ಮನುಷ್ಯ ಜಾತಿ
ತಾನೊಂದೆ ವಲಂ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೫೬೦೦೧೮

ಮಕ್ಕಳ ಸಾಹಿತ್ಯ

ಸಂಪಾದಕರು
ಡಾ. ಬಸು ಬೇವಿನಗಿಡದ



೬ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

BVP-1211- 27|2|17
1284-(5)

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ

ಸಂಪುಟ- ೯

ಮಕ್ಕಳ ಸಾಹಿತ್ಯ

ಸಂಪಾದಕರು

ಡಾ. ಬಸು ಬೇವಿನಗಿಡದ

ಪ್ರಧಾನ ಸಂಪಾದಕರು

ಪುಂಡಲೀಕ ಹಾಲಂಬಿ

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ, ಬೆಂಗಳೂರು - ೫೬೦೦೧೮

KANNADA SAHITYA PARISHATTU CENTENARY PUBLICATION

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ
ಸಂಪುಟ-೯
ಮಕ್ಕಳ ಸಾಹಿತ್ಯ
ಸಂ: ಡಾ. ಬಸು ಬೇವಿನಗಿಡದ

ಪ್ರಕಾಶಕರು :
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು – ೫೬೦ ೦೧೮

ಮುಖಪುಟ ವಿನ್ಯಾಸ : **ಪ.ಸ. ಕುಮಾರ್**
ಪುಟಗಳು : ೬೧೬
ಮುದ್ರಣ ಕಾಗದ :
೭೦ಜಿ.ಎಸ್.ಎಂ. ಎನ್.ಎಸ್.ಮ್ಯಾಪ್‌ಲಿಥೋ
ಬೆಲೆ : ಮೂರು ನೂರಾ ಐವತ್ತು ರೂಪಾಯಿಗಳು
ಪ್ರಥಮ ಮುದ್ರಣ: ೨೦೧೫
ಪ್ರತಿಗಳು : ೧೦೦೦

ಮುದ್ರಣ

ಲಾವಣ್ಯ ಮುದ್ರಣ
ನಂ.೧೯, ವಿದ್ಯಾಪೀಠ ಸರ್ಕಲ್
೧೫ನೇ ಕ್ರಾಸ್, ಬಿಎಸ್‌ಕೆ ೧ನೇ ಹಂತ,
ಬೆಂಗಳೂರು – ೫೬೦ ೦೫೦
ಫೋ:೨೬೬೧೫೮೪೩
ಮೊ: ೯೮೪೫೦೬೩೩೮೧

ADHUNIKA KANNADA SAHITYA CHARITRE
SUMPUTA - 9
MAKKALA SAHITYA
History of children's Literature in Kannada - Vol - ix
Ed: by Dr. Basu Bevingidada

published by :
Kannada Sahitya Parishattu
Pampa Mahakavi Road
Chamarajapete, Bengaluru - 560018

Cover Page : **P.S. Kumar**
Pages : 616
Paper :
70 G.S.M. N.S. Maplitho
Rs : 350=00
First Edition : 2015
Copies : 1000

printed at

Lavanya Mudrana
No.19, Vidyapeeta Circle
15th Cross, BSK 1st Stage
Bengaluru - 560050.
Ph:26615843
M: 9845063381

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಕಾರ್ಯಕಾರಿ ಸಮಿತಿ

ಅಧ್ಯಕ್ಷರ ನುಡಿ

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯ. ನಾಡು, ನುಡಿ, ಸಾಹಿತ್ಯಕ್ಕೆ ಪ್ರೇರಕಶಕ್ತಿಯಾಗಿ ಹಾಗೂ ಪೋಷಕವಾಗಿ ದುಡಿಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ೫-೫-೧೯೧೫ರಂದು ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ದಿವಾನ್‌ರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಸಂಸ್ಥಾಪನೆಗೊಂಡಿತು. ಸರ್ ಮಿರ್ಜಾ ಇಸ್ಮಾಯಿಲ್ ಅವರ ನೆರವಿನಿಂದ ಪುಷ್ಟಿ ಪಡೆಯಿತು. ಅಂದಿನಿಂದ ಈವರೆಗೆ ೨೪ ಜನ ಅಧ್ಯಕ್ಷರು ಪರಿಷತ್ತಿನ ಸೇವೆ ಸಲ್ಲಿಸಿದ್ದಾರೆ. ೮೧ ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷತೆಯನ್ನು ೭೯ ಜನ ಮಹಾನ್ ಲೇಖಕರು ಅಲಂಕರಿಸಿದ್ದಾರೆ. ಕೇವಲ ೧೨೫ ಜನ ಸದಸ್ಯರಿಂದ ಆರಂಭಗೊಂಡ ಪರಿಷತ್ತಿನ ಇಂದಿನ ಸದಸ್ಯರ ಸಂಖ್ಯೆ ೨,೧೦,೦೦೦. ಎಲ್ಲ ಮೂವತ್ತು ಜಿಲ್ಲೆಗಳಲ್ಲೂ, ೧೭೬ ತಾಲ್ಲೂಕುಗಳಲ್ಲೂ, ೪ ಹೊರನಾಡು ಘಟಕಗಳಲ್ಲೂ ಪರಿಷತ್ತು ತನ್ನ ಶಾಖೋಪಶಾಖೆಗಳನ್ನು ವಿಸ್ತರಿಸಿಕೊಂಡಿರುತ್ತದೆ.

ಪರಿಷತ್ತಿನ ಪ್ರಕಟಣೆಗಳ ಸಂಖ್ಯೆಯೇ ೧೫೦೦. ಕೇವಲ ಅಂಕಿಸಂಖ್ಯೆಯ ದೃಷ್ಟಿಯಿಂದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಸಾಧನೆ ಅನನ್ಯವಾದುದು; ಇನ್ನು ಕನ್ನಡ ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಯಂತೂ ಅವಿಸ್ಮರಣೀಯವಾದುದು.

ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವದ ಅಂಗವಾಗಿ ಕೆಲವೊಂದು ಮಹತ್ವದ ಯೋಜನೆಗಳನ್ನು ಪರಿಷತ್ತು ಕೈಗೊಂಡಿರುತ್ತದೆ. ಮೊದಲನೆಯದಾಗಿ, ಎರಡು ಶತಮಾನಗಳಿಗೂ ಮೀರಿದ ಅವಧಿಯ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳ ರಚನೆ ಹಾಗೂ ಪ್ರಕಟಣೆ. ಎರಡನೆಯದಾಗಿ, ಪರಿಷತ್ತಿನ ನೂರರ ಸಂಭ್ರಮಕ್ಕೆ ಕಿರೀಟಪ್ರಾಯವಾಗಿ ಕನ್ನಡದ ನೂರು ಮೌಲಿಕ ಗ್ರಂಥಗಳ ಮರುಮುದ್ರಣ. ಜೊತೆಗೆ, ಪರಿಷತ್ತಿನ ನೂರು ವರ್ಷಗಳ ಇತಿಹಾಸವನ್ನು ದಾಖಲಿಸುವ ನೆನಪಿನ ಸಂಪುಟದ ಪ್ರಕಟಣೆ.

೧೭-೮-೨೦೧೨ರಂದು ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಕಟಣಾ ಸಮಿತಿ ಸಭೆಯಲ್ಲಿ ಪರಿಷತ್ತಿನ ಪ್ರಕಟಣೆಗಳು ಶಾಶ್ವತವಾಗಿ ಕನ್ನಡಿಗರ ಮನದಲ್ಲಿ ಉಳಿಯುವಂತಾಗಬೇಕೆಂದು ನಿರ್ಧರಿಸಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಸಂಪುಟಗಳನ್ನು ಪ್ರಕಟಿಸಲು ನಿರ್ಧರಿಸಲಾಯಿತು. ದಿನಾಂಕ ೨೭-೧೦-೨೦೧೨ರಲ್ಲಿ ನಡೆದ ಇದೇ ಸಮಿತಿ ಸಭೆಯಲ್ಲಿ ೧೫ ಸಂಪುಟಗಳಲ್ಲಿ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗಳನ್ನು ಪ್ರಕಟಿಸಲು

ತೀರ್ಮಾನಿಸಿ ಸಂಪಾದಕ ಸದಸ್ಯರ ಪಟ್ಟಿಯನ್ನು ತಾತ್ಕಾಲಿಕವಾಗಿ ಸಿದ್ಧಪಡಿಸಿ ವಿಷಯಗಳ ವರ್ಗೀಕರಣ, ಸಂಪುಟಗಳ ನಿಗದಿ ಹಾಗೂ ಪ್ರಾದೇಶಿಕ ಪ್ರಾತಿನಿಧ್ಯ, ಸಾಮಾಜಿಕ ಪ್ರಾತಿನಿಧ್ಯಗಳನ್ನು ಮತ್ತು ಆಯಾ ಕ್ಷೇತ್ರದ ತಜ್ಞರು ಹೊಂದಿರುವ ಅನುಭವ, ಪರಿಶ್ರಮ, ಸಾಧನೆಗಳನ್ನು ಗಮನದಲ್ಲಿಟ್ಟುಕೊಂಡು ಸಂಪಾದಕರನ್ನು ಅಗತ್ಯಕಂಡಂತೆ ನಿಗದಿಪಡಿಸುವ ಅಧಿಕಾರವನ್ನು ಅಧ್ಯಕ್ಷರಿಗೆ ನೀಡಲು ಸಮಿತಿಯು ತೀರ್ಮಾನಿಸಿತು. ಅದರಂತೆ ಸಂಪುಟಗಳಿಗೆ ಸಂಪಾದಕರನ್ನು ಗೊತ್ತುಪಡಿಸಲಾಯಿತು.

ಅನಂತರ ೧೨-೬-೨೦೧೩ ಹಾಗೂ ೫-೭-೨೦೧೩ರಂದು ಸಂಪುಟಗಳ ಸಂಪಾದಕರ ಸಭೆಗಳಲ್ಲಿ ವಿಷಯಗಳನ್ನು ಪುನರ್‌ವರ್ಗೀಕರಣ ಮಾಡಿ ಒಟ್ಟಾರೆ ೧೭ ಸಂಪುಟಗಳಲ್ಲಿ ಪ್ರಕಟಿಸಲು ನಿರ್ಧರಿಸಲಾಯಿತು.

ಸಾಹಿತ್ಯ ಚರಿತ್ರೆಗಳ ಸ್ವರೂಪದ ಪರಿಕಲ್ಪನೆ ಬದಲಾಗಿರುವ ದೃಷ್ಟಿಯಿಂದ ಹತ್ತೊಂಬತ್ತನೆಯ ಶತಮಾನವೂ ಸೇರಿದಂತೆ ಈವರೆಗಿನ ಒಟ್ಟಾರೆ ಕನ್ನಡ ಬರವಣಿಗೆಯನ್ನು ಗಮನದಲ್ಲಿರಿಸಿಕೊಂಡು ಸಾಹಿತ್ಯ ಚರಿತ್ರೆಯನ್ನು ರೂಪಿಸಲು ಉದ್ದೇಶಿಸಿ, ಮೊಟ್ಟ ಮೊದಲ ಬಾರಿಗೆ 'ಸಾಹಿತ್ಯ ಚರಿತ್ರೆ'ಯಲ್ಲಿ ಕಲೆ, ವಿಜ್ಞಾನ, ಮಾನವಿಕ ಬರವಣಿಗೆಗಳನ್ನು ಸೇರಿಸಿ, ಪ್ರತ್ಯೇಕ ಸಂಪುಟಗಳಲ್ಲಿ ಪ್ರಕಟಿಸಲು ನಿರ್ಧರಿಸಲಾಯಿತು. ಆ ೧೭ ಸಂಪುಟಗಳೆಂದರೆ:

೧. ಮುಂಬೆಳಗು- ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಗೆ ಪೂರ್ವಪೀಠಿಕೆ
(೧೯ನೆಯ ಶತಮಾನದ ಕನ್ನಡ ಸಾಹಿತ್ಯ) – **ಸಂ: ಡಾ. ಎ.ವಿ. ನಾವಡ**
೨. ಆಧುನಿಕ ಕನ್ನಡ ಸಾಹಿತ್ಯದ ತಾತ್ತ್ವಿಕ ನೆಲೆಗಳು- (೨೦ನೆಯ ಶತಮಾನದ ಆರಂಭದಿಂದ ಈವರೆಗೆ)
೩. ಕಾವ್ಯ (ಮಹಾಕಾವ್ಯಗಳೂ ಸೇರಿದಂತೆ)
೪. ಸಣ್ಣಕಥೆ
೫. ಕಾದಂಬರಿ
೬. ನಾಟಕ
೭. ಸಾಹಿತ್ಯ ವಿಮರ್ಶೆ- ಸಾಹಿತ್ಯ ಮೀಮಾಂಸೆ
೮. ಜಾನಪದ – **ಡಾ. ವೀರಣ್ಣ ದಂಡೆ**
೯. ಮಕ್ಕಳ ಸಾಹಿತ್ಯ
೧೦. ಅನುವಾದ ಸಾಹಿತ್ಯ
೧೧. ಸಂಶೋಧನೆ – **ಸಂ: ನಾಡೋಜ ಪ್ರೊ. ಕಮಲಾ ಹಂಪನಾ**
೧೨. ಸಂಕೀರ್ಣ-೧ [ಭಾಷಾಶಾಸ್ತ್ರ, ಗ್ರಂಥ ಸಂಪಾದನೆ, ಸಾಹಿತ್ಯ ಚರಿತ್ರೆಗಳು, ನಿಘಂಟು, ವಿಶ್ವಕೋಶ, ಛಂದಸ್ಸು, ಶಾಸನಗಳು, ಹಸ್ತಪ್ರತಿಶಾಸ್ತ್ರ)
೧೩. ಸಂಕೀರ್ಣ-೨ [ಲಲಿತ ಪ್ರಬಂಧ, ಹಾಸ್ಯ ಸಾಹಿತ್ಯ, ಜೀವನ ಚರಿತ್ರೆ, ಆತ್ಮಕಥೆ, ಅಂಕಣ ಬರಹ, ವಿಚಾರ ಸಾಹಿತ್ಯ, ಭಾಷಣಗಳು, ಮುನ್ನುಡಿಗಳು, ಅಭಿನಂದನಾ ಗ್ರಂಥಗಳು, ಪತ್ರಿಕೋದ್ಯಮ]
೧೪. ವಿಜ್ಞಾನ – ತಂತ್ರಜ್ಞಾನ : **ಸಂ: ಟಿ.ಆರ್. ಅನಂತರಾಮು**
೧೫. ಮಾನವಿಕಗಳು
೧೬. ಲಲಿತಕಲೆಗಳು
೧೭. ಸಂಸ್ಕೃತಿ ಅಧ್ಯಯನ

ಯೋಜನೆಗೆ ನಿರ್ದಿಷ್ಟ ಕಾಲಮಿತಿಯನ್ನು ನಿಗದಿಪಡಿಸಿ ಜೂನ್ ೨೦೧೪ರೊಳಗೆ ಹಸ್ತಪ್ರತಿ ಸಿದ್ಧಪಡಿಸುವ ಗುರಿಯನ್ನು ಹೊಂದಲಾಗಿತ್ತಾದರೂ, ವಿಷಯ ಬಾಹುಳ್ಯ ಹಾಗೂ ಅಪಾರ ಕನ್ನಡ ಗ್ರಂಥರಾಶಿಯ ಅಧ್ಯಯನವೇ ಮೊದಲಾದ ಕಾರಣಗಳಿಂದ ಹಸ್ತಪ್ರತಿಗಳು ಸಿದ್ಧವಾಗುವುದು ನಿಗದಿತ ಅವಧಿಯನ್ನು ಮೀರಿತು.

ಪ್ರಸ್ತುತ ಎಲ್ಲ ಹದಿನೇಳು ಸಂಪುಟಗಳ ರಚನೆಯ ಪ್ರಗತಿ ವಿವಿಧ ಹಂತಗಳಲ್ಲಿದೆ. ಎಲ್ಲ ಸಂಪಾದಕರು ಶತಮಾನೋತ್ಸವದ ಅವಧಿಯೊಳಗಾಗಿ ತಮ್ಮ ತಮ್ಮ ಸಂಪುಟಗಳನ್ನು ಸಿದ್ಧಪಡಿಸಿಕೊಡುತ್ತಾರೆಂಬ ವಿಶ್ವಾಸ ಹಾಗೂ ನಂಬಿಕೆ ನನಗಿದೆ.

ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟಗಳ ಮಾಲೆಯಲ್ಲಿ ಐದನೆಯದಾಗಿ **ಮಕ್ಕಳ ಸಾಹಿತ್ಯ** ಎಂಬ ೯ನೆಯ ಸಂಪುಟವು ಸಿದ್ಧಗೊಂಡು ಪ್ರಕಟವಾಗುತ್ತಿದೆ. ಇದಕ್ಕಾಗಿ ನಾನು ಸಂಪುಟದ ಸಂಪಾದಕರಾದ ಡಾ. ಬಸು ಬೇವಿನಗಿಡದ ಅವರನ್ನು ಅಭಿನಂದಿಸಬಯಸುತ್ತೇನೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯಕ್ಕೆ ವಿಶಿಷ್ಟವಾದ ಚರಿತ್ರೆ ರಚನೆಯಾದಂತಿಲ್ಲ. ಇದು ಮೊಟ್ಟಮೊದಲ ಪ್ರಯತ್ನ. ಈ ಶ್ರಮದಾಯಕ ನೂತನ ನಿರ್ಮಾಣ ಕಾರ್ಯವನ್ನು ಅತ್ಯಂತ ಶ್ರದ್ಧೆ ಹಾಗೂ ಪರಿಷತ್ತಿನ ಮೇಲಿನ ಪ್ರೀತಿಯಿಂದ ನೆರವೇರಿಸಿಕೊಟ್ಟಿರುವ ಡಾ. ಬಸು ಬೇವಿನಗಿಡದ ಅವರಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯ ಬೀಜರೂಪವನ್ನು ನನ್ನಲ್ಲಿ ಬಿತ್ತಿದವರು ನಾಡೋಜ ದೇಜಗೌ ಅವರು. ಅವರಿಗೆ ನನ್ನ ಗೌರವಪೂರ್ವಕ ನಮನಗಳು.

ಈ ಪ್ರಕಟಣೆ ಯೋಜನೆಗೆ ನೆರವು ನೀಡಿದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀಮತಿ ಉಮಾಶ್ರೀ ಅವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನನ್ನ ಕೃತಜ್ಞತೆಗಳು.

ಈ ಮಹತ್ಕಾರ್ಯದಲ್ಲಿ ನನ್ನೊಡನೆ ಸಹಕರಿಸಿದ ಪ್ರಕಟಣ ಸಮಿತಿಯ ಎಲ್ಲ ಸದಸ್ಯರಿಗೆ ಹಾಗೂ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಸಂಪುಟವನ್ನು ಅತ್ಯಲ್ಪ ಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಲಾವಣ್ಯ ಮುದ್ರಣ – ಅವರಿಗೆ ನನ್ನ ಕೃತಜ್ಞತೆಗಳು.

ದಿನಾಂಕ : ೨೩–೦೯–೨೦೧೫
ಬೆಂಗಳೂರು

ಪುಂಡಲೀಕ ಹಾಲಂಬಿ
ಅಧ್ಯಕ್ಷರು

ಪ್ರಸ್ತಾವನೆ

ಜಗತ್ತಿನ ಎಲ್ಲ ಸಾಹಿತ್ಯಗಳಲ್ಲಿ ಮಕ್ಕಳ ಸಾಹಿತ್ಯ ಎನ್ನುವ ಪ್ರಕಾರ ಅಸ್ತಿತ್ವದಲ್ಲಿದ್ದರೂ ರಮಣೀಯವಾದ, ಹೃದ್ಯವಾದ, ಮನಕಲಕುವ, ಮುದನೀಡುವ ಮತ್ತು ಕಲ್ಪನೆಯ ರೆಕ್ಕೆ ಅರಳಿಸುವ ಸಾಹಿತ್ಯ ಸಾಕಷ್ಟು ಸೃಷ್ಟಿಯಾಗಿದ್ದರೂ ಅದರ ನಿಖರ ಚರಿತ್ರೆ ಬರೆಯಲ್ಪಟ್ಟಿಲ್ಲ ಹಾಗೂ ಅದರ ನಿಶಿತ ವಿಮರ್ಶೆ ನಡೆದಿಲ್ಲವೆಂಬುದು ಮಕ್ಕಳ ಸಾಹಿತ್ಯ ಕುರಿತು ಈ ಲೋಕ ತೋರಿಸುತ್ತ ಬಂದಿರುವ ಅಲಕ್ಷ್ಯದ ಕುರುಹಾಗಿದೆ. ಇಂಗ್ಲಿಷ್ ಸೇರಿದಂತೆ ಪ್ರಪಂಚದ ಹಲವು ಭಾಷೆಗಳಲ್ಲಿ ಬಾಲ ಸಾಹಿತ್ಯದ ಕೃಷಿ ತುಂಬ ವಿಪುಲವಾಗಿ ನಡೆದು ಹಲವು ಆಯಾಮಗಳು ಆ ಪ್ರಕಾರಕ್ಕೆ ದಕ್ಕಿವೆ.

ಜಗತ್ತಿನ ಪ್ರತಿಯೊಂದು ನಾಗರಿಕತೆ ಪುರಾಣ ಸಾಹಿತ್ಯ ಮತ್ತು ಪಾರಂಪರಿಕವಾಗಿ ಬಂದ ದಂತಕತೆ, ನಂಬಿಕೆ ಹಾಗೂ ಅತಿಶಯ ಕಲ್ಪನೆಯ ಸಾಹಿತ್ಯಗಳನ್ನು ಹೊಂದಿದೆ. ಜನಪದ ಮಾದರಿಯ ಕತೆ ಹಾಗೂ ಹಾಡುಗ್ಗಳನ್ನು ಎಲ್ಲೆಡೆಗೂ ಕಾಣಬಹುದು. ಭಾರತದ ಪಂಚತಂತ್ರ, ಪರ್ಷಿಯಾದ ಅಸುರಿಕ್ ಮರದ ಕತೆ, ಗ್ರೀಕಿನ ಇಸೋಪನ ಕತೆಗಳು ಮುಂತಾದವು ಮಕ್ಕಳನ್ನು ಹಾಗೂ ಹಿರಿಯರನ್ನು ಏಕಕಾಲಕ್ಕೆ ರಂಜಿಸಿವೆ. ಬಾಲ್ಯಾವಸ್ಥೆಗೆಂದು ಪ್ರತ್ಯೇಕ ಸಾಹಿತ್ಯ ಮೊದಲಿನಿಂದ ಇರದಿದ್ದರೂ ಬಾಯಿಂದ ಬಾಯಿಗೆ ಹರಿದ ಕೆಲವು ವಿಶಿಷ್ಟ ಕತೆ, ಹಾಡು, ಅಣಕ ಮತ್ತು ದೃಶ್ಯಪ್ರಸಂಗಗಳು ಮಕ್ಕಳನ್ನು ರಂಜಿಸುವಲ್ಲಿ, ಅವರ ಮನಸ್ಸನ್ನು ರೂಪಿಸುವಲ್ಲಿ ಮತ್ತು ಅವರನ್ನು ಸಂವೇದನಾಶೀಲರನ್ನಾಗಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಮಗುತನ ಮತ್ತು ಶೈಶವದ ಕಾಲವೆಂಬುದು ಒಂದು ಸೂಕ್ಷ್ಮ ಬೆಳವಣಿಗೆಯ ಹಂತವಾಗಿದೆ. ಹುಟ್ಟುತ್ತ ಬಹುಶಃ ಖಾಲಿ ಇರುವ ಮಗುವಿನ ಸಂವೇದನಾಮಂಡಲ ಅದರ ಸುತ್ತಲಿನ ಪರಿಸರ ಹಾಗೂ ಪ್ರಭಾವದಿಂದ ತುಂಬಿಕೊಳ್ಳುತ್ತ ಹೋಗುತ್ತದೆ. ನಮ್ಮ ನರವ್ಯೂಹ ಮತ್ತು ಇಂದ್ರಿಯಗಳ ದತ್ತಾಂಶ ಸಂಸ್ಕರಣ, ಪ್ರಕ್ರಿಯೆ, ಉಪಯೋಗಕ್ಕೆ ದೊರಕುವ ದತ್ತಾಂಶಗಳ ಪರಿಮಾಣ, ಅವುಗಳ ಪ್ರಭಾವ ಹಾಗೂ ಪರಿಣಾಮದ ಕಾರ್ಯ ಒಂದು ಅದ್ಭುತ ರಚನೆಯಾಗಿದೆ. ಮನುಷ್ಯನ ಮನಸ್ಸು, ಮಿದುಳು, ನರಮಂಡಲ ಹಾಗೂ ಐಂದ್ರಿಕ ಸಂವೇದನೆಗಳ ಬೆಳವಣಿಗೆಯ ಹಂತದಲ್ಲಿ ಹಾಡು, ಕತೆ, ದೃಶ್ಯಗಳು ಅಪಾರ ಪ್ರಭಾವ ಬೀರುವುದು ರುಜುವಾತಾಗಿದೆ.

ಈ ದಿಶೆಯಲ್ಲಿ ಮಕ್ಕಳ ಪ್ರವೃತ್ತಿ – ಒಲವು–ಉದ್ದೇಶಗಳನ್ನು, ಅವರ ಭಾವನೆ – ಕಲ್ಪನೆ –ಎಣಿಕೆಗಳನ್ನು, ಅರಿವು–ಜಾಗೃತಿ–ಜ್ಞಾನಗಳನ್ನು ರೂಪಿಸುವಲ್ಲಿ ಮತ್ತು ವಿಸ್ತಾರಗೊಳಿಸುವಲ್ಲಿ ಮೌಖಿಕ ಮತ್ತು ಬರಹ ಸಾಹಿತ್ಯ ರೂಪಗಳು ಇನ್ನಿಲ್ಲದ ಪಾತ್ರವಹಿಸುತ್ತವೆ. ಮಕ್ಕಳಿಗೆಂದೇ ಯೋಚಿಸಲ್ಪಟ್ಟ–ರೂಪಿಸಲ್ಪಟ್ಟ ಸಾಹಿತ್ಯ ಬರುತ್ತಿದ್ದರೆ, ಅದು ಅವರ ಸಂವೇದನೆಗಳನ್ನು ಉದ್ದೀಪನಗೊಳಿಸುವಂತಿದ್ದರೆ ಚೆನ್ನ ಎನ್ನುವುದು ಎಲ್ಲ ಲೇಖಕರು ಮತ್ತು ವಿದ್ವಾಂಸರು ಒಪ್ಪುವ ಮಾತಾಗಿದೆ.

ಪ್ರಬುದ್ಧರು ತಮ್ಮ ಸಾಹಿತ್ಯವನ್ನು ಅದೂ ತಾವು ಇಷ್ಟಪಟ್ಟ ಸಾಹಿತ್ಯವನ್ನು ಮಾತ್ರ ಮಕ್ಕಳ ಜೊತೆ ಹಂಚಿಕೊಂಡು ಅವರನ್ನು ಬೆಳೆಸಿದ ಹಿಂದಿನ ದಿನಗಳಿಂದ ಹಿಡಿದು ವಾಸ್ತವ ಮಾರ್ಗದ–ಅಸಂಬದ್ಧ ರೀತಿಯ–ಮಕ್ಕಳ ಮನೋಲೋಕ ತೆರೆದಿಡುವ ಇಂದಿನ ಮಕ್ಕಳ ಸಾಹಿತ್ಯದವರೆಗೆ ಅನೇಕ ಬದಲಾವಣೆಗಳು ಸಂಭವಿಸಿದ್ದನ್ನು ಗುರುತಿಸಬಹುದಾಗಿದೆ. ಮಕ್ಕಳ ಸಾಹಿತ್ಯದ ಇತಿಹಾಸವೆಂದರೆ ಒಂದು ರೀತಿಯಲ್ಲಿ ಅಸ್ಪಷ್ಟವಾದ, ಅದೂ ಇದೂ ಕೂಡಿಕೊಂಡ, ಚಿತ್ತು ಚಿತ್ತಾಗಿರುವ(blurred) ದಾಖಲೆಯೆಂದೇ ಪರಿಗಣಿತವಾಗಿದೆ. ಅದಕ್ಕೆ ಮೂಲ ಕಾರಣವೆಂದರೆ, ಆ ಪ್ರಕಾರದ ಬಗೆಗಿನ ಅಲಕ್ಷ್ಯವೆನ್ನದೆ ಬೇರೆ ದಾರಿ ಇಲ್ಲ. ಇಷ್ಟು ದಿನ ಮಕ್ಕಳ ಸಾಹಿತ್ಯವನ್ನು ಓದುವವರು ಬರೀ ಮಕ್ಕಳು ಮಾತ್ರ ಎಂಬುದಾಗಿತ್ತು. ಆದರೆ ಇತ್ತೀಚೆಗೆ ಅದು ಪ್ರತ್ಯೇಕ ಓದಿನ ಜೊತೆಗೆ ಹಿರಿಯರು ಕೂಡ ಪಾಲ್ಗೊಳ್ಳಬೇಕಾದ, ಸಂವಹನಗೊಳ್ಳಬೇಕಾದ ಕ್ರಿಯೆ ಎಂದು ಸಾಬೀತಾಗಿದೆ. ಆದ್ದರಿಂದ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗ ಹಾಗೂ ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಮಕ್ಕಳ ಸಾಹಿತ್ಯ ಸೃಷ್ಟಿಯ ಕಲ್ಪನೆಗಳು ವಿಸ್ತಾರಗೊಂಡು ಅನೇಕ ಒಳ್ಳೆಯ ಕೃತಿಗಳು ಹೊರಬಂದವು. ಇದಕ್ಕಿಂತ ಮೊದಲು ಮಕ್ಕಳಲ್ಲಿನ ತಿಳಿವಳಿಕೆ ಎಂದರೆ ಭಾರತೀಯರು ರಾಮಾಯಣ, ಮಹಾಭಾರತ, ಪುರಾಣದ ಕತೆಗಳನ್ನು ಮತ್ತು ಬೇತಾಳದ ಕತೆಗಳನ್ನು ಮಕ್ಕಳಿಗೆ ಹೇಳುತ್ತಿದ್ದರು. ಗ್ರೀಕರು ಹೋಮರನ ಓಡಿಸ್ಸಿ, ಇಸೋಪನ ಕತೆಗಳನ್ನು ಆಶ್ರಯಿಸಿದ್ದರು. ರಷಿಯಾದಲ್ಲಿ ಮಕ್ಕಳಿಗೆ ಸಾಂಪ್ರದಾಯಿಕ ಕತೆಗಳನ್ನು ನೀಡಲಾಗುತ್ತಿತ್ತು. ಚೀನಾದಲ್ಲಿ ದೊಡ್ಡವರ ಮನರಂಜನಾ ಆಟಗಳನ್ನು, ನಾಟಕಗಳನ್ನು, ಹಾಗೂ ಕೆಚ್ಚೆದೆಯ ಕದನ ಕಲೆಗಳನ್ನು(martial arts) ಮಕ್ಕಳಿಗೂ ಉಣಬಡಿಸಲಾಗುತ್ತಿತ್ತು.

ಪ್ರಪಂಚದಾದ್ಯಂತ ಮಕ್ಕಳ ಸಾಹಿತ್ಯದ ಇತಿಹಾಸವನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ಗಮನಿಸುವುದಾದರೆ, ಕ್ರಿ. ಶ. ೯೦೦ರಿಂದ ೧೨೫೦ರ ಸಮಯದಲ್ಲಿ ಕತೆಯ ವಿಭಿನ್ನ ರೂಪಗಳು ಅಂದರೆ ನಾನಾ ರೂಪಗಳಲ್ಲಿ ಕತೆಗಳನ್ನು ಹೇಳುವ ಸಂಪ್ರದಾಯಗಳು ಕಾಣಿಸಿಕೊಂಡವು. ಮತ್ತು ಅಲ್ಲಿಂದ ಮಕ್ಕಳ ಅವಶ್ಯಕತೆಗಳು ಮೇಲ್ಮೈಗೆ ಬರತೊಡಗಿದವು. ಆದರೂ ಸಾಂಪ್ರದಾಯಿಕತೆಯ ಪ್ರಭಾವ ಇದ್ದೇ ಇತ್ತು. ಧಾರ್ಮಿಕ ಕಟ್ಟುಕಟ್ಟಳೆ, ಮೋಕ್ಷದ ಹಾದಿ ಮುಂತಾದ ಕಲ್ಪನೆಗಳಿಂದ ಮಕ್ಕಳನ್ನು ಬಾಲ್ಯದಿಂದಲೇ ಆ ತರಹದ ಕತೆ – ಕಾವ್ಯ– ಮಂತ್ರ – ತಂತ್ರಗಳಲ್ಲಿ ದೂಡಲಾಗುತ್ತಿತ್ತು. ಅದನ್ನೇ ಪರೋಕ್ಷವಾದ ರೀತಿಯಲ್ಲಿ ಬಿಂಬಿಸುವ ಸಾಹಿತ್ಯ ಕೃತಿಗಳು ಕೂಡ ಬರುತ್ತಿದ್ದವು. ಚಾಸರ್‌ನ 'ದಿ ಕ್ಯಾಂಟರ್‌ಬರಿ ಟೇಲ್ಸ್', ಜಾನ್ ಬನಿಯನ್ನನ 'ದಿ ಪಿಲಿಗ್ರಿಮ್ಸ್ ಪ್ರೊಗ್ರೆಸ್'(೧೬೭೮) ಎನ್ನುವ ಕೃತಿಗಳು ಈ ಮಾದರಿಯವು. ಆದರೂ ಇವು ಮಕ್ಕಳನ್ನು ಆಕರ್ಷಿಸಿ ಅವರಲ್ಲಿ ಓದುವ ಪ್ರೇರಣೆ ಹುಟ್ಟಿಸಿದವು. ೧೭ನೆಯ ಶತಮಾನದಲ್ಲಿ ಬ್ರಿಟನ್ನಿನಲ್ಲಿ ಮುದ್ರಿತವಾದ ಕರಪತ್ರ ಮಾದರಿ(ಚಾಪ್ ಬುಕ್ಸ್)ಯ ಜನಪದ ಹಾಡು, ಕತೆ, ಸಾಹಸದ ನಿರೂಪಣೆ ಮುಂತಾದವು ಸಾಂಪ್ರದಾಯಿಕ ಮನಸ್ಸುಗಳಲ್ಲಿಯೇ ಮಕ್ಕಳು ಮುಳುಗಿ ಹೋಗದಂತೆ ತಡೆದವು. ಈ 'ಪುಸ್ತಕ'ಗಳು ಅಮೇರಿಕದ ಕಾಲನಿಗಳಿಗೂ ಪ್ರಯಾಣ ಮಾಡಿದವು. ೧೬೩೪ರಲ್ಲಿ 'ಪೆಂಟಾಮಿರೋನ್' ಎನ್ನುವ ಇಟಾಲಿಯನ್ ಪುಸ್ತಕ ಪ್ರಕಟವಾದಾಗ ಯುರೋಪಿನಲ್ಲಿ ಬಾಲ ಸಾಹಿತ್ಯದ ಎಳೆಗಳು ಮತ್ತಷ್ಟು ಸ್ಪಷ್ಟವಾದವು. ೧೭೫೦ರ

ಸುಮಾರಿಗೆ ಬ್ರಿಟನ್ನಿನಲ್ಲಿ ಆಧುನಿಕತೆಯ ವಿಚಾರಗಳು ಗೋಚರಗೊಂಡವು. ೧೭೪೪ರಲ್ಲಿ ಜಾನ್ ನ್ಯೂ ಬೆರ್ರಿ ಎನ್ನುವ ಲೇಖಕ 'ಎ ಲಿಟಲ್ ಪ್ರೆಟ್ಟಿ ಪಾಕೆಟ್ ಬುಕ್' ಹೆಸರಿನ ಪುಸ್ತಕ ಪ್ರಕಟಿಸಿದಾಗ ಬಾಲ್ಯತನದ ಸಂವೇದನೆಗಳು ಹೀಗಿರಬಹುದು ಎಂಬ ಕಲ್ಪನೆಗಳನ್ನು ಹುಟ್ಟು ಹಾಕಿದವು. ೧೯ನೆಯ ಶತಮಾನದ ಮಧ್ಯಭಾಗದಲ್ಲಿ ಮಕ್ಕಳ ಸಾಹಿತ್ಯವೆಂದರೆ ಉಪದೇಶವಲ್ಲ, ಬದಲಾಗಿ ಮಗುವಿನ ಕಲ್ಪನಾ ಲೋಕದ ವಿಸ್ತಾರ ಹಾಗೂ ಅದರ ವಾಸ್ತವ ಜಗತ್ತಿನ ಅರಿವು ಎಂಬ ಜಾಗೃತಿ ನಿಚ್ಚಳವಾಗತೊಡಗಿತು. ೧೮೫೭ರಲ್ಲಿ ಪ್ರಕಟವಾದ ಥಾಮಸ್ ಹ್ಯೂಗ್ಸ್‌ನ 'ಟಾಮ್ ಬ್ರೌನ್ಸ್ ಸ್ಕೂಲ್ ಡೇಸ್' ಒಂದು ಆರಂಭಿಕ ಪ್ರಯತ್ನವಾಗಿತ್ತು. ಆದರೆ ಯಾವಾಗ ಲುಯಿಸ್ ಕೆರೋಲ್‌ನ 'ಆ್ಯಲೀಸ್ ಇನ್ ವಂಡರ್‌ಲ್ಯಾಂಡ್'(೧೮೬೫), ಎಡ್ವರ್ಡ್ ಲಿಯರ್‌ನ ಲಿಮರಿಕ್ಸ್‌ಗಳು ಪ್ರಕಟವಾದವೋ ಆಗ ಮಕ್ಕಳಿಗಾಗಿನ ಬರವಣಿಗೆಯ ದಿಕ್ಕು-ದೆಶೆಗಳು ಒಮ್ಮೆಲೆ ಬದಲಾದವು. ಇಂಗ್ಲಿಷ್ ಸಾಹಿತ್ಯದಲ್ಲಿ ಫ್ಯಾಂಟಸಿ ಮತ್ತು ಅಸಂಬದ್ಧತೆ ಈ ರೀತಿಯಲ್ಲಿ ಕಾಣಿಸಿಕೊಂಡಿತು. ಜೆ. ಎಂ ಬ್ಯಾರಿಯ 'ಪೀಟರ್ ಪ್ಯಾನ್', ರಾಲ್‌ಡಾಲ್‌ನ 'ಚಾರ್ಲಿ ಆ್ಯಂಡ್ ಚಾಕ್ಲೇಟ್ ಫ್ಯಾಕ್ಟರಿ', ಮಾರ್ಕ್ ಟ್ವೈನ್‌ನ 'ಹಕ್ಲ್‌ಬರಿ ಫಿನ್', ರುಡ್‌ಯಾರ್ಡ್ ಕಿಪ್ಲಿಂಗ್‌ನ 'ದಿ ಜಂಗಲ್ ಬುಕ್', ಎನಿಡ್ ಬ್ಲೈಟನ್‌ಳ 'ದಿ ಫೇಮಸ್ ಫೈವ್', ಜೆ. ಕೆ ರೌಲಿಂಗ್‌ಳ 'ಹ್ಯಾರಿ ಪಾಟರ್', ಧನಗೋಪಾಲ ಮುಖರ್ಜಿಯ 'ಗೇನೆಕ್', ಅನಿತಾ ದೇಸಾಯಿಯ 'ವಿಲೇಜ್ ಬೈ ದ ಸೀ', ನಿಕೊಲಾಯ್ ನಾಸಾವ್‌ನ 'ಡುನ್ನೊ', ಮುಂತಾದವು ಮಕ್ಕಳ ಸಾಹಿತ್ಯದ ಚರಿತ್ರೆಯಲ್ಲಿ ಸಾಕಷ್ಟು ಸಂಚಲನ ಹಾಗೂ ಓದುವ ವರ್ಗವನ್ನು ಸೃಷ್ಟಿಸಿಕೊಂಡವು.

ಭಾರತದಲ್ಲಿ ರವೀಂದ್ರನಾಥ ಟ್ಯಾಗೋರ್, ಉಪೇಂದ್ರ ಕಿಶೋರ್ ರಾಯ್, ಬೆಹರಿಲಾಲ್ ಪುರಿ, ಪ್ರೇಮ್‌ಚಂದ, ರಸ್ಕಿನ್ ಬಾಂಡ್, ಘಿಸುಭಾಯ್ ಬಧೇಖಾ, ಕೃಷ್ಣ ಚಂದ್ರಕರ್, ಸಾನೆ ಗುರೂಜಿ, ಕುವೆಂಪು, ಜಿ ಪಿ ರಾಜರತ್ನಂ, ಪಂಜೆ ಮುಂತಾದವರ ಕೃತಿಗಳು ಮಕ್ಕಳ ಸಾಹಿತ್ಯ ಪ್ರಕಾರವನ್ನು ಜೀವಂತವಾಗಿಟ್ಟವು. ಹೊಸ ಸಾಧ್ಯತೆಗಳನ್ನು ಈ ಲೇಖಕರು ತೋರಿಸಿದರು. ಖ್ಯಾತ ವ್ಯಂಗ್ಯಚಿತ್ರಕಾರ ಕೆ. ಶಂಕರ್ ಪಿಳ್ಳೆ 'ಚಿಲ್ಡ್ರನ್ ಬುಕ್ ಟ್ರಸ್ಟ್' ಮೂಲಕ ಮಕ್ಕಳ ಸಾಹಿತ್ಯದ ಹೊಸ ಯುಗವೊಂದನ್ನು ತೆರೆದರು ಎಂದರೆ ಅತಿಶಯೋಕ್ತಿಯಲ್ಲ. ಎನ್‌ಬಿಟಿ ಅಂಥ ಸರಕಾರಿ ಸಂಸ್ಥೆ ಈ ಬಗೆಯ ಪ್ರೇರಣೆಗಳಿಂದ ಮುಂದಿನ ಹೆಜ್ಜೆಗಳನ್ನು ಹಾಕಿತು.

ಕನ್ನಡದಲ್ಲಿ ಮೊದಲಿನಿಂದ ಕಾಣಿಸಿಕೊಂಡ ಮಕ್ಕಳ ಸಾಹಿತ್ಯದ ಸ್ವರೂಪ ಎಂಥದು, ಅದು ಬದಲಾವಣೆಗೊಂಡ ಕಾಲಘಟ್ಟ ಯಾವುದು, ಏನೆಲ್ಲ ಹೊಸ ಸಂವೇದನೆ ಹರಿದು ಬಂದಿತು, ಎಷ್ಟೆಲ್ಲ ಲೇಖಕರು ಇದರ ಅಸ್ಮಿತೆಗಾಗಿ ದುಡಿದಿದ್ದಾರೆ ಎನ್ನುವುದನ್ನು ದಾಖಲಿಸುವ ಹಾಗೂ ಅವಲೋಕಿಸುವ ಪ್ರಯತ್ನವನ್ನು ಈ ಆಧುನಿಕ 'ಮಕ್ಕಳ ಸಾಹಿತ್ಯ'ಚರಿತ್ರೆ ಕೃತಿ ಮಾಡುತ್ತದೆ. ಇದನ್ನು ಬರೆಯಲು ಈ ಹಿಂದೆ ಯಾವುದೇ ಪ್ರಯತ್ನಗಳಾಗಿರಲಿಲ್ಲ ಮತ್ತು ನಮಗೆ ಆ ಬಗೆಯ ಯಾವುದೇ ಮಾದರಿಗಳೂ ಲಭ್ಯವಿರಲಿಲ್ಲ. ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಇತಿಹಾಸವನ್ನು ಯಾರೂ ಕಾಲಾನುಕ್ರಮದಲ್ಲಿ ಹಾಗೂ ಶಿಸ್ತುಬದ್ಧವಾಗಿ ಇಡುವ ಪ್ರಯತ್ನವನ್ನು ಮಾಡಿರಲಿಲ್ಲ. ಕೆಲವು ಪ್ರಯತ್ನಗಳು ಲೇಖಕರ ಪರಿಚಯ ಹಾಗೂ ಅವರ ಕೃತಿಗಳ ಹೆಸರುಗಳನ್ನು ಪಟ್ಟಿಮಾಡುವಲ್ಲಿ ಮಾತ್ರ ತೃಪ್ತಿಪಟ್ಟಿವೆ. ಹೀಗಾಗಿ ಕನ್ನಡ ಮಕ್ಕಳ ಬರವಣಿಗೆಯ

ಸಮಗ್ರ ನೋಟವೊಂದನ್ನು ಕೊಡುವ ದಿಶೆಯಲ್ಲಿ ಇದೊಂದು ಪ್ರಯತ್ನವೆಂದು ನಾನು ತಿಳಿದಿದ್ದೇನೆ. ಈ ಸಂಪುಟದ ಲೇಖಕರಿಗೆ ಎಲ್ಲ ಲೇಖಕರ ಹಾಗೂ ಕೃತಿಗಳ ಮಾಹಿತಿ ಅಲಭ್ಯವಾಗಿರುವುದು ಒಂದು ಪರಿಪೂರ್ಣ ಅವಲೋಕನಕ್ಕೆ, ಚರಿತ್ರೆಯ ಬರಹಕ್ಕೆ ಇರಬಹುದಾದ ಬಹುದೊಡ್ಡ ಅಡಚಣೆಯೆಂದು ಹೇಳಬಹುದು. ಅಷ್ಟಾಗಿಯೂ ಗಮನಾರ್ಹ ಸಾಧನೆ ಮಾಡಿದ ಎಲ್ಲ ಲೇಖಕರನ್ನು ಈ ಪುಸ್ತಕ ಗಮನಿಸಿದೆ ಎಂಬುದು ಓದುಗರ ಗಮನಕ್ಕೆ ಬರುತ್ತದೆ ಎಂದುಕೊಂಡಿದ್ದೇನೆ. ಮೇಲಾಗಿ ಇದು ಕನ್ನಡ ಮಕ್ಕಳ ಸಾಹಿತ್ಯದ ಸ್ಥಿತ್ಯಂತರ, ಒಲವು ಹಾಗೂ ಪ್ರವೃತ್ತಿಗಳನ್ನು ದಾಖಲಿಸುವ ಚರಿತ್ರೆಯಾಗಲು ನಾನು ಇಷ್ಟಪಟ್ಟಿದ್ದೇನೆ. ಇಂತಹ ಆಶಯಗಳಿಂದ ಬರೆಯಲು ಹೊರಟ ಚರಿತ್ರೆಯಲ್ಲಿ ಕಣ್ತಪ್ಪಿನಿಂದ ಬಿಟ್ಟುಹೋದ, ಅಥವಾ ಅದಕ್ಕೆ ಪೂರಕವಾಗದೆ ಹೋದ ಹೆಸರುಗಳು ಬರದೇ ಹೋಗುವ ಸಾಧ್ಯತೆ ಇದ್ದೇ ಇದೆ. ಅದು ಚರಿತ್ರೆಯ ಹಾಗೂ ಬರಹದ ಅನಿವಾರ್ಯ ಭಾಗವಾಗಿದೆ. ಮುಂದಿನ ಈ ಬಗೆಯ ಪ್ರಯತ್ನಗಳಿಗೆ ಈ ಪುಸ್ತಕ ಒಂದು ಪ್ರೇರಣೆಯಾದರೆ ಅದೇ ಈ ಸಂಪುಟದ ಯಶಸ್ಸು ಎಂದು ನಾನು ಭಾವಿಸುತ್ತೇನೆ.

ಪ್ರತಿಯೊಬ್ಬ ಲೇಖಕನಿಗೂ ಅವರದೆ ಆದ ವಿಶಿಷ್ಟ ಶೈಲಿಯಿರುತ್ತದೆ. ಆ ದೃಷ್ಟಿಯಿಂದ ಇಲ್ಲಿಯ ಲೇಖನಗಳನ್ನು ಅವಲೋಕಿಸಬಹುದೆಂದು ತೋರುತ್ತದೆ. ಮಕ್ಕಳ ಸಾಹಿತ್ಯದ ಅಸ್ಮಿತೆ ಹಾಗೂ ವಿಶಿಷ್ಟತೆಯನ್ನು ಗುರುತಿಸುವುದರ ಜೊತೆಗೆ ಆ ಕಾಲಘಟ್ಟವನ್ನು ತೆರೆದಿಡುವ ಮತ್ತು ಅದರ ಮುಖ್ಯ ಲಕ್ಷಣಗಳನ್ನು ಕಣ್ಣಮುಂದೆ ಹಾಸುವ ಪ್ರಯತ್ನ ಇಲ್ಲಿದೆ. ಲೇಖಕರು ಒಮ್ಮೊಮ್ಮೆ ಒಟ್ಟಾಗಿಯೆ ಕಾಣಿಸಿಕೊಳ್ಳಬಹುದು ಇಲ್ಲವೆ ಬಿಡಿಬಿಡಿಯಾಗಿ ತಮ್ಮ ಕೃತಿಗಳ ಮೂಲಕ ವಿಶ್ಲೇಷಣೆಗೆ ಒಳಗಾಗಬಹುದು.

'ಮಕ್ಕಳ ಸಾಹಿತ್ಯ' ಚರಿತ್ರೆಯ ಈ ಗ್ರಂಥವನ್ನು ಒಟ್ಟು ಹದಿನೆಂಟು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದೆ. ಇದರಲ್ಲಿರುವ ಹೂರಣವು ಈ ಪ್ರಕಾರದ ಆರಂಭಿಕ ಸುಳುಹುಗಳಿಂದ ಹಿಡಿದು ಹೊಸ ಸಂವೇದನೆಗಳನ್ನು ಹರಿಸಿದ ಲೇಖಕರವರೆಗೆ, ಹೊಸ ತಲೆಮಾರಿನ ಬರಹಗಾರರವರೆಗೆ, ಮಕ್ಕಳ ಸಾಹಿತ್ಯಕ್ಕೆ ಚಿತ್ರಗಳ ಸಾಹಚರ್ಯ ಎಷ್ಟು ಅಗತ್ಯ ಎಂಬುದನ್ನು ನಿರೂಪಿಸುವವರೆಗೆ, ಮಕ್ಕಳ ಸಾಹಿತ್ಯಗಳ ಅನುವಾದಗಳವರೆಗೆ, ಈ ಸಾಹಿತ್ಯ ಸೃಷ್ಟಿಯ ಪೂರಕ ಕೆಲಸದಲ್ಲಿ ತೊಡಗಿಕೊಂಡ ಸಂಘಸಂಸ್ಥೆಗಳವರೆಗೆ, ಬಾಲ್ಯ ಸಂವೇದನೆ ಎನ್ನುವುದು ಹೇಗೆ ಪಕ್ವತೆಯ ಹೆಗಲ ಮೇಲೆ ಮುಗ್ಧತೆಯ ಮೆರವಣಿಗೆಯಾಗಿದೆ ಎಂಬುದರ ನೋಟ ಒದಗಿಸುವವರೆಗೆ, ವೈಚಾರಿಕ ನಿಲುವುಗಳು ಸೇರಿಕೊಂಡ ಎಳೆಗಳನ್ನು ಗುರುತಿಸುವವರೆಗೆ ಚಾಚಿಕೊಂಡಿರುವುದನ್ನು ಗಮನಿಸಬೇಕು. ಅದೂ ಅಲ್ಲದೆ ಆರಂಭದಿಂದ ಇಲ್ಲಿಯವರೆಗಿನ ಕನ್ನಡ ಮಕ್ಕಳ ಮಹತ್ವದ ಸಾಹಿತ್ಯ ಸಂಕಲನಗಳು, ಮಕ್ಕಳ ಸಾಹಿತ್ಯ ಕುರಿತ ವಿಮರ್ಶೆ, ಅಧ್ಯಯನ ಮುಂತಾದವುಗಳನ್ನು ಕೂಡ ಅವಲೋಕಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಮಕ್ಕಳ ಸಾಹಿತ್ಯದಲ್ಲಿ ತೀವ್ರವಾಗಿ ತೊಡಗಿಸಿಕೊಂಡ ಅನೇಕ ಲೇಖಕರು ಈ ಕೃತಿಯ ನಿರ್ಮಾಣದಲ್ಲಿ ತೊಡಗಿಕೊಂಡು ಇದು ಒಂದು ಆಕಾರ ತಳೆಯಲು ಕಾರಣರಾಗಿದ್ದಾರೆ. ಆನಂದ ಪಾಟೀಲ, ಎಚ್. ಎಸ್. ವೆಂಕಟೇಶ ಮೂರ್ತಿ, ಚಿಂತಾಮಣಿ ಕೊಡ್ಲಕೆರೆ, ರೂಪಾ ಹಾಸನ, ರಾಜೇಂದ್ರ

ಗಡಾದ, ಚೆನ್ನಪ್ಪ ಅಂಗಡಿ, ಬಸು ಬೇವಿನಗಿಡದ, ಸಂಗಮೇಶ ಗುಜಗೊಂಡ ಅವರು ಇಲ್ಲಿಯ ಲೇಖನಗಳನ್ನು ಬರೆದುಕೊಟ್ಟಿದ್ದಾರೆ. ಅವು ಮೌಲಿಕವೂ ಸಾಕಷ್ಟು ಸಮಗ್ರವೂ ಆಗಿವೆ ಎಂಬುದನ್ನು ಸಂಪಾದಕನಾಗಿ ನಾನು ತುಂಬ ವಿನೀತಭಾವದಿಂದ ಹೇಳಬಯಸುವೆ. ಕನ್ನಡ ಸಾಹಿತ್ಯ ಲೋಕ ಗಮನಿಸದೆ ಬಂದಿದ್ದ ಅನೇಕ ಹಿರಿಯ ಲೇಖಕರನ್ನು, ಅಜ್ಞಾತ ಬರಹಗಾರನ್ನು, ಹೊಸ ತಲೆಮಾರಿನ ಸತ್ವಪೂರ್ಣ ಲೇಖಕರನ್ನು ಹಾಗೂ ಅವರ ಕೊಡುಗೆಯನ್ನು ಒಳಗೊಳ್ಳಲು ಈ ಕೃತಿ ಶಕ್ತಿ ಮೀರಿ ಯತ್ನಿಸಿದೆ. ಮಕ್ಕಳ ಸಾಹಿತ್ಯ ಎಂಬ ಪ್ರಕಾರ ಕನ್ನಡದಲ್ಲಿ ಕಾಣಿಸಿಕೊಂಡ ದಿನಗಳಿಂದ ಹಿಡಿದು ಈಗಿನ ಆಧುನಿಕ ಸ್ವರೂಪದ ವರೆಗಿನ ಒಂದು ನೋಟ ಮತ್ತು ಅದರ ಸುತ್ತ ಇರುವ ಇತರ ಮಗ್ಗುಲಗಳನ್ನು ಕೊಡುವಲ್ಲಿ ಆಸ್ಥೆ ವಹಿಸಲಾಗಿದೆ ಎಂದು ಹೇಳಬಯಸುತ್ತೇನೆ. ಈ ಕೃತಿಯ ಲೇಖಕರ ವಿನಂತಿಗೆ ಓಗೊಟ್ಟು ತಕ್ಷಣ ತಮ್ಮ ಕೃತಿಗಳನ್ನು ಕಳುಹಿಸಿದ ಮತ್ತು ಕೇಳಿದ ಮಾಹಿತಿಯನ್ನು ತಕ್ಷಣ ಒದಗಿಸಿದ ಎಲ್ಲ ಲೇಖಕರನ್ನು ಹೃದಯಪೂರ್ವಕ ಸ್ಮರಿಸುವುದು ನನ್ನ ಕರ್ತವ್ಯ.

ಹೀಗಾಗಿ ಕನ್ನಡ ಮಕ್ಕಳ ಸಾಹಿತ್ಯ ಇತಿಹಾಸದ ಒಂದು ಒಟ್ಟು ಅವಲೋಕನವೆಂದು ಇದನ್ನು ಸಹೃದಯರು ಸ್ವೀಕರಿಸುತ್ತಾರೆಂದು ತಿಳಿಯುತ್ತೇನೆ. ಹಲವು ವಿದ್ವಾಂಸರು ಇದರಲ್ಲಿ ಭಾಗಿಯಾಗಿ ಈ ಸಂಪುಟದ ಮೌಲಿಕತೆಯನ್ನು ಹೆಚ್ಚಿಸಿದ್ದಾರೆ. ಅವುಗಳ ಮಹತ್ವವನ್ನು ಓದುಗರಿಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಕಾಲಕ್ಕೆ ಲೇಖನಗಳನ್ನು ಕೊಟ್ಟ ಸಹ ಲೇಖಕರಿಗೆ ನನ್ನ ವಂದನೆಗಳು.

ಕನ್ನಡ ಮಕ್ಕಳ ಸಾಹಿತ್ಯ ಚರಿತ್ರೆಯನ್ನು ಪ್ರಪ್ರಥಮವಾಗಿ ಸಂಪಾದಿಸುವ ಹಾಗೂ ಕೆಲವು ಲೇಖನಗಳನ್ನು ಬರೆಯುವ ಅವಕಾಶ ಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪುಂಡಲೀಕ ಹಾಲಂಬಿ ಅವರಿಗೂ ಮತ್ತು ಪರಿಷತ್ತಿನ ಎಲ್ಲಾ ಪದಾಧಿಕಾರಿಗಳಿಗೂ ನಾನು ಆಭಾರಿಯಾಗಿದ್ದೇನೆ. ಲೇಖಕ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಡಾ. ರಾಜಶೇಖರ ಹತಗುಂದಿ ಅವರ ಒತ್ತಾಯವಿಲ್ಲದಿದ್ದರೆ ಈ ಸಂಪುಟ ಹೊರಬರುವುದು ದುಸ್ತರವಿತ್ತು. ಅವರ ಸಹಕಾರ ಮತ್ತು ಒತ್ತಾಸೆಯ ಋಣಗಳನ್ನು ಕೃತಜ್ಞತೆಯ ಮಾತಿನಿಂದ ತೀರಿಸಲು ಸಾಧ್ಯವಿಲ್ಲ. ಅದೇ ರೀತಿ ಪರಿಷತ್ತಿನ ಆಧುನಿಕ ಸಾಹಿತ್ಯ ಚರಿತ್ರೆಯ ಸಂಚಾಲಕರಾದ ಜೆ.ಎನ್. ಶಾಮರಾವ್ ಅವರು ಬೆನ್ನುಹತ್ತಿ ಆಗಿಂದಾಗ್ಗೆ ಎಚ್ಚರಿಸದೆ ಹೋಗಿದ್ದರೆ, ಲೇಖನಗಳನ್ನು ಬರೆಯದೆ ಹೋದ ಲೇಖಕರ ಬದಲಿಗೆ ಹೊಸ ಲೇಖಕರನ್ನು ಒದಗಿಸದೆ ಹೋಗಿದ್ದರೆ, ಅಧ್ಯಕ್ಷರ ಆಶಯದಂತೆ ಇದ್ದ ಲೇಖಕರೇ ಮತ್ತು ಸಂಪಾದಕರೇ ಹೊಣೆ ಹೊತ್ತು ಎಲ್ಲ ಲೇಖನಗಳನ್ನು ಹಂಚಿಕೊಂಡು ಸಕಾಲಕ್ಕೆ ತರಬೇಕು ಎಂದು ಪ್ರೀತಿಯಿಂದ ಒತ್ತಾಯಿಸದೆ ಹೋಗಿದ್ದರೆ ಈ ಚರಿತ್ರೆ ರೂಪುಗೊಳ್ಳುವುದು ಕಷ್ಟವಿತ್ತು ಎಂಬ ಮಾತನ್ನು ನಾನು ಹೇಳಲೇಬೇಕು. ಆದ್ದರಿಂದ ಜೆ.ಎನ್. ಶಾಮರಾವ್ ಅವರಿಗೂ ನಮಸ್ಕಾರ ಹೇಳುವೆ.

ಆಧುನಿಕ 'ಮಕ್ಕಳ ಸಾಹಿತ್ಯ' ಚರಿತ್ರೆ ಪುಸ್ತಕ ರೂಪಿಸುವಾಗ ನೆರವಾದ ಎಲ್ಲ ಮನಸ್ಸುಗಳನ್ನು ನೆನೆಯುತ್ತ ಇದನ್ನು ಎಲ್ಲ ಓದುಗರು ಪ್ರೀತ್ಯಾದರಗಳಿಂದ ಸ್ವೀಕರಿಸುತ್ತಾರೆಂದು ನಂಬಿ ಈ ನಾಲ್ಕು ಮಾತು ಮುಗಿಸುವೆ.

ಧಾರವಾಡ
೧೯.೦೮.೨೦೧೫

ಡಾ. ಬಸು ಬೇವಿನಗಿಡದ

ಪರಿವಿಡಿ

ಮಕ್ಕಳ ಸಾಹಿತ್ಯ

೧

ಮಕ್ಕಳ ಸಾಹಿತ್ಯದ ಪೂರ್ವಭಾವಿ ಕಾಲ

ಡಾ. ಆನಂದ ಪಾಟೀಲ

ಬಾಲ ಸಾಹಿತ್ಯದ ಪ್ರವೇಶ

ಮಕ್ಕಳ ಸಾಹಿತ್ಯವನ್ನು ಬರವಣಿಗೆಯಲ್ಲಿಯ ಸಾಹಿತ್ಯವಾಗಿ ಸಾಮಾನ್ಯವಾಗಿ ಗಣಿಸುವಾಗ ಅದನ್ನ ಇಂಗ್ಲಿಷಿನ ಹೊರಗಿನ ಪ್ರಭಾವದಿಂದಲೇ ಎನ್ನುವುದನ್ನು ಒಪ್ಪಬೇಕಾಗುತ್ತದೆ. ಈ ಬಗೆಯ ಪ್ರಭಾವದಿಂದಲೇ ಪ್ರಮುಖವಾಗಿ ಹೊಸಗಾಲದ ಕನ್ನಡದ ನಮ್ಮ ಮಕ್ಕಳಿಗೆ ಅವರದೇ ಆದ ಓದಿನ ಸಾಹಿತ್ಯ ಸಾಮಗ್ರಿಯ ಕಲ್ಪನೆ ಕಾಣಿಸಿದುದು ಎಂದರೆ ಅದೇನೂ ತಪ್ಪಿಲ್ಲ. ಬ್ರಿಟಿಷರಿಂದ ಹೊಸ ಶಿಕ್ಷಣ ವ್ಯವಸ್ಥೆ ಶುರು ಹಚ್ಚಿಕೊಂಡು ನಮ್ಮ ಮಕ್ಕಳೆಲ್ಲ ಶಾಲೆ ಎನ್ನುವ ಸಾರ್ವಜನಿಕ ಸಂಸ್ಥೆಯೊಂದಕ್ಕೆ ಹೋಗತೊಡಗಿದಂದಿನಿಂದ ಅವಕ್ಕೆ ಪ್ರತ್ಯೇಕ ಪುಸ್ತಕಗಳು ತಯಾರಾಗತೊಡಗಿ, ಮಿಷನರಿಗಳಿಂದ, ಸರಕಾರದಿಂದ ಬಳಕೆಗೆ ಬರುತ್ತ ಪುಸ್ತಕಗಳು ನಾನಾ ಬಗೆಯಲ್ಲಿ ಕಾಣತೊಡಗಿದವು. ಬರಹರೂಪದ ಸಾಹಿತ್ಯ ಕಾಣಿಸಿಕೊಂಡು ಮಕ್ಕಳಿಗಾಗಿ ತನ್ನ ವಿಶೇಷತೆಯನ್ನ ಅಪೇಕ್ಷಿಸಿತು. ಪಂಜೆ ಮಂಗೇಶರಾಯರು 'ಬಾಲ ಸಾಹಿತ್ಯ' ಎನ್ನುವ ಪದದ ಬಳಕೆಯನ್ನು ಮಾಡಿದರು. ೧೯೨೧ರಲ್ಲಿ ಅವರು ಮಂಗಳೂರಿನಲ್ಲಿ 'ಬಾಲ ಸಾಹಿತ್ಯ ಮಂಡಳಿ'ಯ ರಚನೆಯಲ್ಲಿ ಪಾತ್ರವಹಿಸಿದ್ದರು. ಅವರೇ ತಮ್ಮ ಹೈದರಾಬಾದಿನ ನಾಡಹಬ್ಬದ ಭಾಷಣದಲ್ಲಿ 'ಬಾಲ ಸಾಹಿತ್ಯ – ಈ ಪದವು ಕನ್ನಡದಲ್ಲಿ ತೀರ ಹೊಸದು. ಅದು ಹುಟ್ಟಿ ಇನ್ನೂ ಹದಿನೈದು ವರ್ಷಗಳಾಗಿಲ್ಲ' ಎಂದು ತಮ್ಮ ಬಳಕೆಯನ್ನೇ ಪ್ರಾರಂಭದ ಬಳಕೆಯಿರುವ ಹಾಗೆ ಕಾಣುತ್ತದೆ ಎನ್ನುವ ಸೂಚನೆಯನ್ನ ಕೊಟ್ಟಿದ್ದರು. ಈ ಮೊದಲು ಈ ಬಗೆಯ ಸಾಹಿತ್ಯದ ಪ್ರತ್ಯೇಕತೆಯ ಪದಗಳನ್ನು ನಾನಾ ಬಗೆಯಲ್ಲಿ ಬಳಸಿರಬಹುದು, ಆದರೆ ಅವಾವುವೂ ಅಷ್ಟಾಗಿ ಎದ್ದುಕಂಡಿಲ್ಲ. ಕನ್ನಡದಲ್ಲಿ ಮುಂದೆಲ್ಲ ಬಾಲ ಸಾಹಿತ್ಯ ಎನ್ನುವ ಪದಕ್ಕಿಂತ ಮಕ್ಕಳ ಸಾಹಿತ್ಯ ಎನ್ನುವ ಪದವೇ ಹೆಚ್ಚು ನಿಂತುಕೊಂಡುದನ್ನು ಕಾಣುತ್ತೇವೆ.

ರಂ. ಶ್ರೀ. ಮುಗಳಿ ಅವರು ೧೮೨೦ರಿಂದ ೧೯೨೦ರ ಅವಧಿಯನ್ನು ಹೊಸ ಸಾಹಿತ್ಯದ ಮೊದಲ ಹಂತ ಎಂದು ಕರೆದಿದ್ದಾರೆ. ಸ. ಸ. ಮಾಳವಾಡರೂ ಇದೇ ಅಭಿಪ್ರಾಯವನ್ನು ತಳೆದವರು. ಎಲ್ . ಎಸ್, ಶೇಷಗಿರಿರಾಯರು ೧೮೭೦ರಿಂದ ೧೯೨೦ರವರೆಗೆ ಮೊದಲ ಹಂತ ಎನ್ನುವುದು ಉಚಿತ ಎನ್ನುತ್ತಾರೆ. ಒಟ್ಟಾರೆ ಕನ್ನಡದ ವಾತಾವರಣ ಗಮನಿಸಿ ಈ ಅಭಿಪ್ರಾಯಗಳು. ಆದರೆ ಇದರಲ್ಲಿ ಮಕ್ಕಳಲೋಕ ಕಂಡ ಹೊಸತು, ಅಲ್ಲಿನ ಸಾಹಿತ್ಯ

ಎನ್ನುವ ಸೃಜನಶೀಲ ಬರವಣಿಗೆಯ ಬಗೆಗೆ ಹೇಳುವ ಮಾತುಗಳೇ ಬೇರೆಯಾಗಬೇಕಾಗುತ್ತದೆ. ಶಾಲಾ ವ್ಯವಸ್ಥೆ ಶುರುವಾದಂದಿನಿಂದ ಹಿಡಿದು, ಬರವಣಿಗೆಯಲ್ಲಿನ ಪರಿಕರವನ್ನ ಮಕ್ಕಳು ಓದಿಗೆ ತಂದುಕೊಳ್ಳುವ ಪ್ರಾರಂಭದಿಂದ ಗಮನಿಸಿದರೆ ಕನ್ನಡ ನಾಡಿನ ವಿಭಿನ್ನ ಭಾಗಗಳಲ್ಲಿ ವಿಭಿನ್ನವಾಗಿ ತೊಡಗುವಿಕೆ ಕಾಣುತ್ತದೆ. ಹೆಚ್ಚೂ ಕಡಿಮೆ ಈ ಎಲ್ಲ ವೈವಿಧ್ಯತೆಯ ದಾರಿಯನ್ನೂ ಪಂಜೆಯವರ ಹಾವಿನ ಹಾಡಿನವರೆಗೆ, ಅವರವೇ ಕಥೆಗಳವರೆಗೆ ಒಂದು ಹಂತವಾಗಿ ಗಣಿಸಬಹುದು ಎನಿಸುತ್ತದೆ. ಅಲ್ಲಿ ಒಂದು ಬಗೆಯ ಪಾಕವಾದ ಬರವಣಿಗೆ ಕಾಣಿಸಿತು. ಹಾಗೆಂದು ಅದನ್ನೇ ಎಲ್ಲರೂ ಮುಂದೆ ಅನುಸರಿಸಿ ಹೊಸತಿಗೆ ತೆರೆದುಕೊಂಡರು ಎಂದೇನಿಲ್ಲ. ರಾಜರತ್ನಂ ಅವರ ವೇಳೆಯಲ್ಲೂ ಇನ್ನೂ ಹಳೆಗಾಲದ ಘಾಟು ಚೆನ್ನಾಗಿಯೇ ಇದ್ದುದನ್ನ ನೋಡುತ್ತೇವೆ. ಅಂತೂ ನಾಡಿನ ಬೇರೆ ಬೇರೆ ಕಡೆಗಳಲ್ಲಿ ಒಬ್ಬೊಬ್ಬರ ಆಸಕ್ತಿಯಿಂದ, ಮುತುವರ್ಜಿಯಿಂದ, ತೊಡಗಿಕೊಳ್ಳುವಿಕೆ ಕಾಣಿಸಿಕೊಳ್ಳುತ್ತ ಬಂತು. ಹಾಗಾಗಿ ಒಂದೆಲ್ಲೋ ಹೊಸತು ಕಾಣಿಸಿದಾಗ ಒಟ್ಟಾರೆಯ ಸ್ಪಂದನ ಅದಕ್ಕೆ ಸಿಕ್ಕಿತು ಎನ್ನುವುದು ಅಷ್ಟಾಗಿ ಕಾಣದು. ಪಂಜೆಯವರ ಉತ್ಕೃಷ್ಟದ ಕೆಲವೆಲ್ಲ ಪದ್ಯ ರಚನೆಗಳ ನಂತರ ಅದೇ ಗುಣಮಟ್ಟದ ರಚನೆಗಳನ್ನ ನಿರೀಕ್ಷಿಸುವುದಾಗಲಿಲ್ಲ. ತಮ ತಮಗೆ ಹೊಳೆದಂತೆ ತೊಡಗಿಕೊಂಡವರೇ ಇಲ್ಲಿ ಬಹಳ.

ಹಾಗಾಗಿ ಮಕ್ಕಳ ಸಾಹಿತ್ಯದ ಉದಯದ ತಯಾರಿ ಶಾಲಾ ಪಠ್ಯಗಳೊಡನೆ ಅವುಗಳ ಸಿದ್ಧತೆಯಲ್ಲಿಯೇ ಆಯಿತು ಎನ್ನುವುದು ಸರಿ ಎಂದು ಕಾಣುತ್ತದೆ. ಒಂದು ನಿಖರದಲ್ಲಿ ಪಂಜೆಯವರ ನಿರ್ದಿಷ್ಟ ಹೆಜ್ಜೆಗಳಿಂದ ಮಕ್ಕಳ ಸಾಹಿತ್ಯ ತನ್ನ ಅಸ್ತಿತ್ವವನ್ನ ಗುರುತಿಸಿಕೊಂಡಿತು ಎನ್ನಬಹುದು. ಹಾಗಾಗಿ ಪ್ರಬುದ್ಧರ ಸಾಹಿತ್ಯ, ಅಥವಾ ಒಟ್ಟಾರೆ ಕನ್ನಡ ಸಾಹಿತ್ಯದ ಘಟ್ಟಗಳನ್ನ ಗುರುತಿಸುವ ಪ್ರಕ್ರಿಯೆಯಲ್ಲಿ ಈ ಮಕ್ಕಳ ಸಾಹಿತ್ಯದ ಬಗೆ ಬೇರೆಯೇ ಆಗಿ ನಿಲ್ಲುತ್ತದೆ ಎನ್ನದೆ ನಿರ್ವಾಹವಿಲ್ಲ. ಶಿಕ್ಷಕರ ಸಮುದಾಯ ಮುಂಚೂಣಿಯಲ್ಲಿ ನಿಂತುದು, ಬಹು ದೊಡ್ಡ ಸಂಖ್ಯೆಯಲ್ಲಿ ಅವರೇ ಕಾಣಿಸಿಕೊಂಡುದು, ಅಷ್ಟೇ ಅಲ್ಲದೆ 'ಮಕ್ಕಳ ಸಾಹಿತಿ' ಎಂದು ಕರೆದುಕೊಳ್ಳುತ್ತ, ಕೇವಲ ಮಕ್ಕಳ ಸಾಹಿತ್ಯಕ್ಕೇ ತಮ್ಮನ್ನ ನಿಷ್ಠೆಯಿಂದ ಮೀಸಲಾಗಿರಿಸಿಕೊಂಡುದು ಮುಂತಾಗಿ ಕಾಣಿಸಿದ ಸಮಯವನ್ನ ಈ ಮೊದಲಿನ ಸಮಯದಿಂದ ಪ್ರತ್ಯೇಕವಾಗಿ ಗುರುತಿಸಬಹುದು. ಹಾಗಿದ್ದಾಗಲೂ ಪ್ರಬುದ್ಧರಿಗಾಗಿ ಬರೆಯುತ್ತ, ಮಕ್ಕಳಿಗಾಗಿಯೂ ತುಡಿದ ಕೆಲವರ ಬರವಣಿಗೆ ಇಲ್ಲಿಯೂ ಇದ್ದೇ ಇದ್ದಿತು. ಹಾಗೆಯೇ ಸಿದ್ಧತೆಯ, ನಂತರದ ಮೊದಲ ಘಟ್ಟ ಎಂದುಕೊಳ್ಳುವಲ್ಲಿಯೂ ಶಿಕ್ಷಕರು ದೊಡ್ಡ ಸಂಖ್ಯೆಯಲ್ಲಿಯೇ ಇದ್ದರು. ಶಾಲಾ ಪಠ್ಯಗಳೊಡನೆಯೇ, ಮಕ್ಕಳ ಸಾಹಚರ್ಯದಲ್ಲಿಯೇ ಸಾಹಿತ್ಯ ಪಕ್ವ ಪಡೆದುಕೊಂಡುದರಿಂದ ಅವರ ಸಂಖ್ಯೆಯೇ ವಿಶೇಷವಾಗಿದ್ದುದು ಸಹಜವೇ. ಆದರೆ ಅವರೊಟ್ಟಿಗೆ ಇತರ ಅನೇಕರೂ ಅಲ್ಲಿ ತೊಡಗಿಕೊಂಡರು. ಪ್ರಬುದ್ಧರಿಗಾಗಿ ಬರೆಯುತ್ತ ಮಕ್ಕಳಿಗಾಗಿಯೂ ಬರೆದರು. ಮಕ್ಕಳಿಗಾಗಿಯೇ ತಮ್ಮ ಬರವಣಿಗೆ ಮೀಸಲು ಎಂದುಕೊಂಡಿರಲಿಲ್ಲ ಅವರು. ಪಂಜೆಯವರೇ ತಮ್ಮ ವೃತ್ತಿಯ ಬಹುಭಾಗವನ್ನು ಮಕ್ಕಳ ನಡುವೆ ಶಿಕ್ಷಕರಾಗಿ, ಅಧಿಕಾರಿಗಳಾಗಿ ಕಳೆದವರು.

ಮಕ್ಕಳನ್ನ ತಮ್ಮದೇ ಆದ ನಿರೀಕ್ಷೆಯಲ್ಲಿ ಬೆಳೆಸುವುದಕ್ಕೆ ಅನುಕೂಲವಾಗುವ ಬರವಣಿಗೆ ಅಥವಾ ತೋಂಡಿ ಸಂಪ್ರದಾಯದ ಬಗೆಯಿಂದ ಹಿಡಿದು ಮಕ್ಕಳಿಗೆ ತಮ್ಮದೇ ಆದ ಅಸ್ತಿತ್ವ ಇದೆ, ಅವುಗಳಿಗಾಗಿ ಬೇಕಾಗುವ ಯಾವುದೇ ನೇರ ಉಪಯೋಗಿ ಉದ್ದೇಶವಿಲ್ಲದ, ಆನಂದವನ್ನೇ

ನೀಡುವ ಬರವಣಿಗೆ ಎನ್ನುವ ಮಾತುಗಳತನಕ ನಾನಾ ಬಗೆಯ ಅಭಿಪ್ರಾಯಗಳು, ವಿಚಾರ ಧಾರೆಗಳು ವಿಶ್ವದಲ್ಲಿ ಈಗ ಸುಮಾರು ಎರಡುನೂರು ವರುಷಗಳಿಂದ ಹರಿದು ಬಂದಿರುವುದನ್ನ ನೋಡುತ್ತೇವೆ. ಒಂದಂತೂ ನಿಜ, ಮಕ್ಕಳ ಸಾಹಿತ್ಯದ ಇತಿಹಾಸವನ್ನ ಗಮನಿಸಿದರೆ ಅನುಮಾನದಿಂದ, ಅಲಕ್ಷ್ಯದಿಂದ, ಒಂದು ಬಗೆಯ ಕೀಳರಿಮೆಯಿಂದ ನೋಡಿದುದೇ ದೀರ್ಘ ಅವಧಿಯಲ್ಲಿ ಚಾಚಿಕೊಂಡಿರುವುದು ಕಂಡುಬರುತ್ತದೆ.

ಸಾಹಿತ್ಯದ ಇತಿಹಾಸಕಾರರು ಮಕ್ಕಳ ಓದನ್ನು ಕಂಡೂ ಕಾಣದಂತೆ ನಿರ್ಲಕ್ಷಿಸಿರುವುದು, ಇಲ್ಲವೆ ಕಡೆಗಣಿಸಿರುವುದು, ಕೆಲವರು ಅದನ್ನ ಗೌಣವಾಗಿ ಕಂಡುದು ಸಾಮಾನ್ಯವಾಗಿ ಎಲ್ಲ ಭಾಷಾ ವಲಯದಲ್ಲೂ ಕಂಡುಬರುತ್ತದೆ. ಅವರು ಅದಕ್ಕೊಂದು ಸಮರ್ಪಕವಾದ ದೀರ್ಘವಾದ ಹಿನ್ನೆಲೆ ಇಲ್ಲವೆಂತಲೋ, ಗಣಿಸಬಹುದಾದ ಪ್ರಮಾಣದಲ್ಲಿ ಲೇಖಕರು, ಕೃತಿಗಳು ಕಾಣುವುದಿಲ್ಲವೆಂತಲೊ, ಇಲ್ಲವೆ ಶೈಲಿ, ಸಂವೇದನಾಶೀಲತೆ, ದರ್ಶನ ಮುಂತಾಗಿ ಗುಣಮಟ್ಟದಲ್ಲಿ ಸೋಲುವಂಥದು ಎಂಬ ಕಾರಣಕ್ಕಾಗಿ ಗಣಿಸುವುದು ಸಾಧ್ಯವಾಗಲಾರದೆಂತಲೊ, ಅಂತೂ ಹಲವಾರು ಕಾರಣಗಳನ್ನ ಮುಂದೊಡ್ಡಿರುವುದು ಕಂಡುಬರುತ್ತದೆ. ಆದರೆ ಕೆಲವರಾದರೂ ಮಕ್ಕಳ ಸಾಹಿತ್ಯಕ್ಕೆ ಎರಡು ಶತಮಾನದಷ್ಟು (ಇಂಗ್ಲಿಷಿನಲ್ಲಿಯಾದರೂ) ಇತಿಹಾಸವಿರುವುದನ್ನ ಕಡೆಗಣಿಸಲಾಗದು ಎಂದು ಅಭಿಪ್ರಾಯಪಟ್ಟುದೂ ಇದೆ.

ಮಕ್ಕಳ ಸಾಹಿತ್ಯದ ಹಿಂದಿನ ಇತಿಹಾಸದ ಸಮಯ ಅಂದರೆ ಅಲ್ಲೆಲ್ಲ ಮಗುವನ್ನ ಮಗುವಾಗಿ ಕಂಡುದೇ ಅಷ್ಟಾಗಿ ಕಾಣದು. ಮಗುವೇನಿದ್ದರೂ ದೊಡ್ಡವರ ಪ್ರತಿರೂಪ, ದೊಡ್ಡವರಾಗುವ ತಯಾರಿಯ ಸಮಯವೆಂದೇ ಗಮನಿಸಲಾದುದರಿಂದ ಆ ಬಗೆಯ ಬೆಳವಣಿಗೆಗೆ ಅಗತ್ಯವಾದ ಸಾಮಗ್ರಿಯನ್ನು ನೀಡುತ್ತ ಬಂದುದನ್ನ ನೋಡುತ್ತೇವೆ. ಹಾಗಾಗಿ ಉಪದೇಶಪರವಾದ, ಕಟ್ಟುನಿಟ್ಟುಗಳನ್ನು ಹೇಳುವ, ನೀತಿ ನಡಾವಳಿಗಳನ್ನು ನಿರ್ದೇಶಿಸುವ ಸಾಮಗ್ರಿಯೇ ಮುಖ್ಯವಾಗಿ ಕಾಣುತ್ತದೆ. ಮಕ್ಕಳು ತಮ್ಮ ವಯೋಸಹಜ ಗ್ರಹಿಕೆಯ ಮಟ್ಟವನ್ನ ಮೀರಿದ ಎಷ್ಟೋ ಸಂಗತಿಗಳನ್ನ ಅವಗತ ಮಾಡಿಕೊಳ್ಳಲು ಆಗಲೇ ಸಿದ್ಧವಾಗಬೇಕಾದ ಪ್ರಸಂಗಗಳಿದ್ದುದನ್ನ ನೋಡುತ್ತೇವೆ. ಬಹುಶಃ ಎಲ್ಲ ನಾಗರಿಕತೆಗಳ ಪ್ರಾರಂಭದ ಪುಟಗಳಲ್ಲಿ ಇದೇ ಬಗೆಯದು ಕಾಣುತ್ತದೆ. ಸಾಕ್ಷರಪೂರ್ವದ ಸಮುದಾಯಗಳಲ್ಲಿ ಮಗುವನ್ನ (ಬಾಲಕ ಬಾಲಕಿಯರನ್ನ) ಬುಡಕಟ್ಟಿನ, ವಂಶದ ಒಟ್ಟಾರೆಯ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಂಬಂಧಗಳಲ್ಲಿಯೇ ಗುರುತಿಸಲಾಗುತ್ತಿತ್ತು. ಬಾಲಕ ಬಾಲಕಿಯರನ್ನ ಎಲ್ಲ ಮಮತೆಯಿಂದ ಕಾಣಲಾಗುತ್ತಿತ್ತಾದರೂ ಬಾಲ್ಯದ ಪ್ರತ್ಯೇಕ ಅಸ್ತಿತ್ವ ಇರಲಿಲ್ಲ. ಹಳೆಯ ಒಡಂಬಡಿಕೆಯ ಜ್ಯೂಗಳಲ್ಲಿ ತಂದೆಯ ಕಿರುರೂಪವೇ ಬಾಲಕ ಎಂದು ಭಾವಿಸಲಾಗಿತ್ತು. ಹೀಗೆಯೇ ಪ್ರಾಚೀನ ಗ್ರೀಕರಲ್ಲಿ, ರೋಮ್ ಸಂಸ್ಕೃತಿಗಳಲ್ಲಿ ಮಕ್ಕಳ ಉಡಿಗೆ ಕುಬ್ಜಗೊಳಿಸಿದ ದೊಡ್ಡವರ ಉಡಿಗೆಯೇ ಆಗಿರುತ್ತಿತ್ತು. ಭಾರತೀಯ ಸಂಸ್ಕೃತಿಯೇನೂ ಇದಕ್ಕೆ ಹೊರತಾಗಿಲ್ಲ. ಶ್ರೇಣೀಕೃತ ಸಮಾಜದ ವ್ಯವಸ್ಥೆ ಶುರುವಾದಂದಿನಿಂದಲೂ, ಅದಕ್ಕಿಂತ ಪೂರ್ವದಲ್ಲೂ ಮಕ್ಕಳನ್ನು ಅವರದೇ ಆದ ಅಸ್ತಿತ್ವದಲ್ಲಿ ಕಂಡಿರುವುದು ಅಷ್ಟಾಗಿ ಇಲ್ಲವೆಂದೇ ಹೇಳಬೇಕು. ಪುಟ್ಟ ಬಾಲಕರಿದ್ದಾಗಲೇ ಆಶ್ರಮದಂಥದಲ್ಲಿ ಶಿಕ್ಷಣ ಪಡೆಯುತ್ತಿದ್ದ ವ್ಯವಸ್ಥೆ ಕೆಲ ಮಕ್ಕಳಿಗೆ ಸಾಧ್ಯವಾಗುತ್ತಿತ್ತಾದರೂ ಅದೂ ಕೂಡ ಗಂಭೀರವಾದ ಬದುಕಿನ ತಯಾರಿಯ ಬಗೆಯದೇ ಆಗಿರುತ್ತಿತ್ತು. ಇಂಥ ಪರಿಸರದಲ್ಲಿ ಸಹಜದ ಬದಲಾವಣೆಗಳನ್ನ ಕಾಣಲು ಶತ ಶತಮಾನಗಳೇ ಉರುಳಬೇಕಾಯಿತು. ಬಾಲಕ, ಬಾಲಕಿಯರು

ಕಿರುರೂಪದ ದೊಡ್ಡವರೇ ಆಗಿರುತ್ತಿದ್ದರು. ಹೆಣ್ಣು ಇಂಥ ನಾಗರಿಕರನ್ನ ಹೆರುವ ಭೂಮಿಕೆಯಾಗಿದ್ದಳು. ಹೀಗಾಗಿಯೇ ಎಂದು ಕಾಣುತ್ತದೆ, ಕ್ಲಾಸಿಕಲ್ ಅಂದುಕೊಳ್ಳುವ ಸಾಹಿತ್ಯ ಮಗುವನ್ನ ಅಷ್ಟಾಗಿ ಗುರುತಿಸಲೇ ಇಲ್ಲ ಎಂದರೆ ತಪ್ಪಾಗದು. ಮಧ್ಯಯುಗದುದ್ದಕ್ಕೂ, ಹಾಗೆಯೇ ಮುಂದಿನ ಬಹುದೀರ್ಘ ಸಮಯದವರೆಗೂ ಮಕ್ಕಳ ಸಾಹಿತ್ಯದ ಮುಖ್ಯ ಸಂಗತಿಯಾದ ಮಗುವನ್ನು ತೀರ ವಿರಳವಾಗಿ ಗಮನಿಸಲಾಯಿತು.

ಹೀಗಾಗಿ ಔದ್ಯೋಗಿಕ ಕ್ರಾಂತಿಯ ಉದಯದವರೆಗೂ ಮಕ್ಕಳ ಸಾಹಿತ್ಯ ತನ್ನ ಅಸ್ತಿತ್ವ ತೋರಿಸುವಲ್ಲಿ ಸಂಕೋಚವನ್ನೇ ಅನುಭವಿಸಿತು. 'ಎನ್‌ಲೈಟನ್‌ಮೆಂಟ್' ವಿಚಾರಧಾರೆಯಿಂದ, ಲೋಕೆ, ರೂಸೋ ಅಂಥ ತತ್ವಜ್ಞರಿಂದ ಪಾಶ್ಚಾತ್ಯರಲ್ಲಿ ಈ ಹೊಸತು ಆದ್ಯತೆ ಪಡೆಯುತ್ತ, ಮತ್ತು ರೂಪುಗೊಳ್ಳುತ್ತ ಬಂತು. ಜಾನ್ ಲೋಕೆ ಶಿಕ್ಷಣ ಕುರಿತು ಒಂದು ಬಗೆಯ ಸ್ವತಂತ್ರ ದೃಷ್ಟಿಕೋನ ವ್ಯಕ್ತಪಡಿಸಿದ್ದರಿಂದ, ರಂಜನೆಯೊಂದಿಗೆ ಮಕ್ಕಳನ್ನ ರೂಪಿಸಬಹುದೆಂಬ ವಿಚಾರಧಾರೆಯನ್ನ ಹರಿಸಿದರೆ, ರೂಸೋ ಮಕ್ಕಳನ್ನ ಸಹಜವಾಗಿ, ಸರಳವಾಗಿ ಯಾವ ಒತ್ತಾಯಗಳಿಲ್ಲದೆ ಬೆಳೆಸುವ ವಿಚಾರ ತಂದುದರಿಂದ, ಮಕ್ಕಳ ಬಾಲ್ಯ ಪ್ರಾಶಸ್ತ್ಯ ಪಡೆಯುವುದರೊಂದಿಗೆ ಮಕ್ಕಳ ಪುಸ್ತಕ ಲೋಕ ತೆರೆದುಕೊಂಡಿತು. ಇಂಗ್ಲಿಷಿನವರು ತಮ್ಮ ಬಾಲ್ಯಕ್ಕೆ ವಿದಾಯ ಹೇಳುವುದಿಲ್ಲ ಎನ್ನುವ ಮಟ್ಟಿಗೆ ಬಾಲ್ಯದೊಡನೆ ಮಾಯೆ ಇರಿಸಿಕೊಳ್ಳುವವರು ಎನ್ನುವ ಹೇಳಿಕೆಯೊಂದಿದೆ. ಅದನ್ನ ಸಾಬೀತುಗೊಳಿಸುವಂತೆಯೇ ಇಂಗ್ಲಿಷಿನ ಸಾಂಸ್ಕೃತಿಕ ವಾತಾವರಣದಲ್ಲಿ ಮಕ್ಕಳ ಕಡೆಗಿನ ಗಮನ ಎಲ್ಲೆಡೆಗಿಂತ ಮೊದಲು ಹರಿಯಿತು ಹಾಗೂ ಮಕ್ಕಳಿಗಾಗಿನ ಬರವಣಿಗೆಯ ತುಡಿತ ಅಲ್ಲಿಯೇ ಶುರುವಾಯಿತು. ವಿಶ್ವದ ಮಕ್ಕಳ ಇತಿಹಾಸದ ಮೊದಲ ಪುಟಗಳನ್ನ ಹೀಗೆ ಇಂಗ್ಲಿಷಿನಲ್ಲಿಯೇ ಕಾಣಬೇಕಾಗಿರುವುದು, ಅಥವಾ 'ಮಕ್ಕಳ ಸಾಹಿತ್ಯ' ಅಂತ ಅವರೇ ಮೊದಲಿಗೆ ಮಾತನಾಡಿ ಅದರ ಪುಟಗಳನ್ನ ತೆರೆದರು. ಅದನ್ನ ಪ್ರತ್ಯೇಕವಾಗಿ ಪ್ರಾಶಸ್ತ್ಯ ಕೊಟ್ಟು ನೋಡಿದರು. ಉಳಿದಂತೆ ಜಗತ್ತಿನ ಇತರ ಕಡೆಗಳಲ್ಲಿ ಇಲ್ಲಿನ ಪ್ರಭಾವದಿಂದಲೇ ಮಕ್ಕಳ ಸಾಹಿತ್ಯದ ಹೊಸ ಮನ್ವಂತರ ಶುರುವಾದುದು ಎಂದರೆ ತಪ್ಪಿಲ್ಲ.

ಇಂಗ್ಲಿಷಿನ ರೊಮ್ಯಾಂಟಿಕ್ ಸಾಹಿತ್ಯದ ಸಂದರ್ಭದಲ್ಲಿ ವಿಲಿಯಮ್ ಬ್ಲೇಕ್, ವರ್ಡ್ಸ್‌ವರ್ತ್ ಅಂಥ ಕವಿಗಳಿಂದ ಬಾಲ್ಯ ತನ್ನ ಅಸ್ತಿತ್ವವನ್ನ ವಿಶೇಷವಾಗಿಯೇ ತೀರಿಸಿಕೊಂಡಿತು. ಸಾಮಾನ್ಯವಾಗಿ ಭಾವಿಸುವಂತೆ ೧೮ನೆಯ ಶತಮಾನದ ಅರ್ಧದ ಹೊತ್ತಿಗೆ ವ್ಯಕ್ತಿಯಾಗಿಯೂ ಹಾಗೆಯೆ ಮಗು ತನ್ನ ಸ್ವಂತಿಕೆಯ ಸ್ಥಾನವನ್ನು ಪಡೆಯಿತು ಎನ್ನಬಹುದು. ಈ ಸ್ಥಿತಿಗೆ, ಅಲ್ಲದೆ ಮಗುವಿಗಾಗಿರುವ ನಿರ್ದಿಷ್ಟದ ಸಾಹಿತ್ಯದ ಉದಯಕ್ಕೆ ಇತರೇ ಅನೇಕ ಐತಿಹಾಸಿಕ ಸಂಗತಿಗಳನ್ನ ತಳುಕು ಹಾಕಿ ನೋಡಲಾಗುತ್ತದೆ. ಮಧ್ಯಮ ವರ್ಗದ ಉದಯ, ಮಹಿಳೆಯ ಅಭಿವೃದ್ಧಿ(ಮಹಿಳೆಗೆ ಸಂಬಂಧಿಸಿದ ಹಾಗೆ ಮುಖ್ಯವಾಗಿ ಮಕ್ಕಳ ಸಾಹಿತ್ಯದ ಗಣನೆ), ರೋಗಗಳ ಹಬ್ಬುವಿಕೆಯಿಂದ, ಹೆರಿಗೆಯಲ್ಲಿ ತಾಯಂದಿರು ಅಪಾರ ಸಂಖ್ಯೆಯಲ್ಲಿ ಮರಣ ಹೊಂದುತ್ತಿದ್ದುದು, ಅದರಿಂದ ಅನಾಥವಾಗುಳಿಯತೊಡಗಿದ ಅಪಾರ ಸಂಖ್ಯೆಯ ಮಕ್ಕಳು, ಜೊತೆಗೆ ದುಡಿಯುವ ವರ್ಗದ ಮಕ್ಕಳು ತಮ್ಮ ಅಪ್ಪ ಅಮ್ಮ ಇಬ್ಬರೂ ದುಡಿಯತೊಡಗಿದಂತೆ ತಾವೂ ದುಡಿಮೆಗೆ ಒಳಗಾಗತೊಡಗಿದುದು, ಜೊತೆಗೆ ಮಧ್ಯಮ ವರ್ಗದ, ಹಾಗೂ ಮೇಲಿನ ವರ್ಗದ ಮಕ್ಕಳು ದಾದಿಯರ ಆರೈಕೆಯಲ್ಲಿ ಸಮಯ ಕಳೆಯಬೇಕಾದ ಪ್ರಸಂಗ ಬಂದುದು, ಇದರಿಂದೆಲ್ಲ

ಶಾಲೆಯೆಂಬ ವ್ಯವಸ್ಥೆ ಅಗತ್ಯವಾಗಿ ಕಾಣತೊಡಗಿದುದು ಇದೇ ಮುಂತಾದ ಸಾಮಾಜಿಕ ಸಂದರ್ಭಗಳು ಮಕ್ಕಳೆಡೆಗೆ ಸರಿಯಾದ ಗಮನಹರಿಸಬೇಕೆಂಬ ಒತ್ತಡಗಳನ್ನು ತಂದವು.

ವಿಶೇಷವಾಗಿ ರೊಮ್ಯಾಂಟಿಕ್ ಸಾಹಿತ್ಯದ ವಾತಾವರಣದಲ್ಲಿ ಪ್ರಕೃತಿಯ ಗುಂಗು ಸಾಕಷ್ಟು ಕವಿಗಳನ್ನು ಹಿಡಿದುದರಿಂದ, ಬಾಲ್ಯವನ್ನು ಪ್ರಕೃತಿಗೆ ಹತ್ತಿರವಾಗಿ, ವಾಸ್ತವಗಳ ಅನುಭವಗಳಿಂದ ರೂಪಿತವಾಗುವ ಮೊದಲು ಸ್ವಚ್ಛಂದ ಸೃಷ್ಟಿಯಿಂದ ಮುಗ್ಧವಾಗಿ ಕಲಿಯುವುದೇ ಹಿರಿದಾದುದು, ಸಹಜವಾದುದು ಎನ್ನುವಂತೆ ಕಂಡುದನ್ನ ವಿಶೇಷವಾಗಿಯೇ ಹೇಳಬೇಕು ಇಲ್ಲಿ. ವಿಲಿಯಮ್ ಬ್ಲೇಕ್‌ನ Songs of Innocence and Songs of Experience ಹಾಗೂ ವರ್ಡ್ಸ್‌ವರ್ತ್‌ನ Intimations on Immortality ಅಂಥ ಕೃತಿಗಳು ಬಾಲ್ಯದ ಸುತ್ತಲಿನ ಭಾವಮಯತೆಯನ್ನ ಹೆಚ್ಚಿಸಿದವು. ಮಕ್ಕಳಿಗಾಗಿ ಪ್ರತ್ಯೇಕ ಸಾಹಿತ್ಯ ಬರತೊಡಗಿತಾದರೂ ಮಕ್ಕಳ ಕುರಿತ ಈ ಬಗೆಯ ಬರವಣಿಗೆಗಳು ಉಂಟುಮಾಡಿದ ವಾತಾವರಣ ಗಣನೀಯವಾದುದು.

ಮಕ್ಕಳ ಸುತ್ತಲಿನ ವಾತಾವರಣ ಬದಲಾಗತೊಡಗಿದಂತೆ ಓದಿನ ಹಂಬಲ, ಅದಕ್ಕಾಗಿ ಪಠ್ಯಗಳ ಸೃಷ್ಟಿ ಸಿದ್ಧವಾಗತೊಡಗಿ ಸಾಹಿತ್ಯದ ಲೋಕ ಅನಾವರಣಗೊಳ್ಳತೊಡಗಿತು. ಜನಪದ ಕತೆಗಳು, ಚಾಪ್ ಪುಸ್ತಕಗಳಾಗಿ ಬೀದಿ ಬದಿಯಲ್ಲಿ ಕಾಣಿಸಿಕೊಂಡುದು, ಪುರಾಣದ ಮೂಲದ ಕತೆಗಳು ಕಾಣಿಸಿಕೊಂಡುದು ಮಕ್ಕಳಿಗೆ ನಾನಾ ಬಗೆಯ ಓದಿನ ಉಣಿಸನ್ನ ನೀಡತೊಡಗಿದವು. ಮುದ್ರಣ ವ್ಯವಸ್ಥೆಯ ಹಲವಂದದ ಸುಧಾರಣೆಗಳು ಕಾಲಿಟ್ಟಂತೆ ಅಂದದ ಪುಸ್ತಕಗಳಿಗೆ ನಾಂದಿಯಾಗತೊಡಗಿತು. ಕೇವಲ ನೀತಿಯ, ಹೇರಿಕೆಯ ಮಾರ್ಗದರ್ಶನದ ವಿಷಯಗಳಿಂದ ಬಿಡಿಸಿಕೊಂಡು ಬರಹಗಳು ಉಲ್ಲಾಸಮಯವಾಗಿ ಓದನ್ನು ವೃದ್ಧಿಗೊಳಿಸುವಲ್ಲಿ ತೊಡಗಿಕೊಳ್ಳುತ್ತ ಬಂದವು. ಮಕ್ಕಳ ಪುಸ್ತಕಗಳ ಲೋಕ ಮಾರುಕಟ್ಟೆಯ ಸಾಧ್ಯತೆಗಳನ್ನ ಹೊಸ ಬಗೆಯಲ್ಲಿ ಹೆಚ್ಚಿಸುತ್ತ ಮತ್ತಷ್ಟು ಒತ್ತಾಸೆಯನ್ನ ತಂದಿತು ಕೂಡ. ಹೀಗೆ ಇಂಗ್ಲಿಷ್ ಪರಿಸರದಲ್ಲಿಯೇ ಮಕ್ಕಳ ಸಾಹಿತ್ಯದ ತುರುಸಿನ ಚಟುವಟಿಕೆಗಳು, ಚರ್ಚೆಗಳು, ಮಾತುಕತೆಗಳು ನಡೆದುಕೊಂಡು ಬಂದು ಈಗ ಅಲ್ಲಿ ಅಚ್ಚರಿಪಡುವಷ್ಟು ಸಾಧನೆ ಕಾಣುತ್ತದೆ.

ಜನಪದ ಹಾಗೂ ಪ್ರಾಚೀನ ಸಾಹಿತ್ಯ ಪರಂಪರೆಯಲ್ಲಿ ಮಕ್ಕಳ ಸಾಹಿತ್ಯದ ಸುಳುಹುಗಳು

ಇಂಗ್ಲಿಷಿನ ಪ್ರಭಾವದಿಂದಲೇ ಪ್ರಮುಖವಾಗಿ ಹೊಸಗಾಲದ ಕನ್ನಡದ ನಮ್ಮ ಮಕ್ಕಳಿಗೆ ಅವರದೇ ಆದ ಓದಿನ ಸಾಹಿತ್ಯ ಸಾಮಗ್ರಿಯ ಕಲ್ಪನೆ ಕಾಣಿಸಿತು ಎಂಬುದೇನೋ ನಿಜವೇ. ಆದರೆ ಇದಕ್ಕಿಂತ ಮೊದಲು ನಮ್ಮ ಪರಂಪರೆಯಲ್ಲಿ ಏನೂ ಇರಲಿಲ್ಲವೆ? ಇರಲಿಲ್ಲವೆಂದು ಹೇಳಿದರೆ ತಪ್ಪಾಗುತ್ತದೆ. ಅತ್ಯಂತ ಶ್ರೇಷ್ಠವಾದ ಸಾಧನೆ ಮಾಡಿದ ಪರಂಪರೆ ನಮ್ಮಲ್ಲಿದ್ದೇ ಇತ್ತು. ಭಾರತದ ಕಿರುರೂಪವಾಗಿ ಕನ್ನಡ ನಾಡಿನಲ್ಲೂ ಇದೆಲ್ಲ ಕಾಣಿಸಿಕೊಂಡೇ ಇದ್ದಿತು. ಆದರೆ ಹೊಸಗಾಲದಲ್ಲಿ ಮಕ್ಕಳನ್ನು ನೋಡತೊಡಗಿದ ದೃಷ್ಟಿಕೋನ ಅಲ್ಲಿ ಇರಲಿಲ್ಲ. ನಮ್ಮಲ್ಲಿ ಪ್ರಾಚೀನದಿಂದಲೂ ಸಾಹಿತ್ಯದಲ್ಲಿ ಮಕ್ಕಳು ಕಾಣಿಸಿಕೊಂಡುದು ಇದ್ದೇ ಇದೆ. ನಚಿಕೇತನಂಥವನನ್ನು ಉಪನಿಷತ್ತುಗಳಲ್ಲೇ ನಾವು ಸಂಧಿಸುತ್ತೇವೆ. ಸತ್ಯಕಾಮ ಜಾಬಾಲನಂಥವನನ್ನು ಕಾಣುತ್ತೇವೆ. ನಮ್ಮ ಪರಂಪರೆಯ ಸಾಹಿತ್ಯ ನಮ್ಮ ಮುಂದೆ, ನಮ್ಮ ಮಕ್ಕಳ ಮುಂದೆ ಸಾಕಷ್ಟು ಮಕ್ಕಳ

ಉದಾಹರಣೆಗಳನ್ನ ಇರಿಸಿದೆ. ಆದರೆ ಅವರೆಲ್ಲ ಅಸಾಧ್ಯವಾದುದನ್ನ ಮಾಡಿ ತೋರಿಸಿದ ಧೀರರು, ಆದರ್ಶದ ಶ್ರೇಷ್ಠರು. ಸರಿ ಸುಮಾರು ಇವರೆಲ್ಲ ಬದುಕಿನ ಗಂಭೀರವಾದ ಸಂಗತಿಗಳಿಗಾಗಿ ಸಣ್ಣ ವಯಸ್ಸಿನಲ್ಲಿಯೇ ನಿಷ್ಠೆಯಿಂದ ತುಡಿದವರು, ಹಟದಿಂದ ಸಾಧಿಸಿದವರು. ಧೃವ, ಪ್ರಹ್ಲಾದ, ಮಾರ್ಕಂಡೇಯ, ಅಭಿಮನ್ಯು ಹೀಗೆ ಒಬ್ಬರೆ ಇಬ್ಬರೇ. ಶ್ರೇಣೀಕೃತ ಸಮಾಜದ ವಾತಾವರಣ ಮೂಡುವುದಕ್ಕಿಂತ ಮೊದಲಾಗಲಿ, ನಂತರದಲ್ಲಾಗಲಿ ಋಷ್ಯಾಶ್ರಮಗಳಂಥ ವಿದ್ಯಾಕೇಂದ್ರಗಳಲ್ಲಿ ಶಿಕ್ಷಣ ಸಿಗುತ್ತಿದ್ದುದು ಬಹುಶಃ ಎಲ್ಲ ಮಕ್ಕಳಿಗಾಗಿ ಅಲ್ಲವೆ ಅಲ್ಲ. ಕೆಲವೆಲ್ಲ ಅಪವಾದಗಳಿರಬಹುದು. ಅವೂ ವಿರಳವಾದ, ಕೆಲವೆಲ್ಲ ಒಂದಿಷ್ಟು ದುಸ್ತರದ ಪ್ರಸಂಗಗಳನ್ನ ಎದುರಿಸಿದಂತಹವಾಗಿರುವುದೇ ಆಗಿರುತ್ತದೆ. ಅದೇನೇ ಇದ್ದರೂ ಈ ವಿರಳವಾದ ಉಳ್ಳ ಸಮಾಜದ, ಮೇಲ್‌ಜಾತಿಯ ಸಮಾಜದ ಮಕ್ಕಳಿಗಾದರೂ ದೊರಕುತ್ತಿದ್ದ ಓದು, ಪಾಠದ ಸಾಮಗ್ರಿ ಬದುಕಿನ ಗಂಭೀರ ತಯಾರಿಗಾಗಿಯೇ, ಮತ್ತು ಆದರ್ಶಗಳ ಸಿದ್ಧತೆಗಾಗಿಯೇ ಎಂದರೆ ತಪ್ಪಾಗದು. ಬಹುಸಂಖ್ಯೆಯ ಮಕ್ಕಳು ತಮ್ಮ ತಮ್ಮ ಮನೆಯ ಉದ್ಯೋಗವನ್ನೇ ಹಿರಿಯರಿಂದ ಕಲಿಯುತ್ತ ಬದುಕನ್ನ ರೂಪಸಿಕೊಳ್ಳುತ್ತಿರಲು ಸಾಕು. ಹಾಗಾಗಿ ಸಾರ್ವತ್ರಿಕ ಶಿಕ್ಷಣದ ಸಂಗತಿ ಆಗೆಲ್ಲ ಸಾಧ್ಯದ ಮಾತೇ ಆಗಿರಲಿಲ್ಲ.

ಪಂಚತಂತ್ರದ ಕುರಿತು ಒಂದಿಷ್ಟು ಅಭಿಪ್ರಾಯಗಳಿರುವುದನ್ನು ತಳ್ಳಿಹಾಕಲಾಗದು.. ವಿಶ್ವದಲ್ಲಿಯೇ ಅವುಗಳಷ್ಟು ಪ್ರಚುರಗೊಂಡ ಬೇರೆ ಉದಾಹರಣೆಗಳಿಲ್ಲ. ಅಷ್ಟು ಯಶಸ್ಸು ಅವುಗಳದು. ಇಸೋಪನ ನೀತಿ ಕತೆಗಳ ಮೂಲದಲ್ಲಿಯೂ .ಇವೇ ಕತೆಗಳಿರಬಹುದಾದುದನ್ನ ವಿದ್ವಾಂಸರು ಊಹಿಸಿದುದೂ ಇದೆ. ಈಗೆಲ್ಲ ಪಂಚತಂತ್ರ ಎಂದೊಡನೆ ಮಕ್ಕಳ ಸಾಹಿತ್ಯವೇ ಎಂದು ನಾವು ಸಾರಾಸಗಟಾಗಿ ಹೇಳಿಬಿಡುತ್ತೇವೆ. ಆದರೆ ಮೂಲದಲ್ಲಿ ಈ ಪಂಚತಂತ್ರ ಕತೆಗಳು ಮಕ್ಕಳನ್ನ ದೃಷ್ಟಿಯಲ್ಲಿಟ್ಟುಕೊಂಡು ಸೃಷ್ಟಿಗೊಂಡವು ಎಂಬುದೇ ಚರ್ಚೆಗೊಳಗಾದ ಸಂಗತಿ. ಈ ಕತೆಗಳು ರಾಜಕುಮಾರರಿಗಾಗಿಯೇ ವಿಶಿಷ್ಟ ಉದ್ದೇಶಗಳನ್ನ ಹೊಂದಿ ಅವರಿಗಾಗಿಯೇ ರೂಪುಗೊಂಡವು ಎನ್ನುವುದು ಒಂದು ಬಲವಾದ ಅಭಿಪ್ರಾಯ. ಅಲ್ಲಿನ ವ್ಯಾವಹಾರಿಕ ಸಂಗತಿಗಳಿಗೆ ಪಾಠವಾಗುವ, ಅದಕ್ಕಾಗಿ ಸಿದ್ಧಗೊಳಿಸುವ ತಂತ್ರಗಳನ್ನ ಈ ಕತೆಗಳು ಹೇಳುತ್ತಿರುವ ಹಾಗೆ ಕಾಣಲಾಗುತ್ತದೆ. ಹಾಗೆ ನೋಡಿದರೆ, ಅವರು ದಾರಿ ತಪ್ಪಿದ ರಾಜಕುಮಾರರು. ಈ ನಿಟ್ಟಿನಲ್ಲಿ ವಿದ್ವಾಂಸರ ವಿಭಿನ್ನ ಅಭಿಪ್ರಾಯಗಳಿದ್ದರೂ, ಈ ಕೃತಿ ರಾಜರು, ಅವರ ಹತ್ತಿರದ ಪ್ರತಿಷ್ಠಿತರ ನಡುವೆಯೇ ಮತ್ತೆ ಮತ್ತೆ ಪ್ರತಿಗಳನ್ನ ಹೊಂದುತ್ತ ಓಡಿಯಾಡಿಕೊಂಡಿತ್ತು ಎನ್ನುವುದರಲ್ಲಿ ಸಂಶಯವಿಲ್ಲ. ಸ್ವಪ್ನಾ ದತ್ತಾ ಎನ್ನುವವರ ಅಭಿಪ್ರಾಯವೊಂದನ್ನಿಲ್ಲಿ ನೋಡಬಹುದು ‘ . . . Vishnu Shrama agrees to teach not a group of goody, innocent youngsters, but a parcel of spoilt brats who are already young adults, who perhaps because of their being brought up in a royal household are not merely acquainted with the ways of the world but also quite knowledgeable about bribes, pay offs, courtesans, extramarital affairs, liasions and the like . . . these are not stories originally meant for children but for the young adult.’

(‘ವಿಷ್ಣುಶರ್ಮ ಕಲಿಸಲು ಒಪ್ಪಿಕೊಂಡುದು ಭೋಳೆ, ಮುಗ್ಧ ಮಕ್ಕಳಿಗಲ್ಲ, ಬದಲಾಗಿ ದಾರಿ ತಪ್ಪಿದ, ಹದಿಹರೆಯದ ಹುಡುಗರಿಗೆ. ಅರಸೊತ್ತಿಗೆಯ ವಾತಾವರಣದಲ್ಲಿ ಬೆಳೆದು ಬಂದ ಅವರು ಸುತ್ತಲಿನ ಲೋಕ ವ್ಯವಹಾರಗಳನ್ನ ಬಲ್ಲವರಾಗಿದ್ದರಷ್ಟೇ ಅಲ್ಲ, ಅಲ್ಲಿನ

ಲಂಚಗುಳಿತನ, ಅನೈತಿಕ ಸಂಬಂಧಗಳು, ಮುಂತಾಗಿ ಎಲ್ಲವನ್ನು ಬಲ್ಲವರು. ಈ ಕತೆಗಳು ಪುಟ್ಟ ಮಕ್ಕಳಿಗೆ ಅಲ್ಲ, ಹದಿಹರೆಯದವರಿಗಾಗಿ.')

ಪಂಚತಂತ್ರಕ್ಕೆ ಆಧಾರವಾಗಿರಬಹುದಾದ ಕಥಾಸರಿತ್‌ಸಾಗರದಂಥ ಕೃತಿಗಳು ಮಕ್ಕಳನ್ನೇ ಗಮನದಲ್ಲಿರಿಸಿಕೊಂಡು ಒಟ್ಟಾಗಿಸಿದ ಕತೆಗಳಲ್ಲ. ಜನಪದರಲ್ಲಿರುವ ವಿಭಿನ್ನ ಕತೆಗಳೇ ಇರಬಹುದಾದಂಥವು ಇವು. ಹೀಗೆಯೇ ಹಳ್ಳಿವಾಡದಲ್ಲಿ ಮೊದಲಿನಿಂದಲೂ ತೋಂಡಿ ಸಂಪ್ರದಾಯದಲ್ಲಿ ಬಂದಿರುವ ಕತೆಗಳು ಇದ್ದೇ ಇದ್ದವು. ಅವಾವವೂ ಮಕ್ಕಳಿಗೇ ನೇರವಾಗುಳ್ಳ ಸಾಮಗ್ರಿಯಾಗಿ ಇದ್ದುವಲ್ಲ. ಹಿರಿಯರು ಮಕ್ಕಳನ್ನೇ ಮುಂದೆ ಕೂರಿಸಿಕೊಂಡು ಹೇಳುತ್ತಿರುವ ಸಮಯದಲ್ಲಿ ಈ ಕತೆಗಳು ಮಕ್ಕಳಿಗೆ ಒಂದಿಷ್ಟೆಲ್ಲ ತಕ್ಕುದಾಗಿ ಸಿದ್ಧವಾಗುತ್ತಿದ್ದಿರಲು ಸಾಕು. ಆ ಆ ಸಮಯದ ಅಸ್ತಿತ್ವ ಅವಕ್ಕೆ. ಜಾನಪದವನ್ನ ಹಾಗೆ ಹಾಗೆ ಗ್ರಹಿಸುವುದೇ ಸರಿಯಾದುದು ಎನಿಸುತ್ತದೆ. ಎಲ್ಲ ಸಂಸ್ಕೃತಿಗಳಲ್ಲೂ ಈ ಬಗೆಯ ಮಕ್ಕಳ ಲೋಕ ಇರಲಿಕ್ಕೆ ಸಾಕು. ಅದು ಬರವಣಿಗೆಯಲ್ಲಿರದ ಕಾರಣ ದಾಖಲೆಯಾಗಿ, ಗುರುತಿಗೆ ಸಿಗದೇ ಹೋಗಿರುವುದು. ಅಷ್ಟಾಗಿಯೂ ಅದು ಇಂದು ನಾವು ಭಾವಿಸುವ ಹಾಗೆ ಆದಷ್ಟೂ ನಿರ್ದಿಷ್ಟವಾಗಿದ್ದುದಲ್ಲವೇ ಅಲ್ಲ. ಆ ಕಾಲದ ಹಿರಿಯರ ಮನೋಸ್ಥಿತಿ ಹೇಗೆಲ್ಲ ವರ್ತಿಸಿತೊ ಅದರ ಪಡಿನೆಳಲಾಗಿಯೇ ಅದು ಇರಲು ಸಾಧ್ಯ. ಹಾಗೆ ಕೇವಲ ಮಕ್ಕಳನ್ನ ಸೇರಿಸಿಕೊಂಡು ಹೇಳಿರಬಹುದಾದ ಕತೆಯೋ ಹಾಡೋ ರಂಜನೆಯನ್ನ ಉಳ್ಳುದಾಗಿದ್ದರೂ ಸಾಕಷ್ಟು ಪಾಲು ದೊಡ್ಡವರ ಗ್ರಹಿಕೆಗಳನ್ನ ಬಾಲ ಮನಗಳ ಮೇಲೆ ಹೇರಿರುವಂಥದೇ ಇರಬಹುದಾಗಿದೆ. ಹಾಗಾಗಿ ಮಕ್ಕಳ ಸಾಹಿತ್ಯದ ಅದರದೇ ಆದ ಆಕಾರ, ಆದಷ್ಟೂ ಸ್ವಚ್ಛಂದವಾದ ಅಸ್ತಿತ್ವ, ಇಂದು ನಾವು ಅಪೇಕ್ಷೆ ಪಡುವಂಥದು ಇರಲಿಲ್ಲವೆಂದೇ ಹೇಳಬಹುದಾಗಿದೆ. ಹಾಗಾಗಿ ಪಂಚತಂತ್ರದ ಕತೆಗಳು ಇವತ್ತು ಮಕ್ಕಳಿಗೆ ಅಂತ ನಿಗದಿತವಾಗಿರುವ ಹಾಗೆ ಅವು ಸೃಷ್ಟಿಯಾಗಿ ಕ್ರಿಯಾಶೀಲವಾಗಿ ಬಳಕೆಯಾಗುತ್ತಿದ್ದ ಸಂದರ್ಭದಲ್ಲಿ ಇರಲಿಕ್ಕಿಲ್ಲ ಎನ್ನುವುದೇ ಸಾಧುವಾದುದು. ಅಷ್ಟಾಗಿ ಅಂದು ಬರವಣಿಗೆ ಏನಿದ್ದರೂ ತಾಳೆಗರಿಗಳಂಥ ಸಾಮಗ್ರಿಗಳಲ್ಲಿ ಆಗುತ್ತಿದ್ದುದರಿಂದ ಅದೆಲ್ಲ ಸಾಮಾನ್ಯದ ಮಕ್ಕಳಿಗೆ ತಲಪುವುದು ಸಾಧ್ಯವೇ ಇರಲಿಕ್ಕಿಲ್ಲ ಎನ್ನಬಹುದು. ಅಷ್ಟಲ್ಲದೆ ಪಂಚತಂತ್ರ ಕತೆಗಳೆಂದರೆ ಪ್ರಾಣಿಕತೆಗಳು ಎನ್ನುವಷ್ಟರ ಮಟ್ಟಿಗೆ ಪ್ರಚುರವಾಗಿರುವಂತೆ ಆ ಕೃತಿ ಇಲ್ಲ. ಅಲ್ಲಿ ಇತರೇ ಕತೆಗಳೂ ಸಾಕಷ್ಟಿವೆ, ಅಲ್ಲದೆ ಬದುಕಿನ ಗಂಭೀರ, ಮಕ್ಕಳಿಗೆ ಸೂಕ್ತವೇ ಅಲ್ಲದ ಕತೆಗಳೂ ಹಲವಿವೆ ಎನ್ನುವುದನ್ನೂ ಹೇಳಬೇಕು ಇಲ್ಲಿ. ವ್ಯಾವಹಾರಿಕ ಬದುಕಿನ ಜಾಣತನದ ತಂತ್ರಗಳನ್ನ ಹೇಳುವ ಈ ಕತೆಗಳು ಕೇವಲ ಪಂಚತಂತ್ರಗಳನ್ನಲ್ಲ, ಇನ್ನೂ ಸಾಕಷ್ಟು ಸಂಖ್ಯೆಯ ತಂತ್ರಗಳನ್ನ ಒಳಗೊಂಡಿರಬೇಕಾಗುತ್ತದೆ, ಹಾಗೆ ಇಲ್ಲಿ ಕತೆಗಳೊಳಗೆ ಕತೆಗಳಾಗಿ ಬಗೆಬಗೆಯ ಕತೆಗಳಿವೆ ಕೂಡ. ಸಂಸ್ಕೃತದ ನಂತರ ಮೊಟ್ಟಮೊದಲಬಾರಿಗೆ ಕನ್ನಡದಲ್ಲಿಯೇ ತರ್ಜುಮೆಗೊಂಡ ಪಂಚತಂತ್ರದ ಕೃತಿ ದುರ್ಗಸಿಂಹನದು. ದುರ್ಗಸಿಂಹನ ಪಂಚತಂತ್ರ ರಾಜಾಸ್ಥಾನ, ಪಂಡಿತರ ವಾತಾವರಣದಲ್ಲಿಯೇ ಸಮ್ಮಾನಗೊಂಡುದೇ ವಿನಾ ಮಕ್ಕಳಿಗೆ, ಸಾಮಾನ್ಯ ಜನತೆಗೆ ತಲಪುವ ಬಗೆಯದಲ್ಲವೇ ಅಲ್ಲ. ಹಾಗಿರುವಾಗ ತೋಂಡಿ ಸಂಪ್ರದಾಯದಲ್ಲಿಯೇ ಜನಪದವಾಗಿ ಈ ಪಂಚತಂತ್ರದ ಕತೆಗಳು ಬಹುಸಂಖ್ಯೆಯ ಮಕ್ಕಳಿಗೆ ತಲಪಬೇಕಾಗಿತ್ತು. ನಮ್ಮ ತೋಂಡಿ ಸಂಪ್ರದಾಯದ ವಿಭಿನ್ನ ಭಾಷೆಗಳಲ್ಲಿ ಪಂಚತಂತ್ರವೆಂದೇ ಕರೆಸಿಕೊಂಡು ಈ ಕತೆಗಳು ಹೀಗೆ ಹೀಗೇ ಎಷ್ಟರ ಮಟ್ಟಿಗೆ ಪ್ರಚಾರದಲ್ಲಿದ್ದವು ಎನ್ನುವದರ ಅಧ್ಯಯನ ಬಹುಶಃ ನಮ್ಮ ನಡುವೆ

ನಡೆದ ಹಾಗೆ ಕಾಣುವುದಿಲ್ಲ. ಇಂದು ಕನ್ನಡದಂಥ ಭಾಷಾವಲಯದಲ್ಲಿ ಜನಪದ ಸಾಮಗ್ರಿಯಾಗಿ ಕಥಾ ಪ್ರಪಂಚವನ್ನ ಅವಲೋಕಿಸಿದರೆ ಅಲ್ಲಿ ಈ ಬಗೆಯ ಇದೇ ರೀತಿಯಲ್ಲಿ, ಅಂದರೆ ಒಂದು ವ್ಯವಸ್ಥೆಯಲ್ಲಿ ಸಿಗುವುದಿಲ್ಲ ಎನ್ನುವುದೂ ಅಷ್ಟೇ ಸತ್ಯವಾದ ಮಾತು. ಏನಿದ್ದರೂ ಮುದ್ರಣ ಮಾಧ್ಯಮ ಬಂದಮೇಲೇ ಈ ಪಂಚತಂತ್ರ ಕತೆಗಳು ಇದ್ದಕಿದ್ದಹಾಗೆ ಭರ್ಜರಿಯಾಗಿ ಪ್ರಚಾರ ಕಂಡವೇನೋ ಎನಿಸುತ್ತದೆ. ಗ್ಯಾರೆಟ್ ಜಾನ್, ರೆ. ಕಿಟಲ್ ಅಂಥ ಮಿಷನರಿಗಳೇ ಮೊದಲು ಮಕ್ಕಳಿಗಾಗಿ ಎಂದು ಈ ಪಂಚತಂತ್ರದ ಕತೆಗಳನ್ನು ಕನ್ನಡದಲ್ಲಂತೂ ತರುವ ಪ್ರಯತ್ನ ಮಾಡಿದುದನ್ನು ನೋಡುತ್ತೇವೆ. ಇತರ ಭಾರತೀಯ ಭಾಷೆಗಳಲ್ಲಿ ಈ ಬಗೆಯ ಪ್ರಯತ್ನವಾಗಿರುವುದನ್ನ ಗಮನಿಸುತ್ತ ಇದನ್ನೂ ಮಾಡಿರಬಹುದಾಗಿದೆ. ಅಮ್ಮೆಂಬಳ ಅನಂತಯ್ಯ ೧೯೧೮ರಲ್ಲಿ ಹಾಗೂ ಬಂಟ್ವಾಳ ಪದ್ಮನಾಭರು ೧೯೧೭ರಲ್ಲಿ, ಹಾಗೆಯೇ ಮಳಗಿ ವೆಂಕಟರಾಯಪ್ಪ ಸರಳವಾಗಿ ಪಂಚತಂತ್ರದ ಕತೆಗಳನ್ನು ಕನ್ನಡದಲ್ಲಿ ತಂದುದಿದೆ. ಭಾರತೀಯರಲ್ಲಿ ಮುದ್ರಣ ವ್ಯವಸ್ಥೆ ಇಲ್ಲದಾಗಲೂ ಕೆಲ ವರ್ಗಗಳಲ್ಲಿಯಾದರೂ ಪಂಚತಂತ್ರ ಅತ್ಯಂತ ಪ್ರಚಾರ ಪಡೆದುದಾಗಿರಲು ಸಾಕು. ಅದಲ್ಲದೆ ವಿಶ್ವದಲ್ಲೆಲ್ಲ ಅದು ಈಗಾಗಲೇ ಹೆಸರು ಮಾಡಿಯಾಗಿದ್ದುದು. ಹಾಗಾಗಿಯೇ ಮಿಷನರಿಗಳ ಕಣ್ಣು ಅದರ ಮೇಲೆ ಬಿದ್ದಂತೆ ಕಾಣುತ್ತದೆ. ಬಹುಶಃ ಮುಖ್ಯವಾಗಿ ಅಲ್ಲಿನ ಪ್ರಾಣಿ ಕತೆಗಳು ಮಕ್ಕಳಿಗೆ ಹತ್ತಿರವಾಗುತ್ತವೆ ಎನ್ನುವುದನ್ನ ಗಮನಿಸಿ ಮುದ್ರಣಕ್ಕೆ ಮುಂದಾಗಿರಬಹುದು.

ಹೀಗೆ ಜನಪದರ ತೋಂಡಿ ಪರಂಪರೆಯ ಸಾಹಿತ್ಯ ಮಕ್ಕಳಿಗೆ ಬೇಕಾಗುವ, ಅವರನ್ನು ರಂಜಿಸುವ ಸಾಮಗ್ರಿಯನ್ನ ಹೊಂದಿದ್ದರೂ ಅದನ್ನ ನಿಖರವಾಗಿ ಗುರುತಿಸಲಾರದೆ ಹೋಗುತ್ತೇವೆ. ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಜಾನಪದ ಒಂದು ಅಧ್ಯಯನ ವಿಷಯವಾಗಿ ಶುರುವಾದ ಮೇಲೆ ವಿವಿಧ ಮುಖಗಳ ಜನಪದ ಸಾಹಿತ್ಯದ ಸಂಗ್ರಹವಾಗಿದೆ. ಆದರೆ ಮಕ್ಕಳ ಸಾಹಿತ್ಯದ ಕಡೆಗೆ ಅಷ್ಟಾಗಿ ಲಕ್ಷ್ಯ ಹರಿದಿಲ್ಲ. ಎಲ್ಲೋ ಒಬ್ಬಿಬ್ಬರು ಈ ಕಡೆಗೆ ಒಂದಿಷ್ಟು ತುಡಿದುದು ಕಾಣುತ್ತದೆ. ೧೯೭೯ರಲ್ಲಿ ಎಂ. ಎಸ್. ಲಠ್ಠೆ ಅವರು ಉತ್ತರ ಕರ್ನಾಟಕದ ಮಕ್ಕಳ ಪದಗಳನ್ನ ಸಂಗ್ರಹಿಸಿ 'ಚುಕ್ಕೋಳ ಪದಗಳು' ಎಂದು ಸಂಗ್ರಹ ತಂದಿದ್ದರು. ಬೆಟಗೇರಿ ಕೃಷ್ಣಶರ್ಮರ ಮುನ್ನುಡಿಯೊಂದಿಗೆ ಇದು ಬಂದುದು. ಹೀಗೆ ಮತ್ತೆ ಒಂದಿಷ್ಟೆಲ್ಲ ಸಂಗ್ರಹಗಳು ಬಂದಿರಬಹುದು, ಅಷ್ಟೇ. ಆಟದೊಡನೆಯೇ ಹೆಚ್ಚಾಗಿ ಬೆರೆತ ಇಂಥ ರಚನೆಗಳನ್ನ ಅರವಿಂದ ಮಾಲಗತ್ತಿ ಅವರು ತಮ್ಮ ಉತ್ತರ ಕರ್ನಾಟಕದ ಜನಪದ ಆಟಗಳ ಅಧ್ಯಯನದಲ್ಲಿ ಗಮನಿಸಿದ್ದಿದೆ. ಈ ಬಗೆಯ ಸಾಹಿತ್ಯವನ್ನ ನೋಡಿದಾಗ ಇವನ್ನು ಎಷ್ಟೋ ಸಲ ಸಾಹಿತ್ಯ ಎಂದು ಪ್ರತ್ಯೇಕಿಸುವುದಕ್ಕೇ ಸಾಧ್ಯವಾಗುವುದಿಲ್ಲ. ಆಟಕ್ಕೆ ತಕ್ಕ ಹಾಗೆ, ಅಲ್ಲಿನ ದೈಹಿಕ ಚಲನವಲನ, ಸೋಲುಗೆಲುವಿನ ಮಾನಸಿಕ ಸಂಗತಿಗಳು, ಆಟದ ಅಗತ್ಯಗಳು ಮುಂತಾಗಿ ಉದ್ದೇಶಗೊಂಡು ಇವು ಬಳಕೆಯಾಗುತ್ತ ಬಂದಂಥವು. ಬಹಳಷ್ಟು ಯಾವ ನಿರ್ದಿಷ್ಟ ಅರ್ಥಕ್ಕೂ ಅಂಟಿಕೊಳ್ಳದೆ ಕೇವಲ ಆಟಕ್ಕೇ ಹೊಂದಿಕೊಂಡ ಶಬ್ದ ಸಮುಚ್ಚಯಗಳಾಗಿ ಕಾಣುತ್ತವೆ. ಹೆಣ್ಣು ಮಕ್ಕಳ ಆಟಗಳಲ್ಲಿ, ತುಸು ಅವಕಾಶ ಹೆಚ್ಚು ಸಿಗುವಂಥಲ್ಲಿ ಒಂದಷ್ಟು ಅರ್ಥವುಳ್ಳ ಕಟ್ಟುವಿಕೆ ಕಾಣುತ್ತದೆ. ಹೀಗಿದ್ದಾಗಲೂ ಈ ತುಣುಕುಗಳಲ್ಲಿ, ಪ್ರಾಸದ ಜೋಡಣೆಗಳಲ್ಲಿ, ಹಾಡಿನ ತುಂಡುಗಳಲ್ಲಿ ಕುತೂಹಲ ಕೆರಳಿಸುವ ಸಂಗತಿಗಳು ಕಂಡುಬರುವುದಿದೆ. ಒಟ್ಟಾರೆ ಇವು ಒಂದು ಬಗೆಯ ಸ್ವಚ್ಛಂದ ಪ್ರವೃತ್ತಿಯನ್ನ ಹೇಳುವಂಥವೇ. ಮನಸ್ಸಿನಲ್ಲಿ ಬಚ್ಚಿಟ್ಟ ಸಂಗತಿಗಳನ್ನೆಲ್ಲ ಹೊರಗೆ ಹಾಕುವ ಅವಕಾಶಗಳಂತೆ

ಕಾಣುತ್ತವೆ ಕೂಡ. ಯಾವ ಭಿಡೆ ಮುರವತ್ತು ಸಂಕೋಚವಿಲ್ಲದೆ ವ್ಯಕ್ತಗೊಳಿಸುವಿಕೆ ಮತ್ತು ಗಮನಿಸಬಹುದಾದ ವಿಶೇಷ ಇವುಗಳದು. ಹಾಸ್ಯ, ವಿಡಂಬನೆ, ಛೇಡಿಸುವಿಕೆ, ಮೂದಲಿಸುವಿಕೆ, ಚುಚ್ಚಿ ನುಡಿಯುವಿಕೆ ಇವೆಲ್ಲ ಸರ್ವೇ ಸಾಮಾನ್ಯವಾಗಿ ಈ ರಚನೆಗಳಲ್ಲಿ ಕಾಣುತ್ತವೆ. ಸುತ್ತಲಿನ ಕುಟುಂಬದ, ಸಮಾಜದ, ಗಂಡು ಹೆಣ್ಣಿನ, ಎಲ್ಲ ಬಗೆಯ ಸಂಗತಿಗಳು ಇಲ್ಲಿ ತಲೆ ಹಾಕುತ್ತವೆ. ಗೌಪ್ಯತೆ, ಸಭ್ಯತೆ ಕಾಣದು.

'ದೇವರ‍್ಗಿ ಹೋಗ್ತೀನಿ ದಂಡಿ ತಾ
ತಂಬ್ತೋಂಡ ಹೋಗ್ತೀನಿ ಗಿಂಡಿ ತಾ'

'ಅಂಗಿಕಳಿ ಅಂಗಡಿಗಿ ನಡಿ
ಚಡ್ಡಿ ಕಳಿ ಚಾವಡಿಗಿ ನಡಿ'

'ಬಸವ್ವ ಬಸಪ್ಪ ಬಸರ‍್ಹಾಳ, ಬಸರ‍್ಹಾಳ
ಅಡಕಲ ಸಂದ್ಯಾಗ ಹೇತಾಳ, ಹೇತಾಳ'

ಯಾವ ಅಸಹ್ಯ, ಮುಜುಗರವಿಲ್ಲದೆ ಹಳ್ಳಿವಾಡದ ಮಕ್ಕಳು ಇವನ್ನ ಅಂದುಬಿಡುತ್ತಾರೆ. ಮಕ್ಕಳು ತಮ್ಮ ಸುತ್ತಲಿನ ನಾನಾ ವಿದ್ಯಮಾನಗಳಿಗೆ ಕುತೂಹಲಿಗಳಾಗುವುದು ಸಹಜ. ಹಳ್ಳಿಯ ಮಕ್ಕಳು ಇದಕ್ಕೆಲ್ಲ ಈ ಬಗೆಯ ರಚನೆಗಳ ಮೂಲಕ ಒಂದು ಬಿಡುಗಡೆಯನ್ನ ಕಂಡುಕೊಳ್ಳುತ್ತಾರೆ ಎನ್ನಬಹುದೇನೋ. ಗಂಡು ಹುಡುಗರ ಬಾಯಲ್ಲಿ ಬರುವ ರಚನೆಗಳಲ್ಲಂತೂ ಇಂಥ ಪ್ರಯೋಗಗಳು ಧಾರಾಳ.

ಅಂಗಡ್ಯಾಗ ಕಸಕಸಿ ಗಂಡಾ ಹೇಣ್ತಿ ಕುಸಿಕುಸಿ
ಗಂಗಾಳ್ದಾಗ ಗಾರ‍್ಗಿ ಗಂಡಾ ಹೇಣ್ತಿ ವಾರ‍್ಗಿ

* * *

ಗ್ವಾಡಿಮ್ಯಾಲ ಹೆಂಡಿ ಗೌಡನ ರಂಡಿ

* * *

ಆಟಗೂಟಾ ಬೈನತ್ತಾಟ
ನಗಾರಿ ಹೊಲ್ದಾಗ ನೌಬತ್ತೊ
ಬಸ್ಯಾನ . . . ಸಿಗಬಿತ್ತೊ

ಹೀಗೆ ಸಾಕಷ್ಟು ಲೈಂಗಿಕ ಸಂಗತಿಗಳ ಸುತ್ತಲಿನ ಪ್ರಯೋಗಗಳು ದೊರೆಯುತ್ತವೆ. ಇಂಥವು ಒಂದು ಬಗೆಯಲ್ಲಿ ಹಳ್ಳಿಯಂಥ ಪರಿಸರದಲ್ಲಿ ಮಾನಸಿಕ ಆರೋಗ್ಯ ಕಾಪಾಡುವಲ್ಲಿ ಸಹಾಯ ಮಾಡುತ್ತಲೂ ಇರಬಹುದು. ನಗರದ, ಮಧ್ಯಮ ವರ್ಗದ ಪರಿಸರದಲ್ಲಿ ಮುಚ್ಚು ಮರೆಗಳು ಬಹಳ. ಅಲ್ಲಿನ ಮಕ್ಕಳಿಗೆ ಹೋಲಿಸಿದಾಗ ಹಳ್ಳಿವಾಡದ ಮಕ್ಕಳು ಆದಷ್ಟೂ ಮುಕ್ತ ವಾತಾವರಣದಲ್ಲಿ ವ್ಯವಹರಿಸುತ್ತಾರೆ ಎಂದುಕೊಳ್ಳಬಹುದು. ಅವರ ಬಾಯಲ್ಲಿನ ಈ ತುಣುಕುಗಳು

ಇದಕ್ಕೆಲ್ಲ ಸಹಾಯಕಾರಿಯಾಗಿ ಒದಗುತ್ತವೆ. ಮನುಷ್ಯ ಸಂಬಂಧಗಳ ವ್ಯಾವಹಾರಿಕ ಬಗೆಗಳು, ಅವುಗಳ ವಾಸ್ತವ ವ್ಯಾಪಾರಗಳು ಇಂಥ ರಚನೆಗಳಲ್ಲಿ ಎಗ್ಗಿಲ್ಲದೆ ಹೊರಚಾಚಿಕೊಳ್ಳುತ್ತವೆ. ಹೀಗೆ ಮಕ್ಕಳು ಇವನ್ನ ಅನ್ನುವಾಗ ಹಿರಿಯರೂ ತಲೆ ಕೆಡಿಸಿಕೊಳ್ಳುವುದಿಲ್ಲ, ಬದಲಾಗಿ ಹಿರಿಯರ ಏನೆಲ್ಲ ವಿದ್ಯಮಾನಗಳು ಮಕ್ಕಳ ಮುಂದೆಯೇ ನಡೆಯುತ್ತಿರುತ್ತವೆ. ಹಾಗೆಯೇ ಹಳ್ಳಿಯ ಬಯಲು, ಸ್ವಚ್ಛಂದ ಪರಿಸರ ಒಂದಿಷ್ಟೆಲ್ಲ ಮುಕ್ತತೆಯನ್ನ ಅನಾಯಾಸವಾಗಿ ಮಕ್ಕಳಿಗೆ ಒದಗಿಸುತ್ತದೆ.

ಬಚ್ಚಲದಾಗ ನೊಣ – ನಿಮ್ಮವ್ವ ಕ್ವಾಣ
ಬಾರಿಗಿಡದಾಗ ನಮ್ಮಣ್ಣ – ಬಳಕೊಂಡ ತಿನ್ನಾವ ನಿಮ್ಮಣ್ಣ
ಚಪಾತಿ ಉಣ್ಣಾಂವ ನಮ್ಮಣ್ಣ – ಚಪ್ಲಿ ಕಳ್ಳ ನಿಮ್ಮಣ್ಣ

ಇಂಥ ಬಳಕೆಗಳು ಮಕ್ಕಳಿಗೆ ಆದರ್ಶಗಳನ್ನ ಹೇಳಬೇಕು, ಒಳ್ಳೆಯ ಸಂಗತಿಗಳನ್ನ ಹೇಳಬೇಕು ಮುಂತಾಗಿ ಅಂದುಕೊಳ್ಳುವ ಮನೋಸ್ಥಿತಿಗಳಿಗೆ ವ್ಯತಿರಿಕ್ತವಾಗಿರುತ್ತವೆ. ಜಗತ್ತಿನಾದ್ಯಂತ ಇರುವ ಹಾಗೆ ಕನ್ನಡದಲ್ಲೂ ಈ ಬಗೆಯ ರಚನೆಗಳು ವಿಪುಲವಾಗಿಯೇ ಇರಲು ಸಾಧ್ಯ. ವಿಭಿನ್ನ ಪ್ರಾದೇಶಿಕ ವೈವಿಧ್ಯತೆಗಳನ್ನ ಸಂಗ್ರಹ ಹಾಗೂ ಅಧ್ಯಯನಗಳು ಹೇಳಬೇಕು. ಬಯಲು ಸೀಮೆಯ ಪ್ರದೇಶಗಳು ಇಂಥವುಗಳಿಗೆ ಹೆಚ್ಚು ಅವಕಾಶಗಳನ್ನ ಒದಗಿಸಿದರೆ, ಮಲೆನಾಡಿನಲ್ಲಿ ಒದಗಿಸಲಿಕ್ಕಿಲ್ಲ. ಅಲ್ಲಲ್ಲಿನ ಸಾಂಸ್ಕೃತಿಕ ಪರಿಸರ, ಶಿಕ್ಷಣದ ವ್ಯವಸ್ಥೆಗಳ ವಿಸ್ತಾರಗಳು, ಬಡತನ ಸಿರಿತನಗಳ ಅಂತರಗಳು ಇವೆಲ್ಲ ಇಂಥ ರಚನೆಗಳ ಹಿನ್ನೆಲೆಯಲ್ಲಿ ನಿಲ್ಲುತ್ತವೆ. ದುಡಿಯುವ ವರ್ಗದ ಮಕ್ಕಳ ಬಾಯಲ್ಲಿ ಸಿಗುವ ಈ ಬಗೆಯ ರಚನೆಗಳು ಅದೇ ಉಳ್ಳವರ, ಅನುಕೂಲಸ್ಥರ ಮಕ್ಕಳ ಬಾಯಲ್ಲಿ ಇರಲಿಕ್ಕಿಲ್ಲ. ಅಂತೂ ಇವುಗಳ ವಿಸ್ತಾರದ ಸಂಗ್ರಹ, ಅಧ್ಯಯನ ಆದಾಗಲೇ ಏನಾದರೂ ಹೇಳಲು ಸಾಧ್ಯ. ಬರಬರುತ್ತ ನಾಗರಿಕತೆ ವಿಸ್ತರಿಸುತ್ತ ಈಗಾಗಲೇ ಸಾಕಷ್ಟು ಮರೆಯಾಗಿ ಹೋಗಿವೆ.

ಹತ್ತೊಂಬಳ್ಳಿ ಹಲಗಿ ಬಡ್ಡಿ
ನಾಯಿಗೆ ನುಚ್ಚು ಹಾಕಲಾರೆ
ಗಿಳೀಗೆ ಬೆಲ್ಲ ತಿನಿಸಲಾರೆ
ಅಪ್ಪನ ರೊಕ್ಕ ಎಣಿಸಲಾರೆ
ಅವ್ವನ ಸೀರಿ ಮಡಸಲಾರೆ

ಅನೇಕ ಕಡೆ ಅಂಥ ರಚನೆಗಳ ಜೊತೆಗೆ ಈ ಕೆಳಗಿನ ಪದ್ಯ ವಿಭಿನ್ನವಾಗಿದೆ:

ಒಂದು ನಿನ್ನ ಕೊಂದು ಹಾಕೇನು
ಎರಡು ನಿನ್ನ ಕುತಗಿ ಹಿಚಕೇನು
ಮೂರು ನಿನ್ನ ಮೂಲ್ಯಾಗೊತ್ತೇನು
ನಾಲ್ಕು ನಿನ್ನ ಪಾಕ ಮಾಡೇನು
ಐದು ನಿನ್ನ ಕೊಯ್ದು ಚಲ್ಲೇನು
ಆರು ನಿನ್ನ ಮ್ಯಾಲ ಹಾರೇನು
ಏಳು ನಿನ್ನ ಬೋಳ ಕೊಯ್ದೇನು
ಎಂಟು ನಿನ್ನ ಗಂಟಲ ಹಿಚಕೇನು

ಒಂಬತ್ತು ನಿನ್ನ ಕಂಬಕ ಬಿಗಿದೇನು
ಹತ್ತು ನಿನ್ನ ಹತ್ತಿ ಬಿಟ್ಟೇನು

ಇಂಥವೂ ಸದ್ಯೆವ ಅಲ್ಲಿರುತ್ತವೆ. ನಮ್ಮ ಮಕ್ಕಳ ಸಾಹಿತಿಗಳೆನ್ನುವವರು ಮಕ್ಕಳಿಗೆ ಅಂಕಿಗಳನ್ನ ರೂಢಿ ಮಾಡಿಸಲು ರಚಿಸುವ ಪದ್ಯಗಳ ಜೊತೆಗೆ ಇಂಥವನ್ನ ಹೋಲಿಸಿದರೆ ಅಂತರಗಳು ಸ್ಪಷ್ಟವಾಗುತ್ತವೆ. ಸಾಮಾಜಿಕ ವ್ಯವಸ್ಥೆ, ಜನರ ನಡೆವಳಿಗಳು, ದರ್ಪ, ದೈನ್ಯಗಳು ಎಲ್ಲವೂ ಇಂಥ ರಚನೆಗಳ ಆಹಾರವಾದುವೇ. ಅಲ್ಲಿ ಪ್ರಬುದ್ಧರ ಲೋಕ ಮಕ್ಕಳ ಲೋಕದಿಂದ ದೂರವಿಲ್ಲವೇ ಇಲ್ಲ. ಎಲ್ಲವೂ ಬಯಲೇ.

'ಕುಲಾಯಿ ಕಟಗೊ ಕುಲಕಣ್ಣಿಗಿ ಇಟಗೊ'
'ಆಚಾರ ಆಚಾರ ಕಲ್ತಾರಪ್ಪ ಏಕಾದಶಿ ಮಾಡ್ತಾರಪ್ಪ'

'ಕಣ್ಣ ಮೂಗ್ಲೆ ಚಂದ್ವಾಳಿ
ಒಲ್ಲ ಅಂತಾಳ ವರಾ ನೋಡಿ ವರಾನೋಡಿ'

'ಒಲ್ಯಾಗ ಮೂರ ಕಟಗಿ ಅಯ್ನೋರ ಬಂದಾನ ಹಿಟ್ಟಿಗಿ'

'ಸುಸಲನ ಗಂಡ ಕರಿಲಕ-ಬಂದ
ಒಲ್ಲೊಲ್ಲಂದ ವಾಲಿತಂದ
ಅದ್ಯಾತರ ವಾಲಿ – ಝುಮಕಾಲಿ ಝುಮಕಾಲಿ'[೯]

ನಾವಿಂದು ಭಾವಿಸಿಕೊಳ್ಳುವ ಮಕ್ಕಳ ಮನೋಲೋಕವನ್ನ ಪ್ರತಿನಿಧಿಸುವ ರಚನೆಗಳೂ ಅಲ್ಲಿ ವಿರಳವಾಗಿ ಲಭ್ಯವಾದಾವು. ಉದಾಹರಣೆಗೆ . . .

ಗಾಡಿ ಬಂತ ಗಾಡಿ ಅಜ್ಜ ಹ್ವಾದ ಓಡಿ
ತಿಕೇಟ ಸಿಗಲಿಲ್ಲ ಖೋಡಿ
ಅಜ್ಜಾ ರೊಕ್ಕಾ ಕೊಟ್ಟ ಓಡಿ ಓಡಿ ಬಂದ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಡೆಯಿಂದ 'ಬಾರೋ ಗೀಜಗ' ಎನ್ನುವ ಇಂಥ ಆಯ್ದ ಕೆಲ ಪದ್ಯಗಳ ಸಂಗ್ರಹ ಆಕರ್ಷಕವಾಗಿ ಚಿತ್ರಗಳೊಡನೆ ಬಂದುದಿದೆ. ಅದು ಮತ್ತೆ ನಮ್ಮ ಮಕ್ಕಳಿಗೆ ಇವನ್ನ ಮುಟ್ಟಿಸುವ ಯೋಜನೆಯದು. ಜನಪದ ಸಂಗ್ರಹವೆಂದೋ ಅಧ್ಯಯನವೆಂದೋ ಆಯ್ಕೆಗೊಳ್ಳುವ ಪದ್ಯಗಳಿಗೂ ಹೀಗೆ ಮಕ್ಕಳಿಗೇ ಎಂದು ಆಯ್ಕೆಗೊಳ್ಳುವ ರಚನೆಗಳಿಗೂ ಅಂತರವಿದ್ದೇ ಇರುತ್ತದೆ. ಈ ಬಗೆಯ ಪ್ರಯತ್ನಗಳು ಕೂಡ ನಮ್ಮ ನಡುವೆ ಅಷ್ಟಾಗಿ ನಡೆದಿಲ್ಲ. ಅರ್ಥವಿಲ್ಲದ, ಕೇವಲ ಪ್ರಾಸಗಳಿಂದ ಕೂಡಿದ, ಆಟಕ್ಕೆ ಬಳಕೆಯಾಗುವ ಇಂಥವನ್ನು ಸಾರಾಸಗಟಾಗಿ 'ನಾನ್ಸೆನ್ಸ್ ರೈಮ್ಸ್' ಗುಂಪಿಗೆ ಸೇರಿಸುವಂತಿಲ್ಲ ಅನಿಸುತ್ತದೆ. ಯಾಕೆಂದರೆ ಇವುಗಳಲ್ಲನೇಕವು ಮೂಲದಲ್ಲಿ ಸರಿಯಾಗಿಯೇ ಇದ್ದು ಬಳಕೆಯಾಗುತ್ತ ಹೇಗೆ ಹೇಗೋ ತಿರುಚಿಕೊಂಡವುಗಳಾಗಿ ಕಾಣುತ್ತವೆ.

ಮಕ್ಕಳ ಸಾಹಿತ್ಯದ ಉದಯದ ಕಾಲ

ಇಂಥವುಗಳ ರಚನೆಕಾರರು ಎಂದಿದ್ದರೂ ಅಜ್ಞಾತವಾದವರೇ. ಅಥವಾ ಇವು ಅನೇಕ ಸಲ ಒಬ್ಬರಿಂದೊಬ್ಬರಿಗೆ ರವಾನೆಯಾಗುತ್ತ ರೂಪತಳೆದವು. ಇವು ಜನರ ಸಹಜದ ಆಡುಭಾಷೆಯಲ್ಲಿಯೇ ರಚನೆಗೊಳ್ಳುತ್ತ, ತಮಗನುಕೂಲವಾಗುವ ಛಂದಗಳನ್ನು ಆಶ್ರಯಿಸುತ್ತವೆ, ಅಲ್ಲಲ್ಲಿನ ಮನೋವ್ಯಾಪಾರಕ್ಕೆ ತಕ್ಕಂತೆ ವೈವಿಧ್ಯವನ್ನೂ ಹೊಂದುತ್ತವೆ. ಆ ನಿಟ್ಟಿನಲ್ಲಿ ಇವು ಮಕ್ಕಳ ನಡುವೆ ಅತ್ಯಂತ ಜೀವಂತ ಕ್ರಿಯೆಗಳಾಗಿರುತ್ತವೆ. ಕನ್ನಡದ ಈ ಬಗೆಯ ರಚನೆಗಳು ಸಾಕಷ್ಟು ಸಂಗ್ರಹವಾದರೆ ಆ ಕುರಿತು ಒಂದಿಷ್ಟೆಲ್ಲ ವಿಶೇಷತೆಗಳು ಗೋಚರಿಸಿಯಾವು. ಇವಕ್ಕೆಲ್ಲ ಕಾಲದ ಚರಿತ್ರೆಯನ್ನು ಊಹಿಸುವುದೇ ದುಸ್ತರದ ಸಂಗತಿ.

ಪದ್ಯಗಳಂತೆ ಕತೆಗಳೂ ಮಕ್ಕಳ ನಡುವೆ ವಿಪುಲ ಸಂಖ್ಯೆಯಲ್ಲಿ ಹರಿದಾಡಿಕೊಂಡಿವೆ. ಕತೆಗಳಲ್ಲಿ ಮಕ್ಕಳ ಕತೆಗಳಾವುವು, ದೊಡ್ಡವರವಾವುವು ಎಂದು ವಿಂಗಡಿಸುವುದೇ ಕಷ್ಟದ್ದು. ಮಕ್ಕಳನ್ನ ಸುತ್ತ ಕೂರಿಸಿಕೊಂಡು ಕತೆ ಹೇಳುವಾಗ ಒಂದಾವುದೋ ಕತೆ ಮಕ್ಕಳದಾಗಿ ರೂಪು ತಳೆಯಬಹುದು. ವಿಭಿನ್ನ ಸಾಮಾಜಿಕ ಪರಿಸರದ ಪ್ರಭಾವವೂ ಇಂಥ ನಿರೂಪಣೆಗಳಲ್ಲಿರುತ್ತದೆ. ಜನಪದ ಕತೆಗಳ ಸಂಗ್ರಹ ಸಾಕಷ್ಟು ನಮ್ಮ ನಡುವೆ ಆಗಿದೆ. ಆದರೆ ಇವು ಮಕ್ಕಳಿಗೆ ಅಂತ ಆದ ಸಂದರ್ಭಗಳನ್ನ ನಿಗದಿಯಾಗಿಟ್ಟು ನೋಡಿದುವಲ್ಲ. ಇಂಥ ವಿಪುಲ ಕಥಾ ಸಾಮಗ್ರಿಯನ್ನೇ ಆಧರಿಸಿಕೊಂಡು ನಮ್ಮ ನಾಗರಿಕ ಸಮಾಜದ ಲೇಖಕರು ಮಕ್ಕಳ ಸಾಹಿತ್ಯವೆಂದು ನೀಡಲು ಹೊರಟಿದ್ದರು ಎನ್ನುವುದು ಸುವಿದಿತ. ಪದ್ಯಗಳ ಕಡೆಗೆ ಹೊರಳದಿರುವುದಕ್ಕೂ ಕತೆಗಳ ಕಡೆಗೆ ಹೊರಳಿದುದಕ್ಕೂ ಅಂತರಗಳು ಸ್ಪಷ್ಟವಾಗಿಯೇ ಇದೆ. ಎಮ್. ಎಸ್. ಪುಟ್ಟಣ್ಣನವರಿಂದ ಹಿಡಿದು ಇಂಥ ಜನಪದ ಕತೆಗಳನ್ನ ಮಕ್ಕಳಿಗೆ ಆಯ್ದುಕೊಂಡುದು ನಮ್ಮಲ್ಲಿ ಕಾಣುತ್ತದೆ. ಪಂಜೆ ಮಂಗೇಶರಾಯರಂಥವರ ಸಂಗ್ರಹಗಳಲ್ಲಿ ಇಂಥವೇ ಆಮೂಲಾಗ್ರವಾಗಿರುವುದು ಇವುಗಳ ಮಹತ್ವವನ್ನ ಹೇಳುತ್ತದೆ. ಆದರೆ ಹೀಗೆ ಹೆಕ್ಕಿಕೊಂಡು ಮಕ್ಕಳಿಗೆಂದು ಹೇಗೆಲ್ಲ ಈ ಲೇಖಕರು ಬರವಣಿಗೆಗಿಳಿದರು ಎನ್ನುವುದು ಗಮನಿಸಬೇಕಾದ ಸಂಗತಿ. ಸರಿ ಸುಮಾರು ಮಕ್ಕಳಿಗಾಗಿ ಎಂದು ಬರೆದ ಎಲ್ಲ ಲೇಖಕರು ಈ ಬಗೆಯ ಜನಪದ ಕತೆಗಳನ್ನೇ ಆಯ್ದುಕೊಂಡು ನೀಡಿದರು. ಎಮ್. ಎಸ್ ರಾಮರಾವ್, ದೇವುಡು, ಬಿ. ಶ್ರೀ. ಪಾಂಡುರಂಗರಾಯ, ನವಗಿರಿನಂದ, ಹೊಯ್ಸಳ ಹೀಗೆ ಎಲ್ಲರೂ ಈ ಕಣಜವನ್ನೇ ಆಶ್ರಯಿಸಿ ನೀಡಿದವರು. ಈಚಿನ ಪ. ರಾಮಕೃಷ್ಣಶಾಸ್ತ್ರಿ ಅಂಥವರೂ ದಂಡಿಯಾಗಿ ಇವೇ ಕತೆಗಳನ್ನ ನೀಡುತ್ತಿದ್ದಾರೆ. ಪತ್ರಿಕೆಗಳ ಅಂಕಣಗಳೂ ಇಂಥ ಸಾಮಗ್ರಿಗೆ ಮೀಸಲಾಗಿವೆ ಎನ್ನುವಹಾಗೆ ಈ ಕತೆಗಳನ್ನ ನೀಡುತ್ತ ಬಂದಿವೆ. ಚಂದಮಾಮ ಜನಪ್ರಿಯವಾದುದು ಇಂಥ ಕತೆಗಳಿಂದಲೇ. ನಮ್ಮ ಸಿನಿಮಾ ಜಗತ್ತೂ ಈ ಬಗೆಯ ಕತೆಗಳನ್ನ ಸಾಕಷ್ಟು ಆಯ್ದುಕೊಂಡಿದೆ. ಕತೆ ಎಂದರೆ 'ಹೀಗೊಂದೂರಿನಲ್ಲಿ . . .' ಎಂದು ಪ್ರಾರಂಭವಾಗುವುದೇ ಎನ್ನುವ ಹಾಗೆ ರೂಢಿಯಾಗಿದೆ. ಅದರಲ್ಲೂ ಭಾರತ ಈ ಬಗೆಯ ಕತೆಗಳ ದೊಡ್ಡ ಕಣಜ ಎನ್ನುವುದನ್ನ ಮರೆಯಕೂಡದು. ಆದರೆ ಜನರ ನಡುವೆ ಅತ್ಯಂತ ಪ್ರಚುರವಾಗಿ ಬಹುಕಾಲದಿಂದ ಸಂಚರಿಸಿಕೊಂಡಿರುವ ಮಾತ್ರಕ್ಕೆ ಒಂದು ಕತೆ ಮಕ್ಕಳಿಗೂ ಆಗುತ್ತದೆ ಎನ್ನುವುದು ಅಷ್ಟೇ ತಪ್ಪಾದ ತೀರ್ಮಾನ. ಇವನ್ನ ಆಯುವುದು, ಮಕ್ಕಳಿಗೆ ತಕ್ಕನಾಗಿ ನೀಡುವುದು ಮಾಡಬೇಕಾದ ಕೆಲಸ. ಕನ್ನಡದ ಲೇಖಕರು ನಿರೂಪಿಸುವಲ್ಲಿ ಒಳ್ಳೇ ಸೊಗಸನ್ನು ತಂದು ತಮ್ಮ ಛಾಪನ್ನು ನೀಡಿದುದಿದೆ. ಕುವೆಂಪು ಅವರೇ 'ಹಾಳೂರಿನ' ಕತೆಯನ್ನ ಒಳ್ಳೇ ಸ್ವಾರಸ್ಯಕರವಾಗಿ ನಿಡಿದಾಗಿ

ನಿರೂಪಿಸಿದುದಿದೆ. ಹೊಯ್ಸಳ, ಮೇವುಂಡಿ ಮಲ್ಲಾರಿ ಆಡುಭಾಷೆಯ ಬನಿಯನ್ನು, ಹಾಗೂ ಕತೆಗಾರಿಕೆಯನ್ನು ಬರವಣಿಗೆಯಲ್ಲೂ ತಂದವರು. ಜನಪದದಿಂದ ಪ್ರಭಾವಿತರಾದ ಚಂದ್ರಶೇಖರ ಕಂಬಾರರಂಥ ಲೇಖಕರು ಮಕ್ಕಳಿಗಾಗಿ ಎಂದೇ ಇಂಥ ಕತೆಗಳನ್ನ ಆಯ್ದು ನೀಡಿದುದಿದೆ. ಹಾಗೇಕೆ ಎಂಬುದನ್ನೂ ಅವರು ಮುನ್ನುಡಿಯಲ್ಲಿ ಬರೆದಿದ್ದಾರೆ. ಹಾಗಿದ್ದಾಗಲೂ ಇಂದು ಮಕ್ಕಳು ಎಂದಾಕ್ಷಣ ಲೇಖಕರು ಗ್ರಹಿಸುವ ಓದುಗನಿಗೆ ನೀಡಬೇಕೆನ್ನುವ ಕತೆಗಳಿಗೂ ಈ ಹಳ್ಳಿವಾಡದ ಕತೆಗಳಿಗೂ ಕೆಲವೆಲ್ಲ ಅಂತರಗಳಿದ್ದೇ ಇದ್ದಾವೆ. ಬಹು ಮುಖ್ಯವಾಗಿ ಜನಪದ ಕತೆಗಳು ರಚನೆಯಾದುದೇ ಪ್ರಬುದ್ಧರಿಂದ ಎನ್ನುವಂತೆ ದೊಡ್ಡವರ ಬದುಕಿನ ಸಂಗತಿಗಳನ್ನೇ ವಿಶೇಷವಾಗಿ ಆಶ್ರಯಿಸಿರುತ್ತವೆ. ಅಲ್ಲದೆ ಈ ಕತೆಗಳ ಹಿನ್ನೆಲೆಯಲ್ಲಿ ಹಿಂದಣ ಸಮಾಜದ ಮೌಲ್ಯಗಳು ನಿಂತುಕೊಂಡಿರುತ್ತವೆ. ಉದಾಹರಣೆಗೆ ಮಹಿಳೆಯನ್ನ ಕಾಣುತ್ತ ಬಂದ ಬಗೆಯನ್ನ ಈ ಕತೆಗಳಲ್ಲಿ ನೋಡಬಹುದು. ಮಲತಾಯಿಯ ಚಿತ್ರಣಗಳೇ ಆಗಬಹುದು, ಅತ್ತೆ ಅಳಿಯರ ನಡುವಿನ ಸಂಬಂಧಗಳೇ ಆಗಬಹುದು. ಇವೆಲ್ಲ ಇಂದಿನ ನಮ್ಮ ಬದಲಾದ ಪರಿಸರಕ್ಕೆ ಸರಿಹೊಂದುವಂಥವಲ್ಲ. ಅದೇನೇ ಇರಲಿ ಕನ್ನಡದ ಮಕ್ಕಳ ಕಥಾ ಲೋಕ ಎಂದರೆ ಅದು ಮುಕ್ಕಾಲುಪಾಲು ಜನಪದ ಕತೆಗಳದೇ ಎಂದರೆ ತಪ್ಪಾಗದು.

ಈ ಹಳ್ಳಿವಾಡದ ಸರಕನ್ನ ಬಿಟ್ಟರೆ ನಮ್ಮ ಮಕ್ಕಳ ಸಾಹಿತ್ಯದಲ್ಲಿ ಗಣಿಸಬಹುದಾದ ರಚನೆಗಳನ್ನ ಹಳೆಗನ್ನಡದಿಂದ ಹಿಡಿದು ಹೊಸಗನ್ನಡದ ಉದಯದವರೆಗೆ ಅನೇಕರು ನೀಡಿದುದಿದೆ. ಅವನ್ನೆಲ್ಲ ಆರಿಸಿ ಆರಿಸಿ ನೋಡುವುದಾಗಬೇಕು. ಬಹು ಮುಖ್ಯವಾಗಿ ಕನ್ನಡದಲ್ಲಿ ಅತ್ಯಂತ ಪ್ರಚುರವಾಗಿರುವುದು ಪುಣ್ಯಕೋಟಿ ಗೋವಿನ ಹಾಡು. ೧೧೪ ನುಡಿಗಳಲ್ಲಿ ಈ ರಚನೆಯನ್ನ ನೀಡಿದ ಕವಿ ಇಂದಿಗೂ ಅಜ್ಞಾತ. ಈ ಪದ್ಯ ಬಹುಕಾಲದಿಂದ ಕನ್ನಡದ ಜನರ ನಡುವೆ ಅತ್ಯಂತ ಆಸಕ್ತಿಯಲ್ಲಿ ಓಡಾಡಿಕೊಂಡಿದೆ. ಹಾಗಾಗಿ ನೂರಾರು ಪಾಠಾಂತರಗಳು ಸಿದ್ಧವಾಗಿಬಿಟ್ಟಿವೆ. ಅನೇಕ ಹೊಸ ಹೊಸ ಪದ್ಯಗಳೂ ಸೇರಿಕೊಳ್ಳುತ್ತ ಬಂದಿವೆ. ಮೂಲ ಕೃತಿ ಹೀಗಿರಬಹುದು ಎಂದು ಡಿ. ಎಲ್. ನರಸಿಂಹಾಚಾರ್ಯರು ಒಂದು ಪ್ರಯತ್ನವನ್ನು ಮಾಡಿದ್ದರು. ಅವರ ಊಹೆಯಂತೆ ಈ ಪದ್ಯದ ರಚನೆಕಾರ ಮದ್ದೂರಿನವನು. ಪದ್ಯದಲ್ಲಿ ಬರುವ 'ಮದ್ದುರ ನಾರಸಿಂಹನೆ' ಸ್ತುತಿಯಿಂದ ಅವರು ಊಹಿಸಿದ್ದು. ಟಿ. ಕೇಶವಭಟ್ಟರು ಇಂಥ ಸಂಗ್ರಹವೊಂದನ್ನ ತಂದಿದ್ದರು. ಸಾಹಿತ್ಯ ಪರಿಷತ್ತು ಇಲ್ಲಿಯವರೆಗೆ ನಾಲ್ಕು ಬಾರಿ ಈ ಪದ್ಯವನ್ನು ಮುದ್ರಿಸಿದೆ. ದ್ವಿತೀಯ ಆವೃತ್ತಿಯ ಮುನ್ನುಡಿಯಲ್ಲಿ ಹಂಪ ನಾಗರಾಜಯ್ಯನವರು ಬರೆಯುತ್ತ 'ಸತ್ಯವೇ ನಮ್ಮ ತಾಯಿತಂದೆ' ಎಂಬ ಧ್ಯೇಯವನ್ನು ಪ್ರತಿಪಾದಿಸುವ ಕಥೆ ನಮ್ಮ ಜೀವನದ ಮೂಲ ಸೂತ್ರದ ವಿವರಣೆ ಎಂದೇ ಹೇಳಬಹುದು. ಕನ್ನಡ ಸಾಹಿತ್ಯದಲ್ಲೇ ಇದೊಂದು ಅಪೂರ್ವವಾದ ರಚನೆ' ಎಂದಿದ್ದಾರೆ. ಎಂ. ಎಸ್. ಪುಟ್ಟಣ್ಣನವರೇ ಅತ್ಯಂತ ಪ್ರಚುರವಾದ, ಸುಪ್ರಸಿದ್ಧವಾದ ಗೋವಿನ ಹಾಡನ್ನು ಮೊದಲ ಸಲ ಶಾಲಾ ಪಠ್ಯಗಳಲ್ಲಿ ಅಳವಡಿಸಿದರು ಎಂದು ಡಾ.ಎಚ್.ಎಸ್ ಸುಜಾತಾ ಅವರು ತಮ್ಮ ಪುಟ್ಟಣ್ಣನವರ ಕುರಿತ ಸಂಶೋಧನ ಪ್ರಬಂಧದಲ್ಲಿ ಹೇಳುತ್ತಾರೆ. ಇದು ಪುಟ್ಟಣ್ಣನವರು ಸಿದ್ಧಪಡಿಸಿದ 'ಕನ್ನಡ ಒಂದನೆಯ ಪಾಠವು' ಪಠ್ಯದಲ್ಲಿ ಸೇರ್ಪಡೆಯಾಗಿದೆ. ಸುಲಭ ಭಾಷೆಯಲ್ಲಿ, ಸರಳವಾಗಿ ನಿರೂಪಣೆಗೊಳ್ಳುತ್ತ ಕತೆಯನ್ನ ನಿರೂಪಿಸುತ್ತ ಕತೆಯ ಅಪರೂಪದ ಸಂದೇಶವನ್ನ ಪ್ರಭಾವಕಾರಿಯಾಗಿ ಮುಂದಿಟ್ಟಿರುವುದು ಈ ರಚನೆಯ ವಿಶೇಷ. ಕನ್ನಡದ ಅನೇಕ ವಿದ್ವಾಂಸರು ಈಗಾಗಲೇ ಈ ಕೃತಿಯ ಕುರಿತು ಮಾತನಾಡಿದ್ದಾರೆ.

ಧರಣಿ ಮಂಡಲ ಮಧ್ಯದೊಳಗೆ
ಮೆರೆವುದೈವತ್ತಾರು ದೇಶದಿ
ಇರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು

ಎಂದು ಸಾಗುವ ರಚನೆ ಮೊದಲ ಹದಿನೆಂಟು ಪದ್ಯಗಳಲ್ಲಿ ಅರುಣಾದ್ರಿಯ ವನ್ಯ ಸಂಪತ್ತಿನ ಕುರಿತು ವಿವರವಾಗಿ ಚಿತ್ರಿಸಿದೆ. ಅಲ್ಲಿನ ಬಗೆಬಗೆಯ ಸಸ್ಯರಾಶಿ, ಕಾಡು ಮೃಗಗಳು, ಪಕ್ಷಿಗಳು, ತಪಸ್ಸಿನಲ್ಲಿರುವ ಮುನಿಗಳು, ನದಿಗಳು ಎಲ್ಲವನ್ನ ವಿವರಿಸುತ್ತ ಕತೆ ಪ್ರಾರಂಭವಾಗುತ್ತದೆ. ಗೋವುಗಳ ಬಗೆಗಿನ ಅಕ್ಕರೆಯ ಭಾವವು ಇಡೀ ಕವಿತೆಯುದ್ದಕ್ಕೂ ಕಂಡುಬರುತ್ತದೆ. ಗೋವುಗಳು ನಮ್ಮ ಪರಂಪರೆಯಲ್ಲಿ ಪಡೆದ ಮಹತ್ವವನ್ನ ಕವಿ ಹೀಗೆ ಪ್ರತಿನಿಧಿಸುತ್ತಾನೆ :

ತಮ್ಮ ತಾಯ್ಗಳ ಕಂಡು ಕರುಗಳು
ಅಮ್ಮನೆಂದೂ ಕೂಗಿ ನಲಿಯುತ
ಸುಮ್ಮಾನದೊಳು ಮೊಲೆಯನುಂಡು
ನಿರ್ಮಲಾದೊಳು ಇದ್ದವು

ಈ ಗೋವುಗಳನ್ನ ಸಾಕಿಕೊಂಡಿದ್ದ ಗೊಲ್ಲನನ್ನೂ ಕವಿ ತನ್ಮಯತೆಯಿಂದ ಚಿತ್ರಿಸುತ್ತಾನೆ.

ಉಟ್ಟ ದಟ್ಟಿಯು ಪಟ್ಟೆ ಚೆಲ್ಲಣ
ತೊಟ್ಟ ಪದಕವು ಬಿಲ್ಲೆ ಸರಗಳು
ಕಟ್ಟಿ ಭಾಪುರಿ ಭುಜದ ಕೀರ್ತಿಯು
ಇಟ್ಟ ಮುದ್ರಿಕೆಯುಂಗುರ

ಪಚ್ಚೆ ಕಡಗವು ಪವಳದಾಸರ
ಹೆಚ್ಚಿನಾ ಕಾಲ್ಗಡಗ ಗೆಜ್ಜೆಯು
ನಿಶ್ಚಿತಾನಂದದಲಿ ಮೆರೆದನು
ಮುತ್ತಿನಾ ಸರ ಪದಕವು

ಇಟ್ಟ ಮುತ್ತಿನ ಒಂಟಿ ಬಾವುಲಿ
ಕಂಠಮಾಲೆ ಪದಕ ಸರಗಳು
ದಿಟ್ಟತನದಲಿ ಧರಿಸಿ ಮೆರೆದನು
ಗಂಟೆ ಮೊದಲಾದೊಡವೆಯಾ

ನೀಲದೊಂಟಿಯು ತಾಳಿ ಚೌಕಳಿ
ಕಾಲ ಕಡಗವು ಮೇಲೆ ಭಾಪುರಿ
ನೀಲದುಂಗರ ಕಾಲ ಸರಗಳು
ಲೋಲ ಧರಿಸಿಯೆ ಮೆರೆದನು

ಚಂದ್ರಗಾವಿಯ ಅಂಗಿತೊಟ್ಟು
ಇಂದ್ರನೀಲದ ಪಾಗುಸುತ್ತಿ
ಚಂದ್ರಕಾಂತದ ದುಪಟಿಯನ್ನು
ಚಂದದಿಂದಲಿ ಪೊದ್ದನು

ಗೊಲ್ಲ ಶೃಂಗರಿಸಿಕೊಂಡು
ಒಳ್ಳೆ ದುಕುಲಗಳನ್ನು ಪೊದ್ದು
ಬೆಳ್ಳಿಯಂಡೆಯ ಕೈಲಿ ಪಿಡಿದು
ಎಲ್ಲ ಗೋವ್ಗಳ ಕರೆದನು

ಅವನು ತನ್ನ ಗೋವುಗಳನ್ನೆಲ್ಲ ಕರೆಯುವುದನ್ನ ಕವಿ ಚಿತ್ರಿಸಿರುವ ಬಗೆಯೇ ವಿಶಿಷ್ಟವಾಗಿದೆ. ಎಳೆಯ ಮಾವಿನ ಮರದ ಕೆಳಗೆ ಕೊಳಲನೂದುತ ಅವನ್ನೆಲ್ಲ ಒಂದೊಂದಾಗಿ ಹೆಸರಿಸುತ್ತ ಕರೆಯುತ್ತಾನೆ. ಎಂಟು ಪದ್ಯಗಳಲ್ಲಿ ಈ ಕರೆಯುವಿಕೆಯನ್ನ ಕವಿ ನೀಡುತ್ತಾನೆ. ಗೊಲ್ಲ ಮತ್ತು ಅವನ ಗೋವುಗಳ ನಡುವಿನ ಪ್ರೀತಿಯ ಸಂಬಂಧ ಎಂಥದಿತ್ತು ಎನ್ನುವುದನ್ನ ಈ ಮೂಲಕ ಪ್ರಸ್ತುತಪಡಿಸುತ್ತಾನೆ ಆತ.

ಪಾರ್ವತಿ ಲಕ್ಷ್ಮೀಯು ಬಾರೆ
ಸರಸ ಸದ್ಗುಣವನಿತೆ ಬಾಲೆ
ಸರಸ್ವತಿಯ ಮಾಣಿಕವೆ ಬಾರೆಂದು
ಸರಸದಿಂದ ಗೊಲ್ಲ ಕರೆದನು

ಉದಯ ಭಾಸ್ಕರ ದೇವಿ ಬಾರೆ
ಚದುರ ಗುಣ ಸಂಪನ್ನೆ ಬಾರೆ
ಹೃದಯ ನಿರ್ಮಲೆ ನೀನು ಬಾರೆಂದು
ಹರುಷದೊಳು ಗೊಲ್ಲ ಕರೆದನು

ಧರ್ಮದೇವಿ ನೀನು ಬಾರೆ
ಧರ್ಮಗುಣದಾ ತಾಯೆ ಬಾರೆ
ಧರ್ಮವತಿಯೇ ನೀನು ಬಾರೆಂದು
ಪ್ರೇಮದೊಳು ಗೊಲ್ಲ ಕರೆದನು

ಹೀಗೆ ಬಗೆಬಗೆಯಲ್ಲಿ ಕರೆಯುವದರ ಮೂಲಕ ಗೋವುಗಳನ್ನ ಎಷ್ಟೆಲ್ಲ ಗೌರವದಿಂದ, ಮಮತೆಯಿಂದ, ಅಕ್ಕರೆಯಿಂದ ಗೊಲ್ಲ ನೋಡಿದನು ಎನ್ನುವುದು ವ್ಯಕ್ತವಾಗುತ್ತದೆ. ಅವನ ಕಾವ್ಯ ಪ್ರತಿಭೆ ಈ ನಿರೂಪಣೆಯ ಜೊತೆಗೇ ಸಹಜವಾಗಿ ಸೂಸಿಬಿಟ್ಟಿದೆ

ಗೊಲ್ಲ ಕರೆದಾ ಧ್ವನಿಯ ಕೇಳಿ
ಎಲ್ಲ ಪಶುಗಳು ಬಂದವಾಗ
ಚಲ್ಲಿ ಸೂಸಿತು ಪಾಲ ಕರೆದು
ಅಲ್ಲಿ ತುಂಬಿತು ಬಿಂದಿಗೆ

ಕಡಲು, ಮೇಘವು ತೆರಳುವಂದದಲ್ಲಿ ಈ ಗೋವುಗಳೆಲ್ಲ ಅರಣ್ಯಕ್ಕೆ ನಡೆದುವಂತೆ. ಗೋ ಸಂಪತ್ತಿನ ಶ್ರೀಮಂತಿಕೆಯನ್ನ ಕವಿ ಅತ್ಯಂತ ಸಮೃದ್ಧವಾಗಿಯೇ ನೀಡಿದ್ದಾನೆ. ಏಳುದಿನಗಳಿಂದ ಹಸಿವಿನಿಂದ ಬಳಲಿದ ವ್ಯಾಘ್ರ ಪುಣ್ಯಕೋಟಿಯನ್ನ ಕಂಡಾಗ ಅದು ಬರುತ್ತಿದ್ದುದು ಹೀಗೆ:

ಕೋಮಲತೆಯಿಂ ನಲಿದು ನೆಗೆಯುತ
ಆ ಮಹಾಟವಿ ಮಧ್ಯದಲ್ಲಿ
ಪ್ರೇಮದಿಂದಲಿ ಬರುವ ಪಶುವನು
ಭೂಮಿಯೊಳು ಹುಲಿ ಕಂಡಿತು

'ಹೊಲನ ಗದ್ದೆಯ ಹಾಳುಮಾಡಿದೆ, ಬೆಳೆದ ಪೈರನು ಸವಿದು ಕೆಡಿಸಿದೆ' ಎಂದು ಹುಲಿಯೆದುರು ಪುಣ್ಯಕೋಟಿ ನಿಶ್ಚಲವಾಗಿ ಹೇಳಿತು:

ನಾನು ಮೆಟ್ಟಿದ ಭೂಮಿ ಬೆಳೆವುದು
ಧಾನ್ಯಧನಗಳುಂಟು ಮಾಡುವೆ
ಶಾನೆ ಕ್ಷೀರವ ಕೊಡುವೆ ನಿತ್ಯವು
ಮಾನವರಿಗುಪಕಾರಿಯು
ಅಡವಿಯೊಳಗಣ ಹುಲ್ಲ ಮೇಯುವೆ
ಮಡುವಿನೊಳಗಣ ನೀರ ಕುಡಿಯುವೆ
ಒಡೆಯನಾಜ್ಞೆಯಿಂದಲಿರುವೆನು
ಕಡೆಹಾಯಿಸು ಹುಲಿರಾಯನೆ

ಪುಣ್ಯಕೋಟಿ ತಿರುಗಿ ಬರುವೆನೆಂಬ ಭಾಷೆಯನ್ನು ಹುಲಿಗೆ ನೀಡಿ ತಿರುಗಿ ಬಂದಾದ ಮೇಲೆ ತನ್ನ ಕಂದನೊಡನೆಯ ಸಮಯವನ್ನ ಕವಿ ವ್ಯಾಕುಲತೆಯಿಂದ ಚಿತ್ರಿಸುತ್ತಾನೆ.

ಮಗನೆ ಬಾರೊ ಮೊಲೆಯ ಕುಡಿಯೊ
ಹೇಗೆ ಬದುಕಿಯೊ ಏನನರಿಯೆ
ಬೇಗ ಬಾರೊ ಕಂದ ಎನುತಲಿ
ಮಗನ ನೋಡಿಯೆ ಎಂದಳು

ಕಟ್ಟಕಡೆಯಲಿ ಮೇಯದೀರು
ಬೆಟ್ಟದೊತ್ತಿಗೆ ಹೊಗದೀರು
ದುಷ್ಟ ವ್ಯಾಘ್ರಗಳುಂಟು ಅಲ್ಲಿ
ನಟ್ಟನಡುವೆ ಬಾರಯ್ಯನೆ

'ಅಮ್ಮ ನೀನು ಸಾಯಲೇತಕೆ ಸುಮ್ಮನಿರು ಎಲ್ಲರ ಹಾಗೆ' ಎನ್ನುವ ಕರುವಿನ ಮಾತಿಗೆ ಅದು ಹೇಳುವ ಮಾತು:

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು

ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟಕಡೆಗಿದು ಖಂಡಿತ

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಸರ್ವ ಬಳಗವು
ಸತ್ಯವಾಕ್ಯಕೆ ತಪ್ಪಿದಾರೆ
ಅಚ್ಯುತಾ ಹರಿ ಮೆಚ್ಚನು

ಅದು ಉಳಿದ ಗೋವುಗಳಿಗೆ ಹೇಳುವ ಮಾತುಗಳು ತಾಯಭಾವದ ಉತ್ಕಟತೆಯನ್ನೇ ಹೇಳಿವೆ :

ಅಮ್ಮಗಳಿರಾ ಅಕ್ಕಗಳಿರಾ
ಎನ್ನ ತಾಯಿಯೊಡಹುಟ್ಟುಗಳಿರಾ
ನಿಮ್ಮ ಕಂದನೆಂದು ಕಂಡಿರಿ
ತಬ್ಬಲಿ ಮಗನೈದನೆ

ಮುಂದೆ ಬಂದರೆ ಹಾಯದೀರಿ
ಹಿಂದೆ ಬಂದರೆ ಒದೆಯದೀರಿ
ನಿಮ್ಮ ಕಂದನೆಂದು ಕಂಡಿರಿ
ತಬ್ಬಲಿ ಮಗನೈದನೆ

'ಇಬ್ಬರಾ ಋಣ ತೀರಿತೆಂದು' ಕಂದನನ್ನ ತಬ್ಬಿಕೊಂಡು ಹಸು ವಾಪಸು ಬರುತ್ತದೆ. ಅದು ಪುಣ್ಯನದಿಯೊಳು ಸ್ನಾನವ ಮಾಡಿ ಗವಿಯ ಬಾಗಿಲವರೆಗೆ ಹೋಗಿ ನಿಲ್ಲುತ್ತದೆ. ಅಷ್ಟೇ ಅಲ್ಲ ಸಾವಕಾಶವ ಮಾಡದಂತೆ ಹುಲಿಯನ್ನು ಕರೆಯಿತು.

ಖಂಡವಿದೆ ಕೊ ರಕ್ತವಿದೆ ಕೊ
ಗುಂಡಿಗೆಯ ಕೊಬ್ಬುಗಳಿವೆ ಕೋ
ಉಂಡು ಸಂತಸಗೊಂಡು ನೀ ಭೂ
ಮಂಡಲದೊಳು ಬಾಳಯ್ಯನೆ

ಈ ಮಾತಿಗೆ ಹುಲಿಯೇ ಬದಲಾಗಿ ಹೋಗುತ್ತದೆ

ಎನ್ನ ಒಡಹುಟ್ಟಕ್ಕ ನೀನು
ನಿನ್ನ ತಿಂದು ನಾನೇನ ಪಡೆವೆನು
ನಿನ್ನ ಪಾದದ ಮೇಲೆ ಬಿದ್ದು
ಎನ್ನ ಪ್ರಾಣವ ಬಿಡುವೆನು
ಮುನ್ನ ನೂರು ಗೋವ ಕೊಂದ
ಅನ್ಯಕಾರಿ ಪಾಪಿ ನಾನು
ಇನ್ನು ಇರಿಸಲು ಏಕೆ ಪ್ರಾಣವ
ಬಿಡುವೆನೆಂದು ಪೇಳಿತು

'ಅಮ್ಮ ನೀನು ಸತ್ಯವಂತೆಯು, ನಿನ್ನ ದರುಶನ ಮಾತ್ರದಿಂದಲಿ ನಾನು ಪೂರ್ವದಿ ತಂದ ಫಲವು ಇಂದು ಪರಿಹಾರವಾಯಿತು' ಎಂದೇ ಅದು ಹೇಳುತ್ತದೆ. ತನ್ನ ಪ್ರಾಣವನ್ನ ಬಿಟ್ಟ ಹುಲಿಯನ್ನು ಹರಿ ಹರ ಬ್ರಹ್ಮಾದಿಗಳು ಮೆಚ್ಚಿದರಂತೆ, ಹರನು ಅದರ ಚರ್ಮವನ್ನೇ ಹೊದ್ದುಕೊಂಡನಂತೆ, ಬ್ರಹ್ಮನು ಪ್ರಾಣವನ್ನು ಪ್ರೇಮದಿಂದ ಕರೆದುಕೊಂಡನಂತೆ. ಅಷ್ಟೇ ಅಲ್ಲ ದೊಡ್ಡಿಗೆ ಮರಳಿದ ಪುಣ್ಯಕೋಟಿಯ ಕಾಲಿಗೆ ಗೊಲ್ಲನು ಕೂಡ 'ಉನ್ನತ ಸೌಭಾಗ್ಯವೀಯೆಂದು' ಎರಗುತ್ತಾನೆ. ಹೀಗೆ ಇದೊಂದು ಅಪರೂಪದ ಅಧ್ಯಾತ್ಮ ಸಂದೇಶದ ಕಾವ್ಯವಾಗಿ ಮಾರ್ಪಾಟಾಗಿದೆ. ಹಿಂದಿನಿಂದ ಅನೂಚಾನವಾಗಿ ಹರಿದುಬಂದಿರುವ ಭಾರತೀಯ ಮೌಲ್ಯಗಳನ್ನ ಮುಂದಿರಿಸಿದೆ.

ಈ ರಚನೆಯನ್ನ ಪಠ್ಯಗಳಲ್ಲಿ ಸಂಗ್ರಹವಾಗಿ ಅಳವಡಿಸುತ್ತಲೇ ಬರಲಾಗಿದೆ. ಕತೆ ಮಕ್ಕಳಿಗೆ ಪ್ರಿಯವಾಗುವ ಹಾಗೆ ಹಾಡುಗಬ್ಬವಾಗಿ ಕನ್ನಡದ ಲಯ ಬಲು ಸುಲಭವಾಗಿ ನಾಲಿಗೆಗಿಳಿಯುವಂತಿದೆ. ಮಕ್ಕಳಿಗೆ ಎಂದು ನಿರ್ದಿಷ್ಟವಾಗಿ ನಿರೂಪಿತವಾದ ಕಾವ್ಯ ಇದಲ್ಲ. ಹಾಗಿದ್ದಾಗಲೂ ಇದನ್ನ ಜೀವನದ ಮೌಲ್ಯವಾಗಿ ಮಕ್ಕಳಿಗೆ ತಲಪಿಸುವ ಕಾರ್ಯವನ್ನ ನಮ್ಮ ಹಿರಿಯರು ಮಾಡುತ್ತಲೇ ಬಂದಿದ್ದಾರೆ. ಮಕ್ಕಳೂ ಹಿರಿಯರ ಸಹಾಯದಿಂದ ಇದನ್ನ ಪ್ರೀತಿಯಿಂದಲೇ ಸ್ವೀಕರಿಸಿದ್ದಾರೆ ಎನ್ನಬಹುದು. ನಮ್ಮ ಹಿಂದಿನ ತಲೆಮಾರಿನವರಿಗೆ ಮಕ್ಕಳ ಓದಿನ ನಿರೀಕ್ಷೆಗಳು ಹೆಚ್ಚೇ ಇದ್ದವು. ರಾಜಶೇಖರ ವಿಳಾಸದಂತಹ ಕಾವ್ಯಭಾಗಗಳನ್ನ ಶಾಲಾ ಪಠ್ಯಗಳಲ್ಲಿ ಅಳವಡಿಸುತ್ತಿದ್ದುದಿತ್ತು. ಹಾಗಿರುವಾಗ ಆದಷ್ಟೂ ಸರಳವಾದ ಈ ರಚನೆ ಮಕ್ಕಳಿಗೆ ಒಂದಿಷ್ಟೆಲ್ಲ ಸುಲಭವಾಗಿಯೇ ದಕ್ಕಿರಲು ಸಾಕು. ಏನೇ ಇರಲಿ ಅತ್ಯಂತ ಜನಪ್ರಿಯ ರಚನೆ ಇದು ಎಂದರೆ ತಪ್ಪಾಗದು.

ಹರಿಶ್ಚಂದ್ರ ಕಾವ್ಯದ ಲೋಹಿತಾಶ್ವನ ಪ್ರಸಂಗ, ಜೈಮಿನಿ ಭಾರತದ ಚಂದ್ರಹಾಸನ ಚರಿತ್ರೆ, ಕುಮಾರವ್ಯಾಸನ ಭಾರತದ ಕೌರವ ಪಾಂಡವರ ಬಾಲ್ಯದ ಚಿತ್ರಣಗಳು, ಹರಿಹರನು ಚಿತ್ರಿಸಿದ ಶರಣರ ಬಾಲ್ಯದ ಚಿತ್ರಣಗಳು ಇವೆಲ್ಲ ಮೊದಲೆಲ್ಲ ಮಕ್ಕಳಿಗೆ ಪಠ್ಯವಾಗಿ ಕಲಿಸಲ್ಪಡುತ್ತಿದ್ದುವೇ.

ಬಾಲಕೃಷ್ಣನನ್ನು ನಾನಾ ಬಗೆಯಲ್ಲಿ ತಮ್ಮ ಭಕ್ತಿ ರಚನೆಗಳಲ್ಲಿ ಚಿತ್ರಿಸಿದ ಪುರಂದರ ದಾಸರ ಅನೇಕ ಪದ್ಯಗಳು ಮಕ್ಕಳಿಗೆ ಹತ್ತಿರವಾಗುವಂಥವೇ. ಅದರಲ್ಲೂ ಕೃಷ್ಣನೇ ಬಾಲಕನಾಗಿ ಮುದ್ದುಮುದ್ದಾಗಿ ಮಾತನಾಡುವ ಬಗೆಬಗೆಯ ರಚನೆಗಳು ಮಕ್ಕಳ ಲೋಕವನ್ನೇ ಹೇಳುತ್ತವೆ. 'ಗುಮ್ಮನ ಕರೆಯದಿರೆ ಅಮ್ಮ ನೀನು' ಎನ್ನುವ ಪದ್ಯವಂತೂ ಬಲು ಸರಳವಾಗಿ, ಮಕ್ಕಳನ್ನ ತಲಪುವ ಆಪ್ತ ಭಾವದ ರಚನೆ. ಇದರಲ್ಲಿನ ಒಂದೊಂದು ನುಡಿಯೂ ಮಮತೆಯೊಳಗೆ ಅದ್ದಿದಂತೆ ಅಮ್ಮನೊಡನೆಯ ಮಗುವಿನ ತಪ್ಪೊಪ್ಪಿಗೆಯ ಭಾವಗಳು ಮುಗ್ಧತೆಯಲ್ಲಿ ತೊಯ್ದು ಮೂಡಿದಂತಿವೆ.

ಸುಮ್ಮನೆ ಇರುವೆನು ಅಮ್ಮಿಯ ಬೇಡೆನು
ಮಮ್ಮು ಉಣ್ಣುತ್ತೇನೆ ಅಮ್ಮ ಅಳುವುದಿಲ್ಲ
ಹೆಣ್ಣುಗಳಿರುವಲ್ಲಿಗೆ ಹೋಗಿ ಅವರ
ಕಣ್ಣು ಮುಚ್ಚುವುದಿಲ್ಲವೆ
ಚಿಣ್ಣರ ಬಡಿಯೆನು ಅಣ್ಣನ ಬೈಯೆನು
ಬೆಣ್ಣೆಯ ಬೇಡೆನು ಮಣ್ಣುತಿನ್ನುವುದಿಲ್ಲ

ಬಾವಿಗೆ ಹೋಗೆ ಕಾಣೆ ಅಮ್ಮ ನಾನು
ಹಾವಿನೊಳಾಡೆ ಕಾಣೆ
ಆವಿನ ಮೊಲೆಯೂಡೆ ಕರುಗಳ ನೋಡೆ
ದೇವರಂತೆ ಒಂದು ತಾವಿಗೆ ಕೂಡುವೆ

ಮಗನ ಮಾತನು ಕೇಳುತ ಗೋಪಿ ದೇವಿ
ಮುಗುಳು ನಗುವ ನಗುತ
ಜಗದೊಡೆಯ ಶ್ರೀ ಪುರಂದರ ವಿಠಲನ
ಬಿಗಿದಪ್ಪಿಕೊಂಡಳು ಮೋಹದಿಂದಾಗ

ದೇವರಂತೆ ಒಂದು ತಾವಿಗೆ ಕೂಡುವೆ ಎನ್ನುವ ಸಾಲಿನಲ್ಲಂತೂ ಈ ಭಾವ ಸಂವೇದನೆಯ ಶಿಖರವನ್ನೇರಿದೆ. ಬಲು ಸಹಜವಾದ ಮುದ್ದು ಮುದ್ದು ಮಾತುಗಳು ಇಲ್ಲಿ ಹರಿದು ಬಂದಿವೆ. ಈ ಬಗೆಯಲ್ಲಿ ತಾಯಿ ಮಗನ ನಡುವಿನ ಸಂದರ್ಭಗಳನ್ನ ಸೃಷ್ಟಿಸಿಕೊಂಡು ರಚಿಸಿದ ಅವರ ಅನೇಕ ರಚನೆಗಳು ಮಕ್ಕಳಿಗೆ ನಿಜಕ್ಕೂ ಮುದನೀಡುವಂತಿವೆ. ಅಮ್ಮನಾಗಿ ಯಶೋದೆ ತೋರುವ ಹುಸಿ ಕೋಪದ ಭಾವಗಳು ಇಂಥವು . . .

ಇವನ ಪಿಡಿದುಕೊಂಡು ಹೋಗೆಲೋ ಜೋಗಿ
ಇವ ನಮ್ಮ ಮಾತು ಕೇಳದೆ ಪುಂಡನಾದ

ಆಡುತಾಡುತ ಪೋಗಿ ನೀರಲ್ಲಿ ಮುಳುಗಿದ
ಬೇಡವೆಂದರೆ ಬೆಟ್ಟ ಬೆನ್ನಲ್ಲಿ ಹೊತ್ತ

ದಾಡೆಯ ವಿಪ್ರನ ಕಣ್ಣುತಿವಿದ ಬುದ್ಧಿ
ಇಲ್ಲೆಂದರೆ ಕೈಲಿ ಕೊಡಲಿಯ ಪಿಡಿದ

ಬಿಲ್ಲು ಹಿಡಿದು ತಾನು ರಕ್ಕಸರ ಕೊಂದ
ಬಹುಬಲ್ಲಿದ ಮಾವನ ಶಿರವ ಛೇದಿಸಿದ

ಎಂದೆಲ್ಲ ಸಾಗುವ ಪದ್ಯದ ಕೊನೆಯಲ್ಲಿ 'ಎತ್ತಲಾದರೂ ಕೊಂಡು ಹೊಗೆಲೋ ಜೋಗಿ' ಎಂದಿರುವಲ್ಲಿ ತೀರ ಸಹಜದ ಮನೋವ್ಯಾಪಾರವೇ ಕಂಡರಿಸಿಯಾಗಿದೆ. 'ಕಂದ ಹಾಲು ಕುಡಿಯೊ ಗೋವಿಂದ', 'ತೋಳು ತೋಳು ರಂಗ ತೋಳನ್ನಾಡೈ', 'ಲಾಲಿಸಿದಳು ಮಗನ ಯಶೋದೆ' ಮುಂತಾಗಿ ಅವರ ರಚನೆಗಳೆಲ್ಲ ಬಾಲಲೋಕದ ಭಾವಲೋಕವನ್ನ ಯಶಸ್ವಿಯಾಗಿ ಪದ್ಯಗಳಲ್ಲಿಳಿಸಿವೆ. ಭಕ್ತಿ ರಚನೆಗಳಾದರೂ ಇವು ಮಕ್ಕಳಿಗೆ ತಲಪುವ, ಮುದ ನೀಡುವ ರಚನೆಗಳೇ. ಹೀಗೆಯೇ ಕನಕದಾಸರ

ಡೊಂಕುಬಾಲದ ನಾಯಕರೆ
ನೀವೇನೂಟವ ಮಾಡಿದಿರಿ
ಕಣಕವ ಕುಟ್ಟುವ ಅಲ್ಲಿಗೆ ಹೊಗಿ
ಹಣಿಕಿ ಹಣಿಕಿ ನೋಡುವಿರಿ

ಮುಂತಾಗಿ ಸಾಗುವ ವಿಡಂಬನೆಯ ಹಾಸ್ಯಮಯವಾದ ರಚನೆ ತನ್ನ ಮೇಲ್ಪದರದಲ್ಲಾದರೂ ಮಕ್ಕಳಿಗೆ ಒಳ್ಳೇ ಮುದನೀಡಬಲ್ಲುದೇ. ಹಾಗೆಯೇ ಮುಪ್ಪಿನ ಷಡಕ್ಷರಿಗಳ ತಿರುಕನ ಕನಸಿನ ಕವಿತೆಯೂ ಒಂದು ಕತೆಯನ್ನ ನಿರೂಪಿಸುತ್ತ ಮಕ್ಕಳಿಗೆ ಹತ್ತಿರವಾದಂತಹದೇ. 'ತಿರುಕನೋರ್ವನೂರಮುಂದೆ ಮುರುಕು ಧರ್ಮಶಾಲೆಯಲ್ಲಿ ಒರಗಿರುತ್ತಲೊಂದುಕನಸು ಕಂಡನಂತೆನೆ' ಎಂದು ಸಾಗುವ ಸರಳ ನಿರೂಪಣೆ ಕುತೂಹಲ ಹುಟ್ಟಿಸುವ, ತಿರುಕನ ಕೊರಳಿಗೇ ಆನೆ ಮಾಲೆ ಹಾಕುವ, ರಾಜನನ್ನಾಗಿ ಸಾರುವ ಪ್ರಸಂಗ ಮಕ್ಕಳಿಗೆ ಖಂಡಿತ ಕತೆಯಾಗಿ ರಂಜಿಸುತ್ತ ಹತ್ತಿರವಾಗುವಂತಹುದೇ. ಇದೇ ಕಾರಣಕ್ಕೆ ಬಹುಶಃ ಇದು ಮಕ್ಕಳ ಪಠ್ಯದಲ್ಲಿ ಮೇಲಿಂದ ಮೇಲೆ ಸೇರ್ಪಡೆಯಾಗುತ್ತ ಬಂತು. 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ' ದಂತಹ ಸರಳವಾದ ವಚನಗಳು ಕೂಡ ಮಕ್ಕಳಿಗೆ ಮುಟ್ಟುವಂತಹುವೇ.

ಈ ಬಗೆಯ ವಾತಾವರಣ ಮಕ್ಕಳ ಲೋಕವನ್ನ ತನ್ನದೇ ಆದ ರೀತಿಯಲ್ಲಿ ಮುಟ್ಟುವ ಕೆಲಸವನ್ನ ಖಂಡಿತ ಮಾಡಿತು. ಮಕ್ಕಳ ಸಾಹಿತ್ಯ ಲೋಕ ಪ್ರಫುಲ್ಲವಾಗಿ ತೆರೆದುಕೊಳ್ಳುವ ಪೂರ್ವಭಾವಿಯಾಗಿ ಈ ಬಗೆಯ ತಯಾರಿ ತನ್ ತಾನೇ ನಡೆದು ಬಂತು.

ನವೋದಯಕ್ಕೆ ಹೊರಳಿದ ಸಮಯದಲ್ಲಿ ಇಂಗ್ಲಿಷಿನ ಸಾಹಿತ್ಯದ ಪರಿಚಯ ಸಾಕಷ್ಟು ಆಗತೊಡಗಿತು. ಸುಮಾರು ಐದು ದಶಕಗಳ ಇಂಗ್ಲಿಷಿನ ಕೃತಿಗಳು ನವೋದಯ ಸಿದ್ಧತೆಯ ಸಮಯದಲ್ಲೇ ನಮ್ಮವರಿಗೆ ಪರಿಚಯವಾಗಿದ್ದುವು ಎನ್ನಬಹುದು. ಇಂಗ್ಲಿಷಿನಲ್ಲಿ ಮಕ್ಕಳ ಸಾಹಿತ್ಯದ ಸುವರ್ಣಯುಗ ಅಂತ ಕರೆಯುವ ಅವಧಿಯೂ ಕಾಣಿಸಿಕೊಂಡಾಗಿತ್ತು. ಇಂದಿಗೂ ಅತ್ಯಂತ ಪ್ರಚುರದಲ್ಲಿರುವ, ಕ್ಲಾಸಿಕ್ ಎಂದು ಗುರುತಿಸಿಕೊಂಡಿರುವ 'ಆಲೀಸ್ ಇನ್ ವಂಡರ್ ಲ್ಯಾಂಡ್', 'ವಿನಿ ದಿ ಪೂವ', 'ಟ್ರೆಸರ್ ಐಲ್ಯಾಂಡ್', 'ಹಾಬಿಟ್', 'ನರ್ನಿಯಾ', 'ಪೀಟರ್ ಪ್ಯಾನ್', 'ವಿಂಡ್ ಇನ್ ದ ವಿಲೊ' 'ವಿಝಾರ್ಡ್ ಆಫ್ ಓಝಡ್' ಮುಂತಾದ ಅನೇಕ ಕೃತಿಗಳು ಆಗಲೇ ಕಾಣಿಸಿಕೊಂಡಿದ್ದವು. ಮಕ್ಕಳಿಗಾಗಿರುವ ಉತ್ಕೃಷ್ಟ ಎಂದು ಹೆಸರಿಸುವ ಕೆಲವಾದರೂ ಕೃತಿಗಳನ್ನ ಆಗಲೆ ಕನ್ನಡಕ್ಕೆ ತರುವ ಪ್ರಯತ್ನ ಕೂಡ ನಡೆಯಿತು. ರಾಜರತ್ನಂ 'ಆಲಿವರ್ ಟ್ವಿಸ್ಟ್' ತಂದರು. ನಾ. ಕಸ್ತೂರಿ ಆಲೀಸಳ ಕತೆಯನ್ನ ತಂದರು. ಸುಬೋಧ ರಾಮರಾಯರು ಗ್ರಿಮ್ ಸಹೋದರರ ಕತೆಗಳನ್ನ ತಂದರು. ಎಂ.ವಿ ಸೀತಾರಾಮಯ್ಯ ರಾಬಿನ್‌ಸನ್ ಕ್ರೂಸೊ ತಂದಿದ್ದರು. ಹೀಗೆ ಅನೇಕ ಕೃತಿಗಳು ಕನ್ನಡವನ್ನ ತಲಪತೊಡಗಿದ್ದವು. ಇಷ್ಟಾಗಿಯೂ ಇಪ್ಪತ್ತನೆಯ ಶತಮಾನದ ಇಂಗ್ಲಿಷಿನ ಮಕ್ಕಳ ಸಾಹಿತ್ಯದ ವಿದ್ಯಮಾನಗಳು ಅಷ್ಟಾಗಿ ನಮ್ಮಲ್ಲಿ ಪ್ರಚುರಗೊಳ್ಳಲಿಲ್ಲವೆಂದೇ ಹೇಳಬೇಕು. ಅಲ್ಲಿ ನಡೆದ ಚಿಂತನೆಗಳು ಮತ್ತು ಅಪಾರ ಸಂಖ್ಯೆಯಲ್ಲಿ ಕಾಣಿಸಿಕೊಂಡ ಕೃತಿಗಳು ಯಾವುದರ ಕುರಿತೂ ನಮ್ಮಲ್ಲಿ ಅಷ್ಟಾಗಿ ಮಾತುಕತೆಗಳು ನಡೆದ ಹಾಗೆ ಕಾಣೆ. ನಮ್ಮಲ್ಲಿನ ವೈಚಾರಿಕತೆ ಎಂದರೆ ಸಾಹಿತ್ಯವಾಗಿ ಮಕ್ಕಳಿಗಾಗಿನ ಬರವಣಿಗೆಯೂ ಸೃಜನಶೀಲವಾಗಿರಬೇಕು, ಮಕ್ಕಳ ಮನಸ್ಸಿಗೆ ತಕ್ಕುದಾಗಿರಬೇಕು, ಉಪದೇಶಪರವಾಗಿರಕೂಡದು, ಉತ್ಕೃಷ್ಟವಾಗಿರಬೇಕು ಎನ್ನುವಷ್ಟರಮಟ್ಟಿಗಿನ ನೆಲೆಯದಷ್ಟೆ.

ಚುರುಕುಗೊಂಡ ಸಾಹಿತ್ಯಕ ಚಟುವಟಿಕೆ

೧೯ನೆಯ ಶತಮಾನದ ಮೊದಲಿನಿಂದಲೇ ಮಕ್ಕಳ ಸಾಹಿತ್ಯದ ಬರವಣಿಗೆ ಅಗತ್ಯವಾಗಿಯೂ, ಬಹು ಮುಖ್ಯವಾಗಿ ಶೈಕ್ಷಣಿಕ ಕಾರಣಗಳಿಂದಲೂ ಪ್ರಾರಂಭವಾದುದನ್ನು

ಕನ್ನಡ ನಾಡಿನುದ್ದಕ್ಕೂ ಕಾಣುತ್ತೇವೆ. ಇದು ಭಾರತದ ಎಲ್ಲ ಭಾಷೆಗಳಲ್ಲಿ ನಡೆದ ಹಾಗೆಯೇ ನಡೆದಿದೆ. ಮದ್ರಾಸ ಪ್ರಾಂತವಾಗಿ, ಮುಂಬೈ ಪ್ರಾಂತವಾಗಿ, ಮೈಸೂರಿನ ಕನ್ನಡದ ಅರಸರಿಗೆ ಸೇರಿದ್ದಾಗಿ, ಹೈದರಾಬಾದ ಆಡಳಿತಕ್ಕೆ ಒಳಗಾಗಿದ್ದಾಗಿ ಹಂಚಿಹೋಗಿದ್ದ ಕನ್ನಡ ನಾಡು ಹಾಗೆ ನೋಡಿದರೆ ಕನ್ನಡದ ವಾತಾವರಣವನ್ನ ಒಂದೇ ಬಗೆಯಲ್ಲಿ ಅನುಭವಿಸಲಿಲ್ಲ ಎನ್ನುವುದು ಸುವಿದಿತ. ಶೈಕ್ಷಣಿಕವಾಗಿ ಮಕ್ಕಳ ಬದುಕಿನಲ್ಲೂ ಓದಿನ ವಾತಾವರಣ ಇದನ್ನೆಲ್ಲ ಅನುಭವಿಸಿಯೇ ಅನುಭವಿಸಿತು. ಮೈಸೂರಿನ ಅರಸರ ವಾತಾವರಣದಲ್ಲಿ ಸಿಕ್ಕ ಬಿಡುಬೀಸು ಅವಕಾಶಗಳು ಬೇರೆಡೆ ಸಿಗಲಿಲ್ಲವಾದರೂ ನಿಧಾನ ಎಲ್ಲೆಡೆ ಪಠ್ಯದ ಕಾರಣವಾಗಿ ಮಕ್ಕಳಿಗಾಗಿ ಬೇಕಾದ ಬರವಣಿಗೆ ತೆರೆದುಕೊಳ್ಳತೊಡಗಿತು.

ಇದೆಲ್ಲ ನವೋದಯದ ಪ್ರೌಢರ ಸಾಹಿತ್ಯದ ಪ್ರಯೋಗಗಳೊಂದಿಗೇ ನಡೆದುದು. ಪ್ರೌಢರ ಸಾಹಿತ್ಯದಲ್ಲಿ ತೊಡಗಿಕೊಂಡಿದ್ದ ಹಿರಿಯರೇ ಬಹುಸಂಖ್ಯೆಯಲ್ಲಿ ಮಕ್ಕಳ ರಂಗದಲ್ಲೂ ಕೆಲಸ ಮಾಡಿದರು. ಅದರ ಅಗತ್ಯವೂ ಹಾಗಿತ್ತು. ಸೃಜನಶೀಲ ಬರವಣಿಗೆಯಲ್ಲಿ ಆಸಕ್ತಿಯುಳ್ಳವರು, ವಿದ್ವಾಂಸರು, ಶೈಕ್ಷಣಿಕ ಕಾಳಜಿಯುಳ್ಳವರು ಮುಂತಾಗಿ ನಾನಾ ಬಗೆಯ ಹಿರಿಯರು ಬರವಣಿಗೆಗಿಳಿದುದು ಕಂಡುಬರುತ್ತದೆ. ಶಾಲಾ ಪಠ್ಯ ವ್ಯವಸ್ಥೆಯ ಅನಿವಾರ್ಯದ, ಅಗತ್ಯದ ಭಾಗವಾಗಿ ನಡೆದ ಹಾಗೆ ಈ ಬಗೆಯ ಕೈಂಕರ್ಯ ಹವ್ಯಾಸದಲ್ಲಿ, ಆಸಕ್ತಿಯಿಂದಲೂ ಅನೇಕರಿಂದ ನಡೆಯಿತು ಎನ್ನುವುದು ಗಮನಾರ್ಹ. ಕನ್ನಡ ಕಟ್ಟುವ ಕಾರ್ಯದ ಉತ್ಸಾಹ, ಹುಮ್ಮಸ್ಸುಗಳು ಹಿನ್ನೆಲೆಯಾಗಿ ಕೆಲಸ ಮಾಡಿದುದನ್ನ ತಳ್ಳಿಹಾಕಲಾಗದು. ಹಾಗಾಗಿ ಬಗೆಬಗೆಯ ಪ್ರಕಾರಗಳಲ್ಲಿ ಪ್ರಯೋಗಗಳನ್ನ ಮಾಡುವ, ಸಮೃದ್ಧಗೊಳಿಸುವ ಪ್ರಯತ್ನಗಳು ವಿಶೇಷವಾಗಿಯೇ ನಡೆದಿರಲು ಸಾಕು.

ಹೊಸ ಶೈಕ್ಷಣಿಕ ವ್ಯವಸ್ಥೆ, ಮುದ್ರಣ ವ್ಯವಸ್ಥೆಯನ್ನ ತರುವುದರೊಂದಿಗೆ ಮಿಷನರಿಗಳು, ಆ ಮೂಲಕ ಆಸಕ್ತ ವಿದೇಶಿಯರು, ಹಾಗೆಯೇ ಸರಕಾರಿ ಸಂಸ್ಥೆಗಳು ಮಕ್ಕಳಿಗಾಗಿನ ಬರವಣಿಗೆಗಾಗಿ ದಾರಿ ಮಾಡಿದುದು ಮೊದಲ ಪ್ರಯತ್ನವಾಗಿ ಸರಿ ಸುಮಾರು ಎಲ್ಲಡೆಯೂ ಕಂಡುಬರುತ್ತದೆ. ೧೭ನೆಯ ಶತಮಾನದ ಆದಿ ಭಾಗದಲ್ಲೇ ಮಿಷನರಿಗಳು ನಮ್ಮ ನಾಡಿನಲ್ಲಿ ಕಾಲಿಟ್ಟರೂ ೧೯ನೆಯ ಶತಮಾನದ ನಡುಭಾಗದವರೆಗೂ ಕನ್ನಡ ಮಕ್ಕಳ ಪದ್ಯಗಳು ಕಾಣುವುದಿಲ್ಲ. ೧೮೧೦ರಲ್ಲಿ ಧಾರವಾಡ ವಿಭಾಗದ ಅಸಿಸ್ಟಂಟ್ ಕಲೆಕ್ಟರ್ ಆಗಿದ್ದ ವಾಲ್ಟರ್ ಎಲಿಯಟ್ ಮಾಡಿದ ಇಸೋಪನ ಕತೆಗಳ ಮುದ್ರಣ ಮೊದಲನೆಯದು ಎನ್ನುವ ವಾಡಿಕೆ ಇದೆ. ೧೮೩೬ರಲ್ಲಿ 'ಸಂಣ ಹಿತೋಪದೇಶ' ಎಂಬ ಪುಸ್ತಕ ಕಲ್ಲಚ್ಚಿನ ಮೂಲಕ ಪ್ರಕಟವಾಯಿತು. ೧೮೩೪ರಲ್ಲಿ ಮಂಗಳೂರಿನಲ್ಲಿ ಮುದ್ರಣ ಯಂತ್ರ ಸ್ಥಾಪನೆಯಾಯ್ತು. ಇದೇ ವೇಳೆಯಲ್ಲಿ ಬಾಸೆಲ್ ಮಿಶನ್ ಸಂಸ್ಥೆಯ ಮೂಲಕ 'ಬಾಲಬೋಧಿನಿ' ಎಂಬ ಕನ್ನಡದ ಮೊತ್ತಮೊದಲ ಅಚ್ಚಿನ ಪುಸ್ತಕ ಶಾಲಾ ಮಕ್ಕಳಿಗೆ ಲಭ್ಯವಾಯಿತು ಎನ್ನುವ ದಾಖಲೆಗಳಿವೆ. ೧೮೬೮ರಲ್ಲಿ ವೀಗಲ್ ಜೆ ಅವರ 'ಬಾಲ್ಲಶಿಕ್ಷೆ' ಬಂದಾಯಿತು. ೧೮೪೨ರಲ್ಲಿ ಗ್ಯಾರೆತ್ ಜಾನ್ ಎಂಬುವವರು ಬೆಂಗಳೂರಿನಲ್ಲಿ ಮುದ್ರಣಾಲಯ ಸ್ಥಾಪಿಸಿ ೧೮೫೩ರಲ್ಲಿ 'ಚಿಕ್ಕವರಿಗೆ ತಕ್ಕ ಪಾಠಗಳು' ಎಂಬ ಕೃತಿಯನ್ನ ಶಾಲೆಗಳ ಉಪಯೋಗಕ್ಕಾಗಿ ಎಂದು ಪ್ರಕಟಿಸಿದುದು ಕಂಡುಬರುತ್ತದೆ. ೧೮೬೫ರಲ್ಲಿ 'ಪಂಚತಂತ್ರ'ವನ್ನೂ ಅವರು ಪ್ರಕಟಿಸಿದರು. ಜೆ. ಮ್ಯಾಕ್ ಎಂಬುವವರು ಮಂಗಳೂರಿನಲ್ಲಿ ಪ್ರಕಟಿಸಿದ 'ಬಾಲಗೀತಗಳು' ಎಂಬ ಕೃತಿಯನ್ನ ಬಾಲ ಸಾಹಿತ್ಯದ ಮೊದಲ ಕೃತಿಯಾಗಿ

ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗುತ್ತಿದೆ. ಡಾ, ಶ್ರೀನಿವಾಸ ಹಾವನೂರ ಅವರು ಹೊಸಗನ್ನಡ ಕವಿತೆಯ ಆವಿರ್ಭಾವ ೧೮೬೭ರಲ್ಲಿ ಕಿಟೆಲ್‌ರಿಂದ ಎಂದು ಅಭಿಪ್ರಾಯ ಪಟ್ಟಿದ್ದು, ಕಿಟಲ್‌ರೇ ಪಠ್ಯಪುಸ್ತಕಗಳಿಗಾಗಿಯೂ, ಬೇರೆಡೆ ಎಳೆಯರಿಗಾಗಿ ಬರೆದ ಸ್ವತಂತ್ರ ಬಿಡಿ ಕವನಗಳು ಸುಮಾರು ನಾಲ್ವತ್ತರಷ್ಟಿವೆ ಎಂದಿರುವುದನ್ನ ಇಲ್ಲಿ ಗಮನಿಸಬಹುದಾಗಿದೆ. ೧೮೪೦ ರಿಂದ ೧೮೪೨ರ ಅವಧಿಯಲ್ಲಿ ರೈಸ್ ಅವರು ಕನ್ನಡ ವಾಚನ ಪುಸ್ತಕದಿಂದಾರಂಭಿಸಿ ಮೊದಲ ಮೂರು ತರಗತಿಗಳಿಗೆ ಪಠ್ಯಗಳನ್ನ ಸಿದ್ಧಪಡಿಸಿದುದು, ಮುಂಬಯಿ ಸರಕಾರವು 'ಕನ್ನಡ ಕವಿತೆಯ ಮೊದಲನೆಯ ಪುಸ್ತಕವು'(೧೮೭೩)ರಲ್ಲಿ ಹೊರತಂದುದು, ಗಂಗಾಧರ ಮಡಿವಾಳೇಶ್ವರ ತುರಮುರಿಯವರು ಕವಿತೆಗಳನ್ನು ಪಠ್ಯ ಪುಸ್ತಕಗಳಲ್ಲಿ ಸೇರಿಸಿಕೊಂಡುದು(೧೮೬೭), ಗ್ರೇಟರ್ 'ಕೊಡಗುದೇಶ ವರ್ಣನೆ'೧೮೬೯ ತಂದುದು, ವೀಗಲ್ ಹಾಗೂ ಮೋಗ್ಲಿಂಗ್ ಅವರು ಕೌಂಡಿಣ್ಯರ ಜತೆ ಸೇರಿ 'ಶಾಲಾಗೃಹ ಪಠಣೋದ್ದಿಶ್ಯ ದೇವವಾಕ್ಯ ವ್ಯಾಖ್ಯಾನ' ತಂದುದು(೧೮೭೫), ಚ. ವಾಸುದೇವಯ್ಯನವರು 'ಬಾಲಬೋಧೆ'(೧೮೭೮)ಯನ್ನು ಆ ಕಾಲದ ಜನಪ್ರಿಯ ಜನಪದ–ಕಂದ ಪದ್ಯಗಳನ್ನು ಬಳಸಿಕೊಂಡು ಸಿದ್ಧಪಡಿಸಿದುದು, ಈ ಎಲ್ಲ ಹತ್ತೊಂಬತ್ತನೆಯ ಶತಮಾನದ ಮಧ್ಯ ಭಾಗದ ನಂತರ ನಡೆಯುತ್ತ ಮಕ್ಕಳ ಸಾಹಿತ್ಯದ ರಂಗಕ್ಕೆ ಹಿನ್ನೆಲೆಯಾಗಿ ಮೊದಲ ಹೆಜ್ಜೆಗಳಾದುದನ್ನು ಹೇಳಬೇಕು.

ನಮ್ಮ ಹಿರಿಯರು ಹೇಳುವಂತೆ ಮಠಮಂದಿರಗಳಲ್ಲಿ ನಡೆಯುತ್ತಿದ್ದ ಶಿಕ್ಷಣ ಪದ್ಧತಿಯಲ್ಲಿ ಪಠ್ಯಗಳಾಗಿ ಗಣಿಸುತ್ತಿದ್ದ ಕಾವ್ಯಭಾಗಗಳನ್ನು ಗಮನಿಸಿದರೆ ಮಕ್ಕಳನ್ನು ಹಿಂದಿನವರು ಹೇಗೆಲ್ಲ ಗ್ರಹಿಸುತ್ತಿದ್ದರು, ಏನೆಲ್ಲ ಬಾಲ್ಯದ ಸಂದರ್ಭದಲ್ಲಿಯೇ ಅಪೇಕ್ಷಿಸುತ್ತಿದ್ದರು ಎನ್ನುವುದು ತಿಳಿಯುತ್ತದೆ. ಹರಿಶ್ಚಂದ್ರ ಕಾವ್ಯದ ಲೋಹಿತಾಶ್ವನ ಭಾಗ, ಜೈಮಿನಿಭಾರತದ ಚಂದ್ರಹಾಸನ ಚರಿತ್ರೆ, ಕುಮಾರವ್ಯಾಸನ ಭಾರತ ಕಥಾಮಂಜರಿಯಲ್ಲಿ ಕೌರವಪಾಂಡವರ ಬಾಲ್ಯ ಜೀವನ, ಕೃಷ್ಣನ ಬಾಲಲೀಲೆಗಳು, ಹರಿಹರನು ಚಿತ್ರಿಸಿರುವ ಶರಣಶರಣೆಯರ ಬಾಲ್ಯದ ಪ್ರಸಂಗಗಳು ಮುಂತಾದವುಗಳನ್ನೆಲ್ಲ ಆಗ ಆಯ್ದುಕೊಳ್ಳಲಾಗುತ್ತಿತ್ತಂತೆ. ಅಮರಕೋಶವನ್ನು ಬಾಯಿಪಾಠ ಮಾಡಿಸಲಾಗುತ್ತಿತ್ತಂತೆ. ಇಂಗ್ಲಿಷ್ ಮಿಷನರಿಗಳು, ಅಧಿಕಾರಿಗಳು ಮೊದಲು ಕೈಗೊಂಡ ಪ್ರಯತ್ನಗಳೂ ಇದೇ ಹಾದಿಯನ್ನ ಹಿಡಿದಂಥವೇ ಆಗಿದ್ದವು. ಆದರೆ ಇವೆಲ್ಲ ಹಿರಿಯರ ತಲೆಗಳಿಂದ ಇಳಿದವುಗಳಾದುವೇ ವಿನಃ ಮಕ್ಕಳಿಗೆ ರುಚಿಸುವ, ಅವರದೇ ಅದ ಮನೋಲೋಕ ಪ್ರವೇಶಿಸುವ ಅರ್ಹತೆ ಹೊಂದಿರಲಿಲ್ಲ. "ಅಜ್ಜನ ಕೋಲುಗಳೆಲ್ಲವೂ ಕುದುರೆಯಾಟಕ್ಕೆ ಅರ್ಹವಾದವುಗಳಲ್ಲ ಎಂಬ ಎಚ್ಚರ ೧೮೮೫ರಲ್ಲಿ ಮೈಸೂರಿನ ಸರಕಾರಿ ಮುದ್ರಣಾಲಯದಲ್ಲಿ ಆರನೇ ಬಾರಿಗೆ ಮುದ್ರಣಗೊಂಡ 'ಪದ್ಯಸಾರ'ದಲ್ಲೇ ಕಾಣಿಸುತ್ತದೆ." ಎಂದಿದ್ದಾರೆ ಬೊಳುವಾರರು ತಮ್ಮ ತಟ್ಟು ಚಪ್ಪಾಳೆ ಪುಟ್ಟ ಮಗು ಕೃತಿಯ ಮೊದಲನುಡಿಯಲ್ಲಿ. ಅವರೇ ಮುಂದುವರೆದು '೧೮೩೬ರಲ್ಲಿ ವಾಲ್ಟರ್ ಎಲಿಯಟ್ ಪ್ರಕಟಿಸಿದ್ದ 'ಸಂಣ ಹಿತೋಪದೇಶ'ವಾಗಲೀ, ೧೮೪೬ರ ಭಗವದ್ಗೀತೆಯ ಅನುವಾದವಾಗಲೀ, ೧೮೩೬ರಲ್ಲಿ ವೆಂಕಟರಂಗೋ ಕಟ್ಟಿಯವರು ಅನುವಾದಿಸಿದ್ದ 'ಅರೇಬಿಯನ್ ನೈಟ್ಸ್' ಆಗಲೀ ಇವೆಲ್ಲವೂ ಬಾಲಸಾಹಿತ್ಯದ ಮಿತಿಗೆ ಭಾರವಾದವುಗಳು' ಎಂದಿದ್ದಾರೆ. ರಾಜರತ್ನಂ ಅವರು ೧೯೩೭ರಲ್ಲಿ ಮೈಸೂರಿನಲ್ಲಿ ಮಿಡ್ಲಸ್ಕೂಲಿನ ಎರಡನೆ ವರ್ಗಕ್ಕೆ ಪಾಠಮಾಡಲು ಹೋದಾಗಿನ ಪರಿಸ್ಥಿತಿಯನ್ನು ತಮ್ಮ ಕಂದನ ಕಾವ್ಯಮಾಲೆಯ ಮುನ್ನುಡಿಯಲ್ಲಿ ಪ್ರಸ್ತಾಪಮಾಡಿರುವುದನ್ನು ನೋಡಿದರೆ ಈ ಬಗೆಯ ಕನ್ನಡದ ಬಳಕೆ ಎಲ್ಲಿಯುವರೆಗೂ ಮುಂದುವರಿದಿತ್ತು ಎಂಬುದರ ಕಲ್ಪನೆ ಬರುತ್ತದೆ. ಪಂಜೆ

ಮಂಗೇಶರಾಯರಂಥವರು ಹೊಸತನ್ನು ತಂದಮೇಲೂ ಈ ಬಗೆಯದು ಇನ್ನೂ ಅಲ್ಲಲ್ಲಿ ಮುಂದುವರೆದೇ ಇತ್ತು.

ಕ್ರೈಸ್ತ ಮಿಷನರಿಗಳು ಪಠ್ಯಗಳಲ್ಲಿ ಇಂಗ್ಲಿಷಿನಲ್ಲಿದ್ದ ಪ್ರಾರ್ಥನಾಪದ್ಯಗಳನ್ನು ಕನ್ನಡಕ್ಕೆ ಅದೇ ಲಯಗಳಲ್ಲಿ ನೀಡಲು ನೋಡಿದುದು, ೧೮೩೮ರಷ್ಟು ಮೊದಲಿಗೇ ಇಂಥ ರಚನೆಗಳು ಕಾಣಿಸಿಕೊಂಡಿದ್ದುದು, ಇಂಥವುಗಳೇ ನಿಧಾನ ಸುಧಾರಣೆಗೊಳ್ಳುತ್ತ ಬಂದುದನ್ನ ಲಭ್ಯವಾದ ಕೆಲವೆಲ್ಲ ರಚನೆಗಳ ಉದಾಹರಣೆಗಳಲ್ಲಿ ಗುರುತಿಸಬಹುದು . . .

ಮೇಘರೂಢನಾಗಿ ಹೋದ ಏಸುಕ್ರಿಸ್ತನು । ತಿರುಗಿ
ಮೇಘರೂಢನಾಗಿ ಲೋಕಕಿಳಿದು ಬರುವನು
ದೂತ–ಸೈನ್ಯ ಸಹಿತವಾಗಿ ಪ್ರಭುಬರುವನು । ಮಹಾ
ನೀತಿ ನ್ಯಾಯದಿಂದಲವನು ತೀರ್ಪುಕೊಡುವನು

ಹೀಗೆ ಕ್ರಿಸ್ತ ಪ್ರಾರ್ಥನಾಗೀತೆಗಳಂತೆ ಇಂಗ್ಲಿಷರನ್ನು ಹೊಗಳುವ ಗೀತೆಗಳನ್ನೂ ಅಳವಡಿಸಲಾಗುತ್ತಿತ್ತಂತೆ. ಬರಬರುತ್ತ ಇಲ್ಲಿನ ನೈಸರ್ಗಿಕ ವರ್ಣನೆ, ಸ್ಥಳಪರಿಚಯ, ಮಕ್ಕಳ ಸುತ್ತಮುತ್ತಲಿನ ಪ್ರಾಣಿಪಕ್ಷಿ, ಶಾಲೆ, ಮನೆ, ದೈನಂದಿನ ಚಟುವಟಿಕೆಗಳನ್ನ ವಸ್ತುಗಳಾಗಿ ಕವಿತೆಗಳಲ್ಲಿ ಸೇರಿಸತೊಡಗಿದುದು ಕಾಣುತ್ತದೆ. ಉದಾಹರಣೆಗೆ ೧೮೭೩ರಲ್ಲಿ ಮುಂಬೈ ಸರಕಾರದ ಒಂದನೆಯ ವರ್ಗದ ಕನ್ನಡ ಕವಿತಾ ಪುಸ್ತಕದಲ್ಲಿ ಇಂಥ ಪದ್ಯಗಳಿವೆ:

ಮಂಗನ ಆಟ

ಒಂದು ಮಂಗವು ತನ್ನ ಕೈಯೊಳು
ಚಂದವಾಗಿಹ ಕೋಲ ಪಿಡಿಯುತ
ಅಂದದಲಿ ಗೆಜ್ಜೆಗಳ ಕಟ್ಟಿಸಿಕೊಂಡು ನಡುವಿನಲಿ
ಬಂದು ವೈಯಾರದಲಿ ನಿಂತಿಹ
ಕಂದ ಹೋತಿನ ಮೇಲೆ ಕೂಡುತ
ಮಂದಿ ನೋಡುವ ಹಾಗೆ ಪೇರಿಯ ತಿರುಗಿಸುತ್ತಿಹವು

ನಾಯಿಯ ವರ್ಣನೆ

ಒಂದು ನಾಯಿಯ ಬಾಯೊಳು
ಚಂದವಾಗಿರ್ದೊಂದು ರೊಟ್ಟಿಯ
ಅಂದದಿಂದಲೆ ಕಟ್ಟಿಕೊಂಡು ಹೊಳೆಯ ದಾಟುತಿದೆ
ಸಂದ ನೆರಳದ ಕಂಡು ಇದು ಮ
ತ್ತೊಂದು ಸೊಣಗನು ಯಿದರ ಬಾಯೊಳ
ಗಿಂದ ಕಸಗೊಲಬೇಕು ರೊಟ್ಟಿಯನೆಂದು ಬಗೆಯುತ್ತ

ಬಾಸೆಲ್ ಮಿಷನ್ ಸಂಸ್ಥೆಯ ಜೆ. ಬ್ರಗೇಲ್ ೧೮೯೬ರಲ್ಲಿ ಪ್ರಕಟಿಸಿದ 'ಕನ್ನಡ ಕಾವ್ಯ' ಭಾಗ ೧ರಲ್ಲಿನ ಒಂದು ಉದಾಹರಣೆ ಯನ್ನ ನೋಡಬಹುದು:

ಹಿರಿಯರ ಮಾತು ಮೀರಬಾರದು
ತಂದೆಯೊಬ್ಬನು ಮಗನ ಕರೆದಿಂ–

ತೆಂದ; ನೋಡೈ ! ನಮ್ಮ ಕೆರೆಯೊಳ
ಗೊಂದು ಮೊಸಳೆಯ ಕಂಡೆನೈ ಮರಿ ಸಹಿತ ಇರುವುದನ್ನೂ
ಕಂದ, ನೀನಾ ಕೆರೆಗೆ ಹೊಗದಿ
ರಂದು ಬುದ್ಧಿಯ ಹೇಳಿದನು ಮ
ತ್ತೊಂದು ದಿನದೊಳಗಪ್ಪನಿಲ್ಲದ ಸಮಯದಲಿ ಹುಡುಗಾ ॥

ಕಥನದ ಬಗೆಯನ್ನ ಇಂಥಲ್ಲಿ ಗುರುತಿಸಬಹುದು. ೧೮೬೭ರಲ್ಲಿ ಧಾರವಾಡದ ಟ್ರೇನಿಂಗ್ ಶಾಲೆಯ 'ಶಾಲಾ ಪತ್ರಿಕೆ'(ಮಠ ಪತ್ರಿಕೆ)ಯಲ್ಲಿನ ಒಂದೆರಡು ಉದಾಹರಣೆಗಳು ಹೀಗಿವೆ:

ಪುಂಡಲಿಕ ಬಾ ಬಾ ಬೇಗಬಾ ॥
ಬೆಂಡನು ಕೊಡುವೆನು ತಿನ್ನಬಾ ॥೧॥

ಬಾರದೆ ಇದ್ದರೆ ರಾಮಗೆ ಕೊಡುವೆನು
ತೀರುವುದೆಲ್ಲವು ಬಾ ಬಾ ।೧।

ಮಕ್ಕಳು ಹಟ ಹಿಡಿಬಾರದು ನಿನಗೆ
ಸಕ್ಕರೆ ಕೊಡುವೆನು ಬಾ ಬಾ ।೨।
ಕೇಳದೆ ಬರುವೆ ನೋಡು. ಬಾ ಬಾ ।೩।

ಒಳ್ಳೆಯ ನಡತೆಯನ್ನು ಹೇಳುವ ಉದ್ದೇಶದ ಇನ್ನೊಂದು ರಚನೆಯ ಸಾಲುಗಳು ಇಂಥವು :

ಸಾಲಿಯಲಿ ಬಂದು ಬೇಗ ಪಾಠ ಕಲಿಯಿರಿ
ಕಲಿತ ಪಾಠೆಂದೆಂದು ಮರಿಯಬೇಡಿರಿ

ಸತ್ಸಂಗತಿಯನ್ನು ಹಿಡಿದು ಸುಗುಣ ಬೆಳೆಸಿರಿ
ಮಾತಾಪಿತಾ ಗುರುಗಳಾಜ್ಞೆ ಮೀರಬೇಡಿರಿ

ಕೆಟ್ಟ ಜನರ ಸ್ನೇಹವನ್ನು ಬಯಸಬೇಡಿರಿ
ಕೊಟ್ಟ ಮಾತಿಗೆಂದು ತಪ್ಪಬೇಡಿರಿ

ಇಂಥವುಗಳನ್ನ ನೋಡಿದಾಗ ಅಂದಿನ ಪ್ರಯತ್ನಗಳು ಹೇಗೆಲ್ಲ ನಡೆಯುತ್ತಿದ್ದವು, ಕೇವಲ ಶೈಕ್ಷಣಿಕ, ಮಾರ್ಗದರ್ಶಿ, ಉಪದೇಶಪರವಾಗುವುದರ ಅಚೆಗೂ ತುಡಿಯುತ್ತಿದ್ದುದು, ಮಕ್ಕಳ ಲೋಕದೊಳೆಡೆಗೆ ಸಹಜವಾಗಿ ತುಡಿಯುವೆಡೆಗೆ ಕೆಲವೆಲ್ಲ ಹಂಬಲಗಳು ಕಂಡುದನ್ನ ನೋಡುತ್ತೇವೆ. ಈ ಸಮಯದಲ್ಲಿ ಎಷ್ಟೆಷ್ಟೊ ಜನ ಇಂಥ ರಚನೆಗಳ ಹಿಂದೆ ಕೆಲಸ ಮಾಡಿದರೋ ಇಂದು ದಾಖಲೆ ಸಿಗುತ್ತಿಲ್ಲ. ಬಹಳಷ್ಟು ಸಲ ಇವರೆಲ್ಲ ಅನಾಮಿಕರಾಗಿಯೇ ಉಳಿದುಹೋದರು. ಶಾಲಾ ಶಿಕ್ಷಕರು ತಾವೇ ರಚಿಸಿ ಬಳಸಿಕೊಳ್ಳುತ್ತಿದ್ದುದು ಸರ್ವೇಸಾಮಾನ್ಯವಾಗಿದ್ದಂತೆ ಕಾಣುತ್ತದೆ.

ಹಳೆಯ ಛಂದಗಳನ್ನ ಬಳಸುತ್ತ ಇಂಥ ರಚನೆಗಳಿಗೆ ದಾರಿಮಾಡಿಕೊಂಡುದು ಕಾಣುತ್ತದೆ. ಇದೇ ಬಗೆಯ ಪ್ರಾರಂಭದ ಹೆಜ್ಜೆಗಳನ್ನು ಮೈಸೂರು ಪ್ರಾಂತ್ಯದಲ್ಲೂ ನೋಡುತ್ತೇವೆ.

ಮಕ್ಕಳ ಸುತ್ತಲಿನ ಸಂಗತಿಗಳನ್ನ ಆಯ್ದುಕೊಳ್ಳುತ್ತಿದ್ದುದು, ಆದಷ್ಟು ಸರಳ ಭಾಷೆಯ ಕಡೆಗೆ ಹೊರಳುತ್ತಿದ್ದುದು ಇಂಥಲ್ಲೆಲ್ಲ ಕಾಣುತ್ತದೆ.

'Free from all bombastic and pedantic imitation of Sanskrit fashion of expression, the elaborate phraseology and fanciful word combination; only aiming at simplicity; clearness, naturalness and graceful, compatible with spoken dialect' ಎಂದು ಜೆ. ಗೇಬ್ರಿಲ್(ಕನ್ನಡ ಕಾವ್ಯ ಭಾಗ-೧೮೬೬) ಎಷ್ಟೋ ಮೊದಲೇ ಅಭಿಪ್ರಾಯ ವ್ಯಕ್ತಪಡಿಸಿದ್ದರೂ ಅದು ಕ್ರಿಯಾರೂಪದಲ್ಲಿ ಬರಲು ೬-೭ ದಶಕಗಳೇ ಹಿಡಿದವು.

ಮುಂಬೈ ಕರ್ನಾಟಕದ ಪ್ರಾಂತದಲ್ಲಿ ವಿದ್ಯಾ ಇಲಾಖೆಯಿಂದ ೧೮೩೫ರ ಹೊತ್ತಿಗೆ ಕನ್ನಡದ ಸಾರ್ವಜನಿಕ ಶಾಲೆಗಳು ಕಾಣಿಸಿಕೊಂಡವು. ಕ್ರಮೇಣ ಊರೂರಿಗೆ ಇವು ವಿಸ್ತರಿಸುತ್ತ ಹೋದವು. ಕ್ರಮಿಕ ಪುಸ್ತಕಗಳ ಪಠ್ಯಗಳು, ಬಾಲಬೋಧೆಗಳು ಇಲ್ಲಿ ಕಾಣಿಸಿಕೊಂಡವು. ೧೮೫೬ರಲ್ಲಿ ತರಬೇತಿಯ ಟ್ರೇನಿಂಗ್ ಶಾಲೆ(ಮೊದಲು ನಾರ್ಮಲ್ ಸ್ಕೂಲು ಎಂದಿದ್ದುದು) ಧಾರವಾಡದಲ್ಲಿ ತೆರೆದು ರಸೆಲ್ ಅನ್ನುವವರು ಶಿಕ್ಷಣದ ಅಧಿಕಾರಿಗಳಾಗಿ ಬಂದು ಹೊಸ ವಾತಾವರಣ ಮೂಡತೊಡಗಿತು. ಡೆಪ್ಯೂಟಿ ಚೆನ್ನಬಸಪ್ಪ ಅವರು ಮೊದಲ ಪ್ರಿನ್ಸಿಪಾಲರಾಗಿ ನಿಯುಕ್ತಿ ಹೊಂದಿದರು. ಈ ತರಬೇತಿ ಶಾಲೆ ಬೆಳಗಾವಿಗೆ ಸ್ಥಳಾಂತರಗೊಂಡು, ಮತ್ತೆ ೧೮೭೫ರಲ್ಲಿ ಧಾರವಾಡಕ್ಕೆ ವಾಪಸ್ಸಾಯಿತಂತೆ. ಡೆಪ್ಯೂಟಿ ಚೆನ್ನಬಸಪ್ಪ ಅವರಿದ್ದಾಗಲೇ ಈ ಸಂಸ್ಥೆಯಿಂದ 'ಮಠಪತ್ರಿಕೆ' ಎಂದು ಪ್ರಾರಂಭಿಸಿದ ಮಾಸಿಕ ಹಲವಾರು ಹೆಸರುಗಳನ್ನು ಪಡೆಯುತ್ತ ಇಂದಿಗೂ 'ಜೀವನ ಶಿಕ್ಷಣ' ಹೆಸರಿನಿಂದ ಮುಂದುವರೆದುಕೊಂಡು ಬಂದಿದೆ. ಹೀಗೆಯೇ ಮೈಸೂರು, ಬೆಂಗಳೂರು, ಬಳ್ಳಾರಿ ಕಡೆಗಳಲ್ಲೆಲ್ಲ ಈ ಟ್ರೇನಿಂಗ್ ಶಾಲೆಗಳು ತೆರೆದುಕೊಳ್ಳುತ್ತ ಬಂದುವು. ಹೈದರಾಬಾದ ಕರ್ನಾಟಕದ ಭಾಗದಲ್ಲಿ ಕನ್ನಡಕ್ಕೆಲ್ಲ ಹಿನ್ನಡೆಯೇ ಆಯಿತು. ಮಠಮಾನ್ಯಗಳು ಆ ಸಂದರ್ಭದಲ್ಲಿ ಸಾಕಷ್ಟು ಆಸಕ್ತಿವಹಿಸಿದವು. ಮೈಸೂರು ಪ್ರಾಂತವು ಕನ್ನಡ ಅರಸರ ಕೈಲಿದ್ದು, ಅವರು ಉದಾರಿಗಳೂ, ಅತ್ಯಂತ ವೈಚಾರಿಕರೂ ಆಗಿದ್ದುದರಿಂದ ಆ ಭಾಗದಲ್ಲಿ ಶಿಕ್ಷಣಕ್ಕೆ, ಅದರಲ್ಲೂ ಕನ್ನಡದ ವಾತಾವರಣಕ್ಕೆ ಒಳ್ಳೇ ಪ್ರೋತ್ಸಾಹವೇ ದೊರೆಯಿತು. ಅಂತೂ ಒಂದೂವರೆ ನೂರು ವರ್ಷದಷ್ಟು ಅವಧಿ ಈ ಬಗೆಯಲ್ಲಿ ಕನ್ನಡದ ವಾತಾವರಣ ಮೂಡಿಸುವುದರ ಜೊತೆಗೆ, ಶೈಕ್ಷಣಿಕ ವಾತಾವರಣ ಕಂಡುಕೊಳ್ಳುವುದರ ಜೊತೆಗೆ ಮಕ್ಕಳ ಸಾಹಿತ್ಯದ ಅಸ್ತಿತ್ವಕ್ಕೂ ದಾರಿ ಮಾಡಿಕೊಂಡಿತು ಎನ್ನಬಹುದು.

ಶಾಂತವೀರ ರಾಚಿದೇವ ಕಿತ್ತೂರ, ಕನ್ನಡ ೫ನೆ ವರ್ಗದ ಕ್ರಮಿಕ ಪುಸ್ತಕ ರಚಿಸಿದ ಗಂಗಾಧರ ಮಡಿವಾಳೇಶ್ವರ ತುರಮುರಿ, ೫ ಮತ್ತು ೬ನೆ ವರ್ಗಗಳ ಪಠ್ಯಗಳನ್ನು ಸಿದ್ಧಪಡಿಸಿದ ವೆಂಕಟರಂಗೋ ಕಟ್ಟಿ, 'ಆಂಗ್ಲ ಕವಿತಾವಳಿ' ಸಿದ್ಧಪಡಿಸಿದ ಹಟ್ಟಿಯಂಗಡಿ ನಾರಾಯಣರಾಯರು, ಗದಿಗೆಯ್ಯ ಹೊನ್ನಾಪುರಮಠ, ಹರ್ಡೇಕರ ಮಂಜಪ್ಪ, ವಲ್ಲಭ ಮಹಾಲಿಂಗ ತಟ್ಟಿ, ತ. ನಾ. ಅಮ್ಮಿನಭಾವಿ, ಮ. ಪ್ರ. ಪೂಜಾರ, ನಾರಾಯಣ ಕೃಷ್ಣರಾವ್ ಹುಯಿಲಗೋಳ ಮುಂತಾದವರೆಲ್ಲ ಮಕ್ಕಳ ಓದಿನ, ಶೈಕ್ಷಣಿಕದ, ಹಾಗೆಯೇ ಒಂದಿಷ್ಟೆಲ್ಲ ಮಕ್ಕಳ ಮನವನ್ನು ಆಕರ್ಷಿಸುವ ಸಾಹಿತ್ಯವನ್ನ ನೀಡುವಲ್ಲಿ ಶ್ರಮಿಸಿದರು. ಇವರೆಲ್ಲ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಿಂದ ಇಪ್ಪತ್ತನೆಯ ಶತಮಾನದ ಮಧ್ಯಭಾಗದವರೆಗೂ ತಮ್ಮ ಈ ಸಾಧನೆಯ ಹಾಸು ಉಳ್ಳವರು.

ಏಳು ಮಾತಿನ ಗಿಳಿಯೆ
ಏಳು ಮುದ್ದಿನ ಖಣಿಯೆ
ಏಳು ಬೆಳಗಾಯಿತ್ಯೆ
ಕಾಗೆ ಕಾಕಾ ಎಂದು
ಗುಬ್ಬಿ ಚಿಂವ್ ಚಿಂವ್ ಎಂದು
ಈಗಲೊದರುತ್ತಿಹವು . . . ಬೇಗನೇಳಯ್ಯ . . .

***

ನಾವು ಮೂರು ಮಂದಿ ದಾರಿಕಾರರಿರುವೆವು
ಸಾವಕಾಶ ಭೂಮಿಯನ್ನು ಸುತ್ತುತಿರುವೆವು

ಇಂಥ ಸರಳವಾದ ಮಕ್ಕಳಿಗೆ ಹಿಡಿಸುವ ರಚನೆಗಳನ್ನ ಮಾಡುತ್ತಿದ್ದ 'ಗೌರೀಶ' ಕಾವ್ಯನಾಮದ ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ(೧೮೬೯-೧೯೧೮) ಗೌರೀಶ ಗ್ರಂಥಮಾಲೆಯ ಕ್ರಮಿಕ ಪುಸ್ತಕಗಳ ಮೂಲಕ ತಮ್ಮ ಈ ಕೊಡುಗೆಯನ್ನ ಅವರು ನೀಡಿದರು. ೧೯೩೮ರಷ್ಟು ಹಿಂದೆಯೇ 'ಕಂದನ ಕಾವ್ಯ' ಎನ್ನುವ ಮಕ್ಕಳ ಕವನ ಸಂಗ್ರಹ ಪ್ರಕಟಿಸಿದ ಸಿ. ಫ. ಕಟ್ಟಿಮನಿ ಅವರು ಅದಕ್ಕೂ ಹಿಂದೆಯೇ ಹತ್ತು ಹದಿನೈದು ವರುಷ ಮೊದಲೇ ಈ ಬಗೆಯ ಕವಿತೆಗಳನ್ನ ರಚಿಸುತ್ತ ಬಂದವರು. ಈ ಸಂಕಲನದಲ್ಲಿನ ಅವರ ಮಾತುಗಳು ಗಮನಾರ್ಹವಾದುಗಳು:

'ಹಳೆಯ ಹಾಡುಗಳ ಅರ್ಥವು ಮಕ್ಕಳಿಗೆ ಸರಿಯಾಗಿ ಅರ್ಥವಾಗದಿರುವ ಮೂಲಕ ಅವರು ಅವುಗಳನ್ನು ಪ್ರೀತಿಸರೆಂಬುದು ಅನುಭವಕ್ಕೆ ಬಂದ ಸಂಗತಿ. ಕನ್ನಡ ಸಾಹಿತ್ಯದಲ್ಲಿ ನವಜೀವನವೂ ನವಚೈತನ್ಯವೂ ಉಂಟಾಗಿ ಹೊಸ ಸಾಹಿತ್ಯವು ಬೆಳಗುತ್ತಿರುವಾಗ ಮಕ್ಕಳ ಶಿಕ್ಷಣದಲ್ಲಿ ಅದನ್ನು ಏಕೆ ಸಮಾವೇಶ ಮಾಡಿಕೊಳ್ಳಬಾರದೆಂಬ ವಿಚಾರವು ನನ್ನನ್ನು ಬಾಧಿಸತೊಡಗಿತು. ಕೊನೆಗೆ 'ಕನ್ನಡ ಬಾಲ ಬೋಧೆ' ಎಂಬ ಬಾಲಕ ಪಠ್ಯ ಪುಸ್ತಕದಲ್ಲಿ 'ಕಾಮನ ಹಬ್ಬವು ಬಂದಿಹುದು' ಎಂಬ ಹಾಡೊಂದನ್ನು ಸೇರಿಸಿದೆನು. ಎಲ್ಲ ಕಡೆಗೂ ಮಕ್ಕಳು ಅದನ್ನು ಪ್ರೀತಿಯಿಂದ ಹಾಡತೊಡಗಿದರು. ತಜ್ಞರಾದರೂ ಈ ಹಾಡಿಗೆ ಬೇರೆ ಹಾಡಿಗಿಂತ ಹೆಚ್ಚು ಮಾನ್ಯತೆಯನ್ನು ಕೊಟ್ಟರು. ಆಗ ಆ ಪುಸ್ತಕದಲ್ಲಿರುವ ಹಳೆಯ ಹಾಡುಗಳನ್ನೆಲ್ಲ ಕಿತ್ತುಹಾಕಿ ಏಳೆಂಟು ಹೊಸ ಹಾಡುಗಳನ್ನು ಸೇರಿಸಿ ಅದನ್ನು ಚೆನ್ನಾಗಿ ಮಾರ್ಪಡಿಸಿದೆನು, ಅದರಲ್ಲಿರುವ 'ಚಂದಮಾಮ ಬಾ ಬಾ ನಮ್ಮ ಮನೆಗೆ ಬಾ', 'ಬಾರೆಲೆ ಹಕ್ಕಿ ಬಣ್ಣದ ಹಕ್ಕಿ' ಎಂಬ ಹಾಡುಗಳನ್ನು ಚಿಕ್ಕಮಕ್ಕಳು ಹಾಡಿ ಹಾಡಿ ನಲಿಯುತ್ತಿದ್ದಾರೆ. ಹೊಸ ಸಾಹಿತ್ಯದಿಂದಲೇ ಆ ಪುಸ್ತಕವು ಮಕ್ಕಳ ಮೆಚ್ಚುಗೆಗೂ ಜನಾದರಕ್ಕೂ ಪಾತ್ರವಾಯಿತೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಮಕ್ಕಳ ಶಿಕ್ಷಣದಲ್ಲಿ ಹೊಸ ಸಾಹಿತ್ಯವನ್ನು ಹೆಚ್ಚಾಗಿ ಸೇರಿಸಿವುದು ಒಳಿತೆಂದು ಈಗ ಮನಗಂಡ ಮಾತಾಗಿದೆ. ಇದಕ್ಕಾಗಿ ನಾನು ಅನೇಕ ಹೊಸ ಹಾಡುಗಳನ್ನು ಕಟ್ಟಿ ಶಾಲೆಯಲ್ಲಿ ಮಕ್ಕಳಿಗೆ ಕಲಿಸಲಾರಂಭಿಸಿದಾಗ ಅವರು ತೋರಿಸಿದ ಆನಂದ. ಉತ್ಸಾಹ ಮೊದಲಾದವುಗಳನ್ನು ವರ್ಣಿಸುವದು ಸುಲಭವಲ್ಲ. ಶಾಲಾಧಿಕಾರಿಗಳು ಇದನ್ನು ನೋಡಿ ಮುಕ್ತ ಕಂಠದಿಂದ ಹೊಗಳಿದ್ದಾರೆ. ಈ ಹಾಡುಗಳು ಸುಲಭ ಶೈಲಿಯಲ್ಲಿ ಸರಳರಾಗದಲ್ಲಿ ಮಕ್ಕಳ ವಿಚಾರ, ಭಾವನೆ, ವಿನೋದ, ಕಥೆ ಮೊದಲಾದ ಮನೋರಂಜಕವಾದ ವಿಷಯಗಳಲ್ಲಿ ರಚಿಸಲ್ಪಟ್ಟಿವೆ.'

ಈಶ್ವರ ಕಮ್ಮಾರ ಅವರು ತಮ್ಮ 'ಮಕ್ಕಳ ಕವನ ಸಾಹಿತ್ಯ' ಗ್ರಂಥದಲ್ಲಿ ಉದ್ಧರಿಸಿರುವ ಈ ಬಗೆಯ ಬರವಣಿಗೆ ಅಂದು ಮಕ್ಕಳ ಬರವಣಿಗೆಯಲ್ಲಿ ನಡೆಯುತ್ತಿದ್ದ ಬದಲಾವಣೆಯ ಒಂದು ಚಿತ್ರಣವನ್ನೇ ನೀಡುತ್ತದೆ. ಅಂದು ಮಕ್ಕಳಿಗೆ ಚೇತೋಹಾರಿಯಾದ, ರುಚಿಯಾದ ರಚನೆಗಳನ್ನ ಮಾಡುವಲ್ಲಿ ಶಿಕ್ಷಕರು, ಇತರರು, ಅನುಭವಿಸುತ್ತಿದ್ದ ವಾತಾವರಣ, ಮುಂದುವರೆದು ಧೈರ್ಯದಿಂದ ಕೆಲವೆಲ್ಲ ಪ್ರಯೋಗಗಳಿಗೆ ತೊಡಗಿಕೊಳ್ಳತೊಡಗಿದುದು, ಕ್ರಮೇಣ ಇಂಥ ಪ್ರಯತ್ನಗಳನ್ನ ಅಧಿಕಾರಿಗಳೂ ಮನ್ನಿಸತೊಡಗಿದುದು, ಬಹು ಮುಖ್ಯವಾಗಿ ಮಕ್ಕಳು ಆನಂದದಿಂದ ಸ್ವೀಕರಿಸತೊಡಗಿದುದು ಇವೆಲ್ಲ ಮಕ್ಕಳ ಸಾಹಿತ್ಯ ಶಿಕ್ಷಣದ ಮರೆಯಲ್ಲಿಯೇ ಅರಳತೊಡಗಿದರೂ ತನ್ನ ದಾರಿಯನ್ನ ಕಂಡುಕೊಳ್ಳತೊಡಗಿದುದನ್ನು ಹೇಳುತ್ತದೆ. ಸಿ. ಫ. ಕಟ್ಟಿಮನಿ ಅವರ 'ಕಂದನ ಕಾವ್ಯ' ದಲ್ಲಿಯ ಕವಿತೆಗಳು ಅತ್ಯಂತ ಸರಳವಾಗಿದ್ದು, ಮಕ್ಕಳ ಸುತ್ತಲೇ ಅರಳಿದ್ದು, ತಮ್ಮ ಸೊಗಸನ್ನ ಹೇಳುತ್ತವೆ.

ಕೋಳಿ ಕೂಗಿತೇಳು ಕಂದ
ಪೂರ್ವದಿಂದ ಸೂರ್ಯ ಬಂದ
ಹೆಚ್ಚು ಮಲಗಲೇನು ಚಂದ
. . . ಏಳು ಕಂದ

***

ಬಾರೆಲೆ ಹಕ್ಕಿ ಬಣ್ಣದ ಹಕ್ಕಿ
ಬಾರೆಲೆ ಹಕ್ಕಿ ಹಾರುವ ಹಕ್ಕಿ
ಗೆಳೆಯರು ಆಡಲು ಯಾರೂ ಇಲ್ಲ
ಕಳೆಯುವದೆಂತು ವೇಳೆಯನೆಲ್ಲ
ಬಾ ಬಾ ನನಗೂ ಹಾಡಲು ಕಲಿಸು
ಬಾ ಬಾ ನನಗೂ ಹಾರಲು ಕಲಿಸು

***

ಚಂದಿರ ಮಾಮಾ ಬಾಬಾ
ನಮ್ಮ ಮನೆಗೆ ಬಾ ಬಾ ॥ ಪ ॥
ಮಾವಿನ ಹಣ್ಣನು ಹಿಂಡಿಕೊಡುವೆ
ಬಾಳೆಯ ಹಣ್ಣನು ಸುಲಿದು ಕೊಡುವೆ
ಹಾಲು ಸಕ್ಕರೆ ಕೂಡಿಸಿ ಕೊಡುವೆ
ಕುಡಿಯಲು ಬೆಳ್ಳಿಯ ಬಟ್ಟಲು ಕೊಡುವೆ

ತುಪ್ಪದ ದೀವಿಗೆ ಹಚ್ಚಿ ಕೊಡುವೆ
ಓದಲು ಚಿಕ್ಕ ಪುಸ್ತಕ ಕೊಡುವೆ
ಆಟದ ಎಲ್ಲ ಒಡವೆಯ ಕೊಡುವೆ
ನಿನ್ನ ಸಂಗಡ ಆಡಲು ಬರುವೆ

ಮಂಚದ ಮೇಲೆ ಹಾಸಿ ಕೊಡುವೆ
ನಿನ್ನ ಸಂಗಡ ಮಲಗಲು ಬರುವೆ

***

ಕಾಗೆಯೊಂದು ಹಾರಿಬಂದು
ಮರದ ಮೇಲೆ ಕುಳಿತುಕೊಂಡು
ಬಾಯೊಳಿದ್ದ ಮಾಂಸವನ್ನು ತಿನ್ನತೊಡಗಿತು
ಠಕ್ಕ ನರಿಯು ಇದನು ಕಂಡು
ಮಾಂಸವನ್ನು ಎತ್ತಲೆಂದು
ಮರದ ಕೆಳಗೆ ಓಡಿಬಂದು ನಿಂತುಕೊಂಡಿತು

ಇಂತಹ ಸೊಗಸಾದ ರಚನೆಗಳನ್ನು ನೀಡಿದ ಸಿ. ಫ. ಕಟ್ಟಿಮನಿ ಅವರು ಹೆಚ್ಚು ಜನಪ್ರಿಯತೆ ಗಳಿಸಿದರು. ಅವರ ಪದ್ಯಗಳು ಪಠ್ಯದಲ್ಲಿ ಮೇಲಿಂದ ಮೇಲೆ ಕಾಣಿಸಿಕೊಂಡು ಸಾಕಷ್ಟು ಪ್ರಚುರವಾಗಿದ್ದವು. ಅವರ 'ಕಂದನ ಕಾವ್ಯ' ಸಂಕಲನದಲ್ಲಿ 'ಬೇಗನೇಳು', 'ನಾಗರಪಂಚಮಿ', 'ಬೇಗ ಕಲಿ', 'ಚಂದಿರಮಾಮ', 'ಆಡುಮರಿ', 'ಬಣ್ಣದ ಹಕ್ಕಿ', ಮೋಟಾರು', 'ಮಂಗನ ಮದುವೆ', 'ಮೀಸೆಬಂದರೆ', 'ಶಾಲೆಗೆ', 'ಮರುಳಕಾಗೆ', 'ನವಿಲಹಿಂಡು', 'ಕನ್ನಡಿಯಲ್ಲಿ ಇಂದಿರೆ', 'ಸಂಜೆಯ ಸೂರ್ಯ', 'ರಬ್ಬರ ನಾಗ', 'ಕೂಸುಮರಿ', 'ಕಾಗೆಯ ಜಾಣ್ಮೆ', 'ಸೂಟಿ ಆಯಿತು', 'ಮಲಗಪ್ಪ ಮಲಗು', 'ಗಿರಿ ಗಿಟಿ', 'ಕಳ್ಳ ಬೆಕ್ಕು', 'ಕಬ್ಬುದಳ','ಉಗಿಬಂಡಿಯ ಆಟ', 'ರೈಲು', 'ಮಳೆ', 'ಕಳ್ಳಸುಳ್ಳ', 'ಹೌದಿನಲ್ಲಿ ಚಂದ್ರ' ಮುಂತಾದ ಇಪ್ಪತ್ತೇಳು ಕವಿತೆಗಳು ಇವೆ. ಈ ಕವಿತೆಗಳ ತಲೆ ಬರಹಗಳೇ ಹೊಸ ಅಪೇಕ್ಷೆಗಳನ್ನು ನಿಚ್ಚಳವಾಗಿ ಹೇಳಿದುದನ್ನು ನೋಡಬಹುದು. 'ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ, ಸಿ. ಫ., ಕಟ್ಟೀಮನಿ, ದಿನಕರ ದೇಸಾಯಿ, ಮೇವುಂಡಿ ಮಲ್ಲಾರಿ ಮುಂತಾದವರು ಉತ್ತರ ಕರ್ನಾಟಕದ ಮಟ್ಟಿಗೆ ಮಕ್ಕಳ ಕವನ ಸಾಹಿತ್ಯದ ಮಟ್ಟಿಗೆ ರಥದ ನಾಲ್ಕು ಗಾಲಿಗಳಿದ್ದಂತೆ ಎಂದು ಹೇಳಬಹುದು' ಎನ್ನುವ ಈಶ್ವರ ಕಮ್ಮಾರ ಅವರ ಮಾತನ್ನಿಲ್ಲಿ(ಮಕ್ಕಳ ಕವನ ಸಾಹಿತ್ಯ) ಉದ್ಧರಿಸಬಹುದು.

ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠ ಅವರು ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ ನಿಷ್ಠೆಯಿಂದ ದುಡಿದಂತೆ, ಮಕ್ಕಳ ಬೆಳವಣಿಗೆಗಾಗಿ ತಾವೆ ತಾವಾಗಿ ತೊಡಗಿಕೊಂಡವರು. ಅನೇಕ ಬಗೆಯ ಭವಿಷ್ಯ ರೂಪಿಸುವ, ಮಾರ್ಗದರ್ಶಿಯಾದ ಕೃತಿಗಳನ್ನು ಅವರು ತಮ್ಮ ಮುದ್ರಣಾಲಯದಿಂದ ತಂದು ಪ್ರಚುರಗೊಳಿಸಿದುದನ್ನು ಇಲ್ಲಿ ಹೇಳಬಹುದು. ಅವರ ಬಾಲರಾಮಾಯಣ, ಬಾಲಭಾಗವತ ಕೃತಿಗಳು ಉದ್ಧರಿಸಬೇಕಾದ ಉದಾಹರಣೆಗಳು. ಕನ್ನಡದ ಗದ್ಯ ರೂಪು ಪಡೆಯುತ್ತಿದ್ದ ಅಂದಿನ ಸಂದರ್ಭದಲ್ಲಿ ಗದಿಗೆಯ್ಯನವರ ಈ ಬರವಣಿಗೆಗಳು ಗಮನಿಸಬೇಕಾದುವಾಗಿದ್ದುವು. ವಿದ್ವಾಂಸರಾದ ಕೆ. ಕೃಷ್ಣಮೂರ್ತಿ ಅವರು ಹೇಳುವ ಹಾಗೆ 'ಸುಮಾರು ಅದೇ ಕಾಲದಲ್ಲಿ ಮೈಸೂರು ಅರಮನೆಯ ವಿದ್ವಾಂಸರು ವಿಸ್ತಾರವಾಗಿ ಬರೆದ ಗದ್ಯರಾಮಾಯಣ, ಮಹಾಭಾರತಾದಿಗಳ ಶೈಲಿಯನ್ನೂ ಹೊನ್ನಾಪುರಮಠ ಅವರ ಗದ್ಯಶೈಲಿಯನ್ನೂ ಹೋಲಿಸಿ ನೋಡಿದಾಗ ಸ್ಫುಟವಾಗಿ ಅಂತರಗಳು ಎದ್ದುಕಾಣುತ್ತವೆ. ಅರಮನೆಯ ವಿದ್ವಾಂಸರ ಶೈಲಿ ಸಂಸ್ಕೃತವೂ ಅಲ್ಲ, ಕನ್ನಡವಂತೂ ಅಲ್ಲವೇ ಅಲ್ಲ ಎನಿಸುವಷ್ಟು ಕೃತಕವಾಗಿ, ಗಜಿಬಿಜಿಯಾದ ವಾಕ್ಯವೃಂದಗಳಿಂದಲೂ ಕರ್ಮಣಿ ಪ್ರಯೋಗಾದಿಗಳಿಂದಲೂ ಸಂಸ್ಕೃತ ಪದಾವಲಿಗಳಿಂದಲೂ ತುಂಬಿರುತ್ತದೆ. ಆದರೆ ಇವರ ಶೈಲಿ ಒಮ್ಮೊಮ್ಮೆ ಗ್ರಾಮ್ಯಕ್ಕೆ ಸಮೀಪವರ್ತಿಯೆನಿಸಿದರೂ ಕೃತಕತೆಯ ದೋಷದಿಂದ ದೂರವಾಗಿರುವದೇ ಹೆಚ್ಚು. ಅಲ್ಲದೆ ಇವರಿಗೆ ನೇರವಾಗಿ ಕಥೆಯನ್ನು ಹೇಳುವ ಉದ್ದೇಶವೇ ವಿನಾ, ವರ್ಣನೆಗಳನ್ನು ಲಂಬಿಸುವ ಹವ್ಯಾಸವಿಲ್ಲ. ಆದ್ದರಿಂದ ಬಾಲಕರ ಹಾಗೂ ಸಾಮಾನ್ಯ ಓದುಗರ ಆಸಕ್ತಿಯನ್ನು

ಉಳಿಸಿಬೆಳೆಸುವಂಥಹ ಘಟನಾಪ್ರಧಾನವಾದ ನಿರೂಪಣಾ ಶೈಲಿಯನ್ನು ಇವರು ತಮ್ಮ ಪ್ರತಿಭೆಯಿಂದಲೇ ಸಂಶೋಧಿಸಿಕೊಂಡರೆನ್ನಬಹುದು. . . . ಇಂಗ್ಲೀಷಿನಲ್ಲಿ ನಮಗೆ ಪರಿಚಿತವಿರುವ ನೇರ ನಿರೂಪಣಾ ಮಾರ್ಗ ಇಲ್ಲಿಯ ಶೈಲಿಯಾಗಿದ್ದು, ಇಂಗ್ಲೀಷ್ ಗದ್ಯದ ಪಡೆನುಡಿಗಳೂ ದೃಷ್ಟಾಂತಗಳೂ ಅಲ್ಲಲ್ಲಿ ಗೋಚರವಾಗುತ್ತವೆ.'. 'ಅಲ್ಲಾವುದ್ದೀನ ಮತ್ತು ಒಂದು ಸೋಜಿಗವಾದ ದೀಪ', 'ಅಲ್ಲೀಬಾಬಾ ಮತ್ತು ನಾಲ್ವತ್ತು ಮಂದಿ ಕಳ್ಳರು' ಅಂಥ ಕೃತಿಗಳು ಮಕ್ಕಳ ಮುಂದೆ ಎಂಥ ಸರಕನ್ನ ಇಡಬೇಕು ಎನ್ನುವುದರ ಕುರಿತು ಚೆನ್ನಾಗಿ ಯೊಚಿಸಿದುದರ ಕುರುಹೇ ಆಗಿವೆ. ಹೀಗೆಯೇ ಅನೇಕ ಪುರಾಣ, ಐತಿಹಾಸಿಕ ಪುರುಷರ ಕುರಿತ ಚರಿತ್ರೆಗಳನ್ನೂ ಅವರು ನೀಡಿದವರು.

ಧಾರವಾಡದ ಬೇಂದ್ರೆಯವರ ಗೆಳೆಯರ ಬಳಗ 'ಹಕ್ಕಿ ಹಾರುತಿದೆ ನೋಡಿದಿರಾ' ಎನ್ನುವ ಸಂಕಲನವನ್ನು ಪ್ರಾರಂಭದಲ್ಲಿ ತಂದರಷ್ಟೇ. ಅದರಲ್ಲಿ ಆ ಸಮಯದ ಅನೇಕರ ಗೀತಗಳು ಕಾಣಿಸಿಕೊಂಡಿದ್ದವು. ದ. ರಾ. ಬೇಂದ್ರೆ, ಮಧುರಚೆನ್ನ, ಸಾಲಿರಾಮಚಂದ್ರರಾಯ, ಶ್ರೀಧರ, ನಾರಾಯಣ ಸಂಗಮ, ವಿನಾಯಕ, ಆನಂದಕಂದ, ಪ್ರಹ್ಲಾದ ನರೇಗಲ್ಲ ಮುಂತಾದವರ ರಚನೆಗಳಿದ್ದವು. ಈ ಸಂಕಲನ ೧೯೩೦ರಲ್ಲಿ ಪ್ರಕಟವಾದುದು. ರಾಮದಾಸರೆಂಬ ಕವಿ ೧೯೨೯ರಲ್ಲಿ ರಚಿಸಿದ ಇಲ್ಲಿನ ಪದ್ಯ ಮಕ್ಕಳದೇ ಆಗಿದೆ . . .

ಎಳೆಯರಾಗುವಾ ನಾವು
ಗೆಳೆಯರಾಗುವಾ
ಎಳೆತನದ ಚಲುವ ನಗುವ
ಬೆಳಕನಿಳೆಗೆ ಒಸಗೆ ಸಿರಿವ ॥ಪ॥

ಚಿಕ್ಕ ಚಿಕ್ಕ ಗೆಳೆಯರೆಲ್ಲ
ಮಿಥ್ಯ ಮಾತುಗಳನ್ನು ಮರೆದು
ಅಕ್ಕರೆಯ ಗುಡಿಯ ಕಟ್ಟಿ
ಐಕ್ಯವೆಂಬ ಶಿಖರವಿಡುವ ॥೧॥

ಒಂದೆ ಮನಸು ಒಂದೆ ಕನಸು
ಒಂದೆ ಭಾವ ಒಂದೆ ಜೀವ
ಒಂದೆ ಹೊರಗು ಒಂದೆ ಒಳಗು
ಎಂದು ಮುಂದು ಎಂದೆಂದಿಗಿರುವ ॥೨॥

ಎಂದು ಸಾಗುವ ಈ ರಚನೆ ಮಕ್ಕಳ ಮನೋಲೋಕವನ್ನ ಅನುಲಕ್ಷಿಸಿಯೇ ಉದ್ದೇಶಗೊಂಡುದು ಎಂದು ಬೇರೆ ಹೇಳಬೇಕಿಲ್ಲ. ಹಾಗೆಯೇ ಪ್ರಸಿದ್ಧವಾದ ಆನಂದಕಂದರ 'ಮುದ್ದನ ಮಾತು' ರವೀಂದ್ರರ 'ಕ್ರೆಸೆಂಟ್ ಮೂನ್' ಸಂಕಲನದಲ್ಲಿಯಂತೆ ಮಗುವಿನ ಮುಗ್ಧ ಭಾವ ಲಹರಿಗಳನ್ನು ಸೊಗಸಾಗಿ ಹಿಡಿದಿಟ್ಟಿರುವ ಸಾರ್ಥಕ ಪ್ರಯತ್ನವೇ ಆಗಿದೆ. ಅದರ ಮುನ್ನುಡಿಯಲ್ಲಿ ಮಾಸ್ತಿಯವರು ಬರೆಯುತ್ತ '(ಮಕ್ಕಳ)ಸಾಮಾನ್ಯವಾದ ಮಾತೂ

ಆಟವೂ ಕಾವ್ಯಕ್ಕೆ ವಸ್ತುವೇ, ಏಕೆಂದರೆ ಅವು ನಮ್ಮ ಮನಸ್ಸಿನಲ್ಲಿ ಸಂತೋಷವನ್ನು ಮೆಚ್ಚುಗೆಯನ್ನು ಕನಿಕರವನ್ನು ಉಂಟುಮಾಡುತ್ತವೆ. ಅವುಗಳ ಸಹಜವಾದ ವರ್ಣನೆಯು ರಸಾತ್ಮಕವಾಗಿರುವದಕ್ಕೆ ದಾರಿಯುಂಟು, ಅವನ್ನು ಹಾಗೆ ವರ್ಣಿಸುವ ಕೃತಿಯು ಕಾವ್ಯವಾಗಬಹುದು. ಈ ವಸ್ತುವನ್ನು ಈ ರೀತಿಯಲ್ಲಿ ಉಪಯೋಗಿಸುವುದು ನಮ್ಮ ಸಾಹಿತ್ಯದಲ್ಲಿ ಹೊಸದಾರಿ. 'ಕವಿ ಭೂಷಣರು' ತಮ್ಮ ಕೃತಿಯಲ್ಲಿ ಈ ವಸ್ತುವನ್ನು ಬಹಳ ಚೆನ್ನಾಗಿ ಉಪಯೋಗಿಸಿದ್ದಾರೆ.'

ಹಾಗಿದ್ದಾಗಲೂ ಇದು ಮಕ್ಕಳಿಂದ ದೂರ ನಿಲ್ಲುವುದೂ ಕೂಡ ಅಷ್ಟೇ ಸತ್ಯ. ಕವಿಗಳೇ ಮಗುವಾಗಿ ತಾಯಭಾವವನ್ನೆಲ್ಲ ಎದುರಿಟ್ಟುಕೊಂಡು ರಚಿಸಿದ ಇವು ಮಗುವನ್ನ ಮೀರಿದ ಅನೇಕ ಭಾವ ಲಹರಿಗಳನ್ನ ಹೊತ್ತಿವೆ. ಕಾವ್ಯವನ್ನ ಗೂಢವಾಗಿಸುತ್ತಲೂ ಹೋಗಿವೆ. ಕೇಂದ್ರದಲ್ಲಿ ಮಗುವಿರುವುದೇನೋ ನಿಜವೇ. ಆದರೆ ಇಲ್ಲಿಯ ಮಗುವಿನ ಮಾತು ದೊಡ್ಡವರು ಆಲಿಸಿ ಅನುಭವಿಸುವಂಥದು. ಹಾಗಾಗಿಯೇ ಮಕ್ಕಳ ಶಕ್ತಿಯನ್ನ ಮೀರಿದ ಶಬ್ದ ಪ್ರಪಂಚವೂ ಇಲ್ಲಿ ಬಳಕೆಯಾಗಿದೆ. ಸಮಸ್ತ ಪದಗಳೂ, ಸಂಧಿಪದಗಳು ಸಾಕಷ್ಟು ಬಳಕೆಯಾಗಿವೆ.

ಕರಿಯ ಸೀರೆಯ ನಡುವೆ
ಜರಿಯ ಹೂ ತೆಗೆದಂತೆ
ಬರುವುದೊಮ್ಮೊಮ್ಮೆ ನುಡಿ
ನಿನ್ನ ಮೆಲು ಧ್ವನಿಯಂತೆ
ಬರಲು ನೆರೆದವರು ತಲೆದೂಗುವರು
ಬಣ್ಣಿಸುತೆ . . .

ಇಂಥ ಸಾಲುಗಳನ್ನ ನಾವಲ್ಲಿ ನೋಡಬಹುದು. ಮಕ್ಕಳಿಗಾಗಿ ಎಂದು ಬೇಂದ್ರೆಯವರ ಯಾವ ರಚನೆಯನ್ನೂ ಕರೆಯುವಂತಿಲ್ಲವಾದರೂ ಅವರ ಅನೇಕ ಕವಿತೆಗಳು ತಮ್ಮ ಆಡು ಭಾಷೆಯ ಬಳಕೆಯಿಂದ, ಹಾಡಿನ ಗುಂಗಿನಿಂದ, ಪ್ರಾಸಗಳ ಸೊಗಸಿನಿಂದ ಮಕ್ಕಳ ಬಾಯಲ್ಲೂ ಸುಲಭವಾಗಿ, ಸೆಳೆಯುತ್ತಲೇ ಹರಿಯುವುದನ್ನ ನೋಡುತ್ತೇವೆ. ಅವರ 'ಪಾತರಗಿತ್ತಿ ಪಕ್ಕಾ' ಕವಿತೆಯಾಗಲಿ, 'ಕರಿಮರಿ ನಾಯಿ ಕುಂಯ್ಗುಡುತಿತ್ತು', 'ಕಬ್ಬಿಣ ಕೈಕಡಗ ಕುಣಿಕೋಲು', 'ಕುಣಿಯೋಣ ಬಾರ ಕುಣಿಯೋಣ ಬಾ' ಅಂಥ ಅನೇಕ ಕವಿತೆಗಳು ತಮ್ಮ ಹೊರ ಪದರಿನಲ್ಲಿಯಾದರೂ ಮಕ್ಕಳನ್ನು ತಲಪುವಲ್ಲಿ ಯಶಸ್ವಿಯಾಗಿವೆ ಎನ್ನಬಹುದು. ಮಧುರಚೆನ್ನರಂಥ ಅಧ್ಯಾತ್ಮದ ಕವಿ ಕೂಡ ಮಕ್ಕಳ ಭಾವ ಲೋಕದ ಕವಿತೆಗಳನ್ನ ರಚಿಸಲು ಮುಂದಾದರು ಎನ್ನುವುದನ್ನ ನೋಡುತ್ತೇವೆ.

ಬಾರೇ ಗೆಳತಿ ಒಳಗೇ ಕುಳಿತಿ
ಅಟ್ಟಾ ಏರಿ ಮೇಲೆ ನಿಂತಿ

ಕದಾಗಿದಾ ನೂಕಿಕೊಂಡು
ಚಿಲಕಾಗಿಲಕಾ ಹಾಕಿಕೊಂಡು
ಅಲ್ಲೇ ಕುಳಿತಿ ಬಾರೇ ಗೆಳತಿ

ಬಾರೇ ಜಾಣೆ ಮಿಂಚಿನ ರಾಣಿ
ಅಪ್ಸರ ನಾರಿ ಮೈ ಜರತಾರಿ

ಈ ಬಗೆಯ ಕವಿತೆಯೂ ತನ್ನ ಹರಹನ್ನ ವಿಸ್ತಾರದಲ್ಲಿ ಹೆಚ್ಚಿನದನ್ನೆಲ್ಲ ಹೇಳುವ ಸಂಗತಿಗಳು ಗೋಚರಿಸುತ್ತವೆ.

ಮೈಸೂರು ಭಾಗದಲ್ಲಿ ಜಯರಾಯಾಚಾರ್ಯರು ೧೯೦೨ರಲ್ಲಿ ಮೊದಲು ಪ್ರಕಟಿಸಿದ 'ಅನುಕರಣ ಗೀತಲಹರಿ', ಆರು ಸಲ ಪುನರ್ಮುದ್ರಣ ಕಂಡು ಮೂವತ್ತು ವರುಷಗಳವರೆಗೆ ಪಠ್ಯದಲ್ಲಿ ಅದರಲ್ಲಿನ ಪದ್ಯಗಳು ಕಾಣಿಸಿಕೊಂಡವು. 'ಹಳೆಯ ತಲೆಮಾರಿನ ಹಿರಿಯರಿಗೆ, ಮಕ್ಕಳಿಗೆ 'ಅನುಕರಣಗೀತಲಹರಿ'ಯ ಪದ್ಯಗಳು ಅಚ್ಚುಮೆಚ್ಚಾಗಿದ್ದವು ಎಂದು ತಿಳಿಯುವ ಸಾಕ್ಷ್ಯಗಳು ಈಗಲೂ ಇವೆ. ನನ್ನ ಬಾಲ್ಯಕಾಲದಲ್ಲಿ ನನ್ನನ್ನೂ ನನ್ನ ತಂಗಿಯರನ್ನೂ ತಮ್ಮಂದಿರನ್ನೂ ನಮ್ಮ ದೊಡ್ಡಪ್ಪ ಆ ಪದ್ಯಗಳನ್ನು ಹೇಳಿ ಹೇಳಿ ರಂಜಿಸುತ್ತಿದ್ದ ನೆನಪು ನನಗೆ ಇನ್ನೂ ಚೆನ್ನಾಗಿದೆ. ಕೆಲವನ್ನು ನಾವು ಬಾಲಬೋಧೆಗಳಲ್ಲಿಯೂ ಓದಿದ್ದೆವು' ಎನ್ನುವ, ಅ ಸಂಕಲನವನ್ನು ಶ್ರಮವಹಿಸಿ ಮತ್ತೆ ೧೯೯೨ರಲ್ಲಿ ಸಂಪಾದಿಸಿ ಪ್ರಕಟಿಸಿದ ಟಿ. ವಿ. ವೆಂಕಟಾಚಲಶಾಸ್ತ್ರಿಗಳ ಮಾತುಗಳನ್ನ ಗಮನಿಸಬೇಕು. 'ಮಕ್ಕಳಲ್ಲಿ ಬಾಲ್ಯದಲ್ಲಿಯೇ ಕಂಡುಬರುವ ಸಹಜ ಸ್ವಭಾವಂಗಳನ್ನೆಲ್ಲಾ ಜಾಗರೂಕತೆಯಿಂದ ಪರೀಕ್ಷಿಸಿ, ಆಟಪಾಠಗಳ ಮೂಲಕವಾಗಿಯೇ ಅವುಗಳು ಪುರೋಭಿವೃದ್ಧಿಗೆ ಬರುವಂತೆ ಮಾರ್ಗವನ್ನು ಕಲ್ಪಿಸಿ ಪ್ರಖ್ಯಾತಿಗೊಂಡವರಲ್ಲಿ ಫ್ರೋಬೆಲ್ ಎಂಬ ಮಹಾಪಂಡಿತರು ಅಗ್ರಗಣ್ಯರಾಗಿರುವರು. ಆ ಮಹನೀಯರು ಮಾಡಿರುವ ಏರ್ಪಾಡುಗಳಲ್ಲಿ ಅಲ್ಲಲ್ಲಿ ಆಚರಣೆಗೆ ಬಂದಿರುವುವು. ಈಚೆಗೆ ನಮ್ಮ ದೇಶದಲ್ಲಿಯೂ ವಿದ್ಯಾಶಾಲೆಗಳಲ್ಲಿ ಆ ವಿಧವಾದ ಏರ್ಪಾಡುಗಳು ಉಪಕ್ರಮವಾಗಿರುವುವು. ಇದನ್ನೇ ಈಗ ಸಾಮಾನ್ಯವಾಗಿ ಕಿಂಡರ್ ಗಾರ್ಟನ್ ಪಾಠದಲ್ಲಿ ಒಂದು ಭಾಗವೆಂದು ತಿಳಿಯಬೇಕಾಗಿದೆ. ಪದಗಳಲ್ಲಿ ಕಂಡುಬರುವ ಲಯಭಾವಂಗಳಿಗೆ ಅನುಗುಣವಾಗಿ ಅಭಿನಯಿಸಿಕ್ಕೊಂಡು ಆ ಪದಂಗಳನ್ನು ಬಾಯಲ್ಲಿ ಹೇಳುವುದೇ ಇದರ ಮುಖ್ಯೋದೇಶವು' ಎನ್ನುವ ಆ ಕೃತಿಯ ಉಪೋದ್ಘಾತದಲ್ಲಿನ ಜಯರಾಯಾಚಾರ್ಯರ ಮಾತುಗಳು ಅವರು ಇಂಥ ಪದ್ಯಗಳನ್ನ ಬರೆದುದರ ಹಿನ್ನೆಲೆ ಸ್ಪಷ್ಟವಾಗಿ ತಿಳಿಯುತ್ತದೆ. ಅದರಲ್ಲಿನ ಕೆಲ ಉದಾಹರಣೆಗಳನ್ನ ನೋಡಬಹುದು:

ಚಂದಕ್ಕಿ ಮಾವ ।
ಚಂದಿರ ಮಾವ ।
ಬಿಂದಿಗೆ ತಂಬಿಗೆ ।
ಕೊಡುಕೊಡು ಮಾವ ॥ಪಲ್ಲ॥
ಎಲೆಲೆ ಬೆಕ್ಕೆ ನೀಂ ।
ಹುಲಿಯ ಸಾಮ್ಯವನು ।
ತಳೆದಿರುತಿಹೆನೆಂದು ॥
ಬಲುಗರುವವ ನೀಂ ।
ಬಳೆಯಿಸದಿರು ಹುಲಿ- ।
ಬಲುಮೆಯು ನಿನಗಿಹುದೇ ॥೧॥

***

ನೋಡು ನೋಡೀ ಗಡಿಯಾರವ ॥ಪಲ್ಲ॥
ನಾಡೆ ಹೊತ್ತನು ತೋರ್ಪುದು ॥ಅನುಪ॥

ಅಲೆಯಲು ಪೆಂಡಿಲ ।
ಮೊಳ ದೊಡ್ಡ ಮುಳ್ಳಿದ್ದು ॥
ಸಲೆ ಸುತ್ತಿ ನಿಮಿಷದ
ನೆಲೆಯನ್ನು ತೋರ್ಪುದು ॥೧॥

ಈ ರಚನೆಗಳ ಜೊತೆಗೆ ಇವನ್ನು ಅಭಿನಯಿಸುತ್ತ ಹೇಗೆಲ್ಲ ಮಕ್ಕಳಿಗೆ ತಲಪಿಸಬೇಕು ಎನ್ನುವ ಸೂಚನೆಗಳು ಎಲ್ಲ ಪದ್ಯಗಳ ಜೊತೆಗೂ ಕಾಣುತ್ತವೆ. ಅಲ್ಲದೆ ಆಗಲೇ ಮಕ್ಕಳಲ್ಲಿ, ಜನರಲ್ಲಿ ಪ್ರಚುರವಾಗಿದ್ದ ಹಾಡುಗಳನ್ನು, ಜನಪದೀಯ ಹಾಡಿನ ತುಣುಕುಗಳನ್ನು ಬಳಸಿಕೊಂಡು ಕೂಡ ಈ ರಚನೆಗಳನ್ನು ಮಾಡಿಕೊಂಡುದಿದೆ. ಅಂಥ ರಚನೆಗಳನ್ನು, ಅವುಗಳ ಹಾಡಿನ ಧಾಟಿಗಾಗಿ ಮೇಲ್ಗಡೆಯೇ ಸೂಚಿಸಿದುದಿದೆ. ದಾಸರ ಪದಗಳನ್ನೂ ಹೀಗೆ ಅನುಕರಿಸಿದುದಿದೆ. ಇನ್ನೂ ಒಂದು ವಿಶೇಷವೆಂದರೆ ಇವೆಲ್ಲಕ್ಕೆ ನಿಗದಿತವಾದ ರಾಗವನ್ನು ಕೂಡ ಸೂಚಿಸಿರುವುದು. ಹಳೆಯ ಕನ್ನಡದ ಬಳಕೆಯನ್ನು ಮಾಡಿಕೊಳ್ಳುತ್ತಲೇ ಅಗತ್ಯದ ಹೊಸ ಶಬ್ದಗಳನ್ನು, ಬಳಕೆಯಲ್ಲಿರುವ ಅನಿವಾರ್ಯವಾದ ಶಬ್ದಗಳನ್ನ ಬಳಸಿಕೊಂಡುದು, ಆದಷ್ಟೂ ಸರಳವಾಗಿ ನಿರೂಪಿಸಿರುವುದು ಮುಂತಾಗಿ ಇಲ್ಲಿ ಗಮನಿಸಬಹುದು. ಮಕ್ಕಳಿಗೆ ವಿಶೇಷವಾದ ವಸ್ತು ಪ್ರಪಂಚವಂತೂ ಎದ್ದು ಕಾಣುವಂತೆ ಎಲ್ಲೆಲ್ಲ ಇದೇ ಇದೆ. ಅರಮನೆಯ ವಿದ್ವಾಂಸರಾಗಿದ್ದ ಜಯರಾಯಾಚಾರ್ಯರು ಅತ್ಯಂತ ವಿದ್ವತ್ತಿನಿಂದ ಗಣ್ಯರಾಗಿದ್ದವರು, ಚಾಮರಾಜೇಂದ್ರ ಒಡೆಯರ ಕಾಲದ ರಂಗಭೂಮಿಯ ಪ್ರಯತ್ನಗಳಲ್ಲಿ ಅವರದು ಹಿರಿದಾದ ಕೊಡುಗೆಯಾಗಿತ್ತು. ಅನೇಕ ಮಹತ್ವದ ಕೃತಿಗಳನ್ನ ರಚಿಸಿ ಶ್ರೇಷ್ಠರೆಂದಿನಿಸಿಕೊಂಡವರು ಈ ಬಗೆಯ ರಚನೆಗಳಿಗೆ ಸಾಕಷ್ಟು ತೊಡಗಿಕೊಂಡರೆಂದೇ ಹೇಳಬೇಕು.

ಎಸ್.ಜಿ ನರಸಿಂಹಾಚಾರ್ಯರ ಕೊಡುಗೆ ಮಕ್ಕಳ ಕಾವ್ಯ ಕ್ಷೇತ್ರದಲ್ಲಿ ಹಿರಿದಾದ ಕೊಡುಗೆ ಎಂಬುದನ್ನು ಅನೇಕ ವಿದ್ವಾಂಸರು ಒಪ್ಪಿದ್ದಾರೆ. ಅವರಲ್ಲಿದ್ದ ವಿದ್ವತ್ತು, ಬಹು ಮುಖ್ಯವಾಗಿ ಉಜ್ವಲ ಪ್ರತಿಭೆ, ಭಾಷಾಂತರದಲ್ಲಿ ಅಪರೂಪದ ತೊಡಗುವಿಕೆ ಅವರ ರಚನೆಗಳಿಗೆ ಮಹತ್ವವನ್ನ ತಂದುಕೊಟ್ಟಿವೆ. ಜಯರಾಯಾಚಾರ್ಯರು ಹಾಗೂ ನರಸಿಂಹಾಚಾರ್ಯರು ಇಬ್ಬರೂ ಇಂಗ್ಲಿಷಿನಿಂದ ಹಲವು ಪದ್ಯಗಳನ್ನ ಕನ್ನಡಕ್ಕೆ ತರುವ ಪ್ರಯತ್ನ ಮಾಡಿದರು. ಹಾಗಾಗಿ ಅವರವೇ ರಚನೆಗಳೊಂದಿಗೆ ಇಂಗ್ಲಿಷಿನ ಮಕ್ಕಳಿಗಾಗಿನ ಪದ್ಯಗಳ ಹೊಸ ಬಗೆಯೂ ಕನ್ನಡಕ್ಕೆ ಪ್ರವೇಶಿಸುವಲ್ಲಿ ಒಂದಿಷ್ಟೆಲ್ಲ ಸಾಧ್ಯವಾಯಿತು. ಅದರಲ್ಲೂ ಎಸ್.ಜಿ. ನರಸಿಂಹಾಚಾರ್ಯರು ಕವಿಗಳಾಗಿ ಬಹುಮುಖ್ಯವಾಗಿ ಸೆಳೆದವರು. ಆ ಸಮಯದಲ್ಲಿ ಪಠ್ಯಗಳಲ್ಲಿ ಕೃತಿಕಾರರ ಹೆಸರುಗಳೇ ನಮೂದಾಗುತ್ತಿರಲಿಲ್ಲವಾಗಿ ಎಷ್ಟೊ ಅವರ ರಚನೆಗಳನ್ನು ಪತ್ತೆ ಮಾಡುವುದು ಕೂಡ ಕಷ್ಟದ ಕೆಲಸವಾಗಿದೆ. ಆದರೆ ಅವರ ಪ್ರತಿಭೆಯನ್ನ ಗುರುತಿಸಿದ ವಿದ್ವಾಂಸರು ಅನೇಕ ರಚನೆಗಳ ಹಿಂದೆ ಅವರದೇ ಪ್ರತಿಭೆ ಇರುವುದನ್ನು ಊಹಿಸುತ್ತಾರೆ. ಎಸ್.ಜಿ ನರಸಿಂಹಾಚಾರ್ಯರವೇ ಆದ ರಚನೆಗಳು ಹಲವಾರು ವಿಶೇಷವಾಗಿಯೇ ಸೆಳೆಯುತ್ತವೆ :

ಕಟ್ಟಿದ್ದ ಕಣ್ಣಿಯನು ಬಿಚ್ಚಿಕೊಳ್ಳಲು ಅರಿಯೆ
ಹೊಟ್ಟೆಗೆ ಬೇಕೆಂದು ಕೇಳಲರಿಯೆ

ಪುಟ್ಟ ಕರು ಇಲ್ಲದಿರೆ ಕರೆದು ತಾರೆನಲರಿಯೆ
ನೀನಾರಿಗಾದೆಯೋ ಎಲೆ ಮಾನವಾ
ಹರಿ ಹರಿ, ಗೋವು ನಾವು

ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೆ ನೊಸಲ ವಿಭೂತಿಯಾದೆ
ತಟ್ಟದೇ ಹಾಕಿದರೆ ಒಳ್ಳೆ ಗೊಬ್ಬರವಾದೆ
ನೀನಾರಿಗಾದೆಯೋ
(ಗೋವಿನ ಚರಿತ್ರೆ)

***

ನೊಗವನೆತ್ತಿನ ಕೊರಳೊಳೀಡುವ ಪಾಡಿಲ್ಲ
ಬಿಗಿದ ಕುದುರೆಯ ಹೂಡುವಾಯಾಸವಿಲ್ಲ
ಮಿಗೆ ಕಾಯ್ದ ನೀರ ಹಬೆಯಿಂದ ಬಲುಬೇಗ
ಹೊಗೆಯ ಗಾಡಿಯು ನೊಡಿ ಹೊಗುತಿಹುದೀಗ

ದಾರಿಯೊಳು ಕಳ್ಳಕಾಕರ ಭೀತಿಯಿಲ್ಲ
ಮೀರಿ ಬಹ ಮಳೆಬಿಸಿಲುಗಳ ಬಾಧೆಯಿಲ್ಲ

ದೂರದೇಶದ ಬೆಳಸನೊಯ್ದು ತರಬಹುದು
ಯಾರಿಗಿದರುಯೋಗಗಳ ಹೊಗಳಲಹುದು
(ಹೊಗೆಯ ಗಾಡಿ)

***

ಬಾರೋ ನಾವಾಡುವ ಬಾರೋ,
ಸಾರಿತು ಸುಗ್ಗಿಯ ತಿಂಗಳಿದೋ,
ಸಾರುವ ನಾವಿಂದಿನ ದಿನದಿ
ದೂರದ ಬೆಟ್ಟದ ಮೇಗಡೆಗೆ
ಭಲರೇ ಬಿಡುವಾಗಿಹುದಿಂದು
ತೊಳಲುತ ವನದಲಿ ತಪ್ಪಲಲಿ
ನೆಳಲಲಿ ಬಿಸಿಲಲಿನಲಿದಾಡಿ
ಸುಳಿವೆವು ದೂರದ ಬೆಟ್ಟದಲಿ
(ಬಿಡುವು)

***

ಹೊತ್ತು ಮುಳುಗುತ್ತಲಿದೆ
ಕತ್ತಲಾಗುತ್ತಲಿದೆ
ಎತ್ತಲೂ ಕಾಗೆಗಳು ಗೂಡ ಬಳಿಗೆ

ಮತ್ತೆ ಕಾಯೆಂದು ಕೂ
ಗುತ್ತಲಾಗಸದೆ ಹಾ
ರುತ್ತಲಿವೆ ಮಲಗುವಾ ಹೊತ್ತಾಯಿತು

ಹಗಲು ಕಳೆದುದು ತಾವ
ರೆಗಳೆಸಳು ಮುಚ್ಚುತಿದೆ
ಬಗೆಬಗೆಯ ಹೂವುಗಳು ಮೊಗವ ಮುಸುಕಿ
ಬಿಗಿದ ನಿದ್ದೆಯೊಳಿಹವು
ಮಗುವೆ ಅದರಿಂದ ಹಾ
ಸಿಗೆಯಲ್ಲಿ ಮಲಗುವಾ ಹೊತ್ತಾಯಿತು

ಕನ್ನಡದ ಗದ್ಯದ ಹರಿಕಾರರೂ ಆದ ಎಮ್. ಎಸ್. ಪುಟ್ಟಣ್ಣ(೧೮೫೨–೧೯೪೩) ಅವರ 'ನೀತಿ ಚಿಂತಾಮಣಿ' ೧೫೦ಕ್ಕೂ ಹೆಚ್ಚು ಅಪರೂಪದ ಕಥೆಗಳ ಸಂಗ್ರಹವಾಗಿದ್ದು ೧೫ ಪುಟ್ಟ ಪುಸ್ತಕಗಳಾಗಿ ಪ್ರಕಟವಾದುದು, ಪದೇ ಪದೇ ಪ್ರಕಟವಾಗುತ್ತ ಜನಪ್ರಿಯವಾದ ಕೃತಿ.

ನಾ. ಕಸ್ತೂರಿ(೧೮೯೭–೧೯೮೭) ಅವರು 'ಪಾತಾಳದಲ್ಲಿ ಪಾಪಚ್ಚಿ'ಎಂದು ಇಂಗ್ಲಿಷಿನಲ್ಲಿ ಕ್ಲಾಸಿಕ್ ಎನಿಸಿಕೊಂಡ. ವಿಶ್ವದಾದ್ಯಂತ ಪ್ರಚುರವಾದ ಲುಯಿ ಕೆರೋಲ್‌ನ 'ಆ್ಯಲೀಸ್ ಇನ್ ವಂಡರ್‌ಲ್ಯಾಂಡ್' ಕೃತಿಯನ್ನ ಸಂಗ್ರಹವಾಗಿ ಕನ್ನಡದಲ್ಲಿ ತಂದುದು ಗಮನಾರ್ಹವಾದುದು. ಆ ಸಮಯದ ಹಿರಿಯರ ಓದು ಹೇಗೆಲ್ಲ ವಿಸ್ತರಿಸಿಕೊಂಡಿತ್ತು, ಆಸಕ್ತಿಗಳು ಹೇಗೆಲ್ಲ ವೈವಿಧ್ಯಮಯವಾಗಿದ್ದುವು ಎನ್ನುವುದನ್ನು ತೋರಿಸುತ್ತದೆ. 'ಪಾತಾಳದಲ್ಲಿ ಪಾಪಚ್ಚಿ' ಕನ್ನಡದ ಮಕ್ಕಳಿಗೆ ಕನ್ನಡದ್ದೇ ಆದ ಕೃತಿ ಎನ್ನುವ ಹಾಗೆ ಮೂಡಿಬಂದುದು ನಿಜ. ಅದರ ಪ್ರಾರಂಭದ ಪ್ರಕಟಣೆಗಳಲ್ಲಿ ಮೂಲ ಕೃತಿಯಲ್ಲಿನ ಚಿತ್ರಗಳನ್ನೇ ಬಳಸಿಕೊಳ್ಳಲಾಗಿತ್ತು. 'ಅಕ್ಷರಶಃ ಭಾಷಾಂತರ ಮಾಡಿದಲ್ಲಿ ಪಾಶ್ಚಾತ್ಯ ಸಂಸ್ಕೃತಿಗೆ ಮಾತ್ರ ಹೊಂದುವ ಅನೇಕ ಸನ್ನಿವೇಶಗಳನ್ನೂ ಆಂಗ್ಲ ಸಾಹಿತ್ಯವನ್ನರಿತವರಿಗೆ ಮಾತ್ರ ರುಚಿಸಬಹುದಾದ ಕೆಲವು ಹಾಸ್ಯಗಳನ್ನೂ ತಿಳಿದುಕೊಳ್ಳಲು ವಾಚಕರಿಗೆ ತೊಂದರೆಯಾಗಬಹುದಾದ್ದರಿಂದ, ಸೂಕ್ತ ತೋರಿದಂತೆ, ಅಲ್ಲಲ್ಲಿ ಬದಲಾವಣೆಗಳನ್ನು ಮಾಡಿದ್ದೇನೆ, ಕಥೆಯನ್ನು ಕೊಂಚ ಮಾರ್ಪಡಿಸಿದ್ದೇನೆ. ಈ ನನ್ನ ಸ್ವತಂತ್ರ ವರ್ತನೆಯಿಂದ ಮೂಲದ ಸ್ವಾರಸ್ಯಕ್ಕೆ ಹೆಚ್ಚು ಕುಂದು ಬಂದಿಲ್ಲವೆಂಬುದು ನನ್ನ ಭಾವನೆ' ಎಂದು ಅವರು ಮೊದಲ ಮುದ್ರಣದ ಸಮಯದ ತಮ್ಮ ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ. ಅಸಂಗತಗಳಿಂದ ಕೂಡಿದ ಆಲೀಸಳ ಕತೆಯನ್ನು ಆಯ್ದುಕೊಳ್ಳುವ ಮನಸ್ಸು ಕೂಡ ವಿಶೇಷದ ಅರ್ಹತೆಯನ್ನ ಬಯಸುತ್ತದೆ. ಕಸ್ತೂರಿಯವರಿಗೆ ಹಾಸ್ಯದ ಬಲು ಹಂಬಲವಿದ್ದಂತೂ ನಿಜ. ಅದರಿಂದಲೂ ಅವರನ್ನ ಈ ಕೃತಿ ಸೆಳೆದಿರಬಹುದು. ಅವರು ಹೇಳಿರುವ ಮಾತುಗಳೂ ಗಮನಾರ್ಹ. 'ಒಂದು ಕ್ಷಣವಾದರೂ ವೈವಿಧ್ಯಕ್ಕಾದರೂ ಬಿಸಿಲಿದ್ದು ಮರವಿದ್ದು ನೆಳಲಿರದೆ ಹೋಗದೆ? . . . ಒಂದು ದಿನ ನೀರು ಸುಡಬಾರದೆ? ಒಂದು ಸಲವಾದರೂ ಕಲ್ಲು ಹಕ್ಕಿಯ ತೆರದಿ ಹಾರಾಡಬಾರದೆ? ಇಂದು ಕ್ಷಣವಾದರೂ ದಾಸ್ಯನಿಯಮಗಳಳಿದು ಸ್ವತಂತ್ರ್ಯ ಸ್ವಚ್ಛಂದ ಹುಚ್ಚಾಟವಾಗದೆ? ಎಂದು ಪುಟ್ಟಪ್ಪನವರಿಗೆ ಅನ್ನಿಸಿದ ಹಾಗೆ ನಮಗೂ ಆಗಾಗ ಅನ್ನಿಸುತ್ತದೆ. ಆದ್ದರಿಂದಲೇ ಈ ವೈಜ್ಞಾನಿಕ ಯುಗದಲ್ಲಿಯೂ ಕೂಡ ಇಂಥಾ ಕಥೆಗಳನ್ನೋದಿ ಆನಂದಿಸುವವರ

ಸಂಖ್ಯೆ ಹೆಚ್ಚುತ್ತಲೇ ಇರುವುದು . . . .'. ಕತೆಯಲ್ಲಿ ಆಲೀಸಳ ಬದಲಿಗೆ ಪಾಪಚ್ಚಿ ಕಾಣಿಸಿಕೊಂಡಿದ್ದಾಳೆ. ಪ್ರಾಣಿಗಳೆಲ್ಲ ಕನ್ನಡದಲ್ಲಿಯೇ ಮಾತನಾಡಿಕೊಂಡಿವೆ, ಕನ್ನಡದ್ದೇ ಪರಿಸರ ಆವರಿಸಿಕೊಂಡಿದೆ. ದೂರದ ಇಂಗ್ಲಿಷು ವಾತಾವರಣದ ಕತೆ ಕನ್ನಡದ್ದಾಗಿ ಅರಳಿದೆ. ಅದಕ್ಕನುಗುಣವಾಗಿ ಅನೇಕ ಬದಲಾವಣೆಗಳನ್ನ ಅವರು ಮಾಡಿಕೊಂಡಿದ್ದಾರೆ. ಉದಾಹರಣೆಗೆ ಪಾಪಚ್ಚಿ ಹಾಡೊಂದನ್ನು ನೆನಪು ಮಾಡಿಕೊಳ್ಳಲು ಹೋಗಿ ಗೋವಿನ ಹಾಡನ್ನು ತಪ್ಪು ತಪ್ಪಾಗಿ ಹೇಳಿದ ಬಗೆ ಹೀಗೆ . . .

ತಾತ ಕರೆದಾ ಧ್ವನಿಯ ಕೇಳಿ
ಎಲ್ಲ ಹುಡುಗರು ಕೆರೆಗೆ ಬಿದ್ದು
ಮೂತಿಯನ್ನು ಮರೆಸಿಕೊಂಡು
ಮುಳುಗಿ ತೇಲಿದರೊಮ್ಮೆಲೆ

ಇದನ್ನ ಕೇಳಿ ಆಮೆ 'ಇದೇನಿದು ? ಬಹಳ ವಿಚಿತ್ರವಾಗಿದೆ, ನಾವು ಕಲಿತ ರೀತಿಯೇ ಬೇರೆ. ನೀವು ಹೇಳುವುದೇ ಬೇರೆ, ಈಚೀಚೆಗೆ ಎಷ್ಟು ಬದಲಾವಣೆಗಳಾಗಿಬಿಟ್ಟಿವೆ ! ಇನ್ನೊಂದು ಪದ್ಯ ಹೇಳಿ ನೋಡೋಣ. ನಿಮಗೆ ಮಾಂಬಿಯ ಕತೆ ಬಾಯಿಗೆ ಬರುತ್ತೋ ?' ಎಂದು ಕೇಳಿತಂತೆ.

ಹೀಗೆ ಪ್ರಾರಂಭದ ಕಾಲದಲ್ಲಿ ಅನ್ನೋಣ, ಶಾಲೆ ಪಠ್ಯಗಳನ್ನ ರಚಿಸುವದರ ಜೊತೆಗೆ ತಾವೇ ಭಾವಿಸಿಕೊಂಡು ಹಲವಂದದ ಬರವಣಿಗೆಯನ್ನ ಅನೇಕ ಹಿರಿಯರು ಮಾಡುತ್ತಲೇ ಬಂದರು. ಚನ್ನಪಟ್ಟಣದಲ್ಲಿ ಚ. ವಾಸುದೇವಯ್ಯನವರು(೧೮೫೨-೧೯೪೩) ಕನ್ನಡ ಮಕ್ಕಳಿಗೆ ನೀಡಿದ 'ಕನ್ನಡ ಬಾಲಬೋಧೆ' ಪಠ್ಯವಾಗುವುದರ ಜೊತೆಗೆ ಮಕ್ಕಳನ್ನು ಓದಿಗೆ, ಕಲಿಕೆಗೆ ಸೆಳೆಯುವ ಅಪರೂಪದ ಕೃತಿಯಾಗಿತ್ತೆಂದು ಕೇಳುತ್ತೇವೆ. ಈ ಪುಸ್ತಕ ಎಷ್ಟು ಪ್ರಚುರವಾಯಿತೆಂದರೆ ಬಹಳಷ್ಟು ವರ್ಷಗಳ ಕಾಲ ಇದು ಪಠ್ಯವಾಗಿತ್ತು. ಮೊದಲ ಬಾರಿಗೆ ಅಖಂಡ ಕರ್ನಾಟಕ ಭೂಪಟ ತಯಾರಿಸಿದ ಬೆಳಗಾವಿ ಜಿಲ್ಲೆಯ ವೆಂಕಟ ರಂಗೋ ಕಟ್ಟಿ(೧೮೩೩-೧೯೧೯) 'ಕನ್ನಡ ಐದನೆಯ ಪುಸ್ತಕ', 'ಆರನೆಯ ಪುಸ್ತಕ' ರಚಿಸಿ ಮಕ್ಕಳಲ್ಲಿ ಓದಿನ ರುಚಿ ಹುಟ್ಟಿಸಿದರು. ೧೮೬೩ರಲ್ಲಿ ಅರೇಬಿಯನ್ ನೈಟ್ಸ್ ಕೃತಿಯನ್ನ ವೆಂಕಟರಂಗೋ ಕಟ್ಟಿ ಅವರು ಕನ್ನಡಕ್ಕೆ ತಂದರು.(ಇದು ಬಾಲ ಸಾಹಿತ್ಯದ ಮಿತಿಗೆ ಒಳಪಡಲಾರದೆಂದು ಬೊಳುವಾರು ಅವರು ಅಭಿಪ್ರಾಯ ಪಟ್ಟಿದ್ದಾರೆ). ಕರ್ಕಿಸೂರಿ ವೆಂಕಟರಮಣಶಾಸ್ತ್ರಿ(೧೮೫೫-೧೯೨೫)ಗಳು 'ಹಿತೋಪದೇಶ' ಎನ್ನುವ ಪತ್ರಿಕೆಯನ್ನ ಬಹಳ ವರ್ಷಗಳ ಕಾಲ ನಡೆಸಿದರು. ಇದರಲ್ಲಿ ಚಿಕ್ಕಮಕ್ಕಳಿಗಾಗಿಯೇ 'ವಿವಿಧ ವೃತ್ತಾಂತ ಸಂಗ್ರಹ' ಎನ್ನುವ ಪ್ರತ್ಯೇಕ ವಿಭಾಗವಿತ್ತಂತೆ. ಶಾಂತಕವಿಗಳೆಂದೇ ಖ್ಯಾತರಾದ ಸಕ್ರಿ ಬಾಳಾಚಾರ್ಯರು(೧೮೫೬-೧೯೬೦) ಚಿಣ್ಣರ ರಂಗಭೂಮಿಗಾಗಿಯೇ ೩೨ ನಾಟಕಗಳನ್ನ ರಚಿಸಿದ್ದುದಾಗಿ ತಿಳಿದು ಬರುತ್ತದೆ. 'ಅಡ್ಡ ಕತೆಗಳ ಬುಕ್ಕು', 'ಸಿಂಹಾಸನ ಬತ್ತೀಸ ಪುತ್ಥಳಿ ಕತೆ', 'ಕವಿಕಂಠ ಕುಠಾರ' ಇವು ಮಕ್ಕಳಿಗಾಗಿ ಬರೆದ ಕೃತಿಗಳು. 'ಮಾತೃಭೂಮಿ ಜನನಿ ನಿನ್ನ ಚರಣ ಸೇವೆ ಮಾಡುವೆ' ಎನ್ನುವ ಅತ್ಯಂತ ಜನಪ್ರಿಯವಾಗಿದ್ದ ಗೀತೆಯನ್ನ ಬರೆದವರು ವಲ್ಲಭ ಮಹಾಲಿಂಗ ತಟ್ಟಿ ಅವರು(೧೮೭೦-೧೯೨೨). ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ತಟ್ಟಿ ಅವರು ಮಕ್ಕಳಿಗೆ ಅನೇಕ ಒಳ್ಳೆಯ ಪದ್ಯಗಳನ್ನ ರಚಿಸಿದರು. ಐರೋಡಿ ಶಿವರಾಮಯ್ಯ(೧೮೭೬-೧೯೪೧) ಶಿಕ್ಷಕರಾಗಿದ್ದು 'ಕನ್ನಡ

ಭಾಷಾ ಪಾಠ ಪುಸ್ತಕ' ವನ್ನು ಒಂದರಿಂದ ಎಂಟನೆಯ ವರ್ಗದವರೆಗೆ ರಚಿಸಿಕೊಟ್ಟಿದ್ದರು. ಇವರು ಬರೆದ ಕತೆಗಳು ಆ ಕಾಲದಲ್ಲಿ ಬರುತ್ತಿದ್ದ ಸುವಾಸಿನಿ, ಸ್ವಧರ್ಮ, ಕರ್ನಾಟಕ ಕೇಸರಿ, ಸುಬೋಧ, ಉದಯ ಭಾರತ ಪತ್ರಿಕೆಗಳಲ್ಲಿ ಪ್ರಕಟವಾಗುತ್ತ ಬಂದಿದ್ದವು. 'ಚಿಲಿ ಮಿಲಿ ಇಲಿ', 'ಚಿಣಿ ಮಿಣಿ ಚಿಟ್ಟೆ', 'ಕೊಂಬಿನ ವೀರ' ಮುಂತಾಗಿ ಆಕರ್ಷಕ ಶೀರ್ಷಿಕೆಗಳನ್ನ ಕೊಡುತ್ತಿದ್ದರು ಅವರು. ೫೦ಕ್ಕಿಂತಲೂ ಹೆಚ್ಚು ಕೃತಿಗಳನ್ನು ಮಕ್ಕಳಿಗಾಗಿ ನೀಡಿದ ನರಹರಿಶರ್ಮ(೧೮೮೦–೧೯೫೮) 'ಬಾಲಸರಸ್ವತಿ' ಕಾವ್ಯನಾಮದಿಂದ ಬರೆಯುತ್ತ ಬಂದವರು. 'ಊರಬಾಗಿಲ ಹನುಮಂತ', 'ಅಡುಗೋಲಜ್ಜಿ', 'ಚಿತ್ರಕಥಾವಳಿ', 'ಪದ್ಯಕಥಾವಳಿ' ಮುಂತಾದುವು ಅವರ ಜನಪ್ರಿಯವಾಗಿದ್ದ ಕೃತಿಗಳು.

೧೯೨೧ರ ಹೊತ್ತಿಗೆ ಸುಬೋಧ ರಾಮರಾಯರು(೧೮೯೦–೧೯೭೦) 'ಸುಬೋಧ ಕುಸುಮಾಂಜಲಿ' ಎಂಬ ಗ್ರಂಥ ಪ್ರಕಾಶನ ಸಂಸ್ಥೆಯನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಅದರ ಮೂಲಕ ಆದರ್ಶ ಪುರುಷರ, ಪೌರಾಣಿಕ ವ್ಯಕ್ತಿಗಳ, ನಾಯಕರ ಜೀವನ ಚರಿತ್ರೆಗಳನ್ನು ಸುಂದರವಾಗಿ ಪ್ರಕಟಿಸಿದರು. ಸಣ್ಣ ಸಣ್ಣ ವಾಕ್ಯಗಳನ್ನು ವಿಫುಲ ಮಾಹಿತಿಗಳನ್ನು, ಸುಲಭವಾಗಿ ಓದಿಸಿಕೊಂಡು ಹೋಗುವಂತಹ ಗುಣಗಳನ್ನು ಈ ಪುಸ್ತಕಗಳನ್ನು ಹೊಂದಿದ್ದರಿಂದ ಈ ಸಂಸ್ಥೆಯು ಬಹುಬೇಗನೇ ಪ್ರಸಿದ್ಧಿಯನ್ನು ಪಡೆಯಿತು. ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯ ಕಾರ್ಯಗಳಲ್ಲಿ ಇನ್ನಿಲ್ಲದಂತೆ ತುಡಿದ ಹರ್ಡೇಕರ ಮಂಜಪ್ಪನವರು(೧೮೮೯–೧೯೪೭) ೧೯೫೫ ರಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕ ಸಾಹಿತ್ಯ ಮಾಲೆಯನ್ನು ಪ್ರಾರಂಭಿಸಿದರು. ವರ್ಷಕ್ಕೆ ೧೬ ಚಿಕ್ಕ ಚಿಕ್ಕ ಪುಸ್ತಕಗಳನ್ನು ಹೊರತರುವ ನಿರ್ಧಾರ ಕೈಗೊಂಡಿದ್ದರಂತೆ ಅವರು. 'ಬುದ್ಧಿಯ ಮಾತು,' 'ಪುಲಕೇಶಿ ಚರಿತ್ರೆ,' 'ಸುಗ್ಗಲಾದೇವಿಯ ಕತೆ' ಮುಂತಾದ ೧೬ ಪುಸ್ತಕಗಳನ್ನು ಕೇವಲ ಒಂದೂವರೆ ರೂಪಾಯಿ ಬೆಲೆಗೆ ಒದಗಿಸುವ ಯೋಜನೆಯನ್ನು ಆರಂಭಿಸಿದರು. 'ಬುದ್ಧಿಯ ಮಾತು' ೧೭ ಸಲ ಪುನರ್ ಮುದ್ರಣವಾದುದನ್ನು ನೆನೆದರೆ ಅವರ ಮಕ್ಕಳ ಸಾಹಿತ್ಯದ ಜನಪ್ರಿಯತೆಯ ಅರಿವಾಗುವುದು. ಕೆಲವೊಂದು ಪುಸ್ತಕಗಳ ವಿಷಯ ಪ್ರೌಢವಾಗಿದ್ದರೂ ಸರಳ ಶೈಲಿ, ನೇರ ನಿರೂಪಣೆ, ಚಿಕ್ಕ ಚಿಕ್ಕ ವಾಕ್ಯಗಳುಳ್ಳ ಈ ಪುಸ್ತಕಗಳು ಮಕ್ಕಳು ಓದಲು ಅರ್ಹವಾಗಿದ್ದವು. ದೇವುಡು ನರಸಿಂಹ ಶಾಸ್ತ್ರಿಗಳು(೧೮೯೭–೧೯೬೨) ಮಕ್ಕಳಿಗಾಗಿ ತುಡಿದ ವಿಶೇಷದ ವ್ಯಕ್ತಿ ಎಂದರೆ ತಪ್ಪಾಗದು. ಅತ್ತ ಪ್ರಬುದ್ಧರಿಗಾಗಿಯೂ ಗಂಭೀರವಾಗಿ ತೊಡಗಿಕೊಂಡ ಅವರು ಮಕ್ಕಳಿಗಾಗಿಯೂ ಹಲವಂದದಲ್ಲಿ ಆಸಕ್ತಿ ತೋರಿದರು. 'ನಮ್ಮ ಪುಸ್ತಕ' ಎನ್ನುವ ಮಕ್ಕಳ ಸಚಿತ್ರ ಪತ್ರಿಕೆಯನ್ನೇ ಬಹುಕಾಲ ನಡೆಸಿದರು. ಮಕ್ಕಳೇ ಬರೆದ ಬರಹಗಳಿಗೂ ಇದರಲ್ಲಿ ಅವಕಾಶವಿತ್ತು. 'ಮಕ್ಕಳ ಪುಸ್ತಕ ಭಂಡಾರ'ದಡಿಯಲ್ಲಿ ಮಕ್ಕಳ ವಯೋವರ್ಗವನ್ನ ಮೂರು ಬಗೆಯಲ್ಲಿ ವಿಂಗಡಿಸಿ ೫೦ ಚಿಕ್ಕ ಚಿಕ್ಕ ಪುಸ್ತಕಗಳನ್ನ ನೀಡಿದರು. 'ದೇಶಾಂತರ ಕಥೆಗಳು', 'ಮೂಢರ ಕತೆಗಳು', 'ಕಥಾಸರಿತ್ಸಾಗರ', 'ಕುಮಾರ ಸಾಹಿತ್ಯ', 'ಕಂದನ ಕಥೆಗಳು', 'ಕನ್ನಡಿಯ ಕಥೆ', 'ಹೊಸಗನ್ನಡ ಪಂಚತಂತ್ರ', 'ಬಾಲ ರಾಮಾಯಣ', 'ಬಾಲ ಭಾಗವತ', 'ವಿಚಿತ್ರ ಶಿಕ್ಷೆ', 'ಮಂಗಪ್ಪಾಜಿಯ ಪುರಾಣ', 'ಬುದ್ಧಿಯ ಕತೆಗಳು' ಮುಂತಾಗಿ ಅನೇಕ ಕೃತಿಗಳು ಅವರಿಂದ ಬಂದಿವೆ. ಚಿ. ಸದಾಶಿವಯ್ಯನವರ(೧೯೦೮–೧೯೮೨) 'ಮಕ್ಕಳ ದೇವರು', 'ಶಿವಾಜಿಯ ಬಾಲ್ಯ', 'ಮಕ್ಕಳಿಗಾಗಿ ಬೃಂದಾವನ'ದಂತಹ ನಾಟಕಗಳು; ಸಾಲಿ ರಾಮಚಂದ್ರರಾಯರ 'ಐದು ಜಾಣಪ್ರಾಣಿಗಳು', 'ಸಿಪಾಯಪ್ಪ' ಮುಂತಾದ ಕೃತಿಗಳು ಜನಪ್ರಿಯವಾಗಿದ್ದುವು. 'ಬುದ್ಧಿಯ ಕಲಿತರು ಜಂಬಣ್ಣ', 'ಕಾಳಜ್ಜಿಯ ಭೂತರಾಜ', 'ಮುಕುಂದ

ಕಂಡ ಕನಸು', 'ಬೆಳೆಯಿತು ಮೂಗು ನೋಡಣ್ಣ', 'ನಗೆಮುದ್ದ ಸಿಡುಕಣ್ಣ', 'ಗೊಗೊಗೊಗ್ಗಯ್ಯ' ಇತ್ಯಾದಿ ಬಹಳಷ್ಟು ಸಂಖ್ಯೆಯಲ್ಲಿ ಮಕ್ಕಳಿಗೆ ಬಲು ಹಿಡಿಸುವ, ಜನಪದ ಸರಕಿನ ಕಥೆಗಳನ್ನ ನೀಡಿದವರು ಎಮ್. ಎಸ್. ರಾಮರಾಯರು. ಎ. ಆರ್. ಕೃಷ್ಣಶಾಸ್ತ್ರಿಗಳ(೧೮೯೦–೧೯೬೪) 'ನಿರ್ಮಲ ಭಾರತೀ ಅಥವಾ ಮಕ್ಕಳ ಮಹಾಭಾರತ'(ಸಚಿತ್ರ) ಅತ್ಯಂತ ಪ್ರಚುರವಾಗಿದ್ದ ಪುಸ್ತಕ. ಇದರಲ್ಲಿ ಬಳಸಿದ ಚಿತ್ರಗಳು ಅಪರೂಪದುವಾಗಿದ್ದವು. ಹಲವು ಆವೃತ್ತಿಗಳನ್ನು ಕಂಡ ಈ ಕೃತಿ ಸುಧಾ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ಮಕ್ಕಳ ಮನಗೆದ್ದಿತ್ತು. 'ರಾಜಕುಮಾರ ಮತ್ತು ಕಿರೀಟ' ಎನ್ನುವ ಕೃತಿಯನ್ನ ಚಂದ್ರದತ್ತ ಅನ್ನುವವರು ತಂದಿದ್ದರು(ಡಿ.ಎನ್.ಶ್ರೀನಾಥ್ ಅವರು ಅದನ್ನ ಮತ್ತೆ ಅನುವಾದಿಸಿದ್ದಾರೆ). ಪಂಡಿತ ಚೆನ್ನಬಸಪ್ಪ ಕವಲಿ(೧೯೦೦–೧೯೮೫) ಅವರು ಶಾಲಾ ಶಿಕ್ಷಕರಾಗಿದ್ದರು, ಸಂಸ್ಕೃತದ ಘನ ಪಂಡಿತರೂ ಆಗಿದ್ದರು. ಅವರು ಮಕ್ಕಳಿಗಾಗಿ ಎಂದುಕೊಂಡು ೬೦ಕ್ಕೂ ಮಿಗಿಲಾಗಿ ಪುಸ್ತಕಗಳನ್ನ ಬರೆದುದಾಗಿ ತಿಳಿಯುತ್ತದೆ. ಅವರ 'ಪುಟ್ಟಣ್ಣನ ಪಂಚತಂತ್ರ' ಕೇಂದ್ರ ಸರಕಾರದ ಬಹುಮಾನ ಪಡೆದಿದೆ. 'ಸುಸಂಸ್ಕೃತ ಸಾಹಿತ್ಯ ಸುಧಾ' ಎನ್ನುವ ತಮ್ಮದೇ ವಿಚಾರಗಳ ಕೃತಿಯನ್ನು ತಂದಿದ್ದರು ಎನ್ನುವುದು ಗಮನಾರ್ಹ. ಇದು ಮೈಸೂರು ಸರಕಾರದಿಂದ ಪುರಸ್ಕೃತಗೊಂಡಿತ್ತು. ತಮಿಳು ಕನ್ನಡ ಬಾಂಧವ್ಯಕ್ಕೆ ಶ್ರಮಿಸಿದ್ದಕ್ಕಾಗಿ ಬಂಗಾರ ಪದಕ ಪಡೆದಿದ್ದ ಎಲ್. ಗುಂಡಪ್ಪ(೧೯೦೩–೧೯೮೬) ಮಕ್ಕಳಿಗಾಗಿಯೂ ವಿಶೇಷವಾಗಿ ತುಡಿದವರು. ಒಂದನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ ಪಠ್ಯಪುಸ್ತಕವನ್ನ ರಚಿಸಿದ್ದುದಾಗಿ ತಿಳಿಯುತ್ತದೆ. ಜಿ. ಎನ್. ಲಕ್ಷ್ಮಣ ಪೈ(೧೯೦೪–೧೯೭೫) ಕವಿಗಳಾಗಿ ಜನಪ್ರಿಯರಾದರಂತೆ ಮಕ್ಕಳಿಗಾಗಿಯೂ ಆಸಕ್ತಿಯಿಂದ ತುಡಿದುದಾಗಿ ತಿಳಿದುಬರುತ್ತದೆ. 'ಮಂಗನ ಮದುವೆ', 'ತೋಳವೂ ಕುರಿಮರಿಯೂ', 'ಸ್ವರ್ಗ ನರಕ' ಮುಂತಾದ ಕವಿತೆಗಳು ಮಕ್ಕಳ ಪಾಠಮಾಲೆಗಳ ಮೂಲಕ ವ್ಯಾಪಕವಾದ ಪ್ರಸಿದ್ಧಿ ಪಡೆದಿದ್ದುವಂತೆ. ಮಕ್ಕಳ ಕವಿಗಳೆಂದೇ ಹೆಸರಾಗಿದ್ದ ವೈ. ಎಸ್. ಗುಂಡಪ್ಪ(೧೯೦೫–೧೯೮) ಆನೇಕಲ್ಲಿನಲ್ಲಿ ಜನಿಸಿದರು. ಆದರ್ಶ ಶಿಕ್ಷಕ ಪ್ರಶಸ್ತಿಗಳಿಸಿರುವ ಇವರು 'ಧ್ರುವಬಾಲ' ಎನ್ನುವ ಸಂಗೀತ ನಾಟಕ, ಸರಳ ರಗಳೆಯ 'ಗೋಲಿಯ ಮೈಮೆ', 'ಮಗುವಿನ ಮೈಮೆ' 'ತೋಳರಾಯನ ಸಭೆ' ಮುಂತಾಗಿ ವೈವಿಧ್ಯದ ಕೃತಿಗಳನ್ನ ಅವರು ತಂದಿದ್ದರು. ಮಂಗಳೂರಿನ ಕುಡ್ವಿ ವಾಸುದೇವ ಶೆಣೈ ಅವರು ಒಂದಾಣೆಯ ಮಾಲೆಯನ್ನು ಆರಂಭಿಸಿ ವಾರಕ್ಕೊಂದರಂತೆ ೩೫೦ ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದರು. ಇದರಲ್ಲಿ ನೂರಾರು ಪುಸ್ತಕಗಳು ಮಕ್ಕಳ ಸಾಹಿತ್ಯದ ಕೃತಿಗಳಾಗಿದ್ದವು ಎಂಬುದು ವಿಶೇಷ. ಹಾಸನ ಜಿಲ್ಲೆಯ ಮತಿಘಟ್ಟದ ಎಲ್. ಗುಂಡಪ್ಪ ತಮಿಳು ಕನ್ನಡ ಬಾಂಧವ್ಯಕ್ಕೆ ಶ್ರಮಿಸಿದಂತೆ ಮಕ್ಕಳ ಸಾಹಿತ್ಯದಲ್ಲೂ ಆಸಕ್ತಿ ತೋರಿದವರು. 'ಕಳ್ಳಮರಿ'. 'ಮಕ್ಕಳ ರವೀಂದ್ರರು', ಭಾರತ ಸರಕಾರದಿಂದ ಪ್ರಶಸ್ತಿ ಪಡೆದ 'ರವೀಂದ್ರನಾಥ ಠಾಕೂರರ ಜೀವನ ಚರಿತ್ರೆ' ಮುಂತಾಗಿ ಮಕ್ಕಳ ಓದಿಗೆ ಅನುಕೂಲವಾಗಬಲ್ಲ ಕೃತಿಗಳು ಹಲವಾರೆಲ್ಲ ಇವರಿಂದ ಬಂದಿವೆ. ಒಂದನೆಯ ತರಗತಿಯ ಮಕ್ಕಳಿಗಾಗಿ ಪಠ್ಯ ಪುಸ್ತಕ ಕೂಡ ರಚಿಸಿದ್ದರು ಇವರು. ಖ್ಯಾತನಾಮರಾದ ಸಿಂಪಿ ಲಿಂಗಣ್ಣ ಜನಪದರಂಗದಲ್ಲಿ, ಪ್ರಬುದ್ಧರ ಸಾಹಿತ್ಯದಲ್ಲಿ ಹೆಸರಾದಂತೆ ಮಕ್ಕಳಿಗಾಗಿಯೂ ಆಸಕ್ತಿ ಹೊಂದಿದವರಾಗಿದ್ದುದು ತಿಳಿದು ಬರುತ್ತದೆ. 'ದೇಶಭಕ್ತಿಯ ಕಥೆಗಳು', 'ವಿಶ್ವಾಮಿತ್ರನ ಸಾಹಸ', 'ನಾಮದೇವ', 'ಭಗವಾನ್ ಬುದ್ಧದೇವ,' 'ಅರವಿಂದರು', 'ಭಾರತೀಯ ಮಹಾಪುರುಷರು,' 'ಕುಲದೀಪ ಬಸವಣ್ಣ' ಮುಂತಾಗಿ ಮಕ್ಕಳಿಗಾಗಿ ಅವರು ರಚಿಸಿದಂತಹವು.

ಜೀವನ ಚರಿತ್ರೆಗಳು ಕನ್ನಡ ಸಾಹಿತ್ಯದಲ್ಲಿ ವಿರಳವೇ ಎನ್ನುವ ಅಭಿಪ್ರಾಯವನ್ನು ಎಲ್.ಎಸ್. ಶೇಷಗಿರಿರಾಯರು ಮುಂದಿಡುತ್ತಾರೆ. 'ದುರದೃಷ್ಟದಿಂದ ಭಾರತದಲ್ಲಿ ಜೀವನದ ಚರಿತ್ರೆಯನ್ನು ಬರೆಯುವ ಸಂಪ್ರದಾಯ ಬರಲಿಲ್ಲ. ಇಂದಿಗೂ ಈ ಕೊರತೆ ಸಾಕಷ್ಟು ತುಂಬಿ ಬಂದಿದೆ ಎನ್ನುವಂತಿಲ್ಲ. ಬಂದಿರುವ ಜೀವನ ಚರಿತ್ರೆಗಳೂ ಬಹುಮಟ್ಟಿಗೆ ನಾಯಕನನ್ನು ಆದರ್ಶ ವ್ಯಕ್ತಿಯಾಗಿ ಚಿತ್ರಿಸುವ ಹಂಬಲದಿಂದ ಸೃಷ್ಟಿಯಾದವು. ಜೀವನ ಚರಿತ್ರೆ ಉಪದೇಶ ಮಾಡಬೇಕು, ಆದರ್ಶ ವ್ಯಕ್ತಿಗಳ ಮೇಲ್ಪಂಕ್ತಿಯನ್ನು ಸೃಷ್ಟಿಸಬೇಕು ಎಂಬ ದೃಷ್ಟಿಯೇ ನಮ್ಮಲ್ಲಿ ಬಹುಮಟ್ಟಿಗೆ'ಎಂದು ತಮ್ಮ 'ಹೊಸಗನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಹೇಳಿರುವುದಿದೆ. ಆದರೆ ಮಕ್ಕಳ ವಿಷಯದಲ್ಲಿ ಈ ಮಾತು ಬೇರೆಯೇ ಆಗದೆ. ಮಕ್ಕಳಿಗಾಗಿ ಜೀವನ ಚರಿತ್ರೆಗಳನ್ನು, ವ್ಯಕ್ತಿಚಿತ್ರಗಳನ್ನು ದಂಡಿಯಾಗಿ ಬರೆದು ಹಾಕಿರುವುದು ಕಾಣುತ್ತದೆ. ಬಹಳಷ್ಟು ಜನ ಈ ನಿಟ್ಟಿನಲ್ಲಿ ಕಾಣುತ್ತಾರೆ. ಆದರೆ ಅವರಲ್ಲಿ ಬಹುಪಾಲು ಮಕ್ಕಳ ಮುಂದೆ ಆದರ್ಶಗಳನ್ನ ಇಡಬೇಕು, ಉದಾತ್ತ ಜೀವನ ಮಾರ್ಗ ತೋರಬೇಕು ಎನ್ನುವ ಉದ್ದೇಶವನ್ನು ಹೊಂದಿದುವೇ ಎನ್ನುವುದರಲ್ಲಿ ಬೇರೆ ಮಾತಿಲ್ಲ.. ಮಕ್ಕಳಿಗಾಗಿ ಜೀವನ ಚರಿತ್ರೆಗಳನ್ನ ರಚಿಸುವುದು ಎಂದರೆ ಇದೇ ಉದ್ದೇಶಕ್ಕಾಗಿ ಎನ್ನುವುದೇ ಎದ್ದುಕಾಣುತ್ತದೆ. ಪುರಾಣದಿಂದಾಯ್ದು ಈ ಬಗೆಯ ಕಥೆಗಳು ನಮ್ಮ ಲೇಖಕರನ್ನು ಮೊದಲಿಗೇ ಆಕರ್ಷಿಸಿವೆ. ಹಾಗಾಗಿ ಸರಿಸುಮಾರು ಈ ಮೊದಲ ತಲೆಮಾರಿನವರು ಈ ಸರಕಿಗೆ ಮಾರುಹೊದವರೇ. , ಇತಿಹಾಸದ ನಾಯಕರ ಸುತ್ತ ಈ ಬಗೆಯ ಬರವಣಿಗೆ ಹಬ್ಬುತ್ತ ಬಂತು. ನಂತರ ರಾಷ್ಟ್ರದ ಸ್ವಾತಂತ್ರ್ಯದಲ್ಲಿ, ಬೆಳವಣಿಗೆಯಲ್ಲಿ ತೊಡಗಿಕೊಂಡ ಅನೇಕ ನಾಯಕರು, ವಿವಿಧ ರಂಗಗಳಲ್ಲಿ ಸಾಧನೆ ಮಾಡಿದವರ ಜೀವನವನ್ನು ಮಕ್ಕಳ ಮುಂದೆ ಇಡುವ ಪ್ರಯತ್ನಗಳಾಗಿ ಮುಂದುವರೆಯುತ್ತಲೇ ಬಂದಿದೆ. ಇದು ಎಷ್ಟರ ಮಟ್ಟಿಗೆ ಪುನರಾವರ್ತನೆಯಾಗುತ್ತಿದೆ ಎಂದರೆ ಮಾರುಕಟ್ಟೆಯ ಸಾಧ್ಯತೆಗಳನ್ನು ಗಮನಿಸಿಕೊಂಡು ಈ ಬಗೆಯದು ಮುಂದುವರೆದಿರುವ ಹಾಗೆ ಭಾಸವಾಗುತ್ತದೆ. ಅನೇಕ ಪ್ರಕಾಶಕರು ಪದೇ ಪದೇ ದೊಡ್ಡ ಸಂಖ್ಯೆಯಲ್ಲಿ ಈ ಬಗೆಯ ಕೃತಿಗಳನ್ನು ಹೊಸಹೊಸ ಯೋಜನೆಯಾಗಿ ತರುತ್ತಲೇ ಇದ್ದಾರೆ. ಮಕ್ಕಳ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯ ಬದುಕಿನ ಎಲ್ಲ ಸಂಗತಿಗಳನ್ನ ಹರವಿಕೊಳ್ಳುವುದು ಸಾಧ್ಯವಾಗದೇ ಹೋಗಬಹುದು, ಅದು ಅನಿವಾರ್ಯ. ಹಾಗಂತ ಅವರಿಗಾಗುವಷ್ಟಾದರೂ ಸಂಗತಿಗಳಲ್ಲಿ ಬದುಕನ್ನು ಸ್ವಾರಸ್ಯವಾಗಿ ಕುಂದುಕೊರತೆಗಳೊಡನೆಯ ತೆರೆದು ಇಡುವ ಸಾಧ್ಯತೆಗಳುಂಟೇ ಉಂಟು.

೨

ಮಕ್ಕಳ ಬರವಣಿಗೆಯ ಉತ್ಕರ್ಷದ ಕಾಲ

ಡಾ. ಆನಂದ ಪಾಟೀಲ

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ದಶಕಗಳಲ್ಲಿ ನಾಡಿನಲ್ಲಿ ಬೇರೆ ಬೇರೆ ಕಡೆಗಳಲ್ಲಿ ಮಕ್ಕಳ ಸಾಹಿತ್ಯದ ಕೃಷಿಯೆಡೆಗೆ ಹರಿದ ತುಡಿತ ಒಂದಿಷ್ಟೆಲ್ಲ ಗಮನಾರ್ಹವಾದ ಸಂಗತಿಗಳನ್ನ ಹೇಳುವಂಥದು. ಮಕ್ಕಳ ಸಾಹಿತ್ಯದ ಉತ್ಕೃಷ್ಟತೆಯನ್ನು ಹೇಳುವ ಹಲವು ಬಗೆಯ ಸಾಧನೆಗಳಿಗೆ ದಾಖಲೆ ಒದಗಿಸುತ್ತವೆ ಈ ಸಮಯದ ಪ್ರಯತ್ನಗಳು. ದಕ್ಷಿಣ ಕನ್ನಡ, ಮೈಸೂರು, ಬೆಂಗಳೂರು, ಧಾರವಾಡ ಮುಂತಾದ ಭಾಗಗಳಲ್ಲಿ ಈ ಬಗೆಯ ವಿಶೇಷದ ಕೃಷಿಯನ್ನು ನೋಡುತ್ತೇವೆ. ನವೋದಯದ ಒಟ್ಟು ಸಮಯ, ಮಕ್ಕಳ ಸಾಹಿತ್ಯದ ಉದಯದ ಸಮಯವೆಂದು ಗುರುತಿಸಿಕೊಳ್ಳುತ್ತಲೂ, ಮಕ್ಕಳ ಸಾಹಿತ್ಯದ ಕಲ್ಪನೆಯನ್ನ ಗಟ್ಟಿಗೊಳಿಸುತ್ತಲೂ, ಅದಕ್ಕೊಂದು ವಾತಾವರಣ ಕಂಡುಕೊಳ್ಳುತ್ತಲೂ ಇರುವ ಸಮಯವಾಗಿ ಕಾಣುತ್ತದೆ. ಅದರ ನಡುವೆ ಕೆಲವರ ಕೃಷಿ ಎದ್ದುಕಾಣುವಂಥದಿದ್ದು, ಅದು ಅವರ ಹಿರಿಯ ಪ್ರತಿಭೆ, ವಿಶಿಷ್ಟ ವ್ಯಕ್ತಿತ್ವಗಳನ್ನ ಆಧರಿಸಿಕೊಂಡು ರೂಪುಗೊಂಡುದಾಗಿ ಕಾಣುತ್ತದೆ. ಗಮನಿಸಬೇಕಾದ ಸಂಗತಿ ಎಂದರೆ ಮಕ್ಕಳ ಸಾಹಿತ್ಯದ ಈ ಬಗೆಯ ಪ್ರಯತ್ನಗಳಲ್ಲಿ ಮುಖ್ಯವಾಗಿ ಕಾಣುವ ಹೆಸರುಗಳೆಲ್ಲ ಸರಿ ಸುಮಾರು ಕನ್ನಡದ ಖ್ಯಾತನಾಮರಾದ, ಇಂದು ಹಿರಿಯ ಲೇಖಕರು ಎಂದು ಗೌರವಿಸುವ, ಅಪೂರ್ವ ಪ್ರತಿಭಾ ಸಂಪನ್ನ ಲೇಖಕರೇ ವಿಶೇಷವಾಗಿರುವುದು.

ಈ ಬಗೆಯ ಶ್ರೇಷ್ಠತೆಯ ಹರಿಕಾರರಾದ ಪಂಜೆಯವರು, ಕುವೆಂಪು, ದಿನಕರ ದೇಸಾಯಿ, ರಾಜರತ್ನಂ, ಇವರೊಡಗೂಡಿ ಎಮ್ ಎನ್ ಕಾಮತರು, ಉಳ್ಳಾಲ ಮಂಗೇಶರಾಯರು, ಉಗ್ರಾಣ ಮಂಗೇಶರಾಯರು, ಹೊಯ್ಸಳ, ಮೇವುಂಡಿ ಮಲ್ಲಾರಿ, ಕೊರಡ್ಕಲ್ ಶ್ರೀನಿವಾಸರಾವ್, ದೇವುಡು ನರಸಿಂಹಶಾಸ್ತ್ರಿ, ನಾ .ಕಸ್ತೂರಿ, ಬೆಟಗೇರಿ ಕೃಷ್ಣಶರ್ಮ, ಶಿವರಾಮ ಕಾರಂತ, ಭಾರತೀಸುತ ಮುಂತಾಗಿ ಅನೇಕ ಹಿರಿಯರ ಹೆಸರುಗಳು ಕಾಣಿಸುತ್ತವೆ. ಇವರಲ್ಲಿ ಬಹಳಷ್ಟು ಜನ ಅಂದಿನ ಕನ್ನಡ ಕಟ್ಟುವ ಕೆಲಸವಾಗಿ ತಮ್ಮ ಸಾಧನೆಯನ್ನು ತೋರಿದವರು. ಬಹಳಷ್ಟು ಜನ ಪ್ರಬುದ್ಧರಿಗಾಗಿ ವಿಶೇಷವಾಗಿಯೇ ತೊಡಗಿಕೊಂಡಂತೆ ವಿವಿಧ ಪ್ರಕಾರಗಳಲ್ಲಿ ಪ್ರಯೋಗಗೈದವರು. ಜೊತೆಗೆ ಮಕ್ಕಳಿಗಾಗಿಯೂ ತುಡಿದವರು. ಕೆಲವರು ಮಾತ್ರ ವಿಶೇಷವಾಗಿ ಮಕ್ಕಳಿಗಾಗಿಯೇ ತಮ್ಮನ್ನು ತೊಡಗಿಸಿಕೊಂಡವರು.

ಉತ್ಕರ್ಷ ಎಂದು ಹೇಳುವಾಗ ಪ್ರಮಾಣದಲ್ಲೂ, ಗುಣಮಟ್ಟದಲ್ಲೂ ಗಣಿಸಿದರೆ ಒಳಿತಾದೀತು. ಆದರೆ ಪ್ರಬುದ್ಧರಿಗಾಗುವ ಸಾಹಿತ್ಯ ಕೃಷಿಗೆ ಹೋಲಿಸಿದರೆ ಮಕ್ಕಳಿಗಾಗಿರುವ ಕೃಷಿ ಯಾವ ಸಮಯದಲ್ಲೂ ಗಣನೀಯ ಪ್ರಮಾಣದ್ದಾಗಿ ಕಂಡಿಲ್ಲ. ಮೊದಲ ಘಟ್ಟದ ಈ ಹಿರಿಯರು ಪ್ರಬುದ್ಧರಿಗಾಗಿಯೇ ವಿಶೇಷವಾಗಿ ತೊಡಗಿಕೊಂಡವರಾದ್ದರಿಂದ ಮಕ್ಕಳಿಗಾಗಿ ತುಡಿದಿದ್ದರೂ ಅದು ಆ ಪ್ರಮಾಣದಲ್ಲಿ ಇಲ್ಲ ಎಂದು ಹೇಳಿದರೆ ತಪ್ಪಾಗದು. ಆದರೆ ಗುಣಮಟ್ಟದಲ್ಲಿ ಈ ಪ್ರತಿಭಾವಂತರ ಕೃಷಿ ಎದ್ದುಕಾಣುವಂತಿರುವುದು ಗಮನಿಸುವಂತಿದೆ. ವಿರಳವಾಗಿ ರಾಜರತ್ನಂ ಅಂಥವರು ನಿಡಿದಾಗಿಯೇ ತೊಡಗಿಕೊಂಡುದನ್ನ ಹೇಳಲೇಬೇಕು.

ಈ ಉತ್ಕೃಷ್ಟತೆಗೆ ಕಾರಣಗಳನ್ನ ಸುಲಭವಾಗಿಯೇ ಕಂಡುಕೊಳ್ಳಬಹುದು. ಮೊದಲನೆಯದಾಗಿ ಈ ಹಿರಿಯರ ಸೊಗಸಿನ ಪ್ರತಿಭೆಯೇ ಇದಕ್ಕೆ ಕಾರಣ. ಜೊತೆಗೆ ಇನ್ನೂ ಹಲವು ಕಾರಣಗಳನ್ನ ಪಟ್ಟಿಮಾಡಬಹುದು:

– ಕನ್ನಡದ ಪ್ರಾಚೀನ ಸಾಹಿತ್ಯ, ಸಂಸ್ಕೃತ ಸಾಹಿತ್ಯದ ಒಡನಾಟಗಳ ಜೊತೆಗೆ ಇಂಗ್ಲಿಷಿನ ಓದು ಸಾಧ್ಯವಾದುದು.

– ನವೋದಯಕ್ಕೆ ಕಾರಣವಾಗಿ ಇಂಗ್ಲಿಷ್ ಸಾಹಿತ್ಯ ಹಿನ್ನೆಲೆಗೆ ಇದ್ದುದು

– ಅದರಲ್ಲೂ ಇಂಗ್ಲಿಷಿನ ಪ್ರಭಾವ ವಿಶೇಷವಾಗಿ ಆದುದು. ಆ ಸಮಯದಲ್ಲಿ ಇಂಗ್ಲಿಷಿನಲ್ಲಿ ಮಕ್ಕಳ ಸಾಹಿತ್ಯ ತನ್ನ ಅಸ್ತಿತ್ವವನ್ನ ಕಂಡುಕೊಂಡಾಗಿತ್ತು. ಅಲ್ಲದೆ, ವಿಕ್ಟೋರಿಯನ್ ಸಮಯದಲ್ಲಿ, 'ಮಕ್ಕಳ ಸಾಹಿತ್ಯದ ಸುವರ್ಣಯುಗ' ಎಂದು ಕರೆಯಿಸಿಕೊಳ್ಳುವವರೆಗೆ ದಾಪುಗಾಲು ಇಟ್ಟಾಗಿತ್ತು. ಬಹು ಪ್ರಚುರವಾದ ಕ್ಲಾಸಿಕ್ ಎನಿಸಿಕೊಂಡ ಬಹಳಷ್ಟು ಕೃತಿಗಳು ಪ್ರಕಟಗೊಂಡಾಗಿತ್ತು.

– ಪ್ರಬುದ್ಧರಿಗಾದ ಸಾಹಿತ್ಯದ ವಿಸ್ತಾರದ ಓದಿನ ಜೊತೆಯಲ್ಲಿ ಅಷ್ಟಿಷ್ಟು ಮಕ್ಕಳಿಗಾಗಿನ ಸಾಹಿತ್ಯದ ಓದು, ಪರಿಚಯವೂ ಆದುದು.

ಶಾಲಾವ್ಯವಸ್ಥೆಯ ಹೊಸ ವಾತಾವರಣ ಶುರುವಾದುದರಿಂದ, ಮಕ್ಕಳಿಗಾಗಿ ಪಠ್ಯ ಸೃಷ್ಟಿಸುವ ಪ್ರಯತ್ನಗಳೂ ನಡೆದಿದ್ದ ಕಾಲ. ಹಾಗಾಗಿ ಪಠ್ಯವಾಗಿಯೂ, ಹಾಗೆಯೇ ಅದರಿಂದಾಚೆಯೂ ತುಡಿದುದನ್ನೂ ಕಾಣುತ್ತೇವೆ. ಈ ಬಗೆಯ ಆಸಕ್ತಿಯ ತುಡಿತವೇ ಮಕ್ಕಳ ಸಾಹಿತ್ಯದ ಸೊಗಸಿನ ಬೆಳಸಿಗೆ ಕಾರಣವಾದುದು. ಈ ಬಗೆಯ ವಾತಾವರಣದಿಂದ ಮಕ್ಕಳ ಸಾಹಿತ್ಯದ ಒಂದು ಬಗೆಯ ಅಘೋಷಿತ ಲೋಕದ ಅನಾವರಣವಾಯಿತು ಎಂದರೆ ಅಡ್ಡಿಯಿಲ್ಲ. ನವೋದಯದ ಸಮಯದಲ್ಲಿ ಕನ್ನಡವನ್ನ ಕಟ್ಟುವ, ಬೆಳೆಸುವ ಕರ್ತವ್ಯದ ಭಾವಗಳು, ಉತ್ಕಟ ಇಚ್ಛೆಗಳು, ಉತ್ಸಾಹಗಳು ಎಲ್ಲೆಡೆಯಲ್ಲಿ ಕಾಣಿಸಿಕೊಂಡದ್ದರಿಂದ ಸಾಹಿತ್ಯದ ಎಲ್ಲ ಬಗೆಯ ಸಾಧ್ಯತೆಗಳ ಕೃಷಿಯ ಕಡೆಗೆ ತುಡಿಯುವ, ಪ್ರಯೋಗಿಸುವ, ಅವನ್ನೆಲ್ಲ ಸಾಕಾರಗೊಳಿಸಿಕೊಳ್ಳುವ ಹಂಬಲ ಸಾಮಾನ್ಯವಾಗಿ ಕಾಣಬರುತ್ತಿತ್ತು. ಹಾಗೆಯೇ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದ ಹಾಗೆ, ತಮ್ಮೊಳಗಿನ ತೀವ್ರದ ತುಡಿತ, ಸಹಜ ಅಭಿಲಾಷೆಗಳು ರೂಪಿಸಿದ ಹಲವರ ಬರವಣಿಗೆಗಳು ನಿಜಕ್ಕೂ ಗಮನಾರ್ಹವಾಗಿ ಕಾಣುವುದರೊಂದಿಗೆ ಸ್ವೋಪಜ್ಞತೆಯನ್ನ ನಿಕರವಾಗಿ ಹೇಳುತ್ತವೆ, ಅದರೊಟ್ಟಿಗೆ ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಸಾಧ್ಯತೆಗಳ ಗಟ್ಟಿಯಾದ ಕೆಲ ಹೆಜ್ಜೆಗಳಾಗಿಯೂ ಕಾಣುತ್ತವೆ.

ಈ ಗಟ್ಟಿ ಹೆಜ್ಜೆಗಳಲ್ಲಿ ಒಬ್ಬೊಬ್ಬರವೂ ಒಂದೊಂದು ಬಗೆಯಾಗಿ, ಅವರೊಳಗಿನ ವಿಶೇಷತೆಗಳನ್ನ ತೋರಿಸುತ್ತವೆ. ಈ ಬಗೆಯ ವಿಶೇಷತೆಗಳು ಮಕ್ಕಳ ಸಾಹಿತ್ಯದ ವಿಭಿನ್ನ ನೆಲೆಗಳ ಹುಡುಕಾಟವಾಗಿಯೂ ನೋಡಲೆಳಸುತ್ತವೆ.

ಮಕ್ಕಳಿಗಾಗಿನ ಸಾಹಿತ್ಯ ಹೇಗೆಲ್ಲ ಇರಬೇಕು ಎಂಬುದರ ಪ್ರಾರಂಭದ ಸವಾಲುಗಳಿಗೆ ಉತ್ತರಿಸುವ ಜವಾಬುದಾರಿಯನ್ನು, ಆ ನಿಟ್ಟಿನ ಪ್ರಯತ್ನಗಳಲ್ಲಿ ತೊಡಗಿದುದನ್ನ, ಅದರಲ್ಲಿ ಎದ್ದುಕಾಣುವ ಕೃತಿಗಳನ್ನು ರಚಿಸಿದುದನ್ನ ಗುರುತಿಸಬಹುದಾಗಿದೆ. ಕವಿತೆಗಳು ಹಾಗೂ ಕತೆಗಳು ಈ ಸಾಹಿತ್ಯದ ಪ್ರಮುಖ ಪ್ರಕಾರಗಳಾಗಿ, ಅಗತ್ಯವಾಗಿಯೂ ಕಂಡಹಾಗಿದೆ. ಅದರ ಜೊತೆಗೆ ನಿಬಂಧ ಮಾದರಿಯ ರಚನೆಗಳು, ಜೀವನ ಚರಿತ್ರೆಗಳನ್ನ ಒಂದಿಷ್ಟೆಲ್ಲ ಸೇರಿಸಬಹುದು.

ಗಮನಿಸಬಹುದಾದ ಸಂಗತಿ ಎಂದರೆ ಮಕ್ಕಳ ಸಾಹಿತ್ಯದ ಬಗೆಗೆ ಈ ಯಾವ ಹಿರಿಯರಲ್ಲೂ ಅನುಮಾನಗಳು, ಅದರ ಅಸ್ತಿತ್ವದಲ್ಲಿನ ಗುಮಾನಿಗಳು ಕಾಣದೇ ಹೋದುದು. ಕೆಲವರೆಲ್ಲ ಮುತವರ್ಜಿವಹಿಸಿ ತೊಡಗಿಕೊಂಡಿರಬಹುದು, ಕೆಲವರೆಲ್ಲ ತೊಡಗಿಕೊಳ್ಳದೆ ಹೋಗಿರಬಹುದು, ಆದರೆ ಯಾರೂ ಅಪಸ್ವರವನ್ನು ಎತ್ತಿದ ಉದಾಹರಣೆಗಳಿಲ್ಲ. ವಿಭಿನ್ನ ಅಭಿಪ್ರಾಯಗಳು, ದೃಷ್ಟಿಕೋನಗಳು ಸದೈವ ಇದ್ದುವು ನಿಜ, ಆದರೆ ನಿರಾಕರಿಸುವ ಮನೋಭಾವ ಎಲ್ಲೂ ಕಾಣಲಿಲ್ಲ. ವಿ.ಕೆ.ಗೋಕಾಕರು '.... ಇಂಥ ಸಾಹಿತ್ಯದಲ್ಲಿಯೂ ಮುಖ್ಯವಾಗಿ ಬೇಕಾದದ್ದು ಸಾಹಿತ್ಯ ಗುಣವೆಂಬುದನ್ನು ನಾವು ಒಮ್ಮೊಮ್ಮೆ ಮರೆಯುತ್ತೇವೆ. ಸುಲಭ ಭಾಷೆ, ವಿಷಯವು ಎಷ್ಟು ಕಠಿಣವಾದರೂ ಅದನ್ನು ಸಜೀವವಾಗಿಸಿ ಅದಕ್ಕೆ ಅರ್ಥದ ವಿವಿಧ ಸ್ತರಗಳನ್ನು ಕಲ್ಪಿಸಿಕೊಡುವ ರೂಪಕತೆ, ಪ್ರಸಾದ ಗುಣ, ಇವು ಬಾಲ ಸಾಹಿತ್ಯದಲ್ಲಿ ಅವಶ್ಯವಾಗಿ ಬೇಕು' ಎಂದು ವಿ.ಜಿ. ಭಟ್ಟರ ಮಕ್ಕಳ ಕವಿತೆಗಳ ಸಂಕಲನದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಶಿವರಾಮ ಕಾರಂತರ ಪ್ರಯತ್ನಗಳು

ಶಿವರಾಮ ಕಾರಂತರ ಪ್ರಯತ್ನಗಳು ಖಂಡಿತ ಮಕ್ಕಳ ಸಾಹಿತ್ಯದ ಚಟುವಟಿಕೆಯ ಹಿಂದೆ ಬಲವಾಗಿ ಕೆಲಸ ಮಾಡಿವೆ. ಸಾಹಿತ್ಯದ ಉತ್ಕರ್ಷದ ಬಗೆಗೆ ಮಾತಾಡುವಾಗ ಈ ಬಗೆಯ ಪ್ರಯತ್ನಗಳನ್ನ ಅಲ್ಲಗಳೆಯಲಾಗದು. ಸ್ವತಃ ಮಕ್ಕಳಿಗಾಗಿ ಬರೆಯುವುದರಲ್ಲೂ ತೊಡಗಿಕೊಂಡ ಕಾರಂತರು ತಮ್ಮ ಎತ್ತರದ ವ್ಯಕ್ತಿತ್ವವನ್ನು ಶ್ರೇಷ್ಠ ವಾತಾವರಣ ಮೂಡಿಸುವಲ್ಲೂ ತೊಡಗಿಸಿಕೊಂಡರು. ಮಂಗನ ಮದುವೆ, ಮೀಸೆಯ ಬಂಟ, ಹುಲಿರಾಯ, ಗಜರಾಜ, ಸೂರ್ಯಚಂದ್ರ, ಒಂದೇ ರಾತ್ರಿ ಒಂದೇ ಹಗಲು, ದುಮ್ಮಿಂಗೋ ಭೋಂ ಭೊಮ್ಮ, ಗೆದ್ದವರ ರಾಜ್ಯ, ಮರಿಯನ ಸಾಹಸ, ಜೋಗಿ ಕಂಡ ಊರು, ದೃಷ್ಟಿ ಸಂಗಮ, ಭೂತಾರಾಧನೆ, ಚೆಲುವ ಕನ್ನಡನಾಡು ಮುಂತಾದ ೨೫ರಷ್ಟು ಪುಸ್ತಕಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ. 'ಢಂ ಢಂ ಡೋಲು' ಎನ್ನುವ ಕವಿತೆಗಳ ಸಂಕಲನವನ್ನೂ ಅವರು ರಚಿಸಿದರು. ಮಕ್ಕಳ ಜ್ಞಾನವೃದ್ಧಿಯ ಉದ್ದೇಶದ ಅನೇಕ ಕೃತಿಗಳನ್ನು ಅವರು ಬರೆದರು. 'ಬಾಲಪ್ರಪಂಚ' ದಂಥ ೧೮೦೦ ಪುಟಗಳ ಮೂರು ಸಂಪುಟಗಳ ವಿಶ್ವಕೋಶ, ಇಕೊ ಪುಸ್ತಕ ಮಾಲೆ, ಹೊಸಗನ್ನಡ ಪಾಠ ಮಾಲೆ ಮುಂತಾಗಿ ಸಾಕಷ್ಟು ಅವರ ಹಿರಿದಾದ ತೊಡಗುವಿಕೆಯನ್ನು ಮಕ್ಕಳ ಲೋಕದಲ್ಲೂ ನಾವು ಕಾಣುತ್ತೇವೆ. ಎಲ್ಲಕ್ಕೂ ಮಿಗಿಲಾಗಿ ಪುತ್ತೂರಿನಲ್ಲಿ 'ಬಾಲವನ' ಹುಟ್ಟುಹಾಕಿ ಮಕ್ಕಳೊಡನೆ ನಾನಾ ಬಗೆಯ ಸಮಯ ಕಳೆಯುವ ಚಟುವಟಿಕೆಗಳಿಗೆ ಕಾರಣರಾದದ್ದು, ಅನೇಕ ಬರಹಗಾರರಿಗೆ

ಇಲ್ಲಿ ಅವಕಾಶ ಮಾಡಿಕೊಡುತ್ತ, ಅವರಿಗೆ ಸಲಹೆಗಳನ್ನ, ಸೂಚನೆಗಳನ್ನ ನೀಡುತ್ತ ವಾತಾವರಣ ಮೂಡಿಸಿದುದು ದೊಡ್ಡ ಕೆಲಸ. ಆ ಸಮಯದ ಅನೇಕ ಮಕ್ಕಳ ಬರಹಗಾರರು ಅವರ ಸಂಪರ್ಕದಲ್ಲಿದ್ದರು. ಹೈಸ್ಕೂಲ್ ಮಟ್ಟದ ಮಕ್ಕಳನ್ನು ಒಟ್ಟುಗೂಡಿಸಿ ಶಾಲಾ ರಜಾ ದಿನಗಳಲ್ಲಿ ಅವರನ್ನು ಕೂಡಿಕೊಂಡು ಕಾಲ್ನಡಿಗೆಯಿಂದಲೇ ಹಳ್ಳಿಹಳ್ಳಿಗೂ ಸಂದರ್ಶಿಸಿ ಸಮಾಜ ಸೇವಾ ಕಾರ್ಯಗಳನ್ನು, ಜನತಾ ಶಿಕ್ಷಣ ಕ್ಯಾಂಪ್‌ಗಳನ್ನು ಆರಂಭಿಸಿದರು. ಗ್ರಾಮ ನೈರ್ಮಲ್ಯ, ಆರೋಗ್ಯದ ಮಹತ್ವ, ಜಾತೀಯತೆ, ಕುರುಡು ಪದ್ಧತಿಗಳಿಂದಾಗುವ ಹಾನಿಗಳು, ಮದ್ಯಪಾನ ಮುಂತಾದ ದುಶ್ಚಟಗಳ ನಿವಾರಣೆಯ ಅಗತ್ಯ ಮುಂತಾದ ಹಲವಾರು ಸಾಮಾಜಿಕ ಸೇವೆಗಳನ್ನು ಸಲ್ಲಿಸುವ ಮೂಲಕ ಶಾಲಾ ಬಾಲಕರಿಗಾಗಿ ಈ ವಿಷಯಗಳ ಕುರಿತಾದ ಅನೇಕ ನಾಟಕಗಳನ್ನು ಬರೆದು ಆಡಿಸಿದರು. ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಶಾಲಾ ಶಿಕ್ಷಣದಲ್ಲಿ ವಿನೂತನ ಮಾದರಿಯ ಪ್ರಯೋಗಗಳನ್ನು ನಡೆಯಿಸಿದ ಕಾರಂತರು ಮಕ್ಕಳ ಕೂಟದ ಮೂಲಕ ಪ್ರತಿಭೆಗಳಿಗೆ ಉತ್ತಮ ವೇದಿಕೆ ಒದಗಿಸಿದರು.

ಬಾಲವನ

ಡಾ. ಶಿವರಾಮ ಕಾರಂತರು ಮಕ್ಕಳ ಕೂಟದ ಮಕ್ಕಳ ಉತ್ಸವ, ಮಕ್ಕಳೊಂದಿಗಿನ ನಿಕಟ ಸಂಪರ್ಕ, ಅಧ್ಯಾಪಕರೊಂದಿಗಿನ ನಿಕಟ ಒಡನಾಟ ಮುಂತಾದವುಗಳಿಂದ ದೊರೆತ ಅಮೋಘವಾದ ಪ್ರತಿಕ್ರಿಯೆಗಳಿಂದ ಉತ್ತೇಜಿತರಾಗಿ ಜುಲೈ ೧೯೩೪ ರಲ್ಲಿ 'ಬಾಲವನ' ಎಂಬ ಸಂಸ್ಥೆಯನ್ನು ಪುತ್ತೂರಿನಲ್ಲಿ ಸ್ಥಾಪಿಸಿದರು. ಇದು ಮಾದರಿ ಶಾಲೆಯಾಗಿದ್ದು ಆಟದ ಮೂಲಕ ಪಾಠವನ್ನು ಕಲಿಸುವ ಹೊಚ್ಚ ಹೊಸದಾದ ಯೋಜನೆಯಾಗಿತ್ತು. ಬಾಲವನದ ಈ ಶಾಲೆಯಲ್ಲಿ ಮಕ್ಕಳಿಗೆ ಅನ್ನಬಟ್ಟೆಯನ್ನು ಕೊಟ್ಟು ವಸತಿ ಸೌಕರ್ಯಗಳನ್ನು ಒದಗಿಸಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ಮಕ್ಕಳ ಲವಲವಿಕೆಯನ್ನು ಹೆಚ್ಚಿಸಲು ಶಾಲೆಯ ವಠಾರದಲ್ಲಿಯೇ ಪ್ರಾಣಿ ಸಂಗ್ರಹಾಲಯವನ್ನು ಕಾರಂತರು ಸ್ಥಾಪಿಸಿದರು. ಪ್ರಾಣಿ ಪಕ್ಷಿಗಳ ಬಗ್ಗೆ ನೈಸರ್ಗಿಕ ಒಲವನ್ನು ತಾಳಿರುವ ಮಕ್ಕಳು ಇದರಿಂದ ಉತ್ತೇಜಿತರಾಗುವದಲ್ಲದೇ ಪ್ರತ್ಯಕ್ಷ ವೀಕ್ಷಣೆಯಿಂದ ಅವುಗಳ ಜೀವನ ವಿಧಾನವನ್ನು ತಿಳಿದುಕೊಳ್ಳಲು ಇದು ಸಹಕಾರಿಯಾಯಿತು. ಕೋಳಿ ಸಾಗಾಣಿಕೆ, ಜೇನು ಸಾಗಾಣಿಕೆ ಮುಂತಾದ ವೃತ್ತಿ ಶಿಕ್ಷಣದ ಪ್ರಯೋಗಗಳನ್ನು ಈ ಶಾಲೆಯಲ್ಲಿ ಕಾರಂತರು ನಡೆಸಿದರು. ಬಾಲವನದಲ್ಲಿ ಆಟದ ರೈಲುಗಳನ್ನು ಸ್ಥಾಪಿಸಿದರು. ನಾಡಿನ ಅನೇಕ ಮಕ್ಕಳು ಕಾರಂತರ ಬಾಲವನಕ್ಕೆ ಹಿಂಡು ಹಿಂಡಾಗಿ ಆಗಮಿಸಿ ಅಲ್ಲಿಯ ಸವಿಯನ್ನು ಸವಿದರು. ಸರಕಾರದ ದಿವ್ಯ ನಿರ್ಲಕ್ಷ್ಯದಿಂದಾಗಿ ಹಾಗೂ ಇದು ವಿದ್ಯಾರ್ಥಿಗಳನ್ನು ಶಿಕ್ಷಣಕ್ಕಾಗಿ ಆಕರ್ಷಿಸಲು ವಿಫಲವಾಗಿದ್ದರಿಂದಾಗಿ ಬಾಲವನವನ್ನು ಕಾರಂತರು ಅನಿವಾರ್ಯವಾಗಿ ಮುಚ್ಚಬೇಕಾಯಿತು. ಆದರೆ ಈಗ ಅಲ್ಲಿನ ಜಿಲ್ಲಾ ಆಡಳಿತ ಬಾಲವನದ ಬಗ್ಗೆ ಲಕ್ಷವಹಿಸಿ ಅದನ್ನು ಪುನಃ ಉಳಿಸಿಕೊಳ್ಳಲು ಸಮಿತಿಯನ್ನು ರಚಿಸಿದೆ. ಪುತ್ತೂರು ಉಪವಿಭಾಗಾಧಿಕಾರಿಗಳು ಅದರ ಅಧ್ಯಕ್ಷರಾಗಿದ್ದು, ಅನೇಕ ಮಕ್ಕಳ ಸಾಹಿತ್ಯದ ಯೋಜನೆಗಳನ್ನು ಅದು ಕೈಗೊಂಡಿದೆ. ಪ್ರತಿವರ್ಷ ಬಾಲವನ ಪ್ರಶಸ್ತಿಯನ್ನು ಮಕ್ಕಳ ಸಾಹಿತ್ಯ ಹಾಗೂ ಮಕ್ಕಳ ಕ್ಷೇತ್ರದಲ್ಲಿ ಒಳ್ಳೆಯ ಕಾರ್ಯ ಮಾಡಿದವರಿಗೆ ನೀಡುತ್ತಿದೆ.

'ಬಾಲವನ' ಮುಚ್ಚಿ ಹೋದ ಮೇಲೆ ಬಹುಮುಖ ಪ್ರತಿಭೆಯ ಶಿವರಾಮ ಕಾರಂತರು ಸಾಮಾನ್ಯ ಜ್ಞಾನ, ಭೂಗೋಳ ಚರಿತ್ರೆ, ಗೃಹ ವಿಜ್ಞಾನ ಮುಂತಾದ ವಿಷಯಗಳನ್ನು ಒಳಗೊಂಡಂತೆ

ಅನೇಕ ಪಠ್ಯಪುಸ್ತಕಗಳನ್ನು ರಚಿಸಿದರು. ೧೯೩೫ರಲ್ಲಿ ಮೊದಲ ಬಾರಿಗೆ ಹೊಸಗನ್ನಡ ಪಾಠಮಾಲೆ ಎಂಬ ಹೆಸರಿನ ೧ ನೇ ತರಗತಿ, ೮ ನೇ ತರಗತಿಯ ವಿದ್ಯಾರ್ಥಿಗಳ ಕನ್ನಡ ಭಾಷಾ ಪಠ್ಯಮಾಲೆಗಳನ್ನು ಸ್ವತಂತ್ರವಾಗಿ ರಚಿಸಿದರು. ಮಕ್ಕಳಿಗೆ ಉತ್ತಮವಾದ ಸಾಹಿತ್ಯ ಗ್ರಂಥಗಳನ್ನು ನೀಡಬೇಕೆಂದು ಚಿಂತಿಸಿದರು. ಇಂಗ್ಲಿಷಿನಲ್ಲಿ The Book of Knowledge; world of wonders, Pictorial Knowledge ನಂತಹ ದೊಡ್ಡ ದೊಡ್ಡ ಗ್ರಂಥಗಳಿವೆ. ಕನ್ನಡದಲ್ಲಿ ಇಂಥ ಕೃತಿಗಳು ಏಕಿಲ್ಲ ? ಎಂದು ವಿಚಾರಿಸಿ ಅಂತಹ ಪುಸ್ತಕಗಳನ್ನು ಹೊರತರ ಬಯಸಿದರು. ಅದರ ಫಲವೇ ಕ್ರೌನ್ ಕ್ವಾರ್ಟೊ ಗಾತ್ರದ ೧೮೦೦ ಪುಟಗಳ 'ಬಾಲಪ್ರಪಂಚ'ದ ಮೂರು ಸಂಪುಟಗಳು. ಮೊದಲನೆಯ ಸಂಪುಟದ ಮುನ್ನುಡಿಯಲ್ಲಿ ಮಕ್ಕಳ ಮನಸ್ಸಿನ ಹಸಿವಿನ ಕುರಿತು ಕಾರಂತರು ಹೇಳಿದ ಮಾತುಗಳು ಗಮನಾರ್ಹವಾಗಿದೆ. "ಶಿಕ್ಷಣದಲ್ಲಿ ಆಸೆ, ಉತ್ಸಾಹ, ರುಚಿಕಟ್ಟು ಹುಟ್ಟಿಸಲು ಶಿಕ್ಷಕರಿಗೆ ಹಾಗೂ ಬಾಲಕರಿಗೆ ಉತ್ತಮ ಪುಸ್ತಕಗಳು ಬೇಕು" ಎಂದು ಹೇಳಿ ತಾವೇ ಜ್ಞಾನಕೋಶ ಸಂಕಲಿಸುವ ಸಾಹಸಕ್ಕೆ ಮುಂದಾದರು. ಕನ್ನಡದಲ್ಲಿ ಅದೇಕೆ ಭಾರತೀಯ ಭಾಷೆಗಳಲ್ಲೇ ಮೊಟ್ಟ ಮೊದಲಿನ ಮಕ್ಕಳ ಜ್ಞಾನಕೋಶವಾಗಿ ಕಾರಂತರ ಕೈಯಿಂದ 'ಬಾಲಪ್ರಪಂಚ' ಮೂರು ಸಂಪುಟಗಳಲ್ಲಿ ಅರಳಿ ಬಂದಿತು. ಈ ಸಂಪುಟಗಳು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಸಂಚಲನವನ್ನು ಉಂಟುಮಾಡಿದವು.

'ಬಾಲಪ್ರಪಂಚ'ದ ಮೂರು ಸಂಪುಟಗಳು ೧೮೦೦ ಪುಟಗಳಷ್ಟು ವಿಸ್ತಾರ ಹೊಂದಿದ್ದು ಪ್ರತಿ ಸಂಪುಟವು ೬೦೦ ಪುಟಗಳಷ್ಟಿವೆ. ಪ್ರತಿ ಸಂಪುಟದಲ್ಲಿ ಕಾರಂತರು ಜ್ಞಾನಖಂಡವನ್ನು ೧೩ ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಈ ವಿಭಾಗಗಳು ಇಂತಿವೆ. ಪ್ರಕೃತಿ ವಿಜ್ಞಾನ, ನಾಡುಗಳು, ನೆರೆವೀಡುಗಳು, ಸಾಹಿತ್ಯ ಕಲೆ, ಇತಿಹಾಸರಂಗ, ಭೌತವಿಜ್ಞಾನ, ಯಂತ್ರಯುಗ, ವಿಶ್ವಕರ್ಮದ ಸಾಹಸಗಳು, ಜೀವನಚರಿತ್ರೆ, ಉದ್ಯೋಗರಾಜ್ಯ, ಏನು? ಎಂಥದು? ಸಮಾಜ ವಿಜ್ಞಾನ, ಕ್ರೀಡಾವನ, ಎಂಜನಿಯರಿಂಗ್ ಸಾಹಸಗಳು. ಎಲ್ಲ ಲೇಖನಗಳು ಈ ಹದಿಮೂರು ವಿಭಾಗಗಳಲ್ಲಿ ಇದ್ದು ಇದೇ ಕ್ರಮದಲ್ಲಿ ಮೂರು ಸಂಪುಟಗಳಲ್ಲಿ ಬರುತ್ತವೆ. ಪ್ರತಿ ಪುಟಕ್ಕೆ ಒಂದೋ ಎರಡೋ ಚಿತ್ರಗಳು ಇದ್ದೇ ಇವೆ. ಪ್ರಥಮ ಸಂಪುಟವು ೧೯೩೪-೩೫ರಲ್ಲಿ, ದ್ವಿತೀಯ ಸಂಪುಟವು ೧೯೩೫-೩೬ರಲ್ಲಿ, ತೃತೀಯ ಸಂಪುಟವು ೧೯೩೬-೩೭ರಲ್ಲಿ ಪ್ರಕಟವಾಗಿ (ಮೂರು ಸಂಪುಟಗಳ ಒಟ್ಟು ಬೆಲೆ ಕೇವಲ ೩೬ ರೂ.ಗಳು) ಅಪಾರ ಮೆಚ್ಚುಗೆಯನ್ನು ಗಳಿಸಿದವಲ್ಲದೇ ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಪ್ರೇರಣೆ ನೀಡಿದವು. ಇವುಗಳಲ್ಲಿನ ಅರ್ಥ ವಿವರಣೆಗಳು ಓದುಗರ ಮನಮುಟ್ಟಿದವು. ವಿಶಿಷ್ಟ ನಿರೂಪಣಾ ಶೈಲಿ, ಅರ್ಥ ವಿವರಣೆಯಿಂದ ಈ ಸಂಪುಟಗಳು ಮಕ್ಕಳ ಜ್ಞಾನ ತೃಷೆಯನ್ನು ನೀಗಿಸಿದವು. ಈ ಸಂಪುಟಗಳು ಪ್ರಕಟವಾದ ಏಳು ದಶಕಗಳ ನಂತರ ಶ್ರೀಮತಿ ಮಾಲಿನಿ ಮಲ್ಯ ಅವರು ಕೃತಿಕಾರರ (ಡಾ. ಕಾರಂತರ) ಆಶಯಕ್ಕೆ ಗೌರವಕ್ಕೆ ಭಂಗ ಬರದ ರೀತಿಯಲ್ಲಿ ಅವುಗಳನ್ನು ಪರಿಷ್ಕರಿಸಿದರಲ್ಲದೇ ಮರು ಮುದ್ರಣ ಮಾಡಲು ಮುಂದಾದರು. ಇದರ ಫಲವಾಗಿ ಪ್ರಥಮ ಸಂಪುಟದ ದ್ವಿತೀಯ ಪರಿಷ್ಕೃತ ಆವೃತ್ತಿಯು ೨೦೦೨ರಲ್ಲಿ ಪುತ್ತೂರಿನ ವಿವೇಕಾನಂದ ಕಾಲೇಜಿನ ಶಿವರಾಮ ಕಾರಂತ ಅಧ್ಯಯನ ಕೇಂದ್ರದಿಂದ ಪ್ರಕಟವಾಯಿತು. ದ್ವಿತೀಯ ಹಾಗೂ ತೃತೀಯ ಸಂಪುಟದ ಪರಿಷ್ಕೃತ, ಆವೃತ್ತಿಗಳನ್ನು ೨೦೦೭ರಲ್ಲಿ ಸಾಲಿಗ್ರಾಮದ ಡಾ. ಕೆ. ಶಿವರಾಮ ಕಾರಂತರ ಸಂಶೋಧನಾ ಮತ್ತು ಅಧ್ಯಯನ

ಸಂಸ್ಥೆ (ರಿ) ಹೊರತಂದಿದೆ. ಇತ್ತೀಚಿಗೆ ಮೂರೂ ಸಂಪುಟಗಳ ಮೂರನೆಯ ಮುದ್ರಣವನ್ನು ಬೆಂಗಳೂರಿನ ವಸಂತ ಪ್ರಕಾಶನವು ಪ್ರಕಟಿಸಿದೆ.

ಬಾಲಪ್ರಪಂಚಗಳಲ್ಲದೇ ಕನ್ನಡ ಮಕ್ಕಳಿಗೆ ವಿಜ್ಞಾನದಲ್ಲಿನ ಹೊಸ ಸಾಧನೆಗಳನ್ನು ಸಂಶೋಧನೆಗಳನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ಕಾರಂತರು ೧೯೫೯ರಲ್ಲಿ ೫೦೦ ಪುಟ ವಿಸ್ತಾರದ 'ವಿಜ್ಞಾನ ಪ್ರಪಂಚ'ದ ಪ್ರಥಮ ಸಂಪುಟವನ್ನು ಹೊರತಂದರು. ೪ ಸಂಪುಟಗಳಲ್ಲಿ ಅರಳಿದ ಈ ವಿಜ್ಞಾನಕೋಶ ೧೯೮೦ರಲ್ಲಿ ಪುನಃ ಮುದ್ರಣಗೊಂಡು ತಾನಿನ್ನೂ ರೆಲೆವೆಂಟ ಎಂದು ಸಾರಿ ಹೇಳಿತು. ಮೊದಲನೆಯ ಸಂಪುಟದ ಶೀರ್ಷಿಕೆ 'ಈ ಜಗತ್ತು'. ಇದರಲ್ಲಿ ಖಗೋಳ ವಿಜ್ಞಾನ, ಭೂ ವಿಜ್ಞಾನ, ಸಾಗರ ವಿಜ್ಞಾನ, ವಾತಾವರಣ ವಿಜ್ಞಾನ ಈ ವಿಷಯಗಳ ಕುರಿತಾದ ೭೦ ಲೇಖನಗಳು ಹಾಗೂ ३४६ ಚಿತ್ರಗಳಿವೆ. ಎರಡನೆಯ ಸಂಪುಟದ ಶೀರ್ಷಿಕೆ 'ಜೀವ ಜೀವನ' ಆಗಿದ್ದು, ಇದು ಜೀವ ವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಮನಃಶಾಸ್ತ್ರ, ಪ್ರಕೃತಿ ವಿಜ್ಞಾನ ಮುಂತಾದ ವಿಷಯಗಳನ್ನು ಹೊಂದಿದೆ. ಮೂರನೇಯ ಸಂಪುಟ 'ವಸ್ತು ಚೈತನ್ಯ' ಆಗಿದ್ದು, ಇದು ವಿಜ್ಞಾನ ವಿಷಯದ ಭೌತವಿಜ್ಞಾನ, ಸಾಪೇಕ್ಷ ಸಿದ್ಧಾಂತ ಜೀವ ರಸಾಯನ ವಿಜ್ಞಾನ ಮುಂತಾದ ವಿಷಯಗಳ ಕುರಿತಾದ ೬३ ಲೇಖನಗಳನ್ನು ಹಾಗೂ ೫೦೬ ಚಿತ್ರಗಳನ್ನು ಒಳಗೊಂಡಿದೆ. ನಾಲ್ಕನೆಯ ಸಂಪುಟ 'ವಿಜ್ಞಾನ ಸಾಧನ' ಎಂಜಿನ್‌ಗಳು, ವಾಹನಗಳು, ಇಲೆಕ್ಟ್ರಾನಿಕ್ಸ್, ವಿಜ್ಞಾನಿಗಳು ಮುಂತಾದ ವಿಷಯಗಳನ್ನು ಕುರಿತ ಲೇಖನಗಳನ್ನು ಒಳಗೊಂಡಿದೆ. ಕಾರಂತರು ಹೊರತಂದ ಈ ಸಂಪುಟಗಳು ಬೃಹತ್ತು ಮತ್ತು ವಿವಿಧತೆ ಹಾಗೂ ವಿಪುಲತೆಗಳ ದೃಷ್ಟಿಯಿಂದ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಅಪರೂಪವೆನಿಸುವಂತಹವುಗಳಾದವು. 'ಬಾಲ ಪ್ರಪಂಚ' ಹಾಗೂ 'ವಿಜ್ಞಾನ ಪ್ರಪಂಚ' – ಒಟ್ಟು ಅಸಾಧಾರಣ, ಅಸಾಮಾನ್ಯ, ಅಪರೂಪದ ವ್ಯಕ್ತಿಯ, ಧೈರ್ಯದ ಶ್ರಮದ, ಮುಂಧೋರಣೆಯ ಫಲಗಳಾಗಿ ಮೂಡಿ ಬೆಳಗಿದವು.

ಮಕ್ಕಳ ಸಾಹಿತ್ಯದ ಗುಣಮಟ್ಟದ ಬಗೆಗೆ ಕಾರಂತರು ಸದಾ ನಿಶಿತಮತಿಗಳೇ ಆಗಿರುತ್ತಿದ್ದರು, ಯಾರಿಗೇ ಆಗಲಿ ಮುನ್ನುಡಿ ಎಂದು ಬರೆಯುವಾಗ ಹಾರೈಕೆಯ ನುಡಿಗಳನ್ನ ಬರೆಯುವಾಗ ನಿರ್ಭಿಡೆಯಿಂದ ತಮ್ಮ ವಿಚಾರಗಳನ್ನ ವ್ಯಕ್ತಪಡಿಸುತ್ತಲೇ ಬಂದರು. ಮಕ್ಕಳ ಸಾಹಿತ್ಯದ ಕುರಿತ ಅವರ ಚಿಂತನೆಗಳು ಈ ಬಗೆಯ ಬರಹಗಳಲ್ಲಿ ಅಲ್ಲಲ್ಲಿ ಕಾಣಿಸುತ್ತವೆ. ಬೊಳುವಾರರ 'ತಟ್ಟು ಚಪ್ಪಾಳೆ ಪುಟ್ಟ ಮಗು' ಕೃತಿಗೆ ಮುನ್ನುಡಿ ಬರೆಯುತ್ತ 'ಯಾರನ್ನೆಲ್ಲ ಮಕ್ಕಳೆಂದು ಕರೆಯಬೇಕು? ಎಷ್ಟು ಪ್ರಾಯದಿಂದ ಎಷ್ಟು ಪ್ರಾಯದ ತನಕ? ಎಂಬ ವಿವೇಕ ಒಂದಾದರೆ, ಅವರಿಗೆ ಕೊಡಬಲ್ಲ ಅಥವಾ ಅವರನ್ನು ಉದ್ದೇಶಿಸಿ ರಚಿಸಿದ ಸಾಹಿತ್ಯದ ರೂಪ ಯಾವುದು? ಎಂದು ಇನ್ನೊಂದು. ಇವುಗಳಲ್ಲಿ ಇನ್ನೂ ಲಿಪಿ ಸಂಸ್ಕಾರ ಪಡೆಯದ್ದೂ ಇರಬಹುದು; ಪಡೆದುದೂ ಇರಬಹುದು, ಪ್ರಾಥಮಿಕ ವಿದ್ಯಾಭ್ಯಾಸ ಬಹುಮಟ್ಟಿಗೆ ರೂಢಿಗೆ ಬಂದ ಇಂದಿನ ದಿನಗಳಲ್ಲಿ, ನಾವು ಶಾಲಾ ಬಾಲಕ, ಬಾಲಕಿಯರನ್ನು ಗಣನೆಗೆ ತರಲೇಬೇಕಾಗುತ್ತದೆ. ಅಗ ಕಿರಿಯ ಹಿರಿಯ ಪ್ರಾಥಮಿಕ ಶಾಲೆಗಳ ಬಾಲಕ ಬಾಲಕಿಯರನ್ನು ಗಣನೆಗೆ ತಂದುಕೊಳ್ಳಬಹುದು. ಅವರಿಗಾಗಿ ರಚನೆಗೊಂಡ ಸಾಹಿತ್ಯವನ್ನು ಪಾಶ್ಚಾತ್ಯರು 'ಶಿಶು ಗೀತೆಗಳು' ಎಂದು ಕರೆದರು – Nursery Rhymes- ಎಂಬ ಸ್ಪಷ್ಟ ಹೆಸರೇ ತನ್ನ ವಿಧಿ ವಿಧಾನಗಳೆರಡನ್ನೂ ಸೂಚಿಸುತ್ತದೆ. . . . ಮುಂದೆ ಬಾಲಕರ ಹಾಡುಗಳು ಹೇಗಿರಬೇಕೆಂದು ಯೋಚಿಸಿ. ಅವರ ಪಾಲಿನ ಶಬ್ದಕೋಶ ಮಿತ; ಅವರ ಸಂತೋಷದ ಪರಿಸರ ಕೇವಲ ಅವರ ಸುತ್ತಮುತ್ತಲಿನದು.

ಹಾಗಾಗಿ ಅವರ ಗ್ರಹಣಶಕ್ತಿಗೆ ಎಟುಕದ ವಾಸ್ತವಿಕ ಪ್ರಪಂಚ ಆಕರ್ಷಕವಾಗಿ ಕಾಣಿಸುವಂತೆ ಮಾಡಬಲ್ಲ ಹಾಡುಗಳನ್ನು ಒದಗಿಸಿದರೆ ಸಾಲದೇನು? ಮಕ್ಕಳು ಕಲಿಯಲು ಶಾಲೆಗೆ ಹೋಗುತ್ತಾರೆಂದ ಮಾತ್ರಕ್ಕೆ ಮೀಸೆ ಬಂದವರ ಜಗತ್ತಿನ ನೀತಿ ಬೋಧನೆ, ಅಧ್ಯಾತ್ಮವನ್ನಾಗಲಿ ವಿಜ್ಞಾನ ವಿಷಯಗಳ ಅಪರಿಚಿತ ಶಬ್ದಗಳ ಹೊರೆಯನ್ನಾಗಲಿ ತುರುಕಿ, ಅವರನ್ನು ಬುದ್ಧಿವಂತರನ್ನಾಗಿ ಮಾಡುವ ಪ್ರಯತ್ನ ಕೇವಲ ಕಂಠಪಾಠದ ಯಾಂತ್ರಿಕ ಸಾಧನೆ ಆಗಬಹುದೇ ಹೊರತು ಮತ್ತೇನಿಲ್ಲ. ಈ ದೃಷ್ಟಿಯಿಂದ ನಮ್ಮ ಶಾಲಾ ಪಠ್ಯಪುಸ್ತಕಗಳೆಲ್ಲವೂ ಒಂದೇ ಜಾಡು ಹಿಡಿದುವು; ಅವು ತಮ್ಮ ಉಪದೇಶಾಮೃತದಿಂದ ಮಕ್ಕಳನ್ನು ನೀತಿವಂತರನ್ನಾಗಿ ಮಾಡುವ ಛಲವುಳ್ಳವು! ಮಕ್ಕಳು ಸಹ ತಮ್ಮ ಸುತ್ತಣ ಜಗತ್ತಿನ ಠಕ್ಕು ಠೌಳಿಗಳನ್ನು ಕಾಣುತ್ತವೆ ಎಂಬುದನ್ನು ತಿಳಿಯಲೊಲ್ಲದ ಹಿರಿಯರ ಪ್ರಯತ್ನ ಅದು !' ಎಂದೆಲ್ಲ ವಿವರವಾಗಿಯೇ ಚರ್ಚೆಗಿಳಿದಿರುವದನ್ನು ನೋಡಬಹುದು. ಇನ್ನೊಂದೆಡೆಗೆ '...ಕನ್ನಡ ನಾಡಿನಲ್ಲಿ ಯಶಸ್ವಿಯಾಗಿ ಮಾಡಿದ ಮೂವರು ಹಿರಿಯರ ನೆನಪು ನನಗೆ ಬರುತ್ತದೆ. ದಿವಂಗತ ಪಂಜೆ ಮಂಗೇಶರಾಯರು ವಿಪುಲವಾಗಿ ಅಂಥ ಕೆಲಸ ಮಾಡಿದ್ದಾರೆ. . . . ದಿವಂಗತ ರಾಜರತ್ನಂರವರು ಈ ಕೆಲಸ ಮಾಡಿದ್ದಾರೆ. . . . ನನ್ನ ನೆನಪಿನಲ್ಲಿ ಉಳಿದುಕೊಂಡ ಇನ್ನೊಬ್ಬ ಅಂಥ ವ್ಯಕ್ತಿ ದಿವಂಗತ ಹೊಯ್ಸಳ ಎಂದಿದ್ದಾರೆ. (ಟಿ.ಎಸ್. ನಾಗರಾಜಶೆಟ್ಟರ 'ಸಕ್ಕರೆ ಬೊಂಬೆ' ಸಂಕಲನದ ಮುನ್ನುಡಿ). ೧೯೧೩ರಲ್ಲಿ ಅವರು ಉಪ್ಪಿನಂಗಡಿಯಲ್ಲಿ ಪ್ರಪ್ರಥಮವಾಗಿ 'ಮಕ್ಕಳಕೂಟ' ಎಂಬ ಸಂಸ್ಥೆಯನ್ನು ಕಟ್ಟಿ ಮಕ್ಕಳ ಕುತೂಹಲ ಆಸಕ್ತಿ ಪ್ರತಿಭೆಗಳ ಮುಕ್ತ ಪ್ರದರ್ಶನಕ್ಕೆ ಅವಕಾಶ ಒದಗಿಸಿದರು. ಅನೇಕ ಮಕ್ಕಳ ನಾಟಕಗಳನ್ನು ಬರೆದು ಮಕ್ಕಳಿಂದ ಪ್ರದರ್ಶಿಸಿದರು. ಕ್ರಿ. ಶ. ೧೯೩೦ರಷ್ಟು ಪೂರ್ವದಲ್ಲಿಯೇ ಮಂಗಳೂರು, ಪುತ್ತೂರು, ಉಡುಪಿ, ಕಾರ್ಕಳ ಮುಂತಾದ ತಾಲೂಕಿನಲ್ಲಿಯ ಎಲ್ಲ ಪ್ರಾಥಮಿಕ ಶಾಲೆಗಳನ್ನು ಸಂದರ್ಶಿಸಿ ಆ ಶಾಲೆಯ ಸ್ಥಿತಿಗತಿ, ಶಿಕ್ಷಣ ಸ್ವರೂಪ, ಹಳ್ಳಿಯ ಶಾಲೆಗಳು ಮತ್ತು ಅಲ್ಲಿನ ವಿದ್ಯಾರ್ಥಿಗಳು ಎದುರಿಸಬೇಕಾಗಿದ್ದ ಸಮಸ್ಯೆಗಳ ಬಗ್ಗೆ ವಿವರವಾದ ಲೇಖನಗಳನ್ನು 'ನಮ್ಮ ಶಾಲೆಗಳು' ಲೇಖನ ಮಾಲೆಯಡಿ 'ಸ್ವದೇಶಾಭಿಮಾನಿ' ಪತ್ರಿಕೆ ಮೂಲಕ ಪ್ರಕಟಿಸಿದರು.

ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ ಮದ್ರಾಸು, ಬಾಂಬೆ, ಮೈಸೂರು, ಹೈದರಾಬಾದ ಮುಂತಾಗಿ ಹಂಚಿಹೋಗಿದ್ದ ನಾಡಿನಲ್ಲಿ ಈ ಪ್ರಯತ್ನಗಳು ಪ್ರತ್ಯೇಕವಾಗಿಯೇ ನಡೆದುವು ಎನ್ನುವುದು. ನಿಧಾನ ಪರಸ್ಪರ ಇವುಗಳ ಪ್ರಭಾವ ಪರಿಣಾಮಗಳು ಒಂದರಮೇಲೊಂದು ಆಗುತ್ತ ಬಂತು. ಹಾಗಾಗಿ ಈ ಮೊದಲ ದಿನಗಳ ಮಕ್ಕಳ ಸಾಹಿತ್ಯವನ್ನ ನೋಡುವಾಗ ಪ್ರತ್ಯೇಕತೆಯೂ ಗಣನೆಗೆ ಬರುತ್ತದೆ.

ಪ್ರಬುದ್ಧರಿಗಾಗಿ ಇದ್ದಂತೆ ಬರಹದ ಪರಂಪರೆಯೇ ಮಕ್ಕಳ ಸಂದರ್ಭದಲ್ಲಿ ಇಲ್ಲದ್ದರಿಂದ ಜನಪದದ ವಾಕ್ಪರಂಪರೆಯ ಮಾದರಿಗಳಿಗೆ ಆ ಕೂಡಲೆ ಹೊರಳಿರುವ ಸಾಧ್ಯತೆ ಕಂಡಿದೆ ಎನಿಸುತ್ತದೆ. ಹಳ್ಳಿಗಾಡಿನಲ್ಲಿ ಆಗಲೆ ಕಥಾಪ್ರಪಂಚ ವಿಪುಲವಾಗಿ ಹಬ್ಬಿದುದಾಗಿದ್ದುದೂ, ಅಜ್ಜಿ ಮೊದಲಾಗಿ ನಮ್ಮ ಮಕ್ಕಳಿಗೆ ಹಿರಿಯರು ಹೇಳಲು ಆಶ್ರಿಯಿಸಿಕೊಂಡ ಸಾಮಗ್ರಿ ಇದೇ ಆಗಿತ್ತು ಎನ್ನುವುದನ್ನ ಗಮನಿಸಬಹುದು. (ಮನೆಯಲ್ಲಿಯ, ಹಾಗೆಯೇ ಸುತ್ತಲಿನ ವಿಭಿನ್ನ ವಯೋವರ್ಗದ ಮಕ್ಕಳ ನಡುವೆ ಕತೆ ಹೇಳುತ್ತಿದ್ದ ವಕ್ತೃಗಳು ಹೇಗೆ ಕತೆಯನ್ನ ರೂಪಿಸಿಕೊಳ್ಳುತ್ತಿದ್ದರು ಎನ್ನುವುದರ ಸಂಗತಿಗಳನ್ನ ಗಣಿಸುವುದು ಕೂಡ ಮಹತ್ವದ ಸಂಗತಿಯೇ ಎನಿಸುತ್ತದೆ. ಅದರಲ್ಲೂ ಗ್ರಾಮೀಣ

ಮಕ್ಕಳು ಆದಷ್ಟೂ ಸ್ವಚ್ಛಂದದ ವಾತಾವರಣಕ್ಕೆ ಒಗ್ಗಿಕೊಂಡವರಾಗಿದ್ದು, ದೊಡ್ಡವರ ಎಷ್ಟೋ ಸಂಗತಿಗಳಿಗೆ ತೆರೆದುಕೊಂಡೇ ಇದ್ದರು ಎನ್ನುವುದನ್ನ ಗಮನಿಸಬೇಕು). ಹೀಗೆ ಜನಪದ ವಾಕ್ಪರಂಪರೆಯಿಂದ ಬರಹಕ್ಕೆ ಕಥಾ ಜಗತ್ತನ್ನು ತರುವಾಗ ಈ ಲೇಖಕರು ಒಂದಿಷ್ಟು ಮುತವರ್ಜಿ ವಹಿಸಿದರು ಎನ್ನಬಹುದು. ಅವರು ಮಕ್ಕಳ ವಯೋಮಾನ, ಅವರ ಗ್ರಹಿಕೆಯ ಸಂಗತಿಗಳು, ಅವರಿಗೆ ನಿಲುಕಿಸಬೇಕಾದ ತಮ್ಮವೇ ಆದ ಗ್ರಹಿಕೆಯಲ್ಲಿ ಊಹಿಸಿಕೊಂಡ ಮಿತಿಗಳಲ್ಲಿನ ಸಂಗತಿಗಳು, ಅನೇಕ ಸಲ ಶಾಲಾವಾತಾವರಣ ನಿರ್ಮಿಸಿದ ಮಿತಿಗಳು, ಭಾಷಾ ಕಲಿಕೆಯ ಸಂಗತಿಯಾಗಿ ರೂಪಿಸಿಕೊಂಡುದು ಮುಂತಾಗಿ ಹಲವಾರು ಬಗೆಯಲ್ಲಿ ಈಗಾಗಲೇ ಇದ್ದ ಸಾಮಗ್ರಿಯನ್ನ ಬೇಕಾದ ಪಾಕವಾಗಿ ಸಿದ್ಧಗೊಳಿಸುವ ಪ್ರಕ್ರಿಯೆಯಲ್ಲಿ ತೊಡಗಿದರು ಎನ್ನಬಹುದು. ಹಾಗಾಗಿ ಶಿಕ್ಷಕ ವೃತ್ತಿಯಲ್ಲಿ ಇದ್ದವರು, ಹಾಗೆಯೇ ಅದರಾಚೆ ಇದ್ದವರು ಅಷ್ಟಿಷ್ಟು ವೈವಿಧ್ಯದಲ್ಲಿ ಕಾಣಸಿಗುತ್ತಾರೆ.

ಪದ್ಯಲೋಕವಂತೂ ಹೊಸಗನ್ನಡದ ಕಾವ್ಯದ ಬದಿಯಲ್ಲಿಯೇ ತನ್ನದೇ ಹೊರಳನ್ನು ಪಡೆಯುವ ಸಾಧ್ಯತೆಗಳನ್ನ ತೋರಿಸಿತು ಎಂದರೆ ತಪ್ಪಾಗದು. ಇಂಥಲ್ಲಿ ಹಳ್ಳಿಗಾಡಿನ ಮಕ್ಕಳ ನಡುವೆ ಇದ್ದ ತುಣುಕು ತುಣುಕು ಸಾಲುಗಳು, ಆಟದ ಸಂಸರ್ಗದಲ್ಲಿದ್ದ ರಚನೆಗಳು ಮುಂತಾದುವನ್ನು ಒಂದಿಷ್ಟು ಗಣಿಸಿದುದನ್ನ ನೋಡುತ್ತೇವೆ. ಇಂಗ್ಲಿಷಿನ ಮಾದರಿಗಳು ಧಾಳಾಗಿ ಮುಂದೆ ಇದ್ದೇ ಇದ್ದುವು.

ಗದ್ಯ ಸಾಹಿತ್ಯ

ಇಂದಿನ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಭಾಗವು ಮದ್ರಾಸ ಪ್ರಾಂತ್ಯದ ಆಡಳಿತಕ್ಕೆ ಒಳಗಾಗಿತ್ತು. ಇಲ್ಲಿ ಕ್ರಿಶ್ಚಿಯನ್ ಮಿಷನರಿಗಳ ಪ್ರಯತ್ನದಿಂದ ಶುರುವಾದ ಶಾಲಾ ವ್ಯವಸ್ಥೆ, ಮುದ್ರಣದ ಸೌಲಭ್ಯಗಳು ಸಾಕಷ್ಟು ದಾರಿಮಾಡಿಕೊಟ್ಟವು. ಈ ಸಂದರ್ಭದಲ್ಲಿ ಬಹು ಮುಖ್ಯವಾಗಿ ಶಾಲಾ ವ್ಯವಸ್ಥೆಯ ಭಾಗವಾಗಿಯೇ ತೊಡಗಿಕೊಂಡ ಅನೇಕ ಲೇಖಕರು ಏನೆಲ್ಲ ಆಸಕ್ತಿಯಿಂದ, ತುಡಿತದಿಂದ, ತಯಾರಿಯಿಂದ ತೊಡಗಿಕೊಂಡರು ಎನ್ನುವುದು ಅಚ್ಚರಿಯ ಸಂಗತಿ. ಇವರಲ್ಲಿ ಬಹಳಷ್ಟೆಲ್ಲ ಮಧ್ಯಮ ವರ್ಗಕ್ಕೆ ಸೇರಿದವರಾಗಿ ಬಡತನದಲ್ಲಿಯೇ ಅಷ್ಟಿಷ್ಟು ಸಾಧ್ಯಮಾಡಿಕೊಂಡು ವಿದ್ವತ್ತನ್ನ ಗಳಿಸಿಕೊಂಡವರು. ಅದರಲ್ಲೂ ಇವರೆಲ್ಲರ ಹಸಿವು ಎಷ್ಟೆಲ್ಲ ಇತ್ತು ಎಂದರೆ ಕನ್ನಡ, ಸಂಸ್ಕೃತ, ಇಂಗ್ಲಿಷು ಮೂರೂ ಭಾಷೆಗಳಲ್ಲೂ ಶ್ರದ್ಧೆಯಿಂದ ಅಧ್ಯಯನಗೈಯ್ಯುವ ಮನಸ್ಸುಗಳು ಕಾಣುವುದು. ಅದರಲ್ಲೂ ಇವರಲ್ಲಿ ಕೊಂಕಣಿ ಭಾಷೆಯುಳ್ಳವರು, ತುಳು ಮಾತೃಭಾಷೆಯುಳ್ಳವರಾಗಿದ್ದೂ ಕನ್ನಡದ ಕೆಲಸವನ್ನ ತಮ್ಮದೆಂದು ಶ್ರದ್ಧೆಯಿಂದ ಮಾಡಿದವರು. ಶಾಲೆ, ವಿದ್ಯಾರ್ಥಿಗಳು ಎಂದರೆ ಎಷ್ಟೆಲ್ಲ ಪವಿತ್ರ ಕೆಲಸವೆಂದು ಇವರು ಭಾವಿಸಿದರು, ಹಾಗೆಯೇ ಎಷ್ಟೆಲ್ಲ ಪ್ರಗತಿದಾಯಕವಾದ ವಿಚಾರಗಳಿಂದ ಹೆಜ್ಜೆ ಹಾಕಿದರು. ಇದೆಲ್ಲದರ ಪರಿಣಾಮ ಮಕ್ಕಳಿಗಾಗಿ ಎಂದು ತೊಡಗಿಕೊಂಡ ಬರವಣಿಗೆಯಲ್ಲಿ ಧಾಳಾಗಿಯೇ ಕಾಣುತ್ತದೆ.

ಪಂಜೆ ಮಂಗೇಶರಾಯರನ್ನ ಮಕ್ಕಳ ಸಾಹಿತ್ಯದ ಪಿತಾಮಹರು, ಆದ್ಯರು ಅಂತೆಲ್ಲ ಕರೆಯುವ ವಾಡಿಕೆ ಇದೆ. ಆ ಸಮಯದಲ್ಲಿ ಹಲವಾರು ಕಡೆಗಳಲ್ಲಿ ಪ್ರಯತ್ನಗಳು ನಡೆದುದು, ಪಂಜೆಯವರಿಗಿಂತ ಮೊದಲಿಗೇ ಒಂದಿಷ್ಟೆಲ್ಲ ಪ್ರಯತ್ನ ಪಟ್ಟುದೆಲ್ಲ ಉಂಟೇ ಉಂಟು. ಹಾಗಿದ್ದರೂ ಪಂಜೆಯವರ ಹೆಸರನ್ನ ಮುಂಚೂಣಿಯಲ್ಲಿ ಕಾಣುವುದಕ್ಕೆ ಕಾರಣಗಳುಂಟು. ಮಕ್ಕಳ ಲೋಕಕ್ಕಾಗಿ

ಬಲು ದೊಡ್ಡ ಪ್ರಮಾಣದಲ್ಲಿ ತೊಡಗಿಕೊಂಡವರು, ಮಕ್ಕಳ ಲೋಕದೊಡನೆ ನಿರಂತರವಾಗಿ ಸಾಹಚರ್ಯ ಹೊಂದಿದವರು, ಮಕ್ಕಳಿಗಾಗಿನ ಬರವಣಿಗೆಯಲ್ಲಿ ವಿಶೇಷ ಆಸ್ಥೆಯಿಂದಲೇ ತೊಡಗಿಕೊಂಡವರು ಅವರು. ಅಷ್ಟೇ ಅಲ್ಲ, ಸಾಧ್ಯವಾದಷ್ಟೂ ವ್ಯವಸ್ಥಿತವಾಗಿಯೇ ತೊಡಗಿಕೊಂಡವರು ಅವರು. ಅವರ ಸಮಕಾಲೀನರಲ್ಲಿ ಅವರ ಈ ಪ್ರಯತ್ನಗಳು ಎದ್ದುಕಾಣುವಂತಿದ್ದುದನ್ನು ತಳ್ಳಿಹಾಕಲಾಗದು.

'ನಮ್ಮಲ್ಲಿ ಈವರೆಗೆ ಪ್ರಕಟವಾಗಿರುವ ಸೃಜನಾತ್ಮಕ ಶಿಶುಸಾಹಿತ್ಯವನ್ನು ಗಮನಿಸಿದಾಗ ಅದರಲ್ಲಿ ಎರಡು ರೀತಿಯ ಬರವಣಿಗೆ ಸ್ಪಷ್ಟವಾಗಿ ಕಾಣುತ್ತದೆ. ಪಂಜೆ, ಕುವೆಂಪು, ರಾಜರತ್ನಂ ಮೊದಲಾಗಿ ನಮ್ಮ ಹಿರಿಯ ಸಾಹಿತಿಗಳು ಮಕ್ಕಳಿಗಾಗಿಯೂ ಬರೆದಿದ್ದಾರೆ. ಇಂಥವರ ಬರವಣಿಗೆಯಲ್ಲಿ ವಿಶೇಷವಾಗಿ ಕಾಣುವ ಪ್ರತಿಭಾ ಪ್ರಕಾಶ, ಅವರ ಸೃಜನ ಶಕ್ತಿಯ ಸಹಜ ಧರ್ಮದ ಪರಿಣಾಮವಾಗಿದೆ. ಅವರ ಇತರ ಕೃತಿಗಳಲ್ಲಿ ಕಾಣುವ ಮಿಂಚು ಅವರ ಮಕ್ಕಳ ಸಾಹಿತ್ಯದಲ್ಲೂ ಕಾಣುತ್ತದೆ. ಮಕ್ಕಳ ಸಾಹಿತ್ಯದ ಇನ್ನೊಂದು ಬಗೆಯನ್ನು ಮಕ್ಕಳ ಸಾಹಿತ್ಯದ ಬಗ್ಗೆ ವಿಶೇಷ ಆಸಕ್ತಿ ಹೊಂದಿರುವ, ತಮ್ಮನ್ನು ಅಂಥ ರಚನೆಗೇ ಸಂಪೂರ್ಣವಾಗಿ ತೊಡಗಿಸಿಕೊಂಡ ಲೇಖಕರು(ಇಂಥವರು ಹೆಚ್ಚಾಗಿ ಅಧ್ಯಾಪಕರು) ಬೆಳೆಸಿದ್ದಾರೆ. ಬಿ.ಎಸ್. ಪಾಂಡುರಂಗರಾವ್, ಅಣ್ಣಾರಾಯ ಸಾಲಿಮನಿ, ಸಿಸು ಸಂಗಮೇಶ ಮೊದಲಾದವರು ಈ ಬಗೆಯ ಲೇಖಕರು. ನಿರ್ದಿಷ್ಟವಾದ, ಸರಳವಾದ ಚೊಕ್ಕತನ ಮತ್ತು ಚೆಲುವಿನ ಅರಕೆ ಇರುವುದಿಲ್ಲ. ಶಿಶು ಸಾಹಿತ್ಯವನ್ನು ಸಮೃದ್ಧಗೊಳಿಸುವಲ್ಲಿ ಇವರ ಪಾತ್ರ ಹಿರಿದಾದದ್ದು ಕೂಡ. ಕಾರಣ, ಇದಿಲ್ಲದೆ ಬೇರೆ ಇಲ್ಲ, ಎಂಬಂತೆ ಇವರು ಮಕ್ಕಳ ಸಾಹಿತ್ಯಕ್ಕೆ ತಮ್ಮನ್ನು ಮುಡುಪು ಮಾಡಿಕೊಂಡು ವೀರನಿಷ್ಠೆಯಿಂದ ಅದಕ್ಕಾಗಿ ದುಡಿಯುತ್ತಿರುತ್ತಾರೆ.' ಎಂದಿರುವ ಡಾ.ಎಚ್.ಎಸ್. ವೆಂಕಟೇಶಮೂರ್ತಿ ಅವರ ಅಭಿಪ್ರಾಯವನ್ನ ನೋಡಬಹುದು.

ಪಂಜೆ ಮಂಗೇಶರಾಯರ ಆರಂಭಿಕ ಯಶಸ್ಸು

ಪಂಜೆಯವರು ಮಕ್ಕಳಿಗಾಗಿನ ಸೃಜನಶೀಲ ಬರವಣಿಗೆಗಾಗಿ ಎಷ್ಟೆಲ್ಲ ತುಡಿದರು ಎನ್ನುವುದಕ್ಕೆ ಅವರು ಅದರ ಸ್ವರೂಪದ ಬಗೆಗೆ ಕೆಲವೆಲ್ಲ ನಿಖರತೆಗಳ ಬಗಗೆ ಚಿಂತಿಸಿದುದನ್ನ ನೋಡಬಹುದು. ಅವರ ೧೯೩೩ರ ಹೈದ್ರಾಬಾದಿನ ನಾಡಹಬ್ಬದ ಭಾಷಣದಲ್ಲಿ ಅವರು ಮಕ್ಕಳ ಸಾಹಿತ್ಯದ ಲಕ್ಷಣವಾಗಿ ಎಂಟು ಸಂಗತಿಗಳನ್ನ ಪಟ್ಟಿ ಮಾಡಿದುದು ಹೀಗೆ:

೧. ಮಕ್ಕಳಿಗಾಗಿ ಬರೆಯುವ ಕಥೆ/ಪದ್ಯಗಳ ವಸ್ತು ವಿಷಯಗಳು ಮಕ್ಕಳ ಪ್ರಪಂಚಕ್ಕೆ ಒಳಪಟ್ಟಿರಬೇಕು... ಅವರಿಗೆ ಪರಿಚಿತವಾಗಿರುವ, ಅವರ ಇಂದ್ರಿಯಗಳಿಗೆ ಎಟಕುವ ವಿಷಯಗಳಾಗಿರಬೇಕು.

೨. ಮಕ್ಕಳ ಸಾಹಿತ್ಯದಲ್ಲಿ ಒಂದಿಷ್ಟು ಅದ್ಭುತ ರಸವಿದ್ದರೆ ಅವರ ಕಲ್ಪನಾ ಶಕ್ತಿಗೆ ಪ್ರಚೋದನೆಸಿಕ್ಕುತ್ತದೆ.

೩. ಮಕ್ಕಳ ಸಾಹಿತ್ಯದಲ್ಲಿ ಧರ್ಮಬೋಧನೆ, ನೀತಿಬೋಧನೆ ವಾಚ್ಯವಾಗಿರಬಾರದು, ಅರ್ಥಾತ್ ನೀತಿ ಹೇಳುವ ಸಲುವಾಗಿಯೇ ಕಥೆ ಅಥವಾ ಕವಿತೆಯನ್ನು ರಚಿಸಿದಂತೆ ಇರಬಾರದು.

೪. ಮಕ್ಕಳ ಸಾಹಿತ್ಯದ ಭಾಷೆ ಸುಲಭ ಹಾಗೂ ಸರಳವಾಗಿರಬೇಕು. ಶಬ್ದಗಳು ಮನೆಯಲ್ಲಿ ಬಳಸುವಂಥದಾಗಿರಬೇಕು; ವಾಕ್ಯಗಳು ದೀರ್ಘವಾಗಿರದೆ, ಸಾಕಷ್ಟು ಚಿಕ್ಕದಾಗಿರಬೇಕು.

೫. ಮಕ್ಕಳ ಕಥೆಗಳಲ್ಲಿ ನಿರೂಪಣೆಗಿಂತ ಸಂಭಾಷಣೆ ಹೆಚ್ಚಿದ್ದರೆ ಒಳ್ಳೆಯದು.

೬. ಪುನರುಕ್ತಿ ಮಕ್ಕಳಿಗೆ ಇಷ್ಟವಾಗುತ್ತದೆ. ಇದರಿಂದಾಗಿ ಅವರು ಭಾಷೆಯನ್ನು ರೂಢಿಸಿಕೊಳ್ಳಲೂ ಸಹಾಯಕವಾಗುತ್ತದೆ.

೭. ಮಕ್ಕಳ ಸಾಹಿತ್ಯದಲ್ಲಿ ಅಶ್ಲೀಲ, ಅಸಹ್ಯತೆಗಳಿಗೆ ಅವಕಾಶವಿರಬಾರದು.

೮. ಮಕ್ಕಳ ಸಾಹಿತ್ಯ ಕೃತಿಗಳನ್ನು ದೊಡ್ಡ ಅಕ್ಷರಗಳಲ್ಲಿ ಅಂದವಾಗಿ ಸಚಿತ್ರವಾಗಿ ಮುದ್ರಿಸಬೇಕು.

'ಬಾಲ ಸಾಹಿತ್ಯ – ಈ ಪದವು ಕನ್ನಡದಲ್ಲಿ ತೀರ ಹೊಸದು. ಅದು ಹುಟ್ಟಿ ಇನ್ನೂ ಹದಿನೈದು ವರ್ಷಗಳಾಗಿಲ್ಲ...' ಅಂತಲೇ ಅವರು ಹೇಳಿರುವುದನ್ನು ಗಮನಿಸಬೇಕು. ೧೯೨೧ರಲ್ಲಿ ಮಂಗಳೂರಿನಲ್ಲಿ 'ಬಾಲಸಾಹಿತ್ಯ ಮಂಡಲ' ಎಂದು ಹೆಸರಿಟ್ಟು ಸಂಸ್ಥೆಯನ್ನು ಹುಟ್ಟು ಹಾಕಿದುದನ್ನು ಇಲ್ಲಿ ಸ್ಮರಿಸಬಹುದು. ಅವರ ರಾಯಚೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣವು ಕೂಡ ಮಕ್ಕಳ ಲೋಕದ ಕಡೆಗೆ ಸದೈವ ಗಮನ ಹರಿಸಿತ್ತು. ಆ ಸಮಯದಲ್ಲಿ ಅವರು ಮಾತನಾಡುತ್ತ ಪ್ರಾಥಮಿಕ ಶಾಲೆಗಳಲ್ಲಿ ಬಳಕೆಯಾಗುವ ಶಬ್ದಗಳು ೧೦೦೦ಕ್ಕಿಂತ ಮೇಲ್ಪಟ್ಟಿರುವುದಿಲ್ಲ. ಇವುಗಳಲ್ಲಿ ಮಕ್ಕಳಿಗೆ ಅವಶ್ಯಕವಾದ ೪೦೦ ಶಬ್ದಗಳನ್ನ ಈಗ ರೂಪಾಂತರಿಸಿ ಬರೆಯುವುದುಂಟು.. ಇದಕ್ಕಾಗಿ ನಿಷ್ಕರ್ಷೆಯಿಂದ ನಿರ್ಧರಿಸಲ್ಪಟ್ಟ ಶಬ್ದಗಳ ಪಟ್ಟಿಯನ್ನು ತಯಾರು ಮಾಡಿ ಅಚ್ಚು ಹಾಕಿಸಿ ಅದನ್ನು ಉಪಾಧ್ಯಾಯರೂ, ಮಕ್ಕಳೂ ಲಕ್ಷಿಸುವಂತೆ ಪ್ರತಿಯೊಂದು ಶಾಲೆಗೂ ವಿದ್ಯಾ ಇಲಾಖೆ ತಲಪಿಸಬೇಕು ಎಂದಿದ್ದರು. ಅಧ್ಯಾಪಕರುಗಳು ತಮ್ಮ ಕೈದೀವಟಿಗೆಗಳನ್ನು ಸಾಹಿತ್ಯಾಗ್ನಿಯಿಂದ ಹೊತ್ತಿಸಿಬಿಟ್ಟರೆ ಪ್ರತಿಯೊಂದು ಗ್ರಾಮಶಾಲೆ ಒಂದು ಪರಿಷನ್ಮಂದಿರವಾಗಿ ಅಲ್ಲಿಯ ಮಕ್ಕಳ ಕೂಟ ಸಾಹಿತ್ಯ ಸಭೆಯಾಗಿ ಬೆಳವಣಿಗೆ ಕಾಣಲಿದೆ ಎಂದಿದ್ದರು.

ಇಂದಿನ ವಿಚಾರಧಾರೆಯಲ್ಲಿ ಪಡೆಯುತ್ತಿರುವ ಸ್ವರೂಪ ಈ ಸಂಗತಿಗಳಿಂದ ಹಲವಾರು ಬಗೆಯಲ್ಲಿ ಕ್ರಮಿಸಿ ಬಂದಿದೆಯಾದರೂ ಅಂದಿನ ಸಂದರ್ಭದಲ್ಲಿ ಕ್ರಿಯಾತ್ಮಕವಾಗಿ, ನಿರ್ದಿಷ್ಟವಾಗಿ ತೊಡಗಿಕೊಂಡುದನ್ನ ಈ ಬಗೆಯ ಲಾಕ್ಷಣೀಕರಣ, ಕಾಳಜಿ ಹೇಳುತ್ತದೆ ಎನ್ನುವುದನ್ನ ಮರೆಯಲಾಗದು. ಪ್ರಾರಂಭದ ಹೆಜ್ಜೆಗಳಲ್ಲಿ ಈ ಬಗೆಯ ಸ್ಪಷ್ಟತೆ ಕಂಡಿರಲಿಲ್ಲ. ನೀತಿ ಹೇಳುವುದನ್ನ ಪ್ರಕಟವಾಗಿಯೇ ಒಪ್ಪಿಕೊಂಡುದಿತ್ತು. ಕೆಲವರು ಹಾಗೂ ಹೀಗೂ ಒಡ್ಡಿಕೊಂಡಿದ್ದರು. ಪಂಜೆಯವರು ಮೊದಲಿನಿಂದಲೂ ನೀತಿ ಹೇಳುವ ವಿಷಯದಲ್ಲಿ ನೇರ ಹೇಳುವಿಕೆಯನ್ನ ನಿರಾಕರಿಸಿದ್ದರು. ಅಲ್ಲದೆ ಧರ್ಮದ ಸಂಗತಿಗಳನ್ನ ವಾಚ್ಯವಾಗಿಸಬಾರದು ಎನ್ನುವುದನ್ನೂ ಅವರು ಹೇಳುತ್ತಾರೆ. ಬೋಧನೆಯನ್ನ ತಳ್ಳಿಹಾಕುವುದಿಲ್ಲವಾದರೂ ಅದನ್ನ ನೇರ ಉಪದೇಶಕ್ಕಿಳಿಯುವುದನ್ನ ಬದಿಗಿರಿಸುತ್ತಾರೆ. ಎಮ್.ಎಸ್. ಪುಟ್ಟಣ್ಣನವರ ನೀತಿ ಚಿಂತಾಮಣಿಯಿಂದ ಈ ನಿರ್ಧಾರಗಳು ಖಂಡಿತವಾಗಿಯೂ ಬೇರೆಯಾಗಿ ನಿಂತವು. ಕತೆಯ ವಸ್ತುವಿನ ಕುರಿತು ಅವರೇನೂ ವಿಶೇಷವಾದ ಸೂಚನೆಗಳನ್ನ ನೀಡಿಲ್ಲವಾದರೂ ಅವರವೇ ಸಂಗ್ರಹಗಳನ್ನ ನೋಡಿದರೆ ಹಳ್ಳಿಗಾಡಿನ ಕತೆಗಳನ್ನ, ಆದಷ್ಟೂ ಚಿಕ್ಕವಾದವುಗಳನ್ನ, ಮಕ್ಕಳನ್ನ ಮುದಗೊಳಿಸುವ ರಂಜನೆ ಉಳ್ಳವುಗಳನ್ನ, ಪುನರುಕ್ತಿಯಂಥ ಆಶಯಗಳಿರುವುಗಳನ್ನ ಆಯ್ಕೆಮಾಡಿಕೊಂಡಿರುವುದು ಕಾಣುತ್ತದೆ. ದೊಡ್ಡವರ ಕಥಾ ಜಗತ್ತಿನ ಮೊದಲ ಪ್ರಯತ್ನಗಳಲ್ಲಿಯೂ ಪಂಜೆಯವರ ಕೈ ಇರುವುದನ್ನ ಇಲ್ಲಿ ಹೇಳಲೇಬೇಕು.

ಅವರು ಆಯ್ದುಕೊಂಡ ಕತೆಗಳಲ್ಲಿ ನೀತಿಯೆನ್ನುವುದು ಉದ್ದೇಶವಾಗಿ ಇರಲೇ ಇಲ್ಲವೆನ್ನುವುದು ಅವರ ಕತೆಗಳಿಂದ ಸುವ್ಯಕ್ತವಾಗುತ್ತದೆ. ಇಲ್ಲಿನ ಕತೆಗಳು ಹೆಚ್ಚಾಗಿ ಹಳ್ಳಿಗಾಡಿನಲ್ಲಿ ಆಗಲೆ ಪ್ರಚುರವಾಗಿದ್ದುವೇ, ಕೆಲವನ್ನೆಲ್ಲ ಅವರು ಬೇರೆ ಮೂಲದಿಂದಲೂ ಪಡೆದುಕೊಂಡಿದ್ದಾರೆ. 'ಮೂರು ಕರಡಿಗಳು' ಕತೆ ಜಗತ್ತಿನಲ್ಲಿ ಹೆಚ್ಚು ಪ್ರುಚುರಗೊಂಡಿರುವ ರಷಿಯನ್ ಮೂಲದ ಕತೆ. ಎಲ್ಲ ಕತೆಗಳಲ್ಲೂ ಮೋಜು, ಪುನರುಕ್ತಿಯ, ಮಾತುಗಳು, ಜಾಣತನಗಳು ತುಂಬಿಕೊಂಡಿವೆ. ಚಿಕ್ಕಮಕ್ಕಳಿಗೆ ಬಲು ಸೊಗಸಾಗಿ ಮುಟ್ಟಬಲ್ಲಂಥವು. ಇವಾವುವೂ ಪಾಠವಾಗಿ ಬಳಕೆಯಾಗುವಂಥವಲ್ಲವಾದುದರಿಂದ ಮಕ್ಕಳ ಮನವನ್ನ ಸಂತಸದಿಂದ ಅರಳಿಸುವ ನಿಖರತೆಯನ್ನೇ ಹೊಂದಿದಂಥವು. ಸುಖಾಂತ್ಯವೂ ಕೆಲ ಕತೆಗಳಲ್ಲಿ ಕಂಡಿದೆ, ಆದರೆ ಇಲ್ಲಿ ನಿಗದಿತ ಸಂಗತಿಯಾಗಿಲ್ಲ. ವ್ಯಾವಹಾರಿಕ ಜಾಣತನ, ಉಪಾಯಗಳು, ಚುರುಕುತನಗಳು ಎದ್ದುಕಾಣುತ್ತವೆ. ನಿರೂಪಣೆಯಲ್ಲಿ ಕೆಲವೆಲ್ಲ ವಿವರಗಳು ಬಂದರೂ ಅವು ಮಕ್ಕಳಿಗೆ ಸಂದರ್ಭವನ್ನು ಚಿತ್ರವತ್ತಾಗಿ ಹಿಡಿದುಕೊಡುವಲ್ಲಿ ರಮಿಸುತ್ತವೆ, ಕಲಿಕೆಯ ಉದ್ದೇಶ ಮುನ್ನೆಲೆಗೆ ನಿಲ್ಲುವುದಿಲ್ಲ. ಉದಾಹರಣೆಗೆ 'ಅರ್ಗಣೆ ಮುದ್ದು' ಕತೆಯಲ್ಲಿ ಕುಂಬಾರನು ಹೇಂಟೆಯನ್ನ ಜಾತ್ರೆಗೆ ತೆಗೆದು ಹೋಗುವಾಗಿನ ಸಂದರ್ಭ ಚಿತ್ರಿಸುತ್ತ . . .

'ಕುಂಬಾರನು ಜಾತ್ರೆಗೆ ಹೊರಟನು. ತಲೆಗೆ ವಲ್ಲಿ, ಕಾಲಿಗೆ ಮೆಟ್ಟು, ಹೆಗಲ ಮೇಲೆ ಎಲವಸ್ತ್ರ, ಎಲವಸ್ತ್ರದ ಕೊನೆಯಲ್ಲಿ ಬೀಗದ ಕೈ, ಬಾಯಿತುಂಬ ವೀಳ್ಯ, ತೋಳು ತುಂಬ ಹುಂಜ ಈ ಪ್ರಕಾರವಾಗಿ ಕುಂಬಾರನು ಜಾತ್ರೆಗೆ ಹೊರಟನು.'

ಸಾಂಸ್ಕೃತಿಕ ಪರಿಸರದ ಸಮೃದ್ಧತೆಯನ್ನ ತುಂಬಿಕೊಳ್ಳುತ್ತಲೇ ಆದಷ್ಟೂ ಸರಳ ಭಾಷೆಯಲ್ಲಿ ಗದ್ಯವಾಗಿ ಕತೆಗಳ ನಿರೂಪಣೆ ನಡೆಯುತ್ತದೆ. ಇವೇ ಕತೆಗಳನ್ನ ತೋಂಡಿ ಸಂಪ್ರದಾಯದಲ್ಲಿ ನಾವು ಇಲ್ಲಿನ ಹಲವಾರು ಮಿತಿಗಳನ್ನ ಮೀರಿ ಮಕ್ಕಳ ಬಳಿಗೆ ಕೊಂಡೊಯ್ಯಬಹುದು. ಮಕ್ಕಳು ಓದಲಿಕ್ಕಾಗದ, ಆದರೆ ಹಿರಿಯರು ಸುಲಭವಾಗಿ ಉಚ್ಚರಿಸಬಲ್ಲ, ಅನೇಕ ಶಬ್ದಗಳನ್ನ ಸುಲಭವಾಗಿ ಬಳಸಿಕೊಳ್ಳಬಹುದು. ಮಕ್ಕಳು ಬರಿ ಕೇಳ್ಮೆಯಿಂದ ಅವನ್ನೆಲ್ಲ ಗ್ರಹಿಸಬಲ್ಲರು. ಅಕ್ಷರ ತಂದು ನಿಲ್ಲಿಸುವ ಮಿತಿ ಇದು. ಅಲ್ಲದೆ ಮಕ್ಕಳಿಗೆ ತೀರ ಹತ್ತಿರವಾದ, ಅವರದೇ ಮನೆ ಮಾತಾದ ಪ್ರಾದೇಶಿಕ, ಆಡು ಭಾಷೆಯಲ್ಲಿ ಕತೆ ಬಲು ರುಚಿಕಟ್ಟಾಗಿಯೇ ರವಾನೆಯಾಗಬಹುದು, ಅದು ಬರಹದ ಸಂದರ್ಭದಲ್ಲಿ ತಪ್ಪಿಹೋಗುವುದು ಸ್ವಾಭಾವಿಕ. ಮಕ್ಕಳು ಸುಲಭವಾಗಿಯೇ ಗ್ರಹಿಸಬಲ್ಲ, ಅನುಭವಿಸಬಲ್ಲ, ಆಸ್ವಾದಿಸಬಲ್ಲ ಭಾಷೆಯ ಸಂಗತಿ, ಕತೆಯ ಸಂಗತಿ ಬರಹದಲ್ಲಿ ಖಂಡಿತ ತಪ್ಪಿಹೋಗುತ್ತದೆ. ಪಂಜೆಯವರು ತಮ್ಮ ಕತೆಗಳಲ್ಲಿ ಸುಲಭ ಭಾಷೆಯನ್ನ ತರುವುದರ ಜೊತೆಗೆ ಅಗತ್ಯವಾಗಿ, ಅನಿವಾರ್ಯವಾಗಿ ಪ್ರಾದೇಶಿಕ ಭಾಷಾ ಬಳಕೆಯನ್ನ ತಂದೇ ತಂದಿದ್ದಾರೆ. ಅವರ ಗದ್ಯ ವ್ಯಾಕರಣಬದ್ಧವಾಗುವುದರ ಜೊತೆಗೆ ಆದಷ್ಟೂ ಆಡು ಮಾತಿನ ಸಾಹಚರ್ಯ ಹೊಂದಲು ನೋಡಿದೆ. ಅನೇಕ ಕಡೆಗೆ ಅವರು ಜನರಲ್ಲಿ ಆಗಲೇ ಬಳಕೆಯಲ್ಲಿರುವ ಪದಗಳ ಅರ್ಥವನ್ನು ಇನ್ನೊಂದು ಪದದೊಂದಿಗೆ ವಿವರಿಸಲು ನೋಡಿದುದು ಕಾಣುತ್ತದೆ. ಇಷ್ಟಾಗಿಯೂ ಆ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಆ ಭಾಗದಲ್ಲಿನ ಬಳಕೆಯ ಸಂಗತಿಗಳು ಅಗತ್ಯವಾಗಿ ಹಾಸುಹೊಕ್ಕಾಗಿದ್ದು, ಕನ್ನಡದ ಇತರ ಕಡೆಗಿನ ಮಕ್ಕಳಿಗೆ ಅವು ಅಪರಿಚಿತವಾಗುವಂಥವೇ. ಉದಾಹರಣೆಗೆ ನೋಡಬಹುದು...

'ಮೂಟೆಯ ಶಬ್ದವನ್ನು ಕೇಳಿ ಕಳ್ಳನಿಗೆ ಎಚ್ಚರವಾಯಿತು. 'ಅದು ಯಾರು ? ಯಾರು?' ಎಂದು ಕಳ್ಳನು ಕೂಗಿದನು. ಅದಕ್ಕೆ ಯಾರೂ ಮಾತಾಡಲಿಲ್ಲ. ಕಳ್ಳನು ಚಾಪೆಯಿಂದ ಎದ್ದು, ಅಡಿಗೆ ಕೋಣೆಗೆ ಓಡಿದನು. ಆಗ ಅವನ ಕಾಲು ನೆಲ್ಲಿಕಾಯಿಗಳ ಮೇಲೆ ಜಾರಿತು. ಅವನು 'ಡಬ್ಬ' ಬಿದ್ದನು.

'ಅಬ್ಬಬ್ಬ, ಇದೇನು ಮಾರಿ!' ಎಂದು ಹೇಳಿ, ದೀಪ ಹಚ್ಚುವುದಕ್ಕೆ ಹೋಗಿ ಹಲಗೆಯ ಮೇಲೆ ಬೆಂಕಿ ಪೆಟ್ಟಿಗೆಯನ್ನು ಹುಡುಕಿದನು.'

ಅವರು ನೀಡಿರುವ ಕತೆಗಳೆಲ್ಲವೂ ಹಳ್ಳಿಗಾಡಿನ ಸರಕಿನಿಂದ ಆಯ್ದುದೇ ಆದರೂ ಮಕ್ಕಳನ್ನ ಮುಂದಿಟ್ಟುಕೊಂಡು ಅವಕ್ಕೆ ಸೂಕ್ತವಾದುವುಗಳಾಗಿ ಆಯ್ಕೆಗಿಳಿದಿದ್ದು, 'ಹೇನು ಸತ್ತು ಕಾಗೆ ಬಡವಾಯಿತು', 'ಇಲಿಗಳ ಥಕ ಥೈ', 'ಗುಡುಗುಡು ಗುಮ್ಮಟ ದೇವರು', 'ಅರ್ಗಣೆ ಮುದ್ದೆ', 'ಸಿಗಡಿ ಯಾಕೆ ಒಣಗಲಿಲ್ಲ', 'ಹುಲಿಯೋ ಇಲಿಯೋ', 'ಅಂಗಳ ದುಗ್ಗು', 'ಮೆಣಸಿನ ಕಾಳಪ್ಪ', ಮುಂತಾಗಿ ಅವರ ಕತೆಗಳ ತಲೆಬರಹಗಳು. ಸರಪಳಿಯಂತೆ ಒಂದೇ ಬಗೆಯ ಘಟನೆಗಳು ಪುನರಾವರ್ತನೆಯಾಗುವುದು, ಆಗ ಒಂದಾವುದೋ ಮಾತು ಮತ್ತೆ ಮತ್ತೆ ಬಳಕೆಯಾಗುತ್ತ ಹೋಗುವುದು, ತೀರ ಕ್ಷುದ್ರ ಅನ್ನಿಸೋ ಜೀವಿಯಿಂದ ಎಂಥೆಂಥದೊ ದೊಡ್ಡ ಜೀವಿಗಳನ್ನ ಒಳಗು ಮಾಡಿಕೊಳ್ಳುತ್ತ ಹೋಗುವುದು, ಕೊನೆಗೆ ಎಲ್ಲ ಸರಿಯಾಗಿ ಸುಖಾಂತ ಕಾಣುವುದು, ಮೂರು ಸಹೋದರರಲ್ಲಿ ಕೊನೆಯವನು ಪೆದ್ದು ಪೆದ್ದು ಆಗಿದ್ದೂ ಕೊನೆಗೆ ಜಯ ಹೊಂದುವದು ಮುಂತಾಗಿ ಜನಪದ ಕತೆಗಳ ಪ್ರಚುರವಾದ ಆಶಯಗಳೇ ಇಲ್ಲಿವೆ. ಮಕ್ಕಳಿಗೆ ಈ ಸಂಗತಿಗಳು ರಂಜಿಸಲು ಬಲು ಅನುಕೂಲವೆಂದು ಗಣಿಸಿದಂತಿದೆ. ಅದರಲ್ಲೂ ಪುನರಾವರ್ತನೆಯನ್ನ ಬಹು ಮುಖ್ಯವಾಗಿ ಗಮನಿಸಿದುದಿದೆ. ಹೆಚ್ಚಿನ ವಿವರಗಳಿಲ್ಲದೆ, ಆದಷ್ಟು ಸಂಭಾಷಣೆ ತರುವುದು ಅಗತ್ಯ ಎನ್ನುವುದನ್ನೂ ಅವರು ವ್ಯಕ್ತ ಪಡಿಸಿದುದಿದೆ.

ಇದೊಂದು ಬಗೆಯಲ್ಲಿ ಆ ಸಮಯದಲ್ಲಿ ಅವರ ಸುತ್ತ ಮುತ್ತ, ಹಿಂದು ಮುಂದು ನಡೆದ ವಿಭಿನ್ನ ಪ್ರಯತ್ನಗಳ ಪಾಕವಾದ ಹದ ಪಡೆದ ರಚನೆಗಳ ಬಗೆ ಎನ್ನಬಹುದು. ಬಹಳಷ್ಟು ಸಲ ಇಲ್ಲಿನ ಕತೆಗಳನ್ನ ನೋಡಿದಾಗ ಪ್ರಾಥಮಿಕ ಶಾಲೆಯ, ಅದರಲ್ಲೂ ಪೂರ್ವಪ್ರಾಥಮಿಕ ಹಂತದ ಮಕ್ಕಳನ್ನ ಎದುರಿಗೆ ಇಟ್ಟುಕೊಂಡಿದ್ದರು ಎನಿಸುತ್ತದೆ. ಪಂಜೆಯವರ ಎದುರಿಗೆ ಎಲ್ಲ ವಯೊಮಾನದ ಮಕ್ಕಳೂ ಇದ್ದರಾದರೂ ಅವರ ಕಥಾ ಬರವಣಿಗೆ ಅವೆಲ್ಲವಕ್ಕೆ ಚಾಚಿಕೊಂಡುದಲ್ಲ. ಆ ಬಗೆಯ ವಾತಾವರಣವೇ ಆಗಿನ್ನೂ ರೂಪುಗೊಂಡಿರಲಿಲ್ಲವೋ ತಿಳಿಯದು. ತಮ್ಮ ಈ ಕೃತಿಗಳನ್ನ ಓದಬಲ್ಲ ವರ್ಗ ನಿರ್ದಿಷ್ಟವಾಗಿ ಅವರೆದುರಿಗೆ ಇತ್ತು. ಶಾಲೆಯ ಒಂದೊಂದು ಹಂತದ ಬೆಳವಣಿಗೆಯ, ಅವುಗಳ ಭಾಷಾ ಸಾಮರ್ಥ್ಯದ, ಗ್ರಹಿಕೆಯ ಸಾಧ್ಯತೆಗಳ ಬಗೆಗೆ ಯೋಜಿತ ದೃಷ್ಟಿಕೋನ ಇಲ್ಲೆಲ್ಲ ಇತ್ತು. ಅವರು ಶಿಕ್ಷಕರಾಗಿ, ತರಬೇತು ಸಂಸ್ಥೆಯ ಪ್ರಾಧ್ಯಾಪಕರಾಗಿ, ಅಲ್ಲಿಯೇ ಮುಖ್ಯೋಧ್ಯಾಪಕರಾಗಿ, ಪ್ರೌಢಶಾಲಾಧ್ಯಾಪಕರಾಗಿ, ಅಧಿಕಾರಿಗಳಾಗಿ ಶಾಲಾ ಮಕ್ಕಳ ಸಾಹಚರ್ಯದಲ್ಲಿಯೇ ಸಾಹಿತ್ಯದ ರಚನೆಯನ್ನ ರೂಪಿಸಿಕೊಂಡರು ಎನ್ನುವುದು ಬಹುಮುಖ್ಯವಾದ ಸಂಗತಿ. ಹಾಗಿದ್ದಾಗಲೂ ಅವರ ಸೃಜನಶೀಲ ಮನಸ್ಸು ತನ್ನ ಪ್ರತಿಭೆಯಿಂದ ಪ್ರಫುಲ್ಲವಾಗಿ ಹೊರಹೊಮ್ಮಬಲ್ಲ ಸಾಧ್ಯತೆಗಳಿಗಾಗಿ ದಾರಿ ಮಾಡಿಕೊಳ್ಳುತ್ತಲೇ ಇತ್ತು. ಕನ್ನಡದ ಹೊಸದಾರಿಗಳೇ ಅಂದು ರೂಪುಗೊಳ್ಳುವ ಪ್ರಯತ್ನದಲ್ಲಿದ್ದುದರಿಂದ ಅವರ ಮಕ್ಕಳ ಸಾಹಿತ್ಯದಲ್ಲಿನ ಪ್ರಯತ್ನಗಳೂ ಗಮನಿಸಬಲ್ಲಂಥವಾದುವು.

ಇದೇ ಸಮಯದಲ್ಲಿ ಬಾಶೆಲ್ ಮಿಷನ್ನಿನವರ ಆಸರೆಯಲ್ಲಿ 'ಬಾಲ ಸಾಹಿತ್ಯ ಮಂಡಳಿ' ಎನ್ನುವ ಸಾಂಸ್ಥಿಕ ಪ್ರಯತ್ನವೂ ಮಂಗಳೂರಿನಲ್ಲಿ ನಡೆದುದು, ಸಾಹಿತ್ಯದ ಕುರಿತಾದ ವಿಶೇಷ ಆಸ್ಥೆ, ಉತ್ಸಾಹ, ಪ್ರಯತ್ನಗಳನ್ನ ಹೇಳುವುದಾಗಿದೆ. ಶಾಲಾ ವಾತಾವರಣದಾಚೆಗೂ ಈ ಬಗೆಯ ಆಸಕ್ತಿ ಹಬ್ಬಿಕೊಳ್ಳುತ್ತಿರುವ ಸೂಚನೆಯೇ ಒಂದು ಬಗೆಯಲ್ಲಿ ಇದಾಗಿತ್ತು ಎಂದರೆ ತಪ್ಪಲ್ಲ. ಪಂಜೆಯವರ ಜೊತೆಗೆ ಆಗ ಉಳ್ಳಾಲ ಮಂಗೇಶರಾಯರು ಈ ಪ್ರಯತ್ನದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದರು ಎನ್ನುವುದನ್ನ ಕೇಳುತ್ತೇವೆ.

ಆದರೆ ಇದೇ ಸಮಯದಲ್ಲಿಯ ದೇಶದ ಬೇರೆ ಕಡೆಗಳಲ್ಲಿನ ವಿದ್ಯಮಾನಗಳನ್ನೂ ನೋಡುವುದು ಒಳಿತು ಎನಿಸುತ್ತದೆ. ಸಾಧ್ಯವಾದ ಮಾಹಿತಿಯ ಆಧಾರ ಅನುಸರಿಸಿ ಈ ಬಗೆಯದನ್ನ ಊಹಿಸಿಕೊಳ್ಳುವುದಾಗುತ್ತದೆ ಎನ್ನುವುದು ಮಿತಿ. ಇದೇ ಸಮಯದಲ್ಲಿ ಕ್ರಿಯಾಶೀಲರಾಗಿದ್ದ ಹಿಂದಿಯ ಖ್ಯಾತ ಲೇಖಕ ಪ್ರೇಮಚಂದರು ಮಕ್ಕಳ ಗ್ರಹಿಕೆಗೆ ನಿಲುಕಬಲ್ಲ ಕತೆಗಳನ್ನ ರಚಿಸಿದರು ಎನ್ನುವುದನ್ನ ಗಣಿಸಬಹುದು. ಮಕ್ಕಳಿಗಾಗಿಯೇ ಎಂದು ಇವು ಪಠ್ಯ ಪುಸ್ತಕಗಳಲ್ಲಿ ಕಾಣಿಸಿಕೊಂಡುದಿದೆ. ಅದಲ್ಲದೆ ಈಚೆಗೆ ಎನ್. ಬಿ. ಟಿ. ಅವರಿಂದ ಮಕ್ಕಳಿಗಾಗಿಯೇ ಎಂದು ಅವರ ಹದಿಮೂರು ಕತೆಗಳನ್ನ ಸಂಕಲಿಸಿ ನೀಡಿದುದಿದೆ. ಆದರೆ ಅವೆಲ್ಲ ವಾಸ್ತವದ ಸಂಗತಿಗಳನ್ನೇ ಆಯ್ದುಕೊಂಡವು, ಅಲ್ಲದೆ ಅವೆಲ್ಲ ಹಳ್ಳಿ ಪ್ರದೇಶದ ಬಡತನದ ಚಿತ್ರಣಗಳೇ ಆಗಿದ್ದವು ಎಂಬುದು ಗಮನಾರ್ಹ. ಅವರು ಕಲ್ಪನೆಯ ಕತೆಗಳಿಗೆ, ರಮ್ಯ, ರಂಜನೀಯ ಕತೆಗಳ ಕಡೆಗೆ ಹೊರಳಲೇ ಇಲ್ಲ. ಇನ್ನೊಬ್ಬ ಹಿರಿಯ ಹಿಂದಿ ಲೇಖಕ, ಮಕ್ಕಳಿಗಾಗಿಯೂ ಆಸ್ಥೆಯಿಂದ ಬರೆದ ಅಮೃತಲಾಲ ನಾಗರ್ ಅವರು ಹೇಳಿಕೊಂಡಿರುವ ಹಾಗೆ ಮಕ್ಕಳಿಗೆ ಬರೆಯುವಾಗ ವಾಸ್ತವವನ್ನು ಆಧರಿಸಿಯೇ ಬರೆಯಲು ಪ್ರೇಮಚಂದ ಅವರು ಸಲಹೆ ನೀಡುತ್ತಿದ್ದರಂತೆ. ಬೆಂಗಾಲಿಯಲ್ಲಿ ಇದೇ ಸುಮಾರಿಗೆ ಆಗಲೇ ಸಾಕಷ್ಟು ಪ್ರಭಾವಕಾರಿಯಾಗಿದ್ದ ರವೀಂದ್ರರ ಸಾಂಸ್ಕೃತಿಕ ವಾತಾವರಣ ಮಕ್ಕಳ ಜಗತ್ತನ್ನೂ ಆವರಿಸಿಕೊಂಡಿತ್ತು. ಅವರೂ, ಅವರ ಪ್ರಭಾವ, ಪ್ರೋತ್ಸಾಹದಿಂದ ಅನೇಕರೂ ಮಕ್ಕಳ ಲೋಕದಲ್ಲಿ ಹಲವಾರು ಬಗೆಯ ಪ್ರಯೋಗಗಳನ್ನ ಮಾಡಿದರು. ಇದೇ ಸಮಯದಲ್ಲಿ ಬೆಂಗಾಲಿಯಲ್ಲಿ ಪ್ರಖರವಾದ ವಾಸ್ತವವಾದಿ, ಸಾಮಾಜಿಕ ತುಡಿತದ ಕಥಾ ಜಗತ್ತನ್ನು ಸೃಷ್ಟಿಸಿದ ಶರತ್‌ಚಂದ್ರ ಚಟರ್ಜಿ ಸಾಕಷ್ಟು ಪ್ರಭಾವ ಮೂಡಿಸಿದ್ದರು. ಅವರು ಮಕ್ಕಳಿಗಾಗಿಯೂ ಬರೆದಿದ್ದರು ಎನ್ನುವುದಿದೆ. ಕಥಾ ಸರಣಿಗಳನ್ನೂ, ಕಾದಂಬರಿಗಳನ್ನೂ ಅವರು ರಚಿಸಿದರಂತೆ ('ರಾಮೇರ್ ಶುಮತಿ' ಹಾಗೂ ಲಾಲೂ ಹಾಗೂ ಅವನ ಗೆಳೆಯರು ಎಂಬುವು ಹೆಚ್ಚು ಜನಪ್ರಿಯವಾಗಿದ್ದುವಂತೆ). ಅಲ್ಲದೆ ಮಕ್ಕಳ ಪತ್ರಿಕೆಯೊಂದರಿಂದಲೇ ಅವರ ಕಥಾ ಜಗತ್ತು ಅನಾವರಣಗೊಂಡುದಿದೆ. ಈ ಇಬ್ಬರೂ ಕನ್ನಡದವರ ಮೇಲೆ ಮಾಡಿದ ಪ್ರಭಾವ ಅಷ್ಟಿಷ್ಟಲ್ಲ. ಹಾಗಿದ್ದಾಗಲೂ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಜಗತ್ತು ಅವರ ಪ್ರಭಾವಗಳಿಂದ ಆದಷ್ಟೂ ದೂರವೇ ಉಳಿಯಿತು ಎನ್ನಬೇಕೆ ? ಎಂ.ಎನ್. ಕಾಮತರು ಕಲಕತ್ತಾದಲ್ಲಿ ಇದ್ದು ಬಂದವರು ಅಲ್ಲಿನ ಪ್ರಭಾವಗಳಿಗೆ ಒಳಗಾದವರು, ಸ್ಫೂರ್ತಿ ಪಡೆದವರು ಎನ್ನುವುದಿದೆ. ಉಪೇಂದ್ರ ಕಿಶೋರ ರಾಯ್ ಮಕ್ಕಳ ಸಾಹಿತ್ಯದಲ್ಲಿ ಏನೆಲ್ಲ ಪ್ರಯೋಗಗಳಿಗೆ ಒಡ್ಡಿಕೊಂಡಿದ್ದರು, ಸಂದೇಶ ಪತ್ರಿಕೆಯನ್ನೇ ನಡೆಸುತ್ತಿದ್ದರು ಎನ್ನುವುದನ್ನು ಇಲ್ಲಿ ಹೇಳದೆ ಇರಲಾಗದು. ಭಾರತದ ಇನ್ನೂ ಹಲವಾರು ಕಡೆ ವಿಶಿಷ್ಟವಾದ ಪ್ರಯತ್ನಗಳು ನಡೆದಿರಬಹುದು, ಅವುಗಳ ಕುರಿತ ಅಗತ್ಯದ ಮಾಹಿತಿ ಲಭ್ಯವಾಗುತ್ತಿಲ್ಲ.

ಉಳ್ಳಾಲ ಮಂಗೇಶರಾಯರು ಪಂಜೆಯವರ ಜೊತೆಗಿದ್ದೇ ಕೆಲಸ ಮಾಡಿದವರು. ಹಾಗಾಗಿ ಅವರ ಅಭಿಪ್ರಾಯಗಳೆಲ್ಲ ಒಂದು ಬಗೆಯಲ್ಲಿ ಪರಸ್ಪರ ಸಮ್ಮತವಾದುವುಗಳೇ. ಶಿಕ್ಷಣದಲ್ಲಿ ಕತೆಗಳ ಪಾತ್ರವಿದೆ ಎಂದು ಖಚಿತವಾಗಿ ನಂಬಿದವರು ಇವರು. ತರಬೇತಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಹಳ್ಳಿಗಾಡಿನ ಕತೆಗಳನ್ನು ಸಂಗ್ರಹಿಸಿ ತರಲು ಕಡ್ಡಾಯಗೊಳಿಸಿದ್ದರಂತೆ. ಅವರು ಬರೆದು ತಂದ ಕತೆಗಳನ್ನ ತಿದ್ದಿ ತೀಡಿ ಪುಸ್ತಕ ರಚನೆಗಳಿಗೆ ಬಳಸಿಕೊಳ್ಳುತ್ತಿದ್ದರಂತೆ. ಕಲ್ಪಕತೆಯೇ ಪ್ರಧಾನವಾಗಿ ಇರುವ ಕತೆಗಳಾದರೂ ಅತಿಮಾನವ, ಅವಾಸ್ತವ ಕಿನ್ನರ ಕತೆಗಳನ್ನ ಇವರು ಬಳಸಲಿಲ್ಲ ಎನ್ನುವುದಿದೆ. ಇದೊಂದು ಗಮನಿಸಬೇಕಾದ ಸಂಗತಿ. 'ಬಾಲ ಸಾಹಿತ್ಯ ಮಂಡಲ'ದ ಸಂಗ್ರಹಗಳ ಹಿಂದೆ ಪಂಜೆಯವರ ಜೊತೆಗೆ ಉಳ್ಳಾಲರ ಸಾಹಚರ್ಯ ಇದ್ದೇ ಇರುತ್ತಿತ್ತು. ಒಗಟು, ಗಾದೆಗಳ ಹಿಂದಿರುವ ಕತೆಗಳನ್ನು ಪಠ್ಯ ಪುಸ್ತಕಗಳಲ್ಲಿ ಮೊದಲಿಗೆಲ್ಲ ಬಳಸಿದ್ದು ಉಳ್ಳಾಲರೇ ಎನ್ನುವ ಮಾತಿದೆ. ಎಲ್ಲೆಲ್ಲೂ ಅಲಂಕೃತ ಭಾಷೆಗೆ ಒತ್ತುಕೊಡದೆ, ಸರಳತೆ, ಸ್ಪಷ್ಟತೆಗೆ ಆದ್ಯತೆ ನೀಡಿದ ಅವರು ತರಗತಿಯ ಶ್ರೇಣಿಗಳಿಗನುಗುಣವಾಗಿ ಭಾಷೆಯ ಪ್ರೌಢತೆಯನ್ನ ಬಳಸುತ್ತ ಬಂದರು. ಅನೇಕ ನಿತ್ಯ ಬಳಕೆಯ ನುಡಿಗಟ್ಟುಗಳನ್ನು ಅವರು ಬಳಸಿ ರುಚಿಕಟ್ಟುಗೊಳಿಸುತ್ತಿದ್ದರು. ಒಕ್ಕಲು ಹೋಗು, ಕಾಯ ಕಷ್ಟ ಮಾಡು, ಊರು ಬಿಡು ಮನಸ್ಸು ಕರಗು, ದಡ್ಡು ಕಟ್ಟು ಮುಂತಾಗಿ ಅವು. ಹಾಗೆಯೇ ಗ್ರಾಮೀಣ ಬಳಕೆಯ ಅನೇಕ ಪದಗಳನ್ನ ಆಪ್ತವಾಗಿ ಬಳಸಿದರು ಕೂಡ. ಪೂಕರೆ ಇಡು, ಪಡಿಮಂಚ, ಕೊಡಪಾನ, ತಪಲೆ, ಕವಳಿಗೆ, ನಿಶಾನಿ, ಮಜಲು, ಪಡಪು, ಬಂಡಸಾಲೆ, ಗೇಣಿಚೀಟು ಇತ್ಯಾದಿ. ಪಠ್ಯ ಪುಸ್ತಕಗಳ ಮೊದಲಿಗೆ 'ಉಪಾಧ್ಯಾಯರಿಗೆ ಸೂಚನೆಗಳು' ಎಂದು ನೀಡುತ್ತಿದ್ದ ಸೂಚನೆಗಳಲ್ಲಿ ಕತೆಗಳನ್ನ ಓದಿಹೇಳಿದರೆ ಅಥವಾ ನಿರೂಪಿಸಿದರೆ ಸಾಲದು, ನಟನೆಯ ಮೂಲಕ ಅಭ್ಯಾಸ ಮಾಡಿಸಬೇಕು ಎನ್ನುವ ಅಭಿಪ್ರಾಯಗಳು ಇರುತ್ತಿದ್ದುದನ್ನ ಗಮನಿಸಬೇಕು. ಕತೆಯೇ ಆಗಲಿ ಕವಿತೆಗಳೇ ಆಗಲಿ ಮಕ್ಕಳಿಗೆ ಮುದನೀಡಲು ಇರುವವು ಎಂದುಕೊಂಡಾಗಲೂ ಅವರು ಆರೋಗ್ಯದ ವಿಷಯಗಳನ್ನು ಮನದಟ್ಟು ಮಾಡಲು, ಸನ್ನಡತೆಯನ್ನು ಕುರಿತು ತಿಳಿಹೇಳಲು ಕತೆಗಳನ್ನು ಬಳಸಿಕೊಳ್ಳುತ್ತಿದ್ದರು ಎನ್ನವುದಿದೆ. ಮನೆಮಂದಿಗಿಂತಲೂ ಶಾಲಾ ಮಕ್ಕಳನ್ನ ಹೆಚ್ಚಾಗಿಯೇ ಪ್ರೀತಿಸಿದರು ಎನ್ನುವ ಮಾತೂ ಇದೆ ಅವರ ಕುರಿತು.

'ಬಿಸಿಲಿನ ಕಾವನ್ನೂ, ನೀರಿನ ಅಭಾವವನ್ನೂ ತನಗಲ್ಲವೆಂದು ಈಡಾಡಿ ಈ ಬೆಟ್ಟ ಬೇಸಗೆಯ ಹೂವು ತೋರಿದ ಸೊಂಪೂ, ಬೀರಿದ ತಂಪೂ ವಿಸ್ಮಯವೇ ಸೈ' ಎಂದು ಗೋವಿಂದ ಪೈ ಅವರು ಕೊಂಡಾಡಿರುವ ಎಮ್.ಎನ್. ಕಾಮತರು ಅತ್ಯಂತ ಬಡತನದಲ್ಲಿದ್ದೂ ಅವಿರತವಾಗಿ ಸಾಹಿತ್ಯ, ಸಾಂಸ್ಕೃತಿಕ ಲೋಕಕ್ಕಾಗಿ ತುಡಿದವರು. ಶಾಲಾಧ್ಯಾಪಕರಾಗಿದ್ದ ಅವರು ಮಕ್ಕಳ ಒಡನಾಟದಲ್ಲಿ ಸಾಕಷ್ಟು ಕೃಷಿಯನ್ನು ಮಾಡಿದವರು. ಅದರಲ್ಲೂ ಮಕ್ಕಳಿಗಾಗಿ ವಾರ್ಷಿಕೋತ್ಸವಕ್ಕಾಗಿ ಅಪಾರ ಸಂಖ್ಯೆಯಲ್ಲಿ ನಾಟಕಗಳನ್ನು ರಚಿಸಿ, ನಿರ್ದೇಶಿಸಿ, ಆಡಿಸಿದವರು. ಇವು ಜನಸಾಮಾನ್ಯರನ್ನೆಲ್ಲ ಒಟ್ಟಾಗಿ ರಂಜಿಸುವ ಕೃತಿಗಳಾಗಿದ್ದು ಮಕ್ಕಳಿಗಾಗಿಯೇ ಎಂದು ಇರುತ್ತಿರಲಿಲ್ಲ. ಹಾಗಿದ್ದಾಗಲೂ ಮಕ್ಕಳಿಗಾಗಿ ಎಂದೇ ಹಲವಾರು ಕೃತಿಗಳನ್ನ ಅವರು ರಚಿಸಿದರು. ಹಾಗೆಯೇ ಮಕ್ಕಳಿಗಾಗಿ ಕತೆಗಳನ್ನೂ ಬರೆದರು. 'ಬಾಲಕರ ಮಹಾಭಾರತ', 'ಯಾದವ ಕೃಷ್ಣ', 'ಕರ್ಣನ ಕತೆ', 'ಆರ್ಯಮತೋಽಖ್ಯಾನ'(ರಾಮಾಯಣದ ಕತೆಗಳು), 'ಮಹಾರಾಷ್ಟ್ರ' ಇವು ಅವರು ಮಕ್ಕಳಿಗಾಗಿ ಬರೆದ ಗದ್ಯ ಕೃತಿಗಳು ಎಂದು ತಿಳಿದುಬರುತ್ತದೆ. ಅವರು ಹಲವಾರು ಕಥನ ಕವನಗಳನ್ನ ರಚಿಸಿದುದಿದೆ.

ಭರತೇಶ ವೈಭವದ ಮಂಗೇಶರಾಯರೆಂದೇ ಹೆಸರಾಗಿದ್ದ ಉಗ್ರಾಣ ಮಂಗೇಶರಾಯರು ಹಿರಿಯ ವಿದ್ವಾಂಸರಾಗಿ ಮಕ್ಕಳಿಗೆ ಪ್ರೀತಿಯ ಗುರುಗಳಾಗಿದ್ದರು. ಅವರ ಜೀವನದ ಬಹು ಭಾಗವೆಲ್ಲ ಶಾಲೆಯ ಮಕ್ಕಳಿಗಾಗಿಯೇ ಕಳೆಯಿತು. ಕಾವ್ಯಾಧ್ಯಯನದಲ್ಲಿ ಎತ್ತಿದ ಕೈಯಾಗಿದ್ದ ಅವರ ಒಟ್ಟು ಕೃಷಿಯಲ್ಲಿ ಗದ್ಯವೇ ಹೆಚ್ಚಿನದಾಗಿತ್ತು. ಅವರು ಮಕ್ಕಳಿಗಾಗಿ ರಚಿಸಿದ ಸಾಹಿತ್ಯದಲ್ಲಿ ಕತೆಗಳೂ ಸೇರಿದ್ದವು. 'ಕೋಳೂರು ಕೊಡಗೂಸಿನ ಕಥೆ,' 'ಚವುತಿಯ ಚಂದ್ರ,' 'ಓಲೆಯ ಬಣ್ಣ ಯಾವುದು?,' ಮುಂತಾದ ಸಂಗ್ರಹಿತ ಕತೆಗಳು ಅವರ ಹೆಸರಿನಲ್ಲಿವೆ. 'ಕನಕಾಂಗಿ' ಇಂಗ್ಲಿಷಿನ ಮೈದಾಸನ ಕತೆಯನ್ನ ಕನ್ನಡದಲ್ಲಿ ನೀಡಿದುದು(ಇದನ್ನು ಪದ್ಯದಲ್ಲೂ ನೀಡಿದ್ದಾರೆ), 'ಹುಟ್ಟುಗುಣ ಘಟ್ಟ ಹತ್ತಿದರೂ ಬಿಡದು' ಎಂಬುದು ಇಲಿಯ ಕತೆ, 'ಕಂಬಳಿಯ ಕಥೆ' ಒಬ್ಬ ಕುರುಬ ಹುಡುಗನಿಗೆ ಬಿದ್ದ ಕನಸಿನಲ್ಲಿ ಹೊದ್ದುಕೊಂಡ ಕಂಬಳಿಯೇ ತಾನು ಹೇಗೆಲ್ಲ ಸಿದ್ಧವಾಗುತ್ತೇನೆ ಎಂದು ತನ್ನ ಕತೆಯನ್ನೆಲ್ಲ ಹೇಳಿದುದು, 'ಹುಲಿ ಮಾದಣ್ಣ' ಎಂಬುದು, ತನಗರಿಯದೇ ಹುಲಿಯನ್ನ ಕೊಂದು ಶೂರನೆನಿಸಿಕೊಂಡ ಮಾದಣ್ಣನ ಕತೆ. ೧೯೨೪ರಿಂದ ೧೯೫೦ರ ವರೆಗೆ ಒಂದರಿಂದ ಎಂಟನೆಯ ತರಗತಿಯವರೆಗೆ ಮೆಕ್ಮಿಲನರ್ ಪಾಠ ಪುಸ್ತಕಾವಳಿ, ಮಾಧ್ಯಮಿಕ ಕನ್ನಡ ಪಾಠಮಾಲೆ, ನೂತನ ಪ್ರೌಢ ಪಾಠಮಾಲಿಕೆಗಳ ಸಂಪಾದನೆಯಲ್ಲಿ ಪ್ರಮುಖರಾಗಿದ್ದ ಅವರು ಮಕ್ಕಳಿಗಾಗಿ ಅಪಾರ ಪ್ರಮಾಣದಲ್ಲಿ ಗುಣಮಟ್ಟದ ಗದ್ಯ ರಚಿಸಿದುದಿದೆ. ಅವರು ಬರೆದ 'ಚರಿತ್ರೆ ಮತ್ತು ಕಥೆಗಳು' ಎನ್ನುವುದು ಬಹಳ ವರ್ಷಗಳ ವರೆಗೆ ಉಪಪಠ್ಯವಾಗಿದ್ದಿತಂತೆ.

ಇದೇ ಸಮಯದ ಕೊರಡ್ಕಲ್ ಶ್ರೀನಿವಾಸರಾಯರದು ಬಾಲ ಸಾಹಿತ್ಯದಲ್ಲಿ ಇನ್ನೊಂದು ದಾಖಲಿಸಲೇಬೇಕಾದ ಹಿರಿಯ ಹೆಸರು. ಮೂಢನಂಬಿಕೆ, ಅನಿಷ್ಟ ಸಂಪ್ರದಾಯ, ವರ್ಗೀಯ ಅಂತರಗಳ ವಿರುದ್ಧ ವ್ಯಂಗ್ಯ, ವಿಡಂಬನೆಯನ್ನ ಅವಿರತವಾಗಿ ಬಳಸಿ ಜಾಗೃತಿ ಮೂಡಿಸಲು ಹೆಣಗಿದ ಶ್ರೀನಿವಾಸರು ಮಕ್ಕಳಿಗಾಗಿಯೂ ಅಷ್ಟೇ ಕಾಳಜಿಯಿಂದ ತುಡಿದವರು. ಶಾಲಾ ಮಕ್ಕಳಿಂದಲೇ ಬರೆಸಿ ತರುತ್ತಿದ್ದ ಅಚ್ಚುಕಟ್ಟಾದ ಪತ್ರಿಕೆ 'ಬಾಲನಂದಂ'. ಎಳವೆಯಿಂದಲೇ ಮಕ್ಕಳಲ್ಲಿ ವಾಚನಾಭಿರುಚಿ ಹುಟ್ಟಲು, ಅವರ ಅನುಭವಕ್ಕೆ, ಅಭಿರುಚಿಗೆ ಸ್ಪಂದಿಸುವ, ಸರಳ, ಸುಲಭ ಸ್ವಾರಸ್ಯ ವಿಸಯಗಳನ್ನುಳ್ಳ 'ಬಾಲವಾಙ್ಮಯ' ವೆಂಬ ಕಿರು ಹೊತ್ತಿಗೆಯನ್ನ ರಚಿಸಿದ್ದರು. ಪದ್ಯವೇ ಇರಲಿ, ಗದ್ಯವೇ ಇರಲಿ, ಮಗುವಿನ ಮನೋವೃತ್ತಿಯನ್ನು ಲಕ್ಷಿಸಿ ಬಾಲವಾಙ್ಮಯದ ಚೌಕಟ್ಟು ಹಾಕಬೇಕೆನ್ನುವುದು ಅವರ ಇಂಗಿತವಾಗಿತ್ತು. ಇದು ಹಿರಿಯರಿಗೊಂದು ಕೈಪಿಡಿಯಾಗಿತ್ತು.

ಇದೇ ಸಮಯದಲ್ಲಿ ಕನ್ನಡದಲ್ಲಿ ಮೊದಲ ಗಟ್ಟಿಯಾದ ಕತೆಯಾಗಿ ಗಣಿಸುವ 'ಧನಿಯರ ಸತ್ಯನಾರಾಯಣ'ವನ್ನ ಕೊರಡ್ಕಲ್ ಶ್ರೀನಿವಾಸರಾಯರು ರಚಿಸಿದರೆಂಬುದನ್ನು ಇಲ್ಲಿ ಹೇಳಬೇಕು. ಒಂದು ಹುಡುಗನ ಸುತ್ತಲಿನ ಅನುಭವವನ್ನೇ ಉಳ್ಳುದಾಗಿದ್ದು, ಅದು ಅತ್ಯಂತ ವಾಸ್ತವ ತಳಹದಿಯದಾಗಿದ್ದು, ಅಂದಿನ ಶೋಷಣೆಯ ದಿಟ್ಟ ಚಿತ್ರಣ ನೀಡುತ್ತಿರುವುದನ್ನ ನೋಡಿದರೆ ಆ ಬಗೆಯ ಚಿಂತನೆ ಸಾಹಿತ್ಯಕ ವಲಯದಲ್ಲಿ ಆಗಲೆ ಮಾನ್ಯತೆ ಪಡೆಯುತ್ತಿದ್ದುದನ್ನ ಗುರುತಿಸಬಹುದು. ಆದರೆ ಕೊರಡ್ಕಲ್ ಶ್ರೀನಿವಾಸರಾಯರನ್ನೂ ಸೇರಿ ಯಾರೂ ಮಕ್ಕಳಿಗೆ ನೀಡುವಾಗ ಮಾತ್ರ ವಾಸ್ತವ ಕತೆಗಳನ್ನಿಡಲು ಯೋಚಿಸಲಿಲ್ಲ ಎನ್ನುವುದನ್ನು ಇಲ್ಲಿ ಹೇಳಬೇಕು.

ಮಚ್ಚಿಮಲೆ ಶಂಕರನಾರಾಯಣ ಇನ್ನೊಬ್ಬ ಮಕ್ಕಳ ಅಕ್ಕರೆಯ ಹಿರಿಯರು. ಶಾಲಾಧ್ಯಾಪಕ ವೃತ್ತಿಯಲ್ಲಿ ಇಲ್ಲದಿದ್ದರೂ, ಆ ಕಾಲದ ಶಿವರಾಮ ಕಾರಂತ, ಕಡೆಂಗೋಡ್ಲು ಶಂಕರ ಭಟ್,

ಸೇಡಿಯಾಪು ಕೃಷ್ಣ ಭಟ್, ಕಯ್ಯಾರ ಕಿಂಯಣ್ಣರೈ ಮುಂತಾದವರ ಒಡನಾಟ ಸಿಕ್ಕು ಸಾಹಿತ್ಯ, ಸಾಂಸ್ಕೃತಿಕ ಆಸಕ್ತಿಗಳನ್ನ ಚೆನ್ನಾಗಿ ಬೆಳೆಸಿಕೊಂಡಿದ್ದರು. ಅಂದಿನ ಅನೇಕ ಪತ್ರಿಕೆಗಳಲ್ಲಿ ಅವರ ಕವಿತೆ, ಲೇಖನಗಳು ಪ್ರಕಟವಾಗುತ್ತಿದ್ದವು. ವಿಶೇಷವಾಗಿ ಇವರು ಕವಿಹೃದಯಿಗಳು. ೧೯೩೮ರಲ್ಲಿ 'ದುಂಡುಮಲ್ಲಿಗೆ' ಎನ್ನುವ ಗ್ರಂಥಮಾಲೆಯನ್ನ ಪ್ರಾರಂಭಿಸಿ ಎರಡು ತಿಂಗಳಿಗೆ ಒಂದರಂತೆ ಪುಸ್ತಕಗಳನ್ನ ಪ್ರಕಟಿಸುತ್ತಿದ್ದರು. ಇವು ಪ್ರಾಥಮಿಕ, ಪ್ರೌಢಶಾಲೆಯ ಮಕ್ಕಳಿಗೆ ನಿಲುಕುವಂತಿದ್ದುವಂತೆ. 'ನಾಳಿನ ಕಿಡಿಗಳನ್ನು ರೂಪಿಸಲಿರುವ ಸಿಡಿಮದ್ದು' ಎಂದು ತಿ. ತಾ. ಶರ್ಮರಿಂದ ಬಣ್ಣನೆಗೆ ಒಳಗಾದಂಥ ಕೃತಿಗಳನ್ನ ಮಕ್ಕಳಿಗಾಗಿ ನೀಡಿದವರು ಬೇಕಲ ರಾಮರಾಯರು. 'ನಿರಕ್ಷರದ ಬಾಲಕರ ಮೃದು ಹೃದಯದ ಮೇಲೆ ಪರಿಣಾಮವನ್ನುಂಟು ಮಾಡುವ ಬರಹಗಳ ಮೌಲ್ಯ ನಿರ್ಣಯ ಅಸಾಧ್ಯ' ಎಂದೇ ಶರ್ಮರು ಅಭಿಪ್ರಾಯ ಪಟ್ಟುದಿದೆ. ವೀರರಸ ಪ್ರಧಾನವಾದ ಶೈಲಿಯಲ್ಲಿ, ಆದರೆ ಆಡಂಬರವಿಲ್ಲದ, ಸಂಸ್ಕೃತಮಯವಿಲ್ಲದ ಮಣ್ಣಿನ ದೇಸಿ ಗುಣವಿರುವ ಭಾಷೆಯಲ್ಲಿ ಅವರು ಬರೆದುದು. ಚಾರಿತ್ರಿಕ ವಿಷಯಗಳನ್ನು ಅಧಿಕಾರವಾಣಿಯಿಂದ ಹೇಳಬಲ್ಲವರಾಗಿದ್ದ ಅವರು ಮಕ್ಕಳಿಗೆ ಅಂಥ ಸಾಮಗ್ರಿಯನ್ನೇ ವಿಶೇಷವಾಗಿ ನೀಡಿದರು. 'ಪುಳ್ಳೂರು ಬಾಚ' ಅವರದೊಂದು ಪ್ರಸಿದ್ಧ ಕೃತಿ. ಮಾಯಿಪಾಡಿ ಅರಮನೆಯ ಸಮೀಪ ಪುಳ್ಳೂರಿನ ವಾಸುದೇವನ ಕತೆ ಇದಾಗಿತ್ತು. ಎಳ್ಳನ್ನು ಕೈಯಿಂದಲೇ ಹಿಂಡಿ ಎಣ್ಣೆಯನ್ನು ತೆಗೆಯುತ್ತಿದ್ದ ಪರಪಳಿ ನಾಯಕನ ಪರಂಪರೆಗೆ ಸೇರಿದ 'ಅಗೋಳಿ ಮಂಜಣ' ಅವರದಿನ್ನೊಂದು ಪ್ರಸಿದ್ಧ ಕತೆ. 'ಬಾಚನ ಹೆಸರನ್ನು ಯಾರೂ ಬರೆದಿಟ್ಟಿಲ್ಲ. ಆದರೆ ಬಾಚನ ಕಲ್ಲು, ಬಾಚನ ಬಂಡಿ, ಬಾಚನ ಗೊಂಬೆಯಲ್ಲಿ ಆತನ ಮೆಚ್ಚಿನ ಹೆಸರು ಉಳಿದುಕೊಂಡಿದೆ. ಆ ಬಿರುದಿನ ಅರಮನೆ ಜಟ್ಟಿ ಹೊತ್ತು ತಂದ ಆ ಭಾರೀ ಕಲ್ಲುಗಳು ಅವನ ಕೀರ್ತಿಯ ಶಾಸನ ಶಿಲೆಗಳಾಗಿ ಇಂದಿಗೂ ನಿಂತಿವೆ' ಎಂದು ಬರೆದಿದ್ದಾರೆ. 'ಬಾಳಿನ ಹೆಸರು' ೮ನೆಯ ತರಗತಿಗೆ ಉಪಪಠ್ಯವಾಗಿತ್ತಂತೆ. ಅನೇಕ ಕಥನ ಕವನಗಳನ್ನ ಬರೆದಿರುವುದೂ ಇದೆ. ಅವರ ಬರವಣಿಗೆಯ ಶೈಲಿಗೆ ಈ ಕೆಲವು ಸಾಲುಗಳ ಉದಾಹರಣೆ:

> 'ನಾನು ಹಸುಳೆಯಾದರೆ, ನನ್ನ ಕತ್ತಿಯೂ ಹಸುಳೆಯೇನಮ್ಮಾ ?'
>
> 'ಅಟ್ಟ ಅನ್ನ ಉಂಡು, ಪಟ್ಟೆ ಸೀರೆ ಉಟ್ಟು, ಪಟ್ಟೆ ಮಂಚದ ಮೇಲೆ ಮಲಗು. ಆ ಪುಂಡರನ್ನು ಹಿಡಿದು ತಂದು ನಿನ್ನ ಕಾಲ ಮೇಲೆ ಕೆಡಹುತ್ತೇನೆ'
>
> 'ಈ ಕಂಟಕವನ್ನು ಹೇಗೆ ಕಿತ್ತೊಗೆಯುವುದೆಂದು ಯೋಚಿಸುವುದಕ್ಕಾಗಿ ಹಲವು ಹದಿನೆಂಟು ಸೀಮೆಗಳ ಗುರಿಕಾರರು, ಗುತ್ತುಗಳ ಬಾರಗರು, ಏಣೂರಿನ ಬಯಲಿನಲ್ಲಿ ಕೂಟ ಕೂಡಿದರು. ಆಗ ಪೆರಂಚೆಗುತ್ತು ಹೆಸರಾದ ಬೀಡು. ಅಲ್ಲಿ ಸಂದ ಬಾರಗರೆಲ್ಲ ದಂಡು ಕಡಿದ ಕಡುಗಲಿಗಳು'
>
> 'ನಾನು ಕನ್ನಡಿತಿಯೆಂಬುದನ್ನು ತಿಳಿ, ಕನ್ನಡನಾರಿಯ ಸತ್ವವನ್ನು ನೋಡು. ನನ್ನ ಆ ಖಡ್ಗವನ್ನಿತ್ತ ಕೊಡು'
>
> 'ನಮ್ಮ ಕಾಸರಗೋಡಿನ ಮೂರು ಗೆಲ್ಗಂಬಗಳ ನಾಡು'

ಕಾಸರಗೋಡಿನ ಕನ್ನಡ-ಕೋಟೆಯವರ ಭಾಷೆಯನ್ನ ಬಳಸಿರುವ ಅವರು ವಿಶಿಷ್ಟ ಸಿದ್ಧಿಯನ್ನ ಪಡೆದಿದ್ದರು. ಚಾರಿತ್ರಿಕ ವಸ್ತುಗಳನ್ನ ಆಧರಿಸಿದ ಕೃತಿಗಳಂತೆ ಜನಪದ ಕತೆಗಳನ್ನೂ ಸಂಗ್ರಹಿಸಿದವರು ಅವರು. ವಿಸ್ತೃತವಾದ ಆಸಕ್ತಿ ಅವರದು.

ಅಪಾರ ಸಂಖ್ಯೆಯಲ್ಲಿ ಕತೆಗಳನ್ನ ಬರೆದವರು ಕೆಲವರು. ಅಂಥವರಲ್ಲಿ ಭಾರತಿಸುತ(ಎಸ್. ಆರ್. ಅನಂತನಾರಾಯಣ) ಹಾಗೂ ನವಗಿರಿನಂದರು ಎದ್ದುಕಾಣುತ್ತಾರೆ. ಭಾರತಿಸುತರು ಪಂಜೆಯವರ ಮಾರ್ಗದರ್ಶನದಲ್ಲಿಯೇ ಕತೆಗಳನ್ನ ಬರೆಯಲು ತೊಡಗಿದುದು. ಸುಮಾರು ೨೫ ಕಥಾ ಸಂಕಲನಗಳನ್ನ ನೀಡಿರುವ ಅವರು ಕೂಡ ಜನಪದದ ಸಾಮಗ್ರಿಗೆ ಮೊರೆಹೋದುದು ಕಾಣುತ್ತದೆ. ಹುಲಿಗಳ ದಿಬ್ಬಣ, ಕಾಣೆಯಾದ ಕಬ್ಬಿಣರಾಯ, ಹೋತನ ಬೆನ್ನೇರಿದ ತೋಳ, ಮಂತ್ರದ ಕೋಲು, ಕಳ್ಳರ ಫಜೀತಿ ಮುಂತಾದ ಶೀರ್ಷಿಕೆಗಳು ಇದನ್ನೇ ಹೇಳುತ್ತವೆ. ನವಗಿರಿನಂದ ಹೆಸರಿನಿಂದ ಬರೆದ ಹೊಸಬೆಟ್ಟು ರಂಗರಾಯರು ಚಂದಮಾಮದಲ್ಲಿ ದೀರ್ಘಕಾಲದವರೆಗೆ ಕೆಲಸ ಮಾಡಿದವರು. ಅವಿರತವಾಗಿ ಕತೆಗಳನ್ನ ಬರೆಯುತ್ತ ಬಂದವರು. ಅವರು ಚಿತ್ರಕಾರರಾಗಿಯೂ ವಿಶೇಷವಾಗಿಯೆ ಕಾಣಿಸಿಕೊಂಡವರು. ಚಂದಮಾಮದ ನಿಯತ ಕಾಲಿಕೆಗಳಿಗೆ, ಒಂದಷ್ಟೆಲ್ಲ ನಿಗದಿತವಾದ ಅವಕಾಶದಲ್ಲಿ, ಸರಿ ಸುಮಾರು ಎಲ್ಲ ಬಗೆಯ ಕತೆಗಳನ್ನ ಬರೆದವರು. ಬಹು ಮುಖ್ಯವಾಗಿ ಜನಪದದ ಸರಕೇ ಇಲ್ಲಿಯೂ ಆಹಾರವಾದುದು. ರಾಜರ ಕತೆಗಳು, ಹಳ್ಳಿಗಾಡಿನ ಚಿತ್ರಣವಿರುವ ಕತೆಗಳು, ಜಾಣತನದ, ಮೋಸಹೋಗುವ ರಾಜರ ಸಮಯದ ಕತೆಗಳು, ಭೂತಬೇತಾಳಗಳ ಕತೆಗಳು ಎಲ್ಲವಕ್ಕೂ ತಮ್ಮ ಬರವಣಿಗೆಯನ್ನ ಸಿದ್ಧಗೊಳಿಸಿಕೊಂಡಿದ್ದವರು. ಹಾಗೇಂತ ನಮ್ಮ ನಡುವಿನ ಇಂದಿನ ಜೀವನದ ಪ್ರಸಂಗಗಳೂ ಸಾಕಷ್ಟು ಸ್ಥಾನ ಪಡೆದುವು. ಸರಳವಾದ, ನೇರವಾಗಿ ಕತೆಯ ಸಂದರ್ಭವನ್ನ ಮುಂದಿಡುವ, ಸಿದ್ಧ ಮಾದರಿಯ ಬರವಣಿಗೆ ಇದು ಎಂದುಕೊಂಡರೂ ಅವರು ಅದರಲ್ಲಿ ಒಂದು ಬಗೆಯ ಹದವನ್ನ ಕಂಡಿದ್ದರು. ನಿರೂಪಣೆ, ಹಿಡಿದಿಡುವ, ಓದಿಗೆ ಆಕರ್ಷಿಸುವ, ಕಥಾವಸ್ತುವನ್ನು ಸ್ವಾರಸ್ಯವಾಗಿ ತಂದುಕೊಳ್ಳುವ ವರಸೆಗಳೆಲ್ಲ ಅವರ ಬರವಣಿಗೆಗಳಲ್ಲಿ ಕಾಣುತ್ತವೆ. ಮಕ್ಕಳಿಗೂ ದೊಡ್ಡವರಿಗೂ ಆಗುವ ಕತೆಗಳ ಬಂಡವಲೇ ಇದು. ಸಾಮಾನ್ಯವಾಗಿ ಮಕ್ಕಳಿಗೆ ಎಂದುಕೊಳ್ಳಬಹುದಾದರೂ ಚಂದಮಾಮ ಎಲ್ಲ ಬಗೆಯ ವಯೋಮಾನದ ಓದುಗರನ್ನ ಆಶ್ರಯಿಸಿತ್ತು ಎನ್ನುವುದನ್ನು ತಳ್ಳಿ ಹಾಕಲಾಗದು. ಅಲ್ಲಿನ ಕತೆಗಳು ಅದನ್ನೆಲ್ಲ ಗಮನಿಸಿಯೇ ಇರುತ್ತಿದ್ದವು. ಸುಮಾರು ೬೦೦-೭೦೦ ಕತೆಗಳನ್ನು ಬರೆದ ಅವರೇ ಕನ್ನಡದಲ್ಲಿ ಹೆಚ್ಚು ಕತೆಗಳನ್ನ ಬರೆದವರು ಎನ್ನಬಹುದಾಗಿದೆ. ಮಕ್ಕಳ ವಾಸ್ತವದ ಕಥಾ ಪ್ರಸಂಗಗಳೂ ಇಂಥಲ್ಲಿ ಕಾಣಿಸಿಕೊಂಡು ಒಂದಿಷ್ಟೆಲ್ಲ ವಿಶೇಷತೆ ಇರುವುದನ್ನ ತಳ್ಳಿ ಹಾಕಲಾಗದು. ಉದಾಹರಣೆಗೆ 'ಕೆಂಪು ಚೆಂಡು'ವಿನಂಥ ಕತೆಯನ್ನ ನೋಡಬಹುದು. ಇದರಲ್ಲಿ ಬಡತನ, ಉಳ್ಳವರ ನಡುವಿನ ಅಂತರಗಳು ಮಕ್ಕಳ ನಡುವೆ ಏನೆಲ್ಲ ಸಂಗತಿಗಳಿಗೆ ಕಾರಣವಾಗುತ್ತವೆ ಎನ್ನುವದರ ಒಂದು ಸೊಗಸಾದ ಚಿತ್ರಣವಿದೆ. ಮಕ್ಕಳಲ್ಲಿ ಮುಗ್ಧತೆ ಹಿರಿಯರ ಮನಗಳನ್ನೂ ಬದಲಿಸುವಷ್ಟು ಪರಿಣಾಮ ಬೀರಿದುದನ್ನ ಕತೆ ಹೇಳುತ್ತದೆ. ಕನ್ನಡಕ್ಕೆ ಮೂರು ಬೃಹತ್ ಕಾದಂಬರಿಗಳನ್ನ ನೀಡಿದ ದೇವುಡು ಅವರು ಮಕ್ಕಳಿಗಾಗಿ, ೧೯೩೯ರಲ್ಲಿ ಪ್ರಾರಂಭಿಸಿ, ೩೦ ವರುಷಗಳಷ್ಟು ಕಾಲ 'ನಮ್ಮ ಪುಸ್ತಕ' ಎನ್ನುವ ಪತ್ರಿಕೆಯೊಂದನ್ನ ನಡೆಸಿದರು ಎನ್ನುವುದು ಗಮನಾರ್ಹ ಸಂಗತಿ. ಮಕ್ಕಳಿಗಾಗಿ ಏನೆಲ್ಲ ಮುತವರ್ಜಿ ವಹಿಸಿ ಮಾಹಿತಿ ಸಂಗ್ರಹಿಸುತ್ತ, ಅವಕ್ಕೆ ಬೇಕಾಗುವ ಚಿತ್ರಗಳನ್ನೂ ಕಷ್ಟಪಟ್ಟು ಸೇರಿಸುತ್ತ ತರುತ್ತಿದ್ದ ಈ ಪತ್ರಿಕೆಗಳು ಅವರ ಆಸ್ಥೆಯನ್ನು, ಶ್ರಮವನ್ನು ತೋರುತ್ತವೆ. ಹೀಗೆ ಮಕ್ಕಳಿಗಾಗಿ ಬರೆಯುವಾಗ ಅವರು ಮಕ್ಕಳ ಕತೆಗಳ ಕಡೆಗೂ ಗಮನ ಹರಿಸಿದ್ದು ಸಹಜ. ಅವರು ಹಲವಾರು ಕತೆಗಳನ್ನು ಮಕ್ಕಳಿಗಾಗಿ ನೀಡಿದರು. ಅವೆಲ್ಲ ಸರಿ ಸುಮಾರು ಹಳ್ಳಿಗಾಡಿನ ಜನಪದ ಸಾಮಗ್ರಿಯವೇ. ಅವನ್ನು ಆದಷ್ಟು ಸರಳ ಭಾಷೆಯಲ್ಲಿ,

ಒಂದಿಷ್ಟೆಲ್ಲ ವಿವರಗಳೊಂದಿಗೆ ನೀಡಿದುದಿದೆ. ಅವರು 'ಮುದುಕಿಯ ಮಕ್ಕಳು' ಸಂಗ್ರಹಕ್ಕಾಗಿ ಬರೆದ ಮುನ್ನುಡಿಯಲ್ಲಿನ ಕೆಲ ಸಾಲುಗಳು ಇವು:

'ಈ ಪುಸ್ತಕವನ್ನು ಬರೆದಿರುವುದು ೭–೮ ವರ್ಷದ ಹುಡುಗರಿಗಾಗಿ. ಅವರು ಸ್ವತಂತ್ರವಾಗಿ ಓದಬಲ್ಲವರು. ಶಾಲೆಯಿಂದ ಮನೆ, ಮನೆಯಿಂದ ಶಾಲೆಗೆ ಹೋಗಿ ಬರುವುದರ ಜೊತೆಗೆ ಕೊಂಚ ಹೊರಗೂ ತಿರುಗಿರಬಹುದಾದ ಸಂದರ್ಭವುಂಟು. ಮುಂದುವರಿಯುತ್ತಿರುವ ಅವರ ಬುದ್ಧಿಯನ್ನು ಇನ್ನೂ ಅಷ್ಟು ದೂರ ಎಳೆದುಕೊಂಡು ಹೋಗುವುದು ಒಳ್ಳೆಯದು ಎಂಬ ಉದ್ದೇಶದಿಂದ ಕತೆಗಳನ್ನು ಕೊಂಚ ವಿಲಂಬಿಸಿ ಬರೆದಿದೆ. ಜೊತೆಗೆ ಹೊಸ ಹೊಸ ವಿಷಯಗಳನ್ನೂ ಮಕ್ಕಳಿಗೆ ಅಪ್ರಿಯವಾಗದ ರೀತಿಯಲ್ಲಿ ಸೇರಿಸಲು ಪ್ರಯತ್ನಿಸಿದೆ. ಈ ಪದ್ಧತಿಯು ಎಲ್ಲರಿಗೂ ಸಮರ್ಪಕವಾಗಿರುವುದೆಂದು ನನ್ನ ಭಾವನೆ.'

ಹೀಗೆ ಹೇಳುತ್ತ ಅವರು ಇನ್ನೂ ಒಂದು ಮಹತ್ವದ ಸಂಗತಿಯ ಬಗೆಗೆ ಪ್ರಸ್ತಾಪಿಸಿರುವುದು ವಿಶೇಷವಾಗಿದೆ.

'ಈ ಕಥಾಗುಚ್ಛದಲ್ಲಿರುವ ಕೆಲವು ಕಥೆಗಳ ವಿಷಯಗಳಲ್ಲಿ ಮಕ್ಕಳಲ್ಲದ ವಾಚಕರಲ್ಲಿ ವಿಜ್ಞಾಪಿಸಬೇಕಾದ ವಿಷಯವೊಂದುಂಟು. ಕೀಳಾದವರಲ್ಲಿ ದಯೆಯೆಂಬಾ ಈಗಿನ ಸಮಾಜದಲ್ಲಿ ಕಂಡು ಬರುವ ಕೀಳು ಮೇಲುಗಳನ್ನು ಕುರಿತು ಹೇಳಬೇಕಾಗಿದ್ದಿತೆಂದು ಕೆಲವರಿಗೆ ತೋರಬಹುದು. ಈ ಸಣ್ಣ ವಯಸ್ಸಿನಲ್ಲಿ ಆ ಭಾವಗಳನ್ನು ಮನಸ್ಸಿನಲ್ಲಿ ನೆಡಬಾರದು. ಅಲ್ಲದೆ ಈ ಪುಸ್ತಕವನ್ನು ಈಗ ಓದುವವರು ಮುಂದೆ ದೊಡ್ಡವರಾಗುವ ವೇಳೆಗೆ ಈ ವಿಷಮ ಸಮಸ್ಯೆಯು ಬಹುತರದಲ್ಲಿ ಕಳೆದುಹೋಗಿರುತ್ತದೆ ಎಂಬ ನಂಬಿಕೆಯೂ ಉಂಟು. ತಾನು ಉತ್ತಮ ವರ್ಗದವನೆಂಬುವ ಹೆಮ್ಮೆಯವನಿಗೆ ಆದ ಭಂಗ ಇವನ್ನು ಮಾತ್ರ ತೋರಿಸಿದೆ.'

ಇಷ್ಟೇ ಅಲ್ಲದೆ ಈ ಕತೆಗಳನ್ನ ಉಪಾಧ್ಯಾಯರು ಮೊದಲು ಓದಿಸಿ ಅನಂತರ ಒಂದು ಸಲ ಹುಡುಗರನ್ನು ಕಥಾಪಾತ್ರಗಳನ್ನಾಗಿ ಮಾಡಿ ನಾಟಕ ಮಾಡಲೂ ಕೂಡ ಸೂಚಿಸಿದ್ದಾರೆ. ಇವೆಲ್ಲ ಮಾತುಗಳು ದೇವುಡು ಅವರು ಮಕ್ಕಳ ಓದಿನ ಬಗೆಗೆ, ಅವರ ಓದಿನಲ್ಲಿ ಈ ಬಗೆಯ ಕತೆಗಳ ಬಗೆಗೆ ಎಷ್ಟೆಲ್ಲ ಗಂಭೀರವಾಗಿ ತೊಡಗಿಕೊಂಡಿದ್ದರು ಎನ್ನುವುದು ಇಲ್ಲಿ ಗಮನಿಸಬೇಕಾದ ಸಂಗತಿ. ಅಲ್ಲದೆ ಇಲ್ಲಿನ ಅವರ ಆಸಕ್ತಿ ಶಾಲಾ ಓದಿನ ಹೊರಗಿನದು ಎನ್ನುವದೂ ಗಮನಾರ್ಹ.

ಕತೆಗಳ ಮೂಲಕ ನೀತಿಯನ್ನ ಮಕ್ಕಳಿಗೆ ತಲುಪಿಸುವ ನಿಟ್ಟಿನಲ್ಲಿ ದೇವುಡು ಅವರು ತಾವು ಚಿಂತಿಸಿದುದನ್ನು ಮುಂದಿಟ್ಟಿದ್ದಾರೆ. ಅವರ 'ಬುದ್ಧಿಯ ಕತೆಗಳು' ಸಂಗ್ರಹದಲ್ಲಿ ಪೀಠಿಕೆಯಾಗಿ ಬರೆಯುತ್ತಾರೆ:

'ಒಂದನೇ ತರಗತಿಯ ಉಪಯೋಗಕ್ಕಾಗಿ ಬರೆದಿರುವ ಈ ಪುಸ್ತಕದಲ್ಲಿ ನೀತಿಯನ್ನು ಕಂಠೋಕ್ತವಾಗಿ ಹೇಳಿಲ್ಲ. ನೀತಿಯ ಸ್ವರೂಪವು ಮಕ್ಕಳ ಮನಸ್ಸಿನಲ್ಲಿ ಮೂಡಲು ಅನುಕೂಲಿಸುವಂತೆ ಕಥೆಗಳನ್ನು ಮಾತ್ರ ಹೇಳಿದೆ. ಈ ತರಗತಿಯಲ್ಲಿನ ಮಕ್ಕಳು ಸುಮಾರು ೭–೮ರ ವರೆಗಿನ ವಯಸ್ಸಿನವರು. ಅವರಿಗೆ ಬೇಸರವಾಗದಂತೆ ಹೇಳಿಕೊಟ್ಟರೆ ಕಲಿಯುವುದು ಹೆಚ್ಚು ಸಂಭವ. ಅದರಲ್ಲೂ ತಾಯಿಯರು ಮಾಡುವಂತೆ ಔಷಧದ ಗುಳಿಗೆಯನ್ನು ಸಕ್ಕರೆಯಲ್ಲಿ

ಹುಗಿದಿಟ್ಟು ತಿನ್ನಿಸುವುದು ಬಲು ಕ್ಷೇಮ ಹಾಗೂ ಲಾಭಕರ. . . ಉಪಾಧ್ಯಾಯರು ಮೊದಲ ದಿವಸ ರಸವತ್ತಾಗುವಂತೆ ಕಥೆಯನ್ನು ಹೇಳುವುದು. ಎರಡನೆಯ ದಿವಸ ಹುಡುಗರಿಂದಲೇ ಹೇಳಿಸುವುದು. ಮೂರನೆಯ ದಿವಸ ಅದನ್ನು ನಾಟಕದಂತೆ ಆಡಿ ತೋರಿಸುವುದು. ಇದಿಷ್ಟೂ ಮಾಡುವ ವೇಳೆಗೆ ಆಗಲೇ ಕತೆಯಲ್ಲಿರುವ ನೀತಿಯು ಹುಡುಗರ ಮನಸ್ಸಿಗೆ ಹಿಡಿದಿರುತ್ತದೆ. ಹೀಗಾಗಬೇಕೆಂದೇ, ನೀತಿಯೊಂದನ್ನು ಹುಡುಗರ ಮುಂದಿಟ್ಟು ಕಥೆಯನ್ನು ಹೇಳಬಾರದೆಂದೇ, ಇದರಲ್ಲಿ ನೀತಿಗಳನ್ನು ಬರೆದಿಲ್ಲ.'

ಉತ್ತರಕರ್ನಾಟಕ ಭಾಗದಲ್ಲಿ ಅನೇಕರು ಮಕ್ಕಳಿಗಾಗಿ ತೊಡಗಿಕೊಂಡರು. ಶಿಕ್ಷಣದ ಭಾಗವಾಗಿಯೇ ಬರವಣಿಗೆ ವಿಶೇಷವಾಗಿ ಕಂಡರೂ ಕೆಲವೆಲ್ಲ ಸ್ವತಂತ್ರ ಪ್ರಯತ್ನಗಳಾಗಿ ಸ್ವ ಆಸಕ್ತಿಯನ್ನ ವಿಶೇಷವಾಗಿಯೇ ಹೇಳಿದವು. ಗಂಗಾಧರ ಮಡಿವಾಳೇಶ್ವರ ತುರಮುರಿ, ವೆಂಕಟ ರಂಗೋ ಕಟ್ಟಿ, ಶಾಂತಕವಿ, ಶಿವರುದ್ರಪ್ಪ ಸೋಮಪ್ಪ ಕುಲಕರ್ಣಿ, ವಲ್ಲಭ ಮಹಾಲಿಂಗ ತಟ್ಟಿ, ಮೊದಲಾಗಿ ಅನೇಕ ಹಿರಿಯರು ಆಸ್ಥೆಯಿಂದ ಮಕ್ಕಳ ಲೋಕಕ್ಕಾಗಿ ಕೆಲಸ ಮಾಡಿದರು. ಗದಿಗೆಯ್ಯ ಹೊನ್ನಾಪುರಮಠ(೧೮೭೦-೧೯೩೩) ಅವರ 'ನೀತಿ ಮಂಜರಿ' ಎನ್ನುವ ಕಥೆಗಳ ಸಂಕಲನ ೧೧ ಬಾರಿ ಮುದ್ರಣ ಕಂಡು ಶಾಲೆಯಲ್ಲಿ ತಪ್ಪದೆ ಪಠ್ಯವಾಗಿ ಇತ್ತಂತೆ. ಅವರು 'ಅಲ್ಲಾವುದ್ದೀನ್ ಮತ್ತು ಸೋಜಿಗವಾದ ದೀಪ' ಕನ್ನಡದಲ್ಲಿ ನೀಡಿದ್ದರು, ಹಾಗೆಯೇ ಅನೇಕ ಜೀವನ ಚರಿತ್ರೆಗಳು, ಕತೆಗಳು ಮುಂತಾಗಿ ಬಹಳಷ್ಟು ಸಂಖ್ಯೆಯಲ್ಲಿ ಪುಸ್ತಕಗಳನ್ನು ಮಕ್ಕಳಿಗಾಗಿ ಅವರು ತಂದುದಿದೆ. 'ಕರ್ನಾಟಕದ ಗಾಂಧಿ' ಎಂದೇ ಹೆಸರಾಗಿದ್ದ ಹರ್ಡೇಕರ ಮಂಜಪ್ಪ(೧೮೮೯-೧೯೪೭) ವರುಷಕ್ಕೆ ೧೬ ಕೃತಿಗಳನ್ನ ತರುವ ಸಂಕಲ್ಪ ಮಾಡಿಕೊಂಡು ಐವತ್ತಕ್ಕೂ ಹೆಚ್ಚು ಕೃತಿಗಳನ್ನ ಮಕ್ಕಳಿಗಾಗಿಯೇ ಮೀಸಲಾದ ಪುಸ್ತಕ ಮಾಲೆಯಾಗಿ ತಂದರು. ಜೀವನ ಚರಿತ್ರೆಗಳು ಇದರಲ್ಲಿ ವಿಶೇಷ. 'ಬುದ್ಧಿಯ ಮಾತು' ಕೃತಿ ೧೬ ಸಲ ಮುದ್ರಣ ಕಂಡಿತಂತೆ. ಪಂಡಿತ ಚೆನ್ನಪ್ಪ ಕವಲಿ(೧೯೦೦-೧೯೮೫)ಅವರು ಇನ್ನೊಬ್ಬ ಆಸಕ್ತಿಯ ಮಕ್ಕಳ ಲೇಖಕರಾಗಿ ಕಾಣಿಸಿಕೊಂಡವರು. ಶಾಲಾ ಶಿಕ್ಷಕರೂ ಆಗಿದ್ದ ವಿದ್ವಾಂಸರಾಗಿದ್ದ ಅವರು ೬೦ಕ್ಕೂ ಹೆಚ್ಚು ಮಕ್ಕಳ ಪುಸ್ತಕಗಳ ಲೇಖಕರು. 'ಪುಟ್ಟಣ್ಣನ ಪಂಚತಂತ್ರ'(ಕೇಂದ್ರ ಸರಕಾರದ ಬಹುಮಾನ), 'ಸುಸಂಸ್ಕೃತ ಶಿಶು ಸಾಹಿತ್ಯ ಸುಧಾ'(ಮೈಸೂರು ಸರ್ಕಾರದಿಂದ ಪುರಸ್ಕೃತ), 'ಸಚಿತ್ರ ಗಾಂಧಿ' ಮುಂತಾಗಿ ವಿಭಿನ್ನವಾದ ಬಗೆಗಳಲ್ಲಿ ಅವರು ಪುಸ್ತಕ ರಚಿಸಿದುದಿದೆ. ಇಂಥವರೆಲ್ಲರ ಪ್ರಯತ್ನದಿಂದಾಗಿ ಮಕ್ಕಳಿಗಾಗಿನ ಬರಹ ತನ್ನ ಮಾದರಿಗಳನ್ನ ರೂಪಿಸಿಕೊಳ್ಳತೊಡಗಿತು ಎಂದು ಕಾಣುತ್ತದೆ.

ಜಿ. ಪಿ. ರಾಜರತ್ನಂ

ರಾಜರತ್ನಂ ಅವರ ಹೆಸರು ಮಕ್ಕಳ ಕಾವ್ಯದ ಸಂದರ್ಭದಲ್ಲಿ ವಿಶೇಷವಾಗಿಯೇ ಕೇಳಿಬಂದಿರುವುದಿದೆ. ಹಾಗೆಯೇ ಗದ್ಯದಲ್ಲಿಯೂ ಅವರ ಕೃಷಿ ಅಪಾರವಾದುದು, ವಿಸ್ತೃತವಾದುದು. ಅದರ ಹರವು ದೊಡ್ಡದು. ಕನ್ನಡ ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ರೂಪಿತವಾಗಿರುವ ರಾಜರತ್ನಂ ಅವರ ಮಕ್ಕಳ ಸಾಹಿತ್ಯದ ಸಮಗ್ರ ಮರುಮುದ್ರಣ ಏಳು ಸಂಪುಟಗಳಷ್ಟಾಗುತ್ತದೆ ಎಂದಿರುವುದದನ್ನ ಗಮನಿಸಬೇಕಾದುದು. ಇದರಲ್ಲಿ ಒಂದೊಂದು ಸಂಪುಟವೂ ೬೦೦-೭೦೦ ಪುಟಗಳಷ್ಟಾಗುವುದು ಎಂದಿರುವುದಿದೆ.

ಅದರಲ್ಲೂ ಒಂದನೆಯ ಸಂಪುಟ ಬಿಟ್ಟರೆ ಉಳಿದ ಆರು ಸಂಪುಟಗಳು ಗದ್ಯವನ್ನೇ ಹೊಂದಿರುವುದಾಗಿ ಕಾಣುತ್ತದೆ. ಇಲ್ಲಿ ಅವರು ಪುಟಾಣಿಗಳಿಂದ ಹಿಡಿದು ಹೈಸ್ಕೂಲು ಮಟ್ಟದ ಮಕ್ಕಳವರೆಗೂ ನಿಲುಕಬಲ್ಲ ಬರಹವನ್ನ ನೀಡಲು ನೋಡಿದ್ದಾರೆ. ಹಾಗಾಗಿ ಗಂಭೀರವಾದ ಅನೇಕ ಸಂಗತಿಗಳನ್ನ ತಂದುಕೊಂಡಿದ್ದಾರೆ. ಇದು ಗಮನಾರ್ಹವಾದ ಸಂಗತಿ.

'ಗಾಂಧೀ ದಾಸ್ಯ' ಎಂದೇ ಕರೆದುಕೊಂಡಿರುವ ಅವರ ಗಾಂಧೀ ಸ್ಫೂರ್ತಿಯ ಜೀವನ, ಮಕ್ಕಳಿಗೆ ಗಾಂಧಿಯನ್ನ ಮುಟ್ಟಿಸುವಲ್ಲಿ ಸಾಕಷ್ಟು ತೊಡಗಿಕೊಂಡುದು ಅವರ ಮಕ್ಕಳ ಸಾಹಿತ್ಯದಲ್ಲಿಯೇ ಎದ್ದುಕಾಣುವ, ಹಾಗೆಯೇ ಪ್ರತ್ಯೇಕವಾಗಿ ನಿಲ್ಲಬಲ್ಲ ಗದ್ಯದ ಕಟ್ಟು. 'ಮಕ್ಕಳ ಗಾಂಧಿ' ಎಂದೇ ತಲೆಬರಹವಿರುವ ಬರಹಗಳ ಕಟ್ಟು ಇದು. ಗಾಂಧೀಜಿಯವರ ಬಾಲ್ಯದ, ಅವರ ಮುಂದಿನ ಜೀವನಕ್ಕೆ ಆಧಾರವಾಗಿ ನಿಂತ, ಪ್ರಸಂಗಗಳನ್ನೇ ಆಯ್ದುಕೊಂಡು ಬರೆದ ಜೀವನ ಚಿತ್ರಣ ಅದರ ಒಂದು ಪ್ರಮುಖ ಭಾಗವಾಗಿದೆ.

ಉತ್ತರಪ್ರದೇಶದ ಒಂದು ಹಳ್ಳಿಯಲ್ಲಿನ ನೂರು ದಾಟಿದ ಅಜ್ಜಿಯೊಬ್ಬಳ ಪ್ರಸಂಗವನ್ನ ಅವರು ಕೊಟ್ಟಿರುವುದನ್ನ ಇಲ್ಲಿ ಉಲ್ಲೇಖಿಸಬಹುದು. ಈ ಅಜ್ಜಮ್ಮ ಧರ್ಮಭೀರುವಾದವಳು, ನಮ್ಮ ದೇಶದಲ್ಲಿನ ಜನಸಾಮಾನ್ಯರಲ್ಲಿನ ಪರಂಪರಾಗತ ನಂಬಿಕೆಗಳಂತೆ ಹಲವಾರು ತೀರ್ಥಕ್ಷೇತ್ರಗಳನ್ನ ಕಂಡು ಬಂದಿದ್ದವಳು. ಬದರಿಕಾಶ್ರಮದ ಕಷ್ಟದ ಪ್ರವಾಸವನ್ನೂ ಮಾಡಿಮುಗಿಸಿದ್ದಳು. ಅಷ್ಟೆ ಅಲ್ಲ ತನ್ನೂರಿನಲ್ಲಿ ಒಂದೆರಡು ದೇವಸ್ಥಾನಗಳನ್ನೂ ಕಟ್ಟಿಸಿದ್ದಳು, ಅವಕ್ಕೆ ತನ್ನ ಹೊಲಗಳನ್ನೂ ಹಚ್ಚಿದ್ದಳು. ಅಂಥವಳು ಗಾಂಧಿಯನ್ನ ಕಾಣಲು ಕಾತರದಿಂದ ಕಾದುಕೊಂಡಿದ್ದಳು. ರಾಮ ಕೃಷ್ಣರ ಹಾಗೆ ಜನರಿಗೆಲ್ಲ ಒಳಿತನ್ನ ಮಾಡುತ್ತ ಈ ಸಮಯದಲ್ಲಿ ಸಂಚರಿಸುತ್ತಿರುವವರು ಗಾಂಧಿ ಎನ್ನುವುದೇ ಅವಳೊಳಗಿನ ನಂಬಿಕೆ. ಗಾಂಧಿ ಆ ಸಮಯದಲ್ಲಿ ಕಾರೊಂದರಲ್ಲಿ ಆ ಭಾಗದಲ್ಲಿಯೇ ಸಂಚರಿಸುತ್ತಿದ್ದರು. ಅವರ ಕಾರು ಆ ಅಜ್ಜಿ ಇರುವ ಹಳ್ಳಿಯ ಪಕ್ಕದ ದಾರಿಯಲ್ಲೇ ಹೋಗತೊಡಗಿತ್ತು. ಆ ಸುದ್ದಿ ತಿಳಿದು, ಇಷ್ಟು ಸಮಯದಿಂದ ಕಾಯುತ್ತಿದ್ದ ಅಜ್ಜಿ ದಾರಿಯ ಬದಿಯಲ್ಲಿ ಕಾದುಕುಳಿತಳು. ಕಾರು ಮಾತ್ರ ವೇಗವಾಗಿ ಓಡುತ್ತಿತ್ತು. ಗಾಂಧೀಜಿಯವರಿಗೆ ಆ ಅಜ್ಜಿಯ ಬಗೆಗೆ ಏನೂ ಗೊತ್ತಿರಲಿಲ್ಲ. ಆದರೆ ಆ ಅಜ್ಜಿ ಇರುವಲ್ಲಿಗೆ ಬರುವಷ್ಟರಲ್ಲಿ ಅಕಸ್ಮಾತ್ತಾಗಿ ಒಂದು ಟೈರು ಸರಿಯಾಗಿ ಹರಿದುಹೋಯಿತು. ಕಾರು ನಿಂತುಬಿಟ್ಟಿತು. ಅಜ್ಜಿಗೆ ಗಾಂಧಿಯನ್ನು ನೊಡಬೇಕೆನ್ನುವ ಬಯಕೆ ತೀರಿತು. ಆಗ ಗಾಂಧಿ 'ನನ್ನನ್ನು ನೊಡಬೇಕೆಂದು ಬಯಸುತ್ತಿದ್ದ ಆ ಮುದುಕಿಯ ಆಸೆ ತೀರಬೇಕೆಂದು ದೇವರ ಇಚ್ಛೆ. ಅದರಿಂದಲೇ ಈ ಸ್ಥಳದಲ್ಲಿಯೇ ಟೈರು ಹರಿದು ಗಾಡಿ ನಿಂತಿತು. ದೇವರ ಇಚ್ಛೆಗಿಂತ ದೊಡ್ಡದು ಯಾವುದೂ ಇಲ್ಲ' ಎಂದು ಅಂದುಕೊಂಡರಂತೆ ಎಂದು ಬರೆಯುತ್ತಾರೆ ರಾಜರತ್ನಂ. ಮತ್ತೂ ಅವರು ಬರೆಯುವುದೆಂದರೆ 'ಅಜ್ಜಮ್ಮನಿಗೆ ಆಕೆ ಆಸೆಪಡುತ್ತಿದ್ದ ಗಾಂಧೀದರ್ಶನ ಚೆನ್ನಾಗಿ ಸಿದ್ಧಿಯಾಗುವದಕ್ಕೆ ಕಾರಣ : ಗಾಂಧೀಯನ್ನು ಕಾಣಬೇಕು ಎಂದು ಆಕೆಯ ಮನಸ್ಸಿನಲ್ಲಿ ಇದ್ದ ಒಳ್ಳೆಯ ಭಾವನೆ. ಆಕೆಯ ಮನಸ್ಸಿನಲ್ಲಿ ಅಂತಹ ಒಳ್ಳೆಯ ಭಾವನೆ ಬರುವುದಕ್ಕೆ ಕಾರಣ, ಗಾಂಧೀಜಿ ಅಂತಹ ಒಳ್ಳೆಯ ಮನುಷ್ಯರು. ಈ ಸತ್ಯವಾದ ಸಂಗತಿಯನ್ನು ನಾವು ಮರೆಯಬಾರದು' ಈ ಪ್ರಸಂಗಕ್ಕೆ ನೀಡಿದ ತಲೆಬರೆಹ ಕೂಡ 'ಅಜ್ಜಮ್ಮ ಆಸೆಪಟ್ಟ ಅವತಾರ' ಎಂದು.

ಇದೇ ಬಗೆಯಲ್ಲಿ ದೆಹಲಿಯಿಂದ ಹತ್ತು ಮೈಲಿ ದೂರದಲ್ಲಿ ಬೇನೆಯಿಂದ ಕೃಶಳಾಗಿ ಹಾಸಿಗೆ ಹಿಡಿದು ಕೇವಲ ಗಾಂಧೀಜಿಯನ್ನು ನೋಡಬೇಕು ಎನ್ನುವ ಆಸೆಯಿಂದ ಜೀವ ಹಿಡಿದುಕೊಂಡಿದ್ದ ಇನ್ನೊಬ್ಬ ಅಜ್ಜಿಯ ಕತೆಯೂ ಇಂಥದೇ ಉದಾಹರಣೆ. ಆ ಪ್ರಸಂಗದ ಕೊನೆಯಲ್ಲಿ ರಾಜರತ್ನಂ ಬರೆಯುವುದು ಹೀಗೆ.

'ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆ ಹೀಗೆಯೇ ಭಗವಂತನಾದ ಬುದ್ಧನು ರೋಗಿಗಳ ಹತ್ತಿರಕ್ಕೆ ತಾನೇ ಹೋಗಿ, ಅವರ ಸೇವೆ ಮಾಡಿ, ಅವರ ಜೀವಕ್ಕೆ ಸಮಾಧಾನ ತರುತ್ತಿದ್ದ. ಅದರಂತೆಯೇ ಎರಡು ಸಾವಿರ ವರ್ಷಗಳ ಹಿಂದೆ ಸ್ವಾಮಿಯಾದ ಯೇಸುಕ್ರಿಸ್ತನೂ ರೋಗಿಗಳ ಬಳಿಗೆ ಹೋಗಿ, ಅವರ ಸೇವೆ ಮಾಡಿ, ಅವರ ಜೀವಕ್ಕೆ ಸಮಾಧಾನ ತರುತ್ತಿದ್ದ. ಈ ದಿನ, ಈ ನಮ್ಮ ಕಣ್ಣ ಮುಂದಿನ ಕಾಲದಲ್ಲಿ ಮಹಾತ್ಮಾಗಾಂಧಿಯವರು ಬುದ್ಧದೇವನಂತೆ, ಯೇಸುಸ್ವಾಮಿಯಂತೆ ಬದುಕಿ ಹೋಗಿದ್ದಾರೆ.'

'ಗಿಳಿಮರಿಗಳ ಗಾಂಧಿ' ಎಂದೇ ಒಂದು ಶೀರ್ಷಿಕೆಯಿದೆ. ಇದರಲ್ಲಿ ರಾಜರತ್ನಂ ತುಂಬ ಪ್ರಚುರವಾಗಿರುವ ಸಹವಾಸ ದೋಷದಿಂದ ವಿಭಿನ್ನವಾಗಿ ರೂಪುಗೊಂಡ ಎರಡು ಗಿಳಿಗಳ ಕತೆಯನ್ನ ಹೇಳಿದ್ದಾರೆ. ಅದಕ್ಕೆ ಉಪಸಂಹಾರ ಬರೆಯುತ್ತ ಹೇಳುತ್ತಾರೆ:

'ನೀವು ಆಲದ ಮರದ ಮನೆಯ ಗಿಳಿಯ ಹಾಗೆ ಆಗಬೇಕಾದರೆ ಏನು ಮಾಡಬೇಕು ಗೊತ್ತೆ ? ಶ್ರೀರಾಮ, ಶ್ರೀಕೃಷ್ಣ, ಜರತುಷ್ಟ, ಭಗವಾನ್ ಮಹಾವೀರ, ಗೌತಮ ಬುದ್ಧ, ಸಾಕ್ರೆಟೀಸ್, ಯೇಸುಕ್ರಿಸ್ತ, ಮಹಮ್ಮದ್ ಪೈಗಂಬರ್ , ಗುರುನಾನಕ್, ಚೈತನ್ಯ, ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಮಹಾತ್ಮಾಗಾಂಧಿ, ಜವಾಹರಲಾಲ ನೆಹರು ಮುಂತಾದವರ ವಿಷಯವನ್ನು ಪುನಃ ಪುನಃ ಓದಬೇಕು. ಈಗ ನಿಮಗೆ ಅರ್ಥವಾಗದೆ ಹೋದರೂ ದೊಡ್ಡವರಾಗುತ್ತಾ ಬೆಳೆದ ಹಾಗೆಲ್ಲಾ ಬದುಕುವುದಕ್ಕೆ ಪ್ರಯತ್ನ ಮಾಡಬೇಕು.

'ಈ ಪುಸ್ತಕದಲ್ಲಿ ಮಹಾತ್ಮಾ ಗಾಂಧಿಯವರನ್ನು ಕುರಿತ ಕೆಲವು ಮಾತು ಇವೆ. ಇವುಗಳನ್ನು ನಿಮ್ಮಂಥ ಪುಟ್ಟ ಮಕ್ಕಳಿಗಾಗಿ ಬರೆದುದರಿಂದಲೇ ಇದಕ್ಕೆ 'ಗಿಳಿಮರಿಗಳ ಗಾಂಧಿ' ಎಂದು ಹೆಸರು.'

'ಗಾಂಧೀ ವಿದ್ಯೆ' ಗಾಂಧೀ ಜನ್ಮದಿನ ಆಚರಿಸುವ ಅಗತ್ಯ ಹಾಗೂ ಖಾದಿಯ ಮಹತ್ವಗಳನ್ನ ಹೇಳುವ ಬರಹಗಳ ಗುಂಪು. ಜೊತೆಗೆ 'ಗಾಂಧೀಚರಿತ್ರೆ' ದೀರ್ಘವಾದ ಕಥನ ಕಾವ್ಯ, 'ಬೆಳೆಯುವ ಪೈರು' ಗಾಂಧೀ ಬಾಲ್ಯದ ಪ್ರಸಂಗ ಆಧಾರಿಸಿದ ಕಿರು ನಾಟಕ, 'ಗಾಂಧೀರಾಜ್ಯಭಾರ' ಎನ್ನುವ ಮೂರು ಉಪನ್ಯಾಸಗಳ ಕಟ್ಟು ಇವೆಲ್ಲ ಅವರು ಗಾಂಧೀಯನ್ನ ಮಕ್ಕಳಿಗೆ ಹೇಗೆಲ್ಲ ಮುಟ್ಟಿಸಲು ಬಯಸಿದರು ಎನ್ನುವುದನ್ನು ಹೇಳುತ್ತವೆ. ಗಾಂಧೀ ರಾಜ್ಯಭಾರ ಶಬ್ದವನ್ನ ಅವರು ಗಾಂಧೀಜಿಯವರ 'ರಾಮರಾಜ್ಯ'ದ ಬದಲಿಗೆ ಬಳಸಿಕೊಂಡಿರುವುದನ್ನು ಗಮನಿಸಬಹುದು. "ಗಾಂಧಿಯವರು ನಮಗೆ 'ಪ್ರಜಾರಾಜ್ಯ'ದ ಕಲ್ಪನೆಯನ್ನು ಕೊಟ್ಟು, ಅದನ್ನು 'ರಾಮರಾಜ್ಯ' ಎಂದು ಕರೆದರು. ಅದನ್ನೇ ನಾವು 'ಗಾಂಧೀರಾಜ್ಯ' ಎಂದು ಕರೆದರೂ ಒಪ್ಪುತ್ತದೆ. . . . 'ಗಾಂಧಿ' ಎಂದರೆ 'ಆದರ್ಶ ಪ್ರಜೆ' ಎಂದು ಅರ್ಥ," ಎನ್ನುವ ಅವರ ಮಾತುಗಳು ಗಾಂಧಿಯವರನ್ನ ಕಂಡುಕೊಂಡ ಬಗೆಯನ್ನು, ಅಪಾರ ಗೌರವವನ್ನು, ನಿಷ್ಠೆಯನ್ನು ತೋರಿಸುತ್ತವೆ. ಗಾಂಧೀಜಿಯವರ ಕುರಿತು ಉದಾತ್ತ ಭಾವ ಮೂಡುವಂತೆ, ಬದುಕಿನುದ್ದಕ್ಕೂ ಆದರ್ಶವಾಗಿ

ಅನುಸರಿಸುವಂತೆ ಮಕ್ಕಳ ಮುಂದೆ ಒಂದು ದೊಡ್ಡ ಉದಾಹರಣೆಯಾಗಿ ಇಡಲು ಬಯಸಿದುದು ಇಲ್ಲಿ ಸುವ್ಯಕ್ತವಿದೆ.

ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ ಹೀಗೆ ಗಾಂಧಿಯ ಬಗೆಗೆ ಬರೆಯುತ್ತ ನಡುವೆ ಹಲವಾರು ಬೇರೆ ಬೇರೆ ಸಂಗತಿಗಳನ್ನ ಪೂರಕವಾಗಿ ಸೇರಿಸುತ್ತ ಹೋಗಿರುವುದು. 'ಮಕ್ಕಳ ಗಾಂಧೀ ಮಾದರಿ' ಎನ್ನುವ ಶೀರ್ಷಿಕೆಯಲ್ಲಿ ಏಕಲವ್ಯ ಹಾಗೂ ಭರತನ ಬಗೆಗೆ ಬರೆಯುತ್ತ ಮಕ್ಕಳು ತಾವೂ ಹಾಗೆಯೇ ಆಗಬೇಕು ಎನ್ನುತ್ತಾರೆ. ರಾಮನಿಗಾಗಿ ಕಾದು ದರ್ಶನ ಪಡೆದ ಅಂಬಿಗ ಗುಹನ ಪ್ರಸಂಗ ಬರೆಯುತ್ತಾರೆ. ಹಾಗೆಯೇ ಬುದ್ಧನನ್ನ ಕಾಣಲು ಕಾತರಿಸಿ ಕಾಯ್ದು ಕಸ ಗುಡಿಸುವ ಸುನೀತನ ಬಗೆಗೆ ಬರೆಯುತ್ತಾರೆ.

'ದೇವರಂಥ ಮನುಷ್ಯ' ಎನ್ನುವ ಶೀರ್ಷಿಕೆಯಲ್ಲಿ ಗಾಂಧಿ ಕಿಕ್ಕಿರಿದ ರೈಲಿನಲ್ಲಿ ಕುಳಿತು ಕೊಳ್ಳಲು ಸ್ಥಳವಿಲ್ಲದೆ ಪ್ರಯಾಣಿಸುತ್ತಿದ್ದ ಪ್ರಸಂಗ ಬರುತ್ತದೆ. ಗಾಂಧಿ ಎಂದೊಡನೆ ಜನ ಅವಾಕ್ಕಾದರು. ಅವರು ತಮ್ಮೊಳಗೆ '. . . . ಇತರರ ತೊಂದರೆಯನ್ನು ಕಡಿಮೆಮಾಡಲು ಇಷ್ಟು ತೊಂದರೆಪಟ್ಟನಲ್ಲ ! ನಿಜವಾಗಿಯೂ ಈತನೇ ದೇವರಂಥ ಮನುಷ್ಯ !' ಎಂದುಕೊಂಡರಂತೆ. 'ಗಾಂಧಿಯವರು 'ದಾಮ್ಯತ', 'ದತ್ತ' ಮತ್ತು 'ದಯಧ್ವಂ' ಎಂಬ ದೇವರ ಮೂರು ಆಜ್ಞೆಗಳನ್ನೂ ನಡೆಸುತ್ತಿರುವುದರಿಂದಲೇ ಅವರನ್ನು ಕುರಿತು 'ವ್ಯಕ್ತಂ ತ್ವಮೇವ ಭಗವನ್ ಪುರುಷೋತ್ತಮೋಸಿ" ಎನ್ನುವ ಅವರ ವಾಕ್ಯ ಸಾರವಾಗಿ ಗಾಂಧಿಯನ್ನ ಅವರು ಕಂಡುಕೊಂಡುದು, ಮಕ್ಕಳಿಗೆ ಮುಟ್ಟಿಸಿದುದನ್ನೂ ಹೇಳುತ್ತದೆ ಎಂದರೆ ಅತಿಶಯೋಕ್ತಿಯಲ್ಲ.

ಈ ಬಗೆಯ ಬರಹಗಳಲ್ಲಿ ಎದ್ದುಕಾಣುವ ಸಂಗತಿ ಎಂದರೆ ಆದಷ್ಟು ಸರಳವಾದ, ಕಿರಿದಾದ ವಾಕ್ಯಗಳು, ಮಕ್ಕಳಿಗೆ ಸಾಧ್ಯವಾದಷ್ಟೂ ಸುಲಭವಾಗಿ ಅರ್ಥವಾಗುವ ನಿಟ್ಟಿನಲ್ಲಿ ಯೋಚಿಸಿ ಬರೆದಂಥವು. ಹಾಗೆಯೇ ವೈಚಾರಿಕವಾಗಿ, ವಾಸ್ತವದ ಎಚ್ಚರದಿಂದ ಕೂಡಿದ ಮಾತುಗಳು ಇಲ್ಲೆಲ್ಲ ತುಂಬಿದ್ದು, ಮಕ್ಕಳಿಗೆ ಹೇಳುವಾಗಲೂ ರಾಜರತ್ನಂ ಕೇವಲ ಭಾವಾವೇಶಕ್ಕೆ ಒಳಗಾಗಿರಲಿಕ್ಕಿಲ್ಲ ಎನ್ನುವುದನ್ನ ಹೇಳುವಂತಿದೆ.

ಮಕ್ಕಳಿಗೆ ಬರೆಯುತ್ತ ಎಂಥ ವೈಚಾರಿಕತೆಯವರೆಗೂ ರಾಜರತ್ನಂ ಹೋದರು ಎನ್ನುವುದಕ್ಕೆ ಒಂದು ಉದಾಹರಣೆಯನ್ನ ಅವರ 'ಜನತಾ ರಾಜ್ಯಭಾರಂ' ಲೇಖನದಲ್ಲಿ ಗುರುತಿಸಬಹುದು. ಜನರ ಅಪವಾದದ ಕಾರಣವಾಗಿ ಸೀತೆಯನ್ನ ಅಗಲಬೇಕಾಗಿ ಬಂದ ಪ್ರಸಂಗವನ್ನ ಎತ್ತಿಕೊಳ್ಳುತ್ತ 'ನಿರಪರಾಧಿನಿಯಾದ ಸೀತೆಯನ್ನು ರಾಮನು ಏಕೆ ಕಾಡಿಗೆ ಅಟ್ಟಿದನು ?' ಎಂಬುದಕ್ಕೆ ಮೊದಲು ಸಮಂಜಸವಾದ ಉತ್ತರ ಹೇಳಿದವನು ಭವಭೂತಿ ಎಂಬ ದೊಡ್ಡ ಕವಿ.

ಹದಿವಯಸ್ಸಿಗೆ ಕಾಲಿಟ್ಟ ಮಕ್ಕಳೂ ಅವರ ಕಣ್ಣೆದುರಿಗೆ ನಿಡಿದಾಗಿಯೇ ಇದ್ದರು ಎಂದುಕೊಳ್ಳಬಹುದು. ಅಷ್ಟೊಂದು ಗಂಭೀರವಾದ ಸಂಗತಿಗಳಿಗೆ ತಮ್ಮ ಬರಹಗಳಲ್ಲಿ ಅವಕಾಶ ಮಾಡಿಕೊಳ್ಳುತ್ತ ಹೋಗಿದ್ದಾರೆ. 'ಮಹಾತ್ಮರ ಮರಣ' ಎನ್ನುವುದೇ ಒಂದು ಲೇಖನಗಳ ಕಟ್ಟು. ಮಹಾತ್ಮಾ ಗಾಂಧಿಯವರ ಮರಣವನ್ನ ಮುಖ್ಯವಾಗಿಟ್ಟುಕೊಂಡು ಸರಳವಾದ ಭಾಷೆಯಲ್ಲಿಯೇ 'ಬದುಕನ್ನು ತಿಳಿದುಕೊಳ್ಳಬೇಕಾದುದು ಎಷ್ಟು ಅಗತ್ಯವೋ ಸಾವನ್ನು ತಿಳಿದುಕೊಳ್ಳುವುದೂ ಅಗತ್ಯ' ಎನ್ನುವುದನ್ನ ಎಳೆಯೆಳೆಯಾಗಿ ಬಿಡಿಸಿಡುತ್ತ ಹೋಗಿದ್ದಾರೆ. ಬುದ್ಧನ ಕಡೆಯ ದಿನಗಳು, ಏಸುವಿನ ಮರಣದ ಸಮಯ, ಸಾಕ್ರೆಟಿಸ್‌ನ ಮರಣದ ಸಮಯದ ಸ್ಥಿತಪ್ರಜ್ಞತೆ, ಕೃಷ್ಣನ

ವ್ಯಕ್ತಿತ್ವ ಎಲ್ಲವನ್ನ ಇದಕ್ಕಾಗಿ ಬಳಸಿಕೊಂಡಿದ್ದಾರೆ. 'ಸಾವು ಯಾವಾಗ ಬಂದರೂ ಅದು ಒಂದು ವರ; ಆದರೆ ಸತ್ಯಕ್ಕಾಗಿ ಹೋರಾಡುವಾಗ ಅದಕ್ಕಾಗಿ ಬಂದರೆ, ಆ ವೀರನಿಗೆ ಅದು ಎರಡರಷ್ಟು ವರ. ಮರಣವೆಂಬುದು ಮಾರಿಯಲ್ಲ, ಮಿತ್ರರಲ್ಲಿ ಅದು ಪರಮಮಿತ್ರ ಅದು ನಮಗೆ ಯಾತನೆಯಿಂದ ಮುಕ್ತಿ ಕೊಡುತ್ತದೆ. ನಮ್ಮೊಡನೆ ವಿರೋಧಿಸಲು ನಮಗೇ ಅದು ಸಹಾಯವಾಗುತ್ತದೆ. ಸಾವಿನಿಂದ ನಮಗೆ ಹೊಸ ಅವಕಾಶಗಳೂ ಹೊಸಹೊಸ ಆಶಯಗಳೂ ದೊರಕುತ್ತವೆ. ನಿದ್ರೆ ಹೇಗೋ ಹಾಗೆ ಸಾವು ಕೂಡ ಒಂದು ಸವಿಯಾದ ಚೈತನ್ಯದಾಯಿ'ಎನ್ನುವ ಗಾಂಧಿಯವರ ಮಾತುಗಳನ್ನ ಉಲ್ಲೇಖಿಸಿರುವುರಲ್ಲೇ ಅದರೆಲ್ಲ ಗಾಂಭೀರ್ಯವನ್ನ ಕಾಣಬಹುದು.

ಬುದ್ಧನನ್ನೂ ಅಷ್ಟೇ ಅಗತ್ಯವಾಗಿ ಕಾಣುವ, ಉಪನಿಷತ್ತು, ಭಗವದ್ಗೀತೆಗಳನ್ನೂ ಅಷ್ಟೇ ಆದರದಿಂದ ನೋಡುವ, ಹಾಗೆಯೇ ಜೈನಧರ್ಮದ ತತ್ವಗಳನ್ನೂ ಬಿಡದೆ ಆದರಿಸುವ, ಪಾಶ್ಚಾತ್ಯದ ಮಾದರಿಗಳಿಗೂ ಅಷ್ಟೇ ಮಹತ್ವ ನೀಡುವ ಅವರ ವಿಚಾರಸರಣಿ ಮಕ್ಕಳ ಮುಂದೆ ಎಲ್ಲದರ ಸಮನ್ವಯವಾಗಿ ಬದುಕಿನ ಸತ್ಯವನ್ನು ಕಂಡುಕೊಳ್ಳುವ ಬಗೆಯ ಮಾದರಿಯಾಗಿ ನಿಲ್ಲುತ್ತದೆ ಎನ್ನಬಹುದು. ಅದು ಬಹುಶಃ ಅವರ ಸ್ವಂತ ವ್ಯಕ್ತಿತ್ವದ ಪಡಿನೆಳಲಾಗಿಯೇ ಹರಿದಿದೆ ಎಂದರೆ ತಪ್ಪಾಗದು.

ರಾಷ್ಟ್ರಾಭಿಮಾನ, ರಾಷ್ಟ್ರಗೀತೆ, ಭಾಷೆ, ಖಾದಿ ಎಲ್ಲದರ ಬಗೆಗೆ ಗೌರವ ಮೂಡಿಸುವ ನಿಟ್ಟಿನಲ್ಲಿ ಮಕ್ಕಳ ನಡುವೆ ಒಬ್ಬ ನಿಷ್ಠೆಯ ಹಿರಿಯರ ಹಾಗೆ ರಾಜರತ್ನಂ ಕಾಣುತ್ತಾರೆ. ಹಾಗಿದ್ದಾಗಲೂ ಎಲ್ಲೂ ತಮ್ಮನ್ನು ಭಾವಾವೇಶದಲ್ಲಿ ಕಳೆದುಕೊಳ್ಳದೆ ತೂಕವಾಗಿಯೇ ಹೆಜ್ಜೆ ಇಡುತ್ತಾರೆ ಎಂದರೆ ತಪ್ಪಾಗದು. ಭಾಷೆಯ ಕುರಿತಾದ ಜ್ವಲಂತ ಸಮಸ್ಯೆಯ ಕುರಿತಾಗಿ ಬರೆಯುತ್ತ ' ... ಎಲ್ಲಿಯವರೆಗೆ ಹಿಂದೂಸ್ತಾನಿಗೆ ಹೊರತಾದ ತಮಿಳು, ಕನ್ನಡ, ತೆಲುಗು, ಮಲೆಯಾಳ ಮುಂತಾಗಿ ಮಾತನಾಡುವ ಪ್ರದೇಶಗಳಲ್ಲಿ ನೆಲಸಿರುವ ಇತರ ಭಾಷೆ ಮಾತನಾಡುವ ಜನರು ಆಯಾ ಪ್ರದೇಶದ ಭಾಷೆಯನ್ನು ವ್ಯವಹರಿಸದೆ, ತಮ್ಮ ಹಿಂದಿ ಗುಜರಾತಿ ಮಾರವಾಡಿ ಮುಂತಾದವಕ್ಕೆ ಮಾತ್ರ ಅಂಟಿಕೊಂಡಿರುವರೋ ಅಲ್ಲಿಯವರೆಗೂ ಈ 'ರಾಷ್ಟ್ರಭಾಷೆ' ಎಂಬುದು ಏಕತೆಗೆ ಕಾರಣವಾಗುವುದಿಲ್ಲ ಎಂಬುದು ಹಾಗಿರಲಿ; ಅದರಿಂದ ಇದುವರೆಗೆ ಇರುವ ಭಾಷೆಯ ಅನೈಕ್ಯತೆ ಮುಂದೆ ಭಾಷೆಯ 'ಪರದರ್ಪಾಕ್ರಾಂತಿ'ಯಾಗುವುದು ಖಂಡಿತ' ಎನ್ನುವ ಖಂಡಿತದ ಮಾತುಗಳನ್ನೂ ಬರೆಯುತ್ತಾರೆ. ಕೈಲಾಸಂ ಅವರ ನಾಟಕಗಳಲ್ಲಿನ ಪೋಲಿ ಕಿಟ್ಟಿಯ ಪ್ರಸಂಗಗಳನ್ನ ಕತೆಯಾಗಿ ವಿಶದವಾಗಿ ನೀಡಿರುವುದು, ಹಾಗೆಯೇ ಕೈಲಾಸಂ ಅವರವೇ Purpose ಮತ್ತು The Curse ಎನ್ನುವ ಇಂಗ್ಲಿಷಿನ ನಾಟಕಗಳನ್ನು('ಕಥಾಕೋಶ'ವೆಂಬ ಅರವತ್ನಾಲ್ಕು ಕತೆಗಳ ಸಂಕಲನ) ಕತೆಯಾಗಿ ನೀಡಿರುವುದು ಅವರು ಒಟ್ಟಾರೆ ಮಕ್ಕಳಿಗೆ ಮುಟ್ಟಿಸುವುದಕ್ಕೆ ಯಾವುದೇ ಬಗೆಯ ಮಾಧ್ಯಮ ಸೂಕ್ತ ಅನಿಸುತ್ತದೊ ಅದಕ್ಕೆಲ್ಲ ತೆರೆದುಕೊಂಡಿದ್ದರು ಎನ್ನುವುದನ್ನೇ ಹೇಳುತ್ತದೆ.

ಮೇವುಂಡಿ ಮಲ್ಲಾರಿ

ಮೇವುಂಡಿ ಮಲ್ಲಾರಿ(೧೯೦೬–೧೯೭೫) ಹೀಗೆಯೇ ಸೃಜನಶೀಲ ಗುಣದಿಂದ ಎದ್ದು ಕಾಣುವ ಕೃತಿಗಳನ್ನ ನೀಡಿದುದು ಕಂಡುಬರುತ್ತದೆ. 'ಕನ್ನಡ ಕಂದ' ಎನ್ನುವ ಪುಸ್ತಕ ಮಾಲೆಯನ್ನ ಹುಟ್ಟುಹಾಕಿ ತಂದ ಅವರ ಹಲವಾರು ಪುಸ್ತಕಗಳು ಇಂದಿಗೂ ಲಭ್ಯವಿದ್ದು, ಅವರ ಪ್ರಯತ್ನಗಳನ್ನು

ಹೇಳುತ್ತವೆ. ಗದ್ಯ ಪ್ರಕಾರದಲ್ಲಿ ಅವರ ಕೃಷಿ ವಿಶೇಷವಾಗಿಯೇ ಕಾಣುತ್ತಿದ್ದು, ಧಾರವಾಡದ ಆಡುಭಾಷೆ, ಗ್ರಾಮೀಣ ವಾತಾವರಣದ ಸ್ಪರ್ಶ ಹೊಂದಿ ಮಕ್ಕಳಿಗೆ ಕತೆಗಳನ್ನು ಹೇಳಿದಂತೆ ನಿರೂಪಿತಗೊಂಡಿದೆ. ಒಂದು ಕಡೆ ಹೊಯ್ಸಳರು ಈ ಬಗೆಯ ನಿರೂಪಣೆಯಲ್ಲಿ ಎದ್ದುಕಂಡರೆ ಇನ್ನೊಂದು ಕಡೆ ಮೇವುಂಡಿ ಮಲ್ಲಾರಿ ಅವರು ಕಾಣುತ್ತಾರೆ. ಅವರ ಭಾಷೆಯ ಬಳಕೆ, ನಿರೂಪಣೆಯ ಶೈಲಿಗಾಗಿ ಈ ಕೆಳಗಿನ ಉದಾಹರಣೆ ನೋಡಬಹುದು:

ನಮ್ಮೋಣಿಯ ಪಾಟೀಲರ ಮಧುವನ್ನು ನೋಡಿಲ್ಲವೇ ನೀವು? ದಿನಾಲು ನನ್ನ ಸಂಗಡ ಸಾಲೆಗೆ ಬರುತ್ತಾನಲ್ಲ ಅವ, ಅವನು ಚಿತ್ರಗಾರ ನೋಡಿರಿ, ಆತನ ಓದುವ ಪುಸ್ತಕಗಳಲ್ಲೆಲ್ಲ ಕಾಗೇ ಕಾಲು ಗುಬ್ಬೀ ಕಾಲು ಗೊಂಬೆಗಳೇ ಗೊಂಬೆಗಳು.

'ಅಜ್ಜ, ಇದು ನಿನ್ನದೇ ಚಿತ್ರ. ನಿನ್ನ ಮೋರೆ ಇಷ್ಟೆಲ್ಲಿ ಅಗಲಿದೆ ಎಂದೀ ಮತ್ತೆ. ನೀನು ಸಣ್ಣವನಿದ್ದಾಗ ನಿಮ್ಮಪ್ಪ ನಿನ್ನ ಎರಡೂ ಕಿವಿ ಹಿಂಡಿ ಜಗ್ಗುತ್ತಿದ್ದ ಎಂದು ನೀನೇ ಹೇಳಲಿಲ್ಲವೇ, ಅದಕ್ಕೇ ಹೀಗಾಗಿದೆ. ತಲೆಗಿಂತ ಸಣ್ಣ ಗಾಂಧೀ ಟೊಪ್ಪಿಗೆ ಹಾಕಿಕೊಂಡಿರುತ್ತೀ; ಚಂಡಿಗೆ ಹೇಗೆ ಹಾರಾಡುತ್ತದೆ! ಕಣ್ಣು ಚಲೋ ಕಾಣುವುದಿಲ್ಲವೆಂತ ಚಾಳೀಸು ಹಾಕಿದ್ದೇನೆ. ಜಡ್ಡಾಗಿ ನೀನು ಇಷ್ಟು ಸೊರಗಿಬಿಟ್ಟಿದ್ದೀ. ಕೈ ಕಾಲು ಎಂಬವು ಕಡ್ಡಿಯಾಗಿವೆ. ಹೊಟ್ಟೆ ಮಾತ್ರ ನಗಾರಿಯಾಗಿದೆ. ಏಕೆ ಗೊತ್ತಿದೆಯೇನು, ಗಣಪ್ಪನ ಹೊಟ್ಟೆ ಏಕೆ ಡೊಳ್ಳಾಗಿದೆ , ಆತನ ಹೊಟ್ಟೆಯಲ್ಲಿ ಕಡುಬಿದ್ದವಲ್ಲವೇನು? ನಿನ್ನ ಹೊಟ್ಟೆಯೊಳಗೂ ಕಡುಬು ತುಂಬಿವೆ. ಉಂಡು ಹೋಗುವ ಮುಂದೆ ಗಣಪ್ಪ ಕಡಕೊಂಡು ಬಿದ್ದನಂತೆ; ಹೊಟ್ಟೆ ಒಡೆಯಿತಂತೆ; ಕಡಬುಗಳೆಲ್ಲಾ ಬೀದಿಯ ತುಂಬ ಸೂರೆಯಾದವಂತೆ, ಹಾಗೆ ನೀನೂ ಬಿದ್ದುಗಿದ್ದೀ ಎಂದು, ನಿನ್ನ ಕೈಯೊಳಗೆ ಒಂದು ಕೋಲು ಕೊಟ್ಟಿದ್ದೇನೆ'

ಇದನ್ನೆಲ್ಲ ಕೇಳಿ ಅಜ್ಜ 'ಮುಖದ ಲಕ್ಷಣ ಮಾತ್ರ ನನ್ನಂತೆ ಇಲ್ಲ ಬಿಡಪ್ಪ' ಎಂದ.

ಮಧು 'ಕೈಲೆ ಬರೆದದ್ದಪ್ಪ; ಇದಕ್ಕೂ ಎಷ್ಟು ಚೆಂದ ಆಗಬೇಕು' ಎಂದ.

ಇಪ್ಪತ್ತೈದಕ್ಕೂ ಹೆಚ್ಚು ಮಕ್ಕಳ ಕೃತಿಗಳನ್ನ ರಚಿಸಿದ ಮೇವುಂಡಿ ಮಲ್ಲಾರಿ ಅವರು ಮಕ್ಕಳಿಗಾಗಿ ಬರೆಯುತ್ತ ಬಂದ ಎಲ್ಲರಿಂದ ಭಿನ್ನವಾಗಿ ನಿಂತುದು ಅವರವೇ ಆದ ಕಲ್ಪನೆಯ ಸೃಷ್ಟಿಯಲ್ಲಿ ರಚಿಸಿದ ಕೆಲ ಕತೆಗಳಿಂದ. 'ಮಡ್ಡಮ್ಮ' ಎನ್ನುವ ಗ್ರಾಮೀಣ ಪರಿಸರದ ತಾಯಿಯ ಸುತ್ತ ಅರಳಿರುವ ಅವರ ಈ ಸ್ವಂತದ ಕತೆಗಳು ಸರಳವಾದರೂ, ರಂಜನೀಯವಾಗಿ ಮಕ್ಕಳಿಗೆ ಬಲು ಹಿಡಿಸುವವಾಗಿರುವಂತೆಯೇ ತಾಯೀ ಭಾವದ ಬಲುದೊಡ್ಡ ಸಂಗತಿಯನ್ನೇ ತಮ್ಮೊಳಗಿಟ್ಟುಕೊಂಡಿವೆ. 'ಗುಬ್ಬಚ್ಚಿಗೂಡು' ಕತೆಯಲ್ಲಿ ಮಡ್ಡಮ್ಮನ ಚಾಳೀಸು ಕಳೆದುಹೋಗುತ್ತದೆ. ಅದನ್ನ ಹುಡುಕಿ ಹುಡುಕಿ ದಣಿಯುತ್ತಾಳೆ ಮಡ್ಡಮ್ಮ. ಆಗ ಕಪ್ಪುರ ಕನಕ ತಾನು ಪಾಟಿಯಲ್ಲಿ ಗೊಂಬಿ ಬರೆದುದನ್ನ ಅವ್ವನಿಗೆ ತೋರಿಸಲು ಬರುತ್ತಾನೆ. ಆದರೆ ಚಾಳೀಸು ಕಳೆದುಕೊಂಡ ಅವ್ವನಿಗೆ ನೋಡುವುದಾಗಲೊಲ್ಲದು. ಆಗ ಕಪ್ಪುರ ಕನಕ ತಾನೂ ಚಾಳೀಸು ಹುಡುಕತೊಡಗುತ್ತಾನೆ. ಸ್ವಲ್ಪ ಹೊತ್ತಿಗೆಲ್ಲ ಮಗಳು ಮಾವ ಕೊಡಿಸಿದ ಹೊಸ ಬಣ್ಣದ ಗುಬ್ಬಿ ತೋರಿಸಲು ಬರುತ್ತಾಳೆ. ಅವ್ವನಿಗೆ ನೊಡುವುದಾಗಲೊಲ್ಲದು. ಸರಿ, ಅವಳೂ ಚಾಳೀಸು ಹುಡುಕತೊಡಗುತ್ತಾಳೆ. ಮುಂದೆ ಕಿಟ್ಟದ ಕಿಟ್ಟಿ ಬರುತ್ತಾನೆ. 'ರ' ಅನ್ನಲಿಕ್ಕೆ ಬಾರದ ಅವನ ಬಾಯಲ್ಲಿ 'ರ' ಹೊಗಿ 'ಲ' ಆಗುತ್ತಿದೆ, ಅವ್ವನಿಗೆ ತಾನೂ ಪಾಟಿಯಲ್ಲಿ 'ರ' ಬರೆದುದನ್ನ ತೋರಿಸಲು ಬಂದು 'ಅವ್ವಾ, ನಾ 'ಲ'

ಬರದೇನಿ' ಎನ್ನುತ್ತಾನೆ. ಅವ್ವನಿಗೆ ನೋಡುವುದಾಗಲೊಲ್ಲದು, ಸರಿ, ಅವನೂ ಅವ್ವನ ಚಾಳೀಸು ಹುಡುಕತೊಡಗುತ್ತಾನೆ. ಯಾರು ಹುಡುಕಿದರೂ ಅದು ಸಿಗಲಿಲ್ಲ. ಮಡ್ಡಮ್ಮ ಈಗ ತಾನು ಪೇಟೆಗೆ ಹೋಗಿದ್ದನ್ನು ನೆನಪು ಮಾಡಿಕೊಂಡು ಅಲ್ಲಿಯೆಲ್ಲಾದರೂ ಮರೆತು ಬಂದಿರಬಹುದೆ ಅಂತ ಅಲ್ಲಿಗೆ ಹೊಗುತ್ತಾಳೆ. ಅಲ್ಲಿಯೂ ಎಲ್ಲಾಕಡೆ ಹುಡುಕುತ್ತಾಳೆ. 'ಮೇಲಿನದು ಒಗೆ ಒಳಗಿನದು ತಿನ್ನು' ಎನ್ನುವ ಬಾಳೆಹಣ್ಣಿನ ಬುಟ್ಟಿಯಲ್ಲಿ ಹುಡುಕುತ್ತಾಳೆ, ಸಿಗುವುದಿಲ್ಲ. 'ಒಳಗಿನದು ಒಗೆ ನಡುವಿನದು ತಿನ್ನು' ಎನ್ನುವ ಮಾವಿನ ಹಣ್ಣಿನ ಬುಟ್ಟಿಯಲ್ಲಿ ಹುಡುಕುತ್ತಾಳೆ, ಮತ್ತೆ 'ಎಲ್ಲಾ ತಿನ್ನು' ಎನ್ನುವ ಪೇರಲ ಹಣ್ಣಿನ ಬುಟ್ಟಿಯಲ್ಲಿ ಹುಡುಕುತ್ತಾಳೆ. ಕೊನೆಗೆ 'ಉಡು' 'ಹೊದೆ' 'ಹಾಸು' 'ಹೊಲಿದು ಕೊಡು' ಎನ್ನುವ ನಾನಾ ಬಗೆಯ ಬಟ್ಟೆಯ ನಡುವೆಯೂ ಹುಡುಕುತ್ತಾಳೆ. ಊಂ ಹೂಂ ಎಲ್ಲಿಯೂ ಸಿಗುವುದಿಲ್ಲ. ನಿರುಪಾಯಳಾಗಿ ತಿರುಗಿ ಬರುವಾಗ ಅವಳ ಚಾಳೀಸು ಕಂಡುಬಿಡುತ್ತದೆ. ಗುಬ್ಬಚ್ಚಿ ತನ್ನ ಮನೆಗೆ ಚಾಳೀಸು ಮಾಡಿಕೊಂಡು ಬಿಟ್ಟಿದೆ ಅದನ್ನ. ಚೆಂದದ ಮನೆಯನ್ನ ಮಾಡಿಕೊಂಡ ಪುಟ್ಟ ಗುಬ್ಬಚ್ಚಿಯನ್ನ ಬಾಯಿ ತೆರೆದು ಕೇಳಲಾರದೆ, ಅದು ಅದಕ್ಕೇ ಇರಲಿ ಎಂದು ತಾಯಿ ಮಡ್ಡಮ್ಮ ಹಾಗೇ ಬರುತ್ತಾಳೆ.

ಇನ್ನೊಂದು ಪ್ರಸಂಗದಲ್ಲಿ ಒಗೆದು ಹಾಕಿದ ಬಟ್ಟೆಗಳೆನ್ನೆಲ್ಲ ಗಾಳಿ ಹಾರಿಸಿಕೊಂಡು ಹೋಗಿಬಿಡುತ್ತದೆ. ಮಡ್ಡಮ್ಮ ಹುಡುಕುತ್ತ ಬರುತ್ತಾಳೆ. ಚಣ್ಣ, ಅಂಗಿ, ಗಾಂಧೀ ಟೊಪ್ಪಿಗೆ, ಲಂಗ ಹೀಗೆ ಎಲ್ಲವನ್ನ ಹುಂಜ, ಮಂಗ ಮೊದಲಾಗಿ ಬೇರೆ ಪ್ರಾಣಿಗಳು ತೆಗೆದುಕೊಂಡು ತೊಟ್ಟುಕೊಂಡು ಬಿಟ್ಟಿರುತ್ತವೆ. ಮಡ್ಡಮ್ಮ ಅವುಗಳನ್ನೆಲ್ಲ ರಮಿಸಿ ರಮಿಸಿ ಇಸಿದುಕೊಳ್ಳುತ್ತಾಳೆ. ಆದರೆ ಗಿಳೀ ಪುಟ್ಟದು, ಅದು ತಾನು ಹಾಕಿಕೊಂಡ ಕಸೂತಿಯ ಕುಪ್ಪಸ ಕೊಡಲು ಒಪ್ಪುವುದಿಲ್ಲ, ಅಳತೊಡಗುತ್ತದೆ. ಮಡ್ಡಮ್ಮ ಆಗಲಿ ಮಗೂ ಅಂತ ಅದನ್ನ ಅದಕ್ಕೇ ಬಿಟ್ಟು ತಿರುಗಿ ಬರುತ್ತಾಳೆ. ಹೀಗೆಯೇ ಇನ್ನೊಂದು ಪ್ರಸಂಗದಲ್ಲಿ ಆಟದ ಮೇಜನ್ನ ಮಾಡಬೇಕು ಎಂದುಕೊಂಡು ಕೂಡಿಸಿಟ್ಟಿದ್ದ ಕಡ್ಡೀಪೆಟ್ಟಿಗೆಗಳು ಕಾಣೆಯಾದುದನ್ನ ಕಂಡು ಹುಡುಕುತ್ತಾಳೆ. ಮಾವಿನ ಮರದ ಕೆಳಗೆ ಅವೆಲ್ಲ ಸಾಲಾಗಿ ರೈಲು ಗಾಡಿಯಾಗಿ ಸಾಗಿರುವುದನ್ನು ನೋಡುತ್ತಾಳೆ. ಎಮ್ಮೆಗೊಡ್ಡುಗಳು, ಹದಿರು ಬೋರಂಗಿಗಳು, ಜಿಟ್ಟೆಗಳು ಅದರಲ್ಲಿನ ಪ್ರಯಾಣಿಕರು. ಬಿಟ್ಟಿ ಬೆನಕ ಡ್ರೈವರಾಗಿ ಎಳೆಯುತ್ತಿದೆ. ಇದನ್ನೆಲ್ಲ ಮಾಡಿದ್ದು ಗಿಣಿರಾಮ. ಮಡ್ಡಮ್ಮ ಅವುಗಳಿಂದ ಅವನ್ನ ಕಡಿದುಕೊಳ್ಳಲು ಬಯಸದೆ, ಅವುಗಳ ಸಂತಸವನ್ನ ಕೆಡಿಸಲು ಬಯಸದೆ ನಿರುಪಾಯಳಾಗಿ ವಾಪಾಸಾಗುತ್ತಾಳೆ.

ಮೇವುಂಡಿ ಮಲ್ಲಾರಿ ಮಕ್ಕಳಿಗಾಗಿನ ತಮ್ಮ ಬರವಣಿಗೆಯಲ್ಲಿ ಹಲವಾರು ಪ್ರಯೋಗಗಳನ್ನ ಮಾಡಿದರು. ಅಸಂಗತದ, ಪಾಶ್ಚಾತ್ಯದ ಬಗೆಗಳನ್ನ ಅನುಸರಿಸಿದಂತಿರುವ 'ತಿರುವು-ಮುರುವು' ಅನ್ನುವ ದೀರ್ಘದ ಕತೆಯೊಂದನ್ನು ಅವರು ಬರೆದಿದ್ದಾರೆ. ಸಿ. ಎಸ್. ಲುಯಿಯ ನಾರ್ನಿಯಾ ಕೃತಿಯಲ್ಲಿನ ಹಾಗೆ ಇಲ್ಲಿಯೂ ಕಪಾಟಿನೊಳಗಿಂದ ವಿಚಿತ್ರ ಲೋಕಕ್ಕೆ ಹೋಗಿಬಿಡುವ ಪ್ರಸಂಗ ಬಂದಿದೆ. ಒಂದು ಸಲ ಕಿಟ್ಟು ಅನ್ನುವ ಹುಡುಗ ಯಾರೋ ಅಚಾತುರ್ಯದಿಂದ ಹರಿದು ಹಾಕಿದ, ತನ್ನ ಮೆಚ್ಚಿನ ಚಿತ್ರವೊಂದನ್ನ ಸೇರಿಸಿ ಸರಿ ಮಾಡಲು ನೋಡುತ್ತಾನೆ. ಆದರೆ ಅದು ಒಂದಿಷ್ಟು ಹೆಚ್ಚಿಗೆಯೇ ಉದ್ದವಿದ್ದ ಗೋಣು, ಆಕಡೆ ಈಕಡೆ ಹೊರಳಿಸಿಟ್ಟ ಪಾದಗಳು, ಬಡಕಲಾದ ದೇಹ, ಅಂತೂ ವಿಲಕ್ಷಣವಾದ ಮನುಷ್ಯನಾಗಿ ಹೊಮ್ಮುತ್ತದೆ. ಕಿಟ್ಟುವಿಗೆ ಇದು ಮೋಜಾಗಿ ಕಂಡಿದೆ. ಎಲ್ಲ ತುಣುಕುಗಳನ್ನು ಹೇಗೇ ಹೇಗೋ ಹಚ್ಚಿ ಮುಗಿಸುವಷ್ಟರಲ್ಲಿ ಬೂಟೊಂದು ಹಾಗೇ ಉಳಿದುಬಿಡುತ್ತದೆ. ಅದನ್ನ ಎಲ್ಲಿ ಅಂಟಿಸಬೇಕೆಂದು

ತೋಚುತ್ತಿಲ್ಲ. ಆಗ ಆ ಚಿತ್ರದ ಮನುಷ್ಯನೇ ಮಾತನಾಡಿ ಬೂಟನ್ನ ಬೇಗ ತೊಡಿಸು ಅನ್ನುತ್ತಾನೆ. ಕಿಟ್ಟು ಗಡಿಬಿಡಿಯಲ್ಲಿ ಎಲ್ಲಿ ತೊಡಿಸಬೇಕು ಎಂದು ತೋಚದೆ, ಆ ಮನುಷ್ಯನ ಕೈಗೆ ತೊಡಿಸಿಬಿಡುತ್ತಾನೆ. ಆ ಮನುಷ್ಯ ಈಗ ಎದ್ದು ತಮ್ಮ ಮನೆಗೆ ಬರುತ್ತೀಯಾ ಎಂದು ಕೇಳುತ್ತಾನೆ! ಕಿಟ್ಟು ಸಮ್ಮತಿಸುತ್ತಾನೆ. ಅವರು ಈಗ ಆಟದ ಕಪಾಟಿನೊಳಗಿಂದ ಬೇರೆಯದೇ ಅದ ವಿಚಿತ್ರವಾದ ಲೋಕಕ್ಕೆ ಪ್ರವೇಶ ಪಡೆಯುತ್ತಾರೆ. ಅಲ್ಲಿ ಎಲ್ಲ ಬುಡಮೇಲು. ಭೂಮಿಯ ಮೇಲೆ ಫಳ ಫಳ ಹೊಳೆಯುವ ಸೂರ್ಯ, ಬುಡಮೇಲು ಗಿಡಗಳು, ಎಲ್ಲ ತಿರುವು ಮುರುವು. ಮನೆಗೆ ತಲುಪಿದರೆ ಮೊದಲು ಹೊಗೆ ಕಿಂಡಿ ಎದುರಾಗುತ್ತದೆ. ಆ ಮನುಷ್ಯ ಬೇರೆ ಕುಂಟುತ್ತ ನಡೆಯುತ್ತಿರುತ್ತಾನೆ. ಕಿಟ್ಟಿಗೆ ತಾನೇ ಹೀಗೆಲ್ಲ ಅವನನ್ನ ಮಾಡಿದ್ದು ಎಂದು ಅನಿಸುತ್ತದೆ. ತಿರುಗಿ ಹೋದ ಮೇಲೆ ಸರಿ ಮಾಡುತ್ತೇನೆ ಅಂತ ಮಾತು ಕೊಡುತ್ತಾನೆ. ನಂತರ ಹೀಗೆಯೇ ವಿಚಿತ್ರವಾದ ದೊರೆಸಾನಿಯೊಬ್ಬಳ ಕುದುರೆ ಗಾಡಿ ಬರುತ್ತದೆ. ಕಿಟ್ಟು ಅದರಲ್ಲಿ ಕುಳಿತು ಸಾಗುತ್ತ, ದಾರಿಯಲ್ಲೇ ಅದರಿಂದ ಜಿಗಿದು, ತನ್ನ ಆಟದ ಕಪಾಟಿನಿಂದ ಹೊರಗೆ ಬಂದುಬಿಡುತ್ತಾನೆ. ಮೋಜಿನ ತಿರುವು ಮನುಷ್ಯನ ಚಿತ್ರವನ್ನು ಸರಿಯಾಗಿ ಜೋಡಿಸಲು ತೊಡಗುತ್ತಾನೆ. ಈ ಮೋಜಾಗಿ ಕಾಣುವ ಕತೆಗಳಲ್ಲಿ ಪಾಶ್ಚಾತ್ಯದ ಪ್ರಭಾವ ಇದ್ದರೂ ಆಲೀಸಳ ಕತೆಯ ಹಾಗೆ ಅಸಾಂಗತ್ಯವೇ ಕೊನೆಯಾಗಿ ಉಳಿಯುವುದಿಲ್ಲ, ಬದಲಾಗಿ ಅದನ್ನ ಸರಿಗೊಳಿಸುವ ಕ್ರಿಯೆಯಲ್ಲಿ ಕೊನೆಯಾಗುತ್ತದೆ. ಆ ವಿಚಿತ್ರದ ಮನುಷ್ಯ ಮನುಷ್ಯರೆಲ್ಲ ಹೀಗೇ ಎಂದು ದೂರುತ್ತಾನೆ ಕೂಡ. ಅವರು ಜನಪದ ಸಾಮಗ್ರಿಯನ್ನ ನೀಡಿದ್ದೂ ಸ್ವಾರಸ್ಯಕರವಾಗಿಯೇ.

ಹೊಯ್ಸಳ

'ಹೊಯ್ಸಳ' ಹೆಸರಿನಿಂದ ಪ್ರಸಿದ್ಧರಾದ ಅರಗಂ ಲಕ್ಷ್ಮಣರಾಯರು ಸುಮಾರು ಹನ್ನೆರಡು ಮಕ್ಕಳ ಕಥಾ ಸಂಕಲನಗಳನ್ನ ನೀಡಿದ್ದು, ಸರಿಸುಮಾರು ಎಲ್ಲವೂ ಜನಪದದ ಮೂಲದಿಂದ, ಕೆಲವು ವಿದೇಶಿ ಮೂಲದಿಂದ ಅಂತೂ ಬೇರೆ ಬೇರೆ ಮೂಲದಿಂದ ಆಯ್ದ ಕತೆಗಳೇ ಕಾಣುತ್ತವೆ. ಮಕ್ಕಳಿಗೆ ಒಳ್ಳೆಯ ಸಂಗತಿಗಳನ್ನ ನೀಡುವ, ಸದ್ಭಾವ ಮೂಡಿಸುವ, ಯೋಗ್ಯ ವ್ಯಕ್ತಿಗಳನ್ನಾಗಿ ರೂಪಿಸುವ ಮನೋಭಾವವೇ ಕೆಲಸ ಮಾಡುತ್ತದೆ. ಆದರೆ ಇದೆಲ್ಲ ನೇರವಾಗಿ ಕಾಣಿಸಿಕೊಳ್ಳದೆ ಕತೆ ಹೇಳುವ ಪ್ರಕ್ರಿಯೆ ಆಮೋದ ಪ್ರಮೋದವಾಗಿ ಲವಲವಿಕೆಯಿಂದ ಕೂಡಿರುತ್ತದೆ. ಇಲ್ಲಿ ನಿರೂಪಣೆಯೇ ಎದ್ದುಕಾಣುವ ಸಂಗತಿ. ಲೇಖಕ ಕತೆ ಹೇಳುವವನಾಗಿ ತನ್ನ ಮುಂದೆ ಕೇಳುವ ಮಕ್ಕಳಿದ್ದಾರೆ ಎಂದುಕೊಂಡು ಒಳ್ಳೇ ಆಸಕ್ತಿಯಿಂದ ಹೇಳುವಿಕೆ ಬರವಣಿಗೆಯ ಮೂಲಕ ನಡೆಯುತ್ತದೆ. ಇಲ್ಲಿನವು ಓದುವ ಕತೆಗಳೇ ಆದರೂ ಹೊಯ್ಸಳರು ಮಕ್ಕಳಿಗೆ ಕತೆ ಹೇಳುತ್ತಿರುತ್ತಾರೆ. ಗದ್ಯಕ್ಕೆ ಆಡುಭಾಷೆಯ ಸಾಹಚರ್ಯ, ಅವರದೇ ಆದ ಮಾತುಗಾರಿಕೆಯ ಶೈಲಿ, ಹಾಸ್ಯದ ಲೇಪಗಳು, ತಿರುವುಗಳು, ಎಲ್ಲವನ್ನು ಸೇರಿಸಿಕೊಂಡು ಜೀವಂತಿಕೆ ಭಾಸವಾಗುತ್ತದೆ. ಅವರ ಬರವಣಿಗೆಯ ಮುಖ್ಯ ಲಕ್ಷಣವೇ ಈ ಕತೆಗಾರಿಕೆ. ಸಣ್ಣ ಸಣ್ಣ ವಾಕ್ಯಗಳು, ಸಣ್ಣ ಸಣ್ಣದಾಗಿ ವಿರಮಿಸಿಕೊಂಡು ಸಾಗುವ ದೀರ್ಘದ, ಸ್ವಾರಸ್ಯದ, ಬೇಸರ ತರಿಸದೆ, ಆಸಕ್ತಿ ಕೆರಳಿಸುವ ದೀರ್ಘದ ವಾಕ್ಯಗಳು, ಆದಷ್ಟೂ ಸಂಭಾಷಣೆಗಳು, ಕತೆಯ ಪರಿಸರಕ್ಕೆ ಹತ್ತಿರದ ಭಾಷೆಯ ಸೊಗಡು, ಎಲ್ಲಿಯದೇ ಕತೆಯಾಗಲಿ ಅದು ಹತ್ತಿರದ ವಾಸ್ತವದ ಪರಿಸರದಲ್ಲಿ ಹುಟ್ಟಿಕೊಳ್ಳುವುದು ಇವೆಲ್ಲ ಕತೆ ಹೇಳುವಿಕೆಯ ಸೊಗಸುಗಾರಿಕೆಗಳು. ಅವರ ನಿರೂಪಣೆಯ ಕೆಲವು ಉದಾಹರಣೆಗಳನ್ನ ನೋಡಬಹುದು . . .

'ಒಂದು ಊರಿನಲ್ಲಿ ಒಂದು ಎಮ್ಮೆ, ಅದು ಹಾಲು ಕೊಟ್ಟು, ನೀರು ಕುಡಿದು, ಹಿಂಡಿ ತಿಂದು ಹೊರಗೆ ಹೊರಟಿತ್ತು' – ಇದು ಕತೆ ಪ್ರಾರಂಭವಾಗುವ ಒಂದು ಉದಾಹರಣೆ.

'ಬರೆಯುವ ಕಡ್ಡಿ ಹೊರಕ್ಕೆ ಬಂತು. ಗೌರಿಯ ಕೈಗೆ ಹೋಯಿತು. ಮಸಿಯ ಕುಡಿಕೆ ಬಾಯಿ ತೆರೆಯಿತು. ಕಾಗದ ಮಡಿಕೆ ಬಿಚ್ಚಿ ಸಿದ್ಧವಾಯಿತು. ಒತ್ತುವ ಕರಡು ಕಾಗದ ಅಪಾಯ ಕಾಲಕ್ಕೆ ಸಿದ್ಧವಾಗಿತ್ತು. ಗೌರಾ ಮುಂದೆ ಸರಿಯಾಗಿ ಪದ್ಮಾಸನ ಹಾಕಿ ಕುಳಿತಳು. ಸರಿಬರಲಿಲ್ಲ, ಬೆಳಕು ಎಡಗಡೆಯಿಂದ ಬೀಳುವ ಹಾಗೆ, ತೊಡೆಯ ಮೇಲೆ ಕಾಗದ ಕಟ್ಟು ಇಟ್ಟು ಕುಳಿತಳು. ದೀಪವನ್ನು ದೊಡ್ಡು ಮಾಡಿಕೊಂಡಳು. ಇನ್ನು ಬರೆಯಬೇಕು' – ಹೀಗೆ ಚಿಕ್ಕ ಚಿಕ್ಕ, ಆದರೆ ಹಾಗೇ ಅವಲಂಬಿಸಿಕೊಂಡು ಮುಂದುವರೆಯುವ ಚಲನೆಯುಳ್ಳ ವಾಕ್ಯಗಳು.

'ಚಲೋ ಚಿಟ್ಟೆ, ಬಣ್ಣಬಣ್ಣದ್ದು, ಸಿಕ್ಕಿದರೆ ದುರುಗುಟ್ಟಿ ನೋಡುವರಂತೆ, ಬೆಳದಿಂಗಳ ಗಟ್ಟಿಯ ಥರ ಚಿನ್ನ ಸಿಕ್ಕುವುದೇ ತಡ, ಹಾರಾಡಿ ನೆಗೆದಾಡಿ ಹಿಂಬಾಲಿಸುವರಂತೆ. ಕಾಮನ ಕೂಸಿನಂಥ ದೊಡ್ಡರೆಕ್ಕೆಯ ಪತಂಗ ಸಿಕ್ಕಿದರೆ ಬಲೆಯಲ್ಲಿ ಹಿಡಿದು ಹೊಗೆ ಕುಡಿಸಿ, ಬೆನ್ನಿಗೆ ಗುಂಡು ಸೂಜಿ ಚುಚ್ಚಿ, ಮೊಖಮಲ್ಲಿನ ದಿಂಬಿಗೆ ಸಿಕ್ಕಿಸಿ, ಕನ್ನಡಿ ಪೆಟ್ಟಿಗೆಯಲ್ಲಿ ಇಡುವರಂತೆ, ಮತ್ತೂ ಭಾರಿ ಭಾರಿ ಪುಸ್ತಕಗಳನ್ನೆಲ್ಲ ಮೊಗುಚಿ ಹಾಕಿ ಅದಕ್ಕೊಂದು ಹೆಸರು ಗೊತ್ತು ಮಾಡಿ ಅದನ್ನು ದಂತದ ಹಲಗೆಯಲ್ಲಿ ಬರೆದು, ಆ ಚಿಟ್ಟೆಯ ಬಳಿಯಲ್ಲಿ ಇಡುವರಂತೆ, ಅಂಥವರೊಬ್ಬರು ಸಿಂಗಪ್ಪನವರು . . . .' ಹೀಗೆ ದೀರ್ಘವಾದರೂ, ವಿರಮಿಸಿಕೊಂಡು, ಆದರೆ ನಿಲ್ಲದೆ ಸಾಗುವ ದೀರ್ಘ ವಾಕ್ಯಗಳು ಬೇಸರ ತರಿಸದೆ ಇರುವಂಥವು.

ಶುಂಡಾಲಯ್ಯ : ಅಭ್ಯಂಕು, ಅಭ್ಯಂಕೂ

ಅಭ್ಯಂಕ : ಮೂರನೇ ಬಾರಿ ಕೂಗಬೇಡಿ ಅಯ್ಯ, ಎದ್ದೆ

ಶುಂಡಾಲಯ್ಯ : ಎದ್ದು ಬರಬೇಡ, ಎಚ್ಚರಾಗಿದ್ದೀಯಾ ?

ಅಭ್ಯಂಕು : ಎಚ್ಚರ ಚೆನ್ನಾಗಿಯೂ ಎಚ್ಚರವಾಗಿದ್ದೇನೆ

ಶುಂಡಾಲಯ್ಯ : ಕುದುರೆ ಜೋಕೆ ಎಂದೆ

ಅಭ್ಯಂಕು : ಕೆಂದಾಸೀ ಪೈಗೂ ಮೇಯೋದು ಬಿಟ್ಟು ನಿಂತಿದೆ. ಕಲ್ಲೂ ನೀರೂ ಕರಗುವ ಸಮಯ. ಗಂಧರ್ವರು ಭೂಮಿಗೆ ಇಳಿಯುವ ಹೊತ್ತು ನನ್ನೊಡೆಯ.

ಶುಂಡಲಯ್ಯ : ಆಗಲಿ, ಅಂತು ಎಚ್ಚರಾಪ್ಪ ಎಚ್ಚರ

ಈ ಸಂಭಾಷಣೆ ಇರುವ 'ಅಭ್ಯಂಕು' ಕತೆ ಪೂರ್ತಿ ಹೀಗೆ ಸ್ವಾರಸ್ಯದ ಸಂಭಾಷಣೆಯಲ್ಲಿಯೇ ನಡೆಯುತ್ತದೆ. ಅದೊಂದು ತರಹ, ಅಂಕಗಳಾಗಿ ವಿಂಗಡಿಸಿಕೊಂಡು ನಾಟಕವಾಗಿಯೇ ಮುಂದೆ ಪ್ರಸ್ತುತವಾಗಿಬಿಡುತ್ತದೆ. ಈ ಬಗೆಯ ಚಟುವಟಿಕೆಯ ನಿರೂಪಣೆಯಿರುವ ಕತೆಗಳನ್ನು ಮಕ್ಕಳ ಮುಂದೆ ಪ್ರಸ್ತುತಪಡಿಸುವವರು ಒಳ್ಳೇ ಮಾತುಗಾರಿಕೆಯವರೇ ಆಗಿರಬೇಕಾಗುತ್ತದೆ, ಅಭಿನಯಪಟುವೇ ಆಗಿರಬೇಕಾಗುತ್ತದೆ. ಮಕ್ಕಳ ಮುಂದೆ ಏಕಪಾತ್ರಾಭಿನಯವನ್ನೇ ನಡೆಸಬೇಕಾಗುತ್ತದೆ. ಹೊಯ್ಸಳರ ಕತೆಗಳು ಇದನ್ನೆಲ್ಲ

ಅಪೇಕ್ಷಿಸುತ್ತವೆ. ಅಂದರೆ ಇವು ಸುಮ್ಮನೆ ಮಕ್ಕಳು ತಮ್ಮಷ್ಟಕ್ಕೇ ಓದಿಕೊಳ್ಳುವುದಕ್ಕಲ್ಲ, ಮಕ್ಕಳ ಮುಂದೆ ಪ್ರಸ್ತುತಪಡಿಸುವವರಿಗಾಗಿ ಕಾಯುತ್ತವೆ.

'ಇದು ರೇಷನ್ ಕಾಲ, ಹೌದೋ ಅಲ್ಲವೋ; ನಿಮ್ಮ ತಂದೆ ತಾಯಿ ಒಂದೊಂದು ಪಾವು ಅಕ್ಕಿಗೂ ಎಷ್ಟೋ ಜನಗಳನ್ನು ಕೇಳಿ ಕೇಳಿ ತರುತ್ತಾರೆ, ದಿನಕ್ಕೆ ಒಬ್ಬೊಬ್ಬರಿಗೆ ಅರೆಪಾವೂ, ಒಂದು ಪಾವೋ, ಎಂದೆಲ್ಲ ತರ್ಕ ನಡೆಯುತ್ತದೆ. ಅನಂತರ ಒಂದು ಹೊತ್ತಿಗೆ ಅರೆಪಾವು ಕೊಡಿ. ಸಾಕು ಎಂತ ಕೆಲವರು; ಇನ್ನೊಬ್ಬರು 'ಇಲ್ಲ, ಮುಕ್ಕಾಲು ಪಾವು ಕೊಡಿ' ಎಂತ ಸಾಧಿಸುತ್ತಿದ್ದಾರೆ. ಅಂತೂ ಈಗ ಭತ್ತ ಬೆಳೆಯುವ ಜನ ಹೆಚ್ಚಾಗಿ ಬೆಳೆದರೆ ಹೆಚ್ಚು. ಅಲ್ಲಿ, ಅವರು ಕಮ್ಮಿ ಬೆಳೆದರೊ, ಕಮ್ಮಿ ಕೊಡುತ್ತಾರೆ.

ರೇಷನ್ ಹೇಗಾದರೂ ಇರಲಿ, ಬೆಳೆ ಹೇಗಾರೂ ಇರಲಿ, ನಿಮಗಂತೂ ಹೊಟ್ಟೆ ತುಂಬ ಹಾಕಲೇ ಬೇಕು. ಇಲ್ಲದಿದ್ದರೆ ಹುಡುಗರಂತೂ ಗದ್ದಲ ಹಚ್ಚೇ ಬಿಡುತ್ತೀರಿ. ಆದ್ದರಿಂದ ಹುಡುಗರಿಗೆ ಮೊದಲು ಅನ್ನ ಹಾಕುತ್ತಾರೆ. ಅಷ್ಟೇಅಲ್ಲ; ಹೊಟ್ಟೆ ತುಂಬ ಹಾಕುತ್ತಾರೆ. ಇನ್ನಾವ ಕಾಲದಲ್ಲೂ ತಂದೆ ತಾಯಿಗಳು ತಮ್ಮ ಹೊಟ್ಟೆಗೆ ಕಡಿಮೆ ಮಾಡಿಕೊಂಡು ಹುಡುಗರಿಗೆ ಅನ್ನ ಹಾಕುತ್ತಿರಲಿಲ್ಲ.' ಆದುದರಿಂದ ಮಕ್ಕಳಾದವರು ಏನು ಮಾಡಬೇಕು ? ಅದೇ ಮತ್ತೆ ನಾನು ಹೇಳುವ ಮಾತು. ಮಕ್ಕಳು ಒಂದಗಳು ಅನ್ನವನ್ನೂ ಚೆಲ್ಲಬಾರದು.

ಮಕ್ಕಳ ಜೊತೆಗೆ ಮಾತನಾಡಿಕೊಂಡು, ಹಿರಿಯರಾಗಿ ಏನೇನೆಲ್ಲ ಹೇಳಿಕೊಂಡು ಕತೆಗೆ ಪೀಠಿಕೆ ಹಾಕುವ ಬಗೆಗೆ ಇದೊಂದು ಉದಾಹರಣೆ.

ಗಮನಿಸಬಹುದಾದ ಇನ್ನೊಂದು ಕೃತಿ ಎಂದರೆ 'ಕಥನ ಕಲೆ'. ಶಿಕ್ಷಣ ಇಲಾಖೆಯಲ್ಲೇ ಅಧಿಕಾರಿಗಳಾಗಿದ್ದ ಗಜೇಂದ್ರಗಡ ಶಾಮರಾಯರೆನ್ನುವವರು ಬರೆದ ಈ ಕೃತಿ ಶಾಲೆಯ ವಾತಾವರಣದಲ್ಲಿ ಮಕ್ಕಳಿಗೆ ಕತೆಗಳನ್ನು ಎಷ್ಟು ಅಗತ್ಯವಾಗಿ ಹೇಳಬೇಕು ಎನ್ನುವುದರ ಕುರಿತಾದ ಚರ್ಚೆಯನ್ನೇ ಒಳಗೊಂಡುದು. ೧೯೭೭ರಲ್ಲಿ ಪ್ರಕಟಗೊಂಡಿರುವ ಈ ಕೃತಿ ಹೇಳುವ ಮಾತುಗಳು ಮಹತ್ವದುವಾಗಿವೆ. 'ಒಂದು ವಿಷಯದ ವಿವರಣೆಗಾಗಿ ಪಠ್ಯಪುಸ್ತಕದ ಒಂದು 'ಪಾಠ'ವನ್ನಾಗಿ ಕಥೆಯನ್ನು ಬಳಸಿಕೊಳ್ಳುವುದು ಸಮಂಜಸವಾಗಲಾರದು . . . ಕಥೆಯು ಪ್ರಾಮುಖ್ಯವಾಗಿ ಕಲಾಕೃತಿ. ಕಲಾಸ್ವರೂಪವೇ ಕತೆಯ ತಿರುಳು, ಕಥೆಯ ಅಂತಃಸತ್ವ' ಹೀಗೆ ಕತೆಯನ್ನ ಕಲಾಕೃತಿಯಾಗಿಯೇ ಗುರುತಿಸುವ ಲೇಖಕರು ಕಥೆಯ ಪರಿಣಾಮ ಮಕ್ಕಳ ಮೇಲೆ ಹೇಗೆಲ್ಲ ಎನ್ನುವುದರ ಕುರಿತು ಮಾತನಾಡುತ್ತ 'ಕಥಾ ನಿರೂಪಣದಿಂದ ನಾವು ನೇರವಾಗಿ, ಪ್ರಾಮುಖ್ಯವಾಗಿ, ಸಾಧಿಸಬೇಕಾದುದು ಮಕ್ಕಳ ಮನಸ್ಸಿನ ಸಮಾರಾಧನೆ, ಸಂತೋಷಗಳೇ ಹೊರತು, ಬೋಧನೆ, ವಿಷಯ-ವಿವರಣೆಗಳಲ್ಲ ಎನ್ನುವುದು. ಕಥೆ ಕೇಳುವ ಮಕ್ಕಳ ಜ್ಞಾನ ಭಂಡಾರಕ್ಕೆ ಒಂದು ಕಣದಷ್ಟು ಕೂಡ ಹೊಸ ವಿಷಯವನ್ನು ಕಥೆಗಾರನು ಸೇರಿಸದಿರಬಹುದು. ಆದರೆ ಮನಸ್ಸಿಗೆ ಆಗುವ ಅಪ್ಯಾಯಮಾನತೆಯ ಬೆಲೆ ಕಡೆಮೆಯದಲ್ಲ'. ಅವರು ವಿವರಣೆ ನೀಡುವಂತೆ ಕತೆ ಕೇಳುವುದರಿಂದ ಉಂಟಾಗುವ ಆನಂದವು ಮಕ್ಕಳ ಆತ್ಮಶಕ್ತಿಯನ್ನು ಅಭಿವೃದ್ಧಿಗೊಳಿಸುವುದು, ಬಗೆಬಗೆಯ ಭಾವಶಕ್ತಿಗಳನ್ನು ಜಾಗ್ರತಗೊಳಿಸಿ ಅವು ಬಲಿಯುವಂತೆ ಬೆಳೆಯುವಂತೆ ಮಾಡುವುದು . . .ಎಲ್ಲವೂ ತಮಗೆ ಎಂಬ ಸ್ವ-ನಿಷ್ಠರಾದ ಮಕ್ಕಳ ಸಂಕುಚಿತ ಮನೋವೃತ್ತಿಯನ್ನು ವಿಶಾಲಗೊಳಿಸುವುದು, ಪ್ರೀತಿ ಸಹಾನುಭೂತಿಗಳ ಕ್ಷೇತ್ರವನ್ನೂ

ವಿಸ್ತರಿಸುವುದು. ಹೀಗೆ ಬಹು ವಿಶಾಲವಾಗಿ ಅವರು ಕತೆಯ ಪರಿಣಾಮವನ್ನು ಗುರುತಿಸುತ್ತಾರೆ. ಅದೂ ಶಾಲಾವಾತಾವರಣದಲ್ಲಿ ಈ ಕಾರಣಕ್ಕೇ ಅಗತ್ಯವಾದ ಸಂಗತಿಯಾಗಿ ಹೇಳುವುದನ್ನ ಗಮನಿಸಬೇಕು. ಅಂದಿನ ಸಮಯದಲ್ಲಿ ಅನೇಕರು ಅನೇಕ ಬಗೆಯಲ್ಲಿ ಕತೆಗಳ ಸುತ್ತ ತುಡಿದರೂ ಸಾಮಾನ್ಯವಾಗಿ ಕತೆಗಳ ಮೂಲಕ ನೀತಿಯನ್ನ ಹೇಳಬಾರದು ಎನ್ನುವ ಮಾತು ಹೆಚ್ಚೂ ಕಡಿಮೆ ಮುನ್ನೆಲೆಗೆ ಬಂದು ಪಾಕಗೊಂಡಿತ್ತು. ಅದರಲ್ಲೂ ಪಂಜೆಯವರ ಕಥಾಸಂಗ್ರಹಗಳು, ಮೇವುಂಡಿ ಮಲ್ಲಾರಿ, ಹೊಯ್ಸಳ ಅಂಥವರ ಸಂಗ್ರಹಗಳು, ಇನ್ನೂ ಹಲವರ ಸಂಗ್ರಹಗಳು ಗಜೇಂದ್ರಗಡ ಶಾಮರಾಯರ ಅಭಿಪ್ರಾಯಗಳನ್ನ ಹೆಚ್ಚೂ ಕಡಿಮೆ ಒಪ್ಪಿಕೊಂಡಹಾಗೇ ಇದ್ದುವು. ಸ್ಪಷ್ಟವಾಗಿ ಇದನ್ನ ಆಡಿ ತೋರಿಸಿರಲಿಕ್ಕಿಲ್ಲ ಅಷ್ಟೆ. ಆ ನಿಟ್ಟಿನಲ್ಲಿ 'ಕಥನ ಕಲೆ' ಅಂದಿನ ಕತೆಯ ವಾತಾವರಣ, ಚಿಂತನೆಗಳು, ಚರ್ಚೆಗಳ ಸಾಕ್ಷಿಯಾಗಿದೆ ಎನ್ನಬಹುದು. ವಿರಳವಾದ ಕೃತಿಯಾದರೂ ಮಹತ್ವದ್ದು ಇದು. ಇನ್ನೂ ಇಂಥ ವಿಚಾರಗಳು ಅಲ್ಲಲ್ಲಿ ಬಂದಿರಬಹುದು. ಅದರಲ್ಲೂ ಶಾಲಾ ಶಿಕ್ಷಕರ ತರಬೇತಿ ಸಂಸ್ಥೆಗಳು ಶುರುವಾದಮೇಲೆ ಇಂಥ ಚರ್ಚೆಗಳು ನಡೆದಿರಲಿಕ್ಕೇ ಬೇಕು.

ಮೇವುಂಡಿ ಮಲ್ಲಾರಿ ಹಾಗೂ ಹೊಯ್ಸಳ ಅವರ ಬರವಣಿಗೆಯ ವಿಶೇಷಗಳಲ್ಲಿ ಈ ಒಟ್ಟು ನವೋದಯ ಸಮಯದ ಗದ್ಯ ಬರವಣಿಗೆಯ, ಅದರಲ್ಲೂ ಕಥೆಯಂಥ ಚಟುವಟಿಕೆಯಲ್ಲಿ ಆದಷ್ಟೂ ಪಾಕವಾದ, ಪ್ರಾತಿನಿಧಿಕ ಎನ್ನಬಹುದಾದ ಮೂರ್ತಸ್ವರೂಪವನ್ನ ಕಾಣಬಹುದು ಎನಿಸುತ್ತದೆ. ಗದ್ಯದ ಬಹುಮುಖ್ಯವಾದ ಪ್ರಕ್ರಿಯೆ ನಡೆದಿರುವುದು ಕತೆಯನ್ನ ಮಕ್ಕಳಿಗೆ ಮುಟ್ಟಿಸುವಲ್ಲಿಯೇ. ಅದನ್ನ ಬಿಟ್ಟರೆ ರಾಜರತ್ನಂ ಅಂಥವರ ನಿಬಂಧ ಸ್ವರೂಪಗಳಲ್ಲಿ, ಅದನ್ನ ಬಿಟ್ಟರೆ ಜೀವನ ಚರಿತ್ರೆಗಳಲ್ಲಿ. ಭಾರತಭಾರತಿ ಪುಸ್ತಕ ಸಂಪದವೆಂದು ಐಬಿಚ್‌ನವರು ತಂದ ಜೀವನ ಚರಿತ್ರೆಗಳು ಕಿರಿದಾಗಿ, ಸಾರವಾಗಿ ಮಕ್ಕಳಿಗೆ ತಲುಪುವಲ್ಲಿ ಒಂದು ಬಗೆಯ ನಿಗದಿತವಾದ ವಿಶೇಷದ ಪ್ರಯತ್ನವಾಗಿ ಕಾಣಬಹುದಾದಂಥದು.

ಇಂಗ್ಲಿಷಿನಿಂದ ಕೆಲ ಪ್ರಚುರವಾದ ಕೃತಿಗಳು ಕನ್ನಡಕ್ಕೆ ಬಂದುದನ್ನ ಇಲ್ಲಿ ಹೇಳದೆ ಇರಲಾಗದು. ನಾ. ಕಸ್ತೂರಿಯವರು 'ಆ್ಯಲೀಸ್ ಇನ್ ಒಂಡರ್ ಲ್ಯಾಂಡ್' ಅಂಥ ಕೃತಿಯನ್ನ ಸಂಗ್ರಹವಾಗಿ 'ಪಾತಾಳದಲ್ಲಿ ಪಾಪಚ್ಚಿ' ತಂದರು. ಈ ಮೊದಲು ವೆಂಕಟರಂಗೋ ಕಟ್ಟಿಯವರು ೧೮೬೩ರಲ್ಲಿ 'ಅರೇಬಿಯನ್ ನೈಟ್ಸ್' ತಂದಿದ್ದರು. ಇದು ಮಕ್ಕಳ ಮಟ್ಟಕ್ಕೆ ನಿಲುಕುವುದಲ್ಲ ಎನ್ನುವುದಿದೆ. ಆನಂದರು ೧೯೫೦ರಲ್ಲಿ ರಾಬಿನ್ಸನ್ ಕ್ರೂಸೊ ಕತೆಯನ್ನ, ೧೯೫೫ರಲ್ಲಿ ಲುಯಿ ಸ್ಟೀವನ್‌ಸನ್‌ನ ಟ್ರೆಸರ್ ಐಲ್ಯಾಂಡ್‌ನ್ನ 'ಸಿರಿ ದ್ವೀಪ'ವಾಗಿ ತಂದರು. ಎಂ.ವಿ.ಸೀತಾರಾಮಯ್ಯನವರೂ ರಾಬಿನ್‌ಸನ್ ಕೃತಿಯನ್ನ ಕನ್ನಡಕ್ಕೆ ತಂದಿದ್ದರು. ಹೀಗೆ ರಾಜರತ್ನಂ ಕೂಡ 'ಬ್ಯಾರನ್ ಮಂಕ್‌ಹೌಸ್' ಎನ್ನುವ ಅಸಂಗತಗಳ ಕತೆಯನ್ನ ತಂದುದನ್ನ ನೋಡುತ್ತೇವೆ. ನೀಲತ್ತಹಳ್ಳಿ ಕಸ್ತೂರಿ ಅವರು ಟಿನ್ ಸೋಲ್ಜರ್ ಕೃತಿನ್ನ 'ತಗಡಿನ ಸಿಪಾಹಿ'ಯಾಗಿ ತಂದರು. ಎನ್. ಪ್ರಹ್ಲಾದರಾವ್ ಅವರು 'ಪಿನಾಕಿಯೊ'ವನ್ನ ಕನ್ನಡಕ್ಕೆ ತಂದರು. ಇವೆಲ್ಲ ಇಂಗ್ಲೀಷಿನಲ್ಲಿ ಹೆಚ್ಚು ಜನಪ್ರಿಯವಾದ, ಮನ್ನಣೆ ಗಳಿಸಿದ ಕೃತಿಗಳು. ಇವನ್ನ ತಂದವರೂ ಕನ್ನಡದಲ್ಲಿ ಖ್ಯಾತ ಹಿರಿಯ ಲೇಖಕರೇ. ಈ ಬಗೆಯ ಚಟುವಟಿಕೆ ಹೀಗೆ ಹೊರಗಿನಿಂದ ತರುವಲ್ಲಿಗೆ ಮಾತ್ರ ನಡೆಯಿತೇ ಹೊರತು ಅವುಗಳ ಪ್ರಭಾವದಿಂದ ಕನ್ನಡದಲ್ಲಿ ಹೊಸ ಬಗೆಯ ಕೃತಿಗಳ ಹುಟ್ಟಿಗೆ ಕಾರಣವಾಗಲಿಲ್ಲ ಎನ್ನುವದು ಬೇಸರದ ಸಂಗತಿಯೇ.

ಕತೆಗಳನ್ನ ಬಿಟ್ಟರೆ ಹಿರಿಯ ವ್ಯಕ್ತಿಗಳ ಜೀವನ ಚರಿತ್ರೆಗಳು, ಪುರಾಣ, ಐತಿಹಾಸಿಕ ವ್ಯಕ್ತಿಗಳ ಚಿತ್ರಣಗಳು ಒಂದಿಷ್ಟೆಲ್ಲ ಬಿಟ್ಟೂಬಿಟದೆ ಪ್ರಕಟವಾಗುತ್ತ ಬಂದುದಿದೆ. ಮಕ್ಕಳ ಮುಂದೆ ಆದರ್ಶದ ಉದಾಹರಣೆಗಳಿನ್ನಿಡುವುದು, ಭವಿಷ್ಯದ ತಯಾರಿಯನ್ನು ಈಗಿನಿಂದಲೇ ಶ್ರದ್ಧೆಯಿಂದ ಕೈಕೊಳ್ಳುವುದು ಮುಂತಾದ ಕಾಳಜಿಯೇ ಬಹು ಮುಖ್ಯವಾಗಿ ಈ ಬಗೆಯ ಬರಹಗಳ ಹಿಂದೆ ಇರುವುದು. ಕೇವಲ ಸೃಜನಶೀಲವಾದ ಬರವಣಿಗೆಯಾಗಿ, ಸಾಹಿತ್ಯಿಕವಾಗಿ ಇವನ್ನ ನೋಡಿದುದು ಕಡಿಮೆ. ಇಂಥ ಬರಹಗಳ ಅಗತ್ಯವೇ ಮಕ್ಕಳ ಸಂದರ್ಭದಲ್ಲಿ ನಿರ್ದಿಷ್ಟ ಉದ್ದಿಶ್ಯದಲ್ಲಿಯೇ ತಯಾರಾಗುವಂಥದು. ಸ್ವಾರಸ್ಯಕರವಾಗಿ, ಬಾಲ್ಯದಲ್ಲಿಯೂ ಕಣ್ಣು ಹರಿಸಬಹುದಾದ ನಮ್ಮ ಹಿಂದಿನವರ, ಹಿರಿಯ ವ್ಯಕ್ತಿತ್ವದವರ ಬದುಕಿನ ಸಂಗತಿಗಳನ್ನ ಆಸ್ವಾದಿಸುವಂತೆ ನೀಡುವಲ್ಲಿ ಕೆಲವರೆಲ್ಲ ತುಡಿದುದಿದ್ದೇ ಇದೆ. ಆದರೆ, ಅಂಥವುಗಳಿಗೆ ಒಳ್ಳೇ ಹುಡುಕಾಟವನ್ನೇ ನಡೆಸಬೇಕಾಗುವುದು. ಯಾಕೆಂದರೆ ನಮಗೆ ಗಮನಕ್ಕೆ ಬರುವ ಬಹಳಷ್ಟು ಬರವಣಿಗೆಯೆಲ್ಲ ನಿರ್ದಿಷ್ಟ ಉದ್ದಿಶ್ಯ ಹೊಂದಿ ಸೃಷ್ಟಿಯಾದುದೇ. ಸುಬೋಧ ರಾಮರಾಯರಿಂದ ಹಿಡಿದು ರಾಷ್ಟ್ರೋತ್ಥಾನದವರ 'ಭಾರತ ಭಾರತಿ ಪುಸ್ತಕ ಸಂಪದ'ದಂಥ ವಿಸ್ತೃತವಾಗಿ ಹರವಿಕೊಂಡ ಯೋಜನೆಗಳವರೆಗೆ ಇಂಥ ಬರವಣಿಗೆ ಕಾಣಿಸಿಕೊಳ್ಳುತ್ತಲೇ ಬಂದಿದೆ.

ಜನಪದ ಕತೆಗಳನ್ನ ಆಯ್ದು ನೀಡುವುದರ ಜೊತೆಗೆ ರಾಮಾಯಣ ಮಹಾಭಾರತದಂಥ ಹಿರಿಯ ಕಾವ್ಯಗಳ ಕತೆಗಳನ್ನು ಸಂಗ್ರಹವಾಗಿ, ಇಲ್ಲವೆ ಆಯ್ದು ಪ್ರಸಂಗಗಳಾಗಿ ನೀಡುತ್ತ ಬಂದುದೂ ಅನೇಕರಿಂದ ನಡೆದುದರಿಂದ ಅಂಥಲ್ಲಿಯೂ ಆಗಾಗ ವಿಶೇಷದ ಬರವಣಿಗೆ ನಡೆದಿರುವ ಸಾಧ್ಯತೆ ಇದೆ.

ಪದ್ಯ ಸಾಹಿತ್ಯ

ನವೋದಯದ ಸಮಯದಲ್ಲಿ ಪ್ರಬುದ್ಧರ ಓದಿಗಾದ ಸಾಹಿತ್ಯಕ್ಕೆ ಹೋಲಿಸಿದರೆ ಮಕ್ಕಳಿಗಾಗುವ ಪದ್ಯ ಸಾಹಿತ್ಯ ವಿಸ್ತಾರದ ಹರಹನ್ನ ಹೊಂದಿದುದಲ್ಲ. ಹಾಗಿದ್ದರೂ ಪ್ರತಿಭಾವಂತ ಹಿರಿಯರು ಕೆಲವರು ಈ ಕಡೆ ಹೊರಳಿದ್ದರಿಂದ ವಿಶೇಷವಾದುದನ್ನ ನೀಡಿದರು. ಹಾಗೆ ನೋಡಿದರೆ ಪ್ರಬುದ್ಧರ ಸಾಹಿತ್ಯಕ್ಕೆ ನೀಡಿದಷ್ಟು ಒತ್ತು ಮಕ್ಕಳ ಸಾಹಿತ್ಯಕ್ಕೆ ಸಿಕ್ಕಲಿಲ್ಲ ಎನ್ನುವುದನ್ನು ತಳ್ಳಿಹಾಕಲಾಗದು. ಅದರೊಂದಿಗೆ ಈ ಕಡೆಗೂ ಒಂದಿಷ್ಟು ಹೊರಳಿದರು ಎನ್ನುವಂತೆ ಇದು. ಅಷ್ಟಿದ್ದರೂ ಅವರ ಕೃಷಿ ಅನೇಕ ಬಗೆಯಲ್ಲಿ ಸೆಳೆಯುವಂಥದಾಯಿತು, ಮುಂದಿನವರಿಗೆ ದಾರಿ ಹಾಕಿಕೊಡುವಲ್ಲಿ ಸಾರ್ಥಕವಾದ ಕೆಲಸವನ್ನೇ ಮಾಡಿತು ಎನ್ನಲಡ್ಡಿಯಿಲ್ಲ. ಅದು ತುಸುವಾದರೂ, ಒಂದಿಷ್ಟೆಲ್ಲ ಹರಹಿನದಾದರೂ ಸಹಜವಾಗಿಯೇ ಪ್ರತಿಭಾಸಂಪನ್ನರಿಂದ ಪ್ರತಿಭಾಪೂರ್ಣವಾದ ಕೃಷಿಯೇ ನಡೆಯಿತು.

ಮಕ್ಕಳ ಸಾಹಿತ್ಯದ ಪದ್ಯಕೃಷಿ ಎಸ್. ಜಿ. ನರಸಿಂಹಾಚಾರ್ಯರಂಥ, ಅಪರೂಪದ ಬಾಲ್ಯದೆಡೆಗೆ ಸೆಳೆದುಕೊಂಡ ಮನೋಸ್ಥಿತಿಯವರಿಂದ ಓನಾಮಗೊಂಡ ಅದು ಬಿಡದೆ ಹೇಗೋ ಹರಿಯುತ್ತಲೇ ಬಂದಿದೆ. ಪಂಜೆ ಮಂಗೇಶರಾಯರು, ಕುವೆಂಪು, ಜಿ.ಪಿ.ರಾಜರತ್ನಂ ಹಾಗೂ ದಿನಕರ ದೇಸಾಯಿ ಈ ನಾಲ್ವರು ಹಿರಿಯರ ಕೃಷಿ ಒಂದೊಂದು ಬಗೆಯಲ್ಲೂ ವಿಶೇಷವಾಗಿ ಸೆಳೆಯುತ್ತದೆ. ಇವರ ಕೃಷಿಯೆಲ್ಲ ಸ್ವೋಪಜ್ಞತೆಯಿಂದ ವಿಭಿನ್ನವಾಗಿದ್ದು, ಪ್ರಾರಂಭದ ದಿನಗಳಲ್ಲಿಯೇ ಮಕ್ಕಳ ಪದ್ಯ ಸಾಹಿತ್ಯಕ್ಕೆ ಹೊಸ ಸಾಧ್ಯತೆಗಳನ್ನ ತೋರುವಲ್ಲೂ

ಪರಿಣಾಮಗೊಂಡಿತು ಎನ್ನಬಹುದು. ಇವರನ್ನ ಅನುಸರಿಸುತ್ತ ತೊಡಗಿಕೊಂಡ ಇನ್ನೂ ಅನೇಕರಲ್ಲಿ ಹೊಯ್ಸಳರಂಥವರನ್ನ ಬಿಡದೇ ಗಮನಿಸುವ ಅಗತ್ಯವನ್ನ ಹೇಳುವಂಥವರು. ನವೋದಯದ ಭಾವಗೀತೆಯ ವರಸೆಗಳನ್ನೆಲ್ಲ ಸಹಜವಾಗಿಯೇ ಪಡೆದುಕೊಂಡುವಾದರೂ ತಮ್ಮದೇ ಆದ ಅಸ್ತಿತ್ವಹೊಂದುವ ಹೊಳಹುಗಳನ್ನ ಈ ರಚನೆಗಳು ತೋರಿದವು. ತಮ್ಮ ಅಗತ್ಯಗಳಿಗಾಗಿ ಸುತ್ತ ಬೇರೆ ಬೇರೆ ಆಸರೆಗಳನ್ನ ಪಡೆಯಲು ಹವಣಿಸಿದವು.

ಪಂಜೆ ಮಂಗೇಶರಾಯ

ಆದ್ಯರೆಂದು ಗುರುತಿಸುವ ಪಂಜೆಯವರೇ ಗದ್ಯಸಾಹಿತ್ಯದಲ್ಲಿ ತೊಡಗಿಕೊಂಡಂತೆ ಪದ್ಯ ಸಾಹಿತ್ಯದಲ್ಲೂ ವಿಶೇಷವಾಗಿಯೇ ತೊಡಗಿಕೊಂಡರು. ಹಾಗೆ ನೋಡಿದರೆ ಅವರ ಕೆಲ ಪದ್ಯಗಳೇ ಹೆಚ್ಚು ಮುನ್ನೆಲೆಗೆ ಬಂದು ಅವರನ್ನ ಆ ಮೂಲಕ ಗುರುತಿಸುವಂತೆ ಖ್ಯಾತಿಯನ್ನ ತಂದಿರುವುದೀಗ ಇತಿಹಾಸ. ಅವರ 'ಆಡಿನಾ ಮರಿ' ಪದ್ಯ ಇಂಗ್ಲಿಷಿನ ನರ್ಸರಿ ರೈಮ್‌ನ ಅನುಸರಣೆಯೇ ಆದಂತಿದೆ. ಅದರಲ್ಲಿನ ವಸ್ತು, ಕವಿತೆಯ ಚುಟುಕು ಗುಣ, ಲಯದ ಹೊಸತನ ಇದನ್ನೇ ಹೇಳುತ್ತವೆ. ಆದಿಪ್ರಾಸದ ಕನ್ನಡತನವಿದ್ದರೂ ಸೊಗಸಾದ ಮಕ್ಕಳ ಪದ್ಯವಾದ ಇದು ಕನ್ನಡಕ್ಕೆ ಹೊಸದು.

ಮಾತನಾಡದೇ, ನನ್ನ ನೋಡದೆ
ಏತಕ್ಹೋಗುವೆ? ಆಡಿನಾ ಮಗೂ !

ಎಂದು ಮುಗಿಯುವ ಕವಿತೆ ಮಕ್ಕಳ ಮನಸ್ಸಿಗೆ ತೀರ ಹತ್ತಿರದ್ದು. ಇಂಥ ಅವರ ಪ್ರಯತ್ನಗಳನ್ನ ನೋಡಿದಾಗ ಕವಿತೆಯ ಉಡುಗೆ ತೊಡುಗೆಯಂತೆ ವಸ್ತುವಿನ ಆಯ್ಕೆಯಲ್ಲಿಯೂ ಇಂಗ್ಲಿಷಿನ ಪ್ರಭಾವದ ಕಡೆಗೆ ಹೊರಳಿದ್ದರು. 'ಹೊಗೆಯ ಗಾಡಿ'ಯ ಹೊಸ ಸಂಗತಿಗಳು ಮಕ್ಕಳನ್ನ ಮನದಲ್ಲಿಟುಕೊಂಡಂಥವೇ. ಅವರ 'ಹಾವಿನ ಹಾಡು' ಒಂದು ಒಳ್ಳೆಯ ಭಾವಗೀತೆಯಾಗುತ್ತಲೇ ಮಕ್ಕಳಿಗೆ ಸಲ್ಲುವ ಭಾವನೆಗಳನ್ನೇ ಕೇಂದ್ರವಾಗುಳ್ಳ ಪದ್ಯ. ಕೈ ಮುಗಿಯುವುದು, ಹಾಲನ್ನೀಯುವುದು, ಹಳದಿಯ ಹೆಡೆ ಬಿಚ್ಚು ಎನ್ನುವುದು, ತಲೆಯನ್ನು ತೂಗು ಎನ್ನುವುದು, ಕೊಳಲನ್ನ ಊದುವೆ, ಕೇಳು ಎನ್ನುವುದು, ನಾಗಣ್ಣಾ, ತಲೆಯಲ್ಲಿ ಕೊಪ್ಪರಿಗೆಯ ಚಿನ್ನ ಇದೆಯಂತಲ್ಲ, ನಿಜವೆ ಅಂತ ಕೇಳುವುದು ಇವೆಲ್ಲ ಮಕ್ಕಳ ಮನದ ಸಂಗತಿಗಳೇ. ಪಂಜೆಯವರು ಮಕ್ಕಳಾಗಿಯೇ ಬರೆದ ಕವಿತೆ ಇದು. ಪೊಪೊಪೊ ಎಂದು ನಾಟಕೀಯವಾದ, ಹಾಸ್ಯದ, ಅರ್ಥಪೂರ್ಣವಾದ ಕೊನೆಯುಳ್ಳ ಪದ್ಯ ಅದರ ರಚನೆಯ ವೈಖರಿಯಲ್ಲಿ, ಭಾಷೆಯ ಬಳಕೆಯಲ್ಲಿ ವಿಶಿಷ್ಟವಾಯಿತು ಎಂಬುದನ್ನ ವಿಮರ್ಶಕರು ಈಗಾಗಲೇ ಸಾಕಷ್ಟು ಸಲ ಹೇಳಿದ್ದಾರೆ. ಪುಂಗಿಯವನ ತಲೆ ಅನುಸರಿಸಿ ಹಾವು ತಲೆ ಹಾಕುವಂತೆ ಸಾಗುವ ಪದ್ಯದ ಲಯ ಅಲ್ಲಿನ ವಸ್ತುವಿಗೂ, ಮಕ್ಕಳಿಗೂ ಹೇಳಿಮಾಡಿಸಿದಂತಹುದು ಎಂದರೆ ತಪ್ಪಲ್ಲ. ಈ ಬಗೆಯ ವಸ್ತು ಸೆಳೆಯುವ ವಯೋವರ್ಗದ ಮಕ್ಕಳಿಗೆ ಒಂದಿಷ್ಟೆಲ್ಲ ಭಾರವಾದ ಭಾವಲಹರಿಗಳು ಇಲ್ಲಿ ಹರಿದುದಿದೆ. ಹಾಗಿದ್ದಾಗಲೂ ಮಕ್ಕಳ ಲೋಕವನ್ನ ಪದ್ಯ ಸೆಳೆದುದು ಅದು ಕೇವಲ ಪಠ್ಯವಾಗಿ ಹಲವಾರು ಸಲ ಕಾಣಿಸಿದ ಕಾರಣಕ್ಕೇ ಅಂತ ಖಂಡಿತ ಹೇಳಲಿಕ್ಕಾಗದು.

ಅವರು ಮಕ್ಕಳ ಗದ್ಯದ ಬಗೆಗೆ ಹೇಳಿದಂತೆ ಪದ್ಯದ ಬಗೆಗೆ ಪ್ರತ್ಯೇಕವಾಗಿ ಅಷ್ಟಾಗಿ ಏನನ್ನೂ ಹೇಳದೆ ಇದ್ದರೂ ಮಕ್ಕಳೊಡನಾಟದಲ್ಲೇ ಇದ್ದ, ಮಕ್ಕಳಿಗೆ ಪಠ್ಯವಾಗಿ ಕೊಡುವ

ಜರೂರಿಯನ್ನನುಭವಿಸಿದ, ಮಕ್ಕಳ ಲೋಕದಲ್ಲಿ ಸಹಜವಾಗಿ ಬೆರೆಯುವ ತುಡಿತ ಹೊಂದಿದ ಅವರಿಂದ ಮಕ್ಕಳ ಪದ್ಯ ತನ್ನ ಆಕಾರಗಳನ್ನ ಪಡೆಯುವಲ್ಲಿ ಒಂದಿಷ್ಟೆಲ್ಲ ಕ್ರಿಯಾಶೀಲವಾಗಿಯೇ ತೊಡಗಿತು. ವಿಮರ್ಶಕರು ಅವರ ಕೆಲ ಪದ್ಯಗಳನ್ನ ಅಭಿವ್ಯಕ್ತಿಯ ಸೊಗಸುಗಾರಿಕೆಗೆ ಉದಾಹರಿಸುವಾಗೆಲ್ಲ ಅವರ ಒಟ್ಟು ಕಾವ್ಯ ಪ್ರತಿಭೆಯನ್ನ, ಬಳಸಿಕೊಂಡ ಭಾಷಾ ಸಮೃದ್ಧಿಯನ್ನ, ಕನ್ನಡದ ಪ್ರಾರಂಭದ ಕಾವ್ಯದ ನಡುವಿಟ್ಟು ನೋಡಿದುದು ಕಾಣುತ್ತದೆ. ಆ ಕಾವ್ಯದ ಮಕ್ಕಳ ಕಡೆಗಿನ ಹೊರಳನ್ನ ಅಷ್ಟಾಗಿ ಗುರುತಿಸಿಲ್ಲವೆಂದೇ ನನ್ನದು. ಪಂಜೆಯವರು ಆ ನಿಟ್ಟಿನಲ್ಲಿ ಪ್ರಯೋಗಶೀಲರಾಗಿದ್ದರು, ಇಲ್ಲವೆ ಸಹಜವಾಗಿಯೇ ಆ ಕಡೆಗೆ ತುಡಿದಿದ್ದರು ಎನ್ನುವುದನ್ನು ಹೇಳಲೇ ಬೇಕು.

ಭಾಷೆಯ ಬಳಕೆ ತುಸು ಪ್ರೌಢವಾದರೂ, ಕುತೂಹಲಕ್ಕಿಂತ ಹಿರಿಮೆಯ ಕಡೆಗೆ ಹೊರಳಿದರೂ 'ಹೊಗೆಯ ಗಾಡಿ' ಮಕ್ಕಳಿಗೆ ಖುಷಿಕೊಡುವ ವಸ್ತುವಿನದು. ಅವರ 'ನದಿ' ಕವಿತೆಯಂತೂ ಮಕ್ಕಳ ಕವಿತೆಯಾಗಿಯೇ ಖುಷಿಕೊಡುತ್ತದೆ. ಅಲ್ಲಿನ ವಸ್ತುವನ್ನು ಹಾಗೆ ನಿಭಾಯಿಸಿದ್ದು ಕಾಣುತ್ತದೆ, ಭಾವಗೀತೆಯ ಅಂದಿನ ತುಸು ಪ್ರೌಢಶೈಲಿಯಲ್ಲಿಯೇ ಸಾಗಿದರೂ ಸರಳ ಕವಿತೆಯೇ ಅದು. 'ಎಲ್ಲಿಂದ ಬರುತಿಯೆ? ನೀರನ್ನು ತರುತಿಯೆ, ಒಳ್ಳೆದಾಗಿರುತಿಯೆ ನೀನು ?' ಎಂಬ ಕುತೂಹಲದ, ಆಪ್ತಭಾವದೊಂದಿಗೆ ಪ್ರಾರಂಭವಾಗುವ ಕವಿತೆ ನದಿ ಬೆಟ್ಟದಲ್ಲಿ ಹುಟ್ಟಿ, ಹನಿಯಾದುದು, ತಟುಕಾದುದು, ಬೆಟ್ಟಾದುದು, ಬೆರಳಾದುದು, ತೋಳಾದುದು, ತೊಡೆಯಾದುದು, ಪುಟ್ಟ ತೋಡಾದುದು ಹೀಗೆ ನದಿಯ ಕತೆಯನ್ನು ಬಿಚ್ಚುತ್ತ ಹೋಗುತ್ತದೆ. ಅದೂ ಮಕ್ಕಳ ಮನಸ್ಸಿಗೆ ಹತ್ತಿರವಾಗಿ ಕತೆ ಹೇಳುವ ಹಾಗೆ, ಚಿತ್ರವತ್ತಾಗಿ, ಕುತೂಹಲ ಕಾಯ್ದುಕೊಳ್ಳುತ್ತ, ರುಚಿಕಟ್ಟಾಗಿ ಹೇಳುತ್ತ ಹೋಗುತ್ತದೆ. ನದಿ ಮಲೆಮರಗಳ ಮರೆಯಲ್ಲಿ ಮಲಗಿತಂತೆ, ಸೂರ್ಯನ ಬೆಳಕಿಗೆ ಎಚ್ಚತ್ತು ಹೊರಬಂದಿತಂತೆ, ಆಮೇಲೆ 'ಆಡುತ್ತ, ಸುತ್ತಲು ನೋಡುತ್ತ, ತೊರೆಯನ್ನು ಕೂಡುತ್ತ, ಓಡುತ್ತ ಬಂದೆ. ದೂಡುತ್ತ ಕಲ್ಲನ್ನು, ಮಾಡುತ್ತ ಗುಲ್ಲನ್ನು, ಹಾಡುತ್ತ ನೀಡುತ್ತ ಬಂದೆ' ಎಂದು ಹೇಳುವ ನದಿ ಕೊನೆಯಲ್ಲಿ 'ಊರಿನ ಜನರನ್ನು ಕಿವುಡು ಮಾಡಿತು ನನ್ನ ಭೋರಿನ ಕೂಗುವ ಕೂಗು' ಎನ್ನುವಲ್ಲಿ ತನ್ನ ಬಾಲ ಮನದ ಆಕರ್ಷಣೆಯ ವಿಶೇಷತೆಯನ್ನ ಕಾಯ್ದುಕೊಂಡೇ ಬಂದಿದೆ. ಇಂಗ್ಲಿಷ್ ಗೀತೆಗಳ ಪ್ರಭಾವದಿಂದ ಇತ್ತ ಕನ್ನಡದ ಜಾಯಮಾನದ ಒತ್ತಡದಿಂದ ರೂಪುಗೊಂಡ ಕವಿತೆಗಳಲ್ಲಿ ಇದು ಮಕ್ಕಳಿಗಾಗಿ ನಿಜವಾಗಲೂ ಯಶಸ್ವಿಯಾದುದೇ ಅನಿಸುತ್ತದೆ. ಹಾಸ್ಯವನ್ನೊಳಗೊಂಡ ಕವಿತೆಗಳು ಕೆಲವು ಸಹಜವಾಗಿಯೇ ಮಕ್ಕಳಿಗೆ ಹತ್ತಿರವಾದುವು. 'ಪರಾಜಿತ ವಿದ್ಯಾರ್ಥಿಯ ಪ್ರಲಾಪ' ಪರೀಕ್ಷೆಯಲ್ಲಿ ಪದೇ ಪದೇ ಅನುತ್ತೀರ್ಣನಾದ ವಿದ್ಯಾರ್ಥಿಯೊಬ್ಬನ ವೇದನೆಯನ್ನು ಒಳಗೊಂಡುದು. 'ನಾಗಣ್ಣನ ಕನ್ನಡಕ'ವೂ ಹೀಗೆಯೇ ಮಕ್ಕಳಿಗೆ ಮುದನೀಡುವ ಕಥನ ಕವನ. ಬಹಳ ಸರಳವಾಗಿ ಓಡುವ ಓಟ, ಸರಳ ನಿರೂಪಣೆ, ಉದ್ದಕ್ಕೂ ಹಾಸ್ಯವನ್ನು ತುಂಬಿಕೊಂಡೇ ಸಾಗುವ, ಸಂಭಾಷಣೆಯನ್ನೂ ಅಷ್ಟೇ ಸಹಜವಾಗಿ ಒಳಗೊಂಡ ಈ ಕವಿತೆ ಒಂದು ಒಳ್ಳೆಯ ಉದಾಹರಣೆ. ಮಕ್ಕಳನ್ನ ಕಾಳಜಿಯಿಂದಲೇ ಪಂಜೆಯವರು ಗ್ರಹಿಸಿದರು ಎಂಬುದು ಇಂಥ ಪದ್ಯಗಳ ವಸ್ತು, ಭಾಷೆ, ಅಭಿವ್ಯಕ್ತಿಯ ಬಗೆ, ಲಯ ಇವೆಲ್ಲ ಹೇಳಿಯೇ ಹೇಳುತ್ತವೆ.

ಉಪದೇಶಕ್ಕೆ ತಿರುಗುವ ಬಾಗು ಅವರ ಕವಿತೆಗಳಲ್ಲಿ ಒಂದಿಷ್ಟೆಲ್ಲ ಹೆಚ್ಚೇ ಕಾಣುತ್ತದೆ.

ಅದು ಮಕ್ಕಳನ್ನ ಮುಂದಿಟ್ಟುಕೊಂಡಾಗ ಅವರಿಗೆ ಅಗತ್ಯವಾಗಿಯೂ ಕಂಡಿರಬಹುದಾದುದು, ಅವರ ಸ್ವಬಾವಕ್ಕೆ ಸಹಜವಾದುದೂ ಇದ್ದಿರಬಹುದಾದುದು ಎಂದುಕೊಳ್ಳಬೇಕು. ಹಾಗೆ ನೋಡಿದರೆ ಗದ್ಯದ ಸಮಯದಲ್ಲಿ ಈ ನಿಟ್ಟಿನಲ್ಲಿ ಅವರು ಒಳ್ಳೇ ಮುತುವರ್ಜಿ ವಹಿಸಿರುವುದನ್ನ ನೋಡುತ್ತೇವೆ. ಅವರ ಕತೆಗಳಾವುವೂ ಈ ಮಟ್ಟದಲ್ಲಿ ಉಪದೇಶಕ್ಕೆ, ನೀತಿಗೆ ಬಾಗಿದುವಾಗಿ ಕಾಣುವುದಿಲ್ಲ ಎನ್ನುವುದು ಗಮನಿಸಬೇಕಾದ ಸಂಗತಿಯೇ. 'ಜೇಡ ನೊಣದ ಪದ್ಯ,' 'ಸಂಜೆಯ ಹಾಡು', 'ಎಂಟು ಬಂಟರು', 'ಸ್ಥಿರ ಪ್ರಯತ್ನ', 'ಉದ್ಯಮ' ಇಂಥ ಪದ್ಯಗಳ ಹಿಂದೆ ಈ ಬಗೆಯ ಕಾಳಜಿಯೇ ಎದ್ದುಕಾಣುತ್ತದೆ.

ಹೆಚ್ಚು ಪ್ರಚುರತೆಯನ್ನ ಪಡೆದ ಅವರ 'ತೆಂಕಣಗಾಳಿಯಾಟ' ಪದ್ಯಗಳು ತಮ್ಮ ವಸ್ತುವಿನ ಆಯ್ಕೆಯಿಂದ ಮಕ್ಕಳ ಗ್ರಹಿಕೆಗೂ ನಿಲುಕುತ್ತ ಅವರನ್ನ ತಣಿಸುತ್ತಲೇ ಪ್ರಬುದ್ಧತೆಯ ಸಂಗತಿಗಳನ್ನ ತನ್ನ ತೆಕ್ಕೆಗೆ ತೆಗೆದುಕೊಳ್ಳುವಂಥವು. 'ಹಸಿವಿನ ಭೂತದ ಕೂಯುವ ಕೂವೋ? ಹೊಸತಿದು ಕಾಲನ ಕೋಣದ, ಓ ! ಓ ! ಉಸುರಿನ ಸುಯ್ಯೋ ಸೂಸೂಕರಿಸುತ' ಎಂಬಂತಹ ಅಭಿವ್ಯಕ್ತಿಗಳಿಂದ ಮಕ್ಕಳಿಗಾಗುವ ವಸ್ತುವನ್ನ ವಿಶೇಷವಾಗಿ ಹೊಂದಿಯೂ ವಿಸ್ತರಿಸುತ್ತ ಹೆಚ್ಚಿನ ಅನುಭವಕ್ಕೆ ಆಹಾರವಾಗತೊಡುತ್ತವೆ. ಚೆನ್ನಾಗಿ ಓದಿನ ಗೀಳು,ರುಚಿ ಅಂಟಿಸಿಕೊಂಡ ಮಕ್ಕಳು ಖುಷಿಯಿಂದ ಆಸ್ವಾದಿಸಬಲ್ಲಂಥ ಹಾಡೇ ಇವುಗಳು.. ಇಂಥ ಪದ್ಯಗಳು ಪಥ್ಯವಾಗಿ ಭಾಷೆಯ ಬಗೆಗಳು, ಪದಗತಿ, ಲಯಗಳು ನೀಡುವ ನಾದದ ಪರಿಣಾಮ, ಹಾಗೆಯೇ ಸಾಹಿತ್ಯದಿಂದಾಚೆಯೂ ಗ್ರಹಿಸುವ ಅನೇಕ ಸಂಗತಿಗಳಿಗಾಗಿ ಅಭ್ಯಾಸದ ಮಗ್ಗಲುಗಳಿಗೆ ಸ್ಪಂದಿಸುತ್ತ ಇರುವುವಾಗಿಯೂ ಅಸ್ತಿತ್ವ ಹೊಂದಿವೆ. 'ಚಂದ್ರನನ್ನು ತಾ' ಕವಿತೆಯ ವಸ್ತು ಮಕ್ಕಳದ್ದೇ ಆಗಿದ್ದಂಥದ್ದು, ಪಂಜೆಯವರು ಅದನ್ನು ನಿಭಾಯಿಸಿದ್ದು ಒಬ್ಬ ಭಾವಗೀತಕಾರರಾಗಿ, ಹಿರಿಯರಾಗಿ. 'ಸೂರ್ಯೋದಯ' ಎನ್ನುವ ಕವಿತೆಯೂ ಹೀಗೇ. ಅದರಲ್ಲಿ 'ಕೋಳಿಯು ಕಹಳೆಯ ಊದಿದುದು, ಗಾಳಿಯು ರಾಯಸ ಓದಿದುದು' ಎನ್ನುವ ಸಾಲುಗಳಿವೆ. 'ಅಣ್ಣನ ವಿಲಾಪ' ಕವಿತೆ ಪುಟ್ಟ ಮಗು ಕಣ್ಮರೆಯಾದಾಗ ಅಣ್ಣ ಪಡುವ ನೋವನ್ನು ಒಳಗೊಂಡ ಕವಿತೆ. ಕವಿತ ಬೆಳೆಯುತ್ತ ಶೋಕದ ಬಳಿವಿಡಿದು ವಿಸ್ತಾರದ ಅನುಭವವನ್ನು ಒಳಗೊಳ್ಳುತ್ತ ಹೋಗುತ್ತದೆ. 'ಸವಿಯಿತೇ ಕಾಲವಂಕುರದ ಪರಿಯಲ್ಲೇ' ಎಂದು ತಾಯಿಯ ಅಳಲೂ ಸೇರಿ ಭಾವಗೀತೆಯ ಒಂದು ಒಳ್ಳೆಯ ಉದಾಹರಣೆಯಾಗಿ ನಿಲ್ಲುತ್ತದೆ. ಚಿಕ್ಕಂದಿನ ನೆನಪುಗಳನ್ನ ಹೇಳುವ ಕವಿತೆಗಳು ಹಲವನ್ನು ಅವರು ಬರೆದಿದ್ದಾರೆ. ಅಲ್ಲೆಲ್ಲ ಕಳೆದುಹೋದ ದಿನಗಳನ್ನು ಮನೆಯ ಪರಿಸರದಿಂದ ನೋಡಿದುದೇ ಇದೆ. ಅವೆಲ್ಲವುಗಳಲ್ಲಿ ಮಕ್ಕಳಿಗೆ ದಕ್ಕುವ ಅಭಿವ್ಯಕ್ತಿಯ ಕೆಲ ಪದರುಗಳಿವೆ. ಒಟ್ಟಾರೆಯಾಗಿ ಕಾಣುವುದೆಂದರೆ ಪಂಜೆಯವರು ಪದ್ಯ ರಚನೆಗಳಿಗೆ ತೊಡಗಿಕೊಳ್ಳುತ್ತ ಸಾಧ್ಯವಾದ ವಿಸ್ತಾರಗಳಿಗೆ ತಮ್ಮನ್ನು ತೆರೆದುಕೊಳ್ಳಲು ನೋಡಿದರು. ನವೋದಯದ ಮೊದಲ ದಿನಗಳಲ್ಲಿ ಅವರ ಈ ಪ್ರಯತ್ನಗಳು ವಿಶೇಷವಾಗಿಯೇ ಗಮನ ಸೆಳೆದುವು. ಮಕ್ಕಳ ಪ್ರಪಂಚದಲ್ಲೂ ಅಷ್ಟೇ ತೊಡಗಿಕೊಂಡಿದ್ದ ಅವರು ಮಕ್ಕಳ ಕಥಾಪ್ರಪಂಚದಲ್ಲಿ ಒಂದಿಷ್ಟೆಲ್ಲ ನಿಗದಿಯಾಗೇ ತೊಡಗಿಕೊಂಡ ಹಾಗೆ ಪದ್ಯ ಸಾಹಿತ್ಯದಲ್ಲಿ ತೊಡಗಿಕೊಳ್ಳಲಿಲ್ಲವೆನ್ನಬಹುದು. ಹಾಗಿದ್ದರೂ ಅವರ ಕಣ್ಣರಿಕೆಯಲ್ಲಿ ಮಕ್ಕಳು ಇದ್ದೇ ಇದ್ದರು. ಮಕ್ಕಳ ಸುತ್ತಲಿನ ವಸ್ತುಪ್ರಪಂಚವಂತೂ ನಿಡಿದಾಗಿಯೇ ಕಾಣುವುದನ್ನ ತಳ್ಳಿಹಾಕಲಾಗದು.

ಕುವೆಂಪು

ಬಾಲ್ಯದ ಕುರಿತು, ಕಳೆದು ಹೋದ ಆ ಸಮಯದ ಕುರಿತು, ಮರಳಿ ಅದನ್ನ ಪ್ರಕೃತಿಯ ಮರೆಯಲ್ಲಿ ಪಡೆಯುವ ಕುರಿತು ಕುವೆಂಪು ಹಲವು ಪದ್ಯ ಬರೆಯುತ್ತ ಬಾಲ್ಯದ ಕುರಿತ ತಮ್ಮ ಆತ್ಯಂತಿಕ ಸಂತಸದ ಸಂಗತಿಗಳನ್ನ ಅಭಿವ್ಯಕ್ತಗೊಳಿಸಿದ್ದಾರೆ. ಬಾಲ್ಯ ಒಂದು ಅಪರೂಪದ ಸಮಯ, ಮತ್ತೆಂದೂ ಸಿಗಲಾರದೇ ಹೋಗಿಬಿಡುವ ಸಂಗತಿ, ಎಂಬೆಲ್ಲ ಲಹರಿಗಳೊಡನೆ ಬಾಲ್ಯವನ್ನ ದೈವೀಮಯವಾಗಿ ಕಾಣುವ ಕಣ್ಣೂ ನಮಗಿಲ್ಲಿ ಕಾಣುತ್ತದೆ. ಬಾಲ್ಯವನ್ನ ಬದುಕಿನ ತಯಾರಿಗಾಗಿ ಸಿದ್ಧಗೊಳಿಸುವ ಹಂತವಾಗಿ ಕಾಣದೇ ಅದರಲ್ಲಿಯೇ ಒಂದು ಬಗೆಯ ಪರಿಪೂರ್ಣತೆಯನ್ನ ಕಾಣುವ ಬಗೆ ಇಲ್ಲೆಲ್ಲ ಗೋಚರಿಸುತ್ತದೆ. ಕವಿ ರವೀಂದ್ರರ ಶಿಶುಗೀತಗಳಲ್ಲಿ ವಿಸ್ತೃತವಾಗಿ ಹರಡಿರುವ ಈ ಬಗೆಯ ವಿಲಾಸ ವಿಭ್ರಮಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕುವೆಂಪು ಲೀಲೆ ಎಂದೇ ಹೇಳಿದ್ದಾರೆ ಒಂದೆಡೆ.

ಏನೆ ಮಾಡುತಲಿರಲಿ,
ಏನೆ ಓದುತಲಿರಲಿ,
ಧ್ಯಾನ ಮಾಡುತ್ತಿರಲಿ,
ಕಾವ್ಯಕಟ್ಟುತ್ತಿರಲಿ–
ಚೀಟಿ ಹಂಚಿಕೆಗಾಗಿ
ಟಾಂಗಾದಲಿ ಓಡುವಾ
ಬ್ಯಾಂಡಿನೋಲಗ ವಾದ್ಯ,
ನಾಗಸ್ವರದ ವಾದ್ಯ,
ಬಿದ್ದ ಕೂಡಲೆ ಕಿವಿಗೆ–
ಏನದ್ಭುತಂ !
ನನ್ನೆದೆಯ ತೊಟ್ಟಿಲಿಂ
ಚಂಗನೆಯೆ ಹೊರ ಚಿಮ್ಮಿ
ಕಂದನೊಬ್ಬನು ಕೂಗಿ,
ಕುಣಿದು, ನವಿಲೊಲು ಕೇಗಿ–
ಬಿಡುವ ಗಂಟೆಯ ಹೊಡೆಯೆ
ಒಡನೆ ಕೇಕೆಯ ಹಾಕಿ
ಶಾಲೆಯಿಂ ಹೊರದುಮುಕಿ
ನಲಿವ ಬಾಲಕರಂತೆ,–
ಕುಣಿಕುಣಿದು ಕೂಗಾಡಿ
ಹಾರಾಡಿ ಚೀರಾಡಿ
ಗಾಂಭೀರ್ಯವೀಡಾಡಿ
ನುಗ್ಗಿ ಬೀದಿಗೆ ಓಡಿ
ಕುದುರೆಗಾಡಿಯ ಹಿಂದೆ
ಧಾವಿಸಲು, ಕೈ ನೀಡಿ
ಚೀಟಿಯೊಂದನು ಬೇಡಿ,

ಮಾತಿಲ್ಲದಂತಾಗಿ
ಮಾನ ಹೋದಂತಾಗಿ
ಕೈಲಾಗದಂತಾಗಿ
ಸೋತು ಸ್ವೈರೆಗಾಗಿ
ನಾಚುವನು ನನ್ನೊಳಿಹ
ಗುರುಪಂಡಿತಂ

ಎಂದು ಬಾಲ್ಯದ ಅಸಾಧ್ಯ ಸೆಳೆತ ಉಳಿದುಕೊಂಡೇ ಇರುವುದನ್ನು ಹೇಳಿದ್ದಾರೆ. ತಮ್ಮೊಳಗಿನ ಕವಿಗೆ ಈ ಬಗೆಯ ಮುಖಭಂಗದ ಸಮಸ್ಯೆಯಿಲ್ಲ, 'ಸೊಗದ ಹನಿ ತೊಯ್ಯುತಿಹ ಕಣ್ಣೆವೆಯ ಮುಚ್ಚದೆಯೆ ನೋಡುತ್ತ, ದಿಟ್ಟೆಯೊಳೆ ಕಂದಂಗೆ ಮುತ್ತಿಟ್ಟು' ಅವರೊಳಗಿನ ಕವಿ ನಲಿಯುವನಂತೆ. ಎಳಬಿಸಿಲು, ಚೆಂದಳಿರು 'ಕಂದ ಬಾ! ಕಂದ ಬಾ! ಬಾ ಬಂಧು!' ಎಂದು ಅವರೊಳಗಿನ ಮಗುವನ್ನ ಕೂಗಿ ಕರೆಯುವುದಂತೆ.

"ಗೆಳೆಯ ಬಾ! ಆಡೋಣ! ಬೆಳಗಾಯ್ತು !" ಎಂದು
ನಳಿದೋಳಿನಿಂದೆನ್ನ ಬಿಗಿಯಪ್ಪಿನಿಂದು
ಒಲಿಯುತಿದೆ ಅಂದಿನಾ ಎಳಬಿಸಿಲು ಇಂದು!

ಎಂದೆಲ್ಲ ಹೇಳಿಕೊಳ್ಳುತ್ತಾರೆ ಅವರು. "ಎಂತು ನೀನಿಲ್ಲಿಗೈತಂದೆ, ಮಗುವೆ? ಚಿಂತೆ ಯಾವುದನು ಕಳೆದಿಂತು ನಗುವೆ ?" ಎಂದು ತಾಯಿ ಮಗುವನ್ನ ಕೇಳಿದರೆ ಮಗು ಹೇಳುವುದು ಹೀಗೆ:

ಉಡುಗಳಾಚೆಯೊಳಿರುವ ಊರೊಳಿರಲು
'ಹುಡುಗ ಬಾ' ಎಂಬ ದನಿ ಕೇಳಿ ಬರಲು
ಕರೆವರಾರೆಂದರಿಯೆ ತಿರುಗಿ ನೋಡೆ;
ಧರೆಯ ದನಿಯೊಂದು ಸುಳಿಸುಳಿಯುತಾಡೆ;
ದನಿಯು ಬಹ ದಾರಿಯನು ಹಿಡಿದು ಬಂದೆ;

ಎಂದು ಮಗು ಹೇಳುವಲ್ಲಿ ಅವರು ಮಗುವಿನಲ್ಲಿ ಎಂಥ ಉನ್ನತದ ಸಂಗತಿಗಳನ್ನ ಕಾಣಲು ಬಯಸಿದರು ಎನ್ನುವುದು ಕಾಣುತ್ತದೆ. 'ಮುಕ್ತಚೈತನ್ಯದಿಂ ಮೊರಮೊಡುವ ಲೀಲೆ' ಎಂದೇ ಒಂದುಕಡೆ ಹೇಳಿದ್ದಾರೆ.

ಭಯರಹಿತ ನೀನು,
ಲಯರಹಿತ ನೀನು!
ಬದ್ಧಾತ್ಮನಲ್ಲ,
ಶುದ್ಧಾತ್ಮ ನೀನು!

ದಾಸ ನೀನಲ್ಲ;
ಈಶನೀ ನೀನು!
ಮೂಷಿಕವು ಅಲ್ಲ,
ಕೇಸರಿಯು ನೀನು!

ಪಾಪ ನಿನಗಲ್ಲ,
ಪುಣ್ಯ ನಿನಗಲ್ಲ ;
ಎಲ್ಲವನು ಮೀರ-
ಬಲ್ಲೆ ನೀ ಧೀರ !

ಎಂದು ಮತ್ತೊಂದು ಕವಿತೆಯಲ್ಲಿ ಮಗುವನ್ನ ಸಂಬೋಧಿಸಿದ್ದಾರೆ. ಮಗುವಿನ ನಗೆ ಅವರಿಗೆ ಹೇಗೆಲ್ಲ ಕಂಡಿದೆ ಎಂಬುದು ಒಂದು ಸೊಗಸಾದ ಪದ್ಯವಾಗಿರುವುದು ಹೀಗೆ:

ಮೊಗ್ಗು ಮೊಗದ ನೀನು ನಗೆ
ಹೂವು ಕಣಾ ಜಗದ ಹಗೆ
ಎದೆಯ ಕಿಚ್ಚು ಮನದ ಹೊಗೆ
ಎಲ್ಲ ತೊಲಗಿ ಜೀವ ಬೆಳಗಿ
ಮುಗಿಲಿಲ್ಲದ ತಿಳಿಬಾನಿನ
ನೀಲಿಯಹುದು ಬಾಳ ಬಗೆ !

ಬಾಲ್ಯವನ್ನ ದೈವೀಮಯವಾಗಿ ನೋಡುವ ಬಗೆ ಭಾರತೀಯ ಅಧ್ಯಾತ್ಮ ಪರಂಪರೆಯಲ್ಲಿ ಮೊದಲಿಂದಲೂ ಕಂಡುದಾಗಿದೆ.

ಆಲದೆಲಿಯ ಮ್ಯಾಲೆ ಮಲಗಿರುವ
ರಂಗೊಂದಾಲದೆಲೆಯ 'ಮ್ಯಾಲೆ
ಬಾಲ ರೂಪಿನಲಿ ಲೀಲೆಯಿಂದ ಜಗಜಾಲಗಳನು ಜಠ-
ರಾಲಯದೊಳಿಟ್ಟೊಂದಾಲದೆಲೆಯ ಮ್ಯಾಲೆ

ಎಂದು ಸಾಗುವ ಪ್ರಸನ್ನ ವೆಂಕಟದಾಸರ ಅಪರೂಪದ ಪದ್ಯವನ್ನ ಇಲ್ಲಿ ಉದಾಹರಿಸಬಹುದು. ಎಲ್ಲವನ್ನ ಒಳಗೊಂಡು ಮುಗ್ಧವಾಗಿ ಕಾಣಿಸುವ ಮಗು ಇದು.

ಅನಂತದ ಅಂತರಂಗದಲ್ಲಿರುವ ನಿನ್ನ ಸಿಂಹಾಸನವನ್ನು ಏರಲು ಬಾ ಮಗು.

ಅದರಲ್ಲಿ ಕುಳಿತುಕೊ.

ಮುಂಜಾವಿನಲ್ಲಿ ಅರಳುವ ಹೂವಿನಂತೆ ನಿನ್ನ ಹೃದಯವನ್ನು

ಅರಳಿಸಿ ಮೇಲಕ್ಕೆತ್ತು.

ಸಂಜೆಗೆ ತಲೆಬಾಗಿ ದಿನದ ಪೂಜೆಯನ್ನ ನೀರವತೆಯಲ್ಲಿ ಮುಕ್ತಾಯಗೊಳಿಸು.

ಕವಿ ರವೀಂದ್ರರ ಶಿಶುಗೀತವೊಂದರಲ್ಲಿನ ಸಾಲುಗಳಿವು. ಈ ಹಿನ್ನೆಲೆಯನ್ನ ಕಡೆಗಣಿಸಿ ಕುವೆಂಪು ಅವರ ಮಕ್ಕಳಿಗಾಗಿನ ಪದ್ಯಗಳನ್ನ ನೋಡಲಾಗುವುದಿಲ್ಲ.

ವಿಶೇಷದ ಇನ್ನೊಂದು ಸಂಗತಿ ಎಂದರೆ ತಾಯಿಯೊಡನೆಯ ಮಗುವಿನ ಮಾತಾಗಿ ಬಹಳಷ್ಟು ರಚನೆಗಳು ಕಂಡುಬರುವುದು. ರವೀಂದ್ರರೂ ಮಗು ತಾಯಿಯೊಡನೆ ಮಾತನಾಡುವ ಮಗುವನ್ನಿಟ್ಟಕೊಂಡೇ ಶಿಶುಕಾವ್ಯಕ್ಕಿಳಿದುದು. ಕನ್ನಡದ ಆನಂದಕಂದರೂ ಮುದ್ದನ ಮಾತುಗಳನ್ನೆಲ್ಲ ತಾಯಿಯೊಡನೆಯೇ ನಡೆಸಿದುದು. ಅಲ್ಲಿ 'ಗುಡಿಯೊಳಿರುವ ಎಲ್ಲಮ್ಮನಾಗು' ಎಂತಲೂ ಮಗು ಅನ್ನುತ್ತದೆ. ತಾಯಿ ಹಾಗೂ ಮಗು ಇಬ್ಬರ ನಡುವಿನ ಸಂಬಂಧದ

ಗಾಢತೆ, ಒಂದು ಬಗೆಯ ಗೂಢತೆ ಎಂದರೂ ಆದೀತು, ಪ್ರಕೃತಿ ಸಹಜವಾದರೂ ಅಪರೂಪದ ಭಾವಲೋಕಕ್ಕೆ ಕರೆದೊಯ್ಯುವ ಸಂಗತಿ ಎಲ್ಲವನ್ನು ಊಹಿಸಬಹುದಾಗಿದೆ. ಕುವೆಂಪು ಅವರಲ್ಲಿ ಮುಕ್ಕಾಲು ಪಾಲು ಕವಿತೆಗಳೆಲ್ಲ ಈ ಸಂಬಂಧದ ಹಿನ್ನೆಲೆಯಲ್ಲೇ ಅರಳಿದುವು. ಕನ್ನಡದ ಮಕ್ಕಳಿಗಾಗಿನ ಕವಿತೆಯಲ್ಲಿ ಈ ಬಗೆಯ ಭಾವಲೋಕ ಕಡಮೆಯಾಗುತ್ತ ಬಂದು ಈಚಿನ ಹೊಸಗಾಲದ ಸಂದರ್ಭದಲ್ಲಿಯಂತೂ ಈ ಬಗೆಯದು ಇಲ್ಲವೆನ್ನುವಷ್ಟು ಅಪರೂಪವಾಗುತ್ತ ಬಂದುದು ಕಾಣುತ್ತದೆ.

ನವೋದಯದ ಸಂದರ್ಭದಲ್ಲಿಯೇ ತೊಡಗಿಕೊಂಡ ಪಂಜೆಯವರಾಗಲಿ, ರಾಜರತ್ನಂ ಆಗಲಿ, ದಿನಕರ ದೇಸಾಯಿಯವರಾಗಲಿ ಈ ಬಗೆಯ ದಿವ್ಯವಾಗುವ ಭಾವ ಸಮೃದ್ಧಿಯನ್ನ ಆಶ್ರಯಿಸುವುದಿಲ್ಲ. ಮಕ್ಕಳ ಮನೋರಂಗದ ಸಹಜದ ಹರಿವುಗಳೇ ಆದಷ್ಟೂ ಹಿನ್ನೆಲೆಗೆ ಇವರಲ್ಲಿ ನಿಂತುದು ಕಾಣುತ್ತದೆ. ಹಾಗಾಗಿಯೇ ಬಹುಶ: ಆಡು ಭಾಷೆಯ, ಸರಳ ಅಭಿವ್ಯಕ್ತಿ ಬಗೆಗಳನ್ನು ಅವರಲ್ಲಿ ಹೆಚ್ಚು ಕಾಣುತ್ತೇವೆ ಎಂದು ಕಾಣುತ್ತದೆ.

'ನನ್ನ ಮನೆ', 'ಮೇಘಪುರ', 'ಮರಿ ವಿಜ್ಞಾನಿ' ಬಿಡಿ ಪದ್ಯಗಳಿರುವ ಸಂಕಲನಗಳು. ಹೆಚ್ಚು ಪ್ರಚುರವಾಗಿರುವ 'ಅರ್ಧಚಂದ್ರ' ಪದ್ಯದೊಳಗೆ ಚಂದಿರನನ್ನ ದೇವರ ಪೆಪ್ಪರಮೆಂಟು ಎಂದು ಕರೆದಿರುವುದು ಬಹುಶ: ಕನ್ನಡಿಗರೆಲ್ಲರ ಮನದಲ್ಲಿ ಅಚ್ಚಾಗಿ ಹೋಗಿದೆ. ಈ ಕವಿತೆ ತಾಯಿಯ ಕುರಿತ ಮಗುವಿನ ಅದಮ್ಯ ಭಾವವನ್ನು ವ್ಯಕ್ತಪಡಿಸುವುದಾಗಿದೆ. ಪೆಪ್ಪರಮೆಂಟು ಮಕ್ಕಳ ಬಲು ಹತ್ತಿರದ ಆಸಕ್ತಿಯ ಸಂಗತಿ. ಈಗಿನ ಮಕ್ಕಳ ವಾತಾವರಣ ಸಾಕಷ್ಟು ಬದಲಾಗಿದೆ ಎಂಬುದೂ ನಿಜವೇ. ಆದರೂ ಅದು ಬಾಯಿ ಚಪ್ಪರಿಸುವ ಸಿಹಿ ತಿಂಡಿಯ ಪ್ರತಿನಿಧಿಯಾಗಿ ಬಾಲ್ಯದ ಸಹಜತೆಯನ್ನು ಹೇಳುವಂಥದೇ. ಕುವೆಂಪು ಅದನ್ನ ದೇವರ ಪೆಪ್ಪರಮೆಂಟು ಎಂದುದರಲ್ಲಿ ಅವರದೇ ರಮ್ಯ ಕಲ್ಪನೆಗಳ ಹರವಿನ ಹಿನ್ನೆಲೆ ಇದೆ. ಅದು ದೇವರ ಪೆಪ್ಪರಮೆಂಟಾಗಿರುವಂತೆಯೇ 'ಎಷ್ಟೇ ತಿಂದರು ಖರ್ಚೇ ಆಗದ ಬೆಳೆಯುವ' ದಿವ್ಯತೆ ಅದಕ್ಕುಂಟು. ಇಂಥ ಸೊಗಸಿನ ಪೆಪ್ಪರಮೆಂಟನ್ನ ಪಡೆಯಲು ದೇವರ ಬಾಲಕನಾಗಬೇಕು ಎಂದು ತಾಯಿ ಹೇಳುತ್ತಾಳೆ. 'ದೇವರ ಬಾಲಕನಾಗಲು ಒಲ್ಲೆ; ಆತನ ಮೀರಿಹೆ ನೀನಮ್ಮ' ಎನ್ನುತ್ತದೆ ಮಗು. ಹಾಗಾಗಿಯೆ ಅಮ್ಮ ಬಯಕೆಯ ತಿಂಡಿ ಮಾಡಿ ಕೊಟ್ಟರೆ ಅಮ್ಮನಿಗಾಗಿ ತಂದುಕೊಡುವೆನೆನ್ನುವ ಕೃತಜ್ಞತಾ ಭಾವದ ಭರವಸೆಗಳು ಇವು . . .

ಮೂಡುತಿಹ ಚಂದಿರನ ಸೆರೆಹಿಡಿದು ತಂದು
ಕೊಡುವೆನು ನಿನ್ನ ಮಾಂಗಲ್ಯದಲಿ ಇಂದು
ಮಿಣುಕುತಿಹ ತಾರೆಗಳನೆಲ್ಲವನು ಕೊಯ್ದು
ಮಣಿಮಾಲೆಗಳ ಮಾಡುವೆನು ನಿನಗೆ ನೆಯ್ದು
ಮಳೆಬಿಲ್ಲುಗಳನೆಲ್ಲ ಹಿಡಿದೆಳೆದು ತಂದು
ನೆಯ್ಯುವೆನು ನಿನಗೊಂದು ಸೀರೆಯನು ಇಂದು
ಏಳು ಕಡಲನು ದಾಟಿ, ಏಳು ಗಿರಿಗಳ ನೆಗೆದು
ಕೂದಲಿಗೆ ತಹೆ ತೈಲದಂಬುಧಿಯ ಮೊಗೆದು
ಏನು ಬೇಕದ ಹೇಳು! ವೈಕುಂಠ ಬೇಕೆ?
ತಳಿಪ ಬೆಳ್ಳಿಯ ಬೆಟ್ಟ ಕೈಲಾಸ ಬೇಕೆ?

ಆಗಸ, ಅಲ್ಲಿನ ಮೋಡಗಳ ವಿಲಾಸಗಳನ್ನು ಮಗುವಾಗಿ ನೋಡುವ ಪರಿ ಅತ್ಯಂತ ರಮಣೀಯವಾದುದಾಗಿದೆ. ದೇವರ ಬಾಲಕನಾಗಲೊಲ್ಲೆನೆಂದು ಹೇಳಿದರೂ ಭೂಮಿಯಾಚೆನ, ಆಗಸದ ಸ್ವಚ್ಛಂದತೆಯಲ್ಲಿ ರಮಿಸುವುದು, ಆ ಮೂಲಕ ದೇವಲೋಕದ ದಿವ್ಯಕ್ಕೆ ಆಶಿಸುವುದು ಅವರ ಕವಿತೆಗಳಲ್ಲಿ ಮತ್ತೆ ಮತ್ತೆ ಕಾಣಿಸುವ ಸಂಗತಿಯೇ ಆಗಿದೆ.

ಬೆಳ್ಳನೆ ಲಾಲಿಕುಲಾಲಿ ಮಿಠಾಯಿಯ
ಬಾನೊಳು ಹರಡಿಹರೇನಮ್ಮಾ?
ತೆಳ್ಳನೆ ಹಿಂಜಿದ ಬೂರುಗದರಳೆಯ
ಬಿಸಿಲಿಗೆ ಕೆದರಿಹರೇನಮ್ಮಾ?

ಹೀಗೆ ಸಾಗುವ ಈ ಮುಗ್ಧ ಕಲ್ಪನಾ ಲಹರಿ ಮೋಡಗಳನ್ನು ತಿಳಿಬೆಳದಿಂಗಳನ್ನು ಸವಿ ನೊರೆಹಾಲಾಗಿ ಕಾಣುತ್ತದೆ, ಮೋಡಗಳನ್ನು ಅದರಲ್ಲಿ ತೇಲುವ ಸಿಹಿ ಸಿಹಿ ಚಿರೋಟಿಗಳೆಂದು ಕೊಳ್ಳುತ್ತದೆ. ಅದೂ ಸಾಲದು, ನೀಲಿಯ ನೀರೊಳು ಬಾನಮ್ಮನಿಟ್ಟಿಹ ಬೆಣ್ಣೆಯ ಮುದ್ದೆಗಳೇನಮ್ಮ ಎಂದು ಕೇಳುತ್ತದೆ. ಕಡಲಿನ ಕಾಶಿಗೆ ಹೊರಟು ನಿಂತಿರೊ ಯಾತ್ರಿಕರೆ ಇವರು ಅಂತ ಮತ್ತೊಮ್ಮೆ ಕೇಳುತ್ತದೆ, ಅಲ್ಲಿಗೂ ನಿಲ್ಲದೆ ವಿಶ್ವ ರಹಸ್ಯವನ್ನರಿಯಲು ಹೊರಟಿರುವ ಕವಿಗಳೇ ಇವರೂ ಅಂತ ಕಲ್ಪನೆಯನ್ನ ಹರಿಯಿಸುತ್ತದೆ. ದೇವಲೋಕವಂತೂ ಅವರ ಕಲ್ಪನಾ ಜಗತ್ತಿನಲ್ಲಿ ಇದ್ದೇ ಇರುವಂಥದು.

ಮೇಲಿನ ಲೋಕದ ದಿವಿಜರ ಮಕ್ಕಳು
ನೀಲಿಯ ಕೊಳದಲಿ ತೇಲಲು ಬಿಟ್ಟಿಹ
ಸೋಪಿನ ಬೆಳ್ನೊರೆಯೇನಮ್ಮಾ?
ಕಾಗದದಾಟದ ನೌಕಾಸೇನೆಯ
ಬಿನದಕೆ ತೇಲಿಹರೇನಮ್ಮಾ?

ಈ ರಮ್ಯ ಭಾವಲೋಕ ಹೀಗೇ ಬೆಳೆಯುತ್ತ ಹೋಗುತ್ತದೆ. ನಮ್ಮ ಬೆಳ್ಳವಿಗನಸುಗಳೆಲ್ಲ ಹೀಗೆ ಬಗೆಬಗೆಯ ವೇಷ ಧರಿಸಿಕೊಂಡು ಸ್ವರ್ಗಕ್ಕೆ ಹೊರಟಿರಬೇಕು, ಅಷ್ಟೇ ಅಲ್ಲ ಕೊನೆಗೆ 'ನಾನೊಂದು ಮುಗಿಲಾಗಿ ನೀನೊಂದು ಮುಗಿಲಾಗಿ ನೀಲದೊಳಲೆಯುವ ಬಾರಮ್ಮಾ' ಎಂದು ತಾಯಿಯನ್ನ ಕರೆಯುತ್ತದೆ ಮಗು. ಹೀಗೆ ಮೋಡಗಳಾಗುತ್ತ ಸಾಧಿಸುವ ಸೊಗಸಿನ ಸಂಗತಿಯನ್ನ ಕವಿ ಹೇಳುವುದು ಹೀಗೆ . . .

ಮೇಗಡೆ ಸಗ್ಗವು, ಕೆಳಗಡೆ ಭೂಮಿಯು,
ಇಬ್ಬರ ನಂಟರು ನಾವಮ್ಮಾ !
ದಿವಿಜರ ಒಲ್ಮೆಗೆ ಮನುಜರ ಒಲ್ಮೆಗೆ
ಮೇರೆಗಳಪ್ಪೆವು ನಾವಮ್ಮಾ !

ಆಗ ಆ ಲೋಕದವರೂ ನಮ್ಮವರೆನ್ನುವರು, ಈ ಲೋಕದವರೂ ನಮ್ಮನ್ನ ತಮ್ಮವರೆಂದುಕೊಳ್ಳುವರು, ಹೀಗಾಗಿ ನಾಕದ ಹಾಗೂ ಲೋಕದ ನೆಚ್ಚಿನ ಬಂಟರು ನಾವಾಗುತ್ತೇವೆ ಎಂದು ಭೂಮ ಕಲ್ಪನೆಯನ್ನ ವ್ಯಕ್ತಪಡಿಸುತ್ತದೆ. ಇಲ್ಲೆಲ್ಲ ಕುವೆಂಪು ಮನಸ್ಸು ತನ್ನ ಭವ್ಯತೆಯ,

ದಿವ್ಯ ಜೀವನದ ಸಂಗತಿಗಳೊಡನೆಯೇ ಬಾಲಮನದಲ್ಲಿ ಹೊಕ್ಕಾಡಿ ಕಾಣಿಸಿಕೊಂಡುದು ಎಂದು ತಟಕ್ಕನೆ ಹೇಳಿಬಿಡಬಹುದು.

ಆಗಸದ ಮಳೆ, ಗುಡುಗು, ಮಿಂಚು ಎಲ್ಲ ಕಾಣುವುದು ದೇವಲೋಕದ ಬಾಲಕರಾಡುವ ಆಟವಾಗಿ. ಅವರಾಡುವ ಉಕ್ಕಿನ ಚೆಂಡು ಬೀಳುವಾಗ ಆಗುವ ಸದ್ದು ಗುಡುಗು, ಅದು ಬೀಳಲು ಏಳುವ ಕಿಡಿಯೇ ಮಿಂಚು. ಆ ಬಾಲರ ಮೈ ಬೆವರಿಳಿವುದೇ ಮಳೆ. ಇವರು ದೇವಲೋಕದ ಹುಡುಗರಾದುದರಿಂದ ಅವರು ಆಟ ಬಿಟ್ಟರೆ ನಮಗೆಲ್ಲ ಬರಗಾಲವೇ!

ಮನೆಯಂಗಳದ ಹೂವುಗಳು ಕಾಣುವುದು ಗಂಧರ್ವರಾಗಿ! ಹೂವು, ತೋಟ, ಸುತ್ತಲಿನ ಪರಿಸರ ದಿವ್ಯದ ಪಡಿನೆಳಲೇ ಇಲ್ಲಿನ ಬಾಲ ಮನಸಿಗೆ.

ಮುಗುಳು ನಗುವರು! ಮಗುಳೆ ನೆಗೆವರು!
ಮಂದಾನಿಲಣ್ಣಗೆ ಬಾಗುವರು!
ಅಗೊ ತಲೆದೂಗುವರು!
ನೋಡುವ ಕಣ್ಣಿಗೆ ಸವಿಯುವ ಹೃದಯಕೆ
ಹೊನ್ನಿನ ರಂಗನು ಮೆತ್ತುವರು!
ಮುತ್ತುಗಳೊತ್ತುವರು!

ಅವರ ಕಣ್ಣ ಸನ್ನೆಗಳಲ್ಲಿ ಮೂರು ಪಿತೂರಿಗಳಿವೆಯಂತೆ! ಹೀಗೆ ಸಾಗುವ ದಿವ್ಯವಾದ ಕಲ್ಪನಾ ಲಹರಿ ಮಕ್ಕಳ ಗ್ರಹಿಕೆಯ ನೆಲೆಯನ್ನೂ ದಾಟಿ ಸಾಗಿಬಿಡುವುದಿದೆ. ಇಂಥ ಹೂವಿನ ಅದ್ಭುತ ಲೋಕಕ್ಕೆ ತಂಗಿಯನ್ನ ಕರೆಯುವ ಸಡಗರ ಒಂದು ಕಡೆಗಿದೆ. ಹೂವುಗಳೆಲ್ಲ ಉದಯದ ಊರಿನಿಂದ ಬಂದಂಥವು, ಅವು ವಿಧ ವಿಧ ಹಾಡುಗಳನ್ನ ಒಂದಿಗೇ ತಂದಿವೆ, ಮುಡಿಯಲು ಹೂವುಗಳು, ಹಾಡಲು ಹಕ್ಕಿಯ ಇನಿದನಿ, ಹೊದೆಯಲು ಕಾಮನಬಿಲ್ಲಿನಂತಿರುವ ಹಕ್ಕಿಗಳ ಗರಿಗಳು ಎಲ್ಲವನ್ನ ತಂಗಿಗೆ ಇಲ್ಲಿ ದೊರಕೊಂಡುದಾಗಿ ಹೇಳುವ ಹುಡುಗನ ಮಾತು ಕುವೆಂಪು ಮಗುವಾಗಿ ಹೇಳಿದುದೇ ಆಗಿದೆ.

ಎಲ್ಲ ಕನ್ನೆಯರ ಕೆನ್ನೆಯಲಿ
ನಲ್ಲ ಮುತ್ತಿಹವು ಪೆಂಪಿನಲಿ!
ತಾಯಿಯಕ್ಕರೆಯು ಬಿಗಿದ ತೆಕ್ಕೆಯನು
ತಬ್ಬಿಕೊಂಡು ಬಂದಿರುವರಮ್ಮಾ!
ಸವಿಯ ಸೆರೆಗೆ ಬದಲಾಗಿ ಮುಕ್ತಿಯನು
ಒಪ್ಪಿ ಅಪ್ಪಿ ತಂದಿರುವರಮ್ಮಾ!

ಹೀಗೆಲ್ಲ ಇರುವ 'ಗಿಡದ ಹೂವಾಗುವೆನು' ಎಂದುಕೊಳ್ಳುವ ಈ ಮಗು ಎಲ್ಲ ಮಕ್ಕಳಂತಲ್ಲ. 'ಮೇಘಪುರ' ದೀರ್ಘ ಕವಿತೆ ಅವರ ಇದೇ ಬಗೆಯ ಮುಗಿಲಿನಾಸೆಯ ಭಾವಗಳ ಬಿಡು ಬೀಸಾದ ಹರಿವನ್ನ ಮುಂದಿಡುತ್ತದೆ. ಮಳೆಯಾಗುವುದು ದೇವಲೋಕದ ಬಾಲಕರು ಭುವಿಗೆ ಬಂದ ಸಂಭ್ರಮವಾಗಿ, ಅವರ ಹೋಲಿಕೆಯಲ್ಲಿ ತನ್ನ ಕೊರತೆಗಳು ಕಂಡು ಅವರಂತೆ ಸ್ವಾತಂತ್ರ್ಯ ಬಯಸುವ ಲಹರಿ ಇಲ್ಲೆಲ್ಲ ಹರಿಯತೊಡಗುತ್ತದೆ :

ಎಲೆಗಳಲಿ ಕುಣಿಯುತ್ತ
ಸುಮಗಳಲಿ ನಲಿಯುತ್ತ
ತೊರೆಗಳಲಿ ಗಳಪುತ್ತ
ಇಳೆಯ ಮೋಹಿಸುವರಾ
ಲಲಿತ ಬಾಲಕರು

ಉಕ್ಕುವಾ ತಳಿರಾಗಿ
ಹಕ್ಕಿಯಿಂಚರವಾಗಿ
ಬಗೆಬಗೆಯ ಲೀಲೆಯಲಿ
ಚಿಗಿದು ತುಂಬುವರಿಳೆಯ
ಮುಗಿಲ ಬಾಲಕರು

ಮನೆಯ ಹಂಚಿನ ಮೇಲೆ ಹನಿಯಾಗಿ ಕುಣಿದಾಡಲು ಕರೆಯುವರಂತೆ, ಕಿರುಮಾಡಿನಂಗಳಕೆ ಝುರಿಯಂತೆ ಸುರಿದು ತೊದಲು ನುಡಿಯೊಳಗೆ ಕರೆಯುತ್ತ ಓಡುವರಂತೆ, ಅಂತಹ ಸೊಗಸಿನ ಹುಡುಗರನ್ನ ಕರೆಯುತ್ತೇನೆ ಎಂದು ಹೇಳುತ್ತದೆ ಮಗದೊಮ್ಮೆ . . .

ಅರಿಯೆನೆಂತಿಹರೊ !
ಅವರ ದನಿಯನು ಕೇಳಿ
ಅವರಿರುವರೆಂದರಿತೆ
ಕರೆದು ಆ ಗೆಳೆಯರನು
ಸರಸವಾಡುವೆನು

ಹೀಗಿರುವಾಗ, ನೀರ ಹನಿಗಳಲಿ ಅವರು ಅವಿತಿರಬಹುದೆಂದು ಹಿಡಿಯಹೋದರೆ ಅವರು ಕಾಣಲೇ ಇಲ್ಲ ಎನ್ನುವ ಭಾವದ ಎಳೆಯೊಂದು ನುಸುಳುತ್ತದೆ. ಅಮ್ಮ ಇಂಥ ಸೊಗಸಿನ ಬಾಲಕರೊಡನೆ ಆಡಲು ಕಳಿಸುವುದಿಲ್ಲ ಎನ್ನುವ ದೂರಿನ ಲಹರಿಗಳು ಹಲವು ಹರಿಯುತ್ತವೆ.

ತೊರೆಗಳಲಿ ನಲಿವರೆಂ
ದರಿತು ನಾನಲೆಗಳೊಳು
ಸರಸವಾಡಲು ಬಯಸೆ,
ಅರಿಯದವ ನೀನೆಂದು
ಬರಿದೆ ಬೆದರಿಸುವೆ

ತಾಯಿಯ ನಿರ್ಬಂಧ ಮಗುವಿಗೆ ಸಹಿಸದಂತೆಯೇ ಆಗಿಬಿಡುತ್ತದೆ . . .

ನಿನ್ನ ಕರಗಳು, ತಾಯೆ,
ನನ್ನ ಸೆರೆಗೈದಿಹವು
ಇನ್ನು ನಾನದ ಸಹಿಸೆ !
ಲೋಕವಿದು ಸಾಕು ಆ
ನಾಕ ಬೇಕಮ್ಮಾ

ಆ ದೇವಲೋಕದ ಮಕ್ಕಳು ಇಲ್ಲಿಗೆ ಬರುವ ಕಾರಣವಾದರೂ ಏನೆಂದು ಚಿಂತಿಸುವ ಲಹರಿ ಇನ್ನೊಂದು ಮಗ್ಗುಲಿನದು . . .

ವಿಜಯಯಾತ್ರೆಗೆ ಬಹರೊ ?
ಈ ಜಗದ ಮಕ್ಕಳನು
ಕೂಡಿಯಾಡಲು ಬಹರೊ ?

ಅವರಿಗಿರುವ ಸ್ವಾತಂತ್ರ್ಯ ತನಗಿಲ್ಲ, ಅವರೊಡನೆ ಬೆರೆತು ಅವರ ಹಾಗೆಯೆ ಸ್ವಚ್ಛಂದವಾಗಿ ಅಲೆಯುವಾಸೆ ಮಗುವಿಗೆ. ಅವರ ದನಿ ಇಂಪು, ಅವರ ಮೈ ಬಲು ತಂಪು, ಅವರ ಒಡನಾಟ ಸೊಂಪು ಎಂದೆಲ್ಲ ಹೇಳುತ್ತದೆ ಅದು. 'ಮೇಘಪುರವದು ನಮ್ಮ ಊರಮ್ಮಾ; ಆಗಸದ ಮಕ್ಕಳಾನಂದಹೃದಯರಮ್ಮಾ' ಎಂದೇ ಮಗು ಹೇಳುತ್ತದೆ. 'ಎನಗೇಕೆ ಇಹದ ಸೆರೆ?', 'ಲೋಕವಿದು ಸಾಕು, ಆ ನಾಕ ಬೇಕು' ಎಂಬುವೇ ಇಲ್ಲಿ ಮುಖ್ಯವಾಗಿ ಕೇಳಿಬರುವ ಆಶಯಗಳು. ಮಕ್ಕಳು ಆಶಿಸುವ ಸಹಜದ ಅದ್ಭುತ, ಕುತೂಹಲದ ಸಂಗತಿಗಳಾಗಿ ಇವನ್ನ ಊಹಿಸಲಾಗದು.

ಸಹಜವಾಗಿ ಎಲ್ಲ ಮಕ್ಕಳಲ್ಲಿ ಕಾಣುವ ಮನೋಲೋಕದ ಭಾವಲಹರಿಗಳು ಅವರ ಕವಿತೆಗಳಲ್ಲಿ ಇಲ್ಲವೆಂತಲ್ಲ, ಇವೆ. ಕೆಲಸದ ನಿಂಗನಿಗೂ ತನಗೂ ಹೋಲಿಸಿಕೊಂಡು ಅವನು ಮಾಡುವಂತೆಯೇ ತಾನೂ ಮಾಡಲು ಹೋದರೆ ತನ್ನನೇಕೆ ಅಮ್ಮ ಸಹಿಸಿಕೊಳ್ಳುವುದಿಲ್ಲ ಎನ್ನುವ ಅರಿಯದ ಬಾಲ ಭಾವ ಒಂದು ಪದ್ಯದಲ್ಲಿದೆ. ನಿಂಗ ತೋಟದಲ್ಲಿ ನೆಲವನ್ನು ಅಗಿಯುವಂತೆ ತಾನು ಅಗೆಯಲು ಹೋದರೆ ಅಮ್ಮ ಬೈಯುವಳು, ಅವನು ಮರ ಹತ್ತಿ ಹಣ್ಣುಗಳನ್ನ ಕೀಳಲು ಹೋಗುವಂತೆ ತಾನೂ ಮಾಡಲು ಹೋದರೆ ಅಮ್ಮ ಆಗಲೂ ಬೈಯುವಳು, ಹೊಡೆಯುವಳು, ಅವನಂತೆ ತಾನೂ ಮೈಯೆಲ್ಲ ಮಣ್ಣು ಕೆಸರು ಮಾಡಿಕೊಂಡು ಬಂದರೆ ಆಗಲೂ ಸಿಟ್ಟು ಇದ್ದುದೇ, ಹೀಗೆಲ್ಲ ಸಾಗುವ ಅಹವಾಲುಗಳು ಮುಂದೆ ತೀರ್ಮಾನಕ್ಕಿಳಿಯುವುದು ಹೀಗೆ . . .

ಮೂರ್ತಿಯತನವಿದು ನನಗಿನ್ನು ಬೇಡಮ್ಮ
ನಿಂಗನ ಹುದ್ದೆಯೆ ಸುಖವಮ್ಮಾ !

ನಾನಿನ್ನು ನಿಂಗ, ನಿಂಗನೆ ಮೂರ್ತಿ
ನಿನ್ನನು ನಾನಿನ್ನು 'ನಾಗಮ್ಮ' ಎನುವೆ
ಮುಂದಿನ್ನು ನಿಂಗನೆ ನಿನ್ನಯ ಕೈದಿಯು,
ನಾ ನಾಳೆ ನಮ್ಮಾಳು ನಿಂಗಾಗುವೆ !

ನಿಂಗಾ ! ನಿಂಗಾ ! ನಾ ನಿಂಗಾ !
ಇನ್ ಮೇಲೆ ನಾ ನಿಂಗಾ !

ಕವಿ ರವೀಂದ್ರರ ಪದ್ಯಗಳಲ್ಲಿ ಈ ಬಗೆಯ ಭಾವ ಲಹರಿಗಳು ವಿಪುಲವಾಗಿ ಕಾಣುತ್ತವೆ. ರವೀಂದ್ರರ ಒಂದು ಪದ್ಯವನ್ನ ಅನುವಾದಿಸಿ ಕುವೆಂಪು ಅವರೂ ನೀಡಿದುದಿದೆ. ಮಕ್ಕಳ ಮುಗ್ಧ ಭಾವ ಲೋಕವನ್ನ ಹಿರಿಯರಾಗಿ ಬೆರಗಿನಿಂದ ನೋಡುವ ಪರಿಯೂ ಈ ಬಗೆಯ

ಪದ್ಯಗಳ ಹಿನ್ನೆಲೆಗೆ ಇರಬಹುದಾಗಿದೆ. ಅಮ್ಮನ ಮುಂದೆ ತನ್ನೆಲ್ಲ ಮುಗ್ಧತೆಯನ್ನು ಹರವಿಕೊಳ್ಳುವುದರೊಡನೆ, ತಾಯಿಯೊಡನೆಯ ಹೃದ್ಯ ಸಂಬಂಧ, ಅದು ಎಲ್ಲವನ್ನೂ ಮೀರಿ ನಿಂತುದಾಗಿಯೇ ಇಂಥಲ್ಲೆಲ್ಲ ಕಂಡುದಿದೆ. ಅವರ ಇನ್ನೊಂದು ಪದ್ಯದಲ್ಲಿ ಅವ್ವನು ಅಪ್ಪನನ್ನು ತಾನೆನ್ನುವಂತೆ 'ಅಪ್ಪಾ' ಎಂದು ಕರೆಯುವುದಿಲ್ಲವೇಕೆ ಎಂದು ಕುತೂಹಲ ಪಡುವ ಮಾತುಗಳಿವೆ. ತಾನು ಮಾತ್ರ 'ಅಪ್ಪಾ' ಅಂತ ಹೇಳಬೇಕು, ಇಲ್ಲವಾದರೆ ಕೆಟ್ಟವನಾಗಿಬಿಡುತ್ತೇನೆ, ಆದರೆ ಹಾಗನ್ನದೆ ಇರುವ ನೀನು ಕೆಟ್ಟವಳಲ್ಲವೆ ಎಂದು ಸವಾಲು ಹಾಕುತ್ತದೆ ಮಗು. ಸುಮ್ಮನೆ ಇರುವ ತಾಯಿಯನ್ನ ಕಂಡು . .

ಸುಮ್ಮನೆ ಕುಳಿತಿಹೆ ಏಕವ್ವಾ ?
ಉತ್ತರವೀಗಲೆ ಬೇಕವ್ವಾ !
ಮುತ್ತಿಡೆ ಬಿಡುವೆನೆ ಹೇಳವ್ವಾ ?
ನಕ್ಕರೆ ಬಿಡುವೆನೆ ಹೇಳವ್ವಾ ?

ಎಂದೆಲ್ಲ ಗಂಟು ಬೀಳುತ್ತ, ನನಗೆ ಬುದ್ಧಿ ಹೇಳುವ ನಿನಗೆ ಬುದ್ಧಿಯಿಲ್ಲ ಎನ್ನುವ ಮಾತನ್ನೂ ಆಡಿಬಿಡುತ್ತದೆ. ಅದಕ್ಕೇ . . .

ಸೋತೇ ಸೋತೇ ಸೋತೇ ನೀನ್ !
ಗೆದ್ದೇ ಗೆದ್ದೇ ಗೆದ್ದೇ ನಾನ್ !
ಸೋತೇ ನೀನ್ ! ಗೆದ್ದೇ ನಾನ್ !

ಎಂದು ಅಂದುಕೊಂಡುಬಿಡುತ್ತದೆ. ಒಡವೆಗಳನ್ನ ತೊಡಿಸಲು ಬರುವ ತಾಯಿಗೆ, ಬಣ್ಣದ ಬಟ್ಟೆಯ ತೊಡಿಸಲು ಬರುವ ತಾಯಿಗೆ . . . . .

'ಚಂದಕೆ ಚಂದಕೆ' ಎನ್ನುವೆಯಮ್ಮಾ !
ಚಂದವು ಯಾರಿಗೆ ಹೇಳಮ್ಮಾ ?
ನೋಡುವರಿಗೆ ಚಂದವು, ಆನಂದ ;
ಆಡುವ ಎನಗಿದು ಬಲು ಬಂಧ !

ಎಂದು ಅಮ್ಮನ ಕೈಯಲ್ಲಿ ಕೊಸರಾಡುವಂತೆ ಮಾತನಾಡುತ್ತದೆ. ಆದರೆ . .

ನನ್ನೀ ಶಿಶುತನ ನಿನ್ನೀ ತಾಯ್ತನ
ಎರಡೇ ಒಡವೆಗಳೆಮಗಮ್ಮಾ ;
ನಾ ನಿನಗೊಡವೆಯು ; ನೀನನಗೊಡವೆಯು ;
ಬೇರೆಯ ಒಡವೆಗಳೇಕಮ್ಮಾ ?

ಎನ್ನುವ ಮಾತುಗಳು ಕುವೆಂಪು ಮಾತನಾಡಿದುವೇ ಆಗಿವೆ. ಆನಂದಕಂದರ 'ಮುದ್ದನ ಮಾತೂ' ಹೀಗೆಯೇ ದೊಡ್ಡ ಹರವಿಗೆ ತೆರೆದುಕೊಳ್ಳುವುದನ್ನ ಇಲ್ಲಿ ನೆನಪಿಸಿಕೊಳ್ಳಬಹುದು. ಬಾಲ ಸಹಜದ ಭಾವ ಲಹರಿಗಳು ಅವರ ಇನ್ನೂ ಹಲವು ಪದ್ಯಗಳಲ್ಲಿ ಕಂಡುಬರುತ್ತವೆ. 'ಸಂಪಗೆ ಹೂವನು ಸಂಪಗೆ ಹೂವೆಂದೇತಕೆ ಕರೆವರು ಹೇಳಮ್ಮಾ' ಎಂದು ಪ್ರಶ್ನೆ ಹಾಕುವ ಮಗು ಅದಕ್ಕೆ 'ತಂಪಿಗೆ ಎಂದಿರೆ ಇಂಪಾಗಿರುವುದು' ಎಂದು ತನ್ನದೇ ಆದ ಹೆಸರಿಡಲು ನೋಡುವುದು. ಆದರೆ ಯಾರಿಗೆ ಹೇಳಿದರೂ ಆ ಮಾತನ್ನ ಪಾಲಿಸಲು

ತಯಾರಾಗುವುದಿಲ್ಲ, ತಯಾರಾದುದು ತಂಗಿ ಒಬ್ಬಳೇ. ಕೊನೆಗೆ ತಾಯಿಯೂ ಒಪ್ಪಿಗೆ ಕೊಡುವಳು. ಹೀಗೆಯೇ ಸಂಜೆಯ ಕೆಂಪಗಿನ ಸೂರ್ಯನನ್ನ ಇಳಿಸಿ, ಹಿಡಿದು ತಂದು ತನ್ನೊಡನೆ ಇರಿಸಿಕೊಳ್ಳುವೆನೆಂದು ಇನ್ನೊಂದು ಪದ್ಯದಲ್ಲಿ ಮಗು ಹೇಳುತ್ತದೆ. ಆಗ ಸೂರ್ಯನು ತಾಯಿಯನ್ನು 'ಅಮ್ಮಾ' ಎನ್ನುವನಂತೆ, ತನಗೆ 'ಅಣ್ಣಾ' ಎನ್ನುವನಂತೆ. 'ನಾವೀರ್ವರು ಒಂದೇ ಹಾಸಿಗೆಯೊಳು ಮಲಗುತ ಏಳುವೆವೇನಮ್ಮಾ ?' ಎಂದೆಲ್ಲ ಕೇಳುತ್ತದೆ ಮಗು. 'ಅಮ್ಮಾ ಚಂದಿರ ನನ್ನವನು' ಎಂದು ಹೇಳುವ ಪದ್ಯದಲ್ಲಿ ಹೋದಲ್ಲೆಲ್ಲ ಬಂದುಬಿಡುವ ಚಂದಿರನ ಸೋಜಿಗವನ್ನ ಮಗು ಬಿಟ್ಟಿರಲಾಗದ ಸ್ನೇಹವಾಗಿ ಭಾವಿಸುವ ಮುಗ್ಧತೆ ಇದೆ. 'ನೆರೆಮನೆ ಕಿಟ್ಟುವು ಕರೆದರೆ ಹೋಗನು, ಮೂರ್ತಿಯನೆಂದೂ ಬಿಟ್ಟಿರನು !' ಅಂದುಕೊಳ್ಳುತ್ತದೆ ಮಗು!

ಮನೆಯ ಕುರಿತ ಅವರ ಎರಡು ಪದ್ಯಗಳಿದ್ದು ಮನೆಯ ಅಪರೂಪದ ವಾತ್ಸಲ್ಯದ ತಾಣದ ನೆನಪುಗಳಿಗೆ ದಾರಿಮಾಡಿಕೊಟ್ಟಿವೆ. ಸಹಜ ಬಾಲಭಾವದಲ್ಲಿಯೇ ಇವು ಅರಳಿ ಮಕ್ಕಳಿಗೆ ಹತ್ತಿರವಾಗುವಂತಿವೆ.

ತನ್ನ ತಾಯಿಯೊಲಿದ ಮನೆ
ನನ್ನ ತಂದೆ ಬಳೆದ ಮನೆ
ನನ್ನ ಗೆಳೆಯರೊಡನೆ ಕೂಡಿ
ಮುದ್ದು ಮಾತುಗಳನು ಆಡಿ
ಮಕ್ಕಳಾಟಗಳನು ಹೂಡಿ·
ನಾನು ನಲಿದ ನನ್ನ ಮನೆ !

ಅಂತೆಲ್ಲ ತೆರೆದುಕೊಳ್ಳುತ್ತ ನೆನಪಿನ ಬಾಗಿಲಾಗುತ್ತದೆ. ಗಿರಿಜೆ ಇದ್ದುದು, ವಾಸುವಿದ್ದುದು, ಆಳು ಮಂಜ ಒಲೆಯ ಬಳಿ ಕತೆಗಳಲ್ಲಿ ಕರಗಿಸುತ್ತಿದ್ದುದು, ಕೊಬರಿಬೆಲ್ಲಗಳನು ಕೊಟ್ಟು ಸವಿಯ ಸೊಲ್ಲ ಆಡುತ್ತಿದ್ದುದು, ಒಂದೇ ಎರಡೇ ಸಾಲು ಸಾಲು ನೆನಪುಗಳು ಆರ್ದ್ರಗೊಳಿಸುವಂತೆ ಬರುವುದನ್ನ ನೋಡುತ್ತೇವೆ. ಸರಳ ಭಾಷೆಯಲ್ಲಿ ಮಕ್ಕಳಿಗೆ ರವಾನೆಯಾಗುವ ಇಲ್ಲಿನ ಅನುಭವ ದ್ರವ್ಯ ಅವಕ್ಕೆ ಹಾಗೆ ಹಾಗೆ ಮುಟ್ಟುವಲ್ಲಿಯೂ ಯಶಸ್ಸು ಕಾಣುತ್ತದೆ ಎನ್ನಬಹುದು.

ಮೊದಲ ಮಿಂಚು ಹೊಳೆದ ಮನೆ
ಮೊದಲ ಗುಡುಗು ಕೇಳ್ದ ಮನೆ
ಮೊದಲ ಮಳೆಯು ಕರೆದು ಕರೆದು
ಹೆಂಚ ಮೇಲೆ ಸದ್ದು ಕರಿದು
ಮಾಡಿನಿಂದ ನೀರು ಸುರಿದು
ಬೆರಗನಿತ್ತ ನನ್ನ ಮನೆ

ಅಂತೆಲ್ಲ ಮನದೊಳಗೆ ಮನೆಮಾಡಿಕೊಂಡ ಬಗೆಯನ್ನ ನಾನಾ ಬಗೆಯಲ್ಲಿ ಮುಂದಿಡುತ್ತದೆ ಕವಿತೆ. ಹಾಗೆ ಹೇಳುತ್ತ ಹೇಳುತ್ತ ಸಹಜವಾಗಿಯೇ ಬೆಳೆದ ಮನಸ್ಸಿನ ಸಂಗತಿಗಳಿಗೂ ತನ್ನ ಒಡಲಲ್ಲಿ ಜಾಗಮಾಡಿಕೊಳ್ಳುವುದನ್ನ ನೋಡುತ್ತೇವೆ. ಸಹಜ ಭಾವಲಹರಿಗಳು ಕಂಡುಬಂದರೂ, ಅವರ ಒಟ್ಟು ಕಾವ್ಯದ ಗುಣಧರ್ಮವೇ ಎನ್ನಬಹುದಾದ ರಮ್ಯತೆಯಿಂದ, ಕಲ್ಪನೆಯ ಸೊಗಸಿನಿಂದ ಅರಳಿನಿಂತಿರುವುದು, ಹಾಗೆ ಅರುಳುತ್ತರಳುತ್ತ ಬದುಕಿನ ಭವ್ಯತೆಯನ್ನೇ ಹೇಳಲು ಹವಣಿಸುವುದು ಕುವೆಂಪು ಮಕ್ಕಳ ಕವಿತೆಗಳ ಗುಣವೇ ಆಗಿದೆ ಎನ್ನಬಹುದಾಗಿದೆ.

ಕಾಮನಬಿಲ್ಲು ಕಮಾನು ಕಟ್ಟಿದೆ
ಮೋಡದ ನಾಡಿನ ಬಾಗಿಲಿಗೆ !

ಅದ್ಭುತ ಕಲ್ಪನೆಯ ದೃಶ್ಯವನ್ನ ಕಾಣುವ ಕವಿ ಕಣ್ಣು ಕಾಮನಬಿಲ್ಲನ್ನು ಆ ಮೋಡದ ನಾಡಿಗೆ ಈ ಭೂಮಿಯನ್ನ ಬೆಸೆಯುವ ಸೇತುವೆಯಾಗಿ ಕಾಣುತ್ತದೆ. ಹಕ್ಕಿಯನ್ನ ತನ್ನೊಡನೆ ಆಡಲು ಕರೆಯುವ ಹಾಡು ಮುಗ್ಧತೆಯಲ್ಲಿಯೇ ಅರಳಿನಿಂತಿರುವುದು ಹೀಗೆ :

ಪಡುವಣ ದೆಸೆಯೊಳು ಬೈಗಿನ ಹೊತ್ತು
ಮುಳುಗುವ ಸಮಯದಿ, ತಾಯಿಯ ಮುತ್ತು
ನನ್ನನು ಮನೆಯೆಡೆಗೆಳೆಯುವುದು !
ಕಾಡಿನ ಬಳಿಯಲಿ, ನಿನ್ನನು ಹೆತ್ತು
ಪೊರೆದಾ ತಾಯಿಯ ಗುಟುಕಿನ ತುತ್ತು
ನಿನ್ನನು ಗೂಡಿಗೆ ಸೆಳೆಯುವುದು !

'ಪೊದೆಯ ಹಕ್ಕಿ, ಎದೆಯ ಹಕ್ಕಿ' ಕವಿತೆಯಲ್ಲಿ ಕವಿ ಪೊದೆಯಲ್ಲಿನ ಹಕ್ಕಿ ಕೂಗಿದಾಗ ಎದೆಯೊಳಗೊಂದು ಹಕ್ಕಿ ಮರುದನಿಗೊಡುವುದನ್ನು ಕೇಳುತ್ತಾರೆ. ಎದೆಯ ಹಕ್ಕಿಯ ದನಿಯನ್ನು ಕೇಳಿ ಪೊದೆಯ ಹಕ್ಕಿ ಮೋಹಗೊಂಡು ಮತ್ತೆ ಮತ್ತೆ ನುಡಿಯತೊಡಗಿತು. ಕವಿ ಹೇಳುತ್ತಾರೆ

ಎದೆಯ ಹಕ್ಕಿಗಾಗಿ ಪೊದೆಯ
ಹಕ್ಕಿಯನ್ನು ಒಲಿದೆನು !

ತಮ್ಮೊಳಗಿನ ಸಂಗತಿಗಳಿಗೆ ಕಿವಿಯಾಲಿಸುವ ಕವಿಮನ ಕುವೆಂಪುವನ್ನ ನಮ್ಮ ಮುಂದೆ ನಿಲ್ಲಿಸುತ್ತದೆ ಎಂದು ಬೇರೆ ಹೇಳಬೇಕಿಲ್ಲ.

'ಕಿಂದರಿ ಜೋಗಿ' ಕುವೆಂಪು ಸೃಷ್ಟಿಸಿದ ದೀರ್ಘ, ಸೊಗಸಾದ, ಈಗಾಗಲೇ ತನ್ನ ವಿಶೇಷತೆಗಳಿಂದ ಪ್ರಚುರವಾದ ಕವಿತೆ. ಇಂಗ್ಲಿಷ್ ಮೂಲವನ್ನ ಆಧರಿಸಿದರೂ ಕುವೆಂಪು ತಮಗೆ ಬೇಕಾದಂತೆ, ನಮ್ಮದೇ ಪರಿಸರದಲ್ಲಿ ಅರಳಿದಂತೆ, ನಮ್ಮ ಸಾಮಾಜಿಕ ಪರಿಸರದಲ್ಲಿಯೇ ಸಂಭವಿಸಿದಂತೆ ಬರೆದು ಹೊಸ ಸೃಷ್ಟಿಯನ್ನಾಗಿಸಿದ್ದಾರೆ. ಮೇಲೆ ನೋಡಲು ಈ ಕಥನ ಕವನ ಅವರೇ ಕೊನೆಯಲ್ಲಿ ಹೇಳಿರುವಂತೆ 'ಭಾಷೆಯ ಕೊಟ್ಟರೆ ನಾವು ಮೋಸವ ಮಾಡದೆ ಸಲ್ಲಿಸಬೇಕು... ಸತ್ಯವನೆಂದೂ ತ್ಯಜಿಸದೆ ಬಾಳು'ವ ನೀತಿಯನ್ನು ಹೇಳುವುದಕ್ಕಾಗಿ ಅರಳಿದಂತಿದೆ. ಆದರೆ ಇದಕ್ಕೆ ಹಲವಾರು ಬೇರೆ ಬೇರೆ ಮೈಗಳಿರುವುದು ಅಷ್ಟೇ ಸುವ್ಯಕ್ತ. ಊರಿನ ಜವಾಬುದಾರಿ ಹೊತ್ತ ಗೌಡ ತನ್ನ ಲಾಲಸೆ, ದುರಾಸೆಗಳಿಂದ ನುಣುಚಿಕೊಳ್ಳುವುದು, ಅದರಿಂದ ಜನರಿಗೆ ಏನೆಲ್ಲ ಸಂಕಷ್ಟಗಳನ್ನ ತಂದೊಡ್ಡುವುದು ಇಂದಿಗೂ ಪ್ರಸ್ತುತವಾದ ಸಂಗತಿಯೇ. ಜೋಗಿ ಸಾಮಾನ್ಯ ಮಾನವರಂತಲ್ಲದವನು ಎಂಬುದನ್ನು ಅವನ ಆಕರ ಚಹರೆಗಳೇ ಹೇಳಿದರೂ, ಅವನ ಶಕ್ತಿ ಸಾಮರ್ಥ್ಯಗಳ ಬಗೆಗೆ ಅವನು ದೇವತೆಗಳೊಡನೆಯ ಕತೆ ಹೇಳಿದುದೂ ಆಗಿ, ಕಣ್ಣ ಮುಂದೆಯೇ ಎಲ್ಲ ಇಲಿಗಳನ್ನ ಮುಗಿಸಿ ಹಾಕಿದ ಅಚ್ಚರಿ ಇದ್ದರೂ ಗೌಡ ತನ್ನ ದುರಾಸೆಗಳಿಗೆ ಎಳಸುವುದು ಅವನ ವ್ಯಕ್ತಿತ್ವವನ್ನ ಹೇಳುತ್ತದೆ. ಇಲಿಗಳ ಕಾಟದಿಂದ ಬಳಲಿದ ಜನ ಗೌಡನಮೇಲೆ ಸಿಟ್ಟಾಗುವುದು, ಬೈಯುವುದು, ಬರೆಕೊಡುವೆವು ಎಂದೆಲ್ಲ ಕೂಗಿಕೊಂಡುದು ಆಯಿತಾದರೂ ಮಕ್ಕಳನ್ನೇ ಕಳೆದುಕೊಂಡಾಗ 'ದುಃಖಾಂಬುಧಿಯಲಿ' ಮುಳುಗುತ್ತಾರೆಯೇ

ವಿನಃ ಗೌಡನಮೇಲೆ ಸೇಡುತೀರಿಸಿಕೊಳ್ಳುವವರೆಗೆ ಮುಂದುವರೆಯುವುದಿಲ್ಲ. ಸ್ವತಃ ಗೌಡನೇ ಏನು ಅನುಭವಿಸಿದ, ಕೇವಲ ತನ್ನ ದುರಾಸೆಯನ್ನ ತೀರಿಸಿಕೊಂಡನೇ ಎಂಬೆಲ್ಲ ಸಂಗತಿಗಳು ಕತೆಯಲ್ಲಿ ಗೌಣವಾಗಿವೆ. ಇರುವುದೆಲ್ಲ ಜನಸಾಮಾನ್ಯರ ಗೋಳು ಮಾತ್ರ.. ದೇವಲೋಕದಿಂದ ಬಂದ ಜೋಗಿ ಜನರನ್ನ ಇನ್ನಷ್ಟು ಗೋಳಿಗೆ ದೂಡಿದನೆ ಎನ್ನುವದೂ ಪ್ರಶ್ನೆ. ಅವನು ಗೌಡನನ್ನು ತನ್ನ ಶಾಸ್ತಿಯ ಕೇಂದ್ರ ಮಾಡಿಕೊಳ್ಳಬೇಕಿತ್ತು. ಕವಿ ಶಿವರುದ್ರಪ್ಪ ಅವರು ಊಹಿಸಿರುವ ಹಾಗೆ ಭ್ರಷ್ಟ ವ್ಯವಸ್ಥೆಗೆ ಪಾಠ ಕಲಿಸಲು ಬಂದವನಾಗಿ ಜೋಗಿಯನ್ನ ಭಾವಿಸಬಹುದು. ಈ ಭ್ರಷ್ಟ ವ್ಯವಸ್ಥೆಗೆ ಜನ ಸಮುದಾಯವೇ ಪರೋಕ್ಷವಾಗಿ ಕಾರಣವಾದುದರಿಂದ ಅವರು ದುಃಖ ಅನುಭವಿಸಬೇಕಾಗಿ ಬಂತೆ?

ಗೌಡನು ಮಾತಿಗೆ ತಪ್ಪಿದಾಗ ಜೋಗಿ ಮಕ್ಕಳನ್ನೇನೋ ಕರೆದೊಯ್ದು ತಕ್ಕ ಶಾಸ್ತಿಗಿಳಿದ ಎನ್ನಬಹುದಾದರೂ, ಮುಗ್ಧ, ಅರಿಯದ, ದೊಡ್ಡವರ ಸಂಗತಿಗಳನ್ನ ತಿಳಿಯದ ಅಮಾಯಕ ಮಕ್ಕಳು ಬಲಿಯಾದರಲ್ಲ ಎನ್ನಿಸುವುದಿದೆ. ಆದರೆ ಮಕ್ಕಳು ದೊಡ್ಡವರ ಕಣ್ಣಿಗೆ ಮರೆಯಾಗಿ ದುಃಖಕ್ಕೆ ಕಾರಣರಾದರೇ ವಿನಃ ಅವರಿಗೆ ಈ ಲೋಕಕ್ಕಿಂತ ಮಿಗಿಲಾದ ಲೋಕವೇ ಸಿಕ್ಕಿತು ಎನ್ನುವುದು ಗಮನಿಸಬೇಕಾದ ಸಂಗತಿ. ಈ ಭ್ರಷ್ಟ ವ್ಯವಸ್ಥೆಯಲ್ಲಿ ಮಕ್ಕಳಿಗೆ ಸಿಗದೇಹೋಗುವ ಸಂಗತಿಗಳೆಲ್ಲ ಜೋಗಿಯ ದೆಸೆಯಿಂದ ದೊರಕೊಂಡುದು ಒಂದು ಪರ್ಯಾಯದ, ಕತೆಯ ಅವಾಸ್ತವಿಕ ವಾತಾವರಣದಲ್ಲಿ ಸಾಧ್ಯಮಾಡಿಕೊಂಡ ಉಪಾಯವೇ? ಮಕ್ಕಳೂ ಭ್ರಷ್ಟರಾಗಿ ಭವಿಷ್ಯ ಕಳೆದುಕೊಳ್ಳುವುದು ಬೇಡ ಎಂಬ ಆಶಯಗಳೂ ಇಲ್ಲಿ ಇರಬಹುದೇ? ಕುವೆಂಪು ಇವನ್ನೆಲ್ಲ ಊಹಿಸಿ ಕತೆಯ ಆಯ್ಕೆಗಿಳಿದರೋ ಇಲ್ಲವೋ ಎಂಬುದೂ ಕೂಡ ಪ್ರಶ್ನೆಯೇ.

ಬಣ್ಣದ ಮನೆಗಳ ಪಟ್ಟಣವ
ಹಣ್ಣುಗಳುದುರಿದ ತೋಟಗಳ!
ಮಾತಿಗೆ ಮೀರಿದ ಆನಂದಗಳ
ಕೈಗೇ ಸಿಕ್ಕುವ ಹಕ್ಕಿಗಳ!
ಜಿಂಕೆಗಳೆಮ್ಮೊಡನಾಡಿದುವಲ್ಲಿ
ಮೊಲಗಳು ಕುಳಿತುವು ಮೈಮೇಲಲ್ಲಿ!

ಎಂದೆಲ್ಲ ಅಲ್ಲಿನ ಮಕ್ಕಳದೇ ಆದ ಆಸಕ್ತಿಯ ಲೋಕದ ಸಂಗತಿಗಳಿರುವುದನ್ನ ಹೇಳಿದ ಕುಂಟ ಹುಡುಗ, ತನಗೆ ಆ ಭಾಗ್ಯ ಸಿಗಲಿಲ್ಲದುದಕ್ಕೆ 'ಅಯ್ಯೋ ಹೋಯಿತೆ ಆ ನಾಕ!' ಎಂದು ಒರಲುವುನು.

ಕಿಂದರಿ ಜೋಗಿ ಹಿಮಗಿರಿಯಿಂದ ಬಂದವನು. ಅವನನ್ನ ಶಿವನೇ ಬೊಮ್ಮನ ಹಳ್ಳಿಗೆ ಇಲಿಗಳ ಕಾಟ ತೀರಿಸಲು ಕಳಿಸಿದನಂತೆ. ಕುದುರೆಯ ಗೊರಸಿನ ಅಡಿಗಳು ಅವನವು, ತಲೆ ಕಡವೆಯ ಕೊಂಬು ಹೊಂದಿದುದು, ಕಿವಿಗಳೋ ಆನೆಯ ಕಿವಿಯಂತೆ, ಕೋರೆದಾಡೆಯು ಹಂದಿಯಂತೆ. ಅವನು ನೇರ ಗೌಡನ ಮನೆಗೇ ಬಂದ. ಅವನನ್ನು ನೋಡಿ ಗೌಡನ ಹೃದಯ ಬಾಯ್ಗೇ ಬಂದಿತಂತೆ, ಗಡಗಡ ನಡುಗಿ ಹೋದನಂತೆ ಅವ. ಕೃತಯುಗದಲ್ಲಿ ಇಲಿಗಳ ಕಾಟ ಜೋರಾದಾಗ ಭೈರವ ರೂಪ ತಾಳಿದ ಶಿವನಿಗೂ ಅವುಗಳ ಕಾಟ ನಿಲ್ಲಿಸಲಾಗದಾಗ ಈ ಜೋಗಿಯೇ ಸಹಾಯಕ್ಕೆ ಬಂದುದು. ದ್ವಾಪರಯುಗದಲ್ಲಿ ವಿಷ್ಣುವಿಗೂ ಇಂಥದೇ ಪ್ರಸಂಗ ಎದುರಾದಾಗ

ಜೋಗಿಯೇ ಅವನನ್ನ ಉಳಿಸಿದ್ದು. ಇಂಥ ಕಾಲಾತೀತನಾದ ಜೋಗಿ ಇವನು. ಹೀಗೆ ಇಲಿಗಳ ವಿಪರೀತದ ಕಾಟ ಅಡಗಿಸಲು ಬಂದ ಜೋಗಿ, ಬಂದವನೇ ಗೌಡನ ಬಳಿ ಬಂದು ಅವನು ಈಗಾಗಲೇ ಸಾರಿದಂತೆ ಆರು ಸಾವಿರ ನಾಣ್ಯ ಕೊಡುವೆಯಾ ಎಂತಲೇ ಕೇಳುತ್ತಾನೆ.

ಕಿಂದರಿ ಜೋಗಿಯ ಕಿಂದರಿ ಮಾಯದ ಕಿಂದರಿಯೇ, ಸಾಮಾನ್ಯದಲ್ಲ. ಆದರೆ ಅದರ ನಾದದ ಪ್ರಭಾವವಾದುದು ಇಲಿಗಳ ಮೇಲೆ ಮತ್ತು ಮಕ್ಕಳ ಮೇಲೆ ಮಾತ್ರ. ಇಲಿಗಳು ಕಾಟಕೊಟ್ಟಿದ್ದುವು. ಆದರೆ ಮಕ್ಕಳ ಮೇಲೆ ಏಕೆ ಎಂಬುದು ಪ್ರಶ್ನೆ. ಮಕ್ಕಳಿಗೆ ಸಿಗಬೇಕಾದ ನಾಕವನ್ನ ಕೊಡಲು ಈ ನಾದ ಸಾರ್ಥಕವಾಯಿತೆಂದೇ ? ಏಕೆಂದರೆ ಮಕ್ಕಳು ಬೆಟ್ಟದ ಒಳಗೆ ಕಂಡುದು ತಮಗೆ ಸ್ವಚ್ಛಂದವಾಗಿ ಬೇಕಾದುದನ್ನೆಲ್ಲ ಪಡೆಯುವ ಲೋಕವೆ. ಮಕ್ಕಳು, ಬಾಲ್ಯ ಎಲ್ಲ ದೈವೀಮಯವಾದುದು ಎಂದೆನ್ನುವ ಕವಿ ಕುವೆಂಪು, ಬಹುಶಃ ಮಕ್ಕಳಿಗೆ ಬೇಕಾದುದೆಲ್ಲ ಈ ಜನಗಳ ನಡುವೆ ಸಿಗದು, ಅದು ಸಿಗಬೇಕು ಎಂದುಕೊಂಡು ಈ ಕತೆಯ ಸಂಗತಿಯನ್ನ ಬಳಸಿಕೊಂಡರೆ? ಮಕ್ಕಳೆಂದರೆ ಭಾಗ್ಯವೆಂದುಕೊಳ್ಳುವ ಜನ ಮಾತ್ರ ಕಳೆದುಕೊಂಡು ದುಃಖಿತರಾದುದು ಒಂದು ಬಗೆಯಲ್ಲಿ ವಿಪರ್ಯಾಸ.

ಎಲ್ಲ ಇಲಿಗಳೂ ಸಾಯಲಿಲ್ಲ ಎಂಬುದೂ ವಿಶೇಷವೇ. ಒಂದು ಗಡವ ಮೂಷಿಕ ಹೇಗೋ ಈಜಿ ಪಾರಾಯಿತಂತೆ. ಅದು ಹೇಳಿದಂತೆ ಕಿಂದರ ಜೋಗಿಯ ಕಿಂದರಿ ನಾದ ಸೃಷ್ಟಿಸಿದ ಮಾಯೆ ಅವನ್ನ ಭ್ರಮಾಧೀನಗೊಳಿಸಿತು. ಹೋಳಿಗೆಯ ವಾಸನೆಯೇ ಅವುಗಳ ಮೂಗು ತುಂಬಿತಂತೆ, ಹಲ್ವದ ರಾಶಿಯೇ ಕಂಡಿತಂತೆ, ದೊಡ್ಡ ಮಿಠಾಯಿಯ ರಾಶಿ ಕಾಣಿಸಿತಂತೆ, ಬೆಣ್ಣೆಯ ಮುದ್ದೆಯ ರಾಶಿಯೂ ಕಂಡಿತು . . . ಹೀಗೆ ಏನೆಲ್ಲ ಕಂಡ ಇಲಿಗಳ ಸಂತತಿ ಹುಚ್ಚೆದ್ದು ಹರಿದುದು ಸಹಜವಾಗಿಯೇ ಇದೆ. ಕಿಂದರಿಯ ನಾದ ಭ್ರಮೆಯನ್ನು ಉಂಟುಮಾಡಿ ನಾಶಕ್ಕೂ ಕಾರಣವಾಗುತ್ತದೆ. ಹಾಗೆಯೇ ಮಕ್ಕಳಿಗೆ ಬೇಕಾದ ಲೋಕವನ್ನೂ ದರ್ಶಿಸುತ್ತದೆ.

ಈ ಎಲ್ಲ ಸಂಗತಿಗಳು ಏನೇ ಇದ್ದರೂ ಕತೆಯ ನಿರೂಪಣೆ ಮಾತ್ರ ಅದ್ಭುತವಾಗಿ, ರಂಜಕವಾಗಿ ಮೂಡಿದ್ದು ಅದರ ಯಶಸ್ಸಿಗೆ ಸಿಂಹಪಾಲಾಗಿ ತನ್ನದನ್ನ ನೀಡಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಕುವೆಂಪು ಈ ಕವಿತೆಯನ್ನು ಮೊದಲಿಗೆ ಶಿವಮೊಗ್ಗದಲ್ಲಿ ಸಭೆಯೊಂದರಲ್ಲಿ ವಾಚಿಸಿದಾಗ ಪ್ರತಿ ನುಡಿಗೂ ಅದ್ಭುತ ಕರತಾಡನದ ಪ್ರತಿಕ್ರಿಯೆ ದೊರಕಿತ್ತಂತೆ. ಮಕ್ಕಳಿಗೆ ಇಲಿಗಳ ದೊಡ್ಡ ಬಳಗದ ಕತೆ, ಅವುಗಳ ಅಸಾಧ್ಯ ಚೇಷ್ಟೆ ಖಂಡಿತ ರಂಜನೆಯ ಸಂಗತಿಯೇ. ಕಿನ್ನರಿಯ ನಾದಕ್ಕೆ ಇದ್ದಕಿದ್ದ ಹಾಗೆ ಎಲ್ಲ ಅವನ ಹಿಂಬಾಲಿಸುವುದು, ನೀರಲ್ಲಿ ಮುಳುಗಿ ಹೋಗುವುದು, ಹಾಗೆಯೇ ಮಕ್ಕಳೆಲ್ಲ ಹಿಂಬಾಲಿಸುವುದು, ಬೆಟ್ಟ ಬಾಯ್ದೆರೆದು ಅವರೆಲ್ಲ ಅದರೊಳಗೆ ಹೋಗಿಬಿಡುವುದು ಅವಾಸ್ತವದ ಸಂಗತಿಗಳಾಗಿ ಬಾಲ ಮನಸ್ಸಿಗೆ ಕುತೂಹಲವನ್ನು, ಅಚ್ಚರಿಯನ್ನು ಉಂಟುಮಾಡುವುದರಲ್ಲಿ ಸಂಶಯವಿಲ್ಲ. ಹಾಗಾಗಿಯೇ ಮಕ್ಕಳಿಗೆ ಇದು ತುಂಬಾ ಹಿಡಿಸಿದೆ ಎನ್ನಬಹುದು. ಅದರಲ್ಲೂ ಕುವೆಂಪು ನಿರೂಪಣೆ ಮಕ್ಕಳಿಗೆ ಬಲು ಮುದ ನೀಡುವಂತಿದೆ.

ಒಟ್ಟಾರೆಯಾಗಿ ಕುವೆಂಪು ಬಾಲ್ಯದ ವಿಲಾಸ ವಿಭ್ರಮವನ್ನು ದಿವಿಜತ್ವಕ್ಕೆ ಏರುವ ಸಾನಿಧ್ಯ ಮಾಡಿಕೊಳ್ಳಬೇಕಾದುದನ್ನು ಕುವೆಂಪು ರಚನೆಗಳು ಹೇಳುತ್ತವೆ.

ದೊಡ್ಡವರೆಲ್ಲರ ಹೃದಯದಿ ಕಟ್ಟಿಹ
ತೊಟ್ಟಿಲ ಲೋಕದಲಿ
ನಿತ್ಯ ಕಿಶೋರತೆ ನಿದ್ರಿಸುತಿರುವುದು
ವಿಸ್ಮೃತ ನಾಕದಲಿ
ಮಕ್ಕಳ ಸಂಗದೊಳೆಚ್ಚರಗೊಳ್ಳಲಿ
ಆನಂದದ ಆ ದಿವ್ಯ ಶಿಶು
ಹಾಡಲಿ ಕುಣಿಯಲಿ ಹಾರಲಿ ಏರಲಿ
ದಿವಿಜತ್ವಕೆ ಈ ಮನುಜ ಪಶು

ಅವರ ಮಕ್ಕಳ ನಾಟಕಗಳಲ್ಲೂ ಇದೇ ಕುವೆಂಪು ಚಾಚಿಕೊಂಡಿರುವುದನ್ನ ಕಾಣುತ್ತೇವೆ. ಬಹಳಷ್ಟು ಸಲ ರಂಗಪ್ರಯೋಗ ಕಂಡ 'ನನ್ನ ಗೋಪಾಲ'ದಲ್ಲೂ ಕೂಡ ಮಕ್ಕಳ ಮುಗ್ಧ, ನಿಷ್ಕಲ್ಮಶ ಮನಸ್ಸು ದೈವಿ ಸಂಗತಿಯನ್ನ ತಟಕ್ಕನೆ ಹೊಳೆಯಿಸಬಲ್ಲುದು ಎನ್ನುವುದನ್ನ ಅವರು ತೋರಿಸುತ್ತಾರೆ. ಅಮ್ಮ ಹೇಳಿದಂತೆಯೇ ನಂಬಿ ಕಾಡದಾರಿಯಲ್ಲಿ ಗೋಪಾಲನನ್ನ ಕರೆಯುವ ಹುಡುಗನಿಗೆ ಗೋಪಾಲ ಕಾಣಿಸಿಕೊಳ್ಳುತ್ತಾನೆ. ಹಾಲಿನ ಕುಡಿಕೆಯನ್ನ ಕೊಡುತ್ತಾನೆ. ಅದೇ ಆ ಹುಡುಗನ ಗುರುವಿಗೆ ಕಾಣಿಸುವುದಿಲ್ಲ.

ಪಂಜೆ ಮಂಗೇಶರಾಯರಿಂದ ಕುವೆಂಪು ಭಿನ್ನವಾಗಿ ನಿಲ್ಲುವುದು, ಮಕ್ಕಳನ್ನು ನೇರ ಮುಂದೆ ಭಾವಿಸಿಕೊಂಡು ಬರೆಯದುದು, ಇಲ್ಲವೆ ಶಾಲಾ ಮಕ್ಕಳೆಂದು ವ್ಯವಸ್ಥಿತವಾಗಿ, ನಿಗದಿತವಾಗಿ ಓದುವ ವರ್ಗವನ್ನ ಭಾವಿಸಿಕೊಳ್ಳುವ ಅಗತ್ಯ ಕಾಣದಿದ್ದುದು. ಹಾಗೆ ನೋಡಿದರೆ ಕುವೆಂಪು ಮಕ್ಕಳ ಸಾಹಿತ್ಯದ ಪರವಾಗಿಯೇ ಮಾತನಾಡಿದವರು. ಅವರ ಮಕ್ಕಳ ಕುರಿತ ಪ್ರಬಂಧಗಳಲ್ಲಿ ಈ ವಿಚಾರಗಳು ಅಲ್ಲಲ್ಲಿ ಕಾಣಿಸಿಕೊಂಡೂ ಇವೆ. ಅವರು ಶಾಲಾಧ್ಯಾಪಕರಾಗಿ ಮಕ್ಕಳ ನಡುವೆ ಇದ್ದಿರಲಿಲ್ಲ ಎನ್ನುವುದೊಂದೇ. ಬಹುಶಃ ಇದೇ ಕಾರಣಕ್ಕೆ ಅವರು ಸ್ವಚ್ಛಂದವಾಗಿ, ತಮ್ಮೊಳಗನ್ನ ನೋಡಿಕೊಂಡು ಬರವಣಿಗೆಗಿಳಿದರು ಎಂದುಕೊಳ್ಳಬಹುದು. ಬಾಲ್ಯ ಅವರ ಕಣ್ಣರಿಕೆಯಲ್ಲಿ ಹೇಗೆಲ್ಲ ಕಂಡಿತು, ಮಗು ಮನಸ್ಸು ಏನೆಲ್ಲ ಸ್ವರೂಪ ಪಡೆಯಿತು ಅದನ್ನ ಅವರ ಕವಿತೆಗಳಲ್ಲಿ ಅವರದೇ ವಿಶೇಷವಾಗಿ ಗಮನಿಸಬಹುದು. ಹಾಗಾಗಿ ಅವರ ಕಾಣುವ ಬಾಲ್ಯ ಅವರದೇ, ಬೇರೆಯವರದಲ್ಲ. ಮಕ್ಕಳ ಸಾಹಿತ್ಯ ನವೋದಯದ ಸಮಯದಲ್ಲಿ ಈ ಪ್ರತಿಭಾವಂತರಿಂದ ಹೀಗೆ ವಿಭಿನ್ನವಾಗಿ ತನ್ನ ಸಾಧ್ಯತೆಗಳನ್ನ, ಚಾಚುಗಳನ್ನ ಪಡೆಯಿತು ಎನ್ನುವುದು ಮಹತ್ವದ್ದು.

ಜಿ.ಪಿ. ರಾಜರತ್ನಂ

'ತೆಟ್ಟು ಚಪ್ಪಾಳೆ ಪುಟ್ಟ ಮಗು' ಸಂಕಲನದ ಮುನ್ನುಡಿಯಲ್ಲಿ ರಾಜರತ್ನಂ ಅವರು ಮಕ್ಕಳ ಪದ್ಯಲೋಕದ 'ರಾಜ' ಮತ್ತು 'ರತ್ನ' ಎರಡೂ ಆಗಿದ್ದಾರೆ ಎಂದಿದ್ದಾರೆ ಬೊಳುವಾರು ಅವರು. ಆರು ಸಂಕಲನಗಳ ನೂರು ಪದ್ಯಗಳನ್ನೊಳಗೊಂಡ ಸಂಕಲನ 'ಕಂದನ ಕಾವ್ಯಮಾಲೆ'ಯ ಪ್ರಾರಂಭದಲ್ಲಿ ತಮ್ಮ ಬರವಣಿಗೆಯ ಹಿನ್ನೆಲೆಯನ್ನ ಅವರೇ ಹೇಳಿಕೊಂಡಿದ್ದಾರೆ. ಮಕ್ಕಳ ಸಾಹಿತ್ಯಕ್ಕೆ ಅನಿರೀಕ್ಷಿತವಾಗಿ, ಅನಿವಾರ್ಯದ ಸಂದರ್ಭದಲ್ಲಿ ಬಂದೊದಗಿದವರು ಅವರು. ೧೯೩೨ ರ ಹೊತ್ತಿಗೆ ಆಗಲೆ ಕವಿತೆಗಳ ಕೃಷಿಯಲ್ಲಿ ವಿಶೇಷವಾಗಿಯೇ ತೊಡಗಿಕೊಂಡು, ಅವರ ಮಹತ್ವದ 'ಎಂಡ್ಕುಡ್ಕ್ ರತ್ನ'ನ ಪದ್ಯಗಳು ಆಗಲೆ ಬೆಳಕು ಕಂಡಾಗಿ, ಕನ್ನಡ ಎಂ ಎ

ಮುಗಿಸಿ ಕೆಲಸವಿಲ್ಲದೆ, ತಂದೆಯ ಅನುಪಸ್ಥಿತಿ ಬಳಸಿಕೊಂಡು ಮಿಡ್ಲ್ ಸ್ಕೂಲಿಗೆ ಶಿಕ್ಷಕರಾಗಿ, ಮಕ್ಕಳ ಒಡನಾಟದಲ್ಲಿರಬೇಕಾಗಿ ಬಂದು, ಅವರಿಗೆ ತಕ್ಕುದಾದ ಪದ್ಯಗಳನ್ನ ಹೇಳುವ ಜರೂರಿಯಲ್ಲಿ ಈ ಹೊಸ ಕೃಷಿಗೆ ಕೈ ಹಾಕಿದರು. ಮಕ್ಕಳಿಗಾಗಿ ಪದ್ಯ ಬರೆಯಬೇಕೆಂದು ಈ ಮೊದಲು ಉದ್ದೇಶಪಟ್ಟಿರಲಿಲ್ಲ, ಕನಸಿನಲ್ಲಿಯೂ ಯೋಚಿಸಿರಲಿಲ್ಲ ಎಂದು ಅವರೇ ಹೇಳಿಕೊಂಡಿದ್ದಾರೆ. ಕನ್ನಡ ಸಾಹಿತ್ಯದ ಗಂಭೀರ ವಿದ್ಯಾರ್ಥಿಯಾದ ಅವರು ದೊಡ್ಡವರ ಪದ್ಯ ಬರೆಯಲು ತೊಡಗಿದಾಗ ಹೊಯ್ಸಳ, ಪಂಜೆ ಮಂಗೇಶರಾಯರಂಥವರ ರಚನೆಗಳ ಕಡೆಗೆ ಗಮನ ಹರಿಸಿದ್ದರು, ಆದರೆ ತಾನೂ ಹಾಗೆ ಬರೆಯಬೇಕೆಂದು ಅಂದುಕೊಂಡಿರಲಿಲ್ಲ. ಶಾಲೆಗೆ ಹಾಜರಾದ ಮೊದಲ ದಿನವೇ ಮಕ್ಕಳಿಗಾಗಿದ್ದ ಅಂದಿನ ಪಠ್ಯ ನೋಡಿ ಬೆಚ್ಚಿಬಿದ್ದು, ಅದೇ ದಿನ ಶಾಲೆ ಮುಗಿದೊಡನೆಯೆ ಹೊಸ ರಚನೆಯ ಗುಂಗಿನಲ್ಲಿ ಮುಳುಗಿ ಅವರ ಪ್ರಸಿದ್ಧ 'ತುತ್ತೂರಿ' ಪದ್ಯ ರಚಿಸಿ, ಮಕ್ಕಳ ಸಾಹಿತ್ಯಕ್ಕೆ ನಾಂದಿ ಹಾಡಿಯೇ ಬಿಟ್ಟರು. ಅವರು ಮುಂದೆ ಗೋಪಾಲಸ್ವಾಮಿಯವರ ಶಿಶುವಿಹಾರದಲ್ಲಿಯೂ ಮಕ್ಕಳೊಡನೆ ತಮ್ಮ ಆಸಕ್ತಿಯ ಸಮಯ ಕಳೆದು, ಅಲ್ಲಿನ ಮಕ್ಕಳಿಗಾಗಿಯೂ ಪದ್ಯ ಬರೆದರು.

ಮೂರು ನಾಲ್ಕು ವಯಸ್ಸಿನ ಮಕ್ಕಳಿಂದ ಹಿಡಿದು ಹತ್ತು ಹನ್ನೆರಡು, ಅಂದರೆ ಏಳನೆಯ ಕ್ಲಾಸಿನವರೆಗಿನ ಮಕ್ಕಳಿಗಾಗುವಂಥ ಪದ್ಯಗಳನ್ನ, ಶಿಶು ಸಾಹಿತ್ಯ, ಬಾಲ ಸಾಹಿತ್ಯ ಎನ್ನುವ ವಿಭಾಗಗಳನ್ನು ಅವರೇ ಸೂಚಿಸಿದ್ದಾರೆ. 'ಕಂದನ ಕಾವ್ಯಮಾಲೆ' ಸಂಕಲನದ ಕೊನೆಯಲ್ಲಿ ಅವರು ನೀಡಿದ 'ಎರಡು ಮಾತು' ಅವರು ತಮ್ಮ ಮಕ್ಕಳ ಕವಿತೆಗಳ ಹಿನ್ನೆಲೆಯಲ್ಲಿ ಯೋಚಿಸಿದ ಸಂಗತಿಗಳನ್ನ ಹೇಳುತ್ತವೆ. ಅಲ್ಲಿನ ಕೆಲ ಸಾಲುಗಳು ಇವು :

'ಮಕ್ಕಳಿಗೆ ಕಥೆ ಎಂದರೆ ತುಂಬ ಇಷ್ಟ. ಆದರೆ ಅದು ಗದ್ಯದಲ್ಲಿದ್ದರೆ ಎಷ್ಟು ಸುಲಭವಾಗಿ ತಿಳಿಯುತ್ತದೋ ಪದ್ಯದಲ್ಲಿದ್ದರೆ ಅಷ್ಟು ಸುಲಭವಾಗಿ ಅರ್ಥವಾಗುವುದಿಲ್ಲ. ಅದಕ್ಕೋಸ್ಕರ ಪದ್ಯದೊಳಗಿನ ಕತೆಯನ್ನು ಗದ್ಯದಲ್ಲಿ ಹೇಳಿ, ಆಮೇಲೆ ಪದ್ಯವನ್ನು ಓದಿ, ಅಲ್ಲಲ್ಲೆ ಅವಕ್ಕೆ ವಿವರಣೆ ಕೊಡುತ್ತ ಹೋದರೆ, ಮಕ್ಕಳಿಗೆ ಪದ್ಯದ ಸ್ವಾರಸ್ಯವನ್ನು ತಿಳಿಯುವ ದಾರಿ ತೋರಿಸಿದಂತಾಗುತ್ತದೆ.'

'ಮಕ್ಕಳು ನಾದಪ್ರಿಯರು. ಕೇಳಿದ ವರ್ಣಗಳನ್ನು, ಕೇಳಿದ ಪದಗಳನ್ನು, ಕೇಳಿದ ಪಂಕ್ತಿಗಳನ್ನು ಪುನಃ ಪುನಃ ಕೇಳುತ್ತಿದ್ದರೆ ಅವರಿಗೆ ಸಂತೋಷ. ಇಲ್ಲಿನ ತಕಿಟ ತಕಿಟ ಥೈ, ಬೈರನ ಕುಣಿತ, ರೊಟ್ಟಿಯಂಗಡಿ ಕಿಟ್ಟಪ್ಪ... ಇವುಗಳಲ್ಲಿ ಬಹುಪಾಲು ಶಿಶುವಿಹಾರದ ಮಕ್ಕಳಿಗಾಗಿ ಬರೆದುವು.'

'ಬಾಯಿಪಾಠ ಮಾಡಿದ ಪದ್ಯ ಬಹುಕಾಲ ನೆನಪಿನಲ್ಲಿ ನಿಲ್ಲುತ್ತದೆ. ಆದ್ದರಿಂದ ಮಗು ತಿಳಿಯಬೇಕಾದ ವಿಷಯಗಳನ್ನು ಪದ್ಯದಲ್ಲಿ ಹೊಸೆಯುವುದು ರೂಢಿ... ಶಿಕ್ಷಣದಲ್ಲಿ ಇವಕ್ಕೂ ಸ್ಥಾನ ಉಂಟು.'

'ಚುಟುಕ ಎಂದರೆ ಚಿಕ್ಕ ಪದ್ಯ. ಹೆಚ್ಚು ಉದ್ದವಿಲ್ಲದ, ಸುಮಾರು ನಾಲ್ಕೋ ಆರೋ ಪಂಕ್ತಿಗಳೊಳಗೆ ಮುಗಿಯುವ ಪದ್ಯವನ್ನು ಚುಟುಕ ಎಂದು ಕರೆದೆ... ಇಂಥದೊಂದು ಪ್ರಕಾರವನ್ನು ಬರೆಯಬಹುದೆಂಬ ಪ್ರೇರಣೆ ನನಗೆ Edward Lears LimericksDಿಂದ ಬಂದಿತಾದರೂ ಅದರ ವಸ್ತು ವಿಧಾನಗಳಿಗೂ ನನ್ನದಕ್ಕೂ ಇರುವ ವ್ಯತ್ಯಾಸವನ್ನು ವಾಚಕರು ಕಾಣಬಹುದು.'

'ನೀತಿ ಎಂಬ ಮಾರ್ಗದರ್ಶನ ಸಣ್ಣವರಿಗೂ ಬೇಕು, ದೊಡ್ಡವರಿಗೂ ಬೇಕು. ಇಲ್ಲಿರುವ ಪದ್ಯಕತೆಗಳಲ್ಲಿ ಒಂದಲ್ಲ ಒಂದು ನೀತಿ ನವುರಾಗಿ ಸೇರಿ ಮಕ್ಕಳ ಮನಸ್ಸನ್ನು ಮುಟ್ಟುತ್ತದೆ.'

'ಸುತ್ತಿನ ಪ್ರಕೃತಿವ್ಯಾಪಾರಕ್ಕೆ ಸಂಬಂಧಿಸಿದ ಎರಡು ಕವನಗಳು: ನವಿಲು ಮತ್ತು ಮಳೆಯ ಕುಣಿತ. ಕಾವ್ಯಗುಣವನ್ನು ಹೆಚ್ಚು ಪ್ರಮಾಣದಲ್ಲಿ ತುಂಬಿಕೊಂಡಿರುವ ಇವು ಎರಡೂ ಸಣ್ಣವರಿಗೂ ದೊಡ್ಡವರಿಗೂ ಸಮಾನವಾಗಿ ಇಷ್ಟವಾಗಿವೆ.'

ಈ ಮಾತುಗಳನ್ನ ಗಮನಿಸಿದಾಗ ಮಕ್ಕಳ ಪದ್ಯಗಳ ಕುರಿತು ಆ ಸಮಯದ ಲಭ್ಯ ವಾತಾರಣದ ಹಿನ್ನೆಲೆಯಲ್ಲಿ ಸಾಕಷ್ಟು ಚಿಂತಿಸಿದುದು ಕಂಡುಬರುತ್ತದೆ. ಇಂಗ್ಲಿಷಿನ ಮಕ್ಕಳ ಸಾಹಿತ್ಯದ ಸಂಪರ್ಕವೂ ಅವರಿಗೆ ತಕ್ಕಮಟ್ಟಿಗೆ ಆಗಿದೆ.

ಇಲ್ಲಿ ಗಮನಿಸಿಬಹುದಾದ ಒಂದು ಮುಖ್ಯ ಸಂಗತಿ ಎಂದರೆ ಮಕ್ಕಳ ಮನೋಭೂಮಿಕೆಯ ಹಿನ್ನೆಲೆಯಲ್ಲಿ ಅವರಿಗಾಗಿ ಪ್ರತ್ಯೇಕ ಸಿದ್ಧತೆಯಲ್ಲಿಯೇ ಕೃಷಿ ಸಾಧ್ಯವಾಗಬೇಕು ಎನ್ನುವ ಹೊಳಹು. ಅವರ ಮುನ್ನುಡಿಯಲ್ಲಿ 'ಇಂಥವನ್ನು ಇನ್ನೂ ಬರೆಯಬೇಕೆಂಬ ಆಸೆ ಇದೆ' ಎಂಬ ಮಾತಿರುವುದು ಅವರು ತಮ್ಮೊಳಗಿನ ಅಭಿಲಾಶೆಯಾಗಿಯೂ ಈ ಬಗೆಯ ಕೃಷಿಗಿಳಿದರು ಎನ್ನುವುದು ಸೂಚ್ಯವಾಗಿಯಾದರೂ ಕಾಣುತ್ತದೆ. ಇನ್ನು ಮಕ್ಕಳಿಗೆ ಶಿಕ್ಷಣ ನೀಡುವ ಪರಿಕರವಾಗಿಯೂ ಪದ್ಯಗಳನ್ನ ಬಳಸಿಕೊಳ್ಳುವ ವಿಚಾರವೂ ಅವರಲ್ಲಿ ಸ್ಫುಟವಾಗಿಯೇ ಕಂಡಿದೆ. ನೀತಿಯ ಪಾಠವನ್ನ ನವುರಾಗಿ ನೀಡುವ ಮಾತನ್ನು ಹೇಳುವುದರ ಜೊತೆಗೆ ನೇರ ನೀತಿ ಹೇಳುವ ಪದ್ಯಗಳನ್ನೂ ಅವರು ಬರೆದಿದ್ದಾರೆ ಎಂಬುದನ್ನೂ ಗಮನಿಸಬೇಕು.

ರಾಜರತ್ನಂ ಮಕ್ಕಳ ಪದ್ಯಗಳನ್ನ ಬರೆಯಲು ತೊಡಗಿದಾಗ ಆಗಲೇ ಮಕ್ಕಳ ಸಾಹಿತ್ಯದ ಅಗತ್ಯ, ಒಂದಿಷ್ಟು ವಾತಾವರಣ, ನವೋದಯದ ನೆರಳಿನಲ್ಲಾಗಲಿ, ಶಿಕ್ಷಣದ ಅಂದಿನ ಅನಿವಾರ್ಯತೆಗಳನ್ನ ಬಳಿವಿಡಿದಾಗಲೀ ಮೂಡಿಯಾಗಿತ್ತು. ಭಾಷೆ, ವಸ್ತು ಮುಂತಾಗಿ ತನ್ನ ಮೈಯನ್ನ ಪ್ರಯೋಗಕ್ಕೆ ಒಡ್ಡಿಯಾಗಿತ್ತು. ನವೋದಯದ ಶಿಷ್ಟ ಭಾಷೆ ಸರಳಗೊಂಡು ಸುಲಭವಾಗಿಯೇ ದಕ್ಕಿತ್ತು. ಇಂಗ್ಲಿಷಿನ ಮಕ್ಕಳ ಪದ್ಯಗಳ ಪರಿಚಯ ಅಷ್ಟಿಷ್ಟಾಗಿತ್ತಾದರೂ ಭಾವಗೀತದ ಪಕ್ಕದಲ್ಲಿಯೇ ಈ ರಚನೆಗಳು ತಮ್ಮನ್ನ ಕಂಡುಕೊಳ್ಳತೊಡಗಿದ್ದವು. ರಾಜರತ್ನಂ ಒಳಗೇ ಅಡಗಿದ್ದ ಬಾಲ್ಯದ ಲವಲವಿಕೆ, ಅವರು ಪದ್ಯಗಳಲ್ಲಿ ತಂದ ನಾಟಕೀಯತೆ, ಮಾತು, ಹಾಸ್ಯ, ಕುಣಿತ ಮಣಿತದ ಸಾಮಗ್ರಿ ಬೆಳಕು ಕಾಣಲು ಸಾಧ್ಯವಾಯಿತು ಎನ್ನಬಹುದು. ನವೋದಯ ಸಮಯದ ಮಕ್ಕಳಿಗಾಗಿನ ಬರವಣಿಗೆಯಲ್ಲಿ ರಾಜರತ್ನಂ ಎದ್ದುಕಾಣುವುದು ಈ ಬಗೆಯ ಬಾಲ್ಯದ ಖಾಸಾ ಖಾಸಾ ಲೋಕ ಅನಾವರಣಗೊಂಡುದಕ್ಕೆ.

ಬಾಲ್ಯದ ಲೋಕ ಸ್ವೀಕರಿಸಲಿರುವ ಬರವಣಿಗೆ ನೀಡಬಹುದಾದ ಅಭೀಪ್ಸೆ ಅವರೊಳಗೆ ಬಚ್ಚಿಟ್ಟುಕೊಂಡಂತೆ, ಲವಲವಿಕೆಯ ರಚನೆಗಳು ಅವರಿಂದ ತಡೆಯಿಲ್ಲದೆ ಬಂದುದು, ತಮ್ಮದೇ ಛಾಪು ಮೂಡಿಸಿದುದು ಕನ್ನಡದ ಮಕ್ಕಳ ಸಾಹಿತ್ಯಲೋಕದ ಎಲ್ಲರೂ ಗುರುತಿಸುವಂಥದೇ. ಮಕ್ಕಳೊಡನೆ ಒಂದಾಗುವ, ಅವರ ವಿಶಿಷ್ಟ ಮನೋಲೋಕದೊಡನೆ ಬೆರೆತು ಹೋಗುವ, ಅಲ್ಲಿನ ಅನುಭವದ ಜಗತ್ತಿಗೆ ಸ್ಪಂದಿಸುವ, ಹಾಗೆ ತಮ್ಮ ವಯಸ್ಸನ್ನ ಮರೆತುಬಿಡುವ ಮನೋಧರ್ಮ ಮಕ್ಕಳಿಗಾಗಿ ಬರೆಯಬೇಕೆನ್ನುವ ಬರಹಗಾರನಲ್ಲಿ ಕೆಲಸ ಮಾಡುತ್ತದೆ. ಹಾಗಿದ್ದಾಗ ಅದು ಸಹಜವಾಗಿ ಅರಳುತ್ತದೆ, ತನ್ನದೇ ಸೊಬಗಿಂದ ಕಂಗೊಳಿಸುತ್ತದೆ ಎನ್ನುವ ಮತುಗಳನ್ನ

ಮುಖವೆಲ್ಲ ಬೆಣ್ಣೆ!
ತುಂಟ ಕೃಷ್ಣಾ!
ತುಂಟ ಕೃಷ್ಣಾ!

ಇಂಥದೊಂದು ಪದ್ಯವನ್ನ ಅವರ ಸಂಗ್ರಹದಲ್ಲಿ ತಟಕ್ಕನೆ ಎತ್ತಿಕೊಳ್ಳಬಹುದು ಮತ್ತು ಅದು ಅವರ ಮಕ್ಕಳ ಕವಿತೆಯ ವಿಶೇಷತೆಗಳನ್ನೆಲ್ಲ ಹೇಳುತ್ತದೆ. ಬಾಲ್ಯದ ತುಂಟತನ ಹೇಳುವ ಈ ರಚನೆ ಮಕ್ಕಳಿಗೆ ಪ್ರಿಯವಾಗುವಂತೆ ಆಕಾರ ತಳೆದಿದೆ. ಇಲ್ಲಿ ಆಟವೇ ನಡೆದ ಹಾಗಿದೆ. ಕೃಷ್ಣನ ಬೆಣ್ಣೆ ಕದಿಯುವ ಚಿತ್ರ ತುಂಟತನದಿಂದ ಕೂಡಿದ್ದು, ಕಣ್ಣಮುಂದೆ ಕಟ್ಟಿದಂತಿದೆ. ಚುರುಕಾಗಿ ಕುಣಿಯುತ್ತ ಸಾಗುವ ಲಯ ಮಕ್ಕಳ ಬಾಯಿಗೆ ತಟಕ್ಕನೆ ಇಳಿಯುವುದಾಗಿದೆ, ಮನಸ್ಸನ್ನ ಮುತ್ತುವುದಾಗಿದೆ. ಸರಳ ಶಬ್ದ ಸಾಂಗತ್ಯದಲ್ಲಿ ಮಕ್ಕಳಿಗೆ ಬೇಕಾದುದೆಲ್ಲ ತುಸು ಮುಟ್ಟಿಗೆಯಲ್ಲೇ ಸಿಕ್ಕ ಹಾಗಿದೆ. ಈ ಬಗೆಯ ಮಕ್ಕಳಿಗೆ ಹೇಳಿ ಮಾಡಿಸಿದ, ರಂಜನೆಗೆ, ಆಟಕ್ಕೆ ಎಳಸುವ, ಮುದಗೊಳಿಸುವ ಕಟ್ಟುವಿಕೆ ಸಹಜವಾಗಿಯೇ ಎನ್ನುವಂತೆ ಅವರ ಬಹಳಷ್ಟು ಕವಿತೆಗಳಲ್ಲಿ ಎದ್ದುಕಾಣುತ್ತದೆ.

ಪುಟ್ಟ ಪುಟ್ಟ ಕಾಲಿಗೆ
ಕಟ್ಟಿದ ಗೆಜ್ಜೆ
ಕುಣಿಯಲು ಕುಣಿಯಿತು
ಕಿಟ್ಟನ ಹೆಜ್ಜೆ !

***

ಟಂ! ಟಂ! ಟಂ!
ಟಂ! ಟಂ! ಟಂ!
ಟಂ! ಟಂ! ಟಂ! ಟಂ!
ಟಂ! ಟಂ! ಟಂ!

ಕುರಿಯ ಮರಿ! ಬ್ಯಾ!
ಮುದ್ದು ಕುರಿ! ಬ್ಯಾ!
ದಾರಿ ತಪ್ಪಿ ಕಾಡಿನಲಿ
ಕೂಗಿತಮ್ಮ! ಬ್ಯಾ!
ಪಟ್ಟೆ ಹುಲಿ! ಹಾಂ!
ಕುರಿಯ ಕಂಡು! ಹಾಂ!
ಕುರಿಯ ತಿನ್ನಲೆಂದು ಹುಲಿ
ಹಾರಿ ಬಂತು! ಹಾಂ!

***

ತುತ್ತೂರಿ ಊದಿತು
ಥ್ರೂಂ! ಥ್ರೂಂ! ಥ್ರೂಂ!
ರಂಢೋಲೆಂದಿತು
ಢಂ! ಢಂ! ಢಂ!
ತಾಳವು ಕುಟ್ಟಿತು

ಠಣ್! ಠಣ್! ಠಣ್!
ಗಂಟೆಯು ಗುಡುಗಿತು
ಘಣ್! ಘಣ್! ಘಣ್!

***

ತಕಿಟ! ತಕಿಟ! ಥೈ!
ತಮಟೆ ಗಿಮಟೆ! ಠೈಂ!
ಕಾಲು ಕುಣಿ!
ಕಣ್ಣು ಮಿಣಿ!
ತಕಿಟ! ತಕಿಟ! ಥೈ!

***

ಸುತ್ತಲೆಲ್ಲ ರಾಶಿ ಬರಿ
ಕತ್ತಲೆಯ ಕಡಲೆಪುರಿ!
ಏನು ಸದ್ದು! ನಾಯಿ ಮರಿ!
ಭೂ! ಭೂ! ಭೂ!

ಈ ಬಗೆಯಲ್ಲಿ ಒಂದಾದ ಮೇಲೊಂದು ಕೊಡುತ್ತ ಹೋಗಬಹುದು ಈ ಮೋಡಿಗೊಳಿಸುವ ಸಾಲುಗಳನ್ನು. ಅಭಿನಯಕ್ಕೆ ತಟಕ್ಕನೆ ಎಳಸುವ, ಬಾಯೊಳಗೆ ಸರಕ್ಕನೆ ಬಲು ಸ್ವಾದದಿಂದ ಇಳಿಯುವ, ಮುದಗೊಳಿಸುವ ಇವು ಆ ಆ ಪದ್ಯಗಳಲ್ಲಿನ ವಸ್ತುವಿಗೆ ಸ್ಪಂದಿಸುತ್ತ ಒಟ್ಟು ಕವಿತೆಗೆ ಜೀವ ತುಂಬುವಲ್ಲಿ ಪರಿಣಾಮಕಾರಿ ಕೆಲಸ ಮಾಡುತ್ತವೆ. ಒಂದಾವುದೊ ಕ್ರಿಯೆಯಾಗಿರಬಹುದು, ಹಲಬಗೆಯ ಸುತ್ತಲಿನ ಧ್ವನಿಗಳಾಗಿರಬಹುದು, ಒಂದು ಪ್ರಸಂಗವನ್ನೇ ರೋಚಕವಾಗಿ ಕಟ್ಟಿಕೊಡುವುದಾಗಿರಬಹುದು, ಸೊಗಸಿನ ಭಾವಲಹರಿಯಾಗಿಯೂ ಈ ಕುಣಿತ ಮಣಿತ ಅರಳಿನಿಲ್ಲುವುದನ್ನ ನೋಡುತ್ತೇವೆ.

ಈ ಬಗೆಯ ಲಯಗಳು ರೂಪು ಪಡೆಯುವಲ್ಲಿ ಆಗಲೇ ಗ್ರಾಮೀಣ ಪರಿಸರದಿಂದ ಬಾಯಲ್ಲಿದ್ದ ಸಂಗತಿಗಳೂ ಪ್ರಭಾವ ಮಾಡಿರಬಹುದಾದುದನ್ನ ಖಂಡಿತ ಊಹಿಸಬಹುದಾಗಿದೆ. ಹಾಗಾಗಿಯೇ ಪದ್ಯಗಳಲ್ಲಿ ಅಲ್ಲಲ್ಲಿ ಅಗತ್ಯವಾಗಿಯೇ ಲಯವೈವಿಧ್ಯವನ್ನ ತಂದುಕೊಳ್ಳುವುದಾಗಿರುವಂತಿದೆ. ಹಾಗೆಯೇ ನಡುನಡುವೆ ಮಾತು, ಉದ್ಗಾರಗಳು ಸೇರಿಕೊಳ್ಳತೊಡಗುತ್ತವೆ. ರಚನೆ ಯಾವೊಂದು ಧಾಟಿಯಾಗಿ ಹರಿಯುವ ಹಾಡಿಗೇ ವಾಲಿಕೊಳ್ಳದೆ ತನ್ನದೇ ಒಂದು ಸ್ವರೂಪವನ್ನ ಪಡೆಯುವುದು ಸಾಧ್ಯವಾಗುತ್ತದೆ. ಮಕ್ಕಳ ಪದ್ಯಗಳಲ್ಲಿ ಇದೊಂದು ಅಗತ್ಯವಾಗಿ ಬೇಕಾದ ಸಂಗತಿಯೆ. ಆ ನಿಟ್ಟಿನಲ್ಲಿ ಮಕ್ಕಳ ನಡುವೆ ಇದು ಆಟವಾಗಿರುವಂತೆ ಬೆರೆತುಹೋಗುವ ಸಂಗತಿ. ಅದರಿಂದಲೇ ಅದೊಂದು ಪ್ರಸ್ತುತಿ(performance).

ಚಳಿ! ಚಳಿ! ಚಳಿ! ಚಳಿ!
ಶಾಲು ಹೊದೆದನು !
ಮಳೆ! ಮಳೆ! ಮಳೆ! ಮಳೆ!
ನೆನೆದು ಹೋಯಿತು !
ಬಲು ಸೆಕೆ! ಬಲು ಸೆಕೆ!
ಶಾಲು ತೆಗೆದನು!
ಸುರ್ ಗಾಳಿ! ಭುರ್ ಗಾಳಿ!

ಹಾರಿಹೋಯಿತು!
ಬಟ್ಟ ಬೆತ್ತಲೆ !!
ಬಟ್ಟ ಬೆತ್ತಲೆ!!

***

ಬಣ್ಣದ ರೆಕ್ಕೆ
ಬಂತು ಮರಿಹಕ್ಕಿ!
ಬಣ್ಣದ ಚುಕ್ಕಿ
ಬಂತು ಮಿರುಚಿಟ್ಟೆ!
ಬಂತು, ನಿಂತು
ನಿಲ್ಲದೆ ಹಾರಿ ಹೋಯ್ತು!

ಇಂಥವುಗಳ ಸೊಗಸೆಲ್ಲ ಮಕ್ಕಳು ಆಡಿಕೊಂಡು, ಅದರಲ್ಲಿ ಒಂದಾಗಿ, ಆಟವಾಗಿ, ಅನ್ನುವಾಗಲೇ ತಿಳಿಯಬೇಕು. ಮಕ್ಕಳಿಗಾಗಿ ಬೇಕೆಂದೇ ಹಲವಾರು ವೈವಿಧ್ಯದ ಲಯಗಳನ್ನು ಅವರು ಪ್ರಯೋಗಿಸಿದರೆಂದು ಕಾಣುತ್ತದೆ. ಭಾಷೆಯ ಅಭ್ಯಾಸವಾಗಿ, ಮಕ್ಕಳ ನಾಲಗೆಗೆ ರೂಢಿಗೊಳಿಸುವ, ಸಜ್ಜುಗೊಳಿಸುವ, ಹಾಗೆಯೆ ಅಂಕೆಗಳನ್ನ ಪರಿಚಯಿಸುವ ಮುಂತಾಗಿ ಶೈಕ್ಷಣಿಕ ಸಾಮಗ್ರಿಯಾಗಿಯೂ ಪದ್ಯಗಳನ್ನ ಅವರು ದುಡಿಸುವುದು ಕಾಣುತ್ತದೆ. ಆದರೆ ಎಲ್ಲಿಯೂ ನೀರಸಗೊಳಿಸದೆ ರಂಜಕವಾಗಿ, ಮಕ್ಕಳನ್ನ ಖುಶಿ ಪಡಿಸುತ್ತಲೇ ಹೇಳುವುದನ್ನು ಗಮನಿಸಬೇಕಾದುದು.

ಗರುಡಿ ಮಾಡಿದ
ಕುರುಡರಿಬ್ಬರು
ಕರಡಿ ಹಿಡಿಯುವೆನೆಂದರು
ಹೊರಟು ಬಲೆಯನು
ಹರಡದಿದ್ದರು
ಬುರುಡೆ ಹೊಡೆಯುತ ಬಂದರು

***

ಹತ್ತು ಹತ್ತು ಇಪ್ಪತ್ತು
ತೋಟಕೆ ಹೋದನು ಸಂಪತ್ತು
ಇಪ್ಪತ್ತು ಹತ್ತು ಮುವ್ವತ್ತು
ಕೈಯಲ್ಲೊಂದು ಕಲ್ಲಿತ್ತು

***

ಒಂದು ಕಾಡಿನ ಮಧ್ಯದೊಳಗೆ
ಎರಡು ಮರಗಳ ನಡುವೆ ಮಲಗಿ
ಮೂರು ಕರಡಿಗಳಾಡುತಿದ್ದವು
ನಾಕು ಮರಿಗಳ ಸೇರಿಸಿ

***

ಒಂದೆಂಬೋದು ಒಬ್ಬನೆ ಸೂರ್ಯ
ಎರಡೆಂಬುದೇನೇ ಹೆಸರ್ ಹೇಳೇ
ಎರಡೆಂಬೋದು ಭೂಮಿ ಆಕಾಶ
ಮೂರೆಂಬುದೇನೇ ಹೆಸರ್ ಹೇಳೇ

ಆದರೆ ಈ ಬಗೆಯ ಸಾಮಗ್ರಿ ನೀಡುವಲ್ಲಿ ಕೆಲಸಲ ಮಕ್ಕಳನ್ನ ಮೀರಿದ ಸಂಗತಿಗಳೂ ಕಾಣಿಸಿದುದಿದೆ

ಯೌವನದ ಕಾಲದಲಿ
ಮೌನವೇ ಮೇಲು
ಹೌದೌದು ಮಗು ಅದೇ
ಗೌರವದ ಕೀಲು !

***

ಚುಟುಕ ಶಬ್ದವನ್ನ ರಾಜರತ್ನಂ ಅವರೇ ಮೊದಲಿಗೆ ಬಳಸಿದರು ಅಂತ ಹೇಳುವುದಿದೆ. ಅವರು ಮಕ್ಕಳಿಗಾಗಿ ಚುಟುಕಗಳನ್ನು ಪ್ರತ್ಯೇಕವಾಗಿಯೇ ಬರೆದರು. ಎಡ್ವರ್ಡ ಲಿಯರ್‌ನ ಲಿಮೆರಿಕ್ಸ್‌ಗಳಿಂದ ಪ್ರಭಾವಿತರಾಗಿ ಇವನ್ನ ಬರೆದರೂ ಅವು ಅಲ್ಲಿನಕ್ಕಿಂತ ಬೇರೆಯಾದುವು ಎಂದು ಅವರೇ ಹೇಳಿಕೊಂಡಿದ್ದಾರೆ. ಲಿಯರ್ ನೀಡುವ ಅಸಂಬದ್ಧತೆ ರಾಜರತ್ನಂ ಪದ್ಯಗಳಲ್ಲಿ ಕಾಣದು. ಪುಟ್ಟ ಆಕಾರದುವು, ನಿಯತ ಲಯ ಹೊಂದಿದವು ಎಂದಷ್ಟೆ ಹೇಳಬಹುದು. ಏಕೆಂದರೆ, ಪುಟ್ಟ ಮಕ್ಕಳಿಂದ ಹಿಡಿದು ತುಸು ಬೆಳೆದ ಮಕ್ಕಳವರೆಗಿನ ಎಲ್ಲರಿಗೆ ಸಿಗುವ ವಸ್ತು ಇಲ್ಲಿ ಕಾಣಿಸುತ್ತದೆ, ರಂಜಿಸುವಂಥವಿವೆ, ಹಾಸ್ಯದ ಸಾಮಗ್ರಿ ಉಳ್ಳವಿವೆ, ಹಾಗೆಯೇ ಹೆಚ್ಚು ಕಾವ್ಯಮಯವಾಗಿರುವುವು, ಕಲ್ಪನೆಯ ಸೊಗಸನ್ನ ಉಳ್ಳವೂ ಕಾಣುತ್ತವೆ.

ದೊಡ್ಡ ಪಟ್ಟೆ ಪುಲಿ
ಕಾಡುದಾರಿಯಲಿ
ನಡುಗಿ ನಿಂತು
ಹೇಳಿತಿಂತು
ಅಯ್ಯೋ! ಅಪ್ಪ! ಚಳಿ!

ಎನ್ನುವಂಥ ದಿಗಿಲಿನ, ಹಾಗೆಯೇ ಹಾಸ್ಯ ಬೆರೆತ ಪ್ರಸಂಗವನ್ನ ನೀಡುವಂಥವಿವೆ:

ಘಂ! ಘಮ! ಘಮ!
ಗಿಡದ ತುಂಬ ಸುಮ!
ಸುಮದ ಮೇಲೆ
ನಲಿದು ತೇಲಿ
ಮಣಿಗಳಂತೆ ಹಿಮ!

ಅನ್ನುವಂಥ ರಮ್ಯಭಾವ ತುಂಬಿದುವಿವೆ.

ಪಠ್ಯ ಪುಸ್ತಕಗಳಲ್ಲಿ ಮೇಲಿಂದ ಮೇಲೆ ಕಾಣಿಸಿಕೊಂಡು ಜನಪ್ರಿಯವಾಗಿರುವ 'ನಾಯಿ ಮರಿ ನಾಯಿ ಮರಿ ತಿಂಡಿ ಬೇಕೆ' ಹಾಗೂ 'ಬಣ್ಣದ ತಗಡಿನ ತುತ್ತೂರಿ' ಪದ್ಯಗಳು ತಮ್ಮ ಸರಳತೆ ಹಾಗೂ ಮಕ್ಕಳ ಹತ್ತಿರದ ವಿಷಯಗಳಿಗಾಗಿ ಪ್ರಿಯವಾಗಿರುವುದು ಎಲ್ಲರಿಗೂ

ಗೊತ್ತಿರುವ ಸಂಗತಿಯೆ. ಅವರ ಇನ್ನೂ ಹಲವು ಕವಿತೆಗಳು ಮಕ್ಕಳ ಪದ್ಯ ಸಾಹಿತ್ಯದ ದೃಷ್ಟಿಯಿಂದ ಸೊಗಸನ್ನ ಹೇಳುವಂಥವಿವೆ.

ಪೀರ ಗಫೂರನ ಕುದುರೆಯ ಗಾಡಿ!
ಪೀರ ಗಫೂರನ ಗಾಡಿಯ ನೋಡಿ!
ಎಲ್ಲಿದೆ ಪೀರನ ಗಾಡಿಯ ಜೋಡಿ!
ಹೆಫ್ಘ! ಹೆಫ್ಘ! ಹೈ! ಹೈ! ಹೈ!

ಎಂದು ಸಾಗುವ ಕುದುರೆ ಗಾಡಿಯ ಕವಿತೆ ಅದರ ಓಟದಂತೆಯೆ ನಮ್ಮ ಮುಂದೆ ಅನಾವರಣಗೊಳ್ಳುವುದನ್ನ ನೋಡಬಹುದು. ತಿಟ್ಟು ಸಿಕ್ಕಲಿ, ಬಯಲೇ ಸಿಕ್ಕಲಿ, ಅದು ನಿಮಿಷಕೆ ಸಾವಿರ ಮೈಲು ಓಡುವುದಂತೆ, ಅಂಥಾ ಕುದುರೆಯ ಮುಂದೆ ರೈಲಾದರೂ ಏತಕ್ಕೆ ಅನ್ನಸಿಬಿಡುವಂಥದು. ಲಗಾಮು ಚಾವಟಿ ಕೈಯೊಳಗೆ ಬಂದರೆ ಸಾಕು, ಹಾಗೆಯೆ ಗಾಡಿಯ ಒಳಗೆ ಬಾಡಿಗೆ ಇದ್ದರಾಯಿತು ಅದು ಟಣ್ಣಂತ ಹಾರಿಬಿಡುವುದೆ.

ಚಕ್ರದ ಕಟಕಟ ಕಟಕಟ ಸದ್ದು
ಕತ್ತಿನ ಗೆಜ್ಜೆಯ ಕಿಣಿಕಿಣಿ ಮುದ್ದು
ಕೇಳಲು ಕುದುರೆಯು ಹಾರುವ ಹದ್ದು!
ಹೆಫ್ಘ! ಹೆಫ್ಘ! ಹೈ! ಹೈ! ಹೈ!

ಕಟಕಟ ಸದ್ದೂ, ಜೊತೆಗೆ ಕಿಣಿಕಿಣಿ ಮುದ್ದೂ ಎರಡೂ ಅದರ ಓಟಕ್ಕೆ ಖೋ ಕೊಡುವಂಥವೆ. ಇಂಥಾ ಓಟದಲ್ಲಿ ಒಂದು ಚೋದ್ಯವಿದೆ, ಚಕ್ರಗಳಿದ್ದರೂ ಗಾಡಿ ಹಿಂದೆ, ಚಕ್ರಗಳಿಲ್ಲದ ಕುದುರೆ ಮಾತ್ರ ಮುಂದೆ ಮುಂದೆ! ಮಕ್ಕಳಿಗೆ ಹೇಳಿ ಮಾಡಿಸಿದ ಮಾತಿದು. 'ಗಾಡಿಯೆ ನನ್ನದು ಮೋಟರು ಕಾರು! ಡ್ರೈವರು ನಾನೇ ಪೀರ ಗಫೂರು!' ಎನ್ನುವ ಬಡ ಗಫೂರನ ಮಾತುಗಳಲ್ಲಿನ ಆತ್ಮವಿಶ್ವಾಸ ಕವಿತೆಗೆ ಕಳೆಕಟ್ಟಿದೆ. ಮಕ್ಕಳ ಕಣ್ಣಿಗೆ ಆಹಾರವಾಗುವ ಸಾಮಗ್ರಿಗಳೇ ಇಡೀ ಕವಿತೆಯಲ್ಲಿ ಹರಡಿ ಕವಿತೆ ಅರಳಿರುವುದು ಮಕ್ಕಳ ಕವಿತೆಯಾಗಿ ಕಾಣುವ ಯಶಸ್ಸನ್ನ ಹೇಳುತ್ತದೆ.

ರಂಗವಲ್ಲಿ ಇಕ್ಕುತಾರೆ
ಪುಟ್ಟು ಪದ್ದು ಶಾರದೆ!
ಮಕ್ಕಳಾಟ ಎಷ್ಟು ಚೆಂದ
ಬಂದು ನೋಡಬಾರದೆ?

ಎಂಬುದು ಮಕ್ಕಳ ಮೇಲಿನ ಮಮತೆಯೇ ಹರಿದಿರುವ ಕವಿತೆ. ಈ ಪುಟ್ಟ ಕವಿತೆ ಮಕ್ಕಳ ಹೃದ್ಯವಾದ ಜಗತ್ತನ್ನು ಕಣ್ಣಮುಂದಿರಿಸುವಲ್ಲಿ ಕಿಟಕಿಯಂತಿದೆ. ರಂಗವಲ್ಲಿ ಹಾಕುವ ಉಮೇದಿನ ಅವರ ಚಟುವಟಿಕೆಯನ್ನೆಲ್ಲ ಹೇಳುತ್ತ 'ಬಳ್ಳಿ ಬಳ್ಳಿ ಬೆಳೆಯುತಿದೆ! ಬಂದು ನೋಡಬಾರದೆ?' ಎಂದು ಮುಗಿಯುವಲ್ಲಿ ಕವಿತೆಗೊಂದು ರಂಗವಲ್ಲಿಯ ಹಾಗಿನ ಚೆಂದಾದ ಕೊನೆ ಕಂಡಿದೆ.

ಅಮ್ಮನಿಗೆ ಬಲು ಮುದ್ದುಮಗಳು!
ಹೇಳು ನಮಗೇ ಬೈಗಳು!
ನನ್ನ ತಂಗಿ ಎಂತಹವಳು।

ಮನಸು ಬಂತೇ ಅರಗಿಣಿ!
ಬರದೆ ಹೋಯಿತೆ ಲಂಕಿಣಿ!

ಪುಟ್ಟ ತಂಗಿಯ ಕುರಿತ ಪದ್ಯದ ಕೊನೆಯ ಸಾಲುಗಳಿವು.

'ಅಂಬಾಲ್' ಎನ್ನುವ ಕವಿತೆ ಮಕ್ಕಳ ಮಧ್ಯದ ಆಟವನ್ನೇ ಮೂರ್ತಗೊಳಿಸಿದೆ. ಆಟದಲ್ಲಿನ ಮಕ್ಕಳ ಮಾತುಗಳಿಂದಲೇ ಜೀವಂತವಾಗಿರುವ ಈ ರಚನೆ ನಾಟಕೀಯವಾಗಿ ನಮ್ಮ ಮುಂದೆ ಮಕ್ಕಳ ಆಟದ ಸಮಯವನ್ನೇ ಇಳಿಸಿದೆ.

ಇಷ್ಟು ಇಷ್ಟು ಬೆಣ್ಣೆ ತೆಕೊ!
ಚೂಟ್! ಚೂಟ್! ಚೂಟ್!
ಎಡವಿ ಬಿದ್ದೆ ಕೊಂಚ ತಾಳು!
ಏ! ಅಂಬಾಲ್!
ಕುರೋ ಕುರೋ ಮುಟ್ಟು ಬಂದು!
ಚೂಟ್! ಚೂಟ್! ಚೂಟ್!
ಹಿಡಿಯಲಿಲ್ಲ ಎಲ್ಲ ಸುಳ್ಳು!
ಏ! ಅಂಬಾಲ್!

ಎಂದೆಲ್ಲ ಆಟವೇ ನಮ್ಮ ಮುಂದೆ ನಡೆಯುತ್ತದೆ, ನಾವು ಪ್ರೇಕ್ಷಕರು, ಬೇಡ ಆಟದಲ್ಲಿ ಭಾಗಿಯಾಗಬಹುದು. 'ಗರಿಯ ಬಿಚ್ಚಿ ದನಿಯ ಹೆಚ್ಚಿ ಸುತ್ತ ಕುಣಿದು ಮೆರೆಯುವ ನವಿಲನ್ನ ಕಂಡು ಮುಗಿಲ ಹಿಂಡು ಹಿಗ್ಗಿ ಮಳೆಯ ಕರೆದ' ಸರಳವೂ ಸೊಬಗಿನಿಂದ ಕೂಡಿದುದೂ ಆದ ಪದ್ಯ, ತುಸು ದೀರ್ಘವಾದ ತಾರೆಯನ್ನು ಕಳೆದುಕೊಂಡ ಮಾನವೀಯ ಸೆಲೆಯ ಕಥನ ಕವಿತೆ ಇವೆಲ್ಲ ರಾಜರತ್ನಂ ಮಕ್ಕಳಿಗಾಗಿ ಹೇಗೆಲ್ಲ ತೊಡಗಿಕೊಂಡರು ಎಂಬುದಕ್ಕೆ ಸಾಕ್ಷಿಯಾಗಿವೆ.

ಏನೇ ಆದರೂ ಅವರ ಖಾಸಾ ಜಗತ್ತು, ಅವರೊಳಗಿನ ಬಾಲ್ಯದ ಸೆಳೆತವಾಗಿರುವುದು, ಹಾಸ್ಯದ್ದು, ಮುದ ನೀಡುವುದು, ಕುಣಿಯಲು, ಸಂತಸ ಪಡಲು ಹಚ್ಚುವಂಥದೇ, ಗಂಭೀರ ಬಾಗಿನ ಸರಕಿನದಲ್ಲ ಅದು. ಜುಟ್ಟು ಮೀಸೆ ಇಟ್ಟುಕೊಂಡ ಕಳ್ಳ ಮಲ್ಲನನ್ನ ಹಿಡಿಯುವುದಕ್ಕೆ, ಒಳ್ಳೆ ಮಾತು ಹೇಳುವುದಕ್ಕೆ ಲೇಖಕರು ಅವನ ಮನೆಗೆ ಪದೆ ಪದೆ ಹೋದಾಗಲೆಲ್ಲ ಅವನು ಇರುತ್ತಲೇ ಇಲ್ಲ, ಉಲ್ಟಾ ಇವರು ಅತ್ತ ಹೋದರೆ ಅವನು ಇವರ ಮನೆಗೆ ಬಂದು ಕದಿಯುತ್ತಿದ್ದ. ಇಂಥ ಪ್ರಸಂಗಗಳೇ ಮಕ್ಕಳಿಗೆ ಹತ್ತಿರ್ತವಾಗಿಸುವುದು ಅವರನ್ನ. ಅವರಲ್ಲಿನ ಹಾಸ್ಯ ನವಿರಾದುದಿದೆ, ಬಾಯ್ತೆಗೆದು ಚೆನ್ನಾಗಿ ನಕ್ಕು ಬಿಡುವುದೇ ಇದೆ, ಒಂದಿಷ್ಟು ಮುಸಿ ಮುಸಿ ನಗುವುದಿದೆ. ಎಲ್ಲ ಮಕ್ಕಳಿಗಾಗೆ. ಮಕ್ಕಳ ನಗು ರಾಜರತ್ನಂಗೆ ಬೇಕಿತ್ತು. ಅಯ್ಯೋ ಅಪ್ಪ ಚಳಿ ಎಂದು ನಡುಗಿಬಿಡುವ ಹುಲಿಯನ್ನ ತೋರಿಸುತ್ತಾರೆ ಅವರು, ತಾತ ಹೇಳಿದ ಮಾತು ಕೇಳದೆ ಮಳೆಯಲ್ಲಿ ಹೋಗಿ ನೆನೆದು ಬಂದು, ತಾತನೇ ತಂದು ನೀಡಿದ ಬಿಸಿ ಬಿಸಿ ಕಾಫಿ ಕುಡಿದು ಜೋಕಾಗಿ ಮಲಗಿ ನಿದ್ರೆ ಹೊಡೆಯೊ ಮಕ್ಕಳನ್ನ ತೋರಿಸುತ್ತಾರೆ, ಸರಸಳ ಮನೆಯಲ್ಲಿ ಗೌರಿ ಕೂಡಿಸಿ ಪೂಜೆ ಆರತಿಗಾಗಿ ಎಲ್ಲ ತೊಡಗಿದ್ದರೆ, ಹುಡುಗರು ಹೋದರೆ ಕಡುಬನು ಕೊಡುವುರು ನಡೆಯಿರಿ ಎಂದು ಓಡುವ ಹುಡುಗರನ್ನ ತೋರಿಸುತ್ತಾರೆ,

ಅಡುಗೆಯ ಮನೆಯಲಿ
ಗೋಡೆಯಲಿ
ತೂಗಿದ ಬಿದಿರಿನ
ಗೂಡೆಯಲಿ
ಸರಸರವಾಗಿದೆ
ಕೋಡುಬಳೆ!
ನೋಡುತ ಕುಳಿತಿದೆ
ಗೋಡೆಮಳೆ!

ಎನ್ನುವಂಥ ನವಿರು ಹಾಸ್ಯವೂ ಅಲ್ಲಿದೆ, ಹಾಗೆಯೇ

ನೋಡು ನಮ್ಮ ರಾಮೂ ಮೂಗು
ಒಳ್ಳೆ ಎಸಳು ಸಂಪಿಗೆ!
ಏನೆ ಇದು! ದುಂಬಿ ಬಂದು
ಓಡೇಹೋಯ್ತು ಕಂಪಿಗೆ!

ಎನ್ನುವಂಥ ಬಾಯಿ ಮುಚ್ಚಿಕೊಂಡು ತಡೆಯಲಾಗದೆ ನಕ್ಕುಬಿಡುವ ನಗು ಅಲ್ಲಿದೆ, ಅಂಥದರ ಜೊತೆಗೆ

ಕೈಲಿ ಬೈರಿಗೆ!
ಮೈಲಿ ಚೈನು!
ಬೈರ ಕುಣಿದನು! ತೈ ತಕಾ!
ಹೈಹ! ಸೈಸೈ!
ಕುಣಿದು ಜೈಜೈ!
ಪೈಸೆ ಕೇಳಿದ! ತೈ ತಕಾ!

ಎನ್ನುವಲ್ಲಿ, ಹಾಗೆಯೇ

ಬೆಟ್ಟದ ಮೇಲಿನ ಭಟ್ಟನ ಹೊಟ್ಟೆ
ಹಿಂದಕೆ ಹೋಗದು ಮುಟ್ಟಿದರೆ!
ಅವನ ಗುಡಾಣದ ಡೊಳ್ಳಿನ ಹೊಟ್ಟೆ
ಖಣಿಖಣಿ ಎನುವುದು ಕುಟ್ಟಿದರೆ!

ಎನ್ನುವಲ್ಲಿ ವ್ಯಂಗ್ಯವೂ ಬೆರೆತಿದೆ.

'ಇಲ್ಲಿರುವ ಪದ್ಯಕತೆಗಳಲ್ಲಿ ಒಂದಲ್ಲ ಒಂದು ನೀತಿ ನವುರಾಗಿ ಸೇರಿ ಮಕ್ಕಳ ಮನಸ್ಸನ್ನು ಮುಟ್ಟುತ್ತದೆ. ಎರಡು ಕತೆಗಳಲ್ಲಿ ಮಾತ್ರ ನೀತಿ ಯಾವ ಕತೆಯ ಹೊದಿಕೆಯೂ ಇಲ್ಲದೆ ನೇರವಾಗಿ ಉಕ್ತವಾಗಿದೆ' ಎಂಬುದು ಅವರು ಹೇಳಿದ ಮಾತು. ಈ ನವುರಾದ ನೀತಿ ಅವರ ಅನೇಕ ಕವಿತೆಗಳಲ್ಲಿ ಹಬ್ಬಿಕೊಂಡಿದೆ. ಬಣ್ಣದ ತಗಡಿನ ತುತ್ತೂರಿ ಸಿಕ್ಕ ಹುಡುಗ, ಅದು ತನಗೆ ಮಾತ್ರ ಸಿಕ್ಕಿದೆ ಎಂದು ಜಂಬ ಪಟ್ಟು ಕೊನೆಗೆ ಅದರ ಪರಿಣಾಮವೇನೋ ಎನ್ನುವ ಹಾಗೆ ಅದು ನೀರಿಗೆ ಬಿದ್ದು ಹಾಳಾಗುವುದನ್ನ ನೋಡಬೇಕಾಗುತ್ತದೆ. ಗಾಜಿನ ಗೋಲಿ ಸಿಕ್ಕ ಶುದ್ಧ

ಪೋಲಿ ಸುಬ್ಬಣ್ಣನೂ ಅದು ಕೊಚ್ಚೆಯಲ್ಲಿ ಬಿದ್ದು ಫಜೀತಿಯಾಗುವುದನ್ನು, ಹಾಗೆಯೇ ಅದು ಬಂಡಿಯ ಗಾಲಿಗೆ ಸಿಕ್ಕಿ ಒಡೆದು ಹೋಗುವುದನ್ನು ಅನುಭವಿಸುತ್ತಾನೆ. ಅಣ್ಣನಿಗೆ ಏನನ್ನೂ ಕೊಡದೆ ತಾನೇ ಸ್ವಾಹಾ ಮಾಡುವ ಗಂಗೆ ಹೊಟ್ಟೆ ನೋವನ್ನು ಅನುಭವಿಸಿ ಬದಲಾಗುತ್ತಾಳೆ. ಎಷ್ಟು ಹೇಳಿದರೂ ಕಳ್ಳತನ ಬಿಡದ ಮಲ್ಲ ಕೊನೆಗೆ ಚೆನ್ನಾಗಿ ಗುದ್ದು ತಿಂದು ಕಳ್ಳತನ ಬಿಡುತ್ತಾನೆ. ಆಟ ಪಾಠ ಏನೂ ಬೇಡ, ಬರಿ ತಿಂದು ಗೊರಕೆ ಹೊಡೆಯುವುದೇ ತನಗೆ ಕೆಲಸ ಎಂದುಕೊಂಡ ರೋತಿ ರಾಮು ಮೈಕೈಗೆಲ್ಲ ಜೋಮು ತಂದುಕೊಳ್ಳುತ್ತಾನೆ. ಯಾವಾಗಲೂ ಸಿಹಿ ಸಿಹಿ ಎಂದು ಹಪಹಪಿಸುವ ಕಳ್ಳ ರಂಗಪ್ಪ ಜೇನು ಹುಟ್ಟಿಗೂ ಕೈ ಹಾಕಿ ತುಪ್ಪದ ಬದಲು ಬರಿ ಮುಳ್ಳು ತಿನ್ನುತ್ತಾನೆ. ಹೀಗಿರುವ ಪದ್ಯಗಳಲ್ಲಿ ಕೂಡ ಹಾಸ್ಯ, ರಂಜನೆ ಮಕ್ಕಳಿಗೆ ಇಷ್ಟವಾಗುವಂತೆ ಹಾಸಿಕೊಂಡಿದೆ. ಅನುಭವಿ ಹಿರಿಯರಾಗಿ ಪಕ್ಕದಲ್ಲಿ ಕೂರಿಸಿಕೊಂಡು ನಗಿಸುತ್ತ ಒಳ್ಳೆಯ ಮಾತು ಹೇಳಿದಹಾಗೆ ಇದೆಲ್ಲ. ಅವರೇ ಹೇಳಿದ ಹಾಗೆ ಎರಡು ಪದ್ಯಗಳು ಮಾತ್ರ (ಬುದ್ಧಿಮಾತು, ತೆಂಗು) ನೇರವಾಗಿಯೇ ನೀತಿಯನ್ನ ಉದ್ದೇಶಗೊಂಡುವು.

ರಾಜರತ್ನಂ ಅವರ ನಕ್ಕು ನಲಿಯುವ ಈ ಮಕ್ಕಳ ಚೀಲದಲ್ಲಿ ಅಲ್ಲೊಂದು ಇಲ್ಲೊಂದು ಅನಪೇಕ್ಷಿತ ಸಂಗತಿಗಳೂ ಕಂಡುದಿದೆ. ಎರಡು ಟಗರುಗಳ ಜಗಳ ನಡೆದು ಅದು 'ಕೊಂಬಿಗೆ ಕೊಂಬು ತಿಕ್ಕಿ ಢೀ ಢೀ ಢೀ ಢೀ ಢಿಕ್ಕಿ ಹೊಡೆದು ಬಿತ್ತು ರಕ್ತ ಕಕ್ಕಿ' ಎನ್ನುವವರೆಗೂ ಹೋಗುತ್ತದೆ. ಹೆಗಲ ಮೇಲೆ ಹೊಳೆಯುತಿರುವ ಫಳಾ ಫಳಾ ಬಳೆಯ ಸರ 'ಬಿಸಿಲು! ಭಾರ! ಬಳಲುತಿತ್ತು ಅಡಿಯ ಮಾಂಸ, ಮೂಳೆ, ನರ!' ಎನ್ನುವುದನ್ನೂ ನೋಡಹಚ್ಚುತ್ತದೆ.

ಬಾಲ ಕನ್ನಡಿಗನೆ! ನೀನು
ತಾಳ ಹಾಕಿ ರಾಗವಾಗಿ
ಹೇಳಿ ಸವಿಯಲು
ಕುಣಿವ ನಿನಗೆ ತಕ್ಕುವಾದ
ಕುಣಿವ ಕವನಗಳನು ಕಟ್ಟಿ
ಕೊಡುವೆ ಕಂದನೆ!

ಎಂದಿರುವ ಅವರು ತಮ್ಮ ಮಾತನ್ನ ಸಾರ್ಥಕಗೊಳಿಸಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. 'ನಿನಗೆ ತಕ್ಕುವಾದ ಕುಣಿವ' ಕವನಗಳನ್ನ ನೀಡುವೆ ಎಂದಿರುವುದರಲಿಯೇ ಅವರ ಪದ್ಯ ಸಾಹಿತ್ಯದ ಹಿನ್ನೆಲೆಯ ಒತ್ತು ಕಾಣುತ್ತದೆ. ಹಾಗೆಯೇ ಅವರ ಗದ್ಯ ಸಾಹಿತ್ಯದ ಹರಹಿನಿಂದ, ಉದ್ದೇಶದಿಂದ ವಿಭಿನ್ನವಾಗಿಯೂ ಅದು ಕಾಣುತ್ತದೆ. ಮಕ್ಕಳ ಭವಿಷ್ಯವನ್ನು ಕಾಳಜಿಯಾಗಿ ಭಾವಿಸುತ್ತ ಬೆಳೆಯುತ್ತಿರುವ ಮಕ್ಕಳಿಗೆ ಎಂಥೆಲ್ಲ ಗಂಭೀರ ಸಂಗತಿಗಳನ್ನೂ ಗದ್ಯದಲ್ಲಿ ಹೇಳಲು ಅನುವುಮಾಡಿಕೊಂಡರು ಅವರು.

ದಿನಕರ ದೇಸಾಯಿ

ತಮ್ಮ ಚುಟುಕಗಳಿಂದ ಪ್ರಬುದ್ಧರ ಲೋಕದಲ್ಲಿ ವಿಶೇಷವಾಗಿಯೇ ಕಾಣಿಸಿಕೊಂಡ ದಿನಕರ ದೇಸಾಯಿ ಅವರು ಮಕ್ಕಳಿಗಾಗಿಯೂ ಅಷ್ಟೇ ಆಸಕ್ತಿಯಿಂದ ಬರೆದರು. ಹಾಗೆ ಬರೆಯುವಾಗ ತಮ್ಮ ವ್ಯಕ್ತಿದ ಪಡಿನೆಳಲಾಗಿಯೇ ಅವೆಲ್ಲ ಹರಿದು ಬಂದು ದಿನಕರರದೇ ಛಾಪು ಹೊಂದಿದವು. ಕುವೆಂಪು ಅವರ ಹಾಗೆ ದಿನಕರರದೂ ಅವರದೇ ಆದ ವೈಶಿಷ್ಟ್ಯದಿಂದ

ಪ್ರತ್ಯೇಕವಾಗಿ ನಿಲ್ಲಬಲ್ಲಂಥದು. ಅದಕ್ಕೆ ಅವರ ಸಾಮಾಜಿಕ ಜೀವನ ಮೌಲ್ಯಗಳ ಬದುಕೇ ಕಾರಣ. ಜೀವನವಿಡೀ ದುಡಿಯುವ ವರ್ಗ, ಬಡವರು ಇಂಥವರ ಕಾಳಜಿಯನ್ನೇ ಉಸಿರಾಟವಾಗಿ ಹೊಂದಿ ಬಿಡುವಿಲ್ಲದೆ ತೊಡಗಿಕೊಂಡವರು ಅವರು. ಹಾಗಾಗಿಯೇ ಬದುಕನ್ನೆಲ್ಲ ತಮ್ಮದೇ ಮೌಲ್ಯಗಳ ದೃಷ್ಟಿಕೋನಗಳಲ್ಲಿಯೇ ನೋಡಬಯಸಿದುದು ಸಹಜವಾಗಿಯೇ ಇದೆ. ಮಕ್ಕಳನ್ನ ಮುಂದಿಟ್ಟುಕೊಂಡಾಗಲೂ ಅವರು ಅಂಥದೇ ಮೌಲ್ಯಗಳನ್ನ ನವಿರಾಗಿ ಹೇಳಲು ಬಯಸಿದರು.

ಅವರ ತುಂಬಾ ಪ್ರಚುರವಾಗಿರುವ ಕವಿತೆ 'ಬೆಕ್ಕೆ ಬೆಕ್ಕೆ' ಇಂಗ್ಲಿಷಿನ ರೈಮ್ ಅನುಸರಿಸಿಯೇ ಸಿದ್ಧವಾದರೂ ದಿನಕರರ ಛಾಪನ್ನು ಚೆನ್ನಾಗಿಯೇ, ಒಂದಿಷ್ಟು ಸೂಕ್ಷ್ಮವಾಗಿಯೇ ಹೊಂದಿದೆ. ಅರಮನೆಗೆ ಹೋಗಿದ್ದ ಬೆಕ್ಕಿನ ಜೊತೆ ಕುತೂಹಲದಿಂದ ಮಾತಿಗಿಳಿಯುವ ವ್ಯಕ್ತಿ ಅಲ್ಲಿನ ವೈಭವ ವಿಲಾಸಗಳನ್ನು ಅಪೇಕ್ಷೆ ಪಟ್ಟು ಪ್ರಶ್ನೆ ಕೇಳುತ್ತಾನೆ. ಇಂಗ್ಲಿಷಿನ ಮೂಲದಲ್ಲಿ ಕೇವಲ ರಾಣಿಯನ್ನ ನೊಡಲು ಹೋದ ಪ್ರಸ್ತಾಪ ಮಾತ್ರ ಇದ್ದರೆ ದಿನಕರರು ರಾಜನ ಸಂಗಡ ರಾಣಿಯು ಇದ್ದ ಪ್ರಸ್ತಾಪ ಮಾಡಿದ್ದಾರೆ, ಹಾಗೆ ಮಾಡುತ್ತ ಒಂದಿಷ್ಟು ಬೇರೆ ತಿರುವುಗಳಿಗೆ ದಾರಿ ಮಾಡಿಕೊಂಡಂತೆಯೂ ಆಗಿದೆ ಎನ್ನಬಹುದು. ಆದರೆ ಬೆಕ್ಕಿನ ಉತ್ತರ ಮಾತ್ರ ತನ್ನದೇ ನೇರದ್ದು :

ಬೆಕ್ಕೇ ಬೆಕ್ಕೇ ಬೇಗನೆ ಹೇಳೆ
ನೋಡಿದ ಆನಂದ
ರಾಣಿಯ ಮಂಚದ ಕೆಳಗಡೆ ಕಂಡೆನು
ಚಿಲಿಪಿಲಿ ಇಲಿಯೊಂದ

ಬೆಕ್ಕಿಗೆ ಅಗತ್ಯವಾಗುವ ಸಂಗತಿ ಅದರ ಹೊಟ್ಟೆ ಹಸಿವಿಗೆ ಆಗುವಂಥದಲ್ಲದೆ, ಅಲ್ಲಿನ ಯಾವ ವೈಭವೂ ಸಿರಿವಂತಿಕೆಯೂ, ವಿಲಾಸಗಳೂ ಗಣನೆಗೇ ಬಾರದೆ ಹೋಗುವದನ್ನು ಕವಿತೆ ಹೇಳುತ್ತದೆ. ಬೆಕ್ಕು ಕೇವಲ ಪ್ರಾಣಿ ಪ್ರಪಂಚದ ಪ್ರತಿನಿಧಿಯಾಗದೆ ದಿನವೂ ಹೊಟ್ಟೆಗೆ ಕಷ್ಟಪಡುವ, ಪರದಾಡುವ ಬಡವರ ದನಿಯಾಗಿಯೂ ಕಾಣುವ ಸಾಧ್ಯತೆಗಳನ್ನ ಹೇಳುತ್ತದೆ. ಒಂದಿಗೇ ಅಂತಃಪುರದಲ್ಲಿಯೂ, ಅದೂ ಮಂಚದ ಕೆಳಗಡೆಯೇ ಇಲಿ ಕಾಣುವುದು, ಅಲ್ಲಿನ ವ್ಯವಸ್ಥೆಯ ಬಗೆಗೆ ಕನ್ನಡಿಯಾಗುತ್ತದೆ. ಬೆಕ್ಕು ಅವರ ರಚನೆಗಳಲ್ಲಿ ಹಲವಾರು ಸಲ ಬಂದಿದೆ. 'ಅಜ್ಜಿಯ ಕಾಟವ ತಪ್ಪಿಸಿಕೊಳ್ಳಲು ನಾವಿಬ್ಬರು ಸೇರಿ ಅಕ್ಕನ ಊರಿಗೆ ಹೋಗಿಬಿಡೋಣವೆ ಸದ್ದಿಲ್ಲದೆ?' ಎಂದು ಆಪ್ತತೆ ತೋರುವ ಬೆಕ್ಕನ್ನು ಅದರೆಲ್ಲ ಸ್ವಭಾವ ಗುಣವಿಶೇಷಗಳಲ್ಲೇ ಇಟ್ಟು ನೋಡಿದರೂ ಅದೇನೋ ಹಚ್ಚಿಕೊಂಡವರ ಹಾಗೆ ಮತ್ತೆ ಮತ್ತೆ ಬರೆದಿದ್ದಾರೆ. ಕುಮಟೆಯ ಜಾತ್ರೆಗೆ ಸಂಭ್ರಮದಲ್ಲಿ ಕರೆಯುವ ಹಾಡೊಂದಿದೆ. 'ಬೆಕ್ಕೇ ಬೆಕ್ಕೇ ಮುದ್ದಿನ ಸೊಕ್ಕೇ, ಜಳಕವ ಮಾಡುವೆಯಾ ?' ಎಂದು ಕೇಳಿದರೆ ತಣ್ಣಿರಾದರೆ ಸಾಯುವ ಚಳಿ, ಬಿಸಿ ನೀರಾದರೆ ಸೆಕೆಯಲಿ ಬೇಯುವುದು. ಹೀಗಾಗಿ :

ಯಾವಾಗಲೂ ಮೈ ನೆಕ್ಕುವ ಬೆಕ್ಕಿಗೆ
ಜಳಕದ ಮಾತೇಕೆ ?
ತಪ್ಪದೆ ಹಾಲೂ ಮೀನೂ ಕೊಟ್ಟರೆ
ಉತ್ತಮ ಆರೈಕೆ

ಇನ್ನೊಂದು ರಚನೆಯಲ್ಲಿ ಅದರ ಸೊಗಸುಗಾರಿಕೆಯನ್ನೆಲ್ಲ ಚಿತ್ರಿಸುವ ಬಗೆ ಇದೆ. ಗಾಜಿನ ಗೋಲಿಯ ಕಣ್ಣುಗಳು, ಗಲ್ಲದ ಮೇಲೆ ಮೀಸೆಗಳೆಂಟು ಸೊಕ್ಕಿನ ಬಡಿವಾರವಾಗಿ ಕಾಣುತ್ತವೆ, ಅಂತೆಲ್ಲ ಮಾತು ನಡೆಯುತ್ತ, ಮೀಸೆಯ ಬೋಳಿಸಿದರೆ ಕೆಡುವುದೆ ಎನ್ನುವ ಪ್ರಶ್ನೆಯೂ ಏಳುತ್ತದೆ ! ಆದರೆ ಅದಕ್ಕೆ ತಟಕ್ಕನೆ ಬೆಕ್ಕಿನ ಉತ್ತರ . . .

ಕೇಳೋ ಕಳ್ಳಾ, ಮುದ್ದಿನ ಮಳ್ಳಾ,
ಮೀಸೆಗಳಿರಬೇಕು
ಮೀಸೆಯ ನೋಡಿದ ಕೂಡಲೆ ಮೂಷಕ
ಗಾಬರಿಗೊಳಬೇಕು

'ಗುರು ಗುರು ಎಂದು ನೆಗೆಯುತ ಬಂದು, ಇಲಿಯನು ಕೊಂದು, ಮೆಂವ್ ಮೆಂವ್, ಹೆದರಿದ ಕಪ್ಪೆಯು ಡ್ರೊಂಯ್ ಡ್ರೊಂಯ್' ಎಂದು ಸಾಗುವ ನಾಟಕೀಯವಾದ ಸೊಗಸಿನ ರಚನೆಯೊಂದಿದೆ. ಹೀಗೆಯೇ ಅವರ ತಿಪ್ಪಾಭಟ್ಟರ ಕವಿತೆಗಳದೇ ಒಂದು ಕಟ್ಟು. ತಿಪ್ಪಾಭಟ್ಟರನ್ನ ನಾನಾ ಬಗೆಯಲ್ಲಿ ವಿಡಂಬಿಸಿದುದೇ ಕಾಣುತ್ತದೆ. ತಿಪ್ಪಾಭಟ್ಟರನ್ನ ಎಲ್ಲರ ನಡುವೆಯೇ ಒಬ್ಬ ಸಾಮಾನ್ಯ ಮನುಷ್ಯನನ್ನಾಗಿ ಚಿತ್ರಿಸಿರುವ ವಿಶೇಷದ ಸಂಗತಿ ಇಲ್ಲಿಯದು. ಎಲ್ಲ ಐಲುಪೈಲುಗಳು, ಅಸಹಾಯಕತೆಗಳು ಇಲ್ಲಿ ವಸ್ತುವಾಗಿ ಬಂದಿದ್ದು ಹಾಸ್ಯದ ಹೂರಣವಾಗಿ, ಕೆಲಸಲ ಗೇಲಿಯಾಗಿ ಕಾಣಿಸಿಕೊಂಡಿವೆ.

ಅಡಿಗೆಯ ಭಟ್ಟ
ಜಗದಲಿ ಶ್ರೇಷ್ಠ
ಭಟ್ಟನ ಬೈದರೆ
ಕೂಳಿಗೆ ಕಷ್ಟ

ಎಂದು ಸೂಚ್ಯವಾಗಿ ಹೇಳುವುದರೊಂದಿಗೆ ಪ್ರವೇಶಿಸಿಕೊಂಡು ನಾನಾ ಬಗೆಯ ಚಿತ್ರಣಗಳಿಗೆ ದಾರಿ ಮಾಡಿಕೊಂಡಿದ್ದಾರೆ. 'ಅಡಿಗೆಯ ಭಟ್ಟ ನಾಲಿಗೆ ಕೆಟ್ಟ, ಬಡಿಸುವ ಮೊದಲೇ ಬಾಯೊಳಗಿಟ್ಟ', 'ಅಡಿಗೆಯ ಭಟ್ಟ ಬೇಯಿಸಿ ಕೊಟ್ಟ, ಉಪ್ಪನು ಹಾಕಲು ಮರತೇ ಬಿಟ್ಟ', ಅಡಿಗೆಯ ಭಟ್ಟ ದೋಸೆಯ ಸುಟ್ಟ, ತಂಬಿಗೆ ತುಪ್ಪವ ತೀರಿಸಿ ಬಿಟ್ಟ', 'ಅಡಿಗೆಯ ಭಟ್ಟ ಮಜ್ಜಿಗೆ ಮುಟ್ಟ, ಅಡಿಗಿಸಿ ಹಾಲನು ಕುಡಿದೇ ಬಿಟ್ಟ' ಹೀಗೆ ನಾನಾ ಬಗೆಯಲ್ಲಿ ಹಾಸ್ಯದ ಮರೆಯಲ್ಲಿ ವ್ಯಂಗ್ಯದ ಸಾಮಗ್ರಿ ಮಾಡಿಕೊಂಡಿದ್ದಾರೆ. ತಿಪ್ಪಾಭಟ್ಟರ ತಲೆಯ ರುಮಾಲು ಒಗೆಯದೆ ವಾರಗಳೇ ಕಳೆದುದನ್ನ ಹೇಳುತ್ತಾರೆ. ಕನ್ನಡಿಯ ಹಾಗೆ ತಿಪ್ಪಾಭಟ್ಟರ ತಲೆ ತಿಳಿ ತಿಳಿ, ಹಾಗೆಯೇ ಬುದ್ಧಿಗೂ ಕೂಡಾ ಬರಗಾಲ ಎಂತಲೂ ಅನ್ನುತ್ತಾರೆ. 'ತತ್ತಿಯ ದೋಸೆ ಭಟ್ಟರಿಗಾಸೆ, ಅಡಿಗಿಸಿ ತಿನ್ನುವ ವೈವಾಟು' ಇರುವುದನ್ನ ಹೇಳುತ್ತಾರೆ. ಕೀಟಲೆ ಗೋಪಾಲ ಭಟ್ಟರು ಸ್ನಾನಕ್ಕೆಂದು ಹಳ್ಳಕ್ಕೆ ಹೋದರೆ ಹಿಂದೆಯೇ ಹೋದ ಅವರ ಪಂಚೆಯನ್ನು ಅಡಗಿಸಿಟ್ಟು ಭಟ್ಟರು ಅದು ಸಿಗದೆ ಕಂಗಾಲಾಗಿ ಮಂತ್ರದ ಬದಲು ಬೈಗಳನ್ನೆ ಉಚ್ಚರಿಸಿದುದನ್ನು ಹೇಳುತ್ತಾರೆ ಇನ್ನೊಂದೆಡೆ. ಪಾಯಸದ ಹುಚ್ಚು ಬಿಡದೆ ಹಾಸಿಗೆ ಹಿಡಿದುದಿದೆ. ತಿಪ್ಪಾಭಟ್ಟರು ಒಮ್ಮೆ ನೇಗಿಲು ಹಿಡಿಯಲು ಹೋಗಿ ನಗೆಪಾಟಲಾದುದನ್ನ ಬರೆಯುತ್ತಾರೆ.

ನೇಗಿಲು ಮುಂದಕೆ, ಭಟ್ಟರು ಹಿಂದಕೆ
ಬಲು ಪೇಚಾಡಿದರು
ಗೊಬ್ಬರ ಕುಣಿಯಲಿ ಭಟ್ಟರು ಬೀಳಲು
ರೈತರು ಹಾಡಿದರು
ತೊಗರಿಯ ಸಾರದು ಭಟ್ಟರಿಗೆ
ನೇಗಿಲ ಭಾರವೆ ದಿಟ್ಟರಿಗೆ

೧೦ ಅಂಕಗಳ ದೀರ್ಘವಾದ ಕವಿತೆಯನ್ನೇ ಭಟ್ಟರನ್ನು ಇಟ್ಟುಕೊಂಡು ಬರೆದಿದ್ದಾರೆ, ಕೊನೆಯಲ್ಲಿ ಈ ಬಗೆಯ ಸ್ವಾರಸ್ಯದ ಭಟ್ಟರ ಬದುಕು ಹಲವಾರು ವಿವಶತೆಗಳಿಂದ ನಲುಗಿ ಸಾವಿನ ಪರ್ಯವಸಾನವನ್ನ ಕಾಣುವುದನ್ನೂ ಬರೆಯುತ್ತಾರೆ.

ಊರಿನ ಬಂಡಿಯ ಹಬ್ಬ
ಆಡೂ ಕಟ್ಟೆಯ ಸುಬ್ಬ
ಭಟ್ಟರ ಹಗರಣ ಮಾಡಿ
ತೋರಿಸಿದನು ಉಂಡಾಡಿ

ಎನ್ನುವಲ್ಲಿಗೆ ಅದಕ್ಕೊಂದು ವ್ಯಂಗ್ಯದ, ಆದರೆ ಅಷ್ಟೇ ಸಂವೇದನೆಯ ಕೊನೆ ಬರೆದಿದ್ದಾರೆ. ವರ್ಣ ವೈಷಮ್ಯದ, ಜಾತಿ ಆಧಾರಿತ ಸಮಾಜದ ಪರಿಸರದಲ್ಲಿ ಭಟ್ಟರನ್ನ ಹೀಗೆ ವಸ್ತುವಾಗಿಸಿಕೊಂಡು ದಿನಕರರು ಬಹುಶ: ಮಕ್ಕಳ ಎದುರಿಗೆ ವೈಷಮ್ಯತೆಯನ್ನ ಮೀರುವ ದಾರಿ ಕಂಡುಕೊಳ್ಳಲು ಪ್ರಯತ್ನಿಸಿದಂತಿದೆ. ಇದು ದಿನಕರರು ಬಯಸಿದ ಅವರೊಳಗಿನ ಬಗೆಯಾಗಿ ಹೊಮ್ಮಿದುದು ಎನಿಸುತ್ತದೆ ನನಗೆ.

'ರೈತ ಮತ್ತು ಕರಡಿ'ಯಂಥ ಪದ್ಯವನ್ನು 'ನಮ್ಮ ಹಳ್ಳಿ'ಯಂಥ ಪದ್ಯವನ್ನು ದಿನಕರರ ಸಂದರ್ಭದಲ್ಲಿ ವಿಶೇಷವಾದ ಕಣ್ಣುಗಳಿಂದಲೇ ನೋಡಬೇಕೆನಿಸುತ್ತದೆ. ಗೇಣಿ ಸಮಸ್ಯೆಯನ್ನು ಇಟ್ಟುಕೊಂಡು ಒಡೆಯನಾದ ಕರಡಿ ತನ್ನ ಪೆದ್ದುತನದಿಂದ ಪ್ರತಿಸಲವೂ ಸೋಲನ್ನು ಅನುಭವಿಸುವುದು, ನಗೆಪಾಟಲಾಗುವುದು, ದುಡಿಯುವ ಶ್ರಮಜೀವಿ ರೈತ ತನ್ನ ಪ್ರತಿಫಲ ಪಡೆಯುವುದು ತನ್ನ ಕೆಲವೆಲ್ಲ ನಿರೀಕ್ಷೆಗಳಿಗಾಗಿಯೇ ರಚನೆಗೊಂಡಿರುವುದು ಎನಿಸದಿರದು. ಎಲ್ಲ ಅವ್ಯವಸ್ಥೆಯೇ ತುಂಬಿರುವ ಹಳ್ಳಿಯ ಕುರಿತು 'ನಮ್ಮೀ ಹಳ್ಳಿಗೆ ನಾವೇ ಯೋಗ್ಯ, ಈತರದೂರೆ ನಮ್ಮದು ಭಾಗ್ಯ' ಎಂದುಕೊಳ್ಳುವುದು ವ್ಯಂಗ್ಯದ ಸಾಮಗ್ರಿಯಾಗಿಯೇ. 'ಕಾಗದ ಬಂತು ಕಾಗದವು' ಎನ್ನುವ ಅಂಚೆಯಣ್ಣನ ಕುರಿತ ಪದ್ಯ, 'ಗಂಟೆಯ ನೆಂಟನೆ ಓ ಗಡಿಯಾರ' ಎಂದು ಶುರುವಾಗುವ ಅತ್ಯಂತ ಪ್ರಚುರವಾದ 'ಗಡಿಯಾರ' ಕವಿತೆಗಳು ದಿನಕರರವೇ ವೈಶಿಷ್ಟ್ಯ ಹೇಳುತ್ತವೆ. ಮಕ್ಕಳನ್ನ ಕುಣಿಸಿ ನಲಿಸುವ ಪದ್ಯಗಳನ್ನೂ ಸಾಕಷ್ಟು ಬರೆದಿದ್ದಾರೆ.

ಹೊಯ್ಸಳ

ಅರಗಂ ಲಕ್ಷ್ಮಣರಾಯರು 'ಹೊಯ್ಸಳ' ಹೆಸರಿನಿಂದ ಮಕ್ಕಳಿಗಾಗಿ ಕವಿತೆಗಳನ್ನ ಬರೆದು ಹೆಸರಾದುದೀಗ ಇತಿಹಾಸ. ಕವಿಯಾಗಿಯೇ, ಅದೂ ಮಕ್ಕಳಿಗಾಗಿನ ಕಾವ್ಯದಲ್ಲೇ ಹೊಯ್ಸಳರು ತಮ್ಮನ್ನ ವಿಶೇಷವಾಗಿ ಕಾಣಿಸಿಕೊಂಡಿರುವುದು. ಅವರ ಕಾವ್ಯವೆಂದರೆ ಅದೊಂದು ಬಗೆಯ ಹದ ಪಡೆದ, ಮಾಗಿದ ಮಕ್ಕಳ ಕಾವ್ಯ ಎನ್ನಬೇಕು. ಅಷ್ಟರಮಟ್ಟಿಗೆ ಅವರು ಮಕ್ಕಳ ಜಗತ್ತಿನೊಳಗೆ

ಮುಳುಗಿ ಹೋಗಿರುವುದು, ತಮ್ಮದೇ ಅಸ್ತಿತ್ವವನ್ನ ತೋರಿಸಿರುವುದು ಗಮನಾರ್ಹ ಸಂಗತಿಗಳು. ಹೊಯ್ಸಳರದೇ ಒಂದು ಬಗೆ, ಅದು ಅವರದೇ ಆದ ಬಗೆ. ಒಂದು ಬಗೆಯ ನವಿರಾದ, ಅಪರೂಪದ ಕಲ್ಪಕತೆಯಿಂದ ಕೂಡಿದ, ಮಕ್ಕಳ ಆಟೋಟದ ಸಮಯದ ಅಕ್ಕರೆಗಳನ್ನು, ಮುದವನ್ನು, ಅಂತಃಕರಣಗಳನ್ನು ಒಳಗು ಮಾಡಿಕೊಳ್ಳುತ್ತ ಸಿದ್ಧವಾದುದು.

ಅಪ್ಪ ಅಮ್ಮ ಮಲಗಿದ ವೇಳೆ
ರಾತ್ರಿ ಸದ್ದು ಅಡಗಿದ ಮೇಲೆ
ಹಣಬೆ ಮೇಲೆ ಮಾಳಿಗೆಯಲ್ಲಿ
ಮಕಮಲ್ ಜೇಡನ ಪರೆಗಳ ಹಾಸಿ
ಕಿನ್ನರರೆಲ್ಲ ಕೂಡುವರಲ್ಲಿ
ಬಲ್ಲೆಯ ನೀನು ಹಸುಗೂಸು

ಎನ್ನುವ ಕವಿತೆ ಅಪರೂಪದ ಕಲ್ಪನಾ ಜಗತ್ತನ್ನ ಅರಳಿಸುತ್ತ ಮಗು ಮನಸ್ಸನ್ನ ಆವರಿಸಿಕೊಳ್ಳುವ ಬಗೆ ಅನನ್ಯವಾದುದು. 'ಒಂದು ಕಾಳು ಜೋಳ, ಒಂದು ಕಾಳು ರಾಗಿ, ಒಂದೇ ಒಂದು ಸಣ್ಣಕ್ಕಿ, ಮತ್ತೂ ಒಂದು ಬಿದಿರಕ್ಕಿ, ಇದರಲಿ ರೊಟ್ಟಿ, ಅದರಲಿ ಮುದ್ದೆ, ಇದರಲಿ ಅನ್ನ, ಅದರಲಿ ಕೀರು' ಹೀಗೆಲ್ಲ ಅಡಿಗೆ ಮಾಡಿಕೊಂಡು, ಹಂಚೀ ಹೂವಿನ ಚಮಚ ಹಿಡಿದು, ವಿಷ್ಣುಕ್ರಾಂತಿ ತಟ್ಟೆ ಇಟ್ಟುಕೊಂಡು ಎಲ್ಲ ಸುತ್ತ ಕುಳಿತು ಉಣ್ಣುತ್ತಾರಂತೆ ಕಿನ್ನರರು! ಚೆಲುವ ಚಂದ್ರ ತಲೆಯ ಮರೆಸುವಂತೆ ಮಿಣುಕು ಹುಳದ ಪಂಜನ್ನು ಹಿಡಿದು ಕತ್ತಲು ದಾರಿಯಲ್ಲಿ ಸಾಗಿ ಹೋಗುತ್ತಾರಂತೆ ಅವರು ! ಇದು ಅವರ ಪ್ರಾತಿನಿಧಿಕ ಉದಾಹರಣೆ ಎಂದರೆ ತಪ್ಪಲ್ಲ. ಅವರ ಶೈಲಿಯ ಸೊಗಸುಗಾರಿಕೆಯ ಸುಂದರ ಉದಾಹರಣೆಯೇ ಈ ಕವಿತೆ.

ಬಳಪದ ಗೊಂಬೆ ಬಸವಣ್ಣಪ್ಪ ಹಾದೀಲಿ ಹೋಗುವಾಗ, ಹತ್ತೀನಾಯಿ ತಲೆ ಕುಣಿಸುತ್ತ, ಬಾಲ ಅಲುಗಿಸಿಕೊಂಡು 'ನನ್ ರೊಟ್ಟಿ, ಬಿಸ್ಕತ್ ಕೊಡು, ನಿನ್ ಹಿಂದೆ ಬರ್ತೀನ್ ಬಿಡು' ಅಂತ ಹಿಂಬಾಲಿಸಿಕೊಂಡೇ ಬಂತಂತೆ. ಹೊಟ್ಟಿನ ಗೊಂಬೆ ಕಿಸುಗಾಲಕ್ಕ ಎದುರಾದ್ಲು, ಅವಳು ತನ್ನ ಬುಟ್ಟಿ ಇಳಿಸಿ ಹಿಟ್ಟಿನ ಮೇಲೆ ಅವರೇಕಾಳು, ರೊಟ್ಟಿಯ ಮೇಲೆ ಬೆಣ್ಣೆ ಮುದ್ದೆ ಇಟ್ಟು ಕೊಟ್ಟಳಂತೆ. ಬಳಪದ ಬಸವ ಕೊಟ್ಟಿದ್ದೆಲ್ಲ ತಿಂದೇಬಿಟ್ಟನಂತೆ! ಮಕ್ಕಳ ನಡುವಿನದೇ ಆದ ಮುದನೀಡುವ ವಸ್ತು ವೈವಿಧ್ಯಗಳು ಹೊಯ್ಸಳರ ಕಾವ್ಯದ ಸೊಗಸು. ಮಕ್ಕಳ ಲೋಕದ ಎಲ್ಲ ವರಸೆಗಳೂ ಅವರಿಗೆ ಕರಗತ. ಏನೇನೆಲ್ಲ ಮಕ್ಕಳ ಆಟದ ಬಗೆಗಳನ್ನ ಅವರು ಸಹಜವಾಗಿಯೇ ಒಳಗೊಳ್ಳುತ್ತಾರೆ ನೋಡುವುದೇ ಚೆಂದ.

ಮಸಿ ಕುಡಿಕೆಯನ್ನೇ ಉರುಟಿಟ್ಟು
ಹಸಿ ಕಾಗದದೋಳೊತ್ತಿಟ್ಟು
ಹೊಸದೋತರದೋಳ್ಳುಜ್ಜಿಟ್ಟು
ಹಸುಗೂಸಾರ್ಕೈ–ಪೇಳುವೆಯಾ?
ನಾಂ–ಗೋ–ತ್ತಿ–ಲ್ಲಾ–ಪ್ಪಾ

ಎಂದೆಲ್ಲಾ ಬಾಲ್ಯದ ಮುಗ್ಧತೆಯ ಲೋಕ ಧರೆಗಿಳಿಸುವ ಶಬ್ದ ಸಂಗತಿ ಕಾಣುವುದು ಹೊಯ್ಸಳರಲ್ಲಿಯೇ. 'ತಟ್ಟು ಚಪ್ಪಾಳೆ ಪುಟ್ಟ ಮಗು' ಕವಿತೆಯಲ್ಲಿ ಗಾಂಧಿಯ ಜನುಮದಿನಕ್ಕೆ ಎಷ್ಟೆಲ್ಲ ಗೌರವದಿಂದ, ಅಕ್ಕರೆಯಿಂದ, ಮುದ್ದಿನಿಂದ ಪುಟ್ಟ ಮಗುವೊಂದು ನಡೆದುಕೊಳ್ಳುವುದನ್ನು

ಹೊಯ್ಸಳರು ಚಿತ್ರಿಸುವುದೇ ಒಂದು ಅದ್ಭುತ.

ಆಡು ಹಾಲು ಹೆಸರು ಖೀರು
ಬೇವು ಚಟ್ನಿ ಗೋಧಿ ರೊಟ್ಟಿ
ಅಷ್ಟು ನೀರು ಅವನಿಗಿಡು
ತಟ್ಟು ಚಪ್ಪಾಳೆ ಪುಟ್ಟ ಮಗು

'ಇಂಡಿಯಾದ ಮಗುವು ಗಾಂಧಿ, ಇಂಡಿಯಾದ ದೀಪ ಗಾಂಧಿ, ಕಂಡು ಅವನ ಕುಣಿವ ಬಾರೊ' ಅಂತ ಕರೆಯುವ ಬಗೆ ಮಕ್ಕಳ ಲೋಕದ ಆಪ್ಯಾಯಮಾನದ ಬಗೆ. 'ಬಂದ ಬಂದ ಸಂತಂಮಣ್ಣ' ಅವರ ಪ್ರಚುರವಾದ ಗೀತೆ. ತುಂಟಾಟದ, ಬಾಲ್ಯದ ಸ್ವಚ್ಛಂದದ ಬಗೆಯನ್ನೆಲ್ಲ ಮೂರ್ತೀಕರಿಸಿರುವ ಬಗೆಯಲ್ಲಿ ಸಂತಂಮಣ್ಣ ಕಾಣಿಸಿಕೊಳ್ಳುವ ಬಗೆ, ಹಾಗೆಯೇ ಅದೆಲ್ಲ ಮುದ್ದಿನಲ್ಲೇ ಪರ್ಯವಸಾನವಾಗುವುದು ಈ ಕವಿತೆಯ ಸೊಗಸಿನೊಂದು ಬಗೆ. ಬಗೆಬಗೆಯಲ್ಲಿ ಅವನನ್ನ ಚಿತ್ರಿಸಿ ಮುಂದಿಡುತ್ತಾರೆ ಕವಿ. ಅದು ಅವರ ತಾಯ ಬಯಕೆಯ ಅಭಿವ್ಯಕ್ತಿಯೇ ಸೈ.

ಪಠಾಸು ಪೆಟ್ಲು ಒಳಜೇಬಲ್ಲಿ
ಕಾಸಿನ ಸಾಲು ಕಳ್ಳ ಜೇಬಲ್ಲಿ
ಚೆಂಡು ದಾಂಡು ಎಡಬಲದಲ್ಲಿ
ಬಂದ ಬಂದ ಸಂತಂಮಣ್ಣ

***

ಕಸ್ತೂರಿ ಚಂದ್ರ ಹಣೆಯಲ್ಲಿಹುದು,
ಚಂಜೆಯ ಶುಕ್ರ ಕಣ್ಣಲ್ಲಿಹುದು,
ಬೆಳು ಬೆಳ್ದಿಂಗಳು ಗಲ್ಲದ ಮೇಲೆ
ಬಂದ, ಬಂದ, ಸಂತಂಮಣ್ಣ

***

ಬಾಬಾರೋ ಬಾರೋ ಸಿಡಿಲಿನಮರಿಯೇ
ಬಾರೋ ನಾಡಿನ ಸುಂಟರಗಾಳೀ,
ತೋರೊ ಸಿರಿಮೊಗ, ತುಂಟರ ಗುರುವೆ,
ಬಂದ ಬಂದ ಸಂತಂಮಣ್ಣ

ಹೊಯ್ಸಳರ ಕವಿತೆಗಳಲ್ಲಿ ಮಕ್ಕಳ ಲೋಕ ಅರಳುವ ಹಾಗೆ, ದೊಡ್ಡವರ ಅಕ್ಕರೆಯೂ ಜೊತೆಗೇ ಉಕ್ಕಿ ಹರಿಯುತ್ತದೆ. ಅದೊಂದು ಅಂತಃಕರಣದ ಸೆಲೆ ಎನ್ನುವೋಪಾದಿಯಲ್ಲಿ.

ಕುವೆಂಪು, ದಿನಕರ ದೇಸಾಯಿ ಅಂಥವರಲ್ಲಿ, ಅವರ ಇಡೀ ವ್ಯಕ್ತಿತ್ವದ, ಹಾಗೂ ವೈಚಾರಿಕ ನಿಲವಿನ ಛಾಪು ಬಿಟ್ಟಗಲದೆ ಮಕ್ಕಳಿಗಾಗಿನ ಬರವಣಿಗೆಯಲ್ಲಿ ರೂಪುಗೊಳ್ಳುವುದನ್ನು ಗುರುತಿಸಬಹುದು. ಕುವೆಂಪು ಅವರಲ್ಲಿ ದೇವರು, ಸಾತ್ವಿಕ ಜೀವನ, ಆರ್ತ ಹೃದಯ, ಸಮಾನತೆ, ಮಾನವೀಯ ಹಂಬಲ ಮುಂತಾದುವೆಲ್ಲ ಕಾಣಿಸಿಕೊಂಡರೆ, ದಿನಕರ ದೇಸಾಯಿಯವರಲ್ಲಿ ಸಾಮಾಜಿಕ ವಾಸ್ತವದ ವೈಷಮ್ಯ, ಆ ನಿಟ್ಟಿನಲ್ಲಿ ಅಪೇಕ್ಷಿತ ಸಂಗತಿಗಳು

ದಿಟ್ಟವಾಗಿಯೇ ಕಾಣಿಸಿಕೊಂಡಿವೆ. ರಾಜರತ್ನಂ ಅವರಲ್ಲಿ ಈ ಬಗೆಯ ವೈಚಾರಿಕ ನಿಲುವು ಬರವಣಿಗೆಯ ಹಿಂದೆ ಇರದೆ ಮಕ್ಕಳ ನಡುವೆ ನಿಂತು ಮಕ್ಕಳು ಸಂತಸದಿಂದ ಕುಣಿದು, ನಕ್ಕು, ಉಲ್ಲಾಸಗೊಂಡು ಮೈಮರೆಯುವಂತೆ ತಮ್ಮನ್ನು ತೊಡಗಿಸಿಕೊಂಡುದು ಕಾಣುತ್ತದೆ. ಹೀಗಾಗಿ ಅಲ್ಲಿ ಮಕ್ಕಳ ನಗೆ, ಕೇಕೆ, ಕುಣಿತ ಕೇಳಿ ಬರುತ್ತವೆ. ಹೊಯಿಸಳರೂ ಶಿಕ್ಷಕರಾಗಿ ಮಕ್ಕಳ ಒಡನಾಟದಲ್ಲಿಯೇ ತಮ್ಮೆಲ್ಲ ರಚನೆಗೆ ದಾರಿ ಮಾಡಿಕೊಂಡರೂ ಅವರ ಸ್ವಭಾವ ವಿಶೇಷ ರಾಜರತ್ನಂ ಅವರಿಗಿಂತ ತುಸು ಬೇರೆ ಬಗೆಯದು. ಅಲ್ಲಿ ಆದಷ್ಟೂ ಸುಕುಮಾರ, ರಮ್ಯ, ಕೋಮಲ ಭಾವ ಪ್ರಪಂಚಕ್ಕೆ ಆದ್ಯತೆ. ಕಲ್ಪನಾಮಯತೆ ಅಲ್ಲಿ ಮೆಲ್ಲಗೆ ಹೂ ಬಳ್ಳಿಯ ಹಾಗೆ ಹರಡಿದೆ. ರಾಜಜರತ್ನಂ ಅವರ ಹಾಗಿನ ತುಂಟ, ಹಾಸ್ಯದ, ಚುರುಕಿನ ಮನೋವ್ಯಾಪಾರ ಅಲ್ಲಿ ಎದ್ದುಕಾಣದು. ಪಂಜೇ ಮಂಗೇಶರಾಯರದೂ ಬದುಕಿನ ಆದಷ್ಟೂ ಗಂಭೀರ ಮಗ್ಗಲುಗಳಿಗೆ ವಾಲಿದ ಸಂಗತಿಗಳೇ. ಒಳ್ಳೆಯ ಬದುಕು, ಸಮೃದ್ಧ ಭವಿಷ್ಯ, ಸಾತ್ವಿಕತೆ ಇಂಥವನ್ನೆಲ್ಲ ಬಾಲ್ಯದಲ್ಲಿ ಕಟ್ಟಿಕೊಡಬೇಕೆಂಬ ಹಂಬಲ ಅಲ್ಲಿ ಹರಿಯುವುದನ್ನು ಕಾಣುತ್ತೇವೆ.

ಕೈಯ್ಯಾರ ಕಿಞ್ಞಣ್ಣರೈ

ಕವಿಗಳಾಗಿ ಸಾರಸ್ವತ ಪ್ರಪಂಚವನ್ನ ಸೆಳೆದ ಕೈಯ್ಯಾರರು ಹಾಗೆ ನೋಡಿದರೆ ಮಕ್ಕಳಿಗಾಗಿಯೇ ಮೊದಲು ಬರೆದರು. ೧೯೪೦ರಲ್ಲಿ 'ಪದ್ಯಮಂಜರಿ' ಭಾಗ ಒಂದು ಹಾಗೂ ಎರಡು ಎಂದು ಪ್ರಕಟವಾದುವು. ಇವಲ್ಲದೆ ೧೯೫೩ರಲ್ಲಿ ಒಂದರಿಂದ ಎಂಟನೆಯ ತರಗತಿಯ ವರೆಗೆ ಒಟ್ಟು ಎಂಟು ನವೋದಯ ವಾಚನಮಾಲೆಗಳನ್ನು ಅವರು ರಚಿಸಿದರು. ಮದ್ರಾಸು ಪ್ರಾಂತದಲ್ಲಿಯೇ ಹೆಚ್ಚು ಪ್ರಚುರಗೊಂಡರೂ, ಬಹುಶಃ ಕನ್ನಡಿಗರೆಲ್ಲರನ್ನು ಮುಟ್ಟಿದ, ತಟ್ಟಿದ ಕವಿತೆ 'ನೀನನಗಿದ್ದರೆ ನಾನಿನಗೆ' ಎನ್ನುವ ಶೀರ್ಷಿಕೆಯ ಸಹಕಾರಿ ತತ್ವವನ್ನು ಒಡಲಲ್ಲಿಟ್ಟುಕೊಂಡ ಸರಳವಾದ, ಕಥೆಯುಳ್ಳ ರಂಜಿಸುವ ರಚನೆ.

ಸಂತೆಗೆ ಹೋದನು ಭೀಮಣ್ಣ
ಹಿಂಡಿಯ ಕೊಂಡನು ಹತ್ತು ಮಣ
ಕತ್ತೆಯ ಬೆನ್ನಿಗೆ ಹೇರಿಸಿದ
ಕುದುರೆಯ ಜೊತೆಯಲಿ ಸಾಗಿಸಿದ . . .
ನನ್ನಯ ಕಷ್ಟದಿ ಹಿಗ್ಗಿದ್ದಿ
ಬಂತೇ ಈಗಾದರು ಬುದ್ಧಿ ?
ನೀ ನನಗಿದ್ದರೆ ನಾ ನಿನಗೆ
ನೆನಪಿರಲೀ ನುಡಿ ನಮ್ಮೊಳಗೆ

ನಿರಾಡಂಬರ ರಚನೆಯಾಗಿಯೂ ಮಕ್ಕಳನ್ನ ನಲಿಸಿದ, ಹಿಡಿದಿಟ್ಟ ಯಶಸ್ಸು ಈ ಕವಿತೆಗೆ ಉಂಟು. ಹೀಗೆಯೇ ಅವರ ಹಲವಾರು ಕವಿತೆಗಳು ಮಕ್ಕಳಿಗೆ ತಲುಪುವಲ್ಲಿ ಸಾರ್ಥಕತೆ ಪಡೆದಿವೆ. ಅವರ 'ಚುಂ ಚುಂ ಅಳಿಲೆ' ಕವಿತೆ ವಸ್ತು, ಭಾಷೆ, ಲಯ ಎಲ್ಲ ನಿಟ್ಟಿನಲ್ಲೂ ಮಕ್ಕಳಿಗಾಗಿಯೇ ಹೇಳಿಮಾಡಿಸಿದಂತಿದೆ ಎಂದರೆ ತಪ್ಪಿಲ್ಲ.

ಅಳಿಲೆ ಅಳಿಲೆ ಚುಂ ಚುಂ ಅಳಿಲೆ
ಮರದಿಂದಿಳಿದು ಬಾ ಬಾ ಅಳಿಲೆ

ಎಂದು ಆಟವಾಗಿ ಕರೆಯುವ, 'ಸಕ್ಕರೆ ಬೆಲ್ಲ ಚಕ್ಕುಲಿ ಎಲ್ಲ' ಕೊಡುವೆನೆಂದು ಪ್ರೀತಿ ತೋರುವ, ಹಾಗೆಯೇ ಅಳಿಲಿಗೂ ಮರದಲ್ಲಿನ ಹಣ್ಣನ್ನ ತಂದು ಕೊಡು ಎಂದು ಕೇಳುವ, ಹಂಚಿ ತಿನುವ ಆಪ್ತತೆಯ ಮಾತುಗಳು ಇಲ್ಲಿವೆ.

ನೀ ನನಗೊಂದು ಕೊಡು ಬಾ ತಂದು
ಹಂಚುತ ತಿನಲು ರುಚಿಯದು ಅಳಿಲು

ಅವರ 'ಹೂ ಕೊಯ್ಯುವ ಹಾಡು' ಕುಣಿತಕ್ಕೂ ಆಗುವುದಾಗಿದ್ದು, ಎಲ್ಲರನ್ನೊಂದು ಗೂಡಿಸುವ, ಉತ್ಸಾಹ ತುಂಬಿದ ಭಾವಗಳನ್ನೊಳಗೊಂಡ ಹಾಡಾಗಿದೆ.

ಗಿರಿಜಾ ಜಲಜಾ ವರದಾ ಕುಮುದಾ
ಬನ್ನಿರಿ ಸಖಿಯರೆ ಹೊರಡುವುದು
ರೋಸಿ ಲಿಲ್ಲಿ ಪಾತಿಮಳೆಲ್ಲಿ
ಆಡುತ ಹಾಡುತ ಹೋಗುವುದು

'ಹೂಗಳ ಕೊಯ್ದು ಮಾಲೆಯ ನೆಯ್ದು ಹಂಚುತಲೆಲ್ಲರು ಮುಡಿಯುವುದು' ಎಂದು ವಿಸ್ತರಿಸುತ್ತ, ಇನ್ನೂ ಹೆಚ್ಚಿನ ಸಂಗತಿಗಳಿಗಾಗಿ ತವಕಿಸುವುದು.

ಚಂದವು ಸುಮ ಸುಮ
ಗಂಧವು ಗಮಗಮ
ನಿರ್ಮಲ ಪರಿಮಳ ಹರಡುವುದು

ಪಂಜೆಯವರ ಹಾಗೆ ಕೈಯ್ಯಾರರು ಸುಂಟರ ಗಾಳಿಯ ಕುರಿತು ಸೊಗಸಾದ ಅಭಿವ್ಯಕ್ತಿಯ ಪದ್ಯವನ್ನೇ ರಚಿಸಿರುವುದಿದೆ. ಹಾಗೆ ನೋಡಿದರೆ ಪಂಜೆಯವರ ರಚನೆ ಮಕ್ಕಳನ್ನ ಮೀರಿ ಅನುಭವದ ಹಲವಾರು ಗಂಭೀರ ಪದರುಗಳಿಗೆ ಒಳಗಾಗುತ್ತ ಹೋಗುತ್ತದೆ. ಆದರೆ ಕೈಯ್ಯಾರರ ರಚನೆ ಆದಷ್ಟೂ ಮಕ್ಕಳ ನಡುವೆಯೇ ಸುಂಟರ ಗಾಳಿಯ ಆಟೋಟೋಪಗಳು ಮೂರ್ತರೂಪ ಪಡೆಯುವಲ್ಲಿ ರಮಿಸುತ್ತದೆ. ಒಂದಿಗೇ ಬದುಕುವ ಅಗತ್ಯದ ನೀತಿ ಹೇಳಲೂ ತವಕಿಸುತ್ತದೆ.

ಗರ್ವದಿ ನಿಂದಿಹ ಮನೆಯನು ಮರವನು
ಮುರಿಯುತಲಿದ್ದರು
ಬಾಗಿದ ಹುಲ್ಲನು ಮುಟ್ಟದೆ ಬಿಟ್ಟಿತು
ಹೇಳೈ ಗುಟ್ಟನು

ಹೆಚ್ಚು ಪರಿಚಿತವಾದ ಸಿ.ಫ. ಕಟ್ಟಿಮನಿ ಅವರ ಕಾಗೆಯನ್ನು ಮೋಸಗೊಳಿಸಿದ ನರಿಯ ಹಾಡಿನ ಪ್ರಸಂಗವನ್ನು ಕಯ್ಯಾರರೂ ಎತ್ತಿಕೊಂಡುದಿದೆ. ಹಾಗೆಯೇ ಅದಕ್ಕೊಂದಿಷ್ಟು ವಿಸ್ತಾರ ನೀಡುವಲ್ಲೂ ಅವರು ತೊಡಗಿಕೊಂಡುದಿದೆ. ನಾಡಿನ ಐಕ್ಯ, ಸಮಭಾವ, ಸಮೂಹ ಜೀವನದಂಥ ಮೌಲ್ಯಗಳನ್ನ ಅಗತ್ಯವಾಗಿ ಮಕ್ಕಳಿಗೆ ನೀಡಬೇಕೆನ್ನುವ ಆದರ್ಶದ ಹಿನ್ನೆಲೆಯಲ್ಲಿಯೇ ಅವರ ಕೃಷಿ ಕಾಣುತ್ತದೆ. 'ಬಿಳಿಯನ್ನು ಬಲು ಹಿಗ್ಗುತ ಹೆಮ್ಮೆಯ ಪಡಬೇಕೆ? ಕಪ್ಪಿನವರ ನಿಂದಿಸುವುದು ತಪ್ಪದು ತಿಳಿ ಜೋಕೆ!' ಎನ್ನುವಂಥ ಸಾಲುಗಳು ಸಹಜವಾದುವು. ಬದುಕಿನ ನೀತಿ, ಸಾರವಾದ ಜೀವನದ ಬಗೆ, ಗಾಂಧಿ ಜೀವನ ಮೌಲ್ಯಗಳನ್ನ ಸದಾ ಜಾಗ್ರತವಾಗಿ ಇಟ್ಟುಕೊಂಡುದು

ಮುಂತಾಗಿ ಗಂಭೀರ ಸರಕನ್ನೇ ವಿಶೇಷವಾಗಿ ಹೊಂದಿರುವ ಅವರ ರಚನೆಗಳು ಮಕ್ಕಳನ್ನು ಮುದಗೊಳಿಸುವ, ಆಟಕ್ಕೆ ಹಚ್ಚುವ, ನಕ್ಕು ನಗಿಸುವ ಸಾಮಗ್ರಿಯನ್ನೂ ಅಷ್ಟಿಷ್ಟಲ್ಲ ಒಳಗೊಂಡೇ ಇವೆ. ಮಕ್ಕಳ ಜಗತ್ತಿನಲ್ಲಿ ಕಯ್ಯಾರರಿಗೆ ಬಲು ಅಕ್ಕರೆ ಇದ್ದೇ ಇದೆ ಎನ್ನುವುದನ್ನ ಅವೆಲ್ಲ ಹೇಳೇ ಹೇಳುತ್ತವೆ.

ಗಟ್ಟದಚ್ಚು ಬೆಲ್ಲ ಕಿಟ್ಟ ಕಂಡು ಮೆಲ್ಲ
ಅತ್ತ ನೋಡಿ ಇತ್ತ ನೋಡಿ
ಕದ್ದು ತಿಂದ ಕಳ್ಳ

ಅಂಥ ಸಾಲುಗಳಿರುವ ಹಾಗೆಯೇ ಭಾವಗೀತೆಯ ಸುಮಧುರ ಒಡಲಿನಲ್ಲಿಯೇ ತಮ್ಮ ಕೃಷಿಯ ಹುಟ್ಟನ್ನು ಪಡೆದ ಕವಿಯಿಂದ ಮಕ್ಕಳ ಸಂದರ್ಭದಲ್ಲೂ

ನೀಲಾಕಾಶದ ಬಟ್ಟಲಿನೊಳಗೆ
ಬೆಣ್ಣೆಯ ಮುದ್ದೆಯ ತೇಲುವೆ ಮೇಗೆ
ಹಾಲಮಳೆಯೊ ಬೆಳದಿಂಗಳೊ ಜೇನೊ
ಅಮೃತವು ಸುರಿವುದು ನಿನ್ನಿಂದೇನೋ

ಎನ್ನುವಂಥ ಅಭಿವ್ಯಕ್ತಿಗಳೂ ಕಾಣಿಸಿಕೊಳ್ಳುತ್ತವೆ.

ಅಂಬಿಗಗೊಂದೇ ದೋಣಿಯ ಕಸುಬು
ಅವನಿಂದಲೆ ಹೊಳೆ ದಾಟುವುದು

ಎನ್ನುವ ಹೃದಯಸ್ಪರ್ಶಿ ಗೀತೆ ಅವರ ಹಿರಿ ಹೃದಯದ ಕವಿತೆಗಳ ನಡುವೆ ಆಪ್ಯಾಯಮಾನವಾಗಿದೆ. ಆ ಕವಿತೆಯಲ್ಲಿ ಕಾಣುವ

ದಾಟಿದ ಮುಂದೆ ಇಲ್ಲವೆ ನೆನಪು?
ದುಡ್ಡು ಕೊಡುತ ಕೈ ಮುಗಿಯುವುದು

ಅಂಥ ಸಾಲುಗಳು ಕವಿತೆಗೆ ಹೃದಯತ್ವವನ್ನು ನೀಡುವಲ್ಲಿ ಸಫಲವಾಗಿವೆ. ಪಾರತಂತ್ರದ ಸಮಯದಲ್ಲಿದ್ದು ದೇಶಾಭಿಮಾನದ ಗೀತೆಗಳನ್ನು ರಚಿಸಿದ ಕವಿ ತಮ್ಮೊಳಗಿಂದಲೇ ಅಕ್ಕರೆಯ ಮಾತುಗಳನ್ನ ಹರಿಬಿಟ್ಟಿದ್ದಾರೆ.

ನಮ್ಮ ದೇಶ ಭಾರತ ಹೇಳಿರೆಲ್ಲ ಹಿಗ್ಗುತ
ಜೇನು ಸುರಿವ ದೇಶವು ಹಾಲು ಹರಿವ ದೇಶವು
ಚಿನ್ನ ಬೆಳೆವ ನಾಡಿದು ರನ್ನ ಹೊಳೆವ ನಾಡಿದು

ಅಂತೆಲ್ಲ ಅಭಿಮಾನ ಉಕ್ಕಿ ಹಾಡುವ ದನಿ ನಾಡಿನ ಸೇವೆಯಲ್ಲಿ ಮುಕ್ತಾಯಗೊಳ್ಳುತ್ತದೆ.

ನಾವು ಮಕ್ಕಳಿವಳದು ತಾಯ ನೆನಪು ಮರೆಯೆವು
ನಾಡಸೇವೆ ಗೆಯ್ವೆವು

ಸೂಕ್ಷ್ಮವಾಗಿಯೇ ಪರರ ಕೈಯಲ್ಲಿದ್ದರೂ ಎಂದಿಗೂ ಈ ತಾಯಿ ನಮ್ಮವಳು ಎನ್ನುವುದನ್ನು ಹೇಳುತ್ತಾರೆ. ಮಕ್ಕಳ ನಡುವೆ ಒಬ್ಬ ತಿಳಿವಳಿಕೆ ಮೂಡಿಸುವ, ಒಳ್ಳೆಯ ಬದುಕಿಗೆ ಮಾರ್ಗದರ್ಶನ

ನೀಡುವ, ಕಾಳಜಿ ವಹಿಸುವ ಹಿರಿಯರಾಗಿ ಕೈಯ್ಯಾರರ ಬಾಲ ಸಾಹಿತ್ಯ ತನ್ನ ಅಸ್ತಿತ್ವ ತೋರಿಕೊಂಡಿತು ಎಂದರೆ ಅದು ಸರಿಯಾದೀತು ಎನಿಸುತ್ತದೆ. ವಿಮರ್ಶಕ ವಿ.ಗ. ನಾಯಕರು 'ನಮ್ಮ ಕವಿಗಳಲ್ಲಿ ಕೈಯ್ಯಾರರಂತೆ ದೊಡ್ಡ ಸಂಖ್ಯೆಯಲ್ಲಿ ಯಶಸ್ವೀ ಶಿಶುಗೀತಗಳನ್ನು ಬರೆದವರು ಕಡಿಮೆ; ಇಷ್ಟೊಂದು ವೈವಿಧ್ಯಮಯವಾಗಿ ಬರೆದವರು ಇನ್ನೂ ಕಡಿಮೆ. ಇವರಂತೆ ಭಾವೈಕ್ಯದತ್ತ ಒಲವು ತೋರಿ, ರಾಷ್ಟ್ರ ಪ್ರೇಮದಿಂದ ಮೈದುಂಬಿಕೊಂಡು, ಒಟ್ಟೊಟ್ಟಿಗೆ ನಾಡು–ನುಡಿಯ ಮೇಲಿನ ಅಭಿಮಾನದಿಂದ ಗೀತ ರಚಿಸಿದವರು ಮತ್ತೂ ಕಡಿಮೆ. ಇವರಂತೆ ಹೆಚ್ಚಿನ ಶಿಶುಗೀತಗಳಲ್ಲೂ ಧ್ವನಿ ಶಕ್ತಿ ತುಂಬಿ ಕೊಟ್ಟವರು ಇಲ್ಲವೇ ಇಲ್ಲವೆಂಬಷ್ಟು ಕಡಿಮೆ' ಎಂದಿರುವುದನ್ನ ಇಲ್ಲಿ ಉಲ್ಲೇಖಿಸಬಹುದು.

ಎಂ.ವಿ. ಸೀತಾರಾಮಯ್ಯ

'ಕೀರ್ತಿ, ಹಣ ಸಂಪಾದನೆ, ಪ್ರಶಂಸೆ ಇವು ಯಾವುದನ್ನೂ ಬಯಸದೆ, ಕೇವಲ ಆತ್ಮಸಂತೋಷಕ್ಕಾಗಿ ಕೃತಿ ರಚನೆ ಮಾಡಿದೆ' ಎಂದಿರುವ ಎಂ.ವಿ. ಸೀತಾರಾಮಯ್ಯ ಹಿರಿಯ ವಿದ್ವಾಂಸರಾಗಿ ಪ್ರಬುದ್ಧ ಸಾಹಿತ್ಯದಲ್ಲಿ ಸಾಕಷ್ಟು ಕೆಲಸ ಮಾಡಿದಂತೆ ಮಕ್ಕಳ ಸಾಹಿತ್ಯ ರಂಗದಲ್ಲಿ ಆಸಕ್ತಿ ತೋರಿದರು. ಸಾಕಷ್ಟು ಬರೆದರೂ ಕೂಡ. 'ರಾಘವ' ಕಾವ್ಯ ನಾಮದೊಂದಿಗೆ ಹೆಸರಾಗಿರುವ ಸೀತಾರಾಮಯ್ಯ ನುರಿತ ಚಿತ್ರಕಾರರೂ, ಸಂಗೀತ ಕಲಾವಿದರೂ ಕೂಡ. ಮೂರು ಸಂಕಲನಗಳು ಹಾಗೂ ಒಂದು ದೀರ್ಘ ಪದ್ಯಕಥೆ ಬರೆಯುವುದಲ್ಲದೆ ನಾಟಕಗಳನ್ನೂ ಬರೆದರು. ಜೀವನ ಚರಿತ್ರೆಗಳನ್ನೂ, ವ್ಯಕ್ತಿ ಚಿತ್ರಣಗಳನ್ನೂ ಬರೆದರು. ಇಷ್ಟೇ ಅಲ್ಲ 'ರಾಬಿನ್ಸನ್ ಕ್ರೂಸೊ'ಅನ್ನು ಕನ್ನಡಕ್ಕೆ ತಂದರು. ದಕ್ಷಿಣ ಭಾಷಾ ಸಂಸ್ಥೆಯ ಮಕ್ಕಳ ಸಾಹಿತ್ಯದ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು ಅವರು.

ಅವರ ಮಕ್ಕಳ ಕಾವ್ಯದ ವಿಶೇಷತೆಯೆಂದರೆ ಹಾಸ್ಯ, ರಂಜನೆ, ಕುಣಿತ ಮಣಿತಕ್ಕೆ ಆಗುವ ವಸ್ತುವನ್ನ, ಲಯಗಳನ್ನ ಹೊಂದಿ ತಟಕ್ಕನೆ ಆಕರ್ಷಿಸುವುದು. ಅವರು ಮಕ್ಕಳ ಸಾಹಿತ್ಯದಲ್ಲಿ ಚೆನ್ನಾಗಿ ಲೆಕ್ಕ ಹಾಕಿಕೊಂಡೇ ಇಳಿದವರು ಎನ್ನಬಹುದು. ಗಂಭೀರ ಸಾಹಿತ್ಯದ ಲೇಖಕರಾಗಿ ಮಕ್ಕಳ ಈ ಹಾಡಿ ಕುಣಿವ ಲೋಕ ಸೃಷ್ಟಿಸುವ ಬಗೆ ನಿಜಕ್ಕೂ ಅವರೊಳಗಿನ ಮಕ್ಕಳ ಲೋಕವನ್ನ ತೆರೆದು ತೋರುತ್ತದೆ ಎನ್ನಲಡ್ಡಿಯಿಲ್ಲ. ತಮ್ಮ ಸುತ್ತಲಿನ ರಚನೆಗಳನ್ನೆಲ್ಲ ಗಮನಿಸಿಕೊಂಡು, ಅಷ್ಟಲ್ಲದೆ ಇಂಗ್ಲಿಷಿನ ಅಭ್ಯಾಸವನ್ನೂ ಮಾಡಿಕೊಂಡು ಅವರು ಕೃಷಿಗೈದರು ಎನ್ನಬಹುದು.

ಬಾತು ಕೋಳಿ ಪೀಪಿ ಹಿಡಿದು
ಪೀ ಎಂದಿತು–ಪೀ ಪೀ ಎಂದಿತು
ಬಾತುಮರಿ ಕುಣಿದು ಕುಣಿದು
ತೈ ಎಂದಿತು–ತೈ ತೈ ಎಂದಿತು
ಪೀ ಪಿ ಪಿ ಪೀ ಪಿ ಪೀ ಪಿ
ಪೀ–ಪೀ–ಪೀ
ತೈ ತಕ್ಕ ತೈ ತಕ್ಕ
ತೈ–ತೈ–ತೈ

ಅಂಥ ಕಣಿಯುವ ಲಯಗಳ ರಚನೆಗಳು ಪುಟ್ಟ ಮಕ್ಕಳು ಗ್ರಹಿಸುವ, ಆಹ್ಲಾದದಲ್ಲಿ ಮುಳುಗುವ, ಆಟಕ್ಕೆಳಸುವ ನಾನಾ ಬಗೆಯ ಹಗುರದ ವಿಷಯಗಳನ್ನ ಆರಿಸಿಕೊಂಡರು.

ಕಿಟ್ಟು ಪುಟ್ಟು ಒಟ್ಟಿಗೆ ಸರ್‍ರನೆ
ಬೀದಿಯ ಬಚ್ಚಲ ಹಾರಿದರು ;
ಒಬ್ಬನು ಎಡವಲು ಇಬ್ಬರು ಜರ್‍ರನೆ
ಬಚ್ಚಲ ಕೊಚ್ಚೆಗೆ ಜಾರಿದರು
ಅವರಿಗೆ ಮೈ ಕೈ ಕೆಸರಾಯ್ತು !
ತುಂಟರು ಎಂದು ಹೆಸರಾಯ್ತು !

ಈ ಬಗೆಯ ನಗಿಸುವ, ಚಟುವಟಿಕೆ ತುಂಬುವ ಪುಟಾಣಿ ಪದ್ಯಗಳನ್ನ ಹಲವಾರು ಬರೆದಿದ್ದಾರೆ ಅವರು. 'ಕಳ್ಳ ಸಿದ್ದ', 'ಘಟಿಂಗ ರಂಗ', 'ನಂ ಚಿಕ್ಕ', 'ಕುರೋ ಕುರೋ ನಾಯಿಮರಿ' ಹೀಗೆ ಒಂದಾದಮೇಲೊಂದು ಹೆಸರಿಸುತ್ತ ಹೋಗಬಹುದು. 'ಢುಂ ಢುಂ ಡೋಲು !' ಕವಿತೆಯಲ್ಲಿ ಹುಡುಗಿ ಹುಡುಗರು ಒಬ್ಬರನ್ನೊಬ್ಬರು ಮೂದಲಿಸುತ್ತ ಸಂತಸ ಪಡುವುದು ಸೊಗಸಾಗಿದೆ.

ಹುಡುಗಿ :
ಜುಟ್ಟು ಹೋಯ್ತು ಕ್ರಾಪು ಬಂತು
ಢುಂ ಢುಂ ಢುಂ
ದಟ್ಟಿ ಹೋಯತ್ತು ಪ್ಯಾಂಟು ಬಂತು
ಢುಂ ಢುಂ ಢುಂ

ಹುಡುಗ :
ಅರಿಸಿನ ಹೋಯ್ತು ಪೌಡರ್ ಬಂತು
ಢುಂ ಢುಂ ಢುಂ
ಕರಿಮಣಿ ಹೋಯ್ತು ನೆಕ್ಲೆಸ್ ಬಂತು
ಢುಂ ಢುಂ ಢುಂ

ಎಂದು ಸಾಗುವ ಪದ್ಯ ಮಕ್ಕಳಲ್ಲಿ ಆಟಕ್ಕೆಳಸುವ, ಆಮೋದದಲ್ಲಿ ಮುಳುಗಿಸುವ ಉದ್ದೇಶ ಹೊಂದಿದುದೇ. 'ಒಂದರಿಂದ ಹತ್ತು ಪೆಪ್ಪರ್‌ಮೆಂಟ್ ಜಗತ್ತು' ಎಂದು ಒಂದು ರಚನೆಯಲ್ಲಿ ಹೇಳಿರುವಂತೆ ಈ ಪೆಪ್ಪರಮೆಂಟ್ ಜಗತ್ತಿಗೆ ಬೇಕಾದ ಬಗೆಬಗೆಯ ಸರಕನ್ನೆಲ್ಲ ಎಂ.ವಿ.ಸೀ ಮುದದಿಂದಲೇ ನೀಡಿದ್ದಾರೆ. 'ಹೂವಾಡಗಿತ್ತಿ'(೧೯೪೫) ಸಂಕಲನ ನೀಡಿದ ನಂತರ ಹದಿಮೂರು ವರುಷಗಳ ನಂತರ 'ಹಾವಾಡಿಗ' ಸಂಕಲನ ಬಂದಾಗಲೂ ಈ ತುಂಟತನದ, ನಗಿಸುವ ಸಾಮಗ್ರಿ ಯಥೇಚ್ಛವಾಗಿಯೇ ಮುಂದುವರಿದುದನ್ನ ನೋಡುತ್ತೇವೆ. ಅದರೊಂದಿಗೆ ನವೋದಯದ ಪ್ರಭಾವದಲ್ಲಿ ನವಿರು, ಗಾಂಭೀರ್ಯವುಳ್ಳ ಪದ್ಯಗಳನ್ನೂ ಮಕ್ಕಳ ಮುಂದಿರಿಸುವುದನ್ನೂ ನೋಡುತ್ತೇವೆ.

ಛೂ ಮಂತ್ರಂ ಗಾಳಿ ! ಛೂ ಮಂತ್ರಂ ಗಾಳಿ
ಚಲೇ ಜಾವ್, ಚಲೇ ಜಾವ್ !

ಹ್ರಾಂ ಹ್ರೀಂ ಹ್ರೂಂ ಹ್ರೋಂ
ಚಲೇ ಜಾವ್, ಚಲೇ ಜಾವ್ !

ಮೈ ಕೈ ಸೊಂಟದ ನೋವು
ಹೊಟ್ಟೆ ಬೆನ್ನಿನ ಬಾವು
ಕಾಲು ತೊಡೆಗಳ ಜೋವು
ಛೂ ಮಂತ್ರಂ ಗಾಳೀ ! ಚಲೇ ಜಾವ್ !

'ಯಾಕೆ ಸ್ಕೂಲಿಗೆ ಹೊತ್ತಾಯ್ತು ?' ಎನ್ನುವ ಪದ್ಯ ಬಲೆ ಹಾಸ್ಯ ಹೊಂದಿದ್ದು, ಕಾರಿನ ಬಗೆಬಗೆಯ ಹೆಸರುಗಳನ್ನೆಲ್ಲ ಉದ್ಧರಿಸುತ್ತ ಸಾಗುತ್ತದೆ.

ಭರ್‌ಭರ್ ಭರ್‌ಭರ್ ಭರ್‍ರ್ ರಂತ
ಬಂದವು ಕಾರ್‌ಮೇಲ್ ಕಾರ್
ಫೋರ್ಡ್ ಫಿಯಟ್ ಬ್ಯೂಕ್ ಸ್ಟೂಡಿಬೇಕರ್
ಬೇಬಿ ಆಸ್ಟಿನ್ ಮಾರಿಸ್ ಮೈನರ್.
ಒಂದರ ಹಿಂದೊಂದ್ ಸರ್‌ರ್‌ರ್ ರಂತ
ಬಂದವು: ಇಲ್ಲ ಪೋಲೀಸ್‌ನೋರ್
ರಸ್ತೆ ಒಳ್ಳೆ ನುಣ್ಣನೆ ಟಾರ್,
ಅತ್ಲಾಗಿಂದ ಇತ್ಲಾಗ್ಗ್ ಹಾರ್–
ಬಂದೇ ಬಂದ ಹಳ್ಳೀಗಮಾರ್ !
ಬಾಳೇಹಣ್ಣಿನ ಸಿಪ್ಪೆ ಜಾರ್–
ಬಿದ್ದೇ ಬಿಟ್ಟ, ನಿಂತುವು ಕಾರ್

ಆಗ ಬಂದ್ರು ಪೋಲೀಸ್‌ನೋರ್,
ಗುಂಪು ಸೇರಿತು ಜನ ನೂರಾರ್,
ನಾನೂ ನೋಡ್ತಾ ನಿಂತೆ, ಸಾರ್.
ಅದಕ್ ಸ್ಕೂಲಿಗೆ ಹೊತ್ತಾಯ್ತ್, ಸಾರ್

ಆಡುಭಾಷೆಯನ್ನ ಸಮರ್ಪಕವಾಗಿ ಬಳಸಿಕೊಂಡು ಒಳ್ಳೇ ಹಾಸ್ಯ ಚಟಾಕಿ ಎಬ್ಬಿಸುವ ಹಾಗೆ ರಚಿಸಿರುವ ಸೀತಾರಾಮಯ್ಯ ಅವರಲ್ಲಿ ಈ ಬಗೆಯ ಮಕ್ಕಳಲ್ಲಿ ಒಂದಾಗಿ ಹೋಗುವ ಸರಕುಗಳು ನಾನಾ ಬಗೆಯಲ್ಲಿ ಅಡಗಿದ್ದವು ಎನ್ನಬಹುದು. ಅವರ 'ಹಲ್ಲಿ' ಎನ್ನುವ ಕವಿತೆಯಂತೂ ಮಕ್ಕಳ ಮುಂದೆ ಸ್ವಾರಸ್ಯಕರವಾಗಿ ಪ್ರಸ್ತುತಪಡಿಸುವ ಎಲ್ಲ ಸೊಗಸುಗಳನ್ನೂ ಇಟ್ಟುಕೊಂಡಿದೆ. ಒಳ್ಳೇ ಹಾಸ್ಯವನ್ನು ಹುಟ್ಟಿಸುವ ಇದು ತಡೆ ಇಲ್ಲದೆ ಸರ ಸರ ಸಾಗುತ್ತದೆ.

ಇಲ್ಲಿ ಅಲ್ಲಿ ಎಲ್ಲೆಲ್ಲೂ
ಹತ್ತಿ ಹರಿಜದು ಗೋಡೆ ಮೇಲೆ
ಹುಡುಕಿ ಮನೆಯ ಮೂಲೆ ಮೂಲೆ
ಹೊಂಚು ಹಾಕಿ ಅಲುಗದೆ,

ಹತ್ತಿರಕ್ಕರ ಹಾರಿ ಬಂದ
ಹುಳು ಹುಪ್ಪಟೆಗಳನು ಹಿಡಿದು
ಗಬಕ್ ಎಂದು ನುಂಗಿಬಿಟ್ಟು

ಅಂತೆಲ್ಲ ಸಾಗುವ ರಚನೆಯನ್ನು ನೋಡುವಾಗ ಅವರು ಮಕ್ಕಳ ನಡುವೆ ಕವಿತೆಯನ್ನ ಹೇಗೆಲ್ಲ ಸೊಗಸಿನ ಚಟುವಟಿಕೆಯಾಗಿ ಇಡಲುನೋಡಿದರು ಎನ್ನುವುದು ಗಮನಕ್ಕೆ ಬರುತ್ತದೆ. ಮಕ್ಕಳ ಬಾಯಲ್ಲಿ ಆಗಲೆ ಇದ್ದ ಆಟದ ಲಯಗಳನ್ನೂ ಅವರು ಸಹಜವಾಗಿಯೇ ಬಳಸಿದರು. 'ಸಾಕಬೇಕು ಹಸು ಸಾಕಬೇಕು' ಹೀಗೆಯೇ ಸರಪಳಿಯಂತೆ ಸರ ಸರ ಸಾಗುವ ಆಟದ್ದೇ ಲಯ. 'ಮಲ್ಲಿಯ ಮಲ್ಲಿಗೆ' ಎನ್ನುವ ಕವಿತೆ, 'ಹಾಡದ ಹಕ್ಕಿ', 'ಬೀದಿ ಮಾರಿ', 'ಗುರುವಚನ ಗೀತ' ಮುಂತಾದುವೆಲ್ಲ ಈ ಬಗೆಯ ಲಯಗಳ ನಾನಾ ಬಗೆಯ ಬಳಕೆಯಿಂದ ಸೆಳೆಯುತ್ತವೆ. ಮಕ್ಕಳಲ್ಲಿ ರುಚಿಯನ್ನ ಹುಟ್ಟು ಹಾಕುವಲ್ಲಿ ಖಂಡಿತ ಕೆಲಸ ಮಾಡುತ್ತವೆ. ಇಂಥ ಆಟದ ಲಯಗಳ ರಚನೆಗಳ ಜೊತೆಗೇ

ಬಂದಿತಿದಿಗೋ ಮುಂಗಾರ ಮಳೆ
ಜಾಗರವಾಡೆಲೆ ನವಿಲೆ !
ಬಣ್ಣದ ಗರಿಗಳ ಕೆದರಿ
ಕಣ್ಣು ಸಾವಿರವ ತೋರಿ
ಗಂಡು ಗಾಡಿಯನು ಬೀರಿ
ಕುಣಿಕುಣಿದಾಡೆಲೆ ನವಿಲೆ !
ಬಂದಿತಿಗೋ ಬಂಗಾರ ಮಳೆ
ನಲಿನಲಿದಾಡೆಲೆ ನವಿಲೆ !

ಎನ್ನುವ ರಮ್ಯಭಾವದ ರಚನೆಗಳನ್ನೂ ಅಷ್ಟೇ ಆಸಕ್ತಿಯಿಂದ ಬರೆಯುತ್ತಾರೆ. 'ಬಾರಯ್ಯ ಬಾ ಗಾಳಿ' ಕವಿತೆ ಗಾಳಿಯ ಹಾಗೆಯೇ ಸುಳಿದು ಸುಳಿದು ಬರುವ ನಡಿಗೆಯನ್ನ ಹೊಂದಿದ ಹಾಗಿದೆ, ಸರಸರನೆ ಹರಿಯುತ್ತದೆ . . .

ಮೆಲುಮೆಲನೆ ನಿಲುನಿಲುತ ನಡೆದು ಬಹ ಮೆಲುಗಾಳಿ
ಸುಳಿಸುಳಿದು ಸುತ್ತಾಡಿ ಅವಿತು ಬಹ ಸುಳಿಗಾಳಿ
ತೆಮಕಣಿಂ ತಂಪುಕಂಪುಗಳ ತಹ ತೆಂಗಾಳಿ
ತರಗೆಲೆಯಮೇಲೆ ತಿರ್ರತಿರುಗಿಸುವ ತಂಗಾಳಿ
ಮರಗಿಡವನುರಿಪ ಕಿಚ್ಚಿನ ಕೆಳೆಯ ನೆರೆಗಾಳಿ
ಸುಯ್ಯೆಂದು ಬಯಲೆಡೆಯ ಸೀಳಿ ಬಹ ಸುಯ್ಗಾಳಿ
ಹೊಯ್ಯೆಂದು ಮಳೆಜುಟ್ಟನೆಳೆದು ತಹ ಹೊಯ್ಗಾಳಿ

ಅಂತೆಲ್ಲ ಸಾಗುವ ಗಾಳಿಯ ನಾನಾ ಅವತಾರಗಳನ್ನ ಸರಸವಾಗಿಯೇ ಮುಂದಿಡುತ್ತ 'ಇಳೆಯ ನಲಿಸುವ ಕಾಡಿಸುವ ನೀನು ಬಲು ತುಂಟ' ಎಂದು ಅರ್ಥಪೂರ್ಣವಾಗಿಯೇ ಸಮನಿಸುವ ರಚನೆ ಪಂಜೆಯವರ ತೆಂಕಣ ಗಾಳಿಗೆ ಹೋಲಿಸಿದರೆ ಮಕ್ಕಳ ನಡುವೆಯೇ ತನ್ನೆಲ್ಲ ಸೊಗಸನ್ನು ಇರಿಸುವಲ್ಲಿ ರಮಿಸುತ್ತದೆ ಎನ್ನಬಹುದು. ಇಂಗ್ಲಿಷಿನಲ್ಲಿ ಸಾಕಷ್ಟು ಪ್ರಚುರಕ್ಕೆ ಬಂದ ದೃಶ್ಯ

ಕಾವ್ಯವನ್ನೂ ಎಂ.ವಿ ಸೀತಾರಾಮಯ್ಯ ಬಳಸಿಕೊಳ್ಳಲು ನೋಡಿರುವುದು ಗಮನಾರ್ಹ ಸಂಗತಿ. ಲುಯಿ ಕೆರೋಲ್ ವಿಶೇಷವಾಗಿಯೇ ಬಳಸಿಕೊಂಡ ಈ ಚಿತ್ರಕ ಬರವಣಿಗೆ ಮುಂದೆ ೨೦ನೆಯ ಶತಮಾನದ ಮಧ್ಯಭಾಗದಲ್ಲಿ ಸಾಕಷ್ಟು ಗಮನ ಸೆಳೆಯಿತು. ಸೀತಾರಾಮಯ್ಯ ತಮ್ಮ ಹಲವು ಕವಿತೆಗಳಿಗೆ ಇದನ್ನ ಬಳಸಿಕೊಂಡು ರಂಜಿಸಲು ನೋಡಿದ್ದಾರೆ. 'ಇಲಿಯ ಬಲ' ಕವಿತೆಗೆ ಬಳಸಿದ ಬಗೆ ಸೊಗಸಾಗಿದೆ. 'ಹಾವು', 'ಗಂಟೆ', ಕಿರೀಟ ಧರಿಸುವ ದೊರೆಗಳು ಇಲ್ಲ ಎನ್ನುವ ಕವಿತೆ, 'ಬೃಂದಾವನ' ಕವಿತೆ ಇವೆಲ್ಲ ಈ ನಿಟ್ಟಿನಲ್ಲಿ ಗಮನಸೆಳೆಯುತ್ತವೆ. ಕನ್ನಡದಲ್ಲಿ ಬಹುಶಃ ಹೀಗೆ ದೃಶ್ಯ ಕಾವ್ಯ ರಚನೆ ಮಾಡಿದುದು ಎಂ.ವಿ ಒಬ್ಬರೆ ಎನಿಸುತ್ತದೆ, ಬೇರೆಲ್ಲಿಯೂ ಕಂಡಂತಿಲ್ಲ. ಅವರು ಚಿತ್ರಕಾರರೂ ಆಗಿದ್ದುದರಿಂದ ಈ ಕಡೆಗೆ ಲಕ್ಷ ಹರಿದಿರಬೇಕು.

ವರ್ಡ್ಸ್‌ವರ್ತ್ ಕವಿಯ ಒಂದು ಪದ್ಯವನ್ನು ಕನ್ನಡದಲ್ಲಿಯೇ ಅರಳಿದ ಸ್ವತಂತ್ರ ಪದ್ಯವಾಗಿ ರಚಿಸಿದ್ದಾರೆ ಎಂ.ವಿ. ಅಂಥ ಗಂಭೀರ ವಸ್ತುವಿನ ನಿರೂಪಣೆಗೆ ಬೇಕಾದ ಭಾಷೆಯನ್ನೇ, ನವೋದಯದಲ್ಲಿ ಆಗ ಸಿದ್ಧವಾಗುತ್ತಿದ್ದ ನಡುಗನ್ನಡ ಬೆರೆತ ತಕ್ಕುದಾದ ಪರಿಕರವಾಗಿ ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ. ಹಿಗೆಯೇ 'ದಾದಿ ರನ್ನೆ' ಎನ್ನುವ ದೀರ್ಘವಾದ ರಚನೆಯನ್ನೂ ಅಷ್ಟೇ ಚಿತ್ರಕಶಕ್ತಿಯಿಂದ ಮುಂದಿಟ್ಟಿದ್ದಾರೆ. ಪುಟಾಣಿಗಳಿಂದ ಹಿಡಿದು ಬೆಳೆಯುತ್ತಿರುವ ಮಕ್ಕಳ ವಿಭಿನ್ನ ಭಾವಕೋಶಗಳನ್ನು ಪುಷ್ಟಿಗೊಳಿಸುವ ಎಲ್ಲ ಬಗೆಯ ಚಿಂತನೆಯನ್ನೂ ಅವರು ಮಾಡಿದರು ಎಂದರೆ ತಪ್ಪಿಲ್ಲ.

ಸಿದ್ದಯ್ಯ ಪುರಾಣಿಕ

ಪ್ರಬುದ್ಧರಿಗಾಗಿ ವಿಶೇಷವಾಗಿಯೇ ಬರೆದ ಸಿದ್ದಯ್ಯ ಪುರಾಣಿಕರು ಮಕ್ಕಳಿಗೂ ಬರೆದು ಹೆಸರಾದುದೀಗ ಇತಿಹಾಸ. ಅವರ 'ಅಜ್ಜನ ಕೋಲಿದು ನನ್ನಯ ಕುದುರೆ' ಕವಿತೆಯನ್ನು ಕೇಳದವರಿಲ್ಲ. ಅವರ ವಿದ್ಯಾ ಗುರುಗಳಾದ ತವಗ ಭೀಮಸೇನರಾಯರು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಅದೇ ಆಗ ಪ್ರಾರಂಭವಾದ ಕನ್ನಡ ಮಾಧ್ಯಮದ ಪಠ್ಯಪುಸ್ತಕಕ್ಕಾಗಿ ಬರೆದುಕೊಡಲು ಕೇಳಿದಾಗ, ಆ ಕೂಡಲೆ ಬರೆದುಕೊಟ್ಟ ಕವಿತೆ. ಆದರೆ ಅಷ್ಟೇ ಯಶಸ್ವೀ ಕವಿತೆ. ಅದರಲ್ಲಿನ ವಸ್ತುವೇ ತೀರ ಸಹಜವಾದ, ಮಕ್ಕಳದ್ದೇ ಆದುದು. 'ಅಜ್ಜನ ಕೋಲು' ಎನ್ನುವುದೇ ವಿಶಿಷ್ಟವಾದ ಆಶಯ. ಮಕ್ಕಳ ಮನಸ್ಸನ್ನ ಹಿಡಿದು ಬಿಡುವಂಥದು. ಕೋಲು ಕುದುರೆಯನ್ನು ಹಿಂದಿನ ತಲೆಮಾರುಗಳಲ್ಲಿ ಆಡದೆ ಇರುವ ಮಕ್ಕಳೇ ವಿರಳ ಎನ್ನುವಂತಿತ್ತು. ಪದ್ಯದಲ್ಲಿ ಪ್ರತಿಸಾಲಿಗೂ 'ಕುದುರೆ' ಎಂಬುದು ಅನುರಣಿತವಾಗುತ್ತ ಮಕ್ಕಳಿಗೆ ಸುಲಭವಾಗಿಯೂ, ಪದ್ಯದ ಅರ್ಥವಿಸ್ತಾರಕ್ಕೆ ಅಗತ್ಯವಾಗಿಯೂ ಸಹಜವಾಗಿ ಬಳಕೆಯಾಗಿಬಿಡುತ್ತದೆ. 'ಅರಸು ಮಕ್ಕಳಿಗು ಸಿಕ್ಕದ ಕುದುರೆ, ನನಗೇ ಸಿಕ್ಕಿದೆ ನನ್ನೀ ಕುದುರೆ' ಅಂಥ ತುಸು ಭಾರದ ಸಂಗತಿಗಳನ್ನ ಈ ಪದ್ಯ ಆಕರ್ಷಿಸುವ ವಯೋಮಾನದ ಮಕ್ಕಳ ದೃಷ್ಟಿಯಲ್ಲಿ ಅನಿಸಿದರೂ ಪುರಾಣಿಕರು ಸಮರ್ಥವಾಗಿ ಮಕ್ಕಳಿಗಾಗಿ ನೀಡಬಲ್ಲರು ಎನ್ನುವುದನ್ನು ಮೊದಲ ಪ್ರಯತ್ನದಲ್ಲಿಯೇ ತೋರಿಸಿದ್ದರು. ಅಲ್ಲಿಂದಾಚೆಗೆ ಅವರು ಒಟ್ಟು ಐದು ಸಂಕಲನಗಳನ್ನು ನೀಡಿದ್ದಾರೆ. 'ನಾನೇ ಇದುವರೆಗೆ ಬರೆದಿರುವ, ಇನ್ನೂ ಬರೆಯಲಿರುವ ಮಕ್ಕಳ ಪದ್ಯಗಳ ಸಮಗ್ರ ಸಂಪುಟವೊಂದನ್ನು ಪ್ರಕಟಿಸುವ ಅಪೇಕ್ಷೆ ನನಗಿದೆ' ಎಂದು ಕೊನೆಯ ಪದ್ಯ ಸಂಕಲನದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದರು.

ಮೊದಲಿನಿಂದಲೇ ಬೇರೆ ಬೇರೆ ವಯೋಮಾನದ ಮಕ್ಕಳಿಗೆ ಅವರು ವಿಭಿನ್ನವಾಗಿ

ಬರೆಯುತ್ತ ಬಂದವರು. ಅಜ್ಜನ ಕೋಲು, ಮಂಗ, ಕರಡಿ ಕುಣಿಸುವವರು, ಚಂದಿರ, ಮಿಠಾಯಿ, ಗುಬ್ಬಚ್ಚಿ, ಹಬ್ಬ ಹುಣ್ಣಿಮೆಗಳು, ಮಳೆ, ಅಜ್ಜಿಯ ಕತೆಗಳು ಇವೇ ಮುಂತಾಗಿ ತಮ್ಮ ಬಾಲ್ಯದ ಪರಿಸರವನ್ನೇ ಆಧರಿಸಿ ಬರೆಯುತ್ತ ಬರುವುದರ ಜೊತೆಗೆ ಜನರ ಸ್ವಭಾವಗಳು, ರೀತಿನಡಾವಳಿಗಳು, ದೇಶಾಭಿಮಾನ ಮುಂತಾದುವೂ ಮಕ್ಕಳ ಮುಂದಿಡಲು ಬಳಸಿಕೊಂಡ ವಸ್ತು ವಿಶೇಷಗಳಾಗಿವೆ. ನವೋದಯದ ಪರಂಪರೆಯಲ್ಲಿ ಬರೆಯತೊಡಗಿದ ಈ ಕವಿ ಮಕ್ಕಳ ಪದ್ಯಗಳಲ್ಲೂ ಅದರ ಛಾಯೆಯನ್ನು ತಂದುಕೊಂಡುದು ಸಹಜ. ಅನೇಕ ಕವಿತೆಗಳು ನವೋದಯದ ಭಾವಗೀತಗಳ ಗುಂಪಿಗೆ ಸಹಜವಾಗಿಯೇ ಸೇರಿಬಿಡುತ್ತವೆ. ಪುರಾಣಿಕರ ಸುತ್ತ ಆಗಲೇ ಮಕ್ಕಳ ಕವಿತೆಯ ಪ್ರಯತ್ನಗಳು ಹಲವಾರು ಬಗೆಯಲ್ಲಿ ನಡೆದು ಒಂದಿಷ್ಟೆಲ್ಲ ನಿಖರವಾದ ದಾರಿ ಕಾಣಿಸಿಕೊಂಡೇ ಆಗಿತ್ತು ಎನ್ನಬಹುದು. ಉತ್ತರ ಕರ್ನಾಟಕದ ಭಾಷೆ, ಪರಿಸರ, ಪ್ರಾದೇಶಿಕ ಸೊಗಡೂ ಸೇರಿ ಮಕ್ಕಳ ಸಾಹಿತ್ಯ ಕಾಣಿಸಿಕೊಂಡೂ ಇತ್ತು. ತಮ್ಮ ಅನುಭವದ, ಆಸಕ್ತಿಯ ಹರಹನ್ನು ತಮ್ಮ ಮಕ್ಕಳ ಕವಿತೆಗಳಿಗೆ ಅವರು ತಂದುಕೊಂಡರು.

'ತುಪ್ಪಾ ರೊಟ್ಟಿ ಗೇಗೆ' ಮೊದಲ ಸಂಕಲನದ ಇದೇ ಶೀರ್ಷಿಕೆಯ ಕವಿತೆಯೇ ಅಜ್ಜನ ಕೋಲಿನ ಹಾಗೆ ಖುಷಿ ಕೊಡುವ ಕವಿತೆ. ಮಕ್ಕಳನ್ನ ಯಾವಾಗಲೂ ಸೆಳೆಯುವ, ನೋಡುತ್ತ ನಿಲ್ಲುವಂತೆ ಮಾಡುವ ಮಂಗನ ಕ್ರಿಯೆಗಳೆಲ್ಲ ಕವಿತೆಯಲ್ಲಿ ಮೂಡಿವೆ. 'ಹಾರುತ ಹಲ್ಲನು ಕಿರಿವವನೆ, ಕಿರಿಯುತ ಮೈಯನು ಕೆರೆವವನೆ' ಎಂದೆಲ್ಲ ಮಂಗನ ಸ್ವಭಾವವನ್ನು ಚಿತ್ರವತ್ತಾದ ಶಬ್ದಗಳಲ್ಲಿ ಹಿಡಿದಿಡುತ್ತ ಸಾಗುವ ಕವಿತೆ

> ಟಣ್ಣನೆ ಹಾರುತ ಬರುವವನೆ
> ತಿನಿಸು ಕಸಿಯುತ ಓಡುವವನೆ
> ತೋರಿಸಿ ಅಣಕಿಸಿ ತಿನ್ನುವವನೆ
> ಉಳಿದುದ ಮೋರೆಗೆ ಎಸೆಯುವವನೆ

ಎಂದು ಕೊನೆಯಾಗುತ್ತ ಮಕ್ಕಳ ಆಸಕ್ತಿಯ ವಾತಾವರಣದಲ್ಲಿ ಸಹಜವಾಗಿಯೇ ವಿರಮಿಸುತ್ತದೆ. ಮಕ್ಕಳಲ್ಲಿ ಬಳಕೆಯಲ್ಲಿರುವ 'ತುಪ್ಪಾ ರೊಟ್ಟಿ ಗೇ ಗೇ' ಎಂದು ಶೀರ್ಷಿಕೆಗೆ ಬಳಸಿಕೊಂಡುದು ಇನ್ನೂ ಜೀವ ತುಂಬಿದೆ. ಅಜ್ಜಿಯ ಕತೆಯ ಕುರಿತಾದ ಇನ್ನೊಂದು ಸೊಗಸಾದ ಕವಿತೆ ಈ ಸಂಕಲನದಲ್ಲಿದೆ. 'ಅ ಆ ಇ ಈ ಗೀತೆ' ಎಂದು ಹೆಸರಿಸಿರುವ ಈ ಗೀತೆ ಮಕ್ಕಳ ಮೋಜಿಗಾಗಿ, ಉದ್ದೇಶಪಟ್ಟು ಪ್ರತಿಯೊಂದು ಸಾಲನ್ನೂ ಸ್ವರಾಕ್ಷರಗಳಿಂದ ಪ್ರಾರಂಭಿಸಿದರೂ ಅದು ಕವಿತೆಯ ಸಹಜತೆಗೆ ಭಂಗವನ್ನುಂಟು ಮಾಡಿಲ್ಲ. 'ಅಜ್ಜಿಯು ಕತೆಗಳ ಹೇಳಿದಳೆಂದರೆ ಆಟದ ನೆನಪೂ ಹಾರುವುದು' ಎಂದು ಪ್ರಾರಂಭವಾಗುವ ಕವಿತೆ ಅಜ್ಜಿಯ ಕತೆಗಳು ಸೃಷ್ಟಿಸುವ ಇಂದ್ರಜಾಲದ ಜಗತ್ತಿನ ಬಗೆಗೆ ಬೆರಗಿನಿಂದ ಹೇಳುತ್ತ ಹೋಗುತ್ತದೆ. 'ಔಡನು ಕಚ್ಚುತ ದೈತ್ಯರು ಬರುವರು, ಅಂಜಿಕೆ ಬರುವುದು ನಮಗೆಲ್ಲ ! ಅಃ ಅಃ ಅಜ್ಜಿ ಸಾಕುಕತೆ, ಮುಗಿಯಿತು ಅಆಇಈ ಗೀತೆ' ಎಂದು ಮೋಜಾಗಿ, ಹಾಗೆಯೇ ಭಾವಪೂರ್ಣವಾಗಿಯೇ ಕೊನೆಗೊಳ್ಳುತ್ತದೆ. ಇಂಥ ಪುಟ್ಟ ಮಕ್ಕಳಿಗೆ ಹಿಡಿಸುವ ಹಲವಾರು ಕವಿತೆಗಳು ಈ ಮೊದಲ ಸಂಕಲನದಲ್ಲಿ ಕಾಣುತ್ತವೆ. 'ಮಂಗತನ' ತುಸು ಬೆಳೆದ ಮಕ್ಕಳಿಗಾಗುವ ಕವಿತೆಯಾಗಿದ್ದು ಹಾಸ್ಯದ ಹೂರಣವುಳ್ಳ, ಮಕ್ಕಳ ಖಾಸಾ ವಸ್ತುವುಳ್ಳ ಕವಿತೆ. 'ಹನುಮನೀ ನಾಡಿನಲಿ ಮಂಗತನ ಬೇಡವೆ ?' ಎಂದು ಕೇಳುವ ಕವಿತೆ ಮಕ್ಕಳಲ್ಲಿ ಬೇಕಾಗುವ ಉತ್ಸಾಹ,

ತುಂಟತನದ ಸಂಗತಿಗಳಿಗೆ ಅಭಿವ್ಯಕ್ತಿ ನೀಡುತ್ತದೆ.

ಇಂಥ ಹನುಮನ ಗುಣವ ಕಲಿಯರೇಗುವನೇಕೊ
ಅಪ್ಪನೊಬ್ಬನೆ ಹುಬ್ಬು ಗಂಟಿಕ್ಕುತ ?
ಯಾರ ಸಿಟ್ಟನೊ ತಂದು ಯಾರ ಮೇಲೆಯೊ ಹಾಕಿ
ಮಂಗತನ ಹಳಿಯುವುದೆ ಸಾಕೆನ್ನುತ ?

ಎಂದು ಸಹಜ ಸ್ವಭಾವದ ಚಿತ್ರಣದಲ್ಲಿ ಕವಿತೆ ತಟ್ಟುತ್ತದೆ.

'ಚೆಂದಪ್ಪ ಚೆಂದಪ್ಪ ಚಾರೀ ಕಾಯಿ' ಚಂದಪ್ಪನ ಬಗೆಗೆ ಮಕ್ಕಳಲ್ಲಿರುವ ಅಕ್ಕರೆಯನ್ನು ಒಂದೇ ಓಟದ ಲಯದಲ್ಲಿ ಚೆಲುವ, ಬರುವ, ತರುವ ಎನ್ನುವ ಅನುರಣಿತ ಕೊನೆಯ ಶಬ್ದಗಳಲ್ಲಿ ಹಿಡಿದಿಟ್ಟಿರುವ ಪ್ರಯತ್ನ ಆಕರ್ಷಿಸುವಂತಿದೆ. ಹಾಗೆಯೇ ಅದು ಒಂದಿಷ್ಟೆಲ್ಲ ವಿಸ್ತಾರದ ಸಂಗತಿಗಳಿಗೆ ಚಾಚುವುದೂ ಇದೆ. ಪುರಾಣಿಕರ ಅನೇಕ ಕವಿತೆಗಳು ಹೀಗೆ ಹೆಚ್ಚಿನ ವಿಸ್ತಾರಕ್ಕೆ ಚಾಚಿಕೊಳ್ಳುವುದನ್ನ ನೋಡುತ್ತೇವೆ. 'ಇವರ ಬಿಟ್ಟು ಇವರ್‍ಯಾರು', 'ದೋಸೆ ದೋಸೆ ತಿನ್ನಲು ಆಸೆ', ಉಗಿಬಂಡಿಯದೇ ಲಯದಲ್ಲಿ ಸಾಗುವ 'ಹೊಗೆ ಬಂಡಿಯ ಹಾಡು' ಇವೆಲ್ಲ ಸೊಗಸಾದ ರಚನೆಗಳೇ.

'ಕೊಡು ಖಡ್ಗವ ಕೈಗೆ' ಭಾರತ ಚೀನಾ ಯುದ್ಧದ ಸಂದರ್ಭದಲ್ಲಿ ಬರೆದ ಕವಿತೆ. 'ಆಟವಾಡ ಬನ್ನಿರಿ', 'ಆಕಾಶಕಾಯದಲಿ ಹಾರುವ ಹಾಡು' ಮುಂತಾದುವೆಲ್ಲ ಬೆಳೆದ ಹೈಸ್ಕೂಲು ಮಟ್ಟದ ಮಕ್ಕಳಿಗೆ ಸಲ್ಲುತ್ತವೆ. 'ಚಂದ್ರಲೋಕದೊಳಿನ್ನು ಮನೆಯ ಕಟ್ಟುವರಂತೆ ಇರುವೊಬ್ಬ ಚಂದ್ರನನು ಅಂದಗೆಡಿಸುವರೆ' ಎನ್ನುವ ಹೆಚ್ಚು ಪ್ರಚುರವಾದ, ಭಾವಪೂರ್ಣವಾದ ಕವಿತೆ ಇದೇ ಸಂಕಲನದಲ್ಲಿದೆ.

ಸಾಕಾಗದಾಯಿತೇ ಈ ಲೋಕ ಈ ಜನಕೆ?
ಏಕೆ ಚಂದ್ರನ ಬೆನ್ನು ಹತ್ತಿರುವರಮ್ಮ?
ಇಲ್ಲಿ ಸಲ್ಲದ ಜನರು ಅಲ್ಲಿ ಸಲ್ಲುವರೆಂತು?
ಇಷ್ಟು ಸಹ ಈ ಜನಕೆ ಗೊತ್ತಿರದೆ ಅಮ್ಮ?

ಎಂದು ಅರ್ಥವಿಸ್ತಾರಗಳನ್ನು ಪಡೆದುಕೊಳ್ಳುತ್ತ ಒಂದು ಬಗೆಯ ಆರ್ದ್ರ ಭಾವ ಸಂದರ್ಭವನ್ನ ಕಟ್ಟಿಕೊಡುವಲ್ಲಿ ರಮಿಸಿದೆ. 'ತುಪ್ಪ ರೊಟ್ಟಿ ಗೇ ಗೇ' ಸಂಕಲನದ ನಂತರ ತುಸು ದೀರ್ಘ ಸಮಯದ ನಂತರ ೧೯೭೭ರಲ್ಲಿ ತಂದ 'ಗಿಲ್ ಗಿಲ್ ಗಿಲಗಚ್ಚಿ' ಸಂಕಲನದಲ್ಲಿ ಅನೇಕ ಗಮನಾರ್ಹ ರಚನೆಗಳು ಸಿಗುತ್ತವೆ. 'ಗಿಲ್ ಗಿಲ್ ಗುಬ್ಬಚ್ಚಿ', 'ಬಣ್ಣದ ಗರಿ', 'ಮಿಠಾಯಿ ಮಕ್ಕಳೇ', 'ಕುರಿಮರಿ ಬೇಕೆ ಕುರಿಮರಿ', 'ಕಾರಮಳಿಯೆ ಕಪ್ಪತ್ತ ಮಳಿಯೆ', 'ಮಜಾ ಅಂದ್ರ ಮಜಾ' ಮುಂತಾದುವು ಮುದನೀಡುವಂತಿವೆ. ಜೊತೆಗೆ ಹಲವಾರು ರಚನೆಗಳು ಪರಿಚಯಿಸುವ, ವಿಷಯ ಸಂಗ್ರಹಿಸಿ ಇಡುವ, ಆದರ್ಶ ಹೇಳುವ ಕಾರ್ಯ ಮಾಡುತ್ತವೆ. ಮಕ್ಕಳಿಗೆ ಕಲಿಸಿ ಅವರ ಬಾಯಲ್ಲಿ ಅನಿಸಿ ಖುಷಿಪಡುವ ವಸ್ತುಗಳು ಇಂಥವು. ಹೀಗೆಯೇ 'ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ' ಹಾಗೂ 'ಬಣ್ಣ ಬಣ್ಣದ ಓಕುಳಿ' ಸಂಕಲನಗಳು ಮಕ್ಕಳಿಗಾಗಿ ಬರೆಯುವ ಉತ್ಸಾಹವನ್ನು ಈ ಹಿರಿಯ ಕವಿಯಲ್ಲಿ ಉಳಿದುಕೊಂಡೇ ಬಂದುದನ್ನು ಹೇಳುತ್ತವೆ. 'ಏನಾದರೂ ಕೊಡಿಸಪ್ಪ' ಎಂದು ಪ್ರಾರಂಭವಾಗುವ ರಚನೆ

'ಹೆಚ್ಚಿಗೆ ನಾನು ಬೇಡೊಲ್ಲ
ಬೇಡಿದರೂ ನೀ ಕೊಡಿಸೊಲ್ಲ'

ಎಂದು ಮಕ್ಕಳದೇ ಮಾತನ್ನ ನಮ್ಮ ಮುಂದಿಡುತ್ತದೆ. 'ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ', 'ಪಾಪ', 'ಕಾಡಿನ ದೀಪ' ಮುಂತಾದುವೆಲ್ಲ ಗೆಲುವಾಗಿವೆ. 'ಬಣ್ಣ ಬಣ್ಣದ ಓಕುಳಿ' ಮಕ್ಕಳದೇ ಆಮೋದದ ವಸ್ತುವನ್ನ ಹೊಂದಿದೆ. 'ಬುಸು ನಾಗಪ್ಪ' ಪಂಚಮಿಯಲ್ಲಿನ ಹಬ್ಬದ ವಾತಾವರಣದಲ್ಲಿ ಹಾವಿನ ಸುತ್ತಲಿನ ಲಹರಿಗಳಲ್ಲಿ ಸಾಗುತ್ತದೆ. 'ಒಂಟೆ' ಕವಿತೆ ತುಂಬಾ ಯಶಸ್ಸು ಕಂಡ ಕವಿತೆ. ಆಯ್ದು ಕೊಂಡ ವಸ್ತು, ಅದನ್ನ ಕವಿತೆಯುದ್ದಕ್ಕೂ ನಿಭಾಯಿಸಿಕೊಂಡು ಹೋಗಿರುವುದು, ಕೊನೆಯಲ್ಲಿ ಚುರುಕಾಗಿ ಮುಗಿಸುವುದು ಎಲ್ಲ ದೃಷ್ಟಿಯಿಂದಲೂ ಸೆಳೆಯುವ ರಚನೆ.

ಒಂಟೆ ಬಂತು
ಒಂಟೆ ಬಂತು
ಒಂಟೆ ಬಂತು ಊರಿಗೆ
ಕೆಲಸ ಗಿಲಸ
ಪಾಠಗೀಠ
ಈಗ ಬೇಕು ಯಾರಿಗೆ?

ಎನ್ನುವಲ್ಲಿಯೇ ಒಂಟೆಯ ಬಗೆಗಿನ, ಅಷ್ಟಾಗಿ ಪರಿಚಯವಿಲ್ಲದ ಪ್ರದೇಶದ ಮಕ್ಕಳಲ್ಲಿನ ಕುತೂಹಲ ತಟಕ್ಕನೆ ಗ್ರಹಿಕೆಗೆ ಬರುತ್ತದೆ. 'ಒಂಟೆ ಬಂತು ಊರಿಗೆ' ಎನ್ನುವಲ್ಲಿಯೇ ಧ್ವನಿರಮ್ಯತೆ ಇದೆ. ಒಂಟೆಯ ಬಗೆಗಿನ ದಿಗಿಲು, ಜೊತೆಗೆ ಹಾಸ್ಯವೂ ಬೆರೆತು ಬಿಡುತ್ತದೆ.

ಇವನ ಮಾಡು
ವಾಗ ಶಿವಗೆ
ಯಾವುದಿತ್ತೊ ಅವಸರ
ಕಲಸಿ ಮಣ್ಣ
ಕಿವುಚಿ ಬಿಟ್ಟ
ಮಾಡಿ ಬಿಟ್ಟ ಸರಸರ !

ಎಂದು ಅಂದುಕೊಳ್ಳುವಲ್ಲಿ ಮನಸ್ಸಿನಲ್ಲಿ ಉಂಟಾದ ವಿಚಿತ್ರ ಭಾವನೆಗಳಿಗೆ ಮೂರ್ತ ಸ್ವರೂಪ ಬಂದಹಾಗಿದೆ. ಪದ್ಯದ ಕೊನೆಯಲ್ಲಿ

ಭಲೆ ಒಂಟೆ
ಭಳಿರೆ ಒಂಟೆ
ನಮ್ಮ ಬಂಟ ಒಂಟೆ
ಕಳಿಸುವೆವು
ನಿನಗೆ ಕಟ್ಟಿ
ನಮ್ಮೂರಿನ ಗಂಟೆ

ಎಂದು ಅಂದುಕೊಳ್ಳುವಲ್ಲಿ ಅಂಥ ಒಂಟೆಯನ್ನ ನಮ್ಮ ಒಂಟೆ ಎಂದು ಭಾವಿಸಿಕೊಂಡುದು, ಬಂಟನೆಂದು ಅಂದುಕೊಂಡುದು, 'ನಮ್ಮೂರಿನ ಗಂಟೆ' ಕಟ್ಟಿ ಕಳಿಸುವ ವಿಚಾರ ತಂದುಕೊಂಡುದು ಎಲ್ಲ ಒಂಟೆಯ ಬಗೆಗೆ ಹುಡುಗರಲ್ಲಿ ಏನೆಲ್ಲ ಉಂಟಾಯಿತು ಎನ್ನುವುದನ್ನ ಹೇಳುತ್ತ ಕವಿತೆ

ಬೆಳೆದು ನಿಲ್ಲುತ್ತದೆ. ಒಂದು ವಿಶಿಷ್ಟವಾದ ಪ್ರಾಣಿಯ ಜೊತೆಗಿನ ಮಕ್ಕಳ ತಾದಾತ್ಮ್ಯವನ್ನು ನಿಧಾನ ತಂದುಕೊಡುತ್ತದೆ.

'ಭಾರತವೆಲ್ಲಕೆ ಬಾವುಟವೊಂದೆ' ಡಾ. ಸಿದ್ದಯ್ಯ ಪುರಾಣಿಕರ ಐದನೆಯ ಸಂಕಲನ. ಪದ್ಯದ ರಚನೆಗಳಲ್ಲಿಯೇ ವಿಶೇಷವಾಗಿ ತೊಡಗಿಕೊಂಡ ಈ ಕವಿ ಈ ಸಂಕಲನದಲ್ಲಿ 'ನೀನೂ ನನ್ನಷ್ಟಿದ್ದಾಗ'ದಂಥ ಕವಿತೆಗಳಲ್ಲಿ ಹೊಸ ಹೊಸ ಭಾವಗಳಿಗೆ ಸ್ಪಂದಿಸಿದ್ದಾರೆ.

ನೀನೂ ನನ್ನಷ್ಟಿದ್ದಾಗ
ಅಪ್ಪಾಲೆ ತಿಪ್ಪಾಲೆ
ಆಡಿದೆಯಾ?
ಗೊಂಬೆಯ ಮದುವೆ
ಮಾಡಿದೆಯಾ?
ಉಂಡಿಗೆ ಅವ್ವನ
ಕಾಡಿದೆಯಾ?

ಪುಟಾಣಿ ಪದ್ಯಗಳೂ ಹಲವನ್ನ ಪುರಾಣಿಕರು ರಚಿಸಿದ್ದಾರೆ.

ಓದು ಎಂದರೆ ತೂಕಡಿಕೆ
ಕೆಲಸವೆಂದರೆ ಆಕಳಿಕೆ
ಮಸಾಲೆದೋಸೆ ಇಡ್ಲಿ ಸಾಂಬಾರ್
ವಡೆ ಎಂದರೆ ಚಟುವಟಿಕೆ

ಹೀಗೆ ಪುರಾಣಿಕರು ಅಧಿಕಾರಿಗಳಾಗಿದ್ದರೂ ಮಕ್ಕಳಿಗಾಗಿ ಅದೇನೋ ವ್ರತದ ಹಾಗೆ ಬರೆಯುತ್ತಲೇ ಬಂದಿದ್ದಾರೆ ಎನ್ನುವುದು ವಿಶೇಷದ ಸಂಗತಿಯೇ.

ಬೇಂದ್ರೆ ಅಂಥ ವರಕವಿಗಳು ಮಕ್ಕಳಿಗಾಗಿ ಬರೆಯಲಿಲ್ಲವೆ ಎನ್ನುವುದು ಪ್ರಶ್ನೆ. ಸಿಸು ಸಂಗಮೇಶರು ಒಂದು ಸಲ, ತಮ್ಮ ಸಂಕಲನವೊಂದಕ್ಕಾಗಿ ಅವರ 'ಪಾತರಗಿತ್ತಿ' ಪದ್ಯವನ್ನ ಬಳಸಿಕೊಳ್ಳಲೇ ಎಂದು ಕೇಳಿದ್ದರಂತೆ. ಆದರೆ ಬೇಂದ್ರೆಯವರೇ ಅದನ್ನು ನಿರಾಕರಿಸಿದ್ದರು, ಅದು ಮಕ್ಕಳಿಗಾಗಿ ಅಲ್ಲವೆಂದೇ ಹೇಳಿದ್ದರು. ಆದರೆ ಶಿವಮೊಗ್ಗ ಸಾಹಿತ್ಯ ಸಮ್ಮೇಳನದ ಹೊತ್ತಿಗೆ ಅವರು ಸಿಸು ಸಂಗಮೇಶರ ಬೇಡಿಕೆಯನ್ನ ಈಡೇರಿಸಿದರು ಎನ್ನುವ ಹಾಗೆ ಕರಡಿ ಕುಣಿಸುವಾತನ ಗೀತೆಯನ್ನ ರಚಿಸಿ ನೀಡಿದರು. ಅದು ಮಕ್ಕಳ ಪಠ್ಯದಲ್ಲಿ ಸೇರಿದುದೂ ಆಗಿದೆ. ಆದರೆ ವಾಸ್ತವದಲ್ಲಿ ಅದೂ ಕೂಡ ವಿಸ್ತಾರವಾಗಿ ಹಬ್ಬಿಕೊಂಡುದೇ ಆಗಿತ್ತು. ಹಾಗಿದ್ದಾಗ್ಯೂ ಬೇಂದ್ರೆ ಅವರ ಅನೇಕ ಕವಿತೆಗಳನ್ನು ಮಕ್ಕಳು ಗುಣುಗುಣಿಸುತ್ತಲೇ ಬಂದರು ಎನ್ನುವುದು ವಾಸ್ತವ ಸತ್ಯ. ಅವರ ಪಾತರಗಿತ್ತಿ ಪದ್ಯ ಮಕ್ಕಳ ಬಾಯಲ್ಲಿ ಹರಿದಾಡಿ ಆಗಿದೆ. ಅವರ ಇಂಥ ಗುಂಗು ಹಿಡಿಸುವ, ನಾದದ ವೈಭವದಿಂದ ಕೂಡಿದ, ಆಡುಮಾತಿನ ಬನಿಯನ್ನ, ಗ್ರಾಮೀಣ ಗಂಧವನ್ನ ಮೆತ್ತಿಕೊಂಡ ರಚನೆಗಳು ತಮ್ಮ ಕೆಲ ಮೇಲ್ಪದರಿನಿಂದಾದರೂ ಮಕ್ಕಳಿಗೆ ಖುಷಿಕೊಡುವಲ್ಲಿ ಸಾರ್ಥಕವೇ ಆಗಿವೆ. ಅದೇ ಬೆಟಗೇರಿ ಕೃಷ್ಣಶರ್ಮರು ತಮ್ಮ ವಿಶೇಷದ 'ಮುದ್ದನ ಮಾತು' ಕೃತಿಯಲ್ಲಿ ಬಾಲ್ಯದ ಮನಸ್ಸಿನೊಳಗಿಂದಲೇ ಮಾತನಾಡಿ ಸೆಳೆದರು. ಮಕ್ಕಳು ಆ ಕವಿತೆಯನ್ನ ವಾಚಿಸುತ್ತಿದ್ದರೆ ಆಸಕ್ತಿಯಿಂದ ಖಂಡಿತ ಕೇಳುತ್ತಾರೆ ಎನ್ನುವುದರಲ್ಲಿ

ಎರಡು ಮಾತಿಲ್ಲ. ಆದರೆ ಅದು ಮಗುವಿನ ಮೂಲಕ ಕವಿಯೊಳಗಿನ ತಾಯ ಭಾವದ ಅಪರೂಪದ ವಾತ್ಸಲ್ಯದ ಗೊತ್ತುಗಳೆಲ್ಲ ಸಂಚರಿಸುತ್ತ ಗಂಭೀರವಾದ ಸಂಗತಿಗಳನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿಯೇ ರಮಿಸುತ್ತದೆ.

ವಿ.ಜಿ. ಭಟ್ಟ

ದಿನ ದಿನ ತುಂಟನು ಅಕ್ಕನ ಜೋಡಿ
ಕಾರಣವಿಲ್ಲದೆ ಜಗಳಾಡಿ
ಪೆಟ್ಟನು ತಿಂದು
ಮೈ ಕೈ ನೊಂದು
ಹರಿಸುವ ಕಣ್ಣೀರಿನ ಕೋಡಿ

ಅಂತೆಲ್ಲ ತುಂಟನ ಗುದ್ದಾಟವನ್ನು ಹೇಳುತ್ತ ಹೋಗುವ ಕವಿತೆ ಕೊನೆಯಲ್ಲಿ ಹೇಳುವುದು ಇದು

ಹೀಗೇ ನಡೆದಿರೆ
ತುಂಟನ ಅಕ್ಕನ
ಮದುವೆಯು ಆಯಿತು ಒಂದು ದಿನ
ಗಂಡನ ಜತೆಯಲಿ
ಅಕ್ಕನು ಹೊರಡಲು
ಅತ್ತನು ತುಂಟನು ಅಕಾರಣ

ಎಂದು ಹೃದಯಸ್ಪರ್ಶಿಯಾಗಿ ಮುಗಿಯುವ ಕವಿತೆ ವಿ. ಜಿ.ಭಟ್ಟರದು. ಪ್ರತಿಭಾವಂತ ಕವಿ ವಿ.ಜಿ. ಭಟ್ಟರು ಮಕ್ಕಳಿಗೂ ಬರೆಯಲು ತುಡಿದುದು ವಿಶೇಷ. ಮಕ್ಕಳಿಗಾಗಿ ಹಲವಾರು ಚುಟುಕಗಳನ್ನು ಬರೆದಿರುವ ಅವರ ರಚನೆಗಳು ಹೆಚ್ಚು ಧ್ವನಿಪೂರ್ಣವಾಗಿದ್ದು, ಮಕ್ಕಳನ್ನು ಮೀರಿ ಬದುಕಿನ ಗಂಭೀರವಾದ ಅನುಭವಗಳನ್ನು ಆಶ್ರಯಿಸುವದೇ ಬಹಳ. ಹಾಗಿದ್ದಾಗಲೂ ಚುರುಕುತನ, ತಟಕ್ಕನೆ ಹೊಳೆಯುವ ಪ್ರಸ್ತುತಿ ಅವರ ಕವಿತೆಗಳಿಗೆ ಚುರುಕನ್ನು ತರುವುದನ್ನು ಹೇಳಬೇಕು. ಕೆಲ ಚುಟುಕಗಳ ಕೆಲ ಪದರುಗಳು ಮಕ್ಕಳಿಗೆ ತಲಪುವುದು ಸಾಧ್ಯವಾಗುತ್ತದೆ ಎಂಬುದನ್ನ ಹೇಳಬೇಕು.

ಗುಡ್ಡದ ಬಯಲಲಿ
ಹಾರುತ ಬಂದಿತು
ದಾರಿಯು ತಪ್ಪಿದ ಮೋಟಾರು
ನೋಡುತ ಗುರು ಗುರು
ಹುಲಿ ದನ ಕರು ಮೊಲ
ತಮ್ಮೊಳಗೇ ಯೋ –
ಚಿಸಿದವು ಎಲ ಎಲ
ಬಾಲವೆ ಇಲ್ಲದ ಇದು ಯಾರು?

ಇಂಥ ಸೊಗಸಿನ ರಚನೆಗಳ ಹಲವೆಲ್ಲವನ್ನ ಅಲ್ಲಿ ಗುರುತಿಸಬಹುದು.

ಖ್ಯಾತ ಲೇಖಕಿಯಾಗಿದ್ದ ಡಾ. ಅನುಪಮಾ ನಿರಂಜನ ಅವರು 'ದಿನಕ್ಕೊಂದು ಕತೆ' ಎಂದು ಹನ್ನೆರಡು ಸಂಪುಟಗಳಲ್ಲಿ ೩೬೫ ಕತೆಗಳನ್ನ ಬರೆದುದಿದೆ. ಸರೋಜಿನಿ ಮಹಿಷಿ, ಎಚ್. ವೈ. ಸರಸ್ವತಮ್ಮ, ಗೀತಾ ಕುಲಕರ್ಣಿ ಮೊದಲಾಗಿ ಅನೇಕರು ಮಕ್ಕಳ ಲೋಕದಲ್ಲಿ ಆಸಕ್ತಿ ತಳೆದುದನ್ನ ಕಾಣುತ್ತೇವೆ. ಗೀತಾ ಕುಲಕರ್ಣಿ ಅವರ 'ನೇಜಿ ಗುಬ್ಬಚ್ಚಿ' ಒಂದು ಸಂವೇದನಾಶೀಲ ಬರವಣಿಗೆಯ ಉತ್ತಮ ಕಾದಂಬರಿ.

ರಾಷ್ಟ್ರೋತ್ಥಾನ ಪರಿಷತ್ತಿನವರು ೧೯೭೭ರಲ್ಲಿ 'ಭಾರತ ಭಾರತಿ ಪುಸ್ತಕ ಸಂಪದ' ಜೀವನ ಚಿತ್ರಗಳು, ವ್ಯಕ್ತಿ ಚಿತ್ರಗಳ ಮಾಲಿಕೆಯನ್ನ ಪ್ರಾರಂಭಿಸಿ ೫೦೦ಕ್ಕೂ ಮಿಕ್ಕಿ ಪುಸ್ತಕಗಳನ್ನು ಈ ಮಾಲಿಕೆಯಲ್ಲಿ ಪ್ರಕಟಿಸಿದರು.

ಗ್ರಂಥ ಋಣ

೧. ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ – ಪ್ರೊ. ಎಸ್. ಅನಂತ ನಾರಾಯಣ

೨. ಎಸ್.ಜಿ. ನರಸಿಂಹಾಚಾರ್ ಕವಿತೆಗಳು – ಸಂ. ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ

೩. ತಟ್ಟು ಚಪ್ಪಾಳೆ ಪುಟ್ಟ ಮಗು – ಸಂ. ·ಬೊಳುವಾರು

೪. ಶ್ರೀ ಪಂಜೆಯವರ ನೆನಪಿಗಾಗಿ – ಸಂ. ಎಮ್. ಗೋವಿಂದ ಪೈ ಮತ್ತು ಇತರರು

೫. ಕನ್ನಡದಲ್ಲಿ ಮಕ್ಕಳ ಸಾಹಿತ್ಯ – ಎಸ್.ವಿ. ಶ್ರೀನಿವಾಸರಾವ್(ವಜ್ರದೀಪ್ತಿಯಲ್ಲಿ)

೬. 'ಸಂಧ್ಯಾ' ಮಕ್ಕಳ ಸಾಹಿತ್ಯ ಪತ್ರಿಕೆಯ ವಿವಿಧ ಸಂಚಿಕೆಗಳು

೭. 'ನವೋದಯದ ನೆರಳಿನಲ್ಲಿ ಮಕ್ಕಳ ಸಾಹಿತ್ಯ' – ಎನ್. ಶ್ರೀನಿವಾಸ ಉಡುಪ –'ಮಕ್ಕಳ ಸಾಹಿತ್ಯ ಶತಮಾನ' ಸಂ. ಆನಂದ ಪಾಟೀಲ ಹಾಗೂ ನ. ರವಿಕುಮಾರ

೮. 'ಮಕ್ಕಳ ಸಾಹಿತ್ಯದ ಮೊದಲ ಘಟ್ಟದ ವಿಶೆಷ ಕೃಷಿ –೧' – ಟಿ.ಎಸ್. ನಾಗರಾಜಶೆಟ್ಟಿ –'ಮಕ್ಕಳ ಸಾಹಿತ್ಯ ಶತಮಾನ' ಸಂ. ಆನಂದ ಪಾಟೀಲ ಹಾಗೂ ನ.ರವಿಕುಮಾರ

೯. 'ಮಕ್ಕಳ ಸಾಹಿತ್ಯಕ್ಕಾಗಿ ತುಡಿದ ಹಿರಿಯರು –೧' – ಡಾ. ಶ್ರೀಪಾದ ಶೆಟ್ಟಿ

೧೦. 'ಮಕ್ಕಳ ಸಾಹಿತ್ಯದ ಮೊದಲ ಘಟ್ಟದ ವಿಶೇಷ ಕೃಷಿ –೨'– ಎಂ.ಎಸ್. ನಾಗೇಂದ್ರ

೧೧. 'ಚಂದಮಾಮದ ನವಗಿರಿನಂದ'(೨೦೧೦) – ಶೇಷನಾರಾಯಣ, ಕೊಡೆಂಕಿರಿ ಪ್ರಕಾಶನ, ನರಿಮೊಗರು, ಪುತ್ತೂರು – ೫೭೪೨೦೨(೯೪೮೦೪೫೧೫೬೦) ಬೆಲೆ –೩೩ ರೂ

೧೨. ಟಿ.ಪಿ.ರಮೇಶ, ಮಡಿಕೇರಿ – ದೇವತಾ ಮನುಷ್ಯ (ಅಣ್ಣಾಜಿ ಫಡತಾರೆ ಅವರ ಅಭಿನಂದನ ಗ್ರಂಥ ೨೦೧೨)

೧೩. ದ. ಕ. ಜಿಲ್ಲೆಯ ಬಾಲಸಾಹಿತ್ಯದ ಮೊದಲಿಗರು – ಸಂ. ಸಂತೋಷಕುಮಾರ ಗುಲ್ವಾಡಿ, (ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಉಜಿರೆ ಹಾಗೂ ಗುಲ್ವಾಡಿ ವೆಂಕಟರಾವ್ ಸ್ಮಾರಕ ಕೇಂದ್ರ, ಮಣಿಪಾಲ – ೧೯೯೦)

೧೪. ೧೯೩೬ ಹೊಸಗನ್ನಡ ಪಾಠಮಾಲೆ (೧ರಿಂದ ೮ನೆಯ ತರಗತಿಯ ವರೆಗೆ) ಪ್ರ : ಬಾಲ ಸಾಹಿತ್ಯ ಮಂಡಲ, ಮಂಗಳೂರು

೧೫. 'ಪಂಜೆ ಮತ್ತು ಅವರ ಸಮಕಾಲೀನರು' – ರಾಮಚಂದ್ರ ಉಚ್ಚಿಲ್, 'ತೆಂಕಣಗಾಳಿ'(ಪಂಜೆ ಶತಮಾನೋತ್ಸವ ಸಂಸ್ಮರಣ) ಯಲ್ಲಿ ಪ್ರಕಟವಾದ ಲೇಖನ. ಸಂ. ಗುಂಡ್ಮಿ ಚಂದ್ರಶೇಖರ ಐತಾಳರು, ೧೯೭೪

೧೬.'ಉಳ್ಳಾಲ ಮಂಗೇಶ ರಾವ್' – ಶಂಕರ ಭಟ್ಟ, ಬಿ. – 'ಕನ್ನಡಕ್ಕಾಗಿ ದುಡಿದವರು' ಪುಸ್ತಕದಲ್ಲಿ ಪ್ರಕಟಿತ, ಕನ್ನಡ ಪ್ರಪಂಚ ಪ್ರಕಾಶನ, ಮಂಗಳೂರು – ೨, ೧೯೫೭

೧೭. 'ಕಥನಕಲೆ'– ಗಮನ ಸೆಳೆದ ಕೃತಿ – ಆ. ನವಲಗುಂದ – 'ಸಂಧ್ಯಾ–ಮಕ್ಕಳ ಸಾಹಿತ್ಯ ಅಧ್ಯಯನ ಮಾಲೆ–೪'–೧೯೯೫, ಸಂಧ್ಯಾ ಸಾಹಿತ್ಯ ವೇದಿಕೆಯ ಪ್ರಕಟಣೆ.

೧೮. 'ದೇವರ ಪೆಪ್ಪರಮೆಂಟೇನಮ್ಮ' ಆನಂದ ಪಾಟೀಲ

೧೯. 'ರಾಜರತ್ನಂ ಮಕ್ಕಳ ಲೋಕ' ಆನಂದ ಪಾಟೀಲ

೨೦. 'ಮಕ್ಕಳ ಸಾಹಿತ್ಯಕ್ಕಾಗಿ ತುಡಿದ ಹಿರಿಯರು' ಡಾ. ಶ್ರೀಪಾದ ಶೆಟ್ಟಿ (ಮಕ್ಕಳ ಸಾಹಿತ್ಯ ಶತಮಾನ. ಸಂ. ಆನಂದ.ವಿ,ಪಾಟೀಲ ಹಾಗೂ ನ. ರವಿಕುಮಾರ)

೨೧. 'ನಿತ್ಯ ಕಿಶೋರತೆ' ಡಾ.ಪಿ. ಸಂಗೀತಾ – 'ವಿಹಾ ಪುಸ್ತಕ', ಬೆಂಗಳೂರು

೨೨. 'ಕೈಯಾರ ಕಿಞ್ಞಣ್ಣರೈಗಳ ಶಿಶು ಸಾಹಿತ್ಯ' ವಿ.ಗ. ನಾಯಕ – 'ಪ್ರತಿಸ್ಪಂದನ' ಸಂಕಲನದಲ್ಲಿ ಪ್ರಕಟಿತ – ಕಿಕ್ಕೇರಿ ಪಬ್ಲಿಕೇಶನ್ – ೧೯೯೭

೩

ಶಿಕ್ಷಕ ಸಾಹಿತಿಗಳ ಗಮನಾರ್ಹ ಕೊಡುಗೆ

ಡಾ. ಆನಂದ ಪಾಟೀಲ

ಮೊದಲಿಗೆ ಕನ್ನಡ ಸಾಹಿತ್ಯದ ಮುಖ್ಯಧಾರೆ ನವೋದಯವೆಂದು, ಇಪ್ಪತ್ತನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಪ್ರಗತಿಶೀಲವೆಂದು, ನಂತರ ನವ್ಯವೆಂದು ಹೊರಳನ್ನು ಪಡೆಯುತ್ತ ಹೊಸ ತಿರುವುಗಳನ್ನು ಪಡೆಯಿತು. ಮಕ್ಕಳ ಸಾಹಿತ್ಯ ಈ ಬಗೆಯ ಬದಲಾವಣೆಗಳನ್ನು ಅನುಭವಿಸಲೇ ಇಲ್ಲ. ಅದೇನಿದ್ದರೂ ಶಾಲಾವಾತಾವರಣದಲ್ಲಿ ಸರಿಗೊಳ್ಳುತ್ತ, ಆದಷ್ಟೂ ಸರಳಗೊಳ್ಳುತ್ತ, ಮಕ್ಕಳ ಲೋಕಕ್ಕೆ ಹೆಚ್ಚು ಹತ್ತಿರದಲ್ಲಿ ಸ್ಪಂದಿಸುತ್ತ, ಒಂದಿಷ್ಟೆಲ್ಲ ವಿಭಿನ್ನತೆಗೆ ಚಾಚಿಕೊಳ್ಳುತ್ತ ಸಾಗಿಬಂದುದಷ್ಟೇ ಅಗಿತ್ತು. ಮುಖ್ಯಧಾರೆಯ ಈ ಎದ್ದುಕಾಣುವ ತಿರುವುಗಳ ಪ್ರಭಾವಗಳನ್ನು ಕಿಂಚಿತ್ತೂ ಅನುಭವಿಸಲಿಲ್ಲ. ಬದಲಾಗಿ ಅದು ಒಂದಿಷ್ಟೆಲ್ಲ ಪ್ರಚುರತೆಯನ್ನ, ತನ್ನದೇ ಆದ ವಿಸ್ತೃತ ಮಾನ್ಯತೆಯನ್ನ ಪಡೆಯುವಲ್ಲಿ ತೊಡಗಿತು ಎನ್ನಬಹುದು. ನವೋದಯದ ಸಮಯದಲ್ಲಿ ಮುಖ್ಯಧಾರೆಯ ಲೇಖಕರೆಲ್ಲ ಬದುಕಿನ ಸಂಪೂರ್ಣತೆಗೆ ತುಡಿದಂತೆ, ನಾನಾ ಬಗೆಯ ಸಾಹಿತ್ಯದ ಬಗೆಗಳನ್ನೆಲ್ಲ ಪ್ರಯೋಗಿಸಲು ಹಿಂದೆ ಮುಂದೆ ನೋಡಲಿಲ್ಲ. ಹಾಗಾಗಿ ಮಕ್ಕಳ ಸಾಹಿತ್ಯವೂ ಅವರಿಗೆ ಬೇಕಾದುದೇ ಆಯಿತು. ಶೈಕ್ಷಣಿಕ ವ್ಯವಸ್ಥೆಯೂ ಹೊಸತಾಗಿ ತೆರೆದುಕೊಂಡುದರಿಂದ ಅದರ ಅಗತ್ಯಕ್ಕೂ ತುಡಿಯುತ್ತ, ಮಕ್ಕಳಿಗೆ ಒದಗಬಹುದಾದ ಸೊಗಸಾದ ಬರಹವನ್ನ ನೀಡುವಲ್ಲಿ ತೊಡಗಿಕೊಂಡವರು ಅನೇಕರು. ಈ ಸಮಯದಲ್ಲಿ ಸ್ವೋಪಜ್ಞತೆಯಿಂದ ಮಕ್ಕಳ ಲೋಕದಲ್ಲಿಯೂ ವೈಶಿಷ್ಟ್ಯದಿಂದ ಅಭಿವ್ಯಕ್ತಿಗಿಳಿದ ಪ್ರತಿಭಾವಂತರಿದ್ದ ಹಾಗೆ ಶಾಲಾವಾತಾವರಣವೇ ಮುಖ್ಯ ಪ್ರೇರಣೆಯಾಗಿ, ಮಕ್ಕಳ ಬೆಳವಣಿಗೆಯನ್ನ ಆದರ್ಶವಾಗಿ ಮುಂದಿರಿಸಿಕೊಂಡ ಬರಹಗಾರರೂ ಇದ್ದೇ ಇದ್ದರು. ಈ ಬಗೆಯ ಮನೋಭಾವನೆ ಪ್ರಾರಂಭದಿಂದಲೂ ಇಂದಿನವರೆಗೂ ಕಂಡುಬಂದುದೇ ಆಗಿದೆ. ಮಕ್ಕಳ ಸಾಹಿತ್ಯದ ಮೊದಲ ಘಟ್ಟವನ್ನ ಇಂಥ ಮನೋಭಾವದ ಬರವಣಿಗೆಯ ನಡುವೆ ಎದ್ದುಕಾಣುವ ಸ್ವಂತಿಕೆಯ ಪ್ರತಿಭಾವಂತರ ಬರವಣಿಗೆ ಕಾಣಿಸಿಕೊಂಡು ತನ್ನ ಅಸ್ತಿತ್ವವನ್ನು ಢಾಳಾಗಿ ಹೇಳಿತು. ಹಾಗಾಗಿ ಮೊದಲ ಘಟ್ಟವನ್ನು ಗುರುತಿಸುವಾಗ ಈ ಬಗೆಯ ಪ್ರತಿಭಾಪೂರ್ಣ ವೈವಿಧ್ಯದ ಕೃಷಿ ಮುಖ್ಯ ಲಕ್ಷಣವಾಗಿ ಕಾಣುತ್ತದೆ. ಆದರೆ ಅದರ ಮುಂದಿನ ಘಟ್ಟವಾಗಿ ಕಾಣುವ ಮಕ್ಕಳ ಸಾಹಿತ್ಯ ಬಲು ದೊಡ್ಡ ಪ್ರಮಾಣದಲ್ಲಿ ಶಿಕ್ಷಕ ಸಮುದಾಯದವರನ್ನೇ ಕಂಡುದರಿಂದ ಅವರ ಕೃಷಿಯ ಗುಣಧರ್ಮಗಳು ಈ ಎರಡನೆಯ ಘಟ್ಟವನ್ನು ವಿಶೇಷವಾಗಿ ಗುರುತಿಸುವಂತೆ ಮಾಡಿದವು. ನವ್ಯವೆಂದು ಮುಖ್ಯಧಾರೆಯ ಲೇಖಕರು ಹೊರಳಿದಾಗ ಅವರು ಮಕ್ಕಳಿಗಾಗಿ

ಬರೆಯುವುದನ್ನು ಗಣಿಸದೇ ಹೋದರು. ಅವರು ಕಂಡುಕೊಂಡ ಅಭಿವ್ಯಕ್ತಿಯ ಸಾಧ್ಯತೆಗಳಲ್ಲಿ ಅದು ಸಹಜವಾಗಿಯೂ ಇತ್ತು. ಹೀಗಾಗಿ ಮಕ್ಕಳ ಸಾಹಿತ್ಯವನ್ನು ತಮ್ಮದನ್ನಾಗಿಸಿಕೊಂಡವರು, ಅದರಲ್ಲಿ ಆಸಕ್ತಿ ತೋರಿದವರು ಬಹುಮುಖ್ಯವಾಗಿ ಶಿಕ್ಷಕರೇ. ಅಷ್ಟೇ ಅಲ್ಲ, ಬಲು ದೊಡ್ಡ ಪ್ರಮಾಣದಲ್ಲಿ ಅವರು ಕಾಣಿಸಿಕೊಂಡರು.

ಬಹುಮುಖ್ಯವಾಗಿ ಇವರೆಲ್ಲ ಮಕ್ಕಳ ಒಡನಾಟದಲ್ಲಿಯೇ ವೃತ್ತಿಯಿಂದಾಗಿ ಇದ್ದಂಥವರು. 'ಮಕ್ಕಳ ಸಾಹಿತಿ' ಎಂದೇ ಕರೆದುಕೊಳ್ಳಲು ಬಯಸಿದವರು. ಅಂದರೆ ಮಕ್ಕಳ ಸಾಹಿತ್ಯವೊಂದರಲ್ಲೇ ತಮ್ಮೆಲ್ಲ ಸೃಜನಶೀಲತೆಯನ್ನ ಕ್ರೋಡೀಕರಿಸಿದವರು. ಒಂದು ಬಗೆಯಲ್ಲಿ ಅದೊಂದು ಕರ್ತವ್ಯ, ತಮ್ಮಿಂದ ಆಗಬೇಕಾದ ಅಗತ್ಯದ ಸೇವೆ ಎನ್ನುವ ಹಾಗೆ ಒಂದಿಷ್ಟೆಲ್ಲ ಅಭಿಮಾನದಿಂದಲೇ ತೊಡಗಿಕೊಂಡವರು ಸರಿಸುಮಾರು ಎಲ್ಲರೂ. ತಮ್ಮವೇ ಸಂಘಟನೆಗಳನ್ನ ಕಟ್ಟಿಕೊಂಡು ಸಾಂಘಿಕ ಚಟುವಟಿಕೆಗಿಳಿದವರು, ಅಕಾಡೆಮಿ ಎಂದು ಪರ್ಯಾಯವಾಗಿ ತಮ್ಮದೇ ವ್ಯವಸ್ಥೆಗಿಳಿದವರು, ಸಮ್ಮೇಳನಗಳನ್ನು ಮಕ್ಕಳ ಸಾಹಿತ್ಯಕ್ಕೇ ಪ್ರತ್ಯೇಕವಾಗಿ ಅನೇಕ ಸಲ ಬಹುದೊಡ್ಡ ಪ್ರಮಾಣದಲ್ಲಿ ನಡೆಸುತ್ತ ಬಂದವರು. ಕಾರ್ಯಾಗಾರಗಳನ್ನ ಮಕ್ಕಳಿಗಾಗಿ ಬರೆಯುತ್ತಿರುವ ಲೇಖಕರಿಗೂ, ಹಾಗೆಯೇ ಮಕ್ಕಳಿಗೂ ನಡೆಸುವಲ್ಲಿ ಮುತುವರ್ಜಿ ವಹಿಸಿದವರು. ಅಷ್ಟೇ ಅಲ್ಲ, ಮಕ್ಕಳ ಸಾಹಿತ್ಯದ ಸೃಜನಶೀಲತೆಯಲ್ಲಿ ತಮ್ಮೊಡನೆ ಮಕ್ಕಳನ್ನೂ ಸೇರಿಸಿಕೊಂಡಿದ್ದುದನ್ನೂ ನೋಡುತ್ತೇವೆ. ವಿವಿಧ ಲೇಖಕರ ಕೃತಿಗಳ ಸಂಗ್ರಹಗಳನ್ನ ತಂದುದೂ ಕೂಡ ಇವರ ವಿಶೇಷ. ಮಕ್ಕಳ ಸಾಹಿತ್ಯದ ಪ್ರಕಟಣೆಗೂ ಕಾಳಜಿ ವಹಿಸಿ, ಕೆಲವೆಲ್ಲ ಸ್ವಂತ ಪ್ರಯತ್ನಕ್ಕೂ ಇಳಿದವರು. ಮಕ್ಕಳ ಸಾಹಿತ್ಯದ ವಾತಾವರಣ ಮೂಡಿಸುವುದಕ್ಕೆ ಹೊರಟವೆನ್ನುವ ಪರಿಯಲ್ಲಿ ತಮ್ಮ ಅಭಿಪ್ರಾಯಗಳನ್ನ ವ್ಯಕ್ತಪಡಿಸುವಲ್ಲಿಯೂ ಮುಂದಾದವರು. ಅನೇಕ ಕಡೆಗಳಲ್ಲಿ ಸಾಹಿತ್ಯ ಪರಿಷತ್ತಿನ, ಜಿಲ್ಲಾ ಮಟ್ಟದ, ತಾಲೂಕು ಮಟ್ಟದ ಸಮ್ಮೇಳನಗಳ ಅಧ್ಯಕ್ಷತೆಯನ್ನ ವಹಿಸುವ ಪ್ರಾಮುಖ್ಯತೆಯನ್ನೂ ಈ ಲೇಖಕರು ಪಡೆದರು. ಹೀಗೆ ಮಕ್ಕಳ ಸಾಹಿತ್ಯವೆಂದರೆ ಕಡೆಗಣನೆಯಾಗಬಾರದ, ಸಮಾಜದ ಗೌರವದ ಕೆಲಸ ಎನ್ನುವ ಮನೋಭಾವವನ್ನು ಹುಟ್ಟುಹಾಕುವಲ್ಲಿ ಇವರೆಲ್ಲ ತೊಡಗಿಕೊಂಡರು ಎಂದರೆ ತಪ್ಪಾಗದು.

ಸಿಸು ಸಂಗಮೇಶರು ವಿಜಾಪುರವನ್ನ ಕೇಂದ್ರ ಮಾಡಿಕೊಂಡಹಾಗೆ, ಇನ್ನೂ ಅನೇಕರು ಅಲ್ಲಲ್ಲಿ ಕೇಂದ್ರಗಳನ್ನ ಸೃಷ್ಟಿಸಿಕೊಂಡು ಕೆಲಸಕ್ಕಿಳಿದುದು ಕಾಣುತ್ತದೆ. ಬೆಂಗಳೂರಿನಂಥ ದಕ್ಷಿಣ ಭಾಗದಲ್ಲಿ ಆರ್. ಕಲ್ಯಾಣಮ್ಮನವರಿಂದ ಸ್ಫೂರ್ತಿಗೊಂಡು ಹುಟ್ಟಿದ 'ಮಕ್ಕಳ ಕೂಟ' ಹಲವಾರು ಸಮ್ಮೇಳನಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಹಮ್ಮಿಕೊಳ್ಳುತ್ತ ಬಂದುದಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 'ಮಕ್ಕಳ ಸಾಹಿತ್ಯ ಸಂಗಮ' ಎನ್ನುವ ಸಂಘಟನೆ ಹುಟ್ಟು ಹಾಕಿದುದಿದೆ. ಕಾರಂತರ 'ಮಕ್ಕಳ ಕೂಟ', 'ಬಾಲವನ'ದ ಪ್ರಯತ್ನಗಳಲ್ಲೂ ಈ ಜನ ಸೇರಿ ಪ್ರೇರಣೆ ಪ್ರೋತ್ಸಾಹ ಪಡೆದುದಿದೆ. ಜಯವಂತ ಕಾಡದೇವರ ಬನಹಟ್ಟಿ ಭಾಗದಲ್ಲಿ ಮಕ್ಕಳ ಸಾಹಿತ್ಯದ ಆಸಕ್ತಿ ಮೂಡಿಸುವಲ್ಲಿ ಹಲವಾರು ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಇವರು ಸಮ್ಮೇಳನಗಳನ್ನ ಆಯೋಜಿಸುತ್ತ ಬಂದುದಲ್ಲದೆ, ಶಾಲೆ ಶಾಲೆಗೆ ಹೋಗಿ, ಪುಸ್ತಕಗಳನ್ನೂ ಹಂಚುತ್ತ, ಮಕ್ಕಳ ಓದಿಗೆ ಪೂರಕವಾದ ವಾತಾವರಣ ಮೂಡಿಸುವ ಕೆಲಸ ಮಾಡುತ್ತ ಬಂದಿರುವುದಿದೆ. ಬೆಳಗಾವಿ ಭಾಗದಲ್ಲಿಯೂ ಕೆಲವರೆಲ್ಲ ಸೇರಿಕೊಂಡು ಚಾಲನೆ ನೀಡಿದರು.

ಕೆಲವರೆಲ್ಲ ವೈಯಕ್ತಿಕವಾಗಿ ದೀರ್ಘ ಸಮಯದ, ಹಾಗೆಯೇ ದೊಡ್ಡ ಸಂಖ್ಯೆಯಲ್ಲಿ

ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡು ಬಂದುದು, ಅದೊಂದು ಅತಿ ಶ್ರದ್ಧಾಮಯವಾದ ಕೆಲಸವೆನ್ನುವಂತೆ ನಡೆದುಕೊಂಡುದು ಗಮನಿಸಬೇಕಾದುದು. ಸಿಸು ಸಂಗಮೇಶ, ಸಂಗಮೇಶ ಹೊಸಮನಿ, ರಸಿಕ ಪುತ್ತಿಗೆ, ಎ.ಕೆ. ರಾಮೇಶ್ವರ, ಗುರುಪಾದಸ್ವಾಮಿ ಹಿರೇಮಠ, ಉಳುವೀಶ, ಶಂ.ಗು. ಬಿರಾದಾರ, ಪರಶುರಾಮ ಚಿತ್ರಗಾರ, ಸಂಗಮೇಶ ಬಾಗಲಕೋಟ, ಈಶ್ವರಚಂದ್ರ ಚಿಂತಾಮಣಿ, ದೇವೇಂದ್ರ ಸತ್ಯಾರ್ಥಿ, ಶೇಖರಪ್ಪ ಹುಲಿಗಿರಿ, ಚಂದ್ರಕಾಂತ ಕರದಳ್ಳಿ, ಅಣ್ಣಾಜಿ ಫಡತಾರೆ, ಅಪ್ಪಾಸ್ವಾಮಿ, ಕವಿತಾ ಕೃಷ್ಣ, ಪಾ.ಭಿ. ಪಾಟೀಲ, ಕಾಡಣ್ಣ ಹೊಸಟ್ಟಿ, ಜಯವಂತ ಕಾಡದೇವರ ಪ.ಗು. ಸಿದ್ಧಾಪೂರ, ಜಂಬುನಾಥ ಕಂಚ್ಯಾಣಿ, ಪಳಕಳ ಸೀತಾರಾಮ ಭಟ್ಟ, ಕಂಚ್ಯಾಣಿ ಶರಣಪ್ಪ, ಬಾ. ಈ. ಕುಮತೆ, ಸಿದ್ಧಲಿಂಗ ಹದಿಮೂರ, ದೊಡ್ಡಣ್ಣ ಗದ್ದನಕೇರಿ, ಆರ್. ಬಸವರಾಜ, ರಾಮಚಂದ್ರ ಭಟ್ಟ, ಬಿ. ಶಂಕರ ಭಟ್ಟ, ಹೊನ್ನಯ್ಯ ಶೆಟ್ಟಿ, ಜಿ.ಎನ್. ಲಕ್ಷ್ಮಣ ಪೈ, ದಾಮೋದರ ಪೈ, ರಾ. ಮೊ. ವಿಶ್ವಾಮಿತ್ರ, ಕೆ.ಜಿ. ಶೆಟ್ಟಿ ಕಟಂದಲೆ, 'ಎಳೆಯರ ಗೆಳೆಯ' ಮುಳಿಯ ಶಂಕರಭಟ್ಟ, ಬಾಳಿಲ ಶಂಕರಭಟ್ಟ, ವಿ.ಮ. ಭಟ್ಟ, ಎ. ಹರಿದಾಸ ಶೆಣೈ, ಮಚ್ಚಿಮಲೆ ಶಂಕರನಾರಾಯಣ, ನಾರಾಯಣ ದಾಮೋದರ, ಬೆಂಡರವಾಡಿ ಸುಬ್ಬಣ್ಣ ಮುಂತಾಗಿ ಈ ಪಟ್ಟಿ ದೊಡ್ಡದು ಅಂದರೆ ದೊಡ್ಡದು.

ಹೀಗೆ ಒಂದರ್ಥದಲ್ಲಿ ಸಾಮೂಹಿಕವಾಗಿ ಕೃಷಿಯಲ್ಲಿ ತೊಡಗಿಕೊಂಡ ಈ ಲೇಖಕರ ಕೃತಿಗಳಲ್ಲಿ ಕೆಲವೆಲ್ಲ ಸಾಮಾನ್ಯವಾಗಿ ಕಂಡುಕೊಂಡ ಒಪ್ಪಿಗೆಗಳು, ಮೌಲ್ಯಗಳು, ಅಪೇಕ್ಷೆಗಳೂ ಇದ್ದವು. ಸಾಹಿತ್ಯ ಅದಷ್ಟೂ ಇಲ್ಲಿ ಶಾಲಾವಾತಾಪರಣದ ಆಸರೆಯಲ್ಲಿ ತನ್ನನ್ನ ಕಂಡುಕೊಂಡಿತು. ಶಾಲೆ ಯಾವತ್ತೂ ಅತ್ಯಂತ ಗೌರವದ ಸ್ಥಳವಾಗಿ ಕಂಡಿತು. ಅದು ದೇವಮಂದಿರ ಎನ್ನುವ ವಾಡಿಕೆ ಸರ್ವೇಸಾಮಾನ್ಯವಾಗಿತ್ತು. ಶಿಕ್ಷಕರನ್ನು 'ಗುರುಗಳು' ಎಂದೇ ಸಂಬೋಧಿಸಿ ಗೌರವಯುತವಾಗಿ ನಡೆದುಕೊಳ್ಳುವ ಪಾಠ ತಪ್ಪದೆ ಕಾಣಿಸಿತು. ಮಕ್ಕಳೆಲ್ಲ ವಿಧೇಯರಾಗಿ, ಶ್ರಮವಹಿಸಿ ಅಭ್ಯಾಸದಲ್ಲಿ, ದಿನ ನಿತ್ಯದ ನಡವಳಿಕೆಗಳಲ್ಲಿ ತೊಡಗಿಕೊಳ್ಳುವುದು, ಗುರುಹಿರಿಯರಿಗೆ ಭಕ್ತಿಯಿಂದ ನಡೆದುಕೊಳ್ಳುವುದು, ಉತ್ತಮ ಭವಿಷ್ಯಕ್ಕಾಗಿ ಶ್ರಮವಹಿಸುವುದು, ಆದರ್ಶಗಳನ್ನ ಸದಾ ತಮ್ಮ ಮುಂದೆ ಇರಿಸಿಕೊಂಡು ನಡೆಯುವುದು ಮುಂತಾದ ಮೌಲ್ಯಗಳು ವ್ಯಾಪಿಸಿಕೊಂಡಿದ್ದವು. ಸಾಹಿತ್ಯವೆನ್ನುವುದು ಭವಿಷ್ಯವನ್ನು ರೂಪಿಸುವ, ಒಳ್ಳೆಯ ವ್ಯಕ್ತಿತ್ವದ ಅಡಿಗಲ್ಲಾದ ಸಾಧನೆ ಎನ್ನುವ ಪಾವಿತ್ರ್ಯದ ಭಾವ ಮೂಡಿತ್ತು. ಗಾಂಧಿ ಜೀವನ ಮೌಲ್ಯಗಳು ಇನ್ನೂ ಗಟ್ಟಿಯಾಗಿಯೇ ಉಳಿದ ಈ ಬಗೆಯ ಶಿಕ್ಷಕ ವರ್ಗದಲ್ಲಿ ಬಿಳಿಯ ಉಡುಪುಗಳೂ, ಶುಭ್ರ ಬಿಳಿಯ ಪಂಚೆ, ಜುಬ್ಬ, ಗಾಂಧಿ ಟೋಪಿ ಸರ್ವೇಸಾಮಾನ್ಯವಾಗಿ ಕಂಡಿದ್ದವೂ ಕೂಡ. ಸುಮಾರು ೪೦ ವರುಷದಷ್ಟು ಕಾಲ ಅವಿರತವಾಗಿ ತೊಡಗಿಕೊಂಡ, ಹಾಗೆಯೇ ಮುಂದುವರೆದುಕೊಂಡು ಬಂದ ಈ ಸಮೂಹದ ಪ್ರಭಾವ ಮುಂದಿನ ದಶಕಗಳಲ್ಲೂ ತನ್ನ ಪರಿಣಾಮವನ್ನ ಕಾಯ್ದುಕೊಂಡಿತು. ಮಕ್ಕಳ ಸಾಹಿತ್ಯವೆಂದರೆ ಇಂಥದೇ, ಇದೇ ಎನ್ನುವ ಮನೋಭಾವ ಕೆಲವೆಲ್ಲ ಪ್ರದೇಶಗಳಲ್ಲಿ ಗಟ್ಟಿಗೊಂಡುದೂ ಆಗಿತ್ತು. ಅಷ್ಟರ ಮಟ್ಟಿಗೆ ಲಾಕ್ಷಣೀಕರಣ ನಡೆದಾಗಿತ್ತು.

ಇನ್ನೊಂದು ಗಮನಿಸಬಹುದಾದ ಸಂಗತಿ ಎಂದರೆ, ಇವರೆಲ್ಲ ಸರಿಸುಮಾರು ಗ್ರಾಮೀಣ ಪ್ರದೇಶದಿಂದ ಬಂದವರಾದುರಿಂದ, ಇವರ ರಚನೆಗಳಲ್ಲಿ ಗ್ರಾಮೀಣ ಪರಿಸರ ಸಾಕಷ್ಟು ಆವರಿಸಿಕೊಂಡಿತು. ಕೆಲವರೆಲ್ಲ ಹಳ್ಳಿವಾಡದ ದೇಸೀ ಬನಿಯನ್ನ ಚೆನ್ನಾಗಿ ಅಭಿವ್ಯಕ್ತಿಸಿದರೂ

ಕೂಡ. ಅಷ್ಟಾಗಿಯೂ ಒಂದು ಬಗೆಯ 'ಸ್ಟ್ಯಾಂಡರ್ಡ್' ಬಗೆಯನ್ನ ಇವರೆಲ್ಲ ಅಪೇಕ್ಷಿಸಿದರು. ತಾವು ಬರೆಯುವ ರಚನೆಗಳು ಸರಳವಾಗಿರುವದರ ಜೊತೆಗೆ ಎಲ್ಲ ಕನ್ನಡದ ಮಕ್ಕಳಿಗೂ ಏಕಕಾಲಕ್ಕೆ ಮುಟ್ಟುವ ಕ್ಷಮತೆ ಹೊಂದಿರಬೇಕು ಎಂದುಕೊಂಡರೂ ಕೂಡ. ಹಾಗಾಗಿ ಕೆಲವೆಲ್ಲ ಗ್ರಾಮೀಣದ ಸಹಜದ ಬಳಕೆಗಳನ್ನು ಮುದ್ದಾಮಾಗಿ ಬದಿಗಿಟ್ಟುದೂ ಆಯಿತು. ಆದರೂ ಕೆಲವರು ಗ್ರಾಮೀಣ ಭಾಷೆಯ ಸೊಗಡನ್ನ, ಅಲ್ಲಿನ ವಾತಾವರಣವನ್ನ ಚೆನ್ನಾಗಿಯೇ ಬಳಸಿಕೊಂಡರು. ಹಾಗಾಗಿ ಮಕ್ಕಳ ಸಾಹಿತ್ಯ ಗ್ರಾಮೀಣ ಮಕ್ಕಳನ್ನ ತಲುಪುವಲ್ಲಿ ಒಳ್ಳೇ ಕೆಲಸವೇ ಆಯಿತು ಎನ್ನಬಹುದು. ಒಂದು ಬಗೆಯಲ್ಲಿ ಇವರದೆಲ್ಲ ಒಂದೇ ಹರವಿನ ಸಾಹಿತ್ಯವಾಗಿಯೂ ಕಂಡಿತು. ಒಬ್ಬರನ್ನ ಅನುಸರಿಸಿ ಇನ್ನೊಬ್ಬರು, ಅವರನ್ನ ಅನುಸರಿಸಿ ಮತ್ತೊಬ್ಬರು ಹೀಗೆ ಒಂದು ನಿಗದಿತ ದಾರಿಯಲ್ಲಿಯೇ ಎಲ್ಲ ಹೆಜ್ಜೆ ಹಾಕಿದುದು ಬಹುವಾಗಿ ಕಾಣುತ್ತದೆ. ಹಾಗಾಗಿ ವೈಯಕ್ತಿಕ ವಿಶೇಷತೆಗಳು ಎದ್ದುಕಾಣುವಂತೆ ಇಲ್ಲಿ ನೋಡಸಿಗುವುದಿಲ್ಲ. ಹಾಗೇಂತ ಕೆಲವರಿಂದ ಸಾಧ್ಯವಾದ ಹೊಸ ಚಾಚುಗಳು, ವ್ಯಕ್ತಿ ವೈಶಿಷ್ಟ್ಯತೆಗಳು, ಒಂದಿಷ್ಟೆಲ್ಲ ಅಧ್ಯಯನ ಪರತೆಗಳು ಕಂಡುದಿದ್ದೇ ಇದೆ. ಅದನ್ನೆಲ್ಲ ಖಂಡಿತ ಗುರುತಿಸಲೇಬೇಕು. ಕೆಲವರ ಪ್ರತಿಭಾಪೂರ್ಣ ಅಭಿವ್ಯಕ್ತಿ ಎದ್ದುಕಾಣುವಂತೆ ರಚನೆಗಳು ನಮ್ಮನ್ನು ಸೆಳೆಯುತ್ತವೆ. ಹೀಗೆ ಒಟ್ಟಾಗಿ ನೋಡುವಾಗ ಕೆಲವೆಲ್ಲ ಸೊಗಸಾದ ರಚನೆಗಳು ಇಲ್ಲಿ ಗಮನಕ್ಕೆ ಬರುತ್ತವೆ. ಖಂಡಿತ ಅವು ಕನ್ನಡ ಮಕ್ಕಳ ಸಾಹಿತ್ಯವನ್ನು ಪುಷ್ಟಿಗೊಳಿಸುವ ಕೆಲಸ ಮಾಡಿವೆ.

ಈ ಬಗೆಯ ಹುರುಪಿನ, ಹುಮ್ಮಸ್ಸಿನ, ಕನ್ನಡದಲ್ಲಿ ಅಲಕ್ಷ್ಯಕ್ಕೆ ಒಳಗಾದ ಮಕ್ಕಳ ಸಾಹಿತ್ಯದೆಡೆಗಿನ ಕಾಳಜಿ ಹಲವಾರು ಕೊರತೆಗಳನ್ನ ಅನುಭವಿಸಿದುದೂ ಅಷ್ಟೇ ಸಹಜ. ಬಹು ಮುಖ್ಯವಾಗಿ ಓದಿನ ವಿಸ್ತಾರಗಳನ್ನು ಈ ವರ್ಗ ಹೊಂದಲಿಲ್ಲ. ಕನ್ನಡದಲ್ಲಿಯೇ ಉಳಿದುದರಿಂದ, ವಿಸ್ತೃತವಾಗಿ ಬೆಳೆದ ಇಂಗ್ಲಿಷಿನ ಹೊಸತು ಇವರಿಗೆ ಅಷ್ಟಾಗಿ ಸನಿಹಕ್ಕೆ ಸುಳಿಯಲಿಲ್ಲ. ಅಲ್ಲದೆ ಅಧ್ಯಯನ, ವಿಮರ್ಶೆ ಮುಂತಾಗಿ ಹೆಚ್ಚಿನ ಹರವಿಗೆ ಇವರೆಲ್ಲ ತೆರೆದುಕೊಳ್ಳಲಿಲ್ಲ. ಹಾಗಾಗಿಯೇ ಮುಖ್ಯಧಾರೆಯ ಲೇಖಕರಿಂದ ಪ್ರತ್ಯೇಕವಾಗಿಯೇ ಉಳಿಯುತ್ತ ಬಂದರು. ಮುಖ್ಯಧಾರೆಯ ಲೇಖಕರೂ ಇವರತ್ತ ಕಣ್ಣುಹಾಯಿಸಲಿಲ್ಲ. ಹಾಗಾಗಿ ತಮ್ಮದೇ ಜಗತ್ತನ್ನು ಸೃಷ್ಟಿಸಿಕೊಂಡು ಕುಬ್ಜತೆಯನ್ನು ಹೊಂದಿದರು ಎಂದರೆ ತಪ್ಪಾಗದು.

ಪದ್ಯ ಕೃಷಿಯೆಡೆಗೇ ತುಡಿದುದು ಸಾಮಾನ್ಯವಾಗಿ ಕಾಣುತ್ತದೆ. ಕೆಲವರೆಲ್ಲ ಕತೆಗಳನ್ನ, ಕಿರು ಕಾದಂಬರಿಗಳನ್ನ ರಚಿಸಿದರೂ ಪದ್ಯಗಳ ಮುಂದೆ ಅವುಗಳ ಸಂಖ್ಯೆ ಬಹಳ ಕಡಿಮೆ. ಅಲ್ಲದೆ ಪದ್ಯ ಕೃಷಿಯಲ್ಲಿ ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಸುರಿದ ನವೋದಯದ ಮಳೆಯನ್ನ ಅನುಸರಿಸಿದುದೂ ಎದ್ದುಕಾಣುತ್ತದೆ. ಹೆಚ್ಚಾಗಿ ಗ್ರಾಮೀಣ ಭಾಗದಿಂದ ಬಂದ ಇವರು ಅಲ್ಲಿನ ವಹಿವಾಟುಗಳನ್ನ ಅಷ್ಟಾಗಿ ನೋಡದೆ ಹೋದರು. ಅಲ್ಲಿನ ಲಯಗಳು, ಆಟದ ಲವಲವಿಕೆಗಳು, ನಾನಾ ಬಗೆಯ ಬಳಕೆಗಳು ಇವು ಗಮನಿಸದೇ ಹೋದಂಥವು. ರಾಜರತ್ನಂ ಇಂಥ ಕೆಲವನ್ನೆಲ್ಲ ಒಳ್ಳೇ ಚುರುಕಾಗಿ ತಂದುಕೊಂಡರು. ಬಹು ಮುಖ್ಯವಾಗಿ ಶಿಕ್ಷಕರಾಗಿ, ಹಿರಿಯರಾಗಿ ಮಕ್ಕಳಿಗೆ ಉದ್ದೇಶಪಟ್ಟು ನೀಡಿದುದೇ ಇಲ್ಲಿನ ಕೃಷಿಯ ದೊಡ್ಡ ಸರುಕು ಎನ್ನುವಂತೆ ಕಂಡಿತು. ಮಕ್ಕಳಿಗೆ ಬರೆಯುವ ಅಗತ್ಯಗಳು, ಅವುಗಳ ಹೊಸ ಹೊಸ ಸಾಧ್ಯತೆಗಳ ಕಡೆಗೆ ಸ್ವೋಪಜ್ಞತೆಯಿಂದ ತಿರುಗಿದುದು ಕಾಣಲಿಲ್ಲ. ಕತೆಗಳ ವಿಷಯದಲ್ಲಂತೂ ಈಗಾಗಲೇ ಇದ್ದ ಗ್ರಾಮೀಣ ಸಾಮಗ್ರಿಯನ್ನೇ ಹೆಚ್ಚಾಗಿ ಬಳಸಿಕೊಂಡುದು ಕಾಣುವಂತಿದ್ದರೆ,

ಪ್ರಾಣಿ ಕತೆಗಳನ್ನ ಹೆಚ್ಚು ಹೆಚ್ಚು ಬರೆದವರು, ಮತ್ತೊಮ್ಮೆ ಪಂಚತಂತ್ರದ ಕತೆಗಳನ್ನ ಸೃಷ್ಟಿಸಿದಂತೆ ಹೊಸ ಹಂದರಗಳನ್ನ ಚಿತ್ರಿಸತೊಡಗಿದುದು ಕಾಣುತ್ತದೆ.

ಈ ಸಮಯದ ಮಾಹಿತಿ ಸಾಕಷ್ಟು ಸಿಗುತ್ತಿದ್ದರೂ, ಕಾಣೆಯಾಗಿಹೋದ, ಮರೆತೇ ಹೋಗಿ, ಈಗ ಒಂದೆಲ್ಲೋ ಎಳೆ ಹಿಡಿದು ಹುಡುಕುತ್ತ ಹೋದರೆ ಸಿಗದೇ ಹೋಗುತ್ತಿರುವ ಪ್ರಸಂಗಗಳೂ ಸಾಕಷ್ಟು, ಇವು ಹೀಗೆ ಮಾಸಿಹೋಗುವ ಕಾರಣವಿರಲಿಲ್ಲ. ಮೊದಲಿನಿಂದಲೂ ಕನ್ನಡದ ಮುಖ್ಯಧಾರೆ ಮಕ್ಕಳಿಗಾಗಿನ ಬರವಣಿಗೆಯನ್ನ ಅಷ್ಟಾಗಿ ಗಮನಿಸಲೇ ಇಲ್ಲವಾದುದರಿಂದ ಹೀಗಾಗಿದೆ ಎನ್ನದೆ ವಿಧಿಯಿಲ್ಲ.

ಸಿಸು ಸಂಗಮೇಶ – ಶಿಶು ಸಾಹಿತ್ಯದ ಗೋಳಗುಮ್ಮಟ

ಸಿಸು ಸಂಗಮೇಶ(೧೯೨೯–೨೦೦೧) ಅವರು ಈ ಮಕ್ಕಳ ಸಾಹಿತಿಗಳ ಸಮೂಹದಲ್ಲಿ ಮುಂಚೂಣಿಯಲ್ಲಿ ಕಾಣಿಸಿಕೊಂಡರು. ಮಕ್ಕಳ ಸಾಹಿತ್ಯಕ್ಕಾಗಿಯೇ ಅವರು ತಮ್ಮ ಜೀವನವನ್ನೆಲ್ಲ ತೊಡಗಿಸಿಕೊಂಡರು ಎಂದರೆ ಅತಿಶಯೋಕ್ತಿಯಲ್ಲ. ಹಾಗೆ ನೋಡಿದರೆ ಅವರು ಪ್ರಬುದ್ಧರಿಗಾಗುವ ಪದ್ಯಗಳ ಸಂಕಲನವನ್ನೇ ಮೊದಲಿಗೆ ಪ್ರಕಟಿಸಿದುದು. ಆದರೆ ಇದ್ದಕಿದ್ದಹಾಗೆ ಮಕ್ಕಳ ಸಾಹಿತ್ಯಕ್ಕೆ ತಿರುಗಿದವರು ಅದನ್ನೆ ತಮ್ಮ ಸಾಧನಾಪಥವನ್ನಾಗಿ ಮಾಡಿಕೊಂಡರು. ಅತ್ಯಂತ ಚತುರ, ಯಶಸ್ವೀ ಸಂಘಟನಾಕಾರರಾಗಿದ್ದ ಅವರು ಹಲವಾರು ಅಭೂತಪೂರ್ವ ಚಟುವಟಿಕೆಗಳಿಗೆ ಸಾಕ್ಷಿಯಾದರು. ಸಾಹಿತ್ಯವೆನ್ನುವುದನ್ನು ಹೀಗೆ ವ್ರತವೆಂಬಂತೆ ಭಾವಿಸಿದುದೇ ಈ ಬಗೆಯ ಶಿಕ್ಷಕ ಸಾಹಿತಿಗಳ ಎದ್ದುಕಾಣುವ ಲಕ್ಷಣವೆಂದರೆ ತಪ್ಪಾಗದು. ಸಿಸು ಸಂಗಮೇಶರಂಥವರು ಇದಕ್ಕೆ ದಾರಿ ಮಾಡಿಕೊಟ್ಟರು. ಹೀಗೆ ದೊಡ್ಡ ಪ್ರಮಾಣದಲ್ಲಿ ಅರ್ಪಿಸಿಕೊಳ್ಳುವುದಕ್ಕೆ ಕಾರಣ ಅವರೊಳಗಿನದಾದುದರ ಜೊತೆಗೆ ಅಂದು ಒಟ್ಟು ಸಾಹಿತ್ಯದ ವಾತಾವರಣದಲ್ಲಿ ಮಕ್ಕಳ ಸಾಹಿತ್ಯವನ್ನ ಗೌಣವಾಗಿ ಕಂಡುದು, ಅಷ್ಟಾಗಿ ಲಕ್ಷಿಸದೇ ಹೋದುದೂ ಕಾರಣ. ಒಂದು ಬಗೆಯಲ್ಲಿ ಇದು ಪ್ರತಿಭಟನೆಯಂತೆಯೂ ಕಾಣಿಸಿದುದಕ್ಕೆ ಕಾರಣಗಳಿವೆ. ಸಿಸು ಸಂಗಮೇಶರ ಹಲವಾರು ಪತ್ರಿಕಾ ಪ್ರಕಟಣೆಗಳು, ವ್ಯಗ್ರ ಲೇಖನಗಳು ಇದಕ್ಕೆ ಸಾಕ್ಷಿ. ಇವನ್ನೆಲ್ಲ ಸೇರಿಸಿದ ಅವರ ಪುಸ್ತಕವೊಂದು ಪ್ರಕಟವಾಗಿದೆ.

ಜನಪದವೋ, ಪರಂಪರೆಯ ಪುರಾಣದ ಕತೆಗಳೋ, ಪಂಚತಂತ್ರವೋ ಅಂತೂ ಇಂಥ ಆಕರಗಳ ಆಧಾರಿತ ಕತೆಗಳೇ ಇದುವರೆಗೆ ಕಾಣಿಸಿಕೊಂಡ ವಾತಾವರಣದಲ್ಲಿ ಸಿಸು ಸಂಗಮೇಶರು ಒಂದಿಷ್ಟೆಲ್ಲ ಹೊಸತಿಗೆ ತುಡಿದರು. ಅವರ 'ಮಂಕುಮರಿ', 'ತಪ್ಪಿಗೆ ತಕ್ಕ ಶಿಕ್ಷೆ', 'ಆಶೆ ಬುರಕಿ ಆಶಾ' ಮುಂತಾದ ಅವರ ಕತೆಗಳು ಈ ಬಗೆಯ ಹೊಸತನ್ನ ಒಂದಿಷ್ಟು ತೋರಿಸಿದವು. ಸಂಭಾಷಣೆ ಹೆಣೆಯುವಲ್ಲಿ, ಕತೆಯನ್ನು ಮುಂದಿಡುವಲ್ಲಿ ತಮ್ಮ ಛಾಪನ್ನು ತೋರಿಸಿದರು. ಆದರೂ ಇಂಥ ಕತೆಗಳೂ ಅವರ ನೇರ ನೈತಿಕ ಪ್ರವೇಶದಿಂದ ಬಿಡುಗಡೆ ಹೊಂದಲಿಲ್ಲ. ಹೀಗಾಗಿ ಸೊಗಸಾದ ಕತೆಯೊಂದು ಬರಿಯ ಹಂದರವಾಗಿ ನಿಂತುಬಿಡುವುದನ್ನ ಕಾಣುತ್ತೇವೆ. ಮಾಹಿತಿನೀಡುವ ಸರಕನ್ನ ವಿಶೇಷವಾಗಿ ಅವರು ಕತೆಯ ನೆಪದಲ್ಲಿ ಮಾಡಿದರು ಎನ್ನಬಹುದು. 'ನನ್ನ ಮನೆ', 'ನನ್ನ ಗೆಳೆಯ ಎಸ್ಕಿಮೋ ಇಗ್ಲಿಯಕ್', 'ನನ್ನ ಗೆಳೆಯ ಜಪಾನದ ಟಾರೋ' ಮುಂತಾದುವೆಲ್ಲ ಹೀಗೆ ಉದ್ದೇಶಗೊಂಡುವೇ. ಪ್ರಾಣಿಗಳನ್ನ ತಮ್ಮ ಕತೆಗಳಲ್ಲಿ ಸಾಕಷ್ಟು ಬಳಸಿಕೊಂಡಿರುವುದು ಕಾಣುತ್ತದೆ. 'ನಾಯಿಯ ಬಾಲ ಡೊಂಕೇಕೆ ?',

'ಬಾವುಗ ಏಕೆ ಮೈ ತೊಳೆಯುವದಿಲ್ಲ?', 'ಕಾಗೆ ಏಕೆ ಕಪ್ಪಗೆ ?', 'ಮೊಲದ ಮೂಗು ಮೊಂಡಾಯಿತು' ಮುಂತಾಗಿ ಅನೇಕ ಕತೆಗಳನ್ನ ಈ ಹಿಂದಿನ ಪರಂಪರೆಯಲ್ಲೇ, ಆದರೆ ತಮ್ಮವೇ ಆಗಿ ಬರೆದಿದ್ದಾರೆ.

ಪಂಚತಂತ್ರದ ಕತೆಗಳನ್ನೇ ಮತ್ತೆ ಹೇಳದೇ ತಾವು ಹೇಳಬೇಕೆಂದುಕೊಂಡುದನ್ನ ಪ್ರಾಣಿಗಳ ಮೂಲಕ ಹೇಳಿ ನೋಡಿದುದು ಸಿಸು ಅವರ ಹೊಸತು. ಅವರು ಹೇಳಹೊರಟಿದ್ದು ಒಳ್ಳೆಯ, ನೀತಿಮಯ ನಡಾವಳಿಗಳ ಸಂಗತಿಗಳು. ಸಿಸು ಅವರು ಹೇಳುವುದೆಲ್ಲ ಹಿರಿಯರು ಮಕ್ಕಳ ಬದುಕನ್ನ ರೂಪಿಸುವ ಕಾಳಜಿಯ ಸಂಗತಿಗಳೇ. ಹೀಗಾಗಿ ಅವರು ಒಬ್ಬ ಹಿರಿಯರಾಗಿ, ಶಿಕ್ಷಕರಾಗಿ ಜವಾಬ್ದಾರಿವಹಿಸುವವರಾಗಿ ಕಾಣುತ್ತಾರೆ. ವಾಸ್ತವವೆಂದರೆ, ಅವರು ಬಳಸಿಕೊಳ್ಳುವ ಪಾತ್ರಗಳು ನಮ್ಮ ಸುತ್ತಲಿನ ಮಕ್ಕಳನ್ನ ಕತೆಗಳಲ್ಲಿ ಕಲ್ಪಿಸಿಕೊಳ್ಳುವುದು, ಅವುಗಳ ಸುತ್ತಲಿನ ವಾಸ್ತವದ ಸಂಗತಿಗಳನ್ನಲ್ಲ. ಸಾಮಾನ್ಯವಾಗಿ ಮಕ್ಕಳ ನಡಾವಳಿಗಳು, ಅವು ಮಾಡುವ ತಪ್ಪು ತಡೆಗಳು, ಅವನ್ನ ತಿದ್ದಿ ಈಗಿನಿಂದಲೇ ಸರಿದಾರಿಯಲ್ಲಿ ನಡೆಯಲು ಪ್ರೇರೇಪಿಸುವ ಕೆಲಸವನ್ನ ಘಟನೆಗಳನ್ನ ಹೊಸೆದು ಕತೆ ಮಾಡಿದುದು ಇಲ್ಲಿನ ಸಾಮಾನ್ಯದ ತಂತ್ರ. ಕತೆ ತನ್ನಷ್ಟಕ್ಕೆ ತಾನೇ ಬಿಚ್ಚಿಕೊಳ್ಳುವುದಾಗದೇ ಸಿಸು ಅವರು ಹೇಳುವ ಸಂಗತಿಗಳಿಗಾಗಿ ಸೃಷ್ಟಿಗೊಳ್ಳುವಂಥದು. ಇದು ನಮ್ಮ ಹಿಂದಿನ ಪರಂಪರೆಯ ನೀತಿ ಕತೆಗಳ ಹೊಸ ರೂಪಾಂತರವೇ ಸೈ. ಪಂಚತಂತ್ರ ಹೇಳುವ ನೀತಿಗಳು ಒಂದಿಷ್ಟೆಲ್ಲ ವ್ಯಾವಹಾರಿಕ ಹರವಿನವು, ಅವು ರಾಜಕುಮಾರರ ಮಕ್ಕಳನ್ನ, ರಾಜಕೀಯ ವಾತಾವರಣವನ್ನ ಗಮನಿಸಿಕೊಂಡು ರಚನೆಗಿಳಿದುವಾದುದರಿಂದ ಅದೆಲ್ಲ ಅಗತ್ಯವಾಗಿ ಕಂಡಿತ್ತು. ಆದರೆ ಸಿಸು ಅವರ ಕತೆಗಳ ಉದ್ದೇಶ ಅವರ ಮುಂದಿನ ಮಕ್ಕಳು. ಇವರು ಯಾವೊಂದು ವರ್ಗದ, ಯಾವೊಂದು ವಿಶಿಷ್ಟ ವಾತಾವರಣದ ಮಕ್ಕಳಲ್ಲ, ಒಟ್ಟು ಮಕ್ಕಳು, ಅವರು ಶಾಲೆಯಲ್ಲಿ ಸಂಧಿಸುವ ಮಕ್ಕಳು ಇವರು. ಹಾಗಿದ್ದಾಗಲೂ ಕೆಲವೆಲ್ಲ ಒಂದಿಷ್ಟು ಹೊಸ ಚಾಚುಗಳನ್ನ ಇಂಥವುಗಳು ತೋರಿಸಿದವು. ಶಾಲೆಗೆ ಹೋಗಲು ಹೊಸ ಸೈಕಲ್ಲನ್ನು ಕೊಡಿಸಬೇಕೆಂದು ಪದೇ ಪದೇ ಬಡ ತಂದೆಯನ್ನ ಪೀಡಿಸುವ ರವಿ ಎನ್ನುವ ಹುಡುಗ, ತನ್ನ ಅಪ್ಪನ ಪರಿಸ್ಥಿಯನ್ನು ಅರಿತುಕೊಂಡು ಸೈಕಲ್ಲು ಬೇಡ ಎನ್ನುವ ನಿರ್ಧಾರಕ್ಕೆ ಬರುತ್ತಾನೆ. ಇನ್ನೊಂದು ಕತೆಯಲ್ಲಿ ರಾಮು ಅನ್ನುವ ದಡ್ಡ ಹುಡುಗ ಮನೆಯಲ್ಲಿ ತಂದೆಯ ಮಾತು ಕೇಳಿ ತನ್ನೊಳಗೆ ಅರಿವನ್ನು ಮೂಡಿಸಿಕೊಳ್ಳುವ, ಅಭ್ಯಾಸಕ್ಕೆ ಶ್ರಮದಿಂದ ಸಿದ್ಧನಾಗುವ ಪ್ರಸಂಗ ಇದೆ. ಅಪ್ಪನ ಜೇಬಿನಿಂದ ದಿನವೂ ಹಣ ಕದಿಯುವ ಹುಡುಗನ ಮನಸ್ಸು ಪರಿವರ್ತಿಸಲು ಅವರ ತಂದೆ ಎಲ್ಲ ನೋಟುಗಳಿಗೆ ಚೀಟಿ ಅಂಟಿಸಿ ಇಟ್ಟರಂತೆ. ಅದನ್ನ ತಿಳಿದು, ಉಪಾಯ ಫಲಿಸದ್ದನ್ನ ಕಂಡು ಹುಡುಗ ತಾನೇ ಬದಲಾಗುವ ಪ್ರಸಂಗ ಇನ್ನೊಂದು ಕತೆಯಲ್ಲಿ ಬಂದಿದೆ. ಹೀಗೆಯೇ ಕ್ಲಾಸಿನಲ್ಲಿ ಸೇಂಗಾ ತಿಂದು ತಿಂದು ಸಿಪ್ಪೆ ಚೆಲ್ಲುವ ಹುಡುಗನ, ಅವನನ್ನು ಶಿಕ್ಷಕರೊಬ್ಬರು ತಮ್ಮ ಎತ್ತರದ ನಡತೆಯಿಂದ ಬದಲಾಗುವಂತೆ ಮಾಡುವುದು ಕತೆಯಾಗಿದೆ. ಆ ಸಿಪ್ಪೆಗಳನ್ನೆಲ್ಲ ಮಾತಾಡದೇ ಅವರೇ ತೆಗೆದುಹಾಕುತ್ತಿದ್ದರು. ಅಲ್ಲದೆ ಅವನು ಸೇಂಗಾ ತಿಂದೇ ಆರೋಗ್ಯ ಕೆಡಿಸಿಕೊಂಡು ಮಲಗಿದಾಗ ಅವರೇ ಔಷಧಿಯನ್ನ ತರಿಸಿ ಹಾಕುತ್ತಾರೆ. ಅನಿಲನೆನ್ನುವ ಹುಡುಗ ಅಬಕಾರಿ ಇಲಾಖೆಯ ಲಂಚಕೋರ ಅಧಿಕಾರಿಗೆ ತನ್ನ ತಂದೆಯೇ ಲಂಚ ಕೊಡುವುದನ್ನ ನೋಡಿ, ಉಪಾಯದಿಂದ ನೋಟುಗಳು ಹರಿದು ಹೋಗಿವೆ ಎನ್ನುತ್ತ ಇಸಿದುಕೊಂಡು ಅವುಗಳ ನಂಬರುಗಳನ್ನು ಬರೆದುಕೊಂಡು ಪೋಲೀಸು ಇಲಾಖೆಗೆ ಸುದ್ದಿ ಮುಟ್ಟಿಸುವಂಥ ಕತೆಯನ್ನೂ ಅವರು ಬರೆದುದಿದೆ. ಅವರು ಆದಷ್ಟೂ

ಎಲ್ಲ ಕಡೆಯ ಮಕ್ಕಳಿಗೂ ಸಲ್ಲುವ ಭಾಷೆಯ ಬಳಕೆಗೆ ತಮ್ಮನ್ನು ನಿರ್ಬಂಧಿಸಿಕೊಂಡರು ಎಂದು ಕಾಣುತ್ತದೆ, ಅದರಿಂದಲೇ ಅವರ ಬರವಣಿಗೆಯಲ್ಲಿ, ಅಲ್ಲಿನ ಸಂಭಾಷಣೆಗಳಲ್ಲಿ ಗ್ರಾಂಥಿಕ ಬಗೆಯೇ ಎದ್ದುಕಾಣುತ್ತದೆ.

ಹಿರಿಯರ ಆದರ್ಶಗಳನ್ನ ಅವರ ಜೀವನ ಆಧಾರಿತ ಸಂಗತಿಗಳಿಂದ ಮಕ್ಕಳ ಮುಂದಿಟ್ಟ ಬರಹಗಳು ಹೆಚ್ಚು ಚೇತೋಹಾರಿಯಾಗಿವೆ ಎನಿಸುತ್ತದೆ. ಬಡ ಬಾಲಕನೊಬ್ಬ ಬೆಟ್ಟದ ಕಂದರಗಳಲ್ಲಿ ಸಾಗುತ್ತಿರುವಾಗ ದರೋಡೆಕೋರರು ಎದುರಾದರು. ಆವಾಗ್ಗೆ ದರೋಡೆಕೋರರು ಬಡ ಬಾಲಕನಲ್ಲಿ ಏನೂ ಇರಲಿಕ್ಕಿಲ್ಲವೆಂದು ಸುಮ್ಮನೆ ಹೊರಟಿರುತ್ತಾರೆ. ಅವರಲ್ಲಿ ಒಬ್ಬನು 'ಏನೋ ಹುಡುಗಾ ನಿನ್ನಲೇನಾದರೂ ಮಾಲು ಇದೆ ಏನು' ಎಂದು ಗದರಿದ. 'ಇವೆ, ನನ್ನಲ್ಲಿ ನಾಲ್ವತ್ತು ನಾಣ್ಯಗಳಿವೆ,' ಎಂದ ಬಾಲಕ. 'ಆಗ ಸುಳ್ಳು ಹೇಳುತ್ತೀಯೇನು?' ಎಂದಾಗ 'ಇಲ್ಲ ನಾನು ಸುಳ್ಳು ಹೇಳುವುದಿಲ್ಲ' ಎಂದು ಹೇಳುತ್ತ ತನ್ನ ಸೊಂಟಕ್ಕೆ ಸುತ್ತಿದ ಹಮ್ಮಿಣಿ ಬಿಚ್ಚಿ ತೋರಿಸಿದಾಗ ಕಳ್ಳರಿಗೆ ಅಚ್ಚರಿ ಎನಿಸಿತು. ಆವಾಗ ದರೋಡೆಕೋರರ ಸರದಾರ 'ನಾವು ದರೋಡೆಕೋರರು ನಿಮ್ಮ ಹಣ ಕಸಿದುಕೊಳ್ಳುತ್ತೇವೆಂದು ಗೊತ್ತಿದ್ದೂ ಹಣ ತೋರಿಸುತ್ತೀಯಲ್ಲ ಎಂಥ ಮೂರ್ಖ' ಎಂದು ಬೈದಾಗ ಅದಕ್ಕೆ ಬಾಲಕ 'ಹೌದು ಸರದಾರರೇ. ನನ್ ಅಮ್ಮೀಜಾನ ಎಂಥ ಸಂಕಟ ಬಂದರೂ ಸುಳ್ಳು ಹೇಳಬೇಡ ಎಂದು ಹೇಳಿದ್ದಾಳೆ. ಈ ನಾಣ್ಯಗಳನ್ನು ಉಳಿಸಲೆಂದು ತಾಯಿಯ ಮಾತನ್ನು ಮೀರಲೇ? ದೇವರು ದೊಡ್ಡವನು, ದಯಾಮಯನು, ನನ್ನನ್ನು ಕಾಪಾಡುವನು' ಎನ್ನುವನು. ಇಂಥ ನಿಜಜೀವನದ ಹಲವಾರು ಉದ್ಬೋಧಕ ಸಂಗತಿಗಳನ್ನ ಸ್ವಾರಸ್ಯಕರವಾಗಿ ಮಕ್ಕಳ ಮುಂದೆ ಇಟ್ಟಿದ್ದಾರೆ. ಅವರ ಕೃತಿಗಳಲ್ಲಿ ಇಂಥವು ಎದ್ದುಕಾಣುತ್ತವೆ.

ಅವರ ಆದಷ್ಟೂ ಕವಿತೆಗಳು ಹತ್ತು ವರುಷದೊಳಗಿನ ಮಕ್ಕಳನ್ನ ತಲುಪುವ ವಸ್ತುವುಳ್ಳವು. ಕೆಲವು ಆಗಾಗ ಇನ್ನೂ ಹೆಚ್ಚಿನ ವಿಸ್ತಾರಕ್ಕೆ ತೆರೆದುಕೊಳ್ಳುವಂಥವು. ಹೆಚ್ಚಿನವು ತಿಳಿಹಾಸ್ಯದ ಲೇಪವನ್ನ ಪಡೆದುಕೊಂಡುವು. ಅವರ ಕತೆಗಳಂತೆ ಇಲ್ಲಿಯೂ ಪ್ರಾಣಿ ಪಕ್ಷಿಗಳು ವಿಶೇಷವಾಗಿ ಕಾಣುತ್ತವೆ.

ಮಂಗೂರಾಯನ ಆಸ್ಪತ್ರೆಯಲಿ
ಎರೆಹುಳ ಏರಿದೆ ಬಿಳಿ ಮೇಜು
ಹೇಳಿದ ಕಾಲು ಕುಂಟುತಲಿಹುದು
ಹುಡುಕುತ ಕಟ್ಟಿರಿ ಬ್ಯಾಂಡೇಜು

ಎರೆಹುಳುವಿನ ಕಾಲನ್ನ ಹುಡುಕುವುದಾದರೂ ಹೇಗೆ? ಮಂಗೂರಾಯರು ವಿವಶರೇ. ಓಡುತ ಬಂದಾ ಕರಿಯನು ಜಿಗಿದನು.

ಆರಡಿ ಎತ್ತರ ಜಂಪ್
ಕುರಿನರಿ, ಮೊಲಗಳೆ ಓಡಿದರೆನ್ನುತ
ಆಯಿತು ಲಘು ಭೂಕಂಪ

ಇಂಥ ತಮಾಷೆಯ ಸಾಕಷ್ಟು ರಚನೆಗಳನ್ನ ಅವರ ಸಂಗ್ರಹಗಳಲ್ಲಿ ಕಾಣಬಹುದು. 'ಗುಬ್ಬಚ್ಚಿ' ಕವಿತೆಯಲ್ಲಿ ಹೀಗೆಯೇ ಗುಬ್ಬಿ ಮರಿಯೊಂದು ಎರೆಹುಳವನ್ನ ಹಿಡಿಯಲು ಹೋಗಿ ಅದು ತುಂಡಾದರೂ ಕಣ್ಮರೆಯಾಗಿ ಮತ್ತೆ ಯಥಾಸ್ಥಿತಿ ಕಾಣಿಸಿದುದನ್ನ ಕಂಡು ಬೇಸ್ತುಬಿದ್ದುದನ್ನ ಚಿತ್ರಿಸುತ್ತಾರೆ.

ಸಿಸು ಅವರು ಹಲವಾರು ಪ್ರಯೋಗಗಳನ್ನ ಮಾಡಲು, ಹೊಸತನ್ನ ತರಲು ಹವಣಿಸಿರುವುದು ಕಾಣುತ್ತದೆ. 'ಅಂಗಿಯಲ್ಲಿ ತಂಗಿ' ಕವಿತೆಯಲ್ಲಿ 'ಅಪ್ಪ ಕಾಂಗ್ರು ಹೊಟ್ಟೆಯಂತೆ ಹೊಲಿಸು ಜೇಬಿನಂಗಿಯ, ಜೇಬಿನೊಳಗೆ ಕಾಣುವಂತೆ ಇರಿಸು ಪುಟ್ಟ ತಂಗಿಯ' ಎನುವಂಥ ಚುರುಕಿನ ಸಂಗತಿ ಇಟ್ಟರು.

ಕತ್ತೆ ಕುಮಾರನು ಪತ್ರಿಕೆ ತಿರುವುತ
ಓದುತ್ತಿದ್ದನು ಸುದ್ದಿ
ಸೋಟೆಯ ತಿರುವುತ ಟಿಸ್ ಪುಸ್ಸೆನ್ನುತ
ಇಂಗ್ಲಿಷ್ ಭಾಷೆಯ ತಿದ್ದಿ

ಮಂಗೂರಾಯನು ಕೇಳಿದನಾಗಲೆ
ಬೆನ್ನಿನ ಮೇಗಡೆ ಗುದ್ದಿ!
'ಕನ್ನಡ ಪತ್ರಿಕೆ ತಿರುವಿ ಹಿಡಿದಿರುವೆ'
ಎಲ್ಲಿಟ್ಟಿರುವೆ ಬುದ್ಧಿ!

ಹೀಗೆಯೇ ಇನ್ನೊಂದು ಮೋಜಿನ ಪದ್ಯವನ್ನು ನೋಡಬಹುದು :

ಟೀವಿಯಲ್ಲಿ ಚೆಂಡಿನಾಟ
ನೋಡುತಲ್ಲೆ ಮಲಗಿದ
'ನಾನು ಒದ್ದೆ! ನೀನು ಬಿದ್ದೆ'
ಕನಸಿನಲ್ಲಿ ಮುಲುಗಿದ

ಆನೆ ಮರಿಯ ಚೆಂಡು ಮಾಡಿ
ಮೇಲಕದನು ಒದ್ದನು
ತನ್ನ ಮೇಲೆ ಬೀಳುತಿರಲು
'ಸತ್ತೆ!' ಎಂದು ಬಿದ್ದನು

ಪ್ರಾಣಿಗಳ, ಪಕ್ಷಿಗಳ ಪಾತ್ರಗಳನ್ನ ಸೃಷ್ಟಿಸಿಕೊಂಡು, ಹೊಸ ಹೊಸ ಪ್ರಸಂಗಗಳನ್ನು ಸೃಷ್ಟಿಸುತ್ತ ಸಾಕಷ್ಟು ಪದ್ಯಗಳನ್ನು ಅವರು ರಚಿಸಿದ್ದಾರೆ, ಅಂಥವೇ ವಿಶೇಷವಾಗಿ ಕಾಣುತ್ತವೆ. ಅಲ್ಲದೆ ಚುಟುಕಗಳಾಗಿ ಇರುವುದೇ ಹೆಚ್ಚು. ಇದೆಲ್ಲ ಅವರ ಹೊರಗಿನ ಪ್ರಭಾವಗಳನ್ನ ಒಳಗೊಂಡುದೇ ಆಗಿರುವ ಹಾಗಿದೆ. ಆ ಸಮಯದ ಉಳಿದವರ ರಚನೆಗಳಲ್ಲಿ ಈ ಬಗೆಯ ಸೃಷ್ಟಿ ಇಷ್ಟು ವಿಪುಲವಾಗಿ ಕಾಣುವುದಿಲ್ಲ. ಕತ್ತೆ ಕುವರ ಸಿನಿಮಾ ಸೇರಿ ಕೊರಳು ಎತ್ತಿ ಹಾಡತೊಡಗಿದಾಗ ಅವನ ತಮ್ಮ ಕಿವಿಮುಚ್ಚಿ ಕೇಳೋದಕ್ಕೆ ಸವಿಯಾಗಿದೆ ಅಂದನಂತೆ, ತಕ್ಷಣವೇ ಖುಷಿಯಲ್ಲಿ ಕತ್ತೆ ಕುವರ ಹಾಡು ಬಿಟ್ಟು ಬೇಕು ನನಗೆ ಚಹಾ ಎಂದನಂತೆ. ನಾಯಿ ಬೆಕ್ಕುಗಳೆರಡು ಬೊಂಬಾಯಿ ನೋಡಲು ಹೊಗಿ, ಅಲಿನ ಟ್ರಾಫಿಕ್ಕಿನಲ್ಲಿ ರಸ್ತೆ ದಾಟುವುದಾಗದೆ, ಹಾಗೇ ಹಾಗೇ ಸಾಗಿ ಕೊನೆಗೆ ಇಂಡಿಯಾ ಗೇಟ್ ತಲಪಿ ಅಲ್ಲಿ ನಾವೆ ಕಂಡು ಟಣ್ಣನೆ ಹಾರಿ ಸೀಟು ಹಿಡಿದ ಪ್ರಸಂಗ ಇನ್ನೊಂದರಲ್ಲಿದೆ. 'ಸಮಾರೋಪ' ಎನ್ನುವ ಪುಟ್ಟ ಪದ್ಯವೊಂದು ಹೀಗಿದೆ .

ಮಂಗೂರಾಮನು ಹಾಕಿ ಪೈಜಾಮಾ
ಕುಸ್ತಿ ಆಡುತ ಆದನು ಗಾಮಾ!

ತೋಳಪ ನಾಯಕ ಹಾಕಿದ ಚೆಡ್ಡಿ
ನರಿ ಜೊತೆ ಆಡುವ ಹುತುತು ಕಬಡ್ಡಿ

ಕೋಕಿಲ ರಾಣಿ ಹಾಕುತ ಜಬಲಾ
ಬಾರಿಸುತಿರುವಳು ಪೇಟೀ – ತಬಲಾ
ಮಯೂರ ರಾಜನು ಕುಣಿದನು ಥಕಥೈ
ಕೂಗಿದರೆಲ್ಲರು ವಾಹವಾ ಸೈ ಸೈ!

ಎರಡು ಪುಟಾಣಿ ಇರುವೆ ಮರಿಗಳ ನಡುವಿನ ಮಾತಕತೆ ಇದು . . .

ಕೇಳಲಿಲ್ಲವೇನು ನೀನು
ಕಾಲು ಜಾರಿ ಬಿದ್ದಿತಂತೆ
ಆ ಬಿಳಿಯ ಆನೆ

ರಕ್ತದಾನ ಕೊಟ್ಟು ನಾನು
ಜೀವದಾನ ಮಾಡಿ ಬರುವೆ
ಸಹಿಸಿಕೊಂಡು ಬೇನೆ

'ಶಾಲೆಗಿಂತ ಚೀಲ ಭಾರ' ಸಂಗ್ರಹದಲ್ಲಿನ ಕವಿತೆಗಳು ಮಕ್ಕಳ ಸುತ್ತಲಿನ ಹಲವು ಬೇಸರದ ಸಂಗತಿಗಳಿಗೆ ಮಾತಾಗಲು ಹವಣಿಸಿವೆ.

ಹೊತ್ತು ತಿರುಗಿದೆ ನಿನ್ನನು
ಪಾಸ್; ನಾಪಾಸ್; ಏನೇ ಆಗಲಿ
ಬಿಟ್ಟು ಬಿಡು ನೀ ಬೆನ್ನನು

ಹಲವಾರು ರಚನೆಗಳು ಭಾವಗೀತಗಳಾಗುತ್ತ ಸುಂದರ ಕಲ್ಪನೆಯನ್ನ ಹೊತ್ತಿವೆ :

ಪೂರ್ವದಿಗಂತದಿ ರವಿ ತಾ ಏಳಲು
ಹರಡಿತು ಎಲ್ಲೆಡೆ ಬಿಸಿಲು
ಮನೆಮಠ ಮಂದಿರ ಚಪ್ಪರ ಗುಡಿಸಲು
ಚಾಚಿತು ಬೆಳಕಿನ ಟಿಸಿಲು

ಅವರ ಹೆಚ್ಚು ಪ್ರಚುರವಾದ ಗೀತೆ 'ಮೊದಲು ಕೆಲಸ ಮಾಡುವೆ' ಎನ್ನುವ ಅವಿರತ ದುಡಿಮೆಯ ಪ್ರಾಣಿ ಪ್ರಪಂಚವನ್ನ ಮುಂದಿಡುವ ಗೀತೆ.

ಇರುವೆ ಇರುವೆ ಕರಿಯ ಇರುವೆ
ನಾನು ಜೊತೆಗೆ ಬರುವೆ
ಆಡಲಿಕ್ಕೆ ಅಮ್ಮನಿಂದ
ಕರಣಿ ಬೆಲ್ಲ ತರುವೆ

ಎಂದು ಮಗು ಕೇಳಿದರೆ ಇರುವೆ ತನಗೆ ಬಿಡುವಿಲ್ಲದ ಕೆಲಸವೆಂದು ನಿರಾಕರಿಸುತ್ತದೆ. ಹಾಗೆಯೇ ಮಗು ನಾಯಿ, ಜೇನುಹುಳು, ಕೋಗಿಲೆಗಳ ಕಡೆಗೂ ಹೋಗುತ್ತದೆ. ಎಲ್ಲವೂ ಕೆಲಸ ಬಿಟ್ಟು ಆಡಲು ನಿರಾಕರಿಸುತ್ತವೆ. ಆಗ ಮಗು ಕೂಡ ಅಂದುಕೊಳ್ಳುತ್ತದೆ:

ಇವರು ಯಾರು ನನ್ನ ಕೂಡ
ಆಡಲಿಕ್ಕೆ ಒಲ್ಲರು
ತಮ್ಮ ತಮ್ಮ ಕೆಲಸದಲ್ಲಿ
ವೇಳೆ ಕಳೆವರೆಲ್ಲರು
ಅವರ ಹಾಗೆ ಮೊದಲು ನಾನು
ನನ್ನ ಕೆಲಸ ಮಾಡುವೆ
ಓದು ಬರಹ ಮುಗಿಸಿಕೊಂಡು
ಸಮಯ ಉಳಿಸಿ ಆಡುವೆ

ಮಕ್ಕಳಿಗೆ ಅದರ್ಶಗಳನ್ನ ಎಷ್ಟೆಲ್ಲ ಹೇಳುವುದು, ನೀತಿಗಳನ್ನ, ಎತ್ತರದ ಜೀವನ ಮೌಲ್ಯಗಳನ್ನ ಅವುಗಳ ಮುಂದಿಡಬಹುದು ಎನ್ನುವುದನ್ನು ಅವರು ಅಗತ್ಯದ್ದು ಎಂದು ಭಾವಿಸಿದಾಗಲೂ ಹಿಂದಿನವರಂತೆ, ಅದರಲ್ಲೂ ವಿಶೇಷವಾಗಿ ಶಿಕ್ಷಕ ಸಮುದಾಯದ ಬರಹಗಾರರಲ್ಲಿಯಂತೆ ತೀರ ಪ್ರಾಶಸ್ತ್ಯ ಕೊಟ್ಟೇನು ತಮ್ಮ ಕವಿತೆಗಳಲ್ಲಿ ಕಾಣಿಸಿದ ಹಾಗೆ ಕಾಣುವುದಿಲ್ಲ ಎಂಬುದನ್ನು ಗಮನಿಸಬೇಕು:

ಅವ್ವ ಕೇಳು ಶಾಲೆಗಿಂದು
ಒಬ್ಬ ಹುಡುಗ ಬಂದನು
ಕೆಳೆಯರವನ ಕೇಳಲಾಗಿ
ಅವನು ಏನು ಅಂದನು!

ಪ್ರಶ್ನೆ : ಬೌದ್ಧ ಜೈನ, ಶಿಖ್ಖಿಸಾಯಿ
ಹಿಂದು ಮುಸಲ್ಮಾನವ?
ಉತ್ತರ : ನಾನು ಯಾವ ಜಾತಿಯವನು!
ಅಲ್ಲ ನಾನು ಮಾನವ!!

ಯಾರು ನನಗೆ ಹೇಳಲಿಲ್ಲ
ಯಾವುದೆನ್ನ ಜಾತಿಯು
ಅಪ್ಪ ಅವ್ವ ಕರೆದರೆನ್ನ
ನೀನು ಮನೆಯ ಜ್ಯೋತಿಯು

ಈ ಬಗೆಯ ಪದ್ಯಗಳು ಅಲ್ಲಿ ಕಂಡರೂ ವಿರಳವಾಗಿಯೇ ಇವೆ. ಆರ್. ವಿ. ಭಂಡಾರಿ ಅವರು ಸಿಸು ಅವರ ಕವಿತೆಗಳ ಕುರಿತು ಬರೆಯುತ್ತ 'ಅವರ ಎಲ್ಲ ಕವಿತೆಗಳೂ ಮಧ್ಯಮ ವರ್ಗದ(ಜಾತಿ ವರ್ಣದ) ವಾತಾವರಣದಲ್ಲಿ ನಿರ್ಮಾಣವಾದುವು. ಇದಕ್ಕೂ ಕೆಳಗಿನ ಮಕ್ಕಳ ಬದುಕಿನ ವಾತಾವರಣವನ್ನು ಹೋಲುವ ರಚನೆ, ಅಂದರೆ ಆ ವಾತಾವರಣದೊಳಗೇ ಮೂಡಿಬಂದ ರಚನೆಗಳು ತೀರ ತೀರ ಕಡಿಮೆ' ಎಂದಿರುವುದನ್ನ ಗಮನಿಸಬಹುದು. ಆದರೆ ಇದು ಸರಿ ಸುಮಾರು ಕನ್ನಡ ಮಕ್ಕಳ ಸಾಹಿತ್ಯದ ಬಗೆಗೂ ಆಡುವ ಮಾತೇ ಆಗಿದೆ. ಮಧ್ಯಮ ವರ್ಗದ ಲೇಖಕರೇ ಬರವಣಿಗೆಗೆ ವಿಶೇಷವಾಗಿ ತೊಡಗಿದುದರಿಂದ ಅವರ ಪರಿಸರವೇ ಎಲ್ಲೆಡೆ ವ್ಯಾಪಿಸಿದುದು ಸಹಜವಾಯಿತು. ಪ್ರಬುದ್ಧರ

ಮಾರ್ಗದಲಿ ಅನುಭವಿಸಿದ ಬಂಡಾಯ, ದಲಿತ ಮುಂತಾದ ಶೋಷಿತರ ದನಿಗಳು ಇಲ್ಲಿ ಪ್ರಖರವಾಗಿ ಕೇಳಲೇ ಇಲ್ಲ. ಅವರೆಲ್ಲ ಬರವಣಿಗೆ ಉದ್ದೇಶಪಟ್ಟು ನೀಡಿದುದಾಗಿರುವುದನ್ನ ಹೇಳುವಂತಿದೆ. ಹಾಗಾಗಿಯೇ ಸಹಜತೆಗಿಂತ ಇಂಥದೆಲ್ಲ ಇರಬೇಕು, ಇದನ್ನೆಲ್ಲ ಹೇಳಬೇಕು ಅಂದುಕೊಂಡು ನೀಡಿದ ಸಾಮಗ್ರಿ ಇದಾಗಿರುವುದೇ ಹೆಚ್ಚು. ಹಾಗಾಗಿ ಒಂದು ಬಗೆಯ ಕೃತಕತೆ ಕಾಣುವುದಿದೆ. ಹೇಳುವುದನ್ನ ಪ್ರಭಾವಕಾರಿಯಾಗಿ, ಇಲ್ಲವೆ ಸೂಕ್ಷ್ಮವಾಗಿ ಹೇಳಿ ಪರಿಣಾಮಕಾರಿಯಾಗುವಂತೆ ಮಾಡುವಲ್ಲಿ ಅವರ ಎಲ್ಲ ಹುರುಪು, ಆಶಯಗಳು ಗಮನಾರ್ಹವಾಗಿ ಕೆಲಸಮಾಡದೇ ಹೋಗಿಬಿಡುತ್ತವೆ. ಅನೇಕ ಸಲ ನಿಗದಿತ ಲಯಕ್ಕಾಗಿ ಸೂಕ್ತವಲ್ಲದ ಶಬ್ದಗಳ ಬಳಕೆ ಆಭಾಸವುಂಟುಮಾಡುವುದೂ ಇದೆ. ಉದಾಹರಣೆಗೆ . . .

ಬಡಿಗೆಯ ಟಕ್ ಟಕ್ ಬಂದನು ಅಜ್ಜ
ಕತೆಯನು ಕೇಳಲು ಎಲ್ಲರು ಸಜ್ಜ

ಸ್ಕೂಟರ್ ಗರ್ ಗರ್ ಬಂದನು ಅಣ್ಣ
ತಿನ್ನಲು ತಟ್ಟೆಯ ಕಡೆಗೇ ಕಣ್ಣ

ಟ್ರಿಣ್ ಟ್ರಿಣ್ ಸೈಕಲ್ ಬಂದನು ತಮ್ಮ
ತಿರುಗುದು ಬಹಳ ಓಧುದು ಕಮ್ಮ

ಸಿಸು ಸಂಗಮೇಶರ ಮಕ್ಕಳ ಸಾಹಿತ್ಯದ ಕೊಡುಗೆ ವಿಶೇಷವಾಗಿ ಅನಿಸುವುದು ಅವರು ಅದಕ್ಕಾಗಿ ಬೇಕಾದ ವಾತಾವರಣ ಮೂಡಿಸುವಲ್ಲಿ ಹಟದಿಂದ, ಬಹು ದೊಡ್ಡ ಪ್ರಮಾಣದಲ್ಲಿ, ಶ್ರದ್ಧೆಯಿಂದ ತೊಡಗಿಕೊಂಡುದು. ಕನ್ನಡದ ಮುಖ್ಯಧಾರೆ ಈ ಕಡೆಗೆ ಹೊರಳಿ ನೋಡದಿದ್ದರೂ ಅದನ್ನ ಲಕ್ಷಿಸದೆ ತಾವು ನಡೆದದ್ದೇ ಹೆಜ್ಜೆ ಎನ್ನುವ ಹಾಗೆ ತಾವು ಕನಸು ಕಂಡುದನ್ನೆಲ್ಲ ಸಾಕಾರಗೊಳಿಸಲು ಅಪಾರ ಶ್ರಮವಹಿಸಿದರು ಅವರು. ತಾವೇ ಪರ್ಯಾಯವಾಗಿ ಅಕಾಡೆಮಿಯೊಂದನ್ನು ಸೃಷ್ಟಿಸಿ, ಶಿಕ್ಷಕ ಸಾಹಿತಿಗಳನ್ನೆಲ್ಲ ಒಟ್ಟುಗೂಡಿಸಿ ನಾಲ್ಕು ಅಭೂತಪೂರ್ವ ಅನ್ನಬಹುದಾದ ಸಮ್ಮೇಳನಗಳನ್ನು ಮಕ್ಕಳ ಸಾಹಿತ್ಯಕ್ಕಾಗಿಯೇ ನಡೆಸಿದರು. ಶಿವರಾಮ ಕಾರಂತರಂಥ ಅನೇಕ ಹಿರಿಯರನ್ನ ತಮ್ಮ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನಗಳನ್ನೂ ಮಾಡಿದರು. ಹಿರಿಯ ಕವಿಗಳಿಂದ ಮಕ್ಕಳಿಗಾಗಿ ಕವಿತೆಗಳನ್ನ ಬರೆಸುವ ಪ್ರಯತ್ನಗಳನ್ನೂ ಮಾಡಿದರು. ಹಾಗೆಯೇ ಯುವ ಬರಹಗಾರರನ್ನು ಪ್ರೋತ್ಸಾಹಿಸುವ ಕೆಲಸವನ್ನೂ ಮಾಡಿದರು. 'ಪುಟಚೆಂಡು'(ಭಾಗ ೧,೨), 'ಆಣೆಕಲ್ಲು'(ಭಾಗ ೧,೨) ಎನ್ನುವ ನಾಲ್ಕು ಸಂಪುಟಗಳ ವಿವಿಧ ಲೇಖಕರ ರಚನೆಗಳ ಸಂಗ್ರಹಗಳನ್ನ ತಂದರು. 'ಪುಟಚೆಂಡು'ವಿನಲ್ಲಿ ಬೇಂದ್ರೆ, ಕುವೆಂಪು ಅವರ ಕವಿತೆಗಳನ್ನೂ ಸೇರಿಸಲಾಗಿದೆ. ಹಾಗೆಯೇ 'ಆಣೆಕಲ್ಲು' ಸರಣಿಗಳಲ್ಲಿ ಪಾಟೀಲ ಪುಟ್ಟಪ್ಪ, ಶಾಂತರಸ, ಬೀಚಿ, ಸಿಂಪಿ ಲಿಂಗಣ್ಣ, ಮಿರ್ಜಿ ಅಣ್ಣಾರಾಯ ಅಂಥವರ ಕತೆಗಳೂ ಸೇರಿವೆ. ಸಂಗಮೇಶ ಹಲವಾರು ವಿಚಾರ ಸಂಕಿರಣಗಳಲ್ಲಿ ಭಗವಹಿಸಿದರು. ಇದಲ್ಲದೆ ಅವರಿಗೆ ಹಿಂದಿ ಭಾಷೆ ಬರುತ್ತಿದ್ದುದರಿಂದ ಅದರ ಸಹಾಯದಿಂದ ಭಾರತದ ಹಲವಾರು ಸಂಘಸಂಸ್ಥೆಗಳೊಡನೆ ನಿರಂತರ ಸಂಪರ್ಕದಲ್ಲಿದ್ದರು. ಹಾಗಾಗಿ ಅವರ ಹೆಸರು ಭಾರತದ ಅನೇಕ ಮಕ್ಕಳ ಸಾಹಿತ್ಯದ ವಲಯಗಳಲ್ಲಿ ಪರಿಚಿತವಾಗಿತ್ತು. ರಾಷ್ಟ್ರಮಟ್ಟದ ಅನೇಕ ಸಂಘಗಳಲ್ಲಿ ಅವರು ಸದಸ್ಯರಾಗಿ ಕಾರ್ಯನಿರ್ವಹಿಸಿದರು ಕೂಡ. ಅಖಿಲಭಾರತ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನವನ್ನೇ

ವಿಜಾಪುರದಲ್ಲಿ ನಡೆಸಿದ ಶ್ರೇಯಸ್ಸು ಅವರದು. ಇಷ್ಟೆಲ್ಲ ಕ್ರಿಯಾತ್ಮಕವಾಗಿ ತೊಡಗಿಕೊಳ್ಳುತ್ತ, ಸರಕಾರದಿಂದ, ಸಾಹಿತ್ಯದ ಸಂಘ ಸಂಸ್ಥೆಗಳಿಂದ ಮಕ್ಕಳ ಸಾಹಿತ್ಯದ ಅವಗಣನೆ ಆಗುತ್ತಿರುವುದನ್ನು ಪದೆ ಪದೆ ಎಚ್ಚರಿಸುವ, ಪ್ರತಿಭಟಿಸುವ ಕೆಲಸವನ್ನೂ ಅಷ್ಟೇ ಸಮರ್ಥವಾಗಿ ಮಾಡಿದರು. ಹೀಗೆ ಸಂಗಮೇಶ ಅವರ ವ್ಯಕ್ತಿತ್ವ ಇಡಿಯಾಗಿ ಮಕ್ಕಳ ಸಾಹಿತ್ಯಕ್ಕೆ ಮೀಸಲಾಗಿಹೋಗಿತ್ತು. ಕೊನೆಯವರೆಗೂ ಮಕ್ಕಳ ಸಾಹಿತ್ಯದ ಕೈಂಕರ್ಯ ಹೊತ್ತು ದೂರದೂರಕ್ಕೆ ಸಂಚರಿಸುತ್ತಲೇ ಇದ್ದರು ಅವರು. ಹಲವಾರು ಪ್ರಶಸ್ತಿ, ಪುರಸ್ಕಾರಗಳು ಅವರನ್ನ ಅರಸಿಬಂದುದು ಸಹಜವಾಗಿಯೇ ಇದೆ. ಎರಡನೆಯ ಘಟ್ಟವೆಂದು ಗುರುತಿಸುವಲ್ಲಿ ಸಂಗಮೇಶರ ಈ ಚಟುವಟಿಕೆಗಳು ವಿಶೇಷವಾಗಿ ಕಾಣುತ್ತವೆ. ಇಲ್ಲಿಯವರೆಗೆ ಹೀಗೆ ಮಕ್ಕಳ ಸಾಹಿತ್ಯಕ್ಕೇ ಎಂದು ಮುತುವರ್ಜಿ, ಕಾಳಜಿಗಳು ಕಂಡಿರಲೇ ಇಲ್ಲ. ಅದೊಂದು ಸಮಾಜ ಅತ್ಯಂತ ತುರ್ತಾಗಿ ಗಮನಹರಿಸಬೇಕಾದ ರಂಗ ಎಂಬುದನ್ನ ಅವರು ಸಾಬೀತುಗೊಳಿಸುವಂತೆ ಹೋರಾಟ ನಡೆಸಿದರು. ಒಂದುಬಗೆಯಲ್ಲಿ ಇತಿಹಾಸವನ್ನೇ ಅವರು ಸೃಷ್ಟಿಸಿದರು ಎಂದರೆ ಅತಿಶಯೋಕ್ತಿಯಾಗದು. 'ಭಾರತ ಸರಕಾರವು ರಾಷ್ಟ್ರದ ಮಕ್ಕಳ ಶಿಕ್ಷಣ ಸಾಹಿತ್ಯದ ಹೆಸರಿನಲ್ಲಿ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ಏಕಸೂತ್ರದಲ್ಲಿರದೆ ಹರಿದು ಹಂಚಿಹೋಗಿದೆ. ಬಾಲ ಸಾಹಿತ್ಯದ ಉನ್ನತಿ ಹಾಗೂ ಸಮೃದ್ಧಿಯೇ ಮುಖ್ಯ ಗುರಿಯನ್ನಾಗಿಟ್ಟುಕೊಂಡು ಸಾಗಿಲ್ಲವೆಂಬುದು ನಿರ್ವಿವಾದ'(ಪ್ರಜಾವಾಣಿ ೧೮-೦೭-೧೯೯೩), 'ಇಂದಿನವರೆಗೆ ಹಿರಿಯರ ಸಾಹಿತ್ಯವನ್ನೇ ಅವಲೋಕಿಸುತ್ತ ಬಂದ ಸಾಹಿತಿಗಳಿಗೆ ಹಿರಿಯರಿಗೆ ಮಕ್ಕಳ ಸಾಹಿತ್ಯದ ಅರಿವು ಇಲ್ಲ. ಅರಿವು ಮಾಡಿಕೊಳ್ಳುವ ಗೋಜಿಗೂ ಹೋಗಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ'(ಪ್ರಜಾವಾಣಿ ದೀಪಾವಳಿ ವಿಶೇಷಾಂಕ ೨೦೦೦) ಮುಂತಾದ ಅವರ ಅಭಿಪ್ರಾಯಗಳನ್ನು ನೋಡಬಹುದು.

ಅವರ ಪುಸ್ತಕ ಪ್ರಕಟಣೆಯ ಕಾರ್ಯ, ಪ್ರಕಾಶನ ಹುಟ್ಟು ಹಾಕಿದುದು, 'ಬಾಲಭಾರತಿ' ಎನ್ನುವ ಮಕ್ಕಳಿಗಾಗಿನ ಪತ್ರಿಕೆಯನ್ನು ನಾಲ್ಕು ವರುಷ ನಡೆಸಿದುದು ಅವರ ಮತ್ತೊಂದು ವಿಶೇಷ ಸಾಧನೆಯ ಮಗ್ಗಲು. 'ಮೊದಲನೆಯದಾಗಿ ಇಂದಿನ ತುಟ್ಟಿಯ ಕಾಲದಲ್ಲಿ ಅನೇಕ ಚಿತ್ರಗಳಿಂದೊಡಗೂಡಿದ ವರ್ಣರಂಜಿತವಾದ ಮಾಸ ಪತ್ರಿಕೆ ಪ್ರಕಟಿಸುವ ತಮ್ಮ ಸಾಹಸಕ್ಕೆ ಅಭಿನಂದನೆ. ಪತ್ರಿಕೆಯಲ್ಲಿ ಜಾಹೀರಾತುಗಳಂತೂ ಕಡಿಮೆ. ಕಾಗದ-ಮುದ್ರಣ-ಪಡಿಯಚ್ಚುಗಳ ಖರ್ಚಿನ ವೆಚ್ಚ ಸರಿದೂಗಿಸುವದು ಕಠಿಣವೇ. ಆದರೂ ತಾವು ಎದೆಗಾರಿಕೆಯಿಂದ ಪತ್ರಿಕೆ ಪ್ರಕಟಿಸುತ್ತ ಇದೀಗ ಎರಡನೆಯ ವರ್ಷದಲ್ಲಿ ಮುನ್ನಡೆದಿರುವದು ಮೆಚ್ಚತಕ್ಕ ವಿಷಯ' ಎಂದು ಬಸವರಾಜ ಕಟ್ಟೀಮನಿ ಅವರು ಬರೆದಿರುವುದನ್ನು ಇಲ್ಲಿ ಉಲ್ಲೇಖಿಸಬಹುದು. ಎಷ್ಟೋ ಸಲ ತಮ್ಮ ಪಗಾರದ ಹಣವನ್ನ ಇದಕ್ಕೆ ಹಾಕಿ ಕಷ್ಟಪಟ್ಟಿದ್ದೂ ಇದೆ. ಬಿ. ಎಸ್. ರಾಮಸ್ವಾಮಿ, ಪಿ. ಆರ್. ತಿಪ್ಪೇಸ್ವಾಮಿ, ಡಿ. ಆರ್. ಬಳೂರಗಿ, ಪ. ರಾಮಕೃಷ್ಣಶಾಸ್ತ್ರಿ, ಅಣ್ಣಾರಾಯ ಸಾಲಿಮನಿ, ಬಿ. ಶ್ರೀ. ಪಾಂಡುರಂಗರಾವ್, ಸಿದ್ದಯ್ಯ ಪುರಾಣಿಕ, ಕೃ. ನಾರಾಯಣರಾವ್, ರಸಿಕ ಪುತ್ತಿಗೆ ಹೀಗೆ ನಾಡಿನ ಎಲ್ಲೆಡೆಯ ಹೆಸರುವಾಸಿ ಲೇಖಕರು ಪತ್ರಿಕೆಗಾಗಿ ಬರೆಯುತ್ತಿದ್ದುದು ಅದರ ಮಹತ್ವವನ್ನು ಹೇಳುತ್ತದೆ. ಮಾಹಿತಿ, ಚಾರಿತ್ರ್ಯ ನಿರ್ಮಾಣದ ಸಂಗತಿಗಳು, ದೇಶಪ್ರೇಮ, ಹಿರಿಯರ ಬಗೆಗೆ ಗೌರವ, ಮುಂತಾಗಿ ನಾನಾ ಬಗೆಯ ವಿಷಯ ಸಾಮಗ್ರಿಯನ್ನ ಮನರಂಜನೆಯೊಡನೆ ಮೇಳೈಸಿಕೊಂಡು ನೀಡುತ್ತಿದ್ದರು.

ಅವರು ಪ್ರಕಟಿಸತೊಡಗಿ ಮಕ್ಕಳದೇ ಆದ ವಿಶಿಷ್ಟ, ಸಾಧ್ಯವಾದಷ್ಟೂ ಆಕರ್ಷಣೆ

ಹೊಂದಿ, ಬೇರೆ ಸಾಮಾನ್ಯವಾಗಿ ಕಾಣುವ ಪುಸ್ತಕಗಳ ಆಕಾರಗಳಿಗಿಂತ ವಿಭಿನ್ನವಾಗಿ ಮಕ್ಕಳವೇ ಎಂದು ಕಾಣುವ ಆಕಾರದ ಪುಸ್ತಕಗಳನ್ನ ಪ್ರಕಟಿಸತೊಡಗಿದುದು, ಚಿತ್ರಗಳಿಗೆ ಎಲ್ಲಿಲ್ಲದ ಮಹತ್ವವನ್ನ ನೀಡಿದುದು, ಬಣ್ಣದಲ್ಲಿ ಸಾಧ್ಯವಾದಷ್ಟೂ ಮುದ್ರಿಸಲು ಪ್ರಯತ್ನಿಸಿದುದು ಆ ಸಮಯದಲ್ಲಿ ಅತ್ಯಂತ ಮಹತ್ವದ ಸಂಗತಿಗಳು. ಕೆ. ಬಿ. ಕುಲಕರ್ಣಿಯಂಥ ಹಿರಿಯ ಕಲಾವಿದರು ಅವರ ಪುಸ್ತಕಗಳಿಗೆ ಚಿತ್ರ ಬರೆಯುತ್ತಿದ್ದುದನ್ನು ಇಲ್ಲಿ ಹೇಳಬೇಕು. ೮೦ರಷ್ಟು ಸಚಿತ್ರ ಮಕ್ಕಳ ಪುಸ್ತಕಗಳು ಹೀಗೆ ಪ್ರಕಟವಾಗಿರುವುದು ಸಾಮಾನ್ಯದ ಕೆಲಸವೇನಲ್ಲ. ಇವುಗಳಲ್ಲಿ ೧೨ ರಾಷ್ಟ್ರೀಯ ಪ್ರಶಸ್ತಿ, ೧೩ ರಾಜ್ಯ ಪ್ರಶಸ್ತಿ, ೧ ಸಾಹಿತ್ಯ ಅಕಾಡೆಮಿ ಪ್ರಶಸ್ತಿ , ೨ ಸಂಘ ಸಂಸ್ಥೆಗಳಿಗೆ ನೀಡುವ ಪ್ರಶಸ್ತಿ ಬಂದಿರುವುದು ಗಮನಾರ್ಹ. ಸುಮಾರು ೩೫ ಶಿಕ್ಷಕ ಸಾಹಿತಿಗಳಿಗೆ ಬರವಣಿಗೆ, ಪ್ರಕಾಶನದಲ್ಲಿ ಮಾರ್ಗದರ್ಶನ ನೀಡಿ ಅವರಿಂದ ಸೃಷ್ಟಿಯಾದ ನೂರಕ್ಕೂ ಮಿಕ್ಕಿ ಪುಸ್ತಕಗಳ ಸಂಪಾದನೆಯನ್ನೂ ಮಾಡಿದರು ಅವರು. ೧೯೫೩ರಲ್ಲಿ 'ಭಾರತಿ ಸಾಹಿತ್ಯ ಭಂಡಾರ'ದ ಮೂಲಕ ನಾಡಿನಾದ್ಯಂತದ ಶಿಕ್ಷಕ ಸಾಹಿತಿಗಳನ್ನ ಸಂಪರ್ಕಿಸುವುದರೊಂದಿಗೆ ಶುರುವಾದ ಅವರ ಮಕ್ಕಳ ಸಾಹಿತ್ಯದ ಸಾಮಾಜಿಕ ಕಾರ್ಯ ಅವರು ಕೊನೆಯುಸಿರು ಎಳೆಯುವವರೆಗೂ ಎಡೆಬಿಡದೆ ನಡೆಯಿತು.

ಮಕ್ಕಳ ಸಾಹಿತ್ಯವನ್ನ ನಿಖರವಾಗಿ ಗುರುತಿಸುವ, ಅದಕ್ಕಾಗಿ ನಿಗದಿತವಾದ ದಾರಿ ಕಂಡುಕೊಳ್ಳುವ ಕಲ್ಪನೆಯ, ಸಂಕಲ್ಪದ, ದಿಟ್ಟ ಪ್ರಯತ್ನಗಳಿಗೆ ಸಿಸು ಸಂಗಮೇಶರಿಂದ ಹೊಸ ಚಾಲನೆಯೇ ದೊರೆತು ಕನ್ನಡದಲ್ಲಿ ಮಕ್ಕಳ ಸಾಹಿತ್ಯವೆಂದೇ ದೊಡ್ಡ ಪ್ರಮಾಣದ ಹರಿವು ಹರಿಯತೊಡಗಿತು. ಇದೇ ಮಕ್ಕಳ ಸಾಹಿತ್ಯದ ಎರಡನೆಯ ಹೊರಳು ಎಂದುಕೊಳ್ಳಬೇಕು. ಸಿಸು ಸಂಗಮೇಶರ ಆಸು ಪಾಸಿನಲ್ಲಿ, ಅವರ ದಾರಿಯನ್ನನುಸರಿಸುತ್ತ ಹೆಜ್ಜೆ ಹಾಕಿದ ಅನೇಕರು, ಇದೇ ಮನೋಭಾವದಲ್ಲಿ ಅಲ್ಲಲ್ಲಿ ಸ್ವತಂತ್ರವಾಗಿಯೋ, ಸಂಘ ಸಂಸ್ಥೆಗಳನ್ನ ಕಟ್ಟಿಕೊಂಡೋ ತೊಡಗಿದ ಅನೇಕರು ಈ ದೊಡ್ಡ ಹರಿವಿಗೆ ತಮ್ಮ ಕಾಣಿಕೆಗಳನ್ನ ನೀಡುತ್ತ ಬಂದುದೀಗ ಇತಿಹಾಸ. ಕರ್ನಾಟಕದ ಉತ್ತರ ಭಾಗದಲ್ಲಿ, ದಕ್ಷಿಣ ಭಾಗದಲ್ಲಿ, ಕರಾವಳಿ ಭಾಗದಲ್ಲಿ ಹೀಗೆ ಅಲ್ಲಲ್ಲಿ ಸಾಕಷ್ಟು ಜನ ತೊಡಗಿಕೊಂಡುದು ಕಾಣುತ್ತದೆ.

ಶಂ. ಗು. ಬಿರಾದಾರ ಅವರು ಹೇಳುವಂತೆ 'ಸಿಸು ಸಂಗಮೇಶ ಅವರು 'ಭಾರತಿ ಸಾಹಿತ್ಯ ಭಂಡಾರ' ಎಂಬ ಮಕ್ಕಳ ಸಾಹಿತ್ಯ ಪ್ರಕಾಶನ ಸಂಸ್ಥೆಯೊಂದನ್ನು ಕಟ್ಟಿ ನನ್ನ ಹಾಗೂ ಕೆಲ ಶಿಕ್ಷಕ ಸಾಹಿತಿಗಳ ಸಹಾಯ ಸಹಕಾರಗಳಿಂದ ಮಕ್ಕಳ ಪುಸ್ತಕಗಳನ್ನೂ ಹೊರತರಲು ಅಣಿಯಾದರು. ಅದರ ಫಲವಾಗಿ ೧೯೫೩ರಲ್ಲಿ 'ಆಣಿಕಲ್ಲು' ಭಾಗ ೧, ಭಾಗ ೨, 'ಪುಟಚೆಂಡು' ಭಾಗ ೧, ಭಾಗ ೨, ಹೀಗೆ ಮಕ್ಕಳ ಕಥೆ ಕವನಗಳ ಸಂಕಲನಗಳು ಪ್ರಕಟವಾದವು. ಇವುಗಳಲ್ಲಿ ನಾಡಿನ ಹೆಸರಾಂತ ಸಾಹಿತಿಗಳ ಕಥೆ ಕವನಗಳು ಪ್ರಕಟವಾದವು. ಜೊತೆಗೆ ಹೊಸ ಬರಹಗಾರರ ಕೃತಿಗಳೂ ಬೆಳಕು ಕಂಡವು. ನಂತರ ನಾಡಿನ ಶಿಕ್ಷಕ ಸಾಹಿತಿಗಳ ಕವನಗಳನ್ನು ಸಂಗ್ರಹಿಸಿ 'ನಾವು–ನಮ್ಮವರು' ಎಂಬ ಪುಸ್ತಕವೊಂದನ್ನು ಹೊರತಂದರು. ಇವುಗಳಿಂದ ನಮ್ಮ ಜಿಲ್ಲೆಯ ಮಕ್ಕಳ ಸಾಹಿತ್ಯಕ್ಕೆ ಪ್ರೋತ್ಸಾಹ ದೊರೆಯಿತು,' ಎಂದಿರುವದನ್ನು ಗಮನಿಸಿದರೆ ಸಿಸು ಸಂಗಮೇಶರ ತುಡಿತಗಳಿಂದ ಆ ಭಾಗದ ಶಿಕ್ಷಕ ಸಮುದಾಯ ಹೇಗೆಲ್ಲ ಹುರುಪುಗೊಂಡಿತು ಎನ್ನುವುದು ತಿಳಿಯುತ್ತದೆ.

ಶಿಕ್ಷಕ ಸಾಹಿತಿಗಳ ಮುಂಚೂಣಿಯ ಘಟ್ಟ

ಸಂಗಮೇಶ ಗುಜಗೊಂಡ

ಸಂಗಮೇಶ ಹೊಸಮನಿ ಅಂಥ ಹಿರಿಯರು ಅತ್ತ ಬದುಕಿನ ಗಂಭೀರ ಮಗ್ಗಲುಗಳಿಗೆ ಹೊರಳುತ್ತಲೂ ಇತ್ತ ಮಕ್ಕಳಿಗಾಗಿಯೂ ಅಷ್ಟೇ ಒಲವಿನಿಂದ ತುಡಿದರು. ಆಧುನಿಕ ವಚನಕಾರರೆಂದೂ ಶಿವಕವಿ ಎಂದೂ ಕರೆಸಿಕೊಂಡಿರುವ ಇವರು ಹರ್ಡೇಕರ ಮಂಜಪ್ಪ, ಮಧುರಚೆನ್ನ ಅಂಥವರ ಸಹವಾಸದಲ್ಲಿ ಬೆಳೆದವರು. 'ಬೋಲಬಗರಿ', 'ಸಕ್ಕರೆಗುಬ್ಬಿ', 'ಗಾಂಧೀಗೀತೆಗಳು' ಮುಂತಾದ ಮಕ್ಕಳಿಗಾಗಿನ ಕವಿತೆಗಳ ಸಂಕಲನಗಳನ್ನು ಪ್ರಕಟಿಸಿ ಹೆಸರು ಮಾಡಿದವರು.

ಗಗನದೊಳಲೆಯುವ ಮೋಡಗಳು
ದೇವನ ಮಾಟದ ಗೊಂಬೆಗಳು
ಮೂಡಲಿನಿಂದಾ ಪಡುವಲ ಅಂಚಿಗೆ
ಪಡುವಲದಿಂದಾ ಮೂಡಲ ಅಂಚಿಗೆ
ಕುಣಿಕುಣಿದಾಡುವ ಹಸುಳೆಗಳು
ದೇವನ ಮಾಟದ ಗೊಂಬೆಗಳು

ಗಾಳಿ ತಾಯಿಯ ತೊಡೆಯನ್ನೇರಿ
ಬಾಂದಳ ರಾಜನ ಅಂಗಳ ಸಾರಿ
ಬೆಳೆಯುವ ಭಾಗ್ಯದ ಕಂದಗಳು
ದೇವನ ಮಾಟದ ಗೊಂಬೆಗಳು

ಹೊಸ ಮಳೆಗಾಳಿಗೆ ಬಸವಳಿಯದಲೆ
ಬಿಸಿ ಬಿಸಿಲಿಗೆ ಉಡಿರೆಲೆಯದಲೆ
ನಗು ನಗುತಾಡುವ ಯೋಗಿಗಳು
ದೇವನ ಮಾಟದ ಗೊಂಬೆಗಳು

ಹೀಗೆ ಸಾಗುವ ರಚನೆ ಕಲ್ಪನೆಯ ಭವ್ಯತೆಯನ್ನ ಹೇಳುತ್ತ ಹೋಗುತ್ತದೆ. ಅವರ 'ಗಾಂಧೀಗೀತೆಗಳು' ಗಾಂಧಿಯ ಸುತ್ತಲಿನ ಬಾಲ ಮನಸ್ಸಿನ ವಿವಿಧ ಲಹರಿಗಳನ್ನ ಒಂದೆಡೆ ಹರವಿಕೊಂಡಂತಿದ್ದು ಒಂದು ಬಗೆಯ ಹೊಸ ಪ್ರಯತ್ನವಾಗಿ ಸೆಳೆಯುತ್ತವೆ.

ಏನು ನಿನ್ನ ನಗೆಯು ತಂದೆ!
ಕಣ್ಣ ಮುಂದೆ ಕುಣಿವುದು,
ನಡೆಯನುಂಡ ಹೃದಯ ವೀಣೆ
ಸ್ವರ್ಗಮಿಡಿತ ಮಿಡಿವುದು

ಎಷ್ಟು ಜನರಿಗೆ ಬೇಕು
ಈ ಊರುಗೋಲು?
ನಾಡಿಗೋ, ದೇಶಕೋ, ವಿಶ್ವಕೋ?
ಯುಗಯುಗಾಂತರಕೋ?
ಇದಕಿಲ್ಲ ಸೋಲು!

***

ಗಾಂಧೀಜಿ ಕವಿಯೇನು?
ಕೇಳಿದನು ಕಂದ!
ಹತ್ತು ವರುಷದ ಹಸುಳೆ
ನಮ್ಮ ಅರವಿಂದ!!

ಕವಿಗಳಿಗೆ ಕಲ್ಪತರು
ಎಂದೆ ನಾನು!
ಮಗುವು ಕೇಳಿತು ಮತ್ತೆ
ಹೀಗೆಂದರೇನು?

ಗಾಂಧೀಜಿ ಋಷಿ ಏನು?
ಕೇಳಿದನು ಕಂದ!
ಋಷಿಗಳಿಗೆ ಋಷಿರಾಜ
ಎಂದೆ ನಾನು

ಹೀಗೆ ಬೆಳೆಯುತ್ತ ಬೆಳೆಯುತ್ತ ಹೋಗುವ ಇಲ್ಲಿನ ಉದಾತ್ತ ಭಾವಗಳು ಗಾಂಧೀಜಿಯವರನ್ನು ಎಷ್ಟೆಲ್ಲ ಔನ್ನತ್ಯದಿಂದ ಹೊಸಮನಿ ಅವರು ನೋಡಿದರು ಎನ್ನುವುದನ್ನ ಹೇಳುತ್ತದೆ. 'ಏನು ನಿನ್ನ ನಗೆಯು ತಂದೆ', 'ಬಾ ನನ್ನ ತಂದೆ', 'ಬಂದ ತಂದೆ', 'ಗಾಂಧಿ ಜಪ', 'ನಿರುತ್ತರ', 'ಅಜ್ಜನ ಕಂಡಿರೇನು', 'ಕಂದನ ಬಯಕೆ', 'ಹೊಸ ಆಟಗಾರ', 'ಸ್ಫೂರ್ತಿಯ ಸೆಲೆ', 'ಗಾಂಧಿ ಅಜ್ಜನ ಊರುಗೋಲು', 'ಭಾರತೀಯ ಹೃದಯ', 'ಅಜ್ಜನ ಆಸ್ತಿ', 'ಅಜ್ಜನು ಎಲ್ಲಿಹರು', 'ಬಾ ಪುಟಾಣಿ' ಮುಂತಾಗಿ ವೈವಿಧ್ಯಮಯವಾಗಿ ಗಾಂಧಿಭಾವಗಳು ಈ ಸಂಕಲನದಲ್ಲಿ ಹರಿದಿವೆ. ಮಕ್ಕಳಿಗೆ ಉದಾತ್ತವಾದ, ಅದರ್ಶದ ಸಂಗತಿಗಳನ್ನ ನೀಡಬೇಕು, ಅವರ ಬಾಳು ಎತ್ತರಕ್ಕೆ ಏರಬೇಕು ಎನ್ನುವ ಹಂಬಲವೇ ಹೊಸಮನಿ ಅವರ ಮಕ್ಕಳ ಕವಿತೆಗಳನ್ನಾಗಿಸಿರುವುದು ಎಂದರೆ ತಪ್ಪಲ್ಲ.

ಶಂ. ಗು. ಬಿರಾದಾರ(೧೯೨೬–೨೦೧೨) ಅವರು ಹಲವಾರು ಕೃತಿಗಳನ್ನ ರಚಿಸಿದ ಲೇಖಕರಾಗಿರುವ ಹಾಗೆಯೇ ಮಕ್ಕಳಿಗಾಗಿಯೂ ಗಮನಾರ್ಹವಾಗಿ ಬರೆದು ಗಮನ ಸೆಳೆದರು.

'ಶೃತಿ ಮಾಡಿಟ್ಟ ವೀಣೆಯಿಂದ ಅಪಸ್ವರ ಹೊರಟರೂ ಹೊರಟೀತು ! ಆದರೆ ಶಂ. ಗು. ಬಿರಾದಾರ ಬಾಯಲ್ಲಿ ಅಪಸ್ವರ ಕಂಡವರೇ ಇಲ್ಲ. ಅವರಿಗೆ ಜೀವನದಲ್ಲಿ ಒಳ್ಳೆಯದನ್ನಲ್ಲದೆ ಬೇರೇನನ್ನೂ ಮಾಡಿ ಗೊತ್ತಿಲ್ಲ' ಎಂದು ಪಾಟೀಲ ಪುಟ್ಟಪ್ಪ ಅವರು ಹೇಳಿರುವುದು ಅವರ ಮಕ್ಕಳ ಕವಿತೆಗಳ ಬಗೆಗೂ ಅಷ್ಟೇ ಸಲ್ಲುತ್ತದೆ. ಹಲವಾರು ಪುರಸ್ಕಾರಗಳಿಗೆ ಭಾಜನವಾದ ಅವರ ಮಕ್ಕಳ ಸಾಹಿತ್ಯದಲ್ಲಿ ಪದ್ಯಗಳೂ ಕಾಣುತ್ತವೆ, ಕತೆಗಳೂ ಕಾಣುತ್ತವೆ.

ನಾವು ಎಳೆಯರು ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದೊ ಸುಂದರ

ಹಿಂದು ಮುಸ್ಲಿಂ ಕ್ರೈಸ್ತರೆಲ್ಲರಿ
ಗೊಂದೆ ಭಾರತ ಮಂದಿರ
ಶಾಂತಿದಾತನು ಗಾಂಧಿತಾತನು
ಎದೆಯ ಬಾನಿನ ಚಂದಿರ

ಎಂದು ಸಾಗುವ, ಅತ್ಯಂತ ಜನಪ್ರಿಯವಾಗಿರುವ, ತೆಲುಗಿನಲ್ಲಿ ರಾಷ್ಟ್ರಕವಿಗಳೆಂದು ಕರೆಸಿಕೊಂಡವರಿಂದ ಭಾಷಾಂತರಗೊಂಡ, ಮಕ್ಕಳ ರಾಷ್ಟ್ರಗೀತೆಯೆಂದೂ ಅನಿಸಿಕೊಂಡ ಸೊಗಸಾದ ಭಾವೈಕ್ಯತೆಯ ಗೀತೆ ಬರೆದವರು ಶಂ. ಗು. ಬಿರಾದಾರ ಅವರು. ಈ ಪದ್ಯದಲ್ಲಿರುವ ಲಾಲಿತ್ಯ, ನಾದಮಯತೆ, ಹೃದ್ಯವಾದ ಪದಜೋಡಣೆ ಅವರ ಎಲ್ಲ ಕವಿತೆಗಳ ಗುಣವೂ ಹೌದು ಎಂದರೆ ತಪ್ಪಲ್ಲ. ಭಾವಗೀತೆಯ ಬಳಿವಿಡಿದೇ ಅವರ ಕವಿತೆಗಳನ್ನ ಗುರುತಿಸಬಹುದು. ಮಕ್ಕಳಲ್ಲಿ ಎಲ್ಲಬಗೆಯ ಆದರ್ಶಗಳ ಗುಣ ಬಿತ್ತುವಿಕೆಯನ್ನ ಬಯಸಿದವರು ಅವರು. ಒಳ್ಳೆಯ, ನಿರ್ಮಲವಾದ ಭಾವಗಳನ್ನ ಹುಟ್ಟು ಹಾಕಬೇಕೆಂದು ಸದಾ ತುಡಿದವರು ಅವರು.

ಬನ್ನಿ ಓ ಸೋದರರೆ ಬೆಳವಲದನಾಡಿಂಗೆ
ತುಂಬಿ ಹರಿಯಲಿ ಮತ್ತೆ ಸಾಹಿತ್ಯ ರಸಗಂಗೆ

ಎನ್ನುವಂಥ ನಾಡಿನ, ಕನ್ನಡದ ಸಂಭ್ರಮವನ್ನ ಅವರ ರಚನೆಗಳಲ್ಲಿ ಸದೈವ ಕಾಣುತ್ತೇವೆ. ಅವರು ಮಕ್ಕಳಿಗಾಗಿ ರಚಿಸಿದ ಕತೆಗಳು ನಮ್ಮ ಸುತ್ತಲಿನ ಮಕ್ಕಳ ನಡುವೆಯೇ ಅರಳಿದಂತಿವೆ. ಆದರೆ ಅವು ಆ ವೇಷ ಧರಿಸಿ ಹಿಂದಿನ ನೀತಿ ಕತೆಗಳಂತೆಯೇ ಮಕ್ಕಳಿಗೆ ಒಳ್ಳೆಯ ನಡತೆಯ ಪಾಠ ಹೇಳಿಕೊಡಲೆಂದೆ ಉದ್ದೇಶಿತಗೊಂಡುವು.

ಪ.ಗು. ಸಿದ್ದಾಪುರ(೧೯೫೮) ಅವರ 'ಮಕ್ಕಳ ನೂರಾರು ಕವಿತೆಗಳು' ಸಂಗ್ರಹಕ್ಕೆ ಮುನ್ನುಡಿ ಬರೆಯುತ್ತ ಡಾ. ಗುರುಲಿಂಗ ಕಾಪಸೆ ಅವರು 'ಆನಂದದ ಸ್ತರಗಳೂ ಇವೆ, ಆದರ್ಶದ ಕನಸುಗಳೂ ಇವೆ. ಚಿಣ್ಣರ ಆಟ ನೋಟಗಳಿರುವಂತೆ, ಮಹಾತ್ಮರ ಸ್ವರೂಪ-ದರ್ಶನಗಳೂ ಇವೆ, ಹೆತ್ತ ತಾಯಿಯ ವಾತ್ಸಲ್ಯ ಅಲ್ಲಿಗಲ್ಲಿಗೆ ಮಿಂಚುತ್ತದೆ, ಭರತಮಾತೆಯ ಹೆಗ್ಗಳಿಕೆ ಮತ್ತು ಸೇವೆಯ ಹೊಣೆಗಾರಿಕೆ ಕೂಡ ಎದ್ದುಕಾಣುತ್ತದೆ. ಪ. ಗು. ಸಿದ್ದಾಪುರ ಪ್ರಜ್ಞಾವಂತ ಭಾರತೀಯ ಆದರ್ಶದ ಪ್ರತೀಕವಾಗಿ ಕವನ ಸೃಷ್ಟಿಸಿದ್ದು ಇಲ್ಲಿಯ ವಿಶೇಷ' ಎಂದಿದ್ದಾರೆ. 'ತಾರಾಲೋಕಕೆ ಹಾರುವೆನು' ಎನ್ನುವ ಅವರ ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ

ದೊರೆಕಿದೆ. 'ಪುಟ್ಟನ ಪ್ರಶ್ನೆ', 'ಸಕ್ಕರೆ ತುಪ್ಪ', 'ಬಣ್ಣದ ಚಿಟ್ಟೆ', 'ಹುಯ್ಯೊ ಹುಯ್ಯೋ ಮಳೆರಾಯ' ಮುಂತಾದವು ಅವರ ಸಂಕಲನಗಳಾಗಿವೆ.

ಅಕ್ಕನ ಮನೆಗೆ ಗಕ್ಕನೆ ಹೋಗುವೆ
ರಜೆಯಲಿ ನಾ ಓಡಿ
ಸಕ್ಕರೆ ತುಪ್ಪ ಅಕ್ಕರೆಯಿಂದ
ಕೊಡುವಳು ಹದಮಾಡಿ

ಮಾವನ ಜೊತೆಗೆ ಬಾವಿಯ ಜಳಕಕೆ
ಹೋಗುವೆ ತೋಟಕ್ಕೆ
ಬೇಗನೆ ಅಕ್ಕ ತರುವಳು ಬುತ್ತಿ
ಎಲ್ಲರ ಊಟಕ್ಕೆ

ಬೇಸರ ಪಡದೆ ಬನಬನ ಸುತ್ತಿ
ಜೇನನು ಅರಸುವೆನು
ಮರಮರ ಹತ್ತಿ ಸರಸರ ಹರಿಯುವೆ
ಮಾಗಿದ ಫಲಗಳನು

ಹೀಗೆ ಹಳ್ಳಿವಾಡದ ಚಿತ್ರಣಗಳು, ಹಂಬಲಗಳು, ಸಮೃದ್ಧತೆಯ ಚಿತ್ರಣಗಳು, ಸ್ವಚ್ಛಂದದ ನಲಿವಿನ ವಾತಾವರಣಗಳು ತಪ್ಪದೆ ವಸ್ತುವಾಗುವುದನ್ನ ಕಾಣುತ್ತೇವೆ. ಕೋಗಿಲೆಯ ಕೂಗನ್ನ ಆಲಿಸುವ ಮಗುವಿನ ಭಾವಗಳು ವ್ಯಕ್ತವಾಗುವುದನ್ನ ನೋಡಬೇಕು . . .

ಯಾರಿಗಾಗಿ ಕೂಗುತಿರುವೆ
ಮಧುರ ಕಂಠ ಕೋಗಿಲೆ?
ಎನ್ನ ಮುಂದೆ ಹೇಳು ಬೇಗ
ನಿನ್ನ ಬಯಕೆ ಈಗಲೆ

ಎಂದು ಸಾಗುವ ರಚನೆ ಮುಗಿಯುವುದು ಹೇಗೆ:

ನಿನ್ನ ಮಧುರ ಗಾನ ಕೇಳಿ
ಎನ್ನ ಹೃದಯ ಅರಳಿತು!
ಎನಗೆ ಅರಿಯದಂತೆ ನಿನ್ನ
ಚರಿತೆ ಕರದಿ ಮೂಡಿತು!

ಈ ಬಗೆಯ ಉದಾತ್ತ ಭಾವಗಳಿಗೆ ಹೊರಳುವುದು ವಾಡಿಕೆಯ ಹಾಗೆಯೇ ಕಾಣುತ್ತ ಬಂತು. 'ಮಕ್ಕಳಿಗೆ ಆರೋಗ್ಯಪೂರ್ಣವಾದ, ಒಳ್ಳೆಯ ಭವಿಷ್ಯದ, ಆಹ್ಲಾದದ ವಾತಾವರಣ, ಸರಿ ದಾರಿಯಲ್ಲಿ ನಡೆಯುವ ಮಾರ್ಗದರ್ಶನ ನೀಡುವುದೇ ಕವಿತೆಯ ಉದ್ದೇಶ ಹಿರಿದಾಗಿ ಕಂಡಿತು. ರಮ್ಯ ಭಾವಗೀತಗಳ ವಾತಾವರಣದ ಮುಂದುವರಿಕೆಯೇ ಹೀಗೆ ಮಕ್ಕಳ ಲೋಕದಲ್ಲಿ ಮುಂದುವರೆಯಿತು ಎನ್ನಬಹುದು.

ದುಂದು ವೆಚ್ಚ ದೂರ ದೂಡಿ
ಎನಗೆ ನಿತ್ಯ ದುಡಿವ ರೂಢಿ
ಪ್ರಾಣಿಪಕ್ಷಿಗಳನು ಮುದದಿ
ಪ್ರೀತಿಯಿಂದ ನೋಡುತ

ಶಿಸ್ತು ಶಾಂತಿ ಕಾಯ್ದುಕೊಂಡು
ಗೆಳೆಯರೊಡನೆ ಬೆರೆತುಕೊಂಡು
ಹೆಜ್ಜೆಯಿಡುವೆ ಮುಂದೆ ಮುಂದೆ
ಸ್ಕೌಟ್ ಗೀತೆ ಹಾಡುತ

ಎನ್ನುವ ಸ್ಕೌಟ್ ಹುಡುಗನನ್ನ ಸಂಧಿಸುತ್ತೇವೆ ಸಿದ್ದಾಪುರ ಅವರ ಕವಿತೆಗಳಲ್ಲಿ. 'ಮೋಸದಿಂದ ಹಣವ ಸುಲಿವ ಹಲವು ಬಗೆಯ ತಿರುಕರು ನಮ್ಮ ನಾಡಿನಲ್ಲಿ ಈಗ ನಿತ್ಯ ಹೆಚ್ಚುತಿರುವರು, ದುಡಿಮೆಯಿಂದ ದೇಶ ಪ್ರಗತಿ ಎಂಬುದನ್ನು ಅರಿಯರು, ಬರಿದೆ ನೀತಿ ತತ್ವಗಳನು ಬೋಧೆ ಮಾಡುತಿರುವರು' ಎನ್ನುತ್ತದೆ ಮತ್ತೊಂದು ಮಗು. ಕನ್ನಡದ ಬಗೆಗೆ ಹಾಡುತ್ತ ಇನ್ನೊಂದು ಮಗು 'ಗಂಧದಂತೆ ನಾಲ್ಕು ದೆಸೆಗೆ ಸೂಸುತಿರುವ ಸೌರಭ, ನಾಡದೇವಿ ಮಕುಟದಲ್ಲಿ ಹೊಳೆವ ದಿವ್ಯ ಕೌಸ್ತುಭ' ಎನ್ನುತ್ತದೆ. ಈ ಬಗೆಯ ಬದುಕಿನ ಆದರ್ಶದ ಭಾವನೆಗಳು ಸರ್ವೇಸಾಮಾನ್ಯವಾಗಿ ಕಾಣುತ್ತವೆ. ಸಿದ್ದಾಪುರ ಅವರ ಕವಿತೆಗಳು ಸುಲಲಿತವಾಗಿ ಒಂದಾವುದೊ ಲಯ ಹಿಡಿದುಕೊಂಡು ಹರಿಯುವುದನ್ನು, ಅದಕ್ಕೆಲ್ಲಿಯೂ ಅಡ್ಡಿಯಾಗದಂತೆ ಶಬ್ದಗಳ ಬಳಕೆ ಮಾಡುವುದನ್ನು, ಅದೊಂದು ಹಾಡಾಗಿ ರೂಪು ಪಡೆಯುವುದನ್ನ ತಪ್ಪದೆ ನೋಡುತ್ತೇವೆ. ಮಕ್ಕಳಿಗೆ ನಾನಾ ಬಗೆಯ ಸಂಗತಿಗಳನ್ನು ಅರುಹುವ, ಅವರಲ್ಲಿ ಆರೋಗ್ಯ, ಪರಿಸರ, ವಿದ್ಯೆಯ ಮಹತ್ವ, ಶಿಸ್ತು ಮುಂತಾದುವನ್ನೆಲ್ಲ ಮೂಡಿಸುವ ಕಾಳಜಿಯುಳ್ಳ ರಚನೆಗಳು ಸಾಕಷ್ಟು ತುಂಬಿಕೊಂಡಿರುವುದು ಮಕ್ಕಳ ಲೋಕಕ್ಕೆ ಕವಿಯಾಗಿ ಏನೆಲ್ಲವನ್ನ ಮುಟ್ಟಿಸಬೇಕು, ಅವರ ಭವಿಷ್ಯ ರೂಪುಗೊಳ್ಳಬೇಕು ಎನ್ನುವ ಶಿಕ್ಷಕನ ತುಡಿತ ಇಂಥಲ್ಲೆಲ್ಲ ಢಾಳಾಗಿಯೇ ಕಾಣುತ್ತದೆ. ಬಾಲ್ಯದ ಸಹಜದ ಸಂದರ್ಭಗಳನ್ನು ಸಿದ್ದಾಪುರರು ಎತ್ತಿಕೊಳ್ಳುವುದಿಲ್ಲ ಅನ್ನುವಂತಿಲ್ಲ, ಮಕ್ಕಳ ಆಟದ ಹಂಬಲ, ರಜೆಯ ಸ್ವಚ್ಛಂದತೆ, ಅಮ್ಮನ ಮುಂದೆ ಮುಗ್ಧತೆಯ ಹರಡಿಕೊಳ್ಳುವಿಕೆ ಎಂಥವನ್ನೆಲ್ಲ ಕಂಡೇಕಾಣುತ್ತೇವೆ. ಆದರೆ ಬಾಲ್ಯವೇ ವಿಸ್ತೃತವಾಗಿ ಹರಡಿಕೊಳ್ಳುವುದಿಲ್ಲ, ಬದಲಾಗಿ ಮಕ್ಕಳಿಗೆ ಸಾಧ್ಯವಾದ ಏನೆಲ್ಲವನ್ನು ತಲುಪಿಸಬೇಕು ಎನ್ನುವ ಹಂಬಲ ಹೆಚ್ಚು ಕಾಡುತ್ತದೆ. ಕವಿತೆಗಳವೇ ಹನ್ನೊಂದು ಸಂಕಲನಗಳನ್ನು ತಂದಿರುವುದನ್ನು ನೋಡಿದರೆ ಸಿದ್ದಾಪುರ ಅವರ ಕವಿತೆಗಳ ಒಲವು ಎಂಥದೆಂಬುದು ತಿಳಿಯುತ್ತದೆ.

ನಿವೃತ್ತಿಯ ನಂತರವೇ ಬರೆಯತೊಡಗಿ ಸಾಕಷ್ಟು ತೊಡಗಿಕೊಂಡು ಇತ್ತೀಚೆಗೆ ರಾಜ್ಯೋತ್ಸವ ಪ್ರಶಸ್ತಿಗೂ ಭಾಜನರಾದವರು **ಕಂಚ್ಯಾಣಿ ಶರಣಪ್ಪ** (೧೯೩೦)ನವರು. ಸಿಸು ಸಂಗಮೇಶರ ವಾತಾವರಣದಲ್ಲಿಯೇ ಬೆಳೆದು ರೂಪಗೊಂಡ ಕಂಚ್ಯಾಣಿ ಅವರು ಶಿಕ್ಷಕರಾಗಿ ಮಕ್ಕಳಿಗೆ ಕಾಳಜಿಯ ಬದುಕಿನ ಪಾಠಗಳನ್ನೇ ಹೇಳಲು ತವಕಿಸಿದ ಹಾಗೆ ತಮ್ಮದೇ ಒಳ ತುಡಿತದಿಂದ ಹಾಸ್ಯದ ಸಾಮಗ್ರಿಯನ್ನ ವಿಶೇಷವಾಗಿಯೇ ಹಿಡಿದಿಟ್ಟವರು. ಹಾಗೆಯೇ ಗ್ರಾಮೀಣ ಪರಿಸರ ಇವರ ಕವಿತೆಗಳಲ್ಲಿ, ಕತೆಗಳಲ್ಲಿ ಪಡಿಮೂಡಿದಂತೆ ಬೇರೆ ಈ ಸಮಯದ ಲೇಖಕರಲ್ಲಿ ಕಾಣಿಸಿಲ್ಲ ಎನ್ನುವುದೂ ಅಷ್ಟೇ ಸತ್ಯ.

ದೀವಳಿಗೆ ದಿನದಂದು ಹೆಂಡಿಯ ಪಾಂಡವರು
ಮನೆಯ ಅಂಗಳದಾಗ ಕುಂತಾರ
ಹೊನ್ನವರಿ ಗೊಂಚಲು ಉತ್ತರಾಣಿ ಕಡ್ಡಿ
ಹಣಿಗೆ ಕುಂಕುಮ ಬಟ್ಟು ಇಟ್ಟಾರ

ಇಂಥ ಖಾಸಾ ಖಾಸಾ ಗ್ರಾಮೀಣ ಪರಿಸರದ ವಸ್ತುಗಳು ಅವರ ಕವಿತೆಗಳ ವಸ್ತುವಾಗುತ್ತವೆ. 'ಅಜ್ಜನ ಹಾಡು', 'ಜಾಗೃತ ಭಾರತ', 'ಮಕ್ಕಳ ಮನೆ', 'ಹುಟ್ಟುಹಬ್ಬ', ಚೆಲುವಿನ ಚಿಟ್ಟೆ', 'ತೊಟ್ಟಿಲ ಗುಬ್ಬಿ', 'ಬೆದರು ಬೆಚ್ಚ', 'ಗುಡುಗುಡು ಗುಂಡ', ಗಿಲ್ ಗಿಲ್ ಗಿಡ್ಡ', 'ತಿಪ್ಪನ ಕತೆಗಳು' ಹೀಗೆ ಹಲವಾರು ಕೃತಿಗಳು ಗ್ರಾಮೀಣ ಬನಿಯನ್ನ ಹೊತ್ತು ಅವರಿಂದ ಬಂದಿವೆ. 'ಬನದೂಟ' ಆಟದಲ್ಲಿಯೇ ಅಲ್ಲೀಕೇರಿ ಮಾಡಿದ ಮಕ್ಕಳ ಸುತ್ತ ರಚನೆಗೊಳ್ಳುವ ಕವಿತೆ. ಅಂಗೈ ಅಗಲದ ಎಲೆತಂದು ಪುಟ್ಟಿ ರೊಟ್ಟಿ ಮಾಡಿದ್ದು, ಕಾಯಿ ಕುಟ್ಟಿ ಮುನ್ನಿ ಪಚಡಿಪಲ್ಯ ಮಾಡಿದ್ದು, ಕಲ್ಲಿನ ಗುಂಡು ಹೊತ್ತು ಮಲ್ಲ ನೀರು ಸುರುವಿದ್ದು, ಚಪ್ಪಡಿ ತಂದು ಚೆನ್ನ ತಾಟು ಮಾಡಿದ್ದು ಹೀಗೆ ಮಕ್ಕಳ ಸಹಜವಾದ ಮಣ್ಣೊಳಗಿನ ಆಟ ಇಲ್ಲಿ ಅರಳಿದೆ. ಕೊನೆಗೆ ಅದು

ನಗುನಗುತಲಿ ಬನದೂಟ ಮಾಡಿ
ಡರ್‍ರನೆ ಡೇಗನು ಬಿಟ್ಟಿಹರು

ಎಂದು ಮುಗಿಯುವಲ್ಲಿ ಸಹಜದ, ಹಾಗೆಯೇ ಕಂಚ್ಯಾಣಿ ಅವರ ಹಾಸ್ಯದ ಸ್ವಭಾವವನ್ನೂ ಪರಿಚಯಿಸಿಬಿಡುತ್ತದೆ. 'ಕುಣಿತದ ಕುತ್ತು' ಹೀಗೆಯೇ ಹಾಸ್ಯದಿಂದ ತುಂಬಿದ, ಹಾಗೆಯೇ ಮರುಕವನ್ನೂ ಉಕ್ಕಿಸುವ ಗ್ರಾಮೀಣ ಪರಿಸರದ್ದೇ ಕವಿತೆ. ಕಸಬರಿಗೆ, ಮಸಿ ಅರಿವೆ ನವಿಲಿನ ಹಾಗೆ ಕುಣಿಯಲು ಹೋಗಿ ಉರಿಯುವ ಒಲೆಗೆ ಬಿದ್ದುದನ್ನು ಹೇಳುತ್ತ ಕವಿತೆ ಅವುಗಳ ಕುಣಿತವನ್ನೇ ಮುಖ್ಯಭಾಗವಾಗಿಸಿಕೊಂಡಿದೆ.

ನವಿಲಿನ ಹಾಗೆ
ಹಿಗ್ಗನು ತಾಳಿ
ಬಂದಿತು ಮಸಿ ಅರಿವೆ
ಕೈ ಕೈ ಕುಲುಕಿಸಿ
ಮೈ ಮೈ ಅಲುಗಿಸಿ
ಥೈ ಥೈ ಕುಣಿದಿಹವು

ಕಂಚ್ಯಾಣಿ ಅವರ ಈ ಹಾಸ್ಯ ಪ್ರಜ್ಞೆ ಈ ಸುಮಾರಿನ ಏಕತಾನದ ಕಾವ್ಯದ ಹರವಿನಲ್ಲಿ ಒಂದಿಷ್ಟೆಲ್ಲ ಹೊಸತಿನ ಬಗೆಯನ್ನೇ ಹೇಳಿತು. ಇದು ಬಾಲ್ಯದ ಅವರ ಆಕರ್ಷಣೆ, ಹಚ್ಚಿಕೊಳ್ಳುವಿಕೆಯನ್ನೂ ಹೇಳುತ್ತದೆ. ಕೇವಲ ಮಕ್ಕಳಿಗೆ ಆದರ್ಶಗಳ, ನೀತಿ ಪಾಠಗಳ ಪಥ್ಯವಾಗುವುದರ ಜೊತೆಗೆ ಮಕ್ಕಳದೇ ಆಸಕ್ತಿಯ ಲೋಕಕ್ಕೆ ತೆರೆದುಕೊಳ್ಳುವುದು ಹೀಗೆ ಸಾಧ್ಯವಾಗಿದೆ ಎನಿಸುತ್ತದೆ.

ಅವರ ಕವಿತೆ 'ಲಟಿಕೆಯ ಮದುವೆ' ಪುಟಾಣಿಗಳನ್ನ ಸೆಳೆಯುವ ನಗುವಿನ ಹೂರಣದ್ದೇ ರಚನೆ. ಚುಟುಕಾ ಚುಟುಕಿ ಲಟಿಕೆ ಹಾಕುತ್ತ ಮದುವೆ ಮಾಡಿದ ಪ್ರಸಂಗದಲ್ಲಿ, ಅರಿಷಿಣ, ಅಕ್ಷತೆ, ಓಲಗ, ಉಡಿಗೆ, ತೊಡಿಗೆ, ಅಡಿಗೆ ಎಲ್ಲ ಲಟಿಕೆಯದೇ ಆಗಿ, ಆ ಶಬ್ದದ ಧ್ವನಿಯೂ ಕವಿತೆಯುದ್ದಕ್ಕೆ ಮೇಳೈಸಿ ಕವಿತೆಗೆ ಚುರುಕಾದ ನಡಿಗೆಯೂ ಸಿಕ್ಕು ಸೊಗಸಾಗಿದೆ.

ಲಟಲಟ ಲಟಲಟ
ಲಟಿಕೆಯ ಹಾಕುತ

ಚಕಚಕ ಸುರಿಗೆಯ ಸುತ್ತಿದರು
ಲಟಿಕೆಯ ಅರಿಷಿಣ
ಲಟಿಕೆಯ ಅಕ್ಷತೆ
ಲಟಿಕೆಯ ಓಲಗ ನುಡಿಸಿದರು

ಇಂಥ ಹಾಸ್ಯಗಳೆಲ್ಲ ಗ್ರಾಮೀಣ ಪರಸರದಲ್ಲಿಯೇ ಅರಳುವಂಥವು. ಇವನ್ನೆಲ್ಲ ತಂದುಕೊಳ್ಳುವುದಕ್ಕೆ ಗ್ರಾಮೀಣದ ಬನಿಯ ಹಲವಾರೆಲ್ಲ ವಿಶಿಷ್ಟ ಪದಗಳನ್ನ ಅಗತ್ಯವಾಗಿಯೂ, ಸಹಜವಾಗಿಯೂ ಅವರು ಬಳಸಿಕೊಳ್ಳುತ್ತಾರೆ. ನೊಣವೂ ನೊರಜೂ ಕೂಡಿ ಜಾತ್ರೆ ಮಾಡಿದ ಪ್ರಸಂಗ ಇನ್ನೊಂದು ಕವಿತೆಗೆ ವಸ್ತುವಾಗಿದೆ. ಅಜ್ಜಿಯ ಕೌದಿಯ ಬಗೆಗೆ ಒಂದು ಕವಿತೆ ಇದೆ. ಊರಿಗೆ ಬರುತ್ತಿದ್ದ, ಈಗ ಕಣ್ಮರೆ ಆಗಿಹೋಗಿರುವ ಜೋಗೇರ ಬಗೆಗೆ ಇನ್ನೊಂದು ಕವಿತೆ ಇದೆ. ಅವರು ಕತೆಗಳನ್ನೂ ಬರೆದಿದ್ದು ಅಲ್ಲಿಯೂ ಕೇವಲ ಹಾಸ್ಯ ಪ್ರಸಂಗಗಳನ್ನೇ ಬರೆದಿದ್ದಾರೆ. ತಿಪ್ಪ ಇಂಥಲ್ಲಿ ಪದೇ ಪದೇ ಕಾಣುವ ಪಾತ್ರ. ಆತ ತನ್ನ ಪೆದ್ದುತನದಿಂದ ಹಲವಾರು ಹಾಸ್ಯಕ್ಕೆ ಕಾರಣನಾಗುವುದು ಕಾಣುತ್ತದೆ. ಇದೆಲ್ಲ ಜನಪದ ಕತೆಗಳ ಸರಕೇ. ಇಂಥದೆಲ್ಲ ಕಂಚ್ಯಾಣಿ ಅವರ ವಿಶೇಷತೆ ಎಂದು ಗುರುತಿಸುವುದರ ಜೊತೆಗೇ ಮಕ್ಕಳಿಗೆ ಕಲಿಸುವ, ದೊಡ್ಡ ದೊಡ್ಡ ವಿಷಯಗಳನ್ನು ಅರುಹಲು ನೋಡುವ, ನೀತಿ ಹೇಳುವ ಶಿಕ್ಷಕ ಸಮುದಾಯದ ಭಾವನೆಗಳು ಎಲ್ಲರಂತೆ ಕಂಚ್ಯಾಣಿ ಅವರಲ್ಲಿ ಸದ್ಯೈವ ಕಾಣಿಸಿಕೊಂಡೆ ಇವೆ. ನಿರ್ದಿಷ್ಟ ಉದ್ದೇಶಪಟ್ಟ ಕವಿತೆಗಳು ಸಾಕಷ್ಟು ಸಿಗುತ್ತವೆ. ಹಲವಾರು ಸಲ ರಮ್ಯ ಭಾವಗೀತಗಳಾಗಿ ಅವು ತಿರುಗಿಕೊಳ್ಳುತ್ತವೆ. ಪಾಪನ ಬಗೆಗೆ ಬರೆಯುತ್ತ 'ನಿನ್ನ ಆಟ ನೋಟವೆಲ್ಲ ನವೀನ ಲೀಲೆಯಾಗಿದೆ' ಎನ್ನುತ್ತಾರೆ. 'ನನ್ನ ತೋಟ' ಕವಿತೆಯಲ್ಲಿ 'ತಾಯಿ ತೊಡೆಯ ಮೇಲೆ ಕುಳಿತು ನಗುವ ತೆರದಿ ಮಕ್ಕಳು, ಚಿಕ್ಕ ಚಿಕ್ಕ ಮಡಿಗಳಲ್ಲಿ ಪುಟ್ಟ ಪುಟ್ಟ ಸಸಿಗಳು' ಎನ್ನುವ ಅಭಿವ್ಯಕ್ತಿ ಕಾಣುತ್ತದೆ. 'ಹಿಂದಿ ಗಂಟು' ರಚನೆಯಲ್ಲಿ 'ಬಾಳ ಬಟ್ಟೆಯ ಹೊಲಿಯೆ ನಂಬುಗೆಯ ಗಂಟು, ಮರೆತು ನಡೆದರೆ ಬಾಳು ಗೋಳು! ಏನುಂಟು?' ಎನ್ನುವಂಥ ಮಾತುಗಳು ಕೇಳುತ್ತವೆ. 'ಭಾಗ್ಯದ ಬಾಗಿಲು' ಎನ್ನುವ ಮಳೆಯ ಕುರಿತ ಕವಿತೆ ಕೂಡ ಹೀಗೆ ವಿಸ್ತಾರದ ಸಂಗತಿಗಳಿಗೆ ಚಾಚಿಕೊಳ್ಳುವುದೇ ಆಗಿದೆ.

ಗಡಿಭಾಗದಲ್ಲಿ ಶಿಕ್ಷಕರಾಗಿದ್ದು ಮಕ್ಕಳಿಗೆ ಪ್ರೀತಿಯಿಂದ ಪದ್ಯಗಳನ್ನ ಬರೆಯುತ್ತ ಬಂದವರು **ಪಾ. ಭಿ. ಪಾಟೀಲ**(೧೯೩೧) ಅವರು. ಒಬ್ಬ ನಿಷ್ಠಾವಂತ ಶಿಕ್ಷಕರಾಗಿ ಮಕ್ಕಳ ಬೆಳವಣಿಗೆಯನ್ನ ಸದಾ ಚಿಂತಿಸುತ್ತ ಬಂದ ಅವರು 'ಅಮ್ಮಾ ಹಾಡು ಹೇಳು', 'ಹಾದಿಯ ಹೂವು', 'ಮುದ್ದು ಮರಿ', 'ಚಿಗುರೆಯ ಮರಿ', 'ಬಾಲಕೃಷ್ಣ' ಮುಂತಾಗಿ ಅನೇಕ ಸಂಕಲನಗಳನ್ನ ನೀಡಿದ್ದಾರೆ. ಹಲವಾರು ಪ್ರಶಸ್ತಿಗಳಿಗೂ ಭಾಜನರು ಅವರು. ಮಕ್ಕಳ ಭವಿಷ್ಯವನ್ನೇ ಗಮನದಲ್ಲಿಟ್ಟುಕೊಂಡು ಒಳ್ಳೆಯ ಮಾತುಗಳಿಂದ ತುಂಬಿದ ಕವಿತೆಗಳನ್ನ ಬರೆದವರು. 'ವಿಶ್ವಕೆಲ್ಲಕೆ ಭಾರತ ಒಂದೇ ಮಂದಿರವು, ಭಾರತ ನೆಲದಿ ಕರ್ನಾಟಕ ಒಂದೇ ಚಂದಿರವು', 'ಅಭಿಮಾನ ನಿನಗಿರಲಿ ಭಾರತಾಂಬೆಯ ವೀರ ಕುವರ ನಾನೆಂದು' ಮುಂತಾದ ದೇಶಭಕ್ತಿಯಿಂದ ಕೂಡಿದ ಗೀತೆಗಳನ್ನು ಮತ್ತೆ ಮತ್ತೆ ಬರೆದಿರುವ ಅವರು ಮಕ್ಕಳನ್ನು ರಂಜಿಸುವ ಹಲವನ್ನೂ ಬರೆದಿರುವರು

ಕಾಮಿ : (ನಸು ಮನೆಯಿಂದ) ಮಿಯಾಂವ್ ಮಿಯಾಂವ್
ಪುಟ್ಟ : ಮುದ್ದಿನ ಕಾಮಿ ಹೇಳೆ ನೀನು

ನಿನ್ನ ಮರಿಗಳನೆಲ್ಲಿಟ್ಟಿ ?
ಕಾಮಿ : ಕೇಳೋ ತುಂಟಾ ನಿನ್ನ ಕೀಟಲೆ ಕಂಡು
ಅಡಗಿಸಿ ಇಟ್ಟಿರುವೆ
ಪುಟ್ಟ : ಹೇಳೆ ಕಾಮಿ ನಿನ್ನ ಮರಿಗಳ ಹೊಟ್ಟೆಗೆ
ಏನನ್ನು ಹಾಕಿರುವೆ ?
ಕಾಮಿ : ಹಾಲನ್ನು ಕುಡಿಸಿ ಹಸಿವನ್ನು ತಣಿಸಿ
ನಿದ್ದೆಗೆ ಹಚ್ಚಿರುವೆ

ಸಂಗಮೇಶ ಬಾಗಲಕೋಟ, ಕರವೀರಪ್ರಭು ಕ್ಯಾಲಕೊಂಡ, ಸಂಗಮೇಶ ಗುಜಗೊಂಡ, ಜಂಬುನಾಥ ಕಂಚ್ಯಾಣಿ ಹೀಗೆ ಮುಂದುವರೆದ ವಿಜಾಪುರದ ಕಡೆಗಿನ ಬೆಳಸನ್ನು ನೋಡಬಹುದು.

ಬೇಸಿಗೆ ರಜೆಯಲಿ ಅಜ್ಜನ ಊರಿಗೆ
ತಪ್ಪದೆ ಹೋಗುವೆನು
ಅಜ್ಜಿಯ ಜೊತೆಗೆ ಅಕ್ಕರೆಯಿಂದಲಿ
ಅನುದಿನ ಆಡುವೆನು

ಹೀಗೆ ಸರಳವಾದ, ನೇರವಾದ ನಿರೂಪಣೆಯುಳ್ಳ ರಚನೆಗಳ ಮೂಲಕ ಗ್ರಾಮೀಣ ಪರಿಸರ, ಒಳ್ಳೆಯ ವಾತಾವರಣ, ಆದರ್ಶದ ಮಾತುಗಳನ್ನ ತುಂಬಿ **ಸಂಗಮೇಶ ಬಾಗಲಕೋಟ** ಅವರು ಹಲವಾರು ರಚನೆಗಳನ್ನ ಮಾಡುತ್ತ ಬಂದರು.

ಕಣ್ಣನರಳಿಸಿ ನಗೆಯ ಸೂಸಿ
ಕೈಯ ಚಾಚಿದ ಕಂದನೆ
ಕೊರಳ ಕೊಂಕಿಸಿ ಕಾಲು ಕದಲಿಸಿ
ಸನಿಹ ಬರುತಿಹ ಚೆಲುವನೆ

ಮರುಳನಾದೆನು ಮರೆಯದಾದೆನು
ತರಳ ನಿನ್ನಯ ಬಂಧನ
ಕರುಳ ಕರೆದಿದೆ ಕೈಯ ಚಾಚಿದೆ
ಎತ್ತಿಕೊಂಡೆನು ನಂದನ

ಹೀಗೆ ಭಾವಗೀತಗಳ ಸುಗಮ ಲಯಗಳಲ್ಲಿ ರಮ್ಯ ಭಾವಗಳನ್ನ ಹಲವಾರು ಅವರು ಅಭಿವ್ಯಕ್ತಗೊಳಿಸಿದ್ದಾರೆ.

ಓದೊ ಬಸವಾ ಎಂದರೆ ಸಾಕು
ಪುಸ್ತಕ ಕಳೆದಿದೆ ಎನ್ನುವನು
ಬರೆಯೋ ಬಸವಾ ಎಂದರೆ ಸಾಕು
ಪೆನ್ನನು ಕೊಡಿಸು ಎನ್ನುವನು

ಎನ್ನುವಂಥ ಮಕ್ಕಳ ಹತ್ತಿರದ ಸಂಗತಿಗಳನ್ನ ಸಂಗಮೇಶ ಬಾಗಲಕೋಟ ಅವರು ತಮ್ಮ ಪದ್ಯಗಳಲ್ಲಿ ತರುವುದನ್ನ ನೋಡುತ್ತೇವೆ. 'ಪತಂಗ', 'ಬಣ್ಣದ ಕಾರು', 'ಗುಲಾಬಿ ಗುಚ್ಛ' ಮುಂತಾಗಿ ಅವರ ಕವಿತಾ ಸಂಕಲನಗಳಲ್ಲದೆ ಅವರು ಕತೆಗಳನ್ನೂ ರಚಿಸಿದ್ದು 'ಗೊಂಬೆಯ ಮದುವೆ'

ಸಂಕಲನದಲ್ಲಿವೆ. ಈ ಶೀರ್ಷಿಕೆಯ ಕತೆಯೇ ಮಜವಾಗಿದೆ. ಕತೆ ಓದುತ್ತ ಹೋದಂತೆ ದೊಡ್ಡವರ ನಡುವೆ ಗಂಭೀರವಾಗಿ ಮದುವೆಯ ಮಾತುಕತೆ, ವ್ಯವಹಾರ, ಒಪ್ಪಿಗೆ, ಅಸಮ್ಮತಿ ಎಲ್ಲ ನಡೆಯುವುದನ್ನು ಕೇಳುತ್ತೇವೆ. ತಂಗಿ ಅಣ್ಣನ ಮನೆಗೆ ತನ್ನ ಮಗಳನ್ನು ಕೊಡಲು ಬಂದಿರುವವಳು. ಅಂತೂ ಹಾಗೂ ಹೀಗೂ ಮಾಡಿ ಮಾತುಕತೆ ಕೂಡಿಬಂದು ಮದುವೆಯೂ ನಡೆದು ಹೋಗುತ್ತದೆ ಸುಗಮವಾಗಿ. ಆದರೆ ಕೊನೆಗೇ ತಿಳಿಯುವುದು ಈ ಮದುವೆ ಆಟದ ಮದುವೆ ಎಂದು ! ಆಟದಲ್ಲಿಯೂ ಮಕ್ಕಳು ಹಿರಿಯರ ಎಲ್ಲ ನಡುವಳಿಕೆಗಳನ್ನು ಹೂಬೇಹೂ ಆಗಿ ಅನುಕರಿಸುವುದು, ಅವು ಏನೆಲ್ಲವನ್ನ ಗ್ರಹಿಸುತ್ತಿರುತ್ತವೆ ಎನ್ನುವುದಕ್ಕೆ ಸಾಕ್ಷಿ ಎನ್ನುವಂತಿರುವ ಕತೆ, ಹಾಸ್ಯದಲ್ಲಿ ಪರ್ಯವಸಾನವಾಗುತ್ತದೆ.

ಹ. ಮ. ಪೂಜಾರ(೧೯೪೦) ಅವರೂ ವಿಜಯಪುರ ಜಿಲ್ಲೆಯ ಸಿಂದಗಿ ಭಾಗದ ಇನ್ನೊಬ್ಬ ಆಸ್ಥೆಯ ಮಕ್ಕಳ ಲೇಖಕರು. ಒಬ್ಬ ಚಟುವಟಿಕೆಯ ಶಿಕ್ಷಕರಾಗಿ, ಸಾಹಿತ್ಯದಲ್ಲಿಯೂ ಆಸಕ್ತಿಹೊಂದಿ ಅವರು ಹಲವಂದದಲ್ಲಿ ತೊಡಗಿಕೊಂಡವರು. ೧೯೭೫ರಲ್ಲಿ ಸ್ವಯಂಘೋಷಿತ ಮಕ್ಕಳ ಬಳಗ ಕಟ್ಟಿ ನೂರಾರು ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳುತ್ತ ಬಂದವರು. ಮಕ್ಕಳಿಗಾಗಿ ಕಥೆ ಕವಿತೆಗಳ ರಚನಾ ಸ್ಪರ್ಧೆಗಳನ್ನ, ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನ ಆಯೋಜಿಸುತ್ತ ಬಂದವರು. ೧೯೯೬ರಲ್ಲಿ ವಿದ್ಯಾಚೇತನ ಪ್ರಕಾಶನವನ್ನ ಹುಟ್ಟು ಹಾಕಿಕೊಂಡು ಪ್ರಕಾಶನಕ್ಕೂ ಆಸ್ಥೆ ವಹಿಸಿ ಅನೇಕರ ಕೃತಿಗಳನ್ನ ತರುತ್ತಿರುವವರು. 'ಸುವರ್ಣ ಕರ್ನಾಟಕ ವರ್ಷಾಚರಣೆ'ಯ ಸಂದರ್ಭದಲ್ಲಿಯೇ ಈ ಪ್ರಕಾಶನ ದಶಮಾನೋತ್ಸವವನ್ನ ಆಚರಿಸಿಕೊಂಡಿತು.

> ಗೆಳೆಯರು ಕೂಡಿ ನಿತ್ಯವು ತಪ್ಪದೆ
> ಶಾಲೆಗೆ ಹೋಗುವೆವು
> ಎಲ್ಲರೂ ಕೂಡಿ ಐಕ್ಯ ಮಂತ್ರದ
> ಪ್ರಾರ್ಥನೆ ಮಾಡುವೆವು

ಎನ್ನುವಂಥ ಸುಮನಸ್ಸಿನ, ಅದರ್ಶಭಾವದ ರಚನೆಗಳನ್ನು ಅವರು ಮಾಡುತ್ತ ಬಂದವರು. ಅವರ 'ಪರಿಸರ' ಸಂಕಲನದಲ್ಲಿ ಇಂಥ ಹಲವಾರು ಕವಿತೆಗಳಿವೆ. ಎಳೆಯರಲ್ಲಿ ಒಳ್ಳೆಯ ಬದುಕಿನ ಬೀಜ ಬಿತ್ತುವುದು, ಕಲಿಕೆಯ ಅನೇಕ ಸಂಗತಿಗಳನ್ನ ರಂಜಕವಾಗಿ ತಲಪಿಸುವುದು ಕವಿತೆಗಳಲ್ಲಿ ವಿಶೇಷವಾಗಿ ಕಾಣುತ್ತದೆ.

> ದಿನಕರನಲ್ಲದೆ ಆಗಸದಲ್ಲಿ
> ಇರುವವರು ಗ್ರಹಗಳು ನಕ್ಷತ್ರ
> ಸೂರ್ಯನ ಬೆಳಕಿಗೆ ಕಾಣದೆ ಹಗಲಲಿ
> ಹೊಳೆವವು ಇರುಳಲಿ ಅವುಮಾತ್ರ

ಮುಂತಾಗಿ ಹಾಡುಗಳ ಮೂಲಕ ಪಾಠಗಳನ್ನ ರಂಜಕವಾಗಿ ನೀಡುವುದರಿಂದ ಮಕ್ಕಳು ಆಸಕ್ತಿಯಿಂದ ಗ್ರಹಿಸಬಲ್ಲರು ಎಂಬುದು ಇಲ್ಲಿನ ಗ್ರಹಿಕೆ. ಹ. ಮ. ಪೂಜಾರ ಅವರು ಕತೆಗಳನ್ನ ಬರೆಯುವಲ್ಲಿ ಹೆಚ್ಚಿನ ಉತ್ಸುಕತೆಯನ್ನ ತೋರಿರುವುದು ಕಾಣುತ್ತದೆ. 'ನೀತಿಯ ಬದುಕು', 'ತುಂಟ ಮಂಗ', 'ಪರೋಪಕಾರ' ಮೊದಲಾದ ಅವರ ಸಂಕಲನಗಳಲ್ಲಿ ಅವರ ಕತೆಗಳನ್ನ ಕಾಣಬಹುದು. ಬೆಕ್ಕೊಂದು ಕದ್ದು ಕದ್ದು ಹಕ್ಕಿಯ ಮರಿಗಳನ್ನು ತಿನ್ನುವುದನ್ನ ಕಂಡು ಪರಸ್ಪರ ಕಚ್ಚಾಡುತ್ತಿದ್ದ ಹಕ್ಕಿಗಳು ಒಂದಾಗಿ ರಕ್ಷಣೆಗೆ ನಿಲ್ಲುವುದು ಒಂದು ಕತೆಯ

ಹಂದರವಾದರೆ, ಮರ ಕಡಿಯಲು ಮುಂದಾದ ಕಾಶೀಮನನ್ನು ತಡೆದ ಮಕ್ಕಳು, ಅವನ ಮನೆಗೆ ಬೆಂಕಿ ಬಿದ್ದಾಗ ಅವನಿಗೆ ನೆರವಾಗಲು ಮುಂದಾಗುವುದು, ಅವನ ಮನ ಪರಿವರ್ತನಗೊಳ್ಳುವುದು ಇನ್ನೊಂದು ಕತೆಯ ವಸ್ತು. ಮತ್ತೊಂದು ಕತೆಯಲ್ಲಿ ಪರಮೇಶಿ ಎನ್ನುವ ಬಡ ಬಾಲಕ ದುಡಿಯುತ್ತಿದ್ದ ಸಾಹುಕಾರನ ಹೊಲದಲ್ಲಿ ದುಡಿಯುವಾಗ ಸಿಕ್ಕ ಚಿನ್ನದ ನಾಣ್ಯಗಳನ್ನು ತಾನೊಂಚೂರೂ ಮುಟ್ಟದೆ ಸಾಹುಕಾರರಿಗೆ ಕೊಡುವದರ ಮೂಲಕ ಜಿಪುಣರಾದ ಅವರ ಮನಸ್ಸು ಪರಿವರ್ತನಗೊಳ್ಳುವುದು ಮತ್ತೊಂದು ಕತೆಯ ಹಂದರ. ಹೀಗೆ ನೀತಿಯನ್ನು ಅವರು ಎಷ್ಟು ಅಗತ್ಯವಾಗಿ ಹೇಳಬೇಕೆನ್ನುತ್ತಾರೆ ಎಂದರೆ ಒಂದು ಕತೆಯಲ್ಲಿ ಬಡ ಹುಡುಗನೊಬ್ಬ ದೂರದ ಊರಿನ ಪ್ರಸಾದ ನಿಲಯದಲ್ಲಿದ್ದು ಓದನ್ನ ಕಷ್ಟ ಪಟ್ಟು ಮುಂದುವರೆಸುತ್ತಾನೆ. ಅವನು ಹೀಗೊಂದು ಸಲ ಬಿಡುವು ಮುಗಿಸಿಕೊಂಡು ಅಮ್ಮನು ಮಾಡಿಕೊಟ್ಟ ಬುತ್ತಿಯ ಗಂಟನ್ನು ತೆಗೆದುಕೊಂಡು ಹೊಗುತ್ತ ದಾರಿಯಲ್ಲಿ ಧರ್ಮಶಾಲೆಯಲ್ಲಿ ತಂಗುತ್ತಾನೆ. ಅಲ್ಲಿಯೇ ಕಳ್ಳರ ಗುಂಪೊಂದು ಸೇರಿಕೊಂಡು ಇವನ ಗಂಟನ್ನೂ ಝಡತಿ ಮಾಡುತ್ತದೆ. ಅದರಲ್ಲಿ ಪುಸ್ತಕ, ಬುತ್ತಿ ಮಾತ್ರ ಇರುವುದನ್ನು ಗಮನಿಸಿ ಬುತ್ತಿಯನ್ನೆಲ್ಲ ತಿಂದು, ಹುಡುಗನಿಗಾಗಿಯೇ ಕದ್ದು ತಂದಿದ್ದ ಸಂಪತ್ತಿನಲ್ಲಿ ಒಂದಿಷ್ಟು ಇರಿಸಲು ನೋಡಿದಾಗ, ಹುಡುಗ ಸಿಟ್ಟಿಗೆದ್ದು, ತಾನು ತಂದಿದ್ದ ಬುತ್ತಿ ಪ್ರಾಮಾಣಿಕವಾದುದು, ಅಪ್ಪ ಅಮ್ಮ ಕಷ್ಟಪಟ್ಟು ದುಡಿದು ಮಾಡಿದ್ದು, ಅದರ ಬದಲಾಗಿ ಕದ್ದ ಮಾಲು ತನಗೆ ಬೇಡ ಎನ್ನುತ್ತಾನೆ. ಇದರಿಂದ ಕಳ್ಳರ ಮನಸ್ಸಿನಲ್ಲಿ ಹೊಸ ಬೆಳಕು ಮಿಂಚಿದಂತಾಗಿ ಅವರು ತಾವು ತಂದಿದ್ದ ಸಂಪತ್ತನ್ನೆಲ್ಲ ಅಲ್ಲಿಯೇ ಇರಿಸಿ ಓಡಿಹೋಗುವರು, ಅಷ್ಟೇ ಅಲ್ಲ ಮನಸ್ಸು ಪರಿವರ್ತನಗೊಂಡು ಮುಂದೆ ಕಳ್ಳತನವನ್ನ ಬಿಟ್ಟು ಬಿಡುವರು. ಹುಡುಗ ತನಗೆ ಸಿಕ್ಕ ಸಂಪತ್ತನ್ನೆಲ್ಲ ಪೊಲೀಸರಿಗೆ ಒಪ್ಪಿಸಿಬಿಡುವನು. ಈ ಬಗೆಯ ಆದರ್ಶಗಳನ್ನ ಅವರು ಮಕ್ಕಳ ಭವಿಷ್ಯದಲ್ಲಿಯೂ ಕಾಣಲು ಬಯಸುತ್ತಾರೆ.

'ಪರೋಪಕಾರ' ಎನ್ನುವ ಸಂಕಲನ ಕೂಡ ಹೀಗೆಯೇ ಪರರಿಗೆ ಉಪಕಾರ ಮಾಡುವ ಆದರ್ಶವನ್ನು ಹಿನ್ನೆಲೆಯಾಗುಳ್ಳ ಕತೆಗಳ ಹಂದರಗಳನ್ನ ಹೊಂದಿರುವಂಥದು. ತನ್ನ ಮಗ ಕೇಶವನ ಜೊತೆ ಕರೀಮನೆಂಬ ಮುಸ್ಲಿಮ್ ಹುಡುಗ ಗೆಳೆಯನಾಗಿರುವುದು ತಾಯಿಗೆ ಇಷ್ಟವಿಲ್ಲ. ಮಗನಿಗೆ ಹೇಳಿ ನೋಡಿದಳು. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಅವರ ಗೆಳೆತನ ಗಾಢವಾಗಿಯೇ ಮುಂದುವರೆಯಿತು. ಒಂದುಸಲ ಕೇಶವನ ತಮ್ಮ ಹೊಂಡದ ನೀರಿನಲ್ಲಿ ಬಿದ್ದು ಮುಳುಗುವಾಗ ಕರೀಮನೇ ಅವನನ್ನು ಬದುಕಿಸುತ್ತಾನೆ. ಆಗ ಅವನ ತಾಯಿಯ ಮನಸ್ಸು ಬದಲಾಗುತ್ತದೆ. ಹೀಗೆಯೇ ಪಾರಿವಾಳಗಳನ್ನ ಕೊಲ್ಲಲು ಬರುತ್ತಿದ್ದ ಯುವಕನೊಬ್ಬ ಅವನ್ನು ರಕ್ಷಿಸಲು ಮುಂದಾದ ಮಕ್ಕಳ ಕಾಳಜಿಯನ್ನ ಕಂಡು ಬದಲಾಗುವುದು ಇನ್ನೊಂದು ಕತೆಯಲ್ಲಿ ಕಾಣುತ್ತದೆ. ಹೀಗೆಯೇ ಸದ್ಗುಣಗಳನ್ನ ಹೇಳುವ ಕತೆಗಳೇ ಇಲ್ಲೆಲ್ಲ ತುಂಬಿವೆ. ಜಾತಿಯ ಗಡಿಗಳನ್ನು ಮೀರುವುದು, ಬಡತನ ಸಿರಿತನಗಳನ್ನ ಮೀರುವುದು ಇಂಥವೆಲ್ಲ ಆದರ್ಶಗಳು ಇಲ್ಲೆಲ್ಲ ಹರಡಿಕೊಂಡಿವೆ. 'ತುಂಟ ಮಂಗ' ಸಂಕಲನವೂ ಇದೇ ಬಗೆಯ ಹಂದರಗಳನ್ನ ಹೊಂದಿದೆ. ಅವರು ತಮ್ಮ ಪ್ರಕಾಶನದಿಂದ ಎರಡು ಸಲ ಸ್ಪರ್ಧೆಗಳನ್ನು ನಡೆಸಿ ಕಥಾ ಸಂಕಲನ, ಕವಿತಾ ಸಂಕಲನಗಳನ್ನೂ ಸಂಪಾದಿಸಿದ್ದಾರೆ. ಸಿಂದಗಿಯ ಸಾರಂಗಮಠದ ಚೆನ್ನವೀರಸ್ವಾಮೀಜಿಗಳ ಕುರಿತೂ, ಗೊಲ್ಲಾಳೇಶ್ವರ ಶರಣರ ಕುರಿತಾಗಿಯೂ ಮಕ್ಕಳಿಗೆ ಅವರು ಬರೆದುದಿದೆ.

ಅವಿರತವಾಗಿ ಬರೆಯುತ್ತ ಬಂದ ಜನಾನುರಾಗಿ ಲೇಖಕರು **ಅಣ್ಣಾಜಿ ಫಡತಾರೆ(೧೯೩೭)** ಅವರು. 'ಬಾಲರ ಬಯಕೆ', 'ಗೆಳೆತನ', 'ಕರ್ತವ್ಯದ ಕರೆ', 'ಕಂದನ ಕವನ' ಮುಂತಾಗಿ ಏಳು ಕವನ ಸಂಗ್ರಹಗಳನ್ನ 'ಹುಲಿ ಮತ್ತು ಮಂಗ', 'ಜಾಣ ನಾವಿಕ', 'ತಿರುಮಂತ್ರ' ವೆಂಬ ಮೂರು ಕಥಾ ಸಂಕಲನಗಳನ್ನ ಪ್ರಕಟಿಸಿದ್ದಾರೆ.

ಶಾಲೆ ಪುಟ್ಟ ತೋಟವು
ಗುರುವು ಅದರ ಮಾಲಿಯು
ನಾವು ಇಲ್ಲಿ ಸಸಿಗಳು
ಬೆಳೆವ ಕಲ್ಪತರುಗಳು
ಶಾಲೆ ಔಷಧಾಲಯ
ಗುರುವು ನುರಿತ ವೈದ್ಯರು
ನಮ್ಮ ರೋಗ ಬಲ್ಲರು
ಎಲ್ಲ ನೋವು ಕಳೆವರು

ಎನ್ನುವಂಥ ಗೌರವಪೂರ್ಣ ರಚನೆಮಾಡಬಲ್ಲವರು ಫಡತಾರೆ ಅವರು. ಆದರ್ಶಗಳನ್ನು, ನೀತಿಯುತ ಒಳ್ಳೆಯ ಮಾತುಗಳನ್ನೇ ಮಕ್ಕಳ ಮುಂದೆ ಇಡಲುಬಯಸಿದವರು ಅವರು. ಹಾಗಾಗಿಯೇ ಅವರ ರಚನೆಗಳೆಲ್ಲ ಆ ಉದ್ದೇಶಕ್ಕಾಗಿಯೇ ತೊಡಗಿಕೊಳ್ಳುತ್ತವೆ. 'ಪುಟ್ಟನ ದಿನಚರಿ'ಯಲ್ಲಿ ಮಕ್ಕಳ ನಿತ್ಯದ ಚಟುವಟಿಕೆಗಳು ಹೇಗೆಲ್ಲ ಇರಬೇಕು ಎನ್ನುವುದನ್ನ ಹೇಳಿದರೆ, 'ತಿನಿಸಿನ ಗಿಡಗಳು' ರಚನೆಯಲ್ಲಿ ತಿಂಡಿಪೋತ ಬಾಲಕ ಬರಿ ತಿಂಡಿ ಕೊಡುವ ಗಿಡಗಳಿರಬೇಕು ಎಂದು ಕನಸು ಕಾಣುವ ಚಿತ್ರಣವಿದೆ. 'ನನ್ನ ತಂಗಿ' ಕವಿತೆ ಯಾವ ಭೇದಭಾವವಿಲ್ಲದೆ ತಂಗಿಯು ಎಲ್ಲರೊಡನೆ ಬೆರೆತು ಆಡುವುದನ್ನ ಹೇಳುತ್ತಾರೆ. 'ಮಂಗನ ಆಟ'ದಲ್ಲಿ ಮಂಗನ ಆಟದ ಮೋಜನ್ನು ಮಕ್ಕಳಿಗೆ ಉಣಬಡಿಸುತ್ತ ಮಕ್ಕಳು ಸಂತೊಷದಲ್ಲಿ ತೇಲಾಡುವಂತೆಯೂ ಅವರು ಮಾಡಿದ್ದಾರೆ. 'ಕರ್ತವ್ಯದ ಕರೆ' ಸಂಕಲನದಲ್ಲಿ ಉತ್ತಮವಾದ ಕರ್ತವ್ಯಗಳ ಸಂದೇಶವೇ ಹರಿದು ಬಂದಿದೆ:

ಪ್ರೇಮದಲ್ಲಿ ತ್ಯಾಗವುಂಟು
ತ್ಯಾಗದಲ್ಲಿ ಪ್ರೇಮವುಂಟು
ಪ್ರೇಮ ತ್ಯಾಗ ಎರಡರಲ್ಲಿ
ನೈಜವಾದ ಸುಖವುಂಟು

ವಿದ್ಯೆಯಲ್ಲಿ ವಿನಯವುಂಟು
ವಿನಯದಲ್ಲಿ ವಿದ್ಯೆಯುಂಟು
ವಿದ್ಯೆವಿನಯ ಎರಡರಲ್ಲಿ
ಬದುಕಿನ ಹಿರಿ ಬೆಲೆಯುಂಟು

ಮುಂತಾದ ಒಳ್ಳೆಯ ಭಾವಗಳ ಮೇಳವೇ ಕಾಣುತ್ತದೆ. ಜನಪದ ಕತೆಗಳ ಸೂತ್ರಗಳನ್ನೇ ಹಿಡಿದುಕೊಂಡು ಹಲವಾರು ಕತೆಗಳನ್ನು ಕೆಲವೆಲ್ಲ ಸಂದೇಶ ಹೇಳುವುದಕ್ಕೆ ಕಟ್ಟಿಕೊಟ್ಟಿದ್ದಾರೆ ಅಣ್ಣಾಜಿ. ಒಟ್ಟಾರೆಯಾಗಿ ಇವೆಲ್ಲ ನೀತಿಕತೆಗಳೇ.

ಭಾವಗೀತದ ಶಿಷ್ಟತೆಯನ್ನ ಲಯಗಳ ಬಳಕೆಯಲ್ಲಿ ಅನುಕರಿಸಿದಂತೆ ಭಾಷೆಯ ಬಳಕೆಯಲ್ಲಿಯೂ ಎಗ್ಗಿಲ್ಲದಂತೆ ಬಳಸಿರುವುದು ಕಂಡುಬರುತ್ತದೆ. ಸುಭಗವಾದ, ಸುಲಲಿತವಾದ, ಹರಿದು ಹೋಗುವ, ರಮ್ಯವಾದ ಹೆಣಿಕೆ ಈ ಪದಗಳ ಬಳಕೆಯಲ್ಲಿ ಕಾಣುತ್ತದೆ. ಹಾಗೆ ಬಳುಸುವದರಿಂದಲೇ ಮಕ್ಕಳ ಸಹಜದ, ಅವರದೇ ನಡುವಿನ ವಾತಾವರಣದಿಂದ ಆಚೆ ನಿಲ್ಲುವುದೂ ಆಗಿಬಿಡುತ್ತದೆ. ಹೀಗೆ ಅನೇಕ ಸಲ, ಶಾಲೆಯೆಂಬ ಕೆಲವೆಲ್ಲ ಶಿಷ್ಟಾಚಾರದ, ಕಲಿಯುವಿಕೆಯ, ಶಿಷ್ಟತೆಯ ಅಭಿಲಾಷೆಯ ಹವಣಿಕೆಯಲ್ಲಿ ಮಕ್ಕಳ ಲೋಕದಿಂದ ದೂರವಾಗಿಬಿಡುವುದೂ ಆಗಿಬಿಡುತ್ತದೆ. ಮಕ್ಕಳದೇ ಆದ ಮಾತು, ಅವಕ್ಕೆ ತಕ್ಕುದಾದ ಲಯಗಳು, ಆಟದ ಬಗೆಗಳು, ಅವುಗಳದೇ ಆದ ವಸ್ತುಪ್ರಪಂಚಕ್ಕೆ ತಕ್ಕುದಾದ ಭಾಷೆ, ಲಯಗಳ ಬಳಕೆ ಇಂಥಲ್ಲಿ ಪ್ರಯೊಗಕ್ಕೂ ಅಷ್ಟಾಗಿ ಒಳಗಾಗಲಿಲ್ಲ. ಹಾಗಾಗಿ ಸುಮಧುರ ಗೀತಗಳನ್ನ, ಹಾಡುಗಳನ್ನ ರಚಿಸುವುದರ ಕಡೆಗೇ ಶಕ್ಯವಿದ್ದ ಪ್ರಯತ್ನಗಳನ್ನ ಇವರೆಲ್ಲ ಮಾಡಿದರು ಎಂದರೆ ತಪ್ಪಿಲ್ಲ.

ಮಕ್ಕಳ ಒಡನಾಟದಲ್ಲಿ ಅವರ ಉತ್ತಮ ಭವಿಷ್ಯದ ರೂವಾರಿಗಳಾಗಿ ವೃತ್ತಿಯೆಲ್ಲ ಕಳೆದಿರುವ ಅವರು ಸಹಜವಾಗಿ ಮಕ್ಕಳಿಗೆ ಒಳ್ಳೆಯದನ್ನು ನೀಡಲು ಬಯಸಿದವರು.

ಶಾಲೆ ಪುಟ್ಟ ತೋಟವು
ಗುರುವು ಅದರ ಮಾಳಿಯು....
ನಾವು ಅಲ್ಲಿ ಸಸಿಗಳು
ಬೆಳೆವ ಕಲ್ಪತರುಗಳು
ಶಾಲೆ ಔಷಧಾಲಯ
ಗುರುವು ನುರಿತ ವೈದ್ಯರು
ನಮ್ಮ ರೋಗ ಬಲ್ಲರು
ಎಲ್ಲ ನೋವು ಕಳೆವರು

ಎನ್ನುವಂತಹ ಪದ್ಯಗಳನ್ನ ಬರೆಯುತ್ತಲೇ 'ಹಕ್ಕಿಯಾಗಿ ಹಾರುವಾಸೆ, ಹಾರಿ ಮೇಲೆ ಏರುವಾಸೆ, ಏರಿ ತೇಲಿ ಮೆರೆಯುವಾಸೆ' ಮುಂತಾಗಿ ಮಕ್ಕಳ ಸ್ವಚ್ಛಂದದ ಹವಣುಗಳನ್ನೂ ಅವರು ತಮ್ಮ ರಚನೆಗಳಲ್ಲಿ ಇರಿಸಿದ್ದಾರೆ. ದೇಶಭಕ್ತಿ, ಭಾವೈಕ್ಯತೆ, ಆದರ್ಶದ ಬದುಕು ಇವೆಲ್ಲ ಅವರ ರಚನೆಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಸಂಗತಿಗಳೇ. ಅವುಗಳ ನಡುವೆ

ಚಹಾ ಕುಡಿಯಬಾರದೆಂದು
ಅತ್ತೆ ನಿತ್ಯ ನುಡಿವಳು
ತಾನು ಮಾತ್ರ ಲೆಕ್ಕ ತಪ್ಪಿ
ಚಹಾ ಕುಡಿಯುತಿರುವಳು

ಎನ್ನುವಂಥ ಸುತ್ತಲಿನ ವಾಸ್ತವಕ್ಕೂ ಅವರ ಸಾಲುಗಳು ತುಡಿಯುತ್ತವೆ. ಅವರ ಕತೆಗಳಲ್ಲೂ ಇಂತಹದೇ ಮಕ್ಕಳ ಬಗೆಗಿನ ಕಾಳಜಿ ಕಾಣಿಸುತ್ತದೆ. ಮೂಢ ನಂಬಿಕೆಯಿಂದ ಮುಕ್ತರಾಗುವುದಕ್ಕೆ ಗೌಡರ ಮಗನು ವೀರಭದ್ರನ ಅವತಾರ ತಾಳುವ ಪ್ರಸಂಗವನ್ನ ತಂದುಕೊಂಡಿದ್ದಾರೆ. ನರಿಯ ಮೋಸದ ಜನಜನಿತ ಕತೆಗಳ ನಡುವೆಯೇ ಘಡತಾರೆ ಅವರು ಕಾಗೆ ಮೋಸ ಹೋಗದ ಜಾಣ ಕಾಗೆಯ ಪ್ರಸಂಗ ಕಟ್ಟಿದ್ದಾರೆ. ಒಂದು ಕತೆಯಲ್ಲಿ ಕುಂಟರಾಮ ಹಾಗೂ ಕಿವಿಯಿಲ್ಲದ

ಸೀತೆ ಪರಸ್ಪರ ನ್ಯೂನತೆಗಳನ್ನು ಬಚ್ಚಿಡುತ್ತ ಮೋಸಕ್ಕೆಳಸುತ್ತ ಮದುವೆಯಾಗಿ ಒಂದು ಒಳ್ಳೆಯ ಪರಿಣಾಮಕ್ಕೆ ತಿರುಗಿದುದು ಇದೆ. 'ಪೆದ್ದರು ಗೆದ್ದರು' ಕತೆಯಲ್ಲಿ ಮುಗ್ಧ ನಾರಾಯಣಾಚಾರಿಯನ್ನು ಮೋಸಗೊಳಿಸಿ ಅವನ ಆಕಳ ಕರುವನ್ನು ಅಪಹರಿಸಿ ನೋವುಂಟು ಮಾಡುವ ವಾಸ್ತವ ಪ್ರಸಂಗವೇ ಇದೆ. ಜನಪದ ಸಾಮಗ್ರಿಯನ್ನೂ ಇವರು ಕತೆಗಳಿಗೆ ತಂದುಕೊಂಡಿದ್ದಾರೆ. ಅಂತೂ ಫಡತಾರೆ ಅವರಲ್ಲಿ ಮಕ್ಕಳಿಗಾಗಿ ಬರೆಯುವಲ್ಲಿ ಒಂದು ಬಗೆಯ ಶ್ರದ್ಧೆ, ಬದ್ಧತೆಯನ್ನ ಕಾಣುತ್ತೇವೆ.

ಇನ್ನೊಬ್ಬ ಗ್ರಾಮೀಣ ಪರಿಸರದಿಂದಲೇ ಬಂದ ಶಿಕ್ಷಕ ಕವಿ **ಪರಶುರಾಮ ಚಿತ್ರಗಾರ.** ಈ ಸಮಯದ ಉಳಿದೆಲ್ಲರ ಹಾಗೆ ಚಿತ್ರಗಾರ ಅವರು ಹಿರಿಯರಾಗಿ ನಿಂತುಕೊಂಡು ಮಕ್ಕಳನ್ನ ತಿದ್ದುವ, ಒಳ್ಳೆಯ ದಾರಿಗೆ ಹಚ್ಚುವ, ಮಾರ್ಗದರ್ಶನ ನೀಡುವ ಮನೋಭಾವದಲ್ಲಿಯೇ ತಮ್ಮ ರಚನೆಗಳಲ್ಲಿ ತೊಡಗಿಕೊಳ್ಳುವುದು. 'ಓ ತಾಯಿ ನಿನಗಾರು ಸರಿಯಿಲ್ಲ ಜಗದಿ, ನಿನ್ನ ಸ್ತುತಿಸುತ ಕಾಲ ನೂಕುವೆನು ಇಹದಿ' ಎನ್ನುವಂಥ ಆರ್ದ್ರ ಭಾವ ಕಂಡುಬರುತ್ತದೆ ಅವರ 'ತಾಯಿ' ಕವಿತೆಯಲ್ಲಿ. ಹಲವಾರು ಸುಕುಮಾರ ಭಾವಗಳಿಂದ ಈ ಕವಿತೆ ಚೆಲುವಾಗಿ ಅರಳಿದೆ. 'ಗುರುಕುಲ' ಕವಿತೆ ಶಾಲೆ ಕೇವಲ ಓದು ಬರಹದ ಕಲಿಕೆಯ ತಾಣವಾಗದೆ, ಪಾವನ ತಾಣವಾಗಿರುವುದನ್ನ ಹೇಳುತ್ತದೆ. ಗುರುಗಳು 'ಬೇಡಿದನೀಯುತಿಹ ಸುರತರುಗಳು'. ಈ ಗುರುಕುಲ 'ಮೇಲುಕೀಳಿನ ಬವವಿಲ್ಲದ ಹಿರಿಜೀವನ' ಕಲಿಸುವುದಾಗಿದೆ. 'ಸಫಾಯಿ' ಮುಂಜಾವಿನ ಮಂಗಳ ಸಮಯದಿ ಪೊರಕೆಯನ್ನು ಹಿಡಿದು ಹಸನುಗೊಳಿಸುವ ಕಾಯಕ ಹೇಳುವ ಕವಿತೆ. 'ಶುದ್ಧಭಾವದಲಿ, ಈಶನ ಸ್ಮರಿಸುತ' ನಡೆಸುವ ಕ್ರಿಯೆ ಅದು. ಅವರು ಚಿತ್ರಿಸುವ 'ಪೊರಕೆ'ಯೂ ಇದಕ್ಕೆ ಹೊರತಾಗಿಲ್ಲ.

> 'ಮೇಲದು ಕೀಳದು ಎಂಬುದನಳಿದು
> ದುಡಿಯುವದೊಂದೇ ನಿನಗದು ಸಾಕು'

ದೀನರ ಮನೆಯಲ್ಲಿ, ಧನಿಕರ ಮನೆಯಲ್ಲಿ ಒಂದೇ ಭಾವದಿಂದ ದುಡಿಯುವ ಪೊರಕೆ ಅದು, ಮಾನಾಭಿಮಾನದ ಆಸೆಯ ತೊರೆದು ಕೈಯಲ್ಲಿ ಬರುತಿಹ ಪೊರಕೆ ಅದು. ಪರೋಕಾರವೆ ಪುಣ್ಯವೆಂಬ ಮಾತನ್ನ ಮೌನದಿಂದ ಸಾರುವುದಾಗಿದೆಯಂತೆ ಅದು. 'ನಿನ್ನೊಳಹೊರಗಿನ ಹೊಲಸನು ಕಳಕೊ' ಎನ್ನುವ ಸಂದೇಶವನ್ನೇ ಸಾರುತ್ತದೆ. ಮುದ್ದು ಬೆಕ್ಕಿನ ಸಹಜ ಸಂಗತಿಗಳನ್ನ ಮೆಲುಕು ಹಾಕುತ್ತ ಸಾಗುವ ಪದ್ಯವೂ 'ಆದರೂನು ನಿನ್ನ ಮಹತಿ ಲೋಕದವರು ಮರೆತರು, ಕಣ್ಣು ಮುಚ್ಚಿ ಹಾಲುಕುಡಿವ ರೀತಿಯೊಂದನರಿತರು' ಎನ್ನುವ ಮಾತಿಗೆ ನಿಲುಕುತ್ತದೆ. 'ಕಾಮಿಯ ಕಾಮಿತ್ನ ನಡತೆಯ ನೊಡುತ ನಗುತಲೆ ಇಂಗಿತ ತಿಳಕೊಂಡೆ' ಎನ್ನುವ ಮಕ್ಕಳೊಳಗಿನ ಮಾತೂ ಇನ್ನೊಂದು ಕವಿತೆಯಲ್ಲಿ ಕಾಣಿಸಿದೆ. 'ಕೊಡೆ' ಹಂಚಿ ಉಂಬ ಗೆಳೆಯನಾಗುತ್ತದೆ, 'ಬಣ್ಣದ ಬೀಸಣಿಕೆ' ಫಲಕಾಶಿಸದೆ ದುಡಿಯುತ್ತದೆ. ಟಾಂಗಾದ ಕುದುರೆ ಭಾರಕೆ ಬಗ್ಗದ ಕರ್ಮಿ, ಸೇವೆಗೆ ಕುಗ್ಗದ ಸೇವಕನಾಗುತ್ತದೆ. 'ಬೊಂಬೈ ಮಿಠಾಯಿ' ಬಾಲರಿಗೊಲುಮೆಯ ಒಡವೆಯ ನೀಡುತ ಬಾಳನ್ನು ನೂಕುತ್ತದೆ. 'ನಾವು ಗೆಳೆಯರು', 'ಶಾಲೆಗೆ ಹೋಗೋಣ', 'ಬೇಕು', 'ನಿಮ್ಮ ಜತೆಯಲಿ', 'ಈ ದೇಶ', 'ನಿನ್ನ ಕೆಲಸ ನೀ ಮಾಡು' ಮುಂತಾಗಿ ಹಲವಾರು ಕವಿತೆಗಳಲ್ಲಿ ಅವರು ಬಯಸುವ ಬಂಧುರವಾದ ಮಕ್ಕಳ ಭವಿಷ್ಯದ ಕನಸುಗಳಿವೆ. ಇಷ್ಟಾದರೂ ವಿರಳವಾಗಿಯಾದರೂ ಅವರೊಳಗಿನ ಸಹಜ ಕವಿ 'ಸಿದ್ದಕ ಸಿದ್ದಿ' ಯಂಥ ಪದ್ಯದಲ್ಲಿ ಮಕ್ಕಳ ಕಲಕಲದಲ್ಲಿ ಒಂದಾಗಿಬಿಡುವುದನ್ನ ಕಾಣುತ್ತೇವೆ:

ಉದ್ದನ ಮೂಗು
ಜೊಂಡಿಗ ಮೀಸಿ
ಮೊಗದಲಿ ಬಂಣ
ಕಾಡಿಗೆ ಗಂಣ
ಮಕ್ಕಳಿಗೊಂದು ಮೋಜಿನ ಸಿದ್ದಿ
ಉಬ್ಬಿದ ತಿಗಗಳ
ಉಬ್ಬಿಸಿ ಹಾರಿಸಿ
ಮೈಕೈ ಹೊರಳಿಸಿ
ದನಿಯನು ಏರಿಸಿ
ಕುಣಿಕುಣಿದಾಡುವ ಸಿದ್ದಿಕ ಸಿದ್ದಿ

'ಸಿದ್ದಿ'ಗಳು ಹೇಳುತ್ತಾ ಬರುತ್ತಿದ್ದ ಧಾಟಿಯಲ್ಲಿಯೇ ಕವಿತೆಯ ರಚನೆಯಾಗಿರುವುದೊಂದು ಬಲು ಸೊಗಸಿನ ಸಂಗತಿಯಾಗಿದೆ. ಈ ಬಗೆಯ ಸೊಗಸನ್ನು ಅಲ್ಲಲ್ಲಿ ಅವರ ರಚನೆಗಳಲ್ಲಿ ಕಾಣಬಹುದು. 'ಕೊಡಿ' ಕವಿತೆಯ ರಚನೆಯೂ ಹೀಗೆಯೇ ಸೆಳೆಯುತ್ತದೆ:

ನಾನು ಕೊಡೆ
ನೀನು ಕೊಡೆ
ಹೊರಗೆ ಹೊರಟ ಕೂಡಲೆ
ಬರುವೆ ನಿನ್ನ ಜತೆಯಲೆ

ಗ್ರಾಮೀಣ ಪರಿಸರದ ಗಾಢತೆ, ಮಕ್ಕಳ ಒಡನಾಟ ನೀಡಿರುವ ಅನುಭವ ಅವರ ಕವಿತೆಗಳಲ್ಲಿ ಅಲ್ಲಲ್ಲಿ ಸ್ವಚ್ಛಂದವಾಗಿ ತೂರಿಕೊಂಡು ಚೈತನ್ಯ ಮೂಡಿಸುತ್ತವೆ. 'ಬೊಂಬೈ ಮಿಠಾಯಿ'ಯ ಸಾಲುಗಳು ಹೀಗಿವೆ . . .

ಬಾಜೂ ಬಂದಿ, ಬಂಗಾರದ ಬಳೆ
ಬೇಕೆ ಬಾಲೆಯರೆ ?
ಬಿಂಕದ ವಂಕಿ, ಕೊಂಕಿದ ಬಳೆಗಳ
ತೊಡಿಸುವೆ ತರಳೆಯರೆ
ಪಟ್ ಪಟ್ ಗಾಡಿ ಸಟ್ ಸಟ್ ಕೊಳ್ಳಿರಿ
ಕೊಡುವೆನು ಬಾಲರಿಗೆ

'ನಾನು ರಚಿಸಿದ ಅನೇಕ ತರಹದ ಗೀತೆ, ಸ್ವಾಗತ ಗೀತೆ, ಮಂಗಲಗೀತೆ ಹಲವು ಗೇಯಗೀತೆಗಳು ಕೇಳದವರು, ಕೌತುಕ ಪಡೆದವರೂ ಉಂಟು ! ಏಕೆಂದರೆ ಇಂಥ ಹಾಡುಗಳನ್ನು ರಾಗಗಳನ್ನು ಬಲ್ಲ ನಾನು ಕೇಳುಗರ ಮನಕ್ಕೆ ತಟುವಂಥ 'ಭೈರವಿ', 'ತೋಡಿ' ರಾಗಗಳಲ್ಲಿ ಹಾಡಿದಾಗ ಆದಂಥ ಪರಿಣಾಮ ಅವರ್ಣನೀಯವಾದುದು. ಅಂಥ ಅನುಭವಾಮೃತ ಸವಿದು ನಾನೂ ಖುಷಿಪಟ್ಟು, ಆನಂದಾಶ್ರುಗಳನ್ನು ಸುರಿಸಿದ್ದೂ ನೆನಪಿಗೆ ಬರುತ್ತದೆ. ಆ ಹಾಡಿನ ಪರಿಣಾಮವೇ ಅಂಥಹದು !' ಬಾ. ಇ. ಕುಮಟೆ (ಮಾದೇವ ಮಿತ್ರ) ಅವರ ಈ ಮಾತುಗಳು ಮಕ್ಕಳ ಸಾಹಿತ್ಯದಲ್ಲಿ ನಿಷ್ಠೆಯಿಂದ ತೊಡಗಿದ ಬಹುದೊಡ್ಡ ಸಂಖ್ಯೆಯ ಈ ಸಮಯದ ಕವಿಗಳಿಗೆಲ್ಲ ಒಂದು ಬಗೆಯಲ್ಲಿ ಅನ್ವಯಿಸುವಂಥದೇ ಎಂದರೆ ತಪ್ಪಾಗದು.

ಮಕ್ಕಳಿಗೆ ರಚಿಸಿದ ಕವಿತೆ ಬಹು ಮುಖ್ಯವಾಗಿ ಹಾಡು, ಅದನ್ನ ಮಕ್ಕಳು ಹಾಡಿ ತಾವೂ ರಂಜನೆಗೊಳಗಾಗಬೇಕು, ಬೇರೆಯವರನ್ನೂ ರಂಜಿಸಿಯಾರು, ಎನ್ನಬಹುದಾದ ಗೇಯತೆಯ, ಒಂದು ಮಟ್ಟಿಗಿನ ತಾತ್ವಿಕ ಒಪ್ಪಂದವನ್ನೇ ಹೇಳುತ್ತದೆ. ನೆರೆಯ ರಾಜ್ಯದಲ್ಲಿದ್ದುಕೊಂಡು, ಶಿಕ್ಷಕ ವೃತ್ತಿಯಲ್ಲಿದ್ದು, ನಿಷ್ಠೆಯಿಂದ ಮಕ್ಕಳೊಂದಿಗೆ ದಿನ ಕಳೆದ, ಹಾಗೆಯೇ ಅವರಿಗಾಗಿ ವ್ರತದಂತೆಯೇ ಬರೆದ ಸಾಹಿತಿ ಮಾದೇವ ಮಿತ್ರ ಕಾವ್ಯನಾಮದ ಬಾ. ಈ. ಕುಮಟೆ. ಎನ್ ಸಿ ಇ ಆರ್ ಟಿ ಅವರು ನಡೆಸುವ ಸ್ಪರ್ಧೆಯಲ್ಲಿ ಆರು ಬಾರಿ ಇವರ ಪುಸ್ತಕಗಳಿಗೆ ಬಹುಮಾನ ಸಂದಿರುವುದನ್ನು ಇಲ್ಲಿ ಹೇಳಬೇಕು. ದೇಶಭಕ್ತಿಗೀತೆಗಳು, ತಾಯಿ ಶಾರದೆಯ ಕುರಿತು, ಭುವನೇಶ್ವರಿಯ ಕುರಿತೆಲ್ಲ ಹಲವಾರು ಕವಿತೆಗಳನ್ನ ಬರೆದಿರುವ ಕುಮಟೆ ಅವರು ಮಕ್ಕಳ ಉಜ್ವಲ ಭವಿಷ್ಯಕ್ಕೆ ಬೇಕಾಗುವ ಆಶಯಗಳೊಂದಿಗೇ ತಮ್ಮೆಲ್ಲ ರಚನೆಗಳನ್ನ ಹರವಿಕೊಳ್ಳುವವರು.

ಬಾಲ್ಯದಲ್ಲಿ ನಾಲ್ಕು ಕಾಲು
ಬೆಳೆದ ಮೇಲೆ ಎರಡು ಕಾಲು
ಮುಪ್ಪಿನಲ್ಲಿ ಮೂರು ಕಾಲು
ತಿಳಿದು ನೋಡು ಇದರ ಕೀಲು

ಅಂತೆಲ್ಲ ಬದುಕಿನ ತಾತ್ವಿಕತೆಯನ್ನ ಮಕ್ಕಳ ಮುಂದೆ ಇಡುತ್ತಾರೆ. 'ಬಾರೆಯೇನು ಗೆಳೆಯ ನೀನು?' ಎನ್ನುವ ಕವಿತೆಯಲ್ಲಿ ಗೆಳೆಯನನ್ನು ಕರೆಯುವ ಕರೆ ಇಂಥದು:

ದೂರದೂರ ಬೆಟ್ಟದಾಚೆ
ಬೆಳ್ಳಿ ಬೆಳಸ ರಾಜ್ಯವಂತೆ
ರವಿಯ ಉದಯ ನಿಲಯವಂತೆ
ಅಲ್ಲಿ ಚೆಲುವು ಸುರಿವುದಂತೆ
ರವಿಯನೆದುರುಗೊಂಡು ಕರೆವ
ಬಾಳ ಬೆಳಕಿಗೆ
ಬಾರೆಯೇನು ಗೆಳೆಯ ನೀನು ನಾನು ಹೋಗುವಾ

ಸುಮಧುರವಾದ ಭಾವ ಲಹರಿಗಳನ್ನೇ ತುಂಬಿಸಿಕೊಂಡಿರುವ ಈ ಭಾವಗೀತ ಮುಗಿಯುವುದು 'ನೆಲದ ಸೊಬಗ ತುಂಬಿಕೊಳಲಿ ಎದೆಯ ಗುಡಿಗೆ ಬಾರೆಯೇನು ಗೆಳೆಯ ನೀನು, ನಾವೂ ಹೋಗುವಾ' ಎಂದು. ಗಾಳಿಗೊಮ್ಮೆ ತುರಿಕೆ ಆದ ಮೋಜಿನ ಪ್ರಸಂಗವನ್ನ ಅವರು ಕವಿತೆಯಲ್ಲಿ ತಂದಿದ್ದಾರೆ. ಆದರೆ ಅಂಥ ಮೋಜಿನ, ನಗು ತುಂಬಿದ ವಸ್ತು ಇಳಿಯುವುದು 'ಕಡಲ ತಡಿಯೊಳು ಭುವನ ಮಡಿಲೊಳು ವಾಯು ನಿದ್ರೆಯೊಳಿರುತಿರೆ . ..' ಎಂದು ಪ್ರಾರಂಭವಾಗುವ ಮಾಧುರ್ಯದ ಶಬ್ದ ಶರೀರ ಪಡೆದೇ ಎನ್ನುವುದನ್ನು ಗಮನಿಸಬೇಕು. ಒಂದು ಸೊಗಸಾದ ರಮ್ಯ ಭಾವಗೀತದಂತೆ ಈ ಹಾಸ್ಯ ಪ್ರಸಂಗ ರೂಪತಳೆಯುತ್ತದೆ ಇಡೀ ಕವಿತೆಯುದ್ದಕ್ಕೂ:

ಅಲ್ಲಿ ಹೊಸವನ ಹಲವು ಹಲಸಿನ
ವೃಕ್ಷ ನುಡಿದವು ನಗುತಲಿ
ಮರುತರಾಜನೆ ಉಜ್ಜು ಮೆಲ್ಲನೆ
ವ್ಯಥೆಯ ಕಳೆಯುವೆನೀಗಲೆ

ಬ್ರೆಸ್ಸಿನಂತಹ ಮೊನಚದಾಗಿಹ
ಫಲಕೆ ಬೆನ್ನನು ತಿಕ್ಕಿತು
ತುರಿಕೆ ತಕ್ಷಣ ಕಳೆಯಿತಾಕ್ಷಣ

'ನೀನೆಂದಿಗು ಖಾಲಿ ತಿರುಗದಿರು, ಏನಾದರು ಕೆಲಸವ ಮಾಡುತಿರು' ಎನ್ನುವಂಥ ವ್ಯಕ್ತಿತ್ವ ರೂಪಿಸುವ ಮಾತುಗಳೇ ಕವಿತೆಯಾಗುವುದನ್ನು ಅವರೆಲ್ಲ ಸಾಹಿತ್ಯ ಕೃಷಿಯ ಮರೆಯಲ್ಲಿ ನೋಡುತ್ತೇವೆ.

ಬನಹಟ್ಟಿ ಭಾಗದಿಂದ **ಜಯವಂತ ಕಾಡದೇವರ(೧೯೪೪)** ಅವರು ಮಕ್ಕಳ ಸಾಹಿತ್ಯಕ್ಕೆ ಅವಿಭಜಿತ ವಿಜಾಪುರ ಜಿಲ್ಲೆಯ, ಈಗ ಬಾಗಲಕೋಟ ಜಿಲ್ಲೆಯ ಕೊಡುಗೆಯಾಗಿ ತಮ್ಮದೇ ಆದ ಬಗೆಯಲ್ಲಿ ಕೃಷಿ ಮಾಡಿದವರು. ಶಿಕ್ಷಕರಾಗಿ ಮಕ್ಕಳ ಸಾಹಚರ್ಯದಲ್ಲಿದ್ದು, 'ಮಕ್ಕಳ ಸಂಗಮ' ಎನ್ನುವ ಸಂಸ್ಥೆಯನ್ನು ಹುಟ್ಟುಹಾಕಿ ನಿರಂತರವಾಗಿ, ಬಹಳ ವಿಶೇಷವೆಂದರೆ ಶಾಲೆ ಶಾಲೆಗೆ ತಿರುಗಿ ಮಕ್ಕಳ ಮುಂದೆ ಸಾಹಿತ್ಯವನ್ನು ಪ್ರಚುರ ಪಡಿಸುತ್ತ, ಪುಸ್ತಕಗಳನ್ನೂ ಹಂಚುತ್ತ ಮಕ್ಕಳಲ್ಲಿ ಸಾಹಿತ್ಯದ ಓದಿನ ಹಂಬಲು ಹೆಚ್ಚಿಸುತ್ತ ಬಂದವರು. ಅವರೇ ಹೇಳಿಕೊಂಡಿರುವ ಹಾಗೆ 'ನಾನು ಇಲ್ಲಿಯ ತನಕ ಮಕ್ಕಳಿಗಾಗಿ ೩೨ ಅಥತಾ ೩೬ ಪುಟಗಳ ಪುಟ್ಟ ಪುಸ್ತಕಗಳನ್ನು ಪ್ರಕಟಿಸಿ ಅವುಗಳನ್ನು ಅತಿ ಸುಲಭ ಬೆಲೆಗೆ ಮಕ್ಕಳಿಗೆ ತಲುಪಿಸುವ ಕಾರ್ಯ ಮಾಡುತ್ತಿದ್ದೆ. . . . ಸುಮಾರು ಒಂದು ಸಾವಿರ ಶಾಲೆಗಳಿಗೆ ಭೇಟಿ ನಿಡಿ, ೭೫ ಸಾವಿರ ಮಕ್ಕಳಿಗೆ ಮುಟ್ಟಿಸಿ ಸಾರ್ಥಕ ಭಾವನೆ ತಾಳಿದ್ದೇನೆ'. ಈ ಬಗೆಯದೊಂದು ಮಕ್ಕಳ ಸಾಹಿತ್ಯದ ಲೋಕದಲ್ಲಿ ಹೊಸ ಬಗೆಯದೇ. ಮಕ್ಕಳಿಗೆ ಪುಸ್ತಕಗಳು ಮುಟ್ಟುವುದಿಲ್ಲ ಎನ್ನುವ ಕೊರಗು ನಮ್ಮ ನಡುವಿದೆ. ಅದರೊಟ್ಟಿಗೆ ಈ ಬಗೆಯ ಪ್ರಯತ್ನಗಳು ವಿರಳವಾಗಿ ಅಲ್ಲಲ್ಲಿ ನಡೆಯುತ್ತಿರಬಹುದು. 'ಹರ್ಕ್ಯೂಲಸ್‌ನ ಸಾಹಸಗಳು', 'ಗಾಳಿ ಮತ್ತು ಕೋಳಿ', 'ಓದು ಮಗು ಓದು', 'ದೇಶ ಕಟ್ಟೋಣ ಬನ್ನಿ', 'ಹಾಡೋಣ ಬಾ ಕುಣಿಯೋಣ ಬಾ', 'ಮಾತಾಡುವ ಗಿಳಿ', 'ಹಾಡು ಕಲಿ ಹಿಗ್ಗಿ ನಲಿ', 'ತೆಂಡೂಲ್ಕರ್ ಮತ್ತು ಇತರ ಶಿಶು ಪ್ರಾಸಗಳು' ಮುಂತಾಗಿ ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ.

ಬಯಲಲ್ಲಾಡಲು
ಬಿಸಿಲಿನ ತಾಪ
ಮನೆಯಲ್ಲಾಡಲು
ಅಪ್ಪನ ಕೋಪ
ಹಿತ್ತಲಲ್ಲಾಡಲು
ಅಜ್ಜಿಯ ಶಾಪ
ಅಳುತ ಕುಳಿತನು
ಪುಟ್ಟನು ಪಾಪ!

ಇಂಥ ಸರಳವಾದ ಮಕ್ಕಳ ಬಾಯಿಗೆ ಬಲು ಸುಲಭವಾಗಿ ಸಿಗುವ ಶಬ್ದ ಸಾಮಗ್ರಿಯ ರಚನೆಗಳನ್ನು ಅವರು ಸಾಕಷ್ಟು ಮಾಡಿದ್ದಾರೆ. 'ಇದ್ದುದರಲ್ಲಿಯೇ ತೃಪ್ತಿಯಪಟ್ಟು ಉಳಿದುದರಲ್ಲಿ ಪರರಿಗೆ ಕೊಟ್ಟು ನೆರೆಹೊರೆಯವರಲಿ ಪ್ರೀತಿಯನಿಟ್ಟು ಒಂದಾಗಿ ಬಾಳಲು ಶಪಥವ ತೊಟ್ಟು ಕಟ್ಟೋಣ ಬಾ, ದೇಶ ಕಟ್ಟೋಣ ಬಾ' ಮುಂತಾಗಿ ಒಳ್ಳೆಯ ಮಾತುಗಳು, ಮಾರ್ಗದರ್ಶನದ ಮಾತುಗಳು, ಆದರ್ಶಗಳು ಇವನ್ನೆಲ್ಲ ಮಕ್ಕಳ ಮುಂದೆ ಇಡುವುದರೊಂದಿಗೆ ರಂಜನೆಯ, ನಗಿಸುವ ವಸ್ತುಗಳನ್ನು ಆದಷ್ಟೂ ಇರಿಸಿರುವುದು ವಿಶೇಷವಾಗಿದೆ.

ನನ್ನ ತಂಗಿ
ಅಲ್ಲ ಜಗಳಗಂಟಿ
ಅವಳಿರುವಳು
ಒಂದಿಷ್ಟು ತುಂಟಿ
ಎಸೆಯುವಳು ತಂದು
ಮಣ್ಣಿನ ಹೆಂಟಿ
ನಗುವಳು ಆಗಾಗ
ಬಾರಿಸಿ ಗಳ್ಳಾಗಂಟಿ
. . . .
ಅಜ್ಜಾ ಅಜ್ಜಾ ಏನಜ್ಜಾ
ಯಾವಾಗ್ ನೋಡಿದ್ರನೂ
ಓದತಾನೇ ಇರ್ತಿ ಅಲ್ವಾ ?
ಹಂಗೇನಿಲ್ಲೋ ಪುಟ್ಟಾ
ಆವಾಗಾವಾಗ್ ಅಡುಗೆ ಮನೆಗ್ಹೋಗಿ
ತಿಂತಿರ್ತೀನಲ್ಲೋ ಹಲ್ವಾ

ಈ ಬಗೆಯ ಮೋಜಿನ ಸಂಗತಿಗಳೇ ಅವರ ಕವಿತೆಯಲ್ಲಿ ಸಾಕಷ್ಟು ಸಿಗುತ್ತವೆ. ಒಂದಿಗೇ ಭಾವಮಯದ ಕೆಲವೆಲ್ಲ ಸಾಲುಗಳು ಅಲ್ಲಿ ಕಾಣಿಸುತ್ತವೆ :

ಬೆಳಗಿನ ಜಾವದಿ
ಹಸಿರೆಲೆ ಮೇಲಿನ
ಇಬ್ಬನಿ ಹನಿಗಳು
ಥಳಥಳಿಸುತ ಉರುಳುವವು

ಕತೆಗಳನ್ನೂ ಜಯವಂತ ಕಾಡದೇವರ ಬರೆದಿದ್ದಾರೆ. ಪುಟ್ಟ ಗುಬ್ಬಿಯಿಂದ ಬುದ್ಧಿಯ ಮಾತು ಕೇಳಿದ ಹದ್ದಿನ ಪ್ರಸಂಗ, ತನ್ನನ್ನು ಸದಾ ಕೀಟಲೆ ಮಾಡಿ ಹಿಂಸಿಸುತ್ತಿದ್ದ ಕೋತಿಗೆ ಮರದಲ್ಲಿನ ಜೇನಹುಟ್ಟು ಕೆದರಿ ಗೋಳಿಕ್ಕಿದ ಏಡಿಯ ಪ್ರಸಂಗ, ತೋಳನ ಸಲಹೆ ಕೇಳಿ ತನ್ನ ಬಳಗವನ್ನೇ ದೂರ ಓಡಿಸಿದ ಮಂಗ ಅಪಾಯದಲ್ಲಿ ಸಿಲುಕಿದಾಗ ಅವೆಲ್ಲ ಮತ್ತೆ ಬಂದು ನೆರವಾದ ಪ್ರಸಂಗ– ಹೀಗೆ ಪ್ರಚುರವಾದ ಪ್ರಾಣಿಕತೆಗಳನ್ನು, ಇಲ್ಲವೇ ಅದೇ ಬಗೆಯಲ್ಲಿ ಕಲ್ಪಿಸಿಕೊಂಡವುಗಳನ್ನು ಅವರು ಬರೆದಿದ್ದಾರೆ. ಅದರೊಟ್ಟಿಗೆ ವಾಸ್ತವ ಮಾದರಿಯ ಒಂದಿಷ್ಟು ಬರವಣಿಗೆಗಳೂ ಕಾಣುತ್ತವೆ. ಕೆಲ ಹುಡುಗರು ಮೀನು ಹಿಡಿಯಲು ನೀರಿಗೆ ಹೋಗಿ ಮೀನು ಹಿಡಿಯುತ್ತಾರೆ. ಆದರೆ ಅವನ್ನು ಏನು ಮಾಡಲು ತಿಳಿಯದೆ ವಾಪಸು ನೀರಿಗೆ ಬಿಡುತ್ತಾರೆ, ಆದರೆ ಅಷ್ಟು ಹೊತ್ತಿಗೆ ಕೆಲವೆಲ್ಲ ಸತ್ತೇ ಹೋಗಿರುತ್ತವೆ. ಇದರಿಂದ ಬೇಸರ ಅನುಭವಿಸುವ ಪ್ರಸಂಗ ಇಂಥ ಒಂದು ಕತೆಯಲ್ಲಿದೆ. ವಿದೇಶಿ ಮೂಲದ ಕೆಲ ಕತೆಗಳನ್ನೂ ಅವರು ನೀಡಿದ್ದಾರೆ.

ಜಂಬುನಾಥ ಕಂಚ್ಯಾಣಿ(೧೯೫೩) ಅವರು ಇನ್ನೋರ್ವ ಮಕ್ಕಳ ಆಸಕ್ತಿಯ ಬರಹಗಾರ. ತಮ್ಮ ತಂದೆಯವರ ಬರವಣಿಗೆಯಿಂದ, ಹಾಗೆಯೇ ವಿಜಯಪುರದ ಮಕ್ಕಳ ಸಾಹಿತ್ಯದ

ವಾತಾವರಣದಿಂದ ಸ್ಫೂರ್ತಿ ಪಡೆದ ಇವರು ಅನೇಕ ಪುಸ್ತಕಗಳನ್ನು ಮಕ್ಕಳಿಗೆ ನೀಡಿದ್ದಾರೆ. ದೊಡ್ಡವರಿಗಾಗಿಯು ಅಷ್ಟೇ ಉತ್ಸಾಹದಿಂದ ಬರೆದಿರುವ ಇವರು ವಿಜ್ಞಾನದ ವಿಷಯಗಳ ಮಾಹಿತಿ ನೀಡುವ, ಮಕ್ಕಳಲ್ಲಿ ಆ ಬಗೆಯ ಕುತೂಹಲ ತಣಿಸುವ ಕೃತಿಗಳನ್ನು ರಚಿಸಿದ್ದಾರೆ. 'ಅಂಬೆಗಾಲಿನ ಹೋರಿ', 'ಚಲ್ ಚಲ್ ಕುದುರೆ', 'ಮಲ್ಲಿಗೆ ಮಳೆ', 'ಪುಟ್ಟಿಯ ಗುಲಾಬಿ', 'ನಂದನವನ' ಇವು ಅವರ ಮಕ್ಕಳಿಗಾಗಿನ ಕವಿತೆಯ ಸಂಗ್ರಹಗಳು.

ಗಿಲ್ ಗಿಲ್ ಗೆಜ್ಜೆಯ ತಾಳಕೆ ಪುಟ್ಟನು
ಗಲ್ ಗಲ್ ಹೆಜ್ಜೆಯನಿಕ್ಕುವನು
ಬಗೆ ಬಗೆ ಮೋಜನು ಮಾಡುತ ಸಕಲರ
ಮನಸಿಗೆ ರಂಜನೆ ನೀಡುವನು

ಚಕ್ ಬುಕ್ ಚಕ್ ಬುಕ್ ಅಗ್ಗಿನ ಗಾಡಿಯು
ಪಡಸಾಲೆಯಲಿ ಓಡುವದು
ಡುರ್ ಡುರ್ ಸದ್ದನು ಮಾಡುತ ಮೋಟರ್
ಅಜ್ಜಿಯ ಸುತ್ತ ತಿರುಗುವದು

ಅಂಥ ಚಟುವಟಿಕೆಯಿಂದ ತುಂಬಿದ ಪದ್ಯವನ್ನ ಬರೆದವರು ಅವರು. ಸರಿ ಸುಮಾರು ಶಿಕ್ಷಕ ಸಾಹಿತಿಗಳ ಕೃತಿಗಳಲ್ಲಿ ಕಂಡುಬರುವ ಏಲ್ಲ ಬಗೆಯ ವಸ್ತುಗಳು ಇವರ ಕವಿತೆಗಳಲ್ಲೂ ಕಂಡು ಬರುತ್ತವೆ. ಹಾಗೆಯೇ ಗ್ರಾಮೀಣ ಭಾಗದ ಸಂಗತಿಗಳು ವಿಶೇಷವಾಗಿಯೇ ಹಾಗೂ ಸಹಜವಾಗಿಯೆ ಕಾಣಿಸಿಕೊಂಡಿವೆ. ಹಾಗೆಯೇ ಮಕ್ಕಳಿಗೆ ಆದರ್ಶದ ಮಾತು ಹೇಳುವ, ನೀತಿಯ ಒಳ್ಳೆಯ ಸಲಹೆಗಳನ್ನಿಯುವ ರಚನೆಗಳೂ ಕಾಣುತ್ತವೆ.

ನಮ್ಮ ಊರಿನ ಎಲ್ಲರೊಲವಿನ
ಕೆಂಪು ಹೆಂಚಿನ ಮಂದಿರ
ಮುದ್ದು ಬಾಲರ ಕನಸಿನಾಗರ
ಭಾವಲೋಕದ ಚಂದಿರ

ಎಂದು ಶಾಲೆಯ ಬಗೆಗೆ ಭಾವಪೂರ್ಣವಾಗಿ ಕವಿತೆಯಾಗಿಸುವ ಅವರು

ಕಾಡಿಂದ ಹಸಿರು ಮಿಡಿಯುವುದು ಉಸಿರು
ಬನದಿಂದ ಬಾಳ್ಗೆ ಕಳೆಯು
ಕಾಡಿಲ್ಲದಿರಲು ಕೇಡುಂಟು ನಮಗೆ
ಉರಿಯುವುದು ಹತ್ತಿ ಧರೆಯು

ಎನ್ನುವಂಥ ಪರಿಸರ ಪ್ರೀತಿಯ ಮಾತುಗಳನ್ನ ಇಡುತ್ತಾರೆ,

ಅಜ್ಜಿಯು ಮಜ್ಜಿಗೆ
ಮಾಡುವ ವೇಳೆಗೆ
ಎದುರಿಗೆ ಇರುತಿದ್ದೆ
ಬೆಣ್ಣೆಯ ಮುದ್ದೆಯ

ಕೈಯೊಳಗಿಡುತಿರೆ
ಗಪಗಪ ತಿನುತಿದ್ದೆ

ಎನ್ನುವಂಥ ಖಾಸಾ ಖಾಸಾ ಮಕ್ಕಳ ಲೋಕವನ್ನೂ ಚಿತ್ರಿಸುತ್ತಾರೆ.

ಗೋಡೆ ಮೇಲೆ ಕುಂಬಿ
ಕುಂಬಿ ಮೇಲೆ ಗೊಂಬಿ
ನಮ್ಮಪ್ಪ ಕೊಟ್ಟಾನ
ಬಣ್ಣದ ಅಂಗಿ

ಎನ್ನುವಂಥ ಸಹಜದ ಗ್ರಾಮೀಣದ ಲಯಗಳನ್ನು ಅವರು ಹಿಡಿದಿಟ್ಟುದು ಇದೆ. ಪರಿಸರ ಕಾಳಜಿಯ ಅವರ ಒಂದು ಸಂಕಲನವೇ ಮಕ್ಕಳಿಗಾಗಿ ಬಂದಿದೆ. ಬಹುಮುಖ್ಯವಾಗಿ ಅವರ 'ಅಂತರಿಕ್ಷದಲ್ಲಿ ಪುಟಾಣಿಗಳು' ಎನ್ನುವ ವೈಜ್ಞಾನಿಕ ಮಾಹಿತಿಯನ್ನ ವಿಪುಲವಾಗಿ ನೀಡಿರುವ ಕೃತಿಯೊಂದಿದೆ. ಬಾಲ ವಿಜ್ಞಾನಿಗಳು ಅಂತರಿಕ್ಷ ಉಡಾವಣೆಯಲ್ಲಿ ಭಾಗವಹಿಸಿ ಅಲ್ಲಿನ ಅನುಭವವನ್ನು ಪಡೆಯುವ ಕಥಾ ಹಂದರ ಹೊಂದಿರುವ ಈ ಕೃತಿ ಹೆಚ್ಚಾಗಿ ಮಾಹಿತಿಯನ್ನು ಮಕ್ಕಳಿಗೆ ನೀಡುವಲ್ಲಿ ತೊಡಗಿಕೊಂಡಿದೆ. ಅದೇ ಅದರ ಯಶಸ್ಸು ಕೂಡ. ಹೀಗೆಯೇ 'ಸಾಹಸದ ಸಮುದ್ರಯಾತ್ರೆ' ಹಲವಾರು ಕತೆಗಳ ಸಂಗ್ರಹವಾಗಿದ್ದು, ಇದರಲ್ಲಿ ರೋಬಾಯ್ ಎನ್ನುವ ಕಲ್ಪಿತ ಹುಡುಗನೊಂದಿಗೆ ಸಮುದ್ರಯಾನ ಮಾಡಿದ ಬಗೆಯನ್ನ ನೀಡುತ್ತ ಮಾಹಿತಿ ನೀಡುವ ಕೆಲಸ ಮಾಡಿದರೆ, 'ತಪ್ಪಿದ ಬಲಿ' ಕತೆ ಮಕ್ಕಳೇ ದೊಡ್ಡವರನ್ನು ಬಲಿಯಂಥ ಮೂಢ ನಂಬಿಕೆಯ ಕುರಿತು ಎಚ್ಚರಿಸುವ ಪ್ರಸಂಗ ಕಲ್ಪಿಸಲಾಗಿದೆ. ಹಾಗೆಯೇ ಜನಪದ ಮಾದರಿಯ ಕತೆಗಳೂ, ವಾಸ್ತವ ಮಾದರಿಯ, ಆದರೆ ಮಹತ್ವಾಂಕಾಕ್ಷೆ ಹೇಳುವ ಉದ್ದೇಶದ ಹಂದರಗಳೂ ಇಲ್ಲಿವೆ. ಹಾಗೆಯೇ 'ಮಿಡಿದ ಕರುಳು' ಎನ್ನುವ ಕಾದಂಬರಿಯನ್ನೂ ಬರೆದಿದ್ದಾರೆ. ಇದು ವಿಶೇಷ. ಜಾತ್ಯತೀತ ಮನೋಭಾವನೆ, ಸಹಬಾಳ್ವೆಯಂತಹ ಮೌಲ್ಯಗಳನ್ನು ಈ ಕೃತಿ ತನ್ನ ಕತೆಯ ಮೂಲಕ ಮುಂದಿರಿಸುತ್ತದೆ. 'ಇದನ್ನು ಓದುವ ನಿಮ್ಮಲ್ಲಿ ಕಿಂಚಿತ್ತಾದರೂ ಪ್ರಯೋಜನವಾದೀತೆಂದು ನನ್ನ ಅನಿಸಿಕೆ. ಅಂಥ ಶ್ರದ್ಧೆಯಿಂದ ಕೂಡಿದ ಆಚರಣೆಗಳು ಮನುಕುಲಕ್ಕೆ ಮಾರಕವಾಗಿವೆ ಎಂಬ ವಿಷಯ ನಿಮಗೆ ಗ್ರಹಿಕೆಯಾದರೆ ಸಾಕು. ಪ್ರೀತಿ, ವಾತ್ಸಲ್ಯ, ಸಹಕಾರ-ಸಹಾಯ, ಕರ್ತವ್ಯನಿಷ್ಠೆ, ಹಿರಿಯರಲ್ಲಿ ಗೌರವ ಮುಂತಾದ ಉದಾತ್ತ ಗುಣಗಳ ಪರಿಚಯವಾಗುತ್ತದೆ' ಎಂದು ಅವರೇ ಈ ಕೃತಿಯಲ್ಲಿ ಹೇಳಿದ್ದಾರೆ. ಜಾತಿಭೇದ, ಮೇಲು ಕೀಳು ಮುಂತಾದ ಭಾವಗಳನ್ನು ಮಕ್ಕಳಲ್ಲಿ ಬೆಳಸಕೂಡದು ಎಂದುಕೊಂಡೇ ಈ ಕತೆಯನ್ನು ಹೆಣೆಯಲಾಗಿದ್ದು, ಗೌಡರ ಹೆಂಡತಿಯೇ ತನ್ನೊಳಗಿನ ಜಾತೀಯ ಮನೋಭಾವ ತೊರೆದು ದಲಿತ ಹುಡುಗ ರಾಮುವನ್ನು ಆದರಿಸುವ ಕತೆ ಇದೆ. ಆದಷ್ಟೂ ಇವರೆಲ್ಲ ಕೃತಿಗಳು ಮಕ್ಕಳ ಭವಿಷ್ಯ ಸಮೃದ್ಧವಾಗಲೆಂಬ ತುಡಿತದಿಂದ ಬರೆದುವೇ ಆಗಿವೆ.

ಚಂದ್ರಗೌಡ ಕುಲಕರ್ಣಿ(೧೯೫೫) ಪ್ರಾಧ್ಯಾಪಕರಾಗಿದ್ದುಕೊಂಡು ಮಕ್ಕಳ ಸಾಹಿತ್ಯದಲ್ಲಿ ಆಸಕ್ತಿ ವಹಿಸಿದ ವಿಶೇಷದವರು. ತಾಳಿಕೋಟಿಯಲ್ಲಿ ವೃತ್ತಿಯಲ್ಲಿದ್ದು ವಿಜಯಪುರದ ಶಿಕ್ಷಕರ ಸಮುದಾಯದೊಡನೆ ಒಡನಾಟದಲ್ಲಿ ಸಕ್ರಿಯರಾದವರು. ಅಕಾಡೆಮಿ ಪುರಸ್ಕಾರ ಮೊದಲಾಗಿ ಹಲವಾರು ಪುರಸ್ಕಾರಗಳಿಗೆ ಭಾಜನರಾದ ಇವರು ಮುಖ್ಯವಾಗಿ ಮಕ್ಕಳ ಕವಿತೆಗಳಲ್ಲಿ ಕೃಷಿಯನ್ನ ಮಾಡಿದವರು. ಮಕ್ಕಳಿಗೆ ರಂಜನೆ, ಒಂದಿಷ್ಟೆಲ್ಲ ರಮ್ಯ ಮನೋಭಾವದ,

ಸಂವೇದನಾಶೀಲ ಭಾವಗಳೊಂದಿಗೆ ಇವರ ಪದ್ಯಗಳು ಕಾಣುತ್ತವೆ.

ರೇಶಿಮೆ ಅಂಗಿ ಚಿಟ್ಟೆ
ಎಲ್ಲಿಗೆ ಹಾರಿ ಹೊಂಟೆ
ಹೂವಿಂದ್ಹೂವಿಗೆ ಹಾರುವೆ
ಏನು ಹೊತ್ತು ತರುವೆ

ಜೋಡು ಪಕ್ಕ ಬಿಚ್ಚಿ
ರಸ ಹೀರತಿ ಚುಚ್ಚಿ

ಗಂಧದ ಗೆಳತಿ ಬಾ ಬಾ
ಚಂದದ ಅಂಗಿ ತಾ ತಾ

ರೇಶಿಮೆ ಅಂಗಿ ಚಿಟ್ಟೆ
ಎಲ್ಲಿಗೆ ಹಾರಿ ಹೊಂಟೆ

ಅಂತಹ ಭಾವಮಯ ರಚನೆಗಳೊಡನೆ ಹಾಸ್ಯದ, ತುಂಟತನದ, ಅದರಲ್ಲೂ ಚುಟುಕು ಪದ್ಯಗಳನ್ನ ವಿಶೇಷವಾಗಿ ಬರೆದುದು ಕಾಣುತ್ತದೆ. ಇಂಥ ಕಿರು ರಚನೆಗಳೇ ಹೆಚ್ಚು ಗೆಲುವಾಗಿವೆ:

ಎಲ್ಲಿಗೆ ಹೋಗುವೆ
ಸುಬ್ಬಿ!
ಗೂಡು ಕಟ್ಟಿದ
ಗುಬ್ಬಿ!
ಇದಕ್ಕ ಪ್ರಸಿದ್ಧ
ಧಾರವಾಡ!
ತಿಂದರೆ ನೋಡು
ಠಾಕೂರ ಪೇಡಾ!

ಆಡುಮಾತಿನ ಬಳಕೆಯನ್ನ ಆಗೀಗ ಮಾಡಿಕೊಂಡಿರುವುದು ಕೂಡ ಕಾಣುತ್ತದೆ

ಕೇಳೇ ಗೆಳತಿ ಗಣಪನ ಬಗ್ಗೆ
ಒಂದೆರಡ ಪ್ರಶ್ನೆ ಮೂಡ್ಯಾವ !
ಬೇಡ್ ಬೇಡಂದ್ರೂ ಮನಸ್ನ್ಯಾಗ್ ಬಂದು
ದಿನವೂ ನನ್ನನ್ ಕಾಡ್ತಾವ !

ಡೊಳ್ಳು ಹೊಟ್ಟೆ ಗಣಪನ ತೂಕ
ಇಲಿಯು ಹೆಂಗ ಹೊರತೈತಿ ?
ಮಗ್ಗುಲದಲ್ಲಿಯೇ ಇಲಿ ಇದ್ರೂ
ಹಾವು ಯಾಕೆ ಸುಮ್ನೈತಿ ?

ಸಿಂದಗಿ ಭಾಗದ ಪ್ರಾಧ್ಯಾಪಕ ವೃತ್ತಿಯಲ್ಲಿರುವ **ರಾ. ಶಿ. ವಾಡೇದ** ಅವರೂ ಉತ್ಸಾಹದಲ್ಲಿ ಈಗಾಗಲೇ ಅನೇಕ ಕೃತಿಗಳನ್ನ ತಂದಿರುವುದಿದೆ. 'ಚಿಣ್ಣರ ಆಟ', 'ಬೆಳಕು', 'ಕೈತೋಟ', 'ಸುಂದರ ಚಂದಿರ' ಎನ್ನುವ ಕವನ ಸಂಕಲನಗಳನ್ನು ತಂದಿರುವಂತೆ 'ಮಾಯದ ಕುದುರೆ' ಎನ್ನುವ ನಾಟಕ ಸಂಕಲನವನ್ನೂ ತಂದಿರುವರು. ಪ್ರೌಢರಿಗಾಗಿನ ಬರವಣಿಗೆಯಲ್ಲೂ ಅವರು ವಿಶೇಷ ಆಸ್ಥೆಯುಳ್ಳವರು. ಹ. ಮ. ಪೂಜಾರರಂಥ ಶಿಕ್ಷಕರ ಒಡನಾಟದ ಪರಿಸರದಲ್ಲಿ ಶಿಕ್ಷಕ ಸಮುದಾಯದೊಡನೆ ಸೇರಿಕೊಂಡು ಮಕ್ಕಳ ಸಾಹಿತ್ಯದ ಅಭಿಲಾಷೆಯನ್ನ ಬೆಳೆಸಿಕೊಂಡುದನ್ನ ಕಾಣುತ್ತೇವೆ. ಹಾಗಾಗಿ ಸಹಜವಾಗಿಯೇ ಆ ಬಗೆಯ ಪ್ರಭಾವ ಇವರ ರಚನೆಗಳಲ್ಲಿ ಢಾಳಾಗಿ ಕಾಣುತ್ತದೆ.

ಕಣ್ಣನು ಮುಚ್ಚುವ
ಆಟವ ಬಿಟ್ಟೆ
ಹಕ್ಕಿಯ ಗೂಡನು
ಸೇರಿಸಿ ಬಿಟ್ಟೆ
ಬಸ್ಸನು ಹತ್ತಿ
ಕುಳಿತೇ ಬಿಟ್ಟೆ

ಎನ್ನುವ ಚುರುಕಿನ ನಡೆಗಳನ್ನ ತಂದುಕೊಳ್ಳುವ ಹಾಗೆ

ಶಾಲೆಗೆ ಹೋಗುವ ನನಗಪ್ಪ
ಕೆಲಸಕೆ ಹಚ್ಚಿದ ಅವನಪ್ಪ
ಅಪ್ಪಗೆ ಕುಡಿತದ ಚಟವಪ್ಪ
ದುಡಿತಕೆ ದೂಡಿದ ಅದಕಪ್ಪ

ಎನ್ನುವಂಥ ತೀರ ವಾಸ್ತವದ ಕಟು ಸಂಗತಿಗಳನ್ನೂ ಇವರು ಪದ್ಯಗಳಲ್ಲಿ ತಂದುಕೊಂಡುದಿದೆ. ಪರಿಸರ ಪ್ರೀತಿ, ಹಿರಿಯರಲ್ಲಿ ಗೌರವ ಮುಂತಾದ ಆದರ್ಶದ ಹಂಬಲಗಳು ಇವರ ರಚನೆಗಳಲ್ಲಿ ತುಂಬಿನಿಂತಿವೆ. ಕಥನ ಕವಿತೆಗಳನ್ನೂ ವಿಶೇಷವಾಗಿಯೇ ಬರೆದಿದ್ದಾರೆ. ನಾಟಕಗಳಿಗೆ ಪುರಾಣದ ಪ್ರಸಂಗಗಳನ್ನ ಆಯ್ದುಕೊಳ್ಳುವ ಹಾಗೆ ನಮ್ಮ ನಡುವಿನ ಸಾಮಾಜಿಕ ಪ್ರಸಂಗಗಳನ್ನೂ ಎತ್ತಿಕೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಗಮನಾರ್ಹ ಕೊಡುಗೆ

ಡಾ. ಆನಂದ ಪಾಟೀಲ

ಉತ್ತರ ಕರ್ನಾಟಕದ ವಿಜಯಪುರ ಭಾಗದಲ್ಲಿ ದೊಡ್ಡ ಸಮೂಹ ತೊಡಗಿದಹಾಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ದೊಡ್ಡ ಶಿಕ್ಷಕ ಸಮುದಾಯ ಮಕ್ಕಳ ಸಾಹಿತ್ಯದಲ್ಲಿ ಸದ್ದಿಲ್ಲದೆ ತನಗೆ ತಾನೆ ತೊಡಗಿಕೊಂಡುದು ಕಂಡುಬರುತ್ತದೆ. ಪಂಜೆಯವರಂಥವರು ಅಲ್ಲಿ ಪ್ರಾರಂಭದ ಗಟ್ಟಿ, ನಿರ್ದಿಷ್ಟ ಹೆಜ್ಜೆಗಳನ್ನು ಹಾಕಿದರು ಎನ್ನುವುದರೊಟ್ಟಿಗೇ ಅಲ್ಲಿನ ಶಿಕ್ಷಕ ಸಮುದಾಯ ಸಾಹಿತ್ಯದಲ್ಲಿ ಇನ್ನಿಲ್ಲದೆ ಶ್ರದ್ಧೆಯಿಂದ ತೊಡಗಿಕೊಳ್ಳುತ್ತ ಬಂತು. ಉತ್ತರ ಕರ್ನಾಟಕದಲ್ಲಿ ಸಿಸು ಸಂಗಮೇಶರಂಥವರಿಂದ ಸಿಕ್ಕ ಸಂಘಟನೆಯ ಚಟುವಟಿಕೆಗಳು ಅಲ್ಲಿ ಕಾಣದಿದ್ದರೂ ಅಲ್ಲಿ

ವೈಯಕ್ತಿಕವಾಗಿ ಅನೇಕರು ಬರೆಯುತ್ತ ಬಂದರು. ಬಹುಶ: ಒಬ್ಬರಿಂದಿನ್ನೊಬ್ಬರು ಸ್ಫೂರ್ತಿ ಪಡೆಯುತ್ತ ರಚನೆಗಿಳಿದಿರಬಹುದು. ಇಲ್ಲವೆ ಶಾಲಾವ್ಯವಸ್ಥೆ ಶುರುವಾಗುವುದರೊಂದಿಗೆ ಮಕ್ಕಳ ಮಧ್ಯದಲ್ಲಿ ಅಗತ್ಯವೆನಿಸುತ್ತ, ಒಂದಿಷ್ಟೆಲ್ಲ ಅಭಿಲಾಷೆಯಿಂದಲೂ ತೊಡಗಿಕೊಂಡಿರಬಹುದು, ಒಟ್ಟಿನಲ್ಲಿ ದೊಡ್ಡ ಪ್ರಮಾಣದ ಶಿಕ್ಷಕ ಸಮುದಾಯದ ಪ್ರಯತ್ನ ಇಲ್ಲಿಯೂ ಕಂಡುಬಂತು.

ಐರೋಡಿ ಶಿವರಾಮಯ್ಯ(೧೮೭೬–೧೯೪೧) ಉಪಾಧ್ಯಾಯರಾಗಿದ್ದು ಜೀವನ ಪರ್ಯಂತ ಮಕ್ಕಳಿಗಾಗಿನ ಬರವಣಿಗಾಗಿ ಶ್ರಮಿಸಿದರು ಎಂದು ಕೇಳುತ್ತೇವೆ. ಮಕ್ಕಳಿಗೆ ಹಲವಾರು ಪಠ್ಯಪುಸ್ತಕಗಳನ್ನ ರಚಿಸಿದ ಇವರು 'ಚಿಲಿಮಿಲಿ ಇಲಿ', 'ಚಿಣಿಮಿಣಿ ಚಿಟ್ಟೆ', 'ಕೊಂಬಿನ ವೀರ', ಕುರಿಯೂ ಅದರ ಸ್ನೇಹಿತರು, ಕಬ್ಬಿಣದ ಬುದ್ಧಿವಾದ, ಬೇಸರದ ದಾಸಮ್ಮ ಮುಂತಾಗಿ ಸಾಕಷ್ಟು ಬಗೆಯ ರಂಜನೆಯ ಕತೆಗಳನ್ನ ಮಕ್ಕಳಿಗೆ ನೀಡಿದರಂತೆ. ಪುಟ್ಟಪುಟ್ಟ ಮಾತುಗಳಲ್ಲಿ ಆಕರ್ಷಕ ಶೀರ್ಷಿಕೆಗಳನ್ನು ನೀಡುವಲ್ಲಿ ಸಿದ್ಧಹಸ್ತರಾಗಿದ್ದರು ಎಂದು ತಿಳಿಯುತ್ತದೆ. ಇಂಥವರ ಪ್ರಾರಂಭದಿಂದಲೇ ಶಾಲಾವಾತಾವರಣದ ಬರವಣಿಗೆಯೊಂದಿಗೆ ರಂಜನೆಯ ಸರಕೂ ಸೇರಿಕೊಳ್ಳುತ್ತ ಮಕ್ಕಳ ಸಾಹಿತ್ಯದ ಬರವಣಿಗೆ ರೂಪು ಪಡೆಯುತ್ತ ಬಂತು ಎನ್ನಬಹುದು. ಪಂಜೆ ಮಂಗೇಶರಾಯರು, ಅವರ ಸಮಕಾಲೀನರಾದ ಎಮ್. ಎನ್. ಕಾಮತರು, ಉಗ್ರಾಣ ಮಂಗೇಶರಾಯರು ಮುಂತಾಗಿ ಶಿಕ್ಷಕರಾಗಿಯೂ ಪ್ರತಿಭಾವಂತರಾದವರು ತೊಡಗಿಕೊಳ್ಳುತ್ತ ಶಿಕ್ಷಕ ಸಮುದಾಯಕ್ಕೆ ವಿಶೇಷವಾಗಿಯೇ ಕರೆ ನೀಡಿದಂತಾಯಿತು. ಈ ಬಗೆಯ ಸ್ಫೂರ್ತಿಯಿಂದ ಈ ಭಾಗದಲ್ಲಿ ಶಿಕ್ಷಕರು ದೊಡ್ಡ ಪ್ರಮಾಣದಲ್ಲಿ ಮಕ್ಕಳ ಸಾಹಿತ್ಯದಲ್ಲಿ ತೊಡಗಿಕೊಳ್ಳುತ್ತ ಬಂದರು. ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯವೆಂದರೆ ಅದು ಶಿಕ್ಷಕರದೇ ಬಹುಪಾಲು ಎನ್ನಲು ಅಡ್ಡಿಯಿಲ್ಲ ಅನ್ನುವಷ್ಟರಮಟ್ಟಿಗೆ ಶಿಕ್ಷಕರ ಸಾಧನೆ ಇಲ್ಲಿದೆ.

ಐವತ್ತರ ದಶಕದಲ್ಲಿ ಮುಂಡಾಜೆ ಅಂಥ ಹಳ್ಳಿಯಲ್ಲಿ 'ತಮ್ಮನ ಸಾಹಿತ್ಯ ಮಾಲೆ' ಎಂಬ ಪ್ರಕಾಶನ ಹಚ್ಚಿಕೊಂಡು 'ತಮ್ಮನ ಕವಿತೆಗಳು', 'ಪುಟ್ಟನ ಪಿಟೀಲು', 'ಶಿಶುವಿಹಾರ', 'ಪೀಪಿ', 'ಗಾನಗೌರಿ' ಮುಂತಾದ ಮಕ್ಕಳ ಗೀತ ಸಂಕಲನಗಳನ್ನ ತರುತ್ತ ಮಕ್ಕಳ ಪ್ರೀತಿಯನ್ನ ಯಥೇಚ್ಛವಾಗಿ ತೋರಿದ ಹಿರಿಯರು ದಕ್ಷಿಣ ಜಿಲ್ಲೆಯ **ರಾಮಚಂದ್ರ ಭಟ್ಟರು(೧೯೧೪–೧೯೮೯)**. 'ತಮ್ಮನ ಕವಿತೆಗಳು' ಅದರದೊಂದು ಪ್ರತಿ ನಮ್ಮನೆಯಲ್ಲೂ ಇತ್ತು. ಅದರಲ್ಲಿದ್ದ ಹತ್ತಿಪ್ಪತ್ತು ಪದ್ಯಗಳು ನನಗೆ ಬಾಯಿಪಾಠ ಬರುವಷ್ಟು ಇಷ್ಟವಾಗಿದ್ದವು. 'ಗೆಳೆಯನೆ ಪೇಳುವೆ ಕೇಳಣ್ಣ ರೈಲುಪ್ರವಾಸದ ಕನಸನ್ನ . . . ನಿನ್ನೆಯ ರಾತ್ರಿಯ ಕನಸಿನಲಿ ಕುಳಿತೆನು ನಾ ರೈಲ್ ಬಂಡಿಯಲಿ . . .' ಅಂತ ಒಂದು ಕವನ. ಒಬ್ಬ ಪುಟ್ಟ ಹುಡುಗ ತನ್ನ ಕನಸಿನಲ್ಲಿ ಒಬ್ಬನೇ ರೈಲಿನ ಬೋಗಿಯಲ್ಲಿ ಒಂದೆಡೆ 'ಸರಪಳಿ ಎಳೆಯಿರಿ' ಎಂದು ಬರೆದದ್ದನ್ನು ನೋಡಿ ಹುಡುಗ ಸರಪಳಿ ಎಳೆಯುವುದು, ರೈಲು ಬಂಡಿ ಹಠಾತ್ತನೆ ನಿಂತುಹೊಗುವುದು, ಕರಿ ಉಡುಪಿನ ಟೊಣಪನೊಬ್ಬ ಬಂದು ಹುಡುಗನನ್ನು ಗದರಿಸುವುದು, ಆಗ ಹುಡುಗ ಭಯದಿಂದ ಅಮ್ಮಾ ಎಂದು ಚೀರಿ ಕನಸು ಮುಗಿಯುವುದು . . . ಪದ್ಯದ ಆ ದೃಶ್ಯಾವಳಿ ನನ್ನ ಮನಸ್ಸಿನಲ್ಲಿ ಎಷ್ಟು ಗಾಢವಾಗಿ ಅಚ್ಚೊತ್ತಿತ್ತೆಂದರೆ ಪದವಿ ಓದು ಮುಗಿಸಿ ದಿಲ್ಲಿಗೆ ಮೊಟ್ಟಮೊದಲ ಬಾರಿಗೆ ನಾನು ರೈಲುಪ್ರಯಾಣ ಮಾಡಿದಾಗ, ರೈಲಿನಲ್ಲಿ ಸರಪಳಿ ಎಳೆಯುವ ವ್ಯವಸ್ಥೆಯನ್ನು ಗಮನಿಸಿದಾಗ, ಕರಿ ಉಡುಪಿನ ಟಿ.ಟಿ.ಗಳನ್ನು ನೋಡಿದಾಗ ನನಗೆ ರಾಮಚಂದ್ರ ಭಟ್ಟರ ಪದ್ಯದ ಒಂದೊಂದು ಸಾಲು ಕೂಡ ಕಣ್ಮುಂದೆ ಬಂದಿತ್ತು. ನಾನು ಸರಪಳಿ ಎಳೆಯಲಿಲ್ಲ ಮತ್ತು ಟೊಣಪ ಬಂದು ನನ್ನನ್ನು

ಗದರಿಸಲಿಲ್ಲ ಎನ್ನುವುದನ್ನು ಬಿಟ್ಟರೆ ಆ ಹುಡುಗನಾಗಿದ್ದೆ!' ಎಂದು ಶ್ರೀವತ್ಸ ಜೋಶಿ ಅವರು ತಮ್ಮ ವಿಜಯ ಕರ್ನಾಟಕದ ಅಂಕಣ ಬರಹದಲ್ಲಿ ನೆನಪಿಸಿಕೊಂಡಿರುವುದನ್ನು ನೋಡಿದರೆ ಒಂದು ತಲೆಮಾರಿನವರ ಮೇಲೆ ರಾಮಚಂದ್ರ ಭಟ್ಟರಂಥ ಪ್ರಾಧ್ಯಾಪಕರು ಎಂಥ ಪ್ರಭಾವ ಬೀರಿದರು ಎಂಬುದನ್ನ ಅರಿಯಬಹುದು. ಅವರ ಸಮಗ್ರ ಕವಿತೆಗಳನ್ನ ಸಂಪಾದಿಸಿರುವ ಪ್ರೊ. ಎನ್ ಜಿ. ಪಟವರ್ಧನ್ ಅವರು ಬೆಳ್ತಂಗಡಿ ತಾಲೂಕಿನ ಪ್ರಥಮ ಮಕ್ಕಳ ಕವಿ ಎಂದೂ ಅವರನ್ನ ನೆನೆದಿದ್ದಾರೆ. ಅಧ್ಯಾಪಕ ವೃತ್ತಿಯಲ್ಲಿರುವವರೆಗೂ ಅವಿರತವಾಗಿ ಬರೆಯುತ್ತ ಬಂದ ಅವರು ನಿವೃತ್ತಿಯವರೆಗೂ ಬರೆದರು. 'ನನ್ನ ಭಾವನೆ ಮಕ್ಕಳಿಂದ ಪಡೆದ ಋಣ. ಅವರ ಜೊತೆಗಿರುವಾಗ ಅದನ್ನು ಪಡೆದೆ. ಬರೆದು ಋಣ ತೀರಿಸಿದೆ. ಅವರ ಸಾಂಗತ್ಯ ತಪ್ಪಿದ ಮೇಲೆ ಬರೆಯಲು ನನ್ನಲ್ಲಿ ಏನೂ ಉಳಿಯಲಿಲ್ಲ' ಎಂದಿರುವುದನ್ನು ನೋಡಿದರೆ ಅವರು ಮಕ್ಕಳೊಂದಿಗೆ, ಅವರಿಗಾಗಿನ ಬರವಣಿಗೆಯೊಂದಿಗೆ ಹೇಗೆ ಅವಿನಾಭಾವದಿಂದ ಹೊಂದಿಕೊಂಡವರಾಗಿದ್ದರು, ಅದನ್ನೊಂದು ಋಣವೆಂದು ಭಾವಿಸಿದರು ಎನ್ನುವುದು ವಿದಿತ. 'ಮಕ್ಕಳ ಗೀತ ರಾಮಾಯಣ' ಎನ್ನುವ ದೀರ್ಘ ಗೀತ ರೂಪಕ ಹಿಡಿದು ಏಳು ಸಂಕಲನಗಳಲ್ಲಿ ಮುನ್ನೂರರಷ್ಟು ಪದ್ಯಗಳನ್ನ ಅವರು ರಚಿಸಿದರು.

ನನ್ನ ತಮ್ಮನಿಗೊಂದು ಚಂದದ
ಚೆಂಡನೊಂದನು ತಂದೆನು
ತಮ್ಮನಾಗಲೆ ಚೆಂಡನಾಡುತ
ನೆಗೆದು ಜಿಗಿಯುತ ನಲಿದನು
'ಚೆಂಡಿನೊಳಗಡೆ ಏನು ತುಂಬಿದೆ'
ಎಂದು ತಮ್ಮನು ಕೇಳಲು
'ಚೆಂಡಿನೊಳಗಡೆ ಗಾಳಿಯನು ತಾ
ತುಂಬಿಸಿರುವರು' ಎಂದೆನು

ತಮ್ಮನಾಗಲೆ ಚೂರಿಯೊಂದನು
ತಂದು ಚೆಂಡನು ಹರಿಯಲು
'ಚೆಂಡಿನೊಳಗಡೆ ಗಾಳಿಯಿಲ್ಲವು
ಬರಿಯ ಚರ್ಮವು' ಎಂದೆನು

ಎನ್ನುವಂಥ ಚೋದ್ಯದ ಪದ್ಯಗಳನ್ನು ಹಲವಾರು ಬರೆದಿರುವ ಭಟ್ಟರು ದೇಶಭಕ್ತಿ, ಗುರುಭಕ್ತಿ, ನಾಡಿನ ಹಿರಿಮೆ ಮುಂತಾಗಿ ಮಕ್ಕಳ ಮುಂದೆ ಒಳ್ಳೆಯ ಸಂಸ್ಕಾರಯುತ ಪದಗಳನ್ನು ಇಡಲು ಬಯಸಿದವರು. ಅವರ 'ಶಾರದಾಂಬೆಯೆ ವಿಧಿಯ ರಾಣಿಯೆ' ಎನ್ನುವ ಪದ್ಯ ಶಾಲೆಗಳಲ್ಲಿ ಪ್ರಾರ್ಥನಾಪದ್ಯವಾಗಿ ಮಕ್ಕಳ ಬಾಯಲ್ಲಿ ಸದಾ ನಲಿದುದು.

ದಾಮೋದರ ಬಾಳಿಗ(೧೯೦೮)ರು ಮಕ್ಕಳ ಸಾಹಿತ್ಯಕ್ಕೆ ಕಥೆ ಕವನಗಳ ಮಹಾಪೂರವನ್ನೇ ಹರಿಸಿದ್ದಾರೆ. ಇವುಗಳಲ್ಲಿ ಮುಖ್ಯವಾದವುಗಳು 'ದೇವರ ಮಕ್ಕಳು', 'ಭಾರತ ಜ್ಯೋತಿ ಮಹಾತ್ಮೆ', 'ಅಜ್ಜಿಕತೆ ಮತ್ತು ಗುಬ್ಬಿ ಕುಣಿತ', 'ಅತ್ತೆಯ ಕರಾರು ಮತ್ತು ಇತರ ಕಥೆಗಳು', 'ಉಂಡಾಡಿ ತೋಳ', 'ಮೃಗರಾಜ' ಎನ್ನುತ್ತಾರೆ ಎಸ್. ವಿ. ಶ್ರೀನಿವಾಸರಾವ್. ಇವರಿಗೆ ಮಕ್ಕಳ ಸಾಹಿತ್ಯದ ರಚನೆಗಾಗಿ ಕೇಂದ್ರ ಸರ್ಕಾರ ಹಾಗೂ ಯುನೆಸ್ಕೋ ಪುರಸ್ಕಾರಗಳು ಲಭ್ಯವಾಗಿವೆ.

ಬಿ. ಶಂಕರಭಟ್ಟ(೧೯೦೮–೧೯೭೨)ರು ಮಂಜೇಶ್ವರದ ಬಳಿಯ ಬೋಳಂತಕೋಡಿಯಲ್ಲಿ ಹುಟ್ಟಿದವರು. ಮಕ್ಕಳಿಗಾಗಿ ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದವರು ಎಂದು ತಿಳಿದು ಬರುತ್ತದೆ. ಮಕ್ಕಳ ವಯಸ್ಸು, ವಿದ್ಯೆಯ ಮಟ್ಟ, ಮನೋಧರ್ಮ ಮುಂತಾದ ಎಲ್ಲವನ್ನು ಗಮನಿಸುತ್ತ ಐದು ಹಂತಗಳಲ್ಲಿ ಕೃತಿಗಳನ್ನ ನೀಡಿದುದಾಗಿ ತಿಳಿಯುತ್ತದೆ. ಮೊದಲ ಹಂತದಲ್ಲಿ ಶಿಶುಗಳಿಗೆ ಪಶು ಪಕ್ಷಿ ಪ್ರಾಣಿಗಳ ವಿಷಯವನ್ನೇ ಆಯ್ದು ಇವುರಗಳ ಚತುರತೆ, ಸಾಹಸಗಳಿಗೇ ಆದ್ಯತೆಕೊಟ್ಟು ಕುತೂಹಲಕಾರಿಯಾಗಿ ಕತೆ ಹೇಳಿದುದಿದೆ. ಪುಟ್ಟ ಪುಟ್ಟ ಪದಗಳ ಬಳಕೆ, ಸಣ್ಣ ಸಣ್ಣ ವಾಕ್ಯ ಇಲ್ಲಿನ ವೈಶಿಷ್ಟ್ಯ. ಹೀಗೆ ಹಂತ ಹಂತವಾಗಿ ಪ್ರಬುದ್ಧತೆಯ ಮಟ್ಟ ಹೆಚ್ಚಿದಂತೆ ಬರವಣಿಗೆ ವಿಸ್ತಾರಕ್ಕೆ ತೆರೆದುಕೊಳ್ಳುವಂತೆ ನೊಡಿಕೊಂಡಿದ್ದಾರೆ. ಹೀಗಿದ್ದಾಗಲೂ ಜನಪದ ಸಾಮಗ್ರಿಯನ್ನೇ ವಿಶೇಷವಾಗಿ ಆಶ್ರಯಿಸಿದ್ದು ಕಾಣಿಸುತ್ತದೆ. 'ಕಾಡುಮೀನು', 'ಬುದ್ಧಿವಂತರ ಬುರುಡೆಗಳು', 'ಭೂದೇವಿಯ ಮದುವೆ', 'ನೀಲಿಹೂ', 'ಬಡಗಿಗಳ ಬಂಡಾಟ', 'ಮಾಯೆಯ ಕನ್ನಡಿ', 'ಗ್ರೀಕ್ ವೀರರು', 'ಚೀನದ ಚಾಂಗ್', 'ಜಂತುಗಳ ಜಾಣ್ಮೆ', 'ಸೋಮಾರಿ ನಾನಲ್ಲ', 'ಹಿಂದಿನ ಹುಡುಗರು', 'ನರಿಯ ನಟನೆ' ಮುಂತಾಗಿ ವಿಸ್ತಾರದ ಸಾಹಿತ್ಯದ ಉಣಿಸು ಇವರದು. ಇಂಗ್ಲಿಷಿನ ಆಲೀಸಳ ಕತೆಯನ್ನೂ ಇವರು ಕನ್ನಡಕ್ಕೆ ನೀಡಿದುದನ್ನ ಇಲ್ಲಿ ಹೇಳಬೇಕು. ಇವುಗಳಲ್ಲದೆ 'ಚೆಲುಗನ್ನಡ ಪಾಠಶಾಲೆ', 'ಚೆಲುಗನ್ನಡ ಪದ್ಯಮಾಲೆ'ಗಳನ್ನೂ ಮಕ್ಕಳಿಗಾಗಿ ಸಂಪಾದಿಸಿದ್ದಾರೆ. 'ಕವನ ಕಿಶೋರ' ಇವರ ಇನ್ನೊಂದು ಇಂಥ ವಿಶೇಷದ ಪ್ರಯತ್ನ.

ಬಿ. ಎಂ. ಶರ್ಮಾ (೧೯೧೫–೧೯೮೮) ಇವರು ಬಿ. ಶಂಕರ ಭಟ್ಟರ ಜತೆಗೂಡಿ ಮಂಗಳೂರಿನಲ್ಲಿ 'ಕನ್ನಡ ಪ್ರಪಂಚ ಪ್ರಕಾಶನ ಸಂಸ್ಥೆ'ಯನ್ನು ಹುಟ್ಟುಹಾಕಿದರು. ಅದು ಕನ್ನಡದಲ್ಲಿ 'ಮಕ್ಕಳಮಂಟಪ ಮಾಲಿಕೆ'ಯಲ್ಲಿ ನೂರಕ್ಕೂ ಅಧಿಕ ಮಕ್ಕಳ ಕಥಾಸಾಹಿತ್ಯಕೃತಿಗಳನ್ನು ಪ್ರಕಟಿಸಿದೆ ಎಂದು ತಿಳಿದುಬರುತ್ತದೆ. ಭಾರತದ ರಾಮಾಯಣ, ಮಹಾಭಾರತ ಮಹಾಕಾವ್ಯಗಳಿಂದ ಆಯ್ದ ಶ್ರೇಷ್ಠ ಮಕ್ಕಳ ಕಥೆಗಳು ಈ ಮಾಲಿಕೆಯಲ್ಲಿ ಪ್ರಕಟವಾಗಿವೆ.

ಪದ್ಮನಾಭ ಸೋಮಯಾಜಿ(೧೯೧೭–೧೯೭೭)ಯವರು ಅಧ್ಯಾಪಕರಾಗಿದ್ದು ಪ್ರಾಥಮಿಕ ಶಾಲೆಯ ಮಕ್ಕಳಿಗಾಗುವ ಬರಹಗಳನ್ನೇ ವಿಶೇಷವಾಗಿ ಬರೆದುದಾಗಿ ತಿಳಿಯುತ್ತದೆ. ಮೂರನೆ ತರಗತಿಯ ಮಕ್ಕಳಿಗಾಗಿ ಪುಟ್ಟಪುಟ್ಟ ೧೮ ಅಧ್ಯಾಯಗಳ 'ಮಕ್ಕಳ ರಾಮಾಯಣ', 'ವೀರಭೀಮಸೇನ' ಜೀವನ ಕಥೆಗಳು ಹಾಗು ನಾಲ್ಕನೆ ತರಗತಿಯ ಮಕ್ಕಳಿಗಾಗಿ 'ಸತ್ಯಹರಿಶ್ಚಂದ್ರ' ಕಥೆ, ಪಂಚತಂತ್ರದ ಕತೆಗಳನ್ನೂ ನೀಡಿದ್ದಾರೆ.

ಎ. ಎಸ್. ಗಣಪಯ್ಯ (೧೯೩೦– ೧೯೮೩) ಇವರು 'ಚೌತಿಗಣಪ' ಮತ್ತು 'ಕಾಣಿಕೆ' ಎಂಬ ಕೃತಿಗಳನ್ನು ನೀಡಿದ್ದಾರೆ. ಇವರ 'ಭರತಾಗಮನ' ಎಂಬ ನಾಟಕ ಒಂದಾಣೆ ಮಾಲೆಯಲ್ಲಿ ಬೆಳಕುಕಂಡಿದೆ, 'ನಮ್ಮ ಬಾವುಟ' ಕವನ ಕೇರಳದ ಪ್ರಾಥಮಿಕ ಶಾಲಾ ಪಠ್ಯಪುಸ್ತಕಕ್ಕೆ ಸೇರ್ಪಡೆಯಾಗಿತ್ತು. 'ಭಕ್ತಸುದಾಮ', 'ಚಂದ್ರಹಾಸ', 'ಭಕ್ತಧ್ರುವ', 'ಕೀಚಕ', 'ಒಲಿದುಬಂದ ಮಂಜುನಾಥ' ಇವರ ನಾಟಕಗಳು. 'ನಾನೇ ಶ್ರೇಷ್ಠ', 'ಅಳಿಯಗಿಳಿಯ' ಮತ್ತು 'ಏಕಶಿರ ಬ್ರಹ್ಮ'ದಂತಹ ೫೦ಕ್ಕೂ ಹೆಚ್ಚು ಪ್ರಹಸನಗಳನ್ನು, ೬೦ಕ್ಕೂ ಹೆಚ್ಚು ಅಭಿನಯ ಗೀತೆಗಳನ್ನು ಮಕ್ಕಳಿಗಾಗಿ ಬರೆದಿದ್ದಾರೆ.

ಬಹು ವಿಶೇಷವಾಗಿ ಈ ಶಿಕ್ಷಕ ಸಮುದಾಯದಲ್ಲಿ ಗುಣಮಟ್ಟದಲ್ಲಿ, ಸಂಖ್ಯೆಯ ಮಟ್ಟದಲ್ಲೂ ಕೇಳಿಬರುವ ಮೂರು ಪ್ರಮುಖ ಹೆಸರುಗಳು ಪಳಕಳ ಸೀತಾರಾಮ ಭಟ್ಟರು, ಮುಳಿಯ

ಶಂಕರಭಟ್ಟರು(ಎಳೆಯರ ಗೆಳೆಯ ಮುಳಿಯ), ಹಾಗೂ ಪರಮೇಶ್ವರ ಭಟ್ಟ ಬಾಳಿಲ ಅವರವು. ಪರಮೇಶ್ವ ಭಟ್ಟ ಬಾಳಿಲ ಅವರು ಗತಿಸಿಯಾಗಿದೆ. ಇನ್ನಿಬ್ಬರು ಸುದೈವದಿಂದ ನಮ್ಮ ನಡುವೆ ಇದ್ದಾರೆ, ವೃದ್ಧಾಪ್ಯದಲ್ಲೂ ಉತ್ಸಾಹದಿಂದ ಮಾತನಾಡಬಲ್ಲವರಾಗಿದ್ದಾರೆ. ಪಳಕಳ ಸೀತಾರಾಮ ಭಟ್ಟರ ಕೃತಿಗಳು ಹೆಚ್ಚು ಪ್ರಚುರಕ್ಕೆ ಬಂದು, ಪಠ್ಯ ಪುಸ್ತಕಗಳಲ್ಲೂ ವಿಶೇಷವಾಗಿ ಕಾಣಿಸಿಕೊಂಡು, ಅವರಿಗೆ ಬಾಲ ಸಾಹಿತ್ಯ ಪುರಸ್ಕಾರವೂ ಬಂದು ನಾಡಿನ ಉಳಿದೆಡೆಗಳಲ್ಲಿ ಅವರ ಹೆಸರು ಹೆಚ್ಚು ಪರಿಚಿತವಾಗಿದೆ. ಉಳಿದವರ ಕೃತಿಗಳು ಇತರಡೆಗಳಲ್ಲಿ ಅಷ್ಟು ಪರಿಚಿತವಾಗದೆ ಉಳಿದುದೇ ಹೆಚ್ಚು. ಆದರೆ ಬಹು ದೊಡ್ಡ ಸಂಖ್ಯೆಯಲ್ಲಿ ಅತ್ಯಂತ ನಿಷ್ಠೆಯಿಂದ ಬರೆದವರು ಇವರು ಎನ್ನುವುದಿದೆ.

ಪಳಕಳ ಸೀತಾರಾಮ ಭಟ್ಟ (೧೯೩೧)ಮಕ್ಕಳಿಗಾಗಿನ ಬರವಣಿಗೆಯ ರಂಗದಲ್ಲಿ ಪಳಕಳ ಸೀತರಾಮ ಭಟ್ಟರ ಹೆಸರನ್ನ ಕನ್ನಡ ನಾಡಿನಲ್ಲಿ ಕೇಳದವರೆ ಅಪರೂಪ, ಅಷ್ಟು ಅವರ ಹೆಸರು ಪ್ರಚಲಿತ, ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ ಎಂದರೆ ತಟಕ್ಕನೆ ಕೈಬೆರಳು ಮಾಡುವುದು ಪಳಕಳರ ಕಡೆಗೆ ಎಂದರೆ ತಪ್ಪಾಗದು, ಅಷ್ಟೊಂದು ಅವರು ವ್ಯಾಪಿಸಿಕೊಂಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಸಿಸು ಸಂಗಮೇಶ ಅವರು ಕಾಣಿಸುವ ಹಾಗೆ ಅವಿರತವಾಗಿ ಈ ರಂಗದಲ್ಲಿ ಪಳಕಳರು ತೊಡಗಿಕೊಂಡುದು ಕಾಣುತ್ತದೆ. ಒಬ್ಬರದು ಬಿರುಸಿನ, ದೊಡ್ಡ ಹರವಿನ ನಡಿಗೆಯಾದರೆ ಇನ್ನೊಬ್ಬರದು ತಮ್ಮಷ್ಟಕ್ಕೆ ತಾವು ನಿರಂತರತೆಯಿಂದ ಹರಿವ ನೀರಿನ ಹಾಗೆ ತೊಡಗಿಕೊಂಡುದು. ಪಳಕಳರ ಬರವಣಿಗೆ ಎಷ್ಟೊಂದು ಅವಿರತ ಎಂದರೆ ಇಲ್ಲಿಯವರೆಗೆ ಅವರು ೧೨೦ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಾಗಿದೆ. ಶಿಕ್ಷಕ ಸಮುದಾಯದಲ್ಲೊಬ್ಬರಾಗಿ ಅವರನ್ನ ಕಾಣುವ ಹಾಗೆಯೇ ಒಬ್ಬ ವ್ರತಧಾರಿಯಾಗಿಯೂ ಕಾಣಬೇಕು. ಅಷ್ಟೊಂದು ನಿಷ್ಠೆಯಿಂದ ತೊಡಗಿಕೊಂಡವರು ಅವರು. ಗಾಂಧಿಜೀವನ ಮಾರ್ಗದಲ್ಲಿ ಪ್ರಭಾವಿತಗೊಂಡ ಅವರು ಅದೇ ಬದುಕಿನ ಸರಳತೆಯ ನಿಷ್ಠೆಯನ್ನ ಜೀವನದುದ್ದಕ್ಕೂ ಕಾಯ್ದುಕೊಂಡು ಬಂದಿದ್ದಾರೆ, ತಮ್ಮ ಮಕ್ಕಳ ಬರವಣಿಗೆಯಲ್ಲೂ ಅದನ್ನ ಹಾಸುಹೊಕ್ಕಾಗಿಸಿದ್ದಾರೆ. ದೊಡ್ಡವರಿಗಾಗಿಯೂ ಅವರು ಬರೆದುದಿದೆ, ಆದರೆ ಅವರ ಮಕ್ಕಳ ರಚನೆಗಳ ಮುಂದೆ ಅದು ತೀರ ಕಡಿಮೆ ಇರುವುದು ಅವರ ಒಲವನ್ನ, ಸೆಳೆತವನ್ನ ಮಕ್ಕಳ ಜಗತ್ತೇ ಹೆಚ್ಚು ಅನುಭವಿಸಿದುದು ಸುವ್ಯಕ್ತ. ಕೇವಲ ಶಿಕ್ಷಕರಾಗಿದ್ದುದರಿಂದಲೇ ಇದು ಸಾಧ್ಯವಾಗಿರದೇ ಅವರ ಮನೋಧರ್ಮದ ಸಹಜದ ತುಡಿತ ಅದಿರುವ ಹಾಗಿದೆ. ಕವಿತೆಯ ಪಾಲು ಹಿರಿದಿರುವ ಹಾಗೆ ಕತೆಗಳ ಪಾಲೂ ಹಿರಿದಾಗಿದೆ ಎನ್ನುವುದು ವಿಶೇಷ. ಮನೆ ಇರಲಿ, ಶಾಲೆ ಇರಲಿ, ಹಕ್ಕಿ, ಪ್ರಾಣಿ, ನಾಡು ನುಡಿ ಎಲ್ಲದರಲ್ಲೂ ಆದರ್ಶದ ಹೊಳಹು ತಪ್ಪದೆ ಕಾಣಸಿಕೊಂಡಿತು.

ಕಿಟ್ಟು ಮನೆಯಿಂದ ಹೊರಗೆ ಓಡಿ ಬಂದು ಕಾಸುಕೊಟ್ಟು (ಬಹುಶ: ಕದ್ದಿರಬಹುದು) ಏನೇನೊ ತಿಂಡಿ ತಿನ್ನಲು ನೊಡುತ್ತಾನೆ, ಅದೇ ಸಮಯಕ್ಕೆ ಅಲ್ಲಿ ಒಂದು ಕಾಗೆ ಬಂದು ತುಂಡು ರೊಟ್ಟಿಯನ್ನು ತಿನ್ನಲು ಹೋಗಿ ಬೇರೆ ಕಾಗೆಗಳನ್ನೂ ಕರೆಯುವುದನ್ನ ನೋಡಿ ಆಗಲೆ ಪಾಠ ಕಲಿತುಬಿಡುತ್ತಾನೆ. ಬಳಿಕ...

ಬಳಿಕ ಚಿಣ್ಣ ಗೆಳೆಯರನ್ನ
ಕರೆದು ತನ್ನ ಕಡಲೆಯನ್ನ

ಹಂಚಿ ಕೊಟ್ಟು ತಿಂದು ಬಿಟ್ಟು
ನಕ್ಕು ನಲಿದನು

ಇರುವೆಯಂತೂ ನೀತಿ ಹೇಳುವುದಕ್ಕೆ ಬಲು ಕೈಗೆ ಸಿಗುವ ಜೀವಿ. ಸರಿ ಸುಮಾರು ಎಲ್ಲ ಕವಿಗಳೂ ಇರುವೆಯ ಬಗೆಗೆ ಬರೆದವರೆ. ಪಳಕಳರು ಇರುವೆಯ ಕುರಿತು ಒಂದು ಸೊಗಸಾದ ರಚನೆ ಮಾಡಿದ್ದಾರೆ . . .

ದಪ್ಪಗಿರಲಿ ಕಪ್ಪಗಿರಲಿ
ತೆಳ್ಳಗಿರಲಿ
ಬೆಳ್ಳಗಿರಲಿ
ದೊಡ್ಡದಿರಲಿ ಚಿಕ್ಕದಿರಲಿ
ಇರುವೆ ಜಾತಿ
ನಡತೆಯಲ್ಲಿ ನೋಡಿದಲ್ಲಿ
ಒಂದೆ ರೀತಿ

ಹಗಲಿನಲ್ಲಿ ಇರುಳಿನಲ್ಲಿ
ಬೆಳಕಿನಲ್ಲಿ ಕತ್ತಲಲ್ಲಿ
ತಾನು ಎಲ್ಲಿ ಇಹುದೊ. ಅಲ್ಲಿ
ಇರುವೆ ಜಾತಿ
ಮೌನದಲ್ಲಿ ದುಡಿಯುವಲ್ಲಿ
ಒಂದೆ ರೀತಿ

ಸದ್ದು ಇಲ್ಲದಂತೆ ಮೆಲ್ಲ
ಕೆಲಸದಲ್ಲೆ ತೊಡಗಬಲ್ಲ
ನಡತೆಯೆಲ್ಲ ತಿಳಿಯದಿಲ್ಲ
ಇರುವೆ ಜಾತಿ
ಜನಗಳೆಲ್ಲ ಕಲಿಯಲಿಲ್ಲ
ಇದರ ನೀತಿ

ಕೋಳಿ, ಜೇನು ನೊಣ, ಕಪ್ಪೆ, ಕತ್ತೆ, ದುಂಬಿ, ಮಿಂಚುಹುಳ, ಚಿಟ್ಟೆ, ಮೊಲ, ಕೋಗಿಲೆ, ಎರೆಹುಳ, ಅಳಿಲು ಹೀಗೆ ಎಲ್ಲವೂ ಆದಷ್ಟೂ ಈ ಬಗೆಯಲ್ಲಿಯೇ ಬಳಕೆಯಾಗಿರುವುದನ್ನು ನೊಡುತ್ತೇವೆ. ನೊಣ, ತಗಣಿಯಂಥ ಜೀವಿಗಳು ಪಾಪದವು, ನೀತಿಗೆ ಅವು ಎಲ್ಲಿಯೂ ನಿಲುಕುವುದಿಲ್ಲ, ಹಾಗಾಗಿ ಅವು ದೂಷಿಸುವುದಕ್ಕೇ ಮೀಸಲು. ಈ ಅನ್ಯ ಜೀವಿಗಳ ಬಗೆಗೆ ದಿಗಿಲು, ಕುತೂಹಲದ ಭಾವಗಳಿಗಿಂತ ಅವನ್ನ ಕೆಲ ಒಪ್ಪಿತ ಸಂಗತಿಗಳಾಗಿ ಗಣಿಸಿಬಿಡುವುದೇ ಹೆಚ್ಚು.

ಸಹಜದ ಮುಗ್ಧ, ಸುಕುಮಾರ ಭಾವಗಳು ಪಳಕಳರ ಅಭಿವ್ಯಕ್ತಿಯ ಕೈಗಳಿಗೆ ಹಲವಾರು

ಕಡೆ ಸಿಗುವುದನ್ನು ನೋಡುತ್ತೇವೆ. ಅಕ್ಕನ ಕಂದ ಆಸ್ಪತ್ರೆಯಿಂದ ಬಂದು ತೊಟ್ಟಿಲಲ್ಲಿ ಆಡುವುದೊಂದು ಸೋಜಿಗದ, ಆಪ್ತತೆಯ ಸಂಗತಿ.

ಬಂದವರು ನಿಲ್ಲಿ ಈ ಕೋಣೆಯಲ್ಲಿ
ಮಲಗಿಹುದು ಕಂದ, ಇದಕೆ
ಬಲು ಹೊತ್ತು ನಿದ್ದೆ ಚಣಕೊಮ್ಮೆ ಒದ್ದೆ
ಹಾಸಿದ್ದ ಹಾಸು ಹೊದಿಕೆ

ಅಂತ ಬರುವವರನೆಲ್ಲ ತಡೆದು ನಿಲ್ಲಿಸುವ ಬಗೆ ಸೊಗಸಿನದು. ಇನ್ನೊಂದು ಪದ್ಯದಲ್ಲಿ ಅಮ್ಮನನ್ನ 'ಸದ್ದು ಇಲ್ಲದಂತೆ ಮೆಲ್ಲ ಹೇಗೆ ಕೋಣೆ ಹೊಕ್ಕಿತು' ಅಂತ ಕೇಳುವ ಪ್ರಶ್ನೆ ಕಾಣಿಸಿಕೊಂಡಿದೆ. ನಿಲ್ಲಲಾರದ ಮಗುವಿನ ರಚ್ಚೆಗೆ ಅಕ್ಕ ಹೇಳುವ 'ಯಾವುದು ಬೇಕೋ ಹೇಳ್ಬೇಕಪ್ಪಾ, ಕೊಟ್ಬೇ ಕೊಡ್ತೀನಿ, ಮತ್ತೂ ನೀನೂ ಅತ್ರೇ ನಾನೂ ಅತ್ತೇ ಬಿಡ್ತೀನಿ' ಅನ್ನೋ ಮಾತು ಇನ್ನೊಂದು ಕಡೆ ಕೇಳಿದೆ. ದೊಡ್ಡವರ ಏನೇನೆಲ್ಲ ಕೆಲಸ ನೋಡಿ 'ಅದ್ಕೇ ನಾನೂ ಹೇಳೋದೆಲ್ಲ, ಚಿಕ್ಕವನಾಗೇ ಇರ್ತೀನಿ' ಅನ್ನುವ ಮುಗ್ಧಭಾವ ಇನ್ನೊಂದು ಕಡೆ ಕೇಳಿದೆ. ಡಾಕ್ಟರ್ ಹತ್ತಿರ ಹೇಳೊ ಮಾತು ಹೀಗೆ ಸೆಳೆಯುವಂಥದಿದೆ

ಡಾಕ್ಟರ್ ಮಾಮಾ ಒಳ್ಳೆಯವ್ರು
ಅಂತಾರಲ್ಲ ಎಲ್ಲ?
ಕಹಿ ಕಹಿ ಮದ್ದೇ ಕೊಡ್ತಾರೇಕೋ
ಗೊತ್ತಾಗ್ತಾನೇ ಇಲ್ಲ

ಹತ್ರಾ ಬಂದೋರೆಲ್ಲರ್ನೂವೇ
ಮಾಡ್ತಾರಂತೆ ಪ್ರೀತಿ
ಚುಚ್ಚೋಮದ್ದು ಕೊಟ್ಬೇ ಯಾಕೆ
ಹುಟ್ಸಿಸ್ತಾರೋ ಭೀತಿ?

'ಮಕ್ಕಳಿಗೆಂದು ಬೇರೆಯೆ ಒಂದು ಮದ್ದೇ ನಿಮ್ಮಲಿ ಇರಬೇಕು, ಅದರಲಿ ಎಲ್ಲ ಸಕ್ಕರೆ ಬೆಲ್ಲ ತುಂಬಿಸಿ ಮೆಲ್ಲನೆ ಇಡಬೇಕು' ಎಂದು ಒಂದು ಮಗು ಇನ್ನೊಂದು ರಚನೆಯಲ್ಲಿ ಹೇಳುತ್ತದೆ.

ಕಥನ ಪ್ರಕ್ರಿಯೆಯಲ್ಲಿ ಕತೆಯನ್ನು ಮಕ್ಕಳಿಗೆ ನೇರವಾಗಿ ಮುಟ್ಟಿಸುವುದನ್ನೇ ಗುರಿಯಾಗಿರಿಸಿಕೊಳ್ಳುವುದನ್ನು ಸಾಮಾನ್ಯವಾಗಿ ಈ ಶಿಕ್ಷಕ ಸಮುದಾಯದ ಕೃಷಿಯಲ್ಲಿ ನೊಡುತ್ತೇವೆ. ಈಗಾಗಲೇ ಕತೆ ತಾನೇ ಹೇಳುವಂಥದನ್ನ ಆದಷ್ಟು ಅಚ್ಚುಕಟ್ಟಾಗಿ ಮುಟ್ಟಿಸುವುದು ಕೆಲಸ. ಪ್ರಚುರವಾಗಿರುವ ಕತೆಗಳನ್ನೇ ಇದಕ್ಕಾಗಿ ಆಯುವುದು ಸರ್ವೇ ಸಾಮಾನ್ಯ. ಅಂದರೆ ಯಾವುದೊಂದು ಕತೆಯನ್ನ ಆಯುವುದು ತಾವೇ ಬಯಸುವ ಆಶಯಗಳಿಗಾಗಿ ಅಲ್ಲ, ಬದಲಾಗಿ ಜನಪ್ರಿಯವಾಗಿರುವ ಕತೆಯನ್ನೇ, ಅದು ಹೇಳುವ ನೀತಿಗಾಗಿ, ಬದುಕಿನ ಪಾಠಕ್ಕಾಗಿ ಆಯ್ದುಕೊಳ್ಳುವುದೇ ಇಂಥಲ್ಲಿ ಕಾಣುವುದು. ಪಳಕಳರೂ ಕಥನ ಕವಿತೆಗಳಿಗಾಗಿ ಬೆಕ್ಕಿಗೆ ಗಂಟೆಕಟ್ಟುವ, ಹಕ್ಕಿಗಳ ಮೊಟ್ಟೆ ತಿನ್ನುವ ಹಾವಿನ, ಸಿಂಹ ಹಾಗೂ ಜಾಣ ಮೊಲದ, ಸಿಂಹವನ್ನೇ

ಮರುಳುಗೊಳಿಸಿದ ನರಿಯು, ಹಾಡಿ ಸಿಲುಕಿಕೊಂಡ ಕತ್ತೆ ಮುಂತಾಗಿ ಕತೆಗಳನ್ನ ಆಯ್ದುಕೊಳ್ಳುವುದು. ಈ ಪದ್ಯಗಳ ಕೊನೆಗೆ ತಿಳಿಯಾಗಿ ಕತೆಯ ನೇರದ ಉದ್ದೇಶ ವ್ಯಕ್ತಗೊಳಿಸುತ್ತ ಮಕ್ಕಳಿಗೆ ತಿಳಿಹೇಳುವ ಕೆಲಸವನ್ನ ಆಸಕ್ತಿಯಿಂದ ಮಾಡಿದ್ದಾರೆ ಪಳಕಳರು. ಅಲ್ಲಲ್ಲಿ ಕೆಲವು ಒಂದಿಷ್ಟು ಹೊಸವನ್ನ ಪಳಕಳರು ಪ್ರಯೋಗಿಸಿದ್ದುದಿದೆ. 'ಚಲಿಸಿದ ಬಂಡೆ' ಎನ್ನುವ ಕಥನದಲ್ಲಿ ಕಪ್ಪೆಯ ಮರಿಗಳು ತಿಳಿಯದೆ ಬಂಡೆಯೆಂದು ತಿಳಿದು ನೀರಲ್ಲಿ ಅರ್ಧಂಬರ್ಧ ಮುಳುಗಿದ ಗೌಡರ ಎಮ್ಮೆಯ ಮೇಲೆ ಕುಳಿತು ಮೋಜಿನ ಪಯಣ ಮಾಡುತ್ತ ದಡವನ್ನ ತಲುಪಿದ ಮೋಜಿನ ಪ್ರಸಂಗ ಇದೆ. ಆದರೆ ಅಮ್ಮ ಕಪ್ಪೆ 'ಬಿಡಿ ಹೆಮ್ಮೆ ಊರಿನ ಗೌಡರದಿದು ಎಮ್ಮೆ' ಎಂದು ತಣ್ಣೀರೆರಚುವಲ್ಲಿಗೆ ಮುಗಿದುಬಿಡುತ್ತದೆ. ಅವುಗಳ ಮುಗ್ಧತೆಯನ್ನ, ಹುಡುಗುತನದ ಆಟವನ್ನ ಮೋಜಾಗಿ, ಸಂತಸದಲ್ಲಿ ಪರ್ಯವಸಾನಗೊಳಿಸುವ ಸಾಧ್ಯತೆಗಳನ್ನ ಕೈಬಿಡಲಾಗಿದೆ.

ಪಳಕಳರು ಪ್ರಾಸ, ನಿಖರವಾದ ಅಚ್ಚಿನಲ್ಲಿ ಅದ್ದಿದಂತಹ ನಡಿಗೆಯನ್ನ ಎಲ್ಲ ಪದ್ಯಗಳಲ್ಲೂ ತರುತ್ತ ಕವಿತೆಯಲ್ಲಿ ಅದೇ ಮುಂದಾಗಿ ಎದ್ದುಕಾಣುವಂತೆ ಮಾಡಿಬಿಡುತ್ತಾರೆ. ಅದೇ ಪ್ರತ್ಯೇಕವಾಗಿ ತನ್ನ ಸಂಗತಿಯನ್ನ ಹೇಳಿಬಿಡುತ್ತದೆ. ಕವಿತೆಯಲ್ಲಿನ ವಸ್ತುವಿಗೆ ಸಹಜದ ಮೈಯಾಗುವುದರ ಜೊತೆಗೆ ಅದು ಕೃತಕತೆಯನ್ನ ಅನುಭವಿಸುವುದೂ ಹೆಚ್ಚು. ಪಳಕಳರು ಮಕ್ಕಳಿಗೆ ಮುಟ್ಟಿಸುವಲ್ಲಿ ಪ್ರಾಸ, ನಿಗದಿತ ಲಯ, ಗೇಯತೆ ಮುಂತಾದವುಗಳನ್ನ ತರುವಲ್ಲಿ ವಿಧೇಯ ಕೃಷಿಕನಂತೆ ನಡೆದುಕೊಳ್ಳುತ್ತಾರೆ ಎನ್ನಿಸುತ್ತದೆ. ಆದರೂ ಅಂಥದರ ಮಧ್ಯೆಯೂ ಅವರನ್ನೂ ಮೀರಿ ಅವರಿಂದ ಸೊಗಸಿನ ಸಹಜದ, ಪ್ರಫುಲ್ಲಿತ ರಚನೆಗಳೆನಿಸಿದ ಕವಿತೆಗಳು ಕಾಣಸಿಗುತ್ತವೆ . . .

ಭೂಮಿಯೆಲ್ಲ ನಡುಗಿದಂತೆ
ಬಾನ ಬಯಲೆ ಗುಡುಗಿದಂತೆ
ಸದ್ದು ಮಾಡಿ ಹಾರಿ ಬರುವ
ಹಕ್ಕಿ ಯಾವುದು?

ಬಾಣದಂತೆ ಮೇಲೆ ಏರಿ
ಮುಗಿಲ ತೇರ ನಡುವೆ ತೂರಿ
ಗುರಿಯ ಕೆಡೆಗೆ ಹಾರಬಲ್ಲ
ಹಕ್ಕಿಯಾವುದು?

ಅಂತಹ ಸಾಲುಗಳನ್ನ ನೋಡಬಹುದು.

ಪಳಕಳರು ಬರೆಯುತ್ತ ಬರೆಯುತ್ತ ಸೊಗಸಾದ, ಅಪರೂಪದ ರಚನೆಗಳನ್ನ ನೀಡಿಬಿಡುವುದಿದೆ. 'ಚಿಕಣಿ ರಂಭೆ' ಎನ್ನುವ ಅವರ ಕವಿತೆ ನಿಜಕ್ಕೂ ಸಹಜದ, ಸುಕೋಮಲ ಭಾವದ, ಮುಗ್ಧತೆಯಲ್ಲಿ ಅದ್ದಿದ ಪದ್ಯವಾಗಿ ಹೊರಹೊಮ್ಮಿದೆ.

ಮನೆಯಲಿಂದು ಉಂಟು ಒಂದು
ನಡೆವ ಪುಟ್ಟು ಬೊಂಬೆ
ಏನೋ ಮಾಡಿ ಆಡಿ ಹಾಡಿ
ನಲಿವ ಚಿಕಣಿ ರಂಭೆ
ಮನೆಯಲಿದ್ದೆ ಬಿದ್ದು ಎದ್ದೆ

ಸಾಗುವುದಿದು ಮೈಲು
ಮೊಲೆಯನುಣುವ ಮಣ್ಣು ತಿನುವ
ಅಂಬೆಗಾಲ ರೈಲು

ಅತ್ತ ನೋಡಿ ಇತ್ತ ಓಡಿ
ಕಂಡುದನ್ನು ಹೆಕ್ಕಿ
ನಿಮಿಷದೊಳಗೆ ಬಾಯಿಯೊಳಗೆ
ಇಕ್ಕಿ ಬಿಡುವ ಹಕ್ಕಿ

ಒಮ್ಮೆ ನಗುವು ಮತ್ತೆ ಅಳುವು
ಘಳಿಗೆಯೊಳಗೆ ನಿದ್ದೆ
ಏನು ಗೆಲುವು
ಎಂಥ ಚೆಲುವು!
ಮುದ್ದಿನದಿದು ಮುದ್ದೆ

***

ಐದು ಮತ್ತು ಐದು ಕೂಡಿ
ಹತ್ತು ಬೆರಳು ಒಟ್ಟಿಗೆ
ಎಡದ ಬಲದ ಕೈಗಳಲ್ಲಿ
ನಮ್ಮ ಮುದ್ದು ಪುಟ್ಟಿಗೆ

ಅತ್ತ ಒಂದು ಇತ್ತ ಒಂದು
ಕಂಗಳೆರಡು ಒಟ್ಟಿಗೆ

ನಡುವೆ ಮೂಗು ಕೆಳಗೆ ಬಾಯಿ
ನಮ್ಮ ಮುದ್ದು ಪುಟ್ಟಿಗೆ

ಅಂತ ಸಾಗುವ ಶೈಕ್ಷಣಿಕವಾದರೂ ಅಕ್ಕರೆಯಿಂದ ಕೂಡಿದ ಪುಟ್ಟಿಯ ಪದ್ಯ ಆಕರ್ಷಕವಾಗಿದೆ.

ಅರಳಿದ ಮಲ್ಲಿಗೆ ಹರಡಿದ ಹಾಗೆ
ಬಿಳಿ ನೊರೆ ಹಾಲನು ಚೆಲ್ಲಿದ ಹಾಗೆ
ಸುತ್ತಲು ತಿಂಗಳ ಬೆಳಕಿತ್ತು
ಕತ್ತಲು ಹಗಲಿನ ತೆರವಿತ್ತು
ದೂರದ ಬಾನಿನ ಬಯಲಿನ ಮೇಲೆ

ಲೆಕ್ಕಕೆ ಸಿಕ್ಕದ ಬೆಳ್ಳಿಯ ಮಾಲೆ
ಪಿಳಿ ಪಿಳಿ ಕಣ್ಣನು ಬಿಡುತಿತ್ತು
ಮೌನದ ನಗುವನು ನಗುತಿತ್ತು

ಎಂದು ಸಾಗುವ ತಣ್ಣನೆಯ ಬೆಳದಿಂಗಳ ಪದ್ಯ ನವೋದಯದ ಭಾವಗೀತಗಳ ಪಡಿನೆಳಲಾಗಿ ಸೊಗಸಾಗಿ ಅರಳಿದುದನ್ನ ನೋಡುತ್ತೇವೆ.

ಮಕ್ಕಳಿಗೆ ಅಂತ ತುಂಬಾ ತುಂಬಾ ಅಂತ ಬರೆದ ಪಳಕಳರು ಆಯ್ದುಕೊಳ್ಳದ ವಿಷಯವೆ ಉಳಿಯಲಿಲ್ಲವೇನೋ ಎನಿಸುವಂತಿದೆ. ಪರಿಸರದ ಬಗೆಗೆ ಬರೆದಿದ್ದಾರೆ, ಮಳೆಕೊಯ್ಲಿನ ಬಗೆಗೆ ಬರೆದಿದ್ದಾರೆ, ಕನ್ನಡದ ಮಮತೆಯ ಕುರಿತು ಬರೆದಿದ್ದಾರೆ, ಭಾವೈಕ್ಯತೆಯ ಕುರಿತು ತಪ್ಪದೆ ಬರೆದಿದ್ದಾರೆ, ದೇಶ ಭಕ್ತಿಯ ಕುರಿತಂತೂ ಸಾಕಷ್ಟು ಬರೆದಿದ್ದಾರೆ. ಪ್ರಾತಿನಿಧಿಕ ಅಂತ ಅನ್ನಿಸಿಕೊಳ್ಳುವ ಅವರ ಸಮಗ್ರ ಸಂಕಲನದಲ್ಲಿ ಮೂವತ್ತಕ್ಕೂ ಮಿಕ್ಕಿ ಅಂಥ ಕವಿತೆಗಳನ್ನ ಇರಿಸಿರುವುದನ್ನ ನೋಡಿದರೆ ಅವರ ಆಯ್ಕೆಯ ಪ್ರಾಶಸ್ತ್ಯ ಗಮನಕ್ಕೆ ಬರುತ್ತದೆ.

ಕತೆಗಳನ್ನೂ ಸಾಕಷ್ಟು ಬರೆದಿರುವ ಪಳಕಳರು ಬಹುಶ: ಒಂದು ಸಮಯದ ಸಿಂಹ ಪಾಲಿನ ಇಂಥ ಕೃಷಿಯನ್ನು ನೀಡಿದವರು ಎಂದೆನ್ನಬಹುದು, ಅಷ್ಟೊಂದು ಬರೆದಿದ್ದಾರೆ. ಹಾಗೆ ೬೦ ವರುಷಗಳ ದೀರ್ಘ ಅವಧಿಯಲ್ಲಿ ಪ್ರಕಟವಾದವುಗಳಲ್ಲಿ ಅರವತ್ತು ಕತೆಗಳನ್ನ ಆಯ್ದು ಸಂಕಲನವನ್ನ ತಂದಿದ್ದಾರೆ. ಬಹಳಷ್ಟು ಪಾಲು ಇಂಥ ಕತೆಗಳಲ್ಲಿ ಈಗಾಗಲೇ ಪ್ರಚುರವಾದ ಕತೆಗಳನ್ನೇ ಮತ್ತೆ ಮತ್ತೆ ಮಕ್ಕಳಿಗೆ ಕೊಟ್ಟುದು. ಮಕ್ಕಳ ಸಾಹಿತ್ಯ ಅಂತ ಹಚ್ಚಿಕೊಂಡ ಸುಮಾರು ಈ ಸಮಯದವರೆಲ್ಲ, ಇದೆಲ್ಲ ನಮ್ಮ ಪರಂಪರೆಯ ಸಾಮಗ್ರಿ, ಇದನ್ನ ಮರೆತು ಹೋಗಲು ಬಿಡಬಾರದು ಎಂದು ಪದೇ ಪದೇ ಇವುಗಳನ್ನ ನೀಡಿದಂತೆ ಕಾಣುತ್ತದೆ. ಪಂಚತಂತ್ರ, ಈಸೋಪನ ನೀತಿಕಥೆಗಳನ್ನ ಬಿಟ್ಟರೆ ಹಳ್ಳಿವಾಡದಲ್ಲಿ ಹಬ್ಬಿಹರಡಿದ ಕತೆಗಳನ್ನೆಲ್ಲ ಹೀಗೆ ಸಂಗ್ರಹಿಸಿ ಕೊಟ್ಟುದನ್ನ ನೋಡುತ್ತೇವೆ. ಪುರಾಣದ ಕತೆಗಳು ಒಂದಿಷ್ಟು, ಇತಿಹಾಸದ ಪ್ರಸಂಗಗಳನ್ನ ಆಯ್ದು ಒಂದಿಷ್ಟು, ಹೊರದೇಶದ ಜನಜನಿತವಾದ ಪ್ರಸಂಗಗಳು ಹಲವು ಇದರೊಟ್ಟಿಗೆ ಸೇರಿದುವು. ಸ್ವಂತದ ಕತೆಗಳೆಂದು ರಚಿಸಿದ ಕೆಲವು ಕತೆಗಳು ಸಿಕ್ಕರೂ ಅವೂ ಈ ಬಗೆಯದರ ಮುಂದುವರಿಕೆಯೇ ಆಗಿರುವಂಥವು.

ಪಳಕಳರು ಆಯ್ದುಕೊಟ್ಟಿರುವ ಕತೆಗಳೆಲ್ಲ ಬದುಕಿಗೆ ಒಳ್ಳೆಯ ಮಾರ್ಗದರ್ಶನವನ್ನ ನೀಡಲು ಸ್ಪಷ್ಟ ಉದ್ದೇಶ ಹೊಂದಿರುವಂಥವು. ನೀತಿಯಿಂದ ನಡೆದುಕೊಳ್ಳುವುದು, ಹಿರಿಯರಲ್ಲಿ ಗೌರವದಿಂದ ವರ್ತಿಸುವುದು, ಶಿಸ್ತಿನ ಜೀವನ ನಡೆಸುವುದು, ಸತ್ಯ, ಅಹಿಂಸೆಯಂಥ ಮೌಲ್ಯಗಳನ್ನ ಅಳವಡಿಸಿಕೊಳ್ಳಲು ಪ್ರಯತ್ನಿಸುವುದು ಮುಂತಾಗಿ ಮಕ್ಕಳಿಗೆ ಪಾಠ ಹೇಳುವ ಹಿರಿಯರ ಕಳಕಳಿಯ ಮಾತುಗಳೇ ಇಲ್ಲೆಲ್ಲ ಕೇಳುವುದು. ಸ್ವಂತದವೆಂದು ಬರೆದಿರಲಿ, ಬೇರೆ ಮೂಲದಿಂದ ಆಯ್ದುಕೊಂಡಿರಲಿ, ಇದೇ ಉದ್ದೇಶವನ್ನೇ ಅವರು ಅಲ್ಲಿ ಕಾಣುವುದು.

ಸರಳವಾದ ಭಾಷೆಯಲ್ಲಿ, ಪುಟ್ಟ ವಾಕ್ಯಗಳಲ್ಲಿ ನೇರವಾಗಿ ಕತೆಯನ್ನು ಮುಟ್ಟಿಸುವ ಪುಟ್ಟ ರಚನೆಗಳು ಹಲವಿವೆ. ಮುದ್ದುಮುದ್ದಾದ ಮಕ್ಕಳಿಗೆ ಮುದನೀಡುವಂತಿವೆ. ಪುಟ್ಟ ಪುಟ್ಟ ಒಳ್ಳೆಯ ಮಾತುಗಳನ್ನ, ಕತೆಯ ಮೂಲಕ ಅವು ಹೇಳುತ್ತವೆ. ಪುಟಾಣಿ ಬೆಕ್ಕೊಂದು ಚೆಂದ ಅಂಗಿ ಹಾಕಿಕೊಂಡು, ಪುಟ್ಟ ಕೊಡೆ ಹಿಡಿದುಕೊಂಡು ಪೇಟೆಯಲ್ಲಿ ತಿರುಗಾಡಿ ಅಂಗಿ

ಚೆಡ್ಡಿ ಕೊಳ್ಳುತ್ತದೆ, ಪುಸ್ತಕ ಕೊಳ್ಳುತ್ತದೆ, ತಿಂಡಿಯನ್ನ ಕೊಳ್ಳುತ್ತದೆ, ಆಮೇಲೆ ಪುಟಾಣಿ ಗೊಂಬೆ ಖರೀದಿಸಿಕೊಂಡು ವಾಪಸು ಬರುತ್ತದೆ. ವಾಪಸು ಬರುವಾಗ ಗುಬ್ಬಚ್ಚಿಯೊಂದು 'ಪುಟ್ಟ ತಾಯಿಯಾದಳು' ಅಂತ ಹಾಡುತ್ತದೆ. ಹೀಗೆಯೇ ಮಿಠಾಯಿ ಬೊಂಬೆಯೊಂದು ಕಿಟ್ಟನಿಂದ ತಪ್ಪಿಸಿಕೊಂಡು ಹೋಗಿಬಿಡುತ್ತದೆ, ತಿಂಡಿಯೆಂದು ತಂದ ಬೊಂಬೆಯನ್ನ ಗೆಳೆಯನಾಗಿ ಹಚ್ಚಿಕೊಂಡ ಕಿಟ್ಟಿಗೆ ಇದು ದಿಗಿಲು, ಮಿಠಾಯಿ ನಗರಕ್ಕೆ ಹೊರಟು ಹೋಗುವೆ ನಾನು ಅಂತ ಆ ಬೊಂಬೆ ಹೊರಟೇ ಹೊಗುತ್ತದೆ, ಕಿಟ್ಟಿ, ಅಪ್ಪ, ಅಮ್ಮ ಯಾರೂ ಕರೆದರೂ ಅದು ಅವರ ಮಾತನ್ನ ಕೇಳದೆ ಓಡುತ್ತ ಹೋಗಿ ದಾರಿಯಲ್ಲಿ ಅಡ್ಡ ಬಂದ ಹೊಳೆಯಲ್ಲಿ ಹಾರಿ ಕರಗತೊಡಗುತ್ತದೆ, ಮೀನುಗಳಿಗೆ ಆಹಾರವಾಗಿ ಬಿಡುತ್ತದೆ. ಹೀಗೇ ಓಡುವ ರೊಟ್ಟಿಯ ಕತೆಯಿದೆ.

ಪಳಕಳರು ತಾವೇ ರಚಿಸಿದಂತಿರುವ ಹಲವು ಕತೆಗಳಿವೆ. ಅವು ನಮ್ಮ ವಾಸ್ತವ ಪರಿಸರದ ಸಂಗತಿಗಳ ನಡುವೆ ಕಟ್ಟಿದುವು. ರಸ್ತೆಯಲ್ಲಿ ಬಿದ್ದಿದ್ದ ಮಿಠಾಯಿಯನ್ನ ತಿಮ್ಮ ಮತ್ತು ತಿಪ್ಪ ಎನ್ನುವ ಗೆಳೆಯರು ಉಳಿದವರು ಎಷ್ಟು ಹೇಳಿದರೂ ಕೇಳದೆ ಆಸೆಯಿಂದ ತಿಂದುದರ ಪರಿಣಾಮ ಏನೇನೆಲ್ಲ ಆಗಿ ಅಂದಿನಿಂದ ಹಾಗೆಲ್ಲ ದುಡುಕುವುದಿಲ್ಲ ಇನ್ನುಮುಂದೆ ಅಂತ ಪಾಠ ಕಲಿತ ಪ್ರಸಂಗ ಒಂದು. ಬಡ ಹುಡುಗ ಗೋಪು ಪೇಪರು ಮಾರಿ ಗಳಿಸಿ ಶಾಲೆಯ ಓದನ್ನ ಮುಂದುವರೆಸುವುದು ಇನ್ನೊಂದರಲ್ಲಿದೆ. ಗಂಧದ ಕಟ್ಟಿಗೆಗಳನ್ನ ಕದಿಯುವವನನ್ನ ಹಿಡಿದುಕೊಟ್ಟ ಇಬ್ಬರು ಸೋದರರ ಕತೆ ಮತ್ತೊಂದು. ಗಾಯಗೊಂಡ ಅಳಿಲನ್ನ ಮನೆಯಲ್ಲಿ ಸಾಕಿ ಬಿಡಲಾರದೆ ಬಿಟ್ಟು ಅದು ಸಹಜ ಪರಿಸರದಲ್ಲಿ ಒಂದಾಗುವಂತೆ ಮಾಡಿ ಸ್ವಾತಂತ್ರ್ಯದ ಪಾಠ ಅರಿಯುವ ಪುಟ್ಟನ ಕತೆ ಇನ್ನೊಂದು. ಹಿಂದು ಮುಸ್ಲಿಮ್ ಗಲಾಟೆಯಾದಾಗ ಹಿಂದು ಕುಟುಂಬ ಮುಸ್ಲಿಮ್ ಕುಟುಂಬದ ಕಾಳಜಿಯನ್ನ ಮಾಡಿದ ಪ್ರಸಂಗ ನಾವೆಲ್ಲರೊಂದೆ ಎನ್ನುವುದನ್ನ ಹೇಳುವುದಕ್ಕಿದೆ.

ಇಂಥವುಗಳ ನಡುವೆ ಅಪ್ಪನ ಕುಡಿತದಿಂದ ಅಪಮಾನಗೊಂಡ, ಅದಕ್ಕಾಗಿ ಉಪವಾಸ ವ್ರತ ಹಿಡಿದು ಅಪ್ಪನ ಮನಸ್ಸನ್ನ ಬದಲಿಸಲು ಹವಣಿಸುವ ಪ್ರಬುದ್ಧ ಶಮ್ಮಿಯಂಥ ಬಡ ಹುಡುಗಿಯ ಕತೆಯೂ ಕಾಣುತ್ತದೆ. ಹಾಗೆಯೇ ಹೊಸತಾಗಿ ಶಾಲೆಗೆ ಸೇರಿದ, ಜೊತೆಗೇ ರಿಕ್ಷಾದಲ್ಲಿ ಶಾಲೆಗೆ ಬರುವ ಪುಟ್ಟನೊಬ್ಬನಿಗೆ ಎಲ್ಲ ಬಗೆಯಲ್ಲೂ ಸಹಾಯಕ್ಕೆ ನಿಲ್ಲುವ ಪುಟ್ಟಿಯ ಕತೆಯೂ ಬಲು ಸೊಗಸಿನದಾಗಿದೆ. 'ಕಾಡಿನ ಕಣ್ಮಣಿ' ಎನ್ನುವ ಒಂದಿಷ್ಟು ದೀರ್ಘದ ಕತೆಯನ್ನ ಇಂಗ್ಲಿಷಿನಿಂದ ಅನುವಾದಿಸಿರುವುದನ್ನೂ ಇಲ್ಲಿ ಹೇಳಬೇಕು. ನಾಟಕಗಳನ್ನೂ ಅವರು ಬರೆದಿದ್ದಾರೆ, ಜೀವನ ಚರಿತ್ರೆಗಳನ್ನೂ ಅವರು ಬರೆದಿದ್ದಾರೆ, ಮಕ್ಕಳಿಗೆ ಶೈಕ್ಷಣಿಕೋಪಯೋಗಿ ಸಾಮಗ್ರಿಯನ್ನೂ ನೀಡಿದ್ದಾರೆ. 'ಚಂದಮಾಮ'ದಿಂದ ಹಿಡಿದು ಕನ್ನಡದ ಬಹುಶಃ ಎಲ್ಲ ಪತ್ರಿಕೆಗಳಲ್ಲೂ ಅವರ ಕವಿತೆಗಳು ಕತೆಗಳು ಪ್ರಕಟವಾಗುತ್ತ ಬಂದಿವೆ. 'ಯುಗಪುರುಷ ಪ್ರಕಾಶನ ಸಂಸ್ಥೆ' ಅವರ ಆಸರೆಗೆ ಸದಾ ಕೈಚಾಚಿದ್ದ ಹಾಗೆ, ಅವರೂ 'ಶಿಶು ಸಾಹಿತ್ಯ ಮಾಲೆ' ಎನ್ನುವ ತಮ್ಮದೇ ಆದ ಪ್ರಕಾಶನದ ಚಟುವಟಿಕೆ ನಡೆಸಿದ್ದೂ ಇದೆ. ಹಲವಾರು ಪ್ರಶಸ್ತಿ ಪುರಸ್ಕಾರಗಳು, ಗೌರವಗಳು ಅವರನ್ನ ಹುಡುಕಿ ಬಂದಿವೆ. ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ವಿರಳದ ಅವಕಾಶವೂ ಅವರಿಗೆ ದೊರೆತಿದೆ. ಇದೆಲ್ಲ ಅವರಿಗೆ ಸಾಧ್ಯವಾಗಿರುವುದು ಅವರ ಮಕ್ಕಳ ಒಲವಿನ ಬರವಣಿಗೆಯಿಂದ.

ಏನೋ ಪುಟ್ಟಾ ಏನು ಗಲಾಟೆ?
ಎಲ್ಲಿಗೆ ನಿಮ್ಮ ಸವಾರಿ?
ಮಳೆಯಲಿ ಆಡಲು ಹೊರಟಿರುವಂತಿದೆ
ಹೇಳೋ ಯಾರ ಪಿತೂರಿ?
ಗದರಿದ ತಾತನ ಮಾತಿಗೆ ನಮ್ಮಲಿ
ಉತ್ತರಿಸುವ ಜನವಿಲ್ಲ

ಮುಂತಾಗಿ ಅವರ ಕವಿತೆಗಳ ಕೆಲ ಸಾಲುಗಳನ್ನ ಉದಾಹರಿಸಬಹುದು.

ರಸಿಕ ಪುತ್ತಿಗೆ(೧೯೩೨-೧೯೯೩)

ಮತ್ತೊಂದು ದಕ್ಷಿಣ ಕನ್ನಡ ಮೂಲದ ಪ್ರತಿಭಾವಂತ ಹೆಸರು. ಶಿಕ್ಷಕರಾಗಿದ್ದುಕೊಂಡು ಬರೆಯುತ್ತ ಬಂದ ಅವರು ಹೆಚ್ಚು ಸೃಜನಶೀಲ ಗುಣದಿಂದ ಸೆಳೆಯುವಂಥವರು. ಸ್ವಾರಸ್ಯವಾಗಿ ಕತೆ ನಿರೂಪಿಸಬಲ್ಲವರಾಗಿದ್ದ ಅವರು ಮಕ್ಕಳಿಗಾಗಿ ಹಲವು ಕತೆಗಳನ್ನು, ಕಾದಂಬರಿಗಳನ್ನು ಬರೆದರು. ಕವಿತೆಗಳನ್ನೂ ಬರೆದರು. 'ಸಣ್ಣವರ ತುಂಟತನಗಳು' ಸಂಕಲನದಲ್ಲಿ ಇಂಥ ಸ್ವಾರಸ್ಯಕರ ಪ್ರಸಂಗಗಳನ್ನ ನೋಡಬಹುದು. ಕತೆಗಳು, ಪ್ರಸಂಗಗಳು ಸುತ್ತಲಿನ ವಾತಾವರಣದಲ್ಲಿಯೇ, ಸಾಮಾಜಿಕ ಪರಿಸರದಲ್ಲಿಯೇ ಅರಳುವಂತೆ ಸಹಜವಾಗಿ ಕಟ್ಟಿಕೊಟ್ಟವರು ಅವರು. ಹಾಗಾಗಿ ಬರವಣಿಗೆಗೆ ಒಂದು ಬಗೆಯ ಜೀವಂತಿಕೆ ಬಂದಿದೆ. ಬಹುಶ: ಮಕ್ಕಳಿಗೆಂದು ಶಿಕ್ಷಕ ಸಮುದಾಯ ಬರೆಯುತ್ತ ಬಂದ ಗದ್ಯಗಳಲ್ಲಿ ಇಂಥವೇ ಹೆಚ್ಚು ಗಟ್ಟಿಯಾದುವು ಎನಿಸುತ್ತದೆ. 'ಸುಬ್ಬ ಓಡಿಸಿದ ಹಂದಿ' ಪ್ರಸಂಗದಲ್ಲಿ ವೆಂಕಟರಮಣಾಚಾರ್ಯರ ಮಗ ಸುಬ್ಬ ತಮ್ಮ ಹೊಲದಲ್ಲಿನ ಗೆಣಸು ತಿನ್ನಲು ಬರುತ್ತಿದ್ದ ಹಂದಿಗಳನ್ನ ಮತ್ತೆಂದೂ ಬರದಿರುವ ಹಾಗೆ ಮಾಡಲು ಹೋದ ಸಾಹಸ ಬಿಚ್ಚಿಕೊಂಡಿದೆ. ಹಂದಿಗಳು ಎಂದರೆ ಬಿಡಾಡಿ ಹಂದಿಗಳಲ್ಲ ಅವು, ಪಕ್ಕದ ಮನೆಯ ಪೇದ್ರು ಕರ್ಡೋಜಸನ ಮನೆಯವು. ಕ್ರಿಸಮಸ್ ಬಂತೆಂದರೆ ಅವಕ್ಕೆ ಎಲ್ಲಿಲ್ಲದ ಬೇಡಿಕೆ. ಸುಬ್ಬ ಅವುಗಳ ಕಾಟಕ್ಕೆ ಬೇಸತ್ತು ತಾನೇ ಉಪಾಯ ಹೂಡಿ ಬಲವಾದ ಕಲ್ಲು ತಂದು ನೀರು ಹೋಗುವ ತೂಬಿಗೆ ಅಡ್ಡಲಾಗಿ ಇರಿಸಿದ. ಒಳ ಬದಿಯ ಬಾಯಿಯನ್ನು ಗುದ್ದಲಿಯಿಂದ ಅಗಲ ಮಾಡಿದ, ತಡಮೆಯ ಕೆಳ ಬದಿಯಿಂದಲೂ ತೂರಿ ಬಾರದಂತೆ ಹಳೆಯ ಡಬ್ಬ ಕತ್ತರಿಸಿ ಮೊಳಡ ಹೊಡೆದ. ಹೀಗೆ ಅವು ಒಳಗೆ ಬರಲಾರದಂತೆ ತಡೆದುದೇನೋ ಆಯಿತು, ಆದರೆ ಇದುವರೆಗೆ ಅವುಗಳು ಮಾಡಿದ ಹಾನಿ ಸಣ್ಣದಲ್ಲ, ಅದಕ್ಕೆಂದೇ ಅವಕ್ಕೆ ಪಾಠ ಕಲಿಸಲು ನಿಂತ. ಗೇಟು ತೆರೆದು ದೂರ ಸುಮ್ಮನೆ ಕದ್ದು ನಿಂತ. ಹಂದಿಗಳು ಡುರುಕ ಡುರುಕ ಎನ್ನುತ್ತ ರಾಜಾರೋಷವಾಗಿ ಒಳಗೆ ಎಗ್ಗಿಲ್ಲದಂತೆ ನುಗ್ಗಿದವು. 'ಬನ್ನಿ, ಮಕ್ಕಳೆ ಮಾಡುತ್ತೇನೆ' ಎಂದು ಸುಬ್ಬ ಗೇಟು ಹಾಕಿ ಬಂದುಮಾಡಿದ, ಸರಿ ಅವಿನ್ನು ಇವನ ಕೈಗೆ ನೇರ ಸಿಗುವಂತಾಯಿತು. ಚಾವಡಿಯ ಮಾಡಿಗೆ ಸಿಕ್ಕಿಸಿದ್ದ ನಾಗಬೆತ್ತ ತೆಗೆದುಕೊಂಡು ಓಡಿದ. ಅವು ಭಯದಿಂದ ಮನೆ ಕಡೆ ಓಡಿದರೆ ಇವನು ಬೆನ್ನುಬಿಡದೆ ಹಿಂಬಾಲಿಸಿದ, ಅವು ಗೇಟು ಹಾದುದರಿಂದ ತೂಬಿನ ಕಡೆಗೆ ಉಪಾಯವಿಲ್ಲದೆ ನುಗ್ಗಿದವು. ಆದರೆ ಅಲ್ಲೂ ಅವಕ್ಕೆ ಆತಂಕ ಎದುರಾಯಿತು. ಸುಬ್ಬ ಬೆತ್ತ ಎತ್ತಿ ಬಾರಿಸತೊಡಗಿದ, ಸಣ್ಣ ಹಂದಿಗಳೇನೊ ಡ್ರೋಂ ಡ್ರೋಂ ಎಂದು ಚಿಕ್ಕ ಸಂದುಗಳಲ್ಲಿ ತೂರಿಕೊಂಡು ಪಾರಾದವು, ಆದರೆ ದೊಡ್ಡ ಹಂದಿ ತನ್ನ ಬೊಜ್ಜು

ದೇಹ ಹಾಯದೆ ಮೂತಿ ಸಿಕ್ಕಿಸಿಕೊಂಡು ಫಜೀತಿಯಾಯಿತು. ಸುಬ್ಬ ಸಿಕ್ಕ ಸಂದರ್ಭ ಬಿಡದೆ ಚೆನ್ನಾಗಿ ಬಾರಿಸಿಯೇ ಬಾರಿಸಿದ. ಅದರ ಅರಚುವಿಕೆಯನ್ನ ಕೇಳಿ ಪೆದ್ರು ಕರ್ಡೋಜ಼ ಅಲ್ಲಿಂದಲೇ ಕೂಗಿದ. ಸುಬ್ಬ ಈಗ ಹೆದರಿಕೊಂಡ, ಹಂದಿಯ ತೊಂದರೆಯೂ ಅವನನ್ನ ಕಂಗೆಡಿಸಿತ್ತು, ಮಾಡಿದುದೇನೋ ಆಗಿತ್ತು, ಆದರೆ ಪ್ರಸಂಗ ಹೇಗು ಹೇಗೋ ತಿರುಗಿಕೊಂಡಿತ್ತು, ಕೂಡಲೆ ತಪ್ಪಿಸಿಕೊಂಡು ಓಡಿದ. ಪೆದ್ರು ಬಂದು ಹಂದಿಯನ್ನ ಬಚಾವು ಮಾಡಿದ. ಕುಪ್ಪಣ್ಣ ಕಡಿಗೆ(ಹಲಸಿನ ಮಿಡಿಗಾಯಿ) ಕೊಚ್ಚಿದ ಪ್ರಸಂಗ, (ಮುಖ್ಯಪ್ರಾಣಭಟ್ಟರ) ಪಟ್ಟೆ ಹರಿದ ಮಾಣಿಗಳ ಪ್ರಸಂಗ, ಮೇರಿಬಾಯಿಯ ಸ್ನಾನದ ಹಂಡೆಗೆ ತಿಮ್ಮಣ್ಣ ತುರಿಕೆ ಕಾಯಿ ಹಾಕಿದ ಪ್ರಸಂಗ, ಲಚ್ಚ ತನ್ನ ಹನುಮನ ಬಾಲದಿಂದ ಅಂತೋಣಿ ಲೋಬೋವಿನ ಕುವ್ಮರಿಗೆ ಬೆಂಕಿ ಇಟ್ಟ ಪ್ರಸಂಗ, ಶ್ವಾನವಧೆ ಮಾಡಿದ ಶ್ರೀನಿವಾಸನ ಪ್ರಸಂಗ ಹೀಗೆ ನಾನಾ ಬಗೆಯ ಅನುಭವದ ಹಿನ್ನೆಲೆಯ ಸ್ವಾರಸ್ಯದ ಪ್ರಸಂಗಗಳನ್ನ ಅಷ್ಟೇ ಸ್ವಾರಸ್ಯವಾಗಿ ಮುಂದಿಟ್ಟಿರುವುದನ್ನು ನೋಡುತ್ತೇವೆ. ಅವರ ನಿರೂಪಣೆಯೇ ಖುಷಿ ಕೊಡುತ್ತದೆ. ಸುಮ್ಮನೆ ಉದಾಹರಣೆಗೆ ಒಂದಿಷ್ಟು ಸಾಲುಗಳನ್ನ ನೋಡಬಹುದು:

'ಅಂತೂ ನಮಗೆ ಬುದ್ಧಿ ತಿಳಿದಾಗ ಮೇರಿಬಾಯಿ ಪ್ರೌಢ ಜವ್ವನೆ. ನಡೆದರೆ ನೆಲ ನಡುಗುವ ಮೈಕಟ್ಟು; ಮಾತಾಡಿದರೆ ಸಿಂಹನಾದ. ಯಾವ ಹೊತ್ತಿಗೆ ಬಂದು ಕರೆದರೂ ಲಾಟೀನು ಹಿಡಿದುಕೊಂಡು, ಗೆಜ್ಜೆ ಕತ್ತಿ ಸೊಂಟಕ್ಕೆ ಸಿಕ್ಕಿಸಿಕೊಂಡು ಯಾವ ಊರಿಗಾದರೂ ಹೋಗುತ್ತಿದ್ದಳು. ಯಾವ ಭೂತ, ದೆವ್ವಗಳೂ ಅವಳಿಗೆ ಇದಿರಿಲ್ಲ. ಅವಳ ಉಡಿಗೆ ಸಾದಾ ಆದರೂ ಹತ್ತಿರ ಬಂದರೆ 'ಘಮ ಘಮ' ಸುವಾಸನೆ ಬರುತ್ತಿತ್ತು. ಅವಳು 'ಲೌಂಡರ್'(ಲ್ಯಾವೆಂಡರ್) ಸಾಬೂನು ಹಾಕಿ ಸ್ನಾನ ಮಾಡುತ್ತಿದ್ದಳೆಂದು ನಮ್ಮಮ್ಮ ಹೇಳುತ್ತಿದ್ದರು.'

ಮಕ್ಕಳಿಗಾಗಿ ಸಾಹಸಮಯ, ಪತ್ತೇದಾರಿ ಕಾದಂಬರಿ ಬರೆಯುವಾಗಲೂ ಅವರು ಬರವಣಿಗೆಯನ್ನ ಸೊಗಸಾಗಿ ಮುಂದಿಟ್ಟವರು. 'ಮಾರುತಿ ಶಾಲೆ ಹುಡುಗರು' ಮೂರ್ತಿ ಚೋರರನ್ನು ಹಿಡಿಯುವಲ್ಲಿ ಮಕ್ಕಳು ವಹಿಸಿದ ಪಾತ್ರವನ್ನ ರೋಚಕವಾಗಿ ಕಟ್ಟಿಕೊಡುವ ಕಾದಂಬರಿ ಇದಕ್ಕೆ ಸಾಕ್ಷಿ. 'ಕೆಂಪು ಕಾರು' ಎನ್ನುವ ಕಾದಂಬರಿಯೂ ಈ ಬಗೆಯದೇ. ಕತೆಗಳನ್ನೂ ಹಲವು ಅವರು ಬರೆದಿದ್ದಾರೆ. ಅಲ್ಲೆಲ್ಲ ಸ್ವಾರಸ್ಯದ ನಿರೂಪಣೆ ಖಂಡಿತ ಸೆಳೆಯುತ್ತದೆ. 'ಅಮ್ಮನ ಸೈಕಲ್ ಸವಾರಿ' ಸಂಕಲನ ಹೀಗೆಯೇ ಹಾಸ್ಯ, ಮುದ ನೀಡುವ ಪದ್ಯಗಳ ಸಂಕಲನ. ಜೀವನ ಚರಿತ್ರೆಗಳನ್ನೂ ಹಲವು ಇವರು ಬರೆದಿದ್ದಾರೆ.

ಆನೆ ಬಂದಿತ್ತು ಅಣ್ಣಾ ಆನೆ ಬಂದಿತ್ತು
ಹಬ್ಬದ ದಿನವೇ, ಸುಬ್ಬನ ಮನೆಗೊಂದಾನೆ ಬಂದಿತ್ತು
ಮಿಠಾಯಿ ಮಾಮನ, ಪುಟಾಣಿ ಗುಡಿಗೊಂದಾನೆ ಬಂದಿತ್ತು

ಅಮ್ಮನು ಕೊಟ್ಟ ತೆಂಗಿನ ಕಾಯಿ ಗೊಳಕ್ ನುಂಗಿತ್ತು
ಅಪ್ಪನು ಕೊಟ್ಟ ಬೆಲ್ಲದ ಉಂಡೆ ಗುಳುಮ್ ಆಗಿತ್ತು
ಹಣ್ಣು ಕೊಟ್ಟರೆ ಸಿಪ್ಪೆ ಸುಲಿಯದೆ
ಒಳಕ್ಕೆ ಹೋಗಿತ್ತು, ಹೊಟ್ಟೆಯ ಒಳಕ್ಕೆ ಹೋಗಿತ್ತು

ಎನ್ನುವ ಅತ್ಯಂತ ಪ್ರಚುರವಾದ, ಮಕ್ಕಳಿಗೆಲ್ಲ ಅಚ್ಚುಮೆಚ್ಚಾಗುವ ಪದ್ಯ ಬರದವರು, ಕನ್ನಡದ ಕೈಂಕರ್ಯವನ್ನು ಹಾಡಿನ ಮೂಲಕ ಎಲ್ಲೆಡೆಯಲ್ಲಿ ಮಾಡುತ್ತ ಬಂದ ಪಂಜಿಗುಡ್ಡೆಯ **ಬೆಂಡರವಾಡಿ ಸುಬ್ರಹ್ಮಣ್ಯ** ಅವರು. ಹದಿನೈದು ಸಾವಿರಕ್ಕೂ ಇಂಥ ಕಾರ್ಯಕ್ರಮಗಳನ್ನು ಅವರು ನಾಡಿನಾದ್ಯಂತ ಸುತ್ತಾಡುತ್ತ ಮಾಡಿದ್ದಾರಂತೆ. ಈ ಸುಬ್ಬಜ್ಜನವರಿಗೆ ಅನೇಕ ಸನ್ಮಾನಗಳು ಅರಸಿಬಂದುದು ಅಚ್ಚರಿಯಲ್ಲ. ಇಪ್ಪತ್ತಾರು ಮಕ್ಕಳ ಪುಸ್ತಕಗಳನ್ನ ಬರೆದಿರುವ ಅವರು ಮಕ್ಕಳಿಗೆ ಪ್ರೀತಿಯಾಗುವ, ಅವರ ಬಾಯಿಗೆ ಸುಲಭವಾಗಿ ದಕ್ಕುವ ಸಾಕಷ್ಟು ರಚನೆಗಳನ್ನ ಮಾಡಿದ್ದಾರೆ. ಸುಬ್ಬಣ್ಣನವರ ಪದ್ಯಗಳಲ್ಲಿ ಹಾಸ್ಯ, ಕಚಕುಳಿ ಇಡುವ ಹಾಸ್ಯ ತುಂಬಿ ತುಳುಕಾಡುತ್ತದೆ.

ಕೋಣೆ ಮೇಲೊಂದ್ ಕುಡುಗೋಲಿಟ್ಟು;
ಕುಡುಗೋಲ್ ಮೇಲೆ ಬೆಲ್ಲ ಇಟ್ಟು;
ಬೆಲ್ಲದ ಮೇಲೊಂದ್ ಇರುವೆ ಬಿಟ್ಟು;
ಇರುವೆ ಬೆಲ್ಲ ತಿನ್ನೋ ತನಕ;
ನನಗೂ ನಿನಗೂ ಟೂ–ಟೂ–ಟೂ!!

ಇಂಥ ಹಳ್ಳಿಗಾಡಿನಲ್ಲಿರುವ ರಚನೆಗಳ, ಆಟದ ಹಾಡುಗಳ ಬನಿಯನ್ನ ಹಿಡಿದು ಸೊಗಸಿನ ಪದ್ಯಗಳನ್ನ ಅವರು ರಚಿಸಿದ್ದಾರೆ.

ಕಪ್ಪೆ ಕಪ್ಪೆ ಕಾಸು ಕೊಡ್ತೀನಿ
ನೀರು ಕೊಡ್ತೀಯಾ; ನಂಗೆ ಕೊಡ್ತೀಯಾ
ಬೆಕ್ಕೆ ಬೆಕ್ಕೆ ಹಾಲು ಕೊಡ್ತೀನಿ
ಇಲಿ ಹಿಡಿತೀಯಾ; ನೀನು ಮ್ಯಾಂವ್ ಅಂತೀಯಾ
ಅಂಬೆ ಅಂಬೆ ಹುಲ್ಲನ್ನು ಕೊಡುವೆ
ಹಾಲು ಕೊಡ್ತೀಯಾ; ನಂಗೆ ಹಾಲು ಕೊಡ್ತೀಯಾ

ಅಂತ ಸರಸರನೆ ಸಾಗುವ ಸಾಲುಗಳಲ್ಲಿ ನಾದಮಯತೆ ತುಂಬಿಕೊಂಡಿದೆ:

ಪುಟ್ಟ ಪುಟ್ಟ ಗೊಂಬೆ ಪುಟಾಣಿ ಗೊಂಬೆ
ಫಟ್ಟದಿಂದ ಕಿಟ್ಟು ಮಾವ ತಂದುಕೊಟ್ಟ ಗೊಂಬೆ

ಕೀಲಿ ಕೊಟ್ಟು ದೂರನಿಲ್ಲು ಮೆಲ್ಲ ಮೆಲ್ಲ ಬರುವುದು
ಕೈಗಳಿಂದ ತಾಳತಟ್ಟಿ ಥಕ್ಕ ಥೈಯ್ಯ ಕುಣಿವುದು
ನನ್ನ ಹಾಗೆ ಕೈಯ್ಯಿ ಕಾಲು ಕಣ್ಣು ಮೂಗು ಉಂಟು
ಕೆಂಪು ನೀಲಿ ಚಡ್ಡಿ ನನಗು ಅದಕು ಉಂಟು

ಅಂಥ ಮುಗ್ಧತೆಯ ಸಾಲುಗಳಾಗಲಿ, ಸುಲಭವಾಗಿ ಹಾಡುವ ಗೇಯತೆಯಾಗಲಿ ಅವರ ಪದ್ಯಗಳ ವೈಶಿಷ್ಟ್ಯತೆ.

ಹೀಗೆ ಅನೇಕ ಶಿಕ್ಷಕ ಲೇಖಕರು ಮುಂಚೂಣಿಯಲ್ಲಿ ನಿಂತು ಮಕ್ಕಳ ಸಾಹಿತ್ಯವನ್ನು ಇನ್ನಿಲ್ಲದ ಅಕ್ಕರೆಯಿಂದ ಬೆಳೆಸಿದ್ದಾರೆ. ಹಾಗೆಯೇ ಇನ್ನುಳಿದವರು ಅಭಿಲಾಷೆಯಿಂದ ತೊಡಗಿಕೊಂಡಿದ್ದಾರೆ. ಉದ್ಯಾವರ ಮಾಧವ ಆಚಾರ್ಯ, ಅಮ್ಮೆಂಬಳ ಅನಂತ ನಾವಡ,

ಎಚ್. ಶ್ರೀಧರ ಹಂದೆ, ಸೊಂಡೂರು ತಿರುಮಲೇಶ ಭಟ್ಟ, ಗೋವಿಂದ ಭಟ್ಟ ಮೂಡಬಿದರೆ, ಟಿ.ಕೆ.ಜಿ. ಭಟ್ಟ ಸಂಪಾಜೆ, ಪಿ. ಎಸ್. ಗಣಪಯ್ಯ, ಬಿ. ವಾಸುದೇವ ವರ್ಣ, ವಿ. ಮ. ಭಟ್ಟ, ಸವಿತಾ ಎಸ್. ಭಟ್ಟ, ಅಡ್ವಾಯಿ ಮುಂತಾಗಿ ಬಹುದೊಡ್ಡ ಸಂಖ್ಯೆಯಲ್ಲಿ ಲೇಖಕರು ಅಲ್ಲಿ ಕಾಣಸಿಗುತ್ತಾರೆ. ಈಚಿನ ವಿಜಯಶ್ರೀ ಹಾಲಾಡಿ ಅವರ ವರೆಗೆ ಮಕ್ಕಳ ಸಾಹಿತ್ಯದ ಪ್ರೀತಿ ದೊಡ್ಡ ಪ್ರಮಾಣದಲ್ಲಿ ಶಿಕ್ಷಕರೊಂದಿಗೆ ಇತರರನ್ನೂ ಆಗಾಗ ಸೆಳೆಯುತ್ತ ಹರಿಯುತ್ತಲೇ ಬಂದಿದೆ.

ಧಾರವಾಡ, ಬೆಳಗಾವಿ ಭಾಗದ ಲೇಖಕರು

– ಸಂಗಮೇಶ ಗುಜಗೊಂಡ

ಧಾರವಾಡದ ಸುತ್ತಮುತ್ತ ಮತ್ತು ಈಗಿನ ಹಾವೇರಿ ಜಿಲ್ಲೆ, ರಾಣೆಬೆನ್ನೂರು ಮುಂತಾದ ಕಡೆಗಳ ಭಾಗದಲ್ಲಿ ಶಿಕ್ಷಕ ಸಮುದಾಯ ತೊಡಗಿಕೊಳ್ಳುವುದರ ಜೊತೆಗೆ ಇತರರೂ ಭಾಗವಹಿಸಿದುದು ಎದ್ದುಕಾಣುತ್ತದೆ. ವಿಜಯಪುರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನಂತೆ ಶಿಕ್ಷಕ ಸಮುದಾಯ ಈ ಭಾಗದಲ್ಲಿ ಅಷ್ಟು ವಿಶೇಷವಾಗಿ ಕಾಣುವುದಿಲ್ಲ.

ಧಾರವಾಡದಲ್ಲಿದ್ದುಕೊಂಡು, (ಮೊದಲು ಶಿಕ್ಷಕರಾಗಿದ್ದು) ವಿಶ್ವವಿದ್ಯಾಲಯದಲ್ಲಿ ಆಡಳಿತದ ಹುದ್ದೆಗಳಲ್ಲಿದ್ದುಕೊಂಡು ಇತರ ಬರವಣಿಗೆಯೊಂದಿಗೆ ಮಕ್ಕಳ ಸಾಹಿತ್ಯದಲ್ಲೂ ವಿಶೇಷದ ಆಸಕ್ತಿಯಿಂದ ತೊಡಗಿಕೊಂಡವರು **ಈಶ್ವರ ಕಮ್ಮಾರ(೧೯೩೩)** ಅವರು. ಅವರು ತಾವು ಸ್ವತಃ ಬರೆಯುವುದಲ್ಲದೆ ಸಂಘಟನೆ, ಮಕ್ಕಳಿಗಾಗಿ ಪತ್ರಿಕೆ ನಡೆಸುವುದರಲ್ಲೂ ಒಳ್ಳೆ ಆಸಕ್ತಿಯನ್ನ ತೋರಿದರು. ಧಾರವಾಡ ಭಾಗದಲ್ಲಿ ಹೀಗೆ ಮುಂದೆ ನಿಂತುಕೊಂಡು ಐವತ್ತು ವರುಷಗಳಷ್ಟು ದೀರ್ಘ ಅವಧಿಯಲ್ಲಿ ಮಕ್ಕಳ ಸಾಹಿತ್ಯದ ಕೆಲಸವನ್ನು ವಹಿಸಿಕೊಂಡವರು ಬಹುಶ: ಅವರೊಬ್ಬರೇ. 'ಮಕ್ಕಳ ಮನೆ' ಎನ್ನುವ ಸಂಸ್ಥೆಯನ್ನು ತಮ್ಮ ಮನೆಯಲ್ಲಿ ಹುಟ್ಟು ಹಾಕಿಕೊಂಡು ಕಾರ್ಯಾಗಾರಗಳು, ಮಕ್ಕಳ ಸಮ್ಮೇಳನಗಳನ್ನು ನಡೆಸಿಕೊಂಡು ಬಂದರು. ತಮ್ಮ 'ಮಕ್ಕಳ ಲೋಕ' ಕೃತಿಗೆ ಸಾಹಿತ್ಯ ಅಕಾಡೆಮಿ ಪುರಸ್ಕಾರವನ್ನು ಹಾಗೆಯೇ ರಾಷ್ಟ್ರೀಯ ಪುರಸ್ಕಾರವನ್ನೂ ಪಡೆದರು. 'ಪಾಪಾ', 'ಮಕ್ಕಳ ಲೋಕ', ಎಡತಾಕ ಪಟ್ಟಿ', 'ಕೊಟ್ಟಿಗೆಯೊಳಗಿನ ಕೋಣಪ್ಪ' ಎನ್ನುವ ನಾಲ್ಕು ಪದ್ಯಸಂಕಲನಗಳನ್ನು, ಮಕ್ಕಳಿಗಾಗಿ ಕಾದದಂಬರಿಗಳನ್ನೂ ರಚಿಸಿದ್ದಾರೆ. ಅವರ ರಚನೆಗಳಲ್ಲಿ ಎದ್ದುಕಾಣುವ ಸಂಗತಿ ಎಂದರೆ ಆಡುಭಾಷೆ ಮತ್ತು ಗ್ರಾಮೀಣ ಪರಿಸರದ ದಟ್ಟ ಪ್ರಭಾವ. ಉತ್ತರ ಕರ್ನಾಟಕ ಭಾಗದಲ್ಲಿ ಇವರಷ್ಟು ಗ್ರಾಮೀಣದ ಆಡು ಭಾಷೆಯ ಬಳಕೆಯನ್ನ ತಂದುಕೊಂಡವರು ಕಡಿಮೆ. ಬಹುಶ: ಧಾರವಾಡದ ಸಾಹಿತ್ಯಕ ಪರಿಸರ, ಬೇಂದ್ರೆ ವಾತಾವರಣವೂ ಇದಕ್ಕೆ ಕಾರಣವಾಗಿರಬಹುದು. ಸಿಸು ಸಂಗಮೇಶರು ಬಳಸಿಕೊಳ್ಳಲು ನೋಡಿದ ಸ್ಟ್ಯಾಂಡರ್ಡ್ ಭಾಷೆ ಇವರಲ್ಲಿ ಕಾಣುವುದಕ್ಕಿಂತ ಈ ಆಡುಭಾಷೆಯ ದನಿಯೇ ಎದ್ದುಕಾಣುತ್ತದೆ. ವೃತ್ತಿಯಲ್ಲಿ ಶಿಕ್ಷಕರಾಗಿರದಿದ್ದರೂ ಮಕ್ಕಳ ಸಾಹಿತ್ಯದ ಕೆಲಸದಲ್ಲಿ ತೊಡಗಿಕೊಂಡಮೇಲೆ ಆ ಸಮಯದ ಉತ್ತರ ಕರ್ನಾಟಕದ ಶಿಕ್ಷಕ ಸಾಹಿತಿಗಳ ಸಾಹಚರ್ಯ ಇವರಿಗೆ ವಿಶೇಷವಾಗಿಯೇ ಇತ್ತು ಎಂಬುದನ್ನ ಗಮನಿಸಬಹುದು.

ದಟ್ಟೀ ದಟ್ಟೀ ದಡಸಾಲಿ
ತಮ್ಮನ ಕಾಲಾಣ್ ಹರಿಗೆಜ್ಜಿ
ಕುಂಕುಮ ಹೆಜ್ಜಿ ಇಡತಾನ
ಹೆಜ್ಜ್ಯಾಗ ಹೂವ ಇರಿಸ್ಯಾನ
. . . .
ಹತ್ತಂಬಳ್ಳಿ ಹರಗಿ ಬಡ್ಡಿ
ನಾಯಿಗೆ ನುಚ್ಚ ಹಾಕವರಿಲ್ಲ
ಬೆಕ್ಕಿಗೆ ಹಾಲ ಹನಿಸವರಿಲ್ಲ
ಮುಗಿಲಿನ ಚಿಕ್ಕಿ ಎಣಿಸವರಿಲ್ಲ
ಗುಳುಂ ಗುಪ್ . . . ಗುಳುಂ ಗುಪ್
. . . .
ಕೊಕ್ಕಾಬತ್ತಿ, ಕ್ವಾಡಾಬತ್ತಿ
ಊರಿಗೆಲ್ಲ ಒಂದೇ ಬತ್ತಿ
ಓಡಲೆ ಬತ್ತಿ

ಮುಂತಾಗಿ ನೇರ ಗ್ರಾಮೀಣ ಹಾಗೂ ಮಕ್ಕಳ ಬಳಕೆಯಲ್ಲಿದ್ದ ರಚನೆಗಳನ್ನು ಅನುಸರಿಸಿಯೇ ಹಲವೆಲ್ಲ ಪದ್ಯಗಳ ರಚನೆಗೆ ಇಳಿಯುವುದನ್ನ ನೋಡುತ್ತೇವೆ.

ಬಂದಾರ ಬಾಯಿಲ್ಲಿ ನೀನೆನ್ನ ಗುಬ್ಬಿ
ಕಿವಿಯಲ್ಲಿ ಹೇಳುವೆನು ನಿನಗೊಂದು ಸುದ್ದಿ
ಮುಚಿಕೊಂಡು ತಂದಿರುವೆ ಬಿಸಿಬಿಸಿ ದೋಸಿ
ಅದರಲ್ಲಿ ಹಚ್ಚಿರುವೆ ಸಿಹಿಸಿಹಿ ಭಾಜಿ

ಆವಾರದೊಳಗಿಲ್ಲ ಮತ್ತಾರು ಮಂದಿ
ಬಂದಿಹುದು ನಮಗಿಂದು ಒಳ್ಳೆಯ ಸಂಧಿ
ಪೇರಲ ಗೊನೆತುಂಬಿ ಬಾಗ್ಯಾವ ಬೆನ್ನು
ಒಂದಲ್ಲ ನೂರಾರು ಆಗ್ಯಾವ ಹಣ್ಣು

ಎಂದು ಗುಬ್ಬಿಯನ್ನು ಕರೆಯುವ ಬಗೆ ಆ ಸಮಯದಲ್ಲಿ ನಮ್ಮ ಮಕ್ಕಳ ಕವಿಗಳು ಗುಬ್ಬಿಯನ್ನ ಕರೆದ ಬಗೆಯಲ್ಲಿಯೇ ವಿಶೇಷವಾಗಿದೆ.

ಸಂಗಾ ನಿಂಗರು ತಂಪಿನ ನೆಲದೊಳು
ಪಯಸೆಯನೊಂದನು ಹೂಳಿದರು
ಸಾಯಂಕಾಲದಿ ಸರತಿಯಲೊಬ್ಬರು
ತಪ್ಪದೆ ನೀರನು ಹನಿಸಿದರು

ಎನ್ನುವಂಥ ಮಕ್ಕಳ ನಡುವಿನ ಆ ಸಮಯದ ಸಾಮಾನ್ಯವಾಗಿ ಕಾಣುತ್ತಿದ್ದ ವಸ್ತುಗಳು ಕಮ್ಮಾರ ಅವರ ರಚನೆಗಳಲ್ಲಿ ಸಾಕಷ್ಟು ಕಂಡು ಬರುವುದರೊಂದಿಗೆ ಅವರು ಈ ರಚನೆಗಳನ್ನು ಪ್ರಬುದ್ಧ ಅನುಭವದ ದಡಕ್ಕೆ ತಂದು ಹಚ್ಚುವಲ್ಲಿಯೇ ತೃಪ್ತಿ ತಳೆಯುವುದು ವಿಶೇಷವಾಗಿ

ಕಾಣುತ್ತದೆ. ಆದರ್ಶಗಳು, ನೀತಿಗಳು ಮುಂತಾದುವೆಲ್ಲ ಹಿನ್ನೆಲೆಯಲ್ಲಿ ವಿರಾಜಮಾನವಾಗಿ ಇದ್ದೇ ಇದ್ದವು. 'ನನ್ನ ಸಾಲೆ' ಎನ್ನುವ ಕವಿತೆಯಲ್ಲಿ ವಸ್ತುವನ್ನು ಹರವಿಕೊಳ್ಳುವುದು ಗಮನ ಸೆಳೆಯುತ್ತದೆ . . .

> ಗೌಡ ಕುಲಕರ್ಣಿಯರು, ಶೆಟ್ಟಿ ಸಾವ್‌ಕಾರಗಳು
> ಊರ ಹಿರಿಯರು ಎಲ್ಲ ಕೂಡಿ ಕುಳಿತು
> ಕಿವಿಯ ಹಿಂಡಿಸಿಕೊಂಡು, ಕೈಯ ಚಿಣಿಯ ತಿಂದು
> ಇಲ್ಲಿ ಕಲಿತಿಹರಂತೆ ಹೇಳುತಿಹರು

ಹೀಗೆ ಕವಿತೆ ಖಾಸಾ ವಾತಾವರಣದಲ್ಲಿಯೇ ಅರಳುತ್ತ ಮುಗಿಯುವುದು 'ಜನುಮದುದ್ದಕು ಮನುಜ ಮಗುವು ಆಗಿಯೇ ಇರಲು ಯಾವ ಜನ್ಮದ ಪುಣ್ಯ ಪಡೆಯಬೇಕು?' ಎಂಬ ಭಾವದೊಂದಿಗೆ. 'ಸವಿನಯ ಪ್ರಾರ್ಥನೆ' ಎನ್ನುವ ರಚನೆಯಲ್ಲಿ ಅವರು 'ನೀವೆಂದಾದರು ನಾಡಿನ ಮಕ್ಕಳ ಏಳ್ಗೆಯ ಚಿಂತನೆ ಮಾಡುವಿರೊ . . . ನಮ್ಮಯ ಪ್ರಾರ್ಥನೆಯನ್ನಾಲಿಸುತ ಅಂತಃಕರಣೆಯ ತೋರುತಲಿ ಮಕ್ಕಳ ಲೋಕವನುದ್ಧರಿಸಲಿಕೆ ನಿರ್ಧರಿಸಿರಿ ಈ ನಿಮಿಷದಲಿ' ಎಂದು ಹೇಳುವ ಹಾಗೆ ಮಕ್ಕಳ ನೈತಿಕ, ಭವ್ಯ ಬದುಕಿಗೆ ಆಸರೆಯಗುವ ಉದ್ದೇಶವನ್ನೇ ಹಿರಿದಾಗಿ ತಮ್ಮ ರಚನೆಯ ಹಿಂದೆ ಹೊಂದಿದವರು ಕಮ್ಮಾರ ಅವರು. ಸೂರ್ಯ ಚಂದ್ರರ ಆಟವನ್ನು ಕಬಡ್ಡಿ ಆಟವೆಂದು ಭಾವಿಸುವಲ್ಲಿ, 'ಕುಂಡಿಯ ಮ್ಯಾಲ ಚಕಚಕನೆ ಹೊಡೆದು ಬಾಸುಂಡಿ ಎಬ್ಬಿಸಲೇನ?' ಎಂದು ಮಗುವಿನ ಪ್ರೀತಿಯನ್ನ ಉತ್ಕಟವಾಗಿ ಅಭಿವ್ಯಕ್ತಿಸುವಲ್ಲಿ, ಗ್ರಾಮೀಣ ಬನಿಯನ್ನ ಸಖತ್ತಾಗಿ ತೋರುವ ಕಮ್ಮಾರರು ಆಯ್ದುಕೊಳ್ಳುವ ವಿಷಯಗಳೇ ಆ ದೃಷ್ಟಿಯಿಂದ ಗಮನ ಸೆಳೆಯುತ್ತವೆ. ಒಟ್ಟಾರೆಯಾಗಿ ನೋಡುವಾಗ ಅವರು ಪ್ರಬುದ್ಧರಿಗಾಗಿ ತೊಡಗುವ ರಚನೆಗಳಿಗೂ ಮಕ್ಕಳಿಗಾಗಿ ತೊಡಗುವ ರಚನೆಗಳಿಗೂ ಅಂತರ ಎದ್ದುಕಾಣದಂತೆ ಅವರ ಅನುಭವ, ಆಕಾಂಕ್ಷೆಗಳು, ಅಭಿಲಾಷೆಗಳು ಹರವಿಕೊಳ್ಳುವುದನ್ನು ನೋಡುತ್ತೇವೆ. ಅವರ ಗದ್ಯ ರಚನೆಗಳಲ್ಲೂ ಈ ಬಗೆಯ ಮಾನಸಿಕತೆಯೇ ಹಿನ್ನೆಲೆಗೆ ನಿಂತುಕೊಳ್ಳುವುದನ್ನ ನೋಡುತ್ತೇವೆ.

'ನಿರೂಪಣೆ ಹಾಗೂ ಶೈಲಿ ತಂತ್ರಗಳಲ್ಲಿಯೂ ಸ್ವಲ್ಪ ಗಡುಚಾದ ಮತ್ತು ನಾವೀನ್ಯತೆಯು ಕಂಡುಬರುವದರಿಂದ ಗ್ರಾಮಾಂತರ ಪ್ರದೇಶದ ಬಹುಸಂಖ್ಯಾತ ಮಕ್ಕಳಿಗೆ ಇವು ಉಕ್ಕಿನ ಕಡಲೆಗಳಾದಾವು ಎಂಬ ಸಂಶಯ ಬರುತ್ತದೆ. ಹೀಗೆಂದ ಮಾತ್ರಕ್ಕೆ ಅವರ ಮಕ್ಕಳ ಕವನಗಳ ಬಗ್ಗೆ ಟೀಕೆಯೆಂದು ಅರ್ಥವಲ್ಲ. ಆದರೆ ಅಮೂಲ್ಯ ನಿರೂಪಣೆಯಲ್ಲಿ ಇನ್ನೂ ಸರಲತೆಯನ್ನು ತಂದರೆ ಮಕ್ಕಳಿಗೆ ಈ ಕವನಗಳು ಅಮೂಲ್ಯ ರತ್ನಗಳಾವುದರಲ್ಲಿ ಸಂದೇಹವಿಲ್ಲ. . . . ಮಕ್ಕಳಿಗೆ ಏನಾದರೂ ಹೇಳಬೇಕಾದಲ್ಲಿ ನೇರವಾಗಿ ಸ್ಪಷ್ಟವಾಗಿ ಯಾವ ಗೊಂದಲವಿಲ್ಲದೆ, ಸುತ್ತು ಸುಳಿದಾಡದೆ ಅವರ ಮನಸ್ಸಿಗೆ ಮುಟ್ಟುವಂತೆ ತಟ್ಟುವಂತೆ ವಿವರಿಸಿದರೆ ಅದು ಅವರಲ್ಲಿ ಮನದಲ್ಲಿ ಉಳಿದುಬಿಡುತ್ತದೆ.' ಎಂದು ಎಚ್. ಎಸ್. ವೆಂಕಟೇಶಮೂರ್ತಿಯವರು ಅವರ 'ಹಕ್ಕಿ ಸಾಲು' ಸಂಕಲನದಲ್ಲಿನ ಪದ್ಯಗಳ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯ ನೋಡಿದರೆ ಅವರು ಒಪ್ಪಿಕೊಂಡ, ಒಪ್ಪಿಕೊಳ್ಳಲಾಗದ ಸಂಗತಿಗಳ ಬಗೆಗೆ ಹೆಚ್ಚು ಸ್ಪಷ್ಟವಾಗುತ್ತದೆ.

ಅನೇಕ ಸಲ ತಾವು ಹೇಳಬೇಕೆಂದುದೆಲ್ಲವನ್ನು ಮಕ್ಕಳ ಮುಂದೆ ಇರಿಸುವ ಮಾನಸಿಕತೆ ಈ ಹಂತದ ಮಕ್ಕಳ ಕಾವ್ಯದಲ್ಲಿ ಕಾಣುತ್ತದೆ ಎಂದರೆ ತಪ್ಪಿಲ್ಲ. ಹಾಗಾಗಿ ಬಾಲ್ಯದಾಚೆಗೆ ನಿಲ್ಲುವುದೇ ನಡೆದುಬಿಡುತ್ತದೆ. ಅಂಥ ಅನೇಕ ವಿಷಯಗಳು ಕಮ್ಮಾರ ಅವರ ಕವಿತೆಗಳ

ವಸ್ತುಗಳಾಗಿವೆ. 'ತಿಪ್ಪ ಮಾಡಿದ ತಪಸ್ಸು' ಎನ್ನುವ ಅವರ ಕಾದಂಬರಿ ಗ್ರಾಮೀಣ ಹುಡುಗನೊಬ್ಬನ ಹಲವಾರು ಅನುಭವಗಳನ್ನು ಕುತೂಹಲದಲ್ಲಿ ನಿರೂಪಿಸಿದೆ.

ಧಾರವಾಡ ಭಾಗದಲ್ಲಿ **ಎಂ. ಡಿ. ಗೋಗೇರಿ(೧೯೪೨)** ಅವರು ಹಾಸ್ಯ ಪ್ರವೃತ್ತಿ, ಲಲಿತ ಬರಹಗಳಿಂದ ಮತ್ತು ರಸಿಕತೆಯ ಸೊಗಸಿನ ಮಾತುಗಾರಿಕೆಯಿಂದ ಹೆಚ್ಚು ಜನಪ್ರಿಯರಾದವರು. ಶಿಕ್ಷಕರಾಗಿ ಮಕ್ಕಳ ಸಾಹಿತ್ಯದಲ್ಲೂ ಅಷ್ಟೇ ಆಸಕ್ತಿಯಿಂದ ತೊಡಗಿಕೊಂಡವರು. ಕಲಿಕೆಯ ಹಲವೆಲ್ಲ ಪಾಠಗಳು ಇವರ ಕವಿತೆಗಳ ವಸ್ತುವಾಗಿದ್ದುದು ಸಹಜವಾಗಿಯೇ ಇದೆ. ನವೋದಯದ ಗ್ರಾಂಥಿಕದ ಶಿಷ್ಟ ಭಾಷಾ ಬಗೆಯನ್ನೇ ತಮ್ಮ ಈ ರಚನೆಗಳಿಗೆ ಬಳಸಿಕೊಂಡ ಗೋಗೇರಿ ಅವರು ಅಂಥದರ ನಡುವೆಯೂ ತೂರಿಕೊಂಡು ತಮ್ಮತನವನ್ನ, ಖಾಸಾ ಬಗೆಯನ್ನ ವ್ಯಕ್ತ ಪಡಿಸುವುದನ್ನು ನೋಡುತ್ತೇವೆ.

ಲುಟು ಲುಟನೆ ನಡೆಯುತ್ತ ಪಟಪಟನೆ ಬೀಳುತ್ತಾ
ಕಟ್ಟೆ ಮೇಲೆಡೆ ಹತ್ತಿ ನಿಲ್ಲುತಿಹನು
ಡ್ಯೂಟಿ ಮಾಡಲು ಹೊರಟ ಅಪ್ಪನಿಗೆ ಕೈ ಬೀಸಿ
ಟಾಟಾ ಹೇಳುತ ನಗುವ ಚೆಲ್ಲುತಿಹನು
. . . . . .
ಸಂಜೆ ಏಳಾದೊಡನೆ ಸಜ್ಜಾಗಿ ಕೂಡುವೆನು
ಪಾಟಿ ಪುಸ್ತಕ ಹಿಡಿದು ಓದಿಕೊಳಲು
ಅಂಜಿ ಮಾಡಲೇಬೇಕು ಕೊಟ್ಟಿರುವ ಮನೆ ಪಾಠ
ಇಲ್ಲದಿರೆ ಬೀಳುವವು ಕೋಲಿನೇಟು
. . . .
ಬೆಕ್ಕು ಬಂತು ಮೆಂವ್ ಮೆಂವ್
ನಾಯಿ ಬಂತು ಭೌಂ ಭೌಂ
ಕುದುರೆ ಬಂತು ಹೈ ಹೈ
ಶಾಲೆಗೆ ಹೋಗುವೆ ಬೈ ಬೈ

ಇಂಥ ರಚನಗೆಳಲ್ಲಿ ಅವರ ಹಾಸ್ಯದ ಸಹಜದ ಬಗೆ ತಾನೇ ತಾನಾಗಿ ಹೊಮ್ಮುವುದನ್ನ ನೋಡಬಹುದು. ಉಳಿದಂತೆ ಆದರ್ಶದ ಹಂಬಲಗಳು, ನಡತೆಯ ಪಾಠಗಳು ಅವರ ರಚನೆಗಳ ಜೀವಾಳವಾಗಿವೆ.

ಏಳಿರೇಳಿರಿ ನನ್ನ ಗೆಳೆಯರೆ
ನನ್ನೀ ನುಡಿಯನು ಕೇಳುವಾ
ಕನ್ನಡಮ್ಮನ ನಾಡ ನೆಲದಲಿ
ಕನ್ನಡುಸಿರನು ಹರಡುವಾ

***

ದೇವ ಮಂದಿರಕಿಂತ ಜ್ಞಾನ ಮಂದಿರ ಮಿಗಿಲು
ಮೂಢ ನಂಬಿಕೆ ಅಳಿವ ದೇವನಿಹನು

ಮೂಡಣದಿ ಹೊರಹೊಮ್ಮಿ ಬರುವ ನೇಸರನಂತೆ
ಅರುಹು ನೀಡುವ ಗುರುವು ಕಾದಿರುವನು

***

ಹುಲ್ಲು ತಿಂದು ಹಾಲು ಕೊಡುವ
ಹಸುವು ನನ್ನ ಮಾತೆಯು
ಬೆಟ್ಟ ಬಯಲು ತಿರುಗಿ ನಮಗೆ
ಕಸುವು ಕೊಡುವ ಭಾತಿಯು

ಇಂಥ ಪದ್ಯಗಳೇ ಅವರ ಸಂಗ್ರಹಗಳಲ್ಲಿ ಸಂಖ್ಯೆಯಲ್ಲಿ ವಿಪುಲ. ಮಕ್ಕಳಿಗೆ ಅಕ್ಷರ ಕಲಿಸುವ, ಭಾಷೆ ರೂಢಿಸುವ ಉದ್ದೇಶದ ರಚನೆಗಳನ್ನು ಹಲವಾರು ಬರೆದಿದ್ದಾರೆ ಗೋಗೇರಿ ಅವರು. ಅವರ ಒಂದು ಸಂಕಲನದ ಹೆಸರೇ 'ಶೈಕ್ಷಣಿಕ ಗೀತೆಗಳು'. ಹಲವಾರು ಸಂಕಲನಗಳನ್ನ ಅವರು ತಂದಿದ್ದು ಅಲ್ಲಿನ ಆಯ್ದ ನೂರೊಂದು ಕವಿತೆಗಳ ಗುಚ್ಛವನ್ನು 'ಪುಟ್ಟನ ಪರಿಸರ' ಎಂದು ಪ್ರತ್ಯೇಕವಾಗಿಯೇ ನೀಡಿದುದಿದೆ. ಇಲ್ಲಿನ ಹಾಡುಗಳನ್ನೆಲ್ಲ ಅವರು ಮಕ್ಕಳ ಮುಂದೆ ಹಾಡಿ ಹಾಡಿ ಪ್ರಚುರಗೊಳಿಸಿದುದು ವಿಶೇಷದ ಸಂಗತಿಯೇ. 'ಈ ನಿನ್ನ ನಾಡಿನಲಿ ಹುಡಿಯಾಗಿ ನಾನಿದ್ದು ಈ ಜನ್ಮ ಸಾರ್ಥಕತೆ ಪಡೆಯುವಾಸೆ, ನೀನುಟ್ಟ ಹಸಿರುಡುಗೆಯಲಿ ಒಂದು ಎಳೆಯಾಗಿ ಈ ಹುಟ್ಟಿನರ್ಥವನು ತೋರುವಾಸೆ', 'ಕೆಂಗುಲಾಬಿಯ ಹೂಗಳರಳಿವೆ ಹಾಲುಗಲ್ಲದ ನಗೆಯಲಿ' ಮುಂತಾದ ಭಾವ ತುಂಬಿದ ಗೀತದ ಸಾಲುಗಳು ಅವರ ರಚನೆಗಳಲ್ಲಿ ಮತ್ತೆ ಮತ್ತೆ ಕೇಳುತ್ತ ಮನವನ್ನ ಹಿಡಿದು ನಿಲ್ಲಿಸುತ್ತವೆ. ಹಾಗಿದ್ದಾಗಲೂ ಹಾಸ್ಯದ, ತುಂಟತನದ ಸೆಳುಕೇ ಮಕ್ಕಳಿಗೆ ಪ್ರಿಯವಾಗುವಂತೆ ಅಲ್ಲಲ್ಲಿ ಹಣಿಕಿಹಾಕುತ್ತಲೇ ಇರುವುದು ಗೋಗೇರಿ ಅವರ ಸ್ವಾರಸ್ಯವೆನ್ನಲೇಬೇಕು. 'ಗಣಪಾ ನೀನೆ ಜಾಣಪಾ ಬಾರಪಾ, ಓಣ್ಯಾಗ ಬಂದರೆ ಕೈತುಂಬ ಝುಣಾ ಝುಣಾ, ಊರಾಗ ನಿಂದರೆ ಜನಕೆಲ್ಲ ತನನನ' ಎನ್ನುವಂತಹ ರಚನೆಗಳಿಂದ ಗೋಗೇರಿ ಅವರನ್ನ ಮಕ್ಕಳ ನಡುವೆ ಚೆನ್ನಾಗಿಯೇ ಗುರುತಿಸಬಹುದು.

ಗಂಗಾಧರ ನಂದಿ(೧೯೪೪) ಹಾವೇರಿ ಭಾಗದಲ್ಲಿ ಶಿಕ್ಷಕರಾಗಿದ್ದುಕೊಂಡು ಮಕ್ಕಳ ಸಾಹಿತ್ಯದಲ್ಲಿ ಇನ್ನಿಲ್ಲದಂತೆ ಆಸಕ್ತಿ ತೋರಿದವರು. ಅವಿರತವಾಗಿ ಮಕ್ಕಳಿಗೆ ಬರೆಯುತ್ತ, ಮಕ್ಕಳ ಸಾಹಿತ್ಯದ ಸಮಾರಂಭಗಳನ್ನ ಆಯೋಜಿಸುತ್ತ, ತಾವೂ ಭಾಗವಹಿಸುತ್ತ ಚಟುವಟಿಕೆಯನ್ನ ತೋರಿದವರು. ಹಲವಾರು ಸನ್ಮಾನ ಪುರಸ್ಕಾರಗಳಿಗೆ ಭಾಜನರಾದ 'ಗಮನ' ಅಂಕಿತದ ಇವರು ನಾನಾ ಬಗೆಯ ಸಾಹಿತ್ಯವನ್ನ ಸೃಷ್ಟಿಸುತ್ತ ಬಂದಿರುವವರು. ಮಕ್ಕಳ ಸಾಹಿತ್ಯದಲ್ಲಿ 'ಯಾಲಕ್ಕಿ ಹಾರ' ಸಂಕಲನದ ವರೆಗೆ, 'ಎದ್ದೇಳು ಭಾರತೀಯ', 'ಮಕ್ಕಳ ವಿಶ್ವ', 'ಒಡನಾಡಿ', 'ಬನ್ನಿ ಚಿನ್ನ', 'ಕೊಬ್ರಿ ಬೆಲ್ಲ', 'ಸುಂದರ ಚಂದಿರ', 'ನಮ್ಮ ಅಮ್ಮ', 'ಜಗ ಮಗ', 'ಆಡು ಹಾಡು', ಎಂಬ ಕವಿತಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಬಾಲರ ಜೀವ' ಎನ್ನುವ ಸಂಕಲನವನ್ನು ಸಂಪಾದಿಸಿದ್ದಾರೆ ಕೂಡ. ಮಕ್ಕಳಿಗೆ ಆದರ್ಶದ ಜೀವನದ ಹೆಜ್ಜೆಗಳನ್ನ ಇಡುವಲ್ಲಿ ಪ್ರೇರಕವಾಗುವಂಥ ವಿಷಯಗಳೇ ಇವರೆಲ್ಲ ರಚನೆಗಳ ವಸ್ತುಗಳು. ಅದು ಭಾಷೆಯಾಗಿರಲಿ, ಶಾಲೆಯಾಗಿರಲಿ, ಮನೆಯಾಗಿರಲಿ, ಎಲ್ಲದರ ಕುರಿತು ನೀತಿಯುತ ಬದುಕನ್ನ ರೂಪಿಸಿಕೊಳ್ಳುವಲ್ಲಿ ಸಹಾಯಮಾಡುವ ಮಾತುಗಳು, ಉಪದೇಶಗಳು ಇಲ್ಲಿ ಕಾಣುತ್ತವೆ.

ಕಲಿತ ಶಾಲೆಗೆಲ್ಲ
ಗೌರವ ತರುವವಳಾಗು
ಕಷ್ಟ ನಷ್ಟಗಳನು
ಹೂಯೆತ್ತಿದಂತೆ ನೀಗು
ತುಂಬು ಮನ ಮನೆಯನು
ಭಾಗ್ಯದೇವಿಯಾಗು
ಒಳಿತು ಕೆಡಕುಗಳನು
ಮೆಟ್ಟುತಲಿ ಬಾಗು

ಎನ್ನುವಂಥ ಹಾರೈಕೆಗಳು ಒಂದರಲ್ಲಿ ಕಂಡುಬಂದರೆ ಇನ್ನೊಂದರಲ್ಲಿ ಗುರುವಿನ ಮಹತ್ವವನ್ನು ಹೇಳುವುದು ಹೀಗೆ

ಜಗದ ಬೆಳಕು ಆದ ಗುರುವೆ
ತಮಗೆ ಕೋಟಿ ನಮನವು

ಮಾತೃಭಾವ ಸದಾ ಸೂಸಿ
ಶಿಷ್ಯರಿಗೇ ದೇವರು
ನೊಂದ ಸುತರ ದುಃಖ ಕಳೆದು
ನೀನಾದೆ ಕಲ್ಪತರು

ಇಂತಹವುಗಳ ನಡುವೆ ಮಕ್ಕಳನ್ನ ಮುದಗೊಳಿಸಬಲ್ಲ ಕೆಲವೆಲ್ಲ ರಚನೆಗಳು ಕಾಣುತ್ತವೆ.

ಭಾವಚಿತ್ರ ತೆಗೆಸುವಾಸೆ
ನನ್ನ ಮನದಿ ಮೂಡಿತು
ನೆರೆಯ ಮನೆಯ ಫೋಟೊ ನೋಡಿ
ಬಯಕೆ ಬಲೆಯ ಬೀಸಿತು

ಅಪ್ಪನನ್ನು ಕೇಳಿ ಬಿಡಲು
ಅಪ್ಪಣೆಯನು ಕೊಟ್ಟರು
ಒಳ್ಳೆ ಬಟ್ಟೆ ತೊಟ್ಟು, ತೊಡಿಸಿ
ಸ್ಟೂಡಿಯೊಳಗೆ ಬಂದರು

ತಂದೆ ತಾಯಿ ತೊಡೆಯಮೇಲೆ
ಕೂಡ್ರಲೆಂದು ಎಳೆದರು
ನಾನು ಶಿಸ್ತಿನಿಂದ ಮಧ್ಯ
ನಿಲ್ಲೆ ನಕ್ಕೆ ನಕ್ಕರು

ಧಾರವಾಡದಲ್ಲಿದ್ದು, ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ಕೆಲಸದಲ್ಲಿದ್ದು,

ಶಿಕ್ಷಕರಲ್ಲದಿದ್ದರೂ **ಅಶೋಕ ಚೊಳಚಗುಡ್ಡ(೧೯೪೯)** ಶಿಕ್ಷಕರು ಹಬ್ಬಿಸಿದ ಮಕ್ಕಳ ಸಾಹಿತ್ಯದ ವಾತಾವರಣದಲ್ಲಿ ಕೂಡಿಕೊಂಡು ಹಲವಾರು ರಂಜಿಸುವ ಪದ್ಯಗಳನ್ನು ತಮ್ಮ 'ಪುಟ್ಟನ ಹಾಡು' ಹಾಗೂ 'ಪುಟ್ಟಾ ಪುಟ್ಟಿಯ ಹಾಡುಗಳು' ಸಂಕಲನಗಳಲ್ಲಿ ನೀಡಿದವರು ಅಶೋಕ ಚೊಳಚಗುಡ್ಡ ಅವರು. ಅವರ ಪದ್ಯಗಳಲ್ಲಿ ಬಹು ಮುಖ್ಯವಾಗಿ ಹಾಸ್ಯವೇ ಎದ್ದುಕಾಣುವುದು. ಮಕ್ಕಳನ್ನ ನಾನಾ ಬಗೆಯಲ್ಲಿ ರಂಜಿಸುವ ಸೊಗಸಾದ ಸಾಮಗ್ರಿ ಅವರಲ್ಲಿ ಬೇಕಾದಷ್ಟು ಕಾಣುತ್ತದೆ.

ನೋಡಿರಿ ನೋಡಿರಿ ನೊರಜಪ್ಪ
ಈತನ ಗೆಳೆಯನೆ ನೊಣವಪ್ಪ
ಗೊಂಯ್ ಗೊಂಯ್ . . . ಜೊಂಯ್ . . . ಜೊಂಯ್
ತುತೂರಿ ಊದುತ
ಎಲ್ಲೆಡೆ ಇರುವರು ಇವರಪ್ಪ
ತಿಪ್ಪೆಯ ಗುಂಡಿ ಕೊಳಕು ರಾಡಿಯು
ಇವರದು ಸುಂದರ ಮನೆಯಪ್ಪ
ಸಕ್ಕರೆ ಬೆಲ್ಲದ ಸವಿಸವಿ ತಿಂಡಿಯ
ಕಂಡರೆ ಎಂಥಾ ಖುಷಿಯಪ್ಪ
ಮೈ ಕೈ ಝಾಡಿಸಿ ತಿಂಡ್ಡಿಯ ಮೇಲೆ
ಎಂಜಲು ಸುರಿವರು ಇವರಪ್ಪ

'ಡಾಕ್ಟರ್ ಬೆಕ್ಕಪ್ಪನವರು', 'ಇಲಿಯ ಫೋನು', 'ತಾಜಾ ಬ್ರೆಡ್ಡಿನ ಹಾಡು', 'ಕಾಯಿಪಲ್ಲೆ ಮೀಟಿಂಗ್', 'ಸೊಳ್ಳೆಪ್ಪ', 'ಬೆಕ್ಕೂರಾಯರ ಯಾತ್ರೆ' ಮುಂತಾದ ಅವರ ತಲೆ ಬರಹಗಳೇ ಇಲ್ಲಿನ ನಗಿಸುವ ಸರಕಿನ ಬಗೆಗೆ ಹೇಳುತ್ತವೆ. ಗೇಯ ಗುಣ ಹೊಂದಿರುವ ಕವಿತೆಗಳಲ್ಲಿ ಸಾಧ್ಯವಿದ್ದಷ್ಟೂ ಅವರು ಆಡುಮಾತಿನ ಬನಿಯನ್ನು ಬೆರೆಸಲು ನೋಡಿದ್ದಾರೆ. ಅವರ ಕವಿತೆಗಳಲಿ ಹಾಸ್ಯವೇ ಸೆಳೆಯುವಂತೆ ಮುಂಚೂಣಿಯಲ್ಲಿ ನಿಲ್ಲುವುದು. 'ನಮ್ಮ ಅಜ್ಜಿ'ಯ ಕುರಿತು ಅವರದೊಂದು ಆಪ್ತವಾದ ಪದ್ಯದ ಸಾಲುಗಳು ಇಂಥವು

ನಮ್ಮ ಅಜ್ಜಿ ಪುಟ್ಟಿಯಂತೆ
ಚಿಕ್ಕದಾಗಿ ಇರುವಳು
ಪುಟ್ಟ ಪುಟ್ಟ ಹೆಜ್ಜೆ ಇಟ್ಟು
ಮಗುವಿನಂತೆ ನಡೆವಳು
ಸೀದಾ ಸಾದಾ ಅರಿವೆ ತೊಟ್ಟು

ಚಂದ್ರನಂತೆ ಹೊಳೆವಳು
ಹೂವಿನಂತೆ ಸುತ್ತ ಮುತ್ತ
ಕಂಪು ಸೂಸುತಿರುವಳು

ಮಕ್ಕಳಿಗೆ ಒಳ್ಳೆಯ ಮಾತುಗಳನ್ನು ಹೇಳುವ, ಅವರ ಭವಿಷ್ಯದ ಕಾಳಜಿ ವಹಿಸುವ ಪದ್ಯಗಳನ್ನೂ ಅವರು ಬರೆದಿದ್ದಾರೆ . . .

ಬಹಳ ಹೊತ್ತು ಮಲಗಬೇಡಿ
ಬೆಳಗು ಬೇಗ ಏಳಿರಿ

ಹಲ್ಲು ಉಜ್ಜಿ ಸ್ನಾನ ಮಾಡಿ
ಮಡಿಯ ಬಟ್ಟೆ ಧರಿಸಿರಿ
ತಂದೆ ತಾಯಿಗಿಂತ ಬೇರೆ
ದೇವರಿಲ್ಲ ತಿಳಿಯಿರಿ
ಭಕ್ತಿಯಿಂದ ಅವರ ನಮಿಸಿ
ದೇವರನ್ನು ನೆನೆಯಿರಿ

ಮುಂತಾದ ಶಿಕ್ಷಕ ಸಾಹಿತಿಗಳಲ್ಲಿ ಸರ್ವೇಸಾಮಾನ್ಯವಾದ ರಚನೆಗಳನ್ನ ಮಾಡಿದರೂ ರಂಜಿಸುವ ಹಾಸ್ಯದ ಪರಿಕರವೇ ಅವರ ಸ್ವಭಾವದ ಬೆರಳುಮಾಡಿ ತೋರಿಸುವ ಗುಣ ಎಂದು ಹೇಳಬಹುದು.

ಹೀಗೆಯೇ ಅನೇಕರನ್ನ ವಿಶೇಷ ಆಸಕ್ತಿಯಲ್ಲಿ ನೋಡಬಹುದು. ಕಥನ ಕವನಗಳನ್ನೇ ಬಹು ಸಂಖ್ಯೆಯಲ್ಲಿ ಬರೆಯುತ್ತ ಬಂದ ಅಣ್ಣಾರಾಯ ಸಾಲೀಮನಿ, ಬಹು ಸಂಖ್ಯೆಯಲ್ಲಿ ಆಸಕ್ತಿಯಿಂದ ಕವಿತೆಗಳನ್ನ ಬರೆಯುತ್ತ ಬಂದ ಹುಬ್ಬಳ್ಳಿಯ ಗುರುರಾಜ ಬೆಣಕಲ್, ಆಕಾಶವಾಣಿಗಾಗಿ ಗೇಯ ಗೀತಗಳನ್ನ ಬರೆಯುತ್ತ ಪ್ರಚುರಗೊಂಡ ವಿ. ಸಿ. ಐರಸಂಗ ಮುಂತಾದವರನ್ನ ನೋಡಬಹುದು.

ಅಮೃತೇಶ ತಂಡರ ಹೀಗೆಯೇ ಅವಿರತವಾಗಿ ಅಕ್ಕರೆಯಿಂದ ಬರೆಯುತ್ತ ಬಂದಿರುವ ಶಿಕ್ಷಕರು. ಮಕ್ಕಳಿಗೆ ಒಳ್ಳೆಯ ಭಾವಗಳ, ಭವಿಷ್ಯ ರೂಪಿಸುವಲ್ಲಿ ಆಸರೆಯಾಗುವ ಪದ್ಯಗಳನ್ನ ಆಸ್ಥೆಯಿಂದ ಬರೆದವರು ತಂಡರ. ಚಿಣ್ಣರೆಲ್ಲರೂ ಕೂಡಿಕೊಂಡು

ಓಡುತೋಡುತ ಬಂದರು
ಬಣ್ಣ ಬಣ್ಣದ ಸಸಿಗಳನ್ನು
ಒಟ್ಟುಗೂಡಿಸಿ ತಂದರು
ಸುತ್ತಮುತ್ತಲೂ ಕಿತ್ತುಬಿಟ್ಟರು
ಬೆಳೆದು ನಿಂತಾ ಕಳೆಯನು
ಗಟ್ಟಿ ನೆಲ ಸಮತಟ್ಟುಗೊಳಿಸಿ
ನೆಟ್ಟು ಬಿಟ್ಟರು ಸಸಿಯನು

ಎನ್ನುವಂಥ ಮುದದಿಂದ ಕೂಡಿದ ಪದ್ಯಗಳನ್ನು ಬರೆಯುತ್ತಲೇ ಒಂದಿಷ್ಟೆಲ್ಲ ಹಾಸ್ಯದ ಸಾಮಗ್ರಿಯನ್ನೂ ಅವರು ತಂದುಕೊಂಡುದಿದೆ.

ಹೋಂ ವರ್ಕ ತೋರಸು
ಎಂದರು ಗುರುಗಳು
ಮೈಯಲಿ ಹುಷಾರು ಇಲ್ಲೆಂದ
ಲೆಕ್ಕವ ಬಿಡಿಸಲು
ಹೇಳಿದರವರು
ಕಳೆದಿದೆ ಪೆನ್ನು ಇಲ್ಲೆಂದ

ಸರಳ ಪದಗಳಲ್ಲಿ, ಗೇಯವಾಗಿ ಹಾಡುವಂತೆ ಮಕ್ಕಳಿಗೆ ಸಾಕಷ್ಟು ಪದ್ಯಗಳನ್ನ ತಂಡರ ಅವರು ಬರೆದಿದ್ದಾರೆ.

ಮನೋಹರ ಬಾಲಚಂದ್ರ ಘಾಣೇಕರ(೧೯೩೭)ಮಕ್ಕಳಿಗಾಗಿ ಬಾಲ ಚರಿತ್ರೆಗಳು, ಕತೆಗಳು ಹೀಗೆ ಸಾಕಷ್ಟು ಕೃತಿಗಳನ್ನು ನೀಡಿದ್ದಾರೆ. ಪ್ರಪಂಚದ ಬಹಳಷ್ಟು ಕತೆಗಳನ್ನು ಕಲೆಹಾಕಿ ಮಕ್ಕಳಿಗೆಂದು ನೀಡಿದ್ದಾರೆ. 'ಚಿರಂಜೀವಿ ಪರಶುರಾಮ', 'ಶ್ರೀ ಬಸವಣ್ಣ', 'ಮಾರ್ಕೋಪೋಲೋ', 'ಗೌತಮ', 'ಬೋಧಿಸತ್ವನ ಕಥೆಗಳು', 'ಬುದ್ಧಜಾತಕ ಕಥೆಗಳು', 'ಪುರಾಣ ಪಂಚಕ', 'ಮಾತಾಡುವ ಕುದುರೆ', 'ಆದರ್ಶದ ಕಥೆಗಳು', 'ಠಕ್ಕರ ಗುರು', 'ಕೊಪ್ಪರಿಗೆ ತುಂಬ ಕಥೆಗಳು', 'ಮಕ್ಕಳ ನಿತ್ಯ ಪಾಠ', 'ಅಮೇರಿಕ ಜನಪದ ಕಥೆಗಳು', 'ಜಪಾನಿನ ಜನಪದ ಕಥೆಗಳು', 'ಬಂಗಾರದ ಹೆಜ್ಜೆ', 'ಇರಾಣದ ಲೋಕನೀತಿ ಕಥೆಗಳು', 'ತುಷಾರಮಣಿ', 'ಅಜ್ಜಾ ನನಗೊಂದು ಕಥೆ ಹೇಳು', 'ಅಜ್ಜಿ ನನಗೊಂದು ಕಥೆ ಹೇಳು', 'ಅಮ್ಮಾ ನನಗೊಂದು ಕಥೆ ಹೇಳು', 'ಗರುಡನ ಕಥೆ', 'ಬಂಗಾರದ ಹೆಜ್ಜೆ' ಮುಂತಾಗಿ ಸಾಕಷ್ಟು ಕೃತಿಗಳು ಇವರಿಂದ ರಚಿತವಾಗಿವೆ.

ಹೀಗೆಯೇ ನಿಂಗಣ್ಣ ಕುಂಟಿ, ರಾಮಚಂದ್ರ ಪಾಟೀಲ ರಾಮು ಮೂಲಗಿ, ಜಗುಚಂದ್ರ ಕೂಡಲ ಮುಂತಾಗಿ ಅನೇಕ ಶಿಕ್ಷಕರು ಈಚಿನ ದಿನಗಳಲ್ಲಿ ಬರೆಯುತ್ತಿದ್ದಾರೆ. ಹಿಂದಿನ ತಲೆಮಾರಿಗೆ ಹೋಲಿಸಿದರೆ ಮಕ್ಕಳಿಗಾಗಿನ ಬರವಣಿಗೆ ಧಾರವಾಡ ಭಾಗದಲ್ಲಿ ಅಷ್ಟಾಗಿ ಹುಲುಸು ಕಾಣದ ರಂಗ ಎಂದರೆ ತಪ್ಪಿಲ್ಲ. 'ಗುಬ್ಬಚ್ಚಿ ಗೂಡು' ಮಕ್ಕಳ ಪತ್ರಿಕೆಯೊಂದಿಗೆ ಈ ರಂಗದಲ್ಲಿ ವಿಶೇಷ ಆಸಕ್ತಿ ತೋರಿದ, ಕೆಲಕಾಲ 'ಬಾಲ ವಿಕಾಸ ಅಕಾಡೆಮಿ'ಯ ಅಧ್ಯಕ್ಷರೂ ಆಗಿದ್ದ ಶಂಕರ ಹಲಗತ್ತಿ ಅವರು ಮಕ್ಕಳ ಸಾಹಿತ್ಯದ ವಾತಾವರಣ ಜಾಗೃತವಾಗಿರಲು ಸಾಕಷ್ಟು ಕೆಲಸಮಾಡಿದುದು ಕಂಡುಬರುತ್ತದೆ. ಸಮ್ಮೇಳನಗಳು, ವಿಚಾರ ಸಂಕಿರಣಗಳು ಮುಂತಾಗಿ ನಾನಾ ಬಗೆಯಲ್ಲಿ ಅವರು ತೊಡಗಿಕೊಂಡು ಬಂದಿದ್ದಾರೆ.

ಬೆಳಗಾವಿ ಭಾಗದಲ್ಲಿ ಶಿಕ್ಷಕ ಸಮುದಾಯವೇ ವಿಶೇಷವಾಗಿ ಚಾಚಿಕೊಂಡಿರುವುದು. ಒಂದಿಷ್ಟೆಲ್ಲ ಆಚೀಚಿನವರು ತೊಡಗಿಕೊಂಡಿರುವುದಿದೆ. ಹಿರಿಯ ಕವಿ ಡಿ. ಎಸ್. ಕರ್ಕಿ ಅಂಥವರು, ಎಸ್. ಡಿ. ಇಂಚಲ ಅಂಥವರು ಈ ಶಿಕ್ಷಕರ ವಾತಾವರಣದಲ್ಲಿ ತಾವೂ ಆಸಕ್ತಿ ತಳೆದು ಒಂದಿಷ್ಟು ಪದ್ಯಗಳನ್ನ ಬರೆದರು.

ಕೆಲಸಮಯ ಶಿಕ್ಷಕರಾಗಿ ಸೇವೆ ಸಲ್ಲಿಸಿದ, ನಂತರ ಪ್ರಬುದ್ಧ ಲೋಕದ ಗಮನ ಸೆಳೆದ ಕವಿ **ಬಿ. ಎ. ಸನದಿ(೧೯೩೩)** ಅವರು ಮಕ್ಕಳಿಗೆ ನಾಲ್ಕು ಕವನ ಸಂಕಲನಗಳನ್ನು ತಂದುದು ಅವು ತಮ್ಮದೇ ವಿಶೇಷತೆಯಿಂದ ಸೆಳೆದುದೂ ಗಮನಿಸಬೇಕಾದ ಸಂಗತಿಯೇ. ಮೊದಲು ಅವರು ಶಿಕ್ಷಕರಾದುದರಿಂದ ಸಹಜವಾಗಿಯೇ ತಮ್ಮ ಮುಂದಿನ ಮಕ್ಕಳನ್ನ ಗಮನದಲ್ಲಿರಿಸಿಯೇ ಅವರು ರಚನೆಗಿಳಿದುದು ಕಾಣುತ್ತದೆ. ಗ್ರಾಮೀಣ ಬನಿ, ಪ್ರಮುಖವಾಗಿ ಗೇಯ ಪ್ರಧಾನವಾದ ಈ ಗೀತೆಗಳು ನಾದಲೋಲತೆಯತೆಯಿಂದ ಸೆಳೆಯುತ್ತವೆ. ನವೋದಯದ ಪ್ರಭಾವದಲ್ಲಿ, ಬೇಂದ್ರೆ ಅಂಥ ನಾದ ಪ್ರಾಧಾನ್ಯದ ಕವಿಯ ಪ್ರಭಾವದಲ್ಲಿ, ಹಾಗೆಯೇ ಗ್ರಾಮೀಣ ಪರಿಸರದ ಹಾಡುಗಳೂ ಹಿನ್ನೆಲೆಯಲ್ಲಿ ನಿಂತಿರುವ ಹಾಗೆ ಭಾಸವಾಗುತ್ತದೆ. ರಾಜರತ್ನಂ, ಕುವೆಂಪು, ದಿನಕರ ಮುಂತಾದವರ ಮಕ್ಕಳ ಕವಿತೆಯ ಪ್ರಭಾವಗಳಿಗಿಂತ ಈ ಬಗೆಯ ನಾದಮಯತೆಯ ಗ್ರಾಮೀಣ ಪರಿಸರವೇ ಈ ಗೀತೆಗಳಿಗೆ ಪ್ರೇರಣೆ. ಅದರಲ್ಲೂ ಶಿಕ್ಷಕ ವೃತ್ತಿಯಲ್ಲಿದ್ದು ಮಕ್ಕಳ

ಬಾಯಲ್ಲಿ ಹಾಡಿಸುವುದು, ಆ ಸಮಯದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ರಂಜಿಸಲು, ಅವರನ್ನ ಆಮೋದ ಪ್ರಮೋದಗೊಳಿಸಲು, ಪಠ್ಯದಿಂದ ಹೊರತಾಗಿ ಖುಷಿಗಾಗಿಯೇ ಸಿದ್ಧಗೊಂಡ, ಹಾಗೆಯೇ ಪಾಲಕರು, ಶಿಕ್ಷಕರು ಮುಂತಾಗಿ ಹಿರಿಯರು ಮಕ್ಕಳು ಇಂಥವನ್ನ ಹಾಡಿ ಕುಣಿದು, ಅಭಿನಯಿಸುವುದನ್ನ ನೋಡಿ ಕಣ್ತುಂಬಿಕೊಳ್ಳಲು ಈ ರಚನೆಗಳ ಹಿಂದಿನ ಪ್ರೇರಣೆ ಇದ್ದಿರಬಹುದಾಗಿದೆ. ಒಂದಾವುದೋ ಧಾಟಿಯಲ್ಲಿ ಹಾಡುವುದಕ್ಕೆ ಅನುಕೂಲವಾಗುವಂತೆ ರಚನೆಗೊಂಡಿರುವುದು ಇಂಥಲ್ಲಿ ಸಹಜ. 'ಗುಲಾಬಿ ಗೊಂಚಲು' ಶ್ರೀಕಾಂತ ಶಮನೆವಾಡಿ ಅವರೊಂದಿಗೆ ಸೇರಿ ತಂದರೆ ಮುಂದೆ ಮೂರು ಸಂಕಲನಗಳನ್ನು('ಜಿಲೇಬಿ ಝುಣ್ ಝುಣ್', 'ಗೃಹ ಪಂಚಮಿ', 'ಹೂವಿನ ಹುಡುಗಿ') ಅವರು ತರುವುದರೊಂದಿಗೆ ತಮ್ಮ ಈ ಬಗೆಯ ಅಭಿಲಾಷೆಯನ್ನ ದೊಡ್ಡದಾಗಿಯೇ ವ್ಯಕ್ತಪಡಿಸಿದ್ದಾರೆ. ಬಾಲ್ಯದ ಲೋಕಕ್ಕಿಂತ ಇಲ್ಲಿನ ವಸ್ತು ಪ್ರಪಂಚ ಹಳ್ಳಿವಾಡದ ನಾನಾ ಬಗೆಯ ಸುರಸವಾದ ಚಿತ್ರಣಗಳನ್ನ, ನಿಸರ್ಗದ ಸೊಗಸಿನ ಚಿತ್ರಣಗಳನ್ನ ಕೊಡುತ್ತವೆ. ಹಾಗೆಯೇ ದೊಡ್ಡವರೂ, ಅವರ ಪ್ರಪಂಚವೂ ಇಲ್ಲಿ ಸಾಕಷ್ಟು ಭಾಗವಹಿಸುತ್ತದೆ. ಅಂಥವೆಲ್ಲ ರಂಜನೆಯಲ್ಲಿ ಪರ್ಯವಸಾನ ಹೊಂದುತ್ತ ಬದುಕಿನ ಸೊಗಸನ್ನು ಸವಿಯಲು ಹಚ್ಚುತ್ತವೆ ಅನ್ನಬಹುದು. ಹಾಗಿದ್ದಾಗಲೂ ಪುಟ್ಟರಿಗಾಗಿ ಕೆಲವೆಲ್ಲ ಬಗೆಬಗೆಯಾಗಿ ರಚನೆಗೊಂಡುವಿವೆ.

ಚಂದುಮಾಮಾ ಚಂದೂಮಾಮಾ ಚಾರೀ ಕಾಯ್
ಬಟ್ಟಲ ತುಂಬ ಬಾರೀ ಕಾಯ್
ಆಚಿ ಕಡೆ ಚೆಲ್ ಚೆಲ್
ಈಚಿ ಕಡೆ ಚೆಲ್ ಚೆಲ್
ನಮ್ ಮರಿ ಚಂದೂ ತೆರೆದಾನ್ ಬಾಯ್
ಚಂದುಮಾಮಾ . . .

ನನಗೊಂದ್ ಪಾಲ ಸಿಗತ್ತೈತಿ
ಬಾಯಾಗ ನೀರ ಬಿಟ್ಟೈತಿ;
ಕೊಡದಿದ್ದರ ಮಾಡೇವ್ ಫಜೀತಿ
ಲಗು ಲಗು ನೀಡೋ ಬಿಳಿಬುತ್ತಿ
ಚಂದುಮಾಮಾ . . .

ಉಸಕಿನ ಹಾಸ್ಗೀ ಹಾಸ್ಯಾರು
ತಂಪಾನ್ ಗಾಳೀ ಬೀಸ್ಯಾರು
ನಾವರೆ ಇಲ್ಲೇ ಮಲಗವ್ರು !
ಬ್ಯಾಡಂತನ್ಲಾಕ್ ನೀ ಯಾರು ?
ಚಂದುಮಾಮಾ . . . .

ಈ ಬಗೆಯ ರಚನೆಗಳು ಹಳ್ಳಿವಾಡದ ಪರಿಸರದಲ್ಲಿನ ಮಕ್ಕಳ ನಡುವೆ ಈಗಾಗಲೇ ಇರುವ ಹಾಡುಗಳ, ಆಟಗಳ ಜೊತೆಗೆ ಸೇರಿಕೊಂಡಿರುವ ತುಣುಕು ಪಣುಕು ರಚನೆಗಳ ಮಧ್ಯೆ ತಮ್ಮ ಅಗತ್ಯದ ಅಸ್ತಿತ್ವ ಹೇಳುತ್ತವೆ.

ನಮ್ಮ ಪುಟ್ಟ ಬಾಪು ಬಹಳ
ಬೆರಕಿ ಇರುವನು;
ಎಲ್ಲಿ ಹೋದರೂನು ಜಗಳ
ಮಾಡಿ ಬರುವನು!

ಗುರುತಿನವರ ಮನೆಯ ಸೇರಿ
ಊಟ ಹೊಡೆವನು;
ಮನೆಗೆ ಬಂದ ಬಳಿಕ ಮತ್ತೆ
'ಹಸಿವೆ' ಎನುವನು!

***

ದಿಟ್ಟ ಬೆಟ್ಟ
ಮೋಡಕೊಂದು
ಬಿರುಸು ಪೆಟ್ಟು ಕೊಟ್ಟಿತು!
ಮೋಡ ಧೈರ್ಯ ಬಿಟ್ಟಿತು!!
ಎದೆಯ ಒಡೆದು
ಕೊಂಡ ಮೋಡ
'ಸೋತೆನಪ್ಪ' ಎಂದಿತು!
ಅಳುತ ಬುವಿಗೆ ಬಂದಿತು!!

ಇಂಥ ರಚನೆಗಳು ಖಂಡಿತ ಪುಟ್ಟ ಮಕ್ಕಳ ಲೋಕದಲ್ಲಿ ಬಹಳ ಖುಷಿಕೊಡುವುವೇ. ಅವರ ಅತ್ಯಂತ ಪ್ರಚುರವಾದ, ಹಳ್ಳಿವಾಡದ್ದೇ ಹಾಡಾಗಿ ಮಕ್ಕಳಲ್ಲಿ ಬೆರೆತುಹೋಗಿರುವ ಯಶಸ್ವಿಯಾದ ಗೀತೆಯೊಂದಿದೆ.

'ಬಾ ಬಾರ ಕಂದಾ
ಬಾರ ಸುನಂದಾ
ಬ್ಯಾಸರ ಬಂದೈತಿ ಆಡೋಣು;
ಆಚಿ ಕೈ ತಾರ
ಈಚಿ ಕೈ ತಾರ
ಮುಟಿಗ್ಯಾಗೇನೈತಿ ನೋಡೋಣು ?'
ಅರೆರೆ ! ಬಿಟ್ಟೀ ?
ಬಿತ್ತಲ ರೊಟ್ಟಿ !
ಎತಕೋ ಮೊದಲದ ತಿನ್ನೋಣು ;
ಆ ಮ್ಯಾಲ ಆಟ
ಆಡೋಣ ಈಟ
ಕಡಿಕೊಂದ್ ಹಾಡರೆ ಅನ್ನೋಣು !

ಅಂತ ಸಾಗುವ ರಚನೆ ತನ್ನ ನಾಟಕೀಯತೆಯಿಂದ, ಆಟಕ್ಕಿಳಿಸುವ ಚಟುವಟಿಕೆಯಿಂದ,

ಬಹು ಮುಖ್ಯವಾಗಿ ಅದರಲ್ಲಿನ ಮಕ್ಕಳ ನಡುವಿನದೇ ಸಂಗತಿಯಿಂದ ಲವಲವಿಕೆಯಿಂದ ಕೂಡಿದೆ. ಇದು ಕೇವಲ ರಚನೆಯಾಗಿರದೆ ನಮ್ಮ ನಡುವೊಂದು ಲಗುಬಗೆಯ ಓಡಾಟ ಕುಣಿದಾಟ ನಡೆದಹಾಗೆ ಆಗಿಬಿಡುತ್ತದೆ. ಇಲ್ಲಿನ ಪ್ರತಿಯೊಂದು ನಡೆಯೂ ತನ್ನಷ್ಟಕ್ಕೆ ತಾನೆ ಸೆಳೆಯುತ್ತ ಒಟ್ಟಂದಕ್ಕೆ ತನ್ನ ಕೈ ಜೋಡಿಸುತ್ತದೆ.

ಗಳ ಗಳ ಗಂಟಿ
ಬಾರಿಸಿ ಕಂಟೀ
ಮರಿಯಾಗ ನಿಂತಕೋ ಬನದಾಗ ;
ನಾ ಹಿಂದಿಂದ
ತುಡುಗೀಲೆ ಬಂದ
ಹಿಡಿತೇನ್ ಒಂದ ಗಳಿಗ್ಯಾಗ !

ತುಂಟತನ, ಕಣ್ಣು ಮುಚ್ಚಾಲೆ ಆಟ, ಲುಟು ಪುಟು ಓಡಾಟ ನಡೆಯುವ ಬಗೆಯೇ ಇದು. 'ಸಾಕಾದ ಮ್ಯಾಗ ತೊಟ್ಟಿಲ ತೂಗ ಗೊಂಬೀ ಮಲಗಲು ಹಾಡೋಣು !' ಹೀಗೆ ಪ್ರತಿ ನುಡಿಯಲ್ಲೂ ರಸಘಟ್ಟಿಗಳೇ ನಿಂತಹಾಗಿವೆ. 'ಬಂದ್ಯಾ ಕಂದಾ? ಬಾರ ಸುನಂದಾ, ಓಡೋಡಿ ಬಾರ ನನತನಕ' ಅಂತೆಲ್ಲ ಹಿರಿಯರು ಭಾಗವಹಿಸುವ, ಆದರೆ ಈ ಎಲ್ಲ ಕ್ರಿಯೆಯೂ ಮಕ್ಕಳ ನಡುವೆಯೇ, ಮಕ್ಕಳನ್ನೇ ಗುರಿಯಾಗಿಸಿಕೊಂಡಿದ್ದು ಅಪರೂಪದ ಯಶಸ್ಸು ಎನಿಸಿಬಿಡುತ್ತದೆ.

ಹಾಗಿದ್ದಾಗಲೂ ಅವರ ರಚನೆಗಳು ನಾದದ ಗುಂಗಿಗೆ ಸಿಲುಕಿ, ಒಂದಿಷ್ಟೆಲ್ಲ ಹರವಿಗೆ ಹಿಗ್ಗುತ್ತ ಸಾಗುವ ಸುಂದರ ಹಾಡುಗಳಾಗುವತ್ತಲೇ ಸಾಗುವುದು ಬಹಳವಾಗಿವೆ. ಪ್ರತಿಭಾವಂತ ಕವಿ ಮನಸ್ಸು ಇಲ್ಲೆಲ್ಲ ತನ್ನ ಸೃಜನಶೀಲತೆಯನ್ನು ಬಿಡುಬೀಸಾಗಿಯೇ ತೊಡಗಿಸಿಕೊಳ್ಳುವುದು ಕಾಣುತ್ತದೆ. ಹಾಗಾಗಿ ಸುಂದರವಾದ ಭಾವಗೀತಗಳ ರಚನೆ ಸಾಧ್ಯವಾಗಿದೆ. 'ಪಂಚ್ಮಿ ಹಬ್ಬ ಸನೇಕ ಬಂದೈತಿ ಜಾಣಾ, ಹಿಂಗ್ಯಾಕ ಸುಮ್ಮನ ಕುಂತೀಯೊ ನೀನಾ?' ಎನ್ನುವಂಥ ಸುರಸವಾದ, ಅಲ್ಲಿನ ಸುಖದುಃಖಗಳಿಗೂ ಚಾಚಿಕೊಳ್ಳುವ ಗಂಡಹೆಂಡತಿಯರ ನಡುವಿನ ಸಂಭಾಷಣೆಗಳು, 'ಸುಗ್ಗಿ ಬಂತು ಭಾಗ್ಯ ತಂತು' ಎನ್ನುವ ಸುಗ್ಗಿಯ ಸಂಭ್ರಮಗಳು, 'ಹೆಣ್ಣು ಗಂಡು ಭೇದ ಯಾಕ? ಅಬಲೇರು ಎಂಬ ನೆವ ಸಾಕ' ಎನ್ನುವ ಹೆಣ್ಣುಮಕ್ಕಳ ದುಡಿವ ಬದುಕಿನ ಹಿರಿಮೆ, ಮುಂತಾಗಿ ಬದುಕಿನ ನಾನಾ ಬಗೆಯ ಚಿತ್ರಣಗಳು ಇಲ್ಲಿ ಆಶ್ರಯ ಪಡೆಯುವವು.

ಮಕ್ಕಳ ಸುತ್ತಲಿನ ವಸ್ತುಗಳನ್ನು ಆಯ್ದುಕೊಂಡಾಗಲೂ ರಮ್ಯ ಭಾವ ಲಹರಿಗೊಳಗಾಗಿ ಭಾವಗೀತದೆಡೆಗೆ ವಾಲುವುದೇ ಹೆಚ್ಚು. 'ಲಾ ಲಲ ಲಾ ಲಲ ಲಾ ಲಲ ಲಾ ಇಂದು ಬಂದ ದಿನ ಬಲು ಮಂಗಲಾ' ಎಂದೆಲ್ಲ ಸಾಗುವ ಸಂತಸದ ಹಾಡು ಮುಂದುವರೆಯುತ್ತ

ಸುಂದರ ಬಂಧುರ
ಹಂದರ
ಹಾಕೋಣ ಜೀಕೋಣ
ಹೊಸ ಬಾಳಿಗೆ
ಹಳೆಯ ಗೋಳ ಕಳೆದು
ಬರುವ ನಾಳಿಗೆ

ಅಂತೆಲ್ಲ ವಿಸ್ತರಿಸಿಕೊಳ್ಳುತ್ತ ಸಾಗುತ್ತದೆ. 'ಜಿಲೇಬಿ ಝುಣ್ ಝುಣ್' ಮಕ್ಕಳ ಆಸಕ್ತಿಯ ವಿಷಯಗಳನ್ನೇ ಒಳಗೊಂಡ ಕಥನ ಕವಿತೆಗಳು ಇಲ್ಲಿವೆ. ಅದಷ್ಟು ಸರಳವಾಗಿಯೂ ಇವೆ. ಹಾಗೆಯೇ ನಿಗದಿತ ಲಯಗಳಲ್ಲಿ ಹೊಂದಿಕೊಳ್ಳುತ ಒಳ್ಳೆಯ ಹಾಡುಗಳಾಗಿವೆ. ಮಕ್ಕಳು ಇವನ್ನೆಲ್ಲ ಗಟ್ಟಿ ಮಾಡಿಕೊಂಡು ಹೇಳಲು ಉದ್ದೇಶ ಪಟ್ಟಹಾಗೇ ಅನಿಸುತ್ತದೆ. 'ಹಾಡುಗಳನ್ನು ಪ್ರಕಟಿಸುವುದಕ್ಕಿಂತ ಮೊದಲು ತಾವು ಬರೆದ ಹಾಡುಗಳನ್ನು ಮಕ್ಕಳೆದುರಿಗೆ ಹಾಡಿ, ಹಾಡಿಸಿ ಅವರೊಡನೆ ಆಡಿ ನಲಿಯುವುದು ಅವರ ಸ್ವಭಾವ. ಅಂತೆಯೇ ಅವರ ಈ ಗೀತೆಗಳು ಪರಿಪಕ್ವವಾಗಿ ಮಕ್ಕಳನ್ನು ಅಕರ್ಷಿಸುವಲ್ಲಿ ಅತ್ಯಂತ ಯಶಸ್ವಿಯಾಗಿವೆ. ಈ ಭಾಗದ ಕನ್ನಡ ಶಾಲೆಗಳಲ್ಲಿ ಮಕ್ಕಳು ಅವರ ಗೀತೆಗಳನ್ನು ಸಾಭಿನಯವಾಗಿ, ಸಾಮೂಹಿಕವಾಗಿ ಹಾಡಿ ಕುಣಿಯುವುದನ್ನು ನಾನು ಅನೇಕ ಸಂದರ್ಭಗಳಲ್ಲಿ ನೋಡಿ ನಲಿದಿದ್ದೇನೆ' ಎಂದಿರುವ ಎಸ್.ಡಿ.ಇಂಚಲ ಅವರ ಮಾತುಗಳನ್ನು ಇಲ್ಲಿ ಗಮನಿಸಬಹುದು.

ಹೀಗೆಲ್ಲ ಇರುವಾಗಲೂ ಸನದಿ ಅವರ ಕವಿತ್ವ ಶಕ್ತಿ ನಮ್ಮನ್ನು ಸದೈವ ಸೆಳೆಯುತ್ತದೆ. ಮುಂದೆ ಅವರು ಹಿರಿಯ ಕವಿಗಳಾಗಿ ಬೆಳೆಯುವ ಮೊದಲ ಹೆಜ್ಜೆಗಳನ್ನ ಇಲ್ಲಿ ಇಟ್ಟ ಹಾಗೆ ಕಾಣುತ್ತದೆ. ಹಾಗಾಗಿ ಕೆಲವೆಲ್ಲ ಒಳ್ಳೇ ಬಂಧುರವಾದ, ಮನ ಸೆಳೆಯುವ ರಚನೆಗಳಾಗಿ ಲವಲವಿಕೆಯಿಂದ ಕೂಡಿವೆ. ರಮ್ಯಭಾವ ಸಾಮಗ್ರಿ ಹೀಗೆ ತಾನೇ ತಾನಾಗಿ ಇಲ್ಲೆಲ್ಲ ಹರಡಿಕೊಳ್ಳುತ್ತದೆ.

ಬಂದಳು ಬಂದಳು ಹೂವಿನ ಹುಡುಗಿ!
ಬಳಕುವ ಬಾಗುವ ನವಿಲಿನ ನಡಿಗಿ
ಎಲ್ಲಿ ಕಲಿತಳೇನೊ!
ನವಿಲೇ
ಬಾಲೆಯಾಯಿತೇನೊ!
ಕೂದಲಿಗಿಳಿಯಿತೊ ಮೋಡದ ಮಾಟ
ಕಣ್ಣೊಳು ಹೊಳೆಯುವ ಮಿಂಚಿನ ಕೂಟ!
ಕೆಂಪು ತುಟಿಯ ತುಂಬ
ಮೊಗದೊಳು
ಬೆಳುದಿಂಗಳ ಬಿಂಬ!

ಸನದಿಯವರ ಹೆಚ್ಚಿನ ಸಂಖ್ಯೆಯವೆಲ್ಲ ಹೀಗೆ ಬಳುಕುತ್ತ ಸಾಗುವ ರಮ್ಯಭಾವ ಗೀತಗಳ ಬಗೆಯವೇ. ಅಷ್ಟಾಗಿಯೂ ಅವರು ಮಕ್ಕಳ ಕವಿಯಾಗಿ ತುಸುವೇ ತೋರಿಕೊಂಡರೂ ಪ್ರಭಾವ ಬೀರುವ ಹಾಗೆ ತಮ್ಮತನವನ್ನ ಮುಂದಿಟ್ಟಿದ್ದಾರೆ.

ಸತ್ಯಾರ್ಥಿ ಕಾವ್ಯನಾಮದ **ಚೆನ್ನಬಸಪ್ಪ ಹೊಸಮನಿ(೧೯೩೮)** ಅವರು ಬೆಳಗಾವಿ ಭಾಗದಲ್ಲಿ ಮಕ್ಕಳ ಸಾಹಿತ್ಯದ ಚುಕ್ಕಾಣಿ ಹಿಡಿದು ನಡೆಸಿದವರು. ಬಿ. ಎ. ಸನದಿ, ಡಿ. ಎಸ್. ಕರ್ಕಿ, ಎಸ್. ಡಿ. ಇಂಚಲ ಅಂಥವರ ದಾರಿಯಲ್ಲಿ ತೊಡಗಿಕೊಂಡ ಅವರು ವಿಜಾಪುರದ ಕಡೆಗಿನ ಶಿಕ್ಷಕ ಸಾಹಿತಿಗಳ ಚಳವಳಿಯ ಭಾಗವಾಗಿ ಬೆಳಗಾವಿ ಭಾಗದಲ್ಲಿ ತಾವೂ ವಿಪುಲ ಮಕ್ಕಳ ಸಾಹಿತ್ಯ ರಚಿಸುವುದಲ್ಲದೆ, ಸಂಘಟನೆ, ವಾತಾವರಣ ಮೂಡಿಸುವಲ್ಲಿ, ಸಮ್ಮೇಳನಗಳನ್ನು ಏರ್ಪಡಿಸುವಲ್ಲಿ ಶ್ರಮಿಸಿದವರು. ಸತ್ಯಾರ್ಥಿಯವರು ಕನ್ನಡ ನಾಡಿನಮಕ್ಕಳ ಸಾಹಿತ್ಯದ ಪ್ರಬಲ ಪ್ರತಿಪಾದಕರಲ್ಲಿ

ಅಗ್ರಮಾನ್ಯರಾಗಿದ್ದಾರೆ' ಎನ್ನುತ್ತಾರೆ ಸ.ರಾ. ಸುಳಕೂಡೆ ಅವರು. 'ಮಕ್ಕಳ ಸಾಹಿತ್ಯ ಅಲಕ್ಷಿತವಾಗಬಾರದು, ಅದಕ್ಕೆ ಯೋಗ್ಯ ಸ್ಥಾನ ಕಲ್ಪಿಸಬೇಕೆನ್ನುವ ನಿಟ್ಟಿನಲ್ಲಿ ಒಂದು ಚಳವಳಿಯ ರೂಪದಲ್ಲಿ ಜೆಲ್ಲೆಯಲ್ಲಿ ಹೋರಾಡಿದ್ದಾರೆ. ೧೯೯೬ರಿಂದ ೨೦೦೧ರವರೆಗೆ ಜಿಲ್ಲೆಯಾದ್ಯಂತ ಸಾಹಿತ್ಯ ಅಭಿಯಾನ ನಡೆಸಿದ್ದಾರೆ; ಶಿಶು ಸಾಹಿತ್ಯ ಜಾಗೃತಿ ಮೂಡಿಸಿದ್ದಾರೆ. ೧೯೯೯ರಲ್ಲಿ ಸ್ಥಾಪಿತವಾದ ರಾಜ್ಯಮಟ್ಟದ 'ಮಕ್ಕಳ ಸಾಹಿತ್ಯ ವೇದಿಕೆ'ಯ ಪ್ರಪ್ರಥಮ ಸಂಸ್ಥಾಪಕ ಬೆಳಗಾವಿ ಜಿಲ್ಲಾಧ್ಯಕ್ಷರಾಗಿ ಮಕ್ಕಳ ಸಾಹಿತ್ಯ ಅಭಿವೃದ್ಧಿಗಾಗಿ ಅಹರ್ನಿಶಿ ಶ್ರಮಿಸಿದ್ದಾರೆ' ಎನ್ನುತ್ತಾರೆ ಡಾ. ಸಿ. ಕೆ. ನಾವಲಗಿ ಅವರು. ಮಕ್ಕಳ ಶ್ರೇಯೋಭಿವೃದ್ಧಿಯನ್ನ, ಉತ್ತಮ ಭವಿಷ್ಯದ ಕನಸನ್ನ ಕಾಣುವ ಶಿಕ್ಷಕರಾಗಿ, ಒಬ್ಬ ಕಳಕಳಿಯ ಹಿರಿಯರಾಗಿ ಅವರು ತಮ್ಮ ಕೃಷಿಯನ್ನು ಬಹು ಮುಖ್ಯವಾಗಿ ಕವಿತೆಯ ಮಾಧ್ಯಮದಲ್ಲಿ ಮಾಡಿದವರು. ರೈತನ ಹಿರಿಮೆ, ಶ್ರಮದ ಜೀವನವನ್ನ ಎತ್ತಿತೋರಿಸುವ, ಗೌರವದಿಂದ ಕಾಣುವ ಅವರ 'ಅನ್ನದಾತ' ಎನ್ನುವ ಪದ್ಯ ಪಠ್ಯವಾಗಿ ಸೇರಿ ಮತ್ತೆ ಮತ್ತೆ ಕರ್ನಾಟಕ ಸರಕಾರದ ಪಠ್ಯದಲ್ಲಿ ೧೬ ಸಲ ಹಾಗೂ ಮಹಾರಾಷ್ಟ್ರ ಸರಕಾರದ ಪಠ್ಯದಲ್ಲಿ ೭ ಸಲ ಮುದ್ರಣಗೊಳ್ಳುತ್ತ ಎಲ್ಲೆಡೆ ಪ್ರಚುರವಾಗಿದೆ.

ಇವನೆ ನೋಡು ಅನ್ನದಾತ
ಹೊಲದಿ ದುಡಿದೆ ದುಡಿವನು
ನಾಡ ಜನರು ಬದುಕಲೆಂದು
ದವಸ ಧಾನ್ಯ ಬೆಳೆವನು

ಮಳೆಯ ಗುಡುಗು ಚಳಿಯ ನಡುಗು
ಬಿಸಿಲು ಬೇಗೆ ಸಹಿಸುತ
ಬೆವರು ಸುರಿಸಿ ಕಷ್ಟ ಸಹಿಸಿ
ಒಂದೇ ಸವನೆ ದುಡಿಯುತ

ಗಟ್ಟಿದೇಹ ದೊಡ್ಡ ಮನಸು
ದೇವನಿಂದ ಪಡೆದನು
ಯೋಗಿಯಾಗಿ ತ್ಯಾಗಿಯಾಗಿ
ಅನ್ನ ನೀಡುತಿರುವನು

ಎತ್ತು ಎರಡು ಇವನ ಜೋಡು
ಕೂಡಿ ದುಡಿವ ಗೆಳೆಯರು
ಹಿಗ್ಗು ಕುಗ್ಗು ಏನೇ ಇರಲಿ
ಹೊಂದಿಕೊಂಡು ನಡೆವರು

ಈ ಬಗೆಯ ಸರಳವಾದ ಬದುಕನ್ನ ಮೌಲ್ಯಗಳಿಂದ ವೀಕ್ಷಿಸುವ ವಸ್ತುಗಳೇ ಅವರ ಎಲ್ಲ ರಚನೆಗಳಲ್ಲಿ ಸ್ಥಾನ ಪಡೆಯುತ್ತವೆ. 'ಇಲ್ಲಿ ಇಲ್ಲ ಬೆತ್ತ ಭಯವು, ಬೇಸರಿಲ್ಲ ಮನಸಿಗೆ, ತಾಯಿಯಂಥ ಗುರುವೇ ಇಲ್ಲ, ಅರಿವು ಪಡೆದೆ ಬಾಳಿಗೆ' ಎಂದು ತಾಯಿಯ ಬಗೆಗೆ

ಹಾಡಿದರೆ, 'ವಿವಿಧ ತನದಿ ವೈರವೇಕೆ ? ಅದರೊಳಿಹುದು ಏಕತೆ, ಒಂದೇ ನೆಲವು, ಒಂದೇ ಒಲವು ಭಾರತೀಯ ಶ್ರೇಷ್ಠತೆ' ಎಂದು ಭಾವೈಕ್ಯತೆಯ ಗೀತೆ ಹಾಡುತ್ತಾರೆ.

ಹುಡುಗಿ : ಚಿಕ್ಕ ಮರಿ ! ಚೆಲುವ ಮರಿ !
ಕುರಿ ಮರಿಯೆ ಬಾ !
ಪುಟ್ಟ ಪುಟ್ಟ ಹೆಜ್ಜೆಯಿಟ್ಟು !
ಬೇಗ ಓಡಿ ಬಾ !
ಹಸಿರು ಹುಲ್ಲು ಬಟ್ಟ ಬಯಲು
ಎಲ್ಲ ಕಡೆಯಲು
ಹರುಷದಿಂದ ಕುಣಿದು ಕುಣಿದು
ತಿಂದು ನಲಿಯಲು
ಕುರಿಮರಿ: ಪುಟ್ಟ ಒಡತಿ ನಾನು ಬಾರೆ
ನನಗೆ ಹೆದರಿಕೆ !
ನಿನ್ನ ಕೈಯೊಳಿದ್ದ ಕೋಲು
ಚೆಲ್ಲು ದೂರಕೆ

ಎನ್ನುವಂಥ ಲವಲವಿಕೆಯ ಸಾಲುಗಳು ಅವರ ರಚನೆಗಳಲ್ಲಿ ಕಾಣುತ್ತವೆ.

ನಿಮ್ಮೊಡನೆ ನಿಮ್ಮಂತೆ
ಬೆಳೆ ಬೆಳೆವ ನಾವು
ನಿಮ್ಮದೇ ಅದರ್ಶವೆಂದು ನಂಬಿಹೆವು

ದ್ವೇಷ ಸುಖ ಸಂತೋಷ
ನೀವು ನೋಡಿದಿರಿ
ನಮ್ಮ ಅವನತಿಯನ್ನು ಗಮನಿಸದೆ ಹೋದಿರಿ

ಎಂದೂ ದಿಟ್ಟವಾಗಿ ಮಕ್ಕಳ ಬಾಯಲ್ಲಿ ಅನ್ನಿಸುವಲ್ಲಿ ಅವರು ಹಿಂಜರಿಕೆ ತೋರುವುದಿಲ್ಲ. 'ದಿವ್ಯಜೀವಿ', 'ಪುಟ್ಟ ಭಾರತ' 'ಮಕ್ಕಳ ಸೊಗಸು', 'ಅನ್ನದಾತ ಮತ್ತು ಇತರ ಕವಿತೆಗಳು' ಎನ್ನುವ ನಾಲ್ಕು ಕವಿತಾ ಸಂಕಲನಗಳನ್ನು ತಂದಿರುವ ಅವರು ಎರಡು ಮಕ್ಕಳ ನಾಟಕಗಳನ್ನೂ ತಂದಿರುವರು, ಹಾಗೆಯೇ ಒಂದು ಮಕ್ಕಳ ಕಾದಂಬರಿಯನ್ನೂ ರಚಿಸಿದವರು. 'ಪುಟ್ಟನ ಕನಸು' ಕಾದಂಬರಿಯಲ್ಲಿ ಮೈಸೂರಿಗೆ ವರ್ಗವಾಗುವ ಅಪ್ಪನ ಸುದ್ದಿ ತಿಳಿದು ಸಂತಸ ಪಡುವ ಹುಡುಗ ಅಲ್ಲಿನ ಝೂದ ಕನಸು ಕಾಣುತ್ತ ಅಲ್ಲಿನ ಪ್ರಾಣಿಗಳೊಡನೆ ಸಂಭಾಷಿಸುತ್ತ ಹೋಗುವ ವಸ್ತು ಇದಾಗಿದೆ. ಇಲ್ಲಿ ಪ್ರಾಣಿಗಳು ಆದರ್ಶದ, ತಿಳಿವಳಿಕೆಯ ಮಾತುಗಳನ್ನು ಆಡುತ್ತ ಪುಟ್ಟನ ಅರಿವನ್ನ ಹೆಚ್ಚಿಸಲು ನೋಡಿದ ಹಾಗೆಯೇ ಕೆಲವೆಲ್ಲ ತಮ್ಮ ಅಹಂಭಾವಗಳನ್ನು ತೊರೆದು ತಾವೇ ಅನುಭವದ ಪಾಠ ಕಲಿತುದನ್ನು ಒಪ್ಪಿಕೊಳ್ಳುತ್ತವೆ. ಸಿಂಹ ಹೀಗೆ ಸೋತು ಮಾತಾಡುತ್ತದೆ, ಹುಲಿ ಪಂಜರದಿಂದ ಪಾರಾದರೂ ತನಗೆ ಉಪಕರಿಸಿದ ಮನುಷ್ಯನನ್ನು ಕೂಡಲೆ ತಿಂದುದು, ಹಸಿವಿನ ಸಮಸ್ಯೆಯೇ ಹೊರತು ನ್ಯಾಯಾನ್ಯಾಯದ ಪ್ರಶ್ನೆಯಲ್ಲ ಎನ್ನುತ್ತದೆ.

'ಉಳವೀಶ' ಕಾವ್ಯ ನಾಮದ **ಉಳವೀಶ ಹುಲೆಪ್ಪನವರಮಠ(೧೯೨೬-೨೦೧೦)** ಅವರದು ಶಿಕ್ಷಕ ಸಾಹಿತಿಗಳಲ್ಲಿನ ಎದ್ದುಕಾಣುವ ಹೆಸರು. ಶಿಕ್ಷಕರಾಗಿ ರಾಷ್ಟ್ರಪ್ರಶಸ್ತಿಯನ್ನು ಪಡೆದಿರುವ ಉಳವೀಶರು ಮಕ್ಕಳ ಸಾಹಿತ್ಯದಲ್ಲಿಯೂ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದವವರು. ಪುಟ್ಟ ಮಕ್ಕಳಿಂದ ಹಿಡಿದು ವೈವಿಧ್ಯದ ರಚನೆಗಳನ್ನ ಮಾಡುತ್ತ ಬಂದವರು. ಗಂಭೀರವಾದ ಪ್ರಬುದ್ಧರ ಸಾಹಿತ್ಯದಲ್ಲಿಯೂ ಒಳ್ಳೆ ಆಸ್ಥೆ ತೋರಿದ ಅವರು ಮಕ್ಕಳಿಗಾಗಿಯೂ ತುಡಿದರು. ರಸಿಕ ವಾಗ್ಮಿ, ಆಶುಕವಿ, ಪ್ರವಚನಕಾರ, ಅಭಿನಯಚತುರ, ಗಾಯಕ ಮುಂತಾಗಿ ಬಹುಮುಖೀ ಪ್ರತಿಭೆಯ ಶ್ರೇಯಸ್ಸಿಗೆ ಭಾಜನರಾದವರು ಉಳವೀಶರು. ಸಿಸು ಸಂಗಮೇಶರ 'ಭಾರತೀ ಸಾಹಿತ್ಯ ಭಂಡಾರ'ದಿಂದ ಪ್ರಕಟಗೊಂಡ ಅವರ 'ಗೊಂಬವ್ವ' ಸಂಕಲನದ ಕವಿತೆಗಳ ಶೀರ್ಷಿಕೆಗಳು ಅವರ ಗ್ರಾಮೀಣ ಶೈಲಿಯ ಸೊಬಗನ್ನ ಹೇಳುತ್ತವೆ. 'ಅವ್ವನು ಇದ್ದರೆ', 'ಭಾವಾ ಬಂದ', 'ಬೆಣ್ಣೆಯ ತುಡುಗ', 'ಬುಡಬುಡಕಿ' ಮುಂತಾದುವು ಅವರ ಸಹಜದ ಮಕ್ಕಳ ಒಡನಾಟದ ಸರಕಾಗಿ ಬಂದುದನ್ನ ಹೇಳುತ್ತವೆ.

ಸಾಲೆಗೆ ಬಾರ ಮಲ್ಲಕ್ಕ
ಪಾಟಿ ಪುಸ್ತಕ ಇಲ್ಲಕ್ಕ

ಅಡಿಗೆ ಮಾಡ ಮಲ್ಲಕ್ಕ
ಗಡಿಗೆ ಮಡಿಕೆ ಇಲ್ಲಕ್ಕ

ಪೂಜಾ ಮಾಡ ಮಲ್ಲಕ್ಕ
ಹೂವು ಪತ್ರಿ ಇಲ್ಲಕ್ಕ

ಕಸೂತಿ ತೆಗೆಯೆ ಮಲ್ಲಕ್ಕ
ಸೂಜಿ ದಾರ ಇಲ್ಲಕ್ಕ

ಊಟಕ ಬಾರ ಮಲ್ಲಕ್ಕ
ಬಂದೆನು ಬೇಗನೆ ಬಡಿಸಕ್ಕ

ಇಂಥ ರಚನೆಗಳು ತಮ್ಮ ಹಾಸ್ಯದ ಸಂಗತಿಗಳೊಡನೆ ಹೆಚ್ಚು ಪ್ರಚುರತೆಯನ್ನ ಪಡೆದಿರುವುದರ ಜೊತೆಗೆ ನಮ್ಮ ಸಮಾಜದ ಚಿತ್ರಣವನ್ನ ವ್ಯಂಗ್ಯವಾಗಿ ಕಟ್ಟಿಕೊಡುವುವೂ ಆಗಿಬಿಡುತ್ತವೆ ಎನಿಸುತ್ತದೆ. ಸರಳವಾದ, ಗೇಯವಾದ, ಸುಭಗವಾದ, ಮಕ್ಕಳ ಶಬ್ದ ಸಂಪತ್ತನ್ನು ಎಲ್ಲಿಲ್ಲದಂತೆ ಗಮನಿಸುವ ಅವರ ರಚನೆಗಳು ಮಕ್ಕಳ ಸಹವಾಸದ ಶಿಕ್ಷಕ ವೃತ್ತಿಯ ಫಲಗಳಾಗಿವೆ ಎನ್ನಬಹುದು.

ತೋಟದೊಳಗಿದೆ ನಮ್ಮ ಮನೆಯದು
ಮುಂದೆ ಸುಳುವಿನ ಬಾಗಿಲು
ಹಿಂದೆ ಹಿತ್ತಲು, ಸುತ್ತು ಮುತ್ತಲು
ಹಸಿರು ಬೇಲಿಯ ಕಾವಲು

ಸರಜ ಬಹಾದ್ದುರ ಎನುವ ಹೆಸರಿನ
ಎರಡು ಎತ್ತುಗಳಿರುವವು
ಹಕ್ಕೆಯೊಳಗಿವೆ ಎಮ್ಮೆ ಆಕಳು
ನೊರೆಯ ಹಾಲನು ಕರೆವವು
ನಮ್ಮ ದೇವರ ಕೋಣೆಯೊಳಗಿದೆ
ಉರಿವ ತುಪ್ಪದ ದೀವಿಗೆ
ಎರಡು ವೇಳೆಯು ಪೂಜೆ ಸಲುವುದು
ಜಗಲಿ ಮೇಲಿನ ದೇವಗೆ

ಇಂಥ ಸರಳವಾದ, ನಮ್ಮ ನಡುವಿನ ನಡೆವಳಿಗಳ ಚಿತ್ರಣಗಳು ಅವರ ಕವಿತೆಗಳಲ್ಲಿ ಕಾಣಿಸುತ್ತ ಹೃದ್ಯ ಬದುಕಿನ ಪಾಠಗಳನ್ನ ಹೇಳಲು ಬಯಸುತ್ತವೆ.

ಮಗು : ಓ ಮುದುಕಮ್ಮ ಓ ಮುದುಕಮ್ಮ
ಕೈಯಲಿ ಕೋಲೇಕೆ?
ಮುದುಕಿ : ಬೇಕದು ನನಗೆ ಬೀಳದ ಹಾಗೆ
ಜೋಲಿಯ ಹಿಡಿಯಲಿಕೆ
ಮಗು : ಬಾಗಿಸಿ ನಡುವ ತೂಗಿಸಿ ಶಿರವ
ನಡಿಯುವಿ ನೀನೇಕೆ?
ಮುದುಕಿ : ಮುಪ್ಪಿನ ರೋಗ ಅಪ್ಪಿದೆ ಈಗ
ನೀನೂ ಬಲು ಜೋಕೆ

ಎಂದೆಲ್ಲ ಸಾಗುವ ಮಾತುಕತೆಗಳ ನಡುವೆ 'ದೇವನ ಅಗಸ ಮಾಡಿದ ಮೋಸ ಗಂಜಿಯ ಸವರಿದನು' ಎನ್ನುವ ಮಾತುಗಳೂ ಕೇಳುತ್ತವೆ, 'ಈ ಹೊಸ ಪಿಡುಗು ಬಡಿವುದು ನಿನಗು ಒಲ್ಲೆಂದರು ಕೂಡ' ಎನ್ನುವುದು ಕೇಳುತ್ತದೆ.

ರಾ.ಶಿ. ವಾಡೇದ, ಸಂ. ಬ. ಮಠಪತಿ, ಚಂದ್ರಶೇಖರ ಹಿರೇಮಠ, ರಾಜಶೇಖರ ನಿಡಗುಂದಿ, ಸಿದ್ಧರಾಮ ದ್ಯಾಗಾನಟ್ಟಿ, ಅಕಬರ ಸನದಿ, ಎಂ. ಎಂ. ಸಂಗಣ್ಣನವರ, ಎಂ.ಆರ್.ಮುಲ್ಲಾ, ರಾಜೇಂದ್ರ ಪಾಟೀಲ, ಬಿ.ಆರ್. ನಾಡಗೌಡ, ಬಿ.ಎಂ. ಪಾಟೀಲ, ಶಾಂತಾ ಜೋಗೇನವರ, ಪಂಡಿತರಾವ್ ಪಾಟೀಲ ಮುಂತಾದವರು ಈ ಕ್ಷೇತ್ರದಲ್ಲಿ ಆಸಕ್ತಿಯಿಂದ ತೊಡಗಿಸ್ಕಿಕೊಂಡಿದ್ದಾರೆ.

ಅದೇ ರೀತಿ ಬಿ.ಎಸ್. ಜಗಾಪುರ, ಬಿ.ಎಂ. ಹಾದಿಮನಿ, ಸಿದ್ಧಲಿಂಗ ಹದಿಮೂರು, ಶೇಖರ ಕತ್ತಿಗೆ, ಎಂ.ಬಿ. ಲಿಂಗದಳ್ಳಿ, ಅಣ್ಣಾರಾಯ ಸಾಲಿಮನಿ, ಗುರುಸಿದ್ಧ ಬಾಣಸಿ, ಬಾಗೂರು ಮಾರ್ಕಂಡೇಯ, ಎಚ್.ವಿ. ತೀರ್ಥೆ, ಪ್ರಕಾಶ ಕಮ್ಮಾರ, ಡಬ್ಲೂ. ಬಸವರಾಜ್, ಬಿ. ವಾಯ್.ಗಿರಿಸಾಗರ, ಶಶಿಕುಮಾರ್ ಮುಂತಾದವರ ಬರವಣಿಗೆ ಪ್ರಕಟಗೊಂಡು ಮಕ್ಕಳನ್ನು ರಂಜಿಸಿದೆ.

ಹೈದರಾಬಾದ ಕರ್ನಾಟಕದ ಪೈರು

ಡಾ. ಆನಂದ ಪಾಟೀಲ

ಹೈದರಾಬಾದ ಕರ್ನಾಟಕ ಭಾಗದಿಂದ ಬಂದ ಸಿದ್ದಯ್ಯ ಪುರಾಣಿಕರಂಥವರು ಮಕ್ಕಳ ಸಾಹಿತ್ಯಕ್ಕೆ ಹಿರಿದಾದ, ವಿಶೇಷವಾದ ಕೊಡುಗೆ ನೀಡಿದರು. ಅದನ್ನ ಮುಂದುವರೆಸಿಕೊಂಡು ಹೋಗುವಂತೆ ಅಲ್ಲಿನ ಶಿಕ್ಷಕ ಸಮುದಾಯವೂ ತಕ್ಕ ಮಟ್ಟಿಗೆ ಪ್ರಯತ್ನಕ್ಕಿಳಿದುದು ಕಂಡು ಬರುತ್ತದೆ. ಇಲ್ಲಿರುವವರು ಬಹಳಷ್ಟು ವಿಜಯಪುರದ ಕಡೆಗಿನ ಶಿಕ್ಷಕರ ಪ್ರಯತ್ನದೊಂದಿಗೆ ಒಡನಾಟವನ್ನಿಟ್ಟುಕೊಂಡವರೆ. ಹಾಗಿದ್ದಾಗಲೂ ಒಂದಿಷ್ಟೆಲ್ಲ ಪ್ರತ್ಯೇಕವಾದ ಪ್ರಯತ್ನಗಳು ಕಂಡುಬರದೇ ಇಲ್ಲ. ಕೈ ಬರಹದ ಪತ್ರಿಕೆ ತರುತ್ತಿದ್ದ ಸಿಮಾಮಾ, ಶೇಖರಪ್ಪ ಹುಲಿಗೆರಿ, ಗಿರಿರಾಜ ಹೊಸಮನಿ, ಲಕ್ಷ್ಮಣ ಕಂದಕೂರ, ಮಕ್ಕಳಿಗಾಗಿ ಈಚಿನವರೆಗೂ ಪತ್ರಿಕೆಯೊಂದನ್ನ ತರುತ್ತಿದ್ದ ಪಾ.ವಿ. ಅರಕೇರಿ, ಎ. ಕೆ. ರಾಮೇಶ್ವರ, ಚಂದ್ರಕಾಂತ ಕರದಳ್ಳಿ ಮೊದಲಾಗಿ ಅನೇಕರು ಆಸಕ್ತಿ ತಳೆದುದು ಕಾಣುತ್ತದೆ. ಅದರಲ್ಲೂ ರಾಯಚೂರು ಭಾಗದಲ್ಲಿ ಒಂದಿಷ್ಟೆಲ್ಲ ತುರುಸಿನ ಚಟುವಟಿಕೆಗಳು ನಡೆದು, ಶಾಂತರಸರಂಥ ಹಿರಿಯರು ಬೆಂಬಲಿಸುತ್ತ, ಆ ಸಮಯದಲ್ಲಿ ಒಂದು ಸಮೂಹ ಸಂಕಲನವನ್ನು ತರುವ ದೊಡ್ಡ ಪ್ರಯತ್ನ ಕೂಡ ನಡೆಯಿತು. ೧೯೭೯ರಲ್ಲಿ ಮಕ್ಕಳ ವರ್ಷದ ಆಚರಣೆಯ ಸಂದರ್ಭದಲ್ಲಿ 'ಶಿಶುಭಾರತಿ' ಎನ್ನುವ ಸಂಕಲನವನ್ನು 'ರಾಯಚೂರು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ'ವು ತಂದಿದೆ. ಇದರಲ್ಲಿ ಕನ್ನಡ ನಾಡಿನ ನಾನಾ ಕಡೆಗಳಲ್ಲಿನ ಕವಿಗಳ ಒಟ್ಟು ೫೫ ಕವಿತೆಗಳನ್ನು ಕಲೆಹಾಕಲಾಗಿದೆ. ಸಹಜವಾಗಿಯೇ ಹೈದರಾಬಾದ ಕರ್ನಾಟಕದ, ಅದರಲ್ಲೂ ಮಕ್ಕಳ ಸಾಹಿತ್ಯದಲ್ಲಿ ವಿಶೇಷವಾಗಿ ಆಸ್ಥೆ ವಹಿಸಿದ ರಾಯಚೂರು ಭಾಗದ ಕವಿಗಳ ಒಂದೊಂದು ಕವಿತೆ ಇದರಲ್ಲಿ ಸೇರಿವೆ. ರವಿ ಹಿರೇಮಠ ಅವರ ನೇತೃತ್ವದ ಗೆಳೆಯರ ಬಳಗ 'ಸಂಧ್ಯಾ ಸಾಹಿತ್ಯ ವೇದಿಕೆ' ಈ ಭಾಗದಲ್ಲಿಯೇ ರೂಪುಗೊಂಡಿದ್ದು ಹಲವಾರು ಕಾರ್ಯಕ್ರಮಗಳನ್ನ ಹಮ್ಮಿಕೊಂಡು ಮಕ್ಕಳ ಸಾಹಿತ್ಯದ ವಾತಾವರಣ ಮೂಡಿಸುವಲ್ಲಿ ಒಳ್ಳೇ ಕೆಲಸ ಮಾಡಿತು.

ಎ. ಕೆ. ರಾಮೇಶ್ವರ(೧೯೩೪) ವಿಜಾಪುರ ಮೂಲದವರು, ನಂತರ ಕಲಬುರ್ಗಿಗೆ ಹೋಗಿ ನೆಲೆಸಿದವರು. ಸಂಘಟನಾ ಚತುರರಾದ ಇವರು ಅನೇಕ ಕಾರ್ಯಾಗಾರಗಳು, ಸಮ್ಮೇಳನಗಳಂಥ ವಿಸ್ತೃತವಾದ ಚಟುವಟಿಕೆಗಳನ್ನು ಕೈಕೊಂಡು ಮಕ್ಕಳ ಸಾಹಿತ್ಯದ ವಾತಾವರಣ ಮೂಡಿಸುವಲ್ಲಿ ಕಾರಣರಾಗಿದ್ದುದನ್ನು ಇಲ್ಲಿ ಹೇಳಬೇಕು. 'ದಿಲ್ಲಿಯ ದೃಷ್ಟಿಯ ಹಳ್ಳಿಗೆ ಸೆಳೆಯಲು ಕೈಗಾರಿಕೆಯನ್ನು ಬೆಳೆಸೋಣ, ದಿನ ದಿನ ಹೊಸ ಹೊಸ ಒಡವೆಯ ಮಾಡುತ ಆರ್ಥಿಕ ಬಲವನು ಪಡೆಯೋಣ' ಎಂದು ಅವರೊಂದು ಕವಿತೆಯಲ್ಲಿ ಹಾಡಿಕೊಂಡಿರುವ ಹಾಗೆ ಗ್ರಾಮೀಣ ಪರಿಸರದ ಹಂಬಲ, ಅಲ್ಲಿನ ವಾತಾವರಣದಲ್ಲಿಯೇ ತಮ್ಮ ರಚನೆಗಳನ್ನೆಲ್ಲ ಹರವಿಕೊಂಡವರು ಎ. ಕೆ. ರಾಮೇಶ್ವರ. ವಿರಳವಾಗಿಯಾದರೂ ಅವರು ಗ್ರಾಮಿಣ ಭಾಷೆಯನ್ನು ಹಾಗೆ ಹಾಗೆ ಅಲ್ಲಲ್ಲಿ ಬಳಸಿದ್ದಾರೆ.

ರಡ್ಡೇರ ಪಾರಿ ಆರೇರ ಭಾಗಿ
ಬೇಡರ ಲಕ್ಷ್ಮಿಯು ಕೂಡಿದರು
ಪಿಂಜಾರ್ ಬೇಬಿ ಐಗೋಳ ಸರಸಿ
ಒಂದೆಡೆಗೆಲ್ಲರು ನೆರೆದಿಹರು

ನೆರಮನಿ ರಾಮು ಹೊಸಮನಿ ಭೀಮು
ಆಡುತ ಅಲ್ಲಿಯೇ ನಿಂದಿಹರು
ಗೌಡರ ಶಾಂತು ಶೆಟ್ಟರ ಕಾಂತು
ಓಡುತ ಆಟಕೆ ಬಂದಿಹರು

ಎನ್ನುವ ಮದುವೆಯ ಆಟ ಹಳ್ಳಿಯ ಬನಿಯನ್ನ ಸಾಕಷ್ಟು ಹೊತ್ತು ತಂದಿದೆ. ಡೊಂಬರ ಆಟ, ಸಾರುವ ಅಯ್ಯನವರು, ಹೆಳವ, ಗೀಗೀ ಮೇಳ, ನಂದೀಕೋಲು ಮುಂತಾದ ಜನಪದದ ಪರಂಪರೆಯ ವಸ್ತುಗಳು ಇಲ್ಲಿ ಸಹಜವಾಗಿಯೇ ಸ್ಥಾನ ಪಡೆದುಕೊಂಡಿವೆ.

ಪಂವ್ ಪಂವ್ ಎಂದು ಒದರುತ ಬಂದಿತು
ಸೆಡಕಿನ ಮೇಲೆ ಮೋಟಾರು
ಶಾಲೆಯ ಹುಡುಗರು ಕೂಡಲೆ ಎಲ್ಲರು
ಹಿಂದಕೆ ತಿರುಗಿ ನೋಡಿದರು

ಹೀಗೆ ಗ್ರಾಮೀಣದ ಆಸಕ್ತಿಗಳು ವಿಶೇಷವಾಗಿಯೇ ಹರವಿಕೊಂಡಿರುವ ರಾಮೇಶ್ವರ ಅವರು ಮತ್ತೆ ಮತ್ತೆ ಆಶ್ರಯಿಸುವುದು ನವೋದಯದ ರೂಢಿಯಾಗಿ ಬಂದ ಭಾಷೆಯ ಬಗೆಯನ್ನೇ. ಸರಳವಾದ, ಒಂದು ನಿಗದಿತ ಭಾಷಾ ಬಳಕೆಯ ಮೂಲಕ ಸಾಧ್ಯವಾದಷ್ಟೂ ಎಲ್ಲರನ್ನೂ ಮುಟ್ಟುವ ಬಗೆಯನ್ನೇ ನಿಗದಿತವಾಗಿ ಕಾಣುತ್ತೇವೆ. ಶಾಲಾ ಕಲಿಕೆಯ ವಾತಾವರಣ ಮಕ್ಕಳಿಗೆ ಕಲಿಸಲು ನೋಡಿದ ಬಗೆ, ಭಾಷಾ ಶುದ್ಧಿಯ ಕಡೆಗೆ ಗಮನಕೊಡಲು ನೋಡಿದುದು, ಶಿಷ್ಟ ಭಾಷೆಗೆ ವಾಲತೊಡಗಿದುದು ಇವೆಲ್ಲ ಇಂಥಲ್ಲಿ ಕೆಲಸ ಮಾಡತೊಡಗಿದವು ಎನ್ನಬೇಕು. ಎಂದಿನ ಹಾಗೆ ಆದರ್ಶ ಮತ್ತು ಉದಾತ್ತ ಜೀವನದ ಪಾಠಗಳು ಇವರ ಕವಿತೆಗಳಲ್ಲೂ ದಂಡಿಯಾಗಿ ಕಾಣುತ್ತವೆ

ತಾಯಿ ನಿನ್ನೆದೆಯ ನೊರೆಹಾಲಿನಲಿ
ಆನುವಂಶದ ರಕ್ತ ಹರಿದು ಬಂದಿಹುದು
ನೀನುಲಿವ ಜೋಗುಳದ ಹಾಡಿನಲಿ
ತಿಳಿವು ತಿಳಿಯಾಗಿ ಮೈದಳೆದು ನಿಂದಿಹುದು

***

ಆಡೋಣ ಬಾ ಗೆಳೆಯ
ನಮ್ಮ ಹೃದಯ ಕೊಳೆಯ ಕಳೆದು
ದಿನ ದಿನವು ಆಡೋಣ
ನಮಗೆ ವೈರಿಯಾಗಿಹ
ಸೋಮಾರಿತನವನು ದೂಡುತ
ನಲಿಯೋಣ ಬಾ ಗೆಳೆಯ

***

ಕಾಡು ನಮಗಿದು ನಾಡು ಗೆಳೆಯನೆ
ಮಮತೆ ತುಂಬಿದ ಅರಮನೆ
ಯಾವ ಮನೆಯಲಿ ಪ್ರೀತಿ ಇರುವುದೊ
ಅದುವೆ ನಿಜದಲಿ ಗುರುಮನೆ

ನೆರಮನಿ ರಾಮು ಹೊಸಮನಿ ಭೀಮು
ಆಡುತ ಅಲ್ಲಿಯೇ ನಿಂದಿಹರು
ಗೌಡರ ಶಾಂತು ಶೆಟ್ಟರ ಕಾಂತು
ಓಡುತ ಆಟಕೆ ಬಂದಿಹರು

ಎನ್ನುವ ಮದುವೆಯ ಆಟ ಹಳ್ಳಿಯ ಬನಿಯನ್ನ ಸಾಕಷ್ಟು ಹೊತ್ತು ತಂದಿದೆ. ಡೊಂಬರ ಆಟ, ಸಾರುವ ಅಯ್ಯನವರು, ಹೆಳವ, ಗೀಗೀ ಮೇಳ, ನಂದೀಕೋಲು ಮುಂತಾದ ಜನಪದದ ಪರಂಪರೆಯ ವಸ್ತುಗಳು ಇಲ್ಲಿ ಸಹಜವಾಗಿಯೇ ಸ್ಥಾನ ಪಡೆದುಕೊಂಡಿವೆ.

ಪಂವ್ ಪಂವ್ ಎಂದು ಒದರುತ ಬಂದಿತು
ಸೆಡಕಿನ ಮೇಲೆ ಮೋಟಾರು
ಶಾಲೆಯ ಹುಡುಗರು ಕೂಡಲೆ ಎಲ್ಲರು
ಹಿಂದಕೆ ತಿರುಗಿ ನೋಡಿದರು

ಹೀಗೆ ಗ್ರಾಮೀಣದ ಆಸಕ್ತಿಗಳು ವಿಶೇಷವಾಗಿಯೇ ಹರವಿಕೊಂಡಿರುವ ರಾಮೇಶ್ವರ ಅವರು ಮತ್ತೆ ಮತ್ತೆ ಆಶ್ರಯಿಸುವುದು ನವೋದಯದ ರೂಢಿಯಾಗಿ ಬಂದ ಭಾಷೆಯ ಬಗೆಯನ್ನೇ. ಸರಳವಾದ, ಒಂದು ನಿಗದಿತ ಭಾಷಾ ಬಳಕೆಯ ಮೂಲಕ ಸಾಧ್ಯವಾದಷ್ಟೂ ಎಲ್ಲರನ್ನೂ ಮುಟ್ಟುವ ಬಗೆಯನ್ನೇ ನಿಗದಿತವಾಗಿ ಕಾಣುತ್ತೇವೆ. ಶಾಲಾ ಕಲಿಕೆಯ ವಾತಾವರಣ ಮಕ್ಕಳಿಗೆ ಕಲಿಸಲು ನೋಡಿದ ಬಗೆ, ಭಾಷಾ ಶುದ್ಧಿಯ ಕಡೆಗೆ ಗಮನಕೊಡಲು ನೋಡಿದುದು, ಶಿಷ್ಟ ಭಾಷೆಗೆ ವಾಲತೊಡಗಿದುದು ಇವೆಲ್ಲ ಇಂಥಲ್ಲಿ ಕೆಲಸ ಮಾಡತೊಡಗಿದವು ಎನ್ನಬೇಕು. ಎಂದಿನ ಹಾಗೆ ಆದರ್ಶ ಮತ್ತು ಉದಾತ್ತ ಜೀವನದ ಪಾಠಗಳು ಇವರ ಕವಿತೆಗಳಲ್ಲೂ ದಂಡಿಯಾಗಿ ಕಾಣುತ್ತವೆ

ತಾಯಿ ನಿನ್ನೆದೆಯ ನೊರೆಹಾಲಿನಲಿ
ಆನುವಂಶದ ರಕ್ತ ಹರಿದು ಬಂದಿಹುದು
ನೀನುಲಿವ ಜೋಗುಳದ ಹಾಡಿನಲಿ
ತಿಳಿವು ತಿಳಿಯಾಗಿ ಮೈದಳೆದು ನಿಂದಿಹುದು

***

ಆಡೋಣ ಬಾ ಗೆಳೆಯ
ನಮ್ಮ ಹೃದಯ ಕೊಳೆಯ ಕಳೆದು
ದಿನ ದಿನವು ಆಡೋಣ
ನಮಗೆ ವೈರಿಯಾಗಿಹ
ಸೋಮಾರಿತನವನು ದೂಡುತ
ನಲಿಯೋಣ ಬಾ ಗೆಳೆಯ

***

ಕಾಡು ನಮಗಿದು ನಾಡು ಗೆಳೆಯನೆ
ಮಮತೆ ತುಂಬಿದ ಅರಮನೆ
ಯಾವ ಮನೆಯಲಿ ಪ್ರೀತಿ ಇರುವುದೊ
ಅದುವೆ ನಿಜದಲಿ ಗುರುಮನೆ

ಇಂಥ ಭಾರದ, ದೊಡ್ಡವರ ಅಭಿಲಾಷೆಯ ಮಾತುಗಳು ಮಕ್ಕಳ ಮೂಲಕ ಹೊಮ್ಮುವಂತೆ ರಚನೆಗಿಳಿಯುವುದನ್ನು ಅಗತ್ಯವೆಂದೇ ಭಾವಿಸಿದಂತಿದೆ. ಅಷ್ಟರ ಮಟ್ಟಿಗೆ ಅದರ ಬಾಹುಳ್ಯ. ಇನ್ನೊಂದು ತಪ್ಪದ ಸಂಗತಿ ಎಂದರೆ ಇವೆಲ್ಲ ಹಾಡುಗಳೇ ನಿಗದಿತ ಲಯಗಳನ್ನು ಆಶ್ರಯಿಸಿ ಭಾವಗೀತ ಪರಂಪರೆಯನ್ನು ಮುಂದುವರೆಸಿದಂಥವು. ಇಂಥಲ್ಲೆಲ್ಲ ಮಕ್ಕಳ ಸಹಜದ ಬಾಲ್ಯವೇ ಕಾಣೆಯಾಗಿ ಬಿಡುತ್ತದೆ ಎನಿಸಿದರೆ ಅತಿಶಯೋಕ್ತಿಯಲ್ಲ. ಅಷ್ಟರ ಮಟ್ಟಿಗೆ ಹಿರಿಯರಾಗಿ ತಮಗೆ ಅಗತ್ಯವಾದುದನ್ನು ಮಕ್ಕಳ ಮುಂದೆ ಇಡಲು ನೋಡಿದ ಸರಕೇ ಇಲ್ಲಿ ಬಹು ಮುಖ್ಯವಾಗಿ ಕಾಣುವುದು. ಮಕ್ಕಳ ಸಾಹಿತ್ಯದ ವಾತಾವರಣದಲ್ಲಿ, ಅನೇಕ ಸಲ ತಾವೇ ಸಂಘಟಿಸುತ್ತ, ಕಟ್ಟಿಕೊಳ್ಳುತ್ತ ಚಟುವಟಿಕೆಯಿಂದ ಬರವಣಿಗೆಯಲ್ಲಿ ನಿಗದಿತವಾಗಿ ತೊಡಗಿಕೊಳ್ಳುತ್ತ ಬಂದ ರಾಮೇಶ್ವರ ಅವರು ಐದು ಸಂಕಲನಗಳನ್ನ ತಂದುದಿದೆ. ಹಲವಾರು ಪುರಸ್ಕಾರಗಳಿಗೂ ಅವರು ಭಾಜನರು. ಇವರ ಬಹುತೇಕ ಸಂಕಲನಗಳು ಸಿಸು ಸಂಗಮೇಶರ ಪ್ರಕಾಶನದಲ್ಲಿಯೇ ಪ್ರಕಟವಾಗಿರುವುದು ಒಂದು ವಿಶೇಷವಾಗಿದೆ.

'ಮಹಾಂತಪ್ರಿಯ' ಕಾವ್ಯನಾಮದ **ಶೇಖರಪ್ಪ ಹುಲಿಗೆರೆ** ಅವರು ಈ ಭಾಗದಲ್ಲಿ ಕಳಕಳಿಯಿಂದ ಕೆಲಸಮಾಡಿದ ಇನ್ನೊಬ್ಬ ಹಿರಿಯರು. ೧೯೭೯ರಲ್ಲಿ ಅಂತರರಾಷ್ಟ್ರೀಯ ಮಕ್ಕಳ ವರ್ಷದ ಅಂಗವಾಗಿ ಸಂಪಾದಿಸಿದ 'ಶಿಶುಭಾರತಿ' ಎನ್ನುವ ಸಂಕಲನ ಅವರ ಹಿರಿಯಾಸೆಗಳನ್ನು ಹೇಳುತ್ತದೆ. ಇದರಲ್ಲಿ ನಾಡಿನ ಹಲವಾರು ಕಡೆಗಳಲ್ಲಿನ ಕವಿಗಳಿಂದ ಮಕ್ಕಳ ಕವಿತೆಗಳನ್ನು ರಚಿಸಿ ಒಂದೆಡೆ ಸಂಕಲಿಸಲಾಗಿದೆ. ಸಿದ್ದಯ್ಯ ಪುರಾಣಿಕ, ರಾಘವೇಂದ್ರ ಇಟಗಿ, ಶಾಂತರಸ, ರಸಿಕ ಪುತ್ತಿಗೆ, ಪಳಕಳ ಸೀತಾರಾಮ ಭಟ್ಟ, ಶಂ. ಗು. ಬಿರಾದಾರ ಮೊದಲಾಗಿ ಅನೇಕರನ್ನ ಕಲೆಹಾಕಿಕೊಂಡು ತಂದ ಈ ಸಂಕಲನ ಒಂದು ಒಳ್ಳೆಯ ಪ್ರಯತ್ನ. 'ಶಿಶುಭಾರತಿ'ಯನ್ನು ಓದಿದೆ. ಮತ್ತೆ ಮತ್ತೆ ಓದಿ ನಲಿವುಗೊಂಡೆ. ವೈವಿಧ್ಯಮಯವೂ ಸುಂದರವೂ ಸರಳವೂ ಆಗಿರುವ ಈ ಕವನಗಳು ಮಕ್ಕಳ ಹೃದಯಗಳನ್ನು ಖಂಡಿತವಾಗಿ ಸೂರೆಗೊಳ್ಳುವವು' ಎಂದಿರುವ ಶಾಂತರಸರ ಮಾತುಗಳನ್ನ ಇಲ್ಲಿ ನೆನೆಯಬಹುದು.

ಕವಿತೆಗಳನ್ನ ಬರೆಯುವುದರಲ್ಲಿಯೇ ಒಲವುಳ್ಳ ಮಹಾಂತಪ್ರಿಯರು ಮಕ್ಕಳಿಗಾಗಿ 'ಪುಗ್ಗಾ', 'ಬಣ್ಣದ ಬಗರಿ', 'ಮಕ್ಕಳ ಮುತ್ತು', 'ಚಕ ಚಕ ಚುಕ್ಕಿ', 'ಬೋರಂಗಿ' ಮುಂತಾಗಿ ಅನೇಕ ಸಂಕಲನಗಳನ್ನ ತಂದಿರುವರು. ಗ್ರಾಮೀಣ ಬನಿಯನ್ನ ವಿಶೇಷವಾಗಿಯೇ ತಮ್ಮ ರಚನೆಗಳಲ್ಲಿ ತಂದುಕೊಳ್ಳುವ ಅವರು ರಂಜಿಸುವ ಸಾಮಗ್ರಿಯನ್ನ ಸಾಕಷ್ಟು ತಮ್ಮ ರಚನೆಗಳಲ್ಲಿ ತಂದಿರುವರು.

ಅಜ್ಜನ ಕೋಟು ಬಲು ಮಾಟು
ಬನ್ನಣ ತುಂಬ ಪೆಪ್ಪರಮೆಂಟು
ನೊಡಲು ಕೋಟು ಕಿಮಟು ಕಿಮಟು
ಒಳಗಡೆ ಘಮಘಮ ಬಿಸ್ಕೀಟು

ಮದುವೆಯ ನೆನಪಿಗೆ ಮಾವನು ಹೊಲಿಸಿದ
ಅಜ್ಜಗೆ ಬೆಚ್ಚನೆ ನೀಡುವ ಕೋಟು
ಕೋಟನು ಧರಿಸಿ ಅಜ್ಜಿಯ ಕೂಡ
ಅಜ್ಜನು ತೆಗೆಸಿಹ ಬಣ್ಣದ ಫೋಟು

ಹಾಸ್ಯದ ವಸ್ತುಗಳೂ ಅವರ ರಚನೆಗಳಲ್ಲಿ ಸೆಳೆಯುತ್ತವೆ. ಇದು ಅವರ ವೈಶಿಷ್ಟ್ಯವಾಗಿದೆ.

ಪಾಠವ ಮಾಡಿ ಆಟವನಾಡಿ
ಬಂದನು ಭೀಮನು ಓಡೋಡಿ
ಹೋಳಿಗೆ ಪಾಯಸ ಘಮ ಘಮ ವಾಸನೆ
ಕೂಡಲೇ ಬಡಿಯಿತು ಮೂಗಿನಡಿ

ಅವರ ರಚನೆಗಳಲ್ಲಿ ವೈವಿಧ್ಯತೆ ಕಾಣಿಸುತ್ತದೆ. ರಂಜನೆಯ ಸಂಗತಿಗಳೊಡನೆ, ಸಾಮಾಜಿಕ ಕಳಕಳಿಯ ವಸ್ತುಗಳನ್ನೂ ಅವರು ತರಲು ಬಯಸಿದರು.

ರಂಗನ ವಾಸವು
ಗುಡಿಸಲಲಿ
ನಿಂಗನ ನಿದ್ದೆಯು
ಬೀದಿಯಲಿ

ಹರಿದ ಅಂಗಿಯು
ಮೈಯಲ್ಲಿ
ಹಸಿದ ಭಂಗಿಯು
ಮುಖದಲ್ಲಿ

ಅಪ್ಪಗೆ ಕೂಲಿಯು
ದಿನವೆಲ್ಲ
ಅವ್ವಗೆ ಮುಸುರೆ
ಹಗಲೆಲ್ಲ

'ಹಾಡುವ ಹಕ್ಕಿಯ ದನಿಹಂಗ, ಬಲು ಇಂಪು ಕಿವಿಗೆ ನನ ತಂದೆ, ಮಕ್ಕಳ ಹಾಡು ಜೇನು ಸವಿದ್ಹಾಂಗ' ಎಂದೇ ತ್ರಿಪದಿಯಲ್ಲಿ ಹೇಳಿಕೊಂಡಿರುವ ಅವರು ಮಕ್ಕಳ ಭವಿಷ್ಯಕ್ಕೆ ಆಸರೆಯಾಗುವ ಒಳ್ಳೆಯ ಮಾತಿನ ಹಲವಾರು ರಚನೆಗಳನ್ನ ಬಿಡದೆ ಮಾಡುತ್ತ ಬಂದಿದ್ದಾರೆ.

ಹೈದರಾಬಾದ ಕರ್ನಾಟಕದ ಸಗರನಾಡಿನ ಶಹಾಪೂರದಲ್ಲಿದ್ದು, ಒಂದಾದ ಮೇಲೊಂದರಂತೆ ಸಂಕಲನ ಪ್ರಕಟಿಸುತ್ತ ಸಾಕಷ್ಟು ಬರೆಯುತ್ತ ಬಂದವರು **ಚಂದ್ರಕಾಂತ ಕರದಳ್ಳಿ(೧೯೫೨)** ಅವರು. ಕತೆಗಳನ್ನು ವಿಶೇಷವಾಗಿ ಬರೆದಿರುವ ಅವರು ಕಾದಂಬರಿಗಳನ್ನೂ, ಕವಿತೆಗಳನ್ನೂ ಬರೆದಿರುವರು. ಮಕ್ಕಳೊಡನೆ ಮಾತುಕತೆ ನಡೆಸುತ್ತ, ಕತೆಯನ್ನು ಹೇಳುವ ತಮ್ಮ ಉದ್ದೇಶವನ್ನು, ಅವುಗಳ ಹಿನ್ನೆಲೆಯನ್ನು, ಅವುಗಳ ಸಂದೇಶವನ್ನು ಮಕ್ಕಳೊಡನೆ ಹಂಚಿಕೊಳ್ಳುತ್ತ ಹೇಳುತ್ತ ಹೋಗುವುದು ಅವರದೊಂದು ವಿಶೇಷ. ಹಾಗಾಗಿ ಒಂದು ಬಗೆಯ ಲವಲವಿಕೆ ಕಾಣುತ್ತದೆ. ಅವರ ಕಾದಂಬರಿ 'ಮಾಯದ ಗಂಟೆ', 'ಮಹಾ ಜಿಪುಣ ಮೈದಾಸ' ಇವು ಜನಪದ ಹಾಗೂ ಈಗಾಗಲೇ ಅತ್ಯಂತ ಜನಪ್ರಿಯವಾಗಿರುವ ಇಂಗ್ಲಿಷಿನ ಕತೆಯೊಂದನ್ನ ಆಧರಿಸಿಕೊಂಡು ವಿಸ್ತರಿಸಿಕೊಂಡಂಥವು. ಈ ವಿಸ್ತಾರ ಮಾಡಿಕೊಂಡ ಕತೆಗಳನ್ನು ಹರಟುತ್ತ, ಸುತ್ತಲಿನ ಅನೇಕ ಸಂಗತಿಗಳನ್ನು ಹರವಿಕೊಳ್ಳುತ್ತ, ನಡುನಡುವೆ ಆಡುಮಾತಿನ ಶೈಲಿಯನ್ನ ಬಳಸಿಕೊಳ್ಳುತ್ತ ಹೋಗುವುದು ಜೀವಂತಿಕೆಯನ್ನು ತಂದಿದೆ ಎನ್ನಬಹುದು. 'ಮಾಯದ ಗಂಟೆ'ಯ ಕತೆ ಗ್ರಾಮೀಣರಲ್ಲಿ ಪ್ರಚುರವಾಗಿರುವ ಅಣ್ಣತಮ್ಮಂದಿರ ನಡುವಿನ ಜಗಳ, ವಿರಸದಂಥ

ವಸ್ತುವನ್ನು ಆಧರಿಸಿದ್ದು. ನಂಬಿಗಸ್ಥ ತಮ್ಮನನ್ನ ಅಣ್ಣ ಮೋಸ ಮಾಡುತ್ತಾನೆ. ತಮ್ಮನ ಮುಗ್ಧತೆಗೆ, ಒಳ್ಳೆಯ ಮನಸ್ಸಿಗೆ ಸರಿಯಾಗಿ ಸನ್ಯಾಸಿಯೊಬ್ಬ ಗಂಟೆಯೊಂದನ್ನು ನೀಡಿ ಹೋಗುತ್ತಾನೆ. ಅದು ಮಾಯದ ಗಂಟೆ. ಅದರಿಂದ ಅವನ ಸಮಸ್ಯೆಯೆಲ್ಲ ಪರಿಹಾರವಾಯಿತು, ಅಣ್ಣ ಒಳಗೊಳಗೇ ಮತ್ತೆ ಸಂಚು ಹೂಡಿ ಆ ಗಂಟೆಯನ್ನ ಲಪಟಾಯಿಸಲು ನೋಡುತ್ತಾನೆ. ಪರಿಣಾಮವನ್ನೂ ಕೊನೆಯಲ್ಲಿ ಅನುಭವಿಸುತ್ತಾನೆ. ಹೀಗೆಯೇ ಮೈದಾಸನ ಅತಿ ಆಸೆಯ ಕತೆ. ಅದೇ 'ಉಪ್ಪಿನ ಗೊಂಬೆ' ಎನ್ನುವ ಕಾದಂಬರಿ ಎನಿಸಿಕೊಂಡಿರುವ ಕತೆ ಲೇಖಕರದೇ ಕಲ್ಪನೆಯಿಂದ ಅರಳಿರುವುದು. ಉಸುಕಿನಲಿ ತನ್ನತಾನೇ ಮೂಡಿದ ಗೊಂಬೆಯೊಂದು ಚೆನ್ನಪಟ್ಟಣದ ಪ್ರವಾಸ ಮಾಡಿ ಅಲ್ಲಿನ ಬಣ್ಣದ ಗೊಂಬೆಗಳೊಡನೆ ಬೆರೆತು ಮತ್ತೆ ಅಲ್ಲಿಂದ ಪ್ರಯಾಣಿಸಿ ಸಾಗರ ಸೇರುವ ಕತೆ ವಿಸ್ತಾರಕ್ಕೆ ಹರಡಿದೆ. ಮೋಡಗಳೇಕೆ ಗುಡುಗುತ್ತವೆ? ರತ್ನಪಕ್ಷಿ ದೂರಕ್ಕೆ ಏಕೆ ಹಾರುವುದಿಲ್ಲ? ನರಿ ಯಾವಾಗಲೂ ಓಡಾಡಿಕೊಂಡಿರುತ್ತದೆ ಏಕೆ? ಕಪ್ಪೆಯ ಮೈಮೇಲೆ ಬೊಕ್ಕೆಗಳೇಕೆ? ಮುಂತಾದ ಸಂಗತಿಗಳಿಗೆ ಕಲ್ಪನೆಯನ್ನ ಹಬ್ಬಿಸಿ ಕತೆ ಮಾಡಿರುವ ಅನೇಕ ಕತೆಗಳನ್ನ ರಂಜಕವಾಗಿ ಅವರು ಹೇಳಿದ್ದಾರೆ. ಕತೆಗಳ ನಡುವೆ ಕವಿತೆಗಳ ಸಾಲುಗಳನ್ನು ಪೋಣಿಸುತ್ತ ಸೊಗಸಾಗಿಸಲು ನೋಡಿದ್ದಾರೆ.

ಇವರು ಕಥೆಗಳನ್ನು ಸಾಮಾನ್ಯವಾಗಿ ಅಜ್ಜನಂಥ ಹಿರಿಯರಿಂದ ಹೇಳಿಸಿದ್ದು ಕಾಣಿಸುತ್ತದೆ. ನಡುನಡುವೆ ಮಕ್ಕಳು ಪ್ರಶ್ನೆಗಳನ್ನ ಕೇಳುವುದು, ಅವಕ್ಕೆ ಅಜ್ಜ ಉತ್ತರ ನೀಡುವುದು ಮುಂತಾಗಿ ಕತೆ ಬೆಳೆಯುತ್ತ ಹೋಗುತ್ತವೆ. ಜನಪದ ಕತೆಗಳನ್ನೇ, ಅಂಥವುಗಳ ಜಾಡಿನಲ್ಲೇ ಹೆಣೆದ ಕತೆಗಳೇ ಕರದಳ್ಳಿ ಅವರ ಸರಕಿನಲ್ಲಿ ಸಾಮಾನ್ಯವಾಗಿ ಕಾಣುವುದು. ಬೆದರುಗೊಂಬೆಯ ಕತೆಯನ್ನ ಅವರು ಬಳಸಿಕೊಂಡು ಕಂಡುಕೊಂಡಿರುವ ಕಲ್ಪನೆ ಹೀಗಿದೆ. ಒಂದು ಹೊಸ ಮನೆಗೆ ತೂಗುಹಾಕಿದ ಬೆದರುಗೊಂಬೆ ತನ್ನ ಉದ್ದೇಶದ ಕೆಲಸ ಮಾಡಿಕೊಂಡಿತ್ತು. ವಿಕಾರವಾಗಿದ್ದ ಅದರಿಂದ ಉದ್ದೇಶಿತ ಕೆಟ್ಟಕಣ್ಣಿನ ದೃಷ್ಟಿ ಆ ಮನೆಯ ಮೇಲೆ ಬೀಳುವುದು ತಪ್ಪಿತ್ತಂತೆ. ಆದರೆ ಮನೆ ಹಳೆಯದಾದಂತೆ ಜನಗಳೂ ಆ ಮನೆಯ ಕಡೆ ಅಷ್ಟಾಗಿ ನೋಡುವುದನ್ನು ಮರೆಯತೊಡಗಿದರು. ಅದರಿಂದ ಬೆದರಗೊಂಬೆಯ ಪ್ರಯೋಜನ ಈಗೇನೂ ಬರದಂತೆ ಆಗತೊಡಗಿತು. ಆದರೆ ಪಕ್ಷಿಗಳು ಈಗ ಧೈರ್ಯ ಮಾಡಿ ಹರಿದುಹೋದ ಅದರ ಶರೀರದಲ್ಲಿ ಮನೆ ಮಾಡಿಕೊಂಡವು. ಆ ಬೆದರುಗೊಂಬೆ ಮೊದಲಿನಂತೆ ಕೆಟ್ಟಕಣ್ಣು ತಾಗದಿರಲೆಂಬ ಉದ್ದೇಶ ಪೂರೈಸದೆ ಸಂತನಂತಾಗತೊಡಗಿತಂತೆ, ನಿರ್ಲಿಪ್ತನಾಗಿರತೊಡಗಿತಂತೆ. 'ತನ್ನತನವನ್ನು ಬಿಟ್ಟುಕೊಟ್ಟು ಎಲ್ಲರಿಗೂ ಬೇಕಾಗುವಂತೆ ಬಾಳಿತು' ಎನ್ನುತ್ತಾರೆ ಲೇಖಕರು. ಕತೆಗಳಲ್ಲಿ ಅನೇಕ ಸಲ ಕತೆಯ ಸಂಗತಿ ಗೌಣವಾಗಿ ವಿವರಗಳು, ಹೇಳಬೇಕಾದ ಸಂದೇಶಗಳು ಎದ್ದುಕಾಣುತ್ತವೆ. 'ಮಾವಿನ ಮರ ಬೆಳೆದದು ಹೀಗೆ ಮತ್ತು ಇತರ ಕತೆಗಳು', 'ಆಕಾಶವೇಕೆ ಮೇಲಿದೆ', 'ಕುರುಡ ಮತ್ತು ಕಂದೀಲು ಹಾಗೂ ಇತರ ಕಥೆಗಳು', 'ಉಪ್ಪಿನಗೊಂಬೆಯ ಹುಟ್ಟೂರು ಮತ್ತು ಇತರ ಕಥೆಗಳು' ಹೀಗೆ ಕತೆಗಳನ್ನು ಹೊಂದಿದ ಸಂಕಲನಗಳು. 'ಸಗರಾದ್ರಿ ಚಾರಣ' ಸಗರದಲ್ಲಿಯ ಬೆಟ್ಟದ ಚಾರಣವನ್ನೇ ವಿವರಣೆಗೆ ಇಟ್ಟುಕೊಂಡಿರುವ ಕೃತಿ. ಕಾದಂಬರಿ ಎಂದು ಕರೆದಿರುವ ಈ ರಚನೆಯಲ್ಲಿ ಚಾರಣದ ನೆಪದಿಂದ ಬೆಟ್ಟದ ವಿವರಗಳನ್ನು ನೀಡಿರುವ ಸಂಗತಿಗಳಿವೆ, ಆ ನಿಟ್ಟಿನಲ್ಲಿ ಇದು ವಿಶೇಷವಾಗಿಯೇ ಇದೆ. ನಮ್ಮ ಸಾಂಸ್ಕೃತಿಕ ಬದುಕನ್ನು ಪರಿಚಯಿಸುವ, ಪಾಠ ಹೇಳುವ, ಆದರ್ಶದ, ನೀತಿಯ ಮಾತು ಹೇಳುವ, ರಾಷ್ಟ್ರಪ್ರೇಮ, ಹಿರಿಯರ ಮೇಲಿನ ಗೌರವ ತೋರಿಸುವ ಅನೇಕ ಪದ್ಯಗಳನ್ನೂ ಕರದಳ್ಳಿಯವರು ಬರೆದಿದ್ದಾರೆ.

ಊರಮುಂದಿನ ತೋಟ
ಗಿಡ ಗಂಟಿ ಕೂಟ
ಹಕ್ಕಿ ಪಕ್ಕಿ ಆಟ
ಗೆಳೆಯರೊಡನೆ ನೋಟ
ಸಿರಿಯ ಸೊಬಗು ಮಾಟ
ಮುಗಿಲ ಮೋಡ ಓಟ
ಚುಕ್ಕಿ ಚಿಕ್ಕಿ ಮಿಣುಕಾಟ

ಅಂಥ ಅನೇಕ ಸೊಗಸಿನ ರಚನೆಗಳು ಚಂದ್ರಕಾಂತ ಕರದಳ್ಳಿ ಅವರಲ್ಲಿ ಕಾಣುತ್ತವೆ.

ಕಲಬುರ್ಗಿಯ ಕಡೆಯ ಭಾಷೆಯನ್ನು ಸರಾಗವಾಗಿ ಬಳಸಿಕೊಳ್ಳುವುದು ಚಂದ್ರಕಾಂತ ಕರದಳ್ಳಿ ಅವರ ಮತ್ತೊಂದು ವೈಶಿಷ್ಟ್ಯವಾಗಿದೆ. ಇದು ಮಕ್ಕಳಿಗೆ ನುಡಿಗೆ ಇರುವ ಭಾಷಾಶಕ್ತಿ, ವಿವಿಧ ಅರ್ಥ, ಸಾಂದರ್ಭಿಕ ಮಹತ್ವ ಮುಂತಾದವುಗಳ ಪರಿಚಯ ಆಗುತ್ತದೆ. ಅವರ 'ಮಾಯದ ಗಂಟೆ' ಕಾದಂಬರಿಯಲ್ಲಿ ಕೆಲವು ಸಾಲುಗಳನ್ನು ಇಲ್ಲಿ ಉದಾಹರಿಸಬಹುದು:

> ಬ್ಯಾಸಿಗಿ ದಿವ್ಸ ಅಂತ ನಿಮ್ಗ ಮೊದ್ಲೇ ಹೇಳಿನಲ್ಲ. ಕಲಬುರ್ಗಿ ಜಿಲ್ಲಾದಾಗ, ಬ್ಯಾಸಗಿ ದಿನದಾಗ ಹಪ್ಪಳ ಮಾಡತಾರ, ಶ್ಯಾಂವಿಗೆ ಮಾಡತಾರ, ಗೋಲಿ ಅಂತ ಮಾಡ್ತಾರ. ಮಕ್ಕಳು ನೀರು ತರ್ತಿನಂಥ ಮನೀಗಿ ಹೋಗಿದ್ರಲ್ಲ, ಬಿಸಿಲಿನ ಝಳಕ್ಕ ಮನೀಮಂದಿ ಎಲ್ಲ ಸಬ್ ಮಲಗಿತ್ತು. ಅಂಗಳದಾಗ ಹಪ್ಪಳ, ಉಳ್ಳಾಗಡ್ಡಿ, ಸೆಂಡಗಿ ಮಾಡಿ ಒಣ ಹಾಕಿದ್ರು. ಹೊಲಕ್ಕ ಬಿತ್ತಬೇಕಂತ ಸೇಂಗಾದ ಕಾಳ್ನೂ ಒಡೆದಿದ್ರು...
>
> ಯಾರೋ ತಮ್ಮಾ, ಅಳುಮೋರೆ ಮಾಡ್ಕೊಂಡು ಬಂದೀಯಲಾ, ಹೋಗ ಕಾಲಕ್ಕ ನಕ್ಕೋತ ಹೋಗಿದ್ದಿ ಏನಾತು? ಅಜ್ಜ ಕೇಳಿಯೇ ಬಿಟ್ಟ.

ಉತ್ತರ ಕನ್ನಡ ಜಿಲ್ಲೆಯ ವೈವಿಧ್ಯದ ಬೆಳೆ

ಉತ್ತರ ಕನ್ನಡ ಜಿಲ್ಲೆ ಶೈಕ್ಷಣಿಕ ಕಾರಣಕ್ಕೋ, ಜೀವನದ ಹಲವಾರು ವಹಿವಾಟುಗಳ ಕಾರಣಕ್ಕೋ ಸನಿಹದ ಧಾರವಾಡ-ಹುಬ್ಬಳ್ಳಿಗಳ ಸಂಪರ್ಕದಲ್ಲಿರುತ್ತ ಉತ್ತರ ಕರ್ನಾಟಕವೆಂದು ಕೊಳ್ಳುವ ಪ್ರದೇಶಕ್ಕೆ ಸೇರಿದರೂ, ಒಂದಿಷ್ಟೆಲ್ಲ ತನ್ನ ಪ್ರಾಕೃತಿಕ ಕಾರಣಕ್ಕಾಗಿ, ಬದುಕಿನ ವಿಭಿನ್ನ ಶೈಲಿಯ ಅಗತ್ಯಗಳಿಂದಾಗಿ ಪ್ರತ್ಯೇಕವಾಗಿಯೇ ಕಂಡಂತಹದು. ಅಲ್ಲಿನ ಮಕ್ಕಳ ಸಾಹಿತ್ಯವೂ ಹೀಗೆಯೇ ಪ್ರತ್ಯೇಕವಾಗಿಯೇ ತೊಡಗಿಕೊಂಡ ಬಗೆಯದು. ದಿನಕರ ದೇಸಾಯಿಯವರಂಥ ಹಿರಿಯರು ಮಕ್ಕಳ ಲೋಕದಲ್ಲಿ ತೋರಿದ ಆಸ್ಥೆಯನ್ನ ಮುಂದೆ ಕೆಲವರಾದರೂ ಉಳಿಸಿ ಬೆಳಸಿಕೊಂಡು ಬಂದರು.

ಪ್ರಬುದ್ಧರ ಸಾಹಿತ್ಯದಲ್ಲಿ ಆಸ್ಥೆಯಿಂದ ತೊಡಗಿಕೊಂಡಿದ್ದ, ಹಾಗೆಯೇ ಬಂಡಾಯ ಚಳವಳಿಯ ಮುಂಚೂಣಿಯಲ್ಲಿದ್ದ **ಆರ್.ವಿ. ಭಂಡಾರಿ** ಅವರು ಉತ್ತರ ಕನ್ನಡ ಜಿಲ್ಲೆಯಿಂದ ಬಹುಶ: ಒಬ್ಬರೇ ಒಬ್ಬರಾಗಿ ಮಕ್ಕಳ ಸಾಹಿತ್ಯದಲ್ಲಿ ಅಷ್ಟೇ ಆಸಕ್ತಿಯಿಂದ ತೊಡಗಿಕೊಂಡವರಾಗಿ ಎದ್ದುಕಾಣುವ ವ್ಯಕ್ತಿತ್ವದವರು. ಶಿಕ್ಷಕರಾಗಿದ್ದ ಭಂಡಾರಿ ಅವರು ಮಕ್ಕಳಿಗಾಗಿನ ಬರವಣಿಗೆಯೆಡೆಗೆ ತುಡಿದುದು ಸಹಜವಾಗಿಯೇ ಇತ್ತು. ಒಟ್ಟಾರೆ ಮಕ್ಕಳ ಸಾಹಿತ್ಯದ ಸಂದರ್ಭದಲ್ಲಿಯೂ

ಭಂಡಾರಿ ಅವರದು ವಿಭಿನ್ನ ಧ್ವನಿಯಾದುದು ಗಮನಿಸಬೇಕಾದುದು. ಶಿಕ್ಷಕರಾಗಿದ್ದೂ, ಆ ಸಮಯದ ಶಿಕ್ಷಕ ಸಾಹಿತಿಗಳ ಕೃಷಿಯೊಡನೆ ಸಮೀಕರಿಸಿಕೊಳ್ಳದೆ ತಮ್ಮದೇ ಅಗತ್ಯದ ದಾರಿ ಕಂಡುಕೊಂಡವರು ಅವರು. ಕೆಲವರ್ಗದ ಅನುಭವಗಳಿಂದ ರೂಪುಗೊಂಡಿದ್ದ ಅವರು ತಮ್ಮ ದಾರಿಯನ್ನು ಅಗತ್ಯವಾಗಿ ಕಂಡುಕೊಂಡರು. ಕವಿತೆಗಳನ್ನೂ, ಕಾದಂಬರಿಗಳನ್ನೂ, ಬಹುವಿಶೇಷವಾಗಿ ನಾಟಕಗಳನ್ನು ಬರೆದು, ನಾಟಕಗಳನ್ನು ರಂಗದಲ್ಲಿ ತರುವುದರಲ್ಲಿ ಪ್ರಯೊಗಶೀಲರಾಗಿಯೂ ಇದ್ದವರು ಅವರು. ಅವರ ಎರಡು ಕಾದಂಬರಿಗಳು 'ಯಶೋವಂತನ ಯಶೋಗೀತ' ಹಾಗೂ 'ಚಿನ್ನದ ಹುಡುಗಿ ಚಿನ್ನಮ್ಮ'. ಇವುಗಳಲ್ಲಿ ಗ್ರಾಮೀಣ ಪರಿಸರದಿಂದ, ಕೆಳವರ್ಗದ ಅಪಮಾನಗಳಿಂದ, ನೋವುಗಳ ಮಧ್ಯದಿಂದ ಬದುಕನ್ನು ರೂಪಿಸಿಕೊಳ್ಳುವ ಹೋರಾಟದಲ್ಲಿ ತೊಡಗಿಕೊಂಡಿರುವ ಚಿತ್ರಣವೇ ಇದೆ. ಎರಡೂ ಕಾದಂಬರಿಗಳು ಮಕ್ಕಳ ದಿಟ್ಟ ಪ್ರಯತ್ನವನ್ನು, ಏನೇ ಅಡತಡೆಗಳು ಎದುರಾದರೂ ಸೋಲನ್ನ ಒಪ್ಪಿಕೊಳ್ಳದೆ ದಿಟ್ಟ ಹೆಜ್ಜೆಗಳನ್ನ ಇಡುವುದನ್ನು ಚಿತ್ರಿಸಿರುವುದಿದೆ. ಒಂದರಲ್ಲಿ ಹುಡುಗ, ಇನ್ನೊಂದರಲ್ಲಿ ಹುಡುಗಿ ಸಮಸಮವಾಗಿಯೇ ಈ ಬಗೆಯ ಹೆಜ್ಜೆ ಹಾಕುವುದನ್ನ ನೋಡುತ್ತೇವೆ. ಯಶೋವಂತ ತನ್ನ ಅವಮಾನಗಳಿಂದ ಮನೆಯನ್ನ ತೊರೆದು ನಾನಾ ಬಗೆಯ ಅನಿರೀಕ್ಷಿತ ತಿರುವುಗಳ ದಾರಿಯಲ್ಲಿ ಹೆಜ್ಜೆ ಹಾಕಿದರೆ, ಚಿನ್ನಮ್ಮ ನೇರ ನಿರ್ದಿಷ್ಟ ಮಾರ್ಗದಲ್ಲಿ ಹೆಜ್ಜೆ ಹಾಕುತ್ತಾಳೆ. ಯಶೋವಂತನ ಯಶೋಗೀತ ಕಾದಂಬರಿ ಉದ್ದಕ್ಕೂ ಗುಟ್ಟನ್ನ ಬಿಟ್ಟುಕೊಡದೆ ರೋಚಕ ಸನ್ನಿವೇಶಗಳನ್ನ ಕಟ್ಟಿಕೊಡುತ್ತ ಸಾಗುವುದೊಂದು ವಿಶೇಷ. ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ ಮೇಲ್ವರ್ಗವನ್ನು ಕೇವಲ ಶೋಷಣೆಯ ಮೂಲದಲ್ಲಿಯೇ ಗುರುತಿಸುವುದಾಗದೆ, ಅಲ್ಲಿನ ಅನೇಕ ಪಾತ್ರಗಳು ಮಕ್ಕಳ ಬೆಳವಣಿಗೆಗೆ ಪೂರಕವಾಗಿ ವರ್ತಿಸುವುದನ್ನೂ ಅಷ್ಟೇ ವಿಶೇಷವಾಗಿ ತಂದುಕೊಂಡಿರುವುದು ಭಂಡಾರಿ ಅವರ ದೃಷ್ಟಿಕೋನದ ಮಹತ್ವವನ್ನು ವಿವರಿಸುತ್ತದೆ.

ಭಂಡಾರಿ ಅವರು ಪುಟ್ಟ ಮಕ್ಕಳಿಗಾಗಿ ರಂಜಿಸುವ, ಪ್ರಾಸಬದ್ಧವಾದ, ಮೋಜಿನ ಪದ್ಯಗಳನ್ನು ಹಲವಾರು ಬರೆದಿದ್ದಾರೆ. ಅವರ 'ಆಡು ಬಾ ಹಾಡು ಬಾ', 'ಋತುಗೀತೆಗಳು' ಎರಡೂ ಸಂಕಲನಗಳಲ್ಲಿ ಇಂಥವೇ ವಿಪುಲವಾಗಿವೆ.

ಚಿಟ್ಟೆ ಚಿಟ್ಟೆ
ಬಣ್ಣದ ಚಿಟ್ಟೆ
ಮೈಯ್ಯ ತುಂಬ
ಕುಂಕುಮ ಪಟ್ಟೆ
ಸೂಜಿಗಿಂತ
ಪಕ್ಕ ಮೆತ್ತೆ
ಸ್ವರ್ಗದಿಂದ
ಅಂಚೆ ತಂದೆ

ಹೂವಿಗೆ ಹೂವಿಗೆ
ಸುದ್ದಿಯ ಹಂಚಿ
ಮೇಲಕೆ ಹಾರಿದೆ
ಚೆಂದಕೆ ಮಿಂಚಿ

ಅಂಥ ರಮ್ಯವಾದ ಪದ್ಯಗಳ ಜೊತೆಗೆ ವಿನೋದ ಪ್ರಶ್ನೆ ಸಾಕಷ್ಟು ಅವರಲ್ಲಿ.

ಅಜ್ಜನ ಮೀಸೆ ಬಿಳಿ
ಅಪ್ಪನ ಮೀಸೆ ಕರಿ
ಅವ್ವಗೆ ಮೀಸೆಯೆ ಇಲ್ಲ
ಅಜ್ಜಿಗೆ ಹಲ್ಲೇ ಇಲ್ಲ
. . .
ಆಕಳ ಮರಿ ಹಾಲು
ಹಾಲಿನ ಮರಿ ಮಜ್ಜಿಗೆ
ಮಜ್ಜಿಗೆಯ ಮರಿ ಬೆಣ್ಣೆ
ಬೆಣ್ಣೆಯ ಮರಿ ತುಪ್ಪ
ಆಹಾ ಆಹಾ ತುಪ್ಪ
ದೋಸೆಗೆ ಹಾಕೊ ಬೆಪ್ಪ

ಇಂಥ ಪದ್ಯಗಳ ನಡುವೆ ಬಂಡಾಯದ ಮನೋಧರ್ಮದ ಹಲವು ರಚನೆಗಳೂ ಕಂಡುಬರುತ್ತವೆ. 'ಕನಕನ ವ್ಯಥೆ' ಕವಿತೆಯಲ್ಲಿ . . .

ಉಡುಪಿಯ ಕೃಷ್ಣನು ಗುಡಿಯೊಳಗಡೆ
ಸೆರೆಮನೆ ಸೇರಿದ್ದ
ಗೋಡೆಯ ಒಡೆದು ಮೋರೆಯ ತಿರುಗಿ
ದರ್ಶನ ಕೊಟ್ಟಂತೆ
ಕತೆಯನು ಹೇಳಿ ಹೊರಗೆ ಇಟ್ಟರು
ಕೆಳಜಾತಿಯವನೆಂದು
ತಿಳಿದಿರಾ ಮಕ್ಕಳೆ ಮುದ್ದಿನ ಮಣಿಗಳೆ
ಹಿರಿಯರ ಈ ತಂತ್ರ
ದೇವರಿಗಿದೆಯೇ ಮಡಿ ಮೈಲಿಗೆಯೀ
ಜಾತಿಯ ಕುತಂತ್ರ
ಹರಿಜನ, ಗಿರಿಜನ, ಪುರಜನರೆನ್ನುವ
ಕೃತ್ರಿಮವನು ತೊರೆದು
ಮಾನವರೆಲ್ಲ ಬಂಧುಗಳೆಂದು
ಮಾನವ್ಯವ ಹಿಡಿದು
ಪ್ರೀತಿಯ ತೆರೆದು ನೀತಿಯ ಮೆರೆದು
ಬೆಳೆಯಿರಿ ಬಾಲಕರೆ
ಭಾರತ ಮಾತೆಯ ಪುಣ್ಯದ ಸೆಲೆಗಳೆ
ನಾಳಿನ ಉಸಿರುಗಳೆ

ಎಂದು ಸಾಮಾಜಿಕ ತಾರತಮ್ಯವನ್ನ ದಿಟ್ಟವಾಗಿಯೇ ಮಕ್ಕಳ ಮುಂದೆ ಇರಿಸಿರುವುದನ್ನು ನೋಡಬಹುದು. ಅವರದೊಂದು ಕತೆಯ ಪುಸ್ತಕ 'ಹೂವಿನೊಡನೆ ಮಾತುಕತೆ', ಬಹು

ವಿಶೇಷದ್ದು, ಬಹುಶಃ ಕೆಳವರ್ಗದ ಬೇಸರಗಳನ್ನು, ಸಾಮಾಜಿಕ ಅಸಮಾನತೆಯನ್ನು ಮಕ್ಕಳ ಮುಂದೆ ಆದಷ್ಟೂ ನವಿರಾಗಿ, ಆಪ್ತವಾಗಿ ಇಡಲು ನೋಡಿದ ಪುಸ್ತಕ. 'ಸಕಾಲಿಕ' ವಾರಪತ್ರಿಕೆಯ ಅಂಕಣವಾಗಿ ಅವರು ಬರೆದುದು. ಇಲ್ಲಿ ತೀರ ನವಿರಾದ, ಭಾವಲಹರಿಗಳೂ ಇವೆ, ಅದರೊಂದಿಗೆ ತಾರತಮ್ಯದ ಸಾಮಾಜಿಕ ನೀತಿಯ ದ್ವಂದ್ವಗಳೂ ಇವೆ. ಇಲ್ಲೂ ಮಕ್ಕಳೇ ಪಾತ್ರವಾಗಿ ಅನುಭವಿಸುತ್ತ ಪ್ರತಿಕ್ರಿಯಿಸುತ್ತ ಸಕರಾತ್ಮಕ ಮನೋಭಾವ, ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ದನಿ ಎತ್ತುವುದು ಕಾಣುತ್ತದೆ. ಮಕ್ಕಳ ಸಂದರ್ಭದಲ್ಲಿ ಇದೆಲ್ಲ ಅಸಹಜವಾದ ಸಂಗತಿ ಎನಿಸಿದರೂ ಹಿಂದಿನ ಆಶಯಗಳು ಗಮನಿಸುವಂತೆ ಮಾಡುತ್ತವೆ. ಶಿಕ್ಷಕ ಸಮುದಾಯದವರಾರೂ ಮಕ್ಕಳ ಸಾಹಿತ್ಯವೆಂದು ಬರೆಯಲಾಗದುದನ್ನು ಗಟ್ಟಿಯಾಗಿ ಬರೆಯಲು ಹವಣಿಸಿದುದೇ ಇಲ್ಲಿನ ಬಹು ಮಹತ್ವದ ಸಂಗತಿ. ಮಕ್ಕಳು ಇಲ್ಲಿ ಬಲು ದಿಟ್ಟವಾಗಿ ವರ್ತಿಸುವಂತೆ, ಎಂಥವರನ್ನೂ ಎದುರು ಹಾಕಿಕೊಳ್ಳುವಂತೆ ಚಿತ್ರಿತರಾಗಿರುವುದು ಭಂಡಾರಿ ಅವರೊಳಗಿನ ಬಯಕೆಯಾಗಿ. ಉದಾಹರಣೆಗೆ ಕನಕದಾಸರ ಕೀರ್ತನೆ ನಡೆದ ದೇವಸ್ಥಾನವೊಂದರಲ್ಲಿ ಊಟದ ಸಮಯ ಎಲ್ಲ ಮಕ್ಕಳ ನಡುವೆ ಸೇರಿ ಏಕೋಭಾವದಲ್ಲಿ ಊಟಕ್ಕೆ ಕುಳಿತ ಮುಕ್ರಿ ಜಾತಿಯ ಹುಡುಗ ವಸಂತ, ಅಲ್ಲಿನ ಪುರೋಹಿತರು ಮೈಲಿಗೆಯಾಯಿತು ಎಂದು ಬೊಬ್ಬಿಟ್ಟಾಗ ಅವರನ್ನು ಕನಕದಾಸರದೇ ಉದಾಹರಣೆ ಮುಂದಿಟ್ಟು ಸವಾಲು ಎಸೆಯುತ್ತ ಎದುರು ಹಾಕಿಕೊಳ್ಳುತ್ತಾನೆ. ವಿಶೇಷ ಎಂದರೆ ಮೇಲು ಜಾತಿಯವರಾದರೂ ಅವರ ಸ್ನೇಹಿತರೆಲ್ಲ ಅವನ ಪರವಾಗಿ ನಿಲ್ಲುತ್ತಾರೆ. ಪರಿಣಾಮ ಅವನ ಪರವಾಗಿ ತಿರುಗಿಕೊಳ್ಳುತ್ತದೆ. ಹೀಗೆಯೇ ಪುಟ್ಟಿ ಶಾಲೆಯಲ್ಲಿ ಹರಿಜನ ಮುದುಕಿಗೆ ಕುಡಿಯಲು ನೀರೇ ಸಿಗದೆ ಅವಳ ಬಿಸಿ ಕಂಬನಿಯ ಹನಿ ಅವಳ ಕೊಡದಲ್ಲಿ ಬಿದ್ದ ಕವಿತೆಯನ್ನು ಕೇಳಿ ದೇವರ ಮೇಲೆ ಸಿಟ್ಟು ಬಂದು ಕನಸಿನಲ್ಲಿ ದೇವರನ್ನೇ ಭೆಟ್ಟಿಯಾಗಲು ಹೋಗುವ, ದೇವರೊಡನೆ ಸಂವಾದಕ್ಕಿಳಿಯುವ ಪ್ರಸಂಗವೊಂದಿದೆ. ಹಾಗೆಯೇ ದಯಾನಂದನೆನ್ನುವ ಇನ್ನೊಬ್ಬ ಹುಡುಗ ಆರು ನಾಯಿ ಕುನ್ನಿಗಳನ್ನು ಸಾಕಲು ಹೋಗಿ ಮನೆಯಲ್ಲಿನ ಬಡತನದಿಂದ ಅಸಹಾಯಕನಾಗಿ, ಅಮ್ಮನ ಅಳಲನ್ನು ಒಳಗೇ ನುಂಗಿಕೊಂಡು ಗೆಳೆಯರೆಲ್ಲರಿಗೆ ಅವನ್ನ ಹಂಚಿಬಿಡುವ ಪ್ರಸಂಗ ಇನ್ನೊಂದು ಕತೆಯಲ್ಲಿದೆ. ಜೊತೆಗೇ ಹೂವಿನ ಜೊತೆ ಮಾತಾಡುವ ಮುಗ್ಧ ಸಂಭಾಷಣೆಯಂಥವೂ ಇದರಲ್ಲಿ ಸೇರಿವೆ.

ಆರ್.ವಿ. ಭಂಡಾರಿ ಅವರ ಬಹು ವಿಶೇಷದ ಸಂಗತಿ ಅವರ ನಾಟಕಗಳದು. ಅವರೊಬ್ಬ ಚತುರ ಸಂಭಾಷಣೆಕಾರ, ಸೊಗಸಿನ ಮಾತುಗಾರ. ಚುಟುಕಿನ, ಚುರುಕಿನ ಮಾತುಕತೆಗಳೇ ಅವನ್ನು ಕೇಳುವಂತೆ ಮಾಡುತ್ತವೆ. ಕನ್ನಡದಲ್ಲಿ 'ಮಕ್ಕಳ ನಾಟಕ' ಎಂಬ ಪ್ರಕಾರ ಚಾಲ್ತಿಗೆ ಬರುವದಕ್ಕೆ ಎಷ್ಟೋ ಮೊದಲೇ ಆರ್. ವಿ. ಭಂಡಾರಿಯವರು ಆ ದಿಶೆಯಲ್ಲಿ ಕೆಲಸ ಪ್ರಾರಂಭಿಸಿಬಿಟ್ಟಿದ್ದರು. ಹಳ್ಳಿಯ ಮಾಸ್ತರರಾಗಿದ್ದ ಆರ್. ವಿ. ತಮ್ಮ ಪ್ರಾಥಮಿಕ ಶಾಲೆಯ ಮಕ್ಕಳನ್ನು ಗಮನದಲ್ಲಿಟ್ಟುಕೊಂಡೇ ಮಕ್ಕಳ ನಾಟಕಗಳನ್ನು ರಚಿಸಿದರು, ಆಡಿಸಿದರು' ಎಂದಿದ್ದಾರೆ ರಂಗಕರ್ಮಿ ಕಿರಣ್ ಭಟ್ಟ, ರಂಗ ಪ್ರಯೊಗವನ್ನು ಬಲು ಗಮನದಲ್ಲಿಟ್ಟುಕೊಂಡೇ ಅವರು ರಚನೆಗಿಳಿದುದು ಅವರ ಕೃತಿಗಳ ದೊಡ್ಡ ಬಲ. 'ನವೋದಯದ ನಂತರದ ಅನೇಕ ಮಕ್ಕಳ ಸಾಹಿತಿಗಳಂತೆ ಮಕ್ಕಳನ್ನು ಕುಬ್ಜರನ್ನಾಗಿ ನೋಡಲಿಲ್ಲ. ಎಂಥ ತತ್ವಗಳನ್ನೂ ಸರಳವಾಗಿ

ಹೇಳುವುದರ ಮೂಲಕ ಮಕ್ಕಳಿಗೆ ಮುಟ್ಟಿಸಬಹುದು ಎಂಬ ಧೈರ್ಯ ಅವರಲ್ಲಿತ್ತು. ಆದುದರಿಂದಲೇ ಅವರು ಇತರರಿಗಿಂತ ವಿಭಿನ್ನವಾಗಿ ನಾಟಕಗಳನ್ನು ಬರೆಯಲು ಸಾಧ್ಯವಾಯಿತು' ಎಂದಿರುವ ಕಿರಣ್ ಭಟ್ಟ ಅವರ ಮಾತುಗಳು ಗಮನಾರ್ಹವಾದುವು. ಮಕ್ಕಳ ವಾಸ್ತವ ನೆಲೆಯಲ್ಲಿಯೇ ನಾಟಕಗಳ ವಸ್ತುಗಳನ್ನು ಅವರು ಹೆಣೆದುಕೊಂಡು ತಮ್ಮ ಅಭಿವ್ಯಕ್ತಿಗೆ ತವಕಿಸಿದರು. ಗಾಂಧಿಯಾಗಬಯಸಿ ಮೊದಮೊದಲು ವಿಫಲವಾಗುವ ಹುಡುಗನೊಬ್ಬ ದಲಿತರ ಮಂದಿರ ಪ್ರವೇಶಕ್ಕಾಗಿ ಸತ್ಯಾಗ್ರಹ ಮಾಡುವುದರ ಮೂಲಕ ನಿಜವಾಗಿಯೂ 'ಗಾಂಧಿ' ಆಗಿಬಿಡುವುದನ್ನು ನೋಡುತ್ತೇವೆ. ಹಾಗೆಯೇ 'ಉಪ್ಪಿನ ಸತ್ಯಾಗ್ರಹ' ನಾಟಕ ಮೊದಲು ಸತ್ಯಾಗ್ರಹದ ನಾಟಕವಾಗುತ್ತ ನಂತರ ನಿಜವಾದ ಸತ್ಯಾಗ್ರಹವೇ ಆಗಿಬಿಡುವ ಪ್ರಕ್ರಿಯೆಗೆ ತಿರುಗಿಕೊಳ್ಳುತ್ತದೆ. 'ಬೆಳಕು ಹಂಚಿದ ಬಾಲಕ' ಅಂಬೇಡಕರರದೇ ಕಥೆಯನ್ನು ಹೊಂದಿದುದು. ಪ್ರಾಣಿಗಳನ್ನೂ ತಮ್ಮ ನಾಟಕಗಳಲ್ಲಿ ಯಥೇಚ್ಛವಾಗಿಯೇ ಬಳಸಿಕೊಂಡರೂ ವಾಸ್ತವದ ಜೀವನ ಪ್ರಜ್ಞೆಯ ಹರವಿನಲ್ಲಿಯೇ ಅವೆಲ್ಲ ಕೆಲಸ ಮಾಡುವುದನ್ನು ನೋಡುತ್ತೇವೆ. ಜಂಭದ ಕೋಳಿಯಾಗಿ, ಜಂಭದ ಮುದುಕಿಯ ಸಂಗಾತಿಯಾಗಿ ಮತ್ತೊಮ್ಮೆ ಸ್ವತಂತ್ರವಾಗಿ ಹಾರಾಡುವ ಬೆಳ್ಳಕ್ಕಿಯಾಗಿ ಹಕ್ಕಿಗಳು ಅವರ 'ಪ್ರೀತಿಯ ಕಾಳು' ನಾಟಕಗಳಲ್ಲಿ ಹಾರಾಡಿಕೊಳ್ಳುವುದನ್ನು ನೋಡುತ್ತೇವೆ. ಮಾತುಕತೆಗಳ ಚುರುಕಿನ ಸಂಗತಿಗಳಲ್ಲಿ ಅನೇಕ ಸವಾಲುಗಳನ್ನು ಅವರು ಮುಂದಿಡುತ್ತ ಚಕಿತಗೊಳಿಸುವುದನ್ನು ನೋಡುವುದೇ ಒಂದು ವಿಶೇಷ.

ಅವರೊಬ್ಬ ಶಿಕ್ಷಕರಾಗಿದ್ದುಕೊಂಡೂ ಬಂಡಾಯದ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಕೊಂಡು, ಪ್ರಕಾಶನ ಸಂಸ್ಥೆಯನ್ನೂ ಹುಟ್ಟು ಹಾಕಿಕೊಂಡು, ಆ ಸಮಯದ ಎಲ್ಲರ ಒಡನಾಟದಲ್ಲಿ ಇದ್ದುದರಿಂದ ಬಹುಶಃ ಮಕ್ಕಳ ಸಾಹಿತ್ಯದಲ್ಲಿ ತೊಡಗಿಕೊಂಡ ಶಿಕ್ಷಕರಿಂದ ಅವರು ವಿಭಿನ್ನರಾಗಿ ಕಾಣುತ್ತಾರೆ. ಕೆಳವರ್ಗದಿಂದ ಬಂದವರಾಗಿ ಅಲ್ಲಿನ ಅನುಭವಗಳಿಗೆಲ್ಲ ಸಾಕ್ಷಿಯಾಗಿದ್ದು ಬರವಣಿಗೆಗಿಳಿದುದು ಅವರೊಳಗಿನ ತುಡಿತವಾಗಿಯೂ ಸಹಜವಾಗಿ ಹೊರಹೊಮ್ಮಿದೆ. ಆದರೆ ಅದು ಸಂಯಮದ ಕಟ್ಟೆಯನ್ನೂ ಯಾವತ್ತೂ ಮೀರದೆ, ಮಾನವೀಯ ಆರೋಗ್ಯವಂತ ಸಮಾಜದ ಭವಿಷ್ಯದ ಹಂಬಲವಾಗಿ ಕಾಣಿಸಿಕೊಂಡಿದೆ. ಅವರೊಬ್ಬ ಶಿಕ್ಷಕರಾಗಿ ತಮ್ಮ ದೊಡ್ಡ ಜವಾಬುದಾರಿಯನ್ನು ಎಲ್ಲ ಬಗೆಯ ಮಕ್ಕಳ ನಡುವೆ ಭಾವಿಸಿಕೊಂಡಂತಿದೆ. ಅದಕ್ಕೇ ಅವರೆಲ್ಲ ಕೃತಿಗಳಲ್ಲೂ ವಾಸ್ತವದ ಏನೇ ನೋವುಗಳಿದ್ದರೂ ಸಕಾರಾತ್ಮಕ ನಿಲವಿಗೆ ಅಂತ್ಯ ಕಾಣುವುದು. ಬರಗೂರು ರಾಮಚಂದ್ರಪ್ಪನವರು ಅವರ ಕುರಿತು 'ಮೂರು ನೆಲೆಗಳಿಂದ ಮುಖ್ಯವಾಗುತ್ತಾರೆ. ಸಂಘಟನೆ, ಸಾಹಿತ್ಯ ಮತ್ತು ಸ್ನೇಹ ಈ ಮೂರು ನೆಲೆಗಳ ಮೂಲಕ ರಾಜಧಾನಿಯಾಚೆಗೆ ಸೃಜನಶೀಲ ಬದ್ಧತೆಯಿಂದ ಬದುಕಿ ಸ್ಥಳೀಯ ಸಾಂಸ್ಕೃತಿಕ ಕೊಡುಗೆ ಕೊಟ್ಟ ಭಂಡಾರಿಯವರಂಥವರ ಮಹತ್ವವನ್ನು ನಾವು ಅರ್ಥಮಾಡಿಕೊಳ್ಳುವುದು ಅಗತ್ಯ' ಎಂದಿರುವುದನ್ನು ಗಮನಿಸಬಹುದು. 'ಹೊನ್ನಾವರದ ಅರೆಅಂಗಡಿಯಂತಹ ಮೂಲೆಯಲ್ಲಿದ್ದುಕೊಂಡು ಯಾವ 'ಗಾಡ್ ಫದರ್'ನ ಸಹಾಯವೂ ಇಲ್ಲದೆ ಆರ್.ವಿ. ಯವರು ಏರಿದ ಎತ್ತರ ದೊಡ್ಡದು. ಬಹುಶಃ ಆರ್. ವಿ. ಯವರ ಒಳಗಡೆ ಒಂದು ಸಣ್ಣ ಹಠವಿತ್ತೆಂದು ಕಾಣಿಸುತ್ತದೆ. ಏಕೆಂದರೆ ಅವರು ಇಂಗ್ಲಿಷ್ ಎಂ.ಎ. ಮಾಡಿದರು, ಕನ್ನಡ

ಎಂ.ಎ. ಮಾಡಿದರು. ಆಮೇಲೆ ಕನ್ನಡದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. ಇದನ್ನು ಅವರ ಉದ್ಯೋಗದ ಅವಶ್ಯಕತೆಗಾಗಿ ಮಾಡಲಿಲ್ಲ. ಅದರ ಬದಲು ಅವರ ಮನಸ್ಸಿನ ಆಳದಲ್ಲಿದ್ದ ಒಂದು ಏಕಲವ್ಯನ ಹಠ ಇವುಗಳನ್ನು ಪಡೆಯುವಂತೆ ಪ್ರೇರಣೆ ನೀಡಿತು.' ಎಂದಿರುವ ಕೇಶವ ಶರ್ಮಾ ಅವರ ಮಾತುಗಳೂ ಇಲ್ಲಿ ಮಹತ್ವದವೆನಿಸುತ್ತವೆ. ಅವರೆಲ್ಲ ಬರವಣಿಗೆಯ ಹಾಗೆ ಮಕ್ಕಳ ಬರವಣಿಗೆಗೂ ಹಿನ್ನೆಲೆಯಾಗಿ ಈ ಮಾತುಗಳು ನಿಲ್ಲುತ್ತವೆ.

ಶಿಕ್ಷಕರಾಗಿದ್ದು, ಮಕ್ಕಳ ಒಡನಾಟದಲ್ಲಿ ಸದಾ ಇರುತ್ತಿದ್ದು ಆಕಾಂಕ್ಷಿಗಳಾಗಿ, ಅನೇಕ ಸಲ ಅಗತ್ಯವನ್ನೂ ಅನುಭವಿಸಿ ಮಕ್ಕಳಿಗೆ ಬರೆಯುತ್ತ ಬಂದವರ ಸಂಖ್ಯೆ ಬಲು ದೊಡ್ಡದು. ಕನ್ನಡದಲ್ಲಿ ಇವರ ಕೊಡುಗೆ ಸಂಖ್ಯೆಯಲ್ಲಿ ಬಲು ದೊಡ್ಡದು. ಇವರನ್ನು ಬಿಟ್ಟರೆ ಸ್ವಆಸಕ್ತಿಯಿಂದ ಬಹುಪಾಲು, ಒಂದಿಷ್ಟು ಸುತ್ತಲಿನವರ ಪ್ರೋತ್ಸಾಹ, ಬೆನ್ನು ತಟ್ಟುವಿಕೆ, ಹಾಗೆಯೇ ಶಿಕ್ಷಕ ಸಾಹಿತಿಗಳ ವಾತಾವರಣದಲ್ಲಿ ತಾವೂ ಬೆರೆತುಹೋದುದು ಈ ಹಲವಾರು ಕಾರಣಗಳಿಂದ ಹಲವರು ಮಕ್ಕಳ ಸಾಹಿತ್ಯದಲ್ಲಿ ಗಮನಾರ್ಹ ಕೆಲಸ ಮಾಡಿರುವುದು ಕನ್ನಡದಲ್ಲಿ ಕಾಣಿಸುತ್ತದೆ.

ವನರಾಗ ಶರ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಆಸಕ್ತಿಯಿಂದ ಬರೆಯುತ್ತ ಬಂದ ಶಿಕ್ಷಕರು. ವಿಜಯಪುರದ ಕಡೆಗಿನ ಹಾಗೆ ಸುತ್ತ ಯಾವ ವಾತಾವರಣ ಇರದಿದ್ದರೂ ತಮ್ಮದೇ ಆಸಕ್ತಿಯಿಂದ ಬರೆಯುತ್ತ ಬಂದವರು ಇವರು. ಗೇಯ ಗುಣವುಳ್ಳ, ಉತ್ತಮ ಭವಿಷ್ಯ ಹಾರೈಸುವ ಹಲವಾರು ಸದಾಶಯದ ಕವಿತೆಗಳನ್ನು ಮುಖ್ಯವಾಗಿ, ಹಾಗೆಯೇ ಕತೆಗಳನ್ನೂ ಬರೆದವರು. 'ಬಣ್ಣದ ಕೊಳಲು', 'ಬಣ್ಣದ ಕಾರಂಜಿ', 'ಸಾಹಸ ಯಾತ್ರೆ' ಮುಂತಾದ ಕೃತಿಗಳನ್ನು ನೀಡಿದ್ದಾರೆ.

ಜೇನಿನ ಬಣ್ಣದ ಕೂದಲು ಕಟ್ಟಿ
ಬರುವಳು ಆಡುತ ಚಿನ್ನಾಟ
ಮೀನೂ ಎಂಬ ಚುರುಕಿನ ಬಾಲಕಿ
ನೋಡಲು ಸುಂದರ ಮೈಮಾಟ

ತಾವರೆ ಕಣ್ಣಿನ ಕೈಯಲಿ ಮಣ್ಣಿನ
ಅಂಗಳ ಸಾರಿಸೊ ಈ ಹೆಣ್ಣು !
ಹಣ್ಣನು ಕಂಡರೆ ಬಿಡುವುದೆ ಇಲ್ಲ
ಅವಳೊ ಮನೆ ಮಂದಿಯ ಕಣ್ಣು

ಕೃಷ್ಣನ ಕಂಡರೆ ಕೈಯಲಿ ಬೆಣ್ಣೆ
ಪುಟಾಣಿ ಕಾಲಲಿ ಕಿರು ಗೆಜ್ಜೆ
ಎಂಥ ಚಂದ ತೊದಲುಲಿ ಗಾನ
ಅಂದವು ಹಂಸದ ಆ ಹೆಜ್ಜೆ

ಬಾನಲಿ ಚಂದಿರ ಅರಳಿದ ಹಾಗೆ
ಮೊಗದಲಿ ತುಂಬ ಬಿರಿದ ನಗೆ
ಕೊರಳಲಿ ಮಣಿಸರ ಗಲ್ಲಕೆ ಬೊಟ್ಟು

ಮದುಮಗಳೇನೊ ಎಂಬ ನಗೆ
ಆಟದ ಗೊಂಬೆ ಕಾರು ವಿಮಾನು
ತುಂಬಿದೆ ಅಂಗಡಿಯಿಟ್ಟಂತೆ
ದಿನವಿಡೀ ಆಡಿ ದಣಿವಳು ಮೀನೂ
ದಂಡೆಗೆ ಬಿದ್ದ ಮೀನಂತೆ
ಮೀನೂ ಪುಟಾಣಿ ಬಾ ಬಾ ಎಂದರೆ
ಬರದೆ ಮರೆಯಲಿ ಅಡಗುವಳು
ಕಣ್ಣನು ಮುಚ್ಚಿ ಸುಮ್ಮನೆ ಕೂತರೆ
ಗಪ್ಪನೆ ಅಮ್ಮನ ತಬ್ಬುವಳು

ಇಂಥ ಸೊಗಸಾದ ರಚನೆಗಳು ಅವರ ಸಂಕಲನಗಳಲ್ಲಿ ಕಾಣಸಿಗುತ್ತವೆ. 'ಗಾಂಧಿ ಮಹಾತ್ಮನು ಮೋಹನ ಚಂದನು, ಇಂಡಿಯಾ ದೇಶದ ಚಂದಿರನು', 'ಬಾಪು ಎಂಬ ಹೆಸರನು ಪಡೆದ ಮೋಹನ ದಾಸ ಗಾಂಧಿಯೆ ಭಾಪು ! ಭಾಪು ! ನಿನ್ನ ಭಾಪು ! ಇಹುದು ಜಗದ ಮುಂದೆಯೆ' ಎಂದು ಗಾಂಧಿಯ ಕುರಿತು ಮನತುಂಬಿ ಬರೆದಿರುವ ಅವರು ವಿಶೇಷವಾಗಿ ಮಕ್ಕಳ ಭವಿಷ್ಯವನ್ನ ಹಾರೈಸುವ ಕಾಳಜಿಯ ವಸ್ತುಗಳನ್ನೇ ತಮ್ಮ ರಚನೆಗಳಿಗೆ ಆಯ್ದುಕೊಂಡಿದ್ದಾರೆ. 'ಕಸಬರಿಗೆ ನಾ ಕಸಬರಿಗೆ, ಬಂದರೆ ಜೋಕೆ ಉಸಾಬರಿಗೆ' ಎಂದು ಸಾಗುವ ಕಸಬರಿಗೆಯ ಬುದ್ಧಿಮಾತಿನ ಕವಿತೆ ಕೊನೆಗೊಳ್ಳುವುದು 'ಮೇಲು ಕೀಳು ಎಂಬುದು ಇಲ್ಲ, ಭೇದದ ನಡತೆ ಒಳಿತಲ್ಲ' ಎಂದು.

ಮಳೆ ಕುರಿತು ಅವರು ಹಲವು ಒಳ್ಳೆಯ ಪದ್ಯಗಳನ್ನು ಮಕ್ಕಳಿಗೆ ನೀಡಿದ್ದಾರೆ. ನಿಸರ್ಗದ ಅಂದ-ಚೆಂದ, ಚೆಲುವು-ಚಿತ್ತಾರಗಳು ಮಳೆಯ ನಡುವೆ ಎಷ್ಟೊಂದು ಆಕರ್ಷಕವಾಗಿರಬಲ್ಲವು ಎಂಬುದನ್ನು 'ಮಳೆಯ ಆಟ' ಪದ್ಯ ಹೇಳುತ್ತದೆ:

ಮೋಡದ ನಡುವೆ ಬಿಸಿಲಿನ ಪರದೆ
ಇಳಿಬಿದ್ದಿತು ಪೂರ
ಕಾಮನಬಿಲ್ಲು ಮೂಡಿತು ಅಲ್ಲಿ
ಬಿಡಿಸಿತು ಬಣ್ಣದ ಚಿತ್ತಾರ

ತುಂತುರು ಒಮ್ಮೆ ಹಿಂದೆಯೇ ಜುರುಜುರು
ಪರಿಪರಿ ಮಳೆಯ ಆಟ
ಒಮ್ಮೆಗೆ ಮಾಯ ಏನೋ ಹೂಟ
ಗಾಳಿಯ ಜೊತೆಗೆ ಓಟ!

ಬೆಂಗಳೂರು, ಮತ್ತಿತರ ಭಾಗದ ಫಸಲು

ಉತ್ತರ ಕರ್ನಾಟಕದ ವಿಜಯಪುರದ ಕಡೆಗೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಕ್ಕಳ ಸಾಹಿತ್ಯದೆಡೆಗೆ ಕಂಡು ಬಂದ ತುಡಿತ ಉಳಿದ ಭಾಗಗಳ ಶಿಕ್ಷಕ ಸಮುದಾಯದಲ್ಲಿ ಅಷ್ಟಾಗಿ ಕಂಡುಬರಲಿಲ್ಲ ಎನ್ನುವುದು ಸತ್ಯ. ಅದರಲ್ಲೂ ಬೆಂಗಳೂರು, ಮೈಸೂರ ಕಡೆಗಿನ ದಕ್ಷಿಣ ಭಾಗದಲ್ಲಿ ಈ ಬಗೆಯ ವಿಶೇಷದ ಪ್ರಯತ್ನಗಳು ಮೊದಲಿನ ಹಿರಿಯರ

ಪ್ರಯತ್ನಗಳನ್ನನುಸರಿಸಿ ಮುಂದುವರೆದುದು ಕಾಣದು. ಶಿಕ್ಷಕ ಲೇಖಕರ ವೈಯಕ್ತಿಕ ತೊಡಗುವಿಕೆಯೂ ವಿಶೇಷವಾಗಿ ಅಲ್ಲಿ ಅಷ್ಟಾಗಿ ಕಾಣದು. ಕುವೆಂಪು, ರಾಜರತ್ನಂ, ದೇವುಡು, ಹೊಯ್ಸಳ, ಬಿ. ಎಸ್. ಪಾಂಡುರಂಗರಾವ್ ಮುಂತಾದವರ ಕಾಳಜಿಗಳು ಮುಂದೆ ಅಷ್ಟಾಗಿ ಕಾಣಲಿಲ್ಲ. ಅಲ್ಲಲ್ಲಿ ಚಟುವಟಿಕೆಗಳು ನಡೆಯುತ್ತ ಬಂದುದು ಸುಳ್ಳಲ್ಲ, ಆದರೆ ಅದು ಎದ್ದುಕಾಣುವಂತೆ ಥಾಳಾದುದಲ್ಲ. ಶಿಕ್ಷಕೇತರರೇ ತಮ್ಮದೇ ಆಸಕ್ತಿಯಿಂದ ತೊಡಗಿಕೊಂಡ ಪ್ರಯತ್ನಗಳು ಈ ಭಾಗದಲ್ಲಿ ವಿಶೇಷವಾಗಿ ಕಾಣುತ್ತವೆ. ಪ್ರಕಾಶಕರು ಬಹು ಸಂಖ್ಯೆಯಲ್ಲಿ ಈ ಭಾಗದಲ್ಲಿ ಕಾಣಿಸಿಕೊಂಡುದು, ಸರಕಾರದ ಯೋಜನೆಗಳು ಈ ಭಾಗದಲ್ಲಿ ಸುಲಭವಾಗಿ ಅರಿವಿಗೆ ಬರುತ್ತಿದ್ದುದು ಮುಂತಾಗಿ ನಾನಾ ಬಗೆಯ ಯೋಜನೆಗಳಲ್ಲಿ ಈ ಭಾಗದ ಅನೇಕ ವಿದ್ವಾಂಸರು ತೊಡಗಿಕೊಂಡುದು ಕಾಣುತ್ತದೆ.

ಬಿ. ಶ್ರೀ. ಪಾಂಡುರಂಗರಾಯ ಅವರ ಪ್ರಯತ್ನಗಳು, ದೇವುಡು ಅವರ ತೊಡಗಿಕೊಳ್ಳುವಿಕೆಗಳು, ಟಿ.ಎಮ್.ಆರ್ ಸ್ವಾಮಿ, ಕುಮಾರ ವೆಂಕಣ್ಣ ಅವರ ಪತ್ರಿಕೆಯ ಪ್ರಯತ್ನಗಳು, ಎಸ್. ವಿ. ಶ್ರೀನಿವಾಸರಾವ್ ಅವರ ಕಾಳಜಿಗಳು, ಇವೆಲ್ಲ ಒಂದಿಷ್ಟು ಸಾಂಘಿಕ ಅಪೇಕ್ಷಿತವಾದರೂ ಹೆಚ್ಚಾಗಿ ವೈಯಕ್ತಿಕವಾಗಿಯೇ ಕಂಡ ಆಸಕ್ತಿಯ ಪ್ರಯತ್ನಗಳಾಗಿ ಉತ್ತಮ ಸಾಹಿತ್ಯದ ಬೆಳಸಿಗಾಗಿ, ಅದೂ ಒಂದು ಗಣಿಸಬೇಕಾದ ಅಗತ್ಯವೆನ್ನುವುದನ್ನ ಒತ್ತಿಹೇಳುವ ಆಗ್ರಹಗಳಾಗಿ ಕಾಣುತ್ತವೆ.

ಬಿ.ಶ್ರೀ. ಪಾಂಡುರಂಗರಾಯರು(೧೯೧೩-೧೯೯೩) 'ಮಕ್ಕಳ ಮಂಟಪ' ಎನ್ನುವುದನ್ನು ಹುಟ್ಟುಹಾಕಿಕೊಂಡು ಸಾಕಷ್ಟು ತೊಡಗಿಕೊಂಡರು. 'ಕಲ್ಲುಸಕ್ಕರೆ ಬೆಟ್ಟ'ದಂಥ ಜನಪ್ರಿಯ ಜನಪದ ಕತೆಯನ್ನ ಬರೆದಿದ್ದ ಅವರು ಹಲವಾರು ಪ್ರಕಾರದ ಬರವಣಿಗೆಯನ್ನ ಮಕ್ಕಳ ವಯೋಮಾನವನ್ನ ಗಮನಿಸುತ್ತ ರಚಿಸಿದ್ದರು. 'ಕನ್ನಡ ಮಕ್ಕಳ ಸಾಹಿತ್ಯದ ಹೆಜ್ಜೆಪಾಡು' ಎನ್ನುವ ಕೃತಿಯನ್ನೂ ಬರೆದುದಿದೆ. 'ಸಾಹಸಕಥೆ', 'ಮರವೇರಿದ ಹುಂಜ', 'ಸಾಕುಪ್ರಾಣಿಗಳು', 'ಮುದ್ದುಸಿಂಗಾರದ ಕಥೆ', 'ಮಳೆರಾಯ', 'ತುಂಟನ ಗುರು', 'ಪುಟಾಣಿ ಗೆಳೆಯ', 'ತಾಯಿಯೇ ದೇವರು', 'ಆದರ್ಶ ಸೋದರರು', 'ಧೀರ ಮಗ', 'ಗುರುವೇ ದೊಡ್ಡವನು', 'ರಾಜಾ ಬೀರಬಲ್', 'ಎಳೆಯರ ಭಾರತ', 'ಮಹಾತ್ಯಾಗಿ', 'ಮಹಾಮಾತೆ', 'ಮಹಾಸಾಹಸಿ', 'ಶಿಖರದಿಂದ ಶಿಖರಕ್ಕೆ', 'ಕಾಶ್ಮೀರ', 'ಆಕಾಶದಲ್ಲಿ ಅದ್ಭುತಗಳು' ಮುಂತಾದುವು ಅವರ ಕೃತಿಗಳು. 'ಮೆದುಳಿಗೆ ಮೃಷ್ಟಾನ್ನ' ಕೃತಿಯು ೧೮೫೭ರಿಂದ ೧೯೪೫ರ ತನಕ ನಡೆದ ಸ್ವಾತಂತ್ರ್ಯ ಸಂಗ್ರಾಮದ ಕಥೆಯನ್ನ ಒಳಗೊಂಡಿದೆ. ಇವಲ್ಲದೆ 'ಪಾಪಚ್ಚಿ' ಪತ್ರಿಕೆಯಲ್ಲಿ ಧಾರಾವಾಹಿಯಾಗಿ 'ಮೊಲರಾಜನು ರಾಜನಾದಾಗ', 'ಶಾಲೆಯ ಶೂರರು', 'ಮರವೇರಿದ ಹುಂಜ' ಮೊದಲಾದ ಧಾರಾವಾಹಿ ಕಾದಂಬರಿಗಳನ್ನು ಪ್ರಕಟಿಸಿದರು. ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯಸಮ್ಮೇಳನಗಳ ಅಧ್ಯಕ್ಷತೆಯನ್ನು ಎರಡು ಬಾರಿ ನಿರ್ವಹಿಸಿದ ಶ್ರೇಯಸ್ಸೂ ಇವರದು. ಪಂಚತಂತ್ರದ ಪ್ರಾಣಿಗಳನ್ನು ರಂಗದ ಮೇಲೆ ತಂದು ಮಾತನಾಡಿಸಿ ಮಕ್ಕಳನ್ನು ನಗಿಸಿದ್ದಾರೆ.

ಎಸ್.ವಿ. ಶ್ರೀನಿವಾಸರಾವ್(೧೯೩೧) ಅವರು ಕೇಂದ್ರ ಸರಕಾರದ ರಕ್ಷಣಾ ಇಲಾಖೆಯಲ್ಲಿ ಕಂಟ್ರೋಲರ್ ಆಫ್ ಕ್ವಾಲಿಟಿ ಅಶ್ಯೂರನ್ಸ್ ಆಗಿ ಕಾರ್ಯನಿರ್ವಹಿಸುತ್ತ, ನಂತರ ಇಲೆಕ್ಟ್ರಾನಿಕ್ಸ್ ಬೆಂಗಳೂರುನಲ್ಲಿ ಸೈಂಟಿಫಿಕ್ ಆಫೀಸರ್ ಆಗಿ ಕಾರ್ಯನಿರ್ವಹಿಸುತ್ತ ಇದೆಲ್ಲರಿಂದ ವ್ಯತಿರಿಕ್ತವಾದ

ಬೇರೆಯದೇ ಆದ ಮಕ್ಕಳ ಲೋಕದಲ್ಲಿ ಬಲು ಆಸಕ್ತಿಯಿಂದ ಕೆಲಸ ಮಾಡಿರುವುದು ಅಚ್ಚರಿಯ ಸಂಗತಿಯೇ. ಪ್ರಬುದ್ಧರಿಗಾಗಿಯೂ ಆಸಕ್ತಿಯಿಂದ ತೊಡಗಿಕೊಂಡ ಇವರು ೨೦ಕ್ಕೂ ಹೆಚ್ಚು ಕೃತಿಗಳನ್ನು ನೀಡಿರುವುದು ಅವರ ಅದಮ್ಯ ಉತ್ಸಾಹವನ್ನು ಹೇಳುತ್ತದೆ. 'ಮಕ್ಕಳೇ ಇವರನ್ನು ನೀವು ಬಲ್ಲಿರಾ?' ಎನ್ನುವ ಸರಣಿ ಅಂಕಣ ಬರವಣಿಗೆಯನ್ನ ಪ್ರಜಾಮತ ಪತ್ರಿಕೆಯಲ್ಲಿ ಬರೆದು ವಿಶೇಷವಾಗಿಯೇ ಮಕ್ಕಳ ಸಾಹಿತ್ಯಾಸಕ್ತರನ್ನು ಸೆಳೆದರು. ಅಷ್ಟೇ ಅಲ್ಲ, ಅವರು ಮಕ್ಕಳ ಸಾಹಿತ್ಯದೆಡೆಗೆ ವಿರಳವೆನ್ನುವಂತೆ ವೈಚಾರಿಕ ನಿಲವನ್ನು ಹೊಂದಿದ್ದರು. ಅಧ್ಯಯನದ ದೃಷ್ಟಿಕೋನ ಅವರಲ್ಲಿ ವಿಪುಲವಾಗಿ ಕಾಣುತ್ತದೆ. ಅವರ 'ಮಕ್ಕಳ ಸಾಹಿತ್ಯದ ನೆಲೆ–ಬೆಲೆ' ಕೃತಿ ಇದನ್ನ ನಿಚ್ಚಳವಾಗಿ ಹೇಳುತ್ತದೆ. 'ಹಾರೋ ಹನುಮ' ಅವರ ಫ್ಯಾಂಟಿಸಿಯ ಕತೆ ಮಕ್ಕಳನ್ನ ಒಳ್ಳೇ ಸೆಳೆದಿದ್ದ ಕೃತಿ. ಅತ್ತ ಫ್ಯಾಂಟಸಿಯನ್ನು ಇತ್ತ ವಾಸ್ತವವನ್ನು ಎರಡನ್ನೂ ಸಮೀಕರಿಸುತ್ತ ನಮ್ಮ ಸುತ್ತಣ ಪರಿಸರದಲ್ಲಿ ಅರಳಿದ ವಿಶಿಷ್ಟದ ಕೃತಿ ಇದು. ಭದ್ರಾವತಿ ಆಕಾಶವಾಣಿಯಲ್ಲಿ ಧಾರಾವಾಹಿಯಾಗಿ ಪ್ರಸಾರವಾಗಿ ಮಕ್ಕಳನ್ನು ಸಾಕಷ್ಟು ಸೆಳೆದಿದ್ದ ಕೃತಿ ಇದು. ಮೂರು ಮಕ್ಕಳ ಕಾದಂಬರಿಗಳನ್ನು ಅವರು ರಚಿಸಿದ್ದುದಾಗಿ ತಿಳಿದು ಬರುತ್ತದೆ.

ಆರ್. ಕಲ್ಯಾಣಮ್ಮನವರ ಪ್ರಯತ್ನಗಳು ಬಹಳ ವಿಶೇಷವಾದುವು. ತಮ್ಮ ಆಸ್ತಿಯನ್ನೇ ನೀಡಿ ಮಕ್ಕಳ ಕೂಟ ಕಟ್ಟಲು ಮುಂದೆ ಬಂದ ಇವರು ಮಕ್ಕಳ ಚಟುವಟಿಕೆಗಳಿಗೆ ನಾನಾ ಬಗೆಯಲ್ಲಿ ಸಹಾಯ ಮಾಡಿದವರು. ೧೯೩೭ ರಲ್ಲಿ ಮಕ್ಕಳ ಮೇಲಿನ ಮಮತೆಯ ಪ್ರತೀಕವಾಗಿ ತಾವು ಹೊರಡಿಸುತ್ತಿದ್ದ 'ಸರಸ್ವತಿ' ಪತ್ರಿಕೆಯಲ್ಲಿ ಮಕ್ಕಳಿಗಾಗಿ ಹಲವು ಪುಟಗಳನ್ನು ಮೀಸಲಾಗಿರಿಸಿದರು. ಅದರಲ್ಲಿ ಮಕ್ಕಳಿಗೆ ಅನೇಕ ರೀತಿಯ ಸ್ಪರ್ಧೆಗಳನ್ನು ಏರ್ಪಡಿಸಿದರು. ಸ್ಪರ್ಧೆಗಳಲ್ಲಿ ಪಾಲ್ಗೊಂಡ ಅನೇಕ ಮಕ್ಕಳು ಬಹುಮಾನಕ್ಕೆ ಆಯ್ಕೆಯಾದರು. ಆ ಪ್ರತಿಭಾವಂತ ಮಕ್ಕಳಿಗೆ ಅದ್ದೂರಿಯಾಗಿ ಬಹುಮಾನ ವಿತರಣೆ ಉತ್ಸವ ಮಾಡಬೇಕೆಂದು ಕಾರ್ಯಕ್ರಮ ಒಂದನ್ನು ಹಮ್ಮಿಕೊಂಡರು. ಈ ಕಾರ್ಯಕ್ರಮವು ನಗರಸಭೆ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಹಿರಿಯ ಮಕ್ಕಳ ಸಾಹಿತಿಗಳಾದ ಹೊಯ್ಸಳ, ಪಂಜೆ ಮಂಗೇಶರಾಯರ ಶುಭಾಕಾಂಕ್ಷೆಯಿಂದ ಮಕ್ಕಳ ಸಮ್ಮೇಳನವಾಗಿ ರೂಪಗೊಂಡು ಅದು ಅಂದಿನ ರಾಜಕುಮಾರಿ ವಿಜಯಲಕ್ಷ್ಮಮ್ಮಣ್ಣಿ ಅವರಿಂದ ಉದ್ಘಾಟನೆಗೊಂಡು ಮೂರು ದಿನಗಳ ಕಾಲ ಅದ್ದೂರಿಯಾಗಿ ನಡೆಯಿತು. ಇದರ ಅಭೂತಪೂರ್ವ ಯಶಸ್ಸಿನ ಫಲವಾಗಿಯೇ ಆರ್. ಕಲ್ಯಾಣಮ್ಮನವರು ೧೯೩೮ ಎಪ್ರಿಲ್ ೨೬ ರಂದು ಬೆಂಗಳೂರಿನಲ್ಲಿ 'ಅಖಿಲ ಕರ್ನಾಟಕ ಮಕ್ಕಳ ಕೂಟ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆ ಎಷ್ಟೊಂದು ಜನಪ್ರಿಯವಾಯಿತೆಂದರೆ ಒಂದು ವರ್ಷ ಕಳೆಯುವಷ್ಟರಲ್ಲಿ ಅದರ ವ್ಯಾಪ್ತಿ ಇಡೀ ಕರ್ನಾಟಕಕ್ಕೆ ಹರಡಿತು. ಅಭಿಮಾನಿಗಳ ಸಂಖ್ಯೆ ದಿನದಿನಕ್ಕೆ ಬೆಳೆಯಿತು. ಬೆಂಗಳೂರಿನಷ್ಟೇ ಅಲ್ಲದೇ ನಾಡಿನ ಬೇರೆ ಬೇರೆ ಊರುಗಳಲ್ಲಿ ಕೂಟದ ಶಾಖೆಗಳು ಪ್ರಾರಂಭವಾದವು. ಪ್ರತಿವರ್ಷವೂ ಮಕ್ಕಳ ಸಮ್ಮೇಳನಗಳು ಜರುಗಲಾರಂಭಿಸಿದವು. ಆ ಸಮ್ಮೇಳನಗಳಿಗೆ ಮಕ್ಕಳೇ ಅಧ್ಯಕ್ಷರು, ಮಕ್ಕಳೇ ಸ್ವಾಗತಾಧ್ಯಕ್ಷರಾಗುತ್ತಿದ್ದುದು ವಿಶೇಷವಾಗಿತ್ತು. ಮಕ್ಕಳ ಕೂಟವು ಕಥೆ, ಕವನ, ಲೇಖನ ರಚನಾ ಸ್ಪರ್ಧೆ, ಚರ್ಚಾ ಸ್ಪರ್ಧೆ, ಚಿತ್ರಬಿಡಿಸುವ ಸ್ಪರ್ಧೆ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿ ಮಕ್ಕಳಲ್ಲಿರುವ ಪ್ರತಿಭಾ ಶಕ್ತಿಯನ್ನು

ಪ್ರೋತ್ಸಾಹಿಸಿತು. ಅನೇಕ ಪ್ರತಿಭಾವಂತ ಮಕ್ಕಳಿಂದ, ಮಕ್ಕಳ ಬರಹಗಾರರಿಂದ ಮಕ್ಕಳ ಸಾಹಿತ್ಯವನ್ನು ಬರೆಯಿಸಿತು. ಕೂಟದ ವತಿಯಿಂದ ಹಲವಾರು ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿತು. 'ಬಣ್ಣದ ಬಗರಿ', 'ಜಾಣ', 'ಹೂವಿನ ಶಾಲೆ', 'ಉಗಾದಿ ಉಡುಗೊರೆ', 'ಅಜ್ಜ–ಅಜ್ಜಿ', 'ಕೋಲೆಬಸವ' ಮುಂತಾದವು ಪ್ರಮುಖ ಪ್ರಕಟನೆಗಳಾಗಿವೆ. ಮಕ್ಕಳ ಕೂಟದಲ್ಲಿ ನಿರಂತರವಾಗಿ ಮಕ್ಕಳ ಚಟುವಟಿಕೆಗಳು ನಡೆಯಲಾರಂಭಿಸಿದವು. ಮಕ್ಕಳ ಸಾಹಿತಿ ಜಿ. ಪಿ. ರಾಜರತ್ನಂ, ಹೊಯ್ಸಳ ಅವರು ಪ್ರತಿ ಶನಿವಾರದಂದು ಬಂದು ಮಕ್ಕಳಿಗಾಗಿ ಕತೆ, ಕವನ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರಲ್ಲದೇ ಮಕ್ಕಳಿಂದ ಅವುಗಳನ್ನು ಹೇಳಿಸುತ್ತಿದ್ದರು. ಮಕ್ಕಳು ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದರು. ಈ ರೀತಿ ಕೇಳುತ್ತಿದ್ದ ಪ್ರಶ್ನೆ ಉತ್ತರಗಳನ್ನು ಚಿಕ್ಕ ಚಿಕ್ಕ ಪುಸ್ತಕಗಳಲ್ಲಿ ಮಕ್ಕಳ ಕೂಟವು ಹೊರತಂದಿದೆ. ಮಕ್ಕಳ ಕೂಟದ ಕಾರ್ಯಚಟುವಟಿಕೆಗಳಿಂದಾಗಿ ಅನೇಕ ಮಕ್ಕಳ ಸಾಹಿತಿಗಳು ರೂಪಗೊಂಡರು. ಟಿ. ಎಮ್.ಆರ್. ಸ್ವಾಮಿ, ಹೆಚ್. ವೈ. ಸರಸ್ವತಮ್ಮ, ಕೆ.ಟಿ. ಬನಶಂಕರಮ್ಮ, ಚಿ. ಉದಯಶಂಕರ, ಎಚ್. ಶ್ರೀನಿವಾಸಮೂರ್ತಿ ಪ್ರಮುಖ ಮಕ್ಕಳ ಸಾಹಿತಿಗಳಾಗಿ ಹೊರ ಹೊಮ್ಮಿದರು.

ಹೆಸರಾಂತ ಮಕ್ಕಳ ಸಾಹಿತಿಗಳನ್ನು ಸಾಮಾಜಿಕ ಸಾಧನೆ ಮಾಡಿದ ವ್ಯಕ್ತಿಗಳನ್ನು ಕರೆಯಿಸಿ ಮಕ್ಕಳಿಗೆ ಅವರ ವ್ಯಕ್ತಿತ್ವವನ್ನು ಪರಿಚಯಿಸಿ ಅಂಥವರ ಆದರ್ಶಗಳನ್ನು ಮಕ್ಕಳ ಕೂಟವು ಅವರೆದುರು ಬಿಂಬಿಸಿತು. ಅನೇಕ ಹೊಸ ಹೊಸ ಪ್ರಯೋಗಗಳನ್ನು ಮಾಡಿತು. ಕಲ್ಯಾಣಮ್ಮನವರು 'ಸರಸ್ವತಿ' ಪತ್ರಿಕೆಯಲ್ಲಿ ಮಕ್ಕಳ ಬಾವುಟ ವಿಭಾಗದಲ್ಲಿ ಮಕ್ಕಳೇ ಬರೆದ ಕತೆ, ಕವನ, ಚುಟುಕು, ನಾಟಕಗಳನ್ನು ಪ್ರಕಟಿಸುತ್ತಿದ್ದರಷ್ಟೇ ಅಲ್ಲ, ಒಬ್ಬ ಬಾಲ ಸಾಹಿತಿಯನ್ನೇ ಬಾಲವಿಭಾಗದ ಸಂಪಾದಕನನ್ನಾಗಿ ಮಾಡಿದ್ದು ಅವರ ಪ್ರಯೋಗಪರತೆಗೆ ಸಾಕ್ಷಿ ಎನ್ನಬಹುದು. ಕಲ್ಯಾಣಮ್ಮನವರ ಜೀವಿತಾವಧಿಯಲ್ಲಿ ಹದಿನೆಂಟು ಮಕ್ಕಳ ಸಮ್ಮೇಳನಗಳು ನಾಡಿನ ವಿವಿಧ ಭಾಗಗಳಲ್ಲಿ ಜರುಗಿದವು. ಅವರ ನಿಧನಾನಂತರವೂ ಸಮ್ಮೇಳನಗಳು, ತಿಂಗಳು ಕಾಲ ಬೇಸಿಗೆ ಶಿಬಿರಗಳು ನಡೆಯುತ್ತಲೇ ಇವೆ. ಈಗಾಗಲೇ ೩೦ ರಾಜ್ಯ ಮಟ್ಟದ ಮಕ್ಕಳ ಸಮ್ಮೇಳನಗಳು, ೪೬ ಬೇಸಿಗೆ ಶಿಬಿರಗಳನ್ನು ಸಂಘಟಿಸಿದ ಕೀರ್ತಿ ಮಕ್ಕಳ ಕೂಟಕ್ಕೆ ಸಲ್ಲುತ್ತದೆ. ಇವುಗಳಲ್ಲಿ ಡಾ. ಶಿವರಾಮ ಕಾರಂತ, ರಾಜರತ್ನಂ, ಹೊಯ್ಸಳ, ಬಿ. ಶ್ರೀ. ಪಾಂಡುರಂಗರಾಯ, ಪರಿಮಳ ಮುಂತಾದ ದಿಗ್ಗಜರು ಪಾಲ್ಗೊಂಡಿರುವುದು ವಿಶೇಷವಾಗಿದೆ. ಅನೇಕ ಗಣ್ಯಮಾನ್ಯರು ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಮಕ್ಕಳ ಕೂಟಕ್ಕೆ ಭೇಟಿ ನೀಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅಂತಹವರಲ್ಲಿ ಮಾಜಿ ಪ್ರಧಾನಿ ಇಂದಿರಾಗಾಂಧಿ, ರಾಜ್ಯಪಾಲರಾಗಿದ್ದ ಎ. ಕೆ. ಬ್ಯಾನರ್ಜಿ, ಉಮಾಶಂಕರ ದೀಕ್ಷಿತ, ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ, ಉಪರಾಷ್ಟ್ರಪತಿ ಬಿ. ಡಿ. ಜತ್ತಿ, ಎಸ್. ಎಂ. ಕೃಷ್ಣ, ನಟರಾದ ಶ್ರೀನಾಥ, ವಿಷ್ಣುವರ್ಧನ ಪ್ರಮುಖರಾಗಿದ್ದಾರೆ.

ಈ ಬಳಗದಿಂದಲೇ ಬಂದ **ಟಿ. ಎಮ್. ಆರ್. ಸ್ವಾಮಿ(೧೯೧೧–೧೯೪೭)** ಅವರು ಶಿಕ್ಷಕರಾಗಿ ಮಕ್ಕಳ ಸಾಹಿತ್ಯಕ್ಕಾಗಿ ಬಹುದಿನಗಳ ಕಾಲ ಕೆಲಸಮಾಡಿದವರು. 'ಕನ್ನಡಿಗರ ಕಣಜ' ಎನ್ನುವ ಗ್ರಂಥಮಾಲೆಯ ಮೂಲಕ, ತಾವೇ ಪ್ರಕಾಶನ ನಡೆಸುತ್ತ ಹಲವಾರು ಮಕ್ಕಳ

ಪುಸ್ತಕಗಳನ್ನು ಪ್ರಕಟಿಸಿದರು. ಈ ಮಾಲೆಯಲ್ಲಿ ದೊಡ್ಡವರು ಮಕ್ಕಳಿಗಾಗಿ ಬರೆದುದು ಸೇರಿರುವ ಹಾಗೆ ಮಕ್ಕಳೇ ಬರೆದುದೂ ಕೂಡ ಸೇರಿದೆ. ಸ್ವಾಮಿ ಅವರೇ ನಾಟಕಗಳನ್ನು, ಕವಿತೆಗಳನ್ನು, ಕತೆಗಳನ್ನು ಬರೆದುದಿದೆ. ಮಕ್ಕಳ ಕೂಟದ ಸ್ಥಾಪನೆ ಕೂಡ ಈ 'ಕನ್ನಡಿಗರ ಕಣಜ'ದಿಂದ ನಡೆಯಿತು, ಹಾಗೂ ಇದು ಮಕ್ಕಳ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಒಳ್ಳೇ ಕೇಂದ್ರವಾದುದು ಇತಿಹಾಸ. 'ಪಾಯಸದ ಪಟ್ಟಣ' ಎನ್ನುವ ನಾಟಕದ ಮುನ್ನುಡಿಯಲ್ಲಿ ಸ್ವಾಮಿ ಬರೆದಿರುವಂತೆ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವ, ಮನಶಾಸ್ತ್ರದ ಆಧಾರದ ಮೇಲೆ ಬರೆದ, ಅವರ ತಿಳಿವಳಿಕೆ, ಸಂತೋಷ, ವಿನೋದಗಳನ್ನು ಹೆಚ್ಚಿಸುವ ಪುಟ್ಟ ಪುಸ್ತಕಗಳನ್ನು ಒದಗಿಸುವ ಕೆಲಸದಲ್ಲಿ ತೊಡಗಿರಬೇಕೆಂದು ನಿರ್ಧರಿಸಿರುವುದಾಗಿ ಹೇಳಿಕೊಂಡಿರುವುದು ಕಂಡುಬರುತ್ತದೆ. ಇದರಿಂದ ಮಕ್ಕಳಿಗೆ ಇಂಥ ಪುಸ್ತಕಗಳ ಹೊರತಾಗಿ ಕತೆ, ಕವಿತೆ, ನಾಟಕಗಳಂಥ ರಂಜನೆಯ ಪುಸ್ತಕಗಳನ್ನ ಅವರು ಬೇರೆಯಾಗಿ ಪ್ರಕಟಿಸಿದರು ಎಂದು ಕಾಣುತ್ತದೆ. ಬಿ.ಎಂ. ಶ್ರೀ ಅವರ ಮೆಚ್ಚುಗೆಯ ಮುನ್ನುಡಿ ಇವರ ಪುಸ್ತಕವೊಂದಕ್ಕಿದೆ. ಅವರ 'ಪಾಯಸದ ಪಟ್ಟಣ'ದ ಬರವಣಿಗೆ ನೋಡಿದರೆ ಟಿ.ಎಂ.ಆರ್ ಸ್ವಾಮಿ ಒಬ್ಬ ಒಳ್ಳೆಯ, ಆಸಕ್ತಿಯ, ಮಕ್ಕಳಿಗೆ ಹೇಗೆಲ್ಲ ಇರಬೇಕು ಎಂದು ಸಾಕಷ್ಟು ತೊಡಗಿಕೊಂಡ ಪ್ರತಿಭಾವಂತ ಬರಹಗಾರ ಎನಿಸುತ್ತದೆ.

ಇನ್ನುಳಿದಂತೆ ಅನೇಕರು ವಿಭಿನ್ನ ರಂಗದಲ್ಲಿ ಕಾರ್ಯಪ್ರವೃತ್ತರಾಗಿದ್ದುಕೊಂಡು ಮಕ್ಕಳ ಸಾಹಿತ್ಯದೆಡೆಗೆ ಆಸಕ್ತಿ ಹೊಂದಿ ಒಂದಿಷ್ಟೆಲ್ಲ ತೊಡಗಿಕೊಂಡವರು.

ಎಚ್. ವೈ ಸರಸ್ವತಮ್ಮ (೧೯೦೬-೧೯೯೩) 'ಮಕ್ಕಳ ಸಚಿತ್ರ ಭಾರತ' ನೀಡಿದವರು. ಪ್ರಬುದ್ಧರಿಗಾಗಿ ಸಾಕಷ್ಟು ಬರವಣಿಗೆ ಮಾಡಿದ ಇವರು ಸುಪ್ರಸಿದ್ಧ ಸಮಾಜಸೇವಕಿ ಪಾರ್ವತಿಬಾಯಿ ಅರವಳೆ ಅವರ ಆತ್ಮಚರಿತ್ರೆಯನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ್ದು ಇದು ಹಲವು ವರ್ಷ ಹೈಸ್ಕೂಲಿಗೆ ಪಠ್ಯ ಪುಸ್ತಕವಾಗಿತ್ತು.

ಉಪಾಧ್ಯಾಯರಾಗಿ, ನಂತರ ಸೆಕ್ರೆಟರಿಯೇಟ್‌ನಿಂದ ನಿವೃತ್ತಿಹೊಂದಿದ **ಆರ್. ಎಸ್. ರಾಮರಾವ್(೧೯೧೫)** ಸಾಹಿತ್ಯ ಪರಿಷತ್ತಿನಲ್ಲಿ, ಐಬಿಎಚ್‌ನಲ್ಲಿ ಕಾರ್ಯ ನಿರ್ವಹಿಸುತ್ತ ಸಾಹಿತ್ಯದಲ್ಲಿ ಒಳ್ಳೇ ಆಸಕ್ತಿಯಿಂದ ತೊಡಗಿಕೊಂಡ ಹಿರಿಯರು. ಮಕ್ಕಳಿಗಾಗಿ ಎಂದು ಇವರು ಅನೇಕ ಕೃತಿಗಳನ್ನು ರಚಿಸಿದರು. ಇವರು ರಚಿಸಿದ 'ಸಾಹಸ ಭೀಮ ವಿಜಯ' ಎಂಟನೆಯ ತರಗತಿಗೆ ಪಠ್ಯವಾಗಿತ್ತು. 'ಗದ್ಯ ಮಂಜರಿ' ೯ನೆಯ ತರಗತಿಗೆ ಪಠ್ಯವಾಗಿತ್ತು. 'ಹರಿಶ್ಚಂದ್ರ', 'ಅತ್ತಿಮಬ್ಬೆ', ರೊದ್ದ ಶ್ರೀನಿವಾಸರಾವ್, 'ಗೋದಾವರಿ', 'ಎಚ್ಚಮನಾಯಕ', 'ಕುಣಿಗಲ್ ರಾಮಶಾಸ್ತ್ರಿ', 'ಕಲ್ಯಾಣದ ಚಾಲುಕ್ಯರು', 'ಪಂಡಿತ ಮೋತಿಲಾಲ್' ನೆಹರು ಮುಂತಾಗಿ ಇವರ ಕೃತಿಗಳು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಿಸಿದರೂ ಬೆಂಗಳೂರು ಕಾರ್ಯಕ್ಷೇತ್ರವಾಗಿದ್ದ **ಕುಮಾರ ವೆಂಕಣ್ಣ(೧೯೧೬-೧೯೯೪)** ಮಕ್ಕಳ ಸಾಹಿತ್ಯ ರಂಗದಲ್ಲಿ ಗಮನಿಸಬೇಕಾದ ಹೆಸರು. 'ಪಾಪಚ್ಚಿ' ಪತ್ರಿಕೆಯ ಮೂಲಕ ಅವರ ಮಕ್ಕಳ ಲೋಕದ ಸೇವೆ ವಿಶೇಷವಾದುದು. 'ಕಪ್ಪೆ ಮಡಿದ ಕ್ರಾಂತಿ', 'ಜಾಣ ಗೆಲ್ಲುತ್ತಾನೆ', 'ಜಾಣರು ತೋಡಿದ ಬಾವಿ', 'ತಂದೆ ಹೇಳಿದ ಬುದ್ಧಿ', 'ನ್ಯಾಯಶೀಲ ಗೆಲ್ಲುತ್ತಾನೆ', 'ಮಂತ್ರಿಯಾದ ಬುದ್ಧಿವಂತ', 'ಬೆಟ್ಟದ ಮೇಲೆ ಪುಟ್ಟ ಮನೆ',

'ದೇವರ ಹೆಂಡರು', 'ಮರೆಯಲಾರದ ಮಹಾವೀರರು' ಮುಂತಾದುವು ಇವರ ಮಕ್ಕಳಿಗಾಗಿನ ಕೃತಿಗಳು. ಮಕ್ಕಳಿಗಾಗಿ ಇವರು ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದರು.

ಜಗ್ಗು ಪ್ರಿಯದರ್ಶಿನಿ ವೃತ್ತಿಯಿಂದ ಉಪಾಧ್ಯಾಯರಾಗಿದ್ದು ಪ್ರಬುದ್ಧರಿಗಾಗಿ ತುಡಿದಂತೆ ಮಕ್ಕಳಿಗಾಗಿಯೂ ತೊಡಗಿಕೊಂಡವರು. ವಿದ್ಯಾ ಇಲಾಖೆಯಿಂದ ರಾಜ್ಯ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ ಪಡೆದ ಇವರು ಮಕ್ಕಳಿಗಾಗಿ 'ನಾಗಾಸಾಕಿ', 'ಕಂದರ–ಕಾಮಧೇನು', 'ಪರಿವರ್ತನ' ಮುಂತಾದ ಕೃತಿಗಳನ್ನು ನೀಡಿದ್ದಾರೆ.

ಗೃಹಿಣಿಯಾಗಿದ್ದುಕೊಂಡು ಅದೇನೋ ಒಲವಿನಿಂದ ಮಕ್ಕಳಿಗೆ ನಿರಂತವಾಗಿ ತೊಡಗಿಕೊಂಡು ಬಂದಿರುವವರು **ಶಾರದಾ ವಿ. ಮೂರ್ತಿ** ಅವರು. ಅವರ ಆಸಕ್ತಿಯ ಆಯ್ಕೆ ಕವಿತೆಯೇ. 'ಚಂದಮಾಮ ಬೇಗಬಾ', 'ಹಕ್ಕಿ ಗೂಡು', 'ವಂದ್ಯ ನೀವು ವಿಶ್ವಕೆ' ಮುಂತಾಗಿ ಹಲವಾರು ಸಂಕಲನಗಳನ್ನ ಅವರು ತಂದಿದ್ದಾರೆ. 'ಮಾತನಾಡಿ ಗೊಂಬೆಗಳೇ' ಅವರ ಕಿರು ನಾಟಕಗಳ ಸಂಕಲನ. ಅದರಲ್ಲೂ ಅವರು ಒಂದು ಗೀತ ನಾಟಕ ರಚಿಸಿದ್ದಾರೆ. ಅದಲ್ಲದೆ ಉಳಿದವುಗಳಲ್ಲಿಯೂ ಅಲ್ಲಲ್ಲಿ ಕವಿತೆ ಹಣಿಕಿ ಹಾಕುತ್ತಲೇ ಇರುತ್ತದೆ.

ಥರಥರ ಅನ್ನುವ ಚಳಿಯಲಿ ಅಮ್ಮ
ಎಲೆಗಳು ಉದುರುವುದೇಕೆ?
ಪಾಪದ ಮರಗಳು ಹಾಗೆಯೇ ನಿಂತು
ಗಡಗಡ ನಡುಗುವುದೇಕೆ?

ಎನ್ನುವಂಥ ಕುತೂಹಲದ ಸಹಜತೆಗಳು ಅಲ್ಲಿ ಕಂಡಿವೆ, ಅಂತರ್ಗತ ಲಯವಿದೆ.

ಬೇರೆಯ ತಿಂಡಿಗೆ
ಎಲ್ಲಿದೆ ಹೇಳಿ
ದೋಸೆಯ ಗಮ್ಮತ್ತು

ಲೆಕ್ಕವು ತಪ್ಪಿ
ತಿಂದರೂ ತಾರದು
ಹೆಚ್ಚಿನ ಆಪತ್ತು

ಕಾವಲಿ ಮೇಲೆ
ಹಿಟ್ಟನು ಹೊಯ್ಯಲು
ಚಿಯ್ಯನೆ ಸಂಗೀತ
ಗಮಗಮ ಪರಿಮಳ
ಮೂಗಿಗೆ ಬರುವುದು
ಸುದ್ದಿಯ ಸಾರುತ್ತ

ಅಂತೆಲ್ಲ ಮಕ್ಕಳಿಗೆ ಬಲು ಮುದವೆನಿಸುವ ಪದ್ಯಗಳನೇಕವನ್ನ ಅವರು ರಚಿಸಿದ್ದಾರೆ.

ನೆನೆದರೆ ನೀರಲಿ ನಿಂದೆಯು ಬಾಲಗೆ
ತುಡು ತಡವಾದರೂ ಸಹಿಸದು ಜನರಿಗೆ
ಮುದುಡಿದೆ ಎಂದರೆ ತಪ್ಪದು ಗದರಿಕೆ
ಸಂಬಳ ಕಡಿತವು ಯಾವುದೇ ತಪ್ಪಿಗೆ

ಎನ್ನುವ ಪೇಪರು ಮಾರುವ ಹುಡುಗನ ಕುರಿತೂ ಅವರು ಸಂವೇದನೆಯ ಸಾಲುಗಳನ್ನ ತಮ್ಮ ಕವಿತೆಯಲ್ಲಿ ನೀಡಿದ್ದಾರೆ.

ಆರ್. ಬಸವರಾಜ್ ಅವರು ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದುಕೊಂಡು ಮಕ್ಕಳ ಸಾಹಿತ್ಯದಲ್ಲಿ ಇನ್ನಿಲ್ಲದಂತೆ ತೊಡಗಿಕೊಂಡವರು. 'ರುದ್ರಾಕ್ಷಿಸರದ ಬೆಕ್ಕು ಮತ್ತಿತರ ಕತೆಗಳು', 'ಪರಮಾನಂದಯ್ಯನ ಬೆತ್ತ ಮತ್ತಿತರ ಕತೆಗಳು', 'ಅತ್ತೆಯನ್ನು ಸ್ವರ್ಗಕ್ಕೆ ಕಳಿಸಿದ ಸೊಸೆ ಮತ್ತಿತರ ಕತೆಗಳು', 'ಜಿಪುಣಾಗ್ರೇಸರ ಕೊಣವೇಗೌಡ ಮತ್ತಿತರ ಕತೆಗಳು', 'ಸುಣ್ಣದ ಕೊಳದಲ್ಲಿ ರಾಕ್ಷಸ ಮತ್ತಿತರ ಕತೆಗಳು', 'ಪುಟಾಣಿಗಳಿಗೆ ಪುಟ್ಟ ಕಥೆಗಳು', 'ಒಂದು ಕಪ್ಪು ಕುದುರೆಯ ಆತ್ಮ ಕತೆ', 'ಅಪಹೃತ ಬಾಲಕನ ಸಾಹಸಗಳು', 'ಮೂವರು ಬಂದೂಕು ಧಾರಿಗಳು', 'ಕಿಶೋರರಿಗೆ ಕಿರುಗತೆಗಳು' ಮುಂತಾಗಿ ಸಾಕಷ್ಟು ಜನಪದ ಸರಕಿನಿಂದಾಯ್ದ ಕತೆಗಳನ್ನ ನೀಡಿದ ಇವರು 'ಕಿರಿಯರಿಗೆ ಕನ್ನಡ ಸಾಹಿತ್ಯ ಚರಿತ್ರೆ'(ಹತ್ತು ಸಂಪುಟಗಳು) ಮುಂತಾದ ಕೃತಿಗಳನ್ನೂ ನೀಡಿದ್ದಾರೆ. ಇವರ ಕತೆಗಳ ಸಮಗ್ರ ಸಂಕಲನವೂ ಬಂದಿದೆ.

ಎಸ್. ಕೆ ರಮಾದೇವಮ್ಮ ಕರ್ನಾಟಕ ಸರಕಾರದ ಹಲವಾರು ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತಿಗೆ ಮೊದಲು ಉಪಕಾರ್ಯದರ್ಶಿಯಾಗಿ ವಿದ್ಯಾ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದವರು. ಇವರು ಮಕ್ಕಳ ಸಾಹಿತ್ಯದಲ್ಲಿ ಆಸಕ್ತಿ ತೋರಿ ಹಲವು ಕೃತಿಗಳನ್ನ ರಚಿಸಿದರು. 'ರಷ್ಯಾ ದೇಶದ ಮಕ್ಕಳ ಕಥೆಗಳು' ಎನ್ನುವ ಸಂಕಲನಕ್ಕೆ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಬಂದಿದೆ. ೧೯೮೫ರಲ್ಲಿ ಧಾರವಾಡದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ 'ಮಕ್ಕಳ ಭವಿಷ್ಯ ರೂವಾರಿ' ಎನ್ನುವ ಗೌರವವನ್ನು ನೀಡಲಾಯಿತು.

ಬಿ. ಎಸ್. ರುಕ್ಕಮ್ಮ (೧೯೩೪) ಮೈಸೂರಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಮಕ್ಕಳ ಸಾಹಿತ್ಯದಲ್ಲಿ ಒಳ್ಳೇ ಆಸಕ್ತಿ ಹೊಂದಿದವರಾಗಿದ್ದಾರೆ. ಇವರ 'ಪಾಪು ಅಮ್ಮನಿಗೆ ಹೇಳಿದ ಕಥೆಗಳು' ಕೃತಿಗೆ ಎನ್. ಸಿ. ಇ. ಆರ್. ಟಿ.ಯ ಪುರಸ್ಕಾರ ಬಂದಿದೆ. ಹಾಗೆಯೇ 'ಫೇಬರನ ಕೀಟಲೋಕ' ಕೃತಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಬಹುಮಾನ ಪಡೆದಿದೆ.

ಭಾರತೀಯ ರಿಝರ್ವ ಬ್ಯಾಂಕಿನಲ್ಲಿ ಅಧಿಕಾರಿಯಾಗಿದ್ದ **ಸೂ. ಸುಬ್ರಹ್ಮಣ್ಯ(೧೯೩೫)** ವಿಶೇಷವಾಗಿ ವಿಜ್ಞಾನ ಸಾಹಿತ್ಯದಲ್ಲಿ ಆಸಕ್ತಿ ಹೊಂದಿದವರು. ಇವರ 'ನಮ್ಮ ಸೂರ್ಯ' ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಿದೆ. 'ರಕ್ತದ ಕಥೆ' ಗೆ ದಕ್ಷಿಣ ಭಾರತದ ಪುಸ್ತಕ ಸಂಸ್ತೆಯಿಂದ ಪುರಸ್ಕಾರ ಬಂದಿದೆ. 'ಶಬ್ದ ಸಾಗರದಲ್ಲಿ' ಕೃತಿಗೆ ೨೦ನೆ ರಾಷ್ಟ್ರೀಯ ಮಕ್ಕಳ ಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. ಅಂತರರಾಷ್ಟ್ರೀಯ ಮಕ್ಕಳ ಸಾಹಿತ್ಯ ಸಂಶೋಧನಾ ಸಂಸ್ಥೆಯಲ್ಲಿ ಭಾಗವಹಿಸಲು ಫ್ರಾನ್ಸ್, ಪಶ್ಚಿಮ ಜರ್ಮನಿಗಳಿಗೆ ಭೇಟಿ ನೀಡಿದವರು ಇವರು.

'ಪ್ರಾಣಿಗಳ ಮೋಜು', 'ಅಲೆಕ್ಸಾಂಡರ್ ಫ್ಲೆಮಿಂಗ್', 'ಮೇಘನಾದ ಸಹಾ', ಮಕ್ಕಳ ನಾಟಕ 'ನಕ್ಕಿತು ನಕ್ಷತ್ರ' ಮುಂತಾದುವು ಇವರ ಮಕ್ಕಳ ಕೃತಿಗಳು. ಇಂಗ್ಲಿಷಿನಲ್ಲಿಯೂ ಇವರು ಮಕ್ಕಳಿಗಾಗಿ 'ದಿ ರೆಡ್ ರಿವರ್ ಆಫ್ ಲೈಫ್' ಕೃತಿಯನ್ನ ರಚಿಸಿದ್ದಾರೆ.

ಜನಪದ ಕತೆಗಳನ್ನ ವಿಶೇಷವಾಗಿ ನೀಡಿದ ಕೃ ನಾರಾಯಣರಾವ್(೧೯೩೦) ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸಿದವರು. 'ಗುಣವಂತರ ಕಥೆಗಳು', 'ದಿನಕ್ಕೊಂದು ಮಕ್ಕಳ ಕಥೆ', 'ಮಕ್ಕಳಿಗಾಗಿ ಮಹಾಪುರುಷರ ಚರಿತ್ರೆ,' ಮುಂತಾದುವು ಇವರ ಕೃತಿಗಳು.

ಐಬಿಎಚ್‌ನಲ್ಲಿ ಕನ್ನಡ ವಿಭಾಗದ ಪ್ರಮುಖರಾಗಿದ್ದ ಜಿ. ಕೆ. ಅನಂತರಾಮ್ ಆಸಕ್ತಿಯಿಂದ ಮಕ್ಕಳಿಗಾಗಿಯೂ ಬರೆದ ಹಿರಿಯರು. ಮರಾಠಿಯಿಂದ ಅನುವಾದಿಸಿದ 'ಮಾತನಾಡುವ ಮಾವಿನ ಹಣ್ಣು', ಇಂಗ್ಲಿಷ್‌ನಿಂದ ಅನುವಾದಿಸಿದ 'ತಾಮ ಮತ್ತು ಪುಟ್ಟ ಹಕ್ಕಿ', ಹಾಗೆಯೇ ದೊಲತ್ ಮತ್ತು ಎಚ್ ದೊಂಗಾಜಿ ಅವರ ಕೃತಿಯನ್ನು ಕನ್ನಡಕ್ಕೆ 'ಲೂಸಿಗೆ ಒಂದು ಅಂಗಿ' ಎಂದು ತಂದವರು. ಶಾರದಾ ಕೇಸ್ಕರ್‌ರವರ ಕೃತಿಯನ್ನು ಕನ್ನಡಕ್ಕೆ 'ರಾಮಾಯಣದಿಂದ ಆರಿಸಿದ ಕಥೆಗಳು' ಎಂದು ನೀಡಿದ್ದಾರೆ.

ಕೆ. ಎಚ್. ರಾವ್(೧೯೩೮) ದಾವಣಗೆರೆಯಲ್ಲಿ ಹುಟ್ಟಿದವರು. ಉಪಾಧ್ಯಾಯರಾಗಿದ್ದ ಇವರು ರಂಜನೀಯ ಧಾರಾವಾಹಿಗಳನ್ನ ಬರೆಯುತ್ತ ಬರುವಂತೆ ಮಕ್ಕಳಿಗೂ ಆಸಕ್ತಿಯಿಂದ ತೊಡಗಿಕೊಂಡವರು. 'ರಾಮಾಯಣದ ೨೦ ಕಥೆಗಳು', 'ಮಕ್ಕಳ ದೀಪ', 'ಮಕ್ಕಳ ಕವನ ಮಾಲೆ', 'ವಿನೋದವನ', 'ಚಾಚಾ', 'ಮಿಠಾಯಿ', 'ಆದಿಮಾನವರು', 'ಗಣೇಶ', 'ಮಂತ್ರವಾದಿ', 'ಮಾಯಾಜಾಲ', 'ಮುದ್ದು ಮಗನ ರಾದ್ಧಾಂತ(ನಗೆ ನಾಟಕ)', 'ನೀತಿಯ ಬೆಳಕು', 'ಕಾಡಿನಲ್ಲಿ ಮೀನಾ', 'ಪುರಾಣ ಕಥೆಗಳು', 'ವೀರ ಹನುಮ', 'ಮಾಯದ ಗಿಣಿ' ಮುಂತಾಗಿ ಇವರ ಕೃತಿಗಳು.

ಅಧ್ಯಾಪಕರಾಗಿದ್ದು ವಿಜ್ಞಾನದಲ್ಲಿಯೇ ವಿಶೇಷ ಆಸಕ್ತಿ ತಳೆದಿರುವ **ಗಾಯತ್ರಿ ಮೂರ್ತಿ** ಮಕ್ಕಳಿಗಾಗಿ ಅನೇಕ ಮಾಹಿತಿ ನೀಡುವ ವಿಜ್ಞಾನದಲ್ಲಿ ಆಸಕ್ತಿ ಮೂಡಿಸುವ ಮಕ್ಕಳ ಕೃತಿಗಳನ್ನು ನೀಡಿದ್ದಾರೆ. 'ಕಾಡಿನಲ್ಲೊಂದು ಕ್ಯಾಂಪು', 'ಬಿಂದುಸಿಂಧು' ಮತ್ತು 'ಬ್ರೂಸ್‌ಲಿ' ಅಂಥ ಮಕ್ಕಳ ಕಾದಂಬರಿಗಳನ್ನ ರಚಿಸಿರುವ ಅವರು, ಗಾಳಿ, ಶಾಖ, ನೀರು, ಬೆಳಕು, ಶಬ್ದಲೋಕ ಮುಂತಾದ ವಿಜ್ಞಾನದವೇ ನೇರ ವಿಷಯವಿರುವ ಕೃತಿಗಳನ್ನು ನೀಡಿದ್ದಾರೆ.

ಒಳ್ಳೆಯ ಸಂಘಟನಾ ಚತುರರೆಂದು ಹೆಸರಾಗಿರುವ, ಗೊರೂರು ಮತ್ತು ಪ್ರಕೃತಿ ಪ್ರತಿಷ್ಠಾನಗಳ ಅಧ್ಯಕ್ಷರಾಗಿ ಸೇವೆ ನಿರ್ವಹಿಸಿದ **ಲಲಿತಾ ರಂಗಸ್ವಾಮಿ(೧೯೫೨)** 'ಮಕ್ಕಳ ಕಥಾ ಕೋಶ', 'ಬುದ್ಧಿ ಕಲಿತ ನರಿ', 'ಪುಟ್ಟು ಪ್ರಪಂಚ', 'ಚಿನ್ನದ ಕಿರೀಟ', 'ಜನಪ್ರಿಯ ಕಥೆಗಳು', 'ಜನಪ್ರಿಯ ದೇಶಭಕ್ತಿ ಗೀತೆಗಳು', 'ಮಕ್ಕಳ ಹಾಡುಗಳು' ಮುಂತಾಗಿ ಅನೇಕ ಕೃತಿಗಳನ್ನ ಮಕ್ಕಳಿಗಾಗಿ ನೀಡಿದವರು.

ಮೈಸೂರಿನಲ್ಲಿ ಪ್ರಾಧ್ಯಾಪಕರಾಗಿದ್ದುಕೊಂಡು ಮಕ್ಕಳ ಸಾಹಿತ್ಯದಲ್ಲಿ ಆಸಕ್ತಿ ತಳೆದವರು **ಚಂದ್ರಶೇಖರಯ್ಯ**. ಅವರ ಮೈಸೂರಿನ ಗೀತಾ ಬುಕ್ ಹೌಸ್‌ನವರಿಂದ ಪ್ರಕಟವಾದ 'ತುಂಟರ

ಕ್ರಿಕೆಟ್' ಒಂದು ಒಳ್ಳೇ ಗಮನ ಸೆಳೆಯುವ ಕೃತಿ. ಅದರಲ್ಲಿನ 'ನಾನೂ ಹೊಡೆದೆ' ಎನ್ನುವ ಕವಿತೆ ಅಪ್ಪನಾಗಿ ಮಗುವಿಗೆ ಹೊಡೆದ ಪ್ರಸಂಗವನ್ನ ಆಧರಿಸಿ, ಒಂದಿಷ್ಟು ಹೊಸತಿನಿಂದ ಸೆಳೆಯುತ್ತದೆ.

೧

ನನ್ನ ಮಗಳು ತುಂಟಿ
ಮಹಾ ಜಗಳಗಂಟಿ!
ಅಳಲು ಶುರುವು ಮಾಡಿದರೆ
ಗುಡುಗು ಸಿಡಿಲು ಮಳೆ!
ಮಳೆ ಬಂದು ತೊಳೆದಮೇಲೆ
ನೋಡಬೇಕು
ಅವಳ ಮುಖದ ಕಳೆ!

೨

ಒಮ್ಮೆ–
ಅಮ್ಮನ ಮುಂದೆ
ಕೋಣೆಯಲಿ ಗುಡುಗು
ನಡುಮನೆಯಲಿ ಸಿಡಿಲು
ನನ್ನ ಮುಂದೆ ರೂಮಿನಲಿ
ಮಳೆ!

೩

ಏಕೆ? ಎಂದು ಪ್ರಶ್ನಿಸಲು
ಅದಕೆ ಮುಂಚೆ ಮುದ್ದಿಸಲು
ಬಂದ ಉತ್ತರ,
'ಅಪ್ಪಾ . . . ಅಣ್ಣ ಹೊಡೆದ!'
'ಎಲ್ಲಿಗೆ . . .?' ಇಲ್ಲದ ಕೋಪ
ತಂದುಕೊಂಡು ಕೇಳಿದೆ!
ಅದಕು ಮುನ್ನ ತೋಳಿನಲ್ಲಿ
ಪುಟ್ಟ ಮಗಳನಪ್ಪಿದೆ

೪

'ಇಲ್ಲಿಗೆ' ಎಂದು ತೋರಲು
ಅವಳ ಬೆರಳೆ ಕೆನ್ನೆಯಲಿ
ಗುಳಿಯನೊಂದ ಮಾಡಿತು
'ಮತ್ತಿನ್ನೆಲ್ಲಿಗೆ?'

'ಇಲ್ಲಿಗೆ!'
ಮತ್ತೆ ಮತ್ತೆ ಕೇಳಿದೆ
ಉತ್ತರವನು ಪಡೆದೆ

ಹೀಗೇ ಸಾಗುವ ಸಹಜದ ಮಾತಿನ ಸರಪಳಿ ಕೊನೆಯಾಗುವುದು 'ಅಪ್ಪನಿರುವ ನನ್ನ ಕಡೆ'! ಎಂದು ತಿಳಿದು ನನ್ನ ಮಗಳು ಹೇಳಿದಳು, 'ನಾನೂ ಹೊಡೆದೆ!' ಎಂದು.

ಶಾಲಾ ಶಿಕ್ಷಕ ಸಮುದಾಯದಿಂದಾಚೆ ವಿಶೇಷದ ಆಸಕ್ತಿ

ಶಾಲಾ ಶಿಕ್ಷಕ ಸಮುದಾಯ ವಿಶೇಷವಾಗಿಯೇ ತೊಡಗಿಕೊಂಡುದರ ಜೊತೆಗೆ ನಾಡಿನಾದ್ಯಂತ ಅನೇಕರು ತಮ್ಮೊಳಗಿನ ಅದೇನೋ ತುಡಿತದಿಂದ ಮಕ್ಕಳ ಲೋಕದೆಡೆಗೆ ವಿಶೇಷವಾಗಿಯೇ ಹೊರಳಿರುವುದು ಕಾಣುತ್ತದೆ. ಇವರು ಶಾಲಾ ಶಿಕ್ಷಕರಂತೆ ಮಕ್ಕಳ ಒಡನಾಟದಲ್ಲಿರದಿದ್ದರೂ ಮಕ್ಕಳಿಗಾಗಿನ ಬರಹದೆಡೆಗೆ ತುಡಿದುದು, ಅವಿರತವಾಗಿ ಕೃಷಿಗಿಳಿದುದು, ತಮ್ಮ ಓದಿನ, ಅಧ್ಯಯನದ ಹರವಿನಿಂದ ಹೊಸತಿಗೆಲ್ಲ ವಿಸ್ತರಿಸಿಕೊಂಡುದು ಗಮನಿಸಬಹುದಾದ ಸಂಗತಿ. ಹೀಗಿದ್ದಾಗಲೂ ಶಾಲಾಧ್ಯಾಪಕರ ಚಟುವಟಿಕೆಗಳೊಡನೆ ಇಂಥವರನೇಕರು ಒಡನಾಟವನ್ನ ಇಟ್ಟುಕೊಂಡುದು ಕಂಡುಬರುತ್ತದೆ. ಶಾಲಾಶಿಕ್ಷಕ ಸಮುದಾಯದ ಕೃಷಿಯ ಪರಿಚಯ ಸಾಕಷ್ಟಿದ್ದು ಅದರೊಂದಿಗೇ ಇವರು ತಮ್ಮ ವಿಸ್ತರಣೆಗಳನ್ನ ಹೇಳಿದರು ಎಂದರೆ ಒಳಿತು. ಇಂಥ ಅನೇಕರು ಅಚ್ಚರಿ ಮೂಡಿಸುವಷ್ಟು ಉತ್ಸುಕತೆಯಿಂದ ಸಾಹಿತ್ಯ ಸೃಷ್ಟಿಗೆ, ಮಕ್ಕಳ ಸಾಹಿತ್ಯದ ಹಲವಾರು ಚಟುವಟಿಕೆಗಳಿಗೆ ತುಡಿದುದು ವಿಶೇಷವಾದುದು. ಇವರಲ್ಲಿ ಕೆಲವರೆಲ್ಲ ಈ ಶಿಕ್ಷಕ ಸಮುದಾಯದ ಒಡನಾಟದಲ್ಲಿ ಇದ್ದುಕೊಂಡು ಅವರೊಳಗೆ ಒಂದಾಗಿ ತೊಡಗಿಕೊಂಡಿರುವುದು ಕಂಡುಬರುತ್ತದೆ. ಹಾಗಾಗಿ ಅನೇಕ ಸಲ ಶಿಕ್ಷಕ ಸಾಹಿತಿಗಳ ಬರವಣಿಗೆಯ ಪಡಿನೆಳಲಾಗಿಯೇ ಇವರ ರಚನೆಗಳು ಕಂಡುದಿದೆ. ಇಂಥವರಲ್ಲಿ ಅನೇಕರಿಗೆ ಓದಿನ ವಿಸ್ತೃತ ಸಾಧ್ಯತೆಗಳು, ತೆರೆದುಕೊಳ್ಳುವಿಕೆಗಳು ಇದ್ದೇ ಇದ್ದುವು. ಅದರಲ್ಲೂ ಕಾಲೇಜು ಪ್ರಾಧ್ಯಾಪಕರಾಗಿದ್ದವರು ವಿಶೇಷ ಅಧ್ಯಯನದಲ್ಲಿ, ಹೊಸ ಓದಿನಲ್ಲಿ ತೊಡಗುವ ಸಾಧ್ಯತೆಗಳನ್ನ ತಳ್ಳಿಹಾಕಲಾಗದು. ಆದರೂ ಕನ್ನಡದ ಮಟ್ಟಿಗೆ ನೋಡಿದರೆ ಹೆಚ್ಚಿನ ಹರವಿಗೆ, ವಿಭಿನ್ನತೆಗೆ ತೆರೆದುಕೊಂಡಿರುವುದು ಕಂಡುಬರುವುದಿಲ್ಲ.

ಸಿ. ಎಂ. ಗೋವಿಂದ ರೆಡ್ಡಿ ಶಿಕ್ಷಕರಾಗಿ ತೊಡಗಿಕೊಂಡು ಕಾಲೇಜಿನ ಪ್ರಾಧ್ಯಾಪಕರಾದರೂ ಮಕ್ಕಳಿಗಾಗಿ ಬರೆಯುತ್ತ ಬಂದ ತಮ್ಮ ಪ್ರೀತಿಯನ್ನು ಕಡಿಮೆಗೊಳಿಸದೆ ನಿರಂತರವಾಗಿ ಬರವಣಿಗೆಯಲ್ಲಿ ತೊಡಗಿಕೊಂಡವರು. ಅವರು ವಿಜಾಪುರದ, ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯ, ಹಾಗೆಯೇ ಬೆಂಗಳೂರು ಕಡೆಗಿನ ಒಂದಿಷ್ಟೆಲ್ಲ ಶಿಕ್ಷಕರ ಸಮುದಾಯ ಪ್ರಯತ್ನಗಳ ಒಡನಾಟವಿಲ್ಲದೆ ತಾವೇ ತಾವಾಗಿ, ತಮ್ಮ ಸ್ನೇಹಿತರು, ಒಡನಾಡಿಗಳ ಸಲಹೆ, ಪ್ರೋತ್ಸಾಹಗಳಿಂದ ಬರವಣಿಗೆಯಲ್ಲಿ ತೊಡಗಿಕೊಂಡವರು. '**ಪ್ರಜಾವಾಣಿ**' ಪತ್ರಿಕೆಯ ದೀಪಾವಳಿ ವಿಶೇಷಾಂಕಗಳಿಗಾಗಿ ನಡೆಸುತ್ತಿದ್ದ ಮಕ್ಕಳ ಕಾವ್ಯ ಸ್ಪರ್ಧೆಯಲ್ಲಿ ಹಲವು ಬಾರಿ ಬಹುಮಾನವನ್ನ ಇವರು ಪಡೆದುದನ್ನೂ ಇಲ್ಲಿ ಹೇಳಬೇಕು. ಮಕ್ಕಳನ್ನು ರಂಜಿಸುವ, ಅವರ ಭವಿಷ್ಯದ ಕಾಳಜಿಯಿಂದ ಒಳ್ಳೆಯ

ಮಾತುಗಳನ್ನು ಹೇಳುವ ನಾನಾ ಬಗೆಯ ಪದ್ಯಗಳನ್ನು ಅವರು ಬರೆಯುತ್ತ ಬಂದಿದ್ದಾರೆ. 'ನನಗೆ ತಿಳಿದ ತಕ್ಕಡಿಯಲ್ಲಿ ಅಳೆದು ನೋಡಿದರೂ ಪ್ರಸ್ತುತ ಸಂಕಲನದಲ್ಲಿ ಮಕ್ಕಳು ಮೊದಲ ಓದಿನಲ್ಲೇ ಪ್ರೀತಿಸಬಹುದಾದ ಬಹಳಷ್ಟು ಒಳ್ಳೆಯ ಪದ್ಯಗಳಿವೆ. ದೊಡ್ಡವರ ಆಸೆಗಳಾಗಿರುವ ನಾಡು ನುಡಿ, ದೇಶಪ್ರೇಮಗಳಿಗಿಂತ ಅವರ ಕಣ್ಣಿಗೆ ಕಾಣಿಸುವ ಸೂರ್ಯ, ಚಂದ್ರ, ನಕ್ಷತ್ರಗಳು; ನೆಲ ಜಲ ಆಕಾಶಗಳು; ಕಾಗೆ, ಕೋಗಿಲೆ, ಗಿಳಿಗಳು ಮಕ್ಕಳನ್ನು ಹೆಚ್ಚು ಆಕರ್ಷಿಸುತ್ತವೆ ಎಂಬ ಸತ್ಯ ರೆಡ್ಡಿಯವರಿಗೆ ಬಹಳ ಚೆನ್ನಾಗಿ ಗೊತ್ತಿರುವಂತಿದೆ' ಎಂದಿರುವ 'ಪದ್ಯದ ಮರ' ಸಂಕಲನಕ್ಕೆ ಮುನ್ನುಡಿ ಬರೆದಿರುವ ಬೊಳುವಾರು ಮೊಹಮ್ಮದ ಕುಂಞ ಅವರ ಮಾತುಗಳನ್ನ ಇಲ್ಲಿ ಉದಾಹರಿಸಬಹುದು.

ಹೊತ್ತು ಮೂಡುವ ಮೊದಲೆ ಏಳುವೆ
ಸುಪ್ರಭಾತವ ಹಾಡುವೆ
ನಿತ್ಯ ತಪ್ಪದೆ. ಅಪ್ಪ ಅಮ್ಮಗೆ
ನಮಿಸಿ ವಂದನೆ ಹೇಳುವೆ

ಹಲ್ಲನುಜ್ಜುವೆ ಮುಖವ ತೊಳೆಯುವೆ
ದಿನವೂ ಜಳಕವ ಮಾಡುವೆ
ಕಾಯಿ ಹಚ್ಚುವೆ ಪಾತ್ರೆ ತಿಕ್ಕುವೆ
ಅಮ್ಮನಿಗೆ ನೆರವಾಗುವೆ

ಎನ್ನುವಂಥ ಪದ್ಯಗಳನ್ನ ಬರೆದ ಹಾಗೆ

ಮೂಡು ಬಾನಿನಲ್ಲಿ ಕೆಂಪು
ರಂಗು ಹರಿಯಿತು
ದುಂಡುಮೊಗದ ಬಾಲರವಿಯ
ಉದಯವಾಯಿತು

ಗಾಳಿ ಸುಂಯ್ ಸುಂಯ್ ಎಂದು
ಮೇಳ ಊದಿತು
ಎಲೆಯು ರಪರಪನೆ ಬಡಿದು
ತಾಳ ಹಾಕಿತು

ಎನ್ನುವಂಥ ರಮ್ಯಭಾವದ ಗೀತೆಗಳನ್ನೂ ಅವರು ಬರೆದಿದ್ದಾರೆ. ಪ್ರಾಣಿ ಪಕ್ಷಿಗಳ ಪಾತ್ರಗಳನ್ನು ಮಾಡಿಕೊಂಡು ಹಲವಾರು ಈಗಾಗಲೇ ಪ್ರಚುರವಾಗಿರುವ , ಹಾಗೆಯೇ ತಾವೆ ಕಲ್ಪಿಸಿಕೊಂಡಿರುವ ಕಥನಗಳನ್ನು ನಿರೂಪಿಸಿವುದನ್ನೂ ಮಾಡಿದ್ದಾರೆ. ಸರಳವಾಗಿ, ನಿಗದಿತ ಲಯಗಳಲ್ಲಿ ಸಾಗುವ ಇವು ಕತೆಯನ್ನ ನೇರವಾಗಿ ಮಕ್ಕಳಿಗೆ ತಲಪುವಂತೆ, ಅವುಗಳಲ್ಲಿ ಅಡಗಿದ ಸಂದೇಶವನ್ನ ಮುಟ್ಟಿಸುವಂತೆ ಕೆಲಸಮಾಡುತ್ತವೆ.

ಅಡವಿಯಲ್ಲಿ ಹರಿವ ನದಿಯ
ದಡದೊಳಿದ್ದ ಹಾದಿ ಬದಿಯ
ಪೊದೆಗಳಲ್ಲಿ ಹಲವು ಪ್ರಾಣಿ
ಪಕ್ಷಿ ಇದ್ದವು
ಪ್ರೀತಿ ಸ್ನೇಹದಿಂದ ಬೆಳೆದು
ಜಾತಿ ವೈರವನ್ನು ತೊರೆದು
ನೀತಿ ನಿಯಮ ಮೀರದಂತೆ
ಸುಖದೊಳಿದ್ದವು

ಹೀಗೆ ಸರಾಗವಾಗಿ ಸಾಗುವ ಲಯಗಳಲ್ಲಿ ಅವರು ಬಲೆಯಲ್ಲಿ ಸಿಕ್ಕ ಜಿಂಕೆಯನ್ನು ಹಾಗೆಯೇ ಆಮೆಯನ್ನು ಗೆಳೆಯರೆಲ್ಲ ಸೇರಿಕೊಂಡು ಉಪಾಯವಾಗಿ ಬಿಡಿಸಿದ ಕತೆಯನ್ನು ಹೇಳುತ್ತಾರೆ ವಿವರವಾಗಿ. ಅನಾಥವಾದ ಚಿರತೆಯ ಮರಿಯನ್ನು ಸಾಕಿದ ಕುರಿಯ, ಅದು ದೊಡ್ಡದಾದಾಗ ಅದರಿಂದಲೇ ಪ್ರಾಣ ಕಳೆದುಕೊಂಡ ಪ್ರಸಂಗ, ಮರದ ಮೇಲಿನ ಹಕ್ಕಿಯ ಮೊಟ್ಟೆಗಳನ್ನು ಕದ್ದು ತಿನ್ನುತ್ತಿದ್ದ ಹಾವು ಮರದ ಟೊಂಗೆಯಿಂದ ಬಿದ್ದು ಸಾವು ತಂದುಕೊಂಡ ಕತೆ, ನೀರು ಕಾಣದೆ ಅಲೆಯುತ್ತಿದ್ದ ಬೇಡನೊಬ್ಬ ಅವನಿಗೆ ನೀರಿನ ತಾಣ ತೋರಿದ ಮಂಗವನ್ನೇ ಕೊಂದುಹಾಕಿದ ಕತೆ, ಮೇಕೆಯನ್ನು ಬೀಳುವಂತೆ ಮಾಡಿ ಅದರ ಆಸರೆಯಿಂದ ತಾನು ಬಾವಿಯಿಂದ ಪಾರಾದ ನರಿಯ ಕತೆ ಹೀಗೆ ಹಲವಾರು ಕತೆಗಳನ್ನ ಅವರು ಹೇಳಿದ್ದಾರೆ. ಕೆರೆಗೆ ಹಾರವಾದ ಭಾಗೀರಥಿಯ ಕತೆಯನ್ನೂ ಹೀಗೆಯೇ ವಿವರಗಳೊಂದಿಗೆ ನೀಡಿದುದಿದೆ. ಭೀಮನ ಮದುವೆ ಪ್ರಸಂಗ, ಕನಕದಾಸರ ರಾಗಿಯ ಹಿರಿಮೆಯನ್ನು ಹೇಳುವ ರಾಮಧಾನ್ಯದ ಕತೆಗಳನ್ನೂ ಅವರು ನೀಡಿದ್ದಾರೆ. ಪುಟ್ಟಿ ಕನಸಿನಲ್ಲಿ ಮಂಗಳ ಗ್ರಹಕ್ಕೆ ಹಾರಿ ಅಲ್ಲಿಯೂ ಹಿಂದೆ ಮರಗಳ ನಾಶವಾಗಿ ಏನೂ ಇಲ್ಲದಂಥ ಪ್ರಸಂಗ ಬಂದಿರುವುದನ್ನು ಅಲ್ಲಿನ ಒಂದು ಬಂಡೆಯಿಂದ ಕೇಳುವ ಪ್ರಸಂಗವನ್ನು ಅವರು ತಮ್ಮದೊಂದು ಕವಿತೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಹೀಗೆ ಇಂದಿನ ಪ್ರಸ್ತುತ ವಿಷಯಗಳಿಗೂ ಸ್ಪಂದಿಸುವ ಹಲವಾರು ಪದ್ಯಗಳನ್ನು ಅವರು ಬರೆದುದಿದೆ.

ಕವಿಯ ಪಾದ ಸುಡುವುದೆಂದು
ಚಮ್ಮಾರನು ನೊಂದನು
ಬೇರೆ ಪಾದರಕ್ಷೆ ನೀಡಿ
'ಧರಿಸಿಕೊಳ್ಳಿ' ಎಂದನು

ಬೇಂದ್ರೆ ತಾತ ಕೊಡೆಯ ಬಿಚ್ಚಿ
ಚಮ್ಮಾರಗೆ ಹಿಡಿದರು
'ಸಾವಕಾಶ ಹೊಲಿಯೋ ತಮ್ಮ'
ಮನವ ತುಂಬಿ ನುಡಿದರು

ಇಂಥ ದೊಡ್ಡ ಗುಣವು ನಮ್ಮ
ಬೇಂದ್ರೆಯವರಿಗಲ್ಲದೆ

ಸ್ವಾರ್ಥ ಮನುಜ ಲೋಕದಲ್ಲಿ
ಬೇರೆಯವರಿಗಿರುವುದೆ?

ಬೇಂದ್ರೆ ಅವರ ಜೀವನದ ಪ್ರಸಂಗವನ್ನ ಅವರು ಕವಿತೆಯಾಗಿ ಮಾಡಿರುವ ರಚನೆಯ ಸಾಲುಗಳಿವು.

ಹೀಗೆಯೇ ಶಿಕ್ಷಕರಾಗಿರದಿದ್ದರೂ ಶಿಕ್ಷಣ ಇಲಾಖೆಯಲ್ಲಿ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತ ಬಂದ **ಜೀನಹಳ್ಳಿ ಸಿದ್ಧಲಿಂಗಪ್ಪ** ಮಕ್ಕಳಿಗಾಗಿ ತಮ್ಮೊಳಗಿನ ಆಸಕ್ತಿಯಿಂದ ನಿರಂತರವಾಗಿ ಬರೆಯುತ್ತ ಬಂದವರು. ತಮ್ಮದೇ 'ಪ್ರೇಮ ಪ್ರಕಾಶನ' ಹುಟ್ಟುಹಾಕಿ ಅಂದವಾದ ಪುಸ್ತಕಗಳನ್ನ ತರುವ ಪ್ರಯತ್ನವನ್ನೂ ಮಾಡಿದ್ದಾರೆ, ಅದಕ್ಕಾಗಿ ಅವರಿಗೆ ಪುಸ್ತಕ ಪ್ರಾಧಿಕಾರದ ಪುಸ್ತಕ ಸೊಗಸು ಪುರಸ್ಕಾರವೂ ಸಂದಿದೆ. 'ಚಿಣ್ಣರ ಚಿಲಿಪಿಲಿಗಾನ' ಎನ್ನುವ ಪುಸ್ತಕವಂತೂ ಪೂರ್ತಿ ಬಣ್ಣದಲ್ಲಿಯೇ, ಅಂದರೆ ಮುಖಪುಟದೊಂದಿಗೆ ಒಳಚಿತ್ರಗಳೂ ಬಣ್ಣವಾಗಿವೆ. ಕನ್ನಡ ಮಕ್ಕಳ ಪುಸ್ತಕ ಲೋಕದಲ್ಲಿ ಇದು ಅಪರೂಪದ್ದು. 'ಪುಟ್ಟಪುಟಾಣಿ ಹಾಡು', 'ಹೇಳು ಪುಟ್ಟ ಹೇಳು', 'ಕನ್ನಡ ಕಾವೇರಿ', 'ಹಾಡು ನನ್ನ ಹಾಡು', 'ಚಿಣ್ಣರ ಹಾಡು', 'ಚಿಣ್ಣರ ಚಿಲಿಪಿಲಿಗಾನ' ಹೀಗೆ ಅನೇಕ ಮಕ್ಕಳ ಕವನ ಸಂಕಲನಗಳನ್ನು ತಂದ ಅವರು ವಿಶೇಷವಾಗಿ ಜನಪದರ ಒಗಟು, ಗಣಿತಗಳ ಕುರಿತು ಸಾಕಷ್ಟು ಸಂಗ್ರಹ ಹೊಂದಿದ್ದು ಮಕ್ಕಳಿಗಾಗಿ ಅವನ್ನು ತರುತ್ತಲೇ ಇದ್ದಾರೆ. 'ಮಕ್ಕಳ ಒಗಟಿನ ಹಾಡು', 'ಮಕ್ಕಳ ಜಾಣ್ಮೆಯ ಕತೆಗಳು', 'ಒಗಟು ಬಿಡಿಸೋ ಜಾಣರ ಜಾಣ' ಮುಂತಾದುವು ಈ ಬಗೆಯವು. ದೊಡ್ಡವರಿಗಾಗಿಯೂ ಇಂಥ ಸರಕನ್ನು ಸಾಕಷ್ಟು ತಂದಿದ್ದಾರೆ. ಜನಪದ ಅಕಾಡೆಮಿಯ ಪ್ರಶಸ್ತಿಯನ್ನೂ ಇದಕ್ಕಾಗಿ ಪಡೆದಿದ್ದಾರೆ. ಅದು ಅವರ ಖಾಸಾ ಖಾಸಾ ಪ್ರೀತಿ ಎನ್ನುವ ಹಾಗೆ.

ಶಾಲೆಗೆ ಹೋಗ್ಲೇಬೇಕು ಅಂದ್ರೆ
ಕಾಯ್ಲೇಬೇಕು ಬಸ್ಸು
ಕಾಯ್ಲಿಲ್ಲಾಂದ್ರೆ ಡ್ರೈವರಣ್ಣ
ಮಾಡೇಬಿಡ್ತಾನೆ ಮಿಸ್ಸು

* * *

ಸ್ಕೂಲ್ ಮಕ್ಳೂಂದ್ರೆ ಡ್ರೈವರ್ರಣ್ಣ್ಗೆ
ಬಾರಿ ಬಾರಿ ಅಲರ್ಜಿ
ಕೈಂದ್ರೂನೂ ಹಾಯ್ ಅಂದ್ರೂನು
ನಿಲ್ಲಿಸ್ದಂಗೆ ಪರಾರಿ!
ಸ್ಕೂಲ್ಗೆ ಹೊರ್ಡೋದಂದ್ರೆ ನಮ್ಗೆ
ಏರ್ತಿದ್ದಂಗೆ ಬೆಟ್ಟ
ಹತ್ತಿಕ್ಕಾಗ್ದೆ ಬಿದ್ ಬಿಟ್ವೆಂದ್ರೆ
ಮುಟ್ಟೀವ್ ಪಾತಾಳ್ ಮಟ್ಟ!

ಅಂಥ ಶಹರದ ಅನುಭವಗಳನ್ನ ಕಟ್ಟಿಕೊಡುವ ಹಾಗೆ ಹಳ್ಳಿವಾಡದ ಅನುಭವಗಳಿಗೂ ಅಷ್ಟೇ ಸ್ಪಂದಿಸಿರುವುದು ಕಂಡುಬರುತ್ತದೆ . . .

ಅಮ್ಮ ಅಮ್ಮ ಅಮ್ಮ ನಂಗೆ
ಓದಲಿಕ್ಕೆ ಕಳಿಸು
ಮುರುಕು ಗುಡಿಸಲೊಳಗೆ ಕಮರಿ
ಬಾಡುತ್ತೈತೆ ಮನಸು

ಹರಕು ಮುರುಕು ಚಿಂದಿತೊಟ್ಟು
ಬೆಳೆಯೋದ್ಹೇಗೆ ಇಲ್ಲಿ?
ತಂಗ್ಳು ಪಂಗ್ಳು ತಿಂದುಕೊಂಡು
ಸಾಯುವುದೇನಿಲ್ಲಿ?

ಎನ್ನುವಂಥ ಕಟುವಾಸ್ತವದ ಚಿತ್ರಣವನ್ನೂ ನೀಡಿರುವುದು ವಿಶೇಷ.

ಮಮ್ಮಿ ನಾನು ಸ್ಕೂಲ್ಗೆ ಹೊರಟೆ ;
ತಿಂಡಿಯ ಕಟ್ಟು ನನ್ಗೆ
ಕಟ್ಲಿಲ್ಲಾಂದ್ರೆ ಹಾಗೇ ಹೊರಟೆ
ತರ್ಬೇಕ್ ನೀನೇ ಅಲ್ಗೆ!

'ಷೂ'ನ ಹಾಕು 'ಟೈ'ಯ ಕಟ್ಟು
ಡ್ರೆಸ್ಸ್‌ನ ತೊಡ್ಸಿ ನನ್ಗೆ
ತೊಡ್ಸಿಲ್ಲಾಂದ್ರೆ ಹಾಗೇ ಹೊರಟೆ
ನಾಚ್ಕೆ ಆಗ್ಬೇಕ್ ನಿನ್ಗೆ!

ಇಂಥ ಮಕ್ಕಳ ನಾನಾ ಬಗೆಯ ಸಹಜದ ವರ್ತನೆಗಳು, ಆಟೋಟಗಳು ಇವರ ರಚನೆಗಳಲ್ಲಿ ಹೆಚ್ಚು ಪಾಲು.

ನಾವು ಸಣ್ಣ ಮಕ್ಕಳು
ಈ ನಾಡ ಮಡಿಲ ಹೂಗಳು॥
ಬಿಸಿಲಿನೊಳಗೆ ಬೇಯ್ವೆವು
ಮಂತ್ರಿಗಾಗಿ ಕಾಯ್ವೆವು॥ ನಾವು॥

ಯೂನಿಫಾರಂ ತೊಟ್ಟುಕೊಂಡು
ಟೈಯ ಮೇಲೆ ಕಟ್ಟಿಕೊಂಡು
ಬೆಳಗಿನಿಂದ ಕಳೆಯಗೊಂಡು
ಶೂಗಳ್ಹಾಕಿ ಸಿದ್ಧಗೊಂಡು
ಬಿಸಿಲಿನೊಳಗೆ ಬೇಯ್ವೆವು
ಮಂತ್ರಿಗಾಗಿ ಕಾಯ್ವೆವು ॥ ನಾವು ॥

ಇಂಥ ರಚನೆಗಳು ಅವರ ಸಂಕಲನಗಳಲ್ಲಿ ಮೇಲಿಂದ ಮೇಲೆ ಸಿಗುತ್ತವೆ.

ಮೇಟಿಕೆರೆ ಹಿರಿಯಣ್ಣ(೧೯೫೧) ಹಾಸನ ಭಾಗದಲ್ಲಿ ಕಾಲೇಜು ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಹೀಗೆಯೇ ಬಿಟ್ಟೂ ಬಿಡದೆ ಮಕ್ಕಳಿಗೆ ಬರೆಯುತ್ತ ಬಂದಿದ್ದಾರೆ. 'ಚಿಣ್ಣರಿಗಾಗಿ ಬಣ್ಣದ ಗೋಲಿಗಳು', 'ಯಾರ ಕೂಡ ಆಟ ಆಡಲಿ', 'ಹೂವು ಹಕ್ಕಿ ಮಕ್ಕಳು', 'ಬಿಸಿ ಬಿಸಿ ಕಜ್ಜಾಯ'ಮುಂತಾದ ಕವನ ಸಂಕಲನಗಳು, 'ಸಿದ್ದು ಪಟಾಲಂ ಮತ್ತು ಆಂಡಾಳಮ್ಮನ ಪೇರಲ ಮರ' ಎನ್ನುವ ಕಥಾ ಸಂಕಲನವನ್ನ ಅವರು ನೀಡಿದ್ದಾರೆ. 'ನಾನು' 'ಮೇಣಿಹಾಲು' ಕುಡಿದವನು. ಹೀಗಾಗಿ ನನ್ನ ಕವನಗಳಾಗಲಿ, ಕಥೆಗಳಲ್ಲಾಗಲಿ ಅದರದೇ ಅಡರು' ಎಂದಿದ್ದಾರೆ ಅವರು. ಹಾಗೆಯೇ ಗ್ರಾಮೀಣ ಬಗೆಯ ಚಿತ್ರಣಗಳು, ಒಗರು ಚಿಗುರುಗಳು ಅವರ ಕೃತಿಗಳಲ್ಲಿ ಹೆಚ್ಚು ಸಿಗುತ್ತವೆ. ಜಾನಪದ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸಮಾಡಿದವರೂ ಕೂಡ.

ರಂಗನಾಥ ಜಾತ್ರೆ ಬಂತು
ಚಂದ ಕಾಣಿರೊ
ಒಂದು ದಿನ ಹೋಗಿ ನೋಡಿ
ಆನಂದ ಪಡೀರೊ

ಅಂದವಾಗಿ ಜೋಡಿಸಿರೊ
ಅಂಗಡಿ ನೊಡೀರೊ
ಬಣ್ಣ ಬಣ್ಣದ ಮಿಠಾಯಿ
ಚಂದ ಕಾಣೀರೊ
ಸುಣ್ಣದಕಲ್ಲು ಸಕ್ರೆಕಡ್ಡಿ
ಚೀಪಿ ನೋಡೀರೊ
ಕಜ್ಹೂರ ಕಳ್ಳೆಪುರಿ
ತಿಂದು ನೋಡೀರೊ

ಅಂಥ ಪದ್ಯಗಳು ಅಲ್ಲಿವೆ. ಹಾಗೆಯೇ

ಆನೆ ಬಂತೊಂದಾನೆ
ಕೃಷ್ಣ ಮಠದ ಆನೆ
ಮೂರು ನಾಮ ಧರಿಸ್ಯೆತೆ
ತಾನು ವೈಷ್ಣವ ಆಗ್ಯೆತೆ
ತಿನ್ನಲು ತಿಂಡಿ ಕೊಟ್ಟರೆ
ಶೈವರಿಗೂ ನಮಿಸುತ್ತೆ

ಆನೆ ಬಂತೊಂದಾನೆ
ಕೃಷ್ಣ ಮಠದ ಆನೆ
ಜಾತಿ ಭೇದ ಅದಕಿಲ್ಲ
ಸಂಗತಿ ನಿಮಗೂ ಗೊತ್ತಲ್ಲ
ಕಾದರ್ ಕೊಟ್ರು ತಿನ್ನುತ್ತೆ
ಪಿಂಚಲುನೂನು ನಮಿಸುತ್ತೆ

ಎನ್ನುವಂಥ ವಿಡಂಬನೆಯ ಚಿತ್ರಣಗಳೂ ಅವರಲ್ಲಿವೆ.

ಇಸ್ಕೂಲ್ ರಜ ಬಾರ್ಲ ಮಗ
ಕೇಳ್ ಕಣ್ಲ ಮಗ
ಹುಚ್ಚೆಳ್ ಚಟ್ನಿ ರಾಗಿ ರೊಟ್ಟಿ
ಚಂದ್ ಕಣ್ಲ ಮಗ
ಮೂರ್ ರೊಟ್ಟಿ ಮ್ಯಾಲೊಂದಿಷ್ಟು
ತಿಂದ್ ಬುಡ್ಲ ಮಗ
ಬಾರೆ ಮ್ಯಾಲೆ ಕುರಿ ಬುಟ್ಕಂಡ್
ಮೇಯ್ಸ್ ಬುಡ್ಲ ಮಗ

ಅನ್ನುವಂಥ ಹಳ್ಳಿಯ ಸೊಗಡಿನ ರಚನೆಗಳನ್ನು ಬರೆಯುತ್ತಲೇ ಹಿರಿಯಣ್ಣ ಅವರು ಬೇಲೂರಿನ ಚನ್ನಕೇಶವ ದೇವಸ್ಥಾನದ ಹಿರಿಮೆಯನ್ನೂ ಹೊಗಳಿ ಬರೆಯುತ್ತಾರೆ, ಟಿಪ್ಪುವಿನ ಸಾಹಸವನ್ನು ಮಕ್ಕಳ ಮುಂದಿರಿಸುತ್ತಾರೆ, ಕನ್ನಡ ನಾಡಿನ ಪ್ರವಾಸದ ಸೊಗಸನ್ನು ಇಡಬಯಸುತ್ತಾರೆ, ಗೊಮ್ಮಟನ ಹಿರಿಮೆಯ ಬಗೆಗೂ ಬರೆಯುತ್ತಾರೆ. 'ಬೆಕ್ಕು ಮತ್ತು ಕಜ್ಜಾಯ'ದಂಥ ಪ್ರಚುರ ಕತೆಯನ್ನೂ ಬರೆದಿದ್ದಾರೆ. ಅವರ ಕಥಾ ಸಂಕಲನ 'ಸಿದ್ದು ಪಟಾಲಂ ಮತ್ತು ಅಂಡಾಳಮ್ಮನ ಪೇರಲಮರ'ಕ್ಕೆ ಮುನ್ನುಡಿ ಬರೆಯುತ್ತ ರಾಜೇಗೌಡ ಹೊಸಹಳ್ಳಿ ಅವರು 'ಲೇಖಕರು ಕಥೆ ಹೇಳುತ್ತಾ ವರ್ತಮಾನದ ರಾಜಕೀಯ, ಸಾಮಾಜಿಕವೆರಡನ್ನೂ ಕೂಡಿಸಿಕೊಳ್ಳುತ್ತಾರೆ. ಅದರಲ್ಲೂ ಮಕ್ಕಳಿಗೆ ಬೆಚ್ಚಗಾಗುವಂತೆ ಕಲಿಸುತ್ತಾರೆ' ಎಂದಿದ್ದಾರೆ. ಈ ಕಥಾ ಸಂಕಲನ ಹಾಗೆ ನೋಡಿದರೆ ಅವರ ಪದ್ಯಗಳಿಗೆ ಹೋಲಿಸಿದರೆ ಹೆಚ್ಚು ವಿಶಿಷ್ಟವಾಗಿದೆ. ಅವರ ನಿರೂಪಣೆಯ ಸೊಗಸನ್ನು ವಿಶೇಷವಾಗಿಯೇ ತೋರಿಸಿದೆ. ಗ್ರಾಮೀಣ ಬನಿಯೂ, ಮಕ್ಕಳೊಡನೆ ಬೆರೆತು ಹೇಳುವ ಬಗೆಯೂ, ಹಾಗೆಯೇ ಕತೆಯನ್ನ ಸ್ವಾರಸ್ಯವಾಗಿ ಇಡುವ ಬಗೆಯಲ್ಲೂ ಇಲ್ಲಿನ ನಿರೂಪಣೆ ತನ್ನದನ್ನು ಹೇಳುತ್ತದೆ. ಆದರೆ ಮಕ್ಕಳ ಮುಂದೆ ಅವರು ಇಡುವಾಗ ತಾವು ಏನೇನೆಲ್ಲ ವ್ಯಕ್ತಗೊಳಿಸಬೇಕಿಂದಿರುವರೋ ಅದನ್ನೆಲ್ಲ ಇರಿಸುವಲ್ಲಿ ಯಾವ ಸಂಕೋಚವನ್ನ ಅನುಭವಿಸುವುದಿಲ್ಲ. ಉಳಿದಂತೆ ಕನ್ನಡದಲ್ಲಿ ಬರುತ್ತಿರುವ ಕತೆಯ ಸರಕಿನ ಮುಂದೆ ಈ ಬಗೆಯದು ಸ್ವಲ್ಪ ವಿಭಿನ್ನವೇ ಸರಿ. ವಾಸ್ತವದ ಮಾದರಿಗಳನ್ನ ಇಡುವಾಗಲೂ ಈ ಬಗೆಯದು ಅಷ್ಟಾಗಿ ಕಾಣದು ಎಂದೇ ನನಗನಿಸಿದೆ. ಬಹಳಷ್ಟು ಸಲ ಅವರು ವಿಡಂಬನೆಯನ್ನು ಆಶ್ರಯಿಸುತ್ತಾರೆ. ಇಲ್ಲಿನ 'ಮಹಿಶಮಂಡಲದ ದಸರ ಮತ್ತು ಮಲ್ಲೇಶ ದೇವರು', 'ಅರಸನ ಕಾಲದಲ್ಲಿ ಹೂಸಿದರೂ ಬಹುಮಾನ' ಇಂಥವೆಲ್ಲ ವಿಡಂಬನೆಯನ್ನ ವಿಶೇಷವಾಗಿಯೇ ಆಶ್ರಯಿಸಿವೆ. ಆ ಮೂಲಕ ಅವರು ದೊಡ್ಡವರಲ್ಲಿ ಹಂಚಿಕೊಳ್ಳುವ ಸಂಗತಿಗಳೇ ಸಾಕಷ್ಟು ಇವೆ ಎನಿಸುವಂತಿವೆ.

ಮೈಸೂರಿನಲ್ಲಿರುವ **ಸವಿತಾ ಪ್ರಭಾಕರ್** ಅವರು ತಮ್ಮ ಸಂಪಾದನೆಯಲ್ಲಿ ತಂದಿರುವ ಎರಡು ಬೃಹತ್ತಾದ ಮಹಿಳೆಯರೇ ರಚಿಸಿದ ಕತೆಗಳ ಸಂಕಲನಗಳ(ಮಕ್ಕಳ ಮೋಜಿನ ಕಥೆಗಳು, 'ಮಕ್ಕಳ ಕಥಾ ಪ್ರಪಂಚ' ಕುರಿತು ಕೆಲ ಮಾತುಗಳನ್ನು ಹೇಳಲೇಬೇಕಿದೆ. ಒಟ್ಟು ೮೪ ಲೇಖಕಿಯರು ಕತೆಗಳನ್ನ ಈ ಸಂಕಲನಗಳಿಗೆ ನೀಡಿದ್ದು ಕಳೆದ ೨೦೧೨ರಲ್ಲಿ ಇವು ಪ್ರಕಟಗೊಂಡಿವೆ. ಹಿರಿಯ, ವಯೋವೃದ್ಧ ಲೇಖಕಿಯರಿಂದ ಹಿಡಿದು ಇತ್ತೀಚೆಗಿನ ಯುವ

ಲೇಖಕಿಯರ ವರೆಗೆ ವಿಭಿನ್ನ ಲೇಖಕಿಯರ ಬರವಣಿಗೆ ಇಲ್ಲಿದೆ. ವೈದೇಹಿ, ಪ್ರೇಮಾ ಭಟ್, ರೇಖಾ ಕಾಖಂಡಕಿ, ನಿರುಪಮಾ, ನೀಳಾದೇವಿ, ವಸುಮತಿ ಉಡುಪ, ಮುಂತಾಗಿ ನುರಿತ ಲೇಖಕಿಯರಿರುವ ಹಾಗೆ ಮಕ್ಕಳಿಗಾಗಿ ಬರೆಯುತ್ತ ಹೆಸರಾಗಿರುವ ಬಿ. ಎಸ್. ರುಕ್ಕಮ್ಮ ಅಂಥವರೂ ಇದ್ದಾರೆ. ಮುದ್ದು ತೀರ್ಥಹಳ್ಳಿಯಂಥ ಬಾಲಕಿಯ ಕತೆಯೂ ಇಲ್ಲಿದೆ. ಪಂಚತಂತ್ರ ಮಾದರಿಯ ಕತೆಗಳು, ಜನಪದ ಮಾದರಿಯ ಕತೆಗಳು ಸಾಕಷ್ಟಿರುವ ಹಾಗೆ ಹೊಸತಿನ ವಾಸ್ತವ ಪರಿಸರದ ಕತೆಗಳೂ ಇಲ್ಲಿ ಕಾಣಿಸಿವೆ. ತುಂಬಾ ಮೊದಲಿನಿಂದ ಬರವಣಿಗೆಯಲ್ಲಿರುವವರೂ ಇಲ್ಲಿ ಈ ಸಂಕಲನಕ್ಕಾಗಿಯೇ ಕತೆಗಳನ್ನ ರಚಿಸಿಕೊಟ್ಟಿದ್ದಾರೆ. ಅಂದರೆ ಮಕ್ಕಳಿಗಾಗಿ ಕತೆ ಎಂದರೆ ಹೀಗೆ ಎನ್ನುವ ಅವರದೇ ಆದ ಈವತ್ತಿನ ಕಲ್ಪನೆಯೇ ಇಲ್ಲಿ ಕಾಣುತ್ತದೆ. ಹೀಗಾಗಿ, ಮಕ್ಕಳೆಂದಾಕ್ಷಣ ಕತೆಗಳನ್ನ ಇಂಥ ಉದ್ದೇಶಕ್ಕೆ ಹೇಳಬೇಕು, ಇಂಥಿಂಥ ಸಂಗತಿಗಳೇ ಇರಬೇಕು ಎನ್ನುವ ಕೆಲವೆಲ್ಲ ಸಿದ್ಧ ಗ್ರಹಿಕೆಗಳೂ ಸಾಕಷ್ಟು ಇಲ್ಲಿ ಕಾಣುತ್ತವೆ.

ವೈದೇಹಿ ಜನಪದ ಮಾದರಿಯಲ್ಲಿಯೇ ರಮ್ಯವಾಗಿ ಕತೆಹೇಳಿದ್ದರೂ ಅದಕ್ಕೊಂದಿಷ್ಟು ಪ್ರಸ್ತುತದ ಅಸ್ತಿತ್ವ ತಂದು ಮಕ್ಕಳಿಗೆ ಹತ್ತಿರವಾಗುವ ಹಾಗೆ ಮಾಡಿದ್ದಾರೆ. ಇಲ್ಲಿನ ಕತೆ ಹೇಳುವ ಶೈಲಿಯ ಬಳಕೆ ಬರವಣಿಗೆಗೆ ಸೊಗಸನ್ನು ತಂದಿದೆ, ಅದರ ಮಾತಿನ ವರಸೆಗಳೆಲ್ಲ ರುಚಿಕಟ್ಟಾಗಿವೆ. ಚಿಟ್ಟಿಯೆಂಬ ಹುಡುಗಿಯ ಉದ್ದನೆಯ ಕೂವಲುಗಳಲ್ಲಿ ಆಸರೆ ಪಡೆದ ಹೇನು ಸಾಮ್ರಾಜ್ಯ, ಅವು ಅವಳಲ್ಲಿ ವಿನಂತಿ ಮಾಡಿಕೊಂಡು ಕಾಪಾಡಲು ಹೇಳುವುದು, ಕೊನೆಗೆ ಹಿರಿಯರದೇ ನಿರ್ಧಾರ ನಿಂತು ಎಲ್ಲ ನಾಶವಾಗುವುದು ಕತೆ. ಅದೇ ನಿರುಪಮಾ ಅವರ ಕತೆ ಜನಪದದಲ್ಲಿದೆ. ಮೂವರು ಅಣ್ಣ ತಮ್ಮಂದಿರಲ್ಲಿ ಮೂರನೆಯವನು ಕಷ್ಟಪಡುವುದು, ಅವನಿಗೆ ಅಚ್ಚರಿಯ ರೂಪದಲ್ಲಿ ಸಂಪತ್ತು ಕೂಡಿ ಬರುವುದು, ಉಳಿದ ಇಬ್ಬರು ಹೊಟ್ಟೆಕಿಚ್ಚುಪಡುವುದು, ತಾವೇ ಕೊನೆಗೆ ಹಾಳಾಗುವುದು ಕತೆಯ ಮಾಮೂಲಿ ವಾತಾವರಣ. ಅದೇ ರೇಖಾ ಕಾಖಂಡಕಿ ಅವರ ಕತೆಯಲ್ಲಿ ವಾಸ್ತವದ ಹಂದರವಿದ್ದು, ಮಾದು ಎನ್ನುವ ಹುಡುಗ ಶಾಲೆಯಲ್ಲಿ ಉಳಿದವರಂತೆ ತನಗೆ ಹಾಡಲು ಬರುವುದಿಲ್ಲ, ಚಿತ್ರ ಬರೆಯಲು ಬರುವುದಿಲ್ಲ ಎಂದೆಲ್ಲ ಹೇಳಿದಾಗ ಗದರುವ ಅಮ್ಮ ಅವನು ಊಟಕ್ಕೆ ಕುಳಿತವನು ಭಿಕ್ಷುಕ ಹುಡುಗ ಬಂದಾಗ ತಟ್ಟೆಯಲ್ಲಿದ್ದುದನ್ನೆಲ್ಲ ಎದ್ದುಹೋಗಿ ಹಾಕಿ ಬಂದುದನ್ನ ನೋಡಿ ಏನೂ ಕಲಿಯಲಾಗದಿದ್ದರೂ ಪರವಾಯಿಲ್ಲ ಮನುಷ್ಯನಾಗಿ ಬಾಳು ಎಂದು ಹರಸುವ ಉದ್ದೇಶಿತ, ಮಕ್ಕಳಿಗೆ ನಿಗದಿತವಾದ ಪಾಠದ ಕತೆಯಾಗಿದೆ. ಮಕ್ಕಳ ಸಾಹಿತ್ಯ ತನ್ನ ಮೆಚ್ಚಿನ ಸಂಗತಿ ಎಂದುಕೊಳ್ಳುವ ಕೆ. ಸೌಮ್ಯ ಅವರು ಬರೆದಿರುವ ಕತೆ ವಾಸ್ತವ ಮಾದರಿಯದಾಗಿದ್ದು, ಹೆಚ್ಚು ಹತ್ತಿರದ್ದಾಗಿ ಕಾಣುತ್ತದೆ. ಒಬ್ಬ ಸಿನಿಮಾ ಹೀರೋನನ್ನು ಅತಿಯಾಗಿ ಹಚ್ಚಿಕೊಂಡ ವಿದ್ಯಾರ್ಥಿ ಅವನನ್ನು ಹತ್ತಿರದಲ್ಲೇ ಕಾಣುವ ಪ್ರಸಂಗ ಅನಾಯಾಸವಾಗಿ ಬಂದಾಗ ಭ್ರಮನಿರಸನಗೊಳ್ಳುವ, ಬದಲಾಗಿ ಮರುದಿನ ನಿಮ್ಮ ನೆಚ್ಚಿನ ವ್ಯಕ್ತಿ ಯಾರು ಎಂದು ಟೀಚರ್ ಕೇಳುವಾಗ ಆ ಹೀರೋನ ಬದಲು ತನ್ನ ಅಪ್ಪನೇ ತನ್ನ ಮೆಚ್ಚಿನ ವ್ಯಕ್ತಿ ಎಂದು ಹೇಳುವಷ್ಟು ಬದಲಾವಣೆ ತಂದುಕೊಳ್ಳುತ್ತಾನೆ ಕತೆಯಲ್ಲಿ. ಹೀಗೆ ಇಲ್ಲಿ ಮಕ್ಕಳಿಗಾಗಿನ ಕತೆಯ ಕುರಿತ ಗ್ರಹಿಕೆ ಸಮಕಾಲೀನ ಚಿಂತನೆಯ ಆಧಾರವೆನ್ನುವುದನ್ನು

ಹೊಂದಿಲ್ಲ. ಅವರು ಅವರವರು ಅಂದುಕೊಂಡಂತೆ ಅದು. ಹೀಗಾಗಿ ನೀತಿ ಕತೆಯಿಂದ ಹಿಡಿದು ತೀರ ವಾಸ್ತವ ಕತೆಗಳವರೆಗೆ ಎಲ್ಲ ಬಗೆಯ ಕತೆಗಳು ಕಾಣುತ್ತವೆ. ನಮ್ಮ ಸುತ್ತಲಿನ ಮಕ್ಕಳ ನಡುವಿನ ಕಥಾ ಪ್ರಸಂಗವಾದರೂ ಅದೊಂದು ಆದರ್ಶದ ಪಾಠವಾಗುವ, ನೀತಿ ಕತೆಯಾಗಿ ತಿರುಗಿಕೊಳ್ಳುವ ಸಂಗತಿಗಳೇ ಹೆಚ್ಚು ಆಗಿ ಕಾಣಿಸುತ್ತಿದೆ.

ಮುಖ್ಯಧಾರೆಯ ಕೆಲವರು .....

ಪ್ರಬುದ್ಧರ ಸಾಹಿತ್ಯದಲ್ಲಿಯೇ ವಿಶೇಷವಾಗಿ ಕಾಣಿಸಿಕೊಂಡ ಬುದ್ಧಣ್ಣ ಹಿಂಗಮಿರೆ, ಸರೋಜಿನಿ ಮಹಿಷಿ, ಡಿ.ಎಸ್. ಕರ್ಕಿ, ಎಸ್.ಡಿ.ಇಂಚಲ, ಚೆನ್ನವೀರ ಕಣವಿ, ಗೀತಾ ಕುಲಕರ್ಣಿ, ರಾಘವೇಂದ್ರ ಇಟಗಿ, ವರದರಾಜ ಹುಯಿಲಗೋಳ ಮುಂತಾದವರು ಪ್ರಬುದ್ಧರ ಸಾಹಿತ್ಯದಲ್ಲಿ ಆಸ್ಥೆಯಿದ್ದು ಅಷ್ಟಿಷ್ಟು ಮಕ್ಕಳಿಗಾಗಿಯೂ ಬರೆದುದು ಇಲ್ಲಿ ಗಮನಿಸಬೇಕಾದುದೇ. **ಬುದ್ಧಣ್ಣ ಹಿಂಗಮಿರೆ** ಅವರ ಸಂಗ್ರಹ 'ಗುಬ್ಬಿಯ ಹಾಡು' ೧೯೫೭ರಲ್ಲಿ ಬಂದುದು. ಗ್ರಾಮೀಣ ಸೊಗಡಿನಲ್ಲಿ ಅದ್ದಿ ತೆಗೆದಂತಿರುವ ಇಲ್ಲಿನ ಪದ್ಯಗಳೂ ಜನಪದದಲ್ಲಿನ ಪ್ರಯೋಗಗಳ ಕಡೆಗೆ ಹೊರಳಿರುವುದನ್ನು ಗಮನಿಸಬಹುದು.

ನೋಡೋಣ ನಡ್ಯಾಕ
ದೇವರ ಗುಡೀ;
ಜಾತರಿಗಿ ಹೋಗೋಣ .
ನಡೀ ನಡೀ!

ಪೇಡೇರ ಲಾಡೂರ
ತಿನ್ನೋನ್ ನಡೀ;
ಸೋಡಾ ವಾಟರ್
ಕುಡಿಯೋನ್ ನಡೀ!

ಹಳ್ಳಿಯ ಪರಿಸರದಲ್ಲಿಯೇ, ಅಲ್ಲಿನ ಭಾಷೆ, ಲಯಗಳು, ಸಾಂಸ್ಕೃತಿಕ ಉಡುಗೆ ಉಟ್ಟು ಅರಳುವ ಇಂಥ ಪದ್ಯಗಳು ನಮ್ಮ ಹಳ್ಳಿ ಮಕ್ಕಳ ಲೋಕವನ್ನು ಪ್ರತಿನಿಧಿಸುತ್ತವೆ. ಈಗಾಗಲೇ ಇರುವ ಹಾಡು, ಹಾಡಿನ ತುಣುಕಗಳ ನಡುವೆ ಹೊಸತನ್ನ ತಂದುಕೊಳ್ಳುವ ಚಾಚುಗಳು ಕಾಣುತ್ತವೆ.

ನಿನಗ್ಯಾರು ಬಡದಾರ
ಯಾಕಳತಿ ಗೊಂಬವ್ವಾ?
ನಿನಗ್ಯಾರ ಬೈದಾರ
ಯಾಕಳತಿ ಕಂದವ್ವಾ?

ಗುಬ್ಬಿಯ ಕಥೆಯನ್ನು ಕೇಳ ಬಯಸುವ ಮಗು ತಾಯಿಗೆ 'ಹೇಳದೆಯಿದ್ದರೆ ನೋಡಮ್ಮ, ಊಟವ ಮಾಡುವದಿಲ್ಲಮ್ಮಾ!' ಎಂದು ಮೊಂಡು ಹಟ ಹಿಡಿಯುವುದು, 'ಡೋಡ ನಡದಾನ ಹಿಡಿಯೂಣ ಬಾರ!' ಎಂದು ಚಂದ್ರಮನನ್ನು ಹಿಡಿಯಲು ಕರೆಯುವುದು ಮುಂತಾದ

ರಚನೆಗಳಲ್ಲಿ ಆಡುಮಾತು, ಸಹಜ ಭಾವಗಳು ಗೆಲುವನ್ನು ತಂದಿವೆ. ಅವರ ಸಾಮಾಜಿಕ ಕಳಕಳಿಯ ಸಂಗತಿಗಳು ಆಗಲೇ ಮಕ್ಕಳ ರಚನೆಗಳಲ್ಲಿ ಕಾಣಿಸಿಕೊಂಡಿದ್ದವು . .

'ಇರುವನು ಒಬ್ಬನೆ
ಕುಂಬಾರ
ಊರಿಗೆ ಒಬ್ಬನೆ
ಕಮ್ಮಾರ'
***
ಬಾಡಿಗೆ ಶಾಲೆಯು
ಇಲ್ಲಿಹುದು
ಸೋರುವ ಚಾವಡಿ
ಒಂದಿಹುದು
***
ನನ ರಾಜ ಅಂಗೀ ನೋಡ
ಇವ ಫೊಂಚೀ ಕುಲಾಯಿ ನೋಡ
ನನ ರಾಜಾನ ಮೈಯ್ಯ ನೋಡ
ಇವ ಹುವ್ವಿನ ಕಯ್ಯ ನೋಡ

ಮಕ್ಕಳು ಸರಾಗವಾಗಿ ಅಂದುಕೊಳ್ಳಬಹುದಾದಂತಹ ರಚನೆಗಳು ಬಹಳಷ್ಟು ಸ್ವಚ್ಛಂದದಿಂದ, ಆಟದ ಕ್ರಿಯೆಗಳಿಂದ ಕೂಡಿವೆ. ಅವರ ಸಂಕಲನಗಳಲ್ಲಿ ಮುಕ್ಕಾಲುಪಾಲು ನವೋದಯದ ಬಳಿವಿಡಿದು ರಚಿಸಿದ ರಚನೆಗಳೇ ಕಾಣುತ್ತವೆ ಎನ್ನುವುದನ್ನು ತಳ್ಳಿಹಾಕುವಂತಿಲ್ಲ. ಹಾಗಿದ್ದಾಗಲೂ ಒಂದಿಷ್ಟೆಲ್ಲ ಸೋಪಜ್ಞತೆಯಿಂದ ಎದ್ದುಕಾಣುವ ಕೆಲವಾದರು ರಚನೆಗಳು ಬೇರೆ ಹೊರಳನ್ನು ತೋರಿಸುತ್ತವೆ. ಮುಂದೆ ಈ ಬಗೆಯ ಪ್ರಯೋಗಗಳ್ಯಾವವೂ ನಡೆದ ಹಾಗೆ ಕಾಣುವುದಿಲ್ಲ.

ಸರಿಸುಮಾರು ಇದೇ ಸಮಯದಲ್ಲಿ ಮಕ್ಕಳಿಗಾಗಿಯೂ ರಚನೆಗಿಳಿದ **ಡಿ. ಎಸ್. ಕರ್ಕಿ** ಅವರ ರಚನೆಗಳಲ್ಲಿ ರಮ್ಯಭಾವಗಳ ಮೇಳವೆ ಕಂಡುಬಿಡುತ್ತದೆ. ಕವಿತೆಯ ಸಾರ ಎನ್ನುವಂತಹದು ಕೊನೆಯ ಸಾಲುಗಳಲ್ಲಿ ಸಾಂದ್ರವಾಗುತ್ತ, ಅನೇಕ ಸಲ ಮಕ್ಕಳ ಲೋಕವನ್ನ ಮೀರುತ್ತಲೂ ಇರುವುದಾಗಿರುತ್ತದೆ. 'ಬಣ್ಣದ ಚೆಂಡು' ಕವಿತೆಯಲ್ಲಿ ರಬ್ಬರ್ ಚೆಂಡಿನ ನಾನಾ ಬಗೆಗಳನ್ನ ಹಿಡಿದಿಡುತ್ತ 'ಕೊನೆಯಲಿ ಒಂದು ದಿನ ಪುಸ್ಸೆಂದು ಆಟವ ಮುಗಿಸುವ ಚೆಂಡು' ಎಂದು ಬದುಕಿಗೆ ವ್ಯಾಪಿಸಿಕೊಳ್ಳುವುದನ್ನು ನೋಡುತ್ತೇವೆ. ಹೀಗೆಯೇ ಅವರ 'ಬುರು ಬುರು ಬಸವಣ್ಣ', 'ಕೊಟ್ಟರೆ ಹಿಗ್ಗನು, ಬಿಟ್ಟರೆ ತಗ್ಗನು'. 'ನನ್ನ ನಿನ್ನ ಮಾತು' ಕವಿತೆಯಲ್ಲಿ ಮಗು ತಾಯಿಗೆ ಆಕೆಯ ಹಾಗೂ ತನ್ನ ಪರ್ಯವಸಾನವಾಗುತ್ತದೆ. ನವೋದಯದ ನವಿರುಭಾವದ, ರಮ್ಯ ಕಲ್ಪಕತೆ, ಸಜ್ಜನಿಕೆಯ ಭಾಷೆಯ ಕವಿ ಕರ್ಕಿಯವರು. ಮಕ್ಕಳಿಗೆ ಬರೆಯುವಾಗಲೂ ಅವರು ಈ ಎಲ್ಲವನ್ನು ಮುಂದುವರೆಸಿಯೇ ನಡೆಯುತ್ತಾರೆ.

ಕಂದಾ ಕಡಲಲಿ ತೀರದ ನೀರನು
ತುಂಬಿರುವಾ ದೇವ
ಎಂದೂ ತೀರದ ಪ್ರೀತಿ ನನ್ನೀ
ಎದೆಯಲಿ ತುಂಬಿರುವ

ಎಂದು ಭಾವತೀವ್ರತೆಯಲ್ಲಿ ಪರ್ಯವಸಾನವಾಗುತ್ತದೆ. ನವೋದಯದ ನವಿರುಭಾವದ, ರಮ್ಯ ಕಲ್ಪಕತೆ, ಸಜ್ಜನಿಕೆಯ ಭಾಷೆಯ ಕವಿ ಕರ್ಕಿಯವರು. ಮಕ್ಕಳಿಗೆ ಬರೆಯುವಾಗಲೂ ಅವರು ಈ ಎಲ್ಲವನ್ನು ಮುಂದುವರೆಸಿಯೇ ನಡೆಯುತ್ತಾರೆ.

ಚಿಕ್ಕೆ ಚಂದ್ರಮರಾಡುತಿಹರು
ಮುಗಿಲ ಬಯಲಲಿ ಆಟವ
ಅವರ ಹಾಗೆಯೆ ನಾವು ಬೆಳೆಸುವ
ಎಳೆಯ ಗೆಳೆಯರ ಕೂಟವ

ಅಲ್ಲಿ ಮಕ್ಕಳಿಗೇ ವಿಶಿಷ್ಟವಾದ ತುಂಟತನಗಳು, ಕೀಟಲೆಗಳು ಕಾಣವು. ಹಾಗಂತ ಮಕ್ಕಳ ಲೋಕದ ಆಕರ್ಷಣೆಯ ಅನೇಕ ವಸ್ತುಗಳು ಅವರ ರಚನೆಗಳಲ್ಲಿ ಕಾಣದೆ ಹೋಗಿವೆ ಎನ್ನುವ ಹಾಗಿಲ್ಲ.

ಅಹಹಾ ಕುಣಿಯುವ ಚೆಂಡು!
ಥೈತಕ ಎಂದು
ಕುಣಿ ಕುಣಿ ಎಂದು
ನಮ್ಮನು ಕುಣಿಸುವ ಚೆಂಡು
ಅಹಹಾ ರಬ್ಬರ ಚೆಂಡು.

ಚೆನ್ನವೀರ ಕಣವಿ(೧೯೨೮) ಅವರು ಮಕ್ಕಳಿಗಾಗಿ ಒಳ್ಳೇ ಪ್ರೀತಿಯಿಂದಲೇ ಬರೆದಿದ್ದಾರೆ. 'ಹಕ್ಕೀಪುಚ್ಚ' ಎನ್ನುವ ಸಂಗ್ರಹ ೧೯೮೫ರಲ್ಲಿ ಬಂದುದು, ಇತ್ತೀಚೆಗೆ ಎಚ್ ಎಸ್ ವಿ ಅವರ ಪ್ರೇರಣೆಯಿಂದ ರಚಿಸಿದ ಒಂದು ಕವಿತೆಯನ್ನು ಸೇರಿಸಿ ೨೦೦೬ರಲ್ಲಿ ಮತ್ತೆ 'ಚಿಣ್ಣರ ಲೋಕವ ತೆರೆಯೋಣ' ಹೆಸರಿನಲ್ಲಿ ಮರುಮುದ್ರಣಗೊಂಡಿದೆ. ಸರಾಗವಾಗಿ ಹರಿಯುವ ಲಯಗಳು, ಹೃದ್ಯವಾಗಿ ಪೋಣಿಸಿದ ಪದಗಳು, ಆಕರ್ಷಿಸುವ ಸಹಜದ ಅಭಿವ್ಯಕ್ತಿ ವಿಶೇಷವಾಗಿ ನಮ್ಮನ್ನು ಸೆಳೆಯುತ್ತವೆ. ಮಕ್ಕಳ ನಡುವಿನ ಸಹಜದ ಮನೋ ವ್ಯಾಪಾರಗಳನ್ನು ಹಿಡಿದಿಡುವುದರ ಜೊತೆಗೆ ಮಕ್ಕಳ ಕುರಿತು ಪ್ರೀತಿ, ಅಕ್ಕರೆಯ ಭಾವಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ರವಿವಾರ ಹುಟ್ಟಿರುವ ಮಕ್ಕಳೆಲ್ಲ
        ಕಲಿಯುವರು ಸರಿಯಾಗಿ ಪಾಠಗಳನು
ಸೋಮವಾರ ದಿವಸ ಹುಟ್ಟಿದವರು
        ನಿತ್ಯವೂ ಸತ್ಯವನೆ ಮಾತನಾಡುವರು
ಯಾರು ಮಂಗಳವಾರ ಹುಟ್ಟಿದವರು
        ಯಾವ ಕೆಲಸಕು ಹಿಂದೆ ಸರಿಯದವರು

ಹೀಗೆ ಯಾವ ದಿನ ಹುಟ್ಟಿದರೂ ಒಂದಿಲ್ಲ ಒಂದು ಒಳ್ಳೆಯ ಗುಣಗಳನ್ನೇ ಹೊಂದುವವರು ಎನ್ನುತ್ತ, 'ಈಗ ಹೇಳಿರಿ ಬೇಗ ಕುಣಿಕುಣಿದು ಬಂದು, ನೀವು ಹುಟ್ಟಿದ ದಿವಸಯಾವ್ಯದೆಂದು' ಎಂದು ಹೃದ್ಯ ಹಾಸ್ಯವನ್ನು ತರುತ್ತಾರೆ. ಬೊಂಬೆಯೊಡನೆಯ ಆಪ್ತ ಮಾತುಕತೆ ಒಂದು ಕವಿತೆಯಲ್ಲಿದ್ದರೆ, ಪುಟ್ಟ ಪಾಪುವಿನೊಡನೆಯ ಬಾಲ ಭಾವದ ಮಾತುಕತೆ ಇದೆ ಇನ್ನೊಂದು ರಚನೆಯಲ್ಲಿ. ಪ್ರಾಣಿ, ಪಕ್ಷಿಗಳನ್ನು ಬಳಸಿಕೊಂಡು ಹಲವಾರು ಪದ್ಯಗಳನ್ನ ಅವರು ರಚಿಸಿದ್ದಾರೆ.

ಗ್ರಾಮೀಣದಲ್ಲಿ ಪ್ರಚುರದಲ್ಲಿರುವ ರಚನೆಗಳನ್ನು ಬಳಸಿಕೊಂಡು ಹಲವನ್ನೆಲ್ಲ ಬರೆದಿರುವುದು ವಿಶೇಷವಾಗಿದೆ.

ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ
ಸಂಜೆಯ ಗಾಳಿ
ತಂಪೊಳು ತೇಲಿ
ಗರಿಗರಿ ಮೋಡ
ಬಾನಿನ ಕೂಡ
ಮೈಮರೆತೋಟ
ಚಕ್ಕಂದಾಟ
ಬಣ್ಣದ ಹಕ್ಕಿ
ಕೊರಳಲ್ಲುಕ್ಕಿ
ಸುವ್ವಿ ಚವ್ವೀ
ಹಾಡಿದೆ ಟುವ್ವಿ

ಅಂತೆಲ್ಲ ಸಾಗುವ ರಚನೆ ಮಕ್ಕಳ ನಡುವೆ ಸಲೀಸಾಗಿ ಹರಿದು ಬರುವುದರ ಜೊತೆಗೆ ಕವಿಯ ಹೃದ್ಯ ಆಶಯಗಳಿಗೂ ತಾಣವಾಗಿದೆ. ಹೀಗೆಯೇ 'ಬಗಾಟ ಬಗರಿ', 'ಕಂಬಕಂಬದಾಟ ನಿಂಬಿಯ ತೋಟ', 'ಆನಿ ಬಂತವ್ವ ಆನಿ' ಹೀಗೆ ಹಲವಾರು ರೂಢಿಗತ ಲಯಗಳನ್ನ ಬಳಸಿಕೊಂಡಿದ್ದಾರೆ. ಗದ್ಯಗಂಧಿಯಾಗಿ ಹರಿದ 'ನಾಯಿ ಬೆಕ್ಕು ಕ್ರಿಕೆಟ್ಟು' ಕವಿತೆ ಅವರದೇ ಪ್ರಾಣಿ ಸಹವಾಸದ ಅನುಭವವನ್ನ, ಮೊಮ್ಮಕ್ಕಳ ನಡುವಿನ ವಾತ್ಸಲ್ಯದಲ್ಲಿ ಹರಿದಿರುವ ಹೆಸರಿನ ಆಟವನ್ನ ಚೆನ್ನಾಗಿ ಸಂವಹನಗೊಳಿಸುತ್ತದೆ.

ಮಿಂಚುಹುಳುವಿನ ಅವರ ಪ್ರತಿಮೆ
ತುಂಬ ಆಪ್ಯಾಯಮಾನವಾದುದು:
ಯಾರೂ ಎಣ್ಣೆಯ ಹಾಕಿಲ್ಲ
ಆದರೂ ಸಣ್ಣಗೆ ದೀಪವಿದೆ
ಗಾಳಿಗೆ ಆರದೆ ಮಿನುಗುತಿದೆ

ಹಿರಿಯ ರಾಜಕಾರಣಿ **ಸರೋಜಿನಿ ಮಹಿಷಿ**ಯಂಥವರು ಅಪರೂಪಕ್ಕೆಂದು ಮಕ್ಕಳ ಲೋಕದೆಡೆಗೆ ಹೊರಳಿ ಕೆಲವೆಲ್ಲ ಸ್ವಾರಸ್ಯದ ಕೃತಿಗಳನ್ನ ರಚಿಸಿದ್ದಾರೆ. 'ಕಿವಿಮಾತು' ಕವಿತೆಯಲ್ಲಿ ಗೆಳತಿಗೆ ಹೇಳುವ ಗುಟ್ಟಿನ ಮಾತುಗಳು ಇವು . . .

ನಿನ್ನ ಕಿವಿಯಲಿ ನಾನು
ಒಂದು ಮಾತು ಹೇಳುವೆ
ಹೇಳಬೇಡ ಯಾರಿಗೂ
ಅವ್ವ ಅಪ್ಪ ಬಂದರು

ಪೇರಲ ತೋಟ ಹೊಕ್ಕು
ಹಣ್ಣು ಕಾಯಿ ತಿನ್ನೋಣ

ಎಳೆಯ ತೆಂಗಿನ ನೀರು
ಇಳಿಸಿ ಕುಡಿದು ಬರೋಣ

ಹುಣಿಸೆ ಮರದ ಜೋಕಾಲಿ
ತೂಗಿ ತೂಗಿ ಆಡೋಣ
ಕೆರೆಯ ಕಮಲವ ಕಿತ್ತಿ
ಮನೆಗೆ ಕೊಂಡು ಬರೋಣ

ಧಾರವಾಡ ಆಕಾಶವಾಣಿಯಲ್ಲಿ ಅನುರಾಧಾ ಧಾರೇಶ್ವರ ಅವರು ಹಾಡಿ ಅತ್ಯಂತ ಪ್ರಚುರವಾದ 'ಹಾರುವ ಗಿಳಿಯೆ ಹಸುರಿನ ಮರಿಯೆ ನಿಲ್ ನಿಲ್ ನಿಲ್' ಎನ್ನುವ ಕವಿತೆ ತನ್ನ ನಾಟಕೀಯ ಗುಣಗಳಿಂದ, ಹಾಗೆಯೇ ಹೃದ್ಯಭಾವಗಳಿಂದ ಸೊಗಸಾದ ರಚನೆಯೇ.

ಹಸುರಿನ ಪುಚ್ಛ
ಎಲೆಗಳೆ ಎಂದು
ಮಕ್ಕಳು ಕಿತ್ತಿ
ಎಸೆಗಿಸೆದಾರು
ನಿಲ್ ನಿಲ್ ನಿಲ್

ಎಲೆಗಳ ಹಿಂದೆ
ಅಡಗಿದ ಹಣ್ಣು
ಎಂದೇ ನಿನಗೆ
ಹೊಡೆಗಿಡದಾರು
ಕಲ್ ಕಲ್ ಕಲ್

ಎಂದೆಲ್ಲ ಸಾಗುವ ಗೀತೆ 'ಪಚ್ಚದ ಮರಿಯೆ ಕಟ್ಟುವೆ ನಿನ್ನ ಕೊರಳಿಗೆ ಸರವ ಕಾಲಿಗೆ ಗೆಜ್ಜೆ ಘಿಲ್ ಘಿಲ್ ಘಿಲ್' ಎಂದು ಕೊನೆಯಾಗುವುದು ಸೊಗಸಿನ ಮೂರ್ತತೆಯನ್ನ ಹೊಂದಿದಂತಿದೆ. ಪುಟ್ಟ ಪುಟ್ಟ ೫೦ ಪದ್ಯಗಳಲ್ಲಿ ಅವರು ಇಡೀ ಸ್ವಾತಂತ್ರ್ಯ ಸಂಗ್ರಾಮವನ್ನ ಕಟ್ಟಿಕೊಟ್ಟಿರುವುದನ್ನ ಇಲ್ಲಿ ಹೇಳಲೇಬೇಕು. ಇವೆಲ್ಲ ಒಬ್ಬೊಬ್ಬರೂ ಮಕ್ಕಳ ಲೋಕದಲ್ಲಿ ಹೊಸಹೊಸ ಸಂಗತಿಗಳನ್ನ ಸೇರಿಸಲು ತುಡಿದುದನ್ನ ಹೇಳುತ್ತವೆ.

ಪಂಚಾಕ್ಷರಿ ಹಿರೇಮಠ(೧೯೩೩) ಪ್ರಬುದ್ಧರಿಗೆ ವಿಶೇಷವಾಗಿ ತೊಡಗಿಕೊಂಡಂತೆ ಮಕ್ಕಳಿಗಾಗಿಯೂ ಆಸಕ್ತಿಯಿಂದ ಬರೆದವರು. ಹಿಂದಿಯಿಂದ ಪ್ರೇಮಚಂದರ 'ಈದಿಗಾ' ಕತೆಯನ್ನು, ಹರಿಕೃಷ್ಣ ದೇವಸರೆ ಅವರ 'ಸುರಖಾಬದ ಗರಿಗಳು' ಎನ್ನುವ ಕೃತಿಯನ್ನು ಕನ್ನಡಕ್ಕೆ ನೀಡಿದವರು. 'ಚಾಕ್ಲೇಟ್ ಮತ್ತು ಇತರ ಕಥೆಗಳು' ಇವರ ಇನ್ನೊಂದು ಗಮನಿಸಬಹುದಾದ ಮಕ್ಕಳ ಕೃತಿ.

ಗೀತಾ ಕುಲಕರ್ಣಿ ಅವರು ಮಕ್ಕಳಿಗಾಗಿ ದೀರ್ಘವಾದ ಸ್ವಾರಸ್ಯದ ಕತೆಗಳ ಸಂಕಲನವನ್ನು ತಂದಿರುವ ಹಾಗೆ 'ನೇಜಿ ಗುಬ್ಬಚ್ಚಿ' ಎನ್ನುವ ಅಪರೂಪದ ಕಾದಂಬರಿಯನ್ನ ರಚಿಸಿರುವುದು ಕನ್ನಡ ಮಕ್ಕಳ ಸಾಹಿತ್ಯದ ಲೋಕದ ಸೊಗಸು ಎಂದೇ ಹೇಳಬೇಕು. ದಕ್ಷಿಣ ಕನ್ನಡ ಜಿಲ್ಲೆಯ

ತಮ್ಮ ಬಾಲ್ಯದ ಅನುಭವಗಳ ಹಿನ್ನೆಲೆಯಲ್ಲಿ ಪುಟ್ಟನೊಬ್ಬನ ಸುತ್ತ ಹರಿದಿರುವ ಕತೆ ಮುಗ್ಧ ಮನಸ್ಸು ತನ್ನ ಸುತ್ತಲಿನ ಪರಿಸರದಲ್ಲಿ ಏನೆಲ್ಲವನ್ನ ಗ್ರಹಿಸುತ್ತ ಸಂವೇದನಾಶೀಲವಾಗುತ್ತದೆ, ತನ್ನ ಸುತ್ತಲಿನ ಹಿರಿಯರಲ್ಲಿ ಏನೆಲ್ಲವನ್ನ ಆಶಿಸುತ್ತದೆ, ಹಂಬಲಿಸುತ್ತದೆ, ಆಶಿಸಿದುದು ಸಿಗದೇ ಹೋದಾಗ ಎಷ್ಟೆಲ್ಲ ಮ್ಲಾನವಾಗುತ್ತದೆ, ಪರ್ಯಾಯದ ತನ್ನದೇ ಆದ ದಾರಿಗಳಿಗೆ ಹುಡುಕಾಟ ನಡೆಸುತ್ತದೆ ಎನ್ನುವುದನ್ನ ಬಲು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ ಲೇಖಕಿ. ದರ್ಪದ ಅಪ್ಪನನ್ನ ಎದುರಿಸಲಾರದೆ, ಒಳಗೊಳಗೇ ಮುರುಟುವ ಹುಡುಗ ಅಮ್ಮ, ಅಜ್ಜಿಯ ಆಸರೆಯಲ್ಲಿ ತನ್ನ ಬೆಚ್ಚನೆಯ ಭಾವಗಳಿಗೆ ಕಾವು ಕೊಡುತ್ತಾನೆ. ಕೋಳಿ ಕಾಳಗಕ್ಕೆ ಅಪ್ಪ ಸಿದ್ಧಗೊಳಿಸಿದ ಮನೆಯ ಹುಂಜವನ್ನ ಹಚ್ಚಿಕೊಂಡಿರುವ ಹುಡುಗ ತನ್ನ ಶಾಲೆಯ ಪ್ಲ್ಯೂನ್ ಕಡೆಯಿಂದ ಅದರ ಕಿರು ಬೆರಳನ್ನ ಕತ್ತರಿಸಿ, ಕಾಳಗಕ್ಕೆ ಲಾಯಕ್ಕಿಲ್ಲದಂತೆ ಮಾಡುವುದರಲ್ಲಿ ಯಶಸ್ವಿಯಾಗುತ್ತಾನೆ, ಪರ್ಯಾಯವಾಗಿ ಅಪ್ಪನ ಮೇಲೆ ಪ್ರತಿಭಟನೆ ತೋರಿಸುತ್ತಾನೆ. ಕಾಳಗದ ಹಿಂಸೆಯಿಂದ ತಪ್ಪಿಸಲು ಚಿಕ್ಕದೊಂದು ಹಿಂಸೆಗೆ ಶರಣಾಗುತ್ತಾನೆ. ಹೀಗೆಯೇ ಶಾಲೆಯ ವಾತಾವರಣ, ಮನೆಯ ವಾತಾವರಣದ ಯಕ್ಷಗಾನ ಮುಂತಾಗಿ ಹಲವಾರು ಕಡೆಗಳಲ್ಲಿನ ವಾತಾವರಣವನ್ನ ವಿಸ್ತೃತವಾಗಿ ಚಿತ್ರಿಸುತ್ತ ಕಳೆಕಟ್ಟಿದ್ದಾರೆ ಕತೆಗೆ. ಒಂದು ಸಂವೇದನಾಶೀಲವಾದ ಬರವಣಿಗೆ ಅದು.

ಹೀಗೆಯೇ ಬೇರೆ ಬೇರೆ ವೃತ್ತಿಯವರೂ, ಸಾಹಿತ್ಯದ ಮುಖ್ಯವಾಹಿನಿಯ ಪ್ರಖ್ಯಾತರೂ ತಮ್ಮೊಳಗಿನ ಆಸಕ್ತಿಯಿಂದಲೋ, ಜೊತೆಯವರ ಒತ್ತಾಸೆಯಿಂದಲೋ, ಒಂದಾವುದೋ ಯೋಜನೆಯ ಭಾಗವಾಗಿಯೋ ಕಾಣಿಸಿಕೊಂಡು ಈ ಸಾಮೂಹಿಕ ಪ್ರಕ್ರಿಯೆಯನ್ನ ಪುಷ್ಟಿಗೊಳಿಸಿದರು ಎನ್ನಬಹುದು. 'ಭಾರತ ಭಾರತಿ ಪುಸ್ತಕ ಸಂಪದ' ಮಾಲಿಕೆಯಲ್ಲಿ ಜೀವನ ಚರಿತ್ರೆಗಳನ್ನು ಸಂಪಾದಿಸಿದ ಎಲ್. ಎಸ್. ಶೇಷಗಿರಿರಾವ್, ಸು.ರಂ. ಎಕ್ಕುಂಡಿ, ಶಾಂತರಸ, 'ಸೊಂಡಿ ಗಣಪಾ ಬಂದಾ' ನಾಟಕ ನೀಡಿದ ವಾಮನ ಬೇಂದ್ರೆ, ರಾಬಿನ್‌ಸನ್ ಕ್ರೂಸೊ, ಕವಿ ರನ್ನ, ಚಾವುಂಡರಾಯ ಮುಂತಾಗಿ ೫೦ಕ್ಕೂ ಹೆಚ್ಚು ಮಕ್ಕಳಿಗೆ ಪುಸ್ತಕಗಳನ್ನು ರಚಿಸಿದ ಹಿರಿಯ ಭಾಷಾ ತಜ್ಞ ಜಿ. ವೆಂಕಟಸುಬ್ಬಯ್ಯರಂಥ ಹಿರಿಯ ಲೇಖಕರು, ಬಳ್ಳಾರಿ ಬೀಚಿ, ಬಸವರಾಜ್ ಮನಸೂರ್ ಮುಂತಾದ ಜೀವನ ಚರಿತ್ರೆಗಳನ್ನ ರಚಿಸಿದ ಶಾ. ಮಂ. ಕೃಷ್ಣರಾವ್, ಶ್ರಮವೇ ದೇವರು ಕೃತಿಯ ಕೆ. ಎಸ್. ಹೆಗಡೆ, ಎನ್. ಪ್ರಹ್ಲಾದ ರಾಯರ 'ಮೈಸೂರುಪಾಕ್', 'ಮಿಂಚುಳ್ಳಿ', 'ರಾಜ–ಬೆಸ್ತ', 'ಮಹಾಯಾನ', 'ಸ್ಮೃತಿಕನ್ಯೆ', 'ಒಂದಾದರೂ ಸಸಿ ನೆಡಿ'; ವೈ.ಎಸ್.ಜಿ.ಯವರ 'ಧ್ರುವ' ಬಾಲ ಸಂಗೀತ ನಾಟಕ, 'ಗೋಲಿಯ ಮಹಿಮೆ', 'ಮಗುವಿನ ಮಹಿಮೆ', 'ಬಾಲಕಬೀರ್', 'ತೋಳರಾಯನ ಸಭೆ', 'ಕಾಸಿನ ಗಂಟು', 'ಹಾಸ್ಯ ಪ್ರಹಸನ', ಎಸ್. ಅನಂತನಾರಾಯಣರ 'ಹುಲಿಪಟ್ಟೆ', 'ಮೊಲದ ನ್ಯಾಯ', ಎಂ. ರಾಮರಾವ್ ಅವರ 'ಸೋಮಾರಿ ಸಿದ್ಧ', 'ಅನ್ನ ಕೊಡುವ ಹಕ್ಕಿ', 'ಚಿನ್ನ ಕೊಡುವ ಮರ', 'ಉಪ್ಪಿಲ್ಲದ ಊಟ', 'ಚಂದ್ರನ ಕಡೆ' ಕಥಾಸಂಕಲನಗಳು, 'ಮಕ್ಕಳ ಸಾಹಿತ್ಯ ಬಳ್ಳ ತುಂಬಿದ ಕೆಲವು ಹನಿಗಳು', ಎಚ್. ಜೆ. ಲಕ್ಕಪ್ಪಗೌಡ, ಮಕ್ಕಳಿಗೆ ಅಜ್ಜನ ನುಡಿಮುತ್ತುಗಳು ನೀಡಿದ ಮುಂಡರಗಿಯ ಅನ್ನದಾನೇಶ್ವರ ಸ್ವಾಮಿಗಳು, 'ನಗುವ ಮೂರು ಮುತ್ತುಗಳು,' 'ಬಾಳು ಬೆಳಗಿತು', 'ಹೊರಸಂಚಾರ', 'ಹಾಡುವ ಹಕ್ಕಿ', 'ಚಿಲಿಪಿಲಿ', 'ಸರಿಗಮ' ಮುಂತಾದ ಕೃತಿಗಳನ್ನು ರಚಿಸಿದ ಶ್ಯಾಮಲಮೂರ್ತಿ, 'ಪಾಪು ಹೇಳಿದ ಕತೆಗಳು' ಪುಸ್ತಕಕ್ಕೆ ರಾಷ್ಟ್ರೀಯ ಪುರಸ್ಕಾರ ಪಡೆದ, ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ, ಹಾಗೆಯೇ ಮಕ್ಕಳಿಗಾಗಿ 'ಚಂದಕ್ಕಿ ಮಾಮ', 'ಬಾತು ಬಂಗಾರ

ಮೊಟ್ಟೆ', 'ಪಟ್ಟಣದ ಇಲಿ', 'ನಿಮ್ಮ ಮಕ್ಕಳಿಗೆಂಥ ಸಾಹಿತ್ಯ ಬೇಕು?', 'ಸಂಕ್ಷಿಪ್ತ ಮಹಾಭಾರತ' ಮುಂತಾದವುಗಳನ್ನ ರಚಿಸಿದ ನಿರುಪಮಾ, ಮಕ್ಕಳ ಸಾಹಿತ್ಯದಲ್ಲಿ ಒಳ್ಳೆಯ ಆಸ್ಥೆಯಿಂದ ತೊಡಗಿದ, ವಿಶೇಷವಾಗಿ ನಾಟಕಗಳನ್ನು ರಚಿಸಿದ ವರದರಾಜ ಹುಯಿಲಗೋಳ, ಚಿತ್ರದುರ್ಗದಲ್ಲಿ ಪ್ರಾಧ್ಯಾಪಕರಾಗಿದ್ದು ಮಕ್ಕಳಿಗೆ ಕವಿತೆಗಳನ್ನ ಮುದದಿಂದ ಬರೆಯುತ್ತ ಹಾಸ್ಯದ ಹೂರಣವನ್ನ ವಿಶೇಷವಾಗಿಯೇ ಹೊಂದಿರುವ ರಚನೆಗಳನ್ನು ನೀಡಿದ ಬಿ. ತಿಪ್ಪೇರುದ್ರಪ್ಪ 'ಜನಪದ ನೀತಿ ಕತೆಗಳು', 'ಕರಿಬಂಟನ ಕಾಳಗ' ಪ್ರಕಟಿಸಿದ ಹ. ಕ. ರಾಜೇಗೌಡ, ಎಸ್. ಚೆನ್ನಪ್ಪ, ಸು, ರಂಗಸ್ವಾಮಿ, ಸುಮಾರು ಹತ್ತು ಕೃತಿಗಳನ್ನು ಹೊರತಂದ ಕೆ. ಶಾಮಣ್ಣ, 'ವಸುಂಧರಾ ಗೀತೆಗಳು', 'ಬಾಲಗೀತಾವಳಿ', 'ಆಗಸ ತೋಟದ ಹೂಗಳು' ಮುಂತಾಗಿ ಪದ್ಯಗಳ ಸಂಕಲನ ತಂದ ಆಕಾಶವಾಣಿಯಲ್ಲಿ ನಿರ್ದೇಶಕರಾಗಿದ್ದ ರಾಘವೇಂದ್ರ ಇಟಗಿ, 'ಕುಮಾರರಾಮ', 'ಕಂದನ ಕವನಗಳು', 'ಆರು ಪ್ರಾಣಿ ಕಥೆಗಳು' ಮುಂತಾದ ಕೃತಿಗಳನ್ನು ತಂದ ರಾಮೇಗೌಡ(ರಾಗೌ), 'ರಣಧೀರ ಕಂಠೀರವ', 'ನರಸಿಂಹರಾಜ ಒಡೆಯರ್', 'ನಾಲ್ವಡಿ ಕೃಷ್ಣರಾಜ ಒಡೆಯರ್' ಕೃತಿಗಳನ್ನ ರಚಿಸಿದ ಕಾದಂಬರಿಗಾರ್ತಿ ಆರ್ಯಾಂಬ ಪಟ್ಟಾಭಿ, 'ದಿನೇಶನ ದೀಪಾವಳಿ', 'ದಿನೇಶನ ರಜೆಯ ದಿನಗಳು', 'ರಶ್ಮಿಯ ಗೆಳತಿ ಮಾಧವಿ', ಮೂರು ಕಾದಂಬರಿಗಳನ್ನು ರಚಿಸಿದಿನ್ನೋರ್ವ ಕಾದಂಬರಿಗಾರ್ತಿ ಸರೋಜಾ ನಾರಾಯಣರಾವ್, 'ಆಶಾಕಿರಣ', 'ನನ್ನ ತಾಯಿ', 'ತಾಯಿ ಭಾರತಿ' ಮುಂತಾದುವನ್ನ ರಚಿಸಿದ ಎಂ. ಆರ್. ಮುಲ್ಲಾ, 'ಮಕ್ಕಳ ಮನಸು', 'ಬಾಲರ ಭಾವನೆ', 'ಕಿಶೋರ ಕಿರಣ', 'ಚಿಣ್ಣರ ಚಿಲಿಪಿಲಿ' ರಚಿಸಿದ ಕೆ. ಭೈರಪ್ಪ, 'ಭಟ್ಟನ ಕನಸು' ಕೃತಿಯ ಬಿ,ಟಿ. ಲಲಿತಾನಾಯಕ, 'ರಶ್ಮಿ ಸರ್ಕಸ್ ಕಂಪನಿ', 'ಬಣ್ಣದ ಗಿಲಿಕಿ', 'ಲಕ್ಷ್ಮಣರಾವ್ ಕಿರ್ಲೊಸ್ಕರ್' ಮೊದಲಾದ ಕೃತಿಗಳನ್ನ ನೀಡಿದ ಲಲಿತಮ್ಮ ಚಂದ್ರಶೇಖರ್, 'ಚುಕ್ ಬುಕ್ ರೈಲು' ಹಾಗೂ 'ಉಡುಗೊರೆ ಕೃತಿ'ಗಳನ್ನು ರಚಿಸಿದ ಹೆಬ್ಬಾರ್, 'ಕನ್ನಡ ಕಿನ್ನರಿ ಸಂಕಲನ' ಸೇರಿದಂತೆ ಕೆಲ ನಾಟಕಗಳನ್ನು ನೀಡಿದ ಕವಿತಾಕೃಷ್ಣ, 'ಚವತಿ ಗಣಪ' ಕೃತಿ ರಚಿಸಿದ ಪಿ.ಎಸ್. ಗಣಪಯ್ಯ, 'ಬಾಲರ ಬಾವುಟ', 'ಬಾಲಗೀತೆ', 'ಬಾಲರ ಬಂಧು', 'ಮಗುಳು ಮಲ್ಲಿಗೆ', 'ಬಾಲ ಮುರುಳಿ' ಮುಂತಾದ ಕೃತಿಗಳನ್ನು ತಂದ ಕೆ. ಜಿ. ಶೆಟ್ಟಿ, 'ಕದಂಡಲೆ', 'ಕಿಶೋರ' ಕೃತಿ ರಚಿಸಿದ ಸುರೇಂದ್ರರಾಮ್, 'ದಿನಕ್ಕೊಂದು ಕತೆ'ಯಿಂದ ಹೆಸರುವಾಸಿಯಾದ ಅನುಪಮಾ ನಿರಂಜನ ಅಂಥ ವೈದ್ಯ ವೃತ್ತಿಯವರನ್ನು, ವಿವಿಧ ದೃಷ್ಟಿಕೋನದವರನ್ನು ಹಾಗೂ ಅನೇಕ ವಿವಿಧ ವೃತ್ತಿಯವರನ್ನು, ಹಾಗೆಯೇ ಒಂದಿಷ್ಟೆಲ್ಲ ವೈವಿಧ್ಯತೆಯನ್ನೂ ಕಾಣುತ್ತೇವೆ. ಸರಸ್ವತಿಬಾಯಿ ರಾಜವಾಡೆ, ಗಿರಿಬಾಲೆ ಅತ್ರಾಡಿ, ಇಂದಿರಾ ಹೆಗ್ಡೆ, ಎಚ್. ಸಿ. ಲಕ್ಷ್ಮೀ ಪಾರೆ, ತರಂಗ ಪತ್ರಿಕೆಯ ಮೂಲಕ ಮಕ್ಕಳಿಗಾಗಿ ತುಡಿಯುತ್ತಿರುವ ಸಂಧ್ಯಾ ಪೈ, 'ಪುಟ್ಟನ ಗಾಳಿಪಟ', 'ಪುಷ್ಪಕ ವಿಮಾನ', 'ಶೋಧ', 'ಮಕ್ಕಳ ಸಾಹಿತ್ಯಕ್ಕೆ ಶಿವರಾಮ ಕಾರಂತರ ಕೊಡುಗೆ' ಮುಂತಾದ ಕೃತಿ ತಂದಿರುವ ವರದಾ ಶ್ರೀನಿವಾಸ, 'ಮಕ್ಕಳ ಕಥಾಕೋಶ', 'ಬುದ್ಧಿಕಲಿತ ನರಿ', 'ಪುಟ್ಟ ಪ್ರಪಂಚ', 'ಚಿನ್ನದ ಕಿರೀಟ', 'ಜನಪ್ರಿಯ ಕತೆಗಳು', 'ಮಕ್ಕಳ ಹಾಡುಗಳು' ಮುಂತಾದ ಕೃತಿಗಳ ಲೇಖಕಿ ಲಲಿತಾ ರಂಗಸ್ವಾಮಿ, ಬೆ. ಗೋ. ರಮೇಶ, ನೀಲಗಂಗಾ ಚರಂತಿಮಠ, ಕೊತ್ತಲ ಮಹದೇವಪ್ಪ, 'ಗುಹೆ' ಕಾದಂಬರಿ ರಚಿಸಿದ ಬಿ.ಎಲ್.ವೇಣು, 'ಅರಳಿಗುಡ್ಡದ ಮೇಲೆ', 'ಮಲೆನಾಡ ಮಾದ' ಕೃತಿ ರಚಿಸಿದ ಅನುರಾಧ ಮೂರ್ತಿ, ವೈದ್ಯ ವೃತ್ತಿಯಲ್ಲಿದ್ದೂ ಆಸ್ಥೆ

ತೋರಿದ ಕರವೀರಪ್ರಭು ಕ್ಯಾಲಕೊಂಡ, ಪತ್ರಿಕಾರಂಗದಲ್ಲಿಯೇ ವಿಶೇಷವಾಗಿ ಸೇವೆ ಸಲ್ಲಿಸುತ್ತ, ಆಕಾಶವಾಣಿಗಾಗಿ ಅನೇಕ ರೂಪಕಗಳನ್ನ, ಪತ್ರಿಕೆಗಳಿಗಾಗಿ ಅನೇಕ ಕೃತಿಗಳನ್ನ ರಚಿಸಿದ, 'ಅಳಿಲಿನ ಸೇವೆ' ಇಡೀ ರಾಮಾಯಣವನ್ನು ಗದ್ಯ ಪದ್ಯ ಮಿಶ್ರಿತ ವಿಶಿಷ್ಟ ಶೈಲಿಯಲ್ಲಿ ನೀಡಿದ ಅರ್ಚಕ ವೆಂಕಟೇಶ, ಮಕ್ಕಳ ಸಾಹಿತ್ಯದಲ್ಲಿಯೇ ವಿಶೇಷ ಆಸಕ್ತಿ ಹೊಂದಿದ್ದ ಎಂ. ಎಸ್. ವೆಂಕಟರಾಮಯ್ಯ, 'ಮಹಾಭಾರತ ಕಿರಣ', 'ರಂಜನೆಯ ರಾಮಾಯಣ', 'ಬುದ್ಧಿಬಲದ ಕಥೆಗಳು', 'ಸುವರ್ಣ ಪಕ್ಷಿ' ಮುಂತಾಗಿ ಹಲವಾರು ಮಕ್ಕಳ ಕೃತಿಗಳನ್ನು ರಚಿಸಿದ ವನಮಾಲಾ ಆಚಾರ್, 'ಚಿಣ್ಣರ ಗಿಣ್ಣು', 'ಕಿರುಬಾಲ', 'ಬಾ ಗುಬ್ಬಿ ಬಾ' ಮುಂತಾದ ಕೃತಿಗಳನ್ನು ನೀಡಿದ ಶಾಂಭಟ್ ಕುಳೂರು, ರಾಜ್ಯ ಪ್ರಶಸ್ತಿಗಳಿಸಿದ 'ಪುಟ್ಟನ ಸಂಸಾರ', 'ನಮ್ಮ ನೆಚ್ಚಿನ ಬಾಪೂಜಿ' ಮುಂತದ ಕೃತಿಗಳನ್ನು ನೀಡಿದುದೇ ಅಲ್ಲದೆ ಮಕ್ಕಳ ಸಾಹಿತಿಗಳ ಸಂಘಟನೆಯಲ್ಲಿ ಸಕ್ರಿಯರಾಗಿದ್ದ ಅಪ್ಪಾಸ್ವಾಮಿ, 'ಢೋಂ ಢೋಂ ಢೋಂ' ಎನ್ನುವ ಕವನ ಸಂಕಲನ ನೀಡಿದ ಗಾಂಧೀ ತತ್ವನಿಷ್ಠ ಪ್ರೊ. ನಾ .ದಯಾನಂದ, 'ಭಾರತದ ಮೂವರು ಮಹಾ ಪುರುಷರು', 'ಆದರ್ಶ ಗುರುಶಿಷ್ಯರು', 'ಚಿಕ್ಕದೇವರಾಜ ಒಡೆಯರು' ಮುಂತಾಗಿ ಸುಮಾರು ೩೦ರಷ್ಟು ಮಕ್ಕಳ ಕೃತಿಗಳನ್ನು ನೀಡಿದ ಆಕಾಶವಾಣಿಯಲ್ಲಿ ಉದ್ಯೋಗಿಯಾಗಿದ್ದ ಬಿ.ಎಸ್. ಸ್ವಾಮಿ, ಮಕ್ಕಳಿಗಾಗಿ ವೈಜ್ಞಾನಿಕ ಪದ್ಯಗಳನ್ನು ಬರೆದಿರುವ, 'ಪುಟಾಣಿಗಳ ವಿಜ್ಞಾನ ಪದಗಳು' ರಚಿಸಿ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಪಡೆದಿರುವ ವಿಜ್ಞಾನರಂಗದ ತಜ್ಞರು, ಕುಲಪತಿಗಳಾಗಿದ್ದ ಕೆ. ಚಿದಾನಂದಗೌಡ, ನಿಮ್ಮ ಅಕ್ಕ, 'ಆದರ್ಶ ಗೆಳೆಯ', 'ಬಹುಮಾನ', 'ಮೂರು ಮಕ್ಕಳ ನಾಟಕಗಳು', 'ಬಂಗಾರದ ಪೆಟ್ಟಿಗೆ', 'ಪ್ರಚಂಡ ಪೋರರು', 'ಜಾಣಮರಿ (ಶಿಶು ಗೀತಗಳು)', 'ರಾಮಾಯಣ', 'ದಶಾವತಾರಗಳು', 'ಏಕಲವ್ಯ' ಮುಂತಾದ ಕೃತಿಗಳನ್ನ ನೀಡಿದ ಚುಕ್ಕಿ ಚಿತ್ರ ಖ್ಯಾತಿಯ ಕಲಾವಿದ ಮೋಹನ ವೆರ್ಣೇಕರ, 'ನಗುಮಗು', 'ಹಕ್ಕಿಯ ಹಾಡು', 'ಮಧುರ' ಮುಂತಾದ ಕೃತಿಗಳನ್ನು ನೀಡಿದ ಚಿತ್ರ ಕಲಾವಿದ ಕೆ. ಎಂ. ಬಾಲಸುಬ್ರಹ್ಮಣ್ಯ, 'ಸಾಹಸಿ ಗಲಿವರ್', 'ಕಿರಿಯರ ಕಥೆಗಳು', 'ಭಾರತದ ವೀರ ಬಾಲಕರು', 'ಮಕ್ಕಳ ಮುದುಕರ ಕತೆಗಳು', 'ಭೀಮಸೇನ', 'ಪಶುಪಕ್ಷಿಗಳ ಕಥೆಗಳು' ಮುಂತಾದ ಕೃತಿಗಳನ್ನು ನೀಡಿರುವ ಶೈಲಜಾ ಎಂ. ಭಟ್, ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಸದಾ ಕಳಕಳಿಯಿಂದ ತೊಡಗಿಕೊಳ್ಳುತ್ತಿರುವ, ತೆಲುಗು ಕನ್ನಡದ ಬಾಂಧವ್ಯಕ್ಕೂ ಕೈ ಚಾಚುವ, ಮಕ್ಕಳ ಸಾಹಿತ್ಯದಲ್ಲಿ ಒಳ್ಳೇ ಆಸಕ್ತಿ ಹೊಂದಿರುವ, ಕವಿತೆ, ಕತೆಗಳನ್ನು ರಚಿಸಿರುವ ಸ ರಘುನಾಥ, ಹಲವಾರು ಸಂಕಲನಗಳನ್ನ ಸಂಪಾದಿಸಿದ, ಕಾದಂಬರಿ ಅಂಥ ಕೃತಿಗಳನ್ನ ತಂದಿರುವ ಬಾಪುಜ ಅವರು ಹೀಗೆ ಒಬ್ಬರೆ ಇಬ್ಬರೇ. ಅಸಂಖ್ಯ ಸಂಖ್ಯೆಯಲ್ಲಿ ಮಕ್ಕಳಿಗಾಗಿ ಬರವಣಿಗೆಗಿಳಿದವರು ಈ ಶಿಕ್ಷಕ ಸಮುದಾಯದೊಡನೆಯೇ ಕಾಣುತ್ತಾರೆ. ಶಿಕ್ಷಕ ಸಮುದಾಯ ಹುಟ್ಟುಹಾಕಿದ ವಾತಾವರಣದಿಂದಲೇ ಇವರೆಲ್ಲ ಬರವಣಿಗೆಗೆ ಇಳಿದರು ಎಂದೇನಿಲ್ಲ. ಹಲವರೆಲ್ಲ ತಮ್ಮದೇ ಬೇರೆ ಬೇರೆ ಪ್ರೇರಣೆಗಳಿಂದ, ಕೆಲವರು ಸ್ವ ಅಭಿಲಾಷೆಯಿಂದ ಬರೆದವರೂ ಇದ್ದಾರೆ. ಹಾಗಾಗಿ ಶಿಕ್ಷಕ ಸಮುದಾಯದಲ್ಲಿ ಸಾಮಾನ್ಯವಾಗಿ ಕಾಣುವ ಗುಣಧರ್ಮಗಳನ್ನು ಎಲ್ಲರ ಕೃತಿಗಳಲ್ಲಿ ಕಾಣಲಾಗುವುದಿಲ್ಲ. ಕೆಲವರೆಲ್ಲ ಅತ್ಯಂತ ಪ್ರತಿಭಾವಂತಿಕೆಯಲ್ಲಿಯೇ ರಚಿಸಿ ಒಳ್ಳೆಯ ಉದಾಹರಣೆಗಳನ್ನ ಇಟ್ಟಿದ್ದಾರೆ. ಕೆಲವರೆಲ್ಲ

ಬರವಣಿಗೆಯಲ್ಲಿ ನುರಿತವರಾಗಿ, ಪ್ರಬುದ್ಧರಿಗಾಗಿ ನಿರತವಾಗಿ ತೊಡಗಿಕೊಂಡು ಆಗೀಗ ಮಕ್ಕಳಿಗಾಗಿ ಬರೆಯುತ್ತ ತಮ್ಮ ನಿಪುಣತೆಯನ್ನ ಇಲ್ಲಿಯೂ ತೋರಿದವರಿದ್ದಾರೆ. ಜನಪ್ರಿಯ ಕತೆಗಾರರು, ಕಾದಂಬರಿಗಾರರು ಇಲ್ಲಿಯೂ ವಿಶೇಷವಾದುದನ್ನೇ ನೀಡಿದ್ದಾರೆ. ಪ್ರಕಾಶಕರ ಆಸಕ್ತಿಯಿಂದ ಕೆಲವೆಲ್ಲ ಸರಣಿ ಪ್ರಕಟಣೆಗಳು, ಮಾಲಿಕೆಗಳು ಹೊರಬಂದಿವೆ.

ಇಂದೊಂದು ತರಹ ಕಾಡು ಇದ್ದಹಾಗೆ ಎಂದರೂ ಅಡ್ಡಿ ಇಲ್ಲ, ಹಾಗೆಯೇ ದೀರ್ಘ ಅವಧಿಯ ಬೆಳಸೂ ಹೌದು. ಆದರೆ ಒಟ್ಟಾಗಿ ಎಲ್ಲಿಯೂ ಗಣಿಸಲು ಹೋಗಿಲ್ಲದ ಸಾಹಿತ್ಯ; ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸಾಹಿತ್ಯ ಸೃಷ್ಟಿಯಾದುದನ್ನ ಕಾಣುತ್ತೇವೆ. ಹಾಗೆಯೇ ಕೆಲವೆಲ್ಲ ವಿಭಿನ್ನ ಬಗೆಯ ಚಾಚುಗಳನ್ನೂ ಸಿದ್ಧಿಗಳನ್ನೂ ಕಾಣಬಹುದು. ಅಧ್ಯಯನದ ವಿಸ್ತಾರಗಳಿದ್ದವರು ಹೊಸತಾಗಿಯೇ ತುಡಿದಿದ್ದಾರೆ. ಆದರೆ ಅವರ ಇತರ ಪ್ರಬುದ್ಧರಿಗಾದ ಬರಹಗಳ ನಡುವೆ ಈ ಬರವಣಿಗೆ ಗೌಣವಾಗಿ ಅಷ್ಟಾಗಿ ಗಮನಕ್ಕೆ ಬಾರದೆ ಹೋದುದೇ ಹೆಚ್ಚು.

ಜೀವನ ಚರಿತ್ರೆಗಳು, ಮತ್ತು ಇತರೆ

ಹರ್ಡೇಕರ ಮಂಜಪ್ಪ, ಗದಿಗೆಯ್ಯ ಹೊನ್ನಾಪೂರಮಠ, ಸುಬೋಧ ರಾಮರಾಯರು(ಮಹಾಪುರುಷರ ಬಗೆಗೆ ಒಂದು ಪುಸ್ತಕ ಮಾಲೆ), ಐಬಿಚ್ ಪ್ರಕಾಶನದ ಪ್ರಕಟಣೆಗಳು. ಜಿ.ವೆಂಕಟಸುಬ್ಬಯ್ಯನವರು, ಹೀಗೆ ಬಹಳಷ್ಟು ಜನ ಈ ಬಗೆಯ ಕೃತಿಗಳನ್ನ ರಚಿಸಿದ್ದಾರೆ. 'ಕರ್ನಾಟಕ ಗಾಂಧಿ' ಹರ್ಡೇಕರ ಮಂಜಪ್ಪ ವರುಷಕ್ಕೆ ೧೬ರಂತೆ ಚಿಕ್ಕ ಚಿಕ್ಕ ಪುಸ್ತಕಗಳನ್ನು ತರುವ ಸಂಕಲ್ಪ ತೊಟ್ಟು ಐವತ್ತಕ್ಕೂ ಪುಸ್ತಕಗಳನ್ನು ತಂದರು. ಇವುಗಳಲ್ಲಿ ಜೀವನ ಚರಿತ್ರೆಗಳು, ವ್ಯಕ್ತಿ ಚಿತ್ರಗಳೇ ವಿಶೇಷವಾದವು. 'ಪುಲಿಕೇಶಿ ಚರಿತ್ರೆ', 'ಸುಗ್ಗಲಾದೇವಿಯ ಕತೆ', 'ಏಕಲವ್ಯನ ಕತೆ' ಜೀವನ ಚರಿತ್ರೆಗಳು, ಮುಂತಾಗಿ ಶೀರ್ಷಿಕೆಗಳಿರುವುದು ಕಂಡುಬರುತ್ತದೆ. ಎಸ್.ವಿ. ಶ್ರೀನಿವಾಸರಾವ್ ಅವರೂ 'ಕೆರೂರು ವಾಸುದೇವಾಚಾರ್ಯ', 'ಗಂಗರಾಜ ದುರ್ವಿನೀತ', 'ಅಬ್ದುಲ್ ಕಲಾಮ್ ಆಜಾದ್', 'ಗುರುನಾನಕ್' ಮೊದಲಾಗಿ ಕೃತಿಗಳನ್ನು ತಂದರು, ಡಾ. ನಿರುಪಮಾ ಅವರು ಹಲವಾರು ಜೀವನ ಚರಿತ್ರೆಗಳನ್ನ ರಚಿಸಿದರು. ಪ್ರಾರಂಭದ ದಿನಗಳಲ್ಲಿ ಈ ಬಗೆಯ ಮನಃಸ್ಥಿತಿಗಳೇ ಎಲ್ಲೆಡೆ ವಿಶೇಷವಾಗಿ ಕಾಣಿಸಿದ್ದರಿಂದ ಇಂಥ ಸಾಹಿತ್ಯ ವಿಪುಲವಾಗಿದ್ದುದರಲ್ಲಿ ಅಚ್ಚರಿ ಇಲ್ಲ. ಇದರೊಂದಿಗೆ ರಾಮಾಯಣ, ಮಹಾಭಾರತಗಳನ್ನ ಆಧರಿಸಿದ ಅನೇಕ ಕೃತಿಗಳನ್ನು ಸರಳವಾಗಿ, ಸಂಗ್ರಹವಾಗಿ ನೀಡಿದುದೂ ಕಂಡುಬರುತ್ತದೆ. ಇದರೊಟ್ಟಿಗೆ ಪಂಚತಂತ್ರ, ಹಿತೋಪದೇಶ, ಬೃಹತ್ಕಥೆಗಳಂಥ ಆಕರಗಳಿಂದ ಅನೇಕ ಕೃತಿಗಳನ್ನ ರಚಿಸಲಾಯಿತು. ಅರೇಬಿಯನ್ ನೈಟ್ಸ್, ಬೀರಬಲ್ಲನ ಚಾತುರ್ಯದ ಕಥೆಗಳು, ತೆನಾಲಿ ರಾಮಕೃಷ್ಣನ ವಿನೋದ ಪ್ರಸಂಗಗಳು ಇವು ಕೂಡ ಕಾಣಿಸಿಕೊಂಡುವು. ಇವುಗಳ ಕುರಿತ ಸರಿಯಾದ ದಾಖಲೆ ಸಿಗುವುದೇ ದುಸ್ತರ. ಬಾಲಮಿತ್ರ ಕಾವ್ಯನಾಮದ ಬಾದಾಮಿ ಕೃಷ್ಣರಾಯರ 'ಬಾಲರಾಮಾಯಣ', 'ಬಾಲಭಾರತ' ಗಮನಾರ್ಹವಾದುವು.

ಮಕ್ಕಳ ಸಾಹಿತ್ಯದಲ್ಲಿ ಹರಿದ ಹೊಸ ಸಂವೇದನೆ

ಡಾ. ಬಸು ಬೇವಿನಗಿಡದ

ಬಾಲ್ಯಕ್ಕೆ ವಿದಾಯ ಹೇಳಿದವನು ಸಾಹಿತಿಯಾಗಲಾರ ಎಂಬ ಮಾತಿದೆ. ಅಂದರೆ ಬಾಲ್ಯದ ಅನುಭವಗಳನ್ನು ಅಭಿವ್ಯಕ್ತಗೊಳಿಸುವ ಕಲೆ ಗೊತ್ತಿರುವವರಿಗೆ ಸಾಹಿತ್ಯ ನೀರು ಕುಡಿದಷ್ಟು ಸುಲಭವಾಗುತ್ತದೆ. ಬಾಲ್ಯ, ಕೌಮಾರ್ಯ, ತರುಣಾವಸ್ಥೆ, ಮುಪ್ಪು ಮುಂತಾದ ಮನುಷ್ಯನ ಬದುಕಿನ ಅವಸ್ಥೆಗಳಲ್ಲಿ ಬಾಲ್ಯದ ನೆನಪುಗಳಿಗೆ ಮಹತ್ವದ ಸ್ಥಾನವಿದೆ. ಕಿಶೋರಾವಸ್ಥೆಯ ಆಟ, ಅಳು, ನಗು, ನಲಿವು, ವಿಸ್ಮಯ, ವಿನೋದ, ಅಚ್ಚರಿ, ಆಘಾತಗಳು ಒಂದು ಲೋಕವನ್ನೆ ಸೃಷ್ಟಿಮಾಡುತ್ತವೆ. ಅದಕ್ಕಾಗಿಯೇ ಈ ಮಕ್ಕಳ ಲೋಕವನ್ನು ವಿಶಿಷ್ಟ ಬಗೆಯಲ್ಲಿ ಹಿಡಿದಿಡಬೇಕಾಗುತ್ತದೆ. ಮಕ್ಕಳಿಗೆ ತೆರೆದಿಡಬೇಕಾಗುತ್ತದೆ. ಮಕ್ಕಳು ಓದಿಗೆ ತೆರೆದುಕೊಳ್ಳಬೇಕಾದ ಸಂದರ್ಭಗಳು ಬಹಳಷ್ಟು ಸೂಕ್ಷ್ಮವೂ ಭಾವನಾತ್ಮಕವೂ ವಿಸ್ಮಯಕಾರಿಯೂ ಆಗಿರುವುದರಿಂದ ಅವರಿಗೆ ಇಷ್ಟವಾಗುವ ಹಾಗೆ ತೆರೆದುಕೊಳ್ಳುವುದು ಒಂದು ರೀತಿಯಲ್ಲಿ ಸವಾಲಿನ ಕೆಲಸವಾಗಿದೆ. ಮಕ್ಕಳ ಮನೋಲೋಕವನ್ನು ಹಲವು ಬಗೆಗಳಿಂದ ಹಲವು ಬಣ್ಣಗಳಿಂದ ತುಂಬಬೇಕಾಗುತ್ತದೆ. ಚಿಣ್ಣರ ಆಲೋಚನೆಗಳನ್ನು ಪ್ರಚೋದಿಸುವ, ಅವರ ಆಸಕ್ತಿಗಳನ್ನು ಕೆರಳಿಸುವ, ಅವರ ಅಪೇಕ್ಷೆಗಳನ್ನು ಈಡೇರಿಸುವ, ಅವರ ಹಕ್ಕುಗಳನ್ನು ಮನ್ನಿಸುವ ಬರವಣಿಗೆ ಹಿರಿಯರ ಸಾಹಿತ್ಯಕ್ಕಿಂತ ಭಿನ್ನವಾದ ಆಕೃತಿ ಆಕಾರಗಳನ್ನು ಬೇಡುತ್ತದೆ; ವಿಶಿಷ್ಟ ರೂಪ–ಪ್ರಭೇದಗಳನ್ನು ಹುಡುಕಿಕೊಂಡು ಹೋಗುತ್ತದೆ. ಮಕ್ಕಳ ವಯೋಮಾನಕ್ಕೆ ಹಿಡಿಸುವ ಸಂಗತಿಗಳನ್ನು ಕೃಷಿ ಮಾಡಲು ವಿಶಿಷ್ಟ ಸಾಗುವಳಿ ಪದ್ಧತಿಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಆದರೆ ಈ ಸಂಗತಿಗಳು ಸತತವಾಗಿ ಪ್ರಯೋಗಕ್ಕೆ ಒಳಗಾಗುವಂಥವು. ಅದಕ್ಕಾಗಿ ಇದೇ ಮಾದರಿಯೆಂದು, ಅದೇ ರೂಪವೆಂದು ಶಾಶ್ವತ ಪಟ್ಟಿಯನ್ನು ಕೊಡಲಾಗುವುದಿಲ್ಲ. ಹಾಗಾಗಿ ನವೋದಯ ಕಾಲದಲ್ಲಿದ್ದ ಮಕ್ಕಳ ಸಾಹಿತ್ಯದ ರೂಪ–ಮಾದರಿಗಳು ವಸ್ತು–ವಿನ್ಯಾಸದ ದೃಷ್ಟಿಯಿಂದ ಯಾವ ಬದಲಾವಣೆಗಳನ್ನು ತಳೆದಿವೆ, ಯಾವ ರೂಪಾಂತರಗಳಲ್ಲಿ ಹಾಯ್ದು ಬಂದಿವೆ, ಯಾವ ಅವಸ್ಥೆಗಳನ್ನು ದಾಟಿಕೊಂಡು ಬಂದಿವೆ ಎಂಬುದು ಅವಲೋಕನಕ್ಕೆ ಒಳಗಾಗಬೇಕಾಗಿದೆ. ಹೊಸ ಮಾದರಿಗಳು ಕಿಶೋರರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿವೆಯೆ, ಯಶಸ್ವಿಯಾಗಿದ್ದರೆ ಅವು ತುಳಿದ ಹಾದಿ ಎಂಥದು ಎಂಬುದು ಕೂಡ ವಿಮರ್ಶೆಗೆ ಒಳಪಡಬೇಕಾದ ವಿಚಾರ.

ರಮಣೀಯ ವಿಚಾರ, ನಾನಾ ಭಾವಗಳ ಸಮೃದ್ಧಿ, ರಮ್ಯ ವಾತಾವರಣ ಮತ್ತು ವಿನೋದ ಪ್ರಸಂಗಗಳನ್ನು ಸೃಷ್ಟಿಸುವಲ್ಲಿ ಕುವೆಂಪು, ದಿನಕರ ದೇಸಾಯಿ, ಹೊಯಿಸಳ, ಮೇವುಂಡಿ

ಮಲ್ಲಾರಿ, ಜಿ. ಪಿ. ರಾಜರತ್ನಂ ಮುಂತಾದ ಹಿರಿಯರು ಒಂದು ಪರಂಪರೆಯನ್ನು ಹುಟ್ಟು ಹಾಕಿದರು. ಕುವೆಂಪು ಬಾಲ್ಯವನ್ನು ಒಂದು ಅನುಭೂತಿಯ ಸ್ಥಿತಿಯೇನೋ ಎನ್ನುವಂತೆ ಬಣ್ಣಿಸುವರು. 'ದೇವರ ಪೆಪ್ಪರಮೆಂಟೆ ನಮ್ಮ ಗಗನದೊಳಲೆಯುವ ಚಂದಿರನು' ಎನ್ನುವ ಸಾರ್ವಕಾಲಿಕ ಪ್ರತಿಮೆಯೊಂದನ್ನು ಕೊಡುವ ಮೂಲಕ ಕುವೆಂಪು ಅವರು ಕನ್ನಡ ಮಕ್ಕಳ ಸಾಹಿತ್ಯದ ದಿಶೆಗಳನ್ನು ವಿಸ್ತರಿಸಿದರು. ಸುಂದರವಾದ ಹಾಗೂ ಮನೋಹರವಾದ ಸಂಗತಿಗಳನ್ನು ಮಕ್ಕಳ ಮನಸ್ಸಿಗೆ ತಟ್ಟುವಂತೆ ಅವರಂತೆ ಚಿತ್ರಿಸಿದವರಿಲ್ಲ. ತಮ್ಮ ದೇಶ ಕಾಲದ ಅನುಭವಗಳನ್ನು ರಮ್ಯ ಹಾಗೂ ಭಾವನಾಪೂರ್ಣ ಶೈಲಿಯಲ್ಲಿ ಅವರು ತೆರೆದಿಟ್ಟರು. ಕಲ್ಪನಾಶೀಲ ಅಭಿವ್ಯಕ್ತಿಯ ಮೂಲಕ ಮಕ್ಕಳ ಸಾಹಿತ್ಯದಲ್ಲಿಯೂ ತಾವು ನಂಬಿದ್ದ ವೈಚಾರಿಕ ಹಾಗೂ ಆಧ್ಯಾತ್ಮಿಕ ಸೆಳಕುಗಳನ್ನು ನೆಯ್ದರು.

ಮುಗ್ಧತೆ, ವಿಸ್ಮಯ, ವಾತ್ಸಲ್ಯ, ಅಕ್ಕರೆ ಮುಂತಾದ ಮೌಲ್ಯಗಳು ಇಲ್ಲಿ ಹರಳುಗಟ್ಟಿ ನಿಂತಿವೆ. ಸ್ವಾತಂತ್ರ್ಯದ ಲಹರಿ ಉಚ್ಚ ಸ್ವರದಲ್ಲಿ ಕೇಳಿಸುವುದು.

ಎಲೆಗಳಲಿ ಕುಣಿಯುತ್ತ
ಸುಮಗಳಲ್ಲಿ ನಲಿಯುತ್ತ
ತೊರೆಗಳಲಿ ಗಳಪುತ್ತ
ಇಳೆಯ ಮೋಹಿಸುವರಾ
ಲಲಿತ ಬಾಲಕರು
ಉಕ್ಕುವ ತಳಿರಾಗಿ
ಹಕ್ಕಿಯಿಂಚರವಾಗಿ
ಬಗೆಬಗೆಯ ಲೀಲೆಯಲಿ
ಚಿಗಿದು ತುಂಬುವರಿಳೆಯ
ಮುಗಿಲ ಬಾಲಕರು

ದೇವಲೋಕದ ಮಕ್ಕಳೇ ಇಲ್ಲಿಗೆ ಬಂದು ಈ ಭೂಮಿಯನ್ನು ನಂದನವನವನ್ನಾಗಿ ಮಾಡಿದ್ದಾರೆಂದು ಅನ್ನಿಸುವ ಭಾವ ಕೆಲವಡೆ ವ್ಯಕ್ತವಾದರೆ ಇನ್ನು ಕೆಲವು ಕಡೆ ದೇವಲೋಕ ಮತ್ತು ಮರ್ತ್ಯಲೋಕದ ನಡುವೆ ಸೇತುವೆ ಕಟ್ಟಲು ಬಂದ ಒಲವಿನ ಹೂವುಗಳು ಮಕ್ಕಳು ಎಂಬ ಭಾವವನ್ನು ಕುವೆಂಪು ವ್ಯಕ್ತಪಡಿಸುತ್ತಾರೆ.

ಮೇಗಡೆ ಸಗ್ಗವು, ಕೆಳಗಡೆ ಭೂಮಿಯು
ಇಬ್ಬರ ನಂಟರು ನಾವಮ್ಮಾ!
ದಿವಿಜರ ಒಲ್ಮೆಗೆ ಮನುಜರ ಒಲ್ಮೆಗೆ
ಮೇರೆಗಳೆಪ್ಪೆವು ನಾವಮ್ಮಾ !

'The Pied Piper of Hamelin' ದೀರ್ಘ ಕವಿತೆಯ ಅನುವಾದ 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಕನ್ನಡ ನವೋದಯದ ಮತ್ತೊಂದು ಮೈಲಿಗಲ್ಲು. ನಮ್ಮ ಸಾಮಾಜಿಕ ಹಾಗೂ ಮನೋವೈಜ್ಞಾನಿಕ ಪರಿಸರದಲ್ಲಿಯೇ ಸಂಭವಿಸಿರಬಹುದೇನೋ ಎಂಬಂತೆ ಕುವೆಂಪು ಇದನ್ನು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಕುವೆಂಪು ಅವರ ಸಾಮಾಜಿಕ ಕಾಳಜಿ ಅಲ್ಲಲ್ಲಿ ಈ ಕಾವ್ಯದಲ್ಲಿ ಹಣಿಕಿ ಹಾಕುತ್ತದೆ.

ಕುವೆಂಪು ಅವರ ಭಾವನಾಶೀಲ, ಕಲ್ಪನಾಶೀಲ ಸಾಹಿತ್ಯ ಮಕ್ಕಳ ನವೋದಯವನ್ನು ಒಂದೆಡೆ ರೂಪಿಸಿದರೆ ಜಿ. ಪಿ. ರಾಜರತ್ನಂ ಅವರ ವಿನೋದಶೀಲ ಹಾಗೂ ನಾದಮಯ ಪದ್ಯಗಳು ಮತ್ತೊಂದು ನೆಲೆಯನ್ನು ಒದಗಿಸಿಕೊಟ್ಟವು.

'ಮಕ್ಕಳು ನಾದಪ್ರಿಯರು. ಕೇಳಿದ ವರ್ಣಗಳನ್ನು, ಕೇಳಿದ ಪದಗಳನ್ನು, ಕೇಳಿದ ಪಂಕ್ತಿಗಳನ್ನು ಪುನಃ ಪುನಃ ಕೇಳುತ್ತಿದ್ದರೆ ಅವರಿಗೆ ಸಂತೋಷ. ಇಲ್ಲಿನ ತಕಿಟ ತಕಿಟ ಥೈ, ಬೈರನ ಕುಣಿತ, ರೊಟ್ಟಿಯಂಗಡಿ ಕಿಟ್ಟಪ್ಪ... ಇವುಗಳಲ್ಲಿ ಬಹುಪಾಲು ಶಿಶುವಿಹಾರದ ಮಕ್ಕಳಿಗಾಗಿ ಬರೆದುವು... ನೀತಿ ಎಂಬ ಮಾರ್ಗದರ್ಶನ ಸಣ್ಣವರಿಗೂ ಬೇಕು. ದೊಡ್ಡವರಿಗೂ ಬೇಕು. ಇಲ್ಲಿರುವ ಪದ್ಯಕತೆಗಳಲ್ಲಿ ಒಂದಲ್ಲ ಒಂದು ನೀತಿ ನವುರಾಗಿ ಸೇರಿ ಮಕ್ಕಳ ಮನಸ್ಸನ್ನು ಮುಟ್ಟುತ್ತದೆ.'

ಮಕ್ಕಳ ಸಾಹಿತ್ಯವನ್ನು ಕುರಿತು ಅವರು ಸಾಕಷ್ಟು ಚಿಂತಿಸಿರುವುದು, ಇಂಗ್ಲಿಷ ಸೇರಿದಂತೆ ಇತರ ಭಾಷೆಗಳ ಪ್ರಭಾವಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಮಕ್ಕಳ ಪದ್ಯಗಳಲ್ಲಿ ಲವಲವಿಕೆ, ನಾಟಕೀಯ ಮಾತು, ವಿನೋದ, ಉಲ್ಲಾಸ, ಹಾಡು, ಕುಣಿತಗಳನ್ನು ತಂದ ಶ್ರೇಯಸ್ಸು ಅವರಿಗೆ ಸಲ್ಲಬೇಕು.

೧. ಪುಟಾಣಿ ಕೃಷ್ಣ!
ಪುಟ್ಟ ಪುಟ್ಟ ಅಂಗೈ!
ಭಲಾರೆಗಡಿಗೆ
ದೊಡ್ಡ ಬೆಣ್ಣೆ ಮುದ್ದೆ!
ತೆಗೆದಾ–ಮುಕ್ಕಿದಾ!
ತೆಗೆದಾ–ನೆಕ್ಕಿದ!

೨. ಹತ್ತು ಹತ್ತು ಇಪ್ಪತ್ತು
ತೋಟಕೆ ಹೋದನು ಸಂಪತ್ತು

ಹಾಸ್ಯ ಸಂಗತಿಗಳನ್ನು ಕಲ್ಪನೆಯಲ್ಲಿ ಹೇಗೆ ಬೆರೆಸಬೇಕೆಂಬುದು ಜಿ. ಪಿ. ರಾಜರತ್ನಂ ಅವರಿಗೆ ಗೊತ್ತಿತ್ತು;

ದೊಡ್ಡ ಪಟ್ಟೆ ಹುಲಿ
ಕಾಡುದಾರಿಯಲಿ
ನಡುಗಿ ನಿಂತು
ಹೇಳಿತಿಂತು
ಅಯ್ಯೋ! ಅಪ್ಪ! ಚಳಿ

ರಂಗವಲ್ಲಿ ಇಕ್ಕುತಾರೆ
ಪುಟ್ಟು ಪದ್ದು ಶಾರದೆ
ಮಕ್ಕಳಾಟ ಎಷ್ಟು ಚೆಂದ
ಬಂದು ನೋಡಬಾರದೆ?

ಸಮಾನತೆಯ ಹಂಬಲ, ಸಾಮಾಜಿಕ ಕಾಳಜಿ, ಮಾನವೀಯ ಸಂವೇದನೆ ಮುಂತಾದವು

ದಿನಕರ ದೇಸಾಯಿ ಅವರಲ್ಲಿ ಕಾಣಿಸಿಕೊಂಡವು. ಮಕ್ಕಳ ವಯೋಮಾನ, ಅವರ ಅರಿವಿನ ಸಾಧ್ಯತೆ, ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ರಾಜರತ್ನಂ ಸಾಹಿತ್ಯ ರಚಿಸಿದರು. ತಮ್ಮ ಹಿಂದಿನ ಶಿಷ್ಟತೆಯನ್ನು ಬದಿಗೊತ್ತಿ ಆಡುಭಾಷೆಯನ್ನು, ನುಡಿಗಟ್ಟುಗಳನ್ನು, ಅವರು ಯಥೇಚ್ಛವಾಗಿ ಬಳಸಿ ಮಕ್ಕಳ ಕಾವ್ಯಕ್ಕೆ ಅಗತ್ಯವಾಗಿದ್ದ ಲಯವನ್ನು ತಂದುಕೊಟ್ಟರು. ಅಂದರೆ ರಾಜರತ್ನಂ ಅಭಿವ್ಯಕ್ತಿಗಾಗಿ ಹೊಸ ಹೊಸ ಪ್ರಯೋಗಗಳನ್ನು ನಡೆಸಿದರು. ಇಂದಿನ ಮಕ್ಕಳ ಕಾವ್ಯದಲ್ಲಿ ಕಾಣಸಿಗುವ ಭಾಷೆಯ ಸರಳತೆ, ಸರಳ ಛಂದಸ್ಸು, ಆಡುನುಡಿ ಮುಂತಾದವುಗಳ ಬಳಕೆಯನ್ನು ನವೋದಯದ ಕೆಲ ಹಿರಿಯರು ಆರಂಭಿಸಿದರು. ವಿಪರ್ಯಾಸವೆಂದರೆ ನವೋದಯದ ನಂತರ ಬಂದ ಲೇಖಕರು ಮಕ್ಕಳ ಬರವಣಿಗೆಯನ್ನು ಅಲಕ್ಷ್ಯ ಮಾಡಿದ್ದರ ಪರಿಣಾಮವೆಂಬಂತೆ ಆ ಪ್ರಯೋಗಗಳಿಗೆ ಹೊಸ ಧ್ವನಿ, ಹೊಸ ನೆಲೆಗಳು ಸಿಗಲಿಲ್ಲ. ಆದರೆ ಈ ಸಂಕಷ್ಟದ ಸಮಯದಲ್ಲಿ ಮಕ್ಕಳ ಸಾಹಿತ್ಯದ ಬಂಡಿಯನ್ನು ನಿಲ್ಲದಂತೆ ಎಳೆದವರು ಮಾಸ್ತರುಗಳು. ಅದರಲ್ಲಿಯೂ ವಿಜಾಪುರ ಭಾಗದ ಪ್ರಾಥಮಿಕ ಶಾಲಾ ಶಿಕ್ಷಕರು ಸಿಸು ಸಂಗಮೇಶ ಅವರ ಮುಂದಾಳತ್ವದಲ್ಲಿ ಮಕ್ಕಳ ಬರವಣಿಗೆಯನ್ನು ಜೀವಂತವಾಗಿಟ್ಟರು. ಹೊಸ ಹೊಸ ಜನರನ್ನು ಬರೆಯಲು ಪ್ರೇರೇಪಿಸಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಮಕ್ಕಳ ಸಾಹಿತ್ಯ ಕುರಿತು ವ್ಯಾಪಕವಾದ ಕೆಲಸ ನಡೆಯಿತು. ಮಕ್ಕಳ ಸಾಹಿತ್ಯ ಕುರಿತು ನಾಡವರಲ್ಲಿ ಹಾಗೂ ಹಿರಿಯ ಸಾಹಿತಿಗಳಲ್ಲಿ ಜಾಗೃತಿಯನ್ನು ಮೂಡಿಸುವುದು ಸೇರಿದಂತೆ ಸಾಹಿತ್ಯ ಸಂಘಟನೆ, ಪುಸ್ತಕ ಪ್ರಕಟನೆ, ಸಾಹಿತ್ಯ ಸಮ್ಮೇಳನದ ಆಯೋಜನೆ, ವಿಚಾರ ಸಂಕಿರಣ ಮುಂತಾದ ಕೆಲಸಗಳನ್ನು ಈ ಶಿಕ್ಷಕ ಸಮೂಹ ಮಾಡಿತು.

'ಪುಟಚೆಂಡು ಭಾಗ–೧' ಮತ್ತು 'ಪುಟಚೆಂಡು ಭಾಗ–೨' ಎನ್ನುವ ಆಯ್ದ ಮಕ್ಕಳ ಕವಿತೆಗಳನ್ನು ತಮ್ಮ 'ಭಾರತಿ ಸಾಹಿತ್ಯ ಭಂಡಾರ'ದ ಮೂಲಕ ೧೯೫೫ ರಲ್ಲಿ ಪ್ರಕಟಿಸುವ ಮೂಲಕ ನವ್ಯ ಸಾಹಿತ್ಯದ ನೆರಳಿನಲ್ಲಿ ಅವಮಾನ ಮತ್ತು ಅಲಕ್ಷ್ಯಕ್ಕೆ ತುತ್ತಾಗಿದ್ದ ಬಾಲ ಸಾಹಿತ್ಯಕ್ಕೆ ಸಿಸು ಸಂಗಮೇಶರು ಬೆಳಕು ಹಿಡಿದರು. 'ಪುಟಚೆಂಡು' ಸಂಗ್ರಹದಲ್ಲಿ ಬೇಂದ್ರೆ, ಕುವೆಂಪು, ಈಶ್ವರ ಸಣಕಲ್ ಮುಂತಾದ ಖ್ಯಾತನಾಮರ ಕವಿತೆಗಳಿರುವುದು ವಿಶೇಷವಾಗಿದೆ. ಕಳೆದ ಶತಮಾನದ ಅರವತ್ತು ಮತ್ತು ಎಪ್ಪತ್ತರ ದಶಕಗಳಲ್ಲಿ ಮಕ್ಕಳ ಕಥೆಗಳನ್ನು ಬರೆಯುವ ಮೂಲಕ ಅನೇಕ ಸಂಗ್ರಹಗಳನ್ನು ಪ್ರಕಟಿಸುವ ಮೂಲಕ ಸಿಸು ಸಂಗಮೇಶ ಓದುವ ಮಕ್ಕಳ ಹಂಬಲವನ್ನು ತಣಿಸಿದರು. 'ನರಿಯ ಫಜೀತಿ', 'ಮೊಲದ ಮೂಗು ಮೊಂಡಾಯಿತು' ಮುಂತಾದ ಅವರ ಸಂಗ್ರಹಗಳು ಸ್ವಾರಸ್ಯಕರವಾಗಿ ಓದಿಸಿಕೊಂಡು ಹೋಗುತ್ತವೆ. 'ಸವಿ ಸಾಹಿತ್ಯ' 'ಚಕ್ಕು ಚೌಕಳಿ' ಯಂತಹ ಕವನ ಸಂಕಲನಗಳಲ್ಲಿ ಅವರ ಕವಿತೆಯ ವೈಶಿಷ್ಟ್ಯಗಳನ್ನು ಕಾಣಬಹುದು.

ಇರುವೆ ಇರುವೆ ಕರಿಯ ಇರುವೆ
ನಾನು ಜೊತೆಗೆ ಬರುವೆ
ಆಡಲಿಕ್ಕೆ ಅಮ್ಮನಿಂದ
ಕರಣಿ ಬೆಲ್ಲತರುವೆ

ಇರುವೆ, ನಾಯಿಮರಿ, ಜೇನುಹುಳ, ಕೋಗಿಲೆ ಮುಂತಾದವುಗಳ ಸುತ್ತ ಅವರ ಕವಿತೆ ಕಟ್ಟಿಕೊಳ್ಳುತ್ತದೆ. ಪ್ರಾಣಿ ಮತ್ತು ಪಕ್ಷಿಲೋಕದ ಸುತ್ತ ಅವರ ಬರವಣಿಗೆ ಚಾಚಿಕೊಂಡಿದೆ.

ಪಳಕಳ ಸೀತಾರಾಮಭಟ್ಟ, ಕಂಚ್ಯಾಣಿ ಶರಣಪ್ಪ, ಶಂಗು ಬಿರಾದಾರ, ಈಶ್ವರಚಂದ್ರ ಚಿಂತಾಮಣಿ, ಪ.ಗು. ಸಿದ್ದಾಪುರ, ಜಂಬುನಾಥ ಕಂಚ್ಯಾಣಿ ಮುಂತಾದ ಹಿರಿಯರು ಈ ಅವಧಿಯಲ್ಲಿ ಸಾಕಷ್ಟು ಕೆಲಸ ಮಾಡಿದರು. ಆದರೆ ಏಕತಾನತೆ ಹಾಗೂ ಅಧ್ಯಯನದ ಕೊರತೆಗಳು ಅವರ ಸೃಷ್ಟಿಯಲ್ಲಿ ಹೊಸತನ್ನು ತರಲು ಅಡ್ಡಿಯಾದವು. ಅಪಾರ ಕಾಳಜಿ, ಅವಿರತ ಶ್ರಮ, ಮಕ್ಕಳಿಗಾಗಿ ತುಡಿಯುವ ಮನಸ್ಸುಗಳು ಮಕ್ಕಳ ಸಾಹಿತ್ಯದ ಬರವಣಿಗೆಯನ್ನು ಜೀವಂತಿಕೆಯಲ್ಲಿ ಇಟ್ಟಿದ್ದರ ಪರಿಣಾಮವೆಂಬಂತೆ ಎಪ್ಪತ್ತರ ದಶಕದಲ್ಲಿ ಹೊಸ ಗಾಳಿ ಬೀಸಿತು. ಇದುವರೆಗೆ ಕೇವಲ ಶಿಕ್ಷಕರು ಮಾತ್ರ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡು ತಮ್ಮ ಅನುಭವಗಳನ್ನು ಹೇಳಿದ್ದರು. ಹೊಸ ಕಾಲದಲ್ಲಿ ವಿವಿಧ ವೃತ್ತಿಗಳ ಎಲ್ಲ ಸ್ತರಗಳ ಲೇಖಕರು ತಮ್ಮ ಅನುಭವ ಸಾರವನ್ನು ಮಕ್ಕಳಿಗೆ ಹೇಳಲು ಆರಂಭಿಸಿದ್ದರಿಂದ ಮಕ್ಕಳ ಸಾಹಿತ್ಯಕ್ಕೆ ಹಿಂದೆ ಕಾಣಿಸಿಕೊಳ್ಳದಿದ್ದ ಬಹುತ್ವ ದಕ್ಕಿದಂತಾಯಿತು. ಬರೀ ಬಹುತ್ವ ದಕ್ಕುವುದಷ್ಟೇ ಅಲ್ಲ, ಹೊಸ ಅನುಭವ ನೆಲೆಗಳು ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವಂತಾಯಿತು. ನವೋದಯದಲ್ಲಿದ್ದಂತೆ ಹಿರಿಯರ ಲೇಖಕರು ಮತ್ತೆ ಬಾಲ ಸಾಹಿತ್ಯದ ಕಡೆ ತಮ್ಮ ಗಮನ ಹರಿಸಿದ್ದರಿಂದ ಹೊಸ ಪ್ರಯೋಗ ಹಾಗೂ ವೈಚಾರಿಕ ನೆಲೆಗಳಿಗೆ ಆಸ್ಪದ ಸಿಕ್ಕಂತಾಯಿತು. ಆಡುಭಾಷೆ, ಸಂಭಾಷಣೆ, ವಿನೋದಪ್ರಜ್ಞೆ, ಸಾಮಾಜಿಕ ಕಾಳಜಿ, ಕಲ್ಪನಾಶೀಲತೆ, ಸರಳತೆ ಹಾಗೂ ಮಕ್ಕಳ ಮನೋವೈಜ್ಞಾನಿಕ ಸಂಗತಿಗಳು ಈಗ ಅಭಿವ್ಯಕ್ತಗೊಳ್ಳತೊಡಗಿದವು. ನಾ. ಡಿಸೋಜ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಸುಮತೀಂದ್ರ ನಾಡಿಗ, ಕೆ.ವಿ. ತಿರುಮಲೇಶ, ಆನಂದ ಪಾಟೀಲ, ಶ್ರೀನಿವಾಸ ಉಡುಪ, ಚಿಂತಾಮಣಿ ಕೊಡ್ಲೆಕೆರೆ, ರಾಧೇಶ್ ತೋಳ್ಪಾಡಿ, ಕೃಷ್ಣಮೂರ್ತಿ ಬಿಳಿಗೆರೆ, ವಿಜಯಶ್ರೀ ಹಾಲಾಡಿ, ಗಿರೀಶ್ ಜಕಾಪುರೆ, ತಮ್ಮಣ್ಣ ಬೀಗಾರ, ರಾಜಶೇಖರ ಕುಕ್ಕುಂದ ಮುಂತಾದ ಲೇಖಕರು ತಮ್ಮ ಹೊಸ ಪ್ರಯೋಗಗಳ ಮೂಲಕ ಕನ್ನಡ ಮಕ್ಕಳ ಸಾಹಿತ್ಯ ಲೋಕ ಹೊಸ ಆಳ, ವಿಸ್ತಾರಗಳನ್ನು ಕಂಡುಕೊಳ್ಳಲು ಕಾರಣರಾಗಿದ್ದಾರೆ. ಹೊಸ ಲೇಖಕರ ವಿಶಿಷ್ಟತೆ, ಲಕ್ಷಣಗಳನ್ನು ಈ ರೀತಿ ಗುರುತಿಸಬಹುದು.

೧. ಈ ಮೊದಲಿನ ಕೃತಿಗಳಲ್ಲಿ ಮಕ್ಕಳಿಗಾಗಿಯೇ ಎಂದು ಒಂದು ಲೋಕವನ್ನು ಗುರುತಿಸಲಾಗುತ್ತಿತ್ತು. ಒಂದು ಬಗೆಯ ಅಂತರದಲ್ಲಿ ಅವರನ್ನು ಕಾಣಲಾಗುತ್ತಿತ್ತು. ಅವರಿಗಾಗಿ ಹಿರಿಯರು ಹರಿಸುವ ದೃಷ್ಟಿಕೋನ ಕೃತಕವೂ ಆದರ್ಶಗಳಿಂದ ತುಂಬಿದುದೂ ಆಗಿರುತ್ತಿತ್ತು. ಹೊಸ ಬರಹಗಳು ಈ ಅಂತರವನ್ನು ಹಾಗೂ ಮಡಿವಂತಿಕೆಯ ಭಾವವನ್ನು ಹೊಡೆದುಹಾಕಿದವು.

೨. ಭಾಷೆಯ ಬಳಕೆ ಒಮ್ಮಿಂದೊಮ್ಮೆಲೆ ಸ್ಥಿತ್ಯಂತರಗಳನ್ನು ಕಂಡಿತು. ಜಡವಾಗುತ್ತ ಬಂದ ಭಾಷೆ ಹೊಸ ರೂಪಕ ಮತ್ತು ಪ್ರತಿಮೆಗಳ ಹುಡುಕಾಟದಲ್ಲಿತ್ತು. ಈ ಬರಹಗಾರರು ಆ ತುಡಿತವನ್ನು ಅರ್ಥೈಸಿಕೊಂಡರು. ಭಾಷೆಯ ಒಂದು ಸ್ಥಿತಿಯು ಹೋಗಿ ಮತ್ತೊಂದು ಸ್ಥಿತಿಯು ಬರಬೇಕಾದರೆ ಸಾಕಷ್ಟು ಸಿದ್ಧತೆಗಳು ಆ ಭಾಷೆಯ ಒಳಗೆ ಸದ್ದಿಲ್ಲದೆ ನಡೆದಿರುತ್ತವೆ. ಭಾಷೆ, ಲಯಗಳನ್ನು ಮುರಿದುಕಟ್ಟುವ, ಆಶಯಗಳನ್ನು ಹಿಗ್ಗಿಸುವ, ದಿಗಂತಗಳನ್ನು ವಿಸ್ತರಿಸುವ ಕೆಲಸ ಹೊಸ ಕಾಲದಲ್ಲಿ ನಡೆಯಿತು. ಮಕ್ಕಳಿಗಾಗಿ ಹೊಸ ನುಡಿಗಟ್ಟು ಪ್ರಾಪ್ತವಾದದ್ದು ಕನ್ನಡಕ್ಕೆ ದಕ್ಕಿದ ಒಂದು ವಿಶಿಷ್ಟತೆ ಎನ್ನಬಹುದು. ಕತೆ, ಕವಿತೆ, ನಾಟಕಗಳು ಈ ದಿಶೆಯಲ್ಲಿ ಕಾಣಿಸಿಕೊಂಡವು.

೩. ಮಕ್ಕಳ ಸಾಹಿತ್ಯದ ಹರಿವಿಗೆ ತೀವ್ರತೆಯ ಗತಿ ಸಿಕ್ಕಿತು. ಉತ್ಕಟವಾಗಿ, ಗಾಢವಾಗಿ ತಮ್ಮ ಇಂಗಿತ–ಇರಾದೆಗಳನ್ನು ಲೇಖಕರು ತೋಡಿಕೊಂಡರು. ಶ್ರದ್ಧೆ ಮತ್ತು ಪ್ರಬಲವಾಗಿ ಕಾಡುವ ಗುಣಗಳು ಬಾಲ ಸಾಹಿತ್ಯಕ್ಕೆ ದಕ್ಕಿದವು. ಮುಖ್ಯ ವಾಹಿನಿಯಲ್ಲಿದ್ದ ಪ್ರಸಿದ್ಧ ಲೇಖಕರು ಮಕ್ಕಳಿಗಾಗಿ ಬರೆಯಲು ತೊಡಗಿದ್ದರಿಂದ ಇದುವರೆಗೆ ಶೋಧನೆಗೆ ಒಳಗಾಗಿರದಿದ್ದ, ಅಭಿವ್ಯಕ್ತಿಗೆ ದಕ್ಕದೆ ಹೋಗಿದ್ದ ಸಂಗತಿಗಳು ಈಗ ಕಾವ್ಯವಸ್ತುಗಳಾದವು.

೪. ಶಾಲೆಯ ಸೊತ್ತಾಗಿದ್ದ ಸಾಹಿತ್ಯ ಈಗ ಹೊರಗಿನ ವಾತಾವರಣದ ಅಭಿವ್ಯಕ್ತಿಯೊಡನೆ ನಳನಳಿಸತೊಡಗಿತು. ಕತೆ, ಕವಿತೆ, ನಾಟಕ ಈಗ ಭಿನ್ನ ಅನುಭವಗಳ ಕಥನವಾಗತೊಡಗಿತು. ಶಾಲಾ ಪ್ರತಿಮೆ, ಸಂಕೇತಗಳು ತುಂಬಿದ್ದ ಜಾಗದಲ್ಲಿ ಹೊಟೇಲು, ಗ್ಯಾರೇಜ್, ಟೇಲರ್ ಅಂಗಡಿ, ಬೀದಿ, ಬಸ್‌ಸ್ಟ್ಯಾಂಡ್, ಮನೆಯ ಅಟ್ಟ, ಹಿತ್ತಿಲು, ಗುಡ್ಡ, ಕಾಡು, ಕಣಿವೆ ತುಂಬಿಕೊಂಡವು. ಪದಪ್ರಯೋಗ, ಪದವಿನ್ಯಾಸ, ಉಕ್ತಿಯ ರೀತಿಗಳಲ್ಲಿ ಒಂದು ಬದಲಾವಣೆ ಕಾಣಿಸಿಕೊಂಡಿತು. ನಾಟಕೀಯತೆ, ತೀವ್ರತೆಗಳು ಹೆಚ್ಚು ಢಾಳಾಗಿ ತೋರ್ಪಡಿಸಿಕೊಂಡವು.

೫. ಮಕ್ಕಳ ಮನಸ್ಸಿನೊಳಗೆ ಇಣುಕಿ ನೋಡಿದ್ದು ಹೊಸ ಬರಹಗಾರ ಮತ್ತೊಂದು ವೈಶಿಷ್ಟ್ಯವಾಗಿತ್ತು. ಮಕ್ಕಳ ಮನಸ್ಸಿನೊಳಗಡೆ ನಡೆಯುವ ಸಂಗತಿಗಳ ಅನ್ವೇಷಣೆ ನಡೆಯತೊಡಗಿತು. ಅದರ ಜೊತೆಗೆ ಮಾನವೀಯ ನೆಲೆಗಳ ಹುಡುಕಾಟವೂ ನಡೆಯಿತು. ಸಮಾನತೆಯ ಭಾವ, ಸ್ವಾತಂತ್ರ್ಯದ ಆಶಯ, ವೈಯಕ್ತಿಕತೆಯ ಈಡೇರಿಕೆ ಮುಂತಾದ ಸಂವೇದನೆಗಳು ಮುನ್ನೆಲೆಗೆ ಬಂದವು.

೬. ಹದಿಹರೆಯಕ್ಕೇ ಸಂಬಂಧಿಸಿ ನಡೆಯುವ ಮಾತುಕತೆ, ಪ್ರೇಮದ ಸೆಳಕು, ಹುಸಿಪ್ರೇಮ ಮುಂತಾದವುಗಳು ಅಸ್ಪಷ್ಟವಾಗಿಯಾದರೂ ಕಾಣಿಸಿಕೊಳ್ಳತೊಡಗಿದವು.

೭. ಬಾಲ ಕಾರ್ಮಿಕರು, ಮನೆಯಲ್ಲಿನ ಜಗಳ, ಸಂಬಂಧಿಕರು ತೋರುವ ಅಸಡ್ಡೆ, ಕೆಲವು ಕಡೆ ಅನುಭವಿಸುವ ಅಪಮಾನ ಈಗ ಬೆಳಕಿಗೆ ಬರತೊಡಗಿದವು

೮. ರಮ್ಯದಿಂದ ವಾಸ್ತವದ ಕಡೆಗೆ ಬರವಣಿಗೆಯ ಲಕ್ಷ್ಯ ಬರತೊಡಗಿ, ಕಥೆ, ಕವಿತೆ, ನಾಟಕಗಳು ಈಗ ರಮ್ಯವಾದ, ಆದರ್ಶವಾದ, ಕಲ್ಪನಾಜಗತ್ತನ್ನು ಬಿಟ್ಟು ವಾಸ್ತವದ ಹಸಿ ಅನುಭವಗಳನ್ನು ತೆರೆದಿಡುವಲ್ಲಿ ಪ್ರಯತ್ನ ಮಾಡಿದವು.

ಮಕ್ಕಳ ಸಾಹಿತ್ಯದಲ್ಲಿ ಹೊಸ ಸಂವೇದನೆ ಹರಿಸಿದ ಎಚ್.ಎಸ್. ವೆಂಕಟೇಶಮೂರ್ತಿ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ನಾ. ಡಿಸೋಜ, ಸುಮತೀಂದ್ರ ನಾಡಿಗ, ಬೊಳುವಾರು ಮಹಮದ್ ಕುಂಞ, ಆನಂದ ಪಾಟೀಲ, ಶ್ರೀನಿವಾಸ ಉಡುಪ, ಟಿ.ಎಸ್. ನಾಗರಾಜಶೆಟ್ಟಿ, ಕೆ.ವಿ. ತಿರುಮಲೇಶ್ ಮತ್ತಿತರ ಲೇಖಕರ ಕೃತಿಗಳ ಮೇಲೆ ಒಂದು ನೋಟ ಹರಿಸುವುದರಿಂದ ಅವರ ಸಾಹಿತ್ಯ ಸೃಷ್ಟಿಯ ವಿಶಿಷ್ಟತೆ ಅನಾವರಣಗೊಳ್ಳುತ್ತದೆ. ಕೃಷ್ಣಮೂರ್ತಿ ಬಿಳಿಗೆರೆ, ಶಶಿಧರ ವಿಶ್ವಾಮಿತ್ರ, ಭಾಗೀರಥಿ ಹೆಗಡೆ, ಕಮಲಾ ಕೊಂಡದ ಕುಳಿ, ತಮ್ಮಣ್ಣ ಬೀಗಾರ, ಗಣೇಶ ನಾಡೋರ, ನೀಲಾಂಬರಿ, ರಾಜಶೇಖರ ಕುಕ್ಕುಂದಾ, ಗಿರೀಶ ಜಕಾಪುರೆ ಮುಂತಾದ ಹೊಸಗಾಲದ ಪ್ರಯೋಗಶೀಲ ಲೇಖಕರನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಡಾ. ಎಚ್.ಎಸ್. ವೆಂಕಟೇಶಮೂರ್ತಿ

ನವ್ಯ ಹಾಗೂ ನವ್ಯೋತ್ತರ ಸಂದರ್ಭದಲ್ಲಿ ಕನ್ನಡದ ಮುಖ್ಯ ಲೇಖಕರಲ್ಲೊಬ್ಬರಾದ ಡಾ. ಎಚ್.ಎಸ್. ವೆಂಕಟೇಶಮೂರ್ತಿ ಅವರು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿಯೂ ಮಹತ್ತರ ಕೃಷಿ ಮಾಡಿ ನವೋದಯ ಲೇಖಕರ ಪರಂಪರೆಯನ್ನು ಮುಂದುವರೆಸಿದ್ದು ೮೦ರ ದಶಕ ಕಂಡ ಒಂದು ಮಾರ್ಗ ಪ್ರವರ್ತಕ ಬೆಳವಣಿಗೆಯೆಂದೇ ಹೇಳಬೇಕು. ಆ ಮೂಲಕ ಶ್ರೇಷ್ಠ ಸೃಜನಶೀಲ ಮತ್ತು ಕ್ರಿಯಾಶೀಲ ಮನಸ್ಸುಗಳು ಮಕ್ಕಳ ಸಾಹಿತ್ಯಕ್ಕೆ ಅಗತ್ಯವಾಗಿದ್ದ ಹೊಸ ನೋಟ, ಹೊಸ ಆಲೋಚನೆಗಳನ್ನು ಹರಿಸಲು ಸಾಧ್ಯವಾಯಿತು. 'ನಾಡಿನ ಗುಬ್ಬಿಗಳು ಹೋದವೆಲ್ಲಿ? ವೆಂಕಟೇಶ ಮೂರ್ತಿಯವರ ಪದ್ಯಗಳಲ್ಲಿ ಕುಳಿತಿವೆ' ಎಂದು ಕವಿ ಡಾ. ಚೆನ್ನವೀರ ಕಣವಿ ಮೆಚ್ಚಿಕೆಯಿಂದ ಉದ್ಗರಿಸುವಷ್ಟು ಅವರ 'ಹಕ್ಕಿಸಾಲು' ಕವನ ಸಂಕಲನದ ಅಮ್ಮಗುಬ್ಬಿ, ಮರಿಗುಬ್ಬಿಗಳು ನಾಡಿನಾದ್ಯಂತ ಹೆಸರುವಾಸಿಯಾದವು. ೧೯೮೭ ರಲ್ಲಿ ಪ್ರಕಟವಾದ 'ಹಕ್ಕಿಸಾಲು' ಸಂಕಲನ ೩೯ ಮಕ್ಕಳ ಕವನಗಳನ್ನು ಒಳಗೊಂಡಿತ್ತು. 'ಹಕ್ಕಿಸಾಲು' ಬೆಳಕು ಕಂಡ ಹತ್ತು ವರ್ಷಗಳ ನಂತರ ೧೯೯೭ ರಲ್ಲಿ 'ಹೂವಿನ ಶಾಲೆ' ಪ್ರಕಟವಾಯಿತು. ಗೇಯತೆ, ಸರಳತೆ, ಸೂಕ್ಷ್ಮತೆ ಹೊಸತನಗಳು ಈ ಸಂಕಲನಗಳ ಯಶಸ್ಸನ್ನು ನಿರ್ದೇಶಿಸಿದವು. ಈ ಮೊದಲೆ 'ಅಮಾನುಷರು', 'ಕದಿರನ ಕೋಟೆ', 'ಅಗ್ನಿಮುಖಿ', 'ನೀಲಿನಗರ' ಎಂಬ ಸಾಹಸಮಯ ಕುತೂಹಲ ಹುಟ್ಟಿಸುವ ಕಿರು ಕಾದಂಬರಿಗಳನ್ನು ಬರೆದಿದ್ದರು. 'ಚಿನ್ನಾರಿ ಮುತ್ತ' ಎಂಬ ಅವರ ಕಥೆ ಸಿನೆಮಾ ಆಗಿ ಬಹಳಷ್ಟು ಪ್ರಸಿದ್ಧಿಯನ್ನು ಪಡೆಯಿತು ಹಾಗೂ ಮಕ್ಕಳ ಪ್ರತಿಭೆಯನ್ನು ಉತ್ತೇಜಿಸಿತು. 'ಅಳಿಲು ರಾಮಾಯಣ', 'ಹೂವಿ', 'ಸುಣ್ಣದ ಸುತ್ತು', 'ಕಂಸಾಯಣ', 'ಕುಣಿ ಕುಣಿ ನವಿಲೆ' ಎಂಬ ಅವರ ಐದು ಮಕ್ಕಳ ನಾಟಕಗಳು ಬಿ.ವಿ. ಕಾರಂತ, ಪ್ರೇಮಾ ಕಾರಂತ, ಬಿ. ಜಯಶ್ರೀ, ಶ್ರೀಪಾದ ಭಟ್, ಕೃಷ್ಣಮೂರ್ತಿ ಕವತ್ತಾರ್ ಮುಂತಾದ ಖ್ಯಾತ ರಂಗನಿರ್ದೇಶಕರಿಂದ ರಂಗದ ಮೇಲೆ ಯಶಸ್ವಿ ಪ್ರಯೋಗಗಳನ್ನು ಕಂಡಿವೆ. ಬಹುಮುಖ ಪ್ರತಿಭೆಯ ಎಚ್ಚೆಸ್ವಿ ಮಕ್ಕಳ ಸಂವೇದನೆಗಳನ್ನು ಪರಿಣಾಮಕಾರಿ ಅಭಿವ್ಯಕ್ತಿಗೆ ಒಳಪಡಿಸಿ ಈ ಅಲಕ್ಷಿತ ಸಾಹಿತ್ಯ ಕ್ಷೇತ್ರದ ಆಳ-ಅಗಲಗಳನ್ನು ಹೆಚ್ಚಿಸಿದರು.

ಮಕ್ಕಳ ಭಾವಲೋಕ ಹಾಗೂ ರಮ್ಯಲೋಕಗಳನ್ನು ಇನ್ನಿಲ್ಲದಂತೆ ಸೂರೆಗೈದವರು ಎಚ್.ಎಸ್. ವೆಂಕಟೇಶಮೂರ್ತಿ ಅವರು. ಬರೀ ಕಲ್ಪನೆ, ರಮ್ಯ ಕಥಾನಕಗಳಲ್ಲಿಯೆ ಮುಳುಗದೆ ಆ ಕಥೆಗಳು ವೈಚಾರಿಕತೆಯ ದೀಪದಿಂದ ಮಿನುಗುವಂತೆ ಮಾಡುವಲ್ಲಿ ಅವರು ಸಫಲರಾಗಿದ್ದಾರೆ. ನವೋದಯದ ನಂತರ ಸೊರಗಿದ್ದ ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಅವರ ರಚನೆಗಳು ಪುನರ್‌ಜೀವಿತದಂತೆ ಒದಗಿಬಂದವು. ಕಾವ್ಯ, ಕಥೆ, ಕಾದಂಬರಿ, ನಾಟಕ ಹೀಗೆ ಹಲವು ಪ್ರಕಾರಗಳಲ್ಲಿ ಬಾಲ್ಯಲೋಕದ ಅನಾವರಣ ಅವರಿಂದ ನಡೆಯಿತು. ಪ್ರಬುದ್ಧತೆಯ ಸೆಳಕುಗಳನ್ನು ಅವರ ರಚನೆಗಳು ಕೊಡತೊಡಗಿದವು. ಮಾನಸಿಕ ಎತ್ತರ ಮತ್ತು ಬೌದ್ಧಿಕ ವಿಕಾಸಗಳು ಪರೋಕ್ಷವಾಗಿ ಅವರ ಕಾವ್ಯದಲ್ಲಿ ತುಂಬಿಕೊಂಡವು. ಮಕ್ಕಳಿಗೆ ಪಾಲಕರ ಪ್ರೀತಿಯ ಜೊತೆಗೆ ಅವರದೆ ಆದ ಸ್ವಂತ ಬದುಕು ಕೂಡ ಇದೆ ಎಂಬುವ ಎಚ್ಚರವನ್ನು ಅವರ ಕವಿತೆಗಳು ಕೊಡುತ್ತವೆ. ಬರೀ ಕುತೂಹಲ, ವರ್ಣನೆಗಳಲ್ಲಿ ಪದ್ಯಗಳು ಮುಗಿಯದೆ ಬಾಳ್ವೆಗೆ ಬೇಕಾದ ಒಂದು ಅಡಿಪಾಯವನ್ನು ನಿರ್ಮಿಸುವಲ್ಲಿ ಅವು ನಿರಂತರ ನಿರತವಾಗಿವೆ.

> ಬೇಕಾದ್ದೇನು ಬದುಕೋದಕ್ಕೆ
> ಅಮ್ಮನ ಪ್ರೀತಿಯ ತೆಕ್ಕೆ
> ಅಷ್ಟೇ ಸಾಕೆ ಬೇಡವೆ ಹೇಳು; ನಿನ್ನದೇ ಸ್ವಂತ ಬಾಳು?
> –ಮೇಡಂ ಮತ್ತು ಮರಿಹಕ್ಕಿ

ನೆರಳು ಮತ್ತು ಬಿಸಿಲುಗಳ ಸಾದೃಶ್ಯ–ವೈದೃಶ್ಯ ಲೋಕವೊಂದನ್ನು 'ಗಿಳೀ ಬಣ್ಣ ಹಸಿರು' ಎಂಬ ಅವರ ಪದ್ಯ ತುಂಬ ಸೊಗಸಾಗಿ ನಿರೂಪಿಸುತ್ತದೆ. ಗಿಳಿ, ಪಾರಿವಾಳ, ಕೊಕ್ಕರೆ, ಮನುಷ್ಯರ ಬಣ್ಣಗಳು ಬೇರೆ ಬೇರೆಯಾಗಿದ್ದರೂ ನೆಲದ ಮೇಲೆ ಬಿದ್ದಿರುವ ನೆರಳಿನಲ್ಲಿ ಮಾತ್ರ ಎಲ್ಲ ಕಪ್ಪಾಗಿ ಒಂದೇ ಆಗಿರುವುದು ಒಂದು ಒಳನೋಟವನ್ನು ಕೊಡುತ್ತದೆ. ವೈವಿಧ್ಯತೆ ಮತ್ತು ಏಕತೆಯ ರೂಪಕವಾಗಿಯೂ ಅದು ಕಾಣಿಸಿಗುತ್ತದೆ.

> ಗಿಳಿ ಬಣ್ಣ ಹಸಿರು
> ಅದರ ನೆರಳು ಮಾತ್ರ
> ಕಪ್ಪು!
>
> ಪಾರಿವಾಳದ್ ಬೂದ
> ಅದರ ನೆರಳು ಮಾತ್ರ
> ಕಪ್ಪು!
>
> ಕೊಕ್ಕರೇದು ಬಿಳಿ
> ಅದರ ನೆರಳು ಮಾತ್ರ
> ಕಪ್ಪು!
>
> ನಿನ್ನ ಬಣ್ಣ ಕಂದು
> ನಿನ್ನ ನೆರಳು ಮಾತ್ರ
> ಕಪ್ಪು!
>
> ಅಮ್ಮಾ ನೋಡೆ ಈ ತಮಾಷೆ
> ನೆರಳಲ್ಲೆಲ್ಲ ಒಂದೆ – ಆದ್ರೆ
> ಬಿಸಿಲಲ್ಲಿ ಮಾತ್ರ ಬೇರೆ! –ಗಿಳೀ ಬಣ್ಣ ಹಸಿರು

ಇಲ್ಲಿ ಮಗು ಅಮ್ಮನಿಗೆ ಹೇಳುವ ತರ್ಕ ಕೂಡ ಇದೆ. ಯಾವುದರಲ್ಲಿ ಅಂತರ, ಅಸಮಾನತೆಗಳನ್ನು ಗುರುತಿಸುತ್ತ ಮನುಷ್ಯ ಬಂದಿದ್ದಾನೆಯೋ ಅದು ತಪ್ಪು ಎನ್ನುವ ವಿಚಾರ ಮಗುವಿನ ನಿಷ್ಕಲ್ಮಶ ಬುದ್ಧಿಗೆ ಹೊಳೆಯುತ್ತದೆ. ಅಂತಹದೇ ವಿಚಾರ 'ಗುಬ್ಬಿಮರಿಯ ಹೊಸ ತರ್ಕ' ಪದ್ಯದಲ್ಲಿ ಮತ್ತಷ್ಟು ಸ್ಪಷ್ಟವಾಗಿ ಮೂಡಿದೆ. ಕಾಗೆಮರಿಯ ಜೊತೆ ಆಡಿದರೆ ಗುಬ್ಬಿಮರಿಯೂ ಕಪ್ಪಾಗುತ್ತೆ ಅಂತ ತನ್ನ ಮರಿಯನ್ನು ಹೆದರಿಸುವ ಅಮ್ಮಗುಬ್ಬಿಗೆ ಮರಿಗುಬ್ಬಿ

'ನನ್ನ ಜೋಡಿ ಆಡ್ತಾ ಇದ್ರೆ ಕಾಗೆ ಮರಿ ಮಲ್ಲಿಗೆ ಹೂವಿನ ಹಾಗೆ ಬೆಳ್ಳಗೆ ಆಗತ್ತ ನೋಡು ಅದಕ್ಕೆ' ಅಂತ ಪುರ್ರನೆ ಹಾರಿಹೋಗುತ್ತದೆ. ಮಕ್ಕಳು ಅವರ ಜೊತೆ ಆಡಬಾರದು, ಇವರ ಜೊತೆ ಆಡಬಾರದು ಎನ್ನುವ ಪಾಲಕರ ಧೋರಣೆಯನ್ನು ಇಲ್ಲಿ ಕಟುವಾಗಿ ಟೀಕಿಸಲಾಗಿದೆ. ಕಾಗೆಮರಿಯನ್ನು ಬಿಳಿಯದನ್ನಾಗಿ ಮಾಡುವ ಮರಿಗುಬ್ಬಿಯ ತರ್ಕ ಪ್ರಶ್ನಾರ್ಹವಾದರೂ ಪ್ರತಿಭಟನೆಯ ಸೆಳಕು, ಹೊಸ ಆಲೋಚನೆ, ಸಮಾನ ಭಾವದ ಕಲ್ಪನೆ 'ಗುಬ್ಬಿಮರಿಯ ಹೊಸ ತರ್ಕ' ಪದ್ಯದಲ್ಲಿ ಸಶಕ್ತವಾಗಿ ಮೂಡಿಬಂದಿವೆ. 'ಎಲೆಗಳು ನೂರಾರು', 'ಮಣ್ಣಲ್ಲಿ ಬೀಜ ಊರಿ' ಪದ್ಯಗಳು ಅಂತಹವೆ. ಹೀಗೆ ಸಾಹಿತ್ಯವೆನ್ನುವುದು ರಂಜನೆಯ ಸರಕಾಗದೆ ವಿಚಾರಗಳ ಚಿತ್ತಾರವನ್ನು ಮಕ್ಕಳಲ್ಲಿ ಮೂಡಿಸಬೇಕು ಎನ್ನುವ ತತ್ತ್ವ ವೆಂಕಟೇಶಮೂರ್ತಿ ಅವರ ಬಹುಪಾಲು ರಚನೆಗಳ ಹಿಂದೆ ಕೆಲಸ ಮಾಡಿದೆ. ಸುಮ್ಮನೆ ಸುಂದರವಾಗಿ ಬರೆದರೆ ಸಾಲದು, ಜೋಗುಳ ಹಾಡಲಿಕ್ಕೆಂದು ಬರೆದರೆ ಸಾಲದು, ಬದಲಾಗಿ ಮನುಷ್ಯ ಬದುಕಿನ ಕಥೆ ಅದರಲ್ಲಿ ಒಡಮೂಡಬೇಕು ಎನ್ನುವ ಭಾವ ವೆಂಕಟೇಶಮೂರ್ತಿ ಮತ್ತು ಅವರ ಸಮಕಾಲೀನ ಬರಹಗಾರರಿಗೆ ಮುಖ್ಯವಾಯಿತು. ಇದು ಒಂದು ರೀತಿಯಲ್ಲಿ ಇದುವರೆಗೂ ಮಕ್ಕಳ ಸಾಹಿತ್ಯವನ್ನು ರೂಪಿಸಿದ್ದ ಆಶಯವನ್ನು ಹೊಸನೋಟದಲ್ಲಿ ಇರಿಸಿತು. ಇದರಿಂದ ಮುಗ್ಧಲೋಕವನ್ನು, ಕಲ್ಪನಾ ಜಗತ್ತನ್ನು ಅವರು ಮರೆಮಾಚುತ್ತಾರೆಂದಲ್ಲ, ಮುಗ್ಧತೆ ಮತ್ತು ರಮ್ಯತೆಯ ಜೊತೆಗೆ ವಾಸ್ತವವೂ ಮಡುಗಟ್ಟಬೇಕು ಎನ್ನುವುದು ಈ ಲೇಖಕರ ಕಾಳಜಿಯಾಗಿದೆ. 'ಭತ್ತದ ಹೂವು, ಬಾಡದ ಹೂವು, ಮನಸಿನ ಹೂವು, ಕನಸಿನ ಹೂವು'ಗಳು ಹೇಗೆ ನೆನೆಯುವವರ ಮನೆ ಸೇರುವ ಹೂವುಗಳಾಗುತ್ತವೆ ಎಂಬುದನ್ನು ಎಚ್.ಎಸ್. ವೆಂಕಟೇಶಮೂರ್ತಿಯವರ ಪದ್ಯಗಳನ್ನು ನೋಡಿಯೆ ಹೇಳಬೇಕಾಗುತ್ತದೆ. ಮಕ್ಕಳ ಸೃಜನಶೀಲತೆ ಹಾಗೂ ಅವರ ತಿಳಿವಳಿಕೆಯ ದಿಗಂತಗಳನ್ನು ವಿಸ್ತರಿಸಿದವರಲ್ಲಿ ಎಚ್.ಎಸ್.ವಿ. ಅವರೂ ಒಬ್ಬ ಪ್ರಮುಖರು. ಕಲ್ಪನೆ, ತಿಳಿಹಾಸ್ಯ, ವರ್ಣನೆಗಳಿಂದ ಅವರ ಕವಿತೆಗಳು ಕಳೆಗಟ್ಟುತ್ತವೆ. ಪುರಾಣ, ಐತಿಹ್ಯ, ಇತಿಹಾಸಗಳಿಂದ ಅವರು ಮಕ್ಕಳ ಮನಸ್ಸನ್ನು ಪರಂಪರೆಗೆ ಜೋಡಿಸುತ್ತಾರೆ. ವಾಸ್ತವದ ಬರವಣಿಗೆಯ ಮೂಲಕ ವರ್ತಮಾನದಲ್ಲಿ ನಿಲ್ಲುತ್ತಾರೆ. ವೆಂಕಟೇಶಮೂರ್ತಿಯವರು ಪುರಾಣ–ಆಧುನಿಕತೆಗಳನ್ನು ಬಳಸಿಕೊಂಡು ಮಕ್ಕಳೆದುರು ಒಂದು ಇಂದ್ರಜಾಲವನ್ನೆ ನಿರ್ಮಿಸಿ ಇಡುತ್ತಾರೆ. ಇಂದ್ರಜಾಲದ ಮಾಯೆಯಲ್ಲಿ ಕಳೆದುಹೋಗಬಾರದೆನ್ನುವ ಎಚ್ಚರವನ್ನೂ ಅವರ ಪದ್ಯಗಳು ಕೊಡುತ್ತವೆ.

ಬನ್ನಿರಯ್ಯ ಬನ್ನಿರಯ್ಯ
ಗೆಳೆಯರೆಲ್ಲ ಬನ್ನಿ
ಹ್ರಾಂ ಹ್ರೀಂ ಇಂದ್ರಜಾಲ
ತೋರಿಸುವೆನು ಬನ್ನಿ

ಶಾಲೆಯ ಮುರುಕು ಹೆಂಚು, ಬಳಪದ ಚೂರು, ಮಾವಿನೋಟೆ, ನವಿಲುಗರಿ, ಗುಬ್ಬಿಪುಕ್ಕ ಮುಂತಾದ ಸಂಗತಿಗಳಿಂದಲೆ ಎದುರಿಸಬೇಕಾದ ಜಗತ್ತಿನ ಇಂದ್ರಜಾಲವನ್ನು ಮಕ್ಕಳಿಗೆ ಅವರು ತೋರಿಸಿಕೊಡುತ್ತಾರೆ. ಕಾಗೆಬಂಗಾರ, ಕಾರೆಹಣ್ಣು, ತುಳಸಿ ಸೊಪ್ಪು, ಸಿಲ್ಕುದಾರಗಳಿಂದ ಕಟ್ಟಿ ನಿಲ್ಲಿಸುವ ಕಾಮನಬಿಲ್ಲು ಸಾಹಿತ್ಯದಲ್ಲಿ ಇಂದ್ರಜಾಲಿಕತೆಯನ್ನು ನಿರ್ಮಿಸುವ ಬಗೆ ಹೇಗೆ ಎಂದು ಮತ್ತು ಲೋಕವನ್ನು ತುಂಬಿಕೊಳ್ಳುವ ಬಗೆ ಹೇಗೆ ಎಂದು ಹೇಳಿಕೊಡುವಂತಿದೆ. ಬಂಗಾರವೆನ್ನುವುದು ನಿಜವಾದ ಬಂಗಾರ ಖರೀದಿಸುವಂತಾಗಬಾರದು. ಮಕ್ಕಳು ಸಂಗ್ರಹಿಸಿ

ಇಟ್ಟಿರುವ ಚೂರು-ಪಾರು ವಸ್ತುಗಳು ಹೇಗೆ ಅವರಿಗೆ ಅಪಾರ ಮೌಲ್ಯವುಳ್ಳದ್ದಾಗಿವೆ ಎಂಬುದನ್ನು 'ಇಂದ್ರಜಾಲ' ಪದ್ಯ ಅಷ್ಟೇ ನವಿರಾಗಿ ಚಿತ್ರಿಸುತ್ತದೆ.

ಹೂವು ಯಾವ ಶಾಲೆಯಲ್ಲಿ ಕಲಿಯುತ್ತದೆ, ಹೂವಿನ ಶಿಕ್ಷಕರು ಯಾರು, ಹೆಡ್‌ಮಾಸ್ತರ್ ಹೂವಿಗೆ ಬಯ್ಯೋದಿಲ್ಲವೆ ಮುಂತಾಗಿ ಮಗುವಿನ ಕಲ್ಪನೆಯನ್ನು ಕೆರಳಿಸುವ, ಅರಳಿಸುವ ಕವಿತೆ 'ಹೂವಿನ ಶಾಲೆಯಲ್ಲಿ.'

ಹೂವೆ ಹೂವೆ ನೀನು
ಮರ ಹತ್ತಿದ್ರೂನು
ಬಯ್ಯೋದಿಲ್ವೇನಮ್ಮ
ಶಾಲೆ ಹೆಡ್‌ಮೇಡಮ್ಮ?
ಹೋಗೋ ಹೆದರಿಸ್ಬೇಡ
ಹೆಡ್ಮೇಡಮ್ಮ ಕೂಡ
ಭಾರಿ ಮರ ಏರೇ
ಪಾಠ ಮಾಡುತ್ತಾರೆ!

-ಹೂವಿನ ಶಾಲೆಯಲ್ಲಿ

ಹೂವುಗಳು ಹೇಗೆ ಹೂಮಾಲೆಯಾಗಬೇಕೆಂದು ಗುಟ್ಟು ಹೇಳಿಕೊಡುವ ಕಮಲಾ ಮಿಸ್, ಗುಡ್ಡದಲ್ಲಿರುವ ಲಿಂಗಕ್ಕೆ ಅರ್ಪಿತಗೊಳ್ಳುವುದನ್ನು ಗುಡ್ಡ ಏರಿಯೇ ತೋರಿಸಿಕೊಡುವ ಪೀಟಿ ಮಿಸ್ ಪದ್ದಮ್ಮ, ಜಾರುವ ತಲೆಗೂದಲಲ್ಲಿಯೂ ನಿಲ್ಲುವುದನ್ನು ಹೇಳಿಕೊಡುವ ಪ್ರಯೋಗಶಾಲೆಯ ಲಿಲ್ಲಿ ಟೀಚರ್ ಮಗುವಿನ ಅದಮ್ಯ ಕುತೂಹಲವನ್ನು ತಣಿಸಬಲ್ಲವರಾಗುತ್ತಾರೆ. ಮನುಷ್ಯ ಲೋಕಕ್ಕೂ, ನಿಸರ್ಗಕ್ಕೂ ಒಂದು ಸಂಬಂಧವನ್ನು ಕಾಣಿಸುವ ನಿಸರ್ಗದ ವ್ಯಾಪಾರದಲ್ಲಿ ಮನುಷ್ಯಲೋಕದ ವ್ಯಾಪಾರವನ್ನು ಕಂಡು ಅಚ್ಚರಿಪಡುವ ಮಗುವಿನ ಭಾವಕೋಶ ಇಲ್ಲಿ ತುಂಬ ಆಪ್ತವಾಗಿ ನಿರೂಪಿತವಾಗಿದೆ. ಮಗುವಿನ ಶಾಲೆಯ ಟೀಚರ್‌ಗಳಂತೆ ಮರದಲ್ಲಿಯೂ ಟೀಚರ್‌ಗಳಿರುವುದು, ಅವರಿಂದ ಹೂವು ಏನೆಲ್ಲ ಕಲಿತಿರುವುದು ಕಲ್ಪನೆಯ ಏಣಿಯಾಗಿದೆ. ಪರಿಭಾವಿಸಿದ ಸಂಗತಿಗಳು ಮಗುವಿನ ಕೈಗೆ ಎಟುಕುವಷ್ಟು ಸನಿಹದಲ್ಲಿವೆ. ಇಂತಹ ಕಲ್ಪನಾ ವಿಲಾಸ ಎಚ್.ಎಸ್.ವಿ.ಯವರ ಅನೇಕ ಪದ್ಯಗಳಲ್ಲಿ ಕಾಣಸಿಗುತ್ತದೆ.

ಗಾಳಿ ಮರಿ ಅಂಗಿ ಚಡ್ಡಿ ಟೋಪಿ ಧರಿಸಿ ಹಾರುತ್ತ
ನೀಲಿ ಬೆಟ್ಟ ಏರುತ್ತ
ಅಮ್ಮ ನನ್ನ ಕೂಗ್ತಿದಾಳೆ ನಾಳೆ ಮತ್ತೆ ನೋಡೋಣ
ಅಂತ ಮಾಯ ಆಗ್ಬಿಡೋದೆ? ಅಂಗಿ ಚಡ್ಡಿ ಇಲ್ಲದ
ಬರೀ ಬೆತ್ತಲೆ ಹುಡುಗ ಪಾಪ!
ಏನಪ್ಪ ಈಗ ಮಾಡೋಣ?

-ಏನಪ್ಪ ಈಗ ಮಾಡೋಣ

ಗಾಳಿಮರಿಯನ್ನು ಆಟಕ್ಕೆ ಆಹ್ವಾನಿಸುವ ಹುಡುಗನೊಬ್ಬನನ್ನು ಕೀಟಲೆಗೆಂದು ಗೋಳು ಹೊಯ್ದುಕೊಳ್ಳುವ ವಿನೋದ ಇಲ್ಲಿ ತುಂಬ ಸುಂದರವಾಗಿ ನಿಂತಿದೆ. ತನಗೆ ಅಂಗಿ, ಚಡ್ಡಿ, ಟೋಪಿಗಳಿಲ್ಲ, ಅದಕ್ಕೆ ಅವುಗಳನ್ನು ಕೊಟ್ಟರೆ ಆಟವಾಡಲು ಬರುತ್ತೇನೆ ಎಂದ ಗಾಳಿಗೆ

ಹುಡುಗ ಗಾಳಿಯನ್ನು ನೋಡುವ, ಕೂಡುವ, ಅದರ ಗೆಳೆತನ ಮಾಡುವ ಉತ್ಸಾಹದಲ್ಲಿ ಎಲ್ಲ ಕೊಡುತ್ತಾನೆ. ಅಮ್ಮ ಕರೀತಿದ್ದಾಳೆಂದು ಓಡಿಹೋಗುವ ಗಾಳಿಮರಿ ಒಂದು ಕಡೆಯಾದರೆ ಬತ್ತಲೆ ನಿಂತ ಹುಡುಗ ಮತ್ತೊಂದು ಕಡೆಯಾಗುತ್ತಾನೆ. ವಿನೋದ, ನವಿರುಹಾಸ್ಯ ಇರುವಂತೆಯೆ ಪ್ರಕೃತಿಯ ಗೆಳೆತನ ಬಯಸುವ, ಅನೂಹ್ಯವನ್ನು ಹತ್ತಿರಕ್ಕೆ ಕರೆಯುವ ಹುಡುಗನೊಬ್ಬನ ದಿಟ್ಟತನವನ್ನೂ ಸೂಚ್ಯವಾಗಿ ಹೇಳುವಂತಿದೆ.

ಎಲ್ಲ ಮರಿಗಳು ಕಾ ಕಾ ಎಂದರೆ
ಇದೊಂದು ಮಾತ್ರ ಕುಹೂ ಕುಹೂ!

ಎನ್ನುವ ಕುಹೂ ಕುಹೂ ಪದ್ಯ ಕೋಗಿಲೆಮರಿಯನ್ನು ಕಾಗೆ ಬೆಳೆಸುವ, ಕೊನೆಗೆ ಅದು ಬೇರೆ ಕಡೆ ಹಾರಿಹೋಗುವ ಚಿತ್ರಣವನ್ನು ಅದ್ಭುತ ಲಯಗಾರಿಕೆಯಲ್ಲಿ ಹಿಡಿದಿಟ್ಟಿದೆ.

ಎಲ್ಲ ಮರಿಗಳು ಕಾ ಕಾ ಎಂದರೆ
ಇದೊಂದು ಮಾತ್ರ ಕುಹೂ ಕುಹೂ!

ಹಕೀಮಕಾಕಾ ಬಂದನು ರಾತ್ರಿ
ಕೂಸಿಗೆ ತಿನಿಸಿದ ಹುಣಿಸೆ ಹೂ!
ಎಲ್ಲಾ ಮರಿಗಳು ಕಾ ಕಾ ಎಂದವು !
ಇದೊಂದು ಮಾತ್ರ ಕುಹೂ ಕುಹು!

ಮರುದಿನ ದೂರದ ಊರಿನ ಕೋಗಿಲೆ
ಬೇಡಿತು ಕಾಕಾಂಬಿಕೆಯನ್ನು!
ಮರಿಯೇ ಇಲ್ಲದ ಮಡಿಲಿಗೆ ನೀಡಿರಿ
ಕುಕೂ ಎನ್ನುವ ಕೂಸನ್ನು — ಕುಹೂ ಕುಹು

ಕೋಗಿಲೆಮರಿಯನ್ನು ತನ್ನ ಮರಿಯೆಂದೆ ಬೆಳೆಸಿದ ಕಾಗೆಯ ವಾತ್ಸಲ್ಯ, ಅದನ್ನು ಬೇರೆಯವರ ಪಾಲು ಮಾಡುವಾಗಿನ ದುಃಖ, ಇಬ್ಬರು ತಾಯಂದಿರ ಪ್ರೀತಿ ಉಂಡ ಮರಿ ಪ್ರೀತಿಯಿಂದ ಕುಹೂ ಕುಹು ಎಂದು ಕೂಗುವುದು ಆರ್ದ್ರ ಭಾವನೆಗಳನ್ನು, ಮಾನವೀಯ ಸೆಳಕುಗಳನ್ನು ಮಕ್ಕಳಲ್ಲಿ ಉಕ್ಕಿಸುತ್ತವೆ.

ತಮ್ಮ ಕವಿತೆಗಳಿಗೆ ಮಾನವೀಯ ಸ್ಪರ್ಶ ನೀಡುವುದರಲ್ಲಿ ಮತ್ತು ನಿಸರ್ಗದ ಸಂಗತಿಗಳನ್ನು ಮಕ್ಕಳ ಗ್ರಹಿಕೆಗೆ ತಂದುನಿಲ್ಲಿಸುವುದರಲ್ಲಿ ವೆಂಕಟೇಶಮೂರ್ತಿಯವರು ಸಾಧಿಸುವ ಕಲೆಗಾರಿಕೆ ಮಹತ್ತರವಾದುದು.

ಚಿಟ್ಟೆ! ಚಿಟ್ಟೆ! ಚಿಟ್ಟೆ
ಎಲ್ಲಿಗೋಟ ಬಿಟ್ಟೆ
ಹೀಗೆ ಯಾರ್ಹತ್ತ್ರಾದ್ರೂ
ಬುರುಡೆ ಬಿಡೋದಕ್ಕೆ

— ಚಿಟ್ಟೆ! ಚಿಟ್ಟೆ! ಚಿಟ್ಟೆ!

ಗಹನವೆಂದಿನಿಸದಂತೆ ವಿನೋದವನ್ನೂ ಹರಟೆಯನ್ನೂ ಅವರು ಬಳಸಬಲ್ಲರು. ಮಲ್ಲಿ ಎನ್ನುವ ಹುಡುಗಿ ಮಲ್ಲೀಪಟ್ಟಣದ ಗಲ್ಲಿಗೆ ಹೋಗಿ ಅಲ್ಲಿಂದ ಗೋಲಿ ಮಾಡುವ ಕಲ್ಲನ್ನು ತಂದು ಯಾರಿಗೆ ಕೊಡುತ್ತೀಯೆ ಮಲ್ಲಿಗೆ ಎಂದರೆ ಆಕೆ ರಾತ್ರಿಯಿಡೀ ಅಳುತ್ತಿರುವ ಅಡುಗೆಮನೆಯ ನಲ್ಲಿಗೆ ಎನ್ನಬೇಕೆ! ಇಂತಹ ಅನೇಕ ಸ್ವಾರಸ್ಯಕರ ಪದ್ಯಗಳನ್ನು ಎಚ್ಚೆಸ್ವಿ ಬರೆದಿದ್ದಾರೆ.

ಕಲ್ಪನಾ ಲೋಕದಿಂದ ಮಕ್ಕಳ ಮನಸ್ಸನ್ನು ಹೇಗೆ ವಿಸ್ತರಿಸಬಹುದೆಂಬುದಕ್ಕೆ ಎಚ್.ಎಸ್.ವಿ. ಅವರ ಅನೇಕ ಕವಿತೆಗಳು ನಿದರ್ಶನಗಳಾಗಿವೆ. ಆ ಫ್ಯಾಂಟಸಿ, ರಮ್ಯತೆಯೆನ್ನುವುದು ಮಕ್ಕಳಿಗೆ ಗೋಜಲಾಗುವ ಕ್ಲಿಷ್ಟ ಜಗತ್ತಲ್ಲ. ಬದಲಾಗಿ ಅದು ವಿಸ್ಮಯದ ಲೋಕ. ಆಶ್ಚರ್ಯ ಮತ್ತು ಕುತೂಹಲಗಳು ಹೆಣೆದು ಇಟ್ಟಿರುವ ಚೆಂದ ಕಸೂತಿ.

ಕಾಡಲ್ಲೊಂದು ಮಾವು– ಅದರ
ಕೈಯಲ್ಲಿತ್ತು ಹೂವು
ಕೊಟ್ಟೋರದಕ್ಕೆ ಯಾರೇ – ಅಂತ
ಕೇಳುತ್ತಾ ಇದೆ ತಾರೆ!

ನಿಂಗೇನಾದ್ರೂ ಗೊತ್ತಾ– ಕೇಳಿತು
ಬಳ್ಳಿಯು ತಲೆದೂಗುತ್ತ
ಹಾವಿನ ಆಣೆಗೂ ಕಾಣೆ– ಹೇಳಿತು
ಸಾವಿನ ಕಣ್ಣಿನ ಹುತ್ತ

–ತಾರೆಯ ತರಲೆ

ಕಣ್ಣ ಮುಂದಿರುವ ಕಾಡಿನ ಪ್ರಪಂಚದಿಂದ ಕವಿತೆ ಹೂವಿನ ಮೂಲಕ ತಾರಾಲೋಕಕ್ಕೆ ನುಗ್ಗುವುದು. ಆ ಚುಕ್ಕಿಯನ್ನು ನೆಲಕ್ಕೆ ಎಳೆದು ತರುವುದು. ಪರಿಚಿತ ವಸ್ತುಗಳಿಂದ ಅಪರಿಚಿತತೆಯನ್ನು, ಅಗಮ್ಯವನ್ನು ಕಟ್ಟಿಕೊಡಲಾಗುತ್ತದೆ. ಮಾವು–ಹೂವು, ಯಾರೇ–ತಾರೆ, ತಲೆದೂಗುತ್ತ–ಕಣ್ಣಿನ ಹುತ್ತ ಮುಂತಾದ ಪ್ರಾಸದ ನುಡಿಗಳು ಅತ್ಯಂತ ಸಹಜವಾಗಿ ಸಂಭವಿಸಿ ಕೃತಕತೆ ಸನಿಹ ಸುಳಿಯುವುದಿಲ್ಲ. ಹೀಗೆ ವೆಂಕಟೇಶಮೂರ್ತಿಯವರ ಪದ್ಯಗಳಲ್ಲಿ ಛಂದಸ್ಸು, ಶೈಲಿ, ಆಕೃತಿಗಳು ವಸ್ತುವಿನ ಜೊತೆಯಲ್ಲಿ ಸಹಜವಾಗಿ ಕರಗಿಕೊಂಡು ಹಾಗೂ ಹುದುಗಿಕೊಂಡು ಅನುಭವವನ್ನು ನೈಜವಾಗಿಸುತ್ತವೆ.

ಯಾಕಮ್ಮ ಅಳುವೆ–ನಿಂಗೆ
ಬೇಕಾದ್ದು ಕೊಡುವೆ
ಹೇಳಮ್ಮ ಹೀಗೇಕೆ ಮಾತಾಡದೆ ಇರುವೆ?

–ಯಾಕಮ್ಮ

ಅಳುವೆ, ಕೊಡುವೆ, ಇರುವೆಗಳು ಪದಕ್ಕಾಗಿ ಬಂದ ಪದಗಳಾಗಿರದೆ ಮಗುವಿನ ತುಂಟತನ ಮತ್ತು ಅಮ್ಮನ ವಾತ್ಸಲ್ಯವನ್ನು ಬಣ್ಣಿಸಲು ಬಂದವುಗಳಾಗಿವೆ.

ಊರುಗಳಲ್ಲಿ ನಲ್ಲಿಯ ನೀರು ಹಿಡಿಯುವ ಸಂಕಷ್ಟವನ್ನು ನವಿರು ಹಾಸ್ಯ ಹಾಗೂ ಲಾಲಿತ್ಯದೊಂದಿಗೆ 'ನೀರ್ಬಂತು' ಎನ್ನುವ ಪದ್ಯ ಕೊಡುವ ಪರಿ ಅಸಾಮಾನ್ಯವಾದುದು.

ನೀರು ಶೇಖರಿಸುವ ಸರ್ಕಸ್ಸು ನಲ್ಲಿಯ ಮುಖಕ್ಕೆ ಇಕ್ಕುವ, ನಾವೇ ಬಾಯಿ ಬಿಟ್ಟುಕೊಂಡು ನೋಡುವ ಭಾವಗಳನ್ನು ಹಿಡಿದಿಡುತ್ತದೆ.

ನೀರ್ಬಂತು ಪಾರವ್ವ
ಕೊಡ ಗಿಡ ತಾರವ್ವ
ನಲ್ಲಿ ಮೂಲೆಗಿಕ್ಕವ್ವ
ಮೂಲೆಯ ಮನೆ ಚಿಕ್ಕವ್ವ

ಓಡಿ ಬಂದ್ಲು ಮಲ್ಲಕ್ಕ
ಸರ್ತಿ ತುದೀಲ್ ನಿಲ್ಲಕ್ಕ

ಇಟ್ಲು–ತಪ್ಲೆ–ಗಿಂಡಿ–ಬಟ್ಲು
ತುದೀಲಿ ತಾನೇ ಬಾಯ್ ಬಿಟ್ಲು!

–ನೀರ್ಬಂತು

ಲಯ–ಪ್ರಾಸದ ಜೊತೆಗೆ ಹಳ್ಳಿಯ ಪರಿಸರ, ಮನೆಯ ಎಲ್ಲ ಪಾತ್ರೆ–ಪಗಡಗಳಲ್ಲಿ ನೀರು ತುಂಬಿಸಿಕೊಳ್ಳಬೇಕಾದ ತಾಪತ್ರಯ ಹಾಗೂ ನೀರು ತುಂಬಿಸುವ ಬವಣೆಯನ್ನು ಅನುಭವಿಸುವವರು ಮನೆಯ ಹೆಣ್ಣುಮಕ್ಕಳೆ ಎಂದು ಈ ಪದ್ಯ ಸೂಚಿಸುತ್ತದೆ. ಸೂಕ್ಷ್ಮತೆ, ಕೋಮಲತೆ, ರಮ್ಯತೆ ಎಚ್.ಎಸ್.ವಿ. ಅವರ ಮುಖ್ಯ ಲಕ್ಷಣಗಳಾಗಿರುವಂತೆಯೆ ಮಕ್ಕಳ ತುಂಟತನ, ಕೀಟಲೆ, ಹಾಸ್ಯ ಸ್ವಭಾವಗಳು ಅವರ ಸಾಹಿತ್ಯದಲ್ಲಿ ಎರಕಗೊಂಡು ಬರುತ್ತವೆ. ಇದರಿಂದ ಬೇಸರ, ಏಕತಾನತೆ, ಅನಾಸಕ್ತಿಗಳಿಂದ ಅವರ ಕಾವ್ಯ ಪಾರಾಗಿದೆ.

ಡಮ್ಮಾಡಂ ಡಮ್ಮಾಡಂ ಡಮ್ಮಾ ಡಮ್ಮಾರೆ ಡಂ
ಷ್! ಷ್! ಬರ್‍ತಿದಾರೆ ಸರೋಜಾ ಮೇಡಂ

ಎನ್ನುವ ಕವಿತೆ ಎಚ್ಚೆಸ್ವಿಯವರ ವೈನೋದಿಕ ಕಾವ್ಯಕ್ಕೆ ಉದಾಹರಣೆಯಂತಿದೆ. ಹಾಗೆಯೇ ಮಕ್ಕಳಿಗೆ ನೀರಸವೆನ್ನಬಹುದಾದ ಸಂಗತಿಗಳನ್ನು ರಸಮಯವನ್ನಾಗಿ, ಆಸಕ್ತಿದಾಯಕವನ್ನಾಗಿ ಮಾಡಿ ಪ್ರಸ್ತುತಪಡಿಸುವ ಕಲೆಗಾರಿಕೆ ಅವರಿಗೆ ಸಿದ್ಧಿಸಿದೆ. ಆದರೆ ಯಾವತ್ತೂ ಅವರು ಅದನ್ನು ಪರಿಶ್ರಮದಿಂದ, ಒತ್ತಾಯಪೂರ್ವಕವಾಗಿ ಹೇರುವ ಕೆಲಸ ಮಾಡುವುದಿಲ್ಲ.

ಅಜ್ಜಿ ಅಜ್ಜಿ ಸುಂಟರಗಾಳಿ ಸೊಂಟ ಏಕೆ ಮುರಿಯುತ್ತೆ?
'ನಂಗೆ ಸೊಂಟ ಮುರಿತಾ ಇದೆ
ಹೋಗೋ ತರಲೆ ; ತಲೆಹರಟೆ!'
ಯಾರನ್ ಕೇಳ್ಳಿ, ಏನೇ ಕೇಳ್ಳಿ, ಯಾಕೆಲ್ಲರಿಗೂ ರೇಗುತ್ತೆ!
ಎಲ್ಲರ್‍ದೂನು ಒಂದೇ ಉತ್ರ!
'ಹೋಗೋ ತರಲೆ; ತಲೆಹರಟೆ!'

–ಒಂದೇ ಉತ್ತರ

ಮಕ್ಕಳು ತರಲೆಯೆಂದು, ಅವರು ಕೇಳುವುದು–ಹೇಳುವುದು ತಲೆಹರಟೆಯೆಂದು ತಿಳಿದುಕೊಂಡ ಸಮಾಜದ ಅಸ್ವಸ್ಥತೆಯನ್ನು, ಅವ್ವ ಸೂರ್ಯನಂತೆ ಉರಿಯುತ್ತಿರುವುದನ್ನು, ಅಪ್ಪ ಸಿಡಿಯುತ್ತಿರುವುದನ್ನು, ಮೇಡಂ ಸಿಟ್ಟಿನಿಂದ ಬಿರಿಯುತ್ತಿರುವುದನ್ನು, ಅಜ್ಜ ದಮ್ಮಿನಿಂದ ಕೆರಳುತ್ತಿರುವುದನ್ನು ಮಕ್ಕಳು ಅನುಭವಿಸಬೇಕಾಗಿದೆ ಎಂಬ ವಾಸ್ತವ ಇಲ್ಲಿ ಅಭಿವ್ಯಕ್ತವಾಗಿದೆ. Go Away and Shut Up ಎಂಬ ಕವಿತೆಯ ಪ್ರೇರಣೆಯಿಂದ ತಾವಿದನ್ನು ಬರೆದಿರುವುದಾಗಿ ಕವಿ ಹೇಳಿದ್ದಾರೆ. ಮಕ್ಕಳು ಯಾವಾಗಲೂ ಬಾಯಿ ಮುಚ್ಚಿಕೊಂಡಿರಬೇಕೆಂಬ ನಿಲವನ್ನು ಇಲ್ಲಿ ಖಂಡಿಸಲಾಗಿದೆ. ಯಾವುದು ಕಾವ್ಯದಲ್ಲಿ ಬಂದಿರಲಿಲ್ಲವೊ, ಅದನ್ನು ಕೊಡುವ ಮೂಲಕ ವೆಂಕಟೇಶಮೂರ್ತಿಯವರು ಕನ್ನಡದ ಮಕ್ಕಳ ಪದ್ಯಗಳು ವಿವಿಧ ಆಯಾಮಗಳಿಂದ ಕೂಡಿರುವಂತೆ ನೋಡಿಕೊಂಡರು. ಹಾವಿನ ಹುನ್ನಾರವನ್ನು ಹಕ್ಕಿಮರಿಗೆ ಹೇಳುವ ತಾಯಿಹಕ್ಕಿಯ ಕವಿತೆಯಲ್ಲಿ ಸಮಾಜದಲ್ಲಿರುವ ವಿಷಸರ್ಪಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕೆಂಬ ಪರೋಕ್ಷ ಕಳಕಳಿ ವ್ಯಕ್ತವಾಗಿದೆ.

ಬೆಣ್ಣೆಯ ಮುದ್ದೆಯಾಗಿರುವ ಚಂದ್ರನನ್ನು ಮುಟ್ಟಿದರೆ ಮೊಲದ ರೇಷ್ಮೆಯಂತಹ ತುಪ್ಪಳವನ್ನು ಮುಟ್ಟಿದಂತಾಗಬಹುದೆಂದು, ಬಾನಿಗೆ ತೂಗುವ ಸೇತುವೆ ಕಟ್ಟಲು ಬಣ್ಣದ ಮೋಡಗಳು ತೇಲುತ್ತಿರಬಹುದೆಂದು ಮಕ್ಕಳು ಕಲ್ಪನೆ ಮಾಡಿಕೊಳ್ಳುತ್ತಾರೆ. ಇಂತಲ್ಲಿ ಕವಿಯ ಕಲ್ಪನೆ ಎಷ್ಟೊಂದು ಸೊಗಸಾಗಿ ಮೂಡಿದೆ. 'ದೀಪವು ಆರಿದ...' ಕವಿತೆಯಲ್ಲಿ ಮತ್ತೊಂದು ಇಲಿಯ ಸಾಹಸದಿಂದೊಡಗೂಡಿದ ಕಲ್ಪನೆ ಕೆಲಸ ಮಾಡಿದೆ. ಅಮವಾಸ್ಯೆಯ ರಾತ್ರಿಯಲ್ಲಿ ಮೊಸರಿನ ಗಡಿಗೆಗೆ ಬಿದ್ದ ಇಲಿಗಳೆರಡರಲ್ಲಿ ಅಣ್ಣ ಇಲಿ ಈಜದೆ ಸೋಮಾರಿಯಾಗಿ ಸತ್ತರೆ ತಮ್ಮ ಇಲಿ ಕಾಲನು ಬಡಿದು ಬಡಿದು ಮೇಲೆ ಬರುವುದು. ಅಷ್ಟೊತ್ತಿಗೆ ಮೊಸರು ಕಡೆದಂತಾಗಿ ಮಜ್ಜಿಗೆಯಲ್ಲಿ ಬೆಣ್ಣೆ ತೇಲುತ್ತಿರುವುದು. ಸಾಹಸಿಯಾದರೆ ಬದುಕೂ ಸಿಗುವುದು, ಬೆಣ್ಣೆಯೂ ಸಿಗುವುದು ಎಂಬ ಸುಪ್ತ ಸಂದೇಶ ಈ ಸ್ವಾರಸ್ಯಕರ ಕವಿತೆಯಲ್ಲಿ ಅಡಕವಾಗಿದೆ.

ಬದುಕುವ ಆಸೆಗೆ ಬಡಿದೂ ಬಡಿದೂ ಕಡೆಯಿತು ಮೊಸರನ್ನು!
ತೇಲಿತು ಬೆಣ್ಣೆಯ ಮುದ್ದೆಯು–ಹೋಲುತ ದೇವರ ನಗೆಯನ್ನು!
ತಲೆದೂಗಿತು ಇಲಿ, ಸಾಹಸಿಗಷ್ಟೇ ಬದುಕುವ ಹಕ್ಕು ಇದೆ!
ಅಹುದಹುದೆನ್ನುತ ಮಜ್ಜಿಗೆಯಲ್ಲಿ ಬೆಣ್ಣೆಯು ತೇಲುತಿದೆ!

–ದೀಪವು ಆರಿದ

ವೆಂಕಟೇಶಮೂರ್ತಿಯವರ ಕವಿತೆಗಳ ರಚನೆಯೂ ವೈವಿಧ್ಯಮಯವಾದುದು. ಭಾವಗೀತೆ, ಕಥನಗೀತೆ, ಶಿಶುಗೀತೆ ಮತ್ತು ಪ್ರಾಸಗಳಲ್ಲಿ ಪ್ರಯೋಗಗಳನ್ನು ಮಾಡುವ ಮೂಲಕ ತಮ್ಮ ಕಾವ್ಯ ಯಾವಾಗಲೂ ಜೀವಂತಿಕೆಯಿಂದ ಕೂಡಿರುವಂತೆ ನೋಡಿಕೊಂಡಿದ್ದಾರೆ. ಕಥನ ಕವನಗಳಂತೂ ಚಿತ್ತಾಕರ್ಷಕವಾಗಿ ಮಕ್ಕಳ ಮನಸ್ಸನ್ನು ಹಿಡಿದಿಡುತ್ತವೆ:

ತುಂಗಾ ಭದ್ರಾ ಕೂಡೋ ಜಾಗ – ಏಳ್ಹೆಡೆ ನಾಗ!
ಅಲ್ಲೇ ಗವಿಯಲಿ ಭಾರೀ ತೋಳ–ಕೈಯಲಿ ತಾಳ!
ಜಡಿಮಳೆ ಜಡಿಮಳೆ ಹೊಡೆಯೋ ಹೊತ್ತು–ಬಾನೇ ಬಿತ್ತು
ಮಿಂಚು ಗುಡುಗು ಭಾರೀ ಸಿಡಿಲು – ನದಿಯೋ ಕಡಲು

–ಮಸೆದ ಹಲ್ಲು

'ಮಸೆದ ಹಲ್ಲು', 'ದೀಪವು ಆರಿದ...', 'ಕಾಡಿನಲ್ಲಿ ಹಕ್ಕಿ ಮತ್ತು ಹುಲಿ', 'ಬಡವಿಯ ಪಾಡು', 'ಘಟ್ಟದ ಯೋಗಿ', 'ಕತ್ತಲಮ್ಮ ಎಂಬ ಹುಡುಗಿ ತನ್ನ ಅಜ್ಜಿಯನ್ನು ಹುಡುಕಿದ್ದು' ಮುಂತಾದ ಪದ್ಯಗಳು ನವೀನ ಭಾವ ಮತ್ತು ನಿರ್ವಹಣೆಯಿಂದ ಯಾರ ಮನಸ್ಸನ್ನಾದರೂ ಸೆಳೆಯುತ್ತವೆ. 'ಹೋದಿಗೆರೆಯ ಹಿತ್ತಲು' ಎಂಬ ಕವಿತೆ ಭಾವಗೀತಾತ್ಮಕವೂ ಕಥನರೂಪವೂ ಹುಡುಗನೊಬ್ಬನ ಆತ್ಮನಿವೇದನೆಯೂ ಆಗಿ ವೆಂಕಟೇಶಮೂರ್ತಿಯವರ ಬಾಲ್ಯಕಾಲ ಮತ್ತು ಅವರು ಆಡಿದ ಮನೆ–ಪರಿಸರವನ್ನು ಆ ಕಾಲದಲ್ಲಿಯೆ ಮರಗಟ್ಟಿ ನಿಲ್ಲಿಸಿದೆ. ಬಾಲ್ಯದ ಸೆಳಕುಗಳು ತುಂಬ ಜೀವಂತಿಕೆ ಹಾಗೂ ಚಲನಶೀಲತೆಯಿಂದ ಕವಿತೆಯಾಗಿ ಮಾರ್ಪಟ್ಟಿವೆ.

ಮನೆಯ ಹಿಂದೆ ಹಿತ್ತಲಿದೆ ಅಲ್ಲೆ ಬಾಗೆ, ಬೇವು
ಶಾಲೆ ಮುಗಿದ ಮೇಲೆ ಸೇರಿ ಆಡುತ್ತೀವಿ ನಾವು
ಬಾಗೆಮರದ ಮೇಲೆ ಸಂಜೆ ಬರುವದೊಂದು ಕೋಗಿಲೆ
ಕುಹೂ ಕುಹೂ ಕೂಗುತ್ತದೆ ನಾವು ಸೇರಿದಾಗಲೆ!

ಗೋಣಿಮಡಿಯೆ ಲಾಲಬಾಗು, ಅಲ್ಲೆ ನಮ್ಮ ತಿಂಡಿ
ಬೇಳೆಬಾತು, ಪುಳಿಯೊಗರೆ, ಇದ್ದೆ ಇತ್ತು ಉಚಿಡಿ
ರೈಲು ಶಿಳ್ಳೆ ಹಾಕುತ್ತಿತ್ತು ಬಂದೆವೆಲ್ಲ ಓಡಿ
ಐದೆ ನಿಮಿಷದಲ್ಲಿ ಇಡೀ ಬೆಂಗಳೂರು ನೋಡಿ

–ಹೋದಿಗೆರೆಯ ಹಿತ್ತಲು

ಪ್ರಾಸಪದಗಳ ಚಮತ್ಕಾರಿಕ ಬಳಕೆ, ಅನುರಣನದಿಂದ ಹೊರಡುವ ಒತ್ತು, ನಾಟಕೀಯ ಸಂಭಾಷಣೆ ಇವುಗಳನ್ನು ಉಪಯೋಗಿಸಿಕೊಂಡು ತುಂಬ ಎಳೆಯರಿಗಾಗಿ ಶಿಶುಪ್ರಾಸ (ಅನ್ನೋ ಹಾಡು)ಗಳನ್ನು ಆಡುನುಡಿಯಲ್ಲಿಯೊ, ಲಯಪೂರ್ವಕವಾಗಿಯೊ ವೆಂಕಟೇಶಮೂರ್ತಿಯವರು ಕೊಟ್ಟಿದ್ದಾರೆ.

ಗಿಲಿ ಗಿಲಿ ಗಿಲ್ !
ಹೋಗ್ಬೇಡ ನಿಲ್ !
ಹನಿ ಹನಿ ಮಳೆ ಜೊತೆ
ತಲೆ ಮೇಲೆ ಕಲ್ !
ಗಿಲಿ ಗಿಲಿ ಗಿಲ್

ಪುಟ್ಟ ಕಂದ ಹೈ
ಪಾಪ! ಬರೀ ಮೈ
ಚಡ್ಡಿ ಕೂಡ ನೈ
ಥೈ! ಥೈ! ಥೈ!

ತೊಡಿಸಿ ನಿಕ್ಕರು
ತಾತ ನಕ್ಕರು
ಜಿಪ್ಪೆ ಚಕ್ಕರು
ಹೋ! ಹೋ! ಹೋ!

–ಪಾಪನ ಚಡ್ಡಿ

ಮಕ್ಕಳ ಗಮನಕ್ಕೆ ಒಮ್ಮೆ ಬಂದುವೆಂದರೆ ಗಕ್ಕನೆ ಅವರನ್ನು ಸೆಳೆಯುವ ಗುಣ ಇಂತಹ ಪದ್ಯಗಳಿಗಿದೆ. ಎರಡರಿಂದ ಆರೇಳು ವರ್ಷದ ಮಕ್ಕಳಿಗೆ ಈ ಕವಿತೆಗಳು ವಿಶೇಷವಾಗಿ ರುಚಿಸುವಂತಿವೆ. ಲಯಗಾರಿಕೆ, ಪದ್ಯದ ಹದ ಅಷ್ಟು ಸೊಗಸಾಗಿದೆ. ಮೊಮ್ಮಗಳ ತೊಟ್ಟಿಲ ಆಟಗಳನ್ನು ಕಂಡು ಆನಂದಿಸುವ ಅಜ್ಜ ಅವಳ ಬಾಲಲೀಲೆಗಳನ್ನು ಬಣ್ಣಿಸುವ ರೀತಿ ಎಚ್ಚೆಸ್ವಿಯವರ 'ಸೋನಿ ಪದ್ಯಗಳು' ಕವನ ಸಂಕಲನದ್ದು. ಪುಟ್ಟ ಮಗುವಿನ ಸೌಂದರ್ಯವನ್ನು ಅದು ತೋರಿಸುವ ಜಗತ್ತನ್ನು, ಅದರ ನಾನಾ ಆಟ ವಿನೋದಗಳನ್ನು ಸೋನಿ ಪದ್ಯಗಳು ತೆರೆದಿಡುತ್ತವೆ. ಶಕ್ತಿದೇವತೆಗೆ ಅಭಯಹಸ್ತವಿದ್ದರೆ ಈ ಪುಟ್ಟ ದೇವತೆಯ ಅಭಯಪಾದ ನೋಡಲು ಕವಿ ನಮ್ಮನ್ನು ಆಹ್ವಾನಿಸುತ್ತಾರೆ.

ವೆಂಕಟೇಶಮೂರ್ತಿಯವರ ಮೊಮ್ಮಗಳು ಸೋನಿಯ(ಸೌಖ್ಯ)ಳ ಬಾಲ ಸೊಬಗನ್ನು 'ಸೋನಿ ಪದ್ಯಗಳು' ಅವಳ ಫೋಟೋಗಳೊಂದಿಗೆ ಪರಿಣಾಮಕಾರಿಯಾಗಿ ವಿವರಿಸಿದ್ದು, ಮಗುವಿನ ಶೈಶವವೊಂದನ್ನು ಇಷ್ಟೊಂದು ಭಾವಾಕರ್ಷಕವಾಗಿ ಬಣ್ಣಿಸಬಹುದೆ ಎಂಬ ವಿಸ್ಮಯವನ್ನು ಹುಟ್ಟುಹಾಕಿದ್ದು ಈ ಸಂಕಲನದ ಹೆಗ್ಗಳಿಕೆಯಾಗಿದೆ. ಜಿ.ಎಸ್.ಎಸ್. ಅವರು 'ಅಕ್ಕರೆಯ ಪಿಸುದನಿಗಳು' ಎಂದು ಇವುಗಳನ್ನು ಕರೆದಿದ್ದಾರೆ. ಅಜ್ಜನ ವಾತ್ಸಲ್ಯ ಎಷ್ಟೆಲ್ಲ ಮಾತುಗಳ, ಆಡುನುಡಿಗಳ ರೂಪ ಪಡೆಯಬಹುದೆಂದು ಇದರಿಂದ ತಿಳಿಯುತ್ತದೆ.

ಸೋನಿಯ ಮೂಗು ಯಾವತ್ತೂ ಮೇಲೆ
ಅಳುವಾಗಲೂ
ನಗುವಾಗಲೂ
ಎಚ್ಚರದಲ್ಲೂ
ನಿದ್ದೆಯಲ್ಲೂ
ಅಂಗಾತ ಇದ್ದರೂ
ಮುಖಾಡಿ ಬಿದ್ದರೂ
ಸೋನಿಯ ಮೂಗು ಯಾವತ್ತೂ ಮೇಲೆ

* * *

ಸೋನಿ ಟಾಟಾ ಮಾಡುತ್ತಾಳೆ
ಬಲಗೈಯಲ್ಲಿ
ಎಡಗೈಯಲ್ಲಿ
ಬಲಗಾಲಲ್ಲಿ

ಎಡಗಾಲಲ್ಲಿ
ಸೋನಿ ಟಾಟಾ ಮಾಡುತ್ತಾಳೆ

* * *

'ಮೊಮ್ಮಗಳೇ! ನೀನು ನನ್ನ ಅಜ್ಜಿ ಅನ್ನಬೇಡ'
ಅನ್ನುತ್ತಾಳೆ ಸೋನಿಯ ಅಜ್ಜಿ!
ಭಯಪಡಬೇಡವೇ ಅಜ್ಜಿ! ನೀನು ಸೋನಿಗೆ ಮಾತ್ರ ಅಜ್ಜಿ
ಸೋನಿಯ ಅಜ್ಜನಿಗಲ್ಲ!

ಮೂರುವರ್ಷದ ಬಾಲರಿಂದ ಹಿಡಿದು ಹದಿಹರೆಯದವರೆಗಿನ ಮಕ್ಕಳ ಮನೋಭೂಮಿಕೆಗೆ ನಿಲುಕುವ ನಿಖರ ಹಾಗೂ ಸುಲಲಿತ ಸಾಹಿತ್ಯವನ್ನು ಸೃಷ್ಟಿಸಿದವರು ಎಚ್.ಎಸ್. ವೆಂಕಟೇಶಮೂರ್ತಿ ಅವರು. ಮಕ್ಕಳಿಗಾಗಿ ಬರೆಯುವುದೆಂದರೆ ತಮ್ಮ ಅಂತಸ್ತು ಹಾಗೂ ಮನೋಧರ್ಮಕ್ಕೆ ತಕ್ಕುದಲ್ಲ ಎಂದು ಭಾವಿಸಿ ಅದನ್ನು ಕಡೆಗಣಿಸಿದ್ದ ಕಾಲದಲ್ಲಿ ಮಕ್ಕಳಿಗೆ ಬರೆಯುವುದು ತುಂಬ ಸೃಷ್ಟಿದಾಯಕ ಹಾಗೂ ಚೈತನ್ಯಶೀಲ ಕೆಲಸವೆಂದು ಅವರು ನಂಬಿದರು. ಹಿರಿಯರ ಸಾಹಿತ್ಯದಲ್ಲಿ ಎಷ್ಟು ಶ್ರದ್ಧೆ ಹಾಗೂ ತನ್ಮಯತೆಯಿಂದ ತೊಡಗಿಕೊಂಡರೋ ಅದೇ ತನ್ಮಯತೆ, ಕಾಳಜಿಗಳಿಂದ ಮಕ್ಕಳ ಸಾಹಿತ್ಯ ರಚಿಸಿದರು: 'ಚಿಕ್ಕಂದಿನಲ್ಲಿ ನಾನು ಓದಿ ಮರುಳಾದ ಕುವೆಂಪು, ಪಂಜೆ ಮಂಗೇಶರಾಯ, ಜಿ.ಪಿ. ರಾಜರತ್ನಂ, ಸಿದ್ದಯ್ಯ ಪುರಾಣಿಕ, ಎಲ್. ಗುಂಡಪ್ಪ, ಹೊಯಿಸಳ ಮೊದಲಾದವರ ಸಶಕ್ತವಾದ ಕೃತಿಗಳು ತಮ್ಮ ಪರಂಪರೆಯನ್ನು ತಾವೇ ನಿರ್ಮಿಸದೆ ಸುಮ್ಮನೆ ಕೂಡುವುದಿಲ್ಲ... ಈ ಪದ್ಯಗಳೊಂದಿಗೆ ನಾನು ಆಡಿ ಬೆಳೆದ ಮನೆ, ಅಂಗಳ, ಶಾಲೆಯ ಬಯಲು, ತೋಪು, ಕೆರೆಮೈದಾನಗಳಿದ್ದಾವೆ. ನನ್ನ ಬಾಲ್ಯ ಗೆಳೆಯರೂ, ಗೆಳತಿಯರೂ ಇದ್ದಾರೆ'.

ಪರಂಪರೆಯನ್ನು ಮುನ್ನಡೆಸುವ ಕೆಲಸದಲ್ಲಿ ತಾವು ಪರಂಪರೆಯಿಂದ ಪ್ರಭಾವಿತರಾಗಿರುವುದನ್ನು ಅವರು ಹೇಳಿದ್ದಾರೆ. ಪರಂಪರೆಗೆ ಪಾತಾಳಗರಡಿ ಹಾಕದೆ ಆಧುನಿಕತೆಯನ್ನು ಕಟ್ಟಲಾಗುವುದಿಲ್ಲ ಎಂಬ ಅರಿವು ಅವರಿಗಿದೆ. ಈ ಕಟ್ಟುವಿಕೆಯನ್ನು ಎಚ್ಚೆಸ್ವಿ ತುಂಬ ಸ್ವಾರಸ್ಯಕರವಾಗಿಯೇ ಬಣ್ಣಿಸುತ್ತಾರೆ 'ಇದು ಕಟ್ಟು ಹರಿಯುವುದಕ್ಕಾಗಿಯೇ ಮಾಡಿದ ಒಂದು ಕಟ್ಟುವಿಕೆ.'

ಮಕ್ಕಳ ಕಲ್ಪನೆಗೆ ರೆಕ್ಕೆಹಚ್ಚುವ, ಅವರ ಭಾವಕೋಶದಲ್ಲಿ ಬೀಡುಬಿಡುವ, ಅವರ ವೈಚಾರಿಕತೆಗೆ ಇಂಬುಕೊಡುವ ಸಾರ್ಥಕ ರಚನೆಗಳನ್ನು ಎಚ್ಚೆಸ್ವಿ ನೀಡಿದ್ದಾರೆ. ಮಗುವಿನ ಮುಗ್ಧಲೋಕವನ್ನು ಮುನ್ನೆಲೆಗೆ ತಂದು ಅದರಲ್ಲಿ ಭಾವ ಹಾಗೂ ವ್ಯಕ್ತಿಪ್ರಧಾನ ಅಂಶಗಳಿಗೆ ಮಹತ್ವ ನೀಡಿದ್ದಾರೆ. ಮಗು ಹಾಗೂ ಅದರ ಸುತ್ತಲಿನ ಪರಿಸರವನ್ನು ಕಲಾತ್ಮಕ ನೇಯ್ಗೆಯಲ್ಲಿ ಹಾಯಿಸಿ ಹಲವು ನೆಲೆಗಳು ಒಂದೇ ಕೇಂದ್ರಕ್ಕೆ ದುಡಿಯುವಂತೆ ಮಾಡುತ್ತಾರೆ. ಕವಿ ಸುಬ್ರಾಯ ಚೊಕ್ಕಾಡಿಯವರು ವೆಂಕಟೇಶಮೂರ್ತಿಯವರ ಮಕ್ಕಳ ಸಾಹಿತ್ಯದ ವಿಶಿಷ್ಟತೆಯನ್ನು ಕುರಿತು ಹೇಳಿರುವುದು ಸಮಂಜಸವಾಗಿದೆ: 'ಎಚ್.ಎಸ್. ವೆಂಕಟೇಶಮೂರ್ತಿಯವರ ಕವಿತೆಗಳಲ್ಲಿ ಮಗುವಿನ ಮುಗ್ಧ ಕಲ್ಪನಾಲೋಕ ತನ್ನೆಲ್ಲಾ ವರ್ಣ ವಿನ್ಯಾಸಗಳೊಂದಿಗೆ ಪ್ರತ್ಯಕ್ಷವಾಗುತ್ತವೆ. ಕಹಿ ಇಲ್ಲದ ವ್ಯಂಗ್ಯ,

ನೋವಿಲ್ಲದ ತಮಾಷೆ, ಹತಾಶೆಯಿಲ್ಲದ ವಿಷಾದ, ತಲೆಭಾರವಿಲ್ಲದ ನೀತಿ, ಘಾಸಿಗೊಳಿಸದ ಮಗುವಿನ ಭಾವಕೋಶದ ಪ್ರಕಟಣೆ ಶ್ರೀಯುತರ ಕವಿತೆಗಳ ಬಹುಮುಖ್ಯ ಗುಣಗಳಾಗಿದ್ದು, ಮಕ್ಕಳ ಸಾಹಿತ್ಯ ಪ್ರಪಂಚದಲ್ಲಿ ಹೊಸ ಬೆಳಕೊಂದನ್ನು ಮೂಡಿಸುವಲ್ಲಿ ಸಫಲವಾಗಿವೆ.' (ಮಕ್ಕಳ ಸಾಹಿತ್ಯ ಶತಮಾನ, ಪು. ೮೯).

ಲವಲವಿಕೆಯಿಂದೊಡಗೂಡಿದ ಸಂಭಾಷಣೆ, ಸುಲಲಿತ ಭಾಷೆ, ತಮಾಷೆಯ ಸೆಳಕು ಮತ್ತು ಪರೋಕ್ಷವಾಗಿ ಮೇಲ್ಮೈಗೆ ಬರುವ ವೈಚಾರಿಕ ಆಶಯಗಳಿಂದ ಎಚ್ಚೆಸ್ವಿ ಮಕ್ಕಳ ಕವನಗಳು ಬದಲಾದ ಮನೋಧರ್ಮವನ್ನು ರೂಪಿಸುವಲ್ಲಿ ಯಶಸ್ವಿಯಾದವು. ಮಕ್ಕಳ ಪ್ರಪಂಚ ಹಾಗೂ ಹಿರಿಯರ ಪ್ರಪಂಚದ ನಡುವಿನ ಸಂಘರ್ಷವನ್ನೂ ಮಕ್ಕಳ ವಿಶಾಲ ಮನೋಭೂಮಿಕೆಯನ್ನೂ ಅವು ತೆರೆದಿಟ್ಟವು.

ವೆಂಕಟೇಶಮೂರ್ತಿ ಅವರ ಕಥಾಜಗತ್ತು

ಪಾಶ್ಚಾತ್ಯ ಸಾಹಿತ್ಯದಲ್ಲಿ ಮಕ್ಕಳಿಗಾಗಿ ಸಾಹಸಮಯ ಕಥೆ, ಕಾದಂಬರಿಗಳ ದೊಡ್ಡ ಸೃಷ್ಟಿಯೇ ನಡೆದಿದ್ದು ಕನ್ನಡದಲ್ಲಿ ಅದರ ವಿರಳ ರಚನೆಗೆ ಕಾರಣಗಳು ಸಕಾರಣವಾಗಿರಲಿಲ್ಲ. ಈ ಕೊರತೆಯನ್ನು ನೀಗಿಸಲೆಂಬಂತೆ ನಾ. ಡಿಸೋಜ, ಎಚ್ಚೆಸ್ವಿ, ಗೀತಾ ಕುಲಕರ್ಣಿ ಮೊದಲಾದ ಲೇಖಕರು ದೀರ್ಘ ಕತೆಗಳನ್ನು ಬರೆದು ಕನ್ನಡದ ಮಕ್ಕಳು ಆ ಓದಿಗೆ ತೆರೆದುಕೊಳ್ಳುವಲ್ಲಿ ಕಾರಣರಾದರು. ನಮ್ಮಲ್ಲಿ ಪ್ರಾಣಿಕತೆಗಳು, ನೀತಿಕಥೆಗಳು, ಪಂಚತಂತ್ರದ ಕಥೆಗಳು ಇದ್ದುವಾದರೂ ವಾಸ್ತವದ ಹಂದರದಲ್ಲಿ ಮಕ್ಕಳು ವಾಸಿಸುವ ಜಗತ್ತಿನ ಬರವಣಿಗೆಗಳು ಕಡಿಮೆ ಇದ್ದವು. ಅಲ್ಲದೆ ಸಾಹಸ, ಹುಡುಕಾಟ, ತಿರುಗಾಟದ ಕತೆಗಳೂ ಅತ್ಯಂತ ವಿರಳವಾಗಿದ್ದವು. ಈ ನಿಟ್ಟಿನಲ್ಲಿ ವೆಂಕಟೇಶಮೂರ್ತಿಯವರ 'ಅಮಾನುಷರು' (ಮೊದಲ ಮುದ್ರಣ, ೧೯೮೦, ಬಾಪ್ಕೊ ಪ್ರಕಾಶನ, ಬೆಂಗಳೂರು), 'ನೀಲಿನಗರ' (ಮೊದಲ ಮುದ್ರಣ, ೧೯೮೦, ಬಾಪ್ಕೊ ಪ್ರಕಾಶನ, ಬೆಂಗಳೂರು), 'ಕದಿರನ ಕೋಟೆ' (ಮೊದಲ ಮುದ್ರಣ, ೧೯೮೫, ಸುಂದರ ಪ್ರಕಾಶನ, ಧಾರವಾಡ), 'ಅಗ್ನಿಮುಖಿ' (ಮೊದಲ ಮುದ್ರಣ ೧೯೮೬, ಲಿಪಿ ಪ್ರಕಾಶನ, ಬೆಂಗಳೂರು) ಎನ್ನುವ ನೀಳ್ಗತೆಗಳು ಕಳೆದ ಶತಮಾನದ ೮೦ರ ದಶಕದಲ್ಲಿ ಪತ್ರಿಕೆಗಳಲ್ಲಿ ಧಾರಾವಾಹಿಯಾಗಿ ಪ್ರಕಟವಾಗುವುದರ ಮೂಲಕ ಮಕ್ಕಳ ಓದುವ ಆಸಕ್ತಿಯನ್ನು, ಅವರ ಕುತೂಹಲವನ್ನು ತಣಿಸಿದವು. ಈ ಕಿರುಕಾದಂಬರಿಗಳು ಹೈಸ್ಕೂಲು ಮಟ್ಟದ ಹದಿಹರಯದ ಹುಡುಗರನ್ನು ಗಮನದಲ್ಲಿಟ್ಟುಕೊಂಡು ಬರೆದವುಗಳಾಗಿವೆ.

'ಅಮಾನುಷರು' ಕಾದಂಬರಿ ಮಕ್ಕಳ ಕುತೂಹಲವನ್ನು ಉದ್ದಕ್ಕೂ ಕಾಯ್ದುಕೊಂಡು ಹೋಗುತ್ತದೆ. ರಹಸ್ಯ, ಸಾಹಸಗಳು ಸುರುವಿನಲ್ಲಿಯೆ ಎದುರಾಗುತ್ತವೆ: 'ಐದು ಗಂಟೆಗೆ ಸರಿಯಾಗಿ ಬಾ ಎಂದು ಆ ಮುದುಕ ಹೇಳಿದ್ದ. ಅವನಿಗೆ ಬೆಳಗಟ್ಟದ ಗಣಪತಿಶಾಸ್ತ್ರಿ ಪಂಡಿತಾರಾಧ್ಯ ಅಂತ ಉದ್ದವಾದ ಹೆಸರು. ಅದರಲ್ಲಿ ಅವನ ನಿಜವಾದ ಹೆಸರು ಎಷ್ಟು, ಉಳಿದ ಸೇರ್ಪಡೆಗಳೇನು, ಏನೂ ಗೊತ್ತಾಗುವಂತಿರಲಿಲ್ಲ... ಬುರುಜನ ಹಟ್ಟಿಯಲ್ಲಿ ಎಡಕ್ಕೆ, ಬಲಕ್ಕೆ, ಅಡ್ಡವಾಗಿ, ಕೊಂಚ ನೇರವಾಗಿ ಹೋಗಿ ಥಟ್ಟನೆ ಎಡಕ್ಕೆ ಹೊರಳಿ ಮಾಯವಾಗಿ ಬಿಡುವ ನಿಗೂಢವಾದ ಓಣಿಗಳಿವೆ...' ಹೀಗೆ ದುರ್ಗದ ಕೋಟೆ, ಬಂಡೆಗಲ್ಲು, ರಣಹದ್ದಿನಂತೆ

ಹೆದರಿಸುವ ಕೋಡುಗಲ್ಲು ಮುಂತಾದ ವಿವರಗಳಿಂದ ಸಾಹಸ ದುರಂತಮಯ ಮತ್ತು ಭಯಾನಕ ಚಿತ್ರಣ ಮಕ್ಕಳ ಮನ ಗೆಲ್ಲುವುದರಲ್ಲಿ ಸಂಶಯವಿಲ್ಲ. ಭಾಷೆಯ ತೀವ್ರತೆಯಲ್ಲಿ, ಹೆಣಿಗೆಯಲ್ಲಿ, ಉತ್ಕಟ ನಿರೂಪಣೆಯಲ್ಲಿ ಲೇಖಕರು ಯಾವುದೆ ರಾಜಿ ಮಾಡಿಕೊಂಡಿಲ್ಲದಿರುವುದು ಮಕ್ಕಳ ಬರವಣಿಗೆಯನ್ನು ಅವರು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ. ಕಾದಂಬರಿಯಲ್ಲಿ ಬರುವ ಕಾಡು, ಕಣಿವೆಗಳ ವಿವರಗಳು ಮಕ್ಕಳು ಅಲ್ಲಿಗೆ ಭೆಟ್ಟಿ ಕೊಟ್ಟಷ್ಟು ನೈಜವಾಗಿ ತೆರೆದುಕೊಳ್ಳುತ್ತವೆ:

'ನಾವು ಕಣಿವೆಯ ಆಳಕ್ಕೆ ಇಳಿಯುತ್ತಿದ್ದಂತೆಯೇ ಬೆಳ್ಳಗೆ ಬೆಳಕಾಗತೊಡಗಿತು. ಚೆನ್ನಾಗಿ ಬೆಳಕಾದರೂ ಸೂರ್ಯೋದಯವಾಗಿರಲಿಲ್ಲ. ಏಳಾಯಿತು, ಎಂಟಾಯಿತು, ಆದರೂ ಸೂರ್ಯಬಿಂಬ ಕಾಣಿಸಲಿಲ್ಲ... ನಾವು ಇಳಿಯುತ್ತಿದ್ದ ತಾವಿನಿಂದ ಸ್ವಲ್ಪ ದೂರದಲ್ಲಿ ಎಡಕ್ಕೆ ಭಾರೀ ಎತ್ತರದ ಒಂದು ಬಂಡೆಯ ಮೇಲೆ ಮೂರು ಸೀಳಾಗಿ ಒಂದು ಜಲಪಾತ ಸಮಾನಂತರವಾಗಿ ಕ್ಷೀಣವಾದ ಅಬ್ಬರದೊಂದಿಗೆ ಇಳಿಯುತ್ತಿತ್ತು...' (ಅಮಾನುಷರು, ಪು. ೩೦). ಶಿಲಾದುರ್ಗದಿಂದ ಅಪ್ರಮೇಯ ಸತ್ತು, ಉಳಿದ ಮೂವರು ಜೀವಂತ ಪಾರಾಗಿ ಬರುವುದು ಕಣ್ಣಿಗೆ ಕಟ್ಟುವಷ್ಟು ಪರಿಣಾಮಕಾರಿಯಾಗಿ ನಿರೂಪಿತವಾಗಿದೆ.

'ಅಗ್ನಿಮುಖಿ'ಯೂ ಸಾಹಸಪ್ರಧಾನ ನೀಳ್ಗತೆಯಾಗಿದೆ. ಡುಬ್ಬು, ಸುಧೀರ, ರಂಗು ಎಂಬ ಹೆಸರಿನ ಮಕ್ಕಳು ಲಾಂಚಿನಲ್ಲಿ ನಲಾಗಿರಿಯ ಬುಡವನ್ನು ಮುಟ್ಟಿ ಅಲ್ಲಿ ಅವರು ಪಡೆದುಕೊಳ್ಳುವ ಅನುಭವವು ಸ್ವಾರಸ್ಯಕರವಾಗಿ ಹೇಳಲ್ಪಟ್ಟಿದೆ. ಕಡಲು, ಬೆಟ್ಟಗಳು ಬೆಳದಿಂಗಳಲ್ಲಿ ಹೇಗೆ ಭಯಾನಕವೂ ಸುಂದರವೂ ಆಗಿರುತ್ತವೆಯೆಂಬುದನ್ನು ಲೇಖಕರ ನಿರೂಪಣೆ ಚೆನ್ನಾಗಿ ಮನದಟ್ಟು ಮಾಡುತ್ತದೆ: 'ನರ್ಮದಾ ನಲಾಗಿರಿಯ ತೀರ ಸಮೀಪ ಬರುವ ವೇಳೆಗೆ ಆಕಾಶದಲ್ಲಿ ಚೂರು ಚಂದ್ರಮಾ ಕಾಣಿಸಿಕೊಂಡ. ಬೆಳದಿಂಗಳು ಎಂಬುದು ಒಂದು ವಿಚಿತ್ರ ಮಾಯೆ. ಅದು ಬೆಳಕೂ ಅಲ್ಲ. ಕತ್ತಲೂ ಅಲ್ಲ. ಅದು ಮುಚ್ಚಿ ತೋರಿಸುವುದಕ್ಕಿಂತ ಮುಚ್ಚಿಡುವುದೇ ಹೆಚ್ಚು...' (ಅಗ್ನಿಮುಖಿ, ಪು. ೧೧೧). ಉಸಿರು ಬಿಗಿಹಿಡಿದು ಓದಬೇಕು ಎನ್ನುವ ಕುತೂಹಲವನ್ನು ಎಚ್ಚೆಸ್ವಿಯವರ ಕಾದಂಬರಿಗಳು ಉಂಟುಮಾಡುತ್ತವೆ. ಒಂದು ರೋಚಕ, ಸಾಹಮಯ ಯಾತ್ರೆಯನ್ನು ಕೈಗೊಂಡ ಅನುಭವವನ್ನು ಮಕ್ಕಳಿಗೆ ಅವು ಕೊಡುವುದರಲ್ಲಿ ಸಂದೇಹವಿಲ್ಲ. 'ಕದಿರನ ಕೋಟೆ', 'ನೀಲಿನಗರ'ಗಳೂ ಈ ಮಾತಿಗೆ ಹೊರತಾಗಿಲ್ಲ.

ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

'ಬಾಳ ಒಳ್ಳೋರ್ ನಮ್ಮ ಮಿಸ್ಸು, ಏನು ಕೇಳಿದ್ರೂ ಯಸ್ಸೆಸ್ಸು' ಎನ್ನುವ ಕವನದ ಮೂಲಕ ನಾಡಿನ ಮಕ್ಕಳಿಗೆ ಅತ್ಯಂತ ಪ್ರಿಯರಾದವರು ಡಾ. ಎನ್. ಎಸ್ ಲಕ್ಷ್ಮೀನಾರಾಯಣ ಭಟ್ಟ ಅವರು. ವೆಂಕಟೇಶಮೂರ್ತಿಯವರ 'ಹಕ್ಕಿಸಾಲು' ಪ್ರಕಟವಾಗುವ ಮೊದಲೆ ಭಟ್ಟರ 'ನಂದನ' ಹಾಗೂ 'ಕಿನ್ನರಿ' ಎಂಬ ಧ್ವನಿ ಸುರುಳಿಗಳ ಕ್ಯಾಸೆಟ್‌ಗಳು ಅವರ ನವೀನ ಹಾಡುಗಳನ್ನೊಳಗೊಂಡು ಮಕ್ಕಳನ್ನು ನಾಡಿನುದ್ದಕ್ಕೂ ರಂಜಿಸಿದ್ದವು. ಈ ತರಹದ ಕವನಗಳು ಕೇಳುವುದಕ್ಕೂ ಚೆನ್ನಾಗಿವೆ, ಅನ್ನುವುದಕ್ಕೂ ಚೆನ್ನಾಗಿವೆ ಎಂದು ಮಾಸ್ತರರು, ಪಾಲಕರು ಕೂಡ ಉದ್ಗರಿಸಿದರು. ಮಕ್ಕಳಿಗೆ ಸಾಹಿತ್ಯವೆಂಬುದು, ಕವನವೆಂಬುದು ಸಾಂಪ್ರದಾಯಿಕ

ನೆಲೆಯಲ್ಲಿ ನೀತಿ ಬೋಧನೆಗಾಗಿ ಇರುವ ನೀರಸ ಪಾಠವೆಂಬ ರೀತಿಯನ್ನು ಹೊಡೆದುಹಾಕಿ ಮಕ್ಕಳ 'ಮಿಸ್ಸು' ಬಹಳಷ್ಟು ಒಳ್ಳೆಯವರು, ಮಕ್ಕಳೇ ಶಿಕ್ಷಕರಿಗೆ ಮಾರ್ಕ್ಸ್ ಕೊಡಬಲ್ಲರು, ಗುಂಡನೆನ್ನುವನು ಕೂಳಿಗೆ ದಂಡನಾಗಿದ್ದಾನೆ ಎಂಬಂತಹ ಹೊಸ ಹೊಸ ವಿಚಾರಗಳನ್ನು ಲಕ್ಷ್ಮೀನಾರಾಯಣ ಭಟ್ಟರ ಕವಿತೆಗಳು ನಿರೂಪಿಸಿದವು. ವಿದ್ಯಾರ್ಥಿಗಳಿಗೆ ಈ ರೀತಿಯ ಕವನಗಳನ್ನು ಹೇಳಬಹುದೇ ಎಂಬ ಆಘಾತಕಾರಿ ಪ್ರತಿಕ್ರಿಯೆಯನ್ನು ಭಟ್ಟರ ಕವನಗಳು ಕೆಲವಡೆ ಎದುರಿಸಬೇಕಾಯಿತು. ಅಂದರೆ ಲಯ, ವಸ್ತು, ವಿನ್ಯಾಸ, ಮನೋಭಾವಗಳಲ್ಲಿ ಬದಲಾವಣೆಯನ್ನು ಭಟ್ಟರ 'ನಂದನ' ಹಾಗೂ 'ಕಿಶೋರಿ' ಕವನ ಸಂಕಲನಗಳು ತಂದವು. 'ಬಾಳ ಒಳ್ಳ್ಯೋರ್ ನಮ್ಮ ಮಿಸ್ಸು', 'ಟಾಮೀ ಟಾಮೀ ನಮ್ಮನೆ ನಾಯಿ' ಮುಂತಾದ ಕವಿತೆಗಳೂ ಸೇರಿದಂತೆ ೪೧ ಕವಿತೆಗಳ ಸಂಕಲನ 'ನಂದನ' ಎನ್ನುವ ಹೆಸರಿನಲ್ಲಿ ೧೯೮೯ರಲ್ಲಿ ಪ್ರಕಟವಾಯಿತು. ಈ ಪುಸ್ತಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯು ೧೯೮೯ರ ಪುಸ್ತಕ ಬಹುಮಾನವನ್ನು ನೀಡಿ ಗೌರವಿಸಿತು. 'ಕಿಶೋರಿ' ಕವನ ಸಂಕಲನ ಕೇಂದ್ರ ಸರ್ಕಾರದ 'ನ್ಯಾಷನಲ್ ಕೌನ್ಸಿಲ್ ಫಾರ್ ರಿಸರ್ಚ್ ಆಂಡ್ ಎಜುಕೇಷನಲ್ ಟ್ರೇನಿಂಗ್' (NCERT) ಸಂಸ್ಥೆಯ ೧೯೯೨–೯೩ನೇ ಸಾಲಿನ 'ಬಾಲ ಸಾಹಿತ್ಯ ಪುರಸ್ಕಾರ' ಪಡೆದು ೧೯೯೩ರಲ್ಲಿ ಪ್ರಕಟವಾಯಿತು. 'ಕಿಶೋರಿ' ಸಂಕಲನದ ಕೆಲವು ಕವನಗಳನ್ನು 'ನವಿಲುಗರಿ' ಮತ್ತು 'ಕಿಶೋರಿ' ಕ್ಯಾಸೆಟ್‌ಗಳಲ್ಲಿ ಬಳಸಿಕೊಂಡು ಮತ್ತಷ್ಟು ಮಕ್ಕಳ ಹತ್ತಿರಕ್ಕೆ ಒಯ್ಯಲು ಪ್ರಯತ್ನಿಸಲಾಯಿತೆಂದು ಲೇಖಕರು ಹೇಳಿದ್ದಾರೆ. 'ಗೋವಿನ ಹಾಡು' ಆಧಾರವಾಗಿಟ್ಟುಕೊಂಡು ಬರೆದಿರುವ 'ಸತ್ಯವೇ ನಮ್ಮ ತಾಯಿ ತಂದೆ' ಕವನ ಸಂಕಲನ ೧೯೯೯ರಲ್ಲಿ ಮೊದಲ ಬಾರಿ ಪ್ರಕಟವಾಯಿತು.

ಬಾಳ ಒಳ್ಳ್ಯೋರ್ ನಮ್ಮ ಮಿಸ್ಸು
ಏನ ಹೇಳಿದ್ರೂ ಯಸ್ಸೆಸ್ಸು
ನಗ್ತಾ ನಗ್ತಾ ಮಾತಾಡ್ತಾರೆ
ಸ್ಕೂಲಿಗೆಲ್ಲ ಫೇಮಸ್ಸು

ಎನ್ನುವ ಸಾಲುಗಳು ಲಕ್ಷ್ಮೀನಾರಾಯಣ ಭಟ್ಟರನ್ನು ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಮಕ್ಕಳ ಸಾಹಿತ್ಯದ ಹೊಸ ತಾರೆ ಎಂದು ರುಜುವಾತು ಮಾಡಿದವು. ನವನವೀನವಾದ ಕಲ್ಪನೆ, ಶಬ್ದಗಳು ಕುಣಿಯುವ ರೀತಿ, ಪದ್ಯದಲ್ಲಿ ಹೊರಹೊಮ್ಮುವ ಭಾವ, ನಾಟಕೀಯ ಅಂಶ, ತಮಾಷೆ, ವಿನೋದ, ಅಚ್ಚರಿ ಮತ್ತು ಆತ್ಮಸ್ಥೈರ್ಯ ಭಟ್ಟರ ಕವನಗಳ ಸ್ಥಾಯೀ ಗುಣಗಳಾಗಿವೆ. ತಮಾಷೆ, ಹರಟೆ, ನಗು ಮಾಯವಾಗಿದ್ದ ದಶಕದ ಸಾಹಿತ್ಯಕ್ಕೆ ಅವರ ಕವನಗಳು ಮರುಭೂಮಿಯಲ್ಲಿನ ನೀರಿನ ಬುಗ್ಗೆಗಳಾದವು, 'ಡೊಳ್ಳು ಹೊಟ್ಟೆ ಗುಂಡ' ಎಂಬ ಅವರ ಪದ್ಯವನ್ನೆ ನೋಡಬಹುದು.

ಡೊಳ್ಳು ಹೊಟ್ಟೆ ಗುಂಡ
ತಿಂಡಿ ತಿನ್ನೋಕೆ ಬಂದ
ಹಸಿವು ಇಲ್ಲ ನಂಗೆ
ಚೂರೇ ತಿಂತೀನ್ ಅಂದ
ಒಂದು ತಟ್ಟೆ ಉಪ್ಪಿಟ್ಟು

ಎರಡೇ ನಿಮಿಷ, ಢಂ!
ಮೂರೇ ದೋಸೆ, ನಾಕೇ ರೊಟ್ಟಿ
ಐದೇ ಇಡ್ಲಿ ಢಂ!
ಆರು ವಡೆ ಢಂ
ಏಳು ಉಂಡೆ ಢಂ
ಎಂಟೊ, ಒಂಬತ್ತೊ ಪೂರಿ ಅಷ್ಟೆ
ಢಂ ಢಂ ಢಂ
ಒಂದೇ ಲೀಟರ್ ಹಾಲು ಕುಡಿದು
ಗುಂಡ ಎದ್ದೇ ಬಿಟ್ಟ ಯಾಕೋ ತಿಂಡಿ ಸೇರ್ತಿಲ್ಲಾಂತ
ತುಂಬ ದುಃಖಪಟ್ಟ!
ಜೈ ಜೈ ಜೈ
ತಿಂಡಿ ಪೋತ ಗುಂಡ
ಎಂತ ಹೊಟ್ಟೇಬಾಕ ಬಂದ್ರೂ
ಗುಂಡನ ಎದುರು ಥಂಢ!

ಗುಂಡ ತಿನ್ನುವ ಅಗಾಧ ಪ್ರಮಾಣದ ಆಹಾರಕ್ಕೂ ಅದಕ್ಕೆ ಪೂರಕವಾಗಿ ಹಿನ್ನೆಲೆ ಸಂಗೀತದಂತೆ ದೊಡ್ಡದಾಗಿ ಕೇಳುವ ಢಂ ಎಂಬ ಶಬ್ದಕ್ಕೂ ಎಷ್ಟೊಂದು ಸಾದೃಶ್ಯ ಉಂಟಾಗಿದೆ! ಮತ್ತು ಅವನ ಹೊಟ್ಟೆ ಒಡೆಯಿತೋ ಢಂ! ಮುಂದೆ ಇಟ್ಟ ಪ್ಲೇಟ್ ಖಾಲಿಯಾಯಿತೋ ಢಂ! ಢಂ, ಢಂ, ಢಂ ಗಳು ಒಂದು ಲೋಕವನ್ನು ಸೃಷ್ಟಿಸುತ್ತವೆ. ಗುಂಡ ಎಂದು ಕರೆಯಲ್ಪಡುವ ಅಂತಹ ಬಾಲಕ ಇದ್ದಾನೊ ಇಲ್ಲವೊ, ಇದ್ದರೂ ಅಷ್ಟನ್ನು ತಿಂದಾನೋ ಇಲ್ಲವೊ, ತಿಂದರೂ ಹಾಗೆ ಹೇಳಿದ್ದಾನೊ ಇಲ್ಲವೊ ಎಂಬ ಪ್ರಶ್ನೆಗಳು ಮಕ್ಕಳನ್ನು ಕಾಡುವುದರ ಜೊತೆಗೆ ತಿಂಡಿಪೋತರು ಅಷ್ಟೇನು ಇನ್ನೂ ಹೆಚ್ಚಿಗೆ ತಿಂದಾರು ಎಂದು ನಗಾಡುವ, ಅಂತಹ ಪದ್ಯ ಓದಿದ್ದಕ್ಕೆ ಕೇಳಿದ್ದಕ್ಕೆ ಸಂತೃಪ್ತಿ ಹೊರಸೂಸುವ ಸಂದರ್ಭ ಉಂಟಾಗುತ್ತವೆ. ಅಸಂಭವನೀಯತೆಯನ್ನು ಸಂಭವನೀಯವಾಗಿಸುವ ಕಲೆ ಸಾಹಿತ್ಯಕ್ಕಿದೆ. ಅಂತಹ ಕಲ್ಪನಾಶಕ್ತಿ ಹಾಗೂ ಶಬ್ದಚಾತುರ್ಯಗಳು ಈ ಪದ್ಯವನ್ನು ನಿರ್ಮಿಸುವಲ್ಲಿ ನೆರವಾಗಿವೆ.

'ನಾನೇ ಅಪ್ಪ ಆಗ್ತೀನಿ' ಎನ್ನುವ ಪದ್ಯದಲ್ಲಿ ಕುಟುಂಬದ ಅಪ್ಪ, ಅಮ್ಮ, ಅಜ್ಜಿ, ಅಣ್ಣ, ಅಕ್ಕ ಎಲ್ಲರನ್ನೂ ತರಾಟೆಗೆ ತೆಗೆದುಕೊಳ್ಳುವ, ಪುಟ್ಟ ಮಕ್ಕಳನ್ನು ಕಾಡುವ ಅವರ ಪರಿಯನ್ನು ಪ್ರಶ್ನಿಸುವ ಪುಟ್ಟನೊಬ್ಬನ ದಿಟ್ಟತನದ ಕಲ್ಪನೆಯಿದೆ. ಅಲ್ಲಿ ಹೋಗಬಾರದು, ಇಲ್ಲಿ ಹೋಗಬಾರದು, ಅವರ ಜೊತೆ ಆಡಬಾರದು, ಇವರ ಜೊತೆ ಆಡಬಾರದು, ಆಟ ಆಡಬಾರದು, ಮನೆಯಲ್ಲಿಯೆ ಬಿದ್ದಿರಬೇಕು ಎನ್ನುವಂತಹ ಕಟ್ಟಳೆಗಳಿಂದ ರೋಸಿಹೋಗಿರುವ ಬಾಲಕನೊಬ್ಬನ ಪ್ರತಿಭಟನೆ ಅವನು ಊಹಿಸುವ ಸಂಭವನೀಯತೆಯಲ್ಲಿ ಸಾಧ್ಯವಾಗಿದೆ.

ಅಣ್ಣನ ಕರೆದು ಕೇಳ್ತಿನಿ
"ಯಾಕೋ ಸ್ಕೂಲಿಗೆ ಹೋಗ್ತಿಲ್ಲ?
ತಮ್ಮನ್ ಬಯ್ತೀಯಂತೆಲ್ಲೋ
ಪೆದ್ದ, ನಾಚಿಕೆ ಆಗೊಲ್ವ?

ನಿನ್ನಲ್ಲಿರೋ ಚೆಂಡನ್ನ
ಬ್ಯಾಟು ಬಳಪ ಗೋಲಿನ
ತೆಪ್ಪಗೆ ಅಪ್ನಿಗೆ ಕೊಟ್ಟು ಬಿಡು
ಇಲ್ಲವೆ ತಿನ್ತಿ ಒದೆಯನ್ನ
ಅಜ್ಜೀನ್ ಕರೆದು ಕೇಳ್ತಿನಿ
"ಯಾಕೇ ಮಗೂನ ಬಯ್ತೀಯ?
ಉಸ್ಮಾನ್ ಜೊತೆಗೆ ಆಡಿದರೇನು
ಯಾತಕ್ ಸಿಡಿಸಿಡಿ ಮಾಡ್ತೀಯ?

ಆಡುಮಾತು, ಸರಳ ಸಂಭಾಷಣೆ, ಹೇರಿದ ಮೌಲ್ಯಗಳ ವಿರುದ್ಧ ದಂಗೆಯ ಮನೋಭಾವ, ಸ್ಥೈರ್ಯಗುಣ ಈ ಕವಿತೆಯಲ್ಲಿ ಕಾಣುವ ಅಂಶಗಳಾಗಿವೆ. ಅವನು ಗೆದ್ದ ಮೇಲೆ ಎಲ್ಲ ತಿಂಡಿಯನ್ನು ತಾನೇ ಬಾಚಿಕೊಂಡು ಅಟ್ಟದ ಮೇಲೆ ಗುಪ್ತವಾಗಿ ಇಟ್ಟುಕೊಂಡು ಖರಮ್ ಖುರಮ್ ತಿನ್ನುತ್ತೇನೆ ಎಂದು ಸಾರುತ್ತಾನೆ! ಅದೂ ಅವನ ಗೆಳೆಯರಾದ ಟೀಪೂ ಮತ್ತು ಬಿರ್ಜು ಅವರನ್ನು ಕರೆದುಕೊಂಡು! ಹೀಗೆ ಮುಖ್ಯ ಸಾಹಿತ್ಯ ಧಾರೆಯಲ್ಲಿ ಚಾಲ್ತಿಯಲ್ಲಿದ್ದ ಪ್ರಧಾನ ಲಕ್ಷಣಗಳನ್ನು ಮಕ್ಕಳಲ್ಲಿ ತರಲು ಅವರು ಯತ್ನಿಸಿದರು.

ಮಕ್ಕಳ ಮನೋಲೋಕಕ್ಕೆ ಇಳಿದು ಬರೆಧಾಗ, ಅವರ ಭಾವನೆಗಳೊಂದಿಗೆ ತಾದಾತ್ಮ್ಯತೆ ಹೊಂದಿದಾಗ ಮಾತ್ರವೇ ಅವರ ಭಾವ-ಸಾಹಚರ್ಯಗಳನ್ನು ಅಭಿವ್ಯಕ್ತಪಡಿಸಲು ಸಾಧ್ಯ ಎಂಬುದನ್ನು ಎನ್ನೆಸ್‌ಎಲ್‌ಭಟ್ಟ್ ಅವರ ಕವನಗಳು ಬಿಂಬಿಸುತ್ತವೆ. ಸೃಷ್ಟಿಯ ಪುನರಾವರ್ತನೆ ಕ್ರಿಯೆಯನ್ನು, ಅದರ ವಿಸ್ಮಯವನ್ನು 'ರಾತ್ರಿ-ಹಗಲು ಎರಡೂನು' ಎನ್ನುವ ಪದ್ಯ ಅರ್ಥವತ್ತಾಗಿ ವಿವರಿಸುತ್ತದೆ. ಬೀಜ ಮೊಳೆತು ಮರವಾಗುವ, ಹೂವು-ಕೀಚು-ಕಾಯಿ ಹಣ್ಣಾಗುವ ಮತ್ತೆ ಬೀಜವಾಗುವ ವಿಸ್ಮಯವನ್ನು ಹಿಡಿದಿಟ್ಟಿದೆ.

ರಾತ್ರಿ ಹಗಲು ಎರಡೂನೂ
ಒಂದರ ಹಿಂದೆ ಮತ್ತೊಂದು
ಬರ್ತಾನೇ ಇರ್ತಾವೆ,
ಯಾತಕ ಆ ಥರ ಮಾಡ್ತಾವೆ?

. . . .

ನದಿಗಳೂ ಕಡಲಿಗೆ ಸೇರ್ತಾವೆ
ಬಿಸಿಲಿಗೆ ಆವಿ ಆಗ್ತಾವೆ;
ಮೋಡಗಳಾಗಿ ನೆಲಕ್ಕೆ ಸುರಿದು
ಮತ್ತೇ ನದಿಯೇ ಆಗ್ತಾವೆ

– ರಾತ್ರಿ ಹಗಲು ಎರಡೂನು (ಕಿಶೋರಿ)

ಮಕ್ಕಳನ್ನು ಉದಾಸೀನ, ಅಸಡ್ಡೆ ಭಾವದಿಂದ ಕಾಣುವ ಹಿರಿಯರ ಸ್ವಭಾವವನ್ನು ಕವಿ ಗುರುತಿಸಿದ್ದಾರೆ. ಮಕ್ಕಳಲ್ಲಿ ಅದು ಒಳಗೆಯೇ ಚುಚ್ಚುತ್ತಿರುತ್ತದೆ ಎನ್ನುವ ಅರಿವು ಹಿರಿಯರಲ್ಲಿರುವುದು ಕಡಿಮೆ.

ಏನೋ ಕೇಳಿದರೇನೋ ಹೇಳ್ತಿ
ದೊಡ್ಡೋರೆಲ್ಲ ಹೀಗೇನೆ
ಬೇಗಬೇಗನೆ ದೊಡ್ಡೋನಾಗಿ
ತಿಳ್ಕೋತೀನಿ ನಾನೇನೇ!

–ನಂದನ

ಮಕ್ಕಳ ಸ್ವಾಭಿಮಾನ, ಕೆಚ್ಚುಗಳಲ್ಲದೆ ಅವರಲ್ಲಿರುವ ತುಂಟತನ, ಹಾಸ್ಯಪ್ರಜ್ಞೆ, ಉಲ್ಲಾಸದ ಗುಣಗಳಿಗೆ ಲಕ್ಷ್ಮೀನಾರಾಯಣ ಭಟ್ಟರು ಕನ್ನಡಿ ಹಿಡಿದಿದ್ದಾರೆ.

'ಕಿಶೋರಿ' ಸಂಕಲನದಲ್ಲಿರುವ 'ಮೈಯೇ ಇಲ್ಲ ಬರಿ ಬುರುಡೆ' 'ಹೇಳಿದರೆ ನೀ ಜಾಣ', 'ಗುರ್ ಅಂತೀನಿ ಹುಲಿಯಲ್ಲ', 'ಎಷ್ಟೊಂದಿವೆ ವಜ್ರದ ಬೊಟ್ಟು' ಮುಂತಾದ ಕವನಗಳು ಒಗಟಿನ ರೂಪದಲ್ಲಿವೆ.

ಒಗಟು ಬಿಡಿಸುವ ಆಲೋಚನೆಗೆ ಈಡುಮಾಡುವ, ರಹಸ್ಯದ ರಸ್ತೆಯಂಚಿಗೆ ಅರಿವೂ ಇರುವ ಇಂತಹ ಪದ್ಯಗಳು ಮಕ್ಕಳ ಆಸಕ್ತಿಯನ್ನು ಕೆರಳಿಸುವಂಥವು. ಗೇಯತೆ, ಸಹಜತೆಗಳು ಅವುಗಳನ್ನು ಮತ್ತಷ್ಟು ಮುದ ಮಾಡಿವೆ.

ಎಷ್ಟೊಂದಿವೆ ವಜ್ರದ ಬೊಟ್ಟು
ಅಟ್ಟಲು ಮೇಲೆ ಎತ್ತಿಟ್ಟು
ಹೋಗಿದ್ದಾರೊ ಹೊರಗೆಲ್ಲೊ
ಕೈಗೆ ಸಿಗುವಂತಿಲ್ವಲ್ಲೊ!

–ಎಷ್ಟೊಂದಿವೆ ವಜ್ರದ ಬೊಟ್ಟು

ಮೈಯೇ ಇಲ್ಲದ ಬರಿ ಬುರುಡೆ
ನೆತ್ತಿಗೆ ಜುಂಗಿನ ಬಿಗಿ ಬಿರಡೆ
ನಾ ಯಾರೆಂದು ಹೇಳುವಿಯಾ,
ಸೋತರೆ ಕಾಲಿಗೆ ಬೀಳುವಿಯಾ?

. . . .

ನನ್ನನ್ ಹೊಡೆಯೋ ಹಾಗಿಲ್ಲ
ಹೊಡೆದೋರ್ ಕೈಯೇ ನೋಯುತ್ತೆ,
ನಾನು ಜೊತೇಲಿ ಸೇರ್ಕೊಂಡ್ರೆ
ತಿಂಡಿ ಬಲು ರುಚಿ ಆಗುತ್ತೆ

–ಮೈಯೇ ಇಲ್ಲ ಬರಿ ಬುರುಡೆ

'ಪ್ರಾಣಿ ಸಮ್ಮೇಳನ' ಎಂಬ ಕಥನ ಕವಿತೆ ನಿಸರ್ಗದ ಒಂದು ಭಾಗವಾಗಿರುವ ಮನುಷ್ಯ ಇಡೀ ನಿಸರ್ಗವನ್ನು ನಿಯಂತ್ರಿಸಲು ಹೆಣಗಾಡುವ ದುಷ್ಟ ಆಲೋಚನಾ ಪ್ರವೃತ್ತಿಯನ್ನು ಟೀಕಿಸುತ್ತದೆ. ಪ್ರಕೃತಿಯೊಡನೆ, ಪ್ರಾಣಿ–ಪಕ್ಷಿಗಳೊಡನೆ ಬಿಂಬಿಸುವುದನ್ನು ಬಿಟ್ಟು ಅವುಗಳನ್ನು

ಇಲ್ಲವಾಗಿಸುತ್ತ, ಜೀವಚಕ್ರಕ್ಕೆ ಕುತ್ತು ತರುತ್ತಿದ್ದಾನೆ ಎಂಬ ಸಂದೇಶ ಇದರಲ್ಲಿ ಅಡಕವಾಗಿದೆ. ಸಂದೇಶ ಮುಖ್ಯವಲ್ಲ, ಅದನ್ನು ನಿರ್ವಹಿಸಿರುವ ರೀತಿ ಅತ್ಯುತ್ತಮವಾಗಿದೆ.

ತೀರ್ಥಹಳ್ಳಿ ಕಡೆ ಕಾಡುಗಳಿಂದ
ಮರಗಳ ಮೇಲಿನ ಗೂಡುಗಳಿಂದ
ಬಂದವು ಬಗೆ ಬಗೆ ಪ್ರಾಣಿಗಳು
ಮುದಿ ಹಕ್ಕಿಗಳಾ ಮೇನೆಗಳು

. . . .
ಇರುವೆ ಗೊದ್ದಗಳು ಮೊದಲಲ್ಲಿದ್ದವು
ನಾಯಿ ಬೆಕ್ಕುಗಳು ಆಮೇಲಿದ್ದುವು
ಆನೆ ಸಿಂಹಗಳು ಕೊನೆಯಲ್ಲಿದ್ದವು

ಕತ್ತೆ, ಕೋತಿ, ನರಿ, ನಾಯಿಗಳಿಗೆ ದುಷ್ಟಬುದ್ಧಿ ಆರೋಪಿಸುತ್ತ ಏನೇನೊ ಅಡ್ಡಹೆಸರಿನಿಂದ ಅವುಗಳನ್ನು ಕರೆಯುತ್ತ ಬಂದಿರುವ ಮನುಷ್ಯ ಈ ಪ್ರಾಣಿಸಮ್ಮೇಳನದಲ್ಲಿ ಅವುಗಳಿಂದಲೆ ಉಗಿಸಿಕೊಳ್ಳುತ್ತಾನೆ. ಮಾನವೀಯ ನಡತೆಯ ಪಾಠ ಅದರಲ್ಲಿ ಸೇರಿರುವುದು ಪದ್ಯ ನೀತಿಯ ಹೊರೆಯಿಂದ ನಲುಗುವಂತೆ ಆಗಿದೆ ಎಂದರೂ ಮಕ್ಕಳಲ್ಲಿ ಜಾತಿ–ಮತ ಭೇದಗಳನ್ನರಸದಂತೆ ಹೇಳುವ ಅರಿವಿನ ಪಾಠ ಅದರಲ್ಲಿ ಅಡಗಿದೆ.

'ಸತ್ಯವೇ ನಮ್ಮ ತಾಯಿ–ತಂದೆ' ಸಂಕಲನದಲ್ಲಿ 'ಸತ್ಯವೇ ನಮ್ಮ ತಾಯಿ–ತಂದೆ' ಎಂಬ ಕಥನ ಕವನ, 'ಗಣಪತಿಯ ಸಾಹಸ ಕಥೆಗಳು' ಹಾಗೂ ಕೆಲ ಬಿಡಿ ಕವಿತೆಗಳಿವೆ. 'ಕಿಶೋರಿ' ಸಂಗ್ರಹದಲ್ಲಿದ್ದ 'ಪ್ರಾಣಿ ಸಮ್ಮೇಳನ' ಎಂಬ ಕಥನ ಕವನ ಉಪಶೀರ್ಷಿಕೆಗಳನ್ನು ಜೋಡಿಸಿಕೊಂಡು ಮತ್ತೆ ಇದರಲ್ಲಿ ಸೇರ್ಪಡೆಯಾಗಿದೆ. 'ಸತ್ಯವೇ ನಮ್ಮ ತಾಯಿ–ತಂದೆ' ದೀರ್ಘ ಮಕ್ಕಳ ಕವನವಾಗಿದ್ದು ಕನ್ನಡದ ಪ್ರಸಿದ್ಧ ಗೋವಿನ ಹಾಡನ್ನು ವಿಸ್ತರಿಸಿ ಬರೆಯಲಾದ ಒಂದು ಗೀತರೂಪಕದಂತೆ ಅನಿಸುತ್ತದೆ.

ಮನುಜ ಗಿನುಜರಾ ಕಥೆಯಲ್ಲ ಇದು
ದೇವದಾನವರ ಸ್ತುತಿಯಲ್ಲ
ಆಡಿದ ಮಾತಿಗೆ ಜೀವವ ಹೂಡಿದ
ಗೋವಿನೀ ಕಥೆಗೆ ಸಮವಿಲ್ಲ

. . . .
ಕನ್ನಡ ತಾಯಿಯ ಒಡಲಲ್ಲಿ ಸ–
ಹ್ಯಾದ್ರಿಯ ಸುಂದರ ಮಡಿಲಲ್ಲಿ
ಇದ್ದ ಕಾಳಿಂಗನೆಂಬ ಗೊಲ್ಲ ಸಾ–
ಕಿದ್ದ ಹಸುಗಳನು ಪ್ರೀತಿಯಲಿ

. . . .
ಹೀಗೆ ನುಡಿದು ಹಸುಪಾದಕೆ ವಂದಿಸಿ
ಗಿರಿಯ ಹತ್ತಿ ಮೇಲಕೆ ನಿಂತು

ಸಾಯಲಿ ಹಿಂಸೆಯೆ ಎನ್ನುತ ಕೂಗಿ
ಹಾರಿ ಅಸುವ ನೀಗಿತು ಹುಲಿಯು

–ಸತ್ಯವೇ ನಮ್ಮ ತಾಯಿ–ತಂದೆ

ಈ ದೀರ್ಘ ಕವಿತೆಯಲ್ಲಿ ಅಲ್ಲೊಂದು ಇಲ್ಲೊಂದು ಪಂಕ್ತಿಗಳು ಮನಸೆಳೆಯುವುದನ್ನು ಬಿಟ್ಟರೆ ಮೂಲ ಗೋವಿನ ಹಾಡಿನ ಉತ್ಕಟತೆಯನ್ನು ಇದರಲ್ಲಿ ಕಾಣಲಾರೆವು. ಗೋವಿನ ಹಾಡನ್ನು ಆಧರಿಸದೆ ಬೇರೊಂದು ರೀತಿಯಲ್ಲಿ ಆಧುನಿಕ ಸಂವೇದನೆ ರೂಪಗಳಲ್ಲಿ ಇದನ್ನು ಅವರು ಬರೆದಿದ್ದರೆ ಒಳ್ಳೆಯದಿತ್ತು ಎನ್ನಿಸುತ್ತದೆ. 'ನಂದನ', 'ಕಿಶೋರಿ' ಕೃತಿಗಳ ಮಾಂತ್ರಿಕತೆ, ಯಶಸ್ಸು ಈ ಕೃತಿಗೆ ದಕ್ಕಲಾರದು. ಮೇಲಾಗಿ ಒಬ್ಬ ಲೇಖಕನ ಎಲ್ಲ ಕೃತಿಗಳೂ ಸಮಾನ ಸಿದ್ಧಿ ಪಡೆಯುವುದು ಕಷ್ಟಸಾಧ್ಯ. ನೀರನ್ನು ಚೆಲ್ಲುವ ಮೋಡ ಒಮ್ಮೊಮ್ಮೆ ಮಳೆ ಸುರಿಸದೆ ಮುಂದೆ ಸಾಗಬಹುದು. ಆದರೆ ಅದರಿಂದ ಹಿಂದಣ ಫಲದ ಮಹತ್ವ ಕಡಿಮೆಯಾಗಲಾರದು. 'ಗೇರ್ ಗೇರ್ ಮಂಗಣ್ಣ', 'ಬಾಳ ಒಳ್ಳ್ಯೋರ್ ನಮ್ಮ ಮಿಸ್ಸು', 'ಹೇಳಿ ಮಿಸ್, ಹೇಳಿ ಮಿಸ್' ಮುಂತಾದ ಲಕ್ಷ್ಮೀನಾರಾಯಣ ಭಟ್ಟರ ಕವನಗಳನ್ನು ಮಕ್ಕಳು ಗುಣುಗುಣಿಸುತ್ತಲೆ ಇರುತ್ತಾರೆ.

ನಾ. ಡಿಸೋಜ

ಕನ್ನಡದ ಒಬ್ಬ ಮಹತ್ವದ ಕತೆಗಾರರಾಗಿ, ಕಾದಂಬರಿಕಾರರಾಗಿ ಜನಮನ್ನಣೆ ಪಡೆದಿರುವ ನಾ. ಡಿಸೋಜ (ನಾರ್ಬರ್ಟ್ ಡಿ'ಸೋಜ, ಹುಟ್ಟಿದ್ದು ಸಾಗರ, ಶಿವಮೊಗ್ಗ ಜಿಲ್ಲೆ, ೧೯೩೭) ಮಕ್ಕಳಿಗಾಗಿ ಹೃದ್ಯವಾದ ಕಥಾಬರವಣಿಗೆಯನ್ನು ಮಾಡುವ ಮೂಲಕ ಕನ್ನಡದಲ್ಲಿ ತೀರ ಅಲಕ್ಷ್ಯಕ್ಕೆ ಒಳಗಾಗಿದ್ದ ಮಕ್ಕಳ ಕಾದಂಬರಿ ರೂಪಕ್ಕೆ ಜೀವಕೊಟ್ಟರು. 'ಗೋಪಿಯ ಗೊಂಬೆ' (೧೯೮೩), 'ಬೆಳಕಿನೊಡನೆ ಬಂತು ನೆನಪು' (೧೯೮೪), 'ನೇತ್ರಾಣಿ ಗುಡ್ಡಕ್ಕೆ ಯಾತ್ರೆ' (೧೯೮೫), 'ಕಾಡಾನೆಯ ಕೊಲೆ' (೧೯೬೩), 'ಆನೆ ಬಂತೊಂದಾನೆ' (೧೯೯೩), 'ವಿನು, ಸುನ್ನಿ ಗೆಳೆಯರು' (೧೯೯೫), 'ಪಾರಿವಾಳಗಳ ದ್ವೀಪ' (೨೦೦೦), 'ಹಕ್ಕಿಗೊಂದು ಗೂಡು ಕೊಡಿ' (೨೦೦೨), 'ಮುಳುಗಡೆ ಊರಿಗೆ ಬಂದವರು' (೨೦೦೮), 'ಶಾಲೆಗೆ ಹೋಗದ ಹುಡುಗಿಯರು' (೨೦೦೯), 'ಕೊನೆ ಮನೆ ಹುಡುಗರು' (೨೦೦೯), 'ಮೀನುಗಾರ ದೊರೆ' (೨೦೦೯), 'ಆನೆ ಹುಡುಗ ಅಬ್ದುಲ್ಲಾ', 'ಕೋಳಿ ಅನಂತ', 'ಸಮಯದ ಸದ್ಬಳಕೆ' (೨೦೧೦), 'ಬೆಟ್ಟದಪುರದ ದಿಟ್ಟ ಹುಡುಗರು' ಮುಂತಾದ ಕಾದಂಬರಿಗಳು, 'ಮತ್ತೆ ಹೇಳಿದ ಅಜ್ಜೀ ಕತೆಗಳು' (೨೦೦೮), 'ಪುಟ್ಟಜ್ಜಿ ಪುಟ್ಟಜ್ಜಿ ಕತೆ ಹೇಳು' (೨೦೧೨), 'ಸಮಗ್ರ ಕತೆಗಳು' (೨೦೧೨) ಮುಂತಾದ ಕಥಾಸಂಕಲನಗಳು, 'ಗೆಳೆಯರ ಬಳಗಕ್ಕೆ ಜೈ' (೧೯೯೯), 'ಶರಾವತಿ' (೧೯೮೧), 'ಮುಂದೇನು?' (೧೯೯೭), 'ಕೃಷ್ಣನ ಕೊಡುಗೆ' (೨೦೦೧), 'ಬದುಕಿಗೆ ಬಣ್ಣ', 'ಅಕ್ಷರ ಕಲಹ', 'ಹಕ್ಕಿಗಳಿಗೆ ಬಂತು ಬಣ್ಣ', 'ಮಕ್ಕಳು ನೀಡಿದ ಶಿಕ್ಷೆ' ಮುಂತಾದ ನಾಟಕಗಳು ಸೇರಿದಂತೆ ಹಲವು ಜೀವನ ಚರಿತ್ರೆ, ಪ್ರವಾಸ ಅನುಭವ, ಪ್ರದೇಶದ ಚಿತ್ರಣಗಳನ್ನು ನೀಡಿರುವುದು ಮಕ್ಕಳಿಗಾಗಿ ಅವರು ಎಷ್ಟೊಂದು ವಿಪುಲ ಸಾಹಿತ್ಯದ ಸೃಷ್ಟಿ ಮಾಡಿದ್ದಾರೆಂಬುದಕ್ಕೆ ಸಾಕ್ಷಿಯಾಗಿದೆ. 'ಬೆಳಕಿನೊಡನೆ ಬಂತು ನೆನಪು' ಕಿರುಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನವನ್ನು ಮತ್ತು 'ಮುಳುಗಡೆ ಊರಿಗೆ ಬಂದವರು' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲಸಾಹಿತ್ಯ ಪುರಸ್ಕಾರವನ್ನು ಅವರು ಪಡೆದಿದ್ದಾರೆ.

ಘಟನೆಗಳನ್ನು ನೆನಪಿನ ಹಕ್ಕಲುಗಳನ್ನಾಗಿ ಪರಿವರ್ತಿಸಿಕೊಂಡು ವಾಸ್ತವದ ಚಿತ್ರಣವನ್ನು ಮಕ್ಕಳಿಗೆ ಉಣಬಡಿಸಿದ್ದು ಡಿಸೋಜರವರ ಹೆಚ್ಚುಗಾರಿಕೆಯಾಗಿದೆ. ಒಂದು ರೀತಿಯಲ್ಲಿ ಅವರು ತಮ್ಮ ಮಲೆನಾಡಿನ ಅನುಭವಗಳನ್ನು ಕಥೆಗಾರನೊಬ್ಬನ ಮೂಲಕ ಹೇಳಿಸಿ ಅವು ರಮ್ಯವೂ ಕಾಲ್ಪನಿಕವೂ ನೈಜವೂ ಮುಖಕ್ಕೆ ರಾಚುವಂಥವೂ ಆಗುವಂತೆ ನೋಡಿಕೊಳ್ಳುತ್ತಾರೆ. ಸರಳ ಭಾಷೆಯಲ್ಲಿ ಮತ್ತು ಪರಿಚಿತ ವಾತಾವರಣದಲ್ಲಿ ಕಾದಂಬರಿಗಳು ಬಿಚ್ಚಿಕೊಳ್ಳುವುದು ಅವರ ಬಾಲಸಾಹಿತ್ಯದ ಮತ್ತೊಂದು ಮುಖ್ಯ ಲಕ್ಷಣವಾಗಿದೆ.

ನೆನಪುಗಳು ಸಾಯುವುದಿಲ್ಲ ಎಂದು ಹೇಳುತ್ತಾರೆ. ಅದೂ ಬಾಲ್ಯದ ನೆನಪುಗಳು ಮತ್ತೆ ಮತ್ತೆ ಮರುಕಳಿಸುತ್ತಿರುತ್ತವೆ. ಆ ನೆನಪುಗಳನ್ನು ಅಭಿವ್ಯಕ್ತಿಯ ಬೆಂಕಿಯಲ್ಲಿ ಹಾಯಿಸಿದಾಗ ಅವು ಕಲಾತ್ಮಕ ರೂಪ ತಳೆಯುತ್ತವೆ. ಬಾಲ್ಯದ ನೆನಪುಗಳನ್ನು, ಘಟನೆಗಳನ್ನು ಮತ್ತೆ ಜೀವಿಸುವ ಉತ್ಕಟತೆಯ ಮೇಲೆ ಬರವಣಿಗೆಯ ಯಶಸ್ಸು ಅವಲಂಬಿಸಿರುತ್ತದೆ. 'ಬೆಳಕಿನೊಡನೆ ಬಂತು ನೆನಪು', 'ಮುಳುಗಡೆ ಊರಿಗೆ ಬಂದವರು', 'ಕಾಡಾನೆಯ ಕೊಲೆ', 'ಹಕ್ಕಿಗೊಂದು ಗೂಡು ಕೊಡಿ' ಮುಂತಾದವು ನಾ. ಡಿಸೋಜ ಅವರ ಬಾಲ್ಯದ ದಟ್ಟ ಬೆಳಕುಗಳನ್ನು ಮನಗಾಣಿಸುತ್ತವೆ. ಸುಂದರವೂ ರುದ್ರ–ಭಯಂಕರವೂ ಆದ ನಿಸರ್ಗ ಮತ್ತು ಅದನ್ನು ಕೊರೆದು ಸೌಲಭ್ಯಗಳ ವಾಹಕವಾಗಿಸುವ ಮನುಷ್ಯನ ಆಧುನೀಕರಣದ ಪ್ರಕ್ರಿಯೆ– ಇವು ಒಂದಕ್ಕೊಂದು ಸಂಘರ್ಷದ ಹಾದಿಯಲ್ಲಿರುವುದನ್ನು ಡಿಸೋಜ ಚಿತ್ರಿಸುತ್ತಾರೆ. ಜೋಗದಲ್ಲಿ ವಿದ್ಯುತ್ ಉತ್ಪಾದನೆ ಕಾಮಗಾರಿಯ ಘಟನೆಗಳನ್ನು ಇಟ್ಟುಕೊಂಡು 'ಬೆಳಕಿನೊಡನೆ ಬಂತು ನೆನಪು' ಎನ್ನುವ ಕಾದಂಬರಿಯನ್ನು ಅವರು ಬರೆದಿದ್ದಾರೆ. ಮಾನವೀಯ ಚಿತ್ರಣ ಈ ನೀಳ್ಗತೆಯ ಪ್ರಮುಖ ಅಂಶವಾಗಿದೆ. ಬಟನ್ ಒತ್ತಿದೊಡನೆ ಬಲ್ಬಿನ ಮೂಲಕ ಬೆಳಕು ಹರಡುವ ಆಧುನಿಕ ಸೌಲಭ್ಯದ ಹಿಂದೆ ಸಾವಿರಾರು ಸಾಮಾನ್ಯರ ತ್ಯಾಗ–ಬಲಿದಾನಗಳ ಕಥೆ ಇರುವುದನ್ನು ಸೂಚ್ಯವಾಗಿ ಓದುವ ಮಕ್ಕಳಿಗೆ ತಿಳಿಸುವುದು ಲೇಖಕರ ಉದ್ದೇಶವಾಗಿರುವಂತಿದೆ. ನೀತಿಪಾಠ ಇಲ್ಲಿ ಎಲ್ಲಿಯೂ ವಾಚ್ಯವಾಗಿ ಕಾಣಿಸಿಕೊಂಡಿಲ್ಲ. ಇದೊಂದು ಕಾಡಿನ ಕಥೆ. ನಾಡವರು ಕಾಡಿಗೆ ಹೋಗುವ, ಕಾಡಿನಲ್ಲಿ ಇರುವವರ ಜೊತೆ ಬದುಕುವ, ಮತ್ತೆ ನಾಡಿಗೆ ವಾಪಸ್ ಬರುವ, ಅಡವಿಯಲ್ಲಿರುವವರು ಬದುಕಿಗಾಗಿ ಹೆಣಗಾಡುವ ಕಥೆಯಾಗಿ ರೂಪಾಂತರಗೊಂಡಿದೆ. ಸಾಮರಸ್ಯ, ಮಾನವೀಯತೆಯಿಂದ ಬದುಕು ಸುಂದರವಾಗಬಲ್ಲುದು ಎಂಬುದನ್ನು ಹೇಳುತ್ತದೆ. ಅದರ ಜೊತೆಗೆ ಕಷ್ಟಸಹಿಷ್ಣುಗಳಿಗೆ ಲೇಖಕರು ಮರುಗುವ, ಅವರ ಪಕ್ಷ ವಹಿಸುವ, ಸಾಮಾಜಿಕ ನ್ಯಾಯದ ತಕ್ಕಡಿ ತೂಗುವ ಸನ್ನಿವೇಶಗಳು ಪರೋಕ್ಷವಾಗಿ ಬಣ್ಣಿಸಲ್ಪಟ್ಟಿವೆ. ಮಕ್ಕಳಿಗಾಗಿ ಇದನ್ನು ಡಿಸೋಜ ಅವರು ಮಾಡಿದ್ದು ಮಹತ್ವದ್ದಾಗಿದೆ. ಜೋಗದಲ್ಲಿ ಮಹಾತ್ಮಾಗಾಂಧಿ ವಿದ್ಯುದಾಗಾರವನ್ನು ಕಟ್ಟುವ ಸಂದರ್ಭವನ್ನು 'ಬೆಳಕಿನೊಡನೆ ಬಂತು ನೆನಪು' ಕಾದಂಬರಿ ಹಿನ್ನೆಲೆಯಾಗಿ ಹೊಂದಿದೆ. ಇಲ್ಲಿರುವ ರಾಮು ನಮ್ಮ ನೆರೆಮನೆಯ ಹುಡುಗನಷ್ಟು ಆಪ್ತನಾಗುವ ಪಾತ್ರ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಕುವೆಂಪು ಅವರು ಕಾಡನ್ನು ಹೇಗೆ ಅನುಚಾನ ಕಾಡುವ ಪಾತ್ರವನ್ನಾಗಿ ಮಾಡುತ್ತಾರೋ ಡಿಸೋಜ ಅವರು ಕೂಡ ಈ ಕಾದಂಬರಿಯಲ್ಲಿ ದಟ್ಟ ಕಾಡಿನ ನಡುವೆ ನಡೆಯುವ ಮನುಷ್ಯಲೋಕದ ವ್ಯಾಪಾರಗಳನ್ನು ಮಕ್ಕಳ ಕಣ್ಣಿಂದ ನಿರೂಪಿಸುತ್ತಾರೆ.

ರಾಮುವಿನ ತಂದೆ ಇಂಜಿನಿಯರ್. ರಾಮು ಅಪ್ಪನೊಡನೆ ಜೋಗಕ್ಕೆ ಬಂದು ಅಲ್ಲಿಂದ ಮತ್ತೆ ಅಪ್ಪ ಬೇರೆ ಊರಿಗೆ ವರ್ಗವಾಗಿ ಹೋಗುವವರೆಗಿನ ಘಟನೆಗಳು ಇಲ್ಲಿಯ ಕಥಾವಸ್ತು.

ಮೈನವಿರೇಳಿಸುವ ಸನ್ನಿವೇಶ, ಧುತ್ತೆಂದು ಎದುರಾಗುವ ಪ್ರಸಂಗ, ಸಾಹಸದ ಘಟನೆ, ದುರಂತದ ಕ್ಷಣ ಈ ಕಾದಂಬರಿಯನ್ನು ಆಪ್ಯಾಯಮಾನವನ್ನಾಗಿ ಮಾಡುತ್ತದೆ. ರಾಮು ಮತ್ತು ಕುಟುಂಬ ಜೀಪಿನಲ್ಲಿ ಹೋಗುವಾಗ ಭಯಾನಕ ಕಾಡುಕೋಣಗಳು ಎದುರಾಗುತ್ತವೆ. ನೇರಳೆ ಹಣ್ಣು ತರಲೆಂದು ರಾಮು ಮತ್ತು ಸ್ನೇಹಿತ ಕಾಡಿಗೆ ಹೋದಾಗ ಆ ಹೊತ್ತಿಗೆ ತೊರೆಗೆ ನೀರು ಕುಡಿಯಲು ಬಂದ ಪಟ್ಟೆಹುಲಿಯನ್ನು ಕಂಡು ಬೆಚ್ಚಿ ಬೀಳುತ್ತಾರೆ. ಹೆದರಿ ಅಲ್ಲಿಂದ ಕಾಲುಕೀಳುತ್ತಾರೆ. ರಾಮುನ ಅವ್ವ ರಾತ್ರಿಯ ಕಗ್ಗತ್ತಲಲ್ಲಿ 'ಕಟ್ಟಿಗೆಯ ತುಂಡು ಎಂದು ಅಲ್ಲಿ ಬಿದ್ದುಕೊಂಡಿದ್ದ ಹೆಬ್ಬಾವನ್ನೇ ಉರಿಯುವ ಒಲೆಗೆ ಹಾಕುವುದು, ಅದು ಝಳಕ್ಕೆ ಹೆದರಿ ಆಗಿಂದಾಗಲೇ ಹೊರಬರುವುದು ಮತ್ತೊಂದು ಕಾದಂಬರಿಯ ಮೈ ಝುಮ್ಮೆನಿಸುವ ಘಟನೆಯಾಗಿದೆ. ಇಂತಹವುಗಳನ್ನು ಓದಿದಾಗ ಮಕ್ಕಳ ಮನಸ್ಸು ಎಷ್ಟೆಲ್ಲ ರೀತಿಯಿಂದ ಪ್ರತಿಕ್ರಿಯಿಸುತ್ತದೆ ಎಂಬುದನ್ನು ನಾವು ಯೋಚಿಸಬೇಕು. ಜೋಗದ ವಿದ್ಯುತ್ ಕೆಲಸಗಾರರು ಅಲ್ಲಿ ವಿದ್ಯುತ್ತನ್ನು ಹುಟ್ಟಿಸುವ, ಅದನ್ನು ಹಳ್ಳಿ–ನಗರಗಳಿಗೆ ಹರಿಸುವ ಸಾಹಸದಲ್ಲಿ ನಿರತರಾಗಿದ್ದರೆ, ಮಕ್ಕಳು ಆ ಕಾಡು, ಸೃಷ್ಟಿಯ ಜೊತೆಗೆ ಮನುಷ್ಯ ನಡೆಸುತ್ತಿರುವ ಹೋರಾಟ, ಯಂತ್ರಗಳು ಕಾರ್ಯನಿರ್ವಹಿಸುವ ರೀತಿ, ಹಳ್ಳಿಗರ ಪ್ರೀತಿ ಮುಂತಾದ ಹೊಸ ಅನುಭವಗಳ ಸಾಹಸದಲ್ಲಿ ತೊಡಗಿದ್ದಾರೆ. ಮಲೆನಾಡಿಗೆ ಮೊದಲ ಸಲ ಹೋಗುವಾಗ ಎದುರಾಗುವ ಕಣಿವೆ, ದಟ್ಟಕಾಡು, ಹಾವಿನ ಹಾಗೆ ಹರಿದು ಹೋಗಿರುವ ದಾರಿ ಮುಂತಾದ ಕಾಡಿನ ರಹಸ್ಯಗಳು ರಾಮು ಮತ್ತು ಅವನ ಗೆಳೆಯರಾದ ಚಂದ್ರು, ಗಣೇಶ, ಮಂಜು, ಶ್ರೀನಾಥ ಮುಂತಾದವರಿಗೆ ಆಶ್ಚರ್ಯದ ಜೊತೆಗೆ ದಿಗಿಲು– ಭಯಗಳನ್ನುಂಟುಮಾಡುತ್ತವೆ. ವಿದ್ಯುತ್ ಉತ್ಪಾದನೆಯಲ್ಲಿ ನಿರತ ಟ್ರಾಲಿಗಳು, ಟ್ರಾಲಿಯಿಂದ ಹರಿದು ಹೋಗುವ ಸಿಮೆಂಟು, ಉಸುಕು, ಕಡಿಗಳು, ಅಲ್ಲಿಯ ಕೆಲಸಗಾರರು, ಕೂಗಾಟ ಮಕ್ಕಳ ಮನ ತುಂಬುತ್ತವೆ. ಟ್ರಾಲಿಯನ್ನು ಜಾರುಬಂಡೆಯ ತರಹ ಉಪಯೋಗಿಸಬೇಕೆಂದು ಯೋಚಿಸಿದವರು ಸ್ವಲ್ಪದರಲ್ಲಿಯೇ ಅಪಾಯದಿಂದ ತಪ್ಪಿಸಿಕೊಳ್ಳುತ್ತಾರೆ. ರಾಮು ಮನೆಯ ಕೆಲಸದಾಳು 'ಅಡವಿ' ಆ ಹೆಸರಿನಿಂದ ಅಡವಿಗೆ ಅನ್ವರ್ಥವಾಗಿದ್ದಾನೆ. ಪರೋಪಕಾರಕ್ಕೆ ಅವನು ಮತ್ತೊಂದು ಹೆಸರಾಗಿದ್ದಾನೆ. ಅವನು ತಂದುಕೊಡುವ ಜೇನುತುಪ್ಪ, ತರಕಾರಿ, ಅಪಾಯದ ಸಮಯದಲ್ಲಿ ಪಾರು ಮಾಡಿದ ಪ್ರಸಂಗ, ರಾಮುವನ್ನು ತನ್ನ ಮಗನಿಗಿಂತಲೂ ಹೆಚ್ಚು ಪ್ರೀತಿಸಿದುದು ಈ ಎಲ್ಲ ಸಂಗತಿಗಳು ಹರಿಹರೆಯದ ರಾಮುವಿನ ಚಿತ್ತಿನಲ್ಲಿ ಕೆತ್ತಲ್ಪಡುತ್ತವೆ. ಆದರೆ ಅಡವಿ ಕಾಲುಜಾರಿ ನದಿಯಲ್ಲಿ ಬಿದ್ದು ಸತ್ತುಹೋಗುವ ದುರಂತದ ಸುದ್ದಿ ರಾಮು ಸೇರಿದಂತೆ ಆ ಕುಟುಂಬವನ್ನು ಕಂಗೆಡಿಸಿಬಿಡುತ್ತದೆ. ಆ ಪ್ರದೇಶ ಬೆಳಕಿನ ಆಗಮನದೊಂದಿಗೆ ನಿಧಾನಕ್ಕೆ ಎಲ್ಲ ಸೌಲಭ್ಯಗಳನ್ನು ಪಡೆಯುತ್ತಿದ್ದಂತೆಯೇ ರಾಮುವಿನ ತಂದೆಗೆ ಮತ್ತೆ ವರ್ಗವಾಗುತ್ತದೆ. ಭಾರವಾದ ಮನಸ್ಸಿನೊಂದಿಗೆ ರಾಮು ಜೋಗವನ್ನು ಬಿಡುತ್ತಾನೆ. ಹಾಸ್ಯದ ಪ್ರಸಂಗಗಳು ಇರುವಂತೆಯೇ ಮನ ಕಲಕುವ ಸಂದರ್ಭಗಳು ಇರುವುದರಿಂದ 'ಬೆಳಕಿನೊಡನೆ ಬಂತು ನೆನಪು' ಮಕ್ಕಳ ಬರವಣಿಗೆಯ ಒಂದು ಉತ್ಕೃಷ್ಟ ಉದಾಹರಣೆಯಾಗಿದೆ.

'ಗೋಪಿಯ ಗೊಂಬೆ' ಕಿರುಕಾದಂಬರಿಯಲ್ಲಿ ಬೊಂಬೆಗೆ ಒಂದು ವಿಶಿಷ್ಟ ವ್ಯಕ್ತಿತ್ವ ನೀಡುವ ಮೂಲಕ ಬೊಂಬೆಗಳು ಹೇಗೆ ಮಕ್ಕಳ ಬದುಕಿನಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತವೆಂಬುದನ್ನು ಲೇಖಕರು ನಿರೂಪಿಸಿದ್ದಾರೆ. ಕಲ್ಪನೆ ಮತ್ತು ವಾಸ್ತವಗಳು ಬೆರೆತಿರುವ

ಒಂದು ಸೊಗಸಾದ ಕೃತಿ ಇದಾಗಿದೆ. ಗೊಂಬೆ ಒಂದು ನಿರ್ಜೀವ ವಸ್ತುವಲ್ಲ. ಅದಕ್ಕೆ ಅದರದೇ ಆದ ಬೇಕು-ಬೇಡಗಳಿವೆ. ಯಾರು ತನ್ನನ್ನು ಆದರಿಸುವವರು, ಯಾರು ತಿರಸ್ಕರಿಸುವವರು ಎಂದು ಅದು ಲೆಕ್ಕ ಹಾಕುತ್ತದೆ. ಅಂಗಡಿಯೊಂದರ ಶೋಕೇಸಿನಲ್ಲಿರುವ ಗೊಂಬೆಯನ್ನು ಆಡಂಬರ-ಅಬ್ಬರ-ಕೃತಕತೆಗಳಲ್ಲಿ ಮುಳುಗಿರುವ ಸರೋಜ ಎನ್ನುವ ಹೆಂಗಸು ಖರೀದಿಸುತ್ತಾಳೆ. ಜುಂ ಎಂದು ಅವಳೊಂದಿಗೆ ಕಾಡಿನಲ್ಲಿ ಪ್ರಯಾಣಿಸುವ ಗೊಂಬೆ ಟಿ.ವಿ.ಯ ಮೇಲೆ ತುಸುಹೊತ್ತು ಕುಳಿತು ದಣಿವಾರಿಸಿಕೊಳ್ಳುವಷ್ಟರಲ್ಲಿ ಶೋಕೇಸ್ ಎಂಬ ಜೈಲಿನಲ್ಲಿ ಬಂದಿಯಾಗುತ್ತದೆ. ಆದರೆ ಸರೋಜಳ ಅಕ್ಕನ ಮಗ ಗೋಪಿ ಬಂದಾಗ ಗೊಂಬೆಗೆ ಬಿಡುಗಡೆ ಸಿಗುತ್ತದೆ. ಆ ಬಾಲಕನ ಬಾಲ್ಯ ಬೊಂಬೆಯಿಂದ ನಳನಳಿಸುತ್ತದೆ. ಗೊಂಬೆ ಕಳೆಯುವ, ಪುನಃ ಸಿಗುವ ಕ್ಷಣಗಳು ಓದುಗ ಮಕ್ಕಳನ್ನು ತುದಿಗಾಲ ಮೇಲೆ ನಿಲ್ಲಿಸುತ್ತವೆ. ಭಾವನೆಗಳ ಮಹಾಪೂರವೇ ಇದರಲ್ಲಿ ತುಂಬಿಕೊಂಡಿದೆ. ಕತೆ ಸರಳವಾಗಿದ್ದರೂ ಬಿಗಿಯಾದ ನಿರೂಪಣೆಯಿಂದ ಕತೆ ತೀವ್ರತೆಯನ್ನು ಕಾಯ್ದುಕೊಳ್ಳುತ್ತದೆ. ಮನಸ್ಸುಗಳ ತಾಕಲಾಟವನ್ನೂ ಈ ಕೃತಿಯಲ್ಲಿ ಮಕ್ಕಳು ಅನುಭವಿಸುವಂತಾಗುತ್ತಾರೆ.

'ಕಾಡಾನೆಯ ಕೊಲೆ' ಮತ್ತಷ್ಟು ಸಹಜತೆಯಿಂದ, ಗಾಢ ಅನುಭವದ ಪರಿಣಾಮಕಾರಿ ಅಭಿವ್ಯಕ್ತಿಯಿಂದ ಮಕ್ಕಳ ಮನಸ್ಸಿನಲ್ಲಿ ಬಹುಕಾಲ ನಿಲ್ಲುವಂಥದು. ಕಾಡು, ವನ್ಯಜೀವಿಗಳ ಬಗೆಗೆ ಮಕ್ಕಳಿಗಿರುವ ಪ್ರೀತಿ, ಕಾಳಜಿ ಮತ್ತು ಕುತೂಹಲಗಳು ಇದರಲ್ಲಿ ಎದ್ದುಕಾಣುವ ಅಂಶಗಳಾಗಿವೆ. ಆನೆಯ ದಂತಕಳ್ಳರನ್ನು ಮಕ್ಕಳು ಹಿಡಿಯುವ ಸಾಹಸಮಯ ಕಾದಂಬರಿಯಂತೆ ತೋರಿದರೂ ಎಳೆಯರು ಕಾಡಿನಲ್ಲಿ ಪಡೆಯುವ ಅನುಭವಗಳಿಂದ ಅವರು ಹೊಸ ವ್ಯಕ್ತಿತ್ವವನ್ನು ಧರಿಸುವಂತಾಗುತ್ತಾರೆ. ಹೆದರಿಕೆ ಹಾಗೂ ಕುತೂಹಲಗಳೊಂದಿಗೆ ಕಾಡಿನೊಳಗೆ ಹೆಜ್ಜೆಯಿಡುವ ಹುಡುಗರು ಎದೆಗುಂದದೆ ಸಾಹಸವನ್ನು ಮೆರೆಯುವಂತಾಗುತ್ತಾರೆ. ತಮ್ಮ ಸುತ್ತಲಿನ ನಿಸರ್ಗದ ಬಗೆಗಿನ ಪ್ರೀತಿ ಅವರಲ್ಲಿ ಆಡವಾಡುತ್ತಲೆ ಬೆಳೆದುಬಿಟ್ಟಿದೆ. ಗೆಳೆಯನಂತೆ ಒಂದಾಗಿದೆ ಕಾಡು ಅವರ ಬದುಕಿನಲ್ಲಿ. ಅದು ಅವರಲ್ಲಿ ಸಹಿಷ್ಣುತೆ ಬೆಳೆಸಿದೆ. ಸಹಜೀವನದ ಪಾಠ ಕಲಿಸಿದೆ. ಮಂಜು, ಗೋಪಿ, ನಾಗ, ರಂಗ ಒಬ್ಬರಿಗೊಬ್ಬರು ಬಹಳಷ್ಟು ಹಚ್ಚಿಕೊಂಡಿದ್ದಾರೆ. ಕೊರಲಕ್ಕಿ ಹಳ್ಳಿಯಿಂದ ಗೇರುಸೊಪ್ಪೆಯ ಶಾಲೆಗೆ ದಿನವೂ ನಡೆದುಹೋಗುವ ಇವರ ಮನಸ್ಸಿನಲ್ಲಿ ಶರಾವತಿ ನದಿ, ಸುತ್ತಲೂ ಹಬ್ಬಿರುವ ಮಲೆಗಳು, ಆಳ ಕಣಿವೆ, ದಟ್ಟವಾಗಿ ಹಬ್ಬಿರುವ ಗಿಡಮರಗಳು ಆಳವಾಗಿ ನಟ್ಟಿವೆ. ಮಲೆನಾಡಿಗರಲ್ಲಿ ಸುತ್ತಲಿನ ಮಲೆಗಳು ಹೇಗೆ ಅವರ ಬದುಕಿನ ಅವಿಭಾಜ್ಯ ಅಂಗವಾಗಿವೆ ಎಂಬುದನ್ನು ಇದು ತಿಳಿಯಪಡಿಸುತ್ತದೆ. ನೋವಾಗಲಿ, ನಲಿವಾಗಲಿ ಮಕ್ಕಳ ಮನಸ್ಸಿನಲ್ಲಿ ಎಷ್ಟು ಆಳ ಹೋಗುತ್ತದೆ ಎಂಬುದಕ್ಕೆ ಈ ಕೃತಿಯೂ ಅಲ್ಲದೆ 'ಆನೆ ಬಂತೊಂದಾನೆ', 'ನೇತ್ರಾಣಿ ಗುಡ್ಡಕ್ಕೆ ಯಾತ್ರೆ', 'ವಿನಿಸುನ್ನಿ ಗೆಳೆಯರು', 'ಶಾಲೆಗೆ ಹೋಗದ ಹುಡುಗಿಯರು' ಮುಂತಾದ ಪುಸ್ತಕಗಳು ಸಾಕ್ಷಿಯಾಗಿವೆ.

ಮಕ್ಕಳ ಸಾಹಿತ್ಯದಲ್ಲಿ ನಾ. ಡಿಸೋಜ ಅವರ ಇನ್ನೆರಡು ಮಹತ್ವದ ಪುಸ್ತಕಗಳೆಂದರೆ 'ಮುಳುಗಡೆ ಊರಿಗೆ ಬಂದವರು' ಮತ್ತು 'ಹಕ್ಕಿಗೊಂದು ಗೂಡು ಕೊಡಿ'. ಮುಳುಗಡೆಯಾಗುವ ಊರಿನವರು ಅನುಭವಿಸುವ ದಾರುಣ ಸ್ಥಿತಿ ಅದನ್ನು ಅನುಭವಿಸಿದವರಿಗೇ ಗೊತ್ತು. 'ಮುಳುಗಡೆ' ಎಂಬ ಕಾದಂಬರಿಯನ್ನೂ ಡಿಸೋಜ ಅವರು ಬರೆದಿದ್ದು ಅದು 'ಸುಧಾ' ವಾರಪತ್ರಿಕೆಯಲ್ಲಿ

ಧಾರಾವಾಹಿಯಾಗಿ ಪ್ರಕಟಗೊಂಡು ವ್ಯಾಪಕ ಪ್ರತಿಕ್ರಿಯೆಯನ್ನು ಪಡೆಯಿತು. 'ಮುಳುಗಡೆ ಊರಿಗೆ ಬಂದವರು' ಹೆಸರಿನ ಈ ಮಕ್ಕಳ ಬರವಣಿಗೆ ಸಂಕಟಗಳನ್ನು ಸಹನೀಯವಾಗಿಸಲಿಕ್ಕೆ ಮಕ್ಕಳು ಪಡುವ ಪ್ರಯತ್ನವನ್ನು ನಿರೂಪಿಸುತ್ತದೆ. ಶರಾವತಿ ಹಿನ್ನೀರಿನಿಂದ ಆವೃತಗೊಂಡಿರುವ ಊರಿನ ಜನ ಅನುಭವಿಸುವ ಪಾಡಿಗೆ ದನಿಯಾಗಲಿಕ್ಕೆ ಸರ್ಕಾರ, ಸಂಸ್ಥೆಗಳು ತಯಾರಿಲ್ಲದ ಸಂದರ್ಭದಲ್ಲಿ ಆ ಪಾಡನ್ನು ತಮ್ಮ ಪಾಡೆಂದು ತಿಳಿದು ಆ ನೋವಿಗೆ ಸ್ಪಂದಿಸುವವರು ರಜೆ ಕಳೆಯಲು ಅಜ್ಜನ ಊರಿಗೆ ಬರುವ ಬೆಂಗಳೂರಿನ ಮಕ್ಕಳು. ಶ್ರೀಧರ ಎಂಬ ಹುಡುಗ ಮತ್ತು ಅವನ ಸ್ನೇಹಿತರು ಎದೆಗುಂದದೆ ಜನರಿಗೆ ಅವರ ಹಕ್ಕುಗಳ ಬಗ್ಗೆ ಜಾಗೃತಿ ಉಂಟುಮಾಡಿ, ಅವರಿಗೆ ಸರ್ಕಾರದಿಂದ ಸಿಗಬೇಕಾಗಿದ್ದ ಸೌಲಭ್ಯಗಳನ್ನು ತಿಳಿಸಿ ಆಡಳಿತ ಯಂತ್ರ ಕೊನೆಗೂ ಹಳ್ಳಿಗೆ ಬಂದು ಅವಶ್ಯಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವಂತೆ ಮಾಡುವುದು ಈ ಕಾದಂಬರಿಯ ವಸ್ತುವಾಗಿದೆ. ವೃದ್ಧರೆಲ್ಲ ಗ್ರಾಮಗಳಲ್ಲಿ ಉಳಿದು, ವಿದ್ಯಾವಂತ, ದುಡಿಯುವ ಮಕ್ಕಳು ನಗರಗಳನ್ನು ಸೇರಿರುವ ಮತ್ತೊಂದು ಆಯಾಮವೂ ಕತೆಗೆ ಸೇರಿಸಲ್ಪಟ್ಟಿದೆ. ಸಣ್ಣಪುಟ್ಟ ಪಟ್ಟಣಗಳಲ್ಲಿಯ ಸಾಫ್ಟ್‌ವೇರ್ ಹುಡುಗರು ಕೂಡ ದೇಶ ತೊರೆದು ತಮ್ಮ ಕುಟುಂಬ, ಊರು, ನಾಡಿಗೆ ಎರವಾಗಿದ್ದಾರೆ ಎಂಬುದು ಸೂಚ್ಯವಾಗಿ ದಾಖಲಾಗಿದೆ. ಹೀಗಾಗಿ ಹಳ್ಳಿ–ಪಟ್ಟಣಗಳೆನ್ನದೆ ಮುದುಕ–ಮುದುಕಿಯರು ಕೊರಗುತ್ತಿರುವುದು ಈ ಕೃತಿಯಲ್ಲಿ ಮೂಡಿಬಂದಿದೆ. ಬೇರೆ ಊರಿನಿಂದ ಬಂದಿರುವ ಮಕ್ಕಳು, ಇಲ್ಲಿರುವ ಹಿರಿಯರು ಈಗ ಅನಿವಾರ್ಯವಾದ ಪ್ರೀತಿ–ವಾತ್ಸಲ್ಯಕ್ಕೆ ಜೋತುಬಿದ್ದರೂ ಅವರ ಸಂಬಂಧದಲ್ಲಿ ಯಾವುದೆ ಕೃತ್ರಿಮತೆ ಇಲ್ಲ. ಒಬ್ಬರಿಗೊಬ್ಬರು ಸೋಲುತ್ತಾರೆ. ಬೀಳುತ್ತಿರುವ ಶಾಲೆಯನ್ನು ಮಕ್ಕಳು ಎದ್ದು ನಿಲ್ಲುವಂತೆ ಮಾಡುತ್ತಾರೆ.

ಸಾಹಸಭರಿತ ಕಾದಂಬರಿಗಳನ್ನು ನಾ. ಡಿಸೋಜ ಅವರು ಕೊಟ್ಟಿದ್ದಾರೆಂದಾಕ್ಷಣ ಅವು ಪಾಶ್ಚಾತ್ಯ ಕಾದಂಬರಿಗಳು ಚಿತ್ರಿಸುತ್ತಿದ್ದ ಅವಾಸ್ತವದ ಮಾದರಿಗಳದ್ದಲ್ಲ. ಅಂದರೆ ಡಿಸೋಜ ಅವರ ಕಾದಂಬರಿಯ ಮಗು ಹತ್ತಾರು ಮಂದಿಯೊಡನೆ ಹೊಡೆದಾಡಿ ಗೆಲ್ಲುವುದಿಲ್ಲ. ಏಣಿಯಿಲ್ಲದೆ ಸರಸರನೆ ದೊಡ್ಡ ದೊಡ್ಡ ಕಟ್ಟಡ ಏರುವುದಿಲ್ಲ. ಯಾವುದು ವಾಸ್ತವಕ್ಕೆ ಅತೀತವಾಗಿರುತ್ತದೆಯೋ ಅದನ್ನು ಚಿತ್ರಿಸಲು, ನಿರೂಪಿಸಲು ಅವರು ಮನಸ್ಸು ಮಾಡಿಲ್ಲ. ಸಾಹಸವಿದ್ದರೂ ಅದು ಮರವೇರುವ ಸಾಹಸ, ಹೊಳೆ ದಾಟುವ ಸಾಹಸ, ಲಾಂಚ್ ಹತ್ತಿ ಗುಡ್ಡ ಮುಟ್ಟುವ ಸಾಹಸ, ಕಳ್ಳರನ್ನು ಗುಂಪುಗೂಡಿ ಓಡಿಸುವ ಸಾಹಸ. ಅಂದಿನ ಮಕ್ಕಳು ನಿರಾಯಾಸವಾಗಿ ಅನುಭವಿಸುತ್ತಿದ್ದ ಸ್ವಾತಂತ್ರ್ಯವನ್ನು ಹಾಗೂ ಅಪಾಯ ಮತ್ತು ದುರಂತದ ಸಂದರ್ಭಗಳಲ್ಲಿ ಊರು ಒಂದಾಗುತ್ತಿದ್ದ ಸಾಮರಸ್ಯವನ್ನು ಡಿಸೋಜ ಅವರ ಕತೆ–ಕಾದಂಬರಿಗಳು ಹೇಳುತ್ತವೆ.

ಬೊಳುವಾರು ಮಹಮದ್ ಕುಂಞ

ಹಿರಿಯ ಲೇಖಕ ಬೊಳುವಾರು ಮಹಮದ್ ಕುಂಞ ಅವರು ಮಕ್ಕಳಿಗಾಗಿ 'ತಟ್ಟು ಚಪ್ಪಾಳೆ ಪುಟ್ಟಮಗು' ಸಂಕಲನವನ್ನು ಸಂಪಾದಿಸಿಕೊಟ್ಟು ಆ ಕಾಲಘಟ್ಟದಲ್ಲಿ ಅದೊಂದು ತುಂಬ ಮಹತ್ವದ್ದೆನಿಸುವ ಕೆಲಸ ಮಾಡಿದರು. ಮಕ್ಕಳಿಗಾಗಿಯೂ ಬರೆದಿರುವ ಹಿರಿಯ ಕಾದಂಬರಿಕಾರರಾದ ಶಿವರಾಮ ಕಾರಂತರು ಅದಕ್ಕೊಂದು ಚಾರಿತ್ರಿಕ ಮುನ್ನುಡಿ ಬರೆದುಕೊಟ್ಟರು. ಬೊಳುವಾರು ಅವರು ತಮ್ಮ ಮಕ್ಕಳ ಪ್ರೀತಿಯನ್ನು ಮುಂದುವರೆಸುವ ದಿಸೆಯಲ್ಲೆಂಬಂತೆ 'ಪಾಪು ಗಾಂಧಿ ಗಾಂಧಿ ಬಾಪು ಆದ ಕತೆ' ಎಂಬ ಮಹಾತ್ಮ ಗಾಂಧಿ

ಕುರಿತ ನೀಳ್ಗತೆಯನ್ನು ಬರೆದರು. ಕನ್ನಡ ಪುಸ್ತಕ ಪ್ರಾಧಿಕಾರದಿಂದ ೨೦೦೯ರಲ್ಲಿ ಪ್ರಕಟವಾದ ಅದು ಈಗಾಗಲೇ ಹಲವಾರು ಮುದ್ರಣಗಳನ್ನು ಕಂಡಿರುವುದು ನಾಡಿನಾದ್ಯಂತ ಅದು ಪಡೆದ ಜನಪ್ರಿಯತೆಯನ್ನು ಸೂಚಿಸುತ್ತದೆ.

ಮಹಾತ್ಮ ಗಾಂಧಿಯ ಕತೆ ಎಲ್ಲರಿಗೂ ಗೊತ್ತಿರುವಂಥದ್ದೇ. ಆದರೂ ಅದನ್ನೊಂದು ಕುತೂಹಲಕರ, ಮೈ ಜುಮ್ಮೆನ್ನಿಸುವ ಕತೆಯನ್ನಾಗಿ ಮಾರ್ಪಡಿಸಿರುವುದು ಬೊಳುವಾರು ಅವರ ಕಥನಕಲೆಗೆ ಒಂದು ನಿದರ್ಶನವೆನ್ನಬಹುದು. ಗಾಂಧಿ ಬಗ್ಗೆ ಈಗಾಗಲೆ ಕನ್ನಡದಲ್ಲಿ ಸಾವಿರಾರು ಪುಸ್ತಕಗಳು ಬಂದಿವೆ. ಬೇರೆ ಬೇರೆ ಭಾಷೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅದು ಲಕ್ಷದ ಗಡಿ ದಾಟೀತು! ಅಂತಹದುರಲ್ಲಿ ಗಾಂಧೀಜಿಯ ಕುರಿತು ಪುಸ್ತಕ ಬರೆಯುವುದು ಒಂದು ಸವಾಲಿನ ಕೆಲಸ. ಚರಿತ್ರೆಯನ್ನು ಕತೆಯಾಗಿಸುವುದು, ಅದೂ ಯಾವುದೇ ಅಪಚಾರವಾಗದಂತೆ ನಿರೂಪಿಸುವುದು ತುಂಬ ಸಂಯಮ ಮತ್ತು ಅಭ್ಯಾಸವನ್ನು ಬೇಡುವಂತಹದು. ಮತ್ತೂ ಕಠಿಣವಾದದ್ದೆಂದರೆ ಅಷ್ಟು ದೊಡ್ಡ ಜೀವನ ಚರಿತ್ರೆಯಲ್ಲಿ ಯಾವುದನ್ನು ಬಿಡುವುದು ಮತ್ತು ಯಾವುದನ್ನು ಸೇರಿಸುವುದು, ಯಾವುದು ಮಹತ್ವದ್ದೆಂದು ಸಾರುವುದು ಮತ್ತು ಯಾವುದು ಅಷ್ಟೇನೂ ಮಹತ್ವದ್ದಲ್ಲವೆಂದು ಹೇಳುವುದು? ಆದರೆ ಬೊಳುವಾರು ಅವರು ಮಕ್ಕಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಆಸಕ್ತಿದಾಯಕ ಕಥೆಯೊಂದನ್ನು ಕಟ್ಟಿಕೊಟ್ಟಿದ್ದಾರೆ: 'ಇದರಿಂದ ಹತ್ತನೇ ತರಗತಿಯವರೆಗಿನ ಮಕ್ಕಳ ಮತಿ ಮತ್ತು ಪುಸ್ತಕದ ಪುಟಗಳ ಮಿತಿ, ಎರಡನ್ನೂ ಗಮನದಲ್ಲಿರಿಸಿಕೊಂಡು, ಮಕ್ಕಳಿಗೆ ಆಸಕ್ತಿ ಹುಟ್ಟಿಸಬಹುದಾದ ಕೆಲವು ಎಳೆಗಳನ್ನು ವಿಸ್ತರಿಸಿ, ಮಕ್ಕಳಿಗೆ ಅನಗತ್ಯ ಎಂಬುದಾಗಿ ನಾನು ಭಾವಿಸಿದ ಘಟನೆಗಳನ್ನು ತೇಲಿಸಿ ಅಥವಾ ಕೈಬಿಟ್ಟು ಈ ಕತೆ ಹೆಣೆದಿರುವೆ.'

'ಪಾಪು ಗಾಂಧಿ ಗಾಂಧಿ ಬಾಪು ಆದ ಕತೆ' ಕೃತಿ ಮೂರು ಭಾಗಗಳಲ್ಲಿ ಹೇಳಲ್ಪಟ್ಟಿದೆ. ಗಾಂಧಿ ಪಾಪು ಇದ್ದಾಗಿನ ಕಾಲಘಟ್ಟವನ್ನು 'ಪಾಪು' ಎಂದು, ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ಹೋರಾಟಗಾರರಾಗಿ ರೂಪುಗೊಂಡ ಬಗೆಯನ್ನು 'ಗಾಂಧಿ' ಎಂತಲೂ ಮತ್ತು ದೇಶಕ್ಕೆ ಸ್ವಾತಂತ್ರ್ಯ ಕೊಡಿಸಿ ಮತಾಂಧನೊಬ್ಬನ ಗುಂಡಿಗೆ ಬಲಿಯಾಗಿ ಅಮರರಾಗುವ ಕಾಲಘಟ್ಟವನ್ನು 'ಬಾಪು' ಎಂತಲೂ ವಿಂಗಡಿಸಲಾಗಿದೆ. ದೇಶಕ್ಕಾಗಿ ಅವರು ಮಾಡಿದ ತ್ಯಾಗ-ಬಲಿದಾನಗಳನ್ನು ಸ್ಮರಿಸುತ್ತ ದೇಶವು ಕೃತಜ್ಞತೆಯಿಂದ ಮಹಾತ್ಮ ಗಾಂಧೀಜಿಯನ್ನು 'ರಾಷ್ಟ್ರಪಿತ' ಎಂದು ಕರೆದಿದೆ. ಮೋಹನದಾಸ ಕರಮಚಂದ ಗಾಂಧಿ ಅವರ ಬಾಲ್ಯದ ದಿನಗಳಿಂದ ಹಿಡಿದು ಅವರ ಮೇಲೆ ಪರಿಣಾಮ ಬೀರಿದ ವ್ಯಕ್ತಿ, ಘಟನೆಗಳನ್ನು, ಸತ್ಯಾಗ್ರಹವೆಂಬ ಹಿರಿದಾದ ಅಸ್ತ್ರವನ್ನು ಅವರು ಸಿದ್ಧಿಸಿಕೊಂಡ ಕತೆಯನ್ನು, ಕೋಮುದಳ್ಳುರಿಗೆ ಅವರು ನಲುಗಿದ ಭಯಾನಕ ಕ್ಷಣಗಳನ್ನು ಈ ಪುಸ್ತಕ ಎಳೆಯರ ಮುಂದಿಡುತ್ತದೆ. ಭಿಕ್ಷುಕರಿಗೆ ದುಡ್ಡು ಎಸೆಯುವ ಘಟನೆ ಗಾಂಧಿಯ ಎಳೆತನದಲ್ಲಿ ಸಂಭವಿಸಿ ಅವರನ್ನು ಕಲಕಿದ್ದು ಮಕ್ಕಳಿಗೆ ಪರಿಣಾಮಕಾರಿ ಓದು ಆಗಿ ಪರಿಣಮಿಸುತ್ತದೆ.

"ತಾನು ದೊಡ್ಡವನಾದಾಗ ಬೇರೆ ಭಿಕ್ಷುಕರಿರುತ್ತಾರೆಂದು ರಂಭತ್ತೆ ಹೇಳಿದ ಮಾತು ಅವನಿಗೆ ಪೂರ್ತಿಯಾಗಿ ಅರ್ಥವಾಗಿರಲಿಲ್ಲ. ಬೇರೆ ಭಿಕ್ಷುಕರೆಂದರೆ ಯಾರು? ಈ ಭಿಕ್ಷುಕರ ಮಕ್ಕಳೇ ಅಥವಾ ಬೇರೆ ಊರಿನಿಂದ ಬರುವವರೆ?'

ಮಕ್ಕಳ ಮನಸ್ಸಿನ ಮೇಲೆ ಅಪಾರ ಪ್ರಭಾವ ಬೀರಬಲ್ಲ ರೀತಿಯಲ್ಲಿ ಬೊಳುವಾರು ಅವರು ಕತೆ ಹೇಳಿರುವುದು ಅದ್ಭುತವಾಗಿದೆ. ಅವರ ಗದ್ಯಕ್ಕೆ ಆ ಮಾಂತ್ರಿಕತೆ ಇದೆ.

ಸುಮತೀಂದ್ರ ನಾಡಿಗ

ಬಾಯಲ್ಲಿ ನಲಿಯುವಂತಹ, ನೀರು ಬರಿಸುವಂತಹ ಶಿಶುಪ್ರಾಸಗಳನ್ನು ಕೊಟ್ಟು ಮಕ್ಕಳ ಮನಸ್ಸನ್ನು ಗೆದ್ದವರು ಸುಮತೀಂದ್ರ ನಾಡಿಗ ಅವರು. ಕೇವಲ ಉಪದೇಶದ ನೀರಸ ಹೂರಣ ಉಣಬಡಿಸುತ್ತ ಶಾಲೆಯ ಎಳೆಯ ಮಕ್ಕಳು ಆಕಳಿಸುವಂತಹ ವಾತಾವರಣ ಸೃಷ್ಟಿಯಾಗಿದ್ದ ಸಂದರ್ಭದಲ್ಲಿ ನಾಡಿಗರ ರಚನೆಗಳು ಲವಲವಿಕೆಯನ್ನು ಹುಟ್ಟಿಸಿದವು. ಅಂತಹ ರಚನೆಗಳಿಗೆ ಪಾಶ್ಚಾತ್ಯ ಪರಿಸರದಲ್ಲಿ ಚಾಲ್ತಿಯಲ್ಲಿದ್ದ ನರ್ಸರಿ ಹಾಡು (Nursery Rhymes) ಹಾಗೂ ನಾನಸೆನ್ಸ್ ಪದ್ಯ (Nonsense Poetry)ಗಳು ಪ್ರೇರಣೆ ಕೊಟ್ಟವು ಎಂದು ಅವರೇ ಹೇಳಿದ್ದಾರೆ. 'ನಾಲ್ಕು ವರ್ಷದ ಹಿಂದೆ ನಾನು ಆಸ್ಟ್ರೇಲಿಯಾದಲ್ಲಿರುವ ನನ್ನ ಮಗಳ ಮನೆಗೆ ಹೋದೆ. ಅವಳಿಗೆ ಮೂರು ವರ್ಷದ ಒಬ್ಬಳು ಮಗಳಿದ್ದಳು. ಅವಳ ಹೆಸರು ವಿಭಾ. ಅವಳ ಹತ್ತಿರ ಇದ್ದ ಮಕ್ಕಳ ಪುಸ್ತಕಗಳನ್ನು ನೋಡುತ್ತಿದ್ದಾಗ, ಅವಳಿಗೆ ಹಿಡಿಸುವಂತಹ ನರ್ಸರಿ ರೈಮ್ಸ್‌ನ್ನು ನಾನ್ಯಾಕೆ ಬರೆಯಬಾರದು ಎನ್ನಿಸಿತು. ಅವರ ಮನೆಯಲ್ಲಿ ಪ್ರಿನ್ಸಿ ಅನ್ನುವ ದೊಡ್ಡ ಗಾತ್ರದ ನಾಯಿ ಒಂದಿತ್ತು. ವಿಭಾಳ ಪುಸ್ತಕದಲ್ಲಿ ಒಂದು ಚಿಕ್ಕ ಪದ್ಯ ನೋಡಿದೆ:

Hey diddle diddle, the cat and the fiddle,
The cow jumped over the moon
The little dog laughed to see such sport,
And the dish ran away with the spoon

ಅಂಥದೊಂದು ಬರೆಯಬೇಕು ಅಂದುಕೊಂಡು

ಸರಿಗಮ ಸರಿಗಮ ಪದನಿ, ಹೂ ಬಿಟ್ಟಿತ್ತು ಬದನಿ
ಪಿಟೀಲು ಬಾರಿಸಿ ಬೆಕ್ಕು, ಪ್ರಿನ್ಸಿ ಹೊಟ್ಟೆ ಹುಣ್ಣಾಯಿತು ನಕ್ಕು
ಹಸು ಹಾರಿತ್ತು ಚಂದ್ರನ ಮುಂದೆ, ತಟ್ಟೆ ಓಡಿತ್ತು ಸ್ಪೂನಿನ ಹಿಂದೆ
ಸರಿಗಮ ಸರಿಗಮ ಪದನಿ, ಹೂ ಬಿಟ್ಟಿತ್ತು ಬದನಿ

ಅಂತ ಒಂದು ಪದ್ಯ ಬರೆದೆ' (ಡಿಡಿಲಕ್, ಡಿಡಿಲಕ್, ೨೦೦೨)

ಒಬ್ಬ ಲೇಖಕನಿಗೆ ಪ್ರೇರಣೆಗಳು ಹೇಗೆಲ್ಲ ದೊರೆಯುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆ. 'ಇಂಗ್ಲಿಷ್ ಗೀತಗಳು' ಯಾವ ರೀತಿ ಪ್ರಭಾವ ಮಾಡಿತು ಎಂಬುದು ನಮಗೆಲ್ಲರಿಗೂ ಗೊತ್ತು. 'ಡಿಡಿಲಕ್, ಡಿಡಿಲಕ್' ಪದ್ಯಕ್ಕೆ 'Hey diddle diddle' ಎನ್ನುವುದೆ ಪ್ರೇರಣೆಯಾಗಿರಬೇಕು. 'ಅಚ್ಚುತ' ಎನ್ನುವ ನಾಡಿಗರ ಪದ್ಯ ಬೆಣ್ಣೆ ಕರಗಿದಷ್ಟೆ ಸಲೀಸಾಗಿ ಮಕ್ಕಳ ನಾಲಿಗೆ ಮೇಲೆ ಕರಗುತ್ತದೆ.

ಅಚ್ಚುತ ಬಂದನು ಅಚ್ಚುತ
ಬ್ರೆಡ್ಡಿಗೆ ಬೆಣ್ಣೆಯ ಹಚ್ಚುತ

ಅಚ್ಚುತ ಹೋದನು ಅಚ್ಚುತ
ಬ್ರೆಡ್ಡು ಬೆಣ್ಣೆಯನು ಕಚ್ಚುತ
ಹೋಗೇ ಬಿಟ್ಟನು ಅಚ್ಚುತ

–ಅಚ್ಚುತ

ಇದುವರೆಗೂ ಐದು ಮಕ್ಕಳ ಸಂಕಲನಗಳನ್ನು ಪ್ರಕಟಿಸಿರುವ ಅವರು ಅಪಾರ ವೈವಿಧ್ಯತೆ ಹಾಗೂ ಶಬ್ದದ ಆಟಗಳನ್ನು ಮಕ್ಕಳಿಗೆ ಪರಿಚಯಿಸಿದ್ದಾರೆ. ವಿನೂತನ ಕಲ್ಪನೆ, ಆಗದೆ ಇರುವುದನ್ನು ಸಂಭವಿಸುವಂತೆ ಮಾಡುವುದು, ರಹಸ್ಯದ ಬೆನ್ನತ್ತಿ ಹೋಗುವುದು ಮುಂತಾದ ಕ್ರಿಯೆಗಳು ಮಕ್ಕಳ ಬದುಕಿನ ಭಾಗಗಳು ಎಂಬುದು ಕವಿಗೆ ಗೊತ್ತು. ಅದಕ್ಕಾಗಿಯೇ ಅವರು ಶಬ್ದಗಳ ಜೊತೆಗೆ ಆಟವಾಡುತ್ತ, ಪ್ರಾಸ ಅನುಪ್ರಾಸಗಳನ್ನು ನಿರ್ಮಿಸುತ್ತ, ಶ್ಲೇಷೆಯಲ್ಲಿ ರೋಮಾಂಚನವನ್ನು ಹುಟ್ಟುಹಾಕುತ್ತ, ಲಯಕ್ಕೆ ಕುಣಿಯುವಂತೆ ಮಾಡುತ್ತ ಮಕ್ಕಳಿಗೆ ಮುದ ನೀಡುವ, ಅವರ ಮನಸ್ಸಿಗೆ ಮನೋಹರವಾಗುವ ರಚನೆಗಳನ್ನು ನೀಡಿದ್ದಾರೆ. 'ಗಾಳಿಪಟ' (೧೯೯೯), 'ಇಲಿ ಮದುವೆ' (೧೯೯೯), 'ಡಿಡಿಲಕ್ ಡಿಡಿಲಕ್' (೨೦೦೨), 'ಡಕ್ಕಣಕ ಡಕ್ಕಣ' (೨೦೦೫), 'ಇರುವೆ ಮತ್ತು ಆನೆ' (೨೦೧೦) ಎನ್ನುವ ಅವರ ಸಂಕಲನಗಳು ಹಲವಾರು ಮುದ್ರಣಗಳನ್ನು ಕಾಣುವ ಮೂಲಕ ಎಳೆಯರು ಅವುಗಳನ್ನು ಮತ್ತೆ ಮತ್ತೆ ಬೇರೆ ಬೇರೆ ಕಡೆ ಬರಮಾಡಿಕೊಂಡರು. 'ಗಾಳಿಪಟ', 'ಇರುವೆ ಮತ್ತು ಆನೆ', 'ಇಲಿ ಮದುವೆ'ಗಳಲ್ಲಿನ ಕವನಗಳು ಬೆಳೆದ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ರಚಿತವಾದವುಗಳಾದರೆ ಡಿಡಿಲಕ್ ಡಿಡಿಲಕ್, ಡಕ್ಕಣಕ ಡಕ್ಕಣ ಪುಸ್ತಕಗಳು ಬಾಲವಾಡಿ ಹಂತದಲ್ಲಿರುವ ಮಕ್ಕಳ ಅಗತ್ಯಗಳನ್ನು ಯಶಸ್ವಿಯಾಗಿ ಪೂರೈಸಬಲ್ಲವಾಗಿವೆ. ಬಾಲವಾಡಿ ಅಥವಾ ಪೂರ್ವಪ್ರಾಥಮಿಕ ಶಾಲೆಯ ಮಕ್ಕಳು ಹಾಗೂ ನರ್ಸರಿ ಮಕ್ಕಳನ್ನು ಉದ್ದೇಶಿಸಿ ನಾಡಿಗರು ಬರೆದಿರುವ ಈ ಶಿಶುಪ್ರಾಸಗಳು ಅಪಾರ ಮಕ್ಕಳನ್ನು ರಂಜಿಸಿವೆ, ಕುಣಿಸಿವೆ. ಅವರು ಸಂತೃಪ್ತಿಯ ಅಲೆಯ ಮೇಲೆ ತೇಲುವಂತೆ ಮಾಡಿವೆ. ತುಂಬ ಗಹನವಾದುದನ್ನು, ತರ್ಕದ ಮೇಲೆ ನಿಂತಿರುವುದನ್ನು ಮಕ್ಕಳ ತಲೆಯೊಳಗೆ ತುಂಬುವುದು ಕಷ್ಟವೆಂದು ಶಿಶುಪ್ರಾಸಗಳ ಮೊರೆ ಹೋಗಬೇಕಾಯಿತೆಂದು ಅವರು ಒಂದೆಡೆ ಹೇಳಿದ್ದಾರೆ: '೨ ರಿಂದ ೫ ವರ್ಷದ ಮಕ್ಕಳ ಮನಸ್ಸು ಕಾವ್ಯವನ್ನು ಗ್ರಹಿಸುವ ರೀತಿಯೇ ಬೇರೆ. ನರ್ಸರಿ ರೈಮ್ಸ್ ಮಾತ್ರ ಅವರಿಗೆ ಇಷ್ಟವಾಗುತ್ತದೆ. ಹಾಗಾದರೆ ಅವುಗಳ ಗುಣವೇನು ಅಂತ ಆಲೋಚಿಸಲಿಕ್ಕೆ ಶುರುಮಾಡಿದೆ. ಆಸ್ಟ್ರೇಲಿಯಾದಿಂದ ಬಂದಿದ್ದ ಮೊಮ್ಮಗಳು ವಿಭಾ ಎದುರಿಗಿದ್ದಳು. ಅವಳಿಗೆ ಎಂಥ ಕತೆ ಹೇಳಬೇಕು, ಅವಳ ಜೊತೆ ಏನು ಮಾತಾಡಬೇಕು, ಅವಳಿಗೆ ಎಂಥ ಕಾವ್ಯ ರುಚಿಸುತ್ತೆ, ಅಂಥದನ್ನು ಬರೆಯಬೇಕು ಅಂತ ಒದ್ದಾಡುತ್ತಿದ್ದೆ. ಆಗ:

ಚಕಮಕ ಚಕಮಕ ಚಿಲ್ಲಾಣ, ನಾಧೀಧಿನ್ನ ತಿಲ್ಲಾಣ
ನಾನೂ ನೀನೂ ನಿಲ್ಲೋಣ, ಇರುವೆಗೆ ಸಕ್ಕರೆ ಚೆಲ್ಲೋಣ
ಚಕಮಕ ಚಕಮಕ ಚಿಲ್ಲಾಣ

...ಅವಳಿಗೆ ಅದು ಬಾಯಿಪಾಠ ಆಯಿತು. ಪದ್ಯ ಹೇಳು ಅಂತ ನನ್ನನ್ನು ಕಾಡಲಿಕ್ಕೆ ಸುರು ಮಾಡಿದಳು... ಈ ಶಿಶುಪ್ರಾಸಗಳಲ್ಲಿ ಶಬ್ದ ಮುಖ್ಯವಾಗಿರಬೇಕು. ಶಬ್ದದ ಕುಣಿತ ಇರಬೇಕು.

ತರ್ಕವಿಲ್ಲದ, ಬರಿಯ ಅರ್ಥಹೀನವಾದ ಕುಣಿಸುವ ಶಬ್ದಗಳಿದ್ದರೂ ಸಂತೋಷವಾಗುತ್ತದೆ...'

ಪ್ರಾಸಗಳು ಮಕ್ಕಳನ್ನು ಸೆಳೆಯುವಂತಿರಬೇಕು ಎಂದು ಹೇಳುವ ಅವರು ಹೀಗೆ ಪುಟ್ಟ ಮಕ್ಕಳನ್ನು ತಟಕ್ಕನೆ ಹಿಡಿದುಕೊಳ್ಳುವ ಹಾಗೆ ರಚನೆಗಳನ್ನು ನೀಡಿದ್ದಾರೆ. ಮಕ್ಕಳಲ್ಲಿ ಒಮ್ಮೆಗೇ ಪ್ರವೇಶ ಮಾಡುವಂತಹ ಲಯ, ಮರುಕಳಿಸುವ ಅನುರಣನ, ಬಾಯಿ ಚಪ್ಪರಿಸುವ ಪ್ರಾಸ ಸುಮತೀಂದ್ರ ನಾಡಿಗರ ಶಿಶುಪ್ರಾಸಗಳ ಲಕ್ಷಣಗಳೆನ್ನಬಹುದು.

ಪುಟಾಣಿ ಹುಡುಗಿ ಪುಟ್ಟಮ್ಮ
ನಿಂಗ್ಯಾಕಿಷ್ಟು ಸಿಟ್ಟಮ್ಮ?
ನೀನೇ ರೊಟ್ಟಿ ತಟ್ಟಮ್ಮ
ಪುಟಾಣಿ ಹುಡುಗಿ ಪುಟ್ಟಮ್ಮ

–ಪುಟ್ಟಮ್ಮ

ಹಣಾ ಅನ್ನುತ್ತೆ ಝಣಝಣ
ಮಂತ್ರ ಹೇಳ್ತಾರೆ ಮಣಮಣ
ಗಂಟೆ ಅನ್ನುತ್ತೆ ಗಣಗಣ
ಕರೂ ಕುಣೀತ್ತೆ ಟಣಪಣ
ಗೆಳೆಯರೆ ಇಲ್ಲ ಭಣಭಣ
ಎಂತಾ ಬಿಸಿಲು ರಣರಣ!

ಮಕ್ಕಳಿಗೆ ವೈನೋದಿಕವೆನಿಸುವ ಪದಪುಂಜಗಳನ್ನು ಅವರು ಸಲೀಸಾಗಿ ಬಳಸುತ್ತಾರೆ. ಸಾಭಿನಯ, ಅನುರಣನಗಳಿಂದ ಅವುಗಳ ಸ್ವಾರಸ್ಯ ಮತ್ತೂ ಹೆಚ್ಚಾಗುತ್ತದೆ. ಮಕ್ಕಳಿಗೆ ಇಷ್ಟವಾಗುವ ಪ್ರಾಣಿ ಪಕ್ಷಿಗಳ ಚಿತ್ರಣದಿಂದ ಅವು ಮತ್ತೂ ಸುಲಲಿತ.

ಒಂದು ಕಪ್ಪೆ ಹಾಡಿತು
ಹಿಡಿದು ದೊಡ್ಡ ಗಿಟಾರ್
ಉಳಿದ ಕಪ್ಪೆ ಹಾಡಿದವು
ವಟರ್ ವಟರ್ ವಟಾರ್

– ಕಪ್ಪೆ ಹಾಡು

ಕತ್ತಲ ಕೋಣೇಲ್
ಕಪ್ಪನೆ ಬೆಕ್ಕು
ಕಣ್ಣಿಗ್ ಕಾಣೊಲ್ಲ
ಹಾಲು ನೀರಲ್ಲಿ
ಕರಗಿದ ಸಕ್ಕರೆ
ಕೈಯಿಗ್ ಸಿಕ್ಕೊಲ್ಲ

– ಬೆಕ್ಕು ಮತ್ತು ಸಕ್ಕರೆ

ಶಬ್ದಗಳ ಆಟ ನಾಡಿಗರಲ್ಲಿ ಮಕ್ಕಳಿಗೆ ಎಷ್ಟೊಂದು ಮಜವಾಗಿರುತ್ತದೆ, ಸಖತ್ತಾಗಿರುತ್ತದೆ

ಎನ್ನುವುದಕ್ಕೆ 'ಹಕ್ಕಬುಕ್ಕ' ಪ್ರಾಸ ಒಳ್ಳೆಯ ನಿದರ್ಶನವಾಗಿದೆ.

ಹಕ್ಕಬುಕ್ಕ ಇಬ್ಬರೂ
ಕುಳಿತು ಅಕ್ಕಪಕ್ಕ
ಕುಣಿಯೋಣವೇ ಅಂದರು
ಥೈಯ ಥೈಯ ತಕ್ಕ

ಅರ್ಥವಿಲ್ಲದಿದ್ದರೂ ಶಬ್ದಗಳು ನಾಲಿಗೆಯ ಮೇಲೆ ಹೇಗೆ ಕುಣಿಯುತ್ತವೆ ಎಂಬುದರ ಮೇಲೆ ಪ್ರಾಸದ ಯಶಸ್ಸೊಂದು ನಿರ್ಧಾರವಾಗುತ್ತದೆ. 'ಡಿಡಿಲಕ್ ಡಿಡಿಲಕ್' ಅಂತಹ ಒಂದು ಪ್ರಯತ್ನವಾಗಿದೆ.

ಡಿಡಿಲಕ್ ಡಿಡಿಲಕ್ ಡಿಡಿಲಕ್ಕ
ಡಿಡಿಲಕ್ ಡಿಡಿಲಕ್ ಡಿಡಿಲಕ್ಕ
ನಾಳೆ ಬರ್ತಾಳ್ ನಮ್ಮ ದೊಡ್ಡಕ್ಕ
ಅವಳಿಗ್ ಕೊಡ್ತೀನ್ ನವಿಲಿನ ಪುಕ್ಕ
ಡಿಡಿಲಕ್ ಡಿಡಿಲಕ್ ಡಿಡಿಲಕ್ಕ
ಡಿಡಿಲಕ್ ಡಿಡಿಲಕ್ ಡಿಡಿಲಕ್ಕ

ಹಾಸ್ಯ, ವಿನೋದ, ಸರಳತೆ, ಸುಲಭ ಅರ್ಥಗಳು ನಾಡಿಗರ ಮಕ್ಕಳ ಪದ್ಯಗಳನ್ನು ವಿಶೇಷವಾಗಿಸುತ್ತವೆ. ಅರ್ಥವಿಲ್ಲದ, ಅಸಂಗತವೆನ್ನಬಹುದಾದ ಪದ್ಯಗಳು ಎಳೆಯ ಮಕ್ಕಳ ಆಸಕ್ತಿಗಳನ್ನು ಹಿಡಿದಿಡಲು ಉಪಯೋಗ ಮಾಡುವಂಥವು. ಸ್ವಲ್ಪ ದೊಡ್ಡವರಾಗುತ್ತಲೆ ಅವರಿಗೆ ಕನ್ನಡದ ಜಾಯಮಾನದಲ್ಲಿ ಸೃಷ್ಟಿಗೊಂಡ ಮಕ್ಕಳ ರಚನೆಗಳನ್ನು ಕೊಡುವುದು ವಿಹಿತವೆನಿಸೀತು. ಈ Nonsense rhymes ಗಳ ಜೊತೆಗೆ ಕನ್ನಡದ ಜಾನಪದದಲ್ಲಿರುವ ಅಸಾಂಗತ್ಯ ನುಡಿಗಳನ್ನು, ಪದಪುಂಜಗಳನ್ನು ಮಕ್ಕಳ ಗಮನಕ್ಕೆ ತರಬೇಕು ಎನ್ನುವ ಅಭಿಪ್ರಾಯವು ಕೆಲವು ವಿದ್ವಾಂಸರಲ್ಲಿದೆ. ನಾಡಿಗರ 'ಇಲಿ ಮದುವೆ' ಮತ್ತು 'ಗಾಳಿಪಟ' ಸಂಕಲನಗಳಲ್ಲಿ ಇರುವ ಪದ್ಯಗಳು ಪ್ರಾಥಮಿಕ ಹಾಗೂ ಬೆಳೆದ ಮಕ್ಕಳ ಅಗತ್ಯಗಳನ್ನು ಲಕ್ಷ್ಯದಲ್ಲಿರಿಸಿಕೊಂಡಿವೆ. 'ಇಲಿ ಮದುವೆ'ಯಲ್ಲಿನ ಪದ್ಯಗಳು ಅವರ ಶಿಶುಪ್ರಾಸಗಳಷ್ಟು ಆಕರ್ಷಕವಾಗಿಲ್ಲ.

ಕ್ರೈಸ್ತಮತವ ಹಳಿಯಲಿಲ್ಲ
ಹಿಂದೂ ಧರ್ಮ ಹೊಗಳಲಿಲ್ಲ
ಇಸ್ಲಾಮಿನ ಅವಹೇಳನ ಗಾಂಧಿ ಮಾಡಲಿಲ್ಲ
ಈಶ್ವರನೂ ಅಲ್ಲಾನೂ
ಒಂದೇ ಎಂದು ಹೇಳಿದರು
ದೇವ ದೇವರಲ್ಲಿ ಭೇದ ಅವರು ಎಣಿಸಲಿಲ್ಲ

ಆದರೆ 'ಗಾಳಿಪಟ'ದಲ್ಲಿನ ಕವನಗಳು ಚೇತೋಹಾರಿಯಾಗಿವೆ. 'ಗಾಂಧೀಜಿ' (ಇಲಿ ಮತ್ತು ಮದುವೆ), 'ಏಕೆ', 'ಗಾಳಿ', 'ಹಲ್ವ' ಮುಂತಾದವು ನವಿರಾಗಿದ್ದು ಮಕ್ಕಳ ಮನ ರಂಜಿಸುತ್ತವೆ.

ಏಕೆ

ಜಿರಾಫೆಗ್ಯಾಕೆ ಉದ್ದನೆ ಕತ್ತು
ಮರಗಳ ಎಲೆಗಳ ತಿನ್ನೋಕೆ

ಆನೆಗೆ ಉದ್ದನೆ ಸೊಂಡಿಲು ಯಾಕೆ?
ಕೈಗಳ ಹಾಗೆ ಬಳಸೋಕೆ

ಒಂಟೆಯ ಬೆನ್ನಿಗೆ ಯಾಕಿದೆ ಡುಬ್ಬ?
ನೀರಿಟ್ಕೊಳ್ಳೋಕೆ

ಕಾಂಗರುಗ್ಯಾಕೆ ಹೊಟ್ಟೆಯ ಚೀಲ?
ಮರಿಗಳು ಕೂರೋಕೆ.

ಆಸ್ಟ್ರಿಚ್‌ಗ್ಯಾಕೆ ಉದ್ದನೆ ಕಾಲು
ಜೋರಾಗ್ ಓಡೋಕೆ.

–ಏಕೆ (ಗಾಳಿಪಟ)

ಮಕ್ಕಳಿಗೆ ಸುಲಲಿತವಾಗಿರುವ ಇಂತಹ ಪದ್ಯಗಳು ಮಕ್ಕಳ ಪಠ್ಯಪುಸ್ತಕಗಳಲ್ಲಿ ಮಾತ್ರ ಸೇರುತ್ತಿಲ್ಲ. ಇಂದಿನ ಕಾಲದ ಪದ್ಯಗಳನ್ನು ಸೇರಿಸಲು ಪಠ್ಯಪುಸ್ತಕ ಆಯ್ಕೆ ಸಮಿತಿಯಲ್ಲಿರುವ ವಿದ್ವಾಂಸರ ಸಾಂಪ್ರದಾಯಿಕ ಮನೋಭಾವವೇ ಕಾರಣವಾಗಿದೆ. ಪದ್ಯಗಳು ಹೀಗೆಯೆ ಇರಬೇಕೆಂಬ ರೂಢಿಗತ ನಂಬಿಕೆಯನ್ನು ಧ್ವಂಸ ಮಾಡದ ಹೊರತು ಆಡುನುಡಿಯಲ್ಲಿರುವ, ಅನ್ನಲು ಮಜವಾಗಿರುವ ಶಿಶುಪ್ರಾಸಗಳು ಕನ್ನಡನಾಡಿನ ಮಕ್ಕಳಲ್ಲಿ ಹೊಕ್ಕುಬಳಕೆಯಾಗುವುದು ಕಠಿಣ. ಸುಮತೀಂದ್ರ ನಾಡಿಗರು ಈ ದಿಶೆಯಲ್ಲಿ ಅಪರೂಪವೆನಿಸುವ ರಚನೆಗಳನ್ನು ಕೊಟ್ಟಿದ್ದಾರೆ.

ಮಕ್ಕಳಲ್ಲಿರುವ ಜಾಣತನ, ತುಂಟತನ, ಮೋಜು ಇವುಗಳನ್ನು ಸೂರೆಗೊಳ್ಳುವಂತೆ ಅವರು ಕೆಲವು ಪದ್ಯಗಳನ್ನು ಬರೆದಿದ್ದಾರೆ. ಅವು ಕಟ್ಟಿಕೊಳ್ಳುವ ಬಗೆಯೇ ವಿಶಿಷ್ಟವಾದುದು. 'ಬಣ್ಣದ ಚಿಟ್ಟೆ' ನಮ್ಮನ್ನು ಸೆಳೆಯುವ ಪರಿ ಹೀಗಿದೆ:

ಬಣ್ಣದ ಚಿಟ್ಟೆ ಬಣ್ಣದ ಚಿಟ್ಟೆ ಎಲ್ಲಿಗ್ ಹೋಗ್ತೀಯ?
ತೋಟದಲ್ಲಿ ನೀ ನನ್ನ ಜೊತೆಗೆ ಆಡೋಕ್ ಬರ್ತೀಯ?

ಹೂವಿನ ಬಂಡನ್ನು ಕುಡೀಯುತ್ತೀಯಾ ಎಂದು ಪ್ರಶ್ನಿಸುವ ಚಿಟ್ಟೆ ಜೇನುತುಪ್ಪವನ್ನು ಕುಡಿಯಲಿಕ್ಕೆ ಸೊಂಡಿಲು ಏನು ಬೇಕಾಗಿಲ್ಲ, ಗೂಡು ತುಂಬಿ ಹಣಕುವ ಹನಿಗೆ ಬಾಯಿ ಒಡ್ಡಿದರೆ ಸಾಕು ಎಂದೆಲ್ಲ ಪುಸಲಾಯಿಸುತ್ತದೆ. ಕೊನೆಗೆ ತನ್ನನ್ನು ಮುಟ್ಟದೆ ಇದ್ದರೆ ತೋಟಕ್ಕೆ ಆಡಲಿಕ್ಕೆ ಬರುತ್ತೇನೆಂದು ಮಗುವಿಗೆ ಹೇಳುತ್ತದೆ.

ಆಯ್ತಪ್ಪ, ನೀ ಹೇಳಿದ ಹಾಗೆ ಮುಟ್ಟದೆ ಇರ್ತೀನಿ
ಮುಟ್ಟದೆ ಇದ್ರೆ ಆಡೋದಕ್ಕೆ ತೋಟಕ್ ಬರ್ತೀನಿ

ನಾಟಕೀಯವಾದ ಭಾಷೆ, ಒಬ್ಬರನ್ನು ಸೋಲಿಸಲು ಮತ್ತೊಬ್ಬರು ಪ್ರಯತ್ನಿಸುವ ಆಟ, ಈ ಪದ್ಯವನ್ನು ನಾಲಗೆಗೆ ಲಾಲಿತ್ಯವಾಗಿಸುತ್ತದೆ. 'ಡಕ್ಕಣಕ ಡಕ್ಕಣ', 'ಪಿಕನಿಕ್', 'ಇಡ್ಲಿ ಸಾಂಬಾರ್', 'ದುಡ್ಡು', ಮುಂತಾದ ಪದ್ಯಗಳಲ್ಲಿಯ ಪದಮೈತ್ರಿ, ಪ್ರಾಸ, ಸರಳ ಛಂದಸ್ಸು ಅವುಗಳನ್ನು ನಲಿಯುವ ಹಾಗೆ ಮಾಡುತ್ತವೆ. ಇಂತಹ ಹಲವು ಕಾರಣಗಳಿಗಾಗಿ ಸುಮತೀಂದ್ರ ನಾಡಿಗ ಅವರ ಪದ್ಯಗಳು ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಶಿಶುಪ್ರಾಸಗಳ ಹೊಸ ಸ್ವರೂಪವನ್ನು ಕೊಟ್ಟವು.

ಡಾ. ಆನಂದ ಪಾಟೀಲ

ಆಡುಮಾತು, ಲಯಗಾರಿಕೆ, ಮುಗ್ಧತೆಯ ಅನಾವರಣ ಮತ್ತು ವಾಸ್ತವ ಪ್ರಜ್ಞೆಗಳಿಂದಾಗಿ ಆನಂದ ಪಾಟೀಲ ಅವರ ಮಕ್ಕಳ ಸಾಹಿತ್ಯ ತನ್ನದೆ ಆದ ಒಂದು ವಿಶಿಷ್ಟತೆಯನ್ನು ಪಡೆದಿದೆ. ಕನ್ನಡದ ಮಕ್ಕಳ ಸಾಹಿತ್ಯ ಹೊಸ ಆಯಾಮಗಳನ್ನು ಪಡೆಯುವಲ್ಲಿ ಅವರ ಕೃತಿಗಳು ಸಾಕಷ್ಟು ನೆರವಾಗಿವೆ. ಮಕ್ಕಳ ಸಾಹಿತ್ಯ ರಚನೆಯ ಜೊತೆಗೆ ತಳಕುಹಾಕಿಕೊಂಡಿದ್ದ ಒಂದು ಕೃತ್ರಿಮ ಪರದೆಯನ್ನು ಸರಿಸುವಲ್ಲಿ ಪಾಟೀಲರು ಯಶಸ್ವಿಯಾಗಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲ ಸಾಹಿತ್ಯ ಪುರಸ್ಕಾರ(೨೦೧೪) ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನಗಳು ಅವರಿಗೆ ಸಂದಿವೆ. 'ಅಜ್ಜಿ ಮನೆ ಬಹಳ ದೂರ' ಎನ್ನುವ ಮೊದಲ ಕವನ ಸಂಕಲನ ೧೯೮೩ರಲ್ಲಿ ಪ್ರಕಟವಾಯಿತು. 'ಹೂ', 'ಹಕ್ಕಿ ಪುಟಾಣಿ', 'ಹೂ ಅಂದ್ರ ಹೂ', 'ಅಜ್ಜಿ ಬಿಡಿಕಾಳ್ ಬಿಡಿಕಾಳು ಮೇಲೊಂದೆರಡು ಇಡಿಗಾಳು', 'ಪಪ್ಪಿಕೊಟ್ರು ಬಾಮು' ಎನ್ನುವ ಕವನ ಸಂಕಲನಗಳು, 'ಪುಟ್ಟಕ್ಕನ ಪತ್ರಗಳು', 'ಬೆಳದಿಂಗಳು', 'ಡಂ ಡಂ ಊರಿಗೆ ಡಿಂ ಡಿಂ ಗಾಡಿ', 'ಖಾಲಿ ಕಡ್ಡಿಪೆಟ್ಟಿಗೆ ಮತ್ತು ಬೆಳಕಿಂಡಿ', 'ನನ್ನ ಪ್ರಾಣಿ ಕತೆಗಳು', 'ಮತ್ತೆ ಬಂತು ಚಂಪು', 'ಮೂರು ಮೇಲೊಂದು', 'ಹತ್ತು ಹತ್ತು ಇಪ್ಪತ್ತು', ಮುಂತಾದ ಕತೆ ಕಾದಂಬರಿ ಗದ್ಯ ಕೃತಿಗಳನ್ನು ಬರೆದಿರುವ ಆನಂದ ಪಾಟೀಲ ತಮ್ಮ ನಿರಂತರ ಕ್ರಿಯಾಶೀಲತೆಯಿಂದ ಮಕ್ಕಳ ಸಾಹಿತ್ಯದ ದಿಶೆಗಳನ್ನು ವಿಸ್ತಾರಗೊಳಿಸಿದ್ದಾರೆ. 'ಅಲರು', 'ಮುಗುಳು' ಮುಂತಾದ ಅವಲೋಕನ, ಅಧ್ಯಯನ, ವಿಮರ್ಶೆಯ ಕೃತಿಗಳು ಅವರ ವ್ಯಾಪಕ ಅಧ್ಯಯನ ಮತ್ತು ಓದಿಗೆ ಸಾಕ್ಷಿಯಾಗಿವೆ.

ಆನಂದ ಪಾಟೀಲರ ಸಾಹಿತ್ಯದ ಮುಖ್ಯ ಲಕ್ಷಣಗಳನ್ನು ಹೀಗೆ ಗುರುತಿಸಬಹುದೆಂದು ತೋರುತ್ತದೆ :

೧. ಮಕ್ಕಳ ಲೋಕದ ಸಂವೇದನೆ ಹಾಗೂ ಭಾವ ಸೂಕ್ಷ್ಮತೆ ಅವರಲ್ಲಿ ಅತ್ಯಂತ ಕಲಾತ್ಮಕವಾಗಿ ನೇಯ್ಗೆಗೊಂಡಿರುತ್ತವೆ. ಅದರ ತೀವ್ರತೆ ಪಠ್ಯದೊಡನೆ ಓದುಗನ ತನ್ಮಯತೆಯನ್ನು ಸಾಧಿಸುತ್ತದೆ.

೨. ಪಾಟೀಲರು ಚಿತ್ರಿಸಿರುವ ಪಾತ್ರಗಳು ಸಹಜ ಸ್ವಭಾವ ಹಾಗೂ ಸಾಮರ್ಥ್ಯಗಳನ್ನು ಒಳಗೊಂಡಿರುತ್ತವೆ. ಕೃತಕ ಮತ್ತು ಉದ್ದೇಶಪೂರ್ವಕ ಬಲ ತುಂಬಲು ಅವರು ಇಷ್ಟಪಡುವುದಿಲ್ಲ. ಅವರ ಕಾದಂಬರಿ 'ಡಂ ಡಂ ಊರಿಗೆ ಡಿಂ ಡಿಂ ಗಾಡಿ' ಈ ಮಾತಿಗೆ ಅತ್ಯುತ್ತಮ ಉದಾಹರಣೆಯಾಗಿದೆ.

೩. ಗದ್ಯ ಬರವಣಿಗೆಯ ಹಲವು ರೂಪಗಳನ್ನು ಮಕ್ಕಳ ಬರವಣಿಗೆಗೆಂದು ಅವರು ಉಪಯೋಗಿಸಿರುವಲ್ಲಿ ಇದುವರೆಗೆ ಆ ವಿನ್ಯಾಸಗಳು ಅವಜ್ಞೆಗೆ ಒಳಗಾಗಿದ್ದನ್ನು ಹೇಳುತ್ತವೆ.

ಅಂದರೆ ಲಲಿತ ಪ್ರಬಂಧ, ಲಹರಿ, ಸ್ವಾರಸ್ಯಕರ ಸಂಭಾಷಣೆ ಹಾಗೂ ಜನಪದ ಲಯಗಳ ಬಳಕೆಯಿಂದ ಮಕ್ಕಳ ಸಾಹಿತ್ಯದ ಸ್ವರೂಪಗಳಲ್ಲಿ ನಾವೀನ್ಯತೆ ತಂದರು.

೪. ಕೆಡುಕಿಲ್ಲದ ವಿನೋದ ಮತ್ತು ಹಾಸ್ಯ ಅವರ ಬರವಣಿಗೆಯ ಮತ್ತೊಂದು ಪ್ರಮುಖ ಗುಣವಾಗಿದೆ. ಮಕ್ಕಳ ಕಲ್ಪನೆಗಳಲ್ಲಿ ಹಿರಿಯರು ನಗೆಪಾಟಲಿಗೆ ಈಡಾಗುವದು, ಹಿಂದಿನ ನೆನಪುಗಳಿಂದ ಕಚಗುಳಿ ತರುವದು ನಡೆದಿರುತ್ತದೆ.

ಮಕ್ಕಳದೇ ಆದ ಒಂದು ಪರಿಪೂರ್ಣ ಲೋಕವಿರುತ್ತದೆ. ಮತ್ತು ಅದು ದೊಡ್ಡವರ ಲೋಕದೊಡನೆ ಹೊಕ್ಕುಬಳಕೆ ಮಾಡಿಕೊಳ್ಳುತ್ತಿರುತ್ತದೆ. ಅದರ ಜೊತೆಗೆ ಕಲ್ಪನಾ ಲೋಕವೊಂದರ ಸಂಪರ್ಕದಿಂದ ಅಮೂರ್ತ–ಅಗಮ್ಯದ ಎಳೆಗಳು ಮಕ್ಕಳಿಗೆ ಕೈಗೆ ಸಿಗುತ್ತ ತಪ್ಪುತ್ತಿರುತ್ತವೆ. ಸಂಗತಿಗಳು ಸಿಗುವದು ಮತ್ತು ಅವುಗಳನ್ನು ಕಳೆದುಕೊಳ್ಳುವುದು–ಇದು ಆನಂದ ಪಾಟೀಲ ಅವರ ಕೆಲವು ಕೃತಿಗಳಲ್ಲಿ ಅತ್ಯಂತ ನವಿರಾಗಿ ನಿರೂಪಿಸಲ್ಪಟ್ಟಿದೆ. ಅದಮ್ಯ ಕುತೂಹಲದ ಅಂಚಿಗೆ ಮಕ್ಕಳು ಬಂದು ನಿಲ್ಲುವುದು ಮತ್ತು ಅಲ್ಲಿಂದ ಒಲ್ಲದ ಮನಸ್ಸಿನಿಂದಲೇ ತಮ್ಮ ನೈಜ ಜಗತ್ತಿಗೆ ಮರಳುವುದರ ಚೇತೋಹಾರಿ ಚಿತ್ರಣವೊಂದು 'ಡಂ ಡಂ ಊರಿಗೆ ಡಿಂ ಡಿಂ ಗಾಡಿ'ಯಲ್ಲಿ ಚಿತ್ರಿತವಾಗಿದೆ. ಮಕ್ಕಳ ಮನಸ್ಸಿನ ಇರವು ಮತ್ತು ಅದು ಹಿಗ್ಗುವ – ಕುಗ್ಗುವ ಎಳೆಗಳನ್ನು ಈ ಪುಸ್ತಕದಲ್ಲಿ ಅನುಭವಿಸಬಹುದಾಗಿದೆ. ಕ್ರಿಕೆಟ್, ಫುಟ್ಬಾಲ್, ಕಂಪ್ಯೂಟರ್ ಮುಂತಾದ ಆಟಗಳು ಇಲ್ಲದ ಹಿಂದಿನ ಕಾಲದಲ್ಲಿ ಮಕ್ಕಳು ಹಿಂದಿನಿಂದ ಒಬ್ಬರ ಅಂಗಿಯನ್ನು ಒಬ್ಬರು ಹಿಡಿಯುತ್ತ ಸಾಕಷ್ಟು ಹೊತ್ತು ಗಾಡಿಬಿಡುತ್ತಿದ್ದರು. ಮುಂದಿನವ ಟ್ರುಂ ಟ್ರುಂ ಎಂದು ರೇಲ್ವೆ ಇಂಜಿನ್ ಆದರೆ ಉಳಿದವರು ಅದರ ಡಬ್ಬಿಗಳಾಗಿ ಹೊರಳುತ್ತಿದ್ದರು. ಕೆಲವೊಮ್ಮೆ ಪ್ಯಾಸೆಂಜರ್ ಆಗುತ್ತ, ಮತ್ತೊಮ್ಮೆ ಎಕ್ಸ್‌ಪ್ರೆಸ್ ಆಗುತ್ತ ಮಕ್ಕಳ ಆಟದ ಆಸೆ ತಣಿಸುತ್ತಿದ್ದ ಗಾಡಿ ಆಟ ಈ ಪುಸ್ತಕದಲ್ಲಿ ಮನುಷ್ಯ ಸಂಬಂಧ ಮತ್ತು ನೆನಪುಗಳನ್ನು ಹೊತ್ತು ತರುವ ಪರಿ ಕುತೂಹಲಕಾರಿಯಾದುದು. ಟುಮ್ಯಾ, ರಜಿ, ವಿನೂ, ಸಿದ್ಯಾ, ಶಿವು, ಅಚ್ಚು ಮುಂತಾದ ಗೆಳೆಯರು ಗಾಡಿ ಆಡುವ ಮಾನವೀಯ ಕ್ಷಣಗಳು ಅಂಟಿಕೊಂಡಿರುವ ಪರಿಣಾಮಕಾರಿ ಕತೆಯಾಗಿ ಮಾರ್ಪಟ್ಟಿದೆ. ಕರುಳು ಹಿಂಡುವ ಎರಡು ಸನ್ನಿವೇಶಗಳು ಈ ಕತೆಯಲ್ಲಿ ಮಕ್ಕಳನ್ನು ಆರ್ದ್ರವಾಗಿಸುತ್ತವೆ. ಶ್ರೀಮಂತ ರಾವಜಿ ಅವರ ಮನೆಯ ಪುಟ್ಟ ಹುಡುಗಿಯನ್ನು ಶಿವು ಎನ್ನುವ ಭಾಲಕ ಆಡಿಸುತ್ತ ಕುಳಿತಾಗ ಆ ಹುಡುಗಿಯ ಕೈಯಲ್ಲಿದ್ದ ಉಂಗುರ ಕಳೆದುಹೋಗುತ್ತದೆ. ಎಲ್ಲೂ ಸಿಗದಿದ್ದಾಗ ಈ ಹುಡುಗನೆ ಕದ್ದಿರಬಹುದು ಎನ್ನುವ ಗುಮಾನಿ ಹುಟ್ಟಿಕೊಳ್ಳುತ್ತದೆ. ಶಿವೂನ ಅವ್ವ ಅವನನ್ನು ಮನಸಾರೆ ಹೊಡೆಯುತ್ತಾಳೆ. ಅಳುತ್ತ ಕುಳಿತಿರುವ ಶಿವೂನ ಹತ್ತಿರ ಡಿಂ ಡಿಂ ಗಾಡಿ ಬಂದು ಎಲ್ಲರೂ ಸೇರಿ ಹುಡುಕೋಣ ಎಂದು ಶಿವೂನನ್ನು ಹತ್ತಿಸಿಕೊಂಡು ರಾವಜಿ ಮನೆಯೆಂಗಳಕ್ಕೆ ತಲಪುತ್ತದೆ:

'ನಮ್ ಡಿಂ ಡಿಂ ಗಾಡಿ ಎಂಜಿನ್ನು, ಡಬ್ಬಿ, ಗಾರ್ಡು ಎಲ್ಲಾ ಹುಡುಕೂದ್ರಾಗ ಮುಳುಗಿ ಹೋದ್ರು, ಶಿವೂನೂ ಹುಡುಕಲಿಕ್ಕೆ ಹತ್ತಿದಾ. ಬಿಸಲೊಂದ ಭಾಳ ಆಗಿತ್ತು, ಅವರ ಮನೀ ಮುಂದ ನೆರಳೂ ಇದ್ದಿದ್ದಿಲ್ಲಾ. ನಾವು ಹುಡುಕೇ ಹುಡುಕಿದಿವಿ. ಯಾರಿಗೂ ಕಾಣಸವಲ್ದು, ಟುಮ್ಯಾಗ ಬ್ಯಾಸರ ಬಂತು . . . 'ಕ್ಯಾ ಬಾತ್ ಹೈ' ಸಿದ್ಯಾ ಒಮ್ಮಿಲಿಗೆ ಒದರಿದಾಗ ಎಲ್ಲಾರು ಅತ್ಲಾ ಕಡೆ ಹೊಳಿದ್ವಿ . . . ನಮ್ಮ ಕೆಲಸಾ ಸಕ್ಸೆಸ್ ಆಗಿತ್ತು. ಆ ಹಾಳಾದ ಉಂಗರಾ ಒಂದ ಸಣ್ಣ ಹುಲ್ಲಿಗೆ ಸಿಕ್ಕಹಾಕ್ಕೊಂಡ ಕೂತಿತ್ತು . . .'

ಉಂಗುರವನ್ನು ರಾವಜಿ ಮನೆಗೆ ಮುಟ್ಟಿಸಿದ ಮಕ್ಕಳು ನಿರಾಳರಾದರು. ಪ್ರತಿಫಲವಾಗಿ ಅವರು ಯಾವ ಮಾತಿಗೂ, ಯಾವ ತಿಂಡಿಗೂ ಕಾಯಲಿಲ್ಲ. ಉಂಗುರ ಹೋದರೆ ಹೋಗಲಿ, ಮಗುವನ್ನು ಯಾಕೆ ಹೊಡೀತಿಯ ಬಿಡು ಅಂತ ಅವರು ಅನ್ನಲಿಲ್ಲ ಎಂಬ ವಿಷಾದ ಮಕ್ಕಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಅವರ ಮನೆಯ ಮುಂದೆ ಬಿಸಿಲಿತ್ತು, ನೆರಳಿರಲಿಲ್ಲ ಎಂಬ ರೂಪಕದಲ್ಲಿಯೂ ಅದು ಕಾಣುತ್ತದೆ. ಕಣ್ಣುಗಳಿಗೆ ಅಗೋಚರವಾಗಿರುವ, ಭಾವನೆಗಳಿಗೆ ಮಾತ್ರ ಗೋಚರವಾಗಿರುವ ಲೋಕವೊಂದು ಮಕ್ಕಳಿಗೆ ವಿಶಿಷ್ಟವಾಗಿ ತೆರೆದುಕೊಂಡಿದೆ. ಡಂ ಡಂ ಎನ್ನುವ ಊರಿನಿಂದ ಬಂದಿದ್ದೇನೆಂದು ಹೇಳಿಕೊಳ್ಳುವ ಹುಡುಗನ ಬಗ್ಗೆ ಡಿಂ ಡಿಂ ಗಾಡಿಯ ಹುಡುಗರಿಗೆಲ್ಲ ಅದಮ್ಯ ಕುತೂಹಲ. ಅವನ ವರ್ತನೆ, ಅವನು ತೊಡುವ ಅರಿವೆ, ಅವನ ಮಾತು ಇವರಿಗೆ ವಿಚಿತ್ರ:

'ನಾವು ಬಾಗಿಲಿಗೆ ಬಂದ್ವೆಲಾ, ನಮ್ಮ ಎದರಿಗೆ, ಅಂದರ ಗವಿ ಎದರೀಗೆ ಇರೋ ಅಗಲನ ಕರಿ ಬಂಡೀಮ್ಯಾಲ ಒಬ್ಬ ಹುಡುಗ ಕೂತಿದ್ದಾ. ಗಿಡ್ಡಚೊಣ್ಣಾ, ಬುಷ್‌ರಟು ಹಾಕ್ಕೊಂಡಿದ್ದಾ. ನಾವ ಬರೋದ ಕಾಯಕೋತ ಕೂತಾನೋ ಏನೋ ಅನ್ನೂ ಹಾಂಗ ನಕ್ಕೋತ ಕೂತಿದ್ದಾ.

'ನೀ ಡಂ ಡಂ ಊರಿಂದ ಬಂದೀ ಏನ ಮತ್ತ?' ಅಂತ ಟುಮ್ಯಾ ಚಾಷ್ಟಿ ಮಾಡಿ ನಮ್ಮ ಅಲ್ಲಿಂದ ಬಂದೇನಿ ಅನ್ನವ್ರಹಂಗ ಗೋಣ ಹಾಕಿದ.

ಅಂವಾ ಮಾತಾಡಲಿಕ್ಕೆ ಹತ್ತಿದ. 'ಡಂ ಡಂ ಊರಿನ ಮಜಾ ಅಂದ್ರ ಅಲ್ಲೆ ಹುಡುಗೂರು ಹುಡಗೂರಾಗೇ ಇರ್ತಾರ'
'ಅಂದ್ರ, ದೊಡ್ಡವರು ದೊಡ್ಡವರಾಗೆ ಇರ್ತಾರ?'
'ಹೂಂ'
'ಅಂದ್ರ ಯಾರೂ ಬೆಳೆಂಗೇ ಇಲ್ಲಾ . . .'
'ಹೂಂ'
'ಮುದುಕರಾಗಂಗಿಲ್ಲಾ . . .'
'ಇಲ್ಲಾ'
'ಜಡ್ಡು ಜಾಪತ್ರಿ?'
'ಊಂ ಹೂಂ'
'ಅಲ್ಲೆ ಸಾಲಿ?'
'ಹೋದ್ರ ಹೋಗಬಹುದು. ಬ್ಯಾಡಂದ್ರ ಇಲ್ಲಾ'

ಪೀಟರ್ ಪ್ಯಾನ್‌ನಂತೆ ಈ ಜಗತ್ತು ಮುಗ್ಧತೆಯ ಆಚೆ ಬೆಳೆಯುವುದನ್ನು ನಿಲ್ಲಿಸಿದೆ. 'ಬರ್ತೀರಿ ನನ್ನ ಜೋಡಿ?' ಅಂತ ಆ ಹುಡುಗ ಕೇಳಿದಾಗ ಇವರೆಲ್ಲ ಗಪ್ಪಗಾರ ಆಗುತ್ತಾರೆ. ಮನಸ್ಸಿನ ಸಂದಿಗ್ಧತೆ, ದಿಗಿಲು, ಹೆದರಿಕೆ ಇಲ್ಲಿ ಕಟ್ಟಿಕೊಟ್ಟಿರುವ ರೀತಿ ತುಂಬ ಮಹತ್ವದ್ದು. ಕತೆಯನ್ನು ನಿರೂಪಿಸುತ್ತಿರುವ ಹುಡುಗಿ ಹೇಳುತ್ತಾಳೆ: 'ನನಗ ಒಮ್ಮಲಿಗೆ ನಮ್ ಆಯಿ ಆ ಕತ್ಲಕ್ವಾಣ್ಯಾಗ ಇರ್ತರಲಾ ಅವರದ ನೆನಪಾಗಿ ಬಿಡ್ತು. ಅವ್ರು ಅಕಸ್ಮಾತ್ ಡಂ ಡಂ ಊರಿಗೆ

ಬಂದ್ರ ಈಗ ಇದ್ಧಂಗ ಇರ್ತಾರ ಅಂದ್ರ ? ನನಗ ಅದನ್ನ ಒಪ್ಪಲಿಕ್ಕೆ ಆಗಲಿಲ್ಲ. ಬ್ಯಾಡಾ ಅನ್ನಿಸಿಬಿಡ್ತು'

ಕತ್ತಲು ಕೋಣೆಯಲ್ಲಿ ಕೆಮ್ಮುತ್ತಿರುವ ವೃದ್ಧ್ಯಾಪ್ಯದ ಅಜ್ಜಿಯ ಚಿತ್ರ ಈ ಹುಡುಗಿಯ ಕಣ್ಣಲ್ಲಿ ಅಳಿಸಲಾಗದಂತೆ ಕುಳಿತಿರುವುದು ಈ ಪುಸ್ತಕ ಕಟ್ಟಿಕೊಡುವ ಅತ್ಯಂತ ಮಾನವೀಯ ಕಾಳಜಿಗಳಲ್ಲೊಂದಾಗಿದೆ. ಅದೇ ರೀತಿ ಗಾಡಿ ಓಡಿಸುತ್ತ ಅವರು ನೋಡುವ ಮನೆಯ ಕಂಬದ ಮೇಲೆ ಹಾಕಿರುವ ಮನೆಯವರೆಲ್ಲರೂ ಕುಳಿತು ತೆಗೆಸಿರುವ ಕಪ್ಪುಬಿಳುಪು ಫೋಟೋ ಮನುಷ್ಯ ಸಂಬಂಧಗಳನ್ನು ಮಕ್ಕಳಿಗೆ ತಿಳಿಸಿಕೊಡುವ ದೊಡ್ಡ ಸಾಧನವಾಗಿದೆ. ಧಾರವಾಡ ಕಡೆಯ ಭಾಷೆಯನ್ನು ಸುಲಲಿತವಾಗಿ ಬಳಸಿಕೊಳ್ಳುವ ಕಾದಂಬರಿ ಮಕ್ಕಳಿಗೆ ಸಹಜವಾದ ಅನುಭವವನ್ನು ಕಟ್ಟಿಕೊಡುತ್ತದೆ.

ಮಕ್ಕಳಿಗೆ ಕಲ್ಪಕ ಶಕ್ತಿಯನ್ನು ಬೆಳೆಸುವ ಯೊಚನಾಲಹರಿಯನ್ನು ಉದ್ದೀಪಿಸುವ ಪಾಟೀಲರ ಗದ್ಯ ಮಾದರಿ ಒಂದು ಕಡೆಗಿದ್ದರೆ ವಾಸ್ತವವನ್ನು ಕಟ್ಟಿಕೊಡುವ ಕೆಲ ಮಾದರಿಗಳು 'ಹತ್ತು ಹತ್ತು ಇಪ್ಪತ್ತು' ಕೃತಿಯಲ್ಲಿ ಕಂಡುಬರುತ್ತವೆ. 'ಹತ್ತು ಹತ್ತು ಇಪ್ಪತ್ತು' ಕೃತಿಯಲ್ಲಿ ಕತೆಯ ಆರಂಭ, ಕೊನೆ ಮುಖ್ಯವಾಗುವುದಿಲ್ಲ. ಕಥಾವಸ್ತುವು ಕೂಡ ಇಲ್ಲಿ ಅಷ್ಟು ಮುಖ್ಯವಾಗುವುದಿಲ್ಲ. ಇಲ್ಲಿ ತುಂಬ ಮಹತ್ವದ್ದಾಗುವುದು ಕತೆ ಹೇಳುವ ರೀತಿ. ಒಂದು ಅನುಭವ ಮತ್ತು ಅದರೊಡನೆ ಬೆರೆತಿರುವ ಸಂಸ್ಕೃತಿಯನ್ನು ಮಕ್ಕಳ ಸಂವೇದನೆಯಲ್ಲಿ ದಾಖಲಿಸಿರುವುದು ಕೃತಿಯಲ್ಲಿ ಎದ್ದು ಕಾಣುವ ಅಂಶವಾಗಿದೆ. ಕತೆ ಎಂದರೆ ಹೀಗೆಯೆ ಇರಬೇಕು, ಇದೇ ಅನುಭವಗಳನ್ನು ಕಟ್ಟಿಕೊಡಬೇಕು ಎನ್ನುವ ರೂಢಿಗತ ನಂಬಿಕೆಗಳನ್ನು ತಲೆಕೆಳಗು ಮಾಡುವಲ್ಲಿ ಪಾಟೀಲರ ಆಸಕ್ತಿ ಇರುವಂತಿದೆ. ಮಕ್ಕಳ ಆಟ, ಅಂಜಿಕೆ, ನಗು, ಅಳು ಮತ್ತು ಕಲ್ಪನೆಗಳು ಸಹಜವಾದ ಅಭಿವ್ಯಕ್ತಿಯಲ್ಲಿ ಅರಳಿರುವುದು ಇಲ್ಲಿಯ ಹೆಚ್ಚುಗಾರಿಕೆಯಾಗಿದೆ. ಮಕ್ಕಳ ಸಿಟ್ಟು–ಸಿಡುವು, ಗೆಳೆತನ–ಹಗೆತನ, ನಲಿವು–ಗೆಲುವುಗಳು ಭಾವುಕ ಮತ್ತು ವಾಸ್ತವದ ಪದರುಗಳಲ್ಲಿ ಬಿಚ್ಚಿಕೊಳ್ಳುತ್ತವೆ. ಮಕ್ಕಳ ಜೀವನದಲ್ಲಿ ದಿನನಿತ್ಯ ನಡೆಯುವ ಘಟನೆ, ಸನ್ನಿವೇಶ, ಸಂದರ್ಭಗಳು ಸಂಜ್ಞೆ, ಸಂಕೇತ, ರೂಪಕಗಳ ಭಾಷೆಯಲ್ಲಿ ಮೈದುಂಬಿಕೊಂಡಿವೆ. ಬರೀ ಆಟಗಳೆಂದು ಅಲಕ್ಷ್ಯಕ್ಕೆ ಒಳಗಾಗಿರುವ ಹಲವಾರು ಆಟದ ಸನ್ನಿವೇಶಗಳು ಇಲ್ಲಿ ಕತೆಗಳಾಗಿ ಮಾರ್ಪಡುತ್ತವೆ.

ಪುಟ್ಟಕ್ಕ ಹೆಸರಿನ ಪುಟ್ಟ ಬಾಲಕಿಯ ಗೊಂಬೆಯನ್ನು ಪುಟ್ಟ ಮಂಗವೊಂದು ಎತ್ತಿಕೊಂಡು ಆಲದ ಮರ ಹತ್ತುವುದು, ಪುಟ್ಟಕ್ಕ ಹುಸಿಮುನಿಸಿಸು ತೋರಿಸುವುದು, ಬಾಲಕಿಯ ಕಣ್ಣೀರಿಗೆ ಮಂಗ ಮಾನವೀಯತೆ ಮೆರೆಯುವುದು, ಅವಳು ಮಂಗನಿಗೆ ಪ್ರೀತಿಯಿಂದ ಚಿನ್ನು ಎಂದು ಹೆಸರಿಡುವುದು ಕತೆಗೆ ಜೀವ ತರುತ್ತವೆ. ಪುಟ್ಟಕ್ಕನ ಹತ್ತಿರವಿರುವ ಪುಟ್‌ಪುಟ್ಟಕ್ಕ ಹೆಸರಿನ ಗೊಂಬೆಯೆಂದರೆ ಮಂಗನಿಗೂ ಆಸೆ. ಆ ಹೆಸರು ಅದಕ್ಕೆ ತುಂಬ ಇಷ್ಟವಂತೆ :

' . . . ನನಗೂ ಅಂಥಾದೊಂದ್ ಚೆಂದನೆ ಹೆಸರ ಬೇಕು'
'ಯಾತಕ್ಕೆ . . . ನಿನ್ ಹತ್ರ ಗೊಂಬೆ ಇಲ್ವಲ್ಲ' ಅಂದೆ.
'ಹೂಂ . . . ನನಗೇ ಬೇಕು' ಅದು ಮುಖ ಹೊರಳಿಸಿ ನಾಚಿಗೊಂಡಹಾಗೆ

ಮಾಡ್ತು.
ನನಗೆ ನಗು ಬಂತು.
'ನಮ್ಮಮ್ಮ ಕಿಂವಿ . . . ಕಿಂವಿ . . . ಅಂತಾ ಕರೀತಾಳೆ'
'ಅದು ಇಷ್ಟ ಆಗ್ಲಿಲ್ವಾ ?'
'ಆಯ್ತು . . . ಆದ್ರೂ . . . ' ಅಂತ ದನಿ ಎಳೀತು
'ನಾನೊಂದ್ ಹೆಸರ ಹೇಳ್ಲಾ ಹಾಗಿದ್ರೆ . . : ಚಿನ್ನು'

ಅದು ಬಾಯ್ ತಗೀತು . . . ಕಣ್ ಮುಚ್ತು . . . ಆಮೇಲೆ ತಲೆ ಅಲ್ಲಾಡ್ಸಿ ಆಯ್ತು ಅನ್ನೋಹಾಗೆ ಮಾಡ್ತು. ಹಂಗಂದದ್ದೇ ಬಾಗಿ ಪುಟ್ ಪುಟ್ಟಕ್ಕನ ಕೆನ್ನೆ ಮೇಲೆ ಪಪ್ಪೀ ಕೊಡ್ತು . . . ಆಮೇಲೆ ಸುಂಯ್ ಅಂತ ಹಾರಿ ಗಿಡದಲ್ಲಿ ಮರೆ ಆಗ್ಬಿಡ್ತು . . . ನನಗೆ ಖುಷಿಯೋ ಖುಷಿ . . . 'ಚಿನ್ನು' ಅಂತ ಜೋರಾಗಿ ಕೂಗ್ದೆ

ಅದು ಕಿಚ್ ಕಿಚ್ ಕಿಚ್ ಕಿಚ್ ಅಂತ ಎಲೆಗಳನ್ನೆಲ್ಲಾ ಅಲ್ಲಾಡಿಸಿ ಹಾರಾಡತೊಡಗಿತು. (ಹತ್ತು ಹತ್ತು ಇಪ್ಪತ್ತು ಪು ೮)

ಎರಡನೆಯ ಕತೆಯಲ್ಲಿ ಆಲದ ಮರದ ಎಲೆ ಪುಟ್ಟಕ್ಕನ ಹತ್ತಿರ ಮಾತಾಡುವುದು, ಅವರಿಬ್ಬರೂ ಸುಂಯ್ ಅಂತ ಗಾಳಿಯಲ್ಲಿ ತೇಲಿಕೊಂಡು ಹೋಗುವುದು ಮಕ್ಕಳ ಕಲ್ಪನಾ ಶಕ್ತಿಗೆ ಇಂಬುಕೊಡುವಂತಿದೆ. ಪಾಟೀಲರ ಮತ್ತೊಂದು ಗುಣವೆಂದರೆ ಮಕ್ಕಳ ಗ್ರಹಣಶಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕತೆ ಹೆಣೆಯುವುದು. ವಾಸ್ತವದ ಅರಿವು ಈ ಕತೆಗಳ ಮತ್ತೊಂದು ಮುಖ್ಯ ಅಂಶವಾಗಿದೆ. ಚಿಟಗುಬ್ಬಿ, ಕಾಗೆ, ಅಜ್ಜಿ, ಅಮ್ಮ, ಮೇಡಂ, ಪುಟ್ಟಕ್ಕ, ರಾಜಿ, ವಿನು, ಸುಮಾ, ವಿಜಿ, ಭಾನು ಮುಂತಾದ ಸುತ್ತಮುತ್ತಲಿನ ವ್ಯಕ್ತಿಗಳು, ಪ್ರಾಣಿಪಕ್ಷಿಗಳು ಈ ಕೃತಿಯಲ್ಲಿ ಎದ್ದು ಓಡಾಡುತ್ತಾರೆ. ಮಕ್ಕಳ ಜೊತೆ ಮಾತಾಡುತ್ತಾರೆ.

ಮರೆವಿನ ಅಂಚಿಲ್ಲಿರುವ ಹಳೆಯ ಆಟಗಳನ್ನು ಕೇಂದ್ರಿಕರಿಸಿದ ಎರಡನೆ ಭಾಗದ ಹತ್ತು ಪ್ರಸಂಗಗಳು ಮಕ್ಕಳ ಮೋಜನ್ನು ಗಮನದಲ್ಲಿರಿಸಿಕೊಂಡಿವೆ. ಆಟಕ್ಕೆ ಆಟ, ಲೆಕ್ಕಕ್ಕೆ ಲೆಕ್ಕ. ಮೂರನೇ ಭಾಗದ ಪ್ರಸಂಗಗಳು ನೋಡನೋಡುತ್ತಿರುವಂತೆ ಕಾಲ ಹೇಗೆ ಸರಿಯುತ್ತಿದೆ ಎನ್ನುವುದರ ಸೂಚನೆ ಕೊಡುತ್ತವೆ. ಕುಟುಂಬದ ತವಕ, ತಲ್ಲಣ, ಜಗಳ, ಕೋರ್ಟುಕಚೇರಿ, ಸಾವು–ನೋವುಗಳ ಘಟನೆಗಳಿಂದ ಮಕ್ಕಳು ಎಷ್ಟೆಲ್ಲ ನೋಯುತ್ತಾರೆ ಎಂಬುದನ್ನು ಚಿತ್ರಿಸುವ ಪ್ರಯತ್ನ ಪಾಟೀಲರ ಕತೆಗಳಲ್ಲಿದೆ. ಪುಟ್ಟ ಹೃದಯಗಳು ಅನುಭವಿಸುವ ಒತ್ತಡ ಹಾಗೂ ತಾಕಲಾಟಗಳನ್ನು ಅತ್ಯಂತ ಹೃದಯಸ್ಪರ್ಶಿಯಾಗಿ ಕಟ್ಟಿಕೊಡುವ ಕಲೆ ಅವರಿಗೆ ಕರಗತವಾಗಿದೆ.

ಪಾಟೀಲರ ಗದ್ಯ ಬರಹಗಳು ಈ ರೀತಿಯಲ್ಲಿ ಮಕ್ಕಳ ಸಂಭ್ರಮ, ಸಂಕಟ, ವಿಷಾದ, ಅಗಲಿಕೆಯ ಶೂನ್ಯತೆ ಮುಂತಾದ ಭಾವಗಳ ಅಭಿವ್ಯಕ್ತಿಯಲ್ಲಿ ಮೇಲುಗೈ ಸಾಧಿಸುತ್ತವೆ. ಅವರ ಕವಿತೆಗಳು ಹಾಗೂ ನರ್ಸರಿ ಹಾಡುಗಳು ಕೂಡ ಮಕ್ಕಳ ಮುಗ್ಧತನ ಮತ್ತು ಚೈತನ್ಯದ ಝರಿಯನ್ನು ನಿರೂಪಿಸುವಲ್ಲಿ ನಿರತವಾಗಿವೆ. 'ಹೂ ಅಂದ್ರ ಹೂ', 'ಅಜ್ಜಿ ಅಜ್ಜಿ ಬಿಡಿಕಾಳು', 'ಪಪ್ಪಿಕೊಟ್ರು ಬಾಪು' ಮುಂತಾದ ಸಂಕಲನಗಳು ಆ ದಿಶೆಯಲ್ಲಿ ಹೊರಬಂದ ಮಹತ್ವದ ಕೃತಿಗಳಾಗಿವೆ. ಕಾವ್ಯದಲ್ಲಿ ಕೆಲವು ಕುತೂಹಲಕಾರಿ ಪ್ರಯೋಗಗಳನ್ನು ಮಾಡುವ ಮೂಲಕ ಆನಂದ ಪಾಟೀಲ ಒಂದು ಪರಂಪರೆಯನ್ನು ಪುನರ್‌ಸೃಷ್ಟಿಸುವ ಕೆಲಸ ಮಾಡಿದ್ದಾರೆ. ನಮ್ಮ

ಗ್ರಾಮೀಣ ಭಾಗದಲ್ಲಿ ಪ್ರಚಲಿತದಲ್ಲಿದ್ದು ಈಗ ಬಹುತೇಕ ಮರೆವಿಗೆ ಸರಿದಿರುವ ಮತ್ತು ಸರಿಯುತ್ತಿರುವ ಗೊಂದಲಿಗರ ಪದ, ಚೌಡಿಕೆ ಪದ, ಕಿನ್ನರಿ ಪದ, ಬುರ‍್ರ ಕಥಾ ಮುಂತಾದ ಹಾಡುವ ಸಂಪ್ರದಾಯ, ಹಾಗೂ ಗಪದ್ಯ ಸಂಪ್ರದಾಯಕ್ಕೆ ಜೀವಂತಿಕೆ ತುಂಬುವ ಪ್ರಯತ್ನ ಮಾಡಿದ್ದಾರೆ. ಈ ರೀತಿ ಪದ್ಯಗಳನ್ನು ಅನ್ನುವ ಮಾದರಿಯಲ್ಲಿ ಸ್ವಾರಸ್ಯಕರ ಸನ್ನಿವೇಶ ಏರ್ಪಡುತ್ತದೆ. ನಿರೂಪಕನನ್ನು ಓದುಗರು ಪ್ರಶ್ನಿಸುತ್ತಾರೆ. ತಮ್ಮ ಅಭಿಪ್ರಾಯ ಹೇಳುತ್ತಾರೆ. ಕತೆ ಹೀಗಾಗಬಹುದಿತ್ತು ಎನ್ನುತ್ತಾರೆ, ಅಥವಾ ಅಲ್ಲಿಯ ಭಾವಸಂದರ್ಭಕ್ಕೆ ತಮ್ಮ ಸ್ಪಂದನೆ ನೀಡುತ್ತಾರೆ. ಮಕ್ಕಳಲ್ಲಿ ಈ ರೀತಿಯ ಕಾವ್ಯ ಪ್ರಕಾರವೊಂದರ ಬಗ್ಗೆ ಅಭಿರುಚಿ ಹುಟ್ಟಿಸುವಲ್ಲಿ ಪಾಟೀಲರ 'ಅಜ್ಜೀ ಬಿಡಿಕಾಳ್ ಬಿಡಿಕಾಳು, ಮೇಲೊಂದೆರಡು ಇಡಿಗಾಳು' ಕೃತಿ ಆಸಕ್ತಿ ವಹಿಸುತ್ತದೆ : 'ನೀವೆಲ್ಲಾ ಸುತ್ತ ಕುಳಿತು ಕೊಂಡಿದ್ದೀರಿ, ಮಧ್ಯ ನಾನು ಕುಳಿತುಕೊಂಡಿದ್ದೇನೆ. ನನ್ನ ಕೈಯಲ್ಲಿ ಹಾಡಿಗೆ ಅನುವಾಗಬಲ್ಲ ಒಂದಾವುದೊ ವಾದ್ಯ ಇದೆ. ನಾನು ಹಾಡುತ್ತ, ಸಾಭಿನಯವಾಗಿ ಹೊರಳಾಡುತ್ತ, ಮಧ್ಯೆ ಮಧ್ಯೆ ಒಂದಷ್ಟು ಮಾತನಾಡುತ್ತ ಇದ್ದೇನೆ. ಹೀಗೆ ನೀವು ಭಾವಿಸಿಕೊಳ್ಳುವುದಾದರೆ ಈ ಕೃತಿಯ ಮಾದರಿಯನ್ನು ಸುಲಭವಾಗಿ ಗ್ರಹಿಸಬಲ್ಲಿರಿ' ಎಂದು ಅವರು ಸುಮಾರು ೬೨ ಪುಟಗಳ ದೀರ್ಘ ಕಥನ ಕವನದಲ್ಲಿ ಮೊದಲಿಗೆ ಹೇಳಿಕೊಳ್ಳುತ್ತಾರೆ.

ಎಲ್ಲಿಯೋ ಸುರುವಾಗಿ ಎಲ್ಲಿಗೋ ಹೋಗುವ ಅಡ್ಡಕತೆಯಿಂದ ಮತ್ತೆ ಮೂಲಕತೆಗೆ ಮರಳುವ ವಿಚಿತ್ರ, ವಿಸ್ಮಯದ ಶೈಲಿ ಹಾಗೂ ಹಲವಾರು ರಸವತ್ತಾದ, ಮನ ಮಿಡಿಯುವ ಪ್ರಸಂಗಗಳಿಂದ ಅಜ್ಜೀ ಕತೆಯ ರಚನೆ ತುಂಬ ಸ್ವಾರಸ್ಯಕರವಾಗಿ ಇಲ್ಲಿ ಮೂಡಿಬಂದಿದೆ. 'ಸತ್ತಿಲ್ಲಾ ಸತ್ತಿಲ್ಲಾ, ಕೆಟ್ಟಿಲ್ಲಾ ಕೆಟ್ಟಿಲ್ಲಾ' ಎಂದು ಎಷ್ಟೇ ಸಾಯಿಸಿದರೂ ಸಾಯದ ಗುಬ್ಬಿಯೊಂದು ಹೇಗೆ ಮುದುಕಿಯೊಬ್ಬಳನ್ನು ಕಾಡಿಸುತ್ತದೆ ಮತ್ತು ಮುದುಕಿ ಹೇಗೆ ತನ್ನ ಕಾಯಕದಲ್ಲಿ ಜಯಶೀಲಳಾಗುತ್ತಾಳೆ ಎನ್ನುವ ಜನಪದ ಕತೆಯನ್ನು ಆಧರಿಸಿ ಪಾಟೀಲರು ಕಥನ ಕವನ ಹೆಣೆದಿದ್ದಾರೆ. ಗುಬ್ಬಿಯ ಬದಲಾಗಿ ಇಲ್ಲಿ ಟುಣಕ್ ಟುಣಕ್ ಬಾಲದ ಇಲಿಮರಿ ಇದೆ. ಬೆಳದಿಂಗಳ ಬಾಲೆಯಂತಹ ಪುಟ್ಟ ಹುಡುಗಿಯೊಬ್ಬಳು ಬಂದು ಅಜ್ಜಿಯಲ್ಲಿ ಪುಟ್ಟದಾದ ಕೌದಿಗೆ ಬೇಡಿಕೆ ಇಡುತ್ತಾಳೆ. ಕೌದಿ ಹೊಲೆಯುವುದರಲ್ಲಿ ಪ್ರಸಿದ್ಧಳಾಗಿರುವ ಆಕೆ ಈ ಮಾಟದ ಮೂಗಿನ ಹುಡುಗಿಗೆ ಇಲ್ಲವೆನ್ನಲಾಗುವುದಿಲ್ಲ. ಕೌದಿಯ ಚಿತ್ತಾರದಲ್ಲಿ ಇಡೀ ಪ್ರಪಂಚವನ್ನೇ ಇಳಿಸುವ ಮುದುಕಿಯ ಕಲೆ ಪಾಟೀಲರ ಕಾವ್ಯದಲ್ಲಿ ಚಿತ್ತಾಕರ್ಷಕವಾಗಿ ಇಳಿದಿದೆ :

ಯಾವ ಯಾವ ಊರಾಗೂ
ಸಿಗದಂಥಾ ಕೌದ್ರಿ
ಅದರ ತುಂಬ ಚಿತ್ರ ಅಂದ್ರ ಚಿತ್ರರಿ
ಎಷ್ಟ ಹೇಳಿದ್ರೂ ಕಡಿಮೀನ ಬಿಡ್ರಿ
. . . .
ಅದರೊಳಗ ಏನೇನೆಲ್ಲಾ ಇರತಿದ್ವು ?
ಮಲ್ಲಿಗಿ ಹೂವೇನ ಈಗರಳ್ಯಾವ
ಸಾಲಾಗಿ ಮಾಲ್ಯಾಗಿ ಘಮ್ಮನ್ನತಾವ
ಸಂಪಿಗಿ ಹೂವೇನ ಈಗರಳ್ಯಾವ
ಸಾಲಾಗಿ ಮಾಲ್ಯಾಗಿ ಘಮ್ಮನ್ನತಾವ

ಸ್ಯಾವಂತಿಗಿ ಹೂವ ಈಗರಳ್ಯಾವ
ಕ್ಯಾದೀಗಿ ಹೊಡಿಹೆಂಗ ಬಿಡಿಸಿಕೊಂಡಾವ
ತೆಂಗಿನ ಗರಿ ಹ್ಯಾಂಗ ಬೀಸಿಕೊಂಡಾವ
. . . .
ಅಟ್ಟದ ಮನಿಗೋಳ ಕಟ್ಟೀಯ ಮನಿಗೋಳ
ಬೆಟ್ಟದಾಗ ನಿಂತ ಅರಮನಿ ನಡುವ
ಅರಮನಿ ಖಿಡಕ್ಯಾಗ ಹಣಿಕಿ ಹಾಕುವರ್ಯಾರ

ಅಂತಹ ಕೌದಿ ಹೊಲೆಯುವುದರಲ್ಲಿ ಮಗ್ನಳಾಗಿರುವ ಮುದುಕಿ ತನ್ನ ಕಾಯಕದಲ್ಲಿ ಎಷ್ಟೊಂದು ತನ್ಮಯಳಾಗಿದ್ದಾಳೆ ಎಂಬುದನ್ನು ಪಾಟೀಲರ ಈ ಸಾಲುಗಳು ಚಿತ್ರಿಸುತ್ತವೆ :

ಕಣ್ಣವು ಕಣ್ಣು
ಮುದಕೀ ಕಣ್ಣು
ಕೌದ್ಯಾಗ ಇದ್ವು
ಕಿವಿಯವು ಕಿವಿ
ಕೌದ್ಯಾಗ ಇದ್ವು
ಕೈಯವು ಕೈ
ಸೂಜಿಧಾರದೊಳಗಿದ್ವು
ಪುಟ್ಟಪೂರ ಮುದಕಿ
ಕೌದ್ಯಾಗ ಹುದಗಿದ್ಲು

ಚೆಲುವ ಚಿತ್ತಾರದ ಕೌದಿಯನ್ನು ಇಲಿಯೊಂದು ಬಂದು ಬಂದು ಹಲವು ಸಲ ಕೆಡಿಸುತ್ತದೆ :

. . . . ಕೌದಿಯ ನೋಡ
ಕಾ ಅಂಬು ಕಾಗಿಲ್ಲ, ಗುಬ್ಬೀಗಿ ಚುಂಚಿಲ್ಲ
ಗುಡಿಯ ಮ್ಯಾಗಿನ ಶಿಖರ ಕಾಣಸವಲ್ದ
ಚಂದಪ್ಪ ಚಂದಪ್ಪ ಆಗ್ಯಾನ ಚೂರ ಚೂರ

ಇಲಿ ಮುದುಕಿಯ ಕಲೆಯನ್ನು ಎಷ್ಟು ಕೆಡಿಸಿದರೇನು ? ಅವಳ ತಾಳ್ಮೆಯನ್ನು ಎಷ್ಟು ಪರೀಕ್ಷಿಸಿದ್ರರೇನು? ಆ ಅಜ್ಜಿ ಇಲಿಯನ್ನು ರುಬ್ಬುಗುಂಡಿಗೆ ಹಾಕಿ ಪುಡಿ ಮಾಡಿ, ಒಗೆಯುವ ಕಲ್ಲಿಗೆ ಹಾಕಿ ಜಜ್ಜಿ, ಬೀಸುವ ಕಲ್ಲಿಗೆ ಹಾಕಿ ಬೀಸಿ ಕೊಲ್ಲುವ ಪ್ರಯತ್ನ ಮಾಡುತ್ತಾಳೆ. ಎಷ್ಟು ಕೆಡಿಸಿದರೂ, ಸಾಯಿಸಿದರೂ 'ನಾ ಕೆಟ್ಟಿಲ್ಲ, ನಾ ಸತ್ತಿಲ್ಲ' ಎಂದು ಎದ್ದುಬರುವ ಇಲಿ ಅವಳಿಗೆ ಸವಾಲಾಗಿದೆ. ತನ್ನ ಜನುಮ ಹೋದರೂ ಚಿಂತೆಯಿಲ್ಲ, ಪುಟ್ಟ ಗೌರಿಗೆ ಕೊಡಬೇಕಾಗಿರುವ ಚಿತ್ತಾರದ ಕವದಿಯ ಹೆಣಿಕೆಯನ್ನು ಬಿಡಲೊಲ್ಲೆ ಎನ್ನುವ ಮುದುಕಿ ಕಲೆಗೆ ಸಾವಿಲ್ಲ ಎಂಬುದಕ್ಕೆ ಪ್ರತೀಕವಾಗಿದ್ದಾಳೆ. ನಾಲಿಗೆಯ ಮಾತನ್ನು ಅಕೆ ತಪ್ಪಿಸಲಿಲ್ಲ. ಇಲ್ಲಿ ಮುದುಕಿ ಮತ್ತು ಹುಡುಗಿಯ ನಡುವೆ ನಡೆಯುವ ಮಾತುಕತೆ ಶ್ರೇಷ್ಠ ಕಾವ್ಯದ ಉದಾಹರಣೆಯಂತಿದೆ :

ಮುದುಕಿ : ಒಪ್ಪಿಸಿಕೊ ನಮ್ಮವ್ವ

ಜಪ್ಪಿಸಿಕೊ ನಮ್ಮವ್ವ
ಹರಕರವಿ ಮುದಕೀಯ
ಸಾವಿರದ ಗೆರಿಯ
ಸಾವು ಬಂದರು ಆತು
ನಾಲೀಗಿ ನಿಜವಾತು
ಇನ್ನಾವ ಬಯಕೀಯು
ನಮಗುಳಿಯಲಿಲ್ಲ

ಹುಡುಗಿ : ನಾನೆ ಮಾಯದ ಇಲಿಯು

ನಿನಗೆ ಹಾಕಿದ ಬಲೆಯು
ಹಳ್ಳಿಯೂರಿನ ಹುಡುಗಿ
ತುಡುಗಿ ನಾನೇ
ಹಣ್ಣು ಹಣ್ಣು ಮುದುಕೀ
ಏನು ನಿನ್ನಯ ಹಟವು
ಸೋತು ಹೋದೆನು ದಿಟವು
ಕಲೆಯ ಹಂಬಲಕೆ

ಜಗತ್ತಿನ ಮಕ್ಕಳೆಲ್ಲ ಕನಸುಗಳೊಂದಿಗೆ ಈ ಕೌದಿಯಲ್ಲಿ ಮಲಗಲಿ ಎನ್ನುವ ಹುಡುಗಿಯ ಆಶಯದಲ್ಲಿ ದೇಸಿ ಸಂಸ್ಕೃತಿಯ ಬೇರುಗಳಿವೆ. ಕಥನಕವನವನ್ನು ಕತೆಗೆ ತಕ್ಕಂತೆ ಹೊರಳಿಸಿಕೊಳ್ಳುತ್ತ ಒಂದು ವೈಚಾರಿಕ ನಿಲವನ್ನು ಪರೋಕ್ಷವಾಗಿ ಕಟ್ಟಿಕೊಡುವಲ್ಲಿ ಆನಂದ ಪಾಟೀಲ ಸಫಲರಾಗಿದ್ದಾರೆ. ಜನಪದ ಕಥಾನಕಗಳ ನೆಲೆಗಳನ್ನು ಹಿಗ್ಗಿಸಿಕೊಳ್ಳುವ ಸೂಚನೆಗಳನ್ನು ಕೊಟ್ಟಿದ್ದಾರೆ.

ಮಕ್ಕಳ ಕೆಲವು ಹುಚ್ಚು ಹುಚ್ಚು ಆಸೆಗಳು ಪಾಟೀಲರಲ್ಲಿ ಕಲ್ಪನಾಶೀಲವಾಗಿ ಅರಳಿಕೊಳ್ಳುವುದು ಕುತೂಹಲಕರವಾಗಿರುತ್ತದೆ.

ಚಂದಿರನನ್ನೇ ದಿಂಬನು ಮಾಡಿ
ನೀಲಿ ಆಗಸವ ಹಾಸಿಗೆ ಮಾಡಿ
ಉದ್ದೋ ಉದ್ದಕೆ ಕಾಲನು ಚಾಚಿ
ಅಡ್ಡಕೆ ಅಡ್ಡಕೆ ಕೈಯನು ಹಾಸಿ
ದಿಕ್ಕು ದಿಕ್ಕಿನಲಿ ಹೊರಹೊರಳಾಡಿ
ಮಲಗಿಕೊಳುವ ಆಸೆ

ಬಟಗಡಲೆ ತಿನ್ನುವಾಗ ಬಾಯಲ್ಲಿ ಉಂಟಾಗುವ ಕುಟುಂ ಕುಟುಂ ಶಬ್ದ, ಕಪ್ಪೆಯ ವಟರ್ ಗಿಟಾರ್‌ನಂತೆ ಕೇಳಿಸುತ್ತಿರುವುದು, ಹೆಡ್ ಮೇಡಂ ವರ್ತನೆ, ಸಂಗಣ್ಣನಿಗೆ ಮಂಗಗಳ ದೋಸ್ತಿ, ರಾಜೂನ ಬಾಯಿ ಒಡಕಬಾಯಿಯಾಗಿರುವುದು ಮುಂತಾದ ಸ್ವಾರಸ್ಯಕರ, ಆಸಕ್ತಿದಾಯಕ ಕವನಗಳು ಮಕ್ಕಳ ಒಂದು ಮಾಯಾಲೋಕವನ್ನೇ ತೆರೆದಿಡುತ್ತವೆ. ಮಾಯೆಯೆಂದರೆ ಅದು ಮಕ್ಕಳು ಗಮನಿಸುತ್ತಿರಬಹುದಾದ, ಅವರ ತಲೆಯಲ್ಲಿ ಓಡಾಡುತ್ತಿರಬಹುದಾದ, ಅವರ ಕಲ್ಪನೆಯಲ್ಲಿ

ನಲಿಯುತ್ತಿರಬಹುದಾದ ಮತ್ತು ವಾಸ್ತವಕ್ಕೆ ಮುಖ ಮಾಡಿರುವ ಲೋಕ. ಗೇಲಿಗೊಂಡ ಲೋಕ. ಹರ್ಷಗೊಂಡ ಲೋಕ. ಅಪಮಾನಗೊಂಡ ಲೋಕ, ಕೀಳರಿಮೆ ಅನುಭವಿಸಿದ ಲೋಕ. ಕಲ್ಪನೆಯ ಗರಿ ಬಿಚ್ಚಿದ ಲೋಕ. ಹೀಗೆ ಮಕ್ಕಳ ಬದುಕಿನ ಸೆಳಕುಗಳು ಇಲ್ಲಿ ಅಭಿವ್ಯಕ್ತಿಗೊಂಡಿವೆ. ಹದಿಹರೆಯದ ತಾಕಲಾಟ, ಸಂಕೋಚ, ನಾಚಿಕೆಗಳನ್ನೂ ಪಾಟೀಲರು ಕೆಲವು ಪದ್ಯಗಳಲ್ಲಿ ಚಿತ್ರಿಸಿದ್ದಾರೆ.

ಪೇಪರ್ ಮಾರುವ ನಾಲ್ಕೂ ಹುಡುಗರು
ಹೊಟೆಲ್ ಪಕ್ಕದ ಗೋಡೆಗೆ ಆತು
ಕುಳಿತಿರಬಹುದೆ ಈಗೂ
ಎದುರಿನ ಟಾಕೀಜ್ ಪೋಸ್ಟರ್ ನೋಡುತ

ಹರಟೆಯು ರಂಗೇರಿರಬಹುದು
ಚಾಚಿದ ಕಾಲಿನ ಬೆರಳನು ತಾಕಲು
ಬಿಸಿ ಬಿಸಿ ಬಿಸಿ ಬಿಸಿ ಬಿಸಿಬಿಸಿಲು
ಅಲ್ಲಿಯೆ ಅಲ್ಲಿಯೆ ಓರೆಯಾಗಿಸುತ
ನೆರಳಿನಂಚ ಸೆಳೆದಿರಬಹುದು

'ಕ್ವಿಜ್ ಮಾವಾ', 'ಸೀನಿಗೆ ಸಿಟ್ಟು ಬರುವುದು' ಮುಂತಾದ ಕವಿತೆಗಳಲ್ಲಿ ಅಪರೂಪವೆನ್ನಬಹುದಾದ ವಸ್ತು ಕಾವ್ಯದ ಲೇಪ ಹಚ್ಚಿಕೊಂಡು ಕುಳಿತಿರುತ್ತದೆ.

ವಿಸ್ಮಯ, ಅಕ್ಕರೆ, ಲವಲವಿಕೆಯಂತಹ ಭಾವಗಳು ಪಾಟೀಲರ 'ಹೂ ಅಂದ್ರ ಹೂ' ಸಂಕಲನದ ಪುಟಾಣಿ ಪದ್ಯಗಳನ್ನು ರೂಪಿಸಿವೆ. ಆಡುಮಾತು, ಒಗಟಿನ ರೀತಿ, ಕಲ್ಪನೆಯ ಹರಹು, ಚಿತ್ರಕ ನಿರೂಪಣೆ–ಈ ಪದ್ಯಗಳ ಗುಣವಾಗಿವೆ. ಅವು ಬಾಯಲ್ಲಿ ಕರಗುತ್ತವೆ. ಮನದಲ್ಲಿ ಉಳಿಯುತ್ತವೆ:

ಸದ್ದ ಇಲ್ಲ ಪುಟ್ಟವ್ವ
ಏನ್ ಮಾಡ್ತಾಳ ನೋಡವ್ವ
ಬರಕೋತ ಕೂತಾಳ
ಗ್ವಾಡಿತುಂಬ ಗೊಂಬವ್ವ

ಮಕ್ಕಳ ಜಗತ್ತಿನ ಕೆಲವು ರಾಗ–ಭಾವ–ಸಂವೇದನೆ–ಸ್ವಭಾವಗಳು ಸ್ಪರ್ಶಕ ರೀತಿಯಲ್ಲಿ ಕಟ್ಟಿಕೊಳ್ಳುವುದು ಮತ್ತು ಬಿಚ್ಚಿಕೊಳ್ಳುವುದು ಆನಂದ ಪಾಟೀಲರ ವಿಶೇಷತೆಯಾಗಿದೆ.

ಟಿ. ಎಸ್. ನಾಗರಾಜಶೆಟ್ಟಿ

ಬಹಳಷ್ಟು ವರ್ಷಗಳಿಂದ ಮಕ್ಕಳ ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಈ ಅಲಕ್ಷಿತ ಕ್ಷೇತ್ರದ ನೋವು–ನಲಿವು ಉಂಡಿರುವ ಟಿ. ಎಸ್. ನಾಗರಾಜಶೆಟ್ಟಿಯವರು ತಮ್ಮ ಹಲವಾರು ಪುಸ್ತಕಗಳಿಂದ ಮಕ್ಕಳ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎನ್ನುವುದು ಉತ್ಪ್ರೇಕ್ಷೆಯ ಮಾತಾಗಲಾರದು. ಮಕ್ಕಳ ಅಕ್ಷರ ಲೋಕವನ್ನು ಸಮೃದ್ಧಗೊಳಿಸುವ ಕೆಲಸದಲ್ಲಿ ಆಸಕ್ತಿಯಿಂದ ತೊಡಗಿಕೊಂಡಿರುವುದು ಅವರು ಪ್ರತಿಪಾದಿಸುವ ಮೌಲ್ಯಗಳ ಪ್ರತೀಕವಾಗಿದೆ. ಎಳೆಯರಲ್ಲಿ

ಭಾವ-ಬುದ್ಧಿ-ಕಲ್ಪನೆಗಳ ನಂಟು ಬೆಸೆದಾಗಲೆ ಪ್ರೌಢ ಸಾಹಿತ್ಯ ಬೆಳೆಯಲು ಸಾಧ್ಯವೆಂದು ನಂಬಿ ಮಕ್ಕಳ ಸಾಹಿತ್ಯದ ಅಡಿಪಾಯವನ್ನು ಸುಭದ್ರವಾಗಿಸುವಲ್ಲಿ ನಾಗರಾಜಶೆಟ್ಟಿಯವರ ಕೊಡುಗೆಯು ಗಮನಾರ್ಹವಾದುದಾಗಿದೆ. ೨೦೧೫ನೇ ಸಾಲಿನ ಸಾಹಿತ್ಯ ಅಕಾಡೆಮಿ ಬಾಲಪುರಸ್ಕಾರ ಸೇರಿದಂತೆ ಅನೇಕ ಪುರಸ್ಕಾರಗಳು ಅವರಿಗೆ ಸಂದಿವೆ. ಸುಮಾರು ಮೂರು ದಶಕಗಳಿಂದ ಮಕ್ಕಳ ಕವಿತೆ, ಕತೆ, ರೂಪಕ, ಪ್ರಹಸನ ಎಂದು ಬರವಣಿಗೆಯಲ್ಲಿ ಹಾಗೂ ಮಕ್ಕಳ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಅವರು 'ನವಿಲುಗರಿ', 'ಸಕ್ಕರೆ ಬೊಂಬೆ', 'ಆಮೆ ಮತ್ತು ಹಂಸಗಳು', 'ಚಂದ್ರನ ಶಾಲೆ', 'ಮಕ್ಕಳ ನೆಹರು' ಮುಂತಾದ ಕವನ ಸಂಕಲನಗಳನ್ನು; 'ಪ್ರಾಣಿಗಳ ಜಾತ್ರೆ', 'ಹಾವು-ಕಪ್ಪೆ-ಏಡಿ', 'ಚಿಟ್ಟೆಯ ಬಣ್ಣ', 'ಹೊಸ ಕತೆಗಳು' ಮುಂತಾದ ಕಥಾ ಸಂಕಲನಗಳನ್ನು ಪ್ರಕಟಿಸಿ ಮಕ್ಕಳ ಸೃಜನಶೀಲ ಆಸಕ್ತಿಗಳಿಗೆ ಸ್ಪಂದಿಸಿದ್ದಾರೆ. ಅವರ 'ಸಮಗ್ರ ಮಕ್ಕಳ ಕವಿತೆಗಳು' (೧೯೯೬) ಹಾಗೂ 'ಕರಡಿ ರಸಾಯನ' (೧೯೯೭) ಹೆಸರಿನ ಸಮಗ್ರ ಮಕ್ಕಳ ಕತೆಗಳು ಪ್ರಕಟಗೊಂಡು ಅವರ ಸಾಹಿತ್ಯ ಒಂದು ಕಡೆಗೆ ಸಿಗುವಂತಾಗಿರುವುದು ಕೂಡ ಒಳ್ಳೆಯ ಕೆಲಸವಾಗಿದೆ. ಇತ್ತೀಚೆಗೆ ಅವರು ಬರೆದಿರುವ ಸಾಹಿತ್ಯ ಸೇರ್ಪಡೆಗೊಂಡು ಸಮಗ್ರವು ನವೀಕೃತಗೊಂಡರೆ ಅವರ ಸಾಹಿತ್ಯದ ಅಧ್ಯಯನಕ್ಕೆ ಮತ್ತಷ್ಟು ಉಪಯುಕ್ತತೆ ಒದಗುತ್ತದೆ.

ಭಾಷೆ-ಲಯ-ಪ್ರಾಸಗಳನ್ನು ಸಮರ್ಥವಾಗಿ ಬಳಸಿ ಮಕ್ಕಳ ನಾಲಿಗೆ ಮೇಲೆ ನಲಿಯುವಂತಹ, ಅವರಿಗೆ ಗುಂಗು ಹಿಡಿಸುವಂತಹ, ಕಲ್ಪನೆ-ಬುದ್ಧಿಶಕ್ತಿಗಳನ್ನು ಬೆಳೆಸುವಂತಹ ಹಲವಾರು ಕವಿತೆಗಳನ್ನು ಬರೆದು ಟಿ. ಎಸ್. ನಾಗರಾಜಶೆಟ್ಟಿಯವರು ತಾವು ಒಬ್ಬ ಅನನ್ಯ ಮಕ್ಕಳ ಕವಿಯೆಂಬುದನ್ನು ಸಾಬೀತುಪಡಿಸಿದ್ದಾರೆ. ದಿನ ನಿತ್ಯದ ಸಂಗತಿಗಳು ಶಿಶು ಪ್ರಾಸಗಳಾಗಿ ಅರಳುವ ಪರಿ ಅಚ್ಚರಿ ತರಿಸುತ್ತದೆ. ಅವರ ಅನೇಕ ಕವಿತೆಗಳು ನಾದ ಬಂಧುರದಿಂದ ನಾಲಿಗೆ ಮೇಲೆ ನಲಿದಾಡುತ್ತವೆ.

ಗರಿಗರಿ ಗರಿ ಗರಿ ನವಿಲುಗರಿ
ಮಿರಿಮಿರಿ ಮಿಂಚುವ ನವಿಲುಗರಿ
ಗೆರೆಗೆರೆ ಗೆರೆ ಗೆರೆ ನವಿಲುಗರಿ
ನನ್ನಯ ಮೆಚ್ಚಿನ ಹೊಳಪುಗರಿ

-ನವಿಲುಗರಿ

ಅಣ್ಣನ ಕಡೆಯಿಂದ ನವಿಲುಗರಿಯೊಂದು ಸಿಕ್ಕಿರುವದಕ್ಕೆ ಪುಟ್ಟ ಹುಡುಗ ಸಂತೋಷದಿಂದ ಕುಣಿದಾಡಿ ಪುಸ್ತಕದಲ್ಲಿಟ್ಟರೆ ಅದು ಮರಿ ಹಾಕುವುದೆಂಬ ನಂಬಿಕೆಯಿಂದ ಪುಸ್ತಕದೊಳಗಿಡುವುದು; ಆ ಮರಿಯನ್ನು ಯಾರಿಗೆ ಕೊಡಬೇಕೆಂದು ನೂರೆಂಟು ಬಾರಿ ಯೋಚಿಸುವುದು; ಜಗಳಗಂಟ ಗೆಳೆಯರಿಗೆ ಕೊಡದಿರಲು ನಿರ್ಧರಿಸುವುದು; ಕೊನೆಗೆ ಮನೆಯಲ್ಲಿಯ ಪುಟ್ಟ ತಂಗಿಗೆ ಕೊಟ್ಟರೆ ಅದಕ್ಕೆ ಪ್ರತಿಫಲವಾಗಿ ತನ್ನ ಕೆನ್ನೆಗೆ ಮುತ್ತು ಸಿಗುತ್ತದೆ ಹಾಗೂ ಮೆಚ್ಚಿನ ನವಿಲುಗರಿಯ ಮರಿಗರಿ ಮನೆಯಲ್ಲಿಯೆ ಉಳಿದಂತಾಗುತ್ತದೆಯೆಂಬ ಹುಡುಗನ ಕಲ್ಪನೆ 'ನವಿಲುಗರಿ' ಪದ್ಯದಲ್ಲಿ ಅದ್ಭುತವಾಗಿ ಮೂಡಿಬಂದಿದೆ. ಅದೇ ತರಹ 'ಮಸಾಲೆ ದೋಸೆ' ಎನ್ನುವ ಕವಿತೆ ಸುಡುವ

ಹಂಚಿನ ಮೇಲೆ ಬಿಸಿ ಬಿಸಿ ದೋಸೆಯನ್ನು ಈಗ ತಾನೆ ಹೊಯ್ದು ಕೊಡುತ್ತಿದ್ದಾರೇನೋ ಎನ್ನುವಷ್ಟರ ಮಟ್ಟಿಗೆ ಮಕ್ಕಳ ಆಸಕ್ತಿ ಕೆರಳಿಸುತ್ತದೆ.

ದೋಸೆ ದೋಸೆ ಮಸಾಲೆ ದೋಸೆ
ಹಂಚಿನ ಮೇಲೆ ಚುಯ್ ಚುಯ್ ದೋಸೆ
ಅಮ್ಮನು ಹುಯ್ಯುವ ಹೂವಿನ ದೋಸೆ
ಅಚ್ಚುಮೆಚ್ಚಿನ ತುಪ್ಪದ ದೋಸೆ

– ಮಸಾಲೆ ದೋಸೆ

ಅಣ್ಣ, ತಮ್ಮ, ತಂಗಿ, ಅಮ್ಮ, ಅಪ್ಪ ಎಂದು ಸಂಬಂಧದ ವಿವರಗಳು ಹಾಗೂ ಮನೆಯಲ್ಲಿನ ಪ್ರೀತಿ ನಾಗರಾಜ ಶೆಟ್ಟಿಯವರ ಹಲವು ಕವಿತೆಗಳಲ್ಲಿ ಬಿಡಿಸಿಕೊಳ್ಳುತ್ತ ಹೋಗುತ್ತದೆ.

ಅಮ್ಮನ ಮಡಿಲಲಿ ಆಡುತಲಿರುವನು
ನಮ್ಮ ಮನೆಯ ಪಾಪು
ಅವಳ ಸೆರಗನು ಎಳೆಯುತಲಿರುವನು
ನಮ್ಮ ಮನೆಯ ಪಾಪು
ಪಡೆದಿಹ ಹಿರಿಯರ ಹರಕೆಯನ್ನೆಲ್ಲ
ನಮ್ಮ ಮನೆಯ ಪಾಪು.
ಮೀರುವ ಮುಂದೆ ಮಹಾಪುರುಷರ
ನಮ್ಮ ಮನೆಯ ಪಾಪು

– ನಮ್ಮ ಮನೆಯ ಪಾಪು

ಮನೆಯ ಪುಟ್ಟ ಕಂದ ಮನೆಯವರೆಲ್ಲರ ಪ್ರೀತಿಗೆ ಪಾತ್ರನಾಗಿದ್ದಾನೆ. ಮಕ್ಕಳು ಮನೆಯ ಬೆಳಕಾಗಿದ್ದಾರೆ. ಒಳ್ಳೆಯತನವನ್ನು ಕಲಿತು ಒಳ್ಳೆಯವರೆ ಆಗುವ ಎಲ್ಲ ಲಕ್ಷಣಗಳು ಅವರಲ್ಲಿ ಗೋಚರಿಸುತ್ತವೆ. 'ಪುಟ್ಟನ ದಿನಚರಿ' ಎನ್ನುವ ಅವರ ಇನ್ನೊಂದು ಪದ್ಯ ಸಣ್ಣ ಹುಡುಗನೊಬ್ಬನ ದಿನಚರಿ ಹೇಳುತ್ತದೆ.

ಬೆಂಚನು ಹುಡುಕಿ
ಪುಸ್ತಕ ತಡಕಿ
ಶಿಸ್ತಲಿ ನಾನು ಕೂರುವೆನು
ಪಾಠವ ಕೇಳಿ
ಚಂದದಿ ಬಾಳಿ
ಗೆಳೆಯರನೆಲ್ಲರ ಮೀರುವೆನು

– ಪುಟ್ಟನ ದಿನಚರಿ

ಮನೆಯ ಪ್ರೀತಿ ಹಾಗೂ ಲಾಲಿತ್ಯದ ಜೊತೆಗೆ ಊರಿನ ಜೋಗುಳವೂ ಮಗುವನ್ನು ಹರ್ಷದ ಹೊಳೆಯಲ್ಲಿ ತೇಲಾಡುವಂತೆ ಮಾಡಿದೆ. ಜಾತಿ–ಮತ ಭೇದಗಳಿಲ್ಲದೆ, ಜಗಳ–ತಂಟೆಗಳಿಲ್ಲದೆ ಕಷ್ಟ–ಸುಖಕ್ಕೆ ಒಬ್ಬರಿಗೊಬ್ಬರು ಆಗುತ್ತಿರುವುದನ್ನು ಮಕ್ಕಳು ನೋಡುತ್ತಿದ್ದಾರೆ.

'ನನ್ನ ಊರು' ಕವಿತೆಯಲ್ಲಿ ಇಂತಹ ಆಶಯವಿದೆ.

ಜಾತ್ರೆ ಇರಲಿ ಹಬ್ಬ ಬರಲಿ
ಸೇರಿ ಎಲ್ಲ ಒಟ್ಟಿಗೆ
ನಾಟ್ಯವಾಡಿ ಹಾಡ ಹಾಡಿ
ನಲಿವರವರ ಮಟ್ಟಿಗೆ
ಊರ ನಡುವೆ ದೇವರಿಹನು
ತಪ್ಪದೆಂದು ಪೂಜೆಯು

ಬೀದಿ ಕೊನೆಗೆ ಅರಳಿಕಟ್ಟೆ
ನಿಲ್ಲದಲ್ಲಿ ಹರಟೆಯು

– ನನ್ನ ಊರು

ಮನೆ. ಕುಟುಂಬ, ಸಮಾಜ, ಒಳಿತು-ಕೆಡುಕು, ಪ್ರೀತಿ, ಸಡಗರ ಮುಂತಾದ ಬಾಂಧವ್ಯವನ್ನು ಮಕ್ಕಳಿಗೆ ನಾಗರಾಜಶೆಟ್ಟಿಯವರು ಕಟ್ಟಿಕೊಡುತ್ತಿದ್ದಾರೆ. ಗೆಳೆತನ, ಹಿರಿತನಕ್ಕೆ ಗೌರವವನ್ನು ಹೇಳುತ್ತಿದ್ದಾರೆ. ಅಂದರೆ ಕುಟುಂಬ ಮೌಲ್ಯಗಳು ಅವರ ಕವನದ ವಸ್ತುವಾಗಿ ಬಂದಿರುವುದನ್ನು ನಾವು ನೋಡಬಹುದು. ಕೆಲವು ಮಕ್ಕಳ ಕವಿಗಳ ಹಾಗೆ ಆದರ್ಶಗಳನ್ನು ನಾಗರಾಜಶೆಟ್ಟಿಯವರು ತಂದು ತುರುಕುವುದಿಲ್ಲ. ಸಹಜವಾಗಿ ಮನೆಯ ಸಂಗತಿಗಳನ್ನು ಹೇಳುತ್ತಲೆ ಹೂವಿನಂತೆ ಕೋಮಲವಾಗಿರುವ, ಗರಿಯಂತೆ ನಳನಳಿಸುವ, ಚುಕ್ಕಿಯಂತೆ ಹೊಳೆಯುವ ಮನೆಯ ಪ್ರೀತಿ-ವಾತ್ಸಲ್ಯಗಳನ್ನು ಬಣ್ಣಿಸುತ್ತಾರೆ. ನವೋದಯದ ಆದರ್ಶಗಳಿಂದ ಅವರು ಪ್ರೇರಿತರಾಗಿರುವುದರಿಂದ ಅವರಲ್ಲಿ ಇಂತಹ ಅಂಶಗಳು ಸೇರಿಕೊಳ್ಳುವುದು ಸ್ವಾಭಾವಿಕವಾಗಿದೆ. ಆದರೆ ಕುಟುಂಬದಲ್ಲಿನ ದುಃಖ, ನೋವು, ಹತಾಶೆ, ಸೋಲು, ಅಪಜಯಗಳು ಕಾಣಿಸಿಕೊಳ್ಳದೆ ಹೋಗುತ್ತವೆ. ಕುಟುಂಬ ಮೌಲ್ಯಗಳನ್ನು ಬೆಳೆಸುವ ಭರದಲ್ಲಿ ದುಃಖದ ಸೆಳಕುಗಳು ಮರೆಯಾಗಿರುವ ಅಂಶ ಬೆಳಕಿಗೆ ಬರುತ್ತದೆ. ಇದು ಆಯ್ಕೆಯ ಪ್ರಶ್ನೆಯೂ ಆಗಿರಬಹುದು ಎಂದು ಅನಿಸಿದರೂ ವಾಸ್ತವದ ಚಿತ್ರಣ ಕನ್ನಡದಲ್ಲಿ ಆಮೇಲಿನ ಬೆಳವಣಿಗೆಯಾಗಿ ಕಾಣಿಸಿಕೊಂಡಿದೆ. ವೆಂಕಟೇಶಮೂರ್ತಿಯವರ ಬಿಳಿ ಗುಬ್ಬಿಮರಿ ತನ್ನ ಅಮ್ಮನ ಭೇದ ಭಾವದ ಬುದ್ಧಿವಾದವನ್ನು ಖಂಡಿಸಿ ಕಪ್ಪು ಕಾಗೆಯೊಡನೆ ತಾನು ಆಡಿದರೆ ತಪ್ಪೇನೂ ಅಲ್ಲವೆಂದು ವಾದಿಸುತ್ತದೆ. ಮಕ್ಕಳಿಗೆ ಮೊದಮೊದಲು ಅಂತಹ ಅರ್ಥಗಳು ದಕ್ಕದೆ ಹೋದರೂ ಕ್ರಮೇಣ ನಾದ, ಪ್ರಾಸ, ಲಾಲಿತ್ಯದ ಜೊತೆಗೆ ಭಾವವನ್ನು ಗ್ರಹಿಸುತ್ತ ಹೋಗುತ್ತಾರೆ. ಮನೆಯ ಅಂತಃಕರಣ, ಗೆಳೆಯರ ಪ್ರೀತಿ, ಊರಿನ ಅಂದ-ಚೆಂದ ನಾಗರಾಜಶೆಟ್ಟಿಯವರಲ್ಲಿ ಸಹಜವಾಗಿ ಅರಳಿ ಎಳೆಯರಿಗೆ ಖುಷಿ ತರುವ ಪದ್ಯಗಳಾಗುತ್ತವೆ. ಸರಳ ಮಾತುಗಳ ಬಳಕೆ ಹಾಗೂ ಲಯ ಅವರ ಹೆಚ್ಚುಗಾರಿಕೆಯಾಗಿದೆ. ಅವರ 'ನವಿಲುಗರಿ' ಸಂಕಲನಕ್ಕೆ ಮುನ್ನುಡಿ ಬರೆದ ಡಾ. ಶಿವರಾಮ ಕಾರಂತರು ಅದನ್ನು ತುಂಬ ಸೂಕ್ತವಾಗಿ ಗುರುತಿಸಿದ್ದಾರೆ: 'ಕವನಗಳ ದೃಷ್ಟಿಯಿಂದ ಪರಿಮಿತವಾದ, ನಾಲ್ಕು ನಾಲ್ಕು ಪಾದಗಳ ಚುಟುಕುಗಳ ರೀತಿಯಲ್ಲಿ, ಮಕ್ಕಳಿಗೆ ಪ್ರಿಯವಾಗಬಹುದಾದ, ಅವರ ಕಲ್ಪನೆಗೆ ಎಟುಕಬಹುದಾದ ವಿಷಯಗಳುಳ್ಳ

ಒಂದು ಸಂಪುಟುವನ್ನು ಅರ್ಪಿಸುತ್ತಿದ್ದಾರೆ. ಇವುಗಳಲ್ಲಿನ ಅನೇಕ ಹಾಡುಗಳು ಮಕ್ಕಳ ಗಂಟಲಲ್ಲಿ ಕುಳಿತು, ಅವರ ನಿತ್ಯದ ಲೀಲಾಕೇಳಿಗಳಲ್ಲಿ ಮರುಕಳಿಸಿ ಮೂಡಬಹುದಾದ ಗುಣಗಳುಳ್ಳವು.'

ಸೌಹಾರ್ದಯುತವಾದ, ಪ್ರೀತಿಯಿಂದ ತುಂಬಿದ ಜಗತ್ತೊಂದನ್ನು ರೂಪಿಸಲು ನಾಗರಾಜಶೆಟ್ಟಿಯವರ ಕವಿತೆಗಳು ಪ್ರಯತ್ನ ಪಡುತ್ತವೆ. ಮಕ್ಕಳ ನಗು, ಕಲ್ಪನೆ, ತುಂಟಾಟ ಸಹಜ ರೀತಿಯಲ್ಲಿ ಹೊರಹೊಮ್ಮುತ್ತದೆ. ಪ್ರಸಿದ್ಧ ಇಂಗ್ಲಿಷ್ ಕವಿ ವಿಲಿಯಂ ಬ್ಲೇಕ್ ಕವಿತೆಗಳನ್ನು Songs of Innocence ಮತ್ತು Songs of Experience ಎಂದು ಬೇರ್ಪಡಿಸುತ್ತಾನೆ. ಮುಗ್ಧತೆ, ಸರಳತೆ, ಋಜುತ್ವ ಮುಂತಾದ ಗುಣ ವಿಶೇಷಗಳನ್ನು ಹೊಂದಿದ ಮಕ್ಕಳ ಲೋಕ ತಿಳಿವಳಿಕೆ ಬಂದಂತೆ ಕೆಡುಕು, ಕಪಟತೆ, ಮೋಸ, ಕೃತ್ರಿಮತೆ ಮುಂತಾದ ಕೇಡಿನ ವಿಚಾರಗಳ ಲೋಕದ ಪರಿಚಯ ಪಡೆಯುತ್ತದೆ. ಅನನುಭವಿಯಾದ ಹಾಗೂ ಅನುಭವಿಯಾದ ವ್ಯಕ್ತಿಗಳ ನಡುವಿನ ವ್ಯತ್ಯಾಸವು ಅವರ ನೈತಿಕತೆ, ಬದುಕಿನ ರೀತಿ, ಆಚಾರ, ವಿಚಾರಗಳ ಮೇಲೆ ಪರಿಣಾಮ ಬೀರಿರುತ್ತದೆ. ಇಲ್ಲಿ ಬಾಲ್ಯವೆಂದರೆ ಒಳ್ಳೆಯದು ಹಾಗೂ ಹರಯವೆಂದರೆ ಕೆಟ್ಟದ್ದು ಎಂದು ಅರ್ಥವಲ್ಲ. ನೈತಿಕತೆಯ ಪಾಠಗಳು, ಪ್ರಾಮಾಣಿಕತೆಯ ನೆಲೆಗಳು ಬೆಳೆಯುತ್ತ, ಬದಲಾಗುತ್ತ ಹಾಗೂ ಅರ್ಥಪಡೆದುಕೊಳ್ಳುತ್ತ ಹೋಗುವದನ್ನು ಬ್ಲೇಕ್ ವಿವರಿಸುತ್ತಾನೆ. ಅದೂ ಅಲ್ಲದೆ ಅವನ ಇಂಗ್ಲಿಷ್ ಸಂಸ್ಕೃತಿಯಲ್ಲಿ ಆಗುವ ಅನುಭವಗಳು ನಮ್ಮ ನೆಲಕ್ಕೆ ಹೊಂದಿಕೊಳ್ಳದೆ ಇರಬಹುದು. ಆದರೆ ಸಾಮಾನ್ಯವಾಗಿ ಪ್ರಪಂಚದ ಬಹುತೇಕ ಸಂದರ್ಭಗಳಲ್ಲಿ ಮುಗ್ಧತೆಯನ್ನು ಕಳೆದುಕೊಂಡಾಗ ಬಾಲ್ಯವನ್ನು ಕಳೆದುಕೊಂಡಂತೆಂಬುದು ನಿರೂಪಿತವಾಗಿದೆ. ಕೆಡುಕಿನ ಲೋಕದ ಅನುಭವ ಹಾಗೂ ದುಃಖ-ದಾರಿದ್ರ್ಯ-ಮೋಸ-ವಂಚನೆಗಳ ಲೋಕಕ್ಕೂ ನಮ್ಮ ಮಕ್ಕಳು ಅಲ್ಪಸ್ವಲ್ಪವಾದರೂ ತೆರೆದುಕೊಳ್ಳುವುದರಿಂದ ಆ ಸಂವೇದನೆಗಳ ಅರಿವಾಗುತ್ತದೆ. ಅಂತಹ ಚಿತ್ರಣ ಕನ್ನಡದಲ್ಲಿ ಬಂದದ್ದು ಕಡಿಮೆಯೆಂದೇ ಹೇಳಬೇಕು.

ನಾಗರಾಜಶೆಟ್ಟಿಯವರ ಮಕ್ಕಳ ಕಾವ್ಯದ ಮತ್ತೊಂದು ಮುಖ್ಯ ಗುಣವೆಂದರೆ ನಿಸರ್ಗ ಪ್ರೀತಿ. ಕವಿತೆಗಳ ಮೂಲಕ ಅವರು ಕಟ್ಟಿ ಕೊಡುವ ಪ್ರಕೃತಿ ಚಿತ್ರಣ ಮಕ್ಕಳ ಮನಸ್ಸಲ್ಲಿ ಬಹುಕಾಲ ನಿಲ್ಲುವಂತಹದು. ಗಿಡ-ಮರ-ಕಾಡು, ಕಾಡಿನ ಹಾದಿ, ಆಕಾಶ, ಆಕಾಶದಲ್ಲಿನ ಚುಕ್ಕಿ, ಮಳೆ, ಅಂಗಿಯ ಕೊಳೆ, ಹರಿಯುವ ನೀರು, ಕಾಗದದ ದೋಣಿ ಮುಂತಾದ ಆಪ್ತ ಚಿತ್ರಗಳು ಕಣ್ಣಿಗೆ ಕಟ್ಟುವಂತೆ ಅವರಲ್ಲಿ ವರ್ಣಿಸಲ್ಪಟ್ಟಿವೆ.

ಮಳೆ ಬಂತು ಮಳೆ
ಹೇಗೆ ಬಿತ್ತು ನೀರು ಎಲೆ
ಹರಿವ ನೀರು ಭಲೆ ಭಲೆ
ನಿಂತ ನೀರಿನಲ್ಲಿ ಮೈಯ ತೊಳೆ
ಅಂಗಿ ಕೊಳೆಯು ಆದರಾಗಲಿ
ಅಮ್ಮ ನನ್ನ ಬೈಯ್ಯಲಿ
ಚೆಡ್ಡಿ ತೊಯ್ದು ತೊಪ್ಪೆಯಾಗಲಿ
ಅಪ್ಪ ಮಾತ್ರ ಹೊಡೆಯದಿರಲಿ

– ಮಳೆ ಬಂತು ಮಳೆ

ತಾಯಿ ಹಕ್ಕಿ ಗೂಡನ್ನು ಹೇಗೆ ಕಟ್ಟುತ್ತದೆ, ತನ್ನ ಮಗುವಿಗೆ ಹೇಗೆ ಗುಟುಕು ನೀಡುತ್ತದೆಯೆಂಬುದನ್ನು 'ಗುಟುಕು' ಪದ್ಯ ಮಕ್ಕಳಿಗೆ ವಿವರಿಸುತ್ತದೆ.

ಬಾನಲಿ ಹಾರುವ
ಹೊಳಪಿನ ಹಕ್ಕಿ
ಲಾಗಾ ಹೊಡೆಯಿತು
ಗಾಳಿಯಲಿ
ಪುರ್ರನೆ ಏರಿತು
ಜರ್ರನೆ ಇಳಿಯಿತು
ನಾರನು ತಂದಿತು
ಕೊಕ್ಕಿನಲಿ — ಗುಟುಕು

'ನರಿಯಣ್ಣನ ಅಂಗಡಿ' ಹೆಸರಿನ ಪದ್ಯ ನಮ್ಮ ಓಣಿಯ ಸಾಮಾನ್ಯ ಅಂಗಡಿಯಂತೆ ಕಾಡಿನಲ್ಲಿ ನರಿಯಣ್ಣ ಇಟ್ಟುಕೊಂಡಿರುವ ಅಂಗಡಿಯಲ್ಲಿರುವ ವಸ್ತುಗಳ ಬಗ್ಗೆ ಕುತೂಹಲ ಮೂಡಿಸುತ್ತದೆ. ತಮಾಷೆಯಾಗಿ, ಕುತೂಹಲದ ಸಂಗತಿಯಾಗಿ ಈ ಪದ್ಯ ಬಿಚ್ಚಿಕೊಳ್ಳುತ್ತದೆ. ಮನುಷ್ಯರಲ್ಲಿ ಇರುವಂತೆ ಅಲ್ಲಿ ಕೂಡ ಮೋಸ, ಕಳ್ಳತನ, ವಂಚನೆ, ತುಂಟಾಟ, ಬುದ್ಧಿ ಕಲಿಸುವುದು ಮಕ್ಕಳಿಗೆ ಇಷ್ಟವಾಗುವಂತಿದೆ.

ಬೆಲೆಗಳು ಗಗನಕೆ ಏರಿದವು
ಪ್ರಾಣಿಗಳಲ್ಲೆವು ಬೆದರಿದವು
ಮೋಸದ ನರಿಗೆ ಬುದ್ಧಿಯ ಕಲಿಸಲು
ಕೋಪದ ಕೆಲವು ಒದರಿದವು
ಬಾಳೆಯ ಕದ್ದನು ಮಂಗಣ್ಣ
ಕಾಳನು ಹೊಡೆದನು ಹುಂಜಣ್ಣ
ಬೇಕಾಬಿಟ್ಟಿ ಚೀಲವ ತುಂಬಿಸಿ
ಗಾಡೀಬಿಟ್ಟನು ತೋಳಣ್ಣ ! — ನರಿಯಣ್ಣನ ಅಂಗಡಿ

ಮಕ್ಕಳು ಪಿಕನಿಕ್‌ಗೆಂದು ಮಾವಿನ ತೋಪಿಗೆ ಹೋಗುವುದು; ಕಡಲೆ, ಬೆಲ್ಲ, ಪುರಿ ಮೆಲ್ಲುವುದು; ಮರಕೋತಿ ಆಟ ಆಡುವುದು; ಮಾವಿನ ಮರದಲ್ಲಿನ ದೋರೆ ಹಣ್ಣನ್ನು ಲಪಟಾಯಿಸುವುದು; ಕಮಲಾ ಹಾಡಿದಾಗ ಕತ್ತೆ ಬಂದವೆಂದು ಕಿಟ್ಟು ಕೂಗುವುದು; ಕಮಲಾ ಕೂ ಕೂ ಬಿಡುವುದು; ನಗುವಿನ ಹೊಳೆ ಹರಿಯುವುದು ಮುಂತಾದ ಸಹಜ ಚಿತ್ರಗಳು 'ವನ ವಿಹಾರ' ಪದ್ಯದಲ್ಲಿ ಕಾಣಿಸಿಕೊಂಡು ಮಕ್ಕಳಿಗೆ ಹಾಗೂ ದೊಡ್ಡವರಿಗೆ ಸಂತೋಷ ತರುತ್ತದೆ. ಮುಂಜಾನೆಯಿಂದ ಆಡಿ ಆಡಿ ದಣಿದ ಮಕ್ಕಳು ಸಂಜೆಯಾದ ಕೂಡಲೆ ಕಾಲಿಗೆ ಬುದ್ಧಿ ಹೇಳುತ್ತಾರೆ :

ಸೂರ್ಯನು ಮುಳುಗಲು
ಕತ್ತಲೆ ಹರಡಲು
ಹೊರಟರು ಎಲ್ಲರು ಮನೆ ಕಡೆಗೆ
ನೆನಪನು ಮೆಲ್ಲುತ
ಮಜವನು ಹೇಳುತ
ಬಿದ್ದರು ತಮ್ಮಯ ಹಾಸಿಗೆಗೆ — ವನ ವಿಹಾರ

ಕಾಡು ಹಾಗೂ ಪ್ರಾಣಿಗಳ ಜಗತ್ತನ್ನು ಪರಿಚಯಿಸುವ ಕೆಲಸವನ್ನು ಬಹಳ ಸಲೀಸಾಗಿ ನಾಗರಾಜಶೆಟ್ಟಿಯವರ ಕವಿತೆಗಳು ಮಾಡುವುದರಿಂದ ಮಕ್ಕಳು ತಮ್ಮ ಸುತ್ತಲಿನ ಪ್ರಪಂಚದ ಬಗ್ಗೆ ಕುತೂಹಲ ಉಳ್ಳವರಾಗುತ್ತಾರೆ. ಏಡಿ, ಕೊಕ್ಕರೆ, ಆಮೆ, ಮೊಲ, ಕಾಗೆ, ಕೋಗಿಲೆ, ಹದ್ದು, ನಾಯಿ, ಬೆಕ್ಕು, ಇಲಿ, ಹುಲಿ, ಸಿಂಹ, ನರಿ, ಸೊಳ್ಳೆ, ಇರುವೆ ಮುಂತಾದ ನೂರೆಂಟು ಪ್ರಾಣಿ–ಪಕ್ಷಿಗಳು ಅವರ ಕವಿತೆಗಳಲ್ಲಿ ಬಂದು ಹೋಗುತ್ತವೆ. ಮಕ್ಕಳ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಪ್ರಾಣಿಗಳನ್ನು ಉಪದೇಶದ ಪಾತ್ರಗಳನ್ನಾಗಿ ಹಾಗೂ ನೀತಿಯನ್ನು ಬಿಂಬಿಸುವ ಪರಿಕರಗಳನ್ನಾಗಿ ಉಪಯೋಗಿಸಿಕೊಂಡ ಉದಾಹರಣೆಗಳೆ ಹೆಚ್ಚು. ಆದರೆ ನಾಗರಾಜಶೆಟ್ಟಿಯವರ ಪ್ರಾಣಿ–ಪಕ್ಷಿಗಳು, ಪುರಾಣದ ಪಾತ್ರಗಳು ಉಪದೇಶದ ವಾಹಕಗಳಾಗದೆ, ಹಿಂದಿನ ಸಂಗತಿಗಳ ಧ್ವನಿವರ್ಧಕಗಳಾಗದೆ ಸನ್ನಿವೇಶಕ್ಕೆ ತಕ್ಕ ಹಾಗೆ ರಂಜನೆ ಹಾಗೂ ಅನುಭವ ಕೊಡುವದರಲ್ಲಿ ನಿರತವಾಗುತ್ತವೆ. ಮಕ್ಕಳಿಗೆ ಭಾರವಾಗದೆ ಅವರ ಮನೋವಿಕಾಸಕ್ಕೆ ಪೂರಕವಾಗುತ್ತವೆ. 'ಇರುವೆ' ಎನ್ನುವ ಕವಿತೆ ನಿರಂತರ ದುಡಿಮೆಯ ಪ್ರತೀಕವಾಗುತ್ತದೆ.

ಪುಟಾಣಿ ಇರುವೆ
ಎಲ್ಲಿಡೆ ಇರುವೆ
ವಾಸನೆ ಹಿಡಿದು
ತಿಂಡಿಗೆ ಬರುವೆ

ಸಾಂಪ್ರದಾಯಿಕತೆಯನ್ನು ಮೀರಿ ಹೊಸ ವಸ್ತುವುಳ್ಳ ಕತೆಗಳನ್ನು ಕೊಡಲು ೧೯೯೭ರಲ್ಲಿ ಪ್ರಕಟವಾದ 'ಹೊಸ ಕತೆಗಳು' ಸಂಕಲನದಲ್ಲಿ ಪ್ರಯತ್ನಿಸಿದ್ದಾರೆ. 'ಕರಡಿ ರಸಾಯನ'ದಲ್ಲಿ ಸ್ವಾರಸ್ಯಕರವಾಗಿ ಕತೆ ಹೇಳಿದ್ದಾರೆ. ಕವನ, ಕತೆಗಳಲ್ಲದೆ ಮಕ್ಕಳ ಸಾಹಿತ್ಯವನ್ನು ಗಂಭೀರವಾಗಿ ಓದಿಕೊಂಡು ಅದನ್ನು ಪರಿಶೀಲಿಸುವ ವಿಮರ್ಶಿಸುವ ಕೆಲಸವನ್ನು ಅವರು ಮಾಡಿದ್ದಾರೆ. 'ಮಕ್ಕಳ ಸಾಹಿತ್ಯ : ಕೆಲವು ಅಧ್ಯಯನಗಳು' (೨೦೦೫).

ಮಕ್ಕಳ ಸಾಹಿತ್ಯವನ್ನು ಬರೀ ಪ್ರಾಥಮಿಕ ಶಾಲೆಯ ಶಿಕ್ಷಕರೆ ರಚಿಸಿ, ಮಕ್ಕಳಿಗೆ ಮುಟ್ಟಿಸಿ ಅವರೆ ಮುಂದಾಳತ್ವ ವಹಿಸಿ ಅದರ ಅಸ್ತಿತ್ವಕ್ಕಾಗಿ ಹೆಣಗುತ್ತಿದ್ದ ಕಾಲದಲ್ಲಿ ಟಿ. ಎಸ್. ನಾಗರಾಜಶೆಟ್ಟಿ ಮತ್ತು ಇನ್ನೂ ಹಲವರು ಕನ್ನಡ ಸಾಹಿತ್ಯವನ್ನು ಗಂಭೀರವಾಗಿ ಓದಿಕೊಂಡು, ಶಿಶು ಸಾಹಿತ್ಯದ ಪರಂಪರೆಯನ್ನು ಅಭ್ಯಾಸ ಮಾಡಿಕೊಂಡು ಮಕ್ಕಳ ಕಾವ್ಯ ರಚನೆಗೆ ಮುಂದಾದ ಪ್ರಯುಕ್ತ ಹೊಸ ನೆಲೆಗಳನ್ನು ಕಂಡುಕೊಳ್ಳಲು ಸಾಧ್ಯವಾಯಿತು. ಶಾಲಾ ಶಿಕ್ಷಕರು ಹಾಗೂ ಕಾಲೇಜು ಶಿಕ್ಷಕರ ನಡುವೆ ಒಂದು ಕೊಂಡಿಯಾಗಿಯೂ ನಾಗರಾಜಶೆಟ್ಟಿಯವರು ಕಾರ್ಯ ನಿರ್ವಹಿಸಿದರು. ಇದರಿಂದ ಕಡೆಗಣಿಸಲ್ಪಟ್ಟಿದ್ದ ಶಿಶು ಸಾಹಿತ್ಯವು ಅಕಡೆಮಿಕ್ ವಲಯದಲ್ಲಿ ತುಸುವಾದರೂ ಚರ್ಚೆಗೆ ಬರುವಂತಾಯಿತು. ಈ ರೀತಿಯಲ್ಲಿ ಟಿ. ಎಸ್. ನಾಗರಾಜಶೆಟ್ಟಿಯವರು ತಾವು ಮಕ್ಕಳ ಸಾಹಿತ್ಯ ರಚಿಸುವುದಲ್ಲದೆ ಅದರ ವ್ಯಾಪ್ತಿಯನ್ನು ಹಿಗ್ಗಿಸಲು ದುಡಿದರು.

ಎನ್. ಶ್ರೀನಿವಾಸ ಉಡುಪ

ಲಯಬದ್ಧತೆ, ಲವಲವಿಕೆ, ಅರ್ಥವಂತಿಕೆ ಮತ್ತು ಜೀವಂತಿಕೆ ಇವು ಎನ್. ಶ್ರೀನಿವಾಸ ಉಡುಪ ಅವರ ಸಾಹಿತ್ಯದ ಮುಖ್ಯ ಗುಣಗಳು. ಮಕ್ಕಳ ಕಾವ್ಯದಲ್ಲಿ ಎಷ್ಟೆಲ್ಲ ವೈವಿಧ್ಯತೆ ಹಾಗೂ ಪ್ರಯೋಗಗಳನ್ನು ತರಬಹುದೆಂಬುದಕ್ಕೆ ಅವರ ಕೃತಿಗಳು ಉತ್ತಮ ಉದಾಹರಣೆಗಳಾಗಿವೆ.

ಮನೆ ಮತ್ತು ಶಾಲೆಯ ಸಂಗತಿಗಳು ಹೇಗೆ ಹೊಸ ಸಾಧ್ಯತೆಗಳನ್ನು ಒದಗಿಸಬಲ್ಲವು ಎಂಬುದನ್ನು ಅವರು ತೋರಿಸಿಕೊಟ್ಟರು. ಅಷ್ಟೇ ಅಲ್ಲದೆ ಪುರಾಣ ದಂತಕತೆಗಳನ್ನು ಆಧುನಿಕ ಸಂವೇದನೆಯ ಅಭಿವ್ಯಕ್ತಿಯಲ್ಲಿ ಹಾಯಿಸಿ ವಿನೋದ, ರಂಜನೆ, ಅರಿವುಗಳೊಂದಿಗೆ ಹೊಸ ಕಾಲವನ್ನು ಹಳೆಯದರೊಂದಿಗೆ ಜೋಡಿಸಿಕೊಳ್ಳುವ ವಿಧಾನವನ್ನು ಮಕ್ಕಳಿಗೆ ಮನದಟ್ಟು ಮಾಡಿದರು.

'ಕುಂಭಕರ್ಣನ ನಿದ್ದೆ' (೧೯೯೬), 'ಕನ್ನಡ ನಾಡಿನ ಕೂಸುಮರಿ' (೨೦೦೦), 'ಪಾಪು ಪದ್ಯಗಳು' (೨೦೦೨), ಎನ್ನುವ ಕವನ ಸಂಕಲನಗಳು, 'ಗೂಬಜ್ಜಿಯ ಗೊರಕೆ' (೨೦೧೨) ಹೆಸರಿನ ಕಥಾ ಸಂಕಲನ, 'ಹಿಡಿಂಬನ ತೋಟ' (೨೦೦೪) ಎನ್ನುವ ಮಕ್ಕಳ ನಾಟಕದ ಪುಸ್ತಕಗಳಿಂದ ಆಧುನಿಕ ಮಕ್ಕಳ ಸಾಹಿತ್ಯ ಕ್ಷೇತ್ರವನ್ನು ಅವರು ಸಮೃದ್ಧಗೊಳಿಸಿದ್ದಾರೆ. 'ಕುಂಭಕರ್ಣನ ನಿದ್ದೆ' ಅವರಿಗೆ ಬಹಳಷ್ಟು ಹೆಸರನ್ನು ತಂದುಕೊಟ್ಟ ಕೃತಿಯೆಂದು ಹೇಳಬಹುದು. ೧೯೯೬ರ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ, ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕ ಸೊಗಸು ಪ್ರಶಸ್ತಿ ಮುಂತಾದವುಗಳು ಆ ಪುಸ್ತಕದ ಗೌರವವನ್ನು ಹೆಚ್ಚಿಸಿವೆ. ಕೆಲವು ಶಿಶುಕಾವ್ಯ ಬಹುಮಾನಗಳೂ ಉಡುಪರಿಗೆ ಸಂದಿವೆ.

ಶ್ರೀನಿವಾಸ ಉಡುಪರ ಈ ಪುಸ್ತಕ ಬಂದ ಮೇಲೆ ಕುಂಭಕರ್ಣ ಹೆಚ್ಚು ಪ್ರಸಿದ್ಧನಾದನೇನೋ! ಅತಿಯಾದ ನಿದ್ದೆಗೆ ಅನ್ವರ್ಥಕವಾಗಿರುವ ಕುಂಭಕರ್ಣನೆಂಬ ವ್ಯಕ್ತಿಯ ಪುರಾಣ ವೃತ್ತಾಂತವನ್ನು ಕಥನ ಕವನದ ರೂಪದಲ್ಲಿ ಅವರು ನಿರ್ವಹಿಸಿರುವ ರೀತಿ ಮೆಚ್ಚುಗೆಗೆ ಪಾತ್ರವಾಗುತ್ತದೆ. ಅದಕ್ಕೊಂದು ಆಕರ್ಷಕ ಲಯವನ್ನು ಅವರು ಬಳಸಿಕೊಂಡು ಓದಿದ ಮಕ್ಕಳ ಹಾಗೂ ಹಿರಿಯರ ನಿದ್ದೆಯಲ್ಲಿಯೂ ಕುಂಭಕರ್ಣ ಬರುವಂತೆ ಮಾಡಿದ್ದಾರೆ.

ಸೀತಾಮಾತೆಯ ರಾವಣ ಕದ್ದು
ಅಶೋಕ ವನದಲಿ ಬಚ್ಚಿಟ್ಟಿದ್ದು
ಆಂಜನೇಯನು ಸೀತೆಯ ಕಂಡು
ಲಂಕಾನಗರಿಗೆ ಕಿಚ್ಚಿಟ್ಟಿದ್ದು
ಕುಂಭಕರ್ಣನಿಗೆ ಗೊತ್ತೇ ಇಲ್ಲ!
ಎಂಥ ನಿದ್ದೆಯೋ ದೇವರೆ ಬಲ್ಲ!
. . . .
ಒಡೆಯನ ಮಾತಿಗೆ 'ಅಪ್ಪಣೆ' ಎಂದು
ಧಡಧಡ ಹೊರಟಿತು ರಾಕ್ಷಸದಂಡು;
ಕೊಕ್ಕರೆ ಕಾಲಿನ ತೆಳು ರಾಕ್ಷಸರು,
ಗೂಬೆಯ ಮೂತಿಯ ಮುದಿ ರಾಕ್ಷಸರು,
ಹೋತನ ಗಡ್ಡದ ಹಿರಿ ರಾಕ್ಷಸರು
ಕುರುಚಲು ಮೀಸೆಯ, ಕೋರೆಯ ದಾಡೆಯ
ತರತರ ರೀತಿಯ ತರುಣ ರಕ್ಕಸರು
ಪುಟಪುಟ ನಡೆಯುವ ಮರಿರಕ್ಕಸರು

ನಲವತ್ತೆಂಟು ಪೆಂಟಿಬೆಲ್ಲ, ಹತ್ತು ಬೇವಿನ ಚಕ್ಕೆಯ ಹೊರೆ, ಆರು ಬುಟ್ಟಿ ಕರಿಬಾವಲಿ

ಹಿಕ್ಕೆಯಿಂದ ಮಾಡಿದ ಕಷಾಯಕ್ಕೂ ವಿಧವಿಧ ಮದ್ದಿಗೂ ಕುಂಭಕರ್ಣ ಜಗ್ಗದಿದ್ದಾಗ ಪುಟಾಣಿ ರಾಕ್ಷಸನೊಬ್ಬನ ಉಪಾಯದಂತೆ ಹೆಂಡ ಕುಡಿಸಿದ ಸಾವಿರ ಆನೆಗಳನ್ನು ತರಿಸಿ ಅವನ ಮೈ ಎಂಬ ಬೆಟ್ಟ ಹತ್ತಿಸುತ್ತಾರೆ. ಕೊನೆಗೂ ಆ ಮಹಾಶಯನು ಗೊರಕೆ ನಿಲ್ಲಿಸಿ, ಅರೆಬರೆ ಕಣ್ದೆರೆದು 'ಇವೇನಿವು, ನಿದ್ದೆ ಮಾಡಲೂ ಬಿಡದ ಜಿರಲೆಗಳು' ಎಂದು ಕಚಪಚ ತುಳಿಯುತ್ತಿದ್ದ ಆನೆಗಳನ್ನು ದಿಕ್ಕುದಿಕ್ಕಿಗೆ ಎಸೆದುಬಿಟ್ಟನಂತೆ! ಅಂತೂ ಆ 'ನಿದ್ರಾಯೋಗಿ' ಕಣ್ಣನ್ನು ತೆರೆದು ಗದೆಯನ್ನು ತೂಗುತ್ತ ಯುದ್ಧಕ್ಕೆ ಹೊರಟನಂತೆ!

ಮಕ್ಕಳು ನಕ್ಕು ನಕ್ಕು ನಲಿಯುವಂತೆ ಅವನನ್ನು ಎಬ್ಬಿಸುವ ಪರಿ ನಿರೂಪಿಸಲ್ಪಟ್ಟಿದೆ. 'ಕುಂಭಕರ್ಣನಿಗೆ ಗೊತ್ತೇ ಇಲ್ಲ! ಎಂಥ ನಿದ್ದೆಯೋ ದೇವರೆ ಬಲ್ಲ!' ಎನ್ನುವ ಸಾಲುಗಳು ಪ್ರತಿನುಡಿಯ ಕೊನೆಗೆ ಬಂದು ಅನುರಣನದ ಸಮರ್ಥ ಪರಿಣಾಮ ಬೀರಿವೆ. ಬಗೆಬಗೆ ವೇಷ ತಿಂಡಿಗಳು ಕುತೂಹಲ ಹುಟ್ಟಿಸುತ್ತವೆ. ಗಬಗಬ, ಗಟಗಟ, ಗಮಗಮ, ಪರಪರ, ತಕತಕ, ಧಮ್‌ಧಮ್, ಭೋಂಭೋಂ ಮುಂತಾದ ಶಬ್ದಪುಂಜಗಳನ್ನು ಅದ್ಭುತ ಪರಿಣಾಮ ಬೀರುವಂತೆ ಬಳಸಲಾಗಿದೆ. ಆದರೆ ಈ ಎಲ್ಲ ವಿನ್ಯಾಸ ಯಾವುದೆ ಕೃತಕತೆ ಇಲ್ಲದಂತೆ ಪದ್ಯದಲ್ಲಿ ಅನಾವರಣಗೊಂಡಿರುವುದು ಎದ್ದುಕಾಣುವ ಅಂಶವಾಗಿದೆ. ಇದೇ ಸಂಕಲನದಲ್ಲಿರುವ 'ಪುಟ್ಟು ಹೇಳಿದ್ದು' ದಿನನಿತ್ಯದ ಸರಳ ಶಬ್ದಗಳಿಂದಲೆ ಮಗುವಿನ ಶಾಲಾಬವಣೆಯನ್ನು ವಿವರಿಸುತ್ತದೆ. ಮಕ್ಕಳು ಅನ್ನಲು ತುಂಬ ಸಹಳವಾಗಿದೆ. ಆ ಸರಳತೆಯನ್ನು ಅದಕ್ಕೊಪ್ಪುವ ಲಯ, ಪ್ರಾಸಗಳು ಚೇತೋಹಾರಿಯಾಗಿಸಿವೆ.

ಟೀಚರಿಗ್ಯಾಕೋ ನನ್ನ ಕಂಡರೆ
ಸಿಟ್ಟು ಬೆಟ್ಟದಷ್ಟು!
ದಿನಾ ನನ್ನನೇ ಹುಡುಕಿ ಕೇಳುತಾರೆ
ಎಂಟಾರಲಿ ಎಷ್ಟು?'

ಯಾರಿಗೆ ಉತ್ತರ ಬರುವುದಿಲ್ಲವೊ ಅವರ ಹಿಂದೆಯೆ ಬೆನ್ನುಬೀಳುವ ಮಾಸ್ತರಗಳ ಸ್ವಭಾವವನ್ನು ಇಲ್ಲಿ ವ್ಯಂಗ್ಯಕ್ಕೀಡುಮಾಡಲಾಗಿದೆ. ಮಕ್ಕಳನ್ನು ಮಕ್ಕಳಾಗಲು ಬಿಡದೆ ಅವರನ್ನು ಅಕಾಲದಲ್ಲಿಯೆ ದೊಡ್ಡವರನ್ನಾಗಿ ಮಾಡಿಬಿಡಬೇಕೆಂಬ ಹಿರಿಯರ ಹಾಗೂ ಮಾಸ್ತರರ ಮನೋಭಾವದ ಟೀಕೆ ಶ್ರೀನಿವಾಸ ಉಡುಪ ಅವರ ಕಾವ್ಯದ ಮತ್ತೊಂದು ಪ್ರಮುಖ ಅಂಶವಾಗಿದೆ. 'ಆಟೋ ಮಾಮನಿಗೆ', 'ಕಪ್ಪು ಹಲಗೆ ಮತ್ತು ಸೀಮೆಸುಣ್ಣ' ಆಸಕ್ತಿಯಿಂದ ಓದಿಸಿಕೊಳ್ಳುತ್ತವೆ. 'ಅಂಕೆಗಳ ಅವಾಂತರ'ವಂತೂ ಅವರ ಕಲ್ಪನಾವಿಲಾಸದಿಂದ ಎಷ್ಟೊಂದು ಸೊಗಸಾಗಿ ಸೃಷ್ಟಿಯಾಗಿದೆಯೆಂದರೆ ಮನುಷ್ಯಲೋಕದ ಅವಗುಣಗಳನ್ನು ಅಂಕೆಗಳು ಕುಣಿದಾಡುತ್ತ ಹೇಳುತ್ತಿವೆ. ಅಂಕೆಗಳನ್ನು ಹೋಲುವ ಆ ಚಿತ್ರಗಳು ನಮ್ಮ ಕೋಪ-ತಾಪ-ದರ್ಪಗಳನ್ನು ಎಷ್ಟು ಚೆನ್ನಾಗಿ ಬಿಂಬಿಸುತ್ತಿವೆ;

ಒಂದೆಂಬೋನು ಒಂಟಿ ಪಿಶಾಚಿ
ನಿಂತಿದ್ದಾನೆ ಕತ್ತನು ಚಾಚಿ
ಎರಡಕ್ಕನಿಗೆ ಗರುಡನ ಮೂಗು
ಸದಾ ಸಿಡಿಮಿಡಿ, ಸಿಟ್ಟು, ರೇಗು!

. . . .
ಹೇಗಪ್ಪಾ ಒಪ್ಪಿದೆ ನೀ ಇಲಿ ಸವಾರಿಗೆ?
ಇಲ್ಲವೆ ಕೈಲಾಸದಲ್ಲಿ ಬೇರೆ ಸಾರಿಗೆ?

–ಪುಟ್ಟನ ಪ್ರಶ್ನೆ

ಕರಿದ ಕಡಬು? ಹುರಿದ ಎಳ್ಳು?
ಸಿಹೀ ಮೋದಕ
ಕುಡಿಯುತೀಯ ತಣ್ಣಗಿರುವ
ಬೇಲ ಪಾನಕ?

–ಗಣಪನ ಗೋಳು

ಶ್ರೀನಿವಾಸ ಉಡುಪರು ನಮ್ಮ ಸಾಂಸ್ಕೃತಿಕ ಚಹರೆ ಮತ್ತು ಸಾಮಾಜಿಕ ಪರಿಸರಗಳನ್ನು ಮಕ್ಕಳಿಗಾಗಿ ಸಮರ್ಥ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ ಎಂದರೆ ತಪ್ಪಲ್ಲ. ಆಮೆಚಿಪ್ಪು, ತುಂಟ ಇರುವೆ ಮರಿ, ಅಜ್ಜಿ ಗೂಬೆಯ ವಿಕಾರ ಗೊರಕೆಗಳನ್ನಿಟ್ಟುಕೊಂಡು ಕೆಲವು ಮಕ್ಕಳ ಕಥೆಗಳನ್ನು ಅವರು ಸ್ವಾರಸ್ಯಕರವಾಗಿ ಬರೆದಿದ್ದಾರೆ. 'ಗೂಬಜ್ಜಿಯ ಗೊರಕೆ' ಎಂಬ ಹೆಸರಿನ ಏಳು ಪ್ರಾಣಿ–ಪಕ್ಷಿಗಳ ಕಥೆಗಳಿವೆ. ಇಂಗ್ಲಿಷಿನ ಕೆಲವು ಕಥೆಗಳು ಇದಕ್ಕೆ ಪ್ರೇರಣೆ ನೀಡಿರುವುದನ್ನು ಅವರು ಹೇಳಿದ್ದಾರೆ. ಮೊದಲ ಮರಿ 'ಮಿಂಟು'ವಿನ ನಿದ್ದೆ ಹಾಳುಮಾಡುತ್ತಿರುವ ಗೂಬಜ್ಜಿಯ ಗೊರಕೆಯನ್ನು ನಿಲ್ಲಿಸಲು ಇಡೀ ಪ್ರಾಣಿಸಂಕುಲ (ದಪ್ಪಣ್ಣ, ಕಪ್ಪಣ್ಣ ಎಂಬ ಕರಡಿಗಳು, ಬೆಟ್ಟಪ್ಪ ಎನ್ನುವ ಆನೆಯೂ ಸೇರಿ) ಪ್ರಯತ್ನಿಸಿ ವಿಫಲವಾಗುವುದು. ಆಗ ಪುಟ್ಟ ಅಳಿಲೊಂದು ಕಾರ್ಮೋಡ ಸೂರ್ಯನಿಗೆ ಅಡ್ಡ ಬರುವುದನ್ನು ಗಮನಿಸಿ ಕಪ್ಪೆ, ಜೀರುಂಡೆಗಳಿಗೆ 'ಜಿರ್ರೋಂ. ..' ಕೂಗು ಸುರು ಹಚ್ಚಲು ಹೇಳಿತು. ರಾತ್ರಿಯಾಯಿತೆಂದು ಗೂಬೆ ಕಣ್ಣು ತೆರೆಯಿತು. ಈ ಕತೆ 'ಕುಂಭಕರ್ಣನ ನಿದ್ದೆ'ಯನ್ನು ನೆನಪಿಸುತ್ತದೆ! ಕಣ್ಣಿಗೆ ಕಟ್ಟುವಂತೆ ವಿವರಗಳನ್ನು ಕೊಡುವ ಕಲೆ ಶ್ರೀನಿವಾಸ ಉಡುಪರಿಗೆ ಕರಗತವಾಗಿದೆ.

ಮೂರಣ್ಣನಿಗೆ ಮುಖದಲಿ ಗಂಟು
ಯಾರೂ ಇಲ್ಲ ಇವನಿಗೆ ನಂಟು

ಬಾಲವಾಡಿಯಲ್ಲಿರುವ ಮೂರರಿಂದ ಐದು ವರ್ಷದ ಮಕ್ಕಳಿಗೆ ಅವರು ರಚಿಸಿರುವ ಅನ್ನುವ ಪದಗಳ ಸಂಗ್ರಹ 'ಕನ್ನಡನಾಡಿನ ಕೂಸುಮರಿ' ವೈವಿಧ್ಯಮಯವಾದ ಶಿಶುಪ್ರಾಸಗಳನ್ನು ಒಳಗೊಂಡಿದೆ. 'ಕುಂಬಳಕಾಯಿ–ನುಗ್ಗೇಕಾಯಿ' ಅಂತಹ ಒಂದು ಸೃಷ್ಟಿಶೀಲ ರಚನೆಯಾಗಿದೆ.

ಕುಂಬಳಕಾಯಿ ನುಗ್ಗೆಯ ಕೇಳಿತು:
'ಯಾಕೋ ಕಡ್ಡಿ ಸಿಪಾಯಿ
ಊಟ ಮಾಡದೆ ಒಣಗಿದ್ದೀಯಾ?
ಇಲ್ಲವೆ ಒಂದೂ ರೂಪಾಯಿ?'
ನುಗ್ಗೇಕಾಯಿ ನಗುತ್ತ ಹೇಳಿತು:
'ಕುಂಬಳ, ನೀನೋ ಫುಟ್‌ಬಾಲು!
ದುಂಡನೆ ಡ್ರಮ್ಮು! ಹೊಡೆಯೋಕಾಗಿ
ನಾನಾಗಿರುವೆನು ಕೋಲು!'

ಕನ್ನಡದ ಅಕ್ಷರ, ಅಂಕಿ, ಕಾಗುಣಿತ ಪರಿಚಯಿಸುವ, ವಾರ ನೆನಪಿಸುವ ಕೆಲ ಸುಲಲಿತ ರಚನೆಗಳು ಇಲ್ಲಿದ್ದು ಅವು ಬಾಲವಾಡಿ, ಮತ್ತಿತರ ಪಠ್ಯ ಪುಸ್ತಕಗಳಲ್ಲಿ ಸೇರ್ಪಡೆಗೊಂಡರೆ ಮಕ್ಕಳು 'ಕನ್ನಡ, ಕನ್ನಡ ಹಾ! ಸವಿಗನ್ನಡ' ಎಂದಾರು!

ಅ ಆ ಎನ್ನುತ ಅಕ್ಕ ಆಡುವಳು,
ನೀನೂ ಜೊತೆಗೆ ಸೇರುಮರಿ;
ಇ ಈ ಎಂದರೆ ಇಲಿ ಈಶ್ವರನಿಗೆ
ಇಷ್ಟವು ಗೊತ್ತೇ, ಪುಟ್ಟಮರಿ?
ಉ ಊ ಎಂದರೆ ಉಪ್ಪಿಟ್ಟು, ಊಟ
ಯಾವುದು ಬೇಕೋ, ಕೇಳುಮರಿ

ಅ, ಆ ಗಳ ಜೊತೆ ಸೇರುಮರಿ, ಪುಟ್ಟಮರಿ, ಕೇಳುಮರಿ ಎಂದೆಲ್ಲ ವಿಧವಿಧ ಪದಮುಂಜಗಳು ಲಯದಲ್ಲಿ ಪುನರಾವರ್ತಿತವಾಗುವುದು ಮಕ್ಕಳಿಗೆ ಇಷ್ಟವಾಗುತ್ತದೆ.

ಗಣಪನಿಗೆ ಕರಿಗಡಬು,
ಗೌರಿಗೋ–ಹೂವು!
ಶಿವನಿಗೇನೂ ಬೇಡ
ಕೊರಳಲಿದೆ ಹಾವು!

ಎನ್ನುವುದು ಎಷ್ಟೊಂದು ವೈನೋದಿಕವಾಗಿದೆ.

ಶ್ರೀನಿವಾಸ ಉಡುಪ ಅವರು ಮತ್ತೆ ಮತ್ತೆ ಪುರಾಣದ ಪ್ರತಿಮೆಗಳಿಗೆ ಹೋಗುವುದು ಅಲ್ಲಿ ಅವರ ಲಯಗಾರಿಕೆ ಮತ್ತು ಸೃಷ್ಟಿಶೀಲತೆ ಹೆಚ್ಚು ಕ್ರಿಯಾಶೀಲವಾಗಿರುವುದಕ್ಕೆ ಇರಬೇಕು. 'ಪಾಪು ಪದ್ಯಗಳು' ಕೃತಿಯ 'ಪುಟ್ಟನ ಪ್ರಶ್ನೆ', 'ಗಣಪನ ಗೋಳು', 'ಯಶೋದೆ ಕೃಷ್ಣ' ಪದ್ಯಗಳು ಈ ಮಾತಿಗೆ ನಿದರ್ಶನವಾಗಿವೆ.

ಗಣಪ, ನಿನಗೆ ಯಾಕೆ ಇಂಥ ಉದ್ದ ಸೊಂಡಿಲು?
ನೆಗಡಿ ಬಂದರೆಷ್ಟು ಕಷ್ಟ, ಒರೆಸಿಕೊಳ್ಳಲು

ಶ್ರೀನಿವಾಸ ಉಡುಪರು ನಮ್ಮ ಸಾಂಸ್ಕೃತಿಕ ಚಹರೆ ಮತ್ತು ಸಾಮಾಜಿಕ ಪರಿಸರಗಳನ್ನು ಮಕ್ಕಳಿಗಾಗಿ ಸಮರ್ಥ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ ಎಂದರೆ ತಪ್ಪಲ್ಲ. ಆಮೆಚಿಪ್ಪು, ತುಂಟ ಇರುವೆ ಮರಿ, ಅಜ್ಜಿ ಗೂಬೆಯ ವಿಕಾರ ಗೊರಕೆಗಳನ್ನಿಟ್ಟುಕೊಂಡು ಕೆಲವು ಮಕ್ಕಳ ಕಥೆಗಳನ್ನು ಅವರು ಸ್ವಾರಸ್ಯಕರವಾಗಿ ಬರೆದಿದ್ದಾರೆ. 'ಗೂಬಜ್ಜಿಯ ಗೊರಕೆ' ಎಂಬ ಹೆಸರಿನ ಏಳು ಪ್ರಾಣಿ–ಪಕ್ಷಿಗಳ ಕತೆಗಳಿವೆ. ಇಂಗ್ಲಿಷಿನ ಕೆಲವು ಕತೆಗಳು ಇದಕ್ಕೆ ಪ್ರೇರಣೆ ನೀಡಿರುವುದನ್ನು ಅವರು ಹೇಳಿದ್ದಾರೆ. ಮೊದಲ ಮರಿ 'ಮಿಂಟು'ವಿನ ನಿದ್ದೆ ಹಾಳುಮಾಡುತ್ತಿರುವ ಗೂಬಜ್ಜಿಯ ಗೊರಕೆಯನ್ನು ನಿಲ್ಲಿಸಲು ಇಡೀ ಪ್ರಾಣಿಸಂಕುಲ (ದಪ್ಪಣ್ಣ, ಕಪ್ಪಣ್ಣ ಎಂಬ ಕರಡಿಗಳು, ಬೆಟ್ಟಪ್ಪ ಎನ್ನುವ ಆನೆಯೂ ಸೇರಿ) ಪ್ರಯತ್ನಿಸಿ ವಿಫಲವಾಗುವುದು. ಆಗ ಪುಟ್ಟ ಅಳಿಲೊಂದು ಕಾರ್ಮೋಡ ಸೂರ್ಯನಿಗೆ ಅಡ್ಡ ಬರುವುದನ್ನು ಗಮನಿಸಿ ಕಪ್ಪೆ, ಜೀರುಂಡೆಗಳಿಗೆ 'ಜಿರ್ರೋಂ. ..' ಕೂಗು ಸುರುಹಚ್ಚಲು ಹೇಳಿತು. ರಾತ್ರಿಯಾಯಿತೆಂದು ಗೂಬೆ ಕಣ್ಣು ತೆರೆಯಿತು. ಈ ಕತೆ 'ಕುಂಭಕರ್ಣನ ನಿದ್ದೆ'ಯನ್ನು ನೆನಪಿಸುತ್ತದೆ! ಕಣ್ಣಿಗೆ ಕಟ್ಟುವಂತೆ ವಿವರಗಳನ್ನು ಕೊಡುವ ಕಲೆ ಶ್ರೀನಿವಾಸ ಉಡುಪರಿಗೆ ಕರಗತವಾಗಿದೆ.

ತಿರುಮಲೇಶ್

ಮಕ್ಕಳ ಭಾವಲೋಕದ ಅನನ್ಯ ಚಿತ್ರಣವನ್ನು ಕೆ.ವಿ. ತಿರುಮಲೇಶ ಅವರ ಕವಿತೆಗಳಲ್ಲಿ ಕಾಣಬಹುದು. ಜನಪದವೂ ನವೀನವೂ ವೈನೋದಿಕವೂ ಆಗಿರುವ ಅವರ ಪದ್ಯಗಳು ಒಂದು ಚೇತೋಹಾರಿ ಅಭಿವ್ಯಕ್ತಿಗೆ ಮಾದರಿಯಾಗಿವೆ.

ಪುಟಾಣಿ ಲೋಕವೊಂದುಂಟು
ಅದರಲ್ಲವರದೆ ಕಾರ್‌ಬಾರು
ಹುತ್ತದ ಮನೆ ಕಟ್ಕೊಂಡವರು
ಸುಖವಾಗಿರ್‍ತಾರೆ
ಹೂಗಳ ತೋಟದಿ ಸುತ್ತಾಡ್ಕೊಂಡು
ಹಾಯಾಗಿರ್‍ತಾರೆ
ಮಳೆಗೆಲೆ ಮರೆಗೆ ನಿಂತ್ಕೊಂಡು
ಮಳೆಯನು ನೋಡ್ತ ಇರ್‍ತಾರೆ
ಬಿಸಿಲಿಗೆ ಅಣಬೆಯ ನೆರಳಲಿ ಕುಳಿತು
ಕತೆಗಿತೆ ಹೇಳ್ಕೊಂಡಿರ್‍ತಾರೆ
ಇಬ್ಬನಿ ಕುಡಿದು
ಬಾಯಾರಿಸ್ತಾರೆ
ಜೇನು ತಿಂದು
ಹೊಟ್ಟೆ ತುಂಬ್ತಾರೆ
ಜೇಡನ ಬಲೆಯಲಿ ತೂಗುಯ್ಯಾಲೆ
ಹಕ್ಕಿ ಗೂಡುಗಳಲ್ಲಿ ಅವರ ಶಾಲೆ
ಆಟ ಆಡ್ಕೊಂಡೆ ಪಾಠ ಕಲೀತಾರೆ
ಪಾಠ ಕಲಿತು ದೊಡ್ಡವರಾಗ್ತಾರೆ
ಪಾತರಗಿತ್ತಿ ಮರಿದುಂಬಿ
ಎಲ್ಲ ಅವರ ದೋಸ್ತಿಗಳು
ಗಿಡಮರ ಹಕ್ಕಿ ಜೊತೆಕೂಡ
ಅವರಿಗೆ ಗೊತ್ತು ಮಾತಾಡುವುದು
ಸಂಜೆಗೊಮ್ಮೆ ಮುಂಜಾವಿಗೊಮ್ಮೆ
ದೈವವನವರು ಪ್ರಾರ್ಥಿಸುವರು
ತಂದೆ, ನಮ್ಮ ಲೋಕವನು
ಹೀಗೆಯೇ ಇಟ್ಟಿರು!

ಮಕ್ಕಳ ಲೋಕದ ಅಪಾರ ಪ್ರೀತಿಯ ಈ ಪದ್ಯ ಬರೆದವರು ಖ್ಯಾತ ಕವಿ ಕೆ.ವಿ. ತಿರುಮಲೇಶ..

ತಿರುಮಲೇಶ ಈ ಮೊದಲು ಮಕ್ಕಳ ಸಾಹಿತ್ಯದಲ್ಲಿ ಕೈಯಾಡಿಸಿದ ಬಗೆಗೆ ಅಷ್ಟಾಗಿ ಎಲ್ಲೂ ಗಮನಕ್ಕೆ ಬಂದಿಲ್ಲ. ಅವರೇ ಹೇಳಿಕೊಂಡಿರುವ ಹಾಗೆ ಅವರಿಗೆ ಇದು ಒಂದಿಷ್ಟು ಹೊಸತೇ. ಸಾಹಿತ್ಯದ ಗಂಭೀರ ಓದುಗ, ಸೃಷ್ಟಿಶೀಲ ಮನಸ್ಸುಳ್ಳ ಅವರು ಕನ್ನಡದಲ್ಲಿ ಮೊದಲಿನಿಂದ ಬಂದ

ಮಕ್ಕಳ ಸಾಹಿತ್ಯವನ್ನ ಗಮನಿಸಿದವರೇ. ಪಂಜೆ ಮಂಗೇಶರಾಯ, ಜಿ.ಪಿ.ರಾಜರತ್ನಂ, ಕುವೆಂಪು ಅಂಥ ಹಿರಿಯರ ಪದ್ಯಗಳನ್ನು, ಈಚಿನ ಸಮಯಗಳಲ್ಲಿ ಎನ್. ಎಸ್.ಲಕ್ಷ್ಮೀನಾರಾಯಣ ಭಟ್ಟ, ಎಚ್. ಎಸ್. ವಿ., ಸುಮತೀಂದ್ರ ನಾಡಿಗರಂಥವರ ರಚನೆಗಳನ್ನೂ ಅವರು ಗಮನಿಸಿದವರೇ. 'ಮಕ್ಕಳ ಕವಿತೆಗೆ ಕನ್ನಡದಲ್ಲಿ ಇಲ್ಲದಿದ್ದರೂ ಕೊರತೆ, ಬತ್ತಬಾರದು ಅದರ ಒರತೆ ' ಅಂತಲೇ ಸೊಗಸಾಗಿ ತಮ್ಮ ಕೃಷಿಯ ಹಿಂದಿನ ಉದ್ದೇಶವನ್ನ ಅವರು ಹೇಳುತ್ತಾರೆ. ಅವರೊಳಗಿನ ಮಗು ಮನಸ್ಸು ಅವರ ಗಂಭೀರ ಕವಿತೆಯ ಮರೆಯಲ್ಲಿ ಅಷ್ಟಿಷ್ಟು ಕಣ್ಣುಮುಚ್ಚಾಲೆ ಆಡಿದುದು ಈಗ ಪ್ರಕಟವಾಗಿಯೇ ಪ್ರತ್ಯೇಕ ದಾರಿ ಕಂಡುಕೊಂಡಿದೆ. ಚಿಕ್ಕ ಪುಟ್ಟ, ಯಕಶ್ಚಿತ್ ಸಂಗತಿಗಳಲ್ಲೂ ವಿಶೇಷತೆಯನ್ನ ಕಾಣುವ ಗುಣ ಅವರ ಕವಿತೆಯಲ್ಲಿ ಕಂಡಿರುವುದನ್ನು ಇಲ್ಲಿ ನೆನೆಯಬಹುದು. ಅವರ ಈ ವರೆಗಿನ ಕವಿತೆಯ ಕೃಷಿಯೊಡನೆಯೇ ಇವನ್ನು ಇಟ್ಟು ನೋಡಲು ಬಯಸುವವರು ಇರಬಹುದು. ಆದರೆ ಅವರ ಕವಿ ವ್ಯಕ್ತಿತ್ವದ ಹಿನ್ನೆಲೆಯಲ್ಲಿಯೇ ಈ ಬಗೆಯ ರಚನೆಗಳನ್ನ ಬೇರೆ ಇಟ್ಟು ನೋಡುವುದು ಸರಿ.

ಗ್ರಾಮೀಣ ಪರಿಸರದ ಮಕ್ಕಳ ಹಾಡು, ಹಾಡಿನ ತುಣುಕುಗಳು ಬಗೆ ಆದಷ್ಟೂ ರಂಜನೆಯಲ್ಲಿ ಮುಕ್ತಾಯಗೊಳ್ಳುತ್ತವೆ. ಅಲ್ಲಿ ಇಂದಿನ ನಾಗರಿಕ ಮನಸ್ಸು ಕಂಡುಕೊಳ್ಳುತ್ತಿರುವ ಸೂಕ್ಷ್ಮ ಸಂವೇದನೆಗಳು ಕಾಣಲಾರವು. ಕೇವಲ ಹಾಸ್ಯವಲ್ಲದ ಮನಸ್ಸಿನ ಹಲವಂದದ ಭಾವದ ಗೊತ್ತುಗಳು ಈಗೆಲ್ಲ ಕಾಣಿಸಿಕೊಳ್ಳುತ್ತಿರುವ ಹಾಗೆ ಜನಪದದಲ್ಲಿ ಕಾಣದು. ಬದುಕಿನ ವಾಸ್ತವ ಅಲ್ಲಿ ಹಣಿಕಿಹಾಕುವುದು ಆದಷ್ಟೂ ಹಾಸ್ಯ, ವ್ಯಂಗ್ಯ, ಮೂದಲಿಕೆ ಮುಂತಾಗಿಯೇ ಎಂದು ಕಾಣುತ್ತದೆ.

ತಿರುಮಲೇಶರು ಜನಪದ ಮಾದರಿಯನ್ನೇ ವಿಶೇಷವಾಗಿ ಕ್ಯಾನ್‌ವಾಸಾಗಿ ಹೊಂದಿದರೂ ತಮ್ಮತನವನ್ನ ಕಾಣಿಸಿ ಹೊಸತಿನ ಅನುಭವ ನೀಡುತ್ತಾರೆ.

ಮೊದಲ ನೋಟಕ್ಕೇ ತಟಕ್ಕನೆ ಹಿಡಿದು ಬಿಡುವ ಇಂಥ ಹೊಸತಿನ ಅಭಿವ್ಯಕ್ತಿಗಳು ಹಲವನ್ನ ಗುರುತಿಸುವುದಾದರೆ

ಮಿಣು ಮಿಣು ಮಿಂಚುವ ಮಿಂಚುಳದೊಳಗೆ
ಬೆಳಕೆಲ್ಲಿಂದ ಪುಟ್ಟ – ಕತ್ತಲ ಹೊತ್ತ
ಆಲದ ಮರಕೇ ಗೊತ್ತು

ಹೊದ್ದು ಮಲಗಿದ ನಿದ್ದೆಯೊಳಗೆ
ಕನಸೆಲ್ಲಿಂದ ಪುಟ್ಟ–ಮುಚ್ಚಿದ
ಕಣ್ಣರೆಪ್ಪೆಗೇ ಗೊತ್ತು

ಸಹಜದ ಪ್ರಶ್ನೆಗೆ ಅನಿರೀಕ್ಷಿತವಾದ ಉತ್ತರವೊಂದು ಬರುವುದರ ಜೊತೆಗೇ ತನ್ನೊಡನೆ ಹೊತ್ತು ತರುವ ಭಾವ ಸಾಮಗ್ರಿ , ಬೆರಗು, ಗೂಢತೆ, ಕುತೂಹಲ ಇವೆಲ್ಲವಕ್ಕೆ ತೆರದುಕೊಳ್ಳುವ ಸಾಧ್ಯತೆಗಳು ಇಲ್ಲಿನವು.

ದೀಪಗಳ ಹಬ್ಬ ದೀಪಾವಳಿ ಬರುವುದು, ನಮ್ಮ ಬದುಕಿನಲ್ಲಿ ಹೊಸತನ್ನ ತುಂಬುವುದು ಗೊತ್ತಿರುವ ಸಂಗತಿ. ಮಕ್ಕಳಿಗಂತೂ ಹುರುಪಿನ, ಉಮೇದುತರುವ, ಕುಣಿದಾಡುವ ಸಮಯ ಅದು. ಅಂಥ ಹಬ್ಬ ಈವರೆಗೂ ಇರಲಿಲ್ಲ, ಎಲ್ಲಿಂದ ಬಂತದು, ಎಲ್ಲಿತ್ತು ಅಂತೆಲ್ಲ ಮುಗ್ಧತೆಯ

ಅವ್ಯಕ್ತ ಪ್ರಶ್ನೆಗಳ ಆವರಣದೊಳಗೆ ಎಂಬಂತೆ ಅರಳಿರುವ ಪದ್ಯ ಹೇಳುವ ಸಂಗತಿಗಳು ಹೊಸದೇ ಆದ ಮನಸ್ಸಿನ ಹರವುಗಳನ್ನು ನಮ್ಮ ಮುಂದಿಡುತ್ತವೆ :

ಪಶ್ಚಿಮ ಘಟ್ಟದ ಕಾಡಿನಲಿತ್ತು
ಬಯಲು ಸೀಮೆಯ
ಹಾಡಿಯಲಿತ್ತು
ಬಾನ್ ಮೇಲಿನ
ಮೋಡದಲಿತ್ತು
ಪಾರಿಜಾತದ ಗಿಡದ
ಮೇಲಿತ್ತು

ನಾಟಕೀಯ ದೃಶ್ಯವೊಂದನ್ನು, ಅಲ್ಲಿನ ಕ್ರಿಯೆ ಪಟಪಟನೆ ನಡೆದುಹೋಗುವುದನ್ನು ನಮ್ಮ ಮುಂದಿಡುತ್ತ ಹಿಡಿದಿಡುತ್ತಲೇ ಪಳಕ್ಕನೇ ಹೊಸದೊಂದು ಹೊಳೆದಹಾಗಾಗುವ ಬಗೆ ಈ ಕೆಳಗಿನ ಪುಟ್ಟ ರಚನೆಯದು :

ಕತ್ತಲಾದರೆ ಬೆಕ್ಕಿಗೆ
ಮೊದಲು ಅದರ ಬಾಲ ಮಾಯ
ಆಮೇಲದರ ಕಾಲು ಮಾಯ
ಆಮೇಲದರ ಕೈ ಮಾಯ
ಆಮೇಲದರ ಹೊಟ್ಟೆ ಮಾಯ
ಆಮೇಲದರ ಮೈ ಮಾಯ
ಆಮೇಲದರ ಮೀಸೆ ಮಾಯ
ಆಮೇಲದರ ಮುಖ ಮಾಯ
ಎಲ್ಲಾ ಮಾಯವಾದರೂ
ಉಳಿಯೋದದರ ಕಣ್ಣುಗಳು
ಕತ್ತಲಲ್ಲಿ ಫಳ ಫಳ

ದಾಂಬರು ಗಾಡಿ ಈಗಿನ ಶಹರದ ಮಕ್ಕಳಿಗೆ ಆಕರ್ಷಣೆಯದಾಗಿ ಉಳಿದಿರಲಿಕ್ಕಿಲ್ಲ, ಗ್ರಾಮೀಣ ಪರಿಸರದ ಮಕ್ಕಳಿಗೆ ಅಷ್ಟಿಷ್ಟು ಆಕರ್ಷಣೆ ಉಳಿದಿದೆಯೇನೊ. . . ಅಂತೂ ತಮ್ಮ ಬಾಲ್ಯದ ಅನುಭವವಾಗಿಯೇ ತಿರುಮಲೇಶರು ಬರೆದುಬಿಟ್ಟಿರಬಹುದಾದ 'ದಾಂಬರು' ಪದ್ಯ ಒಂದು ಸೊಗಸಾದ ಚಿತ್ರಣ.

ಯಂತ್ರದ ಭೀಮಾಕಾರ, ಅದರ ಕರಕರ ಸದ್ದು, ಇವುಗಳ ಮಧ್ಯ ಎತ್ತರದಲ್ಲಿ ಕಾಣುವ ಡ್ರಾಯ್‌ವರ್ ಆಕಾಶದಲ್ಲಿಯೇ ಕುಳಿತಿದ್ದಾನೆ ಅಂದುಕೊಳ್ಳುವುದು, ಈ ಚೋದ್ಯದ ಮುಂದೆ ಹಿಂದೆ ದುಡಿಯುವ ಮಂದಿ, ಅವರ ಕಾಲಿಗೆ ದಪ್ಪನೆಯ ಚಿಂದಿ ಬಟ್ಟೆ , ತಲೆಗೂ ಮೈಗೂ ಅಂಥದನ್ನೇ ತೊಟ್ಟುದು ಎಲ್ಲವನ್ನ ಹೇಳುತ್ತ ,

ರಾಮ ರಹೀಮ ಗುರುತೇ ಸಿಗದು
ಗಂಗೆ ಗೌರಿ ನಮ್ಮೂರವರಾ
ಅವರಿಗೆ ಕುಡಿಯಲು ಶರಬತ್ತು ತನ್ನಿ

ಎನ್ನುವಲ್ಲಿಗೆ ಮಾನವೀಯದ ಸ್ಪರ್ಶ ತನ್ನತಾನೇ ತಗುಲಿ ಪದ್ಯದ ಹರವು ಮತ್ತಷ್ಟು ಹರಡಿಕೊಳ್ಳುತ್ತದೆ.

ಗ್ರಾಮೀಣ ರಚನೆಗಳಲ್ಲಿ ಪ್ರಮುಖವಾಗಿ ಕಾಣುವ ಸರಪಳಿಯಂತೆ ಒಂದಕ್ಕೊಂದು ಹೆಣೆದುಕೊಂಡು ಸಾಗುವ, ಪುನರಾವರ್ತನೆಗೊಳ್ಳುತ್ತ, ಪ್ರಶ್ನೋತ್ತರಗಳ ಮಾಲೆಯಾಗಿ ಹಬ್ಬುವ ಮಾದರಿ ಇಲ್ಲಿನ ಬಹುಪಾಲು ಪದ್ಯಗಳು ಆಶ್ರಯಿಸಿದ ಬಂಧವಾಗಿದೆ. ಇದರಲ್ಲಿ ತಿರುಮಲೇಶರು ನಾನಾ ಬಗೆಯ ಸಾಧ್ಯತೆಗಳಿಗೆ ಹವಣಿಸಿರುವುದು ಕಾಣುತ್ತದೆ.

ಹಾಸ್ಯ, ವಿಡಂಬನೆ ಮುಂತಾದ ಗುಣಲಕ್ಷಣಗಳು :

ತಿರುಮಲೇಶರ ರಚನೆಗಳಲ್ಲಿ ವಿಶೇಷವಾಗಿ ಕಾಣುವ ಅಂಶ ಹಾಸ್ಯ. ಅವರ ಪದ್ಯಗಳನ್ನ ಮೊದಲಸಲ ನೋಡುವಾಗ ತಟಕ್ಕನೆ ಕಾಣುವ ಸಂಗತಿ ಈ ಹಾಸ್ಯವೇ ಆಗಿದೆ. ಮಕ್ಕಳಿಗೆ ಹಾಸ್ಯ, ತುಂಟತನ, ಕೀಟಲೆ ಇವೆಲ್ಲ ಬಲು ಬೇಗ ಹಿಡಿಸುವ ಸಂಗತಿಗಳೇ. ಮಕ್ಕಳ ಸಹಜದ ಗುಣ ಅದು. ಮಕ್ಕಳೊಡನೆ ಬೆರೆಯುವುದಕ್ಕೆ ಬಲುದೊಡ್ಡ ಅಸ್ತ್ರ ಇದು. ಎಲ್ಲ ಮಕ್ಕಳ ಸಾಹಿತಿಗಳಲ್ಲೂ ಇದು ಕಾಣಬೇಕೆಂದೇನೂ ಇಲ್ಲ. ಅದು ಅವರವರ ಮನೋಧರ್ಮ. ಹಾಸ್ಯದ ಸಂಗತಿಗಳಿಗೆ ಅಷ್ಟಾಗಿ ಸ್ಪಂದಿಸದ ಲೇಖಕರು ಉಂಟು. ತಿರುಮಲೇಶ ಮಾತ್ರ ಈ ನಿಟ್ಟಿನಲ್ಲಿ ವಿಶೇಷವಾಗಿಯೇ ಕಾಣುತ್ತಾರೆ. ಹಾಸ್ಯದ ನಾನಾ ಬಗೆಗಳು ಅವರ ರಚನೆಗಳಲ್ಲಿ ಕಾಣುತ್ತವೆ. ತಿಳಿ ಹಾಸ್ಯದಿಂದ ಹಿಡಿದು ವ್ಯಂಗ್ಯ, ವಿಡಂಬನೆಯ ಹಲವಾರು ಮಗ್ಗಲುಗಳನ್ನ ಪಡೆಯುತ್ತದೆ ಅದು.

ಬೆಕ್ಕು ಬಂತು ಮಿಯಾಂ ಅಂತು
ಜೈಲಿಗಾಕಿದ್ರು
ನಾಯಿ ಬಂತು ಬೌ ಅಂತು
ಜೈಲಿಗಾಕಿದ್ರು
ಕುದುರೆ ಬಂತು ಹೇ ಅಂತು
ಜೈಲಿಗಾಕಿದ್ರು

ಅಂತೆಲ್ಲ ಪುನರಾವರ್ತನೆಯಾಗುತ್ತ ಸಾಗುವ ಸಂಗತಿ, ಹಾಗೆ ನೋಡಿದರೆ ಮೇಲ್ನೋಟಕ್ಕೆ ವಿಶೇಷವಾಗಿ ಕಾಣದು. ಆದರೆ ಪುಟ್ಟ ಪುಟಾಣಿಗಳೆದುರು ಅಭಿನಯವಾಗಿ ಆಕಡೆಯಿಂದ ಒಂದೊಂದನ್ನೆ ತಂದು ತಂದು ಈಕಡೆ ಜೈಲಿನಲ್ಲಿ ಹಾಕ್ತಾ ಇರೊ ಸಂಗತಿ ಮೋಜಿನದು, ಕುತೂಹಲದ ಸಂದರ್ಭ ಕಟ್ಟಿಕೊಡುವಂಥದು. ತಿರುಮಲೇಶರ ಸೊಗಸಿನ ತಿರುವು ಪದ್ಯಕ್ಕೆ ಕೊನೆಯಲ್ಲಿ ಸಿಕ್ಕು ಎಲ್ಲ ನಗು, ಕೇಕೆಯಲ್ಲಿ ಪರ್ಯವಸಾನವಾಗುವುದು ಹೀಗೆ :

ಎಲ್ಲಾ ಇಲ್ಲೆ ಇವೆಯಲ್ಲಾ ?
ಇದೇ ಮತ್ತೆ ಜೈಲು ಅಂದ್ರೆ

ನಮ್ಮ ನಡುವಿನ ಪ್ರಾಣಿಗಳ ಬಗೆಗಿನ ನಡಾವಳಿಯ ಬಗೆಗೆ ವಿಡಂಬನೆಯೂ ಇಲ್ಲಿ ಹಾಗೇ ಬೆರೆತ ಹಾಗಿದೆ. 'ಎಲ್ಲಿಂದ ಬಂತು' ಅನ್ನೋ ಸರಪಳಿ ಉಚ್ಚಿಕೊಳ್ಳುವುದು ನಮ್ಮ ವಾಸ್ತವಗಳಲ್ಲಿ.

ಅಕ್ಕಿ ಎಲ್ಲಿಂದ ಬಂತೋ ಪುಟ್ಟ
ಗೋಣಿ ಚೀಲ್ದಿಂದ
ಹಾಲು ಎಲ್ಲಿಂದ ಬಂತೋ ಪುಟ್ಟ
ಪ್ಲಾಸ್ಟಿಕ್ ಚೀಲ್ದಿಂದ

ಎಳನೀರ ಎಲ್ಲಿಂದ ಬಂತೋ ಪುಟ್ಟ
ಬೀದಿ ಕೊನೆಯಿಂದ
ಈರುಳ್ಳಿ ಎಲ್ಲಿಂದ ಬಂತೋ ಪುಟ್ಟ
ತಳ್ಳು ಗಾಡಿಯಿಂದ
ತತ್ತಿ ಎಲ್ಲಿಂದ ಬಂತೋ ಪುಟ್ಟ
ಇಬ್ರಾಹಿಮನ ಅಂಗಡಿಯಿಂದ
ಉಳಿದದ್ದೆಲ್ಲವು ಅಲ್ಲಿಂದ
ಕೇಳೋದೆ ಬೇಡ

ಹಿರಿಯರ ಕಣ್ಣಿಂದ ನೋಡುವ ಇಲ್ಲಿ ನಮ್ಮ ಹೊಸಗಾಲದ ಮಕ್ಕಳು ಕಾಣುವ ತಮ್ಮ ಸುತ್ತಲಿನದನ್ನ ಢಾಳಾಗಿಯೆ ವಿಡಂಬಿಸಲಾಗಿದೆ.

'ಪರೀಕ್ಷೆ ' ಅನ್ನೋ ಪದ್ಯದ ಧಾಟಿ ವಿಡಂಬನೆಯದೇ :

ಒಂದನೆ ಕ್ಲಾಸಲಿ ಪುಟ್ಟನ ಕೇಳಿದ್ರು
ಎರಡಿದ್ದೂ ಒಂದೇ ಯಾವ್ದಪ್ಪ ಪುಟ್ಟ?
ಮೂಗು
ಅದು ಹ್ಯಾಂಗಪ್ಪ?
ಹೊಳ್ಳೆಗಳೆರಡಿದ್ದೂ
ಮೂಗು ಒಂದೇ
ಸರಿ, ಎರಡನೆ ಕ್ಲಾಸಿಗೆ ಹೋಗಪ್ಪ
ಎರಡನೆ ಕ್ಲಾಸಲಿ ಪುಟ್ಟನ ಕೇಳಿದ್ರು
ಮೂರಿದ್ದೂ ಒಂದೇ ಯಾವ್ದಪ್ಪ ?
ಹೊಟ್ಟೆ
ಅದು ಹ್ಯಾಂಗಪ್ಪ ?
ಬೆಳಗ್ಗೆ ಮಧ್ಯಾಹ್ನ ಸಂಜೆ
ಮೂರೂಟ ಇದ್ದೂ
ಹೊಟ್ಟೆ ಒಂದೇ
ಸರಿ, ಮೂರನೇ ಕ್ಲಾಸಿಗೆ ಹೋಗಪ್ಪ

ಹೀಗೇ ಪುಟ್ಟ ಐದನೆ ಕ್ಲಾಸಿನವರೆಗೂ ಹೋದ. ಆದ್ರೆ ಅಲ್ಲಿ ಅವನ ಜಾಣತನ ತಿರುಗೇಟು ಹೊಡೀತು

ಐದನೆ ಕ್ಲಾಸಲಿ ಪುಟ್ಟನ ಕೇಳಿದ್ರು
ಆರಿದ್ದೂ ಒಂದೇ ಯಾವ್ದಪ್ಪ ?
ಸೆಟ್ ದೋಸೆ
ಅದು ಹ್ಯಾಂಗಪ್ಪ ?
ದೋಸೆ ಆರಿದ್ರೂ
ಬಿಸಿ ತೊವ್ವೆ ಹಾಕಿದರೆ ಒಂದೇ
ಸರಿ ಮನೆಗೆ ಹೋಗಪ್ಪ
ಇಲ್ಲಿ ಆರನೆ ಕ್ಲಾಸು ಇಲ್ಲಪ್ಪ

ಪುಟ್ಟನ ಅತಿ ಬುದ್ಧಿವಂತಿಕೆಗೆ ತಕ್ಕುದಾದ ಕ್ಲಾಸು ಅಲ್ಲಿರಲಿಲ್ಲ! ಗ್ರಾಮೀಣ ಪರಿಸರದಲ್ಲಿ ಹೀಗೆ ಬುದ್ಧಿವಂತಿಕೆ ಪ್ರದರ್ಶಿಸುವ ರಚನೆಗಳು ಸಾಕಷ್ಟು ಸಿಗುತ್ತವೆ. ತಟಕ್ಕನೆ ನಗು ಉಕ್ಕಿಸುವ ಇಂಥವು ನಮ್ಮ ನಡುವಿನ ಸಂಗತಿಗಳಿಗೆ ಇನ್ನೊಂದೇ ಬಗೆಯಲ್ಲಿ ದಾರಿ ಮಾಡಿಕೊಂಡುವು.

ಅಳಿಲಿಗೆ ಗೆರೆಗಳು ಯಾಕೋ ಅಂದ್ರೆ
ಬರೀಬೇಕಲ್ಲ ಅ ಆ ಇ ಈ
ಅದ್ಕೇ ಅಂತಾನ್ ಪುಟ್ಟ
ಕಡಲಿಗೆ ತೆರೆಗಳು ಯಾಕೋ ಅಂದ್ರೆ
ಎಣಿಸ್ಬೇಕಲ್ಲ ಒಂದೂ ಎರಡೂ
ಅದ್ಕೇ ಅಂತಾನ್ ಪುಟ್ಟ
ಬಾನಿಗೆ ತಾರೆಗಳು ಯಾಕೋ ಅಂದ್ರೆ
ಹೇಳ್ಬೇಕಲ್ಲ ಅಶ್ವಿನಿ ಭರಣಿ
ಅದ್ಕೇ ಅಂತಾನ್ ಪುಟ್ಟ

ಅಂತೆಲ್ಲ ಸಾಗುವ ಪುಟ್ಟನ ಗೋಳು ಊಟದ ತಾಟಿನವರೆಗೂ ಹೋಗುತ್ತದೆ :

ದೇವರಿಗೆ ನಾಮಗಳು ಯಾಕೋ ಅಂದ್ರೆ
ಕಾಯ್ಬೇಕಲ್ಲ ಊಟದವರೆಗೆ
ಅದ್ಕೇ ಅಂತಾನ್ ಪುಟ್ಟ

ಇದೊಂದು ಬಗೆಯ ನವಿರಾದ ಹಾಸ್ಯ. ನಿತ್ಯವೂ ಮನೆ ಮನೆಯಲ್ಲಿ ಕಾಣುವ, ಮಕ್ಕಳ ಒಡನಾಟದಲ್ಲಿ ಹಿರಿಯರು ಕಂಡುಕೊಳ್ಳುವ, ಮಕ್ಕಳೆದುರಿಗೆ ತುಸು ಕೀಟಲೆಯಾಗಿ ಹಾಡಿ ಪಾಡಿ, ನಕ್ಕು ನಗಿಸಿ, ಸೊಗಸಿನ ಸಮಯ ತುಂಬಿಕೊಳ್ಳುವ ಬಗೆ. ಮಕ್ಕಳ ಸುತ್ತಲಿನ ನಗುವಿನ ಈ ಬಗೆಯವು ಸಾಕಷ್ಟು ಸಿಗುತ್ತವೆ ತಿರುಮಲೇಶರ ಹಾಸ್ಯದಲ್ಲಿ.

ಅಗೋಳಿ ಮಂಜಣ್ಣನ ಹಿಡಕೊಂಡು ಬನ್ನಿರಿ
ಗೋಳಿ ಮರದಡಿ ಮಲಗಿಸಿರಿ
ಬರಲ್ಲಾ ಅಂದರೆ ಎಳಕೊಂಡು ಬನ್ನಿರಿ, ತದಕೊಂಡು ಬನ್ನಿರಿ
ಕೋಳಿ ಗೂಡಲಿ ಕೂಡಿಸಿರಿ

ಮಜ್ಜಿಗೆ ಕುಡಿಸಿರಿ ಸಜ್ಜಿಗೆ ತಿನಿಸಿರಿ
ವಜನ ತೆಗೆದು ಮಜ್ಜನ ಮಾಡಿಸಿರಿ
ಮಾಡಲ್ಲಾಂದರೆ ಮರ್ದನ ಮಾಡಿರಿ ದುರ್ದಿನ ಬಿಡಿಸಿರಿ
ಒಳ್ಳೇ ಪಾಡ್ದನಗಳ ಹೇಳಿಸಿರಿ

ಇಲ್ಲಿನ ಹಾಸ್ಯ ಮಕ್ಕಳಿಗೆ ನಗು ತರಿಸುವುದರೊಂದಿಗೆ, ಸಮಾಜದಲ್ಲಿನ ಕನಿಷ್ಠದ ಬದುಕಿನ, ಕಲೆಯ ಶ್ರೀಮಂತಿಕೆಯ, ಅದರೊಡನೆಯ ನಡಾವಳಿಯ ಹಲವು ಮಗ್ಗಲುಗಳಿಗೆ ಸ್ಪಂದಿಸುವುದಾಗಿದೆ. 'ದುರ್ದಿನ ಬಿಡಿಸಿರಿ, ಪಾಡ್ದನಗಳ ಹೇಳಿಸಿರಿ' ಎನ್ನುವ ಮಾತು ಕವಿಯ ಹೃದಯದ ಆಶಯವನ್ನು ಈ ಸಂದರ್ಭದೊಡನೆ ಸಹಜವಾಗಿಯೇ ಬೆಸೆದಿದೆ. 'ಕಟ್ಟೆ ಮನೆ ಕಿಟ್ಟಪ್ಪ, ಚಟ್ಟೆ ಮೇಲೆ ಕೂತ್ಕಪ್ಪ ಹೊಡಿತಾನ್ನೆಂಗೆ ಪಟ್ಟಾಂಗ' ಅಂತ ಸಾಗುವ ಕಿಟ್ಟಪ್ಪನ ಚಿತ್ರಣ

'ಕಿಟ್ಟಪ್ಪಂಗೆ ಕೆಲ್ಸವಿಲ್ಲ, ತಿನ್ನೋದಕ್ಕೆ ಏನಿಲ್ಲ ಹೊಟ್ಟೆಯದಕ್ಕೆ ಅಂಟ್ಕೈತೆ ಬೆನ್ನಿಗೆ, ಆದ್ರೂ ಏನೂ ಪರವಾಯಿಲ್ಲ ಅವನ ನಗೆ ಮಾತಿಗೆ ' ಅಂತ ನಮ್ಮ ನಡುವೆಯೇ ಕಾಣುವ ಸಂಗತಿಗಳನ್ನ ಕವಿ ನೀಡುವುದು ಗಮನ ಸೆಳೆಯುವಂತಿದೆ. ಹುಲಿ ವೇಷದ ಉಗ್ರಪ್ಪನದೂ ಇದೇ ರೀತಿ ಇನ್ನೊಂದು ಬಗೆಯದು. ಹುಲಿ ವೇಷದ ಉಗ್ರಪ್ಪ ಅಂತೂ ಹುಲಿಯ ಹಾಗೇ ಆಗಿಬಿಟ್ಟನಂತೆ. ಹೂಂ ಅನ್ನೋ ಬದಲು ಗುರ್ರ್ ಅನ್ನೋದು, ಮೀಸೆ ಒಂಥರಾ ತಿರುವೋದು, ಆಕಳ ಬೆದರುವ ಹಾಗೆ ಆಕಳಿಸೋದು, ಕತ್ತಲಿಗೆಲ್ಲೋ ಹೋಗಿಬಿಡೋದು ಹೀಗೇ. ಹಾಸ್ಯದ ಮರೆಯಲ್ಲಿ ವಾಸ್ತವದ ಬೇಸರ, ಕಾಳಜಿ, ವಿವಶತೆಗಳು ಕಂಡುಬರುವುದಕ್ಕೆ ಇಂಥಲ್ಲೆಲ್ಲ ಸಾಧ್ಯವಾಗುತ್ತದೆ.

ಹಳೆಗನ್ನಡವನ್ನು ನಮ್ಮ ನಡುವೆ ಬಳಸಿ ನಗುವಿಗೆ ದಾರಿಮಾಡಿಕೊಳ್ಳುವ ಬಗೆ ಇದು:

ಹಳೆಗನ್ನಡದ ಪುಟ್ಟನ್
ಪಾಠಶಾಲೆಯಿಂ ಮರಳಿದನ್
ವಸ್ತ್ರಾಂತರಂ ಗೈದನ್
ಕೈಕಾಲ್ ಮೋರೆಯಂ ತೊಳೆದನ್
ಬಾಣಸಾಲೆಯಂ ಪೊಕ್ಕನ್
ಸಮಸ್ತ ತಿಂಡಿಗಳಂ ಸಂಹರಿಸಿದನ್
ಕ್ಷೀರಮಂ ಕುಡಿದನ್
ಚೆಂಡು ದಾಂಡುಗಳಂ ಪಿಡಿದನಾಡುಂಬೊಲಕ್ಕೆ ಪೊರಮಟ್ಟನ್
ಪುಟ್ಟನ್
ವಿವಿಧ ಕ್ರೀಡಾವಿನೋದ ದಿಟ್ಟನ್

ಮಕ್ಕಳ ಮನೋಧರ್ಮದ ಸುತ್ತಲಿನಿಂದ ತೆಗೆದ ಹಾಸ್ಯದ ಎಳೆ ಇನ್ನೊಂದು :

ಭೂಮಿ ಹಲ್ವದ ಹಾಗೆ ಚಪ್ಪಟೆ ಅಂತ
ಅಜ್ಜಿಯ ವಾದ
ಲಡ್ಡಿನ ಹಾಗೆ ದುಂಡಗೆ
ಅಂತ ಅಮ್ಮನ ವಾದ
ಪುಟ್ಟನ ವಾದ ತುಂಬಾ ಸರಳ
ಹಲ್ವದ ಹಾಗೆ ಹಲವು ಸಲ
ಲಡ್ಡಿನ ಹಾಗೆ ಕೆಲವು ಸಲ
ನಮಗೆರಡೂ ಬೇಕಲ್ಲ!

ಪುಟಾಣಿ ರಚನೆಗಳು ಹಲವಲ್ಲಿ ಜೋಕ್ ಮಾದರಿಯ ನಗೆ ಹನಿಗಳು ಹತ್ತಾರು ಕಾಣುತ್ತವೆ :

ಮೊಸಳೆ ಕಣ್ಣೀರು
ಯಾಕಪ್ಪಾ ಮೊಸಳೆ
ಸುರಿಸ್ತಾ ಇದ್ದೀ ಕಣ್ಣೀರು ?
ಹೋಗ್ಬಿಟ್ನಲ್ಲಪ್ಪಾ ಮಂಗಣ್ಣ
ಹೋಗ್ಬಿಟ್ನಾ ಮಂಗಣ್ಣ ?
ಎಲ್ಲೋಗ್ಬಿಟ್ಟನೋ ಮೊಸಳೆ
ನನ್ನ ಹೊಟ್ಟೇ ಒಳಕ್ಕೆ

ನರ್ಸರಿ ರೈಮ್ ಮಾದರಿಯ ಕೆಲವನ್ನು ತುಂಬ ಚೆಂದಾಗಿ ರಚಿಸಿದ್ದಾರೆ. ತಿರುಮಲೇಶರು ಪುಟಾಣಿಗಳಿಗಾಗುವ, ಸುಲಭವಾಗಿ ಅಂದುಕೊಳ್ಳಬಹುದಾದ, ಹಾಗೆಯೇ ಕೇಳುತ್ತ ಕೇಳುತ್ತ ಅನುಭವಿಸುವ, ಆನಂದಿಸುವ ಅನೇಕ ಪದ್ಯಗಳನ್ನ ರಚಿಸಿದ್ದಾರೆ.

ಗರಮಾ ಗರಮ್ ಊತಪ್ಪ
ನಮ್ಮೀ ಪ್ರಾರ್ಥನೆ ಕೇಳಪ್ಪ
ಈರುಳ್ಳಿ ತಿಂದು ಊತಪ್ಪ
ಹಾಕಿಸಿಕೊಂಡು ಹಸುವಿನ್ ತುಪ್ಪ
ತಟ್ಟೆಗೆ ಬಂದು ಬೀಳಪ್ಪ!
. . . . . .
ಲಡ್ಡು ಬುಟ್ಟಿ ಕದ್ದವರಾರು?
ಬೆಣ್ಣೆ ಮುದ್ದೆ ಮೆದ್ದವರಾರು?
ಅಪ್ಪನ ಚದ್ದರ ಹೊದ್ದವರಾರು?
ಸಖತ್ ನಿದ್ದೆ ಹೊಡದವರಾರು?
ಪುಟ್ಟನೋ ಪೋಲಿ ಕಿಟ್ಟನೋ?
ಪುಟ್ಟನಲ್ಲ ಪೋಲಿಕಿಟ್ಟ!

ಅಂತಹ ರಂಜನೆಯ, ನಗುವಿನ ಸಾಮಗ್ರಿಯೇ ಇಲ್ಲಿಯೂ ಎದ್ದು ಕಾಣುವಂಥದು. ಆದರೂ ನವಿರುಭಾವದ ಹಲವು ಮಗ್ಗಲುಗಳೂ ಅನೇಕ ಪದ್ಯಗಳಲ್ಲಿ ಅಲ್ಲಲ್ಲಿ ಕಾಣಿಸುತ್ತವೆ.

ಕಂಬಳಿ ಹುಳವೆ ಚಳಿ ಚಳಿ ಹುಳವೆ
ಇಷ್ಟೊಂದು ಕಂಬಳಿ ಎಲ್ಲಿಂದ ಹುಳವೆ
ದೇವಲೋಕದ ಸಂತೆಯಿಂದ ಕೊಂಡೆ
ನಿಂಗೂ ಬೇಕೇನು?
ತುರಿಸೀತು ಜೋಕೆ
ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ
ಇಷ್ಟೊಂದು ಬಣ್ಣವು ಎಲ್ಲಿಂದ ಚಿಟ್ಟೆ
ನಂದನ ವನದ ಸಂತೆಯಿಂದ ಕೊಂಡೆ
ನಿಂಗೂ ಬೇಕೇನು?
ಹತ್ತೀತು ಜೋಕೆ

ಕೆ.ವಿ. ತಿರುಮಲೇಶ್ ಅವರ ಮಕ್ಕಳ ಕವಿತೆಗಳಲ್ಲಿ ಅಭಿವ್ಯಕ್ತಿಯ ಹೊಸ ರೂಪ, ವಸ್ತುವಿನ ಭಿನ್ನ ನಿರ್ವಹಣೆಗಳನ್ನು ಕಾಣಬಹುದಾಗಿದೆ..

ಈ ಹಿರಿಯರು ಕಟ್ಟಿಕೊಟ್ಟ ಸಂವೇದನೆ, ನಡೆಸಿದ ಪ್ರಯೋಗಗಳು ಹೇಗೆಲ್ಲ ಮುಂದಿನ ಪೀಳಿಗೆಯ ಲೇಖಕರನ್ನು ಪ್ರಭಾವಿಸಿದವು, ಯಾವ ರೀತಿಯಲ್ಲಿ ಅವು ಕನ್ನಡದ ಮಾದರಿಯನ್ನು ಮುಂದುವರೆಸಲು ಯತ್ನಿಸಿದವು ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ಗಮನಿಸಬಹುದಾಗಿದೆ.

೬

ಹೊಸತು ತಂದ ಹತ್ತು ಹಲವರು

– ಡಾ. ಬಸು ಬೇವಿನಗಿಡದ

ಆಡುಭಾಷೆಯ ಹೆಚ್ಚಿನ ಬಳಕೆ, ಹೊಸ ಪ್ರತಿಮೆ–ಸಂಕೇತ–ಸಂಜ್ಞೆಗಳ ಪ್ರಯೋಗ, ಮಕ್ಕಳು ಹಿರಿಯರ ಬದುಕಿನೊಳಗೆ ಇಣುಕಿನೋಡುವ ಸನ್ನಿವೇಶ, ಬಾಲರ ಮನೋವೈಜ್ಞಾನಿಕ ಸಂಗತಿಗಳಿಗೆ ನೀಡಿದ ಒತ್ತು, ವಾಸ್ತವ ಕಥನದ ನಿರೂಪಣೆ, ವಿನೋದ ಪ್ರಜ್ಞೆ, ವೈಜ್ಞಾನಿಕ ಹಿನ್ನೆಲೆ, ಹದಿಹರೆಯದ ಸಂವೇದನೆಗಳ ಪರೋಕ್ಷ ವಿವರಣೆ ಮುಂತಾದ ಸಂಗತಿಗಳಿಂದ ಅನೇಕ ಲೇಖಕರು ಮಕ್ಕಳ ಸಾಹಿತ್ಯಕ್ಕೆ ಹೊಸ ದಿಶೆಗಳನ್ನು ತೋರಿಸುವಂತಾದರು. ಹೊಸ ಸಂವೇದನೆಯ ಹಲವಾರು ತಮ್ಮ ಅನುಭವಗಳನ್ನು ಅನೇಕ ಭಿನ್ನ ಆಯಾಮಗಳಲ್ಲಿ ವ್ಯಕ್ತಪಡಿಸಿದರು. ಅಂತಹ ಹಲವು ಲೇಖಕರನ್ನು ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಕನ್ನಡ ಮಕ್ಕಳ ಸಾಹಿತ್ಯ ಪಡೆದುಕೊಂಡಿರುವ ಕೆಲವು ವಿಶಿಷ್ಟತೆಗಳನ್ನು ತಿಳಿಯಬಹುದು.

ನೀಲಾಂಬರಿ

'ನೀಲಾಂಬರಿ' ಹೆಸರಿನಿಂದ ಬರೆಯುತ್ತಿರುವ ಕೆ.ಪುಟ್ಟಸ್ವಾಮಿ (ಕೆ.ಪಿ.ಸ್ವಾಮಿ) ಕಳೆದ ಮೂರು ದಶಕಗಳಿಂದ ತಮ್ಮ ವೈಚಾರಿಕ, ವೈನೋದಿಕ, ವೈಜ್ಞಾನಿಕ ಹಾಗೂ ಸಾಹಸಮಯ ಕಥೆಗಳ ಮೂಲಕ ಮಕ್ಕಳ ಮನಸ್ಸನ್ನು ಗೆದ್ದವರು. ಕಥನ ಪ್ರಕಾರಕ್ಕೆ ಜೀವಂತಿಕೆ ಮತ್ತು ಲವಲವಿಕೆಯನ್ನು ತುಂಬಿದವರು. ಕಥೆಗಳಲ್ಲಿದೆ ಸೊರಗುತ್ತಿದ್ದ ಕಾಲದಲ್ಲಿ ಹಲವು ಹಾಸ್ಯ, ವಿನೋದ, ಸಾಹಸಪ್ರಧಾನ ಮತ್ತು ಕುತೂಹಲಭರಿತ ಆಖ್ಯಾನಗಳನ್ನು, ಲಕ್ಷಗೊಟ್ಟು ಓದುವಂತಹ ವೃತ್ತಾಂತಗಳನ್ನು ಆಕರ್ಷಕ ಕಥಾವಸ್ತು ಮತ್ತು ಶೈಲಿಯ ಮೂಲಕ ಮಕ್ಕಳಿಗೆ ತಲಪಿಸಿದ್ದಾರೆ. 'ನಗೆಮದ್ದು', 'ಬಿದಿರುಹೊಳಗೆ ಬೆಂಕಿ,' 'ಅಶ್ವಶಕ್ತಿ ೫೦೦೦', 'ಸಿಂಗರಾಯನ ಗವಿ', 'ಪಟಾಕಿಯ ಸಂಭ್ರಮ', 'ದುರಾಸೆಯ ಮಲ್ಲಣ್ಣ', 'ಅರಣ್ಯಗ್ರಾಮಕ್ಕೆ ಪ್ರವಾಸ', 'ಸೂರ್ಯನಲ್ಲಿಗೆ ನಿಯೋಗ' ಮುಂತಾದ ನೀಲಾಂಬರಿ ಪುಸ್ತಕಗಳು ಮಕ್ಕಳನ್ನು ರಂಜಿಸಿವೆ. ರಂಜಿಸುವುದಕ್ಕೆ ಮಾತ್ರ ಸೀಮಿತವಾಗದೆ ಓದುವ ಹವ್ಯಾಸವನ್ನು ಬೆಳೆಸುವಲ್ಲಿ ಹಾಗೂ ಮಕ್ಕಳ ಅನುಭವಲೋಕವನ್ನು ವಿಸ್ತಾರಗೊಳಿಸುವಲ್ಲಿ ಅವು ದುಡಿದಿವೆ. ನವಕರ್ನಾಟಕ ಪ್ರಕಾಶನ ಅವರ ಪುಸ್ತಕಗಳನ್ನು ಪ್ರಕಟಿಸಿದೆ. ನೀಲಾಂಬರಿಯವರ ಕತೆಗಳ ವೈಶಿಷ್ಟಗಳನ್ನು ಹೀಗೆ ಗುರುತಿಸಬಹುದು:

೧. ಅವರ ಕತೆಗಳು ತುಂಬ ಸರಳ ರೀತಿಯಲ್ಲಿ ಪ್ರಾರಂಭವಾಗುತ್ತವೆ ಹಾಗೂ ಬಲುಬೇಗನೆ ಒಂದು ಆಸಕ್ತಿದಾಯಕ ತಿರುವಿನೊಡನೆ ಕುತೂಹಲವನ್ನು ಗಳಿಸಿಕೊಳ್ಳುತ್ತವೆ.

೨. ಕಥೆಯ ಭಾಷೆ ಸರಳವಾಗಿದ್ದು ಚಿಕ್ಕ ಚಿಕ್ಕ ವಾಕ್ಯಗಳು ಮಕ್ಕಳ ಸಂವಹನಕ್ಕೆ ಅನುಕೂಲವಾಗುತ್ತವೆ. ಹಾಗೆಂದು ಪ್ರಯತ್ನಪೂರ್ವಕ ಅಥವಾ ಕೃತಕ ಅಭಿವ್ಯಕ್ತಿಗೆ ಅವರು ಎಡೆಮಾಡಿಕೊಟ್ಟವರಲ್ಲ.

ಉದಾಹರಣೆ (ಅ): ರಾಜ ರಾಣಿಯೊಂದಿಗೆ ಸಮಾಲೋಚನೆ ನಡೆಸಿದ. ಊರಿನ ಮಂತ್ರವಾದಿಯನ್ನು ಕರೆಸಿದರು. ಆತ ಮಂತ್ರ ಮಾಟ ಮಾಡಿದ...

ಉದಾಹರಣೆ (ಆ): ಸೂರ್ಯ ದಿನದ ಪಯಣ ಮುಗಿಸಿದ. ರಥ ಧೂಳಿನಿಂದ ತುಂಬಿತ್ತು. ಬಹಳ ದೂರ ಬಿರುಬಿಸಿಲಿನಲ್ಲಿ ಸಂಚಾರ ಮಾಡಿದುದರಿಂದ ಎಲ್ಲಿ ಮುಟ್ಟಿದರೂ ಕೈ ಸುಟ್ಟು ಹೋಗುವಷ್ಟು ಬಿಸಿಯಾಗಿತ್ತು.

೩. ಅದೇ ರೀತಿ ಅಗತ್ಯವಿದ್ದೆಡೆ ಉದ್ದ ಸಾಲು, ಕಣ್ಣಿಗೆ ಕಟ್ಟುವ ವಿವರಣೆ, ಆಡುಮಾತಿನ ಬಳಕೆ, ಪೂರಕ ಚಿತ್ರಗಳು ಕಥೆಯ ಓಟಕ್ಕೆ ಸಹಕಾರಿಯಾಗುತ್ತವೆ.

೪. ಪ್ರಾಣಿಕತೆಗಳು, ಹಬ್ಬದ ಆಚರಣೆಗಳು, ಶಾಲೆಯ ಚಟುವಟಿಕೆಗಳು, ಗೆಳೆತನ, ಬೆಂಕಿ, ಬಿರುಗಾಳಿ, ಅಪಘಾತ ಮುಂತಾದ ಒಮ್ಮೆಗೆ ಗಮನ ಸೆಳೆಯುವ ವಸ್ತು–ವೈವಿಧ್ಯ ಇವರ ಕಥೆಗಳನ್ನು ನಿರ್ಮಿಸುತ್ತದೆ.

೫. ಹಾಸ್ಯಪ್ರಜ್ಞೆ, ಮಾನವೀಯ ಗುಣಗಳ ಚಿತ್ರಣ, ಅಹಂಕಾರದ ದಮನ, ಬುದ್ಧಿವಂತಿಕೆಯನ್ನು ಗೌರವಿಸುವ ಸಂದರ್ಭ ಮುಂತಾದವುಗಳು ಅವರ ಕತೆಗಳ ಒಡಲೊಳಗಿರುವ ಹೂರಣವಾಗಿದ್ದು ಆ ಆಶಯಗಳ ಸುತ್ತ ಕತೆ ಕಟ್ಟಲ್ಪಟ್ಟಿರುತ್ತದೆ.

ನಮ್ಮ ಮಕ್ಕಳ ಕತೆಗಳಲ್ಲಿ ಅತಿವಾಸ್ತವ ಹಾಗೂ ಅತಿರಂಜಿತ ಕತೆಗಳೆ ಹೆಚ್ಚು. ಆದರೆ ಮಾನವೀಯ ಸೆಳಕು ಮತ್ತು ವಾಸ್ತವದ ವಿವರಣೆಯ ಹಲವು ಕತೆಗಳನ್ನು ನೀಡುವುದರ ಮೂಲಕ ನೀಲಾಂಬರಿಯವರು ವಾಸ್ತವ ದೃಷ್ಟಿಕೋನದ ಮಹತ್ವವನ್ನು ಹೆಚ್ಚಿಸಿದರು. ಈ ಮಾತಿಗೆ ಉದಾಹರಣೆಯಾಗಿ 'ಪಟಾಕಿಯ ಸಂಭ್ರಮ' ಹಾಗೂ 'ಹಳ್ಳಿ ಹುಡುಗಿ' ಎಂಬ ಎರಡು ಕತೆಗಳನ್ನು ವಿಶ್ಲೇಷಿಸಬಹುದು.

ನಾವು ಇತರರನ್ನು ನೋಡಿ ಅವರಂತಾಗಲು, ಅವರ ವೇಷ–ಭೂಷಣ ಅನುಕರಿಸಲು, ಅವರು ಖರ್ಚು ಮಾಡಿದಂತೆ ಖರ್ಚುಮಾಡಲು ಹಾತೊರೆಯುತ್ತವಲ್ಲವೆ? ಈ ಸ್ವಭಾವವನ್ನು ವ್ಯಂಗಕ್ಕೆ ಈಡುಮಾಡುವ ಹಾಗೂ ಆ ಸ್ವಭಾವವನ್ನು ತಿದ್ದಿಕೊಳ್ಳುವ ಪರೋಕ್ಷ ಪಾಠವೊಂದು 'ಪಟಾಕಿಯ ಸಂಭ್ರಮ' ಕಥೆಯಲ್ಲಿದೆ. ಇದರಲ್ಲಿ ನರೇಂದ್ರ ಹೆಸರಿನ ಬಾಲಕನಿದ್ದಾನೆ. ಅವನ ಗೆಳೆಯರು ದೀಪಾವಳಿಯಲ್ಲಿ ಪಟಾಕಿ ಸುಡಲು ನೂರಾರು ರೂಪಾಯಿ ಖರ್ಚು ಮಾಡುತ್ತಿದ್ದಾರೆ. ತಾನು ಸಿರಿವಂತರ ಮನೆಯಲ್ಲಿ ಹುಟ್ಟಬಾರದಿತ್ತೆ ಎಂದು ಅವನು ತನ್ನ ಬಗ್ಗೆಯೆ ಹಿಂಜರಿಕೆ, ಸಂಕೋಚಪಡುವನು. ಆದರೆ ಈ ಸಲ ಬೆಂಗಳೂರಿನಲ್ಲಿರುವ ಅಕ್ಕ ಹಾಗೂ ಅವಳ ಗಂಡ ಹಬ್ಬಕ್ಕೆ ಬಂದಾಗ ಭಾವ ತಾನು ಕೇಳಿದಷ್ಟು ಕೊಡಿಸದೆ ಇರಲಾರರು ಎಂದುಕೊಂಡ.

"ಈ ಭಾವನಿಂದಾಗಿ ನರೇಂದ್ರನಲ್ಲಿರುವಷ್ಟು ಪುಸ್ತಕಗಳು ಬೇರೆ ಯಾರಲ್ಲಿಯೂ ಇರಲಿಲ್ಲ. ಅಪ್ಪನಷ್ಟು ಜಿಪುಣರಲ್ಲ. ನರೇಂದ್ರನಿಗೆ ಸೊಗಸಾದ ಉಡುಪು ಕೊಡಿಸಿದ್ದರು. ಸ್ವಲ್ಪ ಹಾಸ್ಯ

ಸ್ವಭಾವದವರು. ತಾನು ಪ್ರೀತಿಯಿಂದ 'ಭಾವ' ಎಂದರೆ, 'ನಾನು ನಿನ್ನ ಭಾವ, ನೀನೋ ಮಹಾನುಭಾವ!' ಎನ್ನುವರು. ಈ ಸಲ ತಂದಿದ್ದ ಹೊಸ ಪುಸ್ತಕಗಳ ಬಗ್ಗೆ ನರೇಂದ್ರ ಅಷ್ಟೇನೂ ಆಸಕ್ತಿ ತೋರಲಿಲ್ಲ ಎಂಬುದು ಭಾವನ ಸೂಕ್ಷ್ಮ ಗಮನಕ್ಕೆ ಬಾರದೆ ಹೋಗಲಿಲ್ಲ... ಆದರೆ ಭಾವ ಉಪಾಯ ಮಾಡಿ ನರೇಂದ್ರನನ್ನು ಅವನ ಬಡಗೆಳೆಯರ ಮನೆಗೆ ಕರೆದುಕೊಂಡು ಹೋದರು. ಪಟಾಕಿ ಕೊಳ್ಳುವುದಕ್ಕೆ ಹೋಗಲಿ ಸಿಹಿ ಅಡುಗೆ ಮಾಡಲು ಕೂಡ ದುಡ್ಡಿಲ್ಲದ ಪರಿಸ್ಥಿತಿಯಲ್ಲಿ ಆ ಗೆಳೆಯರಿದ್ದರು. ಸೋರುವ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಸ್ವಲ್ಪ ಹೊತ್ತು ಬಿಟ್ಟು ಭಾವ ಮಾರ್ಕೆಟ್ಟಿನಲ್ಲಿ ನರೇಂದ್ರನಿಗೆ ಪಟಾಗಿ ಕೊಡಿಸಲು ಮುಂದಾದರು:

ನರೇಂದ್ರ ಮೆತ್ತಗಿನ ದನಿಯಲ್ಲಿ ಹೇಳಿದ– 'ಭಾವ, ನನಗೆ ಪಟಾಕಿ ಬೇಡ ಅನಿಸುತ್ತೆ. ಪಟಾಕಿ ಬದಲು, ಈಗ ನೋಡಿ ಬಂದೆವಲ್ಲ ಆ ಗೆಳೆಯರಿಗೆ ಏನಾದರೂ ಸಿಹಿ ಕೊಡಿಸಿದರೆ ಅವರಿಗೆ ಸಂತೋಷವಾಗುತ್ತೆ.'

ಭೇಷ್, ಅದಕ್ಕೆ ನಿನ್ನನ್ನು 'ಮಹಾನುಭಾವ' ಎನ್ನುವುದು. ಸಿಹಿ ಬದಲು ಒಂದೊಂದು ಜೊತೆ ಉಡುಪು ಕೊಡಿಸಿದರೆ ಅವರಿಗೆ ಸಿಹಿ ತಿಂದಷ್ಟು ಸಂತೋಷವಾಗುತ್ತದೆಯಲ್ಲವೆ? ತನ್ನ ಇಬ್ಬರು ಮಿತ್ರರು ಉಟ್ಟು ನಲಿಯಬಹುದಾದಷ್ಟು ಹಣವನ್ನು ಹೀಗೆ ಚಟಪಟಗುಟ್ಟಿಸಲು ತವಕಿಸುತ್ತಿದ್ದ ತನ್ನ ಬಗೆಗೇ ನಾಚಿಕೆ ಎನ್ನಿಸಿತು.

ಹೀಗೆ ಸರಳ ಹಾಗೂ ಅಡೆತಡೆಯಿಲ್ಲದ ಕತೆ ಲವಲವಿಕೆ ಹಾಗೂ ಹಾಸ್ಯ ಪ್ರವೃತ್ತಿಯ ಸೆಳಕುಗಳಿಂದ ಮಕ್ಕಳಿಗೆ ಬೇಸರ ತರಿಸಲಾರದು. ಮನುಷ್ಯನ ಗುಣಗಳನ್ನು ಮುಖ್ಯವಾಗಿ ಉದಾರತೆ, ಜಿಪುಣತೆ, ಅಹಂಕಾರಿ ಸ್ವಭಾವ ಮುಂತಾದ ಗುಣಗಳನ್ನು ಹಾಗೂ ಸಿಟ್ಟು–ಸೆಡುವುಗಳನ್ನು ಕೃತ್ರಿಮವಾಗದಂತೆ ನೀಲಾಂಬರಿ ಅನೇಕ ಕತೆಗಳಲ್ಲಿ ಚಿತ್ರಿಸಿದ್ದಾರೆ. 'ಹಳ್ಳಿ ಹುಡುಗ' ಕೂಡ ಒಂದು ಒಳ್ಳೆಯ ಕತೆಯಾಗಿದೆ. ಬೆಂಗಳೂರಿನ ಕೈಗಾರಿಕಾ ಪ್ರದೇಶವನ್ನು ಅಲ್ಲಿಯ ಗಿಜಿಗಿಡುವ ವಾಹನಗಳ ಓಡಾಟವನ್ನು, ಅಲ್ಲಿ ಅಂಧರು ರಸ್ತೆ ದಾಟಲು ಪಡುವ ಕಷ್ಟವನ್ನು ಮತ್ತು ಹಳ್ಳಿ ಹುಡುಗನ ಸಹಾಯಹಸ್ತವನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಶಾಲೆಯ ಹೊಸ ಗೆಳೆಯರು ಶಂಕರನನ್ನು ಕೀಟಲೆ ಮಾಡುತ್ತಾರೆ. 'ಬಂದಾ ಹಳ್ಳಿ ಗುಗ್ಗು. ಕಾಫಿ ಕುಡಿಯೋ ಮಗ್ಗು' ಎಂದು ತಮಾಷೆ ಮಾಡಿ ನಗುವುದಕ್ಕೆ ಶಂಕರ ಮೊದಮೊದಲು ನೊಂದುಕೊಂಡರೂ ಸೊಗಸುಗಾರರಾಗಿರುವ ಎಲ್ಲರೂ ಚೆನ್ನಾಗಿ ಓದುವವರಲ್ಲ ಎಂಬುದು ತಿಳಿದನಂತರ ನಗರದಲ್ಲಿಯೂ ಗುಗ್ಗುಗಳಿರುತ್ತಾರೆ ಎಂದು ಸಮಾಧಾನ ಹೇಳಿಕೊಂಡ. ಮುಂದೆ ವಿಶೇಷ ಅರ್ಹತೆಯುಳ್ಳವರಿಗೆ ಸಹಾಯ ಮಾಡುವ ಶಂಕರನ ಫೋಟೋ ಪೇಪರ್‌ದಲ್ಲಿ ಬಂದಾಗ ಹಳ್ಳಿಗುಗ್ಗು ಶಾಲೆಯಲ್ಲಿ ಮಿಂಚುತ್ತಾನೆ. ಮನೆಯ ತಮಾಷೆಯ ಪ್ರಸಂಗಗಳನ್ನು, ಶಂಕರಮಾಮನ ಲಡಕಾಸು ಸೈಕಲ್‌ನ್ನು, ಮಾನವೀಯ ಘಳಿಗೆಗಳನ್ನು ನೀಲಾಂಬರಿ ಈ ಸಾಮಾನ್ಯ ಕತೆಯಲ್ಲಿ ತುಂಬ ಮನ ಮಿಡಿಯುವ ರೀತಿಯಲ್ಲಿ ಚಿತ್ರಿಸಿದ್ದಾರೆ.

ಹಲವು ವರ್ಷಗಳವರೆಗೆ ಕತೆಯ ಸೆಲೆಯನ್ನು ಬತ್ತದ ಹಾಗೆ ನೋಡಿಕೊಂಡು ಒಳ್ಳೆಯ ಸಾಹಿತ್ಯವನ್ನು ಮಕ್ಕಳಿಗೆ ಉಣಬಡಿಸಿರುವುದು ನೀಲಾಂಬರಿಯವರ ಕೊಡುಗೆಯಾಗಿದೆ.

ಶಶಿಧರ ವಿಶ್ವಾಮಿತ್ರ

ಕಾಡನ್ನು ಮೈತುಂಬಿಕೊಂಡಂತೆ ಬಣ್ಣಿಸುವ ಶಶಿಧರ ವಿಶ್ವಾಮಿತ್ರ ಅವರದು ಮನುಷ್ಯನ

ಬದುಕನ್ನು ಕಾಡಿನ ಕನ್ನಡಿಯಲ್ಲಿಟ್ಟು ನೋಡುವ ಬರವಣಿಗೆ. ಕಾಡಿನ ಇಂಚಿಂಚನ್ನೂ ಕಣ್ಣಿಗೆ ಕಟ್ಟುವಂತೆ ವಿವರಿಸುವ ಅವರು ತಾವು ಬೆಳೆದು ಬಂದ ಪರಿಸರವನ್ನು ವಾಸ್ತವಕ್ಕೆ ಮುಖಾಮುಖಿಯಾಗಿಸುತ್ತಾರೆ. ಮೇಲಾಗಿ ದಟ್ಟ ವಿವರಗಳಿಂದ ಓದುವ ಮಕ್ಕಳ ಮನಸ್ಸುಗಳು ಆಚೆ ಈಚೆ ಹೋಗುವುದಿಲ್ಲ. 'ಕತೆಯಾದ ಹುಲಿ', 'ಮರಿಯಾನೆ', 'ಬನದ ಹಕ್ಕಿಗಳು', 'ಇರಾವತಿ', 'ಕಡೆಯ ಚಿರತೆ', 'ಅಗಸನ ಕತ್ತೆ ಮತ್ತು ಹೊಂಡದ ಕಪ್ಪೆಗಳು' ಮುಂತಾದ ಅವರ ಕತೆ–ಕಾದಂಬರಿಗಳು ಪರಿಸರ ಹಾಗೂ ಮನುಷ್ಯನ ನಡುವಿನ ಸಂಘರ್ಷವನ್ನು ಪರೋಕ್ಷವಾಗಿ ತಿಳಿಯಪಡಿಸುತ್ತವೆ. ಮಕ್ಕಳಿಗೆ ಪರಿಸರದ ಪಾಠಗಳನ್ನು ಕಥೆಯ ರೂಪದಲ್ಲಿ ಹೇಳಿದಂತಿದ್ದರೂ ಅವು ಎಲ್ಲಿಯೂ ನೀತಿಪಾಠವಾಗಿಲ್ಲ ಮತ್ತು ಹಳಹಳಿಕೆ ಹೊಂದಿದ ಲೇಖನಗಳಾಗಿಲ್ಲ ಎಂಬುದು ಮಹತ್ವದ್ದಾಗಿದೆ.

ಸುಮಾರು ತೊಂಬತ್ತು ಪುಟಗಳ 'ಕತೆಯಾದ ಹುಲಿ' ಕೃತಿ ಹದಿನೆಂಟು ಅಧ್ಯಾಯಗಳಲ್ಲಿ ಹುಲಿಯೊಂದರ ಬದುಕನ್ನು ಮನುಷ್ಯನ ಬದುಕಿನೊಂದಿಗೆ ಮತ್ತು ಮನುಷ್ಯನ ಬದುಕನ್ನು ಹುಲಿಯ ಬದುಕಿನೊಂದಿಗೆ ಸಮೀಕರಿಸುತ್ತದೆ. ರುಡ್‌ಯಾರ್ಡ್ ಕಿಪ್ಲಿಂಗ್ ತನ್ನ 'Jungle Book' ಪುಸ್ತಕದಲ್ಲಿ ಯಾವುದನ್ನು ಕಲ್ಪಿತ ವಾಸ್ತವದಲ್ಲಿ ಹೇಳಲು ಪ್ರಯತ್ನಿಸಿದ್ದಾನೆಯೋ ಅದನ್ನು ಶಶಿಧರ ವಿಶ್ವಾಮಿತ್ರ ಅವರು ಹೆಚ್ಚು ಹೆಚ್ಚು ವಾಸ್ತವ ಸಂಗತಿಗಳ ಮೇಲೆಯೇ ಕ್ರೋಡೀಕರಿಸಿ ಹೇಳಲು ಯತ್ನಿಸಿದ್ದಾರೆ. ನಡೆದಷ್ಟು ಇದು, ಹೀಗೆ ನಡೆಯಿತು, ಹೀಗೆ ನಡೆಯುತ್ತದೆ ಎಂದೆಲ್ಲ ಹೇಳುವ ಬದಲು, 'ಹೀಗೆಲ್ಲ ನಡೆಯುತ್ತಿರಬಹುದು, ಹೀಗೆ ಆಗಿರಬಹುದೇನೋ' ಎನ್ನುವ ಕಲ್ಪನೆಯ ಹಂದರದಲ್ಲಿ ಮಕ್ಕಳ ಯೋಚನೆಗಳನ್ನು ಕೃತಿಯೊಳಗೆ ಅಡಗಿಸಿದಂತೆ ಕತೆ ಹೇಳಲು ಪ್ರಯತ್ನಿಸಿದ್ದಾರೆ. ತಿಥಿಯೊಂದನ್ನು ಮುಗಿಸಿಕೊಂಡು ಮರಳಿ ಕಾಡಿನಲ್ಲಿರುವ ಮನೆಗೆ ನಡೆದಿರುವ ಬ್ರಾಹ್ಮಣ ಭೋಜಣ್ಣ ಸಂಜೆ ಸಂಧ್ಯಾವಂದನೆಗೆಂದು ತೊರೆಯ ಬಳಿ ಬಗ್ಗಿದಾಗ ನೀರಿನಲ್ಲಿ ಅವನ ಆಲೋಚಿಸುತ್ತ ಬಂದಿದ್ದ ಹುಲಿ ಕಾಣುತ್ತದೆ. ಅದು ತನ್ನನ್ನು ತಿನ್ನಬಹುದೇನೋ ಎಂದುಕೊಂಡರೂ ಧೈರ್ಯ ತೆಗೆದುಕೊಳ್ಳುವನು. ಅದೂ ಸಾಧು ಪ್ರಾಣಿಯಾಗಿದೆ ಈಗ! ಹುಲಿ ದುಷ್ಟನೆ ಅಥವಾ ಮನುಷ್ಯ ದುಷ್ಟನೆ ಎನ್ನುವ ವಾದ ಅವರಿಬ್ಬರ ನಡುವೆ ಆರಂಭವಾಗುತ್ತದೆ. ಬ್ರಾಹ್ಮಣ ಬುದ್ಧಿವಂತಿಕೆಯಿಂದ ಹುಲಿಯನ್ನು ಮಾತಾಡಿಸುತ್ತ ಊರತನಕ ಬರುತ್ತಾನೆ. ಆದರೆ ಹುಲಿಗೆ ಅವನ ಆಟ ಅರ್ಥವಾಗಿ ಎದುರು ಬಂದು ಗುಟುರು ಹಾಕುತ್ತದೆ. ಕೈಲಿದ್ದ ಕುಕ್ಕೆಯನ್ನು ಅದರ ಮೇಲೆ ಒಗೆಯುತ್ತಾನೆ. ಹಿಟ್ಟು ಅದರ ಕಣ್ಣು, ಮೂಗು ತುಂಬಿಕೊಂಡು ಅದು ಸಂದಿಗ್ಧದಲ್ಲಿರುವಾಗ ಇವನು ಮರವೇರಿ ಪಾರಾಗುತ್ತಾನೆ. ಇಲ್ಲಿ ಹುಲಿ, ಮನುಷ್ಯ ಮುಖ್ಯರಾಗದೆ ಅವರು ನಡೆಸುವ ವಾದ–ಪ್ರತಿವಾದ-ಮುಖ್ಯವಾಗುತ್ತವೆ. ಈ ಕತೆಯ ಮತ್ತೊಂದು ವೈಶಿಷ್ಟ್ಯವೆಂದರೆ ಊರಗೌಡನಾದ ರಾಜಣ್ಣ ಈ ಕತೆಯನ್ನು ಅಲ್ಲಿದ್ದವರಿಗೆ ಹೇಳುತ್ತಿದ್ದಾನೆ. ಕಾಡಿನಲ್ಲಿ ಹುಲಿ ಭೋಜಣ್ಣನನ್ನು ಅಡ್ಡಗಟ್ಟಿರಬಹುದು ಎಂದೆಲ್ಲ ಅವನ ತರ್ಕ. ನಡೆದಿದೆಯೋ ಇಲ್ಲವೊ ಎಂಬ ಸಂಶಯ ಕೇಳುವವರಲ್ಲಿ ಬರಬಾರದೆನ್ನುವುದು ಅವನ ವಾದ: 'ಕತೆ ಹಂಗೆ ಕಟ್ಟೋದಾಗೋದಿಲ್ಲ. ನಾನು ಏನು ಹೇಳುತಿದೀನೋ ಅದೇ ಅಲ್ಲಿ ಆಗುತಾ ಇದೆ. ಬೇರೆಯಲ್ಲ... ನಿಜಕ್ಕಿಂತ ದಿಟವಾದದ್ದೆಂದರೆ ಕತೇನೇ.' ಒಂದು ರೀತಿಯಲ್ಲಿ ಬದುಕು ಮತ್ತು ಕತೆಗಳು (ಕಲೆಗಳೂ ಆದೀತು!) ಬೇರೆಬೇರೆಯಾಗಬಾರದು ಎನ್ನುವ ಕಳಕಳಿ ಈ ಕೃತಿಯಲ್ಲಿ ಹುದುಗಿದೆ.

'ಮರಿಯಾನೆ' ಪುಸ್ತಕವೂ ಮತ್ತೊಂದು ಪ್ರಕೃತಿಪಾಠವಾಗಿದೆ. ಪ್ರಾಣಿಗಳ ಲೋಕವನ್ನು ಕೀಳು ಎಂದು ಭಾವಿಸುವ ಮಾನವನ ಸ್ವಾರ್ಥವನ್ನು ಇಲ್ಲಿ ಟೀಕಿಸಲಾಗಿದೆ. ನಮ್ಮ ಮಕ್ಕಳನ್ನು ಎಷ್ಟು ವಿಧವಿಧವಾಗಿ ನಾವು ಪ್ರೀತಿಸುತ್ತೇವೆಯೋ ಅದೇ ರೀತಿ ಅಂತಹ ಭಾವನೆ ಪ್ರಾಣಿಗಳಿಗೂ ಇರುತ್ತದೆ. ಮಗುವಿನ ತುಂಟತನವನ್ನು ಮುದ್ದಿನಿಂದ ಬಣ್ಣಿಸುವ ಮನುಷ್ಯ ಮರಿಯಾನೆಯೊಂದರ, ಮರಿಗುಬ್ಬಿಯೊಂದರ, ಮರಿಜಿಂಕೆಯೊಂದರ ತುಂಟಾಟ ಹೇಗೆಲ್ಲ ಇರಬಹುದೆಂದು ಯೋಚಿಸಿದ್ದಾನೆಯೇ ಎಂಬ ಪ್ರಶ್ನೆಯನ್ನು ಶಶಿಧರ ವಿಶ್ವಾಮಿತ್ರ ಇಲ್ಲಿ ಕೇಳಿದ್ದಾರೆ. ಮಕ್ಕಳಿಗೆ ಆ ಬಗ್ಗೆ ಮೊದಲಿನಿಂದಲೆ ಅರಿವು ಬರುವಂತೆ ಪಾಲಕರೂ ಕಾಡು, ಪರಿಸರ ನಮ್ಮನ್ನು ಸಾಕುತ್ತಿರುವ ಪ್ರಕೃತಿ ಎಂಬ ಪ್ರಜ್ಞೆಯನ್ನು ಹೊಂದಬೇಕೆಂಬ ತುಡಿತ ಸೂಚ್ಯವಾಗಿ ಇಲ್ಲಿ ವ್ಯಕ್ತವಾಗಿದೆ.

ಮನುಷ್ಯರಂತೆಯೇ ಪ್ರಾಣಿಗಳಿಗೂ ಭಾವನೆಗಳಿರುತ್ತವೆ ಎನ್ನುವ ಭಾವನೆ ಬಾಲರಿಗೆ ಏಕೆ ದೊಡ್ಡವರಿಗೂ ಈ ಕೃತಿಯನ್ನು ಓದಿದಾಗ ಸಹಜವಾಗಿ ಅನ್ನಿಸುತ್ತದೆ. ಕಾಡನ್ನು ವರ್ಣಿಸುವ ರೀತಿ, ಮರಿಯಾನೆಯ ತುಂಟತನ ಕಣ್ಣಿಗೆ ಕಟ್ಟುವಂತಿದೆ:

೧. ಚಂದಿರನಿರದ ರಾತ್ರಿ. ಹಿಮ ಸುರಿಯುವ ಮಾಗಿ ಹಿಮ್ಮೆಟ್ಟಿದೆ. ಬರಲಿರುವ ಮಳೆಗಾಗಿ ಕಾಡಿನ ಜೀವಗಳೆಲ್ಲ ಕಾದಿವೆ. ಕಾಡಿನ ತಗ್ಗುಗಳೆಡೆ ಅಲ್ಲಲ್ಲಿರುವ ಸಣ್ಣ ದೊಡ್ಡ ಹೊಂಡಗಳೆಲ್ಲ ಬತ್ತಿದ್ದರೂ ಹಳ್ಳ ತೆಳ್ಳಗೆ ಹರಿಯುತ್ತಿದೆ. ಹಳ್ಳದ ಮರಳು ಪಾತ್ರದ ಎರಡೂ ಪಕ್ಕ ಹೊಂಗೆ ಕೆಸವುಗಳ ಹಸಿರೋ ಹಸಿರು...

೨. ಮರಿಯಾನೆಗೆ ಹಠಾತ್ ಎಚ್ಚರಾದಾಗ ಇನ್ನೂ ಕತ್ತಲು. – 'ಅರೆ, ಇನ್ನೂ ಬೆಳಕು ಹರಿದಿಲ್ಲವಲ್ಲ ಯಾಕೆ? ತಾನು ಎದ್ದರೆ ಬೆಳಕು ಏಳುತ್ತದೇನೋ' ಎನ್ನಿಸಿತು ಅದಕ್ಕೆ.

ಎಲ್ಲರೊಡನೆ ಆಡಿಕೊಂಡು ಬಹಳಷ್ಟು ತುಂಟಿಯಾಗಿದ್ದ ಹೆಣ್ಣು ಮರಿಯಾನೆ ಚೆಂದದ ಚಿಟ್ಟೆಯೊಂದನ್ನು ಕಂಡು ಅದರ ಹಿಂದೆ ಅಲೆದು ಅಲ್ಲಿ ಓಡಿ ಇಲ್ಲಿ ಓಡಿ ಕೊನೆಗೆ ಮನುಷ್ಯ ಕೊರೆದಿಟ್ಟ ಕಂದಕದೊಳಗೆ ಬಿದ್ದು ಯಾರಿಗೂ ಗೊತ್ತಾಗದಂತೆ ಪ್ರಾಣ ಕಳೆದುಕೊಳ್ಳುತ್ತದೆ. ಎಷ್ಟೋ ಸಮಯದ ನಂತರವೇ ಅಮ್ಮ ಆನೆಗೆ, ಇತರ ಪ್ರಾಣಿಗಳಿಗೆ ಅದು ತಿಳಿದು ಅವು ದುಃಖಿಸುತ್ತವೆ. ದುರಂತದ ಚಿತ್ರಣವೊಂದನ್ನು ಶಶಿಧರ ವಿಶ್ವಾಮಿತ್ರ ಆಪ್ತವಾಗಿ ಕಟ್ಟಿಕೊಡುತ್ತಾರೆ.

'ಬನದ ಹಕ್ಕಿಗಳು' ಕೂಡ ಇಂತಹದೇ ದುರಂತ ಚಿತ್ರಣವೊಂದನ್ನು ಮಕ್ಕಳ ಮುಂದಿಡುತ್ತದೆ. 'ಮಣ್ಣುಹುಳು'ವಿನ ಸಂತೋಷದ ಘಳಿಗೆ ಹಾಗೂ ಸಾವಿನ ಘಳಿಗೆಗಳನ್ನು ಈ ಪುಸ್ತಕ ದಾಖಲಿಸುತ್ತದೆ. ಯಾವುದೊ ಹುಳ ನಮ್ಮ ಮುಂದೆ ಹರಿದರೆ ನಾವು ಸರಕ್ಕನೆ ಕಾಲಲ್ಲಿಯ ಚಪ್ಪಲಿಯಿಂದ ಹೊಸಕಿ ಹಾಕುವ ಸಂಭವವೇ ಹೆಚ್ಚು. ಬೇರೆಯವರು ಸತ್ತು ನಾವು ಬದುಕಬೇಕೆನ್ನುವ ದುರಾಸೆ ನಮ್ಮೊಳಗೆ ಮನೆ ಮಾಡಿರುತ್ತದೆ. ಮಹಾತ್ಮಾಗಾಂಧಿ ಒಂದೆಡೆ ಹೇಳಿದ್ದಾರೆ: 'ಈ ಭೂಮಿ ಮನುಷ್ಯನ ಆಸೆಗಳನ್ನು ಪೂರೈಸಬಹುದೇ ಹೊರತು ಅವನ ದುರಾಸೆಗಳನ್ನಲ್ಲ'. ಒಂದು ಚಿಕ್ಕ ಹುಳುವಿನ ಪ್ರಾಣ ಹಾಗೂ ಬದುಕು ಎಷ್ಟು ಅಮೂಲ್ಯವಾಗಿರುತ್ತದೆ ಎಂಬುದನ್ನು ಶಶಿಧರ ವಿಶ್ವಾಮಿತ್ರ ಅವರ 'ಬನದ ಹಕ್ಕಿಗಳು' ಎಂಬ ಈ ಕೃತಿ ಸಾಬೀತುಪಡಿಸುತ್ತದೆ. ಮಣ್ಣೊಳಗೆ ಹೂತುಕೊಂಡು ತನ್ನ ಬಾಳ-ಬದುಕು ನೋಡಿಕೊಳ್ಳುವ ಮಣ್ಣುಹುಳ ಇಂದು ಅದೇನೋ ಉಮೇದು ಬಂದು ಒಂದು ಮರವನ್ನು ಏರುತ್ತದೆ. ಮುಗ್ಧ ಹುಳು ಮೇಲೇರುವುದನ್ನು ಕಂಡು ಮರಕ್ಕೆ ಏನೇನೋ ಯೋಚನೆ

ಬರುತ್ತವೆ: 'ಬೆಳಗಾಗಿದೆ, ಹಕ್ಕಿಗಳೆದ್ದಿವೆ. ಯಾವುದಾದರೂ ಹುಳಾ ಸಿಕ್ಕೀತಾ ಅಂತ ಮೈಯೆಲ್ಲಾ ಕಣ್ಣಾಗಿ ನೋಡ್ತಾ ಇರ್ತವೆ...' ಅಪಾಯದ ಸೂಚನೆ ಕೊಡಬೇಕೆಂದರೂ ಮರಕ್ಕೆ ಅದರದೆ ಆದ ನೂರೆಂಟು ತಾಪತ್ರಯ, ಜಂಜಾಟ. ಅಷ್ಟರಲ್ಲಿ ಹುಳ ಮೇಲೇರಿ ತರಗೆಲೆಯನ್ನು ತಿನ್ನತೊಡಗುವುದು. ಹೋಳಿಗೆ ಸಿಕ್ಕಂತೆ ಖುಶಿಯಾದ ಅದು ಮೆಲ್ಲನೆ ಮೇಯುತ್ತಿದ್ದಂತೆ ಪಕ್ಕಕ್ಕೆ ಏನೋ ದಾಟಿಹೋಗುತ್ತಿರುವಂತೆ ಅನಿಸಿತು. ನೋಡಿದರೆ ಇರುವೆಯ ಸಾಲು. ಕ್ಷಣಾರ್ಧದಲ್ಲಿ ಅವು ಹುಳವನ್ನು ಮುತ್ತಿದವು. ಅಷ್ಟರಲ್ಲಿ ಬೆಟ್ಟಗೂಗೆಯ ಕಣ್ಣಿಗೂ ಬಿದ್ದು ಅದು ಇರುವೆ ಸಮೇತ ಹುಳವನ್ನು ಗುಳಂ ಮಾಡುತ್ತದೆ. ಎಲ್ಲ ಕಡೆ ತಿಂದು ಮುಕ್ಕುವ ಶತ್ರುಗಳಿದ್ದಾರೆ ಎಂದು ಗೌಜಿಗ ಹಕ್ಕಿ ಹೇಳಿದರೆ ಪ್ರಪಂಚದಲ್ಲಿರುವುದೇ ಹುಟ್ಟು–ಸಾವು ಎಂಬ ಆಧ್ಯಾತ್ಮಕವಾಣಿ ಪಾರಿವಾಳದ ಬಾಯಿಯಿಂದ ಬರುತ್ತದೆ. ಈ ಪುಟ್ಟ ಕೃತಿಯೊಳಗೆ ಹಲವು ಮನ ಕಲಕುವ ಸಂಗತಿಗಳು ಹೇಳಲ್ಪಟ್ಟಿವೆ.

'ಮಯೂರ' ಮಾಸಪತ್ರಿಕೆಯಲ್ಲಿ ಮೊದಲು ಧಾರಾವಾಹಿಯಾಗಿ ಬಂದು ನಂತರ ಪುಸ್ತಕ ರೂಪದಲ್ಲಿ ಪ್ರಕಟವಾದ 'ಇರಾವತಿ' (೧೯೯೫) ಕಾದಂಬರಿಯೂ ಮಕ್ಕಳಿಗೆ ನಿಸರ್ಗ ಮತ್ತು ಮನುಷ್ಯ ಸಂಬಂಧದ ಕತೆಯನ್ನು ಹೇಳುತ್ತದೆ. ಮುದಿಯಾನೆಯ ಕತೆಯಲ್ಲಿ ಅಜ್ಜಿಯ ಕತೆಯೂ ಅಡಗಿದೆ. ಕಾಡಿನ ಅಜ್ಜಿ ಮುದಿ ಹೆಣ್ಣು ಆನೆ ಸಾಯುವ ಸ್ಥಿತಿಯಲ್ಲಿದ್ದರೆ ಮನುಷ್ಯ ಬಾಳ್ವೆಯ ಅಜ್ಜಿಯೂ ಕೂಡ ಇಲ್ಲಿ ಬಾಳಸಂಜೆಯಲ್ಲಿದ್ದಾಳೆ. ಅದು ಸೂಚ್ಯವಾಗಿ ಹೇಳಲ್ಪಟ್ಟಿದೆ. ಕಾದಂಬರಿಯ ಪ್ರವೇಶದಲ್ಲಿ ಲೇಖಕರು ಹೇಳುವ ಮಾತುಗಳು ಪರಿಣಾಮಕಾರಿಯಾಗಿವೆ:

"ಗಣದೊಡತಿ ಎಂದು ಮಾನ್ಯತೆ ಪಡೆದ ಹಿರಿಯಜ್ಜಿಯಿವಳು. ತಮಗೆಲ್ಲ ಈವರೆಗೆ ಸಂತವಿಕ್ಕುತ್ತಿದ್ದಾಕೆ ಇಲ್ಲವಾಗುತ್ತಿದ್ದಾಳೆಂದು ಗಜಗಣ ಪರಿಭಾವಿಸುತ್ತದೆಯೇ?... ಜೀವನವಿಡೀ ತಮ್ಮೊಡನೆ ನಿಧಾನ ಸಾವಧಾನಗಳಿಂದ ಒಡನಾಡಿದ ಮುದಿ ಹೆಣ್ಣಾನೆ ಸಾಯಲಿಕ್ಕಾಗಿದೆಯೆಂದು ಕಾಡಿನ ಇತರ ಪ್ರಾಣಿಗಳು ತಿಳಿದಾವೆಯೆ? ತನ್ನಂತೆ ಮಣ್ಣಿಂದೆದ್ದು ತನ್ನ ಮಡಿಲೊಳಗಾಡಿದ ಘನಾತಿ–ಘನಕಾಯವೊಂದು ಮಣ್ಣಿಗೆ ಮರಳಲಿದೆ ಎಂದು ಕಾಡು ಸಾಕ್ಷೀಕರಿಸುತ್ತದೆಯೆ?"

ಶಶಿಧರ ವಿಶ್ವಾಮಿತ್ರ ಅವರು ಕಾಡನ್ನು ಒಂದು ದಟ್ಟ ಪಾತ್ರವಾಗಿ ನಿರೂಪಿಸುತ್ತಾರೆ. ನಾ. ಡಿಸೋಜ ಅವರು ಕಾಡನ್ನು ಹೇಗೆ ತಮ್ಮ ಕಾದಂಬರಿಗಳಲ್ಲಿ ಜೀವಂತಿಕೆಯಿಂದ ಚಿತ್ರಿಸಿರುವರೋ ಹಾಗೆಯೇ ಶಶಿಧರ ಅವರ ಬರವಣಿಗೆಯ ಛಾಪು ಇದೆ. ವ್ಯತ್ಯಾಸವೆಂದರೆ ಡಿಸೋಜ ಅವರ ಭಾಷೆ ಸರಳವಾಗಿದ್ದು ಸರಸರ ಮುಂದೆ ಹೋಗುತ್ತದೆ. ಶಶಿಧರ ವಿಶ್ವಾಮಿತ್ರ ಅವರು ಬಹಳಷ್ಟು ವರ್ಣನೆ, ಬಣ್ಣನೆಗಳಲ್ಲಿ, ವಿವರಗಳಲ್ಲಿ ಕಥೆಯ ಮುನ್ನಡೆಯುವಿಕೆಗೆ ಧಕ್ಕೆ ತಂದುಕೊಳ್ಳುತ್ತಾರೆ. ಹಾಡುಗಳನ್ನು ಬಳಸಿಕೊಳ್ಳುವುದು ಒಳ್ಳೆಯದೆಂದು ತೋರಿದರೂ ಬಹಳಷ್ಟು ಕಡೆ ಅವು ಅನಗತ್ಯವಾಗಿ ಕಂಡುಬಂದು ಕಿರಿಕಿರಿ ಅನ್ನಿಸಲು ಸುರುವಾಗುತ್ತದೆ. ಕತೆ ಚಿಕ್ಕದಿದ್ದಾಗ, ಗೀತರೂಪಕವಿದ್ದಾಗ ಹಾಡುಗಳ ಬಳಕೆ ಒಂದು ಮೌಲ್ಯವಾಗಬಹುದು. ಇಲ್ಲದಿದ್ದರೆ ಅಪಮೌಲ್ಯಕ್ಕೆ ಒಳಗಾಗುವ ಸಂಭವವೇ ಹೆಚ್ಚು. ಶಶಿಧರ ವಿಶ್ವಾಮಿತ್ರ ಅವರು ಕತೆಯ ಬಂಧಕ್ಕೆ ಇನ್ನಷ್ಟು ಗಮನ ಕೊಟ್ಟರೆ ಅವರಿಂದ ಇನ್ನೂ ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದೆಂದು ತೋರುತ್ತದೆ. ಅಷ್ಟಾಗಿಯೂ ಅವರು ಚಿತ್ರಿಸಿರುವ ಅಜ್ಜಿ ಕಾರಂತರ ಮೂಕಜ್ಜಿಯಂತೆ ಮನದಲ್ಲಿ ಉಳಿಯುತ್ತಾಳೆ. ಕಾಡು ಬಿಟ್ಟು ನಾಡಿಗೆ ಬಾ ಎಂದು ಮೊಮ್ಮಗ ಕೃಷ್ಣ ಕರೆದಾಗ ಅವಳು ಹೇಳುತ್ತಾಳೆ :

'ಅನ್ನ ಎಲ್ಲಿದೆಯೋ ಅಲ್ಲಿಗೆ ನೀವು ಹೋಗಲೇಬೇಕಪ್ಪ. ಉಂಡ ಅನ್ನ ಮೈ ಹತ್ತಬೇಕಾದರೆ ಹೋದಲ್ಲಿನ ನೀತಿ ನಡಾವಳಿಗಳನ್ನು ನಡೆಸಬೇಕಪ್ಪ. ಅನ್ನದ ಋಣ ಮನುಷ್ಯನ್ನ ಹ್ಯಾಗೆ ತಿದ್ದುತ್ತೆಂದರೆ ಪರಂಪರೆ ನನ್ನನ್ನ ಹಸಗೂಸೆಂದರೆ ನೀವು ನನ್ನನ್ನ ಮುದಿಗೊಡ್ಡೂ ಅಂತೀರಿ. ಹಿಂದಿನವರು ನನ್ನ ನಡಾವಳಿಯನ್ನು ಒಪ್ಪೊಲ್ಲವೇ ಅನ್ನೋ ಭ್ರಮೆ, ಆತಂಕಗಳಿಂದ ನಾನು ಕಾಲ ಹಾಕುತಿದೀನಿ, ಆದರೆ ನಾನು ಕಾಣುವ ಹಾಗೆಯೇ ನಿಮ್ಮಗಳ ರೀತಿ ರಿವಾಜು ಬದಲಾಗುತ್ತ ಹೋಗ್ತಾ ಇದೆ. ನಿಮ್ಮಲ್ಲಿಗೆ ನಾನು ಸಲ್ಲೊಲ್ಲ. ಆದ್ದರಿಂದ ನನ್ನನ್ನು ಬಾ ಅಂತ ಕರೀಬೇಡಿ. ಇಲ್ಲಿದ್ದುಕೊಂಡು ಇಲ್ಲೀದನ್ನ ನಡೆಸಿಕೋತ ಕಾಲವಾಗುತ್ತೇನೆ. ನೆಲೆ ಹೂಡಿದಲ್ಲಿಗೆ ಸಲ್ಲುವ ಚಿಗುರಗಳಾಗಿ ನೀವು ಸಂಪನ್ನರಾಗಿ.'

ಅಜ್ಜಿ ಹೇಳುವ ಈ ಮಾತು ಬದುಕು ಕಟ್ಟುವ ಮಾತಾಗಿದೆ. ಹೊಸ ಮೌಲ್ಯಗಳನ್ನು ಸ್ವಾಗತಿಸುವ ಜಗತ್ತು ಅದಕ್ಕೆ ಹೊಂದಿಕೊಳ್ಳಬೇಕು ಎನ್ನುವ ಭಾವ ಅಲ್ಲಿದೆ. ಮುದಿಯಾನೆ ಸತ್ತಿದ್ದಕ್ಕೆ ಆನೆಗಳ ಹಿಂಡು ಅಳುತ್ತಿದೆ. ಸಾವಾದಾಗ ಪ್ರಾಣಿಗಳಿಗೆ ಸಂತಾಪವಿಲ್ಲ ಎಂದು ಕೃಷ್ಣ ಅಜ್ಜಿಗೆ ಹೇಳಿದಾಗ ಆಕೆ ಹೇಳಿದ್ದಳು: 'ಕರೆಂಟು ಹೊಡೆದು ಒಂದು ಕಾಗೆ ಸತ್ತರೆ ಮಿಕ್ಕೋವು ಹ್ಯಾಗಾಡುತ್ತೆ ನೋಡಿದ್ದೀಯ?'

ಅವನಿಗೆ ಈಗ ಸತ್ತುಹೋದ ಅಜ್ಜಿಯ ನೆನಪು ಬರುತ್ತದೆ. ತರ್ಪಣ ಮುಗಿದ ಮೇಲೆ ದುಃಖತಪ್ತ ಸಂಬಂಧಿಗಳನ್ನು ಕಂಡು ಜೋಯಿಸರು ಹೇಳುವುದು ಹೀಗೆ:

'ಯಾರೇ ಮೆಚ್ಚಬಹುದಾದಂಥ ಬಾಳನ್ನು ಬಾಳಿ ಯಾರಲ್ಲೂ ಏನನ್ನೂ ಏತಕ್ಕೂ ಬೇಡದೆ ಎಲ್ಲರೂ ಕೊಂಡಾಡುವಂತೆ ಸಾಯುವವರು ಧೀರರಲ್ಲದೆ ಮತ್ತೇನು?'

ಮಾನವೀಯತೆಯ ಪಾಠವನ್ನು ಕಾದಂಬರಿ ಚಿತ್ರಿಸುತ್ತದೆ. ಶಶಿಧರ ವಿಶ್ವಾಮಿತ್ರ ಅವರು ಹೇಳುವ ಸಂಗತಿಗಳು ಮಕ್ಕಳಿಗೆ ಕೆಲವೊಮ್ಮೆ ತುಂಬ ಭಾರವಾಗಿ ಬಿಡುತ್ತದೆ. ಪ್ರೌಢಶಾಲೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳಿಗೆ ಇವು ಸೂಕ್ತವಾಗಬಲ್ಲವು.

ಶಾಂತಾರಾಮ ಸೋಮಯಾಜಿ

ಲೇಖಕ ಶಾಂತಾರಾಮ ಸೋಮಯಾಜಿ ಅವರು ಮಕ್ಕಳಿಗಾಗಿ ಹೊಸ ರೀತಿಯಲ್ಲಿ ಕತೆಗಳನ್ನು ಹೇಳುವ ಮೂಲಕ ಕಥಾಸಾಹಿತ್ಯ ಹೊಸ ಆಯಾಮಗಳನ್ನು ಪಡೆಯಲು ಕಾರಣರಾಗಿದ್ದಾರೆ. ಅವರ ಕತೆಗಳ ಒಂದು ಮುಖ್ಯ ಲಕ್ಷಣವೆಂದರೆ ತೀರ ಇಷ್ಟವಾಗುವ ಸಹಜತೆ. ಆ ಸಹಜತೆಗೆ ತಕ್ಕಂತೆ ಭಾಷೆಯನ್ನು ಮುರಿದುಕಟ್ಟುವ ಮೂಲಕ ಅಸಹಜ ಹಾಗೂ ಅಗಮ್ಯವೆನಿಸುತ್ತಿದ್ದ ಕತೆಗಳು ಹುಡುಗರ ಹಾಗೂ ದೊಡ್ಡವರ ಉಸಿರಿನೊಂದಿಗೆ ಉಸಿರಾಡತೊಡಗಿದವು. ಪ್ರಾಪಂಚಿಕ ಹಾಗೂ ಕೀಟಲೆಯ ಭಾಷೆ ಅವರ ಕಥನದ ಮತ್ತೊಂದು ಹೊಸ ಪ್ರಯೋಗವಾಗಿದೆ. ಇದರಿಂದ ಗೆಳೆತನದ ಬಾಂಧವ್ಯವೊಂದು ಕಥಾಪಾತ್ರಗಳಲ್ಲಿ ಹಾಗೂ ಓದುಗರಲ್ಲಿ ಒಡಮೂಡಲು ಸಾಧ್ಯವಾಗುತ್ತದೆ. ಅವರ ಕತೆಗಳ ಪಾತ್ರಗಳು ಕೂಡ ಅಷ್ಟೇ. ಹಿಂದೆ ಪರಾಕ್ರಮದ ಸಂಕೇತವಾಗಿರುತ್ತಿದ್ದ ಸಿಂಹ ಈಗ ನರಿಯ ಕೃಪಾಕಟಾಕ್ಷದಿಂದೆಂಬಂತೆ ಆರೋಗ್ಯವನ್ನು ಸರಿಪಡಿಸಿಕೊಳ್ಳಬೇಕಾಗಿದೆ. ಅದರ ಬಿದ್ದ ಹಲ್ಲುಗಳನ್ನು ಕಟ್ಟಿಸಿಕೊಳ್ಳಬೇಕಾಗಿದೆ. ಇವರ ಕತೆಯ ನಿರೂಪಣೆ ವಿನೋದಪ್ರಿಯವಾಗಿ ಸಾಗಿ, ಸರಸ ಸಂಭಾಷಣೆ, ಕೀಟಲೆ, ಕಲ್ಪನೆ

ಮತ್ತು ಮಾಹಿತಿಗಳಿಂದ ಮೈಪಡೆದುಕೊಂಡು ವಾಸ್ತವ ಕತೆಯ ಹಂದರದಲ್ಲಿ ಅರಳುತ್ತದೆ. ಒಮ್ಮೊಮ್ಮೆ ಸಾಮಾನ್ಯವೆನ್ನಿಸುತ್ತ, ಮತ್ತೊಮ್ಮೆಗೆ ಅಸಾಮಾನ್ಯವೆನ್ನಿಸುತ್ತ ಮಕ್ಕಳಿಗೆ ಅದು ಕುತೂಹಲ ಹಾಗೂ ದೈನಂದಿನ ಮಾತುಗಳಲ್ಲಿ ಹೇಳಿದ ವೃತ್ತಾಂತವೆನಿಸುತ್ತದೆ:

ಇದ್ದಿಲಿನ ಮುಂದೆ ಕೀಟ್ಲಸ್ವಾಮಿ ನರಿ, ಚಟ್ಟಾಮುಟ್ಟಿಗೆ ಹಾಕಿ ಕುಳಿತಿತು. ಬೆಂಕಿ ಮಂತ್ರವನ್ನು ಹೇಳುತ್ತಾ ಹೋಯಿತು. 'ಬೆಂಕಿ ಘೂವಮ್ಮಾ ಕೆಂಪು ಹೂವಮ್ಮಾ, ಬೆಂಕಿ ತಾರಮ್ಮಾ ಉರೀ ಬೇಕಮ್ಮಾ' ... ಒಂದೆರಡು ನಿಮಿಷದಲ್ಲಿ ಕೈಕೊಡಲಿಯ ಚೂಪು ತುದಿ ಕೆಂಪಾಯಿತು... ನಿದ್ರೆ ಮಾಡುತ್ತಿದ್ದ ಸಿಂಹದ ಬದಿಗೆ ಬಂತು. ತೆರೆದುಕೊಂಡ ಬಾಯಿಯ ಒಳಗೆ ಕೊಡಲಿಯನ್ನು ಇಟ್ಟಿತು. ಹಲ್ಲು ಇರುತ್ತಿದ್ದ ಜಾಗದಲ್ಲಿ ಕೊಡಲಿಯಿಂದ ಚಿಪ್‌ಚಿಪ್ ಬಡಿಯಿತು. ಒಂದು ಹಲ್ಲು ಚಿಪ್... ಎರಡು ಹಲ್ಲು ಚಿಪ್‌ಚಿಪ್... ಮೂರು ಹಲ್ಲು ಚಿಪ್ ಚಿಪ್...

ಹೀಗೆ ಕೀಟ್ಲಸ್ವಾಮಿ ನರಿ, ಕಚ್ಚಿ ಕಚ್ಚಿ ತಿನ್ನುವ ತೋಳ, ಬಾಯಲ್ಲಿ ಹಲ್ಲಿರದ ಗ್ಯಾಮಸಿಂಗ್ ಎನ್ನುವ ಮುದಿಸಿಂಹ ಮುಂತಾದವುಗಳ ನಡುವೆ ನಡೆಯುವ ಸ್ವಾರಸ್ಯಕರ ಸಂಭಾಷಣೆ, ಹಾಸ್ಯದ ಪ್ರಸಂಗ, ಸಿಟ್ಟಿನ ಘಳಿಗೆ, ಹತಾಶೆಯ ಕ್ಷಣಗಳು, ಕಥಾಶೈಲಿಯ ಹೊಸ ಪರಂಪರೆಯನ್ನು ಬೆಳೆಸುವಲ್ಲಿ ಆಸಕ್ತವಾಗಿವೆ. ಕಲ್ಪನೆ ಮತ್ತು ಅದ್ಭುತ ಪ್ರಸಂಗಗಳಿಗೂ 'ಕಲಹಾರಿಯ ಸಿಂಹ ಮತ್ತು ಮ್ಯಾಂಟೀಸ್‌ನ ಪ್ರಾರ್ಥನೆ' (ವಸಂತ ಪ್ರಕಾಶನ, ಬೆಂಗಳೂರು, ೨೦೧೧) ಪುಸ್ತಕದಲ್ಲಿ ಕೊರತೆಯಿಲ್ಲ :

'ಒಮ್ಮೆ ಕಾಂಗ್ ದೊರೆಗೆ ಒಂದು ಯೋಚನೆ ಬಂತು. ತನ್ನ ಪ್ರಜೆಗಳಿಗೋಸ್ಕರ ಒಂದು ಅದ್ಭುತ ಪ್ರಪಂಚ ಸೃಷ್ಟಿ ಮಾಡಿದರೆ ಹೇಗೆ? ಯಾರೂ ಇಲ್ಲಿಯತನಕ ಅನುಭವಿಸದ ಒಂದು ಮಾಯಾಲೋಕವನ್ನು ನಿರ್ಮಿಸಿದರೆ ಹೇಗೆ? ಹಾಗೆ ಯೋಚನೆ ಮಾಡಿದ ದೊರೆ ಕಾಂಗ್. ಅನಂತರ ಒಳಲೋಕದಿಂದ ಹೊರಲೋಕಕ್ಕೆ ಬಂದ. ಭೂಮಿಯ ಮೇಲೆ ಕಾಲಿಟ್ಟ, ಮ್ಯಾಜಿಕ್ ಬಾಣವನ್ನು ಎಲ್ಲಾ ದಿಕ್ಕುಗಳಿಗೂ ಬಿಟ್ಟ. ಅದ್ಭುತ ಪ್ರಕೃತಿಯ ಸೃಷ್ಟಿ ಆಯಿತು. ಆಮೇಲೆ ಒಂದು ದಿಕ್ಕಿಗೆ ಮ್ಯಾಜಿಕ್ ಭರ್ಚಿಯನ್ನು ಎಸೆದ. ಅದು ಎಲ್ಲಿ ಬಿತ್ತೋ ಅಲ್ಲಿ ಮಹಾಮರ ಸೃಷ್ಟಿ ಆಯಿತು. ಅಬ್ಬಾ ಎಂತಹ ಮರ! ಅದರ ರೆಂಬೆ-ಗೆಲ್ಲುಗಳು ಪ್ರಪಂಚದ ಎಲ್ಲಾ ದಿಕ್ಕುಗಳಿಗೂ ಹರಡಿದ್ದವು. ರೆಂಬೆಗಳ ತುದಿ ಭೂಮಿಯ ಅಂಚಿನವರೆಗೂ ಹಬ್ಬಿದ್ದವು.'

ಇಂಗ್ಲಿಷ್ ಪದಗಳನ್ನು, ವ್ಯಂಗ್ಯ ವಿಡಂಬನೆಯ ತುಣುಕುಗಳನ್ನು ಸೇರಿಸುತ್ತ ನಿರೂಪಣೆ ಜೀವನಕ್ಕೆ ಹತ್ತಿರವಿರುವಂತೆ ಹಾಗೂ ಸಹಜವೆನ್ನಿಸುವಂತೆ ನೋಡಿಕೊಳ್ಳುವ ಶಾಂತಾರಾಮ ಸೋಮಯಾಜಿ ಅವರು ಒಂದೊಂದು ಸಲ ಮಾಹಿತಿ, ನೀತಿ ಪಾಠಗಳನ್ನು ಅತಿಯಾಗಿ ಸೇರಿಸುತ್ತ ನೀರಸರಾಗುತ್ತಾರೆ. ಅಷ್ಟಾಗಿಯೂ ಕತೆ ಕಟ್ಟುವ ರೀತಿಯಲ್ಲಿ ಹೊಸ ಪ್ರಯೋಗ ಮಾಡಿರುವ ಅವರ ಕೃತಿಗಳು ಚೇತೋಹಾರಿಯಾಗಿದ್ದು ಮಕ್ಕಳ ಕಲ್ಪನಾಶಕ್ತಿಯನ್ನು ಉದ್ದೀಪಿಸುವಂತಿವೆ.

ಶಾಂತಾರಾಮ ಸೋಮಯಾಜಿ ಅವರ 'ದೇಶ ವಿದೇಶಗಳ ವಿನೋದ ಕಥೆಗಳು' ಎನ್ನುವ ಕೃತಿ ಮಕ್ಕಳಿಗಾಗಿ ವಿನೋದ, ತಿಳಿವಳಿಕೆ, ಕುತೂಹಲ, ಹಾಸ್ಯ, ಚಾಲಾಕುತನಗಳನ್ನು ಕಟ್ಟಿಕೊಡಬಲ್ಲ ಸಾಮಗ್ರಿಯನ್ನು ಹೊಂದಿದೆ. ತುನಿಷಿಯಾ, ಅಮೆರಿಕ, ಪಾಕಿಸ್ತಾನ, ಗ್ರೀಸ್, ಪರ್ಶಿಯಾ, ಇರಾನ್ ದೇಶಗಳಿಂದಲ್ಲದೆ ನಮ್ಮ ದೇಶದ ಇತರ ಭಾಗಗಳಲ್ಲಿ ಪ್ರಚಲಿತದಲ್ಲಿರುವ

ಕತೆಗಳನ್ನು ಈ ಪುಸ್ತಕ ಒಳಗೊಂಡಿದೆ. ಅದೂ ಅಲ್ಲದೆ ಝೆನ್, ಸೂಫಿ, ನಾರ್ವೆಜಿಯನ್ ಹಿನ್ನೆಲೆಯ ಕೆಲವು ಕತೆಗಳು ಮಕ್ಕಳಿಗೆ ಮುದ ನೀಡುತ್ತವೆ. ಈ ಕಥಾಸಂಗ್ರಹದ ಒಂದು ವಿಶೇಷತೆಯೆಂದರೆ ಕತೆಗಾರರಿಗೆ ತುಂಬ ಸರಳವಾಗಿ ಹೇಳುವ ಗುಣವಿದೆ. ಹಾಗಾಗಿ ಮಕ್ಕಳು ತಾವೇ ತಾವಾಗಿ ಇಲ್ಲಿನ ಕತೆಗಳನ್ನು ಕುತೂಹಲದಿಂದ ಓದಬಲ್ಲರು ಹಾಗೂ ಗ್ರಹಿಸಬಲ್ಲರು. ಎಳೆಯರ ಗ್ರಹಿಕೆ–ತಿಳಿವಳಿಕೆಗಳನ್ನು ವಿಸ್ತರಿಸಬಲ್ಲ ಶಕ್ತಿಯನ್ನು ಈ ಕಥೆಗಳು ಪಡೆದಿವೆ. 'ಗಾಜಿನ ಕಿಟಕಿ–ಬಂಗಾರದ ಕಿಟಕಿ', 'ಬೀಗವಿರದ ಬಾಯಿ', 'ನಕಲಿ ವಿಜ್ಞಾನಿ', 'ಹುಂಜದ ವೇದಾಂತ', 'ಮಂಗ ಮತ್ತು ಮಾನವ', 'ಹರಕು ಚೀಲ ಮತ್ತು ತೃಪ್ತಿ' ಮುಂತಾದ ಕತೆಗಳು ಮಕ್ಕಳಲ್ಲಿ ಸ್ವಾವಲಂಬನೆ ಮತ್ತು ತೃಪ್ತಿಯ ಗುಣಗಳನ್ನು ಬೆಳೆಸುವಂತಿವೆ. ನಕ್ಕು ನಗಿಸಬಲ್ಲ ವಿಷಯ ವೈವಿಧ್ಯತೆಯನ್ನು ಹಲವು ಕತೆಗಳು ಪಡೆದಿವೆ. ಕತೆಗಳು ನಮ್ಮ ನೆಲದ್ದೇ ಅನ್ನಿಸುವಂತಿವೆ.

ಶಾಂತಾರಾಮ ಸೋಮಯಾಜಿಯವರ 'ಚಿಟ್ಟೆಹಾಡು ಮತ್ತು ಇರುವೆ ಮದುವೆ' ಕೂಡ ಒಂದು ಒಳ್ಳೆಯ ಪುಸ್ತಕವಾಗಿದೆ. ನಮ್ಮ ಸುತ್ತಮುತ್ತಲಿನ ಪ್ರಾಣಿ ಪ್ರಪಂಚದ ಬಗ್ಗೆ ನಮಗಿರುವ ಅಜ್ಞಾನವನ್ನು ಹೋಗಲಾಡಿಸಬಲ್ಲ ವೈಜ್ಞಾನಿಕ ಹಾಗೂ ನಿಖರ ಮಾಹಿತಿ ಈ ಪುಸ್ತಕದಿಂದ ದೊರೆಯುತ್ತದೆಯೆಂದರೆ ತಪ್ಪಲ್ಲ. ತುಂಬ ಸ್ವಾರಸ್ಯಕರವಾಗಿ ಚಿಟ್ಟೆ ಹಾಗೂ ಇರುವೆಗಳ ಲೋಕವನ್ನೂ ಶಾಂತಾರಾಮ ಸೋಮಯಾಜಿ ಅವರು ಅನಾವರಣಗೊಳಿಸುತ್ತಾರೆ. ಚಿಟ್ಟೆಗಳನ್ನು ಕುರಿತು ಜಗತ್ತಿನ ಎಲ್ಲ ಕಡೆ ಹರಡಿಕೊಂಡಿರುವ ಅದ್ಭುತ ಕತೆಗಳಲ್ಲಿ ಕೆಲವನ್ನಾದರೂ ಈ ಸಂಗ್ರಹದಿಂದ ಮಕ್ಕಳು ಸವಿಯಬಹುದಾಗಿದೆ. ಉತ್ತರ ಅಮೇಜಾನ್ ಪ್ರದೇಶದ ಜಾನಪದ ಸಂಸ್ಕೃತಿಯನ್ನು ಬಿಂಬಿಸುವ ಚಿಮುಡಿಯಾ ಎನ್ನುವ ಬಾಲಕಿಯ ಸುತ್ತ ಹೆಣೆದಿರುವ ಪಾತರಗಿತ್ತಿಯ ಕತೆ ಮಕ್ಕಳೆದುರು ಒಂದು ಮಾಯಾಲೋಕವನ್ನು ಸೃಷ್ಟಿಸುತ್ತದೆ.

ಇರುವೆ ಎನ್ನುವ ಪುಟ್ಟ ಪ್ರಾಣಿಯನ್ನು ಕುರಿತು ಬಹಳ ಸೊಗಸಾದ ಹಾಗೂ ಅಷ್ಟೇ ವೈಜ್ಞಾನಿಕವಾದ ಮಾಹಿತಿಯನ್ನು ನೀಡುತ್ತದೆ. ಜೊತೆಗೆ ಮೇಲು–ಕೀಳು ಎನ್ನುವ ಭಾವನೆಯಿಲ್ಲದೆ ತಮ್ಮ ತಮ್ಮ ಜವಾಬ್ದಾರಿ ಅರಿತುಕೊಂಡು ಸಾಂಘಿಕ ಜೀವನ ನಡೆಸುವ ಇರುವೆಗಳ ವೈಶಿಷ್ಟ್ಯತೆಯನ್ನು ಈ ಕೃತಿ ತೆರೆದಿಡುತ್ತದೆ. ಇರುವೆಗಳ ಮದುವೆ ಮತ್ತು ಸಂತಾನ ಪ್ರಕ್ರಿಯೆಯನ್ನು ಮನುಷ್ಯನ ಜೀವನಕ್ಕೆ ಹೋಲಿಸುತ್ತ ಭೂಮಿ ಇರುವುದು ಸಕಲ ಜೀವಿಗಳಿಗಾಗಿಯೆ ಹೊರತು ಮನುಷ್ಯನ ಸ್ವಾರ್ಥಕ್ಕಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ಕತೆ ಹಾಗೂ ಮಾಹಿತಿಯ ಕಣಜವಾಗಿ ಪುಸ್ತಕ ಸುಂದರವಾಗಿದೆ. ಕುತೂಹಲವನ್ನು ಕಾಯ್ದುಕೊಂಡು ಹೋಗುತ್ತದೆ. ಒಳ್ಳೆಯ ಕತೆಗಾರರಾಗಿರುವುದರಿಂದ ಶಾಂತಾರಾಮ ಸೋಮಯಾಜಿಯವರಿಗೆ ಮಕ್ಕಳನ್ನು ಮುಟ್ಟಬೇಕಾದ ದಾರಿ ಗೊತ್ತಿದೆ.

ಕೃಷ್ಣಮೂರ್ತಿ ಬಿಳಿಗೆರೆ

ಕವಿ ಕೃಷ್ಣಮೂರ್ತಿ ಬಿಳಿಗೆರೆ ಅವರು ಇದುವರೆಗೆ ಮಕ್ಕಳಿಗಾಗಿ 'ಗುಡುಗುಡು ಗುಡ್ಡ', 'ಸಾವಿರ ಕಣ್ಣಿನ ನವಿಲು' ಎನ್ನುವ ಕವನ ಸಂಕಲನಗಳನ್ನು, 'ಮಳೆ ಹುಚ್ಚ ಮತ್ತು ನವಿಲೂರಿನ ಕತೆ' ಹಾಗೂ 'ಅಗಲ ಕಿವಿಯ ಅರಿವುಗಾರ' ಎಂಬ ನಾಟಕಗಳನ್ನು ಪ್ರಕಟಿಸಿದ್ದಾರೆ.

ಮೇಲೆ ಮೇಲೆ ಬೆಳೆಯದವನೆ
ಮಗುವಾಗಿಯೆ ಇರುವವನೆ । ಹಣ್ಣು ಕೊಡುವೆ ಕಣ್ಣು ಕೊಡು
ಹಗಲು ಸೂರ್ಯ ಕಾವು । ಇರುಳ ಚಂದ್ರ ಹೂವು ।
ಹೇಗೆ ಎಂದು ನನಗೆ ಇಂದು । ಹೇಳು ಅಕ್ಕಯ್ಯ ಹೇಳು ಅಕ್ಕಯ್ಯ ।
ಇಲ್ಲಿ ಬಯಲು ಅಲ್ಲಿ ಕಲ್ಲು । ದೂರದಲ್ಲಿ ಆಳ ಕಡಲು
ಇದರ ಗುಟ್ಟು ಬಿಚ್ಚಿ ಕೊಡೋ । ನನ್ನ ಅಣ್ಣಯ್ಯ । ನನ್ನ ಅಣ್ಣಯ್ಯ ।

ಎನ್ನುವಂತಹ ಕಾಡುವ ಸಾಲುಗಳನ್ನು ತಮ್ಮ ಅನೇಕ ಪದ್ಯ ಹಾಗೂ ನಾಟಕಗಳಲ್ಲಿ ನೀಡಿರುವ ಅವರು ಈ ಹೊತ್ತು ಕನ್ನಡದಲ್ಲಿ ಮಕ್ಕಳಿಗಾಗಿ ಬರೆಯುತ್ತಿರುವ ಪ್ರಮುಖ ಲೇಖಕರಲ್ಲಿ ಒಬ್ಬರಾಗಿದ್ದಾರೆ. ಪ್ರಕೃತಿಯ ಸಿರಿ, ಸಮೃದ್ಧಿ, ಬಾಲ್ಯದ ತುಂಟತನ, ಸಹಜೀವನದ ಅಗತ್ಯತೆ, ಸಮಾನತಾ ಭಾವ ಮುಂತಾದ ಮೌಲ್ಯಗಳು ಅವರ ಮಕ್ಕಳ ಸಾಹಿತ್ಯವನ್ನು ನಿರ್ದೇಶಿಸಿವೆ. ಬಹಳಷ್ಟು ಲವಲವಿಕೆ ಹಾಗೂ ಉತ್ಸಾಹ ಅವರ ಮಕ್ಕಳ ಹಾಡುಗಳನ್ನು ನಾಲಿಗೆಯ ಮೇಲೆ ನಿಲ್ಲಿಸುತ್ತವೆ. ಪದಗಳಲ್ಲಿ ಅವರು ಅಡಗಿಸಿಡುವ ಅರ್ಥ ಮತ್ತು ಲಯಗಳು ಕನ್ನಡ ಮಕ್ಕಳ ಕಾವ್ಯಕ್ಕೆ ದಿಕ್ಸೂಚಿಯಂತಿವೆ:

ಸೂರ್ಯ ಕಿರಣ ಮಿಂಚಿ ಮಿಂಚಿ । ಬೆಳಕ ಕೋಲು ಹುಟ್ಟಿತು
ಚಂದ್ರ ಬಿಂಬ ಕೆರೆಗೆ ಬಿದ್ದು । ಹಾಗೆ ಹಾಗೆ ಕರಗಿತು

ನಮ್ಮ ಸುತ್ತಲಿನ ಜಗತ್ತು ನಾದಮಯವಾಗಿದೆ, ಕುತೂಹಲಕಾರಿಯಾಗಿದೆ ಹಾಗೂ ವೈವಿಧ್ಯಮಯವಾಗಿದೆ ಎಂಬ ಅರಿವನ್ನು ಮಕ್ಕಳಲ್ಲಿ ಪರಿಣಾಮಕಾರಿಯಾಗಿ ಬಿತ್ತುವ ಶಕ್ತಿ ಅವರ ಪದ್ಯಗಳಲ್ಲಿದೆ. ಹೊಸ ಅರ್ಥಗಳನ್ನು ಹುಟ್ಟು ಹಾಕುವುದು ಮತ್ತು ಈಗಾಗಲೆ ರೂಢಿಯಲ್ಲಿರುವ ಪದ್ಯದ ಕ್ರಮಗಳನ್ನು ಮುರಿದು ಕಟ್ಟುವುದು ಅವರ ಆಸಕ್ತಿಯ ಕೇಂದ್ರಗಳಾಗಿವೆ. ಕೆರೆಯ ಏರಿಯನ್ನು ಕುರಿತ ಕವಿತೆಯಲ್ಲಿ ಏರಿಯೆನ್ನುವುದು ಬರಿ ಏರಿಯಾಗದೆ ನೀರನ್ನು ತಡೆದು ನಿಲ್ಲಿಸುವ ದಾರಿಯೂ ಕೂಡ ಎನ್ನುತ್ತಾರೆ. ದಿನವೂ ನೀರು ಕುಡಿಯುವ ಏರಿಯ ಮೈಯ ಮಾತ್ರ ಯಾಕೋ ಬಿಸಿಯಾಗಿದೆ ಎನ್ನುವ ಅಚ್ಚರಿಯ ಭಾವವನ್ನು ಪ್ರಕಟಿಸುತ್ತಾರೆ. ಕಟ್ಟಿಗೆಯಲ್ಲಿ ಅಗ್ನಿ ಇರುವಂತೆ, ಕಬ್ಬಿನೊಳಗೆ ಸಿಹಿ ಅಡಕವಾಗಿರುವಂತೆ ಪ್ರಕೃತಿಯ ವಸ್ತುಗಳು ತಮ್ಮೊಳಗೆ ಎಷ್ಟೆಲ್ಲ, ಏನೆಲ್ಲ ಹುದುಗಿಸಿಕೊಂಡಿವೆ ಎನ್ನುವ ಅರಿವು ಹುಟ್ಟುತ್ತದೆ.

ನಿತ್ಯ ನೀರ ಕುಡಿವ ಏರಿ । ಮೈಯ್ಯ ಮೇಲೆ ಬಿಸಿಬಿಸಿ ।
ಏರಿ ಹಿಂದೆ ತೊನೆದ ತೋಟ । ತಲೆಯೆಲ್ಲ ಹಸಿ ಹಸಿ ।
ಏರಿ ಮೇಲೆ ಏರುವಾಟ । ತಂತಿ ಮೇಲೆ ನೃತ್ಯವು ।
ಕೆರೆಯ ಒಳಗೆ ಧುಮುಕುವಾಟ । ಹೊಸತು ಹೊಸತು ಪಾಠವು ।

ಲೋಕವನ್ನು ಕಣ್ಣೊಳಗೆ ಮೈಯೊಳಗೆ ತುಂಬಿಕೊಳ್ಳುವುದರಲ್ಲಿಯೇ ಮಗುವಿನ ಸೃಜನಶೀಲತೆ ಅಡಗಿದೆ ಎನ್ನುವುದನ್ನು ಅವರು ನಿರೂಪಿಸುತ್ತಾರೆ. ನೋಡುವುದು, ಕೇಳುವುದು, ಕೂಗುವುದು, ಬೆಳೆಯುವುದು ಎಲ್ಲ ಎಷ್ಟು ವಿಚಿತ್ರ ಸಂಬಂಧಗಳನ್ನು ಹೊಂದಿವೆ. ಶಬ್ದ ಲಾಲಿತ್ಯ ಹಾಗೂ ಚಿತ್ರಕ ಶಕ್ತಿ ಅವರ ಕವನಗಳಲ್ಲಿ ಒಮ್ಮೆಲೆ ಎದ್ದು ಕಾಣುವಂತಹದು.

ನೋಡಿದೆ ನೋಡಿದೆ । ಗುಳುಮುಳು ಹಕ್ಕಿ । ಮುಳುಗುವದ
ನೋಡಿದೆ ನಾನು । ಕರಡಿ ಬೆಟ್ಟ । ಮೇಲಮೇಲಕೆ ಬೆಳೆಯುವದ ನೋಡಿದೆನಮ್ಮ!
ಕೋಣನ ಕಾವಲ ಕಾಡಿನಲಿ । ಜೋಡಿ ನರಿಗಳು ಕೂಗುವದ
ಆಲದ ಮರವು । ಬಿಳಲನು ಬಿಟ್ಟು । ಅಕ್ಕಪಕ್ಕನೆ ಬೆಳೆಯುವದ
ನೋಡಿದೆ ನಾ ನೋಡಿದೆ । ಸೂರ್ಯನು ಕೆಳಗೆ ಇಳಿಯುವದ ।
ತೋಟದ ದಾರಿಯು ಮುಗಿಯುವದ

ನಾದದ ನದಿಯೊಂದು ನಡೆದಂತೆ, ಸುಳಿಯುವ ಗಾಳಿ ತೀಡಿದಂತೆ, ಕಲ್ಪನೆಯೊಂದು ಮಸೆದಂತೆ ಕೃಷ್ಣಮೂರ್ತಿ ಬಿಳಿಗೆರೆ ಅವರ ಕವಿತೆಯ ನಡಿಗೆಯಿರುತ್ತದೆ. ಮರವೊಂದು ಹಕ್ಕಿಗೆ ಹೇಗೆ ಮನೆಯಾಗಿದೆ, ದನ-ಕರುವಿಗೆ ಹೇಗೆ ನೆರಳಾಗಿದೆ, ಸುಳಿದಾಡುವ ಪ್ರಾಣಿ ಪಕ್ಷಿಗೆ ಹೇಗೆ ತಂಗಾಳಿಯಾಗಿ ಬೀಸಿಕೊಂಡಿದೆ ಎಂದು ಹೇಳುತ್ತ ಹಸಿರ ನೆಲವನ್ನು ಬರಡಾಗಿಸದಂತೆ, ಚಿಗಿತ ಹಸಿರನ್ನು ಚಿವುಟದಂತೆ ಮರದ ಮೂಲಕ ಹೇಳಿಸುತ್ತಾರೆ ಮಗುವಿನ ತುಂಟತನ, ಅದು ವಹಿಸುವ ಸ್ವಾತಂತ್ರ್ಯ, ಗಳಿಸಿಕೊಳ್ಳುವ ಸಂತೃಪ್ತಿ ಕೆಲವೆಡೆ ತುಂಬ ನವಿರಾಗಿ ಕಾಣಿಸಿಕೊಂಡಿದೆ.

ಕದ್ದೆ ಕದ್ದೆ । ಏನು ಕದ್ದೆ । ಅಮ್ಮನ ಒಲವಿನ । ಪ್ರೀತಿಯ ಕದ್ದೆ
ಗೆದ್ದೆ ಗೆದ್ದೆ । ಏನು ಗೆದ್ದೆ । ಅಪ್ಪನ ಸಿಟ್ಟಿನ । ಮನಸನು ಗೆದ್ದೆ

ಹಿರಿಯರನ್ನು ಓಲೈಸಿಕೊಳ್ಳುವ ದಾರಿ ಗೊತ್ತಿರುವಂತೆ ಅವರ ನಡೆಗಳನ್ನು ತಾವು ನೋಡುತ್ತಿದ್ದೇವೆ ಎನ್ನುವ ಸಂದೇಶವನ್ನು ಮಕ್ಕಳು ಕೊಡುತ್ತಾರೆ:

ಹೊಡೆಯಬೇಡಿ । ಬಡಿಯಬೇಡಿ
ಓದು ಓದು ಬರೀ ಬರೀ । ಎಂದಷ್ಟೇ ಕೂಗಬೇಡಿ
ಓದುತೀವಿ ಬರೆಯುತೀವಿ । ಹೊಸ ಪುಸ್ತಕ ತಂದುಕೊಡಿ
ನಮಗೆ ನೀವು ಕೊಂಡುತಂದ । ಪುಸ್ತಕಗಳ ಲೆಕ್ಕಕೊಡಿ
ಒಂದು ಸಣ್ಣ ಸಮಯವನ್ನು । ನಮಗೆ ನೀವು ಮೀಸಲಿಡಿ

ಹಲವು ಜನಪದ ಲಯಗಳನ್ನು ತಮ್ಮ ಹಾಡುಗಳಲ್ಲಿ ಬಳಸಿಕೊಳ್ಳುವ ಮೂಲಕ ಮಕ್ಕಳ ಕಾವ್ಯದಲ್ಲಿ ಹೊಸ ಪ್ರಯೋಗಗಳ ಸಾಧ್ಯತೆಗಳನ್ನು ಕೃಷ್ಣಮೂರ್ತಿಯವರು ತೋರಿಸಿದ್ದಾರೆ.

ಚಿಕ್ಕವರೆಂಬುದು ನಿಜವಣ್ಣ । ಲೋಕ ದೊಡ್ಡದು ತಿಳಿಯಣ್ಣ
ಹಾಗೆ ಹಬ್ಬಿದ ಈ ಭೂಮಿ । ಹೀಗೆ ಬಗ್ಗಿದ ಆಕಾಶ । ನಿಮ್ಮದಲ್ಲ ನಮ್ಮದು।
– ನಮ್ಮ ಲೋಕ ದೊಡ್ಡದು

* * *

ಸೋಜಿಗವೋ ಸೋಜಿಗ । ಜಗವೆ ಒಂದು ಸೋಜಿಗ ।
ಜೀವಜಾಲದೊಳಗೆಲ್ಲಾ । ಪ್ರಾಣವಾಗಿ ಸುಳಿಯುತಿರುವ ।
ಗಾಳಿಗುಟ್ಟು ಸೋಜಿಗ । ಸೋಜಿಗವೋ ಸೋಜಿಗ ॥
ಬಿಡುವಿರದೆ ಢವಗುಡುವ । ಮೈಗೆ ರಕ್ತ ರವಾನಿಸುವ ।
ಹೃದಯ ಸೋಜಿಗ । ಸೋಜಿಗವೋ ಸೋಜಿಗ ॥

ಇಷ್ಟು ಸಣ್ಣ ತಲೆಯ ಒಳಗೆ । ಕೋಟಿ ನೆನಪು ಕೂಡಿ ಇಡುವ ।
ಮೆದುಳು ಸೋಜಿಗ । ಸೋಜಿಗವೋ ಸೋಜಿಗ ॥
ಚಿವುಟದಿದ್ದರೆ ಸಾಕು । ಚಿಗುರಿ ಚಿಮ್ಮುವೆನು । ಸುಮ್ಮನಿದ್ದರೆ ಸಾಕು ।
ಹೂವ ಸುರಿಸುವೆನು ।

ಮರದ ಹಾಡನ್ನು ನಾವು ಆಲಿಸಬಲ್ಲೆವೆ ಎಂದು ಕೇಳುತ್ತಲೆ ಕಾಡಿನ ಪ್ರಾಣಿಸಂಕುಲದ, ಅನಂತ ಜೀವರಾಶಿಯ ಹಾಡು ಕೇಳಿಸುತ್ತಾರೆ. ಇಡೀ ನಿಸರ್ಗದ ಹಾಡು ತೇಲಿಬರುವುದು. ಸೂರ್ಯ, ಚಂದ್ರ, ಆಕಾಶ, ಗಿಡ, ಮರ, ಗೆದ್ದಲು, ಗರಿಕೆ, ನೆಲ, ನದಿ, ಜಿಂಕೆ, ಜೀರಿಂಬೆಗಳ ಬದುಕಿನ ಹಾಡು ಅನವರತ ಕೇಳುವುದು. ಪುಟ್ಟ ಹುಡುಗಿಯೊಂದು ಜೀರಿಂಬೆಯನ್ನು ಕಡ್ಡಿಪೆಟ್ಟಿಗೆಯಲ್ಲಿಟ್ಟು ಸೃಷ್ಟಿಯ ಕೌತುಕವನ್ನು ಅನುಭವಿಸುವ ಪರಿ ತುಂಬ ವಿಶಿಷ್ಟ ರೀತಿಯಲ್ಲಿ ಬಣ್ಣಿಸಲ್ಪಟ್ಟಿದೆ. ಆ ಹುಡುಗಿ ಹಗಲು-ರಾತ್ರಿ ತನ್ನ ಮನಸ್ಸಿನಲ್ಲಿ ಅಂದುಕೊಳ್ಳುವ ಭಾವಗಳು ಈ ಪದ್ಯದಲ್ಲಿ ಕೆತ್ತಲ್ಪಟ್ಟಿವೆ. ಶಾಲೆಯಿಂದ ಮನೆಗೆ, ಮನೆಯಿಂದ ಶಾಲೆಗೆ ಹೋಗುವಾಗಲೂ ಆಕೆಗೆ ಆ ಪುಟ್ಟ ಮರಿಯದೆ ಚಿಂತೆ. ಅದು ಯಾವಾಗ ಪೆಟ್ಟಿಗೆಯಲ್ಲಿ ಮೊಟ್ಟೆ ಇಟ್ಟೀತೋ, ತಾನು ಯಾವಾಗ ಅದನ್ನು ಕಂಡು ಕಣ್ತುಂಬಿಕೊಂಡೇನೋ ಎನ್ನುವ ಕುತೂಹಲ ಮಡುಗಟ್ಟಿದೆ. ಜೀರಿಂಬೆಯ ಕೊರಳಿಗೆ ಮುದ್ದುಮಗು ದಾರ ಕಟ್ಟಿರುವುದು ಜೀರಿಂಬೆಯ ಕೊರಳಲ್ಲಿ ಹೊಳೆಯುವ ಹಾರವಾಗಿದೆ ಎಂದು ಕವಿ ಮಕ್ಕಳಿಗೆ ಕಲ್ಪನೆಯ ಕುದುರೆ ಏರಿಸುತ್ತಾರೆ. ಬೆಂಕಿಪೊಟ್ಟಣ ಅದಕ್ಕೆ ಹೊಸದಾಗಿ ಸಿಕ್ಕ ಮನೆಯಾಗಿದೆ:

ನೋಯದಂತೆ ಅದರ ಕೊರಳು । ದಾರ ಹಾರ ಕಟ್ಟಿಸಿದಳು ।
ಬೆಂಕಿ ಪಟ್ಟಣ ಹುಡುಕಿ ತಂದು । ಮನೆಯ ಕಟ್ಟಿ ಕೊಟ್ಟಳು ॥

ಎಷ್ಟೋ ದಿನವಾದರೂ ಜೀರಿಂಬೆ ಮೊಟ್ಟೆ ಇಡಲಾರದ್ದನ್ನು ಕಂಡು ನಿರಾಶೆ ಅನುಭವಿಸುವ ಆಕೆ ಅದನ್ನು ಹಾರಿಬಿಡುತ್ತಾಳೆ. ಮರುಕ್ಷಣ ನೋಡಿದಾಗ ಆಶ್ಚರ್ಯವೆಂಬಂತೆ ಕಡ್ಡಿಪೆಟ್ಟಿಗೆಯಲ್ಲಿ ಐಶ್ವರ್ಯದ ನಿಧಿಯೆಂಬಂತೆ ಅವಳು ಕಾದು ಕಂಗೆಟ್ಟಿದ್ದ ಹಳದಿ ಮೊಟ್ಟೆ ಕಂಡುಬರುತ್ತದೆ. ಅವಳ ಸಂತೋಷಕ್ಕೆ ಎಳೆಯುಂಟೆ? ಮಗುವಿನ ನೋಡುವ, ತಿಳಿಯುವ, ತುಂಬಿಕೊಳ್ಳುವ ಹಂಬಲವನ್ನು ಎಷ್ಟು ವರ್ಣಿಸಿದರೂ ಸಾಲದು ಅವರಿಗೆ:

ಹಾರುವ ಹಕ್ಕಿಯ । ಕೂಗುವೆನು । ಹೊಸ ಹಾಡನು । ನಾ ಕಲಿಯುವೆನು
ಇರುವೆಯ ಹಿಂದೆ । ನಡೆಯುವೆನು । ಹೊಸ ಜಾಡನ್ನು । ಹಿಡಿಯುವೆನು

ಸೋಜಿಗ, ವಿಸ್ಮಯ, ಅಮೂರ್ತತೆಗಳನ್ನು ಬಹಳ ಸರಳವಾಗಿ ಮತ್ತು ಅಷ್ಟೆ ಕಲಾತ್ಮಕತೆಯಿಂದ ಅಭಿವ್ಯಕ್ತಿಸುವುದು ಕೃಷ್ಣಮೂರ್ತಿಯವರು ಮಕ್ಕಳ ಕಾವ್ಯವನ್ನು ಎಷ್ಟು ಗಂಭೀರವಾಗಿ ಪರಿಗಣಿಸುತ್ತಾರೆಂಬುದನ್ನು ಹೇಳುತ್ತದೆ:

ಕಾಲವೆ ಕಾಲವೆ । ಕಾಲು ಸುಡತಾವ । ಎಷ್ಟು ಬಿಸಿ । ನೀ ಎಷ್ಟು ಬಿಸಿ ॥
ಕಾಲವೆ ಕಾಲವೆ । ಕತ್ತಲ ಕಾಲುವೆ । ಆಳ ಎಷ್ಟಿರುವೆ । ಅಗಲ ಎಷ್ಟಿರುವೆ ॥
ಕಾಲವೆ ಕಾಲವೆ । ಕಲ್ಲಿನ ಹೂವೆ । ಎಂದಿಗೂ ಹಣ್ಣೇ । ಆಗದ ಕಾಯೆ ॥

ಕಾಲವೆನ್ನುವುದು ಕತ್ತಲ ಕಾಲುವೆಯಾಗಿ ಹರಿಯುವ ರೂಪಕ ಕೃಷ್ಣಮೂರ್ತಿ ಬಿಳಿಗೆರೆಯವರು ಮಕ್ಕಳಿಗೆ ಕೊಡಮಾಡಿದ ಶ್ರೇಷ್ಠ ಅಭಿವ್ಯಕ್ತಿಯ ಒಂದು ಮಾದರಿಯಾಗಿದೆ. ಅದೇ ರೀತಿ ಕಾಲ ಒಂದೊಂದು ಸಲ ನಿಂತುಬಿಡುತ್ತದೆ. ಅದೂ ಕಲ್ಲಿನಲ್ಲಿ ಕೆತ್ತಿದ ಹೂವಿನ ಹಾಗೆ. ಅದರಲ್ಲಿ ಮೂಡಿರುವ ಕಾಯಿ ಎಂದಿಗೂ ಹಣ್ಣು ಆಗಲಾರದು. ಮತ್ತೊಂದೆಡೆ ಅವರು ಸಾವಿನ ಶಬ್ದ ಹೇಗಿರುತ್ತದೆಯೆಂದು ಹೇಳುವ ಪರಿ ಅಸಾಮಾನ್ಯವಾಗಿದೆ:

ಸಾವಿನ ಸದ್ದು ಹೂವು ನೆಲಕೆ ಉದರುವ ಹಾಗೆ

ರೂಪಕ, ಹೋಲಿಕೆಗಳನ್ನು ಅವರು ನಿರ್ಮಾಣ ಮಾಡುವ ರೀತಿ ಮತ್ತು ಅವುಗಳ ಮೂಲಕ ಧ್ವನಿಗಳನ್ನು ಹೊರಡಿಸುವ ರೀತಿ ಅನನ್ಯವಾದುದು:

ಹೂವಿನ ಮೈಯಿ । ಹೇಗೆ ಹೇಗೆ । ಕಂದನ ಕರುವಿನ । ಕೆನ್ನೆಯ ಹಾಗೆ ॥
ಹಾವಿನ ಮೈಯಿ । ಹೇಗೆ ಹೇಗೆ । ನುಣ್ಣನೆ ಮಣ್ಣನು । ಮುಟ್ಟಿದ ಹಾಗೆ ॥

ಅವರ ನಾಟಕದಲ್ಲಿ ಬರುವ ಒಂದು ಹಾಡು:

ಮಣ್ಣಲ್ಲಿ ಮೂಡಿದವನೆ
ಮಣ್ಣಿನಲ್ಲಿ ಕರಗಿದವನೆ
ಓದುವವನೆ ಬರೆಯುವವನೆ,
ಸ್ಕೂಲಿಗೇನು ಹೋಗದವನೆ

ಮಣ್ಣಲ್ಲಿ ಮೂಡಿದ ಅಕ್ಷರಗಳನ್ನು ಮಣ್ಣವಾಸನೆ ಕರಗದ ಹಾಗೆ ಹೊಸ ಮನೋಧರ್ಮದಲ್ಲಿ ಕೃಷ್ಣಮೂರ್ತಿ ಬಿಳಿಗೆರೆ ಕಟ್ಟಿಕೊಟ್ಟಿದ್ದಾರೆ.

ಕೃಷ್ಣಮೂರ್ತಿ ಬಿಳಿಗೆರೆ 'ಮಳೆಹುಚ್ಚ', 'ನವಿಲೂರಿನ ಕತೆ' (೧೯೯೯) ಮತ್ತು 'ಅಗಲ ಕಿವಿಯ ಅರಿವುಗಾರ' (೨೦೦೧) ಎಂಬ ನಾಟಕಗಳನ್ನು ನೀಡುವ ಮೂಲಕ ಮಕ್ಕಳ ರಂಗಭೂಮಿಗೆ ತಮ್ಮದೆಯಾದ ಕೊಡುಗೆ ನೀಡಿದ್ದಾರೆ. ಹೊಸ ಹೊಸ ರೂಪಕ, ವಸ್ತು, ಭಾಷೆಗಳಿಂದ ಮಕ್ಕಳ ಅರಿವಿನ ದಿಗಂತಗಳನ್ನು ವಿಸ್ತರಿಸಿದ್ದಾರೆ. ತಾವು ಮಕ್ಕಳ ನಾಟಕ ಬರೆದುದರ ಹಿನ್ನೆಲೆಯನ್ನು 'ದೊಡ್ಡವರ ಜೊತೆಗೊಂದಿಷ್ಟು ಮಾತು'ಗಳಲ್ಲಿ ಹಂಚಿಕೊಂಡಿದ್ದಾರೆ: '...ಮಕ್ಕಳ ಶಕ್ತಿಯ ಅರಿವಿದ್ದವರು ಅವರ ಜೊತೆ ಎಷ್ಟು ಎತ್ತರಕ್ಕೆ ಬೇಕೋ ಅಷ್ಟು ಎತ್ತರಕ್ಕೆ ಏರುತ್ತಾರೆ. ಹೊಚ್ಚಹೊಸ ರೂಪಕಗಳನ್ನು ಮಕ್ಕಳ ಮನಸ್ಸಿಗೆ ಹಾಕುತ್ತಾರೆ. ಆಗಬೇಕಾದದ್ದು ಇದು. ಮಕ್ಕಳು ಹಳಸಲು ಭಾಷೆಯ ತೊತ್ತುಗಳಲ್ಲ. ಅವರಿಗೆ ನಿತ್ಯವೂ ಹೊಸದು ಬೇಕು.'

ಮಕ್ಕಳ ಗ್ರಹಿಕೆ ಮತ್ತು ಕಲ್ಪನೆಗಳನ್ನು ವಿಸ್ತರಿಸುವಲ್ಲಿ ಇವರ ನಾಟಕಗಳ ಮಹತ್ವವಿದೆ. ಹಾಡುಗಳನ್ನು ಬಹಳ ಪರಿಣಾಮಕಾರಿಯಾಗಿ ಅವರು ಬಳಸಿದ್ದಾರೆ.

ಈ ಕಾಡಿನ ಹಾಡು ಬೇಕು
ಕಾಡ ಕೋಟಿ ಜೀವ ಬೇಕು
ಕಡಲ ತಡಿಯ ಗಾಳಿ ಬೇಕು

ಕ್ಷಮೆ ಇರಲಿ ಹಾಡುಗಾರ
ಕ್ಷಮೆ ಎಂಬುದು ಇರಲಿ
ನದಿಯ ಜೀವ ಝುಲ್ಲೆಂದರೆ
ಲೋಕ ಹೊತ್ತಿ ಉರಿದರೆ
ನಮ್ಮ ಲೋಕ ಆಟಕಿಲ್ಲ ಆಟವಿಲ್ಲ ನಾವು ಇಲ್ಲ

ಆಟ ಆಡುತ್ತಲೆ ಇರಬೇಕಾದುದು ಚೈತನ್ಯಶೀಲ ಬದುಕಿನ ಸಂಕೇತವಾಗಿದೆ.

ರಾಧೇಶ ತೋಳ್ಪಾಡಿ

ಬಾ ಬಾ ಬಾ ಬಾ ಮಿಂಚಿ ಮಿಂಚಿ ಬಾ
ಬಾ ಬಾ ಬಾ ಬಾ ಬೆಳಕ ಹಂಚಿ ಬಾ
ಇಣುಕಿ ಹಣುಕಿ ಬಾ
ಇರುಳ ಕೆಣಕಿ ಬಾ

ಎನ್ನುವಂತಹ ಮರೆಯಲಾಗದ ಸಾಲುಗಳ ಅನೇಕ ಪದ್ಯಗಳನ್ನು ಕೊಟ್ಟಿರುವ ರಾಧೇಶ ತೋಳ್ಪಾಡಿ 'ವರ್ತಮಾನ'ದಲ್ಲಿ ಬರೆಯುತ್ತಿರುವ ಕನ್ನಡದ ಮುಖ್ಯ ಮಕ್ಕಳ ಕವಿಗಳಲ್ಲಿ ಒಬ್ಬರು. ವರ್ತಮಾನ ಎಂದು ನಾನು ಒತ್ತಿ ಹೇಳಿದೆ. ಮಕ್ಕಳಿಗೆ ಬೇಕಾಗಿರುವ ವರ್ತಮಾನವನ್ನು ಅದರ ಹಿಂದಣ ಮತ್ತು ಮುಂದಣ ನೆಲೆಗಳಲ್ಲಿಯೂ ಕಂಡುಕೊಂಡು ಅವರು ಚಿಣ್ಣರಿಗೆ ನೀಡುತ್ತಿದ್ದಾರೆ. ಇಂದಿನ ಕಾಲ ಸರಳವಲ್ಲ. ಅದು ಸೂಕ್ಷ್ಮವೂ ಹೌದು. ಒರಟೂ ಹೌದು. ಈ ಬಹುಮುಖಿಯ ಹಲವು ಆಯಾಮಗಳನ್ನು ಮಕ್ಕಳಿಗೆ ಅವರ ಪರಿಚಿತ ನುಡಿಗಟ್ಟು, ಭಾಷೆ, ರೂಪಕ, ಉಪಮೆಗಳೊಂದಿಗೆ ರಾಧೇಶ್ ಕಟ್ಟಿಕೊಟ್ಟಿರುವುದು ಮಹತ್ವದ್ದಾಗಿದೆ. ಪ್ರಾಸಕ್ಕೆ ತ್ರಾಸು ಪಟ್ಟುಕೊಳ್ಳದೆ ಸಹಜ ಅಭಿವ್ಯಕ್ತಿಯಲ್ಲಿ ಲೋಕದ ಅನುಭವವನ್ನು ಪ್ರಕಟಿಸುವುದು ಮಕ್ಕಳ ಕಾವ್ಯ ಇತ್ತೀಚಿನ ದಿನಗಳಲ್ಲಿ ಪಡೆದ ಯಶಸ್ಸು. ರಾಧೇಶ್, ಬಿಳಿಗೆರೆ ಕೃಷ್ಣಮೂರ್ತಿ ಮುಂತಾದವರಿಂದ ಹೊಸಬಗೆಯ ಪ್ರಯೋಗಗಳು ನಡೆದಿವೆ. 'ಬಿಸಿಲಿನ ದೊರೆಗೆ ನೆರಳಿನ ಮನೆ' (೨೦೦೪) ಮತ್ತು 'ಹಲೋ ಹಲೋ ಚಂದಮಾಮ' (೨೦೧೦) ಎಂಬ ಎರಡು ಕವನ ಸಂಕಲನಗಳನ್ನು ರಾಧೇಶ್ ತೋಳ್ಪಾಡಿ ಪ್ರಕಟಿಸಿದ್ದಾರೆ. 'ಪ್ರಜಾವಾಣಿ' ದೀಪಾವಳಿ ವಿಶೇಷಾಂಕದ ಶಿಶುಕಾವ್ಯ ಸ್ಪರ್ಧೆಯಲ್ಲಿ ಅವರು ಎರಡು ಸಲ ಪುರಸ್ಕಾರ ಪಡೆದಿದ್ದಾರೆ.

ಕರಾವಳಿ ಪ್ರದೇಶ(ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳದ ಶಾಂತಿಗೋಡು)ದಿಂದ ಬಂದಿರುವ ಅವರಿಗೆ ಕಡಲು, ಕಾಡು, ಮಳೆ, ಮೋಡದ ಪ್ರತಿಮೆಗಳನ್ನಿಟ್ಟುಕೊಂಡು ಕಾವ್ಯ ರಚಿಸುವುದು ನೀರು ಕುಡಿದಷ್ಟೆ ಸುಲಭವಾಗಿದೆಯೆಂದು ಅವರ ಕವಿತೆಯ ಲಾಲಿತ್ಯ ನೋಡಿ ಅನ್ನಿಸಿದರೆ ಆಶ್ಚರ್ಯವಿಲ್ಲ! ಅಷ್ಟೇ ಅಲ್ಲದೆ ಮಕ್ಕಳಿಗೆ ಕಡಬು ತಿನ್ನಿಸುವ ಕೆಲಸವನ್ನು ಅವರು ಅಲ್ಲಿ ಮಾಡಿದ್ದಾರೆ. ಉದಾಹರಣೆಗೆ 'ಮಿಂಚು ಹುಳುವೇ, ಬಾ!' ಪದ್ಯದಲ್ಲಿ :

ಬುದ್ಧನನ್ನು ಕಾಡ ಕಡೆಗೆ ನಡೆಸಿದವಳೇ ಬಾ

ಅವನ ಮಾತು, ಮೌನ ಎಲ್ಲ ಬಲ್ಲೆ ಜಾಣೆ, ಬಾ
ಸದ್ದು ಇರದೆ ಬಾ
ಶುದ್ಧ ಚಿನ್ನ, ಬಾ
ಉರಿಯೇ ಇರದೆ ಉರಿವುದನ್ನು ಕಲಿಸು, ನಲಿಸು ಬಾ
ಇರುಳ ಕವಿತೆ ಬಾ!

ಮಿಂಚುಹುಳುವನ್ನು ಮಕ್ಕಳಿಗೆ ಇಷ್ಟು ಪ್ರಿಯವಾಗಿ ಮಾಡುವ, ಅದನ್ನು ಅಭಿನಯದಲ್ಲಿ ಕುಣಿಸುವ ಹಾಗೂ ನಲಿಸುವ ರಾಧೇಶ್ ಕೊನೆಯ ಪ್ಯಾರಾದಲ್ಲಿ ಬುದ್ಧನನ್ನು ತಂದು ಸಾಮಾನ್ಯ ಅರ್ಥಕ್ಕೆ ಅಸಾಮಾನ್ಯ ಹೊಳಪು ಬರಿಸುತ್ತಾರೆ. ಬುದ್ಧನ ಬಗ್ಗೆ ಮತ್ತು ಬೆಂಕಿ ಇಲ್ಲದೆ ಬೆಳಕಾಗಿ ಇರುವುದರ ಬಗ್ಗೆ ಸುಳಿವು ನೀಡಿ ಮಕ್ಕಳಿಗೆ ಕುತೂಹಲ ಹುಟ್ಟಿಸುತ್ತಾರೆ. ಚಿಂತಾಮಣಿ ಕೊಡ್ಲೆಕೆರೆಯವರು ಹೇಳುವಂತೆ ಶಿಕ್ಷಕರು ಅಥವಾ ಪಾಲಕರು ಅಂತಹ ಕೆಲವು ಸಂದರ್ಭಗಳಲ್ಲಿ ಸಣ್ಣ ವಿವರಣೆ ಕೊಟ್ಟರೆ ಪದ್ಯ ಅದ್ಭುತ ಯಶಸ್ಸನ್ನು ಸಾಧಿಸಿದಂತಾಗುತ್ತದೆ. ಯಾವುದೇ ನೀತಿಪಾಠದ ಲೇಪವಿಲ್ಲದೆಯೂ ಮಾನವೀಯ ಮತ್ತು ಅರ್ಥಪೂರ್ಣ ಬದುಕಿನ ಪಾಠ ಮಾಡಬಲ್ಲ ಕಾವ್ಯದ ಎಳೆಗಳು ಈ ಪದ್ಯದಲ್ಲಿವೆ.

ರಾಧೇಶ್ ಅವರಲ್ಲಿ ಕಲ್ಪನೆಯೆನ್ನುವುದು ಚಿಗುರುತ್ತದೆ. ಅದು ತಾಜಾ ಮತ್ತು ಅನಿರೀಕ್ಷಿತ ಸಂಗತಿಗಳೊಂದಿಗೆ ಅದ್ಭುತ ಸಾಮರಸ್ಯ ಸಾಧಿಸುತ್ತದೆ. ಕಾಲರಿಡ್ಜ್ (Coleridge) ಕವಿ ಹೇಳುವಂತೆ Fancy ಮತ್ತು Imagination ಇಲ್ಲದೆ ಒಂದು ಕೃತಿ ಸಾಹಿತ್ಯವಾಗಲಾರದು. ಆದರೆ ಬರೀ ಕಲ್ಪನೆಯೆ ಸಾಹಿತ್ಯವಾಗಲಾರದು. 'ನಂಗೂ ಮಂತ್ರ ಬರ್ತಿದ್ರೆ', 'ಗಾಳಿರಾಯನಲ್ಲಿ ವಿನಂತಿ', 'ಮರವಂತೆ ಬೀಚಲ್ಲೊಂದು ಖೋ-ಖೋ ಫೈನಲ್ ಪಂದ್ಯಾಟ', 'ಸೂರ್ಯ ಹೊಸ ಬಾಡಿಗೆ ಮನೆ ತಲಾಶ್ ಮಾಡಿದ್ದು' ಮುಂತಾದ ಪದ್ಯಗಳು ರಾಧೇಶ್ ಅವರ ಕಲ್ಪನಾ ಲಹರಿಯನ್ನು ಕಾವ್ಯದಲ್ಲಿ ಬಳಸಿಕೊಳ್ಳುವ ಕಲೆಯನ್ನು ವಿವರಿಸುತ್ತವೆ. ಸೂರ್ಯನ ಒಲವಿನ ಪತ್ನಿ ಗಾಳಿ ಎಂದು ಹೇಳುತ್ತಾರೆ. ಅವನ ಉರಿಬಿಸಿಲಿನ ಮುಖಕ್ಕೆ ತಂಗಾಳಿ ತಾಗಿಸುವವಳು ಅವಳೇ ಅಲ್ಲವೆ!

ಸೂರ್ಯ ತನ್ನ ಒಲವಿನ ಪತ್ನಿ ಗಾಳೀ ಕೈ ಹಿಡಕೊಂಡು
ಹೊರಟೇಬಿಟ್ಟ ಹುಡುಕೋದಕ್ಕೆ ಮನೆಯನು ಬಾಡಿಗೆಗೆಂದು !
ನಡೆದೂ ನಡೆದೂ ಸುಸ್ತೋ ಸುಸ್ತು; ಸಾಯಂಕಾಲದ ಹೊತ್ತು
ಕೊನೆಗೂ ಸಿಕ್ತು ಊರಿನ ಕೊನೆಗೆ ಮುರುಕಲು ಮನೆಯೊಂದಿತ್ತು
ಮುರುಕಲು ಮಾಡು, ಕತ್ತಲ ಕೋಣೆ, ಗೆದ್ದಲು ಕಟ್ಟಿದ ಹುತ್ತ
ಸುತ್ತಲೂ ಕಾಡು, ಬಾವಲಿಬೀಡು, ಹರಿದಿವೆ ಕರಿಕರಿ ಸರ್ಪ!

ಅಂತರ್‌ಲಯ, ದ್ವಿರುಕ್ತಿ ಪ್ರಾಸಗಳು ಸಹಜವಾಗಿ ಸಂಭವಿಸಿ ಈ ಪದ್ಯವನ್ನು ಚೇತೋಹಾರಿಯಾಗಿಸುತ್ತವೆ. ಸೂರ್ಯ ಮೇಲಿನ ಓಣಿಯ ಹುಡುಗನಾಗಿ, ಗಾಳಿ ಪವನಕುಮಾರಿಯಾಗಿ ಮನೆ ಹುಡುಕುವ ಚಿತ್ರ ವಿನೋದವನ್ನು ಹುಟ್ಟುಹಾಕುತ್ತದೆ. ಇಂದೋ, ನಾಳೆಯೋ ಬೀಳುವಂತಿರುವ ದೆವ್ವದ ಬಂಗಲೆಯಲ್ಲಿ ಈಗ ವಾಸವಾಗಿರುವ ಜೇಡ, ಜಿರಲೆ,

ಚೇಳು, ಹಲ್ಲಿಗಳು ಹೊಸ ದಂಪತಿಯೊಡನೆ ನಡೆಸುವ ಆಪ್ತ ಮಾತುಕತೆ ಮತ್ತು ಬಾಡಿಗೆ ವ್ಯವಹಾರ ಸ್ವಾರಸ್ಯಕರವಾಗಿದೆ. ಮುಗಿಲಲ್ಲಿರುವ ಸೂರ್ಯನಿಗೆ ನೆಲದ ಮನೆಯ ಮುರುಕು ಚಿತ್ರ ಈಗ ಕಣ್ಣಿಗೆ ಬಿದ್ದಿರಬೇಕು. ಜೋಪಡಿಯ ಮೇಲೆ ಬೆಳಕು ಬಿದ್ದ ಚಿತ್ರವಾಗಿಯೂ, ಅನಾದರಕ್ಕೆ ಒಳಗಾದ ಇತಿಹಾಸದ ತುಣುಕಾಗಿಯೂ ಅದಕ್ಕೆ ಸೂಚ್ಯ ಅರ್ಥಗಳನ್ನು ನೀಡಬಹುದು!

'ಒಂದು ಬಂಡೆಯ ತೀರ್ಥಯಾತ್ರೆ' ಕವನವು ಜಲಪಾತವೊಂದರ ಕೆಳಗಿರುವ ಬಂಡೆಯ ಆತ್ಮವೃತ್ತಾಂತವನ್ನು ಹೇಳುತ್ತದೆ. ತಾನು ಹೇಗಿದ್ದೆ, ಈಗ ಹೇಗಾಗಿದ್ದೇನೆ ಎನ್ನುವ ಪರಿವರ್ತನೆಯ ಚಿತ್ರಗಳನ್ನು ಅದು ಕೊಡುತ್ತದೆ. ಜೋಗ್ ಜಲಪಾತದ ಝೇಂಕಾರ, ಆ ನೀರಿನ ಹಾಲ್‌ಬಿಳುಪು, ಆ ಭೋರ್ಗರೆತದ ಓಂಕಾರಗಳನ್ನು ನೀಡುವುದರ ಮೂಲಕ ನಿಸರ್ಗದ ಸಣ್ಣ ಸಂಗತಿಯೊಂದು ಎಷ್ಟೊಂದು ವಿಶಾಲ ಅರ್ಥಗಳನ್ನು ನೀಡಬಲ್ಲುದು! ಮಕ್ಕಳಿಗೆ ಆ ತರಹದ ರುಚಿಯನ್ನೂ ನೀಡಬೇಕಲ್ಲವೆ?

ಜೋಗದ ಝೇಂಕಾರದಲ್ಲಿ
ಮೀಯಲೆಂದು ಬಂದೆ
ನನ್ನ ನಾನೇ ಮರೆವುದಕ್ಕೆ
ಒಳ್ಳೇ ಜಾಗವೆಂದೇ!
ಭೋರ್ಗರೆತದ ಓಂಕಾರಕೆ
ಕರಗಿ ಬೆಣ್ಣೆಮುದ್ದೆ!
ಇಲ್ಲಿ ಬರುವ ಮುಂಚೆ ನಾನು
ಆಹಾ, ಹೇಗೆ ಇದ್ದೆ!

ಕಷ್ಟಗಳ ಜಲಪಾತಕ್ಕೆ ಒಡ್ಡಿಕೊಂಡಾಗಲೇ ಮನುಷ್ಯ ಗಟ್ಟಿಯಾಗುವುದು, ಅಹಂಕಾರವನ್ನು ತ್ಯಜಿಸುವುದು, ನಮ್ಮನ್ನು ನಾವು ಮರೆಯುವುದು ನಡೆಯುತ್ತದೆ. ತನ್ನ ಮೇಲೆ ನೀರು ಹಾಯ್ದು ಹಾಯ್ದು ದೊಡ್ಡ ಬಂಡೆಯಿರುವ ತಾನು ಸಣ್ಣ ಗೋಲಿಯಾಗಬೇಕೆ, ಸವೆದು ಸೊನ್ನೆಯಾಗಬೇಕೆ ಎನ್ನುವುದು ಅರ್ಥಪೂರ್ಣವಾಗಿದೆ.

ನಾನು ಸವೆದು ಸವೆದು ಸಣ್ಣ
ಗೋಲಿಯಾಗಬೇಕೆ?
ಸವೆದು ಸವೆದು ಸವೆದು ಕೊನೆಗೆ
ಸೊನ್ನೆಯಾಗಬೇಕೆ?

ಕಷ್ಟಕ್ಕೆ ಸವೆಯುವುದು, ಕಾಲಕ್ಕೆ ಸವೆಯುವುದು, ಮಾಸ್ತರರ ಪಾಠಕ್ಕೆ ಸವೆಯುವುದು, ಜಂಭ ಕಳೆದುಕೊಂಡು ಸವೆಯುವುದು, ಹೀಗೆ ಸವೆಯುವುದು ಎಂದರೆ ಹೆಚ್ಚಿನ ಅರ್ಥ ಗಳಿಸಿಕೊಳ್ಳುವುದು ಎನ್ನುವ ಹಿರಿದಾದ ಅರ್ಥ ಇಲ್ಲಿ ಹುದುಗಿದೆ.

ರಾಧೇಶ್ ಅವರ ಮುಗ್ಧತೆಯನ್ನು ಬರ್ಫ್ (ಫ್ರೀಜ್) ಮಾಡಿ ಇಟ್ಟಿದ್ದಾರೆ. 'ಮಗು ಗುಬ್ಬಿ ಮತ್ತು ಐಸ್‌ಕ್ರೀಮ್' ಎನ್ನುವ ಕವನದಲ್ಲಿ ಪದ್ಯಗಳಲ್ಲಿ ಗುಬ್ಬಿ ಮತ್ತೆ ಮತ್ತೆ ಕಾಣಿಸಿಕೊಂಡು

ಜನ ಆಸ್ಥೆ ಕಳೆದುಕೊಂಡಿದ್ದಾರೋ ಎಂದುಕೊಂಡರೂ ಇಲ್ಲಿಯ ಗುಬ್ಬಿ ಮಾತ್ರ ಹೊಸದಾಗಿದೆ. ಅಕ್ಕ, ತಮ್ಮನ ನಡುವೆ ಅದೂ ಮನೆ ಹುಡುಗ/ಹುಡುಗಿ ಆದಷ್ಟು ಸಾಮೀಪ್ಯವನ್ನು ಸಾಧಿಸಿದೆ. ಇಲ್ಲಿಯ ಕುಶಲೋಪರಿ ಮತ್ತು ಕಳಕಳಿ ಹೃದಯದಿಂದ ಮೂಡುತ್ತದೆ:

ಅಕ್ಕ, ಅಕ್ಕ ಪುಟ್ಟ ಗುಬ್ಬಿ
ಐಸ್‌ಕ್ರೀಂ ಯಾಕೆ ತಿನ್ನೋಲ್ಲ?
ಕಡೇ ಪಕ್ಷ ತಿಂಗಳಗೊಂದ್ಸಲಿ
ತಿನ್‌ಬೇಕೂಂತ ಅನ್ಸೋಲ್ವಾ?
ಅಯ್ಯೋ ಪೆದ್ದೆ, ಗುಬ್ಬೀ ಹತ್ರ
ದುಡ್ಡು-ಗಿಡ್ಡು ಇದೆಯೇನೋ?
ಪುಕ್ಕಟೆ ಐಸ್‌ಕ್ರೀಮ್ ಕೊಡಿಸೋದಕ್ಕೆ
ಅವನೇನ್ ಗುಬ್ಬಿ ಮಾವನೋ?

ಮಾರ್ದವ ಸೆಲೆಯಿಂದ ಪದ್ಯ ಪುಟಿಯುತ್ತದೆ. 'ಗುಬ್ಬಿಗೆ ಪುಟ್ಟನ ಬೇಡಿಕೆ' ಪದ್ಯ ಲಯಬದ್ಧತೆಯಿಂದ ಮಕ್ಕಳನ್ನು ಸೆಳೆಯುತ್ತದೆ.

ಪುಟ್ಟ ಗುಬ್ಬಿ ಬಾ
ಪುಕ್ಕ ಹತ್ತು ತಾ

ರಾಧೇಶ್ ಅವರ ಒಗಟು ಪದ್ಯಗಳದೇ ಒಂದು ವಿಸ್ಮಯಲೋಕ. ಈ ಕವಿತೆಗಳಲ್ಲಿ ಅವರು ಸಾಧಿಸಿರುವ ಲಯಗಾರಿಕೆ ಮತ್ತು ಕುತೂಹಲವನ್ನು ಎರಕ ಹೊಯ್ದಿರುವ ಮಾಟಗಾರಿಕೆ ಗಮನ ಸೆಳೆಯುತ್ತದೆ. ಭಾಷೆ ಹಾವಿನಂತೆ ಹೊರಳುತ್ತದೆ. ಸರಸರ ಸಾಗುತ್ತದೆ.

ಹುವ್ವ, ಹುವ್ವ, ಹುವ್ವ; ಲಕ್ಷ ಕೋಟಿ ಹುವ್ವ
ಕೀಳಲಾಗದಮ್ಮ । ಹಾಗೇ ನೋಡಿರಮ್ಮ !
ಯಾವನವನು ಮಾಲಿ-ಹಾಕಲಿಲ್ಲ ಬೇಲಿ
ತೋಟ ಹಾಗೇ ಬಿಟ್ಟು ಹೋದನೆಲ್ಲಿ ಹೇಳಿ!
ಎಟುಕದಂಥ ಹೂವು, ಮಿಟುಕಲಾಡಿ ಹೂವು
ಯಾವುದೆಂದು ಹೇಳಿ, ಕೊಡುವೆ ನಿಮಗೆ ಮಾವು

* * *

ಪುಟ್‌ಪುಟಾಣಿ ಮಕ್ಳೆ ಬನ್ನಿ
ಒಗಟೊಂದನ್ನು ಹೇಳ್ತೀನಿ
ಹಸಿರಿಗೆ ತನ್ನ ಹೆಸರಿಟ್ಟಂಥ
ಜಾಣೆ ಕಥೇನ ಹೇಳ್ತೀನಿ

* * *

ಮಡಚುವ ಖಡ್ಗ; ಮುಡಿಯುವ ಖಡ್ಗ
ಮುಡಿದವಳ ರತಿದೇವಿ ಮಾಡುವ ಖಡ್ಗ

ಪರಿಮಳದ ಖಡ್ಗ; ಮರಿಯಿಡುವ ಖಡ್ಗ
ಸರಿಯಾಗಿ ಹೇಳಿದರೆ ನೀ ಜಾಣ ಹುಡುಗ!

ಹೆಣ್ಣಿಗೆ ಹುಚ್ಚು ಹಿಡಿಸುವ ಈ ಖಡ್ಗ ಅದೆಷ್ಟು ವಿಧದಲ್ಲಿ ಇಲ್ಲಿ ಬಣ್ಣಿಸಲ್ಪಟ್ಟಿದೆ. ರಾಧೇಶ್ ಅವರ 'ಕಾಗೆ ಸಂಸಾರದ ಕಥೆ' ಎನ್ನುವುದು ಕಥನಕವನ ಮಾದರಿಯಲ್ಲಿದ್ದು ಕಾಗೆ ದಂಪತಿ ಕೋಗಿಲೆ ಮರಿಯನ್ನು ಸಾಕಿದ್ದು, ಕೊನೆಗೆ ಅದು ಕಾ ಕಾ ಎನ್ನದೆ ಕುಹೂ ಕುಹೂ ಎನ್ನುತ್ತ ಹಾರಿಹೋದ ಕತೆಯನ್ನು ಹೇಳುತ್ತದೆ. ಆದರೆ ಈ ಪದ್ಯ ಅಷ್ಟು ತೀವ್ರವಾಗಿ ಬಂದಿಲ್ಲ. ವೆಂಕಟೇಶಮೂರ್ತಿಯವರ 'ಎಲ್ಲ ಮರಿಗಳು ಕಾ ಕಾ ಎಂದರೆ । ಇದೊಂದೆ ಮಾತ್ರ ಕುಹೂ ಕುಹೂ!' ಎನ್ನುವಲ್ಲಿನ ಉತ್ಕಟ ಕಾವ್ಯಗುಣ ಇಲ್ಲಿ ಮಾಯವಾಗಿದೆ. ಮರವಂತೆ ಬೀಚಿನಲ್ಲಿ ಕಡಲ ಅಲೆ ಹಾಗೂ ಹಕ್ಕಿಗಳ ನಡುವಿನ ಖೋ ಖೋ ಪಂದ್ಯಾಟ ಅವರ ನವೀನ ಕಲ್ಪನೆ ಹಾಗೂ ಅದರ ಸಮರ್ಥ ನಿರ್ವಹಣೆಗೆ ಸಾಕ್ಷಿಯಾಗಿದೆ:

ಒಂದಿನ್ನೊಂದರ ಬೆನ್ನನು ತಟ್ಟಿ, ಎಬ್ಬಿಸಿ, ಉಬ್ಬಿಸಿ ಓಡುತಿವೆ
ಎದ್ದಿವೆ, ಕೂತಿವೆ ಕಡಲಿನ ಅಲೆಗಳು ಖೋ-ಖೋ ಆಟವನಾಡುತಿವೆ!
ಹೊನಲು ಬೆಳಕಿನ ಪಂದ್ಯಾಟವಿದು, ಫೈನಲ್ ಹಂತದ ಸೆಣಸಾಟ
ಅಲೆಗಳ ಟೀಮಿಗೂ ಹಕ್ಕಿಯ ಬಳಗಕೂ ನಡೆದಿದೆ ಭಾರೀ ತಿಕ್ಕಾಟ!

'ಹಲೋ ಹಲೋ ಚಂದಮಾಮ' ಸಂಕೆಲನದ ಪುಟ್ಟ ಪದ್ಯಗಳು ಕೂಡ ಅವುಗಳಲ್ಲಿನ ವಿನೋದ ಲಹರಿಗಾಗಿ ಮೆಚ್ಚಿಕೆಯಾಗುತ್ತವೆ:

ಅಕ್ಕನ ಲೆಕ್ಕ
ಅಕ್ಕ, ಅಕ್ಕ, ಸಿಕ್ಕಾಪಟ್ಟೆ ಲೆಕ್ಕ ಮಾಡ್ಬೇಡಾಕ್ಕ
ಹಕ್ಕಿ, ಚುಕ್ಕಿ, ಹೂವು, ಮಾವು ಇಡ್ತಾವೇನು ಲೆಕ್ಕ
ಕೈಯನ್ನೆತ್ತಿ ಕೊಡ್ತಾ ಇದ್ರೆ ಹಿಗ್ಗೇ ಅಕ್ಕ ಪಕ್ಕ
ರೊಕ್ಕ ರೊಕ್ಕ ಅನ್ಬೇಡಾಕ್ಕ, ರೊಕ್ಕದಿಂದಲೇ ದುಃಖ

'Zನ ಗೋಳು' ಪದ್ಯ ನಕ್ಕು ನಗಿಸುತ್ತದೆ. ಹೀಗೆ ಮಕ್ಕಳ ಅನುಭವ ಲೋಕ ರಾಧೇಶ ತೋಳ್ಪಾಡಿಯವರ ಅಭಿವ್ಯಕ್ತಿಯಲ್ಲಿ ಹೂವಿನಷ್ಟೆ ಸಹಜವಾಗಿ ಅರಳಿದೆ.

ತಮ್ಮಣ್ಣ ಬೀಗಾರ

ಹೊಸಗಾಲದ ಮಕ್ಕಳ ಲೇಖಕರಲ್ಲಿ ತಮ್ಮಣ್ಣ ಬೀಗಾರ ಅವರದು ಒಂದು ಪ್ರಮುಖ ಹೆಸರು. ಸಮಕಾಲೀನ ಸಂವೇದನೆಯನ್ನು ಅತ್ಯಂತ ಆಪ್ತವಾಗಿ ಮಕ್ಕಳಿಗೆ ಕಟ್ಟಿಕೊಡುವುದರಲ್ಲಿ ಅವರು ಸಿದ್ಧಹಸ್ತರು. ನಮ್ಮ ಬಹುತೇಕ ಶಿಕ್ಷಕರು ತಮ್ಮ ರಚನೆಗಳಲ್ಲಿ ಉಪದೇಶ ಮತ್ತು ನೀತಿಕಥೆಗಳನ್ನು ಧಾರಾಳವಾಗಿ ತುಂಬಿ ಬರವಣಿಗೆಯನ್ನು ಹೊಸೆದದ್ದನ್ನೆ ಹೊಸೆಯುವ ನಿರರ್ಥಕ ಚಟುವಟಿಕೆಯನ್ನಾಗಿಸಿದ್ದಾರೆ. ಇದಕ್ಕೆ ಅಪವಾದವೆಂಬಂತೆ ಅಲ್ಲಿ, ಇಲ್ಲಿ ಸೃಷ್ಟಿಶೀಲತೆಯ ಕೆಲವು ದನಿಗಳು ಕೇಳಿಬರುತ್ತವೆ. ಕಟುವಾಸ್ತವದ ಚಿತ್ರಣ ಚಿತ್ರಿಸಲ್ಪಡುತ್ತದೆ. ತಮ್ಮಣ್ಣ ಬೀಗಾರ ಅಂತಹ ಒಂದು ಧ್ವನಿಯಾಗಿದ್ದಾರೆ. 'ಗುಬ್ಬಚ್ಚಿಗೂಡು' (೨೦೦೨), 'ಚಿಂವ್ ಚಿಂವ್' (೨೦೦೪),

'ಮಿಂಚಿನ ಮರಿ' (೨೦೦೭), 'ಚೀಕ್ ಜೀಕ್' (೨೦೦೮), 'ಪುಟಾಣಿ ಪುಡಿಕೆ' (೨೦೧೦), 'ಸೊನ್ನೆ ರಾಶಿ ಸೊನ್ನೆ' (೨೦೧೨), 'ತೆರೆಯಿರಿ ಕಣ್ಣು' (೨೦೧೨) ಎನ್ನುವ ಕವನ ಸಂಕಲನಗಳನ್ನು, 'ಕಪ್ಪೆಯ ಪಯಣ' (೨೦೦೭), 'ಜಿಂಕೆಮರಿ' (೨೦೦೯), 'ಹಸಿರೂರಿನ ಹುಡುಗ' (೨೦೧೦), 'ಮಲ್ನಾಡೆ ಮಾತಾಡು' (೨೦೧೧), 'ಅಮ್ಮನ ಚಿತ್ರ' (೨೦೧೪) ಎನ್ನುವ ಕಥಾಸಂಕಲನಗಳನ್ನು ನೀಡುವುದರ ಮೂಲಕ ತಾವೊಬ್ಬ ಗಮನಿಸಬೇಕಾದ ಮಕ್ಕಳ ಲೇಖಕ ಎಂಬುದನ್ನು ಅವರು ಈಗಾಗಲೇ ಸಾಬೀತುಪಡಿಸಿದ್ದಾರೆ.

ಒಬ್ಬ ಲೇಖಕ ತಾನು ಬದುಕುತ್ತಿರುವ ಪರಿಸರವನ್ನು ಜೀವಂತವಾಗಿ ಮೂಡಿಸಿದಾಗ ಅವನ ಪುಸ್ತಕ ಅರ್ಧ ಗೆದ್ದಂತೆ. ಇನ್ನರ್ಧ ಅವನು ಚಿತ್ರಿಸುವ ಪಾತ್ರ ಮತ್ತು ಚಿತ್ರಿಸುವ ಬಗೆ. ಕತೆಯಲ್ಲಿ ತಮ್ಮಣ್ಣ ಅವರು ಪರಿಸರವನ್ನು ಬಣ್ಣಿಸುವ ರೀತಿ ತುಂಬ ಪರಿಣಾಮಕಾರಿ ಯಾದುದಾಗಿದೆ. ಮಲೆನಾಡಿನ ಚಿತ್ರ ಮತ್ತು ಮಲೆನಾಡಿನ ಮಕ್ಕಳ ಬದುಕು ಅವರ ಬರವಣಿಗೆಯಲ್ಲಿ ಅರಳುವ ಕ್ರಮ ವಿಶಿಷ್ಟವಾಗುವುದರ ಜೊತೆಗೆ ಹೃದ್ಯವಾಗುತ್ತದೆ. ಇವರ ಕತೆ-ಕವಿತೆಗಳಲ್ಲಿ ಅದು ಒಂದು ರೀತಿಯ ಹಿನ್ನೆಲೆಯ ಸಂಗೀತದಂತೆ ಕೆಲಸ ಮಾಡುತ್ತದೆ ಮತ್ತು ಓದುಗರ ಲಕ್ಷ್ಯ ಪಠ್ಯವನ್ನು ಬಿಟ್ಟು ಆಚೀಚೆ ಹೋಗದಂತೆ ತಡೆಯುತ್ತದೆ. ಇವರ 'ಪುಟಾಣಿ ಪುಡಿಕೆ' ಸಂಕಲನದಲ್ಲಿನ ಪದ್ಯಗಳು ಮನುಷ್ಯ ಮತ್ತು ಪರಿಸರವನ್ನು ಅವುಗಳ ಎಲ್ಲ ವೈವಿಧ್ಯ ಹಾಗೂ ವೈರುಧ್ಯಗಳೊಂದಿಗೆ ಬೆಸೆದಿವೆ. ಅದರಲ್ಲಿಯೂ ವಿಶೇಷವಾಗಿ 'ಚಳಿ ಚಳಿ' ಪದ್ಯಗಳು ಹೊಸ ದೃಷ್ಟಿಕೋನದಿಂದ ಹೇಳಲ್ಪಟ್ಟಿವೆ:

ರಾತ್ರಿ ಹೊರಗಡೆ ತುಂಬಾ
ಮಂಜು ಸುರಿದಿರುತ್ತೆ
ಮರದ ಎಲೆ ತೊಯ್ದು
ಪಟಪಟ ಬೀಳುತ್ತೆ
ಹೊರಗೆ ಹೋದೆ ಅಂದ್ರೆ
ಚಳಿ ನಡುಕ ಬರುತ್ತೆ
ಮರದ ಮೇಲೆ ಹಕ್ಕಿ
ರಾತ್ರಿ ಹೇಗೆ ಕಳೆಯುತ್ತೆ?

ನಾಯಿಮರಿಗೆ, ಬೆಕ್ಕಿನಮರಿಗೆ ನಾವು ಬರೀ ಅನ್ನ ಕೊಡುತ್ತಿದ್ದೇವೆ. ಆದರೆ ಚಳಿಯಿಂದ ಅವು ನಡುಗುವಾಗ ನಾವೇನು ಬಟ್ಟೆ, ಸ್ವೆಟರ್, ಸ್ಕಾರ್ಫ್ ಕೊಡುತ್ತಿದ್ದೇವೆಯೇ ಎಂದು ಪ್ರಶ್ನೆ ಮಾಡಿಕೊಳ್ಳುವ ಮಗುವಿನಲ್ಲಿ ಸಹಾನುಭೂತಿ, ಕರುಣೆ, ಮಾನವೀಯ ತುಡಿತದ ಅಂಶಗಳು ಹುಟ್ಟಿಕೊಂಡ ಪರಿಯನ್ನು ಕಾಣಬಹುದಾಗಿದೆ.

ಅಜ್ಜನ ಬಾಯಿ ಅದರುತ್ತೆ
ಅಜ್ಜಿಯ ಕೈ ನಡುಗುತ್ತೆ
ಎಲ್ಲ ಚಳಿಯ ಕಾಟ
ಹಾಕಿ ಬಿಸಿ ಬಿಸಿ ಊಟ

ಎನ್ನುವಲ್ಲಿ ಅಜ್ಜ-ಅಜ್ಜಿಯನ್ನು ಮಗುವು ಸೂಕ್ಷ್ಮವಾಗಿ ಅವಲೋಕಿಸಿದ್ದನ್ನು ಕಾಣಬಹುದು. ಒಳಗಣ ಮತ್ತು ಹೊರಗಣವನ್ನು ವಿಶ್ಲೇಷಿಸುವ ತಮ್ಮಣ್ಣ ಬೀಗಾರರ ಈ ಕ್ರಮ ವಿಶಿಷ್ಟವಾದುದು.

ವಿನೋದಪರತೆ ಅವರ ಕಾವ್ಯದ ಮತ್ತೊಂದು ಲಕ್ಷಣ. ಅತಿಯಾದ ಗಂಭೀರತೆ ಹಾಗೂ ಉಪದೇಶಾತ್ಮಕತೆಗಳಿಂದ ಕನ್ನಡ ಮಕ್ಕಳ ಕಾವ್ಯ ಸೃಷ್ಟಿಶೀಲತೆ ಹಾಗೂ ಲವಲವಿಕೆಗಳಿಂದ ಎರವಾಗಿದೆ. ಈ ನಿಟ್ಟಿನಲ್ಲಿ ತಮ್ಮಣ್ಣ ಬೀಗಾರರು ಕೆಲವು ಒಳ್ಳೆಯ ಹಾಸ್ಯ ಪ್ರವೃತ್ತಿಯ ರಚನೆಗಳನ್ನು ನೀಡಿದ್ದಾರೆ.

ಅನ್ನದ ಅಗಳು ಕುಣಿಯುತ ಬಂದು
ಉಪ್ಪಿನ ಹರಳಿಗೆ ಹೀಗಂತು:
'ಉಪ್ಪೇ ಉಪ್ಪೇ ಚಿಟಿಕೆ ಉಪ್ಪೇ
ನಿನ್ನ ಜಾಗ ಮೂಲೆ'
'ಬಾಯಿಗೆ ಬಂದದ್ದು ಹೇಳ್ಬೇಡ
ನಾನಿಲ್ದಿದ್ರೆ ನಿನ್ನ ಬಿಸಾಕಿ ಬಿಡ್ತಾರೆ
ಸಪ್ಪೆ ಮೋರೆ ಮಾಡಬೇಡಾ!'

–ಅನ್ನ ಉಪ್ಪು

ಭಾಗೀರತಿ ಹೆಗಡೆಯವರ 'ಸ್ವಭಾವ' ಎನ್ನುವ ಕವಿತೆಯಲ್ಲಿ ಸಕ್ಕರೆ-ಉಪ್ಪಿನ ಜಗಳ ಚಿತ್ರಿಸಲಾಗಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಬಿಳಿಬಣ್ಣದ ಮಲ್ಲಿಗೆ
ಹಾಲು ಬಣ್ಣದ ಮಲ್ಲಿಗೆ
ಎಷ್ಟು ಚೆಂದ ಮಲ್ಲಿಗೆ
ನಾಚಿಕೆ ಅಲ್ವ ಹಲ್ಲಿಗೆ?

–ಮಲ್ಲಿಗೆ

'ತೆರೆಯಿರಿ ಕಣ್ಣು' ಸಂಕಲನದಲ್ಲಿನ 'ಇಷ್ಟ', 'ಸಾಕೆ', 'ಹಿಕ್ಕೆ ನೋಡಿ' ಹೃದ್ಯವಾಗಿದ್ದು ವಿನೋದಪ್ರಿಯ ಗುಣ ಹೊಂದಿವೆ.

ಪಾರಿವಾಳದ ಹಿಕ್ಕೆ ನೋಡಿ
ಥೇಟ್ ಬಿಳೀ ಬಣ್ಣ
ಪಾರಿವಾಳ ತಿಂದಿರಬಹುದು
ಅಜ್ಜನ ಕವಳದ ಸುಣ್ಣ

–ಹಿಕ್ಕೆ ನೋಡಿ

ಈ ಸಂಕಲನದ ಕವಿತೆಗಳಲ್ಲಿ ತಮ್ಮಣ್ಣ ಅವರು ತಮ್ಮ ಮೊದಲಿನ ಸಂಕಲನಗಳಿಗಿಂತ ಬೆಳೆದಿರುವ, ಭಿನ್ನವಾಗಿ ಬರೆದಿರುವ ಸೂಚನೆಗಳು ಕಾಣಸಿಗುತ್ತವೆ.

ಇತ್ತೀಚೆಗೆ ತಮ್ಮಣ್ಣ ಅವರು ಗದ್ಯದಲ್ಲಿ ಸಾಕಷ್ಟು ಪ್ರಯೋಗಗಳನ್ನು ಮಾಡುತ್ತಿರುವಂತೆ ತೋರುತ್ತದೆ. 'ಜಿಂಕೆಮರಿ', 'ಹಸಿರೂರಿನ ಹುಡುಗ', 'ಮಲ್ನಾಡೆ ಮಾತಾಡು' ಮತ್ತು 'ಅಮ್ಮನ

ಚಿತ್ರ' ಸಂಕಲನಗಳು ಅದಕ್ಕೆ ಪುರಾವೆಯಾಗಿವೆ. ಬದಲಾಗುತ್ತಿರುವ ಬದುಕನ್ನು ಮಕ್ಕಳಿಗೆ ತಮ್ಮದೇ ಶೈಲಿಯಲ್ಲಿ ಉಣಬಡಿಸುತ್ತಾರೆ. ಇಂದು ಸುತ್ತಲಿನ ಪರಿಸರ ಹಸಿರಾಗಿಲ್ಲ, ಹಸನಾಗಿಲ್ಲ ಎನ್ನುವುದನ್ನು 'ಹಸಿರೂರಿನ ಹುಡುಗ' ಸಂಕಲನದಲ್ಲಿ ಅವರು ಕಟ್ಟಿಕೊಡಲು ಯತ್ನಿಸಿದ್ದಾರೆ:

'ನಾನು ಹೇಳುತ್ತಿರುವುದು ಮಲೆನಾಡಿನ, ಕಾಡಿನ, ನೀರಿನ, ಪ್ರಾಣಪಕ್ಷಿಯ ಕುರಿತಾಗಿ ಎಂಬುದು ನಿಮಗೆ ತಿಳಿದಿದೆ. ನೀವು ಜಾಣರು ಎಂಬುದು ನನಗೆ ಗೊತ್ತು. ಆದರೆ ಕಾಲ ಕಳೆದಂತೆ ಮಲೆನಾಡೂ ಬದಲಾಗಿದೆ. ಕಾಡು ಕರಗಿದೆ. ನೀರು ಒಣಗಿದೆ. ಹಳ್ಳಿಯ ಮಧ್ಯದಲ್ಲಿ ಬಸ್ಸು ಬಂದು ನಿಂತಿದೆ. ಎಷ್ಟೋ ಹಳ್ಳಿಗಳು, ಕಾಡುಗಳು ಮುಳುಗಿ ಕತ್ತಲಾಗಿವೆ. ಆದರೆ ಆ ನೀರೇ ನಮ್ಮ ನಾಡಿಗೆ ಬೆಳಕು ನೀಡಿದೆ.'

ಬದಲಾಗುತ್ತಿರುವ ಒಂದು ಪ್ರದೇಶದ ಚಿತ್ರಣವನ್ನು ಮತ್ತು ಅದರ ವೈಶಿಷ್ಟ್ಯತೆಯನ್ನು ಸಹಜವಾಗಿ ಬಣ್ಣಿಸುವುದು ತಮ್ಮಣ್ಣ ಬೀಗಾರರ ಒಂದು ಮುಖ್ಯ ಲಕ್ಷಣವಾಗಿದೆ. ತಾವು ಬಾಳಿ ಬದುಕುತ್ತಿರುವ ಪರಿಸರವನ್ನು ಒಂದು ಪಾತ್ರವೆಂಬಂತೆ ಅವರು ಚಿತ್ರಿಸುವುದು ನಿಜಕ್ಕೂ ಕುತೂಹಲಕಾರಿಯಾದುದು: 'ಹೌದು ನನ್ನದು ಕಾಡುಹಳ್ಳಿಯೇ. ಸುತ್ತಲೂ ದಟ್ಟಕಾಡು. ಕಾಡಿನ ಮಧ್ಯದ ಕಣಿವೆಯಲ್ಲಿ ಪುಟ್ಟ ಊರು. ಕೆಲವೇ ಮನೆಗಳು. ನಡೆಯಲು ಸರಿಯಾದ ದಾರಿಗಳಿಲ್ಲ... ನಾವು ಬಾಲ್ಯವನ್ನು ಚೆನ್ನಾಗಿ ಅನುಭವಿಸಬೇಕು. ಇರುವೆಗಳು ನಮ್ಮ ಸುತ್ತಲು ಸುತ್ತುತ್ತಿದ್ದರೂ ನಾವು ಅವುಗಳನ್ನು ಹತ್ತಿರದಿಂದ ನೋಡುವಂತಿಲ್ಲ... ನನ್ನ ಊರ ಸುತ್ತಲೂ ಇರುವ ಚಿಕ್ಕ ಚಿಕ್ಕ ಜಲಪಾತಗಳು, ಬಾವಲಿಗಳು, ಯಕ್ಷಗಾನವೇ ತಾವೆಂಬಂತೆ ಕುಣಿಯುವ ಜನ...'

ಮಕ್ಕಳಿಗೆ ಒಂದು ಪ್ರದೇಶದ ಪರಿಪೂರ್ಣವಾದ ಚಿತ್ರವನ್ನು ಕೊಡಬಹುದೆಂಬಂತೆ ಅವರು ನಿರೂಪಿಸುತ್ತ ಹೋಗುತ್ತಾರೆ. 'ಹಸಿರೂರಿನ ಹುಡುಗ' ಸಂಕಲನದ ಮತ್ತೊಂದು ವೈಶಿಷ್ಟ್ಯವೆಂದರೆ ಪ್ರಥಮ ಪುರುಷ ಶೈಲಿಯ ಬರವಣಿಗೆಯಲ್ಲಿ, ಆತ್ಮಚರಿತ್ರೆಯ ಧಾಟಿಯಲ್ಲಿ ಇಲ್ಲಿಯ ಕಥಾಭಾಗಗಳು ನಿರೂಪಿತವಾಗಿರುವುದು. ಇದರಿಂದ ಓದುವ ಮಗುವಿನ ಮನಸ್ಸಿನಲ್ಲಿ ಇದು ತನ್ನದೆ ಕತೆಯೆಂಬಂತೆ ಅನಿಸುವುದು. ಹಿಂದಣವನ್ನು ವರ್ತಮಾನದಲ್ಲಿ ಇರಿಸುತ್ತ ವಿವಿಧ ಪ್ರಸಂಗಗಳನ್ನು ಹೇಳುತ್ತ ಹೋಗಿದ್ದಾರೆ. ಬೆಳೆಯುತ್ತಿರುವ ಹುಡುಗನ ಭಾವಪ್ರಪಂಚ ಇಲ್ಲಿ ಸಶಕ್ತವಾಗಿ ಮೂಡಿಬಂದಿದೆ. ಬಾಲ್ಯಕಾಲದಲ್ಲಿನ ಹಲವು ಅನುಭವಗಳು, ಬಾಲಮನಸ್ಸಿನಲ್ಲಿ ಏಳುತ್ತಿದ್ದ ತರಂಗಗಳು ಇಲ್ಲಿ ಮಡುಗಟ್ಟಿವೆ. ಮಲೆನಾಡಿನ ಅನುಭವಗಳ ಈ ವಿವರಣೆ ಬಯಲುಸೀಮೆಯ ಹುಡುಗ–ಹುಡುಗಿಯರಿಗೆ ಕುತೂಹಲಕರವೂ ಆಸಕ್ತಿದಾಯಕವೂ ಆಗುವುದರಲ್ಲಿ ಸಂಶಯವಿಲ್ಲ. 'ಜೇಡನ ಬಲೆಯಲ್ಲಿ' ಎನ್ನುವ ಪ್ರಸಂಗದಲ್ಲಿ ಜೇಡನ ಬಲೆಗೆ ಬಿದ್ದ ಹಕ್ಕಿಯ ಕತೆ ಹೇಳುವ ಹುಡುಗ, ಪುಟ್ಟ ಮತ್ತು ತಿಮ್ಮ ಸೇರಿ ಬಿಡಿಸುವ ಆರ್ದ್ರ ಚಿತ್ರಣ ಕಣ್ಣಿಗೆ ಕಟ್ಟುವಂತಿದೆ.

'ಜೇಡರ ಬಲೆಯ ಮೇಲೆ ಬಿಸಿಲು ಬಿದ್ದು ಫಳಾ ಫಳಾ ಎಂದು ಹೊಳೆಯುತ್ತಾ ಇತ್ತು. ಸುಮಾರು ಕೈಬೆರಳಿನಷ್ಟು ದಪ್ಪನೆಯ ಜೇಡ, ಅದರ ತಲೆಕೆಂಪು. ಕಣ್ಣು ಹೊಳೆಯುತ್ತಾ ಇತ್ತು. ದೇಹವೆಲ್ಲಾ ಕಪ್ಪು. ಆಗಲೆ ನಾವು ಜೇಡವನ್ನು ಹತ್ತಿರ ಬಂದು ನೋಡತೊಡಗಿದ್ದೆವು... ಅಷ್ಟರಲ್ಲಿ ಪುರ್ರ್ ಅಂತ ಕಾಡುಗುಬ್ಬಿಯೊಂದು ಹಾರಿಬಂತು'.

ನಿಸರ್ಗದ ನಡುವೆ ಬದುಕುತ್ತ ಅನೇಕ ಅನುಭವಗಳನ್ನು ಪಡೆಯುತ್ತ ಹೋಗಿರುವುದರ ನಿರೂಪಣೆ 'ಹಸಿರೂರಿನ ಹುಡುಗ' ಪುಸ್ತಕದಲ್ಲಿದೆ. 'ಮಾಳದಲ್ಲಿ ಹಾವು', 'ಜಾರಿಬಿದ್ದೆ', 'ಮುಖಕ್ಕೆ ಬಣ್ಣ ಮತ್ತು ಶೇಂಗಾ ಅಂಗಡಿ' ಮುಂತಾದ ಬರಹಗಳು ತುಂಬ ಇಷ್ಟವಾಗುತ್ತವೆ. 'ಮಲ್ನಾಡೆ ಮಾತಾಡು' ಕಥಾಸಂಕಲನದಲ್ಲಿನ ಕತೆಗಳು ಕೂಡ ಮಲೆನಾಡಿನ ನಿಸರ್ಗವನ್ನು ಮತ್ತಷ್ಟು ಸೂರೆ ಮಾಡುತ್ತವೆ. ಈ ಸಂಕಲನದ ವೈಶಿಷ್ಟ್ಯವೆಂದರೆ ಕತೆಗಳು ಇನ್ನಷ್ಟು ಸಹಜವಾಗಿ ಯಾವುದೇ ಆಡಂಬರವಿಲ್ಲದೆ ನಿರೂಪಿತವಾಗಿರುವುದು. ಮಕ್ಕಳ ದಿನನಿತ್ಯದ ಆಗು-ಹೋಗುಗಳೆ ಇಲ್ಲಿಯ ವಸ್ತುವಾಗಿರುವುದು ವಿಶೇಷ: 'ಇಂದು ಪುಸ್ತಕ ತೆಗೆದು ಸರಿಪಡಿಸುತ್ತ ಇದ್ದೆ. ನಾಳೆ ಶಾಲೆ ಪ್ರಾರಂಭ. ಮಧ್ಯಂತರ ರಜೆಯ ಹದಿನೈದು ದಿವಸಗಳು ಹೇಗೆ ಮುಗಿದವೋ ತಿಳಿಯಲಿಲ್ಲ. ರಜೆಯಲ್ಲಿ ಮಾಡುವುದಕ್ಕಾಗಿ ಕೆಲವು ಕೆಲಸ ಹೇಳಿದ್ದರು...'

ಮಕ್ಕಳಿಗೆ ಸಹಜತೆಯನ್ನು ರೂಢಿಸುವಲ್ಲಿ ಇಲ್ಲಿಯ ಬರಹಗಳು ಸಹಾಯಕ ವಾಗಬಹುದು.

೨೦೧೪ರಲ್ಲಿ ಪ್ರಕಟವಾಗಿರುವ 'ಅಮ್ಮನ ಚಿತ್ರ' ಕಥಾಸಂಕಲನ ತಮ್ಮಣ್ಣ ಬೀಗಾರ ಅವರನ್ನು ಒಬ್ಬ ಒಳ್ಳೆಯ ಮಕ್ಕಳ ಕತೆಗಾರರನ್ನಾಗಿ ರೂಪಿಸಿದೆ ಎನ್ನಬಹುದು. ಅದೂ ಅಲ್ಲದೆ ಮಕ್ಕಳಿಗೆ ವಾಸ್ತವ ಬರವಣಿಗೆಯನ್ನು ಇದು ದಟ್ಟವಾಗಿ ಪರಿಚಯಿಸುತ್ತದೆ. ನೈಜವಾದ, ವಾಸ್ತವ ಬದುಕನ್ನು ಹೇಳುವ ಮಕ್ಕಳ ಕತೆಗಳು ನಮ್ಮಲ್ಲಿ ತುಂಬ ಕಡಿಮೆ ಪ್ರಮಾಣದಲ್ಲಿ ಇರುವುದರಿಂದ 'ಅಮ್ಮನ ಚಿತ್ರ'ಗಳಂತಹ ಕೃತಿಗಳು ಮಹತ್ವ ಗಳಿಸಿಕೊಳ್ಳುತ್ತವೆ. 'ಸೋನು' ಹೆಸರಿನ ಬಾಲಕನ ಕತೆ ಇದು. ಕಡುಬಡತನದಲ್ಲಿ ಬೆಂದು ಬಾಳುತ್ತಿರುವ ಹುಡುಗನೊಬ್ಬನ ಕರುಣಾಜನಕ ಕತೆಯೊಂದನ್ನು ತಮ್ಮಣ್ಣ ಕಟ್ಟಿಕೊಟ್ಟಿದ್ದಾರೆ. ಹಳೆಯ ಕಬ್ಬಿಣ ಸಾಮಾನುಗಳನ್ನು ಮಾರುವ ಗುಜರಿ ಅಂಗಡಿಯ ಹುಡುಗನ ಅಲಕ್ಷಿತ ಬಾಲ್ಯವನ್ನು ಇಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ.

ಕತೆ ಆರಂಭ ಆದಾಗ ಹಸಿವೆಯಿಂದ ಕಂಗೆಟ್ಟಿರುವ ಸೋನು ಮುರುಕಲು ಡಬ್ಬಿಯಲ್ಲಿ ಉಳಿದಿರಬಹುದಾದ ಕಾರ (ಸೇವು) ಕಡ್ಡಿಯನ್ನು ಬಾಯಿಗೆ ಹಾಕಿಕೊಳ್ಳುತ್ತಾನೆ. ಹಳೆಯ ತಂತಿಗಳು ಬಾಯಲ್ಲಿ ಸಿಕ್ಕು ಚರ್‌ಪರ್ ಸದ್ದಾಗುತ್ತದೆ. ಕೈಗೆ ಬಂದದ್ದು ಬಾಯಿಗೆ ಬರಲಿಲ್ಲ. ಉಗುಳಿದ. ಮೊನ್ನೆ ಮೊನ್ನೆಯಷ್ಟೇ ಅವನ ಅವ್ವ ಸತ್ತಿದ್ದಾಳೆ. ಆಕೆ ದುಡಿದು ಊಟ ಹಾಕುತ್ತಿದ್ದಳು. ಆದರೆ ಅಪ್ಪ ಕಾಳಜಿ ಮಾಡುತ್ತಿಲ್ಲ. ಬದಲಾಗಿ ಶಾಲೆಗೆ ಹೋಗಬೇಕಾದವನನ್ನು ದುಡಿಯಲು ಹಚ್ಚಿದ್ದಾನೆ. ತನ್ನ ಅನ್ನವನ್ನು ಸಂಪಾದಿಸಿಕೊಳ್ಳಲು ಗೆಳೆಯರೊಂದಿಗೆ ಚಿಂದಿ ಆಯುವ ಕಾಯಕವನ್ನು ಹುಡುಗ ಮಾಡಲೇಬೇಕು: 'ಒಂದೊಂದು ದಿನ ಏನೂ ಸಿಗದೆ ಕಣ್ಣೀರು ಇಳಿಸುತ್ತಾ ಅವನ ಮನೆಯ ಹಿಂದೆ ಸುಮಾರು ದೂರದಲ್ಲಿರುವ ಕೊಳವೆಬಾವಿಯ ನಲ್ಲಿಯಿಂದ ನೀರು ಕುಡಿದು ಖುಶಿಪಟ್ಟಿದ್ದೂ ಇದೆ. ಆದರೆ ಮೊದಲು ಹಾಗಿರಲಿಲ್ಲ. ಅವನ ಅಮ್ಮ ದಿನಾಲೂ ಮುಂಜಾನೆ, ಮಧ್ಯಾಹ್ನ, ಸಂಜೆ ಊಟ ಕೊಟ್ಟೇ ಕೊಡುತ್ತಿದ್ದಳು. ಆದರೆ ಅಮ್ಮ ಈಗ ಬದುಕಿಲ್ಲವಲ್ಲ. ಅಮ್ಮ ಸತ್ತ ಮೇಲೆ... ಎಂದು ನೆನಪಾದಾಗೆಲ್ಲ ಸೋನು ತಾನಿರುವ ಜಾಗವನ್ನು ಮರೆತು ಅಳಲು ಶುರು ಮಾಡುತ್ತಾನೆ. ಯಾರಾದರೂ ನೋಡಿ 'ಏನಾಯಿತೋ, ಯಾಕೆ ಅಳ್ತೀಯಾ?' ಎಂದಾಗ ಹೌದಲ್ಲ, ನಾನು ಅಳುತ್ತಿದ್ದೇನಲ್ಲ ಅಂದೆನಿಸಿ ಅಳು ನಿಲ್ಲಿಸಲು

ಪ್ರಯತ್ನಿಸುತ್ತಾನೆ'. ಸೋನು, ರೀತು, ಸುಮಿ, ಶಬಾನಾ ಮುಂತಾದ ಮಕ್ಕಳು ಅಸಮಾನತೆಯಿಂದ ನಲುಗುತ್ತಿರುವ ಭಾರತದ ಸಾಮಾಜಿಕ ಸ್ಥಿತಿಯನ್ನು ತೆರೆದು ಇಡಬಲ್ಲವರಾಗಿದ್ದಾರೆ. ಉಳ್ಳವರ, ಉಳ್ಳದೆ ಇರುವವರ ಪ್ರಪಂಚದ ಜೊತೆಗೆ ಒಳ್ಳೆಯತನವನ್ನು ಎಲ್ಲಿದ್ದರೂ ಗೌರವಿಸಬೇಕು ಎನ್ನುವುದರ ಚಿತ್ರಣ ಇಲ್ಲಿ ಬಹಳಷ್ಟು ಸ್ಪಷ್ಟವಾಗಿ ಮೂಡಿದೆ. ಕಸದಬುಟ್ಟಿಯಲ್ಲಿ ಸಿಗುವ ಚಪ್ಪಲಿ, ಪಾತ್ರೆ, ಅದು-ಇದು ಮತ್ತೊಬ್ಬರಿಗೆ ಮಾರಿ ಅದರಿಂದ ಬ್ರೆಡ್ಡನ್ನೋ, ಕೇಕನ್ನೋ, ಬಿಸ್ಕೀಟನ್ನೋ ತಿಂದು ಜೀವನ ನಿರ್ವಹಿಸಬೇಕಾದ ಸ್ಥಿತಿ ಈ ಮಕ್ಕಳಿಗಿದೆ. ಅವರು ಚಿಂದಿ ಆಯಬೇಕಾದರೆ ಅವರ ನಡುವೆ ನಡೆಯುವ ಜಗಳ ಕೂಡ ಇಲ್ಲಿ ಹೇಳಲ್ಪಟ್ಟಿದೆ. ಸೋನುವಿನ ತಂಗಿಗೆ ಪಲ್ಸ್‌ಪೋಲಿಯೊ ಹನಿ ಹಾಕಿಸಿ ಬರುವಾಗ ಬಸ್ಸಿನ ಅಪಘಾತದಲ್ಲಿ ಸಿಕ್ಕು ಸತ್ತ ಅವನ ಅಮ್ಮನ ನೆನಪು ಎಂತಹ ಓದುಗನನ್ನಾದರೂ ಕಾಡದೆ ಇರದು. ಅಮ್ಮ ತನ್ನ ಮಗುವಿಗೆ ಪೋಲಿಯೊ ಹನಿ ಹಾಕಿಸುವ ಫೋಟೊ ಹೊಡೆದು ಅದನ್ನು ಈಗ ಪೋಲಿಯೋ ಪ್ರಚಾರದ ಗಾಡಿಗೆ ಅಂಟಿಸಿಕೊಂಡು ಬರುತ್ತಿರುವುದನ್ನು ನೋಡಿದ ಸೋನುಗೆ ಅಮ್ಮನ ಗಾಢವಾದ ನೆನಪು ಬರುತ್ತದೆ. ಮುಗ್ಧ ಬಾಲಕನ ಅಮ್ಮ ಇಲ್ಲದ ಜಗತ್ತಿನಲ್ಲಿ ಆಕೆಯ ಫೋಟೋ ಹೊತ್ತ ಗಾಡಿ ಬರುವುದು ತಮ್ಮಣ್ಣ ಬೀಗಾರ ಚಿತ್ರಿಸಿರುವ ಮಕ್ಕಳ ಸಾಹಿತ್ಯದ ಬಹುಮುಖ್ಯ ರೂಪಕಗಳಲ್ಲಿ ಒಂದಾಗಿದೆ. ಈ ಪ್ರತಿಮೆ ಎಷ್ಟು ಗಾಢವಾದದ್ದೆಂದರೆ ಅನಿರೀಕ್ಷಿತವೂ ಆಕಸ್ಮಿಕವೂ ಎಂಬಂತೆ ಮಗು ಮತ್ತೆ ಶಾಲೆಗೆ ಮರಳುತ್ತದೆ. ಅಮ್ಮನ ಪೋಸ್ಟರ್ ಕಿತ್ತುಕೊಂಡು ಜನರಿಗೆ ಹೆದರಿ ಓಡಿಬರುತ್ತಿರುವ ಸೋನುವನ್ನು ಶಿಕ್ಷಕಿ ಕಮಲಾ ಎದುರು ಬಂದು ಅಪ್ಪಿಕೊಳ್ಳುವುದು ಕ್ರೂರತೆಯನ್ನು ಕರುಣೆ ಎದುರಿಸಿದಂತಾಗಿದೆ. ಮಾನವೀಯತೆ, ಅಂತಃಕರಣ ಮತ್ತು ವಾಸ್ತವದ ನೆಲೆಗಳಿಂದ ಈ ಕತೆ ತಮ್ಮಣ್ಣ ಬೀಗಾರ ಅವರ ಮಹತ್ವದ ರಚನೆಯಾಗಿದೆ ಎಂದು ಹೇಳಬಹುದು. 'ಸುರೇಶಣ್ಣ' ಕತೆಯೂ ಕೂಡ ಆಸಕ್ತಿಯಿಂದ ಓದಿಸಿಕೊಳ್ಳುತ್ತದೆ. 'ಹಳ್ಳ ನೋಡಲು ಹೋದರು' ಕತೆಯಲ್ಲಿ ಹೆಬ್ಬಾವೊಂದನ್ನು ಕಟ್ಟಿಗೆಯ ತುಂಡು ಎಂದು ತಿಳಿದು ಕೋಲಿನಿಂದ ದಂಡೆಗೆ ಜಗ್ಗಿದ ಮೈನವಿರೇಳಿಸುವ ಪ್ರಸಂಗವನ್ನು ನಿರೂಪಿಸುತ್ತಾರೆ. 'ಬಾವಲಿ ಗುಹೆ' ಕತೆ ಉಪದೇಶದ ಸೆಳಕುಗಳಿಂದ ತುಸು ಭಾರವಾಗುತ್ತದೆ. 'ನವಿಲಕ್ಕ', 'ಕಲಾವಿದ' ಒಳ್ಳೆಯ ರಚನೆಗಳಾಗಿವೆ. ತಮ್ಮ ಮೊದಲಿನ ಬರಹಗಳಿಗಿಂತ ಇದರಲ್ಲಿನ ಗದ್ಯ ಮಾಗಿರುವುದು ಎದ್ದುಕಾಣುತ್ತದೆ. ಕಪ್ಪೆಯ ಡ್ರಾಂಕ್-ಡ್ರಾಂಕ್, ಮೀನಿನ ಗುಳಂಗಳಿಂದ 'ಮಾತಾಟ-ಮಾತೂಟ' ಎನ್ನುವ ಸಂಕಲನ ಮಕ್ಕಳ ಕಲ್ಪನಾಲೋಕವನ್ನು ವಿಸ್ತರಿಸುತ್ತದೆ. ಇದು ಬೆಂಗಳೂರಿನ ಶ್ರೀ ಲಕ್ಷ್ಮೀ ವೆಂಕಟೇಶ್ವರ ಪ್ರಕಾಶನದಿಂದ ೨೦೧೪ ರಲ್ಲಿ ಪ್ರಕಟಗೊಂಡಿದೆ. ಹಾಡು, ಕತೆ, ನೃತ್ಯ, ಕುಣಿದಾಟ ಮಕ್ಕಳಿಗೆ ಎಷ್ಟೆಲ್ಲ ಇಷ್ಟದ ಸಂಗತಿಗಳು ಎಂಬುದನ್ನು ಹೇಳುತ್ತಲೆ ಅಂತಹ ಚಟುವಟಿಕೆಗಳ ಮೂಲಕ, ಮನಸ್ಸು ತುಂಬುವ ಆಟಗಳ ಮೂಲಕ ಕತೆ ಹೇಳಲು ತಮ್ಮಣ್ಣ ಅವರು ಹೊರಟಿದ್ದಾರೆ. ಮಾತುಗಳನ್ನು ಆಟವನ್ನಾಗಿಯೂ ಊಟವನ್ನಾಗಿಯೂ ಮಾರ್ಪಡಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಈ ಮಾತುಕತೆಗೆ ಲಲಿತ ಪ್ರಬಂಧದ ಲಾಲಿತ್ಯ ಒದಗಿದ್ದು ಅವರ ಗದ್ಯ ಪಡೆದುಕೊಳ್ಳುತ್ತಿರುವ ಒಂದು ಒಳ್ಳೆಯ ಲಕ್ಷಣವಾಗಿದೆ. ಚಂದ್ರನನ್ನು ಆಯ್‌ಸ್ಕ್ರೀಮ್ ಮುದ್ದೆಯಾಗಿರಿಸಿರುವುದು, ಕಪ್ಪೆಯ ಡ್ರಾಂಕ್... ಡ್ರಾಂಕ್‌ಗಳನ್ನು ಹಿಡಿದಿಟ್ಟಿರುವುದು, ಬಾಲಕ ಮಂಗನ ಮರಿಯಾಗಿರುವುದು, ಬಸ್ಸು ಹತ್ತಿ ಕಂಡಕ್ಟರ್‌ನಲ್ಲಿ ಚಿಲ್ಲರೆ ಮರೆತಿರುವುದು ಮುಂತಾದವು

ತಮ್ಮಣ್ಣ ಬೀಗಾರ ಅವರ ಸಾಹಿತ್ಯದ ಲಯ ಕಂಡುಕೊಂಡಿರುವ ಹೊಸ ಹೆಜ್ಜೆಗಳಾಗಿವೆ. ಮಕ್ಕಳಿಗೆ ಹೊಸ ಹೊಳಹುಗಳನ್ನು ಅವರು ಕೊಡುತ್ತಿದ್ದಾರೆನ್ನುವುದಕ್ಕೆ ಸಾಕ್ಷಿಯಾಗಿ 'ಕತ್ತಲೆ ತೋರಿಸು...' ಮತ್ತು 'ಚಂದ್ರನೆಂಬ ಆಯ್ಸ್‌ಕ್ರೀಮ್' ಬರಹಗಳನ್ನು ನೋಡಬಹುದು. ನಾವು ಬೆಳಕನ್ನು ತೋರಿಸುವುದಕ್ಕೆ ಹಾತೊರೆಯುತ್ತೇವೆ. ಆದರೆ ಕತ್ತಲಿನ ಪರಿಚಯವೂ ಆಗಬೇಕಲ್ಲ. ಕತ್ತಲೆಯ ಭಯ, ಕೆಳಗೆ ಬಿದ್ದ ಸಾಮಾನು ತುಳಿಯುವುದು, ಗೋಡೆಗೆ ಢಿಕ್ಕಿ ಹೊಡೆಯುವುದು ಇಂತಹವೆಲ್ಲ ಇದ್ದದ್ದೆ. ಅಂತಹ ಅನುಭವ ಇಲ್ಲಿ ಹರಿದಾಡಿದೆ: 'ಮನೆಯ ಎಲ್ಲ ದೀಪಗಳೂ ಗಾಳಿಗೆ ಆರಿಹೋಗಿದ್ದರಿಂದ ಇಡೀ ಮನೆ ಕತ್ತಲೆಯಲ್ಲಿ ಕಳೆದುಹೋಯಿತು. ಪುಟ್ಟ ತಮ್ಮ ಕೂಡಲೆ ದೊಡ್ಡದಾಗಿ ಅಳುತ್ತ ಏನೋ ಮಾಡಿದ ಅಂತ ಕಾಣುತ್ತದೆ. ಸ್ಟೂಲು ಉರುಳಿದ ಸದ್ದಾಯಿತು... ನಾನು ಹಾಗೇ ಆರಿಹೋದ ದೀಪ ಹಿಡಿದುಕೊಂಡು ನಿಂತೇ ಇದ್ದೆ. ಅಮ್ಮ ಒಳಗಿನಿಂದಲೇ ದೀಪ ತರುತ್ತೇನೆ. ಸ್ವಲ್ಪ ನಿಲ್ಲಿ. ಕಡ್ಡಿಪೆಟ್ಟಿಗೆ ಕಾಣಿಸ್ತಾ ಇಲ್ಲ ಎಂದು ದೊಡ್ಡದಾಗಿ ಹೇಳುವುದು ಕೇಳುತ್ತಿತ್ತು. ಅಮ್ಮ ಒಳಗೆ ದೀಪ ಹಚ್ಚಿದ್ದನ್ನು ಕಂಡು ನಾನು ಒಳಗೆ ಅಂದಾಜಿನ ಮೇಲೆ ನಡೆದೆ... ತಮ್ಮ ಇನ್ನೂ ಅಳುತ್ತಲೇ ಇದ್ದ. ತಮ್ಮನನ್ನು ನೋಡುತ್ತಿದ್ದಂತೆ ನಾನು ದೀಪ ಕೈಯಿಂದ ಬಿಟ್ಟು ದೊಡ್ಡದಾಗಿ ಅಯ್ಯೋ ಎಂದು ಕಿರುಚಿದೆ. ದೀಪ ನೆಲದ ಮೇಲೆ ಬಿದ್ದು ಅದರ ಮುಚ್ಚಳ ಕಳಚಿ ಬತ್ತಿ ಎಣ್ಣೆ ಎಲ್ಲ ಹೊರಕ್ಕೆ ಬಂದು ಇಡೀ ಬತ್ತಿಯೇ ಹೊತ್ತಿಕೊಂಡು ದೊಡ್ಡದಾಗಿ ಉರಿಯತೊಡಗಿತು.'

'ಚಂದ್ರನೆಂಬ ಆಯ್ಸ್‌ಕ್ರಿಮ್', 'ನಲ್ಲಿ ಲಹರಿಯ ಮಾತು' ಕತೆ ಮೆಚ್ಚುಗೆಯಾಗುತ್ತದೆ. ಹಾಡಿನಲ್ಲಿಯೆ ಕತೆ ಹರಿದಿದೆ:

ಒಂದೂರಲ್ಲಿ ಒಂದಾನೆ
ಟಂ ಟಂ ಟಂ
ಊರಿಗೆ ಆನೆ ಯಾಕೆ ಬಂತಪ್ಪ
ಟಂ ಟಂ ಟಂ
ಕಾಡಲಿ ತಿನ್ನಲು ಸಿಗಲಿಲ್ಲವಂತೆ
ಟಂ ಟಂ ಟಂ
ಕಾಡು ಯಾಕೆ ಖಾಲಿ ಆಯ್ತು
ಟಂ ಟಂ ಟಂ
ಕಾಡಿಗೆ ಹೋಗೋ ಕೊಡಲಿಯ ಕೇಳು
ಟಂ ಟಂ ಟಂ

ಹಲವು ಒಳ್ಳೆಯ ಕೃತಿಗಳನ್ನು ಕೊಟ್ಟಿರುವ ತಮ್ಮಣ್ಣ ಬೀಗಾರ ಅವರ ಮುಂದಿನ ಕೃತಿಗಳು ಮತ್ತಷ್ಟು ಆಸಕ್ತಿದಾಯಕವಾಗಿರಬಲ್ಲವು.

ಭಾಗೀರಥಿ ಹೆಗಡೆ

ಪ್ರಕೃತಿಯಿಂದ ದೂರವಾಗಿರುವ ಮನುಷ್ಯ ಮತ್ತೆ ಪ್ರಕೃತಿಗೆ ಮರಳಬೇಕು ಮತ್ತು ಹುಟ್ಟಿರುವ ಭಾಷೆಯಲ್ಲಿ ಮಾತ್ರ ಉತ್ಕಟವಾಗಿ ಕಲಿಯಬಲ್ಲೆವು, ಜೀವಿಸಬಲ್ಲೆವು ಎನಿಸುವ ಆಶಯಗಳುಳ್ಳ 'ಗುಬ್ಬಿಯ ಸ್ವರ್ಗ' (೨೦೦೬) ಹಾಗೂ 'ಕನ್ನಡ ಶಾಲೆಯ ಹುಡುಗ' (೨೦೧೨)

ಹೆಸರಿನ ಕವನ ಸಂಕಲನಗಳನ್ನು ಲೇಖಿಕಿ ಭಾಗೀರಥಿ ಹೆಗಡೆ ಪ್ರಕಟಿಸಿದ್ದಾರೆ. ತಮ್ಮ ಅನುಭವಗಳ ಅಭಿವ್ಯಕ್ತಿಗೆ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಿರುವುದು ಹಾಗೂ ಪದ್ಯವನ್ನು ಸರಳವಾಗಿ ಹೇಗೆ ಹೆಣೆಯಬೇಕೆಂದು ತಿಳಿದಿರುವುದು ಅವರ ಕೃತಿಗಳಲ್ಲಿ ಮೇಲುನೋಟಕ್ಕೆ ಕಂಡುಬರುವ ಅಂಶಗಳು. ಮಕ್ಕಳ ಲೋಕದ ವಿಸ್ಮಯಶಕ್ತಿಯನ್ನು ಹೊಂದದೆ ಆ ಭಾವಲೋಕವನ್ನು ಅಭಿವ್ಯಕ್ತಿಸಲು ಸಾಧ್ಯವಿಲ್ಲ. ಭಾವನೆಗಳ ಆ ಜಗತ್ತನ್ನು ಸಾಕಷ್ಟು ಕುತೂಹಲ ಹಾಗೂ ಸ್ವಾರಸ್ಯಕರವಾಗಿ ಭಾಗೀರಥಿಯವರು ಹಿಡಿಯುತ್ತಾರೆ. ಇವರ 'ಗುಬ್ಬಿಯ ಸ್ವರ್ಗ' ಪುಸ್ತಕದ ಗುಬ್ಬಿಗೆ ಇರುವ ಆಸೆ–ಆಕಾಂಕ್ಷೆಗಳು ಪರೋಕ್ಷವಾಗಿ ಮಗುವೊಂದರ ಬೇಕು–ಬೇಡಗಳು. ಇಲ್ಲಿಯ ಗುಬ್ಬಿಗೆ ಸ್ವರ್ಗ ಬೇಡ, ಆದರೆ ಸ್ವಾತಂತ್ರ್ಯ ಬೇಕು. ಕಲ್ಪವೃಕ್ಷ ಬೇಡ, ಹುಳಿ, ಒಗರಿನ ಕಾಯಿ ಬೇಕು.

ಗುಬ್ಬಚ್ಚಿ ಗುಬ್ಬಚ್ಚಿ
ಇಲ್ಯಾಕೆ ಬಂದೆ ಗುಬ್ಬಚ್ಚಿ
ಅಲ್ಲಿ ಎಲ್ಲೂ ನೆಲವೇ ಇಲ್ಲ
ಮುತ್ತು ರತ್ನ ಬಂಗಾರ
ಕಾಲಿಟ್ಟ ಕಡೆಯಲ್ಲೆಲ್ಲಾ
ಪಚ್ಚೆ ಹವಳ ಸಿಂಗಾರ

ನೆಗೆಯಲಿಕ್ಕಾಗದೆ, ಜಿಗಿಯಲಿಕ್ಕಾಗದೆ ದೇವಲೋಕದಿಂದ ಧರೆಗೆ ಬಂದಿರುವ ಗುಬ್ಬಿಗೆ ಕಾಯಿ ಕುಕ್ಕಿ ತಿನ್ನುವಾಸೆಯಾಗಿದೆ. ನಾರು ಬೇರು ಹತ್ತಿಯ ಚೂರುಗಳನ್ನು ಹುಡುಕಿ ತಂದು ಗೂಡು ಕಟ್ಟುವಾಸೆಯಾಗಿದೆ. 'ಒಂದೇ ಕೊಳಗದ ಹುಗ್ಗಿ' ಉಂಡು ಉಂಡು ಅದರ ಮನಸ್ಸು ಕೀಸರಿಟ್ಟಿದೆ. ಆಡುವ ಮಗುವನ್ನು ಕಟ್ಟಿಹಾಕಿ, ವಜ್ರವೈಡೂರ್ಯದ ಹಾರ ಹಾಕಿ ಅದನ್ನು ಅರಮನೆಯಲ್ಲಿಟ್ಟರೆ ಸ್ವಾತಂತ್ರ್ಯವಿಲ್ಲದೆ ಅದು ಸಾಯುತ್ತದೆ. ನೆಲವಿಲ್ಲದೆ ಮುಗಿಲಿಗೆ ಯಾವ ಅರ್ಥವೂ ಇಲ್ಲ, ಸ್ವಾತಂತ್ರ್ಯವಿಲ್ಲದೆ ಬದುಕಿಗೆ ಯಾವ ಅರ್ಥವೂ ಇಲ್ಲ ಎನ್ನುವ ತತ್ವವನ್ನು ಈ ಪದ್ಯದಲ್ಲಿ ಪುಟ್ಟಮಕ್ಕಳಿಗೆ ಪರೋಕ್ಷವಾಗಿ ಹೇಳುವ ಕಲೆಗಾರಿಕೆ ಭಾಗೀರಥಿಯವರದು. ನೆಲಮೂಲ ಸಂಸ್ಕೃತಿಯ ಮಹತ್ವವನ್ನು, ಬೆವರಿನ ಬೆಲೆಯನ್ನು, ವಿಲಾಸ ವೈಭವಗಳು ತರುವ ಅರಾಜಕತೆಯನ್ನು ಮಕ್ಕಳಿಗೆ ಆಗಲಿ, ಪಾಲಕರಿಗೆ ಆಗಲಿ ಮನದಟ್ಟು ಮಾಡುವ ಹಂಬಲ ಕವಯಿತ್ರಿಯದಾಗಿದೆ. 'ಚಿಟ್ಟಗುಬ್ಬಿ' ಹೆಸರಿನ ಮತ್ತೊಂದು ಕವಿತೆ ಇದರಲ್ಲಿದೆ. ಇಲ್ಲಿಯ ಲಯ ಅದನ್ನು ಬಹಳ ಪ್ರಿಯವಾಗಿಸುತ್ತದೆ.

ಅತ್ತ ಇತ್ತ ಓಡೋದ್ಯಾಕೆ ಚಿಟ್ಟಗುಬ್ಬಿ ಚಿಂವ್ ಚಿಂವ್
ಸುತ್ತ ಮುತ್ತ ನೋಡೋದ್ಯಾಕೆ ಪುಟ್ಟಗುಬ್ಬಿ ಚಿಂವ್ ಚಿಂವ್

ಆದರೆ ಅಲ್ಲಿ ತುಂಬಿದ ಆದರ್ಶ ಕವಿತೆಗೆ ಭಾರವಾಗಿದೆ. ವೆಂಕಟೇಶಮೂರ್ತಿಯವರ ಗುಬ್ಬಿ ಪದ್ಯಗಳು ಬಂದ ಮೇಲೆ ಮಕ್ಕಳ ಕವಿತೆಗಳಲ್ಲಿ ಗುಬ್ಬಿ ಮತ್ತೆ ಮತ್ತೆ ಬರುತ್ತಿದೆ!

'ಸ್ವಭಾವ' ಎನ್ನುವ ಪದ್ಯದಲ್ಲಿ ಕವಯಿತ್ರಿಯ ಸೂಕ್ಷ್ಮ ಗ್ರಹಿಕೆಗಳನ್ನು ಕಾಣಬಹುದು. ಉಪ್ಪಿನ ಡಬ್ಬಿ, ಸಕ್ಕರೆ ಡಬ್ಬಗಳ ನಡುವಿನ ಸ್ನೇಹದ ಜಗಳ ವಿನೋದಪ್ರಿಯವಾಗಿದ್ದು ಮಕ್ಕಳನ್ನು ರಂಜಿಸುವುದರಲ್ಲಿ ಸಂದೇಹವಿಲ್ಲ.

ಉಪ್ಪಿನ ರಾಶಿಗೆ ಹೊಟ್ಟೆಕಿಚ್ಚು
ಸಕ್ಕರೆ ಕೀರ್ತಿಯ ಕಂಡು
ಹಗಲೂರಾತ್ರಿ ಚಟಪಟಗುಟ್ಟಿತು
ಭರಣಿಯಲಿ ಕೂತುಕೊಂಡು

. . . .

ಸಕ್ಕರೆ ಡಬ್ಬಿಯ ಮುಚ್ಚಳ ತೆಗೆದು
ಗಪಗಪ ಮುಕ್ಕಿತು ಉಪ್ಪು
ಸರಪರ ನೆಕ್ಕಿತು ತಿರುಗಿ ನೋಡಿತು
ನನ್ನದೇನಿಲ್ಲ ತಪ್ಪು

'ಗುಮ್ಮ', 'ಹನುಮ', 'ಇರುವೆ' ಮುಂತಾದವು ಹೃದ್ಯವಾಗಿವೆ. ಈಗಾಗಲೇ ಬಂದಿರುವ ವಸ್ತುವನ್ನು ಮತ್ತೆ ಮತ್ತೆ ಅಭಿವ್ಯಕ್ತಿಸುವ ಬದಲು ಸೀಮೋಲ್ಲಂಘನೆ ಮಾಡಿದಾಗ ಒಬ್ಬ ಕವಿ ನಿಜಕ್ಕೂ ವಸ್ತು-ರೂಪಗಳ ಆಯಾಮಗಳನ್ನು ವಿಸ್ತರಿಸಬಲ್ಲವನಾಗುತ್ತಾನೆ. ವಿಸ್ತರಿಸಬಲ್ಲವಳಾಗುತ್ತಾಳೆ. ಇದರತ್ತ ನಮ್ಮ ಕವಿಗಳು ಲಕ್ಷ್ಯ ಹರಿಸಬೇಕಾಗಿದೆ.

'ಕನ್ನಡ ಶಾಲೆಯ ಹುಡುಗ' ಕೃತಿಯ 'ರೈಲು', 'ಮೀಸೆ', 'ಮಳೆಯಾಟ', 'ಏನಾಗಲಿ' ಮುಂತಾದವು ಉತ್ತಮ ರಚನೆಗಳಾಗಿವೆ.

ಕೂಽ ಕೂಽಽ ಕೂಽಽಽ ವು
ಬಂತು ಬಂತು ರೈಲು
ಧಡಕ್ ಧಡಕ್ ಧಡಕ್ ಧಡಕ್
ದಾರಿಯುದ್ದ ಹುಯ್ಲು

–ರೈಲು

ರಾಮನಲ್ಲ ಭೀಮನಲ್ಲ
ಕೃಷ್ಣನಲ್ಲ ತಿಳಿದುಕೊ
ನಾನು ನಿನ್ನ ಮುದ್ದು ಕಂದ
ತೋಳು ನೀಡಿ ಎತ್ತಿಕೊ

–ಏನಾಗಲಿ

ಮಕ್ಕಳು ಪುರಾಣ ವ್ಯಕ್ತಿಗಳಾಗದೆ, ಅವರಂತಾಗದೆ ಇವರಂತಾಗದೆ ಅವರ ಒಲವಿನಂತಾಗಬೇಕೆಂಬ ಬಯಕೆಯನ್ನು 'ಏನಾಗಲಿ' ಪದ್ಯ ಹೇಳುತ್ತದೆ.

ಕಲ್ಲಿನೊಳಗು ಹುಲ್ಲಾಗಲೆ
ಹಸಿರಿನುಸಿರ ಮೆಲ್ಲಲೆ
ಬರಡು ರೆಂಬೆಯೊಳಗೂ ಚಿಗುರಿ
ಮುದಿತನವನು ಗೆಲ್ಲಲೆ

ಜೋಡುನುಡಿ, ದ್ವಿರುಕ್ತಿ, ಪುನರಾವರ್ತನೆ, ಲಯ ಮುಂತಾದ ಕಾವ್ಯ ಲಕ್ಷಣಗಳನ್ನು

ಮೈಗೂಡಿಸಿಕೊಂಡು ಕವಿತೆ ಬರೆಯುವ ಭಾಗೀರಥಿ ಹೆಗಡೆ ಎಲ್ಲ ನನಗೇ ಬೇಕು ಎಂದು ಕಾಡುವ ತುಂಟ ಹುಡುಗರ ಬಗ್ಗೆಯೂ ಬರೆಯುತ್ತಾರೆ. ಮಕ್ಕಳನ್ನು ಬರೀ ಕಲ್ಲುಗೊಂಬೆಯ ತರಹ ಚಿತ್ರಿಸದೆ ಅವರ ಜಗಳ, ಕಿತ್ತಾಟ, ರಂಪಾಟ ಬಣ್ಣಿಸಲ್ಪಟ್ಟಾಗ ವಾಸ್ತವಕ್ಕೆ ಹತ್ತಿರವಾಗುತ್ತದೆ.

ಬೇಕಪ್ಪಾ ಬೇಕು
ಮತ್ತಿನ್ನೇನು ಬೇಕು?
ಬೇಕು ಜೀನ್ಸ್ ಪ್ಯಾಂಟು
ಜೇಬು ತುಂಬಾ ನೋಟು
ಬೇಕಪ್ಪ ಟೀ ಶರ್ಟು
ಅಪ್ಪನಂಥದೇ ಕೋಟು

ಎಲ್ಲ ಕಡೆ ಇಂಗ್ಲಿಷೆಂಬ ಹುಸಿಬಣ್ಣವನ್ನು ಅಳಿಸಿ ಕನ್ನಡದ ಸ್ವಾಭಾವಿಕ ಬಣ್ಣ ಬಳಿಯಬೇಕೆಂಬ ಆಶಯ 'ಕನ್ನಡ ಶಾಲೆಯ ಹುಡುಗಿ' ಪದ್ಯದ್ದು. 'ದಿಟ ದಿಟ ಮಾನವರಾಗೋಣ' ಎಂಬ ಕೊನೆಯಲ್ಲಿನ ನೀತಿಪಾಠದಿಂದ ಕವಿತೆ ತನ್ನ ಪ್ರಾರಂಭದ ಸ್ವಾರಸ್ಯವನ್ನು ಉಳಿಸಿಕೊಳ್ಳುವುದಿಲ್ಲ. ನಗಲಿಕ್ಕೂ ಇಂಗ್ಲಿಷ್ ಭಾಷೆ ಬೇಕೆ ಎಂಬ ವ್ಯಂಗ್ಯದಿಂದ ಕವಯಿತ್ರಿಯು ಭಾವನೆಗಳಿಗೆ ಅದು ಒದಗಲಾರದೆನ್ನುವ ಸತ್ಯವನ್ನು ಹೇಳುತ್ತಾರೆ.

ಕುಣಿಕುಣಿದಾಡುವೆ ಜಿಗಿಜಿಗಿದೋಡುವೆ
ಗಾಳಿಯಲಿ ತಂಗಾಳಿಯಲಿ
ಮರವನ್ನೇರುವೆ ಕೊಳಲನ್ನೂದುವೆ
ಹೊಳೆಯಲ್ಲೀಜುವೆ ಸೂಟಿಯಲಿ

ಮರ ಏರುವ, ಕೊಳಲನೂದುವ, ಗಾಳಿಯಲ್ಲಿ ತೂಗುವ, ಹೊಳೆಯಲ್ಲಿ ಈಜುವ ಮತ್ತು ಜಿಗಿಜಿಗಿದಾಡುವ ಸಂಗತಿಗಳಿಂದ ಮಕ್ಕಳು ದೂರಾಗಬಾರದೆನ್ನುವ ಮತ್ತು ಆ ಜೀವಪರ ಕೌಶಲಗಳು ಕನ್ನಡದ ಮಕ್ಕಳಿಗೆ ಕನ್ನಡದ ನೆಲದಲ್ಲಿಯೇ ಹುಟ್ಟಿನಿಂದ ಬರಬೇಕೆಂಬ ಒಲವು ಕವಿತೆಯಲ್ಲಿ ವ್ಯಕ್ತಗೊಂಡಿದೆ.

ಗಿರೀಶ್ ಜಕಾಪುರೆ

'ನನ್ನ ಸೈಕಲ್ ಸವಾರಿ' ಎನ್ನುವುದು ಗಿರೀಶ ಜಕಾಪುರೆ ಅವರ ಮಕ್ಕಳ ಸಾಹಿತ್ಯದ ಎರಡನೆಯ ಕೃತಿ. ಅವರ ಈ ಮೊದಲಿನ 'ಜುಗ್ನು : ಪ್ರಬುದ್ಧ ಮಕ್ಕಳ ಕತೆಗಳು' ಎಂಬ ಸಂಕಲನ ಹದಿಹರೆಯದ ಮಕ್ಕಳ ಮಾನಸಿಕ ತುಮುಲಗಳನ್ನು ತೆರೆದಿಟ್ಟಿತ್ತು. 'ನನ್ನ ಸೈಕಲ್ ಸವಾರಿ' ಎಂಬ ಹೆಸರಿನ ಸಂಕಲನದಲ್ಲಿ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಅಪರೂಪವೆನ್ನಬಹುದಾದ ಹೊಸತನ ಹಾಗೂ ದಿಟ್ಟತನ, ಬುದ್ಧಿ–ಭಾವದ ಕಲ್ಪಕತೆಯಲ್ಲಿ ಮಾತ್ರ ಇರದೆ ಕವಿತೆಯ ಶೈಲಿ ಹಾಗೂ ಕಥಾವಸ್ತುವಿನ ನಿರ್ವಹಣೆಗಳಲ್ಲಿಯೂ ಅದು ಹಾಸುಹೊಕ್ಕಾಗಿರುವುದು ಕಂಡುಬರುತ್ತದೆ. ಸಾಂಪ್ರದಾಯಿಕತೆಯನ್ನು ಮೀರಿದ ಮಕ್ಕಳ ರಚನೆಗಳಿಗೆ ಮುಂದಾದ ಎಸ್.ಎಚ್. ವೆಂಕಟೇಶಮೂರ್ತಿ, ಸುಮತೀಂದ್ರ ನಾಡಿಗ್, ಕೆ.ವಿ. ತಿರುಮಲೇಶ್, ನಾ. ಡಿಸೋಜ ಮುಂತಾದವರು ಪ್ರಯೋಗಗಳಿಲ್ಲದೆ ನೀರಸವಾಗಿದ್ದ ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಜೀವಂತಿಕೆಯನ್ನು

ತಂದರು. ಈ ಹಿರಿಯರ ರಚನೆಗಳಿಗೆ ಭಿನ್ನವಾಗಿ ಪ್ರಯೋಗಗಳಿಗೆ ತೆರೆದುಕೊಳ್ಳುವುದು ಒಂದು ಸವಾಲಾಗಿತ್ತು. ರಾಧೇಶ ತೋಳ್ಪಾಡಿ, ಆನಂದ ಪಾಟೀಲ, ಚಿಂತಾಮಣಿ ಕೊಡ್ಲೆಕೆರೆ, ಶ್ರೀನಿವಾಸ ಉಡುಪ ಸೇರಿದಂತೆ ಹಲವರು ಅದರಲ್ಲಿ ಯಶಸ್ಸನ್ನು ಕಂಡರು. ಹೊಸ ತಲೆಮಾರಿನ ಗಿರೀಶ ಜಕಾಪುರೆ ಅದನ್ನು ವಿಸ್ತರಿಸುವ ಬಹು ಒಳ್ಳೆಯ ಪ್ರಯತ್ನ ಮಾಡಿದ್ದಾರೆ. ಇದು ಹೊಸ ಮಜಲಿನ ಮಕ್ಕಳ ಸಾಹಿತ್ಯ ಮಾತ್ರವಾಗಿರದೆ ಮರೆಯಾಗಿ ಹೋಗುತ್ತಿದ್ದ ಮಕ್ಕಳ ಸೃಷ್ಟಿಶೀಲ ಲೋಕವೊಂದನ್ನು ಹಿಡಿದಿಡುವ ಪ್ರಯತ್ನವಾಗಿದೆ. ಉತ್ತರ ಕರ್ನಾಟಕ ಭಾಗದ ಮಕ್ಕಳ ಹುಡುಗಾಟಿಕೆ, ವಿನೋದ ಪ್ರಸಂಗ, ಸಾಹಸದ ಸನ್ನಿವೇಶ, ಕಲ್ಪನಾಶೀಲ ಮನಸ್ಸು, ತೊಂದರೆಗಳಿಗೆ ಅಂಜದ ದಿಟ್ಟತನಗಳು ಇಲ್ಲಿ ಒಡಮೂಡಿದ್ದು ನಮ್ಮ ಮೈನವಿರೇಳಿಸುವಂತಿವೆ. ಓದುಗರೂ ಕೂಡ ಈ ಹಾಡುಗಳಲ್ಲಿ ತೊಡಗುತ್ತಾರೆ. ಮಕ್ಕಳೊಡನೆ ಮಕ್ಕಳಾಗಿ, ಮಕ್ಕಳ ಹೃದಯದ ಕಣವಾಗಿ ಸುತ್ತಮುತ್ತಲಿನ ಪ್ರಪಂಚವನ್ನು ನೋಡಿದ್ದರ ಫಲವೆಂಬಂತೆ ಇಲ್ಲಿಯ ಪದ್ಯಗಳು ಹುಟ್ಟಿಕೊಂಡಿವೆ.

ಇಲ್ಲಿಯ ಕವಿತೆಗಳು ಗಪದ್ಯ ಮಾದರಿಯಲ್ಲಿವೆ. ಅವುಗಳನ್ನು ಅನ್ನಲಿಕ್ಕೆ, ಹೇಳಿಕೊಳ್ಳುವುದಕ್ಕೆ ತುಂಬಾ ಖುಷಿಯಾಗುತ್ತದೆ. ಒತ್ತಾಯದ ರಾಗ, ಧಾಟಿಗಳನ್ನು ಮೀರಿದ ಇವು ಸಹಜತೆಯಲ್ಲಿ ಅರಳಿ ನಿಂತಿವೆ. ಮಕ್ಕಳ ಮನೋವಿಲಾಸದೊಂದಿಗೆ ಬೆಸುಗೆಯಾಗಿರುವ ಇಲ್ಲಿಯ ಪದ್ಯಗಳು ಅವರ ಜೀವನನೋಟಗಳನ್ನು ಹೊರಹಾಕುತ್ತವೆ. ಹೀಗಾಗಿ ಮಕ್ಕಳ ದೃಷ್ಟಿಕೋನ ಈ ಸಂಕಲನದ ಒಂದು ತಾತ್ವಿಕತೆಯೂ ಆಗಿ ರೂಪಿತವಾಗಿದೆ. ಮಕ್ಕಳು ಯಾವುದನ್ನು ನೋಡುತ್ತಾರೋ, ಕೇಳುತ್ತಾರೋ, ಕಲ್ಪಿಸಿಕೊಳ್ಳುತ್ತಾರೋ ಅದೆಲ್ಲವೂ ಅವರ ಗ್ರಹಿಕೆಯಲ್ಲಿಯೇ ಅಭಿವ್ಯಕ್ತಗೊಂಡಿದೆ. ಅವರು ಸಂತಸ ಪಡುವ ಸಂಗತಿಗಳು, ನೋವು–ನಲಿವುಗಳು, ಹತಾಶೆ–ಸಂಭ್ರಮಗಳು ಅವರ ಅನುಭವದ ಪರಿಮಿತಿಯಲ್ಲಿಯೇ ಬಿತ್ತರಗೊಳ್ಳುವುದು ಈ ಸಂಕಲನದ ಮಹತ್ವದ ಸಂಗತಿಯಾಗಿದೆ. ಮಕ್ಕಳ ಹರ್ಷೋದ್ಗಾರ, ಚೀತ್ಕಾರ, ಆಕಳಿಕೆ, ಬಿಕ್ಕಳಿಕೆ, ಚೀರಾಟ, ಕೂಗಾಟ ಇಲ್ಲಿ ಅಕ್ಷರಶಃ ನಮ್ಮಿಂದ ಕೇಳಲ್ಪಡುತ್ತದೆ. ಬೆಳೆಯುವ ಮಕ್ಕಳು ಆಡಿಕೊಳ್ಳುವ, ಹಾಡಿಕೊಳ್ಳುವ ಹಾಗೂ ಊಹಿಸಿಕೊಳ್ಳುವ ಬಗೆಬಗೆಯ ಚಿತ್ರಣಗಳಿಂದ ಈ ಸಂಕಲನ ತುಂಬಾ ಚೇತೋಹಾರಿಯಾಗಿ ಮೂಡಿಬಂದಿದೆ. ತಮ್ಮೆದುರು ತೆರೆದುಕೊಳ್ಳುವ ಕೌತುಕಮಯ ಜಗತ್ತೊಂದನ್ನು ಅದೇ ಭಯಮಿಶ್ರಿತ ಕುತೂಹಲ, ಹುಚ್ಚು ಧೈರ್ಯ, ಒರಟು ಸ್ವಭಾವ, ಸಾಹಸಮಯ ಪ್ರವೃತ್ತಿಗಳಿಂದ ಗಿರೀಶ ಅವರು ಕೆತ್ತಿದ್ದಾರೆ. ಬರೀ ಆದರ್ಶ ಹಾಗೂ ಉಪದೇಶ ಸರಕನ್ನು ಮಕ್ಕಳ ಸಾಹಿತ್ಯವೆಂದು ಕೊಡುತ್ತ ಅವರನ್ನು ಸಹಜ ಪ್ರವೃತ್ತಿಗಳಿಂದ ವಿಮುಖರಾಗಿಸಿದ ಅಪರಾಧಿ ಪ್ರಜ್ಞೆ ಕ್ಷಣಹೊತ್ತು ನಮ್ಮಲ್ಲಿ ಮೂಡಿದರೆ ಆಶ್ಚರ್ಯವಾಗಬೇಕಾಗಿಲ್ಲ. ಮಾರ್ಕ್ ಟ್ವೇನರ 'ಹಕಲಬರಿ ಫಿನ್', ಜೆ.ಎಮ್. ಬ್ಯಾರಿಯ 'ಪೀಟರ್ ಪ್ಯಾನ್', ರುಡಯಾರ್ಡ್ ಕಿಪ್ಲಿಂಗ್‌ನ 'ದಿ ಕಿಡ್ನ್ಯಾಪಡ್', ಜಾನಥನ್ ಸ್ವೀಫನ್‌ನ 'ಗಲಿವರ್ಸ್ ಟ್ರಾವೆಲ್ಸ್' ಮುಂತಾದ ಪುಸ್ತಕಗಳು ಮಕ್ಕಳ ಸಾಹಿತ್ಯದಲ್ಲಿ ಮೂಡಿಸಿದ ಸಂಚಲನ ಅಪಾರವಾಗಿದ್ದು ಅವು ತೆರೆದಿಟ್ಟ ಸಾಹಸಮಯ ಹಾಗೂ ಕಲ್ಪನಾಶೀಲ ಎಳೆಗಳು ಹಲವು ಭಾಷೆಯ ಸಾಹಿತ್ಯಗಳನ್ನು ಪ್ರಭಾವಿಸಿವೆ. ಮಕ್ಕಳ ನೈಸರ್ಗಿಕ ಹಾಗೂ ಸಹಜ ಬೆಳವಣಿಗೆಯನ್ನು ಚಿತ್ರಿಸುವ ಸಾಹಿತ್ಯವನ್ನು ನಾವು ಹೆಚ್ಚು ಹೆಚ್ಚು ಬರಮಾಡಿಕೊಳ್ಳಬೇಕಾದ ಅವಶ್ಯಕತೆಯಿದೆ. ಎಳೆಯ ಮನಸ್ಸುಗಳ ನಾನಾ ಕಲ್ಪನೆ ಹಾಗೂ ತುಂಟಾಟಗಳಿಂದ ಕಲಿಕೆಯನ್ನು,

ಾವಿಕವಾಗಿ ಸಾಧಿಸಲ್ಪಡುವ ಅಚ್ಚರಿಯನ್ನು ಇಲ್ಲಿಯ ಪದ್ಯಗಳು ಹೇಳುತ್ತವೆ. ಉದಾಹರಣೆಗೆ ಂಗ' ಎನ್ನುವ ಪದ್ಯವನ್ನು ನೋಡಬಹುದು.

ರಾತ್ರಿ ಪೂರಾ ಥಂಡ್ಯಾಗ ನಿಂತ್ರೂ ಗಿಡಪ್ಪ
ನಿಂಗ ಉರಿ ನೆಗಡಿ ಕೆಮ್ಮ ಬರಂಗಿಲ್ಲ । ಹ್ಯಾಂಗ?
ಯಾವಾಗ್ಲೂ ನೀರೊಳಗಿದ್ರೂ ಮೀನಕ್ಕಾ
ನಿಂಗ ಶೀತ ಗೀತ ಆಗಂಗಿಲ್ಲ । ಹ್ಯಾಂಗ?

ಉರಿಯಲ್ಲಿ, ಬಿಸಿಲಲ್ಲಿ, ಚಳಿಯಲ್ಲಿ ನಿಂತರೂ ಗಿಡ–ಮರ ಎಲ್ಲವನ್ನೂ ಸಹಿಸಿಕೊಳ್ಳುತ್ತವೆ. ಳಿಗೆಲ್ಲಿ ನೆರಳ? ಎತ್ತೂ ಬರಿಯ ಬಿಸಿಲ' ಎಂದು ಬೇಂದ್ರೆಯವರು ಕೇಳುತ್ತಾರೆ. ಅಗಾಧ ್ಹ ಹಾಗೂ ಸಹಿಷ್ಣುತೆಯನ್ನು ಪ್ರಕೃತಿಯಿಂದ ಕಲಿಯಬೇಕೆನ್ನೋ ಪಾಠ ಗಿರೀಶ ಅವರ ದಲ್ಲಿ ಮಕ್ಕಳಿಗೆ ಹೇಳಲ್ಪಟ್ಟಿದೆ. ಎಷ್ಟು ತಿರುಗಿದರೂ ಭೂಮಿಗೆ ದಣಿವಾಗುವುದಿಲ್ಲವೆಂದು, ನಗ ಉರಿಯುವ ಬೆಂಕಿಯಲ್ಲಿದ್ದರೂ ಸೂರ್ಯ ಸುಟ್ಟು ಹೋಗುವುದಿಲ್ಲವೆಂದು, ಯಾರ ಂ ಗಾಳಿ ಸಿಗುವುದಿಲ್ಲವೆಂದು ಹೇಳುತ್ತ ಅವ್ವ ಎಷ್ಟು ದುಡಿದರೂ ಹಿಗ್ಗಿನಲ್ಲಿಯೇ ಇರುತ್ತಾಳೆಂದು ು ಮತ್ತು ನಿಸರ್ಗದ ಹೋಲಿಕೆ ಮಾಡುತ್ತಾರೆ. ಗಾಳಿ, ನೀರು, ಬೆಂಕಿ ಇವುಗಳ ಹುಟ್ಟು ಾಗುತ್ತದೆ ಎನ್ನುವ ಕುತೂಹಲವೂ ಮಗುವಿನ ಕಣ್ಣಿನಲ್ಲಿದೆ.

ಪರೀಕ್ಷೆಯಲ್ಲಿ ಪಾಸಾಗಲಿಲ್ಲವೆಂದೋ, ಹೆಚ್ಚು ಅಂಕ ಬರಲಿಲ್ಲವೆಂದೋ ಆತ್ಮಹತ್ಯೆ ಮಾಡಿಕೊಳ್ಳುವ ಳ ಕೆಲವು ನಿದರ್ಶನಗಳನ್ನು ನಾವು ನೋಡಿದ್ದೇವೆ. ಕೇವಲ ಪಠ್ಯಪುಸ್ತಕಗಳ ಜ್ಞಾನವನ್ನು ಯಲ್ಲಿ ತುಂಬಿಕೊಂಡು ಸಾಮಾನ್ಯಜ್ಞಾನದಿಂದ ಮಕ್ಕಳು ವಂಚಿತರಾಗಿರುವ ಪ್ರಸಂಗಗಳೂ ಟು. ಪುಸ್ತಕ ಪಂಡಿತನಾದ ಹುಡುಗ ಇತರ ಹುಡುಗರನ್ನು ಹೀಯಾಳಿಸುವ ಸಂದರ್ಭಗಳನ್ನು ರೂ ಗಮನಿಸಿರುತ್ತಾರೆ. ಅಂತಹ ಧಿಮಾಕಿನ ಹುಡುಗರಿಗೆ ಸಾಮಾನ್ಯಜ್ಞಾನ ಪಡೆದುಕೊಂಡಿರುವ ಂಕನೊಬ್ಬ ಉತ್ತರಿಸುವ ರೀತಿ 'ನನಗ್ಯಾರು ಸಮಾನ?' ಎನ್ನುವ ಪದ್ಯದಲ್ಲಿದೆ. ಮಗುವೊಂದರ ವಿಶ್ವಾಸವನ್ನು ಗಿರೀಶ ಜಕಾಪುರೆ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ.

ಸೋಯ್ಂ ರೋಯ್ಂ
ಬೋಂ.. ಓ.. ಓ..
ನಮ್ಮ ಮನೆಯ ಮೇಲಿಂದ
ಹಾರಿಹೋಯ್ತು ವಿಮಾನ
ನನಗ್ಯಾರು ಸಮಾನ..?

ರಾಜುನ ಮನೆಯ ಮೇಲೆ
ವಿಮಾನ ಹಾರೋದಿರಲಿ..
ಗುಬ್ಬಿ ಕೂಡ ರೆಕ್ಕೆ ಬಿಚ್ಚೋದಿಲ್ಲ..!
ಭುರ್ ಭುರ್.. ಭುರಾರೇ ಭುರ್
ಆಗಾಗ ನಾಯಿಯೊಂದು ಕಾಣಿಸುತ್ತೆ

ಅದೂ ಕುಂಟ್ಕೊಂಡು ನಡೆಯುತ್ತೆ..!
ಬೌ ಬೌ ಬೌಬೌರೇ ಬೌ

ಹೀಗೆ ಸಾಗುವ ಪದ್ಯ ಮಿತ್ರರಿಬ್ಬರಲ್ಲಿಯ ಗೆಳೆತನ, ಹಗೆತನ, ಸ್ಪರ್ಧೆ, ಪ್ರತೀಕ್ಷೆ, ಪ್ರತೀಕಾರ ಮುಂತಾದ ಗುಣಲಕ್ಷಣಗಳನ್ನು ಪ್ರಕಟಿಸುತ್ತದೆ. ಮಕ್ಕಳ ಕಾಮನೆಗಳು ಗರಿಬಿಚ್ಚಿ ಹಾರುತ್ತವೆ. ವಿಮಾನಕ್ಕಿಂತಲೂ ವೇಗವಾಗಿ ಮುನ್ನುಗ್ಗುತ್ತವೆ. ಪದ್ಯಗಳನ್ನು ಅನುಸರಿಸಿ ಹೊರಡುವ ಲಯಬದ್ಧ ಕೇಕೆ, ನಾದ; ವಿಸ್ಮಯ-ಆಶ್ಚರ್ಯಗಳನ್ನು ಸೂಚಿಸುವ ಉದ್ಗಾರ; ಮನುಷ್ಯ ಹಾಗೂ ಪ್ರಾಣಿ ಜಗತ್ತನ್ನು ಬೆಸೆಯುವ ಮಾನವೀಯ ಕಾಳಜಿ ಇಲ್ಲಿಯ ಕವಿತೆಗಳನ್ನು ಆಪ್ಯಾಯಮಾನಗೊಳಿಸುತ್ತವೆ. 'ಅಪೇಶಿ ರಾಜ' ಎನ್ನುವ ಕವನ ಇದಕ್ಕೆ ಒಂದು ಒಳ್ಳೆಯ ಉದಾಹರಣೆಯಾಗಿದೆ.

ಟ್ರುಬ್ಯಾಂ ಟ್ರುಬ್ಯಾಂ ಟ್ರುಬ್ಯಾಂ
ದರ್ವೇಶಿ ಊರಿನ
ಅಪೇಶಿ ರಾಜನ ಹತ್ರ
ಇತ್ತು ಒಂದು ಎಮ್ಮೆ..!
ಒಂದು ಬಣಿವೆ ಹುಲ್ಲು
ತಿನ್ನುತ್ತಿತ್ತು ಒಮ್ಮೆ..!
ಅದು ಕೊಡ್ತಿರಲಿಲ್ಲ ಹಾಲು
ಕೊಟ್ಟಿಗೆ ತುಂಬ ಸೆಗಣಿ ಸಾಲು..!
ಟ್ರುಬ್ಯಾಂ ಟ್ರುಬ್ಯಾಂ ಟ್ರುಬ್ಯಾಂ

ಮಕ್ಕಳ ಗಂಟಲಿಂದ ಹೊರಡುವ ನೂರಾರು ಅರ್ಥರಹಿತ ಉದ್ಗಾರಗಳು-ಸ್ವರಗಳು ಇಲ್ಲಿ ಬಹಳಷ್ಟು ಅರ್ಥ ತುಂಬಿಕೊಂಡ ರಸಘಳಿಗೆಗಳಾಗಿವೆ. 'ಕನ್ನಂಬಾಡಿ ಕಟ್ಟೆ', 'ಕೋಲೆಬಸವಾ', 'ಹ್ಯಾಂಗ ಗೊತ್ತಾಗ್ತದ? ಹಾಳಾದ ನಿದ್ದಿ', 'ಇಲಿಮರಿ' ಮುಂತಾದ ಕವನಗಳು ಗಿರೀಶ ಅವರ ವೈವಿಧ್ಯಮಯ ಬರವಣಿಗೆಗೆ ಸಾಕ್ಷಿಯಾಗಿವೆ. ಐತಲಕಡಿ ತೈಕಲಕಡಿ ಜುಮ್ಮಾ ಎಂದು ಹೇಳುವಷ್ಟು ಚೈತನ್ಯವನ್ನು ಒಳಗೊಂಡಿವೆ. 'ನಾಯಿ ಪಿಂಟೂ ಆಗಿದ್ದು' ಧೀರ್ಘ ಕವನ ಓದುಗರ ಸಹನೆ ಬೇಡುತ್ತದೆ. ಇಷ್ಟನ್ನು ಬಿಟ್ಟರೆ ಅವರ ಪದ್ಯಗಳು ಮಕ್ಕಳ ಮನಸ್ಸು ಗೆಲ್ಲುವುದರಲ್ಲಿ ಸಂದೇಹವಿಲ್ಲ.

ಉತ್ತರ ಕರ್ನಾಟಕದ ಜೀವನಕ್ರಮ, ಅಲ್ಲಿಯ ಭಾಷೆ, ಗ್ರಾಮೀಣ ನಂಬಿಕೆ, ಮನೋವಿಕಾಸದ ಕಲ್ಪನೆ, ಕಲಿಕೆಯ ಹಂಬಲ ಮುಂತಾದವುಗಳನ್ನು ಸಮರ್ಥವಾಗಿ ಬಳಸಿಕೊಂಡಿರುವ ಈ ಪದ್ಯಗಳು ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಹೊಸನೀರು ಹರಿಸಿವೆ.

ಗಿರೀಶ್ ಜಕಾಪುರೆ ಅವರ 'ಜುಗ್ನು' ಪುಸ್ತಕದಲ್ಲಿ ಮಕ್ಕಳಿಗಾಗಿ ಒಂಭತ್ತು ಕತೆಗಳಿವೆ. ಪ್ರಬುದ್ಧ ಮಕ್ಕಳ ಕತೆಗಳೆಂದು ಅವರು ಹೇಳಿಕೊಂಡಿರುವುದರಿಂದ ಈ ಕತೆಗಳನ್ನು ಸುಮಾರು ೧೨ ರಿಂದ ೧೬ ವಯಸ್ಸಿನ ಮಕ್ಕಳು ಓದಿ ಸವಿಯುವಂತಹವರು ಎಂಬುದು ಓದಿದಾಗ ಗೊತ್ತಾಗುತ್ತದೆ. ಸ್ವಲ್ಪ ಬೆಳೆದ ಮಕ್ಕಳ ಮನಸ್ಸನ್ನು ಅರಿತುಕೊಂಡು ಮಕ್ಕಳ ಜಗತ್ತೊಂದನ್ನು ಸೃಷ್ಟಿಸಿಕೊಡುವಲ್ಲಿ ಗಿರೀಶ್ ಯಶಸ್ವಿಯಾಗಿದ್ದಾರೆ. ಹದಿಹರೆಯದ ಅನುಭವಗಳನ್ನು

ಲಕ್ಷ್ಯದಲ್ಲಿರಿಸಿಕೊಂಡು ಬರೆದ ಹಲವಾರು ಬರವಣಿಗೆಯ ತುಣುಕುಗಳು ದೊಡ್ಡವರ ಕಥೆ-ಕಾದಂಬರಿಗಳಲ್ಲಿ ಸಿಗುತ್ತವೆ. ಬಾಲ್ಯದ ಅನುಭವಗಳನ್ನು ಸರಕಾಗಿಸಿಕೊಂಡು ಸಹೃದಯರ ಸಂವೇದನೆಗಳನ್ನು ಕರಗಿಸಿರುವ ಅನೇಕ ಉದಾಹರಣೆಗಳನ್ನು ನೋಡಬಹುದು. ಹಿರಿಯರ ಸಾಹಿತ್ಯದಲ್ಲಿ ಬಾಲ್ಯದ ಅನುಭವಗಳಿಗೆ ವಿಶೇಷ ಮಹತ್ವವಿರುತ್ತದೆ. ಆ ಸಾಹಿತ್ಯ ಕೃತಿಯ ಅವಿಭಾಜ್ಯ ಅಂಗವಾಗಿ ಓದಿಸಿಕೊಳ್ಳುವ ಬಾಲ್ಯ ತಂದಿಡುವ ನೆನಪು, ಕತೆಗೆ ಒದಗಿಸುವ ತಿರುವು ಅಪ್ಯಾಯಮಾನವಾಗಿರುವಂತಹದು. ದೇವನೂರು ಮಹಾದೇವರ ಶಿವೂ ಗೋಡೆಗೆ ಬರೆದ ನವಿಲಾಗಿರಬಹುದು, ಶ್ರೀ ಕೃಷ್ಣ ಆಲನಹಳ್ಳಿಯವರ ಕಿಟ್ಟಿಯಾಗಬಹುದು, ಸಾಹಿತ್ಯದ ಜೀವವಾಗಿ ಹೊರಹೊಮ್ಮುವ ಇಂತಹ ಬಾಲ ಪಾತ್ರಗಳು ಮಕ್ಕಳ ಸಾಹಿತ್ಯದಲ್ಲಿ ಅಷ್ಟೇ ಜೀವಂತವಾಗಿ ಜನ್ಮ ತಾಳಲ್ಪಟ್ಟಿರುವುದು ಕನ್ನಡ ಮಕ್ಕಳ ಸಾಹಿತ್ಯದಲ್ಲಿರುವ ಕೊರತೆಯಾಗಿ ಕಾಣುತ್ತದೆ. ಅಂದರೆ ವಾಸ್ತವವಾದಿಯಾಗಿರುವ, ಹೃದಯ ಹಿಂಡುವ, ಬದುಕಿನ ಸಾಹಿತ್ಯವನ್ನು ಅನಾವರಣಗೊಳಿಸುವಂತಹ ಬರವಣಿಗೆ ಮಕ್ಕಳ ಸಾಹಿತ್ಯದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ನಮ್ಮಲ್ಲಿ ಮಕ್ಕಳ ಸಾಹಿತ್ಯವೆಂಬುದು ಬರಿ ಮಕ್ಕಳನ್ನು ನಕ್ಕುನಗಿಸುವ, ವಂಚನೆಗೀಡುಮಾಡುವ, ಫ್ಯಾಂಟಸಿ ಲೋಕಕ್ಕೆ ಕರೆದೊಯ್ಯುವ, ಆದರ್ಶದ ಉಪದ್ಯಾಪಕ್ಕೆ ಜೋತುಬೀಳುವ ಕತೆ-ಕವಿತೆಗಳಾಗಿ ಮಾರ್ಪಟ್ಟಿದೆ. ಫ್ಯಾಂಟಸಿ, ಜಾನಪದ ಬೇಡವೆಂದಲ್ಲ. ಆದರೆ ಅದು ಅತಿಯಾಗಿ ಮಕ್ಕಳ ಬರವಣಿಗೆಯೆಂಬುದು ಬರಿ ಪಂಚತಂತ್ರದ ಕತೆಗಳಾಗಿ, ರಾಜ-ರಾಣಿ ರಾಜಕುಮಾರರ ಅನುಭವಗಳ ಜೀವನದ ವಿವರಗಳಾಗಿ ಮಕ್ಕಳು ಸಂವೇದನಾಶೀಲ ಮತ್ತು ಸಾಂಸ್ಕೃತಿಕ ನೋಟಕ್ಕೆ ಎರವಾಗಿದ್ದಾರೆ. ಮಕ್ಕಳಲ್ಲಿ ಕದಿಯುವವರು, ಸುಳ್ಳರು, ದೇಹದ ಬೆಳವಣಿಗೆಗಳನ್ನು ಗಮನಿಸುತ್ತಿರುವವರು ಇಲ್ಲವೆಂದೇ ತಿಳಿಯಲಾಗುತ್ತಿತ್ತು.

ಹಳ್ಳಿಯಲ್ಲಿ ನಡೆಯುವ ಬಯಲಾಟ, ಸಣ್ಣಾಟಗಳ ಸಂಸ್ಕಾರಗಳ ವಿವರಗಳನ್ನು ಕೊಡುತ್ತಲೆ ಗ್ರಾಮೀಣ ಮಕ್ಕಳು ಅಂತಹ ನಾಟಕಗಳ ಪರಿಸರದಿಂದ ಮುಳುಗೆದ್ದು ಬಂದಿರುತ್ತಾರೆಂಬುದನ್ನು ಇದು ಸೂಚಿಸುತ್ತದೆ. ನಾಟಕದ ವಸ್ತುವನ್ನು ಬದುಕಿನೊಂದಿಗೆ ಸಮೀಕರಣ ಮಾಡಿಕೊಳ್ಳುವ ರಘು ಎನ್ನುವ ಈ ಕತೆಯಲ್ಲಿನ ಹುಡುಗ ತಾನೂ ಸಿಂಧೂರ ಲಕ್ಷ್ಮಣನಾಗಬೇಕು, ಶೌರ್ಯ ಸಾಹಸವನ್ನು ಮೆರೆಯಬೇಕು, ಅವನಂತಹ ನಾಯಕನನ್ನು ತನ್ನ ಜೊತೆಗಾರನನ್ನಾಗಿ ಮಾಡಿಕೊಳ್ಳಬೇಕು ಎಂಬ ಅಭಿಲಾಷೆ ಹೊಂದುತ್ತಾನೆ ಮತ್ತು ಆ ಆಸೆ ಈಡೇರಿಸಿಕೊಳ್ಳುವುದಕ್ಕಾಗಿ ಸ್ನೇಹಿತರ ಸಹಾಯ ಪಡೆಯುತ್ತಾನೆ. ಗುಡ್ಡದ ಅಂಚಿನಲ್ಲಿ ಗುಡ್ಡ ಕೆದರಿ ಗವಿ ಮಾಡಿಕೊಳ್ಳುವುದು, ತುಂಬು ಬಸಿರಿನ ನಾಯಿಯೊಂದಕ್ಕೆ ಬ್ರೆಡ್ಡಿನ ತುಣುಕು ಹಾಕಿ ಅದರ ಹಸಿವನ್ನು ನೀಗಿಸಲು ಯತ್ನಿಸುವುದು, ರವಿ ಮತ್ತು ಸ್ನೇಹಿತರು ತೋಡಿದ ಗವಿ ಆ ನಾಯಿಗೆ ಮಳೆಯಿಂದ ರಕ್ಷಣೆ ಪಡೆಯಲು ನೆರವಾಗುತ್ತದೆ. ಅದು ಹಾಕಿದ ಐದಾರು ನಾಯಿಮರಿಗಳ ಪೈಕಿ ಕಪ್ಪು ನಾಯಿಮರಿಯೊಂದನ್ನು ರಘು ಆಯ್ದುಕೊಂಡು ಸಿಂಧೂರ ಲಕ್ಷ್ಮಣನ ನಾಯಿಯ ಥರವೇ ತನ್ನ ನಂಬಿಗಸ್ಥ ನಾಯಿ ಎಂದು ಇನ್ನು ಬರದ ಮೀಸೆಯನ್ನು ತೀಡಿಕೊಳ್ಳುವುದು ಅತ್ಯಂತ ಸಹಜವಾಗಿ, ಕುತೂಹಲಕರವಾಗಿ ಮೂಡಿಬಂದಿದೆ.

ಕೃಷಿಕ ಕುಟುಂಬದ ವರ್ಣನೆಯಂತೂ ಬೀರಾ ಕಥೆಯಲ್ಲಿ ಅತ್ಯುತ್ತಮವಾಗಿದೆ. ಮನೆಯಲ್ಲಿನ ಹೊತ್ತಿದ ಅನ್ನದ ವಾಸನೆ, ರಘೂನ ಪ್ರೀತಿಯ ಕುರಿಮರಿ ಬೀರಾನ ಕೊರಳಲ್ಲಿಯ ಗಂಟೆಗಳ

ಗಿಲಿಗಿಲಿ ಶಬ್ದ, ಊರ ಜೋಗ್ಯಾರ ಅಂಗಡಿ ವಾಸನೆ, ಜಾತ್ರೆಯ ಮೋಜು, ದೀಪಾವಳಿ ಹಬ್ಬವನ್ನು ಆಚರಿಸಲು ಮದ್ದು ಇಲ್ಲದಿದ್ದುದಕ್ಕಾಗಿ ರಘುನ ಅಪ್ಪ ಬೀರಾನನ್ನೆ ಮಾರುವುದು, ಗೆಳೆಯ ಅಹಮ್ಮದ್‌ನ ಅಪ್ಪನೆ ಆ ಕುರಿಮರಿಯನ್ನು ಬಕರೀದ್ ಬಲಿಗಾಗಿ ಕೊಂಡುಕೊಳ್ಳುವುದು ಕಾಕತಾಳೀಯವಾಗಿದೆ. ಮುಂದೆ ಬೀರಾನ ಸಲುವಾಗಿ ರಘು ಊಟ, ಶಾಲೆ ಬಿಟ್ಟು ಹಾಸಿಗೆ ಹಿಡಿಯುವುದು, ಜೀವದ ಗೆಳೆಯ ಅಹಮದ್ ಅವರಪ್ಪನ ಮನವೊಲಿಸಿ 'ಬೀರಾ'ನನ್ನು ಮತ್ತೆ ರಘುವಿಗೆ ಮರಳಿ ಒಪ್ಪಿಸುವಾಗ ಗೆಳೆತನದಲ್ಲಿನ ತ್ಯಾಗದ ಸಂಕೇತವಾಗಿ ಪರಿಣಮಿಸುತ್ತದೆ. ರಘು ಮತ್ತು ಅಹಮದ್ ಹಿಂದೂ–ಮುಸ್ಲಿಂ ಸಮಾಜದ ಪ್ರತಿನಿಧಿಗಳಾಗಿ ನಿಂತರೆ ಆಶ್ಚರ್ಯವಿಲ್ಲ. ಭೀಮಾ ಮಾಸ್ತರರ ಹೊಡೆತಗಳ ಹೆದರಿಕೆ ಮಕ್ಕಳನ್ನು ಕನಸಿನಲ್ಲಿಯೂ ಕಾಡುತ್ತಿರುತ್ತದೆ.

ಬಡತನವನ್ನೇ ಹಾಸಿ ಹೊದ್ದಿರುವ ವಿಧವೆ ತಾಯಿ ಮತ್ತು ಅವಳ ಮಗ ವೆಂಕಟೇಶ ಜೀವನದಲ್ಲಿ ಸವಾಲುಗಳನ್ನು ಎದುರಿಸುವ ವಸ್ತು 'ಕುಲ್ಫಿ ಹುಡುಗ' ಎನ್ನುವ ಕಥೆಯಲ್ಲಿದೆ. ಶೆಗಣಿ ಹಿಡಿದು ಕುಳ್ಳು ಬಡೆದು ಒಣಗಿಸಿ ಅವುಗಳನ್ನು ಮಾರಿದಾಗಲೇ ಅವರಿಗೆ ಊಟಕ್ಕೆ ಗತಿ. ವೆಂಕಿ ಹತ್ತನೆ ಕ್ಲಾಸಿಗೆ ಹೆಜ್ಜೆಯಿಡುತ್ತಿದ್ದಾನೆ. ಟ್ಯೂಶನ್ ಹೋಗಲು ರೊಕ್ಕ ಹೊಂದಿಸಲು ಬರ್ಫ ಅಥವಾ ಆಯಿಸ್‌ಕ್ರೀಮ್ ಅಥವಾ ಕುಲ್ಫಿ ಮಾರಲು ತೊಡಗುತ್ತಾನೆ. ಸರಕಾರದವರು ಶಾಲೆ ಕಲಿಯಲು ಕೊಟ್ಟ ಸೈಕಲನ್ನು ಸೂಟಿಯಲ್ಲಿ ಬರ್ಫ ಮಾರಲು ಸ್ವಲ್ಪ ದುಡ್ಡು ಗಳಿಸುವ ಅನಿವಾರ್ಯತೆ ಈ ಹುಡುಗನಿಗೆ ಎದುರಾಗಿದೆ. ವೆಂಕಿ ಬಡ ಹುಡುನಾಗಿದ್ದರೂ ಆಯ್ಸ್‌ಕ್ರೀಮ್ ಮಾರುವಾಗ ಅವನು ನೋಡುವ ಬಡತನದ ಚಿತ್ರಗಳು ಆತನ ಮನಸ್ಸನ್ನು ಕಲಕುತ್ತವೆ. ಮಕ್ಕಳನ್ನು ಹೊಡೆಯುವ ಅಪ್ಪಂದಿರು, ಹೆಣ್ಣು ಮಕ್ಕಳನ್ನು ಕಾಡಿಸುವ ತಾಯಂದಿರು. ಬಡ ಹುಡುಗರನ್ನು ಗೋಳು ಹೊಯ್ದುಕೊಳ್ಳುವ ಮಾಲೀಕರು ಈ ಜಗತ್ತಿನಲ್ಲಿ ತುಂಬಿದ್ದಾರೆಂದು ಈ ಕಥೆ ವಿವರಿಸುತ್ತದೆ. ಒಂದು ಹುಡುಗಿಯನ್ನು ಕಂಡಾಗ ಕೌಟುಂಬಿಕ ಹಿಂಸೆಗೊಳಗಾದ ಹದಿಹರೆಯದ ವೆಂಕಿಯಲ್ಲಿ ಪ್ರೇಮದ ಭಾವನೆ ಮೂಡಿ ಅಷ್ಟೇ ಶೀಘ್ರವಾಗಿ ಮರೆಯಾಗುತ್ತದೆ. ವೆಂಕಿಯ ಅವ್ವ ಗೋಡೆಗೆ ತಟ್ಟಿದ ಕುಳ್ಳುಗಳು ಮ್ಯೂಸಿಯಂನಲ್ಲಿಯ ಢಾಲುಗಳಂತೆ ಗೋಚರಿಸುತ್ತಿದ್ದವು ಎಂದು ಲೇಖಕರು ಹೇಳಿರುವುದು ದೊಡ್ಡ ಪ್ರತಿಭಟನೆಯ ಸಂಕೇತವಾಗಿದೆ.

'ಸೂರ್ಯಶಿಕಾರಿ' ಮತ್ತು 'ರೈಟ್ ಬಂಡಿ' ಫ್ಯಾಂಟಸಿಯಿಂದ ಹೆಣೆದ ಕಥೆಗಳಾಗಿದ್ದು ಜನಪದ ರೂಪಕಗಳು ಧಾರಾಳವಾಗಿ ಬಳಕೆಯಾಗಿ ಮಕ್ಕಳ ಕಲ್ಪನಾಶಕ್ತಿಯನ್ನು ವಿಸ್ತರಿಸುವಂತಿವೆ. 'ಜುಗ್ನು' ಎಂಬ ಕಥೆ ಮಾತ್ರ ಭಿನ್ನವಾಗಿದ್ದು ಬಾಲಾಪರಾಧಿಗಳಾಗಿರುವ ಹುಡುಗರನ್ನು ತಿದ್ದುವ ಕೆಲಸದಲ್ಲಿ ಅನಾಥಾಶ್ರಮ ನಡೆಸುತ್ತಿರುವ ರಮಾನಂದತೀರ್ಥರು ಮಗ್ನರಾಗಿದ್ದಾರೆ. ಈ ಕರುಣಾಲಯದಲ್ಲಿ ಯಾರು ಎಷ್ಟೇ ಸುಧಾರಿಸಿದರೂ ಜುಗ್ನು ಮಾತ್ರ ತನ್ನನ್ನು ಸುಧಾರಿಸಲು ಯಾರಿಂದಲೂ ಸಾಧ್ಯವಿಲ್ಲವೆಂಬಂತೆ ಮತ್ತೆ ಮತ್ತೆ ತಪ್ಪುಗಳನ್ನು ಮಾಡುತ್ತ ಹೋಗುತ್ತಾನೆ. ಆದರೆ ಕೊನೆಗೆ ರಮಾನಂದತೀರ್ಥರು ಹುಡುಗನನ್ನು ಮಾರ್ಪಡಿಸುವಲ್ಲಿ ಯಶಸ್ವಿಯಾಗುತ್ತಾರೆ.

ಗಣೇಶ ಪಿ. ನಾಡೋರ

ಪ್ರಾಣಿಗಳನ್ನು ಪ್ರಧಾನವಾಗಿಟ್ಟುಕೊಂಡು ಮಕ್ಕಳ ಕತೆಗಳನ್ನು ಬರೆದಿರುವ ಗಣೇಶ ಪಿ. ನಾಡೋರರವರು ಇತ್ತೀಚೆಗೆ ತುಂಬ ಒಳನೋಟಗಳನ್ನು ಹೊಂದಿರುವ ಕಥಾಸಾಹಿತ್ಯ ನಿರ್ಮಾಣ ಮಾಡಿದ್ದಾರೆ. ಅವರ ಕತೆಗಳು ಬರೀ ರಂಜನೆಯ ಉದ್ದೇಶವನ್ನು ಇಟ್ಟುಕೊಳ್ಳದೆ

ಒಂದು ಮನೋಭಾವವನ್ನು ನಿರ್ಮಾಣ ಮಾಡುವ ಪರೋಕ್ಷ ಉದ್ದೇಶವನ್ನು ಹೊಂದಿವೆ. ಪರಂಪರೆಯನ್ನು ವರ್ತಮಾನದ ಸಂವೇದನೆಯಲ್ಲಿ ಅರಳಿಸುವ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ತುಂಬ ವಿಪುಲವಾಗಿ ಬರೆದಿರುವುದು ಕೂಡ ಹರೆಯದಲ್ಲಿ ಅವರು ಮಾಡಿರುವ ಸಾಧನೆಯಾಗಿದೆ. ಈವರೆಗೆ ಸುಮಾರು ಒಂಭತ್ತು ಕಥಾಸಂಗ್ರಹಗಳನ್ನು ಮಕ್ಕಳಿಗಾಗಿ ಪ್ರಕಟಿಸಿದ್ದಾರೆ. ಅವರ ಬಹುತೇಕ ಕೃತಿಗಳು ನವಕರ್ನಾಟಕ ಪ್ರಕಾಶನದಿಂದ ಪ್ರಕಟವಾಗಿದ್ದು 'ಬೆಳ್ಳಕ್ಕಿ ಮತ್ತು ಬುಲ್‌ಬುಲ್' (೨೦೦೩) ಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಪುರಸ್ಕಾರ ದೊರಕಿದೆ. 'ಪ್ರಾಣಿಗಳ್ಗಳು ಮತ್ತು ಮಯೂರ' ಪುಸ್ತಕ ೨೦೦೧ನೇ ಸಾಲಿನ ಬಿ.ಎಂ.ಶ್ರೀ ಪ್ರತಿಷ್ಠಾನದ ಸಾವಿತ್ರಮ್ಮ ದತ್ತಿ ಮಕ್ಕಳ ಸಾಹಿತ್ಯ ಪ್ರಶಸ್ತಿ ಗಳಿಸಿದೆ. 'ಪ್ರಾಣಿಪಕ್ಷಿಗಳ ಕಥೆಗಳು' (೧೯೯೮), 'ಮಕ್ಕಳ ಕಥೆಗಳು' (೧೯೯೮), 'ಮರಳಿ ಕಾಡಿಗೆ' (೨೦೦೦), 'ಕರಡಿಯ ದೊಡ್ಡತನ' (೨೦೦೦), 'ಕಾಡಿನ ಕಥೆಗಳು' (೨೦೧೧), 'ಮಾಯದ ಪುಗ್ಗಿ ಮತ್ತಿತರ ಕಥೆಗಳು' (೨೦೧೨) ಮುಂತಾದವು ಅವರ ಇತರ ಪ್ರಮುಖ ಸಂಕಲನಗಳಾಗಿವೆ. ನಾವು ಮೋಸ ಮಾಡಿದರೆ ನಮಗೆ ಮೋಸ ಮಾಡುವವರು ಯಾರಾದರೂ ಇದ್ದೇ ಇರುತ್ತಾರೆಂದು 'ಮೋಸ ಹೋದ ಕಾಗೆ' ಕತೆ ಹೇಳುತ್ತದೆ. ಕೋಗಿಲೆ ಮರಿಯನ್ನು ಕಾಗೆ ಬೆಳೆಸುವ ಪರಿಪಾಠವನ್ನು ಇಲ್ಲಿ ಇನ್ನೊಂದು ರೀತಿಯಲ್ಲಿ ಚಿತ್ರಿಸಲಾಗಿದೆ. ಕತೆಗಿಂತ ಪ್ರಕೃತಿಯ ವಿವರ, ಜೀವನಕ್ರಮದ ವಿಶ್ಲೇಷಣೆ ಮುಖ್ಯವೆಂದು ಗಣೇಶ ಭಾವಿಸುತ್ತಾರೆ: 'ತದಡಿ ಒಂದು ಸುಂದರವಾದ ಪ್ರಕೃತಿರಮ್ಯವಾದ ಕರಾವಳಿ ತೀರದಲ್ಲಿರುವ ಊರು. ತದಡಿಯ ಸಮುದ್ರ ತೀರದಲ್ಲಿ ನಿತ್ಯ ಸಂಜೆ ಹಲವು ಬೋಟುಗಳು, ಯಾಂತ್ರೀಕೃತ ದೋಣಿಗಳು ಮೀನು ತುಂಬಿಕೊಂಡು ನಿಲ್ಲುತ್ತವೆ. ಆಗ ಅಲ್ಲಿ ವಿಪರೀತ ಸದ್ದುಗದ್ದಲ. ಮೀನು ಮಾರುವವರ, ಕೊಳ್ಳುವವರ ಹಾಗೂ ಹೊರುವವರ ಗಡಿಬಿಡಿಯ ಚಟುವಟಿಕೆಗಳು ನಡೆಯುತ್ತವೆ. ಕೆಲವರು ಇಲ್ಲಿಂದ ಟ್ರಕ್ಕು ತುಂಬಿಕೊಂಡು ದೊಡ್ಡ ದೊಡ್ಡ ಪಟ್ಟಣ, ಊರುಗಳಿಗೆ ಮಾರಲು ಮೀನು ಒಯ್ದರೆ, ಮತ್ತೆ ಕೆಲವರು ಒಂದೊಂದು ಬುಟ್ಟಿ ಮೀನು ಖರೀದಿಸಿ ಹತ್ತಿರದ ಊರು, ಹಳ್ಳಿಗಳಿಗೆ ಮಾರಲು ಒಯ್ಯುತ್ತಾರೆ. ಹೀಗೆ ಮೀನುಗಳು ಸಮೃದ್ಧವಾಗಿ ಸಿಗುವ ಈ ಪ್ರದೇಶದಲ್ಲಿ ಕಾಗೆಯೊಂದು ವಾಸವಾಗಿತ್ತು...'

ಹಲವು ಅಪರಿಚಿತ ಪರಿಸರದ ನಿರೂಪಣೆಗಳಿಂದ ಗಣೇಶ ನಾಡೋರ ಅವರ ಕತೆಗಳು ಪ್ರಾಣಿ ಪಕ್ಷಿಲೋಕದ ಕಾಡಿನ ಚಿತ್ರಣವನ್ನು ನೀಡುವಲ್ಲಿ ಸಫಲವಾಗುತ್ತವೆ. ಸಜ್ಜನರನ್ನು ದುರ್ಜನರು ಹೇಗೆ ಕಬಳಿಸುತ್ತಾರೆನ್ನುವುದಕ್ಕೆ 'ಕಾಡಿನ ಕಥೆಗಳು' ಸಂಕಲನದ 'ಬೆಕ್ಕು ಮತ್ತು ಗಿಳಿ' ಕತೆ ನಿದರ್ಶನವಾಗಿದೆ.

ಒಂದು ದಿನ ಬೆಕ್ಕು ಮತ್ತು ಗಿಳಿ ಸಂಧಿಸಿದವು. ಬೆಕ್ಕು ಹೇಳಿತು : 'ಅರೆ! ಗಿಳಿ ನೀನು ಅದೆಷ್ಟು ಸುಂದರವಾಗಿರುವಿ. ನಿನ್ನ ಕೆಂಪು ತುಟಿ, ಕಂಗಳು, ಹಸುರು ಮೈ ಎಲ್ಲ ಅದೆಷ್ಟು ಸುಂದರ.' ಗಿಳಿ ಹೇಳಿತು : 'ಬೆಕ್ಕೇ, ನಿನ್ನ ಗಂಭೀರ ಮುಖ, ಬಣ್ಣಬಣ್ಣದ ಮೈ ಕೂಡ ಅಷ್ಟೇ ಸುಂದರ.'

ಆದರೆ ಮುಂದೆ ಬೆಕ್ಕು ಗಿಳಿಯನ್ನು ನಡೆಸಿಕೊಳ್ಳುವ ರೀತಿ, ತನ್ನ ಪದ್ಧತಿಯನ್ನೇ ಗಿಳಿಯೂ ಅನುಸರಿಸಬೇಕೆಂಬ ಅದರ ಹಟ, ಸರ್ವಾಧಿಕಾರ ಮತ್ತು ದುರಹಂಕಾರದ

ಸೂಚನೆಗಳಂತೆ ಮಕ್ಕಳಿಗೆ ಇಲ್ಲಿ ಕಾಣಸಿಗುತ್ತದೆ. ಸಾಮರಸ್ಯವಿರುವಲ್ಲಿ ವಿರಸ ಹೊಯ್ದಾಡಿದರೆ ದುರಂತ ಕಟ್ಟಿಟ್ಟ ಬುತ್ತಿ ಎನ್ನುವಂತೆ ಹೇಳಲಾಗಿದೆ. ಠಕ್ಕ ಬೆಕ್ಕು ಮುಗ್ಧ ಗಿಳಿಯ ಕತ್ತು ಹಿಸುಕಿ ನುಂಗುತ್ತದೆ. 'ಬೆದರುಬೊಂಬೆ' ಎನ್ನುವ ಕತೆಯಲ್ಲಿ ಹೊಲದಲ್ಲಿನ ಬೆದರುಬೊಂಬೆಯನ್ನು ಕುರಿ ಮತ್ತು ಮೊಲಕ್ಕೆ ತೋರಿಸಿ ತಾನು ಮಾತ್ರ ಬೆಳೆದುನಿಂತ ಪೈರನ್ನು ನುಂಗುತ್ತಿರುವ ಜಿಂಕೆಯೊಂದರ ಮೋಸತನವನ್ನು ಬಯಲಿಗೆಳೆಯಲಾಗಿದೆ. ಒಂದು ಬೆದರುಬೊಂಬೆಗೆ ಮತ್ತೊಂದು ಬೆದರುಬೊಂಬೆ ಸೃಷ್ಟಿಯಾಗುತ್ತದೆ. ಅವಕಾಶಗಳನ್ನು ತಮ್ಮ ಉಪಯೋಗಕ್ಕೆ ಮಾತ್ರ ಬಳಸಿಕೊಳ್ಳುವ ಸ್ವಾರ್ಥಗುಣವನ್ನು ಚಿತ್ರಿಸಲಾಗಿದೆ. ಮನುಷ್ಯ ಸ್ವಭಾವವನ್ನು ಇಲ್ಲಿ ಪ್ರಾಣಿಲೋಕಕ್ಕೆ ಆರೋಪಿಸಿ ಕತೆ ಹೆಣೆಯಲಾಗಿದೆ. ಸಣ್ಣಮೀನುಗಳನ್ನು ತಿನ್ನುತ್ತಿರುವ ದುಷ್ಟ ಶಾರ್ಕ್ ಮೀನಿನ ಕತೆಯಲ್ಲಿ ಶಾರ್ಕ್ ಮೊಸಳೆಗೆ ಹೇಗೆ ಆಹಾರವಾಗುತ್ತದೆಯೆಂಬುದನ್ನು ವಿವರಿಸಲಾಗಿದೆ. ಅಗತ್ಯವಿರುವಷ್ಟನ್ನು ಬಯಸದೆ ಅತಿಯಾಗಿ ಬಯಸಿದರೆ ಆಗುವ ಅನಾಹುತ ಇಲ್ಲಿದೆ. 'ಕರಡಿಯ ದೊಡ್ಡತನ' ಹೆಸರಿನ ಸಂಕಲನದಲ್ಲಿರುವ 'ಅಪರಿಚಿತರಿಂದ ಬಂದ ಆಪತ್ತು' ಕತೆ ಸ್ವಾರಸ್ಯಕರವಾಗಿದೆ. ಉತ್ತರ ಕನ್ನಡ ಜಿಲ್ಲೆಯವರಾದ ಗಣೇಶ ಪಿ. ನಾಡೋರರವರ ಕತೆಗಳಲ್ಲಿ ಮತ್ತೆ ಮತ್ತೆ ಬರುವ ಹುಡುಗನ ಹೆಸರು ಮಯೂರ. ಈ ಮಯೂರ ಒಮ್ಮೊಮ್ಮೆ ಅಂಜುಬುರುಕನೂ ಮತ್ತೊಮ್ಮೆ ಧೈರ್ಯಶಾಲಿಯೂ ಆಗಿರುತ್ತಾನೆ. ನಮ್ಮ ನೆರೆಮನೆಯ ಹುಡುಗನಂತೆ ಅವನು ಚಿತ್ರಿತವಾಗಿರುವುದು ವಿಶೇಷವಾಗಿದೆ. ಮಯೂರ ಈ ಕತೆಯಲ್ಲಿ ಕಾಡಿನಲ್ಲಿ ಹೊರಟಾಗ ಅಪರಿಚಿತರಿಂದ ತೊಂದರೆಗೆ ಸಿಕ್ಕಹಾಕಿಕೊಳ್ಳುವ ಪ್ರಸಂಗಗಳಿವೆ. ಮರದ ಹಣ್ಣು ಕಿತ್ತು ತಿನ್ನುತ್ತಿದ್ದಾಗ ವಿಚಿತ್ರ ಪ್ರಾಣಿಯೊಂದು ಬಂದು ಚಿನ್ನದ ದುಡ್ಡು ಕೇಳುವುದು, ಯಾರೋ ನರಭಕ್ಷಕ ಇವನಿಗೆ ಸಹಾಯ ಮಾಡುವ ನೆಪದಲ್ಲಿ ನಾಣ್ಯಕೊಟ್ಟು ಇವನನ್ನು ತಿನ್ನಲು ಸನ್ನದ್ಧನಾಗುವುದು, ಹುಡುಗ ಓಡಿಹೋಗಿ ಕುದುರೆ ಸವಾರನೊಬ್ಬನ ಕುದುರೆಯ ಮೇಲೆ ಹತ್ತಿ ಪಾರಾಗುವುದು, ಕೊನೆಗೆ ಆತ ದರೋಡೆಕಾರನಾಗಿರುವುದು ಕುತೂಹಲಕರವಾಗಿ ಮತ್ತು ಅಷ್ಟೆ ಕಲಾತ್ಮಕವಾಗಿ ಚಿತ್ರಿತವಾಗಿದೆ. ಮಕ್ಕಳು ಎದುರಿಸುವ ಅಪಾಯಗಳನ್ನು ಸಹಜ ರೀತಿಯಲ್ಲಿ ಕಟ್ಟಿಕೊಡಲಾಗಿದೆ. ಪ್ರಾಣಿಕತೆಗಳಲ್ಲಿ ಪ್ರಾಣಿಗಳಿಗೆ ಒದಗುವ ಸಂಕಷ್ಟಗಳನ್ನು ವಿವರಿಸಲಾಗಿದೆ. ಪುಟ್ಟ ಪ್ರಾಣಿಗಳು ದೊಡ್ಡ ಪ್ರಾಣಿಗಳಿಂದ ಎದುರಿಸುವ ಅಪಾಯಗಳನ್ನು ಕೂಡ ಗಣೇಶ ಹೇಳುತ್ತಾರೆ.

'ಪ್ರಾಣಿಗಳ್ಳರು ಮತ್ತು ಮಯೂರ' ಕೃತಿಯಲ್ಲಿ ಮಯೂರನ ಸಾಹಸವಿದೆ. ಅವನ ಕಲ್ಪನಾಶಕ್ತಿ ಅಗಾಧವಾಗಿದೆ. ಪರಿಸರದ ಕತೆಯನ್ನು ಮಕ್ಕಳ ಮನಸ್ಸಿಗೆ ನಾಟುವಂತೆ ಹೇಳುವುದು ಗಣೇಶ ಅವರ ವಿಶಿಷ್ಟತೆಯಾಗಿದೆ. 'ಬೆಳ್ಳಕ್ಕಿ ಮತ್ತು ಬುಲ್‌ಬುಲ್' ಸಂಕಲನದಲ್ಲಿ ಹದಿನೆಂಟು ಕತೆಗಳಿದ್ದು ಅಲ್ಲಿಯೂ ಮನುಷ್ಯನಿಗೆ ಅಗತ್ಯವಾದ ನಿಸರ್ಗದ ಚಿತ್ರಣವಿದೆ. ಪ್ರಕೃತಿ, ಸುತ್ತಲಿನ ಪರಿಸರ, ಮನುಷ್ಯರ ಬದುಕು ಇಲ್ಲಿ ಅನಾವರಣಗೊಳ್ಳುತ್ತವೆ. ಕಾಡು ನೋಡದ, ಕಾಡಿನ ಬಗ್ಗೆ ಅರಿಯದ ವಿದ್ಯಾರ್ಥಿಗಳಿಗೆ ಈ ಪುಸ್ತಕಗಳು ತುಂಬ ವಿವರಗಳನ್ನು ನೀಡುತ್ತವೆ. ಬೆಳ್ಳಕ್ಕಿ ಕತೆಯಲ್ಲಿ ಪಕ್ಷಿಗಳ ಬದುಕಿನ ರೀತಿಯನ್ನು ವಿವರಿಸಿದ್ದಾರೆ. ಹಕ್ಕಿಗಳ ವಲಸೆಯ ಕ್ರಮವನ್ನು ವೈಜ್ಞಾನಿಕ ವಿವರಗಳೊಂದಿಗೆ ಕುತೂಹಲಭರಿತ ಶೈಲಿಯಲ್ಲಿ ಕಟ್ಟಿಕೊಟ್ಟಿರುವುದು ಬಹಳಷ್ಟು ಮೆಚ್ಚತಕ್ಕ ಅಂಶವಾಗಿದೆ. ಉದ್ದವಲ್ಲದ ವಾಕ್ಯಸರಣಿ, ಸಹಜ ಸಂಭಾಷಣೆ, ಪ್ರಾಣಿಲೋಕದ

ಸಿಟ್ಟು-ಸೆಡವು, ನಿಗೂಢ ಜೀವನಕ್ರಮವನ್ನು ವಿವರಿಸುವ ಶೈಲಿ ಈ ಪುಸ್ತಕವನ್ನು ಅಪ್ಯಾಯಮಾನವಾಗಿಸುತ್ತವೆ.

'ಮಾಯದ ಪುಗ್ಗಿ' ಸಂಕಲನದಲ್ಲಿ ಹದಿಮೂರು ಕತೆಗಳಿದ್ದು ಸಾಮಾನ್ಯವಾಗಿ ಗರ್ವಭಂಗದ ಆಶಯವನ್ನು ಹೊತ್ತುಕೊಂಡಿವೆ. ಹೆಬ್ಬಾವಿನ ಸೊಕ್ಕು ಮುರಿಯುವುದು, ಅಣ್ಣನ ದುರಾಸೆ ತಿಳಿದುಬರುವುದು, ತಂದೆ-ತಾಯಿಯರ ಅತಿಯಾಸೆಯಿಂದ ಮಕ್ಕಳು ಮಾಯವಾಗುವುದು ಇಲ್ಲಿದೆ. ಆಧುನಿಕ ಬಲೂನ್ ಹಿಡಿದುಕೊಂಡು ಆಕಾಶಕ್ಕೆ ಏರಿದ್ದ ಮಕ್ಕಳು ತಂದೆ-ತಾಯಿಯರಿಗೆ ಬುದ್ಧಿ ಬಂದ ಮೇಲೆ ದೊಪದೊಪನೆ ನೆಲಕ್ಕೆ ಬಿದ್ದು ಸಂತೋಷ ತರುತ್ತಾರೆ.

'ನೆಗೆತ' (ಕಾವ್ಯಕಲಾ ಪ್ರಕಾಶನ, ಬೆಂಗಳೂರು-೨೦೧೫) ಎನ್ನುವ ಹೆಸರಿನ ಗಣೇಶ ನಾಡೋರರ ಕಾದಂಬರಿ ಇತ್ತೀಚಿನ ದಿನಗಳಲ್ಲಿ ಬಂದ ಒಂದು ಒಳ್ಳೆಯ ಕೃತಿಯೆಂದು ಹೇಳಬಹುದು. 'ನೆಗೆತ' ಎನ್ನುವುದು ಗಣೇಶ ಅವರ ಇಲ್ಲಿಯತನಕ ಮಾಡಿದ್ದಕ್ಕೂ ಮತ್ತು ಈ ಹೊಸ ಬರವಣಿಗೆಗೂ ಸಂಬಂಧಿಸಿದ್ದಾಗಿದೆ ಎನ್ನುವಷ್ಟರಮಟ್ಟಿಗೆ ಇದು ಭಿನ್ನವಾಗಿದೆ. ಇಷ್ಟು ದಿನ ಅವರು ಮಾಡುತ್ತಿದ್ದ ಪ್ರಾಣಿಕತೆಗಳಿಗೂ ಮತ್ತು ಇಲ್ಲಿಯ ವಾಸ್ತವ ಬರವಣಿಗೆಗೂ ಬಹಳಷ್ಟು ಅಂತರವಿದೆ ಹಾಗೂ ಒಂದು ಎತ್ತರದ ನೆಗೆತವನ್ನು ಸಾಧಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ ಎನ್ನಬಹುದು. 'ನೆಗೆತ'ದ ಒಂದು ಮುಖ್ಯ ಆಕರ್ಷಣೆಯೆಂದರೆ ಅವರ ಸುಲಲಿತ ಮತ್ತು ಚುರುಕು ಭಾಷೆ. ಕಣ್ಣಿಗೆ ಕಟ್ಟುವಂತಹ ವಿವರಗಳು. ಭಾಷೆಯಲ್ಲಿ ಬೆರೆತುಹೋಗಿರುವ ವಸ್ತು: "ನಾನು ಎಷ್ಟೋ ಸಾರಿ ಹೆಲಿಕಾಪ್ಟರ್ ಮೂಲಕ ಆಕಾಶಕ್ಕೆ ನೆಗೆದಿದ್ದರೂ, ಪ್ರತಿಸಲ ಹಾರುವಾಗ ಹೊಸದಾಗಿ ಹಾರುವಂತೆಯೇ ರೋಮಾಂಚನಗೊಳ್ಳುತ್ತೇನೆ. ಮೇಲೆ ಮೇಲೆ ಹೋಗುತ್ತಿರುವಂತೆ ಕಡ್ಡಿಪೊಟ್ಟಣದಂತಾಗುವ ಮನೆಗಳು, ಹಾವಿನಂತೆ ಕಾಣುವ ರಸ್ತೆಗಳು, ಎದುರಿಗೆ ಸಿಗುವ ಸಮುದ್ರದ ಬಿಳಿಬಣ್ಣದ ಹಕ್ಕಿಗಳು, ತುಂಡು ತುಂಡು ಮೋಡಗಳು, ಪಶ್ಚಿಮದಲ್ಲಿ ನೀಲಿಯಾಗಿ ಹರಡಿಕೊಂಡಿರುವ ಸಮುದ್ರ... ಹಸಿರು ಸೀರೆಯ ಸೆರಗಿನಂತೆ ಕಾಣುವ ಸಹ್ಯಾದ್ರಿ ಬೆಟ್ಟಗಳನ್ನು ನೋಡುತ್ತಿದ್ದಂತೆ ಸ್ವಲ್ಪ ಭಾವುಕನಾಗುತ್ತೇನೆ. ಯಾಕೆಂದರೆ ಅಲ್ಲಿ ಎಲ್ಲೋ ಮರೆಯಲ್ಲಿರುವ ನಾನು ಹುಟ್ಟಿ ಬೆಳೆದ ಊರು ಯಲ್ಲಾಪುರ ನೆನಪಾಗಿ ಕಣ್ಣಲ್ಲಿ ನೀರಾಡುತ್ತದೆ...'

'ನೆಗೆತ' ಕಾದಂಬರಿಯ ಕಥಾನಾಯಕ ಕಾರವಾರದ ವಾಯುಸೇನೆಯ ಓರ್ವ ಪೈಲಟ್ ಆಗಿದ್ದಾನೆ. ಸೇನಾ ನೆಲೆಯಿಂದ ದಿನಾಲು ನಾಲ್ಕೈದು ಸಲ ಪೆಟ್ರೋಲಿಂಗ್ ಮಾಡುವುದು ಅವನ ಕಾಯಕವಾಗಿದೆ. ಅವನು ತನ್ನ ವೃತ್ತಿಯನ್ನು ಹೇಳಿಕೊಳ್ಳುತ್ತ ಬಾಲ್ಯಕಾಲವನ್ನು ತೆರೆದಿಡುವುದು ಕುತೂಹಲ ಹುಟ್ಟಿಸುತ್ತದೆ. ಅವನು ಬೆಳೆದುಬಂದ ಪರಿಸರ, ಕಾಲ, ಜನಜೀವನ, ಗೆಳೆಯರು ಅರ್ಥವತ್ತಾಗಿ ಹಾಗೂ ಚಿತ್ರವತ್ತಾಗಿ ಮೂಡಿಬಂದು ಮಕ್ಕಳನ್ನು ರಂಜಿಸುವುದರಲ್ಲಿ ಸಂದೇಹವಿಲ್ಲ. ಸಣ್ಣವನಿದ್ದಾಗ ಪೈಲಟ್ ಆಗಬೇಕೆಂಬ ಆಸೆ ಅವನಲ್ಲಿ ಮೂಡಿದುದು, ಬಡತನದ ಬೇಗೆಯಲ್ಲಿ ಮನಸ್ಸು ಕನಲುವುದು, ತಂದೆ-ತಾಯಿಯನ್ನು ಗೋಳು ಹೊಯ್ದುಕೊಳ್ಳುವುದು ಯಥಾರ್ಥ ಮೂಡಿಬಂದಿವೆ. ಕನಸಿನ ತತ್ತಿಗೆ ಕಾವು ಕೊಟ್ಟು ತಾನು ಹೇಗೆ ಪೈಲಟ್ ಆದೆ ಎನ್ನುವುದನ್ನು ಓದುಗರ ಮುಂದೆ ಕತೆಯ ಹೀರೋ ಇಡುತ್ತ ಹೋಗುತ್ತಾನೆ. ನೆಲವಿಲ್ಲದೆ ಮುಗಿಲಿಲ್ಲ ಎನ್ನುವ ಸತ್ಯವನ್ನೂ ಅವನು ಅರ್ಥ ಮಾಡಿಕೊಂಡಿದ್ದಾನೆ.

ಬಡತನ ಇವನ ಮನೆಯನ್ನು ಕಿತ್ತು ತಿನ್ನುತ್ತಿದ್ದರೂ ಓದಿನಲ್ಲಿ ಆಸಕ್ತಿವಹಿಸಿ ಕಷ್ಟಗಳನ್ನು ಮೀರುತ್ತಾನೆ. ಪ್ರಾಣಿ-ಪಕ್ಷಿಗಳೆಂದರೆ ಅವನಿಗೆ ತುಂಬ ಪ್ರೀತಿ. ಹಾರುವುದೆಂದರೆ, ನೆಗೆಯುವುದೆಂದರೆ ಅವನಿಗೆ ಎಲ್ಲಿಲ್ಲದ ಆಸಕ್ತಿ. ಒಂದು ಹಾರುವ ಏತಿಯನ್ನು ಹಿಡಿದು ಸಾಕುತ್ತಾನೆ. ಶಿಕ್ಷಕರು ಶಾಲೆಯಲ್ಲಿ ಅದರ ಬಗ್ಗೆ ಪಾಠ ಮಾಡಿದಾಗ ಆಸಕ್ತಿ ಅತ್ಯಾಸಕ್ತಿಯಾಗಿ ಪರಿವರ್ತಿತವಾಗುತ್ತದೆ. ಕೊನೆಗೆ ಕಾರವಾರದ ಕಡಲ ತಡಿಯಲ್ಲಿ ನೌಕಾನೆಲೆಯ ಅಧಿಕಾರಿಯಾಗಿ ಉದ್ಯೋಗ ಸಿಕ್ಕಿದಾಗ ಅವನ ಭಾಗ್ಯದ ಬಾಗಿಲು ತೆರೆಯುತ್ತದೆ. ಪರಿಶ್ರಮಕ್ಕೆ ತಕ್ಕ ಫಲ ಸಿಗುತ್ತದೆ. ತನ್ನಲ್ಲಿದ್ದ ಹಾರುವ ಏತಿಯನ್ನು ಪಂಜರದಿಂದ ಹೊರಗೆ ಬಿಡುತ್ತಾನೆ. ಅದು ಗಿಡವೇರಿ ಗಾಳಿಯಲ್ಲಿ ಲೀನವಾದಾಗ ಸಂತಸಪಡುತ್ತಾನೆ. ಪರಿಸರವನ್ನು ಭಾಷೆಯಲ್ಲಿ ಮಕ್ಕಳಿಗೆ ಕುತೂಹಲಕರವಾಗಿ ಕಟ್ಟಿಕೊಡುವುದು ಗಣೇಶ ನಾಡೋರರಿಗೆ ಸಿದ್ಧಿಸಿದೆ. ಆಕಾಶದಲ್ಲಿ ಹಾರಾಟ, ನೆಲಕ್ಕಿಳಿದ ಆಕಾಶದ ಹಕ್ಕಿ, ಹಾರುವ ಬಯಕೆ, ಗೋವಿಂದಜ್ಜನ ತರ್ಕ, ಸತ್ಯದ ಶಕ್ತಿ, ಧಡಿಯನ ಬೆದರಿಕೆ, ಸಿಡಿಮಿಡಿ ಅಮ್ಮ, ಅಪ್ಪನ ಪಾಡು, ಮಾಸ್ತರರ ಕ್ಷಮೆ, ಓತಿ ನೆಗೆಯಿತು ಮುಂತಾಗಿ ೧೬ ಅಧ್ಯಾಯಗಳಲ್ಲಿ ಕಾದಂಬರಿ ಸ್ವಾರಸ್ಯಕರವಾಗಿ ಹರಡಿಕೊಂಡಿದೆ.

ಕಂನಾಡಿಗಾ ನಾರಾಯಣ

ಕತೆಗಾರ ಕಂನಾಡಿಗಾ ನಾರಾಯಣ ಮಕ್ಕಳಿಗಾಗಿ 'ಹುಲಿಯ ಹೆಜ್ಜೆ'(೨೦೦೪) ಎಂಬ ಕಾದಂಬರಿಯನ್ನು, 'ಆನೆ ಬಂತೊಂದಾನೆ' (೨೦೦೨) ಎಂಬ ನೀಳ್ಗತೆಯನ್ನು, 'ನವಿಲುಗಿರಿ' (೨೦೧೪) ಎಂಬ ಕಥಾ ಸಂಗ್ರಹವನ್ನು ಪ್ರಕಟಿಸಿದ್ದಾರೆ. 'ಹುಲಿಯ ಹೆಜ್ಜೆ' ಕಾದಂಬರಿ ಮಕ್ಕಳಿಗೆ ಪ್ರಿಯವಾಗಬಲ್ಲ ವಸ್ತು-ಭಾಷೆಗಳಿಂದೊಡಗೂಡಿ ಆಕರ್ಷಕವಾಗಿದೆ.

'ಆನೆ-ಬಂತೊಂದಾನೆ' ನೀಳ್ಗತೆ ತುಂಬ ಸೊಗಸಾಗಿ ನಿರೂಪಿಸಲ್ಪಟ್ಟಿದ್ದು ಕುತೂಹಲಭರಿತ ದೃಶ್ಯಗಳಿಂದ ಯಾರನ್ನಾದರೂ ತಣಿಸುವಂತಿದೆ. ಅವರ ಕತೆಗಳು ಕೂಡ ಹೃದ್ಯವೂ ವಾಸ್ತವವೂ ಆಗಿ ಮಕ್ಕಳ ಮನೋಲೋಕಕ್ಕೆ ಕನ್ನಡಿ ಹಿಡಿಯುತ್ತವೆ. ಹೀಗೆ ವಿಶಿಷ್ಟವಾಗಿ ಮಕ್ಕಳ ಸಾಹಿತ್ಯವನ್ನು ರಚಿಸಿದರೂ ಕಂನಾಡಿಗಾ ನಾರಾಯಣ ಅವರ ಪುಸ್ತಕಗಳು ಚರ್ಚೆಯಾಗಿಲ್ಲದಿರುವುದು, ಅಗತ್ಯ ವಿಮರ್ಶೆ-ಪರಿಚಯ ಕಂಡಿಲ್ಲದಿರುವುದು ಆಶ್ಚರ್ಯದ ಮಾತಾಗಿದೆ.

ನಮ್ಮಲ್ಲಿರುವ ಮಕ್ಕಳ ಕತೆಗಳು ತುಂಬಾ ಗಂಭೀರವೂ ಉಪದೇಶಾತ್ಮಕವೂ ಆಗಿ ಜಡವಾಗಿರುವುದನ್ನು ನಾವು ನೋಡುತ್ತೇವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕಂನಾ ಅವರ ಬರವಣಿಗೆ ವಿನೋದಪ್ರಿಯವೂ ತಮಾಷೆ – ಹೆದರಿಕೆ – ಕಚಗುಳಿಗಳಿಂದ ಕೂಡಿದ್ದೂ ಆಗಿ ಮಕ್ಕಳ ಸಾಹಿತ್ಯಕ್ಕೆ ಲವಲವಿಕೆಯನ್ನು ತುಂಬುವಂತಿದೆ.

ಸೋಮು ಮತ್ತು ರಾಮು ಎಂಬ ಬಾಲಕರ ಸಾಹಸದ ಕೆಲಸವನ್ನು ನಿರೂಪಿಸುವ 'ಹುಲಿಯ ಹೆಜ್ಜೆ' ಕಾದಂಬರಿ ಪ್ರಾರಂಭದಿಂದ ಕೊನೆಯವರೆಗೂ ಸ್ವಾರಸ್ಯಕರವಾಗಿ ನಿರೂಪಿತಗೊಂಡಿದೆ. ಕುತೂಹಲವನ್ನು ಉಳಿಸಿಕೊಳ್ಳುತ್ತದೆ. ಕುತೂಹಲ ಎಂದಾಕ್ಷಣ ಅದು ಪತ್ತೇದಾರಿ ಮಾದರಿಯ ಬರವಣಿಗೆಯಲ್ಲ. 'ಹುಲಿಯ ಹೆಜ್ಜೆ' ಯಲ್ಲಿ ಸೋಮು ಮತ್ತು ರಾಮು ಮಾಡುವುದು ಪತ್ತೇದಾರಿಕೆಯೆ ಆಗಿದ್ದರೂ ಅದನ್ನು ಹೆಣೆದ ತಂತ್ರ ಸಿದ್ಧ ಮಾದರಿಯಿಂದ

ಕಾದಂಬರಿಯನ್ನು ರಕ್ಷಿಸಿದಂತಿದೆ. ಮೇಲಾಗಿ ಕಾಡಿನಲ್ಲಿ ಮೂಡುವ ಹೆಜ್ಜೆಗಳು ಹುಲಿಯ ಹೆಜ್ಜೆಗಳೆ ಎನಿಸುವಷ್ಟರ ಮಟ್ಟಿಗೆ ಕತೆ ವಾಸ್ತವವಾಗುತ್ತ ಹೋಗುತ್ತದೆ. ಕೊನೆಗೆ ಹುಲಿಯ ಘರ್ಜನೆ ಮತ್ತು ಹುಲಿಹೆಜ್ಜೆಗಳು ಆ ಊರಗೌಡನ ಮೋಸದ ತಂತ್ರಗಳು ಎಂದು ತಿಳಿದಾಗ ಮಕ್ಕಳು ಆ ಸಾಹಸಮಯ ಬರವಣಿಗೆಯನ್ನು ಮೆಚ್ಚುವುದರಲ್ಲಿ ಸಂಶಯವಿಲ್ಲ.

ಶಿವಮೊಗ್ಗದ ಗಾಡಿಕೊಪ್ಪ ಎನ್ನುವ ಹೆಸರಿನ ಊರು ಮತ್ತು ಅದರ ಸುತ್ತಮುತ್ತ ನಡೆಯುವ ವಿವರಗಳು ಮಲೆನಾಡು ಮತ್ತು ಅಲ್ಲಿಯ ಜೀವನಕ್ರಮದ ವಿವರಗಳನ್ನು ಬಿಡಿಸಿಡುತ್ತಲೆ ಲೇಖಕರ ಉದ್ದೇಶಿತ ಲಕ್ಷ್ಯವನ್ನು ಸಾಧಿಸುತ್ತ ಹೋಗುವುದು ಈ ಕೃತಿಯ ಹೆಚ್ಚುಗಾರಿಕೆಯಾಗಿದೆ.

ಸೋಮು ಪ್ರತಿನಿಧಿಸುವ ಪ್ರಾಮಾಣಿಕ ಹಾಗೂ ಮುಗ್ಧ ಲೋಕ ಮತ್ತು ಕರಿಗೌಡ ಪ್ರತಿನಿಧಿಸುವ ಕಪಟಲೋಕವನ್ನು ಬೆರೆಸಿರುವ ಕ್ರಮ ವಿಶಿಷ್ಟವಾಗಿದೆ. ವಿನೋದ ಶೈಲಿ ಈ ಬರವಣಿಗೆಯನ್ನು ಪ್ರಿಯವಾಗಿಸುತ್ತದೆ. ಬೇಸರ ಹತ್ತಿರ ಸುಳಿಯಲು ಆಸ್ಪದ ಕೊಡದೆ ಲೇಖಕರು ವಾಸ್ತವ ರೀತಿಯಲ್ಲಿ ಬಾಲಕನ ಬಡತನದ ವಿವರಗಳನ್ನು ಚಿತ್ರಿಸುತ್ತಾರೆ. ಸಾಹಸ ಪ್ರಧಾನ ರಮ್ಯ ಕತೆಯಂತೆ ಅನಿಸಿದರೂ ಕಟು ವಾಸ್ತವದ ವಿಶ್ಲೇಷಣೆ ಕಾದಂಬರಿಯಲ್ಲಿ ಅಡಕವಾಗಿದೆ. ಸೋಮು ಶಾಲೆ ಬಿಟ್ಟು ತನ್ನ ದೂರದ ಹಳ್ಳಿಗೆ ಹೋಗುತ್ತಾನೆ. ಯಾರದೋ ಸಂಬಂಧಿಕರ ಮನೆಯಲ್ಲಿ ಇದ್ದುಕೊಂಡು ಓದುತ್ತಿದ್ದ ಆತನಿಗೆ ಮನೆಯ ಪರಿಸ್ಥಿತಿಯ ಅರಿವಿದೆ: 'ಸಾರ್, ನಾವು ಬಡವರು. ಬೆಳಗ್ಗಿಗೆ ಇದ್ದರೆ ರಾತ್ರಿಗೆ ಇಲ್ಲ. ರಾತ್ರಿಗೆ ಇದ್ದರೆ ಬೆಳಗ್ಗಿಗೆ ಇಲ್ಲ. ದಿನಕ್ಕೆ ಒಂದೊತ್ತಿನ ಊಟ ಮಾಡೋದೂ ಕಷ್ಟವಾಗಿದೆ. ಊಟಕ್ಕೇ ಇಲ್ಲದಿರುವಾಗ ಫೀಜನ್ನು ಎಲ್ಲಿಂದ ತಂದು ಕೊಡಲಿ ಸಾರ್....'

ಚೆನ್ನಾಗಿ ಓದುತ್ತಿರುವ ಹುಡಗನಿಗೆ ಸಹಾಯ ಮಾಡುವ ಮನಸ್ಸು ಹೆಡ್ ಮಾಸ್ತರರಿಗೆ ಇರುವುದಾದರೂ ಎಷ್ಟು ಜನಕ್ಕೆ ಅಂತ ಹೀಗೆ ತಾನು ಫೀ ಕಟ್ಟುತ್ತ ಹೋಗಬೇಕು ಎಂದು ಅವರಿಗೆ ಅನಿಸುವುದು ಸ್ವಾಭಾವಿಕವಾಗಿದೆ. ಅದಕ್ಕಾಗಿಯೆ ಅವರು ನಾಳೆಗೆ ಫೀ ಕಟ್ಟದಿದ್ದರೆ ಪರೀಕ್ಷೆಗೆ ಕೂಡ್ರಿಸುವುದಿಲ್ಲ ಎಂದು ಗದರಿಸಿ ಕಳಿಸುತ್ತಾರೆ. ಅವನು ಹೋದ ತಕ್ಷಣ ಪಾಪ, ಅವನಿಗೆ ಹಾಗೆ ಗದರಬಾರದಿತ್ತು ಎಂದು ಅವರಿಗೆ ಅನಿಸುತ್ತದೆ. ಇರಲಿ, ನಾಳೆ ಅವನನ್ನು ಸಮಾಧಾನಪಡಿಸಿ, ಅವನ ಫೀಯನ್ನು ತಾವೇ ತುಂಬುವ ನಿರ್ಧಾರ ಮಾಡುತ್ತಾರೆ. ಬೇರೆ ಕೆಲಸದ ಕಡೆ ತಮ್ಮ ಗಮನ ಹರಿಸುತ್ತಾರೆ. 'ನಾಳೆ'ಗಾಗಿ ಕಾದರು. ಆದರೆ ಸೋಮು ಬರಲೇ ಇಲ್ಲ. ಮಾಸ್ತರರ ಸಹಾನುಭೂತಿಯಿದ್ದರೂ ಹುಡುಗ ಹೋಗಿಬಿಟ್ಟಿರುವುದು ಓದುಗರ ಮನಸ್ಸನ್ನು ಕಲಕುತ್ತದೆ. ಗುರುಗಳು ಹೇಳಿದ ಹಾಗೆ ಅಳುತ್ತಾ ಕುಳಿತರೆ ಪ್ರಯೋಜನವಿಲ್ಲವೆಂದು ಅರಿತ ಸೋಮು ಹೊಟ್ಟೆ ಹೊರೆಯಲು ಮತ್ತು ತನ್ನ ಅನ್ನವನ್ನು ತಾನೆ ಸಂಪಾದಿಸಲು ಊರಿಗೆ ಹೊರಡುವ ನಿರ್ಧಾರ ಮಾಡುತ್ತಾನೆ. ಮನೆಯಲ್ಲಿರುವ ಎಂಟ್ಹತ್ತು ಆಕಳುಗಳನ್ನು ಮೇಯಿಸಿ, ಹಾಲು ಕರೆದು, ಮಾರಿ ದುಡ್ಡು ಗಳಿಸುವ ಯೋಜನೆ ಅವನ ಪುಟ್ಟ ಮನಸ್ಸಿನಲ್ಲಿ ಹುಟ್ಟಿಕೊಳ್ಳುತ್ತದೆ. ಶಾಲೆಯನ್ನು ಬಿಟ್ಟು ಹೋಗುತ್ತಿರುವುದಕ್ಕೆ ಅವನಲ್ಲಿ ಯಾವ ಕಹಿಭಾವನೆಯೂ ಇಲ್ಲ. ಬದಲಾಗಿ ಊರಿಗೆ ಬಂದ ಮೇಲೆ ಮನೆಯ ಪರಿಸ್ಥಿತಿಗೆ ಅವನು ತುಂಬ ಸರಳವಾಗಿ ಹೊಂದಿಕೊಳ್ಳುತ್ತಾನೆ. ಊರು ಅವನಿಗೆ ಆಪ್ತವಾಗುತ್ತದೆ. ರಾಮು ಜೀವದ ಗೆಳೆಯನಾಗುತ್ತಾನೆ. ಸ್ವಾಭಿಮಾನ ಮತ್ತು

ಗೆಳೆತನಗಳನ್ನು ಮೌಲ್ಯಗಳನ್ನಾಗಿ ಈ ಕಾದಂಬರಿಯಲ್ಲಿ ಹೆಣೆಯಲಾಗಿದೆ. ತಿಳಿಹಾಸ್ಯ ಈ ಕೃತಿಯ ಮತ್ತೊಂದು ಗುಣವಾಗಿದೆ. ಒಬ್ಬಳೇ ಮಗಳಿರುವ ಗೌಡನ ಕುಟುಂಬ ವರನ ಮನೆಯನ್ನು ನೋಡಿಕೊಂಡು ಬರಲು ಹೊರಟಿದೆ. ಜೀಪು ಬಾಗಿಲ ಮುಂದೆ ತಂದು ನಿಲ್ಲಿಸಲು ಹೇಳುತ್ತಾನೆ. ಆಳು 'ಎಲ್ಲಿಗೆ?' ಎಂದು ಕೇಳುತ್ತಾನೆ. ಇದೇನು ಅಪಶಕುನ ಎಂದು ಗೌಡನಿಗೆ ಸಿಟ್ಟುಬಂದರೂ ಈ ವೇಳೆಯಲ್ಲಿ ಕೋಪ ತಾಳಬಾರದೆಂದು ಸಮಾಧಾನದಿಂದಲೆ ಗಂಡಿನ ಮನೆ ನೋಡಿಕೊಂಡು ಬರಲು ಎನ್ನುವನು. 'ಓಹೋ ಗಂಟುಕಳ್ಳರ ಮನೇಗಾ?' ಎಂದು ಆಳು ನಸುನಗುವನು. ಈ ಸಲ ಗೌಡನಿಗೆ ತಡೆದುಕೊಳ್ಳಲಾರದಷ್ಟು ಸಿಟ್ಟು ಬಂದರೂ ಶುಭ ಕಾರ್ಯದ ಸಮಯದಲ್ಲಿ ಅದು ಶೋಭೆ ತರುವಂತಹುದಲ್ಲವೆಂದು ಮತ್ತು ಪ್ರೀತಿಯಿಂದಲೆ 'ಅದೇನೋ ಗಂಟು ಕಳ್ಳರು ಅಂದೆಯಲ್ಲಾ. ಏನು ವಿಷಯ' ಎಂದು ಆಳಿನ ಮೈದಡವುವನು.

'ಸ್ವಲ್ಪ ದಿನ ತಾಳಿ ಸ್ವಾಮಿ. ಆಮೇಲೆ ನಿಮಗೇ ಎಲ್ಲ ಗೊತ್ತಾಗುತ್ತೆ.'

ಆಳು ಹೇಳುವ ಈ ಮಾತು ಅಳಿಯಂದಿರು ಮಾವನ ಮನೆಯನ್ನು ಬರಿದು ಮಾಡುವ, ಅದೂ ಒಬ್ಬಳೇ ಮಗಳಿರುವ ಮನೆಯೆಂದರೆ ಇನ್ನು ಸ್ವಾತಂತ್ರ್ಯವಹಿಸಿಕೊಂಡು ತಮ್ಮದೇ ಮನೆಯೆಂದುಕೊಳ್ಳುವ ಲೋಭದ ಮನೋಭಾವವನ್ನು ವಿವರಿಸುತ್ತದೆ. ಆಳುಗಳ ಅನುಭವ ಪ್ರಪಂಚ ಎಷ್ಟೊಂದು ವಿಸ್ತಾರವಾದದ್ದೆಂಬುದು ಇದರಿಂದ ತಿಳಿಯುತ್ತದೆ. ಆಳಾದ ಮಹದೇವನ ಮುಂದಿನ ಪ್ರಸಂಗವಂತೂ ಮಕ್ಕಳನ್ನು ನಕ್ಕುನಗಿಸುತ್ತದೆ. ಮಹದೇವ ಜೀಪ್ ಸುರು ಮಾಡಲು ನೋಡಿದರೆ ಸ್ಟಾರ್ಟೇ ಆಗುತ್ತಿಲ್ಲ. ಕೊನೆಗೆ ಅವನಿಗೆ ಸಂಶಯ ಬಂದು ಡೀಸೆಲ್ ಟ್ಯಾಂಕ್ ನೋಡುತ್ತಾನೆ. ಡೀಸೆಲ್ ಖಾಲಿಯಾಗಿದೆ. ಓಡಿ ಬಂದು ಗೌಡನಿಗೆ ಹೇಳಲು ಅವನ ಪಿತ್ತ ನೆತ್ತಿಗೇರಿ 'ಬೇಗ ಸೈಕಲ್ ಮೇಲೆ ಡೀಸೆಲ್ ತಾ' ಎಂದ. ಅದಕ್ಕೆ ಆಳಿನ ಉತ್ತರ: 'ಗೌಡ್ರೆ, ನನಗೆ ಸೈಕಲ್ ಹೊಡೆಯಲು ಬರಲ್ಲ. ಓಡಿ ಹೋಗಿ ತರ್ತೇನೆ'.

ಓಡಿಹೋದವನು ಸ್ವಲ್ಪ ಸಮಯದಲ್ಲಿಯೇ ತಿರುಗಿ ಬಂದ. ಗೌಡನಿಗೆ ಖುಷಿಯಾಯಿತು. ಇಷ್ಟು ಬೇಗ ಡೀಸೆಲ್ ತಂದ ಎಂದು. ಆದರೆ ಮಹದೇವ ಡಬ್ಬಿ ಮರೆತು ಹೋಗಿದ್ದ. ಅದನ್ನು ಒಯ್ಯಲು ತಿರುಗಿ ಬಂದಿದ್ದಾನೆ, ಅಷ್ಟೆ! ಗೌಡನಿಗೆ ಸಿಟ್ಟು ಉಲ್ಬಣಿಸಿ ಮಾದನನ್ನು ಕರೆದು ಸೈಕಲ್ ತರಲು ಹೇಳಿದ. ಮಾದ ಮನೆಗೆ ಹೋದರೆ ಮನೆಯಲ್ಲಿ ಸೈಕಲ್ ಇಲ್ಲ. ಮಗ ಬಯಲಿಗೆ ಒಯ್ದಿದ್ದ. ಅಲ್ಲಿಗೆ ಹೋದ. ಸ್ವಲ್ಪ ಮುಂದೆ ಹೋದರೆ ಆಡುವ ವಯಸ್ಸಿನ ಮಗ ಸೈಕಲ್ ದಬ್ಬಿಕೊಂಡು ಬರುತ್ತಿದ್ದ. ಮಾದ ಅವನ ಕೈಯಿಂದ ಬರಕ್ಕನೆ ಕಸಿದುಕೊಂಡು ಜೋರಾಗಿ ಸೈಕಲ್ ತುಳಿಯಲಾರಂಭಿಸಿದ. ಸ್ವಲ್ಪ ಹೊತ್ತಿಗೇ ಯಾಕೋ ಸೈಕಲ್ ಬಹಳಷ್ಟು ಬಿಗಿಯಾಗುತ್ತದೆ ಅನಿಸಿತು. ಸ್ವಲ್ಪ ಹೊತ್ತಿಗೆ ನಿಂತಿತು. ನೋಡಿದರೆ ಪಂಕ್ಚರ್ ಆಗಿತ್ತು. ತಡವಾದುದಕ್ಕೆ ಸಾಕ್ಷಿಯೆಂದು ಹವಾ ಹೋದ ಸೈಕಲನ್ನೆ ಗೌಡನ ಮುಂದೆ ನಿಲ್ಲಿಸಿದ: 'ಸಾವುಕಾರರೇ, ಸೇಕೊಲ್ನ ನನ್ನ ಮಗ ಕಲಿಯಕ್ಕೇ ಅಂತ ತಗಂಡ್ಹೋಗಿ ಪಂಚೇರ್ ಮಾಡ್ಕೊಂಡು ಬಂಧ್ಬಿಟ್ವಾನೆ.'

ಅವನನ್ನು ಬಾಯಿಗೆ ಬಂದ ಬೈಯ್ದು ಗೌಡ ಕೊನೆಗೆ ಎತ್ತಿನ ಗಾಡಿಯಲ್ಲಾದರೂ ಹೋಗಿ ಬಸ್‌ಸ್ಟ್ಯಾಂಡ್ ತಲುಪಿದರಾಯ್ತೆಂದು ಅಂದಾನಿಯನ್ನು ಗಾಡಿ ತರಲು ಕಳಿಸಿದ. ನಂಬಿಗಸ್ಥ ಆಳು ಅಂದಾನಿ ಮನೆಗೆ ಬಂದರೆ ದನದ ಹಕ್ಕೆಯಲ್ಲಿ ಎತ್ತುಗಳು ಮಾಯ!

ಹೆಂಡತಿ ತಣ್ಣಗೆ ಅಂದಳು: 'ನನಗೇನು ಗೊತ್ತಿತ್ತು? ಮೇಯ್ದು ಕೊಂಡು ಬರಲಿ ಎಂದು ಗದ್ದೆಗೆ ಹೊಡೆದೆ.'

ಇಂತಹ ಹಲವು ಪ್ರಸಂಗಗಳ ಸೊಗಸಾದ ನಿರೂಪಣೆ 'ಹುಲಿಯ ಹೆಜ್ಜೆ' ಕೃತಿಯನ್ನು ಓದುಗರಿಗೆ ಹತ್ತಿರವಾಗಿಸುತ್ತದೆ. ಇದರಲ್ಲಿ ಹುಲಿಯೆ ಇಲ್ಲದಿರುವುದು, ಹುಲಿವೇಷದಲ್ಲಿರುವ ನರಿ ಸ್ವಭಾವದ ಗೌಡನ ಮುಖವಾಡ ಕಳಚಿ ಬೀಳುವುದು, ವಾಸ್ತವ ಮಾರ್ಗವನ್ನು ತುಳಿದಿರುವುದು ಕಾದಂಬರಿಯ ಮುಖ್ಯ ಅಂಶಗಳಾಗಿವೆ.

'ಆನೆ ಬಂತೊಂದಾನೆ' ಎಂಬುದು ಕಂನಾಡಿಗಾ ನಾರಾಯಣ ಅವರ ಮತ್ತೊಂದು ಸ್ವಾರಸ್ಯಕರವಾದ ಕತೆ. ಕುತೂಹಲದ ಎಳೆಗಳಿಂದ ಅದು ಆಪ್ಯಾಯಮಾನವಾಗುತ್ತದೆ. ನವಕರ್ನಾಟಕ ಪ್ರಕಾಶನದಿಂದ ಅದು ೨೦೦೩ರಲ್ಲಿ ಪ್ರಕಟಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ಆನೆಗಳ ಕತೆಗಳು ಲೆಕ್ಕವಿಲ್ಲದಷ್ಟು ಬಂದಿವೆ. ಆದರೆ ಕಂನಾಡಿಗಾ ನಾರಾಯಣ ಅವರ ಆನೆಯ ಕತೆ ತುಂಬ ಭಿನ್ನ, ವಿಶಿಷ್ಟ ಮತ್ತು ಸಾಂಪ್ರದಾಯಿಕ ರಚನೆಗಳ ಪ್ರಭಾವದಿಂದ ತಪ್ಪಿಸಿಕೊಂಡು ಮಕ್ಕಳನ್ನು ರಂಜಿಸುತ್ತದೆ. ಆನೆಕೆರೆ ಎನ್ನುವ ಹೆಸರಿನ ಕೆರೆಗೆ ಆಗಾಗ ಬಂದು ಹೋಗುವ ಆನೆ ಹಿಂಡಿಗೆ ಆನೆಪ್ಪ ಹೆಸರಿನ ವ್ಯಕ್ತಿಯೆಂದರೆ ಅಚ್ಚುಮೆಚ್ಚು. ಯಾಕೆಂದರೆ ಇವನು ಅವುಗಳನ್ನು ಹೆದರಿಸದೆ ಬಾಳೆಗೊನೆ, ಕಬ್ಬಿನ ಹೊರೆಗಳನ್ನು ತಿನ್ನಿಸುವನು. ಗರ್ಭಿಣಿ ಆನೆಗಳ ಆಸೆ ಅರಿತುಕೊಂಡು ಅಕ್ಕಿ, ಬೆಲ್ಲ, ಮತ್ತಿತರ ರುಚಿಕರ ದಿನಸಿಗಳನ್ನು ಕೊಡುತ್ತ ಅವುಗಳ ಪ್ರೀತಿ ಸಂಪಾದಿಸಿದ್ದ. ಗರ್ಭಿಣಿ ಆನೆಗಳು ಮರಿ ಹಾಕಿದ ಮೇಲೆ ಒಂದೆರಡು ದಿನ ಆ ಮರಿಗಳ ಮೇಲೆ ನಿಗಾ ವಹಿಸಿ ನರಿ–ನಾಯಿಗಳು ಅತ್ತ ಸುಳಿಯದಂತೆ ನೋಡಿಕೊಳ್ಳುತ್ತಿದ್ದ. ಹೀಗಾಗಿ ಅವನ ನಿಜವಾದ ಹೆಸರು ಮರೆತುಹೋಗಿ ಎಲ್ಲರೂ ಅವನನ್ನು ಆನೆಪ್ಪ ಎಂದೇ ಕರೆಯುತ್ತಿದ್ದರು. ಒಂದು ಸಲ ಇವನು ಬೆಳಗಿನ ಹೊತ್ತು ಸಕ್ಕರೆನಿದ್ದೆಯಲ್ಲಿ ಮಲಗಿರುವಾಗ ಆನೆಯೊಂದು ಕಿರುಚಾಡುವ, ಒದರುವ ಶಬ್ದ ಕೇಳಿ ಬರುತ್ತದೆ. ಸದ್ದು ಹೆಣ್ಣಾನೆಯ ಪ್ರಸವ ವೇದನೆಯದೇ ಎಂಬುದನ್ನರಿತ ಆತ ಅಲ್ಲಿಗೆ ಧಾವಿಸುತ್ತಾನೆ ಯೋನಿಯಿಂದ ಅರ್ಧ ಮಾತ್ರ ಹೊರಗೆ ಬಂದು ಒದ್ದಾಡುತ್ತಿದ್ದ ಆನೆಮರಿಯನ್ನು ಹೇಗೋ ಜಗ್ಗಿ ರಕ್ಷಿಸುತ್ತಾನೆ. ತಾನು ದೊಪ್ಪೆಂದು ದೂರ ಹೋಗಿ ಬೀಳುತ್ತಾನೆ.

ಈ ಸಂದರ್ಭದಲ್ಲಿ ನಡೆಯುವ ಆಕಸ್ಮಿಕವೊಂದು ಅಲ್ಲಿಯ ಇಡೀ ಚಿತ್ರಣವನ್ನೇ ಬದಲಿಸಿಬಿಡುತ್ತದೆ: 'ಕಾಡಿನೊಳಗಿಂದ ಇದ್ದಕ್ಕಿದಂತೆ ಜಿಂಕೆಯೊಂದು ಬಾಣದ ಬಿರುಸಿನಷ್ಟು ವೇಗವಾಗಿ ನುಗ್ಗಿ ಬಂತು. ಬಂದದ್ದು ಅನಿರೀಕ್ಷಿತವಾಗಿ ಆನೆಗಳ ಹಿಂಡಿಗೆ ಢಿಕ್ಕಿ ಹೊಡೆದು ಬಿದ್ದುಬಿಟ್ಟಿತು. ಬೇಟೆಯನ್ನು ಓಡಿಸಿಕೊಂಡು ಅಷ್ಟೇ ಜೋರಾಗಿ ಜಿಗಿದುಕೊಂಡು ಬರುತ್ತಿದ್ದ ಹುಲಿ ಸಹ ಒಂದು ಕ್ಷಣ ದಿಕ್ಕುತೋಚದೇ ಗಕ್ಕನೆ ಬ್ರೇಕು ಹಾಕಿದಂತೆ ನಿಂತುಕೊಂಡಿತು. ಅದು ಹಾಗೆ ನಿಂತಿದ್ದೆ ತಡ; ಏನಾಗುತ್ತಿದೆ ಅಂತ ಗೊತ್ತಾಗದೇ ಸುಮ್ಮನಿದ್ದ ಆನೆಗಳೆಲ್ಲಾ ತಮ್ಮ ಮೇಲೆಯೇ ಹುಲಿ ಆಕ್ರಮಣ ಮಾಡುತ್ತದೆ ಅಂತ ಪ್ರಾಣಭಯದಿಂದ ದಿಕ್ಕಾಪಾಲಾಗಿ ಓಡಿಹೋದವು. ಇತ್ತ ಕಡೆ ಆನೆಪ್ಪನನ್ನು ನೋಡಿದ ಹುಲಿಗೂ ಭಯ ಆಗಿಹೋಯ್ತು. ಹುಲಿಯನ್ನು ನೋಡಿದ ಆನೆಪ್ಪನಿಗಂತೂ ಕೈಕಾಲು ನಡುಕ ಬಂತು. ಯಾವು ಯಾವು ಎತ್ತ ಎತ್ತಲಾಗಿ ಹೋದವೋ ಯಾರಿಗೂ ಗೊತ್ತಾಗಲಿಲ್ಲ'.

ಅಲ್ಲೇ ತಬ್ಬಲಿಯಾಗಿ ಉಳಿದ ಆನೆಮರಿಯನ್ನು ಆನೆಪ್ಪ ಜೋಪಾನ ಮಾಡುವ ವಿವರಗಳು ಆಪ್ತವೆನಿಸುತ್ತವೆ. ಹುಟ್ಟಿ ಸ್ವಲ್ಪ ಹೊತ್ತಾದ ಮೇಲೆ, ಅದರ ಭಾರವನ್ನು ಅದು ತಡೆದುಕೊಳ್ಳವಂತಾದ ಮೇಲೆ ಕಾಲನ್ನು ಎತ್ತಿ ಇಡಿಸುತ್ತ, ನಡೆಯಲಿಕ್ಕೆ ಕಲಿಸುತ್ತ ಗದ್ದೆಮನೆಗೆ ಕರೆದುಕೊಂಡು ಬರುತ್ತಾನೆ. ಈ ಪ್ರಾಣಿ ಪ್ರೇಮಿ, ಕಾಡು ಪ್ರೇಮಿ ರೈತನ ಸಾಹಸದ ವಿವರಗಳು ಕಣ್ಣಿಗೆ ಕಟ್ಟುವಂತಿದ್ದು ಸಹಬಾಳ್ವೆಯ ಪಾಠವನ್ನು ತಮ್ಮೊಡಲಲ್ಲಿ ಇಟ್ಟುಕೊಂಡಿವೆ. ಆನೆಪ್ಪನ ಪ್ರೀತಿಯ ಜೊತೆಗೆ ಹಲವು ವ್ಯಕ್ತಿಗಳ ಸ್ವಾರ್ಥವನ್ನು ಇಲ್ಲಿ ಜೊತೆಜೊತೆಯಾಗಿ ತೋರಿಸಲಾಗಿದೆ. ಭಾರತ್ ಸಾ ಮಿಲ್ಲಿನ ಫಕೀರಸಾಬ ಆನೆಮರಿಯನ್ನು ತನ್ನ ಕಟ್ಟಿಗೆ ಮಿಲ್ಲಿನಲ್ಲಿ ಉಪಯೋಗಿಸಿಕೊಳ್ಳುವ ಹೊಂಚು ಹಾಕಿದರೆ ಉರಮಂಜು ಮಠದ ಸ್ವಾಮೀಜಿ ಆನೆಯನ್ನು ಮಠಕ್ಕೇ ಪಡೆಯುವ ವಿಫಲ ಪ್ರಯತ್ನ ಮಾಡುತ್ತಾನೆ: 'ಅಂದಂಗೆ ನಿನ್ನತ್ರ ಆನೆಮರಿ ಐತಂತಲ್ಲ. ಅದುನ್ನ ಯಾರಿಗೋ ಮಾರಕ್ಕೇ ಹೊಂಟಿದಿಯಾ ಅಂತ ಸುದ್ದಿ ಬಂದೈತೆ......ಆ ಆನೆಕರನ ಆನೆಗಳ ಸಂತಾನಭಿವೃದ್ಧಿಗೆ ಅಂತ ಕಾಲದಿಂದ ಅಭಿವೃದ್ಧಿಪಡಿಸಿರೋದೆ ನಮ್ಮ ಉರಮಂಜು ಮಠ. ದೇವರ ಕೃಪೆಯಿಂದ ಆನೆಯೊಂದು ಮರಿಯನ್ನು ಹಾಕಿ ಮಠದ ಸೇವೆ ಮಾಡಲಿ ಅಂತ ಬಿಟ್ಟುಹೋಗಿದೆ. ಆದ್ದರಿಂದ ಅದನ್ನು ತಂದು ಮಠಕ್ಕೆ ಒಪ್ಪಿಸು. ಹಾಗೆಂದು ದೇವರ ಆಜ್ಞೆಯಾಗಿದೆ.'

ಈ ನಡುವೆ ಆನೆಗಳ ಹಿಂಡು ಬಂದು ಆನೆಮರಿಯನ್ನು ತಮ್ಮೊಡನೆ ಕರೆದುಕೊಂಡು ಹೋಗಿವೆ. ಮರಿಗೆ ಮನಸ್ಸಿಲ್ಲದಿದ್ದರೂ ಅವ್ವನ ಪ್ರೀತಿಯನ್ನು ದಾಟಲಾರದೆ ಜೊತೆಗೆ ಹೋಗಿದೆ. ಅದನ್ನು ಬಿಟ್ಟಿರಲಾರದೆ ಒದ್ದಾಡುತ್ತಿದ್ದ ಆನೆಪ್ಪನಿಗೆ ಶಿವಮೊಗ್ಗ-ತಾಳಗುಪ್ಪ ನಡುವಿನ ರೇಲ್ವೆ ಕ್ರಾಸಿಂಗ್‌ವೊಂದರಲ್ಲಿ ಆನೆಮರಿಯೊಂದು ಸತ್ತ ಸುದ್ದಿ ಬರುತ್ತದೆ. ಸರ್ಕಸ್ ಕಂಪನಿಯ ಮಾಲಿಕ ರಾಬರ್ಟನಿಗೆ ಇವನ ಆನೆಮರಿಯನ್ನು ಕಂಪನಿಯಲ್ಲಿ ದುಡಿಸಿಕೊಳ್ಳುವ ದುರಾಲೋಚನೆ. ಸತ್ತ ಆನೆಮರಿಯ ಮುಖ ನೋಡಲೂ ಆಗದೆ ನೂರಾರು ಮೈಲು ನಡೆದಿದ್ದ ಆನೆಪ್ಪ ಮನೆಗೆ ಬಂದು ಮಲಗಿದ. ಮುಂಜಾನೆದ್ದು ಕೆರೆಯಲ್ಲಿ ನೋಡಿದರೆ ಆನೆಮರಿ! ಇವನನ್ನು ಹುಡುಕಿಕೊಂಡು ಬಂದಿದೆ. ಪೊಲೀಸ್ ಇನ್ಸಪೆಕ್ಟರನ ಪ್ರಭಾವದಿಂದ ಮರಿಯನ್ನು ಮಠಕ್ಕೆ ಕರೆತರುವ ಸ್ವಾಮೀಜಿ ಆನೆಪ್ಪನನ್ನು ಕಾಡುಪ್ರಾಣಿಯ ಅನಧಿಕೃತ ಬಂಧನದ ಕೇಸಿನಲ್ಲಿ ಜೈಲಿಗೆ ಕಳಿಸುತ್ತಾರೆ. ಪರಿಸರವಾದಿಗಳ ಚಳವಳಿ ಮಠಕ್ಕೆ ಕುತ್ತು ತರುತ್ತದೆ. ಅತ್ತ ಜೈಲಿನಲ್ಲಿ ಮರಿಯಾನೆಯ ತಪದಲ್ಲಿ ಆನೆಪ್ಪನಿಗೆ ಜ್ವರ ಬಂದರೆ ಇತ್ತ ಮೇವು ತಿನ್ನದ ಮರಿ ಮಠದಲ್ಲಿ ಸಾಯುವ ಸ್ಥಿತಿ ಬರುತ್ತದೆ. ಕೊನೆಗೆ ಮರಿ ತನ್ನ ಸೊಂಡಿಲನ್ನು ಆನೆಪ್ಪನ ಮೇಲೆ ಆಡಿಸುವುದರೊಂದಿಗೆ ಕತೆ ಮುಕ್ತಾಯಕ್ಕೆ ಬರುತ್ತದೆ. ಆನೆಪ್ಪನ ಪಡಿಪಾಟಲು, ಮನುಷ್ಯ ಮತ್ತು ಆನೆಮರಿಯ ನಡುವಿನ ಪ್ರೀತಿ, ಕೆಲವು ವ್ಯಕ್ತಿಗಳ ಮೋಸದ ವ್ಯವಹಾರ ಈ ನೀಳ್ಗತೆಯಲ್ಲಿ ನವಿರಾಗಿ ನಿರೂಪಿಸಲ್ಪಟ್ಟಿವೆ. ಆಸೆ-ಆಮಿಷಗಳಿಗೆ ಬಲಿ ಬೀಳದೆ, ಬಲವುಳ್ಳವರ ಬೆದರಿಕೆಗಳಿಗೆ ಬಗ್ಗದೆ ಆನೆಪ್ಪ ಆನೆಮರಿಯನ್ನು ಕಾಪಾಡುವ, ಜೋಪಾನ ಮಾಡುವ ಚಿತ್ರಣ ಒಂದು ರೀತಿಯಲ್ಲಿ ನಿಸರ್ಗ ಪ್ರೀತಿ ಮತ್ತು ಮಾನವೀಯತೆಯೆಂಬ ಮೌಲ್ಯಗಳನ್ನು ಜೋಪಾನ ಮಾಡಿದಂತಾಗಿದೆ. ಸದಾಚಾರ ಮತ್ತು ದುರಾಚಾರಗಳನ್ನು ಬದಿಬದಿಗೆ ಇಟ್ಟು ಯಾವ ಉಪದೇಶಾತ್ಮಕ ಬೋಧನೆಯೂ ಇಲ್ಲದೆ ಸ್ವಾರಸ್ಯಕರವಾಗಿ ಕತೆ ಹೇಳುತ್ತಾ ಹೋಗುವುದು ಕಂನಾಡಿಗಾ ನಾರಾಯಣ ಅವರ ಬರವಣಿಗೆಯ ಒಂದು ಮುಖ್ಯ ಗುಣವಾಗಿದೆ.

ಅವರ 'ನವಿಲುಗರಿ' [ನವಕರ್ನಾಟಕ ಪ್ರಕಾಶನ, ೨೦೧೪] ಕಥಾಸಂಕಲನ ನವಿಲುಗರಿ, 'ತೆಂಡೂಲ್ಕರ ಜತೆ ಕ್ರಿಕೆಟ್ ಆಡಿದ್ದು', 'ಹಾಲು ಮಾರುವ ಹುಡುಗ', 'ಬಣ್ಣದ ಜಿಂಕೆ' ಎಂಬ ಕಥೆಗಳನ್ನು ಒಳಗೊಂಡಿದ್ದು ಮನುಷ್ಯ-ಪ್ರಾಣಿ-ಪಕ್ಷಿಗಳ ಸಂಬಂಧಗಳನ್ನು ಮಾನವೀಯ ನೆಲೆಯಲ್ಲಿ ಚಿತ್ರಿಸುವ ಒಳ್ಳೆಯ ಪ್ರಯತ್ನವಾಗಿದೆ. 'ನವಿಲುಗರಿ' ಕಥೆ ವಿಶಿಷ್ಟವಾಗಿದ್ದು 'ಆನೆ-ಬಂತೊಂದಾನೆ' ಯಲ್ಲಿದ್ದಂತೆ ಚೆಲುವಯ್ಯ ಎಂಬ ರೈತ ಮತ್ತು ಅವನ ಮಗ ಸುರೇಶರಿಗೆ ನವಿಲುಗಳು ಪ್ರಾಣಕ್ಕಿಂತಲೂ ಹೆಚ್ಚಾಗುವ ಚಿತ್ರಣ ಮೂಡಿಬಂದಿದೆ. ಚೆಲುವಯ್ಯನ ಬತ್ತದ ಹುಲ್ಲಿನ ಬಣವೆ, ಅಲ್ಲಿ ಸಿಗುವ ನವಿಲಿನ ಮೊಟ್ಟೆಗಳು, ಅವುಗಳನ್ನು ಆತ ಕೋಳಿಯ ಮಂಕರಿಯಲ್ಲಿಡುವುದು, ಎರಡು ಮೊಟ್ಟೆಗಳು ಫಲಪ್ರದವಾಗಿ ಗಂಡು-ಹೆಣ್ಣು ನವಿಲುಮರಿ ಹುಟ್ಟುವುದು, ಇವರ ಮನೆ ಊರಿನ ಆಕರ್ಷಣೆ ಮತ್ತು ಅಸೂಯೆಯ ಕೇಂದ್ರವಾಗುವುದು, ಗೌಡ ಚೆಲುವಯ್ಯನ ವಿರುದ್ಧ ಹಗೆ ಸಾಧಿಸುವುದು ಮತ್ತು ಚೆಲುವಯ್ಯನ ಮಗ ಕೊನೆಗೆ ಜಿಂಕೆ, ಮೊಲ ಮುಂತಾದ ಪ್ರಾಣಿಗಳನ್ನು ಕೊಂದು ತಿನ್ನುವ ಗೌಡನನ್ನು ಪೋಲೀಸರಿಗೆ ಹಿಡಿದುಕೊಡುವುದು – ಎಲ್ಲ ಕುತೂಹಲದ ಭಾಷೆಯಲ್ಲಿ ಮೈದಾಳಿ ಬಂದಿವೆ. ಒಮ್ಮೊಮ್ಮೆ ಭಯಾನಕವೂ ಮತ್ತೊಮ್ಮೆ ಮನಕಲಕುವಂಥವೂ ಆದ ಸನ್ನಿವೇಶಗಳಿಂದ ಕಂನಾಡಿಗಾ ನಾರಾಯಣ ಅವರು ಪ್ರಕೃತಿ ಪ್ರೀತಿಯ ಒಂದು ಭಾವಲೋಕವನ್ನೆ ನಿರ್ಮಾಣ ಮಾಡುತ್ತಾರೆ: 'ಮಧ್ಯರಾತ್ರಿ ಎರಡೋ ಮೂರೋ ಗಂಟೆಯಿರಬೇಕು. ನವಿಲಿನ ವಿಕಾರವಾದ ಕಿರುಚಾಟ. ಅದರ ಕೊರಳಿಗೆ ಕಟ್ಟಿದ್ದ ಗಂಟೆಯ ಸದ್ದಿನಿಂಧಾಗಿ ಚೆಲುವಯ್ಯನಿಗೆ ಎಚ್ಚರವಾಗಿ ಓಡಿಬಂದು ಬಾಗಿಲನ್ನು ತೆರೆದ. ನಾಲ್ಕೈದು ಬೀದಿನಾಯಿಗಳು ಒಟ್ಟಾಗಿ ಸೇರಿ, ನವಿಲೊಂದನ್ನು ಅಟ್ಟಾಡಿಸಿಕೊಂಡು ಹಿಡಿದು ಒಂದೊಂದೂ ಒಂದೊಂದು ಕಡೆ ಬಾಯಿಹಾಕಿ ಕೀಳಲಾರಂಭಿಸಿದ್ದವು. ಚೆಲುವಯ್ಯಾ ಅಬ್ಬರಿಸುತ್ತ ಬಂದು ಅವುಗಳ ಬಾಯಿಯಿಂದ ನವಿಲನ್ನು ಬಿಡಿಸಿಕೊಂಡು ಮಗುವಿನಂತೆ ತೊಡೆಯ ಮೇಲೆ ಮಲಗಿಸಿಕೊಂಡು ಉಪಚರಿಸಿದ.....'

ಪರಿಸರದ ಕತೆಯನ್ನು ಮಕ್ಕಳಿಗೆ ಹೇಳಿಕೊಡುವ ನಿಟ್ಟಿನಲ್ಲಿ ಕಂನಾಡಿಗಾ ನಾರಾಯಣ ಅವರ ಕತೆ-ಕಾದಂಬರಿಗಳು ಮಹತ್ವದ್ದಾಗಿವೆ. ಅವರು ಕೊಡುವ ವಿವರಗಳು ವರ್ಣನೆಗಷ್ಟೆ ಸೀಮಿತವಾಗದೆ ಆಳವಾದ ಒಂದು ಅನುಭವವನ್ನು ಉಂಟುಮಾಡುತ್ತವೆ.

ನಿರ್ಮಲಾ ಸುರತ್ಕಲ್

ನಿರ್ಮಲಾ ಸುರತ್ಕಲ್ ಅವರ ಮಕ್ಕಳ ಕವಿತೆಗಳಲ್ಲಿ ನವಿರು ಭಾವನೆ, ತಿಳಿಹಾಸ್ಯ, ಸೌಖ್ಯದ ವಾತಾವರಣ ಮತ್ತು ವಾತ್ಸಲ್ಯದ ಸೆಳಕುಗಳು ತುಂಬಿಕೊಡಿರುತ್ತವೆ. ಹಾಗಾಗಿ ಇತ್ತೀಚೆಗೆ ಬರೆಯುತ್ತಿರುವ ಮಕ್ಕಳ ಲೇಖಕರಲ್ಲಿ ಇವರದೂ ಒಂದು ಗಮನಾರ್ಹ ಹೆಸರಾಗಿದೆ. ಅವರ 'ಪಾತರಗಿತ್ತಿ ಪಕ್ಕಾ' [ಶ್ರೀನಿವಾಸ ಪುಸ್ತಕ ಪ್ರಕಾಶನ, ೨೦೧೨] ಒಂದು ಒಳ್ಳೆಯ ಮಕ್ಕಳ ಕವನ ಸಂಕಲನವಾಗಿದೆ.

'ಮೇಡಂ' ಆಗಿ ಸ್ಕೂಲಿಗೋದ್ರೆ ಹೆದರ್ತಾರೆಲ್ಲಾ ನಂಗೆ
ಕೂರಂದ್ರೆ ಕೂತು, ನಿಲ್ಲಂದ್ರೆ ನಿಂತು ಕೇಳ್ತಾರೆ ಹೇಳಿದ್ದಂಗೆ!
ನಾನೇ 'ಅಮ್ಮ' ಆದ್ರೆ ಮತ್ತೆ 'ಚಿಕ್ಕೋಳ್' ಅನ್ನೋರಿಲ್ಲ
ಮಗುವನು ಸಾಕೋದೆಲ್ಲ ಗೊತ್ತು ಗೊಂಬೆಗೆ ಮಾಡ್ತೀನಲ್ಲ?

'ಏನಾಗ್ಬೇಕು ನಾನು?' ಎನ್ನುವ ಪದ್ಯದಲ್ಲಿ ಮಕ್ಕಳ ಕುತೂಹಲದ ಜಗತ್ತೊಂದು ತೆರೆದುಕೊಂಡಿದೆ. ತಾನು ಅದು ಆಗಬಲ್ಲೆನೆ, ಇದು ಆಗಬಲ್ಲೆನೆ ಎನ್ನುವ ಅವರ ಮನಸ್ಸು ಅನಾವರಣಗೊಂಡಿದೆ. ಸುತ್ತಲಿನ ಜಗತ್ತನ್ನು ಮಕ್ಕಳು ಗ್ರಹಿಸುವ ಬಗೆ, ಲೋಕವನ್ನು ಒಳಗು ಮಾಡಿಕೊಳ್ಳುವ ಅವರ ರೀತಿ, ಸುಂದರವಾದದ್ದನ್ನು ಒಟ್ಟುಮಾಡಿಕೊಳ್ಳುವ ಅವರ ಯತ್ನ ಇಲ್ಲಿ ಕಾಣಸಿಗುತ್ತದೆ. ಮಕ್ಕಳು ಅಂದರೆ ಏನೂ ಗೊತ್ತಿರದವರು ಎನ್ನುವ ಅಸಡ್ಡೆ, ಅಲಕ್ಷ್ಯದ ಭಾವವನ್ನು ತಿರಸ್ಕರಿಸುವ ಮಗುವಿನ ಭಾವಲೋಕವೊಂದು ಈ ಕವನದಲ್ಲಿ ಅರಳಿನಿಂತಿದೆ.

'ಚಳಿ.......ಚಳೀ.....', 'ಗುಬ್ಬಚ್ಚಿ ಅಕ್ಕಾ........', 'ಇಂಗ್ಲೀಷ ಬೇಬಿ', 'ದೀಪಾವಳಿ' ಮುಂತಾದ ಕವನಗಳು ಸ್ವಾರಸ್ಯಕರವಾಗಿ ಮೂಡಿಬಂದಿವೆ. 'ಬಿಸಿ ಬಿಸಿ ಬಿಸಿಲು' ಎನ್ನುವ ಪದ್ಯ ಬೇಸಿಗೆಯ ತಾಪವನ್ನು ಬಣ್ಣಿಸುತ್ತದೆ:

ನೆತ್ತಿಯ ಮೇಲ್ಗಡೆ ಬೆಂಕಿಯ ಚೆಂಡು
ಬತ್ತಿದೆ ಜಲಝುರಿ ನೆಲದಲಿ ನೋಡು
ಬೆತ್ತಲೆ ತಿರುಗುವ ಪಾಪನ ಕಂಡು
ಮತ್ಸರ ಪಡುತಿಹ ನಮ್ಮದು ಪಾಡು

ಪ್ರಾಸ, ಅನುರಣನ, ಸಹಜ ಅಭಿವ್ಯಕ್ತಿಗಳಿಂದ ನಿರ್ಮಲಾ ಅವರ ಪದ್ಯಗಳು ಮಕ್ಕಳಿಗೆ ಇಷ್ಟವಾಗುತ್ತವೆ.

ದಳದಳ ಬೆವರಿಗೆ ಮೈಯಿಡಿ ಒದ್ದೆ
ಜಳಕವದಿಲ್ಲವೆ? ವಾಸನೆ ಮುದ್ದೆ!

ಲಕ್ಷ್ಮಿನಾರಾಯಣ ಭಟ್ಟರ 'ಬಾಳ ಒಳ್ಳೋರು ನಮ್ ಮಿಸ್ಸು' ಪದ್ಯವನ್ನು ಅನುಕರಿಸಿ ನಿರ್ಮಲಾ ಅವರು ಬರೆದಿರುವ 'ಭಾಳಾ ಕೆಟ್ಟೋಳ್ ನಂ ಮಿಸ್ಸು' ಕವಿತೆ ಮನೆಯಲ್ಲಿನ ಮಗುವನ್ನು ಟೀಚರ್ ಆಗಿ ಕಲ್ಪಿಸಿಕೊಂಡಿದೆ. ಪುಟ್ಟ ಹುಡುಗಿ ಟೀಚರ್ ಆಗಿ ಕಾಣಿಸಿಕೊಂಡು ಅವಳ ಅಮ್ಮನನ್ನು ನಾನಾ ವಿಧದಲ್ಲಿ ಗೋಳು ಹೊಯ್ದುಕೊಳ್ಳುವ, ಅಮ್ಮನಿಗೆ ಬೆರಗು ಮೂಡಿಸುವ ತುಂಟಿಯಾಗಿದ್ದಾಳೆ:

ಚಾಕ್ಲೇಟ್ ತಾನೇ ತಿಂತಾಳೆ
'ನಂಗೇ' ಅಂದ್ರೆ ಅಳ್ತಾಳೆ
ಕೆನ್ನೆ ಉಬ್ಬಿ, ತುಟಿಗಳ ಕೊಂಕ್ಸಿ
'ಕಹಿ, ಕಹಿ ಗೊತ್ತಾ?' ಅಂತಾಳೆ
ಭಾಳಾ ಕೆಟ್ಟೋಳ್ ನಂ ಮಿಸ್ಸು
ಕೇಳಿದ್ರೂನೂ ನೋ ಕಿಸ್ಸು
ತಂಟೆ, ತುಂಟಿ, ಜಗಳಗಂಟಿ
ಮನೆಯೊಳಗೆಲ್ಲಾ ಫೇಮಸ್ಸು!

'ಅಮ್ಮ ತಂದ ಪಾಪು' ಕವನ ಮಕ್ಕಳ ಭಾಷೆಯಲ್ಲಿ ನವಿರಾಗಿ ಅರಳಿದೆ. ಆರು ವರ್ಷದ ಅಕ್ಕ ಮತ್ತು ಆರು ತಿಂಗಳ ತಮ್ಮ ಅವರ ನಡುವಿನ ವಾತ್ಸಲ್ಯ ಹರಳುಗಟ್ಟಿದೆ:

ಬೂಬೂ ಬಾಬಾ ಮ್‌ಮ್ ಭಾಷೆ
ಏನೇನೇನೋ ಮಾತು
ಕೂದಲು ಜಗ್ಗಿ ಎಳೆದಾಡ್ತಾನೆ
ನೀಡಲು ಹೋದರೆ ಮುತ್ತು!
ಆರೇ ತಿಂಗಳು ತಮ್ಮನಿಗಂತೆ
ನಂಗೋ ವರ್ಷ ಆರು
'ಅಕ್ಕ' ಅಂತ ಕ್ಯಾರೇ ಇಲ್ಲ
ಕಚ್ಚುವ ಬೆರಳನು ಜೋರು!

'ಠೂ ಠೂ, ಐ ಟೂ', 'ಬೇಕರಿ ಮಾಮಾ' ಮುಂತಾದವು ಸ್ವಾರಸ್ಯಕರವಾಗಿ ಓದಿಸಿಕೊಳ್ಳುತ್ತವೆ.

ಭಾಷೆಯ ಸೊಗಡು, ಲಯ, ಅರ್ಥ ಹೊಳೆಯಿಸುವ ಸಾಲು, ವಿನೋದ, ವಿಸ್ಮಯ ಮುಂತಾದ ಗುಣಗಳಿಂದ ನಿರ್ಮಲಾ ಸುರತ್ಕಲ್ ಅವರ ಬರವಣಿಗೆ ಆಸಕ್ತಿಯಿಂದ ಓದಿಸಿಕೊಳ್ಳುತ್ತದೆ. ಮಕ್ಕಳ ಸಾಹಿತ್ಯಕ್ಕೆ ಅವರು ಇನ್ನು ಹೊಸದನ್ನು ಕೊಡಬಲ್ಲ ಶಕ್ತಿ ಹೊಂದಿದ್ದಾರೆಂದು ಅನಿಸುತ್ತದೆ.

ರಾಜಶೇಖರ ಕುಕ್ಕುಂದಾ

ಗ್ರಾಮೀಣ ಜೀವನದ ರೂಪಕ, ಶಬ್ದಗಳಲ್ಲಿ ಅಂತರ್ಗತವಾಗಿರುವ ಲಯ, ಪದಗಳಲ್ಲಿ ಕುಳಿತಿರುವ ವಿನೋದ ಮತ್ತು ಸರಳ ಶೈಲಿಗಳಿಂದ ತಾವು ಒಬ್ಬ ಒಳ್ಳೆಯ ಮಕ್ಕಳ ಕವಿಯೆಂದು ಸಾಬೀತು ಮಾಡಿರುವವರು ರಾಜಶೇಖರ ಕುಕ್ಕಂದಾ. ಅವರ 'ಚೆಲುವ ಚಂದಿರ' ಕೃತಿಯನ್ನು ೧೯೮೮ರಲ್ಲಿ ಮೊದಲಿಗೆ ತಂದವರು ಸೇಡಂನ ನೃಪತುಂಗ ಅಧ್ಯಯನ ಸಂಸ್ಥೆಯವರು. ಹೊಸ ಚಿತ್ರ, ರೂಪಗಳೊಂದಿಗೆ ಅದು ೨೦೧೧ ರಲ್ಲಿ ಕಲಬುರಗಿಯ ಸಾಗರ ಪ್ರಕಾಶನದಿಂದ ಅಂದವಾಗಿ ಮುದ್ರಣಗೊಂಡಿದೆ. ಮಕ್ಕಳ ಕವಿತೆಗಳ ಎರಡನೇ ಸಂಕಲನ 'ಗೋಲಗುಮ್ಮಟ' ನವಕರ್ನಾಟಕ ಪ್ರಕಾಶನದಿಂದ ೨೦೦೪ ಮತ್ತು ೨೦೧೨ ರಲ್ಲಿ ಎರಡು ಬಾರಿ ಬೆಳಕು ಕಂಡಿದೆ. ಥಟ್ಟನೆ ಮನ ಸೆಳೆಯುವ 'ಪುಟಾಣಿ ಪ್ರಾಸಗಳು' ಕಲಬುರ್ಗಿಯ ಕನ್ನಡನಾಡು ಪ್ರಕಾಶನದಿಂದ ೨೦೧೨ ರಲ್ಲಿ ಹೊರಬಂದಿದೆ

ರಾಜಶೇಖರ ಕುಕ್ಕಂದಾ ಅವರ ವೈಶಿಷ್ಟ್ಯಗಳಲ್ಲಿ ಒಂದೆನ್ನಬಹುದಾದ ಉತ್ತರ ಕರ್ನಾಟಕದ ಭಾಷಾ ಸೊಗಸು ಮತ್ತು ಜೀವನ ಶೈಲಿಗಳು ಈ ಪದ್ಯಗಳೊಳಗೆ ಪರೋಕ್ಷವಾಗಿ ಪ್ರಕಾಶಿಸುವುದು ವಿಶಿಷ್ಟವಾಗಿದೆ. ಅದಕ್ಕೆ ಕುಕ್ಕುಂದಾ ಅವರು ಬಾಲ್ಯದ ನೆನಪುಗಳನ್ನು ಭದ್ರವಾಗಿ ಹಿಡಿದಿಟ್ಟಿರುವುದೇ ಆಗಿದೆ: 'ಅಡುಗೆ ಮನೆಯೊಳಗಿನ ಅಮ್ಮನ ಪಾಡು, ಸಿಟ್ಟು ಬಂದಾಗಿನ ಅಪ್ಪನ ಆರ್ಭಟ, ನಮ್ಮ ಹಳ್ಳಿಯ ಸೊಬಗು, ಬೆಳೆಯ ಸಿರಿ, ಹಳ್ಳದ ತೀರದ ಆಟ, ಮರದಡಿಯ ಊಟ, ಆಕಳ ನೊರೆ ಹಾಲಿನ ಸವಿ....ಎದೆಯಾಳದ ಒಂದೊಂದು ನೆನಪುಗಳೂ ಎಳೆಎಳೆಯಾಗಿ ಬಿಚ್ಚಿಕೊಂಡಾಗ ಮನಸ್ಸಿಗೆ ಹಿತವೆನಿಸುತ್ತದೆ.'

ಆತ್ಮವಿಶ್ವಾಸವನ್ನು ಹಳ್ಳಿಯ ಹುಡುಗನೊಬ್ಬ ಪ್ರಕಟಿಸುವ ಪರಿ 'ಗೋಲಗುಮ್ಮಟ' ಕವಿತೆಯಲ್ಲಿ ಅನ್ಯಾದೃಶವಾವಾಗಿ ಮೂಡಿಬಂದಿದೆ:

ಗೋಲ ಗೋಲ ಗೋಲ ಗೋಲ
ಗೋಲಗುಮ್ಮಟ
ಮೇಲೆ ಹತ್ತಿನೋಡೆ ಅಬ್ಬ
ಏನು ಅದ್ಭುತ!
'ಹುಚ್ಚ' ಎಂದು ಒಮ್ಮೆ ನಾನು
ಕೂಗಿ ನೋಡಿದೆ
'ಹುಚ್ಚ ಹುಚ್ಚ ಹುಚ್ಚ' ಎನ್ನುವ
ದನಿಯ ಕೇಳಿದೆ
'ಜಾಣ' ಎಂದು ಕೊನೆಗೆ ಒಮ್ಮೆ
ಕೂಗಿ ನೋಡಿದೆ
'ಜಾಣ ಜಾಣ ಜಾಣ' ಎನ್ನುವ
ದನಿಯ ಕೇಳಿದೆ
ಅಯ್ಯೋ ನಾನು ನನ್ನ ತಪ್ಪು
ಅರಿತುಕೊಂಡೆನು
ಮರೆಯದಂಥ ಪಾಠವೊಂದು
ಕಲಿತುಕೊಂಡೆನು

ವಿನೋದವೂ ವಿಸ್ಮಯವೂ ಕೂಡಿದಂತಹ ಈ ಕವಿತೆ ಹಲವು ಅರ್ಥಗಳನ್ನು ಕೊಡುತ್ತದೆ. 'ನನ್ನ ಹಳ್ಳಿ' ಎನ್ನುವ ಪದ್ಯದಲ್ಲಿ ಗೋಲಿ ಗುಂಡು, ಬುಗುರಿ, ಚೆಂಡು, ಕಪ್ಪೆಚಿಪ್ಪಿನಾಟ, ಹಕ್ಕಿಪಕ್ಷಿ ನೋಟಗಳನ್ನು ಕೊಡುತ್ತ ಮರೆಯಾಗುತ್ತಿರುವ ಸಂಸ್ಕೃತಿಯೊಂದರ ಅನಾವರಣ ಮಾಡುತ್ತಾರೆ. ಆದರೆ ಅದರಲ್ಲಿ ಯಾವುದೇ ವಿಷಾದವಿಲ್ಲ. ಹಳ್ಳಿ ಮನೆಗಳ ಒಲೆ ಉರಿಯುವ ಹೊಗೆಯ ಕಪ್ಪು, ಇಡೀ ಹಳ್ಳಿಯನ್ನು ಆವರಿಸಿಕೊಂಡಿರುವುದು ದಿಲ್ಲಿಯ ಮಂಜನ್ನು ಅಲ್ಲಿಯ ಕಲುಷಿತ ಹೊಗೆಗಳನ್ನು ನೆನಪಿಗೆ ತರುತ್ತದೆ:

ನನ್ನ ಹಳ್ಳಿ
ಸವಿಯ ಹಳ್ಳಿ
ಇದಕೆ ಸಾಟಿ ಎಲ್ಲಿ?
ಹೊಗೆಯ ಕಪ್ಪು
ಮುಸುಕಿನಲ್ಲಿ
ನಾಚಬೇಕು ದಿಲ್ಲಿ!

ತಮ್ಮ ಅತ್ತರೆ ಅವನ ಕಣ್ಣಿಂದ ಸುರಿಯುವ ಮುತ್ತಿನ ಮಳೆ, ಅವನಿಂದ ಹೊರಹೊಮ್ಮುವ ಸಂಗಿತದ ಅಲೆ, ಕೆಂಡದಂತಾಗುವ ಕಣ್ಣುಗಳು, ಜೊಲ್ಲಿನ ಜೊತೆ ಸುರಿಯುವ ತಟಪಟವೆನ್ನುವ ಭಾಷೆ – ಮತ್ತೊಬ್ಬ ಪುಟ್ಟನ ಬಾಯಿಂದ ಅಭಿವ್ಯಕ್ತಿಗೊಳ್ಳುವುದೆಂದು ಕುಕ್ಕುಂದಾ ಚಿತ್ರಿಸುತ್ತಾರೆ:

ತಮ್ಮನು ಅತ್ತರೆ
ಕಣ್ಣೆವೆ ಕುಣಿಸುತ
ಮುತ್ತಿನ ಸುರಿಮಳೆಯು

ಮನೆಯನು ನಡುಗಿಸಿ
ಗಗನಕೆ ಮುಟ್ಟುವ
ಸರಿಗಮ ರಾಗಗಳು

ಪ್ರಕೃತಿ ಪ್ರೇಮ, ಸಮೃದ್ಧಿ ಕಾಣುವ ತವಕ, ಸುಂದರ ಬದುಕಿನ ಆಶಯ ಅವರ ಕವಿತೆಗಳಲ್ಲಿ ಒಡಮೂಡುವ ಚಿತ್ರವಾಗಿದೆ. ಮಳೆ ಇಲ್ಲದಿದ್ದರೆ ಬೆಳೆಯಿಲ್ಲವೆನ್ನುವ ವಾಸ್ತವದ ಅರಿವು ಮನಸ್ಸಿನಲ್ಲಿ ನಿಲ್ಲುತ್ತದೆ.

ಗಡಗಡ ಗುಡುಗುವ
ಮೋಡಣ್ಣ
ಹನಿ ಹನಿ ಮಳೆಯನು
ಸುರಿಯಣ್ಣ
ಝುಳಝುಳ ತೊಳೆಯಲಿ
ಊರ ಕೊಳೆ
ಫಳಫಳ ಹೊಳೆಯಲಿ
ಮುಖದ ಕಳೆ
ಚೀ ಪೀ ಎನ್ನಲಿ
ಹಕ್ಕಿಗಳು
ಛಳಿಯಲಿ ನಡುಗಲಿ
ಬೆಕ್ಕುಗಳು

ಪ್ರಾಣಿ–ಪಕ್ಷಿಗಳ ಆಟಗಳನ್ನು ಹತ್ತಿರದಿಂದ ಗಮನಿಸಿ ಮೋಜಿನ ಸಂಗತಿಗಳನ್ನು ಮಕ್ಕಳಿಗೆ ಉಣಬಡಿಸುತ್ತಾರೆ. 'ಮಂಗ' ಪದ್ಯ ಒಂದು ಒಳ್ಳೆಯ ಉದಾಹರಣೆಯಾಗಿದೆ:

ಮರವನು ಹತ್ತಿ
ಹಣ್ಣನು ಕಿತ್ತಿ
ಮಾಳಿಗೆ ಸುತ್ತುವುದು
ಟಿಸ್ ಟಿಸ್ ಎಂದು
ಹಲ್ಲನು ಕಿರಿದು
ಅಣಕಿಸಿ ಓಡುವುದು
ಕೆಂಪನೆ ಮೋರೆ
ಪಿಳಿ–ಪಿಳಿ ಕಣ್ಣು
ಸೋಜಿಗವೆನಿಸುವುದು

'ಚಿಟ್ಟೇ ಚಿಟ್ಟೇ', 'ನನ್ನ ಬೆಕ್ಕು', 'ಜೀವದ ಗೆಳೆಯ' ಮುಂತಾದವುಗಳಲ್ಲಿ ಮಕ್ಕಳಿಗೆ ಸಾಹಚರ್ಯ ಕೊಡುವ ನಾಯಿ, ಬೆಕ್ಕು, ಪತಂಗಗಳ ಸುಂದರ ಚಿತ್ರಣವಿದೆ. 'ಚೆಲುವ ಚಂದಿರ' ಕವಿತೆಯಲ್ಲಿ ಚಂದ್ರನನ್ನು ಹಾಗೂ ಅವನ ಹಿತವಾದ ಬೆಳಕನ್ನು ಸುಂದರವಾಗಿ ಸೆರೆ ಹಿಡಿಯಲಾಗಿದೆ.

ಅಮ್ಮ ಅಮ್ಮ
ನೋಡು ಬಾರೆ
ಚೆಲುವ ಸೊಬಗಿನ ಚಂದಿರ
ಬಾನಿನಲ್ಲಿ
ಬೆಳಕು ಚೆಲ್ಲಿ
ಮೂಡಿ ನಿಂತಿಹ ಸುಂದರ
ಹಿತ್ತಲಲ್ಲಿ
ಕೆಂಪು ಬಿರಿದು
ಕೆರಳಿ ನಗುತಿವೆ ಸುಮಗಳು
ಇಂಥ ಚೆಲುವ
ನೋಟ ಕಂಡು
ಹರುಷ ಉಕ್ಕಿದೆ ಮನದೊಳು

ಲಯಬದ್ಧ ಹಾಗೂ ಮಾಧುರ್ಯ ತುಂಬಿದ ರಚನೆಗಳನ್ನು ಕೊಟ್ಟಿರುವ ಕುಕ್ಕಂದಾ ಅವರು ಮಕ್ಕಳ ಭಾವಕೋಶಕ್ಕೆ ಲಗ್ಗೆ ಇಟ್ಟಿದ್ದಾರೆ. ಆಟಗಳನ್ನು ಮರೆತು ಬರೀ ಪಾಠಗಳಲ್ಲಿಯೆ ಮುಳುಗಿರುವ ಮಕ್ಕಳನ್ನು ಅವರು ಪುಸ್ತಕ ಹರಿಯಲು, ಮಲಗಿರುವ ನಾಯಿಯ ನಿದ್ದೆ ಕೆಡಿಸಲು ಏನೇನೋ ಗಜಿ ಬಿಜಿ ಗೀಚಿ ·ಅಂದವಾದ ಗೋಡೆಯನ್ನು ಕೆಡಿಸಲು ಪ್ರೇರೇಪಿಸುತ್ತಾರೆ!

ಗೋಡೆ ಮೇಲೆ ಬರಿ
ಹಾಳೆ–ಗೀಳೆ ಹರಿ
ನಿದ್ದಿಗಿಳಿದ ನಾಯಿ ಕೆಣಕಿ
ಮಾಯ ಆಗು ಮರಿ!

ಪಾತರಗಿತ್ತಿ ಹೂವಿಂದ ಹೂವಿಗೆ ಹಾರಿ ಇಷ್ಟು ದಿನ ಪುಕ್ಕಟೆ ರಸ ಹೀರಿರುವುದನ್ನು ಪುಟ್ಟಿಯೊಬ್ಬಳು ತರಾಟೆಗೆ ತೆಗೆದುಕೊಳ್ಳುತ್ತಿದ್ದಾಳೆ:

ಪಾತರಗಿತ್ತಿ ಪಕ್ಕ
ಕೊಡಲೇಬೇಕು ರೊಕ್ಕ
ಹೂವಿನ ರಸ ಹೀರಿದ್ದೆಷ್ಟು
ಮಾಡಿಟ್ಟೀನಿ ಲೆಕ್ಕ!

ಶಬ್ದಗಳ ಜೊತೆಗೆ ಆಟವಾಡುತ್ತ ಸೊಗಸಾದ ಪ್ರಾಸ ಕಟ್ಟುವುದು ಅವರಿಗೆ ಸಹಜವಾಗಿದೆ.

ಸಣ್ಣಿ ಸಣ್ಣಿ ಸಣ್ಣಿ
ಸಾಕಿದೊಂದು ಕುನ್ನಿ
ಬಂದವರಿಗೆ ಅಂತೈತಂತೆ
ಬನ್ನಿ, ಬನ್ನಿ, ಬನ್ನಿ

ಪರಿಸರ, ಚಂದ್ರನ ಬೆಳದಿಂಗಳು, ಸೂರ್ಯನ ಬೆಳಕು ಮುಂತಾದ ಮೌಲ್ಯಯುತ ವಿಚಾರಗಳನ್ನು ಅದು ಪರೋಕ್ಷವಾಗಿ ಕಟ್ಟಿಕೊಡುತ್ತದೆ. ವಾಸ್ತವ ಬರವಣಿಗೆ ಕುಕ್ಕಂದಾ ಅವರಲ್ಲಿ ವಿರಳವಾಗಿ ಕಂಡು ಬಂದು ಕಡು ಬಡತನ, ಅಸಮಾನತೆಗಳಂತಹ ವಸ್ತುಗಳ ಕಡೆಗೆ ಅವರು ಗಮನಹರಿಸಬೇಕಾಗಿದೆ ಎನಿಸುತ್ತದೆ. ಹಾಗಾದಾಗ ಅವರ ಬರವಣಿಗೆ ಒಂದು ಫುಲ್ ಸರ್ಕಲ್ ಬಂದಂತೆನಿಸುತ್ತದೆ. ಹಾಗೇ ಹೇಳಿಯೂ ಅವರ ಮೊದಲ ಸಂಕಲನದಲ್ಲಿರುವ ಗ್ರಾಮೀಣ ಚಿತ್ರಗಳು ಆಪ್ಯಾಯಮಾನವಾಗಿವೆ. ಅವುಗಳನ್ನು ಮತ್ತಷ್ಟು ವಿಸ್ತರಿಸುವುದು ಅದ್ಭುತ ಲಯಗಾರಿಕೆಯ ಕುಕ್ಕುಂದಾ ಅವರಿಗೆ ಕಷ್ಟವಾಗಲಾರದು.

ವಿಜಯಶ್ರೀ ಹಾಲಾಡಿ

ಮಕ್ಕಳ ಚುರುಕುತನ, ಚಾಲಾಕಿತನ ಹಾಗೂ ಅವರ ಚಟುವಟಿಕೆಗಳ ಚೆಲುವಿಕೆಯನ್ನೆಲ್ಲ ಸೂರೆಗೊಳ್ಳುವಂತೆ ಬರೆಯುವ ವಿಜಯಶ್ರೀ ಹಾಲಾಡಿ ವರ್ತಮಾನದ ಲೇಖಕರಲ್ಲಿ ಬಹಳಷ್ಟು ಭರವಸೆ ಹುಟ್ಟಿಸಿರುವವರು. 'ಓತಿಕ್ಯಾತ ತಲೆ ಕುಣ್ಸಿ' [ಅಭಿನವ ಪ್ರಕಾಶನ ಬೆಂಗಳೂರು, ೨೦೧೨] ಒಂದು ಒಳ್ಳೆಯ ಕವನ ಸಂಕಲನವಾಗಿದೆ. ಮಕ್ಕಳಿಗಾಗಿ ಕೊಡಬಲ್ಲ ಸರಕು ತಿಂಡಿ, ಆಟವೆ ಹೊರತು ಆದರ್ಶ ಹಾಗೂ ಉಪದೇಶ ಅಲ್ಲ ಎಂಬುದನ್ನು ಈ ಸಂಕಲನ ಸಾಬೀತುಪಡಿಸುತ್ತದೆ. ಹುಡುಗರಿಗೆ ಇಷ್ಟವಾಗುವ ಗರಿಗರಿ ಚಿಪ್ಸ್, ಕರಂ ಕುರಂ ಚಕ್ಕಲಿ, ಗುಳಂಗುಳಂ ಬಾಳೆಹಣ್ಣು ಮುಂತಾದವು ಇಲ್ಲಿಯ ಪದ್ಯಗಳಲ್ಲಿ ಸೇರಿಕೊಂಡಿರುವುದು ಪದ್ಯಗಳ ತಾಜಾತನ ಹಾಗೂ ಸಹಜತೆಗೆ ಸಾಕ್ಷಿಯಾಗಿದೆ. ಬರೀ ಮಕ್ಕಳ ತುಂಟತನಕ್ಕಷ್ಟೆ ಈ ಪುಸ್ತಕ ಸೀಮಿತವಾಗಿಲ್ಲ. ಪ್ರೀತಿ ವಾತ್ಸಲ್ಯದ ಎಸಳೂ ಇಲ್ಲಿ ಸೇರಿಕೊಂಡಿವೆ.

ಮಕ್ಕಳ ಗೆಲುವು, ಉತ್ಸಾಹ ಹಾಗೂ ತೆರಪಿಲ್ಲದ ಚಟುವಟಿಕೆಗಳು ಕವಿತೆಗಳಾಗಿ ಮಾರ್ಪಟ್ಟಿರುವುದರಿಂದ ಅವು ಲವಲವಿಕೆಯಲ್ಲಿ ಅರಳಿದಂತಿವೆ. ಒಂದು ರೀತಿಯ ಉನ್ಮಾದದಲ್ಲಿ ಕುಣಿದಂತಿವೆ. ಪದಲಾಸ್ಯ ಇವರ ಕವಿತೆಗಳ ಒಂದು ಮುಖ್ಯ ಗುಣವಾಗಿದೆ.

ಓತಿಕ್ಯಾತ ತಲೆಕುಣ್ಸಿ
ಮರದ ಮಂಗ ಬಾಲಕುಣ್ಸಿ
ತಂಗಿ ಗೆಜ್ಜೆ ಕಾಲಕುಣ್ಸಿ
ಝ್ಯು ಝ್ಯು ಝ್ಯು......
ಆಕಾಶ ಬಣ್ಣ ಬರೆದು
ಕಾಮನಬಿಲ್ಲು ಮಕ್ಳನ್ನ್ ಕರೆದು
ಮಳೆಯು ಸುರಿದು ಗುಡುಗು ಬಡಿದು
ಛಟ್ ಛಟ್ ಛಟಿಲ್.......

ಆಕಾಶ ಬಣ್ಣ ಬಳಿಯುವುದು, ಕಾಮನಬಿಲ್ಲು ಮಕ್ಕಳನ್ನು ಕರೆಯುವುದು, ಹಸಿರುಗಿಡ ಹೂವು ಕೊಡುವುದು ಅವರಲ್ಲಿ ಸಹಜವಾಗಿ ಸಂಭವಿಸಿ ಮಕ್ಕಳ ಲೋಕದ ವ್ಯಾಪಾರಕ್ಕೆ ಹಿನ್ನೆಲೆಯಾಗಿ ನಿಲ್ಲುತ್ತವೆ. ಮಕ್ಕಳು ಕುಂಬಳ ಬೀಜಗಳನ್ನು ಕದ್ದು, ಅವುಗಳನ್ನು ಒಲೆಯ ಬಾಣಲೆಯಲ್ಲಿ ಹುರಿದು, ಮುಸುಕಿನಲ್ಲಿಯೆ ಮುಗಿಸಿಬಿಡುವುದನ್ನು ಲೇಖಕಿ ಸ್ವಾರಸ್ಯಕರವಾಗಿ

ಚಿತ್ರಿಸಿದ್ದಾರೆ. ಹೋಂವರ್ಕ್ ಮುಟ್ಟದೆ ತಿಂಡಿ ಮಾತ್ರ ಮುಗಿಸಿರುವುದು ನೈಜತೆಗೆ ಸಾಕ್ಷಿಯಾಗಿದೆ!

ಕುಂಬ್ಳ ಬೀಜ ಕದ್ದು ತಿಂದು
ಬಾಣ್ಲೆ ಇಟ್ಟು ಬೇಗ ಹುರಿದು
ಮುಸುಕುನೊಳ್ಗೆ ಮುಗ್ಸೇ ಬಿಟ್ವೆ
ಕರುಂ ಕುರುಂ ಕುರುಂ.......
ಹೋವರ್ಕ್ ಬರ್ದೇ ಇಲ್ಲ

***

ತಿಂಡಿ ಮಾತ್ರ ಉಳ್ಸೇ ಇಲ್ಲ
ಅಮ್ಮ ಬಂದ್ಲು ದೊಣ್ಣೆ ತಂದ್ಲು
ಪಟ್ ಪಟ್. ಪಟಾರ್

ಇಲಿ ಸಾಯಿಸಲು ಅಮ್ಮ ಬೋನು ಇಟ್ಟಿದ್ದರೂ ಅದು ಸಾಯದಿರುವುದಕ್ಕೆ ಪುಟ್ಟಿ ಇಲಿಗೆ ಅಮ್ಮನ ಪ್ಲ್ಯಾನು ಹೇಳುವುದು ಕಾರಣವಾಗಿದೆ. ಮಕ್ಕಳ ತುಂಟಾಟದ ಜೊತೆಗೆ ಪ್ರಾಣಿ–ಪಕ್ಷಿಗಳ ಪ್ರೇಮ ಅಲ್ಲಿ ವ್ಯಕ್ತಗೊಂಡಿದೆ.

ಅಮ್ಮ ನೀನು ಬೋನಿಟ್ರೆ
ಇಲಿಯೇನೂ ಬೀಳಲ್ಲ
ಬೋಂಡ–ಕೊಬ್ರಿ
ಚಕ್ಲಿ–ನಿಪ್ಪಟ್
ಏನಿಟ್ರೂ ಗಿಟ್ಟಲ್ಲ
ಏನಿಟ್ರೂ ಗಿಟ್ಟಲ್ಲ

ಥರಗುಟ್ಟುವ ಚಳಿ ಕುರಂ ಎಂದು ಬಾಯಲ್ಲಿ ನೀರೂರಿಸುವ ತಿಂಡಿಯೊಡನೆ ಚೆನ್ನಾಗಿರುತ್ತದೆ ಎಂದು ಈ ಕವಯಿತ್ರಿ ಬಣ್ಣಿಸುತ್ತಾರೆ.

ಚಳಿ ಚಳಿ ಚಳಿ
ಎಂಥ ಮಜ
ಚಳಿಯ ಜೊತೆ
ಕರುಂ ಕುರಂ
ಇನ್ನು ಮಜ

ತಾಯಿಯು ಪದೇ ಪದೇ ನೆನಪು ಮಾಡುವ ಹೋಂವರ್ಕ್‌ನಿಂದಾಗಿ ಮಗುವಿಗೆ ಚಳಿಯ ಜೊತೆಗೆ ಮಮ್ಮಿಯ ಕಾಟವೂ ಮತ್ತೊಂದು ಬೇಸರದ ಸಂಗತಿ.

ಮಮ್ಮಿದೊಂದು ಕಾಟ
ಹೋಂವರ್ಕ್ ಮಾಡು ಪುಟ್ಟ

ಚಳಿಗೆ ಕೈಯು ನಡುಗಿ
ಸ್ಪೆಲಿಂಗ್ ಎಲ್ಲ ಸೊಟ್ಟ

ನಮ್ಮ ಸುತ್ತಮುತ್ತಲಿನ ಸಂಗತಿಗಳನ್ನು ಶಬ್ದಗಳ ಆಟದೊಂದಿಗೆ ಮಕ್ಕಳ ಮುಂದಿಡುವುದು ಮುದಕೊಡುತ್ತದೆ:

ಧೋ ಧೋ ಧೋ ಧೋ
ಮಳೆ ಮಳೆ ಮಳೆ ಮಳೆ
ಚಟ ಪಟ ಚಟ ಪಟ
ಗುಡುಗು ಸಿಡಿಲು
ವಟ ವಟ ವಟ ವಟ
ವಟಗುಟ್ಟುತ್ತಾ
ಕಲ್ಲೀನ ಸಂದಿಗೆ ಹೋದ್ರು
ಯಾರು ಅವ್ರು ಆ.......ಯಾರು ಅವ್ರು?
ಕಪ್ಪೆ!

ಬೆಕ್ಕಿನ ಮ್ಯಾಂವ್ ಮ್ಯಾಂವ್, ನಾಯಿಯ ಕುಂಯ್ ಕುಂಯ್ ಹಾವಿನ ಬುಸ್ ಬುಸ್, ಮಾಮನ ದಡಬಡ ಎಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾರೆ.

ತಾಯಿ ಮತ್ತು ಮಗುವಿನ ನಡುವೆ ನಡೆಯುವ ಸಂಭಾಷಣೆ ಮತ್ತು ತುಂಟಾಟಗಳಲ್ಲಿ ವಾತ್ಸಲ್ಯ ತುಂಬಿತುಳುಕುತ್ತದೆ. ಮಗುವಿನ ಮಾತು ಕೇಳಿ ತಾಯಿಗೆ ನಗು, ಪ್ರೀತಿ, ಬೆರಗು, ಒಮ್ಮೊಮ್ಮೆ ಬೇಸರ ! ಬೇಸರ ಯಾಕಂದ್ರೆ–ಮಗು ಹೇಳುತ್ತೆ ಅಮ್ಮ ನೀನು ಮುಂದೆ ಅಜ್ಜೀ ತರಹ ಆಗ್ತೀಯಲ್ಲ ಎಂದು !

ಅಜ್ಜಿ ನೋಡು ಹೆಂಗಿದಾರೆ
ಬಿಳಿಕೂದ್ಲು ಹಲ್ಲಿಲ್ಲ
ನೀನು ಕೂಡ ಒಂದಿನ
ಅಜ್ಜಿ ಆಗ್ತಿಯೇನಮ್ಮ?
ಅಯ್ಯೋ ನನ್ನಮ್ಮ
ಹ್ಹ ಹ್ಹಾ ನನ್ನಮ್ಮ

ತನ್ನನ್ನು ಸುಖಾಸುಮ್ಮನೆ ಹೊಡೆಯುತ್ತಿರುವುದ್ಯಾಕೆ ಎಂದು ತಾಯಿಯನ್ನು ಪ್ರಶ್ನಿಸುತ್ತದೆ:

ಇಷ್ಟೆಲ್ಲ ಓದ್ಕೊಂಡಿದ್ದಿ
ಹೊಡೀತಿ ಯಾಕೆ ನಂಗೆ
ಮಗುವಿನ ಮನಸು ಹಸಿಮಣ್ಣು
ಗೊತ್ತಿಲ್ಲೇನಮ್ಮ?
ದಡ್ಡಿ ನನ್ನಮ್ಮ

ವೈವಿಧ್ಯತೆ ಜೀವಜಗತ್ತಿನ ಜೀವಾಳವಾಗಿದೆ ಎಂಬುದು 'ಹೇಗೆ ಇದ್ರು ಎಲ್ರೂ ಚಂದ' ಎಂಬ ಪದ್ಯದಲ್ಲಿ ಇನ್ನಿಲ್ಲದಂತೆ ನಿರೂಪಿತವಾಗಿದೆ:

ಇರುವೆಯಣ್ಣ ಲಿಲ್ಲಿಪುಟ್
ಆನೆಮಾಮ ಬೊಂಬಾಟ್
ಹೇಗೆ ಇದ್ರು ಎಲ್ರು ಚಂದ್
ನಾನು ನೀನು ಅವ್ನು
ಜಿಂಕಿ ಓಟ ಓಲಿಂಪಿಕ್
ಆಮೆ ಪಾಪ ಗಪ್‌ಚಿಪ್
ಹೇಗೆ ಇದ್ರು ಎಲ್ರು ಚಂದ್
ನಾನು ನೀನು ಅವ್ನು

ನಾವು ಹೇಗಿರುವೆವೊ ಹಾಗೆಯೆ ಚೆನ್ನಾಗಿದ್ದೇವೆ ಮತ್ತು ಪ್ರತಿಯೊಬ್ಬರಿಗೂ ಅವರದೇ ಆದ ಪ್ರತಿಭೆಯಿದೆ ಎನ್ನುವುದನ್ನು ಈ ಕವಿತೆ ಆಡಾಡುತ್ತಲೆ ಕಲಿಸಿಕೊಡುತ್ತದೆ:

ಕೋಗಿಲೆ ಹಾಡು ಸೂಪರ್
ಕಾಗೆಯಕ್ಕ ಕರಕರ್
ಹೇಗೆ ಇದ್ರು ಎಲ್ರು ಚಂದ
ನಾನು ನೀನು ಅವ್ನು
ಅಣ್ಣ ತುಂಬ ಬ್ರೈಟು
ನಾನು ಸ್ವಲ್ಪ ಟ್ಯೂಬ್‌ಲೈಟು
ಹೇಗೆ ಇದ್ರು ಎಲ್ರು ಚಂದ
ನಾನು ನೀನು ಅವ್ನು

ಎಲ್ಲರೂ ಒಂದಾಗಿರಬೇಕೆಂಬ ತಿಳಿವಳಿಕೆ ಮತ್ತು ಒಳಗೊಳ್ಳುವಿಕೆಯೆ ಬಾಳಿನ ಹಿರಿದಾದ ಅರ್ಥವೆಂದು ಈ ಪದ್ಯ ಪರೋಕ್ಷವಾಗಿ ಹೇಳುತ್ತದೆ. ಅದೇ ಆಶಯದ ಇನ್ನೊಂದು ಪದ್ಯ– 'ನೋವಿಗೆ ಬೈ ಬೈ'

ಇರುವೆ ಸಾಲು ಓಡ್ತಾ ಇರ್ಲಿ
ಆನೆಗಳೆಲ್ಲ ಕಾಡಲ್ಲಿರ್ಲಿ
ಹೂವುಗಳೆಲ್ಲ ಗಿಡದಲ್ಲಿರ್ಲಿ
ಜೀವ ಸಂಕುಲ ನಗ್ತಾ ಇರ್ಲಿ
ಬೈ ಬೈ ನೋವಿಗೆ ಬೈ ಬೈ

ಈ ಜಗತ್ತಿನಲ್ಲಿ ಇರುವೆಯೂ ಬದುಕಬೇಕು ಮತ್ತು ಆನೆಯೂ ಬದುಕಬೇಕು ಎನ್ನುವ ಸಹಬಾಳ್ವೆಯ ಪಾಠ ಇದರಲ್ಲಿ ಅಡಕವಾಗಿದೆ. ಇಲ್ಲದಿದ್ದರೆ ವಿನಾಶ ಕಾಲಕ್ಕೇ ನಮ್ಮನ್ನು ನಾವೆ ಶಪಿಸಿಕೊಳ್ಳಬೇಕಾಗುತ್ತದೆ:

ಜೆಸಿಬಿಯ ಯಮತೋಳು
ನೂಕಿ ಅಮ್ಮನ ಅಳಲು
ನೆರೆದವರೆಲ್ಲ ಅತ್ತು ಬಿಟ್ಟರು
ಕಣ್ಣೀರೊರೆಸಲು ಯಾರು?
ಕಣ್ಣೀರೊರೆಸಲು ಯಾರು?

ನಾಟಕೀಯತೆ, ಆಡುಭಾಷೆಯ ಸೊಗಡು, ಲಯಗಾರಿಕೆ, ಪದಮಾಧುರ್ಯ ಮತ್ತು ಸಹಜ ನಿರೂಪಣೆಗಳಿಂದ ವಿಜಯಶ್ರೀ ಹಾಲಾಡಿ ಮಕ್ಕಳ ಬರವಣಿಗೆಯಲ್ಲಿ ಗಮನಾರ್ಹವಾದುದನ್ನು ಸಾಧಿಸಿದ್ದಾರೆ.

ಚಿಂತಾಮಣಿ ಕೊಡ್ಲೆಕೆರೆ

ಮೋಜು, ರಂಜನೆ ಮನಸ್ಸಿನಲ್ಲಿ ಒಮ್ಮೆಲೆ ಕುಳಿತುಕೊಳ್ಳುವ ಲಯ ಮತ್ತು ಅದಕ್ಕೊಪ್ಪುವ ಪ್ರಾಸ, ಅನುರಣನೆಗಳಿಂದ ಶಿಶುಪ್ರಾಸಗಳು ಇತ್ತೀಚೆಗೆ ಕನ್ನಡದಲ್ಲಿ ಜನಪ್ರಿಯವಾಗುತ್ತಿವೆ. ಬಾಲವಾಡಿ ಮಕ್ಕಳಿಗೆ ಇಂತಹ ರಚನೆಗಳು ಹಿಂದೆ ಇದ್ದುದೆ ಕಡಿಮೆ. ಇಂಗ್ಲಿಷ್ ನರ್ಸರಿ ಹಾಡುಗಳು ಕನ್ನಡದ ಮೇಲೆ ಪ್ರಭಾವವನ್ನು ಬೀರಿದ ನಂತರ ಹೊಸ ಹಾಡುಗಳು ಹುಟ್ಟಿಕೊಂಡವು. ಸುಮತೀಂದ್ರ ನಾಡಿಗ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಕೆ.ವಿ. ತಿರುಮಲೇಶ್, ರಾಜಶೇಖರ ಕುಕ್ಕುಂದಾ, ಆನಂದ ಪಾಟೀಲ, ಚಿಂತಾಮಣಿ ಕೊಡ್ಲೆಕೆರೆ ಮುಂತಾದವರು ಇದರಲ್ಲಿ ಈಗ ಸಾಕಷ್ಟು ಫಸಲು ತೆಗೆದಿದ್ದಾರೆ. ಶಿಶುಪ್ರಾಸಗಳಲ್ಲಿ ಈಗ ತುಂಬಿಕೊಂಡಿರುವ ಜೀವಂತಿಕೆ ಕನ್ನಡ ಭಾಷೆ, ಸಂಸ್ಕೃತಿಗಳು ಸಾಧಿಸಿರುವ ಹೊಸ ವಿಸ್ತಾರವಾಗಿದೆ. ಕತೆಗಾರರಾದ ಚಿಂತಾಮಣಿ ಕೊಡ್ಲೆಕೆರೆ ಮಕ್ಕಳಿಗಾಗಿ 'ಸಿಂಡ್ರೆಲಾ-ಅಂಬ್ರೆಲಾ' (ನವಕರ್ನಾಟಕ ಪ್ರಕಾಶನ, ೨೦೦೧) ತರುವುದರೊಂದಿಗೆ ಪುಟಾಣಿ ಪದ್ಯಗಳ ಸ್ವಾರಸ್ಯವನ್ನು ಮತ್ತಷ್ಟು ಹೆಚ್ಚಿಸಿದರು. ಅವರು ಕಲ್ಪನೆಯನ್ನು ಹರಿದುಬಿಡುವ ರೀತಿ ಬೆರಗು ಹುಟ್ಟಿಸುವತಂಹುದು:

ಹುಡುಗಿ ಹೆಸರು ಸಿಂಡ್ರೆಲಾ
ಕೈಯಲ್ ಫೋಲ್ಡಿಂಗ್ ಅಂಬ್ರೆಲಾ
ಮಳೆ ಬಂದ್ರೆ
ಬಂತು ತೊಂದ್ರೆ
ಕೊಡೆ ಬಿಚ್ಚೋಕೆ ಬಂದ್ರೇ ತಾನೇ-
ನೀವ್ಯಾರಾದ್ರೂ ಬರ್‍ರೆಲಾ !
ಕರೀತಿದ್ದಾಳೆ ಸಿಂಡ್ರೆಲಾ

– ಸಿಂಡ್ರೆಲಾ ಅಂಬ್ರೆಲಾ

ಗೆಳೆಯ ಹೇಳಿದ ಗುಟ್ಟನ್ನು ರಟ್ಟು ಮಾಡುವುದಿಲ್ಲವೆನ್ನುವ ಪುಟ್ಟ ಅದನ್ನು ಎಷ್ಟೊತ್ತು ಗುಟ್ಟಾಗಿ ಇಟ್ಟಿರುತ್ತಾನೆ ಗೊತ್ತಾ?

ಪಕ್ಕದ್ಮನೆ ಕಿಟ್ಟು
ಹೇಳಿದ್ದಾನೆ ಗುಟ್ಟು
'ನಾ ಯಾರಿಗೂ ಹೇಳಲ್ಲ
ನಾ ಯಾರಿಗೂ ಹೇಳಲ್ಲ'
ಕೊಟ್ರೆ ಅಚ್ಚು ಬೆಲ್ಲ?
'ಈಗ್ಲೇ ಹೇಳ್ತಿನಲ್ಲ!'

– ಗುಟ್ಟು

ಮಳೆ ಮತ್ತು ಚಳಿ ಕುರಿತು ಮಕ್ಕಳ ಭಾವನೆಗಳನ್ನು ವಾಸ್ತವ ರೀತಿಯಲ್ಲಿ ಕೊಡ್ಲೆಕೆರೆ ಅಭಿವ್ಯಕ್ತಿಸಿದ್ದಾರೆ.

ಆನಂದ, ಭಯ, ಗೆಲುವು, ಕೇಕೆಗಳು ಈ ಪ್ರಾಸಗಳಲ್ಲಿ ಸಮ್ಮಿಲನಗೊಂಡಿವೆ. ಚಳಿಯೆಂದರೆ ಹುರಿಗಡಲೆ ಸಿಗಬಹುದೆಂಬ ಆಸೆ ಒಂದೆಡೆಯಿದ್ದರೆ ಹಾಸಿಗೆಯಲ್ಲಿ ನಡಗುತ್ತಿರುವ ಅಜ್ಜನ ನೆನೆದು ಚಳಿ ಬರಬೇಡ ಎನ್ನುತ್ತಿದ್ದಾನೆ ಪುಟ್ಟ ಹುಡುಗ. ತಾನು ಆಟವಾಡುವುದು ಮುಗಿದ ಮೇಲೆ ಮಳೆ ಬರಲಿಯೆನ್ನುವ ಆಸೆ ಮನದ ಒಂದು ಮೂಲೆಯಲ್ಲಿದ್ದರೆ ಗುಡುಗು-ಮಿಂಚುಗಳ ಮಾಯಾಲೋಕ ತನ್ನ ಕಣ್ಣೆದುರು ತೆರೆದುಕೊಳ್ಳಲೆಂಬ ಬಯಕೆ ಇನ್ನೊಂದು ಮೂಲೆಯಲ್ಲಿದೆ.

ಮಳೆಯೇ ಮಳೆಯೇ ಬಂದುಬಿಡು
ಗುಡುಗು ಮಿಂಚು ತಂದು ಬಿಡು
ಕೆರೆ ಬಾವಿ ತುಂಬಿ ಬಿಡು
ರಸ್ತೆಯನ್ನೆಲ್ಲಾ ತೊಳೆದುಬಿಡು

ಬೆಕ್ಕಿಗೆ ಹಾಲು ಕೊಟ್ಟು ಅಜ್ಜನ ಕಾಲನು ನೆಕ್ಕು ಎಂದು ಪೂಸಿ ಹೊಡೆಯುವ ಹುಡುಗ ಇಲ್ಲಿದ್ದಾನೆ!

ಮ್ಯಾಂವ್ ಮ್ಯಾಂವ್ ಬೆಕ್ಕಣ್ಣ
ಇಲಿ ಕಂಡರೆ ಸೊಕ್ಕಣ್ಣ
ಅರ್ಧ ಲೋಟ ಹಾಲು ಕೊಡುವೆ
ಅಜ್ಜನ ಕಾಲನು ನೆಕ್ಕಣ್ಣ

ಪುಕ್ಕಟೆ ದೋಸೆ ತಿನ್ನಬೇಕೆನ್ನುವ ಗೋಪಾಲನ ಆಸೆಗೆ ಅಷ್ಟೇ ವಿನೋದದಿಂದ ಹೋಟೆಲ್ ಭಟ್ಟ ಹೇಳುವುದು ಸ್ವಾರಸ್ಯಕರವಾಗಿದೆ:

ಭಟ್ರೇ ಭಟ್ರೇ ಬೆಣ್ಣೆ ಹಾಕಿ
ಮಸಾಲೆ ದೋಸಿ ಕೊಡಿ
ದುಡ್ಡು ಎಂಬುದು ತೀರಾ ಕೆಟ್ಟದು
ದುಡ್ಡಿನ ಆಸೆ ಬಿಡಿ
ಗೋಪಾಲಣ್ಣ ಬೆಳಗಿನ ಹೊತ್ತು
ತಣ್ಣನೆ ನೀರು ಕುಡಿ
ಬಟಾಟೆ ಪಲ್ಯ ಒಳ್ಳೆಯದಲ್ಲ
ಸುಮ್ಮನೆ ಮನೆಗೆ ನಡಿ

ವಿನೋದ ಪ್ರವೃತ್ತಿ ಈ ಪುಟ್ಟ ಕವಿತೆಗಳಲ್ಲಿ ತುಂಬಿಕೊಂಡು ಮಕ್ಕಳಿಗೆ ಮುದ ಕೊಡುತ್ತದೆ

ಕಾವೇರಕ್ಕನ ಗಂಡ
ಪೇಪರ್ ಓದಿಕೊಂಡ
ಚಾ ಕುಡಿದು ಮಿಂದ
ನೀರೊ-ಬಿಸಿ ಕೆಂಡ

'ಓಟಗಾರ ಗೋಪಾಲಣ್ಣ', 'ಕೂಡೋ ಲೆಕ್ಕ', 'ಹುಲಿ' ಮುಂತಾದ ಪದ್ಯಗಳು ಮಕ್ಕಳ ಮನಸ್ಸಿನ ಭಾರವನ್ನು ಇಳಿಸುವಂತಿವೆ. ಅವರ ನಾಲಿಗೆ ಮೇಲೆ ನಲಿಯುತ್ತವೆ. ಅವರ ಆಟ–ಪಾಠಗಳಲ್ಲಿ ಇವು ಸೇರಿಕೊಂಡಾಗ ಮನಸ್ಸು ಮತ್ತಷ್ಟು ಅರಳುವುದರಲ್ಲಿ ಸಂಶಯವಿಲ್ಲ

ವಸಂತ ಪ್ರಕಾಶನದ ವ್ಯಕ್ತಿಚಿತ್ರ ಮಾಲೆಯಲ್ಲಿ ಬಂದಿರುವ ರವೀಂದ್ರನಾಥ ಠಾಕೋರ್ (೨೦೧೨), ರಮಣ ಮಹರ್ಷಿ (೨೦೧೧) ಪುಸ್ತಕಗಳು ಸ್ವಲ್ಪ ಬೆಳೆದ ಹುಡುಗರನ್ನು, ಮುಖ್ಯವಾಗಿ, ಹೈಸ್ಕೂಲು ಓದುವ ಹುಡುಗರನ್ನು ಗಮನದಲ್ಲಿಟ್ಟುಕೊಂಡು ಬರೆದವುಗಳಾಗಿವೆ. ಇಲ್ಲಿ ಚಿಂತಾಮಣಿ ಕೊಡ್ಲೆಕೆರೆ ಅವರು ಗಹನ ವಿಷಯಗಳನ್ನು ಸರಳವಾಗಿ ನಿರೂಪಿಸಿದ್ದಾರೆ. ರವೀಂದ್ರನಾಥ ಟ್ಯಾಗೋರರ ಭೂಮ ವ್ಯಕ್ತಿತ್ವವನ್ನು ಕುತೂಹಲಕರವಾಗಿ ಹೇಳುತ್ತ ಹೋಗಿದ್ದಾರೆ: 'ಜೀವಿತ ಕಾಲದಲ್ಲೇ ಈ ಋಷಿಕವಿ ದಂತಕತೆಯಾಗಿಬಿಟ್ಟರು. ಒಮ್ಮೆ ಯಾವುದೋ ಕಾಡಿನ ಪಕ್ಕದ ಹಳ್ಳಿಯಲ್ಲಿ ಒಬ್ಬ ಇಂಗ್ಲಿಷ್ ಅಧಿಕಾರಿ ಉಳಿಯಬೇಕಾಗಿ ಬಂದಿತಂತೆ. ಹಳ್ಳಿಗರು ಬೆಂಕಿ ಹಾಕಿಕೊಂಡು, ಹಾಡಿ ನಲಿಯುತ್ತಿದ್ದರು. ಹಾಡುಗಳ ಸೊಬಗಿಗೆ ಆಂಗ್ಲ ವ್ಯಕ್ತಿ ಮರುಳಾದ. ಇನ್ನೂ ಒಂದೆರಡು ಕಡೆ ಹೀಗೆಯೇ ನಡೆಯಿತು. ಎಷ್ಟೋ ದಿನಗಳ ಬಳಿಕ ಆತ ಆ ಹಾಡುಗಳ ಕವಿ ರವೀಂದ್ರರೆಂದು ಪತ್ತೆ ಹಚ್ಚಿದ. 'ದೇಶದಲ್ಲಿ ಅವರು ಸುತ್ತದ ಪ್ರದೇಶವಿಲ್ಲ. ಜೀವನದಲ್ಲಿ ಅವರು ಆಸಕ್ತಿ ತಳೆಯದ ಕ್ಷೇತ್ರವಿಲ್ಲ. ಇಷ್ಟಾಗಿಯೂ ಅವರು 'ನಾನು ಕವಿ' ಎಂದೇ ಹೇಳಿಕೊಂಡಿದ್ದಾರೆ.' ರವೀಂದ್ರರ ಜನನದಿಂದ ಹಿಡಿದು ಅವರು ಓದಿದ ಪರಿಸರ, ಬೆಳೆದ ವಾತಾವರಣ, ಮಹಾತ್ಮಾಗಾಂಧಿಯ ಒಡನಾಟ, ಅವರ ಅಗಾಧ ಕೆಲಸ ಮುಂತಾದವುಗಳನ್ನು ತಮ್ಮದೆ ಶೈಲಿಯಲ್ಲಿ ಚಿಂತಾಮಣಿಯವರು ಹೇಳಿಕೊಂಡು ಹೋಗಿದ್ದಾರೆ. ಅವರ ಸಾಹಿತ್ಯಕ ಹಾಗೂ ಜೀವನದ ಕಲಾ ಪೂರ್ಣ ಪರಿಚಯ ವಿದ್ಯಾರ್ಥಿಗಳಿಗೆ ಆಗುವುದು. ಅದೇ ರೀತಿ ರಮಣ ಮಹರ್ಷಿ, ವಿನೋಬಾ ಭಾವೆ ಅವರ ವ್ಯಕ್ತಿತ್ವಗಳನ್ನು ಕುರಿತು ಚಿಂತಾಮಣಿ ಕೊಡ್ಲೆಕೆರೆ ಬರೆದಿದ್ದಾರೆ. ಕೆಲವು ಮಕ್ಕಳ ಕತೆಗಳನ್ನು ಅವರು ಬರೆದದ್ದು ಉಂಟು. ಮಕ್ಕಳಿಗಾಗಿ ಅವರು ಹೃದಯಂಗಮ ಹಾಗೂ ಮುದ ಕೊಡುವ ರೀತಿಯಲ್ಲಿ ಬರೆಯುವುದರಿಂದ ಅವರ ಮುಂದಿನ ಪುಸ್ತಕಗಳ ಬಗ್ಗೆ ಕುತೂಹಲವಿರುವುದು ಸಹಜವಾಗಿದೆ.

ಕಲ್ಪನಾ ಹೆಗಡೆ

'ನಕ್ಷತ್ರಮೀನು' [ಮಂಗಳಾ ಪ್ರಕಾಶನ, ಬೆಂಗಳೂರು, ೨೦೧೪] ಎನ್ನುವುದು ಕಲ್ಪನಾ ಹೆಗಡೆ ಅವರ ಕಥಾ ಸಂಕಲನದ ಹೆಸರು. ಆಗಸದಲ್ಲಿ ಮಿನುಗುವ ನಕ್ಷತ್ರದ ಹೊಳಪು ಸಮುದ್ರದಾಳದಲ್ಲಿನ ಮೀನಕ್ಕೆ ದೊರೆಯಿತೆ ಎನ್ನುವಂತಹ ಕುತೂಹಲವನ್ನು ಹುಟ್ಟಿಸುತ್ತ ಅನೇಕ ಸಾಹಸ ಮತ್ತು ಸ್ವಾರಸ್ಯಕರ ಸನ್ನಿವೇಶಗಳನ್ನು ಕತೆಗಳಲ್ಲಿ ತರಲು ಲೇಖಕಿ ಪ್ರಯತ್ನಿಸಿದ್ದಾರೆ. ಮಾನವೀಯ ಹಾಗೂ ಹೃದಯಂಗಮ ಭಾವನೆಗಳನ್ನು ಮಕ್ಕಳಲ್ಲಿ ಬೆಳೆಸಲು ಅವರು ಕತೆಗಳನ್ನು ಕಟ್ಟುತ್ತಾರೆ. ತಾಯಿಯ ವಾತ್ಸಲ್ಯವನ್ನು ಅವರು ಹಲವು ಪಾತ್ರಗಳಲ್ಲಿ ತರುವುದರ ಮೂಲಕ ಮಮತೆ, ಕೋಮಲತೆ, ಪೊರೆವ ಗುಣ, ಮಿಡಿಯುವ ಹೃದಯ ಮುಂತಾದ ಮೌಲ್ಯಗಳನ್ನು ಕತೆಯಲ್ಲಿ ಮುನ್ನೆಲೆಗೆ ತರುತ್ತಾರೆ. 'ಪರಿವರ್ತನೆ', 'ಕಿಟ್ಟು ಮತ್ತು ಕುರುಡ', 'ಮಕ್ಕಳ ಸಾಹಸ', 'ಶ್ಯಾಮನ ಹರಕೆ', 'ಬುದ್ಧಿವಂತ ಕೋಳಿ', 'ಅನ್ನದಾತ', 'ಜಾಣಬೆಕ್ಕು' ಮುಂತಾದ ಕತೆಗಳಲ್ಲಿ ಸಹಜ ನಿರೂಪಣೆಯಿದ್ದು ಸರಳವಾಗಿ ಓದಿಸಿಕೊಂಡು ಹೋಗುತ್ತವೆ.

'ಜಾಣ ಬೆಕ್ಕು' ಕತೆಯಲ್ಲಿ ಗುಂಡ ತೆನಾಲಿ ರಾಮನ ಹಾಗೆ ಬಿಸಿಹಾಲು ಇಟ್ಟು ಹಾಲು ಕುಡಿಯುವುದನ್ನು ಬಿಡಿಸಲು ನೋಡುತ್ತಾನೆ. ಆದರೆ ಇವನು ಸೇರಾದರೆ ಇವನ ಬೆಕ್ಕು ಸವ್ವಾ ಸೇರು! ಬಿಸಿಹಾಲು ಹಾಗೂ ಫ್ರಿಜ್‌ನಲ್ಲಿಟ್ಟಿರುವ ಹಾಲನ್ನು ಕೆಡವಿ ಎರಡೂ ಮಿಶ್ರಣವಾದ ತಣ್ಣನೆಯ ಹಾಲು ಕುಡಿದು ಇವನ ಯೋಜನೆಯ ಮೇಲೆ ತಣ್ಣೀರು ಸುರುವುತ್ತದೆ! ಇದು ಆಧುನಿಕ ಬೆಕ್ಕಲ್ಲವೆ! ಇಂತಹ ಹಲವು ವೈನೋದಿಕ ಪ್ರಸಂಗಗಳು ಈ ಸಂಕಲನದಲ್ಲಿವೆ. ಆದರ್ಶಮಯತೆಯನ್ನು ಬೇಕೆಂತಲೆ ತರದೆ ಪ್ರಯೋಗಶೀಲತೆಯ ಕಡೆಗೆ ಲಕ್ಷ ಕೊಟ್ಟರೆ ಅವರಿಂದ ಇನ್ನು ಒಳ್ಳೆಯ ರಚನೆಗಳು ಬರಬಹುದು. ಕಲ್ಪನಾ ಹೆಗಡೆ ಅವರ ಕವಿತೆಗಳಲ್ಲಿ ಲವಲವಿಕೆಯ ಗುಣವಿದ್ದು ಮಕ್ಕಳನ್ನು ಆಕರ್ಷಿಸುವಂತಿವೆ.

ಹುಣಸೂರು ಮಾದುಪ್ರಸಾದ್

'ಚುಕ್ಕಿ ನವಿಲುಗಿರಿ' (ಪ್ರೇಮ ಪ್ರಕಾಶನ, ಜೀನಹಳ್ಳಿ, ೨೦೧೩) ಮಾದುಪ್ರಸಾದ್ ಅವರ ಮಕ್ಕಳ ಕವನ ಸಂಕಲನವಾಗಿದ್ದು ಚೇತೋಹಾರಿ ಬರವಣಿಗೆ ಅದರ ಒಂದು ಮುಖ್ಯ ಗುಣವಾಗಿದೆ. ಅದಕ್ಕೆ ತಕ್ಕಂತೆ ಇರುವ ಆಡುಭಾಷೆ, ಗ್ರಾಮೀಣ ರೂಪಕ ಮತ್ತು ವಿನೋದ ಪ್ರಜ್ಞೆಗಳು ಈ ಲೇಖಕರ ಬಗ್ಗೆ ಹೆಚ್ಚು ಭರವಸೆ ಹೊಂದುವಂತೆ ಪ್ರೇರೇಪಿಸುತ್ತವೆ. ಗಾಳಕ್ಕೆ ಏನೋ ಸಿಕ್ಕಿತು ಎಂದು ನೀರಿಗೆ ಗಾಳ ಹಾಕಿದ ಹುಡುಗ ಮೇಲಕ್ಕೆ ಎತ್ತಿದರೆ ಅವನ ಮೋರೆ ಸಪ್ಪೆಗಾಗುವ ಪ್ರಸಂಗ ಬರುತ್ತದೆ.

ಎತ್ತು ಎತ್ತು ಎತ್ತು
ಗಾಳ ಮೇಲೆ ಬಂತು
ಸಿಕ್ಕುಕೊಂಡಿದೆ ದಪ್ಪನೆ ಕಪ್ಪೆ
ಅಯ್ಯೋ, ಹಿಡ್ಡೋನ್ ಮೋರೆ ಸಪ್ಪೆ

–ಗಾಳ

ಪುಟ್ಟ ಹಾಳೆಗೆ ಪೆನ್ನು ಚುಚ್ಚಿ ಬರೀ ತೂತು ಮಾಡುತ್ತ ಕೂಡ್ರುತ್ತಾನೆಂದು ಬೈಯ್ಯುವ ಅಮ್ಮನಿಗೆ ತುಂಟ ಮಗ ಉತ್ತರ ಕೊಡದೆ ಇರುತ್ತಾನೆಯೆ?

ಬರೆಯುವಾಗ
ಹಾಳೆ ತೂತು ಮಾಡಿವ್ನಂತ
ಅಮ್ಮ ಬೈತಾವ್ರೆ
ಅವ್ರು ಮಾತ್ರ
ದೋಸೆ, ತುಂಬ
ನೂರು ತೂತು ಮಾಡವ್ರೆ

–ಸಬೂಬು

ಮಾದುಪ್ರಸಾದ ಸೃಷ್ಟಿಸುವ ಚಿತ್ರಗಳು ಮಕ್ಕಳ ಕಲ್ಪನೆಯನ್ನು ವಿಸ್ತರಿಸಲು ದುಡಿಯುತ್ತವೆ. ಹಾಲು ಕೊಟ್ಟರೂ ಕುಡಿಯದ, ಅನ್ನ ಕೊಟ್ಟರು ತಿನ್ನದ, ಬ್ರೆಡ್ ಜಾಮು ಬಿಸ್ಕಿಟ್ ಮುಟ್ಟದ ನಾಯಿ ಯಾತಕ್ಕೆ ಹಟ ಮಾಡುತ್ತಿದೆಯೆಂದರೆ:

ನಿಂತೆ ಹೋಯ್ತು ಆಟ–ಗೀಟ
ಯಾಕಿಸ್ಟು–ಹಟವಂತೆ?
ಬಾನಿನಲ್ಲಿ ತೇಲುತ್ತಿರುವ
ಬೆಳ್ಳಿ ರೊಟ್ಟಿ ಬೇಕಂತೆ!

'ಸಂತೆ ಆಟ' ಪದ್ಯ ಗ್ರಾಮೀಣ ಮಕ್ಕಳ ಆಟವನ್ನು ಅರ್ಥವತ್ತಾಗಿ ಕಟ್ಟಿಕೊಡುತ್ತದೆ. ಗಿಡದ ಎಲೆಗಳನ್ನು ನೋಟು ಮಾಡಿಕೊಂಡು, ಬಳ್ಳಿಯನ್ನು ಹಗ್ಗವನ್ನಾಗಿ ಮಾಡಿಕೊಂಡು, ಕಲ್ಲು–ಮಣ್ಣನ್ನು ಮಾರುವ ಸರಕಿನ ಗುಂಪುಗಳನ್ನಾಗಿ ಮಾಡಿಕೊಂಡು ಬಸ್ಸು ಪೇಟೆಗೆ ಹೊರಡುವ, ಬಜಾರಿನಲ್ಲಿ ತಿರುಗುವ ಚಿತ್ರ ತನ್ನ ಕಲಾತ್ಮಕತೆಯಿಂದ ನಮ್ಮ ಮನ ಸೆಳೆಯುತ್ತದೆ.

ಎಲೆ ಗಿಲೆ ಕಿತ್ಗೊಂಡವ್ರೆ
ನೋಟು ಗೀಟು ಮಾಡ್ಕೊಂಡವ್ರೆ
....
ಪೂಂ ಪೂಂ ಪೂಂ ....ಪೂಂ
ಏನೇನ ಬೇಕು ತಗೊಳ್ರಿ
....
ರೈಟ್ ರೈಟ್ ರೈಟ್ ರೈಟ್

–ಸಂತೆ ಆಟ

ಗೋಲಕ, ಬೆಂಗಳೂರ ಆಟ, ಪುಟ್ಟನ ಪುಂಗಿ, ಬೆಕ್ಕಿನ ಮರಿ ಮುಂತಾದ ಪದ್ಯಗಳು ಮನಸೆಳೆಯುವಂತಿವೆ. ಮಾದುಪ್ರಸಾದ್ ಅವರು 'ಹಾಡೋಣ ಬಾ ಕಿಶೋರ', 'ಹಕ್ಕಿಗಾನ' ಎನ್ನುವ ಹಾಡಿನ ಸಂಕಲನಗಳನ್ನು ಮತ್ತು 'ಗೋಲಿಗಜ್ಜುಗದ ಹುಡುಗ' ಎನ್ನುವ ಕಾದಂಬರಿಯನ್ನು ಪ್ರಕಟಿಸಿ ಮಕ್ಕಳ ಸಾಹಿತ್ಯದಲ್ಲಿ ಅವರಿಗಿರುವ ಆಸ್ಥೆಯನ್ನು ಪ್ರಕಟಿಸಿದ್ದಾರೆ. ಅವರು ನವೀನ ವಸ್ತು ಹಾಗು ಲಯ ವೈವಿಧ್ಯದಿಂದ ಇನ್ನಷ್ಟು ಕೃತಿಗಳನ್ನು ತಂದರೆ ಒಳ್ಳೆಯ ಪ್ರಯತ್ನವಾದೀತು.

ಶಾರದಾ ಮುಳ್ಳೂರ

ನೀರಜ –
ಆಟ ಆಡುವಾಗಿನ ನಗು
ನೀರಿನ ಬುಗ್ಗಿ
ಹಾಲು ಕುಡಿದು ನಕ್ಕರಂತೂ
ಹಾಲಿನ ಸುಗ್ಗಿ

ಎನ್ನುವಂತಹ ಸಾಲುಗಳಲ್ಲಿ ವಾತ್ಸಲ್ಯ ಘನವಾಗಿ ಕುಳಿತಿದೆ. ತಾಯಿ–ಮಗುವಿನ ಪ್ರೀತಿ ನವೀನ ಕಲ್ಪನೆಯಲ್ಲಿ ಅರಳಿದೆ. ಎಚ್.ಎಸ್. ವೆಂಕಟೇಶಮೂರ್ತಿಯವರ 'ಸೋನಿ ಪದ್ಯಗಳು' ಮಾಡಿದ ಪ್ರಭಾವದಿಂದ ಶಾರದಾ ಮುಳ್ಳೂರ 'ನೀರಜ' (ವಿನಯ ಪ್ರಕಾಶನ ಜಮಖಂಡಿ, ೨೦೦೮)ದಲ್ಲಿ ನೀರಜನ ಬಾಲಲೀಲೆಗಳನ್ನು ಬಣ್ಣಿಸಿದ್ದಾರೆ. ಇವು ಒಂದು ರೀತಿಯಲ್ಲಿ ಮಗುವನ್ನು

ಕುರಿತ ಬರೆದ ವಾತ್ಸಲ್ಯ ಪ್ರಾಸಗಳು. ಮಗುವಿನ ಆಟಗಳನ್ನು ನೋಡಿ ಹಿರಿಯರಲ್ಲಿ ಉಂಟಾದ ಭಾವಲಹರಿಗಳು. ಹೀಗಾಗಿ ಇವು ಓದಿಗಾಗಿ ಮಕ್ಕಳನ್ನು ಲಕ್ಷದಲ್ಲಿರಿಸಿಕೊಳ್ಳದೆ ಬೆಳೆದ ಹುಡುಗ–ಹುಡುಗಿಯರನ್ನು ಹಾಗೂ ಹಿರಿಯರನ್ನು ಲಕ್ಷದಲ್ಲಿರಿಸಿಕೊಂಡಿವೆ. ಬೇಂದ್ರೆ, ಕಣವಿ, ಎಚ್ಚೆಸ್ವಿ ಮುಂತಾದವರು ಅನೇಕ ಮರೆಯಲಾಗದ ವಾತ್ಸಲ್ಯಹಾಡುಗಳನ್ನು ಕೊಟ್ಟಿದ್ದಾರೆ. ಆ ಹಾದಿಯಲ್ಲಿ ನಡೆಯಲು ಶಾರದಾರವರು ಪ್ರಯತ್ನಿಸಿದ್ದಾರೆ. ಕೆಲವು ಪದ್ಯಗಳಂತೂ ಮೋಹಕವಾಗಿವೆ.

ನಕ್ಷತ್ರ ನೋಡಬೇಕೆಂದರೆ
ನಿನ್ನ ಕಣ್ಣು ನೊಡಬೇಕು
ಜೋಡಿ ಚಂದ್ರರ ಕಾಣಲು
ನಿನ್ನ ಉಬ್ಬಿದ ಗಲ್ಲ
ನೋಡಬೇಕು

ಮಗು ಡಬ್ಬ ಬಿದ್ದು ಕಪ್ಪೆಯಾಗುವ, ಚಿತ್ತ ಬಿದ್ದು ಮೀನಾಗುವ, ಎದ್ದು ಕುಳಿತು ಮೊಲವಾಗುವ ಇಲ್ಲಿಯ ಶಬ್ದ ಚಿತ್ರಗಳು ಥಟ್ಟನೆ ಸೆಳೆಯುವಂತಿವೆ.

ಜಯಶೀಲಾ ಬೆಳಲದವರ

'ತೂಗಿರೆ ಕಂದನ' (ವಿದ್ಯಾ ಪ್ರಕಾಶನ, ಧಾರವಾಡ, ೨೦೧೨) ಜಯಶೀಲಾ ಬೆಳಲದವರ ಅವರ ವಾತ್ಸಲ್ಯಗೀತೆಗಳ ಒಂದು ಸಂಕಲನವಾಗಿದೆ.

ತೋಳ ತೊಟ್ಟಿಲಲಿ
ಬಾಳ ಬಟ್ಟಲಲಿ
ಸಕ್ಕರೆ ಹಾಲ್ಕೆನೆಯಾಗಿ
ತಾಯ್ತನವ ತುಂಬಿ ಬಂದ
ಓ ನನ್ನ ಸಿರಿಯೆ, ಓ ನನ್ನ ದೊರೆಯೆ

–ಓ ನನ್ನ ಸಿರಿಯೆ

ಮಗು ಮನೆಯ ಸಿರಿಯೆಂಬುದನ್ನು ಹಲವು ಹಾಡುಗಳಲ್ಲಿ ಅವರು ವಿವರಿಸಿದ್ದಾರೆ. ಅದರ ಆಟ–ಪಾಠಗಳಲ್ಲಿ ತಾಯ್ತಂದೆ ಮೈ ಮರೆಯುವ ಕ್ಷಣಗಳು ಇಲ್ಲಿವೆ:

ಬಾ ಬಾ ಕಂದ
ಚುರುಮುರಿ ತಂದು
ಕುರು ಕುರು ತಿಂದು
ಕುರಿ ಮರಿ ಆಟಾ ಆಡೋಣ

ನನ್ನ ತಂಗಿ ಪುಟ್ಟಿ
ಸುಟ್ಟಳೊಂದು ರೊಟ್ಟಿ
ಬೆಣ್ಣೆ ಹಚ್ಚಿ ಬಾಯಾಗಿಟ್ಟೆ
ಗುಳುಂ ಗುಳುಂ

ತಪ್ಪು ಹೆಜ್ಜೆ ಇಡುತ್ತ ಬರುವ ಕಂದನ ಸೊಗಸು ಕಾಲ್ಗೆಜ್ಜೆಯ ಗಿಲ್ ಗಿಲ್ ಸದ್ದು, ಲಲ್ಲೆಗರೆದು ಲಟಿಕೆ ಮುರಿದು, ಮುತ್ತನಿಕ್ಕಿ, ಗಲ್ಲ ಕಡಿದು ತನ್ನ ತೃಪ್ತಿ ತೋರಿಸುವ ತಾಯಿಯ ವಾತ್ಸಲ್ಯ – ಇಲ್ಲಿ ಅನಾವರಣಗೊಂಡಿವೆ. ಎಲ್ಲ ತಾಯಂದಿರು, ಮಗುವಿಗೆ ಹೆಚ್ಚಾಗಿ ಚಂದಮಾಮನನ್ನು ತೋರಿಸುತ್ತಾರೆ. ಆದರೆ ಇಲ್ಲಿಯ ಅವ್ವ ಸೂರ್ಯಮಾಮನೆಡೆಗೆ ನೋಡಿ ಆ ಆಕಾಶದರಸನನ್ನು ಬಣ್ಣಿಸುತ್ತಿದ್ದಾಳೆ.

ಬಾಳ ಬಯಕೆ ಹರಡುತ
ಬಾನ ಮೆಟ್ಟಲೇರುತ
ಹೊಂಗಿರಣ ಹರಡುತ
ಓಡುವ ಅವನಾರು ಗೊತ್ತಾ ಮಗು?

ಕೆಲವು ಜೋಗುಳ ಪದ, ಗರತಿಯ ಹಾಡುಗಳು ಇಲ್ಲಿ ಸೇರಿವೆ. ಅವರ ಮಕ್ಕಳ ಕವಿತೆಗಳ ಸಂಕಲನ 'ಜೇನುಹನಿ,' ಕತೆಗಳ 'ಪರರ ಕೇಡು ತನ್ನ ಕೇಡು' ಪ್ರಕಟವಾಗಿವೆ.

ಲಲಿತಾ ಹೊಸಪ್ಯಾಟಿ

'ಕಲ್ಪನಾಳಿಗೊಂದು ಎದೆಹಾಡು' (ಗುರುರಾಜ ಪ್ರಕಾಶನ, ಹುನುಗುಂದ ೨೦೦೬), 'ಮಳೆಯಾದಳು ನೀರಾ' (ಗುರುರಾಜ ಪ್ರಕಾಶನ ಹುನಗುಂದ, ೨೦೧೪) 'ಹೂ ಮಾರುವ ಹುಡುಗಿ' (ಗುರುರಾಜ ಪ್ರಕಾಶನ ಹುನಗುಂದ, ೨೦೧೪) ಮುಂತಾದ ಕೃತಿಗಳಿಂದ ಗಮನ ಸೆಳೆದಿರುವ ಲಲಿತಾ ಹೊಸಪ್ಯಾಟಿ ಅವರು ಬರವಣಿಗೆಯಲ್ಲಿ ಸಾಕಷ್ಟು ಸಮಯದಿಂದ ಕೃಷಿ ಮಾಡುತ್ತ ಬಂದಿದ್ದಾರೆ. 'ಕಲ್ಪನಾಳಿಗೊಂದು ಎದೆಹಾಡು' ಕವಿತೆ ಶೀರ್ಷಿಕೆಯೆ ಸೂಚಿಸುವಂತೆ ಕಲ್ಪನಾ ಚಾವ್ಲಾಳ ವೈಜ್ಞಾನಿಕ ಸಾಧನೆ ಹಾಗೂ ಅವಳ ಅಕಾಲಿಕ ಮರಣವನ್ನು ಹಿಡಿದಿಡುತ್ತದೆ. ಮಕ್ಕಳಿಗೆ ಅವಳ ಕಥೆ ಸ್ಫೂರ್ತಿದಾಯಕವಾದುದು.

ಮುಗುಳುನಗೆಯ ಹಿಂದೆ
ಮುಗಿಲ ಮರೆಯ ಆಟವು
ಮಿನುಗು ತಾರೆ ಲೋಕದಲ್ಲಿ
ನಿನ್ನ ನೋಟವು

ನೀಲಾಕಾಶದಲ್ಲಿ ಕಲ್ಪನಾ ಏನೇನೆಲ್ಲ ನೋಡಿದಳು ಎನ್ನುವುದನ್ನು ಹೇಳುತ್ತಾರೆ. ಅವಳ ಸಾಧನೆಗೆ ಹೆಮ್ಮೆ ಪಡುತ್ತ ಗಗನನೌಕೆ ಇಳಿಯುವಾಗ ಛಿದ್ರವಾದುದನ್ನು ವಿಷಾದದಿಂದ ಬಣ್ಣಿಸುತ್ತಾರೆ

ಗಗನದಾಚೆಗಿರುವ ನಿಗೂಢ
ವಿಶ್ವ ಕಂಡೆಯಾ
ಮನುಕುಲದ ಇತಿಹಾಸ
ಅಲ್ಲಿ ಬರೆದೆಯಾ
ಎದೆಯ ತೆರೆದು ಸ್ವಾಗತ

ಕಾದು ನಿಂತೆವು
ಮೇಲೆ ಸ್ಫೋಟ, ಬರೀ ತಾಪ
ಮಾತೆ ಮರೆತವು

ದೂರದ ಅಮೇರಿಕೆಯಲ್ಲಿದ್ದುಕೊಂಡು ಅಷ್ಟೊಂದು ಎತ್ತರಕ್ಕೇರಿದ ಕಲ್ಪನಾ ಚಾವ್ಲಾಳ ನೆನಪು ತಾಯ್ನಾಡಿನಲ್ಲಿ ಎಂದೆಂದಿಗೂ ಇರುವುದೆಂದು ಮಕ್ಕಳಿಗೆ ಹೇಳುತ್ತಾರೆ:

ಮಾತೃಭೂಮಿಯಲ್ಲಿ ನಿನ್ನ
ನೆನಪು ಮಾಸದು
ಕಣ್ಣ ನೀರು ಕೆನ್ನೆಮೇಲೆ
ನೋವ ಮರೆಸದು

'ಅಜ್ಜನ ಉಡುಗೊರೆ' ಎನ್ನುವ ಲಲಿತಾ ಅವರ ಪದ್ಯ ಗ್ರಾಮೀಣ ಸೊಗಡಿನಲ್ಲಿದ್ದು ಮಕ್ಕಳು ಲಯಗೂಡಿಸುತ್ತಾರೆ.

ಏನ್ ತಂದ, ಏನ್ ತಂದ
ಅಜ್ಜಯ್ಯ ನನಗೆ
ಒಲವಿನ ಉಡುಗೊರೆ ತಂದ
ಬರೆಯಲು ಪಾಟಿ ತಂಡ
ಓದಲು ಪುಸ್ತಕ ತಂದ
ಹೆಗಲಿಗೆ ಚೀಲ ತಂದ
ಅಕ್ಷರ ಕಲಿ ಎಂದ
ಧಾರವಾಡ ಪೇಡೆ ತಂದ
ಅಮ್ಮಿನಗಡ ಅಂಟು ತಂದ
ಬೆಳಗಾವಿ ಕುಂದ ತಂದ
ಎಲ್ಲರಿಗೂ ಹಂಚಿ ತಿನ್ನೆಂದ

'ಅತಿ ಆಸೆ' ಕವನ ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಅತಿಯಾಸೆಗಾಗಿ ಕೊಂದ ಕಥೆಯನ್ನು ಲಯಬದ್ಧವಾಗಿ ಹೇಳುತ್ತದೆ. ಸ್ವಲ್ಪ ಉಪದೇಶದ ಜಾಡಿನಲ್ಲಿ ಸಾಗಿರುವ ಈ ಕೃತಿಗಿಂತ 'ಮಳೆಯಾದಳು ನೀರಾ' ಎನ್ನುವ ಕಥಾ ಸಂಕಲನದಲ್ಲಿ ಲಲಿತಾ ಹೊಸಪ್ಯಾಟಿಯವರು ಸಹಜತೆ, ಕಲ್ಪಕತೆಗಳಿಂದ ನಮ್ಮ ಗಮನ ಸೆಳೆಯುತ್ತಾರೆ. ಇಳೆಗೆ ಮಳೆ ಎಷ್ಟು ಅವಶ್ಯಕವೆಂಬುದನ್ನು ನೀರಾ ಎಂಬ ಹುಡುಗಿಯ ಕಥೆಯ ಮೂಲಕ ಲಲಿತಾ ಅವರು ಮಕ್ಕಳಿಗೆ ಮನದಟ್ಟು ಮಾಡಿಸುತ್ತಾರೆ. ನೀರಾ ತರುಣಿ. ಸದಾ ಉರಿಯುವ ಸೂರ್ಯನನ್ನಾಗಲಿ, ಬೇರೆಯವರ ಮೇಲೆ ಅವಲಂಬಿತನಾದ ಚಂದ್ರನನ್ನಾಗಲಿ ಇಷ್ಟಪಡದೆ ಅಲಕ್ಷಿತವಾಗಿದ್ದ ಕಪ್ಪು ಮೋಡವೊಂದಕ್ಕೆ ಒಲಿದು ಮಳೆ ಸುರಿಸುತ್ತಾಳೆ. ಕಡೆಗಣ್ಣಿಗೆ ತುತ್ತಾದವರನ್ನು ಕಡೆವರೆಗೂ ದೇವರು ಕೈ ಬಿಡುವುದಿಲ್ಲವೆಂಬ ಗಾದೆಮಾತಿನಂತೆ ಪ್ರತಿಯೊಂದು ಜೀವಿಗೂ ಅದರದೆ ಆದ ಪ್ರತಿಭೆಯಿರುತ್ತದೆ ಎಂಬುದನ್ನು ಇಲ್ಲಿ ಪರೋಕ್ಷವಾಗಿ ಹೇಳಲಾಗಿದೆ. 'ಬಂಗಾರದ ಬಳೆ' ಅತ್ತೆಯ ಹೃದಯ ವೈಶಾಲ್ಯತೆಗೆ ಸೊಸೆ ಕರಗಿ ನೀರಾಗುವ, ತನ್ನ ತಪ್ಪು ತಿದ್ದಿಕೊಳ್ಳುವ ಕತೆಯನ್ನು ಹೇಳುತ್ತದೆ.

'ಹೂ ಮಾರುವ ಹುಡುಗಿ' ಕವನ ಸಂಕಲನದಲ್ಲಿನ ಕೆಲವು ಪದ್ಯಗಳು ಚೇತೋಹಾರಿಯಾಗಿವೆ. ಶಾಲೆಗೆ ಬರುವುದು ಮಕ್ಕಳಿಗೆ ಸಂತೋಷದ ಅನುಭವವನ್ನು ತಂದುಕೊಡುತ್ತದೆ.

ಶಾಲೆಗೆ ಬರಲು ಕಷ್ಟವೇ ಇಲ್ಲ
ಓಡುತ ಬರುವೆವು ನಾವೆಲ್ಲ
ಗುಡ್ಡ ಬೆಟ್ಟ ಏರಿ ಇಳಿದು
ಜಿಗಿಯುತ ಕಲಿವೆವು ದಿನವೆಲ್ಲ

–ನಲಿ–ಕಲಿ

ಅಜ್ಜಿಯು ಮಾಡಿದ
ಕುರು ಕುರು ಚಕ್ಕುಲಿ
ತಿನ್ನಲು ಬಲು ರುಚಿಯು
ಗೋಲುಗೋಲ
ಸುತ್ತಿದ ಚಕ್ರವು
ಬಣ್ಣವು ಬಲು ಮಜವು

–ಚಕ್ಕುಲಿ

'ಡೌಲಿನ ಪೆನ್ನು' ಮತ್ತು 'ಜಂಭದ ಛತ್ರಿ' ಕವನಗಳು ನಾನು, ನನ್ನದು ಎಂಬ ಸ್ವಾರ್ಥ ಮತ್ತು ಅಹಂಕಾರದ ಸ್ವಭಾವಗಳನ್ನು ತಿದ್ದುವಲ್ಲಿ ಸಹಾಯಕವಾಗುತ್ತವೆ. ತಾಯಿಯ ಮಮತೆ, ವಾತ್ಸಲ್ಯ, ಗೆಳೆಯರ ಪ್ರೀತಿ ಮುಂತಾದವುಗಳು ಲಲಿತಾ ಹೊಸಪ್ಯಾಟಿ ಅವರ ಕವಿತೆಗಳಲ್ಲಿ ಹೇರಳವಾಗಿ ಸಿಗುತ್ತವೆ. ಪ್ರಯೋಗಶೀಲತೆಯತ್ತ ಅವರು ಮನಸ್ಸು ಮಾಡಿದರೆ ಇನ್ನು ಒಳ್ಳೆಯ ರಚನೆಗಳನ್ನು ಕೊಡಬಲ್ಲರು.

ಕಮಲಾ ಕೊಂಡದಕುಳಿ

ಕರಾವಳಿಯ ಸುಂದರ ತೀರ, ಸುರಿಯುವ ಜಲಪಾತ, ಸುಮ್ಮನೆ ಹರಿಯುವ ನದಿ, ಸುಳಿಯುವ ಗಾಳಿಗಳನ್ನು ಅಷ್ಟೇ ಸುಂದರವಾದ ಶಬ್ದಗಳಲ್ಲಿ ಸೃಷ್ಟಿಸಿದವರು ಕುಮಟಾದ ಕಮಲಾ ಕೊಂಡದಕುಳಿ. ಉತ್ತರ ಕನ್ನಡ ಜಿಲ್ಲೆಯ ಬೆಟ್ಟ, ಗುಡ್ಡ, ಗಿಡ, ಮರ, ಕಡಲ ತೀರ, ಕಪ್ಪೆಚಿಪ್ಪು, ಕೊಟ್ಟಿಗೆ, ಸುತ್ತಲು ಇವು ಅವರ ಮಕ್ಕಳ ಕವಿತೆಗಳಲ್ಲಿ ಆಪ್ಯಾಯಮಾನವಾಗುತ್ತವೆ. ಕೆಂಡದಲ್ಲಿ ಡಾಂ ಡು ಎಂದು ಸಿಡಿಯುತ್ತಿರುವ ಹಲಸಿನ ಬೀಜದ ರುಚಿಯನ್ನು ಮತ್ತು ಉಸುಕಿನಲ್ಲಿ ಕಪ್ಪೆಚಿಪ್ಪು ಆಯುವ ಆಟದ ಮಜವನ್ನು ಮಕ್ಕಳು ಸವಿಯುವಂತಾಗುವುದು ಕಮಲಾ ಅವರ ಕವಿತೆಗಳ ವೈಶಿಷ್ಟ್ಯವಾಗಿದೆ. ಪ್ರಕೃತಿಯ ನಿಗೂಢ ಸಂಗತಿಗಳನ್ನು ಹೇಳುತ್ತ ಮಕ್ಕಳ ಕಿಲಕಿಲವೂ ಬೆಳದಿಂಗಳಿನಂತೆ ಒಂದು ವಿಸ್ಮಯ ಹಾಗೂ ಮೋಡಿ ಮಾಡುವಂತಹದ್ದು ಎಂಬುದನ್ನು ಅವರು ವಿವರಿಸುತ್ತಾರೆ. ಈವರೆಗೆ 'ಮುಗುಳು' (ಸುಮುಖ ಪ್ರಕಾಶನ, ಕಲ್ಲಬ್ಲೆ, ೨೦೦೮) ಹಾಗೂ 'ಶುಂಠಿ ಪೆಪ್ಪರಮೆಂಟ್' (ಅಕ್ಷಯ ಪ್ರಕಾಶನ, ಬೆಂಗಳೂರು, ೨೦೧೩) ಎಂಬ ಎರಡು ಕವನ ಸಂಕಲನಗಳನ್ನು ಅವರು ಪ್ರಕಟಿಸಿದ್ದಾರೆ. ಆದರ್ಶ ಹಾಗೂ

ಉಪದೇಶಗಳನ್ನು ಹೊಯ್ಯುವ ಅವರ ಕೆಲವು ರಚನೆಗಳಿಗಿಂತ ಕೀಟಲೆಯ ಮತ್ತು ಸ್ವಾರಸ್ಯಕರ ಸಂಗತಿಗಳನ್ನು ಹೇಳುವ ಅವರು ರಚನೆಗಳು ಇಲ್ಲಿ ಮಹತ್ವದ್ದಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ. ಯಾವ ಅರ್ಥ–ಹೊಳಹು ಇಲ್ಲದಿದ್ದರೂ ಆಡುನುಡಿ, ಶಬ್ದಗಳ ಮೋಡಿ, ಹಾಡಿನ ಲಯ, ಮತ್ತು ಹುಡುಗಾಟಿಕೆಯ ಭಾವಗಳಿಂದ ಅವು ಮಕ್ಕಳ ಮನ ಗೆಲ್ಲುವುದರಲ್ಲಿ ಸಂಶಯವಿಲ್ಲ. 'ಡಿಂಗಿಟಕ, ಡಿಂಗಿಟಿಕ, ಡಂ' ಎನ್ನುವ ಕವನವೇ ಇರಲಿ, 'ಡುಂಡುಂಡುಂ' ಎನ್ನುವದಿರಲಿ, 'ನನ್ನ ಗೋಳ್ಯಾರಹತ್ರ ಹೇಳ್ಲಿ' ಎನ್ನುವದಿರಲಿ – ಎಲ್ಲವೂ ಸಹಜವಾಗಿ ಮೂಡಿಬಂದಿದ್ದು ಪದಲಾಸ್ಯದಿಂದ ಅವು ಬಾಯಲಿ ನಲಿಯುತ್ತವೆ:

ನಾನು ಹೋಗುವೆ ಬೆಟ್ಟಕ್ಕೆ
ಜಿಗಿವೆನು ಒಂದೆ ನೆಗೆತಕ್ಕೆ
ಏರುವೆ ಹುಣಿಸೆ ಮರವನ್ನು
ಕೀಳುವೆ ಎರಡು ಮೂರನ್ನ
ಡಿಂಗಿಟಕ ಡಿಂಗಿಟಕ ಡಂ
ನಾನು ಈಜುವೆ ಹೊಳೆಯಲ್ಲಿ
ಅಪ್ಪ ಅಮ್ಮರ ಜತೆಯಲ್ಲಿ
ಮೀನಿನ ಹಾಗೆ ನೀರೊಳಗೆ
ಅಪ್ಪನ ಬೆನ್ನಿಗೆ ಕ್ಷಣದೊಳಗೆ
ಡಿಂಗಿಟಕ ಡಿಂಗಿಟಕ ಡಂ

ಹಕ್ಕಿಯೊಂದು ಎಲ್ಲಿಂದಲೋ ಕೊಯ್ಲು ಮಾಡಿದ ರಾಶಿಯಿಂದ ಕಾಳನ್ನು ಹೆಕ್ಕಿಕೊಂಡು ಹೋಗುವ ಚಿತ್ರಣ 'ಡುಂಡುಂಡುಂ' ಎನ್ನುವ ಪದ್ಯದಲ್ಲಿ ಸೊಗಸಾಗಿ ಮೂಡಿಬಂದಿದೆ. ತನ್ನ ಪುಟ್ಟಮರಿಯನ್ನು ನೆನೆದು ಅದರ ಹೊಟ್ಟೆಗೂ ಕಾಳು ತೆಗೆದುಕೊಂಡು ಹೋಗುವುದು ಹೃದ್ಯವಾಗಿದೆ. ವಾತ್ಸಲ್ಯದ ಗುಣ ಇಲ್ಲಿ ಅಭಿವ್ಯಕ್ತಗೊಂಡಿದೆ. ಹೇಳಿದ ಕ್ರಮ ಕೂಡ ಹೊಸದಾಗಿದೆ.

ಮನೆಯ ಎದುರು ಗದ್ದೆ ಉಂಟು
ಗದ್ದೆಯೊಳಗೆ ಭತ್ತ ಉಂಟು
ಕೊಯ್ಲು ಕಾಣದ ರಾಶಿ ಉಂಟು
ಡುಂ!ಡುಂ!ಡುಂ!
ಅತ್ತ ಇತ್ತ ಹಾರಿ ನೆಗೆದು
ಹರುಷದಿಂದ ಕುಣಿದು ಕುಣಿದು
ಗಟ್ಟಿ ಕಾಳ ತಿಂದಿತಲ್ಲ
ಡುಂ!ಡುಂ!ಡುಂ!

ಅಣ್ಣ ತನ್ನನ್ನು ಆಟಕ್ಕೆ ಸೇರಿಸಿಕೊಳ್ಳದೆ ತನ್ನ ಗೆಳೆಯರೊಂದಿಗೆ ಆಟವಾಡುತ್ತಾನೆಂಬ ಕೋಪ ಪುಟ್ಟ ತಮ್ಮನದು. ಈ ಚಿಕ್ಕ ಹುಡುಗನನ್ನು ಜೊತೆಯಲ್ಲಿ ಕರೆದುಕೊಂಡು ಆಡಬೇಕೆಂದು ಅಪ್ಪ, ಅಮ್ಮ, ಅಜ್ಜ, ಅಜ್ಜಿ ಹೇಳಿದರೂ ತನ್ನನ್ನು ಬಿಟ್ಟೇ ತಿರುಗುವ ಅವನನ್ನು ಬೈಯ್ಯುತ್ತಾನೆ.

ಅಣ್ಣ ಏನು ಕಡಿಮೆ ಬುದ್ಧಿವಂತನೇ! 'ಪುಟ್ಟ, ನೀನು ಜಾಣನಲ್ಲಾ. ಬಿದ್ದು ಬೀಳ್ತಿಯಂತೆ. ಹೋಗು ಮನೇಲಿ ತಿಂಡಿ ಕೊಡ್ತಾರಂತೆ' ಎಂದು ಪುಸಲಾಯಿಸಿ ಗೆಳೆಯರೊಡನೆ ಗುಡ್ಡ–ಬೆಟ್ಟ ತಿರುಗುತ್ತಾನೆ.

ನನ್ನಣ್ಣನ್ನ ಒಳ್ಳೆ ಹುಡ್ಗ
ಅಂತಾರಲ್ಲ ಎಲ್ಲ
ಆಟಕ್ ಮಾತ್ರ ಸೇರ್‍ಸೊದಿಲ್ಲ
ಗೊತ್ತಾಗ್ತಾನೆ ಇಲ್ಲ
ದೊಡ್ಡ ದೊಡ್ಡ ಹುಡುಗ್ರ ಸೇರ್‍ಸಿ ಕುಣ್ದು
ಎಷ್ಟೊಂದು ಮೋಜಿನ ಆಟ
ನಾನು ಬರ್‍ತೀನಿಂತ ಹೇಳ್ದ್ರೆ
ಉರಿ ಉರಿ ಕಣ್ಣಿನ ನೋಟ

'ಕೊಟ್ಟಿಗೆಗೆ ಬಂದ ಕರು' ಕವನ ಕೂಡ ಸೊಗಸಾಗಿ ನಿರೂಪಿತವಾಗಿದೆ. ಒಂದು ದೃಷ್ಟಿಯಿಂದ ಇದು ಪಂಜೆಯವರ 'ಸುಂಟರಗಾಳಿ' ಪದ್ಯವನ್ನು ದೂರದಿಂದ ನೆನಪಿಸಿದರೆ ಆಶ್ಚರ್ಯವಿಲ್ಲ.

ಒಣಗಿದ ತರಗೆಲೆ
ಗಿರಗಿರ ತಿರುಗುತ
ಸುಂಟರಗಾಳಿಯ ಸುಳಿಯೊಳಗೆ
ಧೂಳಿನ ಧೂಮವು
ಸುತ್ತಲು ಕವಿಯಲು
ಬಾಲವನ್ನೆತ್ತಿ ಎಳೆಗರುವು
ಚಂಗನೆ ಓಡುತ
ಗುಂಪೊಳು ನುಗ್ಗಿ
ಅಮ್ಮನ ಜತೆಯಲಿ ಸಂಭ್ರಮವು

ಸೊಕ್ಕಿನ ದೇಸಾಯಿಯೊಬ್ಬ ಓಣಿ ಓಣಿಯಲ್ಲಿ ಹೇಗೆ ಗರ್ವದಿಂದ ತಿರುಗುತ್ತಿದ್ದ ಎಂಬುದನ್ನು ಹೇಳುತ್ತ ಮಳೆಗೆ ಅವನು ಹಿಡಿದಿರುವ ಕೊಡೆ ಬುಡಮೇಲು ಆಗುವ ಮೂಲಕ ಅವನ ಅಹಂಕಾರವನ್ನು ಕವಯಿತ್ರಿ ಅಡಗಿಸುತ್ತಾರೆ. ಸಣ್ಣ ಸಂಗತಿಯೊಂದು ಬದುಕಿನ ದೊಡ್ಡ ಪಾಠವನ್ನು ಹೇಳುವ ರೀತಿಯಲ್ಲಿ ಮಕ್ಕಳಿಗೆ ಅದು ನಿರೂಪಿಸಲ್ಪಟ್ಟಿದೆ:

ಊರಿನ ಮಧ್ಯದಿ ಸೊಕ್ಕಿನ ಮನುಜ
ಇದ್ದನು ಅವನೇ ದೇಸಾಯಿ
ಸರಿಸಮ ತನಗೆ ಯಾರಿಹರಿಲ್ಲಿ
ಬೀಗುತ್ತಿದ್ದ ಬಡಪಾಯಿ
ಗರಿಗರಿ ಬಟ್ಟೆ ಕಾಲಿಗೆ ಬೂಟು

ಹೊಟ್ಟೆಯ ಒಡೆಯ ಮಹಾಕಾಯ
ನಡೆಯುತಲಿದ್ದರೆ ಗಿಡಮರ ನಕ್ಕವು
'ಮಾಡಿತೇ ಪ್ರಾಣಿಯು ಪರಕಾಯ'

'ಕಪ್ಪೆಯ ಪಯಣ', 'ಅಜ್ಜಿಯ ಕೋಲು', 'ಮಳೆರಾಯ', 'ಚಿಟ್ಟೆ', 'ಹಾರೈಕೆ' ಮುಂತಾದ ಅವರ ಕವನಗಳು ಸೊಗಸಾಗಿವೆ.

ಪ್ರಸನ್ನ ಮಂಡಲಗಿರಿ

'ಅಮ್ಮ ರೆಕ್ಕೆ ಹಚ್ಚು' (ಸೌರಭ ಸಾಹಿತ್ಯ ಪ್ರಕಾಶನ, ಕಲಬುರಗಿ, ೨೦೦೩) ಸಂಕಲನದ ಮೂಲಕ ಕೆಲವು ಲಾಲಿತ್ಯಪೂರ್ಣ ರಚನೆಗಳನ್ನು ಕೊಟ್ಟಿರುವ ಮಂಡಲಗಿರಿ ಪ್ರಸನ್ನ ಮಕ್ಕಳ ಕುತೂಹಲ ಹಾಗೂ ಬೆರಗುಗಳನ್ನು ಪದಗಳಲ್ಲಿ ಪೋಣಿಸಲು ಯತ್ನಿಸಿದ್ದಾರೆ. ಮಕ್ಕಳು ಎಷ್ಟೊಂದು ಸೂಕ್ಷ್ಮವಾಗಿ ಮನೆ ಮತ್ತು ಪರಿಸರವನ್ನು ಗಮನಿಸುತ್ತಾರೆ ಎಂಬುದನ್ನು ಪ್ರಸನ್ನ ಅವರು ತೆರೆದಿಡುತ್ತಾರೆ. ಕೆಲವು ಪದ್ಯಗಳು ಸರಳವೂ ಲಯಾತ್ಮಕವೂ ಕಲಾತ್ಮಕವೂ ಆಗಿ ನಮ್ಮ ಗಮನ ಸೆಳೆಯುತ್ತವೆ. 'ಪುಟ್ಟನ ಪ್ರಶ್ನೆ' ಅಂತಹದೊಂದು ಪದ್ಯ:

ಬಾನಲಿ ಚಂದ್ರನು
ಬಣ್ಣವ ಬದಲಿಸಿ
ತೇಲುತ ಬರುವನು ಏಕಮ್ಮ?
ತಾತನ ಪೂಜೆಯ
ತಾಮ್ರದ ತಟ್ಟೆಯ
ಬಣ್ಣಕೆ ತಿರುಗುವ ಏಕಮ್ಮ?
ಅವನ ಮೈಯಲಿ
ಏತಕೆ ಕಲೆಗಳು
ಹೊಡೆದವರಾರು ಹೇಳಮ್ಮ

ಬೆಳ್ಳಿಯಂತೆ ಬೆಳ್ಳಗಾಗಿರುವ ಚಂದ್ರ, ತಾಮ್ರ ಬಣ್ಣಕ್ಕೆ ತಿರುಗಿರುವ ಚಂದ್ರ, ಕಿರುಚಂದ್ರ, ಅರ್ಧಚಂದ್ರ, ಪೂರ್ಣಚಂದ್ರರ ಕುತೂಹಲವನ್ನು ಇದು ವಿಶ್ಲೇಷಿಸುತ್ತದೆ. ತುಂಟನೊಬ್ಬನ ಪ್ರಶ್ನೆಗಳು ಅಲ್ಲಿಗೆ ನಿಲ್ಲುವುದಿಲ್ಲ. ಜೊತೆಗೆ ಪ್ರಶ್ನೆ ಕೇಳುವ ಮಕ್ಕಳೆಂದರೆ ಹಿರಿಯರ ಇರಸುಮುರಸು ಹೇಳತೀರದಷ್ಟು, ಅವರ ಕುತೂಹಲವನ್ನು ತಣಿಸುವುದು ಬಿಟ್ಟು ಅವರಿಗೆ ಏಟು ಕೊಡುತ್ತಾರೆ.

ಅಕ್ಕನಿಗೇತಕೋ
ಎರಡು ಜಡೆ
ತಾತನಿಗೇತಕೋ
ಕರಿಯ ಕೊಡೆ
. . . . .
ಕೇಳಲು ಪ್ರಶ್ನೆಯ

ಹದಿನೆಂಟು
ಎಲ್ಲರು ಕೊಡುವರು
ತಲೆಗೇಟು!

'ಅಮ್ಮ ರೆಕ್ಕೆ ಹಚ್ಚು' ಕವನ ಮಕ್ಕಳ ಕಲ್ಪನಾ ವಿಸ್ತಾರವನ್ನು ಹಿಡಿದಿಡಲು ಯತ್ನಿಸುವಂತಹದು. ಆ ರೀತಿಯಲ್ಲಿ ಸ್ವಾತಂತ್ರ್ಯದ ಮಹತ್ವದ ನಿರ್ಭೀತಿಯ ಅಗತ್ಯಗಳ ಪರೋಕ್ಷ ಪಾಠ ಹೇಳುತ್ತದೆ;

ಅಮ್ಮ ನನಗೆ
ರೆಕ್ಕೆ ಹಚ್ಚು
ಹಕ್ಕಿಯಾಗುವೆ
ರೆಕ್ಕೆ ಬಿಚ್ಚಿ
ಮೇಲೆ ಮೇಲೆ
ತೇಲಿ ಹೋಗುವೆ
ಬಾನ ಎತ್ತರಕ್ಕೆ ಏರಿ
ತಾರೆ ಹಿಡಿಯುವೆ

ಶಾಲೆಯಿಂದ ಮನೆಗೆ ಬರುವ ವೇಳೆಯಲ್ಲಿಯೇ ಹಿಡಿಯುವ ಮಳೆ, ಪುಟ್ಟಹಕ್ಕಿಯ ತಾಪ, ಪುಟ್ಟುವಿನ ದಸರಾ ಕನಸು ಮುಂತಾದವು ಸ್ವಾರಸ್ಯಕರವಾಗಿ ಓದಿಸಿಕೊಳ್ಳುತ್ತವೆ. 'ಬಕಾಸುರರು', 'ನಾಯಿಗಳು', 'ಕಲ್ಲೆ ಕಲ್ಲೆ ಹಾಯ್ ಹಾಯ್' ಎನ್ನುವ ನಾಟಕಗಳನ್ನು ಕೂಡ ಪ್ರಸನ್ನ ಅವರು ಬರೆದಿದ್ದಾರೆ.

ನಾಗೇಂದ್ರ ನಾಯಕ

ಕತ್ತಲು ಸರಿದಿದೆ
ಸುತ್ತಲು ಬೆಳಕಿದೆ
ಹಾಡು ಕೋಗಿಲೆ ಹಾಡು

ಎಂದು ಬೆಳಕನ್ನು, ಪರಿಮಳವನ್ನು, ಸೃಷ್ಟಿಯ ಚೆಲುವನ್ನು ಕೋಗಿಲೆಯ ಹಾಡಿನೊಂದಿಗೆ ಮಕ್ಕಳಿಗೆ ತಲುಪಿಸಲು ಪ್ರಯತ್ನಿಸುತ್ತ ಬಂದಿರುವ ನಾಗೇಂದ್ರ ನಾಯಕ ಉತ್ತರ ಕನ್ನಡ ಜಿಲ್ಲೆಯವರು. ಅವರು ಹುಟ್ಟಿ ಬೆಳೆದ ತೊರ್ಕೆ ಗ್ರಾಮ, ಅವರು ಓಡಾಡಿದ ಪರಿಸರ, ಕಟ್ಟಿಕೊಂಡ ಕನಸು, ಮಕ್ಕಳೊಂದಿಗಿನ ನಿರಂತರ ಒಡನಾಟದಲ್ಲಿ ಚಿಗುರುತ್ತ ಬಂದಿವೆ. ಅನುಭವದ ಸೆಳಕುಗಳು ಕವಿತೆಗಳಾಗಿ ಅರಳಿವೆ. ಶಿಕ್ಷಕರಾಗಿ ಮೂವತ್ತು ವರ್ಷಗಳಷ್ಟು ಸಮಯವನ್ನು ವಿದ್ಯಾರ್ಥಿಗಳೊಂದಿಗೆ ಕಳೆದಿರುವ ನಾಗೇಂದ್ರ ನಾಯಕ ಸುತ್ತಲಿನ ಪರಿಸರದ ಹೂವು, ಹಣ್ಣು, ತಾರೆಗಳನ್ನು ಮಕ್ಕಳಿಗೆ ಮನದಟ್ಟು ಮಾಡಿಸಿದವರು. 'ಗುಬ್ಬಿಯೆರಡು ಹುಲ್ಲು ಕಡ್ಡಿ ಹೆಕ್ಕಿ ತಂದಿವೆ' ಎಂದೋ, 'ಭೂಮಿತಾಯಿ ನೇಮದಂತೆ ತಿರುಗುತಿರುವುದು' ಎಂದೋ ಪರಿಸರ ಹಾಗೂ ಸಾಮರಸ್ಯದ ಸಂಗತಿಗಳನ್ನು ಕುತೂಹಲದೊಡನೆ ಬೆರೆಸಿಟ್ಟಿದ್ದಾರೆ. ಕೆಲವು ಲಯಬದ್ಧ ರಚನೆಗಳನ್ನು ಕೊಟ್ಟಿದ್ದಾರೆ.

ಮೋಡದ ಮರೆಯಲಿ
ಕುಣಿಕುಣಿದಾಡುವೆ
ತಾರಾ ಬಳಗದಿ
ನಲಿನಲಿದಾಡುವೆ
ಬಾರ್ರೈ ಬಾರೋ ಚಂದಮಾಮಾ
ಭೂಮಿಗೆ ಚೆಲ್ಲುವೆ
ತಿಳಿಬೆಳದಿಂಗಳ
ಹುಣ್ಣಿಮೆ ದಿನದಲಿ
ತುಂಬಿದೆ ಅಂಗಳ
ಬಾರ್ರೈ ಬಾರೋ ಚಂದಮಾಮಾ

ಕಾಡು, ಕಣಿವೆ, ಹಕ್ಕಿಗಳನ್ನು ತುಂಬ ಪ್ರೀತಿಸುವ ಈ ಕವಿತೆ ಆ ಭಾವವನ್ನೂ ತಮ್ಮ ಕವಿತೆಗಳಲ್ಲಿ ಕಟ್ಟಿಕೊಡಲು ಪ್ರಯತ್ನಿಸುತ್ತಾರೆ.

ಹಸಿರು ಬಣ್ಣ
ನೋಡಿರಣ್ಣ
ಕಣ್ಣು ಸೆಳೆದಿದೆ
ಚೊಂಚು ಕೆಂಪು
ಮಾತು ಇಂಪು
ಹಿತವ ನೀಡಿದೆ

ಪ್ರಯೋಗಶೀಲತೆ, ವಾಸ್ತವದ ಅನಾವರಣ, ಆಡುಮಾತುಗಳ ಬಳಕೆ ಮುಂತಾದವುಗಳ ಕೊರತೆ ಇವರಲ್ಲಿ ಕಂಡುಬರುವುದಾದರೂ, ಮಕ್ಕಳ ಭಾವಕೋಶವನ್ನು ಹಿಗ್ಗಿಸಲು ಅವರು ಪ್ರಯತ್ನಪಟ್ಟಿದ್ದಾರೆ. 'ಮಗು-ನಗು' (೧೯೮೮), 'ಗುಬ್ಬಿಗೂಡು' (ಗುರು ಪ್ರಕಾಶನ, ಅಂಕೋಲಾ, ೨೦೧೦) ಮತ್ತು 'ಹೆಜ್ಜೆಗೊಂದು ಹೂವು' (ಗುರು ಪ್ರಕಾಶನ, ಅಂಕೋಲಾ, ೨೦೧೧) ಸಂಕಲನಗಳನ್ನು ಪ್ರಕಟಿಸಿದ್ದಾರೆ.

ಹನುಮಂತರಾವ್ ನಾಗಪ್ಪಗೋಳ

ಮಕ್ಕಳ ಸಾಹಿತ್ಯದಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡಿರುವವರಲ್ಲಿ ಶಿಕ್ಷಕರಾಗಿರುವ ಹನುಮಂತರಾವ್ ನಾಗಪ್ಪಗೋಳ ಅವರೂ ಒಬ್ಬರು. ಇವರ ಕವನ ಸಂಕಲನ 'ಮೊಗ್ಗು ಮಲ್ಲಿಗೆ' (ಚಿಲಿಪಿಲಿ ಪ್ರಕಾಶನ, ಧಾರವಾಡ, ೨೦೦೦) ಮತ್ತು ಕಥಾ ಸಂಕಲನ 'ಉಡಾಳ ಉದ್ದ್ಯಾ ಮತ್ತು ಇತರ ಕಥೆಗಳು' (ಎಚ್.ಬಿ.ಎನ್. ಪ್ರಕಾಶನ, ಮೆಳವಂಕಿ, ೨೦೦೮) ಪ್ರಕಟವಾಗಿದ್ದು ಬೆಳಗಾವಿ ಭಾಗದ ಪ್ರಾದೇಶಿಕ ಸೊಗಡು ಇವರ ಕಥೆಗಳಲ್ಲಿ ಎದ್ದುಕಾಣುತ್ತದೆ. ಹಳ್ಳಿಯ ಆಟಗಳ ಮೇಲೆ ಕಟ್ಟಿದ ಕತೆಗಳು ಓದಿಸಿಕೊಂಡು ಹೋಗುತ್ತವೆ. ಸರಬಡಗಿ (ಬಡಗಿ ಗಿವುಚುವ ಆಟ), ಜೇನು ಬಿಡಿಸುವುದು, ಗೋಲಿ, ಬಗರಿ ಮುಂತಾದ ಮರೆಯಾಗುತ್ತಿರುವ ಆಟಗಳು ಇವರ ಕತೆಗಳಲ್ಲಿ ಜೀವ ಪಡೆಯುತ್ತವೆ. ಗ್ರಾಮೀಣ ಪದ, ನುಡಿಗಟ್ಟುಗಳು ಬಳಕೆಯಾಗಿ

ನೈಜತೆಯ ಚಿತ್ರಣ ಒದಗಿಸುತ್ತವೆ: 'ಅಲ್ಲಲೆ ಭೀಮ, ಈ ಪಾರಿವಾಳ ಬಲೆ ಹೆಂಗ ಮಾಡ್ತಾರಲೆ' ಎಂದು ಕೇಳಿದ ರಾಮ. 'ಇದನ್ನ ದನಗಳ ಕೊಂಬಿನಿಂದ ಕಮಾನದಂತೆ ಮಾಡಿ ಅದಕ್ಕೆ ಒಂದು ಕಟ್ಟಿಗೆಯ ಗುಣಕಾಳಿಯನ್ನು ರಬ್ಬರ್‌ನಿಂದ ಬಿಗಿದು, ಮುಂದು ಹುಕ್ಕ ಮಾಡಿ, ಅದಕ್ಕೆ ಕಾಳು ಕಟ್ಟಿ ತಯಾರು ಮಾಡ್ತಾರು.'

'ಪೇಚಿಗೆ ಸಿಲುಕಿದ ಮಾಸ್ತರ' ಎಂಬ ಕತೆ ಸ್ವಾರಸ್ಯಕರವಾಗಿದೆ. ಶಾಲೆಯಲ್ಲಿನ ಭಾರತದ ಭೂಪಟವನ್ನು ತಮ್ಮ ಮನೆಗೆ ಒಯ್ದು ಹಾಕಿಕೊಂಡಿರುವ ಮಾಸ್ತರರು ಶಾಲಾ ತಪಾಸಣಾ ಅಧಿಕಾರಿಗಳ ಕೈಗೆ ಹುಡುಗರ ಬಾಯ್ತಪ್ಪಿನಿಂದ ಸಿಕ್ಕಿಬೀಳುವ ಪ್ರಸಂಗ ಸೊಗಸಾಗಿ ನಿರೂಪಿತವಾಗಿದೆ. ತಪಾಸಣಾಧಿಕಾರಿಗಳು ಹುಡುಗರ ಬುದ್ಧಿಮತ್ತೆಯನ್ನು ಪರೀಕ್ಷಿಸುವ ಪ್ರಸಂಗದಲ್ಲಿ ಶಿಕ್ಷಕರು ಮಾಡುವ ಮೋಸ ಬಯಲಿಗೆ ಬರುತ್ತದೆ!

'ಮಕ್ಕಳೇ ಬಾಬಾಸಾಹೇಬರು ಎಲ್ಲಿ ಜನಿಸಿದರು?'
'ಅಂಬೆವಾಡಿಯಲ್ಲಿ'
'ಅಂಬೆವಾಡಿ ಎಲ್ಲಿದೆ?'
'ಮಹಾರಾಷ್ಟ್ರದಲ್ಲಿ'
'ಮಹಾರಾಷ್ಟ್ರ ಯಾವ ದೇಶದಲ್ಲಿದೆ?'
'ಭಾರತ ದೇಶದಲ್ಲಿದೆ' ಜಾಣ ವಿದ್ಯಾರ್ಥಿನಿಯೊಬ್ಬಳು ತಕ್ಷಣ ಉತ್ತರಿಸಿದಳು.
'ಭಾರತ ದೇಶ ಎಲ್ಲಿದೆ?'

ಜಾಣ ಮಕ್ಕಳಾ ತಲೆ ಕೆರೆದುಕೊಂಡರು... ದಡ್ಡ ವಿದ್ಯಾರ್ಥಿಗಳಲ್ಲಿ ಒಬ್ಬ ಎದ್ದು ನಿಂತು 'ಸರ್ ಅದು ನಮ್ಮ ಗುರುಗಳ ಮನೆಯಲ್ಲಿದೆ' ಎಂದ. ಎಲ್ಲರೂ ಗೊಳ್ ಎಂದು ನಕ್ಕರು.

ಜೇನು ಹುಳಗಳ ಕಡಿತದಿಂದ ಸಾವನ್ನಪ್ಪುವ ಉದ್ಯಾ, ಪಾರಿವಾಳಗಳನ್ನು ಕೊಲ್ಲುವ ಭೀಮನಿಂದ ದೂರವಾಗುವ ರಾಮಣ್ಣ, ಸಾಹಸ ಪ್ರವೃತ್ತಿಯ ಸಂದೀಪ ಮುಂತಾದ ಪಾತ್ರಗಳು ಮನಸ್ಸಿನಲ್ಲಿ ಉಳಿಯುತ್ತವೆ. ಮಕ್ಕಳಿಗೆ ಇದು ರುಚಿಸುವುದರಲ್ಲಿ ಸಂದೇಹವಿಲ್ಲ. ಹೊಸ ಪ್ರಯೋಗ, ವಾಸ್ತವ ಬರವಣಿಗೆ, ಕಲ್ಪನೆಯ ವಿಸ್ತಾರಗಳತ್ತ ನಾಗಪ್ಪಗೋಳ ಅವರು ಲಕ್ಷ್ಯ ಕೊಟ್ಟರೆ ಅವರಿಂದ ಇನ್ನೂ ಒಳ್ಳೆಯ ಕೃತಿಗಳನ್ನು ನಿರೀಕ್ಷಿಸಬಹುದು. 'ಮೊಗ್ಗು ಮಲ್ಲಿಗೆ'ಯಲ್ಲಿ ಮಕ್ಕಳ ಲಕ್ಷ್ಯ ಎಷ್ಟೆಲ್ಲ ಕಡೆ ಹರಿಯುತ್ತದೆಯೆಂದು ನಿರೂಪಿಸುವ ಹಲವು ಕವನಗಳಿವೆ. 'ಆಕಳು ಕಪ್ಪಾದರೆ ಹಾಲು ಕಪ್ಪೇ?', 'ಅಪ್ಪ ಯಾರಿಗೆ ಏನು ತಂದ?', 'ಹಬ್ಬಗಳ ಊಟ' ಮುಂತಾದವು ಮಕ್ಕಳ ಮನ ಅರಳಿಸುವಂತಿವೆ.

ಲಕ್ಷ್ಮಣ ಚೌರಿ

ಈಗ ಚಿಂವ್ ಚಿಂವ್ ಅನ್ನುತ್ತಿರುವುದು ಗಿಡಗಂಟೆಯ ಕೊರಳೊಳಗಿನದಲ್ಲ. ಬದಲಾಗಿ ಮೊಬೈಲ್ ರಿಂಗ್‌ಟೋನ್ ಎಂದು ಹೊಸ ಚಿಂವ್‌ಚಿಂವ್‌ನ್ನು ತಮ್ಮ ಒಂದು ಪದ್ಯದಲ್ಲಿ ಪರಿಚಯಿಸಿದ್ದಾರೆ ಲಕ್ಷ್ಮಣ ಚೌರಿಯವರು. ಅಪ್ಪನ ಕಿಸೆಯೆ ಅದಕ್ಕೆ ಗೂಡಾಗಿದೆಯೆಂದು ಮಗು ಪತ್ತೆ ಹಚ್ಚಿದೆ.

ಚಿಂವ್ ಚಿಂವೆಂದು
ಜೋಗುಳ ಹಾಡಿ
ಉಲಿಯುತಿದೆ
ಅಪ್ಪನ ಕಿಸೆಯ
ಗೂಡಿನಲ್ಲೊಂದು
ಮೊಬೈಲ್ ಹಕ್ಕಿ

'ಮಗು ನೀ ನಗು' (ಚೌರಿ ಪ್ರಕಾಶನ, ಆಡಿಹುಡಿ, ೨೦೦೪) ಮತ್ತು 'ಅಳಿಲು' (ಚೌರಿ ಪ್ರಕಾಶನ ಆಡಿಹುಡಿ, ೨೦೦೯) ಕೃತಿಗಳನ್ನು ಪ್ರಕಟಿಸಿರುವ ಲಕ್ಷ್ಮಣ ಚೌರಿಯವರ ಸಾಹಿತ್ಯ ಕೃಷಿಯಲ್ಲಿ ಕೌಟುಂಬಿಕ ಹಾಗೂ ಪರಂಪರಾಗತ ಮೌಲ್ಯಗಳ ಮುಂದುವರಿಕೆಯ ಆಶಯವಿದೆ. ಸಾಮರಸ್ಯ ಮತ್ತು ಸಹಬಾಳ್ವೆಯ ಪಾಠಗಳನ್ನು ಕವಿತೆಗಳಲ್ಲಿ ತರಲು ಯತ್ನಿಸುತ್ತಾರೆ:

ಅವ್ವ ಅವ್ವ ನನಗೆ
ಅಜ್ಜಿಯ ತೆರದಿ
ಬಣ್ಣ ಬಣ್ಣದ
ಕೌದಿಯ ಹೊಲಿಯವ್ವ
ರಗ್ಗು ಚಾದರ ರಜಾಯಿ
ಜಾನಿ ಜಮಖಾನಿ
ಇವು ಯಾವುವು ಬೇಡ
ಮೆತ್ತನೆ ಕೌದಿಯ ಹೊಲಿಯವ್ವ

ಗ್ರಾಮೀಣ ಜೀವಸತ್ವವನ್ನು ಅವರ ಬರಹ ಒಳಗೊಳ್ಳಲು ಪ್ರಯತ್ನಿಸುವುದು ನಿಜವಾದರೂ ಅದನ್ನು ಪದ್ಯದ ಕೊನೆಯವರೆಗೂ ಉಳಿಸಿಕೊಳ್ಳದೆ ಹೋಗುತ್ತಾರೆ. ಒಮ್ಮೊಮ್ಮೆ ಉಪದೇಶ ಹಾಗೂ ಆದರ್ಶದ ಪಾಠಗಳ ಪುನರಾವರ್ತನೆಯಾಗುತ್ತದೆ. ಅಷ್ಟಾದರೂ ಕೆಲವು ಗಮನ ಸೆಳೆಯುವ ಪ್ರಾಸಗಳು ಅವರ 'ಅಳಿಲು' ಸಂಕಲನದಲ್ಲಿವೆ.

ನಾಕು ನಾಕು ಎಂಟು
ಬಿಚ್ಚೊ ತಿಂಡಿ ಗಂಟು

ಎಂದು ಗೆಳೆಯರು ಹೇಳಿಕೊಳ್ಳುವುದು ಸ್ವಾರಸ್ಯಕರವಾಗಿದೆ. ಅದೇ ರೀತಿ ಮನೆಯಲ್ಲಿ ಅವ್ವ ಮಾಡುವ ಲಡಕಿ ಉಂಡಿ ತಿಂದು ಅಜ್ಜನ ಅಥವಾ ಅಪ್ಪನ ಬೆನ್ನ ಮೇಲೇರಿ ಕುರಿಮರಿ ಆಟವಾಡುವ ವಿಶಿಷ್ಟವನ್ನು ಬಣ್ಣಿಸುತ್ತಾರೆ:

ಲಟ ಲಟ
ಲಡಕಿ ಉಂಡಿ
ಕಟಕಟ ಕಡದು
ಕರಕರ ತಿಂದು
ಕುರಿಮರಿ ಆಟ ಆಡೋಣ

ಜಯಾನಂದ ಮಾದರ

'ಚುರುಮುರಿ' (ಬಿಂದು ಪ್ರಕಾಶನ, ಗೋಕಾಕ, ೨೦೦೯) ಎನ್ನುವ ಕವನ ಸಂಕಲನವನ್ನು ಪ್ರಕಟಿಸಿರುವ ಜಯಾನಂದ ಮಾದರ ಗೋಕಾಕ ಪ್ರದೇಶದ ಕೆಲವು ನುಡಿಗಟ್ಟು ಹಾಗೂ ವಿಶಿಷ್ಟತೆಗಳನ್ನು ಕವನಗಳಲ್ಲಿ ಅಭಿವ್ಯಕ್ತಿಸಲು ಪ್ರಯತ್ನಿಸುತ್ತಾರೆ.

ಅಪ್ಪನ ಪಟಗಾ
ಸುತ್ತಿದೆ ನಾನು
ಮಾವಗೆ ನಾನು
ಮಹಾರಾಜ
ಅಜ್ಜನ ಕೋಲು
ಹಿಡಕೊಂಡೆ ನಾನು
ಅಮ್ಮಗೆ ನಾನು
ಯುವರಾಜ.

ಹಿರಿಯ ಕವಿಗಳ ಪ್ರಭಾವ, ಶೈಲಿಗಳನ್ನು ಅವರು ಮೀರಿದಾಗ ಅವರ ಕವಿತೆಗೆ ಇನ್ನೂ ಹೆಚ್ಚಿನ ಬಲ, ಸ್ವಂತಿಕೆ ಬರುವುದರಲ್ಲಿ ಸಂಶಯವಿರಲಾರದು. ಹೊಸ ಪ್ರಯೋಗಗಳತ್ತ ಮನಸ್ಸು ಮಾಡಬೇಕಿದೆ.

ಗಾಯತ್ರಿ ಮೂರ್ತಿ

ವಿಜ್ಞಾನದ ಮಾಹಿತಿ ಹಾಗೂ ಬರವಣಿಗೆಯನ್ನು ಅತ್ಯಂತ ಸರಳ ಭಾಷೆಯಲ್ಲಿ ಕಲಾತ್ಮಕವಾಗಿ ನಿರೂಪಿಸಿದ ಪ್ರಮುಖರಲ್ಲಿ ಗಾಯತ್ರಿ ಮೂರ್ತಿ ಕೂಡ ಒಬ್ಬರು. ಕಥೆಯ ಮೂಲಕ ನಮ್ಮ ಸುತ್ತಲಿನ ವೈಜ್ಞಾನಿಕ ಜಗತ್ತನ್ನು ಮಕ್ಕಳು ತಿಳಿಯುವಲ್ಲಿ ಗಾಯತ್ರಿ ಮೂರ್ತಿಯವರ ಪುಸ್ತಕಗಳು ಅತ್ಯುಪಯುಕ್ತವಾಗಿವೆ. ಈ ಲೇಖಕಿಯ ಹೆಚ್ಚುಗಾರಿಕೆಯೆಂದರೆ ಕಥೆಯ ನಿರೂಪಣೆ ಸರಳವಾಗಿ ಆರಂಭವಾಗುವುದರ ಜೊತೆಗೆ ಆಸಕ್ತಿಯನ್ನು ಕೆರಳಿಸುವದಾಗಿರುತ್ತದೆ. ಗಾಳಿಯ ಬಗ್ಗೆ ಹೇಳಬೇಕೆಂದಿದ್ದರೆ ತಾಯಿ ನೀರಿಗೆಂದು ಬಾವಿಗೆ ಹೋಗಿ ಅಲ್ಲಿ ಕೊಡ ತುಂಬುವಾಗ ಉಂಟಾಗುವ ಶಬ್ದದಿಂದ ಸುರುವಾಗುತ್ತದೆ. ಕುತೂಹಲಗೊಂಡ ಪುಟ್ಟ ಮಗ ನೀರು ಯಾಕೆ ಸದ್ದು ಮಾಡುತ್ತಿರುವುದೆಂದು ಪ್ರಶ್ನಿಸುವನು.

'ಗಾಳಿಯನ್ನು ಹೊರಗೆ ತಳ್ಳಿ ನೀರು ಬಿಂದಿಗೆ ತುಂಬುತ್ತೆ. ನೀರನ್ನು ತಳ್ಳಿಕೊಂಡು ಗಾಳಿ ಹೊರಗೆ ಭರೋವಾಗ ಗಳಗಳ ಶಬ್ದ ಆಗುತ್ತೆ ಅಷ್ಟೆ.'

'ಗಾಳಿ ಎಲ್ಲಿತ್ತು?'

'ಬಿಂದಿಗೆ ಒಳಗೆ. ಖಾಲಿ ಬಿಂದಿಗೆ ಅಂದರೆ ಅದರಲ್ಲಿ ಏನೂ ಇಲ್ಲ ಅಂತ ಅರ್ಥ ಅಲ್ಲ. ಅದರ ತುಂಬ ಗಾಳಿ ಇರುತ್ತೆ. ಅದು ನಮ್ಮ ಕಣ್ಣಿಗೆ ಕಾಣೋದಿಲ್ಲ ಅಷ್ಟೆ. ಗಾಳೀನ ಹೊರಕ್ಕೆ ತಳ್ಳಿದರೆ ಮಾತ್ರ ಬಿಂದಿಗೇಲಿ ನೀರು ತುಂಬೋದು. ಅದಕ್ಕೇ ನೋಡು ಬಿಂದಿಗೆ ನೀರಲ್ಲಿ ಬೋರಲಾಗಿದ್ದಾಗ ಗಾಳಿ ಹೊರಕ್ಕೆ ಹೋಗಕ್ಕೆ ಜಾಗ ಇರಲ್ಲ. ಅದಕ್ಕೆ ನೀರು ತುಂಬಲ್ಲ. ನೀರು ತುಂಬಿಸಬೇಕಾದರೆ ಬಿಂದಿಗೇನ ಓರೆಯಾಗೇ ಇಡಬೇಕು.'

ಹೀಗೆ ಸ್ವಾರಸ್ಯಕರವಾಗಿ ವೈಜ್ಞಾನಿಕ ವಿಷಯಗಳನ್ನು ಪ್ರಸಂಗಗಳಾಗಿ, ಕತೆಗಳಾಗಿ, ಸಂಭಾಷಣೆಯ ತುಣುಕುಗಳಾಗಿ ಗಾಯತ್ರಿ ಮೂರ್ತಿಯವರ ಪುಸ್ತಕವು ಕಾಣಿಸಿಕೊಳ್ಳುತ್ತವೆ.

'ನೋಡಮ್ಮ, ಚೆಂಡು ಕೆಳಕ್ಕೆಸೆದರೆ ಪುಟೀಲೆ ಇಲ್ಲ. ಅದಕ್ಕೆ ಬಂದ್ಬಿಟ್ಟೆ. ನಂಗೆ ಬೇರೆ ತಕ್ಕೊಡು' ಎಂದ.

'ಇದು ಸಹ ಗಾಳಿ ಮಹಿಮೆನೇ' ಅಮ್ಮ ಹೇಳಿದಳು.

'ಅಂದರೆ?'

'ಚೆಂಡಿನ ಒಳಗೆ ಗಾಳಿ ತುಂಬ್ತಾರೆ. ಅದರ ಒತ್ತಡದಿಂದ ಚೆಂಡು ಗಟ್ಟಿಯಾಗಿರುತ್ತೆ. ಸಣ್ಣ ತೂತಾದ್ರೂ ಸಾಕು. ಗಾಳಿ ಹೊರಗೆ ಹೋಗುತ್ತೆ. ಅದಕ್ಕೆ ಚೆಂಡು ಪುಟಿಯೋದಿಲ್ಲ. ಫುಟ್‌ಬಾಲ್, ಟೈರ್‌ಗಳಲ್ಲೂ ಅಷ್ಟೆ;

ಗಾಳಿಯ ಒತ್ತಡವನ್ನು ಎಳನೀರಿನ ಮೂಲಕ, ತೂಕವನ್ನು ಬಲೂನಿನ ಮೂಲಕ ತುಂಬಿ ಆಸಕ್ತಿದಾಯಕವಾಗಿ ಹೇಳಿಕೊಡುವುದು ಅವರ ಬರವಣಿಗೆಯಲ್ಲಿನ ಗುಣವಾಗಿದೆ. ನಮ್ಮ ಎಷ್ಟೋ ಜನ ಮಕ್ಕಳ ಸಾಹಿತಿಗಳು ಪರಿಸರವನ್ನು ಉಳಿಸುತ್ತೇವೆಂದು ನೀರಸವಾಗಿ ಪ್ರಾಣಿ–ಪಕ್ಷಿಗಳ ಕತೆಗಳನ್ನು ಹಳೆಯ ಪಂಚತಂತ್ರದ ಶೈಲಿಯಲ್ಲಿ ಇಂದಿಗೂ ಹೇಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆ ದೃಷ್ಟಿಯಿಂದ ಗಾಯತ್ರಿ ಮೂರ್ತಿ ಸಹಜ, ಪರಿಚಿತ ಸಂಗತಿಗಳ ಮೂಲಕ ಅಮೂರ್ತವಾದುದನ್ನು ಕಟ್ಟಿಕೊಡುವುದು ಮಹತ್ವದ್ದಾಗಿದೆ. ನೀರು, ಬೆಳಕು, ಶಬ್ದ, ಶಾಖ, ಗಾಳಿಗಳ ಬಗ್ಗೆ ಕಥಾರೂಪದಲ್ಲಿ ಬರೆದಿರುವ ಅವರು ಮನಸ್ಸು ಮಾಡಿದರೆ ಒಳ್ಳೆಯ, ವಸ್ತುನಿಷ್ಠ ವೈಜ್ಞಾನಿಕ ಕತೆ–ಕಾದಂಬರಿಗಳನ್ನು ಬರೆಯಬಲ್ಲರು ಎನಿಸುತ್ತದೆ. ಸಾಹಿತ್ಯದ ಅಂಶಗಳತ್ತ ಹೆಚ್ಚಿನ ಒತ್ತು ಕೊಟ್ಟರೆ ಇನ್ನೂ ಒಳ್ಳೆಯ ಪುಸ್ತಕಗಳನ್ನು ಅವರಿಂದ ನಿರೀಕ್ಷಿಸಬಹುದು.

ಲಿಂಗರಾಜ ರಾಮಾಪೂರ

ಕ್ರಿಯಾಶೀಲ ಶಿಕ್ಷಕರಾಗಿ ತಮ್ಮನ್ನು ಸದಾ ಒಂದಿಲ್ಲೊಂದು ಚಟುವಟಿಕೆಯಲ್ಲಿ ತೊಡಗಿಕೊಂಡಿರುವ ಲಿಂಗರಾಜ ರಾಮಾಪೂರ ಅವರು ಮಕ್ಕಳಿಗಾಗಿ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ. 'ಗುಬ್ಬಿಗೊಂದು ಮನೆಯ ಮಾಡಿ' ಎನ್ನುವುದು ಅವರು ಇತ್ತೀಚೆಗೆ ಬರೆದಿರುವ ಕಾದಂಬರಿ. ಧಾರವಾಡದ ಚಿಲಿಪಿಲಿ ಪ್ರಕಾಶನದಿಂದ ೨೦೧೪ ರಲ್ಲಿ ಅದು ಪ್ರಕಟಗೊಂಡಿದೆ. ಈ ಕಾದಂಬರಿಗೆ ಜಿ.ಬಿ. ಹೊಂಬಳ ಮಕ್ಕಳ ಸಾಹಿತ್ಯ ಪುರಸ್ಕಾರ ಕೂಡ ಸಂದಿದೆ.

ಲಿಂಗರಾಜ ರಾಮಾಪೂರ ಅವರ ಮಕ್ಕಳ ಬರವಣಿಗೆಯ ವೈಶಿಷ್ಟ್ಯವೆಂದರೆ ವೈಜ್ಞಾನಿಕ ಹಾಗೂ ಪರಿಸರದ ಸಂಗತಿಗಳನ್ನು ಕುತೂಹಲಕಾರಿಯಾಗಿ ಮಂಡಿಸುವುದು. ಇದರಿಂದ ಮಕ್ಕಳು ತಮ್ಮ ಸುತ್ತಲಿನ ಜಗತ್ತಿನ ಬಗ್ಗೆ ಆಸಕ್ತಿ ತಳೆಯುತ್ತಾರೆ. ಆಸಕ್ತಿಯನ್ನು ಬೆಳೆಸುವುದರಲ್ಲಿ ಮಾತ್ರ ಲಿಂಗರಾಜ ರಾಮಾಪೂರ ತೃಪ್ತಿಗೊಳ್ಳುವುದಿಲ್ಲ. ಮಕ್ಕಳು ಒಂದು ಒಳನೋಟವನ್ನು ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಅವರ ಕಾದಂಬರಿಯ ಲಕ್ಷ್ಯವಿದೆ.

'ಗುಬ್ಬಿಗೊಂದು ಮನೆಯ ಮಾಡಿ' ಕಾದಂಬರಿಯ ಮತ್ತೊಂದು ಮುಖ್ಯ ಗುಣವೆಂದರೆ ಒಮ್ಮೆಲೆ ಇಷ್ಟವಾಗುವ ಇಲ್ಲಿಯ ಪಾತ್ರಗಳು ಮತ್ತು ಆ ಪಾತ್ರಗಳನ್ನು ರೂಪಿಸಿರುವ ಭಾಷೆ. ನಮ್ಮ ಮನೆಯ ಅಥವಾ ನಮ್ಮ ಅಕ್ಕಪಕ್ಕದ ಮನೆಯ ಹುಡುಗ-ಹುಡುಗಿಯರಂತೆ ಇಲ್ಲಿಯ ಮಕ್ಕಳು ರೂಪುಗೊಂಡಿದ್ದಾರೆ. ಇದರಿಂದ ಈ ಪುಸ್ತಕವನ್ನು ಓದುತ್ತಿರುವ ಮಕ್ಕಳು ಆ ಪಾತ್ರಗಳೊಂದಿಗೆ ಅತ್ಯಂತ ಸಹಜವಾಗಿ ಸಮೀಕರಿಸಿಕೊಳ್ಳುತ್ತಾರೆ.

ಪಾತ್ರ ಮತ್ತು ಸನ್ನಿವೇಶಗಳು ಸಹಜ ನೆಲೆಯಲ್ಲಿ ಮೂಡುವುದರಿಂದ ಪರಿಚಿತ ವಾತಾವರಣದಲ್ಲಿ ಕೃತಿ ತೆರೆದುಕೊಳ್ಳುತ್ತದೆ. ಇದರಿಂದ ಕಾದಂಬರಿಗೆ ನೈಜತೆ ದಕ್ಕುತ್ತದೆ. ಎಷ್ಟೋ ಮಕ್ಕಳ ಕಥೆ-ಕಾದಂಬರಿಗಳು ಅಗಮ್ಯವಾದದ್ದನ್ನು ಹೇಳುತ್ತ, ಅಪರಿಚಿತ ವಾತಾವರಣ ಹಾಗೂ ಭಾಷೆಯಲ್ಲಿ ಅರಳುತ್ತ, ಕೃತಕ ಹೆಸರು ಹಾಗೂ ಸನ್ನಿವೇಶಗಳಲ್ಲಿ ಅತಾರ್ಕಿಕಗೊಳ್ಳುತ್ತ ಮಕ್ಕಳಿಗೆ ಹೊರೆಯಾಗಿರುವುದನ್ನು ನೋಡಬಹುದು. ಆದರೆ ಈ ಕೃತಿಯಲ್ಲಿ ಲೇಖಕರ ವರ್ತಮಾನದ ಭಾಷೆ ಮತ್ತು ಸಹಜ ನಿರೂಪಣೆಯಿಂದ ಕೃತಕತೆ ದೂರವಾಗಿದೆ. ಹೀಗಾಗಿ ಪರಿಸರದ ಹೆಸರಿನಲ್ಲಿ ಬರುತ್ತಿರುವ ತರ್ಕವಿಲ್ಲದ, ನೆಲೆಯಿಲ್ಲದ, ನೈಜತೆಯಿಲ್ಲದ ಹಲವಾರು ಕಥೆ-ಪುಸ್ತಕಗಳ ನಡುವೆ ಇದೊಂದು ಮಹತ್ವದ ರಚನೆಯಾಗಿದೆ ಎನ್ನಬಹುದು.

ಪುಸ್ತಕ ಮಹತ್ವದ್ದಾಗಲಿಕ್ಕೆ ಅದಕ್ಕಿರುವ ಮಾನವೀಯ ಮುಖವೂ ಮುಖ್ಯವಾಗಿದೆ. ಮಾನವೀಯತೆ ಇಲ್ಲವೆ ವಿಜ್ಞಾನ ಇರಲು ಸಾಧ್ಯವಿಲ್ಲವೆಂದು ಸ್ವತಃ ಐನ್‌ಸ್ಟೀನ್ ಹೇಳಿದ್ದಾರೆ. ಈ ದೃಷ್ಟಿಯಿಂದ ಈ ಕಾದಂಬರಿಯಲ್ಲಿ ಅಡಕವಾಗಿರುವ ಮಾನವೀಯ ಚಿತ್ರಣ ನಮ್ಮ ಮನ ಕಲಕುತ್ತದೆ. ಬರಗಾಲ ಒಕ್ಕರಿಸುವ, ಅಮ್ಮ ಗುಬ್ಬಿಗೆ ಕಾಳು ಹಾಕುವ, ಗುಬ್ಬಿ ಮಳೆಯಲ್ಲಿ ನೆನೆಯುವ, ಗುಬ್ಬಿ ಮೊಬೈಲ್ ಸದ್ದಿಗೆ ಬೆದರುವ, ಗುಬ್ಬಿ ವಾಸಿಸುವ ಸಂಪಿಗೆ ಮರವನ್ನು ಕಡಿದು ಹಾಕುವ, ಗುಬ್ಬಿ ಕಾಣದೆ ನೇಹಾ ಮತ್ತು ಅವಳ ಅಪ್ಪ-ಅಮ್ಮ ತಲ್ಲಣಗೊಳ್ಳುವ, ಕೊನೆಗೆ ಅದು ಎಲ್ಲಿಂದಲೋ ಹಾರಿಬಂದು ಅವರೆಲ್ಲ ಪುಳಕಗೊಳ್ಳುವ ಚಿತ್ರಣ ಕೃತಿಯಲ್ಲಿ ಹೃದಯಸ್ಪರ್ಶಿಯಾಗಿ ಬಂದಿದೆ.

ಗುಬ್ಬಿಗೆ ಮನೆ ಮಾಡುವುದು ಒಂದು ರೀತಿಯಲ್ಲಿ ಮಕ್ಕಳಿಗೆ ಮನೆ ಮಾಡಿದಂತೆ ಎನ್ನುವ ಪರೋಕ್ಷ ಆಶಯ ಈ ಕೃತಿಯಲ್ಲಿದೆ. ಪುಸ್ತಕದ ಉದ್ದಕ್ಕೂ ಗುಬ್ಬಕ್ಕ ನೇಹಾಳಷ್ಟೇ ಮುಖ್ಯವಾಗಿ ಕಾಣಿಸಿಕೊಳ್ಳುತ್ತಾಳೆ. ಅಂದರೆ ಒಂದು ದೃಷ್ಟಿಯಿಂದ ಅವರಿಬ್ಬರೂ ಒಂದೇ ಜೀವ ಎರಡು ದೇಹವೆನ್ನುವಷ್ಟು ಸಾಮೀಪ್ಯವನ್ನು ಗಳಿಸಿಕೊಂಡಿದ್ದಾರೆ. ನೇಹಾ ಅಷ್ಟೆ ಅಲ್ಲದೆ ಅವಳ ಸ್ನೇಹಿತರಿಗೂ ಗುಬ್ಬಿ ಈಗ ಸ್ನೇಹಿತನಾಗಿದೆ. 'ನಮ್ಮ ಮನೆಯ ಸದಸ್ಯನಂತೆ ಗುಬ್ಬಚ್ಚಿ ಅವರನ್ನು ಬರಮಾಡಿಕೊಳ್ಳುತ್ತಿತ್ತು. ಅವರೆಲ್ಲಾ ಗುಬ್ಬಕ್ಕನ ಜೊತೆ ಆಟ ಆಡುತ್ತಿದ್ದರು. ಅವಳ ಸಲುವಾಗಿಯೇ ನನ್ನ ಸ್ನೇಹಿತರ ಸಂಖ್ಯೆಯೂ ಹೆಚ್ಚಾಗಿತ್ತು. ನಮ್ಮ ಮನೆಯಲ್ಲಿ ಪ್ರತಿನಿತ್ಯ ಹಬ್ಬದ ವಾತಾವರಣ, ಗಲಾಟೆ, ಕೂಗಾಟ, ಹಾರಾಟ, ಕಿರುಚಾಟ ಇದ್ದೇ ಇರುತ್ತಿತ್ತು.'

ಹೀಗೆ ಗುಬ್ಬಿ ಬಂದ ಮೇಲೆ ಬಾಲಕಿಯ ಮನೆಯಲ್ಲಿ ಎಷ್ಟೊಂದು ವ್ಯತ್ಯಾಸವಾಗಿದೆ. ಸಂಭ್ರಮ ತುಂಬಿದೆ. ಒಂದು ಹೊಸ ಅಸ್ತಿತ್ವವನ್ನು ಮಕ್ಕಳಿಗೆ ಕೊಡುವಲ್ಲಿ ಆ ಪುಟ್ಟ ಹಕ್ಕಿ ಸಫಲವಾಗಿದೆ. ಗುಬ್ಬಿಯ ಮಾತುಗಳಲ್ಲಿ ಪ್ರೀತಿ, ಕಾಳಜಿ ತುಂಬಿ ತುಳುಕುತ್ತದೆ. ಕಾಡು ಹಾಳಾಗುತ್ತಿರುವುದರ ಬಗ್ಗೆ, ಮನೆಯಲ್ಲಿ ಕಾಳು ಕಡಿಗಳನ್ನು ಹಸನು ಮಾಡುವುದನ್ನು ಬಿಟ್ಟು

ಎಲ್ಲ ರೆಡಿಮೇಡ್ ಆಹಾರ–ಹಿಟ್ಟುಗಳನ್ನು ತರುತ್ತಿರುವ ಬಗ್ಗೆ, ಹಕ್ಕಿಗಳ ವಲಸೆ, ಆಹಾರದ ಬಗ್ಗೆ ಗುಬ್ಬಕ್ಕ ಮಾತನಾಡಿದ್ದಾಳೆ.

'ಈ ದಿನಗಳಲ್ಲಿ ನಮಗೆ ಆಹಾರವೇ ಸಿಗದಾಗಿದೆ. ಹಿಂದಿನ ಕಾಲದಲ್ಲಿ ಕಾಳುಗಳನ್ನು ಒಕ್ಕುವುದು, ರಾಶಿ ಮಾಡುವುದು, ಸ್ವಚ್ಛಗೊಳಿಸುವುದು, ಒಣಗಿಸುವುದು, ಕುಟ್ಟುವುದು, ತೂರುವುದು, ಬೀಸುವುದು ಮಾಡುತ್ತಿದ್ದರು. ಆಗ ಅಲ್ಲಿ ಇಲ್ಲಿ ಬಿದ್ದ ಕಾಳುಗಳು ನಮಗೆ ಆಹಾರವಾಗಿ ಸಿಗುತ್ತಿದ್ದವು. ಆದರೆ ಈಗಿನ ಯಂತ್ರಯುಗ ನಮಗೆ ಆಹಾರವೇ ಸಿಗದಂತೆ ಮಾಡಿದೆ.'

ಪರಿಸರದ ಬಗ್ಗೆ ಕಾಳಜಿ ವಹಿಸದಿದ್ದರೆ ಇನ್ನೂ ಪಕ್ಷಿ–ಪ್ರಾಣಿಗಳು ಜಗತ್ತಿನಿಂದ ಕಣ್ಮರೆಯಾಗುವ ದಿನ ದೂರವಿಲ್ಲವೆಂದು ಗುಬ್ಬಚ್ಚಿ ಪ್ರತಿಪಾದಿಸುತ್ತದೆ:

'ಜಗತ್ತಿನಾದ್ಯಂತ ಶೇಕಡಾ ೧೧ ರಷ್ಟು ಪಕ್ಷಿ ಪ್ರಬೇಧ ಅಪಾಯದ ಅಂಚಿನಲ್ಲಿವೆ. ಪಕ್ಷಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಡೊಡೊ, ಗುಲಾಬಿ ತಲೆ ಬಾತುಕೋಳಿ, ಬೆಟ್ಟದ ಕ್ಯೂಲ್‌ನಂತಹ ಪಕ್ಷಿಗಳು ಇತಿಹಾಸ ಸೇರಿವೆ. ಪರಿಸ್ಥಿತಿ ಹೀಗೆಯೆ ಮುಂದುವರೆದರೆ ನಮ್ಮನ್ನೂ ನೀವು ಬರೀ ಚಿತ್ರದಲ್ಲಿ ನೋಡಬೇಕಾದ ಪರಿಸ್ಥಿತಿ ಬರಬಹುದು. ನಿಸರ್ಗದ ಈ ಅಪೂರ್ವ ಸೃಷ್ಟಿಗಳು ಕಣ್ಮರೆಯಾಗಲು ಇತ್ತೀಚಿನ ಒಂದು ಶತಮಾನದ ಆಗುಹೋಗುಗಳು ಕಾರಣ.'

ಗುಬ್ಬಕ್ಕ, ನೇಹಕ್ಕ, ಸ್ಕೂಲ್ ಮಿಸ್ ಮುಂತಾದವರ ಮಾತುಗಳ ನಡುವೆ ಗುಬ್ಬಕ್ಕ ತನ್ನ ಕಥೆ ಮತ್ತು ವ್ಯಥೆ ಹೇಳಿಕೊಳ್ಳುವುದು ಸಹಜವೆಂಬಂತೆ ಲೇಖಕರು ಚಿತ್ರಿಸಿದ್ದರೂ ಕೆಲವೊಂದು ಸಲ ಆ ಸಂಗತಿಗಳು ತುಂಬ ಭಾರವಾಗಿವೆ ಮತ್ತು ಉದ್ದೇಶಪೂರ್ವಕ ಹೇಳಲ್ಪಟ್ಟಿವೆ ಎನಿಸುತ್ತದೆ. ಇದರಿಂದ ಕಲಾತ್ಮಕತೆಗೆ ಧಕ್ಕೆ ಬರುತ್ತದೆ. ಅಷ್ಟಾಗಿಯೂ ಮಾತನಾಡುವ ಗುಬ್ಬಿಯನ್ನು ಕಾಲ್ಪನಿಕವಾಗಿ ಚಿತ್ರಿಸಿ ನೇಹಾ ಮತ್ತು ಆಕೆಯ ಕುಟುಂಬದ ಜೊತೆ ಅದು ಸ್ಥಾಪಿಸಿಕೊಳ್ಳುವ ಪರಿಸರದ ಸಾತತ್ಯವನ್ನು ಚಿತ್ರಿಸುವಲ್ಲಿ ಲಿಂಗರಾಜ ರಾಮಾಪುರ ಯಶಸ್ವಿಯಾಗಿದ್ದಾರೆ. ಅವರ ಮುಂದಿನ ಕೃತಿಗಳಲ್ಲಿ ಇನ್ನಷ್ಟು ಖಚಿತತೆ ಮತ್ತು ಇನ್ನಷ್ಟು ಕಲಾತ್ಮಕತೆಯಿರುತ್ತದೆ ಎಂದು ಯಾರಾದರೂ ತಿಳಿಯಬಹುದು. ಯಾಕೆಂದರೆ ಅಂತಹ ಪುರಾವೆಯನ್ನು 'ಗುಬ್ಬಿಗೊಂದು ಮನೆಯ ಮಾಡಿ' ಕಾದಂಬರಿಯಲ್ಲಿ ಅವರು ತೋರಿಸಿದ್ದಾರೆ.

ಕಿರಣಪ್ರಸಾದ್. ಆರ್.

ಕಾಲ್ಪನಿಕ ಹಾಗೂ ವೈಜ್ಞಾನಿಕ ಸಂಗತಿಗಳಿಂದೊಡಗೂಡಿದ ಕಥನಗಳನ್ನು ಮಕ್ಕಳಿಗೆ ಕೊಡಮಾಡುವಲ್ಲಿ ಕಿರಣಪ್ರಸಾದ್ ಅವರದು ಎತ್ತಿದ ಕೈ. ಕುತೂಹಲಕಾರಿ ಹಾಗೂ ಮೈನವಿರೇಳಿಸುವ ಕಾದಂಬರಿಗಳನ್ನು ಬರೆದಿರುವ ಅವರು ರಂಜನೆಯ ಜೊತೆಗೆ ವಿಜ್ಞಾನದ ಸಂಗತಿಗಳನ್ನು ತಿಳಿಸಿಕೊಡುವಲ್ಲಿ ಸಫಲರಾಗಿದ್ದಾರೆ. ಈಗಾಗಲೇ 'ಹಿಮಕಿನ್ನರಿ' ಹಾಗೂ 'ನಕ್ಷತ್ರಲೋಕದಲ್ಲಿ ನಚಿಕೇತ' ಎಂಬ ಅವರ ಕಾದಂಬರಿಗಳು ನವಕರ್ನಾಟಕ ಪ್ರಕಾಶನದಿಂದ ಪ್ರಕಟಗೊಂಡು ಅನೇಕ ಮುದ್ರಣಗಳನ್ನು ಕಂಡಿರುವುದು ಆ ಕಾದಂಬರಿಗಳ ಜನಪ್ರಿಯತೆಯನ್ನು ಸೂಚಿಸುತ್ತದೆ. ಕಿರಣಪ್ರಸಾದ್ ಅವರ ಮಕ್ಕಳ ಬರವಣಿಗೆಯ ಪ್ರಮುಖ ಅಂಶಗಳೆಂದರೆ:

೧. ಕತೆಯ ಪ್ರಾರಂಭದಲ್ಲಿ ಕುತೂಹಲ ಹುಟ್ಟಿಸುತ್ತಾರೆ.

೨. ಆರಂಭಿಕ ಹಂತದಲ್ಲಿ ಮಕ್ಕಳಿಗೆ ಹೃದಯಸ್ಪರ್ಶಿಯಾಗುವ ಘಟನೆಗಳು ಜರುಗುತ್ತವೆ. ಸಿಟ್ಟು, ಸೆಡವು, ನಿರಾಸೆ, ತಾಪಗಳು ಸಂಭವಿಸುವ ಬೆನ್ನಲ್ಲೆ ಚಮತ್ಕಾರ, ಅಚ್ಚರಿಗಳು ನಡೆದು ಕತೆ ವೇಗ ಪಡೆಯುತ್ತದೆ.

೩. ಕಥಾವಸ್ತುವಿಗೆ ಅಗತ್ಯವಿರುವ ಸರಳ ಹಾಗೂ ಸಹಜ ಭಾಷೆಯನ್ನು ಬಳಸುತ್ತಾರೆ.

೪. ಕಿರಣಪ್ರಸಾದ್ ಅವರ ಕಾದಂಬರಿಯ ಪಾತ್ರಗಳು ನಮ್ಮ ಅಥವಾ ನಮ್ಮ ನೆರೆಮನೆಯ ಹುಡುಗ–ಹುಡುಗಿಯರಂತಿರುವುದು ಮಕ್ಕಳು ಆ ಪಾತ್ರಗಳೊಂದಿಗೆ ತಮ್ಮನ್ನು ಸಮೀಕರಿಸಿಕೊಳ್ಳಲು ಸಹಾಯಕವಾಗುತ್ತದೆ.

೫. ಮಕ್ಕಳ ಲೋಕದ ವಿದ್ಯಮಾನಗಳನ್ನು ಅವರು ಸೂಕ್ಷ್ಮವಾಗಿ ಅವಲೋಕಿಸಿ ಬರೆಯುವುದರಿಂದ ಕೆಲವು ಒಳನೋಟಗಳನ್ನು ಕೊಡಲು ಅವರಿಗೆ ಸಾಧ್ಯವಾಗುತ್ತದೆ.

'ನಕ್ಷತ್ರಲೋಕದಲ್ಲಿ ನಚಿಕೇತ' ಎಂಬ ಅವರ ಕಾದಂಬರಿಯ ಮೇಲೆ ಕಣ್ಣು ಹಾಯಿಸುವ ಮೂಲಕ ಈ ಅಂಶಗಳನ್ನು ಪರಿಶೀಲಿಸಬಹುದು. ಇದೊಂದು ಕಾಲ್ಪನಿಕ ಕಾದಂಬರಿಯಾಗಿದ್ದು ಅಲ್ಲಲ್ಲಿ ವೈಜ್ಞಾನಿಕ ಸಂಗತಿಗಳನ್ನು ಸೇರಿಸಲಾಗಿದೆ. ಇದರಿಂದ ಮಕ್ಕಳು ವಿಜ್ಞಾನ ಹಾಗೂ ಸಂಶೋಧನೆಯ ಗುಣಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ. ಈ ಕಾಲ್ಪನಿಕ ಕಥೆಯಲ್ಲಿ ನಚಿಕೇತ ಎಂಬ ಪುಟ್ಟ ಹುಡುಗ ಅಕಸ್ಮಾತ್ತಾಗಿ 'ರೇನಾ' ಎಂಬ ನಕ್ಷತ್ರಲೋಕವನ್ನು ತಲಪುತ್ತಾನೆ. ಬೇರೆ ನಕ್ಷತ್ರಲೋಕದಿಂದ ಸಿಡಿದುಹೋಗಿದ್ದ ಗಾಜಿನಂತಹ ದೊಡ್ಡ ಬಂಡೆಗಲ್ಲು ನಚಿಕೇತನ ಮನೆಯ ಹಿತ್ತಲಿನಲ್ಲಿ ಬಿದ್ದು ಕ್ಷಣ ಹೊತ್ತಿನಲ್ಲಿಯೇ ತಿರುಗಿ ಆಕಾಶಕ್ಕೆ ಹೋಗಿತ್ತು. ಅದರ ಒಂದೆರಡು ತುಣುಕು ನಚಿಕೇತನ ಕಿಸೆಯಲ್ಲಿದ್ದವು. ಆ ತುಣುಕುಗಳಿಲ್ಲದೆ ಅದು ಮತ್ತೆ ಮೊದಲಿನಂತಾಗುವುದು ಸಾಧ್ಯವಿರಲಿಲ್ಲವಾದ್ದರಿಂದ ಆ ತುಣುಕುಗಳ ಸಹಿತ ನಚಿಕೇತನನ್ನು 'ರೇನಾ' ಲೋಕಕ್ಕೆ ಅದು ತನ್ನ ಆಯಸ್ಕಾಂತ ಶಕ್ತಿಯ ಬಲದಿಂದ ಜಗ್ಗಿತು. ರೇನಾ ಲೋಕದ ಪಕ್ಷಿಯ ಕೂಗಿನಂತಿರುವ ಭಾಷೆ, ಅಲ್ಲಿಯ ಲೋಹಮಾನವರು, ಲೋಹದಿಂದ ಲೇ ಮಾಡಿದ ಅನ್ನ, ಜೀನ್ ವಿಭಜನೆ ಮಾಡಿ ಮನುಷ್ಯರ ಸಂಖ್ಯೆಯನ್ನು ವೃದ್ಧಿಸುವುದು, ಅಲ್ಲಿಯ ಜನ ೬೦೦ ವರ್ಷಗಳಷ್ಟು ಕಾಲ ಬದುಕುವುದು ಎಲ್ಲ ವಿಚಿತ್ರ ಮತ್ತು ಮಜಾ ಅನ್ನಿಸುತ್ತದೆ.

ನಚಿಕೇತ ರೇನಾ ನಕ್ಷತ್ರದಲ್ಲಿ ಕೆಲವು ಕಾಲ ಇದ್ದು ಅಲ್ಲಿಯವನೆ ಆಗಿ, ಅವರ ಭಾಷೆಯ ಬಿಲ್ಲೆಯಂತಹ ಉಪಕರಣವನ್ನು ಮಿದುಳಿನಲ್ಲಿ ಕೊರೆದು ಇರಿಸಿಕೊಂಡು, ಆ ಭಾಷೆಯನ್ನೆ ಮಾತಾಡಿ, ಕೊನೆಗೆ ನಕ್ಷತ್ರಲೋಕದ ಒಡೆಯ 'ರೇರೇರೇ'ನ ಸಹಾಯದಿಂದ ಮತ್ತೆ ಭೂಮಿಗೆ ಮರಳುತ್ತಾನೆ. ಇದೊಂದು ರಮ್ಯ ಹಾಗೂ ಕಾಲ್ಪನಿಕ ಕಥೆಯಾಗಿರುವುದರಿಂದ ವಾಸ್ತವಿಕ ನೆಲೆಗಟ್ಟಿನ ಮೇಲೆ ಅವುಗಳ ನೈಜತೆಯನ್ನು ವಿಶ್ಲೇಷಿಸಲಾಗದು. ಆದರೆ ಕಿರಣಪ್ರಸಾದ್ ಅವರು ಈ ಘಟನೆಗಳು ನಿಜವಾಗಿಯೂ ನಡೆದಿರಬಹುದೇನೋ ಎಂಬಂತೆ ಕಲಾತ್ಮಕವಾಗಿ ಹಾಗೂ ನಿಖರವಾಗಿ ಚಿತ್ರಿಸಿರುವುದು ಈ ಕಾದಂಬರಿಯ ಹೆಗ್ಗಳಿಕೆಯಾಗಿದೆ. ಕಾಲ್ಪನಿಕವಾಗಿದ್ದರೂ ವೈಜ್ಞಾನಿಕ ಮನೋಭಾವನೆಯ ಚಿತ್ತವನ್ನು ಮಕ್ಕಳಲ್ಲಿ ಬೆಳೆಸುವ ನಿಟ್ಟಿನಲ್ಲಿ ಈ ಕೃತಿ ದುಡಿಯುತ್ತದೆ. ಉದಾಹರಣೆಗೆ ನಚಿಕೇತನು ತನ್ನ ಗೆಳೆಯ ಆದಿತ್ಯ ಹಾಗೂ ಅವನ ಶಿಕ್ಷಕರಾದ ರಘುನಾಥ ಅವರ ಜೊತೆ ನಡೆಸುವ ಸಂಭಾಷಣೆಗಳನ್ನು ನೋಡಬಹುದು:

ನಚಿಕೇತನಿಗೆ ಇದ್ದಕ್ಕಿದ್ದಂತೆ ಏನೋ ಹೊಳೆದಂತಾಯಿತು. ತತ್‌ಕ್ಷಣ ಚುರುಕಾಗಿ ತನ್ನ ಜೇಬಿನಿಂದ ಒಂದೆರಡು ಗಾಜಿನ ಚೂರುಗಳನ್ನು ಹೊರತೆಗೆದ. ಕುತೂಹಲದಿಂದ ನೋಡುತ್ತಿದ್ದ ಆದಿತ್ಯನ ಕಡೆ ತಿರುಗಿದ.

'ಆದಿ, ಆವತ್ತು ನಿನಗೆ ಭೂತಕನ್ನಡಿಯನ್ನು ಸೂರ್ಯನ ಬಿಸಿಲಿಗೆ ಅಡ್ಡವಾಗಿ ಹಿಡಿದು, ಕಾಗದದ ಚೂರೊಂದು ಬೆಂಕಿ ಹೊತ್ತಿಕೊಂಡು ಉರಿಯುವುದನ್ನು ತೋರಿಸಿದ್ದೆನಲ್ಲಾ! ಈಗ ನೋಡು, ಇನ್ನೂ ಅದ್ಭುತ ಜಾದೂ ತೋರಿಸುತ್ತೇನೆ. ಇದೋ ನೋಡು, ನನ್ನ ಬಳಿ ಕೆಲವು ಗಾಜಿನ ಚೂರುಗಳಿವೆ. ಅವುಗಳ ಸಹಾಯದಿಂದ ಕಬ್ಬಿಣವನ್ನೇ ಕರಗಿಸಬಲ್ಲೆ.'

ನಚಿಕೇತ ನಗುತ್ತ ತನ್ನಲ್ಲಿದ್ದ ಕಬ್ಬಿಣದ ಮೊಳೆಯೊಂದನ್ನು ಬಂಡೆಯ ಮೇಲಿಟ್ಟು ಗಾಜಿನ ಚೂರುಗಳನ್ನು ಒಂದಕ್ಕೊಂದು ಜೋಡಿಸಿ ಸೂರ್ಯನ ಕಿರಣಗಳು ಅವುಗಳಲ್ಲಿ ಹಾದು ಹೋಗುವಂತೆ ಹಿಡಿದುಕೊಂಡ. ಕೆಲವೇ ಕ್ಷಣಗಳಲ್ಲಿ ಆ ಗಾಜಿನ ಚೂರುಗಳಿಂದ ವಿಚಿತ್ರ ಬೆಳಕೊಂದು ಹೊರಟಿತು. ಆ ಬೆಳಕಿನ ಹೊಳಪು ಅದ್ಭುತವಾಗಿತ್ತು! ಬಂಗಾರ ಬಣ್ಣದ ಕಿರಣಗಳು ಧಾರೆಧಾರೆಯಾಗಿ ಹರಿದುಬರತೊಡಗಿದವು. ಆದಿತ್ಯ ಬೆರಗಿನಿಂದ ನೋಡತೊಡಗಿದ. ನಚಿಕೇತನೂ ತನ್ಮಯನಾಗಿ ನೋಡುತ್ತಿದ್ದ. ಅವರಿಬ್ಬರ ಜತೆಗೆ ಬೇರೆ ಇನ್ನೆರಡು ಕಣ್ಣುಗಳೂ ಈ ಚಟುವಟಿಕೆಯನ್ನು ಮರೆಯಿಂದ ದಿಟ್ಟಿಸುತ್ತಿವೆಯೆಂದು ಗೆಳೆಯರಿಬ್ಬರಿಗೂ ಗೊತ್ತಾಗಲೇ ಇಲ್ಲ!

ಒಂದು ರೀತಿಯಲ್ಲಿ ಈ ಕಾದಂಬರಿಗೆ ಪತ್ತೇದಾರಿ ಕಾದಂಬರಿಗಿರುವ ಆಕರ್ಷಕ ಭಾಷೆ ಹಾಗೂ ಆಶ್ಚರ್ಯಗಳು ಘಟಿಸುವ ಸರಣಿಯಿದೆ. ಹಾಗೆಂದ ತಕ್ಷಣ ಇದೊಂದು ಜನಪ್ರಿಯ ಮತ್ತು ಸಿನಿಮೀಯ ಶೈಲಿಯ ಪುಸ್ತಕವೆಂದು ಭಾವಿಸಬೇಕಾಗಿಲ್ಲ. ವಸ್ತುವಿನ ಜೋಡಣೆಯನ್ನು ಆಕರ್ಷಕವಾಗಿ ಮತ್ತು ಕುತೂಹಲಕರವಾಗಿ ಮಾಡಿರುವುದು ಮತ್ತು ಅವು ಸಹಜವೆನ್ನುವಂತೆ ಒಂದು ವಾತಾವರಣವನ್ನು ಕಾದಂಬರಿಯೊಳಗೆ ಸೃಷ್ಟಿಸಿರುವುದು ಕೃತಿ ಯಶಸ್ವಿಯಾಗಲಿಕ್ಕೆ ಸಹಕರಿಸಿವೆ. ವಿಸ್ಮಯದ ಘಟನೆಗಳನ್ನು ಅಂತಹ ಭಾಷೆಯಲ್ಲಿಯೆ ಮೈದಾಳುವಂತೆ ಕಾದಂಬರಿಗಾರ್ತಿ ನೋಡಿಕೊಂಡಿದ್ದಾರೆ:

ಬೃಹದಾಕಾರದ ಬಂಡೆಯಂತಹ ತುಂಡೊಂದು ಆಕಾಶದಿಂದ ಅತ್ಯಂತ ವೇಗವಾಗಿ ಹಾರಿಬಂದು ನಮ್ಮ ಹಿತ್ತಲಿನಲ್ಲಿ ಬಿದ್ದಿತು. ವಿಚಿತ್ರವೆಂದರೆ ಅಷ್ಟು ವೇಗವಾಗಿ ಬಂದು, ಅಷ್ಟು ದೊಡ್ಡ ವಸ್ತು ಬಿದ್ದರೂ ಸ್ವಲ್ಪವೂ ಸದ್ದು ಕೇಳಲಿಲ್ಲ. ನನಗೆ ಅತೀವ ಆಶ್ಚರ್ಯ, ಭಯ ಆಗಿದ್ದರೂ ಕುತೂಹಲದಿಂದ ಹತ್ತಿರ ಹೋದೆ... ಊಹೂಂ... ಹತ್ತಿರ ಹೋಗಲು ಸಾಧ್ಯವೇ ಆಗಲಿಲ್ಲ. ಆ ವಸ್ತುವಿನಿಂದ ಅಪಾರ ಶಾಖ ಹೊರಬರುತ್ತಿತ್ತು!

ವಿಜ್ಞಾನದ ಸಂಗತಿಯನ್ನು ಸಾಹಿತ್ಯಕವಾದ ಹಾಗೂ ಭಾವಪ್ರಧಾನ ಭಾಷೆಯಲ್ಲಿ ಬಿಂಬಿಸಿ ತಮ್ಮ ಕಲಾತ್ಮಕ ವೈಶಿಷ್ಟ್ಯ ಮೆರೆಯುವಲ್ಲಿ ಕಿರಣಪ್ರಸಾದ್. ಆರ್. ಅವರು ತುಂಬ ಯಶಸ್ವಿಯಾಗಿದ್ದಾರೆ ಎಂದೇ ಹೇಳಬೇಕು.

ಕೃಷ್ಣಾಜಿ ಘನಾತೆ, ಸೈದಾಪುರ

ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿಯನ್ನು ಹುಟ್ಟಿಸುವಂತೆ ಕೃಷ್ಣಾಜಿ ಘನಾತೆಯವರ ಕೆಲವು ಕವಿತೆಗಳು ಹೆಣೆಯಲ್ಪಟ್ಟಿವೆ. ತೊದಲನುಡಿಯ ಸೊಬಗು, ಲಯ-ಛಂದಸ್ಸುಗಳ ಸಲೀಸಾದ ಓಟ, ಗ್ರಾಮಜೀವನದ ವಸ್ತು ಇವರ ಕವಿತೆಗಳನ್ನು ಮೆಚ್ಚಿಕೊಳ್ಳುವಂತೆ ಮಾಡುವ ವಿಷಯಗಳಾಗಿವೆ. ಕಲಬುರಗಿ ಪ್ರದೇಶದ ಛಾಪನ್ನು ಕೃಷ್ಣಾಜಿಯವರ ಬರವಣಿಗೆಯಲ್ಲಿ ಗುರುತಿಸಬಹುದು. ಎಳೆಯರಲ್ಲಿ ಸಾಮರಸ್ಯವನ್ನು ಬೆಳೆಸುವ ರೀತಿ 'ಗೆಳೆಯರು' ಎಂಬ ಪದ್ಯದ್ದು. ಗೆಳೆತನದಲ್ಲಿ ಹೊಸತನ್ನು ಮೆರೆಸುವ ಮತ್ತು ವೈವಿಧ್ಯವೆ ಈ ನೆಲದ ಗುಣ ಎನ್ನುವ ಭಾವ ಬೆಸೆಯುವ ಲಕ್ಷಣವನ್ನು ಅದು ಒಳಗೊಂಡಿದೆ.

ಜಾನ್ ನನಗೆ ಜಾಣ ಗೆಳೆಯ
ಆಕಾಶ ನನಗೆ ಆತ್ಮೀಯ ಗೆಳೆಯ
ಚಾಂದ್ ನನಗೆ ಚಂದದ ಗೆಳೆಯ
ಬಸವ ನನ್ನ ಬಯಸಿದ ಗೆಳೆಯ

ಗೆಳೆತನ, ಸ್ನೇಹಪರತೆ, ಮೈತ್ರಿ ಮನೋಭಾವವನ್ನು ಚಿತ್ರಿಸುವಲ್ಲಿ ಅವರಿಗೆ ಹೆಚ್ಚಿನ ಆಸ್ಥೆ ಇರುವಂತಿದೆ. ಹೊಸ ಆಟ ಮತ್ತು ಹಳೆಯ ಆಟಗಳನ್ನು ಕೂಡಿಸಿ ಮುಂದಕ್ಕೆ ಒಯ್ಯುತ್ತಾರೆ:

ಚಿಣ್ಣಿದಾಂಡು ನೀನಾಡು
ಗೋಲಿ ಬಳಪ ನನಗೆ ಕೊಡು
ಕ್ರಿಕೆಟ್ ಆಟ ನೀನಾಡು
ಗಾಲಿ ಓಟ ನನಗೆ ಬಿಡು
ಕಣ್ಣು ಮುಚ್ಚಾಲೆ ನೀನಾಡು
ಬೆಳಗುಂಪಿ ಆಟ ನನಗೆ ಬಿಡು

'ಅಮ್ಮ' ಎನ್ನುವ ಕೃಷ್ಣಾಜಿ ಘನಾತೆ ಅವರ ಪದ್ಯ ನಲಿವಿನೊಂದಿಗೆ ಕಲಿಕೆಯನ್ನೂ ಕಲಿಕೆಯೊಂದಿಗೆ ನಲಿವನ್ನೂ ಬೆರೆಸುವ ಒಂದು ಒಳ್ಳೆಯ ಪ್ರಯತ್ನವಾಗಿದೆ. ಹಿಂದಿನ ಕೆಲ ಪ್ರಭಾವಗಳಿದ್ದರೂ ಕವಿಯ ಕಲ್ಪನಾಶೀಲ ರಚನೆ ಇಷ್ಟವಾಗುತ್ತದೆ:

ಅ – ಎಂದು ಬರೆದನು, ಅಮ್ಮ ಎಂದು ಕರೆಯುವೆನು.
ಆ – ಎಂದು ಬರೆದನು, ಆಟಕೆ ನಾನು ಓಡುವೆನು.
ಇ – ಎಂದು ಬರೆದನು, ಇಲ್ಲೇ ನಾನು ಇರುವೆನು.
ಈ – ಎಂದು ಬರೆದನು, ಈಜು ನಾನು ಕಲಿತೆನು.
ಉ – ಎಂದು ಬರೆದನು, ಉಂಡಿ ನಾನು ತಿಂದೆನು.

ಮುಂತಾಗಿ ಸಾಗುವ ಕವಿತೆ ಪರಿಚಿತತೆ ಮತ್ತು ಅಪರಿಚಿತತೆಯನ್ನು ಮಕ್ಕಳಿಗೆ ಮನದಟ್ಟು ಮಾಡುವಲ್ಲಿ ಯಶಸ್ವಿಯಾಗುತ್ತದೆ. ಅವರು ಬಳಸುವ ಗ್ರಾಮ್ಯ ಶಬ್ದಗಳು ಕವನಗಳಿಗೆ ಕಳೆ ತರುತ್ತವೆ ಹಾಗೂ ಓದುಗರ ಮನೋಭೂಮಿಕೆಗೆ ಹೊಂದಿಕೊಳ್ಳುತ್ತವೆ.

೧. ಚಿಂಟು ತುಂಬಾ ಚೂಟಿ ಘಾಟು
ಪಿಂಟು ಬಹಳ ಹಗುರ ದಂಟು

೨. ಬನ್ನಿ ತಾತಾ ಬಡಿಗಿ ತಾತಾ
ಕೈಯಲಿ ಏನಿದೆ ಕೊಡು ತಾತಾ

೩. ರೈಲಿನಲಿ ಐಸ್‌ಕ್ರೀಂ ಬಂತು
ರೈಲಿನಲಿ ಬಿಸ್ಕತ್ ಬಂತು
ಕಾಫಿ ಬಂತು
ನಿದ್ದೆ ಬಂತು
ನಿದ್ದೆಯ ಜೊತೆಗೆ ಸ್ಟೇಷನ್ ಬಂತು
ಸ್ಟೇಷನ್ ಜೊತೆಗೆ ಊರು ಬಂತು

ಹದವಾದ ರೀತಿಯಲ್ಲಿ ಅವರು ಪದ್ಯ ಕಟ್ಟಿದ್ದಾರೆ.

ಎಂ.ಜಿ. ದೇಶಪಾಂಡೆ

ಬೀದರ್ ಭಾಗದಲ್ಲಿ ಮಕ್ಕಳ ಸಾಹಿತ್ಯದ ಚಟುವಟಿಕೆಗಳಿಗೆ ನೀರೆರೆಯುತ್ತ ತಮ್ಮನ್ನು ಕ್ರಿಯಾಶೀಲವಾಗಿರಿಸಿಕೊಂಡಿರುವ ಎಂ.ಜಿ. ದೇಶಪಾಂಡೆ ಇದುವರೆಗೆ 'ಅಜ್ಜನ ಹಳ್ಳಿ' (೨೦೧೦), 'ಕಾಮನಬಿಲ್ಲು' (೨೦೧೨) ಮತ್ತು 'ಚಂದ್ರಹಾರ' (೨೦೧೪) ಎಂಬ ಮೂರು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.

ಅವರ ಬರವಣಿಗೆಯ ರೀತಿ ಸಾಂಪ್ರದಾಯಿಕ ಮಾದರಿಯದು ಎಂದು ಅನಿಸಿದರೂ ಲಯ, ಪ್ರಾಸಪದಗಳಿಂದ ಮಕ್ಕಳಲ್ಲಿ ಆಸಕ್ತಿ ಹುಟ್ಟಿಸುತ್ತಾರೆ;

ನನ್ನ ಪುಟ್ಟ ಕಾರು
ಓಡುವುದು ಅತ್ತ ಇತ್ತ
ಅದನ್ನು ಓಡಿಸುತ್ತಿದ್ದರೆ
ಮರೆವೆ ಎಲ್ಲ ಸುತ್ತಮುತ್ತ

ನಾನು ಆಡುತ್ತಿದ್ದರೆ ಏಕೋ
ಅಪ್ಪನಿಗೆ ಸಿಟ್ಟೇ ಸಿಟ್ಟು
ಅಮ್ಮನಿಗೆ ಮಾತ್ರ
ಹಾಲು ಕುಡಿಸುವ ಪಟ್ಟು

ಮಕ್ಕಳ ಮನಸ್ಸಿನ ಭಾವ ಅವರಲ್ಲಿ ಪ್ರೀತಿಯಿಂದ ಪ್ರಕಟಗೊಳ್ಳುತ್ತದೆ. ಚಿಣ್ಣರ ಹಟ, ರಚ್ಚೆ, ರೋಷ ಮತ್ತು ನೆಮ್ಮದಿಗಳನ್ನು ಕಟ್ಟಿಕೊಡುತ್ತಾರೆ:

ಮನೆಯಲ್ಲಿರುವೆನೆಂದರೆ ನಾ
ಶಾಲೆಗೆ ಹೋಗು ಎನ್ನುವಳು
ಹೊಟ್ಟೆಗೆ ಹಸಿವು ಇಲ್ಲೆಂದರೂ
ತುತ್ತು ಉಣ್ಣು ಎನ್ನುವಳು

ತಮ್ಮಲ್ಲಿ ಬರೀ ತಪ್ಪನ್ನು ಮಾತ್ರ ಕಂಡುಹಿಡಿಯುವ ಹಿರಿಯರ ಸ್ವಭಾವವನ್ನು ಎಳೆಯರು ಮನಸ್ಸಿನಲ್ಲಿ ಟೀಕಿಸುತ್ತಾರೆ. ಪ್ರತಿಯೊಂದೂ ತಮ್ಮ ಮೂಗಿನ ನೇರಕ್ಕೆ ನಡೆಯಬೇಕೆನ್ನುವ ದೊಡ್ಡವರ ವಿಲಕ್ಷಣ ಗುಣ ಮತ್ತು ವೈಚಿತ್ರ್ಯಗಳನ್ನು ದೇಶಪಾಂಡೆ ನಮ್ಮ ಮುಂದಿಡುತ್ತಾರೆ.

ಮನೆಯಲ್ಲಿ ಮಕ್ಕಳು ಆಡುತ್ತಿದ್ದರೆ ಅವು ಹೊರಗೆ ಆಡಿಕೊಳ್ಳಬಾರದೆ ಎನ್ನುವ ಇಲ್ಲವೆ ಹೊರಗೆ ಅಂಗಳದಲ್ಲಿ ಆಡುತ್ತಿದ್ದರೆ ಇಲ್ಲಿಯೆ ಕಣ್ಣೆದುರಿನಲ್ಲಿ ಆಡಿಕೊಳ್ಳಬಾರದಿತ್ತೆ ಎನ್ನುವ ತಾಯಿಯ ವಾತ್ಸಲ್ಯ, ಹೆದರಿಕೆ ಮತ್ತು ಎದೆಗುದಿ ಚಿತ್ರಿಸುತ್ತಾರೆ. ಜೊತೆಗೆ ತಂದೆ-ತಾಯಿಗಳ ಇಬ್ಬಂದಿತನವೂ ಮಕ್ಕಳ ಕಣ್ಣಲ್ಲಿ ಪ್ರಕಟವಾಗುತ್ತಿರುತ್ತದೆ.

ಪುಸ್ತಕ ಹಿಡಿದು ಓದುತ್ತಿದ್ದರೆ
ಹೋಂವರ್ಕ್ ಮಾಡೆನ್ನುವಳು
ನೋಟಬುಕ್‌ನಲ್ಲಿ ಬರೆಯುತ್ತಿರಲು
ಪುಸ್ತಕ ಓದು ಎನ್ನುವಳು

ಬೆಳಿಗ್ಗೆ ಬೇಗ ಎದ್ದರೆ ನಾನು
ಇನ್ನು ಮಲಗು ಎನ್ನುವಳು
ಹಾಗೆ ಏಳದೆ ಮಲಗಿರಲು
ಬೇಗ ಏಳಬಾರದೆ ಎನ್ನುವಳು

'ಚಂದ್ರಹಾರ' ಸಂಕಲನದಲ್ಲಿ 'ಚಿಟ್ಟೆಯ ಸೊಬಗು', 'ಸಾಕ್ಷಿ', 'ನವಿಲೆ', 'ಹಗ್ಗದಾಟ', 'ತಾಯಿಯ ಹಾಡು' ಮುಂತಾದ ಪದ್ಯಗಳು ಚೇತೋಹಾರಿಯಾಗಿವೆ. ಚಿಟ್ಟೆ-ಹೂವಿನ ತಟ್ಟೆ ಎನ್ನುವುದು, ಮುಳ್ಳಿನ ಗಿಡದಲ್ಲಿನ ಹೂ ಬಾಳಿಗೆ ಸಾಕ್ಷಿಯೆನ್ನುವುದು ಅವರ ಕಲ್ಪನೆಯ ಹೆಣಿಗೆಯನ್ನು ಹೇಳುತ್ತವೆ. ಹೊಸ ಪ್ರಯೋಗಗಳಿಂದ ಅವರು ತಮ್ಮನ್ನು ಮತ್ತಷ್ಟು ವಿಸ್ತರಿಸಿಕೊಳ್ಳಬಲ್ಲರು ಎಂದು ಅನಿಸದೆ ಇರದು.

ಹ.ಸ. ಬ್ಯಾಕೋಡ

'ಒಂಟಿಯಾದ ಕಪಿ', 'ಘೂ', 'ತಾಯಿಪ್ರೀತಿ' (೨೦೦೨), 'ಮಾವಿನ ತೋಟದಲಿ ಹಲಸಿನ ಸುವಾಸನೆ' (೨೦೧೩) ಎಂಬ ಕಥಾಸಂಕಲನಗಳನ್ನೂ 'ಕೋಟೆಯಾದವರು' (೨೦೧೨) ಮತ್ತು 'ಹಾರದಿರಲಿ ಪ್ರಾಣಪಕ್ಷಿ' (೨೦೧೩) ಎಂಬ ಕಾದಂಬರಿಗಳನ್ನೂ ಹ.ಸ .ಬ್ಯಾಕೋಡ ಪ್ರಕಟಿಸಿದ್ದಾರೆ. ಈ ಎಲ್ಲ ಪುಸ್ತಕಗಳು ಬೆಂಗಳೂರಿನ 'ಶ್ರೀ ಅಮ್ಮ ಪ್ರಕಾಶನ'ದಿಂದ ಪ್ರಕಟಗೊಂಡಿವೆ.

ಹವ್ಯಾಸಿ ವನ್ಯಜೀವಿ ಫೋಟೋಗ್ರಾಫರ್ ಆಗಿರುವ ಅವರು ಪರಿಸರದ ಫೋಟೋಗಳನ್ನು ಹೊಡೆದಂತೆ ಪರಿಸರಕ್ಕೆ ಸಂಬಂಧಿಸಿದ ಕತೆಗಳನ್ನು ಹೇಳುವುದರಲ್ಲಿ ನಿರತರಾಗಿದ್ದಾರೆ. ಇಲಿ,

ಹೆಗ್ಗಣ, ಒಂಟೆ, ಮಂಗ, ಗಿಣಿ, ಕಾಗೆ, ನರಿ ಮುಂತಾದ ಪ್ರಾಣಿ ಪಕ್ಷಿಗಳ ಕತೆಗಳನ್ನು ಹೇರಳವಾಗಿ ಬರೆದಿರುವ ಹ.ಸ.ಬ್ಯಾಕೋಡ ಆ ಚಿತ್ರಣಗಳ ಮೂಲಕ ಮನುಷ್ಯ ಸ್ವಭಾವಗಳನ್ನು ತೋರಿಸಲು ಪ್ರಯತ್ನಿಸುತ್ತಾರೆ. ಪರಿಸರವನ್ನು ನಮ್ಮ ಮುಂದಿನ ಜನಾಂಗಕ್ಕೆ ಸುಂದರವಾಗಿ ಉಳಿಸಬೇಕೆಂಬ ಸಂಕಲ್ಪ ಅವರ ಪ್ರತಿ ಕತೆ ಮತ್ತು ಕಾದಂಬರಿಯಲ್ಲಿಯೂ ಕಾಣಸಿಗುತ್ತದೆ.

'ತಾಯಿಪ್ರೀತಿ' ಎನ್ನುವ ಸಂಕಲನದಲ್ಲಿ 'ಚಾಣಾಕ್ಷ ಹೆಗ್ಗಣಗಳು', 'ತಾಯಿ ಪ್ರೀತಿ', 'ಪ್ರತ್ಯುಪಕಾರ', 'ದುರುಳ ಕಾಗೆ', 'ಕೇಸರದ ನರಿ',' ರಣಹದ್ದು ಮತ್ತು ರಾಜಕುಮಾರ' ಮುಂತಾದ ಕತೆಗಳಿದ್ದು ಒಂದೆರಡು ಕತೆಗಳನ್ನು ಹೊರತುಪಡಿಸಿದರೆ ಉಳಿದವುಗಳು ಹಳೆಯ ಜಾಡಿನಲ್ಲಿಯೆ ಸಾಗುತ್ತವೆ. ಪಂಚತಂತ್ರ ಹಾಗೂ ನೀತಿ ಕತೆಗಳ ಪ್ರಭಾವ ಇವರ ಮೇಲೆ ಬಹಳಷ್ಟು ಆಗಿರುವಂತೆ ಕಾಣುತ್ತದೆ. ಆದುದರಿಂದ ಆದರ್ಶ ಹಾಗೂ ನೈತಿಕ ಪಾಠದ ಕಡೆಗೆ ಹೆಚ್ಚು ಗಮನ ಕೊಡುವುದರಿಂದ ಕತೆಗಳು ಕಲಾತ್ಮಕ ಬೆಳವಣಿಗೆಯಿಲ್ಲದೆ ಸೊರಗುತ್ತವೆ.

'ಮಾವಿನ ತೋಟದಲಿ ಹಲಸಿನ ಸುವಾಸನೆ' ಸಂಕಲನದಲ್ಲಿ 'ಕಾಗೆಯ ಉಪಕಾರ ಗುಣ', 'ಜೇನು ಸವಿದ ನರಿ' ಮುಂತಾದ ಒಂದೆರಡು ಸ್ವಾರಸ್ಯಕರ ಕತೆಗಳಿವೆ. ಹಳೆಯ ಜಾಡಿನಲ್ಲಿ ಸಾಗುವ ಕಥಾವಸ್ತು, ಹೊಸ ಪ್ರಯೋಗಗಳಿಲ್ಲದ ಶೈಲಿಯ ಏಕತಾನತೆಗಳಿಂದ ಅವರು ತಮ್ಮನ್ನು ಬಿಡಿಸಿಕೊಂಡರೆ ಹೊಸತನ್ನು ಸೃಷ್ಟಿಸಲು ಅವರಿಗೆ ಸಾಧ್ಯವಾದೀತು. ವಸ್ತು ಹಳೆಯದಿದ್ದರೂ ಅದನ್ನು ಆಕರ್ಷಕವಾಗಿ ಹೆಣೆಯಬಲ್ಲ ಕಲೆಗಾರಿಕೆಯನ್ನು ಲೇಖಕನಾದವನು ಮಾಡಬೇಕಾಗುತ್ತದೆ.

ನಾ. ಡಿಸೋಜ ಅವರ 'ಹಕ್ಕಿಗೊಂದು ಗೂಡು ಕೊಡಿ' ಕಾದಂಬರಿ ಹಕ್ಕಿಗಳು ಮತ್ತು ಹಾಳಾಗುತ್ತಿರುವ ಪರಿಸರವನ್ನೇ ವಸ್ತುವನ್ನಾಗಿ ಆಯ್ದುಕೊಂಡಿದ್ದರೂ ಅದನ್ನೊಂದು ಭಾವನೆಗಳು ಹೊಯ್ದಾಡುವ ರೂಪಕವನ್ನಾಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಂಥ ಸಾಧ್ಯತೆಗಳ ಕಡೆ ನಮ್ಮ ಯುವ ಲೇಖಕರು ಗಮನ ಕೊಡಬೇಕಾಗಿದೆ.

ವಿಜಯಕಾಂತ ಪಾಟೀಲ

ಅಮ್ಮ ಅಂದ್ರೆ
ಅಪ್ಪಿಷ್ಟಲ್ಲ?
ಹಾಡು ಪಾಡಿನ ಹೊತ್ತಿಗೆ
ಕೌದಿಯಂತೆ ಬೆಚ್ಚಗೆ
ಅಮ್ಮ ಅಂದ್ರೆ
ಅಪ್ಪಿಷ್ಟಲ್ಲ
ಕಡಲ ತೆರೆಯ ಮುದ್ದು
ನೋವ ನೀಗುವ ಮದ್ದು

ಎಂದು ಅಮ್ಮನ ಅಕ್ಕರೆಯನ್ನು ಹಾಲು ಸಕ್ಕರೆಯಂತೆ ಮಕ್ಕಳಿಗಾಗಿ ಹಿಡಿದಿಟ್ಟವರು ವಿಜಯಕಾಂತ ಪಾಟೀಲ. ತಾಯಿ ಹಾಗೂ ಮಗುವಿನ ಭಾವಲೋಕವೊಂದನ್ನು ಬಣ್ಣಿಸುವಲ್ಲಿ ವಿಜಯಕಾಂತ ತಮ್ಮ 'ಅಮ್ಮ ಅಂದ್ರೆ ಅಪ್ಪಿಷ್ಟಲ್ಲ' (ಸಂಸ್ಕೃತಿ ಪ್ರಕಾಶನ, ಬಳ್ಳಾರಿ, ೨೦೧೪)

ಎನ್ನುವ ಕವನ ಸಂಕಲನದಲ್ಲಿ ಯಶಸ್ವಿಯಾಗಿದ್ದಾರೆ. ಅಮ್ಮ, ಅಕ್ಕ, ಅಜ್ಜಿ, ತಮ್ಮ, ಪುಟ್ಟ, ಪುಟ್ಟಿ ಮುಂತಾದ ಸಂಬಂಧಗಳ ಕೊನೆಯಿಲ್ಲದ ಮಾಧುರ್ಯ ಹಾಗೂ ಆಪ್ತತೆಯನ್ನು ಈ ಸಂಕಲನದಲ್ಲಿ ಕಾಣಬಹುದಾಗಿದೆ. ಈ ಕೃತಿಯ ಮತ್ತೊಂದು ವಿಶೇಷ ಗುಣವೆಂದರೆ ಪಾರಂಪರಿಕ ಮಕ್ಕಳ ಸಾಹಿತ್ಯದ ಪ್ರತಿಮೆ, ರೂಪಕಗಳ ಜಾಗದಲ್ಲಿ ಹೊಸ ಪ್ರತಿಮೆಗಳು ಉತ್ಸಾಹದಿಂದ ಬಂದು ಕುಳಿತಿರುವುದು! ಅಂದರೆ ಹಳೆಯದನ್ನು ಕಳೆದುಕೊಂಡಿದ್ದಕ್ಕೆ ಕವಿಗೆ ವಿಷಾದವಿಲ್ಲ. ಹಳಹಳಿಕೆಯಿಂದ ಮಗುವಿಗೆ ದೈನೇಸಿ ಸ್ಥಿತಿ ಬಂದಿದೆಯೆಂದು ಅವರು ಕೊರಗುವುದಿಲ್ಲ. 'ಗುಬ್ಬಿ ಗುಬ್ಬಿ ಗುಬ್ಬಚ್ಚಿ, ಎಲ್ಲಿಗೆ ಹೋದ್ಯೋ ಪಾಪಚ್ಚಿ'. ಎನ್ನುವಂತಹ ಸಾಲುಗಳಲ್ಲಿ ಅಂತಹದುರ ಸುಳಿವು ಇರಬಹುದಾದರೂ ಗುಬ್ಬಚ್ಚಿಗಳು ಬಾರದೆ ಇರುವುದರಿಂದ ಕಾಳುಕಡಿಗಳಲ್ಲಿ ನುಸಿಗಳು ಜಾಸ್ತಿಯಾಗಿವೆ ಎಂಬ ಪ್ರಜ್ಞೆ ಇರುವುದನ್ನು ನೋಡುತ್ತೇವೆ.

ಅಕ್ಕ ಅಕ್ಕ ಕಲಿಸಿಕೊಡೆ
ಗಣಕ ಯಂತ್ರ ವಿದ್ಯೆ
ಅಕ್ಷರಗಳ ಕೆತ್ತುವೆನು
ಬದಿಗಿರಿಸಿ ನಿದ್ದೆ

ಎನ್ನುವ ತಮ್ಮ, ಕೆಳಗಿನ ಕೇರಿಯ ಮಕ್ಕಳು ನಾವು 'ಸಣ್ಣ'ವರೆಂದು ತಿಳಿದಿಲ್ಲ ಎಂದು ಆತ್ಮವಿಶ್ವಾಸ ತೋರಿಸಿಕೊಳ್ಳುವ ಹುಡುಗರು, ಡುರುಳರ ಪಾಲಿಗೆ ಹಾಲಾಹಲವಾಗುವ ಹಾವಿನ ಹೊಸ 'ಪರಿ' ಮುಂತಾದವು ವಿಜಯಕಾಂತರ ಹೊಸ ಅರಸುವಿಕೆಗೆ ಉದಾಹರಣೆಗಳಾಗಿವೆ.

ಬಾಳೆ ಬಾಳೆ
ಮಾತಾಡೆ
ಕೊನೆಯ ತುಂಬಿ
ನೇತಾಡೆ

ಎನ್ನುವಲ್ಲಿ ಅವರ ಕವನದ ಲಾಲಿತ್ಯವನ್ನು ಕಾಣಬಹುದು. ಅನೇಕ ಏಕತೆಯ ಹಾಡುಗಳು ಮಕ್ಕಳ ಬಾಯಲ್ಲಿ ನಲಿಯುವಂತಿವೆ.

ಕೆಂಪು ನೀಲಿ
ಹಸಿರ ಕೊಡಿ
ಹಳದಿ ಬಿಳಿ
ತುಸುವೆ ಇಡಿ
ನೂರು ಕಣ್ಣು ತೆರೆಸುವೆ.

ರಾಜಶೇಖರ ಭೂಸನೂರಮಠ

ಕನ್ನಡದಲ್ಲಿ ವೈಜ್ಞಾನಿಕ ಕಥೆ-ಕಾದಂಬರಿಗಳನ್ನು ಬರೆದು ಮಕ್ಕಳಿಗೆ ಅದಮ್ಯ ಕುತೂಹಲ ಹಾಗೂ ಸಾಹಸದ ಲೋಕವನ್ನು ತೆರೆದಿಟ್ಟವರು ರಾಜಶೇಖರ ಭೂಸನೂರಮಠ ಅವರು. ಭೂಸನೂರಮಠ ಅವರಲ್ಲಿ ವಿಜ್ಞಾನವೆಂಬುದು ಶುಷ್ಕ ಹಾಗೂ ಅಪ್ಪಟ ವೈಜ್ಞಾನಿಕ ಸಂಗತಿಗಳನ್ನು

ಆಧರಿಸಿದ್ದಾಗಿರದೆ ಅದು ಫ್ಯಾಂಟಸಿ, ಅದ್ಭುತ, ರಮ್ಯ ಹಾಗೂ ಜನಪದ ಎಳೆಗಳನ್ನು ಒಳಗೊಂಡಿರುತ್ತದೆ. ಅಂದರೆ ಅವು ನಿಖರ ವೈಜ್ಞಾನಿಕ ಮಾಹಿತಿಗಳಾಗಿರದೆ ಯಾವುದೋ ವೈಜ್ಞಾನಿಕ ಸಂಗತಿಯಿಂದ ಮೊದಲು ಮಾಡಿಕೊಂಡು ಅದರ ಮೂಲಕ ಒಂದು ಕಥೆ ಕಟ್ಟುತ್ತ ಹೋಗುತ್ತಾರೆ. ಮಕ್ಕಳಿಗೆ ಆಸಕ್ತಿ ಹುಟ್ಟುವಂತಹ ಬೇರೆ ಲೋಕ, ಗ್ರಹ–ನಕ್ಷತ್ರ–ತಾರೆಗಳ ಪರಿಚಯ ಮಾಡುವಂತಹ, ಫ್ಯಾಂಟಸಿ ಹಾಗೂ ವಿಜ್ಞಾನವನ್ನು ಬೆರೆಸುವಂತಹ, ವಿಜ್ಞಾನ ವಿಷಯದಲ್ಲಿ ಈ ರೀತಿಯಲ್ಲಾದರೂ ಮಕ್ಕಳು ಆಸಕ್ತಿ ಬೆಳೆಸಿಕೊಳ್ಳಲಿ ಎನ್ನುವ ಉದ್ದೇಶ ಹೊಂದಿರುವಂತಹ ಸೃಷ್ಟಿ ರಾಜಶೇಖರ ಭೂಸನೂರಮಠ ಅವರದು. ಮಕ್ಕಳ ಕಲ್ಪನಾಶಕ್ತಿಯನ್ನು ಹಿಗ್ಗಿಸುವುದು ಕೂಡ ಅವರ ಕಥನ ಕ್ರಮದಲ್ಲಿ ಸೇರಿರುತ್ತದೆ. ಆವಾಗ ವಿಜ್ಞಾನದ ಜೊತೆ ಜಾನಪದವೂ ಸೇರುವುದು ಅವರಿಗೆ ಸಲೀಸಾಗುತ್ತದೆ. ಒಮ್ಮೊಮ್ಮೆ ಇದು ಅವಾಸ್ತವ ಎನಿಸಿದರೂ ಕತೆಗಳ ಕುತೂಹಲಕಾರಿ ಬೆಳವಣಿಗೆಯ ದೃಷ್ಟಿಯಿಂದ ಸರಿಯೆನಿಸುತ್ತದೆ. 'ವಿಜಯನ ಕಥೆ' ಎಂಬ ತಮ್ಮ ಒಂದು ಪುಟ್ಟ ಕಾದಂಬರಿಯನ್ನು ಅವರು ವೈಜ್ಞಾನಿಕ ಜಾನಪದ ಕಥೆಯೆಂದು ಕರೆದಿದ್ದಾರೆ. ಈ ಕತೆಯಲ್ಲಿ ವಿಜಯ ಎಂಬ ಅಂತರಿಕ್ಷ ಯಾನಿ ಒಂದು ಗ್ರಹದಿಂದ ಮತ್ತೊಂದು ಗ್ರಹಕ್ಕೆ ಒಂದು ಲೋಕದಿಂದ ಮತ್ತೊಂದು ಲೋಕಕ್ಕೆ ಪ್ರಯಾಣ ಮಾಡುತ್ತಿದ್ದಾನೆ: "ಮೊದಲಿನ ಐವತ್ತು ಬೆಳಕಿನ ವರ್ಷಗಳ ದೂರವನ್ನು ಸೀಮೋಲ್ಲಂಘಿನಿಯು ಸರಾಗವಾಗಿ ಕೆಲವೇ ನಿಮಿಷಗಳಲ್ಲಿ ದಾಟಿತು. ಅಂತರಿಕ್ಷದ ಮಡಿಕೆ (space wrap) ಅದಕ್ಕೆ ಸಹಾಯ ಮಾಡಿತು. ವಿಜಯನ ನಿಜವಾದ ಶೋಧಸಾಹಸ ಯಾತ್ರೆ ಅಲ್ಲಿಂದ ಪ್ರಾರಂಭವಾಯಿತೆನ್ನಬಹುದು. ನೌಕೆಯಲ್ಲಿ ವಿಜಯನು ಒಬ್ಬಂಟಿಗನಾಗಿದ್ದಿಲ್ಲ. ಸೀಮೋಲ್ಲಂಘಿನಿಯು ಒಬ್ಬ ನಿಜವಾದ ವ್ಯಕ್ತಿಯಂತೆ ಅವನಿಗೆ ಕಂಪನಿ ಕೊಟ್ಟಿತು. ಅದರೊಡನೆ ಮಾತುಕತೆ ನಡೆಸಬಹುದಿತ್ತು. ಅಂತರಿಕ್ಷದ ವರದಿಯನ್ನು ಕೂಡ ಅದೇ ರವಾನಿಸುತ್ತಿತ್ತು... ದೂರದಲ್ಲಿ ಒಂದು ಲೋಕವೂ ಕಾಣತೊಡಗಿತು. ಆ ಗ್ರಹದ ಮೇಲೆ ಇಳಿಯಲು ವಿಜಯನು ತಯಾರಾದನು. ನಾಗರಿಕತೆಯ ಎಲ್ಲ ಕುರುಹುಗಳೂ ಅಲ್ಲಿ ಕಂಡುಬಂದವು. ಇಳಿದು ನೋಡಿದರೆ ಅಲ್ಲೇನಿದೆ? ಅದೊಂದು ಮೃತಲೋಕವಾಗಿತ್ತು!"

ವಿಜಯ ಅಂತರಿಕ್ಷಯಾನಿಯಾದ ತನ್ನ ಅಜ್ಜ ಚಿದಾನಂದನನ್ನು ಮತ್ತೊಂದು ಲೋಕದಲ್ಲಿ ಹುಡುಕುವುದು, ಇತಿಹಾಸಪೂರ್ವ ಆ ನಗರದಲ್ಲಿ ಇಳಾ ಎಂಬ ರಾಣಿ ಇವನಿಗೆ ಮೋಹಿತಳಾಗಿ ಇವನನ್ನು ಸೆರೆಮನೆಯಲ್ಲಿಡುವುದು, ವಿಜಯ ಅವಳನ್ನು ತಿರಸ್ಕರಿಸಿ ಅವಳಿಗಿಂತ ಸುಂದರಿಯಾದ ಅವಳ ತಂಗಿಯನ್ನು ವರಿಸುವುದು, ಇಳಾ ಅವಳ ತಮ್ಮನಿಗೆ ಪಟ್ಟಕಟ್ಟುವುದು ಮುಂತಾದ ವಿವರಗಳಿವೆ. ಆದರೆ ಈ ವಿವರಗಳು ಹೆಚ್ಚಾಗಿ ಸಾಂಪ್ರದಾಯಿಕ ಕಥಾ ಮಾದರಿಯಲ್ಲಿದ್ದು ಇವುಗಳಲ್ಲಿ ಯಾವುದೇ ಹೊಸತನವಿಲ್ಲ. ಹೆಂಗಸರಿಂದ ಅಧಿಕಾರ ಕಸಿದು ಗಂಡಸಿಗೆ ಕೊಡುವಲ್ಲಿ ಕತೆಗಾರರು ತೃಪ್ತಿಪಡುತ್ತಾರೆ!

ಒಮ್ಮೊಮ್ಮೆ ಭೂಸನೂರಮಠ ಅವರ ಕತೆಗಳು ಅತಿ ಕಲ್ಪನೆಯಿಂದ ಕೂಡಿದ್ದು ನಂಬಲು ಅಸಾಧ್ಯವಾಗಿರುತ್ತವೆ! ಫ್ಯಾಂಟಸಿ, ಅದ್ಭುತ ಎಂದು ಅವುಗಳನ್ನು ನಂಬಬಹುದಾದರೂ ತಾರ್ಕಿಕ ಸಂಬಂಧದ ಒಂದು ಎಳೆ ಸಿಗದೆ ಓದುಗ ಕಕ್ಕಾಬಿಕ್ಕಿಯಾಗುವ ಸಂಭವವೂ ಇಲ್ಲದಿಲ್ಲ.

'ಕುಂಟಕಾಕಾನ ಕಥೆಗಳು' ಕೃತಿಯಲ್ಲಿನ ಕತೆಗಳು ಒಂದು ರೀತಿಯಲ್ಲಿ ಚೇತೋಹಾರಿಯಾಗಿದ್ದು, 'ರೋಬೋಟ್ ಸೈನಿಕ', 'ಹೋಲೋ ಹಗರಣ' ಮುಂತಾದವು ಆಸಕ್ತಿದಾಯಕ ಬೆಳವಣಿಗೆ ಹೊಂದಿವೆ. 'ರೋಬಟ್ ರಮಣಿ' ಪುಸ್ತಕದಲ್ಲಿಯೂ ಕುಂಟಕಾಕಾ ಬರುತ್ತಾನೆ. ಅವನು ಭೂಸನೂರಮಠರ ಜೀವಂತ ಪಾತ್ರ. ಮಕ್ಕಳನ್ನು ಕೂಡ್ರಿಸಿಕೊಂಡು ಆತ ತನ್ನ ಹಿಂದಿನ ಕತೆ ಹೇಳತೊಡಗುತ್ತಾನೆ:

'ನಾನು ಚಂದ್ರನ ಮೇಲಿದ್ದಾಗ, ಒಂದು ರೋಬಟ್ ಸಿಪಾಯಿ ಹೀಗೆ ಕೆಟ್ಟು ನನಗೆ ಎಷ್ಟು ಫಜೀತಿ ಮಾಡಿದ್ದ ಗೊತ್ತೇ? ...ಚಂದ್ರನ ಮೇಲೆ ವಾಸಿಸುವುದೂ ದೆವ್ವಗಳ ನಾಡಿಗೆ ಹೋಗುವುದೂ ಅಷ್ಟೆಯೆ! ಅಲ್ಲಿ ನಮ್ಮ ನೆರಳುಗಳನ್ನು ನೋಡಿ ನಾವೇ ಹೆದರಬೇಕು. ಯಾವ ಸದ್ದೂ ಇಲ್ಲ; ಮತ್ತು ಯಾವಾಗಲೂ ಸ್ಪೇಸ್ ಸೂಟ್ ಹಾಕಿಕೊಂಡೇ ಹೊರಗೆ ಹೋಗಬೇಕು...'

'ರೋಬೋಟ್ ರಮಣಿ'ಯಲ್ಲಿ ಯಂತ್ರ ಶಿಶುವೊಂದು ಕಾಕಾನಿಗೆ ಸಿಕ್ಕಿತಂತೆ:

'ಅಂತೂ ಈ ಲೋಕದಲ್ಲೂ (ಮಂಗಳನ ಮೇಲೆ) ಮನುಷ್ಯರಿದ್ದಾರಲ್ಲ ಎಂದು ದನಿಯನ್ನು ಅನುಸರಿಸಿ ಕಮ್ಯೂಟರ್ ಬಿಟ್ಟೆ. ನಾನು ಹೆಚ್ಚು ದೂರ ಹೋಗಬೇಕಾಗಲಿಲ್ಲ. ಮಂಗಳನ ಮರುಭೂಮಿಯ ಮೇಲೆ ಸಂಪೂರ್ಣ ನಿರ್ಜನ ಪ್ರದೇಶದಲ್ಲಿ ಒಂದು ಮಗು ಅಳುತ್ತ ಕುಳಿತಿತ್ತು! ...ಮಗು ನನ್ನನ್ನು ನೋಡಿದೊಡನೆ ಅಳು ನಿಲ್ಲಿಸಿತು. ನಾನು ಅದನ್ನು ಎತ್ತಿಕೊಳ್ಳಹೋದೆ. ಅದು ಕೈಕಾಲು ಬಡಿದುಕೊಂಡಿತು. ಮಂಗಳನ ಕಡಿಮೆ ಗುರುತ್ವದ ನೆಲದ ಮೇಲೆ ಕೂಡ ಅದು ಭಾರವಾಗಿತ್ತು. ನನಗೆ ಏನೋ ಸಂಶಯ ಬಂದಿತು. ಆದರೆ ಏನೂ ನಿರ್ಣಯಕ್ಕೆ ಬಾರದೇ, ಆ ಮಗುವನ್ನು ರಮಿಸುತ್ತ ಕಮ್ಯೂಟರ್ ಮೇಲೆ ಕೂಡ್ರಿಸಿಕೊಂಡೆ... ಆ ಮಗು ಅಲ್ಲಿ ಹೇಗೆ ಏಕಾಕಿಯಾಗಿ ಬದುಕಿತ್ತೆಂದು ನಿಮಗೆ ಆಶ್ಚರ್ಯವಷ್ಟೇ? ಅದು ಮನುಷ್ಯ ಅಥವಾ ಮಂಗಳಲೋಕದ ಮಗುವಾಗಿರಲಿಲ್ಲ! ಅದೊಂದು ರೋಬಟ್ ಅಥವಾ ಯಂತ್ರಶಿಶು!'

ಅಪರಿಚಿತ ಸಂಗತಿಗಳನ್ನು ಆಸಕ್ತಿಯಿಂದ ಕಟ್ಟಿಕೊಡುವ ಕೆಲವು ಕತಾಪುಸ್ತಕಗಳನ್ನು ರಾಜಶೇಖರ ಭೂಸನೂರಮಠ ಬರೆದಿದ್ದಾರೆ. 'ರೋಬಟ್ ರಮಣಿ' (ನವಕರ್ನಾಟಕ ಪ್ರಕಾಶನ, ೧೯೯೧), 'ಕುಂಟಕಾಕಾನ ಕಥೆಗಳು' (ಸಪ್ನ, ಬೆಂಗಳೂರು, ೨೦೦೫), 'ಅಪಹರಣ' (ಐ.ಬಿ.ಎಚ್. ಪ್ರಕಾಶನ, ೧೯೯೮), 'ವಿಜಯನ ಕಥೆ' (ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೦) ಕೃತಿಗಳು ಅವರ ವೈಜ್ಞಾನಿಕ ಮಾದರಿಯ ಫ್ಯಾಂಟಸಿ ಹಾಗೂ ಅದ್ಭುತ ಕಥಾನಕಗಳಿಗೆ ಸಾಕ್ಷಿಯಾಗಿವೆ. 'ಅಪಹರಣ' ಕತೆಯಲ್ಲಿ ಕತೆ ಹೇಳುವ ತಂತ್ರದಲ್ಲಿ ಹೊಸ ಪ್ರಯೋಗ ನಡೆಸಿದ್ದಾರೆ. 'ಭಲೆ ಪಿಂಕಿ', 'ಶಕ್ತಿನಗರದಲ್ಲಿ', 'ಕಾಲನೌಕೆ', 'ಪರಮಾಣು ಲೋಕದಲ್ಲಿ', 'ನಿಯಮಗಳ ನಾಡಿನಲ್ಲಿ...' ಮುಂತಾದವು ಅವರ ಇನ್ನಿತರ ಕೆಲವು ಪುಸ್ತಕಗಳಾಗಿವೆ.

ಸಂಗಮೇಶ ಗುಜಗೊಂಡ

ನನ್ನ ಊರ
ಸುತ್ತ ಮುತ್ತ
ತೋಟಪಟ್ಟಿ ಹರಡಿವೆ
ಕಬ್ಬು ಬಾಳೆ

ತೆಂಗು ಜೋಳ
ಸೊಕ್ಕಿ ಉಕ್ಕಿ ಬೆಳೆದಿವೆ

ಎಂದು ಗ್ರಾಮಗಳ ಸಮೃದ್ಧಿಯ ನೋಟವನ್ನು ಕಟ್ಟಿಕೊಡುವ ಸಂಗಮೇಶ ಗುಜಗೊಂಡ ಅವರು ಬೆಟ್ಟದ ಚಾರಣ, ರಜಾದಿನಗಳ ಮೋಜು, ಮಳೆಗಾಲ ದಿನಗಳ ಸೊಗಸು ಮುಂತಾದವುಗಳ ಅಭಿವ್ಯಕ್ತಿಯಲ್ಲಿ ತಮ್ಮ ಸ್ವಂತಿಕೆಯನ್ನು ಮೆರೆಯುತ್ತಾರೆ. ಈವರೆಗೆ 'ಅಮ್ಮಾ ಕೇಳೆ' (ಭೂಮಂಡಲ ಪ್ರಕಾಶನ, ಮೂಡಲಗಿ, ೨೦೦೨), 'ಮತ್ತೆ ಬಂತು ಚೈತ್ರ' (೨೦೦೮) ಎನ್ನುವ ಕವನ ಸಂಕಲನಗಳನ್ನು ಹಾಗೂ 'ನೂರು ನಾಣ್ಯ, ಮೂರು ಮಾತು' (೧೯೯೫), 'ಸುವರ್ಣ ಸ್ವಾತಂತ್ರ್ಯ ಹಾಗೂ ಪಾಪಣ್ಣ ಗುರುಗಳು' (ಸಿವಿಜಿ ಇಂಡಿಯಾ, ಬೆಂಗಳೂರು-೨೦೧೨) ಎನ್ನುವ ಕಥಾ ಸಂಕಲನಗಳನ್ನು ಸಂಗಮೇಶ ಗುಜಗೊಂಡ ಪ್ರಕಟಿಸಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ, ಸಾಹಿತ್ಯ ಪರಿಷತ್ತು ಮುಂತಾದ ಸಂಸ್ಥೆಗಳ ಪುರಸ್ಕಾರಗಳನ್ನೂ ಅವರು ಪಡೆದಿದ್ದಾರೆ.

ಪ್ರಕೃತಿ ಪ್ರೀತಿ ಹಾಗೂ ಪರಿಸರ ಸಂಬಂಧಿ ವೈಚಾರಿಕತೆಯನ್ನು ಬೆಳೆಸುವಲ್ಲಿ ಅವರ ಕವಿತೆಗಳು ನಿರತವಾಗಿವೆ.

ಹಳ್ಳದ ದಂಡೆ
ಹಸುರಿನ ಬೀಡು
ಗರಿಗರಿ ಹುಲ್ಲು ಹೊಳೆಯುವುದು
ಹಸಿರನು ಉಂಡು
ಎಮ್ಮೆಯ ಹಿಂಡು
ಹೈನದ ಹೊಳೆಯ ಹರಿಸಿಹುದು

ಗ್ರಾಮೀಣ ಸೊಗಡಿನ ಕೆಲವು ಪದ್ಯಗಳು ಅವುಗಳ ಗೇಯತೆಯಿಂದಲೂ ಮನಸೆಳೆಯುತ್ತವೆ. ಒಕ್ಕಲುತನದ ಪ್ರತಿಮೆಗಳನ್ನು ಅವರು ಬಳಸಿಕೊಳ್ಳುವುದರಿಂದ ಕೃಷಿಜೀವನದ ಪಾಠಗಳು ಪರೋಕ್ಷವಾಗಿ ಹೇಳಲ್ಪಡುತ್ತವೆ:

ಸೂಟಿಯು ಸಾರಲು
ಪಾಟಿಯ ಗಂಟನು
ಮೂಲೆಗೆ ದೂಡುತ ಓಡಿದೆನು
ಎತ್ತಿನ ಗಾಡಿಯ
ಸವಾರಿ ಮಾಡುತ
ಅಜ್ಜನ ತೋಟಕೆ ಸಾಗಿದೆನು
ಕಾಲುವೆ ನೀರನು
ಮಡಿಮಡಿ ಮುಟ್ಟಿಸಿ
ಬೆಳೆಗಳ ಹಸಿವನು ನೀಗಿದೆನು
ಬೆವರದು ಸುರಿಯಲು

ಸಂತಸ ಹರಿಯಿತು
ದುಡಿಮೆಯ ತೃಪ್ತಿ ಗಳಿಸಿದೆನು

ದಣದಣ ಬಿಸಿಲಲಿ
ದೊಪ್ಪನೆ ಜಿಗಿಯುತ
ಬಾವಿಯ ಜಳಕವ ಮಾಡಿದೆನು
ಮಜ್ಜಿಗೆ ರೊಟ್ಟಿ
ಮೊಸರಿನ ಅನ್ನವನು
ತಣ್ಣನೆ ನೆರಳಡಿ ಉಂಡೆನು

ಪದ ಲಾಲಿತ್ಯ, ಬೇಸಾಯದ ಬದುಕಿನ ಚಿತ್ರಣ, ಸಹಜೀವನದ ಪಾಠ ಮುಂತಾದ ಗುಣಗಳನ್ನು ಸಂಗಮೇಶ ಗುಜಗೊಂಡ ಹೊಂದಿದ್ದರೂ ಆಧುನಿಕ ಹಾಗೂ ವಾಸ್ತವ ಸಂವೇದನೆಗಳಿಂದ ಅವರ ಕವಿತೆಗಳು ವಿಮುಖವಾಗಿವೆ. ಇದು ಬಹುಶಃ ಅವರು ರೂಢಿಸಿಕೊಂಡ ಸಾಂಪ್ರದಾಯಿಕ ಮನೋಧರ್ಮದ ಫಲಿತವಾಗಿರಬಹುದು. ಇಲ್ಲವೆ ಅವರ ಮೇಲಾಗಿರುವ ಪ್ರಭಾವಗಳ ಪರಿಣಾಮವಾಗಿರಬಹುದು. ಮಕ್ಕಳ ವರ್ತಮಾನದ ಅಗತ್ಯಗಳಿಗೆ ಅವರು ಸ್ಪಂದಿಸಿದರೆ ಅವರಿಂದ ಇನ್ನೂ ಉತ್ತಮ ಕಾವ್ಯ ಹೊರಬರುವುದರಲ್ಲಿ ಸಂದೇಹವಿಲ್ಲ. 'ಸುವರ್ಣ ಸ್ವಾತಂತ್ರ್ಯ ಹಾಗೂ ಪಾಪಣ್ಣ ಗುರುಗಳು' ಕಥಾ ಸಂಕಲನದಲ್ಲಿಯ ಅವರ ಕಥೆಗಳು ಈ ದೃಷ್ಟಿಯಿಂದ ಆಶಾದಾಯಕವಾಗಿವೆ. 'ದೀಪು ಮತ್ತು ಗಾಳಿಪಟ', 'ಹೋದ ಮಳೆ ಬಂತು' ಮುಂತಾದ ಕತೆಗಳು ಹೃದ್ಯವಾಗಿ ಹೇಳಲ್ಪಟ್ಟಿವೆ.

ಅರುಣಾ ನರೇಂದ್ರ

'ಅಮ್ಮನ ಸೆರಗು' (೨೦೧೦), 'ಬೆಕ್ಕಣ್ಣನ ಉಪಾಯ' (೨೦೦೭), 'ಪಾಟೀಚೀಲ' (೨೦೦೫) ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿರುವ ಕೊಪ್ಪಳದ ಅರುಣಾ ನರೇಂದ್ರ ಅವರು ಮೊದಲಿನಿಂದಲೂ ಈ ಕ್ಷೇತ್ರದಲ್ಲಿ ಆಸಕ್ತಿಯಿಂದ ತೊಡಗಿಸಿಕೊಂಡಿದ್ದಾರೆ. ತಾಯ ವಾತ್ಸಲ್ಯದ ಕೆಲವು ಝುಳಕು ಅವರಲ್ಲಿ ಕಾಣಿಸಿಕೊಳ್ಳುವ ಪರಿ ಸೊಗಸಾಗಿದೆ:

ಅಜ್ಜಿ ಅಜ್ಜಿ ನನ್ನನ್ನು ನಿನ್ನ
ಸೆರಗಲಿ ಬಚ್ಚಿಡು
ಅಪ್ಪ ಅವ್ವಗೆ ಕಾಣಿಸದಂತೆ
ನನ್ನನ್ನು ಮುಚ್ಚಿಬಿಡು
ಪುಟ್ಟಿ ಪುಟ್ಟಿ ಎನ್ನುತ ನನ್ನ
ಹುಡುಕುತ ಬರುವರು
ಒಟ್ಟಿಗೆ ಬಂದು ನಿನ್ನನ್ನು ಕೇಳಲು
ಗುಟ್ಟನು ಹೇಳದಿರು

'ಚಂದಿರನೂರು' ಎನ್ನುವ ಪದ್ಯ ಹೊಸ ನುಡಿಗಟ್ಟು, ಕಲ್ಪನೆಗಳಿಂದ ಒಂದು ಚೇತೋಹಾರಿ ರಚನೆಯಾಗಿದೆ. ಇಂಗ್ಲಿಷ್ ಪದಗಳು ಕನ್ನಡ ವಾತಾವರಣದಲ್ಲಿ ಬೆಸೆದುಕೊಂಡಿವೆ:

ಅಮ್ಮ ಅಮ್ಮ ಚಂದಿರನೂರಿಗೆ
ಹೋಗಬೇಕು ನಾವು
ನಮ್ಮನು ಕಂಡರೆ ಪಂಚಪ್ರಾಣ
ನೋಡಿ ನಗುವನು ದಿನದಿನವು

ಚಂದ್ರನ ಕಂಡು ಬಂದೆಯಾ ಎಂದು
ಅಚ್ಚರಿ ಪಡುವರು ಮಿಸ್ಸು
ಸಾಹಸಿ ಪುಟ್ಟಿ ನೀನೆ ಎನ್ನುತ
ನನಗೇ ಕೊಡುವರು ಕಿಸ್ಸು

'ಬೆಕ್ಕಣ್ಣನ ಉಪಾಯ' ಸಂಕಲನದಲ್ಲಿ ಕಥನ ಕವನಗಳನ್ನು ಹೇಳುವ ಪ್ರಯತ್ನ ಮಾಡುತ್ತಾರೆ. ಅರುಣಾ ನರೇಂದ್ರ ಅವರು ಸುಲಲಿತ ಭಾಷೆ ಬಳಸುತ್ತಾರಾದರೂ ಸಾಂಪ್ರದಾಯಿಕ ಮಾದರಿಗಳಿಗೆ ಜೋತುಬಿದ್ದು ಪುನಃ ಅದೇ ಅದೇ ಪುನರಾವರ್ತನೆಯಾದಂತೆ ಆಗುತ್ತದೆ. ಹೊಸ ಪ್ರಯೋಗಗಳ ಕಡೆಗೆ ಅವರು ಲಕ್ಷ್ಯವಹಿಸಿದರೆ ಇನ್ನೂ ಉತ್ತಮ ರಚನೆಗಳನ್ನು ಕೊಡಬಲ್ಲರು.

ಎಸ್.ಎಸ್. ಹಳ್ಳೂರ

ಬಾಗಲಕೋಟ ಪ್ರದೇಶದ ಎಸ್.ಎಸ್. ಹಳ್ಳೂರ 'ಚಿಣ್ಣರ ಚೇತನ' ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಬೀಳಗಿಯ ರಾಜು ಎಸ್. ಕೊಪ್ಪಾ ಅವರು 'ಹೋಗೋಣ ನಡಿ ಸಾಲಿಗಿ' ಹೆಸರಿನ ಕವಿತಾ ಸಂಕಲನ (ಮಾಧುರಿ ಪ್ರಕಾಶನ, ಬಂಥನಾಳ, ೨೦೧೪) ಹೊರತಂದಿದ್ದಾರೆ. ಅವರ ಭಾಷೆಯಲ್ಲಿ ಪ್ರಾದೇಶಿಕ ಸತ್ವ ತುಂಬಿರುವುದು ವಿಶೇಷವಾಗಿದೆ. ಆದರೆ ಅದನ್ನು ಬಳಸಿಕೊಂಡು ಹೊಸ ರೀತಿಯಲ್ಲಿ ಬರೆಯುವ ಕಲೆಯನ್ನು ಅವರು ಸಿದ್ಧಿಸಿಕೊಂಡಷ್ಟೂ ಒಳ್ಳೆಯ ಕವನ ರಚನೆ ಸಾಧ್ಯವಾಗುತ್ತದೆ.

ಅರುಣಕುಮಾರ ರಾಜಮಾನೆ

ರಾಜಮಾನೆ ಅವರು 'ಚಿನ್ನದ ಗರಿ' (ಚಿನ್ಮಯ ಪ್ರಕಾಶನ, ಅಥಣಿ, ೨೦೧೧), 'ಬಂಗಾರದ ಪೆಟ್ಟಿಗೆ' (೨೦೦೭) ಮುಂತಾದ ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಬಂಗಾರದ ಪೆಟ್ಟಿಗೆಯಲ್ಲಿಯ ಕತೆಗಳು ಜನಪದ, ಪೌರಾಣಿಕ ಮಾದರಿಗಳ ಮುಂದುವರಿಕೆಯಾಗಿವೆ. 'ಚಿನ್ನದ ಗರಿ'ಯಲ್ಲಿ ಆ ಧಾಟಿಯನ್ನು ಬಿಡುವ ಪ್ರಯತ್ನ ಮಾಡಿದ್ದಾರೆ. 'ಗುರುಗಳಿಗೆ ಸಿಟ್ಟು ಬಂದಾಗ', 'ತೀರ್ಪು' ಮುಂತಾದ ಕತೆಗಳು ಸ್ವಾರಸ್ಯಕರವಾಗಿ ಹೇಳಲ್ಪಟ್ಟಿವೆ.

ಡಾ. ಪಿ. ನಾರಾಯಣ ಭಟ್

ಮಕ್ಕಳಿಗಾಗಿ ಹಲವು ಕವನ ಸಂಕಲನಗಳನ್ನು ರಚಿಸಿರುವ ನಾರಾಯಣ ಭಟ್ ಅವರು ಮಕ್ಕಳ ಮುಗ್ಧತೆ ಮತ್ತು ಅವರು ಅನುಭವಿಸುವ ವಿಸ್ಮಯಗಳನ್ನು ತೆರೆದಿಡುತ್ತಾರೆ.

ಇಟ್ಟವರಾರೋ ಆಕಾಶದಲಿ
ಬಂಗಾರದ ಪದಕ
ಯಾರಿಗೊ ಯಾತಕೊ ನೀಡುವರೆಂಬುದು
ತಿಳಿಯದು ಈ ತನಕ
ಶಾಲೆಯಲುಂಟೆ ಚಿಕ್ಕೆಗಳಾಟಕೆ
ಕುಣಿತಕೆ ಬಹುಮಾನ
ಭೂಮಿಗೆ ಮಳೆಯನು ಸುರಿಸುವ ಮೋಡಕೆ
ಇದೆಯೋ ಸನ್ಮಾನ?

'ಚಿನ್ನದ ಪದಕ'ದಂತಹ ಈ ತರಹದ ಪದ್ಯಗಳಲ್ಲಿ ಅವರ ಕಲ್ಪನೆ ಚಿಗುರುವುದನ್ನು ನೋಡಬಹುದು. ಚಂದ್ರನನ್ನು 'ಬೆಳಕಿನ ಚೋರ' ಎಂದು ಕರೆದಿರುವ ನಾರಾಯಣ ಭಟ್ ಅವರ ಕೆಲವು ಪದ್ಯಗಳು ವಿಶಿಷ್ಟವಾಗಿವೆ.

ಸೂರ್ಯನ ಬೆಳಕನು ಕದಿವವನಿರುವನು
ಇರುಳಲಿ ದೂರದ ಬಾನಲ್ಲಿ
ಕಳ್ಳನ ಹಿಡಿಯಲು ಹೊರಡುವ ರವಿಯು
ಬೆಳ್ಳಗೆ ಬಿಸಿ ಬಿಸಿ ಹಗಲಲ್ಲಿ!

ಅವರ ಕೆಲವು ಶಿಶುಪ್ರಾಸಗಳು ಮಕ್ಕಳಿಗೆ ತುಂಬ ಮುದ ನೀಡುವಲ್ಲಿ ಶಕ್ತವಾಗಿವೆ:

ಮಾವಿನ ಮುದ್ದಿನ ಮಗಳು
ಅವಳೇ, ಹಣ್ಣಿನ ತಿರುಳು
ಮಗನೋ, ನೋಡಲು ಒರಟು
ಗೊತ್ತಿದೆಯಲ್ಲಾ ಗೊರಟು!

ಹುಡುಕಿಕೊಂಡು ಬಿಲದ ಬಳಿಗೆ
ಬರಲು ದೊಡ್ಡ ಹುಲಿ
'ಬನ್ನಿ ಒಳಗೆ' ಎಂದಿತಂತೆ
ಹೊರಗೆ ಬರದೆ ಇಲಿ!
ಎಷ್ಟು ದೊಡ್ಡ ಕಾಡು ಇತ್ತು
ಈಗ ಬೋಳು ಬೋಳು
ತಲೆಯಲ್ಲಿದ್ದ ಹೇನು ಅತ್ತು
ಹೇಳಿತಂತೆ ಗೋಳು

ಶಿವಮೊಗ್ಗದ ಡಾ. ಪಿ. ನಾರಾಯಣ ಭಟ್ಟರು ವೈದ್ಯ ವೃತ್ತಿಯಲ್ಲಿದ್ದು, ಮಕ್ಕಳ ಸಾಹಿತ್ಯದಲ್ಲಿ ನಿವೃತ್ತಿಯ ನಂತರ ಆಸಕ್ತಿ ತಳೆದವರು. ಆದರೆ ಅಲ್ಪಾವಧಿಯಲ್ಲೇ ಹುರುಪಿನಿಂದ ಹಲವಾರು ಸಂಕಲನಗಳನ್ನು ತಂದವರು. ಕವಿತೆಯ ಮೇಲೆಯೇ ಅವರಿಗೆ ಒಲವಿರುವುದನ್ನ ತೋರಿಸುವಂತೆ 'ಪುಟ್ ಪುಟ್ ಪುಟಾಣಿ', 'ಪುಟಾಣಿ ಪದ್ಯಗಳು', 'ಚಿಲಿಪಿಲಿ ಗುಟುವ ಚಿಣ್ಣರಿಗೆ', 'ಚಿನಕುರುಳಿ', 'ಬಣ್ಣದ ಬಲೂನು', 'ಚಿನ್ನದ ಚೆಂಡು' ಮುಂತಾಗಿ ಹಲವಾರು ಸಂಕಲನಗಳನ್ನ ತಂದಿದ್ದಾರೆ.

ತಾನು ತುಂಬ ಚೆಂದ ಎಂದು ಹಿಗ್ಗಿಕೊಳ್ಳುತ
ಕನ್ನಡಿಯಲಿ ತನ್ನ ಅಂದ ನೋಡಿಕೊಳ್ಳುತ
ಕಣ್ಣುಗಳನು ಅತ್ತ ಇತ್ತ ಕುಣಿಸಿಕೊಳ್ಳುತ
ತಲೆಯ ಬಾಚಿ ಎರಡು ಜಡೆಯ ನೇಯ್ದುಕೊಳ್ಳುತ
ಹಿಂದೆಯೊಂದು ಮುಂದೆಯೊಂದು ಬೀಸಿಕೊಳ್ಳುತ
ಮಲ್ಲಿಗೆ ಹೂ ಮಾಲೆಗಳನು ಮುಡಿದುಕೊಳ್ಳುತ
ಅಮ್ಮನಂತೆ ಹಣೆಗೆ ಕೆಂಪು ತಿಲಕವಿರುಸುತ
ಲಂಗ ದಾವಣಿಗಳನು ಧರಿಸಿ ಬಳುಕಿ ನಡೆಯುತ
ಬಿಂಕದಿಂದ ಬೀಗುತ್ತಿದ್ದ ಹುಡುಗಿ ಯಾರದು?
ಪುಟ್ಟ ಹುಡುಗಿ ಯಾರದು?

ಎನ್ನುವಂಥ ಸುಲಲಿತವಾಗಿ ಹರಿಯುವ ಲಯಗಳನ್ನ ಅವರ ಕವಿತೆಗಳಲ್ಲಿ ನೊಡಬಹುದು.

ಪುಟ್ಟಿರುವೆ ಮನೆಯಲ್ಲಿ ಸಡಗರದ ಮದುವೆ
ಮಗಳು 'ಚಿಂಚೀ' ಮೂರು ಊರಲ್ಲೆ ಚೆಲುವೆ
ಹೊರಗೆಲ್ಲ ನೆರೆದಿಹುದು ಬಂಧುಗಳ ಸಂತೆ
ಸಾವಿರದ ಮೀರಿರುವ ಬಳಗವುಂಟಂತೆ
ಮುಂಜಾನೆ ಮದುವೆ ಹವೆ ತಂಪು ತಂಪಿರಲು
ಇಬ್ಬನಿಯು ಪನ್ನೀರು ಸಿಂಪಡಿಸುತಿರಲು

ಎಂದೆಲ್ಲ ಪುಟ್ಟಿರುವೆ ಮನೆಯ ಸಡಗರದ ಮದುವೆಯನ್ನ ಚಿತ್ರವತ್ತಾಗಿ ಮುಂದಿಡುತ್ತಾರೆ. ತುಂಟತನ, ಹಾಸ್ಯ, ಕೀಟಲೆ, ಮೋಜು ಭಟ್ಟರ ಪದ್ಯಗಳಲ್ಲಿ ಯಥೇಚ್ಛವಾಗಿ ಕಾಣುತ್ತವೆ. ಜಾಣ ಗುಳ್ಳೇ ನರಿ ಇರುಳಿನಲ್ಲಿ ಶೇಂಗಾ, ಸೌತೇ ಕಾಯಿ, ಕಬ್ಬುಗಳನ್ನು ತಂದು ಗೂಡಂಗಡಿಯನ್ನು ಇಟ್ಟು ಬಣ್ಣದ ಮಾತಿಂದ ವ್ಯವಹಾರಕ್ಕಿಳಿಯುವ ಪ್ರಸಂಗ ಇದೆ. ಕೋತಿ ಮರಿಗಳ ಶಾಲಾ ವಾರ್ಷಿಕೋತ್ಸವದಲ್ಲಿ 'ನಾವು ಮುಂದೆ ಮುಂದೆ, ಮನುಜನಿರಲೆ ಬೇಕು ನಮ್ಮ ಬಾಲ ಹಿಡಿದು ಹಿಂದೆ' ಎಂದು ಅತಿಥಿ ಮಂಗ ಭಾಷಣ ಬಿಗಿಯುವ ಪ್ರಸಂಗ ಇದೆ. ಗಣಪನಿಗೆ ಸೊಂಡಿಲು ಬಂದ ಪ್ರಸಂಗ ನಾರಾಯಣ ಭಟ್ರ ರಚನೆಯಲ್ಲಿ ಹೊಸತೇ ಆಗಿ ಮೂಡಿದೆ. ಅವರು ಪುಟಾಣಿ ರಚನೆಗಳನ್ನು ಸಾಕಷ್ಟು ಬರೆದಿದ್ದು ಸೊಗಸಾದ ಚಿತ್ರಣಗಳನ್ನ ನೀಡಿದ್ದಾರೆ

ಕೋಪವೇ ಬಾರದ ಚಂದಿರ 'ಮಿಸ್ಸು'
ಮಕ್ಕಳು ಸಾವಿರ ಚಿಕ್ಕೆಗಳು

ಹಗಲಲಿ ತುಂಬಾ ಬಿಸಿಲೂ ಎಂದು
ನಡೆವುದು ಶಾಲೆಯು ಇರುಳು
ಪುಣ್ಯಕೋಟಿ ಮಗಳಿಗೊಂದು
ಹುಲಿಯು ಎದುರು ಸಿಕ್ಕಿತು
'ಹಲೊ' ಎಂದು 'ವಿಶ್ಯು' ಮಾಡಿ
ಮುಗುಳು ನಗೆಯ ಬೀರಿತು

ಹೀಗೆ ಒಳ್ಳೇ ಉಮೇದಿನಿಂದ ಬರೆಯುತ್ತಿರುವ ನಾರಾಯಣ ಭಟ್ಟರು ಇತ್ತೀಚೆಗೆ ನಾನ್ಸೆನ್ಸ್ ಮಾದರಿಯ ಕತೆಯೊಂದನ್ನೂ ಕೂಡ ಬರೆದಿದ್ದಾರೆ.

ಸ. ರಘುನಾಥ

ಲಯಬದ್ಧ ಕವಿತೆಗಳನ್ನು ಬರೆದಿರುವ ಸ. ರಘುನಾಥ ಅವರು (ಚುಕ್ಕಿ ಚುಕ್ಕಿ ಹಾಡು, ನಿರ್ಮಲ ಪ್ರಕಾಶನ, ತಿಪಟೂರು, ೨೦೦೨) ಮಕ್ಕಳ ಪರವಾದ ಅನೇಕ ಕೆಲಸಗಳನ್ನು ಕೂಡ ಮಾಡುತ್ತ ಬಂದಿದ್ದಾರೆ. ಕನ್ನಡಕ್ಕೆ ಒಗ್ಗುವಂತಹ, ಜನಪದ ಲಯಗಳನ್ನು ಬಳಸಿಕೊಂಡಂತಹ ಅನೇಕ ಲಕ್ಷಣಗಳನ್ನು ಇವರ ಕವಿತೆಗಳಲ್ಲಿ ಗುರುತಿಸಬಹುದು.

ಜಿಂಗುನಕ ಜಿಂಗುನಕ ಜಿಂಗುನಕಾರೆ
ಜಿಂಗುನಕ ಜಿಂಗುನಕ ಜಿಂಗುನಕಾರೆ
ಕರಿ ಕುರಿ ಕರಿ ಮರಿ ಜಿಂಗುನಕಾರೆ
ಕರಿ ಕರು ಜೊತೆ ಸೇರಿ ಜಿಂಗುನಕಾರೆ
ಕೆರೆ ಏರಿ ಮೇಲೆ ಏರಿ ಜಿಂಗುನಕಾರೆ
ಆಡಿ ಹಾಡಿ ಕುಣಿಯೋದು ನೋಡಿ ಜಿಂಗುನಕಾರೆ
ಹುಡುಗರೆಲ್ಲ ಒಂದುಗೂಡಿ ಜಿಂಗುನಕಾರೆ
ಥಕ್ಕಥೈಯ್ಯ ಕುಣಿದರಪ್ಪ ಜಿಂಗುನಕಾರೆ

'ಅಮ್ಮನ ಪಾಠ' ಎನ್ನುವ ಕವಿತೆಯಲ್ಲಿ ಹುಡುನೊಬ್ಬನ ಶಾಲಾಪಾಠ ಹಾಗೂ ಗಿಳಿಮರಿಗೆ ಅದರ ಅಮ್ಮ ಕಲಿಸುವ ಪಾಠಗಳನ್ನು ತಾಳೆ ಹಾಕಿ ನೋಡಲಾಗಿದೆ. ಸ. ರಘುನಾಥ ಅವರು ಚಿತ್ರಿಸುವ ಅನುಭವ ಚೇತೋಹಾರಿಯಾಗಿದೆ:

ಮರದಲಿ ಕುಳಿತ ಗಿಳಿಮರಿಯೊಂದು
ಕೆಂಪನೆ ಕೊಕ್ಕಲಿ ಎಲೆಗಳ ಮೇಲೆ
ಏನನೊ ಬರೆಯುತ ಹಾಡುತಲಿತ್ತು
ಮಿಸ್ಸು ಎಂದರೆ ಏನಪ್ಪ
ಸೀಬೇಕಾಯೊ ಬಟಾಣಿ ಕಾಳೊ

ತಿನ್ನಲು ಬಹಳ ರುಚಿಯೊಂಟೊ
. . . .
ಓಹೋ ಹಾಗೋ? ಆ ಭಯವಿಲ್ಲ
ಅಮ್ಮನು ಬಂದು ಅಪ್ಪಿ ಮುದ್ದಿಸಿ
ಹಾರಲು ಹಾಡಲು ಕಲಿಸುವಳಲ್ಲ

ಮಾಲತಿ ಪಟ್ಟಣಶೆಟ್ಟಿ

ಮಕ್ಕಳಿಗೆ ಹೊಸತು ಎನಿಸುವ ಹಲವು ಸಂಗತಿಗಳು ಮಾಲತಿ ಪಟ್ಟಣಶೆಟ್ಟಿಯವರ ಕವಿತೆಗಳಲ್ಲಿವೆ. 'ಬೆಳ್ಳಕ್ಕಿ ಸಾಲು' (ಚಿಲಿಪಿಲಿ ಪ್ರಕಾಶನ, ಧಾರವಾಡ, ೨೦೧೧) ಎನ್ನುವ ಅವರ ಕವನ ಸಂಕಲನದಲ್ಲಿ ಹಲವು ವಿಶಿಷ್ಟಪೂರ್ಣ ಕವಿತೆಗಳನ್ನು ಕಾಣಬಹುದು. ಅವರ ಕವಿತೆಗಳಲ್ಲಿರುವ ಪ್ರಕೃತಿ ಹೆಣ್ಣುದನಿಯಾಗಿ ತನ್ನ ಅಭಿವ್ಯಕ್ತಿಯನ್ನು ಸರಾಗವಾಗಿ ಪ್ರಕಟಿಸುತ್ತದೆ.

ಕೆಂಪು ಕೆಂಪು ಕೆಂಪು
ಎಲ್ಲಿದೆ ಎಲ್ಲಿದೆ ಎಲ್ಲಿದೆ
ಗುಲಾಬಿ ಹೂವ ಹೊಕ್ಕಿದೆ ಕೆಂಪು
ಮುಳ್ಳಿನಲಿ ಬಿಕ್ಕಿದೆ ಕೆಂಪು
ನೀಲಿ ನೀಲಿ ನೀಲಿ
ಎಲ್ಲಿದೆ ಎಲ್ಲಿದೆ ಎಲ್ಲಿದೆ
ಬಾನಿನಲ್ಲಿ ಮಿಕ್ಕಿದೆ ನೀಲಿ

ಬಿಳಿ ಬಿಳಿ ಬಿಳಿ
ಎಲ್ಲಿದೆ ಎಲ್ಲಿದೆ ಎಲ್ಲಿದೆ
ಮಲ್ಲಿಗೆಯಲ್ಲಿ ಉಕ್ಕಿದೆ ಬಿಳಿ
ಕಂಟಿಯಲ್ಲಿ ಸಿಕ್ಕಿದೆ ಬಿಳಿ
. . . .
ಹುಲ್ಲಿಗೆ ಹೆಪ್ಪಾಗಿದೆ ಹಸಿರು
ಭೂಮಿಯ ಅಪ್ಪಿದೆ ಹಸಿರು

'ಸಸ್ಯಧರ್ಮ', 'ದೊಡ್ಡವಳಾಗಲೊಲ್ಲೆ', ಮುಂತಾದ ಅವರ ಕವಿತೆಗಳಲ್ಲಿ ಬಾಲ್ಯ ಸಂವೇದನೆಯು ಸಮರ್ಥವಾಗಿ ಅಭಿವ್ಯಕ್ತಿಸಲ್ಪಟ್ಟಿದೆ. ಈ ಬಾಲ್ಯದಲ್ಲಿ ಸುಖ-ದುಃಖಗಳು ಮೇಳೈಸಿವೆ:

ಅಪ್ಪ ರೇಗುವುದು ಏಕೋ
ಅವ್ವ ರಾತ್ರಿಗೆ ಅಳುವುದೇಕೊ
ಹೂವಿನಂಥ ನನ್ನ ಮನವು
ಬಾಡಿ ಹೋಗುವುದೇತಕೋ?

ಸಂಪಟೂರು ವಿಶ್ವನಾಥ್

ಬಹಳಷ್ಟು ವರ್ಷಗಳಿಂದ ಮಕ್ಕಳಿಗಾಗಿ ಬರವಣಿಗೆಯಲ್ಲಿ ತೊಡಗಿಕೊಂಡಿರುವ ಸಂಪಟೂರು ವಿಶ್ವನಾಥ್ (೧೯೩೮) ಸಾಮಾಜಿಕ, ಐತಿಹಾಸಿಕ, ವೈಜ್ಞಾನಿಕ ಎಳೆಗಳ ಕಥೆ–ಕಾದಂಬರಿಗಳನ್ನು ರಚಿಸಿದ್ದಲ್ಲದೇ ಪ್ರಬಂಧ, ಸಾಮಾನ್ಯಜ್ಞಾನ ಮುಂತಾದ ಸಿದ್ಧಬರವಣಿಗೆಯಲ್ಲಿಯೂ ಸಾಕಷ್ಟು ಕೆಲಸ ಮಾಡಿದ್ದಾರೆ. ಮೂರು ದಶಕಗಳಿಗೂ ಮೀರಿ ಅವರು ಈ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಆದರೆ ಒಂದು ರೀತಿಯಲ್ಲಿ ಅವರು ಮಕ್ಕಳ ಸಾಹಿತ್ಯ ಹಿಂದೆ ಯಾವ ಜನಪದ–ಪೌರಣಿಕ ಪ್ರವಾಹದ ಮಾದರಿಯಲ್ಲಿ ಹರಿಯುತ್ತ ಬಂದಿತ್ತೋ ಆ ಮಾದರಿಯನ್ನು ಯಾವುದೇ ಪ್ರಶ್ನೆಗಳಿಲ್ಲದೆ ಮುಂದುವರಿಸಿಕೊಂಡು ಬಂದರು. ಹೊಸಕಾಲದ ಅಗತ್ಯಗಳಿಗಾಗಿ ಬರೆದರೂ ಅದು ಮನರಂಜನಾ ಪ್ರಧಾನ ಮತ್ತು ಸಾಂಪ್ರದಾಯಿಕ ರಚನಾ ಕ್ರಮವನ್ನು ಬಿಟ್ಟು ಸರಿಯಲಿಲ್ಲ. ಹೀಗೆ ಹೇಳಿಯೂ ಅವರು ಆಸಕ್ತಿಯಿಂದ ಕಥೆಕಟ್ಟುವ ಕ್ರಮವನ್ನು ಯಾರಾದರೂ ಮೆಚ್ಚಲೇಬೇಕು. ಸಂಪಟೂರು ವಿಶ್ವನಾಥ್ ಅವರದು ಸರಾಗ ಶೈಲಿ. ಯಾವುದೇ ಗಿಮಿಕ್ ಮಾಡಲು ಅವರು ಮುಂದಾಗುವುದಿಲ್ಲ. 'ಸಾಹಸೀ ಸೋದರರು' (ಬಾಪ್ಕೋ ಪ್ರಕಾಶನ, ೧೯೭೯), 'ಸುವರ್ಣ ಕೀಟ' (ಉದಯ ಪ್ರಕಾಶನ, ೨೦೦೪), 'ಶ್ರೀಕೃಷ್ಣನ ಕಥೆ' (ಅಂಕಿತ ಪುಸ್ತಕ, ೨೦೧೦), 'ಪಾತಕ್ಕೊಂದು ಪೀಠಿಕೆ' (ಸಪ್ನ ಬುಕ್ ಹೌಸ್, ೨೦೧೨) ಮುಂತಾದ ಮಹತ್ವದ ಕೃತಿಗಳು ಸೇರಿದಂತೆ ಈವರೆಗೆ ಸುಮಾರು ನಲವತ್ತು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಗೊರೂರು ಸಾಹಿತ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಎಂ.ಜಿ. ರಂಗನಾಥನ್ ಪ್ರಶಸ್ತಿ ಮುಂತಾದ ಪುರಸ್ಕಾರಗಳು ಅವರ ಕೃತಿಗಳಿಗೆ ಸಂದಿವೆ.

ಶರಣಗೌಡ ಎರಡೆತ್ತಿನ

ಹಲವು ವರ್ಷಗಳಿಂದ ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿಕೊಂಡಿರುವ ಶರಣಗೌಡ ಎರಡೆತ್ತಿನ ಅವರು ಗದ್ಯದಲ್ಲಿ ಒಳ್ಳೆಯ ಕೃಷಿ ಮಾಡಿದ್ದಾರೆ. ಕೆಲವು ಕಾದಂಬರಿಗಳು ಅವರಿಗೆ ಪುರಸ್ಕಾರಗಳನ್ನು ತಂದಿವೆ. 'ಮುತ್ತಿನ ಬೆಟ್ಟ' (೨೦೦೧) ಎನ್ನುವ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನವನ್ನು ಪಡೆದಿದ್ದಾರೆ. ಅದು ಒಂದು ಸರಾಗವಾಗಿ ಓದಿಸಿಕೊಂಡು ಹೋಗುವ ಕುತೂಹಲದ ಕಥಾಹೆಣಿಕೆಯಾಗಿದೆ.

'ಕುನಾಲ'(೨೦೦೩) ಎನ್ನುವ ಕಾದಂಬರಿಯಲ್ಲಿ 'ಕುನಾಲ' ಹೆಸರಿನ ಹಳ್ಳಿಯ ಹುಡುಗನನ್ನು ಕೇಂದ್ರವಾಗಿಟ್ಟುಕೊಂಡು ಕತೆ ಹೇಳಿದ್ದಾರೆ. ಕುನಾಲ ತುಂಟನೆಂದರೆ ತುಂಟ. ಉಡಾಳನೆಂದರೆ ಉಡಾಳ. ಬಾಲಕನನ್ನು ಸುಧಾರಿಸಲೆಂದು ದೊಡ್ಡಪ್ಪ ಅವನನ್ನು ತನ್ನ ಮನೆಗೆ ಕರೆತರುತ್ತಾನೆ. ಬಾಲಕ ಕುನಾಲ ಸುಧಾರಿಸತೊಡಗಿದಾಗ ಮತ್ತು ಆರೋಗ್ಯ ಒಳ್ಳೆಯದಾಗತೊಡಗಿದಾಗ ದೊಡ್ಡಪ್ಪ ಅವನನ್ನು ಹುರಿದುಂಬಿಸುವ ಬದಲು ಅವನ ಉತ್ಸಾಹಕ್ಕೆ ತಣ್ಣೀರು ಹಾಕುತ್ತಾರೆ. ಈ ನಡುವೆ ಕುನಾಲನ ಅಪಹರಣವಾಗುತ್ತದೆ. ಅವನನ್ನು ಹೇಗೆ ಬಿಡಿಸಬೇಕೆಂದು ಪೊಲೀಸರು ಮನೆಯವರು ಚಿಂತಿಸುತ್ತಿರುವಾಗ ಮನೆಯ ಮಕ್ಕಳಾದ ಮಹೇಂದ್ರ, ಶಾಲಿನಿ ಸಾಹಸ

ಮಾಡಿ ಬಿಡಿಸುತ್ತಾರೆ. ಇನ್‌ಸ್ಪೆಕ್ಟರ್ ಎದುರು ಮಹೇಂದ್ರ ತಮ್ಮ ಸಾಹಸದ ವಿವರಗಳನ್ನು ಹೇಳುತ್ತಾನೆ: ಕುನಾಲನನ್ನು ಹುಡುಕಲು ಹೋಗಿದ್ದೆವು. ಆಗ ಕುನಾಲ ಕಳೆದು ಹೋದ ಜಾಗದಲ್ಲಿ ಸುತ್ತಮುತ್ತ ಹುಡುಕಿದೆವು ಅಲ್ಲಿಗೆ ಹೋಗುವುದಕ್ಕೆ ಮುಂಚೆ ವಿದ್ಯಾಳನ್ನು 'ಕುನಾಲನನ್ನು ಎಲ್ಲಿ ಕೂಡ್ರಿಸುತ್ತಿದ್ದಿರಿ... ದಿನಾಲೂ ನಿಮ್ಮನ್ನು ಯಾರಾದ್ರೂ ನೋಡ್ತಿದ್ರಾ?' ಅಂತ ಕೇಳಿದ್ದೆ. 'ಹೀಗೆ ಅಲ್ಲೊಂದು ಬಸ್ ಶೆಲ್ಟರ್ ಇದೆ. ಅಲ್ಲೊಂದು ಕಾಫಿಯ ಗುಡಿಸ್ಲು ಹೊಟೇಲ್ ಇದೆ. ಅದರ ಮಾಲೀಕನ ಹೆಸರು ಗಂಗಣ್ಣ. ಅವನೊಬ್ಬ ಮಾತ್ರ ಕುನಾಲನನ್ನು ದಿನಾ ನೋಡ್ತಿದ್ದ.... ಏಕೇಂದ್ರೇ ನಾವೇ ಹಾಗೆ ಹೇಳಿದ್ದು...' ಅಂತ ಹೇಳಿದ್ದಳು. ಹೀಗಾಗಿ, ನನಗೇಕೋ ಆ ಗಂಗಣ್ಣನ ಮೇಲೆ ಸಂಶಯ ಬಂದಿತ್ತು.

'ಮುಗ್ಧ, ಸಿಗ್ಧ ಮಕ್ಕಳು ಮೊಳಕೆಯಲ್ಲಿಯೇ ಹೇಗೆ ಮುರುಟುತ್ತಾರೆಂಬುದನ್ನು ಮತ್ತು ದೇಶದ ಆಸ್ತಿಗೆ ಹೇಗೆ ಧಕ್ಕೆ ತರುತ್ತಾರೆಂಬುದನ್ನು ಕಾದಂಬರಿ ತೋರಿಸಿಕೊಡುತ್ತದೆ' ಎಂದು ಇದರ ಬಗ್ಗೆ ಡಾ. ಗುರುಲಿಂಗ ಕಾಪಸೆ ಹೇಳುತ್ತಾರೆ.

ಮಕ್ಕಳ ಸಾಹಸಗಳನ್ನು ಹಾಗೂ ಮಕ್ಕಳಲ್ಲಿ ಇರುವ ಮಾನವೀಯತೆ, ಮುಗ್ಧತೆ, ಸಹಾಯ ಮಾಡುವ ಗುಣ ಮುಂತಾದವು ದೊಡ್ಡವರಲ್ಲಿ ಮಾಯವಾಗುತ್ತಿರುವುದನ್ನು ಶರಣಗೌಡ ಚಿತ್ರಿಸುತ್ತಾರಾದರೂ ಪತ್ತೇದಾರಿ ಕಥನದ ರೀತಿ ಒಮ್ಮೊಮ್ಮೆ ಸಿನೀಮಯ ಆಗಿಬಿಡುತ್ತದೆ. ವಾಸ್ತವದ ನೆಲೆಗಟ್ಟು ಹಾಗೂ ಕಥನಕ್ರಮದಲ್ಲಿ ಭಿನ್ನ ಪ್ರಯೋಗ ನಡೆಸಿದರೆ ಅವರ ಬರವಣಿಗೆ ಇನ್ನೂ ಪರಿಣಾಮಕಾರಿಯಾಗಬಹುದು.

ಡಾ. ಬಸು ಬೇವಿನಗಿಡದ

ವಾಸ್ತವ ನೆಲೆಗಟ್ಟಿನ ಮೇಲೆ ಹಲವು ಮಕ್ಕಳ ಕತೆ ಕಾದಂಬರಿ ಬರೆದವರು ಬಸು ಬೇವಿನಗಿಡದ ಅವರು. 'ನಾಳೆಯ ಸೂರ್ಯ' (ಚೈತ್ರ ಪ್ರಕಾಶನ, ಧಾರವಾಡ–೨೦೦೭) ಎನ್ನುವ ಅವರ ಕಾದಂಬರಿ 'ಬಡತನದಿಂದ ಬೆಂದ ಹುಡುಗನೊಬ್ಬನ ಅನುಭವಗಳನ್ನು ಕನ್ನಡದಲ್ಲಿ ವಿರಳವಾಗಿರುವ ವಾಸ್ತವ ಪ್ರಜ್ಞೆಯ ನೆಲೆಯಲ್ಲಿ ಮನೋಜ್ಞವಾಗಿ ಚಿತ್ರಿಸುತ್ತದೆ' ಎಂದು ಡಾ. ಆನಂದ ಪಾಟೀಲ ಹೇಳುತ್ತಾರೆ. 'ನಾಳೆಯ ಸೂರ್ಯ' ಕಾದಂಬರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ವಸುದೇವ ಭೂಪಾಳಂ ಪ್ರಶಸ್ತಿ, ಬೆಳಗಾವಿಯ ನಾಗನೂರು ಮಠದ ಹರ್ಡೇಕರ್ ಮಂಜಪ್ಪ ಪ್ರಶಸ್ತಿ ಮುಂತಾದ ಪುರಸ್ಕಾರಗಳು ಸಂದಿವೆ. ಈ ಕೃತಿಯನ್ನು ಕುರಿತು ಎಚ್.ಎಸ್. ವೆಂಕಟೇಶಮೂರ್ತಿ ಅವರು ತಳೆದ ಅಭಿಪ್ರಾಯ ಹೀಗಿದೆ:

'ಬಾಲ್ಯದ ಅನುಭವಗಳನ್ನು ಇಟ್ಟುಕೊಂಡು ಸರಳವೂ ಸುರಳೀತವೂ ಹೃದ್ಯವೂ ಆದ ಈ ಕಾದಂಬರಿ ಮಕ್ಕಳ ಮನಸ್ಸಿನ ಪ್ರವೃತ್ತಿಯನ್ನು ಸಹಜ ನೆಲೆಯಲ್ಲಿ ಚಿತ್ರಿಸುತ್ತದೆ. ಈ ಕಾದಂಬರಿಯನ್ನು ಓದುವಾಗ ಓದುಗರಿಗೆ ಸಹಜವಾಗಿಯೇ ತಮ್ಮ ಬಾಲ್ಯದ ದಿನಗಳು ನೆನಪಾಗುತ್ತವೆ. ಆ ನೆನಪು, ಈ ಕೃತಿಯನ್ನು ಮತ್ತಷ್ಟು ಆಪ್ಯಾಯಮಾನಗೊಳಿಸುತ್ತದೆ.'

'ರವಿ, ಸದಾಶಿವ, ಸುರೇಖ, ವನಿತಾ ಮೊದಲಾದ ಮಕ್ಕಳ ಚಿತ್ರಗಳು ಎಷ್ಟು ಸ್ಫುಟವಾಗಿ

ಮೂಡಿವೆಯೋ ಅಷ್ಟೇ ಸ್ಫುಟವಾಗಿ ಭೀಮಣ್ಣ, ಮಾಸ್ತರರು ಮತ್ತು ಹೆಬಸೂರ ಮಾಸ್ತರರ ಚಿತ್ರಗಳೂ ಮೂಡಿಬಂದಿವೆ. ಹೆಬಸೂರ ಮಾಸ್ತರರ ವ್ಯಕ್ತಿತ್ವ ಓದುಗರ ಮೇಲೆ ಗಾಢಪ್ರಭಾವ ಬೀರುತ್ತದೆ. ಅವರ ದುರಂತ ಕಾದಂಬರಿಗೆ ಭಾವಸಾಂದ್ರತೆಯನ್ನು ನೀಡಿದೆ. ಮಕ್ಕಳನ್ನು, ಅಧ್ಯಾಪಕರನ್ನು, ಶಾಲೆಯನ್ನು ಕೇಂದ್ರದಲ್ಲಿ ಇರಿಸಿಕೊಂಡು ಒಳ್ಳೆಯ ಕಾದಂಬರಿಯನ್ನು ರಚಿಸಲಾಗಿದೆ.

ಹುಡುಗರು ಪಾಸಾದ ಸಂಭ್ರಮದಲ್ಲಿಯೇ ಹೆಬಸೂರ್ ಮಾಸ್ತರರು ಸಾವಿಗೀಡಾಗುವುದು ಕಾದಂಬರಿಗೆ ಒಂದು ತಿರುವಾಗಿ ಬರುತ್ತದೆ:

'ಮರುದಿನ ಶಾಲೆಯಲ್ಲಿ ಸಂತೋಷದ ಮುಗಿಲು ಹರಿದು ಬಿದ್ದಿತ್ತು. ಹೆಡ್ ಮಾಸ್ತರರೂ ಉಳಿದ ಮಾಸ್ತರರೂ ಒಳ್ಳೆಯ ಹುರುಪಿನಿಂದ ಓಡಾಡುತ್ತಿದ್ದರು. ಅವರ ಶಾಲೆಗೆ ಅತ್ಯುತ್ತಮ ಫಲಿತಾಂಶ ಬಂದಿತ್ತು. ರವಿ ಈಗ ಶಾಲೆಯ ಕಣ್ಮಣಿಯಾಗಿದ್ದ. ಅವನು ಇಡೀ ಜಿಲ್ಲೆಗೆ ಪ್ರಥಮ ಬಂದಿದ್ದ.... ರಿಜಲ್ಟ್‌ನ್ನು ಹೆಬಸೂರ ಸರ್‌ಗೆ ಹೇಳಲು ನಾಗಾಲೋಟದಿಂದ ಓಡಿದರು. ಒಬ್ಬರಿಗಿಂತ ಒಬ್ಬರು ಮುಂದೆ... ಅವರ ಮನೆಗೆ ಬರುತ್ತಿರುವಂತೆಯೇ ಹುಡುಗರ ಕಾಲುಗಳು ನಿಧಾನವಾದವು. ಗಾಳಿಯಲ್ಲಿನ ತಂಪು ಇಲ್ಲವಾಯಿತು. ನೀಲಾಕಾಶವೆಲ್ಲ ಕಪ್ಪಾಗಿ ಕತ್ತಲೆ ಆವರಿಸಿದಂತಾಯಿತು. ಹುಡುಗರ ಹರ್ಷ ಒಮ್ಮೆಲೆ ಸ್ತಬ್ಧವಾಯಿತು. ಹರಿಯುತ್ತಿರುವ ವಿದ್ಯುತ್ ಪ್ರವಾಹವನ್ನು ಮುಟ್ಟಿದ ಮನುಷ್ಯನಂತೆ ಇಡೀ ವಾತಾವರಣ ನಿಶ್ಚಲವಾಯಿತು. ದುಃಖ ಮಡುಗಟ್ಟಿರುವ ಮೌನವನ್ನು ಸಾಲುಮನೆಗಳು ಹೊತ್ತು ನಿಂತವು... ರಕ್ತದ ಕ್ಯಾನ್ಸರಿನಿಂದ ಹೆಬಸೂರ್ ಮಾಸ್ತರ್ ಸತ್ತುಹೋದರೆಂದು ನಂಬಲು ಹುಡುಗರು ತಯಾರಿರಲಿಲ್ಲ. ಮಾಸ್ತರ ಹೆಂಡತಿ ಮಾತಿಲ್ಲದೆ ಕುಳಿತಿದ್ದರು...'

'ಹುಟ್ಟಲಿರುವ ನಾಳೆಗಾಗಿ ರವಿ ಎದುರು ನೋಡತೊಡಗಿದ' ಎನ್ನುವಲ್ಲಿ ಕತೆ ಮುಗಿಯುತ್ತದೆ. 'ಮಾತಾಡದ ಮರ' ಹೆಸರಿನ ಕತೆಯಲ್ಲಿ ಐಶ್ವರ್ಯದ ಆಸೆಗಾಗಿ ಮಗ ಮರವಾಗಿ ರೂಪಾಂತರ ಹೊಂದಿ ಕೈತಪ್ಪಿದರೂ ಅಡ್ಡಿಯಿಲ್ಲ, ತಾನು ಇನ್ನೊಂದು ಮಗು ಪಡೆಯುತ್ತೇನೆ ಎಂದು ನಿರ್ದಯಿ ಅಪ್ಪ ಸಂತೋಷದಿಂದ ಹೋಗುತ್ತಾನೆ. 'ಪ್ರತಿಭಟನೆ' ಕತೆಯಲ್ಲಿ ಹುಡುಗನೊಬ್ಬನ ವಿರುದ್ಧ ಧಿಕ್ಕಾರ ಕೂಗುತ್ತಾನೆ.

ಡಾ. ರಾಜೇಂದ್ರ ಗಡಾದ

'ಚಿಂವ್ ಚಿಂವ್ ಗುಬ್ಬಿ', 'ಕೆನಿ ಕೆನಿ ಮೊಸರು', 'ಆನಿ ಬಂತು ಆನಿ' ಎನ್ನುವ ಶಿಶು ಪ್ರಾಸಗಳ ಸಂಕಲನಗಳನ್ನು ಪ್ರಕಟಿಸಿರುವ ರಾಜೇಂದ್ರ ಗಡಾದ ಅವರು ಭಾಷೆಯನ್ನು ಪ್ರಯೋಗಶೀಲವಾಗಿ ಬಳಸುವ ಮೂಲಕ ತಮ್ಮ ಕಾವ್ಯದಲ್ಲಿ ಲವಲವಿಕೆ ಸುಳಿದಾಡುವಂತೆ ಮಾಡುತ್ತಾರೆ. 'ಬೋರಂಗಿ' ಎನ್ನುವ ಆಕರ್ಷಕ ಕೀಟ, ಜೋರಾಗಿ ಸುರಿಯುವ ಮಳೆ, ನೆರಳು ನೀಡುವ ಮರಗಿಡ, ಕೆ.ಎಸ್.ನ ಅವರ ಕವಿತೆ ನೆನಪಿಸುವ 'ಹಿಂದಿನ ಸಾಲಿನ ಮಕ್ಕಳು' ಮುಂತಾದವು ಮನಸೆಳೆಯುವ ರಚನೆಗಳಾಗಿವೆ.

ಓದುವುದರಲಿ ಇದ್ರೂ ಹಿಂದೆ
ಇಲ್ವೇ ಆಟದಲಿ ಮುಂದೆ
ಯಾಕೆ ತಿಳಿಯೋದಿಲ್ಲ ನಿಮ್ಗೆ
ಎಲ್ಲಾ ಮಕ್ಕಳು ಒಂದೆ

ಸಿದ್ಧಮಾದರಿ, ನಂಬಿಕೆಗಳನ್ನು ಬುಡಮೇಲು ಮಾಡಬೇಕು ಎನ್ನುವ ಆಶಯವನ್ನು ಅವರ ಕೆಲವು ಕವಿತೆಗಳು ಹೊರಹಾಕುತ್ತವೆ.

ಬಾರಲೇ ಬಿಂಕದ ಬಣ್ಣದ ಬೋರಾಣಿ
ಕೂಡಲೇ ಬಾರಲೆ ಬಿಂಕದ ಮಹಾರಾಣಿ

ಎನ್ನುವಂತಹ ಲಯಪೂರ್ಣ ಸಾಲುಗಳನ್ನು ಬರೆಯುತ್ತಾರೆ. ಸಾಂಪ್ರದಾಯಿಕ ಆಶಯ ತೊರೆದಾಗ ಅವರ ಕವಿತೆಗಳ ಧ್ವನಿ ಇನ್ನೂ ಹೆಚ್ಚಬಲ್ಲದು ಎಂದು ಅನಿಸುತ್ತದೆ.

ಅಕ್ಬರ್ ಕಾಲಿಮಿರ್ಚಿ

ಗುರ್ಜಿ, ಗೋಲಿ, ಗಾಡಿ ಮುಂತಾದ ಮಕ್ಕಳ ಆಟಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿ ಅವುಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸಿದವರು ಅಕ್ಬರ್ ಕಾಲಿಮಿರ್ಚಿ ಅವರು. ಇದುವರೆಗೆ 'ಬಾಪು–ಪಾಪು'(ಕನ್ನಡ ಮೈತ್ರಿ ಪ್ರಕಾಶನ, ೨೦೧೨) ಹಾಗೂ 'ರೈಲುಗಾಡಿ'(ಕನ್ನಡ ಮೈತ್ರಿ ಪ್ರಕಾಶನ, ೨೦೧೩) ಎಂಬ ಎರಡು ಕವನ ಸಂಕಲಗಳನ್ನು ಪ್ರಕಟಿಸಿದ್ದಾರೆ.

ಚುಕುಬುಕು ರೈಲು
ಹೊರಟಿದೆ ನೋಡು
ಗಾಳಿಯ ಸೀಳಿ
ನಡೆದಿದೆ ನೋಡು
ಊರಿಂದೂರು
ಗಡಿಹೊರನಾಡು
ದೇಶದ ತುಂಬ
ಚಲಿಸಿದೆ ನೋಡು

'ಯಾವ ಊರಿನ ಸೂರ್ಯ ನಮ್ಮ ಹಳ್ಳಿಗೆ ಬರುತಿಹನು' ಎಂದು ವಿಸ್ಮಯ ಆಶ್ಚರ್ಯಗಳೊಂದಿಗೆ ಹೊಸ ರೀತಿಯಲ್ಲಿ ಕವನ ಕಟ್ಟಬಲ್ಲ ಅಕ್ಬರ್ ಅವರು ಅಂತಹ ಅನೇಕ ಸಾಲುಗಳನ್ನು ನೀಡಿದ್ದಾರೆ. ಪ್ರತಿಮೆ ಮತ್ತು ಕಾವ್ಯ ವಸ್ತುಗಳನ್ನು ದಂಡೆಗೆ ಮುಟ್ಟಿಸುವ ತನಕವೂ ಅವರು ಆ ಕಲಾತ್ಮಕತೆಯನ್ನು ಕಾಯ್ದುಕೊಂಡರೆ ಇನ್ನೂ ಹೆಚ್ಚಿನ ಯಶಸ್ಸು ಸಾಧಿಸಬಲ್ಲರು.

ಚಂದಿರನೂರಲಿ ಚುಕ್ಕಿಗಳಿದ್ದು
ನಮಗೆ ಜಾಗ ಯಾಕಿಲ್ಲ

ಮನುಷ್ಯರಿರುವ ಭೂಮಿಯ ಮೇಲೆ
ಚಂದ್ರನಿಗೇಕೆ ನೆಲೆಯಿಲ್ಲ

ನಾವು ವಾಸಿಸುವ ಭೂಮಿಯಿಂದ ಚಂದ್ರ – ತಾರೆ – ನಕ್ಷತ್ರಗಳನ್ನು ದೂರ ಮಾಡುತ್ತಿದ್ದೇವೆ, ಪ್ರಕೃತಿಯ ಸಂಗಡ ಕಡಿಮೆ ಒಡನಾಡುತ್ತಿದ್ದೇವೆ ಎಂದು ಪರೋಕ್ಷವಾಗಿ ಅವರು ಹೇಳಬಲ್ಲವರಾಗುತ್ತಾರೆ.

ಸೋಮಲಿಂಗ ಬೇಡರ

ರಾತ್ರಿಯ ಊಟವ ಹುಡುಕುತ ನರಿಯು
ನಾಡಲಿ ಒಮ್ಮೆ ಹೋಗಿತ್ತು
ಮೆಲ್ಲಮೆಲ್ಲನೆ ಹೆಜ್ಜೆಯ ಹಾಕುತ
ಅಲ್ಲೊಂದು ಮನೆಯನು ಹೊಕ್ಕಿತ್ತು

ಎನ್ನುವ ಕುತೂಹಲದ ಸಾಲುಗಳನ್ನು 'ಬಣ್ಣದ ನರಿ' ಪದ್ಯದಲ್ಲಿ ಬರೆದಿರುವ ಸೋಮಲಿಂಗ ಬೇಡರ ಅವರು ಕಥನ ಕವನಗಳನ್ನು ಮಕ್ಕಳಿಗೆ ಇಷ್ಟವಾಗುವಂತೆ ಮಾಡುವವರು. 'ಬಾರಪ್ಪ ಮಳೆರಾಯ' ಕವಿತೆಯಲ್ಲಿ ಆಡುನುಡಿಯನ್ನು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ.

ಬಾರಪ್ಪ ಮಳೆರಾಯ ಸೆಟಗೊಂಡು ಕುಂತ್ಯಾಕೊ
ಭೂಮೆವ್ವ ಬಾಡುತ ಹೊಂಟಾಳೊ ಮಳೆಯಪ್ಪ
ಮೈಯೆಲ್ಲ ಬಿಸಿಲ್ಹತ್ತಿ ಸುಡತಾಳೊ

'ಮುದ್ದಿನ ಹಕ್ಕಿ', 'ನೇಗಿಲ ಯೋಗಿ' ಮುಂತಾದ ಪದ್ಯಗಳು ಅನುಕರಣೆಯಿಂದ ಸತ್ವ ಕಳೆದುಕೊಂಡಿವೆ. ಸೋಮಲಿಂಗ ಅವರು ತಮ್ಮದೆ ಆದ ಶೈಲಿ, ವಸ್ತುಗಳನ್ನು ರೂಢಿಸಿಕೊಂಡಲ್ಲಿ ಇನ್ನೂ ಒಳ್ಳೆಯ ಬರವಣಿಗೆ ಮಾಡಬಲ್ಲರು.

ವೈ.ಜಿ. ಭಗವತಿ

ಇನ್ನೂ ಕೆಲವರ ಒಳಮನಸ್ಸಿನಲ್ಲಿ ಜೀವಂತವಾಗಿರುವ ಅಸ್ಪೃಶ್ಯತಾ ಭಾವನೆ, ಮೇಲು – ಕೀಳು ಜಾತಿಗಳ ಆಚರಣೆ, ಬಡವ – ಶ್ರೀಮಂತ ಎನ್ನುವ ಅಂತರ ಮುಂತಾದ ಕೆಡಕುಗಳು ಮಕ್ಕಳ ಮನಸ್ಸನ್ನು ಹೇಗೆ ಘಾಸಿಗೊಳಿಸುತ್ತವೆ ಎನ್ನುವುದು ವೈ.ಜಿ. ಭಗವತಿ ಅವರ ಕತೆಗಳಲ್ಲಿ ಕಾಣಿಸಿಕೊಳ್ಳುತ್ತದೆ. 'ದೇವಮ್ಮನ ಲೋಟ' ಎನ್ನುವ ಕಥೆಯಲ್ಲಿ ದೇವಮ್ಮ ಎನ್ನುವ ದಲಿತ ಶಾಲಾ ಬಾಲಕಿಯ ಮನಸ್ಸಿನ ವಿರುದ್ಧ ಅವಳ ಗೆಳತಿಯರು ಹೇಗೆ ಆಟವಾಡುತ್ತಾರೆ ಮತ್ತು ಹೇಗೆ ಇಂತಹ ಮನೋಭಾವನೆಯನ್ನು ಶಾಲೆಯಲ್ಲಿಯೆ ಚಿವುಟಿ ಹಾಕಬೇಕು ಎನ್ನುವ ಆಶಯ ಅಡಗಿದೆ :

'ಶಾಲೆಯ ಮಧ್ಯಾಹ್ನದ ವಿಶ್ರಾಂತಿ ಗಂಟೆ ಬಾರಿಸಿತು. ತರಗತಿಯಲ್ಲಿದ್ದ ಮಕ್ಕಳು ಖುಶಿಯಿಂದ ಜೋರಾಗಿ ಓಡುತ್ತ ಹೊರಬಂದರು. ಸ್ವಲ್ಪ ವೇಳೆ ಕಳೆದಿರಬೇಕು. ಏಳನೆಯ ತರಗತಿಯ ಕಾವ್ಯ ಅವಸರವಸರವಾಗಿ ತರಗತಿಯೊಳಗೆ ನುಗ್ಗಿ ಹೇಳಿದಳು. 'ಟೀಚರ್, ಟೀಚರ್,

ವೈಷ್ಣವಿ ಚಹಾ ಕುಡಿದ ಲೋಟ ಕಂಪೌಂಡ್ ಆಚೆ ಎಸೆದಳು' ಎಂದು ಆಕೆ ಒಂದೇ ಉಸಿರಿನಲ್ಲಿ ಏದುಸಿರು ಬಿಡುತ್ತ ಹೇಳಿದಳು. ಇನ್ನೂ ವಿಜಯಾ ಟೀಚರ್ ಪ್ರಶ್ನಿಸುವುದರೊಳಗಾಗಿ ವೈಷ್ಣವಿ ಅಳುತ್ತ ಒಳಬಂದು 'ಟೀಚರ್ ಆ ಲೋಟ ನಮ್ಮ ಮನಿ ಒಳಗ ತಗೊಂಡು ಹೋಗಂಗಿಲ್ಲ. ನಮ್ಮ ಅವ್ವಗ ಗೊತ್ತಾದ್ರ ಬಾಳ ಬಡೀತಾಳು' ಅಂದ್ಲು. ಟೀಚರ್ ದಿಗ್ಮೂಢರಾದರು.

ಕೊನೆಗೆ ತಾನು ಮಾಡಿದ್ದು ತಪ್ಪು ಎಂದು ವೈಷ್ಣವಿಯ ಅವ್ವ ಕಮಲವ್ವನಿಗೆ ತಿಳಿಯುತ್ತದೆ. ಆಕೆ ಶಿಕ್ಷಕಿಯ ಮುಂದೆ ಸೆರಗೊಡ್ಡಿ ಬೇಡಿಕೊಳ್ಳುತ್ತಾಳೆ.

'ಟೀಚರ್, ನೀವು ನನಗೊಂದು ಉಪಕಾರ ಮಾಡಬೇಕು. ಆ ದೇವಮ್ಮ ಚಹಾ ಕುಡಿದ ಲೋಟ ನಿಮ್ಮ ಕಡೆ ಐತಲ್ಲ ಅದನ್ನ ನಮ್ಮ ಮನೆಗೆ ಒಯ್ಯತೀನಿ. ದಯವಿಟ್ಟು ನನಗ ಕೊಡ್ರಿ. ವಿಜಯಾ ಟೀಚರ್ ಕಣ್ಣಲ್ಲಿ ಸಂತೋಷದ ಕಣ್ಣೀರು ತನ್ನಿಂದ ತಾನೇ ಹರಿದವು.'

ಭಗವತಿಯರು ಜನಪದ ಎಳೆಗಳನ್ನು ಕೂಡ ಸರಿಯಾಗಿ ಉಪಯೋಗಿಸಿಕೊಳ್ಳಬಲ್ಲರು. ಆದರೆ ಅವುಗಳನ್ನು ಇಂದಿನ ಸಂದರ್ಭದಲ್ಲಿ ಮತ್ತಷ್ಟು ಅರ್ಥ ಬರುವಂತೆ ಹಾಗೂ ಸಾಂಪ್ರದಾಯಿಕ ಅರ್ಥಗಳು ಮರುಕಳಿಸದಂತೆ ಹೆಣೆಯುವ ಕಲೆಗಾರಿಕೆಯನ್ನು ಬೆಳೆಸಿಕೊಂಡಲ್ಲಿ ಇನ್ನೂ ಉತ್ತಮ ಕತೆಗಳನ್ನು ಕೊಡಬಲ್ಲರು. 'ರೈತ ಮತ್ತು ಮೊಲ', 'ಕಣ್ಣು ತೆರೆಸಿದ ಕಂದ', 'ದಾರಿದೀಪ' ಮುಂತಾದ ಕತೆಗಳು ಈ ಮಾತಿಗೆ ಉದಾಹರಣೆಗಳಾಗಿವೆ.

ಸುನಂದಾ ಕಡಮೆ

ಸುನಂದಾ ಅವರ 'ಎಳನೀರು' (ಕಾವ್ಯಕಲಾ ಪ್ರಕಾಶನ, ಬೆಂಗಳೂರು–೨೦೧೪) ಎನ್ನುವ ಕಾದಂಬರಿ ಉತ್ತರ ಕನ್ನಡ ಜಿಲ್ಲೆಯ ಒಂದು ಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡಿದೆ. ಅಲ್ಲಿಯ ಶಾಲೆಯೊಂದರ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಬಾಳ ಸಂವೇದನೆಗಳನ್ನು ಕತೆ ಹೇಳುವ ಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿರುವುದು ಎದ್ದುಕಾಣುತ್ತದೆ. ತೆಂಗಿನ ಗಿಡವನ್ನು ಸಂಕೇತವಾಗಿರಿಸಿಕೊಂಡು ಕೊನೆಯಲ್ಲಿ ಮಕ್ಕಳು ಕತೆ ಹೇಳಿರುವುದು ಕತೆಗಾರ್ತಿಯ ಹೊಸ ಪ್ರಯೋಗದ ಕುರುಹಾಗಿ ಕಾಣುತ್ತದೆ.

ತಯ್ಯಬ್‌ಅಲಿ ಹೊಂಬಳ

ಗದುಗಿನಲ್ಲಿ ಉಪಜೀವನಕ್ಕೆ ಟೈಪರೈಟಿಂಗ್ ಮತ್ತು ಡಿ.ಟಿ.ಪಿ ಕಲಿಕೆ ಸಂಸ್ಥೆ ನಡೆಸುತ್ತ ಮಕ್ಕಳ ಬರವಣಿಗೆಯಲ್ಲಿ ಅಪಾರ ಆಸಕ್ತಿ ಇಟ್ಟುಕೊಂಡಿರುವ ತರುಣ ತಯ್ಯಬ್ ಅಲಿ ಹೊಂಬಳ ಈಗಾಗಲೇ ಸುಮಾರು ೧೨ ಮಕ್ಕಳ ಕೃತಿಗಳನ್ನು ಬರೆದು ಪ್ರಕಟಿಸಿದ್ದಾರೆ. 'ಮಮತೆಯ ಮುತ್ತುಗಳು', 'ಜನನಿ ಜನ್ಮದಾತೆ ಅಮ್ಮ ಹೇಳಮ್ಮ', 'ಪುಟಾಣಿ ಫೀಜಾ', 'ಉಸುಗಿನ ಮಡಿಲು' 'ಗುಬ್ಬಕ್ಕ ಸುಬ್ಬಕ್ಕ' ಮುಂತಾದ ಕಥಾಸಂಕಲನಗಳನ್ನು ಬರೆದು ತಮ್ಮದೆ ಮೆಹಬೂಬ ಪ್ರಕಾಶನ, ಗದಗ ವತಿಯಿಂದ ಪ್ರಕಟಿಸಿದ್ದಾರೆ. 'ದೀಪ' ಹೆಸರಿನ ಕವನ ಸಂಕಲನ, 'ಹನಿಯೊಳಗ ಮಕರಂದ' ಎನ್ನುವ ಚುಟುಕು ಸಂಕಲನ ಕೂಡ ಹೊರತಂದಿದ್ದಾರೆ.

ತಯ್ಯಬ್‌ಅಲಿ ಹೊಂಬಳ ಅವರ ಕಥಾಲೋಕ ಹೆಚ್ಚಾಗಿ ಪ್ರಾಣಿಪಕ್ಷಿಗಳಿಗೆ ಸಂಬಂಧಿಸಿರುತ್ತದೆ.

ಜನಪದ ಕಥೆಗಳ ಆಧಾರಿತವೂ ಆಗಿರುತ್ತದೆ. ಸಾಂಪ್ರದಾಯಿಕ ಮಾದರಿಯ ಇವು ಮಕ್ಕಳಿಗೆ ನೀತಿ–ಉಪದೇಶ ಹೇಳಲು ತೊಡಗುತ್ತವೆ. ಪಳಕಳ ಸೀತಾರಾಮ ಭಟ್ಟರು ಹೊಂಬಳ ಅವರ ಬಗ್ಗೆ ಬರೆಯುತ್ತಾ ಹೀಗೆ ಹೇಳುತ್ತಾರೆ: 'ಅವರ ಕತೆಗಳಲ್ಲಿ ಹೆಚ್ಚಿನವು ಪ್ರಾಣಿಪಕ್ಷಿಗಳಿಗೆ ಸಂಬಂಧಿಸಿದವುಗಳು. ಸಣ್ಣಸಣ್ಣ ಕತೆಗಳು. ಅವರು ಬಳಸುವ ಭಾಷೆ ಸರಳವಾಗಿರುತ್ತದೆ. ವಸ್ತುವಿನಲ್ಲಿ ಹೊಸತನ ಮತ್ತು ಅಭಿವ್ಯಕ್ತಿಯ ಹೊಸ ಕ್ರಮಗಳನ್ನು ರೂಢಿಸಿಕೊಂಡರೆ ಇನ್ನೂ ಹೆಚ್ಚಿನ ಪರಿಣಾಮವನ್ನು ತಯ್ಯಬ್‌ಅಲಿ ಸಾಧಿಸಬಲ್ಲರು ಎಂದು ಅನಿಸುತ್ತದೆ.'

ಗಣಪತಿ ಬಾಳೇಗದ್ದೆ ಅವರು 'ಆಲಂದೂರಿನ ದೇವ ಮತ್ತು ಜಾಣಹಕ್ಕಿ'(ಅಕ್ಷಯ ಪ್ರಕಾಶನ, ೨೦೧೧) ಎನ್ನುವ ಕಥಾ ಸಂಕಲನ ಮತ್ತು 'ಗುಬ್ಬಿ ಕಲಿತ ಹನುಮ'(ಅಕ್ಷಯ ಪ್ರಕಾಶನ, ೨೦೧೨) ಎನ್ನುವ ಕವನ ಸಂಕಲನವನ್ನು ಪ್ರಕಟಿಸಿ ಭರವಸೆ ಮೂಡಿಸಿದ್ದಾರೆ. ಅದೇ ರೀತಿ ಬಸವರಾಜ ಗಾರ್ಗಿ, ಸವಿತಾ ಭಟ್ ಅಡ್ವಾಯಿ, ದತ್ತಗುರು ಕಂಠಿ ಹೆಗಡೆ, ಕುರುವ್ ಬಸವರಾಜ್, ವೀ. ಶ್ರೀಶೈಲ ಮತ್ತಿತರರು ಸಾಕಷ್ಟು ಆಸಕ್ತಿಯಿಂದ ಈ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದಾರೆ.

ಮಕ್ಕಳ ರಂಗಭೂಮಿ

ಡಾ. ಬಸು ಬೇವಿನಗಿಡದ

ಮಕ್ಕಳ ರಂಗಭೂಮಿಯೆಂದಾಕ್ಷಣ ಹಲವು ಹೆಸರುಗಳು ನಮಗೆ ಥಟ್ಟನೆ ಹೊಳೆಯುತ್ತವೆ. ನೀನಾಸಂ, ರಂಗಾಯಣ, ಬೆನಕ, ಬಿಂಬ, ಬಾಲಭವನ, ಪ್ರಭಾತ್ ಶಿಶುವಿಹಾರ, ಚಿಂತನ ರಂಗ ಅಧ್ಯಯನ ಕೇಂದ್ರ, ಯಕ್ಷದೇಗುಲ, ಕಿನ್ನರ ಮೇಳ, ಸಮುದಾಯ, ರಂಗಕಹಳೆ, ಬಾಲಬಳಗ, ಡೆಪ್ಯೂಟಿ ಚೆನ್ನಬಸಪ್ಪ ಪ್ರಾಥಮಿಕ ಶಿಕ್ಷಣ ಪ್ರತಿಷ್ಠಾನ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಚಿಣ್ಣ-ಬಣ್ಣ, ಮಕ್ಕಳ ಸಾಹಿತ್ಯ ಕೂಟ, ಮುಂತಾದ ಸಂಸ್ಥೆಗಳಿಂದಾಗಿ ಮಕ್ಕಳ ನಾಟಕಗಳು ಇಂದು ನಾಡಿನಾದ್ಯಂತ ಪ್ರಯೋಗಿಸಲ್ಪಡುತ್ತಿವೆ. ಒಂದು ನಿರ್ದಿಷ್ಟ ರಂಗ ಪರಿಕಲ್ಪನೆಯನ್ನು ಮಕ್ಕಳ ರಂಗಭೂಮಿ ಪಡೆಯುತ್ತಿದೆ. ಹಿರಿಯರ ಹಾಗೂ ಮಕ್ಕಳ ರಂಗಭೂಮಿಗೆ ಇರುವ ವ್ಯತ್ಯಾಸಗಳು ಗೋಚರಗೊಂಡು ಮಕ್ಕಳ ಅವಶ್ಯಕತೆಗಳು ಮುನ್ನೆಲೆಗೆ ಬರುತ್ತಿವೆ. ಈ ದೃಷ್ಟಿಯಿಂದ ಬಾಲರಂಗಭೂಮಿ ಸಾಗಿಬಂದ ದಾರಿಯ ಕಡೆಗೆ ಒಂದು ಹೊರಳುನೋಟ ಬೀರುವುದು ಅವಶ್ಯಕವಾದುದು.

ಜಾಗತಿಕ ಮಟ್ಟದಲ್ಲಿ ಮಕ್ಕಳ ನಾಟಕದ ಇತಿಹಾಸಕ್ಕೆ ಸುಮಾರು ಐದುನೂರು ವರ್ಷಗಳ ಇತಿಹಾಸ ಇರಬಹುದಾದರೂ ಕನ್ನಡದಲ್ಲಿ ಅದು ನೂರಾ ಇಪ್ಪತ್ತು-ಇಪ್ಪತ್ತೈದು ವರ್ಷಗಳ ಹಿಂದೆ ಹೋಗಿ ನಿಲ್ಲುತ್ತದೆ. ಮಕ್ಕಳ ನಾಟಕಗಳ ಕಲ್ಪನೆಗೆ ನಾಂದಿ ಹಾಡಿದ್ದು ನಮ್ಮ ಪ್ರಾಥಮಿಕ ಶಾಲೆಗಳೆ ಎಂದು ಹೇಳಬಹುದು. ಆಸಕ್ತ ಪ್ರೈಮರಿ ಮತ್ತು ಹೈಸ್ಕೂಲು ಶಿಕ್ಷಕರು ತಮಗೆ ಇಷ್ಟವಾದ ಘಟನೆಗಳನ್ನು, ಸಾಂದರ್ಭಿಕ ಚಿತ್ರಣವನ್ನು ಸಂಭಾಷಣೆಗಳ ರೂಪದಲ್ಲಿ ಮಕ್ಕಳಿಂದ ಹೇಳಿಸಲುತೊಡಗಿದರು. ಹೆಚ್ಚಾಗಿ ಹಿರಿಯರ ನಾಟಕಗಳನ್ನು ಇವು ಅನುಕರಣೆ ಮಾಡುತ್ತಿದ್ದವು. ಅಂತಹ ನಾಟಕಗಳ ಪ್ರಸಿದ್ಧ ಮಾತುಗಳು ಇಲ್ಲಿ ಪುನರಾವರ್ತನೆ ಆಗುತ್ತಿದ್ದವು.

ದಂತಕತೆಗಳನ್ನು ಆಧರಿಸಿಯೋ, ಪೌರಾಣಿಕ-ಐತಿಹಾಸಿಕ ವಸ್ತುಗಳನ್ನು ಒಳಗೊಂಡಿದ್ದೋ, ನಾಡಿನ ಹಿರಿಮೆ-ಗರಿಮೆಗಳನ್ನು ವಿಜೃಂಭಿಸುವಂತಹ ಕೆಲವು ಸಂಭಾಷಣೆಗಳ ತುಣುಕುಗಳು ಅಂದಿನ ಮಕ್ಕಳ ನಾಟಕಗಳಾಗಿರುತ್ತಿದ್ದವು. ನಾಟಕವೆನ್ನಬಹುದಾದ ಈ ಸಂಭಾಷಣೆ-ದೃಶ್ಯಗಳು ಹೆಚ್ಚಾಗಿ ಶಿಕ್ಷಕರು ಬರೆದುಕೊಟ್ಟವುಗಳಾಗಿರುತ್ತಿದ್ದವು. ವೃತ್ತಿನಾಟಕಗಳನ್ನು ನೋಡುತ್ತಿದ್ದ ಆಸಕ್ತ ಶಿಕ್ಷಕರು ಇಂತಹ ಪಠ್ಯೇತರ ಚಟುವಟಿಕೆಗಳಿಗೆ ಕಾರಣಕರ್ತರಾಗಿರುತ್ತಿದ್ದರು. ಮಾಸ್ತರುಗಳು, ಶಾಲಾ ಹುಡುಗರು ಹಾಗೂ ಪೋಷಕರೆದುರು ಜೋರುಧ್ವನಿಯಲ್ಲಿ ಅಭಿನಯಿಸಲ್ಪಡುತ್ತಿದ್ದ

ಇವು ತುಂಬ ನಾಟಕೀಯವಾಗಿರುತ್ತಿದ್ದವು! ಬಹಳಷ್ಟು ಸಲ ಅವು ಆದರ್ಶ ವಾಕ್ಯಗಳನ್ನು ಸುರಿಸುವ ಸಂದರ್ಭಗಳಾಗಿರುತ್ತಿದ್ದವು. 'ಸ್ವದೇಶಾಭಿಮಾನಿ' ಎಂಬ ಪತ್ರಿಕೆಯಲ್ಲಿ ದಾಖಲಾಗಿರುವಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಪ್ರಯೋಗಗಳು ನಿರಂತರವಾಗಿ ನಡೆದದ್ದು ತಿಳಿದುಬರುತ್ತದೆ. ಪಾಶ್ಚಿಮಾತ್ಯ ನಾಟಕಗಳ ಪ್ರಭಾವ ಈ ಪ್ರಯೋಗಗಳ ಮೇಲೆ ಆಗಿದ್ದು ಕಂಡುಬರುತ್ತದೆ. ೧೯೦೭ ನೇ ಇಸ್ವಿ ನವಂಬರ್ ೫ ರಂದು ಸಂತ ಅಲೋಷಿಯಸ್ ಕಾಲೇಜಿನ ವಿದ್ಯಾರ್ಥಿಗಳು 'ಲೋಭಿ' ಹೆಸರಿನ ನಾಟಕವಾಡಿದ್ದಾಗಿ ತಿಳಿದುಬರುತ್ತದೆ. ೧೯೦೯ರಲ್ಲಿ ಹೆಜಮಾಡಿ ಬೋರ್ಡ್ ಶಾಲೆಯ ವಿದ್ಯಾರ್ಥಿಗಳು 'ಮರವು ಸಾಕ್ಷಿಯಾದದ್ದು' ಎಂಬ ಪ್ರಯೋಗವನ್ನು, ೧೯೧೦ ರಲ್ಲಿ ಗುಡ್ಡೆ ಬಿ.ಜಿ.ಎಮ್. ಶಾಲೆಯ ಹುಡುಗರು 'ಸ್ನೇಹತ್ವದ ಮರ್ಮಗಳು' ಎಂಬ ನಾಟಕವನ್ನು ಆಡಿದ್ದು ದಾಖಲಾಗಿದೆ. ಇದೇ ವೇಳೆಗೆ ಎಮ್. ಎನ್. ಕಾಮತ್ ಅವರು ಮಕ್ಕಳ ನಾಟಕಗಳನ್ನು ಬರೆಯುತ್ತ ಈ ಕ್ಷೇತ್ರಕ್ಕೆ ಅಗತ್ಯವಿದ್ದ ಬಲವನ್ನು ತುಂಬತೊಡಗಿದ್ದರು. ಕೆನರಾ ಹೈಸ್ಕೂಲ್ ವಿದ್ಯಾರ್ಥಿಗಳು ೧೯೧೨ ರಲ್ಲಿ ಶಾಲಾ ವಾರ್ಷಿಕೋತ್ಸವದ ಸಂದರ್ಭಕ್ಕೆ ಎಮ್.ಎನ್. ಕಾಮತರ 'ಧ್ರುವ ವಿಜಯ' ನಾಟಕದ ಎರಡು ದೃಶ್ಯಗಳನ್ನು ಅಭಿನಯಿಸುವುದರೊಂದಿಗೆ ಒಂದು ವಾತಾವರಣ ನಿರ್ಮಾಣ ವಾಗತೊಡಗಿತು. ಆ ಕಾಲಕ್ಕೆ ಮಹಿಳೆಯರು ಇದರಲ್ಲಿ ಆಸಕ್ತಿ ವಹಿಸಿ ಕ್ರಿಯಾಶೀಲರಾಗಿದ್ದು ಮೆಚ್ಚತಕ್ಕ ಅಂಶವಾಗಿದೆ. "ಮಂಗಳೂರಿನ ಸರಕಾರಿ ಹುಡುಗಿಯರ ಟ್ರೇನಿಂಗ್ ಶಾಲೆಯವರು 'ತಪ್ಪಿಹೋದ ಮಗನು' ಎಂಬ ನಾಟಕವನ್ನು ೧೯೧೫ರಲ್ಲಿ ಅಭಿನಯಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಎ.ಜೆ. ಸಿಕ್ವೇರಾ ತರಬೇತಿ ನೀಡಿದ್ದ ಈ ನಾಟಕದ ಬಾಲಕಿಯರ ವಾಕ್ಚಾತುರ್ಯವೂ ನರ್ತನವೂ ಅಂಗವಿನ್ಯಾಸವೂ ಅಭಿನಯವೂ ಆಯಾ ಸಂಗತಿಗನುಗುಣವಾದ ನಟನೆಯೂ ಸೊಗಸಾಗಿದ್ದವು' ಎಂದು ೧೯೧೭ರ ಜುಲೈ ಸ್ವದೇಶಾಭಿಮಾನಿಯಲ್ಲಿ ಬಂದ ವಿಮರ್ಶೆಯಲ್ಲಿ ಹೊಗಳಲಾಗಿದೆ."[೧]

ವೃತ್ತಿರಂಗಭೂಮಿ ಕೂಡ ಮಕ್ಕಳ ಪ್ರಯೋಗಗಳಿಗೆ ಆಸ್ಪದ ಕಲ್ಪಿಸಿತು. ಕನ್ನಡ ರಂಗಭೂಮಿಗೆ ಸಂಜೀವಿನಿಯಾಗಿ ಒದಗಿಬಂದ, ಪ್ರಸಿದ್ಧ ನಾಟಕ ಕಂಪನಿಯಾದ ಗುಬ್ಬಿವೀರಣ್ಣನವರ ಚನ್ನಬಸವೇಶ್ವರ ನಾಟ್ಯಸಂಘವು ಮಕ್ಕಳಿಗಾಗಿ ಮೀಸಲಾದ 'ಬಾಲಕಲಾವರ್ಧಿನಿ' ಎಂಬ ಸಂಸ್ಥೆಯನ್ನು ೧೯೨೫ರಲ್ಲಿ ಆರಂಭಿಸಿತು. ಹಳ್ಳಿಗಾಡಿನ ಎಳೆಯರನ್ನು ರಂಗಭೂಮಿಯತ್ತ ಸೆಳೆಯಲು ಇದು ಅತ್ಯಂತ ಮಹತ್ವದ ಹೆಜ್ಜೆಯಾಯಿತು. ಈ 'ಬಾಲಕಲಾವರ್ಧಿನಿ' ನಾಟಕ ಕಂಪನಿಯಲ್ಲಿ ಅನೇಕ ಮಕ್ಕಳು ತಮ್ಮ ಪ್ರತಿಭೆಯ ಮೂಲಕ ಪ್ರೇಕ್ಷಕರನ್ನು ಸೆಳೆದು ಬಾಲಪ್ರಯೋಗಗಳು ಯಶಸ್ವಿಯಾಗುವುದಕ್ಕೆ ಕಾರಣರಾದರು. ಗುಬ್ಬಿ ಕಂಪನಿಯಲ್ಲಿ ಪಾತ್ರ ವಹಿಸುತ್ತಿದ್ದ ಅನೇಕ ಬಾಲ ಕಲಾವಿದರು ಹಾಗೂ ಹೊರಗಿನ ನಿಪುಣ ಬಾಲರು ಇವುಗಳಲ್ಲಿ ನಟಿಸಿದರು. ನಟ-ನಟಿಯರ ಮಕ್ಕಳಂತೂ ತಮ್ಮ ಕಣ್ಣೆದುರಿನ ಲೀಲೆಗಳಿಗೆ ಮಾರುಹೋಗಿ ನಾಟಕದ ಮಾತುಗಳನ್ನು ಲೀಲಾಜಾಲವಾಗಿ ನಿರೂಪಿಸುತ್ತಿದ್ದರು. ಇಂತಹ ನಾಟಕಗಳಲ್ಲಿ ಕೂಡ ಐತಿಹಾಸಿಕ ಹಾಗೂ ಪೌರಾಣಿಕ ವಸ್ತುವೆ ಪ್ರಧಾನವಾಗಿತ್ತು. 'ಸತಿ ಸಾವಿತ್ರಿ', 'ಭಾಮಾಪರಿಣಯ', 'ಕೃಷ್ಣರುಕ್ಮಿಣಿ', 'ಕೃಷ್ಣಗಾರುಡಿ', 'ಕಬೀರಲೀಲೆ'ಯಂತಹ ಪ್ರಯೋಗಗಳಿಗೆ ರಂಗಸ್ಥಲ ವೇದಿಕೆಯಾಯಿತು. ಈ ನಾಟಕಗಳಲ್ಲಿ 'ಭಕ್ತಪ್ರಹ್ಲಾದ' ಪ್ರಯೋಗವಂತೂ ಇದ್ದೇ ಇರುತ್ತಿತ್ತು. ದುಡ್ಡು ಕೊಟ್ಟು ಮಕ್ಕಳ ನಾಟಕಗಳನ್ನು ನೋಡಲು ಹೋಗುತ್ತಿದ್ದ ಪ್ರೇಕ್ಷಕರಿರುತ್ತಿದ್ದರು.

೧. ಮಕ್ಕಳ ರಂಗಭೂಮಿ, ಪು. ೪೨, ಡಾ. ಗಜಾನನ ಶರ್ಮ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ೨೦೧೧.

ಆದರೆ ದೊಡ್ಡವರ ಆಶಯ, ಆದರ್ಶ, ಆಲೋಚನೆಗಳಿಗೆ ಅನುಗುಣವಾಗಿ ಈ ಬಾಲ ಆಟಗಳು ನಡೆಯುತ್ತಿದ್ದವೆಯೇ ಹೊರತು ಮಕ್ಕಳ ವಿಚಾರ ಲಹರಿಗೆ ಅಲ್ಲಿ ಬಹುತೇಕ ಆಸ್ಪದವಿರುತ್ತಿರಲಿಲ್ಲ.

"ಗರೂಡ ಸದಾಶಿವರಾಯರ ನೇತೃತ್ವದಲ್ಲಿದ್ದ ಗದುಗಿನ 'ದತ್ತಾತ್ರೇಯ ನಾಟಕ ಮಂಡಳಿ'ಯವರು 'ಘಟಸ್ಫೋಟ', 'ನಲ್ಲೆಯ ಗೆಳೆಯರು' ಎಂಬ ನಾಟಕಗಳನ್ನು ಮರಾಠಿಯಿಂದ ಅನುವಾದಿಸಿ ೧೫ ರಿಂದ ೧೬ ವರ್ಷದ ಮಕ್ಕಳಿಂದ ಪ್ರಯೋಗ ಮಾಡಿಸಿ, ಪ್ರವೇಶಧನದೊಂದಿಗೆ ಪ್ರದರ್ಶನ ಮಾಡಿಸಿದ್ದು ಒಂದು ಇತಿಹಾಸವೆನ್ನಬಹುದು. ಏಣಗಿ ಬಾಳಪ್ಪನವರ 'ಕಲಾವೈಭವ ನಾಟಕ ಕಂಪನಿ'ಯವರು ತಮ್ಮ ಕಂಪನಿಯ ಪರವಾಗಿ ಖ್ಯಾತ ನಾಟಕಕಾರ ಆರ್.ಡಿ. ಕಾಮತ ಅವರ 'ದೇವರ ಮಗು' ನಾಟಕವನ್ನು ಸಾಕಷ್ಟು ಯಶಸ್ವಿಯಾಗಿ ಪ್ರದರ್ಶಿಸುತ್ತಿದ್ದರು. ಇದು ಸಂಪೂರ್ಣವಾಗಿ ಮಕ್ಕಳ ನಾಟಕವೆ ಆಗಿರದಿದ್ದರೂ ಒಂದು ಮಗುವನ್ನೆ ಕೇಂದ್ರವಾಗಿಟ್ಟುಕೊಂಡ ನಾಟಕವಾಗಿತ್ತು" ಎಂಬ ಸುರೇಶ ಕುಲಕರ್ಣಿಯವರ ಅಭಿಪ್ರಾಯದ ಪ್ರಕಾರ ವೃತ್ತಿರಂಗಭೂಮಿ ಮಕ್ಕಳ ಪ್ರಯೋಗಗಳ ಕಡೆ ಗಮನ ಹರಿಸಿದ್ದನ್ನು ಕಾಣಬಹುದಾಗಿದೆ. ಆದರೆ ಅವುಗಳಲ್ಲಿ ಯಾವುದೇ ಹೊಸ ಆಲೋಚನೆ ಇಲ್ಲದೆ ಸೊರಗಿದವು. ಮೇಲಾಗಿ ವೃತ್ತಿನಿರತ ಕಲಾತಂಡಗಳು ತಮ್ಮ ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದ ಕಾಲಘಟ್ಟದಲ್ಲಿ ಎಳೆಯರ ಕನಸುಗಳನ್ನು ಬಿತ್ತರಿಸುವ, ಅವರ ಆಲೊಚನೆಗಳಿಗೆ ಮಾತಾಗುವ, ಅವರದೇ ಲೋಕವನ್ನು ತೆರೆದಿಡುವ ಸಮಯ-ಸಾಮರ್ಥ್ಯ ಕಲ್ಪನೆಗಳನ್ನು ಹೊಂದುವುದು ಸಾಧ್ಯವಿರಲಿಲ್ಲ. ವೃತ್ತಿ ತಂಡಗಳು ತಮ್ಮ ಉತ್ಕರ್ಷದ ಸಮಯವನ್ನು ತಲಪಿ ಆಧುನಿಕ ಸವಾಲುಗಳೆದುರು ಕ್ಷೀಣಿಸುತ್ತಿದ್ದಂತೆ 'ಬಾಲಕಲಾವರ್ಧಿನಿ', 'ಕಲಾವೈಭವ ನಾಟಕ ಕಂಪನಿ' ಮುಂತಾದ ಸಂಸ್ಥೆಗಳ ಮಕ್ಕಳ ಪ್ರಯೋಗಗಳು ಮರೆಗೆ ಸರಿದವು. ಅಂದರೆ ಸುಮಾರು ೧೯೨೦-೨೫ರಿಂದ ಸುಮಾರು ೧೯೭೦ರವರೆಗೆ ಮಕ್ಕಳ ನಾಟಕ ಕ್ಷೇತ್ರ ತೀರ ಅವಜ್ಞೆಗೆ ಈಡಾಯಿತು.

ಆದರೆ ಮರುಭೂಮಿಯಲ್ಲಿನ ಓಯಸಿಸ್‌ನಂತೆ ಶಿವರಾಮ ಕಾರಂತ ಹಾಗೂ ಕುವೆಂಪು ಅವರ ಮಹತ್ವದ ಪ್ರಯತ್ನಗಳು ಈ ಕಷ್ಟಕಾಲದಲ್ಲಿಯೂ ಮಕ್ಕಳ ರಂಗಪ್ರಯೋಗಗಳನ್ನು ಬದುಕಿಸಿದವು ಎನ್ನಬೇಕು. ಕುವೆಂಪುರವರ 'ಮೋಡಣ್ಣನ ತಮ್ಮ' (೧೯೨೬) ಹಾಗೂ 'ನನ್ನ ಗೋಪಾಲ' (೧೯೩೦) ನಾಟಕ ಕ್ಷೇತ್ರಕ್ಕೆ ಮಗುವಿನ ಭಾವನಾಲೋಕವನ್ನು ತೆರೆದಿಟ್ಟವು. ಅವರ 'ಅಮಲನ ಕಥೆ', 'ಬೊಮ್ಮನಹಳ್ಳಿಯ ಕಿಂದರಜೋಗಿ'ಗಳು ಬಾಲಸಾಹಿತ್ಯದ ಮನಕಲಕುವ ಉದಾಹರಣೆಗಳಾದವು. ರಂಗದ ಮೇಲೆಯೂ ಅವು ಯಶಸ್ವಿ ಪ್ರಯೋಗಗಳಾಗಿದ್ದನ್ನು ನಾವು ನೋಡಿದ್ದೇವೆ.

"ಮಕ್ಕಳ ರಂಗಭೂಮಿ ಇತಿಹಾಸ ನೋಡುವಾಗ ಡಾ. ಶಿವರಾಮ ಕಾರಂತರು ಮಕ್ಕಳ ರಂಗಭೂಮಿಗೆ ನೀಡಿದ ಕೊಡುಗೆಯನ್ನು ಪ್ರಮುಖವಾಗಿ ಪರಿಗಣಿಸುವುದು ಅಗತ್ಯ. ಕಾರಂತರ ನಿಕಟವರ್ತಿಯಾಗಿದ್ದ ಮಾಲಿನಿಮಲ್ಯ ಅವರು ಹೇಳುವಂತೆ ೧೯೨೯ರಲ್ಲಿ ಕಾರಂತರು ಅಸ್ಪೃಶ್ಯತೆ ಕುರಿತ ನಾಟಕ ಪ್ರದರ್ಶಿಸಿದ್ದರು. ನಂತರದ ಅವಧಿಯಲ್ಲಿ ಕಾರಂತರು ಗದ್ಯನಾಟಕ, ಪದ್ಯನಾಟಕ, ಆಶುನಾಟಕ, ಮೂಕನಾಟಕ, ಗೀತನಾಟಕ, ಛಾಯಾನಾಟಕ, ಪ್ರತಿಮಾನಾಟಕ, ಗೊಂಬೆನಾಟಕ, ಹಾಸ್ಯನಾಟಕ, ಅಣಕವಾಡು ಹೀಗೆ ಹಲವಾರು ವೈವಿಧ್ಯಮಯ ಪ್ರಯೋಗಗಳನ್ನು ನಡೆಸಿದ್ದಾರೆ. 'ಮಂಗನ ಮದುವೆ', 'ಸೂರ್ಯಚಂದ್ರ', 'ಅಜ್ಜಿಮಾಣಿ', 'ಡೊಮಿಂಗೊ', 'ಹಸನ್ ಪರ್ವಿನಾ'

ಮುಂತಾದ ನಾಟಕಗಳನ್ನು ಪ್ರಯೋಗಿಸಿದರು. ಉಪ್ಪಿನಂಗಡಿ, ವಿಟ್ಲಗಳಲ್ಲಿ ನಡೆಸಿದ ಮಕ್ಕಳ ಕೂಟಗಳು, ವಿಶೇಷ ಅಧಿವೇಶನಗಳು, ಉತ್ಸವಗಳು ತುಂಬಾ ಮಹತ್ವದವೂ ಪರಿಣಾಮಕಾರಿಯೂ ಆಗಿವೆ" ಎಂದು ಕಾರಂತರ ರಂಗಪ್ರಯೋಗಗಳ ಕೊಡುಗೆಯನ್ನು ಚರಿತ್ರೆಯ ಹಿನ್ನೆಲೆಯಲ್ಲಿ ಡಾ. ನಿಂಗು ಸೊಲಗಿ ಗುರುತಿಸುತ್ತಾರೆ.[೨]

ಕಾರಂತರು ಸಾಮಾಜಿಕ ನೆಲೆಗಳನ್ನು ಮುನ್ನೆಲೆಗೆ ತರುವುದರ ಮೂಲಕ ಮಕ್ಕಳು ನಾಟಕಗಳಲ್ಲಿ ಅಪರೂಪವಾಗಿದ್ದ ವಾಸ್ತವಿಕತೆಯನ್ನು ಪರಿಚಯಿಸಿದರು. ಕೈಲಾಸಂ ಅವರ 'ಟೊಳ್ಳುಗಟ್ಟಿ' ಅಥವಾ 'ಮಕ್ಕಳ ಸ್ಕೂಲ್ ಮನೇಲಲ್ವೆ' ನಾಟಕ ಮಕ್ಕಳಿಗಾಗಿ ಎಂದು ಬರೆಯಲ್ಪಡದಿದ್ದರೂ ಮೌಲ್ಯಗಳ ಬಿತ್ತುವಿಕೆಯನ್ನು ತನ್ನ ಉದ್ದೇಶವಾಗಿ ಹೊಂದಿತ್ತು. ಮುಂದೆ ಬರಲಿದ್ದ 'ಪಂಜರಶಾಲೆ'ಗೆ ಅದು ಒಂದು ರೀತಿಯಲ್ಲಿ ಪೂರ್ವಭಾವಿ ವೇದಿಕೆಯನ್ನು ಒದಗಿಸುವ ಹಾಗಿತ್ತು. ಮನೆಯ ವಾತಾವರಣ ಒಳ್ಳೆಯದಿದ್ದರೆ ಮಗು ಒಳ್ಳೆಯ ವ್ಯಕ್ತಿಯಾಗಿ ರೂಪುಗೊಳ್ಳುತ್ತಾನೆ ಎಂಬ ಆಶಯ ಅದರಲ್ಲಿ ಅಡಗಿದೆ. ಈ ನಾಟಕವನ್ನು ಶಾಲೆ ಹಾಗೂ ಕಾಲೇಜುಗಳ ವಾರ್ಷಿಕೋತ್ಸವಗಳಲ್ಲಿ ಆಡಲಾಯಿತು. ಇದರಿಂದ ನಾಟಕ ಪ್ರಯೋಗದ ಸಾತತ್ಯ ಮುಂದುವರೆಯಲು ಸಹಾಯಕವಾಯಿತು. ಅಲ್ಲೊಂದು ಇಲ್ಲೊಂದು ಶಾಲಾ ನಾಟಕಗಳು ಪ್ರದರ್ಶಿತವಾಗುತ್ತಿದ್ದರೂ ಪದ್ಯಸಾಹಿತ್ಯಕ್ಕೆ ಸಿಕ್ಕ ಪ್ರೋತ್ಸಾಹ ನಾಟಕಕ್ಕೆ ಸಿಗಲಿಲ್ಲವೆಂದೇ ಹೇಳಬೇಕು. ಶ್ರೀರಂಗ ಅವರ 'ಹನ್ನೊಂದುವರಿ', ಬೇಂದ್ರೆಯವರ 'ಮಕ್ಕಳು ಅಡಿಗೆ ಮನೆ ಹೊಕ್ಕರೆ' ಮುಂತಾದವು ಪ್ರಕಟಗೊಂಡರೂ ಅವುಗಳಿಂದ ಹೆಚ್ಚಿನ ಶಕ್ತಿಯೇನೂ ಹರಿದುಬರಲಿಲ್ಲ. ಈ ಉತ್ಸಾಹಹೀನ ಕಾಲಾವಧಿ ಎಲ್ಲಿಯವರೆಗೆ ಮುಂದುವರಿಯಿತೆಂದರೆ ಹೆಸರಾಂತ ನಿರ್ದೇಶಕ ಬಿ.ವಿ. ಕಾರಂತ ಅವರು ೧೯೭೧ ರಲ್ಲಿ ತಮ್ಮ 'ಪಂಜರಶಾಲೆ' ನಾಟಕವನ್ನು ಹೆಗ್ಗೋಡಿನಲ್ಲಿ ಮಕ್ಕಳಿಂದ ಅಭಿನಯಿಸುವತನಕ. ಪ್ರಪ್ರಥಮ ಬಾರಿಗೆ ದೃಷ್ಟಿಗೋಚರದ ಕಲಾತ್ಮಕ ಪರಿಣಾಮವೆಂದರೇನು ಎಂಬುದು ಬಿ.ವಿ. ಕಾರಂತರ ನಿರ್ದೇಶನದ ಮಾಂತ್ರಿಕತೆಯಿಂದ ತಿಳಿದುಬಂದಿತು. ಪ್ರಸಿದ್ಧ ಸಾಹಿತಿಯಾಗಿ ಕುವೆಂಪು ಅವರು ಹೇಗೆ ಮಕ್ಕಳ ಸಾಹಿತ್ಯದಲ್ಲಿ ನವಿರು ಹಾಗೂ ಮನತಟ್ಟುವ ಸಂವೇದನೆಗಳನ್ನು ಕಟ್ಟಿಕೊಟ್ಟಿದ್ದರೋ ಅದೇ ರೀತಿಯಲ್ಲಿ ತುಂಬ ಹೆಸರು ಮಾಡಿದ ನಿರ್ದೇಶಕರೊಬ್ಬರಿಂದ ಮಕ್ಕಳ ರಂಗಪ್ರಯೋಗದ ಸಾಧ್ಯತೆಗಳು ಕಣ್ಣಿಗೆ ಕಟ್ಟುವಂತೆ ನಿರೂಪಿತಗೊಂಡವು. ಬಿ.ವಿ. ಕಾರಂತ, ಕೆ.ವಿ. ಸುಬ್ಬಣ್ಣ, ಚಂದ್ರಶೇಖರ ಕಂಬಾರ, ವೈದೇಹಿ ಮುಂತಾದವರ ಪ್ರಯತ್ನಗಳಿಂದ ಸಾಹಿತ್ಯದಷ್ಟೆ ಮುಖ್ಯವಾದ ಅಥವಾ ಅದಕ್ಕಿಂತಲೂ ಮಹತ್ವವುಳ್ಳ ವೀಕ್ಷಣದ ಅಂಶ, ತಾತ್ವಿಕ ದೃಷ್ಟಿಕೋನ, ದೃಶ್ಯಾತ್ಮಕತೆಯ (Visual angle) ಪರಿಕಲ್ಪನೆ ಬೆಳೆಯಲು ಸಹಾಯಕವಾಯಿತು. ನೋಟಕ್ಕೆ ಸಂಬಂಧಿಸಿದ ಅಂಶಗಳು ಈಗ ಮೇಲುಗೈ ಪಡೆಯತೊಡಗಿದವು. ನಾಟಕ ಸಾಹಿತ್ಯದ ಅಂಶಗಳು ರಂಗದ ಮೇಲೆ ಹೇಗೆ ಪ್ರಕಟಗೊಳ್ಳುತ್ತವೆ ಎಂಬುದರ ಮೇಲೆ ನಾಟಕವೊಂದರ ಯಶಸ್ಸು ನಿರ್ಧಾರವಾಗತೊಡಗಿತು. ಅಂದರೆ ಅಪಾರ ಸಾಧ್ಯತೆಗಳು ನಿರ್ದೇಶಕನ ಮೇಲೆ ಅವಲಂಬಿತವಾದವು. ಸಾಹಿತ್ಯವನ್ನು ಒಮ್ಮೊಮ್ಮೆ ತನಗೆ ಬೇಕಾದಂತೆ ಹಿಗ್ಗಿಸಿಕೊಂಡು ಇಲ್ಲವೆ ಕುಗ್ಗಿಸಿಕೊಂಡು ಕ್ರಿಯೆಯನ್ನು ಮುನ್ನಡೆಸುವ, ತಿರುವು ತರುವ, ಪ್ರೇಕ್ಷಕ ಮಕ್ಕಳನ್ನು ತುದಿಗಾಲಲ್ಲಿ ನಿಲ್ಲಿಸುವ, ಅವರ ಕಲ್ಪನಾಶಕ್ತಿಗೆ ಇಂಬುಕೊಡುವ ಕೆಲಸ ನಡೆಯತೊಡಗಿತು. ದೃಷ್ಟಿಪಥಗಳು ವಿಶಾಲವಾದವು.

೨. ಮಕ್ಕಳ ರಂಗಭೂಮಿ, ಪು. ೫೪, ಚಿಲಿಪಿಲಿ ಪ್ರಕಾಶನ, ಧಾರವಾಡ, ೨೦೧೩

ದೃಶ್ಯಗಳು ದೀರ್ಘವಾದವು. ಮನಸ್ಸಿಗೆ ಕಂಡ ಸಂಗತಿಗಳನ್ನು ಈಗ ಕಣ್ಣಿಗೆ ಕಾಣಿಸುವ ಹಂಬಲ ಮೇಲುಗೈ ಪಡೆಯತೊಡಗಿತು. ರಂಗಸಜ್ಜಿಕೆ, ವೇಷಭೂಷಣ, ದೃಶ್ಯವನ್ನಾಗಿ ಮಾರ್ಪಡಿಸುವ ರೀತಿ ಮಹತ್ವ ಪಡೆದವು.

ಬಿ.ವಿ. ಕಾರಂತರ 'ಪಂಜರಶಾಲೆ', 'ನೀಲಿಕುದುರೆ', 'ಹೆಡ್ಡಾಯಣ', 'ಅಳಿಲು ರಾಮಾಯಣ'ದ ಪ್ರಯೋಗಗಳು ಮಕ್ಕಳ ನಾಟಕ ಕ್ಷೇತ್ರದಲ್ಲಿ ಹೊಸ ಅಲೆಯ ಆರಂಭಕ್ಕೆ ಕಾರಣವಾದವು. ಎಪ್ಪತ್ತರ ದಶಕದಿಂದ ಹೊಸ ಶತಮಾನದವರೆಗೆ ಹಲವು ಆವಿಷ್ಕಾರಗಳನ್ನು ಬಾಲರಂಗಭೂಮಿ ಗಳಿಸಿಕೊಂಡಿತು. ಕೆ.ವಿ. ಸುಬ್ಬಣ್ಣ ಅವರ 'ಕಾಡಿನಲ್ಲಿ ಕಥೆ', 'ಬೆಟ್ಟಕ್ಕೆ ಚಳಿಯಾದರೆ', ಚಂದ್ರಶೇಖರ ಕಂಬಾರ ಅವರ 'ಅಲಿಬಾಬ ಮತ್ತು ನಲವತ್ತು ಮಂದಿ ಕಳ್ಳರು', 'ಪುಷ್ಪರಾಣಿ', ಎನ್.ಎಸ್. ವೆಂಕಟರಾಮ್ ಅವರ 'ಹಿಮಾನಿ ಮತ್ತು ಏಳುಜನ ಕುಳ್ಳರು', 'ಸಿಂದಾಬಾದ್', ಆರ್.ವಿ. ಭಂಡಾರಿ ಅವರ 'ಕಸದ ಡಬ್ಬಿ ಮತ್ತು ಬಹುಮಾನ', 'ಬೆಳಕಿನೆಡೆಗೆ', ವೈದೇಹಿ ಅವರ 'ಧಾಂ ಧೂಂ ಸುಂಟರಗಾಳಿ', 'ನಾಯಿಮರಿ' ಎ.ಎಸ್.ಮೂರ್ತಿ ಅವರ 'ಮಂತ್ರವಾದಿ' ಮುಂತಾದ ನಾಟಕಗಳು ಸಾವಿರಾರು ಪ್ರೇಕ್ಷಕರನ್ನು ಸೆಳೆದವು. ನಾಟಕಗಳನ್ನು ಪ್ರಯೋಗಶೀಲತೆಗೆ ದೂಡಿದವು. ಹೊಸ ಹೊಸ ನಿರ್ದೇಶಕರುಗಳು ರಂಗದ ಮೇಲೆ ಕಾಣಿಸಿಕೊಂಡರು. ಪ್ರೇಮಾ ಕಾರಂತ್ ನಿರ್ದೇಶನದ 'ನಕ್ಕಳಾ ರಾಜಕುಮಾರಿ' ಅದ್ಭುತ ಯಶಸ್ಸನ್ನು ಪಡೆಯಿತು. ನಾಟಕಗಳು ಬದುಕಿರುವುದು ಪ್ರದರ್ಶನಗಳ ಮೇಲೆ ಎಂಬುದು ಮತ್ತೆ ಮತ್ತೆ ಕಾಣಿಸಿಕೊಳ್ಳತೊಡಗಿತು. ನಾಡಿನಾದ್ಯಂತ ನಾಟಕೋತ್ಸವಗಳು, ನಾಟಕ ಶಿಬಿರಗಳು, ರಂಗ ಅಧ್ಯಯನ ಶಾಲೆಗಳು ಏರ್ಪಾಡುಗೊಂಡವು. ಬಿ.ವಿ. ಕಾರಂತ, ಕೆ.ವಿ. ಸುಬ್ಬಣ್ಣ, ಪ್ರೇಮಾ ಕಾರಂತ, ಇಕ್ಬಾಲ್ ಅಹ್ಮದ್, ಐ.ಕೆ. ಬೋಳುವಾರು, ಬಿ. ಜಯಶ್ರೀ, ಎಸ್. ಮಾಲತಿ, ಅಶೋಕ ಬಾದರದಿನ್ನಿ, ಪ್ರಮೋದ ಶಿಗ್ಗಾಂವ್, ಶ್ರೀಪಾದ ಭಟ್, ಪಿ. ಗಂಗಾಧರಸ್ವಾಮಿ, ಮಹಾದೇವ ಹಡಪದ, ಹುಲುಗಪ್ಪ ಕಟ್ಟೀಮನಿ, ಶಂಕರಯ್ಯ ಘಂಟಿ, ಕಿರಣ್ ಭಟ್, ಮೂರ್ತಿ ದೇರಾಜೆ, ಎ.ಎಸ್. ಮೂರ್ತಿ, ಕೆ.ಜಿ. ಕೃಷ್ಣಮೂರ್ತಿ, ಕೃಷ್ಣಮೂರ್ತಿ ಬಿಳಿಗೆರೆ, ಪ್ರಕಾಶ ಗರುಡ, ಸಂತೋಷ ಗುಡ್ಡಿಯಂಗಡಿ, ಸಿ. ಲಕ್ಷ್ಮಣ್ ಇನ್ನೂ ಮುಂತಾದ ರಂಗನಿರ್ದೇಶಕರು ಬಾಲನಾಟಕಗಳ ಅರ್ಥ ಹಾಗೂ ವ್ಯಾಪ್ತಿಗಳನ್ನು ಹಿಗ್ಗಿಸಿದರು. ೧೯೭೦ರಿಂದ ಇಲ್ಲಿಯವರೆಗಿನ ಕಾಲಘಟ್ಟದ ಮತ್ತೊಂದು ಮುಖ್ಯ ಬೆಳವಣಿಗೆಯೆಂದರೆ ಅನೇಕ ರಂಗಸಂಸ್ಥೆಗಳು ಉದಯವಾಗಿದ್ದು. ಅಪಾರ ಕ್ರಿಯಾಶೀಲತೆಯಿಂದ ಅವು ಮಕ್ಕಳ ರಂಗಭೂಮಿಯ ಪುನರುಜ್ಜೀವನಕ್ಕೆ ಪಣತೊಟ್ಟವು. 'ಬೆನಕ', 'ರಂಗಾಯಣ', 'ನೀನಾಸಂ', 'ಚಿಣ್ಣ-ಬಣ್ಣ' 'ಕಿನ್ನರಮೇಳ', 'ತಿರುಕ', 'ಚಿಂತನರಂಗ ಅಧ್ಯಯನ ಕೇಂದ್ರ', 'ಬಿಂಬ', 'ರಂಗಕಹಳೆ', 'ಪ್ರಭಾತ', 'ಸಮುದಾಯ', 'ಆದಿಮ', 'ಗೊಂಬೆಮನೆ', 'ಸುಚಿತ್ರಾ ಬಾಲಜಗತ್', 'ನಟನಾ', 'ನಿರತನಿರಂತ' ಮುಂತಾದವುಗಳನ್ನು ಹೆಸರಿಸಲೇಬೇಕು. ಅವುಗಳ ಭಿನ್ನ ವಿಭಿನ್ನ ಪ್ರಯೋಗಗಳು ಸಾಹಿತ್ಯ, ಸಂಗೀತ, ನೃತ್ಯ, ಅಭಿನಯಗಳನ್ನು ರಂಗದ ಮೇಲೆ ಅದ್ಭುತ ಪರಿಣಾಮ ಮಾಡಿದವು. ಮಕ್ಕಳು ಹಾಗೂ ಹಿರಿಯರನ್ನು ರಂಜಿಸಿದವು. ಮಕ್ಕಳ ಭಾವಾಭಿನಯ ಹಾಗೂ ಆಂಗಿಕ ಭಾಷೆಗಳ ವಿಸ್ತಾರಕ್ಕೆ ಈ ತಂಡಗಳು ಹಾಗೂ ಅವುಗಳ ನಿರ್ದೇಶಕರು ಶ್ರಮಪಟ್ಟರು.

ಪ್ರಭಾತ ಕಲಾವಿದರು ವಿಶಿಷ್ಟ ರಂಗವಿನ್ಯಾಸದೊಂದಿಗೆ 'ಸಿಂಡರೆಲಾ', 'ಪುಣ್ಯಕೋಟಿ', 'ಕಿಂದರಿಜೋಗಿ', 'ತುಂಟಗಣಪ', 'ಲವಕುಶ'ಗಳನ್ನು ಪ್ರಸ್ತುತಪಡಿಸಿದರು. ಉದಾತ್ತ ಮತ್ತು

ಅಗಾಧವೆನಿಸುವ ವಿಚಾರಗಳನ್ನು ಹಾಗೂ ಅದ್ಭುತ ದೃಶ್ಯಾವಳಿಗಳನ್ನು ಅವರು ಪರಿಚಯಿಸಿದರು. ಬೆನಕ ಮಕ್ಕಳ ನಾಟಕ ಕೇಂದ್ರವನ್ನು ಕಟ್ಟಿಕೊಂಡು ಮಕ್ಕಳ ರಂಗಭೂಮಿಗೆ ತಮ್ಮನ್ನು ತೇಯ್ದುಕೊಂಡವರು ಪ್ರೇಮಾ ಕಾರಂತ. ಎಳೆಯರ ರಂಗಭೂಮಿಯನ್ನು ನಿರ್ಲಕ್ಷಿಸಿದ ಸಂಸ್ಥೆಯಿಂದ ತಮಗೆ ಯಾವುದೇ ಪುರಸ್ಕಾರ ಬೇಡವೆಂದು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿಯನ್ನು ನಿರಾಕರಿಸಿದರು. ಮಕ್ಕಳ ರಂಗಭೂಮಿಯೊಂದಿಗೆ ಅವರು ಹೊಂದಿರುವ ತಾದಾತ್ಮ್ಯತೆಯನ್ನು ಇದು ಸ್ಪಷ್ಟಪಡಿಸುತ್ತದೆ. ಕರ್ನಾಟಕದ ಅನೇಕ ಕಡೆ ಮಕ್ಕಳ ನಾಟಕ ಶಿಬಿರಗಳನ್ನು ಸಂಘಟಿಸಿದರು. ಹಿರಿಯ ಸಾಹಿತಿಗಳಿಂದ ಮಕ್ಕಳಿಗಾಗಿ ನಾಟಕಗಳನ್ನು ಬರೆಸಿದರು. ಮಕ್ಕಳ ರಂಗಪ್ರಯೋಗಗಳನ್ನು ಎಷ್ಟೆಲ್ಲ ವಿಶಿಷ್ಟವಾಗಿ ಮಾಡಬಹುದೆಂದು ತಮ್ಮ ವೇಳೆಯನ್ನೆಲ್ಲ ಆ ಚಿಂತನೆಯಲ್ಲಿಯೆ ಕಳೆಯುತ್ತಿದ್ದರು. ತಮ್ಮ ಎಲ್ಲ ಪ್ರತಿಭೆಯನ್ನು ಅದಕ್ಕಾಗಿ ದುಡಿಸಿಕೊಳ್ಳುತ್ತಿದ್ದರು. ಈ ರೀತಿಯಲ್ಲಿ ಅವರು ಮಕ್ಕಳ ರಂಗಭೂಮಿಯೊಂದಿಗೆ ಅಭಿನ್ನತೆಯನ್ನು ಮೆರೆದರು. ನಾಟಕಗಳನ್ನು ನಿರ್ದೇಶಿಸುವಾಗ ಅದರಲ್ಲಿ ಕರಗಿ ಹೋಗಿರುತ್ತಿದ್ದರು. ಕಂಬಾರರ 'ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು', 'ಪುಷ್ಪರಾಣಿ' ಮುಂತಾದವು ಪ್ರೇಮಾ ಕಾರಂತ ಅವರ ನಿರ್ದೇಶನದಲ್ಲಿ ಜನಮನ ಸೂರೆಗೊಂಡವು. ಬಿ.ವಿ. ಕಾರಂತರ ಸಂಗೀತವೂ ಈ ನಿರ್ದೇಶನಕ್ಕೆ ಜೊತೆಯಾಗಿ ಮತ್ತಷ್ಟು ಪರಿಣಾಮ ಬೀರುವಲ್ಲಿ ಸಹಾಯಕವಾಯಿತು. 'ನಕ್ಕಳಾ ರಾಜಕುಮಾರಿ', 'ಜೆಯೆಂಟ್ ಮಾಮಾ', 'ಇಸ್ಪೇಟ್ ರಾಜ್ಯ', 'ಕುಣಿಯೋ ಕತ್ತೆ' ಮುಂತಾದ ಯಶಸ್ವಿ ನಾಟಕಗಳ ಹಿಂದೆ ಪ್ರೇಮಾ ಕಾರಂತ ಅವರ ಸೃಜನಶೀಲ ಪ್ರತಿಭೆಯ ಪರಿಶ್ರಮವಿದೆ.

ಮೂರ್ತಿ ದೇರಾಜೆ ಮಕ್ಕಳ ರಂಗಪ್ರಯೋಗಗಳಿಗೆ ಹೆಸರಾದವರು. ಅವರ 'ಸಮಸಾಂಪ್ರತಿ' ಸಂಸ್ಥೆ ಕಡಿಮೆ ಖರ್ಚಿನಲ್ಲಿ ಹೆಚ್ಚು ಕ್ರಿಯಾಶೀಲತೆಯನ್ನು ರಂಗದ ಮೇಲೆ ತರುವ ನಿಟ್ಟಿನಲ್ಲಿ ದುಡಿಯುತ್ತಿದೆ. ನಾಟಕದ ನಿರ್ಮಾಣದಲ್ಲಿ ಮಕ್ಕಳೆ ತೊಡಗಿರುವಂತೆ, ಸಂಭಾಷಣೆ, ಅಭಿನಯ ಅವರಿಗೆ ಕಷ್ಟವಾಗದಂತೆ, ಸೃಜನಶೀಲತೆಗೆ ಇಂಬುಗೊಡುವಂತೆ ಮೂರ್ತಿ ದೇರಾಜೆ ಪ್ರಯತ್ನಿಸುತ್ತಾರೆ.

'ನಿರತನಿರಂತ' ಸಂಸ್ಥೆಯನ್ನು ಸುಮಾರು ಇಪ್ಪತ್ತು ವರ್ಷಗಳಿಂದ ಕಟ್ಟಿ ಬೆಳೆಸಿರುವ ಐ.ಕೆ. ಬೋಳುವಾರು ಒಂದು ಉತ್ತಮ ಮಕ್ಕಳ ನಾಟಕ ಶಾಲೆಯನ್ನು ರೂಪಿಸಿದ್ದಾರೆ. ಮಕ್ಕಳ ರಂಗಾಯಣ, ಅಟ್ಟಾಮುಟ್ಟಾ, ನಾಟಕೋತ್ಸವ ಮುಂತಾದ ಪ್ರಯೋಗಗಳಿಂದ ದಕ್ಷಿಣಕನ್ನಡ, ಕಾಸರಗೋಡು ಮುಂತಾದ ಕನ್ನಡ ಪ್ರದೇಶಗಳಲ್ಲಿ ಮಕ್ಕಳ ನಾಟಕವನ್ನು ಜೀವಂತವಾಗಿಟ್ಟಿದ್ದಾರೆ. 'ಕೆರೆಗೆ ಹಾರ', 'ಮಳೆಹಕ್ಕಿ ಹಾರ್ನಬಿಲ್', 'ಇ=ಐನ್‌ಸ್ಟೈನ್' ಇತ್ಯಾದಿ ಅವರ ಪ್ರಯೋಗಗಳು ಪ್ರಸಿದ್ಧವಾಗಿವೆ.

'ರಂಗಾಯಣ'ದ ಮುಖ್ಯಸ್ಥರಾಗಿ ಬಸವಲಿಂಗಯ್ಯನವರು 'ಚಿಣ್ಣರ ಮೇಳ' ಆರಂಭಿಸಿ ನಾಡಿನ ಉದ್ದಗಲಕ್ಕೂ ರಂಗನಾದ ಹರಿಸಿದರು. ಮಕ್ಕಳ ಚಿಲಿಪಿಲಿಯ ಉಲಿ ಎಲ್ಲೆಡೆಗೂ ಕೇಳುವಂತಾಯಿತು. ಮೈಸೂರು ಮೊದಲ್ಗೊಂಡು ಧಾರವಾಡ, ಹೊಸಪೇಟೆ, ಹೂವಿನ ಹಡಗಲಿ, ಗದಗ, ಕಲಬುರಗಿ, ಬೆಳಗಾವಿಯಂತಹ ಊರುಗಳಲ್ಲಿ ಮಕ್ಕಳು ನಾಟಕ ನೋಡಿ ನಲಿದರು. ಸ್ವೀಡನ್ನಿನ ಸ್ವಿಡಿಷ್ ಐ.ಟಿ.ಐ. ನೆರವಿನ ಯೋಜನೆ ರೂಪಿಸಲಾಯಿತು. ಈ ಸಂಸ್ಥೆಯ ಸಹಕಾರದಿಂದ 'ರಂಗಕಿಶೋರ' ಆರಂಭಿಸಲಾಯಿತು. ಸಿ. ಬಸವಲಿಂಗಯ್ಯ, ಪ್ರಸನ್ನ, ಚಿದಂಬರರಾವ್ ಜಂಬೆ ಇವರುಗಳ ಕೊಡುಗೆ ಅನನ್ಯವಾಗಿದೆ.

ರಂಗಶಿಬಿರಗಳನ್ನು ಏರ್ಪಡಿಸುತ್ತ ರಂಗಯಾತ್ರೆ ಕೈಗೊಳ್ಳುತ್ತ ಅನೇಕ ಅವಿಸ್ಮರಣೀಯ ನಾಟಕಗಳನ್ನು ನಿರ್ಮಿಸಿದವರು, ನಿರ್ದೇಶಿಸಿದವರು 'ಚಿಣ್ಣ-ಬಣ್ಣ' ತಂಡದ ಇಕ್ಬಾಲ್ ಅಹಮದ್. 'ಚಿಣ್ಣ-ಬಣ್ಣ' ೧೯೮೮ ರಲ್ಲಿ ಹುಟ್ಟಿಕೊಂಡಿತು. ದೊಡ್ಡವರಿಂದಲೂ ಮಕ್ಕಳಿಗಾಗಿ ನಾಟಕ ಆಡಿಸುವ ಪ್ರಯತ್ನವನ್ನು ಇಕ್ಬಾಲ್ ಮಾಡಿದರು. 'ಚಿಣ್ಣ-ಬಣ್ಣ' ತಂಡ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಮಕ್ಕಳ ರಂಗಪ್ರಯೋಗಗಳಿಗೆ ಮುಂದಾಯಿತು. ಇವರು ಪ್ರದರ್ಶಿಸಿದ 'ಪೋಲಿಕಿಟ್ಟಿ', 'ಮ್ಯಾಕಬೆತ್', 'ಗಿಡ್ಡುಟೇಲರ್', 'ನೀಲಿಕುದುರೆ' ಇತ್ಯಾದಿ ನಾಟಕಗಳು ತುಂಬ ಯಶಸ್ವಿಯಾದವು. ಇಕ್ಬಾಲ್‌ರೊಂದಿಗೆ ನಟರಾಜ ಹೊನ್ನವಳ್ಳಿ, ರಾಮಕೃಷ್ಣ, ಕೇಶವಮೂರ್ತಿ ಮುಂತಾದ ಕಲಾವಿದರ ಪ್ರತಿಭೆ ಮಕ್ಕಳ ನಾಟಕ ಕುರಿತ ದೃಷ್ಟಿಕೋನವನ್ನು ಬದಲಿ ಮಾಡಿತೆಂದೆ ಹೇಳಬೇಕು.

ಮಕ್ಕಳು ನಾಟಕ ಕಲಿತು ಎಲ್ಲ ಕಡೆಗೂ ಸಂಚಾರ ಮಾಡುವುದು ಸಾಧ್ಯವಾಗಲಾರದೆಂದು ಅರಿತುಕೊಂಡ ಕೆ.ಜಿ. ಕೃಷ್ಣಮೂರ್ತಿಯವರ ನೇತೃತ್ವದಲ್ಲಿನ 'ಕಿನ್ನರ ಮೇಳ' ಭಿನ್ನ ರಂಗಪ್ರಯೋಗಗಳಿಗೆ ಮುಂದಾಯಿತು. ತುಮರಿ ಊರಿನಲ್ಲಿ ರಂಗಕಾರ್ಯಾಗಾರಗಳನ್ನು ಏರ್ಪಡಿಸುತ್ತ ಶಾಲೆ-ಕಾಲೇಜುಗಳಲ್ಲಿ ರಂಗಜಾಗೃತಿಯ ಅರಿವನ್ನು ಉಂಟುಮಾಡುತ್ತಿದೆ.

ಕ್ರಿಯಾಶೀಲ ರಂಗಕರ್ಮಿ ಎ.ಎಸ್. ಮೂರ್ತಿ ಮತ್ತು ಅವರ ಮಕ್ಕಳಾದ ಶೋಭಾ ವೆಂಕಟೇಶ್ ಹಾಗೂ ಎ.ಎಂ. ಪ್ರಕಾಶ ಅವರು 'ಬಿಂಬ' ಸಂಸ್ಥೆಗಳನ್ನು ಕಟ್ಟುವ ಮೂಲಕ ನಾವು ವಾಸಿಸುವ ಬಡಾವಣೆಯಿಂದಲೆ ಮಕ್ಕಳ ರಂಗ ಕೆಲಸಗಳು ಆರಂಭವಾಗಬೇಕು ಎನ್ನುವ ಧ್ಯೇಯವುಳ್ಳವರು. ಪ್ರಕಾಶ್ ಅವರು 'ಹನುಮಂತನಗರ ಬಿಂಬ' ಸ್ಥಾಪಿಸಿದರೆ ಶೋಭಾ ವೆಂಕಟೇಶ್ ಅವರು 'ವಿಜಯನಗರ ಬಿಂಬ'ದ ಮೂಲಕ ಮನೆಗಳನ್ನು ರಂಗಪಾಠಶಾಲೆಗಳನ್ನಾಗಿ ಪರಿವರ್ತಿಸಿದ್ದಾರೆ. 'ಭೂಮಿಕಾ', 'ಪುಟ್ಟಿ', 'ಕತೆಯೊಳಗಿನ ಕಂತೆ', 'ಬೆಳಕು' ಮುಂತಾದ ಪ್ರಯೋಗಗಳು ಈ ಸಂಸ್ಥೆಗಳ ನಿರ್ಮಾಣಗಳಾಗಿವೆ.

ಕೋಟಿಗಾನಹಳ್ಳಿ ರಾಮಯ್ಯ ಅವರು 'ಆದಿಮ' ಮತ್ತು 'ಚೌಕಿ' ಸಂಸ್ಥೆಗಳ ಮೂಲಕ ಬೇಸಿಗೆ ರಂಗಶಾಲೆಗಳನ್ನು ಏರ್ಪಡಿಸುತ್ತ ಮಕ್ಕಳ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೇರೆಗಳನ್ನು ವಿಸ್ತರಿಸುವ ಕೆಲಸ ಮಾಡುತ್ತಿದ್ದಾರೆ. 'ಚುಕ್ಕಿಮೇಳ' ಎನ್ನುವ ಇವರ ಶಿಬಿರ ಯಶಸ್ವಿಯಾಗಿದೆ. ದೇಸಿ ಒಲವುಗಳನ್ನು ಹಿಗ್ಗಿಸುವುದು ರಾಮಯ್ಯ ಅವರ ಇನ್ನೊಂದು ಕನಸು.

ಮಂಡ್ಯ ರಮೇಶ ಅವರ ನೇತೃತ್ವದಲ್ಲಿರುವ 'ನಟನಾ' ತಂಡ ಕೂಡ ಮಕ್ಕಳಲ್ಲಿ ರಂಗಕಲೆಯ ಆಸಕ್ತಿಯನ್ನು ಬೆಳೆಸುವಲ್ಲಿ ನಿರತವಾಗಿದೆ. ಮಂಡ್ಯ ರಮೇಶ್ ನಿರ್ದೇಶನದ 'ತುಂಟ ರಾಬಿನ್', 'ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು', 'ಕಿಂದರಿಜೋಗಿ' ಮುಂತಾದ ಪ್ರಯೋಗಗಳು ರಾಜ್ಯದ ಒಳಗೆ ಮತ್ತು ಹೊರಗೆ ಯಶಸ್ವಿಯಗಿವೆ.

ಮಕ್ಕಳ ನಾಟಕಗಳ ಹರವನ್ನು ಹೆಚ್ಚಿಸುವ ದಿಸೆಯಲ್ಲಿ ರಾಷ್ಟ್ರೀಯ ನಾಟಕ ಶಾಲೆ(National School of Drama)ಯ ಬೆಂಗಳೂರಿನ ಪ್ರಾದೇಶಿಕ ಕೇಂದ್ರದ ಕೊಡುಗೆಯೂ ಇದೆ. ಬೇಸಿಗೆಯ ರಜೆ ಮುಗಿದು ಇನ್ನೇನು ಮಳೆಗಾಲ ಬಂದಿತು ಎನ್ನುವ ಸಂಕ್ರಮಣದ ಅವಧಿಯಲ್ಲಿ 'ಮಳೆಬಿಲ್ಲು' ಹೆಸರಿನ ನಾಟಕೋತ್ಸವವನ್ನು ಈ ಸಂಸ್ಥೆ ಏರ್ಪಡಿಸುತ್ತಿದೆ. ಬೆಂಗಳೂರು, ಧಾರವಾಡ, ಉಡುಪಿ, ಶಿವಮೊಗ್ಗ ಮುಂತಾದ ಸ್ಥಳಗಳಲ್ಲಿ ಮೂವತ್ತೈದಕ್ಕೂ ಹೆಚ್ಚು

ಪ್ರಯೋಗಗಳನ್ನು ಇದು ಪ್ರದರ್ಶಿಸಿದೆ. ಅನೇಕ ಹೆಸರಾಂತ ನಿರ್ದೇಶಕರು ಈ ಸಂಸ್ಥೆ ಏರ್ಪಡಿಸಿದ್ದ ರಂಗ ಪ್ರಯೋಗಗಳನ್ನು ನಿರ್ದೇಶಿಸಿ ಒಂದು ಮಾದರಿಯನ್ನು ನಿರ್ಮಿಸುವಲ್ಲಿ ನೆರವಾಗಿದ್ದಾರೆ.

ಕೆ. ಜಗುಚಂದ್ರ ಅವರು ರಂಗಭೂಮಿಯಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತ ಬಂದಿದ್ದಾರೆ. ತಾವು ಕಟ್ಟಿಕೊಂಡ 'ರಂಗಗಂಗಾ' ಮತ್ತು 'ಕಲಾದರ್ಶಿ' ತಂಡಗಳಿಂದ ಮಕ್ಕಳ ರಂಗಭೂಮಿಗೆ ಉತ್ತರ ಕರ್ನಾಟಕದಲ್ಲಿ ನೆಲೆ ಒದಗಿಸಲು ಪ್ರಯತ್ನಪಟ್ಟಿದ್ದಾರೆ. ವೈದೇಹಿ ಅವರ 'ಧಾಂ ಧೂಂ ಸುಂಟರಗಾಳಿ', ಚಂದ್ರಶೇಖರ ಕಂಬಾರ ಅವರ 'ಪುಷ್ಪರಾಣಿ', ಬಿ.ಟಿ. ದೇಸಾಯಿ ಅವರ 'ಗಿಡ್ಡೂ ಟೇಲರ್‌ನ ಸಾಹಸಗಳು' ಮಮತಾ ಜಿ.ಸಾಗರ ಅವರ 'ಚುಕ್ಕಿಚಂದ್ರಮ' ಮುಂತಾದ ನಾಟಕಗಳನ್ನು ರಾಮದುರ್ಗ, ಬೆಳಗಾವಿ, ಬಾಗಲಕೋಟೆ, ವಿಜಾಪುರ, ಕಾರವಾರ, ತುಮಕೂರು, ಮೈಸೂರು, ಬೆಂಗಳೂರು ಮುಂತಾದ ಕಡೆ ಆಡಿಸಿದ್ದಾರೆ. ತಮ್ಮದೆ 'ಬಣ್ಣದ ಹೂಗಳು', 'ಗಂಧರ್ವಸೇನಾ', 'ಪರಿಚಾರಕ' ಮುಂತಾದವುಗಳನ್ನು ಕೂಡ ರಂಗಪ್ರದರ್ಶನಕ್ಕೆ ಅಳವಡಿಸಿದ್ದಾರೆ. ಜಗುಚಂದ್ರ ಅವರ 'ಆಕಾಶ ಮತ್ತು ಚುಕ್ಕಿಚಂದ್ರಮ' (ಚಂದ್ರಾಲಯ ಪ್ರಕಾಶನ, ಧಾರವಾಡ, ಧಾರವಾಡ ೨೦೦೮) ಎನ್ನುವ ನಾಟಕ ಧಾರವಾಡ ಮತ್ತು ಇತರೆಡೆಗಳಲ್ಲಿ ಅನೇಕ ಸಲ ಪ್ರದರ್ಶನಗಳನ್ನು ಕಂಡಿದೆ. ಅದು ಧಾರವಾಡ ಬಾನುಲಿಯಿಂದಲೂ ಮಲ್ಲಪ್ಪ ಹೊಂಗಲ ಅವರ ನಿರ್ದೇಶನದಲ್ಲಿ ಪ್ರಸಾರಗೊಂಡಿದ್ದು ಇದೆ.

ಡಾ. ಶಶಿಧರ ನರೇಂದ್ರ ಕೂಡ ರಂಗಭೂಮಿಯೊಂದಿಗೆ ಮೊದಲಿನಿಂದಲೂ ತಮ್ಮನ್ನು ತೊಡಗಿಸಿಕೊಂಡವರು. ಶಿವರಾಮ ಕಾರಂತ ಅವರ 'ಋತುಯಾತ್ರೆ'ಯನ್ನು ೪೦ ಮಕ್ಕಳ ಒಂದು ನೃತ್ಯರೂಪಕವನ್ನಾಗಿ ನಿರ್ಮಾಣ ಮಾಡಿ, ಅನೇಕ ಕಡೆ ಪ್ರಯೋಗ ಮಾಡಿ ಮೆಚ್ಚುಗೆ ಗಳಿಸಿದ್ದಾರೆ. ಶಾಲಾ ನಾಟಕೋತ್ಸವ ಹಾಗೂ ಮಕ್ಕಳ ರಂಗಭೂಮಿಗೆಂದು 'ಕಿತ್ತೂರು ಚೆನ್ನಮ್ಮ' 'ಒಗ್ಗಟ್ಟಿನಲ್ಲಿ ಬಲವಿದೆ', 'ಕ್ರಾಂತಿವೀರ ಭಗತಸಿಂಗ್', 'ನಾಗರಹಾವೆ' 'ರೆವರೆಂಡ್ ಝಿಗ್ಲರ್', 'ಮಹಾತ್ಮ' ಮುಂತಾದ ತಮ್ಮದೇ ರಚನೆಗಳನ್ನು ಅನೇಕ ಕಡೆ ಆಡಿಸಿದ್ದಾರೆ.

ಅವರ 'ಉಪಮನ್ಯು' ಪೌರಾಣಿಕ ವಸ್ತುವನ್ನು ಒಳಗೊಂಡ ನಾಟಕ ವಿದ್ಯಾರ್ಥಿಯೊಬ್ಬನ ಗುರುಭಕ್ತಿಯನ್ನು ಸಾಬೀತುಪಡಿಸುತ್ತದೆ. ಕಷ್ಟಗಳ ಸರಮಾಲೆಯ ನಡುವೆ ವಿದ್ಯಾರ್ಥಿ ಗುರುವಿನ ವಿಶ್ವಾಸಕ್ಕೆ ಭಂಗ ತರುವುದಿಲ್ಲ. 'ಯಕ್ಷಪ್ರಶ್ನೆ', 'ಹುಡುಗ ಮತ್ತು ಮಾಸ್ತರು' ರೂಪಕಗಳನ್ನು ಕೂಡ ಆಡಿಸಿದ್ದಾರೆ. 'ಕಲಾದರ್ಪಣ', 'ಸಂಸ್ಕಾರಭಾರತಿ' ಸಂಸ್ಥೆಗಳ ಜೊತೆ ಸಂಪರ್ಕವಿರಿಸಿಕೊಂಡು ಮಕ್ಕಳ ರಂಗಭೂಮಿಯಲ್ಲಿದ್ದಾಗಲೂ ಕೆಲಸ ಮಾಡುವತ್ತ ಆಸಕ್ತಿ ಉಳಿಸಿಕೊಂಡಿದ್ದಾರೆ.

ಡಾ. ನಿಂಗುಸೊಲಗಿ ೧೯೯೦ರಿಂದ ಮಕ್ಕಳ ರಂಗಭೂಮಿಯಲ್ಲಿ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹುಲ್ಲಕಟ್ಟೆ ಎಂಬ ಗ್ರಾಮದಲ್ಲಿ ಇದ್ದಾಗಿನಿಂದ ಈಗ ಇರುವ ಗದಗ ಜಿಲ್ಲೆಯ ಮುಂಡರಗಿಯ ಶಾಲೆಯವರೆಗೂ ಒಂದಿಲ್ಲೊಂದು ಪ್ರಯೋಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತ ಬಂದಿದ್ದಾರೆ. ಮಕ್ಕಳನ್ನು ರಂಗದ ಮೇಲೆ ನೋಡಬೇಕು ಎನ್ನುವ ತೀವ್ರ ತುಡಿತವನ್ನು ತಾವು ಶಿಕ್ಷಕ ವೃತ್ತಿಗೆ ಬಂದಾಗಿನಿಂದಲೇ ಕಾರ್ಯರೂಪಕ್ಕೆ ತಂದರು. ಇದರ ಫಲವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ಗ್ರಾಮೀಣ ಮಕ್ಕಳಿಗೆಂದು 'ಅರಿತು ನಡೆಯದ ಬಾಳು ಬಾಳಲ್ಲ' ಎಂಬ ನಾಟಕವನ್ನು ಬರೆದು ಪ್ರದರ್ಶಿಸಿದರು. ಅದೇ

ರೀತಿ 'ಬನದಮ್ಮ', 'ಕಾಳೆಬಳಗ', 'ಕರುಳಿನ ಗೆಳೆಯ' ಎನ್ನುವ ಪ್ರಯೋಗಗಳನ್ನೂ ಮಾಡಿಸಿದರು. ಸಫ್ದರ್ ಹಶ್ಮಿಯವರ ನಾಟಕವೊಂದನ್ನು ಅನೇಕ ಕಡೆ ಆಡಿಸಿದ್ದಾರೆ. 'ಶಿಲ್ಪಿ' ಎನ್ನುವ ಈ ನಾಟಕವನ್ನು ಪ್ರೊ. ಕಾಶೀನಾಥ ಅಂಬಲಗಿ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅದೇ ರೀತಿ 'ಪುಣ್ಯಕೋಟಿ' ರೂಪಕವನ್ನು ಧಾರವಾಡ, ಮುಂಡರಗಿ, ಗದಗ ಸೇರಿದಂತೆ ಉತ್ತರ ಕರ್ನಾಟಕದ ಅನೇಕ ಕಡೆ ಮಕ್ಕಳಿಂದ ಪ್ರದರ್ಶನ ಕೊಡಿಸಿದ್ದಾರೆ. ಮುಂಡರಗಿಯಂತಹ ಗ್ರಾಮವೂ ಅಲ್ಲದ ಪಟ್ಟಣವೂ ಅಲ್ಲದ ಅರೆಪಟ್ಟಣ ಪ್ರದೇಶದಲ್ಲಿದ್ದುಕೊಂಡು ಸುತ್ತಲಿನ ಹಳ್ಳಿಗಳಲ್ಲಿ ತಮ್ಮ ಮಕ್ಕಳ ಕೂಟ 'ಮುಂಡರಗಿ ಕೋಟೆ ಮಕ್ಕಳ ಕೂಟ'ದಿಂದ ನಾಟಕದ ಕಂಪು ಹರಡಲು ಪ್ರಯತ್ನಿಸುತ್ತಿದ್ದಾರೆ. 'ಬನದಮ್ಮ;, 'ಕಾಗೆಬಳಗ', 'ಕರುಳಿನ ಗೆಳೆಯ', 'ನಮ್ಮ ಸ್ವಾತಂತ್ರ್ಯ', 'ಉಚ್ಚ-ನೀಚ', ಎನ್ನುವ ನಾಟಕಗಳು ಸೇರಿರುವ 'ನಿಂಗು ಸೊಲಗಿ ಐದು ಮಕ್ಕಳ ನಾಟಕಗಳು' ೨೦೦೦ನೇ ಇಸ್ವಿಯಲ್ಲಿ ಪ್ರಕಟವಾಯಿತು (ಚಿಲಿಪಿಲಿ ಪ್ರಕಾಶನ, ಧಾರವಾಡ). 'ಅಲೆಮಾರಿ ಮುದುಕ ಥೇಲಿಸ್' ಎನ್ನುವ ನಾಟಕ ೨೦೧೧ರಲ್ಲಿ ಮತ್ತು 'ಮುಂಡರಗಿ ಭೀಮರಾಯ' ೨೦೦೮ರಲ್ಲಿ ಪ್ರಕಟಗೊಂಡಿವೆ. ಆಧುನಿಕತೆ ಮತ್ತು ಹೊಸ ಪ್ರಯೋಗಗಳಿಗೆ ಇಂಬು ಕೊಡುವತ್ತ ನಿಂಗು ಸೊಲಗಿ ಲಕ್ಷ್ಯವಹಿಸಬೇಕಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕಿರಣಭಟ್, ಶ್ರೀಪಾದ ಭಟ್, ವಿಠ್ಠಲ ಭಂಡಾರಿ ಮುಂತಾದವರ ನೇತೃತ್ವದಲ್ಲಿ ರಂಗ ತಂಡಗಳು ಆ ಭಾಗ್ಯದಲ್ಲಿ ರಂಗಭೂಮಿಯನ್ನು ತುಂಬ ಕ್ರಿಯಾಶೀಲವಾಗಿ ಇಟ್ಟಿವೆ ಎನ್ನಬಹುದು. ಸಿದ್ದಾಪುರ, ಅಂಬಿಕಾನಗರ, ಹೊನ್ನಾವರ ಮುಂತಾದ ಕಡೆ ಪ್ರದರ್ಶನಗಳನ್ನು ಏರ್ಪಡಿಸುವುದರ ಮೂಲಕ, ಹೊಸ ಪ್ರಯೋಗಗಳಿಗೆ ತಮ್ಮನ್ನು ತೆರೆದುಕೊಳ್ಳುವುದರ ಮೂಲಕ 'ಚಿಂತನ ರಂಗ ಅಧ್ಯಯನ ಕೇಂದ್ರ', 'ರಂಗ ಸಂಗ', 'ಚಿಂತನ' ಮುಂತಾದ ತಂಡಗಳು ಮಕ್ಕಳ ರಂಗಭೂಮಿಗೆ ಈ ಪ್ರದೇಶದಲ್ಲಿ ಕಾಯಕಲ್ಪ ನೀಡಿವೆ. ಮಕ್ಕಳ ರೆಪರ್ಟರಿ, ರಂಗ ತರಬೇರಿ ಶಿಬಿರ, ತಿರುಗಾಟಗಳನ್ನು ಕಳೆದ ೧೨ ವರ್ಷಗಳಿಂದ 'ಚಿಂತನ ರಂಗ ಅಧ್ಯಯನ ಕೇಂದ್ರ' ನಡೆಸುತ್ತ ಬಂದಿದೆ. ಹಾಗೆಯೇ ಮತ್ತೂರು ಸುಬ್ಬಣ್ಣ, ಎಸ್. ಕಶ್ಯಪ್ ಮುಂತಾದವರ ಚಟುವಟಿಕೆಗಳು ಗಮನಾರ್ಹವಾಗಿವೆ.

ತುಮಕೂರಿನ 'ಶ್ರೀರಂಗರಂಗ', ಧಾರವಾಡದ 'ಗೊಂಬೆಮನೆ', ಹೊಸಪೇಟೆಯ 'ಭಾವೈಕ್ಯತಾ ವೇದಿಕೆ', 'ಸಮುದಾಯ ಸಾಂಸ್ಕೃತಿಕ ಸಂಘಟನೆ', ಕಾಡಶೆಟ್ಟಿಹಳ್ಳಿಯ 'ಮಕ್ಕಳ ಮನೆ', ಸಿ. ಲಕ್ಷ್ಮಣ ಅವರ 'ರಂಗಕಹಳೆ', ಹಂಸಲೇಖ ಅವರ 'ದೇಸಿ ಕಲಾಶಿಕ್ಷಣ' ಮುಂತಾದ ಸಂಸ್ಥೆಗಳ ಅವಿರತ ಪ್ರಯತ್ನಗಳನ್ನು ದಾಖಲಿಸಬೇಕು. ಈ ಸಂಸ್ಥೆ ಹಾಗೂ ಇವುಗಳನ್ನು ಮುನ್ನಡೆಸುವ ಕ್ರಿಯಾಶೀಲ ರಂಗಕಲಾವಿದರು, ನಿರ್ದೇಶಕರು ಮಕ್ಕಳ ನಾಟಕ ಕ್ಷೇತ್ರಕ್ಕೆ ನವಚೈತನ್ಯವನ್ನು ತುಂಬಿದರು. ಈ ಸಂಸ್ಥೆಗಳ ಜೊತೆಗೆ ಹೆಸರಿಸಬೇಕಾದ ಮತ್ತೊಂದು ಸಂಸ್ಥೆಯೆಂದರೆ ಆಕಾಶವಾಣಿ. 'ಗಿಳಿವಿಂಡು', 'ಬಾಲಬಳಗ', 'ಎಳೆಯರ ಬಳಗ', 'ಬಾಲಗೋಪಾಲ' ಮುಂತಾದ ಹೆಸರುಗಳುಳ್ಳ ಮಕ್ಕಳ ಕಾರ್ಯಕ್ರಮಗಳಲ್ಲಿ ನಿರಂತರ ಮಕ್ಕಳ ನಾಟಕಗಳನ್ನು, ರೂಪಕಗಳನ್ನು ಪ್ರಸಾರ ಮಾಡುವುದರ ಮೂಲಕ ರಂಗಸ್ಥಳದ ಮೇಲೆ ಸದಾ ಬೆಳಕು ಬಿದ್ದಿರುವಂತೆ, ನಾಟಕದ ಮಾತುಗಳನ್ನು ಮಕ್ಕಳು ಗುಣುಗುಣಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ. ಅನೇಕ ಹಿರಿಯ ಹಾಗೂ ಹೆಸರಾಂತ ಲೇಖಕರು ಮಕ್ಕಳ ನಾಟಕಗಳನ್ನು ಬರೆಯುವುದರಲ್ಲಿ, ಅನುವಾದಿಸುವುದರಲ್ಲಿ, ರೂಪಾಂತರಿಸುವುದರಲ್ಲಿ ತೊಡಗಿಕೊಂಡಿದ್ದರಿಂದ ಈ ಕ್ಷೇತ್ರಕ್ಕೆ ಅಗತ್ಯವಾಗಿ ಬೇಕಾಗಿದ್ದ ಒಂದು

ಜಗಿತ ಸಿಕ್ಕಂತಾಯಿತು. ಬಿ.ವಿ. ಕಾರಂತರ 'ಪಂಜರಶಾಲೆ' ಇರಲಿ, ಕಂಬಾರರ 'ಅಲಿಬಾಬಾ' ಇರಲಿ, ಕುವೆಂಪು ಅವರ 'ಬಾಲಗೋಪಾಲ' ಇರಲಿ, ಆರ್.ವಿ. ಭಂಡಾರಿಯವರ 'ಬೆಳಕಿನೆಡೆಗೆ' ಇರಲಿ ಎ.ಎಸ್. ಮೂರ್ತಿ ಅವರ 'ಓ ನನ್ನ ಮರವೇ' ಇರಲಿ, ವೈದೇಹಿ ಅವರ 'ಸುಂಟರಗಾಳಿ'ಯೆ ಇರಲಿ ಇವೆಲ್ಲವುಗಳು ನಿರ್ದೇಶಕನ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಂಡು ಹೊಸ ಅರ್ಥಸಾಧ್ಯತೆಗಳನ್ನು ಪಡೆದುಕೊಂಡವು.

ಕೆಲವು ಪ್ರಮುಖ ನಾಟಕಕಾರರು

ಬಿ.ವಿ. ಕಾರಂತ

ಅಪಾರ ರಂಗಪ್ರತಿಭೆಯ ಬಿ.ವಿ. ಕಾರಂತ ಅವರು ತಮ್ಮ 'ಪಂಜರಶಾಲೆ', 'ನಕ್ಕಳಾ ರಾಜಕುಮಾರಿ', 'ಇಸ್ಪೀಟ್ ರಾಜ್ಯ' ಮುಂತಾದ ಮಕ್ಕಳ ನಾಟಕ ಪ್ರಯೋಗಗಳ ಮೂಲಕ ಕನ್ನಡಕ್ಕೆ ಅಗತ್ಯವಾಗಿದ್ದ ಜೀವಂತಿಕೆಯನ್ನು ಕೊಡುವಲ್ಲಿ ಸಫಲರಾದರು.

ರವೀಂದ್ರನಾಥ ಟ್ಯಾಗೋರರ 'ತೋತಾ ಕಿ ಪಡಾಯಿ' ಎನ್ನುವ ಸಣ್ಣಕತೆಯೊಂದನ್ನು ಆಧರಿಸಿ 'ಪಂಜರಶಾಲೆ'ಯನ್ನು ಬಿ.ವಿ. ಕಾರಂತರು ರಚಿಸಿದರು. ಇದರಿಂದ ಕಲಾತ್ಮಕ ಅಭಿವ್ಯಕ್ತಿಯ ಹೊಸ ಶಕೆಯೊಂದು ಆರಂಭವಾಯಿತು. ಕಲಿಕೆಯೆನ್ನುವುದು ಮಕ್ಕಳಿಗೆ ಪಂಜರದ ಬಂಧನವಾಗದೆ ನಿರ್ಭಯದ ಪೂರ್ಣ ಸ್ವಾತಂತ್ರ್ಯವನ್ನು ಕೊಡುವ ಅನುಭವದ ತಿಳಿವಳಿಕೆಯಾಗಬೇಕೆಂದು 'ಪಂಜರಶಾಲೆ' ಪರೋಕ್ಷವಾಗಿ ಹೇಳುತ್ತದೆ. ಅಂತಹ ಹಿನ್ನೆಲೆಯ ಹಾಡಿನೊಂದಿಗೆ ನಾಟಕ ಆರಂಭವಾಗುತ್ತದೆ:

ದೂರ ದೂರ ದೂರ ದೂರ ಗಗನಕೆ
ದೂರ ದೂರ ದೂರ ದೂರ ಕ್ಷಿತಿಜಕೆ
ಹಾರೋಣ ಬಾ... ಹಾರೋಣ ಬಾ...
ಗರಿಗಳ ಕೆದರಿ ಚುಂಚುವ ಚಾಚಿ
ಬೆಟ್ಟ ತಪ್ಪಲು ಅಡವೀ ಬಯಲು
ದಾಟಿ ದೂರ ದೂ...ರ...ಹಾರೋಣ ಬಾ...

ರಾಜನ ತೋಟದಲ್ಲಿ ಹಣ್ಣು ತಿನ್ನುತ್ತಿರುವ ಗಿಳಿಹಿಂಡು ಸೇವಕರ ಸದ್ದಿನೊಂದಿಗೆ ಓಡಿಹೋಗುವವು. ಮರಿಗಿಳಿಯೊಂದು ಅವರ ಕೈಗೆ ಸಿಕ್ಕಿಬೀಳುವುದು. ಮರ, ಗಿಡ, ಹೂವು-ಹಣ್ಣುಗಳು ರಾಜನ ಆಸ್ತಿ ಎಂದು ಪರಿಗಣಿಸಿರುವ ಅರಮನೆಯವರು ಗಿಳಿಯನ್ನು ನಿರಕ್ಷರಕುಕ್ಷಿ, ಅಸಂಸ್ಕೃತ ಹಕ್ಕಿಯೆಂದು ಛೇಡಿಸುತ್ತಾರೆ. ಅರಣ್ಯವಾಸಿ ಪ್ರಾಣಿಗೆ ನಾಗರಿಕ ಪಾಠ ಹೇಳಲು ಪ್ರಾರಂಭಿಸುತ್ತಾರೆ. ರಾಜ ಅದಕ್ಕೆ ಸಮ್ಮತಿಸುತ್ತಾನೆ. ಶುಕಪಕ್ಷಿಯ ಅವಿದ್ಯೆಗೆ ಕಾರಣಗಳನ್ನು ಹುಡುಕುತ್ತಾರೆ:

ಸಂಶೋಧಕ ೧ : ಮೊತ್ತಮೊದಲನೆಯದಾಗಿ ಇದಕ್ಕೆ ಕಾಡಿನ ಸಂಪರ್ಕವನ್ನೇ ತಪ್ಪಿಸಬೇಕು.

ಸಂಶೋಧಕ ೨ : ಶುಕಪಕ್ಷಿಯ ರೆಕ್ಕೆ ಪುಕ್ಕಗಳನ್ನು ಕತ್ತರಿಸಿ ಹಾಕಬೇಕು.

ಸಂಶೋಧಕ ೩ : ಅಲ್ಲ, ಅಲ್ಲ, ಶುಕಪಕ್ಷಿಯ ಕಾಲುಗಳನ್ನೇ ಕಡಿದು ಹಾಕಬೇಕು.

ಸಂಶೋಧಕ ೪ : ಅಲ್ಲಲ್ಲ, ಅದರ ಕೊಕ್ಕಿಗೆ ಬೀಗಮುದ್ರೆ ಹಾಕಬೇಕು.

ಅದಕ್ಕೊಂದು ಪಂಜರಶಾಲೆ ನಿರ್ಮಿಸಿ, ಶಿಕ್ಷಣಕ್ಕಾಗಿ ದೊಡ್ಡ ಪಂಡಿತಮಂಡಲಿಯನ್ನೆ ನಿಯಮಿಸಿ ನೂರೆಂಟು ನಿರೀಕ್ಷಕರು, ಮಹಾನಿರೀಕ್ಷಕರು, ಸಹನಿರೀಕ್ಷಕರು, ಸುದ್ದಿವಾಹಕರು, ಪುಸ್ತಕಧಾರಿಗಳನ್ನು ನೇಮಕ ಮಾಡಿ ಗಿಳಿಗೆ ಸಂಸ್ಕೃತಿಯನ್ನು ಕಲಿಸಲಾಗುತ್ತದೆ. ಕೊನೆಗೆ ಅದು ಸಾಯುವ ಹಂತ ತಲಪಿದಾಗ ಅದು ಸಭ್ಯವಾಯಿತೆಂದು, ಶಿಕ್ಷಿತವಾಯಿತೆಂದು ಬಿಡಲಾಗುತ್ತದೆ. ಕಬ್ಬಿಣದ ಕಡಲೆಯಾಗಿರುವ ಕಲಿಕೆಯನ್ನು ಇಲ್ಲಿ ವ್ಯಂಗ್ಯಕ್ಕೆ ಈಡುಮಾಡಲಾಗಿದೆ.

ಪಂಜೆ ಮಂಗೇಶರಾಯರ 'ಹೆಡ್ಡ ಧೂಮನ ಕತೆ'ಯನ್ನು ಆಧರಿಸಿ ಕಾರಂತರು ಬರೆದ 'ಹೆಡ್ಡಾಯಣ' ೧೯೭೧ರಲ್ಲಿ ಪ್ರಪ್ರಥಮ ಬಾರಿಗೆ ಉಡುಪಿಯಲ್ಲಿ ಪ್ರಯೋಗಿಸಲ್ಪಟ್ಟಿತು. ಗೀತೆ, ಹಾಡು, ಸ್ವಾರಸ್ಯಕರ ಸನ್ನಿವೇಶಗಳಿಂದ 'ಹೆಡ್ಡಾಯಣ', 'ಅಳಿಲು ರಾಮಾಯಣ'ದಂತಹ ಪ್ರಯೋಗಗಳು ವಿನೂತನ ರಂಗಕಲ್ಪನೆಗಳನ್ನು ತೆರೆದಿಟ್ಟವು.

ಎಮ್.ಎನ್. ಕಾಮತ್

ನೂರು ವರ್ಷಗಳ ಹಿಂದೆ ಶಾಲೆಗಳಲ್ಲಿ ಮಕ್ಕಳ ನಾಟಕದ ಪರಿಕಲ್ಪನೆ ಕಣ್ಣುಬಿಡುತ್ತಿರುವಾಗ ಎಮ್.ಎನ್. ಕಾಮತ ಅವರು ರಚಿಸಿದ ನಾಟಕಗಳು ಆ ಪರಿಕಲ್ಪನೆಗೆ ಸ್ಪಷ್ಟ ರೂಪ ಒದಗಿಸುವಲ್ಲಿ ನೆರವಾದವು. ಅವರು ಪ್ರಥಮವಾಗಿ ರವೀಂದ್ರನಾಥ ಟ್ಯಾಗೋರರ 'ಪೋಸ್ಟ್ ಆಫೀಸ್' ನಾಟಕವನ್ನು 'ಅಂಚೆಮನೆ' ಎಂದು ಅನುವಾದಿಸಿಕೊಟ್ಟರು. ಮಕ್ಕಳನ್ನೂ ಹಿರಿಯರನ್ನೂ ಗಮನದಲ್ಲಿಟ್ಟುಕೊಂಡು ಇದು ಸಿದ್ಧವಾಗಿತ್ತು. ರಂಗಭೂಮಿಯ ಬಗ್ಗೆ ತಿಳಿವಳಿಕೆಯುಳ್ಳ ಕಾಮತರಿಂದ ಪ್ರೇಕ್ಷಕರ ಒಲವುಗಳನ್ನು ಪುರಸ್ಕರಿಸುವ 'ಚಂದ್ರಹಾಸ', 'ಸೀತಾ ಸ್ವಯಂವರ', 'ತುಕಾರಾಮ', 'ತೆನಾಲಿ ರಾಮ', 'ಮರ್ಜಿ', 'ಮಾಲಿ', 'ಶಿಕ್ಷಣ ಪರೀಕ್ಷೆ', 'ಶುಕ ಶಿಕ್ಷಣ' ಮುಂತಾದ ನಾಟಕಗಳು ರಚಿಸಲ್ಪಟ್ಟವು. ಆದರ್ಶ ಹಾಗೂ ನೀತಿಯ ಪಾಠಗಳೇ ಈ ನಾಟಕಗಳ ಮೂಲ ತಿರುಳಾಗಿದ್ದವು. ಪುರಾಣ–ಇತಿಹಾಸದ ಪಾತ್ರ ಹಾಗೂ ಸಂಭಾಷಣೆಗಳಿಂದ ಎಳೆಯರಲ್ಲಿ ಒಂದು ರೀತಿಯ ಪರಂಪರೆಯ ಆರಾಧನೆಯನ್ನು ಅವು ಹುಟ್ಟುಹಾಕುವಲ್ಲಿ ಯಶಸ್ವಿಯಾದವು. ಕೆಲವು ಸಾಮಾಜಿಕ ಸಂಗತಿಗಳನ್ನು ಕುರಿತು ಅವರು ನಾಟಕಗಳನ್ನು ಬರೆಯುವುದರ ಮೂಲಕ ಹೊಸತನದತ್ತ ತುಡಿದರು.

ಶಿವರಾಮ ಕಾರಂತ

ಶಿವರಾಮ ಕಾರಂತರ ಕ್ರಿಯಾಶೀಲತೆ ಅವರನ್ನು ಮಕ್ಕಳ ರಂಗಭೂಮಿಯಲ್ಲಿಯೂ ಆಗ ನವನವೀನತೆಯೆನ್ನಬಹುದಾದ ಪ್ರಯೋಗಗಳಿಗೆ ಈಡುಮಾಡಿತು. ಕೇವಲ ಪುರಾಣ, ದಂತಕತೆ, ಇತಿಹಾಸಗಳಿಗೆ ಸೀಮಿತವಾಗಿದ್ದ ಕಥಾವಸ್ತುವನ್ನು ಅವರು ಸಾಮಾಜಿಕ ವಿಷಯಗಳಿಗೆ ವಿಸ್ತರಿಸಿದರು. ಅವರ ಕಾದಂಬರಿಗಳಲ್ಲಿ ನಿರೂಪಿತವಾಗಿರುತ್ತಿದ್ದ ವೈಚಾರಿಕತೆಯ ಹಲವು ಅಂಶಗಳಾದರೂ ಈ ನಾಟಕಗಳಲ್ಲಿ ಸೇರಿಕೊಂಡಿರುತ್ತಿದ್ದವು. ಸುಮಾರು ೧೯೩೦ರಿಂದ ೧೯೪೫ರ

ಅವಧಿಯಲ್ಲಿ ಕಾರಂತರ ಅನೇಕ ನಾಟಕಗಳು ಮಕ್ಕಳನ್ನು ರಂಜಿಸಿದವು. ಪ್ರಾಣಿಪಕ್ಷಿಗಳ ಪಾತ್ರಚಿತ್ರಣದ 'ನಿಮ್ಮ ಓಟು ಯಾರಿಗೆ' ದಂತಹ ನಾಟಕಗಳ ಮೂಲಕ ಎಳೆಯರಿಗೆ ರಾಜಕೀಯದ ಹುನ್ನಾರಗಳನ್ನು ತಿಳಿಸಲು ಪ್ರಯತ್ನಿಸುತ್ತಾರೆ. ವ್ಯಂಗ್ಯ, ಟೀಕೆ, ಅಣಕಗಳು ಇದರಿಂದ ಮಕ್ಕಳಿಗೆ ಪರಿಚಯವಾಗುತ್ತವೆ. ೧೯೯೧ರಲ್ಲಿ ಅಕ್ಷರ ಪ್ರಕಾಶನ ಹೊರತಂದ 'ಸರಳ ವಿರಳ ನಾಟಕಗಳು' ಸಂಗ್ರಹದಲ್ಲಿ ಇದು ಪ್ರಕಟಗೊಂಡಿದೆ.

೧೯೪೭ರಲ್ಲಿ ಪುತ್ತೂರಿನ ಹರ್ಷ ಪ್ರಕಟಣಾಲಯದಿಂದ ಮರುಮುದ್ರಿತವಾಗಿರುವ 'ಮಂಗನ ಮದುವೆ' ಕಾರಂತರ ಮತ್ತೊಂದು ಅಣಕವಾಡು ಎನ್ನಬಹುದು. ಇಲ್ಲಿರುವ ವಿನೋದಪ್ರಜ್ಞೆ ತುಂಬ ಸೊಗಸಾಗಿದೆ.

'ಸೂರ್ಯಚಂದ್ರ', 'ಅಜ್ಜಿಮಾಣಿ', 'ಡೊಮಿಂಗೊ', 'ಹಸನ್‌ಪರ್ವೀನಾ', 'ನರನೋ ವಾನರನೋ', 'ಕಾಕ ಪರಿಣಯ' ಮುಂತಾದ ಅವರ ನಾಟಕಗಳು ಸ್ವಾರಸ್ಯಕರವಾಗಿವೆ.

ಕುವೆಂಪು

ಶ್ರೇಷ್ಠ ಸಾಹಿತ್ಯ ಗುಣಗಳುಳ್ಳ ಕೆಲವು ನಾಟಕಗಳನ್ನು ಬರೆಯುವುದರ ಮೂಲಕ ಕುವೆಂಪು ಅವರು ಮಕ್ಕಳ ರಂಗಭೂಮಿಗೆ ಅಪರೂಪದ ಕೊಡುಗೆ ನೀಡಿದ್ದಾರೆ. ಯಾವ ಉತ್ಕಟತೆಯಿಂದ ಅವರು ಹಿರಿಯರಿಗಾಗಿ ಬರೆದರೋ ಅದೇ ಉತ್ಕಟತೆಯಲ್ಲಿ ಮಕ್ಕಳ ಸಾಹಿತ್ಯವನ್ನೂ ರಚಿಸಿದರು. ಅಂದರೆ ಮಕ್ಕಳ ಸಾಹಿತ್ಯವನ್ನು ಅವರು ಉಪೇಕ್ಷಿಸಲಿಲ್ಲ. ಬದಲಾಗಿ ಅದರಲ್ಲಿ ಕಾಲಾತೀತವಾದ ಮಾನವೀಯ ಸೆಳಕುಗಳನ್ನು ಸೇರ್ಪಡೆ ಮಾಡುವ ಮೂಲಕ ಒಂದು ಶ್ರೇಷ್ಠ ಮಾದರಿಗೆ ಉದಾಹರಣೆಯಾದರು.

ಅವರ 'ನನ್ನ ಗೋಪಾಲ' ಬಾಲಕನ ತುಡಿತಗಳನ್ನು ಪುರಾಣದ ಪಾತ್ರವೊಂದರ ಮೂಲಕ ಕಲಾತ್ಮಕವಾಗಿ ಬಿಂಬಿಸುವ ಬಗೆಯಾಗಿದೆ. ನಾಟಕಗಳನ್ನು ಸಾಹಿತ್ಯ ಕೃತಿಗಳಾಗಿಯೂ ಓದಬಹುದೆಂದು, ಆಸ್ವಾದಿಸಬಹುದೆಂದು, ಮೌಲ್ಯಗಳನ್ನು ಕಂಡುಕೊಳ್ಳಬಹುದೆಂದು ಅವರ ರಚನೆಗಳನ್ನು ನೋಡಿದಾಗ ತಿಳಿಯುತ್ತದೆ. ನಾಟಕವೊಂದಕ್ಕೆ ನಿರ್ದೇಶಕ, ನಟ, ಪ್ರೇಕ್ಷಕರು ತಂದುಕೊಡುವ ಅರ್ಥ ಹಾಗೂ ಮಹತ್ವ ಬೆಲೆಯುಳ್ಳದ್ದು. ಅದರ ಜೊತೆಗೆ ನಾಟಕಕೃತಿ ಕಲಾತ್ಮಕವಾಗಿದ್ದಷ್ಟೂ ಸಾಹಿತ್ಯಿಕವಾಗಿದ್ದಷ್ಟೂ ನಾಟಕದ ಮೌಲ್ಯ ಹೆಚ್ಚಾಗುತ್ತ ಹೋಗುತ್ತದೆ. ಈ ದೃಷ್ಟಿಯಿಂದ ಕುವೆಂಪು ನಾಟಕಗಳು ಗಂಭೀರ ರಚನೆಗಳಾಗಿ ತಮ್ಮ ಮೌಲ್ಯವನ್ನು ಕಾಪಾಡಿಕೊಂಡಿವೆ. ಅವುಗಳಲ್ಲಿ ಆಧುನಿಕ ನಾಟಕೀಯ ಅಂಶಗಳು ಕಡಿಮೆಯೆಂದೆನಿಸಿದರೂ ಪರಿಣಾಮದ ದೃಷ್ಟಿಯಿಂದ ಬಹಳ ಉಪಯುಕ್ತವಾದವುಗಳು.

ಮಗುವಿನಲ್ಲಿ ದೇವರ ಸ್ವರೂಪವನ್ನು ಕಾಣುವಂತೆ 'ನನ್ನ ಗೋಪಾಲ' ನಾಟಕ ಪ್ರೇರೇಪಿಸುತ್ತದೆ. ಕರುಣರಸ ಅಥವಾ ಕಾರುಣ್ಯ ಎನ್ನುವುದು ಈ ಸಂಭಾಷಣೆಯಲ್ಲಿ ಹರಿದು ನಮ್ಮನ್ನು ಮುಟ್ಟುತ್ತದೆ. ಸ್ಥಿತಿವಂತರಲ್ಲದ ತಾಯಿ ಮತ್ತು ಮಗು ತಮ್ಮ ಕಷ್ಟಗಳಿಗೆ ಭಗವಂತನನ್ನು ಆಶ್ರಯಿಸಿದ್ದಾರೆ. ಶಾಲೆ ಮುಗಿಸಿ ಕಾಡಿನ ಕತ್ತಲೆಯಲ್ಲಿ ಬರುವುದೆಂದರೆ ಮಗು ಗೋಪಾಲನಿಗೆ ಹೆದರಿಕೆ. ಆಗ ತಾಯಿ ಹೇಳುತ್ತಾಳೆ:

ತಾಯಿ : ನೀನು ಶಾಲೆಯಿಂದ ಬರುವಾಗ ಕಾಡಿನಲ್ಲಿ ಹೆದರಿಕೆಯಾದರೆ ಗೋಪಾಲನನ್ನು ಕೂಗು, ಬರುತ್ತಾನೆ.

ಗೋಪಾಲ : ಯಾರಮ್ಮ ಅವನು?

ತಾಯಿ : ನಿನ್ನಣ್ಣ, ನನ್ನ ಹಿರಿಯ ಮಗ. ಕಾಡಿನಲ್ಲಿ ಅವನು ಯಾವಾಗಲೂ ದನ ಕಾಯುತ್ತಾ ಇರುತ್ತಾನೆ. ನೀನು ಕರೆದರೆ ಬಂದು ನಿನ್ನನ್ನು ಕಾಡು ದಾಟಿಸುತ್ತಾನೆ.

ತಮ್ಮ ಗೋಪಾಲ ಕರೆದಾಗ ಅಣ್ಣ 'ಬನದ ಗೋಪಾಲ' ದನ ಕಾಯುವವನಾಗಿ ಓಗೊಡುತ್ತಾನೆ. ಕೊಳಲನೂದುವ, ನವಿಲುಗರಿ ಸಿಕ್ಕಿಸಿಕೊಂಡ ಕೃಷ್ಣನಾಗಿ ಅವನ ಕಣ್ಣಮುಂದೆ ಗೋಪಾಲನು ನಿಲ್ಲುತ್ತಾನೆ. ತಮ್ಮ ಬನದ ಗೋಪಾಲನ ಕೊಳಲದನಿಗೆ ತಲೆದೂಗುತ್ತಾನೆ. ಬನದ ಗೋಪಾಲ ಗೋಪಾಲನಿಗೆ ಕೊಟ್ಟ 'ಮೊಸರು ಕುಡಿಕೆ'ಯನ್ನು ಗುರುಗಳು ಎಷ್ಟು ಸಲ ಸುರುವಿದರೂ ಖಾಲಿಯಾಗದು! ಗುರುಗಳು ಸಹಿತ ಕೊನೆಗೆ ಕಾಡಿನ ಗೋಪಾಲನ ದರ್ಶನಕ್ಕೆ ಬರುತ್ತಾರೆ. ವಿದ್ಯಾರ್ಥಿಗೆ ಭೆಟ್ಟಿಯಾಗಿರುವ ಭಗವಂತ ಗುರುಗಳಿಗೆ ಮಾತ್ರ ಮುಖ ತೋರಲೊಲ್ಲ. ಅವರು ಇನ್ನೂ ಕಾಯಬೇಕು ಎನ್ನುವ ಕಾಡಿನ ಧ್ವನಿ ಕೇಳಿಬರುತ್ತದೆ. ನಿರ್ಮಲ ಮನಸ್ಸಿನವರಿಗೆ ಮಾತ್ರ ದೇವರು ಕಾಣಿಸಿಕೊಳ್ಳುತ್ತಾನೆ ಎಂಬ ಆಶಯವನ್ನು ಈ ನಾಟಕ ಹೊಂದಿದೆ. ತಾಯಿಗೆ ಮಾತ್ರ ದೇವರು ಮಗ ಇದ್ದ ಹಾಗೆ. ಗೋಪಾಲ ತನ್ನ ಕಿರಿಯ ಮಗ, ಬನದ ಗೋಪಾಲ ತನ್ನ ಹಿರಿಯ ಮಗ ಎಂದು ಆಕೆ ಹೇಳುತ್ತಾಳೆ. ಅದೂ ಅಲ್ಲದೆ ಮಗ ದೇವರನ್ನು ಕಂಡಿದ್ದಾನಲ್ಲ, ಸಾಕು, ತನಗೂ ಕಂಡ ಹಾಗೆ. ಮಣ್ಣಿನಲ್ಲಿಯೆ ಅವನಿದ್ದಾನೆ ಎಂದು ನಂಬುತ್ತಾಳೆ.

ತಾಯಿ : ಗೋಪಾಲ, ನಿನ್ನಣ್ಣನನ್ನು ಯಾವಾಗಲೂ ಮರೆಯಬೇಡ. ಅವನ ಮೇಲೆ ನಿನ್ನ ಪ್ರೀತಿ ನಿರಂತರವಾಗಿರಲಿ. ನಿನಗೇನು ಬೇಕಾದರೂ ಅವನನ್ನೇ ಕೇಳು. ನಿನಗೇನು ಕಷ್ಟ ಬಂದರೂ ಅವನಿಗೆ ಹೇಳು.

ಗೋಪಾಲ : ಅಮ್ಮಾ ನನ್ನಣ್ಣನನ್ನು ನೀನೂ ನೋಡುವೆಯಂತೆ. ನಾಳೆ ನನ್ನೊಡನೆ ಬಾ. ಪಾಪ! ಅವನಿಗೆ ದನ ಕಾಯುವ ಕೆಲಸ. ಇಲ್ಲಿಗೆ ಬರಲು ಸಮಯವಿಲ್ಲವಂತೆ.

ತಾಯಿ : ಬೇಡ, ಕಂದ. ನಿನ್ನನ್ನು ನೋಡಿದರೇ ಸಾಕು. ಅವನನ್ನು ನೋಡಿದ ಹಾಗೆಯೇ. ನನ್ನ ಪಾಲಿಗೆ ನೀನೇ ಅವನು. ಅವನೇ ನೀನು.

ನವಿರು ಭಾವನೆಗಳ ಈ ನಾಟಕ ಕುವೆಂಪು ಅವರ ಆಧ್ಯಾತ್ಮಕ ಸೆಳಕುಗಳನ್ನು ಸೂಚಿಸುವಂತೆ ಮುಗ್ಧತೆ, ಋಜುತ್ವ, ಸರಳತೆ, ನಿರ್ದೋಷತೆ, ನೈತಿಕ ಪರಿಶುದ್ಧಿ, ನಿಷ್ಕಪಟತೆ, ಅಕೃತಿಮತೆ ಮುಂತಾದವುಗಳಲ್ಲಿ ಕುವೆಂಪು ಅವರಿಗಿದ್ದ ಒಲವುಗಳನ್ನು ತೆರೆದಿಡುತ್ತದೆ. ಅದಕ್ಕಾಗಿಯೇ ಎ.ಆರ್. ಕೃಷ್ಣಶಾಸ್ತ್ರೀ ಅವರು ಈ ನಾಟಕವನ್ನು ೧೯೩೦ರಲ್ಲಿ ಓದಿದ ಕೂಡಲೆ ಕುವೆಂಪು ಅವರಿಗೆ ಒಂದು ಓಲೆ ಬರೆದರು.

ನನ್ನ ಪ್ರಿಯ ಪುಟ್ಟಪ್ಪ,

ನಿಮ್ಮ 'ನನ್ನ ಗೋಪಾಲ' ಈ ದಿನ ಬೆಳಿಗ್ಗೆ ನನಗೆ ಮುಟ್ಟಿತು. ಒಡನೆಯೆ ಓದಿ

ಮುಗಿಸಿಬಿಟ್ಟೆ. ಶ್ರೀ ಶಾಸ್ತ್ರಿ ಅವರಿಗೆ ನಾನು ಬರೆದಿರುವಂತೆ, ಅದು ಭಗವದ್ಗೀತೆ ಮತ್ತು ಭಾಗವತ ಎರಡರ ಸಾರಸರ್ವಸ್ವವನ್ನು ತನ್ನಲ್ಲಿ ಒಳಗೊಂಡಿರುವ ಒಂದು ಪುಟ್ಟ ಅನರ್ಘ್ಯ ರತ್ನ. ಕಣ್ಣೀರು ತುಂಬಿ ಅದನ್ನು ಓದಿದ್ದೇನೆ. ಮಡಿ ಮಾಡಿದ ಹತ್ತಿಯ ಬಟ್ಟೆಯಂತಹ ಅಂತರ್ನೈರ್ಮಲ್ಯವನ್ನು ಅನುಭವಿಸುತ್ತಿದೆ ನನ್ನ ಚೇತನ. ಸಾಧಾರಣವಾಗಿ ಜನ ನನ್ನನ್ನು ಕಲ್ಲುಮನಸ್ಸಿನ ಕಟುವ್ಯಕ್ತಿ ಎಂದು ಭಾವಿಸುತ್ತಾರೆ; ಆದರೆ ನಂಬುತ್ತೀರೋ ಇಲ್ಲವೊ, ಅದನ್ನು ಓದಿದ ಮೇಲೆ ನನ್ನ ಹೃದಯ ಒಂದು ಊರ್ಧ್ವಮುಖವಾದ ಸ್ವರ್ಗೀಯ ರಸಾನಂದ ಸ್ರೋತದಲ್ಲಿ ಮುಳುಗಿ ತೇಲಿಹೋಗುತ್ತಿರುವಂತಿದೆ. ಪರಿಣಾಮವಾಗಿ ಈವೊತ್ತು ಏನೊಂದೂ ನಿತ್ಯದ ನೀರಸ ಕರ್ತವ್ಯ ಕರ್ಮವನ್ನು ಮಾಡಲಾರದವನಾಗಿದ್ದೇನೆ. ಆಧ್ಯಾತ್ಮಕ್ಕೆ ಇಷ್ಟೊಂದು ಉಪಯುಕ್ತ ವಾಹಕವಾಗಿ ಸಾಹಿತ್ಯ ತಾನೆಂದೂ ಸೃಷ್ಟಿಯಾಗಿಲ್ಲ. ತಮ್ಮ ಈ ಸೇವೆಯ ಬದುಕಿನಲ್ಲಿ ವಾಗ್ದೇವಿಯ ಮತ್ತು ಭಗವಂತನ ಕೃಪೆ ನಿತ್ಯಸಂಗಿಯಾಗಿ ನಿಮ್ಮನ್ನು ನಡೆಸಲಿ ಎಂದು ಪ್ರಾರ್ಥಿಸುತ್ತೇನೆ.

ಬೆಂಗಳೂರು

ಕೆ.ವಿ. ಸುಬ್ಬಣ್ಣ

'ಕಾಡಿನಲ್ಲಿ ಕಥೆ', 'ಬೆಟ್ಟಕ್ಕೆ ಚಳಿಯಾದರೆ', 'ಜಯಂಟ್ ಮಾಮ' ಮುಂತಾದ ನಾಟಕಗಳನ್ನು ಬರೆದಿರುವ ಕೆ.ವಿ. ಸುಬ್ಬಣ್ಣ ರಂಗ ಪರಿಕರ, ವಿನ್ಯಾಸ, ಬೆಳಕಿನ ಹೊಂದಾಣಿಕೆ, ಹಿನ್ನೆಲೆಯ ದೃಶ್ಯ ಮುಂತಾದ ಆಧುನಿಕ ತಂತ್ರಗಳಿಗೆ ಹೆಚ್ಚು ಒತ್ತುಕೊಟ್ಟು ನಾಟಕಗಳು ರಂಗದ ಮೇಲೆ ಹೆಚ್ಚು ಯಶಸ್ವಿಯಾಗುವಂತೆ ನೋಡಿಕೊಂಡರು. ಪಾತ್ರವರ್ಗ ಹಾಗೂ ನಿರ್ದೇಶಕನ ಮಹತ್ವವನ್ನು ಅವರು ಹೇಳಿದರು. ನಾಟಕದ ದಿಗ್ದರ್ಶಕ, ನಟರು ಹಾಗೂ ನಾಟಕಕಾರ ಒಟ್ಟು ಸೇರಿದಾಗಲೆ ಒಂದು ಪರಿಣಾಮಕಾರಿ ಪ್ರದರ್ಶನವಾಗಬಲ್ಲದೆಂದು ಸುಬ್ಬಣ್ಣ ನಂಬಿದ್ದರು. ೧೯೬೮ರಲ್ಲಿ 'ಕಾಡಿನಲ್ಲಿ ಕಥೆ' ಪ್ರದರ್ಶನವಾಯಿತು. ಇಕ್ಬಾಲ್ ಅಹಮದ್ ನಿರ್ದೇಶನದ 'ಬೆಟ್ಟಕ್ಕೆ ಚಳಿಯಾದರೆ' ನಾಟಕ ೧೯೭೭ರಲ್ಲಿ ಶಿವಮೊಗ್ಗದಲ್ಲಿ ಪ್ರೇಕ್ಷಕರೆದುರು ಪ್ರದರ್ಶಿತಗೊಂಡಿತು. ಪ್ರಸಿದ್ಧ ಇಂಗ್ಲಿಷ್ ಲೇಖಕ Oscar Wilde ನ 'The Selfish Gaint' ಕತೆಯನ್ನು ಆಧರಿಸಿ 'ಜಯಂಟ್ ಮಾಮ' ಎನ್ನುವ ನಾಟಕವನ್ನು ಸುಬ್ಬಣ್ಣ ಬರೆದಿದ್ದಾರೆ. ಇದು ೧೯೮೩ರಲ್ಲಿ ಹೆಗ್ಗೋಡಿನಲ್ಲಿ ಕೆ.ಜಿ. ಕೃಷ್ಣಮೂರ್ತಿ ನಿರ್ದೇಶನದಲ್ಲಿ ಪ್ರದರ್ಶಿತವಾಯಿತು.

ಡಾ. ಚಂದ್ರಶೇಖರ ಕಂಬಾರ

ಡಾ. ಚಂದ್ರಶೇಖರ ಕಂಬಾರರು ರಂಗಭೂಮಿಯ ಅಪಾರ ಸಾಧ್ಯತೆಗಳನ್ನು ತೋರಿಸಿಕೊಟ್ಟ ಬಹುಮುಖಿ ಪ್ರತಿಭಾವಂತರು. ಹಿರಿಯರಿಗಾಗಿ ಮತ್ತು ಮಕ್ಕಳಿಗಾಗಿ ಅವರು ಬರೆದಿರುವ ನಾಟಕಗಳು ರಂಗಪ್ರದರ್ಶನಗಳಿಗೆ ಹೆಸರುವಾಸಿಯಾಗಿರುವಂತೆ ಸಾಹಿತ್ಯಕ ಗುಣಗಳಿಂದ ತಮ್ಮ ಮಹತ್ವವನ್ನು ಹೆಚ್ಚಿಸಿಕೊಳ್ಳುತ್ತ ಹೋಗುತ್ತವೆ. 'ಅಲಿಬಾಬಾ ಮತ್ತು ನಲವತ್ತು ಮಂದಿ ಕಳ್ಳರು', 'ಪುಷ್ಪರಾಣಿ', 'ಕಿಟ್ಟಿಕಥೆ' ಎನ್ನುವ ವೈವಿಧ್ಯಮಯ ಮಕ್ಕಳ ನಾಟಕಗಳು ಬಿ.ವಿ. ಕಾರಂತರ ಸಂಗೀತ ಹಾಗೂ ಪ್ರೇಮಾ ಕಾರಂತರ ನಿರ್ದೇಶನದಲ್ಲಿ ನಾಡಿನಾದ್ಯಂತ ಆಡಲ್ಪಟ್ಟು ಹಲವು ಯಶಸ್ವೀ ಪ್ರಯೋಗಗಳನ್ನು ಕಂಡಿವೆ. ರಂಗಾಸಕ್ತರಿಗೆ ಹೊಸ ಹೊಳಹುಗಳನ್ನು ನೀಡಿವೆ.

'ಅಲಿಬಾಬ ಮತ್ತು ನಲವತ್ತು ಮಂದಿ ಕಳ್ಳರು' ಮೊದಲ ಬಾರಿಗೆ ೧೯೮೦ ಮೇ ೨೩ ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 'ಬೆನಕ' ತಂಡದವರಿಂದ ಪ್ರಯೋಗಿಸಲ್ಪಟ್ಟಿತು. ೧೯೮೫ ಮತ್ತು ೧೯೮೬ರ ನೀನಾಸಂ ತಿರುಗಾಟದಲ್ಲಿಯೂ ಇದನ್ನು ಆಡಲಾಯಿತು. ಪ್ರೇಮಾ ಕಾರಂತ ಅವರ ಒತ್ತಾಯದ ಮೇರೆಗೆ ತಾವು ಇದನ್ನು ಬರೆದುದಾಗಿ ಡಾ. ಕಂಬಾರ ಹೇಳಿದ್ದಾರೆ: 'ಪ್ರೇಮಾ ಕಾರಂತ ದುಂಬಾಲು ಬಿದ್ದು, ಮಕ್ಕಳೆಲ್ಲಾ ಓದಿ ಅದರಲ್ಲಿರುವ ಖುಷಿ ಭಾಗವನ್ನು ಆನಂದಿಸುತ್ತಿದ್ದುದನ್ನು ಅನುಭವಿಸಿ ಬರೆದದ್ದು. ಇದು ಹೇಳಿ ಕೇಳಿ ಜನಪದ ಕತೆಯಾದ್ದರಿಂದ ನಾಟಕೀಯ ಸಂಘರ್ಷಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ಬಯಲಾಟದ ರೂಪದಲ್ಲೇ ಬರೆಯಬೇಕಾಯಿತು.

ಮಕ್ಕಳ ಸಾಹಿತ್ಯಕ್ಕೆ ಒಂದು ವಿಶೇಷ ಕೊಡುಗೆಯಾಗಿರುವ 'ಅಲಿಬಾಬ ಮತ್ತು ನಲವತ್ತು ಕಳ್ಳರು' ನಾಟಕ ತನ್ನ ವಿನೋದ ಹಾಗೂ ಮಿಂಚಿನ ಮಾತುಗಾರಿಕೆಗಾಗಿ ಪ್ರಸಿದ್ಧವಾಗಿದೆ. ಬಿಟ್ಟೂ ಬಿಡದಂತೆ ಸೇರಿರುವ ಲಾಸ್ಯ, ಹಾಡು, ರಸಮಯ ಸನ್ನಿವೇಶಗಳಿಂದ ನಾಟಕ ಮಕ್ಕಳನ್ನು ರಂಜಿಸುವುದರ ಜೊತೆಗೆ ಸಾಹಿತ್ಯದ ಅರ್ಥಪೂರ್ಣ ದರ್ಶನ ಮಾಡಿಸುತ್ತದೆ. ಬಯಲಾಟದ ವಿನ್ಯಾಸದಲ್ಲಿ ಬರೆಯಲಾಗಿರುವ 'ಅಲಿಬಾಬಾ' ನಾಟಕವು ಹಾಡು, ನೃತ್ಯ, ಕುಣಿತ, ಆಂಗಿಕ ಅಭಿನಯ ಮುಂತಾದವುಗಳನ್ನು ಹೇರಳವಾಗಿ ಬಳಸಿಕೊಳ್ಳುತ್ತದೆ. ಕತೆ ಪತ್ತೇದಾರಿ ಮಾದರಿಯಲ್ಲಿ ಸಾಗುತ್ತ ಜನಪ್ರಿಯ ಮತ್ತು ಜಾನಪದದ ಅಂಶಗಳನ್ನು ತನ್ನ ಒಡಲಲ್ಲಿ ನುರಿಸಿಕೊಳ್ಳುತ್ತದೆ. ವಿನೋದ ಮತ್ತು ಕೌಶಲ ಈ ನಾಟಕದ ಮುಖ್ಯ ಅಂಶಗಳಾಗಿವೆ. ಇದನ್ನು ಕೆ.ವಿ. ಅಕ್ಷರ ಅವರು ಹೀಗೆ ಗುರುತಿಸಿದ್ದಾರೆ. " 'ಶ್ರೀ ಜಗವದನಾ' ಎಂಬ ಪ್ರಾರ್ಥನೆಯೊಂದಿಗೆ, ಪೂರ್ಣವಾಗಿ ಒಂದು ಸಣ್ಣಾಟದ ಶೈಲಿಯಲ್ಲಿಯೇ ಆರಂಭವಾಗುವ ಈ ನಾಟಕ ಮುಂದೆ 'ಓ ಪ್ಯಾರಿ ಮರ್ಜಿನಾ' ಎಂಬಂಥ ಹುಸಿ ಜನಪ್ರಿಯ ಹಾಡುಗಳನ್ನು, ಪತ್ತೇದಾರಿ ಕಥನದ ಸ್ವಾರಸ್ಯಗಳನ್ನು ಸೇರಿಸಿಕೊಳ್ಳುತ್ತ ಜಾನಪದವೋ ಜನಪ್ರಿಯವೋ ಎಂದೇನೂ ಬೇರೆ ಮಾಡಲಾಗದ ಮಿಶ್ರ ರೂಪವೊಂದನ್ನು ಸಾಧಿಸಿಕೊಳ್ಳುತ್ತದೆ. ಪಾತ್ರ ನಿರ್ಮಾಣದಲ್ಲೂ ಅಷ್ಟೇ. ಖಾಸೀಮನ ಹೆಂಡತಿ ಒಂದು ಕಡೆಗೆ ಸದಾ ವಟಗುಟ್ಟುವ ಸಿದ್ಧಮಾದರಿಯ ಪಾತ್ರವಾಗಿ ಕಂಡೂ ತನ್ನ ಮತ್ತು ತನ್ನ ಗಂಡನ ನಡುವಿನ ಜಗಳವನ್ನು ಪ್ರೀತಿಯೆಂದು ಸಮರ್ಥಿಸಿಕೊಳ್ಳುವಾಗ ಆ ಸಿದ್ಧಮಾದರಿಯಿಂದಾಚೆ ಜಿಗಿಯುತ್ತಾಳೆ. ಈ ನಾಟಕದ ಮಾತುಗಳಲ್ಲಿ ಕನ್ನಡ, ಇಂಗ್ಲಿಷ್ ಮತ್ತು ಹಿಂದಿಗಳು ಮಿಶ್ರಗೊಳ್ಳುವಷ್ಟೇ ಸುಲಲಿತವಾಗಿ ಶೈಲಿಗಳು, ಪಾತ್ರ ಮಾದರಿಗಳು ಮತ್ತು ಸಾಂಸ್ಕೃತಿಕ ಆವರಣಗಳು ಬೆರಕೆಗೊಳ್ಳುತ್ತವೆ."

ನಮ್ಮ ನೆಲದ ಸಾಂಸ್ಕೃತಿಕ ವೈವಿಧ್ಯತೆಯನ್ನು ಈ ನಾಟಕ ಪರೋಕ್ಷವಾಗಿಯೂ, ಪ್ರತ್ಯಕ್ಷವಾಗಿಯೂ ಸಾದರಪಡಿಸುತ್ತದೆ. ನಾಟಕ ಪ್ರಾರಂಭವಾದಾಗ ಸೂತ್ರಧಾರ ಹೇಳುವ ಮಾತುಗಳಲ್ಲಿಯೆ ಅದು ವ್ಯಕ್ತವಾಗುತ್ತದೆ. "ಬಾಲಕ, ಬಾಲಕಿಯರೇ ಮತ್ತು ಪಾಲಕರೇ, ನಾವು ಓದೋ ಮಕ್ಕಳು, ನಾಟಕ ಆಡತೀವಿ... ನಾಟಕದ ಪ್ರಾರಂಭದಲ್ಲಿ ಗಣೇಶನ ಪೂಜೆ ಮಾಡಬೇಕು. ಇದೇನಪ್ಪಾ, ಅಲ್ಲಾನೂರಲ್ಲಿ ಕಲ್ಲಯ್ಯಂದೇನು? ಅಂದಂತೆ ಮುಸ್ಲೀಮರ ಕಥೇಲಿ ಗಣೇಶನ ಪೂಜೆ ಯಾಕೆ ಅಂತ ಗಲಾಟೆ ಮಡಬೇಡಿ. ನಿಮ್ಮ ಗಲಾಟೆ ಎಂಬ ವಿಘ್ನ ದೂರ ಮಾಡೋದಕ್ಕೇ ನಾವು ಗಣೇಶನ ಪೂಜೆ ಮಾಡ್ತಾ ಇರೋದು.'

'ಅಲಿಬಾಬಾ...' ಪಾತ್ರಗಳ ಹಾಡುಗಳು, ಮೇಳದ ಗೀತೆಗಳು, ಅಣಕುವಾಡುಗಳ ಪ್ರೇಕ್ಷಕರನ್ನು ನಕ್ಕು ನಲಿಸುತ್ತವೆ:

ಅಲಿಬಾಬಾ–೧: ದಡಿಯರು ಇವರ್‍ಯಾರೋ ಏನೆಂಥ ಮಂದಿ ಒಬ್ಬೊಬ್ಬ ಒಂದೊಂದು ಕೊಬ್ಬಿದ ಹಂದಿ ಕಳ್ಳರು ಬಂದರು, ಸುಳ್ಳರು ಬಂದರು, ಕದ್ದುಕೊಂಬಂದರು ಏನೇನೊ ತಂದರು.

೨: ತಲಿನೋಡು ಕಸಬರಿಗೆ ಹುಲ್ಲೀನ ಹುಬ್ಬು ಕಾಗೆ ಕೂತಂಗಿತ್ತು. ಆ ಮೂಗಿನುಬ್ಬು ಹಲ್ಲೆಂಬೊ ಗರಗಸ ಮತ್ತೆರಡು ಕೋರೆ ಕಣ್ಣೊಳಗೊಂದೊಂದು ಹದನಾದ ಚೂರಿ.

ಸಲೀಂ : ಮರ್ಜೀನಾ! ನಿನ್ನ ಮರೆಯಲಾರೆ ನಾ। ನೀ ಎನ್ನ ಹೃದಯಕವನಾ। ಹೇಳಬೇಡ ನನನಾ। ಮುಗುಳುನಗು ನೀನಾ । ಧನ್ಯನು ನಾನಾ...

ಈ ನಾಟಕದ ಫಾತಿಮಾ ಮತ್ತು ಮರ್ಜೀನಾ ಆಡುವ ಮಾತು ತುಂಬ ಸ್ವಾರಸ್ಯಕರವಾಗಿದ್ದು ವ್ಯಂಗ್ಯ, ತಮಾಷೆ, ನಾಟಕೀಯ ಅಂಶಗಳನ್ನು ಹೊರಹಾಕುತ್ತವೆ:

ಫಾತಿಮಾ : ಹಾಳಾದವಳೇ, ಔಷಧಿ ಕುಡಿಯೋ ಹೊತ್ತಾಯ್ತು; ಈಗೇನು ಬಿಸಿನೀರು ಕೊಡ್ತೀಯಾ? ಇಲ್ಲಾ ನಿನ್ನನ್ನು ಒದ್ದು ಒದ್ದು ಒದ್ದು...

ಮರ್ಜೀನಾ : ಅಯ್...

ಫಾತೀಮಾ : ಬಿಸಮಿಲ್ಲಾ ಮಾಡಿ...

ಮರ್ಜೀನಾ : ಹೊಯ್

ಫಾತೀಮಾ : ಚರ್ಮಾ ಸುಲಿದು

ಮರ್ಜೀನಾ : ಹೊಯ್

ಫಾತೀಮಾ : ಮಸಾಲಿ ಹಾಕಿ ಪಲ್ಯಾ ಮಾಡಿ...

ಮರ್ಜೀನಾ : ಹೊಯ್ ಹೊಯ್...

ಫಾತೀಮಾ : ನಾಯಿಗಿ ಹಾಕಲೊ?

ಮರ್ಜೀನಾ : ಅಲ್ಲೇ ಬಿಸಿನೀರಿದೆ. ಮಾತ್ರೆ ತಗೊಳ್ಳಿ. ನಾಳೆ ಪಲ್ಯ ಮಾಡಿ ನಾಯೀಗಿ ಹಾಕೀರಂತೆ.

ಫಾತೀಮಾ : ಮೊದಲೇ ಯಾಕ್ಹೇಳಲಿಲ್ಲವೆ ಗಯ್ಯಾಳಿ?...

ಬಯಲಾಟದ ಸ್ವಾರಸ್ಯಕರ ಪ್ರದರ್ಶನದಂತೆ ಇಲ್ಲಿಯ ಪ್ರತಿ ಪಾತ್ರವೂ ಅನೇಕ ಮಜಲುಗಳನ್ನು ಒಳಗೊಳ್ಳುತ್ತ ಕುತೂಹಲ ಹುಟ್ಟಿಸುತ್ತದೆ. ಘಟನೆ ಹಾಗೂ ಸನ್ನಿವೇಶಗಳನ್ನು ಕಲಾತ್ಮಕವಾಗಿ ಹೆಣೆದಿರುವ ಕಂಬಾರರು ಹಾಡುಗಳ ಮೂಲಕ ಪ್ರೇಕ್ಷಕನ ಮನಸ್ಸು ಅತ್ತಿತ್ತ ಸರಿದಾಡದಂತೆ ಮಾಡಿದ್ದಾರೆ:

ನಾ ಮರ್ಜೀನಾ॥
ಮಿರುಗುವ ಮಿಂಚಿನ
ಚೂರಿಯ ಅಂಚಿನ
ಹರಿತಾದ ಕಣ್ಣೀನ । ಬಾಲೆ ನಾ॥

ಗುಟ್ಟು ಎದೆಯಾಗಿನ
ಸಂಚು ಮನದಾಗಿನ
ಗೂಢಗಳ ಇರಿವೇನ ।
ಮರ್ಜೀನಾ॥

ವೈದೇಹಿ

ಮಕ್ಕಳ ಸೂಕ್ಷ್ಮ ಮನೋಲೋಕವನ್ನು ರಂಗದಮೇಲೆ ತೋರಿಸಲು ಪ್ರಯತ್ನಪಟ್ಟವರು ವೈದೇಹಿಯವರು. ಮಕ್ಕಳ ನಾಟಕ ಕ್ಷೇತ್ರವು ಹೊಸತನ ಹಾಗೂ ಸವಾಲುಗಳಿಗೆ ತುಡಿಯುತ್ತಿದ್ದ ಸಮಯವನ್ನು ಬಳಸಿಕೊಂಡು ಹೆಗ್ಗೋಡಿನ ನೀನಾಸಂದಂತಹ ತಂಡಗಳಿಗೆ ಅವರು ನಾಟಕಗಳನ್ನು ಬರೆದುಕೊಟ್ಟರು. 'ಧಾಂ ಧೂಂ ಸುಂಟರಗಾಳಿ', 'ಗೊಂಬೆ ಮ್ಯಾಕ್‌ಬೆತ್', 'ನಾಯಿಮರಿ', 'ಸೂರ್ಯ ಬಂದ', 'ಹಕ್ಕಿ ಹಾಡು', 'ಮೂಕನ ಮಕ್ಕಳು' ಮುಂತಾದ ಅವರ ನಾಟಕಗಳು ನಿರ್ದೇಶಕರಿಗೆ ಭಿನ್ನವೆನಿಸಿದವು. ಪ್ರಸಿದ್ಧ ಇಂಗ್ಲಿಷ್ ನಾಟಕಕಾರ ಶೇಕ್ಸಪೀಯರ್‌ನ 'ಟೆಂಪೆಸ್ಟ್' ನಾಟಕವನ್ನು ಆಧಾರವಾಗಿಟ್ಟುಕೊಂಡು 'ಧಾಂ ಧೂಂ ಸುಂಟರಗಾಳಿ'ಯನ್ನು ವೈದೇಹಿ ರಚಿಸಿದ್ದಾರೆ. ರಂಗ ಅಭಿವ್ಯಕ್ತಿಗೆ ಇದು ಒಂದು ಕಲಾತ್ಮಕ ಕೊಡುಗೆಯಾಗಿದೆ. ಮಕ್ಕಳ ನಾಟಕದತ್ತ ಸುಂಟರಗಾಳಿ ತಮ್ಮ ಪ್ರಥಮ ಪ್ರಯತ್ನವೆಂದು ನೀನಾಸಂ ತಿರುಗಾಟಕ್ಕಾಗಿ ೧೯೮೯ರಲ್ಲಿ ತಾವು ಇದನ್ನು ಬರೆದುದಾಗಿಯೂ ಕೆ. ವಿ. ಅಕ್ಷರ ಅವರ ಪ್ರೋತ್ಸಾಹದ ಮೇರೆಗೆ ಈ ರಚನೆಗೆ ಮುಂದಾಗಿರುವುದಾಗಿಯೂ ಅವರು ತಮ್ಮ ಮಾತುಗಳಲ್ಲಿ ಹೇಳಿಕೊಂಡಿದ್ದಾರೆ. ಅವರ ನಾಟಕಗಳು ಅಕ್ಷರ ಪ್ರಕಾಶನದಿಂದ ಪ್ರಕಟವಾಗಿವೆ.

ವೈನೋದಿಕ ಭಾಷೆ, ತಿಳಿ ಹಾಸ್ಯ, ಪ್ರಾದೇಶಿಕ ನುಡಿಗಟ್ಟು ಹಾಗೂ ಚತುರ ಸಂಭಾಷಣೆಗಳಿಂದ ಸುಂಟರಗಾಳಿ ಪ್ರೇಕ್ಷಕರನ್ನು ರಂಜಿಸುತ್ತದೆ. ಸ್ವಾರಸ್ಯಕರ ಹಾಡುಗಳು ಕತೆಯಲ್ಲಿ ಏಕತಾನತೆ ಸಂಭವಿಸದಂತೆ ತಡೆಯುತ್ತವೆ.

ಅಡುಗೆಯ ಭಟ್ಟ
ಹಡಗೂ ಬಿಟ್ಟ
ಬಿಟ್ಟ ಹಡಗು
ಸೊಟ್ಟ ಪಟ್ಟ
ಪಟ್ಟಕೆ ಯಾರು
ಅಕಟಾ ಅಕಟಾ
ನಾನಿಹೆನಲ್ಲ
ಅಡುಗೆಯ ಭಟ್ಟ!
ಕುಳಿತೇಬಿಟ್ಟ
ಚಟ್ಟಾ ಮುಟ್ಟಾ
ಚಂದ್ರಸಾಲೆಯೋ

ಚಕ್ರಸಾಲೆಯೋ
ಪಾಯಸ ಹೊಡೆಯೋ

ಮಂತ್ರವಾದಿಯೊಬ್ಬ ತನ್ನ ಮಂತ್ರಗಳ ಬಲದಿಂದ ಕಡಲನ್ನು ಉಕ್ಕೇರಿಸಿ ತನಗೆ ಹಿಂದೆ ಮೋಸ ಮಾಡಿದ್ದ ರಾಜನ ಕುಟುಂಬವನ್ನು ಸಂಕಷ್ಟಕ್ಕೆ ಸಿಲುಕಿಸುತ್ತಾನೆ. ರಾಜಕುಮಾರ ದಿಕ್ಕು ತಪ್ಪಿ ಅಲೆಯುತ್ತಾನೆ. ಮಂತ್ರವಾದಿಯ ಮಗಳು ಮತ್ತು ರಾಜಕುಮಾರ ಒಬ್ಬೊಬ್ಬರನ್ನೊಬ್ಬರು ಮೋಹಿಸುತ್ತಾರೆ. ರಾಜನಿಗೆ ತನ್ನ ತಪ್ಪಿನ ಅರಿವಾಗಿ ಮಂತ್ರವಾದಿಯ ಕ್ಷಮೆ ಕೇಳುತ್ತಾನೆ. ಮಂತ್ರವಾದಿತನ ಈಗ ಸಾಕೆಂದು ರಾಜಕುಮಾರಿ ಅಪ್ಪನಲ್ಲಿ ಕೋರಿಕೊಳ್ಳುತ್ತಾಳೆ. :

ಕುಮಾರಿ : ನಿನ್ನ ಮಂತ್ರಶಕ್ತಿಯೋ . . . ಚಂಡಮಾರುತವೋ . . . ಹಡಗೋ ! ಈ ನಿನ್ನ ಛೂ ಮಂತ್ರ ವಿದ್ಯೆ ಇನ್ನು ಸಾಕು. . . . ಅಪ್ಪಾ, ನೀನು ನನ್ನ ಪ್ರೀತಿಯ ತಂದೆ ಮಾತ್ರ ಆಗಿರು.

ಮಂತ್ರಬುದ್ಧಿ : ಮಗು, ನೀನನ್ನುವುದು ಸರಿಯೇ, ನನ್ನ ಮನಸ್ಸು ಕೂಡ ಅಗಿನಿಂದ ಇದನ್ನೇ ಹೇಳುತ್ತಿದೆ . . . ಓ ಗಿರಿ ಝರಿಗಳಲ್ಲಿ, ತೋಪು ಕಾನನಗಳಲ್ಲಿ ಅಷ್ಟದಿಕ್ಕುಗಳಲ್ಲಿ ನೆಲೆಯಾಗಿರುವ ಶಕ್ತಿಗಳೇ,ಹೆಜ್ಜೆ ಗುರುತು ಬೀಳದಂತೆ ನಡೆದು ಆಕಾಶಕ್ಕೇರುವವರೆ, ಚಂದ್ರನ ಬೆಳಕಲ್ಲಿ ಬೆಳ್ಳಿ ಕುಣಿದು ಬರುವ ಕಿನ್ನರಿಯರೆ, ನನ್ನ ಕಾರ್ಯಕ್ಕೆ ನಿಮ್ಮನ್ನೆಲ್ಲ ಬಳಸಿಕೊಂಡೆ. ಉರಿವ ಸೂರ್ಯನನ್ನು ಮಸುಕು ಮಾಡಿದೆ. ಸಿಡಿಲ ಛಿಟಿಲಿಗೆ ಬೆಂಕಿ ಕೂಡಿಸಿದೆ. ವೃಷ್ಟಿ ನಡುಗಿಸಿದೆ. ಸಾಗರವ ಮಗುಚಿದೆ. ನನ್ನ ಮಾಂತ್ರಿಕ ಶಕ್ತಿಯಿಂದ ಇಷ್ಟೆಲ್ಲವನ್ನೂ ಮಾಡಿದೆ. ಇನ್ನು ಇದೆಲ್ಲ ಸಾಕು . . . ಇನ್ನೆಂದೂ ಈ ಭ್ರಮೆ ಹುಟ್ಟಿಸುವ ಅಗತ್ಯ ನನಗಿಲ್ಲ.

ಹೀಗೆ ಭ್ರಮೆ, ಕಲ್ಪನೆ, ವಾಸ್ತವ ಜಗತ್ತುಗಳನ್ನು ಕಲಾತ್ಮಕವಾಗಿ ವೈದೇಹಿಯವರು ಜೋಡಿಸುತ್ತಾರೆ. ಲಾಲಿತ್ಯದಿಂದ ಕೂಡಿದ ಗೀತೆಗಳು ನಾಲಿಗೆಯಮೇಲೆ ನಲಿಯುತ್ತವೆ. :

ಒಬೇಲೆ ಒಬೇಲೆ ಬೇಲೆ
ಒಬಲೆ ಒಬೇಲೆ ಬೇಲೆ
ಕಡಲನಡುವೆ ನಡೆದ ಕಥೆಯ
ಕೇಳಿರೆಲ್ಲ ಬಾಲ ಬಾಲೆ

ಶೇಕ್ಸಪಿಯರ್‌ನ ಮತ್ತೊಂದು ಪ್ರಸಿದ್ಧ ನಾಟಕ 'ಮ್ಯಾಕ್‌ಬೆತ್' ನ್ನು ಆಧರಿಸಿ ವೈದೇಹಿ ಬರೆದಿರುವ 'ಗೊಂಬೆ ಮ್ಯಾಕ್‌ಬೆತ್'ನ್ನು ಮೊದಲ ಬಾರಿಗೆ ಸಾಗರದ 'ಚಿಣ್ಣಬಣ್ಣ' ತಂಡದವರು ಇಕ್ಬಾಲ್ ಅಹಮದ್ ಅವರ ನಿರ್ದೇಶನದಲ್ಲಿ ಆಡಿದರು. ಶೇಕ್ಸಪಿಯರ್‌ನ ಈ ಕಥಾವಸ್ತುವನ್ನು ನೆನಪಿಸಿ ಮಕ್ಕಳ ನಾಟಕದ ಸಾಧ್ಯತೆಯನ್ನು ನೀಡಿದವರು ಕೆ. ವಿ. ಸುಬ್ಬಣ್ಣನವರು ಎಂದು ವೈದೇಹಿ ತಮ್ಮ ಮಾತುಗಳಲ್ಲಿ ನೆನೆಯುತ್ತಾರೆ ('ಗೊಂಬೆ ಮ್ಯಾಕ್‌ಬೆತ್', ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೨). ಆಸೆಯ ಬೆನ್ನಿಗೆ ಬಿದ್ದು ದೆವ್ವಕ್ಕೆ ಆತ್ಮವನ್ನು ಮಾರಿಕೊಳ್ಳುವ, ರಾಜನನ್ನು ಕೊಂದು ತಾನೇ ರಾಜನಾಗುವ ಮ್ಯಾಕ್‌ಬೆತ್‌ನ ಕತೆಯನ್ನು ವೈದೇಹಿಯವರು ಒಬ್ಬ ವೀರಯೋಧನ ಕತೆಯಾಗಿಸಿದ್ದಾರೆ. ದುರಂತ ನಾಟಕವನ್ನು ಮಕ್ಕಳ ಮನೋಭೂಮಿಕೆಗೆ

ತರಲು ಪ್ರಯತ್ನಿಸಿದ್ದಾರೆ. ನಡುನಡುವೆ ತಮಾಷೆ, ಮೋಜು ನಾಟಕೀಯ ತಿರುವು, ಸೂತ್ರಧಾರರ ಸುಲಲಿತ ಸಂಭಾಷಣೆ, ಗೊಂಬೆಗಳ ಮಾತು ಮುಂತಾದುವು ನಾಟಕಕ್ಕೆ ಕಳೆ ಕಟ್ಟುತ್ತವೆ. ಭವಿಷ್ಯಗಾರರ (ಅಶರೀರವಾಣಿ) ಮಾತು ಕೇಳಿಕೊಂಡು ವೀರಯೋಧ ತಾನು ಕನಸುಕಂಡದ್ದನ್ನೆಲ್ಲ ನನಸು ಮಾಡಲು ಹೊರಡುತ್ತಾನೆ. ಕಾಡರ ದೊರೆ ಆಗುವನು ಎಂದು ಹೇಳಿದ ಭವಿಷ್ಯ ನಿಜವಾದಾಗ ಡಂಕನ್ನಿನ ಮಹಾರಾಜನಾಗುವುದು ಕೂಡ ಸಲೀಸೆಂದು ಅಥಿತಿಯಾಗಿ ಬಂದಿದ್ದ ರಾಜನನ್ನು ಗಂಡಹೆಂಡತಿ ಕೊಲೆ ಮಾಡುತ್ತಾರೆ. ಕೊಲೆ ಮಾಡುವುದು ಸರಳವೆನಿಸುತ್ತದೆ. ಆದರೆ ಅದನ್ನು ಅವರು ಅರಗಿಸಿಕೊಳ್ಳಲಾರರು. ಮನೋಕ್ಷೋಭೆಯಿಂದ ನರಳುತ್ತಾರೆ. ಎಲ್ಲಿ ನೋಡಿದಲ್ಲೆಲ್ಲ ತಾವು ಕೊಂದ ವ್ಯಕ್ತಿಗಳ ಪ್ರೇತಗಳನ್ನು ಕಾಣುತ್ತಾರೆ. ದಾರಿಗೆ ಅಡ್ಡ ಬರುವವರನ್ನು ಕೊಲ್ಲಬಯಸುವರು.

ವೀರಯೋಧ : ನಾನು ನನ್ನ ಮನಸ್ಸಿನ ಒಳ್ಳೆಯ ಯೋಚನೆಗಳನ್ನೆಲ್ಲ ಬದಿಗೊತ್ತಿ, ಮಹಾರಾಜನಾಗಬೇಕೆಂಬ ಮಹದಾಸೆಯಿಂದ, ನನ್ನ ಹೆಂಡತಿಯ ಮಾತುಗಳಿಂದ ಧೈರ್ಯ ಪಡೆದು ನನ್ನನ್ನು ಸ್ವಂತ ಮಗನಂತೆ ಪ್ರೀತಿಸುತ್ತಿದ್ದ ಮಹಾರಾಜರನ್ನು ಕೊಂದದ್ದು . . . ಇಂತಹ ಒಂದು ಕರಾಳ ಕೃತ್ಯ ಮಾಡಿದ್ದು ಇಷ್ಟು ಮಾಡಿಯೂ ನನ್ನ ಸಿಂಹಾಸನವೇ ಘಲ ಘಲ ಅಲ್ಲಾಡುತ್ತದೆ ಎಂದಾದರೆ . . . ನಾನಿಷ್ಟೆಲ್ಲ ಮಾಡಿದ್ದೂ ಆ ಶೂರ ಯೋಧನ ಮಕ್ಕಳಿಗೆ ಬಿಟ್ಟಿಯಾಗಿ ಸಿಂಹಾಸನ ಕೊಡಲಿಕ್ಕಾ ? ಏನಂತ ಮಾಡಿದಿರಿ ನನ್ನ ? ಕಿರೀಟ ದಕ್ಕಬೇಕಾದದ್ದು ನನ್ನ ಮಕ್ಕಳಿಗೆ . . .

ವೀರಯೋಧ, ಶೂರಯೋಧ ಎಂಬ ಗೊಂಬೆಗಳ ಮೂಲಕ ಅಧಿಕಾರ ಹಾಗೂ ಲಾಲಸೆಯ ಕರಾಳ ಮುಖಗಳನ್ನು ಈ ನಾಟಕದಲ್ಲಿ ಬಿಚ್ಚಿ ತೋರಿಸಲಾಗಿದೆ. ಪ್ರಾದೇಶಿಕ ನುಡಿಗಟ್ಟು ಹಾಗೂ ಸಾಂದರ್ಭಿಕ ಹಾಡುಗಳ ಮೂಲಕ ಪುರಾಣ ಮತ್ತು ವರ್ತಮಾನಗಳ ನಡುವೆ ಕೊಂಡಿ ಸೇರಿಸಲು ಲೇಖಕಿ ಪ್ರಯತ್ನಿಸಿದ್ದಾರೆ.

ಅಬಲಕ
ತಬಲಕ
ಮೆರಿಮೆರಿ
ಕಂಚಾ
ಜೋಡಾ
ಅಸ್ಕಿ
ಪುಸ್ಕಿ
ಪಾದರ
ಧಾಂ
ಧೂಂ
ಕಟ್
ಕಟಾರ್

ಅವ್ರಬಿಟ್ ಇವ್ರಬಿಟ್
ಇವ್ರಬಿಟ್ ಅವರ್‍ಬಿಟ್
ಇದ್ದವ್ರಲ್ಲಿ
ಕೊಂದವ್ರ ಯಾರ್?

ಜನಪದ ಮೂಲವನ್ನು ಆಧರಿಸಿದ 'ನಾಯಿಮರಿ', ನಿಸರ್ಗದ ಸಹಜತೆಯನ್ನು ಬಣ್ಣಿಸುವ 'ಹಕ್ಕಿಹಾಡು', ಸ್ವಾತಂತ್ರ್ಯ ಹಾಗೂ ಬೆಳಕಿನ ಮಹತ್ವವನ್ನು ವಿವರಿಸುವ 'ಸೂರ್ಯ ಬಂದ' ಮುಂತಾದವು ವೈದೇಹಿಯವರ ನಾಟಕ ರಚನಾ ಕೌಶಲದ ವಿವಿಧ ಮುಖಗಳನ್ನು ಪರಿಚಯಿಸುತ್ತವೆ.

ಕೃಷ್ಣಮೂರ್ತಿ ಬಿಳಿಗೆರೆ

ಕೃಷ್ಣಮೂರ್ತಿ ಬಿಳಿಗೆರೆ ಅವರು ಭಿನ್ನ ನಾಟಕಗಳನ್ನು ನೀಡುವ ಮೂಲಕ ಕನ್ನಡ ಮಕ್ಕಳ ನಾಟಕ ಕ್ಷೇತ್ರಕ್ಕೆ ಕಲಾತ್ಮಕ ಹಾಗೂ ಸಾಮಾಜಿಕ ಆಯಾಮಗಳನ್ನು ನೀಡುವಲ್ಲಿ ಸಫಲರಾಗಿದ್ದಾರೆ. 'ಮಳೆಹುಚ್ಚ', 'ನವಿಲೂರಿನ ಕಥೆ',(೧೯೯೯), 'ಅಗಲಕಿವಿಯ ಅರಿವುಗಾರ'(೨೦೦೧), 'ಅಂಗಭಂಗದ ರಾಜ್ಯದಲ್ಲಿ ಮತ್ತು ಇತರ ಮಕ್ಕಳ ನಾಟಕಗಳು'(ನಮ್ಮ ಪ್ರಕಾಶನ – ಬಿಳಿಗೆರೆ ೨೦೧೩)ಎನ್ನುವ ಕೃತಿಗಳನ್ನು ಮಕ್ಕಳ ರಂಗ ಕ್ಷೇತ್ರಕ್ಕೆ ನೀಡಿದ್ದಾರೆ. ಅಭಿವ್ಯಕ್ತಿಯ ಹೊಸಕ್ರಮ, ಹೊಸ ವಸ್ತು ಮತ್ತು ಕಲಾತ್ಮಕ ಹೆಣಿಗೆಯಿಂದ ಮಕ್ಕಳ ರಂಗಭೂಮಿಯ ಸಾಧ್ಯತೆಗಳನ್ನು ವಿಸ್ತರಿಸಿದ್ದಾರೆ. ಸಿದ್ಧಮಾದರಿಗಳನ್ನು ಮುರಿಯುವಲ್ಲಿ, ಮಕ್ಕಳ ಗ್ರಹಿಕೆಗಳನ್ನು ವಿಸ್ತರಿಸುವಲ್ಲಿ ಬಿಳಿಗೆರೆ ಅವರ ವಿಶಿಷ್ಟತೆಯನ್ನು ಕಾಣಬಹುದು.

ಸಾಯದೇ ಸಾಯುತ್ತಿರುವವರ, ಕಣ್ಣುಗಳಿದ್ದೂ ಕಳೆದುಕೊಂಡವರ ಜಗತ್ತಿಗೆ ಪುನರ್ಜೀವಂತಿಕೆ ತರುವಲ್ಲಿ ಕೃಷ್ಣಮೂರ್ತಿ ನಾಟಕಗಳ ಮಕ್ಕಳು ಆಸಕ್ತರಾಗಿದ್ದಾರೆ.

ಕಣ್ಣುಗಳೆಲ್ಲೋ ಕಳೆದು ಹೋಗಿವೆ
ಬನ್ನಿ ಅವುಗಳ ಹುಡುಕೋಣ
ಹಿಂದಹಿಂದಕೆ ಇನ್ನೂ ನಿಗೂಢಕೆ
ಮುಂದಮುಂದಕೆ ಪೂರ್ವದಿಗಂತಕೆ
ಅಂಗಭಂಗದ ರಾಜ್ಯದ ಕಡೆಗೆ
ಸಾಯದೆ ಸಾಯ್ತಾ ಇರೋರ ಬಳಿಗೆ
ನೀರು ನೆರಳು ಬೇರಿನ ಕಡೆಗೆ
ಭೂಮಂಡಲದ ಪೂರ್ವದ ಕಡೆಗೆ

ನಮ್ಮ ಅಂತರ್ಗತ ಶಕ್ತಿಯನ್ನು ಬಳಸಿಕೊಳ್ಳದೆ ಹೊರಗಿನ ಶಕ್ತಿ ಉಪಯೋಗಕ್ಕೆ ಬರಲಾರದು ಎಂದು ಇವರ ಮಕ್ಕಳು ಹೇಳುವಂತಾಗುತ್ತಾರೆ. 'ಅಂಗಭಂಗದ ರಾಜ್ಯದಲ್ಲಿ' ಎನ್ನುವ ನಾಟಕ

ಹುಣಸೇ ಮರವೊಂದರ ಸುತ್ತ ಪ್ರತಿಮಾತ್ಮಕವಾಗಿ ಬೆಳೆಯುತ್ತದೆ. ಈ ಊರಿನಲ್ಲಿ ಒಂದೇ ಒಂದು ಮರ ಉಳಿದಿದೆ. ಅದು ಹುಣಿಸೇ ಮರ. ಆ ಮರದಿಂದ ಇಳಿಯುವ ಹುಣಿಸೇಮರದ ಹುಡುಗಿಯ ನಾಯಕತ್ವದಲ್ಲಿ ಈ ನಾಟಕ ಪ್ರಾರಂಭವಾಗುತ್ತದೆ. ಈ ಬಾಲಕಿ ಆ ಮರದಲ್ಲೇ ವಾಸವಾಗಿರುವ ನಾಲ್ಕು ದೆವ್ವಗಳ ಜೊತೆಗೆ ಅಂಗಭಂಗದ ರಾಜ್ಯದಲ್ಲಿ ಪರಿಶೀಲನೆಗೆ ಹೊರಡುತ್ತಾಳೆ. ಆ ಬಾಲಕಿ ದೆವ್ವಗಳಿಗೆ ತಾಯಿಯ ನೆನಪನ್ನು ತರುವದು ವಿಸ್ಮಯಕಾರಿಯಾಗಿದೆ.

ದೆವ್ವ ೧ : ಆಹಾ ಯಾರಿವಳು, ನಮ್ಮವ್ವನ ನೆನಪು ತರ್‍ತಾ ಇರುವವಳು. ಇವಳು ಎಲ್ಲಿದ್ದಳು. ಯಾವ ಲೋಕದಿಂದ ಬಂದಳೋ ಕಾಣೆ.

ದೆವ್ವ ೨ : ಬೀಜದ ಹಾಗೆ ಮೆಲ್ಲಮೆಲ್ಲನೆ ಮಣ್ಣಿನಿಂದ ಹುಟ್ಟಿಬಂದಳು.

ದೆವ್ವ ೩ : ದಿಢೀರನೆ ಆಕಾಶದ ಕದ ತೆಗೆದು ಮೋಡದ ಮೆಟ್ಟಿಲಿಳಿದು ಬಂದಳಾ.

ದೆವ್ವ ೪ : ಇಲ್ಲ ಇಲ್ಲ. ಅಲ್ಲೆಲ್ಲಿಂದಲೂ ಬಂದಂತೆ ಕಾಣಲಿಲ್ಲ. ಬರಗಾಲದಿಂದ ಇನ್ನೇನು ತಾನೂ ಒಣಗಿ ಹೋಗಬೇಕು ಅಂತ ಅಂದುಕೊಳ್ಳುತ್ತಿರುವ ಈ ಭೂಮಿಯ ಕೊನೇ ಮರ ಈ ಹುಣಿಸೇ ಮರದಿಂದ ಇಳಿದು ಬಂದವಳು. ನಮ್ಮೊಂದಿಗಿದ್ದು ನಮ್ಮಂತಾಗದವಳು.

ಅಂಗಗಳೆಲ್ಲ ಭಗ್ನಗೊಂಡಿರುವ ಊರಿನ ಜನರ ಶುಶ್ರೂಷೆ ಈ ಬಾಲಕಿಯಿಂದ ನಡೆಯುವದು ನಾಟಕದ ಕೇಂದ್ರವಾಗಿದೆ. ಇಲ್ಲಿಯ ರಾಜನೂ ಮುಖವಾಡದಲ್ಲಿ ಅಡಗಿ ಕುಳಿತಿದ್ದಾನೆ. ದೆವ್ವಗಳು ಅವನ ಮುಖವಾಡವನ್ನು ಕಿತ್ತು ತೆಗೆಯುತ್ತವೆ. ಅಂಗಭಂಗದ ರಾಜ್ಯದ ಜನ ತಮ್ಮ ಮನುಷ್ಯರೂಪ ಬಿಟ್ಟುಕೊಟ್ಟು ತಾವು ನಾಶ ಮಾಡಿದ ಹಸಿರನ್ನು ಮತ್ತೆ ಹುಟ್ಟಿಸಲಿಕ್ಕೆ, ಜೀವಜಾಲದ ಜಲವನ್ನು ಹರಿಸಲಿಕ್ಕೆ ಗಿಡಮರಗಳಾಗಿ ಪ್ರಾಣಿಪಕ್ಷಿಗಳಾಗಿ ಹುಳುಹುಪ್ಪಡಿಗಳಾಗಿ ಪರಿವರ್ತನೆ ಹೊಂದುತ್ತಾರೆ. ಬಾಲಕಿ ಹೇಳುವ ಮಾತು ಅವರ ಅಂತರಂಗದ ದನಿಯಾಗುತ್ತದೆ.

ಹು : ನಾನು ಎಂದರೆ ನಾನಲ್ಲ. ನಾನು ಮರದಜಾತಿಯವಳು. ಇವು ಮರದ ಮಾತುಗಳು. ಮೈಯೆಲ್ಲ ಕಿವಿಯಾಗಿ ಕೇಳಿಸಿಕೊಳ್ಳಿ. ನೀವು ಬದಲಾಗಲು ಬಯಸಿದ್ದೀರಿ. ಅದಕ್ಕಾಗಿ ಬದ್ಧರಾಗಿದ್ದೀರಿ. ನೀವೀಗ ಬದಲಾಗುತ್ತೀರ . . . ನೀವು ಮನುಷ್ಯರಾಗಿ ಬದಲಾದ ದಿನದಿಂದ ಗೆಲ್ಲುವ ನೆಪದಲ್ಲಿ ಏನೇನುಕೊಲ್ಲುತ್ತ ಬಂದಿರೋ ಅದರ ನೆನಪಿನೊಳಗೆ ಹೋಗಿ. ಹುಲಿ, ಹುಲ್ಲೆ, ಮೊಲವಾಗಿ, ಹಾವಾಗಿ, ಅಳಿಲಾಗಿ ಬದಲಾಗಿ. ಏನಾದರೂ ಆಗಿ ಬದಲಾಗಿ. ಆ ಜೀವಿಗಳಿಗೆ ಜೀವ ಕೊಡಿ . . . ಜೀವ ಕೊಡಿ.

ಮಂಗಳವಾಗಲಿ ಮಂಗಳವಾಗಲಿ
ಗಿಡಗಳ ಹಸಿರು ಹಸಿರಾಗಿರಲಿ
ಆಕಾಶದ ನೆಲ ಸುಮ್ಮನೆ ಸುರಿಸಲಿ
ನೆಲ ನೆನೆಯಲಿ, ಗರಿಕೆ ಚಿಗುರಲಿ
ನದಿಗಳ ನೀರು ಬತ್ತದೆ ಇರಲಿ
ಸಾಗರ ಸಾವನು ಅಪ್ಪದೆ ಇರಲಿ

ಮಣ್ಣು ಅನ್ನವ ಹುಟ್ಟಿಸುತಿರಲಿ
ಮಂಗಳವಾಗಲಿ ಮಂಗಳವಾಗಲಿ

ಹೀಗೆ ಹೊಸ ಚಿಂತನೆಯನ್ನು ಹುಟ್ಟಿಸುವಲ್ಲಿ ಕೃಷ್ಣಮೂರ್ತಿ ಅವರ ನಾಟಕಗಳು ಪ್ರಯತ್ನಿಸುತ್ತವೆ. 'ಕೇಡಾಳ ಕೆಪ್ಪರ್ಕ', 'ಕತ್ತೆ ಹಾಡು' ಎನ್ನುವ ನಾಟಕಗಳು ಕೂಡ ಹೊಸರೀತಿಯಲ್ಲಿ ಬರೆಯಲ್ಪಟ್ಟಿವೆ.

ಡಾ. ಗಜಾನನ ಶರ್ಮ

ರಂಗಭೂಮಿ ಕ್ಷೇತ್ರದಲ್ಲಿ ತಮ್ಮನ್ನು ತುಂಬ ಕ್ರಿಯಾಶೀಲವಾಗಿ ತೊಡಗಿಸಿಕೊಂಡವರು ಡಾ. ಗಜಾನನ ಶರ್ಮ ಅವರು. ಮಕ್ಕಳ ನಾಟಕ ಹಾಗೂ ರಂಗಭೂಮಿ ಕುರಿತು ವಿಶೇಷ ಅಧ್ಯಯನ ನಡೆಸಿದವರು. ಅವರು ಬರೆದಿರುವ ಅನೇಕ ನಾಟಕಗಳು ಮಕ್ಕಳನ್ನು ರಂಜಿಸುವುದರ ಜೊತೆಗೆ ಅವರಲ್ಲಿ ವೈಚಾರಿಕ ಕಿಡಿಯನ್ನು ಹೊತ್ತಿಸಬಲ್ಲ ಸಾಮರ್ಥ್ಯ ಪಡೆದಿವೆ. 'ನಾಣಿಭಟ್ಟನ ಸ್ವರ್ಗದ ಕನಸು', 'ಮೃಗ ಮತ್ತು ಸುಂದರಿ', 'ಗೊಂಬೆ ರಾವಣ', 'ಪುಸ್ತಕ ಪಾಂಡಿತ್ಯ', 'ಕತ್ತೆ ಸರಪಂಚ' ಮುಂತಾದ ಅವರ ನಾಟಕಗಳು ಪ್ರಯೋಗಗಳಾಗಿಯೂ ಪುಸ್ತಕಗಳಾಗಿಯೂ ರಂಗಾಸಕ್ತರ ಗಮನ ಸೆಳೆದಿವೆ.

'ನಾಣೀಭಟ್ಟನ ಸ್ವರ್ಗದ ಕನಸು' ನಾಟಕ ಸ್ವರ್ಗವೆನ್ನುವುದು ಭೂಮಿಯ ಮೇಲಿನ ಬದುಕಿನಲ್ಲಿಯೆ ಇದೆಯೆಂಬುದನ್ನು ಮನದಟ್ಟು ಮಾಡುತ್ತದೆ. ಭೂಲೋಕದಲ್ಲಿ ಅಸಂಖ್ಯ ಕಷ್ಟಗಳಿವೆ. ಸ್ವರ್ಗಕ್ಕೆ ಹೋದರೆ ಅಪರಿಮಿತ ಸುಖ ಸಿಗುವುದು, ಬಯಸಿದ್ದು ತಕ್ಷಣ ದೊರಕುವುದು, ಹಸಿವೆಂಬುದೇ ಇಲ್ಲ ಮುಂತಾಗಿ ಹೇಳುತ್ತ ಹಿರಿಯರು ಎಳೆಯರಲ್ಲಿ ಹುಸಿಕಲ್ಪನೆ ಹಾಗೂ ಮಿಥ್ಯೆಗಳನ್ನು ಬಿತ್ತುತ್ತಾರೆ ಎಂಬುದನ್ನು ಈ ನಾಟಕ ಹೇಳುತ್ತದೆ. ಬದುಕಿರುವುದೇ ಪಾಪ, ಸಾಯುವುದೇ ಸುಖ ಎಂಬಂತಹ ಭಾವನೆಯನ್ನು ಇಲ್ಲಿಯ ಅಜ್ಜ ಮೊಮ್ಮಗ ನಾಣೀಭಟ್ಟನಲ್ಲಿ ಬಿತ್ತುತ್ತಾನೆ:

'ಈ ಭೂಮಿ ಮೇಲಿನ ಕಷ್ಟಗಳಿಗೆ ಸಾಕ್ಷಿಯಾಗಿ ಬದುಕೇ ಇದೀನಿ... ಬದುಕೇ ಇದೀನಿ. ನನ್ನ ಕರ್ಮ ಯಾವಾಗ ತೀರುತ್ತೋ... ಯಾವಾಗ ನನಗೆ ಮುಕ್ತಿ ದೊರೆಯುತ್ತೋ, ಆ ದೇವರಿಗೆ ಗೊತ್ತು.'

ಆಗ ಹುಡುಗ ಕೇಳುತ್ತಾನೆ : 'ಅಜ್ಜ ಮುಕ್ತಿ ಅಂದ್ರೇನು?'

'ಈ ಭೂಲೋಕದ ಕಷ್ಟಗಳಿಂದ ಮುಕ್ತರಾಗೋದು... ಈ ಲೋಕದ ಕಷ್ಟಗಳಿಂದ ದೂರವಾಗಿ ಸ್ವರ್ಗದಲ್ಲಿ ನೆಲೆಸೋದು.'

ಕನಸಿನಲ್ಲಿ ಸ್ವರ್ಗಕ್ಕೆ ಹೋಗುವ ಹುಡುಗ ಅಲ್ಲಿಯ ಏಕತಾನತೆಯಿಂದ ಸೊರಗುತ್ತಾನೆ, ಕೊರಗುತ್ತಾನೆ. 'ಆಯಾಸವಿಲ್ಲ, ರಾತ್ರಿಯಿಲ್ಲ, ಮಣ್ಣಿಲ್ಲ, ಮಸಿಯಿಲ್ಲ. ಮಲಗುವ ಸುಖ, ಕಣ್ಮುಚ್ಚುವ ಸುಖ, ಕನಸು ಕಾಣುವ ಸುಖ ನಿಮಗೇನು ಗೊತ್ತು?' ಎಂದು ಸ್ವರ್ಗದ ಅಪ್ಸರೆಯರನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. ದುಡಿಮೆ, ವಿಶ್ರಾಂತಿ, ಹಸಿವು, ಆತಂಕ, ಸುಖ ಇವುಗಳ ಮಹತ್ವವನ್ನು ಸ್ವರ್ಗ ನರಕಗಳೆಂಬ ನಂಬಿಕೆಗಳೆದುರು ನಾಟಕಕಾರರು ದೃಢಪಡಿಸುತ್ತಾರೆ. ನಾಣೀಭಟ್ಟ, ಅಮ್ಮ, ಅಜ್ಜ, ರಾಕ್ಷಸ, ಮಂತ್ರವಾದಿ ವಿವಿಧ ಗೆಳೆಯರು ಇವರ ಅಚ್ಚುಕಟ್ಟಾದ ಪಾತ್ರ ನಿರ್ವಹಣೆಯೊಂದಿಗೆ ನಾಟಕ ಸ್ವಾರಸ್ಯಕರವಾಗಿ ಪ್ರೇಕ್ಷಕರೆದುರು ಬಿಚ್ಚಿಕೊಳ್ಳುವುದರಲ್ಲಿ

ಸಂಶಯವಿಲ್ಲ. ಇದರ ಪ್ರಥಮ ರಂಗಪ್ರಯೋಗ ೧೯೯೯ರಲ್ಲಿ ಶಿವಮೊಗ್ಗದಲ್ಲಿ 'ಕಲಾಕಿರಣ' ತಂಡದಿಂದ ನಡೆಯಿತು.

ಈಡೇರದ ಕನಸಿನಿಂದ ಕೆಳಗಿಳಿದು ನೆಲದಲ್ಲಿ ಕಾಲೂರಿ, ಬದುಕಿನ ಅರ್ಥ ಕಂಡುಕೊಂಡು ಪೃಥ್ವಿಯನ್ನೇ ಸ್ವರ್ಗವನ್ನಾಗಿಸಬೇಕು ಎನ್ನುವ ಆಶಯ ನಾಟಕದುದ್ದಕ್ಕೂ ಹರಿಯುತ್ತದೆ.

ಹಾಡು, ಸಮಂಜಸ ಸಂಭಾಷಣೆ, ನಾಟಕೀಯ ತಿರುವುಗಳಿಂದ ಇಷ್ಟವಾಗುವ ಗಜಾನನ ಶರ್ಮ ಅವರ ಮತ್ತೊಂದು ನಾಟಕವೆಂದರೆ 'ಮೃಗ ಮತ್ತು ಸುಂದರಿ'. ಆಸ್ಕರ್ ವೈಲ್ಡ್‌ನ ತುಂಬ ಪ್ರಸಿದ್ಧ ಕಥೆಯನ್ನು ಆಧರಿಸಿದ ಈ ನಾಟಕ ಮಕ್ಕಳಿಗಾಗಿ ಒಂದು ವಿಶಿಷ್ಟ ಪ್ರಯೋಗವಾಗಿದೆ. ೧೯೮೮ರಲ್ಲಿ 'ಕಲಾಕಿರಣ ಶಿವಮೊಗ್ಗ' ಇವರು ಇದನ್ನು ಶಿವಮೊಗ್ಗದಲ್ಲಿ ಪ್ರಥಮ ಬಾರಿಗೆ ಪ್ರಯೋಗಿಸಿದರು. ಮನುಷ್ಯನ ಎದೆಯೊಳಗೆ ತುಂಬಿರುವ ಕ್ರೂರತೆ ಹಾಗೂ ಹೊಳೆಯುವುದೆಲ್ಲ ಬಂಗಾರವಲ್ಲ ಎನ್ನುವ ಮಾತಿನ ಉದಾಹರಣೆಯಂತೆ ಅಹಂಕಾರ ತುಂಬಿದ ಸೋದರಿಯರು ನಡೆದುಕೊಳ್ಳುತ್ತಾರೆ. ದಯೆಯೆ ಮೈವೆತ್ತಿರುವ ಸುಂದರಿ ಎನ್ನುವ ಮಗಳು ಮಾತ್ರ ಅಪ್ಪನನ್ನು ಅರಿತುಕೊಂಡು ಅವನ ಕಷ್ಟ-ಸುಖಗಳ ನಿಜವಾದ ಪಾಲುದಾರಳಾಗುತ್ತಾಳೆ. ಅಪ್ಪ ವಚನ ಕೊಟ್ಟಂತೆ ಕಾಡುಮೃಗವೊಂದನ್ನು ಮದುವೆಯಾಗುತ್ತಾಳೆ. ಅದರಿಂದ ಸಕಲ ಸಂಪತ್ತು ಅಪ್ಪನಿಗೆ ಹಾಗೂ ಸೋದರಿಯರಿಗೆ ದೊರೆತು ಅವರು ವಿಲಾಸಿ ಜೀವನ ನಡೆಸುತ್ತಿರಬೇಕಾದರೆ ಸುಂದರಿ ಮಾತ್ರ ಮೃಗವನ್ನು ಮದುವೆಯಾಗಿ ಅದರ ಜೊತೆಗೆ ಹೇಗಪ್ಪಾ ಜೀವನ ನಡೆಸುವುದು ಎನ್ನುವ ಚಿಂತೆಯಲ್ಲಿದ್ದಾಳೆ. ಮೃಗದ ಹೃದಯ ದಯೆ ಹಾಗೂ ಮಾನವೀಯತೆಯಿಂದ ತುಂಬಿದೆ. ಕೊನೆಗೆ ಅವಳು ಅದಕ್ಕೆ ಕರಗುವುದರೊಂದಿಗೆ, ಮದುವೆಯಾಗಲು ಮನಃಪೂರ್ವಕವಾಗಿ ಒಪ್ಪಿದ್ದೇನೆಂದು ಹೇಳುವುದರೊಂದಿಗೆ ಶಾಪಗ್ರಸ್ತ ಮೃಗ ರಾಜಕುಮಾರನಾಗಿ ಪರಿವರ್ತನೆ ಹೊಂದುತ್ತಾನೆ. ಕಥೆ ಸುಖಾಂತ್ಯವಾಗುತ್ತದೆ.

ಸುಂದರವಾಗಿ ಕಾಣುವ ಮನುಷ್ಯನ ದೇಹದೊಳಗೆ ಕ್ರೂರ ಹೃದಯವಿದ್ದಿರಬಹುದು, ಒರಟು ದೇಹದ ಮೃಗದೊಳಗೆ ಸುಂದರ ಹೃದಯವಿದ್ದಿರಬಹುದು ಎನ್ನುವ ಭಾವ 'ಮೃಗ ಮತ್ತು ಸುಂದರಿ' ನಾಟಕದಲ್ಲಿ ಮೇಲ್ಮೈಗೆ ಬರುತ್ತದೆ.

ಮನಮುಟ್ಟುವ ಹಾಡುಗಳಿಂದ, ಪ್ರಾಸ-ಪುನರುಕ್ತಿಗಳ ಸಂಯೋಜನೆಯಿಂದ ನಾಟಕ ಆಸಕ್ತಿ-ಕುತೂಹಲಗಳನ್ನು ಗಳಿಸಿಕೊಳ್ಳುತ್ತದೆ:

೧. ಮಕ್ಕಳು ಬಂದು ನೋಡ್ತಾರೆ ಮುಟ್ಟಿ – ಮುಂದೇನಾಯ್ತು
ನೋಡದಿರಿ ಮಕ್ಕಳೆ ತೆರೆಯದಿರಿ ಬುಟ್ಟಿ– ಮುಂದೇನಾಯ್ತು
ಶೆಟ್ಟಿಯ ಮಕ್ಕಳು ವಿಸ್ಮಯಪಡ್ತಾರೆ – ಮುಂದೇನಾಯ್ತು
ಮಕ್ಕಳನು ರಮಿಸಿ ಶೆಟ್ಟಿ ಹೇಳ್ತಾನೆ – ಮುಂದೇನಾಯ್ತು

೨. ಬುಟ್ಟಿಯ ಮುಚ್ಚಳ ತೆಗೆದಾರು ಶಿವನೇ...
ಬೆಳ್ಳಿ ಬಂಗಾರವ ಕಂಡಾರು ಶಿವನೇ...
ಅಪ್ಪನ ಕರೆದು ತೋರಿದರು ಶಿವನೇ...
ಕಷ್ಟ ಕಳೆಯಿತೆಂದು ಬೀಗಿದರು ಶಿವನೇ...

'ಮೃಗ ಮತ್ತು ಸುಂದರಿ'ಯಲ್ಲಿ ಸೂತ್ರಧಾರ ಮತ್ತು ಮೇಳಗಳನ್ನು ಸಮರ್ಥವಾಗಿ ಬಳಸಿಕೊಳ್ಳಲಾಗಿದೆ. ನಾಟಕದ ಒಟ್ಟು ಪರಿಣಾಮದಲ್ಲಿ ಅವು ಉಂಟುಮಾಡುವ ಪ್ರಭಾವ ಎದ್ದು ಕಾಣುತ್ತದೆ:

ಮೇಳ : ತಲೆಯೆತ್ತಿ ನೋಡ್ತಾನೆ ದಿಂ ದಿಂ ದಿಂ ದಿಂ
ಹತ್ತಿರ ಹೋಗ್ತಾನೆ ದಿಂ ದಿಂ ದಿಂ ದಿಂ
ತೆರೆದಿತ್ತು ಬಾಗಿಲು ದಿಂ ದಿಂ ದಿಂ ದಿಂ
. . . .

ಬಗೆ ಬಗೆ ಕಜ್ಜಾಯ ಆಹಾ ಆಹಾ
ಪಾಯಸ ರಸದೂಟ ಆಹಾ ಆಹಾ...

* * *

ಬಾಗಿದ ಬೆನ್ನಿನ ಬಡವಿ ಮುದುಕಿ
ಬಂದಳು ಸೀತೆಯ ಅರಮನೆ ಹುಡುಕಿ
ಕಾಲಲಿ ಹುಣ್ಣು ಕಾಣದು ಕಣ್ಣು
ಕೂದಲು ಬೆಳ್ಳಗೆ ಮಾಗಿದ ಹಣ್ಣು

ಮುಂತಾದ ಅರ್ಥಪೂರ್ಣ ಮೇಳದ ಹಾಡುಗಳಿಂದ ಗಜಾನನ ಶರ್ಮ ಅವರ 'ಗೊಂಬೆ ರಾವಣ' ಎನ್ನುವ ಇನ್ನೊಂದು ನಾಟಕ ಕೂಡ ಮಕ್ಕಳಿಗೆ ರಂಗಭೂಮಿಯ ಅಪಾರ ಸಾಧ್ಯತೆಗಳನ್ನು ಪರಿಚಯಿಸುವಲ್ಲಿ ಶಕ್ತವಾಗುತ್ತದೆ. ಪೌರಾಣಿಕ ಕಥೆಯೊಂದರ ತುಣುಕನ್ನು ಅದ್ಭುತವಾಗಿ ವಿಸ್ತರಿಸಲಾಗಿದೆ. ರಾವಣನ ಗೊಂಬೆಗೆ ಜೀವ ಬರಿಸೆಂದು ಪರಿಪರಿಯಾಗಿ ಮುದುಕಿಯೊಬ್ಬಳು ಸೀತೆಯನ್ನು ಕಾಡುತ್ತಾಳೆ. ಆ ಜೀವಂತ ಗೊಂಬೆಯನ್ನು ಜನರ ಹತ್ತಿರ ಒಯ್ದು ರಾವಣನ ದುಷ್ಟತನವನ್ನು ಬಯಲು ಮಾಡುತ್ತೇನೆ ಎನ್ನುತ್ತಾಳೆ. ಮನಸ್ಸಿಲ್ಲದ ಮನಸ್ಸಿನಿಂದ ಸೀತೆ ಗೊಂಬೆಗೆ ಜೀವ ಬರಿಸಿದಾಗ ಮುದುಕಿ ರಕ್ಕಸಿಯಾಗಿ ಮಾರ್ಪಾಡಾಗುತ್ತಾಳೆ: 'ಸ್ವರ್ಣಲಂಕೆಯನ್ನು ಮಣ್ಣುಗೂಡಿಸಿದ ಮಾಟಗಾತಿ ನೀನೇ ಅಲ್ಲವೇ? ನನ್ನ ಅಣ್ಣಂದಿರನ್ನು, ಬಂಧು ಬಾಂಧವರನ್ನು ಕೊಲ್ಲಿಸಿದವಳು ನೀನೇ ಅಲ್ಲವೆ? ... ಜಾನಕಿ, ಇಗೋ ಇಲ್ಲಿ ಮತ್ತೆ ಬಂದಿದ್ದಾನೆ ನಿನ್ನ ಮುಂದಿನ ಸುಖ ಜೀವನವನ್ನು ಹಾಳು ಮಾಡುವುದಕ್ಕಾಗಿ ಈ ಗೊಂಬೆ ರಾವಣ. ನಿನ್ನನ್ನು ಮತ್ತೊಮ್ಮೆ ಕಾಡಿಗೆ ಅಟ್ಟುವ ಗೊಂಬೆ ರಾವಣ...'

ಆಡುತ್ತಿತ್ತು ಓಡುತ್ತಿತ್ತು ನೋಡುತ್ತಿತ್ತು ಗೊಂಬೆ
ಒಳಗೆ ಹೊರಗೆ ಎದ್ದು ಬಿದ್ದು ಕುಣಿಯುತ್ತಿತ್ತು ಗೊಂಬೆ
ಏಳಬಿಡದೆ ಕೂರಬಿಡದೆ ಕಾಡುತ್ತಿತ್ತು ಗೊಂಬೆ
ತಟ್ಟಿ ಕೈಯ್ಯ ಮುಟ್ಟಿ ಮೈಯ್ಯ ಆಡುತ್ತಿತ್ತು ಗೊಂಬೆ

ಸಮಕಾಲೀನವನ್ನು ಹಾಗೂ ಪ್ರಾಚೀನವನ್ನು ಬೆಸೆಯುತ್ತ ಗಜಾನನ ಶರ್ಮ ನಾಟಕ ಕಟ್ಟಿರುವುದು ಮೆಚ್ಚುವಂತಹದಾಗಿದೆ.

ಎಸ್.ಮಾಲತಿ, ಸಾಗರ

'ಹೂವುಗಳು ಅರಳಲಿ', 'ತಿರುಕನ ಕನಸು', 'ನ್ಯಾಯಕ್ಕೇ ಜಯ', 'ಬುದ್ಧ ಹೇಳಿದ ಕತೆ' ಹಾಗೂ 'ಮಾಯಾ ಬಜಾರ್'ದಂತಹ ನಾಟಕಗಳ ಮೂಲಕ ಮತ್ತು ನಾಟಕ ನಿರ್ದೇಶನದ ಮೂಲಕ ಮಕ್ಕಳ ರಂಗಭೂಮಿಗೆ ಅನನ್ಯವಾದ ಕೊಡುಗೆ ಕೊಟ್ಟವರು ಎಸ್. ಮಾಲತಿ ಅವರು. ಜನಪರ ಮತ್ತು ಪುರೋಗಾಮಿ ತತ್ವಗಳ ಮೇಲೆ ಮಕ್ಕಳ ನಾಟಕಗಳನ್ನು ರಚಿಸಿ ಬಾಲಸಾಹಿತ್ಯದಲ್ಲಿಯೂ ಒಂದು ತಾತ್ವಿಕ ಬದ್ಧತೆಯನ್ನು ಎಸ್.ಮಾಲತಿ, ಸಾಗರ ಅವರು ಕಾಪಾಡಿಕೊಂಡು ಬಂದಿದ್ದಾರೆ. ಅವರ ಬಹುತೇಕ ನಾಟಕಗಳು 'ನವಕರ್ನಾಟಕ ಪ್ರಕಾಶನ' ದಿಂದ ಪ್ರಕಟಗೊಂಡಿವೆ. 'ಮೂರು ಮಕ್ಕಳ ನಾಟಕಗಳು' ಹೆಸರಿನಲ್ಲಿ ಹೂವುಗಳು ಅರಳಲಿ, 'ತಿರುಕನ ಕನಸು', 'ನ್ಯಾಯಕ್ಕೆ ಜಯ' ಇವು ೨೦೦೮ರಲ್ಲಿ ಪುಸ್ತಕ ರೂಪದಲ್ಲಿ ಹೊರಬಂದಿವೆ. 'ಮಾಯಾ ಬಜಾರ್' ನಾಟಕವನ್ನು ಬಂಡಾಯ ಪ್ರಕಾಶನ, ಕೆರೆಕೋಣ–ಹೊನ್ನಾವರ ಇವರು ೨೦೧೨ರಲ್ಲಿ ಪ್ರಕಟಿಸಿದ್ದಾರೆ. ೧೯೮೯ ರಲ್ಲಿ ಕೊಳಗೇರಿ ಮಕ್ಕಳ ಕುರಿತ ಈ ನಾಟಕವನ್ನು ಅವರು ಬರೆದು ಬೆಂಗಳೂರಿನ ಫ್ರೇಜರ್ ಟೌನ್ ಸಮೀಪದ ಕೊಳಗೇರಿಯ ಮಕ್ಕಳಿಗೆಂದು ಬರೆದು ನಿರ್ದೇಶಿಸಿದರು. ಮಾಯಾ ಬಜಾರಿನ ಹಿನ್ನೆಲೆಯನ್ನು ಮಾಲತಿಯವರು ಹೀಗೆ ವಿವರಿಸಿದ್ದಾರೆ: 'ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಮತ್ತು ಸ್ವಯಂ ಸೇವಾ ಸಂಸ್ಥೆ 'ಮಾಧ್ಯಮ್'ಗಳು ನನ್ನನ್ನು ಬೆಂಗಳೂರಿನ ಮಾಯಾ ಬಜಾರ್ ಎಂಬ ಕೊಳಗೇರಿಯ ಮಕ್ಕಳಿಗೆ ಒಂದು ನಾಟಕ ಮಾಡಿಸಿರೆಂದು ಕೇಳಿಕೊಂಡಾಗ ಎದ್ದ ಪ್ರಶ್ನೆ 'ಯಾವ ನಾಟಕ ಮಾಡಿಸಲಿ' ಎಂಬುದು. ಕೊಳಗೇರಿಗಳಲ್ಲಿ ಜನರು ಯಾವ ಮೂಲಭೂತ ಸೌಕರ್ಯಗಳೂ ಇಲ್ಲದೆ ಅತ್ಯಂತ ಹೀನಾಯ ಸ್ಥಿತಿಯಲ್ಲಿ ಬದುಕುವವರು. ಮಾಧ್ಯಮ್ ಸಂಸ್ಥೆಯ ಮೂಲಕ ಹಲವು ದಿನಗಳ ಕಾಲ ಕೊಳಗೇರಿಗೆ ಭೇಟಿ ಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಅರಿತುಕೊಂಡೆ. ಅಲ್ಲಿನ ಮಕ್ಕಳ ಸಂದರ್ಶನವನ್ನೂ ಮಾಡಿದೆ. ಅಲ್ಲಿ ಬಿಚ್ಚಿಕೊಂಡ ಕಥೆಗಳು ಹಲವಾರು. ಅವರದೇ ಕಥೆಗಳನ್ನಾಧರಿಸಿ ಈ 'ಮಾಯಾ ಬಜಾರ' ನಾಟಕವನ್ನು ಬರೆದೆ. ಸುಮಾರು ೬೦ ಮಕ್ಕಳೊಂದಿಗೆ ಒಂದು ತಿಂಗಳ ಕಾಲ ತಾಲೀಮು ನಡೆಸಿ ಈ ನಾಟಕವನ್ನು ಸಿದ್ಧಪಡಿಸಿದೆವು. ಅದೇ ವರ್ಷ ಈ ನಾಟಕದ ೬೦ ಪ್ರದರ್ಶನಗಳಾದವು. ಬೊಂಬಾಯಿಯಲ್ಲಿ ನಡೆದ ನಾಟಕೋತ್ಸವದಲ್ಲೂ ಈ ನಾಟಕ ಪ್ರದರ್ಶನಗೊಂಡಿತು. ('ಮಾಯಾ ಬಜಾರ್', ಪುಟ.III, ಲೇಖಕರ ಮಾತು, ಬಂಡಾಯ ಪ್ರಕಾಶನ, ಕೆರೆಕೋಣ, ೨೦೧೨)

ಗುಲಾಬಿನಗರವೆಂದು ಪ್ರಸಿದ್ಧವಾದ ಬೆಂಗಳೂರು ಹೇಗೆ ತನ್ನೊಳಗೆ ಒಂದು ನರಕಸದೃಶವಾದ ಕೊಳಗೇರಿಯ ಜನಜೀವನವನ್ನು ಬದುಕುಗೊಟ್ಟಿದೆ ಎಂಬುದನ್ನು ಈ ನಾಟಕ ಕಥೆ ಮಾಡಿ ಹೇಳುತ್ತದೆ. ಅಂದರೆ ಬದುಕಿನ ವಾಸ್ತವವನ್ನು ಎಳೆಎಳೆಯಾಗಿ ಬಿಡಿಸಿ ಇಡುವಲ್ಲಿ ಸಫಲವಾಗಿದೆ. ಮಕ್ಕಳಿಗೆ ಬೇಕಾದ ಆಹಾರ, ಆರೋಗ್ಯ, ಶಾಲೆ, ಕ್ರೀಡೆ, ಮನರಂಜನೆ ಇವು ಯಾವುವೂ ಇಲ್ಲದೆ ಕೊಳಚೆ ಪ್ರದೇಶಗಳ ಜನ ಅದರಲ್ಲೂ ಮುಖ್ಯವಾಗಿ ಮಕ್ಕಳು ಹೇಗೆ ವಂಚಿಸಲ್ಪಟ್ಟಿದ್ದಾರೆ ಎಂಬುದರ ಮೇಲೆ 'ಮಾಯಾ ಬಜಾರ್' ಬೆಳಕು ಬೀರುತ್ತದೆ. ಕತ್ತಲೆಯ ಅನಾಥ ಲೋಕವೊಂದು ನಮ್ಮ ಕರುಳನ್ನು ಮಿಡಿಯುತ್ತದೆ. ಕೊಳಚೆ ಪ್ರದೇಶದ ಕಷ್ಟ ತಾಳಲಾರದೆ ರಾಮು ಹಾಗೂ

ನರಸಯ್ಯ ಹೆಸರಿನ ಬಾಲಕರಿಬ್ಬರು ಮನೆಯಿಂದ ಓಡಿ ಹೋಗುತ್ತಾರೆ. ಗೊತ್ತುಗುರಿಯಿಲ್ಲದೆ ಬಂದ ಅವರು ಮಕ್ಕಳನ್ನು ಮಾರಾಟ ಮಾಡುವ ಜಾಲವೊಂದರಲ್ಲಿ ಸಿಕ್ಕಿಬೀಳುತ್ತಾರೆ. ಹೋಟೆಲಿನ ಅಮಾನವೀಯ ಮಾಲೀಕನ ಕ್ರೌರ್ಯಕ್ಕೆ ನಲುಗುತ್ತಾರೆ:

ರಾಮು	:	ದಾದಾ ಇನ್ನೂ ಯಾಕೆ ಬರ್ಲಿಲ್ಲ?
ನರಸಯ್ಯ	:	ಸಿನಿಮಾಕ್ಕೆ ಕರ್ಕೊಂಡ್ಹೋಗ್ತಿನಿ ಅಂತ ಹೇಳಿದ್ನಲ್ಲ .
(ಹೋಟೆಲ್) ಮಾಲೀಕ	:	ಮೇಲಕ್ಕೆ ಎದ್ದೇಳ್ರೋ, ಏಳ್ರೊ ಕೆಲಸ ಮಾಡ್ರೋ
ರಾಮು	:	ನಾವ್ಯಾಕೆ ನಿಮ್ಮಲ್ಲಿ ಕೆಲಸ ಮಾಡ್ಬೇಕು?
ಮಾಲೀಕ	:	ನಿಮ್ಮೊಬ್ಬಬ್ಬರಿಗೆ ಐನೂರು – ಐನೂರು ರೂಪಾಯಿ ಕೊಟ್ಟು ಕೊಂಡ್ಕೊಂಡಿದೀನಿ. ಮುಚ್ಕೊಂಡ್ ಕೆಲಸ ಮಾಡಿ.
ನರಸಯ್ಯ	:	ರಾಮು, ದಾದಾ ಕಳ್ಳ ಕಣೋ .
ಮಾಲೀಕ	:	ಕಳ್ಳಗಿಳ್ಳ ಅಂದ್ರೆ ಚರ್ಮ ಸುಲಿದು ಬಿಡ್ತೀನಿ. ಹೋಗೋ ನೀನು ಹಿಟ್ಟು ರುಬ್ಬು ನೀನು ಹೋಗಿ ಪಾತ್ರೆ ತೊಳಿ.

ನಾಟಕದಲ್ಲಿ ಬರುವ ಹಾಡುಗಳು ಲಯಬದ್ಧವಾಗಿದ್ದು ಶೋಷಿತರ ಆಕ್ರೋಶವನ್ನು ತೆರೆದಿಡುತ್ತವೆ. ಕನಸು ಕಾಣುತ್ತಿರುವ ಮಕ್ಕಳ ಕಣ್ಣಲ್ಲಿ ಹೇಗೆ ನೀರು ತುಂಬಿಕೊಂಡಿದೆ ಎಂಬುದನ್ನು ಮಾಲತಿಯವರು ವಿವರಿಸುತ್ತಾರೆ. ಭವ್ಯ ಭಾರತದ ಪ್ರಜೆಗಳಲ್ಲಿ ಮನೆ ಮಾಡಿರುವ ಮೇಲು–ಕೀಳು ಭಾವನೆ, ಜಾತೀಯತೆ, ಬಡತನ ಮುಂತಾದ ಆಚಾರಹೀನ ನಡವಳಿಕೆಗಳನ್ನು ಲೇವಡಿ ಮಾಡುತ್ತಾರೆ:

ಕನಸು ಕಾಣುವ ಕಣ್ಣಲಿ ನೀರು
ಮಾಯಾ ಬಜಾರ್ ಮಕ್ಕಳು ನಾವು
ಮಾಯಾ ಬಜಾರ್ ಮಕ್ಕಳು ನಾವು
ಬಾಲ್ಯವೆಂದರೆ ಅದೇನು ಹೇಳಿ
ಆಟ, ಪಾಠ, ಸರಿಯಾದ ಊಟ
ಕಂಡಿಲ್ಲ ಒಂದನೂ ಒಪ್ಪತ್ತು
ಮಾಯಾ ಬಜಾರ್ ಮಕ್ಕಳು ನಾವು
ಜಗಳ ಹೊಡೆತ ಕುಡಿತ ಬಡಿತ
ಇವುಗಳಲ್ಲಿಯೇ ನಮ್ಮಯ ಬದುಕು
ನಗುವು ನಲಿವೂ ಕಂಡಿಲ್ಲ.

ನಾಟಕದ ಕೊನೆಯಲ್ಲಿ ಬರುವ 'ಅಯ್ಯೋ ದೇವರು ಏನು ಮಾಡ್ತಾನೆ? ನಾವೇ ಏನಾದ್ರು ಮಾಡ್ಬೇಕು?' ಎನ್ನುವ ಗಂಗಮ್ಮನ ಮಾತಿನಲ್ಲಿ ನವಸಮಾಜವನ್ನು ಕಟ್ಟುವ ಕೆಲಸ ನಮ್ಮಿಂದಲೇ ಪ್ರಾರಂಭವಾಗಬೇಕು, ಸಮಾನತೆಯ ಆಶಯವನ್ನು ಮಕ್ಕಳಲ್ಲಿ ಮೊದಲಿನಿಂದಲೇ ಬಿತ್ತಬೇಕು ಮುಂತಾದ ವೈಚಾರಿಕತೆ ಅಭಿವ್ಯಕ್ತಗೊಂಡಿದೆ.

ಮಾಲತಿ ಅವರ 'ನ್ಯಾಯಕ್ಕೆ ಜಯ' ಇಂತಹುದೇ ನ್ಯಾಯ ನೀತಿ ಧರ್ಮದ ಆಶಯವಿದ್ದರೂ ಇಲ್ಲಿ ಅದು ತುಂಬ ಕಲಾತ್ಮಕವಾಗಿ ನಿರೂಪಿತವಾಗಿದೆ. ಧನಿಕನಾದ ಭೀಮಣ್ಣ – ಬಡವನಾದ ರಾಮಣ್ಣ ಅವರ ಗುಣಾವಗುಣಗಳನ್ನು ವೈದೃಶ್ಯದ ಮೂಲಕ ಬಿಂಬಿಸಲಾಗಿದೆ. ಧನದಾಸೆಗೆ ಅಣ್ಣ ಭೀಮಣ್ಣ ತಮ್ಮನಿಗೆ ಸೇರು ಹಿಟ್ಟು ಕೊಡಲು ಕಡವಾಗಿ ತಮ್ಮನ ಕಣ್ಣುಗಳನ್ನೇ ಕಿತ್ತುಕೊಳ್ಳುವುದು ರೊಕ್ಕ ಆಮಿಷ ಅಸೂಯೆಗಳಿಗೆ ಮನುಷ್ಯ ಎಷ್ಟೊಂದು ನಿರ್ಲಜ್ಜ ಮತ್ತು ನೀಚನಾಗುತ್ತಾನೆ ಎಂಬುದರ ಸಂಕೇತವಾಗಿದೆ. ಕೊನೆಗೆ ನಿಸರ್ಗದ ಔದಾರ್ಯದಿಂದ ತಮ್ಮನ ಕಣ್ಣುಗಳು ಮತ್ತೆ ಕಾಣುತ್ತವೆ. ಅಣ್ಣನ ದುಷ್ಟತನವನ್ನು ಕ್ಷಮಿಸಿ ಹುಚ್ಚನಾಗಿದ್ದ ಅವನ ಬಾಯಿಯಲ್ಲಿ ಎಲೆಯೊಂದರ ರಸ ಹನಿಸುವ ಮೂಲಕ ತಮ್ಮನು ಅಣ್ಣನಿಗೆ ಮತಿಯನ್ನು ಮತ್ತೆ ದೊರಕಿಸಿಕೊಡುತ್ತಾನೆ. ಚಂದ್ರಶೇಖರ ಕಂಬಾರ ಅವರು ಹೇಳಿದ ಜನಪದ ಕಥೆಯೊಂದರ ಆಧಾರದ ಮೇಲೆ ತಾವು 'ನ್ಯಾಯಕ್ಕೆ ಜಯ' ನಾಟಕವನ್ನು ಬರೆದುದಾಗಿ ಮಾಲತಿಯವರು ಹೇಳಿಕೊಂಡಿದ್ದಾರೆ.

ಮಕ್ಕಳ ವಯೋಮಾನದ ಭಾಷೆ, ಕಲ್ಪನೆ, ಸನ್ನಿವೇಶಗಳಿಂದ ಇದು ಒಂದು ಉತ್ತಮ ನಾಟಕವಾಗಿದೆ. ಅನೇಕ ನಾಟಕ ತಂಡಗಳಿಂದ ಅದು ಅಭಿನಯಿಸಲ್ಪಟ್ಟಿದೆ. ಮಣ್ಣಿನ ಸಂಬಂಧವನ್ನು ಕಡಿದುಕೊಳ್ಳಬಾರದೆನ್ನುವ ಅಂಶ ನಾಟಕದಲ್ಲಿ ಅನೇಕ ಸಲ ಬರುತ್ತದೆ. ಹಾಡುಗಳು ಕೂಡ ಮಾಧುರ್ಯದಿಂದ ನಾಟಕದ ಓಟಕ್ಕೆ ಸಹಕರಿಸುತ್ತವೆ:

೧. ಹುಯ್ಯೋ ಹುಯ್ಯೋ ಮಳೆರಾಯ
ನೀಗಿಸೋ ನಮ್ಮಯ ಬವಣೆಯ
ಬಾಯಾರಿಹುದು ನಮ್ಮ ಜೀವ
ನೀಗಿಸೋ ನಮ್ಮಯ ದಾಹವಾ
ಕೆರೆಕಟ್ಟೆ ಎಲ್ಲ ಒಣಗಿಹುದು
ಬದುಕೇ ಬೇಸರ ಆಗಿಹುದು
ಕಾಯೋ ನಮ್ಮನು ನೀ ಬಂದು
ತಣಿಸೋ ನಮ್ಮನು ಸುಖ ತಂದು

೨. ಮನುಜ ಮನುಜ ಸೇರಿದರೆ
ಅದು ಸ್ವರ್ಗವು
ಮನಸು ಮನಸು ಕೂಡಿದರೆ
ಅದೇ ಸೌಖ್ಯವು

ಬಾಲ ಕಾರ್ಮಿಕ ಹಾಗೂ ಅಸ್ಪೃಶ್ಯತೆಯ ಸಮಸ್ಯೆಯ ಮೇಲೆ 'ಹೂವುಗಳು ಅರಳಲಿ' ನಾಟಕ ತನ್ನ ಗಮನವನ್ನು ಕೇಂದ್ರೀಕರಿಸಿದರೆ 'ತಿರುಕನ ಕನಸು' ಸಮಕಾಲೀನ ಸಮಸ್ಯೆಗಳನ್ನು ಹಳೆ ಕತೆಯ ನಿರೂಪಣೆಯೊಂದಿಗೆ ಬಗೆಹರಿಸುವಲ್ಲಿ ನಿರತವಾಗಿದೆ. ಕೇವಲ ಮನರಂಜನೆ, ಪುರಾಣ, ನೀತಿಕತೆ ಎಂದು ಭೂತಕಾಲದಲ್ಲಿ ಮುಳುಗದೇ ವರ್ತಮಾನದ ತಲ್ಲಣಗಳನ್ನು ಹಾಗೂ ಶೋಷಿತರ ಅಳಲನ್ನು ಕಟ್ಟಿಕೊಡುವ ಮೂಲಕ ಎಸ್. ಮಾಲತಿ ಅವರು ಕನ್ನಡ ಮಕ್ಕಳ ನಾಟಕಗಳ ಮೇರೆಗಳನ್ನು ವಿಸ್ತರಿಸಿದ್ದಾರೆ. ಅಲಕ್ಷಿತ ನೆಲೆಗಳನ್ನು ಮುನ್ನೆಲೆಗೆ ತಂದಿದ್ದಾರೆ.

ಸತ್ಯನಾರಾಯಣರಾವ್ ಅಣತಿ

ಗಿಡ-ಮರ-ಹೂವು-ಹಣ್ಣುಗಳಿಗೆ ಮನುಷ್ಯತ್ವದ ಆರೋಪಣ ಮಾಡುತ್ತ ಮನುಷ್ಯ ಲೋಕದ ಗುಣ ಅಥವಾ ಆದರ್ಶಗಳನ್ನು ನಿಸರ್ಗದಲ್ಲಿ ಕಾಣುವ ಹಂಬಲ ಸತ್ಯನಾರಾಯಣರಾವ್ ಅಣತಿಯವರ ನಾಟಕಗಳಲ್ಲಿದೆ. ಹೂಗಳಿಗೆ ಹಾಗೂ ಕಲಾತ್ಮಕ ವಸ್ತುಗಳಿಗೆ ವ್ಯಕ್ತೀಕರಣ ಮಾಡಿ ಮಕ್ಕಳಿಗೆ ಅವು ಮುದವಾಗುವ ಹಾಗೆ ಚಿತ್ರಿಸಿದ್ದಾರೆ. ಈವರೆಗೆ ಅವರು ಎರಡು ನಾಟಕಗಳನ್ನು ಬರೆದಿದ್ದಾರೆ. 'ಹೂವಿನ ಸುಗ್ಗಿ' (ಕಣ್ವ ಪ್ರಕಾಶನ, ಬೆಂಗಳೂರು, ೨೦೦೦) ಮತ್ತು 'ಕೊಳಲ ನ್ಯಾಯ' (ಕಾಲ ಪ್ರಕಾಶನ, ಬೆಂಗಳೂರು ೨೦೧೨). ಈ ಕೃತಿಗಳು ಮಕ್ಕಳಿಗೆ ರಮ್ಯಲೋಕದ ಅನುಭವವನ್ನು ಕೊಡುತ್ತಲೆ ಹೊಸ ವಿಚಾರವನ್ನು ಅರುಹುವ ಶಕ್ತಿಯನ್ನು ಪಡೆದಿವೆ.

ಸತ್ಯನಾರಾಯಣರಾವ್ ಅವರ ನಾಟಕಗಳ ಒಂದು ವಿಶೇಷ ಗುಣವೆಂದರೆ ಅವರ ಭಾಷೆಯ ಮಾಧುರ್ಯ. ಶಾವಿಗೆಯ ಎಳೆಗಳಂತೆ ಅದು ಸರಸರನೆ ಇಳಿಯುವುದು. ಜಡೆಯಂತೆ ಹೆಣೆದುಕೊಳ್ಳುವುದು. 'ಹೂವಿನ ಸುಗ್ಗಿ' ಒಂದು ಸುಂದರ ಸಂಗೀತ ನೃತ್ಯರೂಪಕವಾಗಿದೆ. ಇಲ್ಲಿ ಮಾತಿನ ಚಾಕಚಕ್ಯತೆಗಿಂತ ಹಾಡುಗಳ ಸಮ್ಮೋಹನ ಶಕ್ತಿಯೇ ಹೆಚ್ಚು. ನಾಟಕ ಆರಂಭವಾಗುವುದು ಗುಲಾಬಿ, ಮಲ್ಲಿಗೆ, ಸೇವಂತಿಗೆ, ಇರುವಂತಿಗೆ ಮುಂತಾದ ಹೂವುಗಳ ಸಂಭ್ರಮದ ನಡುವೆ. ತಮ್ಮ ಹಿರಿಮೆ-ಗೌರವ-ಪ್ರತಿಷ್ಠೆಗಳನ್ನು ನೆನೆದುಕೊಂಡು ಅವು ಅಟ್ಟಕ್ಕೆ ಏರಿವೆ. ತಮ್ಮಂತಹ ಸೌಂದರ್ಯ, ಸುಗಂಧವನ್ನು ಹೊಂದಿರದ ತುಂಬೆ ಹೂವನ್ನು ಅವು ನಿಕೃಷ್ಟವಾಗಿ ಕಾಣುತ್ತವೆ. ಆದರೆ ತುಂಬೆ ಹೂವು ಈ ಹೂವುಗಳ ದಬ್ಬಾಳಿಕೆಗೆ ಮಣಿಯುವುದಿಲ್ಲ. ತನ್ನನ್ನು ಅವಮಾನ ಮಾಡುತ್ತಿರುವ ಪುಷ್ಪಗಳಲ್ಲಿರುವ ನ್ಯೂನತೆಗಳನ್ನು ತೆರೆದಿಡುತ್ತದೆ. ತುಂಬೆ ಹೂವಿನ ಪ್ರಾರ್ಥನೆಗೆ ಕಣ್ಣು ತೆರೆಯುವ ಶಿವ 'ಚಿಕ್ಕದಾಗಿದ್ದರೂ ಚೆಲುವಾಗಿರುವೆ' ಎಂದು ತುಂಬೆ ಹೂವನ್ನು ಪ್ರೀತಿಯಿಂದ ತನ್ನ ಮುಡಿಗೇರಿಸಿಕೊಂಡು ಭೂಮಿಯ ಮಡಿಲಲ್ಲಿ ಎಲ್ಲರೂ ಒಂದೇ ಎಂಬ ತತ್ವವನ್ನು ಸಾರುತ್ತಾನೆ. ತರತಮ ಭಾವವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಈ ನಾಟಕ ದುಡಿಯುತ್ತದೆ.

ಶಿವನೊಲಮೆಯ ಗೆದ್ದ
ಕೂಸಿಗೆ ಶರಣೆನ್ನಿರೆ
ನೆಲದಾಯಿ ಮಕ್ಕಳು
ಮುಗಿಲಿಗೆ ಜಿಗಿದು
ಶಿವನ ಸನ್ನಿಧಿಗೇ
ಏರುವ ಬನ್ನಿರೇ
ಹೂವು ನಾವೆಲ್ಲಾ
ಒಂದೆನ್ನಿರೆ
ಭೂಸಖಿ ಮಡಿಲಲ್ಲಿ
ಒಂದೆನ್ನಿರೇ
ಸೊಬಗಿನ ಸುಗ್ಗಿಯ
ಸಿರಿಯೆನ್ನಿರೇ
ಜಗದ ಜಾಣೆಯರೆಲ್ಲಾ
ಒಂದೆನ್ನಿರೇ

ಹೆಸರಿರುವ ಹೆಸರಿರದ
ಗುರುತಿರುವ ಗುರುತಿರದ
ಬಿಡಿ ಬಿಡಿ ಬಣ್ಣಗಳೊಂದಾಗಿ
ನುಗ್ಗಿ
ತಂಗಿ ಬಿಳಿ ತುಂಬೆಯಲ್ಲಿ
ಸೇರುವೆವು ಹಿಗ್ಗಿ

ಸತ್ಯನಾರಾಯಣರಾವ್ ಅಣತಿ ಅವರ 'ಕೊಳಲ ನ್ಯಾಯ' ನಾಟಕದಲ್ಲಿಯೂ ಕೂಡ ಸರಳ, ಸುಂದರ ಭಾಷೆಯಲ್ಲಿ ಒಂದು ತಾತ್ವಿಕತೆ ಅರಳುತ್ತದೆ. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರು ಹೇಳಿದ ಒಂದು ಕತೆಯನ್ನು ವಿಸ್ತರಿಸಿ ತಾವು ಈ ನಾಟಕ ಬರೆದಿರುವುದಾಗಿ ಅಣತಿಯವರು ಹೇಳಿಕೊಂಡಿದ್ದಾರೆ: 'ನೊಬೆಲ್ ಪ್ರಶಸ್ತಿ ವಿಜೇತರಾದ ಡಾ.ಅಮರ್ತ್ಯ ಸೇನ್ ಅವರು ಒಂದು ಭಾಷಣದಲ್ಲಿ ಹೇಳಿದ ಕತೆಯೇ 'ಕೊಳಲ ನ್ಯಾಯ.' ಕೊಳಲು ಮೂವರು ಮಕ್ಕಳಲ್ಲಿ ಯಾರಿಗೆ ಸೇರಬೇಕು? ತಯಾರು ಮಾಡಿದವರು, ನುಡಿಸಲು ಬರುವವನಿಗೆ, ಇಂಥ ಯಾವ ವಸ್ತು ಇಲ್ಲದವಳು. ಯಾರಿಗೆ? ಈ ಪ್ರಶ್ನೆಗೆ ಉತ್ತರ ಹುಡುಕುವುದೇ ಇಂದಿನ ನಮ್ಮ ದೇಶದ ಅರ್ಥ ವಿತರಣೆಯ ಸಮಸ್ಯೆ ಎಂಬುದಾಗಿ ಸೂಚಿಸುವ ಕತೆ ನನ್ನ ಮನಸ್ಸಿನಲ್ಲಿ ಇಳಿಯುತ್ತಾ ಹೋಯಿತು. ಪರಿಭಾವಿಸುತ್ತಾ ಹೋದಂತೆ ಈ ರೂಪ ತಳೆಯಿತು." (ಕೊಳಲ ನ್ಯಾಯ ಪು.VII).

ಕೊಳಲಿನ ದನಿಯೊಂದಿಗೆ ಆರಂಭವಾಗುವ ನಾಟಕ ಮುಂಜಾನೆಯ ಬೆಡಗನ್ನು ಒಂದು ಹಾಡಿನ ಮೂಲಕ ಕಟ್ಟಿಕೊಡುತ್ತದೆ.

ಬಂಗಾರ ತೇರ ಏರಿ
ಬರುತಾನೆ ಬೆಳಕಣ್ಣಾ
ಮುಂಜಾನೆ ಸಿಂಗಾರ ನೋಡಿರಣ್ಣಾ
ಸಖಿಯ ಸೌಭಾಗ್ಯಕ್ಕೆ ಹಾಡಿರಣ್ಣಾ ಸುವ್ವಿ/ಸುವ್ವಿ/ಸುವ್ವಿ
ಹೂ ಹಣ್ಣು ಹಂಪಲು
ಗಿಡ ಮರದ ಜೊಂಪಲು
ಜೀವಜಾತಕ್ಕೆಲ್ಲಾ ಹಂಚಲು
ತುಂಬಿದ ಹೊಟ್ಟೆಯ ಸಮ ಸುಖ ಸುವ್ವಿ/ಸುವ್ವಿ/ಸುವ್ವಿ

ಹೊಸ ಕಥೆ ಹೇಳೆಂದು ಅಜ್ಜಿಯನ್ನು ಪೀಡಿಸುವ ಮಕ್ಕಳ ಆಟದೊಂದಿಗೆ ನಾಟಕ ಪ್ರಾರಂಭವಾಗುತ್ತದೆ. ತಾವೆಲ್ಲ ಹಕ್ಕಿಗಳ ಹಾಗಿರಬೇಕು, ಹಾಡಬೇಕು, ಆಡಬೇಕು ಎನ್ನುವ ಮಕ್ಕಳ ಆಶೆಯೊಂದಿಗೆ ಅಜ್ಜಿ ಅವರಿಗೆ ಶಾಮಲಾ, ವಿಮಲಾ, ವೇಣು, ಎನ್ನುವ ಗೆಳೆಯರ ಕಥೆ ಹೇಳುವಳು.

ಕೊಳಲನ್ನು ತಯಾರು ಮಾಡಿದ ಶ್ಯಾಮಲಾ, ಕೊಳಲು ನುಡಿಸಲು ಗೊತ್ತಿರುವ ವೇಣು, ಆಡಲು ತನ್ನಲ್ಲಿ ಬೇರೆ ವಸ್ತುವಿಲ್ಲದ್ದಕ್ಕೆ ಕೊಳಲನ್ನೇ ಬೇಡುತ್ತಿರುವ ವಿಮಲಾ–ಈ ಮೂವರಲ್ಲಿ ಕೊಳಲು ಯಾರಿಗೆ ಸೇರಬೇಕು ಎನ್ನುವ ಜಗಳ ರಾಜನ ಆಸ್ಥಾನಕ್ಕೆ ಹೋಗುತ್ತದೆ.

ನ್ಯಾಯವಾದಿಯ ಬುದ್ಧಿವಂತಿಕೆಯಿಂದ ಚೆನ್ನಾಗಿ ಕೊಳಲು ನುಡಿಸಬಲ್ಲ ವೇಣುವಿಗೆ ಕೊಳಲು ದೊರೆಯುವುದು. ಕೊಳಲು ಸಿದ್ಧಪಡಿಸಿದ ಶ್ಯಾಮಲೆಗೆ ಅವಳ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ. ಅಲ್ಲದೆ ವಿಮಲಾಳಿಗೆ ಆಟಿಕೆ ಕೊಳ್ಳಲು ರಾಜಧನ ಸಿಗುವುದರ ಜೊತೆಗೆ ಅವಳ ತಂದೆ – ತಾಯಂದಿರ ಬಡತನವನ್ನು ದೂರ ಮಾಡುವ ವಚನ ರಾಜನಿಂದ ಸಿಗುತ್ತದೆ. ಸಾಮಾಜಿಕ ಸ್ಥಿತಿಗತಿ, ಸಾಮಾಜಿಕ ನ್ಯಾಯ, ಪ್ರತಿಭೆಗಳಿಗೆ ಪ್ರೋತ್ಸಾಹ ಮುಂತಾದ ಸಾಮಾಜಿಕ ಮೌಲ್ಯಗಳನ್ನು ಅಣತಿಯವರು ಮುನ್ನೆಲೆಗೆ ತರುತ್ತಾರೆ. ಮಕ್ಕಳಿಗೆ ಪ್ರಿಯವಾಗುವಂತಹ ಅನೇಕ ಹಾಡುಗಳು ಈ ನಾಟಕದಲ್ಲಿರುವುದು ಇನ್ನೊಂದು ವಿಶೇಷವಾಗಿದೆ. ಮಕ್ಕಳು ಪುಷ್ಪಕ ವಿಮಾನ ಹತ್ತಿ ಹಾಡುತ್ತಾ ಹೋಗುವ, ರಾಜಧಾನಿ ಸೇರಿ ನ್ಯಾಯವನ್ನು ಕೇಳುವ ಚಿತ್ರಣ ಸೊಗಸಾಗಿ ಮೂಡಿಬಂದಿದೆ.

ಅಲ್ಲಿ ಹಸಿರು
ಇಲ್ಲಿ ಕೆಂಪು
ಹಳದಿ ನೀಲಿ ಬಣ್ಣ
ಹಕ್ಕಿಯಂತೆ ಹಾರುತಿರುವ
ನಮ್ಮ ನೋಡಿರಣ್ಣ.

ಹರಿವ ನದಿ
ಗಿರಿಯ ಸಾಲು
ನೀಲಿ ಮೇಲೆ
ಅಗೋ ಪೈರು ಪಚ್ಚೆ
ಸಖಿಯ ಮೈತುಂಬ ಹಚ್ಚೆ.

ಡಾ. ಆನಂದ ಪಾಟೀಲ

'ಮುತ್ತ್ಯಾ ಮತ್ತು ಮೂವರು ರಾಕ್ಷಸರು', 'ಮಾಯಪ್ಪಜ್ಜನ ರುಮಾಲು', 'ಪಂಡಿತರಪ್ಪ ಪಂಡಿತರು', 'ಕಾಜಿನ ಕಣ್ಣು ಕಾಣದ ಕಣ್ಣು'– ಹೀಗೆ ನಾಲ್ಕು ನಾಟಕಗಳನ್ನು ರಚಿಸಿರುವ ಆನಂದ ಪಾಟೀಲ ಅವರು ಮಕ್ಕಳ ರಂಗಭೂಮಿಯ ಕಡೆಗೂ ತಮ್ಮ ಬರವಣಿಗೆಯ ಕುಶಲತೆಯನ್ನು ಹರಿಸಿದ್ದಾರೆ. ಈ ನಾಟಕಗಳನ್ನು ಅವರು ಮೊದಲು ಬಾನುಲಿ ಮಾಧ್ಯಮ ಆಕಾಶವಾಣಿಗಾಗಿ ಬರೆದರು. ರೇಡಿಯೋದಲ್ಲಿ ಈ ನಾಟಕಗಳನ್ನು ಕೇಳಿದ ಮಕ್ಕಳು ಖುಷಿಪಟ್ಟು ಪತ್ರ ಬರೆದರು. ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಈ ನಾಟಕಗಳು 'ಒಂದು, ಎರಡು, ಮೂರು, ನಾಲ್ಕು–ಮಕ್ಕಳಿಗಾಗೇ ನಾಟಕ ಅಷ್ಟೂ' ಎನ್ನುವ ಶೀರ್ಷಿಕೆಯಲ್ಲಿ ಮುದ್ರಿತವಾಗಿವೆ. ಪುಸ್ತಕವನ್ನು ಬೆಂಗಳೂರಿನ ವಸಂತ ಪ್ರಕಾಶನ ೨೦೦೩ರಲ್ಲಿ ಹೊರತಂದಿದೆ. ಆಡುವ ಮತ್ತು ನೋಡುವ ಮಕ್ಕಳು ಖುಷಿಪಟ್ಟರೆ ಅದೇ ಇವುಗಳ ಸಾರ್ಥಕತೆ ಎಂದು ಆನಂದ ಪಾಟೀಲ ತಮ್ಮ ಮಾತುಗಳಲ್ಲಿ ಹೇಳಿಕೊಂಡಿದ್ದಾರೆ. 'ಇವು ಮೊದಲು ಬಾನುಲಿಗಾಗಿ ಬರೆದಂತವು, ಕೇಳಿದ ಮಕ್ಕಳು ಖುಷಿಪಟ್ಟು ಪತ್ರ ಬರೆದಿದ್ದರು. ರಂಗದಲ್ಲಿ ಪ್ರದರ್ಶಿಸುವುದಕ್ಕೆ ತಕ್ಕ ಹಾಗೆ ಒಂದಷ್ಟು ಬದಲಾವಣೆ ಮಾಡಿ ಇಲ್ಲಿ ನೀಡಲಾಗಿದೆ. ರಂಗದಲ್ಲಿ ಪ್ರಯೋಗಕ್ಕಾಗಿ ನೀಡಿದ

ಸೂಚನೆಗಳು, ಲೇಖಕ ಒಂದು ನಿಟ್ಟಿನಲ್ಲಿ ಊಹಿಸಿ ಬರೆದವುಗಳಷ್ಟೇ. ನಾಟಕ ನಿರ್ದೇಶಕರ ಸೃಜನಶೀಲ ಮನಸ್ಸುಗಳಿಗೆ ಹೊಳೆದಂತೆ ಇವುಗಳ ಸಾಧ್ಯತೆ'. ನಿರ್ದೇಶಕರ ಸ್ವಾತಂತ್ರ್ಯವನ್ನು ಪಾಟೀಲರು ಒತ್ತಿಹೇಳಿರುವುದು ನಾಟಕದ ಕೃತಿಯೊಂದು ರಂಗದ ಮೇಲೆ ಯಶಸ್ವಿಯಾದಾಗಲೇ ಅದು ನಾಟಕಕಾರನ ಯಶಸ್ಸು ಎಂದು ಹೇಳಿದಂತಿದೆ.

'ಮುತ್ತ್ಯಾ ಮತ್ತು ಮೂವರು ರಾಕ್ಷಸರು' ನಾಟಕ ಒಂದು ಹಳ್ಳಿಯ ಕಥೆಯನ್ನು ಆಧರಿಸಿದ್ದು ಅವಾಸ್ತವ ಮತ್ತು ವಾಸ್ತವ ಜಗತ್ತುಗಳ ನಡುವೆ ವ್ಯವಹರಿಸುವ ಹುಡುಗನೊಬ್ಬ ಗೊಂದಲಕ್ಕೊಳಗಾಗುವ ಸಂಗತಿ ಇಲ್ಲಿ ಮೂಡಿ ಬಂದಿದೆ. ಕಲ್ಪನಾ ಜಗತ್ತಿನ ಅದ್ಭುತ ಅಚ್ಚರಿಗಳು ವ್ಯವಹಾರಿಕ ಲೋಕದೊಂದಿಗೆ ತಳುಕು ಹಾಕಿಕೊಳ್ಳುವ ವಿಸ್ಮಯವನ್ನು ಬಾಲಕ ಅನುಭವಿಸುವಂತಾಗುತ್ತಾನೆ.

ಮುತ್ತ್ಯಾ ಅಂದರೆ ಈ ನಾಟಕದಲ್ಲಿ ಅಜ್ಜನಲ್ಲ. ಅದು ಒಬ್ಬ ಹುಡುಗನ ಹೆಸರು. ಮುತ್ತಣ್ಣ ಎಂದು. ಪಾಟೀಲರ ಮತ್ತೊಂದು ವಿಶೇಷತೆಯೆಂದರೆ ಉತ್ತರ ಕರ್ನಾಟಕದ ಭಾಷೆಯನ್ನು ಅತ್ಯಂತ ಲೀಲಾಜಾಲವಾಗಿ ಅವರು ಬಳಸುವುದು. ಮೇಲಾಗಿ ಈ ಭಾಷೆ ಮಕ್ಕಳ ಮನೋಭೂಮಿಕೆಗೆ ಹೊಂದಿಕೆಯಾಗುವುದು.

> 'ನನ್ನ ಹೆಸರು ಮುತ್ತ್ಯಾ, ಅರೇ, ಇದೇನ ಹೆಸರು, ಇಂಥಾದ್ದು ಅಂತ ಅಂದುಕೊಂಡಿರಬೇಕಲ್ಲಾ ನೀವು, ನಾನರ ಎನ ಮಾಡ್ಲಿ ಹೇಳ್ರಿ, ಹಾಂಗ ನೋಡಿದ್ರ ನನ್ನ ಹೆಸರು ಮುತ್ತಣ್ಣ ಅಂತ, ಛಂದದಲಾ ಹೆಸರು. ಆದರ ಈ ದೊಡ್ಡವರ ಪ್ರೀತಿ ಎಂಥದ್ದೋ ಏನೋ ಯಾವ ಹೆಸರೂ ಛಂಧಾಗಿ ಪೂರ್ಣ ಬಾಯಿ ತೆಗೆದು ಕರ್ಯಾಂಗಿಲ್ಲ ನೋಡ್ರಿ. ನನ್ನ ಹೆಸರೂ ಹೀಂಗ್ಯ.'

'ಮಾಯಪ್ಪಜ್ಜನ ರುಮಾಲು' ನಾಟಕವನ್ನು ಒಂದು ಸಣ್ಣ ಫ್ಯಾಂಟಸಿಯ ಎಳೆಯನ್ನು ಹಿಡಿದುಕೊಂಡು ಜನಪದ ಮಾದರಿಯಲ್ಲಿ ಬರೆಯಲಾಗಿದೆ. ನೆರಳು-ಬೆಳಕನ್ನು ಸರಿಯಾಗಿ ಮತ್ತು ಸೂಕ್ತವಾಗಿ ಅಳವಡಿಸುವುದರ ಮೂಲಕ ನಾಟಕವನ್ನು ಮಕ್ಕಳಿಗೆ ಕುತೂಹಲಕರವಾಗಿ ಮಾಡಬಹುದು. ಇಲ್ಲಿಯ ಹಾಡುಗಳು ಸ್ವಾರಸ್ಯಕರವಾಗಿವೆ.

ರುಂಬಾಲೇನ ಛಂದಾ
ಹಾವಿನಾಂಗ ಗುಂಡಾ
ಮ್ಯಾಲ ಛತ್ರಿ ಹಾಂಗ
ಚುಂಗ ಬಿಟಗೊಂಡಾ

ನಿದ್ದಿ ಹೊಡದಾನೊ
ನಿದ್ದಿ ಹೊಡದಾನೊ
ಗುರು ಗುರು ಗುರು ಗುರು
ನಿದ್ದಿ ಹೊಡದಾನೋ

ಅಡ್ಡ ಗುಡ್ಡಧಾರಿಗೆ
ಅಡಿವ್ಯಾಗ ಬಿದ್ದಾನೋ

ಮುಟ್ಟಿಲ್ಲ ಮಸುಕಿಲ್ಲ
ಮುತ್ಯಾ ಮಲಗ್ಯಾನೋ

ಲಡಿ ಉಚ್ಚಿಧಾಂಗೋ ಸ ರ ರ ರ ರ ರ
ಲೈನ ಹೊಂಟ ಹಾಂಗೊ ಅ ರ ರ ರ ರ ರ
ಹಳ್ಳ ಹರದಾಂಗೋ ಸ ಳ ಳ ಳ ಳ ಳ
ರುಮಾಲಪ್ಪೋ ರುಮಾಲೊ
ಈ ರುಮಾಲಪ್ಪೋ ಕಮಾಲೋ

ಆನಂದ ಪಾಟೀಲರ 'ಕಾಜಿನ ಕಣ್ಣು, ಕಾಣದ ಕಣ್ಣು' ನಾಟಕ ಮೇವುಂಡಿ ಮಲ್ಲಾರಿ ಅವರ 'ಗುಬ್ಬಜ್ಜಿಗೂಡು' ಕತೆಯನ್ನು ಆಧರಿಸಿದ್ದು, ಕೃಷ್ಣ ಪಾರಿಜಾತದ ಹಿನ್ನೆಲೆಯಲ್ಲಿ ಈ ನಾಟಕವನ್ನು ಅವರು ಕಟ್ಟಿಕೊಡುತ್ತಾರೆ.

ಎ.ಎಸ್.ಮೂರ್ತಿ

'ಆ ಮನಿ ಈ ಮನಿ', 'ಗುಮ್ಮ', 'ಮಂತ್ರವಾದಿ', 'ಓ ನನ್ನ ಮರವೆ', 'ಚಿನ್ನದ ಚೆಂಡು', ಹಾಡುಹಕ್ಕಿ, 'ಕಾಶಿ ಕಿಟ್ಟಿ' ಮುಂತಾದ ನಾಟಕಗಳ ಮೂಲಕ ಎ.ಎಸ್. ಮೂರ್ತಿ ಅವರು ಕನ್ನಡ ಮಕ್ಕಳ ನಾಟಕ ಕ್ಷೇತ್ರದಲ್ಲಿ ತಮ್ಮ ವೈಶಿಷ್ಟ್ಯವನ್ನು ಮೆರೆದಿದ್ದಾರೆ. ಮಕ್ಕಳಿಗಾಗಿ ಸರಳವೂ ವೈನೋದಿಕವೂ ಮನರಂಜನೆ ನೀಡುವಂತಹವೂ ಹಾಗೂ ಕಲಾತ್ಮಕವೂ ಆಗಿರುವಂತಹ ನಾಟಕಗಳನ್ನು ಮೂರ್ತಿಯವರು ಬರೆದಿದ್ದಾರೆ. ಹಾಗೂ ಆಡಿಸಿದ್ದಾರೆ. ರಂಗಭೂಮಿ, ಬೀದಿನಾಟಕ, ಆಕಾಶವಾಣಿಗಳಂತಹ ಮಾಧ್ಯಮಗಳನ್ನು ಸಮರ್ಥವಾಗಿ ಉಪಯೋಗಿಸಿಕೊಂಡು ಒಂದು ಸಂಚಲನವನ್ನು ಉಂಟುಮಾಡುವಲ್ಲಿ ಎ.ಎಸ್.ಮೂರ್ತಿ ಯಶಸ್ವಿಯಾಗಿದ್ದಾರೆ. ತಾವು ಮಕ್ಕಳ ನಾಟಕ ಕ್ಷೇತ್ರಕ್ಕೆ ಬಂದ ಹಿನ್ನೆಲೆಯನ್ನು 'ಐದು ಮಕ್ಕಳ ನಾಟಕಗಳು' ಪುಸ್ತಕದಲ್ಲಿ ಪ್ರಾರಂಭದಲ್ಲಿ ಅವರು ಮಕ್ಕಳಿಗಾಗಿ ಹೇಳಿಕೊಂಡಿದ್ದಾರೆ:

'ನೀವು ಪೇರೆಂಟ್ಸ್ ಡೇ, ಕ್ಲಾಸ್ ಡೇ, ವಾರ್ಷಿಕೋತ್ಸವ, ಶಿಕ್ಷಕರ ದಿನಾಚರಣೆ, ಮಕ್ಕಳ ನಾಟಕ ಸ್ಪರ್ಧೆ ಸಂದರ್ಭಗಳಲ್ಲಿ ಮಕ್ಕಳಿಂದ ವೈವಿಧ್ಯಮಯ ಕಾರ್ಯಕ್ರಮ ರೂಪಿಸಲು ಎಷ್ಟು ಕಷ್ಟಪಟ್ಟಿರುತ್ತೀರಿ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ . ನಮ್ಮ ಸಾಹಿತ್ಯವಲಯದ ದಿಗ್ಗಜರಿಗೆ ಮಕ್ಕಳ ನಾಟಕ ರಚನೆ ಏಕೆ ಅಪ್ರಿಯವಾಯಿತು ಎಂಬುದಕ್ಕೆ ಸರಿಯಾದ ಉತ್ತರ ಸಿಕ್ಕಿಲ್ಲ. ಮಕ್ಕಳ ನಾಟಕಗಳ ಅಭಾವದಿಂದಾಗಿ ದೊಡ್ಡವರು ಅಭಿನಯಿಸಿದ ಮೇಜರ್ ನಾಟಕಗಳನ್ನು ಮಕ್ಕಳು ಆಡಿವೆ.. ಹಾಡು, ಕುಣಿತ, ಚಿತ್ರಕಲೆ, ಸಂಗೀತ, ನೃತ್ಯ, ಕಲಿತ ಮಕ್ಕಳ ದಂಡು ಲವಲವಿಕೆಯಿಂದ ಹೊಸ ನಾಟಕವಾಡುವ ಉತ್ಸಾಹ ತೋರಿದ್ದು ಕಂಡಾಗ ಅವರೆಲ್ಲರ ಪ್ರತಿಭೆಗೆ ಕನ್ನಡಿ ಹಿಡಿಯುವಂತೆ ನಾಟಕ ರಚಿಸುವ ಮನಸ್ಸಾಯಿತು. ನಾಟಕಕಾರ ನಾಟಕ ಬರೆಯಬಹುದು. ರಂಗದ ಮೇಲೆ ಬಂದರೆ ಮಾತ್ರ ಬರೆದದ್ದಕ್ಕೂ ಸಾರ್ಥಕ."

ಈ ಮಾತುಗಳನ್ನು ಉದ್ಧರಿಸಿರುವ ಉದ್ದೇಶವೆಂದರೆ ಮಕ್ಕಳಿಗೂ ಪ್ರತ್ಯೇಕವಾದ ರಂಗಭೂಮಿಯ ಅವಶ್ಯಕತೆ ಹಾಗೂ ಹಿರಿಯರಿಂದ ಬೇರೆಯಾದ ಕೌಶಲ ಹಾಗೂ ರಚನೆಗಳು

ಅಗತ್ಯವಾದವುಗಳು ಎಂಬುದನ್ನು ತಿಳಿಯುವದಾಗಿದೆ. ಮೂರ್ತಿಯವರಿಗೆ ನಾಟಕ ರಚನೆ ಬರೀ ಮನರಂಜನೆಯಾಗಿರದೆ ಮಕ್ಕಳ ಮನಸ್ಸಿನ ಭಾವನೆಗಳನ್ನು ಒಡಮೂಡಿಸುವ ಯತ್ನವಾಗಿದೆ. ಅವರ 'ಗುಮ್ಮ' ಅಂತಹ ಒಂದು ನಾಟಕ. ಎಲ್ಲರೊಳಗೂ ಇರುವ ಗುಮ್ಮನನ್ನು ಕಾಣಿಸಲು ಅವರು ಪ್ರಯತ್ನಪಟ್ಟಿದ್ದಾರೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಗೌರಿದತ್ತು ನಿರ್ದೇಶನದಲ್ಲಿ 'ಗುಮ್ಮ' ಪ್ರದರ್ಶನವಾದ ಮೇಲೆ ಆ ನಾಟಕದ ಪ್ರತಿಗಳಿಗೆ ಬೇಡಿಕೆ ಬಂದು ಸುಕ ಪ್ರಕಾಶನದಿಂದ ೧೯೯೯ರಲ್ಲಿ ಪ್ರಕಟಿಸಿದರು. 'ಅಧರ್ಮಪತನ' ಹಾಗೂ 'ಸಂಘರ್ಷ'ವನ್ನು 'ಗುಮ್ಮ' ನಾಟಕ ಪರೋಕ್ಷವಾಗಿ ಹೇಳುತ್ತದೆ. ಕೆಟ್ಟ ವಿಚಾರಗಳು ಬೆಳಕಿಗೆ ಹೆದರುತ್ತವೆ ಎಂದು ಈ ನಾಟಕದ ಅಜ್ಜಿ ಹೇಳುತ್ತಾಳೆ.

'ಹೇ ಗುಮ್ಮ, ನಿನ್ನ ಅಹಂಕಾರಕ್ಕೆ ಕಾರಣ ಜನರ ಮನದಲ್ಲಿರೋ ಭಯ. ಆ ಭಯವೇ ದೂರವಾದ್ರೆ ನಿನಗೆಲ್ಲಿ ನೆಲೆ ನಮ್ಮಲ್ಲಿರೋ ಕತ್ತಲನ್ನು ಓಡಿಸಿದ್ರೆ ನಿಂಗೆಲ್ಲಿದೆ ಜಾಗ?.... ಖಂಡಿತಾ ಇದು ಸಾಧ್ಯವಿಲ್ಲ ಅಂತ ಮೆರಿಬೇಡ'.

'ಆ ಮನಿ ಈ ಮನಿ' ನಾಟಕ ಬಡ ಮಲತಾಯಿಯ ಕೈಯಲ್ಲಿ ನೋವನ್ನನುಭವಿಸುವ ಹುಡುಗಿಯ ಕತೆ. ಹೊಟ್ಟೆನೋವು ಎಂದು ಕಾಡಿನಲ್ಲಿಯ ಬೇರು ತರಿಸಲು ಮಲತಾಯಿ ಹುಡುಗಿಯನ್ನು ಕಾಡಿಗಟ್ಟಿ ಕೈತೊಳೆದುಕೊಳ್ಳುತ್ತಾಳೆ. ಹುಡುಗಿ ಕಾಡಿನಲ್ಲಿ ಅಲೆಯುತ್ತ, ರಾತ್ರಿಯ ಹೊತ್ತು ಮಾತ್ರ ಜೀವಂತವಾಗಿರುವ ಗೊಂಬೆಗಳ ಬಳಗ ಸೇರುತ್ತಾಳೆ. ಅಲ್ಲಿ ಅವಳಿಗೆ ಮನೆಯಲ್ಲಿ ಕಳೆದುಕೊಂಡ ಪ್ರೀತಿ ಸಿಗುತ್ತದೆ. ಹೀಗೆಯೇ ತನ್ನ ಹಟಮಾರಿತನಕ್ಕಾಗಿ ಗೊಂಬೆಗಳ ಲೋಕದಿಂದ ಹೊರಹಾಕಲ್ಪಟ್ಟ ಪುಟ್ಟ ಗೊಂಬೆಗೆ ಹುಡುಗಿಯ ಮನೆ ಆಸರೆಯಾಗುತ್ತದೆ. ಹುಡುಗಿ ಗೊಂಬೆಗಳೊಡನೆ ಸ್ನೇಹ, ಆದರ ಗಳಿಸಿ ಅವುಗಳ ಸಹಾಯದಿಂದ ಮಲತಾಯಿ ಹೇಳಿದ್ದ ಬೇರು ಸಂಪಾದಿಸಿ ಮನೆಗೆ ಮರುಳುತ್ತಾಳೆ. ದುಡಿಯುವ, ಪ್ರೀತಿ ತೋರುವ ಮಗಳನ್ನು ಕಳೆದುಕೊಂಡಿದ್ದ ಮಲತಾಯಿಗೆ ಈಗ ಬುದ್ಧಿ ಬಂದಿದ್ದು ಆಕೆ ಅತ್ಯಂತ ಅಕ್ಕರೆಯಿಂದ ಮಗಳನ್ನು ಬರಮಾಡಿಕೊಳ್ಳುತ್ತಾಳೆ. ಪುಟ್ಟ ಬೊಂಬೆ ಕೂಡ ತನಗೆ ತಾನು ಬುದ್ಧಿ ಕಲಿತು ತನ್ನ ಬಳಗವನ್ನು ಸೇರಿಕೊಳ್ಳುತ್ತದೆ.

ಎ.ಎಸ್. ಮೂರ್ತಿಯವರ 'ಆ ಮನಿ ಈ ಮನಿ'ಯಲ್ಲಿ ನಾಟಕದ ಕಥೆ ಎರಡು ದಿಕ್ಕುಗಳಲ್ಲಿ ಹರಿಯುತ್ತ ಕುತೂಹಲವನ್ನು ಉಳಿಸಿಕೊಳ್ಳುತ್ತದೆ. ಮಲತಾಯಿಯ ಕತೆಗಳು ನಮ್ಮ ಜಾನಪದದಲ್ಲಿ ಹಲವಾರು ಇವೆ. ಆದರೆ ಅದಕ್ಕೆ ಪ್ರತಿಯಾಗಿ ಕೀಟಲೆ ಮಾಡುವ ಗೊಂಬೆಯೊಂದನ್ನು ಮೂರ್ತಿಯವರು ಮಲತಾಯಿಯ ಮನೆಯಲ್ಲಿ ಕಲ್ಪಿಸಿಕೊಂಡಿರುವುದು ವಿಶೇಷವಾಗಿದೆ. ನಾಟಕದಲ್ಲಿನ ಹಾಡು, ಕುಣಿತ, ಸ್ವಾರಸ್ಯಕರ ಸಂಭಾಷಣೆ, ಕಚಗುಳಿ, ವಿನೋದ ಪ್ರಸಂಗಗಳು 'ಆ ಮನಿ ಈ ಮನಿ' ಯನ್ನು ಕನ್ನಡದ ಒಂದು ಒಳ್ಳೆಯ ಮಕ್ಕಳ ನಾಟಕವನ್ನಾಗಿ ಪರಿವರ್ತಿಸಿವೆ. ನಿರೂಪಕರು ಹಾಗೂ ಅಜ್ಜನ ನಡುವಿನ ಆರಂಭದ ಮಾತುಗಳು ನವೀನವೂ ಆಸಕ್ತಿದಾಯಕವೂ ಆಗಿವೆ:

ನಿರೂಪಣೆ ೧: ಹಾ! ಹೀಂಗಾ ಒಂದು ಕಥಿ.

ನಿರೂಪಣೆ ೫: ಒಂದೂರು, ಆ ಊರ್ನಾಗೊಬ್ಬ ರಾಜಾ.

ನಿರೂಪಣೆ ೪: ಅವನಿಗೊಬ್ಬ ರಾಣಿ.

ನಿರೂಪಣೆ ೭: ಏಯ್! ಆನ ಅಲ್ಲ, ಇಬ್ರು,

ನಿರೂಪಣೆ ೧: ಏಯ್!.... ಇಬ್ರಲ್ಲ ಒಬ್ರು.

ನಿರೂಪಣೆ ೫: ಶ್ ಏಯ್ ನಾವು ಆ ಕಥಿ ಹೇಳ್ತಿಲ್ಲ. ಆ ರಾಜನಿಗೆ ಮಕ್ಕಳೆ ಇರಲಿಲ್ಲ.

ನಿರೂಪಣೆ ೪: ಏಯ್, ಇದೇನು ತಪ್ಪು ಗಿಪ್ಪು ಹೇಳ್ತೀದಿ.

ನಿರೂಪಣೆ ೧: ಏಯ್ ಹಾಂಗಿಲ್ಲ ಕಥಿ

ಅಜ್ಜ : ನಾವ್ ಹೇಳೋ ಕಥಿ ಎಂದೂ ಕೇಳಿರಬಾರದು. ನೋಡಿರಬಾರದು. ಮುಂದೆಂದೂ ಕೇಳಲೂಬಾರದು. ಅಂಥಾ ಕಥಿ ಹೇಳ್ತಿನಿ.

(ಎಲ್ಲ ನಿರೂಪಕರೂ ನಗುವರು)

ನಿರೂಪಕಿ ೫: ಅದು.. ಅದು.. ಅದ್ ಸಾಧ್ಯ ಇಲ್ಲ ಬಿಡು

(ಎಲ್ಲ ಕಿಲಕಿಲ ನಗು)

ಹೀಗೆ ಕಥೆ ಹಾಗೂ ನಾಟಕಗಳ ಸಿದ್ಧ ಮಾದರಿಗಳನ್ನು ಒಡೆಯುವಲ್ಲಿ ಎ.ಎಸ್ ಮೂರ್ತಿ ಯಶಸ್ವಿಯಾಗುತ್ತಾರೆ. ಈ ನಾಟಕದಲ್ಲಿ ಸುಲಲಿತ ಮಾತುಗಾರಿಕೆ ನಾಟಕಕಾರರು ಸಾಧಿಸಿದ ಒಂದು ವಿಶೇಷ ಗುಣವಾಗಿದೆ. ಹಾಡುಗಳು ಕೂಡ ಹೃದ್ಯವಾಗಿವೆ:

ನೋಡು ಅಕ್ಕಯ್ಯ – ಕೇಳು ಅಣ್ಣಯ್ಯ
ನೋಡು ತಮ್ಮಯ್ಯ – ಕೇಳು ತಂಗ್ಯವ್ವ
ಹೇಳುತೀವಿ ಲೋಕದಾ ಕಥೆ
ಬೆಲ್ಲದ್ದಿಂದೆ ಬೇವಿನಾ ವ್ಯಥೆ.

* * *

ಕಣ್ತಣಿಸೋ ಚೆಲುವುಂಟು
ಕಣ್ಣೀರ ಕಡಲುಂಟು
ನಲಿವ ನವಿಲ ಹಿಂದೆ
ಕಡಿದೆಸೆಯೋ ಮೃಗವುಂಟು
ಇದೇ ನಮ್ಮ ಭೂಮಿಯ ಕಥೆ
ಸುಖ–ದುಃಖ ಸಮತೆಯಾ ಜೊತೆ॥

(ಆ ಮನಿ, ಈ ಮನಿ; ೧೯೯೯, ಪುಟ ೧೨, ಸುಕ ಪ್ರಕಾಶನ, ಬೆಂಗಳೂರು–೪೦)

ವಾಸ್ತವ ಬದುಕಿನ ಸೋಲು ಗೆಲುವು, ಕಷ್ಟ ನಷ್ಟ, ಕನಸು–ನನಸುಗಳನ್ನು ಚೇತೋಹರಿಯಾದ ಮತ್ತು ಜೀವಂತಿಕೆಯಿಂದ ಕೂಡಿರುವ ಭಾಷೆಯಲ್ಲಿ ಮೂರ್ತಿಯವರು ಕಟ್ಟಿಕೊಡುವುದರಿಂದ ನಾಟಕ ಕ್ಷೇತ್ರವು ಹೊಸ ಗಾಳಿಯನ್ನು ಉಸಿರಾಡುವಂತಾಯಿತು. ಬೀದಿ ಭಾಷೆಯನ್ನು ನಾಟಕಗಳ ಪಾತ್ರಗಳು ಸಲೀಸಾಗಿ ಆಡುವುದರಿಂದ ನಾಟಕದಲ್ಲಿ ಕೃತ್ರಿಮತೆ ಕಂಡುಬರುವುದಿಲ್ಲ. ಜನಪರವಾದ ಆಶಯಗಳಿಂದ ಎ.ಎಸ್. ಮೂರ್ತಿ ಮಕ್ಕಳ ನಾಟಕಗಳು ಹೊಸ ನೆಲೆ ಕಂಡುಕೊಳ್ಳಲು ಕಾರಣರಾದರು.

ಡಾ. ಎಚ್ ಎಸ್. ವೆಂಕಟೇಶಮೂರ್ತಿ

'ಅಳಿಲು ರಾಮಾಯಣ', 'ಹೂವಿ', 'ಸುಣ್ಣದ ಸುತ್ತು', 'ಕಂಸಾಯಣ', 'ಕುಣಿ ಕುಣಿ ನವಿಲೆ' ಮುಂತಾದ ನಾಟಕಗಳನ್ನು ಬರೆಯುವ ಮೂಲಕ ಮಕ್ಕಳ ಪದ್ಯ ಗದ್ಯಗಳೊಡನೆ ನಾಟಕ ಕ್ಷೇತ್ರದಲ್ಲಿಯೂ ಗಮನಾರ್ಹ ಸಾಧನೆ ಮಾಡಿರುವುದು ಹಿರಿಯ ಲೇಖಕ ಎಚ್.ಎಸ್. ವೆಂಕಟೇಶಮೂರ್ತಿ ಅವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದೆ. ಅವರ ನಾಟಕಗಳು ಭಾಷಾ ಲವಲವಿಕೆ ಹಾಗೂ ಅಂತರ್ಗತ ಲಯಗಳಿಂದ ಕನ್ನಡಕ್ಕೆ ವಿಶಿಷ್ಟವೆನಿಸಿವೆ. ಪೌರಾಣಿಕ ಹಾಗೂ ಸಮಕಾಲೀನ ವಸ್ತುಗಳನ್ನು ಮಕ್ಕಳ ಮನೋಭೂಮಿಕೆಯ ವಿಕಾಸಕ್ಕೆ ಅವರು ಅಚ್ಚುಕಟ್ಟಾಗಿ ಹೊಂದಿಸಿರುವುದು, ವಿಸ್ಮಯ ತರಿಸುತ್ತದೆ. ಅವರ ರಚನೆಗಳು ರಂಗದ ಮೇಲೆ ಪ್ರಯೋಗಗೊಂಡಾಗ ಮತ್ತಷ್ಟು ಅರ್ಥವಂತಿಕೆಯನ್ನು ಪಡೆಯುವುದರಲ್ಲಿ ಸಂದೇಹವಿರಲಾರದು. ಅಂತಹ ಅನೇಕ ಪ್ರಯೋಗಗಳನ್ನು ನಾಡಿನ ಒಳಗೆ ಮತ್ತು ಹೊರಗೆ ಅವು ಕಂಡಿವೆ. ಮಕ್ಕಳನ್ನು ಹಾಗೂ ಹಿರಿಯರನ್ನು ಮುದಗೊಳಿಸಿವೆ. ಸಂಭಾಷಣೆಯ ಚುರುಕುತನದ ಜೊತೆಗೆ ಆಪ್ತ ಹಾಗೂ ಸನ್ನಿವೇಶಕ್ಕೆ ಪೂರಕವಾದ ಗೀತೆಗಳ ಮೂಲಕ ಒಂದು ಕಲ್ಪನಾಲೋಕವನ್ನು ಅವರು ಸೃಷ್ಟಿಮಾಡುತ್ತಾರೆ. ಅದಕ್ಕೆ 'ಅಳಿಲು ರಾಮಾಯಣ' ಒಂದು ಉಜ್ವಲ ಉದಾಹರಣೆಯಾಗಿದೆ. ಚಿಲ್ಪಾರಿ ಅಳಿಲಿನ ಹಾಡುಗಳು ಸದಾ ಗುಣುಗುಣಿಸಬೇಕೆನ್ನುವ ಗುಣ ಹೊಂದಿವೆ.

ಏನು ಸುಖ? ಬೇಕೇನು ಸುಖ.
ರಾಮನೆ ಆಗಿರೆ ನಮ್ಮ ಸಖ'
ಬಂಡೆಯ ಉರುಳಿಸಿ ತರುವೇ
ತರುವೇ ನಾನೂ ಬರುವೇ

ಇರಲಿ। ಬಂಡೆಯು ಅವರಿಗೆ ಇರಲಿ।
ಬರಲಿ।
ಆ ಮೇಲರುಳೀ ।
ಬರುವೆ ಮರಳನು ತರುವೆ
ಮರಳಿ, ಮರಳಿ, ಮರಳಿ,
ತರುವೆ
ನಾನೂ ಬರುವೆ

ಆಡುಮಾತಿನ, ಪ್ರಾಸಂಗಿಕವಾಗಿ ವಿನೋದ ಹುಟ್ಟುಹಾಕುವ ಕೆಲವು ಗೀತೆಗಳು ಕಥೆಯ ಓಟಕ್ಕೆ, ಮನಸ್ಸಿನ ಜಿಗಿತಕ್ಕೆ ಸಹಕಾರಿಯಾಗಿವೆ. ಅಂಗದ ಮಂಗಗಳಿಂದ ಸೇತುವೆ ಕಟ್ಟಿಸುವರೆಗಿನ ಹಾಡು ಅಂತಹದೊಂದು:

ಕೈ ಎತ್ತ ಮೇಲಕ್ಕೋಗಿ
ಕಾಲೆತ್ತ್ ಮುಂದಕ ನೆಗಿ
ಎರಡು ಕೈಯ ಮುಂದಕ ಝಾಡ್ಸ್

ಹೆಜ್ಜೆ ಪಕ್ಕಾ ಹೆಜ್ಜೆ ಜೋಡ್ಸ್
ಬಾಲ ಎತ್ತ್ ಮೇಲಕ್ಕ ಬೀಸ್
ನೆಲದ ಮೇಲೆ ಚೌಕ ಹಾಸ್
ಒಂದ್–ಎಲ್ಡ – ಮೂರ್ –ನಾಕ್
ಇನ್ನೂ ಸೊಂಟ ಬಗ್ಗಿಸಬೇಡ್
ಕೂಡು – ಏಳ್– ಏಳು–ಕೂಡ್
ಇಪ್ಪತ್ ಸಲ ಹೀಂಗೇ ಮಾಡ್

ಜಾಂಬವಂತ ಕೀರ್ವಾಣಿ ಭಾಷೆಯಲ್ಲಿ ಮಾತನಾಡಿ ಕೋತಿ ವೇಷದಲ್ಲಿರುವ ರಾವಣನ ಗುಪ್ತಚಾರರಾದ ಅಕರ ಮಕರರನ್ನು ಗೋಳು ಹೊಯ್ದುಕೊಳ್ಳುವ, ಅವರನ್ನು ಮಾಯಾರಿಸು ಪ್ರಸಂಗ ನಕ್ಕು ನಗಿಸುತ್ತದೆ.

ಪರ್ಕ	:	ಒಂದು ಅನುಮಾನ ನಂಗೆ ಇಲ್ಲಿರೋ ಕೋತಿಗಳೆಲ್ಲಾ ಕೋತಿಗಳೇ ತಾನೇ
ಜಾಂಬವಂತ	:	ನೋಡ್ಕೊಂಡ್ರೆ ಸರಿ! ಒಬ್ಬನ ಬಾಲ ಒಬ್ಬ ಕಿತ್ತು ನೋಡಿ! ಬಾಲ ಬಂತೂ ರಾಕ್ಷಸ! ಬರ್ಲಿಲ್ಲಾ ಕೋತಿ
ಕೋತಿಗಳು	:	ತಾತ.. ಇವರಿಬ್ರಿಗೆ ಬಾಲಾನೇ ಇಲ್ಲ.
ಸುಗ್ರೀವ	:	ಹಿಡೀರಿ ಅವರ್ನ ತದಕ್ರಿ ಚೆನ್ನಾಗಿ ರಾವಣನ ಗೂಢಚರರೇ ಇರಬೇಕು ಅವ್ರು..
ಜಾಂಬವಂತ	:	ಬಿಟ್ಬಿಡಿ ಬಿಟ್ಬಿಡಿ ಪಾಪ ಅವ್ರನ್ನ. ಗೂಢಚರರನ್ನ ಬಂಧಿಸಬಾರ್ದು ಊಟ ಗೀಟ ಹಾಕೇ ಆಮೇಲೆ ಅವ್ರನ್ನೋಡ್ಸಿ
ಸುಗ್ರೀವ	:	ಸಭೆ ಹೊರಗಾದ್ರೂ ಅವ್ರನ್ನ ಕಳ್ಸೋಣ
ಜಾಂಬವಂತ	:	ಇದ್ಕೊಳ್ಲಿ ಬಿಡಿ ನಾನು ಕೀರ್ವಾಣಿ ಭಾಷೆಲಿ ಮಾತಾಡ್ತೀನಿ ಅದರ ತಲೆ ಬುಡು ಇವರಿಗೆ ಅರ್ಥವಾಗಿಲ್ಲ.. ಕಕಕ –ಕಿಕಿಕಿ – ಕುಕುಕುಕೌ? ಕೇಕೇಕೇಕೇ ..ಕುಕುಕುಕು– ಕೀಕೀಕೀ– ಕೇಕಿ, ಕೌ ಕೌಶ್ಮಕೃ–ಕ್ರೋ ಕ್ರೋ ಕ್ರೋ – ಕ್ರೀ! ಕ್ರೀ ಕ್ರೀ ಕ್ರೀ । ಕೇ ಕೆ ಕೈ .

'ಅಳಿಲು ರಾಮಾಯಣ' ನಾಟಕ ರಾಮನ ಮಮತೆ ಹಾಗೂ ಅಳಿಲಿನ ನಿಸ್ವಾರ್ಥ ಸೇವೆಯನ್ನು ಬಿಂಬಿಸುವುದರ ಜೊತೆಗೆ ಸಣ್ಣದು ದೊಡ್ಡದು ಎಂಬ ಭೇದಭಾವನ್ನು ತೊಡೆಯಲು ಪ್ರಯತ್ನಿಸುತ್ತದೆ. ಅಳಿಲು ತುಚ್ಛ ಪ್ರಾಣಿ, ಚೋಟುದ್ದ ಇದೆ ಎಂದೆಲ್ಲ ಹೀಯಾಳಿಸಿ, ಅದರಿಂದೇನು ಕೆಲಸ ಆದೇದಿತೆಂದು ಅವಮಾನಿಸುತ್ತಾರೆ. ಕೊನೆಗೆ ರಾಮ ಅಳಿಲಿನ ಕರೆಗೆ ಓಗೊಟ್ಟು ಸಹಾಯಕ್ಕೆ ಬರುತ್ತಾನೆ. ಸೇತುವೆ ಕಟ್ಟುವಲ್ಲಿ ನೆರವಾಗುವ ಅದರ ಕೋರಿಕೆಗೆ ಪ್ರೀತಿಯಿಂದ ಸಮ್ಮತಿಸುತ್ತಾನೆ. ಹೊಡೀಬೇಕು, ಬಡೀಬೇಕು, ಎನ್ನುವ ರಾಮನ ಭಕ್ತರಾದ ಕಪಿಗಳನ್ನು

ತರಾಟೆಗೆ ತೆಗೆದುಕೊಳ್ಳುವ ಅಳಿಲಿನ ಮಾತುಗಳಲ್ಲಿ ಅಹಂಕಾರದ ದಮನವನ್ನು ಸೂಚಿಸುವ ಆಶಯವಿದೆ.

ಅಳಿಲು ಮರಿ: ಥೂ ಮಾತೆತ್ತಿದರೆ ಬಡೀತೀವಿ, ಹೊಡಿತೀವಿ, ಚಚ್ತಿವಿ! ನಾಚಿಕೆ ಆಗಲ್ವಾ

ನಿಮ್ಗೆ. ರಾಮನ ಭಕ್ತರಂತೆ, ರಾಮನ ಭಕ್ತರು. ಹಿಂಗಾ ನಡ್ಕೋಳ್ಳೋದು ರಾಮನ ಭಕ್ತರು?

ಕಾಳಗ, ಯುದ್ಧ, ದ್ವೇಷ, ಅಸೂಯೆಗಳನ್ನು ಧಿಕ್ಕರಿಸುವ ಸೂಚನೆಯೂ ಈ ನಾಟಕದ ಕೊನೆಯಲ್ಲಿದೆ. ಮಕ್ಕಳಿಗೆ ಬೇಕಾಗಿರುವುದು ಆಟ – ಪಾಠ ನಿದ್ದೆಗಳೇ ಹೊರತು ನೆಮ್ಮದಿ ಕೆಡಿಸುವ ಯುದ್ಧಗಳಲ್ಲ ಎಂದು ವೆಂಕಟೇಶಮೂರ್ತಿ ಸೀತೆಯ ಲಾಲೀಪದದಲ್ಲಿ ಹೇಳಿಸುತ್ತಾರೆ. ಮಾತೃವಾತ್ಸಲ್ಯದ ಸೀತೆ ಹಾಗೂ ಪರೋಪಕಾರದ ಅಳಿಲಿನ ಮೇಲೆ ಬೆಳಕು ಕೇಂದ್ರೀಕೃತವಾಗುವದರೊಂದಿಗೆ ನಾಟಕ ಮುಕ್ತಾಯವಾಗುವುದು. ಯುದ್ಧಕೇಂದ್ರದಿಂದ ನಾಟಕ ಶಾಂತಿ ಹಾಗೂ ನೆಮ್ಮದಿಯ ಕೇಂದ್ರಕ್ಕೆ ಒತ್ತು ನೀಡುವುದರೊಂದಿಗೆ ಮಕ್ಕಳ ಕನಸಿನ ಲೋಕವನ್ನು ಬರಮಾಡಿಕೊಳ್ಳುತ್ತದೆ.

ರಾಮ ರಾವಣ ಸೇನೆ ಕಾಳಗಕೆ ಸಿದ್ಧ
(ಕೋರಸ್‌ನಲ್ಲಿ) ಕಾಳಗಕೆ ಸಿದ್ಧ
ನಡೆದೇ ನಡೆವೊದೂ ರಣಮಾರಿ ಯುದ್ಧ
(ಕೋರಸ್‌ನಲ್ಲಿ) ರಣಮಾರಿ ಯುದ್ಧ
ಮಕ್ಕಳಿಗ್ಯಾಕೀ ಕೊಲೆಗಡುಕ ವಿದ್ಯೆ?
ದೊರೆತರೆ ಸಾಕಮ್ಮ ಕಣ್ತುಂಬ ನಿದ್ದೆ!
(ಕೋರಸ್‌ನಲ್ಲಿ) ಕಣ್ತುಂಬ ನಿದ್ದೆ !
ಯಾರಿಗೋ ಗೆಲುವು ಇನ್ಯಾರಿಗೋ ಸೋಲು
ಯುದ್ಧ ಭೂಮಿಯ ಉದ್ದವಿದ್ದೋರ ಸಾಲು
ಮಕ್ಕಳಿಗ್ಯಾಕಿ ಸಿಡಿಗುಂಡ ಕೇಳೀ
ದೊರೆತರೆ ಸಾಕಮ್ಮ ಗಜ್ಜುಗ ಗೋಲಿ!
ಮಕ್ಕಳಿಗ್ಯಾಕಿ ಹೆಮ್ಮಾರಿ ಕುತ್ತು?
ದೊರೆತರೆ ಸಾಕಮ್ಮ ಕೈತುಂಬ ತುತ್ತು!

ಹೆಸರಾಂತ ನಿರ್ದೇಶಕರಾದ ಬಿ.ವಿ.ಕಾರಂತರು 'ಅಳಿಲು ರಾಮಾಯಣ'ವನ್ನು ನಿರ್ದೇಶನ ಮಾಡಿ ಪಠ್ಯದ ಶಕ್ತಿಯನ್ನು ಸೂರೆಗೊಳ್ಳುವಂತೆ ರಂಗದ ಮೇಲೆ ತಂದರು. ಅವರೇ ಅದನ್ನು ಬರೆಸಿದರೆಂದು ವೆಂಕಟೇಶಮೂರ್ತಿ ಹೇಳುತ್ತಾರೆ:

'ಅಜ್ಜನಾದ ಮೇಲೆ' ನಾನು ಪುಂಖಾನುಪುಂಖವಾಗಿ ಮಕ್ಕಳ ನಾಟಕಗಳನ್ನು ಬರೆಯತೊಡಗಿದ್ದು! ಬಿ.ವಿ.ಕಾರಂತರು 'ಅಳಿಲು ರಾಮಾಯಣ' ಬರೆಸಿದರು. ಪ್ರೇಮಾ ಕಾರಂತರು 'ಸುಣ್ಣದ ಸುತ್ತು', 'ಮುದಿ ದೊರೆ ಮತ್ತು ಮೂವರು ಮಕ್ಕಳು', 'ಕುಣಿ ಕುಣಿ ನವಿಲೆ', 'ಅದಲು ಬದಲು ಕಂಚಿ ಕದಲು' ಬರೆಸಿದರು. 'ಕಂಸಾಯಣ', 'ಹೂವಿ' ನಾಟಕಗಳನ್ನು ಬಿ. ಜಯಶ್ರೀ ಅವರಿಗಾಗಿ ಬರೆದೆ. ಚಿಟ್ಟೆಯ ಬಗೆಗೆ ಒಂದು ಚೆಲುವಾದ ರೂಪಕವನ್ನು ಸುಷ್ಮಾ

ಬರೆಸಿದರು. ಶ್ರೀಪಾದ ಹೆಗಡೆ 'ಕಂಸಾಯಣ'ಕ್ಕೆ ಒಂದು ಹೊಸ ಸಂಸ್ಕಾರವನ್ನೇ ನೀಡಿದರು. ರಾಘವೇಂದ್ರ ಪಾಟೀಲರು 'ಧರಣಿ ಮಂಡಳ ಮಧ್ಯದೊಳಗೆ' ಬರೆಸಿ ತಿರುಕ ರಂಗಭೂಮಿಯಲ್ಲಿ ಪ್ರತಿವರ್ಷವೂ ನನ್ನ ಮಕ್ಕಳ ನಾಟಕಗಳು ಪ್ರಯೋಗಗೊಂಡು ಸಾವಿರಾರು ಮಕ್ಕಳ ಮನಸೂರೆ ಮಾಡಿದ್ದನ್ನು ನಾನು ಅಭಿಮಾನದಿಂದ ನೆನೆಯುತ್ತೇನೆ.'

'ಹೂವಿ' ತನ್ನ ಹೃದ್ಯವಾದ ಭಾಷೆ, ಹಾಡುಗಳಿಂದ ವಸ್ತುವಿನ ನಿರ್ವಹಣೆಯಿಂದ ಪ್ರೇಕ್ಷಕರ ಹಾಗೂ ಓದುಗರ ಮನ ತಟ್ಟುತ್ತದೆ. ಸ್ವಾರಸ್ಯಕರ, ಮೈನವಿರೇಳಿಸುವ ಪ್ರಸಂಗಗಳಿಗೂ ಕೊರತೆಯಿಲ್ಲ.

ಹೊನ್ನ : ಬೆಳಿಗ್ಗೆ ಮನೆ ಹತ್ರ ಹೂ ಮಾರೋ ಹುಡುಗಿ ಹೂವಮ್ಮ ಬಂದಿದ್ಲು.

ಕುದುರೆ : ಅಯ್ಯೋ ಹೂವಾ! ನಾನು ಹುಲ್ಲು ಅಂದ್ಕೊಂಡೆ!

ಹೊನ್ನ : ಹೂವು – ಹೂವು ಇವುಗಳ ವ್ಯತ್ಯಾಸವೇ ತಿಳಿಯೊಲ್ಲ ನಿನಗೆ..! ಲದ್ದಿ! ಲದ್ದಿ ತುಂಬಿಕೊಂಡಿದೆ ನಿನ್ನ ತಲೇಲಿ

ಕುದುರೆ : ಲದ್ದಿ ತುಂಬಿಕೊಂಡಿರೋದು ತಲೇಲಲ್ಲ

ಹೊನ್ನ : ನಿನ್ನ ತಲೆ! ನಿನ್ನ ಮೈ ತುಂಬ ಲದ್ದೀನೆ ತುಂಬ್ಕೊಂಡಿದೆ!

ಅರ್ಥಕ್ಕೆ ಮಣಿಸುವ, ವ್ಯಂಗಕ್ಕೆ ಒಯ್ಯುವ, ಎದೆಯನ್ನು ಕಲಕುವ ಸಂಭಾಷಣೆ, ಹಾಡುಗಳಿಂದ ವೆಂಕಟೇಶ ಮೂರ್ತಿಯವರ ನಾಟಕಗಳು ಬಹಳಷ್ಟು ಪ್ರಭಾವಶಾಲಿಯಾಗಿವೆ ಹಾಗೂ ಪರಿಣಾಮಕಾರಿಯಾಗಿವೆ.

ಆರ್.ವಿ.ಭಂಡಾರಿ

ಮಕ್ಕಳ ನಾಟಕಗಳಿಗೆ ಬಂಡಾಯ ಹಾಗೂ ದಲಿತ ನೆಲೆಗಳ ಸ್ಪರ್ಶ ನೀಡುವ ಮೂಲಕ ಆರ್.ವಿ. ಭಂಡಾರಿ ರಂಗಭೂಮಿಯನ್ನು ವಾಸ್ತವದ ಬೆಳಕಿನಲ್ಲಿ ಚಿತ್ರಿಸಿದರು. ಹೊಸ ಬಗೆಯ ವಸ್ತು ವಿನ್ಯಾಸಗಳು ಭಂಡಾರಿಯವರ ಕಾದಂಬರಿ–ನಾಟಕಗಳನ್ನು ರೂಪಿಸಿದವು. ಅವರ ನಾಟಕಗಳಲ್ಲಿ ವೈಚಾರಿಕ ನಿಲವುಗಳು ಮೇಲುಗೈ ಪಡೆಯುತ್ತವೆ. ವಾಸ್ತವವಾದಿ ದೃಷ್ಟಿಕೋನದಿಂದ ಮಕ್ಕಳನ್ನು ಬೆಳೆಸಬೇಕೆಂಬುದು ಅವರ ನಿಲವಾಗಿತ್ತು ಎನಿಸುತ್ತದೆ. ಬುದ್ಧನ ತತ್ವಗಳು, ಬಸವಣ್ಣನ ಕನಸುಗಳು, ಗಾಂಧಿಯ ಆದರ್ಶಗಳು, ಅಂಬೇಡ್ಕರರ ಹೋರಾಟಗಳು ಭಂಡಾರಿಯವರ ಮಕ್ಕಳ ನಾಟಕಗಳಲ್ಲಿ ಕಾಣಿಸಿಕೊಳ್ಳುತ್ತವೆ. ಮೇಲಾಗಿ ಚುರುಕು ಮಾತುಕತೆ, ಸಂಭಾಷಣೆಯಲ್ಲಿಯೇ ಪರೋಕ್ಷವಾಗಿ ಬಿಚ್ಚಿಕೊಳ್ಳುವ ನಾಟಕಕಾರನ ಮಾತುಗಳು, ಆಡುಮಾತಿನ ಕೆಳವರ್ಗಗಳ ಹೋರಾಟದ ಬದುಕು ಆರ್.ವಿ. ಭಂಡಾರಿಯವರ ನಾಟಕಗಳನ್ನು ವಿಶಿಷ್ಟವಾಗಿಸುತ್ತವೆ. ಬಹಳ ಮಂದಿ ಲೇಖಕರು ವೈಚಾರಿಕತೆಯನ್ನು ಗಹನ ವಿಷಯವೆಂದು ಇದುವರೆಗೂ ಅದನ್ನು ಮಕ್ಕಳ ಮನೋಲೋಕಕ್ಕೆ ತರಲು ಹಿಂಜರಿಯುತ್ತಿದ್ದರು. ಇದಕ್ಕೆ ತದ್ವಿರುದ್ಧವಾಗಿ ಆರ್.ವಿ.ಯವರು ಜನಸಾಮಾನ್ಯರ ನಿತ್ಯದ ಬದುಕನ್ನು ಹಾಗೂ ಧೀಮಂತರ ಹೋರಾಟಗಳನ್ನು ಮಕ್ಕಳ ಮಿಡಿಯುವಿಕೆಗೆ ಹೊಂದಿಸಿದರು. ಸರಳ ನಿರೂಪಣೆಯಿಂದಲೇ ಅವರು ತಮ್ಮ ಉದ್ದೇಶವನ್ನು ಸಾಧಿಸುತ್ತಾರೆ.

'ಬೆಳಕು ಹಂಚಿದ ಬಾಲಕ', 'ಬೆಳಕಿನ ಕಡೆಗೆ', 'ಕೊಲ್ಲುವವನು', 'ನಾನೂ ಗಾಂಧಿ ಆಗ್ತೇನೆ!', ಮುಂತಾದ ನಾಟಕಗಳಲ್ಲಿ ಅವರ ವೈಚಾರಿಕ ನಿಲವುಗಳು ಮುನ್ನೆಲೆಗೆ ಬರುತ್ತವೆ. 'ಬೆಳಕು ಹಂಚಿದ ಬಾಲಕ' ನಾಟಕದಲ್ಲಿ ಬಾಲಕನೊಬ್ಬ ಶಾಲಾ ವಾರ್ಷಿಕೋತ್ಸವದ ಪ್ರಸಂಗದಲ್ಲಿ ಬುದ್ಧನ ಪಾತ್ರ ವಹಿಸುತ್ತಾನೆ. ಅಲ್ಲಿ ಬುದ್ಧನ ಮಾತುಗಳನ್ನು ಹೊರಹಾಕುತ್ತಾನೆ. ಬುದ್ಧ ಮತ್ತು ಅಂಗುಲಿಮಾಲ ಅವರ ಪ್ರಸಂಗವನ್ನು ತೆರೆದಿಡುತ್ತ ಹುಡುಗನೊಬ್ಬ ಕಳ್ಳರ ತಂಡವನ್ನೇ ಪರಿವರ್ತನೆಗೊಳಿಸುವ ಕಥೆ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಅದೇ ರೀತಿ 'ಧೃವ ಚರಿತ್ರೆ' ನಾಟಕದಲ್ಲಿ 'ಬಾರೆ ಬೆಳಕೆ, ನೀನಿಲ್ಲದಿದ್ದರದು ಬದುಕೇ' ಎಂದು ಬದುಕಿನ ಪ್ರಕಾಶವನ್ನು ಆಹ್ವಾನಿಸುವ ಮೂಲಕ ಮಕ್ಕಳಲ್ಲಿ ಬೆಳಕಿನ ಹಂಬಲವನ್ನು ಬಿತ್ತುತ್ತಾರೆ. ಬೆಳಕನ್ನು ಎಷ್ಟು ಆಹ್ವಾನಿಸಿದರೂ ಆರ್.ವಿ. ಅವರಿಗೆ ತೃಪ್ತಿಯಿಲ್ಲ. ರಂಗಭೂಮಿಯಲ್ಲಿ ತಮ್ಮನ್ನು ಕ್ರಿಯಾಶೀಲವಾಗಿ ತೊಡಗಿಸಿಕೊಂಡಿರುವ ಶೀತಲ್ ಭಟ್ ಅವರು ಆರ್.ವಿ.ಯವರ ನಾಟಕಗಳಲ್ಲಿ ಪಾಲ್ಗೊಂಡಿದ್ದನ್ನು ಮರೆಯಲಾರದ ಬಾಲ್ಯದ ಅನುಭವವೆಂದು ಹೇಳುವುದು ಅಪ್ಯಾಯಮಾನವಾಗಿದೆ: 'ಬೆಳಕು ಹಂಚಿದ ಬಾಲಕ' ನಾಟಕದ ಮೊದಲ ಗೀತೆಯಲ್ಲಿ ಇಡೀ ನಾಟಕದ ಸಾರವೇ ಅಡಗಿದೆ. ಅಂಬೇಡ್ಕರ್ ಅವರು ಓದೋಕೆ ಎಷ್ಟು ಇಷ್ಟಪಡುತ್ತಿದ್ದರು ಹಾಗೂ ಕಷ್ಟಪಡುತ್ತಿದ್ದರು ಅನ್ನೋದು ಅಚ್ಚರಿ ಮೂಡಿಸಿತು. 'ಇಲ್ಲಿ ಬರುವ ಅಂಬೇಡ್ಕರ್ ಹಾಗೂ ಮೇಷ್ಟ್ರ ಪಾತ್ರ ಇಷ್ಟವಾಯಿತು. ಇನ್ನೊಂದು ನಾಟಕ ಅಂದರೆ 'ನಾನೂ ಗಾಂಧಿ ಆಗ್ತೇನೆ! ಶಾಲೆಯಲ್ಲಿ ಅರ್ಥವಾಗದ ಅಂಬೇಡ್ಕರ್ ಹಾಗೂ ಗಾಂಧೀಜಿ ಆರ್.ವಿ.ಭಂಡಾರಿಯವರ ನಾಟಕಗಳಲ್ಲಿ ಬಹಳ ಸುಂದರವಾಗಿ ಚಿತ್ರಿತಗೊಳ್ಳುತ್ತಾರೆ. ಪ್ರತಿಶಬ್ದವೂ ಪ್ರಭಾವಶಾಲಿಯಾಗಿದ್ದು ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುತ್ತದೆ.' ('ಸಹಯಾನ', ಸಂ: ಎಂ.ಜಿ.ಹೆಗಡೆ, ಚಿಂತನ ಪುಸ್ತಕ ೨೦೦೮)

ಮನುಷ್ಯನ ಎದೆಯನ್ನು ಹರಗಬೇಕು, ಅಲ್ಲಿ ಸದ್ಗುಣಗಳನ್ನು ಬಿತ್ತಿ ಬೆಳೆಯುವ ಮೂಲಕ ಪ್ರೀತಿಯ ಪೈರು ಪಡೆಯಬೇಕೆಂಬ ಆಶಯ 'ಪ್ರೀತಿಯ ಕಾಳು' ಹಾಗೂ 'ಒಂದೇ ಬಣ್ಣದ ಹಕ್ಕಿಗಳು' ಎಂಬ ನಾಟಕಗಳಲ್ಲಿದೆ.

ಮಕ್ಕಳು ತಮ್ಮ ಪ್ರೀತಿಯ ಅಜ್ಜಿಯಲ್ಲಿ ಕತೆಯ ಕೋರಿಕೆ ಇಡುವುದರೊಂದಿಗೆ 'ಪ್ರೀತಿಯ ಕಾಳು' ನಾಟಕ ಆರಂಭವಾಗುತ್ತದೆ. ಮುಂದೆ ಹಕ್ಕಿಗಳ ಲೋಕವೊಂದು ತೆರೆದುಕೊಳ್ಳುತ್ತದೆ. ಅನೇಕ ಪದ್ಯಗಳು ಏಕತಾನತೆಯನ್ನು ಹೋಗಲಾಡಿಸಲು ಅನುಕೂಲಕರವಾಗಿವೆ:

ದೇಶ ದೇಶದ ಗಡಿಯ ಮೀರಿ ಹಾರುವೆ
ಲೋಕವನೆ ಒಂದು ಮಾಡುವೆ

ಗಿಳಿಯೊಂದು ಹೀಗೆ ಹಾರುತ್ತ, ಗಡಿಗಳನ್ನು ಮೀರುತ್ತ ಸಾಗುತ್ತಿರುವಾಗ ಹೊಲವೊಂದರಲ್ಲಿ ಅದಕ್ಕೆ ಪ್ರೀತಿಯ ಕಾಳು ಸಿಗುತ್ತವೆ. ಅಂತಹ ಕಾಳನ್ನು ದ್ವೇಷ ಹೊತ್ತಿಕೊಂಡಿರುವ ಮನುಷ್ಯನ ಎದೆಯಲ್ಲಿ ಬಿತ್ತುವ ಮೂಲಕ ಮಕ್ಕಳು ಮಾನವತೆಯ ಪ್ರೋಕ್ಷಣೆ ಮಾಡುವುದು ನಾಟಕದ ಮುಖ್ಯ ಎಳೆಯಾಗಿದೆ. 'ಒಂದೇ ಬಣ್ಣದ ಹಕ್ಕಿಗಳು' ನಾಟಕವು ಬಾಲ ಕಾರ್ಮಿಕರ ಸಮಸ್ಯೆಯನ್ನು ತನ್ನ ಗಮನದಲ್ಲಿರಿಸಿಕೊಂಡಿದೆ. ಮಕ್ಕಳ ಸಮಸ್ಯೆಯನ್ನು ತೆರೆದಿಡುತ್ತ ಅವರಲ್ಲಿ ಜೀವನದ ಪ್ರೀತಿಯನ್ನು ಉಕ್ಕಿಸುವ ಭಾವ ಇದರಲ್ಲಿ ಮನೆ ಮಾಡಿದೆ.

ಲಯಬದ್ಧ ಹಾಗೂ ಚುರುಕು ಮಾತುಗಾರಿಕೆ ಆರ್.ವಿ. ಭಂಡಾರಿಯವರ ನಾಟಕಗಳ ವಿಶೇಷ ಗುಣವಾಗಿದೆ. ಮತ್ತು ಆಕರ್ಷಕವೂ ಆಗಿರುತ್ತದೆ. ಮಕ್ಕಳ ಆಡುಮಾತಿನ ಸಂಭಾಷಣೆ ಲೀಲಾಜಾಲವಾಗಿ ಹೆಣೆದುಕೊಂಡು ಒಂದು ಕಲಾತ್ಮಕ ವಿನ್ಯಾಸವನ್ನು ನಿರ್ಮಾಣ ಮಾಡುತ್ತವೆ.

ಹುಡುಗರು	:	ಅಜ್ಜ ಅಜ್ಜಿ ಎಲ್ಲಿಗೆ?
ಅಜ್ಜಿ	:	ತಿರ್ಪತಿ ಯಾತ್ರೆಗೆ.
ಹುಡುಗರು	:	ಅಜ್ಜಿ ನಾವು ಬರ್ತೇವೆ. ತಿರ್ಪತಿ ನೋಡ್ತೇವೆ.
ಅಜ್ಜಿ	:	ಬೇಡ, ಬೇಡ ಮಕ್ಕಳೆ, ಮನೆಗ್ಹೋಗಿ ಮಕ್ಕಳೆ
ಹುಡುಗರು	:	ಅಜ್ಜಿ ಏನು ತರ್ತಿಯಾ?
ಅಜ್ಜಿ	:	ಬೆಂಡು ಬೆತ್ತಾಸು ತರ್ತೇನೆ ಮನೆಗ್ಹೋಗಿ ಮಕ್ಕಳೆ
ಹುಡುಗರು	:	ಅಜ್ಜಿ ನಾವು ಬರ್ತೇವೆ. ನಿನ್ನ ಹಿಂದೆ ಬರ್ತೇವೆ.
ಅಜ್ಜಿ	:	ಅಂಗಿ ಚಡ್ಡಿ ತರ್ತೇವೆ. ಮನೆಗ್ಹೋಗಿ ಮಕ್ಕಳೆ
ಹುಡುಗರು	:	ಅಜ್ಜ ನಾವು ಬರ್ತೇವೆ, ನಿನ್ನ ಹಿಂದೆ ಬರ್ತೇವೆ.

'ಮುದುಕನೂ ಹುಲಿಯೂ' ನಾಟಕದ ಅಂತರ್ಗತ ಲಯಗಾರಿಕೆಯ ಇಂತಹ ಸಂಭಾಷಣೆಯ ಅನೇಕ ಉದಾಹರಣೆಗಳನ್ನು ಅವರ ನಾಟಕಗಳಿಂದ ಎತ್ತಿಕೊಡಬಹುದು. ಮಾತು, ಹಾಡುಗಳನ್ನು ಅನುರೂಪವಾದ ದೃಶ್ಯಕ್ಕೆ ಬಳಸಿಕೊಳ್ಳುವ ಕಲೆಯಿಂದ ಭಂಡಾರಿಯವರ ನಾಟಕಗಳು ಮೆಚ್ಚುಗೆ ಗಳಿಸಿದವು. ಸೊರಗಿದ್ದ ರಂಗ ವಾಸ್ತವಕ್ಕೆ ಅವರು ಮೈದುಂಬಿಕೊಳ್ಳುವ ಶಕ್ತಿ ನೀಡಿದರು.

'ಮುದುಕನೂ ಹುಲಿಯೂ' ನಾಟಕದಲ್ಲಿ ಮುದುಕನಾಗಿರುವ ರೈತನೊಬ್ಬ ತೀರ್ಥಯಾತ್ರೆಗೆ ಸಿದ್ಧನಾಗಿದ್ದಾನೆ. ಅಜ್ಜನನ್ನು ಹಚ್ಚಿಕೊಂಡಿರುವ ಮಕ್ಕಳನ್ನು ಕೇಳಬೇಕೆ? ಅವರು ಅವನನ್ನು ಹಿಂಬಾಲಿಸುತ್ತಾರೆ. ದಾರಿಯಲ್ಲಿ ಅಜ್ಜನಿಗೆ ಪಂಜರದಲ್ಲಿ ಸಿಕ್ಕಿಹಾಕಿಕೊಂಡಿರುವ ಹುಲಿಯೊಂದು ತನ್ನನ್ನು ಪಾರು ಮಾಡಲು ಮೊರೆಯಿಡುತ್ತದೆ. ಹುಲಿ ಎಷ್ಟು ಉಪಾಯಗಾರನೆಂದರೆ ಪುಣ್ಯಕೋಟಿಯನ್ನು ಉಳಿಸಿದ ಹುಲಿರಾಯ ತನ್ನ ಅಜ್ಜ ಎಂದು ಕೊಚ್ಚಿಕೊಳ್ಳುತ್ತದೆ! ಇದು ಫ್ಲ್ಯಾಶ್‌ಬ್ಯಾಕ್ ತಂತ್ರದಿಂದ ಯಕ್ಷಗಾನದ ಶೈಲಿಯಲ್ಲಿ ನಮ್ಮೆದುರು ತೆರೆದುಕೊಳ್ಳುತ್ತದೆ. ಅಜ್ಜನನ್ನು ತಾನು ತಿನ್ನುವುದಿಲ್ಲ ಎಂದು ನಂಬಿಸಲು ಹುಲಿಯ ತಂತ್ರ! ರೈತ ಹುಲಿಯನ್ನು ನಂಬಿ ಅದನ್ನು ಪಂಜರದಿಂದ ಬಿಡಿಸುತ್ತಾನೆ. ಹುಲಿ ಇವನನ್ನು ತಿನ್ನಲು ಮುಂದಾಗುತ್ತದೆ. ಮಕ್ಕಳು ನರಿಯಣ್ಣನನ್ನು ನ್ಯಾಯ ಬಗೆಹರಿಸಲು ಆಮಂತ್ರಿಸುತ್ತಾರೆ. ಚತುರ ನರಿ ಹುಲಿಯನ್ನು ಉಪಾಯದಿಂದ ಮತ್ತೆ ಪಂಜರದೊಳಕಕೆ ದೂಡುತ್ತದೆ. ಮಕ್ಕಳನ್ನು ಮರೆಯುವ, ಅಲಕ್ಷಿಸುವ ಹಾಗೂ ಬದುಕಿನ ಪ್ರೀತಿಯನ್ನು ಧಿಕ್ಕರಿಸಿ ಯಾತ್ರೆಗೆ ಹೊರಡುವ ಕ್ರಮ ಒಳ್ಳೆಯದಲ್ಲ ಎಂದು ಸೂಚಿಸುತ್ತದೆ. ಆರ್.ವಿ.ಯವರ ನಾದಮಯ ಭಾಷೆ, ಸ್ವಾರಸ್ಯಕರ ಸನ್ನಿವೇಶಗಳಿಂದ 'ಮುದುಕನೂ ಹುಲಿಯೂ' ಕನ್ನಡದ ಶ್ರೇಷ್ಠ ಮಕ್ಕಳ ನಾಟಕಗಳಲ್ಲಿ ಒಂದು ಎಂಬುದು ಸಾಬೀತಾಗುತ್ತದೆ.

'ಬೆಕ್ಕು ಮತ್ತು ರೊಟ್ಟಿ' ನಾಟಕವು ಅರ್.ವಿ.ಯವರ ಮಾತುಗಾರಿಕೆಯ ಕುಶಲತೆಯನ್ನು ರೂಢಿಸಿಕೊಂಡಿದೆ. ಇದರಲ್ಲಿ ಕತೆ ಪ್ರಾರಂಭಿಸುವವನು ಸೂತ್ರಧಾರನಾದ ಒಬ್ಬ ಬಾಲಕ. ಜನ ಬೇಡವೆಂದು ನಿರಾಕರಿಸಿದರೂ ಇವನು ತನ್ನ ವಾಗ್ಬಾಣಗಳನ್ನು ನಿಲ್ಲಿಸುವುದಿಲ್ಲ.

'ಕೇಳಿದಿರಾ ನಟರೇ, ನಾವು ನಾಟಕ ಮಾಡಲೇಬೇಕು. ಹೆದರಿಕೊಳ್ಳಬೇಡಿ, ಎಲ್ಲಾ ನಮ್ಮ ಜನಗಳೇ, ತಪ್ಪಿದರೂ ಕ್ಷಮಿಸಿ ಬಿಡುತ್ತಾರೆ. ಮರೆತುಹೋದರೆ ದೊಡ್ಡದಾಗಿ ನಕ್ಕುಬಿಡಬಹುದು'. ಮಾತುಗಳೊಡನೆ ಹಾಡಿನ ಲಯಗಳು ನಾಲಿಗೆಯ ಮೇಲೆ ಉಳಿದುಕೊಳ್ಳುತ್ತವೆ:

ಬಾರೋ ಬಾರೋ ನರಿಯಣ್ಣ
ಪ್ರಾಣಿಗಳಲ್ಲಿ ಜಾಣಣ್ಣ
ಸೌತೆಕಾಯಿ ಕಳ್ಳಣ್ಣ
ಕೋಳಿಮರಿ ಹಿಡಿಯಣ್ಣ
ಬಾರೋ ಬಾರೋ ನರಿಯಣ್ಣ
ಪ್ರಾಣಿಗಳಲ್ಲಿ ಜಾಣಣ್ಣ
ಅಜ್ಜ ಯಾತ್ರೆಗೊಂಟವನೆ
ಮಧ್ಯ ಹುಲಿಯ ಹಿಡಿದವನೆ

'ಬೆಕ್ಕು ಮತ್ತು ರೊಟ್ಟಿ', 'ಗಡ್ಡ ಎಳೆದವನ ಬಾಯಿಗೆ ಮಿಠಾಯಿ', 'ಬಿತ್ತಿದ್ದನ್ನ ಬೆಳೆದುಕೋ' ಮುಂತಾದವು ಈಗಾಗಲೇ ಪ್ರಸಿದ್ಧವಾಗಿರುವ ಕತೆಗಳನ್ನು ಸೊಗಸಾಗಿ ನಾಟಕ ರೂಪದಲ್ಲಿ ತರುವ ಪ್ರಯತ್ನಗಳಾಗಿವೆ. ಜನಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡು ಮಕ್ಕಳ ನಾಟಕ ಕ್ಷೇತ್ರಕ್ಕೆ ವಿಪುಲ ಶಕ್ತಿಯನ್ನು ತುಂಬಿದ ಆರ್.ವಿ. ಭಂಡಾರಿಯವರ ಕೊಡುಗೆ ವಿಶಿಷ್ಟವಾದುದಾಗಿದೆ. 'ಬೆಳಗಿನ ಕಡೆಗೆ' (೧೩ ನಾಟಕಗಳ ಸಂಗ್ರಹ), 'ಬೆಳಕು ಹಂಚಿದ ಬಾಲಕ ಮತ್ತು ನಾನೂ ಗಾಂಧಿ ಆಗ್ತೇನೆ (೨ ನಾಟಕಗಳು ೨೦೦೪), 'ಬಣ್ಣದ ಹಕ್ಕಿ' (೨ ನಾಟಕಗಳು ೨೦೦೫) ಮುಂತಾದ ಪ್ರಕಟನೆಗಳು ಅನೇಕ ಕಡೆ ಮಕ್ಕಳಿಂದ, ರಂಗಾಸಕ್ತ ತಂಡಗಳಿಂದ ಅಭಿನಯಿಸಲ್ಪಟ್ಟಿವೆ. ಸಾಹಿತ್ಯದ ಓದಾಗಿಯೂ ಈ ನಾಟಕಗಳು ಸ್ವಾರಸ್ಯಕರವಾಗಿ ಓದಿಸಿಕೊಳ್ಳುತ್ತವೆ.

ಬಿ.ಟಿ. ದೇಸಾಯಿ

ಆಡುಭಾಷೆ, ಕುತೂಹಲಕರ ಹೆಣಿಗೆ, ಸ್ವಾರಸ್ಯಕರ ಸಂಭಾಷಣೆಗಳಿಂದ ಬಿ.ಟಿ. ದೇಸಾಯಿ ಅವರ 'ಒಂದೇ ಏಟಿಗೆ ಯೋಳು ಅರ್ಥಾತ್ ಗಿಡ್ಡೂ ಟೇಲರನ ಸಾಹಸಗಳು' ಎನ್ನುವ ನಾಟಕ ಕನ್ನಡ ಮಕ್ಕಳ ನಾಟಕ ಕ್ಷೇತ್ರಕ್ಕೆ ಕೊಡಮಾಡಿದ ಒಂದು ಅಪರೂಪದ ರಚನೆಯಾಗಿದೆ. ೧೯೯೦ರಲ್ಲಿ ಹೆಗ್ಗೋಡಿನ ಅಕ್ಷರ ಪ್ರಕಾಶನದಿಂದ ಪ್ರಕಟಗೊಂಡಿರುವ ಇದು ರಂಗದ ಮೇಲೆ ಅನೇಕ ಸ್ಥಳಗಳಲ್ಲಿ ಯಶಸ್ವಿಯಾಗಿ ಪ್ರದರ್ಶನಗೊಂಡಿದೆ. ತನ್ನ ಜಾಣ್ಮೆಯಿಂದ ರಾಜಕುಮಾರಿಯನ್ನು ಮದುವೆಯಾಗುವ ಬಡ ಸಿಂಪಿಗ ಯುವಕನೊಬ್ಬನ ಜಾನಪದ ಕಥೆಯನ್ನು ಬಿ.ಟಿ. ದೇಸಾಯಿ ಅವರು ಕಲಾತ್ಮಕ ಮಕ್ಕಳ ನಾಟಕವನ್ನಾಗಿಸಿದ್ದಾರೆ. ಕುಳ್ಳನಾಗಿರುವ 'ಗಿಡ್ಡೂ' ಹೆಸರಿನ ಟೇಲರ್ ತನ್ನ ಸಾಹಸಮಯ ವ್ಯಕ್ತಿತ್ವದಿಂದ ಅವನಿಗೆದುರಾಗುವ ಎಲ್ಲ ಆತಂಕಗಳನ್ನು ದಾಟುತ್ತಾನೆ. ರಾಕ್ಷಸನ ತೊಡೆಯ ಮೇಲೆ ಕುಳಿತು ಅವನನ್ನು ಹೆದರಿಸುವ ಗಿಡ್ಡೂ ಧೈರ್ಯಕ್ಕೆ

ಸಂಕೇತವಾಗುತ್ತಾನೆ. ಕಠಿಣ ಪರಿಸ್ಥಿತಿಯನ್ನು ಎದುರಿಸಲು ಉಪಾಯ ಹೂಡುತ್ತಾನೆ. ಆಡು ಮಾತಿನ ಕಸುವು, ಅದರಲ್ಲಿ ಅಡಗಿರುವ ನಾನಾ ಅರ್ಥ ವಿನೋದಗಳು ಈ ನಾಟಕದಲ್ಲಿ ತಟ್ಟನೆ ಮನಸೆಳೆಯುತ್ತವೆ.

ಗಿಡ್ಡೂ : ಅಯ್ಯಯಪ್ಪಾ! ಕುಣದೂ ಕುಣದೂ ಕಾಲು ದಣದವು ಒಂದೀಟು ದಣವು ಆವರಿಸಿಕೊಂಡು ಹೋದರಾತು ಇಲ್ಲೆ ಕೂತಗಂಡು.

[ರಾಕ್ಷಸನ ಹತ್ತಿರ ಬಂದು ತೊಡೆ ತಟ್ಟಿ) ಇಲ್ಲೆ ಮೆತ್ತಗೆ ಐತಿ. ಒಂದೀಟು ಹೊತ್ತು ಕೂತಗೊಂಡು ಮುಂದ ಹೋಗೋಣಾಂತ.

ರಾಕ್ಷಸ : (ಭಯಂಕರ ಧ್ವನಿಯಿಂದ) ಹ್ಞೂಂ

ಗಿಡ್ಡೂ : ಯಾವುರಾತಪಾ ಯಜಮಾನ?

ರಾಕ್ಷಸ : ಹ್ಞೂಂ!

ಗಿಡ್ಡೂ : ಯಾರ ಪೈಕೀನಪಾ ನೀನು?

ರಾಕ್ಷಸ : ಯಾರು ನೀನು?

ಗಿಡ್ಡು : (ಠಣ್ಣನೆ ಕೆಳಗೆ ಜಿಗಿದು) ಯಾರಂತ ಗೊತ್ತಿಲ್ಲ?

ರಾಕ್ಷಸ : ಯಾರು ನೀನು।

ಗಿಡ್ಡೂ : (ತನ್ನ ಎದೆಯ ಮೇಲೆ ಬರೆದದ್ದನ್ನು ತೋರಿಸುತ್ತ) ಇದನ್ನ ಓದಾಕ ಬರತೈತಿ?

ರಾಕ್ಷಸ : ಒಂದೇ ಏಟಿಗೆ ಯೋಳು ಒಂದೇ ಏಟಿಗೆ ಯೋಳು! ನೀನು ನಿಜವಾಗಿಯೂ ಅಷ್ಟು ಬಲವಾನನೇ?

ಗಿಡ್ಡೂ : ಅವರೀವರ ಕೂಟಾಗ ಚಾಷ್ಟೀ ಮಾಡಿ ನನಗ ಗೊತ್ತಿಲ್ಲಪಾ

ನಾಟಕದ ಕೊನೆಯಲ್ಲಿ ಗಿಡ್ಡೂ ಹೇಳುವ ಮಾತು ಕಥೆಯ ಉದ್ದೇಶವನ್ನು ಸ್ಪಷ್ಟಪಡಿಸುತ್ತವೆ:

ಗಿಡ್ಡೂ : ಇಲ್ಲಿ ಕೇಳಿರಿ ಮಾರಾಜರ
ಮಾನ ಇತ್ಯಾದಿ ಇದ್ದವರಿಗೆ ಚಡ್ಡಿ ಬೇಕು.
ಅಧಿಕಾರಕ್ಕೂ ಮನುಷ್ಯತ್ವದ ಚಡ್ಡಿ.
ಸಿರಿತನಕ್ಕೂ ತಿಳಿವಳಿಕೀ ಚಡ್ಡಿ.
ಬಡತನಕ್ಕೂ ಬುದ್ಧಿವಂತಕಿ ಚಡ್ಡಿ.
ಹರೇಕ್ಕೂ ಸಂಯಮದ ಚೆಡ್ಡಿ.
ಮುಪ್ಪಿಗೆ ಮರೆವಿನ ಚೆಡ್ಡಿ.

ಮಮತಾ ಜಿ ಸಾಗರ

ಕವಯಿತ್ರಿ ಮಮತಾ ಸಾಗರ ಅವರ 'ಚುಕ್ಕಿ ಚುಕ್ಕಿ ಚಂದಕ್ಕಿ' ನಾಟಕವು ನಶಿಸಿಹೋಗುತ್ತಿರುವ ಮನುಷ್ಯ ಹಾಗೂ ಪ್ರಕೃತಿ ನಡುವಿನ ಒಡನಾಟವನ್ನು ಮತ್ತಷ್ಟು

ಗಟ್ಟಿಗೊಳಿಸುವ ಪ್ರಯತ್ನ ಮಾಡುತ್ತದೆ. ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು ಇವರಿಂದ ೧೯೯೯ ರಲ್ಲಿ ಪ್ರಕಟಗೊಂಡಿರುವ ಇದು ಪ್ರಕಟನೆಗೆ ಮುಂಚೆ ಇಕ್ಬಾಲ್ ನಿರ್ದೇಶನದಲ್ಲಿ 'ಚಿಣ್ಣ–ಬಣ್ಣ' ತಂಡದಿಂದ ರಂಗದ ಮೇಲೆ ಪ್ರಯೋಗಿಸಲ್ಪಟ್ಟಿತು. ಶಾಲೆಯೆಂದರೆ ಸಾಕುಸಾಕಾಗಿರುವ ಚುಕ್ಕಿ ಎಂಬ ಚಿಕ್ಕ ಹುಡುಗ ಕಾಡಿನಲ್ಲಿ ಗಿಡ – ಮರ – ಬಳ್ಳಿ ಪ್ರಾಣಿಗಳ ಜೊತೆ ಕಾಲ ಕಳೆಯುತ್ತ ಅವುಗಳ ಮಾತು ಕಲಿತು ಪೆಡಂಭೂತ್ – ಜಲಪಿಶಾಚಿಯರನ್ನು ಮರುಳು ಮಾಡುತ್ತಾನೆ. ಚಿಕ್ಕಿಯನ್ನು ನುಂಗಲೆತ್ನಿಸುವ ವಿನಾಶಾಧೀಶ್ವರ ಎಂಬ ರಾಕ್ಷಸನ ಕೈಗೆ ಸಿಗದೆ ಅವನ ಅಧೀನದಲ್ಲಿರುವ ಚಂದ್ರ ಚುಕ್ಕಿಗಳನ್ನು ಬಿಡಿಸುತ್ತಾನೆ. ಕಾಡಿಗೆ ಪುನಃ ಬೆಳದಿಂಗಳು ತರುತ್ತಾನೆ. ಇಲ್ಲಿ ಮಾತು, ಭಾಷೆಗೆ ಮತ್ತು ಸ್ವಾತಂತ್ರ್ಯಕ್ಕೆ ಚುಕ್ಕಿ ಸಂಕೇತವಾಗಿ ಕಾಣಿಸಿಕೊಳ್ಳುತ್ತಾನೆ. ನಾಟಕದ ಮೊದಲರ್ಧ ತುಂಬ ಲವಲವಿಕೆಯಿಂದ ಬಂದಿದ್ದು ಕಲ್ಪನಾಶೀಲ ಪ್ರಯೋಗಕ್ಕೆ ಇಂಬು ಕೊಟ್ಟಿದೆ. ಇಲ್ಲಿರುವ ಹಾಡು, ಕುಣಿತ, ನಾಟಕದ ಓಟಕ್ಕೆ ಪೂರಕವಾಗಿದ್ದು ಮಕ್ಕಳ ಮನಸ್ಸಿನ ಅಭಿವ್ಯಕ್ತಿಗೆ ಕನ್ನಡಿ ಹಿಡಿಯುತ್ತವೆ.

ನನ್ನ ಹೆಸರು ಚುಕ್ಕಿ ಅಂತ
ಆಟ ಅಂದ್ರೆ ನಂಗಿಷ್ಟ
ಶಾಲೆ ಅಂದ್ರೆ ಅಷ್ಟಕ್ಕಷ್ಟೇ
ಪಾಠ ಅಂದ್ರೆ ಬಲುಕಷ್ಟ.

ನಾಟಕಕಾರರ ಭಾಷೆ ಸರಳವಾಗಿದ್ದು ಸಹಜತೆಯನ್ನು ಕಾಯ್ದುಕೊಂಡಿದೆ. ಚುಕ್ಕಿ ಮೊಲ, ಚಿಟ್ಟೆ, ಕೋತಿ, ಸಿಂಹ ಬಂಡೆಗಳ ಜೊತೆ ಮಾತನಾಡುವುದು ಸ್ವಾರಸ್ಯಕರವಾಗಿದೆ.

ಚುಕ್ಕಿ : ಬಣ್ಣದ ಚಿಟ್ಟೆ ಬಣ್ಣದ ಚಿಟ್ಟೆ
ಎಲ್ಲಿಗೆ ಹೋಗ್ತಿಯೇ?
ಚಿಟ್ಟೆ : ಹೂವಿಗು ದುಂಬಿಗು ಜಗಳ ಅಂತೆ
ನೋಡಕ್ ಹೋಕ್ತೇನಿ
ಚುಕ್ಕಿ : ಗೇರ್ ಗೇರ್ ಮಂಗಣ್ಣ
ಕೋತಿ : ನನ್ನತ್ರೇನೂ ಇಲ್ಲಣ್ಣ
ಚುಕ್ಕಿ : ಭಾಷೆ ಬಂತು ಭಾಷೆ
ಭಾಷೆ ಬಂತು ಭಾಷೆ
ಗುರ್ ಗುರ್ ಅಂದ್ರೆ ಗೊತ್ತಾಗುತ್ತೆ
ಚ್ಯೂ ಚ್ಯೂ ಅಂದ್ರೆ ತಿಳಿಯುತ್ತೆ
ಹಾ ಹೂಂ ಹರ್ರ್ರಾ ಹುರ್ರ್ರಾ
ಎಲ್ಲಾನೂ ನಂಗೆ ತಿಳಿಯುತ್ತೆ.

ರಂಗಪ್ರಯೋಗದ ದೃಷ್ಟಿಯಿಂದ ಮಕ್ಕಳಿಗೆ ಇದು ಅಸಕ್ತಿ ಹಾಗೂ ವಿಸ್ಮಯ ಹುಟ್ಟಿಸುತ್ತದೆ.

ಆರ್.ಕೆ. ಶಾನುಭೋಗ

ತಮ್ಮ ನಾಟಕಗಳ ಮೂಲಕ ಮಕ್ಕಳ ಭಾವನೆಗಳನ್ನು ಚಿತ್ರಿಸಲು ಪ್ರಯತ್ನಿಸಿದವರು ಆರ್.ಕೆ. ಶಾನುಭೋಗ ಅವರು. ಹಲವು ರಂಗ ಪ್ರಯೋಗಗಳಿಗೆ ಸಾಕ್ಷಿಯಾದ ಅವರ ಕೃತಿಗಳು ಮಕ್ಕಳ ಆಧುನಿಕ ಕಾಲವನ್ನು ಗಮನದಲ್ಲಿಟ್ಟುಕೊಂಡಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನವನ್ನು ತಮ್ಮ 'ಅಪೂರ್ವ' ನಾಟಕಕ್ಕೆ ಪಡೆದುಕೊಂಡಿರುವ ಶಾನಭೋಗ ಅವರು ನಾಟಕದ ಕತೆಯನ್ನು ಆಸಕ್ತಿದಾಯಕವಾಗಿ ಬೆಳೆಸುವ ಕಲೆ ಹೊಂದಿದ್ದಾರೆ. 'ಅಪೂರ್ವ' ೨೦೦೦ನೇ ಇಸ್ವಿಯಲ್ಲಿ ಟಿ.ಎಸ್.ನಾಗರಾಜಶೆಟ್ಟಿ ಅವರ ತಿಪಟೂರಿನ ನಿರ್ಮಲ ಪ್ರಕಾಶನದಿಂದ ಪ್ರಕಟಗೊಂಡರೆ 'ಉಪ್ಪಿನಕಾಯಿಯ ಅತ್ತೆ' (೨೦೦೧), 'ಪಾರಿತೋಷ' (೨೦೦೩) ಹಾಗೂ 'ಸುನಾಮಿಯ ಸುಳಿಯಲ್ಲಿ' (೨೦೦೪) ನಾಟಕಗಳು ಧಾರವಾಡದ 'ಜಡಭರತ ಪ್ರಕಾಶನ'ದಿಂದ ಬೆಳಕು ಕಂಡಿವೆ.

ವಿ.ಎಸ್. ಶಿರಹಟ್ಟಿಮಠ

ಮಕ್ಕಳ ಶಾಲಾ ನಾಟಕಗಳನ್ನು ಬರೆಯುವುದರಲ್ಲಿ ತಾವು ಅತ್ಯಂತ ಸಿದ್ಧಹಸ್ತರು ಎನ್ನುವಂತೆ ಸಿದ್ಧಮಾದರಿಯಲ್ಲಿ ಶಾಲೆಗಳಿಗೆ ಬೇಕಾಗುವ ಅನೇಕ ನಾಟಕಗಳನ್ನು ಬರೆದವರು, ವಿ.ಎಸ್. ಶಿರಹಟ್ಟಿಮಠ ಅವರು. 'ನಾಟಕಗಳ ರಚನೆ ಅವರಿಗೆ ಮೀನು ನೀರಿನಲ್ಲಿ ಈಜಿದಷ್ಟು ಸಹಜ ಕ್ರಿಯೆ. ಸಾಮಾಜಿಕ, ಪೌರಾಣಿಕ, ಐತಿಹಾಸಿಕ ಯಾವುದೇ ವಸ್ತು ವಿಷಯಗಳಿರಲಿ ಅವುಗಳನ್ನು ನಾಟಕಕ್ಕೆ ಸುಲಭವಾಗಿ ಅಳವಡಿಸಿ ಬಿಡುವ ನೈಪುಣ್ಯತೆ ಶಿರಹಟ್ಟಿಮಠರದು' ಎಂದು ಜಯವಂತ ಕಾಡದೇವರ ಇವರ ಕೃತಿಗಳ ಬಗ್ಗೆ ಹೇಳುತ್ತಾರೆ. ಉತ್ತರ ಕರ್ನಾಟಕದ ಭಾಷಾ ಸೊಗಡು ಇವರ ಕೃತಿಗಳ ಮತ್ತೊಂದು ವಿಶೇಷವಾಗಿದೆ. 'ಕರುಳಿನ ಕೂಗು', 'ಬುದ್ಧಿವಂತ ಗಣೇಶ', 'ದೇಶ ಸೇವೆ', 'ಕಲೆಯ ಬೆಲೆ', 'ಕವಲೂರ ಸಿದ್ಧ' ಮುಂತಾದ ಅವರ ನಾಟಕಗಳು ಮಕ್ಕಳಲ್ಲಿ ಅಡಗಿರುವ ಪ್ರತಿಭೆಯ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸುತ್ತವೆ. ಆಡು ಮಾತು, ವಿನೋದಪ್ರಜ್ಞೆ ಇವರ ನಾಟಕಗಳಲ್ಲಿ ಕಂಡುಬರುವ ಅಂಶಗಳು:

ಶಿವಾ : ನಾ ಹೇಳಿದ ಮಾತಿಗೆ ಯಾರ ಗೆದಿತೀರಿ ಅವ್ರಿಗೆ ಕೊಡತೀನಿ. ತಿಳಿತಾ, ತಾಯಿಲ್ಲಿ ಹಣ್ಣು.

ಗಣೇಶ : ನೀ ಅವ್ವಾನ ಕೈಯಾಗ ಕೊಟ್ಟಗಿಟ್ಟಿ, ಅವ್ವ ಅಣ್ಣನ ಕೈಯಾಗ ಕೊಡತಾಳ,

ಶಿವಾ : ಕೊಡೊದಿಲ್ಲ, ಅಂತಾ. ಕೇಳಿರಿಲ್ಲಿ ಇಬ್ಬರೂ ಚಿತ್ತಗೊಟ್ಟು ಕೇಳ್ರ್ಯಾ ನಿಮ್ಮಿಬ್ಬರಲ್ಲಿ ಯಾರು ಭೂಮಂಡಲವನ್ನು ಸುತ್ತಿ ಹಾಕಿ ಮೊದ್ಲು ಯಾರು ಬರುವಿರೋ ಅವರಿಗೆ ಈ ಹಣ್ಣು ಕೊಡುವುದು. ತಿಳಿತಾ?

ಷಣ್ಮುಖ : ನಡಕೊಂಡ್ ಹೋಗೊದು, ಹ್ಯಾಂಗ್ ಹೋಗೋದು ಯಪ್ಪಾ

ಗಣೇಶ : ಓಡಕೊಂತ ಹೋಗೋದು ಹೌದಲ್ಲೆಪ್ಪಾ?

ಶಿವ : ನಡಕೊಂತರ ಹೋಗ್ರಿ, ಓಡಕೊಂತರ ಹೋಗ್ರಿ, ಇಲ್ಲದಿದ್ರ
ನಿಮ್ಮ ವಾಹನಗಳಾದವಲ್ಲ ಅವನ್ನ
ತಗೊಂಡರ ಹೋಗ್ರಿ ಏನ ಬೇಕಾದ ಮಾಡ್ರಿ

ಲವಲವಿಕೆಯ ಭಾಷೆಯನ್ನು ಶಿರಹಟ್ಟಿಮಠ ಅವರು ಬಳಸುತ್ತಾರಾದರೂ ಸಾಂಪ್ರದಾಯಿಕ ವಸ್ತು ಹಾಗೂ ನಿರ್ವಹಣೆಗಳಿಂದ ಅವರ ನಾಟಕಗಳು ಹಳೆಯದರ ಸುತ್ತ ಗಿರಕಿ ಹೊಡೆಯುತ್ತವೆ. ಮಕ್ಕಳು ಹಾಗೂ ಹಿರಿಯರನ್ನು ನಗಿಸುವಲ್ಲಿ ಮಾತ್ರ ಅವರು ಲಕ್ಷ್ಯವಹಿಸುತ್ತಾರೆ. ಬಾಲ್ಯದ ಸಂವೇದನೆ, ಹೊಸ ಪ್ರಯೋಗಗಳಿಗೆ ಅವರಲ್ಲಿ ಆಸ್ಪದವಿಲ್ಲ. ಅವರ ಮಕ್ಕಳ ನಾಟಕಗಳ ಮತ್ತೊಂದು ಮಿತಿಯೆಂದರೆ ನಾಟಕದ ವಸ್ತುವಿನಲ್ಲಿ ಯಾವುದೇ ಹೊಸತನವಿಲ್ಲ. ಈಗಾಗಲೇ ಗೊತ್ತಿರುವ ಸಂಗತಿಗಳನ್ನು ಮಕ್ಕಳ ಮಾತುಗಳಲ್ಲಿ ಇಡುತ್ತಾರೆ. ತಮ್ಮ ಮಿತಿಗಳನ್ನು ಮೀರುವ ಪ್ರಯತ್ನ ಮಾಡಿದರೆ ಅವರಿಂದ ಒಳ್ಳೆಯ ನಗೆ ನಾಟಕಗಳು ರಚನೆಗೊಳ್ಳಬಲ್ಲವು.

ನಾ.ಸು. ಭರತನಹಳ್ಳಿ

ನಾ.ಸು. ಭರತನಹಳ್ಳಿ ಶಿಕ್ಷಕರಾಗಿದ್ದುಕೊಂಡು ಮಕ್ಕಳ ಸಾಹಿತ್ಯದಲ್ಲಿ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಆಕಾಶ ಹರಿದು ಬೀಳುತ್ತದೆ?' (ಪ್ರತಿಭಾಸಂಪನ್ನ ಪ್ರಕಾಶನ, ಬೆಂಗಳೂರು,೨೦೦೩) ಎನ್ನುವ ಅವರ ನಾಟಕವು ಕುತೂಹಲಕಾರಿ ಪ್ರಯೋಗವಾಗಿದೆ.

ಆಕಾಶ ಬಿತ್ತು, ಆಕಾಶ ಬಿತ್ತು
ಬಂದಿತು ಬದುಕಿಗೆ ಆಪತ್ತು
ಓಡುವ ಬನ್ನಿ ಓಡೋಡಿ ಬನ್ನಿ
ಹುಂಜವು ಕರೆಯಿತು ಕೊಕೊಕೊ ಕೊಂ

ಯಾರೋ ಹೇಳಿದ್ದನ್ನು ಕೇಳಿ ಅದರಂತೆ ನಂಬಿ ಹೆಡ್ಡರಾಗುವ ಬದಲು ಜಾಣರಾಗಬೇಕೆಂಬ ಆಶಯವನ್ನು ಕೋಳಿಮರಿ, ಹೇಂಟೆ, ನರಿ, ಅಜ್ಜ, ಹುಡುಗಿಯರ ಪಾತ್ರಗಳಿಂದ ನಿರೂಪಿಸಲಾಗಿದೆ.

ಕಾತ್ಯಾಯಿನಿ ಕುಂಜಿಬೆಟ್ಟು

'ನಿದ್ರಾನಗರಿ', 'ಮೊಲಂ ಸಿಂಹಮಂ ಕೊಂದ ಕತೆ', 'ಹಿಮಮಣಿ' ಎನ್ನುವ ಮೂರು ನಾಟಕಗಳನ್ನು ಕಾತ್ಯಾಯಿನಿ ಅವರು 'ಮೂರು ನಾಟಕಗಳು' (ಶ್ರೀನಿವಾಸ ಪುಸ್ತಕ ಪ್ರಕಾಶನ ಬೆಂಗಳೂರು, ೨೦೧೦) ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಹಳೆಯದನ್ನು ಮತ್ತು ಹೊಸತನ್ನು ಸೇರಿಸಿ ಮಕ್ಕಳೆದುರು ಒಂದು ರಮ್ಯ ಲೋಕವನ್ನು ತೆರೆದಿಡುವ ಪ್ರಯತ್ನವನ್ನು ಅವರ ನಾಟಕಗಳು ಮಾಡುತ್ತವೆ. ಮಕ್ಕಳಿಗೆ ಹಿಡಿಸುವ ಹಾಡು, ಸರಳ ಮಾತು, ಫ್ಯಾಂಟಸಿಯ ಕುಸುರಿ ಕೆಲಸಗಳಿಂದ ಅವರ ಕೃತಿಗಳು ಇಷ್ಟವಾಗುತ್ತವೆ. ಹಗುರ ವಿನೋದ ಕೂಡ ಅವರ ಶೈಲಿಯ ಒಂದು ಬಗೆಯಾಗಿದೆ. ಈ ದಿಶೆಯಲ್ಲಿ 'ನಿದ್ರಾನಗರಿ' ಮತ್ತು 'ಹಿಮಮಣಿ' ಯಶಸ್ವಿ ಪ್ರಯತ್ನಗಳೆನ್ನಬಹುದು.

ಒಂದಾನೊಂದು ನಗರದಲ್ಲಿ
ಇದ್ದನೊಬ್ಬ ರಾಜ
ರಾಜ! ರಾಜ! ರಾಜ! ಕೀರ್ತಿವರ್ಮ ರಾಜ
ರಾಜ ಕೂತರೆ ಸಿಂಹಾಸನದಲಿ
ಪಕ್ಕ ಕೂರುವಳು ರೋಜಾ
ರೋಜಾ ರೋಜಾ ರೋಜಾ
ಪಟ್ಟದ ರಾಣಿ ಸರೋಜಾ

ನಾಟಕೀಯತೆ, ಹಾಡು ಮುಂತಾದವುಗಳಿಂದ ಕಾತ್ಯಾಯಿನಿಯವರು ಒಂದು ಪೂರಕ ವಾತಾವರಣವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗುತ್ತಾರಾದರೂ ಸಾಂಪ್ರದಾಯಿಕ ಹಾಗೂ ಸಿದ್ಧ ಮಾದರಿಯನ್ನು ಒಡೆಯುವ ಮನಸ್ಸು ಮಾಡುವುದಿಲ್ಲ. ಇದರಿಂದ ನಾಟಕಗಳು ಗಳಿಸಿಕೊಳ್ಳಬೇಕಾದ ದೂರ ಮತ್ತು ಎತ್ತರಗಳು ಲಭಿಸಲಾರದೆ ಹೋಗುತ್ತವೆ. ಅಷ್ಟಾಗಿಯೂ ಅವರ ರಚನೆಗಳಲ್ಲಿ ಮಕ್ಕಳ ಫ್ಯಾಂಟಸಿ ಹಾಗೂ ರಮ್ಯ ಲೋಕದ ಉತ್ತಮ ನೆಲೆಗಳು ದೊರಕುತ್ತವೆ. ಆಡು ಮಾತಿನ ಬಳಕೆಯಿಂದ ಸಂಭಾಷಣೆ ಸ್ವಾರಸ್ಯಕರವಾಗಿರುತ್ತದೆ.

ಡಗ್ಗು ಚಕ್ಕು! ಡಗ್ಗು ಚಕ್ಕು!
ಡಗ್ಗು ಚಕ್ಕು! ಡಗ್ಗು ಚಕ್ಕು!
ಣಕ್ಕು ಣಕ್ಕೂ! ಣಕ್ಕು ಣಕ್ಕು!
ಣಕ್ಕು! ಣಕ್ಕು! ಣಕ್ಕು ಣಕ್ಕು!

ಹುಡುಗ : ನೀನು ಜೌಟ್... ನೀನು ಜೌಟ್... ನಿನ್ನ ಹಲ್ಲು ಕಂಡಿತು.

ಹುಡುಗಿ : ಇಲ್ಲ ನಾನು ನಗ್ಲಿಲ್ಲ... ಹಲ್ಲು ತೋರಿಸ್ಲಿಲ್ಲ! ಮೋಸ... ಮೋಸ...

ಎಲ್ಲರೂ : ಮೋಸ... ಸಮೋಸ... ಸಮೋಸ...
ಢಾಂ ಡೂಂ ಅದರ ಮೇಲೆ ಪುಡ್ಯು ಪುಸ್ಕ...

ಎನ್. ಶ್ರೀನಿವಾಸ ಉಡುಪ

'ಹಿಡಿಂಬನ ತೋಟ' (೨೦೦೪) ಎನ್. ಶ್ರೀನಿವಾಸ ಉಡುಪ ಅವರು ಬರೆದಿರುವ ನಾಟಕ. ಹಿಡಿಂಬ ರಾಕ್ಷಸನ ತೋಟದ ಅಂದ ಚೆಂದ ಕಂಡು ಅವನು ಊರಲ್ಲಿ ಇಲ್ಲದ ಸಮಯದಲ್ಲಿ ಶಾಲೆಯ ಮಕ್ಕಳು ಅದರಲ್ಲಿ ಸೇರಿ ನಲಿಯುತ್ತಾರೆ. ಹಿಡಿಂಬನ ತಂಗಿ ಹಿಡಿಂಬೆಯೂ ಮಕ್ಕಳ ಆಟದಲ್ಲಿ ಸೇರಿಕೊಳ್ಳುತ್ತಾಳೆ. ಆದರೆ ಯಾರನ್ನೂ ತೋಟದ ಒಳಗೆ ಬಿಟ್ಟುಕೊಳ್ಳದ ಹಿಡಿಂಬ ಊರಿನಿಂದ ತಿರುಗಿ ಬಂದು ಅವರನ್ನು ಒಳಸೇರಿಸುವುದಿಲ್ಲ. ಮಕ್ಕಳು ತೋಟದ ಒಳಗೆ ಬರದಿದ್ದರೆ ವಸಂತ ಋತು ಹೇಗೆ ಬಂದಾನು! ತೋಟ ಒಣಗುತ್ತದೆ. ಆಗ ಹಿಡಿಂಬ ಪಶ್ಚಾತ್ತಾಪಪಟ್ಟು ಮಕ್ಕಳನ್ನು ತೋಟಕ್ಕೆ ಸ್ವಾಗತಿಸುತ್ತಾನೆ. ಹೂವಿನ ತೋಟ ಮತ್ತೆ ನಳನಳಿಸುತ್ತದೆ. ಹಿಡಿಂಬೆ, ಮಕ್ಕಳು ಹಾಡುವ ಹಾಡುಗಳು ಸೊಗಸಾಗಿವೆ.

ಈ ಮಕ್ಕಳ ಕಿಲಕಿಲ ನಗೆ
ಸೂರೆಗೊಂಡಿತೆನ್ನ ಬಗೆ!
. . . .
ಗಿಡಮರ ಚಿಗುರಿಸು, ಬಾರೊ ವಸಂತ
ಹೂಗಳನರಳಿಸು ಬಾ!
ಹಿಮಚಳಿಗಾಳಿಯ ಹೊಡೆದೋಡಿಸು ಬಾ
ಬೆಳಕನು ಹೊಮ್ಮಿಸು ಬಾ!
ಬಾರೋ ವಸಂತ ಬಾ!
ಬಾರೋ ವಸಂತ ಬಾ !
ಹರುಷವ ಹರಡುತ ಬಾ!

'ಬೆರಳುಗಳು' (೨೦೦೦) ಎರಡು ಕಿರುನಾಟಕಗಳನ್ನು ಒಳಗೊಂಡಿದ್ದು ಅವುಗಳೆಂದರೆ 'ಬೆರಳುಗಳು' ಮತ್ತು 'ಪಕ್ಕವಾದ್ಯಗಳ ಫಜೀತಿ'. ಇವು ಆಸಕ್ತಿದಾಯಕವಾಗಿದ್ದು, 'ಪಕ್ಕವಾದ್ಯಗಳ ಫಜೀತಿ' ರಂಗದ ಮೇಲೂ ಅಭಿನಯಿಸಲ್ಪಟ್ಟಿದೆ.

ಡಾ. ಎಸ್. ಕಶ್ಯಪ್ ಅವರ 'ಹೀಗೂ ಆಗಬಹುದು', 'ಮಾಯಾಚೀಲ', 'ಚಂದ್ರಮುಖಿ' 'ಅಲ್ಲಿನೋಡು', 'ಒಂದು ನಿಮಿಷದ ಕತೆ' ಮುಂತಾದ ನಾಟಕಗಳನ್ನು ಬರೆದು ಸಮಕಾಲೀನ ವಿಷಯಗಳನ್ನು ನಿರ್ವಹಿಸಿದ್ದಾರೆ. ಅದೇ ರೀತಿ ಪಳಪಳ ಸೀತಾರಾಮಭಟ್ಟರ 'ನಚಿಕೇತ', 'ಏಕಲವ್ಯ', ಉಳುವೀಶ ಅವರ 'ಬಾಲ ತಪಸ್ವಿ', ಪಾರ್ವತಿ ಐತಾಳರ 'ಗುರುದಕ್ಷಿಣೆ', ಕೆರಳ್ಳಿ ಗುರುನಾಥರೆಡ್ಡಿ ಅವರ 'ಬಾಂದಳದ ಬಾಲಕಿಯರು', ಎ.ಕೆ. ರಾಮೇಶ್ವರ ಅವರ 'ಕ್ಷಮಾದಾನ' ಮುಂತಾದ ನಾಟಕಗಳನ್ನು ಹೆಸರಿಬಹುದು.

ನಮ್ಮ ಪುಟಾಣಿ ಸಾಹಿತಿಗಳು

– ಚನ್ನಪ್ಪ ಅಂಗಡಿ

ಮಕ್ಕಳನ್ನು ಮತ್ತು ಮಕ್ಕಳ ಸಾಹಿತ್ಯವನ್ನು ವಿಮರ್ಶಿಸುವ ಅವಶ್ಯಕತೆಯಿಲ್ಲ. ಹಾಗೆಂದ ಮಾತ್ರಕ್ಕೆ ಅವರನ್ನು ಮತ್ತು ಅವರ ಸಾಹಿತ್ಯವನ್ನು ಅಲಕ್ಷಿಸಬೇಕೆಂದೇನೂ ಇಲ್ಲ. ಎಲ್ಲಿಯವರೆಗೆ ಮಕ್ಕಳನ್ನು ನಾವು ಗಂಭೀರವಾಗಿ ಪರಿಗಣಿಸುವುದಿಲ್ಲವೋ ಅಲ್ಲಿಯವರೆಗೆ ರಾಷ್ಟ್ರದ ಭವಿಷ್ಯ ಕುರಿತಾದ ಚಿಂತನೆಗಳೆಲ್ಲವೂ ಅಪೂರ್ಣವೆಂದೇ ಹೇಳಬೇಕಾಗುತ್ತದೆ. ವ್ಯಕ್ತಿತ್ವ ನಿರ್ಮಾಣದ ಭದ್ರ ಬುನಾದಿಯೆಂದರೆ ಬಾಲ್ಯ; ಎತ್ತಿ ಹಿಡಿಯುವ ಸಧೃಡ ಗೋಡೆಗಳೆಂದರೆ ಯೌವನ; ರಕ್ಷಣೆ ನೀಡುವ ಛಾವಣಿಯೆಂದರೆ ಮಧ್ಯವಯಸ್ಸು; ಮುಂದಿನದೆಲ್ಲ ಅಂದ ಚೆಂದ, ಅಷ್ಟೆ. ಮನೆಯಲ್ಲಿ ಪೀಠೋಪಕರಣಗಳಿಲ್ಲವೆಂದರೆ ಹೇಗೋ ಸಂಭಾಳಿಸಬಹುದು. ಮನೆಯೆ ಇಲ್ಲವೆಂದರೆ?

ಸಾಮಾನ್ಯವಾಗಿ ಒಟ್ಟಾರೆ ಮಕ್ಕಳ ಸಾಹಿತ್ಯವನ್ನು ಮೂರು ರೀತಿಯಲ್ಲಿ ವಿಭಾಗಿಸುವ ಪರಿಪಾಠವಿದೆ. ಪ್ರೌಢ ಸಾಹಿತ್ಯವನ್ನು ಬರೆಯುವ ಖ್ಯಾತನಾಮರು ಆಗಾಗ ಮಕ್ಕಳಿಗಾಗಿ ರಚಿಸುವ ಕೃತಿಗಳು, ಸದಾ ಮಕ್ಕಳಿಗಾಗಿಯೇ ಬರೆಯುತ್ತ ಮಕ್ಕಳ ಸಾಹಿತಿಗಳೆಂದು ಹೆಸರು ಮಾಡಿರುವವರು ರಚಿಸುವ ಕೃತಿಗಳು, ಬಾಲಸಾಹಿತಿಗಳಾದ ಮಕ್ಕಳೇ ತಮಗಾಗಿ ರಚಿಸುವ ಕೃತಿಗಳು. ಒಂದು ತಿಳಿವಳಿಕೆಯೆಂದರೆ ಪ್ರಸ್ತುತ ಸಾಹಿತ್ಯದ ಗುಣಮಟ್ಟವಾಗಲಿ, ಗಾಂಭೀರ್ಯತೆಯಾಗಲಿ ಈ ಮೇಲಿನ ಕ್ರಮದಲ್ಲಿ ಇಳಿಮುಖವಾಗುತ್ತದೆ ಅಂತ. ಅದೇನೇ ಇರಲಿ, ಒಟ್ಟಾರೆಯಾಗಿ ಮಕ್ಕಳ ಸಾಹಿತ್ಯದ ಬಗ್ಗೆ ಸರಿಯಾದ ಚರ್ಚೆಯಾಗಿಲ್ಲ (ವಿಮರ್ಶೆಯೇ ಆಗಬೇಕೆಂದಿಲ್ಲ). ಹಾಗೆ ನೋಡಿದರೆ ಆ ಪ್ರಕಾರದಲ್ಲಿ ದುಡಿಯುವವರ ಸಂಖ್ಯೆಯೇ ಕಡಿಮೆ. ಬರೆದಷ್ಟು ಸಾಹಿತ್ಯದ ಅವಲೋಕನ ಕೂಡ ಸರಿಯಾಗಿ ನಡೆದಿಲ್ಲ. ಅದನ್ನು ವ್ಯವಸ್ಥಿತವಾಗಿ ಮಕ್ಕಳಿಗೆ ತಲಪಿಸುವ ಕೆಲಸವಂತೂ ಆಗಬೇಕಿದೆ.

ಮಕ್ಕಳ ಸಾಹಿತ್ಯ ರಚಿಸುವುದು ಅತಿ ಸುಲಭವೆಂದು ನಾನಂತೂ ಭಾವಿಸಿಲ್ಲ. ಹಗುರವಾಗಿ ಬರೆದುಬಿಟ್ಟರೆ ಮಕ್ಕಳ ಸಾಹಿತ್ಯವಾಗುವುದೂ ಇಲ್ಲ. ಬಾಲಸಾಹಿತಿಗಳ ಬರವಣಿಗೆಯ ಚರ್ಚೆ ಪ್ರಾರಂಭಿಸುವುದಕ್ಕಿಂತ ಮೊದಲು ಬಾಲರಿಗಾಗಿ ಬರೆದ ಹಿರಿಯ ಸಾಹಿತಿಗಳನ್ನು ಸ್ಮರಿಸಿಕೊಳ್ಳುವುದು ಉಚಿತವೆನಿಸುತ್ತದೆ. ಕುವೆಂಪು, ಬೇಂದ್ರೆ, ಕಾರಂತ, ನಾ. ಕಸ್ತೂರಿ, ಆನಂದಕಂದ,

ಗುಂಡಪ್ಪದ್ವಯರು, ಮೇವುಂಡಿ ಮಲ್ಲಾರಿ, ರಾಜರತ್ನಂ, ದಿನಕರ ದೇಸಾಯಿ, ವಿಸೀ, ಭಾರತಿಸುತರಂಥ ಇನ್ನೂ ಅನೇಕರು ನಮ್ಮ ತಲೆಮಾರಿನವರು ಕಂಡುಂಡ ಸಾಹಿತ್ಯ ದಿಗ್ಗಜರು; ಅದಕ್ಕೂ ಮೊದಲೇ ಎಂ.ಎಸ್. ಸುಬ್ರಹ್ಮಣ್ಯ, ವೆಂಕಟ ರಂಗೋ ಕಟ್ಟಿ, ಗಂಗಾಧರ ತುರಮರಿ, ಶಾಂತಕವಿ, ಶಿವರುದ್ರಪ್ಪ ಕುಲಕರ್ಣಿ, ಪಂಜೆ ಮಂಗೇಶರಾಯರು, ಗದಿಗೆಯ್ಯ ಹೊನ್ನಾಪೂರಮಠ, ಎಂ.ಎಸ್. ಕಾಮತ್, ಹೊಯ್ಸಳ, ಆರ್. ಕಲ್ಯಾಣಮ್ಮ, ಹರ್ಡೇಕರ ಮಂಜಪ್ಪ, ದೇವುಡು ನರಸಿಂಹಶಾಸ್ತ್ರಿ ಮುಂತಾದವರು ಮಕ್ಕಳ ಸಾಹಿತ್ಯಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆಗಳನ್ನು ನೀಡಿ ಸಮೃದ್ಧಗೊಳಿಸಿದ್ದಾರೆ.

ಜಿ. ವೆಂಕಟಸುಬ್ಬಯ್ಯ, ಸುಮತೀಂದ್ರ ನಾಡಿಗ, ನಾ. ಡಿಸೋಜ, ರಾಜಶೇಖರ ಭೂಸನೂರಮಠ, ಎಚ್. ಎಸ್. ವೆಂಕಟೇಶಮೂರ್ತಿ, ಎನ್. ಎಸ್. ಲಕ್ಷ್ಮಿನಾರಾಯಣಭಟ್ಟ, ವರದರಾಜ ಹುಯಿಲಗೋಳ, ಸಿದ್ದಯ್ಯ ಪುರಾಣಿಕ, ಅನುಪಮಾ ನಿರಂಜನ, ಮನೋಹರ ಘಾಣೇಕರ, ಬಿ.ಎ.ಸನದಿ, ದೇಜಗೌ, ಕಯ್ಯಾರ ಕಿಞ್ಞಣ್ಣ ರೈ, ಜಿ. ಟಿ. ನಾರಾಯಣರಾವ್, ಜೆ. ಆರ್. ಲಕ್ಷ್ಮಣರಾವ್, ಪಂಚಾಕ್ಷರಿ ಹಿರೇಮಠ, ಗುರುಲಿಂಗ ಕಾಪ್ಸೆ, ನಿಸಾರ ಅಹ್ಮದ್, ಚೆನ್ನವೀರ ಕಣವಿ, ಕಮಲಾ ಹಂಪನಾ, ಇಂಥ ವಿವಿಧ ಪ್ರಕಾರಗಳಲ್ಲಿ ಬರೆಯುತ್ತಿರುವ ಸಾಹಿತಿಗಳು ಮಕ್ಕಳ ಸಾಹಿತ್ಯದ ಪರಿಚಾರಿಕೆಯಿಂದ ತಪ್ಪಿಸಿಕೊಂಡಿಲ್ಲ. ತಮ್ಮ ಬರವಣಿಗೆಯ ಪರಿಧಿ ಎಂಥದ್ದೇ ಆದರೂ ನಡುನಡುವೆ ಎಳೆಯ ಮನಸ್ಸುಗಳಿಗಾಗಿಯೇ ತಮ್ಮ ಪ್ರತಿಭೆಯ ಮಗ್ಗುಲೊಂದನ್ನು ಮೀಸಲಿಟ್ಟು ದುಡಿದ ಸಾಹಿತಿಗಳಿವರು. ಇನ್ನು ಮಕ್ಕಳಿಗಾಗಿಯೇ ಬರೆಯುತ್ತ ಆ ಪ್ರಕಾರಕ್ಕೆ ಒಂದು ಘನತೆಯನ್ನು ತಂದುಕೊಟ್ಟ ಕನ್ನಡ ಸಾಹಿತಿಗಳದ್ದೂ ಒಂದು ಪಟ್ಟಿಯಿದೆ. 'ಸಿಸು' ಸಂಗಮೇಶ, ಶಂ.ಗು. ಬಿರಾದಾರ, ಕಂಚ್ಯಾಣಿ ಶರಣಪ್ಪ, ಪಳಕಳ ಸೀತಾರಾಮಭಟ್ಟ, ಈಶ್ವರ ಕಮ್ಮಾರ, ರಸಿಕ ಪುತ್ತಿಗೆ, ಪರಶುರಾಮ ಚಿತ್ರಗಾರ, ಗುರುಪಾದಸ್ವಾಮಿ ಹಿರೇಮಠ, ಎ.ಕೆ. ರಾಮೇಶ್ವರ, ನಿರುಪಮಾ, ಸಂಪಟೂರ ವಿಶ್ವನಾಥ, ಎಂ.ಡಿ.ಗೋಗೇರಿ, ಜಂಬುನಾಥ ಕಂಚ್ಯಾಣಿ, ಮಾರ್ಕಂಡೇಯ ದೊಡ್ಡಮನಿ, ನಿಂಗಣ್ಣ ಕುಂಟಿ, ಗಂಗಾಧರ ನಂದಿ ಹೀಗಿದ್ದಾರೆ ಮಕ್ಕಳ ಸಾಹಿತಿಗಳು.

ಅಬ್ದುಲ್ ರೆಹಮಾನ್ ಪಾಷಾ, ರಾಜೇಂದ್ರ ಗಡಾದ, ಕೊತ್ತಲ ಮಹದೇವಪ್ಪಾ, ರಾಜಶೇಖರ ಕುಕ್ಕುಂದಾ, ಪ.ಗು. ಸಿದ್ದಾಪೂರ, ಆನಂದ ಪಾಟೀಲ, ಗುರುರಾಜ ಬೆಣಕಲ್, ಜಯವಂತ ಕಾಡದೇವರ, ಪ. ರಾಮಕೃಷ್ಣ ಶಾಸ್ತ್ರಿ, ಗಣೇಶ ನಾಡೋರ ಇಂಥ ಲೇಖಕರು ಮಕ್ಕಳಿಗಾಗಿ ಅತ್ಯುತ್ಸಾಹದಿಂದ ಬರೆಯುತ್ತಿದ್ದಾರೆ, ಕನಿಷ್ಟ ಒಂದು ಮಕ್ಕಳ ಕೃತಿಯನ್ನು ರಚಿಸಿರುವ ಸಾಹಿತಿಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ, ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಬರಹಗಾರರ ಸಂಖ್ಯೆ ಒಂದು ಸಾವಿರಕ್ಕೂ ಹೆಚ್ಚಿದೆಯೆಂದು ಮಕ್ಕಳ ಸಾಹಿತ್ಯ ಕುರಿತಾದ ತಮ್ಮ ಮಹಾಪ್ರಬಂಧದಲ್ಲಿ ರಾಜೇಂದ್ರ ಗಡಾದ ಅವರು ಚರ್ಚಿಸಿದ್ದಾರೆ. ಇದೇನೂ ಸಣ್ಣ ಪ್ರಮಾಣದ ಬರವಣಿಗೆಯಲ್ಲ. ಬಹಳ ಮುಖ್ಯವಾದ ಪ್ರಶ್ನೆಯೆಂದರೆ ಇವುಗಳಲ್ಲಿನ ಎಷ್ಟೆಷ್ಟು ಕೃತಿಗಳನ್ನು ಮಕ್ಕಳಿಗೆ ತಲುಪಿಸಿ ಅವರ ಓದಿಗೆ ಅನುಕೂಲತೆಗಳನ್ನು ಒದಗಿಸಿಕೊಟ್ಟಿದ್ದೇವೆ ಎನ್ನುವುದು. ಇಷ್ಟೊಂದು ಸಾಹಿತ್ಯ ಸಾಧಕರ ಹೆಸರುಗಳನ್ನು ನೆನಪಿಸಿಕೊಳ್ಳುವುದರ ಉದ್ದೇಶವೂ ಇದೇ ಆಗಿದೆ. ಸಮಕಾಲೀನ ಸ್ಪರ್ಧಾ ಪ್ರಪಂಚದಲ್ಲಿ ಮಕ್ಕಳಿಗೆ ಸಾಹಿತ್ಯದ ಪುಸ್ತಕ ಓದುವ ವಾತಾವರಣವನ್ನು ನಾವು ಎಷ್ಟರ ಮಟ್ಟಿಗೆ ಕಟ್ಟಿಕೊಡುತ್ತಿದ್ದೇವೆ. ಪುಸ್ತಕದ ಓದು, ಅವರ ಸ್ಪರ್ಧಾ ಜಗತ್ತಿನ ವಿಷಯವಾಗಿ

ಪರಿಣಮಿಸಿದೆಯೆ? ಸದಾ ಪ್ರಲೋಭನೆಗಳನ್ನು ಮಕ್ಕಳ ಕಣ್ಮುಂದೆ ಹರಿಬಿಡುತ್ತಿರುವ ವಿದ್ಯುನ್ಮಾನ ಮಾಧ್ಯಮಗಳ ಮುಂದೆ ಮಕ್ಕಳು ತಮಗಾಗಿ ಬರೆಯಲ್ಪಟ್ಟ ಸಾಹಿತ್ಯವನ್ನು ಯಾವ ರೀತಿಯಲ್ಲಿ ಆಸ್ವಾದಿಸಲು ಸಜ್ಜಾಗಿದ್ದಾರೆ? ಮನೆ–ಪಾಲಕರು, ಶಾಲೆ–ಶಿಕ್ಷಕರು, ಸಮಾಜ–ಚಿಂತಕರು, ಈ ನಿಟ್ಟಿನಲ್ಲಿ ಯಾವ ಪರ್ಯಾಯಗಳನ್ನು ಶೋಧಿಸಿಕೊಂಡಿದ್ದಾರೆ? ಇವೇ ಮುಂತಾದ ಸಂಗತಿಗಳನ್ನು ನಮ್ಮಷ್ಟಕ್ಕೆ ನಾವು ಸ್ಪಷ್ಟಪಡಿಸಿಕೊಳ್ಳಲೇಬೇಕು. ಆಗ ಮಾತ್ರ ಪ್ರಸ್ತುತ ವಿಷಯದ ಮೇಲೆ ಗ್ರಂಥ ಸಂಪಾದಿಸುವ ಇಂಥ ಪ್ರಯತ್ನಗಳು ನಿಶ್ಚಿತ ಗುರಿಯನ್ನು ಸಾಧಿಸಲು ಅನುವಾಗುತ್ತದೆ. ಶ್ರಮವೂ ಸಾರ್ಥಕವಾಗುತ್ತದೆ. ಲೇಖನದ ಮುಂದಿನ ಭಾಗದಲ್ಲಿ ನಾನು ಚರ್ಚಿಸಲು ಹೊರಟಿರುವ ಬಾಲಸಾಹಿತಿಗಳು ಈ ಹಿಂದೆ ಪಟ್ಟಿ ಮಾಡಿರುವ ಕೆಲವು ಸಾಹಿತಿಗಳ ಕೆಲವು ಕೃತಿಗಳನ್ನಾದರೂ ಓದಿಕೊಂಡಿದ್ದಾರೆಂದು ಭಾವಿಸುತ್ತ ಮುಂದುವರೆಯುತ್ತೇನೆ. ಮೇಲಾಗಿ ಇದು ನನ್ನ ಸಂಗ್ರಹಕ್ಕೆ ದಕ್ಕಿರುವ ಯಾದಿಯಾಗಿದ್ದು, ಈ ಕ್ಷೇತ್ರದಲ್ಲಿ ದುಡಿದವರನೇಕರ ಹೆಸರುಗಳು ಬಿಟ್ಟು ಹೋಗಿರಲೂಬಹುದು. ಇದರ ಒಂದಂಶ ಮಾಹಿತಿಯನ್ನಾದರೂ ಮಕ್ಕಳ ಗಮನಕ್ಕೆ ತರುವುದು ದೊಡ್ಡವರ ಕರ್ತವ್ಯ. ಮತ್ತೊಮ್ಮೆ ನೆನಪಿಸುತ್ತೇನೆ, ಇದು ಮಕ್ಕಳ ಸಾಹಿತ್ಯದ ವಿಮರ್ಶೆಯಲ್ಲ. ಒಂದು ರೀತಿಯ ಸಮೀಕ್ಷೆ, ಮತ್ತೊಂದು ರೀತಿಯ ಓದು, ಅಷ್ಟೆ.

***

ಹಾಗೆ ನೋಡಿದರೆ ಎಲ್ಲ ಮಕ್ಕಳೂ ಕವಿಗಳೇ. ಏಕೆಂದರೆ ಮಕ್ಕಳು ತಮ್ಮ ಸುತ್ತಣ ಪ್ರಪಂಚವನ್ನು ಸದಾ ಕುತೂಹಲಭರಿತ ಆತ್ಮೀಯತೆಯಿಂದ ನೋಡುತ್ತ ಭಾವನಾತ್ಮಕ ಸಂಬಂಧವನ್ನು ಬೆಳೆಸಿಕೊಳ್ಳುತ್ತಾರೆ. ಅಗಣಿತ ಕಲ್ಪನೆಯ ಮೂಲಕ ತಾವು ಕಂಡುಂಡ ಲೋಕವನ್ನು ಮರುಸೃಷ್ಟಿ ಮಾಡಬಲ್ಲವರಾಗಿರುತ್ತಾರೆ. ಕತೆಯೊಳಗೊಂದು ಕತೆ ಕಟ್ಟುತ್ತಾರೆ. ಹಾಡಿನೊಳಗೊಂದು ಹಾಡನ್ನು ಹುಟ್ಟಿಸುತ್ತಾರೆ. ಸೃಷ್ಟಿಯ ವಿಸ್ಮಯಗಳನ್ನು ಮುಗ್ಧತೆಯಿಂದ ನೋಡಿ ಆನಂದಿಸುತ್ತಾರೆ. ಹೀಗೆ ತತ್‌ಕ್ಷಣದ ಭಾವನಾತ್ಮಕ ಪ್ರತಿಕ್ರಿಯೆ ಸಾಧ್ಯವಾಗುವುದು ಕವಿ ಮನಸ್ಸಿಗೆ ಮಾತ್ರ. ಇವೆಲ್ಲ ಕವಿಗಿರಬೇಕಾದ ಅತ್ಯಗತ್ಯ ಗುಣಗಳು. ಅವು ಮಕ್ಕಳಲ್ಲಿ ಯಥೇಚ್ಛವಾಗಿವೆಯಷ್ಟೇ ಅಲ್ಲ, ಸಹಜವಾಗಿ ಆಳವಟ್ಟಿವೆ. ಅಂಥ ಕವಿತ್ವದ ಸಂಪೂರ್ಣ ಅರಿವು ಮತ್ತು ಭಾಷಾ ಬಳಕೆಯ ಅಷ್ಟಿಷ್ಟು ಜ್ಞಾನವಿರುವ ಮಕ್ಕಳು ಮಾತ್ರ ಬಾಲಕವಿಗಳಾಗಿ ಹೊರಹೊಮ್ಮುತ್ತಾರೆ. ಅಂಥವರು ಕತೆ ಲೇಖನಗಳನ್ನು ಬರೆಯಬಹುದು. ದೊಡ್ಡವರ ಪ್ರೋತ್ಸಾಹದ ಜೊತೆಗೆ ಮಾರ್ಗದರ್ಶನವೂ ದೊರೆತವರು ತಕ್ಕಮಟ್ಟಿನ ಯಶಸ್ಸು, ಕೀರ್ತಿಗಳನ್ನು ಸಂಪಾದಿಸಿದ್ದಾರೆ.

***

ಮುದ್ದು ಹೆಸರಿನಿಂದ ಮುದ್ದು ಮುದ್ದಾಗಿ ಬರೆಯುತ್ತಿರುವ ವಿತಾಶ ರಿಯಾ, ತೀರ್ಥಹಳ್ಳಿಯ ಮಲೆನಾಡಿನ ಪರಿಸರದಲ್ಲಿ ಅರಳಿದ ಸಾಹಿತ್ಯಕ ಪ್ರತಿಭೆ. ತನ್ನ ಬರವಣಿಗೆಯಲ್ಲದೇ ಆಕರ್ಷಕ ವಾಚನ ಶೈಲಿಯಿಂದಲೂ ಗಮನ ಸೆಳೆದಿರುವ ಈ ಬಾಲೆಗೆ ಸಿಕ್ಕಿರುವ ಅವಕಾಶಗಳು, ಪ್ರಶಸ್ತಿ ಪುರಸ್ಕಾರಗಳು, ಮಾಧ್ಯಮದ ಪ್ರಚಾರ, ವಿವಿಧ ವೇದಿಕೆಗಳ ಪಾಲುದಾರಿಕೆ, ಸಂಘ ಸಂಸ್ಥೆಗಳ ಪ್ರೋತ್ಸಾಹ ಮುಖ್ಯವಾಗಿ ಪಾಲಕರ ಬೆಂಬಲಗಳೆಲ್ಲ ಸಮ್ಮಿಳಿತಗೊಂಡು ಆಕೆ ರಾಜ್ಯಮಟ್ಟದಲ್ಲಿಯೇ ಹೆಸರು ಮಾಡಿರುವ ಕವಿಯಾಗಿದ್ದಾಳೆ.

ಮಾತು ಮತ್ತು ಮೌನಗಳನ್ನು ತನ್ನಂತರಂಗದ ಪರದೆಯ ಮೇಲೆ ಮುಖಾಮುಖಿಯಾಗಿರಿಸಿ ತಿದ್ದಿ ತೀಡಿದ ಚಿತ್ರಗಳನ್ನೇ ಬಿಡಿಸುವ ಮುದ್ದುವಿನ ಬರವಣಿಗೆಯು ಪ್ರಾಯವನ್ನು ಮೀರಿ ಹದಗೊಂಡಿದೆ. ಮಾತುಗಳೆಲ್ಲಾ, ಬರೀ ಗದ್ದಲಗಳೆನಿಸಿ/ಮೌನವಾದೆ/ ಈಗ ಮೌನದಲ್ಲೂ ಮಾತಿನದೇ ಸದ್ದುಗದ್ದಲ (ಮಾತು–ಮೌನ) ಎಂದು ಬರೆಯುತ್ತ ಮೌನ ಕುರಿತಾದ ತನ್ನ ಒಲವನ್ನು ತೋರ್ಪಡಿಸುತ್ತಾಳೆ. ತನ್ನ ಮೌನದೊಳಗಿನ ಹತ್ತು ಹಲವು ತಲ್ಲಣಗಳನ್ನು ಹೀಗೆ ಮನಸ್ಸು ಸಹಜವಾಗಿ ಹಂಚಿಕೊಳ್ಳುತ್ತದೆ.

ತನ್ನ ಓರಗೆಯ ಬರಹಗಾರರಲ್ಲಿಯೇ ವಿಭಿನ್ನವಾಗಿ ನಿಲ್ಲುವ ಅವಳ ಕವನಸಂಕಲನ 'ಕಾನನ–ಕಲರವ' ದಲ್ಲಿ ಕವಿತೆಗಳನ್ನು 'ಮೌನದ ಸಾಲುಗಳು', 'ಮಿಂಚುಗೊಂಚಲು', 'ಹಾಯಾದ ಹಾಯ್ಕುಗಳು', 'ಚಿಲಿಪಿಲಿ ಉಲಿ', 'ಹನಿ ಹನಿ ಸಿಂಚನ', 'ಮಲ್ಲಿಗೆ ದಂಡೆ' ಎಂದು ವಿವಿಧ ಗುಂಪುಗಳನ್ನಾಗಿ ಮಾಡಿಕೊಂಡಿದ್ದಾಳೆ. ಕೆಲವು ಸ್ವತಂತ್ರ ಕವಿತೆಗಳಾದ ಮೇಲೆ ಕೊನೆಯಲ್ಲಿ 'ಮರ ಗೀತೆಗಳು' ಎಂಬ ಕೇಂದ್ರ ವಸ್ತುವನ್ನೊಳಗೊಂಡ ಹಲವಾರು ಸಾಲುಗಳು ಬರುತ್ತವೆ. ಇದೆಲ್ಲ ಈ ಬಾಲಕವಿ ಬರವಣಿಗೆಯನ್ನು ಎಷ್ಟೊಂದು ಗಂಭೀರವಾಗಿ ತೆಗೆದುಕೊಂಡಿದ್ದಾಳೆಂಬುದನ್ನು ತೋರಿಸುವುದರ ಜೊತೆಗೆ ಸಾಹಿತ್ಯ ಪರಂಪರೆಯೊಂದಿಗೆ ತನ್ನರಿವಿನ ಪ್ರಪಂಚವನ್ನು ಪ್ರಚುರಪಡಿಸುತ್ತದೆ.

ಇದೇ ಸಂಕಲನದ 'ಕಂಪನ'ದಲ್ಲಿ,

> ಅದಿರಿನ ದೊಡ್ಡ ದೊಡ್ಡ ಲಾರಿಗಳು
> ಒಂದರ ಹಿಂದೊಂದು
> ಹೆದ್ದಾರಿಯಲಿ ಸಾಗುವಾಗ
> ಮನೆ ನೆಲ
> ಎದೆಯಲ್ಲೆಲ್ಲಾ ನಡುಕ!

ಎಂದು ಪ್ರಸ್ತುತ ಗಣಿ ಸಮಸ್ಯೆಗೆ ಆತಂಕದ ಸ್ಪಂದನೆಯನ್ನು ನೀಡುತ್ತಾಳೆ. ಗಣಿಗಾರಿಕೆಯಂತಹ ಹಗಲು ದರೋಡೆಯ ದಂಧೆಯಿಂದ ನೆಲ ಮಾತ್ರ ನಡುಗುತ್ತಿಲ್ಲ. ಜೀವಪರವಾದ ಎದೆಗಳಲ್ಲೂ ನಡುಕ ಉಂಟಾಗಿದೆ. ಸಂಪನ್ಮೂಲಗಳನ್ನು ನುಂಗಿ ನೊಣೆಯುವ ಇಂಥ ಉದ್ಯಮಗಳು ಮುಂದಿನ ತಲೆಮಾರಿನವರಿಗೆ ಈ ಪರಿಸರವನ್ನು ಉಳಿಸುತ್ತವೆಯೇ? ಎಂಬ ಪ್ರಶ್ನೆ, ಜಾಗೃತವಾದ ಎಳೆ ಮನಸ್ಸನ್ನು ಕಾಡಿದೆ. ಬೆಳದಿಂಗಳು/ಹಾಲು ಸುರಿಸಿದರೆ/ ಮೋಡಗಳಿಗೆ/ಮತ್ಸರ ಎಂದು ನವಿರಾಗಿ ಬರೆಯುವಂತ ಕಾವ್ಯ ಪ್ರತಿಭೆಯೂ ಆಕೆಯಲ್ಲಿದೆ ಎಂಬುದನ್ನು ಗಮನಿಸಬೇಕು.

> ಕಪ್ಪಗೆ ಮಲಗಿತ್ತು
> ತುಳಿದೆ. ಹಾವಲ್ಲ,
> ಅದು ಹಾದಿ
> ಅಮವಾಸ್ಯೆ ರಾತ್ರಿ
> ಸುಂದರ ಹಸಿರು
> ಮರವೂ ಭೂತ

ಎಂಬಂಥ ಯಶಸ್ವಿ ಹಾಯ್ಕುಗಳಿದ್ದರೂ ಆ ಪ್ರಕಾರದ ನಿಯತಿಗಳನ್ನು ಮುದ್ದು ಇನ್ನಷ್ಟು ಅರಿಯಬೇಕಾಗಿದೆ.

ಸಂಕಲನದಲ್ಲಿರುವ 'ಮರ ಗೀತೆಗಳು' ಶೀರ್ಷಿಕೆಯಡಿಯಲ್ಲಿ ಅಲ್ಲಲ್ಲಿ ಮಿಂಚಿನಂತ ಸಾಲುಗಳು ಇವೆ.

ಹಚ್ಚ ಹಸಿರ ಗರಿಕೆ ಹುಲ್ಲು
ನೀ ಭೂಮಿಯ ಮೇಲೆ
ಹೀಗೆ ಹಬ್ಬಿ ನಿಲ್ಲು,
ಹಣ್ಣನು ನೀಡುವ ಹಲಸು
ನನಗೀಗ
ನಿನ್ನದೇ ಕನಸು,
ಅರಳಿ ಮರವೇ
ಅರಳಿ ನಿಲ್ಲು
ಬಿಸಿಲ ಬೇಗೆಗೆ
ನೆರಳು ಚೆಲ್ಲು
ಬಿದಿರೆ ಬಿದಿರೆ ಬಿದಿರೆ
ನೀನೆ ತೊಟ್ಟಿಲ ತೂಗುವೆ
ನೀನೇ ಚಟ್ಟವ ಹೊರುವೆ;

ಹೀಗಿವೆ ಈ ಎಳೆಮನಸ್ಸಿನ ಕವಿಯ ಯೋಚನಾ ಲಹರಿಗಳು. ಮುದ್ದು ಕಾಡು-ಮೇಡು ನೋಡುತ್ತ ತನ್ನಲ್ಲಿ ಗುನುಗುನಿಸುತ್ತಿದ್ದಾಳೇನೊ ಎಂಬಂಥ ಅನುಭವ ಓದುಗನಲ್ಲಿ ಮೂಡಿಬರುತ್ತದೆ. ಪರಿಸರ ಆಕೆಯ ಬರವಣಿಗೆಯ ಮುಖ್ಯ ಕಾಳಜಿಯಾದರೂ ಆಕೆ ನವೆಂಬರ್ ಬಂತೆಂದರೆ..., ಶವ ಸಂಸ್ಕಾರ, ನೋಯ್ಡಾ ರಕ್ಕಸರು, ತೆಪ್ಪೋತ್ಸವ ಮತ್ತು ಬೆಳ್ಳಕ್ಕಿ, ಮುಂತಾದ ಸಮಕಾಲೀನ ಸಂಗತಿಗಳ ಮೇಲೆ ಬೆಳಕು ಚೆಲ್ಲುವ ಕವಿತೆಗಳನ್ನು ರಚಿಸಬಲ್ಲಳು. ವಯೋಸಹಜವಾದ ಉತ್ಸಾಹದಿಂದ ತನ್ನ ಸಂಕಲನಕ್ಕೆ ದೀರ್ಘವಾದ 'ಮನದ ಮಾತು' ಬರೆದುಕೊಂಡಿರುವ ಮುದ್ದು ಮುಂಬರುವ ದಿನಗಳಲ್ಲಿ ಮನದ ಮಾತನ್ನು ಕವಿತೆಯನ್ನಾಗಿಸುವ ಕಡೆಗೆ ಹೆಚ್ಚು ಲಕ್ಷ್ಯ ವಹಿಸಿದಷ್ಟೂ ಬೆಳೆಯುವ ಅವಕಾಶಗಳಿವೆ.

ನಾ. ಡಿಸೋಜ, ಕೆ.ಟಿ. ಗಟ್ಟಿಯವರಂಥ ಸಾಹಿತಿಗಳಿಂದ ಮೆಚ್ಚುಗೆ, ಮಾರ್ಗದರ್ಶನ ಪಡೆದಿರುವ ಮುದ್ದು, 'ಎಷ್ಟು ಬಣ್ಣದ ಇರುಳು' ಕವನ ಸಂಕಲನ, 'ಒಂದು ಚಂದ್ರನ ತುಂಡು' ಎಂಬ ಗದ್ಯಕೃತಿ, 'ಕಾಡ ಹಾದಿಯ ಹೂಗಳು' ಎಂಬ ಕಾದಂಬರಿಯನ್ನು ಪ್ರಕಟಿಸಿದ್ದಾಳೆ. ಹಲವು ಪತ್ರಿಕೆಗಳಿಗೆ ನಿರಂತರವಾಗಿ ಅಂಕಣ ಬರಹಗಳನ್ನು ಕೂಡ ಬರೆಯುತ್ತ, 'ಮಂದಾನಿಲ' ಮಾಸ ಪತ್ರಿಕೆಯನ್ನು ನಡೆಸುವ ಮುದ್ದು ಇತರೆ ಮಕ್ಕಳಿಗೆ ಆದರ್ಶವಾಗಿದ್ದಾಳೆ. ಮೂಡುಬಿದ್ರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ಪತ್ರಿಕೋದ್ಯಮ ವಿದ್ಯಾರ್ಥಿಗಳು ಆಕೆಯನ್ನು ಕುರಿತಾದ ಸಾಕ್ಷ್ಯ ಚಿತ್ರವನ್ನು ಹೊರತಂದಿದ್ದಾರೆ.

***

'ತನ್ನ ಪ್ರತಿಭೆ, ಅಭಿವ್ಯಕ್ತಿಯ ಶಕ್ತಿ, ಪರಿಸರಕ್ಕೆ ಸ್ಪಂದಿಸುವ ಗುಣ, ಕಂಡದ್ದನ್ನು ಕಣ್ಣಿಗೆ ಕಟ್ಟುವಂತೆ ಹೇಳುವ ರೀತಿ, ಅನಿಸಿಕೆಗಳನ್ನು ಕಾವ್ಯವಾಗಿಸುವ ಶೈಲಿ, ಜೊತೆಗೆ ಮನೆಯ ಕಾವ್ಯಮಯ, ಪ್ರೇಮಮಯ ವಾತಾವರಣದಿಂದ ಈ ಹುಡುಗ ನಾಳೆ ನಮ್ಮ ನಾಡಿನ ಪ್ರತಿಭಾವಂತ ಶಕ್ತಿಶಾಲಿಯಾದ ಕವಿಯಾಗುವನೆಂಬ ವಿಶ್ವಾಸವಿದೆ' ಎಂಬ ಶಾಂತರಸರ ಭವಿಷ್ಯವಾಣಿಯನ್ನು ನಿಜ ಮಾಡಿ ತೋರಿಸಿದವರು ಸೂಕ್ಷ್ಮಕವಿ ವಿಕ್ರಮ ವಿಸಾಜಿಯವರು.

'ನನ್ನ ಸುತ್ತಲಿನ ಜನರು' ಎಂಬ ಶೀರ್ಷಿಕೆಯ ನಲವತ್ತು ಶಿಶುಕವನಗಳ ಸಂಗ್ರಹಕ್ಕೆ ಮುನ್ನುಡಿ ಬರೆದ ಶಾಂತರಸರು ಮಕ್ಕಳನ್ನು ನಿರ್ಲಕ್ಷಿಸುವ ಅಜ್ಞ ಹಿರಿಯರ ನಡೆಯನ್ನು ಪ್ರಶ್ನಿಸಿದ್ದಾರೆ. ತನ್ನ ಮೊದಲ ಸಂಕಲನದಲ್ಲಿ 'ಗಾಳಿಪಟ'ದಂತೆ ಸ್ವಚ್ಛಂದವಾಗಿ ಹಾರಾಡುತ್ತಿದ್ದ ಕವಿಯ ಮನಸ್ಸು 'ನನ್ನ ಸುತ್ತಲಿನ ಜನರು'ವಿನಲ್ಲಿ ಗಂಭೀರವಾಗಿ ಬೆಳೆದು ಸುತ್ತಣ ಜಗತ್ತಿನ ಒಳಹೊರಗನ್ನು ಅರಿಯುವ ಹಂಬಲ, ಸಮಾಜದ ಓರೆಕೋರೆಗಳನ್ನು ನಿರ್ಭಿಡೆಯಿಂದ ಹೇಳುವ ಛಾತಿಯನ್ನು ಬೆಳೆಸಿಕೊಂಡಿದ್ದಾರೆ.

ಅಪ್ಪ/ಲೂನಾದ ಮೇಲೆ/ಕುಳಿತು ಹೋಗುವಾಗ/ಗಣಪತಿ /ಇಲಿಯ ಮೇಲೆ /ಕೂತು ಹೋಗುವಂತೆ /ಕಾಣುತ್ತಾನೆ (ಅಪ್ಪ ಮತ್ತು ಗಣಪತಿ) ಎಂದು ಕವಿತಂದೆ ಜಿ. ಬಿ. ವಿಸಾಜಿಯವರನ್ನು ವಿಡಂಬಿಸುವ ಅಂದಿನ ಬಾಲಕ ವಿಕ್ರಮನದು ಸಹಜ ಕಾವ್ಯಪ್ರತಿಭೆ. ಮಕ್ಕಳಿಗಾಗಿ ಹಿರಿಯರು ಪ್ರಜ್ಞಾಪೂರ್ವಕವಾಗಿ ಬರೆಯುವದಕ್ಕೂ, ಮಕ್ಕಳೇ ತಮಗಾಗಿ ಬರೆದುಕೊಳ್ಳುವದಕ್ಕೂ ಇರುವ ವ್ಯತ್ಯಾಸ ಯಾವಾಗಲೂ ಕುತೂಹಲ ಹುಟ್ಟಿಸುವಂತದು. ಹಾಗೆ ಮುಗ್ಧವಾಗಿ ಕೇವಲ ಬೆರಳೆಣಿಕೆಯಷ್ಟು ಬರೆಯುವ ಶಿಶುಕವಿಗಳ ಕಾಲದಲ್ಲಿಯೇ ಎರಡು ಸಂಕಲನ ಪ್ರಕಟಿಸಿದವರು ವಿಕ್ರಮ ವಿಸಾಜಿಯವರು.

೧) ಅಂಗಡಿಯಿಂದ ಕೊಂಡುತಂದೆನು
ನಾನು ಒಂದು ಗಾಳಿ ಪಟ
ಆಕಾಶದ ಬಯಲಲಿ ಹಕ್ಕಿಯಂತೆ
ಹಾರಿಸಿಬಿಟ್ಟೆನು ಮೇಲಕೆ ಪಟಪಟ (ಗಾಳಿಪಟ ಕವಿತೆ ಮತ್ತು ಸಂಕಲನದ ಶೀರ್ಷಿಕೆ)

೨) ನಾನು ಬರೆಯುತ್ತೇನೆ
ಕಲ್ಲಿನಂಥ ಮನಸ್ಸುಗಳನ್ನು ಕರಗಿಸುವುದಕ್ಕಾಗಿ
ನಾನು ಬರೆಯುತ್ತೇನೆ
ದುಃಖಿತರ ಮನಸ್ಸಿನ ಶಾಂತಿಗಾಗಿ
(ನಾನು ಏಕೆ ಬರೆಯುತ್ತೇನೆ?– ನನ್ನ ಸುತ್ತಲಿನ ಜನರು)

ಇವೆರಡು ಕವಿತೆಗಳನ್ನು ಗಮನಿಸಿದರೆ ಒಂದು ಮಗು ಬೌದ್ಧಿಕವಾಗಿ ಬೆಳೆಯುವ ರೀತಿ ಸ್ಪಷ್ಟವಾಗುತ್ತದೆ. ಆಟೋಟದಲ್ಲಿ ಮುಳುಗಿಹೋದ ಮಕ್ಕಳು ದಿನಗಳೆದಂತೆ ಅನುಭವದ ಪರಿಧಿ ಹಿಗ್ಗಿ ಬದುಕಿನ ವಾಸ್ತವತೆಗಳಿಗೆ ಪ್ರತಿಸ್ಪಂದಿಸುವ ಗುಣವನ್ನು ಬೆಳೆಸಿಕೊಳ್ಳುತ್ತಾರೆ. ಬೌದ್ಧಿಕತೆಯೊಂದಿಗೆ ಬದ್ಧತೆಯೂ ಕ್ರಮೇಣ ಬೆಳೆದು ಮಗು ಜವಾಬ್ದಾರಿಯ ಮಾತನ್ನು ಆಡಲು ರೂಢಿಸಿಕೊಳ್ಳುತ್ತದೆ. ಗಾಳಿಪಟ ಆಡುವ ವಿಕ್ರಮ, ನಾನೇಕೆ ಬರೆಯುತ್ತೇನೆ? ಎಂದು ತನ್ನನ್ನು ತಾನು ಪ್ರಶ್ನಿಸಿಕೊಳ್ಳುವ

ಹಂತಕ್ಕೇರುತ್ತಾನೆ. ಅದು ಸೃಜನಶೀಲ ಬದ್ಧತೆಯಾಗಿ ಇಂದಿನ ವಿಕ್ರಮನಲ್ಲೂ ಕಂಡುಬರುವುದನ್ನು ನೋಡಿದ್ದೇವೆ. ಹಾಗಾದರೆ ಮಗು ಬೆಳೆಯುವ ವಿಕಾಸದ ಪರಿಯಾದರೂ ಎಂಥದ್ದು?

ಇದಕ್ಕೆ ಅನುವಂಶೀಯ ವಿಜ್ಞಾನದಲ್ಲಿ ಉತ್ತರವಿದೆ. ಸರಳ ಸೂತ್ರ ಹೀಗಿದೆ,

P=G+E, ಇಲ್ಲಿ

P-Phenotype (ಬಾಹ್ಯ ರೂಪ ಮತ್ತು ಗುಣಸ್ವಭಾವ)

G- Genotype (ಅನುವಂಶೀಯವಾಗಿ ಬಂದ ವಂಶವಾಹಿನಿ–ಜೀನ್ಸ್)

E= Environment (ಮಗು ಬೆಳೆಯುವ ಪರಿಸರ)

ಇಂದು ನಮ್ಮ ಮುಂದೆ ಕಾಣುತ್ತಿರುವ ಮಗು ಅರ್ಧ ಅನುವಂಶೀಯವಾಗಿ ಹರಿದು ಬಂದ ರಕ್ತಗತ ಗುಣವಾಗಿದ್ದರೆ, ಇನ್ನರ್ಧ ತಾನು ಬೆಳೆದ ಪರಿಸರದಿಂದ ಪಡೆದ ಗುಣಸ್ವಭಾವಗಳ ಮೊತ್ತ. ಇದರಿಂದ ಒಂದು ವಿಷಯ ಸ್ಪಷ್ಟವಾಗಬೇಕು. ಯಾವ ದೃಷ್ಟಿಯಿಂದ ನೋಡಿದರೂ ಇಂದು ನಮ್ಮ ಮಗು ಮಾಡುವ ತಪ್ಪಿಗೆ ಸ್ವತಃ ಮಗು ಕಾರಣವಲ್ಲ. ಹಾಗಾಗಿ ಅದು ಶಿಕ್ಷೆಗೆ ಅರ್ಹವಲ್ಲ. ತಿದ್ದುಪಡಿಗೆ ಮಾತ್ರ ಅರ್ಹ. ಮಗುವಿನ ಸರ್ವತೋಮುಖ ವಿಕಾಸವನ್ನು ಬಯಸುವವರು ತಾವೇನಾಗಿದ್ದಾರೆ, ತಮ್ಮ ಪರಿಸರ ಏನಾಗಿದೆ ಎಂಬುದನ್ನು ನೋಡಿಕೊಳ್ಳಬೇಕಾಗುತ್ತದೆ. ಇದು ಕೇವಲ ಸಾಹಿತ್ಯಕ್ಕೆ ಸಂಬಂಧಿಸಿದ್ದಲ್ಲ. ಬದಲಾಗಿ ಜೀವನಕ್ಕೆ ಸಂಬಂಧಿಸಿದ ವಿಷಯವಾಗಿದೆ.

ಇಂದು ಆ ಬಾಲಕ ವಿಕ್ರಮ, ವಿಸಾಜಿಯಾಗಿ ಬೆಳೆದು 'ನೀವೇಕೆ ಕತ್ತಲ ಕಡೆಗೆ', 'ತಮಾಷಾ'ದಂಥ ಕಾವ್ಯ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿ 'ಶ್ರೀವಿಜಯ' ಪ್ರಶಸ್ತಿ ಪಡೆಯುವಷ್ಟು ತನ್ನ ಜಗತ್ತನ್ನು ಹಿಗ್ಗಿಸಿಕೊಳ್ಳುತ್ತಾನೆ.

***

ತೊಟ್ಟಿಲಲ್ಲಿ ನನ್ನ ತಂಗಿ
ಆಟವಾಡುತ್ತಿದ್ದಳು
ತೊಟ್ಟಿಲಿಗೆ ಗೆಜ್ಜೆ ಕಾಲು
ಬಡಿದು ಬಡಿದು ನಕ್ಕಳು
ಅವಳ ನಗುವ ಕಂಡ ನಾವು
ನಮ್ಮ ನೋವು ಮರೆತೆವು
ಅವಳ ನಗುವ ತುಟಿಯ ಕಂಡು
ಬೆರೆತು ಮರೆತು ಹೋದೆವು (ನನ್ನ ತಂಗಿ–ಹಕ್ಕಿಗೂಡು)

ಮಗು ತೊಟ್ಟಿಲಿಗೆ ಕಾಲು ಬಡಿಯುವಾಗ ಹೊರಡುವ ಗೆಜ್ಜೆಸದ್ದು! ಆಹಾ... ಒಮ್ಮೆ ಹಾಗೆ ಕಲ್ಪಿಸಿಕೊಂಡರೆ ಎಂಥ ಚಿತ್ರಗಳು ಕಣ್ಣಮುಂದೆ ಬರಬಹುದು? ಎಂಥ ಭಾವನೆಗಳು ಮನದಲ್ಲಿ ಮಿಂಚಿ ಮರೆಯಾಗಬಹುದು? ಇದು ಖಂಡಿತವಾಗಿಯೂ ನಮ್ಮ ನೋವನ್ನು ಕೆಲವು ಕ್ಷಣವಾದರೂ

ಮರೆಸುವ ಸನ್ನಿವೇಶ. ಜೀವನಾಯುಷ್ಯವನ್ನು ಎರಡು ನಿಮಿಷವಾದರೂ ಹೆಚ್ಚಿಸುವ ಭಾವಸಂದರ್ಭ. ಅದಕ್ಕೆ ಹೇಳುವುದು ಎಷ್ಟೋ ಸಲ ಒಂದು ವಸ್ತುವಿಗಿಂತ ಆ ವಸ್ತುವನ್ನು ಕುರಿತಾದ ಕವಿತೆ ನಮ್ಮನ್ನು ಹೆಚ್ಚು ಗಾಢವಾಗಿ ಪ್ರಭಾವಿಸಬಲ್ಲದು. ಯಾರು ಈ ಬಾಲಕವಿ?

ಈ ಪೃಥ್ವಿಯಲ್ಲಿ ಕಣ್ತೆರೆದ ಮರುಗಳಿಗೆಯಿಂದ ಅಪ್ಪಟ ಸಾಹಿತ್ಯಕ ವಾತಾವರಣದಲ್ಲಿ ಚಿಗುರೊಡೆದ ಮತ್ತೊಂದು ಕಾವ್ಯಪ್ರತಿಭೆ ಪೃಥ್ವಿ ವಕ್ಕುಂದ. ತನ್ನಷ್ಟಕ್ಕೆ ತಾನು ಆಡುತ್ತ ಉಲಿದ ಸಾಲುಗಳು 'ಕವಿತೆ' ಎಂಬುದು ತಿಳಿಯುವ ಮುನ್ನವೇ ಕವಿಯಾದವಳು ಪೃಥ್ವಿ. ಹಾಗಾಗಿ ಆಕೆ ಹುಟ್ಟುಪ್ರತಿಭೆ ಮತ್ತು ಬೆಳೆದ ಪ್ರತಿಭೆ.

ಭಾವನಾತ್ಮಕ ಸಂಬಂಧ ಪ್ರತಿ ಕ್ಷಣದಲ್ಲೂ ಸಾಧ್ಯವಾಗುವುದರಿಂದ ಎಲ್ಲ ಮಕ್ಕಳು ಕವಿಗಳು. ತಂಗಿಯ ಕಾಲಿನ ಗೆಜ್ಜೆಸದ್ದಿಗೆ ಪೃಥ್ವಿಯ ಕಣ್ಣುಗಳು ಮಿಂಚಿದವಲ್ಲ, ಹೀಗೆ ಲಯಕ್ಕೆ ಚುರುಕಾದ ಕಿವಿಯುಳ್ಳವರು ಕವಿಗಳು. ಏಳು ವರ್ಷದವಳಿದ್ದಾಗಿನಿಂದ ತನ್ನ ಮನಸ್ಸಿನ ಭಾವಸ್ಪಂದನೆಗಳನ್ನು ಕವಿತೆಯಾಗಿಸುತ್ತ ಬಂದಿರುವ ಪೃಥ್ವಿ ತಾನು ಹೆಚ್ಚಾಗಿ ಅಮ್ಮ, ಸೂರ್ಯ, ಚುಕ್ಕಿ ಕುರಿತಾಗಿ ಬರೆದಿದ್ದೇನೆ ಅಂತ ಹೇಳಿಕೊಂಡಿದ್ದಾಳೆ. ಅದು ಸಹಜ. ಕಲ್ಪನೆಯೇ ಕಾವ್ಯದ ಮೂಲಧಾತು. ಒಂದು ಮಗುವಿನ ಕಲ್ಪನಾಲೋಕದ ವಿಸ್ತಾರವನ್ನು ಅಳೆಯಲು ಸಾಧ್ಯವಿಲ್ಲ. ಹಾಗಾಗಿ ಆಕೆ ಬೇರೆ ಸಂಗತಿಗಳ ಬಗ್ಗೆಯೂ ಸಾಕಷ್ಟು ಬರೆಯಬಲ್ಲಳು. ಬರೆದಿದ್ದಾಳೆ ಕೂಡ. ಕೆಳಗಿನ ಸಾಲುಗಳನ್ನು ಗಮನಿಸಿ

ಗಿಡಮರಗಳು ಕಡಿದರು
ಸಿಗುತ್ತಿಲ್ಲ ಹಣ್ಣು
ಸ್ವಲ್ಪ ದಿನ ತಡೆದರೆ
ಗುಡ್ಡವಿನ್ನು ನೆಲಸಮ.
ಹೀಗೆ ಕಾಲ ಕಳೆದರೆ
ಅದ್ಭುತವೊಂದು ನೆಲಸಮ (ನೆಲಸಮ)

ಮನೆಯ ಎದುರಿನ ಗುಡ್ಡವೊಂದು ತಾನು ನೋಡುತ್ತಿದ್ದಂತೆ ನೆಲಸಮವಾಗುವ ರೀತಿಯನ್ನು ಮಗು ಪರಿಭಾವಿಸುವ ಬಗೆಯನ್ನು ಮಗುವಿನ ಬಾಯಿಂದಲೇ ಕೇಳಿದ ಶಬ್ದಗಳಿವು. ಮಕ್ಕಳು ಯಾವಾಗಲೂ ಗಿಡ–ಮರ, ಹಕ್ಕಿ–ಚುಕ್ಕಿ, ಅಪ್ಪ–ಅವ್ವ, ಸೂರ್ಯ–ಚಂದ್ರ, ಕುರಿತಂತೆಯೇ ಬರೆಯುತ್ತಾರೆಂದಲ್ಲ. ತಮ್ಮ ಇಂದ್ರಿಯಗಳಿಗೆ ಗೋಚರವಾಗುವ processನ್ನೂ ಗಮನಿಸುತ್ತಾರೆ. ಅದು ವಿನಾಶಕಾರಿ ಪ್ರಕ್ರಿಯೆಯಾಗಿದ್ದರೆ ಸೂಕ್ಷ್ಮ ಮನಸ್ಸಿನಲ್ಲಿ ಎಬ್ಬಿಸುವ ತಲ್ಲಣಗಳಿಗೆ 'ನೆಲಸಮ' ಕವನ ಸಾಕ್ಷಿ. ಮಕ್ಕಳು ಏನು ಬರೆಯಬಲ್ಲರು? ಹೇಗೆ ಬರೆಯಬಲ್ಲರು? ಎನ್ನುವುದಕ್ಕಿಂತ ಎಲ್ಲ ಮಕ್ಕಳು ಏಕೆ ಬರೆಯುವುದಿಲ್ಲ ಎಂಬುದು ಉಚಿತ ಪ್ರಶ್ನೆಯಾದೀತು. ಪೃಥ್ವಿಯ ತಂಗಿ ನಭ ಕೂಡ ಅಕ್ಕನ ಅಂಗಳದಲ್ಲಿ ಅಕ್ಕರೆಯ ರಂಗೋಲಿ ಹಾಕುತ್ತಿದ್ದಾಳೆ. ಇದನ್ನೇ ಸಾಹಿತ್ಯಕ ಪರಿಸರ ಎನ್ನುವುದು.

***

ಬರಹಗಾರ್ತಿ ಡಾ. ಚೆನ್ನಕ್ಕ ಪಾವಟೆಯವರ ಮಗಳು ಚಿನ್ಮಯಿ ಪಾವಟೆ ೮ನೇ ವರ್ಗದಲ್ಲಿ ಓದುತ್ತಿರುವಾಗ 'ಅರಳುತಿದೆ ಹೂವು' ಕವನ ಸಂಕಲನವನ್ನು ಪ್ರಕಟಿಸಿದ್ದಾಳೆ. ಸಾಧನಕೇರಿಯ ಬೇಂದ್ರೆ ಪರಿಸರದಲ್ಲಿ ಅರಳಿದ ಕಾವ್ಯದ ಹೂವು ಸ್ವತಃ ಚಿನ್ಮಯಿ, 'ಚಿಟ್ಟೆ ಚಿಟ್ಟೆ/ ಸುಂದರ ಚಿಟ್ಟೆ/ ಎಲ್ಲಿ ಕೊಂಡೆ/ಈ ಹೊಸ ಬಟ್ಟೆ?' ಎಂದು ಬರೆದು ಕೇಳುಗರಲ್ಲಿ ಬೆರಗನ್ನು ಹುಟ್ಟಿಸುತ್ತಾಳೆ. ಮಕ್ಕಳು ನಿಸರ್ಗವನ್ನು ತಮ್ಮ ಮನೋಭೂಮಿಕೆಯಲ್ಲಿಟ್ಟು ಹೇಗೆ ನೋಡಬಲ್ಲರು ಎಂಬುದಕ್ಕೆ ಈ ಪುಟ್ಟ ಸಾಲು ಸಾಕ್ಷಿ. 'ಪರೀಕ್ಷೆಯೆಂಬ ಯುದ್ಧ'ದಲ್ಲಿ ಈ ಹಸುಳೆ, 'ತಯಾರಾಗಿ ಪರೀಕ್ಷೆಗೆ/ರಣರಂಗದ ಅಂತಿಮ ಯುದ್ಧಕ್ಕೆ/ಯುದ್ಧ ಮಾಡಿರಿ ಛಲದಲಿ/ಓದೇ ನಿಮ್ಮ ಶಸ್ತ್ರವಾಗಿರಲಿ॥' ಎಂದು ಪರೀಕ್ಷೆಯನ್ನು ಯುದ್ಧಕ್ಕೆ ಹೋಲಿಸಿದ್ದಾಳೆ. ಯುದ್ಧವೆಂದ ಮೇಲೆ ಶತ್ರುಗಳು ಇರಲೇ ಬೇಕಲ್ಲ. ಹಾಗಾಗಿ ಕೊನೆಗೆ ಹೇಳುತ್ತಾಳೆ, ಪ್ರಶ್ನೆ ಪತ್ರಿಕೆಗಳ ಶತ್ರುಗಳನ್ನು/ ಧೈರ್ಯಗೆಡದೇ ಬಿಡಿಸಿರಿ/ ನಿಮ್ಮ ಜ್ಞಾನದಿಂದಲೇ ನಿಮ್ಮೀ/ ಯುದ್ಧದಲ್ಲಿ ಜಯ ಗಳಿಸಿರಿ ॥'

ಓದು ಜ್ಞಾನವನ್ನು ಶಸ್ತ್ರಾಸ್ತ್ರಗಳಿಗೂ, ಪ್ರಶ್ನೆ ಪತ್ರಿಕೆಗಳನ್ನು ಶತ್ರುಗಳಿಗೂ ಸಮೀಕರಿಸಿ ಹೇಳಿರುವುದು ಯುದ್ಧದ ದೃಷ್ಟಿಯಿಂದ ಸರಿಯಿರಬಹುದು. ಆದರೆ ಅದೇ ಪರೀಕ್ಷೆಯನ್ನು ಕ್ರೀಡೆಗೆ ಹೋಲಿಸಿದ್ದರೆ ಅಲ್ಲಿ ಶತ್ರು ಇರುತ್ತಿರಲಿಲ್ಲ, ಬದಲಾಗಿ ಎದುರಾಳಿ ಇರುತ್ತಿದ್ದ. ಯುದ್ಧದಲ್ಲಿ ಸೋಲೆಂದರೆ ಸಾವು, ಇಲ್ಲವೇ ಶರಣಾಗತಿ. ಆಟದಲ್ಲಿ ಸೋಲೆಂದರೆ ಮತ್ತೊಂದು ಆಟಕ್ಕೆ ಛಲದಿಂದ ಅಣಿಗೊಳ್ಳುವಿಕೆ. ನೀನು ಕವಿತೆಯನ್ನು ಹಾಗೆ ಬರೆಯಬೇಕಾಗಿತ್ತು ಎಂದು ಮಗುವಿನಲ್ಲಿ ಹೇಳಲಾಗುವುದಿಲ್ಲ. ಮಗು ಪರೀಕ್ಷೆಯನ್ನು ಕ್ರೀಡೆಯಂತೆ ಎದುರಿಸುವ ಮನೋಧರ್ಮವನ್ನು ಶಿಕ್ಷಕರು, ಪಾಲಕರು ಬೆಳೆಸಬೇಕಾಗಿದೆ. ಕ್ರೀಡೆಗೆ umpire ಇದ್ದಾನೆ, ಯುದ್ಧದಲ್ಲಿಲ್ಲ. ಕ್ರೀಡೆಯ ಕುರಿತಾಗಿ ಮಾತನಾಡುವ ಭಾಷೆಯಲ್ಲೂ ಸುಧಾರಣೆಯಾಗಬೇಕಿದೆ. 'ಪಾಕಿಸ್ತಾನವನ್ನು ಮಣ್ಣು ಮುಕ್ಕಿಸಿದ ಭಾರತ' ಎಂದು ಕ್ರಿಕೆಟ್ ಕುರಿತಾದ ಸುದ್ದಿ ಪ್ರಕಟವಾಗುತ್ತದೆ. ಚಿಕ್ಕ ಮಕ್ಕಳೇನಾದರೂ ಅದನ್ನು ಕೇಳಿದರೆ, ಅವರು ಕ್ರಿಕೆಟ್ ವಿಷಯವನ್ನು ಬದಿಗಿರಿಸಿ, ಪಾಕಿಸ್ತಾನವನ್ನು ಮಣ್ಣು ಮುಕ್ಕಿಸುವ ಗುರಿಯೆಡೆಗೆ ತಮ್ಮ ಲಕ್ಷ್ಯವನ್ನು ಹರಿಸುವ ಅಪಾಯವಿದೆ. ಇದನ್ನೆಲ್ಲ ದೊಡ್ಡವರಿಗಾಗಿ ಹೇಳುತ್ತಿದ್ದೇನೆ, ಮಕ್ಕಳಿಗಲ್ಲ. ಬರೆಯುವ ಬಹುತೇಕ ಮಕ್ಕಳದು ಕಚ್ಚಾಭಾಷೆ (ಭಾಷೆಯೆಂದರೆ ವ್ಯಾಕರಣ-ಛಂದಸ್ಸು ಹಿನ್ನೆಲೆಯಿಂದ ಹೇಳುತ್ತಿಲ್ಲ, ಯೋಚನಾಕ್ರಮದ ಭಾಷೆ). ಹಾಗಾಗಿ ಅನೇಕ ಮಕ್ಕಳ ಕವಿತೆಗಳಲ್ಲಿ ತಾಳಮೇಳವಿಲ್ಲದ ಸಾಲುಗಳು-ಶಬ್ದಗಳು ಬಂದುಬಿಡುತ್ತವೆ. ಅದನ್ನು ವಿಮರ್ಶಿಸುವ ಅವಶ್ಯಕತೆಯಿಲ್ಲ. ಅವರಲ್ಲಿ ಬರೆಯಬೇಕೆಂಬ ತುಡಿತವಿದ್ದರೆ, ಅದಕ್ಕೆ ಬೇಕಾದ ವಾತಾವರಣ ನಿರ್ಮಿಸುವದಷ್ಟೇ ನಮ್ಮ ಕೆಲಸ.

'ಉಪಾಯ ಬಂದವನಿಗೆ ಅಪಾಯವಿಲ್ಲ' ಎನ್ನುವ ಒಂದು ರೀತಿಯ ಕಥನ ಕಾವ್ಯವನ್ನು ಚಿನ್ಮಯಿ ಬರೆದಿದ್ದಾಳೆ. 'ಅರುಳುತಿದೆ ಹೂವು' ಕವನದ ಸಾಲುಗಳು ಹೀಗಿವೆ,

ಅರಳುತಿದೆ ಹೂವು
ನಿನ್ನೆ ತಾನೆ ತಾಯಿ ಮಡಿಲಿನ ಜೋಗುಳಕ್ಕೆದ್ದು
ಕಂಪು ಸೂಸುತ ಹಾಡಿ
ಅರಳುತಿದೆ ಹೂವು ॥

***

ಪ್ರಸ್ತುತ ಲೇಖನಕ್ಕೆ ವಿಷಯಗಳನ್ನು ಸಂಗ್ರಹಿಸುತ್ತ ಹೋದಂತೆ ನನಗೊಂದು ಅದ್ಭುತ ಲೋಕದ ಪರಿಚಯವಾಯಿತು. ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲೂಕಿನ ಪುಟ್ಟ ಗ್ರಾಮ ಕನ್ನಮಂಗಲದಲ್ಲಿ ನಡೆದ ಪ್ರಯೋಗದ ಬಗ್ಗೆ ನಾನೆಷ್ಟು ಹೇಳಿದರೂ ಕಡಿಮೆಯೇ. ಆ ಗ್ರಾಮದ ಸರಕಾರಿ ಶಾಲೆಯ ಶಿಕ್ಷಕ ಎಸ್. ಕಲಾಧರ, ಚಿಗುರು ಮೀಸೆಯ ಕಾರ್ಯಪಡೆ–ಸ್ನೇಹ ಯುವಕರ ಸಂಘದೊಂದಿಗೆ ಸೇರಿಕೊಂಡು ತಮ್ಮ ಕರ್ತೃತ್ವದ ಸಾಧ್ಯತೆಯನ್ನೇ ಪರೀಕ್ಷಿಸುತ್ತಿದ್ದಾರೆ. ಸರಕಾರಿ ಶಾಲೆಗಳ ಬಗೆಗಿರುವ ನನ್ನ ಮನದ ಮೂಲೆಯೊಳಗಿನ ಪ್ರೀತಿ ಇಂಥ ಕಾರಣಗಳಿಗಾಗಿ ಸವೆದು ಹೋಗದ ಪಟುತ್ವದಂತೆ ಹೊಳೆಯುತ್ತಿರುತ್ತದೆ. ಅಲ್ಲಿರುವ ಅವ್ಯವಸ್ಥೆಗಳ ಬಗ್ಗೆ ಸಾಕಷ್ಟು ಚರ್ಚೆಯಾಗುತ್ತಿರುತ್ತದೆ. ಆದರೆ ಸರಿಯಾದ ಸೌಲಭ್ಯಗಳಿಲ್ಲದ ಹಳ್ಳಿಗಾಡಿನಲ್ಲಿ ಬದ್ಧತೆಯಿಂದ ದುಡಿಯುವ ಶಿಕ್ಷಕರನ್ನೂ ನೋಡುತ್ತಿದ್ದೇವೆ. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಅವರ ಪಾತ್ರ ಗಣನೀಯವಾದದ್ದು. ಪ್ರತಿ ಹಳ್ಳಿಯ ಶಾಲೆಯಲ್ಲಿ ಒಬ್ಬೊಬ್ಬ ಕಲಾಧರ ಇದ್ದರೆ, ನಮ್ಮ ಹಳ್ಳಿಯ ಶಾಲೆಗಳ ಸ್ಥಿತಿಗತಿ ಈಗ ನಾವು ನೋಡುತ್ತಿರುವಷ್ಟು ಶೋಚನೀಯವಾಗಿಯಂತೂ ಇರುವುದಿಲ್ಲ. ಏನವರ ಸಾಧನೆ?

ಅವರು ಕನ್ನಮಂಗಲದ ಸರಕಾರಿ ಶಾಲೆಯ ಮಕ್ಕಳ ಸೃಜನಶೀಲ ಶಕ್ತಿಯನ್ನು ಕೆಣಕಿ, ಅವರಿಂದ ಅನಿಸಿದ್ದನ್ನು ಬರೆಯಲು ವೇದಿಕೆಯನ್ನು ನಿರ್ಮಿಸಿದ್ದಾರೆ. ಹಾಗೆ ಅರಳಿದ ತಾಜಾ ತಾಜಾ ಹೂಗಳನ್ನು ಸೇರಿಸಿ ಸುಂದರವಾದ ಮಾಲೆಯನ್ನು ಕಟ್ಟಿದ್ದಾರೆ. ಮಕ್ಕಳು ಗೀಚಿದ ನಾನಾ ಸಂಗತಿಗಳನ್ನು ಒಗ್ಗೂಡಿಸಿ 'ಶಾಮಂತಿ' ಸರಣಿಯನ್ನು ೨೦೧೦ರಿಂದ ಪ್ರತಿ ವರ್ಷ ಪ್ರಕಟಿಸುತ್ತ ಬರುತ್ತಿದ್ದಾರೆ. ಕಲಾಧರ ಅವರನ್ನು ಒಳಗೊಂಡಂತೆ ಶಾಲೆಯ ಶಿಕ್ಷಕರು ಹಾಗೂ ಗ್ರಾಮದ ಸ್ನೇಹ ಯುವಕರ ಸಂಘದ ಉತ್ಸಾಹಿ ಸದಸ್ಯರು ಈ ಕೆಲಸವನ್ನು ಶ್ರದ್ಧೆ ಪ್ರೀತಿಯಿಂದ ನಡೆಸಿಕೊಂಡು ಬರುತ್ತಿದ್ದಾರೆ.

'ಶಾಮಂತಿ' ಎಂದರೆ ಸೇವಂತಿಗೆ ಹೂವಿಗಿರುವ ಕೋಲಾರ ಭಾಗದ ಪ್ರಾದೇಶಿಕ ಪದ. ಇದು ನೆಲದ ಗುಣವನ್ನು ಧ್ವನಿಪೂರ್ಣವಾಗಿ ಹೇಳುವುದರಿಂದ ಮಕ್ಕಳ ತೋಟದಲ್ಲಿ ಅರಳಿದ ಹೂಗುಚ್ಛವನ್ನೇ ಪ್ರತಿನಿಧಿಸುತ್ತದೆ.

೨೦೧೦ ರ ಶಾಮಂತಿಯಲ್ಲಿ ಮೂರರಿಂದ ಎಂಟನೇ ವರ್ಗದವರೆಗಿನ ಮಕ್ಕಳು ತಮಗೆ ತೋಚಿದ್ದನ್ನೆಲ್ಲ ಗೀಚಿಕೊಂಡಿದ್ದಾರೆ. ಮನಸೋ ಇಚ್ಛೆ ಮಾತನಾಡಿದ್ದಾರೆ. ಬಹುಶಃ ಸಂಪಾದಕರು ಅದನ್ನು ಸೋಸುವ ಗೊಡವೆಗೆ ಹೋಗಿಲ್ಲ. ಅದರ ಅವಶ್ಯಕತೆಯೂ ಇಲ್ಲ. ಕೆಲವರು ಕವಿತೆ, ಕೆಲವರು ಕತೆ, ಮತ್ತಿತರರು ಘಟನೆ, ಅನುಭವ, ತಮ್ಮ ಪ್ರಿಯವಾದ ವಸ್ತುಗಳು, ಸಂಬಂಧಗಳು ಜೊತೆಗೆ ತರಹೇವಾರಿ ಚಿತ್ರಗಳು ಹೀಗೆಯೇ ಅಂತ ಅಲ್ಲ, ಹೇಗೆಂದರೆ ಹಾಗೆ ಬರೆದುಕೊಂಡಿದ್ದಾರೆ.

'ಸೂರ್ಯ ಮತ್ತು ಚಂದ್ರ' (ಕವಿತೆ), 'ನಮ್ಮ ಹೊಸ ಮನೆ' (ಲೇಖನ), 'ಹಸು ಮತ್ತು ಮನುಷ್ಯ' (ಕತೆ), 'ನನ್ನ ಅಣ್ಣನ ಹೆಸರು ನರೇಶ' (ಘಟನೆ), 'ಗೊರ್ ಗೊರ್ ಕೋತಿ' (ಅನುಭವ), 'ಚೇಪೇಕಾಯಿ ಮಾರಲು ಹೋಗಿದ್ದೆ' (ಅನುಭವ), 'ನಾನು' (ಕವಿತೆ), ಇಂಥ ಪಟ್ಟಿಗೆ ಕೊನೆಯೆಂಬುದೇ ಇಲ್ಲವೇನೋ ಅನಿಸುತ್ತದೆ. ತಮ್ಮ ಬರವಣಿಗೆಗೆ ಹೊಂದುವಂಥ ಚಿತ್ರಗಳನ್ನು ಮಕ್ಕಳು ಬಿಡಿಸಿದ್ದಾರೆ. ಕೆಲವು ಮಕ್ಕಳು ಪ್ರತಿದಿನ ಹೊಲ ಮನೆ ಕೆಲಸ ಮಾಡುವ

ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅವರ ಮುಗ್ಧ ಮಾತನ್ನು ಕೇಳಿದರೆ ಅವರು ಬಡವರ ಮನೆಯ ಮಕ್ಕಳೆಂದು ಯಾರಾದರೂ ಅರ್ಥ ಮಾಡಿಕೊಳ್ಳಬಹುದು. ಕೆಲಮಕ್ಕಳು ಬಹಳ ಕಷ್ಟಪಟ್ಟುಕೊಂಡೇ ಶಾಲೆಗೆ ಬರುತ್ತಾರೆಂದೆನಿಸುತ್ತದೆ. ಆದರೆ ಮಕ್ಕಳ ಪ್ರಪಂಚವೆಂಬುದು ಬಡವಾಗಿಲ್ಲ. ತಮ್ಮ ಅನಿಸಿಕೆಗಳನ್ನು ಉತ್ಸಾಹದಿಂದ ಹಂಚಿಕೊಳ್ಳುವಲ್ಲಿ ಅಪಾರ ಶ್ರೀಮಂತಿಕೆಯನ್ನು ಮೆರೆದಿದ್ದಾರೆ.

ಆರನೇ ತರಗತಿಯಲ್ಲಿ ಓದುವ ಚೇತನ ಎಂಬ ಹುಡುಗಿ ಬರೆದ 'ನಮ್ಮಜ್ಜಿ' ಎಂಬ ಲೇಖನವನ್ನು ಓದಿ:

'ನಮ್ಮಜ್ಜಿ ತುಂಬಾ ಕೆಟ್ಟೋಳು, ಏನಾದರೂ ಬೈಕೊಂತಾ ಇರ್ತಾಳೆ. ನಮ್ಮಜ್ಜಿ ಏನಾದ್ರೂ ಕೆಲಸ ಹೇಳಿದ್ರೆ ನಮ್ಮ ತಮ್ಮ ಕೆಲಸ ಮಾಡಿದ್ರೆ ಸಾಕು ಇವನೇ ಒಳ್ಳೆಯವನು ಅಂತಾಳೆ. ಒಂದೊಂದ್‌ಕಿತ್ತ ಅವನ ಮೇಲೆ ತಿರುಗಿಬೀಳ್ತಾಳೆ. ನಮ್ಮಜ್ಜಿ ಏನು ಕೆಲಸಾನೂ ಮಾಡಲ್ಲ. ಯಾವಾಗಲೂ ನಿದ್ದೆ ಮಾಡ್ತಾ ಇರ್ತಾಳೆ. ನಮ್ಮಜ್ಜಿ ಇದ್ರೆ ಪಕ್ಕದ್ಮನೆಯಮ್ಮ ಬರ್ತಾಳೆ. ನಮ್ಮ ಅಜ್ಜೀಗೂ ಕೆಲಸ ಇರಲ್ಲ. ಆಯಮ್ಮನಿಗೂ ಕೆಲಸ ಇರಲ್ಲ. ಇಬ್ಬರೂ ನಮ್ಮ ಅಟ್ಟೀಯಲ್ಲಿ ಕುಳಿತುಕೊಂಡ್‌ಬಿಟ್ಟು ಸಾಯಂಕಾಲದವರೆಗೆ ಪುಂಗಾಣಿ ಹೇಳ್ತಾ ಇರ್ತಾರೆ. ಆಯಮ್ಮ ಹೋದ್‌ಮೇಲೆ ನಮ್ಮಜ್ಜಿ ಟಿ.ವಿ. ನೋಡ್‌ಕೊಂಡೇ ಇರ್ತಾಳೆ.'

ಇದನ್ನು ಓದಿ ನಾನು ಮನಸ್ವೀ ನಕ್ಕಿದ್ದೇನೆ. ಮಗು ಯಾವ ವಸ್ತು ಕುರಿತು ಬರೆಯುತ್ತದೆ ಎಂಬುದು ಮುಖ್ಯವಲ್ಲ. ತನಗೆ ಅನಿಸಿದ್ದನ್ನು ಹೇಗೆ ಅಡೆತಡೆಯಿಲ್ಲದೆ ಪ್ರಾಮಾಣಿಕವಾಗಿ ಹೇಳುತ್ತದೆಯನ್ನುವುದು ಮುಖ್ಯ. ಇದನ್ನು ಕೇಳಿದ ಅಜ್ಜಿ ಕೂಡ ನಿಸ್ಪೃಹತೆಯಿಂದ ನಕ್ಕರೆ ಆ ಹುಡುಗಿಯ ಮನಸ್ಸು ಪುಟಕ್ಕಿಟ್ಟ ಬಂಗಾರದಂತೆ ಹೊಳೆಯುತ್ತದೆ. ಹುಡುಗಿ ಅಜ್ಜಿಯ ಬಗ್ಗೆ ಯೋಚಿಸುವ ಧಾಟಿಯನ್ನು ಕ್ರಮೇಣ ಬದಲಿಸಿಕೊಳ್ಳುತ್ತಾಳೆ. ಮಕ್ಕಳನ್ನು ಬೆಳೆಸುವುದೂ ಒಂದು ಕಲೆ.

'ಶಾಮಂತಿ'ಯ ಕೊನೆಯಲ್ಲಿ 'ಪ್ರಶ್ನೆಗಳಿವೆ ನನ್ನೊಳಗೆ' ಎಂಬ ವಿಭಾಗದಲ್ಲಿ ಮಕ್ಕಳು ತಮಗೆ ಕಾಡುವ ಪ್ರಶ್ನೆಗಳನ್ನು ಮುಂದಿರಿಸಿದ್ದಾರೆ. ಅವು ದೊಡ್ಡವರನ್ನು ಗಲಿಬಿಲಿಗೀಡು ಮಾಡುವುದು ನಿಶ್ಚಿತ. ನಮ್ಮನ್ನು ಚಿಂತನೆಗೆ ಹಚ್ಚುವುದೂ ಅಷ್ಟೇ ಸತ್ಯ. ಪ್ರಶ್ನೆಗಳನ್ನು ನೋಡಿ,-

* ಗುರುಗಳು ಹೇಗಿರಬೇಕು?
* ಭಾನುವಾರ ಏಕೆ ರಜಾ ಕೊಡುತ್ತಾರೆ?
* ದೊಡ್ಡವರು ಮಕ್ಕಳನ್ನು ಏಕೆ ಹೊಡೆಯುತ್ತಾರೆ?
* ಮನುಷ್ಯ ಹೇಗೆ ತಯಾರಾಗುತ್ತಾನೆ?
* ನಾವು ದೇವರನ್ನು ಏಕೆ ಪೂಜಿಸುತ್ತೇವೆ?
* ಪೋಲೀಸರು ಏಕೆ ಬೇಕು?
* ಸೂರ್ಯ ನಕ್ಷತ್ರಗಳು ಹೇಗಾದವು?

* ಜನರಿಗೆ ಬಟ್ಟೆ ಏಕೆ ಬೇಕು?

* ವಿದ್ಯೆ ಏಕೆ ಕಲಿಯಬೇಕು?

* ಶಾಲೆಗಳನ್ನು ಯಾರು ಕಂಡುಹಿಡಿದರು?

ಇವರನ್ನು ಮಕ್ಕಳೆಂದು ಉಡಾಫೆ ಮಾಡಲಾದೀತೆ? ನಮಗೆ ಉತ್ತರ ಹೊಳೆಯದಿದ್ದರೆ ಇವನ್ನು ತರಲೆ ಪ್ರಶ್ನೆಗಳೆಂದು ತಳ್ಳಿ ಹಾಕಬಹುದೆ?

ಇಲ್ಲಿನ ಬಹಳಷ್ಟು ಬರಹಗಳಲ್ಲಿ ಮಕ್ಕಳ ದೃಶ್ಯ ಮೂಲಕ್ಕಿಂತ ಶಬ್ದ ಮೂಲದ ಗ್ರಹಿಕೆ ಎದ್ದು ಕಾಣುತ್ತದೆ. ಮಗುವಿನ ಒಟ್ಟು ಮಾನಸಿಕ ಬೆಳವಣಿಗೆಗೆ ಶಬ್ದಜ್ಞಾನ ಮತ್ತು ಬಿಂಬಜ್ಞಾನ ಎರಡೂ ಮುಖ್ಯವಾಗುತ್ತವೆ. ಸಾಮಾನ್ಯವಾಗಿ ಶಹರದ ಮಕ್ಕಳು ಗಿಡ–ಮರ, ಗುಡ್ಡ–ಬೆಟ್ಟ, ನದಿ–ಹಳ್ಳ, ಹಕ್ಕಿ– ಪುಕ್ಕ, ಹೂ–ಹಣ್ಣು, ಅಜ್ಜ–ಅಜ್ಜಿ ಎಂಬ ಶಬ್ದಗಳನ್ನು ತಮ್ಮ ಪಠ್ಯದ ಭಾಗವಾಗಿ ಮೇಲಿಂದ ಮೇಲೆ ಕೇಳುತ್ತಾರೆ. ಆದರೆ ಅನೇಕ ಸಂದರ್ಭದಲ್ಲಿ ಆ ವಸ್ತುಗಳು ಅವರಿಗೆ ನೋಡಲು ಕೂಡ ಸಿಗಲಿಕ್ಕಿಲ್ಲ. ಅಂದರೆ ಅವರು ಶಬ್ದಜ್ಞಾನ ಪಡೆದು ಬಿಂಬಜ್ಞಾನದಿಂದ ವಂಚಿತವಾಗುತ್ತಾರೆ. ಗ್ರಾಮೀಣ ಪರಿಸರದ ಮಕ್ಕಳಿಗೆ ಈ ಸಮಸ್ಯೆಯಿಲ್ಲ. ಆಧುನಿಕ ಸೌಲಭ್ಯಗಳ ಕೊರತೆಯಿರಬಹುದಾದರೂ ಈ ಮಕ್ಕಳಿಗೆ ಗುರುರಹಿತ ಸ್ವಯಂ ಕಲಿಕೆಯ ಅವಕಾಶವಿದೆ. ಆದ್ದರಿಂದ ಅವರ ಕಲಿಯುವ ಸಾಮರ್ಥ್ಯ ಹೆಚ್ಚುತ್ತ ಹೋಗುತ್ತದೆ. ಆದರೆ ಅದು ಶೈಕ್ಷಣಿಕ ಸಾಧನೆ(Academic Performance)ಯಾಗುವ ವ್ಯವಸ್ಥೆ ನಮ್ಮ ಶಿಕ್ಷಣ ಪದ್ಧತಿಯಲ್ಲಿಲ್ಲ.

ಮುಂದೆ ಕಲಾಧರವರು 'ಶಾಮಂತಿ ೨' (೨೦೧೧) 'ಶಾಮಂತಿ ೩' (೨೦೧೨) ಹೊತ್ತಿಗೆಗಳನ್ನು ತುಂಬಾ ಆಕರ್ಷಕ ವಿನ್ಯಾಸದೊಂದಿಗೆ ಪ್ರಕಟಿಸಿದ್ದಾರೆ. ಮೂರೂ ಸಂಚಿಕೆಗಳಿಗೆ ಆದಿಮದ ಕೋಟಿಗಾನಹಳ್ಳಿ ರಾಮಯ್ಯನವರ ದೀರ್ಘ ಮತ್ತು ವಿಶ್ಲೇಷಣಾತ್ಮಕ ಪ್ರಸ್ತಾವನೆಗಳಿವೆ. ಈ ಸಂಚಿಕೆಗಳು ಒಂದು ರೀತಿಯಲ್ಲಿ 'ಕೂಳೆ' ಬೆಳೆಯಿದ್ದಂತೆ. ಒಮ್ಮೆ ಬಿತ್ತಿದ ಬೆಳೆಯ ಬೇರನ್ನು ನೆಲದಲ್ಲೇ ಉಳಿಯಲು ಬಿಟ್ಟರೆ ಅದು ಮತ್ತೆ ಮತ್ತೆ ಬೆಳೆಯುವಂತೆ 'ಶಾಮಂತಿ' ಮುನ್ನಡೆಯುತ್ತಿದೆ. ಕನ್ನಮಂಗಲದ ಯುವಕರು ಅದಕ್ಕೆ ನೀರು ಗೊಬ್ಬರವಷ್ಟೇ ಅಲ್ಲ, ಗಾಳಿ ಬೆಳಕು ಕೂಡ ಆಗಿದ್ದಾರೆ. 'ಶಾಮಂತಿ ೩' ಸಂಚಿಕೆಯನ್ನಂತೂ ಕೈಯಲ್ಲಿ ಎತ್ತಿಕೊಳ್ಳಲು ಅತೀವ ಅನಂದವಾಗುತ್ತದೆ. ಅದರಲ್ಲಿ ಜೀವಸಂಸ್ಕೃತಿ, ಸಂಭ್ರಮ, ಆಸುಪಾಸು ಇಡ್ಲೀಪಾಸು, ನಮ್ಮೋರು, ಕಾಣ್ಕೆ, ಜ್ಞಾಪಕಶಾಲೆ ವಿಭಾಗಗಳಿವೆ. ಈ ಪುಸ್ತಿಕೆಗಳನ್ನು ತರಿಸಿಕೊಂಡು ಓದುವ ಭಾಗ್ಯ ನಿಮ್ಮದಾಗಲಿ.

***

ತನ್ನ ಹನ್ನೆರಡನೇ ವರ್ಷಕ್ಕೆ ಕಾವ್ಯವರ್ಷವನ್ನು ಸುರಿಸಿದ ವರ್ಷಾ ಹೂಗಾರ, ೧೯೯೮ರಲ್ಲಿ ಕವಿತೆಗಳ 'ಹೂಬುಟ್ಟಿ'ಯನ್ನು ಕನ್ನಡ ಕಾವ್ಯ ತೋಟದಲ್ಲಿಟ್ಟು ಸಂಭ್ರಮಿಸಿದವಳು. ಆಧ್ಯಾತ್ಮ ಜೀವಿ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಸದಾಶಯದೊಂದಿಗೆ, ದೇವದಾಸಿ ಪದ್ಧತಿ ನಿರ್ಮೂಲನೆಯ ಹರಿಕಾರ ಬಿ.ಎಲ್. ಪಾಟೀಲರ 'ವಿಮೋಚನಾ ಪ್ರಕಾಶನ'ದಿಂದ ತನ್ನ ಮೊದಲನೇ ಕೃತಿ 'ಹೂಬುಟ್ಟಿ' ಪ್ರಕಾಶಿಸಲು ಅವಕಾಶ ದೊರೆತಿದ್ದು ಕೂಡ ಹೆಮ್ಮೆಯ

ಸಂಗತಿ. ಮುಂದೆ ನಾಲ್ಕು ವರ್ಷದಲ್ಲಿ ಅಥಣಿಯ ಅದೇ ಪ್ರಕಾಶನದಿಂದ ವರ್ಷಾಳ 'ಬಾನಂಗಳ' ಕವನ ಸಂಕಲನ ಹೊರಬಂದಿದೆ.

ನನ್ನ ನಾಯಿ, ಪಾತರಗಿತ್ತಿ, ಚಂದ್ರ, ನನ್ನ ಶಾಲೆ, ನನ್ನ ತಮ್ಮ, ನನ್ನ ತೋಟ, ಬೆಕ್ಕು, ಮಳೆಹನಿ, ಇಂಥ ವಸ್ತುಗಳನ್ನು ಕುರಿತು ಮೊದಲ ಸಂಗ್ರಹದಲ್ಲಿ ಕವಿತೆಗಳಿದ್ದರೆ ಮನುಜ ಧರ್ಮ, ರೈತನ ದುಡಿಮೆ, ರೆಕ್ಕೆಗಳಿದ್ದರೆ, ಯುದ್ಧದಲ್ಲಿ, ಗಿಡಗಳು ಶತ್ರುಗಳು ಎಂಬಂಥ ವಿಷಯಗಳು ಎರಡನೇ ಸಂಕಲನದಲ್ಲಿ ಕವನಗಳಾಗಿ ಮೂಡಿಬಂದಿವೆ. 'ಹೂಬುಟ್ಟಿ'ಯಲ್ಲಿ ಒಂದೇ ಹೆಸರಿನ ಎರಡೆರಡು ರಚನೆಗಳು, ಕಾಗುಣಿತ ದೋಷಗಳು ತೂರಿಕೊಂಡು ಬಂದುಬಿಟ್ಟಿವೆ. ದೊಡ್ಡವರು ಇದರ ಬಗ್ಗೆ ಲಕ್ಷ್ಯವಹಿಸಬೇಕಾಗಿತ್ತು. ಉಳಿದಂತೆ ಅದೊಂದು ತುಂಬಾ ಆಕರ್ಷಕವಾದ ಸಂಕಲನವಾಗಿದ್ದು ಗರಿಗರಿಯಾದ ಚಿತ್ರಗಳಿಂದ ಕಂಗೊಳಿಸುತ್ತಿದೆ. ವರ್ಷಾಳ ವರ್ಷಧಾರೆ ಓತಪ್ರೋತವಾಗಿ ಹರಿದಿದೆ.

ಕಂದನ ಬಾಯಲಿ ಶಬ್ದವೇ ಅಮ್ಮ
ಅಮ್ಮನ ಕರುಳಿನ ಕುಡಿಯೇ ಕಂದ
ಇಬ್ಬರ ಪ್ರೀತಿಗೆ ಕೊನೆ ಎಲ್ಲಿ?
ಇರುವವು ಕತೆಗಳು ಮಡಿಲಲ್ಲಿ (ಕರುಳಿನ ಕುಡಿ – ಹೂಬುಟ್ಟಿ)

ಪ್ರಾಧ್ಯಾಪಕ ಡಾ. ಎಂ. ಬಿ. ಹೂಗಾರರ ಪುತ್ರಿಯಾದ ವರ್ಷಾ, ಸಂಕಲನದಿಂದ ಸಂಕಲನಕ್ಕೆ ಬೆಳೆದಿದ್ದು ನೋಡಿದರೆ ಸೋಜಿಗವೆನಿಸುತ್ತದೆ.

ಹುಣ್ಣಿಮೆಯಲ್ಲಿ ಮಾತ್ರ ಚಂದ್ರನು
ಕಾಣುವುದೇಕಮ್ಮ?
ಅಮಾವಾಸ್ಯೆ ಅಂದ್ರೆ ಚಂದ್ರನಿಗೂ ಕೂಡ
ಹೆದರಿಕೆ ಏನಮ್ಮ? (ಚಂದ್ರಗೂ ಹೆದರಿಕೆಯೆ?)

ಸೂರ್ಯ ಚಂದ್ರರಿಗಿರದ ಭೇದವು
ಮನುಜರಿಗೇಕಯ್ಯ?
ಸಸಿಗೆ –ದುಂಬಿಗೆ ಇರದ ಭೇದವು
ಮನುಜರಿಗೇಕಯ್ಯ?
ಬಿಸಿಲು ಮಳೆಗೆ ಇರದ ಭೇದವು
ಮನುಜರಿಗೇಕಯ್ಯ?

(ಮನುಜ ಧರ್ಮ) ಎಂದು ಪ್ರಶ್ನಿಸುತ್ತಾಳೆ.

***

ಯಶೋದಾ ಪಾಟೀಲ 'ಪ್ರಯಾಗ' ಕವನ ಸಂಕಲನವನ್ನು ಪ್ರಕಟಿಸಿದ್ದಲ್ಲದೆ, ಅದರೊಳಗಿನ 'ಹಸಿರು–ಉಸಿರು' ಕವಿತೆ ಮಹಾರಾಷ್ಟ್ರದ ಕನ್ನಡ ಮಾಧ್ಯಮದ ಎಂಟನೆಯ ತರಗತಿಯ ಸುಗಮ ಭಾರತಿ ಪಠ್ಯಪುಸ್ತಕಕ್ಕೆ ಆಯ್ಕೆಯಾಗಿದೆ. ಚಿತ್ರಕಲೆಯಲ್ಲೂ ಸೈ ಎನಿಸಿಕೊಂಡಿರುವ

ಯಶೋಧಾಳ ಆಕರ್ಷಕ ಚಿತ್ರಗಳು, ಕತೆಗಳು, ಪ್ರವಾಸ ಲೇಖನಗಳು, ಕವಿತೆಗಳು ಹಲವಾರು ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. 'ತುಂತುರು', 'ತರಂಗ', 'ಗುಬ್ಬಚ್ಚಿ ಗೂಡು', ಸುಧಾದಲ್ಲಿ ಕವಿತೆ ಮತ್ತು ಅದಕ್ಕೆ ಹೊಂದುವ ಚಿತ್ರಗಳನ್ನು ಕಳಿಸಿ ಅವು ಓದುಗರಿಗೆ ತಲಪಲು ಕಾರಣಳಾಗಿದ್ದಾಳೆ. ಕರ್ನಾಟಕ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನೀಡುವ ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿಗೆ ಭಾಜನಳಾಗಿದ್ದಾಳೆ. ಕಾಕತಾಳೀಯವೆಂಬಂತೆ ಸಂಯುಕ್ತ ಕರ್ನಾಟಕದ ಸಾಪ್ತಾಹಿಕ ವಿಭಾಗದಲ್ಲಿ ಆಕೆಯ ಲೇಖನ 'ಕಿತ್ತೂರಿನ ವೈಭವ' ಅದಕ್ಕೂ ಮೊದಲೇ ಪ್ರಕಟವಾಗಿತ್ತು. ಕಿತ್ತೂರಿನ ರಾಣಿ ಚನ್ನಮ್ಮ ಶಾಲೆಯ ವಿದ್ಯಾರ್ಥಿಯಾಗಿದ್ದ ಆಕೆಯೀಗ ಬಿ.ಇ. ಪದವೀಧರೆ.

ಅವಳ 'ಪ್ರಯಾಗ' ಕವನ ಸಂಕಲನಕ್ಕೆ ವಿಶ್ವೇಶ್ವರಯ್ಯ ಮಕ್ಕಳ ಸಾಹಿತ್ಯ ಪ್ರಶಸ್ತಿ ಲಭಿಸಿದೆ.

'ತೆಂಗಿನ ಮರ, ಅಡಿಕೆ ಮರ, ಬಿರುಗಾಳಿಗೆ ತತ್ತರಿಸಿದ್ದವು; ಹಲವು ವರ್ಷಗಳಿಂದ ಬಾಳಿ ಬದುಕಿದ ಆಲದ ಮರಗಳು ಇಂದಿನ ದೈತ್ಯ ಗಾಳಿಗೆ ನೆಲ ಕಚ್ಚಿದ್ದವು; ಆಕಾಶದಲ್ಲಿ ದಟ್ಟ ಮೋಡ, ಸಿಡಿಲು ಅಬ್ಬರಿಸಿದರೆ, ಮಿಂಚು ಗಾಢ ಕತ್ತಲನ್ನು ಸೀಳಿ ಭೂಮಿ ತುಂಬ ಬೆಳಕು ಚೆಲ್ಲಿತ್ತು; ಹನಿಹನಿಯಾಗಿ ಸುರಿಯಲಾರಂಭಿಸಿದ ಮಳೆ ಹಂತಹಂತವಾಗಿ ತಾರಕಕ್ಕೇರಿತು! ಹಲವು ದಿನಗಳಿಂದ ಮಳೆ ಇಲ್ಲದೆ ಬಳಲಿ ಬೆಂಡಾಗಿದ್ದ ನದಿ ಸರೋವರಗಳು ಬೆಳಗಾಗುವುದರಲ್ಲಿ ತುಂಬಿ ಹರಿಯುತ್ತಿದ್ದವು!'

ಇದು ಯಶೋದಾ ಎಂಟನೇ ತರಗತಿಯಲ್ಲಿರುವಾಗ ೨೦೦೨ರ ನವೆಂಬರ್ ೧೪ರ ತರಂಗದಲ್ಲಿ ಪ್ರಕಟವಾದ 'ಮೊಸಳೆಯ ಪಶ್ಚಾತ್ತಾಪ' ಕತೆಯ ಆರಂಭದ ಸಾಲುಗಳು. ಇಲ್ಲಿನ ಭಾಷಾಶುದ್ಧತೆ, ವಾಕ್ಯ ರಚನೆಯ ಜಾಣ್ಮೆ ವಯಸ್ಸಿಗಿಂತಲೂ ಮುಂದಿರುವುದನ್ನು ಗಮನಿಸಬೇಕು. ಈ ಕತೆಯಲ್ಲಿ ಬರದ ದಾರುಣತೆ, ಮಳೆಯ ವೈಭವಗಳೆರಡನ್ನೂ ಮನೋಜ್ಞವಾಗಿ ಕಟ್ಟಿಕೊಡಲು ಯತ್ನಿಸಲಾಗಿದೆ. 'ಕಂದನ ಗೋಳು' ಚುಟುಕಿನ ಕುಟುಕುವ ಸಾಲು ನೋಡಿ,–

ಪಾಟಿಯ ಚೀಲ ಬೆನ್ನಿಗೆ ಭಾರ
ಮನೆಯ ಪಾಠ ತಲೆಗೆ ಭಾರ
ಬಾಟಾ ಬೂಟು ಕಾಲಿಗೆ ಭಾರ
ಊಟದ ಡಬ್ಬಿ ಕೈಗೆ ಭಾರ
ಆಟಕೆ ಹೋಗಲು ಸಮಯವೇ ಇಲ್ಲ
ಮಲಗಲು ಹೋದರೆ ನಿದ್ದೆಯೇ ಇಲ್ಲ.

ಮಂದಾಕಿನಿ ಪಾಟೀಲ ಸಾಹಿತ್ಯದೊಂದಿಗೆ ಸಂಗೀತ ಕಲೆಯನ್ನು ಮೈಗೂಡಿಸಿಕೊಂಡ ಪ್ರತಿಭಾವಂತೆ. 'ಸುಧಾ', 'ತರಂಗ', 'ಪ್ರಜಾವಾಣಿ', 'ಉದಯವಾಣಿ', 'ತುಂತುರು' ಪತ್ರಿಕೆಗಳಲ್ಲಿ ಅವಳ ಕತೆ, ಕವನ, ಪ್ರವಾಸ ಲೇಖನ, ಚುಟುಕು, ಶಿಶುಪ್ರಾಸ ಪ್ರಕಟಗೊಂಡಿವೆ. 'ಹೊಂಗಿರಣ' ಕವನಸಂಕಲನ ಕನ್ನಡ ಪುಸ್ತಕ ಪ್ರಾಧಿಕಾರದ ಧನಸಹಾಯದೊಂದಿಗೆ ಬೆಳಕು ಕಂಡಿದೆ. ಸಹೋದರಿ ಯಶೋಧಾಳಂತೆ ಈ ಕವನ ಸಂಕಲನಕ್ಕೆ ಮಂದಾಕಿನಿ ಕೂಡ ವಿಶ್ವೇಶ್ವರಯ್ಯ ಪ್ರಶಸ್ತಿ ಬಾಚಿಕೊಂಡಿದ್ದಾಳೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಪ್ರವಾಸೋದ್ಯಮ ಇಲಾಖೆಗಳಲ್ಲದೆ, ವಿವಿಧ ಸಂಘ ಸಂಸ್ಥೆಗಳು ಮತ್ತು ಜಿಲ್ಲಾಧಿಕಾರಿಗಳಿಂದ ಆಕೆ

ಅನೇಕ ಪ್ರಶಸ್ತಿ ಪಡೆದಿದ್ದಾಳೆ. ಬೆಂಗಳೂರು ಮತ್ತು ಬಿಜಾಪೂರ ಆಕಾಶವಾಣಿ ಕೇಂದ್ರಗಳ ಮೂಲಕ ಅವಳ ಹಾಡುಗಳು ಪ್ರಸಾರವಾಗಿವೆ. ಈಕೆ ಚಿತ್ರಕಲೆಯಲ್ಲಿ ತನ್ನದೇ ಆದ ಸಾಧನೆ ಮಾಡಿದ್ದಾಳೆ.

ಮಕ್ಕಳಲ್ಲಿ ಸೃಜನಶೀಲತೆಯ ಬೀಜ ಪೋಷಿಸುತ್ತಿರುವ ಧಾರವಾಡದ 'ಗುಬ್ಬಚ್ಚಿ ಗೂಡು' ಪತ್ರಿಕೆಯ ಅಪೂರ್ಣ ಕತೆಯೊಂದನ್ನು ಸಮರ್ಥವಾಗಿ ಪೂರ್ಣಗೊಳಿಸಿದ ಸಾಧನೆಗೆ ಮಂದಾಕಿನಿಯೂ ಪಾತ್ರಳಾಗಿದ್ದಾಳೆ. ಬಿಜಾಪೂರ ಜಿಲ್ಲಾ ಮಟ್ಟದ ಕರಕುಶಲ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ೨೦೦೪, ಅಕ್ಟೋಬರ್ ೩ ರ 'ಕರ್ಮವೀರ'ದಲ್ಲಿ ಆಕೆಯ ಸುಂದರವಾದ ರಂಗೋಲಿ ಜಾಗ ಪಡೆದು ಕಣ್ಣಿಗೆ ತಂಪು ನೀಡಿದೆ. 'ತುಂತುರು' ಪತ್ರಿಕೆಯ 'ಕುಣಿಯೋಣು ಬಾರ' ಕಾಲಂನಲ್ಲಿ ಆಕೆಯ ಕವನಗಳು ನಿರಂತರ ಪ್ರಕಟವಾಗಿವೆ.

'ಹಕ್ಕಿಗಳಂತೆ ಹಾರಲು ಬಂದರೆ ಜಗತ್ತನ್ನೇ ನನ್ನ ರೆಕ್ಕೆಯೊಳಗೆ ಬಚ್ಚಿಟ್ಟುಕೊಳ್ಳುತ್ತಿದ್ದೆ.....' ಎಂಬುದು ಆಕೆಯ ಕವಿತೆಯ ಸಾಲಲ್ಲ ಸುಂದರ ಲೇಖನವೊಂದರ ಶೀರ್ಷಿಕೆ.

ಮಳೆಗಾಲ ಬಂದಾಗ
ನದಿಯಾಗಿ ಹರಿದಾಗ
ಕಾಗದದ ದೋಣಿ ಹರಿಬಿಟ್ಟಾಗ
ಸಾಗರವ ಸೇರಿ ನಕ್ಕಿತಾಗ.

ಇದು ಖಂಡಿತ ಆಕೆಯ ಕವನ, ಅದೂ ಐದನೇ ತರಗತಿಯಲ್ಲಿದ್ದಾಗ ಬರೆದದ್ದು.

ತನ್ನಿಬ್ಬರು ಅಕ್ಕಂದಿರನ್ನು ಹಿಂದಿಕ್ಕಿ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆ ಮಾಡಿದ ಈ ಮನೆತನದ ಮತ್ತೊಂದು ಕುಡಿ ಮನಿಷಾ ಪಾಟೀಲ. ಕಲಬುರ್ಗಿ ಜಿಲ್ಲಾ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯ ಪಟ್ಟ ಈಕೆಗೆ ಒಲಿದು ಬಂದಿದೆ.

ಆಕೆ ೨ನೇ ತರಗತಿಯಲ್ಲಿರುವಾಗಲೇ ಬರೆದ ಚಟುಕುಗಳನ್ನು ಗಮನಿಸಿ.

ಜಗಳ ತಂಟೆ
ಮರೆಯೋಣ
ಸುಖಶಾಂತಿ
ಜಯಿಸೋಣ
ಸಮೃದ್ಧ ನಾಡು
ಕಟ್ಟೋಣ.

ಕನ್ನಡ ಪುಸ್ತಕ ಪ್ರಾಧಿಕಾರದ ಧನಸಹಾಯದೊಂದಿಗೆ ಪ್ರಕಟಗೊಂಡ ಅವಳ 'ಪಂಚರಂಗಿ' ಕವನ ಸಂಕಲನವನ್ನು ಖ್ಯಾತ ಸಾಹಿತಿಗಳಾದ ಯು. ಆರ್. ಅನಂತಮೂರ್ತಿ ಬಿಡುಗಡೆ ಮಾಡಿದ್ದಾರೆ. ಇದೇ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಬಹುಮಾನವೂ ಸಂದಿದೆ.

ಯಾದಗಿರಿ ಜಿಲ್ಲೆಯ ಮಕ್ಕಳ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ಇದೇ ಮನೀಷಾ

ಪಾಟೀಲ ಮಾಡಿದ್ದಾಳೆ. ಇದೆಲ್ಲಕ್ಕೆ ಕಳಶವಿಟ್ಟಂತೆ ಬೆಳಗಾವಿಯಲ್ಲಿ ಜರುಗಿದ ವಿಶ್ವ ಕನ್ನಡ ಸಮ್ಮೇಳನದ ಮಕ್ಕಳ ಸಾಹಿತ್ಯಗೋಷ್ಠಿಯ ಅಧ್ಯಕ್ಷತೆಯ ಗೌರವಕ್ಕೂ ಭಾಜನಳಾಗಿದ್ದಾಳೆ.

ಅಕ್ಕಂದಿರು ನಿರ್ಮಿಸಿದ ಹೆದ್ದಾರಿಯಲ್ಲಿ ಅದೇ ಉತ್ಸಾಹದಿಂದ ಒಂದು ರೀತಿಯ ನಿರಾತಂಕ ನಡಿಗೆ ಮುಂದುವರೆಸಿರುವವನು ಇವರೆಲ್ಲರ ಕಿರಿಸೋದರ ಬಸವರಾಜ. ಅವನು ಬರೆದ 'ವಿಸ್ಮಯ' ಒಂದು ಅಪ್ಪಟ ಶಿಶುಪ್ರಾಸ :

ಸಾಗರದಾಗ ಉಪ್ಪ
ಅನ್ನದಾಗ ತುಪ್ಪ
ಶೇಂಗಾದಾಗ ಎಣ್ಣೆ
ಮಜ್ಜಿಗಿಯಾಗ ಬೆಣ್ಣೆ
ತೆಂಗಿನಾಗ ಎಳೆನೀರ
ಸೊಂಟದಾಗ ಉಡಿದಾರ
ಹೂವಿನಾಗ ಜೇನ
ನಿನ್ನ ತಲ್ಯಾಗ ಹೇನ.

ಅನೇಕ ಪತ್ರಿಕೆಗಳು ಈತನ ಕವಿತೆ, ಲೇಖನಗಳನ್ನು ಪ್ರಕಟಿಸಿದ್ದು ಅವನು ಇನ್ನೂ ಬೆಳೆಯಬೇಕಾಗಿದೆ. ಅಂಥ ಎಲ್ಲ ಅವಕಾಶಗಳೂ ಅವನ ಮುಂದಿವೆ. ಮಂಡ್ಯ ಜಿಲ್ಲೆ ಆದಿಚುಂಚನಗಿರಿ ಮಠದಲ್ಲಿ ನಡೆದ ಮಕ್ಕಳ ಸಾಹಿತ್ಯ ಸಮ್ಮೇಳನದ ಚುಟುಕು ಗೋಷ್ಠಿಯ ಅಧ್ಯಕ್ಷತೆಯ ಗೌರವ ಬಾಲಕ ಬಸವರಾಜನಿಗೆ ಸಂದಿದೆ.

***

ಗೋಲಿ – ಬುಗುರಿ ಆಡುವ ವಯಸ್ಸಿನಲ್ಲಿ ಹಲವು ಪಠ್ಯೇತರ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಉತ್ಸಾಹದ ಚಿಲುಮೆಯಾಗಿದ್ದ ವಿದ್ಯಾಸಾಗರ ಕುಕ್ಕುಂದಾ ಅಪಘಾತಕ್ಕೀಡಾಗಿ ಸುತ್ತಮುತ್ತಲಿನವರನ್ನು ದುಃಖಸಾಗರದಲ್ಲಿ ಮುಳುಗಿಸಿಬಿಟ್ಟ.

ವಿದ್ಯಾಸಾಗರನ 'ನನ್ನ ಕನಸು' ಕವನ ಸಂಕಲನ ಪ್ರಕಟವಾಗಿದ್ದು ಆತನ ಸಾವಿನ ನಂತರ. ಹದಿನೆಂಟು ಶಿಶುಗೀತೆಗಳಿರುವ ಈ ಸುಂದರ ಪುಸ್ತಕಕ್ಕೆ ಶಂ.ಗು. ಬಿರಾದಾರ ಅವರ ಮನ ಮಿಡಿಯುವ ಮುನ್ನುಡಿಯಿದೆ.

ಮಕ್ಕಳು ಬರೆದ ಸಾಹಿತ್ಯ ಅಪಕ್ವವಾಗಿರಬೇಕಾಗಿಲ್ಲ. ಅವರು ಕೂಡ ನಮ್ಮನ್ನು ವಿಚಾರಕ್ಕೆ ಹಚ್ಚುವಂತೆ ಬರೆಯಬಲ್ಲರು ಎಂಬ ಮಾತು 'ಶಂಗು' ಮುನ್ನುಡಿಯಲ್ಲಿದೆ.

ಅಮ್ಮ ನನಗೆ
ಆಸೆ ಇಲ್ಲ
ಹಕ್ಕಿಯಾಗಲು .....
ಸಾರ್ಥಕವಮ್ಮ
ನನ್ನ ಜನುಮ
ಕೀರ್ತಿ ಪಡೆಯಲು

ಎಂಬ ತನ್ನ ಕವಿತೆಯ ಆಶಯದಂತೆ ಈ ಬಾಲಕವಿ ಕೀರ್ತಿವಂತನೇ ಆಗಿದ್ದಾನೆ. ತನ್ನ ಕನಸನ್ನು ನಮ್ಮ ಕನಸನ್ನಾಗಿಸಿ,

ಗಗನ ಯಾನ
ಮಾಡಿ ನಾನು
ಎತ್ತರಕೆ ಹೋಗುವೆ,

ಎಂದು ನಮ್ಮ ನಿರೀಕ್ಷೆಗೂ ಮೀರಿ, ನಿಲುಕಿಗೂ ತೀರಿ ಎತ್ತರಕ್ಕೆ ಹೋಗಿದ್ದಾನೆ. 'ಮೊಲದ ಜಾಣ್ಮೆ' ಕೇವಲ ಶಿಶುಗೀತೆಯಲ್ಲ, ಅದೊಂದು ಕಥನ ಗೀತೆ. ಅದರ ಲಯ, ಶಬ್ದ ಸಂಯೋಜನೆ, ಪದ–ಪಾದ ವಿನ್ಯಾಸ, ಸಹಜ ಪ್ರಾಸ ಕೇವಲ ಮಕ್ಕಳಿಗಷ್ಟೇ ಅಲ್ಲ ದೊಡ್ಡವರೂ ತಲೆದೂಗುವಂತಿವೆ. 'ಸಿಂಹ ಮತ್ತು ಇಲಿ', 'ಪೆದ್ದ ಕೋಳಿ ಮರಿ', ಇದೇ ಜಾಡಿನಲ್ಲಿವೆ.

ಹಾರುವ ತಟ್ಟೆ ಏರುವುದು, ಆಕಾಶದಲ್ಲಿ ನೆಗೆಯುವುದು, ಚಂದ್ರಲೋಕಕ್ಕೆ ಜಿಗಿಯುವುದು, ಕಾವ್ಯ ಲೋಕದಲ್ಲಿ ಕುಪ್ಪಳಿಸುವುದು; ವಿದ್ಯಾಸಾಗರನ ಉತ್ಸಾಹಕ್ಕೆ ಪಾರವೇ ಇಲ್ಲ. ಅಣ್ಣ ರಾಜಶೇಖರ ಕುಕ್ಕುಂದಾ ಈಗ ಗುರುತಿಸುವ ಮಕ್ಕಳ ಸಾಹಿತಿಯಾಗಿ ಬೆಳೆದಂತೆ ವಿದ್ಯಾಸಾಗರನಿಗೆ ಉತ್ತಮ ಭವಿಷ್ಯವಿತ್ತು. ಅಂತೆಯೇ ಆ ಬಾಲಪ್ರತಿಭೆ ಕುರಿತಾಗಿ ಕಂಚ್ಯಾಣಿ ಶರಣಪ್ಪನವರು

ಬೆಳವಲದ ನಾಡಿನಲಿ
ಬಾಲ ಭಾರ್ಗವನಾಗಿ
ಮೆರೆದವನ ನೆನೆನೆನೆದು
ಮನ ನೊಂದಿತು

ಎಂದು ಹಾಡಿದ್ದರೆ, 'ಸಿಸು' ಸಂಗಮೇಶರವರು

ಯಾಕೊ ಏನೊ, ಮೊನ್ನೆ ಅವನ
ಕವನ ನೆನಪು ಆಯಿತು.
ಇಂದು ಎದೆಯ ಬಿರಿವ ಸುದ್ದಿ
ಮನಕೆ ನೋವು ತಂದಿತು

ಅಂತ ತಮ್ಮ ಭಾಷ್ಪಾಂಜಲಿ ಸಲ್ಲಿಸಿದ್ದಾರೆ.

ಇಂಗ್ಲಿಷ್ ಭಾಷೆ, ವಿಜ್ಞಾನ, ಸಾಹಿತ್ಯ, ಚಿತ್ರಕಲೆಯ ಆಸಕ್ತಿಗಳೊಂದಿಗೆ ತನ್ನ ತೀಕ್ಷ್ಣ ಬುದ್ಧಿಯಿಂದ ಎಲ್ಲರನ್ನೂ ಬೆರಗುಗೊಳಿಸುತ್ತಿದ್ದ. ಅವನ 'ನನ್ನ ಕನಸು' ಶಿಶು ಸಾಹಿತ್ಯಕ್ಕೊಂದು ವಿಶೇಷ ಕೊಡುಗೆಯೆಂದರೆ ತಪ್ಪಾಗಲಾರದು.

ಮರೆಯಾಗಿ ಹೋಗಬಹುದಾಗಿದ್ದ ತಮ್ಮನ ಕವನಗಳನ್ನು ಸಾಹಿತ್ಯ ಲೋಕದಲ್ಲಿ ಚುಕ್ಕಿಗಳಂತೆ ಮಿನುಗಲು ಮುತುವರ್ಜಿ ವಹಿಸಿದವರು ಸ್ವತಃ ಮಕ್ಕಳ ಸಾಹಿತಿಯಾದ ಅಣ್ಣ ರಾಜಶೇಖರ ಕುಕ್ಕುಂದಾ. ವಿದ್ಯಾಸಾಗರನ ಹೆಸರಿನಲ್ಲಿ ಕೆಲವು ವೇದಿಕೆಗಳಿಂದ ಪ್ರಶಸ್ತಿ ಕೊಡುವುದೂ ನಡೆದಿದೆ ಎಂಬ ಮಾಹಿತಿ ಕೂಡ ನನಗೆ ಸಿಕ್ಕಿದೆ.

ಕನ್ನಡದ ಹೆಸರಾಂತ ಕವಯಿತ್ರಿ ಕಾರ್ಕಳದ ಜ್ಯೋತಿ ಗುರುಪ್ರಸಾದ ಅವರ ಮಗ ಪೂರ್ಣಪ್ರಜ್ಞ- 'ಎಲ್ಲರೂ ಖುಷಿ ಆಗಿ ಇದ್ದರೆ ಮಾತ್ರ/ ನಾನು ಕವಿತೆ ಬರೆಯುವುದು/ ಇಲ್ಲ ಎಂದರೆ ಕವಿತೆ ಇಲ್ಲ,' ಎಂದು ಬರೆದ ಅವನೇ ಈಗಿಲ್ಲ. ಅವನು ನೋಟಬುಕ್ಕಿನಲ್ಲಿ ಗೀಚಿದ ಕೆಲವು ಕವಿತೆಗಳು ೨೦೧೦ ರಲ್ಲಿ 'ಛಂದ ಪುಸ್ತಕ' ದಿಂದ ಮುದ್ರಣ ರೂಪ ಕಂಡಿವೆ. ಮಕ್ಕಳು ತಮ್ಮ ಕಿಸೆಯಲ್ಲಿ ಇಟ್ಟುಕೊಳ್ಳಬಹುದಾದ ಈ ಟೈನಿ ಪುಸ್ತಕ ಪೂರ್ಣನೇ ನಮ್ಮ ಮುಂದೆ ಬಂದು ನಿಂತು ಮಾತನಾಡುತ್ತಿರುವನೇನೋ ಎಂಬಂತೆ ಕಾಣುತ್ತದೆ. ಪುಟಕ್ಕೊಂದು ಚುಟುಕಿನಂತೆ, ಹಕ್ಕಿಯೊಂದು ಮೇಲೆ ಹಾರಿದಾಗ ಉದುರಿ ಬಿದ್ದ ಗರಿಗಳಂತೆ ಕಂಗೊಳಿಸುವ ಈ ಕವಿತೆಗಳ ಸಂಗ್ರಹಕ್ಕೊಂದು ಹೆಸರು – 'ಪೂರ್ಣನ ಗರಿಗಳು'. ಪೂರ್ಣನ ಗರಿಗಳು, ಪೂರ್ಣನ ಹೆಜ್ಜೆಗಳೇ ಸರಿ.

ಎಲ್ಲರೂ ಖುಷಿಯಾಗಿದ್ದರೆ ಮಾತ್ರ ನಾನು ಬರೆಯುತ್ತೇನೆ ಎಂದ ಬಾಲಕನ ಗರಿಗರಿಯಾದ ಸಾಲುಗಳನ್ನು ಮಾತ್ರ ನೋಡಿ ನಾವು ಖುಷಿ ಪಡಬೇಕಾಗಿದೆ. ಹೆತ್ತಕರಳು ಇಂಥ ಅಗಲಿಕೆಯ ನೋವನ್ನು ಹೇಗೆ ತಡೆದುಕೊಳ್ಳುತ್ತದೋ ನನಗಂತೂ ಗೊತ್ತಿಲ್ಲ. ಅಣ್ಣ ಗೌತಮನಿಗೆ ಅಪ್ಪ ಅವ್ವನನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿ ತನ್ನ ಚಿತ್ತ ಚಿತ್ತಾರದ ಗರಿಗಳನ್ನು ನಮ್ಮ ಕೈಗೆ ಕೊಟ್ಟು ಹೋದ ಪೂರ್ಣ ಹೀಗೊಂದು ಕವಿತೆ ಬರೆದಿದ್ದಾನೆ.

ನನ್ನ ತಪ್ಪನ್ನು ನಾನು
ಒಪ್ಪಿಕೊಳ್ಳುತ್ತೇನೆ
ನಾನು ನನ್ನ ಅಣ್ಣನ ಹಾಗೆ
ಕ್ರಿಕೆಟ್‌ನಲ್ಲಿ ಸಿಡುಕುತ್ತೇನೆ.
ಅದೇ ನನ್ನ ದೊಡ್ಡ ತಪ್ಪು

ಈ ಕವನದ ಹೆಸರು 'ಪೂರ್ಣಪ್ರಜ್ಞನ ಬಗ್ಗೆ' ಅಂತ.

ಆತ ೪ನೇ ತರಗತಿಯಲ್ಲಿ ಕಲಿಯುತ್ತಿರುವಾಗ ಹೇಗೆ ಬರೆದಿದ್ದಾನೆ ನೋಡಿ.

ಮೇಣದಬತ್ತಿ
ಬೆಳಕು ಕೊಡುತ್ತದೆ ನಿಜ
ಅದಕ್ಕೆ ತಕ್ಕ ಹಾಗೆ
ನಾವು ಬರೆಯದಿದ್ದರೆ
ಅದು ಚಿಕ್ಕದಾಗುತ್ತಾ ಬಂದು
ಆರಿ ಹೋಗುತ್ತದೆ ಅಲ್ಲವೆ?

ಇದೊಂದು ಉಜ್ವಲ ಕಿರುಗವಿತೆ ಅಂತ ಜಯಂತ ಕಾಯ್ಕಿಣಿ ಹೇಳಿದ್ದಾರೆ. ಮಕ್ಕಳು ಹೀಗೆಲ್ಲಾ ಬರೆಯುತ್ತಾರೆ ಎಂಬುದೇ ಒಂದು ಸೋಜಿಗದ ಸಂಗತಿ. ಕೆಲವು ಚಿಣ್ಣರ ನಡೆನುಡಿಗಳು ನಮ್ಮನ್ನು ತಟ್ಟನೆ ಹಿಡಿದು ನಿಲ್ಲಿಸಿದಂತೆನಿಸಿದರೆ, ಇನ್ನು ಹಲವು ಮಕ್ಕಳ ಮಾತುಗಳು ಸುಂದುಹೊಡೆದ ನಮ್ಮನ್ನು ಮತ್ತೆ ವಾಸ್ತವ ಲೋಕಕ್ಕೆ ಬರಮಾಡಿಕೊಳ್ಳುತ್ತವೆ. ಅವರ ತೊದಲನುಡಿಗಳು ಸಹೃದಯ ಮನಸ್ಸುಗಳಿಗೆ ಲೇಪಿಸುವ ತಂಪು ಮುಲಾಮಿನಂತೆ.

ಪೂರ್ಣನ ಕಿರುಗವಿತೆಗಳ ಸಾಲುಗಳು ಮುಗ್ಧ ಬೆರಗಿನ ನೋಟದೊಂದಿಗೆ, ಅಷ್ಟೇ ಮುಗ್ಧವಾದ ಮುಕ್ತ ಚಿಂತನ ಕ್ರಮವನ್ನು ಮಿನುಗಿಸುತ್ತವೆ. ಬಹುತೇಕ ಮಕ್ಕಳು ಹುಡುಕಾಡುವ ಪ್ರಾಸ, ಶಬ್ದ, ನಾದಗಳ ಹಂಗಿಲ್ಲದೇ ಅತ್ಯಂತ ಸಹಜ ಕಲ್ಪನಾಶೀಲ ಅಭಿವ್ಯಕ್ತಿಯೇ ಪೂರ್ಣನ ಮಾದರಿ. ಶಿವರಾಮ ಕಾರಂತರು

೧೯೯೭ನೇ ಇಸವಿಯಲ್ಲಿ
ಸತ್ತುಹೋದರು ಅವರು ೧೯೯೮ನೇ
ಇಸವಿಯನ್ನು ನೋಡಿ
ಸತ್ತು ಹೋಗಬೇಕಾಗಿತ್ತು.

ಪೂರ್ಣನ ಬಗ್ಗೆ ನನ್ನದೂ ಇದೇ complaint. ನಾಡಿನ ಅಸಂಖ್ಯ ಮಕ್ಕಳಲ್ಲಿ ಪೂರ್ಣನಿದ್ದಾನೆ. ಅವರೆಲ್ಲರೂ ಜ್ಯೋತಿ ಮತ್ತು ಗುರುಪ್ರಸಾದರ ಮಕ್ಕಳೇ.

ಪೆನ್ ಬರೆಯುತ್ತೆ ನಿಜ
ಇಂಕ್ ಮುಗಿದುಹೋದಾಗ
ಬೇಜಾರು.

ಲೇಖನದ ಈ ಮೊದಲಿನ ಭಾಗದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಕನ್ನಮಂಗಲ ಶಾಲೆಯಲ್ಲಿ ಮಕ್ಕಳೊಂದಿಗೆ ನಡೆದ ಪ್ರಶಂಸಾರ್ಹ ಪ್ರಯೋಗದ ಬಗ್ಗೆ ಚರ್ಚಿಸಿದ್ದೇನೆ. ಅಲ್ಲಿ ಪ್ರಕಟವಾದ 'ಬಾರೋ ವಸಂತ ಬಾರೋ...' ಎಂಬ ಪುಸ್ತಕ ಕುರಿತಾಗಿ ಈಗ ಹೇಳಬೇಕಾಗಿದೆ. ಅದೇ ಕನ್ನಮಂಗಲದ ಸರ್ಕಾರಿ ಶಾಲೆಯಲ್ಲಿ ಕಲಿತ ವಿದ್ಯಾರ್ಥಿ ವಸಂತಕುಮಾರ ಕೆ. ಸಿ. ಎಂಬ ಹುಡುಗನ ಸೂತಕದ ಕನವರಿಕೆಯ ಗುಚ್ಛವೇ ಈ ಕೃತಿ. ಶಾಲೆಯಲ್ಲಿ ಶಿಕ್ಷಕರು, ಸಹಪಾಠಿಗಳ ಕಣ್ಮಣಿಯಾಗಿದ್ದ ಚಿತ್ರಕಲಾವಿದ, ಕ್ರೀಡಾಪಟುವಾಗಿದ್ದ ಹುಡುಗ ಹದಿನೇಳನೆ ವಯಸ್ಸಿನಲ್ಲಿ ಇದ್ದಕ್ಕಿದ್ದ ಹಾಗೆ ಕಣ್ಮರೆಯಾಗಿ ಮರಳಿ ಬಾರದ ವಸಂತನಾಗಿದ್ದಾನೆ. ಅವನಲ್ಲಿ ಒಡನಾಡಿದ ಕ್ರೀಡಾ ತರಬೇತಿ ಪಡೆದವರಲ್ಲಿನ ಇಪ್ಪತ್ತು ಮಕ್ಕಳು ಹಂಚಿಕೊಂಡ ಹೃದಯಾಂತರಾಳದ ಮಾತುಗಳಿವು. ಮಕ್ಕಳು ಆಯಣ್ಣ ಹಂಗಿದ್ದ, ಹಿಂಗಿದ್ದ, ನಮ್ಮನ್ನು ಆಡಿಸುತ್ತಿದ್ದ, ಕಾಡಿಸುತ್ತಿದ್ದ, ಪ್ರೀತಿಸುತ್ತಿದ್ದ. ಅವತ್ತು ಒಂದಿನ ಹಂಗಾಯಿತು, ನನಗೆ ಆತ ಸಹಾಯ ಮಾಡಿದ್ದ, ನಮ್ಮನೆಗೆ ಬಂದಿದ್ದ, ನಾನು ಅವನ ಮನೆಗೆ ಹೋಗಿದ್ದೆ, ನಾನವನಿಗೆ ಬೈದಿದ್ದೆ, ಹೀಗೆ ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಏನಿದ್ದರೂ ಅದೆಲ್ಲ ವಸಂತನೆಡೆಗೆ ಅವರಿಗಿರುವ ನಿರ್ವಾಜ್ಯ ಪ್ರೀತಿ, ನಿಷ್ಕಲ್ಮಷ ಪ್ರೇಮ. ಇಡೀ ಮಕ್ಕಳ ಸಮೂಹಕ್ಕೆ ಅಣ್ಣನಾಗಿದ್ದ ಹಳ್ಳಿ ಹೈದನ ಬಗೆಗಿರುವ ಸದ್ಭಾವನೆ. ಹೇಳದೆ ಕೇಳದೆ ಆ ತಮ್ಮ ತಂಗಿಯರನ್ನು ತಬ್ಬಲಿ ಮಾಡಿ ಹೋದ ವಿಷಾದದ ಘಳಿಗೆಯಲ್ಲಿನ ಹೊರದಾರಿಗೆ ಈ ಪುಸ್ತಕವೇ ಬಾಗಿಲು.

ಮತ್ತೆ ಇದೆಲ್ಲದರ ಮಾರ್ಗದರ್ಶಕರು ಕಲಾಧರ್, ದೇವರಾಜ್ ಮತ್ತವರ ಬಳಗ. ಪ್ರಕಾಶನದ ಹೊಣೆ ಹೊತ್ತವರು ಕನ್ನಮಂಗಲದ 'ಸ್ನೇಹ'ಪರ ಯುವಕರು.

ಹೀಗೆ ಅಗಲಿದ ಮೂವರು ಎಳೆಯರು ಮಕ್ಕಳ ಸಾಹಿತ್ಯ ಮಾರ್ಗದಲ್ಲಿ ಮೂಡಿಸಿದ ಹೆಜ್ಜೆಗಳನ್ನು ಕಣ್ಣುತುಂಬಿಕೊಳ್ಳುವ ಪ್ರಸಂಗವಿದು. ಮೊದಲಿಬ್ಬರು ಮೈ ಜುಮ್ಮೆನ್ನಿಸುವ ಕವಿತೆ ಬರೆದರೆ, ಮೂರನೆ ಹುಡುಗ ಸ್ವತಃ ಕವಿತೆಯಾಗಿ ಮರೆಯಾಗಿದ್ದಾನೆ.

***

ನಿಜ ಎಂದರೆ ಯಾವ ಕೋಗಿಲೆಯೂ ಗಮನ ಸೆಳೆಯುವುದಕ್ಕಾಗಿ ಹಾಡುವುದಿಲ್ಲ ಎನ್ನುವ ಜಿ. ಪಿ. ಬಸವರಾಜುರವರ ಪ್ರೋತ್ಸಾಹಕರ ಮುನ್ನುಡಿಯನ್ನು ತನ್ನ ಸಂಕಲನಕ್ಕೆ ಗಿಟ್ಟಿಸಿಕೊಂಡಿರುವ ಚೈತ್ರಾ ಬೇವಿನಗಿಡದ ಧಾರವಾಡ ನೆಲದ ಮತ್ತೊಂದು ಕಾವ್ಯಪ್ರತಿಭೆ. 'ಕರೆಯುವುದು ಕೋಗಿಲೆ' ಎಂದು ಹಾಡಿರುವ ಚೈತ್ರಾಳಲ್ಲೂ ಒಂದು ಕೋಗಿಲೆ ಕುಳಿತು ಕುಹೂ ಕುಹೂ ಎನ್ನುತ್ತಿದೆಯೇನೋ ಅನ್ನಿಸುತ್ತಿದೆ. ಕೋಗಿಲೆಯಂತೆ ಆಕೆಯದೂ ಹಾಡುವುದು ಸಹಜ ಧರ್ಮ.

ನನ್ನ ಪಾಲಿನ ಭೂಮಿ – ಅಮ್ಮ
ನನ್ನ ಪಾಲಿನ ಆಕಾಶ – ಅಪ್ಪ
ನನ್ನ ವಾತ್ಸಲ್ಯದ ಪಾಲು – ತಮ್ಮ
ನೆನಪ ಹೊಳೆಯ ಸಾಲು – ಅಜ್ಜಿ

ಇದು ಅವಳ ಕೃತಿಯ ಅರ್ಪಣೆ, ಸರಿ. ಇದು ಯಾವ ಕವಿತೆಗೆ ಕಡಿಮೆಯಿದೆ? ಬಹುಶಃ ಇಂಥ ಕಾವ್ಯಶಕ್ತಿಯ ಕಾರಣದಿಂದ ತನ್ನ ಹಸ್ತಪ್ರತಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ಸಹಾಯಧನದ ಬಹುಮಾನ ಪಡೆದು ಸಂಕಲನ ಪ್ರಕಟಿಸಿದ್ದಾಳೆ. ಕವಿ–ಕಥೆಗಾರ, ಅಪ್ಪ ಡಾ. ಬಸು ಬೇವಿನಗಿಡದವರ ಸೂಕ್ತ ಬೆಂಬಲವೂ ಇದೆ. ಆಕೆ ತಾನು ಕಲಿತ ಧಾರವಾಡದ ಪ್ರಜೆಂಟೇಶನ್ ಶಾಲೆಯ ಅಕ್ಕರೆಯ ವಿದ್ಯಾರ್ಥಿ. ಅಲ್ಲಿನ ಶಿಕ್ಷಕಿಯರು ತಮ್ಮ ವಿದ್ಯಾರ್ಥಿನಿಯ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ರಾಷ್ಟ್ರೀಯ ಹಬ್ಬದಲ್ಲಿ ಭಾಗವಹಿಸುವ ರೀತಿಯಲ್ಲಿ ಪಾಲ್ಗೊಂಡಿದ್ದರು. ಶಿಸ್ತಿನೊಂದಿಗೆ ಮಾನವೀಯ ಅಂತಃಕರಣವನ್ನು ಧಾರೆಯೆರೆದು ಮಕ್ಕಳನ್ನು ತಯಾರು ಮಾಡುವದು ಅಲ್ಲಿನ ಶಿಕ್ಷಕಿಯರಲ್ಲಿ ನಾನು ಕಂಡುಕೊಂಡ ಲಕ್ಷಣ.

ಚೈತ್ರಾಳ ಕವಿತೆಯ ಕೆಲವು ಸಾಲುಗಳನ್ನು ಗಮನಿಸಿ.

ಮಕ್ಕಳು ನಗುತ್ತಾರೆ
ಹೂವು ಅರಳುವಂತೆ
ಮಕ್ಕಳು ಅಳುತ್ತಾರೆ
ಹೂವು ಬಾಡುವಂತೆ
ಮಕ್ಕಳು ಹಾಡುತ್ತಾರೆ
ನದಿಯ ಕಲರವದಂತೆ
ಮಕ್ಕಳು ಸುಮ್ಮನಾಗುತ್ತಾರೆ
ನದಿಯ ನಿಶ್ಶಬ್ದದಂತೆ   ಅರಳುವ ಹೂಗಳು

ಕೋಗಿಲೆ ಕರೆಯುತ್ತದೆ
ಕುಹೂ ಕುಹೂ ಎಂದು
ನವಿಲು ಕುಣಿಯುತ್ತದೆ
ಥಕ ಥಕ ಎಂದು... .. ..
ಅಮ್ಮ ಕರೆಯುತ್ತಾಳೆ
ಚಿನ್ನ ಚಿನ್ನ ಎಂದು   ಕರೆಯುವುದು ಕೋಗಿಲೆ

ತನ್ನ ಸುತ್ತಲಿನ ಜಗತ್ತನ್ನು ಕುತೂಹಲದಿಂದ ನೋಡುವುದು, ಅಲ್ಲಿರುವ ಸತ್ಯ ಸೌಂದರ್ಯಗಳನ್ನು ತನಗೆ ದಕ್ಕುವ ರೀತಿಯಲ್ಲಿ ಗುರುತಿಸುವುದು, ಅಂಥ ಸಂಗತಿಗಳಿಗೆ ಸ್ವತಃ ತಾನೇ ಧ್ವನಿಯಾಗುವುದು, ಚೈತ್ರಾ ರೂಢಿಸಿಕೊಂಡ ತನ್ನದೇ ಆದ ಕಾವ್ಯಮಾರ್ಗ. ತನಗೆ ಕೇಳುವ ದನಿಯನ್ನು ಒಳದನಿಯನ್ನಾಗಿಸಿ ಸಹೃದಯರಿಗೆ ಕೇಳಿಸುವ ಎಲ್ಲ ಲಕ್ಷಣಗಳನ್ನು ಆಕೆ ಈಗಾಗಲೇ ತೋರಿದ್ದಾಳೆ.

ನದಿಗೆ ಕಲರವವೂ ಇದೆ, ನಿಶ್ಶಬ್ದವೂ ಇದೆ. ನಿಸರ್ಗದ ಇಂಥ ಪ್ರಕ್ರಿಯೆಗಳನ್ನು Personification ಮಾಡುವುದು ಈ ಬಾಲೆಗೆ ಸಾಧ್ಯವಾಗಿರುವುದು ಆಶ್ಚರ್ಯಕರ ಸಂಗತಿ. ಹಾಡುವ ಕೋಗಿಲೆಯ ದನಿಯಲ್ಲಿ ಶಬ್ದವಿದ್ದಂತೆ ಮೌನವೂ ಇದೆ. ಆಕೆಯ ವಯಸ್ಸಿನ ಇತಿಮಿತಿಗಳ ನಡುವೆಯೂ ಕವಿತೆ ಯಶಸ್ವಿಯಾಗಿರುವುದು ಇಂಥ ಗುಣದಿಂದ. ಅವಳ ಅತಿ ಪುಟ್ಟದಾದ ಕವನ 'ಅಪ್ಪ-ಅಮ್ಮ' ನೋಡಿ

ಸೈಕಲ್‌ಗೆ ಎರಡು ಗಾಲಿ
ಒಂದು ಅಪ್ಪ
ಇನ್ನೊಂದು ಅಮ್ಮ

ಮಕ್ಕಳು ಹೀಗೆ ಯೋಚಿಸಬಲ್ಲರೆಂದು ಅನೇಕ ಬಾರಿ ನಮಗೆ ಹೊಳೆಯುವುದೇ ಇಲ್ಲ. ಅವರು ಬರವಣಿಗೆಗೆ ಆಯ್ದುಕೊಳ್ಳುವ ವಸ್ತುಗಳು ನಮಗೆ ಸಣ್ಣವೆನಿಸಬಹುದು. ಆದರೆ ಅವುಗಳ ಮೂಲಕ ಹೇಳುವುದು ಮಾತ್ರ ಗಹನವಾದದ್ದೇ ಇರುತ್ತದೆ. ಒಂದು ವಸ್ತುವಿಗಿಂತ ಅದನ್ನು ಕುರಿತಾದ ಕವಿತೆಯೇ ಹೆಚ್ಚು ಘನವಾಗಿರುತ್ತದೆ ಎನ್ನುವುದಕ್ಕೆ ಮಕ್ಕಳ ಬರವಣಿಗೆಯೂ ಹೊರತಾಗಿಲ್ಲ ನೋಡಿ.

'ಅನಾಥ ರಾಜಕುಮಾರಿ'ಯ ಕೊನೆಯ ಸಾಲುಗಳು,

ಅವಳ ಕೊನೆಯ ಕತೆಗೆ
ನಾನು ಹೂಂ ಅನ್ನಲೇ ಇಲ್ಲ
ಅಜ್ಜಿ ಸತ್ತು ಹೋದಳು
ರಾಜಕುಮಾರಿ ಅನಾಥಳಾದಳು

***

ಇತ್ತೀಚೆಗೆ ಮಕ್ಕಳ ಸಾಹಿತಿಯಾಗಿ ಹೆಸರು ಮಾಡಿದ್ದಲ್ಲದೆ 'ಸಿಸು' ಸಂಗಮೇಶವರ ಸಾಹಿತ್ಯಿಕ ಸಾಧನೆ ಕುರಿತಂತೆ ಪಿಎಚ್.ಡಿ. ಯನ್ನು ಮಾಡಿರುವ ರಾಜೇಂದ್ರ ಗಡಾದರವರು ಚಿಕ್ಕಂದಿನಿಂದಲೇ ಕವನ ಬರೆಯುವ ಹವ್ಯಾಸ ರೂಢಿಸಿಕೊಂಡವರು. ಅಂತ ಕೆಲವು ಕವಿತೆಗಳನ್ನು ಸೇರಿಸಿ 'ಚಿಂವ್ ಚಿಂವ್ ಗುಬ್ಬಿ' ಎಂಬ ಸಂಕಲನವನ್ನು ಹೊರತಂದಿದ್ದಾರೆ. ಮಕ್ಕಳು ಓದಿ, ಹಾಡಿಕೊಂಡು ನಲಿದಾಡುವಂತಹ ಹಲವು ರಚನೆಗಳು ಈ ಪುಸ್ತಿಕೆಯಲ್ಲಿವೆ (೧೯೯೨ರ ಪ್ರಕಟಣೆ). ಮುಗ್ಧತೆ, ಸಹಜತೆ, ರಮಣೀಯತೆ ಅವರ ಅಂದಿನ ಬರವಣಿಗೆಯ ಮುಖ್ಯ ಆಕೃತಿಗಳು. ಗಡಾದವರು ಒಬ್ಬ ಉತ್ಸಾಹಿ ಕಾರ್ಯಕರ್ತನಂತೆ ಮಕ್ಕಳ ಸಾಹಿತ್ಯಲೋಕದಲ್ಲಿ ಇಂದು ದುಡಿಯುತ್ತಿರುವುದನ್ನು ನಾವೆಲ್ಲ ನೋಡಿದ್ದೇವೆ.

'ಚಿಂವ್ ಚಿಂವ್ ಗುಬ್ಬಿ'ಯಲ್ಲಿ ಗಣೇಶನಿಂದ ಹಿಡಿದು ಕೋತಿಯವರೆಗೆ ಕಾವ್ಯದ ವಸ್ತುಗಳಿವೆ. ನನ್ನ ತಮ್ಮ, ಬಂತು ಮಳೆ, ತಮ್ಮನ ಸೈಕಲ್ಲು , ನಮ್ಮ ಶಾಲೆ, ಪುಟ್ಟ ಕಂಡ ಜಾತ್ರೆ, ಮೊಲದ ಜಾಣತನ, ನಮ್ಮಯ ಟಿವ್ಹಿ, ಹೀಗೆ ರಾಜೇಂದ್ರ ತನ್ನ ಭಾವಪ್ರಪಂಚವನ್ನು ವಿಸ್ತರಿಸಿಕೊಳ್ಳುತ್ತಾನೆ. ಶಾಲೆಯನ್ನು ವರ್ಣಿಸುತ್ತಾನೆ, ದೇಶವನ್ನು ಹಾಡಿ ಹೊಗಳುತ್ತಾನೆ, ರಾಷ್ಟ್ರಧ್ವಜದ ಮಹತ್ವವನ್ನು ಸಾರುತ್ತಾನೆ, ತುಂಟ ತಂಗಿಯನ್ನು ಛೇಡಿಸುತ್ತಾನೆ, ಹಕ್ಕಿಯಾಗಿ ಕನಸಿನ ಗೂಡು ಕಟ್ಟುತ್ತಾನೆ.

> ಹೊಲದಿ ಕೀಟವ ತಿಂದು
> ಬೆಳೆಯ ರಕ್ಷಿಸುತ್ತಿದ್ದೆ
> ಅಳುವ ಮುದ್ದು ಕಂದಗಳಿಗೆ
> ಲಾಲಿ ಗೀತೆ ಹಾಡುತ್ತಿದ್ದೆ

ಬೆಳೆವ ಸಿರಿ ಮೊಳಕೆಯಲ್ಲಿ ನೋಡು ಎನ್ನುವಂತೆ ಭವಿಷ್ಯದಲ್ಲಿ ತಾನು ಮುನ್ನಡೆಯಬೇಕಾದ ಸಾಧನಾಮಾರ್ಗದ ಸೂಚನಾಫಲಕದ ಮೇಲೆ ಬರೆದಿರುವ ಮಾತಿನಂತಿವೆ ಮೇಲಿನ ಸಾಲುಗಳು.

ಗಡಾದವರು ೨೦೧೧ ರಲ್ಲಿ ಹೊರತಂದ 'ಹೇಳಿ ನಾನು ಯಾರು?' ಎಂಬ ಶೈಕ್ಷಣಿಕ ಮಕ್ಕಳ ಒಗಟುಗಳು ಮತ್ತು ಅದಕ್ಕೂ ಮೊದಲು ಪ್ರಕಟಿಸಿದ 'ಹೇಳು ನನ್ನ ಹೆಸರೇನು?' ಕೃತಿಗಳು ಮಕ್ಕಳ ಬೌದ್ಧಿಕ ಬೆಳವಣಿಗೆ ದೃಷ್ಟಿಯಿಂದ ಮಹತ್ವದ ಕೆಲಸಗಳಾಗಿವೆ. ಅವರಲ್ಲಿ ಬದುಕಿನ ಬಗ್ಗೆ ಯೋಚನಾ ಕ್ರಮವೊಂದನ್ನು ಹುಟ್ಟುಹಾಕುವಂತಿವೆ.

***

ಕಾಸರಗೋಡು-ಕುಂಬಳೆಯ ರಾಜ್ಯಶ್ರೀ ಕುಳವರ್ಮ ಸಾಹಿತ್ಯ ಜಗತ್ತಿನಲ್ಲಿ ಮುಟ್ಟಿದ್ದೆಲ್ಲ ಚಿನ್ನವೆನ್ನುವಂತೆ ಅವಕಾಶ-ಮನ್ನಣೆ-ಪ್ರಶಸ್ತಿಗಳನ್ನು ಬಾಚಿಕೊಳ್ಳುತ್ತಾ ನಡೆಯುತ್ತಿದ್ದಾಳೆ. 'ಕಾರಂಜಿ', 'ನಗುವ ಹೂಗಳು', 'ಯುಗಾದಿಯ ಕುಸುಮಗಳು', 'ಪರಿಸರ ಪಲ್ಲವಿ', 'ಚೆಲುವಿನ ಹೂಮಾಲೆ', 'ತಾತ್ವಿಕ ವಚನಗಳು', 'ಕವನ ಸಂಕಲನಗಳು', 'ನರುಗಂಪು ಕಥಾಸಂಕಲನ', 'ನವೋದಯ ಪ್ರಬಂಧ ಸಂಕಲನ'ಗಳನ್ನು ಈಗಾಗಲೇ ನೀಡಿರುವ ರಾಜ್ಯಶ್ರೀ ಬರಹದಲ್ಲಿ ಪ್ರೌಢಿಮೆ ಹಾಗೂ ರಚನಾ ಕೌಶಲ್ಯಗಳನ್ನು ಯಾರಾದರೂ ಗುರುತಿಸಬಹುದು. ಈ ಇಬ್ಬರು ಪ್ರತಿಭಾವಂತ ಕವಿಗಳ ಬರವಣಿಗೆಯು ಈಗಾಗಲೇ ಯುವ ಸಾಹಿತ್ಯಕ್ಕೆ ಸೇರಿರುವುದರಿಂದ ಚರ್ಚೆಯನ್ನು ಲಂಬಿಸುವಂತಿಲ್ಲ.

ಅದೇ ರೀತಿ ಮಕ್ಕಳ ಸಾಹಿತಿ ನಿಂಗು ಸೊಲಗಿಯವರ ಮಕ್ಕಳಾದ ಚೇತನ್ ಮತ್ತು ವಿಶ್ವಾಸ್ ಕೂಡ ವಿಶಿಷ್ಟವಾಗಿ ಬರೆಯುತ್ತಿದ್ದಾರೆ. ಆದರೆ ಚೇತನ ಯುವಕವಿಯೆಂದು ಗುರುತಿಸಲ್ಪಟ್ಟಿದ್ದಾನೆ.

ಗದಗ ಜಿಲ್ಲೆಯ ಚೈತ್ರ ವಿಶ್ವಬ್ರಾಹ್ಮಣ, ದೀಪಾ ಕೂಗಲೂರಮಠ, ಮಂಜರಿ ಹೊಂಬಾಳೆ; ಉತ್ತರ ಕನ್ನಡ ಜಿಲ್ಲೆ ತಾರಿಮಕ್ಕಿಯ ಕೃತ್ತಿಕಾರಾಣಿ ಮತ್ತು ಆಕೆಯ ಸೋದರ ತಿಲಕರಾಜ;

ಬಾಗಲಕೋಟೆಯ ಜ್ಯೋತಿ ಲಮಾಣಿ, ಆಕಾಶ ಬಡಿಗೇರ; ಹಾವೇರಿ ಜಿಲ್ಲೆಯ ಚೈತ್ರಾ ಕಲ್ಲೇಗೌಡರ, ಕಾವ್ಯ ಮಲಗುಂದ ; ಗುಲ್ಬರ್ಗದ ನಚಿಕೇತ , ಆಕಾಶ ಬಿ.ಪಿ ; ಬೀದರದ ಪವನ ಪ್ರಭು ; ಬಳ್ಳಾರಿಯ ಪಿ.ಜಿ ಶ್ರೀದೇವಿ , ಬಿ.ಎಂ ಪವಿತ್ರ ಹೀಗೆ ಬಹಳಷ್ಟು ಮಕ್ಕಳು ಬರೆಯುವ ಹವ್ಯಾಸವನ್ನಿಟ್ಟುಕೊಂಡಿದ್ದಾರೆಂದು ವಿವಿಧ ಮೂಲಗಳಿಂದ ತಿಳಿದುಬಂದಿದೆ. ಇವರನ್ನು ಪಾಲಕರು–ಶಿಕ್ಷಕರ ಮೂಲಕ ಸಂಪರ್ಕಿಸಲು ಪ್ರಯತ್ನಿಸಲಾಗಿದ್ದು ಅವರ ಸಾಹಿತ್ಯ ಲಭ್ಯವಾಗಿಲ್ಲ. ಹೊಸಪೇಟೆಯ ಡಾನ್ ಬಾಸ್ಕೊ ಸ್ಕೂಲಿನ ಆರ್. ಹುಲಿಗೆಮ್ಮ ಸಾಹಿತ್ಯಕವಾಗಿ ಬಹಳಷ್ಟು ಕ್ರಿಯಾಶೀಲಳಾಗಿದ್ದಾಳಂತೆ. ಆಕೆಗೆ ಪ್ರೋತ್ಸಾಹದ ಅವಶ್ಯಕತೆಯಿದ್ದು ಕಡೇ ಪಕ್ಷ ಆ ಭಾಗದ ಸಹೃದಯರು ಇದನ್ನು ಗಮನಿಸಬೇಕು.

ನನ್ನ ಗಮನಕ್ಕೆ ಬಾರದಿರುವ ಇನ್ನೂ ಬಹಳಷ್ಟು ಪುಠಾಣಿ ಸಾಹಿತಿಗಳು ಇದ್ದೇ ಇರುತ್ತಾರೆ. ಇನ್ನೂ ನಿಜವಾದ ಪ್ರತಿಭಾವಂತ ಮಕ್ಕಳಿದ್ದು ಸೂಕ್ತ ಪ್ರೋತ್ಸಾಹ ದೊರೆಯದೇ, ಅವರ ಅಭಿವ್ಯಕ್ತಿ ಹೊಸ್ತಿಲಾಚೆಗೆ ಇಣುಕದಿರುವ ಸಾಧ್ಯತೆಯೂ ಇದೆ. ತಮ್ಮೆಲ್ಲ ಒತ್ತಡದ ನಡುವೆಯೂ ಇಂಥ ಮಕ್ಕಳ ಪ್ರತಿಭೆ ನೀರು ಬೆಳಕು ದೊರೆಯದೇ ಕಮರಿ ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿ ಮಾತ್ರ ದೊಡ್ಡವರದ್ದು. ಒಂದು ವ್ಯವಸ್ಥೆಯೊಳಗಿನ ದೋಷದಿಂದ ಬೆಳೆಯುವ ಸಿರಿ ಬಡವಾಗಬಾರದು. ಸೌಲಭ್ಯಗಳ ಕೊರತೆಯಿಂದ ಮಗುವಿನ ವ್ಯಕ್ತಿತ್ವ ಉಡುಗಬಾರದು. ಇದರ ಬಗ್ಗೆ ನಮ್ಮೊಳಗಿನ ಸಂವೇದನೆ ಸದಾ ಎಚ್ಚರವಿರಲಿ.

ಶಿವಮೊಗ್ಗದ ಚಿಂತನಪರ ಬರಹಗಾರ, ಸ್ವತಃ ಕಾರ್ಯಕರ್ತರಂತೆ ದುಡಿಯುವ ಸರ್ಜಾಶಂಕರ ಹರಳಿಮಠವರ ಮಗ ಅಂತಃಕರಣ ಲೇಖನ ಬರೆಯತೊಡಗಿದ್ದಾನೆ. ನಾಲ್ಕನೇ ತರಗತಿಯಲ್ಲಿ ಓದುತ್ತಿರುವ ಪೋರ ಪತ್ರಿಕೆಯೊಂದಕ್ಕೆ ಅಂಕಣಗಳನ್ನು ಬರೆಯುತ್ತಿದ್ದಾನೆ. ತಂದೆಯ ಮಾರ್ಗದರ್ಶನವಿದ್ದರೂ ಅದು ಕೇವಲ ಕನಿಷ್ಠ fine tuninದ ಮಟ್ಟಿಗೆ ಮಾತ್ರವಿದ್ದೀತು. ಮಕ್ಕಳ ಹೋಂವರ್ಕನ್ನು ಪಾಲಕರು ಪೂರೈಸಬೇಕಾಗಿರುವಾಗ ಈ ಹುಡುಗ ವಿವಿಧ ವಿಷಯಗಳ ಮೇಲೆ ಲೇಖನ ಬರೆಯುವುದೆಂದರೆ ವಿಭಿನ್ನ ಸಾಧ್ಯತೆಯ ಉದಾಹರಣೆಯಾಗುತ್ತದೆ.

ನಾನು ಸಂಗ್ರಹಿಸಿರುವ ಅಂತಃಕರಣನ ಕೆಲವು ಲೇಖನಗಳೆಂದರೆ ಒಂದು ರೋಚಕ ಟಿ೨೦ ಪಂದ್ಯದ 'ಕಥೆ ಹೇಳುವೆ' 'ಮಾನವ ಲೋಕದ ಬೆಳಕಿನ ಕಿರಣ ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್', 'ನಮ್ಮ ಮನೆಯಲ್ಲಿ ಬಿರುಗಾಳಿ ಬೀಸಿದ ಆಮ್ ಆದ್ಮಿ ಪಾರ್ಟಿ!', 'ಕ್ರಾಂತಿಕಾರಿ ಭಗತ್ ಸಿಂಗ್' ಮುಂತಾದವು. ಹುಡುಗ ಈ ಎಲ್ಲ ಮಾಹಿತಿಗಳನ್ನು ಸಂಗ್ರಹಿಸಿ ಬರೆದಿದ್ದಾನಾದರೂ ತನ್ನ ಪುಟ್ಟ ಮನಸ್ಸಿನೊಳಗಿನ ಅನುಭವಗಳನ್ನೂ ಬಾಲ್ಯದ ಹಸಿತನದೊಂದಿಗೆ ಬೆರೆಸಿದ್ದಾನೆ. ದೆಹಲಿಯಲ್ಲಿ ಕಳೆದ ೨೦೧೩ರ ಚುನಾವಣೆಯಲ್ಲಿ ಬಿಜೆಪಿ ೩೨ ಸ್ಥಾನಗಳನ್ನು ಪಡೆದಿದ್ದರೂ ೨೮ರಲ್ಲಿ ಗೆದ್ದ ಆಪ್ ಹೇಗೆ ಅಧಿಕಾರಕ್ಕೆ ಬಂದಿತೆಂದು ತನಗೆ ತಿಳಿಯಲಿಲ್ಲ ಎಂದಿದ್ದಾನೆ. ಅಪ್ಪ ರಾಜಕೀಯ ಲೆಕ್ಕಾಚಾರದ ಮೂಲಕ ತಿಳಿಹೇಳಿದರೂ ತನಗೆ ಅರ್ಥವಾಗಲಿಲ್ಲ ಅಂತ ಮುಗ್ಧತೆಯಿಂದ ಹೇಳುತ್ತಾನೆ.

ಅಪ್ಪ ಕೇಜ್ರಿವಾಲ್ ಪಕ್ಷದ ಪರ ಪ್ರಚಾರಕ್ಕೆ ಹೋಗುವುದು, ಅಮ್ಮ ಅದಕ್ಕೆ ತಕರಾರು ಎತ್ತುವುದು, ಸ್ವತಃ ತನಗೆ ಪರೀಕ್ಷೆ ಎದುರಿಸುವ ದುಗುಡಗಳ ಮಧ್ಯೆ ಮಗು ತನಗಾಗುವ ಅನುಭವವನ್ನು ದೊಡ್ಡವರು ಬೆಚ್ಚಿ ಬೀಳುವಂತೆ ಪ್ರಕಟಿಸುತ್ತದೆ.

'ಅಂಥೂ ಈ ಆಮ್ ಆದ್ಮಿ ಪಾರ್ಟಿಯಿಂದ ಭ್ರಷ್ಟಾಚಾರ ನಿರ್ಮೂಲನೆಯಾಗುತ್ತದೆಯೊ, ನಮ್ಮ ಮನೆಯಲ್ಲಿ ಇನ್ನೇನಾದರೂ ಆಗುತ್ತದೆಯೋ ಆ ದೇವನೊಬ್ಬನಿಗೆ ಗೊತ್ತು!'

ಹೀಗೆ ಅಂತಃಕರಣ ತನ್ನ ಲೇಖನವನ್ನು ಮುಗಿಸುತ್ತಾನೆ.

ವಿದ್ಯಾಸಾಗರ ಬಾಲ ಪುರಸ್ಕಾರ ಪಡೆದಿರುವ ಅಂತಃಕರಣ ಅಂತರ್ಜಾಲ ಪತ್ರಿಕೆ 'ವಿಶ್ವಕನ್ನಡಿಗ'ದಲ್ಲಿ ಅಂಕಣಕಾರನಾಗಿ 'ಮಿಂಚು' ಎನ್ನುವ ಕ್ರೀಡಾ ಅಂಕಣ ಬರೆಯುತ್ತಿದ್ದಾನೆ. ಇಷ್ಟು ಸಣ್ಣ ವಯಸ್ಸಿನಲ್ಲಿಯೆ ಐದು ಪುಸ್ತಕಗಳನ್ನು ಪ್ರಕಟಿಸುವ ಪ್ರತಿಭೆ ತೋರಿದ್ದಾನೆ. 'ಮಿಂಚಿನ ಬೆಳಕು'(ಅಂಕಣ ಪ್ರಬಂಧಗಳು), 'ಮೆರವಣಿಗೆ' (ಕಿರುಕತೆಗಳು), 'ಅಮ್ಮನ ಸಿಟ್ಟು' (೪೦ ಕವಿತೆಗಳು) ಎನ್ನುವ ಪುಸ್ತಕಗಳು ಬೆನಕ ಬುಕ್ಸ್ ಬ್ಯಾಂಕ್, ಯಳಗಲ್ಲು ಪ್ರಕಾಶನದಿಂದ ೨೦೧೪ರಲ್ಲಿ ಪ್ರಕಟಗೊಂಡಿವೆ.

***

ವಿಸ್ಮಯಾ ಅಂಗಡಿ ಕೂಡ ಕೆಲವು ಕವಿತೆಗಳನ್ನು ಬರೆದಿದ್ದಾಳೆ. ಆಕೆಯಲ್ಲಿ ಬರೆಯುವ ಉತ್ಸಾಹ ಹುಟ್ಟಿಕೊಳ್ಳುವದಕ್ಕೆ ನಾನು ಕೆಲವು ಕಾರಣಗಳನ್ನು ಗುರುತಿಸಿದ್ದೇನೆ. ಸಾಹಿತ್ಯದಿಂದ ಲಭ್ಯವಾಗುವ ಮನ್ನಣೆಗೆ ಕೂಡ ಆಕರ್ಷಿತಳಾಗಿರಬಹುದು. ಅಪ್ಪನೊಂದಿಗೆ(ನನ್ನೊಂದಿಗೆ) ಓಡಾಡುವಾಗ ಸಿಗುವ ದೊಡ್ಡ ಸಾಹಿತಿಗಳ ಸಂಪರ್ಕ ಪ್ರೇರಣೆಯಾಗಿರಬಹುದು. ಕಾರ್ಯಕ್ರಮದಲ್ಲಿ ಭಾಗವಹಿಸುತ್ತ 'ಕವಿ–ಕಾವ್ಯ' ಸಂಗತಿಗೆ ದಕ್ಕುವ ವೇದಿಕೆ, ಅವಕಾಶಗಳು ಎಳೆ ಮನಸ್ಸಿಗೆ ಖುಷಿ ನೀಡಿರಬಹುದು. ಹೀಗೆ ತಂತಾನೆ ಒದಗಿಬಂದ ಸಾಹಿತ್ಯಿಕ ಹಿನ್ನೆಲೆಯ ವಿಶೇಷ ಸೌಲಭ್ಯಗಳು ಮಕ್ಕಳ ಬೆಳವಣಿಗೆಗೆ ಸಹಾಯವಾಗುವುದು ಎಲ್ಲರಿಗೂ ತಿಳಿದಿರುವ ಸಂಗತಿಯೆ. ಅಂತೆಯೆ ಆಕೆಯ ತಮ್ಮ ಪರ್ವ ನಾವು ಗಮನಿಸುವ ಮೊದಲೇ ಕೆಲವು ಕತೆಗಳನ್ನು ಬರೆದಿದ್ದಾನೆ. ಅವುಗಳಲ್ಲಿನ ಒಂದರ ಸಾರಾಂಶ ಹೀಗಿದೆ.

'ಒಂದು ಹಕ್ಕಿ ಗೂಡು ಕಟ್ಟಿ ತತ್ತಿಯನ್ನು ಇಟ್ಟಿರುತ್ತದೆ. ಗಾಳಿಗೆ ಸಿಲುಕಿ ತತ್ತಿ ನಾಶವಾಗಿ ತಾಯಿ ಹಕ್ಕಿ ದುಃಖಕ್ಕೀಡಾಗುತ್ತದೆ. ಪಕ್ಕದ ಗೂಡಿನಲ್ಲಿರುವ ಇನ್ನೊಂದು ಹಕ್ಕಿ ತನ್ನಲ್ಲಿರುವ ನಾಲ್ಕು ಮರಿಗಳಲ್ಲಿ ಎರಡನ್ನು ಮೊದಲನೆಯದಕ್ಕೆ ಕೊಡುವುದಾಗಿ ಹೇಳಿ ಸಂತೈಸಲು ಪ್ರಯತ್ನಿಸುತ್ತದೆ. ಮರಿಗಳು ತನ್ನಲ್ಲಿಗೆ ಬರಲು ಒಪ್ಪಲಿಕ್ಕಿಲ್ಲ ಎಂಬ ಸಂಶಯ ದುಃಖಿತ ಪಕ್ಷಿಗೆ. ತಾನು ತಿಳಿಹೇಳಿ ಕಳಿಸುವುದಾಗಿ ಉಪಕಾರಿ ಪಕ್ಷಿ ಭರವಸೆ ನೀಡುತ್ತದೆ.'

ವಿಸ್ಮಯ ನಾಲ್ಕನೇ ತರಗತಿಯಲ್ಲಿರುವಾಗ ಬರೆದ ಕವಿತೆಯೊಂದು ಹೀಗಿದೆ :

ಆಡೋಣ ಬಾ ಗೆಳತಿ ಆಡೋಣ ಬಾ
ಅಪ್ಪನಿಗೆ ಆಫೀಸಿನ ಕೆಲಸದ ಚಿಂತೆ
ಅವ್ವನಿಗೆ ಅಡುಗೆ ಕೆಲಸ ಕಂತೆಕಂತೆ
ಶಾಲೆ ಟ್ಯೂಷನ್ ಹೋಮವರ್ಕು
ಜಾಣರಾಗಲು ಎಲ್ಲ ಬೇಕೇ ಬೇಕು
ಮನದ ಆನಂದಕೆ ಆಟವೂ ಬೇಕು
ಲಗೋರಿ ಕುಂಟೋಬಿಲ್ಲೆ ಹಾವು ಏಣಿ

ಆಣಿಕಲ್ಲು ಅಲ್ಲಿಕೇರಿ ಚಿನ್ನಿಮಣಿ
ಎಲ್ಲಿ ಹೋದಾವು ಗೆಳತಿ?
ಆಡೋಣ ಬಾ ಗೆಳತಿ ಆಡೋಣ ಬಾ.

ತಮ್ಮ ಮಕ್ಕಳು ಏನನ್ನಾದರೂ ಗೀಚಿದಾಗ ಪಾಲಕರು ಪ್ರೋತ್ಸಾಹ ನೀಡುವುದನ್ನು ಮಾತ್ರ ಮರೆಯಬಾರದು. ಏಕೆಂದರೆ ಮಕ್ಕಳು ಬರೆದದ್ದರಲ್ಲಿ ಒಳ್ಳೆಯದು ಕೆಟ್ಟದ್ದು ಎಂಬುವುದಿರುವುದಿಲ್ಲ.

***

ಇನ್ನು ಮಕ್ಕಳಲ್ಲಿ ಸಾಹಿತ್ಯ ಸಂಸ್ಕೃತಿ ಬಗೆಗಿನ ಒಲವನ್ನು ಉದ್ದೀಪನಗೊಳಿಸಲು ಹಲವಾರು ಮಾರ್ಗಗಳಿವೆ. ಏಕೆಂದರೆ ಕಳೆದೆರಡು ಶತಮಾನಗಳ ಆಧುನಿಕ ವಿಜ್ಞಾನದ ಆವಿಷ್ಕಾರ ಮತ್ತು ಇಂದಿನ ಜಾಗತೀಕರಣ, ನಮ್ಮ ಜನಜೀವನದ ಅನೇಕ ಪಲ್ಲಟಗಳಿಗೆ ಕಾರಣವಾಗಿವೆ. ವಿಜ್ಞಾನ ಕೇವಲ ಜ್ಞಾನವಾಗಿ ಬರದೆ ನಮಗೆ ಬಿಡುಗಡೆಯ ಸೌಲಭ್ಯವಾಗಿ ಬಂದಿದ್ದರಿಂದ 'ಸಾಮಗ್ರಿ ಅಧುನಿಕತೆ' ಮನೆ ಮಾಡಿದೆ. ಮಕ್ಕಳು ವಿವೇಚನೆಯ ಶಕ್ತಿಯಿಂದ ಇದನ್ನು ಎದುರಿಸಲಾರರು (ದೊಡ್ಡವರಿಗೇ ಸಾಧ್ಯವಾಗುತ್ತಿಲ್ಲ). ಈ ಸಂಸ್ಕೃತಿಯ ಬಡತನ ಅವರ ಸರ್ವಾಂಗೀಣ ಬೆಳವಣಿಗೆಗೆ ಅಡಚಣೆಯಾಗಬಾರದು. ನಮ್ಮ ನೆಲದೊಡಲ ಫಲವತ್ತತೆಯನ್ನು ಬಳಸಿಕೊಂಡು ಆಧುನಿಕತೆಯ ಪೋಷಣೆಯೊಂದಿಗೆ ಪರ್ಯಾಯ ಸಂಸ್ಕೃತಿಯನ್ನು ಕಟ್ಟಬೇಕಾಗಿದೆ. ಆಧುನಿಕ ಸಂಸ್ಕೃತಿಯ ಕ್ಯಾನವಾಸಿನ ಮೇಲೆ ಜನಪದ ಸಾಹಿತ್ಯದ ಕೆಲವಂಶಗಳು ಈ ನಿಟ್ಟಿನಲ್ಲಿ ಕೆಲಸಕ್ಕೆ ಬರುವ ಎಲ್ಲ ಅವಕಾಶಗಳೂ ನಮ್ಮ ಮುಂದಿವೆ.

ಜನಪದ ಮಕ್ಕಳ ಹಾಡುಗಳು ಅವರಲ್ಲಿ ಸೃಜನಶೀಲತೆಯ ಬೇರುಗಳನ್ನು ಗಟ್ಟಿಗೊಳಿಸುವಲ್ಲಿ ತುಂಬ ಸಹಕಾರಿಯೆಂದು ಹೇಳಬಹುದು. ಜನಪದ ಗೀತಸಾಹಿತ್ಯದ ವಿಶಿಷ್ಟ ಪ್ರಕಾರದ ಈ ಹಾಡುಗಳು ಅವರಲ್ಲಿ ಜೀವನೋತ್ಸಾಹವನ್ನು ಪ್ರೇರೇಪಿಸುವುದರ ಜೊತೆಗೆ ಬದುಕಿನ ಅನುಭವದ ತಿಳಿವಳಿಕೆಯನ್ನು ನೀಡುತ್ತವೆ. ಉತ್ತರ ಕರ್ನಾಟಕದಲ್ಲಿ 'ಚುಕ್ಕೋಳ ಪದಗಳು' ಎಂದು ಕರೆಯಿಸಿಕೊಳ್ಳುವ ಅವು, ಮಕ್ಕಳಿಗಾಗಿ ಜನಪದರು ಹಾಡಿದ ಹಾಡುಗಳಾಗಿವೆ. ಅವುಗಳೆಂದರೆ ದೇವರ ಪದಗಳು, ಆಟದ ಹಾಡುಗಳು, ಪರಿಹಾಸದ ಹಾಡುಗಳು, ಪ್ರಕೃತಿ ಸಂಬಂಧಿ ಹಾಡುಗಳು, ಆಚರಣೆಯ ಹಾಡುಗಳು, ಕಥನ ಗೀತೆಗಳು, ಎಣಿಕೆ ಹಾಡುಗಳು, ಆಧುನಿಕ ಹಾಡುಗಳು, ಅಶ್ಲೀಲ ಹಾಡುಗಳು, ಲಾಲಿ ಹಾಡು, ತೊಟ್ಟಿಲ ಹಾಡು, ಅಣಿಪೀಣಿ ಮುಂತಾದವುಗಳು.

ಎಣಿಕೆಯ ಹಾಡುಗಳು ಮಕ್ಕಳಿಗೆ ಮನರಂಜನೆ ನೀಡುವುದಲ್ಲದೆ ಅಂಕಿ ಸಂಖ್ಯೆಯ ಜ್ಞಾನವನ್ನು ಒದಗಿಸಿಕೊಡುವುದು ವಿಶೇಷ.

ಒಂದು ಎರಡು, ಶಾಲೆಗೆ ಹೊರಡು
ಮೂರು ನಾಲ್ಕು ಪಾಟಿಯು ಬೇಕು
ಐದು ಆರು, ಸೈಕಲ್ಲ ಏರು

ಏಳು ಎಂಟು, ಪೆಪ್ಪರಮೆಂಟು
ಒಂಭತ್ತು ಹತ್ತು, ನಡಿ ಹೊತ್ತಾತು.

ಮಕ್ಕಳು ಹಾಡಿಕೊಳ್ಳುವ 'ಕಣ್ಣಾಮುಚ್ಚೆ 'ಯಂತೂ ಕನ್ನಡ ಎಲ್ಲೆಲ್ಲಿ ಹಬ್ಬಿದೆಯೊ ಅಲ್ಲಲ್ಲಿ ಚೆಣ್ಣರಿಂದ ಹಾಡಲ್ಪಟ್ಟಿದೆ. ಇದು ಬದುಕಿನ ಕ್ಷಣಿಕತೆಯನ್ನು ಪ್ರಚುರಪಡಿಸುವ ಅರ್ಥಪೂರ್ಣ ಹಾಡೆಂಬುದು ಎಲ್ಲರಿಗೂ ಗೊತ್ತು.

ಕಣ್ಣಾಮುಚ್ಚೆ
ಕಾಡೇಗೂಡೆ
ಉದ್ದಿನ ಮೂಟೆ
ಉರುಳೇ ಹೋಯ್ತು
ನಮ್ಮಯ ಹಕ್ಕಿ ಬಿಡ್ತೇನೆ
ನಿಮ್ಮಯ ಹಕ್ಕಿ ಮುಚ್ಚಿಟ್ಟುಕೊಳ್ರಿ.

ಆನೆ ಬಂತೊಂದಾನೆ
ಯಾವೂರ ಆನೆ
ಬಿಜಾಪುರದಾನೆ
ಇಲ್ಲಿಗ್ಯಾಕ ಬಂತು
ಹಾದಿ ತಪ್ಪಿ ಬಂತು
ಹಾದಿಗೊಂದು ದುಡ್ಡು
ಬೀದಿಗೊಂದು ದುಡ್ಡು
ಅದ ದುಡ್ಡು ಕೊಟ್ಟು
ಸೇರ ಕೊಬ್ರಿ ತಂದು
ಲಟಲಟ ಮುರದು
ಕೊಬ್ರಿ ಬೇಕೊ ಬೆಲ್ಲ ಬೇಕೊ.....

ಈ ಹಾಡನ್ನು ಕೇಳದೆ ಬೆಳದ ಕನ್ನಡ ಮಕ್ಕಳೇ ಇಲ್ಲ. ಇಂಥ ಹಾಡುಗಳು ಮಕ್ಕಳ ಮನಸ್ಸನ್ನು ಪ್ರಫುಲ್ಲಗೊಳಿಸುವುದರಲ್ಲಿ ಸಂಶಯವೇ ಇಲ್ಲ. ನಮ್ಮೂರಲ್ಲಿ ಗುಳ್ಳವ್ವನ ಪೂಜೆ ಮಾಡುವಾಗ ಮಹಿಳೆಯರು ಹೇಳುತ್ತಿದ್ದ ಹಾಡು ಇಂದಿಗೂ ನನಗೆ ನಗೆ ತರಿಸುತ್ತದೆ.

ಗುಳ್ಳವ್ ಗುಳ್ಳವ್
ಗುಳ್ಳವ್ವನ ಗಂಡ
ಒನಕಿ ಮಿಂಡ
ತಳವರ ತಾಟ್ಯಾ
ಎಮ್ಮಿ ಹಾಟ್ಯಾ....

ಎಲ್ಲ ಮಕ್ಕಳೂ ಕವನ–ಕಥೆ ಬರೆಯಲೆಂದು ನಿರೀಕ್ಷಿಸುವುದು ತಪ್ಪಾಗುತ್ತದೆ. ಆದರೆ ನಮ್ಮಲ್ಲಿರುವ ಶ್ರೀಮಂತ ಜನಪದ ಹಾಡುಗಳು ಅವರ ಬಾಯಲ್ಲಿ ಹರಿದಾಡಬೇಕು. ಇಲ್ಲವೆ

ಕಿವಿಯಲ್ಲಿ ಸುಳಿದಾಡಬೇಕು. ಪುರಾಣ ಪುಣ್ಯ ಕಥೆಗಳ ಜೊತೆಗೆ ಇತಿಹಾಸವನ್ನು ತಿಳಿದಿರಬೇಕಾಗುತ್ತದೆ. ಇದರಿಂದ ಕನಸು-ಕಲ್ಪನೆ ಮತ್ತು ವಾಸ್ತವಿಕತೆಯನ್ನು ಸರಿಸಮ ಭಾವದಿಂದ ಸ್ವೀಕರಿಸುವ ಮನೋಭಾವನೆ ಬೆಳೆಯುತ್ತದೆ. ಬದುಕನ್ನು ಬಂದಂತೆ ಎದುರಿಸುವ ಸಂತುಲಿತ ವ್ಯಕ್ತಿತ್ವ ಅವರದಾಗುತ್ತದೆ.

ಸಮಾಜ ಜೀವಿಗಳಾಗಿ ಬೆಳೆಯಬೇಕಾದ ಮಕ್ಕಳಲ್ಲಿ ಎಲ್ಲಕ್ಕಿಂತ ಮೊದಲು ಆತ್ಮವಿಶ್ವಾಸವನ್ನು ವೃದ್ಧಿಸುವಂತ ಶೈಕ್ಷಣಿಕ ಸಾಮಾಜಿಕ ವ್ಯವಸ್ಥೆಯೊಂದನ್ನು ರೂಪಿಸಲು ದೊಡ್ಡವರು ಶ್ರಮಿಸಬೇಕಾಗಿದೆ. ಭಾರತದಂತ ವೈವಿಧ್ಯಮಯ ಸಂಸ್ಕೃತಿ ಸಂಪ್ರದಾಯಗಳಿರುವ ದೇಶದಲ್ಲಿ ಹಾಗೊಂದು ಸಾಮಾನ್ಯೀಕರಣಗೊಂಡ domain ನಿರ್ಮಿಸುವುದು ಸುಲಭವೆಂದು ಹೇಳಲಾಗದು. ಅಸಾಧ್ಯವೆಂದು ಹೇಳಿದರೆ ನಿರಾಶಾವಾದದ ಉತ್ತಮ ಉದಾಹರಣೆಯಾಗಬಹುದಷ್ಟೆ. ನೆನಪಿಡಿ, ಅಂಥದೊಂದು ವಾತಾವರಣವನ್ನು ಹುಟ್ಟು ಹಾಕಲು ಸಾಧ್ಯವಾದರೆ ಅದು ಇಡೀ ಜಗತ್ತಿನಲ್ಲಿಯೇ ಉತ್ಕೃಷ್ಟವಾದ ಮಕ್ಕಳ ಮಂದಿರದಂತೆ ಗೋಚರಿಸುತ್ತದೆ.

ಮಕ್ಕಳು ವೈಯಕ್ತಿಕ ನೆಲೆಯಲ್ಲಿ ಆತ್ಮವಿಶ್ವಾಸ ವೃದ್ಧಿಸಿಕೊಳ್ಳಲು ಪಾಲಕರು, ಪೋಷಕರು, ಶಿಕ್ಷಕರು, ಹಿರಿಯರು ಯಾವುದೇ ಹಂತದಲ್ಲಿ ಮತ್ತು ಎಲ್ಲ ಹಂತದಲ್ಲಿ ದಾರಿ ತೋರಬೇಕಾಗುತ್ತದೆ. ಅದು facilitation ಮಾದರಿಯಲ್ಲಿರಲಿ. ಒಳ್ಳೆಯ ಓದು, ಉತ್ತಮ ಅಭಿರುಚಿ, ಧ್ಯಾನ-ಯೋಗ, ಸಂವಹನ ಕೌಶಲ್ಯಗಳು, ಸಣ್ಣಪುಟ್ಟ ಸಮಸ್ಯೆಗಳ ನಿವಾರಣೆ, ಪ್ರವಾಸ-ಸಾಹಸ, ಮಾನವೀಯ ಸಂಬಂಧಗಳು, ಇತರರ ಬಗ್ಗೆ ಕರುಣೆ-ಮೆಚ್ಚುಗೆ, ಪ್ರಾಮಾಣಿಕತೆ, ಸತ್ಯಸಂಧತೆ, ಆರೋಗ್ಯ ಕಾಳಜಿ, ವೈಜ್ಞಾನಿಕ ಯೋಚನಾಕ್ರಮ, ಇವೇ ಮುಂತಾದ ಮೌಲ್ಯಗಳು/ಚಟುವಟಿಕೆಗಳು ಮಕ್ಕಳಲ್ಲಿ ಸದಾ ಕಾಣುತ್ತಿದ್ದರೆ ಒಳ್ಳೆಯದು.

೯

ಬಾಲ್ಯ ಸಂವೇದನೆಯ ನಿರ್ವಹಣೆ

ಡಾ. ಎಚ್.ಎಸ್. ವೆಂಕಟೇಶಮೂರ್ತಿ

ಕಾಡಿಗೆ ಹಚ್ಚಿದ ಕಣ್ಣು, ತೀಡೀ ಮಾಡಿದ ಹುಬ್ಬು
ಮಾವೀನ ಹೋಳು ನಿನ ಕಣ್ಣು ಕಂದಯ್ಯ।
ಮಾವ ಬಣ್ಣೀಸಿ ಕರೆದಾನ॥

ಮಕ್ಕಳಿಗಾಗಿ ಯಾರು ಬರೆಯಬೇಕು ಎನ್ನುವುದು ಹರಿಯುವ ನದಿಯಲ್ಲಿ ಅಲೆ ತಲೆ ಎತ್ತುವ ಹಾಗೆ ಮತ್ತೆ ಮತ್ತೆ ತಲೆ ಎತ್ತುವ ಪ್ರಶ್ನೆ. ಮಕ್ಕಳಿಗಾಗಿ ಮಕ್ಕಳೇ ಬರೆಯಬೇಕೆಂದು ವಾದ ಮಾಡುವವರು ಇದ್ದಾರೆ. ಅದೇ ನಿಜವಾದ ಮಕ್ಕಳ ಸಾಹಿತ್ಯ. ದೊಡ್ಡವರು ಬರೆದಾಗ ಅವರು ಎಷ್ಟೇ ಪರಕಾಯಪ್ರವೇಶ ಚತುರರಾದರೂ ಮಕ್ಕಳ ಸಹಜ ಮುಗ್ಧತೆ ಅಲ್ಲಿ ಬರುವುದು ಸಾಧ್ಯವಿಲ್ಲ ಎನ್ನುವುದು 'ಮಕ್ಕಳ ಸಾಹಿತ್ಯ ಮಕ್ಕಳಿಂದ' ಎಂದು ವಾದಿಸುವವರ ಮುಖ್ಯ ನಿಲವು. ಯಾವುದೇ ಸಾಹಿತ್ಯವಿರಲಿ ಅದಕ್ಕೆ ಕಲಾತ್ಮಕತೆಯ ಪರಿಷ್ಕಾರವಾಗದೆ ಅದು ನಿಜವಾದ ಸಾಹಿತ್ಯವಾಗುವುದು ಸಾಧ್ಯವಿಲ್ಲ. ಮಕ್ಕಳು ಬರೆದುದರಲ್ಲಿ ಮುಗ್ಧತೆ ಇರುತ್ತದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಆ ಬರಹಕ್ಕೆ ಸಾಹಿತ್ಯ ಸಂಸ್ಕಾರವಾಗದೆ ಅದಕ್ಕೆ ಲಯದ ಸಹಜ ಸೊಗಸು, ಭಾಷೆಯ ಬೆಳಕು, ಕಲ್ಪನೆಯ ಜಿಗಿತ ಸಿದ್ಧಿಸಲಾರದು. ಮಕ್ಕಳೇ ಬರೆದ ಅನೇಕ ರಚನೆಗಳನ್ನು ನಾನು ನೋಡಿದ್ದೇನೆ. ಹಿಂದೆ ಕ್ಯಾಡ್ಬರಿಯವರು ಮಕ್ಕಳಿಗಾಗಿಯೇ ಒಂದು ಸ್ಪರ್ಧೆ ನಡೆಸಿ ನೂರಾರು ಮಕ್ಕಳ ರಚನೆಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. ಮಕ್ಕಳಲ್ಲಿ ಸೃಷ್ಟಿಶೀಲತೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಇಂಥ ಪ್ರಯೋಗಗಳು ಸ್ವಾಗತಾರ್ಹವಾದುವೇ. ಆದರೆ ಮಕ್ಕಳು ಹೀಗೆ ಬರೆದುದು ನಿಜವಾದ ಮಕ್ಕಳ ಸಾಹಿತ್ಯಕ್ಕೆ ಕಚ್ಚಾಮಾಲು ಎಂದು ನನಗೆ ಅನ್ನಿಸುತ್ತೆ. ಮಕ್ಕಳ ಕಲ್ಪನೆ ಹಾರಾಡುವ ನೆಲೆಯನ್ನು ಗುರುತಿಸಿಕೊಳ್ಳಲು ಈ ಬಗೆಯ ರಚನೆಗಳು ನಮಗೆ ಸಹಾಯ ಮಾಡುತ್ತವೆ. ಆದರೆ ಕ್ಯಾಡ್ಬರಿಯ ಆಂಥಾಲಜಿಯಲ್ಲಿ ಪಂಜೆಮಂಗೇಶರಾಯರ 'ತೆಂಕಣಗಾಳಿಯಾಟ', ಕುವೆಂಪು ಅವರ 'ಕಿಂದರಿಜೋಗಿ', ರಾಜರತ್ನಂ ಅವರ 'ತುತ್ತೂರಿ', ಸಿದ್ಧಯ್ಯಪುರಾಣಿಕರ 'ಅಜ್ಜನ ಕೋಲಿದು' – ಮೊದಲಾದ ರಚನೆಗಳ ಸಮೀಪಕ್ಕೆ ಬರುವ ರಚನೆಗಳೂ ಇಲ್ಲ. ನಮ್ಮ ದಿನಪತ್ರಿಕೆ, ವಾರಪತ್ರಿಕೆ, ಮಾಸಿಕಗಳಲ್ಲಿ ಪ್ರಕಟವಾಗುವ ಮಕ್ಕಳು ಬರೆದ ಕವಿತೆಗಳೆನ್ನುವ ಬರಹವನ್ನು ಒಮ್ಮೆ ಗಮನಿಸಿದರೆ ನನ್ನ ಮಾತಿನ ತಥ್ಯ ತನಗೆ ತಾನೇ ಸ್ಪಷ್ಟವಾಗುವುದು.

ಮಕ್ಕಳ ಸಾಹಿತ್ಯದಲ್ಲಿ ಮಕ್ಕಳ ಭಾಷೆ, ಮಕ್ಕಳ ಕಲ್ಪನೆ, ಮಕ್ಕಳ ಮುಗ್ಧತೆ ಇವೆಲ್ಲಾ ಇರಲೇ ಬೇಕು. ಅವುಗಳ ಹಿಂದೆ ಶ್ರೇಷ್ಠ ಮಟ್ಟದ ಸಾಹಿತ್ಯಕ ಕಸುಬುಗಾರಿಕೆ ಮತ್ತು ಮನಸ್ಸಿನ ಪಕ್ವತೆ ಇಲ್ಲದೆ ಮಕ್ಕಳ ಸಾಹಿತ್ಯ ಉನ್ನತಿ ಸಾಧಿಸಲಾರದು. ಅದಕ್ಕಾಗಿಯೇ ನಾನು ಹೇಳುವುದು – ಪ್ರೌಢತೆಯ ಹೆಗಲೇರಿ ಕುಳಿತ ಮುಗ್ಧತೆಯಿಂದ ಮಾತ್ರ ಅತ್ಯುನ್ನತ ಮಕ್ಕಳ ಸಾಹಿತ್ಯದ ನಿರ್ಮಿತಿ ಸಾಧ್ಯ. ಸಾಹಿತ್ಯ ಅಂದಮೇಲೆ ಅನುಭವದ ಆಯ್ಕೆ, ಅದರ ನಿರ್ಮಿತಿಗೆ ತಕ್ಕ ರೂಪದ ಆಯ್ಕೆ, ರೂಪವನ್ನು ಯುಕ್ತವಾಗಿ ಧರಿಸಬಲ್ಲ ಭಾಷೆಯ ಆಯ್ಕೆ, ಆ ಭಾಷೆಯೊಂದಿಗೆ ಭಾವಕ್ಕೆ ಸಾಥಿಯಾಗಿ ನಿಲ್ಲುವ ಉಚಿತ ಲಯದ ಆಯ್ಕೆ ಇವೆಲ್ಲಾ ಇರಲಿಕ್ಕೇ ಬೇಕು. ಅವು ಇಲ್ಲವಾದಲ್ಲಿ ಅತ್ಯುತ್ತಮ ಮಕ್ಕಳ ಸಾಹಿತ್ಯದ ನಿರ್ಮಿತಿ ಸಾಧ್ಯವೇ ಇಲ್ಲ. ಅಜ್ಜನ ಕೋಲನ್ನು ಕುದುರೆ ಎಂದು ಮಕ್ಕಳು ಕಲ್ಪಿಸಬಲ್ಲರು. ಆದರೆ ಈ ಕುದುರೆಯ ವಿಲಕ್ಷಣ ಗುಣಲಕ್ಷಣಗಳನ್ನು ಬಾಲ್ಯವನ್ನು ಆಧಾರವಾಗಿ ಇಟ್ಟುಕೊಂಡು ಈವತ್ತು ಪ್ರೌಢತೆಯ ನೆಲೆಯಲ್ಲಿ ನಿಂತ ಪ್ರಬುದ್ಧ ಕವಿ ಸಿದ್ಧಯ್ಯ ಪುರಾಣಿಕರಂಥವರು ಮಾತ್ರ ಕಲ್ಪಿಸಬಲ್ಲರು.

ಪದ್ಯದ ಕೊನೆಯ ಚೌಪದಿಯನ್ನು ಗಮನಿಸಿ:

> ಅರಬರ ದೇಶದಿ ದೊರೆಯದ ಕುದುರೆ
> ಕಾಠೇವಾಡದಿ ಕಾಣದ ಕುದುರೆ
> ಅರಸುಮಕ್ಕಳಿಗು ಸಿಕ್ಕದ ಕುದುರೆ
> ನನಗೇ ಸಿಕ್ಕಿದೆ ನನ್ನೀ ಕುದುರೆ
> ಅಜ್ಜನ ಕೋಲಿದು ನನ್ನಯ ಕುದುರೆ.

ಇದು ಮಕ್ಕಳ ಅನುಭವಲೋಕಕ್ಕೆ ಅನೇಕ ಹೊಸಗ್ರಹಿಕೆಗಳನ್ನು ದಕ್ಕಿಸುವ ದೃಷ್ಟಿಯಿಂದ ಬರೆಯಲಾದ ಚೌಪದಿ. ಮಕ್ಕಳಿಗೆ ಭಾರವಾಗದಂತೆ ಅವರ ಲೋಕಪರಿಚಯವನ್ನು ಹಿಗ್ಗಿಸುವ ಸಾಲುಗಳು ಇಲ್ಲಿವೆ. ಮಕ್ಕಳೇ ಬರೆದಿದ್ದರೆ ಈ ಬಗೆಯ ಸಾಲುಗಳು ಹುಟ್ಟುತ್ತಿರಲಿಲ್ಲ. ಪ್ರೌಢತೆಯನ್ನ ಬಚ್ಚಿಟ್ಟುಕೊಂಡ ಮುಗ್ಧತೆ ಮಕ್ಕಳ ಕವಿತೆಯ ಅಂಗವಿನ್ಯಾಸವಾಗಬೇಕೆಂದು ನಾನು ಬಯಸುತ್ತೇನೆ. ಇದನ್ನು ಬೇಕಾದರೆ 'ಇನ್ನೋಸೆನ್ಸ್ ಆಫ್ ವಿಸ್ಡಮ್' ಎಂದು ಕರೆಯಲಿಕ್ಕೆ ಅಡ್ಡಿಯಿಲ್ಲ. ಪಂಜೆಯವರ 'ಹಾವಿನ ಹಾಡು' ಎಂಬ ಕವಿತೆಯನ್ನೇ ಎತ್ತಿಕೊಳ್ಳಿ. ಅದು ಕೇವಲ ನಾಗರ ಹಾವನ್ನು ಕುರಿತ ಕವಿತೆಯೇ? ಅಲ್ಲ ಎನ್ನುತ್ತದೆ ಕನ್ನಡ ವಿಮರ್ಶೆ. ಈ ಪದ್ಯದ ಕೊನೆಯ ಚೌಪದಿಯನ್ನು ಗಮನಿಸಿ.

> ಬರಿಮೈ ತಣ್ಣಗೆ, ಮನದಲಿ ಬಿಸಿ ಹಗೆ,
> ಎರಡೆಳೆ ನಾಲಗೆ ಇದ್ದರು ಸುಮ್ಮಗೆ.
> ಎರಗುವೆ ನಿನಗೆ, ಈಗಲೆ ಹೊರಗೆ
> ಪೋ ಪೋ ಪೋ ಪೋ ಪೋ ಪೋ ಪೋ ಪೊ

ಈ ಸಾಲುಗಳು ಬ್ರಿಟಿಷ್ ಸಾರ್ವಭೌಮತ್ವಕ್ಕೆ ಕ್ವಿಟ್ ಇಂಡಿಯಾ ಎಂದು ಸೂಚ್ಯವಾಗಿ ಹೇಳುತ್ತಿವೆ ಎನ್ನುತ್ತಾರೆ ವಿಮರ್ಶಕರು. ದೊಡ್ಡವರಿಗೂ ದಕ್ಕುವ ಮಕ್ಕಳ ಕವಿತೆಗಳು ಎನ್ನುವಂಥ ವಿಮರ್ಶೆ ಇಂಥ ಕವಿತೆಗಳನ್ನು ಕುರಿತೇ ಹುಟ್ಟಿಕೊಳ್ಳುತ್ತದೆ. ನನ್ನ 'ಗುಬ್ಬಿಮರಿ' ಕವಿತಾ ಗುಚ್ಛದಲ್ಲಿ, ಮಕ್ಕಳಿಗೆ ಭಾರವಾಗದಂತೆಯೇ ಅನೇಕ ಗಂಭೀರ ಸಾಮಾಜಿಕನ್ಯಾಯದ ಹೇಳಿಕೆಗಳನ್ನು

ಮಾಡಲಾಗಿದೆ ಎಂದು ಕನ್ನಡ ವಿಮರ್ಶೆ ಗುರುತಿಸಿದೆ. ಒಂದು ಗುಬ್ಬಿಮರಿ ಕಾಗೆಮರಿಯೊಂದಿಗೆ ಆಡಿಕೊಳ್ಳುತ್ತಿದೆ. ಅದು ತಾಯಿ ಗುಬ್ಬಿಗೆ ಸಹ್ಯವಾಗುವುದಿಲ್ಲ. ಅದು ಮರಿಗೆ ನೀನು ಕಾಗೆ ಮರಿಯೊಂದಿಗೆ ಆಡುವುದು ಕೂಡದು, ಗುಬ್ಬಿಮರಿ ಏನಿದ್ದರೂ ಗುಬ್ಬಿಮರಿಯೊಂದಿಗೆ ಮಾತ್ರ ಆಡಿಕೊಳ್ಳಬೇಕು ಎಂದು ನಿರ್ಬಂಧಿಸುತ್ತದೆ. ಮುಗ್ಧ ಗುಬ್ಬಿಮರಿ ಕಾಗೆಮರಿ ಒಳ್ಳೆ ಮರಿ! ಅದರ ಜೊತೆ ಆಡಿದರೆ ಏನು ತಪ್ಪು ಎಂದು ಕೇಳುತ್ತದೆ. ಆಗ ತಾಯಿ ಗುಬ್ಬಿ ಕಾಗೆ ಮರಿಯ ಜೊತೆ ನೀನು ಆಡಿದರೆ ಅದರಂತೆ ನೀನೂ ಕಪ್ಪಗಾಗುತ್ತೀ ಎನ್ನುತ್ತದೆ. ಗುಬ್ಬಿ ಮರಿ ತಕ್ಷಣ ಉತ್ತರಿಸುತ್ತದೆ. 'ನನ್ನೊಂದಿಗೆ ಆಡಿಕೊಂಡರೆ ಕಾಗೆಮರಿ ನನ್ನ ಹಾಗೇ ಬೆಳ್ಳಗೂ ಆಗಬಹುದಲ್ಲ!?' ಇದನ್ನೇ ವಿಸ್ಡಮ್ ಆಫ್ ಇನ್ನೋಸೆನ್ಸ್ ಎಂದು ಗುರುತಿಸಬೇಕಾಗುತ್ತದೆ. ವರ್ಗಭೇದ ವರ್ಣಭೇದದ ಬಗ್ಗೆ ಯಾವ ಅಬ್ಬರವನ್ನೂ ಮಾಡದೆ ಸಾಮಾಜಿಕನ್ಯಾಯದ ಹೇಳಿಕೆಯನ್ನು ಇಲ್ಲಿ ಮಂಡಿಸಲಾಗಿದೆ. ಹೀಗೆ ಯಾವುದು ಉಚಿತವೋ ಆ ಮೌಲ್ಯಗಳು ಮಕ್ಕಳಿಗೆ ನೀತಿಯ ಭಾರವಿಲ್ಲದೆ ಹೃದ್ಗತವಾಗಬೇಕು ಎಂದು ಯಾರಿಗೆ ತಾನೇ ಅನ್ನಿಸುವುದಿಲ್ಲ?

ನನ್ನ 'ಕಾರ್ಪೊರೇಷನ್ ಲಾರಿ' ಎಂಬ ಪದ್ಯದಲ್ಲಿ ಹಾಳುಮೂಳನ್ನು ಹೊಟ್ಟೆಗೆ ಹಾಕಿಕೊಳ್ಳುವ ಕಾರ್ಪೊರೇಷನ್ ಲಾರಿಯ ಬಗ್ಗೆ ಮಗುವೊಂದು ವಹಿಸುವ ಅನುಕಂಪೆ ಮತ್ತು ಕಾಳಜಿ ಮುಖ್ಯವಾಗುತ್ತದೆ. 'ಬೇಕಾದ್ದೇನು ಹಾರೋದಕ್ಕೆ' ಎಂಬ ನನ್ನ ಇನ್ನೊಂದು ಪದ್ಯದಲ್ಲಿ ಮೇಡಂ ಮತ್ತು ಮರಿಹಕ್ಕಿಯ ಸಂವಾದವಿದೆ.

ಬೇಕಾದ್ದೇನು ಹಾರೋದಕ್ಕೆ?
"ಟೊಂಕದ ಪಕ್ಕ ರೆಕ್ಕೆ!"
ಅಷ್ಟೇ ಸಾಕೇ ಯೋಚಿಸಿ ನೋಡು; ಬೇಡವೇನು ಮಾಡು?

ಬೇಕಾದ್ದೇನು ಕುಕ್ಕೋದಕ್ಕೆ?
"ಮೂತಿಲೊಂದು ಕೊಕ್ಕು!"
ಅಷ್ಟೇ ಸಾಕೇ ಯೋಚಿಸಿ ಹೇಳು; ಬೇಡವೇನು ಕಾಳು?

ಬೇಕಾದ್ದೇನು ಬದುಕೋದಕ್ಕೆ?
"ಅಮ್ಮನ ಪ್ರೀತಿಯ ತೆಕ್ಕೆ!"
ಅಷ್ಟೇ ಸಾಕೇ ಬೇಡವೆ ಹೇಳು; ನಿನ್ನದೆ ಸ್ವಂತ ಬಾಳು!?

ಈ ಪದ್ಯದಲ್ಲಿ ಹಾರುವುದಕ್ಕೆ ರೆಕ್ಕೆ ಇದ್ದರೆ ಮಾತ್ರ ಸಾಲದು, ಹಾರಲಿಕ್ಕೆ ಬಯಲೂ ಬೇಕು ಎನ್ನುವ ಸಂಬಂಧೀತತ್ವವನ್ನು ಮಕ್ಕಳಿಗೆ ಅವರ ಭಾಷಾಕಲ್ಪದಲ್ಲೇ ದಾಟಿಸುವ ಪ್ರಯತ್ನವಿದೆ. ಮುಂದೆ "ಚಿನ್ನಾರಿ ಮುತ್ತ" ಚಿತ್ರಕ್ಕೆ ಹಾಡು ಬರೆಯುವಾಗ ಈ ಐಡಿಯಾವನ್ನ ಇನ್ನಷ್ಟು ಸರಳೀಕರಿಸಿ 'ರೆಕ್ಕೆ ಇದ್ದರೆ ಸಾಕೇ' ಎನ್ನುವ ಹಾಡನ್ನು ಬರೆದದ್ದಾಯಿತು. ಅದು ಈವತ್ತೂ ಕನ್ನಡ ಮಕ್ಕಳಿಗೆ ಪ್ರಿಯವಾದ ಒಂದು ಗೀತೆಯಾಗಿದೆ.

ಮಕ್ಕಳ ಕವಿತೆಗಳು ಎಂತೆಂಥಾ ಕಠೋರ ಸತ್ಯಗಳನ್ನು ತಮ್ಮ ಹೃದಯದಲ್ಲಿ ಬಚ್ಚಿಟ್ಟುಕೊಂಡಿರುತ್ತವೆ ಎನ್ನುವುದಕ್ಕೆ ಬ್ರೌನಿಂಗ್ ಕವಿಯ 'ಪೈಡ್ ಪೈಪರ್ ಆಫ್ ಹ್ಯಾಮಲಿನ್'

ಎಂಬ ಪ್ರಸಿದ್ಧ ಕವಿತೆಯನ್ನು ಗಮನಿಸಬೇಕು. ಕುವೆಂಪು ಅವರ ಕಿಂದರಿಜೋಗಿ ಕವಿತೆಗೆ ಪ್ರೇರಣೆ ಈ ಇಂಗ್ಲಿಷ್ ಕವನ. ಅಮೆರಿಕಾದ ಪೆನ್ಸಿಲ್ವೇನಿಯಾದಲ್ಲಿ ನೆಲೆಸಿರುವ ಎಚ್.ವೈ. ರಾಜಗೋಪಾಲ್ ಅವರು 'ಬೊಮ್ಮನಹಳ್ಳಿಯ ಕಿಂದರಿಜೋಗಿ'ಯ ಬಗ್ಗೆ ಬರೆಯುವಾಗ ಬ್ರೌನಿಂಗ್ ಕವಿಯ ಕವಿತೆಯ ಹಿನ್ನೆಲೆಯಲ್ಲಿರುವ ದಾರುಣ ದುರಂತಕಥೆಯೊಂದನ್ನು ಪ್ರಸ್ತಾಪಿಸುತ್ತಾರೆ. ಪೈಡ್ ಪೈಪರ್ ಕವಿತೆಯ ಹಿಂದೆ ಮಧ್ಯಕಾಲೀನ ಯುಗದಲ್ಲಿ ಸಂಭವಿಸಿದ ಮಕ್ಕಳ ಧರ್ಮಯುದ್ಧದ ಐತಿಹ್ಯವಿದೆ. ಪಶ್ಚಿಮ ಯೂರೋಪಿನ ಕ್ರೈಸ್ತರು , ತಮ್ಮ ಧರ್ಮದ ಪವಿತ್ರನಗರವೆಂದು ಪರಿಗಣಿಸಲ್ಪಟ್ಟಿರುವ ಜೆರುಸಲೇಂ ನಗರವನ್ನು ಮುಸ್ಲಿಮ್ ಧರ್ಮೀಯರಿಂದ ಮುಕ್ತಗೊಳಿಸಲು ಎಂಟು ಬಾರಿ ಸೈನಿಕ ಕಾರ್ಯಾಚರಣೆಗಳನ್ನು ನಡೆಸುತ್ತಾರೆ. ಇವನ್ನೇ ಕ್ರುಸೇಡ್‌ಗಳೆಂದು ಗುರುತಿಸುವುದು. ಹದಿಮೂರನೇ ಶತಮಾನದಲ್ಲಿ ದಾರುಣವಾದ ಮಕ್ಕಳ ಕ್ರುಸೇಡ್‌ಗಳು ನಡೆಯುತ್ತವೆ. ಸ್ಟೀಫನ್ ಎಂಬ ಕುರುಬ ಹುಡುಗನ ಮುಂದಾಳುತನದಲ್ಲಿ ಹನ್ನೆರಡು ವಯಸ್ಸು ಮೀರದ ಮೂವತ್ತು ಸಾವಿರ ಮಕ್ಕಳ ದಂಡೊಂದು ಜೆರುಸಲೇಂ ಅನ್ನು ಮುಸ್ಲಿಮರಿಂದ ಬಿಡಿಸಲು ದಂಡಯಾತ್ರೆ ಹೊರಡುತ್ತದೆ. ದಾರಿಯಲ್ಲಿ ಅನೇಕ ಅವಘಡಗಳು ಸಂಭವಿಸುತ್ತವೆ. ಸಮುದ್ರದಲ್ಲಿ ಹಡಗು ಒಡೆದು ಸಾವಿರಾರು ಮಕ್ಕಳು ಮೃತರಾಗುತ್ತಾರೆ. ಅಳಿದುಳಿದ ಮಕ್ಕಳು ಗುಲಾಮರಾಗಿ ಮಾರಲ್ಪಡುತ್ತಾರೆ. ಇಂಥದೇ ಇನ್ನೊಂದು ದುರಂತ ಘಟನೆ – ನಿಕೊಲಾಸ್ ಎಂಬ ಜರ್ಮನ್ ಹುಡುಗನ ನೇತೃತ್ವದಲ್ಲಿ ಇಪ್ಪತ್ತು ಸಾವಿರ ಮಂದಿ ಮಕ್ಕಳು ಜೆರುಸಲೆಂ ಕಡೆ ಹೊರಟು ಮೊದಲ ಚಿಲ್ಡ್ರನ್ ಕ್ರುಸೇಡಿನಂತೆಯೇ ಮಾರ್ಗಮಧ್ಯದಲ್ಲಿ ನಾನಾಬಗೆಯ ತೊಂದರೆಗೆ ಸಿಕ್ಕು ನಾಶವಾಗುವ ಘಟನೆ. ಮಕ್ಕಳಿಗೆ ಉಂಟಾದ ಈ ಸಾಮೂಹಿಕ ಸರ್ವನಾಶವೇ ಒಂದು ರೂಪಕವಾಗಿ ಆಕಾರಪಡೆದು ಪೈಡ್ ಪೈಪರ್ ಕವಿತೆಗೆ ಕಾರಣವಾಗಿರುವುದು ಎದೆ ಝುಲ್ಲೆನ್ನಿಸುವಂಥ ವಿಷಯ. ಈ ಹಿನ್ನೆಲೆಯಲ್ಲಿ ಬ್ರೌನಿಂಗ್ ಕವಿತೆಯನ್ನ, ಅಥವಾ ಕುವೆಂಪು ಅವರ ಕಿಂದರಿಜೋಗಿ ಪದ್ಯವನ್ನ ಇನ್ನೊಮ್ಮೆ ಓದಿದರೆ, ಆ ಕವಿತೆ ಮಕ್ಕಳಿಗೆ ಮಾತ್ರವಲ್ಲ, ಹಿರಿಯರಿಗೂ ಬೇರೊಂದು ನೆಲೆಯಲ್ಲಿ ದಕ್ಕುವ ಕವಿತೆಯಾಗುತ್ತದೆ. ಎಲ್ಲ ಮಕ್ಕಳ ಕವಿತೆಗಳು ಹೀಗಿರಬೇಕೆಂಬುದು ನನ್ನ ವಾದವಲ್ಲ. ಆದರೆ ಮಕ್ಕಳ ಕವಿತೆಗಳು ಹೀಗೆ ಬದುಕಿನ ದಾರುಣತೆಯನ್ನು ಹೃದಯದಲ್ಲಿ ಬಚ್ಚಿಟ್ಟುಕೊಂಡು ಮಕ್ಕಳ ಮನಸ್ಸನ್ನು ಪ್ರವೇಶಿಸಿದರೆ, ಇತಿಹಾಸದ ಕ್ರೌರ್ಯವನ್ನೂ ಮಾಯಾರೂಪದಲ್ಲಿ ನಾವು ಮಕ್ಕಳಿಗೆ ದಾಟಿಸಿದ ಹಾಗೆ ಆಗುತ್ತದೆ. ಮಕ್ಕಳಿಗೆ ಕಠೋರವಾದ ಸತ್ಯಗಳನ್ನು ಹೇಳುವುದಕ್ಕೆ ಈ ಬಗೆಯ ರೂಪಕಮಾರ್ಗ ಅತ್ಯುಚಿತವೆಂದು ನಾನು ಭಾವಿಸುತ್ತೇನೆ. ನಮ್ಮ ಜವಾಬುದಾರಿ – ಮಕ್ಕಳಿಗೆ ಹೂವಿನ ಅರಿವು ಕೊಡುವಂತೆಯೇ ಹೂವಿನ ಹಿಂದಿರುವ ಮುಳ್ಳಿನ ಅರಿವನ್ನೂ ಮರೆಮಾತಿನ ತಂತ್ರದ ಮೂಲಕ ದಾಟಿಸಿ ಬಿಡುವುದು. ಸಂತೋಷದಂತೆ ಸ್ಥೈರ್ಯವೂ ಮಕ್ಕಳಿಗೆ ಉಪಾಧೇಯವಾದುದು. ಮಕ್ಕಳ ಸಾಹಿತ್ಯದಲ್ಲಿ ಇದಕ್ಕೆ ಅನೇಕ ಮಾಯಾಮಾರ್ಗಗಳಿವೆ. ಅದನ್ನು ಜವಾಬುದಾರಿಯೊಂದಿಗೆ ಅನುಸಂಧಾನಿಸುವುದು ಪಕ್ವಗೊಂಡ ಮಾಗಿದ ಮನಸ್ಸಿನ ಮಕ್ಕಳ ಸಾಹಿತಿಗಳ ಹೊಣೆಗಾರಿಕೆ!

***

ಮರೆಯಬಾರದ ಕೆಲವು ಮಕ್ಕಳ ಕವಿತೆಗಳು

ಕನ್ನಡದಲ್ಲಿ ಕಾಲಕಾಲಕ್ಕೆ ಪ್ರಕಟವಾದ ಕೆಲವು ಪ್ರಬುದ್ಧ ಮಕ್ಕಳ ಕವಿತೆಗಳನ್ನು ಈಗ ಪರಿಚಯ ಮಾಡಿಕೊಳ್ಳೋಣ. ಮಕ್ಕಳ ಸಾಹಿತ್ಯ ಎಂದಾಗ ನಮಗೆ ಮೊದಲು ನೆನಪಾಗುವ ಹೆಸರು ಪಂಜೆ ಮಂಗೇಶರಾಯರದ್ದು. ಬಾಲ್ಯದಲ್ಲಿ ಪಂಜೆಯವರ ಕವಿತೆಗಳನ್ನು ಓದುತ್ತಲೇ ನಾವೆಲ್ಲಾ ನಮ್ಮ ಸಾಹಿತ್ಯ ಸಂವೇದನೆಯನ್ನು ರೂಪಿಸಿಕೊಂಡೆವು. ಪಂಜೆ ತಮ್ಮ ಬರಹಗಳನ್ನು ಬೇರೆ ಬೇರೆ ಹೆಸರುಗಳಲ್ಲಿ ಪ್ರಕಟಿಸುತ್ತಾ ಇದ್ದರು. ರಾಮಪಂ, ಹರಟೇಮಲ್ಲ, ಕವಿಶಿಷ್ಯ ಮುಂತಾಗಿ. ಅವರ ಸುಪ್ರಸಿದ್ಧವಾದ 'ಹುತ್ತರಿ ಹಾಡು' ಮತ್ತು 'ನಾಗರಹಾವು' ಕವಿಶಿಷ್ಯ ಎಂಬ ಹೆಸರಿನಲ್ಲಿ ಪ್ರಕಟವಾಗಿದ್ದವು. ಜೊತೆಗೆ ಬಾಲಸಾಹಿತ್ಯ ಮಂಡಲಿಯ ಮೂಲಕ ಪಂಜೆಯವರ ಅನೇಕ ಮಕ್ಕಳ ಕಥೆಗಳು ಪ್ರಕಟವಾದುದನ್ನೂ ನಾವಿಲ್ಲಿ ನೆನೆಯಬಹುದು. 'ಅಂಗಳ ದುಗ್ಗು', 'ಅರ್ಗಣೆ ಮುದ್ದು', 'ಅಗೋಳಿ ಮಂಜಣ್ಣ', 'ಅಜ್ಜಿ ಸಾಕಿದ ಮಗು', 'ಇಲಿಗಳ ಥಕಥೈ', ಮೊದಲಾದುವು ಅವರು ಬರೆದ ಕಥೆಗಳು. ಈ ಕಥೆಗಳು ಇಂಗ್ಲಿಷ್, ರಶಿಯನ್, ಜರ್ಮನ್ ಕಥೆಗಳಿಂದ ಪ್ರೇರಿತವಾಗಿ ಸೃಷ್ಟಿಗೊಂಡಂಥವು. ಅನೇಕ ಜೋಗುಳದ ಹಾಡುಗಳನ್ನು ಪಂಜೆಯವರು ಮಕ್ಕಳಿಗಾಗಿ ಬರೆದಿದ್ದಾರೆ. 'ಡೊಂಬರ ಚೆನ್ನೆ', 'ಕಡೆಕಂಜಿ', 'ನಾಗಣ್ಣನ ಕನ್ನಡಕ', 'ಕಬ್ಬಿಣದ ಬುದ್ಧಿವಾದ', ಮೊದಲಾದವು ಪಂಜೆಯವರ ಕಥನಕವನಗಳು. ಮಕ್ಕಳಿಗಾಗಿಯೇ ಅವರು ಬರೆದ 'ಉದಯರಾಗ', 'ಚಂದ್ರನನ್ನು ತಾ', 'ಹಾವಿನ ಹಾಡು', 'ತೆಂಕಣಗಾಳಿಯಾಟ' – ಇಂಥ ಸೊಗಸಾದ ಕವಿತೆಗಳನ್ನು ಮರೆಯಲಿಕ್ಕೇ ಸಾಧ್ಯವಿಲ್ಲ. ಅವರ 'ಉದಯ ರಾಗ' ಎಂಬ ಪ್ರಸಿದ್ಧ ಕವಿತೆಯನ್ನು ಈವತ್ತಿನ ಓದುಗರಿಗಾಗಿ ಪೂರ್ಣವಾಗಿ ಉದ್ಧರಿಸುತ್ತಿದ್ದೇನೆ.

ಉದಯ ರಾಗ

ಮೂಡುವನು ರವಿ ಮೂಡುವನು; ಕತ್ತಲೊಡನೆ ಜಗಳಾಡುವನು
ಮೂಡಣ ರಂಗಸ್ಥಳದಲಿ ನೆತ್ತರು ಮಾಡುವನು, ಕುಣಿದಾಡುವನು.

ಬೆಳಕಿನ ಕಣ್ಣುಗಳಿಂದಾ ಸೂರ್ಯನು ನೋಡುವನು, ಬಿಸಿಲೂಡುವನು;
ಚಿಳಿಪಿಳಿ ಹಾಡನು ಹಾಡಿಸಿ, ಹಕ್ಕಿಯ ಗೂಡಿನ ಹೊರಹೊರ ದೂಡುವನು.

ಬಂಗಾರದ ಚೆಲು ಬಿಸಿಲ ಕಿರೀಟದ ಶೃಂಗಾರದ ತಲೆ ಎತ್ತುವನು;
ತೆಂಗಿನ ಕಂಗಿನ ತಾಳೆಯ ಬಾಳೆಯ ಅಂಗಕೆ ರಂಗನು ಮೆತ್ತುವನು.

ಮಾಡಿನ ಹುಲ್ಲಲಿ ಚಿನ್ನದ ಗೆರೆಯನು ಎಳೆಯುವನು ರವಿ ಹೊಳೆಯುವನು;
ಕೂಡಲೆ ಕೋಣೆಯ ಕತ್ತಲ ಕೊಳೆಯನು ತೊಳೆಯುವನು ರವಿ ಹೊಳೆಯುವನು.

ಮಲಗಿದ ಕೂಸಿನ ನಿದ್ದೆಯ ಕಸವನು ಗುಡಿಸುವನು, ಕಣ್ ಬಿಡಿಸುವನು;
ಹುಲು, ಗಿಡ, ಹೂವಿಗೆ ಪರಿಪರಿ ಬಣ್ಣದ ಉಡಿಸುವನು, ಹನಿ ತೊಡಿಸುವನು.

ಏರುವನು ರವಿ ಏರುವನು; ಬಾನೊಳು ಸಣ್ಣಗೆ ತೋರುವನು;
"ಏರಿದವನು ಚಿಕ್ಕವನಿರಬೇಕಲೆ" ಎಂಬಾ ಮಾತನು ಸಾರುವನು.

ಈ ಪದ್ಯವು ಪಂಜೆಯವರ ಮಕ್ಕಳ ಕವಿತೆಗಳ ಗುಣವನ್ನು ಸಾರವತ್ತಾಗಿ ಪ್ರಕಟಿಸುತ್ತಾ ಇದೆ. ಮೊದಲು ನಾವು ಮಕ್ಕಳಿಗೆ ಬಹು ಪ್ರಿಯವಾಗುವ ಕುಣಿದಾಡುವ ಪ್ರಾಸಗಳು. ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಇದನ್ನು ಪಠ್ಯದಲ್ಲಿ ಓದಿದ್ದು. ಈಗಲೂ ಈ ಕವಿತೆಯ ಸಾಲುಗಳು ನನ್ನ ಮನಸ್ಸಲ್ಲಿ ಉಳಿದಿವೆ. ತೆಂಗಿನ ಕಂಗಿನ ತಾಳೆಯ ಬಾಳೆಯ ಅಂಗಕೆ ರಂಗನು ಮೆತ್ತುವನು-ಎಂಬ ಸಾಲು ನನ್ನ ಮನೋರಂಗದಲ್ಲಿ ನೆನೆದಾಗೆಲ್ಲಾ ನರ್ತಿಸುತ್ತಾ ಇರುತ್ತದೆ. ಓತಪ್ರೋತವಾಗಿ ಬರುವ ಅನುಪ್ರಾಸಗಳ ಹೆಣಿಗೆ ಮಕ್ಕಳಿಗೆ ಯಾವತ್ತೂ ಪ್ರಿಯವಾಗುವಂಥದ್ದು. ಒಂದೇ ಬಗೆಯಲ್ಲಿ ಅನುರಣಿಸುವ ನಾದದ ಸೊಗಸು ಮಕ್ಕಳನ್ನು ಯಾವಾಗಲೂ ಮರುಳು ಮಾಡುತ್ತದೆ. ಅದನ್ನು ಪಂಜೆಯವರು ಬಲ್ಲವರಾಗಿದ್ದರು. ಮಕ್ಕಳಿಗೆ ಪ್ರಿಯವಾಗುವ ಸಂಗತಿಗಳಿಂದಲೇ ಇಲ್ಲಿ ಬೆಳಗಿನ ಅನುಭವವನ್ನು ಹಿಡಿಯಲಾಗಿದೆ. ಬೇಂದ್ರೆಯವರ 'ಬೆಳಗು' ಎಂಬ ಅದ್ಭುತ ಕವಿತೆ ಪ್ರೌಢರಿಗಾಗಿ ಬರೆದದ್ದು. ಅಲ್ಲಿ ಶಾಂತಿರಸವೇ ಪ್ರೀತಿಯಿಂದ ಮೈದುಂಬೀತಣ್ಣ-ಎಂಬಂಥ ಆಧ್ಯಾತ್ಮಿಕ ಸ್ಪರ್ಶವುಳ್ಳ ಅಮೂರ್ತ ಕಲ್ಪನೆಗಳು ಸಹನೀಯವೂ ಸ್ವಾದ್ಯವೂ ಆಗಬಲ್ಲವು. ಮಕ್ಕಳಿಗಾಗಿ ಹೇಗೆ ಸೂರ್ಯೋದಯವನ್ನು ಗ್ರಹಿಸಬಹುದು? ಮೊದಲ ಸಾಲುಗಳಲ್ಲಿ ರಂಗಸ್ಥಳ ಎಂಬ ಮಾತು ಬರುವುದರಿಂದ ಅಲ್ಲಿ ಬರುವ ಜಗಳ ಮತ್ತು ನೆತ್ತರ ಉಲ್ಲೇಖ ಸಹ್ಯವಾಗುವುದು. ಬೆಳಕು, ಬಿಸಿಲು; ಮುಂಜಾವದಲ್ಲಿ ನಾವು ಕೇಳುವ ಹಕ್ಕಿಗಳ ಚಿಲಿಪಿಲಿ ಇವುಗಳ ವರ್ಣನೆ ಮುಂದಿನ ಸಾಲುಗಳಲ್ಲಿ ಬರುತ್ತದೆ. ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಎಂಬ ಪ್ರಸಿದ್ಧವಾದ ವಚನದ ಸಾಲೊಂದು ಉಂಟಷ್ಟೆ? ಜಗತ್ತಿನ ಚಟುವಟಿಕೆಯೆಲ್ಲಾ ಸೂರ್ಯನಿಂದಲೇ ಚೋದಿತವಾಗುತ್ತವೆ ಎಂಬುದನ್ನು ಪಂಜೆಯವರ ಕವಿತೆಯೂ ಗ್ರಹಿಸುತ್ತಾ ಇದೆ. ಸೂರ್ಯೋದಯದ ಬಣ್ಣಗಾರಿಕೆ ಮುಂದಿನ ಸಾಲುಗಳ ವಿಷಯ. ಜೊತೆಗೆ ಬಿಸಿಲಿನ ಶುದ್ಧೀಕರಣ ಶಕ್ತಿಯನ್ನೂ ಕವಿತೆ ಕೈವಾರಿಸುತ್ತದೆ. ಕೊನೆಯ ಸಾಲು ಹೇರದಿರುವ ಸಹಜ ನೀತಿಯ ಅಥವಾ ಲೋಕಗ್ರಹಿಕೆಯ ಮಾತು. ಯಾವುದೂ ಮಕ್ಕಳ ಗ್ರಹಿಕೆಗೆ ಭಾರವಾಗುವುದಿಲ್ಲ. ಪ್ರೌಢತೆಯ ಹೆಗಲ ಮೇಲೆ ಮುಗ್ಧತೆಯ ಸವಾರಿ ಎಂದು ನಾನು ಹೇಳಿದ ಮಾತು ಇಂಥ ಪದ್ಯಗಳಿಗೆ ಎಷ್ಟು ಚೆನ್ನಾಗಿ ಅನ್ವಯವಾಗುತ್ತದೆ, ನೋಡಿ!

ಪಂಜೆಯ ನಂತರ ನಾವು ನೆನೆಯಬೇಕಾದದ್ದು ಮಕ್ಕಳ ಸಾಹಿತ್ಯದ ರಾಜ ಮತ್ತು ರತ್ನ ಎಂದು ಖ್ಯಾತರಾಗಿರುವ ಜಿ.ಪಿ. ರಾಜರತ್ನಂ ಅವರನ್ನು. ಮಕ್ಕಳ ಕವಿತೆ, ಕಥೆಗಳನ್ನು ಸಮೃದ್ಧವಾಗಿ ಬರೆದು, ಬಾಲಸಾಹಿತ್ಯವನ್ನು ಶ್ರೀಮಂತಗೊಳಿಸಿದವರು ಜಿ.ಪಿ. ರಾಜರತ್ನಂ. ಅವರ 'ತುತ್ತೂರಿ' ಹಾಡನ್ನು ಕೇಳಿ ಯಾವ ಮಗುವಿನ ಕಣ್ಣಲ್ಲಿ ನೀರೂರುವುದಿಲ್ಲ?!

ತುತ್ತೂರಿ

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ ಊದಿದನು
ಸನಿದಪ ಮಗರಿಸ ಊದಿದನು

ತನಗೇ ತುತ್ತುರಿ ಇದೆಯೆಂದ
ಬೇರಾರಿಗು ಅದು ಇಲ್ಲೆಂದ
ಕಸ್ತುರಿ ನಡೆದನು ಬೀದಿಯಲಿ
ಜಂಬದ ಕೋಳಿಯ ರೀತಿಯಲಿ

ತುತ್ತುರಿಯೂದುತ ಕೊಳದ ಬಳಿ
ನಡೆದನು ಕಸ್ತುರಿ ಸಂಜೆಯಲಿ
ಜಾರಿತು ನೀರಿಗೆ ತುತ್ತೂರಿ
ಗಂಟಲುಕಟ್ಟಿತು ನೀರೂರಿ

ಸರಿಗಮ ಊದಲು ನೋಡಿದನು
ಗಗಗಗ ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತುರಿ ಬೋಳಾಯ್ತು

ಬಣ್ಣದ ತುತ್ತುರಿ ಹಾಳಾಯ್ತು
ಜಂಬದ ಕೋಳಿಗೆ ಗೋಳಾಯ್ತು

ತಮ್ಮ ಆಟಿಕೆಯೊಂದು ಕಳೆದುಹೋದಾಗ ಮಕ್ಕಳಿಗಾಗುವ ನೋವು ಎಂಥದೆಂಬುದನ್ನು ಈ ಕವಿತೆ ನವುರಾಗಿ ವರ್ಣಿಸುತ್ತಾ ಇದೆ. 'ತುತ್ತೂರಿ' ಪದ್ಯ ಓದಿದಾಗ ಮಕ್ಕಳ ಕಣ್ಣಲ್ಲಿ ನೀರು ಉಕ್ಕುವುದನ್ನು ನಾನು ನೋಡಿದ್ದೇನೆ. ನೋವಿನ ನವುರಾದ ಅನುಭವವನ್ನು ಮಕ್ಕಳಿಗೆ ಈ ಕವಿತೆ ನೀಡುತ್ತಾ ಇದೆ. ಭವಿಷ್ಯದ ಜೀವನ ಸಂಗ್ರಾಮಕ್ಕೆ ಮಕ್ಕಳನ್ನು ಸಿದ್ಧಪಡಿಸುವ ಕ್ರಮವಿದು. ಜೊತೆಗೆ ಮಕ್ಕಳು ತಮ್ಮ ಆಟಿಕೆಗಳನ್ನು ಇತರ ಮಕ್ಕಳೊಂದಿಗೆ ಹಂಚಿಕೊಂಡು ಸಂತೋಷಪಡಬೇಕೆಂಬ ಮರೆಮಾತೂ ಪದ್ಯದಲ್ಲಿದೆ. ಮಕ್ಕಳಿಗೆ ಸಹಜವಾದ ಎಲ್ಲವೂ ತನಗೇ ಬೇಕೆಂಬ ದೋಚುಬಾಕುತನದಿಂದ ನವುರಾದ ನೋವಿನ ಷಾಕ್ ಕೊಟ್ಟು ಅವರನ್ನು ಸಾಮೂಹಿಕ ಬದುಕಿಗೆ ಅಣಿಗೊಳಿಸುವ ಹುನ್ನಾರವೂ ಕವಿತೆಗೆ ಇದೆ. ಅದರೊಂದಿಗೆ ಕಾವ್ಯಭಾಷೆಯ ರಿಯಾಯ್ತಿಯ ಕಲ್ಪನೆಗಳನ್ನೂ ಮಕ್ಕಳಿಗೆ ಕಲಿಸುವಂತಿದೆ. "ಕಸ್ತೂರಿ" ಪದ್ಯಗಳಲ್ಲಿ "ಕಸ್ತುರಿ" ಆಗಬಹುದು. "ತುತ್ತೂರಿ" ಪದ್ಯದಲ್ಲಿ "ತುತ್ತುರಿ"ಯಾಗಬಹುದು. ಪದ್ಯಭಾಷೆಗೆ ಅಂಥ ರಿಯಾಯ್ತಿ ಉಂಟು ಎಂಬುದನ್ನು ಮಕ್ಕಳಿಗೆ ತಿಳಿಯಪಡಿಸಿ, ನಾಳೆ ಅವರು ಬೆಳೆದು ಕುಮಾರವ್ಯಾಸನನ್ನು ಓದುವಾಗ, "ವೀರನಾರಾಯಣ", "ವೀರ ನರಯಣ" ಹೇಗಾದ ಎಂದು ಗಲಿಬಿಲಿಗೊಳ್ಳುವ ಸಂಭವವನ್ನು ತಪ್ಪಿಸುತ್ತದೆ.

ರಾಜರತ್ನಂ ಅವರನ್ನು ನೆನೆದಾಗ ದೊಡ್ಡದೊಂದು ಕವಿತೆಗಳ ಪಂಕ್ತಿಯೇ ನಮ್ಮ ಕಣ್ಣ ಮುಂದೆ ಹಾಯುತ್ತದೆ.ಅದೆಷ್ಟು ಸುಂದರವಾದ ಮಕ್ಕಳ ಕವಿತೆಗಳು ಅವು! ನಮ್ಮ ಮನೆಯ ಸಣ್ಣ ಪಾಪ, ದೊಡ್ಡ ಪಟ್ಟೆ ಹುಲಿ ಮೊದಲಾದ ರಾಜರತ್ನಂ ಪದ್ಯಗಳನ್ನು ಮರೆಯಲಿಕ್ಕೆ ಸಾಧ್ಯವೇ?

ಹೊಯಿಸಳ ಕನ್ನಡ ಮಕ್ಕಳ ಸಾಹಿತ್ಯದ ಆದ್ಯರಲ್ಲಿ ಒಬ್ಬರು. ದಾವಣಗೆರೆಯವರಾದ (ನಮ್ಮ ಜಿಲ್ಲೆಯವರು ಎಂಬುದು ನನಗೊಂದು ಕೋಡು!) ಅರಗಂ ಲಕ್ಷ್ಮಣರಾಯರ ಕಾವ್ಯನಾಮ ಹೊಯಿಸಳ. ಬೋಳುವಾರು, ಹೊಯಿಸಳರನ್ನು ಮಕ್ಕಳ ಅಕ್ಕರೆಗಳಿಸಿದ ಮೊದಲ ಕವಿ ಎಂದು ಗುರುತಿಸಿದ್ದಾರೆ. ಮಕ್ಕಳ ಮೊಗದಲ್ಲೊಂದು ಮುಗುಳ್ನಗೆ ಅರಳಿಸುವುದು ಹೊಯಿಸಳರ ರಚನೆಗಳ ಹಿಂದಿನ ಮುಖ್ಯ ಉದ್ದೇಶವಾಗಿದೆ. 'ನಾಂ...ಗೋ...ತ್ತಿ...ಲ್ಲಾ...ಪ್ಪಾ,' 'ಬಂದಾ ಬಂದಾ ಸಂತಮ್ಮಣ್ಣ', 'ಚಂದುಮಾಮ' ಮೊದಲಾದವು ಹೊಯಿಸಳರ ಪ್ರಸಿದ್ಧ ಮಕ್ಕಳ ಕವಿತೆಗಳು.

ಸಂತಮ್ಮಣ್ಣ

ಕಲ್ಯಾಣ ಸೇವೆ ಜೇಬಿನ ಬುಡದಲಿ
ಪುಟ್ಟಾಣಿಯ ಪುರಿ ಮೇಲೊಂದಿಷ್ಟು
ಗೋಲಿ ಬಳಪ ಮತ್ತೊಂದಿಷ್ಟು
ಬಂದ ಬಂದ ಸಂತಮ್ಮಣ್ಣ.

ಪಟಾಸು ಪೆಟ್ಲು ಒಳ ಜೇಬಲ್ಲಿ
ಕಾಸಿನ ಸಾಲು ಕಳ್ ಜೇಬಲ್ಲಿ
ಚೆಂಡು ದಾಂಡು ಎಡ ಬಲದಲ್ಲಿ
ಬಂದ ಬಂದ ಸಂತಮ್ಮಣ್ಣ.

ಅಮ್ಮನ ಹಾರ ಉಬ್ಬಿದ ಎದೆಗೆ
ಬಿದಿರಿನ ಕೊಳಲು ಗೆಜ್ಜೆಗಳೊಳಗೆ
ಹದ್ದಿನ ರೆಕ್ಕೆ ಎತ್ತಿದ ತಲೆಗೆ
ಬಂದ ಬಂದ ಸಂತಮ್ಮಣ್ಣ.

ಕತ್ತುರಿ ಚಂದ್ರ ಹಣೆಯಲ್ಲಿಹುದು
ಸಂಜೆಯ ಶುಕ್ರ ಕಣ್ಣಲ್ಲಿಹುದು
ಬೆಳುಬೆಳ್ದಿಂಗಳು ಗಲ್ಲದ ಮೇಲೆ
ಬಂದ ಬಂದ ಸಂತಮ್ಮಣ್ಣ.

ಮೊದಲಿನ ಮಾತು ಹೂವಿನ ಮುತ್ತು
ಮರು ಮಾತಾಡಲು ಸಿಡಿಲು ಗುಡುಗು
ಮೂರನೆ ಬಾರಿಗೆ ಆಸೆಯ ಕಲ್ಮಳೆ
ಬಂದ ಬಂದ ಸಂತಮ್ಮಣ್ಣ

ಬಾರೋ ಬಾರೋ ಸಿಡಿಲಿನ ಮರಿಯೆ!
ಬಾರೋ ನಾಡಿನ ಸುಂಟರಗಾಳಿ!
ತೋರೋ ಸಿರಿಮೊಗ ತುಂಟರ ಗುರುವೆ!
ಬಂದ ಬಂದ ಸಂತಮ್ಮಣ್ಣ!

ನಮ್ಮ ಹೆಮ್ಮೆಯ ಹಿರಿಯ ಕವಿ ಕುವೆಂಪು ಮಕ್ಕಳ ಸಾಹಿತಿಯೆಂದೇ ಗುರುತಿಸಿಕೊಂಡವರೇನಲ್ಲ. ಪ್ರೌಢರಿಗಾಗಿ ಅವರು ಬರೆದಿರುವುದೇ ಹೆಚ್ಚು! ಆದರೆ ಅವರು ಮಕ್ಕಳಿಗಾಗಿ ಏನು ಬರೆದಿದ್ದಾರೋ ಆ ರಚನೆಗಳು ದಿಗ್ದರ್ಶಕವಾದಂಥವು. ಕುವೆಂಪು ಮಕ್ಕಳಿಗಾಗಿ ಬರೆದ ಕಿಂದರಿಜೋಗಿ ಪದ್ಯವನ್ನು ಈಗಾಗಲೇ ಪ್ರಸ್ತಾಪಿಸಿದ್ದೇನೆ. ಮಕ್ಕಳಿಗಾಗಿ, ಕವಿತೆ, ನಾಟಕ, ಪ್ರಬಂಧ ಎಲ್ಲವನ್ನೂ ಕುವೆಂಪು ರಚಿಸಿದ್ದಾರೆ. ಮಲೆನಾಡಿನ ಚಿತ್ರಗಳು ಎಂಬ ಆತ್ಮಕಥನಾತ್ಮಕವಾದ ಅವರ ಪ್ರಬಂಧಗಳು ಪ್ರೌಢಶಾಲೆಯ ಮಕ್ಕಳು ಓದಲೇ ಬೇಕಾದ ಪ್ರಬಂಧಗಳು. 'ಅಜ್ಜಯ್ಯನ ಅಭ್ಯಂಜನ'ದಂಥ ಪ್ರಬಂಧ ಮಕ್ಕಳಿಗೆ ಹೊಸ ಕಲ್ಪನಾ ಲೋಕವೊಂದನ್ನೇ ತೆರೆಯ ಬಲ್ಲುದು. ಮಕ್ಕಳಿಗಾಗಿ ಕುವೆಂಪು ಬರೆದ ನಾಟಕಗಳೂ ಅಷ್ಟೇ ರಮ್ಯವಾಗಿವೆ. ಕುವೆಂಪು ಬರೆದ ಮಕ್ಕಳ ಕವಿತೆಗಳಲ್ಲಿ ನನಗೆ ಬಹಳ ಪ್ರಿಯವಾದ ಒಂದು ಕವಿತೆ ಅರ್ಧಚಂದ್ರ.

ಅರ್ಧಚಂದ್ರ

"ದೇವರ ಪೆಪ್ಪರಮೆಂಟೇನಮ್ಮ
ಗಗನದೊಳಲೆಯುವ ಚಂದಿರನು?
ಎಷ್ಟೇ ತಿಂದರು ಖರ್ಚೇ ಆಗದ
ಬೆಳೆಯುವ ಪೆಪ್ಪರಮೆಂಟೇನಮ್ಮಾ?

"ದಿನ ದಿನ ನೋಡುವೆ, ದಿನವೂ ಕರಗುತ
ಎರಡೇ ವಾರದೊಳಳಿಯುವುದು!
ಮತ್ತದು ದಿನ ದಿನ ಹೆಚ್ಚುತ ಬಂದು
ಎರಡೇ ವಾರದಿ ಬೆಳೆಯುವುದು!"

"ಅಕ್ಷಯವಾಗಿಹ ಪೆಪ್ಪರಮೆಂಟದು
ನನಗೂ ದೊರಕುವುದೇನಮ್ಮಾ?"
"ನೀನೂ ದೇವರ ಬಾಲಕನಾಗಲು
ನಿನಗೂ ಕೊಡುವನು ಕಂದಯ್ಯ!"

"ದೇವರ ಬಾಲಕನಾಗಲು ಒಲ್ಲೆ
ಆತನ ಮೀರಿಹೆ ನೀನಮ್ಮಾ!
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮಾ!"

ಕುವೆಂಪು ಅವರ ಈ ಕವಿತೆ ಕಟ್ಟಿಕೊಳ್ಳುವ ಭಾಷಾ ಶರೀರವನ್ನು ಗಮನಿಸಿ. ಮಕ್ಕಳ ನುಡಿ ಸಂಪತ್ತನ್ನು ನಿರ್ಭಿಡೆಯಿಂದ ಹೆಚ್ಚಿಸುವಂತಿದೆ ಈ ಪದ್ಯ. ಪೆಪ್ಪರಮೆಂಟು ಎಂಬ ಅನ್ಯಭಾಷೆಯ ಪದವನ್ನು ಬಳಸಿಕೊಳ್ಳುವಲ್ಲಿ ಕವಿಗೆ ಮುಜುಗರವಿಲ್ಲ. ಯಾಕೆಂದರೆ ಪೆಪ್ಪರಮೆಂಟು ಈಗಾಗಲೇ ಕನ್ನಡವಾಗಿಬಿಟ್ಟಿದೆ ಎಂಬುದನ್ನು ಅವರು ಬಲ್ಲರು. ಕಾವ್ಯದಲ್ಲಿ ಆ ಪದವನ್ನು ಬಳಸುವ

ಮೂಲಕ ಪದ್ಯಭಾಷೆ ದೊರಕಿಸುವ ಒಂದು ಮರ್ಯಾದಾ ಸೀಮೆ ಈಗ ಅದಕ್ಕೆ ಪ್ರಾಪ್ತವಾಗಿದೆ! ದಿನ ದಿನಕ್ಕೆ ಕರಗುವ ಚಂದ್ರನನ್ನು ದೇವರ ಪೆಪ್ಪರಮೆಂಟೆಂದು ಗ್ರಹಿಸುವಲ್ಲಿ ಮಕ್ಕಳ ಕಲ್ಪಕತೆಯನ್ನು ನಿರಾಯಾಸವಾಗಿ ಹಿಗ್ಗಿಸುವ ಚೋದ್ಯವಿದೆ. ಭಾಷೆ ಮತ್ತು ಕಲ್ಪಕತೆಗೆ ಜಿಗಿಯುವ ರೆಕ್ಕೆ ಹಚ್ಚದೆ ಅದು ಹೇಗೆ ಒಂದು ಮಕ್ಕಳ ಕವಿತೆ ಆದೀತು? ಅದು ಹೇಗೆ ತಾನೆ ಮಕ್ಕಳ ಕಲ್ಪನಾಶೀಲತೆಯನ್ನು ಹಿಗ್ಗಿಸಬಲ್ಲುದು? ಸಹಜ ಕವಿಯೊಬ್ಬ ಮಕ್ಕಳ ಕವಿತೆ ಬರೆದಾಗ ಮಾತ್ರ ಇಂತಹ ಅದ್ಭುತ ಕಾಲ್ಪನಿಕ ಜಿಗಿತಗಳು ಸಾಧ್ಯ. ಒಳ್ಳೆಯ ಕವಿ ಮಾತ್ರ ಒಳ್ಳೆಯ ಗೀತೆಯನ್ನು ಬರೆಯಬಲ್ಲ ಎಂದು ಕೆ.ಎಸ್.ನ. ಹೇಳುತ್ತಿದ್ದರು. ಒಳ್ಳೆಯ ಕವಿ ಮಾತ್ರ ಒಳ್ಳೆಯ ಮಕ್ಕಳ ಕವಿತೆ ಬರೆಯಬಲ್ಲ ಎಂದು ನಾವು ಆ ಸೂಕ್ತಿಯನ್ನು ವಿಸ್ತರಿಸಿದರೆ ತಪ್ಪಾಗಲಿಕ್ಕಿಲ್ಲ. ತಮ್ಮ ನವೀನ ಕಲ್ಪನೆಗಳಿಂದ ಮಕ್ಕಳ ಕಲ್ಪನೆ ಮತ್ತು ಹೋಲಿಸಿ ನೋಡುವ ಶಕ್ತಿಯನ್ನು ಬೆಳೆಸಿದ ಕವಿಗಳಲ್ಲಿ ದಿನಕರದೇಸಾಯಿ ಮುಖ್ಯರು. ಮುಕ್ತಕಗಳ ಕವಿಯೆಂದೇ ಪ್ರಸಿದ್ಧರಾಗಿರುವ ದಿನಕರ ದೇಸಾಯಿ ಸೊಗಸಾದ ಮಕ್ಕಳ ಪದ್ಯಗಳನ್ನೂ ರಚಿಸಿದ್ದಾರೆ.

ಗಡಿಯಾರ

ಗಂಟೆಯ ನೆಂಟನೆ ಓ ಗಡಿಯಾರ
ಬೆಳ್ಳಿಯ ಬಣ್ಣದ ಗೋಳಾಕಾರ
ವೇಳೆಯ ತಿಳಿಯಲು ನೀನಾಧಾರ
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್

ಹಗಲೂ ಇರುಳೂ ಒಂದೇ ಬಾಳು
ನೀನಾವಾಗಲು ದುಡಿಯುವ ಆಳು
ಕಿವಿಯನು ಹಿಂಡಲು ನಿನಗದು ಕೂಳು
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್

ಮುಖ ಒಂದಾದರು ದ್ವಾದಶ ನೇತ್ರ!
ಎರಡೇ ಕೈಗಳು ಏನು ವಿಚಿತ್ರ!
ಯಂತ್ರ ಪುರಾಣದ ರಕ್ಕಸ ಪುತ್ರ!
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್

ಟಿಕ್ ಟಿಕ್ ಎನ್ನುತ ಹೇಳುವೆಯೇನು?
ನಿನ್ನೀ ಮಾತಿನ ಒಳಗುಟ್ಟೇನು?
"ಕಾಲವು ನಿಲ್ಲದು" ಎನ್ನುವೆಯೇನು?
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್

ದುಡಿಯುವುದೊಂದೇ ನಿನ್ನಯ ಕರ್ಮ
ದುಡಿಸುವುದೊಂದೇ ನಮ್ಮಯ ಧರ್ಮ

ಇಂತಿರುವುದು ಕಲಿಯುಗದೀ ಧರ್ಮ
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್

ಕೊನೆಯಲ್ಲಿ ಮಹತ್ವದ ಸಾಮಾಜಿಕ ಹೇಳಿಕೆಯನ್ನೂ ಮಾಡುವ ದಿನಕರ ದೇಸಾಯಿಯವರ ಈ ಪದ್ಯ ನನಗೆ ಪ್ರಿಯವಾಗಿರುವುದು ಅದರ ಅದ್ಭುತವಾದ ಕಲ್ಪನಾಶೀಲತೆಯಿಂದ. ಗಡಿಯಾರವನ್ನು ಗೆಳೆಯಾ ಎಂದು ಕವಿತೆ ಪರಿಭಾವಿಸುತ್ತದೆ.ದ್ವಾದಶ ನೇತ್ರ! ಆದರೆ ಎರಡೇ ಕೈಗಳು ಎಂಬ ವಿಸ್ಮಯ ಭಾವ ಮಕ್ಕಳ ಕಲ್ಪಕತೆಗೆ ಕಚಗುಳಿಯಿಡಬಲ್ಲುದು. ಕಾಲವು ನಿಲ್ಲದು ಎನ್ನುವೆಯೇನು–ಎಂಬ ಪ್ರಶ್ನೆ ಸಹಜವಾಗಿಯೇ ಗಡಿಯಾರವನ್ನೂ ಗಮನಿಸುತ್ತಾ ಗಮನಿಸುತ್ತಾ ಮನಸ್ಸಲ್ಲಿ ಮೂಡುವಂಥದ್ದು! ಅಲ್ಲಿಗೆ ಕವಿತೆ ಮುಗಿದಿದ್ದರೆ ಚೆನ್ನಾಗಿತ್ತು! ಕೊನೆಯ ಶೋಷಣೆಯ ವಿರುದ್ಧ ಮಾಡಿರುವ ಸಾಮಾಜಿಕ ಹೇಳಿಕೆ ಕವಿತೆಗೆ ಭಾರವಾಗುವಂತಿದೆ.

ಎಂ.ವಿ. ಸೀತಾರಾಮಯ್ಯ ಮಕ್ಕಳಿಗಾಗಿ ಹೆಚ್ಚು ಬರೆದವರಲ್ಲವಾದರೂ, ಅವರ ಒಂದು ಕವಿತೆಯನ್ನು ನಾನು ಮರೆಯಲಾರೆ. ಹೂವಾಡಗಿತ್ತಿಯನ್ನು ಕುರಿತ ಪದ್ಯವದು. ಬಾಲ್ಯದಲ್ಲಿ ನಾವು ಹಾಡಿ ಹಾಡಿ ಸಂತೋಷಪಟ್ಟಿದ್ದು! ಹರಿಹರ ಮಹಾ ಕವಿಯ ಪುಷ್ಪ ರಗಳೆಯಲ್ಲಿ ಬರುವಂತೆ ಇಲ್ಲಿ ನಾನಾ ಬಗೆಯ ಹೂಗಳ ದೊಡ್ಡ ಪಟ್ಟಿಯೇ ಉಲ್ಲೇಖವಾಗಿದೆ. ಮಕ್ಕಳ ಕಾಣುವ, ಆಘ್ರಾಣಿಸುವ ಇಂದ್ರಿಯಗಳನ್ನು ಭಾಷೆಯ ಮೂಲಕ ಜಾಗರಗೊಳಿಸುವ ಇಂಥ ಪದ್ಯಗಳಿಗೆ ಅವುಗಳದ್ದೇ ಆದ ಮಹತ್ವವಿದೆ. ಹೂವಾಡಗಿತ್ತಿ "ಹೂವು ಬೇಕೇ ಹೂವು?" ಎಂದು ಕೂಗುತ್ತಾ ಬರಬಹುದು! ಆದರೆ ಪದ್ಯದಲ್ಲಿ ಅವಳು ಹಾಡುತ್ತಾ ಬರುತ್ತಾಳೆ! ವಾಸ್ತವ ಜಗತ್ತಿನ ಸೀಮಾರೇಖೆಗಳನ್ನು ಮಕ್ಕಳ ಕವಿತೆಗಳು ಉಲ್ಲಂಘಿಸುವುದು ಹೀಗೆ!

ಹೂವಾಡಗಿತ್ತಿ

ಹೂವನು ಮಾರುತ
ಹೂವಾಡಗಿತ್ತಿ
ಹಾಡುತ ಬರುತಿಹಳು;
ಘಮ ಘಮ ಹೂಗಳು
ಬೇಕೇ ಎನ್ನುತ
ಹಾಡುತ ಬರುತಿಹಳು

ಈ ಕವಿತೆಯನ್ನು ಮಕ್ಕಳು ರಾಗವಾಗಿ ಹಾಡಿದಲ್ಲಿ ಕವನ ಮತ್ತಷ್ಟು ಮೋಹಕವಾಗಬಲ್ಲುದು.

ಮಕ್ಕಳ ಸಾಹಿತ್ಯಕ್ಕಾಗಿಯೇ ತಮ್ಮ ಜೀವಿತವನ್ನು ಮುಡುಪಾಗಿಟ್ಟ ಹಿರಿಯ ಲೇಖಕರನ್ನು ನಾವು ಸ್ಮರಿಸಲೇ ಬೇಕು. ಪಳಕಳ ಸೀತಾರಾಮಭಟ್ಟರು ಅವರಲ್ಲಿ ಮುಖ್ಯರು. 'ನಾನು ಯಾರು?', 'ಯಾಕೋ ಗೊತ್ತಿಲ್ಲ' ನನಗೆ ತಕ್ಷಣ ನೆನಪಾಗುತ್ತಿರುವ ಪಳಕಳೆಯವರ ಕವಿತೆಗಳು. ಶಂ.ಗು. ಬಿರಾದಾರ, ಎ.ಕೆ. ರಾಮೇಶ್ವರ, ಸಿಸು ಸಂಗಮೇಶ, ಕಂಚ್ಯಾಣಿ ಶರಣಪ್ಪ ಮುಖ್ಯರಾದ ಉಳಿದ ಹಿರಿಯ ಲೇಖಕರು. ಮಕ್ಕಳ ಸಾಹಿತ್ಯದ ಬೀಳುಗಾಲದಲ್ಲಿ ಮಕ್ಕಳ ಸಾಹಿತ್ಯ ನಿರ್ಝರಿ ತೀರಾ ಬತ್ತಿ ಹೋಗದ ಹಾಗೆ ನೋಡಿಕೊಂಡವರು ಇಂಥ ಲೇಖಕರು.

೧೯೫೦ರ ನಂತರ ಮಕ್ಕಳ ಸಾಹಿತ್ಯದ ಬೆಳಸು ಕ್ಷೀಣಗೊಂಡಾಗ ಮಕ್ಕಳಿಗಾಗಿ ಅನೇಕ

ಸೊಗಸಾದ ಪದ್ಯಗಳನ್ನು ಬರೆದವರು ಹಿರಿಯ ಕವಿ ಚೆನ್ನವೀರ ಕಣವಿ. ಅವರ ಜೊತೆ ಜೊತೆಯಲ್ಲೇ ಸಮೃದ್ಧವಾಗಿ ಮಕ್ಕಳ ಕವಿತೆಗಳನ್ನು ಬರೆದವರು, ಅವನ್ನು ಕೆಸೆಟ್ ಮೂಲಕವಾಗಿ ನಾಡಿನಾದ್ಯಂತ ಪ್ರಚುರಪಡಿಸಿದವರು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು. ಭಾಳ ಒಳ್ಳೆವರು ನಮ್ಮಿಸ್ಸು; ಏನ್ ಹೇಳಿದ್ರೂ ಎಸ್ಸೆಸ್ಸು! ಎಂಬ, ಮಕ್ಕಳಿಗೆ (ಹಾಗೇ ಅವರ ಮಿಸ್ಸುಗಳಿಗೂ) ಬಹಳ ಪ್ರಿಯವಾದ ಲಕ್ಷ್ಮೀನಾರಾಯಣಭಟ್ಟರ ಪದ್ಯವನ್ನು ಮರೆಯಲಿಕ್ಕುಂಟೇ? ಹಾಗೇ ಸುಮತೀಂದ್ರ ನಾಡಿಗರು ಭಟ್ಟರ ಜೊತೆಜೊತೆಯಲ್ಲೇ ಅನೇಕ ಸೊಗಸಾದ ಮಕ್ಕಳ ಕವಿತೆಗಳನ್ನು ಬರೆದು ಪ್ರಕಟಿಸಿದ್ದಾರೆ. ಆಕಾಶಕ್ಕೆ ಏಣಿಯಿಟ್ಟು ಚಂದ್ರನ್ ಹತ್ರ ಹೋಗ್ತೀನಿ; ಹಲ್ಲೋ ಮಿಸ್ಟರ್ ಚಂದ್ರ ಅಂತ ಷೇಕ್ ಹ್ಯಾಂಡ್ ಮಾಡ್ತೀನಿ!–ಇದು ನಾಡಿಗರ ಬಹಳ ಜನಪ್ರಿಯವಾದ ಮಕ್ಕಳ ಕವಿತೆ. ಪ್ರಸಿದ್ಧ ಕವಿಗಳಾದ ಮತ್ತು ಲೇಖಕರಾದ ಕೆ.ವಿ. ತಿರುಮಲೇಶ್, ವೈದೇಹಿ, ಚಿಂತಾಮಣಿ ಕೊಡ್ಲೆಕೆರೆ, ಭಾಗೀರಥಿ ಹೆಗಡೆ, ಜೀನಹಳ್ಳಿ ಸಿದ್ಧಲಿಂಗಪ್ಪ, ಬಿಳಿಗೆರೆ ಕೃಷ್ಣಮೂರ್ತಿ, ಟಿ.ಎಸ್. ನಾಗರಾಜ ಶೆಟ್ಟಿ, ಕುರುವ ಬಸವರಾಜ, ಸಿ.ಎಂ. ಗೋವಿಂದರೆಡ್ಡಿ, ರಾಧೇಶ ತೋಳ್ಪಾಡಿ, ತಮ್ಮಣ್ಣ ಬೀಗಾರ, ಆನಂದಪಾಟೀಲ, ಶ್ರೀನಿವಾಸ ಉಡುಪ (ಇವರ ಕುಂಭಕರ್ಣ ನಿದ್ದೆ ಅದ್ಭುತವೆನಿಸುವ ಮಕ್ಕಳ ಕಥನಕವನ), ಪ್ರಸಿದ್ಧ ಕತೆಗಾರ ಈಶ್ವರಚಂದ್ರ, ಅಮೆರಿಕೆಯಲ್ಲಿ ನೆಲೆಸಿರುವ ಮೀರ ನಿರಂತರವಾಗಿ ಮಕ್ಕಳಿಗಾಗಿ ಬರೆಯುತ್ತಾ ಇದ್ದಾರೆ. ಮೇಲೆ ಉಲ್ಲೇಖಿಸಿದ ಹೆಸರುಗಳಲ್ಲಿ ಆನಂದಪಾಟೀಲರು ಸ್ವತಃ ಮಕ್ಕಳ ಕಥೆ, ಕವಿತೆ ಬರೆಯುವುದರೊಂದಿಗೇ ಮಕ್ಕಳ ಸಾಹಿತ್ಯದ ಮೀಮಾಂಸೆಯನ್ನೂ ಬೆಳೆಸುತ್ತಿರುವವರಾಗಿ ಬಹಳ ಮುಖ್ಯರಾಗಿದ್ದಾರೆ. ಮಕ್ಕಳ ಕಾವ್ಯದ ಬಹು ಮುಖ್ಯ ಸಂಕಲನ ಪ್ರಕಟಿಸಿದವರಲ್ಲಿ ಬೊಳುವಾರು ಪ್ರಥಮ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಆ ಮಹತ್ವದ ಕಾವ್ಯ ಸಂಪುಟದಲ್ಲಿ ಸ್ವತಃ ಬೊಳುವಾರರೇ ೧೯೭೫ ರಿಂದೀಚೆಗೆ ಎರಡನೆಯ ಸಂಪುಟಕ್ಕೆ ಆಗಬಹುದಾದಷ್ಟು ಒಳ್ಳೆಯ ಮಕ್ಕಳ ಪದ್ಯಗಳು "ಹಕ್ಕಿಸಾಲು"ಗಳಂತೆ ಕಾದು ಕುಳಿತಿರುವುದರಿಂದಾಗಿ ಅವುಗಳನ್ನು ಈ ಸಂಪುಟದಲ್ಲಿ ಸೇರಿಸಿಕೊಳ್ಳದೆ ಇರುವುದನ್ನು ಸೂಚಿಸಿದ್ದಾರೆ. ೧೯೭೫ರಿಂದ ಈಚೆಗೆ ಕನ್ನಡದಲ್ಲಿ ಅನೇಕ ಬಹು ಮುಖ್ಯವಾದ ಕವಿತಾ ಸಂಗ್ರಹಗಳು, ಕತೆ ಕಾದಂಬರಿಗಳು ಕನ್ನಡದಲ್ಲಿ ಬಂದಿವೆ. ಬೊಳುವಾರರ ಕೃತಿಗೆ ಪೂರಕವಾಗುವಂಥ ಎರಡನೇ ಕಾವ್ಯ ಸಂಪುಟ ಪ್ರಕಟವಾಗುವುದು ಅಪೇಕ್ಷಣೀಯವಾಗಿದೆ. ಅಂಥ ಸಾಹಸವನ್ನು ಯಾರು ಕೈಗೊಳ್ಳುವರೋ ಕಾದು ನೋಡಬೇಕಾಗಿದೆ. ಹಾಗೇ ನಾಟಕ–ಕತೆ–ಕಾದಂಬರಿಗಳ ಸಂಕಲನವೂ ಹೊರಬರಬೇಕಾಗಿದೆ.

ಮಕ್ಕಳ ನಾಟಕಗಳಲ್ಲಿ ಒಳ್ಳೆಯ ಕೃತಿಗಳು ಹೊರಬಂದಿವೆ. ಕುವೆಂಪು, ಕಾರಂತರಿಂದ ಮೊದಲ್ಗೊಂಡು, ಬಿ.ವಿ. ಕಾರಂತ, ಕೆ.ವಿ.ಸುಬ್ಬಣ್ಣ, ಎಚ್.ಎಸ್. ವೆಂಕಟೇಶಮೂರ್ತಿ, ವೈದೇಹಿ, ಅನೇಕ ಸೊಗಸಾದ ಮಕ್ಕಳ ನಾಟಕಗಳನ್ನು ಬರೆದಿದ್ದಾರೆ. ಮಕ್ಕಳ ನಾಟಕಗಳ ರಂಗ ಪ್ರಯೊಗದಲ್ಲಿ ಬಿ.ವಿ. ಕಾರಂತ, ಪ್ರೇಮಾ ಕಾರಂತ, ಶ್ರೀಪಾದಭಟ್ಟ, ಕೃಷ್ಣಮೂರ್ತಿ ಕವತ್ತಾರ, ಬಿ. ಜಯಶ್ರೀ, ಸುಷ್ಮಾ ಮತ್ತು ಕಶ್ಯಪ್, ಹೊನ್ನಾವರದ ಕಿರಣ್ ಭಟ್,ಸುಳ್ಯದ ಮೂರ್ತಿ ದೇರಾಜೆ, ಮೋಹನ್ ಸೋನ, ಐ.ಕೆ. ಬೋಳುವಾರು(ಪುತ್ತೂರು), ದಾಕ್ಷಾಯಿಣಿ ಭಟ್, ಎನ್. ಮಂಗಳಾ, ಕೆ.ಜಿ. ಕೃಷ್ಣಮೂರ್ತಿ, ಮುಂತಾದವರು ದಶಕಗಳಿಂದ ಮಕ್ಕಳ ರಂಗಭೂಮಿಯಲ್ಲಿ ತೊಡಗಿಕೊಂಡಿದ್ದಾರೆ. ತುಮರಿಯಲ್ಲಿ ಕಿನ್ನರಮೇಳ ಸ್ಥಾಪಿಸಿ ಮಕ್ಕಳ ರಂಗಭೂಮಿಗೆ ಅವಿರತವಾಗಿ ಶ್ರಮಿಸುತ್ತಿರುವ ಕೆ.ಜಿ. ಕೃಷ್ಣಮೂರ್ತಿಯವರಂತೂ ವಿಶೇಷ ಉಲ್ಲೇಖಕ್ಕೆ ಪಾತ್ರರಾಗಿದ್ದಾರೆ.

ಮಕ್ಕಳಿಗಾಗಿ ಕಾದಂಬರಿಗಳನ್ನು ರಚಿಸುತ್ತಿರುವ ಹಿರಿಯ ಕಾದಂಬರಿಕಾರರಾದ ನಾ.ಡಿಸೋಜ, ಸುಮತೀಂದ್ರ ನಾಡಿಗ, ಎಚ್.ಎಸ್. ವೆಂಕಟೇಶಮೂರ್ತಿ , ರಾಜಶೇಖರ ಭೂಸನೂರುಮಠ, ಶಶಿಧರ ವಿಶ್ವಾಮಿತ್ರ, ಬಸು ಬೇವಿನಗಿಡದ ಮೊದಲಾದವರನ್ನು ಮರೆಯುವಂತಿಲ್ಲ.

***

ಬೊಳುವಾರು, ತಮ್ಮ "ತಟ್ಟು ಚಪ್ಪಾಳೆ ಪುಟ್ಟ ಮಗು" ಎಂಬ ಮಕ್ಕಳ ಕಾವ್ಯದ ಆಂಥಾಲಜಿಯಲ್ಲಿ ಮಕ್ಕಳ ಕಾವ್ಯವನ್ನು ಪರಿಚಯಿಸುವಾಗ ಒಂದು ಮುಖ್ಯವಾದ ಮಾತು ಉಲ್ಲೇಖಿಸುತ್ತಾರೆ. ಶಿಶುಗೀತೆಗಳು ಅನಾಥ ಮಗುವಿನ ರೋದನ ಎಂಬುದು ಆ ಉಲ್ಲೇಖ. ಚಾರಿತ್ರಿಕವಾಗಿ ಆ ಮಾತು ಮುಖ್ಯವಾದುದು. ಔದ್ಯೋಗಿಕ ಕ್ರಾಂತಿಯ ಪರಿಣಾಮವಾಗಿ ಗಂಡನ ಜತೆ ಹೆಂಡತಿಯೂ ದುಡಿಯಲು ಹೋದಾಗ ನಿರ್ಮಾಣಗೊಂಡ ಅನಾಥ ಮಕ್ಕಳ ಸಂಸ್ಥೆಗಳಲ್ಲಿ ಮಕ್ಕಳ ಸಾಹಿತ್ಯ ಎಂಬ ಪ್ರಕಾರವು ಅಂಬೆಗಾಲಿಟ್ಟಿತಂತೆ! ಬೇರೆ ಬೇರೆ ಸಾಹಿತ್ಯ ಪ್ರಕಾರಗಳಂತೆ ಮಕ್ಕಳ ಸಾಹಿತ್ಯವೂ ಇಂಗ್ಲಿಷ್ ಮಂದಿಯೊಂದಿಗೆ ಭಾರತಕ್ಕೆ ವಲಸೆ ಬಂದಿರುವಂಥದ್ದು. ನಮ್ಮ ದೇಶದಲ್ಲಿ ಬೊಳುವಾರರು ಗುರುತಿಸಿರುವಂತೆ ಶಿಶುಗೀತೆಗಳ ಮೊದಲ ಕೂಗು ಕೇಳಿದ್ದು ಪಾಠಶಾಲೆಗಳಲ್ಲಿ. ಶಿಶುಗೀತೆಗಳ ರಚನೆಯಲ್ಲಿ ವಿಶೇಷವಾಗಿ ತೊಡಗಿದವರು ಕೂಡಾ ಅಧ್ಯಾಪಕರುಗಳು. ಪಠ್ಯ ಪುಸ್ತಕಗಳೇ ಶಿಶು ಸಾಹಿತ್ಯದ ಮೊದಲ ಆಶ್ರಯ ಸ್ಥಾನಗಳು. ಮೊದಲು ಇಂಗ್ಲಿಷ್ ಪದ್ಯಗಳ ಅನುವಾದಗಳೇ ಹೆಚ್ಚಾಗಿ ಕಾಣಿಸಿ ಕೊಂಡರೂ ಕ್ರಮೇಣ ಸ್ವತಂತ್ರ ರಚನೆಗೂ ನಮ್ಮ ಸಾಹಿತಿಗಳು ತೊಡಗಿಕೊಂಡರು. ಪಂಜೆ ಮಂಗೇಶರಾವ್, ಹೊಯಿಸಳ, ಶಿವರಾಮ ಕಾರಂತ, ಜಿ.ಪಿ. ರಾಜರತ್ನಂ, ಸಿದ್ಧಯ್ಯ ಪುರಾಣಿಕ, ಸ್ವತಃ ಕುವೆಂಪು ಅವರಂಥ ಮಹತ್ವದ ಲೇಖಕರು ಮಕ್ಕಳ ಸಾಹಿತ್ಯಕ್ಕೆ ತಮ್ಮ ಅಮೂಲ್ಯ ಕೊಡುಗೆ ನೀಡಿದ್ದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ವರ್ತಮಾನದಲ್ಲಿ ಆ ಪರಂಪರೆಯನ್ನು ಸದೃಢವಾಗಿ ಮುಂದುವರೆಸಬಲ್ಲ ಅನೇಕ ಸಮರ್ಥ ಲೇಖಕರು ಕಾಣಿಸಿಕೊಂಡಿದ್ದಾರೆ.

ಈವತ್ತಿನ ಬಹು ಮುಖ್ಯ ಸಮಸ್ಯೆಯೆಂದರೆ ಇಂಥ ಸಾಹಿತ್ಯವನ್ನು ಓದುವ ಗ್ರಾಹಕರು ಅಂದರೆ ಮಕ್ಕಳು ಕನ್ನಡದ ಕೈತಪ್ಪಿ ಹೋಗುತ್ತಿರುವ ದಾರುಣತೆ. ಕನ್ನಡ ಮಕ್ಕಳ ಸಾಹಿತ್ಯ ಎದುರಿಸುತ್ತಿರುವ ಬಹು ಮುಖ್ಯ ಸಮಸ್ಯೆ ಇದೇ. ಕನ್ನಡ ಪುಸ್ತಕ ಗ್ರಂಥಾಲಯದಲ್ಲಿ; ಇಂಗ್ಲಿಷ್ ಪುಸ್ತಕ ಮಕ್ಕಳ ಕೈಯಲ್ಲಿ. ಈ ಪರಿಸ್ಥಿತಿ ಅದಲು ಬದಲು ಆಗುವ ಸಾಧ್ಯತೆ ಉಂಟೆ? ಅದಲು ಬದಲಾಗದಿದ್ದರೆ ಬೇಡ; ಕಡೇ ಪಕ್ಷ ಇಂಗ್ಲಿಷ್ ರೈಮ್ಸ್ ಜತೆ ಪಂಜೆ, ರಾಜರತ್ನಂ, ಹೊಯಿಸಳರನ್ನೂ ಮಕ್ಕಳು ಪಲುಕುವರೇ? ಅದು ಆಗದೆ ಹೋದಲ್ಲಿ ಪುತಿನ ಅವರು ಅಂದಂತೆ "ಆಸ್ತಿ ಉಂಟು; ಪ್ರಾಪ್ತಿಯಿಲ್ಲ" ಎನ್ನುವ ಮಾತನ್ನು ನಾವೂ ಅನ್ನಬೇಕಾಗುತ್ತದೆ.

ಕನ್ನಡ ಪಠ್ಯಪುಸ್ತಕಗಳು ಮತ್ತು ಮಕ್ಕಳ ಸಾಹಿತ್ಯದ ವಿಕಾಸ

ಎನ್. ಶ್ರೀನಿವಾಸ ಉಡುಪ

– ೧ –

ಭಾಷಾ ಪಠ್ಯಪುಸ್ತಕಗಳ ರಚನೆಯ ಹಿಂದಿರುವ ಉದ್ದೇಶ ಬಹುಮುಖಿಯಾದುದು. ಯಾವುದೋ ಒಂದು ನಿರ್ದಿಷ್ಟ ವಿಷಯದ ಬಗ್ಗೆ ರಚಿತವಾಗುವ ಪಠ್ಯಪುಸ್ತಕ ಆ ಪಠ್ಯವಸ್ತುವಿಗೆ ಮಾತ್ರ ಸೀಮಿತವಾಗಿರುತ್ತದೆ. ಅಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯವನ್ನು ವಿದ್ಯಾರ್ಥಿ ಸುಲಭವಾಗಿ, ಖಚಿತವಾಗಿ ಗ್ರಹಿಸಿಕೊಳ್ಳಬೇಕೆಂಬುದಕ್ಕಷ್ಟೇ ರಚನಕಾರ ಗಮನಕೊಟ್ಟರೆ ಸಾಕು. ಆದರೆ ಭಾಷಾ ಪಠ್ಯಪುಸ್ತಕದ ರಚನೆ ಇಷ್ಟು ಸರಳವಲ್ಲ. ಅಲ್ಲಿ ವಿಷಯಗ್ರಹಣದ ಜೊತೆಜೊತೆಗೇ ವಿದ್ಯಾರ್ಥಿಯು ಭಾಷಾಕೌಶಲವನ್ನು ರೂಢಿಸಿಕೊಳ್ಳಬೇಕೆಂಬ ಉದ್ದೇಶವೂ ಮುಖ್ಯವಾಗುತ್ತದೆ. ಭಾಷೆಯ ಸ್ವರೂಪವೇ ಸಂಕೀರ್ಣವಾದುದು. ಅಲ್ಲಿ ಸುಸಂಬದ್ಧ ಹಾಗೂ ಪರಿಣಾಮಕಾರೀ ಸಂವಹನಕ್ರಿಯೆಯನ್ನು ನಿಯಂತ್ರಿಸುವ ವ್ಯಾಕರಣ ನಿಯಮಗಳಿವೆ; ನಿರ್ದಿಷ್ಟ ಭಾಷೆಗೇ ಸೀಮಿತವಾಗಿರುವ ವಿಶಿಷ್ಟ ನುಡಿಗಟ್ಟು, ಗಾದೆ, ಒಗಟು – ಇತ್ಯಾದಿಗಳಿವೆ, ಕಾಲದಿಂದ ಕಾಲಕ್ಕೆ ಆ ಭಾಷೆಯಲ್ಲಾಗಿರುವ ಸ್ವರೂಪ ವ್ಯತ್ಯಾಸ, ಪ್ರಾದೇಶಿಕ ವೈವಿಧ್ಯಗಳಿಂದ ಉಂಟಾಗುವ ಪಲ್ಲಟಗಳಿವೆ. ಇಂಥ ಸೂಕ್ಷ್ಮಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡೇ ಭಾಷಾ ಪಠ್ಯಪುಸ್ತಕಗಳನ್ನು ರಚಿಸಬೇಕಾಗುತ್ತದೆ. ಒಂದು ಭಾಷೆಯ ಭಾವ ಶ್ರೀಮಂತಿಕೆ, ವೈಚಾರಿಕ ಹಿರಿಮೆ – ಮುಂತಾದುವುಗಳನ್ನು ಆ ಭಾಷೆಯ ಪ್ರಾಚೀನ ಮತ್ತು ಅರ್ವಾಚೀನ ಸಾಹಿತ್ಯದ ಕೆಲವು ಮಾದರಿಗಳ ಮೂಲಕ ಪರಿಚಯಿಸಬೇಕಾದ ಜವಾಬ್ದಾರಿಯೂ ಭಾಷಾ ಪಠ್ಯಪುಸ್ತಕಕ್ಕಿದೆ. ಇಷ್ಟಾಗಿಯೂ ವಿದ್ಯಾರ್ಥಿಯ ಪಾಲಿಗೆ ಅಂಥದೊಂದು ಪುಸ್ತಕದ ಓದು ಶುಷ್ಕವೆನ್ನಿಸದೆ, ರಂಜನೀಯವಾಗಿ, ಭಾವಪ್ರಚೋದಕವಾಗಿದ್ದು, ಆ ಭಾಷೆಯಲ್ಲಿನ ಇತರ ಪುಸ್ತಕಗಳನ್ನು ಓದಬೇಕೆನ್ನುವ ಪ್ರೇರಣೆಗೆ ಕಾರಣವಾಗಬೇಕು. ಆದ್ದರಿಂದಲೇ ಭಾಷಾ ಪಠ್ಯಪುಸ್ತಕಗಳಲ್ಲಿ ಐತಿಹಾಸಿಕ ಹಾಗೂ ಸಮಕಾಲೀನ ಸಂಗತಿಗಳೂ, ದೇಶಭಕ್ತರು, ಕವಿ–ಸಾಹಿತಿಗಳು, ವಿಜ್ಞಾನಿಗಳು, ಜ್ಞಾನಿಗಳು, ಸಮಾಜ ಸುಧಾರಕರು ಇತ್ಯಾದಿ ಆದರ್ಶವ್ಯಕ್ತಿಗಳನ್ನು ಪರಿಚಯಿಸುವ ಬರಹಗಳೂ ಇರಬೇಕಾದುದು ಅಗತ್ಯ, ಈ ಎಲ್ಲ ಅಗತ್ಯಗಳನ್ನು ಪೂರೈಸುವ ಸಲುವಾಗಿ ಭಾಷಾ ಪಠ್ಯಪುಸ್ತಕಗಳ ರಚನೆಯಲ್ಲಿ ಆ ಭಾಷೆಯಲ್ಲಿನ ಕವಿ–ಸಾಹಿತಿಗಳ ಮತ್ತು ವಿವಿಧ ಕ್ಷೇತ್ರಗಳಲ್ಲಿ ಬರೆಯುವ ಲೇಖಕರ ಬರೆಹಗಳನ್ನು ಬಳಸಿಕೊಳ್ಳಬೇಕಾದುದು ಅನಿವಾರ್ಯ ಮಾತ್ರವಲ್ಲ, ಅಪೇಕ್ಷಣೀಯವೂ ಹೌದು. ಹೀಗೆ ಮಾಡುವಾಗ ಆ ಪುಸ್ತಕಗಳನ್ನು ವ್ಯಾಸಂಗ ಮಾಡಲಿರುವ ಮಕ್ಕಳ ವಯಸ್ಸು,

ಅವರ ಮಾನಸಿಕ / ಬೌದ್ಧಿಕ ಮಟ್ಟ – ಮುಂತಾದುವುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ; ವಿದ್ಯಾರ್ಥಿಗಳಲ್ಲಿ ಮೌಲ್ಯಪ್ರಜ್ಞೆ, ಸುಸಂಸ್ಕೃತ ನಡವಳಿಕೆ, ಜೀವನೋತ್ಸಾಹ, ಆತ್ಮವಿಶ್ವಾಸ – ಇಂತಹ ಇತ್ಯಾತ್ಮಕ ಗುಣಗಳನ್ನು ಪ್ರಚೋದಿಸುವ ಬರೆಹಗಳನ್ನೇ ಪಠ್ಯಪುಸ್ತಕಗಳಲ್ಲಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

– ೨ –

ಶಿಕ್ಷಣದ ಎಲ್ಲ ಹಂತಗಳಲ್ಲೂ ಮಾತೃಭಾಷಾ ಮಾಧ್ಯಮವೇ ಇರಬೇಕೆಂಬ ವಾದ ಬಹಳ ಹಳೆಯದಷ್ಟೆ? 'ಮಾತೃಭಾಷೆಯಲ್ಲಿ ಕಲಿತದ್ದೇ ಮೈಹತ್ತುವುದು; ಮಾತೃಭಾಷೆಯಲ್ಲಿ ಬರೆದದ್ದೇ ನಿಲ್ಲುವುದು' ಎಂದು ಡಾ. ಎ. ಆರ್. ಕೃಷ್ಣಶಾಸ್ತ್ರಿಗಳು ಹೇಳಿರುವುದನ್ನು ನೆನಪಿಸಿಕೊಳ್ಳಬಹುದು. ಆದ್ದರಿಂದಲೇ ಮಾತೃಭಾಷೆಯನ್ನು ಸಮರ್ಥವಾಗಿ, ಅದರ ಎಲ್ಲ ಸು-ಸೂಕ್ಷ್ಮಗಳೊಂದಿಗೆ ಕಲಿಸಬೇಕೆನ್ನುವ ಉದ್ದೇಶದಿಂದ ಭಾಷಾ ಪಠ್ಯಪುಸ್ತಕದ ರಚನೆಯಾಗಬೇಕು. ಹೀಗಾಗಿ ಭಾಷಾ ಪಠ್ಯಪುಸ್ತಕ ಮಕ್ಕಳ ಪಾಲಿಗೆ ಕೇವಲ ಪರೀಕ್ಷೆಗಾಗಿ ಓದಬೇಕಾದ ಪುಸ್ತಕವಾಗದೇ, ಒಂದು ಸಾಹಿತ್ಯಕೃತಿಯಂತೆ ರುಚಿಕಟ್ಟಾಗಿರಬೇಕು; ಓದಿನ ಸುಖವನ್ನು ಒದಗಿಸುವಂತಿರಬೇಕು. ಆದ್ದರಿಂದಲೇ ಕನ್ನಡದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಲುವಾಗಿ ಭಾಷಾ ಪಠ್ಯಪುಸ್ತಕಗಳನ್ನು ರಚಿಸುವ ಪ್ರಕ್ರಿಯೆಯಲ್ಲಿ ಕನ್ನಡದ ಮಕ್ಕಳ ಸಾಹಿತ್ಯದ ನೆರವನ್ನು ಪಡೆಯಬೇಕಾದುದು ಸಹಜ ಮಾತ್ರವಲ್ಲ, ಅನಿವಾರ್ಯ ಕೂಡ.

ಭಾರತದ ರಾಜ್ಯಾಂಗದಲ್ಲಿ ಹದಿನಾರು ವರ್ಷದ ಒಳಗಿರುವವರನ್ನೆಲ್ಲಾ ಮಕ್ಕಳೆಂದು ಪರಿಗಣಿಸಬಹುದು ಎನ್ನಲಾಗಿದೆ. ಇವರೆಲ್ಲರಿಗೂ ಅನ್ವಯಿಸುವ ಸಾಹಿತ್ಯವನ್ನೇ ಮಕ್ಕಳ ಸಾಹಿತ್ಯವೆಂದು ಸ್ಥೂಲವಾಗಿ ಹೇಳಬಹುದು. ಮಕ್ಕಳ ಸಾಹಿತ್ಯಪ್ರಕಾರವನ್ನು ಶಿಶುಸಾಹಿತ್ಯ ಹಾಗೂ ಬಾಲಸಾಹಿತ್ಯ ಎಂದು ಎರಡು ವಿಭಾಗಗಳಲ್ಲಿ ವಿಂಗಡಿಸಬಹುದು ಎನ್ನುತ್ತಾರೆ ತಜ್ಞರು. ಆರು ವರ್ಷದ ಒಳಗಿನ ಮಕ್ಕಳು ಶಿಶುಗಳು. ಅವರ ಸಲುವಾಗಿ ರಚಿತವಾಗುವ ಪುಟ್ಟ ಪುಟ್ಟ ಪ್ರಾಸಪದ್ಯಗಳು, ಚುಟುಕಗಳು, ಪುಟಾಣಿಕಥೆಗಳು, ನಿರರ್ಥಕ ಪದ್ಯಗಳು (Nonsense verses) – ಇಂಥವೆಲ್ಲವೂ ಶಿಶುಸಾಹಿತ್ಯದ ಪರಿಧಿಗೆ ಸೇರುತ್ತವೆ. ಆರರಿಂದ ಹದಿನಾರು ವರ್ಷದವರೆಗಿನ ಮಕ್ಕಳನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿತವಾಗುವ ಸಾಹಿತ್ಯವೇ ಬಾಲಸಾಹಿತ್ಯ. ಮಕ್ಕಳ ಸಾಹಿತ್ಯದಲ್ಲಿ ಮನರಂಜನೆಯ ಜೊತೆಜೊತೆಗೇ, ವ್ಯಕ್ತಿತ್ವವಿಕಸನದ ಅಂಶಗಳೂ ಸೇರಿರಬೇಕೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಕಾರಣದಿಂದಲೇ ಮಕ್ಕಳ ಸಾಹಿತ್ಯವನ್ನು ಮನರಂಜನಾ ಸಾಹಿತ್ಯ, ಆದರ್ಶ ಸಾಹಿತ್ಯ, ಶೈಕ್ಷಣಿಕ ಸಾಹಿತ್ಯ ಎಂದು ವರ್ಗೀಕರಿಸುವುದೂ ಉಂಟು. ಮನರಂಜನಾ ಸಾಹಿತ್ಯದಲ್ಲಿ ಮಕ್ಕಳನ್ನು ನಗಿಸುವ, ಅವರ ಕಲ್ಪನಾಶಕ್ತಿಯನ್ನು ಪ್ರಚೋದಿಸುವ, ಕುತೂಹಲವನ್ನು ಕೆರಳಿಸುವ ಕಥೆ, ಕವಿತೆ, ನಾಟಕ, ಕಾದಂಬರಿ – ಇತ್ಯಾದಿಗಳಿರುತ್ತವೆ. ಆದರ್ಶ ಸಾಹಿತ್ಯ ಮೌಲ್ಯಪ್ರಜ್ಞೆ, ನೈತಿಕ ಎಚ್ಚರ, ಹಿರಿಯದೇನನ್ನೋ ಸಾಧಿಸಬೇಕೆಂಬ ಕನಸುಗಾರಿಕೆ, ಆತ್ಮವಿಶ್ವಾಸ – ಮುಂತಾದುವುಗಳನ್ನು ಬಿಂಬಿಸುತ್ತದೆ; ಆದರ್ಶವ್ಯಕ್ತಿಗಳ ಬದುಕು, ಸಾಧನೆಗಳನ್ನು ಪರಿಚಯಿಸುವ ಕೆಲಸವನ್ನು ಮಾಡುತ್ತದೆ. ಇನ್ನು ಶೈಕ್ಷಣಿಕ ಸಾಹಿತ್ಯ ಸರಳವಾದ ರೀತಿಯಲ್ಲಿ ಪರಿಸರ, ಸಮಾಜ, ರಾಷ್ಟ್ರ, ವಿಜ್ಞಾನ, ಮಾನವಿಕ ವಿಚಾರಗಳಿಗೆ ಪ್ರಾಧಾನ್ಯ ನೀಡುತ್ತದೆ.

ಈ ಎಲ್ಲ ಲಕ್ಷಣಗಳಿರುವ ಮಕ್ಕಳ ಸಾಹಿತ್ಯದ ಪರಿಪ್ರೇಕ್ಷ್ಯದಲ್ಲಿ ಕರ್ನಾಟಕ ಪಠ್ಯಪುಸ್ತಕ ಸಂಘದಿಂದ ಪ್ರಸ್ತುತ ಕಾಲಘಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗಾಗಿ – ಅರ್ಥಾತ್ ಒಂದರಿಂದ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಸಲುವಾಗಿ – ರಚಿತವಾಗಿರುವ ಕನ್ನಡ ಪಠ್ಯಪುಸ್ತಕಗಳನ್ನು ಸ್ಥೂಲವಾಗಿ ವಿಶ್ಲೇಷಿಸುವ ಕೆಲಸ ಮಾಡಬಹುದೆನ್ನಿಸುತ್ತದೆ. ಸಾಧಾರಣವಾಗಿ ಮಕ್ಕಳ ಸಾಹಿತ್ಯವೆಂದೊಡನೇ ಮಕ್ಕಳಿಗಾಗಿ ಬರೆಯಲಾಗಿರುವ ವಿವಿಧ ರೀತಿಯ ಕಥೆ, ನಾಟಕ, ಕವಿತೆಗಳಷ್ಟೇ ನಮ್ಮ ಮುಂದೆ ಕಾಣಿಸಿಕೊಳ್ಳುತ್ತವೆ. ಮಕ್ಕಳ ಜ್ಞಾನದ ಪರಿಧಿಯನ್ನು ವಿಸ್ತರಿಸುವ ವಿಜ್ಞಾನ, ಇತಿಹಾಸ ಮುಂತಾದ ವಿವಿಧ ಕ್ಷೇತ್ರಗಳನ್ನು ಕುರಿತ ವಾಙ್ಮಯ ಕೂಡಾ ಮಕ್ಕಳ ಸಾಹಿತ್ಯವಲಯಕ್ಕೆ ಸೇರುತ್ತದೆ ಎಂಬುದನ್ನು ಮರೆಯಲಾಗದು. ಕರ್ನಾಟಕ ಪಠ್ಯಪುಸ್ತಕ ಸಂಘ ಕನ್ನಡ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವಾಗ ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡೇ ಕವಿತೆ, ಕಥೆ, ನಾಟಕ ಮುಂತಾದವುಗಳೊಂದಿಗೆ ವಿಜ್ಞಾನ, ದೇಶಪ್ರೇಮ, ಪರಿಸರ ಪ್ರಜ್ಞೆ – ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದ ಸೂಕ್ತ ಬರೆಹಗಳನ್ನು ಸೇರಿಸಿದ್ದಾರೆ. ಮಕ್ಕಳ ವಯೋಮಾನಕ್ಕೆ ಅನುಗುಣವಾಗಿ ರಚಿತವಾದ ಈ ಪುಸ್ತಕಗಳಲ್ಲಿ ಪ್ರಾದೇಶಿಕ ಭಾಷಾ ವೈವಿಧ್ಯ ಹಾಗೂ ಇನ್ನಿತರ ಭಾಷಾ ಸೂಕ್ಷ್ಮಗಳನ್ನೂ ಮಕ್ಕಳ ಅರಿವಿಗೆ ತರುವ ಪ್ರಯತ್ನ ಮಾಡಿರುವುದು ಶ್ಲಾಘನೀಯ. ಈ ಪುಸ್ತಕಗಳಲ್ಲಿ ಸಂಕಲಿತವಾಗಿರುವ ಪದ್ಯ, ಗದ್ಯ, ನಾಟಕ ಪ್ರಕಾರಗಳಲ್ಲಿ ಕನ್ನಡದ ಮಕ್ಕಳ ಸಾಹಿತಿಗಳ ರಚನೆಗಳೊಡನೆ, ಪಠ್ಯಪುಸ್ತಕಗಳ ಸಲುವಾಗಿಯೇ ರಚಿಸಲ್ಪಟ್ಟ ಬರೆಹಗಳೂ ಇವೆ. ಜೊತೆಗೇ ಜನಪದ ಸಾಹಿತ್ಯ, ವಚನ ಸಾಹಿತ್ಯ ಮೊದಲಾದವುಗಳಿಂದ ಆರಿಸಲಾದ ಕೆಲವು ಭಾಗಗಳೂ, ಹಳೆಗನ್ನಡ, ನಡುಗನ್ನಡ ಸಾಹಿತ್ಯದಿಂದ ಆಯ್ದ ಭಾಗಗಳೂ ಸೇರ್ಪಡೆಯಾಗಿವೆ. ಹೀಗಾಗಿ ಮಕ್ಕಳಿಗೆ ಕನ್ನಡ ಸಾಹಿತ್ಯದ ಸ್ವರೂಪ ವೈವಿಧ್ಯ, ವೈಶಾಲ್ಯಗಳ ಕಿರುಪರಿಚಯಕ್ಕೂ ಈ ಪುಸ್ತಕಗಳ ವ್ಯಾಸಂಗ ಸಹಕಾರಿಯಾಗಿದೆ.

– ೩ –

ಪ್ರಾಥಮಿಕ ಶಾಲೆಯಲ್ಲಿ ಒಂದರಿಂದ ನಾಲ್ಕನೆಯ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ಎಳೆಯರು ಶೈಶವದ ಪರಿಧಿಯಿಂದ ನಿಧಾನವಾಗಿ ಹೊರಬರುವ ಹಂತದಲ್ಲಿರುವಂಥವರು. ಆದ್ದರಿಂದ ಅವರ ಕಲ್ಪನೆಗೆ ಎಟುಕುವ, ಅವರ ಕುತೂಹಲ ಪ್ರವೃತ್ತಿಯನ್ನು ಪ್ರಚೋದಿಸುವ ಪಾಠಗಳನ್ನೇ ಅವರ ಪುಸ್ತಕಗಳಲ್ಲಿ ಅಳವಡಿಸಬೇಕಾಗುತ್ತದೆ. ಮಕ್ಕಳಿಗೆ ಪುಸ್ತಕದ ಓದು ಭಾರವೆನ್ನಿಸಿದರೆ ಅವರು ಪುಸ್ತಕದಿಂದ ವಿಮುಖರಾಗುತ್ತಾರೆ. ಇದನ್ನು ಗಮನದಲ್ಲಿರಿಸಿಕೊಂಡೇ ಪಠ್ಯಪುಸ್ತಕ ಸಂಘ ಪ್ರಾಥಮಿಕ ತರಗತಿಗಳ ಕನ್ನಡ ಪುಸ್ತಕಗಳಲ್ಲಿ 'ಹಾವಿನ ಹಾಡು' (ಪಂಜೆ), 'ಆನೆ ಬಂದಿತ್ತು' (ಬೆಂಡರವಾಡಿ ಸುಬ್ರಹ್ಮಣ್ಯ ಶರ್ಮ), 'ಗಡಿಯಾರ' (ದಿನಕರ ದೇಸಾಯಿ), 'ಕೋಗಿಲೆ' (ಪಳಕಳ ಸೀತಾರಾಮ ಭಟ್ಟ), 'ಗುಡುಗುಡು ಮುತ್ಯಾ' (ಕಂಚ್ಯಾಣಿ ಶರಣಪ್ಪ) ಮುಂತಾದ ಕವಿತೆಗಳನ್ನು ಆಯ್ಕೆ ಮಾಡಿರುವುದು ಅತ್ಯಂತ ಸಮಂಜಸ. ಇವು ಲಯ ವೈವಿಧ್ಯ, ಭಾವ ವೈವಿಧ್ಯಗಳಿಂದ ಮಕ್ಕಳನ್ನು ಆಕರ್ಷಿಸುವ ಶುದ್ಧ ಮಕ್ಕಳ ಕವಿತೆಗಳು. 'ಆನೆ ಬಂದಿತ್ತು, ಅಣ್ಣ ಆನೆ ಬಂದಿತ್ತು । ಹಬ್ಬದ ದಿನವೇ ಸುಬ್ಬನ ಮನೆಗೊಂದಾನೆ ಬಂದಿತ್ತು' ಎಂದೋ 'ನಾಗರ ಹಾವೇ, ಹಾವೊಳು ಹೂವೇ, ಬಾಗಿಲ ಬಿಲದಲಿ ನಿನ್ನಯ ತಾವೇ...'

ಎಂದೋ ರಾಗವಾಗಿ ಹಾಡುತ್ತಾ ಮಕ್ಕಳು ಕವಿತೆಗಳನ್ನು ಅನುಭವಿಸಿದರೆ ಭಾಷಾ ಬೋಧನೆಗೊಂದು ಸಾರ್ಥಕತೆ ಪ್ರಾಪ್ತವಾಗುತ್ತದೆ. ಆದರೆ ಇದೇ ಬಗೆಯ ಸೂಕ್ತಪದ್ಯಗಳ ಆಯ್ಕೆಯ ಪ್ರಕ್ರಿಯೆ ಐದನೆಯ ತರಗತಿಯೂ ಸೇರಿದಂತೆ ಮುಂದಿನ ಪಠ್ಯಪುಸ್ತಕಗಳಲ್ಲಿ ಮುಂದುವರೆದಿದೆಯೆನ್ನಲಾಗುವುದಿಲ್ಲ. ಈ ಪುಸ್ತಕಗಳಲ್ಲಿ ಮಕ್ಕಳ ಮನಸ್ಸಿನಲ್ಲಿ ಸ್ವಾತಂತ್ರ್ಯದ ಮಹತ್ವವನ್ನು ಪ್ರತಿಪಾದಿಸುವ 'ಶಕ್ತಿಕೊಡಿ' (ಪಳಕಳ), 'ಸ್ವಾತಂತ್ರ್ಯದ ಹಣತೆ' – ಪೂರಕಪದ್ಯ (ನಿಸಾರ್ ಅಹಮದ್), 'ಕಿತ್ತೂರ ಕೇಸರಿ' (ಫ. ಗು. ಸಿದ್ದಾಪುರ), 'ಸ್ವಾತಂತ್ರ್ಯ ಸ್ವರ್ಗ' (ಅಕಬರ ಅಲಿ) ಮುಂತಾದ ಕವಿತೆಗಳಿವೆ. ಹಾಗೆಯೇ ದುಡಿಮೆಯ ಹಿರಿಮೆಯನ್ನು ಎತ್ತಿ ತೋರಿಸುವ 'ನೇಗಿಲ ಯೋಗಿ' (ಪೋಲೀಸ ಪಾಟೀಲ), 'ನನ್ನ ರಟ್ಟೆಯ ಬಲವು ಹಿಗ್ಗುತಿರಲಿ' (ಬುದ್ದಣ್ಣ ಹಿಂಗಮಿರೆ) ಮುಂತಾದ ರಚನೆಗಳಿವೆ. ಒಂದೇ ವಿಚಾರವನ್ನು ಕುರಿತಾದ ರಚನೆಗಳು ಬೇರೆ ಬೇರೆ ತರಗತಿಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಂಡರೆ ಮಕ್ಕಳಿಗೆ ಏಕತಾನತೆಯಿಂದಾಗಿ ಕಲಿಕೆಯಲ್ಲಿ ಬೇಸರ ಮೂಡುವ ಸಾಧ್ಯತೆ ಇದೆ. ಮೇಲೆ ಹೆಸರಿಸಲಾದ ಹಲವು ರಚನೆಗಳಲ್ಲಿ ಮಕ್ಕಳ ಮನಸ್ಸನ್ನು ಸೆಳೆಯುವ ಲಯವಿನ್ಯಾಸವಾಗಲೀ, ಕಾವ್ಯಾಂಶವಾಗಲೀ ಅಷ್ಟಾಗಿ ಕಾಣಿಸುವುದಿಲ್ಲವೆನ್ನಬಹುದು. ಇನ್ನು ಪ್ರಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ 'ಮೂಡಲಮನೆ' (ಕಂಬಾರ), 'ಬೇಸಿಗೆ' (ಲಕ್ಷ್ಮಣರಾವ್), 'ಇರುವೆ' (ಚಂದ್ರರಾಜ ಶೆಟ್ಟಿ), 'ಗಂಗವ್ವ ತಾಯಿ' (ಪಟ್ಟಣಶೆಟ್ಟಿ) ಮುಂತಾದ ಆಧುನಿಕ ಕವಿತೆಗಳನ್ನು ಸಮರ್ಥ ಶಿಕ್ಷಕರು ಸಾಭಿನಯವಾಗಿ ವಾಚಿಸಿ ಅಥವಾ ಭಾವಪೂರ್ಣವಾಗಿ ಹಾಡಿ, ವಿವರಣೆ ನೀಡಿದ್ದೇ ಆದರೆ ವಿದ್ಯಾರ್ಥಿಗಳು ಆಸ್ವಾದಿಸಲು ಸಾಧ್ಯವಾದೀತು. ಈ ಪಠ್ಯಪುಸ್ತಕಗಳಲ್ಲಿ ಸೇರಿಸಲಾಗಿರುವ ದಾಸರ ಪದಗಳು ಸಾಕಷ್ಟು ಸರಳವಾಗಿವೆ. ಸರ್ವಜ್ಞನ ತ್ರಿಪದಿಗಳ ಆಯ್ಕೆಯೂ ಮಕ್ಕಳ ಗ್ರಹಿಕೆಯ ದೃಷ್ಟಿಯಿಂದ ಸರಿಯಾಗಿದೆ ಎನ್ನಬಹುದು. ಆದರೆ ವಚನಗಳನ್ನು ಆರಿಸುವಾಗ ಆಯ್ದಕ್ಕಿ ಲಕ್ಕಮ್ಮನ ವಚನಗಳಿಗಿಂತ ಬಸವಣ್ಣನವರ ಅಥವಾ ಅಕ್ಕಮಹಾದೇವಿಯವರ ಸರಳವಚನಗಳನ್ನು ಆಯ್ಕೆ ಮಾಡಬಹುದಿತ್ತು. 'ಮಂಗಳಗ್ರಹದಲ್ಲಿ ಪುಟ್ಟಿ' (ಗೋವಿಂದ ರೆಡ್ಡಿ), 'ಹೊಸಬಾಳು' (ಕುರ್ಶಾಲ್) – ಇಂಥ ಪದ್ಯಗಳು ನಿಜಕ್ಕೂ ಮಕ್ಕಳಿಗೆ ಇಷ್ಟವಾಗುತ್ತವೆ.

ಇನ್ನು ಈ ಪಠ್ಯಪುಸ್ತಕದಲ್ಲಿ ಸಂಕಲಿತವಾಗಿರುವ ಗದ್ಯಬರೆಹಗಳನ್ನು ಕುರಿತು ಸಂಕ್ಷಿಪ್ತವಾಗಿ ಹೇಳುವುದಾದರೆ ಅವುಗಳಲ್ಲಿ ವಿಷಯ ವೈವಿಧ್ಯಕ್ಕೆ ವಿಶೇಷ ಒತ್ತುಕೊಡಲಾಗಿದೆ ಎನ್ನಬಹುದು. ಅಲ್ಲಿ ಕಥೆಗಳಿವೆ; ಪರಿಸರ ಕಾಳಜಿ, ವೈಜ್ಞಾನಿಕ ಸಂಗತಿಗಳು, ವ್ಯಕ್ತಿಚಿತ್ರಗಳು, ಪ್ರೇಕ್ಷಣೀಯ ಅಥವಾ ಐತಿಹಾಸಿಕ ಮಹತ್ವವಿರುವ ಸ್ಥಳಗಳ ಪರಿಚಯ – ಹೀಗೆ ಹತ್ತು ಹಲವು ವಿಷಯಗಳನ್ನು ಸರಳವಾದ ಗದ್ಯದಲ್ಲಿ – ಅನೇಕ ಕಡೆ ಸಂಭಾಷಣೆಯ ಶೈಲಿಯಲ್ಲಿ ನಿರೂಪಿಸಲಾಗಿದೆ. ಐದನೆಯ ತರಗತಿಯ ಪುಸ್ತಕದಲ್ಲಿನ 'ನದಿಯ ಅಳಲು', 'ವಿಮಾನ ನಿಲ್ದಾಣ', 'ನಾನು ಮತ್ತು ಹುಂಚಿಮರ' ಮುಂತಾದುವು ನಿರೂಪಣೆ ಮತ್ತು ಉದ್ದೇಶ – ಎರಡೂ ನೆಲೆಗಳಲ್ಲಿ 'ಸಾರ್ಥಕ'ವಾಗಿವೆ ಎನ್ನಬಹುದು. ಆರನೆಯ ತರಗತಿಯ 'ಸಿರಿಕನ್ನಡ' ಪುಸ್ತಕದಲ್ಲಿನ 'ಘನ ತ್ಯಾಜ್ಯ ವಿಲೇವಾರಿ' ಎಂಬ ನಾಗೇಶ ಹೆಗಡೆಯವರ ಬರೆಹ ಪರಿಸರ ಮಾಲಿನ್ಯವನ್ನು ಹೇಗೆ ನಿಯಂತ್ರಿಸಬಹುದೆಂಬುದನ್ನು ಅತ್ಯಂತ ಸರಳವಾಗಿ, ಅಷ್ಟೇ ಸ್ವಾರಸ್ಯವಾಗಿ, ಮಕ್ಕಳಿಗೆ ಎಲ್ಲೂ ಭಾರವೆನ್ನಿಸದಂತೆ ವಿವರಿಸುತ್ತದೆ. ಶೈಕ್ಷಣಿಕ ಮಕ್ಕಳ ಸಾಹಿತ್ಯ ಹೇಗಿರಬೇಕೆಂಬುದಕ್ಕೆ ಈ ಬರೆಹ

ಒಂದು ಮಾದರಿಯಂತಿದೆ. ಕಂಪ್ಯೂಟರ್ ಬಳಸಿ ಯಾಣದ ಬಗೆಗಿನ ವಿವರವನ್ನು ತಿಳಿಯುವ ತಂತ್ರವನ್ನು ಬಳಸಿಕೊಂಡು ರಚಿಸಲಾಗಿರುವ 'ಯಾಣದ ಕುರಿತೊಂದು ಪತ್ರ' ಎಂಬುದೂ ಒಂದು ಉತ್ತಮ ಬರೆಹ. ವ್ಯಕ್ತಿಚಿತ್ರಗಳನ್ನೊಳಗೊಂಡ ಅನೇಕ ಬರೆಹಗಳು ಸೊಗಸಾಗಿ, ವಿವರಪೂರ್ಣವಾಗಿ ನಿರೂಪಿತವಾಗಿವೆ. ಗಾಂಧೀಜಿಯವರ ಸತ್ಯನಿಷ್ಠೆಯನ್ನು ತೋರಿಸುವ ಬೊಳುವಾರು ಅವರ 'ಎಷ್ಟೇ ಕಷ್ಟ ಬಂದರೂ ಸುಳ್ಳು ಹೇಳಬಾರದು' ('ಪಾಪು ಗಾಂಧಿ ಗಾಂಧಿ ಬಾಪು ಆದ ಕಥೆ' ಎಂಬ ಮಕ್ಕಳ ಕಾದಂಬರಿಯ ಆಯ್ದ ಭಾಗ) ಎಂಬುದು ಅತ್ಯಂತ ಸೂಕ್ತವಾದ ಆಯ್ಕೆ. ಲೇಖಕರು ಉಪಯೋಗಿಸಿರುವ ಸರಳ ಭಾಷೆ, ಕಥನ ಶೈಲಿ – ಎಲ್ಲವೂ ಮಕ್ಕಳ ಮನಸ್ಸನ್ನು ಆಕರ್ಷಿಸುತ್ತವೆ, ಮಾತ್ರವಲ್ಲ, ಬಾಲಕ ಗಾಂಧಿಯ ಧ್ಯೇಯನಿಷ್ಠ ವ್ಯಕ್ತಿತ್ವವನ್ನು ಮಕ್ಕಳೆದುರು ಬಿಂಬಿಸುತ್ತವೆ. ಲೇಖಕರ ಹಸ್ತಾಕ್ಷರದಲ್ಲಿಯೇ ಈ ಬರೆಹ ಮುದ್ರಿತವಾಗಿರುವುದೊಂದು ವಿಶೇಷ. ಇದರಿಂದಾಗಿ ಮಕ್ಕಳಿಗೆ ಹಸ್ತಾಕ್ಷರಗಳನ್ನು ಓದುವ ಅಭ್ಯಾಸಕ್ಕೂ ಅವಕಾಶವಾಗುತ್ತದೆ. ಐದರಿಂದ ಏಳನೆಯ ತರಗತಿಗಳವರೆಗಿನ ಈ ಪಠ್ಯಪುಸ್ತಕಗಳಲ್ಲಿ ಜನರಲ್ ಬೇವೂರ್, ಜನರಲ್ ತಿಮ್ಮಯ್ಯ ಮುಂತಾದ ವೀರ ಸೇನಾನಿಗಳ, ಡಾ. ರಾಜೇಂದ್ರ ಪ್ರಸಾದ್, ಡಾ. ಜ಼ಾಕೀರ್ ಹುಸೇನ್, ಡಾ. ಕಲಾಂ, ರವೀಂದ್ರನಾಥ ಠಾಕೂರ್ – ಇತ್ಯಾದಿ ಮಹನೀಯರ, ಪಂಡರೀಬಾಯಿ, ಮಹಮ್ಮದ್ ಪೀರ್ ಮುಂತಾದ ಕಲಾವಿದರ ಸರಳ ಸಂಕ್ಷಿಪ್ತ ವ್ಯಕ್ತಿಚಿತ್ರಗಳಿವೆ. ಅವುಗಳ ನಿರೂಪಣೆ ಮಕ್ಕಳ ಪಾಲಿಗೆ ಶುಷ್ಕವೆನ್ನಿಸುವುದಿಲ್ಲ. ಇಂಥ ಬರೆಹಗಳಿಂದ ಎಳೆಯರ ಮನಸ್ಸುಗಳಲ್ಲಿ ಉದ್ದಾತ್ತ ಧ್ಯೇಯಗಳು ಮೊಳೆಯಲು ಕಾರಣವಾಗುತ್ತವೆ. ಆಯ್ಕೆಯಾಗಿರುವ ಕಥೆಗಳಲ್ಲಿ ಮಕ್ಕಳ ಬೌದ್ಧಿಕ ಸ್ತರಕ್ಕೆ ಮೀರಿದ 'ಯಕ್ಷಪ್ರಶ್ನೆ', ಪೂರ್ವಪ್ರಾಥಮಿಕ ಶಾಲೆಯ ಮಕ್ಕಳಿಗೆ ಸರಿಹೊಂದುವ 'ಗಂಧರ್ವಸೇನ', 'ಇರುವೆ ಮತ್ತು ಬೂಟು' – ಇತ್ಯಾದಿ ಕಥೆಗಳನ್ನು ಕೈಬಿಡಬಹುದಿತ್ತು. ಉಳಿದಂತೆ ಎಲ್ಲ ಕಥೆಗಳೂ ಮಕ್ಕಳನ್ನು ರಂಜಿಸುವಂತಿವೆ, ಮಾತ್ರವಲ್ಲ ಬೋಧಪ್ರದವಾಗಿಯೂ ಇವೆ. ಸಂಗಮೇಶ ಗುಜಗೊಂಡ ಅವರ 'ಇನಾಮು ಪತ್ರ' (ಐದನೆಯ ತರಗತಿ), ಪಿ. ಶೇಷಾದ್ರಿಯವರ 'ಬೇರು' (ಆರನೆಯ ತರಗತಿ), ಎಸ್. ಷಡಕ್ಷರಿಯವರ 'ದೇವರೆಲ್ಲಿದ್ದಾನೆ...?' ಹಾಗೂ ನಾ. ಡಿಸೋಜಾ ಅವರ 'ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು' (ಏಳನೆಯ ತರಗತಿ) – ಇವೆಲ್ಲವೂ ವಸ್ತುವಿನ ದೃಷ್ಟಿಯಿಂದ, ನಿರೂಪಣೆಯ ನೆಲೆಯಿಂದ ಮಕ್ಕಳ ಓದಿಗೆ ಅತ್ಯಂತ ಸಮಂಜಸವಾದ ಆಯ್ಕೆಗಳು. ಕಥೆಯಲ್ಲದಿದ್ದರೂ ಕಥೆಯಂತೆಯೇ ಓದಿಸಿಕೊಳ್ಳುವ ತೇಜಸ್ವಿಯವರ 'ಚಗಳಿ ಇರುವೆ', ವಿ. ಗಾಯತ್ರಿಯವರ 'ಸೀನಸೆಟ್ಟರು ನಮ್ಮ ಟೀಚರು' (ಏಳನೆಯ ತರಗತಿ) – ಇಂಥ ಬರೆಹಗಳು ವಿಜ್ಞಾನ, ಪರಿಸರ ಮುಂತಾದುವಕ್ಕೆ ಸಂಬಂಧಿಸಿದ ಗಹನ ವಿಷಯಗಳನ್ನು ಎಷ್ಟೊಂದು ಸ್ವಾರಸ್ಯವಾಗಿ ಮಕ್ಕಳಿಗೆ ತಲುಪಿಸಬಹುದೆಂಬುದಕ್ಕೆ ಮಾದರಿಯಾಗಿವೆ.

ಪಠ್ಯಪುಸ್ತಕಗಳಲ್ಲಿನ ಗದ್ಯ ಪಾಠಗಳಲ್ಲಿ ಮಕ್ಕಳು ಸುಲಭವಾಗಿ ಅಭಿನಯಿಸಬಹುದಾದ ಕಿರುನಾಟಕಗಳನ್ನೂ, ದೃಶ್ಯಗಳನ್ನೂ ಸೇರಿಸಿರುವುದು ಮಕ್ಕಳಲ್ಲಿರುವ ಅಭಿನಯ ಪ್ರತಿಭೆ ಹಾಗೂ ಭಾಷಾಕೌಶಲಗಳ ಬೆಳವಣಿಗೆಗೆ ಸಹಾಯಕವಾಗುವಂತಿವೆ. 'ನದಿಯ ಅಳಲು' (ಐದನೆಯ ತರಗತಿ), 'ರಾಹುಲನ ನಿರೀಕ್ಷೆ' (ಐದನೆಯ ತರಗತಿ), 'ಕೃಷ್ಣ–ಸುದಾಮ' (ಆರನೆಯ ತರಗತಿ) – ಮುಂತಾದ ಕಿರುನಾಟಕಗಳನ್ನು ಮಕ್ಕಳು ಅಭಿನಯಿಸುವಂತೆ ಅಧ್ಯಾಪಕರು ಉತ್ತೇಜಿಸಿದರೆ ಮಕ್ಕಳಲ್ಲಿನ ಪ್ರತಿಭೆ ಹಾಗೂ ಆತ್ಮವಿಶ್ವಾಸ – ಎರಡೂ ಬೆಳೆಯಲು ಅವಕಾಶವಾಗುತ್ತದೆ.

– ೪ –

ಮಕ್ಕಳು ಪ್ರೌಢಶಾಲೆಗೆ ಬರುವ ಹೊತ್ತಿಗೆ ಮಾನಸಿಕವಾಗಿಯೂ, ದೈಹಿಕವಾಗಿಯೂ ಬಾಲ್ಯಾವಸ್ಥೆಯನ್ನು ದಾಟಿ ತಾರುಣ್ಯಾವಸ್ಥೆಗೆ ಬಂದಿರುತ್ತಾರೆ. ವ್ಯಕ್ತಿಜೀವನದ ಹದಿವಯಸ್ಸಿನ ಈ ಹಂತ ಬಾಲ್ಯ ಪ್ರೌಢಾವಸ್ಥೆಗಳ ನಡುವಣ ಸಂಕ್ರಮಣ ಕಾಲ. ಈ ಘಟ್ಟದಲ್ಲಿರುವ ಪ್ರೌಢಶಾಲೆಯ ವಿದ್ಯಾರ್ಥಿ ಬದುಕಿನ ವಾಸ್ತವಕ್ಕೆ ಮುಖಾಮುಖಿಯಾಗಲು ತವಕಿಸುತ್ತಾನೆ; ಎಲ್ಲವನ್ನೂ ಪ್ರಶ್ನಿಸುವ, ಎಲ್ಲಕ್ಕೂ ಉತ್ತರ ಕಂಡುಕೊಳ್ಳಬೇಕೆನ್ನುವ ಪ್ರವೃತ್ತಿ, ಬಂಡೇಳುವ ಮನೋಧರ್ಮ – ಇತ್ಯಾದಿಗಳೊಂದಿಗೆ ಆದರ್ಶಪ್ರಿಯತೆ, ಕನಸನ್ನು ನನಸು ಮಾಡಿಕೊಳ್ಳಬೇಕೆನ್ನುವ ಛಲ – ಮೊದಲಾದ ಗುಣಗಳು ಆತನಲ್ಲಿ ಪುಟಿದೇಳುತ್ತವೆ. ಇವೆಲ್ಲವನ್ನೂ ಹಿನ್ನೆಲೆಯಲ್ಲಿಟ್ಟುಕೊಂಡೇ ಪ್ರೌಢಶಾಲೆಗೆ ಸರಿಹೊಂದುವ ಕನ್ನಡ ಭಾಷಾ ಪಠ್ಯಪುಸ್ತಕಗಳನ್ನು ಕರ್ನಾಟಕ ಪಠ್ಯಪುಸ್ತಕ ಸಂಘ ರೂಪಿಸಲು ಪ್ರಯತ್ನಿಸಿದೆ ಎನ್ನಬಹುದು. ಇಲ್ಲಿನ ಬರೆಹಗಳನ್ನು ಶುದ್ಧಾಂಗ ಮಕ್ಕಳ ಸಾಹಿತ್ಯದ ದೃಷ್ಟಿಯಿಂದ ನೋಡಲಾಗದು. ಸಹಜವಾಗಿಯೇ ಇಲ್ಲಿ ಸಂಕಲಿತವಾಗಿರುವ ಪದ್ಯ, ಗದ್ಯ, ನಾಟಕ ಪ್ರಕಾರಗಳೂ ಪ್ರೌಢವಾಗಿವೆ. ಕನ್ನಡದ ಪ್ರಾಚೀನ ಕಾವ್ಯಖಂಡಗಳ ಜೊತೆಜೊತೆಗೇ ಆಧುನಿಕ ಕವಿ–ಸಾಹಿತಿಗಳ ಬರೆಹಗಳ ಆಯ್ಕೆಯ ಪ್ರಕ್ರಿಯೆಯಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಲಿಂಗ ಸಮಾನತೆಯನ್ನು ಕಾಯ್ದುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಎಂಟನೆಯ ತರಗತಿಯ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದಲ್ಲಿ ಆಧುನಿಕ ಕನ್ನಡ ಲೇಖಕರಿಗೆ ಹಾಗೂ ಕವಿಗಳಿಗೆ ಸಿಂಹಪಾಲು. ಉಳಿದಂತೆ ವಚನಕಾರರಾದ ಅಕ್ಕಮಹಾದೇವಿ, ಆಯ್ದಕ್ಕಿ ಮಾರಯ್ಯ, ಸರ್ವಜ್ಞ ಮುಂತಾದವರೂ ಶ್ರೀಪಾದರಾಜ, ಪುರಂದರದಾಸ, ಕನಕದಾಸ ಇತ್ಯಾದಿ ಹರಿದಾಸರೂ, ಷಟ್ಪದಿಕಾರ ಕುಮಾರ ವಾಲ್ಮೀಕಿಯೂ ಆಯ್ಕೆಯಾಗಿದ್ದಾರೆ. ಮುದ್ದಣನೂ ಇಲ್ಲಿ ಕಾಣಿಸಿಕೊಂಡಿದ್ದಾನೆ. ಸಾಹಿತ್ಯದ ವಿವಿಧ ಪ್ರಕಾರಗಳಾದ ಸಣ್ಣಕತೆ, ಕವಿತೆ, ನಾಟಕ, ವ್ಯಕ್ತಿಚಿತ್ರ, ಪ್ರವಾಸ ಕಥನ, ಲಲಿತ ಪ್ರಬಂಧ – ಇತ್ಯಾದಿಗಳೆಲ್ಲವುಗಳ ಮಾದರಿಗಳೂ ಅಡಕವಾಗಿವೆ. ಮಾಸ್ತಿಯವರ ಸಮಕಾಲೀನರಾಗಿದ್ದ ಕಥೆಗಾರ ಬಾಗಲೋಡಿ ದೇವರಾಯರ ಸಣ್ಣಕತೆ 'ಮಗ್ಗದ ಸಾಹೇಬ' ಎಂಟನೆಯ ತರಗತಿಯ ಮಕ್ಕಳಲ್ಲಿ ಧಾರ್ಮಿಕ ಸಹಿಷ್ಣುತೆ, ಗುಡಿಕೈಗಾರಿಕೆಗಳ ಮಹತ್ವ, ಸ್ವಯಂ ಉದ್ಯೋಗ – ಇತ್ಯಾದಿ ಮೌಲಿಕ ವಿಚಾರಗಳನ್ನು ಕುರಿತು ಚಿಂತಿಸುವಂತೆ ಮಾಡುತ್ತದೆ. ಭಾಷೆ ಮತ್ತು ನಿರೂಪಣೆಯ ದೃಷ್ಟಿಯಿಂದಲೂ ಈ ಕಥೆ ಎಂಟನೆಯ ತರಗತಿಯ ಮಕ್ಕಳಿಗೆ ಇಷ್ಟವಾಗುವಂತಿದೆ. ಆದರೆ ಡಿ. ಕೆ. ರಾಜೇಂದ್ರ ಅವರಿಂದ ಸಂಪಾದಿತವಾದ 'ರಾಜಕುಮಾರಿಯ ಜಾಣ್ಮೆ' ಎಂಬ ಜನಪದ ಕತೆಯನ್ನು ಕುರಿತು ಹೀಗೆನ್ನುವಂತಿಲ್ಲ. ಕೃಷ್ಣಾನಂದ ಕಾಮತರ 'ಪರಿಸರ ಸಮತೋಲನ' ಎಂಬ ಶೀರ್ಷಿಕೆಯ ವೈಜ್ಞಾನಿಕ ಬರೆಹ, ಹಿರೇಮಲ್ಲೂರು ಈಶ್ವರನ್ ಅವರ 'ತಲಕಾಡಿನ ವೈಭವ'ವೆಂಬ ಪ್ರವಾಸ ಕಥನ, ಬಿ. ಎಂ. ಹೆಗ್ಡೆಯವರ 'ನಮ್ಮ ಹೃದಯ ನಮ್ಮ ಕೈಯಲ್ಲಿ' ಎಂಬ ಆರೋಗ್ಯರಕ್ಷಣೆಯ ವಿಚಾರದ ಲೇಖನ – ಈ ಎಲ್ಲವೂ ಎಂಟನೆಯ ತರಗತಿಯ ಮಕ್ಕಳ ಬೌದ್ಧಿಕ ಮಟ್ಟಕ್ಕೆ ತಕ್ಕದ್ದಾಗಿವೆ. ಮಾಹಿತಿಪೂರ್ಣವಾಗಿರುವ ಈ ಬರೆಹಗಳು ಸ್ವಾರಸ್ಯಕರವಾಗಿದ್ದು ಶೈಕ್ಷಣಿಕ ಮೌಲ್ಯಗಳಿಂದ ಕೂಡಿರುವಂಥವು. ಕುವೆಂಪುರವರ 'ಮಲೆನಾಡಿನ ಚಿತ್ರಗಳು' ಕೃತಿಯಿಂದ ಆರಿಸಲಾದ ಲಲಿತ ಪ್ರಬಂಧ 'ಅಜ್ಜಯ್ಯನ ಅಭ್ಯಂಜನ' ಮಲೆನಾಡಿನ ಗ್ರಾಮೀಣ ಬದುಕಿನ ಚಿತ್ರಣವನ್ನು

ಅತ್ಯಂತ ಸೊಗಸಾಗಿ ಪ್ರತಿಬಿಂಬಿಸುತ್ತದೆ. ಮಕ್ಕಳು ಮತ್ತೆ ಮತ್ತೆ ಓದಿ ಆನಂದಿಸಬಹುದಾದ ಬರೆಹ. ಹಾಗೆಯೇ ಡಾ.ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ 'ಸಾರ್ಥಕ ಬದುಕಿನ ಸಾಧಕ' ಎಂಬುದು ಡಿ.ವಿ.ಜಿ.ಯವರ ಬದುಕು ಹಾಗೂ ಜೀವನದರ್ಶನಗಳನ್ನು ಕಟ್ಟಿಕೊಡುವ ಒಂದು ಸುಂದರ ವ್ಯಕ್ತಿಚಿತ್ರ. ಮುದ್ದಣನ 'ಶ್ರೀರಾಮಾಶ್ವಮೇಧಂ' ಕಾವ್ಯದಿಂದ ಆರಿಸಿದ 'ಅಂತರಾಳ' ನಾಟಕೀಯ ಸಂಭಾಷಣೆಯಿಂದ ಸ್ವಾರಸ್ಯಕರವಾಗಿದ್ದರೂ, ಅಲ್ಲಿ ಬಳಸಲಾಗಿರುವ ಹಳಗನ್ನಡ ಭಾಷೆ ವಿದ್ಯಾರ್ಥಿಗಳ ಪಾಲಿಗೆ ಕಠಿಣವಾದೀತು.

ಈ ಪುಸ್ತಕದಲ್ಲಿ ಅಳವಡಿಸಲಾಗಿರುವ 'ಬಿಲ್ಲಹಬ್ಬ' ಹಾಗೂ 'ಭೂಕೈಲಾಸ' ಎಂಬ ಎರಡು ಕಿರುನಾಟಕಗಳೂ ಪೌರಾಣಿಕ ವಸ್ತುಗಳನ್ನೊಳಗೊಂಡಿವೆ. ಡಾ. ಎಚ್. ಎಸ್. ವೆಂಕಟೇಶಮೂರ್ತಿಯವರು ಮಕ್ಕಳಿಗಾಗಿಯೇ ರಚಿಸಿದ 'ಕಂಸಾಯಣ' ನಾಟಕದಿಂದ 'ಬಿಲ್ಲಹಬ್ಬ' ಎಂಬುದನ್ನು ಆರಿಸಲಾಗಿದೆ. ಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ಬಿಲ್ಲಹಬ್ಬದ ನೆಪದಲ್ಲಿ ನಂದಗೋಕುಲದಿಂದ ಬಲರಾಮ–ಕೃಷ್ಣರನ್ನು ಮಥುರಾನಗರಕ್ಕೆ ಕಂಸ ಕರೆಸಿಕೊಳ್ಳುವ ಸಂದರ್ಭವೇ ಈ ನಾಟಕದ ವಸ್ತು. ಇಲ್ಲಿನ ಸಂಭಾಷಣೆಯಲ್ಲಿ ಹಾಸ್ಯ, ವ್ಯಂಗ್ಯ, ಕ್ರೌರ್ಯ ಎಲ್ಲವೂ ಪ್ರಕಟವಾಗಿವೆ. ಆಡುಮಾತನ್ನೇ ಬಳಸಿಕೊಂಡು ರಚಿತವಾಗಿರುವ ಈ ನಾಟಕವನ್ನು ಮಕ್ಕಳು ರಂಗದ ಮೇಲೆ ಯಶಸ್ವಿಯಾಗಿ ಪ್ರದರ್ಶಿಸಲು ಸಾಧ್ಯ. ಪಾರಂಪಳ್ಳಿ ನರಸಿಂಹ ಐತಾಳರಿಂದ ರಚಿತವಾದ 'ಭೂ ಕೈಲಾಸ' ಎಂಬ ಕಿರುದೃಶ್ಯ ಶಿವನ ಆತ್ಮಲಿಂಗ ಗೋಕರ್ಣದಲ್ಲಿ ಸ್ಥಾಪಿತವಾದ ಪ್ರಸಂಗವನ್ನು ಒಳಗೊಂಡಿರುವಂಥದು. ಮಕ್ಕಳಿಗಾಗಿಯೇ ರಚಿತವಾದ ಈ ನಾಟಕದಲ್ಲಿ ರಾವಣ, ವಟುವೇಷದ ಗಣಪತಿ ಹಾಗೂ ನಾರದ – ಈ ಮೂರೇ ಪಾತ್ರಗಳು. ಪ್ರಚಲಿತವಿರುವ ಕಥೆಯನ್ನು ಸರಳ ಸಂಭಾಷಣೆಯ ಮೂಲಕ ಲೇಖಕರು ನಾಟಕವಾಗಿಸಿದ್ದಾರೆ.

ಇನ್ನು ಪದ್ಯ ವಿಭಾಗದಲ್ಲಿ ಗೋವಿಂದ ಪೈ ಅವರ 'ಕನ್ನಡಿಗರ ತಾಯಿ' ಮತ್ತು ಕೆ.ಎಸ್.ನ ಅವರ 'ಭಾರತೀಯತೆ' ಎಂಬ ಎರಡು ಕವಿತೆಗಳೂ ಮಕ್ಕಳಲ್ಲಿ ನಾಡು–ನುಡಿಗಳನ್ನು ಕುರಿತು ಅಭಿಮಾನವನ್ನು ಪ್ರೇರಿಸುವ ರಚನೆಗಳು. ತಮ್ಮ ಗೇಯತೆ ಹಾಗೂ ಭಾವಸಂಪತ್ತುಗಳಿಂದಾಗಿ ಮಕ್ಕಳನ್ನು ಹಿಡಿದಿಡುವ ಕವಿತೆಗಳು. ಚೆನ್ನವೀರ ಕಣವಿಯವರ ರಚನೆ 'ಗೆಳೆತನ'ದ ಹಿರಿಮೆಯನ್ನು ಉದಾತ್ತ ಧಾಟಿಯಲ್ಲಿ ಚಿತ್ರಿಸುವ ಒಂದು ಭಾವಗೀತೆ. ಬಿ.ಟಿ. ಲಲಿತಾ ನಾಯಕ್ ಅವರ 'ಭರವಸೆ' ಎಂಬ ಕವಿತೆ ಮಲ್ಲಿಗೆ ಮತ್ತು ಕೋಗಿಲೆಗಳ ಸಂಭಾಷಣೆಯ ರೂಪದಲ್ಲಿ ಆಧುನಿಕ ಜಗತ್ತಿನ ವಿಕಾರಗಳನ್ನು ಅಭಿವ್ಯಕ್ತಿಸುತ್ತದೆ. ದಿನಕರ ದೇಸಾಯಿಯವರ 'ಸಾರ್ಥಕ' ಎಂಬ ಕವಿತೆ ಮನುಷ್ಯನ ಬದುಕಿನ ಸಾರ್ಥಕತೆಯನ್ನು ಕುರಿತು ಧ್ಯಾನಿಸುವಂಥದು. ಈ ಎರಡೂ ಕವಿತೆಗಳು ಭಾಷೆಯ ದೃಷ್ಟಿಯಿಂದ ಸರಳವಾಗಿದ್ದರೂ, ಭಾವದ ದೃಷ್ಟಿಯಿಂದ ಎಂಟನೇ ತರಗತಿಯ ಮಕ್ಕಳಿಗೆ ಸ್ವಲ್ಪ ಭಾರವಾದಾವು ಎನ್ನಿಸುತ್ತದೆ. ಇನ್ನುಳಿದ ವಚನ, ದಾಸರ ಪದ, ಷಟ್ಪದಿಗಳನ್ನು ಸಮರ್ಥ ಅಧ್ಯಾಪಕರ ಸಹಾಯದಿಂದ ಮಕ್ಕಳು ಅರ್ಥ ಮಾಡಿಕೊಂಡು ಆಸ್ವಾದಿಸಬಹುದು.

– ೫ –

ಒಂಬತ್ತು ಮತ್ತು ಹತ್ತನೆಯ ತರಗತಿಗಳಿಗಾಗಿ ರಚಿಸಲಾಗಿರುವ ಕನ್ನಡ ಪಠ್ಯಪುಸ್ತಕಗಳಲ್ಲಿ ಅಡಕವಾಗಿರುವ ಬಹುತೇಕ ಪಾಠಗಳು ಮಕ್ಕಳ ಸಾಹಿತ್ಯದ ವ್ಯಾಪ್ತಿಗೆ ಸೇರಲಾರದವು ಎನ್ನಬಹುದು.

ಆದ್ದರಿಂದ ಅವನ್ನು ಕುರಿತು ವಿಸ್ತಾರವಾಗಿ ಬರೆಯುವ ಅಗತ್ಯವಿಲ್ಲವೆನ್ನಿಸುತ್ತದೆ. ಒಂಬತ್ತನೆಯ ತರಗತಿಯ ಪುಸ್ತಕದಲ್ಲಿ ಆಧುನಿಕ ಕನ್ನಡ ಸಾಹಿತ್ಯದಿಂದ ಸಾರಾ ಅಬೂಬಕ್ಕರ್ ಅವರ 'ಪ್ರಾಮಾಣಿಕತೆ' ಎಂಬ ಒಂದೇ ಒಂದು ಕಥೆಯನ್ನು ಸೇರಿಸಲಾಗಿದೆ. ಸರಳವಾಗಿ ಓದಿಸಿಕೊಂಡು ಹೋಗುವ ಈ ಕಥೆ 'ಹಣ, ಅಧಿಕಾರದ ಪ್ರವಾಹದ ಸುಳಿಯಲ್ಲಿ ಮುಳುಗುತ್ತಿರುವ ಮಾನವೀಯತೆ'ಯನ್ನು ಕುರಿತು ಚಿಂತಿಸುವಂತೆ ಮಾಡುತ್ತದೆ. ಪುಸ್ತಕದಲ್ಲಿ ಮೊದಲ ಪಾಠವಾಗಿರುವ 'ಪಂಥಾಹ್ವಾನ' ಎಂಬ ಕಥೆ ಶಿವಕೋಟ್ಯಾಚಾರ್ಯ ಅವರ ಕನ್ನಡದ ಪ್ರಥಮ ಗದ್ಯಕೃತಿ ಎನ್ನಲಾದ ವಡ್ಡಾರಾಧನೆಯಿಂದ ಆರಿಸಲ್ಪಟ್ಟುದು. ಭಾಷೆಯ ದೃಷ್ಟಿಯಿಂದ ಮಕ್ಕಳ ಪಾಲಿಗೆ ಇದೊಂದು ಕಬ್ಬಿಣದ ಕಡಲೆ. ಕನ್ನಡವನ್ನು ದೂರವಿಡುತ್ತಿರುವ ಈ ಕಾಲದಲ್ಲಿ ಇಂಥ ಪಾಠಗಳು ಕನ್ನಡದ ಬಗ್ಗೆ ಮಕ್ಕಳಲ್ಲಿ ಇನ್ನಷ್ಟು ನಿರಸನ ಭಾವ ಮೂಡಿಸಬಹುದೆನ್ನಿಸುತ್ತದೆ.

ಈ ಪುಸ್ತಕದಲ್ಲಿರುವ 'ಸಮಾಗಮ' ಮತ್ತು 'ಭೂಮಿಗಿಳಿದ ಬೃಹಸ್ಪತಿ' ಎಂಬ ಎರಡು ಕಿರುನಾಟಕಗಳು ಕನ್ನಡದ ಸ್ವತಂತ್ರ ನಾಟಕಗಳಲ್ಲ. ಮೊದಲನೆಯದು ಭಾಸ ಕವಿಯ ಸಂಸ್ಕೃತ ನಾಟಕ 'ಮಧ್ಯಮ ವ್ಯಾಯೋಗ'ದ ಕನ್ನಡ ಅನುವಾದ. ಎರಡನೆಯದು ಷೇಕ್ಸ್‌ಪಿಯರ್‌ನ 'ಮರ್ಚೆಂಟ್ ಆಫ್ ವೆನಿಸ್' ನಾಟಕದ ದೃಶ್ಯವೊಂದರ ರೂಪಾಂತರ. ಎರಡೂ ನಾಟಕಗಳೂ ಮಕ್ಕಳ ಪಾಲಿಗೆ ಆಸ್ವಾದನೀಯವಾಗಿವೆ. ಅದರಲ್ಲೂ 'ಸಮಾಗಮ'ದ ಸಂಭಾಷಣೆ ಮತ್ತು ಘಟನಾವಳಿಗಳು ಸಹಜ, ಸರಳವಾಗಿದ್ದು ಮಕ್ಕಳು ಅದನ್ನು ಯಶಸ್ವಿಯಾಗಿ ರಂಗದ ಮೇಲೆ ತರಲು ಸಾಧ್ಯವಾಗುವಂತಿವೆ. ಗದ್ಯ ಬರೆಹಗಳಲ್ಲಿ ಜಯಪುರದ ಬಗೆಗಿನ ಶಿವರಾಮ ಕಾರಂತರ ಪ್ರವಾಸ ಕಥನ ಮಕ್ಕಳಿಗೆ ಮಾತ್ರವಲ್ಲ, ಹಿರಿಯರಿಗೂ ಅತ್ಯಂತ ವಾಚನೀಯವಾಗಿದೆ. ಇದೇ ಮಾತನ್ನು ಸತ್ಯನಾರಾಯಣ ಭಟ್ ಅವರ 'ಅಚ್ಚರಿಯ ಜೀವಿ ಇಂಬಳ' ಎಂಬ ವೈಜ್ಞಾನಿಕ ಪ್ರಬಂಧದ ಬಗೆಗೂ ಹೇಳಬಹುದು. ಅರವಿಂದ ಮಾಲಗತ್ತಿಯವರ 'ಇತಿಹಾಸದ ಚಕ್ಕಡಿ' ಅವರ ಆತ್ಮಕಥೆಯ ಒಂದು ತುಣುಕು. ಲೇಖಕರ ಬಡತನದ ಬಾಲ್ಯ, ವಿದ್ಯಾಭ್ಯಾಸದ ಬವಣೆಗಳನ್ನು ನಿರಲಂಕೃತ ಭಾಷೆಯಲ್ಲಿ ನಿರೂಪಿಸುವ ಈ ಸ್ಮೃತಿಚಿತ್ರ ಮಕ್ಕಳಲ್ಲಿ ಕಷ್ಟಸಹಿಷ್ಣುತೆ, ಸಾಧಿಸುವ ಛಲ ಮುಂತಾದ ಇತ್ಯಾತ್ಮಕ ಮೌಲ್ಯಗಳನ್ನು ಪ್ರೇರಿಸುವಂತಿದೆ. ಅಲ್ಲದೆ ಈ ಬರೆಹ ಮಕ್ಕಳಿಗೆ 'ಆತ್ಮಕಥನ' ಎಂಬ ಸಾಹಿತ್ಯಪ್ರಕಾರವನ್ನು ಪರಿಚಯಿಸುತ್ತದೆ. ಡಾ. ಎಸ್. ರಾಧಾಕೃಷ್ಣನ್ ಅವರ ಕುರಿತಾದ ಬರೆಹ ಸರಳವಾಗಿರುವುದಲ್ಲದೆ, ಅವರ ಬದುಕಿನ ಬಹುತೇಕ ಎಲ್ಲ ವಿವರಗಳನ್ನೊಳಗೊಂಡು, ಸಮಗ್ರವೂ ಆಗಿದೆ. ಉಳಿದಂತೆ ಪುಸ್ತಕದಲ್ಲಿ ಸೇರಿಸಲಾಗಿರುವ ಆಧುನಿಕ ಕನ್ನಡ ಕವಿತೆಗಳೂ, ಹಳಗನ್ನಡ, ನಡುಗನ್ನಡ ಕಾವ್ಯಭಾಗಗಳೂ ಪ್ರೌಢಸಾಹಿತ್ಯವೆನ್ನಬಹುದು.

ಹತ್ತನೆಯ ತರಗತಿಯ ಪುಸ್ತಕ ಒಂಬತ್ತನೇ ತರಗತಿಯ ವಿನ್ಯಾಸವನ್ನೇ ಮುಂದುವರೆಸಿದೆ. ಇದರಲ್ಲೂ ಕಥೆ, ಪ್ರವಾಸ ಕಥನ, ಲಲಿತ ಪ್ರಬಂಧ, ಹೊಸಗನ್ನಡ ಹಾಗೂ ಹಳಗನ್ನಡದ ಕವಿತೆ / ಕಾವ್ಯಭಾಗ – ಇತ್ಯಾದಿಗಳಿವೆ. ಗದ್ಯನಾಟಕದ ಭಾಗದಲ್ಲಿ ಪು.ತಿ.ನ.ರವರ ಗೀತನಾಟಕ 'ಶಬರಿ'ಯನ್ನು ಮೊದಲ ಪಾಠವಾಗಿ ಮುದ್ರಿಸಲಾಗಿದೆ. ಈ ನಾಟಕದ ಸಂಭಾಷಣೆ ಸಂಗೀತದ ಸಾಹಚರ್ಯವನ್ನು ಬಯಸುವಂಥದು, ಭಾಷೆ ಅಷ್ಟೊಂದು ಸರಳವೆನ್ನಿಸುವುದಿಲ್ಲ. ಹಿಂದಿನ ಪುಸ್ತಕಗಳಲ್ಲಿನ ಮಕ್ಕಳ ನಾಟಕದ ಗುಂಪಿಗೆ ಈ ನಾಟಕವನ್ನು ಸೇರಿಸಲು ಸಾಧ್ಯವಿಲ್ಲ. ಈ ಪುಸ್ತಕದಲ್ಲಿ ಮಕ್ಕಳು ತುಂಬಾ ಇಷ್ಟಪಡಬಹುದಾದ ಬರೆಹಗಳೆಂದರೆ ಗೊರೂರು ರಾಮಸ್ವಾಮಿ

ಅಯ್ಯಂಗಾರ್ ಅವರ 'ಅಮೆರಿಕಾದಲ್ಲಿ ಗೊರೂರು' (ಅನುಭವ ಕಥನ) ಮತ್ತು ಎ.ಎನ್. ಮೂರ್ತಿರಾಯರ 'ವ್ಯಾಘ್ರಗೀತೆ' (ಲಲಿತ ಪ್ರಬಂಧ). ಈ ಎರಡರಲ್ಲೂ ನವಿರಾದ ಹಾಸ್ಯವಿದೆ. ಹಾಸ್ಯದ ಹಿನ್ನೆಲೆಯಲ್ಲಿ ಬದುಕಿನ ಓರೆಕೋರೆಗಳನ್ನು ತೋರಿಸುವ ಆರೋಗ್ಯಪೂರ್ಣ ಧೋರಣೆ ಇದೆ. ಗೋಕಾಕರ 'ಜೀವನ ದೃಷ್ಟಿ', ದೇವನೂರ ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ', ಎಚ್. ನರಸಿಂಹಯ್ಯನವರ 'ವಿಜ್ಞಾನ ಮತ್ತು ಸಮಾಜ' – ಮುಂತಾದುವು ಗಂಭೀರ ಲೇಖನಗಳು; ಮಕ್ಕಳ ಸಾಹಿತ್ಯದ ವ್ಯಾಪ್ತಿಗೆ ಬರುವಂಥವಲ್ಲ. ಪದ್ಯಭಾಗದಲ್ಲಿ ಪಂಪ, ಕುಮಾರವ್ಯಾಸ, ಲಕ್ಷ್ಮೀಶರ ಕಾವ್ಯಖಂಡಗಳೂ ಹಲಗಲಿ ಬೇಡರನ್ನು ಕುರಿತಾದ ಒಂದು ಜಾನಪದ ಲಾವಣಿ ಹಾಗೂ ಬೇಂದ್ರೆ, ಜಿ.ಎಸ್.ಎಸ್, ಎಕ್ಕುಂಡಿ, ದು. ಸರಸ್ವತಿ – ಇಂಥ ನವೋದಯ ಕವಿಗಳ ಒಂದೊಂದು ರಚನೆಗಳೂ ಸೇರಿರುವುದರಿಂದ ಕನ್ನಡ ಕಾವ್ಯದ ವೈವಿಧ್ಯದ ಅರಿವು ಮಕ್ಕಳಿಗಾಗುವಂತೆ ನೋಡಿಕೊಳ್ಳಲಾಗಿದೆ.

ಒಟ್ಟಿನಲ್ಲಿ ಈ ಎಲ್ಲ ಪಠ್ಯಪುಸ್ತಕಗಳನ್ನು ರೂಪಿಸುವಾಗ 'ಸರಳತೆಯಿಂದ ಕಠಿಣತೆಯೆಡೆಗೆ' ಎಂಬ ತತ್ತ್ವವನ್ನು ಅನುಸರಿಸಿರುವುದನ್ನು ಗಮನಿಸಬಹುದು. ಭಾಷೆಯ ಸೂಕ್ಷ್ಮಗಳನ್ನು ಕಲಿಸುವುದರ ಜೊತೆಜೊತೆಗೇ ಮಕ್ಕಳ ಭಾವವಿಕಾಸಕ್ಕೂ ಅವಕಾಶ ಕಲ್ಪಿಸುವ ಶೈಕ್ಷಣಿಕ ಉದ್ದೇಶ – ಈ ಪುಸ್ತಕಗಳ ರಚನೆಯ ಹಿನ್ನೆಲೆಯಲ್ಲಿರುವುದು ಸುಸ್ಪಷ್ಟ. ಆದರೆ ಕನ್ನಡ ಮಕ್ಕಳ ಪಾಲಿಗೆ ಚಿರಕೃತಿಗಳಾಗಿರುವ 'ಗೋವಿನ ಹಾಡು', ಪಂಜೆಯವರ 'ತೆಂಕಣ ಗಾಳಿಯಾಟ', ಕುವೆಂಪುರವರ 'ಕಿಂದರಿ ಜೋಗಿ', ಹೊಯ್ಸಳ ಮತ್ತು ಮೇವುಂಡಿ ಮಲ್ಲಾರಿಯವರ ಕಥೆಗಳು – ಮುಂತಾದುವುಗಳನ್ನೂ ಈ ಪಠ್ಯಪುಸ್ತಕಗಳಲ್ಲಿ ಸೇರಿಸಬಹುದಾಗಿತ್ತು ಎನ್ನಿಸುತ್ತದೆ.

ಮಕ್ಕಳ ಸಾಹಿತ್ಯದಲ್ಲಿ ವೈಚಾರಿಕ ನಿಲವುಗಳು

ಡಾ. ಚಿಂತಾಮಣಿ ಕೊಡ್ಲೆಕೆರೆ

ಮಕ್ಕಳ ಸಾಹಿತ್ಯ ಮತ್ತು ವೈಚಾರಿಕ ನಿಲವುಗಳ ಸಂಬಂಧದ ಹೆಣಿಗೆ ಕುತೂಹಲಕರವಾದದ್ದು. ಈ ಕುರಿತಾದ ವಿವೇಚನೆ, 'ಮಕ್ಕಳ ಸಾಹಿತ್ಯದಲ್ಲಿ ವೈಚಾರಿಕ ನಿಲವುಗಳ ಅಗ್ಯವಿದೆಯೇ?' ಎಂಬ ಮೂಲ ಪ್ರಶ್ನೆಯಿಂದಲೇ ಆರಂಭವಾಗಬೇಕು. ಮಕ್ಕಳ ಸಾಹಿತ್ಯವೆಂದು ಒಟ್ಟಾರೆಯಾಗಿ ಕರೆಯುತ್ತೇವಾದರೂ ಅದರೊಳಗೆ ಉಪವಿಭಾಗಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಶಿಶುಸಾಹಿತ್ಯ, ಕಿಶೋರ ಸಾಹಿತ್ಯ ಮತ್ತು ಹದಿಹರೆಯದ ಸಾಹಿತ್ಯವೆಂದು ಹದಿನೈದು ವರ್ಷದೊಳಗಿನ ಮಕ್ಕಳನ್ನು ವಯೋಮಾನಕ್ಕನುಗುಣವಾಗಿ ಮೂರು ಗುಂಪುಗಳಾಗಿ ಕಲ್ಪಿಸಿಕೊಳ್ಳಬಯಸುತ್ತೇನೆ. ಈ ಮೂರು ಹಂತಗಳಲ್ಲಿ ಮಗು ನಿರೀಕ್ಷಿಸುವ ಸಾಹಿತ್ಯದ ಮಟ್ಟ, ಸತ್ವಗಳಲ್ಲಿ ಸಹಜವಾಗಿಯೇ ವ್ಯತ್ಯಾಸವಿದೆ. ಮೊದಲ ಹಂತದಲ್ಲಂತೂ (ಶಿಶುಸಾಹಿತ್ಯದ ಅವಧಿ) ಮಗುವಿಗೆ ಏನೂ ತಿಳಿದಿರುವುದಿಲ್ಲ. ಆಗ ಮಗುವಿಗೆ ಹಾಡುಗಳ ಮೂಲಕ ಸಾಹಿತ್ಯವನ್ನು ಊಡಿಸಲಾಗುತ್ತದೆ ಮೊಲೆ ಹಾಲಿನಂತೆ. ಹಾಡುವ ಹಾಡುಗಳು ಭಾವಪೂರ್ಣವಾದವು, ಮಗುವಿನ ಬಗೆಗೆ ತಾಯಿಯ ಕನಸುಗಳನ್ನು ಹೇಳುವಂಥವು. ಕೆಲವೊಮ್ಮೆ ಕೊಂಚ ತಮಾಷೆಯ ಪದ್ಯಗಳೂ ಇರಬಹುದು. ಇಲ್ಲಿಂದ ತೊಡಗಿ ಮಗು ಹಾಡುಗಳನ್ನು, ಕಥೆಗಳನ್ನು ಕೇಳಿಸಿಕೊಳ್ಳುತ್ತಾ ಕ್ರಮೇಣ ತಾನೇ ಸ್ವತಃ ಓದಿ ತಿಳಿಯಲು ತೊಡಗುತ್ತದೆ. ಈ ವಿಭಿನ್ನ ಹಂತಗಳಲ್ಲಿ ಮಗು ಏನನ್ನು ಬಯಸುತ್ತದೆ? ಮಗುವಿಗೆ ಏನು ಕೊಡಬೇಕು? ಈ ಎರಡೂ ನೆಲೆಗಳಿಂದ ನಾವು ವೈಚಾರಿಕ ನಿಲವುಗಳ ಅಗತ್ಯದ ಕುರಿತು ಯೋಚಿಸಬೇಕಾಗುತ್ತದೆ. ಮಕ್ಕಳ ಸಾಹಿತ್ಯಕ್ಕೆ ಇರುವ ಒಂದು ಮುಖ್ಯ ನಿಯೋಗವೆಂದರೆ ಅದು ಮಕ್ಕಳ ಕಲ್ಪಕತೆಯನ್ನು ಬೆಳೆಸಬೇಕು ಎಂಬುದು. ಕಲ್ಪನಾಶಕ್ತಿಯ ಉದ್ದೀಪನೆಯು ವೈಚಾರಿಕತೆಯ ಬೆಳವಣಿಗೆಗಿಂತ ಸಂಪೂರ್ಣ ಭಿನ್ನವೆಂದೋ, ಎರಡೂ ವಿರುದ್ಧ ಪ್ರಕ್ರಿಯೆಗಳೆಂದೋ ನಾನು ಹೇಳುತ್ತಿಲ್ಲ. ಆದರೆ ವೈಚಾರಿಕ ನಿಲವು ಭಾರವಾದ ಆಗಂತುಕ ವಸ್ತುವಿನಂತೆ ಪರಿಣಮಿಸಿದರೆ ಆಗಬಹುದಾದ ಸಮಸ್ಯೆಗಳ ಅರಿವೂ ಬರಹಗಾರನಿಗಿರಬೇಕಾಗುತ್ತದೆ.

ಬಾಲಸಾಹಿತ್ಯದ ಕುರಿತು ಹಿರಿಯಕವಿ ಪಂಜೆ ಮಂಗೇಶರಾಯರು ಮಾಡಿದ ಭಾಷಣವೊಂದರ ಸಾರವನ್ನು ಇನ್ನೊಬ್ಬ ಮಕ್ಕಳ ಕವಿ ಎನ್. ಶ್ರೀನಿವಾಸ ಉಡುಪರು ಒಂದೆಡೆ ನೀಡಿದ್ದಾರೆ. ಮಕ್ಕಳ ಸಾಹಿತ್ಯದ ಮೂಲಭೂತ ಲಕ್ಷಣಗಳೆಲ್ಲವೂ ಇಲ್ಲಿವೆ ಎನ್ನಬಹುದು.

೧. ಮಕ್ಕಳಿಗಾಗಿ ಬರೆಯುವ ಕಥೆ, ಪದ್ಯಗಳ ವಸ್ತು, ವಿಷಯಗಳು ಮಕ್ಕಳ ಪ್ರಪಂಚಕ್ಕೆ ಒಳಪಟ್ಟಿರಬೇಕು. ಅವರಿಗೆ ಪರಿಚಿತವಾಗಿರುವ, ಅವರ ಇಂದ್ರಿಯಗಳಿಗೆ ಎಟುಕುವ ವಿಷಯಗಳಾಗಿರಬೇಕು.

೨. ಮಕ್ಕಳ ಸಾಹಿತ್ಯದಲ್ಲಿ ಒಂದಿಷ್ಟು ಅದ್ಭುತ ರಸವಿದ್ದರೆ ಅವರ ಕಲ್ಪನಾಶಕ್ತಿಗೆ ಪ್ರಚೋದನೆ ಸಿಕ್ಕುತ್ತದೆ.

೩. ಮಕ್ಕಳ ಸಾಹಿತ್ಯದಲ್ಲಿ ಧರ್ಮಬೋಧನೆ, ನೀತಿಬೋಧನೆ ವಾಚ್ಯವಾಗಿರಬಾರದು. ಅಂದರೆ, ನೀತಿ ಹೇಳುವ ಸಲುವಾಗಿಯೇ ಕಥೆ ಅಥವಾ ಕವಿತೆಯನ್ನು ರಚಿಸಿದಂತೆ ಇರಬಾರದು.

೪. ಮಕ್ಕಳ ಸಾಹಿತ್ಯದ ಭಾಷೆ ಸುಲಭ ಹಾಗೂ ಸರಳವಾಗಿರಬೇಕು. ಶಬ್ದಗಳು ಮನೆಯಲ್ಲಿ ಬಳಸುವಂಥದಾಗಿರಬೇಕು. ವಾಕ್ಯಗಳು ದೀರ್ಘವಾಗಿರದೆ, ಸಾಕಷ್ಟು ಚಿಕ್ಕದಾಗಿರಬೇಕು.

೫. ಮಕ್ಕಳ ಕಥೆಗಳಲ್ಲಿ ನಿರೂಪಣೆಗಿಂತ ಸಂಭಾಷಣೆ ಹೆಚ್ಚಿದ್ದರೆ ಒಳ್ಳೆಯದು.

೬. ಪುನರುಕ್ತಿ ಮಕ್ಕಳಿಗೆ ಇಷ್ಟವಾಗುತ್ತದೆ. ಇದರಿಂದಾಗಿ ಅವರು ಭಾಷೆಯನ್ನು ರೂಢಿಸಿಕೊಳ್ಳಲೂ ಸಹಾಯವಾಗುತ್ತದೆ.

೭. ಮಕ್ಕಳ ಸಾಹಿತ್ಯದಲ್ಲಿ ಅಶ್ಲೀಲ, ಅಸಹ್ಯತೆಗಳಿಗೆ ಅವಕಾಶ ಇರಬಾರದು.

೮. ಮಕ್ಕಳ ಸಾಹಿತ್ಯ ಕೃತಿಗಳನ್ನು ದೊಡ್ಡ ಅಕ್ಷರಗಳಲ್ಲಿ ಅಂದವಾಗಿ, ಸಚಿತ್ರವಾಗಿ ಮುದ್ರಿಸಬೇಕು.

('ಮಕ್ಕಳ ಸಾಹಿತ್ಯ ಶತಮಾನ', ಪು. ೫)

ಇದು ಹಿರಿಯರು ಮಕ್ಕಳ ಸಾಹಿತ್ಯದ ಕುರಿತು ಹೊಂದಿರುವ ವೈಚಾರಿಕ ನಿಲವುಗಳ ಸಾರರೂಪ. ಇಂದಿಗೂ ಈ ಸೂತ್ರಗಳೇ ನಮ್ಮ ಮಕ್ಕಳ ಸಾಹಿತ್ಯ ಸೃಷ್ಟಿಯ ಹಿಂದೆ ಕೆಲಸ ಮಾಡುತ್ತಿವೆ. ಮಕ್ಕಳ ಇಂದ್ರಿಯಗಳಿಗೆ ಎಟಕುವ ವಿಷಯಗಳಾಗಿದ್ದೂ, ಒಂದಿಷ್ಟು ಪುಟ ಕಲ್ಪನಾಶಕ್ತಿಯನ್ನು ಪ್ರಚೋದಿಸುವ ಅದ್ಭುತ ರಸವೂ ಇರಬೇಕೆಂಬ ಮೊದಲಿನೆರಡು ಸೂತ್ರಗಳು ಮಕ್ಕಳ ಸಾಹಿತಿಗೆ ಸೃಷ್ಟಿಸುವ ಸವಾಲನ್ನು ಗಮನಿಸಬೇಕು. ಹಾಗೆಯೇ ನೀತಿಬೋಧನೆ ವಾಚ್ಯವಾಗಿರಬಾರದೆಂಬ ಮೂರನೆಯ ಸೂತ್ರವನ್ನು ಓದಿಕೊಂಡಾಗ ಮಕ್ಕಳ ಸಾಹಿತ್ಯ ಸೃಷ್ಟಿಯು ಸರಳವೆಂಬಂತೆ ತೋರುತ್ತಿದ್ದೂ ಸಂಕೀರ್ಣ ಕ್ರಿಯೆ ಎಂಬುದು ಅರಿವಿಗೆ ಬರುತ್ತದೆ. ಈ ಸೂತ್ರದ ಕುರಿತು ಕೊಂಚ ವಿವರಿಸುವುದಾದರೆ, ವೈಚಾರಿಕತೆ ಸಾಹಿತ್ಯ ಕೃತಿಯ ಒಡಲೊಳಗಿಂದ ಮೂಡಿಬರಬೇಕಾಗುತ್ತದೆಯೇ ಹೊರತೂ ಅದು ಸಾಹಿತ್ಯ ಕೃತಿಯಲ್ಲಿ ಹೇರಿದ ಅಥವಾ ತುರುಕಿದ ಸಂಗತಿಯಾಗಬಾರದು. ಮಕ್ಕಳ ಸಾಹಿತ್ಯವೇ ಇರಲಿ, ಹಿರಿಯರ ಸಾಹಿತ್ಯವೇ ಇರಲಿ, ತತ್ತ್ವ ಅಥವಾ ವಿಚಾರವು ಒಂದು ಅನುಭವದ, ಶೋಧದ ವಸ್ತುವಾಗಿ ಆಕೃತಿ ಪಡೆದಾಗಲೇ ಅತ್ಯುತ್ತಮ ಸಾಹಿತ್ಯ ಕೃತಿ ಸೃಷ್ಟಿಯಾಗುತ್ತದೆ ಹೊರತು ವೈಚಾರಿಕ ನಿಲವುಗಳ ಪ್ರತಿಪಾದನೆಗಾಗಿಯೇ ಬರೆವ ಕಥೆ, ಕವಿತೆಗಳು ಸ್ವಯಂದೀಪಕತೆ ಇಲ್ಲದೆ ತಾವೂ ಬಳಲಿ, ಮಕ್ಕಳನ್ನೂ ಬಳಲಿಸುತ್ತವೆ.

ಇಲ್ಲಿಯೇ ಇನ್ನೊಂದು ವಿಷಯವನ್ನೂ ಸ್ಪಷ್ಟಪಡಿಸಬೇಕು. ಮಕ್ಕಳಿಗಾಗಿ ವಿಜ್ಞಾನ, ಚರಿತ್ರೆ, ಸಮಾಜವಿಜ್ಞಾನದ ಮಾಹಿತಿಗಳನ್ನು ಪೂರೈಸುವ ಕೃತಿಗಳ ಕುರಿತು ಇಲ್ಲಿ ಚರ್ಚೆ ನಡೆಸುತ್ತಿಲ್ಲ. ಇವು ವಿಚಾರಗಳು, ವಸ್ತು ಸಂಗತಿಗಳು ನಿಖರವಾಗಿ ಪ್ರಕಟವಾಗಬೇಕಾದ ಮಕ್ಕಳ ಪುಸ್ತಕಗಳು. ಈ ಪ್ರಬಂಧದಲ್ಲಿ ಕಥೆ, ಕವಿತೆ, ನಾಟಕ, ಕಾದಂಬರಿ ಮುಂತಾಗಿ ಸೃಷ್ಟಿಯಾಗುವ ಮಕ್ಕಳ ಸಾಹಿತ್ಯದ ಕುರಿತು ಮಾತ್ರ ಪರಿಶೀಲನೆ ಮಾಡಲಾಗುತ್ತಿದೆ.

ಶಿಶುಸಾಹಿತ್ಯವು ತೊಟ್ಟಿಲ ಹಾಡುಗಳು, ರುಚಿಕರ ಪ್ರಾಸದ ದ್ವಿಪದಿಗಳ ಜಗತ್ತು. ಈ ಹಾಡುಗಳನ್ನು ಯಾರು ಬರೆದರೋ, ಯಾರ್‍ಯಾರು ಬರೆದರೋ! ಅದೆಷ್ಟೋ ತಲೆಮಾರುಗಳಿಂದ ಅವೆಷ್ಟೋ ತಾಯಿಯರ ಬಾಯಿಂದ ಬಾಯಿಗೆ ಈ ಹಾಡುಗಳು ಸಂಚರಿಸುತ್ತ ಬಂದಿವೆ. ಇವುಗಳನ್ನು ಕೇಳಿಸಿಕೊಳ್ಳುವವನು(ಳು) ತೊಟ್ಟಿಲಲ್ಲಿರುವ ಎಳೆಗೂಸು. ಆ ತೊಟ್ಟಿಲ ಹಾಡುಗಳಲ್ಲಿ ತುಂಬಿರುವ ಸದಾಶಯ, ಸದ್ಭಾವನೆಗಳನ್ನು ಒಮ್ಮೆ ಕಿವಿಗೊಟ್ಟು ಕೇಳಿದರೂ ಮನಸ್ಸು ತುಂಬಿಬರುತ್ತದೆ.

ಹರದಾರಿ ಬಪ್ಪಾಗ ಹಲವು ದೇವರ ಕಾಯ್ಗು ।
ಹರದಾಡೊಂದ್ಹೆಜ್ಜೆ ಇಡುವಾಗ । ತಮ್ಮಯ್ನ
ಮನೆದೇವರು ಕಾಯ್ಗು ಅನುದಿನ

(ಮಗು ಹರಿದಾಡುವಾಗ ಅಂದ್ರರೆ ಅಂಬೆಗಾಲಿಡುತ್ತ ಓಡಾಡುವಾಗ ಹಲವು ದೇವರು ಕಾಯುವರು. ಹರದಾಟ (ಅಂಬೆಗಾಲಿಡುವುದು) ಮುಗಿದು ಅವನು ಹೆಜ್ಜೆ ಇಟ್ಟು ನಿಲ್ಲುವಾಗ, ನಮ್ಮ ತಮ್ಮಯ್ಯನನ್ನು ಮನೆದೇವರು ಅನುದಿನವೂ ಕಾಯಲಿ).

ಕೇಳಿಸಿಕೊಂಡಿರ? ಈ ಹಾಡು ಯಾರಿಗಾಗಿ? ಅಂಬೆಗಾಲಿಡುವುದು ಬಿಟ್ಟು ಈಗ ತಾನೇ ಹೆಜ್ಜೆಯಿಡುತ್ತಿರುವ ಮಗು ಆ ಹಾಡಿನ ಅರ್ಥ ತಿಳಿಯಲಾರದು. ದೊಡ್ಡವರಿಗೇ ಇರಬಹುದೇನೋ! ತಮ್ಮ ಬಾಲ್ಯದಲ್ಲೂ ಇಂಥ ಹಾಡಿನ ಲಯ ಕೇಳಿಸಿದ್ದು ನೆನಪಾಗಿ ಅವರು ತಲೆದೂಗುವಂತಿದೆ. ಇನ್ನು ಮನೆದೇವರಿಗಂತೂ ಇದು ಖಂಡಿತವಾಗಿ ನೆನಪಿನೋಲೆ! "ನಮ್ಮ ಮಗುವನ್ನು ಇನ್ನು ನೀನೇ ಕಾಯಬೇಕು. ಇದುವರೆಗೂ ಹಲವು ದೇವರು ನಮ್ಮ ಮಗುವನ್ನು ಪೊರೆದಿದ್ದಾರೆ". ಇದೊಂದು ಅಹವಾಲು, ಪ್ರಾರ್ಥನೆ, ತಾಯಗರ್ಭದಿಂದ ಬಂದ ಮಗು ತನ್ನ ಕಾಲಮೇಲೆ ತಾನು ನಿಲ್ಲುವುದನ್ನು ಕಲಿತು, ತಾನೇ ಒಂದು ಹೆಜ್ಜೆ ಇಡುವ ಕ್ಷಣ ಈ ಕವಿಗೆ ಅದೆಷ್ಟು ಮಹತ್ತರ ಕ್ಷಣವಾಗಿ ಕಂಡಿದೆ! "ಇದುವರೆಗೂ ನಾವೆಲ್ಲ ಈ ಮಗುವನ್ನು ನೋಡಿಕೊಂಡೆವಪ್ಪಾ. ಇನ್ನು ನೀನು ನೋಡಿಕೋ" ಎಂದು ಉಳಿದ ದೇವತೆಗಳೆಲ್ಲರೂ ಮಗುವಿನ ಮನೆದೇವರಿಗೆ ಹೇಳುತ್ತಾರೆಂದು ಕಾಣುತ್ತದೆ. ಇನ್ನುಮುಂದೆ ಅವನ ನಡೆಯನ್ನು ಮನೆದೇವರು ಕಾಯಬೇಕು 'ಕಾಯುತ್ತಾನೆ' ಎಂಬ ನಂಬಿಕೆ ಪದ್ಯದಲ್ಲಿ ತಾನೇ ತಾನಾಗಿ ಪ್ರಕಟಗೊಂಡಿದೆ. ಇದು ಒಂದೆರಡು ದಿನಗಳ ಮಾತಲ್ಲ. ಇಡೀ ಜೀವಮಾನದ ಒಪ್ಪಂದ! ಇಂಥ ನಂಬಿಕೆಗಳ ಕೋಶ ಯಾವ ಸಮಾಜದಲ್ಲಿ ಇಲ್ಲ, ಅಥವಾ ಯಾವ ಹೊಸತಲೆಮಾರು ಇಂಥ ಸದಾಶಯಗಳನ್ನು ಧಿಕ್ಕರಿಸಲು ಬಯಸೀತು? ಇವೆಲ್ಲ ಒಂದಷ್ಟು ಹೊತ್ತು ಒತ್ತಟ್ಟಿಗಿರಲಿ. ತೊಟ್ಟಿಲಲ್ಲಿ ಮಲಗಿದ ಮಗುವಿಗೆ ಈ ಹಾಡಿನ ಮೂಲಕ ಕೇಳಿಸಿದ್ದು ಒಂದು ರಾಗ, ಸಿಕ್ಕಿದ್ದು ಒಂದು ಲಯ. ಅಳುತ್ತಿದ್ದ ಮಗು ಅದೆಲ್ಲೋ ಆ ರಾಗದಲ್ಲಿ ತಾನು ಶಾಂತವಾಗುವ, ನಿದ್ದೆ

ಹೋಗುವ ತಾಣ ಕಂಡುಕೊಂಡಿತು. ಅದಕ್ಕೆ ಸಿಕ್ಕ ಕಾವ್ಯ ಸಂಸ್ಕಾರ ಬಹು ಸೂಕ್ಷ್ಮವಾದದ್ದು, ತರ್ಕಕ್ಕೆ ನಿಲುಕದಂಥದು.

ಖಂಡ್ಗಾರಿಗ್ಹೋಪಲ್ಲಿ ಕಂಡಿದ್ರೋ ಭಾವ್ನೋರ?
ಮಂಡೆ ಮಾರುದ್ದ ಕಿವಿಚೋಟು । ಅವರ
ಮುಂದಿನೆರಡ್ಹಲ್ಲು ಶಿರಮುಕ್ಕು

(ಖಂಡಗಾರಿಗೆ ಹೋಗುವ ಹಾದಿಯಲ್ಲಿ ನಮ್ಮ ಭಾವನವರನ್ನು ಕಂಡಿರ? ಅವರ ಕೂದಲು ಮಾರುದ್ದ ಇದೆ. ಕಿವಿ ಜೋತಾಗಿದೆ. ಮುಂದಿನ ಎರಡೂ ಹಲ್ಲುಗಳು ಮುಕ್ಕಾಗಿವೆ)

ಬಾಪೂರಿಗ್ಹೋಪಲ್ಲಿ ಬಾಳೆಯ ಬನವುಂಟು ।
ಬೇಡಿ ತಿಂಬಷ್ಟು ಮನೆಯುಂಟು । ಎಲೆಜೋಗಿ
ದೇವಾಲ್ಯ ಉಂಟು ಶಯನಕ್ಕೆ

(ಬಾಪೂರಿಗೆ ಹೋಗುವಲ್ಲಿ ಬಾಳೆ ಬನ ಇದೆ. ಬೇಡಿ ತಿನ್ನುವಷ್ಟು ಮನೆಗಳು ಇವೆ. ಎಲೆ ಜೋಗಿ, ಮಲಗಲು ದೇವಾಲಯವೂ ಇದೆ).

ಇವೆಲ್ಲ ನಾನು ಚಿಕ್ಕಂದಿನಲ್ಲಿ ಕೇಳಿಸಿಕೊಂಡ ತೊಟ್ಟಿಲ ಹಾಡುಗಳು (ನನಗೂ ಈ ಹಾಡುಗಳನ್ನು ಹೇಳಿ ತೊಟ್ಟಿಲು ತೂಗಿರುತ್ತಾರೆ). ರಾತ್ರಿ ಹೊತ್ತು ಸಣ್ಣ ಬೆಳಕಿನ ನಡುಕೋಣೆಯಲ್ಲಿ ತೊಟ್ಟಿಲು ತೂಗುತ್ತಾ ಹಾಡುವ ಈ ಹಾಡುಗಳು ಮಗುವನ್ನು ಅವನ ಮನಸಿನ ಸೂಕ್ಷ್ಮಾತಿಸೂಕ್ಷ್ಮ ಅಪ್ರಜ್ಞಾಸ್ತರದಲ್ಲಿ ತಲುಪಿರಬೇಕು. ಅದು ಬೇಕೆಂಬಂತೆ ತಾನೇ ಆ ಶಿಶು ಅಳುತ್ತಿರುವುದು? ಅದನ್ನು ಕೇಳುತ್ತ ತಾನೇ, ಮುಂದೊಂದು ಹಂತದಲ್ಲಿ ಆ ಮಗು ನಿದ್ದೆಹೋದುದು? ಶಿಶುಗಳಿಗಾಗಿ ರಚನೆಗೊಂಡ ಈ ಪದ್ಯಗಳು ಶಿಶುಗಳನ್ನು ತಲಪುವುದು ಮಾತ್ರ – ಒಂದು ರಾಗವಾಗಿ, ನಾದವಾಗಿ. 'ಅರ್ಥ' ಅವರ ಪ್ರಪಂಚವಲ್ಲ, ದೊಡ್ಡವರದು. ಈ ಶಿಶು ಸಾಹಿತ್ಯದ ಹಿಂದೆಯೂ ವಿಚಾರಗಳಿವೆ, ಸದಾಶಯಗಳಿವೆ, ತಿಳಿ ಹಾಸ್ಯ ಇದೆ. ಇವೆಲ್ಲ ಇದ್ದೂ ಈ ಸಾಹಿತ್ಯ ನಾದಮಯವಾದ್ದು, ನಾದ ಪ್ರಧಾನವಾದ್ದು.

ಮಗುವಿಗೆ ಎರಡು ಮೂರು ವರ್ಷವಾಗುತ್ತಿದ್ದಂತೆ ಅವನನ್ನು ಕೈ ಹಿಡಿದು ನಡೆಸುವ, ಕುಣಿಸುವ ಎಷ್ಟೊಂದು ದ್ವಿಪದಿಗಳು ನಮ್ಮಲ್ಲಿ!

ಮಳೆ ಬಂತೋ ಮಳೆರಾಯ
ಕೊಡೆ ಹಿಡಿಯೋ ಸುಬ್ರಾಯ!

ಕೊಡೆ ಹಿಡಿಯುವ ಸುಬ್ರಾಯ ಯಾರೆಂಬುದು ನಮಗೆ ತಿಳಿಯದು! ನಮ್ಮ ಕೇರಿಯಲ್ಲಿರುವ ಯಾವುದೋ ಸುಬ್ರಾಯ ನೆನಪಾಗಿರಲೂ ಸಾಕು! ಅಥವಾ ಅವನು ನಮ್ಮೂರ ಸುಬ್ರಹ್ಮಣ್ಯ ದೇವರೋ? ಅವನು ಹಿಡಿಯುವ ಕೊಡೆ ಯಾವುದು? ನಮ್ಮೂರ ಗುಡ್ಡವೆ? ಇದಾವುದೂ ಬೇಕಾಗಿಲ್ಲ ಮಗುವಿಗೆ. ಸುರಿವ ಮಳೆಯಷ್ಟೇ ಸಹಜವಾಗಿ ಈ ಹಾಡಿನ ಲಯ ಅವನನ್ನು ಕುಣಿಸುತ್ತವೆ.

ಅಜ್ಜಿ ಕಾಲಿಗೆ ಗೆಜ್ಜೆ ಕಟ್ಟಿದರದೊಂದುಪಾಯ
ಅಮಟೆಮರಕೆ ಗುಮಟೆ ಕಟ್ಟಿದರದೊಂದುಪಾಯ

ಒಂದಕ್ಕೊಂದು ಸಂಬಂಧವೇ ಇಲ್ಲದ ಈ ಎರಡು ಸಾಲುಗಳು ತಮ್ಮೊಳಗಿನ ಪ್ರಾಸದಿಂದಲೇ ಮಕ್ಕಳನ್ನು ಕುಣಿಸಬಲ್ಲವಾಗಿವೆ. ಅಜ್ಜಿಯ ಕಾಲಿಗೆ ಕಟ್ಟುವ ಗೆಜ್ಜೆ, ಅಮಟೆ ಮರಕ್ಕೆ ಕಟ್ಟುವ ಗುಮಟೆ ತಮ್ಮ ವಿಲಕ್ಷಣ ವೈಚಿತ್ರ್ಯದಿಂದಲೇ ಮಕ್ಕಳನ್ನು ನಗಿಸುವಂತಿವೆ. ಇಂಥ 'ನಿರರ್ಥ' ಅಥವಾ 'ಅಸಂಬದ್ಧ' (nonsense) ಪದ್ಯಗಳ ಒಂದು ಸಮೃದ್ಧ ಭಂಡಾರವೇ ಆಂಗ್ಲ ಸಾಹಿತ್ಯದಲ್ಲಿದೆ. ಮಕ್ಕಳಿಗಾಗಿ. ಕನ್ನಡದಲ್ಲೂ ಇಂಥ ಪದ್ಯಗಳು ಮೊದಲಿನಿಂದಲೂ ಇವೆ, ಆಂಗ್ಲ ಸಾಹಿತ್ಯದ ಪ್ರಭಾವದಿಂದ ರಚಿತವಾದ ಪದ್ಯಗಳೂ ಇವೆ. 'ಚಂದಪ್ಪ ಚಂದಪ್ಪ ಚಾಳೀಕಾಯಿ। ಹಿತ್ತಲ ತುಂಬ ಬಾಳೀಕಾಯಿ' ಇಂಥದೊಂದು ಹಳೆಯ 'ನಿರರ್ಥ' ಪದ್ಯ. ಚಂದ್ರ (ಚಂದಪ್ಪ), ಹಿತ್ತಿಲು, ಬಾಳೀಕಾಯಿ ಇವೆಲ್ಲ ಪದಗಳೊಡನೆ ಚಾಳೀಕಾಯಿ ಎಂಬ ಯಾರಿಗೂ ಗೊತ್ತಿರದ ಒಂದು ಶಬ್ದವೂ (ತರಕಾರಿಯೋ?) ಇಲ್ಲಿದೆ. ಅಂಥದೊಂದು ವಸ್ತುವೋ, ತರಕಾರಿಯೂ ಇದೆ ಎಂದಿಟ್ಟುಕೊಂಡರೂ ಅದಕ್ಕೂ, ಚಂದ್ರನಿಗೂ ಏನು ಸಂಬಂಧ? ಇನ್ನು ಚಾಳೀಕಾಯಿ, ಬಾಳೀಕಾಯಿಗಳಿಗೆ ಇರಬಹುದಾದ್ದು ಪ್ರಾಸದ ಸಂಬಂಧ ಮಾತ್ರ! ಈ ಪ್ರಾಸ ಮಗುವನ್ನು ಸುಮ್ಮನೇ ಕೂರಗೊಡುವುದಿಲ್ಲ, ನಿಲ್ಲಲೂ ಬಿಡುವುದಿಲ್ಲ, ಅವನು ಈ ಪ್ರಾಸ ಪದಗಳನ್ನು ಹಿಡಿದನೆಂದರೆ ಒಂದೋ, ಅವನೇ ಕುಣಿಯಬೇಕು, ಇಲ್ಲಾ, ಅವೇ ಅವನನ್ನು ಕುಣಿಸುತ್ತವೆ. ಹೀಗಿದೆ, ಕಿಶೋರಾವಸ್ಥೆ ಸಮೀಪಿಸುತ್ತಿರುವ ಮಗುವಿನ ಸಾಹಿತ್ಯ ಸಂಬಂಧ.

ಈ ಹಂತದ ಮಕ್ಕಳಿಗಾಗಿ ಹಿರಿಯ ಕವಿ ಜಿ.ಪಿ. ರಾಜರತ್ನಂ ಅವರು ಅನೇಕ ಪದ್ಯಗಳನ್ನು ಬರೆದಿದ್ದಾರೆ.

ದೊಡ್ಡ ಪಟ್ಟೆ ಹುಲಿ
ಕಾಡುದಾರಿಯಲಿ
ನಡುಗಿ ನಿಂತು
ಹೇಳಿತಿಂತು:
"ಅಯ್ಯೋ! ಅಪ್ಪ! ಚಳಿ!"

(ಕಂದನ ಕಾವ್ಯಮಾಲೆ, ಪು. ೯೯)

ಝಣ! ಝಣ! ಝಣ
ಜೇಬು ತುಂಬ ಹಣ
ಮೇಲಕೆತ್ತಿ
ಬಿಡಲು ಸದ್ದು
ಠಣ್! ಠಣ! ಠಣ!

(ಕಂದನ ಕಾವ್ಯಮಾಲೆ, ಪು. ೬೬)

ನದಿಯಲೊಂದು ಬಕ
ಮುದುರಿಕೊಂಡು ಮೊಕ
ಕಾಲನೆತ್ತಿ
ಕುಣಿಯುತಿತ್ತು
ತಕಾ! ತಕ್ಕ! ತಕ

(ಕಂದನ ಕಾವ್ಯಮಾಲೆ, ಪು. ೬೬)

ಈ ಪದ್ಯಗಳಿಗೆ ಮತ್ತೆ ವಿವರಣೆಯೇ ಬೇಕಾಗಿಲ್ಲ. ನರ್ಸರಿ, ಎಲ್.ಕೆ.ಜಿ., ಯು.ಕೆ.ಜಿ. ಹಾಗೂ ಇನ್ನು ಮುಂದಿನ ಒಂದೆರಡು ವರ್ಷದ ಮಕ್ಕಳು ಅಭಿನಯಿಸಿಯೂ ಹೇಳಬಹುದಾದ ಚುಟುಕು ಪದ್ಯಗಳಿವು. ಶಿಶುಪ್ರಾಸಗಳ ಕುರಿತು ಶ್ರೀ ಆನಂದ ವಿ. ಪಾಟೀಲರು ತಮ್ಮ 'ಅಲರು' ಪುಸ್ತಕದಲ್ಲಿ ಹೇಳುವ ಮಾತುಗಳನ್ನು ಗಮನಿಸೋಣ. ಒಟ್ಟಾರೆಯಾಗಿ ಇದುವರೆಗೆ ಕನ್ನಡ ಬಾಲಸಾಹಿತ್ಯದಲ್ಲಿ ನಡೆದಿರುವ ಕಾರ್ಯವನ್ನು ಆ ಮಾತುಗಳು ಸಂಕ್ಷಿಪ್ತವಾಗಿ ಪರಿಚಯಿಸುವಂತಿವೆ.

"ಕನ್ನಡದಲ್ಲಿ 'ಶಿಶುಪ್ರಾಸ' ಎನ್ನುವ ಪದ ಪುಟಾಣಿಗಳಿಗಿರುವ ಪದ್ಯಗಳಿಗೆ ಸಾಮಾನ್ಯವಾಗಿ ಬಳಕೆಯಾಗುತ್ತಾ ಬಂದಿದೆ. ಇದು ಯಾವಾಗಿನಿಂದ ಪ್ರಾರಂಭವಾಯಿತು. ಯಾರು ಮೊದಲು ಬಳಸಿದರು ತಿಳಿಯದು. ಒಂದು ಅಂದಾಜಿನಲ್ಲಿ ಶಾಲಾಪೂರ್ವದ, ಶಾಲೆಯ ಅದೇ ಪ್ರಾರಂಭದ ದಿನಗಳಲ್ಲಿ ಮಕ್ಕಳು ಅಂದುಕೊಳ್ಳಬಹುದಾದ, ಸವಿಯಬಹುದಾದ ರಚನೆಗಳನ್ನು ಹೀಗೆ ಗುರುತಿಸಲಾಗಿದೆ. ಪ್ರಾಸಮಯವಾದ ಶಬ್ದಗಳನ್ನು ವಿಶೇಷವಾಗಿ ಗಮನಿಸಿದ ಹಾಗಿದೆ. ಈ ಪದದ ಬಳಕೆಯಲ್ಲಿ ಪುಟಾಣಿಗಳಿಗಾಗಿರುವ ಇಂಥ ಪದ್ಯಗಳನ್ನು ಯಶಸ್ವಿಯಾಗಿ ಪ್ರಾರಂಭದ ದಿನಗಳಲ್ಲಿ ರಚಿಸಿದ್ದು ಜಿ.ಪಿ. ರಾಜರತ್ನಂ ಅವರು. ಅನಂತರ ಹಲವರು ಇಂಥ ರಚನೆಗಳಿಗೆ ಕೈ ಹಾಕಿದರಾದರೂ ಅಷ್ಟು ಯಶಸ್ವಿಯಾದ ಉದಾಹರಣೆಗಳಿಲ್ಲ. ಈಚಿನ ದಿನಗಳಲ್ಲಿ ಎಚ್.ಎಸ್. ವೆಂಕಟೇಶಮೂರ್ತಿ, ಎನ್. ಶ್ರೀನಿವಾಸ ಉಡುಪ ಮೊದಲಾದವರು ಇದಕ್ಕೆ ಚಾಲನೆ ನೀಡಿದ್ದಾರೆ. ಚಿಂತಾಮಣಿ ಕೊಡ್ಲೆಕೆರೆ ಅವರ ಸೊಗಸಾದ ಸಂಕಲನ ಬಂದಿದೆ. ಸುಮತೀಂದ್ರ ನಾಡಿಗರು ವಿಶೇಷವಾಗಿ ಇಂಥವುಗಳ ರಚನೆಯಲ್ಲಿ ಕಾಣಸಿಗುತ್ತಾರೆ."

(ಅಲರು, ಪು. ೮೦)

ಇನ್ನಷ್ಟು ಪದ್ಯಗಳ ಉಲ್ಲೇಖದಿಂದ ಶಿಶುಪ್ರಾಸಗಳ ಸ್ವರೂಪ ಸ್ಪಷ್ಟವಾಗಬಹುದು.

ಸೊಂಟದಲ್ಲೊಂದೂ ನಿಲ್ತಿರಲಿಲ್ಲ
ಯಾವ್ದೆ ತಂದ್ರೂ ಚಡ್ಡಿ
ಮಹಾಬಲ ಅವನ ಹೆಸರು
ನೋಡ್ಲಿಕ್ ಸಣಕಲು ಕಡ್ಡಿ

(ನಾಡಿಗ)

ಇಟ್ಕೊಂಡಿದ್ಲು ಭೀಮಕ್ಕ ದೊಡ್ಡದೊಂದು ಕೊಡ್ಲಿ
ಬೆಳಿಗ್ಗೆ ಎದ್ದು ತಿಂದ್ ಹಾಕಿದ್ಲು ಹತ್ತಿಪ್ಪತ್ತು ಇಡ್ಲಿ
ದೊಡ್ಡ ಮರ ಕಡಿದ್ಲು
ಕಾಫಿ ಮಾಡ್ಕೊಂಡ್ ಕುಡಿದ್ಲು

(ನಾಡಿಗ)

ಪುಟ್ಟ ಕಂದ ಹೈ
ಪಾಪ! ಬರೀ ಮೈ
ಚಡ್ಡಿ ಕೂಡ ನೈ
– ಥೈ ಥೈ ಥೈ

ಪಾಪ ಎನ್ನುತಾ
ಕಣ್ಣು ತಿಕ್ಕುತಾ
ಅಳುತಲಿದ್ದ ತಾ
– ಛೇ! ಛೇ! ಛೇ!
ತಾತ ಬಂದರು
ಕೊಟ್ಟು ಒಂದು ರೂ
ಚಡ್ಡಿ ತಂದರು
–ಹಾ! ಹಾ! ಹಾ!
ತೊಡಿಸಿ ನಿಕ್ಕರು
ತಾತ ನಕ್ಕರು
ಜಿಪ್ಪೆ ಚಕ್ಕರು
ಹೋ! ಹೋ! ಹೋ!

(ಎಚ್.ಎಸ್. ವೆಂಕಟೇಶಮೂರ್ತಿ)

ಪೆನ್ಸಿಲ್ಲಣ್ಣನ ಮೊದಲನೆ ಶತ್ರು
ಅಳಿಸೋ ರಬ್ಬರ್ರು
ತಪ್ಪು ಬರೆದರೆ ಒಪ್ಪೋದಿಲ್ಲ
ಎನೇ ಹೇಳಿದ್ರೂ ! (ಶ್ರೀನಿವಾಸ ಉಡುಪ)
ಪೆನ್ಸಿಲ್ಲಣ್ಣನ ಎರಡನೆ ಶತ್ರು
ಹೆರೆಯೋ ಮೆಂಡರ್ರು
ಮೊಂಡಾಗಿರಲು ಬಿಡೋದೆ ಇಲ್ಲ
ಎಷ್ಟೇ ಬಡಕೊಂಡ್ರೂ!

(ಶ್ರೀನಿವಾಸ ಉಡುಪ)

ಕಾವೇರಕ್ಕನ ಗಂಡ
ಪೇಟೆಯಿಂದ ಬಂದ
ಪಂಚೆ ಉಟ್ಟುಕೊಂಡ
ಹೊಟ್ಟೆ ತುಂಬ ತಿಂದ
ಕಾವೇರಕ್ಕನ ಗಂಡ
ಪೇಪರ್ ಓದಿಕೊಂಡ
ಚಾ ಕುಡಿದು ಮಿಂದ
ನೀರೊ – ಬಿಸಿಕೆಂಡ

(ಚಿಂತಾಮಣಿ ಕೊಡ್ಲೆಕೆರೆ)

ಇವು ಕೆಲ ಉದಾಹರಣೆಗಳು ಮಾತ್ರ. ಈ ಮಾದರಿಯ ಶಿಸುಪ್ರಾಸಗಳಲ್ಲಿ ಶಬ್ದಗಳ ಕುಣಿತವಿದೆ. ವಿಚಿತ್ರ ಎನ್ನಬೇಕಾದ ತರ್ಕವಿದೆ. ತರ್ಕವನ್ನು ಸುಮ್ಮನೆ ಹೀಗೆ ಇಟ್ಟುಕೊಂಡು ಪ್ರಾಸಗಳ ಅಂತರ್ಜಾಲವೊಂದನ್ನು ತೀರ ಸಲೀಸು ಎಂಬಂತೆ ಹೆಣೆದು ಮಕ್ಕಳ ಹಾಡು,

ಕುಣಿತಕ್ಕೆ ಸಿಕ್ಕಿ ನಲಿಯುವವು ಈ ಶಿಶುಪ್ರಾಸಗಳು. ಜೆ.ಪಿ. ರಾಜರತ್ನಂ ಇಂಥ ಹಾಡುಗಳನ್ನು ಬರೆಯಬೇಕಾಗಿ ಬಂದ ಸಂದರ್ಭವನ್ನು ಅವರ 'ಕಂದನ ಕಾವ್ಯಮಾಲೆ'ಯ ಮುನ್ನುಡಿಯಲ್ಲಿ ನೆನಪಿಸಿಕೊಂಡಿದ್ದಾರೆ. ಮಿಡಲ್‌ಸ್ಕೂಲಿನ ಎರಡನೇ ತರಗತಿಯ ಮಕ್ಕಳಿಗೆ ಒಮ್ಮೆ ಅವರು ಪಾಠ ಹೇಳಬೇಕಾಗಿ ಬಂತು. ಅವರು ಹೇಳಬೇಕಾಗಿದ್ದ ಪದ್ಯಭಾಗ 'ಹರಿಭಕ್ತಿಸಾರ'ದ್ದು. ಮತ್ತೊಂದು ಕಥೆಯ ಹೆಸರು 'ಸೌವರ್ಣಮಧ್ಯ ಸ್ಥಿತಿ'. ಇಂಥ ಕಠಿಣ ಪಾಠಗಳನ್ನು ಎರಡನೇ ತರಗತಿಯ ಮಕ್ಕಳಿಗೆ ಹೇಗೆ ಹೇಳುವುದೆಂದು ಅವರಿಗೇ ವ್ಯಥೆಯೆನಿಸಿತು. ಕರ್ತವ್ಯಬದ್ಧರಾಗಿ ಪಾಠ ಹೇಳಿದರು. ಸಂಜೆ ತಿರುಗಾಡಲು ಹೋದಾಗ ಮಕ್ಕಳ ಮಟ್ಟಕ್ಕೆ ಅವರನ್ನು ಮುಟ್ಟಿ ಆಡಿಸುವ ಕುಣಿಸುವ ಪದ್ಯಗಳು ಬೇಕು ಎಂದು ಯೋಚಿಸತೊಡಗಿದರು. ಹಾಗೆ ಅವರು ಬರೆದಿದ್ದು 'ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ' ಎಂದು ಆರಂಭವಾಗುವ 'ತುತ್ತೂರಿ' ಶಿಶುಗೀತೆ. ಮರುದಿನ ಮಕ್ಕಳಿಗೆ ಓದಿ ಹೇಳಿದರು. ಮಕ್ಕಳು ಹುಚ್ಚೆದ್ದು ಕುಣಿದರು! ಮುಂದಿನದು ಇತಿಹಾಸ.

ಮಕ್ಕಳ ಸಾಹಿತ್ಯದ ಬೇರುಗಳನ್ನು ಜಾನಪದ ಸಾಹಿತ್ಯದ ತಾಯಿನೆಲದಲ್ಲೇ ಹುಡುಕಬೇಕಾಗುತ್ತದೆ. ಲಾಲಿಪದಗಳು, ಅಜ್ಜಿಕಥೆ, ಆಟ, ಕೋಲಾಟದ ಪದಗಳು, ಒಗಟುಗಳು, ಕಾಗಕ್ಕ ಗುಬ್ಬಕ್ಕ ಮಾದರಿಯ ಕಥೆಗಳು... ಇವೇ ಮುಂತಾದವು. ಇಂದಿಗೂ ನಮ್ಮಲ್ಲಿ ಇವನ್ನೆಲ್ಲ ಬೃಹತ್ ಪ್ರಮಾಣದಲ್ಲಿ ಸಂಕಲಿಸಿದ ಕೃತಿಗಳಿಲ್ಲವಾದರೂ ನಾನು ಗುರುತಿಸುತ್ತಿರುವ ಮೇಲಿನ 'ಶಿಶುಪ್ರಾಸ'ಗಳ ಸಾಹಿತ್ಯಪರಂಪರೆಗೆ ನಮ್ಮ ಜಾಸಪದ ಸಾಹಿತ್ಯ ಭಂಡಾರದಿಂದ ಸಿಕ್ಕ ಮುತ್ತು, ರತ್ನಗಳು ಕಡಿಮೆ ಕಿಮ್ಮತ್ತಿನವಲ್ಲ. ಅದೇ ಹೊತ್ತಿಗೆ ಇಂಗ್ಲಿಷ್‌ನ ನರ್ಸರಿ ಪದಗಳ ಪ್ರಭಾವವೂ ಶಿಶುಪ್ರಾಸಗಳ ಸೃಷ್ಟಿಯ ಹಿಂದೆ ದೊಡ್ಡ ಪ್ರಮಾಣದಲ್ಲೇ ಇದೆ ಎಂಬುದನ್ನು ಮರೆಯುವಂತಿಲ್ಲ. ಇಲ್ಲಿಯೇ ಕಾರಂತರ ಮಾತುಗಳನ್ನೂ ಗಮನಿಸಬೇಕು.

"...ಅಂಥ ಮಕ್ಕಳಿಗೆ (ಎತ್ತಿ ಮುದ್ದಾಡುವ ಪ್ರಾಯದ ಮಕ್ಕಳಿಗೆ) ಅವರ ತಾಯಂದಿರೋ, ದಾದಿಯರೋ, ಅಣ್ಣ ತಮ್ಮಂದಿರೋ ಹಾಡಿ, ಕೇಳಿಸಿ ಸಂತಸ ಒದಗಿಸುತ್ತಾರೆ. ಅಲ್ಲಿ ವಿಷಯಗಳ ಬೋಧನೆ ಅಮುಖ್ಯ. ಕಿವಿಗೆ ಹಿತವಾಗಿ ಸಂತಸ ಹುಟ್ಟಿಸುವ ಲಯಬದ್ಧ ನಾದಪ್ರವಾಹ ಮುಖ್ಯ...

ದಾರ್ ಬೂರ್ ಬೊಮ್ಮಕ್ಕ
ಮೊಸರು ಕಡೆಯೆ ತಿಮ್ಮಕ್ಕ

ಇಲ್ಲಿನ ಲಯಗಾರಿಕೆ, ಪ್ರಾಸ-ಮೊಸರು ಕಡೆಯುವಾಗ ಹುಟ್ಟುವ, 'ದಾರ್ ಬೂರ್' ಧ್ವನಿ... ಆವರೆ ಮುಂದಣ ಮಾತುಗಳು ಅಸಂಬದ್ಧ ಗೀತೆಗಳ ರೂಪದವು.

ಕಾಳುನಾಯಿ ಕಚ್ಚಿತು
ಬೋಳುನಾಯಿ ಬೊಗಳಿತು
ಮದ್ದು ತಾರೋ ಮಾವಯ್ಯ
ಮದ್ದಿನ ಚೀಲ ಮರ್ತೋಯ್ತು
ಮರ್ತೋಯ್ತಪ್ಪ ಮರ್ತೋಯ್ತು

ಈ ತೆರನ ಹಾಡುಗಳು ನಮ್ಮ ಜಾನಪದ ಸಾಹಿತ್ಯದಲ್ಲಿ ಕವಿಗಳು ಹುಟ್ಟದಿರುವಲ್ಲೂ,

ತಾಯಿ ಮಕ್ಕಳು ಇರುವಲ್ಲೂ ಹಾಡಿರೂಢಿಯಾಗಿ ಬಂದಿರಲೇಬೇಕು. ತೊಟ್ಟಿಲು ತೂಗುವ ಗತಿಯನ್ನು ಬಿಂಬಿಸುವ ಜೋಗುಳಗಳು ಇರುವಂತೆ ಅವು. ಮಕ್ಕಳ ಕಿವಿಯನ್ನು ಇವು ಸಂತೈಸುತ್ತವೆ. ಅಂಥವುಗಳ ಸಂಗ್ರಹ ನಮ್ಮ ಕೈಗೆ ಸಾಕಷ್ಟು ಬಂದಿಲ್ಲ.' (ಶಿವರಾಮ ಕಾರಂತರು 'ತಟ್ಟು ಚಪ್ಪಾಳೆ ಪುಟ್ಟಮಗು' ಗೆ ಬರೆದ ಮುನ್ನುಡಿ)

ಒಟ್ಟಾರೆಯಾಗಿ ಈವರೆಗಿನ ಪರಿಶೀಲನೆಯಿಂದ ವ್ಯಕ್ತವಾಗುವ ಸಂಗತಿಗಳೆಂದರೆ: ಶಿಶುಸಾಹಿತ್ಯ ನಮ್ಮಲ್ಲಿ ಹಿಂದಿನಿಂದಲೂ ಇತ್ತು. ಆದರೆ ಇಂಗ್ಲಿಷ್ ನರ್ಸರಿ ಪದ್ಯಗಳ ಮಾದರಿಯ ಪರಿಚಯವಾದ ಬಳಿಕವೇ ನಮಗೆ ಅಂಥ ಸಾಹಿತ್ಯ ಶಿಕ್ಷಣದಲ್ಲೂ ಅಗತ್ಯ ಎಂಬುದು ಮನವರಿಕೆಯಾಯಿತು. ಅರ್ಥ, ನೀತಿಗಿಂತ ಪದಲಾಲಿತ್ಯ, ಪ್ರಾಸದ ಮೋಡಿಯಿಂದ ಎಳೆಯ ಮಕ್ಕಳನ್ನು ಉಲ್ಲಾಸದ ಲಯಕ್ಕೆ ತರುವುದೇ ಈ ಸಾಹಿತ್ಯದ ಆಸಕ್ತಿ. ಆನುಷಂಗಿಕವಾಗಿ ನೀತಿ ಇಂಥ ಪದ್ಯಗಳಲ್ಲಿ ಕಾಣಿಸಿಕೊಳ್ಳಲೂಬಹುದು. ಕೃತಕವಾಗಿ ನೀತಿಬೋಧೆ ಮಾಡುವ ರಚನೆಗಳು ಮಕ್ಕಳನ್ನೆಂದೂ ಮುಟ್ಟಿಲ್ಲ. ಜಂಬದ ಕೋಳಿಯಂಥ ಕಸ್ತೂರಿಯ ತುತ್ತೂರಿ ನೀರುಪಾಲಾದುದನ್ನು ಹೇಳುವ 'ತುತ್ತೂರಿ' ಪದ್ಯ ಮಕ್ಕಳಿಗೆ ಮೆಚ್ಚುಗೆಯಾಗುವುದು ತನ್ನ ರಸಮಯ ಪ್ರಾಸಬದ್ಧ ನಡಿಗೆಯಿಂದಲೇ. ಅದರ ನೀತಿ ಮುಟ್ಟುವುದು ಎಷ್ಟೋ 'ಓದು'ಗಳ ನಂತರವೇ ಎನ್ನಬಹುದು. ಶಿಶುಗೀತಗಳ, ಪುಟಾಣಿ ಪ್ರಾಸಗಳ ಹಂತದಲ್ಲಿ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸುವುದು ಉಚಿತವಲ್ಲ.

ಈ ಶಿಶುಸಾಹಿತ್ಯದ ಅವಧಿ ಪ್ರಾಥಮಿಕ ಎರಡು ಅಥವಾ ಮೂರನೆಯ ತರಗತಿಯವರೆಗಿನದು ಎಂದು ನಿರ್ಧರಿಸಿಕೊಂಡರೆ ಇಲ್ಲಿಂದ ಮುಂದೆ ಮಗು ಹನ್ನೊಂದನೇ ವಯಸ್ಸನ್ನು ತಲುಪುವ ನಾಲ್ಕು ವರ್ಷಗಳ ಅವಧಿಯನ್ನು 'ಕಿಶೋರ ಸಾಹಿತ್ಯ' ಎಂದು ನಾನು ಗುರುತಿಸಿದ್ದೇನೆ. ಅದಕ್ಕೂ ಮುಂದಿನದು ಹದಿಹರೆಯದ ಮಕ್ಕಳು ಸಾಹಿತ್ಯ ನಾದವಾಗಿ, ನಾಟ್ಯವಾಗಿ ತಾವು ಓದಿದ ಕವಿತೆಯನ್ನು (ಅಥವಾ ಇನ್ನಾವುದೇ ಬಾಲಸಾಹಿತ್ಯ ಗ್ರಹಿಸಿದ ಬಾಲಕ(ಕಿ),) ಈ ಹಂತಗಳಲ್ಲಿ ಸಾಹಿತ್ಯ ಕೃತಿಯ ಅರ್ಥದ ಕಡೆಗೂ, ಭಾವದ ಕಡೆಗೂ ಮನಸ್ಸನ್ನು ಚಾಚಬಲ್ಲ ಸಾಮರ್ಥ್ಯ ವೃದ್ಧಿಸಿಕೊಳ್ಳುತ್ತಾರೆ. ಪ್ರತಿ ಹಂತದಲ್ಲೂ ಮಗುವಿಗೆ ಯಾವ ಬಗೆಯ ಸಾಹಿತ್ಯ ನೀಡಬೇಕೆಂಬುದು ದೊಡ್ಡ ಸವಾಲು. ವೈಚಾರಿಕ ನಿಲುವುಗಳ ಕುರಿತು ಹೆಚ್ಚಿನ ಎಚ್ಚರ, ಪರೀಕ್ಷೆ ಪ್ರತಿ ಹಂತದಲ್ಲೂ ಮುಖ್ಯವಾದುದೇ. ಮೂಢನಂಬಿಕೆಗಳನ್ನೋ, ಅಂಧಶ್ರದ್ಧೆಯನ್ನೋ, ತಪ್ಪು ತಿಳಿವಳಿಕೆಯನ್ನೋ ಹುಟ್ಟಿಸಬಹುದಾದ ಯಾವುದೇ ಕಥೆ, ಕವಿತೆ ಅಪಾಯಕಾರಿಯಾದುದು. ಅದೇ ಸಮಯದಲ್ಲಿ ಮಕ್ಕಳ ಕಲ್ಪನಾಶಕ್ತಿಯನ್ನು ಬೆಳೆಸುವ, ಕ್ರಿಯಾಶೀಲಗೊಳಿಸುವ ಅಗತ್ಯವನ್ನು ನಾವು ಮನಗಾಣಬೇಕು. ಮಕ್ಕಳಲ್ಲಿ ಸಾಹಸ ಪ್ರವೃತ್ತಿಯನ್ನು ಮೂಡಿಸುವ ಸಾಹಿತ್ಯ ಕೃತಿಗಳು ಆಂಗ್ಲ ಸಾಹಿತ್ಯದಲ್ಲಿ ಸಾಕಷ್ಟಿವೆ. ಕನ್ನಡದಲ್ಲೂ ಅಂಥ ಕೃತಿಗಳು ಹೆಚ್ಚಿನ ಪ್ರಮಾಣದಲ್ಲಿ ಬರಬೇಕಾಗಿದೆ. ಹಾಗೆಯೇ ಮಕ್ಕಳಿಗೆ ಫ್ಯಾಂಟಸಿ ಕಥೆಗಳ ಅದ್ಭುತ ರಮ್ಯಲೋಕವೂ ಬೇಕು. ವಿಜ್ಞಾನ ಸಾಧನೆಗಳ ಕಲ್ಪನಾಲೋಕದ ಕಥೆಗಳು ಮಕ್ಕಳಲ್ಲಿ ವೈಜ್ಞಾನಿಕ ಮನೋಧರ್ಮ ಬೆಳೆಯುವಂತೆ ಸಹಕಾರಿಯಾಗಬಲ್ಲವು. ಜೀವನದಲ್ಲಿ ಅನನ್ಯ ಸಾಧನೆ ಮಾಡಿದವರ ಜೀವನ ಚಿತ್ರಗಳನ್ನು ಮಕ್ಕಳಿಗೆ ನೀಡಿದರೆ ಅವರು ಬಾಳಿನಲ್ಲಿ

ಅಳವಡಿಸಿಕೊಳ್ಳಬೇಕಾದ ಉನ್ನತ ಆದರ್ಶಗಳ, ಮೌಲ್ಯಗಳ ಕುರಿತು ಪ್ರೇರಣೆ ಸಿಕ್ಕಬಹುದು. ಪ್ರಾಣಿದಯೆ, ಸಹಜೀವಿಗಳ ಕುರಿತು ಪ್ರೀತಿ, ಸದ್ಭಾವನೆ, ಕ್ರೀಡಾ ಮನೋಭಾವ, ನಾಡುನುಡಿಗಳ ಕುರಿತು ಆದರ, ಆತ್ಮೀಯತೆ, ವ್ಯಾವಹಾರಿಕ ಬದುಕಿನಲ್ಲಿರಬೇಕಾದ ಜಾಣ್ಮೆ, ಚತುರೋಪಾಯ, ಯುಕ್ತಿ, ಹಿಂಸೆ, ಮೋಸ, ಭಯೋತ್ಪಾದನೆಗಳಿಲ್ಲದ ಸುಂದರ ಬಾಳಿನ, ನಾಳಿನ ಕನಸುಗಳ ಪ್ರಚೋದನೆ, ಉದ್ದೀಪನೆ ಇವೆಲ್ಲವೂ ಹದಿಹರಿಯದ ಮಕ್ಕಳಿಗೆ ನಾವು ಕೊಡಬೇಕಾದ ಸಾಹಿತ್ಯದಲ್ಲಿ ಸೇರಿಕೊಳ್ಳಬೇಕಾದ ಕೆಲ ವಸ್ತು, ವಿಷಯಗಳು. ಇಲ್ಲಿ ನಾನು ಪ್ರಸ್ತಾಪಿಸಿದ ಅಂಶಗಳನ್ನು ಕಿಶೋರಾವಸ್ಥೆಯಿಂದ ಹದಿಹರೆಯದವರೆಗಿನ ಮಕ್ಕಳ ಬೆಳವಣಿಗೆಯ ಅವಧಿಯಲ್ಲಿ ತಕ್ಕ ಹದದಲ್ಲಿ ನೀಡಬೇಕಾಗುತ್ತದೆ. ಈ ಪ್ರಬಂಧದಲ್ಲಿ ಈಗಾಗಲೇ ಹೇಳಿದ ಮಾತುಗಳನ್ನು ಮತ್ತೆ ನೆನಪಿಸಬಯಸುತ್ತೇನೆ. ಎಂಥ ಆಶಯವೇ ಇರಲಿ, ಎಂಥ ನಿಲುವೇ ಇರಲಿ, ಸಾಹಿತ್ಯ ಕೃತಿಯಲ್ಲಿ ಅದು ತನ್ನ ಅಂತರಂಗದಿಂದಲೇ ಆ ತಿಳಿವಳಿಕೆಯನ್ನು ಮಕ್ಕಳಿಗೆ ಮುಟ್ಟಿಸುವಂತಿರಬೇಕು.

ಈ ಕುರಿತು ಗಜೇಂದ್ರಗಡ ಶ್ಯಾಮರಾಯರೆಂಬ ಲೇಖಕರು ಬಹುಹಿಂದೆಯೇ 'ಕಥನಕಲೆ' ಎಂಬ ಕೃತಿಯಲ್ಲಿ ದೀರ್ಘವಾಗಿ ಚರ್ಚಿಸಿದ್ದಾರೆ(೧೯೬೬). ಪಠ್ಯಪುಸ್ತಕದಲ್ಲಿ ಬಳಸಿಕೊಳ್ಳುವಾಗಲೂ ಕಥೆಯು ಪ್ರಮುಖವಾಗಿ ಒಂದು ಕಲಾಕೃತಿ ಎಂಬುದನ್ನು ಮರೆಯಬಾರದು ಎಂದು ಅವರು ವಾದಿಸುತ್ತಾರೆ. "ಕಲಾ ಸ್ವರೂಪವೇ ಕಥೆಯ ತಿರುಳು, ಕಥೆಯ ಅಂತಃಸತ್ವ" ಎಂಬುದು ಅವರ ನಿಲವು. "ಕಥಾನಿರೂಪಣದಿಂದ ನಾವು ನೇರವಾಗಿ, ಪ್ರಾಮುಖ್ಯವಾಗಿ, ಸಾಧಿಸಬೇಕಾದುದು ಮಕ್ಕಳ ಮನಸ್ಸಿನ ಸಮಾರಾಧನೆ, ಸಂತೋಷಗಳೇ ಹೊರತು, ಬೋಧನೆ, ವಿಷಯ ವಿವರಣೆಗಳಲ್ಲ. ಕಥೆ ಕೇಳುವ ಮಕ್ಕಳ ಜ್ಞಾನಭಂಡಾರಕ್ಕೆ ಒಂದು ಕಣದಷ್ಟು ಕೂಡ ಹೊಸ ವಿಷಯವನ್ನು ಕಥೆಗಾರನು ಸೇರಿಸದಿರಬಹುದು. ಆದರೆ ಮನಸ್ಸಿಗೆ ಆಗುವ ಆಪ್ಯಾಯಮಾನತೆಯ ಬೆಲೆ ಕಡಿಮೆಯದಲ್ಲ". "ಕಥೆ ಕೇಳುವುದರಿಂದ ಉಂಟಾಗುವ ಆನಂದವು ಮಕ್ಕಳ ಆತ್ಮಶಕ್ತಿಯನ್ನು ಅಭಿವೃದ್ಧಿಗೊಳಿಸುವುದು, ಬಗೆಬಗೆಯ ಭಾವಶಕ್ತಿಗಳನ್ನು ಜಾಗ್ರತಗೊಳಿಸಿ ಅವು ಬಲಿಯುವಂತೆ ಬೆಳೆಯುವಂತೆ ಮಾಡುವುದು... ಎಲ್ಲವೂ ತಮಗೆ ಎಂಬ ಸ್ವ-ನಿಷ್ಠರಾದ ಮಕ್ಕಳ ಸಂಕುಚಿತ ಮನೋವೃತ್ತಿಯನ್ನು ವಿಶಾಲಗೊಳಿಸುವುದು. ಪ್ರೀತಿ, ಸಹಾನುಭೂತಿಗಳ ಕ್ಷೇತ್ರವನ್ನೂ ವಿಸ್ತರಿಸುವುದು." ನೀತಿಶಿಕ್ಷಣ ಕಥಾವಾಚನ ಅಥವಾ ಶ್ರವಣದಿಂದ ಸಾಧ್ಯವಾಗಲೂಬಹುದು. ಆದರೆ ಅವನ್ನು ಆ ಕೂಡಲೇ ಕಂಡುಹಿಡಿಯುವುದಾಗಲೀ, ರೂಢಿಸುವದಾಗಲೀ, ಅಳೆಯುವುದಾಗಲೀ ಅಸಾಧ್ಯ. ಆದರೆ ಅನಿರ್ದಿಷ್ಟವಾದ ಭವಿಷ್ಯತ್ಕಾಲದಲ್ಲಿ ಈ ಕಥೆಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಖಂಡಿತವಾಗಿ ಧನಾತ್ಮಕವಾಗಿಯೇ ಇರುತ್ತದೆ. [ನೋಡಿ. ಆನಂದ ಪಾಟೀಲರ 'ಕಥನಕಲೆ' ಕೃತಿ ಕುರಿತ ಲೇಖನ, ಪುಸ್ತಕ : 'ಹೀಗೇ... ಖುಷಿ ಕೊಟ್ಟುವು", ಪು. ೩೧]

ಇಲ್ಲಿಯೇ ಒಂದು ಮುಖ್ಯ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ಹಾಗಾದರೆ ಮಕ್ಕಳ ಸಾಹಿತ್ಯದ ಗುರಿ ರಂಜನೆ ಮಾತ್ರವೆ? ಅಲ್ಲಿ ನೀತಿಬೋಧೆಯ ಪಾತ್ರವೇನೂ ಇಲ್ಲವೆ? ಸಾಹಿತ್ಯ ಕೃತಿಯಲ್ಲಿ ಇಂಥ ವಿಚಾರಗಳ ಕುರಿತು 'ಇದಮಿತ್ಥಂ' ಎಂಬಂತೆ ಮಾತನಾಡುವುದು ತುಸು ಕಷ್ಟ. ರಂಜನೆಯೇ ಪ್ರಧಾನವಾಗಿ ಮಕ್ಕಳನ್ನು ಯಾವ ರೀತಿಯಲ್ಲೂ ಪೋಷಿಸಲಾರದ

ಸಾಹಿತ್ಯ ರಚನೆ ವ್ಯರ್ಥವೇ ಸರಿ. ಮಕ್ಕಳಿಗೆ ಜೀವಸತ್ವ ನೀಡದ ಬೀದಿ ಬದಿಯ ನಾಲಿಗೆ ಚಪಲ ಹುಟ್ಟಿಸುವ ತಿನಿಸುಗಳಂತೆ ಅಂಥ ಸಾಹಿತ್ಯ ಕೃತಿಗಳೂ ಬಹುಬೇಗ ನಾಶವಾಗುತ್ತವೆ. ಅದೇ ಹೊತ್ತಿನಲ್ಲೇ, ಮರೆಯಬಾರದ ಮಾತೆಂದರೆ ನೀತಿಬೋಧೆಗಾಗಿ ಕೃತಕವಾಗಿ ಕಟ್ಟುವ ಕಥೆ, ಕವಿತೆಗಳೂ ಅಷ್ಟೇ ನಶ್ವರವಾದವು ಎಂಬುದು. ಈ ಎರಡರ ಸಮನ್ವಯವನ್ನು ಸಾಧಿಸುವುದೊಂದು ದೊಡ್ಡ ಹೋರಾಟ. ಅಂಥ ಯಶಸ್ಸು ಪಡೆದ ಕೆಲ ಕಥೆ, ಕವಿತೆಗಳ ನೇರ ಉದಾಹರಣೆಗಳಿಂದಲೇ ನಮ್ಮ ಗ್ರಹಿಕೆ ಸ್ಪಷ್ಟಗೊಂಡೀತೆಂದು ನನ್ನ ಭಾವನೆ.

ಮೊದಲಿಗೆ ಎಚ್.ಎಸ್. ವೆಂಕಟೇಶಮೂರ್ತಿಯವರ 'ಗುಬ್ಬಿ ಮರಿಯ ಹೊಸತರ್ಕ' ಪದ್ಯವನ್ನು ಓದೋಣ.

ಕಾಗೆ ಜೋಡಿ ಆಡು ನಿನ್ನ
ಕಾಲ್ ಮುರಿತೀನಿ ಅಂತು
ಅಮ್ಮ ಗುಬ್ಬಿ!
ಯಾಕಮ್ಮ ಹಾಗಂತಿ ಕಾಗೆಮರಿ ಜಾಣ ಮರಿ
ಆಡಿದ್ರೇನು ತಪ್ಪು ಅಂತು
ಗುಬ್ಬಿಮರಿ!
ಗುಬ್ಬಿಮರಿ ಗುಬ್ಬಿಮರಿ
ಜೋಡಿ ಮಾತ್ರ ಆಡ್ಕೊಬೇಕು
ಅಮ್ಮ ಗುಬ್ಬಿ ಹೇಳ್ತು
ಗುಬ್ಬಿಮರಿ ಕಾಗೆಮರಿ ಜೋಡಿ ಯಾಕೆ
ಆಡ್ಕೊ ಬಾರ್ದು?
ಮರಿಗುಬ್ಬಿ ಕೇಳ್ತು!
ಅಮ್ಮ ಗುಬ್ಬಿ ಯೋಚಿಸಿ ಹೇಳ್ತು;
ನೋಡು ಪುಟ್ಟ ಕಾಗೆಮರಿ ಕಾಳ್ಗಪ್ಪು, ನೀನು ಬಿಳಿ
ಅದರ ಜೋಡಿ ಆಡ್ತಾ ಇದ್ರೆ ನೀನು ಕೂಡ ಕರ್ರಗೆ
ಕರೀ ಕೊರಮ ಆಗ್ತಿ ನೋಡು, ನಂಗೇನಂತೆ?
ಅದಕ್ಕೆ...
ಪುಟಾಣಿ ಗುಬ್ಬಿ ತಟ್ಟನೆ ಹೇಳ್ತು
ಹೌದಲ್ಲಮ್ಮ ನಾನು ಬಿಳಿ, ಕಾಗೆ ಮರಿ ಕಾಳ್‌ಗಪ್ಪು
ನನ್ನ ಜೋಡಿ ಆಡ್ತ ಇದ್ರೆ ಕಾಗೆಮರಿ ಮಲ್ಲಿಗೆ
ಹೂವಿನ ಹಾಗೆ ಬೆಳ್ಳಗೆ
ಆಗತ್ ನೋಡು ಅದಕ್ಕೇ–
ಅಂತ ಪುರ್ರನೆ ಹಾರಿ ಹೋಯ್ತು ಕಾಗೆ ಜೋಡಿ ಆಡೋಕೆ!

– ಇದೊಂದು ಹೊಸ ಕಥೆಯನ್ನೇ ಕಟ್ಟಿರುವ ಕವಿತೆ. ಗುಬ್ಬಿ ಮರಿಯೊಂದು ತನ್ನ ತಾಯಿಯೊಡನೆ ಆಡುತ್ತಿರುವ ಮಾತುಕತೆ ಇದು. ಕಾಗೆಮರಿಯೊಡನೆ ಆಟವಾಡುತ್ತೇನೆ

ಎಂದು ಗುಬ್ಬಿಮರಿ, ಹಾಗೇನಾದರೂ ಆಟವಾಡಲು ಹೋದರೆ ಕಾಲು ಮುರಿಯುತ್ತೇವೆಂದು ತಾಯಿ ಗುಬ್ಬಿ. ಮರಿಗುಬ್ಬಿಗೆ ಆಶ್ಚರ್ಯ. 'ಯಾಕೆ ಕಾಗೆ ಮರಿ ಜೊತೆ ಆಟ ಆಡಬಾರದು?' ತಾಯಿ ಗುಬ್ಬಿಯದು ಪಕ್ಕಾ 'ಸಂಪ್ರದಾಯಸ್ಥ' ನಿಲುವು. 'ಗುಬ್ಬಿಮರಿ ಗುಬ್ಬಿ ಮರಿಯ ಜೊತೆ ಮಾತ್ರ ಆಟವಾಡಬೇಕು. ಮರಿಗುಬ್ಬಿ ಸುಮ್ಮನಿರಲಾರದು. ಅದು ಹೊಸಕಾಲದ ಶಿಶು. 'ಯಾಕೆ, ಯಾಕೆ ಆಟವಾಡಬಾರದು?' ಇದು ಮರಿಗುಬ್ಬಿಯ ಪ್ರಶ್ನೆ. ತಾಯಿಗುಬ್ಬಿ ಯೋಚಿಸಿ ಒಂದು ಉತ್ತರ ಹೇಳುತ್ತದೆ. "ನೋಡು, ಕಾಗೆ ಜೋಡಿ ಆಡಿದರೆ ನೀನೂ ಕಪ್ಪಾಗಿ ಹೋಗ್ತೀಯ, ಅಷ್ಟೇ". ತಕ್ಷಣ ಮರಿಗುಬ್ಬಿಗೆ ಹೊಸ ಯೋಚನೆ ಬಂತು. "ಅಲ್ಲಮ್ಮ, ನನ್ನ ಜೊತೆ ಅದು ಆಡಿದರೆ ನಾನೇಕೆ ಕಪ್ಪಾಗಬೇಕು? ನನ್ನ ಜೋಡಿ ಆಡಿ ಕಾಗೆಯೂ ಬೆಳ್ಳಗಾಗುತ್ತದೆ. ಅಂಥ ಆಟ ಆಡುತ್ತೀವಿ".

ಈ ಪುಟ್ಟ ಕವಿತೆಗಿಂತ ಚೆನ್ನಾಗಿ ನಾವು ವರ್ಣಭೇದದ ಅವಿವೇಕದ ಕುರಿತು ಬೇರಿನ್ನಾವ ಬಗೆಯಲ್ಲಾದರೂ ತಿಳಿಸಿಕೊಡಬಲ್ಲೆವೆ? ಇದೊಂದು ಕಥೆಯೂ ಹೌದು, ಕವಿತೆಯೂ ಹೌದು. ಇಲ್ಲಿ ಒಂದು ನೀತಿಯೂ ಇದೆ (ಆದರೆ ಅದು 'ನೀತಿಪಾಠ'ವಾಗಿಲ್ಲ). ಒಂದು ಹಾಡಬಲ್ಲ ಕವಿತೆಯಾಗಿಯೂ ತುಂಬ ಯಶಸ್ವಿಯಾಗಿರುವ ಈ ಕವಿತೆ ಮಕ್ಕಳಲ್ಲಿ ಹೃದ್ಗತವಾಗುಳಿದು, ನಾಳೆ ಅವರ ಬಾಳನ್ನು ನಡೆಸುವ ಮುಖ್ಯ ತಾತ್ವಿಕ ದೃಷ್ಟಿಕೋನವನ್ನೂ ಒದಗಿಸಬಲ್ಲಷ್ಟು ಅಂತಃಸತ್ವದಿಂದ ತುಂಬಿದೆ. ಮಕ್ಕಳ ಸಾಹಿತ್ಯದಲ್ಲಿ ಕಾವ್ಯರಸಿಕರು, ವಿದ್ವಾಂಸರು ಹುಡುಕುತ್ತಿರುವುದು ಇಂಥ ಸಹಜ-ಸಾಧ್ಯತೆಗಳನ್ನು. ಇದೇ ಕವಿಯ 'ಅಮ್ಮ ಗುಬ್ಬಿಯ ಲೋಕಜ್ಞಾನ' ಇನ್ನೊಂದು ಯಶಸ್ವೀ ಮಕ್ಕಳ ಪದ್ಯ. ಆ ಕವಿತೆಯಲ್ಲಿ ಮರಿಗುಬ್ಬಿ ತಾಯಿಯನ್ನು ಕೇಳುತ್ತದೆ: "ಅಮ್ಮಾ, ಹಾವು ಹೇಗಿರುತ್ತೆ?" ಗುಬ್ಬಿ ಅಮ್ಮ ಹಾವನ್ನು ವರ್ಣಿಸುತ್ತ ಹೋದಂತೆ ಮರಿಗುಬ್ಬಿಗೆ ಹಾವಿನ ಕುರಿತು ಕುತೂಹಲ ಬೆಳೆಯುತ್ತಲೇ ಹೋಗುತ್ತದೆ. ಹಾವು ಹಕ್ಕಿಮೊಟ್ಟೆಯನ್ನು ಇಡಿಇಡಿಯಾಗಿ ನುಂಗಿಬಿಡುತ್ತದೆ ಎಂದು ತಾಯಿ ಹೇಳಿದರೂ ಆ ಮಗು ಗುಬ್ಬಿಗೆ ಸಡಗರವೇ! "ಹಾವಿನ ಹೊಟ್ಟೆಯಲ್ಲಿ ಹಾಗಾದರೆ ಹಕ್ಕಿಮರಿ ಹುಟ್ಟಿಕೊಳ್ಳುವುದಲ್ಲವೆ!" ಎಂದು ಗುಬ್ಬಿಮರಿಯ ಹರ್ಷದ ಉದ್ಗಾರ. ಅದಕ್ಕೆ ತಾಯಿ ಹೇಳುವ ಮಾತಿದು.

ನಿಟ್ಟುಸಿರಿಡ್ತು ಅಮ್ಮ ಗುಬ್ಬಿ ಇಲ್ಲ ಚಿನ್ನಾರಿ
ಇನ್ನೂ ನಿನಗೆ ತಿಳೀದಮ್ಮ ಹಾವಿನ ಹುನ್ನಾರ
ಹಾವಿನ ಹೊಟ್ಟೆ ಸೇರಿದ್ಮೇಲೆ ಹೇಳೋದಿನ್ನೇನು?
ಹಾವಿನ ಮೊಟ್ಟೆ ಆಗ್ಬಿಡತ್ತೆ ಹಕ್ಕಿ ಮೊಟ್ಟೇನು!

ಇದೊಂದು ದುಃಖದ ಉದ್ಗಾರವಾಗಿರುವಂತೆಯೇ ಅಮ್ಮ ಗುಬ್ಬಿ ತನ್ನ ಮಗುವಿಗೆ ನೀಡುತ್ತಿರುವ ಲೋಕಜ್ಞಾನವೂ ಹೌದಲ್ಲವೆ? ಸೃಷ್ಟಿಶೀಲತೆಯನ್ನು ಸಂಹರಿಸುವ ದೈತ್ಯಶಕ್ತಿಯ ವಿನಾಶಕ ಸ್ವರೂಪದ ಕುರಿತೂ ಹೇಳುತ್ತಿರುವ ಈ ಕವಿತೆಯ ಅಂಥ ಸಾಧ್ಯತೆಗಳನ್ನು ಮಕ್ಕಳು ಬೆಳೆಯುತ್ತ ಅರಿತುಕೊಂಡಾರು. ಈಗ ಅವರಿಗೆ ಸ್ವಾರಸ್ಯವಾಗಿ ಕಾಣುವ ಸಾಲು: "ಹಾವಿನ ಮೊಟ್ಟೆ ಆಗ್ಬಿಡತ್ತೆ ಹಕ್ಕಿ ಮೊಟ್ಟೇನು" ಎಂಬುದು. "ಅರೇ, ಹೌದಲ್ಲವೇ?" ಎಂದು ಕಲ್ಪನೆಗೆ ನಿಲುಕದ ತರ್ಕವೊಂದನ್ನು ಈ ಕವಿತೆ ಹುಟ್ಟುಹಾಕುತ್ತದೆ.

ನಾಗೇಶ ಹೆಗಡೆಯವರ 'ಕೆರೆಯಲಿ ಚಿನ್ನ, ಕೆರೆಯೇ ಚಿನ್ನ' ಮಕ್ಕಳ ನೀಳ್ಗತೆ. ಪರಿಸರ

ಪ್ರಜ್ಞೆಯನ್ನು ಈ ಕಥೆ ಮೂಡಿಸುವ ಪರಿ ಆಕರ್ಷಕವಾಗಿದೆ. ತೊಂಡೂರಿನ ಕೆರೆಗೆ ಮಂಡೂಕರಾಜ ಅಧಿಪತಿ. ಕಥೆ ಶುರುವಾಗುವುದು ಅವನ ಒಡ್ಡೋಲಗದ ದೃಶ್ಯದಿಂದ. ಅವನ ಜಯಘೋಷ ಕೇಳಿ: "ರಾಜರ ರಾಜ! ಮೂರುಲೋಕದ ಗಂಡ! ಉಭಯವಾಸೀಪತಿ! ಬೃಹದ್ ಜಾಲ ಪಾದೇಶ್ವರ! ಮಂಡೂಕರಾಜ ಭೋ ಪರಾಕ್! ಭೋ ಪರಾಕ್!!...

ಇಂಥ ಕಪ್ಪೆರಾಜ ಈಗ ಚಿಂತೆಗೀಡಾಗಿದ್ದಾನೆ. ಕಾರಣ? "ನಮ್ಮ ಕೆರೆಯಲ್ಲಿ ನೀರು ದಿನಾ ಕಡಿಮೆ ಆಗ್ತಾ ಇದೆ. ಕೆರೆಯಲ್ಲಿ ಕಳೆ ತುಂಬಿದೆ. ಕೊಳೆ ತುಂಬಿದೆ. ಕೆಸರು ಹೂಳು ತುಂಬಿದೆ". ಇದಕ್ಕೆ ಪರಿಹಾರವನ್ನು ಎಲ್ಲ ಪ್ರಾಣಿಗಳೂ ಸೇರಿ ಯೋಚಿಸುತ್ತವೆ. "ಒಂದು ತಂಡದವರು ಈ ಕೆರೆಯನ್ನು ಚೊಕ್ಕಟ ಮಾಡಲಿ. ಇನ್ನೊಂದು ತಂಡದವರು ಹೋಗಿ ಮಳೆರಾಯನನ್ನು ಕರೆತರಲಿ" ಎಂದು ತೀರ್ಮಾನವಾಗುತ್ತದೆ. ಇಡೀ ನೀಳ್ಗತೆ ಕೆರೆಯನ್ನು ಚೊಕ್ಕಟ ಮಾಡಲು ಕರೀಮೀನು, ನೀರಾನೆ, ಏಡಿ, ನೀರುಕಾಗೆ, ಚಿಪ್ಪುಹಂದಿ ಮುಂತಾದ ಎಲ್ಲ ಪ್ರಾಣಿಗಳೂ ಮಾಡುವ ಸಾಹಸಗಳನ್ನು ನವಿರಾದ ಹಾಸ್ಯದಿಂದ ಬಣ್ಣಿಸುತ್ತದೆ. ಏಡಿರಾಯ ಕೆರೆಯನ್ನು ಮಲಿನ ಮಾಡುತ್ತಿದ್ದ ಭಟ್ಟರನ್ನು ಓಡಿಸಿದರೆ ಸುಬ್ಬನ ಗಾಳವನ್ನು ನೀರಾನೆ ಜಗ್ಗಿ ಅವನೇ ನೀರಿಗೆ ಬೀಳುವಂತೆ ಮಾಡುತ್ತವೆ. ಚಿಪ್ಪುಹಂದಿ, ಉಡಪ್ಪ, ಮಂಗಣ್ಣ ಸೇರಿ ಪಂಪ್‌ಸೆಟ್‌ಗಳನ್ನು ಢಮಾರ್ ಮಾಡುತ್ತವೆ! ಒಂದೊಂದೂ ಪ್ರಳಯಾಂತಕ ಉಪಾಯ! ಮಡಕೆಯ ರಾಮಣ್ಣ ಚಿನ್ನದ ಆಸೆಗಾಗಿ ಕೆರೆಯ ಹೂಳು ಮಣ್ಣು ಎತ್ತುವಂತೆ ಮಾಡಿದ್ದು ಬೆಳ್ಳಕ್ಕಿಯ ಜಾಣತನ! ಫ್ಯಾಕ್ಟರಿಯವರನ್ನು ಎಲ್ಲ ಪ್ರಾಣಿಗಳೂ ಸೇರಿ ಸರಿದಾರಿಗೆ ತಂದುದೇ ಒಂದು ಬೇರೆ ಕಥೆ.

ಇತ್ತ ಕಪ್ಪೆರಾಜ ದಂಡಯಾತ್ರೆ ಮಾಡಿ ಆಕಾಶರಾಯನನ್ನು ಕಾಣುತ್ತಾನೆ. ಆದರೆ ಆಕಾಶರಾಯ ಟಿ.ವಿ.ಯಲ್ಲಿ ಕ್ರಿಕೆಟ್ ಮ್ಯಾಚ್ ನೋಡುತ್ತಿದ್ದಾನೆ. ಕಪ್ಪೆರಾಜ ಅಂಜುತ್ತಾ "ನಮ್ಮ ತೊಂಡೂರು ಕೆರೆಗೆ ಮಳೆ ಬೇಕಿತ್ತು" ಎಂದರೆ ಆಕಾಶರಾಯ ಕೋಪಗೊಳ್ಳುತ್ತಾನೆ:

"ಹ್ಹ ಹ್ಹ ಮಳೆ! ಮಳೆ ಯಾರಿಗೆ ಬೇಕು? ಮನುಷ್ಯರೇ ಮಳೆಬೇಡ, ನಿಮಗ್ಯಾಕೆ ಬೇಕು? ಕಾಣ್ತಾ ಇಲ್ಲವಾ ಅಲ್ಲಿ ಕ್ರಿಕೆಟ್ ಮ್ಯಾಚ್ ನಡೀತಾ ಇದೆ. ಈಗ ಮಳೆ ಸುರಿಸಿದ್ರೆ ಜನರೆಲ್ಲ ನನಗೆ ಬಯ್ತಾರೆ. ನಡಿ ಆಚೆ!" ಆಕಾಶರಾಯ ಗದರಿದ.

ಕಪ್ಪೆರಾಯ ಆಕಾಶರಾಯನ ಮನವೊಲಿಸಲು ಸಮಾಧಾನದಿಂದಲೇ ಪ್ರಯತ್ನಿಸುತ್ತಾನೆ. ಆಗ ಆಕಾಶರಾಯ ಸೋಫಾದಿಂದ ಎದ್ದುಬಂದು ತನ್ನ ಟಿ.ವಿ. ಚಾನೆಲ್ ತಿರುಗಿಸಿ ಜಲಚಕ್ರದ ಕುರಿತು ವಿವರಿಸುತ್ತಾನೆ.

"ಈ ಚಕ್ರ ಚಲಿಸೋಕೆ ಜಗತ್ತಿನ ಎಲ್ಲ ಜೀವಿಗಳ ಸಹಕಾರ ಬೇಕು. ಆದರೆ ಈ ಮನುಷ್ಯ... ಕೆರೆಗಳನ್ನು ಹಾಳು ಮಾಡಿದ್ದಾನೆ. ಹೂಳು ತುಂಬಿದೆ. ಕಳೆ ಬೆಳೆದಿದೆ... ಮಳೆ ಸುರಿಸಿದ್ರೂ ಅದು ನೆಲಕ್ಕೆ ಇಂಗೋದೇ ಇಲ್ಲ."

"ಶುದ್ಧ ಮಳೆ ಸುರಿಯೋದಾದ್ರೆ ಎಲ್ಲಿ ಸುರೀಬೇಕು? ನೆಲ ಎಲ್ಲಿ ನೋಡಿದ್ರೂ ಕೊಳೆಯಾಗಿದೆ... ಮಳೆ ಸುರಿದ್ರೆ ಅದು ಆಸಿಡ್ ಮಳೆಯೇ ಆಗ್ತದೆ..."

ಕಪ್ಪೆರಾಜ ಸುಸ್ತಾಗಿ ಹೋದ. "ನಮ್ಮ ತೊಂಡೂರು ಕೆರೆ ತೋಯಿಸಿ" ಎಂದು ಬೇಡಿದ. ಏನಾಶ್ಚರ್ಯ! ಆಕಾಶರಾಯನಿಗೇ ನಂಬಲಾಗುತ್ತಿಲ್ಲ. ಕೆರೆಯ ನೀರು ಚೊಕ್ಕಟವಾಗಿತ್ತು. ಮತ್ತೆ, ಮತ್ತೆ ನೋಡಿ ಚೊಕ್ಕಟವಾಗಿರುವುದು ಖಾತ್ರಿ ಮಾಡಿಕೊಂಡ.

"ನೀರಾನೆ ಅಲ್ಲಿ ಬೆಳೆದಿದ್ದ ಜೊಂಡು ಹುಲ್ಲನ್ನೆಲ್ಲ ತಿಂದು ಮುಗಿಸಿ ದಡಕ್ಕೆ ಬರುತ್ತಿತ್ತು... ನೀರೆತ್ತುವ ಪಂಪ್‌ಗಳೆಲ್ಲ ಸ್ಥಗಿತವಾಗಿದ್ದವು... ಕೊಳೆ ನೀರಿನ ಕಾಲುವೆ ಒಣಗಿತ್ತು. ಕೆರೆಯಲ್ಲಿ ಲಾರಿ ತೊಳೆಯುವವರು ಇರಲಿಲ್ಲ... ಪಳಪಳ ಹೊಳೆಯುವ ಶುದ್ಧ ಸ್ಫಟಿಕ ನೀಲಿ ನೀರಿನ ಕೊಳದಂತಿತ್ತು..."

ಆಕಾಶರಾಯ ಖುಷಿಯಾಗಿ ಮಳೆಯಂತ್ರ ಚಾಲೂ ಮಾಡಲು ರಿಮೋಟ್ ಒತ್ತಿದ್ದೇ ಗುಡುಗು, ಸಿಡಿಲು, ಮಿಂಚು, ಅದೇ ಜಲಚಕ್ರ ಮತ್ತೆ ಆರಂಭವಾಯಿತು!

ಇದು ಸಂಕ್ಷಿಪ್ತವಾಗಿ ಈ ನವಿರು ವಿನೋದದ, ವಿಜ್ಞಾನದ ಪಾಠವನ್ನೂ ಹೇಳುವ ಕಥೆಯ ಸಾರಸಂಗ್ರಹ. ಮನುಷ್ಯನ ಸ್ವಾರ್ಥ, ದುಷ್ಟಲಾಲಸೆ, ಪ್ರಾಣಿಗಳ ಉಪಾಯ, ಅವುಗಳ ಸಂಘಟಿತ ಪ್ರಯತ್ನಕ್ಕೆ ಮನುಷ್ಯರೇ ಸೋಲುವುದು, ಆಕಾಶರಾಯನೆಡೆಗೆ ಕಪ್ಪೆರಾಜನ ಸೈನ್ಯದ ಜನಿತದ ನಡಿಗೆ, ಜಲಚಕ್ರದ ಮಹತ್ವ... ಹೀಗೆ ವಾಸ್ತವಕ್ಕೆ, ವಿಜ್ಞಾನಕ್ಕೆ ಕಲ್ಪಕತೆಯ ಮೋಹಕ ವಿಲಾಸಗಳನ್ನು ಬೆರೆಸಿ "ಕೆರೆಯೇ ಚಿನ್ನ" ಎಂಬ ತಿಳಿವಳಿಕೆಯನ್ನು ಒಡಮೂಡಿಸುವ ಯತ್ನ ಈ ಕಥೆಯಲ್ಲಿದೆ. ಪಂಚತಂತ್ರದ ಕಾಲದಿಂದಲೂ ಪ್ರಾಣಿಗಳ ಮೂಲಕ ಕಥೆ ಹೇಳುವ ತಂತ್ರ ನಮ್ಮ ಕಥೆಗಾರಿಕೆಯ ಪರಿಚಿತ ಕ್ರಮವೇ ಆಗಿದೆ. ಪರಿಸರದ ಕುರಿತು ಸಮಂಜಸ ಅರಿವು ಮೂಡಿಸಲು ಈ ತಂತ್ರ ಬಳಸಿ ಲೇಖಕರು ವಿಶಿಷ್ಟ ಯಶಸ್ಸು ಗಳಿಸಿರುವುದು ನಮ್ಮ ಮಕ್ಕಳ ಸಾಹಿತ್ಯಕ್ಕೊಂದು ಹೊಸ ಮಾದರಿ ಕಟ್ಟಿಕೊಟ್ಟಂತಾಗಿದೆ.

* * *

ಡಾ. ಹರಿಕೃಷ್ಣ ದೇವಸರೆ ಹಿಂದಿಯಲ್ಲಿ ಮಕ್ಕಳಿಗಾಗಿ ಮೂರುನೂರಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದವರು. ಹಿಂದಿಯಲ್ಲಿ ಮಕ್ಕಳ ಸಾಹಿತ್ಯದ ಕುರಿತು ಸಂಶೋಧನಾ ಅಧ್ಯಯನ ಮಾಡಿದ ಮೊದಲಿಗರೂ ಹೌದು. ಮಕ್ಕಳ ಸಾಹಿತ್ಯದ ಕುರಿತು ಅವರು ವ್ಯಕ್ತಪಡಿಸಿರುವ ವಿಚಾರಗಳನ್ನು ಆನಂದ ಪಾಟೀಲರು ತಮ್ಮದೊಂದು ಲೇಖನದಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. (ಹೀಗೆ ಖುಷಿ ಕೊಟ್ಟವು, ಪು. ೧೧೯-೧೩೩). ಕೆಳಗಿನ ಅವತರಣಿಕೆಗಳನ್ನು ಆ ಲೇಖನದಿಂದ ಆಯ್ದುಕೊಂಡಿದೆ.

"ಇಂದಿನ ಮಕ್ಕಳ ಸಾಹಿತ್ಯದ ಸ್ವರೂಪ ತೀರಾ ಹೊಸದು. ಅದು ಮನೋವಿಜ್ಞಾನವನ್ನಾಧರಿಸಿ ವಾಸ್ತವದ ಅರಿವಿನಲ್ಲಿ ಸೃಷ್ಟಿಯಾಗುವ ಬರಹ. ಅಲ್ಲಿ ನೀತಿ, ಉಪದೇಶಗಳಿಗೆ ಪ್ರತ್ಯಕ್ಷವಾಗಿ ಯಾವುದೇ ಉಪಸ್ಥಿತಿ ಇಲ್ಲ. ಇಂದಿನ ಮಕ್ಕಳು ತಮ್ಮ ಸುತ್ತಲಿನ ಬಣ್ಣ, ಬಣ್ಣದ ಜಗತ್ತನ್ನು ನೋಡಿಯೇ ಸಂತುಷ್ಟರಾಗುವುದಿಲ್ಲ. ಅವರು ಅದರ ವಿಶ್ಲೇಷಣಾತ್ಮಕ ತಿಳಿವಳಿಕೆಯನ್ನು ಅಪೇಕ್ಷಿಸುತ್ತಾರೆ."

"ನಾವಿನ್ನೂ ಪರಂಪರೆ ಮತ್ತು ಆಧುನಿಕತೆಯ ಸಂಘರ್ಷದಲ್ಲಿಯೇ ಉಳಿದಿದ್ದೇವೆ. ಆದರೆ ನಮ್ಮ ಮುಂದಿರುವ ಪೀಳಿಗೆ ವೇಗದಿಂದ ಮುಂದೆ ಸಾಗುತ್ತಿವೆ. ನಾವು ಅವರಿಗಾಗಿ ನಮ್ಮ ಚಿಂತನೆಯ ದಿಕ್ಕನ್ನು ಇನ್ನೂ ನಿರ್ದಿಷ್ಟಗೊಳಿಸುತ್ತಿಲ್ಲ. ಮಕ್ಕಳ ಆಸಕ್ತಿಗಳು, ಆಕಾಂಕ್ಷೆಗಳು, ತಿಳಿವಳಿಕೆಯ ಹಂಬಲಗಳು ಹಿಂದೆಂದಿಗಿಂತ ಇಂದು ಹೆಚ್ಚು ತೀವ್ರವಾಗಿ ಬದಲಾವಣೆಯನ್ನು ಅನುಭವಿಸುತ್ತಿವೆ... ಅವೇ ಪುರಾಣದ ಕತೆಗಳು, ಜನಪದ ಕತೆಗಳು, ನೀತಿ ಕತೆಗಳು ಮುದ್ರಣಗೊಂಡು ಬರುತ್ತಲೇ ಇವೆ... ಮೂಢನಂಬಿಕೆ, ಪರಂಪರಾಗತ ವಿಚಾರಧಾರೆಯಲ್ಲಿ ಮಕ್ಕಳಿಗೆ ಈಗ ಎಳ್ಳಷ್ಟೂ ವಿಶ್ವಾಸವಿಲ್ಲ... ಇಂದಿನ ವಾತಾವರಣ, ಇಂದಿನ ಜೀವನ ಮೌಲ್ಯಗಳನ್ನು ಹರುಹುವ ಸಾಹಿತ್ಯ ಬೇಕಾಗಿದೆ."

"... ಮಕ್ಕಳು ತಮ್ಮ ಮನಸ್ಸಿನ ಅಭಿವ್ಯಕ್ತಿಯನ್ನು ಕಾಣುವಂಥ ತಮ್ಮದೇ ಆದ ಭಾಷೆಯಲ್ಲಿ ಸ್ವೀಕರಿಸುವಂತೆ, ತಾವು ಅನುಭವಿಸುವ ಸಮಸ್ಯೆಗಳು ಉಪಾಯ ಹುಡುಕಿಕೊಳ್ಳುವಂತೆ, ಪಾತ್ರಗಳೊಡನೆ ತಾದಾತ್ಮ್ಯ ಹೊಂದುವಂತೆ ಸೃಷ್ಟಿಯಾದಾಗ ಮಾತ್ರ ಅದನ್ನು ಮಕ್ಕಳ ಸಾಹಿತ್ಯ ಎಂದು ಗುರುತಿಸಬಹುದು"

ಕಲ್ಪಿತ ಅತಿವಾಸ್ತವದ ಕೃತಿಗಳಿಗಿಂತಲೂ ವಾಸ್ತವಿಕತೆಯನ್ನಾಧರಿಸಿ ಬರೆದ ಕೃತಿಗಳೇ ಮಕ್ಕಳನ್ನು ದಯಾಳು ಹಾಗೂ ಚತುರರನ್ನಾಗಿಸಬಲ್ಲವು ಎಂಬ ದೇವಸರೆಯವರ ವಿಚಾರ ಚರ್ಚಾಸ್ಪದವಾದುದು. ಹ್ಯಾರಿಪಾಟರ್ ಕಥಾಸಂಪುಟಗಳ ವಿಶ್ವವಿಖ್ಯಾತಿ ದೇವಸರೆಯವರ ವಿಚಾರಗಳಿಗಿಂತ ಭಿನ್ನವಾದುದೊಂದು ಚಿಂತನಾಸರಣಿಗೆ ನಮ್ಮನ್ನು ತೊಡಗಿಸುವಂತಿದೆ.

ಹ್ಯಾರಿ ಪಾಟರ್ ಕಥಾಸರಣಿ ಒಟ್ಟು ಏಳು ಪುಸ್ತಕಗಳಲ್ಲಿ ಹರಡಿಕೊಂಡಿದೆ. ವಿಶ್ವಾದ್ಯಂತ ಮಕ್ಕಳನ್ನು ತುದಿಗಾಲಲ್ಲಿ ನಿಂತು ಕಾಯುವಂತೆ ಮಾಡಿದ ಈ ಕೃತಿಯ ಶಕ್ತಿಯ ರಹಸ್ಯ ಎಲ್ಲಿದೆ? ಬ್ರಿಟಿಷ್ ಪ್ರಧಾನಿ ಗೊರ್ಡನ್ ಬ್ರೌನ್, ಜಗತ್ತಿನಲ್ಲಿ ಸಾಕ್ಷರತೆಗಾಗಿ ಯಾವೊಬ್ಬ ವ್ಯಕ್ತಿಯೂ ಇದುವರೆಗೆ ಮಾಡಿರಬಹುದಾದ ಕೆಲಸಕ್ಕಿಂತ ಈ ಕೃತಿಯ ಲೇಖಕಿ ಜೆ.ಕೆ. ರೌಲಿಂಗ್ ಕಾರ್ಯ ದೊಡ್ಡದು ಎಂದು ಶ್ಲಾಘಿಸಿದ್ದಾರೆ. "ಮಕ್ಕಳನ್ನು ಓದಲು ತವಕಿಸುವಂತೆ ಮಾಡುವ ಯಾರನ್ನೇ ಅಗಲಿ ಗೌರವಿಸಬೇಕು. ಈ ಲೇಖಕಿ ಆ ನಿಟ್ಟಿನಲ್ಲಿ ದೊಡ್ಡ ಮೋಡಿಯನ್ನೇ ಮಾಡಿದ್ದಾರೆ" ಎಂಬ ಚಾರ್ಲಿ ಗ್ರಿಫಿತ್ಸ್‌ರ ನುಡಿ ಈ ಕೃತಿಯ ಬರಹಗಾರ್ತಿಗೆ ಸಿಕ್ಕ ಇನ್ನೊಂದು ದೊಡ್ಡ ಹೊಗಳಿಕೆಯ ಮಾತು. ಈ ಇಡೀ ಕಥೆ ಮಾಂತ್ರಿಕ ಜಗತ್ತಿನದು. ಅಲ್ಲಿಯ ದುಷ್ಟ ಶಕ್ತಿ ಮತ್ತು ಒಳ್ಳೆಯ ಶಕ್ತಿಗಳ ನಡುವೆ ಸಿಕ್ಕು ಹೋರಾಡುವ ಹ್ಯಾರಿ ಎಂಬ ಹುಡುಗನ ಕಥೆ ವಿಶ್ವದೆಲ್ಲೆಡೆ ಮಕ್ಕಳಿಗೆ ಆಪ್ಯಾಯಮಾನವೆನ್ನಿಸಿದೆ. ಕಥೆ ಹೇಳುವ, ಸೃಷ್ಟಿಸುವ ಮಾಂತ್ರಿಕರ ಜಗತ್ತು ಒಂದು ಕಲ್ಪಿತ ಲೋಕ. ದೇವಸರೆಯವರ ವಾದವನ್ನು ಒಪ್ಪುವುದಾದರೆ ಇಂದು ಅತ್ಯಂತ ಅಪ್ರಸ್ತುತ, ಅಸಂಬದ್ಧ ಎಂದು ನಾವು ತಿಳಿಯಬೇಕಾದ ಅವಾಸ್ತವಿಕ ಸಂಗತಿಗಳ, ಘಟನೆಗಳ ಲೋಕವಿದು. ಆ ಜಗತ್ತಿನೊಳಗೆ ಹುಟ್ಟುವ ಸಂಘರ್ಷ, ತಂದೆ ತಾಯಿಯರನ್ನು ಕಳೆದುಕೊಂಡ ಹ್ಯಾರಿಯ ಕುರಿತ ಅನುಕಂಪ, ಕೊನೆಗೂ ಒಳ್ಳೆಯವರ ಗೆಲುವನ್ನೇ ಸಾಧಿಸುವಲ್ಲಿ ಹೆಜ್ಜೆಹೆಜ್ಜೆಗೆ ಎದುರಾದ ಕಷ್ಟಕೋಟಲೆ... ಇವೆಲ್ಲ ರೋಚಕ ಓದಿಗೆ ಕಾರಣವಾಗಿರಬೇಕು. ಮಾಂತ್ರಿಕ ಶಾಲೆ, ಕಲ್ಲು ಹರಳಿನ ನಿಗೂಢತೆ, ರಹಸ್ಯಕೋಣೆಯ ಕೌತುಕ, ಚಿತ್ರವಿಚಿತ್ರ ಸ್ಥಳಗಳ

ವರ್ಣನೆ... ಮಕ್ಕಳ ಕುತೂಹಲದ ಬಾಗಿಲುಗಳನ್ನು ತೆರೆಯುತ್ತಾ ಹೋಗಿರಲು ಸಾಕು. ಡಾ. ದೇವಸರೆ ಬಯಸಿದಂತೆ ಈ ಲೇಖಕಿ ಇಂದಿನ ಮಕ್ಕಳ ಅಗತ್ಯವನ್ನು ಊಹಿಸಿಯೇ ಬರೆದಿದ್ದಾರೆ. ಇಲ್ಲವಾದರೆ ಇಷ್ಟೊಂದು ಜಗದ್ವಿಖ್ಯಾತಿ ಸಾಧ್ಯವಿತ್ತೇ? ಈ ಕೃತಿಯ ಗೆಲುವು ಮಕ್ಕಳ ಮನಸ್ಸಿನಲ್ಲಿ ಕಲ್ಪನಾಲೋಕದ ಸಾಧ್ಯತೆಗಳತ್ತ ಇನ್ನೂ ಒಲವಿದೆ ಎಂಬುದನ್ನೇ ಸೂಚಿಸುವಂಥದು. ಅತಿವಾಸ್ತವದ ಇಂಥ ಪಾತ್ರಗಳೊಡನೆ ವಿವಿಧ ದೇಶ, ಪ್ರದೇಶಗಳ ಮಕ್ಕಳು ತಾದಾತ್ಮ್ಯ ಬೆಳೆಸಿಕೊಂಡರಲ್ಲವೆ? 'ಅದೇ ಪುರಾಣದ ಕಥೆ', 'ಅದೇ ನಂಬಿಕೆ, ಅಂಧವಿಶ್ವಾಸಗಳ ಕಥೆ'ಯನ್ನೇ ಹಂದರವಾಗಿ ಬಳಸಿ ಒಳಿತಿನ ಗೆಲುವನ್ನು ಸಾಧಿಸುವ ಮೂಲಕ ಮನುಷ್ಯನ ಮನಸ್ಸಿನ ಒಂದು ಶಾಶ್ವತ ಅಪೇಕ್ಷೆಯನ್ನು ಈ ಲೇಖಕಿ ಮೀಟಿದ್ದಾರೆ ಎಂಬುದೇ ಸೂಕ್ತ ವಿವರಣೆಯಾದೀತು.

* * *

ಪ್ರಾಯಶಃ "ಈ ಸಾಹಿತ್ಯ ಕೃತಿಯು ಜೀವಪರವಾದುದೇ, ಜೀವವಿರೋಧಿಯಾದುದೇ?" ಎಂಬ ಮುಖ್ಯ ಪ್ರಶ್ನೆಗೆ ಸಮರ್ಥವಾಗಿ ಉತ್ತರಿಸಬಲ್ಲ ಯಾವುದೇ ಕೃತಿಯೂ ಆರೋಗ್ಯಪೂರ್ಣವಾದುದು, ವೈಚಾರಿಕ ನಿಲುವುಗಳ ದೃಷ್ಟಿಯಿಂದ ನಮ್ಮ ಮಕ್ಕಳಿಗೆ ಪ್ರಸ್ತುತವೂ, ಪ್ರಯೋಜನಕಾರಿಯೂ ಆದುದೆಂದು ನಾವು ಸರಳವಾಗಿ ತೀರ್ಮಾನಿಸಬಹುದು. ಆದರೆ ಈ 'ಗುಣಮಟ್ಟದ ಪರೀಕ್ಷೆ' (Quality Test) ತುಂಬ ಕಷ್ಟದ್ದು. ಪುಣ್ಯಕೋಟಿಯ ಕಥೆ, ಬೊಮ್ಮನಹಳ್ಳಿ ಕಿಂದರಿಜೋಗಿ, ಇಸೋಪನ ಕಥೆಗಳು, ರಾಮಾಯಣ, ಮಹಾಭಾರತದ ಕಥೆಗಳು, ಪಂಚತಂತ್ರ, ಹಿತೋಪದೇಶದ ಕಥೆಗಳು... ಇವೆಲ್ಲ ಕಾಲದ ಪರೀಕ್ಷೆ ಗೆದ್ದ ಕೃತಿಗಳು. ಪಂಜೆ, ರಾಜರತ್ನಂ, ದಿನಕರ ದೇಸಾಯಿ, ಹೊಯಿಸಳ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಎಚ್.ಎಸ್. ವೆಂಕಟೇಶಮೂರ್ತಿ, ಸುಮತೀಂದ್ರ ನಾಡಿಗ, ಚಂದ್ರಶೇಖರ ಕಂಬಾರ, ತಿರುಮಲೇಶ್, ಪ. ಸೀತಾರಾಮಭಟ್ಟ, ಮೇವುಂಡಿ ಮಲ್ಲಾರಿ... ಇವರೆಲ್ಲ ಬರೆದಿರುವ ಕಥೆ, ಕವಿತೆ, ನಾಟಕಗಳು ಆರೋಗ್ಯಪೂರ್ಣ ವ್ಯಕ್ತಿತ್ವಕ್ಕೆ ಪೋಷಕವಾಗಬಲ್ಲ ಜೀವಸತ್ವಗಳನ್ನೊಳಗೊಂಡಿವೆ. ಆರ್.ವಿ. ಭಂಡಾರಿಯವರ 'ಯಶೋವಂತನ ಯಶೋಗೀತ' ಕರಾವಳಿಯ ಬಡಹುಡುಗನೊಬ್ಬನ ಜೀವನದ ಸಾಹಸ, ಸಾಧನೆಗಳ ಚಿತ್ರಣ. ಎಚ್ಚೆಸ್ವಿಯವರ 'ಚಿನ್ನಾರಿಮುತ್ತ' ಸಹ ಈ ಸಂದರ್ಭದಲ್ಲಿ ವಿಶೇಷವಾಗಿ ಪ್ರಸ್ತಾಪಿಸಲೇಬೇಕಾದ ಕಾದಂಬರಿ. ಹಳ್ಳಿಗಾಡಿನ ಹುಡುಗನೊಬ್ಬನು ಶ್ರೇಷ್ಠ ಓಟಗಾರನಾಗಿ ವಿಕಾಸಗೊಳ್ಳುವುದನ್ನು ಹೇಳುವ ಈ ಮಕ್ಕಳ ಕಾದಂಬರಿ ಎಳೆಯರಿಗೆ ಪ್ರೇರಕ ಆದರ್ಶಗಳನ್ನು ನೀಡಬಲ್ಲಷ್ಟು ಸತ್ವಶಾಲಿಯಾಗಿದೆ. ನಾ. ಕಸ್ತೂರಿಯವರ 'ಪಾತಾಳದಲ್ಲಿ ಪಾಪಚ್ಚಿ', ರಾಜಶೇಖರ ಭೂಸನೂರಮಠರ ಫ್ಯಾಂಟಸಿ ಕಥೆ ಕಾದಂಬರಿಗಳು, ಜಂಬುನಾಥ್ ಅವರ 'ಅಂತರಿಕ್ಷದಲ್ಲಿ ಪುಟಾಣಿಗಳು', ಎಸ್.ವಿ. ಶ್ರೀನಿವಾಸರಾವ್‌ರ 'ಅದ್ಭುತ ಸೃಷ್ಟಿ', ಮಕ್ಕಳ ಕಲ್ಪನಾಶಕ್ತಿಯ ವಿಕಸನಕ್ಕೆ ನೆರವಾಗಬಲ್ಲವು. ಶಶಿಧರ ವಿಶ್ವಾಮಿತ್ರ, ನಾಗೇಶ ಹೆಗಡೆ ಮುಂತಾದವರ ಕೃತಿಗಳಲ್ಲಿ ಅರಳುವ ಪರಿಸರ ಪ್ರೀತಿ ಮಕ್ಕಳ ವ್ಯಕ್ತಿತ್ವವನ್ನು ಪೋಷಿಸುವಂಥದು.

ಈ ದಿಕ್ಕಿನಲ್ಲಿ ನಮ್ಮ ಹೊಸ ಬರಹಗಾರರ ಕಾರ್ಯವೂ ವಿಶೇಷವಾಗಿ ಪ್ರಸ್ತಾಪಿಸಲೇಬೇಕಾದಂಥದು. ಆನಂದ ಪಾಟೀಲ ಸ್ವತಃ ಕವಿತೆ, ಕಥೆ ಬರೆದಿರುವದಷ್ಟೇ ಅಲ್ಲ, ಮಕ್ಕಳ ಸಾಹಿತ್ಯದ ಕುರಿತು ಕಾಳಜಿಯುಳ್ಳ ಅನೇಕ ಲೇಖನಗಳನ್ನೂ ಪ್ರಕಟಿಸುತ್ತ ಬಂದಿದ್ದಾರೆ.

ಶ್ರೀನಿವಾಸ ಉಡುಪ, ಟಿ.ಎಸ್. ನಾಗರಾಜಶೆಟ್ಟಿ, ಕೃಷ್ಣಮೂರ್ತಿ ಬಿಳಿಗೆರೆ, ವಿಷ್ಣು ನಾಯ್ಕ, ತಮ್ಮಣ್ಣ ಬೀಗಾರ, ನಿರ್ಮಲಾ ಸುರತ್ಕಲ್, ರಾಧೇಶ ತೋಳ್ಪಾಡಿ ಮುಂತಾಗಿ ಹಿರಿಕಿರಿಯ ಬರಹಗಾರರ ಒಂದು ದೊಡ್ಡ ಯಾದಿಯನ್ನೇ ಇಲ್ಲಿ ನೀಡಬಹುದು. ಇಲ್ಲೆಲ್ಲ ಕೆಲ ಸಲ ವಾಚ್ಯವಾಗಿಯೇ ವೈಚಾರಿಕ ನಿಲವುಗಳು ಪ್ರಕಟಗೊಂಡಿದ್ದೂ ಇದೆ. ಮುಖ್ಯವಾದುದೆಂದರೆ ಅನೇಕ ಪ್ರತಿಭಾವಂತ ಮನಸ್ಸುಗಳು ಬಾಲಸಾಹಿತ್ಯದ ಸೃಷ್ಟಿಗಾಗಿ ಕ್ರಿಯಾಶೀಲವಾಗಿರುವುದು. ಅನೇಕ ಇಂಥ ಬರಹ, ಪ್ರಯತ್ನಗಳ ಮೂಲಕ ಮಕ್ಕಳಲ್ಲಿ ಓದುವ, ಯೋಚಿಸುವ ಅಭಿರುಚಿ ಬೆಳೆಸುವ ಮಹಾನ್ ಸಾಹಸ ರೂಪುಗೊಳ್ಳಬೇಕಾಗಿದೆ.

ಈ ಹಂತದಲ್ಲಿ ನಮ್ಮ ಬರಹಗಾರರು, ಬರಹಗಳು ಹೊಂದಿರಬೇಕಾದ ಜೀವಪರ ನಿಲವುಗಳ ಪುಟ್ಟ ಯಾದಿಯೊಂದನ್ನು ರಚಿಸಬಹುದು. ಇದೇನೂ ಅಂತಿಮವಾದ ಪಟ್ಟಿಯಲ್ಲ. ಒಟ್ಟಾರೆಯಾಗಿ ಈ ಪ್ರಬಂಧದಲ್ಲಿ ಪ್ರತಿಪಾದಿಸಿಕೊಂಡು, ಬೆಳೆಸಿಕೊಂಡು ಬರಲಾದ ಚಿಂತನೆಯನ್ನಾಧರಿಸಿ ಸಿದ್ಧಪಡಿಸಿರುವ ಯಾದಿಯಿದು. ಹಾಗಿದ್ದೂ ಈ ಅಂಶಗಳು ಸಾಹಿತ್ಯ ಕೃತಿಯಲ್ಲಿ ರಕ್ತಗತ ಅನುಭವವಾಗಿ ಮೂಡಿಬರಬೇಕೇ ಹೊರತು, ಈ ನಿಲವುಗಳ, ಸಿದ್ಧಾಂತಗಳ ಸಮರ್ಥನೆಗೋ, ಪ್ರತಿಪಾದನೆಗೋ ಕಟ್ಟಿದ ಬರಹಗಳು ಅಂತಿಮವಾಗಿ ಅತ್ಯುತ್ತಮ, ಶ್ರೇಷ್ಠ ಸಾಹಿತ್ಯ ಕೃತಿಗಳಾಗಿ ಉಳಿಯಲಾರವು ಎಂಬುದನ್ನೂ ನೆನಪಿಡಬೇಕು.

೧. ಮನುಷ್ಯರನ್ನು ಜಾತಿ, ವರ್ಣ, ವರ್ಗ, ಮತಗಳ ಆಧಾರದಲ್ಲಿ ಒಡೆಯುವ, ಬೇರೆ ಮಾಡುವ, ಶ್ರೇಣಿಗಳನ್ನು ರಚಿಸುವ ಅಥವಾ ಇಂಥ ಪ್ರವೃತ್ತಿಗಳನ್ನು ಪ್ರೋತ್ಸಾಹಿಸುವ ಸಾಹಿತ್ಯ ಕೃತಿಗಳು, 'ಜೀವಪರ'ವಲ್ಲ. ಬದಲಾಗಿ, ಈ ಎಲ್ಲ ಮನುಷ್ಯ ನಿರ್ಮಿತ ಭೇದಭಾವಗಳನ್ನು ತೊಡೆಯುವ, 'ನಾವೆಲ್ಲರೂ ಒಂದೇ' ಎಂಬುದನ್ನು ಮನಗಾಣಿಸುವ ಸಾಹಿತ್ಯ ಜೀವಪರವಾದುದು. "ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ?" ಎಂಬ ಸರ್ವಜ್ಞನ ತ್ರಿಪದಿಯ ಸಾಲು, "ಕುಲ ಕುಲ ಕುಲವೆನ್ನುತಿಹರು" ಎಂಬ ಕನಕದಾಸರ ಹಾಡಿನ ಸಾಲು ಮನಮುಟ್ಟುವ ಬಗೆಯನ್ನೊಮ್ಮೆ ಇಲ್ಲಿ ನೆನೆಯಬಹುದು.

೨. ಯಾವುದೇ ಬಗೆಯ ವೈಕಲ್ಯವನ್ನು (ಕುರುಡು, ಕಿವುಡು, ಬುದ್ಧಿಮಾಂದ್ಯತೆ ಮುಂ.) ಹಾಸ್ಯ ಮಾಡುವ ಬರಹಗಳು ಅನಾರೋಗ್ಯಕರ. ಬದಲಾಗಿ "ದಯೆಯೇ ಧರ್ಮದ ಮೂಲವಯ್ಯಾ" ಬಗೆಯ ವಚನಗಳ ಮೂಲಕ ಅಸಹಾಯಕರ, ದುರ್ಬಲರ ಕುರಿತು ಬೆಳೆಸಿಕೊಳ್ಳಬೇಕಾದ ಸಹಾನುಭೂತಿಯ ಕುರಿತು ಮಕ್ಕಳಿಗೆ ಮನದಟ್ಟಾಗಬೇಕು.

೩. ಹೆಣ್ಣಿನ ಕುರಿತು ಆದರಪೂರ್ಣ ದೃಷ್ಟಿ ಬೆಳೆಯುವಂತೆ ಯತ್ನಿಸಬೇಕು. ವಿವಿಧ ಕ್ಷೇತ್ರಗಳಲ್ಲಿ ಸ್ತ್ರೀಯರು ಗೈದಿರುವ ಸಾಧನೆಗಳನ್ನು ಕುರಿತು ಬರೆಯುವುದರಿಂದ ಸಹಜವಾಗಿಯೇ ಮಹಿಳೆಯರು ಅಬಲೆಯರಲ್ಲ ಎಂಬ ವಿವೇಕ ಬೆಳೆಯುತ್ತದೆ. ಇಂಥ ಗ್ರಹಿಕೆಗಳು ಗಂಡುಮಕ್ಕಳಲ್ಲೂ ಇರಬಹುದು. ಹೆಣ್ಣುಮಕ್ಕಳಲ್ಲೂ ಇರಬಹುದು. ಬೆಳೆಯುವ ಮಕ್ಕಳಲ್ಲಿ ಇಂಥ ತಪ್ಪು ಭಾವನೆಗಳು ಹುಟ್ಟದಂತೆ, ಬೆಳೆಯದಂತೆ ನೋಡಿಕೊಳ್ಳುವುದು ಅಗತ್ಯ.

೪. ಎಲ್ಲ ಬಗೆಯ ಕೀಳರಿಮೆಯಿಂದ ಮಕ್ಕಳು ಬಿಡುಗಡೆ ಪಡೆಯಲು ಸಹಾಯಕವಾಗಬಲ್ಲ ಸಾಹಿತ್ಯ ಅವಶ್ಯಕ.

೫. ಪ್ರಗತಿಪರ, ವೈಜ್ಞಾನಿಕ ದೃಷ್ಟಿಕೋನ ಬೆಳೆಸಿಕೊಳ್ಳುವಂತೆ, ಎಲ್ಲ ಬಗೆಯ ಮೂಢನಂಬಿಕೆಗಳು, ಅಪನಂಬಿಕೆಗಳನ್ನು ತ್ಯಜಿಸುವಂತೆ ಮಕ್ಕಳಿಗೆ ತಿಳಿಹೇಳುವ, ತಿಳಿಯಾಗಿ ಹೇಳುವ ಸಾಹಿತ್ಯ ಅಗತ್ಯ.

೬. ಸಾಹಸ ಪ್ರವೃತ್ತಿಗೆ ಉತ್ತೇಜನ ನೀಡುವಂತಿರಬೇಕು.

೭. ಕಲ್ಪನಾಶಕ್ತಿಯ ವಿಕಾಸ ನಮ್ಮ ಜೀವನದಲ್ಲಿ ಭಾವ, ಬುದ್ಧಿಗಳೆರಡೂ ಮಹತ್ವದವು. ಈ ಎರಡರ ಬೆಳವಣಿಗೆಯನ್ನೂ ಸಾಧಿಸಲು ನಮ್ಮ ಸಾಹಿತ್ಯ ನೆರವಾಗಬೇಕು. ವೈಚಾರಿಕ ಬೆಳವಣಿಗೆಯಲ್ಲಿ ಊಹನೆ, ಸೃಜನೆ, ಕಲ್ಪನೆಗಳಿಗೂ ದೊಡ್ಡ ಪಾಲಿದೆ. ಲೋಕಸತ್ಯದಂತೆಯೇ 'ಭಾವಸತ್ಯ'ವೂ ಒಂದಿದೆ. ಈ ಎರಡರ ಸಮನ್ವಯ ಸಾಧಿಸಬೇಕು.

೮. ಮಕ್ಕಳಲ್ಲಿ ಸೃಷ್ಟಿಶೀಲತೆಯನ್ನು ಉದ್ದೀಪಿಸುವ ಸಾಹಿತ್ಯ ಬೇಕು.

೯. ಈ ಎಲ್ಲ ತಿಳಿವಳಿಕೆಗಳೂ ಮಕ್ಕಳ ಸಾಹಿತ್ಯ ಕೃತಿಯಲ್ಲಿ ಅನುಭವವಾಗಿ ಬರಬೇಕು. 'ಅನುಭವ'ವಾಗಿ ಅರಳದ ವೈಚಾರಿಕ ನಿಲವುಗಳು ಸಾಹಿತ್ಯ ಕೃತಿಗೂ ಭಾರ, ಮಕ್ಕಳಿಗೂ ದೂರ!

* * *

ಮಕ್ಕಳ ಸಾಹಿತ್ಯ ಸಂಕಲನಗಳು

– ಡಾ. ಬಸು ಬೇವಿನಗಿಡದ

ಮಕ್ಕಳ ಸಾಹಿತ್ಯಕ್ಕೆ ಸಿಗಬೇಕಾಗಿದ್ದ ವ್ಯಾಪಕ ಆಳ ವಿಸ್ತಾರಗಳು ಸಿಗದಿರುವುದು ಹಾಗೂ ಅದು ಅಷ್ಟೇನೂ ಮಹತ್ವದ್ದಲ್ಲವೆಂಬ ಭಾವನೆ ಮನೆ ಮಾಡಿರುವುದು, ಅದರ ಅಧ್ಯಯನ ಹಾಗೂ ಆಯ್ದ ಸಂಕಲನಗಳ ಕೊರತೆಗೆ ಕಾರಣವಾಗಿದೆ. ಈ ಪರಿಸ್ಥಿತಿಯ ಕನ್ನಡದಲ್ಲಿ ಮಾತ್ರ ಎಂದು ಭಾವಿಸಬೇಕಾಗಿಲ್ಲ. ಬಹುಷಃ ರಶಿಯನ್ ಮತ್ತು ಇಂಗ್ಲೀಷ್ ಭಾಷೆಗಳನ್ನು ಹೊರತು ಪಡಿಸಿ ಬಹುತೇಕ ಭಾಷೆಗಳ ಸಾಹಿತ್ಯಗಳು ಮಕ್ಕಳ ಸಾಹಿತ್ಯದ ಪ್ರಕಾರವನ್ನು ಉಪೇಕ್ಷೆ ಮಾಡಿದ್ದನ್ನು ಕಾಣುತ್ತೇವೆ. ಮರೆಗೆ ಸರಿದು ಹೋಗದಿರಲೆಂದು ಅನೇಕ ಪಠ್ಯಗಳನ್ನು ಗುರುತಿಸುವ ಕಲಸ ಯಾವುದೇ ವಿಶಿಷ್ಟತೆಗಳನ್ನು ಗುರುತಿಸುವ ಕೆಲಸ, ಯಾವುದೇ ಸಾಹಿತ್ಯದಲ್ಲಿ ನಿರಂತರವಾಗಿ ನಡೆಯುತ್ತಿದ್ದರೆ ಮಾತ್ರ ಸೃಜನಶೀಲತೆಯ ಸಾತತ್ಯ ಭದ್ರವಾಗಿರುತ್ತದೆ. ನೂರು ವರ್ಷದ ಇತಿಹಾಸ ಇರುವ ಕನ್ನಡದ ಸಂದರ್ಭದಲ್ಲಿ ಮಹತ್ವವೆನಿಸುವ ಕೆಲವು ಪಠ್ಯಗಳಾದರೂ ಸಂಕಲನಗೊಂಡಿರುವುದು ಒಂದು ಒಳ್ಳೆಯ ಬೆಳವಣಿಗೆಯಾಗಿದೆ.

ಸಿಸು ಸಂಗಮೇಶ ಅವರು 'ಪುಟಚೆಂಡು' ಎನ್ನುವ ಹೆಸರಿನಲ್ಲಿ ಆಗಿನ ದಿಗ್ಗಜರ ಕವಿತೆಗಳನ್ನು ಸಂಗ್ರಹಿಸುವ ಮೂಲಕ ಮೊಟ್ಟಮೊದಲಬಾರಿಗೆ ಒಂದು ಚಾರಿತ್ರಿಕ ಕೆಲಸ ನಿರ್ವಹಿಸಿದರು. ಮಕ್ಕಳ ಸಾಹಿತ್ಯವೆಂದರೆ ತಾತ್ಸಾರ ಮನೋಭಾವ ತೋರುತ್ತಿದ್ದ ಸಂಕಷ್ಟದ ಕಾಲದಲ್ಲಿ ಅವರು ಕುವೆಂಪು, ಬೇಂದ್ರೆ, ಈಶ್ವರ ಸಣಕಲ್ ಮುಂತಾದ ಹಿರಿಯ ಲೇಖಕರನ್ನು ಒಂದೆಡೆಗೆ ತಂದರು. ಅಗಿನ ಕಾಲದ ಮಕ್ಕಳ ಲೇಖಕರೆದುರು ಅದನ್ನು ಮಾದರಿಯಾಗಿ ಇಟ್ಟರು. ಹಿರಿಯ ಹಾಗೂ ಹೊಸ ಕವಿಗಳನ್ನು ಒಳಗೊಂಡ 'ಪುಟ ಚೆಂಡು ಭಾಗ ಒಂದು, ಮತ್ತು ಭಾಗ ಎರಡು' ಸಂಕಲನಗಳು ಪ್ರಾದೇಶಿಕ ವೈವಿಧ್ಯದೊಂದಿಗೆ ನಮ್ಮ ಗಮನ ಸೆಳೆಯುತ್ತವೆ. ಲೇಖಕರಿದ್ದಕಡೆ ಸಂಪಾದಕರು ಪ್ರಯಾಣಿಸಿ, ಅವರಿಗೆ ನೆನಪೋಲೆ ಬರೆದು, ಹಸ್ತ ಪ್ರತಿ ತರಿಸಿಕೊಂಡು ಸಂಕಲನ ಸಂಪಾದಿಸಿದರು. ಈ ಕವಿತೆ ಮತ್ತು ಕತೆಗಳಿಗಾಗಿ ಅವರು ದೂರದ ಮುಂಬೈ, ಸೊಲ್ಲಾಪುರ, ಬೆಂಗಳೂರು, ಮಂಗಳೂರು ಮುಂತಾದೆಡೆ ದಣಿವನ್ನು ಲೆಕ್ಕಿಸದೆ ಅಡ್ಡಾಡಿದರು. ಮಕ್ಕಳ ಸಾಹಿತ್ಯಕ್ಕೆ ಏನಾದರೂ ಒಂದು ಸ್ಥಾನ ಕಲ್ಪಿಸಬೇಕು, ನಗಣ್ಯವಾಗಿರುವುದನ್ನು ಗಣ್ಯವಾಗಿಸಬೇಕು ಎನ್ನುವ ತುಡಿತ ಅವರಲ್ಲಿ ಮನೆ ಮಾಡಿತ್ತು. ಪುಟಚೆಂಡು ಎನ್ನುವ ಹೆಸರಿನಲ್ಲಿಯೇ ಪುಟಿದೇಳುವ, ಮೆಲಕ್ಕೆ ಚಿಮ್ಮುವ ಲಕ್ಷಣಗಳು ಮೇಲ್ಮೈಗೆ ಬರುತ್ತವೆ. ಅಲಕ್ಷಿತ

ಕ್ಷೇತ್ರಕ್ಕೆ ಉತ್ತೇಜನ ನೀಡುವ ರೀತಿಯಲ್ಲಿ ಸಿಸು ಸಂಗಮೇಶ ಅವರ 'ಪುಟಚೆಂಡು' ಮತ್ತು 'ಆಣಿಕಲ್ಲು' ಪತ್ಯಗಳು ಹೊರಬಂದುವು. ಆ ಸಂದರ್ಭದಲ್ಲಿ ಅವುಗಳನ್ನು ಸಂಪಾದಿಸುವ ಪರಿಶ್ರಮ ಮತ್ತು ದೂರದೃಷ್ಟಿ ತುಂಬಾ ಬೆಲೆಯುಳ್ಳದ್ದು. 'ಆಣಿಕಲ್ಲು' ಭಾಗ ಒಂದು ಮತ್ತು ಭಾಗ ಎರಡರಲ್ಲಿ ಪಾಟೀಲ ಪುಟ್ಟಪ್ಪ, ಶಾಂತರಸ, ಬೀಚಿ, ಸಿಂಪಿ ಲಿಂಗಣ್ಣ, ಮಿರ್ಜಿ ಅಣ್ಣಾರಾಯ ಮುಂತಾದ ಲೇಖಕರ ಕತೆಗಳಿರುವುದು ವಿಶೇಷವಾಗಿದೆ. ಪುಟಚೆಂಡು ಮತ್ತು ಆಣಿಕಲ್ಲು ಕೃತಿಗಳು ೧೯೫೫ರಷ್ಟು ಹಿಂದೆಯೆ ವಿಜಯಪುರ ಸಮೀಪದ ಯರನಾಳದಲ್ಲಿ ಅವರೇ ಹುಟ್ಟುಹಾಕಿದ 'ಭಾರತಿ ಸಾಹಿತ್ಯ ಭಂಡಾರ'ದಿಂದ ಪ್ರಕಟಗೊಂಡಿರುವುದು ಮಕ್ಕಳ ಸಂಕಲನಗಳಿಗೆ ಇರುವ ಚಾರಿತ್ರಿಕ ದೃಷ್ಟಿಯಿಂದ ತುಂಬ ಮಹತ್ವದ ಸಂಗತಿಯಾಗಿದೆ. ಅದೇ ರೀತಿ ೧೯೫೭ರಲ್ಲಿ 'ನಾವು ನಮ್ಮವರು' ಭಾಗ ಒಂದು, ಹಾಗೂ ಭಾಗ ಎರಡು ಎನ್ನುವ ಮಕ್ಕಳಿಗಾಗಿ ಬರೆಯುತ್ತಿರುವ ಶಿಕ್ಷಕ ಸಾಹಿತಿಗಳ ಪರಿಚಯ ಪುಸ್ತಕಗಳನ್ನು ಹೊರತಂದರು.

ನಾಡಿನಾದ್ಯಂತ ತುಂಬ ಜನಪ್ರಿಯವಾದ 'ತಟ್ಟು ಚಪ್ಪಾಳೆ ಪುಟ್ಟ ಮಗು' ಎನ್ನುವ ಕವಿತೆಗಳ ಸಂಕಲನವನ್ನು ಬೊಳುವಾರು ಎಂದೇ ಪ್ರಖ್ಯಾತರಾಗಿರುವ ಬೊಳುವಾರು ಮಹಮದ್ ಕುಂಞ ಅವರು ಸಂಪಾದಿಸಿದ್ದಾರೆ(ದಿವ್ಯಾ ಪ್ರಕಾಶನ, ಬೆಂಗಳೂರು-೧೯೯೧). ಕನ್ನಡದಲ್ಲಿ ಇಷ್ಟೊಂದು ಹಾಡಿ ನಲಿಯುವ ಪದ್ಯಗಳಿದ್ದಾವೆಯೇ ಎನ್ನುವಷ್ಟು ವಿಸ್ಮಯವನ್ನು ಈ ಕೃತಿ ಮೂಡಿಸಿತೆಂದರೆ ತಪ್ಪಾಗಲಾರದು. ಚಪ್ಪಾಳೆ ತಟ್ಟುವ ಕ್ರಿಯೆ ಒಂದು ಸಂಭ್ರಮವನ್ನು ಸೂಚಿಸುವಂತಹದು. ಈ ನೆಲ, ಇಲ್ಲಿಯ ಭಾಷೆ, ಜನಜೀವನ, ಆಟ ಪಾತಗಳು ಒಂದು ಉದಾತ್ತ ಅದರ್ಶದೊಂದಿಗೆ ತಳಕು ಹಾಕಿಕೊಂಡಿವೆ, ಮತ್ತು ಗಾಂಧಿ ಎಂಬ ಬೆಳಕು ನಮ್ಮನ್ನು ಮುನ್ನಡೆಸುತ್ತಿದೆ ಎನ್ನುವ ಪರೋಕ್ಷ ದನಿ ಇಲ್ಲಿಯ ಹಲವು ಪದ್ಯಗಳಲ್ಲಿ ಅಡಗಿರುವಂತಿದೆ.

ಇಂಡಿಯದ ಮಗುವು ಗಾಂದಿ
ಇಂಡಿಯದ ದೀಪ ಗಾಂಧಿ
ಕಂಡು ಅವನ ಕುಣಿವ ಬಾರೊ
ತಟ್ಟು ಚಪ್ಪಾಳೆ ಪುಟ್ಟ ಮಗು

ಹೊಯ್ಸಳ, ಜಿ. ಪಿ. ರಾಜರತ್ನಂ, ದಿನಕರ ದೇಸಾಯಿ, ಪಳಕಳ ಸೀತಾರಾಮ ಭಟ್ಟ, ಈಶ್ವರ ಕಮ್ಮಾರ, ಶಂ. ಗು. ಬಿರಾದಾರ, ಸಿಸು ಸಂಗಮೇಶ, ಕಂಚ್ಯಾಣಿ ಶರಣಪ್ಪ, ಎ. ಕೆ. ರಾಮೇಶ್ವರ ಮುಂತಾದವರ ಒಟ್ಟು ೨೯೦ ಪದ್ಯಗಳು 'ತಟ್ಟು ಚಪ್ಪಾಳೆ' ಸಂಕಲನದಲ್ಲಿ ಸಂಚಯಗೊಂಡಿವೆ. ಉತ್ತರ ಕರ್ನಾಟಕದ ಭಾಷೆಯ ಸೊಗಡು ಹಲವು ಪದ್ಯಗಳಲ್ಲಿ ಮಿರಿಮಿರಿ ಮಿಂಚುತ್ತಧೆ. ಉದಾಹರಣೆಗೆ ಮೇವುಂಡಿ ಮಲ್ಲಾರಿ ಅವರ ಈ ಸಾಲುಗಳನ್ನು ನೋಡಬಹುದು:

ಗುಬ್ಬಿ ಗುಬ್ಬಿ ಇಲ್ಲಿ ಕೂಡು
ಹಾರಿ ಬಂದು ಪುರ್ ಪುರ್
ಕಾಗೆ ಕಾಗೆ ಅಲ್ಲಿ ಕೂಡು
ಹಾರಿ ಬಂದು ಭುರ್ ಭುರ್

ಹೀಗೆಯೇ ಕೆಮ್ತೂರು ದೊಡ್ಡಣ್ಣ ಶೆಟ್ಟಿಯವರ 'ಕೋಟು ಗೀಟು' ಹೆಸರಿನ ಸ್ವಾರಸ್ಯಕರ ರಚನೆ ಇದೆ :

ಕೋಟುಗೀಟು ಹಾಕಿಕೊಂಡು
ಹೇಟು ಬೂಟು ತೊಟ್ಟುಕೊಂಡು
ಬೂಟಿನಿಂದ ಹೊರಟ ತಮ್ಮ
ಡಬ್ ಡಬ್ ಡಬ್

ಹೆಚ್ಚು ಸೃಷ್ಟಿಶೀಲವಾಗಿ ತೊಡಗಿಕೊಂಡ ಎಸ್. ಜಿ. ನರಸಿಂಹಾಚಾರ್ ಅವರು ತುಂಬ ಮೌಲಿಕ ರಚನೆಗಳಿಗೆ ನಾಂದಿ ಹಾಡಿದರು. ಸಹಜತೆ ಮತ್ತು ಲಾಲಿತ್ಯ ಅವರ ಪದ್ಯಗಳಲ್ಲಿ ಎದ್ದುಕಾಣುವ ಅಂಶಗಳು. ಅವರ 'ಗೋವಿನ ಚರಿತ್ರೆ' ತುಂಬ ಪ್ರಸಿದ್ಧ ಪದ್ಯ.

ನೀನಾರಿಗಾದೆಯೊ ಎಲೆ ಮಾನವಾ
ಹರಿ ಹರಿ, ಗೋವು ನಾನು
ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೆ ನೊಸಲ ವಿಭೂತಿಯಾದೆ
ತಟ್ಟದೆ ಹಾಕಿದರೆ ಒಳ್ಳೇ ಗೊಬ್ಬರವಾದೆ
ನೀನಾರಿಗಾದೆಯೊ ಎಲೆ ಮಾನವಾ

ಈ ಸಂಕಲನಕ್ಕೆ ಶಿವರಾಮ ಕಾರಂತರು ಒಂದು ತುಂಬ ಮಹತ್ವದ ಮುನ್ನುಡಿ ಬರೆದಿದ್ದಾರೆ. ಮಕ್ಕಳ ಸಾಹಿತ್ಯದ ಅಗತ್ಯ, ಅದು ಒಳಗೊಳ್ಳುವ ಪದ – ಭಾಷೆಗಳನ್ನು ಅವರು ಚರ್ಚಿಸಿದ್ದಾರೆ. ಉಪದೇಶಾತ್ಮಕ ಸಾಹಿತ್ಯ ಸಲ್ಲ ಎಂದು ಅವರು ಅಂತಹ ಹಾಡು, ನೀತಿ ಕತೆಗಳ ಬಗ್ಗೆ ತಮ್ಮ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅವರ ಮಾತುಗಳು ಇಂದಿಗೂ ಸಂಗತವಾಗಿವೆ: 'ಪದ್ಯಗದ್ಯ ಏನೇ ಇದ್ದರೂ ಅದು ಉಪದೇಶವನ್ನು ಮಾಡಬೇಕೆಂಬ ಹುಚ್ಚು ನಮ್ಮನ್ನು ಪೀಡಿಸಬೇಕಾದ ಕಾರಣವಿಲ್ಲ. ಮಕ್ಕಳಿಗೆ ಸಂತೋಷ ಕೊಡಬಲ್ಲ ಯಾವುದೇ ವೈಚಿತ್ರ್ಯ, ಅದ್ಭುತ ಅಥವಾ ಅಸಂಬದ್ಧಗಳೆಲ್ಲವೂ ಪ್ರಾಸಬದ್ಧ ಗೀತಗಳಾಗಿ ಸಂತೃಪ್ತಿ ಕೊಡಬಲ್ಲವು . . . ಎಳೆಯ ಮಕ್ಕಳ ಸಲುವಾಗಿ ಹಾಡುವ ಹಾಡುಗಳಲ್ಲಿ ಅವರ ಎಟುಕಿನೊಳಗಿನ ಪದಗಳನ್ನು ಬಳಸಬೇಕು. ಅವರ ಲೋಕ ಹಿರಿಯ ಲೋಕವಲ್ಲ. ಅದು ಲೋಕವೂ ಅಲ್ಲ; ದೇಶವೂ ಅಲ್ಲ. ಅದನ್ನು ಎಣಿಸದೆ ನಾವು ತುರುಕುವ ಘೋಷಣೆಗಳು ಅರ್ಥವೈಪರೀತ್ಯದಿಂದ ಹೊರಹೊಮ್ಮುತ್ತವೆ. ಮಕ್ಕಳಿಗೆ ಭಾರತಮಾತೆ ಎಟುಕದ ವ್ಯಕ್ತಿ. ಅವಳ ಸಲುವಾಗಿ ಮಕ್ಕಳ ಬಾಯಿಯಿಂದ 'ಭಾರತಮಾತಾ ಕಿ ಜೈ' ಅನ್ನಿಸುವಾಗ ನಗು ಬರುತ್ತದೆ. ವಿಶಾಲ ಕರ್ನಾಟಕದಲ್ಲಿ ಈ ಶತಮಾನದ ಆದಿಯಿಂದ ರಚನೆಗೊಂಡ ವಿವಿಧ ತೆರನ ಶಿಶುಗೀತೆಗಳು – ಕೇಳುವವರಿಲ್ಲದೆ ಮಾಯವಾಗುತ್ತಿರುವ ಈ ಕಾಲದಲ್ಲಿ – ಅವುಗಳ ಸಂಪಾದನೆಯ ಕೆಲಸ ಬಲು ಕಷ್ಟದ್ದು. ಇಂದು ಪಠ್ಯ ಪುಸ್ತಕ ರಚಿಸುವವರಿಗೆ ಅವು ಬೇಡದೆ ಹೋಗಿ, ಮಕ್ಕಳ ಪಾಲಿನ ಈ ಸವಿ ಸಂಪತ್ತು ಹುಟ್ಟಡಗುವದರಲ್ಲಿತ್ತು. ಅಂತೂ ಬೊಳುವಾರು ಅವನ್ನು ಸಂಗ್ರಹಿಸಿ ಮುದ್ದಾಗಿ ಅಚ್ಚು ಹಾಕಿಸುವ ಕೆಲಸ ಮಾಡಿದ್ದಾರೆ. ಶಿಶು ಗೀತೆಗಳ ಇಂತಹ ಒಂದು ಸಂಗ್ರಹವನ್ನು ಹೊರತರಲು ಅವರು ಎಷ್ಟೊಂದು ಶ್ರಮ ವಹಿಸಿರಬಹುದೆಂದು ಈ ಸಂಪುಟವನ್ನು ನೋಡಿದೊಡನೆ ಹೊಳೆದೀತು.'

ಓರಿಯೆಂಟ್ ಲಾಂಗ್‌ಮನ್ ಪ್ರಕಾಶನ ಸಂಸ್ಥೆಯವರು ಪಂಜೆ ಮಂಗೇಶರಾಯರ ಒಟ್ಟು ಸಾಹಿತ್ಯದ ಸಮಗ್ರ ಸಂಪುಟಗಳನ್ನ ಪ್ರಕಟಿಸಿದ್ದು, ಮಕ್ಕಳ ಸಾಹಿತ್ಯವೂ ಸೇರಿದೆ.

ವಿ. ಸೀತಾರಾಮಯ್ಯ ಅದರ ಪ್ರಧಾನ ಸಂಪಾದಕರಾಗಿ ಹಾಗೂ ಪಂಜೆಯವರ ಪುತ್ರ ಪಂಜೆ ರಾಮರಾವ್ ಅವರು ಆ ಸರಣಿಯ ಸಂಪಾದಕರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ೨೦೧೩ರಲ್ಲಿ ಮಡಿಕೇರಿಯಲ್ಲಿ ನಡೆದ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ 'ಪಂಜೆ ಮಂಗೇಶರಾಯರ ಕೃತಿಗಳು' ಎನ್ನುವ ಶೀರ್ಷಿಕೆಯಲ್ಲಿ ಅವರ ಸಮಗ್ರ ಕೃತಿಗಳನ್ನು ಮತ್ತೊಮ್ಮೆ ಹೊರತಂದಿದೆ. ಇದರ ಪ್ರಧಾನ ಸಂಪಾದಕರಾಗಿ ಎನ್. ಮಹಾಬಲೇಶ್ವರಭಟ್ ಅವರು ಕಾರ್ಯನಿರ್ವಹಿಸಿದ್ದಾರೆ.

ಶಿಕ್ಷಕರ ಸಂಘ ಹಾಗೂ ಮಕ್ಕಳ ಸಾಹಿತ್ಯ ಸಂಗಮ ಮುಂತಾದ ಹೆಸರಿನ ಸಂಸ್ಥೆಗಳು ಕೆಲವು ಪದ್ಯಗಳನ್ನು ಸಂಗ್ರಹಿಸಲು ಆಸ್ಥೆ ತೋರಿದವು. ಸಂಕಲನ ತುಂಬ ಮೌಲಿಕವಾಗಿರಬೇಕೆಂಬ ತುಡಿತ ಇಲ್ಲಿ ಕಾಣಸಿಗುವುದಿಲ್ಲ. ಆದರೂ ಅವು ಸಂಕಲನಗೊಂಡ ಕಾಲಘಟ್ಟದ ದೃಷ್ಟಿಯಿಂದ ಗಮನಿಸುವಂತಿವೆ. ಬಿ, ಶೇಖರಪ್ಪ ಮತ್ತು ಹಾರತಿ ಕಸ್ತೂರಿ ಅವರು ಸಂಪಾದಿಸಿರುವ 'ಶಿಶುಭಾರತಿ' ಎನ್ನುವ ಕವನ ಸಂಕಲನ ೧೯೭೯ರಲ್ಲಿ ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ರಾಯಚೂರು ಪ್ರಕಾಶನದಡಿಯಲ್ಲಿ ಪ್ರಕಟಗೊಂಡಿತು. ಶಾಂತರಸ, ರಾಘವೇಂದ್ರ ಇಟಗಿ, ಉಳವೀಶ ಹುಲೆಪ್ಪನವರಮಠ, ಪರಶುರಾಮ ಚಿತ್ರಗಾರ, ಅಣ್ಣಾರಾಯ ಸಾಲಿಮನಿ, ಮುಂತಾದವರ ಕವನಗಳು ಇಲ್ಲಿವೆ. ನಾರಾಯಣರಾವ ಕಠಾರೆ ಅವರು ಪ್ರಧಾನ ಸಂಪಾದಕರೆಂದು ನಮೂದಿತವಾಗಿದೆ. ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮದವರು ೧೯೯೪ ಮತ್ತು ೧೯೯೫ರಲ್ಲಿ ಕ್ರಮವಾಗಿ 'ಮಕ್ಕಳ ತುತ್ತು', 'ಮಕ್ಕಳ ಮುತ್ತು' ಹೆಸರಿನಲ್ಲಿ ಕವಿತೆ ಮತ್ತು ಕತೆಗಳ ಸಂಕಲನಗಳನ್ನು ಪ್ರಕಟಿಸುವ ಪ್ರಯತ್ನ ಮಾಡಿದರು. ಈ ಸಂಕಲನಗಳಲ್ಲಿ ಶಿವರಾಮ ಕಾರಂತ, ಪಳಕಳ ಸೀತಾರಾಮ ಭಟ್ಟ, ಮುಳಿಯ ಶಂಕರ ಭಟ್ಟ, ಪರಮೇಶ್ವರ ಭಟ್ಟ ಬಾಳಿಲ ಮುಂತಾದ ಹಿರಿಯರ ಹಾಗೂ ಕರಾವಳಿ ಭಾಗದ ಕವಿಗಳ ಕವಿತೆಗಳನ್ನು ಕಾಣಬಹುದು. 'ಬಾರೋ ಗೀಜಗ' ಹಾಗೂ 'ಚಿಗುರು' ಅಂತಹ ಸಂಕಲನಗಳು ಸರಕಾರಿ ಸಂಸ್ಥೆಗಳಿಂದ ಪ್ರಕಟವಾಗಿವೆ. 'ಚಿಗುರು' ಸಂಕಲನ ೧೯೯೬ರಲ್ಲಿ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದಲ್ಲಿ ಪ್ರಕಟಗೊಂಡಿದೆ. ಯಾವುದೇ ಹೊಸತನವಿಲ್ಲದೆ ಇಲ್ಲಿಯ ಕವನಗಳು ಸೊರಗಿವೆ.

'ಬಂದ ಬಂದ ಸಂತಮ್ಮಣ್ಣ' ಎನ್ನುವ ಹೆಸರಿನಲ್ಲಿ ಹೊಯಿಸಳರ ಆಯ್ದ ಬರಹಗಳು, ಆಯ್ದ ಕತೆ–ಕವಿತೆಗಳು, ಡಾ. ಜಿ.ಎಸ್. ಸಿದ್ಧಲಿಂಗಯ್ಯ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿವೆ. ಇದು ೧೯೯೯ರಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟಗೊಂಡಿದೆ.

ಪ್ರೊ.ಎಂ.ವಿ. ಸೀತಾರಾಮಯ್ಯ ಸಮಗ್ರ ಸಾಹಿತ್ಯ ಮಾಲಿಕೆಯಲ್ಲಿ ಐದನೆಯ ಸಂಪುಟವಾಗಿ ಮಕ್ಕಳ ಸಾಹಿತ್ಯ ಮತ್ತು ನಾಟಕಗಳನ್ನು ಒಳಗೊಂಡ ಕೃತಿ ಪ್ರಕಟಗೊಂಡಿದೆ. (ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೨೦೧೦). ಟಿ.ಎಸ್. ನಾಗರಾಜಶೆಟ್ಟಿ ಸಂಪಾದಕರಾಗಿರುವ ಈ ಪುಸ್ತಕದಲ್ಲಿ 'ಹೂವಾಡಗಿತ್ತಿ' ಮುಂತಾದ ಕವಿತೆಗಳು, ಕನ್ನಡದ ಕತೆ, ಈ ಕರುನಾಡಿದು ನನ್ನ ಮನೆ, ರಾಬಿನ್‌ಸನ್ ಕ್ರೂಸೊ ಎನ್ನುವ ಗದ್ಯಬರಹಗಳು, ಕೈಕೋಲು, ಕುಮಾರ ಗೌತಮ ಮುಂತಾದ ನಾಟಕಗಳು ಸೇರಿವೆ.

ಕಂಚ್ಯಾಣಿ ಶರಣಪ್ಪ ಅವರ 'ಅಜ್ಜನ ಅಂದದ ಕತೆಗಳು' ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಕ್ಕಳ ಸಾಹಿತ್ಯ ಸಂಕಲನವೊಂದನ್ನು ಸಬೀಹ ಬಾನು ಅವರು ಸಂಪಾದಿಸಿದ್ದಾರೆ. ಸಿಸು ಸಂಗಮೇಶ ಅವರ ಸಮಗ್ರ ಸಾಹಿತ್ಯ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟಗೊಂಡಿದೆ.

'ಮಕ್ಕಳ ತುತ್ತು' ಸಂಕಲನದಲ್ಲಿ ಶಿವರಾಮ ಕಾರಂತ, ಪಳಕಳ ಸೀತಾರಾಮಭಟ್ಟ, ಇಂದಿರಾ ಹಾಲಂಬಿ, ರಾಧೇಶ್ ತೋಳ್ಪಾಡಿ, ಸವಿತಾ ಭಟ್ ಮುಂತಾದ ಕರಾವಳಿ ಭಾಗದ ಕವಿಗಳ ಕವಿತೆಗಳಿವೆ. 'ಮಕ್ಕಳ ಮುತ್ತು' ಕೃತಿ ಬಹುತೇಕ ಅದೇ ಲೇಖಕರ ಕತೆಗಳನ್ನು ಒಳಗೊಂಡಿದೆ. 'ಬಾರೋ ಗೀಜಗ' ಹಾಗೂ 'ಚಿಗುರು' ಸಂಕಲನಗಳು ೧೯೯೬ರಲ್ಲಿ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದಲ್ಲಿ ಪ್ರಕಟಗೊಂಡಿವೆ. ಆದರೆ ಯಾವುದೇ ಹೊಸತನವಿಲ್ಲದೆ ಇವು ಸೊರಗಿವೆ.

೧೯೯೯ರಲ್ಲಿ ಬೆಂಗಳೂರಿನ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಪ್ರಕಟಿಸಿರುವ 'ಎಳೆಯರ ಕವನಗಳು' ಕೂಡ ಇದೇ ಧಾಟಿಯಲ್ಲಿದ್ದು ಹಳಸಲು ಸರಕನ್ನು ಒಟ್ಟುಮಾಡಿದೆ.

ಆದರೆ ಇದೇ ಸುಮಾರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 'ಕನ್ನಡ ಸಾಹಿತ್ಯ: ಕಾಲು ಶತಮಾನ'ದ ಅಂಗವಾಗಿ 'ಮಕ್ಕಳ ಸಾಹಿತ್ಯ – ಕವಿತೆಗಳು' ಪ್ರಕಟವಾಯಿತು. ೧೯೯೬ರಲ್ಲಿ ಪ್ರಕಟವಾದ ಇದು ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಶಂ.ಗು.ಬಿರಾದಾರ, ಟಿ.ಎಸ್.ನಾಗರಾಜಶೆಟ್ಟಿ ಅವರ ಸಂಪಾದಕತ್ವದಲ್ಲಿ ಬೆಳಕು ಕಂಡಿತು. ರಾಜ್ಯದ ಪ್ರಮುಖ ಮಕ್ಕಳ ಕವಿಗಳ ಪ್ರಾತಿನಿಧಿಕ ಸಂಕಲನವಾಗಿ ಇದು ಆ ಕಾಲಘಟ್ಟದಲ್ಲಿ ಬಂದ ಒಂದು ಮಹತ್ವದ ಕೃತಿಯಾಗಿದೆ. ಅಣ್ಣಾರಾಯ ಸಾಲಿಮನಿ, ಅಶೋಕ ಚೊಳಚಗುಡ್ಡ, ಬಿ. ತಿಪ್ಪೇರುದ್ರಪ್ಪ, ಎಚ್.ಎಸ್. ವೆಂಕಟೇಶಮೂರ್ತಿ, ಬಿ. ಶೇಖರಪ್ಪ ಮುಂತಾದ ಲೇಖಕರ ಪದ್ಯಗಳಿವೆ.

ಅದೇ ರೀತಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦೦೯ರಲ್ಲಿ ಜಿ.ಪಿ. ರಾಜರತ್ನಂ ಮಕ್ಕಳ ಸಾಹಿತ್ಯ ಸಂಪುಟ – ೧ನ್ನು ಪ್ರಕಟಿಸಿತು. ರಾಜರತ್ನಂ ಅವರ 'ಕಂದನ ಕಾವ್ಯಮಾಲೆ' 'ಮಕ್ಕಳ ಗಾಂಧಿ' ಕೃತಿಗಳನ್ನು ಒಳಗೊಂಡಿರುವ ಇದನ್ನು ನೀಲತ್ತಹಳ್ಳಿ ಕಸ್ತೂರಿ ಬಹು ಪರಿಶ್ರಮದಿಂದ ಸಂಪಾದಿಸಿದ್ದಾರೆ. ಪುಸ್ತಕ ಕೂಡ ಅಂದವಾಗಿ ಮುದ್ರಣಗೊಂಡಿರುವುದು ಡಾ.ಜಿ.ಪಿ. ರಾಜರತ್ನಂ ಜನ್ಮ ಶತಮಾನೋತ್ಸವದ ನೆನಪಿಗೆ ಪುಟವಿಟ್ಟಂತೆ ಆಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮತ್ತೊಂದು ಮುಖ್ಯ ಪ್ರಕಟನೆಯೆಂದರೆ ಪ್ರೊ.ಎಂ.ವಿ. ಸೀತಾರಾಮಯ್ಯ ಅವರ ಸಮಗ್ರ ಮಕ್ಕಳ ಸಾಹಿತ್ಯವನ್ನು (ಸಂಪುಟ ೫) ಟಿ.ಎಸ್. ನಾಗರಾಜಶೆಟ್ಟಿ ಅವರ ಸಂಪಾದಕತ್ವದಲ್ಲಿ ಹೊರತಂದಿರುವುದು. ೨೦೧೦ರಲ್ಲಿ ಪ್ರಕಟವಾಗಿರುವ ಇದು ಹೂವಾಡಗಿತ್ತಿ ಮೊದಲಾದ ಕವಿತೆಗಳನ್ನು, ಕನ್ನಡದ ಕತೆ, ಕರುನಾಡಿದು ನನ್ನ ಮನೆ, ರಾಬಿನ್‌ಸನ್ ಕ್ರೂಸೊ ಮುಂತಾದ ಗದ್ಯ ಬರಹಗಳನ್ನು ಕೈಕೋಲು, ಕುಮಾರ ಗೌತಮ ಮುಂತಾದ ನಾಟಕಗಳನ್ನು ಒಳಗೊಂಡಿದೆ.

'ಅಜ್ಜನ ಅಂದದ ಕತೆಗಳು' – ಕಂಚ್ಯಾಣಿ ಶರಣಪ್ಪ ಅವರ ಕತೆಗಳನ್ನು ಒಳಗೊಂಡಿರುವ ಪುಸ್ತಕ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟಗೊಂಡಿದೆ. ಬೊಳುವಾರು ಅವರ 'ಪಾಪು

ಗಾಂಧಿ ಬಾಪು ಗಾಂಧಿ ಆದ ಕತೆ' ಪುಸ್ತಕ ಪ್ರಾಧಿಕಾರದಿಂದ ೨೦೦೬ರಲ್ಲಿ ಮೊದಲು ಪ್ರಕಟಗೊಂಡ ನಂತರ ನಾಲ್ಕು ಮುದ್ರಣಗಳನ್ನು ಕಂಡಿದೆ.

'ಮಕ್ಕಳ ಮೋಜಿನ ಕಥೆಗಳು' ಶೀರ್ಷಿಕೆಯಲ್ಲಿ ಸವಿತಾ ಪ್ರಭಾಕರ್ ಅವರು ೪೨ಜನ ಲೇಖಕಿಯರ ಕಥೆಗಳನ್ನು ಸಂಕಲಿಸಿದ್ದಾರೆ. ಸಿ.ಎನ್. ಮುಕ್ತಾ ಹಾಗೂ ಬಿ.ಆರ್. ನಾಗರತ್ನ ಅವರು ಉಪಸಂಪಾದಕರಾಗಿ ಇಲ್ಲಿ ದುಡಿದಿದ್ದಾರೆ. ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು ಇವರಿಂದ ೨೦೧೨ರಲ್ಲಿ ಮೊದಲ ಬಾರಿಗೆ ಪ್ರಕಟಗೊಂಡಿದೆ. ನೀಳಾದೇವಿ, ಸಿ.ಎನ್.ಮುಕ್ತಾ, ಎಚ್.ಜಿ. ರಾಧಾದೇವಿ ಮುಂತಾದ ಲೇಖಕಿಯರ ಕಥೆಗಳಿವೆ. ಇದೇ ಸಂಪಾದಕರು ಹಾಗೂ ಉಪಸಂಪಾದಕರ ಹೆಸರಿನಲ್ಲಿ 'ಮಕ್ಕಳ ಕಥಾ ಪ್ರಪಂಚ' ಎನ್ನುವ ವಿವಿಧ ಲೇಖಕರ ಕಥಾ ಸಂಕಲನ ಗೀತಾಂಜಲಿ ಪಬ್ಲಿಕೇಷನ್ಸ್‌ನಿಂದಲೇ ಪ್ರಕಟಗೊಂಡಿದೆ. ನಿರುಪಮಾ, ವೈದೇಹಿ, ಬಿ.ಎಸ್.ರುಕ್ಕಮ್ಮರಿಂದ ಹಿಡಿದು ಇತ್ತೀಚಿಗೆ ಬರೆಯುತ್ತಿರುವ ಬಾಲಕಿ ಮುದ್ದು ತೀರ್ಥಹಳ್ಳಿ ಅವರನ್ನು ಇದು ಒಳಗೊಂಡಿದೆ. ಈ ಎರಡೂ ಸಂಕಲನಗಳಲ್ಲಿ ಲೇಖಕಿಯರು ಮಾತ್ರವೇ ಇರುವುದು ಒಂದು ವಿಶಿಷ್ಟ ಸಂವೇದನೆಯನ್ನು ಕಟ್ಟಿಕೊಡುವ ಯತ್ನವಾಗಿ ಕಾಣುತ್ತದೆ.

ಮಕ್ಕಳ ಸಾಹಿತ್ಯವನ್ನು ಬೆಳೆಸುವ ನಿಟ್ಟಿನಲ್ಲಿ ಈಶ್ವರ ಕಮ್ಮಾರ ಮೊದಲಿನಿಂದಲೂ ಜೀವ ತೇಯುತ್ತ ಬಂದವರು ಮಕ್ಕಳ ಪತ್ರಿಕೆಯನ್ನು ನಡೆಸಿದವರು.

ಈಶ್ವರ ಕಮ್ಮಾರ ಅವರು ಕವನ ಹಾಗೂ ಕತೆಗಳ ಎರಡು ಸಂಗ್ರಹಗಳನ್ನು ಸಂಪಾದಿಸಿದ್ದಾರೆ. ೧೯೮೬ರಲ್ಲಿ ಧಾರಾವಾಡದಲ್ಲಿ ತಮ್ಮ ಮಕ್ಕಳ ಮಂದಿರ ವತಿಯಿಂದ ಮಕ್ಕಳ ಸಾಹಿತ್ಯ ಕುರಿತ ಕಮ್ಮಟವೊಂದನ್ನು ಏರ್ಪಡಿಸಿದ್ದರು. ಅದರಲ್ಲಿ ಪಾಲ್ಗೊಂಡವರ ಪ್ರಾಯೋಗಿಕ ಬರಹಗಳು ಇಲ್ಲಿ ಸಂಕಲಿತವಾಗಿವೆ.

'ಹೂವಿನ ತೋಟ'– ಕವನಗಳ ಗುಚ್ಛವಾಗಿದೆ

ಮನೆಯ ದೀಪ – ಕತೆಗಳ ಸಂಗ್ರಹವಾಗಿದ್ದು

'ಮಕ್ಕಳ ಆಟ' ಎಂಬುದು ನಾಟಕಗಳ ಸಂಗ್ರಹವಾಗಿದೆ. ಈ ಮೂರು ಪುಸ್ತಕಗಳೂ ಈಶ್ವರ ಕಮ್ಮಾರ ಅವರೇ ಹುಟ್ಟುಹಾಕಿದ 'ಮಕ್ಕಳ ಮನೆ' ಪ್ರಕಾಶನದಿಂದ ೧೯೯೦ರಲ್ಲಿ ಪ್ರಕಟಗೊಂಡವು.

೧೯೮೫ ರಲ್ಲಿ ನಡೆದ ಪ್ರಥಮ ವಿಶ್ವಕನ್ನಡ ಸಮ್ಮೇಳನದ ನೆನಪಿನಲ್ಲಿ ಹೊರತರಲಾದ ಸಾಹಿತ್ಯಮಾಲೆ ಪುಸ್ತಕಗಳಲ್ಲಿ ಸಂಕಲನ ವಿಭಾಗದಲ್ಲಿ ಮಕ್ಕಳ ಸಾಹಿತ್ಯವೂ ಪ್ರಕಟವಾಗಿದೆ. (ವಿಶ್ವಕನ್ನಡ ಸಮ್ಮೇಳನ, ೧೯೮೫). ಎಂ.ವಿ ಸೀತಾರಾಮಯ್ಯ ಅವರು ಸಂಪಾದಕರಾಗಿ ೨೨೭ ಪುಟಗಳ ಈ ಕೃತಿಯನ್ನು ಹೊರತರುವಲ್ಲಿ ದುಡಿದಿದ್ದಾರೆ. ಪದ್ಯ, ಗದ್ಯ, ನಾಟಕಗಳನ್ನು ಕಿರಿಯ ಮತ್ತು ಹಿರಿಯ ಮಕ್ಕಳಿಗೆಂದು ವಿಭಾಗಿಸಿ ಅವರು ನೀಡಿದ್ದಾರೆ. ಕಿರಿಯರಿಗಾಗಿ ಜಿ.ಪಿ. ರಾಜರತ್ನಂ ಅವರ ಪ್ರಸಿದ್ಧ 'ತುತ್ತೂರಿ' ಕವನವಲ್ಲದೆ, ಕುವೆಂಪು ಅವರ 'ಬಣ್ಣದ ಚುಕ್ಕಿ', ಪಂಜೆ ಮಂಗೇಶರಾಯರ 'ನಾಗರಹಾವು', ದಿನಕರ ದೇಸಾಯಿ ಅವರ 'ಅಂಚೆಯವನು', ಚೆನ್ನವೀರ ಕಣವಿ ಅವರ 'ಹಕ್ಕಿಪುಚ್ಚ'ಗಳು ಸೇರಿವೆ. ಕತೆಯಲ್ಲಿ ಐದು ಮಂದಿ ಇದ್ದಾರೆ. ಹೊಯಿಸಳ, ಜಿ.ಪಿ.ರಾಜರತ್ನಂ, ಅನುಪಮಾ ನಿರಂಜನ, ಬಿ.ಶ್ರೀ. ಪಾಂಡುರಂಗರಾವ್, ಜಯಲಕ್ಷ್ಮೀ

ಶ್ರೀನಿವಾಸನ್ ಸೇರಿದ್ದಾರೆ. ಬಿ.ಶ್ರೀ. ಪಾಂಡುರಂಗರಾವ್ ಅವರ ನಾಟಕ 'ದೀಪಾವಳಿ' ನಾಟಕ ಭಾಗದಲ್ಲಿದೆ. ಇನ್ನು ಹಿರಿಯ ಮಕ್ಕಳಿಗೆಂದು ಎಲ್. ಗುಂಡಪ್ಪ, ಕಾವ್ಯಾನಂದ, ಬಿ.ಎ. ಸನದಿ, ಪಂಜೆ ಮಂಗೇಶರಾಯ, ರಾಘವ ಅವರ ೬ ಪದ್ಯಗಳಿದ್ದು ಕತಾ ವಿಭಾಗದಲ್ಲಿ ಅನುಪಮಾ ನಿರಂಜನ, ನಾ. ಕಸ್ತೂರಿ, ಹೊಯಿಸಳ, ಎಂ.ವಿ. ಸೀತಾರಾಮಯ್ಯ ಅವರ ೪ ಕತೆಗಳಿವೆ. ದೇವುಡು ಅವರ 'ವಿಚಿತ್ರ ಶಿಕ್ಷೆ' ಎನ್ನುವ ನಾಟಕವೂ ಹಿರಿಯ ಮಕ್ಕಳಿಗಾಗಿ ಅಚ್ಚಾಗಿದೆ. ಬಿ.ಎಸ್. ಪಾಂಡುರಂಗರಾವ್, ಅನುಪಮಾ ನಿರಂಜನ ಮುಂತಾದ ಲೇಖಕರು ಎರಡು ಸಲ ಕಾಣಿಸಿಕೊಳ್ಳುವದರ ಬದಲಿಗೆ ಉತ್ತರ ಕರ್ನಾಟಕಕ್ಕೆ ಸಾಕಷ್ಟು ಪ್ರಾತಿನಿಧ್ಯ ಇರುವಂತೆ ಎಂ.ವಿ. ಸೀ. ಅವರು ನೋಡಿಕೊಳ್ಳಬಹುದಿದತ್ತು ಎಂದು ಯಾರಿಗಾದರೂ ಅನಿಸುವುದು ಸಹಜವಾಗಿದೆ. ಸಿಸು. ಸಂಗಮೇಶ, ಶಂ.ಗು. ಬಿರಾದಾರ, ಮೇವುಂಡಿ ಮಲ್ಲಾರಿ ಮುಂತಾದವರ ಬರಹಗಳಿಲ್ಲರುವುದು ವಿಶ್ವಕನ್ನಡ ಸಮ್ಮೇಳನದ ಸಾಹಿತ್ಯ ಮಾಲೆಯಲ್ಲಿ ಬಂದಿರುವ ಈ ಸಂಕಲನದ ದೊಡ್ಡ ಕೊರತೆಯಾಗಿದೆ.

ಧಾರವಾಡದಲ್ಲಿ ೨೩ ಅಕ್ಟೋಬರ್ ೧೯೮೫ ರಲ್ಲಿ ನಡೆದ ರಾಜ್ಯಮಟ್ಟದ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನದ ನೆನಪಿನಲ್ಲಿ 'ಧಾರವಾಡ ಸಾಹಿತ್ಯ ಸಮ್ಮೇಳನ ಸಂಪುಟ'ವನ್ನು ಹೊರತರಲಾಗಿದೆ. ೮೦ ಪುಟಗಳ ಈ ಕೃತಿಯನ್ನು ಸಿಸು ಸಂಗಮೇಶ ಅವರ ಮುಂದಾಳತ್ವದಲ್ಲಿ ವಿಜಾಪುರದಲ್ಲಿ ರಚಿಸಲಾಗಿದ್ದ ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿ ಸಂಸ್ಥೆಯಿಂದ ೧೯೮೮ ರಲ್ಲಿ ಪ್ರಕಟಿಸಲಾಗಿದೆ. ಸಿಸು ಸಂಗಮೇಶ, ಈಶ್ವರ ಕಮ್ಮಾರ, ಬೆ.ಗೊ. ರಮೇಶ್ ಅವರು ಸಂಪಾದಕರಾಗಿದ್ದಾರೆ. ಸಮ್ಮೇಳನದ ಅಧ್ಯಕ್ಷರಾಗಿದ್ದ ಸಿದ್ದಯ್ಯ ಪುರಾಣಿಕರ ಮಾತುಗಳಲ್ಲದೆ ಸೂ. ಸುಬ್ರಮಣ್ಯ ಅವರ ಕನ್ನಡದಲ್ಲಿ ಮಕ್ಕಳ ವಿಜ್ಞಾನ ಸಾಹಿತ್ಯ, ಶಕುಂತಲಾ ಮಾಳಿಕೊಪ್ಪಮಠ ಅವರ ಮಕ್ಕಳ ದೈಹಿಕ ಸಂಪತ್ತು, ವಿ.ಜಿ.ಮಾರಿಹಾಳ ಅವರ ಮಕ್ಕಳ ಬೌದ್ಧಿಕ ಬೆಳವಣಿಗೆ, ಎ.ಎಸ್. ಧರಣೇಂದ್ರಯ್ಯ ಅವರ ಮಕ್ಕಳ ಮಾನಸಿಕ ವಿಕಾಸ ಮುಂತಾದ ಲೇಖನಗಳಿವೆ. ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶಂ.ಗು. ಬಿರಾದಾರ ಅವರ ಮಾತುಗಳೂ ಇವೆ. ಅದೂ ಅಲ್ಲದೆ ಚೆನ್ನವೀರ ಕಣವಿ, ಈಶ್ವರ ಕಮ್ಮಾರ, ಶಂ.ಗು. ಬಿರಾದಾರ, ಎ.ಕೆ. ರಾಮೇಶ್ವರ, ಚನ್ನಪ್ಪ ಹೊಸಮನಿ ಮುಂತಾದವರ ಒಂದೊಂದು ಕವನಗಳೂ ಸಂಕಲಿತವಾಗಿವೆ. ಅಲಕ್ಷಿತವಾಗಿದ್ದ ಮಕ್ಕಳ ಸಾಹಿತ್ಯಕ್ಕೆ ವೇದಿಕೆ ಹಾಗೂ ಪ್ರಕಟಣೆಯ ದ್ಯೋತಕವಾಗಿ ಈ ಪ್ರಕಾಶನದ ಮಹತ್ವವನ್ನು ಗುರುತಿಸಬಹುದು.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಇವರಿಂದ ೨೦೦೧ ರಲ್ಲಿ 'ಶತಮಾನದ ಮಕ್ಕಳ ಸಾಹಿತ್ಯ' ಸಂಪುಟ ಎನ್.ಎಸ್. ರಘುನಾಥ್ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿದೆ. ಕನ್ನಡ ಸಾಹಿತ್ಯದ ಒಂದು ಶತಮಾನದ ಚಾರಿತ್ರಿಕ ಕಾಲಘಟ್ಟವನ್ನು ಸಂದರ್ಭವಾಗಿಸಿಕೊಂಡು ಅದರ ವೈವಿಧ್ಯತೆ, ವೈಶಾಲ್ಯತೆ, ಸಮೃದ್ಧಿ ಮತ್ತು ಸಂಘರ್ಷಗಳನ್ನು ಅವಲೋಕಿಸುವ ನಿಟ್ಟಿನಲ್ಲಿ ಕವಿತೆ, ಸಣ್ಣಕತೆ, ವಿಮರ್ಶೆ, ಲಲಿತ ಪ್ರಬಂಧ, ಸಂಶೋಧನೆ, ಮಕ್ಕಳ ಸಾಹಿತ್ಯ ಎಂದು ಆರು ಪ್ರಕಾರಗಳಲ್ಲಿ ಸಂಕಲನಗಳನ್ನು ಹೊರತರಲಾಗಿದೆ. 'ಮಕ್ಕಳ ಸಾಹಿತ್ಯ' ಸಂಪುಟ ಸುಮಾರು ೮೫೦ ಪುಟಗಳ ಬೃಹತ್ ಗ್ರಂಥವಾಗಿದೆ.

ಈ ಕೃತಿಗೆ ರಘುನಾಥ್ ಅವರ ೨೮ ಪುಟಗಳ ಪ್ರಸ್ತಾವನೆಯಿದೆ. ಆದರೆ ಅದರಲ್ಲಿ ಕೆಲವು ಒಪ್ಪಲಾಗದ ಮಾತುಗಳಿವೆ. ಇಂಗ್ಲಿಷ್ ಸಾಹಿತ್ಯದ ಪ್ರಭಾವ, ಮಿಶನರಿಗಳು ಶಿಶುಗೀತೆಗಳನ್ನು

ತಂದುದು ಮುಂತಾದವುಗಳನ್ನು ಪ್ರಶ್ನಿಸುವ ರಘುನಾಥ್ ಅವರು 'ತಿರುಕನ ಕನಸು' ಕವನದ ಆಧಾರದ ಮೇಲೆ ಮತ್ತು ಜಾನಪದದ 'ಗೋವಿನ ಹಾಡು' ಆಧಾರದ ಮೇಲೆ ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಸೃಷ್ಟಿಯನ್ನು ಮುಪ್ಪಿನ ಷಡಕ್ಷರಿಯ ಕಾಲಘಟ್ಟ (ಕ್ರಿ.ಶ. ೧೫೦೦) ಮತ್ತು ಅದಕ್ಕೂ ಮೊದಲಿನ ಜನಪದರ ಕಾಲಮಾನಕ್ಕೆ ಒಯ್ಯುತ್ತಾರೆ! 'ತಟ್ಟು ಚಪ್ಪಾಳೆ ಪುಟ್ಟ ಮಗು' ಸಂಕಲನಕ್ಕೆ ಬೊಳುವಾರು ಅವರು ಬರೆದಿರುವ ಮಾತುಗಳು ವಾಸ್ತವವಾಗಿವೆ. ಸರಿಯಾದ ಅಧ್ಯಯನವಿಲ್ಲದೆ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಎಲ್ಲವೂ ಇತ್ತು ಎನ್ನುವಂತೆ ಬಿಂಬಿಸುವುದು ಸಲ್ಲದು. ಅದೂ ಅಲ್ಲದೆ 'ತಿರುಕನ ಕನಸು' ಬರೆದಿರುವ ಮುಪ್ಪಿನ ಷಡಕ್ಷರಿ ಒಬ್ಬ ಅನುಭಾವಿ ಕವಿ ಎಂದು ಪ್ರಸಿದ್ಧರಾದವರು. ಅದು ಒಂದು ಅನುಭಾವದ ತಿಳಿವಳಿಕೆಯನ್ನು ಜನಪದ ಕತೆಯ ಮಾದರಿಯಲ್ಲಿ ಕೊಡುವುದಕ್ಕೆ ಪ್ರಯತ್ನಿಸುತ್ತದೆಯೇ ಹೊರತು ಎನ್.ಎಸ್. ರಘುನಾಥ್ ಅವರು ಬರೆದಿರುವಂತೆ 'ಸಾಧಾರಣ ಜನಗಳು ತಮ್ಮ ಮನಸ್ಸಿನಲ್ಲಿ ತುಂಬಿಕೊಂಡಿರುವ ಮಹತ್ತರ ಆಸೆಯ ಚಿತ್ರಣ'ವನ್ನಲ್ಲ. ರಘುನಾಥ್ ಅವರ ಮಾತು ನಿಜವೆಂದಾದರೆ ಸಾಧಾರಣ ಜನ ಎಂದರೆ ಯಾರು? ಬಡವರೇ? ತಿರುಕರೇ? ಕೂಲಿಕಾರರೆ? ಅವರನ್ನು ಗೇಲಿ ಮಾಡಲಿಕ್ಕೆ ಮುಪ್ಪಿನ ಷಡಕ್ಷರಿಯವರು ಬರೆದರೆ? 'ತಿನ್ನುವುದಕ್ಕೂ ಇಲ್ಲದೆ ಭಿಕ್ಷೆ ಬೇಡಿ ಬಂದ ಅವನು ನಿದ್ದೆ ಮಾಡುತ್ತ ರಾಜಕುಮಾರಿಯನ್ನು ಮದುವೆಯಾಗಿ ರಾಜನಾಗುವುದು ವೈದೃಶ್ಯದಲ್ಲಿ ತುಂಬ ಹಾಸ್ಯಾಸ್ಪದವಾಗುತ್ತದೆ' ಎಂದು ರಘುನಾಥ್ ಬರೆಯುತ್ತಾರೆ! ಆದರೆ ನನಗೆ ಅನಿಸಿದಂತೆ ಮತ್ತು ಬಹಳಷ್ಟು ಜನ ವ್ಯಾಖ್ಯಾನಿಸುವಂತೆ ಮುಪ್ಪಿನ ಷಡಕ್ಷರಿಯವರ ಗೀತೆಯ ಗುರಿ ಆಧ್ಯಾತ್ಮಿಕ ಎಚ್ಚರ. ನಾವೆಲ್ಲ ಭ್ರಮಾತ್ಮಕ ಲೋಕದಲ್ಲಿ ವಿಹರಿಸುತ್ತಿದ್ದೇವೆ. ಯಾವುದೋ ಮಾಯೆಯಲ್ಲಿ ಬದುಕುತ್ತಿದ್ದೇವೆ. ಒಂದು ದಿನ ಎಲ್ಲವನ್ನೂ ಬಿಟ್ಟು ಹೋಗುವುದಿದೆ ಎನ್ನುವ ಅರ್ಥವನ್ನು ಒಂದು ಕತೆಯ ಮೂಲಕ ಕೊಡುತ್ತಾರೆ. ಹಾಗೆ ನೋಡಿದರೆ 'ತಿರುಕನ ಕನಸು' ಮಕ್ಕಳ ಪದ್ಯದ ವ್ಯಾಪ್ತಿಗೆ ಬರಲಾರದು. ಯಾವ ಬಾಲ್ಯ ಸಂವೇದನೆಯೂ ಅದರಲ್ಲಿ ಇಲ್ಲ. ಆದರೆ ಅದು ತನ್ನ ಲಯಗಾರಿಕೆ, ಸರಳತೆ ಮತ್ತು ಕತೆ ಹೇಳುವ ಕ್ರಮದಿಂದ ಯಾರಿಗಾದರೂ ಇಷ್ಟವಾಗುತ್ತದೆ. ಅದು ಒಂದು ತುಂಬ ಮಹತ್ವದ ಅನುಭಾವಿ ಪದ್ಯ. ಅದು ಮಕ್ಕಳನ್ನು ಕೂಡ ರಂಜಿಸಿದರೆ ತಪ್ಪಿಲ್ಲ! ಮಕ್ಕಳು ಅದನ್ನು ಇಷ್ಟಪಟ್ಟರೆ ಇನ್ನೂ ಒಳ್ಳೆಯದು. ಆದರೆ 'ತಿರುಕನ ಕನಸು' ಮತ್ತು ಇನ್ನು ಕೆಲವು ಪ್ರಸಿದ್ಧ ಪದ್ಯಗಳನ್ನು ಹೆಸರಿಸುತ್ತ ಇವುಗಳಿಗೆ ಸಮಾನವಾಗಿ ಅಥವಾ ಇವುಗಳ ಹತ್ತಿರಕ್ಕೆ ಬರುವ ಮಕ್ಕಳ ಪದ್ಯವನ್ನು ಯಾವ ಸಾಹಿತಿಯೂ ರಚಿಸಿಲ್ಲ ಎಂಬ ಫರ್ಮಾನನ್ನು ಎನ್.ಎಸ್. ರಘುನಾಥ್ ಹೊರಡಿಸುತ್ತಾರೆ: "ಸಮಕಾಲೀನ ಕವನಗಳ ಬಗ್ಗೆ ಒಂದೆರಡು ಮಾತು. ಇಲ್ಲಿ ನಾನು ಸೇರಿಸಿರುವ ಎಲ್ಲ ಸಮಕಾಲೀನ ಕವನಗಳು ಯಾವುದೇ ಸಂಕಲನಕ್ಕೆ ಆಯ್ಕೆ ಆಗಬಹುದಾದ ಕವನಗಳು. ಹೆಚ್ಚಿಲ್ಲ, ಕಡಿಮೆ ಇಲ್ಲ. ಆದರೆ ಯಾವುದನ್ನೂ ಬೆರಳು ಮಾಡಿ ಈ ಕವನ ಇಲ್ಲದಿದ್ದರೆ ಸಂಗ್ರಹಕ್ಕೆ ಕೊರತೆಯಾಗುತ್ತದೆ, ಇದು ವರ್ಷ ಶತಮಾನಗಳವರೆಗೂ ಉಳಿಯುವ, ನೆನಪಿಸಿಕೊಳ್ಳಬೇಕಾದ ಕವನ ಎಂದು ಹೇಳುವುದು ಸಾಧ್ಯವಿಲ್ಲ. ಮಕ್ಕಳ ಇಂತಹ ಬೆಳವಣಿಗೆಗೆ ಇದು ಅವಶ್ಯ ಎನಿಸುವ ಕವನ ಸಿಗಲಿಲ್ಲ. ಅಂತಹ ಕವನಗಳು ಇಲ್ಲಿ ಇಲ್ಲ. ನನ್ನ ಹುಡುಕಾಟದಲ್ಲಿ ಸಿಕ್ಕಲಿಲ್ಲ. 'ಗೋವಿನ ಹಾಡು', 'ತಿರುಕನ ಕನಸು', 'ಕಿಂದರಿಜೋಗಿ' ಇತ್ಯಾದಿಗಳ ಮಟ್ಟಕ್ಕೆ ಬರಬೇಕೆಂದು ನಿರೀಕ್ಷೆ

ಮಾಡುವುದಿಲ್ಲ. ಆದರೆ ಸಮಕಾಲೀನ ಬದುಕಿನ ಸಂದರ್ಭವನ್ನು ಆಧರಿಸಿ ಮಕ್ಕಳಿಗೆ ಹಾಡಿ ನಲಿಯಬಹುದಾದ ಒಂದು ಹಾಡನ್ನು ಯಾರೂ ಸೃಷ್ಟಿಸಿಲ್ಲ ಎನ್ನುವುದು ಸಾಹಿತ್ಯ ಸತ್ಯ!" ಈ ಉದ್ಗಾರ ಚಿಹ್ನೆ ನನ್ನದು! ಜಿ.ಪಿ.ರಾಜರತ್ನಂ, ಹೊಯಿಸಳ, ಎಚ್.ಎಸ್. ವೆಂಕಟೇಶಮೂರ್ತಿ, ಲಕ್ಷ್ಮೀನಾರಾಯಣಭಟ್ಟ, ಸುಮತೀಂದ್ರ ನಾಡಿಗ, ಆನಂದ ಪಾಟೀಲ, ಶಂ.ಗು. ಬಿರಾದಾರ, ಸಿದ್ಧಯ್ಯ ಪುರಾಣಿಕ ಮುಂತಾದ ಸಾಹಿತಿಗಳ ಪದ್ಯಗಳನ್ನು ನಮ್ಮ ಮಕ್ಕಳು ಇಷ್ಟಪಟ್ಟಿಲ್ಲವೆ? ಹಾಡಿ ನಲಿದಿಲ್ಲವೆ? ಇವರ ಪದ್ಯಗಳು ಎನ್.ಎಸ್. ರಘುನಾಥ್ ಅವರ ಕಣ್ಣಿಗೆ ಬೀಳಲಿಲ್ಲವೆ? ಬೊಳುವಾರು, ನಾ. ಡಿಸೋಜ, ಮೇವುಂಡಿ ಮಲ್ಲಾರಿ ಮುಂತಾದವರ ಗದ್ಯವನ್ನು ಓದಿ ವಾಸ್ತವದ ಚಿತ್ರಣಕ್ಕೆ ಸಾವಿರಾರು ಮಕ್ಕಳು ಕಣ್ಣೀರು ಹಾಕಿದ್ದಾರೆ. ಮನಸ್ಸು ಮಿಡಿದಿದ್ದಾರೆ. ಚಂದ್ರಶೇಖರ ಕಂಬಾರರ ನಾಟಕಗಳಿಗೆ ಕುಣಿದಿದ್ದಾರೆ. ಆದರೆ ಇಂತಹ ಯಾವ ಉದಾಹರಣೆಯೂ ಮತ್ತು ಆಧುನಿಕ ಕಾಲದಲ್ಲಿ ಶ್ರೇಷ್ಠವಾದದ್ದನ್ನು ಚಿತ್ರಿಸಿದ ಯಾವೊಬ್ಬ ಲೇಖಕನೂ ರಘುನಾಥ ಅವರ ಕಣ್ಣಿಗೆ ಬಿದ್ದಿಲ್ಲ! ಅವರು ಮರಳಿ ಮರಳಿ 'ಪಂಚತಂತ್ರ'ದ ಪ್ರಾಣಿಕತೆಗಳ ಮೊರೆ ಹೋಗುತ್ತಾರೆ! ಅವರ ಪ್ರಾಸ್ತಾವಿಕ ಮಾತುಗಳಲ್ಲಿ ಅಡಗಿರುವ ಒಟ್ಟಾರೆ ತಾತ್ಪರ್ಯವೆಂದರೆ 'ಪಂಚತಂತ್ರ'ದಷ್ಟು ಒಳ್ಳೆಯ ಪುಸ್ತಕ ಅಥವಾ ಅದರ ಸಮೀಪ ಇಡಬಹುದಾದ ಪುಸ್ತಕ ಭಾರತದಲ್ಲಿ ಅಷ್ಟೇ ಅಲ್ಲ ಜಗತ್ತಿನಲ್ಲಿಯೇ ಇಲ್ಲ! ಪ್ರೇಮಚಂದ್, ಮಹಾಶ್ವೇತಾದೇವಿ, ರವೀಂದ್ರನಾಥ ಟ್ಯಾಗೋರ, ಸತ್ಯಜಿತ್ ರೇ, ರಸ್ಕಿನ್ ಬಾಂಡ್ ಮತ್ತು ನಮ್ಮ ಅನೇಕ ಪ್ರಾದೇಶಿಕ ಲೇಖಕರು ಮಾಡಿರುವ ಸಾಧನೆ ಸಾಮಾನ್ಯವಾದುದಲ್ಲ. ಅದನ್ನು ಓದುವ ಮತ್ತು ಅರಿಯುವ ಮನಸ್ಸು ಬೇಕು ಅಷ್ಟೇ.

ಇನ್ನು ಅನೇಕ ಸಂಕಲನಗಳು ಹಾಗೂ ಸಮಗ್ರ ವಾಚಿಕೆಗಳು ಬಂದಿದ್ದು ಮಕ್ಕಳ ಸಾಹಿತ್ಯ ಅಧ್ಯಯನದ ದೃಷ್ಟಿಯಿಂದ, ಓದುಗರ ದೃಷ್ಟಿಯಿಂದ ಮಹತ್ವದ ಮಾತಾಗಿದೆ. "ಎಚ್ಚೆಸ್ವಿ ಸಮಗ್ರ ಮಕ್ಕಳ ಸಾಹಿತ್ಯ" ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯಿಂದ ೨೦೧೩ರಲ್ಲಿ ತುಂಬ ಆಕರ್ಷಕವಾಗಿ ಮುದ್ರಣಗೊಂಡಿದೆ.

೧೩

ಮಕ್ಕಳ ಸಾಹಿತ್ಯದ ಅಧ್ಯಯನ, ವಿಮರ್ಶೆ

ಡಾ. ಬಸು ಬೇವಿನಗಿಡದ

ಮಕ್ಕಳ ಸಾಹಿತ್ಯದ ಉದಯದ ಕಾಲದಿಂದ ಇಲ್ಲಿಯವರೆಗಿನ ಕೃತಿಗಳು ಸಾಕಷ್ಟು ಅಧ್ಯಯನ ಹಾಗೂ ವಿಮರ್ಶೆಗೆ ಒಳಗಾಗಿಲ್ಲವೆಂಬುದು ಮೇಲ್ನೋಟಕ್ಕೆ ಕಂಡುಬರುವ ಸತ್ಯವಾಗಿದೆ. ನಿರೀಕ್ಷಿತ ಮಟ್ಟದಲ್ಲಿ ಸಾಹಿತ್ಯ ರಚನೆಯಾಗದೆ ಇರುವುದು ಒಂದು ಕಾರಣವಾದರೆ ಅದಕ್ಕೆ ಅಂಟಿಕೊಂಡ ಅಲಕ್ಷ್ಯದ ಕಾರಣ ಮತ್ತೊಂದು. ಸಾಹಿತ್ಯದ ಚರ್ಚಾಗೋಷ್ಠಿಗಳಲ್ಲಿ, ಸಮ್ಮೇಳನ–ಸಂಕಿರಣಗಳಲ್ಲಿ ಮಕ್ಕಳ ಸಾಹಿತ್ಯ ಪ್ರಕಾರದ ಪಠ್ಯಗಳು ಅವಲೋಕನಗೊಳ್ಳುವ , ವಿವಾದಕ್ಕೀಡಾಗುವ, ಪ್ರಶಂಸೆಗೆ ಒಳಗಾಗುವ, ವಿಮರ್ಶೆಗೆ ಒಳಗಾಗುವ ಸಂದರ್ಭಗಳು ತುಂಬ ಕಡಿಮೆ ಪ್ರಮಾಣದಲ್ಲಿ ಒದಗಿವೆ. ವೈಚಾರಿಕ ನೆಲೆಗಟ್ಟು, ವಸ್ತು–ವಿನ್ಯಾಸ, ನಿರ್ವಹಣೆಯ ಬಗೆ, ಪರಿಣಾಮದ ಹಂತಗಳು ಹೀಗೆಲ್ಲ ಅನೇಕ ಪರೀಕ್ಷೆಗಳಿಗೆ ಅದು ಒಳಗಾಗಬೇಕಿತ್ತು. ಆದರೆ ಅಲ್ಲಿಷ್ಟು ಇಲ್ಲಿಷ್ಟು ಅವಲೋಕನ, ಪರಿಚಯಗಳನ್ನು ಬಿಟ್ಟರೆ ಗಂಭೀರ ಅಧ್ಯಯನ ಹಾಗೂ ವಿಮರ್ಶೆಗೆ ಅದು ಸಾಕಷ್ಟು ಒಳಗಾಗಿಲ್ಲ. ಎಲ್ಲೋ ಕೆಲವರು ಆಸ್ಥೆಯಿಂದ ತೊಡಗಿದುದನ್ನ ತಳ್ಳಿಹಾಕಲಾಗದು. ಆದರೆ ಸಾಹಿತ್ಯ ರಂಗದ ಮುಖ್ಯಧಾರೆಯಾಗಲಿ, ಪ್ರಾತಿನಿಧಿಕ ಸಂಸ್ಥೆಗಳಾಗಲಿ ಒಂದು ಬಗೆಯ ದಿವ್ಯ ಮೌನವನ್ನೇ ತಳೆದಿವೆ ಎಂದರೆ ತಪ್ಪಾಗದು. ಮಕ್ಕಳ ಸಾಹಿತ್ಯದ ವಾತಾವರಣ ಇನ್ನೂ ಅರ್ಥಪೂರ್ಣರೀತಿಯಲ್ಲಿ ನಿರ್ಮಾಣವಾಗಬೇಕಾಗಿದೆ. ಆ ಆಲೋಚನೆಗಳು ಚರ್ಚೆಗಳಿಗೆ ತೆರೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಮಕ್ಕಳ ಸಾಹಿತ್ಯಲೋಕವನ್ನು ಆದರದಿಂದ ಕಾಣುವ ನವೋದಯ ಕಾಲದ ಸಮಗ್ರ ನೋಟ ಮತ್ತೆ ತೆರೆದುಕೊಳ್ಳಬೇಕಾದ ಅಗತ್ಯವಿದೆ. ಸಿಸು ಸಂಗಮೇಶ ಮತ್ತು ಅವರ ಸಮಕಾಲೀನರು ಕುವೆಂಪು ಅವರ ಪರಂಪರೆಯನ್ನು ತಮ್ಮದೆ ಆದ ಸೀಮಿತ ಚೌಕಟ್ಟಿನಲ್ಲಿ ಅಳವಡಿಸಲು ಪ್ರಯತ್ನಪಟ್ಟರು. ಸಿಸು ಸಂಗಮೇಶ ಅವರು ಮಕ್ಕಳ ಸಾಹಿತ್ಯವೆಂಬ ಪ್ರಕಾರವನ್ನು ಜೀವಂತವಾಗಿ ಇಡುವ, ಅದಕ್ಕೆ ಒಂದು ಮಾನ್ಯತೆ ಒದಗಿಸುವ, ಅಖಿಲಭಾರತ ಸಾಹಿತ್ಯ ಸಮ್ಮೇಳನ –ಸಾಹಿತ್ಯ ಅಕಾಡೆಮಿಗಳಲ್ಲಿ ಅದಕ್ಕೆ ಸ್ಥಾನ ಒದಗಿಸಿಕೊಡುವ ಪ್ರಯತ್ನ ಮಾಡದಿದ್ದರೆ ಪ್ರಾಯಶಃ ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಇಂದು ಅಸ್ತಿತ್ವದಲ್ಲಿರಲು ಕಷ್ಟಸಾಧ್ಯವಿತ್ತು.

ಆದರೆ ವ್ಯಕ್ತಿಗತ, ಸ್ವಕೇಂದ್ರಿತ, ಸಂಕೀರ್ಣ ಪ್ರತಿಮೆಗಳಿಂದೊಡಗೂಡಿದ ನವ್ಯ ಬರವಣಿಗೆಯಲ್ಲಿ ಮಕ್ಕಳ ಸಾಹಿತ್ಯಕ್ಕೆ ಅವಕಾಶ ಲಭ್ಯವಾಗಲಿಲ್ಲ. ಮಕ್ಕಳ ಬಾಲ್ಯದ ದಟ್ಟ ಅನುಭವಗಳನ್ನೆಲ್ಲ ಅವರು ತಮ್ಮ ಸಾಹಿತ್ಯದಲ್ಲಿ ಉಪಯೋಗಿಸಿಕೊಂಡರೂ ಮಕ್ಕಳ ಲೋಕದ ಕಡೆ ದೃಷ್ಟಿ

ಬೀರಲಿಲ್ಲ. ಮಹತ್ವದ ಲೇಖಕರೆಲ್ಲ ಇತ್ತ ಕಡೆ ಗಮನ ಹರಿಸದ ಕಾರಣಕ್ಕಾಗಿ ಈ ಅವಧಿಯಲ್ಲಿ ಮಕ್ಕಳ ಸಾಹಿತ್ಯ ಕುಂಠಿತವಾಯಿತು. ಹೊಸ ಹೊಸ ಪ್ರಯೋಗಗಳಿಗೆ ಆಸ್ಪದ ಸಿಗಲಿಲ್ಲ. ಕೃತಿಗಳು ಚರ್ಚಿತವಾಗಲಿಲ್ಲ. ನವ್ಯದ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯ ಅಲಕ್ಷಿತವಾದದ್ದನ್ನು ಕಂಡು ಆ ಕಡೆ ಒಲವಿದ್ದ ಸಿಸು ಸಂಗಮೇಶರಂತಹ ಲೇಖಕರು ಅದನ್ನು ರಕ್ಷಿಸುವ ಪಣತೊಟ್ಟರು, ಶಿಕ್ಷಕರು ಶಾಲಾವಾತಾವರಣದಲ್ಲಿ ಮಕ್ಕಳ ಸಾಹಿತ್ಯದ ಕನಸುಗಳನ್ನು ನನಸುಮಾಡಿಕೊಳ್ಳಲು ದಾರಿಮಾಡಿಕೊಂಡರು. ಅವರೊಂದಿಗೆ ಅಪಾರ ಸಂಖ್ಯೆಯಲ್ಲಿ ಶಿಕ್ಷಕ ಸಮುದಾಯ ಆಸ್ಥೆ ತೋರಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಹೀಗೆ ದೊಡ್ಡ ಸಂಖ್ಯೆಯಲ್ಲಿ ಶಿಕ್ಷಕರು ಮಕ್ಕಳ ಸಾಹಿತ್ಯದತ್ತ ಅಕ್ಕರೆ ತೋರಿದುದು ಕಾಣಿಸುತ್ತದೆ. ಕಂಚ್ಯಾಣಿ ಶರಣಪ್ಪ, ಪಳಕಳ ಸೀತಾರಾಮ ಭಟ್ಟ ಮುಂತಾದವರ ಮುಂದಾಳತ್ವದಲ್ಲಿ ವಿಪುಲ ಸಂಖ್ಯೆಯ ಪುಸ್ತಕಗಳು ಶಿಕ್ಷಕ ಸಾಹಿತಿಗಳಿಂದ ಪ್ರಕಟಗೊಂಡವು. ಆದರೆ ಗುಣಮಟ್ಟ, ಪ್ರಯೋಗಶೀಲತೆ, ಮುಂತಾದವುಗಳನ್ನು ಕಾಯ್ದುಕೊಳ್ಳದೆ ಹೋದ ಪರಿಣಾಮವಾಗಿ ತುಂಬ ಮೌಲಿಕವಾದ ಪೈರು ಬರದೆ ಹೋಯಿತು. ಹೀಗೆ ಹೇಳಿಯೂ ಶಿಕ್ಷಕ ಸಾಹಿತಿಗಳು ಸೃಷ್ಟಿಸಿದ ಸಾಹಿತ್ಯ ಆ ಕಾಲಘಟ್ಟದ ಶೂನ್ಯವನ್ನು ತುಂಬಲು ಸಂಪೂರ್ಣವಾಗಿ ಸಹಕಾರಿಯಾಯಿತೆಂದರೆ ತಪ್ಪಲ್ಲ.

ನವ್ಯೋತ್ತರದ ಫಸಲು ನವೀನ ಪ್ರಯೊಗ ಹಾಗೂ ವಸ್ತು ವೈವಿಧ್ಯತೆಯಿಂದ ಸಾಕಷ್ಟು ಆಶಾದಾಯಕ ವಾತಾವರಣ ನಿರ್ಮಿಸಿತು. ಮುಂಚೂಣಿಯ ಅನೇಕ ಲೇಖಕರು ಮಕ್ಕಳ ಪ್ರಕಾರದಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ಹಿರಿಯರ ಸಾಹಿತ್ಯ ಪ್ರಪಂಚದಲ್ಲಿಯೇ ಸಾರಸ್ವತ ಲೋಕ ಯಾವಾಗಲೂ ಮುಳುಗಿರುವುದಕ್ಕೆ ಅನೇಕ ಕಾರಣಗಳಿರಬಹುದು. ಮಕ್ಕಳ ಸಾಹಿತ್ಯ ಕೇವಲ ಮಕ್ಕಳಿಗಾಗಿದ್ದು, ಆಳ ವಿಸ್ತಾರಕ್ಕೆ ಅವಕಾಶವಿಲ್ಲವೆಂತಲೋ, ಲೇಖಕನೊಬ್ಬ ತನ್ನ ಅಭಿವ್ಯಕ್ತಿಯ ಹಲವು ಸಂಗತಿಗಳನ್ನು ಹೊರಹಾಕಲು ಸಾಧ್ಯವಿಲ್ಲವೆಂತಲೋ, ಮಕ್ಕಳಿಗಾಗಿ ಬರೆದದ್ದನ್ನು ಕೇವಲ ಮಕ್ಕಳು ಮಾತ್ರ ಓದುತ್ತಾರೆಂತಲೋ ಯೋಚಿಸುವ ಬಹುಪಾಲು ಲೇಖಕರು ಈ ಕಡೆಗೆ ಹೊರಳದೆ ಹೋದುದು ಕಾಣುತ್ತದೆ. ಎಲ್ಲ ಲೇಖಕರು ಮಕ್ಕಳಿಗಾಗಿ ಬರೆಯಲೇಬೇಕೆಂದಿಲ್ಲ. ಆದರೆ ಆ ಸಂವೇದನೆಗೆ ಮಿಡಿದವರು ಆ ಸೃಷ್ಟಿಯಲ್ಲಿ ತೊಡಗಿಕೊಂಡರೆ ತಪ್ಪೇನಿಲ್ಲ. ಟಾಲ್‌ಸ್ಟಾಯ್, ಪ್ರೇಮಚಂದ್, ರುಡ್‌ಯಾರ್ಡ ಕಿಪ್ಲಿಂಗ್, ಚಾರ್ಲ್ಸ್‌ಡಿಕನ್ಸ್, ಸ್ಟೀವನ್‌ಸನ್, ಮಹಾಶ್ವೇತಾದೇವಿ, ರವೀಂದ್ರನಾಥ ಟ್ಯಾಗೋರ್, ಕುವೆಂಪು, ದಿನಕರ ದೇಸಾಯಿ, ವೈದೇಹಿ ಮುಂತಾದ ಲೇಖಕರು ಮಕ್ಕಳಿಗಾಗಿ ಲವಲವಿಕೆಯಿಂದ ಬರೆದಿದ್ದಾರೆ. ಹೊಸ ಹೊಸ ಕಲ್ಪನಾ ಲೋಕಗಳನ್ನು ಕೊಳ್ಳೆಹೊಡೆದಿದ್ದಾರೆ, ಕಣ್ಣೀರಿಗೆ ಮಿಡಿದಿದ್ದಾರೆ. ಹೀಗೆ ಸೃಷ್ಟಿಗೊಂಡು ಮಕ್ಕಳನ್ನು ಹಾಗೂ ಹಿರಿಯರನ್ನು ರಂಜಿಸಿದ ಸಾಹಿತ್ಯ ಅಧ್ಯಯನ ಹಾಗೂ ವಿಮರ್ಶೆಗೊಳಪಡಬೇಕಾದದ್ದು ಅಗತ್ಯವಾಗಿದೆ. ಆದರೆ ಬಹುತೇಕ ಸಂದರ್ಭಗಳಲ್ಲಿ ಇದು ಆಗುತ್ತಿಲ್ಲ. ಪತ್ರಿಕೆಗಳಲ್ಲಿನ ಸೀಮಿತ ಜಾಗದ ನೆಪದಲ್ಲಿ ಮಕ್ಕಳ ಪುಸ್ತಕಗಳಂತೂ ಹೆಚ್ಚಾಗಿ ವಿಮರ್ಶೆಗೆ ಒಳಪಡುತ್ತಿಲ್ಲ.

ಪಿಎಚ್. ಡಿ, ಎಂ. ಫಿಲ್ ಮುಂತಾದ ಪದವಿಗಳಿಗಾಗಿ ಹಲವು ವಿದ್ಯಾರ್ಥಿಗಳಾದರೂ ಮಕ್ಕಳ ಸಾಹಿತ್ಯಕ್ಕೆ ಸಂಬಂಧಪಟ್ಟ ಸಂಶೋಧನೆಗಳನ್ನು ಕೈಗೊಂಡಿರುವುದು ಸಮಾಧಾನದ ಸಂಗತಿಯಾಗಿದೆ. ಕಾಲಕಾಲಕ್ಕೆ ಅಧ್ಯಯನ, ವಿಚಾರಗಳ ಕೊಡುಕೊಳ್ಳುವಿಕೆ, ವಿಮರ್ಶೆ, ಅವಲೋಕನ, ಪ್ರತಿಕ್ರಿಯೆ ಇತ್ಯಾದಿ ಬರುತ್ತಿದ್ದರೆ ಮಕ್ಕಳ ಸಾಹಿತ್ಯಕ್ಕೂ ಒಂದು ಗತಿಶೀಲತೆ ಪ್ರಾಪ್ತವಾಗುತ್ತದೆ. ಅದು ಈಗ ಅಸ್ಪಷ್ಟವಾಗಿಯಾದರೂ ಕಾಣುತ್ತಿರುವುದು, ಆಕಾರವೊಂದು

ಮೂಡುತ್ತಿರುವುದು ಆಶಾದಾಯಕ ಸಂಗತಿಯಾಗಿದೆ. ಮಕ್ಕಳ ಬರವಣಿಗೆಯನ್ನು ಕುರಿತು ಅನೇಕ ಹಿರಿಯ ಲೇಖಕರು ಸಂದರ್ಭೋಚಿತ ಲೇಖನಗಳನ್ನು ಬರೆದಿದ್ದಾರೆ. ಆ ಬರಹಗಳನ್ನು ಸಂಗ್ರಹಿಸುವ ಕೆಲಸವಾದರೆ ಒಳ್ಳೆಯದು. ಮುಖ್ಯವಾಗಿ ಪಂಜೆ ಮಂಗೇಶರಾಯ, ಬಿ. ಎಂ. ಶ್ರೀ, ಶಿವರಾಮ ಕಾರಂತ, ಜಿ. ಪಿ. ರಾಜರತ್ನಂ, ವಿ, ಕೃ ಗೋಕಾಕ, ಮುಂತಾದ ಲೇಖಕರು ಮಕ್ಕಳ ಸಾಹಿತ್ಯ ಕುರಿತಂತೆ ಆಡಿದ ಮಾತುಗಳು, ಅಲ್ಲಲ್ಲಿ ಲೇಖನಗಳು, ಮುನ್ನುಡಿ–ಪ್ರತಿಕ್ರಿಯೆಗಳು ಮಹತ್ವವಾದವುಗಳು. ಯಾಕೆಂದರೆ ಅವು ಮಕ್ಕಳ ಸಾಹಿತ್ಯದ ಇರವನ್ನು ಗಟ್ಟಿಮಾಡಿದಂತಹ, ಸಾರಸ್ವತ ಲೋಕಕ್ಕೆ ಇದರ ಅಸ್ತಿತ್ವವನ್ನು ತೋರಿಸಿಕೊಟ್ಟಂತಹ ಚಾರಿತ್ರಿಕ ಸಂಗತಿಗಳಾಗಿವೆ. ಮಕ್ಕಳ ಸಾಹಿತ್ಯವನ್ನು ಕೇವಲ ಮಕ್ಕಳು ಮಾತ್ರ ಓದುವುದಾಗಿರದೆ ಅದು ಮಕ್ಕಳು ಹಾಗೂ ಹಿರಿಯರು ಕೂಡಿಯೆ ತೊಡಗಿಕೊಳ್ಳುವ ಒಂದು ಕ್ರಿಯೆಯಾಗಿದೆ.

'ಮಕ್ಕಳ ಸಾಹಿತ್ಯ–ನಾನು ಕಂಡಂತೆ' ಎನ್ನುವ ಸಿಸು ಸಂಗಮೇಶ ಅವರ ಲೇಖನಗಳು, ಪತ್ರಿಕಾ ಹೇಳಿಕೆಗಳನ್ನೊಳಗೊಂಡ ಸಂಗ್ರಹ ೧೯೯೬ರಲ್ಲಿ ಪ್ರಥಮ ಮುದ್ರಣವಾಗಿ ವಿಜಯಪುರದ ಭಾರತಿ ಸಾಹಿತ್ಯ ಭಂಡಾರದಿಂದ ಪ್ರಕಟಗೊಂಡಿತು. ಕನ್ನಡದಲ್ಲಿ ಮಕ್ಕಳಸಾಹಿತ್ಯ ಕಡೆಗಣಿಸುತ್ತಿರುವುದನ್ನು ಟೀಕಿಸುವ 'ಕನ್ನಡದಲ್ಲಿ ಮಕ್ಕಳ ಸಾಹಿತ್ಯ ಇಲ್ಲವೆ ?', ಪುಸ್ತಕ ಪ್ರಕಟನೆಯ ತೊಂದರೆಗಳನ್ನು ಎತ್ತಿಕೊಂಡು 'ಮಕ್ಕಳ ಸಾಹಿತ್ಯ ಪ್ರಕಾಶನದ ಸಮಸ್ಯೆಗಳು', ಪ್ರಾದೇಶಿ ಭಾಷೆಗಳ ಸಾಹಿತ್ಯ ಅವಲೋಕನ ಮಾಡುವ 'ಭಾರತೀಯ ಭಾಷೆಗಳಲ್ಲಿಯ ಬಾಲ ಸಾಹಿತ್ಯದ ಪಕ್ಷಿನೋಟ' ಮುಂತಾದ ಲೇಖನಗಳು ೨೨೧ ಪುಟಗಳ ಈ ಪುಸ್ತಕದಲ್ಲಿವೆ. ಉತ್ತರ ಭಾರತದ ಅನೇಕ ಲೇಖಕರ ಸಂಪರ್ಕ ಸಿಸು ಸಂಗಮೇಶ ಅವರ ಜೊತೆಗಿದ್ದುದನ್ನು ಈ ಲೇಖನಗಳು ತಿಳಿಸುತ್ತವೆ. ಹರಿದ್ವಾರದ ಎನ. ಕೆ. ಪಾಲಿವಾಲಾ, ಸಹರಾನಪುರದ ಇಂದಿರಾಗೌಡ, ದಿಲ್ಲಿಯ ಜಯಪ್ರಕಾಶ ಭಾರತಿ, ಹರಿಕೃಷ್ಣ ದೇವಸರೆ, ಅಲಹಾಬಾದಿನ ಶಕುಂತಲಾ ಸಿರೋಟಿಯಾ ಮುಂತಾದವರ ಪರಿಚಯ ಹಾಗೂ ಹಿಂದಿ ಬಾಲ ಸಾಹಿತ್ಯದ ಕೆಲವು ಆಯಾಮಗಳು ಅವರಿಗೆ ದೊರೆತುದನ್ನು ಇಲ್ಲಿ ಕಾಣಬಹುದು. ತಾವು ಆಗಾಗ ಬರೆದ ಒಟ್ಟು ೨೩ ಲೇಖನಗಳನ್ನು ಸಂಕಲನಮಾಡಿ ಪ್ರಕಟಿಸಿರುವುದು ಅವರ ಸಾಹಿತ್ಯ ರಚನೆಯ ಪ್ರೇರಣೆಗಳನ್ನು ತಿಳಿಯಲಿಕ್ಕೆ ನೆರವು ನೀಡುತ್ತದೆ.

'ಮಕ್ಕಳ ಸಾಹಿತ್ಯ ಏಕೆ ಬೇಕು?'(೧೯೯೫), 'ಮಕ್ಕಳ ಸಾಹಿತ್ಯ – ಕೆಲವು ಅಧ್ಯಯನಗಳು'(೨೦೦೫), 'ಮಕ್ಕಳ ಸಾಹಿತ್ಯ – ಅಂದು ಇಂದು'(೨೦೦೮) ಇವು ನಿರ್ಮಲ ಪ್ರಕಾಶನ, ತಿಪಟೂರು ಇವರಿಂದ ಪ್ರಕಟಗೊಂಡ ಟಿ. ಎಸ್, ನಾಗರಾಜಶೆಟ್ಟಿ ಅವರ ಕೃತಿಗಳು. ಲಾಗಾಯತಿನಿಂದ ಮಕ್ಕಳ ಸಾಹಿತ್ಯದ ಕೃಷಿ ಮಾಡುತ್ತ ಬಂದಿರುವ ನಾಗರಾಜಶೆಟ್ಟಿ ಅವರು ತಾವು ಹಲವು ಕಡೆ ನೀಡಬೇಕಾಗಿ ಬಂದ ಉಪನ್ಯಾಸ, ವಿಚಾರ, ಭಾಷಣ, ಅವಲೋಕನ, ವಿಮರ್ಶೆಗಳನ್ನು ಈ ಸಂಗ್ರಹದಲ್ಲಿ ತಂದಿದ್ದಾರೆ. ಎಂ. ವಿ. ಸೀತಾರಾಮಯ್ಯ ಹಾಗೂ ಜಿ.ಪಿ. ರಾಜರತ್ನಂ ಅವರ ತೌಲನಿಕ ಅಧ್ಯಯನದ ಲೇಖನ 'ಸಂಚಯ' ಸಾಹಿತ್ಯಕ ಪತ್ರಿಕೆಯಲ್ಲಿ ಪ್ರಕಟವಾಗಿದೆ. 'ಮಕ್ಕಳ ಸಾಹಿತ್ಯ – ಕೆಲವು ಗ್ರಹಿಕೆಗಳು' ಎನ್ನುವ ಇನ್ನೊಂದು ಲೇಖನ ಕೂಡ ಗಮನಿಸುವಂತಹದು.

ನವೋದಯದಿಂದ ಹಿಡಿದು ವರ್ತಮಾನದವರೆಗಿನ ಬಾಲ ಸಾಹಿತ್ಯದ ವಿಮರ್ಶೆ ಹಾಗೂ ಅವಲೋಕನ ನಡೆದಿದ್ದು ಕಡಿಮೆ. ಇಲ್ಲಿಯವರೆಗೆ ಬಂದ ಸಾಹಿತ್ಯ ಏನನ್ನು ಧ್ವನಿಸುತ್ತದೆ,

ಯಾವ ಯಾವ ಅಗತ್ಯಗಳಿಗೆ ತುಡಿದಿದೆ ಎನ್ನುವದರ ಸ್ಥೂಲ ನೋಟವನ್ನು ಕೊಡುವ 'ಮಕ್ಕಳ ಸಾಹಿತ್ಯ ಶತಮಾನ' ಎಂಬ ಪುಸ್ತಕ ಮಕ್ಕಳ ಸಾಹಿತ್ಯದ ಅಧ್ಯಯನ, ವಿಮರ್ಶೆಯಲ್ಲಿ ಒಂದು ಮಹತ್ವದ ಪ್ರಕಟನೆಯಾಗಿದೆ. 'ಸಂಧ್ಯಾ' ಗೆಳೆಯರು ಆಸಕ್ತರ ಸಹಕಾರದೊಂದಿಗೆ ರಾಜ್ಯದ ವಿವಿಧೆಡೆ ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸಿ ಆ ಭಾಷಣಗಳನ್ನು ಬರೆಸಿ ಪ್ರಕಟಿಸುವ ಸಾಹಸ ಮಾಡಿದ್ದಾರೆ. ಆನಂದ ಪಾಟೀಲ ಮತ್ತು ನ. ರವಿಕುಮಾರ ಸಂಪಾದಿಸಿರುವ ಇದು ಬೆಂಗಳೂರಿನ ಅಭಿನವದಿಂದ ೨೦೦೧ರಲ್ಲಿ ಪ್ರಕಟವಾಯಿತು. ಮಂಗಳೂರಿನ ಮುಲ್ಕಿಯಲ್ಲಿ ನಡೆದ ಸಮಾರಂಭದಲ್ಲಿ ಹಿರಿಯ ಲೇಖಕ ಕಯ್ಯಾರ ಕಿಞ್ಞಣ್ಣರೈ ಅವರು ಬಿಡುಗಡೆ ಮಾಡಿ ಇದರ ಹಿಂದಿನ ಪರಿಶ್ರಮವನ್ನು ಕೊಂಡಾಡಿದರು. 'ನವೋದಯದ ನೆರಳಿನಲ್ಲಿ ಮಕ್ಕಳ ಸಾಹಿತ್ಯ' ಎನ್ನುವ ಎನ್. ಶ್ರೀನಿವಾಸ ಉಡುಪ ಅವರ ಲೇಖನ, 'ಮಕ್ಕಳಿಗಾಗಿ ತುಡಿದ ಹಿರಿಯರು' ಎನ್ನುವ ಆರ್. ವಿ. ಭಂಡಾರಿ ಅವರ ಲೇಖನ, 'ಮಕ್ಕಳ ಸಾಹಿತ್ಯದಲ್ಲಿ ಹೊಸಗಾಲ' ಹೆಸರಿನ ರಾಮಮೂರ್ತಿ ತೆಮೆಮನೆ ಅವರ ಬರಹ, 'ಮಕ್ಕಳ ಸಾಹಿತ್ಯಕ್ಕಾಗಿ ತುಡಿದ ಹಿರಿಯರು' ಎನ್ನುವ ಡಾ. ಶ್ರೀಪಾದ ಶೆಟ್ಟಿ ಅವರ ಲೇಖನ ಮುಂತಾದವು ತುಂಬಾ ಮೌಲಿಕವಾಗಿವೆ. ಅದೇ ರೀತಿ ಟಿ. ಎಸ್. ನಾಗರಾಜಶೆಟ್ಟಿ, ಎಂ. ಎಸ್. ನಾಗೇಂದ್ರ, ಆನಂದ ಪಾಟೀಲ, ಬಸು ಬೇವಿನಗಿಡದ, ಸುರೇಶ ಕುಲಕರ್ಣಿ, ಆರ್. ಕೆ. ಶಾನುಭೋಗ, ಎ. ಎಸ್. ಶಂಕರನಾರಾಯಣ ಅವರ ಲೇಖನಗಳು ಕನ್ನಡ ಮಕ್ಕಳ ಸಾಹಿತ್ಯದ ಒಂದು ಸ್ಪಷ್ಟನೋಟವನ್ನು ಒದಗಿಸುತ್ತವೆ.

ಇನ್ನು ಅನೇಕ ಪುಸ್ತಕಗಳಲ್ಲಿ ಮುನ್ನುಡಿಯಾಗಿ ಬಂದ ಕೆಲವು ಲೇಖನಗಳು ಮಕ್ಕಳ ಸಾಹಿತ್ಯದ ವಿವಿಧ ಆಯಾಮಗಳನ್ನು ಪರಿಚಯಿಸುವಲ್ಲಿ ನೆರವಾಗಿವೆ. ೧೯೯೧ರಲ್ಲಿ ಪ್ರಕಟವಾಗಿರುವ ಬೊಳುವಾರು ಅವರ ಸಂಪಾದಿತ 'ತಟ್ಟು ಚಪ್ಪಾಳೆ ಪುಟ್ಟ ಮಗು' ಸಂಕಲನದಲ್ಲಿ ಬೊಳುವಾರು ಅವರ ಪ್ರಾಸ್ತಾವಿಕ ಮಾತುಗಳು ತುಂಬಾ ಅಧ್ಯಯನಪರ ನೋಟಗಳನ್ನು ಒಳಗೊಂಡಿವೆ. ಅದೇ ರೀತಿ ಶಿವರಾಮ ಕಾರಂತರ ಮುನ್ನುಡಿ ಕೂಡ ಮಹತ್ವವಾದುದು. ವಿ. ಗ. ನಾಯಕ ಅವರು ಕಯ್ಯಾರ ಕಿಞ್ಞಣ್ಣರೈ ಅವರ ಮಕ್ಕಳ ಕಾವ್ಯದ ಕುರಿತು ಬರೆದಿರುವ ವಿಮರ್ಶೆಯ ಲೇಖನಗಳಂತಹವು ಬಿಡಿಬಿಡಿಯಾಗಿ ಅಲ್ಲಲ್ಲಿ ಪ್ರಕಟಗೊಂಡಿದ್ದರೂ ಅವುಗಳು ಉಂಟುಮಾಡಿರುವ ಪರಿಣಾಮ ವಿಶೇಷವಾದುದೇ. ಇಂಥ ಲೇಖನಗಳನ್ನು ಕೂಡಿಸಿ ಒಂದು ಪುಸ್ತಕ ಪ್ರಕಟಿಸಿದರೆ ಮಕ್ಕಳ ಸಾಹಿತ್ಯದ ಅಧ್ಯಯನದ ದೃಷ್ಟಿಯಿಂದ ತುಂಬಾ ಪ್ರಯೋಜನಕಾರಿಯಾದುದು. ಅನೇಕ ಸಂಶೋಧನಾ ಪ್ರಬಂಧಗಳಲ್ಲಿ ಒಂದು ಅಥವಾ ಎರಡು ಅಧ್ಯಾಯಗಳು ಆ ಲೇಖಕರ ಮಕ್ಕಳ ಸಾಹಿತ್ಯವನ್ನು ಗಮನದಲ್ಲಿರಿಸಿಕೊಂಡಿವೆ. ಇವುಗಳನ್ನು ಕೂಡ ಒಟ್ಟು ಮಾಡಬೇಕಾದ ಅಗತ್ಯ ಇದೆ. ದಿನಕರ ದೇಸಾಯಿ ಕುರಿತಂತೆ ಡಾ. ಶ್ರೀಪಾದ ಶೆಟ್ಟಿ ಅವರ ಪ್ರಬಂಧ, ಎಂ. ಎಸ್, ಪುಟ್ಟಣ್ಣ ಕುರಿತು ಡಾ. ಎಚ್. ಎಸ್. ಸುಜಾತಾ ಅವರ ಪ್ರಬಂಧ, ದುರ್ಗಸಿಂಹನ ಪಂಚತಂತ್ರವನ್ನು ಕುರಿತು ಡಾ. ವರದರಾಜ ಹುಯಿಲಗೋಳ ಅವರ ಪ್ರಬಂಧ, ಸಿದ್ದಯ್ಯ ಪುರಾಣಿಕ ಅವರನ್ನು ಕುರಿತ ಡಾ. ನಾಗಾಬಾಯಿ ಬುಳ್ಳಾ ಅವರ ಪ್ರಬಂಧ, ಎಸ್. ಜಿ. ನರಸಿಂಹಾಚಾರ್ಯ ಕುರಿತು ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ ಅವರ ಲೇಖನ, ದೇವುಡು ಕುರಿತು ಡಾ. ಕುಮಾರ ಚಲ್ಯ ಅವರ ಪ್ರಬಂಧ ಮುಂತಾದುವು ಒಳ್ಳೆಯ ಅಧ್ಯಯನಗಳಿಗೆ ಸಾಕ್ಷಿಯಾಗಿವೆ. 'ನಿತ್ಯ ಕಿಶೋರತೆ – ಮಕ್ಕಳ ಸಾಹಿತ್ಯ : ಕುವೆಂಪು ಸಾಂಸ್ಕೃತಿಕ ರಾಜಕಾರಣ' ಎನ್ನುವ ಡಾ. ಪಿ. ಸಂಗೀತಾ ಅವರ ಎಂ.ಫಿಲ್ ಪ್ರಬಂಧದ ಪುಸ್ತಕರೂಪ ಕೂಡ ಒಂದು ಒಳ್ಳೆಯ ಅಧ್ಯಯನಕ್ಕೆ ಸಾಕ್ಷಿಯಾಗಿದೆ. ಇದನ್ನು ವಿಹಾ ಪುಸ್ತಕ

ಪ್ರಕಾಶನ ೨೦೧೧ರಲ್ಲಿ ಪ್ರಕಟಿಸಿದೆ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರ ಇವರು ೨೦೧೪ರಲ್ಲಿ ಪ್ರಕಟಿಸಿರುವ 'ಎಚ್ ಎಸ್ ವಿ ಕಾವ್ಯ : ಒಂದು ಅಧ್ಯಯನ' ಎನ್ನುವ ಟಿ.ಪಿ. ಅಶೋಕ ಅವರ ವಿಮರ್ಶಾ ಕೃತಿ ವೆಂಕಟೇಶಮೂರ್ತಿ ಅವರ ಮಕ್ಕಳ ಕಾವ್ಯವನ್ನು ಕುರಿತೂ ಚರ್ಚಿಸಿದೆ. ನಾ ಡಿಸೋಜ ಅವರ ಸಾಹಿತ್ಯ ಕುರಿತು ಅಧ್ಯಯನಗಳು ಡಾ. ಗುರುರಾವ್ ಬಾಪಟ್, ವಿಲಿಯಂ, ಮಾರ್ಷಲ್ ಶರಾಮ್ ಅವರು ಸಂಪಾದಿಸಿದ 'ಮಲೆನಾಡಿಗ' ಗ್ರಂಥದಲ್ಲಿ ಸಂಕಲನಗೊಂಡಿವೆ. ಇದಲ್ಲದೆ ಗಂಗೂ ಮೂಲಿಮನಿ ಅವರು ಪಿಎಚ್. ಡಿ ಪದವಿಗಾಗಿ ನಾ ಡಿಸೋಜ ಅವರ ಮಕ್ಕಳ ಸಾಹಿತ್ಯ ಕುರಿತು ಅಧ್ಯಯನ ಮಾಡಿದ್ದಾರೆ.

ಇದಲ್ಲದೆ 'ಈಶ್ವರ ಕಮ್ಮಾರ ಅವರ ಮಕ್ಕಳ ಕವಿತೆಗಳು' ಹೆಸರಿನಲ್ಲಿ ಮೀರಾಬಾಯಿ ಕೆ ಅವರು ಎಂ.ಫಿಲ್ ಪದವಿಗಾಗಿ ಅಧ್ಯಯನ ನಡೆಸಿ ಪುಸ್ತಕ ಪ್ರಕಟಿಸಿದ್ದಾರೆ. ಇದು ಮೈಸೂರಿನ ವೀಣಾ ಪ್ರಕಾಶನದಿಂದ ೨೦೧೧ರಲ್ಲಿ ಪ್ರಕಟವಾಗಿದೆ. 'ಎಂ. ಡಿ. ಗೋಗೇರಿ : ಸಮಗ್ರ ಸಾಹಿತ್ಯ' ಶೀರ್ಷಿಕೆಯಲ್ಲಿ ಎಂ. ಡಿ ಗೋಗೇರಿ ಅವರ ಸಾಹಿತ್ಯವನ್ನು ಅಭ್ಯಾಸ ಮಾಡಲಾಗಿದೆ. ಮೇತ್ರೇಯಿಣಿ ಗದಿಗೆಪ್ಪಗೌಡರ್ ಅವರು ಪಿ ಎಚ್ ಡಿ ಪದವಿಗಾಗಿ ಸಂಶೋಧನೆ ಕೈಗೊಂಡು ಪುಸ್ತಕ ಪ್ರಕಟಿಸಿದ್ದಾರೆ. ೨೦೧೦ರಲ್ಲಿ ಬೆಂಗಳೂರಿನ ಹೇಮಂತ ಸಾಹಿತ್ಯ ಪ್ರಕಾಶನ ಈ ಕೃತಿಯನ್ನು ಹೊರತಂದಿದೆ. ೫೩೦ ಪುಟಗಳಿರುವ ಪುಸ್ತಕದಲ್ಲಿ ಸುಮಾರು ನೂರು ಪುಟಗಳು ಗೋಗೇರಿ ಅವರ ಮಕ್ಕಳ ಸಾಹಿತ್ಯವನ್ನು ಅವಲೋಕಿಸಿವೆ. ವಿನೋದ ಹಾಗೂ ಗ್ರಾಮೀಣ ಸಂವೇದನೆಯ ಅವರ ಕಾವ್ಯವನ್ನು ರಾಷ್ಟ್ರೀಯತೆ-ನಾಡಭಕ್ತಿ ಉದ್ದೀಪಿಸುವ ಹಾಡುಗಳು, ಕಥನಕವನಗಳು, ಶೈಕ್ಷಣಿಕ ಗೀತೆಗಳು, ಪೌರಾಣಿಕ ಹಾಗೂ ವ್ಯಕ್ತಿಚಿತ್ರಗಳು, ಅಟಿಕೆಗಳು ಎಂದೆಲ್ಲ ವಿಂಗಡಿಸಲಾಗಿದೆ.

ಸಿಸು ಸಂಗಮೇಶ ಅವರನ್ನು ಕುರಿತು ಬಂದ ಅಧ್ಯಯನಗಳಲ್ಲಿ ಡಾ. ರಾಜೇಂದ್ರ ಗಡಾದ ಅವರ 'ಮಕ್ಕಳ ಸಾಹಿತ್ಯ ಹಾಗೂ 'ಸಿಸು ಸಂಗಮೇಶ' ಎಂಬ ಗ್ರಂಥ ಮುಖ್ಯವಾದುದು. ರಾಜೇಂದ್ರ ಗಡಾದ ಅವರು ಸಿಸು ಸಂಗಮೇಶ ಅವರ ಸಮಗ್ರ ಸಾಹಿತ್ಯವನ್ನು ಅವಲೋಕನಕ್ಕೆ ಒಳಪಡಿಸುವುದರ ಮೂಲಕ ಮತ್ತು ಮಕ್ಕಳ ಸಾಹಿತ್ಯದ ಪರಂಪರೆಯಲ್ಲಿ ಅವರ ಮಹತ್ವದ ಸ್ಥಾನವನ್ನು ವಿಶ್ಲೇಷಿಸುವ ಹಾಗೂ ನಿರ್ದೇಶಿಸುವ ಮೂಲಕ ಅವರ ಕೃತಿಗಳಿಗೆ ನ್ಯಾಯ ಒದಗಿಸಿದ್ದಾರೆ. ಈ ಅಧ್ಯಯನ ಪಿ ಎಚ್ ಡಿ ಪದವಿಗಾಗಿ ಕೈಗೊಂಡ ಸಂಶೋಧನಾ ಪ್ರಬಂಧವಾಗಿದೆ. ಗದುಗಿನ ಸಂಗಮ ಪ್ರಕಾಶನದಿಂದ ೨೦೦೯ರಲ್ಲಿ ಇದು ಪ್ರಕಟಗೊಂಡಿದೆ. ೩೩೬ ಪುಟಗಳಲ್ಲಿ ಭಾರತೀಯ ಮತ್ತು ಕನ್ನಡ ಮಕ್ಕಳ ಸಾಹಿತ್ಯ ಪರಂಪರೆ, ಸಿಸು ಸಂಗಮೇಶರ ವ್ಯಕ್ತಿಗತ ಜೀವನ, ಅವರ ಸಾಹಿತ್ಯ ಕೃತಿಗಳ ವಿಶ್ಲೇಷಣೆ, ಅವುಗಳ ಭಾಷೆ-ಶೈಲಿ-ತಂತ್ರ ಹಾಗೂ ಮಕ್ಕಳ ಸಾಹಿತ್ಯಕ್ಕೆ ಸಿಸು ಅವರ ಕೊಡುಗೆ, ಅಧ್ಯಯನಗಳು ಮಕ್ಕಳ ಸಾಹಿತ್ಯಕ್ಕೆ ಅಹರ್ನಿಶಿ ದುಡಿದ ವ್ಯಕ್ತಿಯೊಬ್ಬರ ಬದುಕು ಹಾಗೂ ಸಾಹಿತ್ಯ ಪಥಗಳನ್ನು ಪರೀಕ್ಷೆಗೆ ಒಳಪಡಿಸಿ ಅವರ ಕೃತಿಗಳನ್ನು ಮೌಲಿಕವಾಗಿ ಅವಲೋಕಿಸಲಾಗಿದೆ. ಸಿಸು ಯಾವ ಅವರ ಕೃತಿಯೂ ಬರಹವೂ ಕಣ್ತಪ್ಪಿ ಹೋಗದಂತೆ, ಅವರ ವಸ್ತು ವಿನ್ಯಾಸಗಳು ವಿಶ್ಲೇಷಣೆಯಿಂದ ತಪ್ಪಿಸಿಕೊಳ್ಳದಂತೆ ಗಮನ ಹರಿಸಿರುವುದು ರಾಜೇಂದ್ರ ಗಡಾದ ಅವರ ಅಧ್ಯಯನ ಪ್ರೀತಿಗೆ ಸಾಕ್ಷಿಯಾಗಿದೆ. ಸಾಹಿತ್ಯ ರಚನೆ, ಪ್ರಕಾಶನ, ಮಕ್ಕಳ ಸಂಘಸಂಸ್ಥೆಗಳ ಸ್ಥಾಪನೆ, ಸರಕಾರದೊಂದಿಗೆ ಹೋರಾಟ, ಸಂಘಟನೆ ಹೀಗೆ ಹತ್ತು ಹಲವು ರೀತಿಯಲ್ಲಿ ಅಪರೂಪವೆನ್ನುವಂತೆ ಕನ್ನಡನಾಡಿನಲ್ಲಿ ಮಕ್ಕಳ

ಸಾಹಿತ್ಯ ಕುರಿತ ಚಳವಳಿಯನ್ನೇ ನಡೆಸಿದ ಸಿಸು ಸಂಗಮೇಶರ ಬರಹ ಹಾಗೂ ಹೋರಾಟಗಳನ್ನು ವಸ್ತುನಿಷ್ಠವಾಗಿ ವಿವೇಚಿಸಲಾಗಿದೆ.

ಮಕ್ಕಳ ರಂಗಭೂಮಿ ಕುರಿತು ಎರಡು ಪ್ರಬಂಧಗಳೂ ಈಗಾಗಲೇ ಬಂದಿದ್ದು ಅವು ಪ್ರಕಟವೂ ಆಗಿವೆ. ಡಾ. ಗಜಾನನ ಶರ್ಮಾ ಅವರ ಕನ್ನಡ ಮಕ್ಕಳ ನಾಟಕಗಳ ಕುರಿತ ಪ್ರಬಂಧ ಹಾಗೂ ಡಾ. ನಿಂಗು ಸೊಲಗಿ ಅವರ 'ಮಕ್ಕಳ ರಂಗಭೂಮಿ: ಪ್ರದರ್ಶನ, ಪ್ರಕ್ರಿಯೆ' ಎರಡೂ ಕೃತಿಗಳು ಗಂಭೀರ ಅಧ್ಯಯನವನ್ನು ಹೇಳುತ್ತವೆ. ಇದಲ್ಲದೆ ಡಾ. ಗಜಾನನ ಶರ್ಮಾ ಹಾಗೂ ಡಾ. ಎಸ್. ವಿ. ಕಶ್ಯಪ್ ಅವರು ಸಂಪಾದಿಸಿರುವ 'ಮಕ್ಕಳ ರಂಗಭೂಮಿ' ಕೃತಿ ಕರ್ನಾಟಕ ನಾಟಕ ಅಕಾಡೆಮಿಯಿಂದ ೨೦೧೧ರಲ್ಲಿ ಪ್ರಕಟವಾಗಿದೆ. ಕನ್ನಡ ಮಕ್ಕಳ ರಂಗಭೂಮಿಯನ್ನು ಅವಲೋಕಿಸುವ ಉಪನ್ಯಾಸ ಹಾಗೂ ವಿಚಾರಸಂಕಿರಣಗಳ ಬರಹರೂಪವಾಗಿ 'ಮಕ್ಕಳ ರಂಗಭೂಮಿ' ಪ್ರಕಟವಾಗಿದೆ ಎಂದು ಇದರ ಪ್ರಧಾನ ಸಂಪಾದಕರಾದ ಡಾ. ಬಿ. ವಿ. ರಾಜರಾಂ ಅವರು ಹೇಳುತ್ತಾರೆ. ಅವರು ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಮಕ್ಕಳ ನಾಟಕದ ದಿಕ್ಕುದೆಸೆಗಳನ್ನು ತೆರೆದಿಡುವ ಪ್ರಯತ್ನದ ಅಂಗವಾಗಿ ವಿಚಾರಗೋಷ್ಠಿಗಳನ್ನು ಹಮ್ಮಿಕೊಂಡಿದ್ದರು. ೩೪೦ ಪುಟಗಳಿರುವ ಈ ಪುಸ್ತಕ ೩೪ ಅಧ್ಯಾಯಗಳಲ್ಲಿ ತೆರೆದುಕೊಳ್ಳುತ್ತದೆ. ಕೃತಿಗೆ ಸಮಗ್ರತೆ ತರಲಿಕ್ಕೆ ಕೆಲವು ಹಿರಿಯ ಲೇಖಕರ ಹಿಂದಿನ ಲೇಖನಗಳನ್ನು ಮತ್ತು ಕೆಲವು ರಂಗಕರ್ಮಿಗಳ ಬರಹಗಳನ್ನು ಬಳಸಿಕೊಂಡಿರುವುದಾಗಿ ಸಂಪಾದಕರು ಹೇಳಿಕೊಂಡಿದ್ದಾರೆ.

ಮಕ್ಕಳ ನಾಟಕಗಳ ವೈಶಿಷ್ಟ್ಯ, ಅದು ನಡೆದು ಬಂದ ದಾರಿ ಮತ್ತು ರಂಗ ಚಟುವಟಿಕೆಗಳನ್ನು ಕುರಿತು ಡಾ. ಗಜಾನನ ಶರ್ಮಾ ಅವರು ತಮ್ಮ ಮೊದಲ ಮೂರು ಲೇಖನಗಳಲ್ಲಿ ವಿವೇಚನೆ ಮಾಡಿರುವುದು ಮಹತ್ವದ್ದಾಗಿದೆ. 'ಮಕ್ಕಳ ನಾಟಕ ರಂಗಭೂಮಿ' ಕುರಿತು ಎನ್. ಎಸ್. ವೆಂಕಟರಾಮ್, 'ನಿರ್ದೇಶಕರು ಎದುರಿಸುವ ಸವಾಲುಗಳು' ಕುರಿತು ಎಸ್.ಕೆ. ಮಾಧವರಾವ್, 'ರಂಗತರಬೇತಿ ಚಟುವಟಿಕೆಗಳು' ಕುರಿತು ಕೆ. ಜಗುಚಂದ್ರ, 'ಮಕ್ಕಳ ರಂಗಭೂಮಿ ನಾ ಕಂಡಂತೆ' ಎಂದು ದಾಕ್ಷಾಯಿಣಿ ಭಟ್ ಇಲ್ಲಿ ರಂಗಭೂಮಿಯ ವಿಶ್ಲೇಷಣೆ ಮಾಡಿದ್ದಾರೆ. ಅಲ್ಲದೆ, 'ಧ್ವನಿ ಮತ್ತು ಭಾಷೆ' ಕುರಿತು ಪ್ರಸಿದ್ಧ ನಿರ್ದೇಶಕ ಬಿ. ವಿ. ಕಾರಂತ. 'ಆಟ, ನಾಟಕ, ರಂಗಭೂಮಿ' ಕುರಿತು ಹೆಸರಾಂತ ನಿರ್ದೇಶಕಿ ಪ್ರೇಮಾಕಾರಂತ ಹಾಗೂ 'ಮಕ್ಕಳ ಶಿಕ್ಷಣದಲ್ಲಿ ದೃಶ್ಯ-ಶ್ರವ್ಯ ಮಾಧ್ಯಮಗಳ ಬಳಕೆಯ ಅಗತ್ಯ' ಕುರಿತು ಚಿಂತಕ ಕೆ. ವಿ. ಸುಬ್ಬಣ್ಣ ಅವರ ಲೇಖನಗಳನ್ನು ಬಳಸಿಕೊಂಡಿರುವುದು ಪುಸ್ತಕದ ಮೌಲಿಕತೆ ಹೆಚ್ಚಲು ಕಾರಣವಾಗಿದೆ.

ಮಕ್ಕಳ ರಂಗಭೂಮಿಯಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡಿರುವ ನಿಂಗು ಸೊಲಗಿ ನಾಟಕ ಕೃತಿಯಿಂದ ಮೊದಲುಗೊಂಡು ತಂತ್ರ, ಬೆಳಕು, ಸಂಗೀತ, ತಾಲೀಮು, ಪ್ರದರ್ಶನ ಹಾಗೂ ಅದರ ಪ್ರಭಾವಗಳನ್ನು ವಿವೇಚಿಸುವ 'ಮಕ್ಕಳ ರಂಗಭೂಮಿ : ಪ್ರದರ್ಶನ – ಪ್ರಕ್ರಿಯೆ' ಎಂಬ ಕೃತಿಯನ್ನು ಸಿದ್ಧಪಡಿಸಿದ್ದಾರೆ. ಇದು ಪಿಎಚ್ ಡಿ. ಪದವಿಗಾಗಿ ಅವರು ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಪ್ರಬಂಧದ ಪುಸ್ತಕ ರೂಪವಾಗಿದೆ. ಧಾರವಾಡದ ಚಿಲಿಪಿಲಿ ಪ್ರಕಾಶನದಿಂದ ೨೦೧೩ರಲ್ಲಿ ಹೊರಬಂದಿರುವ ಇದು ಆರು ಅಧ್ಯಾಯಗಳಲ್ಲಿ ಕನ್ನಡ ಮಕ್ಕಳ ರಂಗಭೂಮಿಯನ್ನು ಆಮೂಲಾಗ್ರವಾಗಿ ಅವಲೋಕಿಸುತ್ತದೆ. ಮನೆಯಂಗಳದಲ್ಲಿಯ

ಮಕ್ಕಳಾಟ, ಸೃಜನಾತ್ಮಕ ಆಟ, ಪ್ರಯೋಗಶೀಲ ನಾಟಕ, ಸ್ವಪ್ನ ಹಾಗೂ ವಾಸ್ತವ ನಾಟಕ, ರಂಗಭೂಮಿಯ ವಸ್ತು ವೈವಿಧ್ಯತೆ, ರಂಗತಾಲೀಮು, ರೂಪಕ, ಪ್ರಹಸನ, ಛದ್ಮವೇಷ, ಬೀದಿನಾಟಕ, ತುಂಡು ನಾಟಕ, ಅಣಕೋತ್ಸವ, ರಂಗಭೂಮಿಯ ಶೈಕ್ಷಣಿಕ ಸಾಧ್ಯತೆ, ರಂಗತಂಡದ ಚಟುವಟಿಕೆ ಮುಂತಾದವುಗಳನ್ನು ವಿಶ್ಲೇಷಿಸುವ ಮೂಲಕ ರಂಗಭೂಮಿಯ ಅಪಾರ ಸಾಧ್ಯತೆಗಳನ್ನು ಕಟ್ಟಿಕೊಟ್ಟಿದ್ದಾರೆ. ನಾಟಕಕ್ಕೆ ಎಷ್ಟೆಲ್ಲ ರೂಪಗಳಿವೆ, ಎಷ್ಟೆಲ್ಲ ಪರಿಶ್ರಮ ಬೇಕು, ಎಷ್ಟೆಲ್ಲ ಪ್ರತಿಭೆ ಹೊರಹೊಮ್ಮಬಹುದು ಹಾಗೂ ಬಹುಮುಖಿ ಪರಿಣಾಮಗಳಿಂದ ಮಕ್ಕಳ ಮನಸ್ಸು ಎಷ್ಟೆಲ್ಲ ವಿಕಸಿತವಾಗಬಹುದು ಎಂಬುದನ್ನು ಸೂಕ್ತವಾಗಿ ಸೋದಾಹರಣದಿಂದ ಸಾಧಿಸಿರುವುದು ನಿಂಗು ಸೊಲಗಿ ಅವರ ಪುಸ್ತಕದ ವಿಶೇಷತೆಯಾಗಿದೆ.

'ಭಾರತೀಯ ಮಕ್ಕಳ ಸಾಹಿತ್ಯ ಸಮೀಕ್ಷೆ' ಎಂಬ ಡಾ. ನಿರುಪಮಾ ಅವರ ಕೃತಿ ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳ ಮಕ್ಕಳ ಸಾಹಿತ್ಯಕ ಬೆಳವಣಿಗೆಯನ್ನು ಅವಲೋಕಿಸುತ್ತದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಇವರಿಂದ ಈ ಗ್ರಂಥ ೨೦೦೪ರಲ್ಲಿ ಪ್ರಕಟವಾಗಿದೆ. ಅಸ್ಸಾಮಿ, ಉರ್ದು, ಓಸಿಯಾ, ಕನ್ನಡ, ಕಾಶ್ಮೀರಿ, ಕೊಂಕಣಿ, ಗುಜರಾಥಿ, ತಮಿಳು, ತೆಲುಗು, ಪಂಜಾಬಿ, ಬಂಗಾಲಿ, ಮರಾಠಿ, ಮಲಯಾಳಿ, ಸಂಸ್ಕೃತ, ಸಿಂಧಿ, ಹಿಂದಿ, ಭಾರತೀಯ ಇಂಗ್ಲಿಷ್ ಮುಂತಾದ ಭಾಷೆಗಳಲ್ಲಿ ನಡೆದಿರುವ ಬಾಲಸಾಹಿತ್ಯದ ಬೆಳವಣಿಗೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ನಿರುಪಮಾ ಅವರು ಮಾಡಿದ್ದಾರೆ. ೩೮೦ ಪುಟಗಳ ಪುಸ್ತಕದಲ್ಲಿ ಸುಮಾರು ೫೦ ಪುಟಗಳಲ್ಲಿ ಕನ್ನಡ ಬಾಲಸಾಹಿತ್ಯದ ಬೆಳವಣಿಗೆ ಮೇಲೆ ಕಣ್ಣಾಡಿಸಿದ್ದಾರೆ.. ಇತರ ಪ್ರಾದೇಶಿಕ ಭಾಷೆಗಳಲ್ಲಿ ನಡೆದಿರುವ ಕೆಲಸವನ್ನು ಅರಿಯಲು ಈ ಕೃತಿ ಸಾಕಷ್ಟು ಸಾಮಗ್ರಿಯನ್ನು ಕೊಡುತ್ತದೆ. ನಿರುಪಮಾ ಅವರ 'ನಿಮ್ಮ ಮಕ್ಕಳಿಗೆಂತಹ ಸಾಹಿತ್ಯ ಬೇಕು' ಕೃತಿ ಕೂಡ ಪ್ರಕಟವಾಗಿದೆ(ಆರತಿ ಪಬ್ಲಿಕೇಷನ್ಸ್, ಬೆಂಗಳೂರು ೧೯೮೮).

ಮಕ್ಕಳ ಸಾಹಿತ್ಯಕ್ಕೆ ಸಂಧ್ಯಾ ಸಾಹಿತ್ಯ ವೇದಿಕೆ ಎನ್ನುವ ಗೆಳೆಯರ ಬಳಗದ ಕೊಡುಗೆ ವಿಶೇಷವಾದುದು ಎನ್ನುವುದನ್ನ ಇಲ್ಲಿ ಹೇಳಬೇಕು. ಇಲ್ಲಿಗೆ ೨೨ ವರುಷದಿಂದ ನಿರಂತರವಾಗಿ ಈ ಗೆಳೆಯರ ಬಳಗ ತೊಡಗಿಕೊಂಡಿದ್ದು ಮಕ್ಕಳ ಸಾಹಿತ್ಯದೆಡೆಗೆ ಗಂಭೀರ ದೃಷ್ಟಿಕೋನ ಹರಿಯುವ ನಿಟ್ಟಿನಲ್ಲಿ ತನಗೆ ಸಾಧ್ಯವಾದ ಚಟುವಟಿಕೆಗಳನ್ನ ಹಮ್ಮಿಕೊಳ್ಳುತ್ತ ಬಂದಿದೆ. ನಾಡಿನಾದ್ಯಂತ ವಿವಿಧೆಡೆಗಳಲ್ಲಿ ವಿಚಾರ ಸಂಕಿರಣಗಳು, ಚರ್ಚೆಗಳು, ಸಂವಾದಗಳು ಮುಂತಾಗಿ ಇವರ ಚಟುವಟಿಕೆಗಳು ನಿಗದಿತವಾಗಿ ನಡೆಯುತ್ತ ಬಂದುದನ್ನ ನೋಡುತ್ತೇವೆ, ಮುಖ್ಯಧಾರೆಯ ಪ್ರಮುಖ ಲೇಖಕರನ್ನೂ ಒಳಗೊಂಡಂತೆ, ಮಕ್ಕಳ ಸಾಹಿತ್ಯದಲ್ಲಿ ತೊಡಗಿರುವ ಎಲ್ಲ ಲೇಖಕರನ್ನೂ, ಆಸಕ್ತರನ್ನೂ ಒಳಗೊಳ್ಳುತ್ತ ಇವು ನಡೆದಿವೆ. ಮೇವುಂಡಿ ಮಲ್ಲಾರಿ ಹಾಗೂ ಹ. ರಾ. ಕಿದಿಯೂರ ಅವರ ಕೊಡುಗೆ, ಸಾಗರದಲ್ಲಿ ನಾ. ಡಿಸೋಜ ಅವರ ಮಕ್ಕಳ ಸಾಹಿತ್ಯ ಕುರಿತು ವಿಚಾರ ಸಂಕಿರಣ, ಗದುಗಿನಲ್ಲಿ 'ಸಾವಿರದ ಮಕ್ಕಳ ಕತೆಗಳು' ಶೀರ್ಷಿಕೆಯಲ್ಲಿ ದುರ್ಗಸಿಂಹನ ಪಂಚತಂತ್ರ, ಅರೇಬಿಯನ್ ನೈಟ್ಸ್, ಜಂಗಲ್ ಬುಕ್ ಹಾಗೂ ಆಲೀಸ್ ಇನ್ ವಂಡರ್ ಲ್ಯಾಂಡ್ ಕೃತಿಗಳ ಕುರಿತು ವಿಚಾರ ಸಂಕಿರಣ, ಮುಲ್ಕಿಯಲ್ಲಿ ಪಳಕಳ ಸೀತಾರಾಮ ಭಟ್ಟರ ಕೊಡುಗೆಯ ಕುರಿತು ವಿಚಾರಸಂಕಿರಣ, ಧಾರವಾಡದಲ್ಲಿ ಸಿಸು ಸಂಗಮೇಶರ ಕುರಿತು ಎರಡುದಿನ ವಿಚಾರ ಸಂಕಿರಣ, ವಿಜಯಪುರದಲ್ಲಿ ದಿನಕರದೇಸಾಯಿ ಅವರ ಕುರಿತು, ರಷಿಯದ ಕವಿ ಮಿಲಾಲ್ಬೋವ್ ಅವರ ಕಾವ್ಯದ ಕುರಿತು, ಕಂಚ್ಯಾಣಿ ಶರಣಪ್ಪ ಹಗೂ ಟಿ. ಎಸ್. ನಾಗರಾಜಶೆಟ್ಟಿ ಅವರ

ಕಾವ್ಯಗಳ ತೌಲನಿಕ ನೋಟ ಕುರಿತು ಕಾರ್ಯಕ್ರಮ, ಪುತ್ತೂರಿನಲ್ಲಿ ಎನ್. ಶ್ರೀನಿವಾಸ ಉಡುಪರೊಡನೆ ಸಂವಾದ, ದಾವಣಗೆರೆಯಲ್ಲಿ ಮಕ್ಕಳಿಗೆ ಸಾಹಿತ್ಯವನ್ನು ತಲಪಿಸುವುದು ಹೇಗೆ ಇವೇ ಮುಂತಾಗಿ ಅನೇಕ ವಿಷಯಗಳ ಕುರಿತು ಕಾರ್ಯಕ್ರಮಗಳನ್ನ ವೇದಿಕೆ ಹಮ್ಮಿಕೊಳ್ಳುತ್ತ ಬಂದಿದೆ. ಇಷ್ಟೇ ಅಲ್ಲ, ಮಕ್ಕಳ ಸಾಹಿತ್ಯದ ಅಧ್ಯಯನ, ವಿಮರ್ಶೆಗೇ ಮೀಸಲಾಗಿದ್ದ 'ಸಂಧ್ಯಾ' ಎನ್ನುವ ತ್ರೈಮಾಸಿಕವನ್ನೂ ಎರಡು ವರುಷ ನಡೆಸಿದುದು ಒಂದು ದಾಖಲೆ ಕೆಲಸ. ಯಾಕೆಂದರೆ ಭಾರತದಲ್ಲಿಯೇ ಐಬಿಬಿವಾಯ್ ಸಂಸ್ಥೆಯಿಂದ ಬರುತ್ತಿರುವ ಇಂಗ್ಲಿಷಿನ ಪತ್ರಿಕೆ ಬಿಟ್ಟರೆ ಯಾವ ಭಾಷೆಯಲ್ಲೂ ಈ ಬಗೆಯ ಪ್ರಯತ್ನ ನಡೆದಿಲ್ಲ. ಈ ಸಂಚಿಕೆಗಳಲ್ಲಿ ಕನ್ನಡದ, ಭಾರತೀಯ, ಹಾಗೆಯೇ ವಿದೇಶಿ ಕೃತಿಗಳ ಕುರಿತು ಹಲವಾರು ಲೇಖನಗಳು ಪ್ರಕಟವಾಗಿವೆ. ಕನ್ನಡದ ಮಕ್ಕಳ ಸಾಹಿತಿಗಳಿಗಾಗಿ ಅಧ್ಯಯನ ಶಿಬಿರವೊಂದನ್ನ ಮೂರು ದಿನಗಳ ಕಾಲ ಈ ವೇದಿಕೆ ಹೊಸರೀತಿಯಲ್ಲಿ ನಡೆಸಿತ್ತು. ೨೦೦೦ದಲ್ಲಿ ರಾಜ್ಯಾದ್ಯಂತ ಹದಿನೇಳು ಉಪನ್ಯಾಸಗಳನ್ನು ಈ ವೇದಿಕೆ ಹಮ್ಮಿಕೊಂಡಿತ್ತು. ಈ ಉಪನ್ಯಾಸಗಳೇ ಈ ಮೇಲೆ ಉಲ್ಲೇಖಿಸಿದ 'ಮಕ್ಕಳ ಸಾಹಿತ್ಯ ಶತಮಾನ' ಕೃತಿ ರೂಪದಲ್ಲಿ ಬಂದುದು.

ಮಕ್ಕಳ ಸಾಹಿತ್ಯದ ಅಧ್ಯಯನ, ವಿಮರ್ಶಾ ರಂಗಕ್ಕೆ ಆನಂದ ಪಾಟೀಲರ ಕೊಡುಗೆ ವಿಶೇಷವಾಗಿ ಗಮನಿಸಬೇಕಾದುದು. ಬಹುಶಃ ಭಾರತೀಯ ಭಾಷೆಗಳಲ್ಲೇ ವಿರಳವಾಗಿ ಇಷ್ಟೊಂದು ಪ್ರಮಾಣದಲ್ಲಿ ತೊಡಗಿಕೊಂಡಿರುವುದನ್ನು ಕಾಣುತ್ತೇವೆ ಎನ್ನಬಹುದು. ಮೊದಲಿನಿಂದಲೂ ಮಕ್ಕಳ ಸಾಹಿತ್ಯದೆಡೆಗೆ ಗಂಭೀರ ಚಿಂತನೆಯನ್ನು ನಡೆಸಿಕೊಂಡು ಬಂದಿರುವ ಅವರು ಇಲ್ಲಿಯವರೆಗೆ ನಾಲ್ಕು ಗ್ರಂಥಗಳಲ್ಲಿ ತಮ್ಮ ಲೇಖನಗಳನ್ನು ಸಂಕಲಿಸಿ ನೀಡಿದ್ದಾರೆ. ಇವುಗಳಲ್ಲಿ ಕನ್ನಡದ, ಭಾರತೀಯ ಇಂಗ್ಲಿಷ್ ಲೇಖಕರ, ಹಾಗೆಯೇ ಅನೇಕ ವಿದೇಶೀಯ ಲೇಖಕರ ಕೃತಿಗಳನ್ನ ಅಧ್ಯಯನಕ್ಕೆ ಒಳಪಡಿಸಿರುವುದು ಕಾಣುತ್ತದೆ. 'ಮಕ್ಕಳ ಸಾಹಿತ್ಯ ಖುಷಿ ಕೊಟ್ಟುವು', 'ಮಕ್ಕಳ ಸಾಹಿತ್ಯ ಹೀಗೇ ಒಂದಿಷ್ಟು'(ವಸಂತ ಪ್ರಕಾಶನ, ಬೆಂಗಳೂರು), 'ಅಲರು', 'ಮುಗುಳು'(ಅಭಿನವ, ಬೆಂಗಳೂರು) ಎನ್ನುವ ಶೀರ್ಷಿಕೆಯಲ್ಲಿ ಈ ಕೃತಿಗಳಿವೆ. 'ಅಲರು'ಗಳ ಸಂಕಲನದಲ್ಲಿ ಮಕ್ಕಳ ಸಾಹಿತ್ಯದ ಪ್ರತ್ಯೇಕತೆ ಎಂದರೆ ಏನು, ಶ್ರೇಷ್ಠತೆ ಹೇಗೆ ಇರುತ್ತದೆ, ಕತೆಗಳಲ್ಲಿ ವಾಸ್ತವ ಏಕೆ ಬೇಕು, ಸಾಹಿತ್ಯದ ಅಧ್ಯಯನ ಯಾಕೆ ನಡೆಯಬೇಕು ಎನ್ನುವುದರಿಂದ ಹಿಡಿದು ಕೆ. ವಿ. ತಿರುಮಲೇಶ, ಸುಮತೀಂದ್ರ ನಾಡಿಗ, ಆರ್. ವಿ. ಭಂಡಾರಿ, ರಾಧೇಶ ತೋಳ್ಪಾಡಿ ಮುಂತಾದ ಲೇಖಕರನ್ನು ಚರ್ಚಿಸುವತನಕ ಅವರ ಬರವಣಿಗೆಯ ಬೀಸು ಇದೆ. ಜಮೈಕಾದ ಕವಿ ಜೇಮ್ಸ್ ಬೆರ್ರಿಯ ವಿಶಿಷ್ಟತೆ, ಜೆ. ಕೆ ರೌಲಿಂಗ್ ಅವರ ಹ್ಯಾರಿ ಪಾಟರ್ ಮಾಡಿದ ಮೋಡಿ ಏನು, ಸಫ್ದರ್ ಹಶ್ಮಿ ಅವರ ನಾಟಕಗಳು ಯಾಕೆ ಮುಖ್ಯವಾಗುತ್ತವೆ ಎಂದೆಲ್ಲ ಅವಲೋಕಿಸುತ್ತಾರೆ. ಅನ್ಯ ಭಾಷೆಗಳಲ್ಲಿ ನಡೆದಿರುವ ಪ್ರಯೋಗ, ಹಾಗೂ ಅಲ್ಲಿಯ ಗುಣಲಕ್ಷಣಗಳನ್ನು ತಿಳಿಸುವ ಮೂಲಕ ನಮ್ಮ ಕೃತಿಗಳಿಗೆ ಕನ್ನಡಿ ಹಿಡಿಯುತ್ತಾರೆ. ಆನಂದ ಪಾಟೀಲರ 'ಮುಗುಳು' ಸಂಕಲನ ಅವರು ಬೇರೆ ಬೇರೆ ಸಂದರ್ಭದಲ್ಲಿ ಬರೆದಿರುವ ಲೇಖನಗಳನ್ನು ೩೪೬ ಪುಟಗಳ ವಿಸ್ತಾರದಲ್ಲಿ ಆಯೋಜಿಸಿದೆ. ಮಕ್ಕಳ ಸಾಹಿತ್ಯ ಕುರಿತು ಹೆಚ್ಚಿನ ಗ್ರಂಥಗಳು ಬರುತ್ತಿಲ್ಲ ಎಂಬ ವ್ಯಥೆಯೊಂದಿಗೆ ತಮ್ಮ ಅನಿಸಿಕೆ ವಿಶ್ಲೇಷಣೆ ಹೀಗೆಲ್ಲ ಹರಡಿಕೊಂಡಿದೆ ಎಂದು ನಮ್ಮ ಮುಂದಿಡುತ್ತಾರೆ. ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕಾಗಿ ಬರೆದ 'ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಇತ್ತೀಚಿನ ಒಲವುಗಳು' ಎಂಬುದು ಈ ಸಂಕಲನದ ಮುಖ್ಯ ಲೇಖನಗಳಲ್ಲಿ ಒಂದಾಗಿದೆ. ಹೊಸ ಪ್ರಯೋಗಗಳು ವಸ್ತು ವೈವಿಧ್ಯ ಈ ಕಾಲವನ್ನು ಹೇಗೆ

ಭಿನ್ನವಾಗಿಸಿದೆ, ನವೋದಯದ ಲೇಖಕರು ಯಾವ ರೀತಿಯಲ್ಲಿ ಮುಖ್ಯರಾಗುತ್ತಾರೆ ಎಂದು ತಮ್ಮ ಖಚಿತ ಅಭಿಪ್ರಾಯಗಳನ್ನು ಮಂಡಿಸುವಲ್ಲಿ ಅವರ ವಿಶೇಷತೆ ಇದೆ. ಮಕ್ಕಳ ಪತ್ರಿಕೆಗಳನ್ನು ಕುರಿತ ಲೇಖನ ವಿಸ್ತಾರದ ಚರ್ಚೆಯನ್ನು ಒಳಗೊಂಡಿದೆ. ಅದೇ ರೀತಿ ಅಂಕಲ್ ಪೈ, ರಾಜರತ್ನಂ ಅವರನ್ನು ಕುರಿತ ಬರಹಗಳು ಆಪ್ತವಾಗಿ ಚಿತ್ರಿಸಲ್ಪಟ್ಟಿವೆ. ಹ್ಯಾರಿ ಪಾಟರ್ ಕೃತಿಯ ಕುರಿತೇ ಪ್ರತ್ಯೇಕ ಅಧ್ಯಯನ ಕೃತಿ ಒಂದು ಬಂದಿದ್ದು ಬೆಂಗಳೂರಿನ ವಸಂತ ಪ್ರಕಾಶನದಿಂದ ೨೦೦೯ರಲ್ಲಿ ಪ್ರಕಟವಾಗಿದೆ. ಇನ್ನೆರಡು ಕೃತಿಗಳೂ ಹೀಗೆಯೇ ಅನೇಕ ವಸ್ತುಗಳಿಂದ ತುಂಬಿಕೊಂಡಿರುವ ಲೇಖನಗಳಿವೆ.

'ಮಕ್ಕಳ ಸಾಹಿತ್ಯ ಚಿಂತನ' ಎನ್ನುವ ಶಿವಶಂಕರ ಹಿರೇಮಠ ಅವರ ಕೃತಿ ಮಕ್ಕಳ ಮನೆ, ಧಾರವಾಡ ಇವರಿಂದ ೧೯೮೯ರಲ್ಲಿ ಪ್ರಕಟಗೊಂಡಿದ್ದು ಅನೇಕ ವಿಷಯಗಳನ್ನು ಕುರಿತು ಚರ್ಚಿಸುತ್ತದೆ.

ಮಕ್ಕಳ ಲೇಖಕರ ಅನೇಕ ಅಭಿನಂದನ ಗ್ರಂಥಗಳು ಆಯಾ ಲೇಖಕರ ಬದುಕಿನ ವಿವರಗಳೊಂದಿಗೆ ಅವರ ಕೃತಿಗಳ ವಿಶಿಷ್ಟತೆಯನ್ನು ಗುರುತಿಸುವಲ್ಲಿ ನೆರವಾಗುತ್ತವೆ. ಲೇಖಕ ಅಣ್ಣಾಜಿ ಫಡತಾರೆ ಅವರ ಕುರಿತ 'ದೇವತಾ ಮನುಷ್ಯ' ಎಂಬ ಅಭಿನಂದನಾ ಗ್ರಂಥ ೨೦೧೨ರಲ್ಲಿ ಫಡತಾರೆ ಪ್ರಕಾಶನ, ಮಹಾಲಿಂಗಪುರ ಇವರಿಂದ ಬಿ.ಎಚ್. ಮಾರದ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ. 'ಬಾಲರ ಬಯಕೆ', 'ಮಕ್ಕಳ ತೋಟ', 'ಪುಟ್ಟನ ಪ್ರಪಂಚ' ಮುಂತಾದ ಕವನ ಸಂಕಲನ, 'ತಿರುಮಂತ್ರ', 'ಜಾಣ ನಾವಿಕ' ಮುಂತಾದ ಕಥಾ ಸಂಕಲನಗಳ ಬಗ್ಗೆ ಲೇಖನಗಳಿವೆ. ಅವುಗಳಲ್ಲದೆ ಮಕ್ಕಳ ಸಾಹಿತ್ಯ ಕುರಿತ ಕೆಲವು ಮೌಲಿಕ ಲೇಖನಗಳು ಇಲ್ಲಿರುವುದರಿಂದ ಇದೊಂದು ಉತ್ತಮ ಗ್ರಂಥವಾಗಿ ಹೊರಹೊಮ್ಮಿದೆ. 'ಅನ್ನದಾತ' ಕವನ ಬರೆದು ಪ್ರಸಿದ್ಧರಾಗಿರುವ 'ಸತ್ಯಾರ್ಥಿ' ಕಾವ್ಯನಾಮದ ಚೆನ್ನಬಸಪ್ಪ ಹೊಸಮನಿ ಅವರ ಅಭಿನಂದನ ಗ್ರಂಥ 'ಸತ್ಯಾರ್ಥಿ' ಎನ್ನುವ ಹೆಸರಿನಿಂದಲೇ ಪ್ರಕಟವಾಗಿದ್ದು ಡಾ. ಸಿ.ಕೆ. ನಾವಲಗಿ ಅವರು ಇದರ ಸಂಪಾದಕರಾಗಿದ್ದಾರೆ. ಬೈಲಹೊಂಗಲದ ಸತ್ಯಾರ್ಥಿ ಅಭಿನಂದನಾ ಸಮಿತಿಯಿಂದ ೨೦೧೩ರಲ್ಲಿ ಪ್ರಕಟಗೊಂಡಿದೆ. ೩೦೪ ಪುಟಗಳ ಈ ಗ್ರಂಥ 'ವ್ಯಕ್ತಿ – ವ್ಯಕ್ತಿತ್ವ', 'ಕೃತಿ ಸಮೀಕ್ಷೆ', 'ಮಕ್ಕಳ ಸಾಹಿತ್ಯ ಕುರಿತು' ಮತ್ತು 'ಆತ್ಮಕತೆ' ಎಂಬ ನಾಲ್ಕು ಭಾಗಗಳನ್ನು ಒಳಗೊಂಡಿದೆ. 'ಚಿಣ್ಣರ ಅಜ್ಜ' ಶೀರ್ಷಿಕೆಯಲ್ಲಿ ಕಂಚ್ಯಾಣಿ ಶರಣಪ್ಪ ಅವರ ಕುರಿತು ಅಭಿನಂದನಾ ಗ್ರಂಥ ೨೦೧೪ರಲ್ಲಿ ಪ್ರಕಟಗೊಂಡಿದ್ದು ಇಲ್ಲಿಯೂ ಶರಣಪ್ಪನವರ ಕುರಿತಾಗಿ ಹಲವಾರು ಆಪ್ತ ಬರಹಗಳಿವೆ. ಕಾವ್ಯಾಂಜಲಿ, ಹಿತಚಿಂತನ, ಆತ್ಮಾನುಸಂಧಾನ, ಕರುಳುಬಳ್ಳಿ, ಗ್ರಂಥಾಂತರಂಗ, ಮಕ್ಕಳ ಸಾಹಿತ್ಯದ ದಿಗ್ಗಜರು ಎನ್ನುವ ವಿಭಾಗಗ್ಳಡಿ ಅನೇಕ ಲೇಖನಗಳು ಸಂಕಲನಗೊಂಡಿವೆ. 'ನನ್ನ ಹಾಡು ಪಾಡು' ಎನ್ನುವ ಶರಣಪ್ಪನವರದೇ ಲೇಖನ ಇಲ್ಲಿ ಆತ್ಮ ನಿವೇದನೆಯಾಗಿ ಮಾಡಿದೆ. ಇವರ ಕುರಿತಾಗಿಯೇ 'ಕಂಚ್ಯಾಣಿ ಅವರ ಶಿಶು ಕಾವ್ಯ' ಎಂಬ ಎಂ. ಫಿಲ್ ಪ್ರಬಂಧ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಕೆಯಾಗಿದೆ, ಅದೇ ರೀತಿ 'ಕಂಚ್ಯಾಣಿ ಶರಣಪ್ಪನವರ ಬದುಕು – ಬರಹ' ಶೀರ್ಷಿಕೆಯಡಿಯಲ್ಲಿ ಪಿಎಚ್ ಡಿ. ಪ್ರಬಂಧ ಕೂಡ ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯದಿಂದ ಅಂಗೀಕಾರ ಪಡೆದಿದೆ. ಕಾತ್ಯಾಯನಿ ಕುಂಜಿಬೆಟ್ಟು ಅವರು ಪಳಕಳ ಸೀತಾರಾಮ ಭಟ್ಟ ಅವರ ಸಾಹಿತ್ಯ ಅಧ್ಯಯನ ನಡೆಸಿ ಪಿಎಚ್.ಡಿ ಪದವಿ ಪಡೆದಿದ್ದಾರೆ. ಈ ರೀತಿಯಲ್ಲಿ ಇತ್ತೀಚೆಗೆ ಅಧ್ಯಯನಗಳು ನಡೆದಿರುವುದು ಸ್ವಾಗತಾರ್ಹವಾಗಿದೆ.

ಮಕ್ಕಳ ಸಾಹಿತ್ಯಕ್ಕೆ ಚಿತ್ರಗಳ ಅಗತ್ಯದ ಸಾಹಚರ್ಯ

ಡಾ. ಆನಂದ ಪಾಟೀಲ

ಮಕ್ಕಳ ಸಾಹಿತ್ಯಕ್ಕೆ ಚಿತ್ರಗಳ ಜೊತೆ ಅಗತ್ಯವಾಗಿ ಬೇಕಾಗುತ್ತದೆ. ತೀರ ಚಿಕ್ಕ ಮಕ್ಕಳಿಂದ ಹಿಡಿದು ವಿಭಿನ್ನ ವಯೋವರ್ಗದ ವರೆಗೆ ಅದರ ಅಸ್ತಿತ್ವ ಬಗೆಬಗೆಯದಾಗಿರುತ್ತದೆ. ಪ್ರಬುದ್ಧರ ಸಾಹಿತ್ಯಕ್ಕೂ ಚಿತ್ರಗಳ ಅಗತ್ಯವಿರುವುದನ್ನ ನಾವು ವಿಶೇಷವಾಗಿ ಪತ್ರಿಕೆಗಳಲ್ಲಿ ನೋಡುತ್ತೇವೆ. ಆದರೆ ಕತೆಗಳೇ ಆಗಲಿ, ಕಾದಂಬರಿಗಳೇ ಆಗಲಿ, ಕವಿತೆಗಳೇ ಆಗಲಿ, ಸಾಮಾನ್ಯವಾಗಿ ತಮ್ಮ ಒಳಪುಟಗಳಲ್ಲಿ ಚಿತ್ರಗಳ ಆಸರೆ ಪಡೆಯುವುದಿಲ್ಲ. ಮುಖಪುಟದ ಮಟ್ಟಿಗೆ ಅಲ್ಲಿಯೂ ಉಚಿತವಾದ ದೃಶ್ಯ ಸಂಗತಿಯ ಸಾಹಚರ್ಯ ಇದ್ದೇ ಇದೆ. ಅಪವಾದವಾಗಿ ಕೆಲವೆಲ್ಲ ಕೃತಿಗಳು ಇದ್ದೇ ಇವೆ. ಪ್ರಾಚೀನ ತಾಳೇಗರಿಗಳು, ಪುರಾಣ ಸಾಹಿತ್ಯದ ಸಾಹಚರ್ಯ ಪ್ರಬುದ್ಧರ ರಂಗದಲ್ಲೂ ಚಿತ್ರಗಳ ಜೊತೆ ಇದ್ದುದನ್ನ ಭಾರತದಲ್ಲಿಯೇ ವಿಶೇಷವಾಗಿ ನೋಡುತ್ತೇವೆ. ಜನಪದದ ಸಾಂಪ್ರದಾಯಿಕ ಕತೆ ಹೇಳುವ ಅನೇಕ ಉದಾಹರಣೆಗಳಲ್ಲಿ ಚಿತ್ರಗಳೇ ಪ್ರಮುಖ ಪಾತ್ರ ವಹಿಸುವುದನ್ನು ನೋಡುತ್ತೇವೆ. 'ಪಟಕಥಾ' ಎನ್ನುವ ಪರಂಪರೆಯ ಉದಾಹರಣೆ ಭಾರತದಲ್ಲಿ ಕಂಡಿದೆ. ಇದಕ್ಕಾಗಿಯೇ ತೊಡಗಿಕೊಂಡು ಪ್ರಾವೀಣ್ಯತೆ ಪಡೆದ ಕಲಾವಿದ ಮನೆತನಗಳು ನಮ್ಮ ನಡುವೆ ಉಂಟು. ತೊಗಲುಗೊಂಬೆಯಾಟದಂಥ ರಂಗ ಪ್ರದರ್ಶನಗಳಲ್ಲಿ ಚಿತ್ರಗಾರಿಕೆ ಯಥೇಚ್ಛವಾಗಿ ವಿಶೇಷವಾಗಿಯೇ ಬಳಕೆಯಾಗುವುದನ್ನ ಉದಾಹರಿಸಬಹುದು. ಅದೇನೆ ಇರಲಿ, ಮಕ್ಕಳ ಸಾಹಿತ್ಯ ಮಾತ್ರ ಇಂದಿಗೂ ಅಗತ್ಯವಾಗಿ ಚಿತ್ರಗಳ ಜೊತೆಯನ್ನ ಹೇಳುತ್ತಿದೆ, ಅಷ್ಟೇ ಅಲ್ಲ, ಅದು ಹೊಸಹೊಸತಾಗಿ ತನ್ನ ಅಸ್ತಿತ್ವ ತೋರಿಸಿಕೊಳ್ಳುತ್ತಿದೆ. ನುರಿತ, ವೃತ್ತಿಪರ ಕಲಾವಿದರು ಇಂದು ಈ ರಂಗದಲ್ಲಿ ಕಾಣಿಸಿಕೊಂಡಿದ್ದಾರೆ.

ಕನ್ನಡದಂಥ ಪರಿಸರದಲ್ಲಿ ಮಕ್ಕಳ ಪುಸ್ತಕಗಳಲ್ಲಿ ಕಾಣುವ ಚಿತ್ರಗಳ ಕುರಿತ ಕೆಲ ಅವಲೋಕನ ಈ ಲೇಖನದಲ್ಲಿದೆ. ಕಲ್ಲಚ್ಚಿನಿಂದ ಪ್ರಾರಂಭವಾದ ಮುದ್ರಣ ವ್ಯವಸ್ಥೆಯೊಂದಿಗೇ ಮಕ್ಕಳ ಪುಸ್ತಕಗಳ ಮುದ್ರಣ ಪ್ರಾರಂಭವಾಯಿತು. ೧೯ನೆಯ ಶತಮಾನದ ಮೊದಲರ್ಧದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರ ನವೋದಯವೆಂದು ಎಲ್ಲ ರೀತಿಯಿಂದ ಹೊಸತಿಗೆ ತಿರುಗಿತು. ಅದೇ ಸಮಯದಲ್ಲಿ ಮಕ್ಕಳ ಸಾಹಿತ್ಯ ನಿರ್ದಿಷ್ಟ ರೂಪದಲ್ಲಿ ಆಕಾರ ಪಡೆಯತೊಡಗಿತು ಕೂಡ. ಪಂಜೆ ಮಂಗೇಶರಾಯರಂಥ ಪ್ರತಿಭಾವಂತರು ಶಿಕ್ಷಕರಾಗಿ ಮಕ್ಕಳ ಒಡನಾಟದಲ್ಲಿ ಇದ್ದುದರಿಂದ ಮಕ್ಕಳಿಗಾಗಿನ ಬರಹ ಒಳ್ಳೇ ಸ್ಫೂರ್ತಿ ಪಡೆಯಿತು. ಕನ್ನಡ ನಾಡಿನ ವಿಭಿನ್ನ ಭಾಗಗಳಲ್ಲಿ ಒಂದೆ ಬಗೆಯ ಪ್ರಯತ್ನ, ಬೆಳವಣಿಗೆ ಕಾಣದಿದ್ದರೂ ಅಲ್ಲಲ್ಲಿನ ವಾತಾವರಣಕ್ಕೆ ತಕ್ಕಂತೆ

ಆಸಕ್ತರಿಂದ ಅದು ಮೊದಲುಗೊಂಡುದು ಇತಿಹಾಸ. ಹೀಗೆ ಅಂಬೇಗಾಲಿಕ್ಕಿದ ಮಕ್ಕಳ ಸಾಹಿತ್ಯ ರಂಗದಲ್ಲಿ ಪುಸ್ತಕಗಳ ಮುದ್ರಣವೇನೋ ಅಗತ್ಯವಾಗಿ ನಡೆಯತೊಡಗಿತು. ಆದರೆ ಅದೇ ಅಗತ್ಯವನ್ನ, ಅವಶ್ಯಕವಾದ ಚಿತ್ರಗಳ ಜೊತೆ ಪಡೆಯಲಿಲ್ಲ. ಅಥವಾ ಚಿತ್ರಗಳ ಸಾಹಚರ್ಯವನ್ನು, ತಕ್ಕುದಾಗಿ ಆಗಿನ್ನೂ ಭಾವಿಸಲಿಲ್ಲ ಎಂದರೂ ನಡೆದೀತು. ಹಾಗೇಂತ ತೀರ ಕಡೆಗಣನೆಯೇನೂ ನಡೆಯಲಿಲ್ಲ. ಈಗ ದೊರೆಯುವ ತೀರ ಹಳೆಯ ಪುಸ್ತಕಗಳ ಅನೇಕವುಗಳಲ್ಲಿ ಚಿತ್ರಗಳಿರುವುದನ್ನು ನೋಡುತ್ತೇವೆ. ಚಿತ್ರಕಾರರನ್ನ ಅಷ್ಟಾಗಿ ಲೇಖಕರಷ್ಟು ಮಹತ್ವ ಕೊಟ್ಟು ನೋಡಲಿಲ್ಲವಾಗಿ ಅವರ ಹೆಸರುಗಳು ಅನೇಕ ಕಡೆಗಳಲ್ಲಿ ಕಾಣದೇ ಹೋಗಿವೆ. ರೇಖಾ ಚಿತ್ರಗಳು, ಅವುಗಳಿಂದಲೇ ಮಾಡಿಕೊಂಡ ಬೆಳಕು ಛಾಯೆಗಳ ವ್ಯವಸ್ಥೆ ಸಾಮಾನ್ಯವಾಗಿ ಕಾಣುತ್ತದೆ. ಕನ್ನಡ ನಾಡಿನಲ್ಲಿ ಅನೇಕರು ಚಿತ್ರಕಲೆಯಲ್ಲಿ ಪ್ರಖ್ಯಾತರು ಆಗಲೇ ಕಾಣಿಸಿಕೊಂಡಾಗಿದ್ದ ಕಾಲವೇ ಅದು. ಮುಂಬೈಯ ಸ್ಕೂಲ್ ಆಫ್ ಆರ್ಟ್ ಶುರುವಾಗಿ ಅದರ ಪ್ರಭಾವದಿಂದ ಚಿತ್ರಕಲೆಯ ವಾತಾವರಣ ಮೂಡಿಯಾಗಿತ್ತು. ಮೈಸೂರಿನ ಅರಸರ ಪ್ರೋತ್ಸಾಹದಿಂದ ಆ ಭಾಗದಲ್ಲಿ ಅವಕಾಶಗಳು ಕಾಣಿಸಿಕೊಂಡಿದ್ದವು. ಪಾಶ್ಚಾತ್ಯ ಪ್ರಭಾವದ ನೈಜ ಚಿತ್ರಕಲೆಯ ಪ್ರಭಾವ ಆಗಲೇ ಸಾಕಷ್ಟು ಮೂಡಿಯಾಗಿತ್ತು. ನವೋದಯದ ಈ ಪ್ರಾರಂಭದ ಕಾಲದಲ್ಲಿ ಸಾಹಿತ್ಯ ರಚನೆಯಲ್ಲಿ ತೊಡಗಿದ ಅನೇಕ ಪ್ರತಿಭಾವಂತ ಲೇಖಕರು ಮಕ್ಕಳ ಸಾಹಿತ್ಯದೆಡೆಗೆ ಒಲವು ತೋರಿಸಿದ್ದರು. ಪಂಜೆ ಮಂಗೇಶರಾಯರು, ಕುವೆಂಪು, ಜಿ. ಪಿ. ರಾಜರತ್ನಂ, ದಿನಕರ ದೇಸಾಯಿ, ಹೊಯ್ಸಳ ಮೊದಲಾಗಿ ಅನೇಕರು ಮಕ್ಕಳ ಸಾಹಿತ್ಯದಲ್ಲಿ ಸೊಗಸಿನ ಬೆಳಸನ್ನು ತರಲು ನೋಡಿದರು. ಆದರೆ ಈ ಪ್ರಾರಂಭದ ಉತ್ಕರ್ಷದ ಕಾಲದ ಪ್ರಕಟನೆಗಳು ಮುದ್ರಣ ವ್ಯವಸ್ಥೆಯ ಪ್ರಾರಂಭಿಕ ವ್ಯವಸ್ಥೆಯಿಂದ ತಕ್ಕುದಾದ ಚಿತ್ರಗಳ ಸಾಹಚರ್ಯವನ್ನ ಪಡೆಯದೇ ಹೋದವು. ಜಯರಾಯಾಚಾರ್ಯರು ತಯಾರಿಸಿದ 'ಅನುಕರಣ ಗೀತ ಲಹರಿ' ಒಂದು ಒಳ್ಳೆಯ ಉದಾಹರಣೆಯನ್ನೇನೋ ಮುಂದಿಟಿದ್ದಿತು, ಅಲ್ಲದೆ ಶಿಕ್ಷಕರಿಗೆ ಅನೇಕ ಸಲಹೆಗಳನ್ನ ಕೂಡ ಈ ಪದ್ಯಗಳನ್ನ ಮಕ್ಕಳಿಗೆ ಮುಟ್ಟಿಸಲು ನೀಡಿತ್ತು ಕೂಡ. ಆದರೆ ಅದರಲ್ಲಿ ಒಂದೂ ಚಿತ್ರಗಳಿರಲಿಲ್ಲ. ಒಳ್ಳೆಯ ಕಲಾವಿದರಿದ್ದೂ ಈ ಪುಸ್ತಕಗಳಿಗಾಗಿ ಅಗತ್ಯದ ಚಿತ್ರ ಬರೆಯುವವರು ಲಭ್ಯವಾಗದೆ ಹೋಗುತ್ತಿದ್ದುದು ಒಂದು ಕಾರಣವೆಂದಾದರೆ, ಪ್ರಕಾಶಕರು ಈ ಮತ್ತೊಂದು ಪ್ರತ್ಯೇಕ ಕೆಲಸಕ್ಕಾಗಿ ಅಷ್ಟಾಗಿ ಮುತುವರ್ಜಿವಹಿಸದೇ ಹೋದುದೂ ಇರಬಹುದಾಗಿದೆ. ಮುದ್ರಣ ವ್ಯವಸ್ಥೆಯ ಮೊದಲ ಹೆಜ್ಜೆಗಳು, ಅದೇ ಆಗ ಪತ್ರಿಕೆಗಳು ಪ್ರಾರಂಭವಾಗುತ್ತಿದ್ದು, ಈ ಬಗೆಯ ವಿಭಿನ್ನ ಮಾಧ್ಯಮಕ್ಕೆ ಬೇಕಾಗುವ ಚಿತ್ರ ಸಾಹಚರ್ಯಕ್ಕೆ ನಮ್ಮ ಕಲಾವಿದರು ತೆರೆದುಕೊಳ್ಳುವ ಅಗತ್ಯವಿತ್ತು. ನಿಧಾನ ಇದು ಸಾಧ್ಯವಾಗತೊಡಗಿತು. ರಾಜರತ್ನಂ ಅವರು ಮಕ್ಕಳಿಗಾಗಿ ಆಯ್ದು ದಾಸರ ಪದಗಳನ್ನ ನೀಡಿದ 'ಕೆನೆಹಾಲು'(೧೯೭೩ರ ಪ್ರಕಟನೆ) ಸಂಕಲನದ ಮುನ್ನುಡಿಯಲ್ಲಿ ಬರೆಯುತ್ತ 'ಈ ಮುದ್ರಣದಲ್ಲಿ(೧೯೩೫ರಲ್ಲಿ) ಚಿತ್ರಗಳಿರಲಿಲ್ಲ. ಇವು 'ಅರುಹನ ಮೂರ್ತಿಯಂತಿರೆ ನಿರಾಭರಣಂ' ಆಗಿದ್ದರೂ ಪದಗಳ ಲಾಲಿತ್ಯದಿಂದ, ಪಂಕ್ತಿಗಳ ಗತಿಯಿಂದ ಮಕ್ಕಳಿಗೆ ರುಚಿಯಾದುವು.

ಈ ಮುದ್ರಣದಲ್ಲಿಯೂ(೧೯೪೯) ಚಿತ್ರಗಳಿರಲಿಲ್ಲ

ಈ(೧೯೭೩)ಮುದ್ರಣದಲ್ಲಿ ಆದಷ್ಟು ಚಿತ್ರಗಳನ್ನು ಒದಗಿಸಲು ಯತ್ನಿಸಿದ್ದೇನೆ' ಎಂದಿದ್ದಾರೆ. ಇದು ಆ ಸಮಯದ ವ್ಯವಸ್ಥೆಯನ್ನು ತೋರಿಸುತ್ತದೆ. ಈ ಪುಸ್ತಕದಲ್ಲಿ ಚಿತ್ರಗಳನ್ನು

ಬರೆದ ಕಲಾವಿದರು. ಎಸ್. ಆರ್. ಸ್ವಾಮಿ. ಇವರು ಆಗಲೆ ಕನ್ನಡ ಪುಸ್ತಕಗಳಲಿ ಚಿತ್ರ ಬರೆಯುತ್ತ ಹೆಸರಾಗಿದ್ದ ಕಲಾವಿದರು, ನುರಿತವರು, ಒಳ್ಳೆಯ ಪ್ರತಿಭೆ ಇದ್ದವರು. ಹಾಗಾಗಿ ಇಲ್ಲಿನ ಚಿತ್ರಗಳು ಒಳ್ಳೆ ಪ್ರತಿಭೆಯಲ್ಲಿ ಎದ್ದಿದ ರೇಖಾಚಿತ್ರಗಳೇ ಆಗಿವೆ. ಉದಾಹರಣೆಗೆ



ಕಿರುಬೆರಳಲಿ ಬೆಟ್ಟವನೆತ್ತಿದವ

ಕೃಷ್ಣನು ಗೋವರ್ಧನ ಪರ್ವತವನ್ನು ಬೆರಳಲ್ಲಿ ಎತ್ತಿದ ಪ್ರಸಂಗದ ಚಿತ್ರವಿದೆ. ಲಾಲಿತ್ಯದಿಂದ ಕೂಡಿದ, ಅಲಂಕರಣದ ಶೈಲಿಯತ್ತ ವಾಲಿರುವ ದಿಟ್ಟ ರೇಖೆಗಳು ಇಲ್ಲಿ ಕಾಣುತ್ತವೆ. ಇವರು ಸಾಮಾನ್ಯವಾಗಿ ಇದೇ ಬಗೆಯದನ್ನ ತಮ್ಮ ನಿಗದಿತ ಶೈಲಿಯನ್ನಾಗಿ ಮಾಡಿಕೊಂಡಿದ್ದರು. ಅನುಭವಿ, ನುರಿತ ಕಲಾವಿದನ ಚಿತ್ರ ಎಲ್ಲೆಡೆ ಸೂಕ್ತವಾಗುವಂತೆ ಇಲ್ಲಿಯೂ ಬಳಕೆಗೊಂಡಿದೆ. ಆದರೆ ಇಂದು ಮಕ್ಕಳ ಲೋಕದ ದೃಷ್ಯ ಸಂವಹನದ ಬಗೆ ವಿಸ್ತೃತವಾಗಿ ಹರಡಿದ್ದು ತನ್ನ ವಿಭಿನ್ನ ಅಪೇಕ್ಷೆಗಳನ್ನ ಹೇಳುತ್ತಿದೆ. ಈ ಬಗೆಯ ವಾತಾವರಣದಲ್ಲಿ ಸ್ವಾಮಿ ಅವರ ಪ್ರಸ್ತುತಿ ಎಷ್ಟೇ ನಿಪುಣತೆಯಿಂದ ಕೂಡಿದ, ಶ್ರದ್ಧೆಯ ಮಾದರಿಯದಾದರೂ ಸೂಕ್ತವೇ ಅಂತ ಯೋಚಿಸುವ ಹಾಗೆ ಮಾಡುವುದರಲ್ಲಿ ಎರಡು ಮಾತಿಲ್ಲ. ಇದೇ ರೀತಿ ರಾಜರತ್ನಂ ಅವರದೇ ಇನ್ನೊಂದು ಮಕ್ಕಳ ಪುಸ್ತಕ 'ಮುದ್ದು ಕೃಷ್ಣ'(೧೯೫೧ರಲ್ಲಿ ಪ್ರಕಟಿತ) ಎಮ್. ಎಸ್. ಪುರುಷೋತ್ತಮ ರಾವ್ ಎನ್ನುವ ಇನ್ನೊಬ್ಬ ನುರಿತ ಕಲಾವಿದರ ಚಿತ್ರಗಳನ್ನ ಹೊಂದಿದ್ದು ಆಕರ್ಷಿಸುತ್ತದೆ. ಇಲ್ಲಿಯೂ ಕಲಾವಿದರ ರೇಖಾ ಚಿತ್ರಗಳು ಸಮರ್ಥ ಪ್ರಸ್ತುತಿಯನ್ನ ಹೇಳುತ್ತವೆ. ಇವು ಸೂಚ್ಯವಾಗಿ ಮುಖ್ಯ ಭಾವವನ್ನ ಕೇಂದ್ರೀಕರಿಸಿಕೊಂಡು ಪ್ರಸ್ತುತಪಡಿಸಿದ, ಉಳಿದೆಲ್ಲ ವಿವರಗಳಿಗೆ ಹೋಗದ ಚಿತ್ರಗಳು. ಪುಸ್ತಕವು ಬಾಲ ಕೃಷ್ಣ ಮತ್ತು ತಾಯಿ ಗೋಪಿಕೆಯ ನಡುವಿನ

ವಾತ್ಸಲ್ಯದ ಸೊಗಸಿನ ಸನ್ನಿವೇಶಗಳನ್ನ ಹೊಂದಿದೆ. ಇವೆರಡೂ ಪುಸ್ತಕಗಳು ಮುದ್ರಣ ಗೊಂಡುದು ಬೆಂಗಳೂರಿನ ಬಿ. ಬಿ. ಡಿ ಪಾವರ್ ಪ್ರೆಸ್‌ನಲ್ಲಿ.

ಇನ್ನೊಂದು ಉದಾಹರಣೆಯನ್ನು ಎಮ್. ಎಸ್. ಪುಟ್ಟಣ್ಣನವರ 'ನೀತಿ ಚಿಂತಾಮಣಿ'ಯಿಂದ ಆಯ್ದುಕೊಳ್ಳಲಾಗಿದೆ. ನೀತಿ ಚಿಂತಾಮಣಿ ಮೈಸೂರು ಭಾಗದಲ್ಲಿ, ಅರಸರ ಸಮಯದಲ್ಲಿ, ಅತ್ಯಂತ ಪ್ರಚುರವಾಗಿದ್ದ ಪುಸ್ತಕ. ಇಲ್ಲಿ ಲಭ್ಯವಾದ ಪುಸ್ತಕ ೧೯೭೭ರಲ್ಲಿ ಪ್ರಕಟವಾದುದಾಗಿದ್ದು, ೧೯೬೨ರಲ್ಲಿ ಮೈಸೂರಿನ ಕಾವ್ಯಾಲಯ ಪ್ರಕಾಶಕರಿಂದ ಪ್ರಕಟವಾದುದರ ಮರುಮುದ್ರಣ. ಇಲ್ಲಿ ಚಿತ್ರ ಬಿಡಿಸಿರುವ ಕಲಾವಿದ ಸಿಂಹನಾಥನ್. ಇದೇ ಕಲಾವಿದರ ಚಿತ್ರಗಳು ಹೊಯ್ಸಳರ ಮಕ್ಕಳ ಪುಸ್ತಕಗಳಲ್ಲೂ ನೋಡಲು ಸಿಗುತ್ತವೆ. ಕಾವ್ಯಾಲಯ ಪ್ರಕಾಶನದಲ್ಲಿ ಸಾಮಾನ್ಯವಾಗಿ ಚಿತ್ರ ಬಿಡಿಸುತ್ತಿದ್ದ ಕಲಾವಿದರಿವರಾಗಿರಬಹುದು. ಈ ಕಲಾವಿದರು ಕೂಡ ರೇಖಾ ಚಿತ್ರಗಳಲ್ಲಿ ಒಳ್ಳೇ ನುರಿತವರಾಗಿದ್ದುದು ಗೋಚರಿಸುತ್ತದೆ. ಅದರಲ್ಲೂ ಮಕ್ಕಳ ಈ ಪುಸ್ತಕಗಳಲ್ಲಿ ಕಲ್ಪನಾತ್ಮಕವಾಗಿ ವಿಭಿನ್ನವಾಗಿ ಚಿತ್ರಗಳನ್ನ ಪ್ರಸ್ತುತಪಡಿಸಿರುವುದು ಗಮನಿಸುವಂತಹದು.

ಈ ಕೆಳಗಿನ ಚಿತ್ರದಲ್ಲಿ ವಿವರವಾದ ಅಚ್ಚುಕಟ್ಟಾದ ಚಿತ್ರಣವಿದ್ದರೆ




ಜೇಡಗಳ ಚಿತ್ರಗಳನ್ನ ನೋಡಬಹುದು.



ಹಿರಿಯ ಕವಿ ಕುವೆಂಪು ಅವರು ಮಕ್ಕಳ ಕ್ಷೇತ್ರದಲ್ಲೂ ಮುದದಿಂದ ತುಡಿದವರು. ಹಲವರು ಕವಿತೆಗಳನ್ನು, ಕತೆಗಳನ್ನು ರಚಿಸಿದವರು. ಆದರೆ ಈ ಹಿರಿಯ ಕವಿಯ ಪುಸ್ತಕಗಳೂ ಚಿತ್ರಗಳಿಲ್ಲದೆ ಮುದ್ರಣಗೊಂಡಿರುವುದು ಅಂದಿನ ವ್ಯವಸ್ಥೆಯನ್ನ ಹೇಳುತ್ತವೆ. ಅವರ ಸುಪ್ರಸಿದ್ಧ ಕಿಂದರ ಜೋಗಿ ದೀರ್ಘ ಪದ್ಯದ ಒಂದು ಪ್ರಕಟಣೆಯಲ್ಲಿ ಅಮಲಾ ಎಂಬ ಕಲಾವಿದರ ಚಿತ್ರಗಳನ್ನ ಬಳಸಿಕೊಳ್ಳಲಾಗಿದೆ. ಅದೇ ೨೦೦೭ರ ಪ್ರಕಟಣೆಯಲ್ಲಿ ಇಲ್ಲಿದ್ದಂತೆಯೇ ಇರುವ ಚಿತ್ರಗಳನ್ನು ವ್ಯಂಗ್ಯಚಿತ್ರಕಲಾವಿದರಾಗಿ ಖ್ಯಾತಿಗಳಿಸಿದ ಆರ್. ಕೆ. ಲಕ್ಷ್ಮಣ ಅವರು ಚಿತ್ರಿಸಿದ್ದಾರೆ. ಇಲ್ಲಿ ನೀಡಿರುವ ಒಂದು ಉದಾಹರಣೆಯನ್ನು ನೋಡಬಹುದು. ಶಾಲೆಯಲ್ಲಿ ಪಾಠ ನಡೆದಾಗ ಮೇಷ್ಟರ ಜೇಬಿನಿಂದಲೇ ಇಲಿಗಳು ಹೊರ ಜಿಗಿದು ಆವಾಂತರಗೊಳಿಸಿದ ಪ್ರಸಂಗ ಇದೆ. ಈ ಇಬ್ಬರೂ ಕಲಾವಿದರ ಚಿತ್ರಗಳನ್ನ ನೋಡಿದರೆ ವ್ಯತ್ಯಾಸ ಸುಗೋಚರ. ನಾರಾಯಣರ ವ್ಯಂಗ್ಯ ಚಿತ್ರಗಳ ಸುಪರಿಚಿತವಾದ ರೇಖೆಗಳ ಅವರದೇ ಆದ ಛಾಪಿನ ಶೈಲಿ ಇಲ್ಲಿ ಎದ್ದುಕಾಣುತ್ತದೆ. ಈ ಪುಸ್ತಕ ಉದಯರವಿ ಪ್ರಕಾಶನದಿಂದ ಪ್ರಕಟವಾದುದು.

ಸರಿ ಸುಮಾರು ಇದೇ ಸಮಯದಲ್ಲಿ ಧಾರವಾಡದಲ್ಲಿ ಮೇವುಂಡಿ ಮಲ್ಲಾರಿ ಅವರು ಮಕ್ಕಳ ಪುಸ್ತಕಗಳನ್ನು ರಚಿಸುತ್ತ ತಾವೇ ಪ್ರಕಟಿಸುತ್ತ ಬಂದರು. ಸಾಮಾನ್ಯವಾಗಿ ಗದ್ಯಕತೆಗಳಿಗೆ ಜನಪದ ಮಾದರಿಗಳನ್ನೇ ಆಯ್ದುಕೊಳ್ಳುತ್ತಿದ್ದುದು ವಾಡಿಕೆಯಾಗಿತ್ತು. ಪಂಜೆ ಮಂಗೇಶರಾಯರೇ ಹೀಗೆ ಮಾಡಿದ್ದರು. ಇದೊಂದು ಬಗೆಯಲ್ಲಿ ಸಾರಾ ಸಗಟಾಗಿ ಒಪ್ಪಿಕೊಂಡಹಾಗಿರುವ ಮಾತಾಗಿತ್ತು. ಅತ್ಯಂತ ಹೆಸರಾಂತ ಮಕ್ಕಳ ಲೇಖಕ, ಅದರಲ್ಲೂ ಕತೆಯನ್ನು ಸ್ವಾರಸ್ಯವಾಗಿ

ಮಕ್ಕಳನ್ನು ಮುಂದೆ ಕೂರಿಸಿಕೊಂಡು ಹೇಳಿದಂತೆ ಪ್ರಸ್ತುತಪಡಿಸುತ್ತಿದ್ದ ಹೊಯ್ಸಳರೂ ಕೂಡ ಇಂತದೇ ಮಾದರಿಗಳನ್ನು ಅಪೇಕ್ಷಿಸಿದ್ದರು. ಮೇವುಂಡಿ ಮಲ್ಲಾರಿ ಅವರೂ ಇಂಥವೇ ರಚನೆಗಳನ್ನು ತಮ್ಮದೇ ಆದ ಶೈಲಿಯಲ್ಲಿ ಧಾರವಾಡದ ಬನಿಯೊಡನೆ ಸೊಗಸಾಗಿ ನೀಡುವುದರ ಮಧ್ಯ 'ಮಡ್ಡಮ್ಮ'ನ ಪಾತ್ರವಿರುವ ಕೆಲ ಕತೆಗಳನ್ನು ತಾವೇ ಕಲ್ಪಿಸಿ ನೀಡಿದುದು ಗಮನಿಸುವಂತಹದು. ಮಡ್ಡಮ್ಮ ಒಬ್ಬ ಸಾದಾ ಸೀದಾ ಹಳ್ಳಿಯ ಹೆಣ್ಣುಮಗಳು. ಅವಳ ಸಂಸಾರವೆಂದರೆ ಅವಳು ಮತ್ತು ಅವಳ ಮಕ್ಕಳು ಅಷ್ಟೇ. ಕಿಟ್ಟದ ಕಿಟ್ಟಿ, ಕಾಜಿನ ಕಾಶಿ, ಲುಟುಪುಟು ಪುಟ್ಟು, ಚಂದನ ಚೆಲುವಿ ಹೀಗೆ ಅಚ್ಚ ಗ್ರಾಮೀಣ ಪರಿಸರದ ಮಕ್ಕಳು ಅವಳವು. ಈ ಪಾತ್ರಗಳನ್ನ ಇಟ್ಟುಕೊಂಡು ಅವರು ಹಲವೂ ಪುಟ್ಟ ಪುಟ್ಟ ಪ್ರಸಂಗಗಳನ್ನು ಹೆಣೆದರು. ಎಲ್ಲದರಲ್ಲೂ ತಾಯ ಮಮತೆಯ, ಸಾಮಾನ್ಯ ಮಹಿಳೆ ಎನ್ನಿಸುವವಳಲ್ಲಿಯೂ ಅಡಗಿದ ಆಡಂಬರವಿಲ್ಲದ ದೊಡ್ಡತನದ ಚಿತ್ರಣ ಬರುತ್ತದೆ. ಆದರೆ ಈ ಎಲ್ಲ ಕತೆಗಳಿಗೆ ಅವರು ಬಳಸಿಕೊಂಡುದು ಒಂದು ಬೊಂಬೆಯ ಚಿತ್ರ. ಅದು ಬಹುಶಃ ಕಟ್ಟಿಗೆಯ ಬೊಂಬೆಯ ಒಂದು ರೇಖಾ ಚಿತ್ರ. ಆಗ ಚೆಂದಾಳ ಬೊಂಬೆ ಎಂದು ಕೈ ಕೆಳಗೆ ಬಿಟ್ಟುಕೊಂಡು ನಿಂತ ಹೆಣ್ಣು ಬೊಂಬೆಗಳು ಜನರಲ್ಲಿ ಪ್ರಚುರವಿದ್ದವು. ಗ್ರಾಮೀಣ ಭಾಗದಲ್ಲಿ, ಅದರಲ್ಲೂ ಧಾರವಾಡದ ಹತ್ತಿರದ ಯಮನೂರಿನ ಜಾತ್ರೆಯಲ್ಲಿ ಗೊಂಬೆಗಳು ಮಾರಾಟಕ್ಕೆ ಬರುತ್ತಿದ್ದವು. ಘಾಟು ವಾಸನೆಯ ದಿಟ್ಟ ಬಣ್ಣದ ಇವು ಅಂದು ಮಕ್ಕಳ ವಿಶೇಷ ಆಕರ್ಷಣೆಯ ಆಟಿಗೆಯ ಬೊಂಬೆಗಳಾಗಿದ್ದವು. ಇಂಥದೇ ಒಂದು ಮಾದರಿಯನ್ನು ಅವರು ಬಳಸಿಕೊಂಡಿದ್ದರು. ಆಗೆಲ್ಲ ಬಳಕೆಯಲ್ಲಿ ಬಂದಿದ್ದ ಬ್ಲಾಕುಗಳಲ್ಲಿ ಇದು ಸಿಕ್ಕಿತ್ತು ಅವರಿಗೆ. ಮಡ್ಡಮ್ಮನ ವ್ಯಕ್ತಿತ್ವಕ್ಕೆ ಸೂಕ್ತವೂ ಆಗಿತ್ತು. ಅವಳ ಐದೂ ಮಂದಿ ಮಕ್ಕಳೂ ಬೊಂಬೆಗಳಾಗಿಯೇ ಚಿತ್ರಣಗೊಂಡಿದ್ದರು. ಈ ಬಗೆಯ ಒಂದು ಚಿತ್ರವನ್ನ ಉದಾಹರಣೆಯಾಗಿ ನೋಡಬಹುದು.



ಮಡ್ಡಮ್ಮ ಮತ್ತು ಆಕೆಯ ಮಕ್ಕಳು


ಯಾವ ನುರಿತ ಕಲಾವಿದರ ಚಿತ್ರಗಳೂ ಅವರ ಪುಸ್ತಕಗಳಲ್ಲಿ ಕಾಣಿಸಿರಲಿಲ್ಲ. ಅವರೇ

ತುಂಬ ಕಷ್ಟ ಪಟ್ಟು, ಅದ್ಯಾವುದೋ ಸೆಳೆತವೆಂಬಂತೆ ಮಕ್ಕಳ ಪುಸ್ತಕಗಳನ್ನು ಬಿಟ್ಟೂ ಬಿಡದೆ ಪ್ರಕಟಿಸುತ್ತ ಬಂದರು.


ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಮುಂದಿನ ಹಂತ ಶಿಕ್ಷಕ ಸಮುದಾಯ ಮುಂಚೂಣಿಯಲ್ಲಿ ನಿಂತು ವಿಪುಲವಾಗಿ, ಅತ್ಯಂತ ಶ್ರದ್ಧೆಯಿಂದ, ಇದೊಂದು ತಮ್ಮ ಕರ್ತವ್ಯವೆಂಬಂತೆ ಸಾಹಿತ್ಯದ ರಚನೆ, ಪ್ರಕಟಣೆ, ಪ್ರಚಾರದಲ್ಲಿ ತೊಡಗಿದುದು. ಪ್ರಬುದ್ಧರ ಸಾಹಿತ್ಯ ನವ್ಯವೆಂದು ಹೊರಳಿದ ಕಾಲ ಮಕ್ಕಳ ಸಾಹಿತ್ಯದ ಕಡಗಣನೆಯಾಯಿತೇನೋ ನಿಜವೇ, ಆದರೆ ಈ ಶಾಲಾ ಮಾಸ್ತರರ ದಂಡು ಒಳ್ಳೇ ಹಟದಿಂದೆಂಬಂತೆ ಮಕ್ಕಳ ಸಾಹಿತ್ಯದ ವಾತಾವರಣ ನಿರ್ಮಾಣದಲ್ಲಿ ನಿಂತುದೀಗ ಇತಿಹಾಸ. ಈ ಸಮಯದಲ್ಲಿ ಸಿಸು ಸಂಗಮೇಶರು ಎದ್ದುಕಾಣುವ ವ್ಯಕ್ತಿ. ಅವರು ಮುಂದಾಳತ್ವ ವಹಿಸಿ ಬಲು ದೊಡ್ಡ ಕಾರ್ಯಮಾಡಿದರು. ಅವರು ಪುಸ್ತಕ ಪ್ರಕಟಣೆಯಲ್ಲೂ, ತಮ್ಮದೇ ಆದ 'ಬಾಲ ಭಾರತಿ' ಎನ್ನುವ ಮಕ್ಕಳ ಪತ್ರಿಕೆಯ ಪ್ರಕಟಣೆಯಲ್ಲೂ ಆಸ್ಥೆಯಿಂದ ತೊಡಗಿಕೊಂಡು ಹೊಸ ಮಾರ್ಗ ತೋರಿದರು. ಈ ಸಮಯದಲ್ಲಿ ಮಕ್ಕಳ ಪುಸ್ತಕಗಳಲ್ಲಿ ಚಿತ್ರಗಳ ಬಳಕೆಯ ಕುರಿತು ಒಳ್ಳೇ ಪ್ರಜ್ಞಾಪೂರ್ವಕವಾದ ತೊಡಗುವಿಕೆ ಕಂಡುಬಂದಿತು. ಮಕ್ಕಳ ಸಾಹಿತ್ಯಕ್ಕೆ ಚಿತ್ರಗಳು ಅವಿನಾಭಾವ ಸಂಬಂಧ ಹೊಂದಿವೆ ಎನ್ನುವುದನ್ನು ಮನಗಂಡು ಕಾರ್ಯಪ್ರವೃತ್ತಗೊಂಡುದು ಕಾಣುತ್ತದೆ. ಹಾಗೆಂದು ಎಲ್ಲ ಅನುಕೂಲಗಳು ಅವರಿಗೆ ಒದಗಿಬಂದುವೆಂದು ಅಲ್ಲ. ಅವರು ಚಿತ್ರಕಾರರನ್ನು ಹಿಡಿದು ಸೂಕ್ತ ಚಿತ್ರಗಳನ್ನು ಆಯ್ದು ಪುಸ್ತಕಗಳಲ್ಲಿ ಅಳವಡಿಸಿ ಮುದ್ರಿಸುವಲ್ಲಿ ಒಳ್ಳೇ ಶ್ರಮವನ್ನೇ ವಹಿಸಿದರು. ಅವರು ಭಾರತದ ನಾನಾ ಕಡೆಗಳಲ್ಲಿ ಸಾಕಷ್ಟು ಅಡ್ಡಾಡುತ್ತ ಮಕ್ಕಳ ಸಾಹಿತ್ಯ ವಲಯದ ಸಂಪರ್ಕ ಇಟ್ಟುಕೊಂಡಿದ್ದರೂ ಕೂಡ. ನ್ಯಾಷನಲ್ ಬುಕ್‌ಟ್ರಸ್ಟ್, ಚಿಲ್ಡ್ರನ್ಸ್ ಬುಕ್‌ಟ್ರಸ್ಟ್ ಅಂಥ ಸಂಸ್ಥೆಗಳಿಂದ ಬರತೊಡಗಿದ್ದ ಪುಸ್ತಕಗಳನ್ನು ಗಮನಿಸಿದ್ದರು. ಹಾಗಾಗಿ ಅವರು ತಮ್ಮ ಪ್ರಕಾಶನದಿಂದ ತರತೊಡಗಿದ ಪುಸ್ತಕಗಳಿಗೆ ವಿಭಿನ್ನವಾದ ವಿಶಿಷ್ಟ ಆಕಾರವನ್ನು ಕಂಡುಕೊಂಡರು. ಪುಟಗಳ ವಿನ್ಯಾಸದಲ್ಲಿ, ಮತ್ತು ಚಿತ್ರಗಳ ಅಳವಡಿಕೆಯಲ್ಲಿ ಮಕ್ಕಳ ಲೋಕದ ಅಗತ್ಯವನ್ನು ಕಂಡುಕೊಂಡರು. ಪದ್ಯವಾಗಲಿ, ಕತೆಗಳಾಗಲಿ ಅವನ್ನ ಚಿತ್ರಗಳೊಂದಿಗೆ ವಿಭಿನ್ನ ಬಗೆಯಲ್ಲಿ ಅಳವಡಿಸುತ್ತ ಆಕರ್ಷಕಗೊಳಿಸಿದರು. ಅದರಲ್ಲೂ ಚಿತ್ರಗಳನ್ನು ಸೂಕ್ತ ರೀತಿಯಲ್ಲಿ, ಕಂಡಕೂಡಲೇ ಆಕರ್ಷಿಸುವಂತೆ ಮಾಡಿದುದು ಗಮನಿಸಬೇಕಾದುದು. ಹಾಗೆಂದು ಅವರಿಗೆ ಸುಲಭದಲ್ಲಿ ಅಗತ್ಯವಾದ ಪ್ರತಿಭೆಯ ಕಲಾವಿದರು ಸಿಕ್ಕರೆಂದಲ್ಲ. ಅದಕ್ಕಾಗಿ ಅವರು ಬಹಳ ಶ್ರಮ ವಹಿಸಬೇಕಾಗಿಯೂ ಬಂತು. ಅನೇಕ ಪುಸ್ತಕಗಳಲ್ಲಿ ಚಿತ್ರಕಾರರ ಹೆಸರು ಕಾಣದೆ ಹೋಗಿರುವುದನ್ನು ನೋಡುತ್ತೇವೆ. ಮುದ್ರಣ ಸಂಸ್ಥೆಯಲ್ಲಿ ಆಗೆಲ್ಲ ಲಭ್ಯವಾಗುತ್ತಿದ್ದ ಬ್ಲಾಕುಗಳು, ಅಲ್ಲದೆ ಒಮ್ಮೆ ಮಾಡಿಸಿದ ಬ್ಲಾಕುಗಳನ್ನೇ ಮತ್ತೆ ಮತ್ತೆ ಉಪಯೋಗಿಸಿದುದು ಇಲ್ಲಿ ಯಥೇಚ್ಛವಾಗಿ ಕಾಣುತ್ತದೆ. ಅದೇನೇ ಇರಲಿ, ಮಕ್ಕಳ ಸಾಹಿತ್ಯದೊಡನೆ ಚಿತ್ರಗಳ ಸಾಹಚರ್ಯವನ್ನ ಅವರು ಎಷ್ಟೊಂದು ಮನಗಂಡಿದ್ದರು ಎನ್ನುವುದು ತಿಳಿಯುತ್ತದೆ.

ಕಳೆದ ಶತಮಾನದ ೭೦, ೮೦ರ ದಶಕಗಳಲ್ಲಿ ಖ್ಯಾತ ಕಲಾವಿದ ಬೆಳಗಾವಿಯ ಕೆ. ಬಿ. ಕುಲಕರ್ಣಿ ಅವರ ಚಿತ್ರಗಳು ಉತ್ತರ ಕರ್ನಾಟಕದ ಪತ್ರಿಕೆಗಳಲ್ಲಿ, ಮಕ್ಕಳ ಪುಸ್ತಕಗಳಲ್ಲಿ ವಿಪುಲವಾಗಿ ಕಾಣತೊಡಗಿದವು. ಕರ್ಮವೀರ, ಕಸ್ತೂರಿ ಅಂಥ ಪತ್ರಿಕೆಗಳಲ್ಲಿ ನಿಗದಿತವಾಗಿ ಬರೆಯುತ್ತಿದ್ದ ಕುಲಕರ್ಣಿ ಅವರು ಈ ಭಾಗದ ಲೇಖಕರ ಪುಸ್ತಕಗಳಿಗೂ ಚಿತ್ರಗಳನ್ನ ಬರೆಯಲು ಮನಸು ಮಾಡಿದ್ದು ದೊಡ್ಡ ಸಂಗತಿ. ಹಾಗಾಗಿ ಅವರ ನುರಿತ ಕೈ, ದಿಟ್ಟ,

ಅನುಭವಿ ರೇಖೆಗಳ ಚಿತ್ರಗಳು ಸಾಕಷ್ಟು ಪುಸ್ತಕಗಳಲ್ಲಿ ಕಾಣಿಸಿಕೊಂಡವು. ಸಿಸು ಸಂಗಮೇಶರೂ ತಮ್ಮ ಪುಸ್ತಗಳಿಗೆ ಅವರ ಪ್ರತಿಭೆಯನ್ನು ಆಗಾಗ ಬಳಸಿಕೊಂಡರು. ಅವರದೇ ಆದ 'ಬಿದ್ದ ಚಂದಿರನ ಒದ್ದು ಓಡಿಸಿದ' ಸಂಕಲನಕ್ಕೆ ಕುಲಕರ್ಣಿ ಅವರವೇ ಚಿತ್ರಗಳು ಇವೆ. ಉದಾಹರಣೆಗೆ



ಕಾಡಿನಲ್ಲಿ ಕ್ರೀಡಾ ಮಹೋತ್ಸವ



ಆ ಪುಸ್ತಕದಲ್ಲಿನ ಒಂದುಪುಟವನ್ನು ನೋಡಬಹುದು. ಕುಲಕರ್ಣಿ ಅವರ ಚಿತ್ರಗಳು ಆಗ ಎಷ್ಟೊಂದು ನಿಗದಿತವಾಗಿ ಈ ಭಾಗದಲ್ಲಿ ಕಾಣಿಸಿದುವೆಂದರೆ ಅವನ್ನ ನೋಡಿದೊಡನೆ ತಟಕ್ಕನೆ ಗುರುತಿಸಬಹುದಾಗಿತ್ತು. ಅವರ ನಿರ್ದಿಷ್ಟ ಶೈಲಿ ಹಾಗಿದ್ದುದು. ಅಂಗರಚನೆಗಳನ್ನ ತರುವಲ್ಲಿ ಅವರು ಸುಲಲಿತವಾಗಿ ಪಳಗಿದವರಾಗಿದ್ದಂತೆ, ಕೆಲವೇ ಪ್ರಭಾವೀ ರೇಖೆಗಳ ಎಳೆತಗಳಲ್ಲಿ ಅಪೇಕ್ಷಿತ ಪ್ರಭಾವಗಳನ್ನ ತರಬಲ್ಲವರಾಗಿದ್ದರು. ಮೇವುಂಡಿ ಮಲ್ಲಾರಿ ಅವರ ಪುಸ್ತಕಗಳಲ್ಲೂ ನಂತರ ಈ ಕಲಾವಿದರ ಚಿತ್ರಗಳು ಕಾಣಿಸಿಕೊಂಡುದು ಇದೆ. ಸಿಸು ಸಂಗಮೇಶ ಅವರು ಮೋನಪ್ಪ ಅಂಥ ನುರಿತ ಇನ್ನೂ ಅನೇಕ ಕಲಾವಿದರ ಪ್ರತಿಭೆಯನ್ನು ಬಳಸಿಕೊಂಡುದು ಕಾಣುತ್ತದೆ. ಅವರ ಸಾಹಸ ಮೆಚ್ಚತಕ್ಕುದು.

ಪತ್ರಿಕಾಲೋಕ ಅತ್ಯಂತ ಭರಾಟೆಯಲ್ಲಿ ಕನ್ನಡದಲ್ಲಿ ಆಗ ಶುರುವಾಗಿತ್ತಾದ್ದರಿಂದ ಅವುಗಳಿಗೆ ಅಗತ್ಯವಾದ ಚಿತ್ರಗಳನ್ನ ಬರೆಯುವ ಚಿತ್ರ ಕಲಾವಿದರೂ ಅಗತ್ಯವಾಗಿ ಬೆಳೆಯಬೇಕಾಗಿತ್ತು. ಒಬ್ಬ ಒಳ್ಳೆಯ ಚಿತ್ರಕಲಾವಿದರಾಗಿ ಪ್ರದರ್ಶನಕ್ಕೆ ತಮ್ಮದೇ ಆದ ಅಭಿವ್ಯಕ್ತಿಯ ಚಿತ್ರಗಳನ್ನ ಚಿತ್ರಿಸುವ ಬಗೆಯಿಂದ ಈ ಬಗೆಯ ಅಪೇಕ್ಷೆಗಳು ವಿಭಿನ್ನವಾದುದನ್ನ ಬಯಸಿದುದು ಸಹಜವಾಗಿತ್ತು. ಯಾವೊಂದು ಲೇಖನವೋ, ಕವಿತೆಯೋ, ಕವಿತೆಯೊ ಮುಂತಾಗಿ ಅವುಗಳ ಅಗತ್ಯಕ್ಕೆ ತಕ್ಕಂತೆ ಚಿತ್ರಕಾರ ಚಿತ್ರಿಸುವ ಅಗತ್ಯ ಇತ್ತು. ಅದೂ ಪತ್ರಿಕೆಯ ಪುಟಗಳ ಸ್ಥಳಕ್ಕೆ ಅಗತ್ಯವಾದಂತೆ ಇವನ್ನ, ಸೂಚ್ಯವಾಗಿ, ಅರ್ಥಪೂರ್ಣವಾಗಿ ನೀಡುವ ಜವಾಬುದಾರಿ ದೊಡ್ಡಾಗಿತ್ತು. ಇದಕ್ಕಾಗಿಯೇ ಅನೇಕ ಕಲಾವಿದರು ಸಿದ್ಧವಾದರು. ಕನ್ನಡ ನಾಡಿನಲ್ಲಿ ಅತ್ಯಂತ ಅನುಭಾವಿಯಾದ, ಪ್ರತಿಭಾವಂತ ಅನೇಕ ಕಲಾವಿದರು ಈ ರಂಗದಲ್ಲಿ ಕಾಣಿಸಿಕೊಂಡರು ಎನ್ನುವುದನ್ನು ನೋಡುತ್ತೇವೆ. ಇಂಥ ಕಲಾವಿದರ ಪ್ರತಿಭೆ ಆಗಾಗ ಮಕ್ಕಳ ಪುಸ್ತಕಗಳಿಗೂ, ಪತ್ರಿಕೆಗಳಲ್ಲಿನ ಮಕ್ಕಳಿಗಾಗಿರುವ ಅಂಕಣಗಳಿಗೂ ಲಭ್ಯವಾಗುತ್ತ ಬಂತು. ಆಗಿನ ಚಿತ್ರಕಲಾ ಶಿಕ್ಷಣದಲ್ಲಿ ಈ ಬಗೆಯ ತರಬೇತಿ ಎಷ್ಟರ ಮಟ್ಟಿಗೆ ಇತ್ತೊ ಕಾಣೆ, ಈಗೆಲ್ಲ ದೃಶ್ಯ ಮಾಧ್ಯಮದ ಕುರಿತೇ ಪ್ರತ್ಯೇಕ ಕೋರ್ಸುಗಳು ಕಾಣಿಸಿಕೊಂಡಿವೆ. ಎಮ್. ಟಿ. ವಿ ಆಚಾರ್ಯ ಅವರ ಅಂಚೆ ತರಬೇತಿ ಪಾಠಗಳಲ್ಲಿ ಈ ಬಗೆಯ ಪಾಠಗಳಿದ್ದುದನ್ನು ನಾನು ನೋಡಿರುವೆ. ಇಲ್ಲಿ ಒಂದು ಉದಾಹರಣೆಯನ್ನು ರಾಜರತ್ನಂ ಅವರ 'ಪೋಲಿ ಕಿಟ್ಟಿಯ ಕಥೆಗಳು' ಕೃತಿಯಿಂದ ಆರಿಸಿಕೊಂಡಿದೆ.



'ಏಳೋ ಲೇ ಕಂಸಾವತಾರ!'

ಕೈಲಾಸಂ ಅವರ ಪೋಲಿ ಕಿಟ್ಟಿ ನಾಟಕವನ್ನೇ ಆಧರಿಸಿಕೊಂಡು ಮಕ್ಕಳಿಗಾಗಿ ರಾಜರತ್ನಂ ಈ ಪುಸ್ತಕ ರಚಿಸಿದುದು. ಇದು ಮೊದಲು ಸುಧಾ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಆಗ ಆ ಪತ್ರಿಕೆಗೆ ಬಹಳಷ್ಟು ಸಮಯ ತೊಡಗಿಕೊಂಡ ನುರಿತ ಕಲಾವಿದ ಆನಂದ ಅವರು ಚಿತ್ರಗಳನ್ನ ಬರೆದಿದ್ದರು. ಅವೇ ಚಿತ್ರಗಳನ್ನ ಪುಸ್ತಕಕ್ಕೂ ಅಳವಡಿಸಲಾಗಿದೆ. ಆನಂದ ಅವರು ದಿಟ್ಟ, ಆಕರ್ಷಕ, ಅವರದೇ ಶೈಲಿಯ ನಿಗದಿತ ರೇಖೆಗಳಲ್ಲಿ ಚಿತ್ರಗಳನ್ನ ಸೊಗಸಾಗಿ ನೀಡುತ್ತಿದ್ದುದು ಸುಧಾ ಪತ್ರಿಕೆಯ ವೀಕ್ಷಕರಿಗೆಲ್ಲ ಗೊತ್ತು. ಅಲ್ಲಿ ಭಾವ ಸ್ಫುರಣೆಯಾಗಲಿ, ಸಂದರ್ಭದ ಸೂಚಿತ ಸಂಗತಿಯಾಗಲಿ ಪ್ರಭಾವಕಾರಿಯಾಗಿ ಮೂಡುತ್ತಿತ್ತು.ಅವರು ಸಾಮಾನ್ಯವಾಗಿ ಆಕೃತಿಗಳ ಒಂದಿಷ್ಟೆಲ್ಲ ವಿವರಗಳಿಗೆ ಒತ್ತುಕೊಡುತ್ತಿದ್ದರು. ಅವರ ರೇಖೆಗಳದೇ ವೈಶಿಷ್ಟ್ಯ. ನೋಡುಗರ ಕಣ್ಣುಗಳನ್ನ ಸೆಳೆಯುತ್ತಿದ್ದುದು ವಿಶೇಷವಾಗಿದೆ.

ಮುದ್ರಣ ತಾಂತ್ರಿಕತೆ ಆಫ್‌ಸೆಟ್‌ನಿಂದ ಕಂಪ್ಯೂಟರ್‌ಗೆ ಹೊರಳಿದಂತೆ ಇದ್ದಕಿದ್ದಹಾಗೆ ದೊಡ್ಡ ಬದಲಾವಣೆಯೇ ಕಾಣಿಸಿಕೊಂಡಿತು. ಇದು ನಮ್ಮ ನಾಡಿನ ಎಲ್ಲೆಡೆ ಒಂದೇ ಸಮಯದಲ್ಲಿ ಆಯಿತು ಎಂದಲ್ಲ. ಆಫ್‌ಸೆಟ್ .ತಂತ್ರಜ್ಞಾನವನ್ನ ಬಳಸುವುದು ಇನ್ನೂ ಅನೇಕ ಕಡೆಗಳಲ್ಲಿ ಮುಂದುವರೆದೇ ಬಂತು. ಅಷ್ಟೇ ಏನೂ ಕೆಲ ಕಡೆ ಬ್ಲಾಕ್‌ಗಳ ಮುದ್ರಣವೂ ಮುಂದುವರೆಯಿತು. ಆದರೆ ಕಾಂಪ್ಯೂಟರಿನ ಸಾಫ್ಟವೇರ್ ತನ್ನ ಜಾಲವನ್ನು ಬಹುಬೇಗ ಎಲ್ಲೆಡೆ ಪಸರಿಸುವಲ್ಲಿ ಯಶಸ್ವಿಯಾಗಿದೆ. ಅದರಲ್ಲಿ ಸಾಧ್ಯವಾದ ಸೌಲಭ್ಯಗಳು, ನಾನಾ ಬಗೆಯ ಅಪರಿಮಿತ ಎನ್ನಬಹುದಾದ ಸಾಧ್ಯತೆಗಳು, ಬಹು ಮುಖ್ಯ.-ಬಹು ಸುಲಭದಲ್ಲಿ ಇದೆಲ್ಲ ಸಾಧ್ಯವಾಗುವುದು, ಕಾಲದ ಉಳಿಕೆಯೂ ಅಗಾಧ ಪ್ರಮಾಣದಲ್ಲಿ ಆಗುವುದು. ಹೀಗೆ ಇನ್ನೂ ಅನೇಕ ಕಾರಣಗಳಿಗಾಗಿ ಜನಪ್ರಿಯವಾದುದರಲ್ಲಿ ಅಚ್ಚರಿಯಿಲ್ಲ. ಪುಸ್ತಕ, ಪತ್ರಿಕೆ, ಪೋಸ್ಟರು, ಬ್ಯಾನರು, ಹೋರ್ಡಿಂಗಗಳ ಮುದ್ರಣದಲ್ಲಿ ಇಂದು ಕಾಣುವ ಅಚ್ಚರಿ ಈ ಹೊಸ ತಂತ್ರಜ್ಞಾನದಿಂದ ಸಾಧ್ಯವಾಗಿದೆ. ಮಕ್ಕಳ ಸಾಹಿತ್ಯ ಈಗ ನಿಜವಾಗಲೂ ಊಹಾತೀತ ಬಗೆಯಲ್ಲಿ ಅಗತ್ಯಗಳನ್ನ ದೃಶ್ಯ ಮಾಧ್ಯಮದ ಸಾಹಚರ್ಯದಲ್ಲಿ ಪಡೆಯತೊಡಗಿದೆ ಎಂದರೆ ಅಚ್ಚರಿಯಲ್ಲ. ಅದರಲ್ಲೂ ವಿಶ್ವದ ಬಹು ಭಾಗದಲ್ಲಿ ಕಾಣಿಸಿಕೊಂಡು ಮಾರುಕಟ್ಟೆಯನ್ನು ಬಾಚಿಕೊಳ್ಳುವ ಇಂಗ್ಲಿಷ್ ಪುಸ್ತಕಗಳನ್ನ ನೋಡಿದರೆ ಇದರ ಅದ್ಭುತ ಕಲ್ಪನೆ ಗಮನಕ್ಕೆ ಬರುತ್ತದೆ. ನಮ್ಮಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್ ಈ ನಿಟ್ಟಿನಲ್ಲಿ ಮೊದಲೇ ತೊಡಗಿಕೊಂಡಂತೆ ಒಳ್ಳೇ ದೃಶ್ಯ ಅಭಿವ್ಯಕ್ತಿ ಗುಣವನ್ನ ಕಾಯ್ದುಕೊಂಡು ಒಂದು ಮಾದರಿಯನ್ನ ಸೃಷ್ಟಿಸಿದೆ. ಇದರೊಂದಿಗೆ ತೂಲಿಕಾ, ಪ್ರಥಮ, ತಾರಾ, ಕಥಾ ಮುಂತಾದ ಖಾಸಗಿ ಪ್ರಕಾಶಕರು ಈ ನಿಟ್ಟಿನಲ್ಲಿ ಸಾಧ್ಯತೆಗಳನ್ನ ಬಳಸಿಕೊಳ್ಳುತ್ತ ನಾನಾ ಬಗೆಯ ಚಾಚುಗಳಿಗೆ ಪ್ರಯೋಗನಿರತರಾಗಿದ್ದಾರೆ. ಕನ್ನಡದಲ್ಲಿ ಇಷ್ಟೆಲ್ಲ ಸಾಧ್ಯವಾಗದೆ ಹೋಗಿರಲು ಕಾರಣ ಅದರ ಸೀಮಿತ ಮಾರುಕಟ್ಟೆಯ ಪರಿಮಿತಿಯೇ ಕಾರಣವಲ್ಲದೆ ಬೇರೇನೂ ಇಲ್ಲ. ಇದು ಭಾರತೀಯ ಎಲ್ಲ ಭಾಷೆಗಳ ಪರಿಸ್ಥಿಯೂ ಹೌದು. ಹಿಂದಿಯಂಥ ಒಂದಿಷ್ಟೆಲ್ಲ ವಿಶಾಲ ಪ್ರದೇಶದ ಅವಕಾಶಗಳಲ್ಲಿ ಒಂದಿಷ್ಟೆಲ್ಲ ಸಾಧ್ಯತೆಗಳು ಹೆಚ್ಚು ಕಾಣಬಹುದು. ನಮ್ಮಲ್ಲಿ ಸಾಕಷ್ಟು ವ್ಯವಸ್ಥೆಯಿರುವ ಸ್ಥಿತಿವಂತರಿರುವ ಪ್ರಕಾಶಕರು ಒಂದಿಷ್ಟೆಲ್ಲ ಹೆಚ್ಚು ತೊಡಗಿಕೊಳ್ಳುವ ಸಾಧ್ಯತೆ ಇದೆ. ಆದರೂ ಅವರುಗಳೂ ಕೂಡ ಹೆಚ್ಚು ಮಾರಾಟ ಜಾಲ ಹೊಂದಿಲ್ಲ. ಸಪ್ನಾ ದಂಥ ಪ್ರಕಾಶಕರು ತಮ್ಮ ಮಾರಾಟ ಜಾಲವನ್ನ ಬೆಂಗಳೂರು ಬಿಟ್ಟು ಆಚೀಚೆ ಚಾಚಿಕೊಂಡಿರುವುದು ತೀರ ಕಡಿಮೆ. ನವಕರ್ನಾಟಕದವರು ತಾತ್ಪೂರ್ತಿಕವಾದರೂ ಒಂದಿಷ್ಟು

ವಿಸ್ತೃತ ಪ್ರಮಾಣದಲ್ಲಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇನ್ನುಳಿದವರಲ್ಲಿ ಅಭಿನವ, ಅಂಕಿತ ಮುಂತಾಗಿ ಅನೇಕರು ಒಳ್ಳೇ ಗುಣಮಟ್ಟದ ಪುಸ್ತಕಗಳನ್ನ ತರುತ್ತಿದ್ದು ಹೆಚ್ಚು ಹೆಚ್ಚು ವಿಸ್ತರಿಸಿಕೊಳ್ಳುವ ಅಗತ್ಯವಿದೆ. ಒಂದು ಮಕ್ಕಳ ಪುಸ್ತಕ ಬರಬೇಕಾದರೆ ಅದಕ್ಕಾಗುವ ಚಿತ್ರಗಳ ಹೊಣೆಯನ್ನ ಲೇಖಕರಿಗೇ ವಹಿಸುವ ಪ್ರಕಾಶಕರ ವಹಿವಾಟುಗಳೂ ನಮ್ಮಲ್ಲಿ ಸಾಕಷ್ಟಿವೆ. ಲೇಖಕರು ತಮಗೆ ಸಾಧ್ಯವಾಗುವ ಸ್ಥಳೀಯ ಕಲಾವಿದರನ್ನ ಆಶ್ರಯಿಸಿ ಇದನ್ನ ಸಾಧ್ಯ ಮಾಡಿಕೊಳ್ಳಬೇಕು. ಇಂಥ ಪರಿಸ್ಥಿಯಲ್ಲಿ ತೀರ ಎತ್ತರದ ನಿರೀಕ್ಷೆಗಳನ್ನ ಇಟ್ಟುಕೊಳ್ಳಲಾಗದಿದ್ದರೂ ಒಂದಿಷ್ಟೆಲ್ಲ ಒಳ್ಳೆಯ ಉದಾಹರಣೆಗಳನ್ನ ಗಮನಿಸಿದಾಗ ಕನ್ನಡದ ಪರಿಸರದಲ್ಲಿಯೂ ಆಶಾಭಾವಗಳನ್ನ ತಳೆಯಬಹುದಾಗಿದೆ.

ಗಮನಿಸಬೇಕಾದ ಸಂಗತಿ ಎಂದರೆ, ೨೦ನೆಯ ಶತಮಾನದ ಕೊನೆಯಲ್ಲಿ ಮಕ್ಕಳ ಸಾಹಿತ್ಯದಲ್ಲಿ ಹೊಸ ಅಲೆಯ ಹರಿವು ಕಾಣಿಸಿಕೊಂಡುದೂ ಈ ತಾಂತ್ರಿಕತೆಯ ಹೊಸತಿಗೆ ಸಂವಾದಿಯಾಗಿದೆ. ಶಿಕ್ಷಕರೇ ಮುಂಚೂಣಿಯಲ್ಲಿ ಇದ್ದು ಪ್ರಮುಖವಾಗಿ ಅವರ ಕೃಷಿಯಿಂದಲೇ ವ್ಯಾಪಿಸಿಕೊಂಡ ಮಕ್ಕಳ ಸಾಹಿತ್ಯ ಈ ಹೊಸ ಪರಿಸರದ ಉಸಿರಾಟದಲ್ಲಿ ವಿಭಿನ್ನ ರಂಗದ ಆಸಕ್ತ ಮನಸ್ಸುಗಳನ್ನು ತನ್ನತ್ತ ಸೆಳೆಯಿತು. ಮುಖ್ಯಧಾರೆಯ ಎಚ್. ಎಸ್. ವೆಂಕಟೇಶಮೂರ್ತಿ, ಸುಮತೀಂದ್ರ ನಾಡಿಗ, ಲಕ್ಷ್ಮೀನಾರಾಯಣ ಭಟ್ಟ, ನಾ. ಡಿಸೋಜ ಅಂಥವರು ಕಾಣಿಸಿಕೊಂಡ ಹಾಗೆ ಇನ್ನೂ ಅನೇಕರು ಹೊಸ ದೃಷ್ಟಿಕೋನಗಳೊಂದಿಗೆ ತೊಡಗಿಕೊಂಡರು. ಹೀಗೆ ತನ್ನ ಒಳ ಹೂರಣದಲ್ಲಿ ಹೊಸತಿಗೆ ಹೊರಳುತ್ತಿದ್ದ ಹಾಗೆ ಹೊರಗೂ ಹೊಸತಿಗೆ ಚಾಚಿಕೊಂಡಿತು ಅದು.

ಕನ್ನಡದ ಮಕ್ಕಳ ಪುಸ್ತಕಗಳನ್ನ ಗಮನಿಸುವಾಗ ಎದ್ದುಕಾಣುವ ಶೈಲಿ ವ್ಯಂಗ್ಯಶೈಲಿ. ಗುಜ್ಜಾರಪ್ಪ ಅಂಥ ಅತ್ಯಂತ ಪ್ರತಿಭಾವಂತ ಕಲಾವಿದನ ಸೊಗಸಿನ ತೊಡಗುವಿಕೆಯಿಂದ, ಅದರ ಬಹು ಪ್ರಭಾವದಿಂದ ಇದು ಸಂಭವಿಸಿತು ಎಂದು ನನಗನಿಸುತ್ತದೆ. ಗುಜ್ಜಾರಪ್ಪ ಸಾಕಷ್ಟು ಸಂಖ್ಯೆಯಲ್ಲಿ ಪುಸ್ತಕಗಳಿಗೆ ಚಿತ್ರ ಬರೆದವರು, ಪತ್ರಿಕೆಗಳಿಗೂ ಬರೆದವರು. ಮಕ್ಕಳ ಪುಸ್ತಕಗಳಿಗೂ ಅದೇ ಬಗೆಯ ಒಲವು ತೋರಿದವರು. ಅವರೇ ರಚಿಸಿ ಚಿತ್ರಗಳಿಂದ ಅನಾವರಣಗೊಳಿಸಿದ ಒಂದು ಕೃತಿ 'Mica and the magic shoe' ಎನ್. ಬಿ. ಟಿ.ಯಿಂದ ಪ್ರಕಟವಾಗಿದೆ. ಗುಜ್ಜಾರಪ್ಪ ಅವರನ್ನ ಅವರ ಈ ವ್ಯಂಗ್ಯ ಶೈಲಿಯ ಕುರಿತು ಮಾತನಾಡಿಸಿದಾಗ ಅವರು ಅದನ್ನ ಒಪ್ಪಿಕೊಂಡರು. ನೈಜ ಚಿತ್ರಶೈಲಿ ಮಕ್ಕಳ ಲೋಕದಲ್ಲಿ ಅಷ್ಟಾಗಿ ಕಾಣದೆ ಅತಿರಂಜಿತವಾದ, ಕಲ್ಪನೆಯಿಂದ ಕೂಡಿದ ಬಗೆಯವಾಗಿರುತ್ತವೆ, ೮೫ ಪ್ರತಿಶತ ಇಂಥವೇ ಮಕ್ಕಳ ಪುಸ್ತಕಗಳಲ್ಲಿ ಕಾಣುವುದು ಎನ್ನುವುದು ಅವರ ಅಭಿಪ್ರಾಯ. ಗುಜ್ಜಾರಪ್ಪ ಅವರು ತಮ್ಮ ಈ ಶೈಲಿಯನ್ನ ತಮ್ಮೆಲ್ಲ ಬಗೆಯ ಸಾಹಿತ್ಯ ಸಾಹಚರ್ಯದ ಚಿತ್ರಗಳಿಗೂ ಬಳಸಿಕೊಳ್ಳುತ್ತ ಬಂದಿದ್ದಾರೆ. ಹಾಗಾಗಿ ಅವರೊಬ್ಬ ವ್ಯಂಗ್ಯಚಿತ್ರಕಾರರೆಂದೇ ಹೆಸರಾಗಿರುವುದರ ಜೊತೆಗೆ ಅವರ ಕೃತಿಗಳನ್ನ ಎಲ್ಲಿಯಾದರೂ ತಟಕ್ಕನೆ ಗುರುತಿಸಬಹುದಾಗಿದೆ. ಅವರು ರಾಜಕೀಯ ವ್ಯಂಗ್ಯಚಿತ್ರಗಳನ್ನಾಗಲಿ, ಇತರೇ ವ್ಯಂಗ್ಯಚಿತ್ರಗಳನ್ನಾಗಲಿ ಪ್ರತ್ಯೇಕವಾಗಿ ರಚಿಸುತ್ತ ಕಾಣಿಸಿಕೊಂಡಿರುವುದು ಇಲ್ಲವೇ ಇಲ್ಲ ಎನ್ನುವಷ್ಟು ವಿರಳ. ಆದರೆ ಅವರ ಈ ನಿಗದಿತ ಶೈಲಿ ಅವರ ವ್ಯಂಗ್ಯಶೈಲಿಯನ್ನ ಬಹಳ ಪ್ರಚುರಗೊಳಿಸಿದೆ. ಅದರಲ್ಲೂ ಈ ಶೈಲಿ ಮಕ್ಕಳ ಭಾವಲೋಕದ ಅಭಿವ್ಯಕ್ತಿಗೆ ಅವರಿಗೆ ಅತ್ಯಂತ ಕೂಡಿಬಂದಿದೆ ಎನಿಸುತ್ತದೆ. ಮುಗ್ಧ ಭಾವಗಳನ್ನು ಹೀಗೆಲ್ಲ ತರಲು ಅವರು ಅತ್ಯಂತ ಪ್ರಭಾವಕಾರಿಯಾಗಿ ಸಾಮಾನ್ಯವಾಗಿ ದೊಡ್ಡ ಆಕಾರದ ಮುಖಗಳು,

ಕೈ ಕಾಲುಗಳು, ಬೆರಳುಗಳನ್ನ ವಿಶೇಷವಾಗಿ ಬಳಸಿಕೊಂಡಿರುವುದು ಕಾಣುತ್ತದೆ. ಅವರ ಈ ಚಿತ್ರಗಳ ವಿಶೇಷತೆಯನ್ನು ಸಾಹಿತ್ಯದ ಪಠ್ಯದೊಂದಿಗೇ ನೋಡಬೇಕು, ಅಂದಾಗಲೇ ಸರಿಯಾಗಿ ಭಾವಿಸಲು ಸಾಧ್ಯವಾಗುತ್ತದೆ. ಸುಮತೀಂದ್ರ ನಾಡಿಗರ ಒಂದು ಪದ್ಯಕ್ಕೆ ಅವರು ಬರೆದ ಚಿತ್ರ ಇಟ್ಟುಕೊಂಡು ಉದಾಹರಣೆಯಾಗಿ ನೋಡಬಹುದು. ಅವರ 'ಅಣ್ಣ ತಂಗಿ' ಪದ್ಯದಲ್ಲಿ ಅಣ್ಣನಾಗಿರುವ ಮಗು ರಚ್ಚೆ ಹಿಡಿದಿರುವ ತಂಗಿಯೊಡನೆ ನಡೆಸುವ ಮಾತುಕತೆ ಇರೋ ಪದ್ಯ ಅದು.

ಪುಟ್ಟಿ ಪುಟ್ಟಿ ಅಳಬೇಡಮ್ಮ
ಅಮ್ಮಾ ಬರ್ತಾಳೆ
ಇಲ್ಲೇ ಹತ್ರ ಅಂಗ್ಡಿಗ್ಹೋಗಿ
ಬಿಸ್ಕಿಟ್ ತರ್ತಾಳೆ
ಪುಟ್ಟೀ ಪುಟ್ಟೀ ಅಳಬೇಡಮ್ಮ
ಅಮ್ಮಾ ಬರ್ತಾಳೆ
ಬರೋವಾಗ ಜೊತೇಲೇನೆ
ಐಸ್‌ಕ್ರೀಂ ತರ್ತಾಳೆ

ಅಂತೆಲ್ಲ ನಾನಾ ಬಗೆಯಲ್ಲಿ ಪ್ರಯತ್ನಿಸುವ ಮಗು ಕೊನೆಗೆ ಹೇಳುವುದು ಹೀಗೆ:

ಮಗೂನ್ ಆಡ್ಸೋಕ್ ಬರೋದಿಲ್ಲ
ದಡ್ಡ ಅಂತಾಳೆ
ಕತ್ತೇ ಹಾಗೆ ಬೆಳ್ದಿದ್ದೀಯ
ಅಂತಾ ಬೈತಾಳೆ

ಈ ಪದ್ಯಕ್ಕೆ ಗುಜ್ಜಾರಪ್ಪ ಬಿಡಿಸಿರುವ ಚಿತ್ರ ಇಲ್ಲಿದೆ.



ಅವರ ಶೈಲಿ ಇಲ್ಲಿನ ಭಾವಗಳನ್ನು ಎಷ್ಟೆಲ್ಲ ಅರ್ಥವತ್ತಾಗಿ ನೀಡಲು ಸಾಧ್ಯವಾಗಿದೆ ನೋಡುತ್ತಲೇ ಭಾವಿಸಬೇಕು. ಚುಕ್ಕೆಯ ಕಣ್ಣುಗಳ ಮುಗ್ಧತೆಯ ನಡುವೆಯೂ ಅವು ಹೇಳುವ ನಿಖರತೆಯನ್ನು ಗುರುತಿಸಬಹುದು, ಆಕೃತಿಗಳ ಭಂಗಿಗಳು ಕೂಡ ಹೆಚ್ಚು ನೈಜವಾಗಿದ್ದು ಹತ್ತಿರವಾಗಿ ಕಾಣುತ್ತವೆ. ಗುಜ್ಜಾರಪ್ಪ ಈ ಶೈಲಿಯಿಂದ ಕೇವಲ ರಂಜನೆಯ, ಹಾಸ್ಯದ ಸನ್ನಿವೇಶಗಳಿಗೆ ತಾಗಿಕೊಳ್ಳುತ್ತಾರೆ ಅಂತಲ್ಲವೇ ಅಲ್ಲ, ಅವರು ಎಂಥ ಗಂಭೀರವಾದ ಸಂಗತಿಗಳನ್ನೂ ಸಾಧ್ಯಮಾಡಿಕೊಳ್ಳಬಲ್ಲರು. ಪ್ರಾಣಿಗಳು, ಮರಗಿಡ ಮುಂತಾದ ವಸ್ತು ಪ್ರಪಂಚದಲ್ಲೂ ಈ ಭಾವಸಂಚಾರವನ್ನು ಅವರು ಅತ್ಯಂತ ಕುಶಲತೆಯಿಂದ, ಸುಲಲಿತವಾಗಿ ಸಾಧ್ಯಮಾಡಿಕೊಳ್ಳಬಲ್ಲರು. ಇನ್ನೊಂದು ಚಿತ್ರವನ್ನ ಉದಾಹರಣೆಯಾಗಿ ನೀಡುತ್ತ ಅವರ ಪ್ರತಿಭೆಯನ್ನ ಮುಂದಿಡಬಹುದು ಈ ಲೇಖನದ ಮಿತಿಯಲ್ಲಿ. ದು. ನಿಂ ಬೆಳಗಲಿ ಅವರ ಮಕ್ಕಳ ಕಥಾ ಸಂಕಲನದಲ್ಲಿ 'ಆನೆಯ ವ್ಯಾಪಾರ' ಎನ್ನುವ ಕಥೆಗೆ ಅವರು ರಚಿಸಿದ ಕಲ್ಪನೆಯ ಚಿತ್ರ ಈ ಕೆಳಗಿನ ಉದಾಹರಣೆಯಲ್ಲಿದೆ.



ಅಕಬರ ಮತ್ತು ಬೀರಬಲ್ಲರು ಆನೆ ಏರಿ ಸಂಚಾರ ಹೊರಟಾಗ, ಕುಡಿತದಿಂದ ಮತ್ತನಾದ ದಾರಿಹೋಕನೊಬ್ಬ ಅರಸರೆಂಬುದನ್ನು ಮರೆತು ನಿಶೆಯಲ್ಲಿ ಈ ಆನೆಯ ಕ್ರಯ ಎಷ್ಟು, ನನಗೆ ಕೊಳ್ಳಲು ಬೇಕು ಎನ್ನುತ್ತಾನೆ. ಅರಸನಿಗೆ ಅಚ್ಚರಿಯಾಗುತ್ತದೆ. ಅಕ್ಬರ ಅವನನ್ನ ತನ್ನ ಅರಮನೆಗೆ ಕರೆಸಿ ವಿಚಾರಿಸುತ್ತಾನೆ. ಇಷ್ಟರಲ್ಲಿ ಅವನ ನಿಶೆ ಇಳಿದು, ಬೀರಬಲ್ಲನ ಸಲಹೆಯನ್ನ ಅನುಸರಿಸಿ ಉಳಿದುಕೊಳ್ಳುತ್ತಾನೆ. ಈ ಕತೆಗೆ ಗುಜ್ಜಾರಪ್ಪ ರಚಿಸಿದ ಚಿತ್ರ ಇಲ್ಲಿದೆ. ಚಿತ್ರದಲ್ಲಿ ದೊಡ್ಡ ಗಾತ್ರದ ಆನೆಯನ್ನ ಅದರೆಲ್ಲ ಅಲಂಕಾರಗಳೊಡನೆ ಭರ್ಜರಿಯಾಗಿ

ಚಿತ್ರಿಸಿರುವುದು ಈ ಚಿತ್ರದ ಒಂದು ಪ್ರಮುಖ ಅಭಿವ್ಯಕ್ತಿ ಅಂಶ. ಆನೆಯೇ ಇಲ್ಲಿನ ಸಂಗತಿಗಳ ಕೇಂದ್ರ ಸಂಗತಿ. ಅಕಬರ ಬೀರಬಲ್ಲರು ಅತ್ಯಂತ ಎತ್ತರದಲ್ಲಿರುವುದು, ಕುಡುಕನಿಗೆ ಗೋಚರಿಸದೆ ಹೊಗುವಷ್ಟು ಅಂತರದಲ್ಲಿರುವುದು, ಕುಡುಕನ ಆಕೃತಿ ಚಿಕ್ಕದಾಗಿ, ಆನೆಯ ಬೃಹತ್ ಗಾತ್ರದ ಮುಂದೆ ನಿಚ್ಚಳವಾಗಿಯೇ ಇರುವುದು, ಅವನಲ್ಲಿಯ ಭಾವಗಳು ಸಮರ್ಪಕವಾಗಿ ಬಂದಿರುವುದು, ಅದರೊಂದಿಗೆ ಗಮನಿಸಿದರೆ ಆನೆಯ ಕಣ್ಣುಗಳಲ್ಲಿ ಕೂಡ ಇದೇನು ಈ ಮೂರ್ಖತನ ಎನ್ನುವಂತಿರುವ ಭಾವ ತುಂಬಿರುವುದು ಎಲ್ಲ ಚಿತ್ರಕ್ಕೆ ಅರ್ಥವಂತಿಕೆಯನ್ನ ತಂದುಕೊಟ್ಟಿವೆ.

ವ್ಯಂಗ್ಯ ವ್ಯಕ್ತಿ ಚಿತ್ರಣಗಳನ್ನೂ(caricature) ಗುಜ್ಜಾರಪ್ಪ ಸಮರ್ಥವಾಗಿ ನೀಡಬಲ್ಲರು. ಮಕ್ಕಳ ಅನೇಕ ಕೃತಿಗಳಲ್ಲಿ ಇವು ಕಾಣಿಸುತ್ತವೆ. ಅಂಥದೊಂದು ಉದಾಹರಣೆಯನ್ನು ಈ ಕೆಳಗಿನ ಚಿತ್ರದಲ್ಲಿ ನೋಡಬಹುದು.



ಗಾಂಧೀಜಿ ಎನ್ನುವ ತಲೆ ಬರಹದ ಪದ್ಯಕ್ಕೆ ಅವರು ಚಿತ್ರಿಸಿರುವ ಗಾಂಧೀಜಿಯ ಚಿತ್ರ ಈ ಬಗೆಯದು. ಗಾಂಧೀಜಿಯವರ ಆದರ್ಶಗಳನ್ನ ಚಿತ್ರಿಸಿರುವ ಈ ಪದ್ಯಕ್ಕೆ ವ್ಯಂಗ್ಯಶೈಲಿಯ ಈ ಚಿತ್ರ ಯಾವುದೇ ಕೊರತೆಯನ್ನನುಭವಿಸದೆ ಸೊಗಸಾಗಿಯೇ ಇದೆ, ಪುಷ್ಟಿ ನೀಡಿದೆ, ಅದರಲ್ಲೂ ಮಕ್ಕಳಿಗೆ ಮುದ ನೀಡುವುದಾಗಿದೆ. ಹಿರಿತನದ ಪ್ರಬುದ್ಧತೆಗಳು, ಅನುಕಂಪದ ಭಾವ, ಹಾಗೆಯೇ ವೇಗದ ನಡಿಗೆ ಎಲ್ಲ ಪರಿಣಾಮಕಾರಿಯಾಗಿ ಮೂಡಿವೆ.

ಹೀಗೆ ತುಂಬಾ ಪರಿಣಾಮಕಾರಿಯಾಗಿ ಗುಜ್ಜಾರಪ್ಪ ಅವರ ಶೈಲಿ ಮೂಡಿ, ಅದೂ ಅತ್ಯಂತ ವಿಪುಲವಾಗಿ ಹರಡಿಕೊಂಡು ಅದೊಂದು ಬಗೆಯಲ್ಲಿ ಮಾದರಿ ಎನ್ನುವಂತಾಯಿತೋ ಏನೋ ಗೊತ್ತಿಲ್ಲ. ಅನೇಕ ಕಲಾವಿದರು ಕನ್ನಡ ಮಕ್ಕಳ ಪುಸ್ತಕಗಳಲ್ಲಿ ವ್ಯಂಗ್ಯ ಶೈಲಿಯನ್ನೇ ಮುಂದುವರಿಸಿದರು. ಅವರೆಲ್ಲ ತಮ್ಮದೆ ಆದ ಶೈಲಿಯನ್ನ ಅಳವಡಿಸಿಕೊಂಡು ವೈವಿಧ್ಯವನ್ನು ತಂದರು ಕೂಡ. ಹಾಗೆ ಅನೇಕ ಕಲಾವಿದರನ್ನ ಗುರುತಿಸಬಹುದು.

ಹರಿಣಿ ಎನ್ನುವ ಹೆಸರಿನಿಂದ ಅನೇಕ ಮಕ್ಕಳ ಪುಸ್ತಕಗಳಿಗೆ ಚಿತ್ರಿಸಿರುವ ಕಲಾವಿದರು ಬಲು ಸೊಗಸಾಗಿ ಮಕ್ಕಳ ಲೋಕವನ್ನ ಚಿತ್ರಗಳಲ್ಲಿ ಕಂಡುಕೊಂಡವರು, ಸಾಹಿತ್ಯಕ್ಕೆ ಒಳ್ಳೇ ಪುಷ್ಟಿಯನ್ನು ನೀಡಿದವರು. ಚಾಚಿದ ಮೂಗುಗಳು, ಅಗಲವಾದ ಬಾಯಿಗಳು, ಕಣ್ಣಿನ ಸುತ್ತ ಚುಕ್ಕೆಗಳು, ರೇಖೆಗಳು ಸಾಮಾನ್ಯವಾಗಿ ಅವರ ಚಿತ್ರಗಳಲ್ಲಿ ಭಾವ ತುಂಬಲು ಸಹಾಯಕವಾಗಿ ಬರುವುದನ್ನು ನೋಡುತ್ತೇವೆ. ತೆಳುವಾದ, ಸೆಳೆಯುವ, ದೃಢವಾದ, ಹಾಗೆಯೇ ತಕ್ಕುದಾದ ವೇಗವಿರುವ ರೇಖೆಗಳು ಅವರ ಶೈಲಿಯನ್ನ ಸಮೃದ್ಧಗೊಳಿಸಿವೆ. ಎನ್. ಶ್ರೀನಿವಾಸ ಉಡುಪರ ಒಂದು ಕವಿತೆಯಲ್ಲಿ ತಾತನ ಪ್ರಶ್ನೆಗಳಿಗೆ ಮಗುವೊಂದು ದಿಗಿಲುಗೊಳಿಸುವ ಉತ್ತರ ನೀಡುತ್ತ ಹೋಗುವ ಪದ್ಯಕ್ಕೆ ಹರಿಣಿ ಅವರು ಚಿತ್ರಿಸಿರುವ ಬಗೆಯನ್ನು ನೋಡಬಹುದು.

ಪ್ರಶ್ನೆ - ಉತ್ತರ

''ಯಾಕಪ್ಪಾ ಮಗು, ನಿಂತಿದ್ದೀಯಾ
ಬೆರಳನು ಚೀಪುತ್ತಾ?''

''ಮೋಡದ ಊರಿಗೆ ದಾರಿ ಯಾವುದು,
ತಾತ, ನಿಮಗೆ ಗೊತ್ತಾ?''





''ಯಾಕಪ್ಪಾ ಮಗು, ಸುಮ್ಮನೆ ಕುಳಿತೆ
ನೋಡುತ ಬಾನತ್ತ?''

''ತಾತ, ಸುಮ್ಮಗಿರಿ; ಕುಳಿತಿದ್ದೇನೆ
ಚುಕ್ಕೆಗಳೆಣಿಸುತ್ತಾ!''

''ಯಾಕಪ್ಪಾ ಮಗು, ಮಲಗಿದ್ದೀಯಾ
ಪಿಳಿ ಪಿಳಿ ನೋಡುತ್ತಾ?''

''ತಾತ, ಈ ಅಮ್ಮ ಎಲ್ಲಿಂದ ತಂದಳೋ
ಇಂಥಾ ಸಿಹಿ ಮುತ್ತ!''

ಮುಗ್ಧ, ಯಾವ ಗೊಂದಲವಿಲ್ಲದ, ಸ್ವಚ್ಛಂದದ ಮಗು ನೀಡುವ ಉತ್ತರಗಳಿಂದ ದಿಗಿಲುಗೊಳ್ಳುವ ಅನುಭವಗಳಿಂದ ತುಂಬಿಹೋಗಿರುವ ಹಿರಿಯ ಮನಸ್ಸನ್ನು ಈ ಚಿತ್ರದಲ್ಲಿ ಸೊಗಸಾಗಿ ಹಿಡಿದಿಟ್ಟಿರುವ ಹಾಗಿದೆ. ಇಬ್ಬರ ಆಕೃತಿಗಳ ನಿಲುವಿಕೆಗಳು, ಅವುಗಳ ಹಾವಭಾವಗಳು ಬಲು ಸೊಗಸಾಗಿ ಮೂಡಿವೆ. ಒಂದು ಜೀವ ತುಂಬಿದ ಚಿತ್ರಣ ಇದಾಗಿದೆ ಎನ್ನಲಡ್ಡಿಯಿಲ್ಲ.

ಶ್ರೀನಿವಾಸ ಉಡುಪರ 'ಹಿಡಿಂಬನ ತೋಟ' ನಾಟಕಕ್ಕೆ ಚಿತ್ರ ಬರೆದಿರುವ ಕಮಲಮ್ ಅರಸು ಅವರ ವ್ಯಂಗ್ಯದ ಶೈಲಿಯು ಇನ್ನೊಂದು ಬಗೆಯಲ್ಲಿ ಸೆಳೆಯುವಂತಿದೆ. ಅಂಥ ಒಂದು ಉದಾಹರಣೆಯನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ.



ನೀಟಾಗಿ, ಒಂದಿಷ್ಟೆಲ್ಲ ಸಂದರ್ಭದ ವಿವರಗಳನ್ನ ನೀಡುತ್ತ, ಆದಷ್ಟು ಸರಳವಾಗಿ ನೀಡುವ ಇವರ ಚಿತ್ರಗಳು ಆಕರ್ಷಿಸುವಂತಿವೆ. ಕಣ್ಣುಗಳಿಗೆ ಚುಕ್ಕೆಗಳನ್ನ, ಬಾಯಿಗೆ ರೇಖೆಯನ್ನ ಹಾಗೂ ಮೂಗಿನ ಅನುಪಸ್ಥಿತಿಯನ್ನ ತಂದುಕೊಂಡು ಚಿತ್ರಿಸಿವುದು ಇವರ ಶೈಲಿಯ ವಿಶೇಷ. ಮಕ್ಕಳ ಮುಗ್ಧ ವೈವಿಧ್ಯದ ಭಾವಗಳು ಬಲು ಸೊಗಸಾಗಿ ಅನಾವರಣಗೊಳ್ಳುವುದನ್ನು ನೋಡುತ್ತೇವೆ.

ಹೀಗೆಯೇ ವ್ಯಂಗ್ಯರಂಗದಲ್ಲಿ ಸಾಕಷ್ಟು ಪ್ರಚುರವಾದ ಹೆಸರು ಪ್ರಕಾಶ ಶೆಟ್ಟಿ ಅವರದು. ಅವರೂ ಕೂಡ ಮಕ್ಕಳ ಪುಸ್ತಕಗಳಿಗೆ ಚಿತ್ರಗಳನ್ನ ಬರೆದುದಿದೆ. ಅವರದೊಂದು ಚಿತ್ರವನ್ನ ಉದಾಹರಣೆಗೆ ಇಲ್ಲಿ ನೋಡಬಹುದು.



ದಾಸಯ್ಯ

ಶಂಖವನೂದುತ, ಜಾಗಟೆ ಬಡಿಯುತ
ಊರಿಗೆ ಬಂದ ದಾಸಯ್ಯ.
ದಾಸಯ್ಯಾ, ನಮ್ಮ ದಾಸಯ್ಯ
ಮೂರು ನಾಮದ ದಾಸಯ್ಯ !

ಅಕ್ಕಿಯ ನೀಡಿರಿ, ಭಿಕ್ಷೆಯ ಹಾಕಿರಿ
ಎನ್ನುತ ಬಂದ ದಾಸಯ್ಯ
ದಾಸಯ್ಯಾ, ನಮ್ಮ ದಾಸಯ್ಯ
ಭೋಂ ಭೋಂ ಭೋಂ ಭೋಂ ದಾಸಯ್ಯ !

ಶ್ರೀನಿವಾಸ ಉಡುಪರ 'ಕನ್ನಡ ನಾಡಿನ ಕೂಸುಮರಿ' ಸಂಕಲನದ ಹಾಸ್ಯಭರಿತ ಪದ್ಯಗಳಿಗೆ ಅವರು ಚಿತ್ರ ಬರೆದಿದ್ದು, ಅದರಲ್ಲಿ ದಾಸಯ್ಯನ ವ್ಯಕ್ತಿಚಿತ್ರವನ್ನ ಸೊಗಸಾಗಿ, ಅರ್ಥಪೂರ್ಣವಾಗಿ ನೀಡಿರುವುದು ಇಲ್ಲಿದೆ. ಮಿತವಾದ ರೇಖೆಗಳಲ್ಲಿ ತುಂಬಿಕೊಂಡಿರುವ ಚಿತ್ರಣ ಇದು ಎನ್ನಲಡ್ಡಿಯಿಲ್ಲ.

ಈಚೆಗೆ ಬಂದಿರುವ ರಾಜಶೇಖರ ಕುಕ್ಕುಂದಾ ಅವರ 'ಮಟಾಣಿ ಪ್ರಾಸಗಳು' ಸಂಕಲನ ಒಂದು ಉದಾಹರಣೆ ಅದು. ದೃಶ್ಯ ಮಾಧ್ಯಮದ ಸಾಧ್ಯತೆಗಳನ್ನ ಬಳಸಿಕೊಳ್ಳುವಲ್ಲಿ ಯಶ ಕಂಡಿದೆ. ಮುಖಪುಟ ರಚಿಸಿರುವ ಯುವ ಕಲಾವಿದ ವಿನಯ ಸಾಯ ಅವರು ಪ್ರತಿಭಾಪೂರ್ಣವಾಗಿ ಅಭಿವ್ಯಕ್ತಿ ನೀಡಿದ್ದಾರೆ. ಕಣ್ಣುಗಳನ್ನು ಕಟ್ಟಿಹಾಕುವ ವರ್ಣಗಳು, ಕಲ್ಪನಾತ್ಮಕವಾಗಿ ಕಂಡುಕೊಂಡಿರುವ ಮರ, ಹೂವುಗಳ ಚಿತ್ರಣಗಳು, ಅಲಂಕರಣ ಬಗೆಯನ್ನ ಬಳಸಿಕೊಳ್ಳುತ್ತಲೂ ಹೆಚ್ಚಾಗಿ ಭಾವ ವ್ಯಕ್ತಿಯ ಸಾಧ್ಯತೆಗಳಿಗೆ ತುಡಿದುದು ಕಾಣುತ್ತದೆ. ಆದಷ್ಟು ವರ್ತುಳಾಕೃತಿಯ ರೇಖೆಗಳು, ನಿರ್ದಿಷ್ಟವಾಗಿ ಹಿಡಿದಿಟ್ಟ ಆಕಾರಗಳು ಇಲ್ಲಿ ಮೂಡಿವೆ. ತಲೆಬರಹದ ಅಕ್ಷರಗಳು ಕೂಡ ತಕ್ಕುದಾಗಿ, ತಕ್ಕ ಸ್ಥಾನದಲ್ಲಿ ಇರಿಸಲ್ಪಟ್ಟಿವೆ. ತಟಕ್ಕನೆ ಆಕರ್ಷಿಸುವ, ಅದರಲ್ಲೂ ಮಕ್ಕಳ ಲೋಕದ ಪ್ರತಿನಿಧಿಯಾಗಿ ಈ ಮುಖಪುಟ ಎದ್ದುಕಾಣುತ್ತದೆ. ಈ

ಪುಸ್ತಕದ ಒಳ ಪುಟಗಳ ಚಿತ್ರ ರಚಿಸಿರುವ ಇನ್ನೋರ್ವ ಯುವ ಕಲಾವಿದ ಸಂತೋಷ ಸಸಿಹಿತ್ಲು ಕೂಡ ಒಳ್ಳೇ ಪ್ರತಿಭಾವಂತಿಕೆಯ ಗುರುತನ್ನು ಮೂಡಿಸಿದ್ದಾರೆ ಎನ್ನಬಹುದು. ಪುಸ್ತಕದ ತುಂಬೆಲ್ಲ ಹಬ್ಬಿಕೊಂಡು ಈ ಚಿತ್ರಗಳು ಬಲು ಸೆಳೆಯುತ್ತ ಅವೇ ಪುಸ್ತಕವಾಗಿ ನಿಂತುಕೊಂಡಿವೆ ಎನಿಸಿಬಿಡುತ್ತದೆ. ಒಂದು ಬಗೆಯಲ್ಲಿ ಇಮ್ಪ್ರೆಸ್ಸಿವ್ ಶೈಲಿಯಲ್ಲಿ ಈ ಚಿತ್ರಗಳು ಕಾಣುತ್ತಿದ್ದು, ಅಗತ್ಯದ ಆಕಾರಗಳನ್ನು ತಂದುಕೊಂಡೂ ಅವುಗಳ ಮೂಲಕ ಹೇಳಬೇಕಾದ ಭಾವಗಳಿಗೇ ಹೆಚ್ಚು ಒತ್ತುಕೊಡುವುದನ್ನ ನೋಡುತ್ತೇವೆ. ರೇಖೆಗಳು, ಆಕೃತಿಗಳು ವಿಭಿನ್ನ ಬಗೆಯಲ್ಲಿ ದುಡಿಯುತ್ತ ತಾವೇ ಮಾತನಾಡುತ್ತ ತಮ್ಮ ವೈಶಿಷ್ಟ್ಯಗಳನ್ನ ಹೇಳುತ್ತ ಹೋಗುತ್ತವೆ. ಸಾಫ್ಟ್‌ವೇರ್ ತಾಂತ್ರಿಕತೆಯನ್ನ ಅತ್ಯಂತ ಸಮರ್ಥವಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ. ಪುಸ್ತಕ ಪುಟ್ಟ ಪುಟ್ಟ ರೈಮ್‌ಗಳನ್ನ ಹೊಂದಿದ್ದು, ಆದಷ್ಟು ರಂಜಕ, ಹಾಸ್ಯದ ಸಾಮಗ್ರಿ ಇಲ್ಲಿದೆ. ಒಂದು ಉದಾಹರಣೆಯನ್ನ ಇಲ್ಲಿ ಕೊಡಬಹುದು.

ಹೊಲ ಗದ್ದು ಸುತ್ತು
ಗಿಡ ಮರ ಹತ್ತು
ಬದನೆಕಾಯಿ ತಂದು
ಪುಸ್ತಕದಲಿ ಬಿತ್ತು !



ಈ ರಚನೆಗೆ ರಚಿಸಿರುವ ಚಿತ್ರದಲ್ಲಿ ಕಲಾವಿದ ಕಂಪ್ಯೂಟರ್ ತಂತ್ರಗಳನ್ನ ಸಮರ್ಥವಾಗಿ ಬಳಸಿಕೊಳ್ಳುತ್ತ ಕೇವಲ ಕಪ್ಪುವರ್ಣದ ಮಿತಿಯಲ್ಲಿಯೂ ಹಲವಾರು ಸಾಧ್ಯತೆಗಳನ್ನ ತಂದುಕೊಂಡಿರುವುದನ್ನ ನೊಡುತ್ತೇವೆ. ಶರೀರದ ಭಂಗಿಗಳನ್ನ ಪರಿಣಾಮಕಾರಿಯಾಗಿ ತಂದುಕೊಳ್ಳುವುದು, ಹಾಸ್ಯವನ್ನ ಮುಖದ ಚಹರೆಯಲ್ಲಿ ಸೊಗಸಾಗಿ ಅಭಿವ್ಯಕ್ತಿಸಿರುವುದು, ಪುಸ್ತಕವನ್ನು ಕೂಡ ಭಾವಾಭಿವ್ಯಕ್ತಿಗೆ ಬಳಸಿಕೊಂಡಿರುವುದು ಇವೆಲ್ಲ ಈ ಚಿತ್ರದ ಗೆಲುವಿಗೆ

ಕಾರಣವಾಗಿವೆ. ಪುಸ್ತಕದುದ್ದಕ್ಕೂ ಒಂದೇ ಕೈಯಾಟದ ಒಂದೆ ಬಗೆಯ ಶೈಲಿಯೇ ಕಂಡಿದೆ ಎಂದರೂ ನಾನಾ ಬಗೆಯ ಪ್ರಯೋಗಗಳು ಇಲ್ಲಿ ನಡೆದಿರುವುದು ಗೋಚರಿಸುತ್ತದೆ. ಕಿಟಕಿಗಳು, ವಾಹನಗಳು, ಮರಗಳು, ದಾರಿಗಳು ಎಲ್ಲವನ್ನು ಮಾತನಾಡುವಂತೆ ರೂಪಿಸುವುದು ಸುಲಲಿತವಾಗಿ ಇಲ್ಲಿ ಸಾಧ್ಯವಾಗಿದೆ.

ಇದೆಲ್ಲ ಹೇಳುವ ಸಂಗತಿ ಎಂದರೆ ಕರ್ನಾಟಕದಲ್ಲಿ ಮಕ್ಕಳ ಲೋಕದಲ್ಲಿ ವ್ಯಂಗ್ಯಶೈಲಿ ಅದೇಕೋ ಪ್ರಮುಖವಾಗಿ ಪಾತ್ರವಾಡಿದೆ ಎನ್ನಬಹುದು. ನಮ್ಮ ಕಲಾವಿದರಿಗೆ ಅದೇ ಹೆಚ್ಚು ಸೂಕ್ತ ಕಂಡಿದೆ. ವಿಶ್ವದ ಹರವಿನಲ್ಲಿ ಮಕ್ಕಳ ಸಾಹಿತ್ಯವನ್ನ ನೋಡುವುದಾದರೆ ವ್ಯಂಗ್ಯಶೈಲಿ ಪ್ರಭಾವಕಾರಿಯಾಗಿ ಮೂಡಿದುದನ್ನ ಖಂಡಿತವಾಗಿಯೂ ಗುರುತಿಸಬಹುದು. ಇಪ್ಪತ್ತನೆಯ ಶತಮಾನದಲ್ಲಿ ತನ್ನ ಪದ್ಯ ರಚನೆಗಳಲ್ಲೂ ಜೊತೆಗೆ ಅವಕ್ಕೆ ತಕ್ಕುದಾದ ಚಿತ್ರ ರಚನೆಯಲ್ಲೂ ಅತ್ಯಂತ ಪ್ರಖ್ಯಾತರಾದ ಅಮೆರಿಕಾದ ಡಾ. Seuss(Theodor Seuss Geisel)ರಿಂದ ಹಿಡಿದು ಇತ್ತೀಚಿನ ಯುವ ಕಲಾವಿದೆ, ಲೇಖಕಿ ಲೊರೇನ್ ಚೈಲ್ಡ್ (Lauren Child) ಅವರ ವರೆಗೆ ಅನೇಕ ಬಗೆಯ ವ್ಯಂಗ್ಯಶೈಲಿಯ ವಿಭಿನ್ನ ಮನೋಧರ್ಮದ ಕಲಾವಿದರನ್ನ, ಕಲಾವಿದ–ಲೇಖಕರನ್ನ ಕಾಣುತ್ತೇವೆ. ನಮ್ಮ ಪರಿಸರದ ಮಕ್ಕಳ ಸಾಹಿತಿಗಳು ಬಹುಶಃ ರಾಲ್‌ಡಾಲ್‌ನ ಚಾರ್ಲಿ ಮತ್ತು ಚಾಕ್ಲೇಟ್ ಫ್ಯಾಕ್ಟರಿ ಕೃತಿಗೆ ಚಿತ್ರ ಬರೆದ ಕಲಾವಿದ Quentin Blakeನ ಚಿತ್ರಗಳನ್ನ ನೋಡಿರಬಹುದು, ಹಾಗೆಯೇ ಅತ್ಯಂತ ಪ್ರಚುರದಲ್ಲಿರುವ ಜೆಫ್ ಕೆನ್ನಿಯ ವಿಂಪಿ ಕಿಡ್ ಡೈರಿ ಪುಸ್ತಕಗಳನ್ನಲ್ಲದೆ ಇನ್ನೂ ಹಲವರ ಕೃತಿಗಳನ್ನ ನೋಡಿರಬಹುದು. ಈ ಒಬ್ಬೊಬ್ಬರ ಹಿಂದೆಯೂ ವಿಭಿನ್ನ ಲೋಕ ಕಾಣುತ್ತದೆ. ಅಧ್ಯಯನಕ್ಕೆ ಅದೆಲ್ಲ ಒಳ್ಳೆಯ ವಸ್ತು.

ವ್ಯಂಗ್ಯಶೈಲಿಯ ಹಾಗೆ ನೈಜ ಚಿತ್ರಗಳ ಶೈಲಿ ಕೂಡ ಸಾಕಷ್ಟು ಮಕ್ಕಳ ಸಾಹಿತ್ಯದಲ್ಲಿ ಹರವಿಕೊಂಡಿದೆ. ಹೊರದೇಶಗಳಲ್ಲಿಯೂ, ನಮ್ಮಲ್ಲಿಯೂ ಇದೆ. ಎನ್. ಬಿ. ಟಿಯ ಪುಸ್ತಕಗಳಲ್ಲಿ ಈ ಬಗೆಯ ಶೈಲಿ ಢಾಳಾಗಿಯೇ ಕಾಣುತ್ತದೆ. ಅನೇಕ ನುರಿತ ಚಿತ್ರಕಲಾವಿದರು ಈ ಬಗೆಯದನ್ನ ತಮ್ಮದನ್ನಾಗಿಸಿಕೊಂಡಿದ್ದಾರೆ. ೨೦ನೆಯ ಶತಮಾನದೊಡನೆ ಬರವಣಿಗೆಯಲ್ಲಿ ಎಲ್ಲ ಕಡೆಯೂ ಒಂದು ಬಗೆಯ ಹೊಸತು ಕಾಣಿಸಿಕೊಂಡಿತು ಎಂದರೆ ತಪ್ಪಿಲ್ಲ. ಕೇವಲ ಜನಪದ ಸರಕಿನ, ರಾಜರಾಣಿಯರ ರಮ್ಯ ಕಥೆಗಳಿಂದ, ನೀತಿ ಉಪದೇಶಗಳಿರುವ ಪ್ರಸಂಗಗಳಿಂದ ಸರಿದು ವಾಸ್ತವದ ಚಿತ್ರಣಗಳಿರುವ ನಮ್ಮ ಸುತ್ತಲಿನ ಪರಿಸರದಲ್ಲಿ ಅರಳಿರುವ ಕತೆಗಳನ್ನ ಲೇಖಕರು ನೀಡಲು ಬಯಸಿದರು. ಬದುಕಿನ ಕಟು ವಾಸ್ತವಗಳನ್ನೂ ಮಕ್ಕಳಿಂದ ದೂರವಿಡುವುದು ತರವಲ್ಲ ಎನ್ನುವ ಅಭಿಪ್ರಾಯ ಅನೇಕ ಲೇಖಕರಲ್ಲಿ ಕಾಣಿಸಿಕೊಂಡಿತು. ಅರುಪಕುಮಾರ ದತ್ತಾ, ಮನೋರಮಾ ಜಾಫಾ, ಪಾರೋ ಆನಂದ, ನೀಲಿಮಾ ಸಿನ್ಹಾ, ರಾಮೇಂದ್ರ ಕುಮಾರ, ಮಹಾಶ್ವೇತಾದೇವಿ, ರಸ್ಕಿನ್ ಬಾಂಡ್ ಮುಂತಾಗಿ ಅನೇಕರು ಹೀಗೆ ಹೊರಳು ದಾರಿ ಮಾಡಿದರು. ಶಂಕರ ಪಿಳ್ಳೆ ಅವರು ಮೊದಲಿನಿಂದಲೂ ಈ ಬಗೆಯದಕ್ಕೆ ಪುರಸ್ಕಾರ ನೀಡಿದ್ದರು, ಹಾಗೆ ಅನೇಕ ಲೇಖಕರನ್ನ ಅವರು ಪ್ರೋತ್ಸಾಹಿಸಿ ಬೆಳಕಿಗೆ ತಂದರೂ ಕೂಡ. ಇಂಥ ಬರವಣಿಗೆಗೆ ಹೆಚ್ಚು ನೈಜ ಚಿತ್ರಣದ ಕಲೆ ಸೂಕ್ತ ಅನಿಸತೊಡಗಿದರೆ ತಪ್ಪಲ್ಲ. ಹಾಗಾಗಿಯೇ ಅಂಥ ಚಿತ್ರಗಾರಿಕೆ ಹೆಚ್ಚು ಹೆಚ್ಚಾಗಿ ಈ ಬಗೆಯ ಸಾಹಿತ್ಯ ಕೃತಿಗಳಲ್ಲಿ ಕಾಣಿಸಿತು. ತಾಪಸ್ ಗುಹಾ, ಸುಬೀರ್ ರಾಯ್, ಅತನು ರಾಯ್, ಪುಲಕ್ ಬಿಸ್ವಾಸ್, ಪಾರ್ಥಸೇನ್ ಗುಪ್ತಾ, ದುರ್ಗಾಬಾಯಿ, ಅಮಿತಾವ್ ಸೇನ್ ಗುಪ್ತಾ, ರಾಜೀವ್ ಐಪೆ ಹೇಗೆ ಎದ್ದುಕಾಣುವ ಕಲಾವಿದರೆಲ್ಲ ನೈಜ ಚಿತ್ರಣದ ಶೈಲಿಯನ್ನೆ ಪ್ರಮುಖವಾಗಿ ಆಧರಿಸಿರುವುದು ಗೋಚರಿಸುತ್ತದೆ.

ಕನ್ನಡದಲ್ಲಿ ನೈಜಶೈಲಿಯಲ್ಲಿ ಕೆಲ ಕಲಾವಿದರನ್ನ ಗುರುತಿಸಬಹುದು. ಎಚ್. ಎಸ್. ವಿ. ಅವರ ಎರಡು ಪದ್ಯ ಸಂಕಲನಗಳು ಅಂಕಿತ ಪ್ರಕಾಶನದವರಿಂದ 'ಬಾರೋ ಬಾರೋ ಮಳೆರಾಯ' ಹೆಸರಿನೊಂದಿಗೆ ಸಂಗ್ರಹಗೊಂಡು ಬಂದಾಗ ಅದಕ್ಕೆ ಖ್ಯಾತ ಕಲಾವಿದ ಚಂದ್ರನಾಥ ಆಚಾರ್ಯ ಅವರು ಚಿತ್ರ ಬಿಡಿಸಿದರು. ಕವಿಯ ಕವಿತೆಗಳೇ ಅತ್ಯಂತ ಹೂ ಮನಸ್ಸಿನ, ಕೋಮಲ ಭಾವಗಳ, ಬಾಲ್ಯದ ಆವರಣವನ್ನ ಹೊಂದಿ ಹೂವಿನ ಹಾಗಿದ್ದುವು. ಅದಕ್ಕೆ ತಕ್ಕನಾಗಿ ಆಚಾರ್ಯ ಅವರೂ ಕೂಡ ಸೊಗಸಾಗಿ ಚಿತ್ರಗಳನ್ನ ರಚಿಸಿದರು. ಅವರದು ನುರಿತ, ಅನುಭವಿ ಕೈ. ಅದರಲ್ಲೂ ಅವರು ಇಲ್ಲಿನ ಕವಿತೆಗಳ ಹೂರಣವನ್ನ ಮತ್ತೊಮ್ಮೆ ತಮ್ಮ ರೇಖೆಗಳಲ್ಲಿ ಅನಾವರಣಗೊಳಿಸಿದಂತೆ ಚಿತ್ರಿಸಿದರು. ಇಲ್ಲಿನ ಚಿತ್ರಗಳಿಗೆ ಬಳಸಿದ ರೇಖೆಗಳು ತೆಳು, ಸೂಕ್ಷ್ಮ, ದಿಟ್ಟ, ಹಾಗೆಯೇ ಲಲಿತವಾಗಿ ಹರಿದಾಡುವಂಥವು. ಮಕ್ಕಳ ಮುಗ್ಧ ರೂಪಗಳನ್ನ ಅವರು ಕಡೆದಿಟ್ಟುದೇ ಇವರು ಬೇರೊಂದು ಲೋಕದಿಂದ ಇಳಿದು ಬಂದವರಂತೆ. ಅಲ್ಲೊಂದು ಫ್ಯಾಂಟಸಿ ವಾತಾವರಣ ತನ್ನತಾನೇ ಹರಡಿಕೊಳ್ಳುವಂತಾಗಿದೆ. ಮೆದು ಮೆದು ಪುಟ್ಟ ಶರೀರ ರಚನೆಗಳು, ಸುಕೋಮಲ ಎನ್ನುವಂಥ ಬೆರಳುಗಳು, ಗುಂಗುರು ಕೂದಲುಗಳು ಎಲ್ಲಾ ಒಂದು ಸೊಗಸಿನ ಮುದ್ದು ಮುದ್ದು ವಾತಾವರಣವನ್ನ ಕಟ್ಟಿಕೊಟ್ಟಿವೆ. ಮಕ್ಕಳ ಮುಗ್ಧತೆ, ಕುತೂಹಲದ ಕಣ್ನೋಟಗಳು, ತುಂಟತನಗಳು, ಹಾಸ್ಯದ ಲಹರಿಗಳು, ಬೆರಗುಗಳು ಎಲ್ಲ ಇಲ್ಲಿ ಸಹಜವಾಗಿ ತುಂಬಿಕೊಂಡಂತಿವೆ. ವಯಸ್ಸಾದಂತೆ ಕಳೆದುಕೊಳ್ಳುತ್ತ ಹೋಗುವ, ಮತ್ತೆಂದೂ ಪಡೆಯಲಾರದ ಮುಗ್ಧದ ಅಪರೂಪ ಇಲ್ಲಿ ಹರಡಿದಂತಿದೆ. ಉದಾಹರಣೆಗೆ ಒಂದೆರಡು ರಚನೆಗಳೊಡನೆ ಚಿತ್ರಗಳನ್ನ ನೋಡಬಹುದು:

ಕೈ ಕಾಲು ನೆಲಕ್ಕೂರಿ
ಜೀಕುತ್ತಿದೆ ತೊಟ್ಟಿಲು!
ಹರಸಾಹಸ ಪೂರ್ವಗಿರಿಯ
ಸೂರ್ಯನನ್ನು ಮುಟ್ಟಲು!

ತುಳುಕುತ್ತಿದೆ ಕೆನ್ನೆ ತುಂಬ
ಮುಗುಳು ನಗೆಯ ಬಟ್ಟಲು!
ಕೈ ಚಾಚಿದೆ ಹಕ್ಕಿಗಳಿಗೆ
ಗಾಳಿ ತುಂಬ ಮೆಟ್ಟಿಲು!

ಹೂವಿನ ಕೊಡೆ ನೆತ್ತಿ ಮೇಲೆ
ಹಾರಲಿಕ್ಕೆ ಬಿಟ್ಟಳು!
ಜಾರುಕೆನ್ನೆ ಮೇಲೆ ನೀಲಿ
ಹರಳ ಜಾರಿ ಬಿಟ್ಟಳು!

ಇಲ್ಲಿ ಪುಟ್ಟ ಮಗು ಒಂದು ಪುಟ್ಟ ಕಿನ್ನರಿಯ ಹಾಗೆ, ದೇವ ಕನ್ನಿಕೆಯ ಹಾಗೆಯೇ ಚಿತ್ರಿತವಾಗಿದೆ. ಚಂದ್ರನಾತ ಆಚಾರ್ಯ ಅವರ ಚಿತ್ರ ಇದನ್ನೇ ರೇಖೆಗಳಲ್ಲಿ ಹಿಡಿದಿಟ್ಟಿದೆ.

ಇನ್ನೊಂದು ಮಗುವಿನಲ್ಲಿಯ ಚೋದ್ಯದ, ಹಾಸ್ಯದ ತುಳುಕಿನ ರಚನೆ ಹೀಗಿದೆ . . .



ಮಣ್ಣಲ್ಲೂರಿ ಬೀಜ, ಗಿಡ ಮೇಲಕ್ಕೆ ಬರುತ್ತೆ !
ಬಾವಿಗೆ ನೂಕಿ ಕೊಡ, ನೀರ ಮೇಲಕ್ಕೆ ತರತ್ತೆ !
ಹಲಸಿನ ಹಣ್ಣ ಸುಲಿದರೆ ಒಳಗೆ ಸಿಹಿ ತೊಳೆ ಇರುತ್ತೆ !
ನಗುತಾ ನಗುತಾ ನೋಡಿ ನಿಮ್ಮ ಕನ್ನಡಿನೂ ನಗತ್ತೆ !

ಇದಕ್ಕೆ ರಚಿಸಿರುವ ಚಿತ್ರವಂತೂ ಬಲೇ ಚೂಟಿಯಾಗಿದೆ.



ಮಗುವಿನ ಮುಗ್ಧತೆಯಲ್ಲಿ ಅರಳಿದ ದಿಗಿಲು, ನಗು ನಮ್ಮ ಹೃದಯವನ್ನೂ ಸರಕ್ಕನೆ ಆವರಿಸುವಂತೆ ಆಗುತ್ತದೆ.

ಕನ್ನಡ ಸಂಸ್ಕೃತಿ ಇಲಾಖೆಯಿಂದ ೧೯೯೯ರಲ್ಲಿ ಪ್ರಕಟವಾಗಿರುವ ಹೊಯ್ಸಳರ ಪದ್ಯಗಳ ಮತ್ತು ಕತೆಗಳ ಸಂಕಲನ 'ಬಂದಾ ಬಂದಾ ಸಂತಮ್ಮಣ್ಣ' ಸಂಕಲನದಲ್ಲಿ ನೈಜ ಶೈಲಿಯ ಸೊಗಸಾದ ಚಿತ್ರಗಳು ಇವೆ. ಸರಕಾರಿ ಇಲಾಖೆಯಿಂದ ಪ್ರಕಟವಾದುದರಿಂದ ಆಕರ್ಷಕ ವರ್ಣದಲ್ಲಿಯೂ ಇಲ್ಲಿ ಚಿತ್ರಗಳು ಮೂಡಿವೆ. ವಿಪರ್ಯಾಸವೆಂದರೆ ಕಲಾವಿದರ ಹೆಸರನ್ನು ನೀಡುವ ಗೋಜಿಗೇ ಹೋಗಿಲ್ಲ. ಅ.ಲ. ನರಸಿಂಹನ್ ಅವರ ಹೆಸರಿನ ಪ್ರಸ್ತಾಪ ಮುನ್ನುಡಿಯಲ್ಲಿದ್ದರೂ ಮುದ್ರಣದಲ್ಲಿ ಸಹಕಾರಕ್ಕಾಗಿ ಮಾತ್ರ ನೆನೆಯಲಾಗಿದೆ. ಹೊಯ್ಸಳರ ಸುಕೋಮಲ, ಚೆಂದದ ಪದ್ಯಗಳಿಗೆ ಇಲ್ಲಿನ ಚಿತ್ರಗಳು ಒಳ್ಳೆ ಸಾಹಚರ್ಯವನ್ನು ನೀಡಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಹೆಜ್ಜೆ ಹೆಜ್ಜೆ ಹದಿನೆಂಟೆಜ್ಜೆ
ಒಂದೆ ಹೆಜ್ಜೆ ಪದುಮದ ಹೆಜ್ಜೆ
ಮತ್ತೊಂದೆಜ್ಜೆ ಗುಲಾಬಿ ಹೆಜ್ಜೆ
ಪುಟ್ ಹೆಜ್ಜೆ ಹವಳದ ಹೆಜ್ಜೆ

ಅಂತೆಲ್ಲ ಸಾಗುವ ಮಗುವಿನ ಲೋಕವನ್ನು ಅರಳಿಸಿರುವ ಚಿತ್ರವನ್ನು ಉದಾಹರಣೆಯಾಗಿ ನೋಡಬಹುದು.



ಇದೇ ಶೈಲಿಯಲ್ಲಿ ಬಾಲ್ಯವನ್ನ ಅನಾವರಣಗೊಳಿಸುವ ಸೊಗಸಿನ ರೇಖೆ ಸೆಳೆತದ ಚಿತ್ರಗಳಿಗೆ ನನ್ನದೇ ಪುಟ್ಟ ಮಕ್ಕಳ ಪದ್ಯಗಳ ಪುಸ್ತಕ 'ಹೂ ಅಂದ್ರ ಹೂ'ವಿನಲ್ಲಿಯ ಚಿತ್ರಗಳನ್ನ ಇಲ್ಲಿ ಉದಾಹರಿಸಬಹುದು. ಅಂತಹ ಒಂದು ಉದಾಹರಣೆ ಇಲ್ಲಿದೆ:




ಈಗ ಹರದಿಟ್ಟೀ ಏನ
ಅಂಗೀಮ್ಯಾಲ ಹೂ
ಏನ ತೆಳ್ಳಗವ ನೋಡ
ಹಾರಸ್ತೀನಿ ಫೂ

ತಾಂತ್ರಿಕತೆಯ ಸೌಲಭ್ಯ ತಂದೊಡ್ಡಿರುವ ಅಪರಿಮಿತ ಲೋಕ ದೃಶ್ಯ ಸಂವಹನದ ವಿಸ್ತಾರಗಳಿಗೆ ರೆಕ್ಕೆ ಪುಕ್ಕ ನೀಡಿವೆ, ಆಕಾಶವೇ ಮಿತಿ ಎನ್ನುವ ಹಾಗಿದೆ. ಗ್ರಾಫಿಕ್ ಜಗತ್ತು, ಎನಿಮೇಶನ್ ಜಗತ್ತು ನಮ್ಮ ನಡುವೆ ತೆರೆದುಕೊಳ್ಳುತ್ತಿರುವಂತೆ ನಮ್ಮ ಯುವ ಕಲಾವಿದರನೇಕರು ಅಚ್ಚರಿ ಮೂಡಿಸುವಷ್ಟು ಪ್ರತಿಭೆಯನ್ನ ತೋರಿಸುತ್ತಿದ್ದಾರೆ. ಹಾಗಾಗಿ ಈಗ ಸಾಧ್ಯತೆಗಳಿಗೆ, ಪ್ರಯೋಗಗಳಿಗೆ ಕೊರತೆ ಇಲ್ಲ. ರಾಧೇಶ ತೋಳ್ಪಾಡಿ ಅವರ 'ಹಲೊ ಹಲೊ ಚಂದಮಾಮ' ಕವನ ಸಂಕಲನಕ್ಕೆ 'ಛಂದ ಪುಸ್ತಕ' ಪ್ರಕಾಶನದವರು ಮುಖಪುಟದ ಆಯ್ಕೆಗಾಗಿ ಕಲಾವಿದರಿಗೆ ಕರೆ ಕೊಟ್ಟು ಸ್ಪರ್ಧೆ ನಡೆಸಿದರು. ನೂರಾಮೂವತ್ತಕ್ಕೂ ಹೆಚ್ಚು ಪ್ರವೇಶಗಳು ಸ್ವೀಕೃತವಾದುವಂತೆ. ಇವುಗಳಲ್ಲಿ ಉತ್ತಮವೆನ್ನುವ ೩೦ ಪ್ರವೇಶಗಳನ್ನ ಕವಿ ಜಯಂತ ಕಾಯ್ಕಿಣಿ ಆಯ್ಕೆ ಮಾಡಿದರು. ಮತ್ತೆ ಇವನ್ನ ಜನರಿಗೆ ಆಯ್ಕೆಗೆ ಬಿಡಲಾಯಿತು. ಇದರಲ್ಲಿ ಆಯ್ಕೆ ಆದುದು ವಿನಯ ಸಾಯ ಅವರ ಮುಖ ಪುಟ. ವಿನಯ ಸಾಯ ಮಂಗಳೂರಿನ ಯುವ ಪ್ರತಿಭಾವಂತ ಕಲಾವಿದ, ಬರಹಗಾರ ಕೂಡ. ಚಿತ್ರ ಅವರ ರಚನೆ.



ಸಾಫ್ಟವೇರ್ ಸಾಧ್ಯತೆಗಳನ್ನ ಅತ್ಯಂತ ಉತ್ತಮವಾಗಿ ಬಳಸಿಕೊಂಡಿರುವ ಉದಾಹರಣೆ ಇದು. ಮರದ ಟೊಂಗೆ, ಹೂವುಗಳು, ಗೂಗೆ, ಆಕಾಶದ ಅರ್ಧಚಂದ್ರ ಇವೆಲ್ಲ ಅಲಂಕರಣ ಶೈಲಿಯಲ್ಲಿ, ಆದರೆ ಇತ್ತೀಚಿನ ಹೊಸತಿನಲ್ಲಿ, ಹಾಗೆಯೇ ಕಣ್ಣು ಹಿಡಿದಿಡುವ ವರ್ಣ ಸಂಯೋಜನೆಯುಲ್ಲಿ ಮೂಡಿ ಆಕರ್ಷಿಸುತ್ತವೆ. ಖಾಲಿ ಅವಕಾಶವನ್ನ ಸೊಗಸಾಗಿ ಉಪಯೋಗಿಸಿಕೊಂಡಿದ್ದು, ಅದರ ಜೊತೆಗೆ ಮುಸುಕು ಮುಸುಕಿನ ಮಿಶ್ರಿತ ಅವಕಾಶವನ್ನ ಪ್ರಭಾವಕಾರಿಯಾಗಿ ಅದರೊಂದಿಗೆ ಅಳವಡಿಸಿಕೊಳ್ಳಲಾಗಿದೆ. ಪುಟ್ಟ ಮಕ್ಕಳ ಚಿತ್ರಗಳು, ಹಳೆಯ ಕಾಲದ ಹೊಗೆ ಕೊಳವೆ ಕೆಳ ಭಾಗದಲ್ಲಿ ಕಾಣಿಸಿಕೊಂಡು ಒಂದು ಬಗೆಯ ಫ್ಯಾಂಟಸಿಯ ವಾತಾವರಣಕ್ಕೆ ಕಾರಣವಾಗಿದೆ. ತಲೆ ಬರಹದ ಅಕ್ಷರಗಳನ್ನ ಕೂಡ ಈ ಒಟ್ಟು ಅವಕಾಶಕ್ಕೆ ಸೂಕ್ತವಾಗಿ ಭಾವಾಭಿವ್ಯಕ್ತಿಗಾಗಿಯೇ ಬಳಸಿಕೊಳ್ಳಲಾಗಿದೆ.

ಇನ್ನೊಂದು ಈ ಬಗೆಯ ಪ್ರಯೋಗ ಕಂಡುದು ಅಭಿನವದಿಂದ ಪ್ರಕಟವಾಗಿರುವ ನನ್ನವೇ ಎರಡು ಪ್ರಕಟಣೆಗಳಲ್ಲಿ. 'ಪುಟ್ಟನ ಹಾವು ಹುತ್ತಾಬಿಟ್ಟು ಹೊರಗ್ ಬಂತು' ಎನ್ನುವ ಒಂದೇ ದೀರ್ಘ ಪದ್ಯದ ಪುಸ್ತಕ, ಮತ್ತೊಂದು 'ಪುಟ್ಟ ಪುಟ್ಟ ಪಾಪು ಪುಟಾಣಿ ಪಾಪು' ಎನ್ನುವ ಪುಟಾಣಿಗಳಿಗಾಗಿ ರಚಿಸಿರುವ ಪುಟ್ಟ ರಚನೆಗಳ ಸಂಕಲನಕ್ಕೆ ಕಲಾವಿದೆ ಸೃಷ್ಟಿ ನಿರೂಪಿಸಿರುವ ವಿನ್ಯಾಸ ಒಳ್ಳೇ ಸೊಗಸನ್ನ ತಂದಿತ್ತಿದೆ. ಮಕ್ಕಳ ಪುಸ್ತಕದ ಏನೆಲ್ಲ ಸಾಧ್ಯತೆಗಳಿವೆಯಲ್ಲ ಎನ್ನುವುದಕ್ಕೆ ಉದಾಹರಣೆ ಎನ್ನುವಂತೆ ಇವು ಪ್ರಕಟಗೊಂಡಿವೆ. ಉದಾಹರಣೆಗಾಗಿ ಈ ಚಿತ್ರವನ್ನು ನೋಡಬಹುದು.



ಕಲಾವಿದರ ಕೊರತೆ ಖಂಡಿತ ನಮ್ಮಲ್ಲಿಲ್ಲ. ಬೇಕಾಗಿರುವುದು ಅವಕಾಶಗಳು. ಪ್ರಕಾಶಕರು ಮನಸ್ಸು ಮಾಡಬೇಕು. ಅವರಿಗೆ ಭಾಷೆಯ ಆವರಣದ ಮಿತಿ ಕಾಡುವುದೂ ಸಹಜ. ಕನ್ನಡದಲ್ಲಿ ಪ್ರಕಟವಾಗುವ ಹೆಚ್ಚಿನ ಖರ್ಚಿನ ಪುಸ್ತಕಕ್ಕೆ ಮಾರುಕಟ್ಟೆ ಲಭ್ಯವಾಗದಿದ್ದರೆ ಏನು ಮಾಡುವುದು ಎನ್ನುವ ಆತಂಕ. ಸರಕಾರದ ಗ್ರಂಥಾಲಯ ಇಲಾಖೆ ನಿಗದಿತವಾಗಿ ಪುಸ್ತಕಗಳನ್ನ ಸಕಾಲಕ್ಕೆ ಖರೀದಿ ಮಾಡುವ ಪರಿಪಾಠವಿಟ್ಟುಕೊಂಡರೆ ಅದೊಂದು ಆಧಾರವಿರುತ್ತದೆ. ಅದಷ್ಟೇ ಖಂಡಿತ ಸಾಲದು. ಈಗ ನಮ್ಮ ನಡುವೆ ಈ ಎಲ್ಲ ಮಿತಿಗಳ ನಡುವೆಯೂ ಅನೇಕ ಪ್ರಯೊಗಗಳ ಮನಸ್ಸುಗಳು ಕಾಣಿಸಿಕೊಳ್ಳುತ್ತಿವೆ. ಜೀನಹಳ್ಳಿ ಸಿದ್ಧಲಿಂಗಪ್ಪ ತಾವೇ ಲೇಖಕರಾಗಿ, ಪ್ರಕಾಶಕರಾಗಿ ತಮ್ಮ ಕವನ ಸಂಕಲನ 'ಚಿಣ್ಣರ ಚಿಲಿಪಿಲಿ'ಗೆ ಪೂರ್ತಿಯಾಗಿ ವರ್ಣಚಿತ್ರಗಳನ್ನೇ ಬಳಸಿಕೊಂಡುದುನ್ನ ಇಲ್ಲಿ ಉದಾಹರಿಸಬಹುದು. ಇದು ಅಪರೂಪಕ್ಕೊಮ್ಮೆ ನಡೆಯುವ ಕೆಲಸವೇ ನಮ್ಮ ನಡುವೆ. ಇದಕ್ಕೆ ಅವರಿಗೆ ಪುಸ್ತಕಸೊಗಸು ಪುರಸ್ಕಾರವೂ ಬಂದಿತ್ತು. ಕಲಾವಿದ ಎಸ್. ಮೋಹನಕುಮಾರ ಅವರು ಸೊಗಸಾಗಿ, ಅಚ್ಚುಕಟ್ಟಾದ ಚಿತ್ರಗಳನ್ನ ಬಿಡಿಸಿದ್ದಾರೆ. ಹಾಗೆಯೇ ಸಿ. ಎಂ. ಗೋವಿಂದರೆಡ್ಡಿ ಅವರ 'ಚಿಣ್ಣರ ಲೋಕ'ಸಂಕಲನ ಮುಖಪುಟಕ್ಕೆ ಪ್ರತಿಭಾವಂತ ಕಲಾವಿದ ಎಮ್.ಎಸ್. ಮೂರ್ತಿ ವಿಭಿನ್ನ ಬಗೆಯ ಚಿತ್ರ ನೀಡಿದ್ದಾರೆ. ಕೆ. ಪಿ.ಸುರೇಶ ಅವರು ಅಕ್ಷರ ಕೃಷಿ ಪ್ರಕಾಶನದಿಂದ ೨೦೦೫ರಲ್ಲಿ ಹೊರತಂದಿರುವ 'ಮರಳಿ ಬಂದ ಮೂರು ಕತೆಗಳು'; ಯುನೆಸ್ಕೊ ಫೆಲೊಶಿಪ್ ಯೋಜನೆಯಲ್ಲಿ ತಂದಿರುವ

ಈ ಕೃತಿಯ ಮೂರು ಕತೆಗಳಿಗೆ ಮೂವರು ಕಲಾವಿದರು ಚಿತ್ರ ಬಿಡಿಸಿದ್ದಾರೆ. ಒಬ್ಬೊಬ್ಬರದು ಒಂದೊಂದು ಶೈಲಿ, ಹೊಸ ಬಗೆಯ ಇತ್ತೀಚಿನ ನೋಟದ ಪ್ರಯೋಗಗಳೇ ಇವು. ದಿನೇಶ ಕುಕ್ಕುಜಡ್ಕ, ಮೋಹನ ಸೋನಾ, ಇಕ್ಬಾಲ್ ಅಹಮದ್ ಈ ಮೂವರು ಕಲಾವಿದರು ಇಲ್ಲಿ ತೊಡಗಿಕೊಂಡವರು. ಆದರೆ ಕೃತಿಯಲ್ಲಿ ಯಾವುದು ಯಾರದು ಎನ್ನುವುದು ತಿಳಿಯುವುದಿಲ್ಲ. ಮುಖಪುಟ ಮಾತ್ರ ದಿನೇಶ ಕುಕ್ಕುಜಡ್ಕ ಅವರದು ಎನ್ನುವುದು ತಿಳಿಯುತ್ತದೆ. ಪುಣ್ಯಕೋಟಿ ಕತೆಯನ್ನ ಹೇಳುವ 'ಬಾನು' ಶೀರ್ಷಿಕೆಯ ಕತೆಗೆ ಬಳಸಿರುವ ಶೈಲಿ ಜನಪದರ ಸರಳ, ದಿಟ್ಟವಾದ ಬಗೆಯದು. ಶಾರೀರಿಕ ರಚನೆಗಳನ್ನ ಅನುಸರಿಸಿದರೂ ಅವು ನೈಜತೆಯನ್ನ ಅಗತ್ಯವಾಗಿ ಭಾವಿಸಿದವು, ಮುಖ್ಯ ಭಾವಾಭಿವ್ಯಕ್ತಿಯೇ. ವರ್ಣಗಳಲ್ಲಿ ಕೂಡ ಜನಪದರ ಮಾದರಿಯ ದಿಟ್ಟ, ಆದಷ್ಟು ಮೂಲವರ್ಣಗಳ ಬಳಕೆಯನ್ನ ನೋಡುತ್ತೇವೆ. ಹೀಗಾಗಿ ಒಂದು ಬಗೆಯಲ್ಲಿ ಮಕ್ಕಳ ಲೋಕದ ಸರಳತೆಯ ನೇರ ನಿರೂಪಣೆ ಇಲ್ಲಿಯದು. ಅದೇ ಗಾಂಧೀಜಿಯ ನೌಖಾಲಿಯ ಪ್ರಸಂಗವನ್ನ ಚಿತ್ರಿಸಿರುವ ಪ್ರಸಂಗ ಹೆಚ್ಚು ನೈಜ ಶೈಲಿಯ ಕಡೆಗೆ ವಾಲಿದರೂ ಅಮೂರ್ತ ರೀತಿಯ ಆಕೃತಿಗಳನ್ನ ಹಿಡಿದಿಟ್ಟುಕೊಂಡಿದೆ. ಎರಡು ಚಿತ್ರಗಳಲ್ಲಿಯಂತೂ ಒಂದು ಬಗೆಯ ಅಸ್ಪಷ್ಟ ವಾತಾವರಣವಿದ್ದು ಆಕೃತಿಗಳು ನಿಖರವಾಗಿ ಎದ್ದು ತೋರುವುದಿಲ್ಲ. ಅಮೂರ್ತ ಬಗೆಯದಾದರೂ ಮನುಷ್ಯಾಕೃತಿಗಳು ನಿರ್ದಿಷ್ಟತೆಯನ್ನ ಹೇಳುತ್ತವೆ. ಅದೇ ಜೀಮೂತವಾಹನನ ಕತೆಯನ್ನ ಆಧರಿಸಿರುವ ಮೂರನೆಯ ಕತೆಗೆ ಬಳಸಿರುವ ಬಗೆ ಪೂರ್ತಿಯಾಗಿ ಜನಪದ ಮಾದರಿಯ, ಅದರಲ್ಲೂ ಆದಷ್ಟು ಸಂಕೇತಾತ್ಮಕವಾಗಿ, ಹೆಚ್ಚು ಭಾವಾಭಿವ್ಯಕ್ತಿಗೆ ಪ್ರಾಧಾನ್ಯ ನೀಡಿದ ಉದಾಹರಣೆ. ಅಲ್ಲಿನ ಬಣ್ಣಗಳ ದಿಟ್ಟ ಬಳಕೆ, ಆಕೃತಿಗಳ ಸೂಚ್ಯ, ಸರಳ ಸಂಗತಿಗಳು ಕೂಡಲೆ ಸಂವಹನವನ್ನ ಸಾಧಿಸುತ್ತವೆ. ಒಂದು ಬಗೆಯಲ್ಲಿ ಮುಗ್ಧತೆಯ ಅಭಿವ್ಯಕ್ತಿಯಂತೆ ಇದು. ನನಗನಿಸಿದಂತೆ ಇಲ್ಲಿ ಕಲಾವಿದರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಕತೆಯ ವಸ್ತುವನ್ನ ನಿರೂಪಿಸಲು, ಮುಂದಿಡಲು ನೋಡಿದ್ದಾರೆಯೇ ಹೊರತು ಮಕ್ಕಳ ಲೋಕಕ್ಕೇ ಅಂತ ಇನ್ನಷ್ಟು ವಿಶಿಷ್ಟವಾಗಿ ಚಿಂತಿಸಬಹುದಿತ್ತು ಎಂದು. ಒಬ್ಬೊಬ್ಬರದು ಒಂದೊಂದು ಬಗೆಯ ಚಿಂತನೆ. ಇದಮಿತ್ಥಂ ಅಂತ ಏನಿಲ್ಲ. ಅಂತೂ ಕಲಾವಿದರು ನಮ್ಮ ನಡುವೆ ವಿಭಿನ್ನ ಪ್ರಯೋಗಗಳಿಗೆ, ಸಾಧ್ಯತೆಗಳಿಗೆ ತುಡಿಯುತ್ತಿದ್ದಾರೆ ಎನ್ನುವುದು ಸೊಗಸಿನ, ಸಂತಸದ ಸಂಗತಿ. ಅವರಿಗೆ ಅವಕಾಶಗಳು ಸಿಗಬೇಕು. ಮಕ್ಕಳ ಸಾಹಿತ್ಯ ಲೋಕ ಇದನ್ನ ಹೆಚ್ಚು ಹೆಚ್ಚು ಅಪೇಕ್ಷಿಸುತ್ತದೆ. ಅದು ಅದರ ಅಗತ್ಯ ಕೂಡ. ನಮ್ಮಲ್ಲಿ ಒಂದು ಮಕ್ಕಳ ಪುಸ್ತಕವೆಂದರೆ ಕೇವಲ ಲೇಖಕನನ್ನ ಮಾತ್ರ ಗಣಿಸದೆ ಚಿತ್ರಕಾರರನ್ನ ಕೂಡ ಗಣಿಸುವ ವಾತಾವರಣ ಇನ್ನೂ ಮೂಡುತ್ತಿಲ್ಲ. ಪಾಶ್ಚಾತ್ಯರಲ್ಲಿ ಕಲಾವಿದರನ್ನ ಈಗೆಲ್ಲ ಅತ್ಯಂತ ಗೌರವದಿಂದ ಗುರುತಿಸಲಾಗುತ್ತಿದೆ. ಒಂದು ಮಕ್ಕಳ ಸಾಹಿತ್ಯದ ಕೃತಿಯನ್ನ ಪುರಸ್ಕಾರಕ್ಕೆ ಆಯುವುದರ ಜೊತೆಗೆ ಕಲಾವಿದರ ರಚನೆಗಳನ್ನೂ ಆಯುವುದು ಸಾಕಷ್ಟು ಕಡೆ ನಡೆಯುತ್ತಿದೆ. ಅಂಥ ಸಾಕಷ್ಟು ಉದಾಹರಣೆಗಳನ್ನ ಕೊಡಬಹುದು. ಮಕ್ಕಳ ಲೋಕಕ್ಕೆ ಬೇಕಿರುವ ಅಪರೂಪದ ಚಿತ್ರ ಕಲಾವಿದರು ಇಂದು ಕಾಣಿಸಿಕೊಂಡಿದ್ದರೆ, ತಮ್ಮ ವಿಭಿನ್ನ ಶೈಲಿಯಿಂದ ಹೆಸರು ಮಾಡುತ್ತಿದ್ದರೆ. ನಮ್ಮಲ್ಲೂ ಈ ವಾತಾವರಣ ನಿಧಾನವಾಗಿಯಾದರೂ ಮೂಡಬೇಕು. ಚಿಲ್ಡ್ರನ್ ಬುಕ್ ಟ್ರಸ್ಟ್ ಹುಟ್ಟು ಹಾಕಿದ ಶಂಕರ್ ಪಿಳ್ಳೆ ಈ ಎಲ್ಲ ಸಾಧ್ಯತೆಗಳಿಗೆ ಪ್ರಾರಂಭದಲ್ಲಿಯೇ ಕೈಚಾಚಿದವರು.

ಕಲಾವಿದರಿಗಾಗಿಯೇ ಅನೇಕ ಶಿಬಿರಗಳನ್ನ ನಡೆಸಿದವರು. ಅನೇಕ ಖ್ಯಾತ ಕಲಾವಿದರನ್ನ ಆಹ್ವಾನಿಸಿ ಪ್ರಯೋಗಕ್ಕಿಳಿದವರು. ಕೆ. ಕೆ. ಹೆಬ್ಬಾರ್ ಅಂಥ ಕಲಾವಿದರನ್ನೂ ಅವರು ಒಳಗು ಮಾಡಿಕೊಂಡಿದ್ದರು. ೧೯೮೦ರಲ್ಲಿ ಹೀಗೆ ಹಮ್ಮಿಕೊಂಡಿದ್ದ ಶಿಬಿರದಲ್ಲಿ ಆಹ್ವಾನಿತರಾಗಿದ್ದ ಬ್ರಿಟಿಶ್ ಕಲಾವಿದ ಚಾರ್ಲಸ್ ಕೀಪಿಂಗ್ ಅಭಿಪ್ರಾಯ ಪಟ್ಟಿರುವುದನ್ನ ಇಲ್ಲಿ ಹೇಳಬೇಕು: 'Unlike in the west, the main problem in India is of production and not the lack of talent. Artistic standards are similar, but artists in India work under tremendous handicap'. ಇಂದು ನ್ಯಾಷನಲ್ ಬುಕ್ ಟ್ರಸ್ಟ್ ಸಾಕಷ್ಟು ಒಳ್ಳೆಯ ಪ್ರಯತ್ನಗಳನ್ನ ಮಾಡುತ್ತಿದೆ. ದೇಶದ ಮೂಲೆಮೂಲೆಯಲ್ಲಿನ ಎಲ್ಲ ಭಾಷಿಕ ಮಕ್ಕಳಿಗೆ ಚೆಂದದ ಬಣ್ಣ ಬಣ್ಣದ ಪುಸ್ತಕಗಳನ್ನ ಸುಲಭ ಬೆಲೆಯಲ್ಲಿ ಮುಟ್ಟಿಸುವ ವಿರಳ ಪ್ರಯತ್ನ ಮಾಡುತ್ತಿದೆ.

ಕನ್ನಡ ಮಕ್ಕಳ ಪತ್ರಿಕೆಗಳು ಮತ್ತು ಮಕ್ಕಳ ಸಾಹಿತ್ಯ

– ರೂಪ ಹಾಸನ

ನಮ್ಮ ಸಮಾಜದಲ್ಲಿ ಅತ್ಯಂತ ನಿರ್ಲಕ್ಷಿತರು ಎಂದರೆ ಮಕ್ಕಳು. ಅವರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿವಳಿಕೆ, ಸಂಘಟನೆ ಹಾಗೂ ದನಿ ಇಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣ. ನಮ್ಮ ಸಮಾಜದ ಕೆಳವರ್ಗ, ತಳಸಮುದಾಯ, ರೈತ, ಕಾರ್ಮಿಕ, ಮಹಿಳೆ ಹಾಗೂ ಅಸಹಾಯಕ ವರ್ಗಕ್ಕೆ ಇವತ್ತು ತಮ್ಮ ಹಕ್ಕುಗಳ ಬಗ್ಗೆ ಒಂದಿಷ್ಟಾದರೂ ತಿಳಿವಳಿಕೆ, ಜಾಗೃತಿ ಮೂಡಿರುವುದರಿಂದ ಅವರು ಅದಕ್ಕಾಗಿ ದನಿಯೆತ್ತಿ ಕೇಳುವಂತಾ, ಸಂಘಟಿತರಾಗುವಂತಾ, ಹೋರಾಟ ಮಾಡುವಂತಾ ಹಂತವನ್ನು ತಲುಪಿದ್ದಾರೆ. ಆದರೆ ಮಕ್ಕಳು ಮುಗ್ಧರು ಮತ್ತು ಅಸಹಾಯಕರು ಆಗಿರುವುದರಿಂದ ಅವರು ಸಮಾಜದಲ್ಲಿ ಇನ್ನೂ ನಿರ್ಲಕ್ಷಿತರಾಗೇ ಉಳಿದಿದ್ದಾರೆ. ಮಕ್ಕಳ ಕುರಿತಾಗಿ ಈ ಎಲ್ಲ ಮಾತುಗಳನ್ನ ಯಾಕೆ ಹೇಳುತ್ತಿದ್ದೇನೆ ಎಂದರೆ ಮಕ್ಕಳು ನಿರ್ಲಕ್ಷಿತರಾಗಿರುವುದರಿಂದ ಮಕ್ಕಳ ಸಾಹಿತ್ಯವೂ ನಿರ್ಲಕ್ಷಿತವಾಗಿದೆ! ಹಾಗೇ ಮಕ್ಕಳ ಪತ್ರಿಕೆಗಳ ಬಗೆಗೆ, ಪತ್ರಿಕೆಗಳಲ್ಲಿ ಮಕ್ಕಳ ಬಗೆಗೆ ನಮ್ಮ ಗಮನ ಕೂಡ ಕಡಿಮೆ ಇದೆ. ನಮ್ಮಲ್ಲಿ ಮಕ್ಕಳ ಪತ್ರಿಕೋದ್ಯಮ ಎನ್ನುವಂತಾ ವಿಚಾರವೇ ಇನ್ನೂ ಜಾಗೃತಗೊಂಡಿಲ್ಲ ಎಂದರೆ ತಪ್ಪಾಗಲಾರದು.

ಇವತ್ತಿಗೂ ನಮ್ಮಲ್ಲಿ ಮಕ್ಕಳ ಸ್ವತಂತ್ರ ಲೋಕದ ಬಗ್ಗೆ ನಮಗೆ ಅನುಮಾನ ಇದೆ. ನಮ್ಮಲ್ಲಿ ಬಾಲ್ಯ ಎಂದರೆ ಒಟ್ಟು ಬದುಕಿನ ತಯಾರಿ ಎಂದೇ ನೋಡುವುದರಿಂದ ಧಾರ್ಮಿಕ ಚೌಕಟ್ಟಿನಲ್ಲಿಯೇ, ನೈತಿಕತೆಯ ಹಿನ್ನೆಲೆಯಲ್ಲಿಯೇ ಮಕ್ಕಳನ್ನ ಬೆಳೆಸುವ ಪರಿಪಾಠವಿದೆ. ಹಿರಿಯರೇ ಮಕ್ಕಳ ಎಲ್ಲವನ್ನೂ ನಿರ್ಧರಿಸುವಂತಾ, ಅವರ ಭವಿಷ್ಯದ ಬಗ್ಗೆ ಗೊತ್ತುಪಡಿಸುವಂತದ್ದನ್ನ ನಾವು ಕಾಣುತ್ತೇವೆ. ಹಾಗಾಗೇ ನೀತಿಕಥೆಗಳು, ಪುರಾಣದ ಕಥೆಗಳು, ಆದರ್ಶ ಪುರುಷರ, ಸಾಧಕರ ಕಥೆಗಳು, ಧಾರ್ಮಿಕ ನಡವಳಿಕೆ, ವಿಧೇಯತೆಯ ಪಾಠಗಳಿಗೆ ಬಾಲ್ಯದಲ್ಲಿ ಆದ್ಯತೆ ನೀಡಲಾಗುತ್ತದೆ. ಹಾಗೆ ನೋಡಿದರೆ ನಮ್ಮ ಜಾನಪದ ಸಾಮಗ್ರಿ ಅದ್ಭುತವಾದುದ್ದು. ಅದು ಕಲ್ಪನೆಯ ಮಾನವ ಸಹಜ ತುಡಿತವನ್ನ ಹೊತ್ತುಕೊಂಡಿದೆ. ಇದನ್ನ ಬಳಸಿಕೊಂಡೇ ನಮ್ಮ ಕಾಮಿಕ್‌ಗಳು ರೂಪುಗೊಂಡಿರುವುದು.

ಮಕ್ಕಳ ಕಲ್ಪನಾಶಕ್ತಿಯನ್ನು, ಜ್ಞಾನ, ಅನುಭವಗಳನ್ನು ವಿಸ್ತರಿಸುವ, ಅವರ ಮನಸ್ಸನ್ನು ಅರಳಿಸುವ ನಿಟ್ಟಿನಲ್ಲಿ, ರಂಜನೆ, ಮಾಹಿತಿ, ಶಿಕ್ಷಣ, ಸಮಸ್ಯೆಗಳ ಅರಿವಿನ ವಿಸ್ತರಣೆ ಮತ್ತು

ಸಂತೋಷದ ಸಮಯ ಕಂಡುಕೊಳ್ಳುವಲ್ಲಿ ಪತ್ರಿಕೆ ಅತ್ಯಂತ ಅನಿವಾರ್ಯವಾದದ್ದು. ದೊಡ್ಡವರ ಪತ್ರಿಕೆ ರೂಪುಗೊಂಡ ಅನೇಕ ದಶಕಗಳ ನಂತರ ಮಕ್ಕಳ ಮಾಧ್ಯಮ ಸಾಧ್ಯತೆಯ ಬಗ್ಗೆ ಹಿರಿಯರು ಯೋಚಿಸಿದರು. ಬ್ರಿಟೀಷರ ಪ್ರಭಾವದಿಂದ, ಕ್ರಿಶ್ಚಿಯನ್ ಮಿಷನರಿಗಳ ಆಗಮನದಿಂದ ೧೯ನೇ ಶತಮಾನದ ಕೊನೆಯಲ್ಲಿ ಹಾಗೂ ೨೦ನೇ ಶತಮಾನದ ಪ್ರಾರಂಭದಲ್ಲಿ ದೇಶದ ಅನೇಕ ಭಾಗಗಳಲ್ಲಿ, ಬೇರೆ ಬೇರೆ ಭಾಷೆಗಳಲ್ಲಿ ಮಕ್ಕಳ ಪತ್ರಿಕೆಗಳು ಪ್ರಾರಂಭವಾಗಿದ್ದಕ್ಕೆ ನಮಗೆ ದಾಖಲೆಗಳು ಸಿಗುತ್ತವೆ.

ಮೊದಲ ಹಂತದಲ್ಲಿ ಮಕ್ಕಳ ಪತ್ರಿಕೆಗಳು, ಮಕ್ಕಳಿಗೆ ಅಗತ್ಯವಾದುದನ್ನು ಹಿರಿಯರೇ ಗುರುತಿಸಿ, ತಮ್ಮ ಕಲ್ಪನೆಯಲ್ಲಿ ರೂಪಿಸಿದಂತಹುದೇ ಆಗಿತ್ತು. ಅದರಲ್ಲಿ ಮಕ್ಕಳಿಗೆ ತೋರಿಸಬೇಕಾದ ಅಕ್ಕರೆ, ಆಸಕ್ತಿ, ಅವರ ಬಾಲ್ಯದ ತುಂಟಾಟ, ಆರೋಗ್ಯ, ಅವರ ಭವಿಷ್ಯವನ್ನು ಸರಿಯಾಗಿ ರೂಪಿಸಲು ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕುರಿತು ಹಿರಿಯರಿಗೆ ಹಾಗೂ ಶಿಕ್ಷಕರಿಗೆ ಮಾರ್ಗದರ್ಶನ ನೀಡುವ ಮಾಹಿತಿಗಳೇ ಹೆಚ್ಚಾಗಿ ಇರುತ್ತಿದ್ದವು. ಹಾಗೂ ಮುಖ್ಯವಾಗಿ ಬೇರೆ ಬೇರೆ ಭಾಷೆಯ ಹಿರಿಯ ಸಾಹಿತಿಗಳೇ ಮಕ್ಕಳಿಗಾಗಿ ಪತ್ರಿಕೆಯನ್ನು ಮೊದಲು ಪ್ರಾರಂಭಿಸಿದರು ಎಂಬುದು ಗಮನಾರ್ಹವಾದುದು.

೧೯೨೮ರಲ್ಲಿ ಬೆಂಗಳೂರಿನಲ್ಲಿ ನೆಲೆ ನಿಂತವರಾದ ಆಂಧ್ರಪ್ರದೇಶ ಮೂಲದ ಸಿ. ಅಶ್ವಥ್ ನಾರಾಯಣರಾವ್ ಎಂಬುವವರ ಪ್ರಕಾಶನದಡಿಯಲ್ಲಿ, ದೇವುಡು ಅವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ 'ಮಕ್ಕಳ ಪುಸ್ತಕ' ಎಂಬ ಮಕ್ಕಳ ಪತ್ರಿಕೆ ಪ್ರಾರಂಭಗೊಂಡು ಎರಡು ವರ್ಷಗಳ ಕಾಲ ನಡೆಯಿತು. ಇದೇ ಕನ್ನಡದ ಮೊದಲ ಮಕ್ಕಳ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರ ೧೯೩೫ರ ಸುಮಾರಿಗೆ ದೇವುಡು ಅವರು ಸ್ವತಂತ್ರವಾಗಿ ಪ್ರಾರಂಭಿಸಿ ೨೫ ವರ್ಷಗಳಿಗೂ ಹೆಚ್ಚು ಕಾಲ ನಡೆಸಿದ 'ನಮ್ಮ ಪುಸ್ತಕ' ಎಂಬ ಪತ್ರಿಕೆ ಕನ್ನಡದಲ್ಲಿ ಅತಿ ದೀರ್ಘಕಾಲ ಹಾಗೂ ನಿರಂತರವಾಗಿ ನಡೆದ ಮೊದಲ ಮಕ್ಕಳ ಪತ್ರಿಕೆ ಎಂಬ ವಿಶೇಷಕ್ಕೆ ಪಾತ್ರವಾಗಿದೆ. ಮೊದಲು ನಾಲ್ಕಾಣೆಯಿಂದ ಪ್ರಾರಂಭವಾಗಿ ಆ ಕಾಲದಲ್ಲಿಯೇ ೩ ರೂಪಾಯಿವರೆಗೆ ನಿಗದಿಪಡಿಸಿದ ಮಾಸಿಕವಾಗಿ ಅವರು ಮಕ್ಕಳನ್ನು ರಂಜಿಸಲು, ಅವರ ಜ್ಞಾನವೃದ್ಧಿಗಾಗಿ, ಸನ್ನಡತೆಗೆ ಪ್ರೇರೇಪಿಸಲು ವಿಶೇಷ ಕಾಳಜಿಯಿಂದ ಪತ್ರಿಕೆಯನ್ನು ರೂಪಿಸಿದ್ದು ಗೋಚರಿಸುತ್ತದೆ. ಚಿತ್ರಕಥೆ, ಚಿತ್ರಲಿಪಿ, ಚುಕ್ಕಿಚಿತ್ರ, ವಿಜ್ಞಾನದ ವಿಷಯಗಳು, ವ್ಯಕ್ತಿ ಪರಿಚಯ, ಪೋಷಕರಿಗೆ, ಶಿಕ್ಷಕರಿಗೆ ಸಲಹೆಗಳು ಹೀಗೆ ಪತ್ರಿಕೆ ಆ ಕಾಲಕ್ಕೆ ಸಮೃದ್ಧವಾಗಿಯೇ ಹೊರಬರುತ್ತಿತ್ತು ಎನ್ನಬಹುದು. ಪತ್ರಿಕೆಯಲ್ಲಿ ಫೋಟೋಗಳನ್ನು, ಚಿತ್ರಗಳನ್ನು ಮುದ್ರಿಸಲು ಪ್ರಾರಂಭಿಸಿದ್ದೂ ವಿಶೇಷ. ಅವರು ಪತ್ರಿಕೆಯನ್ನು ಶಿಕ್ಷಣ ಇಲಾಖೆಯ ನೆರವಿನೊಂದಿಗೆ ಬೇರೆ ಬೇರೆ ಜಿಲ್ಲೆಗೂ ವಿಸ್ತರಿಸಿದ್ದರು.

ಆರ್. ಕಲ್ಯಾಣಮ್ಮನವರು ಪ್ರಕಟಿಸುತ್ತಿದ್ದ 'ಸರಸ್ವತಿ' ಎಂಬ ಪ್ರಥಮ ಮಹಿಳಾ ಪ್ರತಿಕೆಯಲ್ಲಿ ಮಕ್ಕಳಿಗಾಗಿಯೇ ಕೆಲ ಪುಟಗಳನ್ನು ಮೀಸಲಾಗಿಟ್ಟಿದ್ದರು. ನಂತರ ಅವರು ಮಕ್ಕಳ ಕೂಟದ ರೂವಾರಿಯಾಗಿ 'ಮಕ್ಕಳ ಬಾವುಟ' ಪತ್ರಿಕೆ ಪ್ರಾರಂಭಿಸಿದರು. ಅನೇಕ ಹಿರಿಯ ಸಾಹಿತಿಗಳು ಇದರಲ್ಲಿ ಮಕ್ಕಳಿಗಾಗಿ ಸೃಜನಶೀಲ ಬರಹಗಳನ್ನು ಬರೆದರು. ಹಾಗೇ ಸಿಸು ಸಂಗಮೇಶರ 'ಬಾಲ ಭಾರತಿ' ಉತ್ತರ ಕರ್ನಾಟಕದಲ್ಲಿ ಮಕ್ಕಳ ಪರವಾದ ಒಂದಿಷ್ಟು ಒಳ್ಳೆಯ ವಾತಾವರಣ ನಿರ್ಮಿಸಿತು. ಇದು ನಾಲ್ಕು ವರ್ಷಗಳ ಕಾಲ ನಡೆಯಿತು. ಧಾರವಾಡದ ಮಕ್ಕಳ ಮನೆಯ

ಈಶ್ವರ ಕಮ್ಮಾರ ಅವರು 'ಮಕ್ಕಳ ಮಂದಿರ' ಪತ್ರಿಕೆಯನ್ನು ಸುಮಾರು ೩ ವರ್ಷಗಳ ಕಾಲ ಆಸಕ್ತಿಯಿಂದ ನಡೆಸಿದರು. ರಾಮದುರ್ಗದಿಂದ ನಾಗಕಲಾಲ್ ಅವರು 'ಚಿಣ್ಣರ ಲೋಕ' ಎಂಬ ಪತ್ರಿಕೆಯನ್ನು ೨ ವರ್ಷಗಳ ಕಾಲ ನಡೆಸಿದರು, ಬೆಂಗಳೂರಿನಿಂದ 'ಚಿಗುರು' ಪತ್ರಿಕೆ ಅಂದವಾಗಿ ಮುದ್ರಣಗೊಂಡು ಒಳ್ಳೆಯ ಮುಖಪುಟದೊಂದಿಗೆ ಕೆಲ ಸಮಯ ಬಂತು. ಒಳ ಪುಟಗಳೂ ಒಳ್ಳೆಯ ಆಸಕ್ತರಿಂದ ಸೊಗಸಾಗಿ ಸಂಯೋಜನೆಗೊಂಡು ಬರುತ್ತಿತ್ತು. ಹೀಗೇ 'ಪುಟಾಣಿ', 'ಪಾಪಚ್ಚಿ', 'ಅಂಗಳ' ಎನ್ನುವ ಮಕ್ಕಳ ಪತ್ರಿಕೆಗಳು ಭರವಸೆ ಹುಟ್ಟಿಸಿ ಅಲ್ಪ ಕಾಲಕ್ಕೆ ಕಣ್ಮರೆಯಾದವು. 'ಸಂಧ್ಯಾ' ಎಂಬ ಪತ್ರಿಕೆ ಮಕ್ಕಳ ಸಾಹಿತಿಗಳಾದ ಡಾ. ಆನಂದ್ ವಿ ಪಾಟೀಲ್ ಹಾಗೂ ಅವರ ಗೆಳೆಯರಿಂದ ಕೆಲವು ವರ್ಷಗಳವರೆಗೆ ಅತ್ಯಂತ ಸೊಗಸಾಗಿ ಬಂತು. 'ಅಂಗಳ' ಬಲು ದೊಡ್ಡ ಆಕಾರದಲ್ಲಿ ಅಂದವಾಗಿ ಹಲವಾರು ಹೊಸತುಗಳಿಗೆ ಹೊಸಗಾಲದ ಅಗತ್ಯಗಳಿಗೆ ತುಡಿಯುವ ಎಲ್ಲ ಸಾಧ್ಯತೆಗಳನ್ನು ತೋರಿಸಿದ್ದ ಪತ್ರಿಕೆ. ಕುಮಾರ ಪಟ್ಟಣದಿಂದ ಪ್ರಕಾಶ್ ರಾವ್ ಅವರು 'ಅಮೃತವರ್ಷಿಣಿ' ಎನ್ನುವ ಪತ್ರಿಕೆಯನ್ನು ಕಳೆದ ೭-೮ ವರ್ಷದಿಂದ ತರುತ್ತಿದ್ದಾರೆ. ಇದು ಹಾವೇರಿ ಜಿಲ್ಲೆಯನ್ನು ಕೇಂದ್ರೀಕರಿಸಿಕೊಂಡು ಶೈಕ್ಷಣಿಕ ಹಿನ್ನಲೆಯಲ್ಲಿ ಹೊರಬರುತ್ತಿದೆ. ಹಾಗೇ ಭಾರತ ಸಂಸ್ಕೃತಿ ವಿದ್ಯಾಲಯದವರು 'ವಿವೇಕ' ಎಂಬ ಪತ್ರಿಕೆಯನ್ನು ತರುತ್ತಿದ್ದಾರೆ. ಚಳ್ಳಕೆರೆಯ ಯರ್ರಿಸ್ವಾಮಿಯವರು ಕಳೆದ ೧೫ ವರ್ಷಗಳಿಂದ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಮಕ್ಕಳಿಗೆ ತಲಪಿಸಲಿಕ್ಕಾಗಿಯೇ 'ಪುಟಾಣಿ ವಿಜ್ಞಾನ' ಎಂಬ ಪತ್ರಿಕೆ ತರುತ್ತಿದ್ದಾರೆ.

ಹೀಗೆ ಅಲ್ಲಲ್ಲಿ ಪ್ರಯತ್ನಗಳು ನಡೆದಿವೆ. ಇನ್ನೂ ಅಲ್ಲಲ್ಲಿ ನಡೆದಿರಬಹುದು. ಶಿವಮೊಗ್ಗದಲ್ಲಿ 'ಮಕ್ಕಳ ಮಂಟಪ' ಎನ್ನುವ ಪತ್ರಿಕೆ ಬರುತ್ತಿದೆ. ಹಾಗೇ ದಕ್ಷಿಣ ಕನ್ನಡದ ಬಿ.ಸಿ ರೋಡ್‌ನಿಂದ ವಾಣಿಯೆನ್ನುವವರು 'ಸಿಂಫನಿ' ಎನ್ನುವ ಪತ್ರಿಕೆ ನಡೆಸುತ್ತಿದ್ದಾರೆ. ಹೊನ್ನಾವರದ ಸೇಂಟ್ ಇಗ್ನೇಶಿಯಸ್ ಶಿಕ್ಷಣ ಸಂಸ್ಥೆಯಿಂದ ಬರುತ್ತಿರುವ 'ಸಂಜೀವಿನಿ' ಎನ್ನುವ ಪತ್ರಿಕೆ ದಶಕಗಳನ್ನು ದಾಟಿ ಮುಂದುವರೆದಿದ್ದು ಆ ಭಾಗದಲ್ಲಿ ಒಳ್ಳೆಯ ಪ್ರತಿಕ್ರಿಯೆ ಗಳಿಸಿದೆ. ರಾಣೀಬೆನ್ನೂರಿನಿಂದ ಬರುತ್ತಿರುವ 'ಯಶಸ್ವಿನಿ' ಆದಷ್ಟೂ ಶೈಕ್ಷಣಿಕವಾಗಿ ಕಾಣಿಸಿಕೊಂಡಿದ್ದರೂ ನಿರಂತರವಾಗಿ ಬರುತ್ತಿದೆ. ಸರ್ಕಾರಿ ಪ್ರೌಢಶಾಲೆಯಲ್ಲಿ ನಾಟಕ ಶಿಕ್ಷಕರಾದ ಸಂತೋಷ್ ಗುಡ್ಡಿಯಂಗಡಿಯವರು ಸ್ವಂತ ಪ್ರಯತ್ನದಿಂದ 'ಅಳಿಮರ' ಎಂಬ ಮಕ್ಕಳ ಪತ್ರಿಕೆಯನ್ನು ಪ್ರತಿ ತಿಂಗಳೂ ವಿಶಿಷ್ಟವಾಗಿ ರೂಪಿಸುತ್ತಿದ್ದಾರೆ. ಅವರ ಪ್ರೇರಣೆಯಿಂದಲೇ ಇನ್ನೂ ಅನೇಕ ಶಿಕ್ಷಕರು ತಮ್ಮ ಪುಟ್ಟ ಪರಿಮಿತಿಯಲ್ಲೇ ಮಕ್ಕಳ ಪತ್ರಿಕೆಗಳನ್ನು ತರುತ್ತಿದ್ದಾರೆ.

ಈ ನಿಟ್ಟಿನಲ್ಲಿ ಧಾರವಾಡದ ಶಂಕರ ಹಲಗತ್ತಿಯವರು ತರುತ್ತಿರುವ 'ಗುಬ್ಬಚ್ಚಿಗೂಡು' ಈಗ ಬಹುಶಃ ಕನ್ನಡದಲ್ಲಿ, ಕನ್ನಡದವರ ಪ್ರಯತ್ನವಾಗಿ ಎದ್ದುಕಾಣುವಂತಿದೆ. ಈಗಾಗಲೇ ೧೦ ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಮುನ್ನೆಡೆದಿದೆ. ಆದಷ್ಟೂ ಶೈಕ್ಷಣಿಕವಾಗಿಯೇ ಕಾಣಿಸಿಕೊಳ್ಳುತ್ತಿರುವ ಪತ್ರಿಕೆ ಶಾಲಾ ಸಂಸ್ಥೆಗಳನ್ನೇ ನೆಚ್ಚಿಕೊಂಡರೆ ಅದೇ ಮಾರ್ಗದಲ್ಲಿ ಹೆಜ್ಜೆ ಇಡಬೇಕಾಗಬಹುದು. ಇದರೊಂದಿಗೇ ಪತ್ರಿಕೆ ಸೃಜನಶೀಲವಾದ ಹಲವಾರು ಪ್ರಯತ್ನಗಳನ್ನು ಹೊಸಕಾಲದ ಮಕ್ಕಳಿಗಾಗಿ ಮಾಡುತ್ತಿರುವುದು ಗಮನಾರ್ಹ. ಹಿರಿಯ ಮಕ್ಕಳ ಸಾಹಿತಿಗಳ ಬರಹಗಳ ಜೊತೆಗೆ ಮಕ್ಕಳ ಕಲ್ಪನೆ, ಸೃಜನಶೀಲತೆಗೂ ಹೆಚ್ಚಿನ ಒತ್ತು ನೀಡಿದೆ. ಗುಣಮಟ್ಟದ ದೃಷ್ಟಿಯಿಂದ ಉತ್ತಮವಾಗಿದೆ. ಆದರೆ ಮಾರುಕಟ್ಟೆಯಲ್ಲಿ ಸ್ವತಂತ್ರವಾಗಿ, ವ್ಯಾವಹಾರಿಕವಾಗಿ

ಪೈಪೋಟಿಯನ್ನು ಎದುರಿಸುವ ನಿಟ್ಟಿನಲ್ಲಿ ಇನ್ನೂ ಹೆಚ್ಚಾಗಿ ಯೋಚಿಸಿಲ್ಲ. ಮಕ್ಕಳ ಕುರಿತು ನೈಜ್ಯ ಕಾಳಜಿಯಿರುವುದು ಪತ್ರಿಕೆಯಲ್ಲಿ ಗೋಚರಿಸುವುದರಿಂದ ಆಶಾಭಾವನೆ ಇಟ್ಟುಕೊಳ್ಳುವುದಕ್ಕೆ ಕಾರಣವಾಗಿದೆ. (ಮಕ್ಕಳ ಪತ್ರಿಕೆಗಳ ಕುರಿತ ಈ ಎಲ್ಲ ಮಾಹಿತಿಗಳನ್ನು ಖ್ಯಾತ ಮಕ್ಕಳ ಸಾಹಿತಿಗಳಾದ ಡಾ.ಆನಂದ ಪಾಟೀಲರು ವಿಸ್ತೃತವಾಗಿ ಅಧ್ಯಯನ ನಡೆಸಿ ದಾಖಲಿಸಿದ್ದಾರೆ.)

ಹಾಗೇ ಮಕ್ಕಳೇ ನಡೆಸುವ ಪತ್ರಿಕೆಗಳು ನಮ್ಮ ನಡುವೆ ಕೆಲವಿತ್ತು. ತೀರ್ಥಹಳ್ಳಿಯ ಮುದ್ದು ನಡೆಸುತ್ತಿದ್ದ 'ಮಂದಾನಿಲ' ಅಲ್ಪ ಕಾಲದಲ್ಲಿಯೇ ಗಮನಿಸುವಂತಾ ಸಾಧನೆ ಮಾಡಿದೆ. ಹಾಗೇ ಹಾಸನದಲ್ಲಿ ಕೆಲವು ವರ್ಷ ಪ್ರೇರಣಾ ವಿಕಾಸ ವೇದಿಕೆಯ ಕೆಲವು ಮಕ್ಕಳು ಸೇರಿ 'ಪ್ರೇರಣಾ' ಎನ್ನುವ ಪತ್ರಿಕೆ ನಡೆಸುತ್ತಿದ್ದರು. ಸಮಾಜಮುಖಿ ಒಲವುಗಳುಳ್ಳ ದಿಟ್ಟ ಪತ್ರಿಕೆಯಾಗಿ ಇದು ರೂಪುಗೊಂಡಿತ್ತು. ಮಕ್ಕಳಿಗಾಗಿ ಹಿರಿಯರು ಬರೆಯುವುದಕ್ಕೂ ಮಕ್ಕಳೇ ನೇರವಾಗಿ ತಮ್ಮ ಪತ್ರಿಕೆಯನ್ನು ತರುವುದಕ್ಕೂ ಇರುವ ವ್ಯತ್ಯಾಸವನ್ನು ಇದರಿಂದ ಗುರುತಿಸಬಹುದಾಗಿದೆ.

ಈ ಬಗೆಯ ಎಲ್ಲಾ ಪ್ರಯತ್ನಗಳನ್ನು ಗಮನಿಸಿದಾಗ ಸಾಹಿತ್ಯಾಸಕ್ತರೇ ಇಂಥ ಪತ್ರಿಕೆಯ ಹಿಂದೆ ಇರುವುದು ಗೋಚರಿಸುತ್ತದೆ. ಆದರೆ ಅವರ ಮುಖ್ಯವಾದ ಸಮಸ್ಯೆ ಎಂದರೆ ಆರ್ಥಿಕ ಸಬಲತೆ ಇಲ್ಲದಿರುವುದು. ಕೇವಲ ಉತ್ಸಾಹ, ಆಸಕ್ತಿಯೇ ಇಲ್ಲಿನ ಬಂಡವಾಳ. ಕೇವಲ ಚಂದಾ ಹಣದ ಮೇಲೆ ಅವಲಂಬಿಸುವ ಇವು ಪತ್ರಿಕೆಯ ಮಾರಾಟ ಜಾಲವನ್ನು ವ್ಯವಸ್ಥಿತವಾಗಿ ತೂಗಿಸಲಾಗದೇ ಅಲ್ಪ ಕಾಲದಲ್ಲೇ ಕೊನೆಯುಸಿರೆಳೆಯುತ್ತವೆ. ಅಥವಾ ನಷ್ಟದಲ್ಲಾದರೂ ಸರಿ ಪ್ರಯತ್ನವನ್ನು ಕೈ ಬಿಡಬಾರದೆಂದು ಆಸಕ್ತರು ತಾವೇ ಹಣ ಹಾಕಿ ಆಗುವವರೆಗೂ ಮುಂದುವರೆಸುತ್ತಾರೆ. ಕನ್ನಡದಲ್ಲಿ ಇದುವರೆಗೆ ನಡೆದ ಪ್ರಯತ್ನಗಳೆಲ್ಲಾ ಈ ಬಗೆಯವೇ ಆಗಿವೆ. ಹಾಗೇ ಇವಾವುವೂ ಉದ್ಯಮವಾಗಿ ತಮ್ಮನ್ನು ಗುರುತಿಸಿಕೊಳ್ಳುವಲ್ಲಿ ಮುನ್ನಡೆದಿಲ್ಲ ಎಂಬುದು ಗಮನಾರ್ಹ. ಈ ಎಲ್ಲ ಪತ್ರಿಕೆಗಳಿಗೆ ಹಿನ್ನೆಲೆಯಾಗಿ ಉದ್ಯಮಿಗಳ ಬೆಂಬಲವಿಲ್ಲದಿರುವುದೂ ಕನ್ನಡ ಮಕ್ಕಳ ಪತ್ರಿಕೆಗಳು ಸೋಲನುಭವಿಸುತ್ತಿರುವುದಕ್ಕೆ ಮುಖ್ಯ ಕಾರಣವಾಗಿವೆ. ನಮ್ಮ ಯಾವ ಪ್ರತಿಷ್ಠಿತ ಪತ್ರಿಕಾ ಸಂಸ್ಥೆಯವರು ಮಕ್ಕಳ ಪತ್ರಿಕೆಯನ್ನು ಮಾಡುವ ಸಾಹಸಕ್ಕೆ ಹೋಗಲಿಲ್ಲ. ಎಲ್ಲರಿಗೂ ಆಗುವ ಮಾಸಿಕ, ಪಾಕ್ಷಿಕ, ವಾರಪತ್ರಿಕೆಗಳು ಮಕ್ಕಳಿಗಾಗಿ ಒಂದಿಷ್ಟು ಪುಟಗಳನ್ನು ಮೀಸಲಿರಿಸಿ ತೃಪ್ತಿಕಂಡಿವೆ. ಅಲ್ಲೇ ಕೆಲವರು ಹೊಸತಿಗೆ ತುಡಿದುದು, ಉತ್ಸಾಹ ತೋರಿದುದು ಕಾಣುತ್ತದೆ. ಹಾಗೆ ಇನ್ನಷ್ಟು ಆಸಕ್ತಿಯಿಂದ ಗಂಭೀರ ಪ್ರಯತ್ನ ಮಾಡಿ 'ಪುಟಾಣಿ ವಿಜಯ' ದ ಹೆಸರಲ್ಲಿ ೨ ವರ್ಷಗಳ ಕಾಲ ಮೊದಲಿಗೆ ಮಕ್ಕಳ ಪುರವಣಿ ತಂದವರೆಂದರೆ ವಿಜಯ ಕರ್ನಾಟಕದವರು. ಹಾಗೇ ಸಂಯುಕ್ತ ಕರ್ನಾಟಕದವರು ಮಕ್ಕಳಿಗಾಗಿ ತರುತ್ತಿರುವ 'ಕಿಂದರ ಜೋಗಿ' ಪುರವಣಿ ಗಮನಿಸುವಂತಾ ಪ್ರಯತ್ನ ಮಾಡುತ್ತಿದೆ. ಪ್ರಜಾವಾಣಿ ಪತ್ರಿಕೆ ತನ್ನ ರವಿವಾರದ ಸಾಪ್ತಾಹಿಕದಲ್ಲಿ ಮಕ್ಕಳ ಕತೆ, ಕವಿತೆಗಳಿಗೆ ಜಾಗ ಕೊಡುತ್ತಾ ಬಂದಿದೆ. ಇತ್ತೀಚಿನ ವಿಜಯವಾಣಿಯೂ ಮಕ್ಕಳ ಪುಟವನ್ನು ಅನುಸರಿಸಿದೆ.

ಇದನ್ನು ಮೀರಿ ಹೊಸ ಪ್ರಯತ್ನಗಳೇನೂ ಪತ್ರಿಕಾ ಮಾಧ್ಯಮದಲ್ಲಿ ಆಗಿಲ್ಲ.

ಇದಕ್ಕೆ ಅಪವಾದವೆನ್ನುವಂತೆ ಕೇವಲ ಉದಯವಾಣಿ ಪತ್ರಿಕಾ ಸಮೂಹದವರು ತರುತ್ತಿರುವ 'ತುಂತುರು' ಒಂದು ಕನ್ನಡದ ಎಣಿಸಬಹುದಾದ ಗಟ್ಟಿಯಾದ ಪ್ರಯತ್ನ. ಇದರ ಸಂಪಾದಕರು ಸಂಧ್ಯಾ ಪೈ ಅವರು. ಪತ್ರಿಕಾರಂಗದ ಅನುಭವ ಸಾಕಷ್ಟಿರುವ, ಆರ್ಥಿಕ

ಬೆಂಬಲ ಗಟ್ಟಿಯಾಗಿರುವ ಈ ಸಂಸ್ಥೆಯ ಪ್ರಯತ್ನ, ಸಮರ್ಥ ವಿತರಣಾ ಜಾಲದಿಂದಾಗಿ ೧೦ ವರ್ಷಗಳನ್ನು ದಾಟಿ ಮುನ್ನಡೆದಿದೆ. 'ತುಂತುರು' ಬಣ್ಣ ಬಣ್ಣವಾಗಿ ಅಂದವಾಗಿ ಬರುತ್ತಿದ್ದು ಕರ್ನಾಟಕದಲ್ಲಿ ಈ ರೀತಿಯ ಬೇರೆ ಮಕ್ಕಳ ಪತ್ರಿಕೆಯ ಸ್ಪರ್ಧೆಯ ಭಯ ಅನುಭವಿಸಿಲ್ಲ. ಈಗ ಮಕ್ಕಳ ಲೋಕದಲ್ಲಿರುವ ಎಲ್ಲಾ ಗಿಮಿಕ್‌ಗಳನ್ನೂ ಬಳಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಪಾಕ್ಷಿಕವಾಗಿ ೧೦-೧೨ ರ ವಯಸ್ಸಿನ ಮಕ್ಕಳಿಗಾಗಿ ಅತ್ಯಂತ ಸುಂದರವಾಗಿ ಬರುತ್ತಿರುವುದು ಶ್ಲಾಘನೀಯ ಪ್ರಯತ್ನವಾಗಿದೆ.

ಹಾಗೇ ಕನ್ನಡದ ಮಕ್ಕಳಿಗಾಗಿ ಹೊರ ರಾಜ್ಯದಿಂದ ಬರುತ್ತಿರುವ ಪತ್ರಿಕೆಗಳು ಅನೇಕವಿವೆ. ಭಾರತದಲ್ಲಿ ಬಹುಶಃ 'ಚಂದಮಾಮ'ದಷ್ಟು ಜನಪ್ರಿಯವಾದ ಮಕ್ಕಳ ಪತ್ರಿಕೆ ಇನ್ನೊಂದಿಲ್ಲ. ೧೯೪೭ರಲ್ಲಿ ಪ್ರಾರಂಭಗೊಂಡ ಇದು ನಿರಂತರವಾಗಿ ೬೬ ವರ್ಷಗಳನ್ನು ಯಶಸ್ವಿಯಾಗಿ ದಾಟಿ ನಡೆದುಬರುತ್ತಿದೆ. ೨೦೦೮ರಿಂದ ಈ ಪತ್ರಿಕೆಗೆ ಹೊಸ ಆಯಾಮ ನೀಡಲಾಗಿದೆ. ಭಾಷೆ, ಪ್ರಸ್ತುತಿ, ಚಿತ್ರ, ದೃಶ್ಯ, ಸಂವಹನ, ವಸ್ತು ಎಲ್ಲ ರೀತಿಯಲ್ಲೂ ಹೊಸತನ ಸಾಧಿಸಿದೆ. ಸಮಕಾಲೀನ ಸ್ಪಂದನೆಯ ಕತೆ, ಸಾಹಸ ಸರಣಿ, ಕ್ರೀಡಾ ಸಮಾಚಾರ, ತಾಂತ್ರಿಕ ರಂಗದ ಸುದ್ದಿಗಳು, ವಿಜ್ಞಾನ ಹೀಗೆ ಇವತ್ತಿನ ಮಕ್ಕಳ ನಿರೀಕ್ಷೆಯನ್ನು ಅಚ್ಚರಿಪಡುವಷ್ಟು ಸಮರ್ಥವಾಗಿ ತುಂಬಿಕೊಡುತ್ತಿದೆ. ಸಂವೇದನಾಶೀಲ ಸಾಮಗ್ರಿ ಹಾಗೂ ಶೈಕ್ಷಣಿಕ ಸಾಮಗ್ರಿ ಎಲ್ಲವನ್ನೂ ನೀಡಲು ಈಗ ಪತ್ರಿಕೆ ಸಜ್ಜಾಗಿದೆ. ಈಗ ಸ್ವಲ್ಪ ದೊಡ್ಡ ಮಕ್ಕಳಿಗಾಗಿಯೇ ಪತ್ರಿಕೆಯನ್ನು ಅಚ್ಚುಕಟ್ಟಾಗಿ ರೂಪಿಸಲಾಗುತ್ತಿದೆ. ಈಗ ಇಂಗ್ಲಿಷಲ್ಲದೇ, ಕನ್ನಡವನ್ನೂ ಒಳಗೊಂಡಂತೆ ಭಾರತದ ಇತರ ೧೨ ಭಾಷೆಗಳಲ್ಲಿ ಚಂದಮಾಮ ಬರುತ್ತಿದೆ.

ಹಾಗೇ ಹೊರರಾಜ್ಯದಿಂದ ಕನ್ನಡದ ಮಕ್ಕಳಿಗಾಗಿ ಬರುತ್ತಿದ್ದ 'ಬಾಲಮಿತ್ರ', 'ಬೊಂಬೆಮನೆ', 'ಪುಟಾಣಿ' ಮುಂತಾದ ನಿಯತಕಾಲಿಕಗಳು ಈಗ ಉಸಿರು ಕಳೆದುಕೊಂಡಿವೆ. ಆದರೆ ಮೂಲ ಕೇರಳದ ಮಂಗಳಂ ಪಬ್ಲಿಕೇಷನ್ಸ್ ಕನ್ನಡದಲ್ಲಿ 'ಬಾಲಮಂಗಳ' ಮತ್ತು 'ಬಾಲಮಂಗಳ ಚಿತ್ರಕಥಾ' ಎಂಬ ಎರಡು ಪಾಕ್ಷಿಕವನ್ನು ಹತ್ತಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದು ಇತ್ತೀಚೆಗಿನ ಕೆಲ ವರ್ಷಗಳಿಂದ ಪುಟಾಣಿ ಮಕ್ಕಳಿಗಾಗಿ 'ಗಿಳಿವಿಂಡು' ಎಂಬ ಮಾಸಿಕವನ್ನು ತರುತ್ತಿದ್ದಾರೆ. ಇದು ವ್ಯಾಪಾರಿ ಉದ್ದೇಶವನ್ನೂ ಮೀರಿದ ಒಂದು ಒಳ್ಳೆಯ ಪ್ರಯತ್ನ. ಹಾಗೇ 'ಚಂಪಕ' ಕೂಡ ಮಕ್ಕಳಿಗೆ ಇಷ್ಟವಾಗುವ ಒಳ್ಳೆಯ ಪತ್ರಿಕೆ.

ಈ ಎಲ್ಲಾ ಪತ್ರಿಕೆಗಳನ್ನು ಹಾಗೇ ಗಮನಿಸಿದರೆ ಇವುಗಳಲ್ಲಿನ ಸಾಮಾನ್ಯವಾದ ಸೂತ್ರವನ್ನು ಕಂಡುಕೊಳ್ಳಬಹುದು. ಇವು ಮಕ್ಕಳ ಭಾವನಾತ್ಮಕ ಹಾಗೂ ಬೌದ್ಧಿಕ ಸಾಮರ್ಥ್ಯವನ್ನು ಗುರಿಯಾಗಿಟ್ಟುಕೊಂಡು ಸಾಮಾನ್ಯವಾದ ಒಂದಿಷ್ಟು ಫಾರ್ಮುಲಾಗಳನ್ನು ಅನುಸರಿಸುತ್ತಿವೆ. ಕಾಮಿಕ್ಸ್ ಎಲ್ಲ ಮಕ್ಕಳ ಪತ್ರಿಕೆಗಳ ಮುಖ್ಯ ಆಕರ್ಷಣೆ. ಹಾಗೇ ರಂಜನೆ, ಮಾಹಿತಿ, ಶಿಕ್ಷಣವೇ ಇವುಗಳ ಮುಖ್ಯ ಗುರಿ. ಅದನ್ನು ಹೊರತುಪಡಿಸಿ ಸೃಜನಶೀಲತೆಗೆ ಇಂಬುಕೊಡುವ ಬರಹಗಳನ್ನೊಳಗೊಂಡಿರುವುದು ಕಡಿಮೆ. ಜೊತೆಗೆ ಸಾಮಾನ್ಯವಾಗಿ ಮಕ್ಕಳು ಎಂದರೆ ನಿರ್ದಿಷ್ಟ ವಯೋವರ್ಗವನ್ನು ಗುರುತಿಸಲಾಗದಿದ್ದರೂ ೭ ವರ್ಷದಿಂದ ೧೦-೧೨ ವರ್ಷದವರೆಗಿನ ಮಕ್ಕಳನ್ನು ಇಲ್ಲಿ ಪರಿಗಣಿಸಲಾಗುತ್ತದೆ. ಆದರೆ ಹೈಸ್ಕೂಲ್ ಮಕ್ಕಳಿಗೆ ಇಷ್ಟವಾಗುವ, ಅವರ ಸಮಸ್ಯೆಗಳನ್ನು ಕುರಿತು ಚರ್ಚಿಸುವಂತಾ ವಾಸ್ತವ ಲೋಕದ ಗಂಭೀರ ಸಾಮಗ್ರಿ ಇಲ್ಲಿ ಅಷ್ಟಾಗಿ ಕಾಣುವುದಿಲ್ಲ. ಸುಮಾರಾಗಿ ಹೈಸ್ಕೂಲಿಗೆ ಬಂದ ಮಕ್ಕಳ ಗ್ರಹಿಕೆ ಹಿಗ್ಗುತ್ತಿರುತ್ತದೆ.

ಸುತ್ತಲಿನ ಅನೇಕ ಸಂಗತಿಗಳು ಅವರನ್ನು ಅಚ್ಚರಿ, ದಿಗಿಲುಗೊಳಿಸುತ್ತವೆ. ಮನೆ, ಶಾಲೆ, ಗೆಳೆಯರ ನಡುವೆ, ಸಮಾಜದಲ್ಲಿ ಕಾಣುವ ಅನಪೇಕ್ಷಿತ ಎಂದುಕೊಳ್ಳುವ ಎಷ್ಟೋ ಸಂಗತಿಗಳಾಗಬಹುದು. ಎಲ್ಲವನ್ನೂ ಮಕ್ಕಳು ನೋಡುತ್ತಾರೆ, ಅನುಭವಿಸುತ್ತಾರೆ. ತಮ್ಮೊಳಗೇ ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿಕೊಳ್ಳುತ್ತಾರೆ. ಇಂಥದ್ದಕ್ಕೆಲ್ಲಾ ಸ್ಪಂದಿಸುವ ಸಂವೇದನಾಶೀಲ ಬರವಣಿಗೆ ನಮ್ಮ ಈ ಮಕ್ಕಳ ಪತ್ರಿಕೆಗಳಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ವಿರಳ.

ಮಕ್ಕಳು ಎಂದರೆ ನಿರ್ದಿಷ್ಟವಾಗಿ ೫ರಿಂದ೮, ೮ರಿಂದ ೧೨, ೧೨ರಿಂದ ೧೬ ವರ್ಷದವರನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯೇಕವಾಗಿಯೇ ಮಕ್ಕಳ ಪತ್ರಿಕೆಗಳು ರೂಪುಗೊಂಡರೆ ಅದರ ಉದ್ದೇಶ ಸಫಲವಾಗುತ್ತದೆ. ರಂಜನೆಯ ಹಾಗೆಯೇ ಮಕ್ಕಳಿಗೆ ಬೌದ್ಧಿಕ ಕಸರತ್ತು ಮುಟ್ಟಿಸುವ ಆಟದ ಹೊಸ ಬಗೆಗಳ ಪ್ರಯತ್ನವೂ ಇತ್ತೀಚೆಗೆ ಆಗಿಲ್ಲ. ಅವರ ಬೇರೆ ಬೇರೆ ತಲ್ಲಣ, ಕಳವಳ, ಸಮಸ್ಯೆಗಳ ಕುರಿತು ವಿಶ್ಲೇಷಿಸುವ ಪ್ರಯತ್ನಗಳೂ ಆಗಿಲ್ಲ. ಪತ್ರಿಕೆಯನ್ನು ಆಸಕ್ತಿಯುತವಾಗಿ, ಆಕರ್ಷಕವಾಗಿ ರೂಪಿಸುವುದಷ್ಟೇ ಅಲ್ಲ ಅದನ್ನು ಮಕ್ಕಳಿಗೆ ಯಶಸ್ವಿಯಾಗಿ ಮುಟ್ಟಿಸುವ ಪ್ರಯತ್ನವೂ ಆಗಬೇಕು. ಜಾಹಿರಾತಿನ ಹೊಸ ಹೊಸ ಸಾಧ್ಯತೆಗಳನ್ನು ಬಳಸಿಕೊಂಡರೂ ತಪ್ಪಿಲ್ಲ. ಪತ್ರಿಕೆ ಮಕ್ಕಳಿಗೆ ತಲಪಿ ಅವರದನ್ನು ಆಸ್ವಾದಿಸುವಂತಾಗಬೇಕು. ಅವರ ಕಲ್ಪನಾಶಕ್ತಿ, ವಿವೇಕ, ಜ್ಞಾನ, ಅನುಭವ, ಸಂವೇದನಾಶೀಲತೆ ಇದರಿಂದ ವಿಸ್ತರಿಸಲು ಮತ್ತು ಅವರು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು ಮಾನಸಿಕವಾಗಿ ಸಬಲರಾಗಲು ಅನುಕೂಲ ಆಗಬೇಕು.

ಮಕ್ಕಳಿಗೆ ಮಾಹಿತಿಯಾಧಾರಿತವಾಗಿ ಇತಿಹಾಸ, ವಿಜ್ಞಾನ, ಪ್ರಾದೇಶಿಕ ವಿಶೇಷತೆ, ಪ್ರಾಣಿ–ಪಕ್ಷಿ ವೈಶಿಷ್ಟ್ಯ, ರೋಚಕ ಸಂಗತಿಗಳು ಹೀಗೆ ನಾನಾ ಬಗೆಯಲ್ಲಿ ಮಾಹಿತಿಯನ್ನೂ ರಂಜನೀಯವಾಗಿ ಕೊಡುವ ಪ್ರಯತ್ನಗಳು ಮತ್ತಷ್ಟು ಹೆಚ್ಚಾಗಬೇಕಿದೆ. ಯಾವ ಮಕ್ಕಳ ಪತ್ರಿಕೆಯೂ ನಮ್ಮ ಸುದ್ದಿ ಮಾಧ್ಯಮಗಳು ದೊಡ್ಡವರಿಗಾಗಿ ನೀಡುವಂತದ್ದನ್ನು ಸಣ್ಣ ಪ್ರಮಾಣದಲ್ಲಿ ಮತ್ತು ಸೂಕ್ಷ್ಮವಾಗಿಯಾದರೂ ಮಕ್ಕಳಿಗೆ ನೀಡಲು ಪ್ರಯತ್ನಿಸಿಲ್ಲ. ಇವು ನಿಯತಕಾಲಿಕಗಳು ಎಂಬ ಒಂದು ಮಿತಿಯಿದ್ದರೂ ಪ್ರಚಲಿತ ಸುದ್ದಿಯನ್ನು ಮಕ್ಕಳ ಮಟ್ಟಕ್ಕೆ ಇಳಿದು ಅಗತ್ಯವಾದುದನ್ನು ನೀಡುವ ಪ್ರಯತ್ನ ಮಾಡಬಹುದು. ಹಾಗೇ ಇವತ್ತಿನ ಮಕ್ಕಳ ಜ್ವಲಂತ ಸಮಸ್ಯೆಗಳನ್ನು ಮುಖ್ಯವಾಹಿನಿಯಲ್ಲಿ ಚರ್ಚಿಸುವಂತಾ ಕೆಲಸಗಳೂ ಆಗುತ್ತಿಲ್ಲ ಎಂಬುದೂ ಒಂದು ಪ್ರಮುಖ ಆರೋಪವೇ.

ಮಕ್ಕಳೇ ಬರೆದ ಕಥೆ, ಕವಿತೆ, ಚಿತ್ರಕ್ಕೆ ಪತ್ರಿಕೆಗಳಲ್ಲಿ ಜಾಗವಿರುತ್ತದೆ. ಆದರೆ ವಿಶಿಷ್ಟ ಸಾಧನೆ ಮಾಡಿದ ಮಕ್ಕಳ ವ್ಯಕ್ತಿಚಿತ್ರ, ಮಕ್ಕಳ ಪರ ಸಂಘ ಸಂಸ್ಥೆಗಳ ಪರಿಚಯ, ಅಂಗವಿಕಲ ಶಾಲಾಸಂಸ್ಥೆಯ ಪರಿಚಯ, ಅಂತಹ ಮಕ್ಕಳ ವಿಶೇಷ ಸಂದರ್ಶನಗಳು ಕಾಣಸಿಗುವುದಿಲ್ಲ. ಇಂದಿನ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗೆ ತಜ್ಞರಿಂದ ಉತ್ತರ, ಮಕ್ಕಳ ಸ್ವಾರಸ್ಯದ ಅನುಭವಗಳಿಗೆ ಜಾಗ, ಒಂದು ವಿಷಯ ನೀಡಿ ಮಕ್ಕಳ ಅಭಿಪ್ರಾಯ ಆಹ್ವಾನಿಸುವುದು ಇಂಥವನ್ನು ಮಾಡಿದಾಗ ಮಕ್ಕಳಿಗೆ ತಾವೇ ತಮ್ಮದೊಂದು ಅನನ್ಯತೆಯನ್ನು, ಅಭಿಪ್ರಾಯವನ್ನು ರೂಪಿಸಿಕೊಳ್ಳಲು ತನ್ಮೂಲಕ ಪ್ರತ್ಯೇಕ ವ್ಯಕ್ತಿತ್ವ ಹೊಂದಲು ಸಾಧ್ಯವಾಗುತ್ತದೆ.

ಮಕ್ಕಳ ಪತ್ರಿಕೆಯ ಆಕಾರ, ಅದರ ದೃಶ್ಯ, ಪ್ರಸ್ತುತಿ, ಅದು ಒಳಗೊಳ್ಳಬಹುದಾದ ವಿಷಯ, ಸಾಮಗ್ರಿ ಎಲ್ಲ ವಿಶೇಷವೂ, ವಿಶಿಷ್ಟವೂ ಆಗಿದ್ದು ಪತ್ರಿಕಾರಂಗ ಇದಕ್ಕೆ ಪ್ರತ್ಯೇಕವಾಗಿಯೇ

ತೊಡಗಿಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಹಿರಿಯರ ದಿನಪತ್ರಿಕೆಗೆ ನೀಡುವಷ್ಟು ಮಹತ್ವವನ್ನು ಇಂಥಹ ಮಕ್ಕಳ ನಿಯತಕಾಲಿಕಗಳಿಗೆ ನೀಡುವುದಿಲ್ಲ. ಪತ್ರಿಕೋದ್ಯಮದ ಪಠ್ಯದಲ್ಲೂ ಮಕ್ಕಳ ಪತ್ರಿಕೆಯ ಕುರಿತು ವಿಶೇಷ ಅಧ್ಯಾಯಗಳು ಕಾಣುವುದಿಲ್ಲ. ಇದೆಲ್ಲ ಆಗಬೇಕಾದ ಕೆಲಸ. ಮಕ್ಕಳ ಪತ್ರಿಕಾರಂಗದಲ್ಲಿ ತೊಡಗಿಕೊಳ್ಳುವವರು ಪ್ರತ್ಯೇಕವಾದ ವರ್ಗ. ಅವರಿಗೆ ಮಕ್ಕಳ ಮನಃಶಾಸ್ತ್ರ ಕಡ್ಡಾಯವಾಗಿ ಗೊತ್ತಿರಬೇಕು. ಮಕ್ಕಳ ಪತ್ರಿಕೆ ಅಥವಾ ಪತ್ರಿಕೆಯಲ್ಲಿ ಮಕ್ಕಳ ಪುಟಗಳನ್ನು ನೋಡಿಕೊಳ್ಳುವುದು 'ಹೇಗೋ ಒಂದು' ಎಂಬ ಕಾಟಾಚಾರದ ವಿಷಯವಾಗಬಾರದು. ಹಾಗೆ ಪತ್ರಕರ್ತರಿಗೆ ತರಬೇತಿ, ಮಾರ್ಗದರ್ಶನ ಸಿಗಬೇಕು. ಮಕ್ಕಳ ಪತ್ರಿಕೆಯ ಬಗೆಗೆ ಮುಖ್ಯವಾಗಿ ಮಕ್ಕಳನ್ನು ಸಂದರ್ಶಿಸಿ, ಸಮೀಕ್ಷಿಸಿ ಅವರಿಗೆ ಬೇಕಾದಂತೆಯೇ ಪತ್ರಿಕೆಯನ್ನು ರೂಪಿಸಬೇಕು. ಹಿರಿಯರು ಎಷ್ಟೇ ತಿಳಿವಳಿಕೆಯುಳ್ಳವರಾದರೂ ಮಕ್ಕಳು ಪ್ರತಿ ಕ್ಷಣ ಇವತ್ತಿನ ಸಂದರ್ಭಕ್ಕೆ ತಕ್ಕಂತೆ ಅಪ್‌ಡೇಟ್ ಆಗುತ್ತಿರುತ್ತಾರೆ. ಅವರ ಹೊಸತನದ ಮುಂದೆ ಹಿರಿಯರು ಸದಾ ಔಟ್‌ಡೇಟೆಡ್! ಹೀಗಾಗಿ ಮಕ್ಕಳ ಪತ್ರಿಕೆಯನ್ನು ರೂಪಿಸುವವರು ಹಿರಿಯರಾದರೂ ಅದು ಮಕ್ಕಳ ಮನಸ್ಸನ್ನು ಹೊಂದಿರಬೇಕು. ಅಂದರೆ ಮಕ್ಕಳಿಗೆ ಎಲ್ಲ ರೀತಿಯಲ್ಲೂ ಇಷ್ಟ ಆಗಬೇಕು. ಅವರಿಗೆ ಅದು ನೇರವಾಗಿ ಸಂಬಂಧಿಸಿದ್ದಾಗಬೇಕು.

ಮಕ್ಕಳನ್ನು ಹೇಗೆಲ್ಲಾ ಆಕರ್ಷಕವಾಗಿ ತಲಪಬೇಕು? ಮಕ್ಕಳಿಗೆ ಇಂದು ಏನೆಲ್ಲಾ ಅಗತ್ಯವಿದೆ? ಮಕ್ಕಳಿಗೆ ವಿಭಿನ್ನವೂ, ವಿಶೇಷವೂ ಆದ ಹೊಸತೇನನ್ನು ಕೊಡಬಹುದು? ಅವಗಣನೆಗೊಳಗಾದ ಮಕ್ಕಳ ಸಮಸ್ಯೆಗಳು ಯಾವುವು? ಎಂದು ಪ್ರತಿಕ್ಷಣ ತುಡಿಯುವ, ಮಕ್ಕಳ ಲೋಕದ ಪ್ರತಿಯೊಂದನ್ನೂ ಸೂಕ್ಷ್ಮವಾಗಿ ಅವಲೋಕಿಸುವ, ಅನುಭವಿಸುವ, ಮಕ್ಕಳ ಮನಸ್ಸನ್ನು ಪರಕಾಯ ಪ್ರವೇಶ ಮಾಡಿ ಅರಿತುಕೊಳ್ಳಬಲ್ಲ ವಿಶಿಷ್ಟ ಮನೋಧರ್ಮದವರೇ ಮಕ್ಕಳ ಪತ್ರಿಕೆಗಳನ್ನು ಮಾಡಬೇಕು. ಹಾಗೇ ಒಟ್ಟು ಪತ್ರಿಕಾ ಕ್ಷೇತ್ರದಲ್ಲಿ ಮಕ್ಕಳ ಪತ್ರಿಕಾರಂಗ ತನ್ನ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುವ ಮೂಲಕ ವಿಭಿನ್ನವೂ, ಅನನ್ಯವೂ ಆದುದನ್ನು ಸಾಧಿಸಬೇಕಿದೆ. ಸಮಾಜ ಮಕ್ಕಳ ಜಗತ್ತಿನೆಡೆಗೆ ಒಂದಿಷ್ಟು ಗಮನ ಕೇಂದ್ರೀಕರಿಸಿದರೆ ಮಕ್ಕಳ ಪತ್ರಿಕಾ ಕ್ಷೇತ್ರದಲ್ಲಿ ಹೊಸಬೆಳಕು ಮೂಡಲು ಸಾಧ್ಯವಿದೆ.

ಕನ್ನಡ ಮಕ್ಕಳ ಸಾಹಿತ್ಯಲೋಕವೆಂದರೆ....

ಮಕ್ಕಳ ಸಾಹಿತ್ಯವನ್ನು ಯಾರು ಬರೆಯಬೇಕು? ಮಕ್ಕಳಿಗಾಗಿ ಹಿರಿಯರು ಬರೆಯಬೇಕಾ? ಅಥವಾ ಮಕ್ಕಳೇ ತಮಗಾಗಿ ಬರೆದುಕೊಳ್ಳುವುದಾ? ಎಂಬ ಚರ್ಚೆ ಬಹಳಷ್ಟು ಹಳೆಯದು. ಮಕ್ಕಳು ಒಂದು ಹಂತದವರೆಗೆ ಸಾಹಿತ್ಯ ಓದಬೇಕಷ್ಟೇ ಅವರೇನು ಬರೆದಾರು? ಎಂಬುದು ಒಂದು ವಾದವಾದರೆ, ಮಕ್ಕಳ ಸಾಹಿತ್ಯವೆಂಬ ಒಂದು ವರ್ಗೀಕರಣವೇ ತಪ್ಪೆಂಬುದು ಇನ್ನೊಂದು ವಾದ. ನಿಜಕ್ಕೂ ಇಂತಹ ವರ್ಗೀಕರಣ ಬೇಕಿಲ್ಲವೆಂದು ನನಗೂ ಅನ್ನಿಸಿದೆ. ಮಕ್ಕಳ ಬರವಣಿಗೆಯಲ್ಲಿ ಅನುಭವದ ಕೊರತೆ, ಭಾಷಾಪ್ರೌಢಿಮೆ, ವಿಶೇಷ ಕಲ್ಪನಾ ಸಾಮರ್ಥ್ಯ, ವಿಸ್ತರಿತ ಭಾವ ಪ್ರಪಂಚ, ವಿಷಯ ಮಂಡನೆಯ ಶಕ್ತಿ, ತಂತ್ರಗಾರಿಕೆಯ ಕೌಶಲಗಳು ಕಡಿಮೆ ಇರುತ್ತವೆಂಬುದು ಕೆಲ ಹಿರಿಯರ ವಾದ.

ಆದರೆ ಅದಕ್ಕೆ ವ್ಯತಿರಿಕ್ತವಾಗಿ ಮಕ್ಕಳಿಗೆಂದೇ ಹಿರಿಯರು ಬರೆಯುವಾಗ ಮಕ್ಕಳ ಲೋಕವನ್ನು ಅದರ ಆಳಕ್ಕಿಳಿದು ಚಿತ್ರಿಸುವುದು ಅಷ್ಟೇ ಕಷ್ಟವೆಂಬ ಮಾತೂ ಸತ್ಯ. ಏಕೆಂದರೆ

ಹಿರಿಯರು ತಾವೆಷ್ಟೇ ಮಕ್ಕಳ ಮನಸ್ಸನ್ನು ಪರಕಾಯ ಪ್ರವೇಶ ಮಾಡಿ ಬರೆಯುತ್ತೇವೆಂದರೂ ನಮ್ಮ ಮತ್ತು ಮಕ್ಕಳ ಕಾಲಘಟ್ಟ, ಅದರೊಂದಿಗೆ ತಳುಕು ಹಾಕಿಕೊಂಡ ಅವಶ್ಯಕತೆಗಳು, ಸಮಸ್ಯೆಗಳು, ಪರಿಸರ, ಪ್ರತಿಸ್ಪಂದನೆಗಳು ಬೇರೆ ಬೇರೆಯಾಗಿಯೇ ಇರುತ್ತವೆ. ಮಕ್ಕಳ ಮನಸ್ಸು ಸದಾ 'ತಾಜಾ' ಆಗಿರುತ್ತದೆ. ಆ ತಾಜಾತನವನ್ನು ಹೊಂದಲು, ಅಭಿವ್ಯಕ್ತಿಸಲು ಅತ್ಯಂತ ಸೂಕ್ಷ್ಮ ಸಂವೇದನೆಯ ಜೊತೆಗೆ ಮಕ್ಕಳಿಗಿರುವ ಸಹಜ ಮುಗ್ಧತೆಯ ಅವಶ್ಯಕತೆ ಹಿರಿಯರಿಗಿರುತ್ತದೆ. ಪ್ರಯತ್ನ ಪೂರ್ವಕವಾದ ಈ ಕಾಲಘಟ್ಟದ ಅನುಭವ ಸೃಷ್ಟಿ ಒಂದು ಹಂತದವರೆಗೆ ಮಾತ್ರ ಸಹಜವಾಗಬಹುದು. ಆ ನಂತರ ಅದು ಸೋಲುತ್ತದೇನೋ ಕೃತಕವಾಗುತ್ತದೇನೋ ಎಂಬ ಆತಂಕ ಕೆಲ ಸಾಹಿತ್ಯ ವಿಮರ್ಶಕರಿಗಿದೆ. ಆದರೆ ಇದೆಲ್ಲ ತರ್ಕದ ಆಚೆಗೆ ಮಕ್ಕಳಿಗಾಗಿ ಹಿರಿಯರು ಸಾಹಿತ್ಯ ರಚನೆ ಮಾಡುತ್ತಲೇ ಇದ್ದಾರೆ. ಹಾಗೇ ಮಕ್ಕಳೂ ತಮಗಿಷ್ಟ ಬಂದುದನ್ನು ತಮಗಿಷ್ಟ ಬಂದ ರೀತಿಯಲ್ಲಿ ದಾಖಲಿಸುತ್ತಲೇ ಇದ್ದಾರೆ. ಇಷ್ಟಕ್ಕೂ ಇದನ್ನೇ ಬರೆಯಬೇಕು. ಹೀಗೇ ಬರೆಯಬೇಕು, ಇಷ್ಟೇ ಬರೆಯಬೇಕೆಂಬ ಕಟ್ಟುಪಾಡುಗಳನ್ನು ಯಾರಿಗೂ ಹಾಕಬಾರದಲ್ಲವೇ?

ಮಕ್ಕಳ ಸಾಹಿತ್ಯ ಎಷ್ಟೇ ಹೊರಬಂದರೂ, ಇಂದಿನ ಕಾನ್ವೆಂಟ್ ಕಂದಮ್ಮಗಳಿಗೆ ಕನ್ನಡ ಪಠ್ಯವನ್ನೇ ನೆಟ್ಟಗೆ ಓದಲು ಬರೆಯಲು ಬರುವುದಿಲ್ಲ, ಇನ್ನು ಸಾಹಿತ್ಯ ಎಲ್ಲಿ ಓದು – ಬರೆದು ಮಾಡ್ತಾರೆ? ಕನ್ನಡ ನಿಜಕ್ಕೂ ಮರೆತು ಹೋಗ್ತಿದೆ, ಮುಂದಿನ ಕೆಲ ದಶಕಗಳಲ್ಲಿ ಕನ್ನಡ ಸತ್ತೇ ಹೋಗುತ್ತದೆ........ಇತ್ಯಾದಿ ಗೊಣಗುಗಳನ್ನು ಇತ್ತೀಚಿನ ದಿನಗಳಲ್ಲಿ ಕೇಳುತ್ತಲೇ ಇರುತ್ತೇವೆ. ಅದರಲ್ಲೂ ಮಕ್ಕಳ ಸಾಹಿತ್ಯದ ಬಗ್ಗೆ ಪ್ರಸ್ತಾಪವಾಗುವಾಗ ಈ ಮಾತುಗಳು, ಮಕ್ಕಳ ಮೇಲಿನ ಆರೋಪಗಳು ಮತ್ತೂ ಹೆಚ್ಚಾಗಿ ಕೇಳುತ್ತಿರುತ್ತವೆ. ಆದರೆ ಇದರಲ್ಲಿ ಮಕ್ಕಳ ತಪ್ಪೇನಿದೆ? ಅವರಲ್ಲಿ ಕನ್ನಡ– ಸಾಹಿತ್ಯದ ಬಗೆಗೆ ಪ್ರೀತಿ ಮೂಡಿಸಲು ಶೈಕ್ಷಣಿಕವಾಗಿಯೋ, ಅದರಾಚೆಗೋ ನಾವೇನು ಮಾಡುತ್ತಿದ್ದೇವೆ? ಮಕ್ಕಳಲ್ಲಿ ಸದಭಿರುಚಿ ರೂಪಿಸುವುದು ಯಾರ ಹೊಣೆ? ಪೋಷಕರದ್ದೇ, ಶಾಲೆಗಳದ್ದೇ, ಸಾಹಿತಿಗಳದ್ದೇ ಅಥವಾ ಕನ್ನಡ–ಸಾಹಿತ್ಯ ಪರ ಕೆಲಸ ಮಾಡುತ್ತಿರುವ ಸರ್ಕಾರಿ–ಖಾಸಗಿ ಸಂಸ್ಥೆಗಳದ್ದೇ? ಮಕ್ಕಳಲ್ಲಿ ವಾಚನಾಭಿರುಚಿ ಬೆಳೆಸುವ, ಬರೆಯುವ ಆಸಕ್ತಿ ಮೂಡಿಸುವ ಕೆಲಸಗಳು ಎಲ್ಲಿ ನಡೆಯುತ್ತಿವೆ? ಇತರ ಪ್ರದರ್ಶನ ಕಲೆ, ಚಿತ್ರಕಲೆಯನ್ನು ಹೇಳಿಕೊಡಲು ಗುರುಗಳಾದರೂ ಸಿಕ್ಕುತ್ತಾರೆ. ಸಾಹಿತ್ಯದ ಶಿಸ್ತುಬದ್ಧ ಓದು, ಯಾವುದನ್ನು? ಹೇಗೆ ಓದಬೇಕು, ಬರವಣಿಗೆಯ ಕ್ರಮ, ಮಾದರಿಗಳ ಕುರಿತ ಪೂರ್ವ ತಯಾರಿ ಮಾಡಿಸಲು ಯಾರಿದ್ದಾರೆ?

ಇಂದಿನ ಮಕ್ಕಳು ಕನ್ನಡ ಸಾಹಿತ್ಯವನ್ನೆಲ್ಲಿ ಓದುತ್ತಾರೆ, ಬರೆಯುತ್ತಾರೆ ಎಂಬ ಮೂಗೆಳೆತದ ಮಧ್ಯೆಯೂ ನೂರಾರು ಮಕ್ಕಳು ಕನ್ನಡವನ್ನು ಪ್ರೀತಿಸುತ್ತಾ, ಓದುವ– ಬರೆಯುವ ಹವ್ಯಾಸ ರೂಢಿಸಿಕೊಂಡಿದ್ದಾರೆ. ಹಾಗೆ ಎಲ್ಲ ಮಕ್ಕಳಿಗೂ ಸಾಹಿತ್ಯಾಸಕ್ತಿ ಎಲ್ಲಿರಲು ಸಾಧ್ಯ? ಬಲವಂತದಿಂದ ಇಂತಹ ಆಸಕ್ತಿ ಮೂಡಿಸಲೂ ಸಾಧ್ಯವಿಲ್ಲ. ಅದು ಸಾಧುವೂ ಅಲ್ಲ. ಕೊಂಚ ಆಸಕ್ತಿ ಇರುವ ಮಕ್ಕಳು ಎಲ್ಲ ಅಡೆತಡೆಗಳ ಮಧ್ಯೆಯೂ ಪೂರ್ಣ ಪ್ರಮಾಣದಲ್ಲಿ ಅಲ್ಲವಾದರೂ ತಮ್ಮ ಮಿತಿಗಳಲ್ಲೇ ಅದರಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನಂತಾ ದೊಡ್ಡ ನಗರಗಳಲ್ಲಿ ಈ ಪ್ರಮಾಣ ಕಡಿಮೆ ಇದ್ದರೂ ನಾಡಿನಾದ್ಯಂತದ ಪಟ್ಟಣ– ಪುಟ್ಟ ಊರುಗಳಲ್ಲಿ ಪರಿಸ್ಥಿತಿ ತೀರಾ ನಿರಾಶಾದಾಯಕವಾಗಿಯೇನೂ ಇಲ್ಲ ಎಂಬುದು ಸಮಾಧಾನಕರ ವಿಷಯ.

ಮಕ್ಕಳ ಸಾಹಿತ್ಯದ ಕುರಿತು ಆಳವಾಗಿ ಅಧ್ಯಯನ ನಡೆಸಿರುವ ಡಾ. ಆನಂದ್ ಪಾಟೀಲ್‌ರು ತಮ್ಮ, ಮಕ್ಕಳ ಕಥೆಗಳಲ್ಲಿ ವಾಸ್ತವ ಎಂಬ ಲೇಖನದಲ್ಲಿ ಹೀಗೆ ಹೇಳಿದ್ದಾರೆ. 'ಮಕ್ಕಳ ಸಾಹಿತ್ಯದಲ್ಲಿ ವಾಸ್ತವವನ್ನು, ವಾಸ್ತವದ ಹಂದರದಲ್ಲೇ ಮಕ್ಕಳಿಗೆ ನೀಡಿದ ಬಗೆ, ಕನ್ನಡದಲ್ಲಿ ಅದೇಕೋ ತೀರಾ ವಿರಳ. ನಮ್ಮಲ್ಲಿ ಒಟ್ಟು ಮಕ್ಕಳ ಕಥೆಗಳನ್ನು ಅವಲೋಕಿಸಿದರೆ ಅವೆಲ್ಲಾ ಅವಾಸ್ತವಿಕ ನೆಲೆಯ, ಫ್ಯಾಂಟಸಿ ಜಗತ್ತಿನ ಆಕರ್ಷಣೆಯ, ನೀತಿಕಥೆಯ, ಮೋಜಿನ ಪ್ರಾಣಿಕಥೆಯ ಚೌಕಟ್ಟಿಗೆ ಸೀಮಿತಗೊಂಡವೇ ಆಗಿವೆ. ಹತ್ತು ವರ್ಷದ ಆಚೆಗೆ ಮಕ್ಕಳು ಗ್ರಹಿಸಬಲ್ಲ ಬದುಕಿನ ಗಂಭೀರ ಸಂಗತಿಗಳ ಕಡೆಗೆ, ಅವರೇ ದಿನವೂ ಬದುಕುತ್ತಿರುವ ಬದುಕಿನ ಕಡೆಗೆ ನಮ್ಮ ಕಥೆಗಾರರು ಹೊರಳಿದ್ದೇ ಅಪರೂಪ. ನಾನು ದೊಡ್ಡ ಮಕ್ಕಳು ಎನ್ನುತ್ತೇನೆ. (ನಿರ್ದಿಷ್ಟವಾಗಿ ಅದನ್ನು ಹೇಳಲಿಕ್ಕಾಗದಿದ್ದರೂ, ಗ್ರಹಿಕೆಯ ಮೇರೆಯನ್ನು ಹಿಗ್ಗಿಸಿಕೊಂಡವರು). ಅವರಿಗೆ ಕಥೆಯ ಓದನ್ನು ಕನ್ನಡ ಇನ್ನೂ ನೀಡಲೇ ಇಲ್ಲ ಎಂದರೂ ಅತಿಶಯೋಕ್ತಿಯೇನೂ ಅಲ್ಲ. ಕೆಲ ಒಳ್ಳೆಯ ಪ್ರಯತ್ನಗಳಿವೆಯಾದರೂ ತೀರಾ ಕಡಿಮೆ.'

ಹಾಗೇ ಇಂದಿನ ಮಕ್ಕಳು ಬರೆಯುತ್ತಿರುವ ಸೃಜನಶೀಲ ಬರಹಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕೆಲವು ಮಕ್ಕಳ ಬರಹಗಳಲ್ಲಿ ಸಹಜತೆ ಇಲ್ಲದಿರುವುದು ಗೋಚರವಾಗುತ್ತದೆ. ಮಕ್ಕಳ ಮನಸ್ಸಿನ ಮೇಲೆ ಮಾಧ್ಯಮಗಳ ಮುಖಾಂತರ ಆಗುತ್ತಿರುವ ತೀವ್ರ ಪ್ರಭಾವದಿಂದಾಗಿ, ವಯೋಸಹಜ ಮುಗ್ಧತೆ ಮರೆಯಾಗಿ, ವಯಸ್ಸಿಗೆ ಮೊದಲೇ ಅಸಹಜ ಪ್ರೌಢಿಮೆ, ತಿಳಿವಳಿಕೆಗಳು ಮೂಡುತ್ತಿರುವುದರಿಂದ, ಅದು ಸಹಜವಾಗಿ ಅವರ ಬರಹದಲ್ಲೂ ಅಭಿವ್ಯಕ್ತಿಗೊಳ್ಳುತ್ತಿವೆ. ಸುತ್ತಲ ಸಮಾಜದಲ್ಲಿ ವೇಗವಾಗಿ ಹರಡುತ್ತಿರುವ ಕೃತಕತೆ, ಈ ಮಕ್ಕಳ ಕ್ಷೇತ್ರವನ್ನೂ ಪ್ರವೇಶಿಸಿರುವುದು ಢಾಳಾಗಿಯೇ ಕಾಣುತ್ತದೆ. ಜೊತೆಗೆ ಹಿರಿಯರ ಪ್ರಭಾವ, ಕೈವಾಡಗಳೂ ಸೂಕ್ಷ್ಮವಾಗಿ ವೇದ್ಯವಾಗುತ್ತವೆ.

ಚಿತ್ರ – ಬರಹಗಳೆರಡೂ ಅತ್ಯಂತ ಸೂಕ್ಷ್ಮ ಸೃಜನಶೀಲ ಅಭಿವ್ಯಕ್ತಿ ಮಾಧ್ಯಮಗಳು. ಅದು ಸಹಜವೂ ಮುಕ್ತವೂ ಆಗಿದ್ದಾಗ ಅದರಿಂದ ಮಕ್ಕಳ ಮನಸ್ಸಿನ ಗೋಜಲು, ಗೊಂದಲಗಳು ಅಮೂರ್ತ ನೆಲೆಗಳಲ್ಲಿ ಅಸ್ಪಷ್ಟವಾಗಿಯಾದರೂ ದಾಖಲಾಗುತ್ತವೆ. ಹೀಗೆಂದೇ ಮಕ್ಕಳ ಇಂತಹ ಅಭಿವ್ಯಕ್ತಿಗಳು ಅವರ ಮಾನಸಿಕ ಬೆಳವಣಿಗೆಗೆ, ಏರುಪೇರುಗಳಿಗೆ, ದನಿಯಿರದ ಪ್ರಶ್ನೆಗಳಿಗೆ ಪ್ರತಿರೂಪವಾಗಿರುತ್ತವೆ. ಅದು ವೈಯಕ್ತಿಕ ನೆಲೆಯ ದಾಖಲೆಯಾದರೂ ನಿರ್ದಿಷ್ಟ ಸಾಮಾಜಿಕ ಸಂದರ್ಭದಲ್ಲಿ ಅದೂ ಮುಖ್ಯವಾಗುತ್ತದೆ.

ಮಕ್ಕಳ ಸಾಹಿತ್ಯದ ವ್ಯವಸ್ಥಿತ ಮಾರಾಟ ಜಾಲದ ಮುಖಾಂತರ, ಕಡಿಮೆ ದರಗಳಲ್ಲಿ ಗುಣಾತ್ಮಕ ಪುಸ್ತಕಗಳು ಮಕ್ಕಳಿಗೆ ನಾಡಿನ ಎಲ್ಲ ಭಾಗಗಳಲ್ಲಿ ದೊರಕುವಂತಾಗಬೇಕು. ಒಟ್ಟಾರೆ ಸಾಹಿತ್ಯದ ಓದು – ಬರವಣಿಗೆಗೆ ಬೇಕಾದಂತಹಾ ಮಾರ್ಗದರ್ಶನಗಳು 'ಪರೋಕ್ಷ' ನೆಲೆಯಲ್ಲಿ ನಡೆದು, ಮಕ್ಕಳ ಸಹಜ, ನೈಜ ಮನಸ್ಸು ಯಾವ ಬಾಹ್ಯ ಒತ್ತಡಗಳಿಲ್ಲದೇ ಅರಳುವಂತಾ ಪೂರಕ ವಾತಾವರಣ ನಿರ್ಮಾಣವಾಗಬೇಕು.

ತಮಗೆಂದೇ ರಚಿತವಾದ ಸಾಹಿತ್ಯವನ್ನು ಓದಬೇಕಿರುವ ಇಂದಿನ ಮಕ್ಕಳಿಗೆ, ಪುಸ್ತಕವನ್ನು ಹೊರತುಪಡಿಸಿ ಹೊರಗಿನ ಪ್ರಪಂಚದಲ್ಲಿ ಮನಸೂರೆಗೊಳ್ಳುವ ಅನೇಕ ಆಕರ್ಷಣೆಗಳಿವೆ. ಇದನ್ನು ಪರಿಗಣಿಸದೇ ನೋಡಿದರೆ, ಭಾಷಾನೀತಿಯ ವಿಷಯದಲ್ಲಿ ದೃಢ ನಿರ್ಧಾರವನ್ನು

ತೆಗೆದುಕೊಳ್ಳದ ಸರ್ಕಾರದ ತಪ್ಪು ನೀತಿ ಮತ್ತು ನ್ಯಾಯಪೀಠಗಳ ವ್ಯತಿರಿಕ್ತ ತೀರ್ಪುಗಳಿಂದಾಗಿ ಇಂದು ರಾಜ್ಯದ ಅರ್ಧದಷ್ಟು ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ಓದುತ್ತಿದ್ದಾರೆ. ಈ ಮಕ್ಕಳು ಕನ್ನಡ ಸಾಹಿತ್ಯವನ್ನು ಓದುವುದೇ ಅಪರೂಪ. ಮನೆಯಲ್ಲಿ ಕನ್ನಡ ಸಾಹಿತ್ಯ ಪರ ವಾತಾವರಣವಿದ್ದು ಆಸಕ್ತಿ ಇರುವ ಮಕ್ಕಳಿಗೆ, ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಸಾಹಿತ್ಯಾಸಕ್ತ ಮಕ್ಕಳಿಗೆ, ಅಥವಾ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಲು ಬಯಸುವ ಚಿಕ್ಕ ಪ್ರಮಾಣದ ಪೋಷಕರಿಗೆ ಉತ್ಕೃಷ್ಟ, ಸೃಜನಶೀಲ ಮಕ್ಕಳ ಸಾಹಿತ್ಯ ಕೃತಿಗಳು ಲಭ್ಯವಾಗುತ್ತಿವೆಯೇ? ಎಂದು ಹುಡುಕಲು ಹೊರಟರೆ..... ಮಕ್ಕಳ ಮನಸಿನಾಳಕ್ಕೆ ಇಳಿದು ಅವರಿಗೆ ಸಂತೋಷ ನೀಡುವಂತ, ಅವರ ಮನಸ್ಸನ್ನು ಅರಳಿಸುವಂತ ಸಾಹಿತ್ಯ ರಚನೆಯಾಗುತ್ತಿರುವುದು ತೀರಾ ಕಡಿಮೆ. ಹಿಂದಿನ ಸಾಹಿತಿಗಳು ಹಿರಿಯರಿಗಲ್ಲದೇ, ಮಕ್ಕಳ ಸಾಹಿತ್ಯವನ್ನೂ ವಿಪುಲವಾಗಿ ರಚಿಸಿದ ನಿದರ್ಶನಗಳಿವೆ. ಆದರೆ ಇಂದು ಮಕ್ಕಳ ಸಾಹಿತ್ಯವನ್ನು–ಸಾಹಿತಿಯನ್ನು ಮುಖ್ಯವಾಹಿನಿಯಲ್ಲಿ ಗುರುತಿಸದೇ ಉಪೇಕ್ಷಿಸಲಾಗುತ್ತಿದೆ. ಮಕ್ಕಳ ಸಾಹಿತಿಗೂ ಈ ಕೀಳರಿಮೆ ಕಾಡುತ್ತಿದೆ. ಹೀಗೆಂದೇ ಇಂದು ಹಿರಿಯರಿಗಾಗಿ ಬರೆಯುವ ಸಾಹಿತಿಗಳು ಮಕ್ಕಳಿಗೆಂದು ಬರೆಯುತ್ತಿರುವುದು ತೀರಾ ಅಪರೂಪ.

ಉಪದೇಶಕಾತ್ಮಕ, ಘೋಷಣೆಯಂತಹ, ಆದರ್ಶ–ನೀತಿ ಬೋಧನೆಯ ಮಾದರಿಯ ಜನಪ್ರಿಯ ಸಾಹಿತ್ಯ ವಿಪುಲವಾಗಿ ಮಾರುಕಟ್ಟೆಯಲ್ಲಿದ್ದರೂ ಅವು ಮಕ್ಕಳ ಮನಸ್ಸನ್ನು ಮುಟ್ಟುವಂತವಲ್ಲ. ಈ ಮಧ್ಯೆ ಕಡಿಮೆ ಪ್ರಮಾಣದಲ್ಲಿಯಾದರೂ, ಸೃಜನಶೀಲವೆನಿಸುವಂಥಾ, ಉತ್ತಮ ಮಕ್ಕಳ ಕೃತಿಗಳು ಹೊರ ಬಂದರೂ ಅದರ ಪರಿಚಯವಾಗಲಿ, ವಿಮರ್ಶೆಯಾಗಲಿ ಪತ್ರಿಕೆಗಳಲ್ಲಿ ಬರುತ್ತಿಲ್ಲ. ಗ್ರಂಥಾಲಯದ ಸಗಟು ಖರೀದಿಗೆ ನಿರ್ದಿಷ್ಟ ಪುಟ ಸಂಖ್ಯೆಯ ಹೊತ್ತಿಗೆಯೇ ಬೇಕಿರುವುದರಿಂದ, ಚಿಕ್ಕ ಗಾತ್ರದ ಮಕ್ಕಳ ಪುಸ್ತಕಗಳು ಮುದ್ರಣ ಮತ್ತು ಮಾರಾಟದ ಜಾಲದಿಂದ ತಿರಸ್ಕರಿಸಲ್ಪಡುತ್ತವೆ. ನಮ್ಮಲ್ಲಿ ಹಿರಿಯರ ಪುಸ್ತಕಗಳಿಗೇ ಮಾರಾಟದ ವ್ಯವಸ್ಥಿತ ಜಾಲವಿಲ್ಲದಿರುವುದರಿಂದ ಒಂದೆಡೆ ಮುದ್ರಣ ಅಥವಾ ಬಿಡುಗಡೆಯಾದ ಪುಸ್ತಕ ಇನ್ನೊಂದೆಡೆ ಸಿಕ್ಕುವುದಿಲ್ಲ. ತಿಳಿಯುವುದೂ ಇಲ್ಲ!

ಮಕ್ಕಳ ಸಾಹಿತ್ಯ ಹಾಗೂ ಸಂಸ್ಥೆಗಳು

– ಡಾ. ರಾಜೇಂದ್ರ ಎಸ್. ಗಡಾದ

ಹತ್ತೊಂಭತ್ತನೇಯ ಶತಮಾನದ ಉತ್ತರಾರ್ಧದಲ್ಲಿ ಪಾಶ್ಚಾತ್ಯರ ಆಗಮನದಿಂದ ಭಾರತೀಯರ ಬೌದ್ಧಿಕ ಮತ್ತು ಭೌತಿಕ ಬದುಕಿನಲ್ಲಿ ಹೊಸಗಾಳಿ ಬೀಸಿದಂತೆ ಸಾಹಿತ್ಯದಲ್ಲಿಯೂ ಹೊಸಗಾಳಿ ಬೀಸಿ ನವೋದಯ ಸಾಹಿತ್ಯದಿಂದ ಆರಂಭಗೊಂಡು ಹೊಸಗನ್ನಡ ಸಾಹಿತ್ಯವು ಹಲವು ರೂಪಗಳಲ್ಲಿ ಬೆಳೆದು ಬಂದಿತು. ಭಾವಗೀತೆ, ಕತೆ, ಕಾದಂಬರಿ, ನಾಟಕ, ಪ್ರವಾಸ ಸಾಹಿತ್ಯ, ಜೀವನ ಸಾಹಿತ್ಯ ಎಂದು ಬೆಳೆದು ಬಂದ ಹತ್ತು ಹಲವು ಪ್ರಕಾರಗಳಲ್ಲಿ "ಮಕ್ಕಳ ಸಾಹಿತ್ಯವೂ" ಒಂದು.

ವಿಶ್ವ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯ ಕಾಲ್ಪನಿಕ, ಅದ್ಭುತ, ರಮ್ಯ, ಭಯಾನಕ, ಭೀಕರ ಹಾಗೂ ವಿಚಿತ್ರ ಚಮತ್ಕಾರಪೂರ್ಣ, ಘಟನಾವಳಿಯಲ್ಲಿಯೇ ರಚಿತವಾಗಿದೆ. ಅರೇಬಿಯನ್ ನೈಟ್ಸ್, ಗಲಿವರ್ ಯಾತ್ರೆ, ಪಂಚತಂತ್ರ, ಬೃಹತ್ಕಥೆ ಮೊದಲಾದ ಕೃತಿಗಳು ಮಕ್ಕಳ ಸಾಹಿತ್ಯದ ಆಧುನಿಕ ವಿಧಾನ ಹಾಗೂ ವಿಷಯ ವಸ್ತುಗಳಿಂದ ತೀರ ಭಿನ್ನವಾಗಿರುವುದರಿಂದ ಅವನ್ನು ಮನುಷ್ಯ ಕುಲದ ಸಂಧಿಕಾಲದ ಸಾಮಾನ್ಯ ಕೃತಿಗಳೆಂದರೆ ತಪ್ಪಾಗಲಾರದು. ಮಕ್ಕಳ ಸಾಹಿತ್ಯದ ಆಧುನಿಕ ಕಲ್ಪನೆ ಬೆಳೆದು ಬಂದದ್ದು ಬಹುತೇಕ ಮುದ್ರಣ ಕಲೆ ಆರಂಭವಾದ ಮೇಲೆಯೇ. ಅಲ್ಲಿಯವರೆಗೂ ಮಕ್ಕಳ ಸಾಹಿತ್ಯಕ್ಕೆ ಸ್ವತಂತ್ರ ಸ್ವರೂಪವೇ ಇರಲಿಲ್ಲವೆನಿಸುತ್ತದೆ. ಇಂದು ನಾವು ಕರೆಯುವ ಮಕ್ಕಳ ಸಾಹಿತ್ಯ ಕಾಣಿಸಿಕೊಂಡದ್ದು ಇಂಗ್ಲಿಷ್ ಮಕ್ಕಳ ಸಾಹಿತ್ಯದ ಸಂಪರ್ಕದಿಂದ ಎನ್ನಬಹುದು.

ಮಕ್ಕಳ ಮನಸ್ಸನ್ನು ಅರಳಿಸಿ ಕುತೂಹಲವನ್ನು ಕೆರಳಿಸಿ ಅವರದೇ ಬೌದ್ಧಿಕ ಮಟ್ಟದಲ್ಲಿ ಚಿಂತನಶೀಲರಾಗುವಂತೆ ಮಾಡುವ, ತಮ್ಮ ಸುತ್ತಲಿನ ಪ್ರಪಂಚವನ್ನು ಅರಿಯುವಂತೆ ಮಾಡುವ ಹಾಗೂ ಅವರನ್ನು ಸಂತೋಷ ಸಾಗರದಲ್ಲಿ ತೇಲುವಂತೆ ಮಾಡುವ ಯಾವುದೇ ಬರವಣಿಗೆಯನ್ನು "ಮಕ್ಕಳ ಸಾಹಿತ್ಯ"ವೆಂದು ಕರೆಯುತ್ತೇವೆ. ಮಾನವನ ಬೆಳವಣಿಗೆಯಲ್ಲಿ ಶೈಶವ, ಬಾಲ್ಯ, ಕೌಮಾರ್ಯ ಎಂಬ ಮೂರು ಮೊದಲ ಹಂತಗಳಿರುವಂತೆ ಮಕ್ಕಳ ಸಾಹಿತ್ಯದಲ್ಲಿಯೂ ಇವುಗಳನ್ನು ಆಧರಿಸಿ ಮೂರು ಹಂತಗಳಿವೆ. ಈ ಹಿನ್ನೆಲೆಯಲ್ಲಿಯೇ ಶಿಶುವಿಹಾರಗಳಲ್ಲಿರುವ ಆರಕ್ಕಿಂತ ಕಡಿಮೆ ವಯೋಮಾನದ ಮಕ್ಕಳಿಗಾಗಿ ರಚಿತವಾದ ಸಾಹಿತ್ಯಕ್ಕೆ "ಶಿಶು ಸಾಹಿತ್ಯ"ವೆಂದೂ,

ಪ್ರೌಢ ಪ್ರಾಥಮಿಕದವರೆಗಿನ ಮಕ್ಕಳಿಗೆ ಸಂಬಂಧಿಸಿದ ಸಾಹಿತ್ಯಕ್ಕೆ 'ಮಕ್ಕಳ ಸಾಹಿತ್ಯ'ವೆಂದು ನಾವು ಕರೆಯುತ್ತೇವೆಯಾದರೂ ಒಟ್ಟಾರೆಯಾಗಿ ಶಿಶುವಿಹಾರದಿಂದ ಪ್ರೌಢಶಾಲಾ ಹಂತದವರೆಗೆ ಕಿರಿಯರಿಗಾಗಿ ರಚಿತವಾದ ಸರಳ ಸಾಹಿತ್ಯವೇ 'ಮಕ್ಕಳ ಸಾಹಿತ್ಯ'ವಾಗಿದೆ. ಶಿಶು ಸಾಹಿತ್ಯ, ಬಾಲ ಸಾಹಿತ್ಯ, ಬಾಲ ವಾಙ್ಮಯ, ಮಕ್ಕಳ ಸಾಹಿತ್ಯ ಈ ಎಲ್ಲ ಪದಗಳು ಸಮಾನಾರ್ಥವುಳ್ಳವು. ಕನ್ನಡ ಸಾಹಿತ್ಯದಲ್ಲಿ ಈ ಪ್ರಕಾರಕ್ಕೆ 'ಮಕ್ಕಳ ಸಾಹಿತ್ಯ' ಎಂಬ ಪದದ್ವಯ ಬಹಳ ಪ್ರಚಾರದಲ್ಲಿದೆ. ಮಕ್ಕಳು ತಮಗಾಗಿ ಬರೆದ ಸಾಹಿತ್ಯವೂ 'ಮಕ್ಕಳ ಸಾಹಿತ್ಯ' ಮಕ್ಕಳಿಗಾಗಿ ಹಿರಿಯರು ಬರೆದು ಸಾಹಿತ್ಯವೂ 'ಮಕ್ಕಳ ಸಾಹಿತ್ಯ' ಎಂದೆನಿಸುತ್ತದೆ.

ಆಧುನಿಕ ಮಕ್ಕಳ ಸಾಹಿತ್ಯದ ಕೃಷಿ ಆರಂಭವಾದ ೧೯ನೇ ಶತಮಾನದ ಮಧ್ಯ ಭಾಗದಲ್ಲಿ 'ಮಕ್ಕಳ ಸಾಹಿತ್ಯ' ಎಂಬ ಒಂದು ಪ್ರತ್ಯೇಕ ವಿಭಾಗ ಕನ್ನಡವೂ ಸೇರಿದಂತೆ ಭಾರತೀಯ ಇತರ ಭಾಷೆಗಳಲ್ಲಿ ಕಂಡು ಬಂದುದೇ ಆಂಗ್ಲರ ಆಳ್ವಿಕೆಯ ಕಾಲದಿಂದಲೇ ಎಂಬುದಂತೂ ಸ್ಪಷ್ಟ ಆ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿತು. ಅಷ್ಟೊತ್ತಿಗಾಗಲೇ ವಿದೇಶದಿಂದ ಭಾರತಕ್ಕೆ ಬಂದು ನೆಲೆಸಿದ ಕ್ರೈಸ್ತ ಮಿಶನರಿಗಳು ಪ್ರತ್ಯೇಕ ಶಾಲೆಗಳನ್ನು ತೆರೆಯಲಾರಂಭಿಸಿದರು. ಜರ್ಮನಿಯ ಬಾಸೆಲ್‌ನಿಂದ ಮಂಗಳೂರಿಗೆ ಬಂದು ನೆಲೆಸಿದ ಕ್ರೈಸ್ತ ಮಿಶನರಿಗಳು ಅಲ್ಲಿ "ಬಾಸೆಲ್ ಮಿಶನ್ ಸಂಸ್ಥೆ" ಯನ್ನು ಸ್ಥಾಪಿಸಿದರು. ಆ ಸಂಸ್ಥೆಯಿಂದಲೇ ಕನ್ನಡದ ಮಕ್ಕಳಿಗಾಗಿ ಶಿಲಾಯಂತ್ರದ "ಬಾಲ ಬೋಧಿನಿ' ಎಂಬ ಕನ್ನಡದ ಮೊಟ್ಟ ಮೊದಲಿನ ಅಚ್ಚಿನ ಪುಸ್ತಕವು ಶಾಲಾ ಮಕ್ಕಳಿಗೆ ಲಭ್ಯವಾಯಿತು. ಮುಂದೇ ಇದೇ ಸಂಸ್ಥೆ ೧೯೪೨–೫೮ ರ ಅವಧಿಯಲ್ಲಿ ಪಾಠಶಾಲೆಗಳಿಗಾಗಿ ಅಕ್ಷರಮಾಲೆ, ಬಾಲ ಶಿಕ್ಷೆ, ಬಾಲ ವ್ಯಾಕರಣ, ಭೂಗೋಳ, ವಾಚನ ಪುಸ್ತಕ ಇತ್ಯಾದಿಗಳನ್ನು ಸಹ ಶಿಲಾಯಂತ್ರದ ಮೂಲಕ ಅಚ್ಚು ಹಾಕಿಸಿತು. ಕೆಲವು ತಿಂಗಳುಗಳ ಬಳಿಕ ಮಿಶನ್‌ಪ್ರೆಸ್ ಸ್ಥಾಪನೆಗೊಂಡಿತು. ಮಕ್ಕಳಿಗಾಗಿ ಪಠ್ಯಪುಸ್ತಕಗಳ ಜೊತೆಯಲ್ಲಿ ಬೈಬಲ್ ಆಧಾರಿತ ೩೩ ಪುಸ್ತಕಗಳನ್ನು ಪ್ರಕಟಿಸಿತು. ಹೀಗಾಗಿ ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಪ್ರಸಾರವನ್ನು ಪ್ರಕಾಶನವನ್ನು ಆರಂಭ ಮಾಡಿದ ಕೀರ್ತಿ ಮೊಟ್ಟ ಮೊದಲಿಗೆ ಬಾಸೆಲ್ ಮಿಶನ್ ಸಂಸ್ಥೆಗೆ ಸಲ್ಲುತ್ತದೆ.

ಇತ್ತ ಮುಂಬೈ–ಕರ್ನಾಟಕದಲ್ಲಿ ವಿದ್ಯಾ ಇಲಾಖೆಯು ಆರಂಭವಾಗಿ ಮಕ್ಕಳ ಕ್ರಮಿಕ ಪುಸ್ತಕಗಳು ಅಷ್ಟೊತ್ತಿಗಾಗಲೇ ಬರತೊಡಗಿದವು. ಮಕ್ಕಳಿಗಾಗಿ ಒಂದು ಪ್ರತ್ಯೇಕವಾದ ಸಾಹಿತ್ಯ ಇರಬೇಕೆಂಬ ಅನಿಸಿಕೆ ಬಲಗೊಳ್ಳತೊಡಗಿತು. ಉಪಶಿಕ್ಷಣಾಧಿಕಾರಿಗಳಾಗಿ ನೇಮಕಗೊಂಡ ಡೆಪ್ಯೂಟಿ ಚೆನ್ನಬಸಪ್ಪನವರು ಕ್ರಿ.ಶ. ೧೮೬೫ರಲ್ಲಿ "ಮಠಪತ್ರಿಕೆ" ಎಂಬ ಹೆಸರಿನ ಮಾಸಿಕವನ್ನು ತೆರೆದರು. (ಇದು ಇಂದಿಗೂ ಸಹ "ಜೀವನ ಶಿಕ್ಷಣ" ಎಂಬ ಹೆಸರಿನಿಂದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(DIET)ಯಿಂದ ಪ್ರಕಟಗೊಳ್ಳುತ್ತಲಿದೆ.) ಇದರಿಂದ ಕನ್ನಡ ಭಾಷೆ ಹಾಗೂ ಶಿಕ್ಷಣ ಮಕ್ಕಳ ಸಾಹಿತ್ಯ ಪ್ರಸಾರಕ್ಕೆ ದೊಡ್ಡ ಪ್ರಚಾರ ಸಿಕ್ಕಿದಂತಾಯಿತು. ಪ್ರಾಥಮಿಕ ಶಿಕ್ಷಣದ ಕಡೆಗೆ ಸರಕಾರದ ಅಧಿಕ ಗಮನ ಸಂದಂತೆ ಶಿಕ್ಷಣ ಕ್ರಮವು ದಿನದಿನಕ್ಕೆ ಹೆಚ್ಚು ಹೆಚ್ಚು ವ್ಯವಸ್ಥಿತವಾಗುತ್ತ ಬಂದಿತು. ಮಕ್ಕಳ ಭಾಷಾ ಶಿಕ್ಷಣಕ್ಕಾಗಿ ಪಠ್ಯ ಪುಸ್ತಕಗಳ ರಚನೆಯೂ ಭರದಿಂದ ಸಾಗತೊಡಗಿತು. ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿದ್ದ ವಿದ್ವಾಂಸರನೇಕರು ಮಕ್ಕಳಿಗಾಗಿ ಪಠ್ಯಪುಸ್ತಕ ರಚನೆಗೆ ಕೈ ಹಾಕಿದರು. ಆಗಲೇ ಸರಳ ಶೈಲಿಯ ಕತೆಗಳು, ತಿಳಿವು ನೀಡುವ ಪಾಠಗಳು, ಶ್ರಾವ್ಯ ಗುಣವುಳ್ಳ ಪದ್ಯಗಳು ಎಳೆಯರಿಗಾಗಿ ಬರೆಯಲ್ಪಟ್ಟವು. ಪಠ್ಯಪುಸ್ತಕಗಳ

ರಚನೆಯೊಂದಿಗೆ ಸರ್ಕಾರ ಮಕ್ಕಳ ಸಾಹಿತ್ಯ ಸೌಧಕ್ಕೂ ಭದ್ರ ಬುನಾದಿ ಹಾಕಿದಂತಾಯಿತು.

ಈ ಸಂದರ್ಭದಲ್ಲಿ ಕನ್ನಡನಾಡಿನಲ್ಲಿ ಉಂಟಾದ ಜನಜಾಗೃತಿ ಶೈಕ್ಷಣಿಕ ಪ್ರಸಾರ ಸಾಹಿತ್ಯ ಚಟುವಟಿಕೆಗಳು ಅಲ್ಲಲ್ಲಿ ಮಕ್ಕಳ ಮಂಟಪಗಳು, ಶಿಶು ಸಾಹಿತ್ಯ ಮಾಲೆಗಳು ತಲೆಯೆತ್ತಿದವು. ಹಲಕೆಲವು ಪ್ರಕಾಶಕರು ಮಕ್ಕಳ ಸಾಹಿತ್ಯ ಪ್ರಕಟನೆಗೆ ಮುಂದೆ ಬಂದರು. ೧೯೨೧ ರಲ್ಲಿ ಪಂಜೆ ಮಂಗೇಶರಾಯರು ಮಕ್ಕಳ ಸಾಹಿತ್ಯಕ್ಕೆ ಮೀಸಲಾದ ಬಾಲ ಸಾಹಿತ್ಯ ಮಂಡಲ ಎಂಬ ಪ್ರಕಾಶನ ಸಂಸ್ಥೆಯನ್ನು ಮಂಗಳೂರಿನಲ್ಲಿ ಸ್ಥಾಪಿಸಿ, ಬಾಲ ಸಾಹಿತ್ಯಕ್ಕೆ ಮಾದರಿ ಎನಿಸಬಹುದಾದ ಹಲವಾರು ಕೃತಿರತ್ನಗಳನ್ನು ಬೆಳಕಿಗೆ ತಂದರು. ಎಳೆಯರ ಅನುಭವ ಪ್ರಪಂಚಕ್ಕೆ ಪರಿಚಿತವಾದ ವಸ್ತುಗಳ ಆಯ್ಕೆ, ಸರಳ ಶೈಲಿಯ, ಸರಳ ಸಂಭಾಷಣೆ, ಪುನರುಕ್ತಿಗಳ ಪರಿಣಾಮಕಾರಿ ಬಳಕೆ, ದೊಡ್ಡ ಅಕ್ಷರಗಳು, ಅಂದವಾದ ಮುದ್ರಣ, ಸಂದರ್ಭೋಚಿತವಾದ ಚಿತ್ರಗಳು ಇವು ಪಂಜೆಯವರ ಬಾಲ ಸಾಹಿತ್ಯ ಕೃತಿಗಳಲ್ಲಿ ಎದ್ದುತೋರುವ ಗುಣ ವಿಶೇಷಗಳಾಗಿದ್ದವು. ಇದೇ ಹೊತ್ತಿಗೆ ಸುಬೋಧ ರಾಮರಾಯರು "ಸುಬೋಧ ಕುಸುಮಾಂಜಲಿ" ಎಂಬ ಗ್ರಂಥ ಪ್ರಕಾಶನ ಸಂಸ್ಥೆಯನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಅದರ ಮೂಲಕ ಆದರ್ಶ ಪುರುಷರ, ಪೌರಾಣಿಕ ವ್ಯಕ್ತಿಗಳ, ನಾಯಕರ ಜೀವನ ಚರಿತ್ರೆಗಳನ್ನು ಸುಂದರವಾಗಿ ಪ್ರಕಟಿಸಿದರು. ಸಣ್ಣ ಸಣ್ಣ ವಾಕ್ಯಗಳನ್ನು ವಿಪುಲ ಮಾಹಿತಿಗಳನ್ನು, ಸುಲಭವಾಗಿ ಓದಿಸಿಕೊಂಡು ಹೋಗುವಂತಹ ಗುಣಗಳನ್ನು ಈ ಪುಸ್ತಕಗಳನ್ನು ಹೊಂದಿದ್ದರಿಂದ ಈ ಸಂಸ್ಥೆಯು ಬಹುಬೇಗನೇ ಪ್ರಸಿದ್ಧಿಯನ್ನು .ಪಡೆಯಿತು. ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯ ಕಾರ್ಯಗಳಲ್ಲಿ ಅಪ್ರತಿಮ ಕಾರ್ಯ ಮಾಡಿದ ಹರ್ಡೇಕರ ಮಂಜಪ್ಪನವರು ೧೯೩೩ ರಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕ ಸಾಹಿತ್ಯ ಮಾಲೆಯನ್ನು ಪ್ರಾರಂಭಿಸಿದರು. ವರ್ಷಕ್ಕೆ ೧೬ ಚಿಕ್ಕ ಚಿಕ್ಕ ಪುಸ್ತಕಗಳನ್ನು ಹೊರ ತರುವ ನಿರ್ಧಾರ ಕೈಗೊಂಡರು. ಬುದ್ಧಿಯ ಮಾತು, ಪುಲಕೇಶಿ ಚರಿತ್ರೆ, ಸುಗ್ಗಲಾದೇವಿಯ ಕತೆ ಮುಂತಾದ ೧೬ ಪುಸ್ತಕಗಳನ್ನು ಕೇವಲ ಒಂದೂವರೆ ರೂಪಾಯಿ ಬೆಲೆಗೆ ಒದಗಿಸುವ ಯೋಜನೆಯನ್ನು ಆರಂಭಿಸಿದರು. ಬುದ್ಧಿಯ ಮಾತು ೧೭ ಸಲ ಪುನರ್ ಮುದ್ರಣವಾದುದನ್ನು ನೆನೆದರೆ ಅವರ ಮಕ್ಕಳ ಸಾಹಿತ್ಯದ ಜನಪ್ರಿಯತೆಯ ಅರಿವಾಗುವುದು. ಕೆಲವೊಂದು ಪುಸ್ತಕಗಳ ವಿಷಯ ಪ್ರೌಢವಾಗಿದ್ದರೂ ಸರಳ ಶೈಲಿ, ನೇರ ನಿರೂಪಣೆ, ಚಿಕ್ಕ ಚಿಕ್ಕ ವಾಕ್ಯಗಳುಳ್ಳ ಈ ಕ್ರಮಗಳು ಮಕ್ಕಳು ಓದಲು ಅರ್ಹವಾಗಿದ್ದವು. ಹಿರಿಯರ ಆದರ್ಶ, ನೀತಿ ಮಕ್ಕಳಲ್ಲಿ ಒಡಮೂಡಲೆಂಬುದೇ ಮಂಜಪ್ಪನವರ ಆಶಯವಾಗಿತ್ತು. ಅಂದವಾದ ಮುದ್ರಣ, ಉತ್ತಮ ಹಾಳೆ, ದಪ್ಪ ಅಕ್ಷರಗಳು ಮಕ್ಕಳ ಪುಸ್ತಕಕ್ಕೆ ಅವಶ್ಯವೆಂಬುದನ್ನು ಅವರು ಚೆನ್ನಾಗಿ ಅರಿತಿದ್ದರು.

ಆರ್. ಕಲ್ಯಾಣಮ್ಮ ಅವರು ಬೆಂಗಳೂರಿನಲ್ಲಿ "ಮಕ್ಕಳ ಕೂಟ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರಲ್ಲದೇ ತಾವು ಹೊರಡಿಸುತ್ತಿದ್ದ ಪತ್ರಿಕೆಯಲ್ಲಿ "ಮಕ್ಕಳ ಬಾವುಟ" ಎಂಬ ಪ್ರತ್ಯೇಕ ವಿಭಾಗವನ್ನೇ ತೆರೆದರು. ಟಿ.ಎಂ.ಆರ್. ಸ್ವಾಮಿ ಅವರು ಕನ್ನಡದ ಕಣಜ ಗ್ರಂಥ ಮಾಲೆ ಸ್ಥಾಪಿಸಿ ಅದರ ಮೂಲಕ ಮಕ್ಕಳಿಗೆ ವೈವಿಧ್ಯಪೂರ್ಣ ಕೃತಿಗಳನ್ನು ಪ್ರಕಟಿಸಿ ಅಂದಿನ ಬರಹಗಾರರಿಗೆ ಸ್ಫೂರ್ತಿ ಹಾಗೂ ಪ್ರೋತ್ಸಾಹಗಳನ್ನು ನೀಡಿದರು. ಮಕ್ಕಳ ಶಿಕ್ಷಣ, ಮನೋವಿಕಾಸ, ಮಕ್ಕಳ ಮನರಂಜನೆ ಇವುಗಳನ್ನೇ ಧ್ಯೇಯವಾಗಿಟ್ಟುಕೊಂಡು ತಮ್ಮ ಮನೆಯಲ್ಲಿಯೇ ಬಿ.ಶ್ರೀ. ಪಾಂಡುರಂಗರಾಯರು "ಮಕ್ಕಳ ಮಂಟಪ" ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ

ಅನೇಕ ಚಟುವಟಿಕೆಗಳನ್ನು ಹಮ್ಮಿಕೊಂಡರು. ಕಡಲ ತೀರ ಭಾರ್ಗವ ಖ್ಯಾತಿಯ ಡಾ. ಶಿವರಾಮ ಕಾರಂತರು ಮಕ್ಕಳಿಗಾಗಿ ಮತ್ತು ಮಕ್ಕಳ ಸಾಹಿತ್ಯ ಬೆಳವಣಿಗೆಗಾಗಿ ವಿವಿಧ ಪ್ರಯೋಗಗಳನ್ನು ಮಾಡಿದರು. ೧೯೧೩ ರಲ್ಲಿ ಅವರು ಉಪ್ಪಿನಂಗಡಿಯಲ್ಲಿ ಪ್ರಪ್ರಥಮವಾಗಿ 'ಮಕ್ಕಳಕೂಟ' ಎಂಬ ಸಂಸ್ಥೆಯನ್ನು ಕಟ್ಟಿ ಮಕ್ಕಳ ಕುತೂಹಲ ಆಸಕ್ತಿ ಪ್ರತಿಭೆಗಳ ಮುಕ್ತ ಪ್ರದರ್ಶನಕ್ಕೆ ಅವಕಾಶ ಒದಗಿಸಿದರು. ಅನೇಕ ಮಕ್ಕಳ ನಾಟಕಗಳನ್ನು ಬರೆದು ಮಕ್ಕಳಿಂದ ಪ್ರದರ್ಶಿಸಿದರು. ಕ್ರಿ. ಶ. ೧೯೩೦ ರಷ್ಟು ಪೂರ್ವದಲ್ಲಿಯೇ ಮಂಗಳೂರು, ಪುತ್ತೂರು, ಉಡುಪಿ, ಕಾರ್ಕಳ ಮುಂತಾದ ತಾಲೂಕಿನಲ್ಲಿಯ ಎಲ್ಲ ಪ್ರಾಥಮಿಕ ಶಾಲೆಗಳನ್ನು ಸಂದರ್ಶಿಸಿ ಆ ಶಾಲೆಯ ಸ್ಥಿತಿಗತಿ, ಶಿಕ್ಷಣ ಸ್ವರೂಪ, ಹಳ್ಳಿಯ ಶಾಲೆಗಳು ಮತ್ತು ಅಲ್ಲಿನ ವಿದ್ಯಾರ್ಥಿಗಳು ಎದುರಿಸಬೇಕಾಗಿದ್ದ ಸಮಸ್ಯೆಗಳ ಬಗ್ಗೆ ವಿವರವಾದ ಲೇಖನಗಳನ್ನು "ನಮ್ಮ ಶಾಲೆಗಳು" ಲೇಖನ ಮಾಲೆಯಡಿ "ಸ್ವದೇಶಾಭಿಮಾನಿ" ಪತ್ರಿಕೆ ಮೂಲಕ ಪ್ರಕಟಿಸಿದರು.

ಹೈಸ್ಕೂಲ್ ಮಟ್ಟದ ಮಕ್ಕಳನ್ನು ಒಟ್ಟುಗೂಡಿಸಿ ಶಾಲಾ ರಜಾ ದಿನಗಳಲ್ಲಿ ಅವರನ್ನು ಕೂಡಿಕೊಂಡು ಕಾಲ್ನಡಿಗೆಯಿಂದಲೇ ಹಳ್ಳಿಹಳ್ಳಿಗೂ ಸಂದರ್ಶಿಸಿ ಸಮಾಜ ಸೇವಾ ಕಾರ್ಯಗಳನ್ನು, ಜನತಾ ಶಿಕ್ಷಣ ಕ್ಯಾಂಪ್‌ಗಳನ್ನು ಆರಂಭಿಸಿದರು. ಗ್ರಾಮ ನೈರ್ಮಲ್ಯ, ಆರೋಗ್ಯದ ಮಹತ್ವ, ಜಾತೀಯತೆ, ಕುರುಡು ಪದ್ಧತಿಗಳಿಂದಾಗುವ ಹಾನಿಗಳು, ಮದ್ಯಪಾನ ಮುಂತಾದ ದುಶ್ಚಟಗಳ ನಿವಾರಣೆಯ ಅಗತ್ಯ ಮುಂತಾದ ಹಲವಾರು ಸಾಮಾಜಿಕ ಸೇವೆಗಳನ್ನು ಸಲ್ಲಿಸುವ ಮೂಲಕ ಶಾಲಾ ಬಾಲಕರಿಗಾಗಿ ಈ ವಿಷಯಗಳ ಕುರಿತಾದ ಅನೇಕ ನಾಟಕಗಳನ್ನು ಬರೆದು ಆಡಿಸಿದರು. ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಶಾಲಾ ಶಿಕ್ಷಣದಲ್ಲಿ ವಿನೂತನ ಮಾದರಿಯ ಪ್ರಯೋಗಗಳನ್ನು ನಡೆಯಿಸಿದ ಕಾರಂತರು ಮಕ್ಕಳ ಕೂಟದ ಮೂಲಕ ಪ್ರತಿಭೆಗಳಿಗೆ ಉತ್ತಮ ವೇದಿಕೆ ಒದಗಿಸಿದರು.

ಬಾಲವನ

ಡಾ. ಶಿವರಾಮ ಕಾರಂತರು ಮಕ್ಕಳ ಕೂಟದ ಮಕ್ಕಳ ಉತ್ಸವ, ಮಕ್ಕಳೊಂದಿಗೆ ನಿಕಟ ಸಂಪರ್ಕ ಅಧ್ಯಾಪಕರೊಂದಿಗಿನ ನಿಕಟ ಒಡನಾಟ ಮುಂತಾದವುಗಳಿಂದ ದೊರೆತ ಅಮೋಘವಾದ ಪ್ರತಿಕ್ರಿಯೆಗಳಿಂದ ಉತ್ತೇಜಿತರಾಗಿ ಜುಲೈ ೧೯೩೪ರಲ್ಲಿ "ಬಾಲವನ" ಎಂಬ ಸಂಸ್ಥೆಯನ್ನು ಪುತ್ತೂರಿನಲ್ಲಿ ಸ್ಥಾಪಿಸಿದರು. ಇದು ಮಾದರಿ ಶಾಲೆಯಾಗಿದ್ದು ಆಟದ ಮೂಲಕ ಪಾಠವನ್ನು ಕಲಿಸುವ ಹೊಚ್ಚ ಹೊಸದಾದ ಯೋಜನೆಯಾಗಿತ್ತು. ಬಾಲವನದ ಈ ಶಾಲೆಯಲ್ಲಿ ಮಕ್ಕಳಿಗೆ ಅನ್ನಬಟ್ಟೆಯನ್ನು ಕೊಟ್ಟು ವಸತಿ ಸೌಕರ್ಯಗಳನ್ನು ಒದಗಿಸಿ ಶಿಕ್ಷಣವನ್ನು ನೀಡಲಾಗುತ್ತಿತ್ತು. ಮಕ್ಕಳ ಲವಲವಿಕೆಯನ್ನು ಹೆಚ್ಚಿಸಲು ಶಾಲೆಯ ವಠಾರದಲ್ಲಿಯೇ ಪ್ರಾಣಿ ಸಂಗ್ರಹಾಲಯವನ್ನು ಕಾರಂತರು ಸ್ಥಾಪಿಸಿದರು. ಪ್ರಾಣಿ ಪಕ್ಷಿಗಳ ಬಗ್ಗೆ ನೈಸರ್ಗಿಕ ಒಲವನ್ನು ತಾಳಿರುವ ಮಕ್ಕಳು ಇದರಿಂದ ಉತ್ತೇಜಿತರಾಗುವದಲ್ಲದೇ ಪ್ರತ್ಯಕ್ಷ ವೀಕ್ಷಣೆಯಿಂದ ಅವುಗಳ ಜೀವನ ವಿಧಾನವನ್ನು ತಿಳಿದುಕೊಳ್ಳಲು ಇದು ಸಹಕಾರಿಯಾಯಿತು. ಕೋಳಿ ಸಾಗಾಣಿಕೆ, ಜೇನು ಸಾಗಾಣಿಕೆ ಮುಂತಾದ ವೃತ್ತಿ ಶಿಕ್ಷಣದ ಪ್ರಯೋಗಗಳನ್ನು ಈ ಶಾಲೆಯಲ್ಲಿ ಕಾರಂತರು ನಡೆಸಿದರು. ಬಾಲವನದಲ್ಲಿ ಆಟದ ರೈಲುಗಳನ್ನು ಸ್ಥಾಪಿಸಿದರು. ನಾಡಿನ ಅನೇಕ ಮಕ್ಕಳು ಕಾರಂತರ ಬಾಲವನಕ್ಕೆ ಹಿಂಡು ಹಿಂಡಾಗಿ ಆಗಮಿಸಿ ಅಲ್ಲಿಯ ಸವಿಯನ್ನು ಸವಿದರು.

ಸರಕಾರದ ದಿವ್ಯ ನಿರ್ಲಕ್ಷ್ಯದಿಂದಾಗಿ ಹಾಗೂ ಇದು ವಿದ್ಯಾರ್ಥಿಗಳನ್ನು ಶಿಕ್ಷಣಕ್ಕಾಗಿ ಆಕರ್ಷಿಸಲು ವಿಫಲವಾಗಿದ್ದರಿಂದ ಬಾಲವನವನ್ನು ಕಾರಂತರು ಅನಿವಾರ್ಯವಾಗಿ ಮುಚ್ಚಬೇಕಾಯಿತು. ಆದರೆ ಈಗ ಅಲ್ಲಿನ ಜಿಲ್ಲಾ ಆಡಳಿತ ಬಾಲವನದ ಬಗ್ಗೆ ಲಕ್ಷವಹಿಸಿ ಅದನ್ನು ಪುನಃ ಉಳಿಸಿಕೊಳ್ಳಲು ಸಮಿತಿಯನ್ನು ರಚಿಸಿದೆ. ಪುತ್ತೂರು ಉಪವಿಭಾಗಾಧಿಕಾರಿಗಳು ಅದರ ಅಧ್ಯಕ್ಷರಾಗಿದ್ದು, ಅನೇಕ ಮಕ್ಕಳ ಸಾಹಿತ್ಯದ ಯೋಜನೆಗಳನ್ನು ಅದು ಕೈಗೊಂಡಿದೆ. ಪ್ರತಿವರ್ಷ ಬಾಲವನ ಪ್ರಶಸ್ತಿಯನ್ನು ಮಕ್ಕಳ ಸಾಹಿತ್ಯ ಹಾಗೂ ಮಕ್ಕಳ ಕ್ಷೇತ್ರದಲ್ಲಿ ಒಳ್ಳೇಯ ಕಾರ್ಯ ಮಾಡಿದವರಿಗೆ ನೀಡುತ್ತಿದೆ.

"ಬಾಲವನ" ಮುಚ್ಚಿಹೋದ ಮೇಲೆ ಬಹುಮುಖ ಪ್ರತಿಭೆಯ ಶಿವರಾಮ ಕಾರಂತರು ಸಾಮಾನ್ಯ ಜ್ಞಾನ, ಭೂಗೋಳ ಚರಿತ್ರೆ, ಗೃಹ ವಿಜ್ಞಾನ ಮುಂತಾದ ವಿಷಯಗಳನ್ನು ಒಳಗೊಂಡಂತೆ ಅನೇಕ ಪಠ್ಯಪುಸ್ತಕಗಳನ್ನು ರಚಿಸಿದರು. ೧೯೩೫ರಲ್ಲಿ ಮೊದಲ ಬಾರಿಗೆ ಹೊಸಗನ್ನಡ ಪಾಠಮಾಲೆ ಎಂಬ ಹೆಸರಿನ ೧ ನೇ ತರಗತಿ, ೮ ನೇ ತರಗತಿಯ ವಿದ್ಯಾರ್ಥಿಗಳ ಕನ್ನಡ ಭಾಷಾ ಪಠ್ಯಮಾಲೆಗಳನ್ನು ಸ್ವತಂತ್ರವಾಗಿ ರಚಿಸಿದರು. ಮಕ್ಕಳಿಗೆ ಉತ್ತಮವಾದ ಸಾಹಿತ್ಯ ಗ್ರಂಥಗಳನ್ನು ನೀಡಬೇಕೆಂದು ಚಿಂತಿಸಿದರು. ಇಂಗ್ಲಿಷಿನಲ್ಲಿ The Book of Knowledge; World of Wonders, Pictorial Knowledge ನಂತಹ ದೊಡ್ಡ ದೊಡ್ಡ ಗ್ರಂಥಗಳಿವೆ. ಕನ್ನಡದಲ್ಲಿ ಇಂಥ ಕೃತಿಗಳು ಏಕಿಲ್ಲ ? ಎಂದು ವಿಚಾರಿಸಿ ಅಂತಹ ಪುಸ್ತಕಗಳನ್ನು ಹೊರತರ ಬಯಸಿದರು. ಅದರ ಫಲವೇ ಕ್ರೌನ್ ಕ್ವಾರ್ಟೊ ಗಾತ್ರದ ೧೮೦೦ ಪುಟಗಳ 'ಬಾಲಪ್ರಪಂಚ'ದ ಮೂರು ಸಂಪುಟಗಳು. ಮೊದಲನೆಯ ಸಂಪುಟದ ಮುನ್ನುಡಿಯಲ್ಲಿ ಮಕ್ಕಳ ಮನಸ್ಸಿನ ಹಸಿವಿನ ಕುರಿತು ಕಾರಂತರು ಹೇಳಿದ ಮಾತುಗಳು ಗಮನಾರ್ಹವಾಗಿದೆ. "ಶಿಕ್ಷಣದಲ್ಲಿ ಆಸೆ, ಉತ್ಸಾಹ, ರುಚಿಕಟ್ಟು ಹುಟ್ಟಿಸಲು ಶಿಕ್ಷಕರಿಗೆ ಹಾಗೂ ಬಾಲಕರಿಗೆ ಉತ್ತಮ ಪುಸ್ತಕಗಳು ಬೇಕು" ಎಂದು ಹೇಳಿ ತಾವೇ ಜ್ಞಾನಕೋಶ ಸಂಕಲಿಸುವ ಸಾಹಸಕ್ಕೆ ಮುಂದಾದರು. ಕನ್ನಡದಲ್ಲಿ ಅದೇಕೆ ಭಾರತೀಯ ಭಾಷೆಗಳಲ್ಲೇ ಮೊಟ್ಟ ಮೊದಲಿನ ಮಕ್ಕಳ ಜ್ಞಾನಕೋಶವಾಗಿ ಕಾರಂತರ ಕೈಯಿಂದ "ಬಾಲಪ್ರಪಂಚ" ಮೂರು ಸಂಪುಟಗಳಲ್ಲಿ ಅರಳಿ ಬಂದಿತು. ಈ ಸಂಪುಟಗಳು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಸಂಚಲನವನ್ನು ಉಂಟುಮಾಡಿದವು.

ಬಾಲಪ್ರಪಂಚದ ಮೂರು ಸಂಪುಟಗಳು ೧೮೦೦ ಪುಟಗಳಷ್ಟು ವಿಸ್ತಾರ ಹೊಂದಿದ್ದು ಪ್ರತಿ ಸಂಪುಟವು ೬೦೦ ಪುಟಗಳಷ್ಟಿವೆ. ಪ್ರತಿ ಸಂಪುಟದಲ್ಲಿ ಕಾರಂತರು ಜ್ಞಾನಖಂಡವನ್ನು ೧೩ ವಿಭಾಗಗಳಲ್ಲಿ ವಿಂಗಡಿಸಿದ್ದಾರೆ. ಈ ವಿಭಾಗಗಳು ಇಂತಿವೆ : ಪ್ರಕೃತಿ ವಿಜ್ಞಾನ, ನಾಡುಗಳು, ನೆರೆವೀಡುಗಳು, ಸಾಹಿತ್ಯ ಕಲೆ, ಇತಿಹಾಸರಂಗ, ಭೌತವಿಜ್ಞಾನ, ಯಂತ್ರಯುಗ, ವಿಶ್ವಕರ್ಮದ ಸಾಹಸಗಳು, ಜೀವನಚರಿತ್ರೆ, ಉದ್ಯೋಗರಾಜ್ಯ, ಏನು? ಎಂಥದು? ಸಮಾಜ ವಿಜ್ಞಾನ, ಕ್ರೀಡಾವನ, ಎಂಜನಿಯರಿಂಗ್ ಸಾಹಸಗಳು. ಎಲ್ಲ ಲೇಖನಗಳು ಈ ಹದಿಮೂರು ವಿಭಾಗಗಳಲ್ಲಿ ಇದ್ದು ಇದೇ ಕ್ರಮದಲ್ಲಿ ಮೂರು ಸಂಪುಟಗಳಲ್ಲಿ ಬರುತ್ತವೆ. ಪ್ರತಿ ಪುಟಕ್ಕೆ ಒಂದೋ ಎರಡೋ ಚಿತ್ರಗಳು ಇದ್ದೇ ಇವೆ. ಪ್ರಥಮ ಸಂಪುಟವು ೧೯೩೪-೩೫ ರಲ್ಲಿ, ದ್ವಿತೀಯ ಸಂಪುಟವು ೧೯೩೫-೩೬ ರಲ್ಲಿ, ತೃತೀಯ ಸಂಪುಟವು ೧೯೩೬-೩೭ ರಲ್ಲಿ ಪ್ರಕಟವಾಗಿ (ಮೂರು ಸಂಪುಟಗಳ ಒಟ್ಟು ಬೆಲೆ ಕೇವಲ ೩೬ ರೂ.ಗಳು) ಅಪಾರ ಮೆಚ್ಚುಗೆಯನ್ನು ಗಳಿಸಿದವಲ್ಲದೇ ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಪ್ರೇರಣೆ ನೀಡಿದವು. ಇದರಲ್ಲಿ ಅರ್ಥ

ವಿವರಣೆಗಳು ಓದುಗರ ಮನಮುಟ್ಟಿದವು. ವಿಶಿಷ್ಟ ನಿರೂಪಣಾ ಶೈಲಿ, ಅರ್ಥವಿವರಣೆಯಿಂದ ಈ ಸಂಪುಟಗಳು ಮಕ್ಕಳ ಜ್ಞಾನ ತೃಷೆಯನ್ನು ನೀಗಿಸಿದವು. ಈ ಸಂಪುಟಗಳು ಪ್ರಕಟವಾದ ಏಳು ದಶಕಗಳ ನಂತರ ಶ್ರೀಮತಿ ಮಾಲಿನಿ ಮಲ್ಯ ಅವರು ಕೃತಿಕಾರರ (ಡಾ. ಕಾರಂತರ) ಆಶಯಕ್ಕೆ ಗೌರವಕ್ಕೆ ಭಂಗ ಬರದ ರೀತಿಯಲ್ಲಿ ಅವುಗಳನ್ನು ಪರಿಷ್ಕರಿಸಿದರಲ್ಲದೇ ಮರು ಮುದ್ರಣ ಮಾಡಲು ಮುಂದಾದರು. ಇದರ ಫಲವಾಗಿ ಪ್ರಥಮ ಸಂಪುಟದ ದ್ವಿತೀಯ ಪರಿಷ್ಕೃತ ಆವೃತ್ತಿಯು ೨೦೦೨ ರಲ್ಲಿ ಪುತ್ತೂರಿನ ವಿವೇಕಾನಂದ ಕಾಲೇಜಿನ ಶಿವರಾಮ ಕಾರಂತರ ಅಧ್ಯಯನ ಕೇಂದ್ರದಿಂದ ಪ್ರಕಟವಾಯಿತು. ದ್ವಿತೀಯ ಹಾಗೂ ತೃತೀಯ ಸಂಪುಟದ ಪರಿಷ್ಕೃತ. ಆವೃತ್ತಿಗಳನ್ನು ೨೦೦೭ ರಲ್ಲಿ ಸಾಲಿಗ್ರಾಮದ ಡಾ. ಕೆ. ಶಿವರಾಮ ಕಾರಂತರ ಸಂಶೋಧನಾ ಮತ್ತು ಅಧ್ಯಯನ ಸಂಸ್ಥೆ (ರಿ) ಹೊರತಂದಿದೆ. ಇತ್ತೀಚಿಗೆ ಮೂರು ಸಂಪುಟಗಳ ಮೂರನೆಯ ಮುದ್ರಣವನ್ನು ಬೆಂಗಳೂರಿನ ವಸಂತ ಪ್ರಕಾಶನವು ಪ್ರಕಟಿಸಿದೆ.

ಬಾಲಪ್ರಪಂಚಗಳಲ್ಲದೇ ಕನ್ನಡ ಮಕ್ಕಳಿಗೆ ವಿಜ್ಞಾನದಲ್ಲಿನ ಹೊಸ ಸಾಧನೆಗಳನ್ನು ಸಂಶೋಧನೆಗಳನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ಕಾರಂತರು ೧೯೫೯ ರಲ್ಲಿ ೫೦೦ ಪುಟ ವಿಸ್ತಾರದ ವಿಜ್ಞಾನ ಪ್ರಪಂಚದ ಪ್ರಥಮ ಸಂಪುಟವನ್ನು ಹೊರತಂದರು. ೪ ಸಂಪುಟಗಳಲ್ಲಿ ಅರಳಿದ ಈ ವಿಜ್ಞಾನಕೋಶ ೧೯೮೦ರಲ್ಲಿ ಪುನಃ ಮುದ್ರಣಗೊಂಡು ತಾನಿನ್ನೂ ರಿಲೆವೆಂಟ ಎಂದು ಸಾರಿ ಹೇಳಿತು. ಮೊದಲನೆಯ ಸಂಪುಟದ ಶೀರ್ಷಿಕೆ "ಈ ಜಗತ್ತು". ಇದರಲ್ಲಿ ಖಗೋಳ ವಿಜ್ಞಾನ, ಭೂ ವಿಜ್ಞಾನ, ಸಾಗರ ವಿಜ್ಞಾನ, ವಾತಾವರಣ ವಿಜ್ಞಾನ ಈ ವಿಷಯಗಳ ಕುರಿತಾದ ೭೦ ಲೇಖನಗಳು ಹಾಗೂ ೩೪೬ ಚಿತ್ರಗಳಿವೆ. ಎರಡನೆಯ ಸಂಪುಟದ ಶೀರ್ಷಿಕೆ "ಜೀವ ಜೀವನ" ಆಗಿದ್ದು, ಇದು ಜೀವ ವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಮನಃಶಾಸ್ತ್ರ, ಪ್ರಕೃತಿ ವಿಜ್ಞಾನ ಮುಂತಾದ ವಿಷಯಗಳನ್ನು ಹೊಂದಿದೆ. ಮೂರನೆಯ ಸಂಪುಟ "ವಸ್ತು ಚೈತನ್ಯ" ಆಗಿದ್ದು, ಇದು ವಿಜ್ಞಾನ ವಿಷಯದ ಭೌತವಿಜ್ಞಾನ, ಸಾಪೇಕ್ಷ ಸಿದ್ಧಾಂತ, ಜೀವ ರಸಾಯನ ವಿಜ್ಞಾನ ಮುಂತಾದ ವಿಷಯಗಳ ಕುರಿತಾದ ೬೩ ಲೇಖನಗಳನ್ನು ಹಾಗೂ ೫೦೬ ಚಿತ್ರಗಳನ್ನು ಒಳಗೊಂಡಿದೆ. ನಾಲ್ಕನೆಯ ಸಂಪುಟ "ವಿಜ್ಞಾನ ಸಾಧನ" ಎಂಜಿನ್‌ಗಳು, ವಾಹನಗಳು, ಇಲೆಕ್ಟ್ರಾನಿಕ್ಸ್, ವಿಜ್ಞಾನಿಗಳು ಮುಂತಾದ ವಿಷಯಗಳ ಲೇಖನಗಳನ್ನು ಒಳಗೊಂಡಿದೆ. ಕಾರಂತರು ಹೊರತಂದ ಈ ಸಂಪುಟಗಳು ಬೃಹತ್ತು ಮತ್ತು ವಿವಿಧತೆ ಹಾಗೂ ವಿಪುಲತೆಗಳ ದೃಷ್ಟಿಯಿಂದ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಅಪರೂಪವೆನಿಸುವಂತಹವುಗಳಾದವು. "ಬಾಲ ಪ್ರಪಂಚ" ಹಾಗೂ "ವಿಜ್ಞಾನ ಪ್ರಪಂಚ" – ಒಟ್ಟು ಅಸಾಧಾರಣ, ಅಸಾಮಾನ್ಯ ಅಪರೂಪದ ವ್ಯಕ್ತಿಯ, ಧೈರ್ಯದ ಶ್ರಮದ, ಮುಂಧೋರಣೆಯ ಫಲಗಳಾಗಿ ಮೂಡಿ ಬೆಳಗಿದವು.

ಇದರ ನಂತರ ಮಂಗಳೂರಿನ ಕುಡ್ವಿ ವಾಸುದೇವ ಶೆಣೈ ಅವರು ಒಂದಾಣೆಯ ಮಾಲೆಯನ್ನು ಆರಂಭಿಸಿ ವಾರಕ್ಕೊಂದರಂತೆ ೩೫೦ ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದರು. ಇದರಲ್ಲಿ ನೂರಾರು ಪುಸ್ತಕಗಳು ಮಕ್ಕಳ ಸಾಹಿತ್ಯದ ಕೃತಿಗಳಾಗಿದ್ದವು ಎಂಬುದು ವಿಶೇಷ. ಅಲ್ಲಲ್ಲಿ ಶಿಶು ಸಾಹಿತ್ಯ ಮಾಲೆಗಳು ತಲೆಯಿತ್ತಿದ್ದರಿಂದಾಗಿ ಹಾಗೂ ಕೆಲವು ಪ್ರಕಾಶಕರು ಮಕ್ಕಳ ಸಾಹಿತ್ಯ ಪ್ರಕಟನೆಗೆ ಮುಂದೆ ಬಂದಿದ್ದರಿಂದ ಮಕ್ಕಳಿಗಾಗಿ ಪ್ರತ್ಯೇಕ ಪತ್ರಿಕೆಗಳು ಪ್ರಕಟವಾಗಲು ಆರಂಭವಾದುದರಿಂದಾಗಿ ಕನ್ನಡ ಮಕ್ಕಳ ಸಾಹಿತ್ಯಕ್ಕೆ ಒಂದು ಸ್ವರೂಪ ನಿರ್ಮಾಣವಾಗುತ್ತಾ

ಬಂದಿತು. ೧೯೨೬ರಲ್ಲಿ ಅಶ್ವಥನಾರಾಯಣರು ಪ್ರಾರಂಭಿಸಿದ "ಮಕ್ಕಳ ಪುಸ್ತಕ" ಪತ್ರಿಕೆ, ದೇವುಡು ನರಸಿಂಹಶಾಸ್ತ್ರಿಗಳ "ನಮ್ಮ ಪುಸ್ತಕ" ಪತ್ರಿಕೆ, ಸುಬೋಧ ರಾಮರಾಯರ "ಸುಬೋಧ" ಪತ್ರಿಕೆ, ಉಳ್ಳಾಲ ಮಂಗೇಶರಾಯರ "ಬಾಲಚಂದ್ರ", ಮೈಸೂರಿನ ಚಿಲ್ಡ್ರನ್ ಬುಕ್ ಕೌನ್ಸಿಲ್‌ದ "ಕಂದ" ಮುಂತಾದ ಪತ್ರಿಕೆಗಳು ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ನೀರೆರೆದವು.

ಸ್ವಾತಂತ್ರ್ಯ ನಂತರ ಮದ್ರಾಸಿನ ಚಕ್ರಪಾಣಿ ನಾಗಿರೆಡ್ಡಿಯವರ ಪ್ರಕಾಶನ ಸಂಸ್ಥೆಯು ಕನ್ನಡದಲ್ಲಿ ಪ್ರಕಟಿಸಿದ "ಚಂದಮಾಮ" ಸಚಿತ್ರ ಮಾಸಪತ್ರಿಕೆಯು ಕಣ್ಮನ ಸೆಳೆಯುವ ಮೂಲಕ ಚಿಣ್ಣರ ಮನವನ್ನು ಗೆದ್ದಿತು. ನಂತರ ೧೯೫೦ ರಲ್ಲಿ ಬಂದ ಜಿ. ಟಿ. ಶ್ರೀಕಂಠಯ್ಯನವರ "ಬಾಲಬಂಧು", ಕುಮಾರ ವೆಂಕಣ್ಣವರ ಸಂಪಾದಕತ್ವದಲ್ಲಿ ೧೯೫೧ ರಲ್ಲಿ ಬಂದ "ಪಾಪಚ್ಚಿ", ರಾ. ಮೋ. ವಿಶ್ವಾಮಿತ್ರರ "ಪರಿಮಳ", ಮೇವುಂಡಿ ಮಲ್ಲಾರಿಯವರ "ಕನ್ನಡದ ಕಂದ", ಜಿ. ಎ. ಕವಲಿ ಅವರ "ನವನೀತ", ೧೯೬೬ ರಲ್ಲಿ ಬಂದ "ವಿಜ್ಞಾನ ಲೋಕ", ೧೯೭೭ ರಲ್ಲಿ ಬೆಂಗಳೂರಿನಿಂದ ಎನ್. ಕೃಷ್ಣಮಾಚಾರಿಯವರ ಸಂಪಾದಕತ್ವದಲ್ಲಿ ಹೊರ ಬಂದ "ಪುಟಾಣಿ", 'ಸಿಸು' ಸಂಗಮೇಶರ ಸಂಪಾದಕತ್ವದಲ್ಲಿ ಬಂದ "ಬಾಲಭಾರತಿ", ಬಾಬು ಕೃಷ್ಣಮೂರ್ತಿ ಅವರ ಸಂಪಾದಕತ್ವದಲ್ಲಿ ಹೊರ ಬಂದ "ಬಾಲಮಂಗಳ", ಬೆಂಗಳೂರಿನಿಂದ ಪ್ರಕಟವಾದ 'ಕಾರಂಜಿ', 'ಪುಟಾಣಿ', 'ಅಜೇಯ' ಪತ್ರಿಕೆಗಳು ಈಶ್ವರ ಕಮ್ಮಾರ ಸಂಪಾದಕತ್ವದಲ್ಲಿ ಹೊರ ಬಂದ "ಮಕ್ಕಳ ಮಂದಿರ" ಮುಂತಾದ ಪತ್ರಿಕೆಗಳು ಮಕ್ಕಳ ಸಾಹಿತ್ಯವನ್ನು ಜನಪ್ರಿಯಗೊಳಿಸಿದವು. ಇವತ್ತಿಗೂ ಅನೇಕ ಮಕ್ಕಳ ಪತ್ರಿಕೆಗಳು ಕನ್ನಡದಲ್ಲಿ ಪ್ರಕಟವಾಗಿ ನಾಡಿನ ಮಕ್ಕಳ ಹಾಗೂ ಮಕ್ಕಳ ಸಾಹಿತ್ಯ ರಚನೆಕಾರರಿಗೆ ಉತ್ತಮ ವೇದಿಕೆಯನ್ನು ಕಲ್ಪಿಸುತ್ತಿವೆ. ಇದರೊಂದಿಗೆ ಅನೇಕ ಸಂಘ-ಸಂಸ್ಥೆಗಳು, ಸರಕಾರ, ಸರಕಾರದ ಅನುದಾನ ಪಡೆದ ಸ್ವಾಯತ್ತ ಸಂಸ್ಥೆಗಳು, ವೇದಿಕೆಗಳು ಪ್ರಕಾಶನ ಸಂಸ್ಥೆಗಳು, ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಮುಂದಾದದ್ದು ಹೆಮ್ಮೆಯ ವಿಚಾರವೇ ಆಗಿದೆ. ಅಂತಹ ಪ್ರಮುಖ ಸಂಸ್ಥೆಗಳು ಹೀಗಿವೆ.

ಅಖಿಲ ಕರ್ನಾಟಕ ಮಕ್ಕಳ ಕೂಟ

ಮಕ್ಕಳಿಗೂ ಸ್ವಂತ ವ್ಯಕ್ತಿತ್ವವಿದೆ. ಆ ನಿರ್ಮಲವಾದ ಪುಟ್ಟ ಮನಸ್ಸಿನಲ್ಲಿ ಏನೇನೋ ಹಿರಿಯ ಆಶೆ, ಆಕಾಂಕ್ಷೆಗಳು ತುಂಬಿರುತ್ತವೆ. ಸಮಸ್ಯೆಗಳು ಮೂಡುವುದುಂಟು. ಅವನ್ನು ಓರಿಗೆಯವರೊಂದಿಗೆ ಹೇಳಿಕೊಳ್ಳುವಷ್ಟು ಸಲುಗೆಯಿಂದ ಮನೆಯವರೊಂದಿಗಾಗಲಿ, ಉಪಾಧ್ಯಾಯರೊಂದಿಗಾಗಲಿ ಮನಬಿಚ್ಚಿ ಹೇಳಿಕೊಳ್ಳಲಾರರು. ವಿರಾಮದ ವೇಳೆಯಲ್ಲಿ ಅವರಿಗಾಗಿಯೇ ಮೀಸಲಾದ ಮನರಂಜನಾ ಸಂಸ್ಥೆಗಳಿದ್ದರೆ ಮಕ್ಕಳು ವಿಹಾರದೊಂದಿಗೆ ವಿದ್ಯೆ ಕಲಿತಾರು, ಆಟದ ಮೂಲ ಪಾಠ ಕಲಿತಾರು ಎಂಬುದನ್ನು ಮನಗಂಡ ಬೆಂಗಳೂರಿನ ಶ್ರೀಮತಿ ಆರ್. ಕಲ್ಯಾಣಮ್ಮ ಅವರು ೧೯೩೭ ರಲ್ಲಿ ಮಕ್ಕಳ ಮೇಲಿನ ಮಮತೆಯ ಪ್ರತೀಕವಾಗಿ ತಾವು ಹೊರಡಿಸುತ್ತಿದ್ದ "ಸರಸ್ವತಿ" ಪತ್ರಿಕೆಯಲ್ಲಿ ಮಕ್ಕಳಿಗಾಗಿ ಹಲವು ಪುಟಗಳನ್ನು ಮೀಸಲಾಗಿರಿಸಿದರು. ಅದರಲ್ಲಿ ಮಕ್ಕಳಿಗೆ ಅನೇಕ ರೀತಿಯ ಸ್ಪರ್ಧೆಗಳನ್ನು ಏರ್ಪಡಿಸಿದರು. ಸ್ಪರ್ಧೆಗಳಲ್ಲಿ ಪಾಲ್ಗೊಂಡ ಅನೇಕ ಮಕ್ಕಳು ಬಹುಮಾನಕ್ಕೆ ಆಯ್ಕೆಯಾದರು. ಆ ಪ್ರತಿಭಾವಂತ ಮಕ್ಕಳಿಗೆ ಅದ್ದೂರಿಯಾಗಿ ಬಹುಮಾನ ವಿತರಣೆ ಉತ್ಸವ ಮಾಡಬೇಕೆಂದು ಕಾರ್ಯಕ್ರಮ ಒಂದನ್ನು ಹಮ್ಮಿಕೊಂಡರು. ಈ ಕಾರ್ಯಕ್ರಮವು ನಗರಸಭೆ, ಕನ್ನಡ ಸಾಹಿತ್ಯ ಪರಿಷತ್ತು

ಹಾಗೂ ಹಿರಿಯ ಮಕ್ಕಳ ಸಾಹಿತಿಗಳಾದ ಹೊಯ್ಸಳ, ಪಂಜೆ ಮಂಗೇಶರಾಯರ ಶುಭಾಕಾಂಕ್ಷೆಯಿಂದ ಮಕ್ಕಳ ಸಮ್ಮೇಳನವಾಗಿ ರೂಪಗೊಂಡು ಅದು ಅಂದಿನ ರಾಜಕುಮಾರಿ ವಿಜಯಲಕ್ಷ್ಮಮ್ಮಣ್ಣಿ ಅವರಿಂದ ಉದ್ಘಾಟನೆಗೊಂಡು ಮೂರು ದಿನಗಳ ಕಾಲ ಅದ್ದೂರಿಯಾಗಿ ನಡೆಯಿತು. ಇದರ ಅಭೂತಪೂರ್ವ ಯಶಸ್ಸಿನ ಫಲವಾಗಿಯೇ ಆರ್. ಕಲ್ಯಾಣಮ್ಮನವರು ೧೯೩೭ರ ಎಪ್ರಿಲ್ ೨೬ರಂದು ಬೆಂಗಳೂರಿನಲ್ಲಿ "ಅಖಿಲ ಕರ್ನಾಟಕ ಮಕ್ಕಳ ಕೂಟ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆ ಎಷ್ಟೊಂದು ಜನಪ್ರಿಯವಾಯಿತೆಂದರೆ ಒಂದು ವರ್ಷ ಕಳೆಯುವಷ್ಟರಲ್ಲಿ ಅದರ ವ್ಯಾಪ್ತಿ ಇಡೀ ಕರ್ನಾಟಕಕ್ಕೆ ಹರಡಿತು. ಅಭಿಮಾನಿಗಳ ಸಂಖ್ಯೆ ದಿನದಿನಕ್ಕೆ ಬೆಳೆಯಿತು. ಬೆಂಗಳೂರಿನಷ್ಟೇ ಅಲ್ಲದೇ ನಾಡಿನ ಬೇರೆ ಬೇರೆ ಊರುಗಳಲ್ಲಿ ಕೂಟದ ಶಾಖೆಗಳು ಪ್ರಾರಂಭವಾದವು. ಪ್ರತಿವರ್ಷವೂ ಮಕ್ಕಳ ಸಮ್ಮೇಳನಗಳು ಜರುಗಲಾರಂಭಿಸಿದವು. ಆ ಸಮ್ಮೇಳನಗಳಿಗೆ ಮಕ್ಕಳೇ ಅಧ್ಯಕ್ಷರು, ಮಕ್ಕಳೇ ಸ್ವಾಗತಾಧ್ಯಕ್ಷರಾಗುತ್ತಿದ್ದುದು ವಿಶೇಷವಾಗಿತ್ತು. ಮಕ್ಕಳ ಕೂಟವು ಕಥೆ, ಕವನ, ಲೇಖನ, ರಚನಾ ಸ್ಪರ್ಧೆ, ಚರ್ಚಾ ಸ್ಪರ್ಧೆ, ಚಿತ್ರಬಿಡಿಸುವ ಸ್ಪರ್ಧೆ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿ ಮಕ್ಕಳಲ್ಲಿರುವ ಪ್ರತಿಭಾ ಶಕ್ತಿಯನ್ನು ಪ್ರೋತ್ಸಾಹಿಸಿತು. ಅನೇಕ ಪ್ರತಿಭಾವಂತ ಮಕ್ಕಳಿಂದ, ಮಕ್ಕಳ ಬರಹಗಾರರಿಂದ ಮಕ್ಕಳ ಸಾಹಿತ್ಯವನ್ನು ಬರೆಯಿಸಿತು. ಕೂಟದ ವತಿಯಿಂದ ಹಲವಾರು ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿತು. "ಬಣ್ಣದ ಬುಗರಿ", "ಜಾಣ", "ಹೂವಿನ ಶಾಲೆ", "ಉಗಾದಿ ಉಡುಗೊರೆ", "ಅಜ್ಜ-ಅಜ್ಜಿ", "ಕೋಲೆಬಸವ" ಮುಂತಾದವು ಪ್ರಮುಖ ಪ್ರಕಟನೆಗಳಾಗಿವೆ. ಮಕ್ಕಳಕೂಟದಲ್ಲಿ ನಿರಂತರವಾಗಿ ಮಕ್ಕಳ ಚಟುವಟಿಕೆಗಳು ನಡೆಯಲಾರಂಭಿಸಿದವು. ಮಕ್ಕಳ ಸಾಹಿತಿ ಜಿ. ಪಿ. ರಾಜರತ್ನಂ, ಹೊಯ್ಸಳ ಅವರು ಪ್ರತಿ ಶನಿವಾರದಂದು ಬಂದು ಮಕ್ಕಳಿಗಾಗಿ ಕತೆ, ಕವನ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರಲ್ಲದೇ ಮಕ್ಕಳಿಂದ ಅವುಗಳನ್ನು ಹೇಳಿಸುತ್ತಿದ್ದರು. ಮಕ್ಕಳು ಕೇಳುವ ಪ್ರಶ್ನೆಗಳಿಗೆ ಉತ್ತರ ನೀಡುತ್ತಿದ್ದರು. ಈ ರೀತಿ ಕೇಳುತ್ತಿದ್ದ ಪ್ರಶ್ನೆ ಉತ್ತರಗಳನ್ನು ಚಿಕ್ಕ ಚಿಕ್ಕ ಪುಸ್ತಕಗಳಲ್ಲಿ ಮಕ್ಕಳ ಕೂಟವು ಹೊರತಂದಿದೆ. ಮಕ್ಕಳ ಕೂಟದ ಕಾರ್ಯಚಟುವಟಿಕೆಗಳಿಂದಾಗಿ ಅನೇಕ ಮಕ್ಕಳ ಸಾಹಿತಿಗಳು ರೂಪಗೊಂಡರು. ಟಿ. ಎಂ. ಆರ್. ಸ್ವಾಮಿ, ಹೆಚ್. ವೈ. ಸರಸ್ವತಿಮ್ಮ, ಕೆ. ಟಿ. ಬನಶಂಕರಮ್ಮ, ಚಿ. ಉದಯಶಂಕರ ಪ್ರಮುಖ ಮಕ್ಕಳ ಸಾಹಿತಿಗಳಾಗಿ ಹೊರ ಹೊಮ್ಮಿದರು.

ಹೆಸರಾಂತ ಮಕ್ಕಳ ಸಾಹಿತಿಗಳನ್ನು ಸಾಮಾಜಿಕ, ಸಾಧನೆ ಮಾಡಿದ ವ್ಯಕ್ತಿಗಳನ್ನು ಕರೆಯಿಸಿ ಮಕ್ಕಳಿಗೆ ಅವರ ವ್ಯಕ್ತಿತ್ವವನ್ನು ಪರಿಚಯಿಸಿ ಅಂಥವರ ಆದರ್ಶಗಳನ್ನು ಮಕ್ಕಳ ಕೂಟವು ಅವರೆದುರು ಬಿಂಬಿಸಿತು. ಅನೇಕ ಹೊಸ ಹೊಸ ಪ್ರಯೋಗಗಳನ್ನು ಮಾಡಿತು. ಕಲ್ಯಾಣಮ್ಮನವರು "ಸರಸ್ವತಿ" ಪತ್ರಿಕೆಯಲ್ಲಿ ಮಕ್ಕಳ ಬಾವುಟ ವಿಭಾಗದಲ್ಲಿ ಮಕ್ಕಳೇ ಬರೆದ ಕಥೆ, ಕವನ, ಚುಟುಕು, ನಾಟಕಗಳನ್ನು ಪ್ರಕಟಿಸುತ್ತಿದ್ದರಷ್ಟೇ ಅಲ್ಲ, ಒಬ್ಬ ಬಾಲ ಸಾಹಿತಿಯನ್ನೇ ಬಾಲವಿಭಾಗದ ಸಂಪಾದಕನನ್ನಾಗಿ ಮಾಡಿದ್ದು ಅವರ ಪ್ರಯೋಗ ಪರತೆಗೆ ಸಾಕ್ಷಿ ಎನ್ನಬಹುದು. ಕಲ್ಯಾಣಮ್ಮನವರ ಜೀವಿತಾವಧಿಯಲ್ಲಿ ಹದಿನೆಂಟು ಮಕ್ಕಳ ಸಮ್ಮೇಳನಗಳು ನಾಡಿನ ವಿವಿಧ ಭಾಗಗಳಲ್ಲಿ ಜರುಗಿದವು. ಅವರ ನಿಧನಾನಂತರವೂ ಸಮ್ಮೇಳನಗಳು, ತಿಂಗಳು ಕಾಲ ಬೇಸಿಗೆ ಶಿಬಿರಗಳು ನಡೆಯುತ್ತಲೇ ಇವೆ. ಈಗಾಗಲೇ ೩೦ ರಾಜ್ಯ ಮಟ್ಟದ ಮಕ್ಕಳ ಸಮ್ಮೇಳನಗಳು, ೪೬ ಬೇಸಿಗೆ ಶಿಬಿರಗಳನ್ನು ಸಂಘಟಿಸಿದ ಕೀರ್ತಿ ಮಕ್ಕಳ ಕೂಟಕ್ಕೆ ಸಲ್ಲುತ್ತದೆ. ಇವುಗಳಲ್ಲಿ ಡಾ.

ಕಾರಂತ, ರಾಜರತ್ನಂ, ಹೊಯ್ಸಳ, ಬಿ. ಶ್ರೀ. ಪಾಂಡುರಂಗರಾಯ, ಪರಿಮಳ ಮುಂತಾದ ದಿಗ್ಗಜರು ಪಾಲ್ಗೊಂಡಿರುವುದು ವಿಶೇಷವಾಗಿದೆ. ಅನೇಕ ಗಣ್ಯಮಾನ್ಯರು ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಮಕ್ಕಳ ಕೂಟಕ್ಕೆ ಭೇಟಿ ನೀಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅಂತವರಲ್ಲಿ ಮಾಜಿ ಪ್ರಧಾನಿ ದಿ. ಇಂದಿರಾಗಾಂಧಿ, ರಾಜ್ಯಪಾಲರಾಗಿದ್ದ ಎ. ಕೆ. ಬ್ಯಾನರ್ಜಿ, ಉಮಾಶಂಕರ ದೀಕ್ಷಿತ, ಮಾಜಿ ಮುಖ್ಯಮಂತ್ರಿ ದಿ. ವೀರೇಂದ್ರ ಪಾಟೀಲ, ಉಪರಾಷ್ಟ್ರಪತಿ ಬಿ. ಡಿ. ಜತ್ತಿ, ಎಸ್. ಎಂ. ಕೃಷ್ಣ, ನಟ ಶ್ರೀನಾಥ, ವಿಷ್ಣುವರ್ಧನ ಪ್ರಮುಖರಾಗಿದ್ದಾರೆ.

ಇದೇ ಮಕ್ಕಳ ಕೂಟದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಬಿ. ಶ್ರೀ. ಪಾಂಡುರಂಗರಾಯರು 'ಮಕ್ಕಳ ಮಂಟಪ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಮಕ್ಕಳಿಗಾಗಿ ಸಾಹಿತ್ಯ ನಿರ್ಮಿಸಲು ದೊಡ್ಡ ಪ್ರಮಾಣದಲ್ಲಿ ಪ್ರಯತ್ನ ನಡೆಸಿ ಯಶಸ್ವಿಯಾದರು. ಬಾಲಕಿರಣ ಮಾಲೆ, ಭಾರತ ದರ್ಶನ ಮಾಲೆ ಮುಂತಾದ ೨೦ ಕ್ಕೂ ಹೆಚ್ಚು ಇವರ ಕೃತಿಗಳು ಬೆಳಕು ಕಂಡವು. ಇವರ ಬೃಹತ್ ಕೃತಿ "ಎಳೆಯರ ಭಾರತ" ತುಂಬಾ ಮಹತ್ವದ ಗ್ರಂಥವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು

೧೯೧೫ರಲ್ಲಿಯೇ ಸ್ಥಾಪಿತವಾದ ಕನ್ನಡ ಸಾಹಿತ್ಯ ಪರಿಷತ್ತು ಆರಂಭದಿಂದಲೂ ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಶ್ರಮಿಸುತ್ತಲೇ ಬಂದಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಅಧ್ಯಕ್ಷರಾಗಿದ್ದ ಎಚ್. ವಿ. ನಂಜುಂಡಯ್ಯನವರಿಂದ ಹಿಡಿದು ಇಂದಿನ ಅಧ್ಯಕ್ಷರ ಕಾಲಾವಧಿಯಲ್ಲಿ ಮಕ್ಕಳ ಸಾಹಿತ್ಯದ ಪ್ರೋತ್ಸಾಹಕ ಕಾರ್ಯಗಳು ನಡೆಯುತ್ತಲೇ ಬಂದಿವೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಏರ್ಪಡಿಸಲಾಗುತ್ತಿರುವ ಮಕ್ಕಳ ಸಾಹಿತ್ಯ ಕುರಿತಾದ ಪ್ರಬಂಧ ಗೋಷ್ಠಿ, ಉಪನ್ಯಾಸ, ಸಂವಾದ ಗೋಷ್ಠಿ, ಮುಂತಾದವು ಹಲವಾರು ಮಕ್ಕಳ ಸಾಹಿತಿಗಳಿಗೆ ಉತ್ತಮ ವೇದಿಕೆಗಳನ್ನು ಕಲ್ಪಿಸಿವೆ. ಕಾಲಕಾಲಕ್ಕೆ ಪರಿಷತ್ತು ಹಲವಾರು ಮಕ್ಕಳ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದ್ದು, ಈಗಾಗಲೇ ಒಂದು ನೂರು ಸಮೀಪ ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿ ನಾಡಿನ ಚಿಣ್ಣರ ಕೈಗೆ ನೀಡಿದ ಶ್ರೇಯಸ್ಸು ಪರಿಷತ್ತಿಗೆ ಸಲ್ಲುತ್ತದೆ. ಅಂತರಾಷ್ಟ್ರೀಯ ಮಕ್ಕಳ ವರ್ಷದಂಗವಾಗಿ ೧೯೭೯'ಲ್ಲಿ ಬೆಂಗಳೂರಿನಲ್ಲಿ ಒಂದು ಮಕ್ಕಳ ಸಾಹಿತ್ಯ ಸಮ್ಮೇಳನವನ್ನೇ ಏರ್ಪಡಿಸಿ ಹಲವಾರು ಮಕ್ಕಳ ಸಾಹಿತಿಗಳ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ನೀಡಿದ್ದಲ್ಲದೇ ಆ ವರ್ಷದುದ್ದಕ್ಕೂ ಅನೇಕ ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿತು. ಇದಾದ ಮೇಲೆ ೧೯೮೩ರಲ್ಲಿ ಚನ್ನಪಟ್ಟಣದಲ್ಲಿ ರಾಜ್ಯಮಟ್ಟದ ಪ್ರಥಮ ಮಕ್ಕಳ ಸಾಹಿತ್ಯ ಸಮಾವೇಶವನ್ನು ಖ್ಯಾತ ಮಕ್ಕಳ ಸಾಹಿತಿ 'ಸಿಸು' ಸಂಗಮೇಶರ ಸರ್ವಾಧ್ಯಕ್ಷತೆಯಲ್ಲಿ ಎರಡುದಿನಗಳ ಕಾಲ ಏರ್ಪಡಿಸಿ ರಾಜ್ಯದ ಮಕ್ಕಳ ಸಾಹಿತ್ಯ ಬರಹಗಾರರೆಲ್ಲ ಒಂದೇ ವೇದಿಕೆಯಡಿ ಸೇರುವಂತಹ ಅವಕಾಶವನ್ನು ಕಲ್ಪಿಸಿತು. ಮಕ್ಕಳ ಸಾಹಿತ್ಯವನ್ನು ಪ್ರೋತ್ಸಾಹಿಸುವುದಕ್ಕಾಗಿಯೇ ಪರಿಷತ್ತಿನ ಅನೇಕ ಶಾಶ್ವತ ದತ್ತಿ ನಿಧಿಗಳನ್ನು ಇರಿಸಿ ಪ್ರತಿವರ್ಷವೂ ಉತ್ತಮ ಮಕ್ಕಳ ಪುಸ್ತಕಗಳಿಗೆ ವಸುದೇವ ಭೂಪಾಲಂ ಪ್ರಶಸ್ತಿ; 'ಸಿಸು' ಸಂಗಮೇಶ ಮಕ್ಕಳ ಸಾಹಿತ್ಯ ದತ್ತಿ ಪ್ರಶಸ್ತಿ, ಜಿ. ಪಿ. ರಾಜರತ್ನಂ ಸಂಸ್ಮರಣ ದತ್ತಿ ಬಹುಮಾನ, ಸಮೀರವಾಡಿ ಸಾಹಿತ್ಯ ಸಮ್ಮೇಳನದ ನೆನಪಿನ ದತ್ತಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ನೀಡುತ್ತ ಮಕ್ಕಳ

ಸಾಹಿತಿಗಳನ್ನು ಗೌರವಿಸುತ್ತಾ ಬರುತ್ತಿದೆ. ಅದಲ್ಲದೇ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನ, ಜಿಲ್ಲಾ ಸಾಹಿತ್ಯ ಸಮ್ಮೇಳನ, ತಾಲೂಕಾ ಸಾಹಿತ್ಯ ಸಮ್ಮೇಳನ, ಹೋಬಳಿ, ಗ್ರಾಮ ಸಮ್ಮೇಳನಗಳನ್ನು ನಡೆಸಿ ಅದರಲ್ಲಿ ಮಕ್ಕಳ ಸಾಹಿತ್ಯ ಕುರಿತು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಯಾ ಭಾಗದ ಮಕ್ಕಳ ಸಾಹಿತಿಗಳಿಗೆ ಕವಿಗಳಿಗೆ ಪರಿಷತ್ತು ವೇದಿಕೆ ಒದಗಿಸುತ್ತಾ ಬಂದಿದೆ.

ಪರಿಷತ್ತು ಹಮ್ಮಿಕೊಂಡ ಕಾರ್ಯಕ್ರಮಗಳಲ್ಲಿ ತುಂಬಾ ಪ್ರಮುಖವಾದವುಗಳೆಂದರೆ, ಬೀದರ್‌ದಲ್ಲಿ ಜರುಗಿದ ೭೨ ನೇ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮೊದಲಬಾರಿಗೆ ಪ್ರತ್ಯೇಕವಾದ ಮಕ್ಕಳ ಕವಿಗೋಷ್ಠಿಯೊಂದನ್ನು ಏರ್ಪಾಡು ಮಾಡಿದ್ದು, ಮಕ್ಕಳ ಕವಿಗಳ ಪ್ರೀತಿಗೆ ಪಾತ್ರವಾಯಿತು. ಅದೇ ರೀತಿ ಬಾಗಲಕೋಟೆಯಲ್ಲಿ ಏರ್ಪಡಿಸಲಾಗಿದ್ದ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ರಚನಾ ಕಾರ್ಯಗಾರ, ಶಿವಮೊಗ್ಗ ಅ.ಭಾ.ಸಾಹಿತ್ಯ ಸಮ್ಮೇಳನದಲ್ಲಿ ಪ್ರತ್ಯೇಕ ಮಕ್ಕಳ ಕವಿಗೋಷ್ಠಿ ಹಾಗೂ ಮಕ್ಕಳ ಸಾಹಿತ್ಯ ಗೋಷ್ಠಿ, ಡಾ. ನಲ್ಲೂರ ಪ್ರಸಾದ್ ಹಾಗೂ ಪುಂಡಲೀಕ ಹಾಲಂಬಿ ಅವರ ಅಧಿಕಾರಾವಧಿಯಲ್ಲಿ ಪ್ರತ್ಯೇಕವಾಗಿ ತಲಾ ೨ ದಿನಗಳ ಕಾಲ ಜರುಗಿದ ಮಕ್ಕಳ ಸಾಹಿತ್ಯ ಸಮಾವೇಶಗಳು ಪ್ರಮುಖವಾಗಿವೆ. ಪರಿಷತ್ತಿನ ಕಾರ್ಯಕ್ರಮಗಳಿಂದಾಗಿ ಅನೇಕ ಹೊಸ ಹೊಸ ಮಕ್ಕಳ ಸಾಹಿತಿಗಳು ಬೆಳಕಿಗೆ ಬಂದಿದ್ದಷ್ಟೇ ಅಲ್ಲ, ಅವರು ಉತ್ತಮೋತ್ತಮವಾದ ಕೊಡುಗೆಗಳನ್ನು ನೀಡಿರುವುದು ಸಂತಸದ ಸಂಗತಿಯಾಗಿದೆ. ಜುಲೈ ೨೦೧೫ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವಿಜಯಪುರದ ಕಂದಗಲ್ಲ ಹನುಮಂತರಾವ್ ಸಭಾಂಗಣದಲ್ಲಿ ಎರಡು ದಿನಗಳ ಮಕ್ಕಳ ಸಾಹಿತ್ಯ ಸಮಾವೇಶವನ್ನು ಆಯೋಜಿಸಿತ್ತು. ಎಚ್ಚೆಸ್ವಿ, ಆನಂದ ಪಾಟೀಲ, ರಾಧೇಶ್ ತೋಳ್ಪಾಡಿ, ಬಸವರಾಜ ಕಲ್ಗುಡಿ, ಚಂದ್ರಗೌಡ ಕುಲಕರ್ಗಿ, ಕುಕ್ಕುಂದಾ, ಕೊಡ್ಲೆಕೆರೆ ಮೊದಲಾದ ಸಾಹಿತಿಗಳು ಭಾಗವಹಿಸಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ

೧೯೬೧ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆರಂಭದ ಕಾಲದಿಂದಲೂ ಮಕ್ಕಳ ಸಾಹಿತ್ಯದ ಬರವಣಿಗೆಯನ್ನು ಉತ್ತೇಜಿಸುತ್ತಾ ಬಂದಿದೆ. ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಉತ್ತಮ ಮಕ್ಕಳ ಕಥೆ, ಕವನ, ಬರಹಗಳನ್ನು ಆಯ್ದು ಪ್ರಕಟಿಸುವ, ವಾರ್ಷಿಕ ಸಂಕಲನಗಳನ್ನು ತರುವ ಕಾರ್ಯವನ್ನು ೧೯೮೮ರಲ್ಲಿ ಪ್ರಾರಂಭ ಮಾಡಿತು. ಅಲ್ಲಿಂದ ಇಲ್ಲಿಯವರೆಗೂ ನಿರಂತರವಾಗಿ ಮಕ್ಕಳ ವಾರ್ಷಿಕ ಸಂಪುಟಗಳನ್ನು ಅಕಾಡೆಮಿಯು ಪ್ರಕಟಿಸುವ ಮೂಲಕ ಹಿರಿಕಿರಿಯ ಮಕ್ಕಳ ಸಾಹಿತಿಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಇದರಿಂದಾಗಿ ಅಪಾರ ಸಂಖ್ಯೆಯ ಮಕ್ಕಳ ಬರಹಗಾರರ ಬರಹಗಳು ಬೆಳಕು ಕಾಣಲು ಸಾಧ್ಯವಾಗಿದೆ. ಕಾಲಕಾಲಕ್ಕೆ ನಾಡಿನ ವಿವಿಧ ಭಾಗಗಳಲ್ಲಿ ಮಕ್ಕಳ ಸಾಹಿತ್ಯ ರಚನಾ ಕಮ್ಮಟ, ಕಾರ್ಯಾಗಾರ, ಮಕ್ಕಳ ಕವಿಗೋಷ್ಠಿ, ವಿಚಾರ ಸಂಕಿರಣ ಮೊದಲಾದ ಕಾರ್ಯಕ್ರಮಗಳನ್ನು ವಿವಿಧ ಸಂಘಟನೆಗಳೊಂದಿಗೆ ಏರ್ಪಡಿಸಿದೆ. ಅವುಗಳಲ್ಲಿ ಸಿಂಗಟಾಲೂರಿನಲ್ಲಿ ಜರುಗಿದ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ರಚನಾ ಕಮ್ಮಟ, ಗದುಗಿನಲ್ಲಿ ನಡೆದ ರಾಜ್ಯಮಟ್ಟದ ಮಕ್ಕಳ ಕವಿಗೋಷ್ಠಿ, ವಿಜಾಪೂರದಲ್ಲಿ ಜರುಗಿದ ಮಕ್ಕಳ ಸಾಹಿತ್ಯ ಸ್ವರೂಪ ಹಾಗೂ ಮಕ್ಕಳ ಸಾಹಿತ್ಯ ಚಿಂತನೆ ಮೊದಲಾದವು ಪ್ರಮುಖ ಕಾರ್ಯಕ್ರಮಗಳಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರತಿ ವರ್ಷವೂ ಕೂಡಾ ಕನ್ನಡದಲ್ಲಿ ಪ್ರಕಟವಾಗುವ ಶ್ರೇಷ್ಠ ಮಕ್ಕಳ ಸಾಹಿತ್ಯ ಕೃತಿಯೊಂದಕ್ಕೆ

ಬಹುಮಾನ ನೀಡುವ ಮೂಲಕ ಮಕ್ಕಳ ಸಾಹಿತಿಗಳನ್ನು ಪ್ರೋತ್ಸಾಹಿಸಿ ಗೌರವಿಸುತ್ತಾ ಬರುತ್ತಿದೆ. ಜೂನ್ ೨೦೧೪ರಲ್ಲಿ ಅಕಾಡೆಮಿಯು ವಿಜಯಪುರದಲ್ಲಿ ಉದಯೋನ್ಮುಖ ಬರಹಗಾರರಾಗಿ ಕಾರ್ಯಾಗಾರ ಏರ್ಪಡಿಸಿತ್ತು. ನಾ. ಡಿಸೋಜ ಉದ್ಘಾಟಿಸಿದರು. ಕಂಚ್ಯಾಣಿ ಶರಣಪ್ಪ, ಹ.ಮ. ಪೂಜಾರ, ಚಂದ್ರಗೌಡ ಕುಲಕರ್ಣಿ, ಚಂದ್ರಕಾಂತ ಕರದಳ್ಳಿ, ಡಾ. ಬಸು ಬೇವಿನಗಿಡದ ಮುಂತಾದವರು ಭಾಗವಹಿಸಿದ್ದರು.

ಭಾರತೀ ಸಾಹಿತ್ಯ ಭಂಡಾರ ವಿಜಾಪೂರ

ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಭಾರತೀ ಸಾಹಿತ್ಯ ಭಂಡಾರ ನೀಡಿದ ಕೊಡುಗೆ ಅನುಪಮವಾಗಿದೆ. ಖ್ಯಾತ ಮಕ್ಕಳ ಸಾಹಿತಿಯಾಗಿದ್ದ ದಿ. 'ಸಿಸು' ಸಂಗಮೇಶರು ೧೯೫೪ ರಲ್ಲಿ ವಿಜಾಪೂರದಲ್ಲಿ (ಮೊದಲು ಯರನಾಳದಲ್ಲಿ ನಂತರ ವಿಜಾಪೂರಕ್ಕೆ ಸ್ಥಳಾಂತರಗೊಂಡಿತು).

ಭಾರತೀ ಸಾಹಿತ್ಯ ಭಂಡಾರವನ್ನು ಮಕ್ಕಳ ಸಾಹಿತ್ಯ ಬರವಣಿಗೆಯ ಪ್ರೋತ್ಸಾಹ ಹಾಗೂ ಪ್ರಕಟನೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಖ್ಯಾತ ಸಾಹಿತಿಗಳಾದ ಸಿಂಪಿ ಲಿಂಗಣ್ಣ, ಮಿರ್ಜಿ ಅಣ್ಣಾರಾಯ, ಶಂ. ಗು. ಬಿರಾದಾರ ಮುಂತಾದವರ ಒಂದು ಸಲಹಾ ಸಮಿತಿಯೊಂದಿಗೆ ಸ್ಥಾಪಿಸಿದರು. ಇದು ಮುಂದೆ ರಾಜ್ಯದ ಮೂಲೆ ಮೂಲೆಯಲ್ಲಿರುವ ಬರಹಗಾರರು ಮಕ್ಕಳ ಸಾಹಿತ್ಯ ರಚನಾ ಕ್ಷೇತ್ರದಲ್ಲಿ ನೆಲೆವೂರುವಂತೆ ಮಾಡಿದ್ದು ಒಂದು ಮೈಲಿಗಲ್ಲು ಎಂದೇ ಹೇಳಬೇಕು.

'ಸಿಸು' ಸಂಗಮೇಶರು 'ಭಾರತೀ ಸಾಹಿತ್ಯ ಭಂಡಾರ'ದಿಂದ ರಾಜ್ಯ ಮಟ್ಟದಲ್ಲಿ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಸ್ವರಚಿತ ಮಕ್ಕಳ ಕವನ ಮತ್ತು ಕಥಾ ಸ್ಪರ್ಧೆಯನ್ನು ಏರ್ಪಡಿಸಿದರು. ಸ್ಪರ್ಧೆಗೆ ಆಯ್ಕೆಯಾದ ಉತ್ತಮ ಮಕ್ಕಳ ಬರಹಗಳ ಜೊತೆಗೆ ನಾಡಿನ ಹಿರಿಯರಿಂದ ಮಕ್ಕಳ ಕತೆ, ಕವನಗಳನ್ನು ಮುದ್ದಾಂ ಆಗಿ ಬರೆಯಿಸಿ ಅವುಗಳನ್ನು ವಯಸ್ಸಿನುಗುಣವಾಗಿ ವಿಭಾಗಿಸಿ "ಆಣೆಕಲ್ಲು ಭಾಗ-೧" ಹಾಗೂ "ಆಣೆಕಲ್ಲು ಭಾಗ-೨" ಎಂಬ ಕಥಾ ಸಂಕಲನಗಳನ್ನು ೧೯೫೫ ರಲ್ಲಿ ಭಂಡಾರವು ಪ್ರಕಟಿಸಿತು. ಈ ಸಂಕಲನದಲ್ಲಿ ಖ್ಯಾತನಾಮರಾದ ಡಾ. ಪಾಟೀಲ ಪುಟ್ಟಪ್ಪ, ಶಾಂತರಸ, ಬೀಚಿ, ಸಿಂಪಿಲಿಂಗಣ್ಣ ಮುಂತಾದವರ ಮಕ್ಕಳ ಕತೆಗಳಿರುವದು ವಿಶೇಷವಾಗಿದೆ. ಅದೇ ರೀತಿಯಾಗಿ ಕವಿತೆಗಳನ್ನು ಒಳಗೊಂಡಂತೆ "ಪುಟಚೆಂಡು ಭಾಗ-೧" ಹಾಗೂ "ಪುಟಚೆಂಡು ಭಾಗ-೨" ಎಂಬ ಕವಿತಾಸಂಕಲನಗಳನ್ನು ಕೂಡಾ ಹೊರ ತಂದಿತು. ಈ ಸಂಗ್ರಹದಲ್ಲಿ ಖ್ಯಾತ ಕವಿಗಳಾದ ದ. ರಾ. ಬೇಂದ್ರೆ, ಕುವೆಂಪು, ಈಶ್ವರ ಸಣಕಲ್ಲ ಮುಂತಾದ ಖ್ಯಾತ ಕವಿಗಳ ಮಕ್ಕಳ ಕವಿತೆಗಳಿದ್ದವು. ಈ ನಾಲ್ಕು ಕೃತಿಗಳು ರಾಜ್ಯದ ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಸಂಚಲನವನ್ನೇ ಉಂಟು ಮಾಡಿದವಲ್ಲದೇ ಮಕ್ಕಳ ಸಾಹಿತ್ಯದ ಬರವಣಿಗೆಗೆ ನಾಂದಿ ಹಾಡಿದವು. ಮುಂದೆ "ನಾವು ನಮ್ಮವರು" ಎಂಬ ಸಂಕಲನ ಪ್ರಕಟಿಸುವ ಮೂಲಕ ರಾಜ್ಯದ ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕ ಸಾಹಿತಿಗಳನ್ನು ಸಂಪರ್ಕಿಸಿ ಅವರನ್ನು ಮಕ್ಕಳ ಸಾಹಿತ್ಯ ರಚನಾ ಕ್ಷೇತ್ರದಲ್ಲಿ ತೊಡಗುವಂತೆ ಮಾಡಿತು. ೧೯೫೫ರಿಂದ ೨೦೦೦ರ ಅವಧಿಯವರೆಗೆ ಬೇರೆ ಬೇರೆ ಮಕ್ಕಳ ಸಾಹಿತಿಗಳ ಸುಮಾರು ಒಂದು ನೂರು ಗ್ರಂಥಗಳನ್ನು ಪ್ರಕಟಿಸಿತು. ಕಾಲಕಾಲಕ್ಕೆ ಪುಸ್ತಕ ಬಿಡುಗಡೆ ಕಾರ್ಯಕ್ರಮ, ಕವಿಗೋಷ್ಠಿ, ಮಕ್ಕಳ ಸಾಹಿತ್ಯ ಚಿಂತನ, ಸನ್ಮಾನ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಿ

ಮಕ್ಕಳ ಸಾಹಿತಿಗಳ ಪ್ರೀತಿಗೆ ಪಾತ್ರವಾಯಿತು. ಭಾರತೀ ಸಾಹಿತ್ಯ ಭಂಡಾರ ಪ್ರಕಟಿಸಿದ ಬಹುತೇಕ ಕೃತಿಗಳು ದ್ವಿಮುದ್ರಣದಿಂದ ಹಿಡಿದು ೧೪ ಸಲ ಮುದ್ರಣ ಭಾಗ್ಯ ಕಂಡಿದ್ದು, ಈ ಕೃತಿಗಳ ಜನಪ್ರಿಯತೆಯನ್ನು ಎತ್ತಿ ತೋರಿಸುತ್ತವೆ. 'ಸಿಸು' ಸಂಗಮೇಶ, ಶಂ. ಗುಂ. ಬಿರಾದಾರ, ಪಾ. ಭೀ. ಪಾಟೀಲ, ರಸಿಕ ಪುತ್ತಿಗೆ, ಸಿದ್ಧಯ್ಯ ಪುರಾಣಿಕ, ಚೆನ್ನವೀರ ಕಣವಿ, ಮಾದೇವಮಿತ್ರ ಪರಶುರಾಮ ಚಿತ್ರಗಾರ, ಸತ್ಯಾರ್ಥಿ, ಪಳಕಳ ಸೀತಾರಾಮಭಟ್ಟ ಮುಂತಾದ ಖ್ಯಾತನಾಮರ ಪುಸ್ತಕಗಳನ್ನು ಪ್ರಕಟಿಸಿದ ಹೆಮ್ಮೆ ಭಾರತೀ ಸಾಹಿತ್ಯ ಭಂಡಾರಕ್ಕಿದೆ. ತನ್ನ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯ ಪ್ರಶಸ್ತಿ, ಧಾರವಾಡ ವಿದ್ಯಾವರ್ಧಕ ಸಂಘದ ಬಹುಮಾನ, ಕೇಂದ್ರ ಸರಕಾರದ ರಾಷ್ಟ್ರ ಪ್ರಶಸ್ತಿ, ಕಾವ್ಯಾನಂದ ಪ್ರಶಸ್ತಿ, ಚಿಕ್ಕೋಡಿ ತಮ್ಮಣ್ಣಪ್ಪ ಪುರಸ್ಕಾರ ಮುಂತಾದ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದ ಹೆಗ್ಗಳಿಕೆ ಭಾರತೀ ಸಾಹಿತ್ಯ ಭಂಡಾರದ್ದಾಗಿದೆ.

ಇದೇ ಭಾರತೀ ಸಾಹಿತ್ಯ ಭಂಡಾರವು ೧೯೭೭ ರಲ್ಲಿ "ಬಾಲಭಾರತಿ" ಎಂಬ ಮಕ್ಕಳ ಮಾಸ ಪತ್ರಿಕೆಯನ್ನು ಆರಂಭಿಸಿತು. ಭಾರಿ ಭರವಸೆಯೊಂದಿಗೆ ಆ ಕಾಲದಲ್ಲಿ ಹೊರಬಂದ ಬಾಲಭಾರತಿ ನಾಲ್ಕಾರು ಸಂಚಿಕೆಗಳಲ್ಲಿಯೇ ತುಂಬಾ ಜನಪ್ರಿಯವಾಯಿತು. ಅನೇಕ ಹೊಸ ಹೊಸ ಮಕ್ಕಳ ಲೇಖಕರನ್ನು ಇದು ಹುಟ್ಟುಹಾಕಿತು. ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಕಥೆ ಕಟ್ಟಿರಿ, ಬಣ್ಣ ತುಂಬಿರಿ, ನಾನು ಯಾರು?, ನೀವೆಷ್ಟು ಬಲ್ಲಿರಿ? ಇತ್ಯಾದಿ ಅಂಕಣಗಳು ಮಕ್ಕಳನ್ನಷ್ಟೇ ಅಲ್ಲ, ಮಕ್ಕಳ ಸಾಹಿತಿಗಳಿಗೂ ಅವಕಾಶಗಳನ್ನು ಕಲ್ಪಿಸಿತು. ವಾರ್ಷಿಕೋತ್ಸವಗಳನ್ನು ಅದ್ದೂರಿಯಾಗಿ ಆಚರಿಸಿ ಅದರಂಗವಾಗಿ ವಿಶೇಷ ಸಂಚಿಕೆಗಳನ್ನು ತರುವ ಮೂಲಕ ಮಕ್ಕಳಿಗಾಗಿ ಮಕ್ಕಳ ಸಾಹಿತಿಗಳಿಗೆ ಸ್ಪರ್ಧೆಗಳನ್ನು ಏರ್ಪಡಿಸಿ ಉತ್ತಮ ಗುಣಮಟ್ಟದ ಮಕ್ಕಳ ಸಾಹಿತ್ಯ ರಚನೆಯಾಗಲು ಪ್ರೋತ್ಸಾಹ ನೀಡಿತು.

ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ

ಮಕ್ಕಳ ಸಾಹಿತ್ಯ ಬೆಳವಣಿಗೆಯಲ್ಲಿ ತುಂಬಾ ಮಹತ್ವದ ಕಾರ್ಯಗೈದ ಮೈಸೂರಿನ "ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ"ವು ಖ್ಯಾತ ಸಾಹಿತಿ ಡಾ. ದೇ. ಜವರೇಗೌಡರ ಅವರ ಅಧ್ಯಕ್ಷತೆಯಲ್ಲಿ ಸಂಪಾದಕ ಮಂಡಳಿಯೊಂದನ್ನು ರಚಿಸಿ ಅಪರೂಪ ಹಾಗೂ ಅಮೂಲ್ಯ ಎನ್ನಬಹುದಾದ "ಜ್ಞಾನಗಂಗೋತ್ರಿ" ಎಂಬ ಏಳು ಸಂಪುಟಗಳನ್ನು ಪ್ರಕಟಿಸಿತು. ಖ್ಯಾತ ಸಾಹಿತಿ ನಿರಂಜನರ ಸಂಪಾದಕತ್ವದಲ್ಲಿ ಸಪ್ತಸ್ವರಗಳಂತೆ ಸಪ್ತವರ್ಣಗಳಂತೆ ಜ್ಞಾನಗಂಗೋತ್ರಿಯ ಏಳು ಸಂಪುಟಗಳು ಮೈದಳೆದು ನಾಡಿನ ಮಕ್ಕಳ ಹೃದಯವನ್ನು ಅರಳಿಸಿದವು.

ಏಳು ಸಂಪುಟಗಳು ಸೇರಿ ಇವು ಸುಮಾರು ೪೮೦೦ ಪುಟ ವಿಸ್ತಾರಗೊಂಡಿವೆ. ಇವುಗಳಲ್ಲಿ ಅಡಕವಾದ ಲೇಖನಗಳ ಸಂಖ್ಯೆ ೪೭೮೨. ಚಿತ್ರಗಳ ಸಂಖ್ಯೆ ೮೦೦೦ ಕ್ಕೂ ಮಿಕ್ಕಿವೆ. ಏಳು ಸಂಪುಟಗಳಲ್ಲೂ ವಿಷಯಾನುಕ್ರಮವಾಗಿ ಲೇಖನಗಳು ಬಂದಿದೆ. ಅದೆಲ್ಲ ಪ್ರತಿ ಸಂಪುಟದಲ್ಲಿ ಅಕಾರಾದಿಯಾಗಿ ವ್ಯವಸ್ಥೆಗೊಂಡಿದ್ದರಿಂದ ಮಕ್ಕಳಿಗೆ ಹೆಚ್ಚಿನ ಪ್ರಯೋಜನ ನೀಡಿವೆ. ಮೊದಲನೆಯ ಸಂಪುಟ ಮನುಕುಲದ ಕಥೆ ಕುರಿತಿದ್ದು, ಗವಿಮಾನವನಿಂದ ಗಗನಮಾನವನವರೆಗೆ ಮಾನವ ವಿಕಾಸ ಹೊಂದಿದ ಸುಮಾರು ೬೦೦ ಲೇಖನಗಳಿವೆ.

ಎರಡನೆಯ ಸಂಪುಟ ಜೀವಜಗತ್ತನ್ನು, ಮೂರನೆಯ ಸಂಪುಟ ಯಂತ್ರ ಜಗತ್ತನ್ನು, ಐದನೆಯ ಸಂಪುಟ ಕಲೆ ಸಾಹಿತ್ಯವನ್ನು ಪರಿಚಯಿಸುತ್ತಿವೆ. ಆರನೆಯ ಸಂಪುಟ ಕ್ರೀಡೆ, ಮನೋಲ್ಲಾಸಕ್ಕೆ ಮೀಸಲಾಗಿದ್ದರೆ, ಏಳನೆಯ ಸಂಪುಟ 'ಭಾರತದ ಕಥೆ'ಯನ್ನು ಸ್ವಾರಸ್ಯಮಯವಾಗಿ ಹೇಳುತ್ತದೆ. "ಜ್ಞಾನಗಂಗೋತ್ರಿ" ಕನ್ನಡ ಮಕ್ಕಳಿಗೆ ಮತ್ತು ಪ್ರಾಥಮಿಕ ಶಾಲಾ ಮಾಧ್ಯಮಿಕ ಶಾಲಾ ಮಕ್ಕಳಿಗೆ ಪಾಲಕರಿಗೆ ಪ್ರಪಂಚದ ಅಗಾಧ ಸ್ವರೂಪವನ್ನು ಪರಿಚಯಿಸುವ ಪ್ರಯತ್ನವನ್ನು ಸಫಲಮಾಡಿಕೊಟ್ಟ ಕೀರ್ತಿ ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರಕ್ಕೆ ಸಲ್ಲುತ್ತದೆ.

ವಿಶ್ವವಿದ್ಯಾಲಯಗಳು

ಮಕ್ಕಳ ಸಾಹಿತ್ಯ ಬೆಳವಣಿಗೆಯಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಪಾತ್ರವನ್ನು ಅಲಕ್ಷಿಸುವಂತಿಲ್ಲ. ಮೈಸೂರು ವಿಶ್ವವಿದ್ಯಾಲಯವು ಶಾಲಾ ಮಕ್ಕಳಿಗೂ ಪ್ರಯೋಜನವಾಗುವಂತಹ ಇಂಗ್ಲಿಷ್ – ಕನ್ನಡ ನಿಘಂಟನ್ನು ೧೯೪೬ರಲ್ಲಿ ಹೊರತಂದಿತಲ್ಲದೇ ಕನ್ನಡದಲ್ಲಿ ಹಿರಿಯರಿಗೆ ಮತ್ತು ಕಿರಿಯರಿಗೆ ಪಂಡಿತ ಪಾಮರರು ಹೀಗೆ ಎಲ್ಲರಿಗೂ ಉಪಯುಕ್ತವಾಗುವಂತಹ ಕನ್ನಡ ವಿಶ್ವಕೋಶವನ್ನು ೧೪ ಸಂಪುಟಗಳಲ್ಲಿ ಪ್ರಕಟಿಸಿತು. ಈ ವಿಶ್ವಕೋಶಗಳು ಮಕ್ಕಳಿಗೆ ಹಾಗೂ ಮಕ್ಕಳ ಸಾಹಿತ್ಯ ರಚನೆಕಾರರಿಗೆ ತುಂಬಾ ಉಪಯುಕ್ತವಾಗಿವೆ. ಇದೇ ವಿಶ್ವವಿದ್ಯಾಲಯ ಮುಂದೆ ಹೊರತಂದ "ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ" ಕೂಡಾ ಬೃಹದ್ಗ್ರಂಥವಾಗಿ ಕರ್ನಾಟಕದ ಬಗ್ಗೆ ಇರುವ ಆಕರ ಗ್ರಂಥವಾಗಿದೆ. ಇದಲ್ಲದೇ ಇದೇ ಮೈಸೂರು ವಿಶ್ವವಿದ್ಯಾಲಯವು ಹಮ್ಮಿಕೊಂಡ "ಕನ್ನಡ ಗ್ರಂಥ ಸೂಚಿ" ಯೋಜನೆಯಿಂದಾಗಿ ಅನೇಕ ಮಕ್ಕಳ ಪುಸ್ತಕಗಳು ಬೆಳಕಿಗೆ ಬಂದವಲ್ಲದೇ ಅವುಗಳ ಮಾರಾಟ, ವಿಮರ್ಶೆಯಿಂದಾಗಿ ಮಕ್ಕಳ ಸಾಹಿತಿಗಳಿಗೆ ತುಂಬಾ ಪ್ರಯೋಜನವಾಯಿತು. ಇದೇ ವಿಶ್ವವಿದ್ಯಾಲಯ ಹೊರತಂದ "ಆಧುನಿಕ ಕನ್ನಡ ಬರಹಗಾರರು" ಕೃತಿಯು ಮಕ್ಕಳ ಸಾಹಿತಿಗಳಿಗೆ ಪ್ರೋತ್ಸಾಹವನ್ನು ನೀಡಿತು. ಕನ್ನಡ ಸಾಹಿತ್ಯ ಚರಿತ್ರೆ ಬೃಹತ್ ಸಂಪುಟಗಳು ಕೂಡಾ ಮಕ್ಕಳ ಸಾಹಿತ್ಯ ಬೆಳವಣಿಗೆಗೆ ಪೂರಕ ವಾತಾವರಣವನ್ನುಂಟು ಮಾಡಿದವು. ಬೆಂಗಳೂರು ವಿಶ್ವವಿದ್ಯಾಲಯ ಸುಮಾರು ಹತ್ತು ಸಂಪುಟಗಳಲ್ಲಿ ಹೊರತಂದ ನಮ್ಮ ಕನ್ನಡ ಸಾಹಿತ್ಯ ಚರಿತ್ರೆಗಳು ತುಂಬಾ ಉಪಯುಕ್ತವಾಗಿದ್ದು, ಮಕ್ಕಳಿಗೂ ಅರ್ಥವಾಗುವಂತಿವೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ೧೯೯೪ ರಲ್ಲಿ ಕಿರಿಯರ ಕರ್ನಾಟಕ (ಕರ್ನಾಟಕ ಕೋಶ) ಎಂಬ ಗ್ರಂಥವನ್ನು ಪ್ರಕಟಿಸಿದೆ. ಬೆಂಗಳೂರು ವಿಶ್ವವಿದ್ಯಾಲಯವು "ಸಾಹಿತ್ಯ ವಾರ್ಷಿಕ" ಯೋಜನೆಯಡಿ ಹೊರತಂದ ವಾರ್ಷಿಕ ಸಂಪುಟಗಳು ಮಕ್ಕಳ ಸಾಹಿತ್ಯ ಮತ್ತಷ್ಟು ಬೆಳಕು ಕಾಣಲು ಸಹಾಯ ಮಾಡಿದವು. ಕರ್ನಾಟಕ ವಿಶ್ವವಿದ್ಯಾಲಯ, ಮಂಗಳೂರು, ಕುವೆಂಪು, ಬೆಂಗಳೂರು, ಗುಲ್ಬರ್ಗಾ ಮುಂತಾದ ವಿಶ್ವವಿದ್ಯಾಲಯಗಳು ಮಕ್ಕಳ ಸಾಹಿತ್ಯ ಹಾಗೂ ಮಕ್ಕಳ ಸಾಹಿತಿಗಳ ಬದುಕು ಬರಹ, ಸಾಹಿತ್ಯಕ ಕೊಡುಗೆಯ ಮೇಲೆ ಸಂಶೋಧನೆಗೆ ಅವಕಾಶ ನೀಡಿದ್ದರಿಂದಾಗಿ ಈ ವಿಷಯಗಳ ಕುರಿತ ಅನೇಕ ಎಂ.ಫಿಲ್., ಪಿಎಚ್.ಡಿ. ಪ್ರಬಂಧಗಳು ಹೊರಬರುವ ಮೂಲಕ ಮಕ್ಕಳ ಸಾಹಿತ್ಯದ ಬೆಲೆಯನ್ನು ಹೆಚ್ಚಿಸಲೂ ಕಾರಣೀಭೂತವಾದವು. ಕೆಲವು ವಿಶ್ವವಿದ್ಯಾಲಯಗಳು ಪ್ರಚಾರ ಉಪನ್ಯಾಸ ಮಾಲೆಯಲ್ಲಿ ಮಕ್ಕಳ ಸಾಹಿತ್ಯ ಕುರಿತಾದ ಕಿರುಪುಸ್ತಕಗಳನ್ನು ಹೊರತಂದಿವೆ.

ಮೈಸೂರು ರಾಜ್ಯ ಶಿಕ್ಷಣ ಮತ್ತು ಸಂಶೋಧನಾ ಇಲಾಖೆ ಹಾಗೂ ವಿದ್ಯಾ ಇಲಾಖೆ

ಮೈಸೂರು ರಾಜ್ಯ ಪಠ್ಯ ಸಂಶೋಧನಾ ಸಂಸ್ಥೆಯು ರಾಜ್ಯ ಹಾಗೂ ಕೇಂದ್ರ ಸರಕಾರಗಳ ಆಶ್ರಯದಲ್ಲಿ ೧೯೫೯-೬೦ರಲ್ಲಿ ಬೆಂಗಳೂರಿನಲ್ಲಿ ಆರು ವಾರಗಳ ಕಾಲದ ಮಕ್ಕಳ ಸಾಹಿತ್ಯ ಶಿಬಿರವನ್ನು ಏರ್ಪಡಿಸಿ, ಮಕ್ಕಳ ಸಾಹಿತ್ಯಕ್ಕೆ ಪ್ರೋತ್ಸಾಹಿಸಿತು. ಈ ಶಿಬಿರದಲ್ಲಿ ಭಾರತಿಸುತ ಶಾಂತರಸ, ಮಿರ್ಜಿ ಅಣ್ಣಾರಾಯ, ಪಂಚಾಕ್ಷರಿ ಹಿರೇಮಠ, ಶಂ. ಗು. ಬಿರಾದಾರ, 'ಸಿಸು' ಸಂಗಮೇಶ ಅವರು ತರಬೇತಿಯನ್ನು ಪಡೆದರಲ್ಲದೇ ಇವರು ಮುಂದೆ ಮಕ್ಕಳ ಸಾಹಿತ್ಯಕ್ಕೆ ಉತ್ತಮ ಕೊಡುಗೆ ನೀಡಲು ಪ್ರೇರೇಪಿಸಿತು. ಈ ಶಿಬಿರದಿಂದ ಮಕ್ಕಳ ಸಾಹಿತ್ಯದ ಬೆಳೆ ಹುಲುಸಾಗಿ ಸಾಗಿದ್ದನ್ನು ಮನಗಂಡು ೧೯೬೧-೬೨ರಲ್ಲಿ ಮತ್ತೆ ಒಂದು ಮಕ್ಕಳ ಸಾಹಿತ್ಯ ರಚನಾ ಕಮ್ಮಟವನ್ನು ನಡೆಸಿತು. ಈ ಕಮ್ಮಟಗಳಿಂದ ಶಾಸ್ತ್ರೀಯವಾಗಿ ಮಕ್ಕಳ ಸಾಹಿತ್ಯ ರಚನೆಯ ಅರಿವು ಮೂಡಿಸಿತು. ಮುಂದೆ ಇದೇ ಇಲಾಖೆಯು ೧೯೬೪ರಲ್ಲಿ ಈಗಾಗಲೇ ಮಕ್ಕಳ ಸಾಹಿತ್ಯ ರಚನೆಯಲ್ಲಿ ನಿರತರಾದವರನ್ನು ಗುರುತಿಸಿ ಭಾರತದ ಬೇರೆ ಬೇರೆ ರಾಜ್ಯ ಹಾಗೂ ಪಟ್ಟಣಗಳಿಗೆ ಆಯ್ಕೆ ಮಾಡಿ ಕಳಿಸಿತಲ್ಲದೇ, ಅವರು ಅಲ್ಲಿ ಒಂದು ವಾರ ತಂಗಿ ಸಂಚರಿಸಿ, ಆಯಾ ಪ್ರದೇಶದ ಬಗ್ಗೆ ಕನ್ನಡದ ಮಕ್ಕಳಿಗಾಗಿ ಒಂದು ಗ್ರಂಥ ಒಂದನ್ನು ರಚಿಸಿಕೊಡುವ ಯೋಜನೆಯನ್ನು ರೂಪಿಸಿತು. ಇದರಿಂದಾಗಿ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಒಳ್ಳೆಯ ಕೃತಿಗಳು ಆವಿಷ್ಕಾರವಾದವು. ಈ ಬಗೆಯ ಮಕ್ಕಳ ಕೃತಿಗಳನ್ನು ವಿದ್ಯಾ ಸಂಶೋಧನಾ ಸಂಸ್ಥೆಯು ಪ್ರಕಟಿಸಿ ನಾಡಿನ ಮಕ್ಕಳ ಕೈಗೆ ತಲಪಿಸಿತು. ಕಮ್ಮಟಗಳ ಮೂಲಕ ಇಲಾಖೆಗಳು ೩ ರಿಂದ ೫, ೫ರಿಂದ ೭, ೭ರಿಂದ ೯, ೯ರಿಂದ ೧೪, ೧೪ರಿಂದ ೧೮ ಈ ಐದು ಸಾಮಾನ್ಯ ಗುಂಪುಗಳನ್ನಾಗಿ ವರ್ಗೀಕರಿಸಿ ಮಕ್ಕಳ ಮಾನಸಿಕ ಸ್ಥಿತಿಗತಿಗೆ ಅನುಗುಣವಾಗಿ ವಸ್ತು ಪದಗಳ ಆಯ್ಕೆ ತಿಳಿಸಿಕೊಟ್ಟಿದ್ದರಿಂದ ಅಲ್ಲಿಂದ (ಶಾಸ್ತ್ರೀಯ) ಅದೇ ರೀತಿಯ ಮಕ್ಕಳ ಸಾಹಿತ್ಯದ ರಚನೆ ಆರಂಭವಾಯಿತು.

೧೯೮೪ರಲ್ಲಿ ಧಾರವಾಡ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯು ಮಕ್ಕಳಿಗೆ ಉತ್ತಮವಾದ ಕತೆ, ಕವನಗಳನ್ನು ನೀಡಬೇಕೆಂಬ ಉದ್ದೇಶದಿಂದ ೧ ಮತ್ತು ೨ ನೇ ತರಗತಿಯಲ್ಲಿ ಓದುವ ಮಕ್ಕಳಿಗೆ ಉಪಯುಕ್ತವಾಗುವಂತಹ ಅಭ್ಯಾಸ ಪತ್ರಿಕೆಗೆ ಅನುಗುಣವಾಗಿ ಕಮ್ಮಟವೊಂದನ್ನು ಏರ್ಪಡಿಸಿತು. ಇದಕ್ಕಾಗಿ ನಾಡಿನ ಮಕ್ಕಳ ಬರಹಗಾರರಿಂದ ಕವನಗಳನ್ನು ಬರೆಯಿಸಿ ತರಿಸಿಕೊಂಡು ಅವುಗಳನ್ನು ವಿಭಾಗಿಸಿ "ಬಟ್ಟಲು ತುಂಬಾ ಬಾರೀಕಾಯಿ" ಎಂಬ ಸುಂದರ ಪ್ರಾತಿನಿಧಿಕ ಕವನ ಸಂಕಲನವನ್ನು ಪ್ರಕಟಿಸಿತು. ಇದು ನಲವತ್ತು ಜನ ಮಕ್ಕಳ ಕವಿಗಳ ಸುಮಾರು ನೂರಾಐವತ್ತು ಮಕ್ಕಳ ಕವನಗಳನ್ನು ಹೊಂದಿದೆ. ಕನ್ನಡದ ಮಕ್ಕಳ ಕವನ ಸಾಹಿತ್ಯದಲ್ಲಿ ಇದು ಅಪೂರ್ವವಾದ ಹಾಗೂ ಮಹತ್ವದ ಸಂಕಲನವಾಗಿದೆಯೆಂದು ಹೇಳಬಹುದು.

ವಿದ್ಯಾ ಇಲಾಖೆಯು ಪಠ್ಯ ಪುಸ್ತಕಗಳಲ್ಲಿ ಚಿತ್ರಗಳಲ್ಲಿ ಸುಧಾರಣೆ ತರಲು ೧೯೬೦ರ ದಶಕದಲ್ಲಿ ಹೆಸರಾಂತ ಚಿತ್ರಕಲಾವಿದರಾದ ಡಾ. ಮಿಣಜಗಿ ಅವರ ಮಾರ್ಗದರ್ಶನದಲ್ಲಿ ಕಲಾವಿದರ ಕಮ್ಮಟವನ್ನು ಏರ್ಪಡಿಸಿತು. ಇದು ಮಕ್ಕಳ ಸಾಹಿತ್ಯ ಕೃತಿಗಳು ಸುಂದರವಾದ ಚಿತ್ರಗಳಿಂದ ಹೊರ ಬರಲು ಸಹಾಯವಾಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯು

ಅನೇಕ ಯೋಜನೆಗಳಡಿಯಲ್ಲಿ ಹಲವಾರು ಕಾರ್ಯಾಗಾರ ಕಮ್ಮಟಗಳನ್ನು ಕಾಲಕಾಲಕ್ಕೆ ಹಮ್ಮಿಕೊಳ್ಳುತ್ತಾ, ಜೊತೆಗೆ ಪಠ್ಯಪುಸ್ತಕಗಳಲ್ಲಿ ಮಕ್ಕಳ ಸಾಹಿತ್ಯದ ಕಥೆ, ಕವನ, ಲೇಖನಗಳನ್ನು ಪ್ರಕಟಿಸುತ್ತಾ ಬಂದಿದ್ದರಿಂದ ಅನೇಕ ಮಕ್ಕಳ ಸಾಹಿತಿಗಳು ತುಂಬಾ ಜನಪ್ರಿಯವಾಗಲು ಸಾಧ್ಯವಾಯಿತು. ೧೯೭೫ರಿಂದ ೧೯೯೧ರವರೆಗೆ ಅಖಂಡ ೧೬ ವರ್ಷಗಳ ಕಾಲ "ಅನ್ನದಾತ" ಎಂಬ ಕವಿತೆಯನ್ನು ಪಠ್ಯದಲ್ಲಿ ಸೇರಿಸಿಕೊಂಡಿದ್ದರಿಂದ ಈ ಕವಿತೆಯ ರಚನೆಕಾರರಾದ "ಸತ್ಯಾರ್ಥಿ" ಪ್ರಮುಖ ಮಕ್ಕಳ ಕವಿಯಾಗಿ ನಾಡಿನಾದ್ಯಾಂತ ಹೆಸರುವಾಸಿಯಾಗಲು ಸಾಧ್ಯವಾಯಿತು.

ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿ

ಸರಕಾರವು ಮಕ್ಕಳ ಸಾಹಿತ್ಯಕ್ಕಾಗಿ ಪ್ರತ್ಯೇಕವಾಗಿ ಅಕಾಡೆಮಿಯೊಂದನ್ನು ಸ್ಥಾಪಿಸದೇ ಇರುವುದನ್ನು ಮನಗಂಡು ಮಕ್ಕಳ ಸಾಹಿತ್ಯ ಪ್ರಚಾರ ಪ್ರಸಾರದ ಉದ್ದೇಶದಿಂದ ರಸಿಕ ಪುತ್ತಿಗೆ, ಪಳಕಳ ಸೀತಾರಾಮಭಟ್ಟ ಬಿ. ಶ್ರೀ. ಪಾಂಡುರಂಗರಾಯ, ಶಂ. ಗು. ಬಿರಾದಾರ, ಈಶ್ವರ ಕಮ್ಮಾರ ಮುಂತಾದವರ ಜೊತೆಗೂಡಿ 'ಸಿಸು' ಸಂಗಮೇಶರು ವಿಜಾಪೂರದಲ್ಲಿ ೧೯೮೫ರಲ್ಲಿ "ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿ" ಎಂಬ ಖಾಸಗಿ ಸಂಸ್ಥೆಯೊಂದನ್ನು ಹುಟ್ಟುಹಾಕಿದರು. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಅಕಾಡೆಮಿಯ ಪ್ರತಿನಿಧಿ ಅಥವಾ ಜಿಲ್ಲಾಧ್ಯಕ್ಷರನ್ನೂ ನೇಮಿಸಲಾಯಿತು. ರಾಜ್ಯದಲ್ಲಿಯ ಹಿರಿಯ ಕಿರಿಯ ಮಕ್ಕಳ ಸಾಹಿತಿಗಳನ್ನು ಒಂದೇ ವೇದಿಕೆಯಡಿ ತರುವ ಪ್ರಯತ್ನ ಅಕಾಡೆಮಿಯ ಮೂಲಕ ಸಾಧ್ಯವಾಯಿತು. ಅಕಾಡೆಮಿಯು ಅಸ್ತಿತ್ವಕ್ಕೆ ಬಂದ ಏಳೇ ತಿಂಗಳಲ್ಲಿಯೇ ಕಲಬುರ್ಗಿಯಲ್ಲಿ ಪ್ರಥಮ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ಡಾ. ಶಿವರಾಮ ಕಾರಂತರ ಸರ್ವಾಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿಸಿತು. ರಾಜ್ಯದಲ್ಲಿ ಮೊದಲ ಬಾರಿಗೆ ನಡೆದ ಈ ಸಮ್ಮೇಳನದಲ್ಲಿ ನಾಡಿನ ಬಹಳಷ್ಟು ಮಕ್ಕಳ ಬರಹಗಾರರು ಪಾಲ್ಗೊಂಡು ಸಮ್ಮೇಳನದ ಸವಿಯನ್ನು ಸವಿದರು. ಮುಂದೇ ಕೆಲವೇ ತಿಂಗಳಲ್ಲಿ ಕಲಬುರ್ಗಿ ಜಿಲ್ಲೆಯ ಸ್ಟೇಶನ್ ಗಾಣಗಾಪೂರದಲ್ಲಿ ತರಂಗ ವಾರ ಪತ್ರಿಕೆಯ ಸಂಪಾದಕರಾಗಿದ್ದ ಸಂತೋಷಕುಮಾರ ಗುಲ್ವಾಡಿ ಸರ್ವಾಧ್ಯಕ್ಷತೆಯಲ್ಲಿ ಗಡಿನಾಡ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಂಡಿತು. ಈ ಎರಡೂ ಸಮ್ಮೇಳನಗಳಿಂದ ಆ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ಸಾಹಿತ್ಯ ರಚನೆಕಾರರು ಹೊರಹೊಮ್ಮಲು ಕಾರಣವಾಯಿತು.

ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿಯು ೧೯೮೫ ರ ಅಕ್ಟೋಬರ್‌ನಲ್ಲಿ ದ್ವಿತೀಯ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಧಾರವಾಡದಲ್ಲಿ ಡಾ. ಸಿದ್ಧಯ್ಯ ಪುರಾಣಿಕರ ಸರ್ವಾಧ್ಯಕ್ಷತೆಯಲ್ಲಿ ಮುಂದೆ ೧೯೮೮ ಜನವರಿ ೨೩ರಿಂದ ೨೫ ರವರೆಗೆ ಆದಿಚುಂಚನಗಿರಿಯಲ್ಲಿ ಮಕ್ಕಳ ಸಾಹಿತಿ ಬಿ. ಪಾಂಡುರಂಗರಾಯರ ಸರ್ವಾಧ್ಯಕ್ಷತೆಯಲ್ಲಿ ಅದ್ದೂರಿಯಾಗಿ ಮೂರನೆಯ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ನೆರವೇರಿಸಿತು. ಈ ಸಮ್ಮೇಳನಗಳಲ್ಲಿ ನಾಡಿನಾದ್ಯಂತ ಬಂದಿದ್ದ ಸಾವಿರಾರು ಮಕ್ಕಳು, ನೂರಾರು ಮಕ್ಕಳ ಸಾಹಿತಿಗಳು ಭಾಗವಹಿಸಿದರು. ಇಲ್ಲಿ ಮಂಡನೆಯಾದ ಉಪನ್ಯಾಸ ಸಂವಾದ ಕಾರ್ಯಕ್ರಮಗಳು ಕನ್ನಡದಲ್ಲಿ ಮಕ್ಕಳ ಸಾಹಿತ್ಯ ರಚನೆಗೆ ಭದ್ರಬುನಾದಿಯನ್ನು ಹಾಕಿದವಲ್ಲದೇ ಅಪಾರ ಸಂಖ್ಯೆಯ ಮಕ್ಕಳ ಸಾಹಿತಿಗಳು

ಒಂದೇ ವೇದಿಕೆಯಡಿ ಸೇರಿ ಅವರು ಇನ್ನಷ್ಟು ಕ್ರಿಯಾಶೀಲರಾಗಿ ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿದವು. ಈ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದಂಗವಾಗಿ ನೂರಾರು ಪುಟಗಳ ವ್ಯಾಪ್ತಿಯಲ್ಲಿ ಹೊರತಂದ "ಮಿಡಿಗೊಂಚಲು", "ಮಿಡಿಮಾವು", 'ಆದಿಚುಂಚನಗಿರಿ ಮಕ್ಕಳ ಸಾಹಿತ್ಯ ಸಮ್ಮೇಳನ'ದ ಸಂಚಿಕೆ, ಇವು ಮಕ್ಕಳ ಸಾಹಿತ್ಯಾಸಕ್ತರ ಮನತಣಿಸಿದಷ್ಟೇ ಅಲ್ಲ, ಮಕ್ಕಳ ಸಾಹಿತ್ಯ ಓದಿಗೆ; ಸಂಶೋಧನೆ, ಅಧ್ಯಯನಕ್ಕೆ ದಾರಿದೀಪವಾದವು. ನಾಡಿನಾದ್ಯಂತ ತುಂಬಾ ಕ್ರಿಯಾಶೀಲವಾಗಿ ಚಟುವಟಿಕೆಗಳನ್ನು ಹಮ್ಮಿಕೊಂಡ ಮಕ್ಕಳ ಸಾಹಿತ್ಯ ಅಕಾಡೆಮಿಯು ೧೯೯೨ರಲ್ಲಿ ಕಲ್ಕತ್ತದ ಅಖಿಲ ಭಾರತ ಬಾಲ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ೩೦ ನೇ ಅಖಿಲ ಭಾರತ ಬಾಲ ಸಾಹಿತ್ಯ ಸಮ್ಮೇಳನವನ್ನು ವಿಜಾಪೂರದಲ್ಲಿ ತುಂಬಾ ಅದ್ದೂರಿಯಾಗಿ ನಡೆಸಿಕೊಟ್ಟಿತು. ಅಕಾಡೆಮಿಯ ಬೆನ್ನೆಲುಬಾಗಿ ಅಧ್ಯಕ್ಷ 'ಸಿಸು' ಸಂಗಮೇಶರ ಕ್ರಿಯಾಶೀಲತೆ ಶ್ರಮ, ಆಸಕ್ತಿ ತುಂಬಾ ಮೆಚ್ಚಿಕೊಳ್ಳಬೇಕಾದ ಸಂಗತಿಯಾಗಿದೆ.

ಮಕ್ಕಳ ಮನೆ, ಧಾರವಾಡ

ಮಕ್ಕಳಿಗೆ ಉತ್ತಮವಾದ ಸಾಹಿತ್ಯವನ್ನು ನೀಡಬೇಕು, ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಸಹಕಾರಿಯಾಗಬೇಕೆಂಬ ಉದ್ದೇಶದಿಂದಲೇ ಈಶ್ವರ ಕಮ್ಮಾರ, ಶಿವಶಂಕರ ಹಿರೇಮಠ, ಚಂದ್ರಕಾಂತ ಬೆಲ್ಲದ, ರಾಮಜಾಧವ ಮೊದಲಾದವರ ನೇತೃತ್ವದಲ್ಲಿ ೧೯೮೫ ರಲ್ಲಿ ಧಾರವಾಡದಲ್ಲಿ ಅಸ್ತಿತ್ವಕ್ಕೆ ಬಂದ ಸಂಸ್ಥೆಯೇ "ಮಕ್ಕಳ ಮನೆ". ಇದು ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಆರಂಭಿಸಿ ೧೯೮೫ ರಲ್ಲಿ ಧಾರವಾಡದಲ್ಲಿ ಮಕ್ಕಳ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡ ರಾಜ್ಯ ಮಟ್ಟದ ೨ ನೇ ಮಕ್ಕಳ ಸಾಹಿತ್ಯ ಸಮ್ಮೇಳನಕ್ಕೆ ಸಹಯೋಗ ನೀಡಿ ತುಂಬಾ ಯಶಸ್ವಿಯಾಗಿ ಸಮ್ಮೇಳನವನ್ನು ನಡೆಸಿಕೊಟ್ಟಿತು. ಮಕ್ಕಳ ಸಾಹಿತ್ಯದ ಪೌಷ್ಟಿಕ ಬೆಳವಣಿಗೆಯು ಅವಶ್ಯಕತೆಯಿದೆ ಎಂಬುದನ್ನು ಮನಗಂಡ ಮಕ್ಕಳ ಮನೆಯು ೧೯೮೮ ರಲ್ಲಿ ಧಾರವಾಡದಲ್ಲಿ ಹತ್ತು ದಿನಗಳ ಕಾಲ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಕಮ್ಮಟವನ್ನು ಏರ್ಪಾಡುಮಾಡಿತು. ಈ ಕಮ್ಮಟದಲ್ಲಿ ನಾಡಿನ ವಿವಿಧ ಭಾಗದ ೪೫ ಶಿಬಿರಾರ್ಥಿಗಳು ಭಾಗವಹಿಸಿ ಪ್ರತಿಭಾವಂತ ಮಕ್ಕಳ ಸಾಹಿತಿಗಳಾಗಿ ಹೊರಹೊಮ್ಮಿದರಲ್ಲದೇ ಈಗಲೂ ಮಕ್ಕಳ ಸಾಹಿತ್ಯ ರಚನೆಯಲ್ಲಿ ತೊಡಗಿ ಖ್ಯಾತನಾಮರಾಗಿರುವದು ಮಕ್ಕಳ ಮನೆಯ ಹೆಮ್ಮೆಯ ಕಾರ್ಯವಾಗಿದೆ. ಕಮ್ಮಟದಲ್ಲಿ ಶಿಬಿರಾರ್ಥಿಗಳಿಂದ ರಚಿತವಾದ ಕವಿತೆಗಳನ್ನು "ಹೂವಿನ ತೋಟ" ಎಂಬ ಹೆಸರಿನಿಂದ ಹಾಗೂ ಕತೆಗಳನ್ನು "ಮನೆಯ ದೀಪ" ಎಂಬ ಹೆಸರಿನಿಂದ ಮಕ್ಕಳ ಮನೆ ಪ್ರಕಟಿಸಿತು. ಅಷ್ಟೇ ಅಲ್ಲ, ಮಕ್ಕಳಿಗಾಗಿ ನಾಟಕಗಳನ್ನು ಬರೆಯಿಸಿ "ಮಕ್ಕಳ ಆಟ" ಎಂಬ ಹೆಸರಿನಿಂದ ಅವುಗಳನ್ನು ಪ್ರಕಟಿಸಿತು. ನಂತರ ಕಮ್ಮಟದಲ್ಲಿ ಮಂಡನೆಯಾದ ಮೂವತ್ತಕ್ಕೂ ಹೆಚ್ಚು ಉಪನ್ಯಾಸಗಳನ್ನು ಸಂಗ್ರಹಿಸಿ "ಮಕ್ಕಳ ಸಾಹಿತ್ಯ ಚಿಂತನ" ಎಂಬ ಸಂಪುಟವನ್ನು ಜೊತೆಗೆ ಈಶ್ವರ ಕಮ್ಮಾರ ಅವರು ಬರೆದ "ಮಕ್ಕಳ ಕವನ ಸಾಹಿತ್ಯ" ಎಂಬ ಗ್ರಂಥಗಳನ್ನು ಹೊರತಂದಿತು. ಈ ಎರಡು ಗ್ರಂಥಗಳ ಜೊತೆಗೆ "ಮಕ್ಕಳ ಗ್ರಂಥ ಸೂಚಿ" ಎಂಬ ಇನ್ನೊಂದು ಪುಸ್ತಕವನ್ನು ಪ್ರಕಾಶಿಸಿತು. ಮಕ್ಕಳ ಮನೆ ಹೊರತಂದ ಈ ಮೂರು ಗ್ರಂಥಗಳು ತುಂಬಾ ಮೌಲಿಕವಾಗಿದ್ದು, ಮಕ್ಕಳ ಸಾಹಿತ್ಯದ ಬಗೆಗೆ ಅರಿಯಬೇಕೆನ್ನುವವರಿಗೆ, ಅಧ್ಯಯನ ಮಾಡಬಯಸುವವರಿಗೆ

ಸಂಧ್ಯಾ ಸಾಹಿತ್ಯ ವೇದಿಕೆ

ಸಮಾನ ಮಕ್ಕಳ ಸಾಹಿತ್ಯಾಸಕ್ತರಿಂದ ಸಂಘಟನೆಗೊಂಡ "ಸಂಧ್ಯಾ ಸಾಹಿತ್ಯ ವೇದಿಕೆ" ಕಳೆದ ಎರಡೂವರೆ ದಶಕಗಳಿಂದ ಮಕ್ಕಳ ಸಾಹಿತ್ಯ ಬೆಳವಣಿಗೆಯಲ್ಲಿ ಸದ್ದಿಲ್ಲದೇ ಕಾರ್ಯ ಗೈಯುತ್ತಿರುವುದು ಮೆಚ್ಚುಗೆಯ ಸಂಗತಿಯಾಗಿದೆ. ನಾಡಿನುದ್ದಗಲಕ್ಕೂ ಮಕ್ಕಳ ಸಾಹಿತ್ಯ ಕುರಿತಾದ ಉಪನ್ಯಾಸ, ವಿಚಾರ ಸಂಕಿರಣ, ಚರ್ಚೆ, ಸಂವಾದ, ಸಾಹಿತ್ಯೋತ್ಸವ, ಕವಿಗೋಷ್ಠಿ, ಪುಸ್ತಕ ಪರಿಚಯ, ಅವಲೋಕನ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದು, ಇದರಲ್ಲಿ ಅನೇಕ ಪ್ರತಿಭಾವಂತ ಮಕ್ಕಳು, ಮಕ್ಕಳ ಸಾಹಿತಿಗಳು ಪಾಲ್ಗೊಂಡಿದ್ದಾರಷ್ಟೇ ಅಲ್ಲ, ವೇದಿಕೆ ಮಕ್ಕಳ ಸಾಹಿತ್ಯದ ವಾತಾವರಣವನ್ನು ಎಲ್ಲಡೆ ಉಂಟು ಮಾಡಿದೆ. ಬಾದಾಮಿಯಲ್ಲಿ ಜರುಗಿದ ಮಕ್ಕಳ ಕತೆಗಳ ಕುರಿತ ವಿಚಾರ ಸಂಕಿರಣ, ಗದುಗಿನಲ್ಲಿ ನಡೆದ ಮೇವುಂಡಿ ಮಲ್ಲಾರಿ, ಹ. ರಾ. ಕಿದಿಯೂರ ಅವರ ಸಾಹಿತ್ಯದ ವಿಚಾರ ಸಂಕಿರಣ ಮತ್ತು ಸಾವಿರದ ಮಕ್ಕಳ ಕತೆಗಳು, ಪಂಚತಂತ್ರ, ಆ್ಯಲಿಸ್ ಇನ್ ಒಂಡರಲ್ಯಾಂಡ್, ಜಂಗಲ್‌ಬುಕ್, ಅರೇಬಿಯನ್ ನೈಟ್ಸ್ ಕುರಿತ ವಿಚಾರ ಸಂಕಿರಣ, ಧಾರವಾಡದಲ್ಲಿ 'ಸಿಸು' ಸಂಗಮೇಶರ ಮಕ್ಕಳ ಸಾಹಿತ್ಯ ಕುರಿತು, ಮುಲ್ಕಿಯಲ್ಲಿ ಪಳಕಳ ಸೀತಾರಾಮಭಟ್ಟರ ಕುರಿತು, ಬಾದಾಮಿಯಲ್ಲಿ ಟಿ. ಎಸ್. ನಾಗರಾಜಶೆಟ್ಟಿ, ಶಹಾಪೂರದಲ್ಲಿ ಕಂಚ್ಯಾಣಿ ಶರಣಪ್ಪ, ಶೃಂಗೇರಿಯಲ್ಲಿ ನಾ. ಡಿಸೋಜಾರ ಮಕ್ಕಳ ಸಾಹಿತ್ಯ ಕುರಿತು ಏರ್ಪಡಿಸಿದ ವಿಚಾರಸಂಕಿರಣಗಳು ಮಹತ್ವದ ಕಾರ್ಯಕ್ರಮಗಳಾಗಿವೆ.

ಇದಲ್ಲದೆ ಕನ್ನಡ ಮಕ್ಕಳ ಸಾಹಿತ್ಯ, ಸಿದ್ಧಯ್ಯ ಪುರಾಣಿಕರ ಮಕ್ಕಳ ಸಾಹಿತ್ಯ, ದಿನಕರ ದೇಸಾಯಿ ಅವರ ಮಕ್ಕಳ ಸಾಹಿತ್ಯ, ಏನಿಡ್ ಬ್ಲೈಟನ್ ಕುರಿತು, ಜೆ. ಪಿ. ರಾಜರತ್ನಂ, ಕುವೆಂಪು ಅವರ ಮಕ್ಕಳ ಸಾಹಿತ್ಯ ಕುರಿತು ಕನ್ನಡದ ಮಹತ್ವದ ಲೇಖಕರಿಂದ ರಾಜ್ಯದ ವಿವಿಧೆಡೆ ಉಪನ್ಯಾಸಗಳನ್ನು ಏರ್ಪಡಿಸಿ ಅನೇಕ ಮಕ್ಕಳ ಸಾಹಿತ್ಯಾಸಕ್ತರ ಗಮನ ಸೆಳೆದಿದೆ. ಸಂಧ್ಯಾ ಸಾಹಿತ್ಯ ವೇದಿಕೆಯು ಪ್ರತಿ ವರ್ಷ ನವೆಂಬರಿನಲ್ಲಿ ನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ಕವಿಗೋಷ್ಠಿ, ಸಂವಾದ, ಮಕ್ಕಳೊಡನೆ ಸಾಹಿತ್ಯದ ಸಮಯ ಒಳಗೊಂಡ "ಸಂಧ್ಯಾ ಮಕ್ಕಳ ಕಾವ್ಯೋತ್ಸವ" ಎಂಬ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ. ಕರ್ನಾಟಕದಲ್ಲಿನ ಮಕ್ಕಳ ಸಾಹಿತ್ಯದ ಚಟುವಟಿಕೆಗಳನ್ನು ಕರ್ನಾಟಕದಾಚೆಗೆ ತಿಳಿಸಲು ಇಂಗ್ಲಿಷ್‌ನಲ್ಲಿ "Karnataka Children Literature" ಹಾಗೂ ದೇಶದ ವಿದೇಶದ ಚಟುವಟಿಕೆಗಳನ್ನು ನಮ್ಮವರಿಗೆ ತಿಳಿಸಲು ಕನ್ನಡದಲ್ಲಿ "ಬಾಲ ಸಾಹಿತ್ಯ" ತ್ರೈಮಾಸಿಕ ಸಂಚಿಕೆಗಳನ್ನು ಪ್ರಕಟಿಸುತ್ತಿದೆ. ಸೃಜನಶೀಲ ಮಕ್ಕಳ ಕಥಾ ಬರವಣಿಗೆಯನ್ನು ಗುರುತಿಸುವ ಸಣ್ಣ ಪ್ರಯತ್ನವಾಗಿ ಪ್ರತಿವರ್ಷ ಮೇವುಂಡಿ ಮಲ್ಲಾರಿ ಅವರ ಹೆಸರಿನಲ್ಲಿ ಮಕ್ಕಳಿಗಾಗಿ ಬರೆಯುತ್ತಿರುವ ಹಿರಿಯರು ಬರೆದ ಸೊಗಸಾದ ಕತೆಯೊಂದಕ್ಕೆ ಮೇವುಂಡಿ ಮಲ್ಲಾರಿ ಮಕ್ಕಳ ಕಥಾ ಪುರಸ್ಕಾರ ನೀಡಿ ಗೌರವಿಸುತ್ತಿದೆ. ಅದೇ ರೀತಿಯಾಗಿ ಸೊಗಸಾಗಿ ಮಕ್ಕಳ ಮುಂದೆ ಕತೆ ಹೇಳುವ ಪ್ರತಿಭಾವಂತರಿಗೆ ಹೊಯ್ಸಳ ಕಥನ ಕಲಾ ಪುರಸ್ಕಾರವನ್ನು, ರಾಜ್ಯ ಮಟ್ಟದಲ್ಲಿ ಬಾಲ ಪ್ರತಿಭೆಯನ್ನು ಗುರುತಿಸಿ ವಿದ್ಯಾಸಾಗರ ಬಾಲ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ. ಈಗಾಗಲೇ ವಿದ್ಯಾಸಾಗರ ಬಾಲ ಪುರಸ್ಕಾರ ಪಡೆದ ಸಿದ್ರಾಮಪ್ಪ ದಂಡೆ, ರಾಜಶ್ರೀ ಕುಳವರ್ಮ, ಎಂ. ಮಾಣಿಕ್ಯ, ಚೈತ್ರಾ ಬೇವಿನಗಿಡದ, ತೀರ್ಥಹಳ್ಳಿ ಮುದ್ದು ಮುಂತಾದವರು ಮಕ್ಕಳ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಗಳನ್ನು

ನೀಡಿದ್ದಾರಷ್ಟೇ ಅಲ್ಲ, ಮಕ್ಕಳ ಸಾಹಿತ್ಯ ರಚನೆಯಲ್ಲಿ ನಿರತರಾಗಿದ್ದಾರೆ. ರಾಜ್ಯದೆಲ್ಲಡೆ ಮಕ್ಕಳ ಸಾಹಿತ್ಯದ ವಾತಾವರಣವನ್ನುಂಟುಮಾಡುವಲ್ಲಿ ಹಾಗೂ ಮಕ್ಕಳ ಸಾಹಿತ್ಯದ ಬೆಳವಣಿಗೆ ಆಗುವಲ್ಲಿ ಸಂಧ್ಯಾ ಸಾಹಿತ್ಯ ವೇದಿಕೆ ಪ್ರಮುಖ ಪಾತ್ರ ವಹಿಸಿದೆ.

ಧ್ರುವಲೋಕ ಬಾಲ ವಿಕಾಸ ವೇದಿಕೆ

ಬಾಲ ಸಾಹಿತ್ಯದ ಪ್ರಕಟನೆ ಪ್ರಸಾರ ಉದ್ದೇಶದಿಂದಲೇ ಯು.ಕೆ.ಪೈ. ಅವರಿಂದ ಪುತ್ತೂರಿನಲ್ಲಿ ೧೯೯೦ರಲ್ಲಿ ಜನ್ಮತಾಳಿ "ಧ್ರುವಲೋಕ ಬಾಲ ವಿಕಾಸವೇದಿಕೆ" ಸಂಸ್ಥೆ ಪುತ್ತೂರು ಬಂಟ್ವಾಳ, ಸುಳ್ಯ, ಬೆಳ್ತಂಗಡಿ ಕಾಸರಗೋಡು ಭಾಗದ ಶಾಲೆಗಳಲ್ಲಿ 'ಹಾಡಿ ಕುಣಿದು ನಲಿ' ಎಂಬ ೧೨೦೦ ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಸಂಘಟಿಸಿ ಆ ಮೂಲಕ ಮಕ್ಕಳಿಗೆ ಮಕ್ಕಳ ಸಾಹಿತ್ಯವನ್ನು ಪರಿಚಯಿಸಿದೆ. ರಾಜ್ಯದ ಎಲ್ಲಾ ಭಾಗದ ಮಕ್ಕಳ ಸಾಹಿತಿಗಳ ಕವನ, ಶಿಶುಪ್ರಾಸ, ಕತೆಗಳನ್ನು ಮಕ್ಕಳಿಗೆ ಕಲಿಸಿ ಪ್ರಚಾರ ಮಾಡಿದೆ. ಇದಕ್ಕಾಗಿಯೇ ರಾಷ್ಟ್ರ ನಾಯಕರ ಬಗ್ಗೆ, ಅವರ ದೇಶ ಪ್ರೇಮ ಜೀವನ ಸಂದೇಶ ಕುರಿತು, ಜನಪ್ರಿಯ ಶಿಶುಪ್ರಾಸ, ಕವಿತೆ, ಪರಿಸರಗೀತೆ, ಅಮ್ಮನ ಹಿರಿಮೆ ಕುರಿತು, ನೂರಾರು ಕಿರು ಪುಸ್ತಕಗಳನ್ನು ಪ್ರಕಟಿಸಿ ಅವುಗಳನ್ನು ಉಚಿತವಾಗಿ ಲಕ್ಷಾಂತರ ಮಕ್ಕಳ ಕೈಗಳಿಗೆ ತಲಪಿಸಿದೆ. ಅತಿ ಹೆಚ್ಚು ಮಕ್ಕಳ ಕೈಗೆ ಪುಸ್ತಕ ತಲಪಿಸಿದ ಕೀರ್ತಿ ಧ್ರುವಲೋಕ ಬಾಲ ಸಾಹಿತ್ಯ ವೇದಿಕೆಗೆ ಸಲ್ಲುತ್ತಿದ್ದು, ನಿರಂತರವಾಗಿ ಇದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು .ಸಂತಸದ ಸಂಗತಿಯಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ

ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಈ ಮೂರು ಜಿಲ್ಲೆಗಳ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಖ್ಯಾತ ಮಕ್ಕಳ ಸಾಹಿತಿ ಪಳಕಳ ಸೀತಾರಾಮಭಟ್ಟ, ಕುರಾಡಿ ಸೀತಾರಾಮ ಅಡಿಗ ಶ್ರೀನಿವಾಸರಾವ್ ಅವರ ನೇತೃತ್ವದಲ್ಲಿ ೧೯೯೩ರಲ್ಲಿ ಅಸ್ತಿತ್ವಕ್ಕೆ ಬಂದ "ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮ" ಕರಾವಳಿ ಭಾಗದಲ್ಲಿ ಗಮನಾರ್ಹ ಮಕ್ಕಳ ಸಾಹಿತ್ಯದ ಚಟುವಟಿಕೆಗಳ ಮೂಲಕ ಮಕ್ಕಳ ಸಾಹಿತ್ಯದ ಕಲರವ ಹರಡಿ ಆ ಭಾಗದಲ್ಲಿ ಮಕ್ಕಳ ಸಾಹಿತ್ಯ ಬೆಳೆದು ಬರಲು ಕಾರಣೀಭೂತವಾಗಿದೆ. ಸುಮಾರು ೬೦೦ ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದ ಮಕ್ಕಳ ಸಂಗಮವು ಎಲ್ಲಾ ತಾಲೂಕುಗಳಲ್ಲೂ ತನ್ನ ಶಾಖೆಗಳನ್ನು ಹೊಂದಿದೆ. ಮಕ್ಕಳಲ್ಲಿ ಸಾಹಿತ್ಯದ ಅಭಿರುಚಿಯನ್ನು ಮೂಡಿಸುವ ಸಲುವಾಗಿ ಈಗಾಗಲೇ ೫೦೦ ಕ್ಕೂ ಹೆಚ್ಚು ಶಾಲೆಗಳಲ್ಲಿ ಕತೆ, ಕವನ, ನಾಟಕ ರಚನಾ ಶಿಬಿರಗಳನ್ನು ಇದು ಸಂಘಟಿಸಿದೆ. "ಮಕ್ಕಳ ಧ್ವನಿ" ಎಂಬ ವಿಶಿಷ್ಟ ಕಾರ್ಯಕ್ರಮದ ಮೂಲಕ ಎಲ್ಲಡೆ ಮಕ್ಕಳ ಸಾಹಿತ್ಯದ ಕಂಪನ್ನು ಬೀರಿದೆ. ಮಕ್ಕಳಲ್ಲಿ ಹಾಗೂ ಓದುಗರಲ್ಲಿ, ಜನಸಾಮಾನ್ಯರಲ್ಲಿ ಮಕ್ಕಳ ಸಾಹಿತ್ಯದ ಅಭಿರುಚಿ ಒಲವು ಮೂಡಿಸಿದೆ. ಪ್ರತಿವರ್ಷವೂ ಎರಡು ದಿನಗಳ ಅವಧಿಯ ಮಕ್ಕಳ ಸಾಹಿತ್ಯ ಸಮ್ಮೇಳನವೊಂದನ್ನು ಕರಾವಳಿ ಭಾಗದಲ್ಲಿ ಹಮ್ಮಿಕೊಳ್ಳುವ ಮೂಲಕ ಆ ಭಾಗದ ಮಕ್ಕಳ ಸಾಹಿತ್ಯ ರಚನೆಕಾರರಿಗೆ ವೇದಿಕೆಯನ್ನು ಒದಗಿಸಿದೆ. ದ. ಕ. ಮಕ್ಕಳ ಸಾಹಿತ್ಯ ಸಂಗಮವು ಈಗಾಗಲೇ ಇಂಥ ೨೧ ಸಮ್ಮೇಳನಗಳನ್ನು ಯಶಸ್ವಿಯಾಗಿ ಜರುಗಿಸಿ ಈ ಭಾಗದಲ್ಲಿ ಮಕ್ಕಳ ಸಾಹಿತ್ಯದ ಬೆಳೆ ಹುಲುಸಾಗಿ ಬೆಳೆಯಲು ಕಾರಣವಾಗಿದೆ. ಮಕ್ಕಳ ಸಾಹಿತ್ಯದ ಹಸ್ತಪ್ರತಿಗಳನ್ನು ಆಹ್ವಾನಿಸಿ ಉತ್ತಮವಾದವುಗಳಿಗೆ

ಪ್ರತಿವರ್ಷ ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿದೆ. ಜೊತೆಗೆ ಜಿಲ್ಲೆಯ ಶ್ರೇಷ್ಠ ಮಕ್ಕಳ ಸಾಹಿತಿಯೊಬ್ಬರನ್ನು ಗೌರವಿಸಿ ಸನ್ಮಾನಿಸುತ್ತಿದೆ.

"ಮಕ್ಕಳ ತುತ್ತು" (ಕವನ ಸಂಕಲನ) "ಮಕ್ಕಳ ಮುತ್ತು" (ಕಥಾ ಸಂಕಲನ) ಎಂಬ ಎರಡು ವಿಶಿಷ್ಟ ಮಕ್ಕಳ ಕೃತಿಗಳನ್ನು ಇದು ಪ್ರಕಟಮಾಡಿದೆ. ಇದರಲ್ಲಿ ಹಿರಿಯರಾದ ಡಾ. ಶಿವರಾಮ ಕಾರಂತ, ಕಯ್ಯಾರ ಕಿಞ್ಞಣ್ಣರೈ ಸೇರಿದಂತೆ ಜಿಲ್ಲೆಯ ಪ್ರಮುಖ ಮಕ್ಕಳ ಬರಹಗಾರರ ರಚನೆಗಳಿವೆ. "ತೊದಲು", "ಮುಗುಳು" ಎಂಬ ಸಂಪುಟಗಳನ್ನು ಸಂಗಮವು ಹೊರತಂದಿದ್ದು, ಇದರಲ್ಲಿ ಮಕ್ಕಳೇ ಬರೆದ ಕಥೆ, ಕವನಗಳಿರುವುದು ವಿಶೇಷವಾಗಿದೆ. ಕರಾವಳಿ ಭಾಗದಲ್ಲಿ ಮಕ್ಕಳ ಸಾಹಿತ್ಯದ ಚಟುವಟಿಕೆಗಳನ್ನು ನಿರಂತರವಾಗಿ ಹಮ್ಮಿಕೊಳ್ಳುವ ಮೂಲಕ ಈ ಭಾಗದಲ್ಲಿ ಉತ್ತಮ ಮಕ್ಕಳ ಸಾಹಿತ್ಯ ರಚನೆಯಾಗಲು ಸಂಗಮವು ಶ್ರಮಿಸುತ್ತಿದೆ.

ಜಿಲ್ಲಾ ಮಕ್ಕಳ ಸಾಹಿತ್ಯ ಸಮಾಗಮ, ಬಾಗಲಕೋಟೆ

ವಿಜಾಪೂರ ಜಿಲ್ಲೆಯ ಮಕ್ಕಳ ಸಾಹಿತ್ಯ ಸಂಗಮದ ಪ್ರೇರಣೆಯಿಂದ ಸ್ವತಂತ್ರವಾಗಿ ೧೯೯೩ ರಲ್ಲಿ ಅಸ್ತಿತ್ವಕ್ಕೆ ಬಂದ "ಬಾಗಲಕೋಟೆ ಜಿಲ್ಲಾ ಮಕ್ಕಳ ಸಾಹಿತ್ಯ ಸಮಾಗಮ" ಈ ಎರಡು ದಶಕಗಳಲ್ಲಿ ನಿರಂತರವಾಗಿ ಬಾಗಲಕೋಟೆ ಜಿಲ್ಲೆಯ ವಿವಿಧೆಡೆ ಹಲವಾರು ಮಕ್ಕಳ ಸಾಹಿತ್ಯದ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಜಿಲ್ಲೆಯ ಮಕ್ಕಳ ಸಾಹಿತ್ಯದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ. ಪ್ರತಿ ತಿಂಗಳ ಮೊದಲನೆಯ ರವಿವಾರದಂದು ತಪ್ಪದೇ ಕವಿಗೋಷ್ಠಿಯನ್ನು ನಡೆಸುತ್ತ ಬರುತ್ತಿದ್ದು, ಈಗಾಗಲೇ ಇಂಥ ನೂರಕ್ಕೂ ಹೆಚ್ಚು ಕವಿಗೋಷ್ಠಿಗಳು ಜರುಗಿ ಮಕ್ಕಳ ಕಾವ್ಯದ ಕಂಪನ್ನು ಬೀರಿವೆ. ನಿರಂತರವಾಗಿ ಮಕ್ಕಳ ಸಾಹಿತ್ಯದ ಕವನ, ಕಥಾ, ಕಮ್ಮಟ, ದೇಶ ಭಕ್ತಿಗೀತೆ ಸ್ಪರ್ಧೆ, ಭಾವಗೀತೆ ಸ್ಪರ್ಧೆ, ಕಾವ್ಯ ರಚನಾ ಸ್ಪರ್ಧೆ, ಪುಸ್ತಕ ಪರಿಚಯ ಹೀಗೆ ಹಲವಾರು ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳನ್ನು ಅವ್ಯಾಹತವಾಗಿ ನಡೆಸುತ್ತ ಮಕ್ಕಳ ಸಾಹಿತ್ಯದ ಬಗ್ಗೆ ಜಾಗೃತಿ ಮೂಡಿಸಿದೆ. ಪ್ರತಿವರ್ಷ ಮಕ್ಕಳ ದಿನಾಚರಣೆ ದಿವಸ ಮಕ್ಕಳಿಗೆ ವೇದಿಕೆ ಒದಗಿಸಿ ಮಕ್ಕಳಿಂದಲೇ ಎಲ್ಲಾ ಕಾರ್ಯಕ್ರಮ ಜರುಗಿಸುತ್ತ ಬಂದಿದೆ. ಈಗಾಗಲೇ ಹತ್ತು ಜಿಲ್ಲಾ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನಗಳನ್ನು ಜಿಲ್ಲೆಯ ಹಿರಿಯ ಮಕ್ಕಳ ಸಾಹಿತಿಗಳ ಸರ್ವಾಧ್ಯಕ್ಷತೆಯಲ್ಲಿ ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಜರುಗಿಸಿದೆ. ಅಲ್ಲದೇ ಮಕ್ಕಳ ಸಮಾಗಮವು ಇದುವರೆಗೂ ಇಪ್ಪತ್ತೈದಕ್ಕೂ ಹೆಚ್ಚು ಗ್ರಂಥಗಳನ್ನು ಪ್ರಕಟಿಸಿದೆ. ಇದರಲ್ಲಿ ಕೆಲವು ಕೃತಿಗಳು ಜಿಲ್ಲಾ ಹಾಗೂ ರಾಜ್ಯಮಟ್ಟದ ಪ್ರಶಸ್ತಿಗಳನ್ನು ಪಡೆದಿವೆ. ಜಿಲ್ಲೆಯ ಆರು ತಾಲೂಕುಗಳಲ್ಲಿ ತನ್ನ ಘಟಕಗಳನ್ನು ಸಮಾಗಮವು ಹೊಂದಿದ್ದು, ನಿರಂತರವಾಗಿ ಜಿಲ್ಲೆಯಲ್ಲಿ ಮಕ್ಕಳ ಸಾಹಿತ್ಯ ಚಟುವಟಿಕೆಗಳು ಜರುಗುತ್ತಲಿವೆ.

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ವೇದಿಕೆ

ಖ್ಯಾತ ಸಾಹಿತಿ ಡಾ. ದೇಜಗೌ ಅವರ ಮಾರ್ಗದರ್ಶನದಲ್ಲಿ ಹಾಗೂ ಮಕ್ಕಳ ಸಾಹಿತಿ ಅಪ್ಪಾಸ್ವಾಮಿ, 'ಸಿಸು' ಸಂಗಮೇಶ ಅವರ ನೇತೃತ್ವದಲ್ಲಿ ಮೈಸೂರಿನಲ್ಲಿ ೧೯೯೮ ರಲ್ಲಿ ಅಸ್ತಿತ್ವಕ್ಕೆ ಬಂದ "ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ವೇದಿಕೆ"ಯು ಸ್ಥಾಪನೆಗೊಂಡ ಎರಡೇ ವರ್ಷಗಳಲ್ಲಿ

ರಾಜ್ಯದ ಎಲ್ಲಾ ಜಿಲ್ಲೆ/ತಾಲೂಕುಗಳಲ್ಲಿ ತನ್ನ ಘಟಕಗಳನ್ನು ಸ್ಥಾಪಿಸುವ ಮೂಲಕ ಮಕ್ಕಳ ಸಾಹಿತ್ಯದ ಸರ್ವತೋಮುಖ ಬೆಳವಣಿಗೆಗೆ ನಾಂದಿಹಾಡಿತು. ಮುಂದೆ ಹರಿಹರದಲ್ಲಿ ತನ್ನ ಕಚೇರಿಯನ್ನು ಹೊಂದಿದ ಮಕ್ಕಳ ಸಾಹಿತ್ಯ ವೇದಿಕೆ ನೂರಾರು ಮಕ್ಕಳ ಕಾರ್ಯಕ್ರಮ, ಕವಿಗೋಷ್ಠಿ, ವಿಚಾರಸಂಕಿರಣ, ಸಾಹಿತ್ಯ ರಚನಾ ಕಮ್ಮಟಗಳು, ತಾಲೂಕಾ ಮಕ್ಕಳ ಸಾಹಿತ್ಯ ಸಮ್ಮೇಳನ ಮುಂತಾದ ಚಟುವಟಿಕೆಗಳ ಮೂಲಕ ನಾಡಿನ ಮಕ್ಕಳ ಹಾಗೂ ಮಕ್ಕಳ ಸಾಹಿತಿಗಳ ಪ್ರೀತಿಗೆ ಪಾತ್ರವಾಯಿತು. ಮೈಸೂರಿನಲ್ಲಿ ರಾಜ್ಯ ಮಟ್ಟದ ಒಂದು ಮಕ್ಕಳ ಸಾಹಿತ್ಯ ಕಮ್ಮಟವನ್ನು ತುಂಬಾ ಯಶಸ್ವಿಯಾಗಿ ನೆರವೇರಿಸಿಕೊಟ್ಟಿತಲ್ಲದೇ, ಕುವೆಂಪು ಅವರ ಮಕ್ಕಳ ನಾಟಕೋತ್ಸವವನ್ನು ಏರ್ಪಡಿಸಿ, ಮಕ್ಕಳ ನಾಟಕ ರಚನಾಕಾರರನ್ನು ಗೌರವಿಸಿತು. ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ವೇದಿಕೆಯ ಕೆಲವು ಜಿಲ್ಲಾ ಘಟಕಗಳು ತುಂಬಾ ಕ್ರಿಯಾಶೀಲವಾಗಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಮಕ್ಕಳ ಸಾಹಿತ್ಯ ಬೆಳವಣಿಗೆಗೆ ಕೈ ಜೋಡಿಸಿದವು. ಮಕ್ಕಳ ಸಾಹಿತ್ಯದ ವಾತಾವರಣವನ್ನು ಜಿಲ್ಲೆಯಲ್ಲಿ ಉಂಟುಮಾಡಿದವು. ಅಂತಹವುಗಳಲ್ಲಿ ಉಲ್ಲೇಖಿಸಲೇಬೇಕಾದವುಗಳೆಂದರೆ ಬೆಳಗಾವಿ, ದಾವಣಗೇರಿ, ಗದಗ, ಗುಲ್ಬರ್ಗಾ, ಹಾವೇರಿ, ಶಿವಮೊಗ್ಗ ಜಿಲ್ಲಾ ಘಟಕಗಳು.

೧೯೯೯ರಲ್ಲಿ ಬೆಳಗಾವಿಯಲ್ಲಿ ಉದ್ಘಾಟನೆಗೊಂಡ "ಬೆಳಗಾವಿ ಜಿಲ್ಲಾ ಮಕ್ಕಳ ಸಾಹಿತ್ಯ ವೇದಿಕೆ"ಯು ಜಿಲ್ಲೆಯ ಉದಯೋನ್ಮುಖ ಮಕ್ಕಳ ಸಾಹಿತಿಗಳ ಹಾಗೂ ಹಳೆಯ ತಲೆಮಾರಿನ ಮಕ್ಕಳ ಬರಹಗಾರರು ಒಂದುಗೂಡಲು ವೇದಿಕೆಯನ್ನು ಕಲ್ಪಿಸಿತು. ಮಕ್ಕಳ ಸಾಹಿತಿ ಸತ್ಯಾರ್ಥಿಯವರು ಜಿಲ್ಲಾ ಘಟಕದ ಅಧ್ಯಕ್ಷರಾಗಿ ಹತ್ತು ತಾಲೂಕುಗಳಲ್ಲಿ ನಿರಂತರವಾಗಿ ಚಟುವಟಿಕೆಗಳನ್ನು ಹಮ್ಮಿಕೊಂಡರು. ಅವರ ಮುಂದಾಳತ್ವದಲ್ಲಿ ಜಿಲ್ಲೆಯಲ್ಲಿ ಮಕ್ಕಳ ಸಾಹಿತ್ಯದ ಮಹಾಪರ್ವವೇ ನಡೆಯಿತು. ವೇದಿಕೆಯ ನಿರಂತರ ಪ್ರೋತ್ಸಾಹ, ಮಾರ್ಗದರ್ಶನದಿಂದಾಗಿ ಐವತ್ತು ಮಕ್ಕಳ ಸಾಹಿತ್ಯ ಕೃತಿಗಳು ಪ್ರಕಟವಾದವಷ್ಟೇ ಅಲ್ಲ, ಹಲವಾರು ಕೃತಿಗಳು ಪ್ರಶಸ್ತಿಗಳಿಗೂ ಭಾಜನವಾದವು. ವೇದಿಕೆಯ ಕಾರ್ಯಕ್ರಮಗಳಿಂದಾಗಿ ಅನೇಕ ಉದಯೋನ್ಮುಖ ಮಕ್ಕಳ ಬರಹಗಾರರು ಬೆಳಕಿಗೆ ಬಂದರು.

೧೯೯೮ರಲ್ಲಿ ಮಕ್ಕಳ ಸಾಹಿತಿ ಡಾ. ರಾಜೇಂದ್ರ ಎಸ್. ಗಡಾದರ ಅಧ್ಯಕ್ಷತೆಯಲ್ಲಿ ಗದಗದಲ್ಲಿ ಅಸ್ತಿತ್ವಕ್ಕೆ ಬಂದ "ಗದಗ ಜಿಲ್ಲಾ ಮಕ್ಕಳ ಸಾಹಿತ್ಯ ವೇದಿಕೆ"ಯು ಈ ಭಾಗದಲ್ಲಿ ನಿರಂತರವಾಗಿ ಮಕ್ಕಳ ಸಾಹಿತ್ಯದ ಪೂರಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರಿಂದ ಅನೇಕ ಹೊಸ ಹೊಸ ಲೇಖಕರು ಮಕ್ಕಳ ಸಾಹಿತ್ಯ ಕ್ಷೇತ್ರದತ್ತ ವಾಲಿದರು. ಹಿರಿಯ ಮಕ್ಕಳ ಸಾಹಿತಿಗಳಾದ 'ಸಿಸು' ಸಂಗಮೇಶ, ಈಶ್ವರ ಕಮ್ಮಾರ, ಅಪ್ಪಾಸ್ವಾಮಿ, ಎ. ಕೆ. ರಾಮೇಶ್ವರ, ಗಂಗಾಧರ ನಂದಿ, ಕಂಚ್ಯಾಣಿ ಶರಣಪ್ಪ ಮುಂತಾದವರನ್ನು ಬರಮಾಡಿಕೊಂಡು ಅವರ ಸಾಹಿತ್ಯ ಕುರಿತು ಅವರೊಂದಿಗೆ ಚರ್ಚೆ ಸಂವಾದ ಏರ್ಪಡಿಸಿದ್ದರಿಂದ ಮಕ್ಕಳ ಸಾಹಿತ್ಯ ವಾತಾವರಣ ಜಿಲ್ಲೆಯಾದ್ಯಂತ ಹರಡಿತು. ಮಕ್ಕಳ ಹಬ್ಬ, ಚಿತ್ರ ನೋಡಿ ಕವನ / ಕಥೆ ಬರೆಯುವ ಸ್ಪರ್ಧೆ, ಮಕ್ಕಳ ನಾಟಕೋತ್ಸವ, ಕವಿಗೋಷ್ಠಿ, ಮಕ್ಕಳ ಸಾಹಿತ್ಯ ರಚನಾ ಕಮ್ಮಟ, ಶಿವರಾಮ ಕಾರಂತ, ಮೇವುಂಡಿ ಮಲ್ಲಾರಿ, ಜೆ. ಪಿ. ರಾಜರತ್ನಂ, 'ಸಿಸು' ಸಂಗಮೇಶ, ದುರ್ಗಸಿಂಹ, ಹ. ರಾ. ಕಿದಿಯೂರ ಮುಂತಾದ ಸಾಹಿತಿಗಳ ಕುರಿತು ವಿಚಾರ ಸಂಕಿರಣಗಳನ್ನು

ನಿರಂತರವಾಗಿ ಹಮ್ಮಿಕೊಳ್ಳುವ ಮೂಲಕ ಅನೇಕ ಪ್ರತಿಭಾವಂತ ಮಕ್ಕಳ ಸಾಹಿತಿಗಳನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನು ವೇದಿಕೆಯು ಮಾಡಿತು. "ಹೂಗೊಂಚಲು", "ದೃಷ್ಟಿ" ಎಂಬ ಪ್ರಾತಿನಿಧಿಕ ಕಾವ್ಯ ಸಂಕಲನಗಳನ್ನು ವೇದಿಕೆಯು ಪ್ರಕಟಿಸಿ ಮಕ್ಕಳ ಕವಿಗಳನ್ನು ಪ್ರೋತ್ಸಾಹಿಸಿತು. ಡಾ. ಗಡಾದ ಮಾರ್ಗದರ್ಶನದಲ್ಲಿ ಹತ್ತಾರು ಪುಸ್ತಕಗಳು ಪ್ರಕಟವಾಗಿ ಮಕ್ಕಳ ಸಾಹಿತ್ಯದ ಕಲರವ ಜಿಲ್ಲೆಯಲ್ಲಿ ಕೇಳಿ ಬರುವಂತಾಯಿತು.

ದಾವಣಗೇರಿ ಜಿಲ್ಲಾ ಘಟಕವು ಸಾಲಿಗ್ರಾಮ ಗಣೇಶ ಶೆಣೈ ನೇತೃತ್ವದಲ್ಲಿ, ಹಾವೇರಿ ಘಟಕವು ಗಂಗಾಧರ ನಂದಿ ನೇತೃತ್ವದಲ್ಲಿ ರಚನೆಗೊಂಡು ಅಭೂತಪೂರ್ವ ಕಾರ್ಯಕ್ರಮಗಳನ್ನು ಜರುಗಿಸಿದರೆ, ಗುಲ್ಬರ್ಗಾ ಜಿಲ್ಲಾ ಘಟಕವು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದಲ್ಲಿ ಗುಲ್ಬರ್ಗಾದಲ್ಲಿ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನವನ್ನೇ ಜರುಗಿಸಿದೆ. ಮಂಡ್ಯ ಜಿಲ್ಲಾ ವೇದಿಕೆಯು ಮಕ್ಕಳಿಗಾಗಿ ವಿನೂತನ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಲ್ಲದೇ "ಮಕ್ಕಳ ಸಾಹಿತ್ಯ ವೇದಿಕೆ" ಎಂಬ ಪತ್ರಿಕೆಯನ್ನೇ ಪ್ರಕಟಲಾರಂಭಿಸಿದ್ದು ಉಲ್ಲೇಖನೀಯವಾಗಿದೆ.

ಚಿಲಿಪಿಲಿ ಸಂಸ್ಥೆ ಮತ್ತು ಗುಬ್ಬಚ್ಚಿಗೂಡು ಪತ್ರಿಕೆ

ಮಕ್ಕಳ ಮನೋವಿಕಾಸಕ್ಕೆ ಸಂಬಂಧಿಸಿದಂತೆ ಮತ್ತು ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಲು ನಿರಂತರವಾಗಿ ಅವರಿಗೆ ವೇದಿಕೆ ಕಲ್ಪಿಸಿಕೊಡುವುದು, ನಾಡಿನ ಮಕ್ಕಳ ಸಾಹಿತ್ಯ ಸಮೃದ್ಧವಾಗುವಂತೆ ಶ್ರೇಷ್ಠ ಮಕ್ಕಳ ಸಾಹಿತ್ಯವನ್ನು ಪ್ರಕಟಿಸುವುದು, ಈ ಮೂಲಕ ಯುವ ಬರಹಗಾರರನ್ನು ಮಕ್ಕಳ ಸಾಹಿತ್ಯದತ್ತ ಗಮನ ಹರಿಸಿ ಮಾರ್ಗದರ್ಶನ, ತರಬೇತಿ ನೀಡುವುದು, ಅವರ ಮಕ್ಕಳ ಸಾಹಿತ್ಯವನ್ನು ಪ್ರಕಟಿಸಿ ಪ್ರೋತ್ಸಾಹಿಸುವುದು, ಹಿರಿಯ ಮಕ್ಕಳ ಸಾಹಿತಿಗಳಿಗೆ ಮತ್ತು ಅವರ ಸಾಹಿತ್ಯ ಕುರಿತಂತೆ ಗೌರವ ದೊರಕುವಂತೆ ಮಾಡುವುದು ಹೀಗೆ ಹತ್ತಾರು ಧ್ಯೇಯ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಕ್ರಿ.ಶ. ೨೦೦೦ದಲ್ಲಿ ಧಾರವಾಡದಲ್ಲಿ ಶಂಕರ ಹಲಗತ್ತಿ ಅವರ ನೇತೃತ್ವದಲ್ಲಿ ಹುಟ್ಟಿಕೊಂಡ ಸಂಸ್ಥೆಯೇ "ಚಿಲಿಪಿಲಿ ಸಂಸ್ಥೆ" ಹಾಗೂ "ಗುಬ್ಬಚ್ಚಿಗೂಡು ಪತ್ರಿಕೆ"ಗಳಾಗಿವೆ.

ಮಾರ್ಚ್ ೮, ೨೦೦೦ರಲ್ಲಿ ಪ್ರಾಯೋಗಿಕ ಸಂಚಿಕೆಯಾಗಿ ಆರಂಭಗೊಂಡ 'ಗುಬ್ಬಚ್ಚಿಗೂಡು' ಪತ್ರಿಕೆ ಇಲ್ಲಿಯವರೆಗೂ ನಿರಂತರವಾಗಿ ಪ್ರಕಟವಾಗುತ್ತಲೇ ಬಂದಿದೆ. ನಾಡಿನ ಹಿರಿಕಿರಿಯ ಮಕ್ಕಳ ಸಾಹಿತಿಗಳ ಒಂದು ವೇದಿಕೆಯಾಗುವಂತೆ ಮತ್ತು ಮಕ್ಕಳ ಒಳಗಿರುವ ಪ್ರತಿಭೆಯನ್ನು ಅನಾವರಣಗೊಳ್ಳುವುದಕ್ಕೆ ಪತ್ರಿಕೆ ಆಶ್ರಯವಾಗಿದೆ. ಸಾವಿರಾರು ಮಕ್ಕಳು ಈ ಪತ್ರಿಕೆ ಮೂಲಕ ತಮ್ಮ ಓದಿನ ರುಚಿ ಹೆಚ್ಚಿಸಿಕೊಂಡಿದ್ದಾರೆ. ಕತೆ, ಕವಿತೆ, ಶಿಶುಪ್ರಾಸ, ಚಿತ್ರಬರಹ, ಮುಂತಾದ ಬರವಣಿಗೆಗಳಿಗೆ ಗುಬ್ಬಚ್ಚಿಗೂಡು ಸ್ಥಳ ನೀಡುತ್ತಾ ಅವರಲ್ಲಿ ಬರವಣಿಗೆ ಕಲೆ ಬೆಳೆಸುವಲ್ಲಿ ಮಹತ್ತರ ಸಾಧನೆ ಮಾಡುತ್ತಿದೆ. ಮಕ್ಕಳ ಸಾಹಿತಿಗಳನ್ನು ಒಂದೆಡೆ ಸೇರಿಸಿ ಸಮಗ್ರ ಮಕ್ಕಳ ಸಾಹಿತ್ಯದ ಅವಲೋಕನ ಚರ್ಚೆ ಮಾಡಲೆಂದೇ ಇದುವರೆಗೂ ಧಾರವಾಡ, ಗದಗ, ಬೆಳಗಾವಿ, ಹುಬ್ಬಳ್ಳಿಯಲ್ಲಿ ಎರಡು ದಿನಗಳ ಐದು ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ಏರ್ಪಡಿಸಿದೆ. ಈ ಸಮ್ಮೇಳನಗಳಲ್ಲಿ ಮಕ್ಕಳ ಸಾಹಿತಿಗಳು ಸಂಘಟಿಕರು ಶಿಕ್ಷಕರು ಸೇರಿದಂತೆ ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದಾರೆ. ಕಂಚ್ಯಾಣಿ ಶರಣಪ್ಪ, ಡಾ. ಎಚ್. ಎಸ್. ವೆಂಕಟೇಶಮೂರ್ತಿ, ಶಂ. ಗು. ಬಿರಾದಾರ, ಡಾ. ಬಿ. ಎ.

ಸನದಿ, ಡಾ. ನಾ. ಡಿಸೋಜಾ ಅವರು ಈ ಸಮ್ಮೇಳನಗಳ ಸರ್ವಾಧ್ಯಕ್ಷತೆಯನ್ನು ವಹಿಸಿದ್ದಾರೆ.

ಮಕ್ಕಳ ಸಾಹಿತ್ಯ ಪ್ರಕಟನೆಗಾಗಿಯೇ ಮೀಸಲಾದ "ಚಿಲಿಪಿಲಿ ಪ್ರಕಾಶನ"ವು ಇಲ್ಲಿಯವರೆಗೂ ೧೫೦ ಕ್ಕೂ ಹೆಚ್ಚು ವಿವಿಧ ಪ್ರಕಾರದ ಮಕ್ಕಳ ಸಾಹಿತ್ಯ ಕೃತಿಗಳನ್ನು ಪ್ರಕಟಿಸಿ ನಾಡಿನ ಚಿಣ್ಣರ ಕೈಗೆ ತಲುಪಿಸಿದೆ. ಚಿಲಿಪಿಲಿ ಸಂಸ್ಥೆಯು ಕಳೆದ ೧೨ ವರ್ಷಗಳಿಂದ ಮಕ್ಕಳ ಕ್ಷೇತ್ರದಲ್ಲಿ ತೊಡಗಿಸಿಕೊಂಡ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸುತ್ತಾ ಬಂದಿದೆ. ಶಿಕ್ಷಣ ಸಿರಿ ರಾಜ್ಯ ಪ್ರಶಸ್ತಿಯನ್ನು ಹಿರಿಯರಿಗೆ, ಶ್ರೇಷ್ಠ ಪ್ರತಿಭೆಗಳನ್ನು ಗುರುತಿಸಿ ಮಕ್ಕಳಿಗೆ ಚಿಣ್ಣರ ಚಿನ್ನ ಪ್ರಶಸ್ತಿ ನೀಡುತ್ತಿದೆ. ಇದುವರೆಗೆ ಎರಡುನೂರಕ್ಕೂ ಹೆಚ್ಚು ಮಕ್ಕಳು, ೧೨೫ ವ್ಯಕ್ತಿಗಳು, ಈ ಪ್ರಶಸ್ತಿಗಳಿಗೆ ಭಾಜನವಾಗಿದ್ದಾರೆ. ಜೊತೆಗೆ ಹತ್ತು ಸಂಸ್ಥೆಗಳೂ ಕೂಡ. ಪೌರ ಪ್ರಜ್ಞೆ ಮಕ್ಕಳ ಚಳವಳಿಯನ್ನು ಸಂಘಟಿಸಿದ ಈ ಸಂಸ್ಥೆಗಳು ಕಲಿಕಾ ಸಾಮಗ್ರಿ ಸಂಶೋಧನಾ ಕೇಂದ್ರವೊಂದನ್ನು ಹಾಗೂ ಧಾರವಾಡದಲ್ಲಿ ಪೂರ್ವ ಪ್ರಾಥಮಿಕ ಹಾಗೂ ಕಿರಿಯ ಪ್ರಾಥಮಿಕ ಕನ್ನಡ ಶಾಲೆಗಳನ್ನು ಪ್ರಾರಂಭಿಸಿ ನೂರಕ್ಕೂ ಹೆಚ್ಚು ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಂಡು ಬಂದಿವೆ. ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಅದರ ಬೆಳವಣಿಗೆಯಲ್ಲಿ ಮಹತ್ತರ ಕಾರ್ಯ ಮಾಡಿದ ಈ ಎರಡೂ ಸಂಸ್ಥೆಗಳ ಕಾರ್ಯ ತುಂಬಾ ಶ್ಲಾಘನೀಯವಾಗಿದೆ.

ಕರ್ನಾಟಕ ಬಾಲ ವಿಕಾಸ ಅಕಾಡೆಮಿ

ಕರ್ನಾಟಕ ಸರಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ೨೦೦೯ ರಲ್ಲಿ ಧಾರವಾಡದಲ್ಲಿ ಸ್ಥಾಪಿಸಿದ "ಕರ್ನಾಟಕ ಬಾಲ ವಿಕಾಸ" ಅಕಾಡೆಮಿ ಈಗಾಗಲೇ ಐದು ವಸಂತಗಳನ್ನು ಪೂರೈಸಿ ನಾಡಿನ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ನೂರಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕೋಟ್ಯಂತರ ಮಕ್ಕಳನ್ನು ತಲಪುವ ಹಂತದಲ್ಲಿ ಯಶಸ್ವಿಯಾಗಿದೆ. ಜೊತೆಗೆ ಮಕ್ಕಳ ಸಾಹಿತ್ಯ ಬೆಳವಣಿಗೆಯಲ್ಲಿ ಶ್ರಮಿಸುತ್ತಿದೆ. ಈ ಅಕಾಡೆಮಿಯ ಸ್ಥಾಪನೆಯ ಉದ್ದೇಶಗಳು ಹಲವಾರು. ಮಕ್ಕಳ ಮನಸ್ಸು ಅರಳಿಸುವ ಮೌಲ್ಯಯುಕ್ತ ಮಕ್ಕಳ ಸಾಹಿತ್ಯ ರಚನೆಯಾಗುವಂತೆ ಮತ್ತು ಅದು ಮಕ್ಕಳ ಕೈಗೆ ತಲುಪುವಂತೆ ಮಾಡುವುದು, ಶಿಕ್ಷಣ ಸಾಹಿತ್ಯ, ಸಂಗೀತ ಹಾಗೂ ಕಲೆಯು ಸೇರಿದಂತೆ ಸರ್ವತೋಮುಖ ಬೆಳವಣಿಗೆಗೆ ಹಾಗೂ ಪ್ರಗತಿಗಾಗಿ ವಿಶೇಷ ಕಾರ್ಯಕ್ರಮವನ್ನು ಹಲವಾರು ಇಲಾಖೆಗಳ ಸಹಕಾರದೊಂದಿಗೆ ಏರ್ಪಡಿಸುವುದು, ಜನಪದ ಕ್ರೀಡೆ, ಸಾಹಿತ್ಯ, ಸಾಂಸ್ಕೃತಿಕ ಹಾಗೂ ಮುಂತಾದ ಕ್ಷೇತ್ರಗಳಲ್ಲಿ ಮಕ್ಕಳ ಪ್ರತಿಭೆಗಳನ್ನು ಗುರುತಿಸಿ ಅವುಗಳನ್ನು ಸಮಾಜಕ್ಕೆ ಪರಿಚಯಿಸಿರುವದು ಮುಂತಾದ ಉದ್ದೇಶಗಳನ್ನು ಹೊತ್ತು ಅಕಾಡೆಮಿ ಅಸ್ತಿತ್ವಕ್ಕೆ ಬಂದಿದೆ. ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಅಕಾಡೆಮಿ ಉತ್ತೇಜಿಸುತ್ತಿರುವುದು ಶ್ಲಾಘನೀಯವಾಗಿದ್ದು, ಈಗಾಗಲೇ ಇದಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಅದು ನಡೆಸಿದೆ. ಅಕಾಡೆಮಿಯು ಕೂಡಲಸಂಗಮ, ಗದಗನಲ್ಲಿ ಹಮ್ಮಿಕೊಂಡ ಮಕ್ಕಳ ಕಥಾ ಕಮ್ಮಟದಿಂದ, ಹಂಪಿ, ಹಾವೇರಿ, ಧಾರವಾಡ, ಹೊಸಪೇಟೆ, ಗಂಗಾವತಿ, ಗುಲ್ಬರ್ಗಾಗಳಲ್ಲಿ ಹಮ್ಮಿಕೊಂಡ ಮಕ್ಕಳ ಕಾವ್ಯ ಕಮ್ಮಟದಿಂದ ಅನೇಕ ಜನ ಹೊಸ ಬರಹಗಾರರು ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದಾರೆ. ರಾಜ್ಯದ ೩೫ ಜಿಲ್ಲೆಗಳಲ್ಲೂ ಜರುಗಿದ ಪಂಚತಂತ್ರದ ಕಥೆಗಳ ಕುರಿತಾದ ಕಥಾಸಂಚಾರ, ಧಾರವಾಡದಲ್ಲಿ

ಜರುಗಿದ ಅಂತಾರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವ, ಬಾಲೋತ್ಸವ, ಸೃಜನೋತ್ಸವ, ರಾಜ್ಯದ ವಿವಿಧೆಡೆ ಜರುಗಿದ ಬೇಸಿಗೆ ಶಿಬಿರ, ಮಕ್ಕಳ ಮಿತ್ರ ಪಡೆ ಕಾರ್ಯಾಗಾರ, ಧಾರವಾಡದಲ್ಲಿ ನಡೆಸಿದ ರಾಷ್ಟ್ರೀಯ ಮಕ್ಕಳ ಹಬ್ಬ, ವಿಶ್ವ ಕನ್ನಡ ಸಮ್ಮೇಳನದಲ್ಲಿ ಮಕ್ಕಳ ವಿಚಾರಗೋಷ್ಠಿ, ಮಕ್ಕಳ ರಂಗ ತರಬೇತಿ ಶಿಬಿರಗಳು, ಮಕ್ಕಳ ಚುಕ್ಕೆ ಮೇಳ, ಬಳ್ಳಾರಿಯಲ್ಲಿ ಜರುಗಿಸಿದ ಮಕ್ಕಳ ವಿಜ್ಞಾನ ಶಿಬಿರ, ಮಕ್ಕಳ ವ್ಯಕ್ತಿತ್ವ ವಿಕಸನ ಶಿಬಿರ ಮೊದಲಾದ ಕಾರ್ಯಕ್ರಮಗಳು ಮಕ್ಕಳಿಗೆ, ಮಕ್ಕಳ ಬರಹಗಾರರಿಗೆ ವೇದಿಕೆಯನ್ನು ಕಲ್ಪಿಸುವ ಮೂಲಕ ಮಕ್ಕಳಲ್ಲಿ, ಮಕ್ಕಳ ಸಾಹಿತ್ಯ ರಚನಾಕಾರದಲ್ಲಿ ಕಥೆ ಕವಿತೆ ಲೇಖನಗಳನ್ನು ರಚಿಸುವ ಸೃಜನಶೀಲ ಅಭಿವ್ಯಕ್ತಿಯನ್ನು ಇಮ್ಮಡಿಗೊಳಿಸಿವೆ.

ಆಯ್ದ ಜಿಲ್ಲೆಗಳಲ್ಲಿ ನಾಟಕ ನಿರ್ದೇಶಕರ ಕಮ್ಮಟವನ್ನು ಏರ್ಪಡಿಸಿದ್ದರಿಂದಾಗಿ ಉತ್ತಮವಾದ ಮಕ್ಕಳ ನಾಟಕಗಳು ಪ್ರದರ್ಶನಗೊಳ್ಳಲು ಸಹಾಯಕವಾಗಿದೆ. ಪ್ರತಿ ಜಿಲ್ಲೆಗಳಲ್ಲೂ "ಮಕ್ಕಳ ಹಬ್ಬ" ಏರ್ಪಡಿಸಿದ್ದರಿಂದಾಗಿ ಅನೇಕ ಪ್ರತಿಭಾವಂತ ಗ್ರಾಮೀಣ/ನಗರ ಪ್ರದೇಶದ ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ದೊರೆತಿದೆ. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗುವಂತಹ ಅನೇಕ ಕಾರ್ಯಕ್ರಮಗಳನ್ನು ಅಕಾಡೆಮಿ ರಾಜ್ಯಾದ್ಯಂತ ಹಮ್ಮಿಕೊಳ್ಳುತ್ತಿದೆ. ಬೆಂಗಳೂರಿನ ಮಕ್ಕಳ ಕೂಟದ ಸಹಯೋಗದಲ್ಲಿ ರಾಜ್ಯಮಟ್ಟದ ಒಂದು ಮಕ್ಕಳ ಸಮ್ಮೇಳನವನ್ನು ಕೂಡಾ ನಡೆಸಿದೆ. ೨೦೧೦ ರಿಂದ ಪ್ರತಿವರ್ಷ ರಾಜ್ಯದಲ್ಲಿ ಮಕ್ಕಳು ಮತ್ತು ಮಕ್ಕಳ ಸಾಹಿತಿಗಳಿಂದ ರಚಿತವಾದ ವಿವಿಧ ಪ್ರಕಾರದ ಮಕ್ಕಳ ಕೃತಿಗಳಿಗೆ "ಮಕ್ಕಳ ಚಂದಿರ" ಎಂಬ ಪ್ರಶಸ್ತಿಯನ್ನು ನೀಡಿ ನಗದಿನೊಂದಿಗೆ ಸತ್ಕರಿಸುತ್ತಿದೆ. ಅದೇ ರೀತಿ ಶ್ರೇಷ್ಠ ಮಕ್ಕಳ ಸಾಹಿತಿಗಳಿಗೆ ಗೌರವ ಪ್ರಶಸ್ತಿ ನೀಡುವ ಮೂಲಕ ಮಕ್ಕಳ ಸಾಹಿತಿಗಳನ್ನು ಪ್ರೋತ್ಸಾಹಿಸುತ್ತಿದೆ. ಅಕಾಡೆಮಿಯು ಕೆಲವೊಂದು ಉಪಯುಕ್ತ ಪುಸ್ತಕಗಳನ್ನು ಕೂಡಾ ಪ್ರಕಟಿಸಿದ್ದು. ಅವುಗಳಲ್ಲಿ ಶಿಕ್ಷಣ ವಿಕಾಸ, ಮಕ್ಕಳ ಜನಪದ ಆಟಗಳು ತುಂಬಾ ಮುಖ್ಯವಾಗಿದೆ. ಮಕ್ಕಳ ಸಾಹಿತ್ಯ ಕ್ಷೇತ್ರದ ಸೃಜನಶೀಲ ಬರಹಗಾರರಿಗೆ ಹಲವಾರು ರೀತಿಯಿಂದ ಬಾಲವಿಕಾಸ ಅಕಾಡೆಮಿ ಉತ್ತೇಜನ ನೀಡುತ್ತಿರುವುದು ಶ್ಲಾಘನೀಯವಾಗಿದೆ.

ಮಕ್ಕಳ ಬಳಗ, ಸಿಂದಗಿ

ಮಕ್ಕಳ ಸಾಹಿತಿ ಹ. ಮ. ಪೂಜಾರ ಅವರ ಮಾರ್ಗದರ್ಶನದಲ್ಲಿ ೧೯೭೭ರಲ್ಲಿ ಅಸ್ತಿತ್ವಕ್ಕೆ ಬಂದ "ಸಿಂದಗಿ ಮಕ್ಕಳ ಬಳಗ" ಇದೊಂದು ಸ್ವಯಂ ಘೋಷಿತ ಬಳಗವಾಗಿದೆ. ಹದಿನೈದು ವರ್ಷದೊಳಗಿನ ಮಕ್ಕಳನ್ನು ಪದಾಧಿಕಾರಿಗಳನ್ನಾಗಿ ಹೊಂದಿದ ಬಳಗವು ಮಕ್ಕಳ ಸರ್ವಾಂಗೀಣ ವಿಕಾಸಕ್ಕಾಗಿ ಮಕ್ಕಳ ದಿನಾಚರಣೆ, ತಾಲೂಕು/ಜಿಲ್ಲಾ ಮಟ್ಟದ ಮಕ್ಕಳ ಮೇಳ, ಬಿಡುವಿನ ಮನೆ, ಜಿಲ್ಲಾ ಮಟ್ಟದ ಬೇಸಿಗೆ ಬಿಡುವಿನ ಶಿಬಿರ, ಮಕ್ಕಳ ಸಾಹಿತ್ಯ ಉತ್ಸವ ಮೊದಲಾದ ರಚನಾತ್ಮಕ ಕಾರ್ಯಕ್ರಮಗಳನ್ನು ಆ ಭಾಗದಲ್ಲಿ ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ. ಬಳಗವು ಮಕ್ಕಳಲ್ಲಿ ಹುದುಗಿರುವ ಸೃಜನಶೀಲ ಪ್ರತಿಭೆಯನ್ನು ಅನಾವರಣ ಮಾಡಲು ಪ್ರಯತ್ನಿಸುತ್ತಿದೆ. ಅನೇಕ ಬಾಲ ಪ್ರತಿಭಾವಂತರನ್ನು, ಬರಹಗಾರರನ್ನು ಮಕ್ಕಳ ಸಾಹಿತ್ಯ ಲೋಕಕ್ಕೆ ಪರಿಚಯಿಸಿದ ಕೀರ್ತಿ ಬಳಗಕ್ಕೆ ಸಲ್ಲುತ್ತದೆ. ಬಳಗವು ಬೆಳ್ಳಿ ಹಬ್ಬದ ಪ್ರಯುಕ್ತ ಸಿಂದಗಿಯಲ್ಲಿ ಎರಡು ದಿನದ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಕೂಡಾ ಜರುಗಿಸಿದೆ.

ಮಕ್ಕಳ ಲೋಕ, ಬಂಟ್ವಾಳ

ಮೊದ ಮೊದಲು ದ.ಕ. ಜಿಲ್ಲಾ ಮಕ್ಕಳ ಸಾಹಿತ್ಯ ಸಂಗಮದ ಘಟಕವಾಗಿ ೨೦೦೫ರಲ್ಲಿ ಸ್ವತಂತ್ರವಾಗಿ ಅಸ್ತಿತ್ವಕ್ಕೆ ಬಂದ "ಮಕ್ಕಳ ಲೋಕ" ೨೦೦೫ರಿಂದ ಪ್ರತಿವರ್ಷವೂ ಮಕ್ಕಳ ಸಮ್ಮೇಳನಗಳನ್ನು ಹಮ್ಮಿಕೊಳ್ಳುವ ಮೂಲಕ ಮಕ್ಕಳಿಗೆ, ಮಕ್ಕಳ ಸಾಹಿತ್ಯ ರಚನಾಕಾರರಿಗೆ ವೇದಿಕೆಯನ್ನು ಕಲ್ಪಿಸಿಕೊಡುತ್ತಿದೆ. ತಾಲೂಕಿನ ವಿವಿಧ ಶಾಲೆಗಳಲ್ಲಿ ಸಂಪನ್ಮೂಲ ವ್ಯಕ್ತಿಗಳ ಮೂಲಕ ಕವನ ಹಾಗೂ ಕಥಾ ರಚನಾ ಕಮ್ಮಟಗಳನ್ನು ಹಮ್ಮಿಕೊಂಡು ಮಕ್ಕಳಿಗೆ ಸಾಹಿತ್ಯ ರಚನೆಯಲ್ಲಿ ಆಸಕ್ತಿ ಮೂಡಿಸುತ್ತಿದೆ. ಕವಿಗೋಷ್ಠಿ, ಕಥಾಗೋಷ್ಠಿ, ಚಿತ್ತ-ಚಿತ್ತಾರ, ಮಾತುಕತೆ ಮುಂತಾದ ನಿರಂತರ ಕಾರ್ಯಕ್ರಮಗಳ ಮೂಲಕ ಮಕ್ಕಳ ಸಾಹಿತ್ಯದ ಕಂಪನ್ನು ಬೀರಿದೆ. ಈಗಾಗಲೇ ಮಕ್ಕಳೇ ಬರೆದಂತಹ ೨೦ಕ್ಕೂ ಹೆಚ್ಚು ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿದ ಹಿರಿಮೆ ಮಕ್ಕಳಲೋಕದ್ದಾಗಿದೆ.

ಇತರ ಸಂಘ ಸಂಸ್ಥೆಗಳು

ವಿಜ್ಞಾನವನ್ನು ಜನಪ್ರಿಯಗೊಳಿಸುವ ಹಿನ್ನಲೆಯಲ್ಲಿ ರಾಜ್ಯದಲ್ಲಿ ೧೯೮೫ ರಲ್ಲಿ ಸ್ಥಾಪನೆಗೊಂಡ "ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು" ಮಕ್ಕಳಿಗೆ ವೈಜ್ಞಾನಿಕ ಸಾಹಿತ್ಯವನ್ನು ಪರಿಚಯಿಸುವ ಹಿನ್ನೆಲೆಯಲ್ಲಿ ೫೦ಕ್ಕೂ ಹೆಚ್ಚು ಉದಯೋನ್ಮುಖ ಹಾಗೂ ಹಿರಿಯ ಬರಹಗಾರರಿಂದ ಮಕ್ಕಳಿಗಾಗಿ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿದೆ. ಪ್ರತಿವರ್ಷ ವಿಜ್ಞಾನ ಲೇಖಕರ ಶಿಬಿರ, ಮಕ್ಕಳಿಗೂ ವಿಜ್ಞಾನ ಸಾಹಿತ್ಯವನ್ನು ಬರೆಯಲು ಉತ್ತೇಜನ ನೀಡುತ್ತಿದೆ. "ಬಾಲವಿಜ್ಞಾನ" ಎಂಬ ಮಾಸಿಕವನ್ನು ಮಕ್ಕಳಿಗಾಗಿ ಕೆಲವಾರು ವರ್ಷಗಳಿಂದ ನಿರಂತರವಾಗಿ ಹೊರತರುತ್ತಿದೆ. ೧೯೮೮ರಲ್ಲಿ ಮೈಸೂರಿನಲ್ಲಿ ಅಪ್ಪಾಸ್ವಾಮಿ ನೇತೃತ್ವದಲ್ಲಿ ಸ್ಥಾಪನೆಗೊಂಡ "ಮಕ್ಕಳಲೋಕ ಸಂಸ್ಥೆ" ಮಕ್ಕಳ ಸಾಹಿತ್ಯದ ಬೆಳವಣಿಗೆಗಾಗಿ ಹಲವಾರು ವರ್ಷಗಳಿಂದ ಶ್ರಮಿಸುತ್ತಿದ್ದು, ಅನೇಕ ಕಾರ್ಯಕ್ರಮಗಳನ್ನು ಜರುಗಿಸಿದೆ. ಜೊತೆಗೆ ರಾಜ್ಯಮಟ್ಟದ ಒಂದು ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದೆ.

ಬನಹಟ್ಟಿಯ "ಮಕ್ಕಳ ಸಂಗಮ"ವು ಮಕ್ಕಳಿಗಾಗಿ ನಿರಂತರವಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ. ಹಲವಾರು ಶಾಲೆಗಳಲ್ಲಿ ನೂರಾರು ಮಕ್ಕಳ ಸಾಹಿತ್ಯದ ಕಾರ್ಯಕ್ರಮಗಳನ್ನು ಇದು ಹಮ್ಮಿಕೊಂಡಿದೆಯಲ್ಲದೆ ಕೆಲವು ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರತಿ ವರ್ಷ ಕನ್ನಡದ ಮಕ್ಕಳ ಸಾಹಿತಿಗಳಿಗೆ ಬಾಲಪುರಸ್ಕಾರ ನೀಡಿ ಗೌರವಿಸುತ್ತಿದೆ. ಡಾ. ಶಿವರಾಮ ಕಾರಂತ ಟ್ರಸ್ಟ್ ಉಡುಪಿಯಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಮಕ್ಕಳ ಸಾಹಿತ್ಯದ ಬೆಳವಣಿಗೆಗಾಗಿ ಅನೇಕ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಮಕ್ಕಳ ಸಾಹಿತ್ಯದ ಸಮ್ಮೇಳನಗಳನ್ನು ಕೂಡಾ ಹಮ್ಮಿಕೊಂಡಿದೆ. ಉತ್ತರ ಕನ್ನಡ ಜಿಲ್ಲಾ ಮಕ್ಕಳ ಸಾಹಿತ್ಯ ವೇದಿಕೆ ಇತ್ತೀಚೆಗೆ ಹೊನ್ನಾವರದಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಮಕ್ಕಳ ಸಾಹಿತ್ಯ ಪ್ರಗತಿಗಾಗಿ ಶ್ರಮಿಸುತ್ತಿದೆ. ಬಸವಕಲ್ಯಾಣದ ಕಲ್ಯಾಣ ನಾಡಿನ ಶರಣ ಪರಿಷತ್ತು ಮಕ್ಕಳಿಗಾಗಿ ಶರಣರ ಚರಿತ್ರೆಗಳನ್ನು ಪ್ರಕಟಿಸಬೇಕೆಂದು ತನ್ನ ಬೆಳ್ಳಿ ಹಬ್ಬದ ಸಂದರ್ಭದಲ್ಲಿ (೨೦೦೧ ರಲ್ಲಿ) ೨೫ ಕ್ಕೂ ಹೆಚ್ಚು ಮಕ್ಕಳ ಪುಸ್ತಕಗಳನ್ನು ಮಕ್ಕಳ ಮುತ್ತು ಮಾಲೆಯಲ್ಲಿ ಪ್ರಕಟಿಸಿದೆ. ಸಿಂದಗಿಯ ಪೂಜ್ಯ ಶ್ರೀ ಚೆನ್ನವೀರ ಸ್ವಾಮೀಜಿ ಪ್ರತಿಷ್ಠಾನವು ಮಕ್ಕಳಲ್ಲಿ ಒಳ್ಳೆಯ

ಸಂಸ್ಕಾರ ತುಂಬಿ ಅವರ ಜೀವನವನ್ನು ಉಜ್ವಲಗೊಳಿಸುವ ಉದ್ದೇಶದಿಂದ "ಮಕ್ಕಳ ಸಾಹಿತ್ಯ ಮಾಲೆ"ಯನ್ನು ಸ್ಥಾಪಿಸಿ ಅದರ ಮೂಲಕ ಹಲವಾರು ಮಕ್ಕಳ ಪುಸ್ತಕಗಳನ್ನು ಹೊರ ತಂದಿದೆ. ಬೆಂಗಳೂರಿನ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಎಂಜನಿಯರಿಂಗ್ ಪ್ರತಿಷ್ಠಾನ (ರಿ) ಪ್ರತಿವರ್ಷ ಮಕ್ಕಳಿಗಾಗಿ ಅಖಿಲ ಭಾರತ ಮಟ್ಟದ ಮಕ್ಕಳ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಮ್ಮೇಳನವನ್ನು ಏರ್ಪಡಿಸುತ್ತಿದೆ. ಅಲ್ಲದೇ ಹಲವಾರು ಪ್ರತಿಭಾವಂತ ಮಕ್ಕಳಿಗೆ ಕಥಾವಾಚನ, ಕವನ ವಾಚನಕ್ಕಾಗಿ ದೊಡ್ಡ ಮಟ್ಟದಲ್ಲಿ ವೇದಿಕೆಯನ್ನು ಕಲ್ಪಿಸಿ ಮಕ್ಕಳಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತದೆ. ಜೊತೆಗೆ ಉತ್ತಮ ಮಕ್ಕಳ ಸಾಹಿತ್ಯ ಕೃತಿಗಳಿಗೆ ವಿಶ್ವೇಶ್ವರಯ್ಯ ಸಾಹಿತ್ಯ ಪ್ರಶಸ್ತಿಯನ್ನು ನೀಡುತ್ತದೆ. ಭಾರತ ಸರಕಾರದ ಶೈಕ್ಷಣಿಕ ಅನುಸಂಧಾನ ಹಾಗೂ ಪ್ರಶಿಕ್ಷಣ ಸಂಸ್ಥೆ ಪ್ರತಿ ಎರಡು ವರ್ಷಗಳಿಗೊಮ್ಮೆ ೫ರಿಂದ ೮ ಹಾಗೂ ೯ರಿಂದ ೧೪ ವಯೋಮಾನದ ಮಕ್ಕಳಿಗಾಗಿ ರಚನೆಯಾದ ಮಕ್ಕಳ ಸಾಹಿತ್ಯವನ್ನು ಪರಿಗಣಿಸಿ ಎರಡು ಮಕ್ಕಳ ಸಾಹಿತ್ಯ ಪ್ರಶಸ್ತಿಗಳನ್ನು ಕೊಡುತ್ತದೆ. ಧಾರವಾಡದ ಕ್ರಿಯಾಶೀಲ ಬಳಗ, ಅಂಕುರ, ಅಭಿನಯಭಾರತಿ, ಕಲಾದರ್ಶಿ, ಬೆಂಗಳೂರಿನ ಬೆಕನ, ಎ. ಎಸ್. ಮೂರ್ತಿ ಅವರ ಮಕ್ಕಳ ಚಿತ್ರನಾಟಕ ತಂಡ, ತುಮರಿಯ ಕಿನ್ನರಮೇಳ, ಹೆಗ್ಗೋಡಿನ ಚಿಣ್ಣರ ಮೇಳ, ಗದುಗಿನ ಕಲರವ, ಬಣ್ಣದ ಮನೆ ಮುಂತಾದ ಸಂಸ್ಥೆಗಳು ಮಕ್ಕಳಿಗಾಗಿ ರಂಗ ತರಬೇತಿ ಶಿಬಿರ, ಸಾಹಿತ್ಯ ಶಿಬಿರಗಳನ್ನು ಏರ್ಪಡಿಸುತ್ತಿವೆ. ಕೋಲಾರ ಜಿಲ್ಲೆಯ ಆದಿಮ ಸಂಸ್ಥೆ, ಬೇಲಾಡಿ, ಕಾಂತಾವರ, ಮಂಗಳೂರು ಪುತ್ತೂರಿನ ಕನ್ನಡ ಸಂಘಗಳು ಮೂಡಬಿದರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ, ಮಕ್ಕಳಿಗಾಗಿ ಮಕ್ಕಳ ಸಾಹಿತ್ಯಕ್ಕಾಗಿ ಶ್ರಮಿಸುತ್ತಿದೆ.

ಇವಲ್ಲದೇ ಬೆಳಗಾವಿಯ ನಾಗನೂರು ರುದ್ರಾಕ್ಷಿಮಠ, ಕಾರಂಜಿಮಠ, ಧಾರವಾಡದ ಡೆಪ್ಯೂಟಿ ಚನ್ನಬಸಪ್ಪ ಪ್ರತಿಷ್ಠಾನ, ಭಾಲ್ಕಿಯ ಡಾ. ಚೆನ್ನಬಸವ ಪಟ್ಟದ್ದೇವರಮಠ, ದೆಹಲಿಯ ಎನ್.ಸಿ.ಆರ್.ಟಿ. ಯುನಿಸೆಫ್ ಸಂಸ್ಥೆ, ನವದೆಹಲಿಯ ಬಾಲ ಶಿಕ್ಷಾ ಪರಿಷತ್ತು, ಶಿವಮೊಗ್ಗ ಕನ್ನಡ ಸಂಘ, ಬೆಂಗಳೂರಿನ ಗೊರೂರು ಪ್ರತಿಷ್ಠಾನ, ಹುಬ್ಬಳ್ಳಿ ಮೂರುಸಾವಿರ ಮಠದ ಜ. ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಬೆಂಗಳೂರಿನ ಬಿ. ಎಂ. ಶ್ರೀ. ಪ್ರತಿಷ್ಠಾನ, ಬನಹಟ್ಟಿಯ ತಮ್ಮಣ್ಣಪ್ಪ ಚಿಕ್ಕೋಡಿ ಪ್ರತಿಷ್ಠಾನ, ಮಹಾದೇವಪ್ಪ ಕರ್ಲಟ್ಟಿ ಪ್ರತಿಷ್ಠಾನ, ಮೂಡಬಿದರೆಯ ಶಿವರಾಮ ಕಾರಂತ ಪ್ರತಿಷ್ಠಾನ, ಅತ್ತಿಮಬ್ಬೆ ಸಾಹಿತ್ಯ ಪ್ರತಿಷ್ಠಾನ, ಚಿಕ್ಕೋಡಿಯ ಚಿಣ್ಣರ ಸಾಹಿತ್ಯ ಪ್ರತಿಷ್ಠಾನ, ಗದುಗಿನ ಸಂಗಮ ಪ್ರಕಾಶನ ವೇದಿಕೆ, ಪುತ್ತೂರಿನ ಬೋಳಂತಕೋಡಿ ಪ್ರತಿಷ್ಠಾನ, ವಿಜಾಪೂರದ ಮನೋಹರ ಬಿರಾದಾರ ದತ್ತಿ ಬಳಗ, ಕಂಬ್ಯಾಣಿ ಶರಣಪ್ಪ ದತ್ತಿನಿಧಿ ಬಳಗ, ಬೆಳಗಾವಿ ಹೊಂಬೆಳಕು ಸಂಸ್ಥೆ, ಕನ್ನಡ ಲೇಖಕಿಯರ ಸಂಘ, ಕನ್ನಡ ಅಭಿವೃದ್ಧಿ ಬಳಗ, ನಾಲವತ್ತವಾಡದ ವಿಜಯ ಪ್ರಕಾಶನ ಮುಂತಾದವು ಮಕ್ಕಳ ಸಾಹಿತಿಗಳಿಗೆ ಮತ್ತು ಉತ್ತಮ ಮಕ್ಕಳ ಸಾಹಿತ್ಯದ ಕೃತಿಗಳಿಗೆ ಬಹುಮಾನ/ಪ್ರಶಸ್ತಿ /ಪುರಸ್ಕಾರಗಳನ್ನು ನೀಡುವುದರ ಮೂಲಕ ಮಕ್ಕಳ ಸಾಹಿತ್ಯದ ಬೆಳವಣಿಗೆಗೆ ಪ್ರೋತ್ಸಾಹಿಸುತ್ತಿವೆ.

ಹಾಗೇನೇ ಪ್ರಜಾವಾಣಿ ದಿನಪತ್ರಿಕೆಯು ಹಲವಾರು ವರ್ಷಗಳಿಂದ ದೀಪಾವಳಿ ಶಿಶುಕಾವ್ಯ ಸ್ಪರ್ಧೆ ಏರ್ಪಡಿಸಿ, ಬಹುಮಾನ ನೀಡಿ ಮಕ್ಕಳ ಕವಿಗಳನ್ನು ಪ್ರೋತ್ಸಾಹಿಸುತ್ತಾ ಬಂದಿದೆ. ಚಂದಮಾಮ, ಬಾಲಮಂಗಳ, ಗಿಳಿವಿಂಡು, ಕನ್ನಡಪ್ರಭ, ವಿಜಯವಾಣಿ, ತುಷಾರ, ವಿಜಯ ಕರ್ನಾಟಕ, ಕರ್ಮವೀರ ಮೊದಲಾದ ಪತ್ರಿಕೆಗಳು ಕೂಡ ಮಕ್ಕಳ ಸಾಹಿತ್ಯದ ಕಥೆ/ಕವನ/

ಲೇಖನ ಸ್ಪರ್ಧೆ ಏರ್ಪಡಿಸಿ ಪ್ರೋತ್ಸಾಹಿಸುತ್ತಿವೆ. ಜೊತೆಗೆ ಬಹುತೇಕ ಎಲ್ಲಾ ದಿನಪತ್ರಿಕೆಗಳು ಸಾಪ್ತಾಹಿಕ ಪುರವಣಿ ಮೂಲಕ, ವಾರ, ಮಾಸ ಪತ್ರಿಕೆಗಳು ಮಕ್ಕಳ ಪುಟಗಳ ಮೂಲಕ ಮಕ್ಕಳ ಬರಹಗಾರರಿಗೆ ಸ್ಫೂರ್ತಿ ನೀಡುತ್ತಿವೆ. ರಾಜ್ಯದ ವಿವಿಧ ಆಕಾಶವಾಣಿ ಕೇಂದ್ರಗಳು, ದೂರದರ್ಶನ ಕೇಂದ್ರ, ಖಾಸಗಿ ಚಾನೆಲ್‌ಗಳು ಸಹ ಮಕ್ಕಳ ಸಾಹಿತ್ಯದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಕ್ಕಳ ಸಾಹಿತ್ಯದ ಬೆಳವಣಿಗೆಯಲ್ಲಿ ಸಹಕರಿಸುತ್ತಿವೆ.

ಮಕ್ಕಳ ಸಾಹಿತ್ಯ ಪ್ರಕಾಶನ ಸಂಸ್ಥೆಗಳು

ಮಕ್ಕಳ ಸಾಹಿತ್ಯ ಬೆಳವಣಿಗೆಯಲ್ಲಿ ಹಲವಾರು ಪ್ರಕಾಶನ ಸಂಸ್ಥೆಗಳು ಶ್ರಮಿಸಿವೆ. ಅವುಗಳಲ್ಲಿ ಮುಖ್ಯವಾದವು ಈ ಕೆಳಗಿನಂತಿವೆ.

ನ್ಯಾಷನಲ್ ಬುಕ್ ಟ್ರಸ್ಟ್ : ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್ ನಾಲ್ಕು ದಶಕಗಳಿಂದಲೂ ಹೆಚ್ಚು ಕಾಲ ಮಕ್ಕಳ ಪುಸ್ತಕಗಳ ಪ್ರಕಾಶನ, ಪ್ರದರ್ಶನ, ಮಾರಾಟ ಚಟುವಟಿಕೆ ಹಾಗೂ ವಾಚನಾಭಿವೃದ್ಧಿಯ ವಿವಿಧ ಕಾರ್ಯಕ್ರಮಗಳನ್ನು ಕನ್ನಡದಲ್ಲಿ ಏರ್ಪಡಿಸುವ ಮೂಲಕ ಕನ್ನಡದಲ್ಲಿ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾ ಬಂದಿದೆ. ಈಗಾಗಲೇ ನೂರಾರು ಒಳ್ಳೆಯ ಮಕ್ಕಳ ಸಾಹಿತ್ಯ ಕೃತಿಗಳನ್ನು ಕನ್ನಡದಲ್ಲಿ ತುಂಬಾ ಅಂದವಾಗಿ ದೊಡ್ಡ ದೊಡ್ಡ ಅಳತೆಗಳಲ್ಲಿ ಸಚಿತ್ರವಾಗಿ ಪ್ರಕಟಿಸಿ ನಾಡಿನ ಚಿಣ್ಣರ ಮನವನ್ನು ಗೆದ್ದಿದೆ. ಅನೇಕ ಶೀರ್ಷಿಕೆಗಳು ಹಲವಾರು ಸಲ ಮರುಮುದ್ರಣಗಳನ್ನು ಕಂಡಿರುವುದು ಅವುಗಳ ಜನಪ್ರಿಯತೆಗೆ ಸಾಕ್ಷಿ. ಜನಪರ ಸಾಹಿತ್ಯ ಪ್ರಸಾರದ ಮೂಲಕ ನಾಡಿನ ಬುದ್ಧಿ ಜೀವಿಗಳಿಂದ ಹಿಡಿದು ಜನಸಾಮಾನ್ಯರವರೆಗೆ ಓದುಗರ ದೊಡ್ಡ ಬಳಗವನ್ನೇ ಈ ಸಂಸ್ಥೆ ಹೊಂದಿದೆ.

ರಾಷ್ಟ್ರೋತ್ಥಾನ ಪರಿಷತ್ತು : ಭಾರತೀಯ ಆದರ್ಶವನ್ನು ಎತ್ತಿ ಹಿಡಿಯುವ, ಜನರೆದೆಗೆ ಸ್ಫೂರ್ತಿ, ಉತ್ಸಾಹಗಳನ್ನೆರೆಯಬಲ್ಲ ಪುಸ್ತಕ ಸಂಸ್ಥೆಯಾಗಿ ರಾಷ್ಟ್ರೋತ್ಥಾನ ಸಾಹಿತ್ಯವು ೧೯೬೫ರಲ್ಲಿ ಪ್ರಾರಂಭವಾಯಿತು. ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸ, ತತ್ವಜ್ಞಾನ, ಜೀವನಾದರ್ಶಗಳ ಹಿರಿಮೆಯನ್ನು ಸಾಹಿತ್ಯ ಪ್ರಕಟನೆಯ ಮೂಲಕ ನಾಡಿನ ಮಕ್ಕಳಿಗೆ ತಲಪಿಸುವ ಪ್ರಯತ್ನವಾಗಿ ಉತ್ತಮ ರಾಷ್ಟ್ರೀಯ ಸಾಹಿತ್ಯವನ್ನು ಕನ್ನಡದ ಮಕ್ಕಳಿಗೆ ತರುವ ಯೋಜನೆಯನ್ನು ಆರಂಭಿಸಿತು. ಭಾರತ ಭಾರತೀ ಪುಸ್ತಕ ಸಂಪದ ಮಾಲೆಯಡಿ ವಿವಿಧ ಕ್ಷೇತ್ರಗಳಲ್ಲಿ ಅಪಾರ ಸಾಧನೆ ಮಾಡಿದ ೫೧೦ ಮಹಾಪುರುಷರ ಕಿರುಪರಿಚಯದ ಸುಂದರ ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿತು. ಇಂಥಹ ಒಂದು ಕೋಟಿಗೂ ಹೆಚ್ಚು ಪುಸ್ತಕದ ಪ್ರತಿಗಳನ್ನು ನಾಡಿನ ಮಕ್ಕಳ ಕೈಗೆ ತಲಪಿಸಿದ ಶ್ರೇಯಸ್ಸು ರಾಷ್ಟ್ರೋತ್ಥಾನ ಪರಿಷತ್ತಿಗೆ ಸಲ್ಲುತ್ತದೆ. ಮೊದಲಬಾರಿಗೆ ಕನ್ನಡದಲ್ಲಿ ಬಂದ ಈ ಪುಸ್ತಕಗಳು ನಂತರ ಹತ್ತಾರು ಭಾಷೆಗಳಿಗೆ ಅನುವಾದಗೊಂಡವು.

ಸಪ್ನ ಬುಕ್ ಹೌಸ್ : ಭಾರತದ ಅತಿ ದೊಡ್ಡ ಪುಸ್ತಕ ಭಂಡಾರವೆಂದು ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಮತ್ತು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಿರುವ ಈ ಸಂಸ್ಥೆ ಇದುವರೆಗೂ ಒಂದು ಸಾವಿರಕ್ಕೂ ಹೆಚ್ಚು ಮಕ್ಕಳ ಪುಸ್ತಕಗಳನ್ನು ವಿವಿಧ ಮಾಲೆಗಳ ಅಡಿ ಪ್ರಕಟಿಸಿದೆ. ಸಾಹಿತ್ಯ, ವಿಜ್ಞಾನ, ಚರಿತ್ರೆ, ಜೀವನಚರಿತ್ರೆ ಹೀಗೆ ವಿವಿಧ ಪ್ರಕಾರದ ಬಹುವರ್ಣದ ಪುಸ್ತಕಗಳು ಪ್ರಕಟವಾಗಿದ್ದು, ಹತ್ತಾರು ಸಲ ಮುದ್ರಣವೂ ಆಗಿವೆ. ಹಿರಿಯ ಮಕ್ಕಳ ಸಾಹಿತಿಗಳಾದ

ಡಾ. ಜಿ. ಪಿ. ರಾಜರತ್ನಂ, ಡಾ. ಶಿವರಾಮ ಕಾರಂತ, ಡಾ. ಸುಮತೀಂದ್ರ ನಾಡಿಗ, ಪ. ರಾಮಕೃಷ್ಣಶಾಸ್ತ್ರಿ ಮೊದಲಾದವರ ಮಕ್ಕಳ ಸಾಹಿತ್ಯದ ಸಮಗ್ರ ಕೃತಿಗಳನ್ನು ಪ್ರಕಟಿಸಿದ ಕೀರ್ತಿ ಹಾಗೂ ಅನೇಕ ಹೊಸ ಮಕ್ಕಳ ಸಾಹಿತಿಗಳ ಕೃತಿಗೆ ಅವಕಾಶ ನೀಡಿ ಪ್ರಕಟಿಸಿ ಪ್ರೋತ್ಸಾಹಿಸಿದ ಕೀರ್ತಿ ಇದಕ್ಕೆ ಸಲ್ಲುತ್ತದೆ. ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಕೊಯಮತ್ತೂರು ನವದೆಹಲಿಯಲ್ಲಿ ಶಾಖೆಗಳನ್ನು ಹೊಂದಿರುವ ಈ ಸಂಸ್ಥೆ ಕಳೆದ ಅರ್ಧ ಶತಮಾನದಿಂದಲೂ ಮಕ್ಕಳ ಸಾಹಿತ್ಯದ ಪ್ರಚಾರ ಪ್ರಸಾರ ಬೆಳವಣಿಗೆಯಲ್ಲಿ ಶ್ರಮಿಸುತ್ತಿದೆ.

ನವಕರ್ನಾಟಕ ಪ್ರಕಾಶನ : ಕಳೆದ ಐದು ದಶಕಗಳಿಗಿಂತಲೂ ಹೆಚ್ಚು ಕಾಲ ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವ ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ. ಲಿ., ಮಕ್ಕಳಿಗೆ ನಿನ್ನೆಯ ಕಥೆಗಳು, ನಾಳೆಯ ಕಥೆಗಳು, ನೋಡಿಕಲಿ, ಪುಟಾಣಿ ಪುಸ್ತಕ, ನೋಡುತ್ತ ಆಡುತ್ತ ಕಲಿಯೋಣ ಬಾ, ನವಕರ್ನಾಟಕ ಕಿರಿಯರ ಕಥಾಮಾಲೆ, ಎಳೆಯರಿಗಾಗಿ ವಿಜ್ಞಾನ, ಚಿತ್ರಖಜಾನೆ ಇತ್ಯಾದಿ ಮಾಲೆಗಳಲ್ಲಿ ಮಕ್ಕಳಿಗಾಗಿ ನೂರಾರು ಅಂದವಾದ ಪುಸ್ತಕಗಳನ್ನು ಪ್ರಕಟಿಸಿದೆ. ನಾ. ಡಿಸೋಜಾ, ನವಗಿರಿನಂದ, ಎಮ್. ಶ್ರೀನಿವಾಸ ಉಡುಪ ಮುಂತಾದ ಖ್ಯಾತ ಮಕ್ಕಳ ಸಾಹಿತಿಗಳ ಕೃತಿಗಳು ಇದರಲ್ಲಿ ಸೇರಿರುವದು ಮತ್ತು ಅನೇಕ ಪ್ರತಿಷ್ಠಿತ ಪ್ರಶಸ್ತಿಗಳನ್ನು. ಅವು ಪಡೆದಿರುವುದು. ಈ ಸಂಸ್ಥೆಯ ಹೆಮ್ಮೆಯ ಸಂಗತಿಯಾಗಿದೆ.

ಐ. ಬಿ. ಹೆಚ್. ಪ್ರಕಾಶನ : ಮಕ್ಕಳಿಗಾಗಿ ಚರಿತ್ರೆಗಳನ್ನು ರಚಿಸುವಲ್ಲಿ ಮತ್ತು ಹುಲುಸಾಗಿ ಪ್ರಕಟಿಸುವಲ್ಲಿ ಐ.ಬಿ.ಹೆಚ್. ಪ್ರಕಾಶನದ ಕೊಡುಗೆ ಮಹತ್ವದ್ದಾಗಿದೆ. ಕನ್ನಡ ನಾಡಿನ ಪರಂಪರೆಯನ್ನು, ಪುಣ್ಯ ಪುರುಷರ ಚರಿತ್ರೆಗಳನ್ನು ನಾಡಿನ ನೂರಾರು ಲೇಖಕರಿಂದ ಬರೆಯಿಸಿ ಅಂದವಾಗಿ ಪ್ರಕಟಿಸಿ ನಾಡಿನ ಎಳೆಯರಿಗೆ ನೀಡಿದ ಕೀರ್ತಿ ಇದಕ್ಕೆ ಸಲ್ಲುತ್ತದೆ.

ಸಂಗಮ ಪ್ರಕಾಶನ : ತೊಂಭತ್ತರ ದಶಕದಲ್ಲಿ ಗದುಗಿನಲ್ಲಿ ಸ್ಥಾಪನೆಗೊಂಡ ಈ ಪ್ರಕಾಶನ ಸುಮಾರು ೫೦೦ ಕ್ಕೂ ಹೆಚ್ಚು ಉದಯೋನ್ಮುಖ ಮಕ್ಕಳ ಸಾಹಿತಿಗಳಿಗೆ ವೇದಿಕೆ ಕಲ್ಪಿಸುವ ಮೂಲಕ ಅವರ ಮೊದಲ ಕವಿತೆ, ಕಥೆ, ಶಿಶುಪ್ರಾಸ, ನಾಟಕ ಇತ್ಯಾದಿಗಳನ್ನು ಐದಾರು ಪ್ರಾತಿನಿಧಿಕ ಸಂಪುಟಗಳಲ್ಲಿ ಹೊರತಂದ ಕೀರ್ತಿಗೆ ಭಾಜನವಾಗಿದೆ.

ಇತರ ಪ್ರಮುಖ ಪ್ರಕಾಶನ ಸಂಸ್ಥೆಗಳು : ಮಕ್ಕಳ ಸಾಹಿತ್ಯ ಕೃತಿಗಳನ್ನು ಪ್ರೀತಿಯಿಂದ ಪ್ರಕಾಶನ ಮಾಡಿ ನಾಡಿನ ಚಿಣ್ಣರ ಕೈಗೆ ತಲುಪಿಸುವಲ್ಲಿ ನಾಡಿನ ನೂರಾರು ಪ್ರಕಾಶನ ಸಂಸ್ಥೆಗಳು ಶ್ರಮಿಸಿವೆ, ಶ್ರಮಿಸುತ್ತಿವೆ. ಅಂತಹ ಕೆಲ ಇತರ ಪ್ರಮುಖ ಪ್ರಕಾಶನ ಸಂಸ್ಥೆಗಳು ಹೀಗಿವೆ·– ಅಂಕಿತ ಪುಸ್ತಕ, ಅತ್ರಿ ಬುಕ್ ಸೆಂಟರ್, ಅಕ್ಷರ ಪ್ರಕಾಶನ, ಅಭಿನವ, ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ, ಆನಂದಕಂದ ಗ್ರಂಥಮಾಲೆ, ಆಕೃತಿ ಪುಸ್ತಕ, ಆಪಿ ಪುಸ್ತಕ ಮನೆ, ಎಂ.ಸಿ.ಸಿ. ಪಬ್ಲಿಕೇಶನ್ಸ್, ಕಣ್ವ ಪ್ರಕಾಶನ, ಕಾಮಧೇನು ಕಾವ್ಯಾಲಯ, ಚಂದನ ಪ್ರಕಾಶನ, ಕೆಂಡಸಂಪಿಗೆ ಪ್ರಕಾಶನ, ಖುಷಿ ಕ್ರಿಯೇಷನ್ಸ್, ಗಿರಿಮನೆ ಪ್ರಕಾಶನ, ಗೀತಾ ಏಜೆನ್ಸಿಸ್, ಗೀತಾ ಪಬ್ಲಿಷಿಂಗ್ ಹೌಸ್, ಗೀತಾ ಪ್ರೆಸ್, ಗೀತಾ ಬುಕ್ ಹೌಸ್, ಚಿಂತನ ಪುಸ್ತಕ, ಚಿಂತನ ಗಂಗಾ ಪ್ರಕಾಶನ, ನಂದಿ ಪ್ರಕಾಶನ, ಚಿಲ್ಡ್ರನ್ ಬುಕ್ ಟ್ರಸ್ಟ್, ಚೇತನ ಬುಕ್ ಹೌಸ್, ಚೈತನ್ಯ ಪ್ರಕಾಶನ, ಚೈತ್ರ ಪ್ರಕಾಶನ, ಛಂದ ಪುಸ್ತಕ, ಜನಪದ ಪ್ರಕಾಶನ, ಟೋಟಲ್ ಕನ್ನಡ, ಡಿ.ವಿ.ಕೆ. ಮೂರ್ತಿ,

ತನುಮನ ಪ್ರಕಾಶನ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ದಿವ್ಯ ಪ್ರಕಾಶನ, ದಿವ್ಯಚಂದ್ರ ಪ್ರಕಾಶನ, ದೇವುಡು ಪ್ರತಿಷ್ಠಾನ, ಧಾತ್ರಿ ಪ್ರಕಾಶನ, ಪಲ್ಲವ ಪ್ರಕಾಶನ, ಪ್ರಗತಿ ಗ್ರಾಫಿಕ್ಸ್, ಪ್ರಸನ್ನ ಟ್ರಸ್ಟ್, ಪ್ರಿಯದರ್ಶಿನಿ ಪ್ರಕಾಶನ, ಪ್ರಿಸಂ ಬುಕ್ಸ್, ಪುಸ್ತಕ ಪ್ರಕಾಶನ, ಬಹುಜನ ಮಾಧ್ಯಮ ಕೇಂದ್ರ, ಭಾಗ್ಯಲಕ್ಷ್ಮೀ ಪ್ರಕಾಶನ, ಭಾರತ ಸಂಸ್ಕೃತಿ ಪ್ರಕಾಶನ, ಭಾರತಿ ಪ್ರಕಾಶನ, ಭಾವನಾ ಪ್ರಕಾಶನ, ಭೂಮಿ ಬುಕ್ಸ್, ಮಧುರ/ವಿಕ್ರಮ್/ಲಹರಿ ಪ್ರಕಾಶನ, ಮನೋಹರ ಗ್ರಂಥಮಾಲಾ, ಜಡಭರತ ಪ್ರಕಾಶನ, ಮಹಿಮ ಪ್ರಕಾಶನ, ಯಾನ ಪ್ರಕಾಶನ, ರಮಣಶ್ರೀ ಪ್ರಕಾಶನ, ಸಮಾಜ ಪುಸ್ತಕಾಲಯ, ರವೀಂದ್ರ ಪುಸ್ತಕಾಲಯ, ಪಿ. ಸಿ. ಶಾಬಾದಿಮಠ ಬುಕ್ ಡಿಪೋ, ಎಂ. ಎಸ್. ಶಾಬಾದಿಮಠ ಬುಕ್ ಡಿಪೋ, ಸಿದ್ಧಲಿಂಗೇಶ್ವರ ಬುಕ್ ಡಿಪೋ, ರಾಮಕೃಷ್ಣಾಶ್ರಮ, ರೂಪ ಪ್ರಕಾಶನ, ರೂಪರಶ್ಮಿ ಪ್ರಕಾಶನ, ಲಡಾಯಿ ಪ್ರಕಾಶನ, ಲೋಹಿಯಾ ಪ್ರಕಾಶನ, ವಸಂತ ಪ್ರಕಾಶನ, ವಿಕಾಸ ಪ್ರಕಾಶನ, ವಿದ್ಯಾ ಪಬ್ಲಿಷಿಂಗ್ ಹೌಸ್, ವಿವೇಕಾನಂದ ಕೇಂದ್ರ, ವಿಸ್ಮಯ ಪ್ರಕಾಶನ, ಮಾರುತಿ ಪ್ರಕಾಶನ, ಯುಗಪುರುಷ ಪ್ರಕಟನಾಲಯ, ನಿರ್ಮಲ ಪ್ರಕಾಶನ, ವಾಸನ್ ಪಬ್ಲಿಕೇಶನ್ಸ್, ವ್ಯಾಸ ಪ್ರಕಾಶನ, ಸೃಷ್ಟಿ ಪಬ್ಲಿಕೇಶನ್ಸ್, ಸಾಗರ ಪ್ರಕಾಶನ, ಸಾವಣ್ಣ ಪ್ರಕಾಶನ, ಸಾಹಿತ್ಯ ಪ್ರಕಾಶನ, ಸಾಹಿತ್ಯ ಭಂಡಾರ, ಸಾಹಿತ್ಯ ಸಿಂಧು ಪ್ರಕಾಶನ, ಸುಭಾಷ್ ಸ್ಟೋರ್ಸ್, ಸುಮ್‌ಸುಮ್ನೆ ಪ್ರಕಾಶನ, ಸುಮೇಧ ಪ್ರಕಾಶನ, ಸ್ಟೂಡೆಂಟ್ ಬುಕ್ ಹೌಸ್, ಸ್ನೇಹ ಬುಕ್ ಹೌಸ್, ಹೇಮಂತ ಸಾಹಿತ್ಯ, ಸಂಕೇಶ್ವರ, ಸಂವಹನ, ಶೃಂಗಾರ ಪ್ರಕಾಶನ, ಸಾಹಿತ್ಯ ಸೌಧ ಪ್ರಕಾಶನ, ಜ್ಞಾನಯೋಗಿ ಪಬ್ಲಿಕೇಶನ್, ಗ್ರಾಮೀಣ ಪ್ರತಿಭಾ ಪ್ರಕಾಶನ, ಭಾರ್ಗವ ಪ್ರಕಾಶನ, ಶ್ರೀಮುಖ ಪ್ರಕಾಶನ, ಸುಮುಖ ಪ್ರಕಾಶನ, ಶೈಲಿ ಪ್ರಕಾಶನ, ಶ್ರೀನಿವಾಸ ಪುಸ್ತಕ ಪ್ರಕಾಶನ, ವಿದ್ಯಾ ಚೇತನ ಪ್ರಕಾಶನ, ಶಿಶು ಸಾಹಿತ್ಯ ಮಾಲೆ ಮಿತ್ತ್ಯೈಲು, ಸಂದೀಪ ಸಾಹಿತ್ಯ, ಸುಧಾ ಶಿಶು ಸಾಹಿತ್ಯ ಮಾಲೆ, ಸಮೀರ ಸಾಹಿತ್ಯ, ಆನಂದ ಪಬ್ಲಿಕೇಶನ್, ವೀರಶೈವ ಭಾರತೀ ಗ್ರಂಥಮಾಲೆ, ಮುಂಡರಗಿ ಅನ್ನದಾನೀಶ್ವರ ಧರ್ಮ ಪ್ರಚಾರಕ ಮಂಡಳ, ಕವಿರಾಜಮಾರ್ಗ ಪ್ರಕಾಶನ, ಎಸ್. ಪಿ. ಪ್ರಕಾಶನ, ಮಲ್ಲಿಕಾರ್ಜುನ ಪ್ರಕಾಶನ, ಗೌರೀಶ ಪುಸ್ತಕಾಲಯ, ಸುರುಚಿ, ಪ್ರೇಮಸಾಯಿ ಪ್ರಕಾಶನ ಮುಂತಾದವು ಮಕ್ಕಳ ಪುಸ್ತಕಗಳನ್ನು ಪ್ರಕಟಿಸಿವೆ / ಪ್ರಕಟಿಸುತ್ತಿವೆ.

ಕನ್ನಡಕ್ಕೆ ಬಂದ ಅನ್ಯಭಾಷಾ ಸಾಹಿತ್ಯ

– ಡಾ. ಬಸು ಬೇವಿನಗಿಡದ

ದುರ್ಗಸಿಂಹನ ಪಂಚತಂತ್ರದಿಂದಲೇ ಈ ಅನುವಾದದ ಇತಿಹಾಸವನ್ನ ಪ್ರಾರಂಭಿಸ ಬಹುದೇನೋ. ಹಾಗೆ ನೋಡಿದರೆ ದುರ್ಗಸಿಂಹ ಮೂಲ ವಸುಭಾಗಭಟ್ಟನ ಕೃತಿಯನ್ನ ಕನ್ನಡಕ್ಕೆ ಮೊದಲು ತಂದಿರುವುದಷ್ಟೇ ಅಲ್ಲ, ಭಾರತದಲ್ಲಿಯೇ ಹೀಗೆ ಸಂಸ್ಕೃತದಿಂದ ಮೊಟ್ಟಮೊದಲಬಾರಿಗೆ ಇನ್ನೊಂದು ಭಾರತೀಯ ಭಾಷೆಯಲ್ಲಿ ತಂದಿರುವ ಸಾಧನೆಯನ್ನೂ ಮಾಡಿದವನು. ಆದರೆ ಅವನು ಆ ಕೃತಿಯನ್ನ ವಿದ್ವಜ್ಜನರ, ರಾಜರ ಆಸ್ಥಾನದ ಬೌದ್ಧಿಕ ವರ್ಗಕ್ಕೆ ಮುಟ್ಟುವಂತೆ ತಂದವನೇ ಹೊರತು, ಮಕ್ಕಳಿಗೆ ಮುಟ್ಟುವಹಾಗೆ ತಂದುದಲ್ಲ. ಪಂಚತಂತ್ರದ ಕತೆಗಳನ್ನ ಆಧಾರವಾಗಿಟ್ಟುಕೊಂಡು ಹೊಸಬಗೆಯಲ್ಲಿ ಅನೇಕ ಕೃತಿಗಳು ಕನ್ನಡಕ್ಕೆ ಬಂದಾಗಿವೆ, ಬರುತ್ತಲೂ ಇವೆ. ಮೂಲದ ವಿಷ್ಣುಶರ್ಮನ ಕೃತಿಯನ್ನೂ ತಂದುದಾಗಿದೆ. ಹೀಗೆಯೇ ಇಸೋಪನ ನೀತಿಕತೆಗಳು, ಅರೇಬಿಯನ್ ನೈಟ್ಸ್ ಕತೆಗಳು, ಸಿಂದಬಾದನ ಸಾಹಸದ ಕತೆಗಳು, ಅಕಬರ್ ಬೀರಬಲ್ಲನ ಕತೆಗಳು, ತೆನಾಲಿ ರಮಕೃಷ್ಣನ ಕತೆಗಳು ದಂಡಿಯಾಗಿ ಮುದ್ರಣಗೊಳ್ಳುತ್ತ ಬರುತ್ತಲೇ ಇವೆ. ಇವುಗಳನ್ನ ದಾಖಲೆ ಇಡುವುದೇ ದುಸ್ತರ ಎನ್ನುವಷ್ಟರ ಮಟ್ಟಿಗೆ ಮಾರುಕಟ್ಟೆಯ ತಂತ್ರವಾಗಿ ಇವು ಬರುತ್ತಲೇ ಇವೆ. ಇವು ಅನುವಾದಗಳಾಗಿ ಬರುತ್ತಿವೆಯೋ, ಆಧಾರಿತವಾಗಿ ಬರುತ್ತಿವೆಯೋ ಎನ್ನುವದೆಲ್ಲ ಗಣನೆಗೆ ಸಿಗುವುದಿಲ್ಲ. ೧೮೬೯ರಷ್ಟು ಹಿಂದೆಯೇ ಅರೇಬಿಯನ್ ನೈಟ್ಸ್ ಕೃತಿಯನ್ನು ವೆಂಕಟರಂಗೋ ಕಟ್ಟಿ ಅವರು ಕನ್ನಡಕ್ಕೆ ತಂದಿದ್ದರು.(ಇದು ಬಾಲ ಸಾಹಿತ್ಯದ ಮಿತಿಗೆ ಒಳಪಡಲಾರದೆಂದು ಬೊಳುವಾರು ಅವರು ಅಭಿಪ್ರಾಯ ಪಟ್ಟಿದ್ದಾರೆ). ಹಾಗೆಯೇ ಗದಿಗೆಯ್ಯ ಹೊನ್ನಾಪೂರಮಠ ಅವರು 'ಅಲ್ಲಾವುದ್ದೀನ ಮತ್ತು ಸೋಜಿಗದ ದೀಪ' ರಚಿಸಿದ್ದರು. ಬೇತಾಳವಿಂಶತಿ ಕತೆಗಳು, ಭಟ್ಟಿ ವಿಕ್ರಮಾದಿತ್ಯನ ಕತೆಗಳು ಮುಂತಾಗಿ ಭಾರತೀಯ ಪರಂಪರೆಯ ಅಸಂಖ್ಯ ಕತೆಗಳು ಇತರ ಭಾಷೆಗಳಲ್ಲಿನ ಹಾಗೆ ಕನ್ನಡದಲ್ಲಿಯೂ ಕಾಣಿಸಿಕೊಳ್ಳುತ್ತಲೇ ಬಂದಿವೆ. ಇವನ್ನೆಲ್ಲ ಸಾರಾಸಗಟಾಗಿ ಸಂಸ್ಕೃತಮೂಲವೆಂದು ಹೇಳಲಾಗದು, ಅಪಭ್ರಂಶವೆಂದೋ ಇತರೇ ಪ್ರಾದೇಶಿಕ ಭಾಷಾ ಮೂಲದುವೆಂದೊ, ಪ್ರಾಕೃತವೆಂದೊ ನಾನಾ ಬಗೆಯಾಗಿ ಕಂಡುಕೊಳ್ಳುವ ಸಾಧ್ಯತೆ ಇದೆ. ರಾಮಾಯಣ ಮಹಾಭಾರತದ ಕತೆಗಳಂತೂ ಮತೆ ಮತ್ತೆ ಬರುತ್ತಲೇ ಇವೆ. ಇವುಗಳಲ್ಲಿ ಮೂಲ ಕನ್ನಡದಲ್ಲಿ ರಚಿತವಾಗಿರುವ ಹಾಗೆ ಬೇರೆ ಭಾಷೆಗಳಿಂದ ಬಂದುವಾಗಿಯೂ ಅನೇಕವಿವೆ. ರಾಜಾಜಿ ಅವರ ಭಾರತ ಕತೆ ಕನ್ನಡಕ್ಕೆ ಬಂದಿರುವುದನ್ನು ಇಲ್ಲಿ ಹೆಸರಿಸಬಹುದು.

ಮಕ್ಕಳ ಸಾಹಿತ್ಯವಾಗಿ ಹೊಸಗಾಲದ ವಾತಾವರಣದ ದೃಷ್ಟಿಯಿಂದಲೇ ನೋಡುವಾಗ ಕೆಲವೆಲ್ಲ ವಿಶೇಷದ ಕೃತಿಗಳ ಅನುವಾದಗಳು ಕಣ್ಣಿಗೆ ಬೀಳುತ್ತವೆ. ನಾ. ಕಸ್ತೂರಿ ಅವರು ಇಂಗ್ಲಿಷಿನಲ್ಲಿ ಮಕ್ಕಳ ಸಾಹಿತ್ಯದ ಕ್ಲಾಸಿಕ್ ಎಂದೇ ಪ್ರಚುರವಾದ ಲುಯಿ ಕರೋಲ್ ಅವರ ಆಲೀಸಳ ಕತೆಯನ್ನು 'ಪಾತಾಳದಲಿ ಪಾಪಚ್ಚಿ' ಎಂದು ಸೊಗಸಾಗಿಯೇ ತಂದರು. ಅದರ ಮೊದಲ ಪ್ರಕಟಣೆಯಲ್ಲಿ ಮೂಲದಲ್ಲಿದ್ದ ಚಿತ್ರಗಳನ್ನೇ ಬಳಸಿಕೊಳ್ಳಲಾಗಿತ್ತು. ಹೀಗೆಯೇ ೧೯೬೫ರಲ್ಲಿ ಎಸ್. ಅನಂತನಾರಾಯಣ ಅವರು ಲಾರಾ ಇಂಗಲ್ಸ್ ವೈಲ್ಡ್‌ರ ಕೃತಿಯನ್ನ ಹತ್ತು ಕೃತಿಗಳ ಸರಣಿಯಾಗಿ ತಂದುದು ಒಳ್ಳೇ ಪ್ರಚುರತೆಯನ್ನ ಪಡೆದಿತ್ತು, ಮಕ್ಕಳಲ್ಲಿಯೂ ಓದಿನ ರುಚಿಯನ್ನ ಹುಟ್ಟಿಸಿತ್ತು. ಈ ಕೃತಿಯಲ್ಲಿ ಮೊದಲ ಹಲವು ಅಧ್ಯಾಯಗಳು ಇಂಗಲ್ಸ್‌ರ ಬಾಲ್ಯದ ದಿನಗಳ ನೆನಪುಗಳನ್ನ ಆಧರಿಸಿದ್ದು ಮಕ್ಕಳಿಗೆ ಬಲು ಹಿಡಿಸುವಂಥವೇ ಆಗಿವೆ. ಎರಡು ಶತಮಾನಗಳ ಹಿಂದೆ ಜನವಿಹೀನವಾಗಿದ್ದ ಅಮೇರಿಕಾ ಖಂಡಕ್ಕೆ ಪ್ರಪ್ರಥಮಬಾರಿಗೆ ವಲಸೆ ಹೋದ ಸಾಹಸಿ ಸಂಸಾರಗಳು ಎದುರಿಸಬೇಕಾಗಿ ಬಂದ ದುರ್ಭರ ಹಾಗೂ ರೋಮಾಂಚಕ ಸನ್ನಿವೇಶಗಳನ್ನು ನೀಡುವಂತಹ ಕೃತಿ ಇದು. ಮೂಲ ನಿವಾಸಿಗಳಿಗೂ ಹಾಗೂ ವಲಸೆ ಹೋದವರಿಗೂ ನಡೆಯುವ ಸಂಘರ್ಷವನ್ನು ಈ ಕೃತಿ ಕುತೂಹಲಕರವಾಗಿ ನಿರೂಪಿಸುತ್ತದೆ. ಹೀಗೆ ಮಕ್ಕಳ ಸಾಹಿತ್ಯವೆಂದೇ ಖ್ಯಾತವಾದ ಕೆಲವೆಲ್ಲ ಕೃತಿಗಳನ್ನು ನಮ್ಮ ಲೇಖಕರು ತಂದಿರುವ ಸಾಧ್ಯತೆ ಉಂಟು. ಆದರೆ ಈಗ ಸರಿಯಾದ ಮಾಹಿತಿ ದೊರಕುವುದು ಕಷ್ಟವಾಗಿದೆ. ನೀಲತ್ತಹಳ್ಳಿ ಕಸ್ತೂರಿ ಅವರು ತಂದ 'ತಗಡಿನ ಸಿಪಾಯಿ' (ಟಿನ್ ಸೋಲ್ಜರ್), ಬಿ, ಜನಾರ್ದನ ಭಟ್ಟ ಅವರು ತಂದಿರುವ ಜೆ. ಎಮ್. ಬೆರ್ರಿಯ 'ಪೀಟರ್ ಪ್ಯಾನ್' ಅಂಥ ಕೃತಿಗಳನ್ನ ಇಲ್ಲಿ ಉಲ್ಲೇಖಿಸಬಹುದು. ಈ ಕೃತಿಯ ಕೆಲ ಸಾಲುಗಳನ್ನು ಇಲ್ಲಿ ಉದ್ಧರಿಸಬಹುದು:

ಪೀಟರ್‌ಗೆ ಒಮ್ಮೊಮ್ಮೆ ನೆನಪೇ ಇರುವದಿಲ್ಲ. ತನ್ನಷ್ಟಕ್ಕೇ ಯಾವುದೋ ಸಾಹಸವನ್ನು ಹುಡುಕಿಕೊಂಡು ಹೋದನೆಂದರೆ ತುಂಬ ಹೊತ್ತು ಬರುವುದೆ ಇಲ್ಲ. ಹಿಂದಿರುಗುವಾಗ ತಾನು ನಕ್ಷತ್ರಗಳ ಜೊತೆ ಮಾಡಿದ ತಮಾಷೆಯ ಕಾರಣದಿಂದ ನಗುತ್ತ ಬರುತ್ತಿದ್ದ. ಆ ತಮಾಷೆ ಯಾವುದೆಂದು ಅವನಿಗೆ ಮರೆತು ಹೋಗಿರುತ್ತಿತ್ತು. ಒಮ್ಮೊಮ್ಮೆ ಅವನ ಮೈಯಲ್ಲಿ ಜಲಕನ್ಯೆಯರ ಪರೆಗಳು ಅಂಟಿಕೊಂಡಿರುತ್ತಿದ್ದವು. ಆದರೆ ಏನಾಯಿತೆಂದು ಅವನಿಗೆ ನೆನಪಿರುತ್ತಿರಲಿಲ್ಲ. . . . ಆದರೆ ಪೀಟರ್ ಗಾಳಿಯಲ್ಲಿ ಮಲಗುವುದು ಹೇಗೆ ಎನ್ನುವುದನ್ನು ಅವರಿಗೆ ಕಲಿಸಿಕೊಡಲು ಮರೆಯಲಿಲ್ಲ. ಅವನು ಹೇಳಿಕೊಟ್ಟಂತೆ ಮಕ್ಕಳು ಗಾಳಿಯ ಮೇಲೆ ಆಕಾಶಕ್ಕೆ ಮುಖಮಾಡಿ ಮಲಗಿಕೊಂಡು ಮುಂದೆ ಧಾವಿಸುತ್ತಿರುವಂತೆಯೇ ನಿದ್ದೆಮಾಡಲು ಕಲಿತರು. ಪೀಟರ್ ಆಗಾಗ ಅವರನ್ನು ಎಚ್ಚರಿಸಿ 'ಇಲ್ಲಿ ಇಳಿಯಬೇಕು' ಎನ್ನುತ್ತಿದ್ದ. ಅವರು ಆ ಗಾಳಿಯಿಂದ ಇಳಿದು ಇನ್ನೊಂದನ್ನು ಹತ್ತಿ ತಮ್ಮ ಪ್ರಯಾಣವನ್ನು ಮುಂದುವರೆಸುತ್ತಿದ್ದರು.

ಇಂಥವಲ್ಲದೆ ಅನೇಕ ಕೃತಿಗಳು ಮಕ್ಕಳಿಗಾಗಬಹುದಾಗಿ ನಮ್ಮ ಖ್ಯಾತ ಲೇಖಕರನೇಕರಿಂದ ಕನ್ನಡಕ್ಕೆ ಬಂದಿವೆ. ಇವು ನೇರವಾದ ಅನುವಾದವಾಗಿರುವಂತೆ, ಆಧಾರಿತ, ಸಂಗ್ರಹವಾಗಿ ಅಂತೂ ನಾನಾ ಬಗೆಯಲ್ಲಿ ಬಂದಿವೆ. ವೆಂಕಟರಂಗೋ ಕಟ್ಟಿ ಅವರ ಅರೇಬಿಯನ್ ನೈಟ್ಸ್, ಗದಿಗೆಯ್ಯ ಹೊನ್ನಾಪುರಮಠ ಅವರ ಅಲ್ಲಾವುದ್ದೀನ್ ಮತ್ತು ಸೋಜಿಗದ ದೀಪ ಮುಂತಾಗಿ ತೀರ ಪ್ರಾಚೀನ ಕೃತಿಗಳಿಂದ ಹಿಡಿದು ಇತ್ತೀಚಿನ ಲೇಖಕರ ವರೆಗೂ ಈ ಅನುವಾದಗಳನ್ನ ಗುರುತಿಸಬಹುದು. ಜಿ. ಕೆ. ಅನಂತರಾಮ್ ಅವರ 'ಹಸಿರು ಭೂತ ಮತ್ತು ಇತರ ಸೂಫಿ

ಕತೆಗಳು', 'ವಾಸವದತ್ತೆ', 'ಮಾತನಾಡುವ ಮಾವಿನ ಹಣ್ಣು'(ಮರಾಠಿಯ ಅನಸೂಯಾ ಪೈಠಣಕರ್), 'ಶ್ಯಾಮ ಮತ್ತು ಪುಟ್ಟ ಹಕ್ಕಿ'(ಕಮಲಾ ಲಕ್ಷ್ಮಣ ಅವರ ಇಂಗ್ಲೀಷ್ ಕೃತಿ), 'ಲೂಸಿಗೆ ಒಂದು ಅಂಗಿ' ಮುಂತಾದವುಗಳಲ್ಲದೆ ಇನ್ನೂ ಅನೇಕರ ಕೃತಿಗಳನ್ನು ಐಬಿಎಚ್ ಪ್ರಕಾಶನದಿಂದ ತಂದರು. ಮಕ್ಕಳ ಲೋಕದಲ್ಲಿ ಬಹಳಷ್ಟು ಆಸಕ್ತಿಯನ್ನ ಹುಟ್ಟಿಸಿದ ರಾಬರ್ಟ ಸ್ಟಿವನ್‌ಸನ್‌ನ 'ಟ್ರೆಸರ್ ಐಲ್ಯಾಂಡ್' ಕೃತಿಯನ್ನು ಅನೇಕರು ಕನ್ನಡಕ್ಕೆ ತಂದಿದ್ದಾರೆ. ಚ. ನಾ. ಚಂದ್ರಪ್ರಭಾ ಅವರು 'ದ್ರವ್ಯದ್ವೀಪ'(ಸಾಹಿತ್ಯೋದಯ-ಮೈಸೂರು-೧೯೫೫), ಆರ್. ಎಸ್. ನಾಯಕ ಅವರು 'ಗುಪ್ತ ಖಜಾನೆ'(ಅಭಿನವ ಪ್ರಕಾಶನ-ಬೆಳಗಾವಿ), ಬಿ. ಡಿ. ಮಾಧವ ಬಾಳಿಗ ಅವರು 'ನಿಕ್ಷೇಪ ದ್ವೀಪ'(ಯು ಆರ್ ಶೆಣೈ ಆ್ಯಂಡ್ ಸನ್ಸ್-ಮಂಗಳೂರು-೧೯೫೩), ಎಂ. ಎಸ್. ರಾಮರಾವ್ ಅವರು 'ನಿಧಿದ್ವೀಪ'(ಡಿ ವಿ ಕೆ ಮೂರ್ತಿ-ಮೈಸೂರು-೧೯೭೪), ಖ್ಯಾತ ಕತೆಗಾರ ಆನಂದ(ಅಜ್ಜಂಪುರ ಸೂರಿ)ಅವರು 'ಸಿರಿದ್ವೀಪ'ಎಂದು ಕನ್ನಡಕ್ಕೆ ತಂದಿರುವ ದಾಖಲೆಗಳು ಸಿಗುತ್ತವೆ. ಇದು ಸಮುದ್ರಯಾನ, ಭೂಶೋಧನೆಗಳನ್ನು ಕುರಿತ ಒಂದು ರಮ್ಯ, ಸಾಹಸಭರಿತ ಕಥೆಯಾಗಿದೆ. 'ಗಲಿವರ್ಸ್ ಟ್ರಾವಲ್ಸ್' ಕೃತಿ ಕೂಡ ಹಲವಾರು ಲೇಖಕರಿಂದ ಕನ್ನಡಕ್ಕೆ ಬಂದಿದೆ. ಮುಖ್ಯವಾಗಿ ಇ. ಆರ್. ಸೇತುರಾಮ್ ಅವರು 'ಗಲಿವರನ ಪ್ರವಾಸ' ಎಂದು ತಂದಿದ್ದಾರೆ. ಇದನ್ನು ವೀರಕೇಸರಿ ಪ್ರಕಟಣಾಲಯ ಬೆಂಗಳೂರು ೧೯೫೩ರಲ್ಲಿ ಹೊರತಂದ ದಾಖಲೆ ಸಿಗುತ್ತದೆ. ಈ ಪುಸ್ತಕಕ್ಕೆ ಆರ್. ಎಸ್. ನಾಯ್ಡು ಅವರು ಚಿತ್ರ ರಚಿಸಿದ್ದಾರೆ.

ನೈಜತೆಯನ್ನು ಚಿತ್ರಿಸುವ ಎಲಿಜೆಬೆತ್ ಹ್ಯಾರಿಯೆಟ್ ಸ್ಟೋ ಅವರ ಅಂಕಲ್ ಟಾಮ್ಸ್ ಕ್ಯಾಬಿನ್ ಎನ್ನುವ ಪ್ರಚುರವಾದ ಕೃತಿ ಕೂಡ ಅನೇಕರಿಂದ ಕನ್ನಡಕ್ಕೆ ಬಂದಿದೆ. ಬಿ. ವಿ. ರಮಣ್ ಅವರು 'ಗುಲಾಮನ ಬಾಳು'(ಆಕ್ಸ್‌ಫರ್ಡ ಯುನಿವರ್ಸಿಟಿ ಪ್ರೆಸ್- ಮದ್ರಾಸ-೧೯೫೫) ಎಂದಲ್ಲದೆ 'ಮಾವನ ಜೋಪಡಿ'(ಯು ಆರ್ ಶೆಣೈ ಆ್ಯಂಡ್ ಸನ್ಸ್-ಮಂಗಳೂರು-೧೯೬೦)ಎಂದೂ ಮತ್ತೆ ತಂದಿದ್ದಾರೆ. ಗುಲಾಮಗಿರಿಯ ಎದುರಾಗಿ ಹೋರಾಡುವ ಘಟನೆಗಳನ್ನು ಇದು ಚಿತ್ರಿಸಿದೆ. ಎಂ. ಗೋಪಾಲಕೃಷ್ಣ ಅಡಿಗರು ಹಲವಾರು ಕೃತಿಗಳನ್ನು ಕನ್ನಡಕ್ಕೆ ತಂದಿರುವ ಹಾಗಿದೆ. 'ದೆವ್ವದ ಕತೆಗಳು'(ಸುಲಭಾ ಸಾಹಿತ್ಯ ಪ್ರಕಾಶನ-ಕುಮಟಾ) ಎನ್ನುವ ಕೃತಿ ಇಂಥದೊಂದು. ಚಾಸರನ ಕತೆಗಳು ಕೂಡ ಹೀಗೆಯೇ ಅನೇಕರಿಂದ ಬಂದಿದ್ದು ಮಕ್ಕಳಿಗೆ ರಂಜನೆ ನಿಡಬಲ್ಲವಂಥವು. ಬಿ. ಶಂಕರಭಟ್(ವಸಂತ ಮಾಲಿಕೆ-ಮಂಗಳೂರು-೧೯೪೯-೬ ಕತೆಗಳಿವೆ), ಬಿ. ಜನಾರ್ದನ್ ಭಟ್(ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨೦೦೩) ಇವರ ಕೃತಿಗಳ ದಾಖಲೆ ಇದೆ. 'ಮಕ್ಕಳೆ ದೇವರು'(ಗಾಡ್ಸ್ ಆನ್ ಅರ್ಥ್) ಎನ್ನುವ ಕೃತಿ ಕಿರಿಯರ ನಾಟಕ ಮಾಲೆಯಲ್ಲಿ ಬಂದಿದ್ದು ಇದನ್ನ ಸದಾಶಿವ ಚಿಟ್ಟನಹಳ್ಳಿ ಎನ್ನುವವರು ಅನುವಾದಿಸಿದ್ದಾರೆ(ದತ್ತರಾಜ ಪ್ರಕಟನಾ ಮಂದಿರ-ಬೆಂಗಳೂರು-೧೯೪೮). ಆಸ್ಕರ್ ವೈಲ್ಡ್‌ನ ಸುಪ್ರಸಿದ್ಧ 'ಸೆಲ್ಫಿಷ್ ಜೈಂಟ್ಸ್'ಕೃತಿ ಕೂಡ ಹೀಗೆಯೇ ಅನೇಕರಿಂದ ಕನ್ನಡಕ್ಕೆ ಬಂದಿದೆ. ಎನ್. ಶ್ರೀನಿವಾಸ ಉಡುಪರು ಅದನ್ನ 'ಹಿಡಿಂಬನ ತೋಟ'ವೆಂದು ಮಕ್ಕಳ ನಾಟಕವಾಗಿಸಿದ್ದಾರೆ. ಎನ್. ಶ್ರೀನಿವಾಸ ಉಡುಪರೇ ಸತ್ಯಜಿತ್ ರೇ ಅವರ ಕತೆಗಳನ್ನ 'ಸತ್ಯಜಿತ್ ರೇ' ಎಂದು ತಂದಿದ್ದು ಅವೆಲ್ಲ ಬೆಂಗಾಲಿಯಲ್ಲಿ ಅವರ ಕುಟುಂಬದವರೇ ತರುತ್ತಿದ್ದ 'ಸಂದೇಶ್' ಮಕ್ಕಳ ಪತ್ರಿಕೆಯಲ್ಲಿ ಪ್ರಕಟವಾಗಿದ್ದುವು. ಎ. ಎನ್. ಮೂರ್ತಿರಾವ್ ಅವರು ಕೂಡ ಅನುವಾದಗಳನ್ನ

ಮಾಡಿದ್ದು 'Rip Van Winkle'ಎನ್ನುವ ಕೃತಿ ಮಕ್ಕಳಿಗಾಗುವುದಾಗಿದೆ. ಸೋಮಾರಿಯೊಬ್ಬ ನಿದ್ದೆಹೋಗಿ ಎಚ್ಚೆತ್ತಾಗ ಜಗತ್ತು ಬದಲಾವಣೆಗೊಂಡಿರುವುದನ್ನು ವಿಸ್ಮಯದಿಂದ ನೋಡುವ ಕುತೂಹಲ ಈ ಕತೆಯಲ್ಲಿದೆ. ವಿಲಿಯಮ್ ಕಾಕ್ವಾಂಬಾ ಎಂಬ ದಕ್ಷಿಣ ಆಫ್ರಿಕಾದ ಸಾಹಸಿ ಹುಡುಗನ ಕತೆಯನ್ನು ಬ್ರಿಯಾನ್ ಮೀಲರ್ ಇಂಗ್ಲಿಷಿಗೆ ತಂದಿದ್ದು ಇದನ್ನು 'ಗಾಳಿ ಪಳಗಿಸಿದ ಬಾಲಕ'(ಛಂದ ಪುಸ್ತಕ–ಬೆಂಗಳೂರು–೨೦೧೪) ಎಂದು ಕರುಣಾ ಬಿ. ಎಸ್. ಅವರು ಇತ್ತೀಚೆಗೆ ಅನುವಾದಿಸಿದ್ದಾರೆ. ಆಫ್ರಿಕಾದ ಕಡುಬಡತನದ ಹುಡುಗನೊಬ್ಬ ಭೀಕರ ಬರಗಾಲದ ನಡುವೆ ಶಾಲೆಗೂ ಹೋಗಲಾರದೆ ತನ್ನ ಹಿತ್ತಲಲ್ಲಿ ಗಾಳಿಯಂತ್ರ ನಿರ್ಮಿಸಿ ಬೆಳಕು ಹೊಮ್ಮಿಸಿದ ಸಾಹಸದ ಕತೆ ಇದಾಗಿದ್ದು ಮಕ್ಕಳಿಗೂ ಒಳ್ಳೆಯ ಓದನ್ನ ನೀಡಬಲ್ಲುದಾಗಿದೆ. ಜಿ. ಪಿ ರಾಜರತ್ನಂ ಕೂಡ ಹೀಗೆ ಹಲವು ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. 'ರಾಜ ಮತ್ತು ಕಾಡುಕೋಣ'(ಓರಿಯೆಂಟ್ ಲಾಂಗ್‌ಮನ್ – ೧೯೬೦) ಎನ್ನುವ ಕೃತಿಯೊಂದು ದಾಖಲೆಯಲ್ಲಿ ದೊರೆಯಿತು. ಅವರು 'ಸರಬುರುಡೆ ಅಥವಾ ಮಕ್ಕ ಮಂಖೌಸನ್' ಎನ್ನುವ ಅಸಂಗತಗಳ ಕತೆಯನ್ನೂ ಸಂಗ್ರಹವಾಗಿ ನೀಡಿದ್ದಿದೆ. ಹೆಚ್ಚು ಪ್ರಚುರವಾದ ಇಟಾಲಿಯನ್ ಭಾಷೆಯ ಕಾರ್ಲೊ ಕಲೋಡಿಯಾರ'ಪಿನಾಕಿಯೊ' ಫ್ಯಾಂಟಸಿಯ ಕತೆಯನ್ನೂ ಹಲವಾರು ಲೇಖಕರು ಮಾಡಿದ ಹಾಗಿದೆ. ಎನ್ ಪ್ರಹ್ಲಾದರಾವ್ 'ಪಿನೋಕಿಯೋ' ಅನುವಾದ ಮಾಡಿದರು. ಇದೇ ಕೃತಿಯನ್ನ ಎಂ.ಎಸ್.ಕೆ ಪ್ರಭು(ಸಾಹಿತ್ಯ ಭಂಡಾರ, ಬಳೆಪೇಟೆ, ಬೆಂಗಳೂರು–೨೦೧೩) ಅವರು 'ಪೋಕರಿ ಪಾಪಣ್ಣನ ಪರಾಕು' ಎಂದು ಕನ್ನಡಕ್ಕೆ ತಂದಿದ್ದಾರೆ. ನವಗಿರಿನಂದ ಅವರು ಮಲಯಾಳಂನ ನೆಚ್ಚುನ್ನಿ ಗೋವಿಂದನ್ ಕುಟ್ಟಿ ಅವರ ಕತೆಗಳನ್ನು 'ಬೇತಾಳ ಬೊಂಬೆಯ ಕತೆಗಳು'(ವಿವೇಕ ಸಾಹಿತ್ಯ ಮಾಲೆ–ಮಂಗಳೂರು–೧೯೬೨) ಎಂದು ಅನುವಾದಿಸಿರುವುದಿದೆ. ಆರ್. ಕೆ. ನಾರಾಯಣರ 'Swamy and his friends' ಕೃತಿ ಕೂಡ ಹಲವು ಬಾರಿ ಅನುವಾದಗೊಂಡಿರುವ ಹಾಗೆ ಕಾಣುತ್ತದೆ. ಎಚ್. ವಾಯ್. ಶಾರದಾ ಪ್ರಸಾದರು 'ಸ್ವಾಮಿ ಮತ್ತು ಅವನ ಸ್ನೇಹಿತರು'(ಇಂಡಿಯನ್ ಥಾಟ್ ಪ್ರಕಟಣೆ – ಮೈಸೂರು) ಎಂದು ೧೯೪೫ರಲ್ಲಿ ತಂದಿರುವ ದಾಖಲೆ ಸಿಗುತ್ತದೆ. ಇದೇ ಕೃತಿ 'ಸ್ವಾಮಿ ಮತ್ತು ಅವನ ಗೆಳೆಯರು' ಎಂದು ನ್ಯಾಷನಲ್ ಬುಕ್ ಟ್ರಸ್ಟ್‌ನಿಂದ ಕೂಡ ಪ್ರಕಟವಾಗಿದೆ. ಎಂ.ವಿ. ಸೀತಾರಾಮಯ್ಯ ಅವರು 'ರಾಬಿನ್‌ಸನ್ ಕ್ರೂಸೊ' ಕನ್ನಡಿಸಿದರು.

ನಮ್ಮ ಅನೇಕ ಪ್ರಸಿದ್ಧ ಲೇಖಕರು ಕನ್ನಡಕ್ಕೆ ತಂದಿರುವ ಅನೇಕ ಕೃತಿಗಳು ಮಕ್ಕಳಿಗೂ ಅನ್ವಯವಾಗುವಂತಿದ್ದು, ಇವೆಲ್ಲ ಮಕ್ಕಳಿಗೇ ಹೆಚ್ಚು ಹಿಡಿಸುವುಗಳೂ ಆಗಿದ್ದುದಿದೆ. ಪ್ರಸಿದ್ಧ ಇಂಗ್ಲೀಷ್ ಕವಿ ರಾಬರ್ಟ್ ಬ್ರೌನಿಂಗ್‌ನಿಂದ ರಚಿತ 'The Pied Piper of Hamelin'ದಿಂದ ಪ್ರೇರಣೆಗೊಂಡ ಕುವೆಂಪು ಅವರು 'ಬೊಮ್ಮನ ಹಳ್ಳಿಯ ಕಿಂದರಿಜೋಗಿ'ಯನ್ನು ಬರೆದುದು ಅದು ಸಾಕಷ್ಟು ಪ್ರಚುರವಾದುದನ್ನ ಇಲ್ಲಿ ಹೇಳಬೇಕು. ಅದು ಕನ್ನಡದ್ದೇ ಕೃತಿಯಾಗಿ ಸ್ವತಂತ್ರವಾಗಿ ಅರಳಿರುವುದನ್ನ ನೋಡುತ್ತೇವೆ. ೧೯೨೬ರಲ್ಲಿ ರಚಿತವಾದ ಇದು ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದ ವತಿಯಿಂದ ಮೊದಲ ಬಾರಿಗೆ ೧೯೨೮ರಲ್ಲಿ ಪ್ರಕಟವಾಯಿತು. ಅಲ್ಲಿಂದ ಅದು ಅನೇಕ ಮುದ್ರಣಗಳನ್ನು ಕಂಡಿದೆ. ೨೦೦೭ರ ಆರನೆಯ ಮುದ್ರಣಕ್ಕೆ ಖ್ಯಾತ ವ್ಯಂಗ್ಯಚಿತ್ರಕಾರ ಆರ್. ಕೆ. ಲಕ್ಷ್ಮಣ್ ಅವರು ಈ ಕೃತಿಗೆ ಚಿತ್ರಗಳನ್ನು ರಚಿಸಿದ್ದನ್ನು ನೊಡುತ್ತೇವೆ. ಹತ್ತು ಹಲವು ಕಾಟಕೊಡುತ್ತಿದ್ದ ಬಲಾಢ್ಯ ಇಲಿಗಳು ಹೇಗಿದ್ದವು ಎಂಬುವುದನ್ನ ರಾಬರ್ಟ್ ಬ್ರೌನಿಂಗ್ ಹೀಗೆ ವರ್ಣಿಸಿದ್ದಾನೆ:

Rats !
They fought the dogs and killed the cats
And bit the babies in the cradles
And ate the cheeses out of the vats
And licked the soup from the cooks'
Own ladies,

Split open the kegs of salted sprats
Made nests inside men's Sunday hats
And even spoiled the women's chats

ಕುವೆಂಪು ಇದನ್ನ ಕನ್ನಡವಾಗಿ ತಂದದ್ದು ಹೀಗೆ :

ಅಲ್ಲೇನಿಲಿಗಳ ಕಾಟವೇ ಕಾಟ
ಅಲ್ಲಿಯ ಜನಗಳಿಗತಿಗೋಳಾಟ
ಇಲಿಗಳು ! ಬಡಿದವು ನಾಯಿಗಳ
ಇಲಿಗಳ ಕಡಿದವು ಬೆಕ್ಕುಗಳ
ಕೆಲವನು ಕೊಂದವು, ಕೆಲವನು ತಿಂದವು,
ಕೆಲವನು ಬೆದರಿಸಿ ಹಿಂಬಾಲಿಸಿದವು
. . . .
ಹಾಲಿನ ಮಡಕೆಯನೊಡೆದವು ಕೆಲವು
ಅನ್ನದ ಅಡಿಗೆಯ ಪುಡಿಮಾಡಿದವು

ಹೀಗೆ ಕನ್ನಡ ವಾತಾವರಣಕ್ಕೆ ಇಡೀ ಪ್ರಸಂಗವನ್ನು ಒಗ್ಗಿಸಿದ್ದಾರೆ. ಕವಿತೆ ಹೊರಭಾಷೆಗಳಿಂದ ಕನ್ನಡಕ್ಕೆ ಬಂದಿರುವುದು ತೀರ ವಿರಳ ಅಂದರೆ ವಿರಳ. ಪ್ರಹ್ಲಾದ ನರೇಗಲ್ಲ ಅವರು ರವೀಂದ್ರರ 'ಕ್ರೆಸೆಂಟ್ ಮೂನ್' ಕೃತಿಯ ಪದ್ಯಗಳನ್ನ 'ಶಿಶು' ಶೀರ್ಷಿಕೆಯಲ್ಲಿ ತಂದಿದ್ದಾರೆ. ರವೀಂದ್ರರ ಪದತಲದಲ್ಲಿಯೇ ಶಾಂತಿನಿಕೇತನದಲ್ಲಿ ಅಭ್ಯಸಿಸಿದ ನರೇಗಲ್ಲರು ರವೀಂದ್ರರ ಇನ್ನೂ ಹಲವು ಕೃತಿಗಳನ್ನ ಗೀತಾಂಜಲಿಯೊಟ್ಟಿಗೆ ಕನ್ನಡಕ್ಕೆ ತಂದಿದ್ದಾರೆ. 'ಶಿಶು' ಕೃತಿ ಮೊದಲು ೧೯೫೫ರಲ್ಲಿ ಡಿ. ಎಸ್. ಕರ್ಕಿ ಅವರ ಮುನ್ನುಡಿಯೊಡನೆ ಮುದ್ರಣಗೊಂಡುದು, ನಂತರ ೧೯೭೧ರಲ್ಲಿ ಹಾಗೂ ೨೦೦೭ರಲ್ಲಿ ಪುನಃ ಮುದ್ರಣ ಕಂಡಿದೆ. ಕರ್ಕಿಯವರು ಬರೆಯುತ್ತ 'ಅನುವಾದಕರು ರವೀಂದ್ರರ ಈ ಗೀತಗಳಲ್ಲಿ ಮಿಡಿದ ಭಾವಗಳೊಡನೆ ತಮ್ಮ ಭಾವವನ್ನು ಬೆರೆಸಿರುವರಲ್ಲದೆ ತಕ್ಕ ಪರಿಸರದಲ್ಲಿ ಮಕ್ಕಳೊಡನೆ ಒಂದಾಗಿ ಬೆರೆತು ಈ ಅನುವಾದ ಕಾರ್ಯವನ್ನು ಮಾಡಿದ್ದಾರೆ. ಅವರು ಶಿಕ್ಷಕರಾಗಿದ್ದ ಸಂಗತಿಯು ಇದಕ್ಕೆ ತುಂಬಾ ನೆರವಾಗಿದೆ. ಗದ್ಯಗಂಧಿಯಲ್ಲಿ ಅರಳಿರುವ ಇಲ್ಲಿನ ರಚನೆಗಳು ಸೊಗಸಾಗಿ ಅನುವಾದಗೊಂಡಿವೆ. ಬಾಲ್ಯದ ಮನೋಭೂಮಿಕೆಯಲ್ಲಿಯೇ ಅರಳಿದರೂ ವಿಸ್ತೃತವಾಗಿ ಹಬ್ಬಿಕೊಳ್ಳುವ ಇಲ್ಲಿನ ಮಕ್ಕಳ ಓದಿಗೆ ಒಂದಿಷ್ಟೆಲ್ಲ ಆಪ್ಯಾಯಮಾನವಾದುದಾಗಿದೆ ಎಂದಿದ್ದಾರೆ. ಅಲ್ಲಿನ ಕೆಲ ಸಾಲುಗಳನ್ನು ಉದಾಹರಿಸಬಹುದು:

'ಅಮ್ಮಾ ಅಣ್ಣನನ್ನು ನಾನು ಇಷ್ಟೇ ಕೇಳಿದೆ :

'ಸಂಜೆಯ ಹೊತ್ತು ಕದಂಬವೃಕ್ಷದ ಟೊಂಗೆಗಳಲ್ಲಿ ಸಿಲುಕಿ ಬಿದ್ದ ಹುಣ್ಣಿವೆಯ ಚಂದಪ್ಪನನ್ನು ಯಾರಾದರೂ ಹಿಡಿದು ತರಬಾರದೆ ?'

'ನಾನು ಹೀಗೆ ಕೇಳಿದೊಡನೆ ಅಣ್ಣನು ಖೊಳ್ಳೆಂದು ನಕ್ಕು ಮತ್ತೆ ಅಂದ: ಏ ನಿನ್ನಂಥ ತಿಳಿಗೇಡಿಯನ್ನು ನಾನೆಲ್ಲಿಯೂ ನೊಡಲಿಲ್ಲ. ಅಲ್ಲವೋ ಮಗೂ, ಚಂದ್ರನು ನಮ್ಮಿಂದ ಎಷ್ಟು ದೂರ ಇರುವನೆಂಬುದು ಗೊತ್ತೆ? ಯಾರು ತಾನೇ ಅವನನ್ನು ಹಿಡಿಯಬಲ್ಲರು?'

'ಆಗ ನಾನೆಂದೆ: ಅಣ್ಣಾ ನಿನಗೆ ಗೊತ್ತಿಲ್ಲವೇನೋ? ಅಟ್ಟದ ಮೇಲೆ ನಿಂತು ನಮ್ಮ ಅಮ್ಮ ನಾವಾಡುವುದನ್ನು ಕಿಡಿಕಿಯೊಳಗಿಂದ ನೋಡಿ ನಗುವದಿಲ್ಲವೇ? ಅವಳು ಬಹಳ ದೂರ ಇದ್ದಾಳೆಂದು ಅನ್ನುವಿಯೇನು?'

ಆನಂದ ಪಾಟೀಲರು ತಮ್ಮ ಹಲವಾರು ವಿದೇಶಿ ಹಾಗೂ ಭಾರತೀಯ ಇಂಗ್ಲಿಷ್ ಲೇಖಕರ ಕುರಿತ ಲೇಖನಗಳಲ್ಲಿ ಅವರ ಕವಿತೆಗಳಲ್ಲಿ ಹಲವನ್ನ ಅನುವಾದಿಸುತ್ತ ಉದಾಹರಿಸಿರುವುದನ್ನು ನೋಡಬಹುದು. ಜಮೈಕಾದ ಕವಿ ಜೇಮ್ಸ್ ಬೆರ್‍ರಿಯ ಕಪ್ಪು ಜನಾಂಗದ ಸಂವೇದನೆಗಳನ್ನೊಳಗೊಂಡ ಕವಿತೆಯ ಸಾಲುಗಳು ಇವು:

ಆಫೀಯಾ ಆಫೀಯಾ
ಕಪ್ಪು ಕಳೆಯ ಹುಡುಗಿ
ಬಿಳಿ ಬಿಳಿ ಬಿಳಿ ಫ್ರಾಕಿನಲ್ಲಿ
ಎದ್ದು ಬರುವ ಬೆಡಗಿ
ಆಹಾ ಆಹಾ ಆಹಾ
ಅಗಲ ಕಪ್ಪು ಕಣ್ಣು
ಕಿಲ ಕಿಲ ಕಿಲ ಕಿಲ
ನಗುವ ಹಾಗೆ ಅನ್ನು!

ರಸ್ಕಿನ್ ಬಾಂಡ್ ಅವರ ಒಂದು ಕವಿತೆಯ ಸಾಲುಗಳು ಇವು :

ನನಗೆ ಗೊತ್ತು
ಈ ಜಗತ್ತು ತುಂಬಿ ತುಳಕ್ತಿರೋದು
ಆನೆಗಳೂ ಇದರಲ್ಲೇ ಇರೋದು
ಒಂದು ವೇಳೆ ಅವಕ್ಕೇನಾದ್ರೂ ಬಂದ್ರೆ ತೊಂದರೆ?
ಹಾಗೇನಾದ್ರೂ ಆದರೆ
    ಬಂದಬಿಡಲಿ ಒಂದಾನೆ ಪುಟಾಣಿ
    ನಮ್ಮನೆಯಲ್ಲಿರಲಿ, ನನ್ ರೂಮ್‌ನಲ್ಲಿ
    ಅಡ್ಡಿಯೇನಿಲ್ಲ
ಹೂಂ, ಅವರಮ್ಮಾ ಬಂದ್ರೂ ಬರ್ಲಿ
ಅಪ್ಪನ ಗ್ಯಾರೇಜು, ಅಲ್ಲಿರ್ಲಿ

'ಪಾಪ' ಅಂತಾನಪ್ಪ
ಅದನ್ನೋಡಿ ಅಲ್ಲಿ
ಆದರೆ?
ಆನೆ ಅಮ್ಮನ ಹಿಂದೆ
ಹೂಂ ಹಿಂದೆ ಹಿಂದೆ
ಬಂದರೆ ಆನೆ ಅಪ್ಪ
ದೇವರೇ ಬಲ್ಲಾ, ಸುಂನಿರ್ತಾಳಾ
ಏನ್ ಮಾಡ್ತಾಳೋ ಅಮ್ಮ, ನಮ್ಮಮ್ಮ!

ಹೀಗೆ ಅನ್ಯ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಮಕ್ಕಳಿಗಾಗುವ ಕೃತಿಗಳಲ್ಲಿ ನ್ಯಾಷನಲ್ ಬುಕ್‌ಟ್ರಸ್ಟ್‌ನವರ ಪಾತ್ರ ಬಲು ದೊಡ್ಡದು ಎನ್ನುವುದರಲ್ಲಿ ಎರಡು ಮಾತಿಲ್ಲ. ನಿಗದಿತವಾಗಿ ಭಾರತೀಯ ಎಲ್ಲ ಭಾಷೆಗಳಲ್ಲಿ ಕೃತಿಗಳನ್ನ ತರ್ಜುಮೆಗೊಳಿಸುತ್ತ ಸುಲಭ ಬೆಲೆಯಲ್ಲಿ, ಅಂದವಾಗಿ, ಸೊಗಸಾದ ಚಿತ್ರಗಳೊಡಗೂಡಿ ಅವರು ಪುಸ್ತಕಗಳನ್ನ ತರುತ್ತಿದ್ದಾರೆ. ಅಷ್ಟೇ ಅಲ್ಲ ಖ್ಯಾತ ಲೇಖಕರಿಂದ ಕೃತಿಗಳನ್ನು ಬರೆಯಿಸಿ ಪ್ರಕಟಿಸುತ್ತ ಬಂದಿದ್ದಾರೆ. ಹೀಗೆ ಬಂದಿರುವ ಅನೇಕ ಕೃತಿಗಳನ್ನು ಹೆಸರಿಸಬಹುದು. ಅಮೆರಿಕಾದ ಅಂತರರಾಷ್ಟ್ರೀಯ ನ್ಯೂಬೆರಿ ಪುರಸ್ಕಾರವನ್ನು ೧೯೨೮ರಲ್ಲಿ ಪಡೆದ ಕೃತಿ 'ಗೇನೆಕ್'. ಇದನ್ನ ಬರೆದ ಲೇಖಕ ಬೆಂಗಾಲಿ ಮೂಲದ ಧನಗೋಪಾಲ್ ಮುಖರ್ಜಿ. ಕಿರಿಯ ವಯಸ್ಸಿನಲ್ಲಿಯೇ ಮರೆಯಾದ ಅಪರೂಪದ ಲೇಖಕ ಪ್ರಾಣಿ ಪಕ್ಷಿಗಳ ಸುತ್ತಲೇ ಅನೇಕ ಕೃತಿಗಳನ್ನು ಬರೆದು ಖ್ಯಾತಿ ಪಡೆದವರು. ಅವರ 'ಗೇನೆಕ್' ಕೃತಿ 'ಚಿತ್ರಗ್ರೀವ'ವಾಗಿ ಎನ್‌ಬಿಟಿಯಿಂದ ೨೦೦೪ರಲ್ಲಿ ಬಂದಿದೆ, ಇದನ್ನ ಸಂಧ್ಯಾ ಎಸ್. ಎನ್ನುವವರು ಅನುವಾದಿಸಿದ್ದಾರೆ. ೧೯೮೨ರಲ್ಲಿ ಹೀಗೆಯೇ ಇನ್ನೊಬ್ಬ ಮಕ್ಕಳ ಸಾಹಿತ್ಯದ ಅಂತರರಾಷ್ಟ್ರೀಯ ಗಾರ್ಡಿಯನ್ ಚಿಲ್ಡ್ರನ್ ಫಿಕ್ಷನ್ ಪುರಸ್ಕಾರ ಪಡೆದ ಲೇಖಕಿ ಅನಿತಾದೇಸಾಯಿ ಅವರ ಕೃತಿ 'ದಿ ವಿಲೇಜ್ ಬೈ ದ ಸೇ' ಕನ್ನಡಕ್ಕೆ ಬಂದಿದ್ದು(೧೯೯೮). ಅದನ್ನ ಎಚ್.ಕೆ.ರಾಮಕೃಷ್ಣ ಎನ್ನುವವರು ಅನುವಾದಿಸಿದ್ದಾರೆ. ಜ್ಞಾನಪೀಠ ವಿಜೇತ ಲೇಖಕಿ ಮಹಾಶ್ವೇತಾದೇವಿ ಅವರ ಎರಡು ಕೃತಿಗಳು 'ಏತೋ ಮುಂಡಾ ಯುದ್ಧವನ್ನು ಗೆದ್ದ' ಮತ್ತು 'ಎಕ್ಕೋರಿಯ ಕನಸು' ಹೀಗೆ ಪ್ರಕಟವಾಗಿವೆ. ಒಂದು ಬುಡಕಟ್ಟು ಜನಾಂಗ ಮುಂಡಾ ಹುಡುಗ ಏತೋನ ಶಾಲೆಗೆ ಬಂದು ಸೇರುವ ಬದುಕಿನ ಹೋರಾಟದ ತೆಯಾದರೆ, ಇನ್ನೊಂದು ಕುಶಲ ಕಲಾವಿದರ ಪರಿಸರದಲ್ಲಿನ ಹಳ್ಳಿಗಾಡಿನ ಹುಡುಗ ಸ್ಥಿತಿವಂತರ ನೆಲೆಯನ್ನ ಸೇರಿ ತನ್ನ ಕನಸುಗಳನ್ನು ನನಸು ಮಾಡಿಕೊಳ್ಳುವ ಕತೆ. ಬಹಳಷ್ಟು ಮಕ್ಕಳನ್ನ ಯಶಸ್ವಿಯಾಗಿ ಮುಟ್ಟಿರುವ ರಸ್ಕಿನ್ ಬಾಂಡ್ ಅವರ ಹಲವು ಕೃತಿಗಳು ಎನ್‌ಬಿಟಿ ಅವರಿಂದ ಕನ್ನಡಕ್ಕೆ ಬಂದಿವೆ. 'ರಸ್ಕಿಯ ಸಾಹಸಗಳು' ಅವರದೇ ಬಾಲ್ಯದ ನೆನಹನ್ನು ಹೊತ್ತು ತಂದಿರುವ ರೋಚಕ ಕಥಾನಕವಾದರೆ, 'ಹೆಬ್ಬಾವು ಮಾಡಿದ ಗೊಂದಲ' ಅವರ ಅಜ್ಜ ಏನೆಲ್ಲ ಪ್ರಾಣಿಗಳನ್ನು ಸಾಕಿದ ಪ್ರಸಂಗದ ಸುತ್ತ ಹಬ್ಬಿಕೊಂಡಿದ್ದು, ಹೆಬ್ಬಾವೊಂದು ಹೀಗೆ ಜನರ ನಡುವೆ ಸೇರಿ ಗೊಂದಲ ಉಂಟಾದ ಹಾಸ್ಯದ ಕತೆ. ಪ್ರೇಮಚಂದರ ಸುಪ್ರಸಿದ್ಧ ಕತೆ 'ಈದಿಗಾ' ಪಂಚಾಕ್ಷರಿ ಹಿರೇಮಠರಿಂದ ಅನುವಾದಗೊಂಡು ಬಂದಿದೆ. ಒಬ್ಬ ಬಡ ಹುಡುಗನ ಸಂವೇದನಾಶೀಲ ಮನಸ್ಸನ್ನ ಕತೆಯಾಗಿ ಕಟ್ಟಿಕೊಡುವ ಅಪರೂಪದ ಕತೆ ಇದು. ಪಂಚಾಕ್ಷರಿ ಹಿರೇಮಠರು ಹಿಂದಿಯ ಖ್ಯಾತ ಮಕ್ಕಳ ಲೇಖಕ ಹರಿಕೃಷ್ಣ ದೇವಸರೆ

ಅವರ ಜನಪದ ಕತೆಯ ಆಧಾರದ ದೀರ್ಘ ಕತೆಯನ್ನ 'ಸುರಖಾಬದ ಗರಿಗಳು' ಆಗಿ ತಂದಿದ್ದಾರೆ. ಹರಿಕೃಷ್ಣ ದೇವಸರೆ ಅವರ ಇನ್ನೊಂದು ಕೃತಿಯನ್ನು 'ದರೋಡೆಗಾರನ ಮಗ' ಎಂದು ತಂದುದೂ ಇದೆ. ಬೆಂಗಾಲಿಯಲ್ಲಿ ಮಕ್ಕಳ ಲೇಖಕಿಯಾಗಿ ಅವಿರತವಾಗಿ ತೊಡಗಿಕೊಂಡು, ಖ್ಯಾತಿಗಳಿಸಿದ ಲೇಖಕಿ ಲೀಲಾ ಮುಜುಂದಾರ ಅವರ ಹೃದಯಸ್ಪರ್ಶಿ ಕತೆಯುಳ್ಳ ಕೃತಿ 'ಬಾರಾಪಾಣಿ' ಕನ್ನಡಕ್ಕೆ ಬಂದಿದೆ. ತಮಿಳಿನ ಪ್ರತಿಭಾವಂತ ಲೇಖಕ ವಳ್ಳಿಕಣ್ಣನ್ ಅವರ ಕತೆಯನ್ನ ಕನ್ನಡಕ್ಕೆ 'ಅಮ್ಮಾವ್ರ ಬಸ್ ಸವಾರಿ'ಯಾಗಿ ಬಂದಿದ್ದು ಒಂದು ಹಳ್ಳಿ ಹುಡುಗಿಯ ಸಂವೇದನೆಗಳ ಸೊಗಸಾದ ಕತೆಯಾಗಿದೆ. ಕಾಮಾಕ್ಷಿ ಬಾಲಸುಬ್ರಹ್ಮಣ್ಯಮ್ ಅವರ 'ಮಂಗುವಿನ ಬುಗುರಿ', 'ಮುತ್ತುವಿನ ಕನಸುಗಳು', ತಾರಾ ತಿವಾರಿ ಅವರ 'ಒಂಟಿ ಮರಿ ಸೋನ', ಎಂ. ಸಿ, ಗೇಬ್ರಿಯಲ್ ಅವರ 'ಬಾಲ ಪಟ್ಟ ಫಜೀತಿ', ಜಗದೀಶ ಜೋಷಿ ಅವರ 'ಮುನಿಯ ಪಡೆದ ನಿಧಿ', ಉಮಾ ಆನಂದ್ ಅವರ 'ಕಾಡಿನಲ್ಲೊಂದು ಕೊಳ' ಮುಂತಾಗಿ ಮಕ್ಕಳ ಮನಸ್ಸಿನ ಸೂಕ್ಷ್ಮದ ಮಗ್ಗಲುಗಳನ್ನ ಚಿತ್ರಿಸಿರುವ ಅನೇಕ ಕತೆಗಳು ಎನ್. ಬಿ. ಟಿ. ಅವರಿಂದ ಕನ್ನಡಕ್ಕೆ ಬಂದಿವೆ. ಹುಚ್ಚು ಮಾವಣ್ಣ ಎಂದೇ ಎಲ್ಲ ಮರಗಳಿಂದ ಕರೆಸಿಕೊಂಡ ಒಂದೆಡೆ ನಿಲ್ಲಲಾರದೆ ಸಂಚಾರ ಹೊರಟ ಎ. ಎಸ್. ಫಡ್ನವೀಸ್ ಅವರ 'ಮಾವಿನ ಮರದ ಕತೆ' ಒಳ್ಳೆಯ ಕಲ್ಪನೆಯ ಕತೆಯಾಗಿದ್ದು ಮಕ್ಕಳನ್ನು ಇನ್ನಿಲ್ಲದಂತೆ ಸೆಳೆಯುವುದಾಗಿದೆ. ಮಿಕ್ಕಿ ಪಟೇಲರ 'ಮಕ್ಕಳ ಆನೆ ರೂಪ' ಚಿತ್ರಗಳ ಮೂಲಕವೇ ಸಂವಹನಗೊಳ್ಳುತ್ತ ರಂಜಿಸುವ ಸೊಗಸಿನ ಪುಸ್ತಕ. ಸ್ವೀಡಿಷ್ ಭಾಷೆಯಿಂದ ಬಂದಿರುವ ಜುಜ್ಜಾ ಥಾಮಸ್ ಹಾಗೂ ವೈಸ್ ಲ್ಯಾಂಡರ ಅವರ 'ಉಯ್ಯಾಲೆಯಾಡಿತು ಹಸು' ಒಂದು ಬಲು ಆಕರ್ಷಣೆಯ ಸೊಗಸಿನ ಕತೆ.

ಹೀಗೆ ಬಿಡಿಬಿಡಿ ಕತೆಗಳಲ್ಲದೆ, ಕೆಲ ಮಹತ್ವದ, ಪ್ರಾತಿನಿಧಿಕವೆನ್ನುವ ಕತಾ ಸಂಕಲನಗಳನ್ನು ವಿಶೇಷವಾಗಿ ತಂದಿರುವುದನ್ನು ನೋಡುತ್ತೇವೆ. 'ಏಷ್ಯಾದ ಆಯ್ದ ಕತೆಗಳು' ಎನ್ನುವ ಸಂಗ್ರಹ ಇಂಥದೊಂದು. ಎಸ್. ಕೆ. ರಮಾದೇವಮ್ಮ ಅವರು ಅನುವಾದಿಸಿರುವ ಇಲ್ಲಿನ ಕತೆಗಳು ಆಯಾ ದೇಶಗಳ ವಿಭಿನ್ನ ಪ್ರಾಕೃತಿಕ, ಸಾಮಾಜಿಕ ಪರಿಸರದಲ್ಲಿ ಅರಳುವ ಬದುಕಿಗೆ ತೆರೆದುಕೊಂಡಂಥವು, ಭಾವಪೂರ್ಣವಾದವುಗಳು, ಕಟುವಾಸ್ತವಗಳನ್ನ ಹೊಂದಿದುವು, ಕಲ್ಪನೆಯಿಂದ ಕೂಡಿದಂಥವು ಮುಂತಾಗಿ ವಿಭಿನ್ನ ಬೆಳಸು ಇಲ್ಲಿ ಕಾಣುತ್ತದೆ. ಮಲೇಷಿಯಾದ 'ನೆರೆಹೊರೆ' ನಮ್ಮಲ್ಲಿನ ಹಾಗೆಯೇ ಧಾರ್ಮಿಕ ಅಸಹನೆಯಲ್ಲಿ ಮಕ್ಕಳು ಅನುಭವಿಸುವ ಪ್ರಸಂಗ ಇದೆ. ಥೈಲ್ಯಾಂಡಿನ ಕತೆ 'ಮೊಟ್ಟೆ ಒಡೆದ ಧೀರ' ಮಕ್ಕಳಲ್ಲಿಯೇ ಹುಟ್ಟುವ ಅಹಂಕಾರ, ದುರಭಿಮಾನದಂತಹ ಗುಣಗಳಿಗೆ ಕನ್ನಡಿ ಹಿಡಿಯುವುದಾಗಿದೆ. ಸಿಂಗಪುರದ 'ಮರೆಯಲಾಗದ ಬೆಕ್ಕು' ಬಾಲಕನೊಬ್ಬ ಬೆಕ್ಕಿನೊಡನೆ ಹೊಂದುವ ಅಳೆಯಲಾಗದ ಭಾವುಕ ಸಂಬಂಧ-ಹೇಳುವ ಕತೆ. ಇಂಡೋನೇಷಿಯಾದ 'ತಾತನಿಗೊಂದು ಉಡುಗೊರೆ' ಪ್ರತಿದಿನದಂತೆ ಬೆಳಿಗ್ಗೆ ಮಸೀದಿಯಲ್ಲಿ ಪ್ರಾರ್ಥನೆಗೆ ಬರದ ತಾತನನ್ನು ನೋಡಲು ಹೋಗುವ ಮೃದು ಹೃದಯದ ಹುಡುಗನೊಬ್ಬ ಆ ತಾತನಿಗಾಗಿ ಆಯ್ದ ಪುಟ್ಟ ಕಾಯಿಗಳನ್ನು ತಾವು ಅಪಹರಿಸಲು ಯೋಚಿಸಿದ ಗೆಳೆಯರು ಮನಸ್ಸು ಬದಲಿಸಿ ಅವನೊಡನೆ ಸೇರುವ ಎಳೆಯ ಮನಸ್ಸುಗಳ ಕತೆ.

ಹೀಗೆಯೇ 'ಹದಿಮೂರು ಶ್ರೇಷ್ಠ ಕತೆಗಳು' ಭಾರತದ ಹದಿಮೂರು ಭಾಷೆಗಳಿಂದ ಆಯ್ದ ಕತೆಗಳನ್ನುಳ್ಳ ಸಂಕಲನ. ಅನಚಿತದೇವ ಶರ್ಮರ ಅಸ್ಸಾಮಿ ಕತೆ ಎಲ್ಲರ ದೂರುಗಳಿಗೆ ಗುರಿಯಾಗುವ ಹುಡುಗನ ಸುತ್ತ ಇದ್ದರೆ, ಭೀಷ್ಮ ಸಾಹನಿ ಅವರ ಹಿಂದಿ ಕತೆಯಲ್ಲಿ ದುಷ್ಟ ಹುಡುಗ ಪುಟ್ಟ ಹಕ್ಕಿ

ಮರಿಗಳನ್ನು ನೋಡಿ ಬದಲಾವಣೆಯಾಗುವ ಪ್ರಸಂಗವಿದೆ. ಸತ್ಯಜಿತ್ ರೇ ಅವರ ಮಾಂಸಾಹಾರಿ ವೃಕ್ಷ ಮೈನವಿರೇಳಿಸುವ ಕತೆಯೂ ಇಲ್ಲಿದೆ. ಹಾಗೆಯೇ ರಸ್ಕಿನ್ ಬಾಂಡ್‌ರ ಪ್ರವಾಹದ ಸಂದರ್ಭದ 'ಸೀತೆ ಮತ್ತು ನದಿ'ಯೂ ಈ ಸಂಗ್ರಹದಲ್ಲಿದೆ. ಸಿರಾಜ್ ಅನ್ವರ್ ಅವರ 'ಅಹಂಕಾರದ ಬೆಲೆ' ಒಬ್ಬ ಸಿಂಪಿಯ ಸುತ್ತಲಿನ ಕತೆಯಾಗಿ ರೂಪಕವಾಗಿ ಅರಳಿದೆ. ಬಿ. ಆರ್. ಭಾಗವತರ ಕತೆ ಇಬ್ಬರು ಹುಡುಗರ ನಡುವೆ ಹುಟ್ಟಿಕೊಳ್ಳುವ ದ್ವೇಷ ಅಚಾತುರ್ಯದ ಘಟನೆಯೊಂದರಿಂದ ಕರಗಿಹೋಗುವ ಪ್ರಸಂಗ ಹೊಂದಿದೆ. ಮಲಯಾಳಂನ 'ಸುಂದರ ಮತ್ತು ಚುಕ್ಕೆ ಬಾಲ' ಒಂದು ಭಾವಪೂರ್ಣ ಕತೆಯನ್ನ ಹೊಂದಿದೆ. ಹಸುಗಳನ್ನು ಕಾಯುವ ಹುಡುಗ ಕಾಡಿನಲ್ಲೇ ಉಳಿದು ಬಿಟ್ಟಾಗ, ಹಸುವೊಂದು ಕೊಟ್ಟಿಗೆಯಲ್ಲಿರಲಾಗದೆ ತಪ್ಪಿಸಿಕೊಂಡು ತಾನು ಆ ಹುಡುಗನನ್ನ ಅರಸಿಕೊಂಡು ಕಾಡಿಗೆ ಬರುವ ಕತೆ ಇಲ್ಲಿಯದು. ಈ ಅನುವಾದಗಳು ಕನ್ನಡದಲ್ಲಿ ಈ ಬಗೆಯ ಯಾವ ಕೆಲಸವೂ ನಡೆದಿಲ್ಲ ಎನ್ನುವುದನ್ನು ಎದ್ದುಕಾಣಿಸುತ್ತದೆ. ನಮ್ಮವರು ಬರಿ ಜನಪದ ಕತೆಗಳ ಸರಕಿಗೇ ಜೋತುಬಿದ್ದುದು ಹೊಸತಿಗೆ ತುಡಿಯದೇ ಇದ್ದುದು ನಿಬಿಡವಾಗಿದೆ.

ಹಲವಾರು ಕೃತಿಗಳು ಬೇರೆ ಬೇರೆ ಪ್ರಕಾಶಕರಿಂದ ಆಗೀಗ ಕನ್ನಡಕ್ಕೆ ಬಂದಿವೆ. ಟಾಲಸ್ಟಾಯ್‌ರ ನೀತಿಕತೆಗಳು, ಪ್ರಾಣಿ ಕತೆಗಳು ಕನ್ನಡಕ್ಕೆ ಬಂದುದಿದೆ. ಅವರ ಜೀವನಚರಿತ್ರೆಯ ಬಾಲ್ಯದ ದಿನಗಳ ವಿವರವಾದ ಚಿತ್ರಣ ಎಲ್ಲ ಮಕ್ಕಳಿಗೂ ಒಳ್ಳೆಯ ಓದನ್ನ ಕೊಡುವಂಥದೇ. ರಷಿಯದ ಪ್ರತಿಭಾವಂತ ಲೇಖಕ ಆಂಟನ್ ಚೆಕಾಫ್‌ರ ಕತೆ 'ಕಷ್ಟಾಂಕ' ಒಂದು ನಾಯಿಯ ನಿಡಿದಾದ ಕತೆ ಕನ್ನಡದಲ್ಲಿ ಸೊಗಸಾಗಿ ಬಂದಿದೆ. ಕೆ. ಎಲ್. ಗೋಪಾಲಕೃಷ್ಣರಾವ್ ಎನ್ನುವವರು ಇದನ್ನ ಅನುವಾದಿಸಿದ್ದಾರೆ. ಸೋವಿಯತ್ ಒಕ್ಕೂಟವಿದ್ದಾಗ ದಂಡಿಯಾಗಿ ಮಕ್ಕಳ ಪುಸ್ತಕಗಳು ರಾದುಗ ಪ್ರಕಾಶನದಿಂದ ಕನ್ನಡಕ್ಕೆ ಬಂದುದೀಗ ಇತಿಹಾಸ. ಮಕ್ಕಳ ಲೋಕದಲ್ಲಿಯೇ ಖ್ಯಾತರಾದ ಅನೇಕ ಲೇಖಕರ ಕೃತಿಗಳು ಹೀಗೆ ನಮ್ಮ ಮಕ್ಕಳಿಗೆ ಲಭ್ಯವಾದವು. ನಿಕೊಲಾಯ್ ನಾಸಾವ್ ಅಂಥ ಅಪರೂಪದ ಕತೆಗಾರನ ಕತೆಗಳು, ಮಿಖಾಲ್ಕೋವ್ ಅಂಥ ಸೊಗಸಿನ ಕವಿಯ ಪದ್ಯಗಳು ಮುಂತಾಗಿ ಅನೇಕ ಕೃತಿಗಳು ಸಿಕ್ಕುವಂತಾಗಿದ್ದು ಒಂದು ಭಾಗ್ಯ. ಇವೆಲ್ಲ ಒಳ್ಳೇ ಅಂದವಾಗಿ ಮುದ್ರಣಗೊಂಡು ಬರುತ್ತಿದ್ದುವು.

ಹೀಗೆಯೇ ಆಗೀಗ ಬೇರೆ ಭಾಷೆಯ ಕೃತಿಗಳು ಬರುತ್ತಲೇ ಇವೆ. ಜೀವ ವಿಜ್ಞಾನಿ ಬಿ.ಎಸ್. ಹಾಲ್ಡೇನ್ ರಚಿಸಿದ ಅದ್ಭುತ ಕತೆ 'ಮೈ ಫ್ರೆಂಡ್ ಮಿ. ಲೀಕಿ'ಯನ್ನು ಡಾ. ಬಿ.ಎಸ್. ಶೈಲಜಾ ಅವರು ಕನ್ನಡಕ್ಕೆ (ನವಕರ್ನಾಟಕ, ಬೆಂಗಳೂರು–೨೦೦೫)ತಂದಿದ್ದಾರೆ. ಶಂಕರಾನಂದ ಅವರು ರುಡ್‌ಯಾರ್ಡ್ ಕಿಪ್ಲಿಂಗ್‌ರ ಅತ್ಯಂತ ಪ್ರಸಿದ್ಧ ಕತೆ 'ದಿ ಜಂಗಲ್ ಬುಕ್'ನ್ನು 'ಕಾಡಿನ ಕಥೆ'ಯಾಗಿ ಕನ್ನಡಕ್ಕೆ ತಂದಿದ್ದಾರೆ. ಸಾನೇ ಗುರೂಜಿ ಎಂದೇ ಖ್ಯಾತರಾಗಿದ್ದ ಪಾಂಡುರಂಗ ಸದಾಶಿವ ಸಾನೆ ಅವರ ಅಪರೂಪದ ಕೃತಿ 'ಶ್ಯಾಮಚೀ ಆಯೀ' ಅನೇಕ ಭಾಷೆಗಳಿಗೆ ಅನುವಾದಗೊಂಡಂತೆ ಕನ್ನಡಕ್ಕೂ 'ಶ್ಯಾಮನ ತಾಯಿ'ಯಾಗಿ ಬಲು ಹಿಂದೆಯೇ ಬಂದಿತ್ತು. ಇತ್ತೀಚೆಗೆ ಅವರ ಹಲವಾರು ಕತೆಗಳನ್ನ ಸಂಕಲಿಸಿ ಕನ್ನಡಕ್ಕೆ ಶಕುಂತಲಾ. ಎನ್. ರಾವ್ ಅವರು 'ಸಾನೇ ಗುರೂಜಿ ಹೇಳಿದ ಕಥೆಗಳು'(ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು–೨೦೧೪) ಎಂದು ತಂದಿದ್ದಾರೆ. ರಾಷ್ಟ್ರಪ್ರೇಮದ ಜ್ವಲಂತ ಉದಾಹರಣೆಯಾದ, ಅತ್ಯಂತ ನಿಷ್ಠ ದೇಶಭಕ್ತರಾಗಿದ್ದ ಸಾನೇ ಗುರೂಜಿ ಅವರು ಮಕ್ಕಳೊಡನೆ ಮಹತ್ವದ ಸಮಯ ಮಾಡಿಕೊಂಡಿದ್ದರು, ಮಕ್ಕಳಿಗಾಗಿ ಪತ್ರಿಕೆಯನ್ನೂ ತರುತ್ತಿದ್ದರು. ಇಂಗ್ಲಿಷಿನಲ್ಲಿ ಬರೆಯುತ್ತ

ಮಕ್ಕಳ ಕತೆಗಳಲ್ಲಿಯೇ ಹೆಸರು ಮಾಡಿರುವ, ಚಿಲ್ಡ್ರನ್ಸ್ ಬುಕ್ ಟ್ರಸ್ಟ್‌ನಿಂದ ಹಲವಾರು ಬಾರಿ ಪುರಸ್ಕಾರ ಪಡೆದ ರಾಮೇಂದ್ರಕುಮಾರ ಅವರ ಆಯ್ದ ಕತೆಗಳನ್ನು 'ಶಾವೋಲಿನ್' ಎಂದು ಕೆ. ಶಿವಲಿಂಗಪ್ಪ ಹಂದಿಹಾಳು(ಅಭಿನವ ಬೆಂಗಳೂರು–೨೦೧೨) ಅವರಿಂದ ಅನುವಾದಗೊಂಡು ಬಂದಿವೆ.

ಕೆ. ಶಿವಲಿಂಗಪ್ಪ ಹಂದಿಹಾಳು

ಶಿವಲಿಂಗಪ್ಪ ಹಂದಿಹಾಳು ಯಾವಾಗಲೂ ಮಕ್ಕಳ ನಡುವೆ ಓಡಾಡಿಕೊಂಡಿರುವವರು. ತಮ್ಮ ಶಾಲೆಯ ಮಕ್ಕಳಿಂದ ಬರೆಸಿದ 'ಎಳೆಬಿಸಿಲು' ಎಂಬ ಕವನ ಸಂಕಲನವನ್ನು ಅವರು ಹೊರತಂದಿದ್ದಾರೆ. ಅನೇಕ ಮಕ್ಕಳ ಶಿಬಿರ, ವಿಚಾರ ಸಂಕಿರಣಗಳನ್ನು ಆಯೋಜಿಸಿದ್ದಾರೆ. ಹೀಗಾಗಿ ಮಕ್ಕಳು ಯಾವ ವಿಷಯದ ಬಗೆಗೆ ತುಡಿಯುತ್ತಾರೆಂಬುದರ ಅರಿವು ಅವರಿಗಿದೆ. ಈ ದೃಷ್ಟಿಯಿಂದ ಅವರು ಮಕ್ಕಳಿಗೆಂದು ಅನುವಾದಿಸಿರುವ ಕಥಾ ಸಂಕಲನ 'ಶಾವೋಲಿನ್' (ಅಭಿನವ, ಬೆಂಗಳೂರು, ೨೦೧೨) ಒಂದು ಅಪರೂಪದ ಕೃತಿಯಾಗಿದೆ. ಇಂಗ್ಲಿಷಿನಲ್ಲಿ ಬರೆಯುತ್ತಿರುವ ಓಡಿಯಾ ಕತೆಗಾರ ರಾಮೇಂದ್ರ ಕುಮಾರರ ಹತ್ತು ಕಥೆಗಳನ್ನು ಅವರು ಕನ್ನಡಕ್ಕೆ ತಂದಿದ್ದಾರೆ.

ಪ್ರಬುದ್ಧ ಮಕ್ಕಳಿಗೆ ಬೇಕಾಗಿರುವ ವಾಸ್ತವ ಹಾಗೂ ನೈಜ ಕತೆಗಳು ಕನ್ನಡದಲ್ಲಿ ವಿರಳವಾಗಿರುವ ಸಂದರ್ಭದಲ್ಲಿ ಈ ಪುಸ್ತಕದ ಪ್ರಕಟಣೆ ಸ್ವಾಗತಾರ್ಹವಾಗಿದೆ. ಹೇಳಿದ್ದನ್ನೇ ಹೇಳುವ ಪಂಚತಂತ್ರ ಮತ್ತು ಜನಪದ ಕಥೆಗಳು ರಾಶಿಗಟ್ಟಲೆ ಬಿದ್ದಿರುವಾಗ ವಾಸ್ತವ ಮಾದರಿಯ ಕತೆಗಳು ಅಪರೂಪವೆನ್ನುವಷ್ಟು ಕಡಿಮೆ ಸಂಖ್ಯೆಯಲ್ಲಿ ಬಂದಿವೆ. ಈ ದೃಷ್ಟಿಯಿಂದ ರಾಮೇಂದ್ರಕುಮಾರ್ ಇಂದಿನ ಕತೆಗಳೆಂದು ಸ್ಲಮ್ ಹುಡುಗರ, ಕೊಳಗೇರಿಗಳ, ಕಡುಬಡತನದಿಂದ ತತ್ತರಿಸುವವರ, ದೀನ ದರಿದ್ರರ ಕತೆಗಳನ್ನು ಕಟ್ಟಿಕೊಡುತ್ತಾರೆ. 'ಶಾವೋಲಿನ್' ಎನ್ನುವುದು ಮ್ಯಾಜಿಕ್ ಗಾಳಿಪಟವೊಂದರ ಹೆಸರು. ಜಾನಿ ಎನ್ನುವ ಗ್ಯಾರೇಜಿನ ಕೆಲಸದ ಹುಡುಗನಿಗೆ ಅದು ಸಿಗುತ್ತದೆ. ಮಾತಾಡುವ ಗಾಳಿಪಟವನ್ನು ಕಂಡು ಈ ಸ್ಲಮ್ ಹುಡುಗನಿಗೆ ಮುಗಿಲು ಮೂರೇ ಗೇಣು. ತನ್ನನ್ನು ದಾರಿ ಬಿಡುವಂತೆ ಪಟ ಅವನ ಮನವೊಲಿಸುತ್ತದೆ. ಸ್ವರ್ಗದಲ್ಲಿರುವ ತನ್ನ ಒಡೆಯನನ್ನು ಸೇರಬೇಕೆಂಬ ಬಯಕೆಯನ್ನು ಶಾವೋಲಿನ್ ಕನಸಿನಲ್ಲಿ ವ್ಯಕ್ತಪಡಿಸಿದಾಗ ಜಾನಿಗೆ ಇಲ್ಲವೆನ್ನುವದಾಗುವುದಿಲ್ಲ. ಮರುದಿನ ರಾತ್ರಿ ಕನಸಲ್ಲಿ ತಾನು ವಚನವಿತ್ತಂತೆ ತನ್ನ ಪ್ರೀತಿಪಾತ್ರ ಗಾಳಿಪಟವನ್ನು ಹಾರಿಬಿಡುತ್ತಾನೆ. ಅಷ್ಟು ಒಳ್ಳೆಯ, ಸುಂದರ ಗಾಳಿಪಟ ಅವನಿಗೆ ಈ ಹಿಂದೆ ಸಿಕ್ಕಿರಲಿಲ್ಲ. ಜಾನಿ ಮೌನವಾದ. ಇಂಥ ಮುದ್ದಾದ ಗಾಳಿಪಟವನ್ನು ನಾನು ಹೇಗೆ ಬಿಡ್ಲಿ? ಇಲ್ಲ. ಇದು ಅವನಿಂದ ಆಗದ ಕೆಲಸ. ಕೊನೆಗೆ ಅವನ ತಂದೆ ಹೇಳಿದ ಮಾತುಗಳು ನೆನಪಿಗೆ ಬಂದವು. "ಮಗು ಕೆಲವೊಮ್ಮೆ ಪಡೆಯೋದಕ್ಕಿಂತ ಕೊಡೋದರಿಂದಲೇ ಹೆಚ್ಚು ಆನಂದ ಸಿಗುತ್ತೆ."

"ಸರಿ ಆಯ್ತು" ಜಾನಿ ಪಟವನ್ನು ನೋಡದೆ ಹೂಂಗುಟ್ಟಿದ. "ಆದರೆ ನೀನು ಸ್ವರ್ಗಕ್ಕೆ ಹೋದ ಮೇಲೆ ನನ್ನ ಅಪ್ಪ-ಅಮ್ಮನ ಹತ್ತಿರ ಹೋಗಿ ಒಂದು ಸಂದೇಶ ಮುಟ್ಟಿಸಬೇಕು."

"ಖಂಡಿತ. ಏನು ಸಂದೇಶ?"

"ನಾನು ಅವರನ್ನು ತುಂಬಾ ಪ್ರೀತಿಸ್ತೀನಿ. ಅವರು ಇಲ್ಲದ ನೋವು ನನ್ನನ್ನು ತುಂಬಾ ಕಾಡ್ತಾ ಇದೆ ಅಂತ ಹೇಳು. ಹಾಗೆಯೇ ಅವರ ಆಶೀರ್ವಾದ ಬೇಕಾಗಿದೆ" ಎಂದು ಹೇಳ್ತಾ ಅವನ ಕಣ್ಣುಗಳು ಒದ್ದೆಯಾದವು... ಜಾನಿ ಕಣ್ಣು ತೆಗೆದ. ಶ್ರೀನು ಬಂದು ಎಬ್ಬಿಸುತ್ತಿದ್ದ.

ಹೀಗೆ ವಾಸ್ತವ, ಕಲ್ಪನೆಗಳು ಒಡಗೂಡಿದ ನೈಜ ಚಿತ್ರಣವೊಂದನ್ನು ಕೊಡುವಲ್ಲಿ ರಾಮೇಂದ್ರಕುಮಾರ್ ಯಶಸ್ವಿಯಾಗುತ್ತಾರೆ. ಕೊನೆಗೆ ಜಾನಿ ಅದ್ಭುತ ಓಟಗಾರನಾಗುವದರೊಂದಿಗೆ ಕಥೆ ಮುಕ್ತಾಯವಾಗುತ್ತದೆ. ಇಂತಹ ಒಟ್ಟು ಹತ್ತು ಕತೆಗಳಿರುವ ಪುಸ್ತಕವನ್ನು ಶಿವಲಿಂಗಪ್ಪ ಹಂದಿಹಾಳ ಕನ್ನಡದ್ದೆ ಅನ್ನಿಸುವ ಹಾಗೆ ಅನುವಾದ ಮಾಡಿದ್ದಾರೆ.

ಬಿ.ಎಸ್. ರುಕ್ಕಮ್ಮ ಮತ್ತು ಎಸ್.ಆರ್. ರಂಗಮಣಿ ಅವರು ಕೆಲವು ಸೊಗಸಾದ ಅನುವಾದ ಮಾಡಿದ್ದಾರೆ. **ಅಧಿಕಾರದ ಕುರುಡು** ಮಧ್ಯಕಾಲೀನ ಭಾರತದ ಕೆಲವು ಜನಪದ ಕಥೆಗಳನ್ನು ಕನ್ನಡದ ಮಕ್ಕಳಿಗೆ ಕೊಡುವ ಕೆಲಸವನ್ನು 'ಅಧಿಕಾರದ ಕುರುಡು' ಪುಸ್ತಕದ ಮೂಲಕ ಬಿ.ಎಸ್. ರುಕ್ಕಮ್ಮ ಹಾಗೂ ಎಸ್.ಆರ್. ರಂಗಮಣಿಯವರು ನಿರ್ವಹಿಸಿದ್ದಾರೆ. 'ಬಾಯಿ ಇದ್ದವರೂ ಬರದಲ್ಲೂ ಬದುಕುತ್ತಾರೆ' ಎನ್ನುವ ಹೆಸರಿನ ಪುಸ್ತಕದಲ್ಲಿಯೂ ಕೂಡ ಇಲ್ಲಿ ಇರದ ಮಧ್ಯಕಾಲೀನ ಭಾರತದ ಜನಪದ ಕಥೆಗಳನ್ನು ನೋಡಬಹುದು. ಮೋಸ, ಕುತಂತ್ರ, ರಾಜಾಶ್ರಯ, ಸ್ವಾಮಿನಿಷ್ಠೆ ಮುಂತಾದವುಗಳು ಹೇರಳವಾಗಿದ್ದ ಪ್ರಾಚೀನ ಜನಜೀವನವನ್ನು ಪರಿಚಯ ಮಾಡಿಸುವುದರ ಜೊತೆಗೆ ಅಲ್ಲಿಯ ಸದ್ಗುಣಗಳನ್ನು ಆಯ್ದುಕೊಳ್ಳಬೇಕೆಂಬ ಅಭಿಲಾಷೆ ಲೇಖಕರಿಗಿದೆ. 'ಬುದ್ಧಿಶಕ್ತಿ ಇದ್ದರೆ ಬರಿಗೈಯಲ್ಲೂ ಬಂಗಾರ ತುಂಬುತ್ತೆ', 'ಬುದ್ಧಿ ಇದ್ದವರು ಬದುಕುತ್ತಾರೆ' ಮುಂತಾದ ಕಥೆಗಳು ಮಕ್ಕಳ ಕುತೂಹಲವನ್ನು ತಣಿಸುವಂತಿವೆ. ಆದರೆ ಲೇಖಕರು ಉಪಯೋಗಿಸುವ ಭಾಷೆ ಮಾತ್ರ ಮಕ್ಕಳಿಗೆ ಭಾರವಾಗಿದೆ. ಕನ್ನಡದ ಜಾಯಮಾನಕ್ಕೆ ತಕ್ಕಂತೆ ಮೂಲ ಕಥೆಗಳನ್ನು ಒಲಿಸಿಕೊಳ್ಳಬೇಕಾಗಿತ್ತು ಎನಿಸುತ್ತದೆ.

ಬಾಯಿ ಇದ್ದವರು ಬರದಲ್ಲೂ ಬದಕುತ್ತಾರೆ ಪುಸ್ತಕ ಮಧ್ಯಕಾಲೀನ ಭಾರತದಲ್ಲಿದ್ದ ಕೆಲವು ಜನಪದ ಕಥೆಗಳನ್ನು ಕನ್ನಡದ ಎಳೆಯರಿಗೆ ಪರಿಚಯಿಸುವ ಕೆಲಸ ಮಾಡುತ್ತದೆ. ರಾಜ–ಮಹಾರಾಜ, ಗುರು–ಶಿಷ್ಯ, ಕಾಡು–ಮೇಡು ಹಿನ್ನೆಲೆಯಲ್ಲಿನ ಇಲ್ಲಿ ಕಥೆಗಳು ಚತುರತೆ ಮತ್ತು ಬುದ್ಧಿಶಕ್ತಿಗಳನ್ನು ಬೆಳೆಸಬಲ್ಲ ಗುಣ ಹೊಂದಿವೆ. 'ಉಪಕಾರಕ್ಕೆ ಪ್ರತ್ಯುಪಕಾರ', 'ಅಲ್ಪವಾದರೂ ಅಖಂಡವಾಗಿರಬೇಕು', 'ಅಂಜಿಕೆಗಿಂತ ಧೈರ್ಯ ಫಲಕಾರಿ' ಮುಂತಾದ ಕಥೆಗಳು ಮಕ್ಕಳಿಗೆ ಇಷ್ಟವಾಗುವುದರಲ್ಲಿ ಸಂದೇಹವಿಲ್ಲ. ಮನೋರಂಜನೆ ಹಾಗೂ ಕಲ್ಪನೆಗೆ ಒತ್ತುಕೊಡಲಾಗಿದೆ. ಸಂಸ್ಕೃತ ಭಾಷೆಯ ಗ್ರಂಥದಿಂದ ಇವುಗಳನ್ನು ರೂಪಾಂತರ ಮಾಡಲಾಗಿದೆ. ವರ್ಣನಾತ್ಮಕ ಸಂಸ್ಕೃತದ ದಟ್ಟ ಪ್ರಭಾವ ಕನ್ನಡದಲ್ಲಿಯೂ ಕಾಣಿಸಿಕೊಂಡಿರುವುದರಿಂದ ಕಥೆಗಳು ಅಷ್ಟು ಸರಳವಾಗಿಲ್ಲವೆಂದು ತೋರುತ್ತದೆ. ಕಥೆಗಳ ವಿಷಯ ವೈವಿಧ್ಯತೆ ಇಷ್ಟವಾಗುತ್ತದೆ.

ಬೇದ್ರೆ ಮಂಜುನಾಥ ಅವರು ರಷ್ಯಾ ಹಾಗೂ ಸುತ್ತಮುತ್ತಲಿನ ದೇಶಗಳ ಜನಪದ ಕಥೆಗಳನ್ನು 'ಸರ್ವರಿಗೂ ಸಮಪಾಲು' ಎನ್ನುವ ಹೆಸರಿನಲ್ಲಿ ಬೇದ್ರೆ ಮಂಜುನಾಥ ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಪುಟ್ಟ ಪುಟ್ಟ ಪ್ರಾಣಿಗಳು ತಮ್ಮ ತಮ್ಮ ಕಥೆಗಳನ್ನು ಆಕರ್ಷಕವಾಗಿ ಇಲ್ಲಿ ಹೇಳಿಕೊಳ್ಳುತ್ತವೆ. 'ಮುದ್ದು ಬಾತುಕೋಳಿ' ಎನ್ನುವ ಕಥೆ ತುಂಬ ನವಿರು ಭಾವನೆಗಳನ್ನು ಉಕ್ಕಿಸುವಂತಿದೆ. ಇಲ್ಲದ ಉಸಾಬರಿ ಮಾಡುವುದಕ್ಕೆ, ಅನವಶ್ಯಕವಾಗಿ ಜಗಳ ಮಾಡಲಿಕ್ಕೆ

ಹೋಗಬಾರದೆನ್ನುವ ಆಶಯ ಹೊಂದಿದ ಕೆಲ ಕಥೆಗಳಿವೆ. 'ಕೀಟಲೆಯೇ ಪ್ರಾಣ ತೆಗೆಯಿತು' ಕಥೆಯಲ್ಲಿ ಹಾವಿಗೆ ಸಹಾಯ ಮಾಡಲು ಹೋದ ಮೀನು ಹಾವಿನ ಉಪಟಳಕ್ಕೆ ತುತ್ತಾಗಿ ಕೊನೆಗೆ ಪುಟ್ಟ ಹಾವನ್ನು ಸಮುದ್ರದ ತಳಕ್ಕೆ ತಳ್ಳಿ ತೊಂದರೆಯಿಂದ ಪಾರಾಗುತ್ತದೆ. 'ಚಮ್ಮಾರನ ಜಾಣತನ', 'ಬಲಶಾಲಿ ಯಾರು' ಕತೆಗಳು ಕೂಡ ಗಮನ ಸೆಳೆಯುತ್ತವೆ. ಕೋಳಿ, ಹೋತ, ಬೆಕ್ಕು, ಇಲಿ, ಗುಬ್ಬಚ್ಚಿ, ಕರಡಿ ಮುಂತಾದ ಪ್ರಾಣಿಗಳ ಸುತ್ತ ಹೆಣೆದ ಕಥೆಗಳು ಮಕ್ಕಳ ಮನೋವಿಕಾಸಕ್ಕೆ ಸಹಾಯಕಾರಿಯಾಗುವಂತಿವೆ. ಕಥೆಗಳಲ್ಲಿಯ ಏಕತಾನತೆ ಹಾಗೂ ಆಕಸ್ಮಿಕ ಘಟನೆಗಳಿಲ್ಲದಿರುವುದು ಒಮ್ಮೊಮ್ಮೆ ಬೇಸರಕ್ಕೆ ದಾರಿ ಮಾಡಿಕೊಡುವ ಸಂಭವವಿದೆ.

'ಚೀನಾದ ಚಿಟ್ಟೆಗಳು' ಬೇದ್ರೆ ಮಂಜುನಾಥ ಅವರ 'ಚೀನಾದ ಚಿಟ್ಟೆ ಕಥೆಗಳು' ಸಂಗ್ರಹ ಚೀನಾದಲ್ಲಿ ಪ್ರಚಲಿತವಿರುವ ನಾಣ್ಣುಡಿ, ಗಾದೆ ಮಾತುಗಳನ್ನು ಅನುಸರಿಸಿ ಹೆಣೆದ ಇಪ್ಪತ್ತೈದು ಮಕ್ಕಳ ಕತೆಗಳನ್ನು ಒಳಗೊಂಡಿದೆ. 'ಶಕ್ತಿಶಾಲಿ ನರಿ-ಹೆದರುಪುಕ್ಕ ಹುಲಿ', 'ನಿನ್ನ ಪ್ರತಾಪ ಇಷ್ಟೇನಾ?', 'ಮಾಂತ್ರಿಕ ಮೀನು', 'ಬಣ್ಣ ಬದಲಿಸುವುದು', 'ಇಬ್ಬರ ಜಗಳ ಮೂರನೆಯವರಿಗೆ ಲಾಭ' ಮುಂತಾದ ಒಳ್ಳೆಯ ಕಥೆಗಳು ಮಕ್ಕಳಿಗೆ ಇಷ್ಟವಾಗುವುದರಲ್ಲಿ ಸಂಶಯವಿಲ್ಲ. 'ಆಡಳಿತದ ಗುಟ್ಟು', 'ಯಥೋಚಿತ ಮಾತು', 'ಷೂ ಖರೀದಿ ಕಥೆ'ಗಳಂತೂ ತಮ್ಮ ತೀಕ್ಷ್ಣ ವ್ಯಂಗ್ಯ, ಪರೋಕ್ಷ ನೀತಿಯ ಗುಣಗಳಿಂದ ಗಮನ ಸೆಳೆಯುತ್ತವೆ. ಆದರೆ ಕೆಲವು ಕಥೆಗಳಲ್ಲಿ ನೀತಿ ಮತ್ತು ಉಪದೇಶದ ಮಾತುಗಳು ಹೇರಳವಾಗಿದ್ದು ಕಥೆ ಭಾರವಾಗುತ್ತದೆ. ವಿವರಣೆಗೆ ಹೊರಟು ಕುತೂಹಲಕ್ಕೆ ತಡೆ ಉಂಟಾಗುತ್ತದೆ. ವಾಕ್ಯಗಳು ಒಮ್ಮೊಮ್ಮೆ ಉದ್ದ ಅನಿಸುತ್ತವೆ. ಕಥೆಗಾರರು ಮನಸ್ಸು ಮಾಡಿದರೆ ಇನ್ನಷ್ಟು ಸರಳವಾಗಿ ಹೇಳಿ ಮಕ್ಕಳ ಮನಸ್ಸನ್ನು ಗೆಲ್ಲಬಹುದು. ನವಕರ್ನಾಟಕದಿಂದ ಮುದ್ರಣಗೊಂಡಿದ್ದು ಆಕರ್ಷಕವಾಗಿ ಚಿತ್ರಗಳಿಂದ ಕೂಡ ಗಮನ ಸೆಳೆಯುತ್ತದೆ.

ವಾಸ್ತವ ಬದುಕನ್ನು ಚಿತ್ರಿಸಿರುವ ಹಲವಾರು ಸಮಕಾಲೀನ ಕತೆಗಳನ್ನು ಕಿರಿಯ ಓದುಗರಿಗೆ ಕೊಡುವಲ್ಲಿ ದಿಲ್ಲಿಯ ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ (ಎನ್.ಬಿ.ಟಿ. ಇಂಡಿಯಾ) ತುಂಬ ಒಳ್ಳೆಯ ಕೆಲಸ ಮಾಡಿದೆಯೆಂದರೆ ತಪ್ಪಾಗಲಾರದು. ಭಾರತದ ಹಾಗೂ ಈ ಭೂಖಂಡ ಭಾಗದ ನೈಜ, ಮಾನವೀಯ ನೆಲೆಗಳನ್ನು ಸಾಹಿತ್ಯದ ರೂಪದಲ್ಲಿ ಅದು ಓದುಗರಿಗೆ ಉಣಬಡಿಸಿದೆ. ಇಂತಹ ನೆಲೆಗಳು ಪರಿಚಯವೇ ಇಲ್ಲದ ಹಾಗೆ ನಮ್ಮ ಅನೇಕ ಲೇಖಕರು ಹಳೆಯ ಜನಪದ ಮತ್ತು ಪುರಾಣ ಕತೆಗಳನ್ನೆ ಮಕ್ಕಳ ಸಾಹಿತ್ಯವೆಂದು ನೀಡುತ್ತಿರುವುದು ತುಂಬ ಕಳವಳಕಾರಿಯಾದದ್ದು. ಮಕ್ಕಳ ಸಾಹಿತ್ಯದಲ್ಲಿ ನಡೆಯುತ್ತಿರುವ ಅನೇಕ ಪ್ರಯೋಗಗಳತ್ತ ನಮ್ಮ ಬರಹಗಾರರು ಕಣ್ಣು ಹಾಸಿದಾಗ ಎಷ್ಟೆಲ್ಲ ಹಾಗೂ ಯಾವೆಲ್ಲ ದೃಷ್ಟಿಕೋನಗಳನ್ನು ಮಕ್ಕಳ ಸಾಹಿತ್ಯಕ್ಕೆ ಕೊಡಬಹುದು ಎಂಬುದರ ಅರಿವಾಗುತ್ತದೆ. ಮೂಲ ಕೃತಿಗಳನ್ನು ಓದಲು ಸಾಧ್ಯವಾಗದಿದ್ದರೂ ಅನುವಾದದ ಮೂಲಕ ಆ ನೋಟಗಳನ್ನು ನಮ್ಮ ಸಂವೇದನೆಗೆ ಒಗ್ಗಿಸಿಕೊಳ್ಳಬಹುದು. ಎನ್‌ಬಿಟಿ ಪ್ರಕಟಿಸಿರುವ ಹಲವು ಕನ್ನಡ ಅನುವಾದಗಳು ಈ ದಿಸೆಯಲ್ಲಿ ತುಂಬ ಉಪಯುಕ್ತವಾಗಿವೆ. ಹೈಸ್ಕೂಲು ಓದುತ್ತಿರುವ ಹುಡುಗ-ಹುಡುಗಿಯರು ಹಾಗೂ ಪ್ರಾಥಮಿಕ-ಕಿರಿಯ ಪ್ರಾಥಮಿಕ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಅದು ತಂದಿರುವ ಪುಸ್ತಕಗಳು ನಮ್ಮ ಮಕ್ಕಳನ್ನು ಇನ್ನೂ ದೊಡ್ಡ ರೀತಿಯಲ್ಲಿ ಮುಟ್ಟಬೇಕಾಗಿದೆ.

'ಏಷ್ಯಾದ ಆಯ್ದ ಕತೆಗಳು' ಕೃತಿ ಹಲವು ಏಷ್ಯಾ ರಾಷ್ಟ್ರಗಳಿಂದ ಆಯ್ದ ಮಕ್ಕಳ

ಕತೆಗಳಾಗಿವೆ. ಅಪಘಾನಿಸ್ತಾನದ ಅಹಜಮ್ ರಹ್ನಾವರ್ಸ್ ಜರ್‍ಯಚ್, ಬರ್ಮಾದ ಗಯೇತ್ನೀ ಯುಯೆ ಮಿಂತ್, ಭಾರತದ ಏಳ್ಳಿ ಕಣ್ಣನ್, ಇಂಡೋನೇಷಿಯಾದ ಜುಸ್ರಾನ್ ಸಫಾನೋ, ನೇಪಾಳದ ಮಾಧವ ಘೀಮ್ಮೈರ್, ಪಾಕಿಸ್ತಾನದ ಅನ್ವರ ಇನಾಯತುಲ್ಲಾ, ಜಪಾನಿನ ನಾನ್‌ಕಿಚಿಕ್‌ನಿಮಿ, ಶ್ರೀಲಂಕಾದ ಸಿಬಿಲ್ ವೆಟ್ಟಾಸಿಂಘೆ ಮುಂತಾದ ಲೇಖಕರ ಒಟ್ಟು ೧೪ ಕತೆಗಳಿವೆ. ಎಸ್.ಕೆ. ರಮಾದೇವಮ್ಮ ಇವುಗಳನ್ನು ಅನುವಾದಿಸಿದ್ದಾರೆ. ೧೯೯೫ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡಿರುವ ಇದು ೧೪೭ ಪುಟಗಳಲ್ಲಿ ಹರವಿಕೊಂಡಿದೆ. ಭಿನ್ನ ಪ್ರಾದೇಶಿಕ ನೆಲೆಗಳ ನೈಜತೆ, ಮಾನವೀಯ ಅಂತಃಕರಣ, ಮಾಂತ್ರಿಕ ಶೈಲಿ ಮುಂತಾದವುಗಳ ಪರಿಚಯ ಈ ಪುಸ್ತಕದಿಂದ ಆದೀತು – ಹಾಗೂ ಅಂತಹ ಓದು ಕನ್ನಡದ ಮಕ್ಕಳ ಬರವಣಿಗೆಯ ಸೃಷ್ಟಿಯಲ್ಲಿ ಹೊಸ ಪ್ರಭಾವಗಳನ್ನು ಬೀರೀತು ಎಂದು ಭಾವಿಸಬಹುದು. ಒಂದೆರಡು ಪ್ರಮುಖ ಉದಾಹರಣೆ ಕೊಡಬಹುದಾದರೆ ಮನುಜನ ಎದೆಯಲ್ಲಿ ಮನೆಮಾಡಿರುವ ಕ್ರೂರತೆ, ಕೇಡು ಮುಂತಾದ ಅವಗುಣಗಳನ್ನು 'ಗಿಡುಗ ಮತ್ತು ಮರ' ಎಂಬ ಅಪಘಾನಿಸ್ತಾನದ ಕತೆ ನಿರೂಪಿಸುತ್ತದೆ. ಒಂದು ಮೋರಿಯ ಅಂಗಡಿಯ ಸುತ್ತ ಹೆಣೆದಿರುವ ಕತೆಯಲ್ಲಿ ಮೋಚಿ ಮತ್ತು ಅವನ ಇಬ್ಬರು ನಿರುದ್ಯೋಗಿ ಸ್ನೇಹಿತರು ದಿನದ ಇಪ್ಪತ್ನಾಲ್ಕು ತಾಸು ಮಾತಾಡುತ್ತಲೆ ಕಾಲಹರಣ ಮಾಡುವವರು. ಒಂದು ದಿನ ನಿರೂಪಕ ಅವರು ತುಂಬ ನೋವಿನಿಂದ, ಮ್ಲಾನವಾಗಿ ಇದ್ದದ್ದು ಕಂಡು ವಿಚಾರಿಸಲು ಮೋಚಿಯ ಗಿಡುಗ ಹಕ್ಕಿ ತಪ್ಪಿಸಿಕೊಂಡ ವಿಚಾರ ತಿಳಿಯುತ್ತದೆ. ಅದನ್ನು ತಿಳಿದು ಆ ಹಕ್ಕಿಗೆ ಸ್ವಾತಂತ್ರ್ಯ ಸಿಕ್ಕಿತಲ್ಲವೆಂದು ಇವನಿಗೆ ಖುಷಿಯಾಗುತ್ತದೆ. ಆದರೆ ಅಂಗಡಿಯವ ಅದರ ಕಾಲಿಗೆ ಕಟ್ಟಿದ ಗಟ್ಟಿಯಾದ ದಾರದಿಂದ ಯಾವುದೋ ಗಿಡಕ್ಕೆ ತಗುಲಿ ನೇತಾಡಿ ಸತ್ತುಹೋಗುತ್ತದೆ ಎಂದು ಹೇಳುತ್ತಾನೆ.

'ಗಿಡುಗ ತನ್ನ ಸಾವನ್ನೂ ತನ್ನೊಡನೆಯೇ ಹೊತ್ತುಕೊಂಡು ಹೋಗಿದೆ' ಮೋಚಿ ಹೇಳಿದ.

'ನೀನು ತುಂಬಾ ಕ್ರೂರಿ' ನಾನು ಹೇಳಿದೆ.

ಬೆಳಗಾದ ಮೇಲೆ ನಿರೂಪಕ ಕಂಡ ದುಃಸ್ವಪ್ನ ನಿಜವಾಗಿತ್ತು. ಆ ಗಿಡುಗ ಕೊಂಬೆಗಳಲ್ಲೊಂದರಿಂದ ನೇತಾಡುತ್ತಿತ್ತು. ಅದರ ಪಾದದಲ್ಲಿದ್ದ ದಾರ ಬಿಗಿಯಾಗಿ ಮರದಲ್ಲಿ ಸಿಕ್ಕಿಕೊಂಡಿತ್ತು. ಅದರ ಸಾವಿನ ತೊಳಲಾಟದಲ್ಲಿ ಆ ಪಕ್ಷಿಯ ಪುಕ್ಕಗಳು ಉದುರಿ ಎಲ್ಲಾಕಡೆ ಹರಡಿ ಬಿದ್ದಿದ್ದವು. ಪಕ್ಷಿ ಸತ್ತಿತ್ತು, ಅದು ತಲೆಕೆಳಗಾಗಿ ತೂಗುತ್ತಿತ್ತು. ನಿರ್ಜೀವ ಕಣ್ಣುಗಳಿಂದ ನೆಟ್ಟ ದೃಷ್ಟಿಯಲ್ಲಿ ನೋಡುತ್ತಿತ್ತು. ನೋವಿನಿಂದ 'ಇದು ರಸ್ತೆಯ ಕೊನೆ' ಎಂದು ಹೇಳುತ್ತಿರುವಂತೆ ಅನ್ನಿಸಿತು. . .

ಮನುಷ್ಯರ ಪಾದಗಳ ಕಡೆ ನೋಡಿದೆ. ಎಲ್ಲರ ಪಾದಗಳೂ ಕಟ್ಟಲ್ಪಟ್ಟಿದ್ದವು. ಆ ಮೋಚಿಯ ಪಾದಗಳು ಕೂಡ ಕಟ್ಟಲ್ಪಟ್ಟಿದ್ದವು. ಆ ದಾರಗಳು ಗೀರುಕುಣಿಕೆಯಂತಿದ್ದವು . .

ಮತ್ತೊಬ್ಬರ ಸ್ವಾತಂತ್ರ್ಯ ಮತ್ತು ಜೀವಪರತೆಯನ್ನು ಅಣಕಿಸುವ, ಹೀಯಾಳಿಸುವ, ಕಸಿದುಕೊಳ್ಳುವ ಕ್ರೂರ ಮನೋಭಾವವನ್ನು ಈ ಕತೆ ತುಂಬ ಸಾಂಕೇತಿಕವಾಗಿ ಚಿತ್ರಿಸುತ್ತದೆ.

ತಮಿಳು ಲೇಖಕರಾದ ವಳ್ಳಿಕಣ್ಣನ್ ಅವರ 'ಮೇಡಮ್‌ನ ಬಸ್ ಸವಾರಿ' ಎಂಬ ಕತೆ ಭಾರತದ ಪ್ರಾತಿನಿಧಿಕ ಕತೆಯಾಗಿ ಈ ಸಂಕಲನದಲ್ಲಿದೆ. ವಳ್ಳಿಯಮ್ಮ ಎಂಬ ತುಂಬ ಧೈರ್ಯವಂತ ಹುಡುಗಿಯ ಕಲ್ಪನಾಶೀಲ ವ್ಯಕ್ತಿತ್ವವನ್ನು ಮನೋಹರವಾಗಿ, ಆಸಕ್ತಿದಾಯಕವಾಗಿ ಚಿತ್ರಿಸಿರುವುದು ಈ ಕತೆಯ ವಿಶೇಷತೆಯಾಗಿದೆ. ಬಾಲಕಿಯೊಬ್ಬಳು ಎಷ್ಟೊಂದು ಸೂಕ್ಷ್ಮವಾಗಿ ಸಂಗತಿಗಳನ್ನು ಅವಲೋಕಿಸುತ್ತಾಳೆ ಮತ್ತು ತನ್ನ ಬದುಕಿನ ಹಕ್ಕನ್ನು ಚಲಾಯಿಸುತ್ತಾಳೆ ಎಂಬುದು ವಿನೋದ ಪೂರ್ಣವಾಗಿ ನಿರೂಪಿತವಾಗಿದೆ. ಆ ಓಣಿಯಲ್ಲಿ ಒಮ್ಮೆ ಒಬ್ಬ ಸುಂದರ ವಿದೇಶಿ ಸಿಪಾಯಿ ಹಾದು ಹೋಗುತ್ತಿರುವಾಗ ಅವನನ್ನು ಮಾತನಾಡಿಸಬೇಕೆಂದು ಅಲ್ಲಿದ್ದ ಹಿರಿಯರಿಗೆ, ಹೆಂಗಸರಿಗೆ, ಗಂಡಸರಿಗೆ ಅನ್ನಿಸಿತು. ಆದರೂ ಧೈರ್ಯ ಸಾಲದೆ ಸುಮ್ಮನಾದರು. ವಳ್ಳಿಯಮ್ಮ ಮಾತ್ರ ಆಗಿಂದಾಗ ಸೆಲ್ಯೂಟ್ ಹೊಡೆದು ನಮಸ್ಕಾರ ಹೇಳಿಬಿಟ್ಟಳು. ಆ ಸೈನಿಕ ಕೂಡ ಮುಗುಳ್ನಗೆ ಬೀರುತ್ತ ಗುಡ್ ಮಾರ್ನಿಂಗ್ ಎಂದನು. ತನ್ನ ಹಳ್ಳಿ ಮತ್ತು ಹತ್ತಿರದ ಪಟ್ಟಣದ ನಡುವೆ ಅಡ್ಡಾಡುತ್ತಿದ್ದ ಬಸ್ಸಿನಲ್ಲಿ ಒಂದು ಸಲವಾದರೂ ಪ್ರಯಾಣಿಸಬೇಕೆಂಬ ಆಸೆಯನ್ನು ಆ ಹುಡುಗಿ ಅವಳ ಅಮ್ಮನ ಗಮನವಿಲ್ಲದಾಗ ಪೂರೈಸಿಕೊಳ್ಳುವುದು ಈ ಕತೆಯ ಕೇಂದ್ರವಾಗಿದೆ. ಕಂಡಕ್ಟರನ ಕನಿಕರ ತನಗೆ ಬೇಡ ಎನ್ನುವಂತೆ ಈ ಬಸ್ ಪ್ರಯಾಣಕ್ಕಾಗಿಯೇ ಕಾದಿಟ್ಟ ಚೂರುಪಾರು ಹಣದಿಂದ ಬಸ್ ತಿಕೀಟ ಕೊಡು ಎಂದು ಅವನನ್ನು ದಬಾಯಿಸುತ್ತಾಳೆ. ಆಕೆಗೆ ಸ್ವಾತಂತ್ರ್ಯ, ಆಯ್ಕೆ ಎಷ್ಟು ಮುಖ್ಯವಾಗಿವೆ ಎಂಬುದನ್ನು ಈ ಕತೆ ತುಂಬಾ ಪರಿಣಾಮಕಾರಿಯಾಗಿ ಹೇಳುತ್ತದೆ:

'ಮಗು, ನೀನು ಹಾಗೆ ನಿಂತುಕೊಳ್ಳಬಾರದು. ಕುಳಿತುಕೊ' ಯಾರದೋ ದನಿ ಕೇಳಿ ಬೆಚ್ಚಿದಳು.

ಕುಳಿತುಕೊಂಡು, ಯಾರ ಧ್ವನಿ ಎಂದು ತಿರುಗಿ ನೋಡಿದಳು. ಅವಳ ಬಗ್ಗೆ ತುಂಬಾ ಪ್ರಾಮಾಣಿಕವಾಗಿ ಕಾಳಜಿ ವಹಿಸಿದ್ದ ಒಬ್ಬ ಹಿರಿಯ ವ್ಯಕ್ತಿ. ಆದರೆ ಅವನ ಮಾತಿನಿಂದ ಆಕೆ ಕೋಪಿಸಿಕೊಂಡಳು.

'ಇಲ್ಲಿ ಯಾವ ಮಗುವೂ ಇಲ್ಲ' ಎಂದು ಜಂಭದಿಂದ ಹೇಳಿದಳು. 'ನಾನು ಎಲ್ಲರಂತೆ ಮೂವತ್ತು ಪೈಸೆಯನ್ನು ಕೊಟ್ಟಿದ್ದೇನೆ'. ಕಂಟಕ್ಟರ್ ಇವರ ಮಧ್ಯೆ ಬಾಯಿ ಹಾಕಿ 'ಓ ಸ್ವಾಮಿ, ಇವರು ತುಂಬಾ ದೊಡ್ಡ ಮೇಡಮ್, ಪಟ್ಟಣಕ್ಕೆ ಒಬ್ಬಳೇ ಪ್ರಯಾಣ ಮಾಡಬಲ್ಲಳು' ಎಂದ.

ವಳ್ಳಿ ಕಂಡಕ್ಟರ್ ಕಡೆಗೆ ಕೋಪದ ದೃಷ್ಟಿಯನ್ನು ಬೀರಿ ಹೇಳಿದಳು, 'ನಾನು ಮೇಡಮ್ ಅಲ್ಲ, ದಯವಿಟ್ಟು ಅದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ, ನೀವಿನ್ನೂ ನನಗೆ ಟಿಕೆಟ್ ಕೊಟ್ಟಿಲ್ಲ'.

ಅವಳು ಹೋಗುವಾಗ ಎಷ್ಟು ಸಂಭ್ರಮದಿಂದ ಹೋಗಿರುತ್ತಾಳೊ ಬರುವಾಗ ಹಸುವೊಂದು ಅದೇ ಬಸ್ಸಿಗೆ ಸಿಲುಕಿ ಸಾಯುವ ದಾರುಣ ಘಟನೆ ಕಂಡು ಕಸಿವಿಸಿಗೊಳ್ಳುತ್ತಾಳೆ. ಯಾಂತ್ರಿಕ ಜಗತ್ತು ಸೃಷ್ಟಿ ಮಾಡುತ್ತಿರುವ ಅಮಾನವೀಯ ಸಂಗತಿಗಳಿಗೆ ನಾವು ಅನಿವಾರ್ಯವಾಗಿ ಒಗ್ಗಿಕೊಳ್ಳುವುದನ್ನು ರೂಢಿಮಾಡಿಸುತ್ತಿರುವ ಅನುಭವ ಈ ಕತೆಯ ಕೇಂದ್ರ ವಸ್ತುವಾಗಿದೆ. ಈ ಕತೆಗೆ ಖ್ಯಾತ ವ್ಯಂಗ್ಯ ಚಿತ್ರಕಾರ ಆರ್. ಕೆ ಲಕ್ಷ್ಮಣ ಅವರ ಚಿತ್ರಗಳು ತುಂಬ ಅರ್ಥಪೂರ್ಣವಾಗಿ ಹೊಂದಿಕೊಂಡಿವೆ.

ಎನ್‌ಬಿಟಿ 'ನೆಹರು ಬಾಲ ಪುಸ್ತಕಾಲಯ', 'ರಾಜೀವಗಾಂಧಿ ಫೌಂಡೇಷನ್' ಸಹಯೋಗದಿಂದ 'ರಾಜೀವಗಾಂಧಿ ಪುಸ್ತಕಮಾಲೆ'ಯಲ್ಲಿ ಅನೇಕ ಕಿರು ಪುಸ್ತಕಗಳನ್ನು ಕಿರಿಯ

ಓದುಗರಿಗೆಂದು ಆಕರ್ಷಕ ಚಿತ್ರಗಳೊಂದಿಗೆ ಪ್ರಕಟಿಸಿದೆ. ನಿದರ್ಶನಕ್ಕಾಗಿ ಮಿಥಿಲೇಶ್ವರ ಅವರು ಮನಕಲಕುವ ರೀತಿಯಲ್ಲಿ ಬರೆದಿರುವ 'ಒಂದು ರಾತ್ರಿಯ ಪ್ರಸಂಗ' ಎನ್ನುವ ಕಥಾ ಪುಸ್ತಕವನ್ನು ನೋಡಬಹುದು. ಇದನ್ನು ಎಚ್. ಎಸ್. ಕುಲಕರ್ಣಿ ಎನ್ನುವವರು ಅನುವಾದಿಸಿದ್ದು, ಮನೋಭಿರಾಮ ಚಕ್ರವರ್ತಿ ಅವರು ಹೃದಯಸ್ಪರ್ಶಿ ಚಿತ್ರಗಳನ್ನು ಬಿಡಿಸಿದ್ದಾರೆ. ಯಜಮಾನನೊಬ್ಬ ತನ್ನ ಕುಟುಂಬದ ಜೊತೆ ಸಂತೋಷದಾಯಕ ಕ್ಷಣಗಳನ್ನು ಕಳೆಯುತ್ತಿರುವಾಗ ಭಿಕ್ಷುಕಿಯಂತೆ ಕಾಣುವ ಮುದುಕಿಯೊಬ್ಬಳು ಅವಳ ಮಗನ ಕಾಯಿಲೆಗೆ ಸಂಬಂಧಿಸಿದಂತೆ ಹಣದ ಸಹಾಯ ಯಾಚಿಸುತ್ತಾಳೆ. ಆದರೆ ಯಜಮಾನ ಇದನ್ನು ನಂಬಲಾರ. ಹಣ ಲಪಟಾಯಿಸಲು ನಾಟಕ ಎಂದು ತಿಳಿಯುತ್ತಾನೆ. ಒಂದು ರೂಪಾಯಿಯನ್ನು ಕೊಡಲು ಮಗಳು ಹೋಗುತ್ತಾಳೆ. ಆ ಮುದುಕಿ ನಿರಾಕರಿಸುವಳು:

'ನಿಮಗೆ ಹೇಗೆ ತಿಳಿಸಿ ಹೇಳಲಿ? ನಾನು ಭಿಕ್ಷುಕಿಯಲ್ಲ. ಹತ್ತಿಪ್ಪತ್ತು ರೂಪಾಯಿಗಳಿಗಿಂತ ಕಡಿಮೆ ಸಹಾಯ ಪಡೆದು ಏನು ಮಾಡಲಿ? ಊರಲ್ಲೆಲ್ಲ ಸುತ್ತಾಡಿ ಸಹಾಯ ಕೇಳುವಷ್ಟು ಸಮಯವಿಲ್ಲ. ಈ ಆಪತ್ತಿನಲ್ಲಿ ನನಗೆ ಸಹಾಯ ಮಾಡಿರಿ, ಜೀವ ಇರುವವರೆಗೆ ಹಾರೈಸುವೆ, ದೇವರು ನಿಮಗೆ ಕಲ್ಯಾಣವನ್ನು ಉಂಟುಮಾಡುವನು.'

'ನೋಡಿದೆಯಾ, ಎಷ್ಟು ಕೊಬ್ಬು ಅವಳಿಗೆ ? ಅವಳ ಕೂಡ ಮಾತಾಡುವುದೇ ವ್ಯರ್ಥ. ಸುಮ್ಮನಿರಿ, ಹೊರಟು ಹೋಗುವಳು ತನ್ನಷ್ಟಕ್ಕೆ.'

ಆಕೆ ಹೊರಟು ಹೋದಳು. ಮೂರ್ನಾಲ್ಕು ತಿಂಗಳ ನಂತರ ಈ ವ್ಯಕ್ತಿ ರಾತ್ರಿಯ ಹೊತ್ತು ನಿರ್ಜನ ಪ್ರದೇಶವೊಂದರಿಂದ ಮನೆಗೆ ಬರುತ್ತಿರುವಾಗ ಅವನ ಮೋಟರ್ ಸೈಕಲ್ ಕೆಟ್ಟು, ಯಾರೂ ಸಹಾಯಕ್ಕೆ ನಿಲ್ಲದೆ ಪ್ರಾಣ ಭೀತಿ ಅನುಭವಿಸುತ್ತಾನೆ. ರಾತ್ರಿಯಲ್ಲಿ ಜನವಸತಿ ಇರುವ ಮನೆ ಹುಡುಕಿ ಹೋಗುತ್ತಾನೆ. ಗುಡಿಸಲುಗಳಿಂತಿರುವ ಕೆಲವು ಮನೆಗಳಿದ್ದವು:

ಮೊದಲನೆಯ ಮನೆ ಬಾಗಿಲು ತಟ್ಟಿದೆ. ಅದು ಗುಡಿಸಲಿನಂಥ ಒಂದು ಮನೆಯಾಗಿತ್ತು. ಸಗಣಿಮಣ್ಣಿನಿಂದ ಸಾರಿಸದ ಮನೆ. ಅಷ್ಟರಲ್ಲಿ ಬಾಗಿಲು ತೆರೆಯಿತು. ಒಬ್ಬ ಮುದುಕಿ ಕಂದೀಲು ಹಿಡಿದು ಹೊರಗೆ ಬಂದಳು. . . . ಊಟ ಮಾಡುತ್ತ ಕಂದೀಲಿನ ಬೆಳಕಿನಲ್ಲಿ ಆ ಮುದುಕಿಯನ್ನು ದಿಟ್ಟಿಸಿ ನೋಡಿದೆ. ನೋಡುತ್ತಲೇ ನಾನು ಸ್ತಬ್ಧನಾದೆ. ನನ್ನ ಮನೆಗೆ ಸಹಾಯ ಬೇಡಲು ಬಂದಿದ್ದ ಮುದುಕಿಯೇ ಇವಳು. ಅವಳ ಇದೇ ಮಗ ಆಸ್ಪತ್ರೆಯಲ್ಲಿದ್ದ ಎಂಬುದು ಅವರ ಮಾತುಕತೆಯಿಂದ ಗೊತ್ತಾಯಿತು. ಕಷ್ಟಪಟ್ಟು ರೊಟ್ಟಿಯನ್ನು ನುಂಗಿದೆ. ಆ ದಿನದ ವರ್ತನೆಗೆ ಮನಸ್ಸಿನಲ್ಲಿಯೇ ನನಗೆ ನಾಚಿಕೆಯಾಯಿತು.

'ಅಲ್ಲಿಂದ ಹೊರಡುವಾಗ ಮುದುಕಿಗೆ ಸ್ವಲ್ಪ ದುಡ್ಡು ಕೊಡಲು ಪ್ರಯತ್ನ ಮಾಡಿದೆ. ಅವಳು ಸ್ವೀಕರಿಸಲಿಲ್ಲ – ನಾವು ದುಡ್ಡಿಗೋಸ್ಕರ ನಿಮಗೆ ಸಹಾಯ ಮಾಡಲಿಲ್ಲ. ನಾವು ಬಡವರು ಹೌದು. ಆದರೆ ನಮ್ಮ ಹೃದಯ ದರಿದ್ರವಲ್ಲ.'

'ಇಂದಿನವರೆಗೆ ಈ ಘಟನೆಯನ್ನು ನನಗೆ ಮರೆಯಲು ಆಗಿಲ್ಲ. ಮುದುಕಿ ಮತ್ತು ಆಕೆಯ ಕುಟುಂಬದವರು ನನಗೆ ಮನುಷ್ಯತ್ವದ ಪಾಠ ಕಲಿಸಿದ್ದರು. . . .'

ಮಾನವೀಯ ಸಂವೇದನೆಗಳನ್ನು ಚಿತ್ರಿಸುವ ಇಂಥ ಅನುವಾದಗಳು ಕನ್ನಡದ

ದೃಷ್ಟಿಕೋನಗಳನ್ನು ಹಿಗ್ಗಿಸಲು ನೆರವಾಗುತ್ತವೆ. ಚಿಕ್ಕ ಚಿಕ್ಕ ವಾಕ್ಯ, ಆಡಂಬರವಿಲ್ಲದ ಭಾಷೆ, ನಿರಾಯಾಸ ನಿರೂಪಣೆಗಳಂಥ ಲಕ್ಷಣಗಳ ಉದಾಹರಣೆಯೆಂದು ಇದನ್ನು ನೋಡಬಹುದು.

ಕಾಲು ಊನವಾಗಿರುವ ಬಿರ್ಜು ಎನ್ನುವ ಹುಡುಗ ಮತ್ತು ಮರದಿಂದ ಮಾಡಿದ ಹಳೆಯ ಕುದುರೆಯ ಸುತ್ತ ಸ್ವಾರಸ್ಯಕರವಾಗಿ ಹೆಣೆದುಕೊಂಡಿರುವ 'ಬಿರ್ಜು ಮತ್ತು ಹಾರುವ ಕುದುರೆ' ಎನ್ನುವ ದೀಪಾ ಅಗರವಾಲ ಅವರ ಕತೆಯನ್ನು ಆನಂದ ಪಾಟೀಲ ತುಂಬಾ ಸೊಗಸಾಗಿ ಕನ್ನಡಕ್ಕೆ ತಂದಿದ್ದಾರೆ. ಮಕ್ಕಳ ಸಾಹಿತ್ಯದಲ್ಲಿ ಮೊದಲಿನಿಂದಿಲೂ ತೊಡಗಿಕೊಂಡಿರುವ ಭಾರತೀಯ ಇಂಗ್ಲಿಷ್ ಲೇಖಕಿ ದೀಪಾ ಅಗರವಾಲ್. ರವೀಂದ್ರನಾಥ ಟ್ಯಾಗೋರ್ ಅವರ 'ರಜೆ ಬಂತು' ಎನ್ನುವದು ಒರಟುತನಕ್ಕಿಳಿದ ಹುಡುಗನ ಸುತ್ತ ಇರುವ ಒಂದು ಸಂವೇದನಾಶೀಲ ಕತೆ. ಆನಂದ ಪಾಟೀಲ ಇದನ್ನು ಅನುವಾದಿಸಿದ್ದಾರೆ. ಪ್ರಾಣಿ, ಪಕ್ಷಿ, ಕಾಡು ಮುಂತಾದವುಗಳ ಸಹಜೀವನ ಹಾಗೂ ಅದರ ಮೇಲೆ ಮನುಷ್ಯನ ಅವಲಂಬನವನ್ನ ಹೇಳುವ 'ಹಸಿರುಕಾಡಿನ ಗೆಳೆಯರು' ಎನ್ನುವ ವಿಮಲೇಂದ್ರ ಚಕ್ರವರ್ತಿ ಅವರ ಕತೆಯನ್ನು ಬಸು ಬೇವಿನಗಿಡದ ಅನುವಾದಿಸಿದ್ದಾರೆ. ಇದಕ್ಕೆ ಸ್ವಪನ್ ನಂದಿ ಸೊಗಸಾಗಿ ಚಿತ್ರಗಳನ್ನು ಬಿಡಿಸಿದ್ದಾರೆ. ಅನೇಕ ನಾಟಕಗಳು ಕೂಡ ಅನುವಾದ, ರೂಪಾಂತರ ಹೊಂದಿ ಮಕ್ಕಳ ಸಾಹಿತ್ಯದ ಪರಿಧಿ ವಿಸ್ತಾರವಾಗಿದೆ. 'ಸ್ಯಾಕರ್ ಲಾಕ್ ಆ್ಯಂಡ್ ಮಿಕಿ ನಿಕಿ' ಎನ್ನುವ ಜರ್ಮನ್ ನಾಟಕವನ್ನು ಗೋನವಾರ ಕಿಶನ್‌ರಾವ್ ಅವರು 'ಛುಕ್ ಛುಕ್ ಭಯ್ಯಾ ತಾಲಾಮ್ ತಾಲ್' ಎಂದು ರೂಪಾಂತರಿಸಿದ್ದಾರೆ. ಮನುಷ್ಯನ ದುಷ್ಟತನವನ್ನು ಮಕ್ಕಳು ಎದುರಿಸುವ ಆಶಯವನ್ನು ತುಂಬಾ ಪರಿಣಾಮಕಾರಿಯಾಗಿ ಮಂಡಿಸುತ್ತದೆ. ಟ್ಯಾಗೋರರ 'ತೋತಾಕಿ ಪಢಾಯಿ'ಯನ್ನು ಬಿ. ವಿ. ಕಾರಂತರು ಪಂಜರಶಾಲೆಯಾಗಿ ಪರಿವರ್ತಿಸಿ ರಂಗಭೂಮಿಗೆ ಹೊಸ ಸಾಧ್ಯತೆಗಳನ್ನು ತೋರಿಸಿದ್ದು ನಮಗೆ ಗೊತ್ತೇ ಇದೆ.

ಮಕ್ಕಳ ಸಾಹಿತ್ಯ ಮತ್ತು ವಿದ್ಯುನ್ಮಾನ ಮಾಧ್ಯಮ

– ಡಾ. ಬಸು ಬೇವಿನಗಿಡದ

ವಿದ್ಯುನ್ಮಾನ ಮಾಧ್ಯಮವಾದ ಆಕಾಶವಾಣಿ, ದೂರದರ್ಶನ ಹಾಗೂ ಇನ್ನಿತರ ಕೆಲವು ಚಾನೆಲ್‌ಗಳು ಮಕ್ಕಳ ಕಾರ್ಯಕ್ರಮಗಳಿಗೆ ಆಸ್ಪದ ನೀಡಿವೆ. ಆಕಾಶವಾಣಿಯಲ್ಲಿ ಮೊದಲಿನಿಂದಲೂ ಸಾಹಿತ್ಯಕ ಕಾರ್ಯಕ್ರಮಗಳು ಪ್ರಸಾರವಾಗುತ್ತ ಬಂದಿದ್ದು ಮಕ್ಕಳ ಸಾಹಿತ್ಯ ರಚನೆ, ಪ್ರಸಾರ ಮತ್ತು ಮಕ್ಕಳ ಪಾಲ್ಗೊಳ್ಳುವಿಕೆಗೆ ಅವು ಸಾಕಷ್ಟು ಅನುವು ಕೊಡುತ್ತ ಬಂದಿವೆ. ಸಾಮಾನ್ಯವಾಗಿ ಮಕ್ಕಳೇ ಮಕ್ಕಳಿಗಾಗಿ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುವುದು ಬಾನುಲಿ ಮಕ್ಕಳ ಕಾರ್ಯಕ್ರಮಗಳ ಒಂದು ಮುಖ್ಯ ಅಂಶವಾಗಿದೆ. ಒಮ್ಮೊಮ್ಮೆ ಹಿರಿಯರು, ಮಕ್ಕಳು ಕೂಡಿಯೇ ಭಾಗವಹಿಸುತ್ತಾರೆ. ಚಿಕ್ಕಪ್ಪ, ಚಿಕ್ಕಮ್ಮ, ಅಕ್ಕ, ಅಣ್ಣ, ಆಂಟಿ, ಅಂಕಲ್, ಮಾಮಾ, ಅತ್ತೆ, ಮಾಸ್ತರ್, ಟೀಚರ್, ಮಿಸ್ ಮುಂತಾದ ಪಾತ್ರಗಳ ಮೂಲಕ ಮಕ್ಕಳನ್ನು ಮಾತನಾಡಿಸುತ್ತ ಅವರ ಅಭಿವ್ಯಕ್ತಿಗೆ ಆಸ್ಪದ ನೀಡಲಾಗುತ್ತದೆ. ಮಕ್ಕಳ ಕತೆ ಕವನ, ವಾಚನ, ನಾಟಕ ರೂಪಕಗಳ ಪ್ರಸಾರ, ಕಾದಂಬರಿ ಓದು, ಶಿಶುಗೀತೆಗಳ ಪ್ರಸ್ತುತಿ ಮುಂತಾದ ಕಾರ್ಯಕ್ರಮಗಳು ಮಕ್ಕಳ ಸಾಹಿತ್ಯದ ಪ್ರಸಾರಕ್ಕೆ ಸಾಕಷ್ಟು ಕೊಡುಗೆ ನೀಡಿವೆ. ಮಕ್ಕಳಲ್ಲಿ ಓದಿನ ಅಭಿರುಚಿಯನ್ನು ಬೆಳೆಸುವಲ್ಲಿ ಹಾಗೂ ಮಕ್ಕಳ ಹಾಡು, ಕಥನಗೀತೆಗಳ ಜನಪ್ರಿಯತೆಯನ್ನು ಹೆಚ್ಚಿಸುವಲ್ಲಿ ಬಾನುಲಿ ಕಾರ್ಯಕ್ರಮಗಳ ಪಾತ್ರ ಹಿರಿದಾದದ್ದು.

ಜಿ.ಪಿ. ರಾಜರತ್ನಂ ಅವರ ಅನೇಕ ಗೀತೆಗಳು ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಸ್ವಾರಸ್ಯಕರವಾಗಿ, ಅರ್ಥಗರ್ಭಿತವಾಗಿ ಮೂಡಿಬಂದಿದ್ದು ಅವುಗಳನ್ನು ಜನರು ಎಷ್ಟೋ ದಿನಗಳವರೆಗೆ ಗುಣುಗುಣಿಸುತ್ತಲೇ ಇದ್ದುದನ್ನು ಅವುಗಳ ಮರುಪ್ರಸಾರಕ್ಕೆ ಬೇಡಿಕೆ ಬರುತ್ತಿದ್ದುದನ್ನು ಕಾಣುತ್ತೇವೆ.

ಹತ್ತು ಹತ್ತು ಇಪ್ಪತ್ತು
ತೋಟಕೆ ಹೋದನು ಸಂಪತ್ತು
ಇಪ್ಪತ್ತು ಹತ್ತು ಮುವತ್ತು
ಕೈಯಲ್ಲೊಂದು ಕಲ್ಲಿತ್ತು.

ಎನ್ನುವ ಹಾಡು ತುಂಬ ಅದ್ಭುತವಾಗಿ ಧಾರವಾಡ ಆಕಾಶವಾಣಿಯಲ್ಲಿ ಪ್ರಸಾರವಾಯಿತು. ಅದರ ಜೊತೆಗೆ 'ಚೆಡ್ಡಿಗಿಡ್ಡಿ ಹಾಕಿಕೊಂಡು' ಸೇರಿದಂತೆ ಅನೇಕ ಗೀತೆಗಳೂ ಆಗ ತುಂಬ

ಜನಪ್ರಿಯಗೊಂಡವು. ಏ.ಜಿ. ನೀರಗಾರ, ಅನುರಾಧಾ ಧಾರೇಶ್ವರ ಮುಂತಾದ ಗಾಯಕರ ಅದ್ಭುತ ಧ್ವನಿಯಲ್ಲಿ ಅವು ಎಲ್ಲೆಡೆ ತೇಲಿದವು.

ಸರೋಜಿನಿ ಮಹಿಷಿ, ಬಿ.ಎ. ಸನದಿ, ಶಂ.ಗು. ಬಿರಾದಾರ, ಈಶ್ವರ ಕಮ್ಮಾರ, ಕಂಚ್ಯಾಣಿ ಶರಣಪ್ಪ, ಪ.ಗು. ಸಿದ್ದಾಪುರ, ರಾಜಶೇಖರ ಕುಕ್ಕುಂದ, ತಮ್ಮಣ್ಣ ಬೀಗಾರ ಮುಂತಾದವರ ಗೀತೆಗಳು 'ಮಕ್ಕಳ ಹಾಡು' ಕಾರ್ಯಕ್ರಮದಡಿಯಲ್ಲದೆ 'ಝೇಂಕಾರ' ಮಕ್ಕಳ ಸಮೂಹಗಾನ ಸಂಗೀತಪಾಠದಲ್ಲಿಯೂ ಪ್ರಸಾರಗೊಂಡವು.

ಧಾರವಾಡ ಆಕಾಶವಾಣಿಯಿಂದ ಅನೇಕ ಲೇಖಕರ ಪ್ರಾಣಿಕತೆಗಳು ನಾಟಕೀಯ ರೂಪದಲ್ಲಿ ಸ್ವಾರಸ್ಯಕರವಾಗಿ ಪ್ರಸಾರವಾದ ಇತಿಹಾಸವಿದೆ. ಶಂ.ಗು. ಬಿರಾದಾರ, ಈಶ್ವರ ಚಂದ್ರ ಚಿಂತಾಮಣಿ, ಕಂಚ್ಯಾಣಿ ಶರಣಪ್ಪ ಅವರಿಂದ ಅನೇಕ ರೂಪಕ, ಹಾಡುಗಳು ಹೀಗೆ ವೈವಿಧ್ಯಮಯ ಅಭಿವ್ಯಕ್ತಿ ಕಂಡುಕೊಂಡವು. ಮಕ್ಕಳ ಧ್ವನಿಯಲ್ಲಿ ಅವು ಶಬ್ದವಾಹಕದಲ್ಲಿ ಪಯಣಿಸುವುದು, ಕೇಳುಗರ ಕಲ್ಪನಾಶಕ್ತಿಯನ್ನು ಉದ್ದೀಪಿಸುವುದು ತುಂಬ ಸಂವೇದನಶೀಲ ಕಾರ್ಯವಾಗಿದೆ.

ಧಾರವಾಡ ಆಕಾಶವಾಣಿಯ ಸ್ಟುಡಿಯೋದಲ್ಲಿ ಅನೇಕ ಮಕ್ಕಳ ಕವಿಗೋಷ್ಠಿಗಳು ಆಯೋಜನೆಗೊಂಡು ವೇದಿಕೆಯನ್ನು ಮಕ್ಕಳಿಗೆ ಹಾಗೂ ಹಿರಿಯರಿಗೆ ಕಲ್ಪಿಸಿದ ಅನೇಕ ನಿದರ್ಶನಗಳಿವೆ. ತಮಗೆ ಪ್ರಸಿದ್ಧಿ ತಂದುಕೊಟ್ಟ ಕೆಲವು ಕವಿತೆಗಳನ್ನು ಅನೇಕ ಲೇಖಕರು ಮೊದಲು ಆಕಾಶವಾಣಿಗಾಗಿಯೇ ಬರೆದದ್ದು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ರಾಜ್ಯದ ಹಲವು ಬಾನುಲಿ ಕೇಂದ್ರಗಳು ಸ್ಥಳೀಯ ಹಾಗೂ ರಾಜ್ಯಮಟ್ಟದಲ್ಲಿ ಕವಿಗೋಷ್ಠಿಗಳನ್ನು ಏರ್ಪಡಿಸಿವೆ.

೨೦೦೮-೦೯ರಲ್ಲಿ ಶ್ರವಣಬೆಳಗೊಳದಲ್ಲಿ ರಾಜ್ಯಮಟ್ಟದ ಬಾಲಕವಿಗೋಷ್ಠಿ ಹಾಗೂ ಹಿರಿಯರಿಂದ ಮಕ್ಕಳ ಕವಿತಾವಾಚನ ಕಾರ್ಯಕ್ರಮಗಳನ್ನು ನೇರಪ್ರಸಾರದಲ್ಲಿ ಹಾಸನ ಆಕಾಶವಾಣಿ ಕೇಂದ್ರ ಆಯೋಜಿಸಿತ್ತು.

೨೦೧೧ರಲ್ಲಿ ರಾಜ್ಯಮಟ್ಟದ ಕವಿಗೋಷ್ಠಿ ಹಾಗೂ ಸಂಗೀತ ಸಂಯೋಜಿತ ಪ್ರಸ್ತುತಿ ಒಂದು ವೈಶಿಷ್ಟ್ಯಪೂರ್ಣ ಕಾರ್ಯಕ್ರಮವಾಗಿತ್ತು.

ವೆಂಕಟೇಶಮೂರ್ತಿ ಅವರು ಆಕಾಶವಾಣಿಯ ಅನೇಕ ಮಕ್ಕಳ ಕಾರ್ಯಕ್ರಮಗಳಲ್ಲಿ ಅತಿಥಿಯಾಗಿ ಪಾಲ್ಗೊಂಡು ಮಕ್ಕಳನ್ನು ರಂಜಿಸಿದ್ದಾರೆ, ತಮ್ಮ ಕವಿತೆಗಳನ್ನು ಪ್ರಸ್ತುತಪಡಿಸಿದ್ದಾರೆ. ಮಕ್ಕಳ ದಿನಾಚರಣೆಗೆಂದು ಆದಿ ಚುಂಚನಗಿರಿಯಿಂದ ನೇರ ಪ್ರಸಾರವಾದ ಎಚ್ಚೆಸ್ವಿ ಕಾರ್ಯಕ್ರಮ ತುಂಬ ವಿಭಿನ್ನವಾಗಿ ಮೂಡಿಬಂದಿತು. 'ಬಾನಂದೂರಲಿ ಇರುವುದು ಒಂದೆ ಕೆನೆಮೊಸರಿನ ಗಡಿಗೆ' ಎಂಬ ಹಾಸನ ಬಾನುಲಿಯಲ್ಲಿ ಆನಂದ ಪಾಟೀಲ ರೂಪಿಸಿದ ಈ ಕಾರ್ಯಕ್ರಮದಲ್ಲಿ ವೆಂಕಟೇಶಮೂರ್ತಿ ಜೊತೆಗೆ ಮಕ್ಕಳು ತುಂಬ ಖುಶಿಯಿಂದ ಸಂವಾದ ನಡೆಸಿದರು. ಎಚ್ಚೆಸ್ವಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಾಲಸಾಹಿತ್ಯ ಪುರಸ್ಕಾರ ಬಂದಾಗ ಮೈಸೂರು ಆಕಾಶವಾಣಿಯ ಜನಪ್ರಿಯ 'ಕಾಫಿತಿಂಡಿ' ಕಾರ್ಯಕ್ರಮದಲ್ಲಿ ಎಚ್ಚೆಸ್ವಿ ಅವರು ಭಾಗಿಯಾಗಿದ್ದರು. ವಿವಿಧ ಮಕ್ಕಳ ಕವಿಗಳ ಕವಿತೆಗಳನ್ನು ನುರಿತ ನಾಟಕ ಕಲಾವಿದರು ಪ್ರಸ್ತುತಪಡಿಸಿದ್ದು ಮೈಸೂರು ಆಕಾಶವಾಣಿಯ ಮತ್ತೊಂದು ವಿಶೇಷ.

ಕನ್ನಡದಲ್ಲಿ ಬಹಳಷ್ಟು ಅಲಕ್ಷ್ಯಕ್ಕೆ ಒಳಗಾಗಿರುವ ನರ್ಸರಿ ರೈಮ್‌ಗಳು, ಶಿಶುಗೀತೆಗಳು ಅಥವಾ ಶಿಶುಪ್ರಾಸಗಳನ್ನು ಹಾಸನ ಆಕಾಶವಾಣಿ ತುಂಬ ಸ್ವಾರಸ್ಯಕರವಾಗಿ ಪ್ರಸಾರ ಮಾಡಿದ್ದು ಒಂದು ಮೈಲಿಗಲ್ಲು ಎಂದು ಹೇಳಬಹುದು. ಆನಂದ ಪಾಟೀಲ ಪರಿಕಲ್ಪನೆಯ 'ಚೂಟಿ ಚುಟುಕ್ ಗುಳಂ ಗುಟುಕ್' ಎಂಬ ನರ್ಸರಿ ರೈಮ್‌ಗಳ ಸರಣಿ ನವೆಂಬರ್ ತಿಂಗಳು ಪೂರ್ತಿ ಮುಂಜಾನೆಯ ಹೊತ್ತು ಪ್ರಸಾರಗೊಂಡಿದ್ದು ಸಾಕಷ್ಟು ಜನಪ್ರಿಯತೆಯನ್ನು ಪಡೆಯಿತು. ಉಷಾಲತಾ ಅವರು ನಿರ್ಮಾಣ ಮಾಡಿದ ಈ ಸರಣಿ ಅವರಿಗೆ ಮತ್ತೊಂದಕ್ಕೆ ಸ್ಫೂರ್ತಿ ನೀಡಿತು. 'ಪುಟ್ಟಕ್ಕೆಂದಲ್ಲಾ ಪುಟ್‌ಪುಟಾಣಿ ಕತೆ' ಎನ್ನುವ ಸಣ್ಣ ಹುಡುಗಿಯೊಬ್ಬಳ ಅನುಭವ ಕಥನದ ಪ್ರಸ್ತುತಿ ಆಸಕ್ತಿಕರವಾಗಿತ್ತು. ಅಸಂಖ್ಯ ರೇಡಿಯೋ ಕೇಳುಗರು ಇದರ ಪ್ರಸಾರಕ್ಕಾಗಿ ಕಾಯ್ದರು. ಆನಂದ ಪಾಟೀಲರು ರಚಿಸಿದ ಕತೆಗಳನ್ನು ಬಾಲಕಿಯೊಬ್ಬಳು ತುಂಬ ಪರಿಣಾಮಕಾರಿಯಾಗಿ ರೇಡಿಯೋ ಮಾಧ್ಯಮಕ್ಕಾಗಿ ಆಡುಮಾತಿನಲ್ಲಿ ಹೇಳಿದ್ದು, ಉಷಾಲತಾ ಅವರು ಅದನ್ನು ಉತ್ಸಾಹದಿಂದ ನಿರ್ಮಿಸಿದ್ದು ಒಂದು ವಿಶಿಷ್ಟ ಸಂಗತಿಯಾಗಿದೆ.

ಉಷಾಲತಾ ಅವರು ಹಾಸನ ಬಾನುಲಿಯಿಂದ ಶಶಿಧರ ವಿಶ್ವಾಮಿತ್ರ ಅವರ ಕಾದಂಬರಿಯನ್ನು ಪ್ರಸಾರಕ್ಕೆ ಅಣಿಗೊಳಿಸಿದ್ದು ಕೂಡ ಒಂದು ವಿಶೇಷ ಕೆಲಸವಾಗಿದೆ.

ಮಕ್ಕಳ ಕತೆ ಕಾದಂಬರಿಗಳನ್ನು ಪ್ರಸ್ತುತಪಡಿಸಿದ್ದು ಆಕಾಶವಾಣಿ ಮಾಡಿದ ಮತ್ತೊಂದು ಪ್ರಸಾರ ಸಾಹಿತ್ಯದ ಹೆಗ್ಗಳಿಕೆಯಾಗಿದೆ. ಸ್ವತಃ ಓದಿದಾಗ ಉಂಟಾಗದೆ ಇರುವ ಪರಿಣಾಮ ಕೆಲವೊಮ್ಮೆ ಆಸಕ್ತಿದಾಯಕ, ಸ್ವಾರಸ್ಯಕರ ಹಾಗೂ ಪರಿಣಾಮಕಾರಿ ಪ್ರಸ್ತುತಿಯಲ್ಲಿ ಸಾಧ್ಯವಾಗುತ್ತದೆ. ಧಾರವಾಡ, ಭದ್ರಾವತಿ, ಹೊಸಪೇಟೆ, ಹಾಸನ ಆಕಾಶವಾಣಿ ಕೇಂದ್ರಗಳಿಂದ ಅನೇಕ ಕತೆ, ಕಾದಂಬರಿಗಳು ರೇಡಿಯೋದಲ್ಲಿ ಬಿತ್ತರಗೊಂಡು ಮಕ್ಕಳು ಹಾಗೂ ಹಿರಿಯರನ್ನು ತುದಿಗಾಲಲ್ಲಿ ನಿಲ್ಲಿಸಿದವು. ಸಂಭ್ರಮ, ಸಂಕಟ ಮುಂತಾದ ಸಂವೇದನೆಗಳು ಬಣ್ಣಿಸಲು ಅಸಾಧ್ಯವಾದವುಗಳು. ನಾ. ಡಿಸೋಜ ಅವರ ಹಲವು ಕಾದಂಬರಿಗಳು ಧ್ವನಿವಾಹಕದ ಮೂಲಕ ಕೇಳುಗರನ್ನು ಮುಟ್ಟಿದವು. 'ಗೋಪಿಯ ಗೊಂಬೆ' ಭದ್ರಾವತಿ ಬಾನುಲಿಯಿಂದ ಪ್ರಸಾರಗೊಂಡಿತು. ಗೋಪಿಯ ಗೊಂಬೆಗಾಗಿ ಸಾವಿರಾರು ಮಕ್ಕಳು ಹುಡುಕತೊಡಗಿದರು! ಎಸ್.ವಿ. ಶ್ರೀನಿವಾಸರಾವ್ ಅವರ 'ಹಾರೋ ಹನುಮ' ಕಾದಂಬರಿ ಕೂಡ ಭದ್ರಾವತಿ ನಿಲಯದಿಂದ ಪ್ರಸಾರಗೊಂಡಿತು. ಈ ಪ್ರಸಾರದ ವೈಶಿಷ್ಟ್ಯವೆಂದರೆ ಕೇಳುವ ಮಕ್ಕಳಿಗೂ ಈ ಕತೆಯಲ್ಲಿ ಭಾಗವಹಿಸಲು ಆಸ್ಪದ ನೀಡಿ ಅವರದೇ ಕಲ್ಪನೆಯಲ್ಲಿ ಕತೆ ಬೆಳೆಸುವಂತೆ ಕೇಳಿಕೊಳ್ಳಲಾಗಿತ್ತು. ಅಂದರೆ ಕತೆ ಎರಡು ರೀತಿಗಳಲ್ಲಿ ಬೆಳೆಯುತ್ತಿತ್ತು ಹಾಗೂ ಪ್ರಸಾರವಾಗುತ್ತಿತ್ತು!

ಆನಂದ ಪಾಟೀಲರ 'ಡಂಡಂ ಊರಿಗೆ ಡಿಂಡಿಂ ಗಾಡಿ' ಕಾದಂಬರಿ ಹೊಸಪೇಟೆ ಆಕಾಶವಾಣಿಯಿಂದ ೨೦೦೪ರಲ್ಲಿ ಪ್ರಸಾರಗೊಂಡಿತು. ಮಕ್ಕಳು ಆಡುವ ಗಾಡಿ ಆಟ ಎಷ್ಟೊಂದು ಮಕ್ಕಳನ್ನು ಪ್ರೇರೇಪಿಸಬಲ್ಲದು, ಎಷ್ಟೆಲ್ಲ ಬದುಕಿನ ಸಂಗತಿಗಳು ಈ ಆಟದಲ್ಲಿ ಇರುತ್ತವೆ ಎಂಬುದಕ್ಕೆ ಇದು ಸಾಕ್ಷಿಯಾಯಿತು. ನಾ. ಡಿಸೋಜ ಅವರ 'ಗೆಳೆಯರ ಬಳಗಕ್ಕೆ ಜೈ' ಎನ್ನುವ ಅವರ ನಾಲ್ಕು ಕಾದಂಬರಿಗಳನ್ನು ಆಧರಿಸಿ ಕಾರ್ಯಕ್ರಮವನ್ನು ಜನರೆದುರು ಬಯಲಿನಲ್ಲಿ ಹೊಸಪೇಟೆ ಆಕಾಶವಾಣಿ ೨೦೧೧ರಲ್ಲಿ ಏರ್ಪಡಿಸಿತ್ತು. 'ಆಕಾಶವಾಣಿ ಹಬ್ಬ'ದ ಅಂಗವಾಗಿ ಆ ವರ್ಷ ಇದನ್ನು ತುಂಬಿದ ಸಭೆಯೆದುರು ಪ್ರಸ್ತುತಪಡಿಸಲಾಯಿತು.

ಆನಂದ ಪಾಟೀಲರು ಇದರ ರಂಗರೂಪ ನಿರ್ಮಾಣ ಮಾಡಿದ್ದರೆ ಚೆನ್ನಮಲ್ಲಿಕಾರ್ಜುನ ಹದಡಿ ನಿರ್ದೇಶಿಸಿದರು. ವೈದೇಹಿ ಅವರ 'ಧಾಂ ಧೂಂ ಸುಂಟರಗಾಳಿ'ಯನ್ನು ಮೈಸೂರು ಆಕಾಶವಾಣಿ ಪ್ರಸಾರ ಮಾಡಿತು. ಮಕ್ಕಳ ನಾಟಕಗಳನ್ನು ಆಕಾಶವಾಣಿ ಮೊದಲಿನಿಂದಲೂ ಪ್ರಸಾರ ಮಾಡುತ್ತ ಬಂದಿದೆ. ಶ್ರೀನಿವಾಸ ಉಡುಪ ಅವರ 'ಹಿಡಿಂಬನ ತೋಟ', ಆನಂದ ಪಾಟೀಲರ 'ಮುತ್ತ್ಯಾ ಮತ್ತು ಮೂವರು ರಾಕ್ಷಸರು', 'ಪಂಡಿತರಪ್ಪ ಪಂಡಿತರು', 'ಮಾಯಪ್ಪಜ್ಜನ ರುಮಾಲು' ಮುಂತಾದವು ಹಾಗೂ ಮಕ್ಕಳ ದೊಡ್ಡಾಟ, ಸಣ್ಣಾಟಗಳನ್ನು ಧಾರವಾಡ, ಕಲಬುರ್ಗಿ ಕೇಂದ್ರಗಳು ಸೇರಿದಂತೆ ಅನೇಕ ಕೇಂದ್ರಗಳು ಪ್ರಸಾರ ಮಾಡಿವೆ.

'ಹ್ಯಾರಿ ಪಾಟರ್' ಸರಣಿಯ ಕುರಿತು ಕೆಲವು ಕಾರ್ಯಕ್ರಮ ರೂಪಿಸಿ ಮಕ್ಕಳ ಸ್ಪಂದನೆಗೆ ಹಾಸನ ಆಕಾಶವಾಣಿ ಧ್ವನಿಯಾಯಿತು. ಜೆ.ಕೆ. ರೌಲಿಂಗ್ ಅವರ ಹ್ಯಾರಿ ಪಾಟರ್ ಸರಣಿಯ ಕೊನೆಯ ಪುಸ್ತಕ ಬಿಡುಗಡೆಯ ದಿನ ಹಲವಾರು ಮಕ್ಕಳು ತಾವು ಓದಿದ ವಿಷಯಗಳನ್ನು, ಈ ಕೊನೆಯ ಪುಸ್ತಕದಲ್ಲಿ ತಾವು ಏನನ್ನು ಬಯಸುತ್ತಿದ್ದೇವೆ ಎಂದೆಲ್ಲ ಹೇಳಿಕೊಂಡರು. ಮಕ್ಕಳು ಓದುವುದಿಲ್ಲ, ಕೇಳುವುದಿಲ್ಲ, ಮಾತನಾಡುವುದಿಲ್ಲ ಎನ್ನುವ ಅನೇಕ ಪೂರ್ವಗ್ರಹ ಪೀಡಿತ ಕಲ್ಪನೆಗಳನ್ನು ಸುಳ್ಳು ಮಾಡುವಂತೆ ಎಷ್ಟೋ ಮಕ್ಕಳು ತಾವು ಓದಿದ್ದನ್ನು, ತಾವು ಕಣ್ಣೀರು ಹಾಕುವಂತೆ ಮಾಡಿದ್ದನ್ನು ಮೆಲುಕು ಹಾಕಿಕೊಂಡ ಧ್ವನಿಗಳನ್ನು ಆಕಾಶವಾಣಿ ಕೇಂದ್ರಗಳು ಪ್ರಸಾರ ಮಾಡಿವೆ.

ಪ್ರಮುಖ ವಿದ್ಯುನ್ಮಾನ ಮಾಧ್ಯಮಗಗಳು ಇಲ್ಲದ ಸಮಯದಲ್ಲಿ ಆಕಾಶವಾಣಿಯೊಂದೆ ಮನರಂಜನೆ ಹಾಗೂ ಮಾಹಿತಿಯ ಮಾಧ್ಯಮವಾಗಿತ್ತು. ಧಾರವಾಡ ಆಕಾಶವಾಣಿಯ ಹಿಂದಿನ ಮಕ್ಕಳ ಕಾರ್ಯಕ್ರಮಗಳನ್ನು ನೆನೆಸಿಕೊಳ್ಳುವವರ ಸಂಖ್ಯೆ ಕಡಿಮೆಯಿಲ್ಲ. ಆಗಲೂ ಮತ್ತು ಈಗಲೂ ಎಳೆಯರ ಬಳಗ, ಗಿಳಿವಿಂಡು, ಬಾಲವಿಹಾರ, ಬಾಲಗೋಪಾಲ, ಪರಿಮಳ, ನಂದನವನ, ಚುಕ್ಕಿ ಚಿಣ್ಣ, ಚಿಣ್ಣರ ಚುಕ್ಕಿ, ಸಮುದಾಯ ಗೀತೆ ಸಂಗೀತ ಪಾಠ ಮುಂತಾದ ಮಕ್ಕಳ ಸಾಮಾನ್ಯ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಮಾಹಿತಿ, ಮನರಂಜನೆಯ ಮಹಾಪೂರವೇ ಹರಿದು ಬರುತ್ತಿತ್ತು, ಹರಿದು ಬರುತ್ತಿದೆ. ಧಾರವಾಡ ಆಕಾಶವಾಣಿಯ ಸಣ್ಣಕ್ಕ, ಅಕ್ಕಮ್ಮ, ರೇಡಿಯೋ ಕಾಕಾ ತುಂಬ ಪ್ರಸಿದ್ಧರಾಗಿದ್ದರು. ಸಣ್ಣಕ್ಕಳಾಗಿ ಜಿ.ಬಿ. ಪೂರ್ಣಿಮಾ, ಅಕ್ಕಮ್ಮಳಾಗಿ ಸುಶೀಲಾ ನಾಯಕ, ರೇಡಿಯೋ ಕಾಕಾ ಆಗಿ ಜಿ.ವಿ. ಹಿರೇಮಠ ಅವರ ಭಾವಾಭಿನಯ, ಮಾತುಗಾರಿಕೆ, ಹಾವಾ – ಭಾವ, ಮಾತುಗಳಲ್ಲಿಯೆ ಹೊಸಲೋಕವನ್ನು ಸೃಷ್ಟಿಸುವ ಶಕ್ತಿ ಮುಂತಾದವುಗಳನ್ನು ಸಾವಿರಾರು ಮಂದಿ ನೆನೆಯುತ್ತಾರೆ. ಪ್ರಭಾ ಸಾತ್‌ವಿಕ್ (ವಾಯಿ) ಅವರ 'ಕೇಳಿ ಗಿಳಿಗಳೆ' ಎನ್ನುವ, ಸಾಪ್ತಾಹಿಕ ಕಾರ್ಯಕ್ರಮ ಕೂಡ ಮಕ್ಕಳಿಗೆ ಹಾಗೂ ಹಿರಿಯರಿಗೆ ತುಂಬ ಆಪ್ಯಾಯಮಾನವಾಗಿತ್ತು.

ಕರ್ನಾಟಕ ಏಕೀಕರಣ, ಇತಿಹಾಸ, ಐತಿಹಾಸಿಕ ಸ್ಥಳಗಳ ಬಗ್ಗೆ ಈ ಕಲಾವಿದರು ಮಾತುಗಳಲ್ಲಿ ಸೃಷ್ಟಿಸುತ್ತಿದ್ದ ಪ್ರಭಾವ ಅಷ್ಟಿಷ್ಟಲ್ಲ. ಅಂತಹ ಧ್ವನಿ, ಸಂಭಾಷಣೆಗಳನ್ನು ಕೇಳಿಯೇ ಎಷ್ಟೋ ಜನರು ರಂಗಭೂಮಿಗೆ, ರೇಡಿಯೋಕ್ಕೆ, ಸಾಹಿತ್ಯಕ್ಕೆ ಆಕರ್ಷಿತರಾದರು. ರೇಡಿಯೋದ ಆ ದಿನಗಳು ಮಾಡಿದ ಪ್ರಭಾವವನ್ನು ಎಂದಿಗೂ ಅಳಿಸಲಾಗುವುದಿಲ್ಲ ಎಂದು ರಂಗಕರ್ಮಿ ಶಶಿಧರ ನರೇಂದ್ರ ಹೇಳುತ್ತಾರೆ. ಅವರ ನಾಟಕಗಳು ಆಕಾಶವಾಣಿಯಲ್ಲಿ ಪ್ರಸಾರವಾದ, ಮಕ್ಕಳಿಂದ ಪ್ರತಿಸ್ಪಂದನೆ ಸಿಕ್ಕ ಬಗೆ ವರ್ಣಿಸಲು ಕಷ್ಟವಾದುದು ಎಂಬ ತೃಪ್ತಿಯನ್ನು ಅವರು ಹೊರಹಾಕುತ್ತಾರೆ.

ದೂರದರ್ಶನವು ಕೂಡ ಮಕ್ಕಳ ಗೀತೆ, ನಾಟಕ, ದೃಶ್ಯರೂಪಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಜನರಿಗೆ ತಲಪಿಸಿದೆ. ಜಯಶ್ರೀ ಅರವಿಂದ ನಿರ್ದೇಶನದ 'ಚುಟುಕಾ ಚುಟುಕಾ ಚೋಟಾರಿ, ಪದ್ಯ ನಿಂಗೆ ಮೋಟಾರಿ' ಎನ್ನುವ ರಾಜರತ್ನಂ ಗೀತಸರಣಿ ದೂರದರ್ಶನದಲ್ಲಿ ಪ್ರಸಾರವಾದ ತುಂಬಾ ಜನಪ್ರಿಯ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಎಚ್.ಎಸ್.ವಿ. ಸೇರಿದಂತೆ ಅನೇಕರ ಗೀತೆಗಳು ದೂರದರ್ಶನದಲ್ಲಿ ಪ್ರಸಾರಗೊಂಡು ಜನರ ಬಾಯಲ್ಲಿ ನಲಿದವು.

ಆಕಾಶವಾಣಿಯ ಝೇಂಕಾರ, ಸಮುದಾಯ ಗೀತೆ ಸಂಗೀತ ಪಾಠ ಹಾಗೂ ಸಮುದಾಯ ಗೀತೆಗಳು, ಕನ್ನಡ, ಹಿಂದಿ, ಮರಾಠಿ, ಉರ್ದು, ಸಂಸ್ಕೃತ, ಬಂಗಾಳಿ, ಆಸ್ಸಾಮಿ ಮುಂತಾದ ಭಾಷೆಗಳಲ್ಲಿ ಪ್ರಸಾರಗೊಂಡು ಸಾಕಷ್ಟು ಜನರ ನಾಲಿಗೆ ಮೇಲೆ ನಲಿದಾಡಿದವು. ಮಕ್ಕಳು ಅವುಗಳನ್ನು ಗುಣುಗುಣಿಸಿದರು. 'ಪಿಲ್ಲಲ್ಲಾರ್, ಪಾಪಲ್ಲಾರ್.....' 'ಇಳೆಯ ಮಕ್ಕಳೆಲ್ಲ ಬನ್ನಿ ತಾಯ ತವರುಮನೆಗೆ', 'ಜಯ, ಜಯ...' ಎನ್ನುವಂತಹ ಹಲವಾರು ಹಾಡುಗಳು ತಮ್ಮ ನಾದಮನತೆಯಿಂದ ಕೇಳುಗರನ್ನು ಸೆಳೆದಿವೆ. ಬಾನುಲಿಯಲ್ಲಿ ಇಂದಿಗೂ ಪ್ರಸಾರವಾಗುತ್ತಿರುವ ಎಚ್.ಎಸ್.ವಿ., ಎನ್.ಎಸ್.ಎಲ್. ಭಟ್, ಸುಮತೀಂದ್ರ ನಾಡಿಗ, ಕಂಚ್ಯಾಣಿ ಶರಣಪ್ಪ, ತಮ್ಮಣ್ಣ ಬೀಗಾರ, ರಾಜಶೇಖರ ಕುಕ್ಕಂದ, ಟಿ.ಎಸ್. ನಾಗರಾಜಶೆಟ್ಟಿ ಮುಂತಾದವರ ಗೀತೆಗಳು ಮಕ್ಕಳ ಕಲ್ಪನಾಲೋಕ ಹಾಗೂ ಅವರ ಅರಿವಿನ ಲೋಕವನ್ನು ವಿಸ್ತರಿಸುವಲ್ಲಿ ತುಂಬಾ ಸಹಾಯಕವಾಗಿವೆ.

'ಝೇಂಕಾರ' ಕಾರ್ಯಕ್ರಮದಲ್ಲಿ ತಮ್ಮ ಸುಮಾರು ೧೪ ಪದ್ಯಗಳು ಪ್ರಸಾರಗೊಂಡು ತಮ್ಮ ಸಾಹಿತ್ಯ ರಚನೆಯಲ್ಲಿ ಪ್ರೇರಣೆ ನೀಡಿದ್ದನ್ನು ಟಿ.ಎಸ್. ನಾಗರಾಜ ಶೆಟ್ಟಿ ಹೇಳುತ್ತಾರೆ. ಅವರ 'ಚುಟ್ಟಿ ಪುಟ್ಟಿ', 'ಪ್ರಾಣಿಗಳ ಪ್ರವಾಸ' ಮುಂತಾದ ರೇಡಿಯೋ ರೂಪಕಗಳಿಗೆ ಅನೇಕ ಪುರಸ್ಕಾರ ಬಂದವು.

ಉಷಾಲತಾ ಅವರು ಚಿತ್ರದುರ್ಗ ಆಕಾಶವಾಣಿಯಲ್ಲಿ 'ಅಜ್ಜನೊಂದಿಗೆ ಮಾತುಕತೆ' ಎಂಬ ಕಾರ್ಯಕ್ರಮವನ್ನು ೧೯೯೩ರಲ್ಲಿ ರೂಪಿಸಿ, ನಿರ್ಮಾಣ ಮಾಡಿ ಪ್ರಸಾರ ಮಾಡಿದರು. ಈ ಕಾರ್ಯಕ್ರಮದ ವೈಶಿಷ್ಟ್ಯವೆಂದರೆ ಎಸ್. ನಿಜಲಿಂಗಪ್ಪ, ಬೆಳೆಗೆರೆ ಕೃಷ್ಣಶಾಸ್ತ್ರಿ, ಕಳಿಂಗ ಕೃಷ್ಣ, ನಿರ್ಮಲಾ ಕೇಸರಿ ಮುಂತಾದ ಹಿರಿಯರು ಮಕ್ಕಳೊಂದಿಗೆ ಮಾತನಾಡಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಉಷಾಲತಾ ಅವರೇ ಚಿತ್ರದುರ್ಗದ ಬಾನುಲಿಯಲ್ಲಿ 'ನಾನು ಓದಿದ ಪುಸ್ತಕ' ಎಂಬ ಮಕ್ಕಳ ಕಾರ್ಯಕ್ರಮದಲ್ಲಿ ಮಕ್ಕಳು ತಾವು ಇತ್ತೀಚೆಗೆ ಓದಿದ ಕೃತಿಯ ಅವಲೋಕನ ಮಾಡಿದರು. ಇದು ೨೦೧೩ರಲ್ಲಿ ಪ್ರಸಾರವಾಯಿತು. ಧಾರವಾಡ ಆಕಾಶವಾಣಿಯಲ್ಲಿ ಚೆನ್ನ ವೀರ ಕಣವಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಸೋಮಶೇಖರ ಇಮ್ರಾಪುರ, ಎಸ್.ಎಂ.ವೃಷಭೇಂದ್ರಸ್ವಾಮಿ, ಶಂ.ಗು. ಬಿರಾದಾರ, ಪ.ಗು. ಸಿದ್ದಾಪುರ, ಜಂಬುನಾಥ ಕಂಚ್ಯಾಣಿ, ಗಣೇಶ ನಾಡೋರ ಮತ್ತಿತರರು ಮಕ್ಕಳೊಂದಿಗೆ ಭಾಗಿಯಾದ ಅನೇಕ ಕಾರ್ಯಕ್ರಮಗಳು ಪ್ರಸಾರಗೊಂಡಿವೆ. ಮಕ್ಕಳ ಅಭಿವ್ಯಕ್ತಿ ಚಾಲನೆಗೆ, ಸಾಹಿತ್ಯದ ಬೀಜ ಬಿತ್ತುವಿಕೆಗೆ ಆಕಾಶವಾಣಿ ದೂರದರ್ಶನದಂತಹ ವಿದ್ಯುನ್ಮಾನ ಮಾಧ್ಯಮಗಳು ನೀಡಿದ ಕೊಡುಗೆ ದೊಡ್ಡ ಪ್ರಮಾಣದ್ದು.

□

ಲೇಖಕರ ವಿಳಾಸಗಳು

ಡಾ. ಆನಂದ ಪಾಟೀಲ
ನಿನಾದ, ರಾಣಿಚೆನ್ನಮ್ಮನಗರ
ಧಾರವಾಡ–೮.

ಶ್ರೀ ಸಂಗಮೇಶ ಗುಜಗೊಂಡ
ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ
ವಾಣಿಜ್ಯ ಮಹಾವಿದ್ಯಾಲಯ
ಮೂಡಲಗಿ – ೫೯೧೩೧೨
ಗೋಕಾಕ್ ತಾ॥ ಬೆಳಗಾವಿ ಜಿಲ್ಲೆ
ದೂ: ೯೪೪೯೫೧೭೯೧೮

ಶ್ರೀ ಚನ್ನಪ್ಪ ಅಂಗಡಿ
'ಕಾಯಕ' ೧೪ಎ/೮೫
೫ನೇ ಕ್ರಾಸ್, ಕುಮಾರೇಶ್ವರನಗರ
ಬೆಳಗಾವಿ ರಸ್ತೆ, ಧಾರವಾಡ
ದೂ: ೯೪೪೪೮೩೨೭೭೮೩

ಡಾ. ರಾಜೇಂದ್ರ ಎಸ್. ಗಡಾದ
ಸಂಗಮೇಶ್ವರ ನಿಲಯ
ರಾಜೀವಗಾಂಧಿನಗರ
ಪಿ & ಟಿ ಕ್ವಾರ್ಟರ್ಸ್ ಎದುರು
ಗದಗ – ೫೮೨ ೧೦೧
ದೂ: ೯೯೪೫೫೭೦೧೬೮೦

ಡಾ. ಚಿಂತಾಮಣಿ ಕೊಡ್ಲೆಕೆರೆ
ನಂ.೩೯೬, ಶ್ರೀ ಗುರುಕೃಪಾ
೧೧ನೇ ಕ್ರಾಸ್, ಜೆ.ಪಿ.ನಗರ
೫ನೇ ಫೇಸ್, ಬೆಂಗಳೂರು – ೫೬೦೦೭೮.
ದೂ: ೯೪೪೯೮೫೫೮೫೮

ಡಾ. ಎಚ್.ಎಸ್. ವೆಂಕಟೇಶಮೂರ್ತಿ
ನಂ.೩೦, ಸಂಕಲ್ಪ
ಪುಷ್ಪಗಿರಿನಗರ, ಬನಶಂಕರಿ ೩ನೇ ಘಟ್ಟ
ಬೆಂಗಳೂರು – ೫೬೦೦೮೫.
ದೂ: ೦೮೦–೨೬೪೨೪೯೯೭

ಡಾ. ರೂಪಾ ಹಾಸನ
'ಪ್ರೇರಣಾ'
ಸಂತ ಜೋಸೆಫರ ಶಾಲೆ ರಸ್ತೆ
ಉತ್ತರ ಬಡಾವಣೆ
ಹಾಸನ – ೫೭೩ ೨೦೧
೯೪೮೦೨–೨೭೫೭೬

ಶ್ರೀ ಎನ್. ಶ್ರೀನಿವಾಸ ಉಡುಪ
ನಂ.೮೩/೧, ಪ್ಲಾಟ್ ನಂ.೧೦೧
ಕೃಷ್ಣ ಬ್ಲಾಕ್, ಸುಂದರ್ ರೆಸಿಡೆನ್ಸಿ
ರಾಮರಾವ್ ಲೇಔಟ್, ಕತ್ತರಿಗುಪ್ಪೆ
ಬೆಂಗಳೂರು – ೫೬೦ ೦೮೫
ದೂ: ೦೮೦–೨೬೭೯೨೬೫೨

ಶ್ರೀ ಬಸು ಬೇವಿನಗಿಡದ
'ಸಿರಿಚೈತ್ರ', ವಿಜಯನಗರ ೧ನೇ ಕ್ರಾಸ್
ಬನಶಂಕರಿ ಹತ್ತಿರ, ಕೆಲಗೇರಿ ರಸ್ತೆ
ಧಾರವಾಡ–೫೮೦ ೦೦೮
ದೂ: ೯೪೪೪೮೨–೧೮೧೫೨

ಎರಡು ಶತಮಾನಗಳಷ್ಟು ದೀರ್ಘ ಕಾಲಾವಧಿಯ, ಅಪಾರ ಗ್ರಂಥರಾಶಿಯುಳ್ಳ ಸಮಗ್ರ ಕನ್ನಡ ಬರವಣಿಗೆಯ ಚರಿತ್ರೆಯನ್ನು ರಚಿಸಿ ಪ್ರಕಟಿಸುವ ಐತಿಹಾಸಿಕ ಯೋಜನೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಶತಮಾನೋತ್ಸವದ ಮಹತ್ವಾಕಾಂಕ್ಷೆಯ ಯೋಜನೆಯನ್ನಾಗಿ ಕೈಗೆತ್ತಿಕೊಂಡಿದೆ. ಕನ್ನಡ ಕಾವ್ಯ, ನಾಟಕ, ಕಾದಂಬರಿ, ಕಥಾಸಾಹಿತ್ಯ – ಹೀಗೆ ವಿವಿಧ ಪ್ರಕಾರಗಳಿಗೆ ಒಂದೊಂದು ಸಂಪುಟದಂತೆ ಒಟ್ಟು ೧೭ ಸಂಪುಟಗಳಲ್ಲಿ ಈ ಸಾಹಿತ್ಯ ಚರಿತ್ರೆ ಪ್ರಕಟವಾಗಲಿದೆ. ಕನ್ನಡ ಬರವಣಿಗೆಯ ಎಲ್ಲ ಓದುಗರಿಗೆ, ವಿದ್ಯಾರ್ಥಿಗಳಿಗೆ, ಅಧ್ಯಯನಶೀಲರಿಗೆ, ವಿದ್ವಾಂಸರಿಗೆ ಇವು ಉಪಯುಕ್ತವಾಗಲಿವೆ ಎಂದು ನಂಬಿದ್ದೇನೆ.

ಪುಂಡಲೀಕ ಹಾಲಂಬಿ

ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು-೫೬೦೦೧೮